


130292

# ಮಹಾತ್ಮ

(ಮೋಹನದಾಸ ಕರಮಚಂದ ಗಾಂಧಿಯವರ ಜೀವನ)

ಲೇಖಕರು


**ಡಿ. ಜಿ. ತೆಂಡುಲ್ಕರ್**

೧೯೨೦ ರಿಂದ ೧೯೨೯ ರವರೆಗೆ

ಸಂಪುಟ ೨

ಮೂಲ ಇಂಗ್ಲಿಷ್ ಕೃತಿಯ ಮುದ್ರಕರು

ಪ್ರಕಾಶನ ವಿಭಾಗ, ವಾರ್ತಾ ಮತ್ತು ಪ್ರಕಟನ ಮಂತ್ರಿ ಶಾಖೆ
ಭಾರತ ಸರ್ಕಾರ



# ಮಹಾತ್ಮ

ಅನುವಾದಕರು

ಕೆ. ಎಸ್. ನಾರಾಯಣಸ್ವಾಮಿ
ಬಿ. ಆರ್. ಪ್ರಾಣೇಶರಾವ್
ಶಶಿಕಲಾ ಚಂದ್ರಶೇಖರ್

ಸಂಪಾದಕರು

ಡಾ. ಎಚ್. ತಿಪ್ಪೇರುದ್ರಸ್ವಾಮಿ

ಗಾಂಧೀ ಭವನ, ಮಾನಸಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

Kannada translation of MAHATHMA–by D. G. Tendulkar ; published by Publication Division, Ministry of Information and Broadcasting, Government of India. Translation published with permission by Gandhi Bhavan, University of Mysore, Mysore. pp. XII+602

Price : [redacted].

© *University of Mysore*

ಹಕ್ಕುಗಳನ್ನು ಕಾಯ್ದಿರಿಸಲಾಗಿದೆ

ಮೊದಲ ಮುದ್ರಣ ೧೯೭೫

ಬೆಲೆ : [redacted] ರೂಪಾಯಿ

ಮುದ್ರಣ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

# ಮುನ್ನುಡಿ

(ಮೊದಲನೆಯ ಸಂಪುಟಕ್ಕೆ ಬರೆದದ್ದು)

ಇತಿಹಾಸಪೂರ್ವಕಾಲದಿಂದ ನೂರಾರು ಸಾವಿರಾರು ಆಚಾರ್ಯರು, ಸಾಹಿತಿಗಳು, ಯೋಧರು, ಧರ್ಮಸಂಸ್ಥಾಪಕರು, ಸಾಧುಸಂತರು, ವಿಚಾರವಂತರು, ವಿಜ್ಞಾನಿಗಳು, ವಿದ್ವಾಂಸರು, ಸಾಹಿತಿಗಳು ಮಾನವಕೋಟಿಯ ಮೇಲೆ ಅದಮ್ಯವಾದ ಪ್ರಭಾವವನ್ನು ಬೀರುತ್ತ ಜಗತ್ತಿನ ಇತಿಹಾಸ ಸೃಷ್ಟಿಗೆ ಕಾರಣರಾಗಿದ್ದಾರೆ. ಬುದ್ಧ, ಯೇಸು, ಮಹಮದ್ ಮೊದಲಾದ ಧರ್ಮೋಪದೇಶಕರು ದೇಶಕಾಲಾತೀತರಾಗಿ ಜನಹೃದಯ ಸಿಂಹಾಸನದಲ್ಲಿ ಮಂಡಿಸಿರುತ್ತ, ಅವರ ಬಾಳಿನಲ್ಲಿ ಚಿರಂತನಜೀವಂತ ಸ್ಫೂರ್ತಿಶಕ್ತಿಯಾಗಿದ್ದಾರೆ. ವಿಚಾರ ಸಂಘರ್ಷದ ಹಾಗೂ ತತ್ಫಲವಾದ ನೂತನ ಜ್ಞಾನೋದಯದ ಪರಿಣಾಮವಾಗಿ ಯಂಗ ಧರ್ಮವೂ, ಜೀವನ ಮೌಲ್ಯಗಳೂ ರೂಪಾಂತರಗೊಂಡು ಜಾತಿ ಮತ ಕುಲಗಳ ಪ್ರತಿಷ್ಠೆ ಶಿಥಿಲಗೊಂಡು ಜಗತ್ತಿನ ಇತಿಹಾಸದಲ್ಲಿ ನೂತನ ಪ್ರಕರಣ ಪ್ರಾರಂಭವಾಗುವುದು ಸಹಜ. ತಮ್ಮ ವಿಚಾರವಂತಿಕೆಯಿಂದ, ದಾರ್ಶನಿಕ ಪ್ರತಿಭೆಯಿಂದ, ಕ್ರಿಯಾಶೀಲತೆಯಿಂದ, ಮಾನವೀಯ ದೃಷ್ಟಿಯಿಂದ ಮನುಕುಲದ ಮೇಲೆ ಕಾಲದೇಶಾತೀತವಾದ ಪ್ರಭಾವವನ್ನು ಬೀರಿ ಆಧುನಿಕ ಇತಿಹಾಸದ ನಿರ್ಮಾಪಕರಲ್ಲಿ ಅಗ್ರಪೂಜೆಗೆ ಪಾತ್ರರಾದವರು ಗಾಂಧೀಜಿ ಮತ್ತು ಲೆನಿನ್. ವಿದೇಶೀಯರ ಸಾರ್ವಭೌಮತ್ವ ಮಾತ್ರವಲ್ಲ, ಅವರ ಪ್ರಭಾವದಿಂದಲೂ ತಂತಮ್ಮ ರಾಷ್ಟ್ರಗಳನ್ನು ಮುಕ್ತಗೊಳಿಸಿ ಪ್ರಪಂಚದ ಚರಿತ್ರೆಯಿಂದ ದಾಸ್ಯವನ್ನು ತೊಲಗಿಸಿದ ಕೀರ್ತಿ ಆ ಇಬ್ಬರು ಮಹನೀಯರಿಗೆ ಸಲ್ಲತಕ್ಕದ್ದಾಗಿದೆ. ವಿದೇಶೀಯರ ರಾಜಕೀಯ ಹಾಗೂ ಆರ್ಥಿಕ ದಾಸ್ಯದಿಂದ ಮುಕ್ತಿಯನ್ನು ಪಡೆಯುವುದು ಮಾತ್ರ ಸ್ವಾತಂತ್ರ್ಯವಲ್ಲ, ಸಾಂಸ್ಕೃತಿಕ ದಾಸ್ಯದಿಂದ, ದಾರಿದ್ರ್ಯದಿಂದ ಮುಕ್ತಿ ಪಡೆಯುವುದೇ ನಿಜವಾದ ಶ್ರೇಷ್ಠವಾದ ಸ್ವಾತಂತ್ರ್ಯವೆಂದು ಅದರ ಕಲ್ಪನೆಯನ್ನು ವಿಸ್ತಾರಗೊಳಿಸಿದ, ಖಚಿತಗೊಳಿಸಿದ, ತಮ್ಮ ಕಲ್ಪನೆಯ ಸ್ವಾತಂತ್ರ್ಯವನ್ನು ಕಾರ್ಯಗತಗೊಳಿಸಲು ತ್ರಿಕರಣಶುದ್ಧಿಯಾಗಿ ಪ್ರಯತ್ನಿಸಿ ಬಹುಮಟ್ಟಿಗೆ ಯಶಸ್ವಿಗಳಾದ ಧೀರ ಧೀಮಂತ ನಿಷ್ಠಾವಂತರವರು.

ಬುದ್ಧ ಬಸವೇಶ್ವರರ, ಪೀಳಿಗೆಯಲ್ಲಿ ಭಾರತೀಯ ಸಂಸ್ಕೃತಿಯ ಶಿಖರಪ್ರಾಯ ವೇಬಂತೆ, ಸಹಸ್ರಾರು ವರ್ಷಗಳ ದಾಸ್ಯವಿಮೋಚನೆಗೆಂಬಂತೆ ಗಾಂಧೀಜಿ ಹುಟ್ಟಿ, ದೇಶ ವಿದೇಶಗಳಲ್ಲಿ ವ್ಯಾಸಂಗ ಮಾಡಿ, ಪರರಾಷ್ಟ್ರದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಸ್ವರಾಷ್ಟ್ರದಲ್ಲಿ ಮಹಾಗಾರುಡಿಗನಂತೆ ಜನರ ಮನಸ್ಸನ್ನೊಲಿಸಿಕೊಂಡು, ಸ್ವದೇಶೀಯ ಸ್ವಾತಂತ್ರ್ಯಸಂಪಾದನೆಯ ಮೂಲಕ ಜಗತ್ತಿನ 'ಗುಲಾಮೀ' ರಾಷ್ಟ್ರಗಳನ್ನು ಜಾಗೃತಗೊಳಿಸಿ ಸಚೇತನಗೊಳಿಸಿ ಧ್ರುವತಾರೆಯಾದ ಕತೆ, ಜಗತ್ತಿನ ವಿಸ್ಮಯಕಾರಿ ಸಂಗತಿಯಾಗಿದೆ. ಎಲ್ಲ ಮಹಾಪುರುಷರಂತೆಯೇ ಅವರ ಜೀವನವೂ ಹೂವಿನ ಸುಪ್ಪತ್ತಿಗೆಯಾಗಿರಲಿಲ್ಲ. ಆಫ್ರಿಕಾದಲ್ಲಾಗಲೀ ಭಾರತದಲ್ಲಾಗಲೀ ಅವರು ಕೊನೆಯುಸಿರಿರುವ ತನಕ ಪಟ್ಟ ಶ್ರಮ, ಅನುಭವಿ

ಸಿದ ಕ್ಲೇಶಸಂಕಟಗಳು, ಸಹಿಸಿದ ಅನ್ಯಾಯ ಕಿರುಕುಳಗಳು, ಮಾಡಿದ ತ್ಯಾಗ, ನಡೆಸಿದ ಧ್ಯೇಯ ಅನುಪಮವಾದುವು. ಅವರ ಬಾಳಿನಲ್ಲಿ ಘಟಿಸಿದ ಪ್ರತಿಯೊಂದು ಸಂಘಟನೆಯೂ ಅವರು ಕಾರಣಪುರುಷರೆನ್ನುವುದನ್ನು ಸೂಚಿಸುತ್ತಿತ್ತು. ಕೊಲೆಗೆ ಕೊಲೆ, ಹುಸಿಗೆ ಹುಸಿ, ಸೇಡಿಗೆ ಸೇಡು, ಮುಯ್ಯಿಯಾಗುತ್ತದೆ. ಆದ್ದರಿಂದ ಸತ್ಯ, ಪ್ರೇಮ, ಅಹಿಂಸೆಗಳ ಮೂಲಕ ಎಂಥ ದುಷ್ಟಶಕ್ತಿಯನ್ನಾದರೂ ದಮನಗೊಳಿಸಬೇಕೆಂಬುದಕ್ಕೆ ಅವರ ಬಾಳೇ ಸಾಕ್ಷಿಯಾಯಿತು. ತಮ್ಮ ದೇಶದ ಜನ ಸುಖವಾಗಿ ಬಾಳಲೆಂದು, ವಿಶ್ವಕ್ಕೆ ಶಾಂತಿ ಯೊದಗಲೆಂದು ತಮ್ಮ ಬಾಳನ್ನೇ ಪಣವೊಡ್ಡಿ ಸ್ವಾತಂತ್ರ್ಯಯಜ್ಞವನ್ನು ಸಾಂಗಗೊಳಿಸಿ ದರು. ಭಾರತದ ಮಾತ್ರವಲ್ಲ, ಇಡೀ ಜಗತ್ತಿನ ಸಮಸ್ಯೆಗಳಿಗೆ ಅವರ ಜೀವನದಲ್ಲಿ ಉತ್ತರ ದೊರೆಯುತ್ತದೆ.

ಅವರು ತೀರಿಕೊಂಡು ಕಾಲುಶತಮಾನವಾಗಿ ಮೇಲೆ ನಡೆಯುತ್ತಿದೆ. ಈಗಾಗಲೇ ಅವರನ್ನು ಭಾರತೀಯರು ಮರೆತು, ಇಂದಿನ ಜಗತ್ತಿಗೆ ಅವರ ಸಂದೇಶ ಸರಿಹೊಂದು ತ್ತದೆಯೇ ಎಂಬ ಪ್ರಶ್ನೆ ಎಲ್ಲ ದಿಕ್ಕುಗಳಲ್ಲಿಯೂ ಅನುರಣಿತವಾಗುತ್ತಿದೆ. ಲೆನಿನ್ ಅಥವಾ ಮಾವೋ ಮತ್ತು ಗಾಂಧೀಜಿಯವರ ಗುರಿ ಬೇರೆ ಬೇರೆಯಲ್ಲ; ಸಾಧನಾ ಮಾಧ್ಯಮ ಮಾತ್ರ ಪರಸ್ಪರ ವಿಭಿನ್ನ. ಗಾಂಧೀಜಿಯವರು ಆರಿಸಿಕೊಂಡ ಮಾಧ್ಯಮ ಭಾರತೀಯ ಸಂಸ್ಕೃತಿಗನುಗುಣವಾದುದೆನ್ನುವುದನ್ನು ಯಾರೂ ಮರೆಯುವಂತಿಲ್ಲ. ಜಗತ್ತಿನ ಶ್ರೇಷ್ಠಮಾನವತಾವಾದಿಗಳಾದ ಬುದ್ಧ ಬಸವೇಶ್ವರರ ಹಾದಿಯೂ ಗಾಂಧೀಜಿ ಯವರ ಹಾದಿಯೂ ಅಭಿನ್ನವಲ್ಲ. ಲೆನಿನ್ ಅನುಸರಿಸಿದ ದಾರಿಯೂ ಆ ಗುರಿಗೆ ಕೊಂಡೊಯ್ಯುತ್ತದೆ, ನಿಜ; ಆದರೆ ಅದು ಭಾರತೀಯ ಮನೋಧರ್ಮಕ್ಕೆ ಸಹಜ ವಾದದ್ದಲ್ಲವೆನ್ನುವುದು ಈಗಾಗಲೇ ಖಚಿತವಾಗಿದೆ. ಗಾಂಧೀಜಿಯ ದಾರಿ ಕಷ್ಟತಮ ವಾದದ್ದು. ಅಧಿಕಾರ ವಿಕೇಂದ್ರಿಕರಣ, ಗ್ರಾಮಸ್ವರಾಜ್ಯ, ಯಂತ್ರೀಕರಣಬಾಹಿರವಾದ ಅರ್ಥನೀತಿ, ಭಾರತೀಯತ್ವನಿಷ್ಠೆ, ಸತ್ಯ, ಪ್ರೇಮ, ಅಹಿಂಸೆಗಳು ಯಾರಿಗೆ ಹಿಡಿಸುತ್ತವೆ? ಹಿಂಸಾತ್ಮಕವಾದ ಯಾವ ಸಾಧನೆಯೂ ಶಾಶ್ವತವಾದುದಲ್ಲವೆಂಬುದು ಗಾಂಧೀಜಿಯವರ ವಾದ. ಸಂಪದ್ಯುಕ್ತವಾದ ಶ್ರೀಮಂತರಾಷ್ಟ್ರಗಳಲ್ಲಿ ಸುಖವಿದೆಯೆ ಎಂದು ಯೋಚಿಸು ವಾಗ ಅವರ ವಾದದ ಸಾರ್ಥಕತೆ ಅಭಿವ್ಯಕ್ತವಾಗುತ್ತದೆ.

ಗಾಂಧೀಜಿ ಸೃಷ್ಟಿಸಿದ್ದ ಅಮಾನುಷ ಸುಮಧುರ ಪ್ರೇಮಮಯ ವಾತಾವರಣ ವಿಂದು ಕಾಣುತ್ತಿಲ್ಲ. ಅದನ್ನು ಹಾಳುಮಾಡಿದವರು ನಮ್ಮ ರಾಷ್ಟ್ರನಾಯಕರು. ಆ ವಾತಾವರಣ ಮತ್ತೆ ಮೊಗದೋರುತ್ತದೆಯೆ ಎಬ ಸಂಶಯ ಇತ್ತೀಚಿನ ಘಟನೆಗಳಿಂದ ಸ್ಫುಟವಾಗುತ್ತದೆ. ಸದ್ಯಸ್ಥಿತಿಯಲ್ಲಿ ಗಾಂಧೀಮಾರ್ಗಕ್ಕಿಂತ ಲೆನಿನ್‌ಮಾರ್ಗ ಗ್ರಾಹ್ಯವೋ ಏನೊ ಎಂದು ಕೆಲವರಿಗಾದರೂ ಅನ್ನಿಸಿದರೆ ತಪ್ಪಾಗಲಾರದು. ಆದರೆ ಕೊನೆಗಾದರೂ ಗಾಂಧೀಮಾರ್ಗವೇ ಶಾಶ್ವತವಾದ ಸರ್ವೋದಯಕ್ಕೆ ಅತ್ಯವಶ್ಯವಾದೀತೆಂದು ತೋರುತ್ತದೆ. ಏನೇ ಆಗಲಿ, ಗುರಿ ಮಾತ್ರ ದೂರ ಸರಿಯಬಾರದು. "ನನ್ನ ಜೀವನದಲ್ಲಿ ಅಸಾಂಗತ್ಯ

ಗಳನ್ನು ಕಾಣುವವರಿದ್ದಾರೆ" ಎಂದು ಗಾಂಧೀಜಿಯವರೇ ಮುಚ್ಚುಮರೆಯಿಲ್ಲದೆ ಹೇಳಿಕೊಳ್ಳುತ್ತಾರೆ. ಅವರ ವರ್ಣಾಶ್ರಮ ಪಕ್ಷಪಾತವನ್ನು ಮೆಚ್ಚುವುದು ಕಷ್ಟ. ಆದರೆ ಅವರ ಒಟ್ಟಾರೆ ವ್ಯಕ್ತಿತ್ವ ನಮಗೆ ಮುಖ್ಯ. ಮಂದಗಾಮಿಗಳಾಗಲಿ, ಉಗ್ರಗಾಮಿಗಳಾಗಲಿ, ಯಾವ ಪಕ್ಷದವರೇ ಆಗಲಿ, ಯಾವ ವಯಸ್ಸಿನವರೇ ಆಗಲಿ, ಯಾವ ದೇಶದವರೇ ಆಗಲಿ, ಚಿರಂತನ ಮೌಲ್ಯಗಳಲ್ಲಿ ಆಸಕ್ತಿಯಿರುವವರು ಗಾಂಧೀಜಿಯವರ ಜೀವನ ಚರಿತ್ರೆಯನ್ನೂ ಅವರ ಕೃತಿಗಳನ್ನೂ ಅತ್ಯವಶ್ಯವಾಗಿ ವ್ಯಾಸಂಗಮಾಡಬೇಕು. ಅಂಥ ವ್ಯಾಸಂಗದಿಂದ ಪ್ರತಿಯೊಂದು ಚೇತನವೂ ಪೂರ್ಣವಾಗುತ್ತದೆ, ಹಿರಿದಾಗುತ್ತದೆ, ಸಾರ್ಥಕವಾಗುತ್ತದೆ.

ಗಾಂಧೀಜಿಯವರ ಲೇಖನ ಭಾಷಣಗಳೆಲ್ಲ ಸಾಮಾನ್ಯವಾಗಿ ಆಂಗ್ಲ ಅಥವಾ ಗುಜರಾತಿ ಭಾಷೆಗಳಲ್ಲಿವೆ. ಪ್ರತಿಯೊಬ್ಬ ಭಾರತೀಯನಿಗೂ ಅವು ಸುಲಭವಾಗಿ ಲಭಿಸುವಂತೆ ಏರ್ಪಾಡು ಮಾಡಬೇಕಾದ್ದು ಸರಕಾರದ ಅಥವಾ ವಿದ್ಯಾಸಂಸ್ಥೆಗಳ ಕರ್ತವ್ಯ. ಅನೇಕ ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ಗಾಂಧೀ ಭವನಗಳು ನಿರ್ಮಾಣವಾಗಿವೆ. ಅಲ್ಲೆಲ್ಲ ಏನು ಕೆಲಸ ನಡೆಯುತ್ತದೆಯೋ ಕಾಣೆ. ಈಗಾಗಲೆ ಕನ್ನಡದಲ್ಲಿಲ್ಲದ ಗಾಂಧೀ ಸಾಹಿತ್ಯವನ್ನು ಕನ್ನಡಿಸಿ ಸಾಮಾನ್ಯ ಜನತೆಗೆ ದೊರಕಿಸಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಗಾಂಧೀಭವನ ಕಾರ್ಯಕ್ರಮ ಹಾಕಿಕೊಂಡಿದೆ. ಆ ದಿಶೆಯಲ್ಲಿ ಈ ಹೊತ್ತಿಗೆ ಒಂದೆರಡು ಗ್ರಂಥಗಳೂ ಹೊರಬಂದಿವೆ. ಗಾಂಧೀಜಿಯವರ ಸಾಚಾ ಅನುಯಾಯಿಗಳಾದ ಶ್ರೀ ತೆಂಡುಲ್ಕರ್ ಅವರ 'ಮಹಾತ್ಮ' ಎಂಬ ಗ್ರಂಥದ ಎಂಟು ಸಂಪುಟಗಳೂ ಇಷ್ಟರಲ್ಲಿಯೇ ಹೊರಗೆ ಬರಲಿವೆ. ಗಾಂಧೀಜೀಯವರ ಲೇಖನ ಭಾಷಣಗಳನ್ನೇ ಹೆಚ್ಚಾಗಿ ಬಳಸಿಕೊಂಡು ರಚನೆಗೊಂಡಿರುವ ಕೃತಿಯಿದು. ಪ್ರತಿಯೊಂದು ಪುಟದಲ್ಲಿಯೂ ಗಾಂಧೀಜಿ ಓದುಗರೊಡನೆ ಸಂಭಾಷಿಸುತ್ತಿರುವಂತೆ ತೋರುತ್ತದೆ. ಅನೇಕ ನುರಿತ ಅರಿತ ವಿದ್ವಾಂಸರು ಭಾಷಾಂತರ ಮಾಡಿದ್ದರೂ ಈ ಕಾರ್ಯ ಎಷ್ಟು ಕಷ್ಟಕರವಾದದ್ದೆನ್ನುವ, ಜವಾಬ್ದಾರಿಯುತವಾದದ್ದೆನ್ನುವ ವಿಚಾರ ಈ ಸಂಪುಟಗಳನ್ನೋದಿದವರಿಗೆ ಅರ್ಥವಾಗದಿರದು. 'ಮಹಾತ್ಮ' ಗ್ರಂಥದ ಕನ್ನಡ ಮುದ್ರಣದ ಪ್ರಕಟನೆಯ ಜತೆಜತೆಗೆ 'The Last Phase' ಎಂಬ ಪ್ಯಾರಿಲಾಲರ ಗ್ರಂಥದ ಭಾಷಾಂತರವನ್ನೂ ಪ್ರಕಟಿಸಲಾಗುತ್ತದೆ. ಮಾಜಿ ವಿದ್ಯಾಸಚಿವರಾದ ಶ್ರೀಮಾನ್ ಕೆ. ವಿ. ಶಂಕರಗೌಡರು ಆ ಗ್ರಂಥದ ಭಾಷಾಂತರ ಕಾರ್ಯದಲ್ಲಿ ತೊಡಗಿದ್ದಾರೆ. ಇಷ್ಟೆಲ್ಲ ಯೋಜನೆಯ ಯಶಸ್ಸಿಗೆ ಕಾರಣರಾದವರು ದಕ್ಷ ನಿರ್ದೇಶಕರಾದ ಡಾ. ತಿಪ್ಪೇರುದ್ರ ಸ್ವಾಮಿಗಳು. ಇವರಿಗೆಲ್ಲ ನಾನು ವಿಶ್ವವಿದ್ಯಾನಿಲಯದ ಪರವಾಗಿ ಹೃತ್ಪೂರ್ವಕ ವಂದನೆಗಳನ್ನರ್ಪಿಸುತ್ತೇನೆ.

**ಕುಲಪತಿ ಭವನ**
**೨೩-೪-೧೯೭೪**

**ದೇ. ಜವರೇಗೌಡ**

# ಕನ್ನಡಕೃತಿ, ಕೃತಜ್ಞತೆ

ಶ್ರೀ ತೆಂಡುಲ್ಕರ್ ಅವರಿಂದ ಇಂಗ್ಲಿಷಿನಲ್ಲಿ ರಚಿತವಾದ 'ಮಹಾತ್ಮ' ಗ್ರಂಥದ ಎಂಟೂ ಸಂಪುಟಗಳನ್ನು ಕನ್ನಡಕ್ಕೆ ತರುವ ಬೃಹದ್ ಯೋಜನೆಯ ಅಂಗವಾಗಿ ಮೊದಲ ಸಂಪುಟ ಈಗಾಗಲೇ ಪ್ರಕಟವಾಗಿದೆ. ಎರಡನೆಯ ಸಂಪುಟ ಈಗ ಪ್ರಕಟವಾಗುತ್ತಿದೆ. ನನಗೆ ಮೊದಲು, ಗಾಂಧೀ ಭವನದ ನಿರ್ದೇಶಕರಾಗಿದ್ದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು, ವಿಶ್ವವಿದ್ಯಾನಿಲಯದ ಔದಾರ್ಯದೊಡನೆ, ಈ ಕೆಲಸವನ್ನು ಆರಂಭಿಸಿದರು. ಇನ್ನು ಎರಡುಮೂರು ವರ್ಷಗಳಲ್ಲಿ ಎಲ್ಲ ಸಂಪುಟಗಳನ್ನೂ ಹೊರತರುವ ಆಶಯವನ್ನು ಗಾಂಧೀ ಭವನ ತಳೆದಿದೆ. ಇಂತಹ ಒಂದು ಮಹತ್ತರವಾದ ಕಾರ್ಯ, ಗಾಂಧೀ ಭವನದಿಂದ ನಡೆಯಲು ಸಾಧ್ಯವಾದುದಕ್ಕೆ ವಿಶ್ವವಿದ್ಯಾನಿಲಯದ ಕುಲಪತಿಗಳ ಸಾಹಸವೇ ಕಾರಣ. ಅವರು ಕೈಕೊಂಡ ಮಹತ್ಕಾರ್ಯಗಳಲ್ಲಿ ಇದೂ ಒಂದಾಗಿದೆ. ಗಾಂಧೀಭವನಕ್ಕೆ ಈ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ, ಮತ್ತು ಈ ಗ್ರಂಥಕ್ಕೆ ವಿಚಾರಪೂರ್ಣವಾದ ಮುನ್ನುಡಿಯನ್ನು ಬರೆದುಕೊಟ್ಟುದಕ್ಕಾಗಿ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಗಾಂಧೀಭವನದ ಪ್ರಕಟನ ಸಮಿತಿ ತುಂಬಾ ಉಪಯುಕ್ತವಾದ ಸಲಹೆಗಳನ್ನಿತ್ತು ಮಾರ್ಗದರ್ಶನ ಮಾಡಿದೆ. ಒಂದೊಂದು ಸಂಪುಟವನ್ನು ಮೂರು ಜನ ಭಾಷಾಂತರಕಾರರಿಗೆ ವಹಿಸಬೇಕೆಂದು ಅಲ್ಲಿ ತೀರ್ಮಾನಿಸಲಾಯಿತು. ಅಂತೆಯೇ ಮೊದಲನೆಯ ಸಂಪುಟವನ್ನು ಶ್ರೀಗಳಾದ ಜಿ. ವಿ. ನಾರಾಯಣಮೂರ್ತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಪ್ರಭುಶಂಕರ–ಇವರಿಗೆ ವಿಭಾಗಿಸಿ ಕೊಡಲಾಯಿತು.

ಈ ಎರಡನೆಯ ಸಂಪುಟವನ್ನು ಶ್ರೀ ಕೆ. ಎಸ್. ನಾರಾಯಣಸ್ವಾಮಿ, ಶ್ರೀ ಬಿ. ಆರ್. ಪ್ರಾಣೇಶರಾವ್ ಮತ್ತು ಶ್ರೀಮತಿ ಶಶಿಕಲಾ ಚಂದ್ರಶೇಖರ್ ಇವರಿಗೆ ವಹಿಸಲಾಯಿತು.

ಪ್ರಾರಂಭದಿಂದ ಹಿಡಿದು 'ಜುಹುವಿನಲ್ಲಿ' ಎನ್ನುವ ಭಾಗವೂ ಸೇರಿದಂತೆ ಈ ಗ್ರಂಥದ ಮೊದಲ ೨೦೩ ಪುಟಗಳನ್ನು ಶ್ರೀ ಕೆ. ಎಸ್. ನಾರಾಯಣಸ್ವಾಮಿಗಳವರು ಭಾಷಾಂತರಿಸಿದ್ದಾರೆ.

'ಪರಾಭವ; ಅಭಿಮಾನಭಂಗ'ದಿಂದ 'ಯಾತ್ರಿಕನ ಮುನ್ನಡೆ' ವರೆಗೆ ಅಂದರೆ ಪುಟ ೨೦೪ರಿಂದ ೪೧೮ರ ವರೆಗೆ ಶ್ರೀ ಬಿ. ಆರ್. ಪ್ರಾಣೇಶರಾವ್ ಅವರು ಅನುವಾದಿಸಿದ್ದಾರೆ.

'ಅವಿಶ್ರಾಂತಿ' ಎನ್ನುವುದರಿಂದ ಹಿಡಿದು ಕೊನೆಯ ವರೆಗೆ ಅಂದರೆ ೪೧೯ರಿಂದ ೬೧೨ರ ವರೆಗೆ –ಇದರ ಅನುವಾದಕರು ಶ್ರೀಮತಿ ಶಶಿಕಲಾ ಚಂದ್ರಶೇಖರ್ ಅವರು.

ಸಾಧ್ಯವಾದಷ್ಟು ಮಟ್ಟಿಗೆ ಭಾಷೆಯ ಏಕರೂಪತೆಯನ್ನು ಕಾಯ್ದುಕೊಳ್ಳುವುದರತ್ತ ಗಮನವಿತ್ತು ಭಾಷಾಂತರದಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿರುವುದರ ಹೊರತಾಗಿ,

ಭಾಷಾಂತರಕಾರರ ಭಾಷೆಯನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ಭಾಷಾಂತರಕಾರರು ತುಂಬಾ ಶ್ರದ್ಧೆಯಿಂದ ಈ ಕೆಲಸವನ್ನು ನಿರ್ವಹಿಸಿಕೊಟ್ಟಿದ್ದಾರೆ. ಅವರಿಗೆ ವಂದನೆಗಳು.

ಈ ಗ್ರಂಥದ ಮುದ್ರಣ ಸುಮಾರು ಅರ್ಧದಷ್ಟು ಮುಂಗಿದಿರುವಾಗ ಡಾ. ಎಚ್. ತಿಪ್ಪೇರುದ್ರ ಸ್ವಾಮಿ ಅವರು ಶಿವಮೊಗ್ಗ ಜಿಲ್ಲೆಯ ಬಿ. ಆರ್. ಪ್ರಾಜೆಕ್ಟ್‌ನ ಸ್ನಾತಕೋತ್ತರ ಕೇಂದ್ರದ ಕನ್ನಡ ಪ್ರಾಧ್ಯಾಪಕರಾಗಿ ನೇಮಕ ಹೊಂದಿ ಗಾಂಧೀ ಭವನದ ಗೌರವ ನಿರ್ದೇಶಕ ಸ್ಥಾನದಿಂದ ನಿರ್ಗಮಿಸಬೇಕಾಯಿತು. ಆದರೂ ಈ ಸಂಪುಟವನ್ನು ಅವರೇ ಪೂರ್ತಿಗೊಳಿಸಬೇಕೆಂಬ ಸಲಹಾಸಮಿತಿಯ ಅಪೇಕ್ಷೆಯಂತೆ ಈ ಕೆಲಸವನ್ನು ಅವರು ಯಶಸ್ವಿಯಾಗಿ ಮುಂದುವರಿಸಿದರು. ಸಂಪಾದನೆಯ ಈ ಕೆಲಸವನ್ನು ಅವರು ಅತ್ಯಂತ ಶ್ರದ್ಧೆವಹಿಸಿ ಚೆನ್ನಾಗಿ ಮಾಡಿಕೊಟ್ಟಿದ್ದಾರೆ. ಅವರಿಗೆ ವಂದನೆಗಳು ಸಲ್ಲುತ್ತವೆ.

ಇದನ್ನು ಕನ್ನಡದಲ್ಲಿ ಪ್ರಕಟಿಸಲು ಒಪ್ಪಿಗೆಯನ್ನಿತ್ತ, ಭಾರತ ಸರ್ಕಾರದ ಪ್ರಕಟನ ಶಾಖೆ ಮತ್ತು 'ನವಜೀವನ ಟ್ರಸ್ಟ್'ಗಳಿಗೂ, ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಎಚ್. ನರಸಣ್ಣ ಮತ್ತು ಅವರ ಸಿಬ್ಬಂದಿವರ್ಗದವರಿಗೂ, ಒಂದಲ್ಲ ಒಂದು ರೀತಿಯಲ್ಲಿ ನೆರವಾದ ಇತರ ಎಲ್ಲರಿಗೂ ಕೃತಜ್ಞತೆ ಸಲ್ಲಬೇಕು.

ಗಾಂಧೀ ಭವನ
ಮೈಸೂರು ವಿಶ್ವವಿದ್ಯಾನಿಲಯ
೧೪–೫–೭೫

**ನಾಡಿಗ ಕೃಷ್ಣಮೂರ್ತಿ**
ಗೌರವ ನಿರ್ದೇಶಕರು

# ಪರಿವಿಡಿ


| | ಪುಟ |
|---|---|
| ಹೊಸ ಯುಗಾರಂಭ ... | ೧ |
| ಒಂದು ವರ್ಷದಲ್ಲಿ ಸ್ವರಾಜ್ಯ ... | ೨೩ |
| ಮೊದಲ ಪರೀಕ್ಷೆ ... | ೪೪ |
| ನಿಧಾನವಾಗಿ ಮುನ್ನಡೆಯಿರಿ ... | ೪೯ |
| ಅರೆನಗ್ನ ಫಕೀರ ... | ೮೫ |
| ಚೌರಿ–ಚೌರ | ೧೧೨ |
| ಮಹಾವಿಚಾರಣೆ ... | ೧೪೦ |
| ಯರವಾಡದಲ್ಲಿ ... | ೧೫೬ |
| ಸ್ವರಾಜ್ಯ ಪಕ್ಷ ... | ೧೫೯ |
| ಮರಣದಿಂದ ಪಾರಾದುದು ... | ೧೭೬ |
| ಜುಹುವಿನಲ್ಲಿ ... | ೧೮೮ |
| ಪರಾಭವ; ಅಭಿಮಾನಭಂಗ ... | ೨೦೪ |
| ಐಕ್ಯತೆಗಾಗಿ ಪ್ರಾಯಶ್ಚಿತ್ತ ... | ೨೨೫ |
| ಬೆಳಗಾಂ ಕಾಂಗ್ರೆಸ್ ... | ೨೫೦ |
| ಪೂರ್ವಸಿದ್ಧತೆಯ ಪ್ರವಾಸ ... | ೨೬೭ |
| ದೇಶಬಂಧು ಚಿರಾಯುವಾಗಲಿ ... | ೨೯೧ |
| ಕಾಲದೊಂದಿಗೆ ಮುನ್ನಡೆ ... | ೩೧೩ |
| ಸತ್ಯಶೋಧನೆ ... | ೩೩೧ |
| ವರ್ಷಪರ್ಯಂತ ಮೌನ ... | ೩೪೫ |
| ವಿಧಾನ ಮಂಡಲದ ಕ್ಷೇತ್ರದಲ್ಲಿ ... | ೩೬೦ |
| ಮೌನದ ಅಂತ್ಯ ... | ೩೭೫ |
| ಯಾತ್ರಿಕನ ಮುನ್ನಡೆ ... | ೪೦೧ |
| ಅವಿಶ್ರಾಂತಿ ... | ೪೧೯ |
| ದರಿದ್ರನಾರಾಯಣನಿಗಾಗಿ ... | ೪೪೭ |
| ಮರಳಿ ಆಶ್ರಮಕ್ಕೆ ... | ೪೭೭ |
| ನವಪ್ರೇರಣೆ ... | ೫೦೬ |
| ಅನುಗ್ರಹವರ್ಷ ... | ೫೨೫ |
| ವಾತಾವರಣದಲ್ಲಿ ಸಿಡಿಲು ... | ೫೫೫ |
| ಪೂರ್ಣ ಸ್ವರಾಜ್ಯ ... | ೫೭೬ |

# ಹೊಸ ಯುಗಾರಂಭ

## ೧೯೨೦

ಆಗಸ್ಟ್ ಒಂದು ೧೯೨೦ ರಂದು ಗಾಂಧೀಜಿ ಅಸಹಕಾರ ಚಳುವಳಿಗೆ ಕರೆಯಿತ್ತರು. ಆ ದಿನ ಅಂದಿನ ವೈಸರಾಯ್ ಲಾರ್ಡ್ ಚೆಲ್ಮಸ್ ಫರ್ಡ್‌ಗೆ ಪತ್ರ ಬರೆದು ತಮ್ಮ ಬಿರುದು ಬಾವಲಿಗಳನ್ನೆಲ್ಲಾ ಹಿಂತಿರುಗಿಸಿದರು.

"ನಿಮ್ಮ ಹಿಂದಿನ ವೈಸ್‌ರಾಯ್ ನನಗೆ ದಕ್ಷಿಣ ಆಫ್ರಿಕಾದಲ್ಲಿನ ಮಾನವೀಯ ಸೇವೆಗಾಗಿ ಕೊಟ್ಟಿದ್ದ 'ಕೈಸರ್–ಇ–ಹಿಂದ್' ಸುವರ್ಣ ಪದಕ, ೧೯೦೬ರಲ್ಲಿ ಭಾರತೀಯ ವೈದ್ಯ ಸಹಾಯ ಸ್ವಯಂಸೇವಕ ದಳದ ಪದಾಧಿಕಾರಿ ಸೇವೆಗಾಗಿ 'ಝೂಲು ಯುದ್ಧ ಪದಕ' ಮತ್ತು ೧೮೯೯–೧೯೦೦ರ ಬೋಯರ್ ಯುದ್ಧ ಸಮಯಕ್ಕೆ ಗಾಯಾಳು ಸಾಗಾಣಿಕೆಯ ಭಾರತೀಯ ಸ್ವಯಂಸೇವಕ ಪಡೆಯ ಮೇಲ್ವಿಚಾರಕನಾಗಿ ಮಾಡಿದ ಸೇವೆಗಾಗಿ ಪಡೆದ 'ಬೋಯರ್ ಯುದ್ಧ ಪದಕ' ಇವುಗಳನ್ನು ಕಿಂಚಿತ್ ಖಿನ್ನತೆ ಯಿಂದಲೇ ತಮಗೆ ಹಿಂತಿರುಗಿಸುತ್ತಿದ್ದೇನೆ. ಖಿಲಾಫತ್ ಚಳುವಳಿಯ ಅಂಗವಾಗಿ ಈ ದಿನಪ್ರಾರಂಭಿಸಿದ ಅಸಹಕಾರ ಕಾರ್ಯಕ್ರಮಕ್ಕನುಗುಣವಾಗಿ ನಾನಿವುಗಳನ್ನು ಹಿಂದಕ್ಕೆ ಕೊಡುವ ಸಾಹಸ ಮಾಡಿದ್ದೇನೆ. ಈ ಗೌರವ ಪ್ರಶಸ್ತಿಗಳು ಬೆಲೆಯುಳ್ಳವಾದರೂ ನನ್ನ ಮುಸಲ್ಮಾನ ಸಹೋದರರು ಮತೀಯ ನಂಬಿಕೆಗಳಿಗೆ ಉಂಟಾಗಿರುವ ಅನ್ಯಾಯ ಕ್ಕಾಗಿ ಬವಣೆ ಪಡುತ್ತಿರುವ ಈ ಸಮಯದಲ್ಲಿ ಅವುಗಳನ್ನು ಧರಿಸಲು ನನ್ನ ಆತ್ಮ ಒಪ್ಪದು. ಈ ಸಾರ್ವಭೌಮ ಸರ್ಕಾರ ಖಿಲಾಫತ್ ವಿಷಯದಲ್ಲಿ ನಿರ್ಲಜ್ಜೆಯ, ಅನೀತಿ ಯುತ ಅನ್ಯಾಯ ಕ್ರಮ ತೆಗೆದುಕೊಂಡಿದೆ ಎಂದು ನನ್ನ ಅಭಿಪ್ರಾಯ. ಕಳೆದ ತಿಂಗಳಿ ನಲ್ಲಾದ ಘಟನೆಗಳು ಇದನ್ನೇ ಸಮರ್ಥಿಸುತ್ತವೆ. ಒಂದು ಹೀನ ಕೃತ್ಯದಿಂದ ಮತ್ತೊಂದಕ್ಕೆ ಸಾಗುತ್ತಾ ಮತ್ತೆ ಮತ್ತೆ ಅನೀತಿಯನ್ನೇ ಸಮರ್ಥಿಸಿ ವಾದ ಮಾಡುತ್ತಾ ಸಾಗಿರುವ ಇಂಥ ಸರ್ಕಾರದಲ್ಲಿ ನನ್ನ ಗೌರವ, ವಿಶ್ವಾಸ ಏನೂ ಉಳಿದಿಲ್ಲ.

"ಪಂಜಾಬಿನ ಪ್ರಶ್ನೆಗೆ ನೀವು ಹಾಗೂ ಸಾಮ್ರಾಜ್ಯ ಸರ್ಕಾರ ತಾಳಿದ ಧೋರಣೆ ನನಗೆ ಇನ್ನೂ ತೀವ್ರ ಅಸಮಾಧಾನವನ್ನುಂಟುಮಾಡಿದೆ. ಮಾನ್ಯರಾದ ತಮಗೆ ಗೊತ್ತಿ ರುವಂತೆ ಏಪ್ರಿಲ್ ೧೯೧೯ರ ಪಂಜಾಬ್ ಗಲಭೆಗಳ ವಿಚಾರಣೆಗಳಿಗೆ ನೇಮಿಸಿದ ಕಾಂಗ್ರೆಸ್ ಸಮಿತಿಯ ಸದಸ್ಯನಾಗಿ ಅವುಗಳ ಮೂಲ ಕಾರಣ ವಿಚಾರಿಸುವ ಅವಕಾಶ ನನಗಿತ್ತು. ನನ್ನ ಖಚಿತ ಅಭಿಪ್ರಾಯದಲ್ಲಿ 'ಸರ್ ಮೈಕೆಲ್ ಓಡ್ವೈಯರ್' ಪಂಜಾಬಿನ ಲೆಫ್ಟಿನೆಂಟ್ ಗೌರ್ನರ ಪದವಿಗೆ ಸರ್ವಥಾ ಅನರ್ಹ ವ್ಯಕ್ತಿ. ಅಮೃತ್‌ಸರದಲ್ಲಿ ಜನ ಜಂಗುಳಿಯ ಪ್ರಕೋಪಕ್ಕೆ ಕಾರಣವಾದುದು ಬಹಳ ಮಟ್ಟಿಗೆ ಆತನ ಆಡಳಿತ ದುರ್ನೀತಿ ಗಳು. ಜನ ದಂಗೆಯೆದ್ದು ಮಾಡಿದ ಅತ್ಯಾಚಾರಗಳೂ ಕೂಡ ಅಕ್ಷಮ್ಯವೆ. ಬೆಂಕಿ

ಹಚ್ಚಿದ್ದು, ಐವರು ನಿರಪರಾಧಿ ಇಂಗ್ಲಿಷರ ಕೊಲೆ ಮತ್ತು ಕುಮಾರಿ ಷೇರ್ ವುಡ್ಡಳ ಮೇಲೆ ನಡೆದ ಹೇಯವಾದ ಹೇಡಿವರ್ತನೆ ಇವು ಖಂಡನೀಯ ದುಷ್ಕೃತ್ಯಗಳು. ಆದರೆ ಜನರಲ್ ಡೈಯರ್, ಕರ್ನಲ್ ಫ್ರಾಂಕ್ ಜಾನ್ಸನ್, ಕರ್ನಲ್ ಓಬ್ರಾಯನ್, ಮೀ. ಬೋಸ್ವರ್ತ ಸ್ಮಿತ್, ರಾಯ್ ಶ್ರೀರಾಮ್ ಸೂತ್, ಮಿ. ಮಲ್ಲಿಕ್ ಖಾನ್ ಮತ್ತು ಇತರ ಅಧಿಕಾರಿಗಳು ತೆಗೆದುಕೊಂಡ ಕ್ರೂರ ಸಶಸ್ತ್ರ ಪ್ರತೀಕಾರ ದಮನ ಕ್ರಮಗಳು ಜನತೆಯ ಅಪರಾಧಕ್ಕೆ ವಿಪರೀತ ಮೀರಿದ ಪ್ರಮಾಣದ್ದು. ಆಧುನಿಕ ಕಾಲದಲ್ಲಿ ಕಂಡರಿಯದ ಅಮಾನುಷ ಕ್ರೌರ್ಯ, ಅಸಹನೀಯ ಹಿಂಸೆಗಳು, ದುರುದ್ದೇಶಕ್ಕಾಗಿಯೇ ನಡೆದ ಅಕೃತ್ಯ ಎನಿಸುವಂತೆ ನಡೆದಿದೆ ಈ ದಮನ ಕಾರ್ಯ. ಮಾನ್ಯರಾದ ತಾವು ಈ ಅಧಿಕಾರಿಗಳ ಅಕೃತ್ಯದ ಬಗ್ಗೆ ತೋರಿದ ಹಗುರ ಮನೋಭಾವ, ಸರ್ ಮೈಕೆಲ್ ಓಡ್ವಯರರ ದೋಷ ವಿಮೋಚನೆ, ಮಿ. ಮಾಂಟೆಗು ಅವರ ವರದಿ, ಇವು ಅಸಹನೀಯ, ಎಲ್ಲಕ್ಕಿಂತ ಹೆಚ್ಚಾಗಿ ಪಂಜಾಬ್ ಘಟನೆಗಳ ಬಗ್ಗೆ ನಾಚಬೇಕಾದ ಅಜ್ಞಾನದಿಂದಲೂ· ಭಾರತೀಯರ ಮನೋವೇದನೆಗೆ ಧಿಕ್ಕಾರ ಮನೋಭಾವದಿಂದಲೂ 'ಹೌಸ್ ಆಫ್ ಲಾರ್ಡ್ಸ್' ಸಭೆ ತಳೆದ ನಿಲುವು ಈ ಚಕ್ರಾಧಿಪತ್ಯದ ಭವಿಷ್ಯದ ಬಗ್ಗೆಯೇ ನನಗೆ ತೀವ್ರ ಕಳವಳವನ್ನುಂಟುಮಾಡಿದೆ. ಇಂದಿನ ಸರ್ಕಾರ ನನ್ನ ವಿಶ್ವಾಸವನ್ನು ಕಳೆದುಕೊಂಡಿದೆ. ನಿಷ್ಠೆಯಿಂದಲೂ ತುಂಬು ಹೃದಯದಿಂದಲೂ ಈ ವರೆಗೆ ನಾನು ನೀಡುತ್ತಿದ್ದ ಸಹಕಾರ ವನ್ನೆಲ್ಲ ನಿಲ್ಲಿಸುವಂತೆ ಬಾಂಧವ್ಯವನ್ನು ಕಡಿದು ಹಾಕಿದೆ.

"ಮನವಿಗಳು, ನಿಯೋಗಗಳು ಮುಂತಾದ ಕಾರ್ಯಗಳ ಮೂಲಕ ಮಾಡುವ ಸಾಧಾರಣ ಚಳುವಳಿಗಳಿಂದ ಈ ಸರ್ಕಾರ ತನ್ನ ಅಕೃತ್ಯಗಳಿಗೆ ಪಶ್ಚಾತ್ತಾಪ ಪಡು ವುದೆಂದು ನನಗೆ ಅನಿಸುವುದಿಲ್ಲ. ತನ್ನ ಆಡಳಿತಕ್ಕೊಳಪಟ್ಟ ನಾಗರಿಕರ ಕ್ಷೇಮಾಭ್ಯುದಯ ಗಳಿಗೆ ಸಂಪೂರ್ಣ ವಿಮುಖವಾಗಿರುವ ಭಾರತ ಸರ್ಕಾರದಂತಹ ಸರ್ಕಾರಕ್ಕೆ ಅದು ತಿಳಿಯುವುದು ದುಸ್ಸಾಧ್ಯ. ಯಾವುದಾದರೂ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಖಿಲಾಫತ್ ಮತ್ತು ಪಂಜಾಬದಂತಹ ಅಕೃತ್ಯಗಳನ್ನು ಕ್ಷಮಿಸಿಬಿಡುವ ಘಟನೆ ನಡೆದಿದ್ದರೆ ಒಂದು ರಕ್ತಕ್ರಾಂತಿಯೇ ಆಗುತ್ತಿತ್ತು. ಇಂಥ ಧಾರುಣ ಅಕೃತ್ಯಗಳನ್ನು ಸಹಿಸುವಂಥ ನಿರ್ವೀರ್ಯತೆ ಪ್ರಕಟವಾದಾಗ ಆ ಜನ ಸರ್ವತ್ಯಾಗಕ್ಕೂ ಸಿದ್ಧರಾಗಿ ಅದನ್ನು ಪ್ರತಿಭಟಿಸುತ್ತಿದ್ದರು. ಆದರೆ ಭಾರತದ ಅರ್ಧಜನ ತೀರ ದುರ್ಬಲರು ; ಹಿಂಸಾತ್ಮಕ ಪ್ರತಿಭಟನೆಯಲ್ಲಿ ತೊಡಗಲಾರರು ಮತ್ತೆ ಅರ್ಧಜನಕ್ಕೆ ಹೀಗೆ ಪ್ರತಿಭಟಿಸಲು ಮನಸ್ಸಿಲ್ಲ. ಆದ್ದರಿಂದಲೇ ಅಸಹಕಾರದ ಚಿಕಿತ್ಸೆಯನ್ನು ಸೂಚಿಸುವ ಸಾಹಸವನ್ನು ನಾನು ಮಾಡಿದ್ದೇನೆ. ಸರ್ಕಾರದೊಡನೆ ಯಾವ ಕಾರ್ಯದಲ್ಲೂ ಸಹಕರಿಸಬಾರ ದೆಂಬುವರಿಗೆ ಇಲ್ಲಿ ಮಾರ್ಗವಿದೆ. ಯಾವ ಹಿಂಸೆಗೂ ಎಡೆಗೊಡದ ಸುವ್ಯವಸ್ಥಿತ ಅಸಹಕಾರ ನಿಸ್ಸಂದೇಹವಾಗಿ ಸರ್ಕಾರವನ್ನು ಮಣಿಸಿ ತನ್ನ ಹೆಜ್ಜೆಯನ್ನು ಹಿಂದಕ್ಕಿಡು ವಂತೆ ಮಾಡಿ ಅಕೃತ್ಯಗಳನ್ನು ಸರಿಪಡಿಸಬಲ್ಲುದು. ಜನತೆಯನ್ನು ಅಸಹಕಾರ ಮಾರ್ಗ ದಲ್ಲಿ ಕರೆದೊಯ್ಯಲು ನಾನು ಪ್ರಯತ್ನ ಮಾಡುತ್ತಿರುವಾಗ, ನೀವು ಈಗಲೂ ನ್ಯಾಯ

ನಿಷ್ಠರಾಗಿ ವರ್ತಿಸುವ ಸಾಧ್ಯತೆ ಉಂಟೆಂಬ ಆಸೆ ನನ್ನಲ್ಲಿ ಬತ್ತಿಹೋಗಿಲ್ಲ. ಆದ್ದರಿಂದ ಮಾನ್ಯ ಶ್ರೇಷ್ಠರಾದ ತಾವು ಈ ಕೂಡಲೇ ಜನರ ಅಂಗೀಕೃತ ಪ್ರತಿನಿಧಿಗಳನ್ನು ಸಭೆ ಸೇರಿಸಿ ಸಮಾಲೋಚಿಸಿ ಮುಸ್ಲಿಮರಿಗೆ ಸಮಾಧಾನಕರವಾದ ಹಾಗೂ ನಿರ್ಭಾಗ್ಯ ಪಂಜಾಬಕ್ಕೂ ಪರಿಹಾರ ದೊರಕುವಂತಹ ಯೋಗ್ಯ ಮಾರ್ಗವೊಂದನ್ನು ಶೋಧಿಸ ಬೇಕೆಂದು ನಾನು ಅತ್ಯಂತ ಗೌರವಪೂರ್ವಕವಾಗಿ ಪ್ರಾರ್ಥಿಸುತ್ತೇನೆ."

ಮಾಳವೀಯರಂತಹ ಹಳೆಯ ಕಾಂಗ್ರೆಸಿಗರು ಈ ಚಳುವಳಿ ಪ್ರಾರಂಭಿಸಲು ಸಮ್ಮತಿಸಿರಲಿಲ್ಲ. ಅದಕ್ಕೆ ಗಾಂಧೀಜಿ "ಅಸಹಕಾರ ನಿರ್ದೇಶನ ಸಮಿತಿಯು ಸಿದ್ಧ ಗೊಳಿಸಿರುವ ಈ ಕ್ರಮದಿಂದ ಹಿಂದೆ ಸರಿಯಬಾರದೆಂದು ನನ್ನ ಉನ್ನತ ಕರ್ತವ್ಯ ನಿಷ್ಠೆ ಹೇಳುತ್ತದೆ. ಜೀವನದಲ್ಲಿ ಹಲವು ಬಾರಿ ಹೀಗೆ ಯಾರು ತಡೆದರೂ ಮುನ್ನುಗ್ಗಲೇ ಬೇಕಾದ ಸಮಯ ಬರುತ್ತದೆ. ಅತಿ ನಿಕಟ ಸ್ನೇಹಿತರು ಇದಕ್ಕೆ ಸಮ್ಮತಿಸದಿರಬಹುದು, ಧರ್ಮ ಸಂಕಟದ ಸಮಯದಲ್ಲಿ ನಮ್ಮ ಅಂತರ್ವಾಣಿಯೇ ನಮಗೆ ಸರ್ವೋಚ್ಚ ನಿರ್ಣಯಕಾರಿಯಾದ ಅವಲಂಬನವಾಗಬೇಕು" ಎಂದರು."

'ಕಾಂಗ್ರೆಸ್ ಮತ್ತು ಅಸಹಕಾರ' ಎಂಬ ಶೀರ್ಷಿಕೆಯಲ್ಲಿ ಹೀಗೆ ಬರೆದರು:

"ಸದ್ಯದಲ್ಲೇ ಕಾಂಗ್ರೆಸ್ ಸಮಾವೇಶವಾಗುತ್ತದೆ, ಆದ್ದರಿಂದ ಅಸಹಕಾರ ಕಾರ್ಯ ಕ್ರಮದ ಬಗ್ಗೆ ಅದು ಪೂರ್ಣವಾಗಿ ವಿಮರ್ಶಿಸಿ ನಿರ್ಣಯ ಮಾಡಲಿ; ಎಂಬ ಕಾರಣ ಕೊಟ್ಟು ತನ್ನ ಕಾರ್ಯವನ್ನು ನಿಲ್ಲಿಸಲು ಹೇಳಿದಂತಿದೆ. ಪಂಡಿತ ಮಾಳವೀಯರು ಕಾಂಗ್ರೆಸ್ಸಿನ ನಿರ್ಣಯವನ್ನೇ ಕಾಯುವುದು ಒಳ್ಳೆಯದು ಎನ್ನುತ್ತಾರೆ. ಆದರೆ ನನ್ನ ವಿನಮ್ರ ಅಭಿಪ್ರಾಯದಲ್ಲಿ ಇದು ಸರಿಯೆನಿಸದು. ವ್ಯಕ್ತಿಯೊಬ್ಬ ಯಾವುದರ ಬಗ್ಗೆ ಒಂದು ನಿಸ್ಸಂಶಯ ನಿರ್ಣಯಕ್ಕೆ ಬಂದಿದ್ದಾನೋ ಅದರಂತೆ ನಡೆಯಲು ಆತ ಸಿದ್ಧ ನಾಗಬೇಕು. ಪೂರ್ವಭಾವಿಯಾಗಿ ಕಾಂಗ್ರೆಸ್ಸಿನೊಡನೆ ಸಮಾಲೋಚಿಸುವುದು ತನ್ನ ಕರ್ತವ್ಯವೆಂದು ಆತ ಭಾವಿಸಲಾರ. ಹೀಗೆ ಹಿಂಜರಿಯುವುದರಿಂದ ನಿಷ್ಕ್ರಿಯತೆಗೆ ದಾರಿಯಾಗುತ್ತದೆ.

"ಕಾಂಗ್ರೆಸ್ ಒಂದು ಇಡೀ ರಾಷ್ಟ್ರದ ಮುಖವಾಣಿ. ಒಬ್ಬ ಸದಸ್ಯ ತನ್ನ ಧೋರಣೆ ಗಳನ್ನಾಗಲೀ, ಕಾರ್ಯಕ್ರಮಗಳನ್ನಾಗಲೀ, ಕಾಂಗ್ರೆಸ್ ಅಂಗೀಕರಿಸಬೇಕೆಂದು ಬಯಸಿದರೆ, ಜನಾಭಿಪ್ರಾಯವನ್ನು ತನ್ನ ಪರವಾಗಿ ರೂಢಿಸುತ್ತಾನೆ. ಸಹಜವಾಗಿಯೇ ಅವುಗಳನ್ನು ಚರ್ಚಿಸಿ ನಿರ್ಣಯಿಸಲು ಕಾಂಗ್ರೆಸ್ಸನ್ನು ಕೋರುತ್ತಾನೆ. ಆದರೆ ಯಾವುದೇ ಒಂದು ನೀತಿಯಲ್ಲಿ ಒಂದು ಕಾರ್ಯದಲ್ಲಿ ಅಚಲ ಅದಮ್ಯ ಶ್ರದ್ಧೆಯುಳ್ಳವನಾದರೆ ಕಾಂಗ್ರೆಸ್ಸಿನ ನಿರ್ಣಯ ಘೋಷಣೆಗಾಗಿ ಕಾದು ಕುಳಿತು ಕೊಳ್ಳುವುದು ಅಕ್ಷಮ್ಯ. ಅದಕ್ಕೆ ಬದಲಾಗಿ ಕ್ರಿಯಾಶೀಲನಾಗಿ ಮುನ್ನುಗ್ಗಿ ತನ್ನ ನಿಲುವಿನ ಔಚಿತ್ಯವನ್ನು ಸಾಧಿಸಿ, ರಾಷ್ಟ್ರ ಅದನ್ನು ಅಂಗೀಕರಿಸದೇ ಅನ್ಯಮಾರ್ಗವಿಲ್ಲ ಎನ್ನಿಸಬೇಕಾಗುತ್ತದೆ."

“ನನ್ನ ಆತ್ಮಸಾಕ್ಷಿಗೆ ವಿರೋಧವಾಗದಿದ್ದಾಗ ಮಾತ್ರ ಕಾಂಗ್ರೆಸ್ಸಿನ ನೀತಿಗೆ ಕರ್ತವ್ಯ ನಿಷ್ಠವಾಗಿ ಕೆಲಸ ಮಾಡಬೇಕೆಂದು ನನ್ನ ಶ್ರದ್ಧೆ ಹೇಳುತ್ತದೆ. ನನ್ನ ನೀತಿಯ ಪರವಾಗಿ ಅಲ್ಪ ಸಂಖ್ಯೆಯಿದ್ದಲ್ಲಿ ಕಾಂಗ್ರೆಸ್ಸಿನ ಹೆಸರನ್ನು ನಾನು ಬಳಸಲಾರೆ. ಯಾವುದೇ ನಿರ್ದಿಷ್ಟ ಸಮಸ್ಯೆಯ ಬಗ್ಗೆ ಕಾಂಗ್ರೆಸ್ ನಿರ್ಣಯಿಸಿದಾಗ ಸದಸ್ಯನಾದವನು ವ್ಯತಿರಿಕ್ತ ವಾಗಿ ಏನೂ ಮಾಡಲೇಬಾರದೆಂದಲ್ಲ. ಆತ ಬೇರೆ ದಾರಿ ತುಳಿದಾಗ ತಾನೇ ಜವಾಬ್ದಾರ ನಾಗಿ ಅಪಾಯಗಳಿಗೆ ಸಿದ್ಧನಾಗಿ, ಕಾಂಗ್ರೆಸ್ಸಿನ ಬೆಂಬಲ ತನಗಿಲ್ಲವೆಂದೇ ತಿಳಿದು ನಡೆಯ ಬೇಕು.

“ಕೆಲವು ಸಮಯಗಳಲ್ಲಿ ಕಾಂಗ್ರೆಸ್ಸಿನವನಾಗಲೀ ಮತ್ತಾವುದೆ ಸಾರ್ವಜನಿಕ ಸಂಸ್ಥೆಯಾಗಲೀ ನಿರ್ವಂಚನೆಯಿಂದ ತಮ್ಮ ಅಭಿಪ್ರಾಯ ಪ್ರಕಟಪಡಿಸಿ ಅದರಂತೆ ಕಾರ್ಯವನ್ನು ಕೈಗೊಂಡು ಅನಂತರ ಕಾಂಗ್ರೆಸ್ಸಿನ ತೀರ್ಪನ್ನು ನಿರೀಕ್ಷಿಸಲು ಸಿದ್ಧ ವಾಗಬೇಕಾಗುತ್ತದೆ. ರಾಷ್ಟ್ರಸೇವೆಗೆ ಅದೇ ಸರಿಯಾದ ಮಾರ್ಗ. ಚೆನ್ನಾಗಿ ವಿಚಾರ ಮಾಡಿದ ನೀತಿಗಳನ್ನು ಕಾರ್ಯಗತ ಮಾಡುವುದರಿಂದ ಕಾಂಗ್ರೆಸ್ಸಿನಂತಹ ಮಹತ್ಪ್ರಾ-ಲೋಚನ ಸಭೆಗೆ ನಿರ್ಣಯಕ್ಕೆ ಬರಲು ಸಹಾಯಕವಾಗುವ ಅಂಕಿ–ಅಂಶಗಳನ್ನು ನಾವು ಒದಗಿಸಬಹುದು. ನಮ್ಮಲ್ಲಿ ಕೆಲವರಿಗಾದರೂ ಒಂದು ನಿರ್ದಿಷ್ಟ ಕಾರ್ಯನೀತಿಯಲ್ಲಿ ಖಚಿತಾಭಿಪ್ರಾಯಗಳು ಮುಂಚಿತವಾಗಿಯೇ ಇರದಿದ್ದಲ್ಲಿ ಕಾಂಗ್ರೆಸ್ ಸ್ಪಷ್ಟರೀತಿಯಲ್ಲಿ ರಾಷ್ಟ್ರೀಯ ಅಭಿಪ್ರಾಯವೊಂದನ್ನು ಘೋಷಿಸಲಾರದು. ಒಬ್ಬೊಬ್ಬರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಮರೆಮಾಚಿಟ್ಟರೆ ಕಾಂಗ್ರೆಸ್ಸು ತನ್ನ ಅಭಿಪ್ರಾಯವನ್ನು ತಡೆ ಹಿಡಿಯಲೇ ಬೇಕಾಗುತ್ತದೆ.

“ಯಾವುದೇ ಸಂಸ್ಥೆಯಲ್ಲಿ ಮೂರು ವರ್ಗದ ಜನ ಇರುತ್ತಾರೆ. ನಿರ್ದಿಷ್ಟ ನೀತಿ ಯೊಂದರ ಬಗ್ಗೆ ಸಹಮತವುಳ್ಳವರು, ಖಚಿತವಾದ ವಿರೋಧಾಭಿಪ್ರಾಯವುಳ್ಳವರು, ಮತ್ತು ಅನಿಶ್ಚಿತ ಮನಸ್ಸಿನವರು. ಈ ಮೂರನೆಯ ದೊಡ್ಡ ಗುಂಪಿಗಾಗಿಯೇ ಕಾಂಗ್ರೆಸ್ ನಿರ್ಣಯಿಸುತ್ತದೆ. ಅಸಹಕಾರದ ಬಗ್ಗೆ ನನ್ನ ಅಭಿಪ್ರಾಯಗಳು ಪೂರ್ವ ನಿಶ್ಚಿತ. ಯಾವುದೇ ಸುಧಾರಣೆಗಾಗಲಿ ನಿರ್ಮಲ, ನಿಷ್ಕಳಂಕ, ಪವಿತ್ರ ಪರಿಸರ ಉಂಟು ಮಾಡುವುದು ಅಗತ್ಯ ಎಂದು ನನ್ನ ನಂಬಿಕೆ. ಈಗಿನ ನೀತಿಗೆಟ್ಟ ಅಸ್ವಚ್ಛ ಹೊಲಸಿನ ಪರಿಸರದಲ್ಲಿ ಅದು ಪ್ರಯೋಜನಕ್ಕೆ ಬಾರದು. ಖಿಲಾಫತ್ ಮತ್ತು ಪಂಜಾಬಿನ ಬಗ್ಗೆ ಒಂದು ನ್ಯಾಯ ನೀತಿಗೆ ಬರಲು ಸಾಮ್ರಾಜ್ಯಸರ್ಕಾರವನ್ನು ಒತ್ತಾಯದಿಂದ ಮಣಿ ಸುವುದು ನಮ್ಮ ಈಗಿನ ಪ್ರಥಮ ಕರ್ತವ್ಯವೆಂದು ನಾನು ಎಣಿಸುತ್ತೇನೆ. ಈ ಎರಡೂ ಸಂದರ್ಭಗಳಲ್ಲೂ ಮಾಡಿದ ಅನ್ಯಾಯಗಳನ್ನು ಅಸತ್ಯದಿಂದಲೂ ದುರಹಂಕಾರದಿಂದಲೂ ಸಮರ್ಥಿಸಿಕೊಳ್ಳಲಾಗುತ್ತಿದೆ. ಇಂಥ ಸರ್ಕಾರವನ್ನು ಅಸಹನೀಯ ಮಲಿನತೆಯಿಂದ ಸ್ವಚ್ಛ ಗೊಳಿಸುವುದು ರಾಷ್ಟ್ರದ ಅಗತ್ಯ ಕರ್ತವ್ಯ. ಹಾಗಲ್ಲದೇ ಅವೆರಡರ ಮಧ್ಯೆ ಸಹಕಾರ ಸಾಧ್ಯವಾಗದು. ಪ್ರಬಲ ವಿರೋಧ ಅಥವಾ ನಿರೋಧ ಮಾಡಲು ಪರಸ್ಪರ ಪೂರ್ವಭಾವಿ ಗೌರವ, ವಿಶ್ವಾಸಗಳು ಅಗತ್ಯ. ಈಗ ಆಳುತ್ತಿರುವ ಅಧಿಕಾರಶಾಹಿಗೆ

ನಮ್ಮ ಬಗ್ಗೆ, ನಮ್ಮ ಮನೋವೇದನೆಗಳ ಬಗ್ಗೆ, ಯಾವ ಗೌರವವೂ ಇಲ್ಲ. ನಮಗೆ ಅದರಲ್ಲಿ ವಿಶ್ವಾಸವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅವರೊಡನೆ ಸಹಕರಿಸುವುದು ಪಾಪಕಾರ್ಯ. ಈ ಬಗ್ಗೆ ನನ್ನ ನಿಲುವು ಅತ್ಯಂತ ಖಚಿತ. ಹೀಗಿರುವಾಗ ನನ್ನ ನೀತಿಯನ್ನೇ ಕಾರ್ಯಗತಗೊಳಿಸಿ ಪ್ರಬಲ ವಿರೋಧಶಕ್ತಿಯಾಗಲು ಕಾಂಗ್ರೆಸ್ ಅನುವಾಗುವಂತೆ ಸಹಾಯಕ ಸಾಧನಗಳನ್ನು ನಾನು ಒದಗಿಸಬಲ್ಲೆ.

"ನನ್ನ ದೃಷ್ಟಿಯಲ್ಲಿ ಅಸಹಕಾರ ಚಳುವಳಿಯನ್ನು ನಿಲ್ಲಿಸಿದರೆ ನಮ್ಮ ಮುಸಲ್ಮಾನ ಬಂಧುಗಳಿಗೆ ದ್ರೋಹ ಬಗೆದಂತೆ ಆಗುತ್ತದೆ. ಅವರಿಗಂತು ಇದು ಧಾರ್ಮಿಕ ಕರ್ತವ್ಯ. ಅವರು ಈ ಕೂಡಲೇ ಕಾರ್ಯೋನ್ಮುಖರಾಗಬೇಕು. ಕಾಂಗ್ರೆಸ್ ನಿರ್ಣಯವನ್ನು ಅವರು ಕಾಯಲು ಸಾಧ್ಯವಿಲ್ಲ. ಅವರ ಹೆಜ್ಜೆಯನ್ನು ಅನುಮೋದಿಸಿ, ದುಃಖಭಾಗಿಗಳಾಗಿ, ಅವರ ಹೊರೆಯನ್ನು ಸ್ವಲ್ಪ ತಗ್ಗಿಸಲು ಕಾಂಗ್ರೆಸ್ ಮುಂದಾಗುವುದೆಂದೇ ಅವರ ನಿರೀಕ್ಷೆಯಾಗಿದೆ. ತನ್ನ ನೀತಿ ಧೋರಣೆಯನ್ನು ಕಾಂಗ್ರೆಸ್ ನಿರ್ಧರಿಸಿಕೊಳ್ಳುವ ತನಕ ತಮ್ಮ ಕಾರ್ಯಾಚರಣೆಯನ್ನು ಅವರು ನಿಲ್ಲಿಸಲಾಗದು. ಅಥವಾ ಬೇರೆ ಕಾರಣಗಳಿಗಾಗಿ ಅದು ತಪ್ಪು ಹೆಜ್ಜೆ ಎಂದು ನಿಶ್ಚಿತವಾದಲ್ಲದೆ ಕಾಂಗ್ರೆಸ್ಸಿನ ನಿರ್ಣಯ ತಮಗೆ ವಿರೋಧವಾದರೂ ಅವರ ಚಳುವಳಿ ಬಿಡಲಾಗದು. ಖಿಲಾಫತ್ ಅವರಿಗೊಂದು ಆತ್ಮಸಾಕ್ಷಿಯ ಪ್ರಶ್ನೆ. ಆತ್ಮಸಾಕ್ಷಿಯ ವಿಷಯಗಳಲ್ಲಿ ಬಹು ಸಂಖ್ಯಾತರ ನಿರ್ಣಯಗಳ ನಿಯಮಕ್ಕೆ ಸ್ಥಾನವಿಲ್ಲ."

ಸರ್ ನಾರಾಯಣ ಚಂದಾವರ್ಕರ್ ಮುಂತಾದ ಮಹನೀಯರು ಈ ಅಸಹಕಾರ ಚಳುವಳಿಗೆ ಜನ ಬೆಂಬಲಿಸದಂತೆ ತಡೆಗಟ್ಟಿದರು. ಅವರ ಪ್ರಣಾಳಿಕೆಯಲ್ಲಿ "ನಮ್ಮ ಮಾತೃಭೂಮಿಯ ಧಾರ್ಮಿಕ ಪರಂಪರೆ ಈ ಅಸಹಕಾರ ಮಾರ್ಗವನ್ನು ಒಪ್ಪದು. ಮಾನವ ಸಮುದಾಯವನ್ನು ಉನ್ನತಿಗೆ ಕರೆದೊಯ್ದು ಉದ್ಧಾರ ಮಾಡಿದ ಮತಧರ್ಮಗಳು ಇದನ್ನು ವಿರೋಧಿಸುತ್ತವೆ" ಎಂದರು. ತಂದೆಯನ್ನು ವಿರೋಧಿಸಿದ ಪ್ರಲ್ಹಾದ, ಗಂಡನಿಂದ ದೂರಳಾದ ಮೀರಾ, ಪಶುವೃತ್ತಿಯ ಅಣ್ಣನನ್ನು ತೊರೆದ ವಿಭೀಷಣ, ಇವರುಗಳ ನಿದರ್ಶನಗಳನ್ನು ಈ ಸಂದರ್ಭದಲ್ಲಿ ಗಾಂಧೀಜಿ ಸಹಜವಾಗಿ ಎತ್ತಿ ತೋರಿಸಿದರು. ದುಷ್ಟ ಪ್ರಚೋದನೆಗೊಳಗಾಗಿಯೋ ಅಥವಾ ಇತರ ಕಾರಣಗಳಿಗಾಗಿಯೋ ರೊಚ್ಚಿಗೆದ್ದು ಜನ ಹಿಂಸಾಚಾರಗಳಲ್ಲಿ ತೊಡಗಬಹುದಾದ ಸಂಭವವೊಂದನ್ನು ಬಿಟ್ಟರೆ ಈ ಚಳುವಳಿಯಿಂದ ಒಟ್ಟಿನಲ್ಲಿ ಸತ್ಪರಿಣಾಮಗಳುಂಟಾಗುವುದೆಂಬುದರಲ್ಲಿ ಗಾಂಧೀಜಿಗೆ ಸಂದೇಹವೇ ಇರಲಿಲ್ಲ. "ಇಂತಹ ಹಿಂಸಾತ್ಮಕ ಘಟನೆಗಳ ಅಪಾಯವನ್ನು ಸಾವಿರ ಬಾರಿ ಸಹಿಸಿಯೇನು, ಆದರೆ ಇಡೀ ಜನಾಂಗವೇ ನಿರ್ವೀರ್ಯವಾಗಿ ನಾಶವಾಗುವ ದುರಂತವನ್ನು ಬಯಸಲಾರೆ" ಎಂದರು.

ಗಾಂಧೀಜಿ ತೋರಿಸಿದ ಮಾರ್ಗ ದುರ್ಗಮವಾಗಿತ್ತು. ಆದರೂ ಜನತೆಯ ಭಾವುಕತೆಯನ್ನು ಸೂರೆಗೊಂಡಿತ್ತು. ಹೇಡಿಗೆ ಆ ಧ್ವಜದಡಿಯಲ್ಲಿ ಸ್ಥಾನವಿರಲಿಲ್ಲ.

ಆಗಸ್ಟ್ ೧೧ರ 'ಯಂಗ್–ಇಂಡಿಯಾ'ದಲ್ಲಿ 'ಕತ್ತಿಯ ಸಿದ್ಧಾಂತ' ಎಂಬ ಲೇಖನವನ್ನು ಬರೆದರು :

"ಪಶುಬಲದ ಈ ಯುಗದಲ್ಲಿ ಆ ಬಲದ ಪರಮಾಧಿಕಾರ ನಿಯಮವನ್ನು ನಿರಾಕರಿಸಿ ಪ್ರತಿಭಟಿಸಬಲ್ಲ ವ್ಯಕ್ತಿ ಇರಲು ಸಾಧ್ಯ ಎಂದು ಬಹುಶಃ ಯಾರೂ ನಂಬಲಾರರು ನಿಜ. ಅಹಿಂಸಾತ್ಮಕ ಅಸಹಕಾರ ಕಾರ್ಯಕ್ರಮದಲ್ಲಿ ಕೆಲವು ವೇಳೆ ಜನ ಆಕ್ರೋಶಕ್ಕೊಳಗಾಗಿ ಹಿಂಸಾಚಾರವೆಸಗಿದರೂ ನಾನು ಆ ಸಮಯದಲ್ಲಿ ಚಳುವಳಿಯ ಮುನ್ನಡೆಗೆ ತಡೆಹಾಕಬಾರದೆಂದು ಉಪದೇಶ ಮಾಡಿ ನನಗೆ ಸಹಿಯಿಲ್ಲದ ಪತ್ರಗಳನೇಕ ಬರುತ್ತವೆ. ಇನ್ನು ಕೆಲವರು ನಾನೇ ರಹಸ್ಯವಾಗಿ ಒಂದು ಹಿಂಸಾತ್ಮಕ ಆಸ್ಫೋಟಕ್ಕೆ ಪಿತೂರಿ ನಡೆಸುತ್ತಿದ್ದೇನೆಂದು ಭಾವಿಸಿ ಬಹಿರಂಗವಾಗಿ ಹಿಂಸಾತ್ಮಕ ದಂಗೆಯನ್ನೇ ಘೋಷಿಸುವ ಆ ಸುದಿನ ಎಂದು ಬರುತ್ತದೆ? ಎಂದು ಕೇಳುತ್ತಾರೆ. ರಹಸ್ಯ ಅಥವಾ ಬಹಿರಂಗ ಹಿಂಸಾತ್ಮಕ ಪ್ರತಿಭಟನೆಗೆ ಮಾತ್ರವೇ ಇಂಗ್ಲಿಷರು ಮಣಿಯುತ್ತಾರೆ ಅನ್ಯಥಾ ಅಲ್ಲ ಎಂದನೇಕರು ನನಗೆ ಆಶ್ವಾಸನೆ ನೀಡುತ್ತಾರೆ. ನನ್ನ ಮೂಲ ಉದ್ದೇಶಗಳನ್ನು ಮುಚ್ಚಿಟ್ಟುಕೊಂಡು ಹಿಂಸಾಚರಣೆಯಲ್ಲಿ ಎಲ್ಲರಂತೆ ನಂಬಿಕೆಯಿದ್ದರೂ ಸೋಗು ಹಾಕುವ ನೀಚ ಮೋಸಗಾರರಲ್ಲಿ ನಾನು ಅಗ್ರಗಣ್ಯನೆಂಬಂದರಲ್ಲಿ ತಮಗೆ ಏನೂ ಸಂದೇಹವಿಲ್ಲವೆಂದು ಇನ್ನು ಕೆಲವರು ವಾದಿಸುತ್ತಾರೆಂದೂ ನಾನು ಕೇಳಿದ್ದೇನೆ.

"ಕತ್ತಿಯ ಸಿದ್ಧಾಂತದ ಪ್ರಭಾವ ಬಹು ಸಂಖ್ಯಾತರಲ್ಲಿ ಇಷ್ಟು ಪ್ರಬಲವಾಗಿ ಆವರಿಸಿದೆ. ಅಸಹಕಾರ ಚಳುವಳಿಯ ಯಶಸ್ಸು ಪ್ರಧಾನವಾಗಿ ಪೂರ್ಣ ಅಹಿಂಸಾ ಪಾಲನೆಯ ಮೇಲೆ ನಿರ್ಧರಿತವಾಗುತ್ತದೆ. ನನ್ನ ನಿರ್ಣಯ ಬಹು ಮಂದಿಯ ವರ್ತನೆಯ ಮೇಲೆ ಪರಿಣಾಮ ಮಾಡುವುದರಿಂದ ನನ್ನ ಖಚಿತ ಅಭಿಪ್ರಾಯಗಳನ್ನು ಆದಷ್ಟು ಸ್ಪಷ್ಟಪಡಿಸಲು ಕಾತರನಾಗಿದ್ದೇನೆ.

"ಹೇಡಿತನ ಅಥವಾ ಹಿಂಸೆ ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾದ ಪ್ರಸಂಗ ಬಂದರೆ ಹಿಂಸೆಯನ್ನೇ ಆರಿಸುವಂತೆ ನಾನು ಹೇಳುತ್ತೇನೆ. ೧೯೦೮ರಲ್ಲಿ ನನ್ನ ಮೇಲೆ ಕೊಲೆಗಡುಕನ ದಾಳಿ ನಡೆದಾಗ ತಾನಲ್ಲಿದ್ದಿದ್ದರೆ ಏನು ಮಾಡಬೇಕಾಗಿತ್ತು? ಎಂದು ನನ್ನ ಹಿರಿಯ ಮಗ ಒಮ್ಮೆ ಕೇಳಿದ. ನನನ್ನು ಕೊಲೆಗೀಡು ಮಾಡಿ ತಾನು ಪಲಾಯನ ಮಾಡಬೇಕಾಗಿತ್ತೋ ಅಥವಾ ಬಾಹುಬಲದಿಂದ ಪ್ರತಿಭಟಿಸಿ ಹೋರಾಡುವುದರಲ್ಲಿ ನಂಬಿಕೆಯುಳ್ಳ ತಾನು ಮುನ್ನುಗ್ಗಿ ಕಾಪಾಡಬೇಕಾಗಿತ್ತೊ? ಇದವನ ಪ್ರಶ್ನೆ. ನನ್ನ ಉತ್ತರ ಸ್ಪಷ್ಟವಾಗಿತ್ತು. ಹಿಂಸಾತ್ಮಕವಾಗಿಯೇ ಆದರೂ ನನ್ನ ಜೀವವನ್ನು ಉಳಿಸುವ ಕಾರ್ಯ ಅವನಿಗೆ ಪ್ರಥಮ ಕರ್ತವ್ಯವಾಗಿತ್ತು ಎಂದು ತಿಳಿಸಿದೆ. ಯಾರೂ ಸಶಸ್ತ್ರ ದಂಗೆಯಲ್ಲಿ ನಂಬಿಕೆ ಇಟ್ಟಿದ್ದಾರೋ ಅವರು ಅಗತ್ಯವಾಗಿ ಶಸ್ತ್ರ ಶಿಕ್ಷಣವನ್ನು ಪಡೆಯಲೇಬೇಕೆಂದು ನನ್ನ ಸಲಹೆ. ಬೋಯರ್ ಯುದ್ಧ, ಝೂಲು ದಂಗೆ, ಮತ್ತು ಮಹಾ ಯುದ್ಧಗಳ ಸಮಯದಲ್ಲಿ ನಾನೂ ಹಾಗೆಯೇ ಮಾಡಿದ್ದೆ. ಆತ್ಮಗೌರವ ರಕ್ಷಣೆಗಾಗಿ

ಭಾರತ ಶಸ್ತ್ರಧರಿಸಬೇಕಾದರೂ ಅಡ್ಡಿಯಿಲ್ಲ. ಹೇಡಿತನದಿಂದ ತನ್ನ ಅವಮಾನಕ್ಕೆ ತುತ್ತಾಗುವುದಾಗಲಿ, ನಿಸ್ಸಹಾಯಕವಾಗಿ ನಿಲ್ಲುವುದಾಗಲಿ ಸರ್ವಥಾ ಯೋಗ್ಯವಲ್ಲ."

"ಆದರೆ ಅಹಿಂಸೆ ಹಿಂಸೆಗಿಂತ ಅತ್ಯುತ್ಕೃಷ್ಟವಾದುದು; ಕ್ಷಮೆ ಶಿಕ್ಷೆಗಿಂತ ವೀರ ಗುಣ, ಎಂದೇ ನನ್ನ ನಂಬಿಕೆ. 'ಕ್ಷಮಾ ವೀರಸ್ಯ ಭೂಷಣಂ' ಆದರೆ ಶಿಕ್ಷೆ ಕೊಡುವ ಸಾಮರ್ಥ್ಯ ಇದ್ದಾಗ ಮಾತ್ರ ಕ್ಷಮೆಗೆ ಬೆಲೆಯುಂಟು. ನಿರ್ಬಲ ಜಂತುವೊಂದು ಕ್ಷಮಾಶೀಲತೆಯನ್ನು ನಟಿಸಿದರೆ ಅದು ಅರ್ಥಹೀನ. ಬೆಕ್ಕು ನಿರ್ದಯವಾಗಿ ಇಲಿಯನ್ನು ನುಚ್ಚುನೂರು ಮಾಡುವಾಗ ಇಲಿಯ ಕ್ಷಮೆಗೆ ಏನು ಬೆಲೆಯುಂಟು? ಅಂತೆಯೆ ಜನರಲ್ ಡೈಯರ್‌ನನ್ನು ಆತನ ದುಷ್ಟ ಪಡೆಯನ್ನು ಕ್ರೂರವಾಗಿ ಶಿಕ್ಷಿಸಬೇಕೆಂದು ಕೂಗುವವರ ಚಿತ್ತವೃತ್ತಿಯನ್ನು ನಾನು ಮೆಚ್ಚುತ್ತೇನೆ. ತಮ್ಮ ಕೈಲಾಗುವುದಾಗಿದ್ದರೆ ಅವರು ಆತನನ್ನು ನುಚ್ಚುನೂರು ಮಾಡಿ ಬಿಡುತ್ತಿದ್ದರು. ಆದರೆ ಭಾರತ ಎಂದೂ ನಿಸ್ಸಹಾಯ ರಾಷ್ಟ್ರವೆಂದು ನಾನು ನಂಬುವುದಿಲ್ಲ. ನಾನೊಬ್ಬ ನಿಸ್ಸಹಾಯಕ ಕ್ರಿಮಿಯಲ್ಲ. ಭಾರತದ ಮತ್ತು ನನ್ನ ಶಕ್ತಿಗಳನ್ನೆಲ್ಲ ಒಂದು ಉನ್ನತ ಧ್ಯೇಯಕ್ಕಾಗಿ ನಾನು ಉಪಯೋಗಿಸಲಿಚ್ಛಿಸುತ್ತೇನೆ."

"ನನ್ನನ್ನು ಅಪಾರ್ಥ ಮಾಡಿಕೊಳ್ಳಬಾರದು. ದೈಹಿಕ ಬಲದಿಂದ ಎಂದಿಗೂ ಶಕ್ತಿ ಚಿಮ್ಮದು. ಅದಮ್ಯ ಸಂಕಲ್ಪ ಶಕ್ತಿಯಿಂದ ಮಾತ್ರ ಅದು ಬರುತ್ತದೆ. ಒಬ್ಬ ಸಾಧಾರಣ ಜೂಲು ಮನುಷ್ಯ ದೈಹಿಕ ಶಕ್ತಿಯಲ್ಲಿ ಇಂಗ್ಲಿಷನನ್ನು ನೂರುಪಟ್ಟು ಮೀರಿಸುತ್ತಾನೆ. ಆದರೆ ಒಬ್ಬ ಇಂಗ್ಲಿಷ ಹುಡುಗನಿಗೆ ಬೆದರಿ ಓಡಿ ಹೋಗುತ್ತಾನೆ. ಆ ಹುಡುಗನ ಕೈಲಿರುವ ರಿವಾಲ್ವರಿಗೋ ಅಥವಾ ಅವನಿಗಾಗಿ ಇತರರು ಪ್ರಯೋಗಿಸುವ ಬಂದೂಕಕ್ಕೋ ಹೆದರುತ್ತಾನೆ. ಸಾವಿಗೆ ಅಂಜುತ್ತಾನೆ. ಧಾಂಡಿಗನಾದರೂ ಅವನು ಅಂಜುಬುರುಕ. ಭಾರತದಲ್ಲಿ ನಾವು ಒಂದು ಕ್ಷಣ ಯೋಚಿಸಬೇಕು. ಮೂವತ್ಮೂರು ಕೋಟಿ ಇರುವ ನಮ್ಮನ್ನು ಹತ್ತು ಲಕ್ಷ ಇಂಗ್ಲಿಷರು ಹೇಗೆ ಹೆದರಿಸಿದ್ದಾರು? ಆದ್ದರಿಂದಲೇ ನಮ್ಮ ದೃಢ ಮನಸ್ಸಿನ ಕ್ಷಮೆಯಿಂದ ನಮ್ಮ ಅದಮ್ಯಶಕ್ತಿ ಪ್ರಕಟವಾಗುತ್ತದೆ. ಜ್ಞಾನಪೂರ್ಣ ಕ್ಷಮೆಯಿಂದ ನಮ್ಮ ಅಂತರಿಕ ಶಕ್ತಿಯ ಮಹಾಪೂರವೆ ಪ್ರವಹಿಸಿ ಒಬ್ಬ ಡೈಯರ್ ಆಗಲಿ, ಫ್ರಾಂಕ್ ಜಾನ್ಸನ್ ಆಗಲಿ, ಭಾರತದ ಪವಿತ್ರ ಶಿರದ ಮೇಲೆ ಅವಮಾನದ ಮಳೆಗರೆಯುವುದು ದುಸ್ಸಾಧ್ಯವಾಗುತ್ತದೆ. ಈ ಕ್ಷಣಕ್ಕೆ ನನ್ನ ಮಾತು ಪಥ್ಯವಾಗದಿದ್ದಲ್ಲಿ ನನಗೆ ಚಿಂತೆಯಿಲ್ಲ. ಇಂದಿನ ನಮ್ಮ ಅತಿ ದೀನಸ್ಥಿತಿ ಕೋಪಕ್ಕೂ, ಸೇಡಿಗೂ ದಾರಿ ಮಾಡಿಕೊಡುತ್ತದೆ. ಆದರೆ ಈ ಶಿಕ್ಷೆಯ ಹಕ್ಕನ್ನು ತ್ಯಾಗ ಮಾಡಿದರೆ ಭಾರತದ ಲಾಭ ಹೆಚ್ಚು ಎನ್ನುವುದನ್ನು ನಾನು ಹೇಳದೆ ಮರೆ ಮಾಚಬಾರದು. ಸೇಡಿಗಿಂತ ಹೆಚ್ಚು ಪವಿತ್ರ ಕೆಲಸ ನಮಗುಂಟು. ವಿಶ್ವಕ್ಕೆ ಒಂದು ಉತ್ತಮ ಸಂದೇಶ ನೀಡುವ ಕರ್ತವ್ಯವು ಭಾರತಕ್ಕೆ ಇದೆ.

"ನಾನೇನು ಕನಸುಗಾರನಲ್ಲ. ನಾನೊಬ್ಬ ಕಾರ್ಯನಿಷ್ಠ ಆದರ್ಶವಾದಿ ಎಂದೇ ಕರೆದುಕೊಳ್ಳುತ್ತೇನೆ. ಅಹಿಂಸಾಧರ್ಮ ಕೇವಲ ಋಷಿಗಳಿಗೂ ಸಂತರಿಗೂ ಮಾತ್ರ

ಮೀಸಲಾದುದಲ್ಲ. ಸಾಮಾನ್ಯ ಜನಕ್ಕೂ ಅದು ಧರ್ಮ. ಹಿಂಸಾಚಾರ ಪಶುವರ್ಗಕ್ಕೆ ಸಹಜವಾದಂತೆ ಮಾನವ ಲೋಕಕ್ಕೆ ಅಹಿಂಸೆಯೆ ಸಹಜಧರ್ಮ. ಪಶು ಸದೃಶ ಮಾನವನಲ್ಲಿ ಆತ್ಮಶಕ್ತಿ ಸುಪ್ತವಾಗಿರುತ್ತದೆ. ದೈಹಿಕ ಬಲವನ್ನಲ್ಲದೇ ಅವನು ಮತ್ತೇನನ್ನು ಅರಿಯನು. ಉತ್ಕೃಷ್ಟ ಧರ್ಮವೊಂದಕ್ಕೆತಲೆ ಬಾಗಬೇಕಾದುದು ಮಾನವನ ಗೌರವ ನಿಷ್ಠೆಯ ಸಂಕೇತ. ಆತ್ಮಶಕ್ತಿಗೆ ಅವನು ಶರಣು ಬರಲೇಬೇಕು.

"ಸನಾತನವಾದ ಆತ್ಮಬಲಿದಾನ–ಧರ್ಮವನ್ನೇ ನಾನು ಭಾರತದ ಮುಂದಿಡುವ ಸತ್ಯಾಗ್ರಹ ಮತ್ತು ಅದರ ನಿಷ್ಪನ್ನ ಕ್ರಿಯೆಗಳಾದ ಅಸಹಕಾರ ಮತ್ತು ನಾಗರಿಕ ಪ್ರತಿಭಟನೆಗಳು ಕಷ್ಟ ಸಹನೆಯ ನಿಯಮಗಳ ಬೇರೊಂದು ರೂಪ. ಹಿಂಸೆಯ ಪರಿಸರದಲ್ಲೇ ಅಹಿಂಸಾಧರ್ಮವನ್ನು ಸಂಶೋಧಿಸಿದ ಋಷಿವರ್ಯರು ವಿಜ್ಞಾನಿ ನ್ಯೂಟನ್ನನಿಗಿಂತ ಹೆಚ್ಚು ಪ್ರತಿಭಾಶಾಲಿಗಳು. ವೆಲ್ಲಿಂಗ್‌ಟನ್‌ನಿಗಿಂತ ಉನ್ನತ ವೀರ ಯೋಧರಾಗಿದ್ದವರು, ಶಸ್ತ್ರಶಕ್ತಿಯ ಸ್ವಂತ ಅನುಭವವಿದ್ದವರು. ಆದ್ದರಿಂದಲೇ ಅದರ ನಿರರ್ಥಕತೆಯನ್ನು ಅರಿತು, ಬಳಲಿದ ಜಗತ್ತಿಗೆ ಅಹಿಂಸೆಯೇ ಉದ್ಧಾರಮಾರ್ಗ, ಹಿಂಸಾಚಾರವಲ್ಲ" ಎಂದು ಬೋಧಿಸಿದರು.

"ಅಹಿಂಸೆ ಅವರ ಕ್ರಿಯಾತ್ಮಕ ರೂಪದಲ್ಲಿ ಪ್ರಜ್ಞಾಪೂರ್ಣ ಕಷ್ಟ ಸಹಿಷ್ಣುತೆ. ದುಷ್ಟ ಪ್ರವೃತ್ತಿಯುವನ ಇಚ್ಛೆಗೆ ಮೂಕವಾಗಿ ಮಣಿಯುವುದು ಎಂದು ಅದರ ಅರ್ಥವಲ್ಲ; ದೌರ್ಜನ್ಯಕಾರನ ಛಲದ ವಿರುದ್ಧ ನಮ್ಮ ಸಂಪೂರ್ಣ ಆತ್ಮ ಶಕ್ತಿಯ ಪ್ರತಿರೋಧ. ಈ ಜೀವಿತ ಸಿದ್ಧಾಂತವನ್ನೊಪ್ಪಿ ಕೆಲಸ ಮಾಡುವಾಗ ಏಕಮೇವ ವ್ಯಕ್ತಿ ಯಾದರೂ ಒಂದು ಅನ್ಯಾಯ ಭರಿತ ಚಕ್ರಾಧಿಪತ್ಯದ ರಾಕ್ಷಸ ಶಕ್ತಿಯನ್ನೇ ಎದುರಿಸಿ ನಿಲ್ಲಲು ಸಾಧ್ಯ. ತನ್ನ ಮಾನ, ಧರ್ಮ, ಆತ್ಮಗಳ ರಕ್ಷಣೆಗಾಗಿ ಅದನ್ನು ಎದುರಿಸಿ ನಿಂತು ಆ ಚಕ್ರಾಧಿಪತ್ಯದ ನಾಶಕ್ಕೋ ಅದರ ಪರಿವರ್ತನೆಗೋ ತಾನೇ ಕಾರಣನಾಗಲೂ ಬಹುದು.

ಆದ್ದರಿಂದ ಭಾರತ ತಾನು ದುರ್ಬಲ ಎಂದು ಅಹಿಂಸೆಯನ್ನಾಚರಿಸಬೇಕೆಂದು ನಾನು ಕೇಳಿಕೊಳ್ಳುತ್ತಿಲ್ಲ. ತನ್ನ ಬಲ, ಸಾಮರ್ಥ್ಯಗಳ ಪ್ರಜ್ಞೆಯಿಂದಲೇ ಅಹಿಂಸೆ ಯನ್ನಾಚರಿಸಲಿ ಎಂಬುದು ನನ್ನ ಮತ. ತನ್ನ ಆತ್ಮ ಬಲದ ದರ್ಶನಕ್ಕಾಗಿ ಭಾರತಕ್ಕೆ ಯಾವ ಶಸ್ತ್ರ ಶಿಕ್ಷಣವೂ ಅಗತ್ಯವಿಲ್ಲ. ನಾವು ಕೇವಲ ಮಾಂಸದ ಮುದ್ದೆಗಳು ಎಂದು ಗ್ರಹಿಸುವುದರಿಂದ ಈ ಶಸ್ತ್ರವಿದ್ಯೆ ಬೇಕು ಎಂದು ನಮಗನಿಸಬಹುದು. ಅವಿನಾಶಿ ಯಾದ ಆತ್ಮ ಒಂದುಂಟು. ಅದು ನಮ್ಮ ದೈಹಿಕ ದೌರ್ಬಲ್ಯಗಳನ್ನೆಲ್ಲ ಮೆಟ್ಟಿನಿಲ್ಲುವ ಅಜೇಯ ಶಕ್ತಿಯಾಗಿ ಇಡೀ ಜಗತ್ತಿನ ಭೌತಿಕ ಶಕ್ತಿ ಸಂಘಟನೆಯನ್ನು ಪ್ರತಿಭಟಿಸಿ ನಿಲ್ಲಬಲ್ಲದು ಎಂದು ಸಾಕ್ಷಾತ್ಕರಿಸಿಕೊಳ್ಳಬೇಕೆಂದೇ ನನ್ನ ಇಚ್ಛೆ. ದಶಶಿರನಾದ ರಾವಣನ ರಾಕ್ಷಸ ಬಲದ ಸೊಕ್ಕು ಲಂಕೆಯ ಸುತ್ತ ಭೋರ್ಗರೆವ ಸಾಗರದ ರಕ್ಷಣೆಯಿದೆ ಎಂಬ ಕುರುಡು ಭರವಸೆ, ಇವುಗಳನ್ನೆದುರಿಸಿ ಕೇವಲ ಮನುಷ್ಯ ಮಾತ್ರನಾದ ರಾಮ ಒಂದು

ಕಪಿಸೇನೆಯೊಡನೆ ಪ್ರತಿಭಟಿಸಿ ನಿಂತ ಸಂಕೇತವಾದರೂ ಏನು? ಪಶುಬಲದ ಮೇಲೆ ಆತ್ಮಶ್ರೀಯ ವಿಜಯು ಎಂದಲ್ಲವೇ? ನಾನು ಕೇವಲ ವ್ಯವಹಾರ ದೃಷ್ಟಿಯುವನು. ರಾಜಕೀಯ ಕ್ಷೇತ್ರದಲ್ಲೂ ಆತ್ಮಶ್ರೀ ನಿಯಮ ವ್ಯಾವಹಾರಿಕವಾಗ ಬಲ್ಲಂದು ಎಂದು ಭಾರತ ಮನಗಾಣುವವರೆಗೂ ನಾನು ಕಾದು ಕುಳಿತಿರಲಾರೆ. ಈಗ ಇಂಗ್ಲೆಂಡಿನ 'ಮೆಷಿನ್ ಗನ್‌ಗಳು' 'ಟ್ಯಾಂಕುಗಳು' 'ವಿಮಾನಗಳು' ಇವುಗಳೆದುರಿನಲ್ಲಿ ಭಾರತ ತಾನು ನಿಶ್ಶಕ್ತವೆಂದು ತಿಳಿದು ನಿಸ್ತೇಜವಾಗಿ ಬಿಟ್ಟಿದೆ. ತನ್ನ ಈ ದೌರ್ಬಲ್ಯದ ಕಾರಣ ವಾಗಿಯೇ ಅಸಹಕಾರ ಮಾರ್ಗವನ್ನು ಹಿಡಿದೀತು. ಆದರೂ ಸಾಕಷ್ಟು ಸಂಖ್ಯೆಯಲ್ಲಿ ಭಾರತದ ಜನ ಈ ಮಾರ್ಗದಲ್ಲಿ ನಡೆದರೂ ಸಾಕು, ನಿರೀಕ್ಷಿಸಿದ ಉದ್ದೇಶ ಸಫಲ ವಾಗುತ್ತದೆ. ಬ್ರಿಟಿಷರು ನ್ಯಾಯ ಬಾಹಿರತೆಯ ಅಸಹನೀಯ ದೌರ್ಜನ್ಯ ಭಾರವನ್ನು ಕಿತ್ತೆಸೆದು ಭಾರತ ವಿಮೋಚನೆಗೊಳ್ಳುತ್ತದೆ.

"ಈ ಅಸಹಕಾರವನ್ನು ಐರ್ಲೆಂಡಿನ ಸಿನ್ನಫೀನಿಸಮ್ ಚಳುವಳಿಯಿಂದ ಪ್ರತ್ಯೇಕಿ ಸುತ್ತೇನೆ. ಹಿಂಸಾಚಾರ ಪ್ರವೃತ್ತಿಗಳ ಜೊತೆ ಜೊತೆಯಾಗಿಯೇ ಈ ಅಸಹಕಾರವನ್ನು ಜಾರಿಗೆ ತರಲು ಅಸಾಧ್ಯ. ಅದರ ತಾತ್ವಿಕ ತಳಹದಿಗೆ ಅದು ವಿರೋಧ. ಆದರೆ ಹಿಂಸಾಕ್ರಮದಲ್ಲಿ ನಂಬಿಕೆಯುಳ್ಳವರನ್ನು ಈ ಶಾಂತಿಯುತ ಅಸಹಕಾರ ಕ್ರಾಂತಿಯ ಒಂದು ಪ್ರಯೋಗ ಮಾಡಿ ನೋಡಬೇಕೆಂದು ನಾನು ಆಹ್ವಾನಿಸುತ್ತೇನೆ. ಆಂತರಿಕ ದೌರ್ಬಲ್ಯದಿಂದ ಎಂದಿಗೂ ಅದು ವಿಫಲವಾಗದು. ಸಾಕಷ್ಟು ಜನ ಬೆಂಬಲವಿಲ್ಲದ ಸಲುವಾಗಿ ಅದು ವಿಫಲವಾಗಬಹುದು. ಆ ಸಮಯಕ್ಕೆ ದೇಶ ಅಪಾಯಕ್ಕೀಡಾಗುತ್ತದೆ. ದೇಶಭಕ್ತ ವೀರರು ರಾಷ್ಟ್ರೀಯ ಅವಮಾನವನ್ನು ಸಹಿಸಲಾಗದೇ ಕ್ರೋಧವಶ ರಾಗುತ್ತಾರೆ. ಹಿಂಸಾತ್ಮಕವಾಗಿ ಪ್ರತಿಭಟಿಸುತ್ತಾರೆ. ನನ್ನ ಮಟ್ಟಿಗೆ ಹೇಳುವುದಾದರೆ ಇಂಥವರು ದೇಶವನ್ನಾಗಲಿ, ತಮ್ಮನ್ನಾಗಲಿ, ಅವಮಾನದಿಂದ ಮುಕ್ತಮಾಡಲಾಗದೆ ನಿರ್ನಾಮವಾಗುತ್ತಾರೆ.

"ಕತ್ತಿಯ ಸಿದ್ಧಾಂತವನ್ನವಲಂಬಿಸಿ ಭಾರತ ಒಂದುವೇಳೆ ಕ್ಷಣಿಕವಾಗಿ ವಿಜಯು ಸಾಧಿಸಬಹುದು. ಆಗ ಅದು ನನ್ನ ಅಭಿಮಾನದ ಹೆಮ್ಮೆಯ ಭಾರತವಾಗಿ ನನ್ನಲ್ಲಿ ಉಳಿಯದು. ನನ್ನ ಸರ್ವಸ್ವವೂ ಈ ದೇಶದ್ದು. ಆದ್ದರಿಂದ ಭಾರತಕ್ಕೆ ನನ್ನ ಆತ್ಮನಿಷ್ಠೆ. ವಿಶ್ವಕ್ಕೆ ಭಾರತದ ಸಂದೇಶವೊಂದುಂಟೆಂದು ನನ್ನ ಅಚಲ ವಿಶ್ವಾಸ. ಅದು ಯುರೋಪನ್ನು ಕುರುಡಾಗಿ ಅನುಕರಿಸಬಾರದು. ಕತ್ತಿಯ ಸಿದ್ಧಾಂತವನ್ನು ಭಾರತ ಸ್ವಾಗತಿಸಿದಂದು ನನ್ನ ಅಗ್ನಿ ಪರೀಕ್ಷೆಯಾದೀತು. ಆ ಸಮಯಕ್ಕೆ ನಾನು ಸಿದ್ಧ. ನನ್ನ ಧರ್ಮ ಯಾವ ಭೌಗೋಳಿಕ ಸೀಮೆಯನ್ನೂ ಅರಿಯದು. ನನ್ನ ಜೀವಂತ ಶ್ರದ್ಧೆ ನಿಜವಾದರೆ, ಧರ್ಮ ನನ್ನ ಭಾರತ ಪ್ರೇಮವನ್ನೂ ಮೀರಿ ನಿಂತೀತು. ಹಿಂದೂಧರ್ಮದ ಮೂಲವೇ ಅಹಿಂಸೆ. ಅಹಿಂಸಾ ಧರ್ಮದ ಮೂಲಕ ಭಾರತದ ಸೇವೆಗಾಗಿ ನನ್ನ ಜೀವನ ಸರ್ವಸ್ವವೂ ಸಮರ್ಪಿತ."

ಆಗಸ್ಟ್ ತಿಂಗಳಿನ ಯಂಗ್–ಇಂಡಿಯಾ ಸಂಚಿಕೆಗಳು ಅಸಹಕಾರದ ಸಮರ್ಥನೆ ಮಾಡುವ ಸತ್ವ ಪೂರ್ಣ ಲೇಖನಗಳಿಂದ ತುಂಬಿದುವು. ತಮ್ಮ ನೀತಿಯನ್ನು ಗಾಂಧೀಜಿ ದೃಢವಾಗಿ ಖಚಿತ ಪಡಿಸಿದರು. ಶಕ್ತಿಯು ಅಪವ್ಯಯವಾಗದಂತೆ ಮೊದಲ ಕೆಲಸ ಮೊದಲು ನಡೆಯಬೇಕೆಂದರು. ಅಸ್ಪೃಶ್ಯತೆಯ ನಿರ್ಮೂಲನ ಕೆಲಸ ಇನ್ನೂ ಅಗಾಧ ವಾಗಿರುವಾಗ ಸ್ವರಾಜ್ಯಕ್ಕಾಗಿ ಅಸಹಕಾರ ಪ್ರಾರಂಭಿಸಿದುದಕ್ಕೆ ಅವರ ಸಮರ್ಥನೆ ಇದು:

"ದಾಸ್ಯ ರಾಷ್ಟ್ರವೊಂದರ ಪ್ರಜೆಯಾಗಿ ನನ್ನ ದಾಸ್ಯವನ್ನು ನೀಗಿಕೊಳ್ಳದೇ ದಲಿತ ವರ್ಗದವರನ್ನು ಉದ್ಧಾರ ಮಾಡುವುದು ಸಾಧ್ಯವಾದರೆ ಈ ಕ್ಷಣ ಮಾಡಿಯೇನು. ಇದು ಅಸಾಧ್ಯ. ಗುಲಾಮನಾದವನಿಗೆ ಸರಿಯಾದ ಕರ್ತವ್ಯ ಪಾಲನೆಗೂ ಸ್ವಾತಂತ್ರ್ಯವಿಲ್ಲ. ಆದ್ದರಿಂದ ಈ ಪಂಚಮರ ಸಮಸ್ಯೆ ನನಗೆ ಪ್ರಾಣಸದೃಶವಾದರೂ ರಾಷ್ಟ್ರೀಯ ಅಸಹಕಾರ ಕಾರ್ಯಕ್ಕೆ ನನ್ನ ಸರ್ವ ಗಮನ. ದೊಡ್ಡ ಸಾಧನೆಯಲ್ಲಿ ಚಿಕ್ಕದೂ ಸೇರಿ ಕೊಳ್ಳುತ್ತದೆ ಎಂಬುದು ನನಗೆ ಖಚಿತ."

ಖಿಲಾಫತ್ ಪ್ರಶ್ನೆಯ ಬಗ್ಗೆ ಬೃಹತ್ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುತ್ತಾ ಗಾಂಧೀಜಿ, ಷೌಕತ್–ಆಲಿ, ಅಜಾದ್ ಮುಂತಾದ ಮುಖಂಡರು ಪಂಜಾಬ್–ಸಿಂಧ್, ಮದ್ರಾಸ್ ಪ್ರಾಂತ್ಯಗಳಲ್ಲಿ ವ್ಯಾಪಕ ಪ್ರವಾಸ ಮಾಡಿದರು. ಯಂಗ್–ಇಂಡಿಯಾದಲ್ಲಿ ಗಾಂಧೀಜಿ ಈ ಪ್ರವಾಸವನ್ನು ವಿವರವಾಗಿ ಬಣ್ಣಿಸಿದರು:

"ರಾತ್ರಿ ರೈಲಿನಲ್ಲಿ ಬೆಂಗಳೂರಿನಿಂದ ಮದ್ರಾಸಿಗೆ ಹೊರಟಿದ್ದೆವು. ಸೇಲಂನಿಂದ ಬೆಂಗಳೂರಿಗೆ ಇಡೀ ದಿನ ೧೨೫ ಮೈಲಿಗಳ ಮೋಟಾರು ಪ್ರವಾಸ; ಹಲವು ಸಭೆಗಳಲ್ಲಿ ಭಾಷಣಗಳು; ಬೆಂಗಳೂರಿನಲ್ಲಿ ಭಾರಿ ಮಳೆಯಲ್ಲೇ ಸಭೆ, ತೀರ ದಣಿದು ರಾತ್ರಿಯ ವಿಶ್ರಾಂತಿಗಾಗಿ ಹಾತೊರೆಯುತ್ತಿದ್ದೆವು. ಆದರೆ ಇಡೀ ರಾತ್ರಿ ನಿದ್ರೆಗೆ ಅವಕಾಶವಾಗಲಿಲ್ಲ. ಪ್ರತಿಯೊಂದು ನಿಲ್ದಾಣದಲ್ಲಿಯೂ ಜನಸಂದಣಿಯು ಸೇರಿ ನಮ್ಮನ್ನು ಸ್ವಾಗತಿಸುತ್ತಿತ್ತು. ಮಧ್ಯರಾತ್ರಿ, ಜಾಲಾರ್‌ಪೇಟೆಯಲ್ಲಿ ರೈಲು ನಲುವತ್ತು ನಿಮಿಷ ನಿಂತು ಬಿಟ್ಟಿತು. ಅದೊಂದು ಭಯಂಕರ ಗದ್ದಲ. ಜನಸಂದಣಿ ಚದುರುವಂತೆ ಷೌಕತ್ ಆಲಿ ಪ್ರಾರ್ಥಿಸಿದರು. ಅವರು ವಾದ ಮಾಡಿದಷ್ಟೂ "ಷೌಕತ್–ಆಲಿ–ಕೀ ಜೈ" ಘೋಷಣೆ ಹೆಚ್ಚೇ ಆಯಿತು. ಮೌಲಾನಾ ನಿಜವಾಗಿ ಹೀಗೆ ಹೇಳಿರಲಾರರು ಎಂದೇ ಆ ಜನರ ತಿಳುವಳಿಕೆ. ಆ ಜನ ಇಪ್ಪತ್ತು ಮೈಲಿಗಳಿಂದ ಬಂದಿದ್ದರು. ಅನೇಕ ಗಂಟೆಗಳ ಕಾಲ ಕಾದು ನಮ್ಮನ್ನು ಕಾಣುವ ತೃಪ್ತಿಗಾಗಿ ಬಯಸಿದ್ದರು. ಈ ಸೆಣಸಾಟಕ್ಕೆ ಬೇಸತ್ತು ಮೌಲಾನಾ ಹಿಮ್ಮೆಟ್ಟಿ ನಿದ್ದೆ ಹೋಗುವಂತೆ ಮಲಗಿಬಿಟ್ಟರು. ಉತ್ಸಾಹಿ ಜನ ಕಿಟಕಿಗಳನ್ನು ಹತ್ತಿ ಇಣುಕಿದರು. ದೀಪ ಆರಿಸಿದಾಗ ಲಾಂದ್ರಗಳನ್ನೇ ತಂದರು. ಕೊನೆಗೊಮ್ಮೆ ನಾನು ಮನವಿ ಮಾಡಲು ಮುಂದಾದೆ. ಎದ್ದು ಬಾಗಿಲಿಗೆ ಬಂದದ್ದೆ ತಡ ಭಯಂಕರವಾಗಿ ಕಿವಿಯೊಡೆಯುವ 'ಜೈ'ಕಾರ ಎದ್ದಿತು. ದಣಿದಿದ್ದ ನನಗೆ ಇದು ಅಸಹನೀಯವಾಯಿತು. ನನ್ನ ಪ್ರಾರ್ಥನೆ ಗಳೆಲ್ಲಾ ನಿಷ್ಫಲವಾದವು. ಸ್ವಲ್ಪನಿಶ್ಶಬ್ದ, ಮತ್ತೆ ಅದೇ ಗದ್ದಲ. ಕಿಟಕಿಗಳನ್ನು ಮುಚ್ಚಿ ಬಿಟ್ಟೆ, ಅವರು ಒಟ್ಟಾರೆ ಹೊರಗಿನಿಂದ ಕಿಟಕಿ ಎತ್ತಿದರು. ನಮ್ಮಿಬ್ಬರನ್ನು ನೋಡುವ

ತೀವ್ರ ಬಯಕೆ ಅವರದು. ಈ ಸೆಣಸಾಟ ನಡೆದೇಯಿತ್ತು. ಕೊನೆಗೊಮ್ಮೆ ನನ್ನ ಮಗ ಮುಂದಾದ, ಕೈ ಜೋಡಿಸಿ ಬೇಡಿದ, ಸಿಟ್ಟಾಗಿ ಕೂಗಿದ, ಇತರ ಪ್ರಯಾಣಿಕರಿಗೆ ತೊಂದರೆ ಮಾಡಬೇಡಿರೆಂದು ಪ್ರಾರ್ಥಿಸಿದ. ಗಾಡಿ ಹೊರಡುವ ನಿಮಿಷದವರೆಗೂ ಅವರು ಇಣುಕಿ ನೋಡುತ್ತಲೇ ಇದ್ದರು. ಈ ಜನರ ಉದ್ದೇಶ ಒಳಿತಾದುದೆ; ಅವರ ಅಪರಿಮಿತ ಪ್ರೀತಿಯ ಪ್ರದರ್ಶನ ಅದು. ಆದರೂ ಅದೆಷ್ಟು ನಿರ್ದಯತೆ ಅದರಲ್ಲಿ ನುಸುಳಿ ಬಂತು; ಅದೆಷ್ಟು ಮೊಂಡುತನ; ಬುದ್ಧಿಗೆಟ್ಟ ಜನಜಂಗುಳಿ; ಅದರಲ್ಲಿ ಮಧ್ಯೆ ಪ್ರಭಾವಯುತ ಬುದ್ಧಿವಂತ ನಾಯಕರೇ ಇರಲಿಲ್ಲ. ಯಾರೂ ಯಾರ ಮಾತನ್ನೂ ಕೇಳದಾದರು."

"ಮಹಾತ್ಮಾ ಗಾಂಧೀ–ಕೀ– ಜೈ' 'ಮಹಮುದಾಲಿ–ಷೌಕತ್– ಆಲಿ–ಕೀ–ಜೈ ಎಂದು ಪದೇ ಪದೇ ಮಾಡುತ್ತಿದ್ದ ಘೋಷಣೆಯ ಬದಲು 'ಹಿಂದೂ–ಮುಸಲ್ಮಾನ–ಕೀ ಜೈ' ಎನ್ನಿ ಅಂದರು ಗಾಂಧೀಜಿ. ಹಿಂದೂ ಮುಸಲ್ಮಾನರು ಒಟ್ಟಿಗೆ 'ಅಲ್ಲಾ–ಹೋ–ಅಕ್ಬರ್' ಎಂದು ಆನಂದದಿಂದ ಘೋಷಿಸಿ, ದೇವರೊಬ್ಬನೆ ಮಹಾಶಕ್ತಿ ಎಂದು ಇದರ ಸಂಕೇತ 'ವಂದೇ ಮಾತರಂ' ಅಥವಾ 'ಭಾರತ–ಮಾತಾಕಿ–ಜೈ' ಎನ್ನಿ 'ಹಿಂದೂ ಮುಸಲ್ಮಾನ–ಕೀ–ಜೈ' ಎಂದು ಘೋಷಿಸಿ ಈ ಮೂರು ಘೋಷಣೆಗಳನ್ನು ಮಾತ್ರ ಕೂಗಬೇಕು. ಇಲ್ಲದಿದ್ದರೆ ಭಾರತಕ್ಕೆ ನಿಜವಾದ ಜಯವಾಗಲಿ, ಭಗವಂತನ ಶ್ರೇಷ್ಠತೆಯ ನಿಜ ಶ್ರದ್ಧೆಯಾಗಲಿ ಪ್ರಕಟವಾಗದು" ಎಂದರು. ಭಾರತ–ಮಾತಾಕಿ–ಜೈಗಿಂತ "ವಂದೇ ಮಾತರಂ" ಘೋಷಣೆಯೇ ಸರಿ ಎಂದರು. "ಇದು ಬಂಗಾಳದ ಬುದ್ಧಿಜೀವಿಗಳ ಹೆಚ್ಚಳಿಕೆಯ ವಿನಯಪೂರ್ವಕವಾದ ಅಂಗೀಕಾರ" ಮುಂದುವರೆದು "ಈ ಘೋಷಣೆಗಳಲ್ಲಿ ಕರ್ಕಶತೆ ಇರಬಾರದು. ಈ ಮೂರರಲ್ಲಿ ಒಂದನ್ನು ಇಬ್ಬರು ಕೂಗಿದಾಗ ಎಲ್ಲರೂ ಧ್ವನಿಗೂಡಿಸಬೇಕಲ್ಲದೇ ತಮ್ಮ ತಮ್ಮ ಪ್ರೀತಿಯ ಘೋಷಣೆಗಳು ತುಮುಲವನ್ನೆಬ್ಬಿಸಬಾರದು. ಮೇಲೆ ಹೇಳಿದ ಕ್ರಮದಲ್ಲೇ ಈ ಘೋಷಣೆಗಳನ್ನು ಕೂಗುವುದು ಉಚಿತ. ಒಂದಾದ ಮೇಲೊಂದು ಬರಬೇಕು. ಸತತವಾಗಿ ಕೂಗುತ್ತಲೇ ಇರಬಾರದು. ಎಲ್ಲಕ್ಕೂ ಒಂದು ವಿಹಿತ ಪ್ರಮಾಣ ಅತ್ಯಗತ್ಯ."

ಈ ಚಳುವಳಿಯ ಮೊದಲ ವರ್ಷದಲ್ಲಿ ಗಾಂಧೀಜಿಯ ನಾಯಕತ್ವ ಹಿಂದೆಂದು ಕಂಡರಿಯದ ಔನ್ನತ್ಯಕ್ಕೇರಿ ನಿಂತಿತು. ಹೊಗೆಯಾಡುತ್ತಲೆ ಇದ್ದ ಹಿಂಸಾ ಪ್ರವೃತ್ತಿಯನ್ನು ಅವರು ತಡೆಗಟ್ಟ ಬೇಕಾಗಿತ್ತು. ದೊಂಬಿಯ ಪ್ರಭುತ್ವ ಭಾರತಕ್ಕೆ ಒಂದು ದೊಡ್ಡ ಅಪಾಯವೆಂದು ಅವರರಿತಿದ್ದರು. ಯುದ್ಧ ವಿರೋಧಿ, ಆದರೂ ಅಸಭ್ಯ ಹುಚ್ಚು ದಂಗೆಗಿಂತ ವ್ಯವಸ್ಥಿತ ಯುದ್ಧ ಎಷ್ಟೋ ಮೇಲು ಎನ್ನುತ್ತಿದ್ದರು. "ಹಿಂಸಾಚಾರದಿಂದಲೇ ಭಾರತ ಸ್ವತಂತ್ರಗಳಿಸಿಕೊಳ್ಳಬೇಕಾದಲ್ಲಿ ಯುದ್ಧವೆಂಬ ಶಿಸ್ತಿನ ಬಲ ಪ್ರಯೋಗವನ್ನೇ ಅನುಸರಿಸಲಿ; ದೊಂಬಿ ದಂಗೆಗಳನ್ನಲ್ಲ" ಕಟ್ಟುನಿಟ್ಟಾದ ಶಿಸ್ತು ಎಲ್ಲದಕ್ಕೂ ಅಗತ್ಯ. ಅನಾಯಕ ಸ್ಥಿತಿಯಿಂದ ನಾವು ವ್ಯವಸ್ಥಿತ ರಚನೆಗೇರಬೇಕು. ದೊಂಬಿಯ ನ್ಯಾಯದ ಬದಲು ಜಾಗೃತ ಜನತಾ ನ್ಯಾಯವನ್ನು ಕಂದುರಿಸಬೇಕು".

ಹೀಗೆಂದು ಸಭೆಗಳಿಗೂ ಪ್ರದರ್ಶನಗಳಿಗೂ ಅನುಸರಿಸಬೇಕಾದ ನೀತಿ–ನಿಯಮಗಳನ್ನು ವಿವರವಾಗಿ ತಿಳಿಸಿದರು ಗಾಂಧೀಜಿ.

"ಸಂಗೀತಾಭ್ಯಾಸದ ಬಗ್ಗೆ ನಮ್ಮ ನಿರಾಸಕ್ತಿ ಒಂದು ದೊಡ್ಡ ಕೊರತೆ, ಸಂಗೀತ ಎಂದರೆ ಲಯಬದ್ಧತೆ, ಕ್ರಮಾನುಸರಣೆ, ಭಾರತದಲ್ಲಿ ಸಂಗೀತ ಕೇವಲ ಕೆಲವರ ಸ್ವತ್ತಾಗಿ ಬಿಟ್ಟಿದೆ. ಇದು ವ್ಯಸನಕರ. ಅದೊಂದು ರಾಷ್ಟ್ರೀಯ ಗುಣವಾಗಲಿಲ್ಲ. ರಾಷ್ಟ್ರಗೀತೆಗಳನ್ನು ಸುಶ್ರಾವ್ಯವಾಗಿ ಕಲೆತು ಹಾಡುವುದನ್ನು ಕಡ್ಡಾಯಗೊಳಿಸಲಿಚ್ಛಿಸುತ್ತೇನೆ. ಅದಕ್ಕಾಗಿ ಕಾಂಗ್ರೆಸ್ ಅಧಿವೇಶನಗಳಿಗೂ ಸಮ್ಮೇಳನಗಳಿಗೂ ಪ್ರಖ್ಯಾತ ಗಾಯಕರನ್ನು ಆಹ್ವಾನಿಸಿ ಸಾಮೂಹಿಕ ಗಾನವನ್ನು ಅಭ್ಯಾಸ ಮಾಡಿಸಬಹುದು. ಜನಜಂಗುಳಿಯ ಶಿಕ್ಷಣ ಅಷ್ಟು ಸುಲಭವಲ್ಲ. ಏಕೆಂದರೆ ಅವರಿಗೆ ಮನಸ್ಸಿಲ್ಲ, ಏಕಾಗ್ರತೆಯಿಲ್ಲ."

ಸಲಹೆಗಳ ಪಟ್ಟಿಯೊಂದನ್ನು ಸಿದ್ಧ ಮಾಡಿದರು ಗಾಂಧೀಜಿ. ದೊಡ್ಡ ದೊಡ್ಡ ಪ್ರದರ್ಶನಗಳನ್ನೇರ್ಪಡಿಸುವಾಗ ಅನನುಭವಿಗಳಾದ ಸ್ವಯಂಸೇವಕರನ್ನು ನೇಮಿಸಬಾರದು. ಉತ್ಕೃಷ್ಟ ಶಿಕ್ಷಣ ಪಡೆದವರೇ ಮುಂಚೂಣಿಯಲ್ಲಿರಬೇಕು. ಪ್ರತಿ ಸ್ವಯಂಸೇವಕನ ಬಳಿಯೂ ನಿಯಮಗಳ ಪುಸ್ತಕ ಕಡ್ಡಾಯವಾಗಿ ಇರಲೇಬೇಕು. ಜನಸಮುದಾಯ ಸೇರಿದಲ್ಲಿ ಸ್ವಯಂಸೇವಕರು ವ್ಯಾಪಕವಾಗಿ ಹಂಚಿಕೊಂಡಿರಬೇಕು. ಬಾವುಟ ಮತ್ತು (ಸೀಟಿಯ) ಶಿಲ್ಪಿಯ ಸಂಕೇತಗಳನ್ನು ಉಪಯೋಗಿಸಿ ನಿರ್ದೇಶನಗಳನ್ನು ಕೊಡುವ ಅಭ್ಯಾಸ ಇರಬೇಕು. ಉಚಿತ ಸಮಯಗಳಲ್ಲಿ ಮಾತ್ರ ರಾಷ್ಟ್ರೀಯ ಘೋಷಣೆಗಳನ್ನು ಶಿಸ್ತಿನಿಂದ ಕೂಗಬೇಕು. ರೈಲು ನಿಲ್ದಾಣಗಳಲ್ಲಿ ಸಿಕ್ಕಾಪಟ್ಟೆ ಗುಂಪುಸೇರುವುದನ್ನು ತಡೆಗಟ್ಟಬೇಕು. ಸಾಲುಗಟ್ಟಿ ಹಿಂದೆ ನಿಂತು ಬಂದು ಹೋಗುವವರಿಗೂ ವಾಹನಗಳಿಗೂ ದಾರಿ ಮಾಡಿಕೊಡಬೇಕು. ಇಂಥ ಪ್ರದರ್ಶನಗಳು ನಡೆಯುವಾಗ ಚಿಕ್ಕ ಮಕ್ಕಳನ್ನು ಯಾವಾಗಲೂ ಕರೆತರಬಾರದು.

ಹಿಂಸೆಯ ಅಂಶಗಳನ್ನು ಗಾಂಧೀಜಿ ದಮನಗೊಳಿಸಿದರು; ಮತ್ತು ಅನಿಶ್ಚಿತ ಮನಸ್ಸಿನವರನ್ನು ಕಾರ್ಯಪ್ರವೃತ್ತರನ್ನಾಗಿಸಿದರು. "ಪ್ರತ್ಯಕ್ಷ ಕ್ರಿಯೆಯಿಂದಲ್ಲದೆ ಈ ಪ್ರಪಂಚದಲ್ಲಿ ಯಾರೂ ಏನನ್ನೂ ಸಾಧಿಸಿಲ್ಲ, 'ನಿಷ್ಕ್ರಿಯ ಪ್ರತಿರೋಧ' (Passive resistance) ಎಂಬ ಪದ ತುಂಬಾ ಅರಕೆಯನ್ನುಳ್ಳದ್ದು. ಸಾಲದು; ಆದ್ದರಿಂದಲೇ ಆ ಪದವನ್ನು ನಾನು ನಿರಾಕರಿಸಿದೆ."

ನಿಧಾನವಾಗಿ ವಿದ್ಯಾರ್ಥಿಗಳು ಶಾಲೆಗಳನ್ನು ಬಹಿಷ್ಕರಿಸಲಾರಂಭಿಸಿದರು. ಬಿರುದಾಂಕಿತರು ಅವುಗಳನ್ನು ಹಿಂತಿರುಗಿಸಿದರು. ಸರ್ಕಾರದ ಉದ್ಯೋಗಿಗಳು ಕೆಲಸ ಬಿಟ್ಟು ಬಂದರು; ವಕೀಲರು ಸನ್ನದನ್ನು ಬಿಸುಟರು.

ಸಂಪ್ರದಾಯವಾದಿಗಳಿಗೆ ಗಾಂಧೀಜಿಯ ಅಸಹಕಾರ ಚಳುವಳಿ ನಕಾರಾತ್ಮಕ ಕ್ರಿಯೆ ಎಂದೇ ತೋರಿತು. ಬ್ರಿಟಿಷ್ ಆಡಳಿತದೊಡನೆ ಅಸಹಕಾರ ಎಂದರೆ ಭಾರತೀಯರಲ್ಲಿ ಪರಸ್ಪರ ಸಹಕಾರ ಇರಲೇ ಬೇಕಾಗಿತ್ತು. ಭಾರತದಲ್ಲಿ ಇಂಥ ಒಂದು ಐಕ್ಯತೆ

ಯನ್ನು ಗಾಂಧೀಜಿ ಸಾಧಿಸಿದರು. ಪರಸ್ಪರ ವೈಷಮ್ಯಗಳು ಮರೆಯಾದವು. ಹಿಂದೂ–ಮುಸ್ಲಿಮರು ಒಂದಾದರು. ಮೊದಲನೆಯ ಬಾರಿಗೆ ಒಂದು ಸಮಗ್ರ ಭಾರತ ರಾಷ್ಟ್ರದ ಚಿತ್ರ ಮೂಡಿತು. ರಾಷ್ಟ್ರೀಯ ಭಾವೈಕ್ಯತೆಯ ಅನುಭವವಾಗತೊಡಗಿತು. ಹಿಂದೂ-ಮುಸ್ಲಿಂ ಐಕ್ಯತೆ ಭಾರತದ ಸ್ವಾತಂತ್ರ್ಯಕ್ಕೆ ಬುನಾದಿ ಆದ ಅಡಿಗಲ್ಲು ಎಂದೇ ಗಾಂಧೀಜಿಯ ಭಾವನೆ. "ಇವನು ಹಿಂದೂ, ಇವನು ಮುಸ್ಲಿಮ ಎಂಬ ಭೇದ ನನಗೆ ಕಾಣದು. ಇಬ್ಬರೂ ಭಾರತ ಮಾತೆಯ ಮಕ್ಕಳು. ಹಿಂದೂಗಳೂ ಬಹುಸಂಖ್ಯಾತರೇನೋ ಹೌದು; ಶಿಕ್ಷಣದಲ್ಲೂ ಜ್ಞಾನಾರ್ಜನೆಯಲ್ಲೂ ಮುಂದುವರೆದವರೆಂಬ ಭಾವನೆಯೂ ಇದೆ. ಹಾಗಿದ್ದಲ್ಲಿ ಮುಸ್ಲಿಂ ಸಹೋದರರೊಡನೆ ಅವರ ಜ್ಞಾನವನ್ನು ಹಂಚಿಕೊಳ್ಳಬೇಕು. ಅದರಲ್ಲಿ ಅವರು ಆನಂದಿಸಬೇಕು. ಬೆನ್ನಲ್ಲಿ ಬಿದ್ದ ಸೋದರರಂತೆ ಹಿಂದೂಗಳೂ ಮುಸಲ್ಮಾನರೂ ಒಗ್ಗಟ್ಟಾಗಿ ದುಡಿದರೇ ಮಾತ್ರ ನಿಜವಾದ ಐಕ್ಯತೆ. ಆಗಲೇ ಭಾರತ ಸ್ವಾತಂತ್ರ್ಯದ ಅರುಣೋದಯ."

೧೯೨೦ರ ಆಗಸ್ಟ್ ೧೦ರಂದು ಸಹಿಯಾದ 'ಸೇವ್ರಸ್ ಒಪ್ಪಂದ' ಭಾರತದ ಮುಸ್ಲಿಮರನ್ನು ಕೆರಳಿಸಿತ್ತು. ಗಾಂಧೀಜಿ ಕೈಕೊಂಡ ಬಿರುದುಗಳ ತ್ಯಾಗ ಕೊಟ್ಟ ಕೊನೆ ಯೆಚ್ಚರಿಕೆಗಳಿಗೆ ವೈಸ್‌ರಾಯ್ ಲಾರ್ಡ್ ಚೆಲ್ಮ್ಸ್‌ಫರ್ಡ್ ಧಿಕ್ಕರಿಸುವ ಉತ್ತರವಿತ್ತರು. ಅಪಹಾಸ್ಯ ಮಾಡಿ ಚಳುವಳಿಯನ್ನು ಮೆಟ್ಟಲು ಉಪಕ್ರಮಿಸಿದರು. ಆ 'ನಿಷ್ಫಲ' 'ಅಸಂಗತ', 'ವಾಸ್ತವಿಕವಾಗಿ ದಡ್ಡತನ', 'ಅವ್ಯವಹಾರ್ಯ', 'ಹುಚ್ಚು ಕನಸು' ಎಂದು ಹೀಯಾಳಿಸಿ, 'ಅವಿವೇಕದಲ್ಲಿ ಅವಿವೇಕತಮ ಉದ್ಯಮ' ಎಂದು ಚಳುವಳಿಯನ್ನು ಧಿಕ್ಕರಿಸಿದರು. ಗಾಂಧೀಜಿ ಅದಕ್ಕೆ ಉತ್ತರಿಸಿದರು, "ವೈಸರಾಯ್ ಅವರ ದುರದೃಷ್ಟಕ್ಕೆ ಅವರ ಅಪಹಾಸ್ಯದಿಂದ ಚಳುವಳಿ ಬೆಳೆದು ನಿಲ್ಲುತ್ತದೆ. ಕ್ರೂರ ದಮನದಿಂದಲೆ ಪ್ರತಿಭಟನೆಯ ಶಕ್ತಿ ಹೆಚ್ಚುತ್ತದೆ. ಇಂತಹ ಜೀವಂತ ಚಳುವಳಿ, ಪ್ರವರ್ತಕರ ಆಲಸ್ಯ, ಅಜ್ಞಾನ, ಅಸಹನೆಗಳ ಪರಿಣಾಮವಾಗಿ ಮಾತ್ರ ನಿಷ್ಫಲವಾದೀತು; ಇತರ ಕಾರಣಗಳಿಂದಲ್ಲ. ಕ್ರಿಯಾಶೀಲ ನಾಯಕರ ನೇತೃತ್ವದಲ್ಲಿರುವ ಈ ಚಳುವಳಿ ಹೇಗೆ ವಿವೇಕಶೂನ್ಯವಾದೀತು; ಇದು 'ಅವ್ಯವಹಾರ' ಎನ್ನಲು ಸಾಧ್ಯವಿಲ್ಲ. ಜನತೆಯ ಬೆಂಬಲ ಸಿಕ್ಕಿದರೆ ತನ್ನ ಗುರಿಯನ್ನು ಸಾಧಿಸುವ ಸಾಧನವೆಂದು ಎಲ್ಲರೂ ಒಪ್ಪುತ್ತಾರೆ. ಜನ ಬೆಂಬಲ ದೊರೆಯದಿದ್ದರೆ ಮಾತ್ರ ಇದೊಂದು 'ದೂರದ ಕನಸು' ಎನಿಸಬಹುದು. ವ್ಯವಸ್ಥಿತ ಅಸಹಕಾರ ಬಲದಿಂದಲೇ ಜನತೆ ವೈಸ್‌ರಾಯರ ಸವಾಲನ್ನು ಪ್ರಬಲವಾಗಿ ಎದುರಿಸಿ ಅಪಹಾಸ್ಯವನ್ನು ಗೌರವದೆಡೆಗೆ ತಿರುಗಿಸಬಹುದು. ಅಪಹಾಸ್ಯವು ದಬ್ಬಾಳಿಕೆಯಂತೆ ತನ್ನ ಉದ್ದೇಶಿತ ಫಲ ಕೈಗೂಡದೇ ಹೋದಲ್ಲಿ ಕೊನೆಗೆ ಗೌರವವನ್ನು ಮೂಡಿಸುತ್ತದೆ."

ಆಗಸ್ಟ್ ಕೊನೆಯ ವೇಳೆಗೆ ಗುಜರಾತ್ ರಾಜಕೀಯ ಸಮ್ಮೇಳನ ಅಸಹಕಾರ ನಿರ್ಣಯವನ್ನು ಅಂಗೀಕರಿಸಿತು. ಹೆಚ್ಚು ವಿರೋಧವಿರಲಿಲ್ಲ. ಕಾಂಗ್ರೆಸ್ಸಿನ ಮಹಾಧಿವೇಶನಕ್ಕೆ ಮುಂಚೆ ಇಂಥ ನಿರ್ಣಯವನ್ನು ಪ್ರಾಂತಮಟ್ಟದ ಸಮ್ಮೇಳನ ಅಂಗೀಕರಿಸುವುದು ಸರಿಯಲ್ಲವೆಂದು ವಿರೋಧ ಬಂತು. "ತಾಯಿಸಂಸ್ಥೆಯ ಗೌರವವನ್ನು ಹೆಚ್ಚಿಸುವ

ಇಂಥ ಕಾರ್ಯಕ್ರಮಕ್ಕೆ ಪೂರ್ವಭಾವಿ ಸಮ್ಮತಿ ಬೇಕಿಲ್ಲ. ಸ್ವಂತ ಹೊಣೆಗಾರಿಕೆಯಿಂದ ಕೈಗೊಳ್ಳಬಹುದು" ಎಂದರು ಗಾಂಧೀಜಿ.

ಇದುವರೆಗೆ ಕಾಂಗ್ರೆಸ್ ಘಟನಾಬದ್ಧ ಮಾರ್ಗವನ್ನೇ ಅನುಸರಿಸುತ್ತಿದ್ದು ಈಗ ದಿಕ್ಕು ಬದಲಾದುದನ್ನು ಚರ್ಚಿಸಲು ಕಾಂಗ್ರೆಸ್ಸಿನ ಒಂದು ವಿಶೇಷ ಅಧಿವೇಶನ ಕಲ್ಕತ್ತಾದಲ್ಲಿ ಸೆಪ್ಟೆಂಬರ್ ೪-೯ರಂದು ನಡೆಯಿತು. ಇಪ್ಪತ್ತು ಸಾವಿರ ಸದಸ್ಯರಿದ್ದ ಮಹಾಸಭೆಗೆ ಅಮೆರಿಕೆಯಿಂದ ಆಗ ತಾನೇ ಹಿಂತಿರುಗಿದ್ದ ಲಾಲಾ ಲಜಪತ್‌ರಾಯ್ ಅಧ್ಯಕ್ಷರು. ವಿವಿಧ ಪ್ರಾಂತ್ಯಗಳಿಂದ ಐದು ಸಾವಿರ ಪ್ರತಿನಿಧಿಗಳು ಬಂದಿದ್ದರು. ಅದೊಂದು ಮಹತ್ವಪೂರ್ಣ ಅಧಿವೇಶನ.

ಶೌಕತ್-ಆಲಿಯವರ ಕೋರಿಕೆಯಂತೆ ಗಾಂಧೀಜಿ ರೈಲು ಪ್ರಯಾಣದಲ್ಲೇ ಕರಡು ನಿರ್ಣಯ ತಯಾರಿಸಿದ್ದರು. ನಿರ್ಣಯವನ್ನು ಯಾರು ಸಮರ್ಥಿಸುವರು, ಯಾರು ವಿರೋಧಿಸುವರು ಎಂದು ಗಾಂಧೀಜಿಗೆ ಗೊತ್ತಿರಲಿಲ್ಲ. ಅತ್ಯುನ್ನತ ಮಟ್ಟದ ಮಹಾನಾಯಕರ ಅಪೂರ್ವ ಸಮ್ಮಿಳನ: ಶ್ರೀಮಂತಿ ಬೆಸೆಂಟ್, ಪಂಡಿತ ಮಾಳವೀಯ, ವಿಜಯರಾಘವಾಚಾರಿ, ಮೋತಿಲಾಲ್ ನೆಹರು, ಚಿತ್ತರಂಜನ್‌ದಾಸ್, ಮಹಮ್ಮದ್-ಆಲಿ ಜಿನ್ನಾ ಎಲ್ಲರೂ ಉಪಸ್ಥಿತರಿದ್ದರು.

ಪಂಜಾಬ್ ಮತ್ತು ಖಿಲಾಫತ್ ಅನ್ಯಾಯಗಳನ್ನು ಪ್ರತಿಭಟಿಸಿ ನ್ಯಾಯ ಪಡೆಯುವುದಕ್ಕೆ ಮಾತ್ರವೇ ಅಸಹಕಾರ ಚಳುವಳಿಯನ್ನು ಸೂಚಿಸಿದ್ದರು ಗಾಂಧೀಜಿ. ಮೋತಿಲಾಲ್ ನೆಹರು ಮತ್ತು ವಿಜಯರಾಘವಾಚಾರಿ ಸ್ವರಾಜ್ಯದ ಬೇಡಿಕೆಯನ್ನು ಸೇರಿಸಬೇಕು ಎಂದರು. ಗಾಂಧೀಜಿ ಸಂತೋಷವಾಗಿ ಒಪ್ಪಿದರು.

"ಖಿಲಾಫತ್ ಪ್ರಶ್ನೆಯಲ್ಲಿ ಭಾರತ ಸರ್ಕಾರ ಹಾಗೂ ಸಾಮ್ರಾಜ್ಯ ಸರ್ಕಾರಗಳು ಕರ್ತವ್ಯಭ್ರಷ್ಟವಾಗಿ ಭಾರತೀಯ ಮುಸಲ್ಮಾನರಿಗೆ ತೀವ್ರ ಅನ್ಯಾಯ ಮಾಡಿವೆ. ಬ್ರಿಟನ್ನಿನ ಮಹಾಪ್ರಧಾನಿ ಉದ್ದೇಶ ಪೂರ್ವಕವಾಗಿಯೇ ಕೊಟ್ಟ ವಚನವನ್ನು ಮುರಿದಿದ್ದಾರೆ - ಹಠಾತ್ತನೆ ಒದಗಿರುವ ಈ ಧಾರ್ಮಿಕ ವಿಪತ್ತನ್ನು ಎದುರಿಸಿ ನಿರ್ಮೂಲ ಮಾಡಲು ನಮ್ಮ ಮುಸಲ್ಮಾನ ಸಹೋದರರು ನಡೆಸುತ್ತಿರುವ ಪ್ರಯತ್ನದಲ್ಲಿ ಎಲ್ಲ ನ್ಯಾಯ ಸಮ್ಮತ ರೀತಿಯಲ್ಲೂ ಇತರ ಎಲ್ಲ ಧರ್ಮಾನುಯಾಯಿಗಳು ಅಗತ್ಯವಾಗಿ ನೆರವಾಗುವುದು ಪವಿತ್ರ ಕರ್ತವ್ಯ; ೧೯೧೯ರ ಏಪ್ರಿಲ್ಲಿನಲ್ಲಾದ ದುರಂತ ಘಟನೆಗಳಲ್ಲಿ ಎರಡು ಸರ್ಕಾರಗಳು ಪಂಜಾಬದ ನಿರಪರಾಧಿ ಜನತೆಯ ರಕ್ಷಣೆಯನ್ನು ಕಡೆಗಣಿಸಿ ವಿಫಲವಾಗಿವೆ. ಸೈನಿಕ ನೀತಿಯನ್ನೇ ಅರಿಯದ ಅನಾಗರಿಕ ಕ್ರೂರ ಅಪರಾಧಿಗಳಾದ ಅಧಿಕಾರಿಗಳನ್ನು ಶಿಕ್ಷಿಸದೆ ಹೋಗಿದ್ದಾರೆ. ಈ ಎಲ್ಲ ಕ್ರೂರ ಕೃತ್ಯಗಳಿಗೂ ಕಾರಣನಾದ, ತನ್ನ ಅಧಿಕಾರ ರಕ್ಷಣೆಯಲ್ಲಿದ್ದ ಜನರನ್ನೇ ದಾರುಣ ಸಂಕಟಕ್ಕೀಡು ಮಾಡಿದ ಮೈಕೆಲ್ ಓಡ್ವೈಯರ್ ದೋಷಮುಕ್ತನೆಂದೇ ಸಾರಲಾಗಿದೆ; ಇಂಗ್ಲೆಂಡಿನ ಕಾಮನ್ಸ್‌ಸಭೆಯಲ್ಲಿನ ಚರ್ಚೆಯಲ್ಲಿ - ಲಾರ್ಡ್ಸ್ ಸಭೆಯಲ್ಲಿ ಇನ್ನೂ ಅಸಹ್ಯವಾಗಿ - ಭಾರತೀಯರ ತೀವ್ರ ಯಾತನೆ

ಗಳನ್ನು ಧಿಕ್ಕರಿಸಿ ಪಂಜಾಬಿನಲ್ಲಿ ನಡೆದ ಭಯಾನಕ ವರ್ತನೆಯನ್ನು ವ್ಯವಸ್ಥಿತವಾಗಿ ನಡೆದ ಭೀಕರ ಕ್ರೌರ್ಯವನ್ನು ಸಮರ್ಥಿಸಿ ತೀರ್ಪು ಕೊಡಲಾಗಿದೆ; ಇತ್ತೀಚೆಗೆ ವೈಸ್‌ರಾಯರು ಮಾಡಿದ ಘೋಷಣೆಗಳಲ್ಲಿ ಪಂಜಾಬ್ ಮತ್ತು ಖಿಲಾಫತ್ ಘಟನೆಗಳನ್ನು ಕುರಿತು ಯಾವ ಪಶ್ಚಾತ್ತಾಪವೂ ವ್ಯಕ್ತಪಟ್ಟಿಲ್ಲ; ಆದ್ದರಿಂದ ಈ ಎರಡು ಕ್ರೂರ ಅನ್ಯಾಯಗಳಿಗೆ ಪರಿಹಾರ ದೊರೆತ ಹೊರತು ಭಾರತದಲ್ಲಿ ಸಮಾಧಾನ ಇರದು. ರಾಷ್ಟ್ರ ಗೌರವವನ್ನು ರಕ್ಷಿಸಲು ಹಾಗೂ ಇಂಥ ದುಷ್ಕೃತ್ಯಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸ್ವರಾಜ್ಯ ಸ್ಥಾಪನೆಯೊಂದೆ ಏಕೈಕ ಮಾರ್ಗ. ಇದು ಕಾಂಗ್ರೆಸ್ಸಿನ ಖಚಿತಾಭಿಪ್ರಾಯ. ಮೇಲ್ಕಂಡ ಅನ್ಯಾಯಗಳನ್ನು ಸರಿಪಡಿಸುವ ವರೆಗೂ, ಸ್ವರಾಜ್ಯ ಸ್ಥಾಪಿಸುವ ವರೆಗೂ, ಸಂಪೂರ್ಣ ಅಹಿಂಸಾತ್ಮಕ ಅಸಹಕಾರ ಮಾರ್ಗವನ್ನೇ ಕಾಂಗ್ರೆಸ್ ಅನುಮೋದಿಸುತ್ತದೆ. ಭಾರತದ ಜನತೆಗೆ ಬೇರೊಂದು ದಾರಿಯಿಲ್ಲವೆಂದು ಕಾಂಗ್ರೆಸ್ ಅಭಿಪ್ರಾಯಪಡುತ್ತದೆ "–ಎಂದು ನಿರ್ಣಯದಲ್ಲಿ ಘೋಷಿಸಲಾಯಿತು. ಮುಂದುವರೆದು :

"ಸಾರ್ವಜನಿಕಾಭಿಪ್ರಾಯವನ್ನು ಈವರೆಗೆ ರೂಢಿಸಿ ಪ್ರತಿನಿಧಿಸುತ್ತಿರುವ ಮುಂಚೂಣಿಯ ಮಾರ್ಗವೇ ಈ ಕಾರ್ಯಕ್ರಮವನ್ನು ಪ್ರಾರಂಭಿಸುವುದು ಅಗತ್ಯ. ಈ ಸರಕಾರದ ಅಧಿಕೃತ ಗೌರವಗಳನ್ನೂ ಬಿರುದು ಬಾವಲಿಗಳನ್ನೂ ದಯಪಾಲಿಸುವುದರ ಮೂಲಕ, ನಿಯಂತ್ರಿತ ಶಿಕ್ಷಣ ಶಾಲೆಗಳ ಮೂಲಕ, ಸರ್ಕಾರಿ ನ್ಯಾಯಾಲಯ ಸಚಿವಾಲಯಂಗಳ ಮೂಲಕ ತನ್ನ ಅಧಿಕಾರ ಶಾಹಿಯನ್ನು ಸಂಘಟಿಸುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಕನಿಷ್ಠ ಅಪಾಯವನ್ನೆದುರಿಸಲು ಸಿದ್ಧವಾಗಿ, ಪರಿಮಿತ ಬಲಿದಾನಕ್ಕೆ ಕರೆಕೊಟ್ಟು ಅಸಹಕಾರ ಚಳುವಳಿಯ ಮೂಲ ಉದ್ದೇಶಗಳಿಗೆ ಸಮನ್ವಯವಾಗುವ ರೀತಿಯಲ್ಲಿ ಸರ್ಕಾರವನ್ನೆದುರಿಸುವುದು ಸ್ವಾಗತಾರ್ಹ. ಇದನ್ನರಿತು ಕಾಂಗ್ರೆಸ್ ಈ ಕೆಳಗೆ ಕಂಡಂತೆ ಜನತೆಗೆ ಸಲಹೆ ನೀಡುತ್ತದೆ :

(ಅ) ಬಿರುದುಗಳನ್ನು ಗೌರವ ಪದವಿಗಳನ್ನು ತ್ಯಜಿಸುವುದು ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿನ ನಾಮಕರಣ ಸದಸ್ಯತ್ವಗಳಿಗೂ ರಾಜಿನಾಮೆ ಸಲ್ಲಿಸುವುದು.

(ಆ) ಸರ್ಕಾರಿ ಸ್ವಾಗತ ಸಭೆಗಳು, ದರ್ಬಾರುಗಳು ಅಧಿಕಾರೀ ಪೋಷಿತ ಸಮಾರಂಭಗಳು, ಸರ್ಕಾರದ ಅಧಿಕಾರಿಗಳು ನಡೆಸುವ ಅಥವಾ ಅವರ ಗೌರವಾರ್ಥ ನಡೆಯುವ ಉತ್ಸವಗಳಲ್ಲಿ ಭಾಗವಹಿಸಲು ನಿರಾಕರಿಸುವುದು.

(ಇ) ಶಾಲೆ ಕಾಲೇಜುಗಳಿಂದ ಕ್ರಮೇಣ ವಿದ್ಯಾರ್ಥಿಗಳನ್ನು ಹೊರಗೆಡಹುವುದು.

(ಈ) ಬ್ರಿಟಿಷ್ ಆಡಳಿತದ ನ್ಯಾಯಾಲಯುಗಳನ್ನು ಲಾಯರುಗಳೂ ಕಕ್ಷಿಗಾರರೂ, ಕ್ರಮೇಣ ಬಹಿಷ್ಕರಿಸುವುದು ಮತ್ತು ಖಾಸಗಿ ನ್ಯಾಯ

ನಿರ್ಣಯ ಸಂಸ್ಥೆಗಳನ್ನು ನಿರ್ಮಿಸಿ ಖಾಸಗಿ ವ್ಯಾಜ್ಯಗಳನ್ನು ತೀರ್ಮಾನಿಸಿ ಕೊಳ್ಳುವುದು.

(ಉ) ಸೇವೆಗಾಗಿ ನಿಯೋಜಿತರಾದ ಸೈನಿಕರು, ಗುಮಾಸ್ತರು, ಮತ್ತು ಕಾರ್ಮಿಕರು ಮೆಸಪೊಟೊಮಿಯದಲ್ಲಿ ಸೇವೆಸಲ್ಲಿಸಲು ನಿರಾಕರಿಸುವುದು.

(ಊ) ಸುಧಾರಿತ ಕೌನ್ಸಿಲ್ಲುಗಳ ಚುನಾವಣೆಯಿಂದ ಅಭ್ಯರ್ಥಿಗಳು ಹಿಂತೆಗೆದು ಕೊಳ್ಳುವುದು ಮತ್ತು ಕಾಂಗ್ರೆಸ್ಸಿನ ಸಲಹೆಯನ್ನು ಮೀರಿ ನಿಲ್ಲುವ ಅಭ್ಯರ್ಥಿಗಳಿಗೆ ಮತದಾರರು ಓಟು ಮಾಡಲು ನಿರಾಕರಿಸುವುದು.

(ಎ) ಪರದೇಶಿ ವಸ್ತುಗಳನ್ನು ಬಹಿಷ್ಕರಿಸುವುದು.

"ಶಿಸ್ತು ಮತ್ತು ತ್ಯಾಗ ಮನೋಧರ್ಮಗಳ ವಿಕಾಸಕ್ಕೆ ಈ ಅಸಹಕಾರ ಚಳುವಳಿ ಸಹಕಾರಿಯಾಗಿದೆ. ಈ ಗುಣಗಳಿಲ್ಲದೆ ಯಾವ ರಾಷ್ಟ್ರವೂ ಪ್ರಗತಿ ಸಾಧಿಸುವುದಿಲ್ಲ. ಆದ್ದರಿಂದ ಪ್ರತಿಯೊಬ್ಬ ಪ್ರಜೆಗೂ ಈ ಚಳುವಳಿಯ ಮೂಲಕ ಅವಕಾಶ ದೊರೆತು ರಾಷ್ಟ್ರೀಯ ಸಂಯಮವನ್ನೂ ಆತ್ಮ ಸಮರ್ಪಣೆಯ ಸಿದ್ಧತೆಯನ್ನೂ ಸಾಧಿಸಲು ಸಾಧ್ಯವಾಗಬೇಕು. ಇದಕ್ಕಾಗಿ ಎಲ್ಲರೂ ಸ್ವದೇಶಿ ಬಟ್ಟೆಯನ್ನೇ ಧರಿಸುವ ಸಂಕಲ್ಪ ಮಾಡಬೇಕೆಂದು ಕಾಂಗ್ರೆಸ್ ಸಲಹೆ ನೀಡುತ್ತದೆ. ಭಾರತದ ಬಂಡವಾಳ ಮತ್ತು ನಿಯಂತ್ರಣವಿರುವ ಹತ್ತಿಗಿರಣಿಗಳು ರಾಷ್ಟ್ರಕ್ಕೆ ಬೇಕಾಗುವಷ್ಟು ನೂಲು ಮತ್ತು ಬಟ್ಟೆಯನ್ನು ತಯಾರಿಸುತ್ತಿಲ್ಲ ಮತ್ತು ಸದ್ಯದಲ್ಲಿ ಅದು ಸಾಧ್ಯವೂ ಅಲ್ಲ. ಆದ್ದರಿಂದ ವ್ಯಾಪಕವಾಗಿ ಬಟ್ಟೆ ಉತ್ಪಾದನೆಯನ್ನು ಉತ್ತೇಜಿಸಲು ಪ್ರತಿಯೊಂದು ಮನೆಯಲ್ಲೂ ನೂಲುವ ಕಲೆಯನ್ನು ಪುನರುಜ್ಜೀವನಗೊಳಿಸಬೇಕು. ಪ್ರೋತ್ಸಾಹವಿಲ್ಲದೆ ಮೂಲೆ ಗುಂಪಾಗಿರುವ ಕೈಮಗ್ಗದ ಉದ್ಯಮದಲ್ಲಿದ್ದ ಕೋಟ್ಯಾಂತರ ನೇಕಾರರಿಗೆ ಉದ್ಯೋಗ ಒದಗಿಸಿ ಬಟ್ಟೆಯ ಉತ್ಪಾದನೆ ಬೆಳೆಯುವಂತೆ ಮಾಡಬೇಕೆಂದು ಕಾಂಗ್ರೆಸ್ ಸಲಹೆ ಮಾಡುತ್ತದೆ."

ಈ ನಿರ್ಣಯವನ್ನು ಮಂಡಿಸುತ್ತಾ ಗಾಂಧೀಜಿ ಹೀಗೆಂದರು :

"ಈ ಠರಾವನ್ನು ಈ ಮಹಾಸಭೆಯಲ್ಲಿ ಮಂಡಿಸುವಾಗ ನನ್ನ ಮೇಲೆ ಬೀಳುವ ಗುರುತರ ಜವಾಬ್ದಾರಿಯನ್ನು ಬಲ್ಲವನಾಗಿದ್ದೇನೆ. ಅದಕ್ಕಿಂತ ಹೆಚ್ಚಾಗಿ ಮನಗಂಡಿದ್ದೇನೆ. ಈ ನಿರ್ಣಯವನ್ನು ಅಂಗೀಕರಿಸುವುದರಿಂದ ನನ್ನ ಕಷ್ಟಗಳೂ ನಿಮ್ಮ ಕಷ್ಟಗಳೂ ಒಟ್ಟಿಗೆ ಹೆಚ್ಚಾಗುತ್ತವೆಂಬುದು ನನಗೆ ಗೊತ್ತು. ತನ್ನ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿ ಕೊಳ್ಳಲು, ರಾಷ್ಟ್ರಗೌರವವನ್ನು ಕಾಪಾಡಲು, ಇದುವರೆಗೆ ನಮ್ಮ ದೇಶ ಅನುಸರಿಸಿದ ರೀತಿನೀತಿಗಳಿಗೆ ಈ ನಿರ್ಣಯ ಹೊಸ ತಿರುವನ್ನು ಕೊಡುತ್ತದೆಂದು ಅರಿತಿದ್ದೇನೆ. ತಮ್ಮ ತಾಯ್ನಾಡಿನ ಸೇವೆಗಾಗಿ ನನಗಿಂತಲೂ ಹೆಚ್ಚು ಸತತವಾಗಿ ಶ್ರಮಿಸುತ್ತಿರುವ ಅನೇಕ ರಾಷ್ಟ್ರೀಯ ನಾಯಕರು ನನ್ನ ವಿರೋಧವಾಗಿದ್ದಾರೆ ಎಂಬ ಅರಿವೂ ನನಗಿದೆ. ಸರ್ಕಾರದ ನೀತಿಯಲ್ಲೇ ಕ್ರಾಂತಿಯುತ ಪರಿವರ್ತನೆ ತರುವ ಪ್ರಯತ್ನದ ವಿರುದ್ಧ

ಪ್ರತಿಭಟಿಸಿ ನಿಲ್ಲುವುದು ತಮ್ಮ ಕರ್ತವ್ಯವೆಂದೇ ಅವರು ಭಾವಿಸಿದ್ದಾರೆ. ಈ ಹಿನ್ನೆಲೆಯಲ್ಲಿ ದೇವರ ಮೇಲೆ ಭಾರವನ್ನು ಹಾಕಿ, ಕರ್ತವ್ಯದ ಮೇಲೆ ಶ್ರದ್ಧೆಯಿಟ್ಟು ನಿಮ್ಮ ಮುಂದೆ ನಿಂತಿದ್ದೇನೆ. ನಿಮ್ಮ ಹೃತ್ಪೂರ್ವಕ ಅಂಗೀಕಾರಕ್ಕಾಗಿ ಈ ಸಲಹೆಯನ್ನು ಮಂಡಿಸುತ್ತಿದ್ದೇನೆ.

"ಸ್ವಲ್ಪ ಕಾಲ ನನ್ನನ್ನು ನಿಮ್ಮ ಮನಸ್ಸಿನಿಂದ ದೂರಹಾಕಿ ಬಿಡಿ. ನಾನೊಬ್ಬ ಸಂತನೆಂದೂ ಸರ್ವಾಧಿಕಾರದಿಚ್ಛೆಯುಳ್ಳವನೆಂದೂ ನನ್ನನ್ನು ದೂರಲಾಗಿದೆ. ನಾನು ಸಂತನೂ ಅಲ್ಲ, ಸರ್ವಾಧಿಕಾರಿ ಪಟ್ಟಕ್ಕೆ ಸ್ಪರ್ಧಿಸುವನೂ ಅಲ್ಲ, ನನ್ನ ಹಲವು ವರ್ಷಗಳ ಅಸಹಕಾರ ಪ್ರಯೋಗದ ವಾಸ್ತವಿಕ ಅನುಭವವನ್ನು ನಿಮ್ಮ ಮುಂದಿಡಲು ಮಾತ್ರ ನಿಂತಿದ್ದೇನೆ. ಈ ರಾಷ್ಟ್ರದಲ್ಲಿ ಅದು ಒಂದು ಹೊಸ ಪ್ರಯೋಗ ಎಂಬುದನ್ನು ನಾನು ಒಪ್ಪಲಾರೆ. ಸಾವಿರಾರು ಜನ ಕೂಡಿದ ನೂರಾರು ಸಭೆಗಳು ಇದನ್ನು ಅಂಗೀಕರಿಸಿವೆ. ಆಗಸ್ಟ್ ಮೊದಲನೇ ದಿನದಿಂದಲೇ ಮುಸ್ಲಿಂ ಸೋದರರು ಇದಕ್ಕೊಂದು ವ್ಯಾವಹಾರಿಕ ರೂಪ ಕೊಟ್ಟಿದ್ದಾರೆ ಮತ್ತು ನಾವು ಸೂಚಿಸಿರುವ ಅನೇಕ ಸಲಹೆಗಳನ್ನು ಅನೇಕ ಕಡೆ ತೀವ್ರವಾಗಿಯೇ ಜನ ಅನುಸರಿಸುತ್ತಿದ್ದಾರೆ. ಈ ಮುಖ್ಯ ಪ್ರಶ್ನೆಯನ್ನು ಚರ್ಚಿಸುವಾಗ ವ್ಯಕ್ತಿಗಳನ್ನು ಮರೆತು ಶಾಂತವಾಗಿ ತರ್ಕ ಬದ್ಧವಾಗಿ ನಿರ್ಣಯಕ್ಕೆ ಬರಬೇಕೆಂದು ಕೋರುತ್ತೇನೆ. ಈ ನಿರ್ಣಯವನ್ನಂಗೀಕರಿಸಿ ಬಿಟ್ಟ ಮಾತ್ರಕ್ಕೆ ಕೆಲಸ ಮುಗಿಯದು. ತನ್ನ ಮಟ್ಟಿಗೆ ಅನ್ವಯವಾಗುವ ನಿಯಮಗಳನ್ನು ಪ್ರತಿ ಸದಸ್ಯನೂ ಕಡ್ಡಾಯವಾಗಿ ಅನುಸರಿಸಬೇಕು. ಕೃಪೆಯಿಟ್ಟು ಶಾಂತವಾಗಿ ನನ್ನ ಮಾತುಗಳನ್ನಾಲಿಸಬೇಕು. ಗದ್ದಲ ವೆಬ್ಬಿಸುವ ಪ್ರಯತ್ನ ಮಾಡಬಾರದು. ಅದರಿಂದ ನಾನು ಹಿಂಜರಿಯುತ್ತಿದ್ದೇನೆಂದಲ್ಲ; ಚಪ್ಪಾಳೆಯಿಂದ ವಿಚಾರಧಾರೆಗೆ ಅಡಚಣೆಯಾಗುತ್ತದೆ. ಚಪ್ಪಾಳೆ ಕೂಗುಗಳಿಂದ ಭಾಷಣಕಾರನಿಗೂ ಶ್ರೋತೃಗಳಿಗೂ ಉಂಟಾಗಬೇಕಾದ ಹೊಂದಿಕೆಗೆ ಧಕ್ಕೆಯಾಗುತ್ತದೆ. ಯಾರೊಬ್ಬ ಭಾಷಣಕಾರನನ್ನೂ ಗದ್ದಲ ಮಾಡಿ ವೇದಿಕೆಯಿಂದ ಹೊರದೂಡಬಾರದು. ಶಿಸ್ತು, ಸಂಯಮ, ತ್ಯಾಗ ಬುದ್ಧಿಗಳ ಶಿಕ್ಷಣವೇ ಅಸಹಕಾರದ ಬುನಾದಿ. ಈ ಮಾರ್ಗದಲ್ಲಿ ವಿರೋಧಾಭಿಪ್ರಾಯಕ್ಕೆ ಪೂರ್ಣ ಗೌರವ ಅತ್ಯಗತ್ಯ. ಹೀಗೆ ತೀವ್ರ ವಿರೋಧಾಭಿಪ್ರಾಯಗಳನ್ನು ಗೌರವದಿಂದ ಕೇಳುವ ಪರಸ್ಪರ ತಾಳ್ಮೆ ನಮ್ಮಲ್ಲಿ ವಿಕಾಸಗೊಳ್ಳದಿದ್ದರೆ ಅಸಹಕಾರ ಎಂದಿಗೂ ಸಾಧ್ಯವಾಗದು. ಕ್ರೋಧದ ಪರಿಸರದಲ್ಲಿ ಅಸಹಕಾರ ನಡೆಯದು. ದಾರಣ ಅನುಭವಗಳಿಂದ ಒಂದು ಪಾಠ ಕಲಿತ್ತಿದ್ದೇನೆ; ನಮ್ಮ ಸಿಟ್ಟನ್ನು ತಡೆಗಟ್ಟಿ ನಿಯತಗೊಳಿಸುವುದಾದರೆ, ಉಷ್ಣದ ನಿಯಂತ್ರಣದಿಂದ ಶಕ್ತಿ ಉತ್ಪನ್ನವಾದಂತೆ, ಕೋಪ ನಿಗ್ರಹದಿಂದ ನಮ್ಮಲ್ಲಿ ಅಪೂರ್ವ ಶಕ್ತಿಯೊಂದು ಪ್ರಜ್ವಲಿಸಿ ನಿಲ್ಲುತ್ತದೆ. ಜಗತ್ತನ್ನೇ ಪರಿವರ್ತಿಸಬಲ್ಲ ಶಕ್ತಿ ಅದು. ಸಂಗ್ರಾಮದಲ್ಲಿನ ಸಹಯೋಧರಂತೆ ಕಾಂಗ್ರೆಸ್ ಅಧಿವೇಶನಗಳಲ್ಲಿ ಸೇರುತ್ತಿರುವ ಸೋದರರಾದ ನಾವು ಪರಸ್ಪರ ತಾಳ್ಮೆಗಿಂತ ಹೆಚ್ಚಿನ ಶಿಸ್ತನ್ನೇನು ಬಯಸಿಯೇವು?

"ಕೇವಲ ಭಗ್ನ ಕಾರ್ಯದಲ್ಲೇ ತೊಡಗಿದವನೆಂದೂ, ಈ ನಿರ್ಣಯ ತಂದು ರಾಷ್ಟ್ರದ ರಾಜಕೀಯ ಕ್ಷೇತ್ರವನ್ನೇ ವಿನಾಶಗೊಳಿಸುತ್ತಿದ್ದೆನೆಂದೂ ನನಗೆ ಹೇಳಿದ್ದಾರೆ. ಕಾಂಗ್ರೆಸ್ ಒಂದೇಪಕ್ಷದ ವೇದಿಕೆಯಲ್ಲ. ಎಲ್ಲ ಅಭಿಮತಗಳಿಗೂ ಇದು ತೆರೆದ ವೇದಿಕೆಯಾಗಬೇಕು. ಇಂದು ಅಲ್ಪ ಸಂಖ್ಯಾತರಾದವರು ತಮ್ಮ ಸಿದ್ಧಾಂತಗಳ ಕಡೆಗೆ ರಾಷ್ಟ್ರವನ್ನೊಲಿಸಿ ಸದಸ್ಯರನ್ನು ಪರಿವರ್ತಿಸಿ ಬಹುಸಂಖ್ಯಾತರಾಗಲೂ ಅವಕಾಶವಿರಬೇಕು. ಅವರು ಸಂಸ್ಥೆಯನ್ನು ಬಿಟ್ಟು ಹೋಗಬೇಕಾಗಿಲ್ಲ. ಕಾಂಗ್ರೆಸ್ಸಿನ ಸ್ಪಷ್ಟ ಖಂಡನೆಗೆ ಗುರಿಯಾದ ಸಿದ್ಧಾಂತಗಳನ್ನು ಮಾತ್ರ ಕಾಂಗ್ರೆಸ್ಸಿನ ಹೆಸರಿನಲ್ಲಿ ಪ್ರಚಾರ ಮಾಡಬಾರದು. ನನ್ನ ನೀತಿಯನ್ನು ನೀವು ಖಂಡಿಸಿದ ಮಾತ್ರಕ್ಕೆ ನಾನುಬಿಟ್ಟು ಹೋಗುವವನಲ್ಲ; ನಿಮ್ಮೊಡನೆ ವಾದ ಮಾಡಿ ನನ್ನ ನೀತಿಯ ಕಡೆಗೆ ಮನವೊಲಿಸಿ ಅಲ್ಪ ಸಂಖ್ಯೆಯನ್ನು ಬಹುಮತದ ಕಡೆಗೆ ಪರಿವರ್ತಿಸಿಕೊಳ್ಳುತ್ತೇನೆ.

"ಖಿಲಾಫತ್‌ಗೆ ಆದ ಅನ್ಯಾಯ ಎಲ್ಲರಿಗೂ ತಿಳಿದಿದೆ. ಎಲ್ಲ ತ್ಯಾಗಕ್ಕೂ ಸಿದ್ಧರಾಗಿ ಮುಸಲ್ಮಾನರು ತಮ್ಮ ಗೌರವವನ್ನು ಕಾಪಾಡಿಕೊಳ್ಳದಿದ್ದರೆ ತಮ್ಮ ಧರ್ಮಗುರುವನ್ನು ನಿಷ್ಠೆಯಿಂದನುಸರಿಸುವ ಗೌರವವನ್ನು ಉಳಿಸಿಕೊಳ್ಳಲಾರರು. ನಿಷ್ಕರುಣೆಯ ಪಶುಕ್ರೌರ್ಯಕ್ಕೆ ತುತ್ತಾದ ಪಂಜಾಬಿನಲ್ಲಿ ಒಬ್ಬ ಮನುಷ್ಯ ದಬ್ಬಾಳಿಕೆಗೆ ತುತ್ತಾಗಿ ಹೊಟ್ಟೆಯ ಮೇಲೆ ತೆವಳಬೇಕಾಗಿ ಬಂದಾಗ ಇಡೀ ದೇಶವೇ ಅವಮಾನದಲ್ಲಿ ಹೊರಳಿತು. ನಾವು ಈ ದೇಶದ ಸುಪುತ್ರ ಪುತ್ರಿಯರೇ ಆದರೆ ಈ ಘೋರ ಅಪಮಾನವನ್ನು ಸರಿಪಡಿಸಲು ದೀಕ್ಷಾಬದ್ಧರಾಗಲೇಬೇಕು. ಈ ಅನ್ಯಾಯವನ್ನು ತೊಡೆದು ಹಾಕುವಸಲುವಾಗಿಯೇ ದೇಶ ಉದ್ರೇಕಗೊಂಡಿದೆ. ಆದರೆ ಇದುವರೆಗೆ ಈ ವಿದೇಶಿ ಸರ್ಕಾರವನ್ನು ಮಣಿಸಲು ನಮಗೆ ಸಾಧ್ಯವಾಗಿಲ್ಲ. ಕೇವಲ ಕೋಪ ಪ್ರದರ್ಶನ ಮಾಡಿ ತೃಪ್ತಿಪಟ್ಟುಕೊಳ್ಳುವುದು ಸಾಧ್ಯವಿಲ್ಲ. ಅಧ್ಯಕ್ಷ ಭಾಷಣದಲ್ಲಿ ಅತಿ ಕಠೋರವಾಗಿಯೇ ಪಂಜಾಬದ ಘಟನೆಗಳನ್ನು ಖಂಡಿಸಲಾಗಿದೆ. ಅದಕ್ಕಿಂತ ಹೆಚ್ಚು ಭಾವೋದ್ರೇಕ ಸಾಧ್ಯವಿಲ್ಲ. ಆದರೆ ಮನಸ್ಸಿಲ್ಲದವರನ್ನೂ ನ್ಯಾಯಕ್ಕೆ ಮಣಿಯುವಂತೆ ಮಾಡದೇ ಹೋದಲ್ಲಿ ಕಾಂಗ್ರೆಸ್ ತನ್ನ ಗೌರವವನ್ನು ಹೇಗೆ ತಾನೇ ಉಳಿಸಿಕೊಂಡೀತು? ಪಶ್ಚಾತ್ತಾಪ ಪಡುವಂತೆ ತನ್ನ ಪ್ರಭಾವದಿಂದ ಒತ್ತಾಯಿಸಿದ ಹೊರತು ಕಾಂಗ್ರೆಸ್ಸಿಗೆ ಅದು ಸಾಧ್ಯವೆ? ಅಂಥ ರಕ್ತ ಸಿಂಚಿತ ಹಸ್ತಗಳಿಂದ ಆದೆಷ್ಟೇ ಅಮೂಲ್ಯವಾದರೂ ಹಂಗಿನ ಬಹುಮಾನವೊಂದನ್ನು ಪಡೆಯಲು ಸಮ್ಮತಿಸೀತೆ?

"ಈ ಗುರಿಸಾಧನೆಗಾಗಿ ಅಸಹಕಾರ ಕಾರ್ಯಕ್ರಮವನ್ನು ನಿಮ್ಮ ಮುಂದಿಟ್ಟಿದ್ದೇನೆ. ಬೇರೆ ಮಾರ್ಗ ಇದಕ್ಕಿಂತ ಉತ್ತಮ ಎಂದು ನಿಮಗೆ ಖಚಿತವಾದ ಹೊರತು ಮಿಕ್ಕವನ್ನೆಲ್ಲಾ ನಿರಾಕರಿಸಿ. ನನ್ನ ಯೋಜನೆಗೆ ಸಾಕಷ್ಟು ಬೆಂಬಲ ದೊರಕಿದರೆ ಒಂದು ವರ್ಷದಲ್ಲಿ ಸ್ವರಾಜ್ಯ ಹಸ್ತಗತವಾದೀತೆಂಬ ನನ್ನ ಮಾತನ್ನು ಮತ್ತೆ ದೃಢವಾಗಿ ಹೇಳಬಯಸುತ್ತೇನೆ. ನಿರ್ಣಯ ಅಂಗೀಕೃತವಾಗಿ ಬಿಟ್ಟರೆ ಸ್ವರಾಜ್ಯ ಬಾರದು. ದಿನ ನಿತ್ಯ

ನಿಷ್ಠೆಯಿಂದ ಪ್ರಗತಿಪರವಾಗಿ ಅನುಷ್ಠಾನ ಮಾಡಬೇಕು. ರಾಷ್ಟ್ರದ ಪರಿಸ್ಥಿತಿಯನ್ನು ಸದಾ ಕಣ್ಣ ಮುಂದಿಟ್ಟು ನಡೆಯಬೇಕು. ಇದಕ್ಕೆ ಪರ್ಯಾಯ ಮಾರ್ಗ ಎಂದರೆ ಕತ್ತಿಯನ್ನು ಹಿರಿದು ನಿಲ್ಲುವುದೊಂದೇ. ಅದು ಈಗ ಸಾಧ್ಯವಿದ್ದಲ್ಲಿ ಅಸಹಕಾರ ತತ್ತ್ವವನ್ನಾರೂ ಕೇಳುತ್ತಿರಲಿಲ್ಲ. ಆದರೆ ಹಿಂಸಾಮಾರ್ಗ ಪ್ರವರ್ತನೆಯಿಂದ ಅನ್ಯಾಯ ತಡೆಗಟ್ಟಬೇಕಾದರೂ ಶಿಸ್ತು ಮತ್ತು ಬಲಿದಾನಗಳು ಅತ್ಯಗತ್ಯ. ಶಿಸ್ತಿನ ರಕ್ಷಣೆ ಪಡೆದ ಸೈನ್ಯ, ಯುದ್ಧಗಳಲ್ಲಿ ವಿಜಯಿಯಾದೀತೆ ಹೊರತು ದೊಂಬಿಯಿಂದ ಗೆಲ್ಲಲಾರದು. ಬ್ರಿಟಿಷ್ ಸರ್ಕಾರದೊಡನೆ ಯೂರೋಪಿನ ಸಾಮೂಹಿಕ ಶಕ್ತಿಗಳೊಡನೆ ಹೋರಾಡಲು ಶಿಸ್ತು ಮತ್ತು ಬಲಿದಾನ ಶಿಕ್ಷಣವನ್ನು ನಾವು ಪಡೆಯಲೇಬೇಕು. ನಾನು ಅಸಹನೆಗೊಂಡಿದ್ದೇನೆ ಎಂದು ಒಪ್ಪಿಕೊಳ್ಳುತ್ತೇನೆ. ನಾವು ಇಂದೇ ಸ್ವರಾಜ್ಯಕ್ಕೂ ಅರ್ಹರು. ಆದರೆ ನಮ್ಮಲ್ಲಿ ರಾಷ್ಟ್ರಕ್ಕಾಗಿ ತ್ಯಾಗ ಮಾಡುವ ಶಕ್ತಿ ಸಾಲದು. ಕುಟುಂಬಕ್ಕಾಗಿ ತ್ಯಾಗ ಮಾಡಬಲ್ಲೆವು. ಇದನ್ನೇ ರಾಷ್ಟ್ರಕ್ಕೂ ವಿಸ್ತರಿಸಿ ಎಂದು ನನ್ನ ವಿನಂತಿ. ಈ ರಾಷ್ಟ್ರೀಯ ಧರ್ಮ ನಮ್ಮಲ್ಲಿ ಸ್ಫುರಣವಾಗಿದೆಯೆ? ಧನ, ಮನೆ, ಮಕ್ಕಳು ಸರ್ವಸ್ವವನ್ನು ತಾಯ್ನಾಡಿನ ಸೇವೆಗೆ ಮುಡಿಪಾಗಿಡುತ್ತೇವೆಯೆ? ಪ್ರಾರಂಭದ ಮಹಾತ್ಯಾಗಕ್ಕೆ ದೇಶ ಸಿದ್ಧವಾಗಿದೆಯೆ? ಇವೆಲ್ಲವನ್ನು ತಿಳಿಯಲು ನಾನು ದೇಶದ ಮೂಲೆ ಮೂಲೆಗೂ ಪ್ರವಾಸ ಮಾಡುತ್ತಿದ್ದೇನೆ. ದೇಶ ಸಿದ್ಧವಾಗಿದೆಯೆ? ಬಿರುದಾಂಕಿತರು ಅವನ್ನು ತ್ಯಜಿಸಲು ಸಿದ್ಧವೇ? ತಾಯ್ನಾಡಿಗಾಗಿ ತಮ್ಮ ಮಕ್ಕಳ ಅಕ್ಷರ ವಿದ್ಯೆಯನ್ನು ಕೊನೆಗಾಣಿಸಲು ಪೋಷಕರು ಸಿದ್ಧರೇ? ಕಾರಕೂನರ ಕಾರ್ಖಾನೆಗಳಾಗಿವೆ ಈ ಶಾಲಾ ಕಾಲೇಜುಗಳು. ಬಿರುದಾಂಕಿತರು, ಪ್ರತಿಷ್ಠಿತರು, ಪೋಷಕರು ಈ ಬಲಿದಾನಗಳಿಗೆ ಸಿದ್ಧರಾಗದಿದ್ದರೆ ಸ್ವರಾಜ್ಯ ಅಸಾಧ್ಯ. ಆಳರಸರು ವಿಧಿಸುವ ಕರ್ತವ್ಯಗಳನ್ನು ದಾಸರಂತೆ ಮಾಡದೆ ಸಾಮಂತ ಪ್ರಜೆಗಳು ಅವರಿಂದ ಬಿರುದು ಬಾವಲಿಗಳನ್ನು ಪಡೆಯಲಾರರು. ದಾಸ್ಯರಾಷ್ಟ್ರ ಸಹಜವಾಗಿ ಇದನ್ನರಿಯಬೇಕು. ಗೆದ್ದ ರಾಷ್ಟ್ರ ತನ್ನ ಹಿತವನ್ನು ರಕ್ಷಿಸುವುದಕ್ಕಲ್ಲದೆ, ದಾಸ್ಯ ರಾಷ್ಟ್ರದ ಹಿತಕ್ಕಾಗಿ ಈ ಬಹುಮಾನಗಳನ್ನು ಕೊಡುತ್ತಿಲ್ಲ. ಇದನ್ನು ಅರಿತ ಕ್ಷಣದಲ್ಲೇ ಈ ಎಲ್ಲ ಸ್ವಯಂ ಪ್ರೇರಿತ ಸಹಾಯಗಳನ್ನು ನಿರಾಕರಿಸಬೇಕು. ಚಕ್ರಾಧಿಪತ್ಯದ ಒಳಗಿರಲಿ, ಹೊರಗಿರಲಿ ಸ್ವಾತಂತ್ರ್ಯ ಸಂಗ್ರಾಮ ಯಶಸ್ವಿಯಾಗಲು ಇವು ಅತ್ಯಗತ್ಯ ಅಡಿಗಲ್ಲುಗಳು. ಹಿಂದೂ ಮುಸಲ್ಮಾನರ ನಿಜವಾದ ಐಕ್ಯ ಬ್ರಿಟಿಷರೊಡನೆ ನಮ್ಮ ಬಾಂಧವ್ಯಕ್ಕಿಂತ ಬಹು ಬೆಲೆಯುಳ್ಳದ್ದೆಂದೇ ನನ್ನ ಮತ. ಇವೆರಡರಲ್ಲಿ ಒಂದನ್ನಾರಿಸು ಎಂದರೆ ಮೊದಲನೆಯದನ್ನೇ ಆರಿಸಿಕೊಂಡೇನು? ಎರಡನೆಯದು ತ್ಯಾಜ್ಯವಾದೀತು. ಪಂಜಾಬದ ಗೌರವ ರಕ್ಷಣೆ ನನಗೆ ಅತ್ಯಮೂಲ್ಯ. ಅರಾಜಕತೆ, ಶಿಕ್ಷಣದ ಅವ್ಯವಸ್ಥೆ, ಶಾಸನ ಸಭೆಗಳ ಮುಕ್ತಾಯ, ಇವೆಲ್ಲ ಅಪಾಯಗಳಿದ್ದರೂ ಬ್ರಿಟಿಷ್ ಬಾಂಧವ್ಯವನ್ನು ತ್ಯಜಿಸಿ ಪಂಜಾಬದ ಗೌರವ ರಕ್ಷಣೆಯೇ ನನ್ನ ಪವಿತ್ರ ಕರ್ತವ್ಯ ಎಂದು ಯಾವ ಶಂಕೆಯೂ ಇಲ್ಲದೆ ಅಂಗೀಕರಿಸುತ್ತೇನೆ.

"ಇಸ್ಲಾಂ 'ಮತ್ತು ಪಂಜಾಬಗಳ ಗೌರವ ರಕ್ಷಣೆಗೆ ಕಂಕಣ ಬದ್ಧರಾಗಲು ನಿಮ್ಮಲ್ಲೂ ಅಂಥ ತೀವ್ರ ರಾಷ್ಟ್ರಾಭಿಮಾನ ಜ್ವಾಲೆ ಪ್ರಜ್ವಲಿಸುತ್ತಿದ್ದರೆ ಬೇಷರತ್ತಾಗಿ ನೀವು ನನ್ನ ನಿರ್ಣಯವನ್ನು ಅಂಗೀಕರಿಸುತ್ತೀರಿ.

"ಶಾಸನಸಭೆಗಳ ಬಹಿಷ್ಕಾರ ಮತ್ತೊಂದು ಜ್ವಲಂತ ಪ್ರಶ್ನೆ. ಈ ಕಾರ್ಯಕ್ರಮದ ಬಗೆಗೆ ಅತ್ಯಂತ ತೀವ್ರ ಅಭಿಪ್ರಾಯ ಭೇದವಿದೆ. ಭಿನ್ನಮತ ಅನಿವಾರ್ಯವಾದರೆ ನಾವು ಪ್ರತ್ಯೇಕವಾಗಲೇಬೇಕು. ಒಂದು ಮಾತನ್ನು ಗಮನದಲ್ಲಿಟ್ಟು ಈ ಬಗ್ಗೆ ನಾವು ನಿರ್ಣಯ ಮಾಡೋಣ. ಈ ಮಂತ್ರಾಲೋಚನೆ ಸಭೆಗಳ ಮೂಲಕ ಸ್ವರಾಜ್ಯ ಸಾಧಿಸೋಣವೇ ಅಥವಾ ಅದನ್ನು ತ್ಯಜಿಸುವುದೇ? ಬ್ರಿಟಿಷರು ವಿಶ್ವಾಸಘಾತಕರಾಗಿದ್ದಾರೆ. ಪಶ್ಚಾತ್ತಾಪ ರಹಿತರಾಗಿದ್ದಾರೆ. ಹೀಗಿರುವಾಗ ಈ ಶಾಸನ ಸಭೆಗಳು ರಾಷ್ಟ್ರವನ್ನು ಮುಕ್ತಗೊಳಿಸೀತೆ? ಬ್ರಿಟಿಷರ ಆಡಳಿತದ ಮುಷ್ಟಿಯನ್ನೇ ಬಿಗಿಪಡಿಸುವುದಿಲ್ಲವೇ? ಇದನ್ನು ವಿಚಾರ ಮಾಡಿ ನಿರ್ಣಯಿಸಿ.

"ಈಗ ಸ್ವದೇಶಿಯ ವಿಚಾರಕ್ಕೆ ಬರುತ್ತೇನೆ. ವಿದೇಶೀಯ ವಸ್ತು ಬಹಿಷ್ಕಾರ ಈಗಾಗಲೇ ನಿರ್ಣಯದಲ್ಲಿದೆ. ಇಲ್ಲಿ ವಿಪರ್ಯಾಸವಿದೆ. ವಿಪರ್ಯಾಸಕ್ಕೆ ನಾನು ಕಾರಣನಲ್ಲ. ಇದಕ್ಕೆ ನಾನು ಸಮ್ಮತಿಸಿದ್ದು ನಿಜ. ಈ ನಿರ್ಣಯದೊಳಕ್ಕೆ ಈ ವಿಷಯ ಹೇಗೆ ಬಂತು ಎಂದು ಈಗ ನಾನು ವಿಶ್ಲೇಷಣೆಗೆ ಹೋಗುವುದಿಲ್ಲ. ಅದರ ತಿರುಳು ಸಂಯಮ ಮತ್ತು ಬಲಿದಾನಕ್ಕೆ ಸಿದ್ಧರಾಗುವುದು. ಸ್ವದೇಶೀ ಎಂದರೆ ಶಾಶ್ವತವಾಗಿ ವಿದೇಶೀ ವಸ್ತುಗಳಿಗೆ ಬಹಿಷ್ಕಾರ. ಇದು ಪುನರಾವೃತ್ತಿ ಎನಿಸೀತು. ಮನಸ್ಸಾಕ್ಷಿಯನ್ನು ಕಡೆಗಣಿಸಿ ನಾನಿದನ್ನು ಬಿಟ್ಟು ಬಿಡಲಾರೆ. ಅದಕ್ಕಾಗಿ ಅಂಗೀಕರಿಸಿದ್ದೇನೆ. ಈ ಸಂಪೂರ್ಣ ಬಹಿಷ್ಕಾರ ವಾಸ್ತವವಾಗಿ ಅಸಾಧ್ಯವಾದೀತು. ಒಂದು ಸೂಜಿಗೂ, ಅಕ್ಷರಶಃ ಹಾಗೂ ಸಾಂಕೇತಿಕವಾಗಿ, ನಾವು ಪರಾವಲಂಬಿಗಳಾಗಿರುವಾಗ ವಿದೇಶೀ ವಸ್ತುಗಳ ಸಂಪೂರ್ಣ ಬಹಿಷ್ಕಾರವಾದರೂ ಹೇಗೆ ಸಾಧ್ಯ! ಈ ಸುಸಂಬದ್ಧ ಕಾರ್ಯಕ್ರಮಕ್ಕೆ ಇದು ಸ್ವಲ್ಪ ಅಪಶೃತಿಯೇ ಆಯಿತೋ ಏನೋ. ಸಿದ್ಧಪಡಿಸಿದ ಒಂದು ಸುಂದರ ಚೌಕಟ್ಟಿಗೆ ಇದು ಹೊಂದದೇ ಹೋಗಿದೆ. ಆದರೆ ಚೌಕಟ್ಟಿನ ಸೌಂದರ್ಯಕ್ಕಿಂತ ಅನುಷ್ಠಾನ ಯೋಗ್ಯತೆಯೇ ನನಗೆ ಸ್ವಾಗತಾರ್ಹ.

"ವ್ಯಕ್ತಿತ್ವ ಪ್ರಭಾವಕ್ಕೆ ನೀವು ಮಣಿಯಬಾರದು. ನಾನು ಮಾಡಿರಬಹುದಾದ ಸೇವೆ ಮರೆತು ಬಿಡಿ. ಪ್ರಯಾಸಪಟ್ಟು ದುಡಿಯುವುದು, ಕಾರ್ಯಕ್ರಮದ ಪೂರ್ವಭಾವಿಯಾಗಿ ಆಳವಾಗಿ ವಿಚಾರ ಮಾಡಿರುವುದು ಮತ್ತು ಅನುಷ್ಠಾನದಲ್ಲಿ ಹಿಂಜರಿಯದ ದೃಢತೆ, ಇವು ನನ್ನಲ್ಲುಂಟು. ನೀವು ಅಂಗೀಕರಿಸುವ ಯಾವುದೇ ಕಾರ್ಯಕ್ರಮವಾಗಲಿ ನನ್ನಿಂದ ಅಷ್ಟನ್ನು ಪಡೆಯಬಹುದು."

ನಿರ್ಣಯಕ್ಕೆ ಪ್ರಬಲವಾದ ವಿರೋಧವಿತ್ತು. ಬಿಪಿನ್ ಚಂದ್ರಪಾಲ್ ಒಂದು ತಿದ್ದುಪಡಿ ಸೂಚಿಸಿದರು. ಸಿ. ಆರ್. ದಾಸ್ ಅನುಮೋದಿಸಿದರು. ಬ್ರಿಟನ್ನಿಗೆ ಒಂದು

ನಿಯೋಗ ಹೋಗಿ ಕಾಂಗ್ರೆಸ್ ಬೇಡಿಕೆಗಳನ್ನು ಮಂಡಿಸುವುದು; ರಾಷ್ಟ್ರದಲ್ಲಿ ರಾಷ್ಟ್ರೀಯ ಶಾಲೆಗಳನ್ನು ಜನತಾ ನ್ಯಾಯಾಲಯಗಳನ್ನು ಸ್ಥಾಪಿಸುವುದು; ಕೌನ್ಸಿಲ್ಲುಗಳ ಬಹಿಷ್ಕಾರ ವನ್ನು ಬಿಟ್ಟು ಬಿಡುವುದು, ಇವು ಮುಖ್ಯಾಂಶಗಳು. ಇದರಿಂದ ಕೌನ್ಸಿಲ್ಲುಗಳ ಚುನಾ ವಣೆಗೆ ಸ್ಪರ್ಧಿಸಿ ಒಳಗಿನಿಂದ ಪ್ರತಿಭಟಿಸುವುದು; ಇದರಿಂದ ನಿಜವಾದ ಚಳುವಳಿ ಯನ್ನು ಬರುವ ಚುನಾವಣೆಗಳವರೆಗೆ ಮುಂದುಹಾಕುವುದು ಎಂದು ನಿರ್ಣಯವನ್ನು ಬದಲಾಯಿಸುವಂತೆ ಸೂಚಿತವಾಗಿತ್ತು. ನಿರ್ಣಯವನ್ನು ಮತ ಎಣಿಕೆಗೆ ಹಾಕಲಾಯಿತು.

ಮತ ಎಣಿಕೆಯನ್ನು ಎಚ್ಚರಿಕೆಯಿಂದ ವ್ಯವಸ್ಥೆ ಮಾಡಲಾಗಿತ್ತು. ಕಾಂಗ್ರೆಸ್ ಚಪ್ಪರವನ್ನು ಖಾಲಿ ಮಾಡಿಸಲಾಯಿತು. ಸ್ವತಃ ಲಾಲಾ ಲಜಪತರಾಯರೇ ಮೇಲ್ವಿ ಚಾರಕರಾದರು. ಆರು ಗಂಟೆಗಳ ಕಾಲ ಈ ಕಾರ್ಯ ನಡೆಯಿತು. ಆ ಚರಿತ್ರಾರ್ಹ ಸೆಪ್ಟೆಂಬರ್ ೯, ೧೯೨೦ರಂದು ಕಾಂಗ್ರೆಸ್ ಅಸಹಕಾರ ನಿರ್ಣಯವನ್ನು ೧೮೫೫–೮೭೩ ಮತಗಳಿಂದ ಅಂಗೀಕರಿಸಿತು. ವಿಷಯ ನಿಯಾಮಕ ಸಮಿತಿಯಲ್ಲಿದ್ದ ಮುಸ್ಲಿಂ ಸದಸ್ಯರಲ್ಲಿ ಜಿನ್ನಾ ರವರೊಬ್ಬರನ್ನು ಬಿಟ್ಟು ಮಿಕ್ಕವರೆಲ್ಲ ಗಾಂಧೀಜಿಯೊಡನಿದ್ದರು. ಪ್ರಖ್ಯಾತ ಮುಸ್ಲಿಮೇತರ ನಾಯಕರನೇಕರು ದಾಸರನ್ನು ಬೆಂಬಲಿಸಿದ್ದರು. ಈ ವಿಜಯ ದೊರೆತಾಗ ಗಾಂಧೀಜಿ ಹೀಗೆ ಬರೆದರು :

"ಅಸಹಕಾರಕ್ಕೆ ರಾಷ್ಟ್ರ ಸಮ್ಮತಿಯುಂಟೆಂದು ಮತ ಎಣಿಕೆಯ ವಿಶ್ಲೇಷಣೆಯಿಂದ ಖಚಿತವಾಗಿದೆ. ಕೌನ್ಸಿಲ್ಲುಗಳು, ಶಾಲೆಗಳು ಮತ್ತು ಕೋರ್ಟುಗಳುನ್ನು ಬಹಿಷ್ಕರಿಸ ಬೇಕೆಂದೇ ನಾನು ವಾದಿಸುತ್ತಿದ್ದೇನೆ. ಈ ನಿರ್ಣಯದ ಪರ ಮತ್ತು ವಿರೋಧವಾಗಿರುವ ಬಹುಸಂಖ್ಯಾತರಿಗೂ ಅಲ್ಪ ಸಂಖ್ಯಾತರಿಗೂ ನಾನು ನಮ್ರನಾಗಿ ಹೀಗೆ ಹೇಳುತ್ತೇನೆ. ವಿಜಯದ ಸಮಯದಲ್ಲಿ ಅತ್ಯಂತ ವಿನಮ್ರರಾಗಬೇಕೆಂದು ಬಹುಸಂಖ್ಯಾತರನ್ನು ಕೇಳಿ ಕೊಳ್ಳುತ್ತೇನೆ. ನಿಮ್ಮ ಮೇಲೆ ಗುರುತರ ಜವಾಬ್ದಾರಿ ಬಿದ್ದಿದೆ. ಒಬ್ಬೊಬ್ಬನ ಬೆಂಬಲಿಗನ ಮೇಲೂ ಈ ಜವಾಬ್ದಾರಿ ಉಂಟು. ಪೋಷಕನಾದಲ್ಲಿ ಮಕ್ಕಳನ್ನು ಸರ್ಕಾರದ ನಿಯಂತ್ರಣ ವಿರುವ ಶಾಲೆ ಕಾಲೇಜುಗಳಿಂದ ಕರೆಸಿಕೊಳ್ಳಬೇಕು. ಲಾಯರಾದಲ್ಲಿ ಈ ಕೂಡಲೇ ನ್ಯಾಯಾಲಯಗಳಲ್ಲಿ ವಕೀಲಿಯನ್ನು ತ್ಯಜಿಸಿ ಖಾಸಗಿ ನ್ಯಾಯ ನಿರ್ಣಯ ಮಂಡಲಿ ಗಳನ್ನು ನಿರ್ಮಾಣ ಮಾಡಬೇಕು. ಕೌನ್ಸಿಲ್ ಚುನಾವಣೆಗೆ ನಿಂತಿರುವ ಉಮೇದುವಾರ ನಾದರೆ ಈ ನಿರ್ಣಯದಿಂದ ಅವನು ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಬದ್ಧನಾಗುತ್ತಾನೆ. ಮತಾಧಿಕಾರ ಉಳ್ಳವರು ಅದನ್ನು ನಿರಾಕರಿಸಬೇಕು. ನಿರ್ಣಯದ ಪರವಾಗಿರುವವರೆಲ್ಲರೂ ಕೈನೂಲನ್ನೂ, ಕೈಮಗ್ಗದ ಬಟ್ಟೆ ತಯಾರಿಕೆಯನ್ನೂ ಪ್ರೋತ್ಸಾಹಿಸಿ ಸ್ವತಃ ಆ ಬಟ್ಟೆಯನ್ನು ತೊಡಲು ಸಂಕಲ್ಪ ಮಾಡುತ್ತೀರೆಂಬುದನ್ನು ಮರೆಯಬಾರದು. ಅಸಹಕಾರ ಕಾರ್ಯಕ್ರಮದ ಮೂಲ ತತ್ವಗಳಾದ ಅಹಿಂಸೆ, ಸ್ವಾರ್ಥತ್ಯಾಗ, ಶಿಸ್ತು, ಸಂಯಮಗಳನ್ನಂಗೀಕರಿಸಿದ್ದರಿಂದ ಅಲ್ಪ ಸಂಖ್ಯಾತರನ್ನು ಗೌರವದಿಂದಲೂ ನ್ಯಾಯ ದಿಂದಲೂ ಕಾಣಲು ಬದ್ಧರಾಗಿರುತ್ತಾರೆ. ದೈಹಿಕವಾಗಿಯಾಗಲಿ ಮಾತಿನಿಂದಾಗಲಿ ಅವರ ಮೇಲೆ ಹಿಂಸಾಚಾರವನ್ನೆಸಗಬಾರದು. ಶ್ರದ್ಧಾಪೂರ್ವಕ ಆಚರಣೆಯಿಂದಲೂ,

ನಿರ್ದೋಷ ನಡವಳಿಕೆಯಿಂದಲೂ ಅವರನ್ನು ನಮ್ಮ ಕಡೆಗೆ ಪರಿವರ್ತಿಸುವ ಪ್ರಯತ್ನ ಮಾಡಬೇಕು. ನಿರ್ಣಯದ ವಿರೋಧಿಗಳು ಅಶಕ್ತರೂ ಅಲ್ಲ ಕಾರ್ಯವಿಮುಖರೂ ಅಲ್ಲ. ಮಕ್ಕಳನ್ನು ಶಾಲೆಗಳಿಂದ ಬಿಡಿಸುವುದು ಸಾಧುವಲ್ಲವೆಂದು ಕೆಲವರು ಸಂಶಯ ಪಟ್ಟರು. ಆದರೆ ಶಾಲೆಗಳು ಬರಿದಾಗಿ ರಾಷ್ಟ್ರೀಯ ಶಾಲೆಗಳು ಎಲ್ಲೆಲ್ಲೂ ವ್ಯವಸ್ಥಿತ ವಾಗ ಹತ್ತಿದರೆ, ವಕೀಲರು ವೃತ್ತಿಯನ್ನು ತ್ಯಜಿಸಿಯೂ ಗೌರವ ಜೀವನವನ್ನು ಮುಂದುವರಿಸುತ್ತಲೇ ಇರುವುದಾದರೆ, ಉನ್ನತರಾಷ್ಟ್ರಭಕ್ತರು ಕೌನ್ಸಿಲ್ಲುಗಳನ್ನು ತ್ಯಜಿಸಿ ಬಂದರೆ, ಅವರಿಗೆ ತಾನೇ ತಾನಾಗಿ ನಂಬಿಕೆ ಬಂದು, ಹಿಂಜರಿಕೆಯನ್ನು ಕಿತ್ತೊಗೆದು ಕಾರ್ಯಕ್ರಮವನ್ನು ತಾವಾಗಿಯೇ ಅಂಗೀಕರಿಸುತ್ತಾರೆ. ಆದ್ದರಿಂದ ಈ ಘಳಿಗೆ ಯಲ್ಲಿ ಅವರು ನಮ್ಮೊಡನಿಲ್ಲ ಅಂದ ಮಾತ್ರಕ್ಕೆ ನಾವು ತಾಳ್ಮೆಗೆಡಬೇಕಾಗಿಲ್ಲ.

"ಅಲ್ಪ ಸಂಖ್ಯಾತರಿಗೆ ಒಂದು ಮಾತು. ಒಂದು ನ್ಯಾಯಬದ್ಧ ಸಮರದಲ್ಲಿ ಅವರು ಸೋತಿದ್ದಾರೆ. ಆತ್ಮಸಾಕ್ಷಿಗೆ ವಿರೋಧವೆನಿಸದಿದ್ದರೆ ಅವರು ಈ ಅಸಹಕಾರ ಕಾರ್ಯಕ್ರಮವನ್ನು ಬಿರುಸಿನಿಂದ ನಡೆಸಲು ಸಹಾಯಕರಾಗಬೇಕು. ಬಹುಸಂಖ್ಯಾತರು ಗುರುತರವಾದ ತಪ್ಪು ಮಾಡಿದ್ದಾರೆ ಎಂದು ತಿಳಿದಿರುವವರು ಅವರನ್ನು ಪರಿವರ್ತಿಸಲು ಚಳುವಳಿ ಕೈಗೊಳ್ಳಬೇಕು. ಈ ಅಲ್ಪ ಸಂಖ್ಯಾತರಲ್ಲೂ ಬಹುಮಂದಿ ತತ್ವಶಃ ರಾಷ್ಟ್ರೀಯ ಶಾಲೆಗಳನ್ನು, ಖಾಸಗಿ ನ್ಯಾಯ ಮಂಡಳಿಗಳನ್ನು ಒಪ್ಪಿಯೆ ಇದ್ದಾರೆ. ಕೌನ್ಸಿಲ್ಲುಗಳ ಬಹಿಷ್ಕಾರವನ್ನು ಮಾತ್ರ ಮುಂದೆ ಹಾಕಬೇಕೆಂದು ಅವರ ಇಚ್ಛೆ. ನಮ್ಮಲ್ಲಿ ಬಹುಮತದ ಇಚ್ಛೆ ವೇಗವನ್ನು ಹೆಚ್ಚಿಸಬೇಕೆಂದಿರುವಾಗ ಅಲ್ಪ ಸಂಖ್ಯಾತರು ನಿರ್ಣಯವನ್ನು ಅಂಗೀಕರಿಸಿ ಕಾರ್ಯಕ್ರಮದ ಯಶಸ್ಸಿಗೆ ನೆರವಾಗಬೇಕೆಂದು ನನ್ನ ವಿನಂತಿ."

ಕಾರ್ಯಕ್ರಮದ ವಿವರಣೆ ಕೊಡುತ್ತಾ ಗಾಂಧೀಜಿ ಹೀಗೆ ಹೇಳಿದರು: "ಕೇವಲ ವಕೀಲರವರ್ಗ, ಅಥವಾ ಉನ್ನತ ವಿದ್ಯಾವಂತ ವರ್ಗಗಳನ್ನು ಮಾತ್ರವೇ ನಾನು ಅವಲಂಬಿಸಿಲ್ಲ. ಆಧಾರಿತವಾಗಿ ಈ ಅಸಹಕಾರದ ವಿವಿಧ ಹಂತಗಳಿಗೆ ಜನತಾಸಮೂಹದ ಶಕ್ತಿಯೆ ನಮ್ಮ ಮುಂದಿನ ಆಶಾಕಿರಣ. ಬರಲಿರುವ ಘಟ್ಟಗಳಲ್ಲಿ ಅವರ ಶಕ್ತಿಯೇ ಇನ್ನೂ ಹೆಚ್ಚು ಆಧಾರಭೂತವಾಗುತ್ತದೆ."

ಮುಸ್ಲಿಂ ಲೀಗಿನ ಅಧಿವೇಶನಗಳು ಈಗ ಹಲವು ವರ್ಷಗಳಿಂದ ಕಾಂಗ್ರೆಸ್ ಅಧಿವೇಶನದ ನಡೆದ ಕಡೆಗಳಲ್ಲೇ ಅದೇ ಸಮಯದಲ್ಲಿ ನಡೆಯುತ್ತಿದ್ದವು. ಕಲ್ಕತ್ತಾದಲ್ಲಿ ಸೆಪ್ಟೆಂಬರ್ ೭ ರಂದು ಅದರ ವಿಶೇಷ ಅಧಿವೇಶನವೊಂದು ನಡೆಯಿತು. ಅಧ್ಯಕ್ಷ ಜಿನ್ನಾ ಅವರು "ಗಾಂಧಿಯವರ ಕಾರ್ಯಕ್ರಮ ಕೈಗೊಳ್ಳದಿದ್ದರೂ ಅಸಹಕಾರ ಚಳು ವಳಿಯನ್ನು ಕೈಗೊಳ್ಳುವುದಲ್ಲದೆ ಜನತೆಗೆ ಬೇರೆ ಮಾರ್ಗವೇ ಇಲ್ಲ" ಎಂದು ನುಡಿದರು.

# ಒಂದು ವರ್ಷದಲ್ಲಿ ಸ್ವರಾಜ್ಯ

## ೧೯೨೦

೧೯೨೦ರ ಕಡೆಯ ಭಾಗದಲ್ಲಿ ಗಾಂಧೀಜಿ ಮೂರು ಬಗೆಯ ಬಹಿಷ್ಕಾರ ಚಳುವಳಿ ಹೂಡಿದರು. ಸ್ವದೇಶಿ ಕಾರ್ಯಕ್ರಮವನ್ನು ಮುಂದುವರಿಸುವುದರ ಬಗೆಗೆ ಕೆಲವು ನಿರ್ದಿಷ್ಟ ಸೂಚನೆಗಳನ್ನು ಮುಂದಿಟ್ಟರು. ನಿಜವಾದ ಸ್ವದೇಶಿ ತತ್ವವನ್ನು ಪ್ರಚಾರ ಮಾಡುತ್ತಲೇ ವಿನಮ್ರ ಜೀವನೋಪಾಯವನ್ನೂ ಸಾಧಿಸುವುದು ಸಾಧ್ಯ. ನಾಲ್ಕು ಜನರ ಒಂದು ಸಂಸಾರ, ಪರಸ್ಪರ ಸಹಾಯಕಾರಿಯಾಗಿರುವ ಗಂಡ, ಹೆಂಡತಿ ಇಬ್ಬರು ಮಕ್ಕಳು ಇದ್ದರೆ, ಒಂದು ಸಣ್ಣ ಪ್ರಮಾಣದ ಖಾದಿ ಭಂಡಾರವನ್ನು ೫೦೦ ರೂಪಾಯಿ ಬಂಡವಾಳದಲ್ಲಿ ನಡೆಸಬಹುದು. ಇಪ್ಪತ್ತು ಸಾವಿರ ಜನಸಂಖ್ಯೆಯ ಊರಿನಲ್ಲಿ ವಾಸಕ್ಕೂ ಅಂಗಡಿಗೂ, ಸೇರಿದಂತೆ ಸಣ್ಣ ವಸತಿಯನ್ನು ಬಾಡಿಗೆಗೆ ಪಡೆಯಬಹುದು. ಪ್ರತಿತಿಂಗಳು ೫೦೦ರೂ. ಬಟ್ಟೆಯನ್ನು ಶೇಕಡ ಹತ್ತರಷ್ಟು ಲಾಭ ಬರುವಂತೆ ಮಾರಿದರೆ ೫೦ ರೂ. ನಿವ್ವಳ ಲಾಭ ಉಳಿಯುತ್ತದೆ. ಸಂಸಾರದ ಜನರೇ ಎಲ್ಲ ಕೆಲಸ ನಿರ್ವಹಿಸಬೇಕು. ಸೇವಕರ ಅಗತ್ಯವಿರಬಾರದು. ಹೆಂಡತಿ ಮಕ್ಕಳು ಬಿಡುವಿನ ಸಮಯದಲ್ಲಿ ನೂಲಬೇಕು.

"ಪ್ರಾರಂಭದಲ್ಲಿ ಖಾದಿ ಮಾರಾಟವಾಗಲಿಕ್ಕಿಲ್ಲ. ಮನೆ ಮನೆಯ ಬಾಗಿಲಿಗೆ ಹೊತ್ತು ಮಾರಾಟ ಮಾಡಬೇಕಾಗಬಹುದು. ಖಾದಿಯನ್ನು ಹೀಗೆ ಜನಪ್ರಿಯ ಗೊಳಿಸುವ ಕಾರ್ಯ ಗಂಡನಿಗೆ ಬೀಳುತ್ತದೆ. ಕ್ರಮೇಣ ವ್ಯಾಪಾರ ಕುದುರುತ್ತದೆ."

"ಶೇಕಡ ಹತ್ತರಷ್ಟು ಲಾಭ ಹಾಕಬಹುದೇ ಎಂದು ಆಶ್ಚರ್ಯ ಪಡಬೇಕಾಗಿಲ್ಲ. ಖಾದಿ ಭಂಡಾರಗಳು ಕಡು ಬಡವರಿಗಾಗಿ ನಿಯೋಜಿತವಾದುವುಗಳಲ್ಲ. ಖಾದಿಯಲ್ಲಿ ಉಳಿತಾಯವಿರುವುದು ಆ ಬಟ್ಟೆಯ ಬಾಳಿಕೆ ಹೆಚ್ಚು ಎನ್ನುವುದಕ್ಕಿಂತ (ಬಾಳಿಕೆ ಹೆಚ್ಚು ಎನ್ನುವುದು ನಿಜ) ಅಭಿರುಚಿಯಲ್ಲಿಯೇ ಕ್ರಾಂತಿಕಾರಕ ಬದಲಾವಣೆಯಾಗುವುದರಿಂದ ನನ್ನ ತೊಡಿಗೆಯಲ್ಲಿ ಮಾರ್ಪಾಟಾದುದು ನನ್ನ ವೆಚ್ಚವನ್ನು ಅದೆಷ್ಟು ತಗ್ಗಿಸಿದೆ ಎಂದು ನಾನು ಬಲ್ಲೆ. ಕೇವಲ ರಾಷ್ಟ್ರಭಕ್ತಿಯ ದೃಷ್ಟಿಯಿಂದ ಕೊಳ್ಳುವವರೂ ಉಂಟು. ಅವರು ಸ್ವಲ್ಪ ಹೆಚ್ಚು ಬೆಲೆ ಕೊಡಲೂ ಸಮರ್ಥರು. ಶೇಕಡ ಹತ್ತರಷ್ಟು ಲಾಭ ಹೆಚ್ಚು ಎಂದು ಭಾವಿಸಲಾರರು. ಅಲ್ಲದೆ ಖಾದಿ ಮಾರಾಟದ ಕೆಲಸಕ್ಕೆ ಬೇಕಾದ ದಕ್ಷತೆ ಕಡಮೆಯೇನೂ ಅಲ್ಲ. ವಿಚಾರಶಕ್ತಿ, ಶ್ರದ್ಧೆ, ದುಡಿಮೆ ಮೂರೂ ಬೇಕು. ಅಂಗಡಿಗೆ ಬೇಕಾದ ಖಾದಿ ಬಟ್ಟೆ ತಾನಾಗಿಯೇ ಸಿಗಲಾರದು. ನೇಗೆಯುವವರನ್ನು ಕಂಡು ತನ್ನ ಅಗತ್ಯವನ್ನು ಪೂರೈಸಲು ಪ್ರೋತ್ಸಾಹಿಸಬೇಕಾಗುತ್ತದೆ. ತನ್ನ ಜಿಲ್ಲೆಯಲ್ಲಿ ತಿರುಗಾಡಿ ಹೆಂಗಸರು ಹೆಚ್ಚಾಗಿ ನೂಲು ವಂತೆ ಪ್ರೇರೇಪಿಸಬೇಕು. ಹಂಜಿ ಎಕ್ಕುವವರ ದಕ್ಷತೆ ಹೆಚ್ಚಿಸಬೇಕು. ಹೀಗಿರುವ ಹಲವು ಪ್ರಮುಖ ಕಾರ್ಯಕ್ಕೆ ವಿಚಕ್ಷಣೆ, ವ್ಯವಸ್ಥೆಯ ಕುಶಲತೆ, ದಕ್ಷತೆ ಎಲ್ಲವೂ ಬೇಕು. ಇಂಥ ಗುಣವಂತ ದುಡಿಮೆಗಾರನಿಗೆ ಶೇಕಡ ಹತ್ತರಷ್ಟು ಲಾಭ ಪಡೆಯುವ ಹಕ್ಕುಂಟು.

ಈ ಮಾರ್ಗದಲ್ಲಿ ನಡೆಯುವ ಸ್ವದೇಶಿ ಭಂಡಾರ–ಸ್ವದೇಶಿ ಚಳುವಳಿಯ ಕೇಂದ್ರವೂ ಆಗುತ್ತದೆ. ಈಗಿರುವ ಸ್ವದೇಶಿ ಭಂಡಾರಗಳ ವ್ಯವಸ್ಥಾಪಕರಿಗೂ, ನನ್ನ ಈ ಸೂಚನೆಯನ್ನು ಹೇಳ ಬಯಸುತ್ತೇನೆ. ಈ ಕೂಡಲೆ ಅವರು ಪರಿವರ್ತಿತರಾಗದೇ ಇರಬಹುದು. ಆದರೆ ಅವರು ಎಷ್ಟರ ಮಟ್ಟಿಗೆ ಖಾದಿಯನ್ನು ಮಾರುತ್ತಾರೋ ಅಷ್ಟರ ಮಟ್ಟಿಗೆ ಮಾತ್ರ ಸ್ವದೇಶಿಯನ್ನು ಬೆಳಸುತ್ತಾರೆಂಬುದರಲ್ಲಿ ನನಗೆ ಸಂದೇಹವಿಲ್ಲ.

ಅಸಹಕಾರ ಚಳುವಳಿಗಾರರ ಮೇಲೆ ಬರುವ ಎಲ್ಲ ದೂರುಗಳಿಗೆ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಅವಕಾಶವಿತ್ತು. 'ಹಿಂದ್ ಸ್ವರಾಜ್' ಗ್ರಂಥದಲ್ಲಿ ಚಿತ್ರಿಸಿರುವಂತಹ ಸ್ವರಾಜ್ಯ ಅಸಾಧ್ಯವೆಂದೂ ಅದಕ್ಕೆ ಪ್ರಯತ್ನಿಸುವವರು ಎಚ್ಚರ ವಹಿಸಬೇಕೆಂದೂ ಟೀಕಿಸುವವರಿಗೆ ಗಾಂಧೀಜಿ ಹೀಗೆ ಬರೆದರು: "ನನ್ನ ಪುಸ್ತಿಕೆಯಲ್ಲಿ ಸೂಚಿಸಿರುವ ಕ್ರಮಗಳನ್ನನುಸರಿಸಬೇಕೆಂದು ನಾನು ಆಗ್ರಹ ಮಾಡುತ್ತಿಲ್ಲ. ಅದು ಸಾಧ್ಯವಿದ್ದರೆ, ಜನ ಹಾಗೆ ವ್ರತ ತೊಟ್ಟರೆ, ಒಂದು ವರ್ಷವಲ್ಲ ಒಂದೇ ದಿನದಲ್ಲಿ ಸ್ವರಾಜ್ಯ ಬಂದೀತು. ಆದರೆ ಇಂದು ಅದೊಂದು ಹುಚ್ಚು ಕನಸು ಎಂದು ಬಲ್ಲೆ. ಈಗ ನಾನು ದೇಶದ ಮುಂದಿಟ್ಟಿರುವುದು ಕೇವಲ ವ್ಯಾವಹಾರಿಕವಾದ ಪ್ರಜಾಪ್ರತಿನಿಧಿ ಅಧಿಕಾರವುಳ್ಳ (ಪಾರ್ಲಿಮೆಂಟರಿ) ಸ್ವರಾಜ್ಯದ ಗುರಿಯನ್ನು ಮಾತ್ರ."

ನ್ಯಾಯಾಲಯಗಳ ಭ್ರಮೆಯನ್ನು ಕುರಿತು ಗಾಂಧೀಜಿ ಬರೆದರು:

"ವಕೀಲರು, ನ್ಯಾಯಾಲಯಗಳು ಒಂದು ಮಾಯಾಜಾಲ. ಕೋರ್ಟುಗಳು ಕಾನೂನು ಕಗ್ಗಂಟುಗಳ ಕುಸಿಯುವ ಕೆಸರಿಗೆಳೆದು ನಮ್ಮ ಪಶುವಾಸನೆಗಳನ್ನು ಪ್ರಚೋದಿಸಿ ಯಾವುದೋ ನ್ಯಾಯಾಕರ್ಷಣೆಗೆ ಬಲಿಯಾಗುವಂತೆ ಮಾಡುವ ಮಧ್ಯವರ್ತಿಗಳು. ಇವು ಇಲ್ಲದಿದ್ದಲ್ಲಿ, ಇಂದಿಗಿಂತ ನಾವು ಹೆಚ್ಚು ನೆಮ್ಮದಿಯಿಂದ ಜೀವಿಸಬಹುದಾಗಿತ್ತು. ನ್ಯಾಯಾಲಯಗಳನ್ನು ಹತ್ತಿದ ಅನೇಕ ಸಜ್ಜನರು ಅಲ್ಲಿನ ಕಲುಷಿತ ಪರಿಸರಕ್ಕೆ ಸಾಕ್ಷಿ ಹೇಳಬೇಕು. ಸುಳ್ಳು ಪ್ರಮಾಣ ಮಾಡುವ ಸಾಕ್ಷಿಗಳು ಹಣಕ್ಕಾಗಿಯೋ ಸ್ನೇಹಕ್ಕಾಗಿಯೋ ಆತ್ಮವನ್ನೇ ಮಾರಿಕೊಳ್ಳಲು ಸಿದ್ಧರಾಗಿ ಸಾಲುಗಟ್ಟಿರುತ್ತಾರೆ. ಅಷ್ಟೇ ಅಲ್ಲ; ನ್ಯಾಯನಿರ್ಣಯಕ್ಕಿಂತ ಸರ್ಕಾರದ ಸಮರ್ಥನೆಯೇ ಈ ನ್ಯಾಯಾಲಯಗಳ ಗುರಿಯಾಗಿರುವುದು ಮತ್ತೂ ಅಸಹನೀಯ. ನ್ಯಾಯವನ್ನು ಎತ್ತಿ ಹಿಡಿಯುವ ಪೀಠಗಳೆಂದು ಹೆಸರಾಗಿರುವ ನ್ಯಾಯಾಲಯಗಳು ರಾಷ್ಟ್ರ ಸ್ವಾತಂತ್ರ್ಯದ ರಕ್ಷಣಾ ಸಾಧನಗಳೂ ಆಗಬೇಕು. ಆದರೆ ಅನೀತಿಯುತ ಅಧಿಕಾರ ಶಾಹಿಯೊಂದನ್ನು ಸಮರ್ಥಿಸುವ ಸಾಧನ ಮಾತ್ರವಾದರೆ ಅಂಥ ನ್ಯಾಯಾಲಯ ಸ್ವಾತಂತ್ರ್ಯ ರಕ್ಷಣೆ ಮಾಡುವ ಬದಲು ರಾಷ್ಟ್ರದ ಧೃತಿಯನ್ನೇ ವಿನಾಶಮಾಡುವ ಘಾತಕ ನಿಲಯಗಳಾಗಿ ಬಿಡುತ್ತವೆ. ಪಂಜಾಬಿನಲ್ಲಿ ನಿರ್ಮಾಣವಾದ ಸೈನ್ಯ ಕಾನೂನು ನ್ಯಾಯ ಮಂಡಳಿಗಳು (ಮಾರ್ಷಲ್ ಲಾ ಟ್ರಿಬ್ಯುನಲ್ಸ್) ಮತ್ತು ಕ್ಷಿಪ್ರ ತೀರ್ಮಾನ ಕೋರ್ಟುಗಳು (ಸಮ್ಮರಿ ಕೋರ್ಟು) ಅಂಥವೇ ಆಗಿದ್ದವು. ನಾಚಿಕೆಗೆಟ್ಟ ನಗ್ನತೆಯಿಂದ ಅವು ಮೆರೆದವು. ಸಾಮಾನ್ಯ ದಿನಗಳಲ್ಲೂ ಮೇಲ್ವರ್ಗದ ಜನಾಂಗ

ವೊಂದರ ಹಾಗೂ ಅದರ ನಿಕೃಷ್ಟ ಗುಲಾಮುವರ್ಗದ ಮಧ್ಯೆ ನ್ಯಾಯ ನಿರ್ಣಯ ಹೀಗೇ ಆದೀತು. ಜಗತ್ತಿನಲ್ಲಿ ಎಲ್ಲೂ ಇಷ್ಟೆ. ಆಫ್ರಿಕದ ನೈರೋಬಿಯಲ್ಲಿ ನಿರಪರಾಧಿ ನೀಗ್ರೋ ಗಳನ್ನು ಉದ್ದೇಶಪೂರ್ವಕವಾಗಿ ಕ್ರೂರ ಹಿಂಸೆಗೆ ಗುರಿ ಪಡಿಸಿದ ಇಂಗ್ಲಿಷ್ ಅಧಿಕಾರಿ ಯನ್ನು ವಿಚಾರಣೆಗೆ ಗುರಿ ಮಾಡುವ ನಾಟಕ ಆಡಿದ ಬಗೆ ಹೀಗೆಯೇ ಆಯಿತು. ಅಮಾನುಷ ಕೊಲೆಗಡುಕನಾದರೂ ಒಬ್ಬ ಇಂಗ್ಲಿಷ್ ಪ್ರಜೆ ಭಾರತದಲ್ಲಿ ನ್ಯಾಯ ಸಮ್ಮತ ಶಿಕ್ಷೆಗಾಗಲೀ ಅದರ ಸಮೀಪ ರೀತಿಯ ದಂಡನೆಗಾಗಲಿ ಒಳಗಾಗಿದ್ದಾನೆಯೆ? ಈ ದುರ್ನೀತಿ ಕೇವಲ ವ್ಯಕ್ತಿಗಳ ಬದಲಾವಣೆಯಿಂದ, ಇಂಗ್ಲಿಷನವನ ಬದಲು ಭಾರತೀಯ ನ್ಯಾಯಾಧೀಶ, ಭಾರತೀಯನಾದ ಸಾರ್ವಜನಿಕ ಫಿರ್ಯಾದಿ (ಪ್ರಾಸಿಕ್ಯೂಟರ್) ಬಂದ ಮಾತ್ರಕ್ಕೆ ಬದಲಾಗದು. ಭಾರತೀಯರಾದ ಮಾತ್ರಕ್ಕೆ ಯಾರೂ ದೇವತೆಗಳಲ್ಲ. ಎಲ್ಲರೂ ಪರಿಸರಕ್ಕೆ ತಲೆಬಾಗುತ್ತಾರೆ. ಸೈನಿಕಾಡಳಿತ ಅವಧಿಯಲ್ಲಿ ನಮ್ಮಲ್ಲೇ ಭಾರತೀಯ ನ್ಯಾಯಾಧೀಶರೂ, ಅಧಿಕೃತ ಫಿರ್ಯಾದಿಗಳೂ ಇದ್ದರು. ಇತರ ಇಂಗ್ಲಿಷರಂತೆಯೇ ಅವರೂ ಅನ್ಯಾಯವೆಸಗಿದ ಅಪರಾಧಿಗಳೇ. ಅಮೃತಸರದ ಮುಗ್ಧ ಮಹಿಳೆಯರನ್ನು ಚಿತ್ರಹಿಂಸೆಗೆ ಗುರಿಮಾಡಿದವರು ಭಾರತೀಯ ಅಧಿಕಾರಿಗಳೇ. ಮನಿಯನ್‌ವಾಲಾದಲ್ಲಿ ಮಹಿಳೆಯರನ್ನು ಅವಮಾನಗೊಳಿಸಿದ ಬಾಸ್ವರ್ತ ಸ್ಮಿತ್‌ನನ್ನೇ ಅವರು ಅನುಕರಿಸಿದರು. ನಾನು ನಾಶಪಡಿಸಬಯಸುವುದು ಆ ದುಷ್ಟ ಪದ್ಧತಿಯನ್ನು. ಇಂಗ್ಲಿಷರೊಡನೆ ನನಗಾವ ವೈಯಕ್ತಿಕ ಘರ್ಷಣೆಯೂ ಇಲ್ಲ. ವ್ಯಕ್ತಿಶಃ ನನಗೆ ಈಗಲೂ ಅನೇಕ ಇಂಗ್ಲಿಷರಲ್ಲಿ ಗೌರವವುಂಟು. ಅವರ ಈ ದುಷ್ಟ ಪದ್ಧತಿ ಪರಿವರ್ತಿತವಾಗುವುದು ಅಸಾಧ್ಯ ಎಂದೆನಿಸಿದ ಮೇಲೂ ಇದು ನಿಜ. ಶ್ರೀ ಆಂಡ್ರೂಸ್‌ರಂತಹ ಮತ್ತಿತರ ಇಂಗ್ಲಿಷ್‌ಸ್ನೇಹಿತರು ಇಂದು ನನಗೆ ಇನ್ನೂ ಹತ್ತಿರವಾಗಿದ್ದಾರೆನ್ನಲೂ ಬಹುದು. ಆದರೆ ಸೋದರರಿಗಿಂತಲೂ ಹೆಚ್ಚಾದ ಇವರ್‍ಯಾರೇ ಆಗಲೀ ಇಂದು ಭಾರತದ ವೈಸ್‌ರಾಯ್. ಆದರೆ ನಾನು ಆತನನ್ನು ಎಂದಿಗೂ ಗೌರವಿಸಲಾರೆ. ಅಧಿಕಾರ ವಹಿಸಿದ ನಂತರ ಆತ ನಿರ್ಮಲನಾಗಿ ಉಳಿಯ ಬಲ್ಲ ಎಂಬ ನಂಬಿಕೆ ನನಗೆಳ್ಳಷ್ಟೂ ಇಲ್ಲ. ನಾವು ಕೀಳು ಮಾನವರೆಂಬ ಮೂಲಾಧಾರ ವನ್ನೇ ಆಶ್ರಯಿಸಿ ಸ್ವಭಾವದಲ್ಲೇ ಭ್ರಷ್ಟವಾಗಿರುವ ಆಡಳಿತ ಕ್ರಮವನ್ನೇ ಆತ ನಡೆಸಬೇಕಾಗುತ್ತದೆ. ದುಷ್ಟಶಕ್ತಿಗಳು ಅನೇಕ ವೇಳೆ ತಮ್ಮ ದುರುದ್ದೇಶಗಳನ್ನು ಮುಚ್ಚಿಟ್ಟು ಅವುಗಳಿಗೆ ಮರ್ಯಾದೆಯ ಮುಖವಾಡ ಹಚ್ಚಲು ನ್ಯಾಯನೀತಿಗಳಿಗೆ ಹೋಲಿಕೆಯಾಗುವ ಸಾಧನಗಳನ್ನೇ ಆಶ್ರಯಿಸುತ್ತವೆ.

"ನಾನು ವಿಷಯಬಿಟ್ಟು ಸ್ವಲ್ಪ ಅತ್ತಿತ್ತ ತಿರುಗಿ ವಾದ ಮಾಡ ಹೊರಟಿದ್ದೇನೆ. ಕಾರಣ, ಈಗಿರುವ ಸರ್ಕಾರಾಡಳಿತ ಪದ್ಧತಿಯನ್ನೇ ಬದಲಿಸದೆ ಕೇವಲ ಭಾರತೀಯರು ನಡೆಸಿದ ಮಾತ್ರಕ್ಕೆ ಅದು ನಮಗೆ ಸಹನೀಯವೆಂದೆನಿಸಲಾರದು ; ಅಷ್ಟೇ ಅಸಹನೀಯ ವಾಗುತ್ತದೆ. ಆದ್ದರಿಂದಲೇ ಲಾರ್ಡ್ ಸಿನ್ಹಾ ಅವರನ್ನು ಇಂಗ್ಲೆಂಡಿನ ಆ ಉನ್ನತ ಪದವಿಗೇರಿಸಿದರೆನ್ನುವ ಸುದ್ದಿಯಿಂದ ನನಗೇನೂ ಸಮಾಧಾನವಾಗಲಿಲ್ಲ. ತಾತ್ವಿಕವಾಗಿ

ವ್ಯಾವಹಾರಿಕವಾಗಿ, ಸಂಪೂರ್ಣ ಸಮಾನತೆ ಬರಬೇಕು. ಇಚ್ಛಿಸಿದಾಗ ಬ್ರಿಟಿಷ್ ಬಾಂಧವ್ಯವನ್ನು ತ್ಯಜಿಸುವ ಸಾಮರ್ಥ್ಯ ನಮ್ಮದಾಗಬೇಕು.

"ವಕೀಲರು ಮತ್ತು ನ್ಯಾಯಾಲಯಗಳ ಮಾತಿಗೆ ಹಿಂತಿರುಗೋಣ. ಈಗಿನಂತೆ ಈ ಸೋಗಿನ ನ್ಯಾಯ ಸಿಂಹಾಸನಗಳನ್ನು ಕುರುಡು ನಂಬಿಕೆಯ ಭಕ್ತಿಯಿಂದಲೋ, ವಿಸ್ಮಯದಿಂದಲೋ, ಗೌರವಿಸುತ್ತಾ ಹೋದಲ್ಲಿ ನಾವು ಬಯಸುವ ಸಮಾನತೆಯ ಸ್ಥಿತಿ ಎಂದಿಗೂ ಬರಲಾರದು. ಈ ನ್ಯಾಯಾಲಯಗಳ ತೀರ್ಪಿನಿಂದ ದುರಾಸೆ, ಮತ್ಸರ, ಅಥವಾ ಕೆಲವು ವೇಳೆ, ನ್ಯಾಯ ಸಮ್ಮತ ಹಕ್ಕು ಪೂರೈಕೆಯಾದ ತೃಪ್ತಿ ಬಂದೀತು. ಆದರೆ ಈ ಪೀಠಗಳ ಮೂಲ ಉದ್ದೇಶವನ್ನೇ ಮರೆಯುವುದು ಸಲ್ಲದು. ಅವು ಪ್ರತಿನಿಧಿಸುವ ಸರ್ಕಾರದ ಸರ್ವಾಧಿಕಾರವನ್ನು ಸ್ಥಾಪಿಸುವುದೇ ಈ ನ್ಯಾಯಾಲಯಗಳ ಗುರಿ. ತಮ್ಮದೇ ಆದ ನ್ಯಾಯಾಲಯಂಗಳಿಲ್ಲದಿದ್ದಲ್ಲಿ ಈ ಸರ್ಕಾರ ಒಂದೇ ದಿನದಲ್ಲಿ ಕುಸಿದು ಬೀಳಬೇಕಾದೀತು. ಭಾರತೀಯ ವಕೀಲರೆಲ್ಲ ಬಹಿಷ್ಕರಿಸಿ ನ್ಯಾಯಾಲಯಗಳಲ್ಲಿ ಲೌಕಿಕ ಮೊಕದ್ದಮೆಗಳಾವುವೂ ಇಲ್ಲದಿದ್ದರೂ ಪ್ರಜೆಗಳನ್ನು ಕಾನೂನು ಬದ್ಧರನ್ನಾಗಿ ಮಾಡುವ ಅಧಿಕಾರ ಇನ್ನೂ ನ್ಯಾಯಾಲಯಗಳಿಗಿರುತ್ತವೆ. ನಾನು ಇದನ್ನು ತಿಳಿದೇ ನನ್ನ ಸಲಹೆ ಮಾಡುತ್ತಿದ್ದೇನೆ. ಆಗ ನಾವು ಮೋಸಹೋಗಲಾರೆವು. ನ್ಯಾಯಾಲಯಗಳ ನೈತಿಕ ಗೌರವವೇ ಕುಸಿದು ಬೀಳುತ್ತದೆ. ಅವಕ್ಕೆ ಮರ್ಯಾದೆ ಇಲ್ಲದಾಗುತ್ತದೆ. ಇಂಗ್ಲಿಷರಿಂದ ಕ್ರಮೇಣ ಅಧಿಕಾರ ವರ್ಗಾವಣೆಯಾಗುವ ಕುರುಹಾಗಿ ಭಾರತೀಯ ನ್ಯಾಯಾಧೀಶರನ್ನು ನೇಮಿಸುತ್ತಿರುವರೆಂಬ ನಂಬಿಕೆ ಇರುವವರೆಗೂ ಅಂಥ ದೊಡ್ಡ ಸ್ಥಾನಗಳಿಗೆ ನಮ್ಮವರನ್ನು ನೇಮಿಸಿದಾಗ ಸಂತೋಷಪಡುತ್ತಿದ್ದೆವು, ವರಪ್ರಸಾದವೆನ್ನುತ್ತಿದ್ದೆವು. ಆದರೆ ಈಗ ಅದು ಆಶ್ಚರ್ಯವೆನಿಸುತ್ತದೆ. ಈ ಪದ್ಧತಿ ಕ್ರಮೇಣ ಸುಧಾರಿಸಬಹುದಾದ ವ್ಯವಸ್ಥೆ ಎಂಬ ನಂಬಿಕೆಯೇ ಈಗ ಕುಸಿದು ಬಿದ್ದಿದೆ. ಉನ್ನತ ಸ್ಥಾನಗಳಿಗೆ ನಮ್ಮವರನ್ನು ನೇಮಿಸಿದಾಗಲೆಲ್ಲ ಮೋಸಕ್ಕೆ ಗುರಿಯಾಗುತ್ತಿದ್ದೇವೆ; ಇದೊಂದು ಶಾಪವಾದೀತೆಂಬ ಅರಿವು ಈಗ ನಮಗಾಗುತ್ತಿದೆ. ಆದ್ದರಿಂದ ಒಬ್ಬೊಬ್ಬ ನ್ಯಾಯವಾದಿಯೂ ನ್ಯಾಯಾಲಯವನ್ನು ಬಹಿಷ್ಕರಿಸಿದಾಗ ಅಷ್ಟಷ್ಟು ಗೌರವ ಅದಕ್ಕೆ ಕಡಮೆಯಾಗುತ್ತದೆ. ಆ ವ್ಯಕ್ತಿಗೂ, ದೇಶಕ್ಕೂ ಅದೇ ಕಾಲಕ್ಕೆ ನೈತಿಕ ಲಾಭ ಹೆಚ್ಚುತ್ತದೆ.

"ನ್ಯಾಯಾಲಯಗಳು ಜನತೆಯ ಸಂಪತ್ತನ್ನು ಹೀರುವ ಸಾಧನಗಳು. ಇದನ್ನು ನಾವು ಗಮನಕ್ಕೆ ತಂದುಕೊಂಡಿಲ್ಲ. ಆ ನಷ್ಟ ಸಾಕಷ್ಟು ಆಗುತ್ತಲೇ ಇದೆ. ಪ್ರಕೃತ ಪದ್ಧತಿಯಲ್ಲಿ ಒಂದೊಂದೂ ದುಂದು ವೆಚ್ಚದ ಸಂಸ್ಥೆಗಳೇ .ಅದರಲ್ಲಿ ನ್ಯಾಯಾಲಯಗಳಂತೂ ಅತಿ ದುಬಾರಿಯವು. ದಕ್ಷಿಣ ಆಫ್ರಿಕಾದ ನ್ಯಾಯಾಲಯಗಳ ವಿಚಾರ ನನಗೆ ಸ್ವಲ್ಪ ಗೊತ್ತು. ಆದರೆ ಭಾರತದ ನ್ಯಾಯಾಲಯಗಳು ವಿಪರೀತ ವೆಚ್ಚದವುಗಳು ಇಲ್ಲಿನ ಜನತೆಯ ಆರ್ಥಿಕ ಸ್ಥಿತಿಗೆ ಅಸಂಬದ್ಧವಾದುವುಗಳೆಂದು ನಿಸ್ಸಂದೇಹವಾಗಿ ಹೇಳಬಲ್ಲೆ. ದಕ್ಷಿಣ ಆಫ್ರಿಕಾದಲ್ಲಿ ಅತ್ಯಂತ ಮೇಧಾವಿ ವಕೀಲರು ಸಹ ಭಾರತದಲ್ಲಿರುವಷ್ಟು

ವಕೀಲಿ ಶುಲ್ಕವನ್ನು ವಸೂಲು ಮಾಡಲು ಸಾಧ್ಯವೇ ಇರಲಿಲ್ಲ. ಉತ್ತಮ ನ್ಯಾಯ ಸಲಹೆಗಾಗಿ ಬಹಳ ದುಬಾರಿ ಶುಲ್ಕವೆಂದರೆ ಅಲ್ಲಿ ಹದಿನೈದು ಗಿನಿಗಳು. ಇಲ್ಲಿ ಸಾವಿರಾರು ರೂಪಾಯಿಗಳು ವೆಚ್ಚವಾಗುತ್ತದೆ. ಒಬ್ಬೊಬ್ಬ ವಕೀಲ ತಿಂಗಳಿಗೆ ಐವತ್ತು ಸಾವಿರದಿಂದ ಒಂದು ಲಕ್ಷದ ವರೆಗೂ ಇಲ್ಲಿ ಸಂಪಾದಿಸಬಲ್ಲ ಎಂದಾಗ ಈ ವ್ಯವಸ್ಥೆಯಲ್ಲಿ ಏನೋ ದಾರುಣ ದೋಷವಿರಲೇ ಬೇಕು. ನ್ಯಾಯ ವಿತರಣೆ ಒಂದು ಸಟ್ಟಾ ವ್ಯಾಪಾರವಲ್ಲ—ಎಂದೂ ಹಾಗಾಗಬಾರದು. ಅತ್ಯಂತ ಬಡವನಿಗೂ ಅತ್ಯುತ್ಕೃಷ್ಟ ನ್ಯಾಯಶಾಸ್ತ್ರದ ಸಲಹೆ ಹೆಚ್ಚು ವೆಚ್ಚವಿಲ್ಲದೆ ದೊರಕುವಂತಾಗಬೇಕು. ಎಲ್ಲವೂ ಇಂಗ್ಲಿಷ್ ಪದ್ಧತಿ, ಅಲ್ಲಿಯ ವಕೀಲರ ಅನುಕರಣೆಯೇ ಆಗಿ ಬಿಟ್ಟಿದೆ. ಇಲ್ಲಿನ ಹವೆ ಅವರಿಗೆ ಒಗ್ಗದು. ಪಾಶ್ಚಾತ್ಯ ಶೀತ ಹವೆಗೆ ಹೊಂದಿಕೊಂಡ ಅನುಕೂಲಗಳೇ ಅವರಿಗೆ ಬೇಕು. ಆಗಾಗ್ಗೆ ತಂಪು ಹವೆಯ ಗಿರಿಧಾಮಗಳ ವಾಸ, ಸ್ವದೇಶ ಪ್ರವಾಸ, ವಿಶಿಷ್ಟ ಶ್ರೀಮಂತಿಕೆಯ ಮಕ್ಕಳ ವಿದ್ಯಾಭ್ಯಾಸ ವೆಚ್ಚ ಎಲ್ಲವೂ ಕಕ್ಷಿದಾರನ ಕಿಸೆಯಿಂದಲೇ ಬರಬೇಕು. ನ್ಯಾಯವಾದಿಯ ಸಲಹೆ ವಿಪರೀತ ದುಬಾರಿ. ಭಾರತಕ್ಕದು ಹೊರಲಾರದ ಭಾರ. ಈ ಇಂಗ್ಲಿಷ್ ವಕೀಲರಿಗೆ ನಾವು ಸಮಾನರು ಎನಿಸಿಕೊಳ್ಳುವುದಕ್ಕಾಗಿ ನಾವೂ ಅದೇ ದುಬಾರಿ ಶುಲ್ಕವನ್ನು ವಸೂಲು ಮಾಡಬೇಕೆಂದು ನಮ್ಮವರು ಅಂದುಕೊಂಡಿದ್ದಾರೆ. ಈ ವಿದೇಶಿ ಬೆಲೆ, ವಿದೇಶಿಅಭಿರುಚಿಗಳು ನಮ್ಮಲ್ಲೂ ಬೇರು ಬಿಟ್ಟರೆ ನಮ್ಮ ದೌರ್ಭಾಗ್ಯವೇ ಸರಿ. ಭಾರತದ ಪರಿಸ್ಥಿತಿಗೆ ಅದು ತೀರ ವಿರೋಧ. ನನ್ನ ವಕೀಲ ಮಿತ್ರರು ಈ ದೃಷ್ಟಿಯಿಂದ ನ್ಯಾಯಾಲಯಗಳನ್ನು ನ್ಯಾಯವಾದಿ ವೃತ್ತಿಯನ್ನು ವಿಚಾರ ಮಾಡುವುದಾದರೆ ರಾಷ್ಟ್ರಸೇವೆ ಮಾಡಲು ಈ ವಕೀಲಿ ವೃತ್ತಿಯನ್ನು ತ್ಯಜಿಸುವುದೇ ಮೊದಲ ಹೆಜ್ಜೆ ಎಂದು ಗೋಚರವಾಗದೆ ವಿಧಿಯಿಲ್ಲ. ನನ್ನ ನಿರೂಪಣೆ ಅಸತ್ಯವೆಂದು ತೋರಿಸಿ ಕೊಟ್ಟರೆ ಮಾತ್ರ ವಕೀಲಿ ವೃತ್ತಿಯನ್ನು ಕುರಿತ ಬೇರೆಯ ಅಭಿಪ್ರಾಯ ಸಾಧ್ಯವಾದೀತು."

ಸೂಚನೆಗಳನ್ನು ನಿಷ್ಠೆಯಿಂದ ಅನುಸರಿಸುವುದಾದರೆ ಒಂದೇ ವರ್ಷದಲ್ಲಿ ಸ್ವರಾಜ್ಯ ಸಾಧನೆ ಖಚಿತ ಎಂದು ಪದೇ ಪದೇ ಹೇಳಿದರು ಗಾಂಧೀಜಿ. ಸೆಪ್ಟೆಂಬರ್ ೨೨ರಂದು ಈ ತ್ರಿವಿಧ ಬಹಿಷ್ಕಾರ ಕುರಿತು 'ಯಂಗ್–ಇಂಡಿಯಾ'ದಲ್ಲಿ ಹೀಗೆ ಬರೆದರು :

"ಅಸಹಕಾರಕ್ಕೆ ಸಾಕಷ್ಟು ಜನ ಬೆಂಬಲವಿದ್ದಲ್ಲಿ ಸ್ವರಾಜ್ಯ ಒಂದೇ ವರ್ಷದಲ್ಲಿ ಲಭಿಸೀತು ಎಂದು ನಾನು ಕಲ್ಕತ್ತೆಯ ಕಾಂಗ್ರೆಸ್ಸಿಗೆ ಕೊಟ್ಟ ಸೂಚನೆಗಳನ್ನು ಅತಿಯಾಗಿ ಅಪಹಾಸ್ಯ ಮಾಡಲಾಗಿದೆ. ನಿಯಮಗಳನ್ನು ಉಪೇಕ್ಷಿಸಿ ಕೇವಲ ಒಂದು ವರ್ಷದ ಅವಧಿಯಲ್ಲಿ ಸ್ವರಾಜ್ಯ ಅಸಾಧ್ಯ ಎಂಬುದನ್ನಷ್ಟೆ ಎತ್ತಿ ಆಡಿ ನಕ್ಕಿದ್ದಾರೆ. ಒಂದು ಪೂರ್ವ ಸಂದರ್ಭದ ಸವಾಲು ಹಾಕಿ ಯಾವುದೇ ಅಸಾಧ್ಯ ಗುರಿಯನ್ನಾದರೂ ಸಾಧ್ಯ ಎಂದು ವಾದಿಸುವುದು ಸುಲಭ ಎಂದು ಮೂದಲಿಸಿದ್ದಾರೆ. ಮತ್ತೆ ನಾನು ಅದನ್ನೇ ಹೇಳಬಯಸುತ್ತೇನೆ. ನಾನು ಹಾಕಿರುವ ನಿಯಮಾನುಸರಣೆಯಿಲ್ಲದೆ ನಿಜವಾದ ಸ್ವರಾಜ್ಯ ಎಂದಿಗೂ ಸಾಧ್ಯವಾಗದು. ಇಂಗ್ಲಿಷರು ನಿರ್ಗಮಿಸಿ, ನಾವು ಸಂಪೂರ್ಣವಾಗಿ ಸ್ವತಂತ್ರ

ವಾಗಿ ನಿಲ್ಲುವ ಭರವಸೆಯ ಸ್ಥಿತಿಯೇ ಸ್ವರಾಜ್ಯ. ಅವರೂ ಪಾಲುದಾರರಾಗ ಬಯಸಿದರೆ ಸರ್ವಸಮಾನತೆಯ ರೀತಿಯದೇ ಆಗಬೇಕು. ಇಂಗ್ಲಿಷ್‌ನವನೊಂದಿಗೆ ಸರಿಸಮಾನತೆಯ ನೈಜ ಸ್ಥಿತಿ ಬಾರದೆ ಸ್ವರಾಜ್ಯವಿರಲಾಗದು. ಅವರನ್ನೇ ಅವಲಂಬಿಸಿ ನಮ್ಮ ರಕ್ಷಣೆ ಯಾಗಬೇಕು, ನಮ್ಮೊಳಗಿನ ಹಿಂದೂ ಮುಸಲ್ಮಾನರ ಮಧ್ಯೆ ಸಶಸ್ತ್ರ ಶಾಂತ ಸ್ಥಿತಿಯನ್ನು ಅವರೇ ನಿರ್ವಹಿಸಬೇಕು. ಶಿಕ್ಷಣ ಹಾಗೂ ಅವಶ್ಯ ವಸ್ತುಗಳ ಸರಬರಾಜಿಗೆ ಅವರದೇ ಅವಲಂಬನೆ, ಕೊನೆಗೆ ಧಾರ್ಮಿಕ ಕ್ಷೇತ್ರದಲ್ಲೂ ಅವರೇ ತೀರ್ಪುಗಾರರು. ಆದ್ದರಿಂದಲೇ ನಮ್ಮ ಇಂದಿನ ದಾಸ್ಯಮನೋಭಾವ. ರಾಜ ಮಹಾರಾಜರ ಅಧಿಕಾರ ಬ್ರಿಟಿಷರ ಕೃಪಾಶ್ರಯದಲ್ಲಿ; ಹಣವಂತರ ಹಣಕ್ಕೆ ಅವರ ರಕ್ಷಣಾ ಭರವಸೆ. ನಮ್ಮ ಈ ಅಸಹಾಯಕ ಸ್ಥಿತಿಯನ್ನು ಬ್ರಿಟಿಷರು ಬಲ್ಲರು. ಆದ್ದರಿಂದ ಸರ್ ಥಾಮಸ್ ಹಾಲೆಂಡ್ ಸಕಾರಣವಾಗಿಯೇ ಅಸಹಕಾರ ಚಳುವಳಿಗಾರರನ್ನು ಅಪಹಾಸ್ಯ ಮಾಡುತ್ತಾನೆ."

"ಈ ಅಸಹಾಯಕತೆಯನ್ನು ನೀಗಿಕೊಳ್ಳುವುದೇ ಸ್ವರಾಜ್ಯ ಸಂಪಾದನೆ.ಇದು ಮಹತ್ತರ ಸಮಸ್ಯೆಯೇನೋ ಹೌದು. ಆಡುಗಳೊಡನೆ ಬೆಳೆದು ಸಿಂಹವು ತನ್ನ ಶೌರ್ಯ ವನ್ನೇ ಮರೆತ ಕಥೆಯಂತೆ ನಮ್ಮ ಸ್ಥಿತಿ. 'ಮಾನವ ಕೋಟಿ ಅನೇಕ ವೇಳೆ ಕೃತಕ ನಿದ್ರಾ ರೂಪದ ಸ್ಥಿತಿಯಲ್ಲಿ ಒದ್ದಾಡುತ್ತದೆ.' ಎನ್ನುತ್ತಾರೆ ಟಾಲಸ್ಟಾಯ್. ಈ ಸ್ಥಿತಿಯ ಸತತ ಬಾಧೆಯಿಂದಲೇ ನಮ್ಮ ಅಸಹಾಯಕತೆ ಉಲ್ಬಣವಾಗುತ್ತಿರುತ್ತದೆ. ಬ್ರಿಟಿಷರೆ ನಮ್ಮನ್ನು ಇದರಿಂದ ಉದ್ಧಾರ ಮಾಡುವುದು ಅಸಂಭವ. ನಿಧಾನವಾಗಿ ನಿಮಗೆ ಶಿಕ್ಷಣ ಸಿಗುತ್ತಾ ಹೋದಂತೆ ಸ್ವಯಂಮಾಡಳಿತಕ್ಕೆ ಅರ್ಹರಾದೀರಿ ಎಂದೇ ಅವರು ಪದೇ ಪದೇ ನಮ್ಮ ಕಿವಿಯಲ್ಲಿ ಕೊರೆಯುತ್ತಾರೆ. ಕೌನ್ಸಿಲ್ಗುಗಳನ್ನು ಬಹಿಷ್ಕರಿಸಿದರೆ ನಮಗೆ ಸ್ವರಾಜ್ಯ ನಿರ್ವಹಣೆಯ ಶಿಕ್ಷಣಾವಕಾಶವೊಂದನ್ನು ಕಳೆದುಕೊಂಡಂತಲ್ಲವೇ? ಎಂದು 'ಟೈಮ್ಸ್' ಪತ್ರಿಕೆ ನಮಗೆ ಬುದ್ಧಿ ಹೇಳ ಹೊರಟಿದೆ. ಇದನ್ನೇ ನಮ್ಮವರೂ ಅನೇಕರು ಹೇಳಿಯಾರು. ಈಜಿಪ್ಟಿನವರು ತಮ್ಮ ಬಹಿಷ್ಕಾರ ಬೆದರಿಕೆಯನ್ನು ಹಿಂತೆಗೆದು ಕೊಂಡ ನಂತರವೇ ಲಾರ್ಡ್ ಮಿಲ್ನರ್ ನಿಯೋಗ ಅವರಿಗೆ ಕಿವಿಗೊಟ್ಟಿದ್ದು ಎಂಬ ಸುಳ್ಳುವಾದವನ್ನು 'ಟೈಮ್ಸ್' ನಾಚಿಕೆಯಿಲ್ಲದೆ ಮುಂದುಮಾಡಿದೆ. ನನ್ನ ಭಾವನೆಯಲ್ಲಿ ಇಡೀ ಜಗತ್ತಿನ ವಿರುದ್ಧವೂ ಆತ್ಮರಕ್ಷಣೆಯ ಸಾಮರ್ಥ್ಯ ಗಳಿಸಿಕೊಳ್ಳುವುದೊಂದೇ ನಮಗೆ ಬೇಕಾಗಿರುವ ಸ್ವರಾಜ್ಯ ಶಿಕ್ಷಣ. ಎಷ್ಟೇ ಲೋಪದೋಷಗಳಿದ್ದರೂ ನಮ್ಮ ಜೀವನ ಪಥವನ್ನು ಸ್ವತಂತ್ರವಾಗಿ ನಡೆಸಿಕೊಳ್ಳುವುದೇ ನಮ್ಮ ಧ್ಯೇಯ. ಒಳ್ಳೆಯ ಸರ್ಕಾರವಾದರೂ ಅದು ಸ್ವಾಯತ್ತ ಸರ್ಕಾರಕ್ಕೆ ಸಮವಾಗಲಾರದು. ಆಫ್ಘನ್ನರದು ಅಪಕ್ವ ಸರ್ಕಾರ. ಆದರೂ ಸ್ವಾಯತ್ತ ಸರ್ಕಾರ. ಅದು ಅವರ ಭಾಗ್ಯ ಎಂದೇ ನಾನು ಅಸೂಯೆ ಪಡುತ್ತೇನೆ. ಜಪಾನೀಯರು ರಕ್ತಪಥದಲ್ಲಿ ಸ್ವತಂತ್ರಾಡಳಿತ ಕಲೆಯನ್ನು ಅಭ್ಯಸಿಸಿದರು. ಈಗಲೂ ಬ್ರಿಟಿಷರಿಗಿಂತ ಹೆಚ್ಚು ಸಮರ್ಥವಾದ ಬಾಹುಬಲಗಳಿಂದ ನಾವವರನ್ನು ಹೊರಗಟ್ಟುವುದಾದರೆ ನಮಗೆ ವಾದ ಮಾಡುವ ಅಥವಾ ಅಧಿಕಾರ ನಿರ್ವಹಿಸುವ ಸಾಮರ್ಥ್ಯಗಳಿಲ್ಲದಿದ್ದರೂ ಸ್ವಾತಂತ್ರ್ಯಕ್ಕೆ ಅರ್ಹರಾಗುತ್ತೇವೆ. ಪಾಶ್ಚಾ

ತ್ಯರಿಗೆ ಪಶುಬಲವೊಂದೇ ಅರ್ಥವಾಗುವುದು. ಅದನ್ನೇ ಅವರು ಅಂಗೀಕರಿಸುವುದು. ಜರ್ಮನಿ ದೇಶ ಇನ್ನಾವ ದೋಷದಿಂದಲೂ ಅಲ್ಲ ಪಶುಬಲದಲ್ಲಿ ಮಿತ್ರರಾಷ್ಟ್ರಗಳಿಗೆ ಸರಿಸಮಾನವಾಗಿರಲಿಲ್ಲ ಎಂಬಷ್ಟೆ ಕಾರಣಕ್ಕಾಗಿ ಮಹಾಯುದ್ಧದಲ್ಲಿ ಸೋತಿತು. ಆದ್ದರಿಂದ ಕಟ್ಟಕಡೆಗೆ ಭಾರತ, ಯುದ್ಧಕ್ಕೆ ಸನ್ನದ್ಧವಾಗ ಬೇಕಾದೀತು. ಆದರೆ ಆ ಶಿಕ್ಷಣವನ್ನು ಬ್ರಿಟಿಷರು ನಮಗೆ ಖಂಡಿತ ಒದಗಿಸುವುದಿಲ್ಲ. ಅಥವಾ ಶಿಸ್ತು ಮತ್ತು ಬಲಿದಾನಗಳ ಹೋರಾಟವನ್ನು ತನ್ನ ವಿಶಿಷ್ಟ ಅಸಹಕಾರ ಕ್ರಮದಿಂದಲೇ ಭಾರತ ಕಲಿಯಬೇಕು. ಮೂವತ್ತೈದು ಕೋಟಿ ಭಾರತೀಯರನ್ನು ಒಂದು ಲಕ್ಷ ಬಿಳಿಯರು ಆಳಲು ಸಾಧ್ಯ,– ಎನ್ನುವುದು ಆಶ್ಚರ್ಯಕರವೂ ಹೌದು, ಅವಮಾನವೂ ಹೌದು. ಶಸ್ತ್ರ ಬಲದಿಂದ ಸ್ವಲ್ಪಮಟ್ಟಿಗೆ ಇದು ಸಾಧ್ಯವೆಂದರೂ ಬಹುಪಾಲು ನಾವು ಕೊಡುವ ಸಾವಿರ ಬಗೆಯ ಸಹಕಾರದಿಂದಲೇ ಅವರ ಅಧಿಕಾರ. ಇದರಿಂದ ನಾವು ಹೆಚ್ಚೆಚ್ಚು ನಿಸ್ಸಹಾಯಕರಾಗಿ ಅವರ ಮೇಲೆ ಅವಲಂಬಿತರಾಗುತ್ತಲೇ ಸಾಗಿದ್ದೇವೆ. ಸುಧಾರಿತ ಕೌನ್ಸಿಲ್ಲುಗಳು, ಹೆಚ್ಚು–ಹೆಚ್ಚು ನ್ಯಾಯಾಲಯಗಳು, ನಮ್ಮವರಿಗೆ ಗೌರ್ನರ್ ಹುದ್ದೆಗಳು ಇವು ಯಾವುವು ನಿಜವಾದ ಸ್ವಾತಂತ್ರ್ಯವಲ್ಲ; ಸ್ವಾಯತ್ತ ಅಧಿಕಾರವೂ ಅಲ್ಲ; ನಿರ್ವೀರ್ಯಗೊಳಿಸುವ ಸೂಕ್ಷ್ಮಸಾಧನೆಗಳು. ಕೇವಲ ದಬ್ಬಾಳಿಕೆಯಿಂದಲೇ ಬ್ರಿಟಿಷರು ನಮ್ಮನ್ನಾಳಲಾರರು. ಈ ದಾಸ್ಯ ಬಂಧನವನ್ನು ಬಿಗಿಯಲು ಹಲವು ದಾರಿ ಹಿಡಿಯುತ್ತಾರೆ. ನೀತಿ–ಅನೀತಿ ಎಂದು ಗಮನಿಸುವುದೇ ಇಲ್ಲ. ತಮ್ಮ ಸಾಮ್ರಾಜ್ಯದಾಹವನ್ನು ತಣಿಸಿಕೊಳ್ಳಲು ಭಾರತದ ಅಗಾಧ ಸಂಪತ್ತನ್ನು ಕೋಟಿ ಕೋಟಿ ಮಾನವರ ದೈಹಿಕ ಶಕ್ತಿಯನ್ನೂ ಬಳಸಿಕೊಳ್ಳುತ್ತಿದ್ದಾರೆ. ಜನಶಕ್ತಿ, ಧನಶಕ್ತಿಗಳನ್ನು ನಾವು ಹಿಂತೆಗೆದುಕೊಂಡ ಕೂಡಲೇ ನಮಗೆ ಸ್ವರಾಜ್ಯ ಲಭಿಸುತ್ತದೆ; ನಾವು ಸಮಾನರಾಗುತ್ತೇವೆ, ಸ್ವಾಭಿಮಾನಿಗಳಾಗುತ್ತೇವೆ.

"ವೈಸರಾಯ್‌ಕೌನ್ಸಿಲ್ ಸಭೆಯ ನಡೆವಳಿಕೆಗಳು ಕೊನೆಯ ಅಂಕದಿಂದ ನಮ್ಮ ಅಪಮಾನದ ಪಾತ್ರೆ ತುಂಬಿತು. ಪಂಜಾಬಿನ ಬಗ್ಗೆ ಶ್ರೀ ಶಾಸ್ತ್ರಿಗಳು ತಮ್ಮ ನಿರ್ಣಯ ಮಂಡಿಸಲು ಅವಕಾಶವೇ ಸಿಗಲಿಲ್ಲ. ಜಲಿಯನ್‌ವಾಲಾ ಬಾಗ್‌ನಲ್ಲಿ ಸಂಕಟಕ್ಕೆ ತುತ್ತಾದ ಭಾರತೀಯರಿಗೆ ೧,೫೫೦ ರೂಪಾಯಿಗಳ ಪರಿಹಾರಧನ ಎಂದು ಗೊತ್ತು ಮಾಡಲಾಯಿತು. ಜನತಾ ದೊಂಬಿಯಲ್ಲಿ ಘಾಸಿಗೊಂಡ ಇಂಗ್ಲಿಷರಿಗಾದರೋ ಲಕ್ಷಾಂತರ ರೂಪಾಯಿಗಳ ಪರಿಹಾರ ಕೊಡಲಾಯಿತು. ಜನಸೇವಕರಾಗಿ ನಡೆದುಕೊಳ್ಳಬೇಕಾದ ಅಧಿಕಾರಿಗಳು ಮಾಡಿದ ಹೀನಾಪರಾಧಗಳಿಗೆ ಕೇವಲ ಖಂಡನೆ. ಇಷ್ಟರಿಂದಲೇ ಆ ಕೌನ್ಸಿಲ್ ಸದಸ್ಯರ ತೃಪ್ತಿ. ಭಾರತಕ್ಕೆ ಶಕ್ತಿ ಇದ್ದಲ್ಲಿ ಘಾಯಕ್ಕೆ ಉಪ್ಪು ತುಂಬುವ ಈ ಅವಮಾನವನ್ನು ಎಂದಿಗೂ ಸಹಿಸುತ್ತಿರಲಿಲ್ಲ.

"ಬ್ರಿಟಿಷರನ್ನು ನಾನು ನಿಂದಿಸುತ್ತಿಲ್ಲ. ಅಲ್ಪ ಸಂಖ್ಯಾತರಾದ ಅವರ ಸ್ಥಾನದಲ್ಲಿ ನಾವೂ ಇದ್ದರೆ ಹಾಗೆಯೇ ಮಾಡುತ್ತಿದ್ದೆವೋ ಏನೋ ಭಯ ಪ್ರಚೋದಕ ಹಾಗೂ

ಮೋಸ ಮಾರ್ಗಗಳು ದುರ್ಬಲರ ಅಸ್ತ್ರಗಳೇ ಹೊರತು ಬಲಶಾಲಿಗಳಿಗೆ ಸಲ್ಲದು. ಸಂಖ್ಯೆಯಲ್ಲಿ ಕಮ್ಮಿಯಾದುದರಿಂದ ಬ್ರಿಟಿಷರು ಬಲಹೀನರು. ಆದರೆ ಸಂಖ್ಯಾ ಬಲ ವಿದ್ದರೂ ನಾವು ಬಲಹೀನರು. ಪರಿಣಾಮವಾಗಿ ಒಬ್ಬರನ್ನೊಬ್ಬರು ಅವನತಿಗೆ ತಳ್ಳು ತ್ತಿದ್ದೇವೆ. ಭಾರತಕ್ಕೆ ಬಂದು ನೆಲೆಸಿದೊಡನೆ ಇಂಗ್ಲಿಷರು ಚಾರಿತ್ರ್ಯ ಹೀನರಾಗಿ ಬಿಡು ತ್ತಾರೆ. ಇಂಗ್ಲಿಷರ ಸಂಪರ್ಕ ಬಂದೊಡನೆ ಭಾರತೀಯರು ಹೇಡಿಗಳಾಗಿ, ನಿಸ್ಸತ್ವರಾಗಿ ಬಿಡುತ್ತಾರೆ. ಇದು ಸಾಮಾನ್ಯ ಅನುಭವ. ಈ ಅವನತಿ ನಮ್ಮೆರಡು ದೇಶಗಳಿಗಾಗಲಿ, ಜಗತ್ತಿಗಾಗಲಿ ಒಳಿತಲ್ಲ.

"ನಮ್ಮನ್ನು ನಾವು ಉದ್ಧರಿಸಿಕೊಂಡರೆ ಇಂಗ್ಲಿಷರೂ ಮತ್ತು ಇತರರೂ ತಮ್ಮ ಉದ್ಧಾರವನ್ನು ತಾವು ಕಂಡುಕೊಂಡಾರು. ಜಗತ್ತಿನ ಪ್ರಗತಿಗೆ ನಾವು ಸಲ್ಲಿಸಬಹುದಾದ ಕಾಣಿಕೆಯೆಂದರೆ ನಮ್ಮ ದೇಶವನ್ನು ನಾವು ಸರಿಪಡಿಸಿಕೊಳ್ಳುವುದೇ.

"ಶಸ್ತ್ರ ಶಿಕ್ಷಣ ಈಗ ಅಸಾಧ್ಯ. ನಾನಿನ್ನೂ ದೂರಹೋಗಿ ಭಾರತಕ್ಕೆ ಈ ಶಸ್ತ್ರ ವಿದ್ಯೆಗಿಂತಲೂ ಹೆಚ್ಚಿನದಾದ ಸಂದೇಶವೊಂದನ್ನು ನೀಡುವ ಕಾರ್ಯವುಂಟು ಎನ್ನುತ್ತೇನೆ. ಆತ್ಮ ನಿರ್ಮಲೀಕರಣವಾದ ತನ್ನ ಪರಮ ಗುರಿಯನ್ನು ಭಾರತ ತನ್ನ ನಿರ್ಮಲ ಆತ್ಮ ಬಲಿದಾನಗಳಿಂದಲೇ ಸಾಧಿಸುವುದು ತನ್ನ ಸಾಮರ್ಥ್ಯಕ್ಕೆ ಸಾಧ್ಯ ಎಂದು ಜಗತ್ತಿಗೆ ತೋರಿಸಿಕೊಡಬಹುದು. ಇದು ಸಂಪೂರ್ಣ ಅಸಹಕಾರ ಕ್ರಮದಿಂದ ಸಾಧ್ಯ. ಯಾರು ಸಹಕಾರ ನೀಡಲು ಮೊದಲು ಮಾಡಿದರೋ ಅವರೇ ಸಹಕಾರವನ್ನು ಹಿಂತೆಗೆದುಕೊಂಡಾಗ ಈ ಅಸಹಕಾರ ಸಾಧ್ಯ. ಸರ್ಕಾರ ನಿಯಂತ್ರಿತ ಶಾಲೆಗಳು, ಸರ್ಕಾರದ ನ್ಯಾಯಾಲಯಗಳು ಹಾಗೂ ಶಾಸನಮಂಡಲಗಳು ಈ ಮೂರು ಮಾಯಾ ಜಾಲಗಳಿಂದ ನಾವು ವಿಮುಕ್ತರಾಗಬೇಕು. ನಮ್ಮದೇ ನಿಯಂತ್ರಣವಿರುವ ಶಾಲೆ ಗಳನ್ನು ನಡೆಸಿ, ನಮ್ಮ ಜಗಳಗಳನ್ನು ನಾವೇ ತೀರ್ಮಾನಿಸಿಕೊಂಡು, ಬ್ರಿಟಿಷರ ಶಾಸನಗಳಿಗೆ ವಿಮುಖರಾದಾಗ ಮಾತ್ರ ನಾವು ಸ್ವಯಮಾಡಳಿತಕ್ಕೆ ಸಮರ್ಥರಾಗು ತ್ತೇವೆ. ಆಗ ಸರ್ಕಾರಿ ಅಧಿಕಾರಿಗಳನ್ನು ಸೈನ್ಯಾಧಿಕಾರಿಗಳನ್ನು ರಾಜೀನಾಮೆ ಕೊಡು ವಂತೆ ನಾವು ಕೇಳುವುದು, ತೆರಿಗೆದಾರರನ್ನು ತೆರಿಗೆ ಕೊಡದಂತೆ ನಿಲ್ಲಿಸಲು ಸಾಧ್ಯ.

"ಮಕ್ಕಳನ್ನು ಶಾಲಾ ಕಾಲೇಜುಗಳಿಂದ ಬಿಡಿಸಿ ನಮ್ಮವೇ ಸ್ವತಂತ್ರ ವಿದ್ಯಾಸಂಸ್ಥೆ ಗಳನ್ನು ಸ್ಥಾಪಿಸಿಕೊಳ್ಳುವಂತೆ ಕೇಳುವುದು ಅಷ್ಟೊಂದು ಅಸಾಧ್ಯವಾದ ಸಲಹೆಯೇನು? ಈಗಿನ ವಕೀಲಿ ವೃತ್ತಿಯನ್ನು ಬಿಟ್ಟು ನ್ಯಾಯಾಲಯಗಳಿಂದ ಹೊರಬಂದು ತಮ್ಮ ಸಂಪೂರ್ಣ ಸಮಯವನ್ನು ರಾಷ್ಟ್ರಸೇವೆಗೆ ಮೀಸಲಿಡುವಂತೆ ವಕೀಲರನ್ನು ಕೇಳುವುದಾಗಲೀ, ಅಗತ್ಯವಿದ್ದೆಡೆ ಅವರ ಜೀವನ ನಿರ್ವಹಣೆಯ ವೆಚ್ಚವನ್ನೊದಗಿಸಿ ಕೊಡುವುದಾಗಲೀ ದುಸ್ಸಾಧ್ಯವಾದ ಸೂಚನೆಯೇನು? ಯಾವ ಕೌನ್ಸಿಲ್ಲುಗಳಲ್ಲಿನ ನಿರಂಕುಶ ಅಧಿಕಾರ ವನ್ನು ರಾಷ್ಟ್ರದ ಮೇಲೆ ಹೇರಲಾಗಿದೆಯೋ ಅಂಥ ಕೌನ್ಸಿಲ್ಲುಗಳಿಗೆ ಸಾರ್ವಜನಿಕರು ಉಮೇದುವಾರರಾಗಬೇಡಿರೆಂದು ಕೇಳುವುದು ಸಾಧ್ಯವಿಲ್ಲವೇ? ಈ ಅಸಹಕಾರದಿಂದ

ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪಶುಶಕ್ತಿ ಸ್ವರೂಪದ ನಗ್ನದರ್ಶನವಾಗುತ್ತದೆ. ಅವರ ಕುಟಿಲ ರಚನೆ ಸ್ಪಷ್ಟವಾಗಿ ಗೋಚರಿಸುತ್ತದೆ. ಕೇವಲ ಪಶುಬಲದ ಆಧಾರದ ಮೇಲೆ ನಡೆದಿರುವ ಈ ಅಸಹ್ಯ ದಮನವನ್ನು ಭಾರತ ಒಂದು ಕ್ಷಣವೂ ಸಹಿಸದು ಎಂಬುದನ್ನು ಎತ್ತಿ ತೋರಿಸಲೂ ಸಮರ್ಥರಾಗುತ್ತೇವೆ.

"ನಾನು ಸೂಚಿಸಿರುವ ಮೂರು ನಿಯಮಗಳನ್ನು ಪಾಲಿಸದೆ ಹೋದಲ್ಲಿ ಸ್ವರಾಜ್ಯವಿಲ್ಲವೆಂಬುದನ್ನು ಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ. ಕಾಲೇಜು ಪದವಿಗಳ ಮೋಹಕ್ಕೆ ಮನಸೋತರೆ, ಕೆಲವು ನಿಮಿಷಗಳಲ್ಲಿ ಇತ್ಯರ್ಥ ಮಾಡುವಂತಹ ಮೊಕ್ಕದ್ದಮೆಗಳಿಗೆ ಕಕ್ಷಿಗಾರರಿಂದ ಸಾವಿರಗಟ್ಟಲೆ ಹಣ ಹೀರುತ್ತಲೇ ಹೋದರೆ, ಅಧಿಕಾರ ದರ್ಪದ ಕೌನ್ಸಿಲ್ ಸಭೆಗಳಲ್ಲೇ ಕುಳಿತು ರಾಷ್ಟ್ರದ ಅಮೂಲ್ಯ ಸಮಯವನ್ನು ಹಾಳು ಮಾಡುವ ಉದ್ಯಮದಲ್ಲಿ ಸಂತೋಷಪಡುತ್ತಲೇ ಇದ್ದರೆ—ನಾವೆಂದಿಗೂ ರಾಷ್ಟ್ರದ ಆತ್ಮಗೌರವವನ್ನು ಉಳಿಸಿಕೊಳ್ಳಲಾರೆವು.

"ಈ ಮಾಯಾಜಾಲದ ಕೊನೆಯದಾದ ಆದರೆ ಕನಿಷ್ಠವಲ್ಲದ ಒಂದು ಮುಖ್ಯ ವಿಷಯವನ್ನು ಗಮನಿಸಬೇಕಾಗಿದೆ; ಅದು ಸ್ವದೇಶಿ ವ್ರತ. ನಮ್ಮ ಸ್ವದೇಶೀ ನಿಯಮವನ್ನು ನಾವು ತಿರಸ್ಕರಿಸದೇ ಹೋಗಿದ್ದರೆ ನಾವಿಂದು ಈ ಪತಿತ ಸ್ಥಿತಿಯಲ್ಲಿರಬೇಕಾಗಿರಲಿಲ್ಲ. ಆರ್ಥಿಕ ದಾಸ್ಯದಿಂದ ವಿಮುಕ್ತರಾಗಬೇಕಾದರೆ ನಮ್ಮ ಬಟ್ಟೆಯನ್ನು ನಾವು ಮೊದಲು ಉತ್ಪಾದನೆ ಮಾಡಲೇಬೇಕು. ಸದ್ಯಕ್ಕೆ ಅದು ಕೈನೂಲಿನಿಂದ ಕೈಮಗ್ಗದಲ್ಲೇ ಆಗಬೇಕು.

"ಇವೆಲ್ಲಕ್ಕೂ ಮೂಲವಾದುವು ಶಿಸ್ತು, ನಿಸ್ವಾರ್ಥತೆ, ಆತ್ಮಸಮರ್ಪಣೆ, ವ್ಯವಸ್ಥಾ ಸಾಮರ್ಥ್ಯ, ಆತ್ಮ ವಿಶ್ವಾಸ ಹಾಗೂ ನಿರ್ಭಯತೆಗಳು. ಪ್ರಭಾವಶಾಲಿಗಳಾದ ನಮ್ಮ ಉನ್ನತ ವರ್ಗಗಳಲ್ಲಿ ಈ ಶಕ್ತಿ ಪ್ರಕಟವಾಗಿ ಸಾರ್ವಜನಿಕ ಅಭಿಪ್ರಾಯ ಕ್ರೋಢೀಕೃತವಾಗಿ ನಿಂತರೆ ಒಂದು ವರ್ಷದಲ್ಲಿ ಸ್ವರಾಜ್ಯ ಖಂಡಿತ ಸಾಧ್ಯ. ಅದಕ್ಕೆ ಬದಲಾಗಿ ನಾಯಕರೆನಿಸಿಕೊಳ್ಳುವ ನಮ್ಮಲ್ಲೇ ಈ ಗುಣಗಳು ಲೋಪವಾದಲ್ಲಿ ಭಾರತಕ್ಕೆ ಸ್ವರಾಜ್ಯದ ಅರ್ಹತೆಯೇ ನಾಶವಾಗುತ್ತದೆ; ಆಗ ನಮಗೆ ಬ್ರಿಟಿಷರ ಕ್ರಮಗಳನ್ನು ವಿರೋಧಿಸುವುದಕ್ಕೂ ಬಾಯಿಲ್ಲವಾಗುತ್ತದೆ. ನಮ್ಮ ಉದ್ಧಾರ, ಅದು ಬರುವ ಕಾಲ, ಎರಡೂ ಸಂಪೂರ್ಣವಾಗಿ ನಮ್ಮ ಕೈಯಲ್ಲೇ ಇದೆ."

ಈ ಚಳುವಳಿಯ ಬಗೆಗಿದ್ದ ಅಪಹಾಸ್ಯದ ಮನೋಭಾವ ಅಕ್ಟೋಬರ್ ವೇಳೆಗೆ ನಿಂತುಹೋಯಿತು. ಗಾಂಧೀಜಿ ಹೀಗೆ ಬರೆದರು : "ಕೌನ್ಸಿಲ್ಲುಗಳ ಬಹಿಷ್ಕಾರ ಸಂಪೂರ್ಣವಾಗಲ್ಲದಿದ್ದರೂ ವ್ಯಾಪಕವಾಗಿ ಹರಡುವ ಭರವಸೆ ಇದೆ. ವಿದ್ಯಾರ್ಥಿಗಳು ಅಶಾಂತರಾಗಿದ್ದಾರೆ. ಪ್ರಮುಖ ವಿದ್ಯಾಸಂಸ್ಥೆಗಳು ರಾಷ್ಟ್ರೀಯ ಸಂಸ್ಥೆಗಳಾಗಲಿವೆ. ಅತ್ಯುನ್ನತ ವಕೀಲರಲ್ಲಿ ಅಗ್ರಗಣ್ಯರಾದ ಪಂಡಿತ ಮೋತಿಲಾಲರ ವೃತ್ತಿತ್ಯಾಗವೊಂದು ಅದ್ಭುತ ಘಟನೆ. ಅಪಹಾಸ್ಯವನ್ನು ಅಳಿಸಿ ಗೌರವ ದೃಷ್ಟಿಯನ್ನು ನೆಲೆಗೊಳಿಸಲು ಸಹಾಯಕವಾದ ಘಟ್ಟ. ಗಂಭೀರವಾಗಿ ಇತರರೂ ತಮ್ಮ ತಮ್ಮ ನಿಲುವನ್ನು ಕುರಿತು ಯೋಚಿಸು

ವಂತೆ ಇದು ಮಾಡಬೇಕು—ಈ ಘಟನೆ ಒಂದು ಅಪೂರ್ವ ಸಂಗತಿ. ಅನೇಕ ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ವೇತನಗಳನ್ನು ತ್ಯಜಿಸಿದ್ದಾರೆ. ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಕೊನೆಯ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ನಿರಾಕರಿಸಿದ್ದಾರೆ. ಇಂಥ ಪರಿಸ್ಥಿತಿ ಇರುವಾಗ ಅಸಹಕಾರ ಚಳುವಳಿಯನ್ನು ಅವಿವೇಕಕ್ರಮ ಎನ್ನಲಾದೀತೆ? ಅಸಹಕಾರ ಚಳುವಳಿಯ ಮೂಲಕ ನಿಸ್ಸಂಶಯವಾಗಿ ಪ್ರಕಟವಾಗಿರುವ ಜನತೆಯ ಸಂಕಲ್ಪ ಶಕ್ತಿಗೆ ಸರ್ಕಾರ ಮಣಿಯಲೇ ಬೇಕು ಇಲ್ಲವೇ ಕ್ರೂರ ದಮನ ಕ್ರಮಗಳಿಂದ ಹತ್ತಿಕ್ಕಲು ಪ್ರಯತ್ನಿಸಬೇಕು."

ಆಲಿ ಸಹೋದರರ ಜತೆಯಲ್ಲಿ ಭಾರತದ ಮೂಲೆ ಮೂಲೆಗಳಲ್ಲಿ ಸಂಚರಿಸಿ ಗಾಂಧೀಜಿ ಜನತಾ ಬಂಡಾಯದ ಸಂದೇಶವನ್ನು ಸಾರಿದರು. ಅಲಿಘರ್ ವಿಶ್ವವಿದ್ಯಾನಿಲಯದಲ್ಲಿ ಪೋಷಕರ ಸಭೆಯನ್ನು ಕುರಿತು ಮಾತನಾಡುತ್ತಾ: "ಯುವಕರಿಗೆ ನಾನು ಕೊಟ್ಟ ಕರೆಯಿಂದ ಅನೇಕ ಪೋಷಕರು ದಿಗ್ಭ್ರಮೆಗೊಂಡಿದ್ದಾರೆ. ನನ್ನ ಪ್ರಿಯಮಿತ್ರರನೇಕರಿಗೆ ನನ್ನ ಈಚಿನ ವರ್ತನೆಗಳು ಹಾಗೆಯೇ ಮಾಡಿವೆ. ಇದರಿಂದ ನನಗೇನೂ ಆಶ್ಚರ್ಯವಾಗದು. ನಮ್ಮನಾಳುತ್ತಿರುವ ಸರ್ಕಾರದ ಪದ್ಧತಿಯ ಬಗ್ಗೆ ನನ್ನ ಮನೋಧರ್ಮ ಸಂಪೂರ್ಣವಾಗಿ ಬದಲಾಗಿ ಬಿಟ್ಟಿದೆ. ಅದರ ಪದಾಘಾತದಲ್ಲಿ ಸಿಕ್ಕಿ ನಾವು ನುಚ್ಚಾಗುತ್ತಿದ್ದೇವೆ. ಪುರಾಣಗಳಲ್ಲಿನ ರಾವಣ ರಾಜ್ಯ ಪದ್ಧತಿಯಂತೆ ಇದೊಂದು ರಾಕ್ಷಸೀ ಪದ್ಧತಿ ಎನಿಸಿದೆ. ನನ್ನ ಅನೇಕ ಮಿತ್ರರಿಗೆ ಹಾಗೆ ಅನಿಸಿಲ್ಲ. ಈ ಕ್ರೂರ ಪದ್ಧತಿಯನ್ನೇ ಕೊನೆಗಾಣಿಸಬೇಕು. ಇಲ್ಲವೇ ಆಳರಸರು ತಮ್ಮ ಅಕೃತ್ಯಗಳಿಗೆ ಪಶ್ಚಾತ್ತಾಪ ಪಟ್ಟು ಈ ಪದ್ಧತಿಯು ಪೂರ್ಣ ಪರಿವರ್ತನೆಯಾಗಬೇಕು ಎಂದೇ ನನ್ನ ಬಯಕೆ.

"ಅಲಿಘರ್‌ನಲ್ಲಿ ಓದುತ್ತಿರುವ ನಿಮ್ಮ ಮಕ್ಕಳ ಭವಿಷ್ಯ ಕುರಿತ ನಿಮ್ಮ ಆತಂಕ ನನಗೆ ಅರ್ಥವಾಗುತ್ತದೆ. ನಿಮ್ಮ ನೋವಿಗೆ ನಾನು ಕಾರಣನಾಗಬಯಸುವುದಿಲ್ಲ. ನಾನೂ ನಾಲ್ಕು ಮಕ್ಕಳ ತಂದೆ. ನನ್ನ ತಿಳುವಳಿಕೆಗೆ ಅನುಗುಣವಾಗಿ ಅವರನ್ನು ಸಾಕಿ ಬೆಳೆಸಿದ್ದೇನೆ. ನನ್ನ ತಂದೆಗಂತೂ ನಾನು ಕರ್ತವ್ಯನಿಷ್ಠ ಮಗನಾಗಿ ನಡೆದುಕೊಂಡಿದ್ದೇನೆ. ಉಪಾಧ್ಯಾಯರಿಗೆ ಸಂಪೂರ್ಣ ವಿಧೇಯ ವಿದ್ಯಾರ್ಥಿಯಾಗಿದ್ದೆ. ಪುತ್ರಧರ್ಮದ ಮಹತ್ವಕ್ಕೆ ನಾನು ಬೆಲೆ ಕೊಡುತ್ತೇನೆ. ಆದರೆ, ಎಲ್ಲಕ್ಕಿಂತ ಮಿಗಿಲು ಭಗವನ್ನಿಯಮಕ್ಕೆ ತಲೆಬಾಗುವ ಕರ್ತವ್ಯವುಂಟು. ದೈವೀಕರ್ತವ್ಯ ಹಾಗೂ ಇತರರಿಗೆ ಸಲ್ಲಿಸಬೇಕಾದ ಕರ್ತವ್ಯ, ಇವುಗಳಲ್ಲಿ ಒಂದನ್ನು ರಾಷ್ಟ್ರದ ಯುವಕ ಯುವತಿಯರು ಆರಿಸಿಕೊಳ್ಳಬೇಕಾದ ಪರ್ವಕಾಲ ಇಂದು ಸಂಭವಿಸಿದೆ. ಈ ಯುವಜನರನ್ನು ನಾನು ಆತ್ಮೀಯವಾಗಿ ಬಲ್ಲೆ. ಉನ್ನತ ಶಿಕ್ಷಣದ ಬಗ್ಗೆ ನಿರ್ಣಯಿಸುವ ಶಕ್ತಿ ಅವರ ಕೈಯಲ್ಲೇ ಇದೆ. ಈ ಉನ್ನತ ವ್ಯಾಸಂಗದ ಮೋಹ ಪರವಶತೆಯಿಂದ ತಮ್ಮ ಮಕ್ಕಳನ್ನು ಹೊರಕ್ಕೆಳೆಯಲೂ ಅನೇಕ ತಂದೆ ತಾಯಿಗಳು ಪ್ರಯಾಸ ಪ್ರಯತ್ನ ಪಟ್ಟಿರುವುದನ್ನು ನಾನು ಬಲ್ಲೆ. ತಮ್ಮ ಹಿರಿಯರಿಗೆ ವಿರುದ್ಧವಾದರೂ ಸಹ ಯುವಕರು ಶಾಲಾ ಕಾಲೇಜುಗಳನ್ನು ಬಿಟ್ಟು ಬನ್ನಿ ಎಂದು ನಾನು

ಕೋರಿದಾಗ ಪೋಷಕರಿಗೆ ಯಾವ ಅನ್ಯಾಯವನ್ನೂ ಮಾಡುತ್ತಿಲ್ಲವೆಂದು ನನಗೆ ಖಚಿತವಾಗಿದೆ. ಹೀಗೆ ಶಾಲಾ ಕಾಲೇಜುಗಳಿಗೆ ಬಹಿಷ್ಕಾರ ಹಾಕಿದ ನೂರಾರು ವಿದ್ಯಾರ್ಥಿಗಳಿದ್ದರೂ ಒಬ್ಬ ಪೋಷಕನೂ ನನ್ನನ್ನು ತೆಗಳಿ ಪತ್ರ ಬರೆದಿಲ್ಲ. ಒಬ್ಬ ಸರ್ಕಾರಿ ನೌಕರ ಮಾತ್ರ ತನ್ನ ಮಕ್ಕಳು ಶಾಲೆ ಬಿಟ್ಟುದಕ್ಕೆ ನನ್ನನ್ನು ಅಪರಾಧಿ ಎಂದು ತಿಳಿಸಿದ್ದಾನೆ. ತನಗೆ ಒಂದು ಮಾತೂ ತಿಳಿಸದೆ ಈ ಮಕ್ಕಳು ಶಾಲೆಗಳನ್ನು ಬಿಟ್ಟು ಬಿಟ್ಟರು ಎಂಬುದೇ ಆತನ ಪ್ರತಿರೋಧದ ಕಾರಣ. ವಾಸ್ತವವಾಗಿ ಈ ವಿಷಯವನ್ನು ತಂದೆ ತಾಯಿಯರೊಂದಿಗೆ ಚರ್ಚಿಸಿಯೇ ನಿರ್ಣಯಿಸಿ ಎಂದು ಹುಡುಗರಿಗೆ ನಾನು ಸೂಚಿಸಿದ್ದೇನೆ.

"ಸಾವಿರಾರು ಸಾರ್ವಜನಿಕ ಸಭೆಗಳಲ್ಲಿ ಅಸಂಖ್ಯಾತ ಜನರಲ್ಲಿ ಈ ಮನವಿ ಮಾಡಿದ್ದೇನೆ. ಈ ಸರ್ಕಾರಿ ಶಾಲೆಗಳನ್ನು ಬಹಿಷ್ಕರಿಸಿ ಎಂದಿದ್ದೇನೆ. ಯಾರೊಬ್ಬರೂ ಪ್ರತಿಭಟಿಸಿದುದನ್ನು ನಾನು ಕಾಣೆ. ಈ ಜನರೇ ಸಭೆ ಸೇರಿ ಆಶ್ಚರ್ಯಕರವಾಗುವಂತಹ ಒಮ್ಮತದಿಂದ ಅಸಹಕಾರ ಚಳುವಳಿಯನ್ನು ಸಮರ್ಥಿಸಿ ನಿರ್ಣಯಗಳನ್ನೇ ಮಾಡಿದ್ದಾರೆ. ಇದರಲ್ಲಿ ಶಾಲೆ ಕಾಲೇಜುಗಳ ಬಹಿಷ್ಕಾರವೂ ಸೇರಿದೆ. ತಮ್ಮ ಬಾಲಕ ಬಾಲಕಿಯರನ್ನು ಈ ಶಾಲಾ ಕಾಲೇಜುಗಳಿಂದ ಬಿಡಿಸುವುದರಲ್ಲಿ ಅಲಿಘಡದ ಪೋಷಕರ ವರ್ಗ ಹಿಂದೆ ಬೀಳಲಾರದೆಂದು ನನ್ನ ಆಶಯ. ಮುಸಲ್ಮಾನ ಬಾಂಧವರಿಗೆ ದ್ರೋಹ ಬಗೆದು, ಪಂಜಾಬನ್ನು ಬರ್ಬರ ವರ್ತನೆಯಿಂದ ಅವಮಾನಗೊಳಿಸಿರುವ ಈ ಸರ್ಕಾರದ ಆಶ್ರಯದಲ್ಲಿನ ಶಾಲಾ ಕಾಲೇಜುಗಳನ್ನು ತಮ್ಮ ಮಕ್ಕಳು ದೂರೀಕರಿಸಬೇಕೆಂದು ಅವರಿಗೆ ಈಗಾಗಲೇ ಮನದಟ್ಟಾಗಿರಬೇಕು.

"ನಮ್ಮ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಗಬಾರದೆಂಬ ಎಚ್ಚರ ನನಗಿದೆ. ಆದರೆ ಅದಕ್ಕಿಂತ ಹೆಚ್ಚಾಗಿ ಸ್ವಚ್ಛ ಪದ್ಧತಿಯ ಶಿಕ್ಷಣ ಸಿಗಬೇಕೆಂದು ನನ್ನ ಆಕಾಂಕ್ಷೆ. ನಾವು ಸಹಿಸಲಾಗದ ಈ ಸರ್ಕಾರಕ್ಕೆ ಕೈಯೊಡ್ಡಿ ಸಹಾಯಧನ ಪಡೆದು ಶಿಕ್ಷಣ ಕೊಡುವುದು ಅವಮಾನಕರ. ಹೇಡಿತನ. ನಮಗದು ಗೌರವಚ್ಯುತಿ. ದ್ರೋಹಕರ ವರ್ತನೆ.

"ಸರಳ ಕುಟೀರಗಳಲ್ಲೋ, ಮರದಡಿಯಲ್ಲೋ ಸ್ವತಂತ್ರ ಪರಿಸರದಲ್ಲಿ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದು ಮೇಲಲ್ಲವೇ? ಸ್ವತಂತ್ರ ಮನೋವೃತ್ತಿಯ ಅಧ್ಯಾಪಕರು ನಮ್ಮ ಮಕ್ಕಳಲ್ಲೂ ಸ್ವಾತಂತ್ರ್ಯಾಭಿಲಾಷೆ ತುಂಬುವ ವಿದ್ಯೆಯನ್ನು ಆಗ ಕೊಡಬಲ್ಲರು. ನಮ್ಮ ಪ್ರೀತಿ ಪಾತ್ರ ರಾಷ್ಟ್ರದ ಭವಿಷ್ಯ, ಪ್ರಧಾನವಾಗಿ ನಮ್ಮ ಮಕ್ಕಳಿಗೆ ಸೇರಿದ್ದು; ನಮಗಲ್ಲ. ನಮ್ಮನ್ನು ತೆವಳಿಸಿದ ದಾಸ್ಯ ಶೃಂಖಲೆಗಳಿಂದ ಅವರನ್ನಾದರೂ ಬಿಡಿಸಬೇಡವೇ? ನಿರ್ಬಲರಾಗಿ, ಸಂಕಲ್ಪಹೀನರಾಗಿ ನಮ್ಮ ದಾಸ್ಯವನ್ನು ಕಿತ್ತೊಗೆಯುವ ಸಾಮರ್ಥ್ಯ ನಮಗಿಲ್ಲದೇ ಹೋದರೂ ಈ ಬಳುವಳಿಯ ಪಾಪವನ್ನು ನಮ್ಮ ಮಕ್ಕಳ ಮೇಲೂ ಹೇರದಿರುವ ವಿವೇಕ ನಮಗೆ ಬರಬೇಡವೆ?

"ಸ್ವತಂತ್ರವಾಗಿ ಬಾಲಕ–ಬಾಲಕಿಯರು ವಿದ್ಯಾರ್ಜನೆ ಮಾಡುವುದರಿಂದ ಅವರಿಗೆ ಏನೂ ನಷ್ಟವಾಗದು. ಸರ್ಕಾರಿ ವಿಶ್ವವಿದ್ಯಾಲಯದ ಪದವಿಗಳ ಆವಶ್ಯಕತೆಯೂ ಅವರಿಗಿರಬೇಕಾದುದಿಲ್ಲ. ಈ ಪದವಿಗಳ ವ್ಯಾಮೋಹವನ್ನು ನಮ್ಮ ಮಕ್ಕಳಂ

ತ್ಯಜಿಸುವಂತಾದರೆ ವಿದ್ಯಾರ್ಜನೆಯ ವೆಚ್ಚ ನಿರ್ವಹಣೆ ಸರಳವಾಗುತ್ತವೆ. ಇಡೀ ರಾಷ್ಟ್ರ ಒಂದು ವಾರದ ವೆಚ್ಚವನ್ನು ಬಿಟ್ಟು ಕೊಟ್ಟರೆ ಸಾಕು, ಶಾಲೆಯ ಮಕ್ಕಳ ಒಂದು ವರ್ಷದ ವೆಚ್ಚಕ್ಕಾಗುತ್ತದೆ. ಅದೂ ಬೇಕಿಲ್ಲ, ನಮ್ಮ ಧಾರ್ಮಿಕ ಸಂಸ್ಥೆಗಳೂ ಹಿಂದೂ-ಮುಸಲ್ಮಾನರ ಧಾರ್ಮಿಕ ನಿಧಿಗಳೂ ಈ ಶಿಕ್ಷಣ ವೆಚ್ಚವನ್ನು ಸುಲಭವಾಗಿ ನಿರ್ವಹಿಸ ಬಲ್ಲವು. ಆದ್ದರಿಂದ ಇಂದಿನ ನಮ್ಮ ಪ್ರಯತ್ನ ಈ ಸ್ವಾಯತ್ತತೆಯ ಸಾಮರ್ಥ್ಯವನ್ನಳೆಯುವ ಹಾಗೂ ನಮ್ಮ ಧರ್ಮ ಸಂಸ್ಥೆಗಳನ್ನೂ ನಮ್ಮ ಗೌರವವನ್ನೂ ರಕ್ಷಿಸಿಕೊಳ್ಳುವ ಮಹಾಪ್ರಯತ್ನವಾಗಿದೆ."

ಅದೇ ನವಂಬರಿನಲ್ಲಿ ಗಾಂಧೀಜಿ ಅಲಹಾಬಾದಿನ 'ಗುಜರಾತ್ ರಾಷ್ಟ್ರೀಯ ವಿಶ್ವವಿದ್ಯಾಲಯ'ವನ್ನು ಸ್ಥಾಪಿಸಿದರು. ಐಕ್ಯ ಭಾರತವೇ ಅದರ ಗುರಿ. ಭಾರತ ರಾಷ್ಟ್ರೀಯ ಭಾಷೆಗಳನ್ನು ಕಾಪಾಡಿಕೊಂಡು ರಾಷ್ಟ್ರೋತ್ಥಾನಕ್ಕಾಗಿ ಬಳಸುವುದೇ ಅದರ ಉದ್ದೇಶ.

"ಏಷ್ಯಾದ ಸಾಂಸ್ಕೃತಿಕ ಅಧ್ಯಯನ ಪಾಶ್ಚಾತ್ಯ ವಿಜ್ಞಾನ ವ್ಯಾಸಂಗದಷ್ಟೇ ಮುಖ್ಯವಾದುದು. ಸಂಸ್ಕೃತ, ಪರ್ಷಿಯನ್, ಪಾಲಿ, ಮಾಗಧಿ ಭಾಷೆಗಳ ಅಪಾರ ಜ್ಞಾನಸಂಪತ್ತನ್ನು ಶೋಧಿಸಿ ರಾಷ್ಟ್ರಶಕ್ತಿಯ ಮೂಲವನ್ನು ಕಂಡುಕೊಳ್ಳಬೇಕು. ಪ್ರಾಚೀನ ಸಂಸ್ಕೃತಿಯ ಅವಲಂಬನೆ ಮತ್ತು ಪುನರುಚ್ಚಾರಣೆ ನಮ್ಮ ಆದರ್ಶವಾಗ ಲಾರದು. ಪರಂಪರೆಯ ಬುನಾದಿಯ ಮೇಲೆ ನೂತನ ಸಂಸ್ಕೃತಿಯ ನಿರ್ಮಾಣವಾಗ ಬೇಕು. ಇತ್ತೀಚಿನ ಅನುಭವಗಳ ಅಪಾರನಿಧಿಯಿಂದ ಅದು ಪುಷ್ಟಿಯಾಗಬೇಕು. ಭಾರತದಲ್ಲಿ ನೆಲೆಗೊಂಡಿರುವ ವಿವಿಧ ಸಂಸ್ಕೃತಿಗಳ ಸಮ್ಮಿಳನವೇ ನಮ್ಮ ಮುಂದಿರುವ ಆದರ್ಶ. ಭಾರತೀಯ ಜೀವನ ಕ್ರಮದ ಮೇಲೆ ಪ್ರಭಾವ ಬೀರಿ, ಈ ರಾಷ್ಟ್ರ ಚೈತನ್ಯ ದಿಂದ ಪ್ರಭಾವಿತವಾದ ಸಂಸ್ಕೃತಿಗಳ ಸಮ್ಮಿಳನ. ಇದಕ್ಕೆ ಒಂದು ಪೂರ್ಣ ಸ್ವದೇಶಿಯ ಸ್ವರೂಪವೂ ಉಂಟು. ಪ್ರತಿಯೊಂದು ಸಂಸ್ಕೃತಿಗೂ ತನ್ನ ನ್ಯಾಯೋಚಿತ ಸ್ಥಾನದ ಭರವಸೆಯಿರುತ್ತದೆ. ಅಮೆರಿಕದ ಮಾದರಿಯಂತೆ ಒಂದು ಪ್ರಧಾನ ಸಂಸ್ಕೃತಿ ಮಿಕ್ಕವು ಗಳನ್ನೆಲ್ಲ ನುಂಗಿಬಿಡುವುದಲ್ಲ. ಅಲ್ಲಿ ಸಾಮರಸ್ಯಕ್ಕಿಂತ ಒಂದು ಕೃತಕ ಕಡ್ಡಾಯ ಏಕತೆಯೇ ಗುರಿ. ನಮ್ಮಲ್ಲಿ ಹಾಗಾಗಬಾರದು."

ಎಲ್ಲ ಭಾರತೀಯ ಧರ್ಮಗಳನ್ನೂ ಅಲ್ಲಿ ಹೇಳಿಕೊಡಲಾಗುತ್ತಿತ್ತು. ಹಿಂದೂ ಗಳಾದವರು ಕೊರಾನನ್ನು, ಮುಸ್ಲಿಮರು ಹಿಂದೂ ಶಾಸ್ತ್ರಗಳನ್ನೂ ವ್ಯಾಸಂಗ ಮಾಡುವ ಸೌಲಭ್ಯವಿರುತ್ತಿತ್ತು. ಮಾನವ ಕುಲದಲ್ಲಿ ಯಾವುದೂ ಅಸ್ಪೃಶ್ಯವಾದುದಲ್ಲ ಎಂಬುದೇ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಪ್ರಧಾನ ಬೋಧನೆ. ಸಂಸ್ಕೃತ ಮತ್ತು ಪರ್ಷಿಯನ್ ರೀತಿಯ ಉರ್ದು ಇವುಗಳ ಸಮ್ಮಿಳನವಾದ ಹಿಂದೂಸ್ತಾನಿ ಭಾಷೆ ಅಲ್ಲಿ ಕಡ್ಡಾಯ ವಿಷಯ. ಅಲ್ಲಿಯ ಶಿಕ್ಷಣ ಕ್ರಮದಿಂದ ಮತ್ತು ರಾಷ್ಟ್ರವ್ಯಾಪಕ ಔದ್ಯೋಗಿಕ ತರಬೇತಿಯಿಂದ ಸ್ವಾತಂತ್ರ್ಯಪ್ರಜ್ಞೆಯನ್ನು ವಿಕಾಸಗೊಳಿಸುವ ಪ್ರಯತ್ನ ನಡೆಯಿತು.

ಪ್ರೌಢ ವಿದ್ಯಾಭ್ಯಾಸ ಕ್ರಮೇಣ ನಗರಗಳಲ್ಲಿ ಹರಡುತ್ತಾ ಜನ ಸಾಮಾನ್ಯರಲ್ಲಿ ನಿಧಾನವಾಗಿ ಬೇರೂರಿ, ಶಿಕ್ಷಿತರು ಅಶಿಕ್ಷಿತರ ಮಧ್ಯೆ ನಿರ್ಮಾಣವಾಗಿದ್ದ ಮಾರಕ

ಕಂದರ ನಿರ್ನಾಮವಾಗುವಂತಾಗಬೇಕೆಂದು ಗಾಂಧೀಜಿ ಆಶಿಸಿದ್ದರು. "ಸುಸಂಸ್ಕೃತರೆನಿಸಿಕೊಂಡವರಿಗೆ ಒಂದು ಔದ್ಯೋಗಿಕ ಶಿಕ್ಷಣ ಶ್ರಮಜೀವಿಗಳಿಗೆ ಜ್ಞಾನಬೋಧನೆ ಇವುಗಳ ಪರಿಣಾಮವಾಗಿ ಆರ್ಥಿಕ ಅಸಮತೆ ಹಾಗೂ ಸಾಮಾಜಿಕ ಅನ್ಯಾಯಗಳು ಬಹುಮಟ್ಟಿಗೆ ಕಡಮೆಯಾಗುವುವು" ಎಂದರು.

ರಾಜಕೀಯ ಆಂದೋಳನದ ಜೊತೆ ಜೊತೆಯಾಗಿ ರಚನಾತ್ಮಕ ಕಾರ್ಯಕ್ರಮವೂ ನಡೆಯುತ್ತಿತ್ತು. ವಿರೋಧಿಗಳನ್ನು ಪರಿವರ್ತಿಸಲು ಗಾಂಧೀಜಿ ಪ್ರಯತ್ನಪಟ್ಟರು. ಸಭ್ಯನಾದ ಇಂಗ್ಲಿಷ್ ಪ್ರಜೆಯು ಕೂಡ ಭಾರತದೊಡನೆ ಸಹಕರಿಸಿ ಹೋರಾಡಬೇಕೆಂದು ಆಶಿಸಿದರು. ಅಕ್ಟೋಬರ್ ೨೭ರಂದು 'ಯಂಗ್-ಇಂಡಿಯಾ'ದಲ್ಲಿ ಆ ಇಂಗ್ಲಿಷ್ ಸಭ್ಯನನ್ನು ಉದ್ದೇಶಿಸಿ ಹೀಗೆ ಬರೆದರು:

"ಪ್ರಿಯ ಸ್ನೇಹಿತರೆ—ಪ್ರತಿಯೊಬ್ಬ ಆಂಗ್ಲೇಯನೂ ಈ ಮನವಿಯನ್ನೋದಿ ಆಳವಾಗಿ ವಿಚಾರ ಮಾಡಬೇಕೆಂದು ನಾನು ಆಶಿಸುತ್ತೇನೆ.

"ಮೊದಲು ನನ್ನ ಪರಿಚಯ ಮಾಡಿಕೊಡುತ್ತೇನೆ. ಇಪ್ಪತ್ತೊಂಬತ್ತು ವರ್ಷಗಳ ಅವಿಚ್ಛಿನ್ನ ಸಾರ್ವಜನಿಕ ಜೀವನದಲ್ಲಿ ನನ್ನಂತೆ ಬ್ರಿಟಿಷ್ ಸರ್ಕಾರದೊಂದಿಗೆ ಸಹಕರಿಸಿ ನಡೆದ ಮತ್ತೊಬ್ಬ ಭಾರತೀಯನಿರಲಾರ ಎಂದೇ ನನ್ನ ವಿನಮ್ರ ನಂಬಿಕೆ. ಈ ವರ್ಷಗಳಲ್ಲಿ ಸಂಭವಿಸಿದ ಘಟನೆಗಳನೇಕವು ಯಾರನ್ನಾದರೂ ರೊಚ್ಚಿಗೆಬ್ಬಿಸುವಂಥದಾದರೂ ನಾನೊಬ್ಬ ಬಂಡಾಯಗಾರನಾಗದೆ ತಡೆದುಕೊಂಡಿದ್ದೇನೆ. ನಿಮ್ಮ ಕಾನೂನುಗಳಿಂದ ನನಗೆ ಶಿಕ್ಷೆಯಾದೀತೆಂದು ಹೆದರಿಯಾಗಲಿ, ಯಾವುದೇ ಇತರ ಸ್ವಾರ್ಥದ ಉದ್ದೇಶದಿಂದಾಗಲಿ ನಾನು ಸಹಕರಿಸಿದೆನೆಂದು ನೀವು ಭಾವಿಸಬಾರದು. ತನ್ನ ಒಟ್ಟಿನ ಕಾರ್ಯನಿರ್ವಹಣೆಯಿಂದ ಬ್ರಿಟಿಷ್ ಸರ್ಕಾರ, ಭಾರತಕ್ಕೆ ಒಳಿತನ್ನೇ ಮಾಡುತ್ತದೆಂಬ ನಂಬಿಕೆಯಿಟ್ಟು ಸ್ವಪ್ರೇರಣೆಯಿಂದ ಮುಕ್ತಹೃದಯಪೂರ್ವಕವಾಗಿ ಈ ಸಹಕಾರ ಹಸ್ತ ನೀಡಿದ್ದೇನೆ. ಈ ಚಕ್ರಾಧಿಪತ್ಯದ ರಕ್ಷಣೆಗಾಗಿಯೇ ನಾಲ್ಕು ಸಾರಿ ಪ್ರಾಣವನ್ನೇ ಪಣವಾಗಿಟ್ಟು ಕೆಲಸ ಮಾಡಿದ್ದೇನೆ: ಬೋಯರ್ ಯುದ್ಧದ ಸಮಯಕ್ಕೆ ಜೀವ ರಕ್ಷಕ ದಳದ ನಾಯಕನಾಗಿ ಸೇವೆ ಮಾಡಿದಾಗ; (ಈ ವರದಿಯನ್ನು ಜನರಲ್ ಬುಲ್ಲರ್ ಮಾಡಿದ್ದಾರೆ.) ನೆಟಾಲಿನಲ್ಲಿ ಝೂಲು ದಂಗೆಯ ಸಮಯಕ್ಕೆ .ಇಂಥದೇ ದಳದಲ್ಲಿ ಮುಂದಾಳಾಗಿ ಕೆಲಸ ಕೈಕೊಂಡಾಗ; ಮೂರನೆಯಬಾರಿ ಮಹಾಯುದ್ಧ ಪ್ರಾರಂಭವಾದಾಗ: ಆಗ ನಾನೇ ಒಂದು ದಳದ ನಿರ್ಮಾತೃವಾಗಿ ಅತ್ಯಂತ ಕಠಿಣ ಶಿಕ್ಷಣ ಕ್ರಮದಲ್ಲಿ ಭಾಗವಹಿಸಿದ ಪರಿಣಾಮವಾಗಿ ಶ್ವಾಸಶೂಲೆಯ ದಾರುಣ ರೋಗಕ್ಕೆ ತುತ್ತಾಗಿ ನರಳಿದೆ. ಮತ್ತು ಕೊನೆಯ ಸಲ ದೆಹಲಿಯಲ್ಲಿ ಲಾರ್ಡ್ ಚೆಲ್ಮ್‌ಸ್‌ಫರ್ಡರು ಕರೆದ ಸಮರ ಸಿದ್ಧತಾ ಸಮ್ಮೇಳನದಲ್ಲಿ ನಾನು ಕೊಟ್ಟ ವಚನ ಪಾಲಿಸಲು ಯುದ್ಧಕ್ಕೆ ಸೈನಿಕರನ್ನು ಸೇರಿಸುವ ಕೆಲಸದಲ್ಲಿ ತದೇಕ ನಿಷ್ಠೆಯಿಂದ ಕೆಲಸ ಮಾಡುತ್ತಾ ಖೇಡಾ ಜಿಲ್ಲೆಯಲ್ಲಿ ಪ್ರಯಾಸದ ಪ್ರವಾಸಗಳನ್ನು ಕೈಗೊಂಡ ಕಾರಣವಾಗಿ ರಕ್ತಭೇದಿರೋಗಕ್ಕೆ ತುತ್ತಾಗಿ ಮರಣದ ಅಂಚಿನಲ್ಲಿ ತುಯ್ದಾಡಿದೆ. ಹೀಗೆ ನಾಲ್ಕು ಸಲ ನಿಷ್ಠಾವಂತನಾಗಿ ಸೇವೆಗೈದ

ಉದ್ದೇಶವಾದರೂ ಇಷ್ಟೆ; ಇಂಥ ನಿರ್ಮಲ ಸೇವೆ ನನ್ನ ದೇಶಕ್ಕೆ ಈ ಚಕ್ರಾಧಿಪತ್ಯದಲ್ಲಿ ಗೌರವ ಸರಿಸಮಾನತೆಯ ಸ್ಥಾನವನ್ನು ಗಳಿಸಿ ಕೊಡುವುದೆಂಬ ದೃಢವಾದ ನಂಬಿಕೆ. ಕಳೆದ ಡಿಸೆಂಬರದಲ್ಲೂ ನಾನು ಒಂದು ಪರಸ್ಪರ ವಿಶ್ವಾಸಪೂರ್ಣ ಸಹಕಾರಕ್ಕಾಗಿ ಪ್ರಾರ್ಥಿಸಿಕೊಂಡೆ. ಲಾಯಿಡ್ ಜಾರ್ಜರು ಮುಸಲ್ಮಾನ ಬಂಧುಗಳಿಗೆ ನೀಡಿದ್ದ ವಚನವನ್ನು ಪಾಲಿಸಿಯಾರೆಂದೂ ಪಂಜಾಬದಲ್ಲಾದ ಕ್ರೂರ ದಬ್ಬಾಳಿಕೆಯ ಹತ್ಯಾ ಕಾಂಡ ಗೊತ್ತಾದಾಗ ಪಂಜಾಬಿಗಳಿಗೆ ನಷ್ಟ ಪರಿಹಾರ ಮಾಡಿಕೊಡುವರೆಂದು ನಾನು ಸಂಪೂರ್ಣ ವಿಶ್ವಾಸದಿಂದ ನಂಬಿದೆ. ಆದರೆ ಲಾಯಿಡ್ ಜಾರ್ಜರ ವಿಶ್ವಾಸ ದ್ರೋಹ; ಅದಕ್ಕೆ ನೀವು ತೋರಿದ ಪ್ರಶಂಸೆ ಮತ್ತು ಪಂಜಾಬ ದುಷ್ಕೃತ್ಯಗಳ ಕ್ಷಮೆ ಇವೆಲ್ಲವೂ ನನ್ನ ನಿಷ್ಠೆಯನ್ನು ಛಿದ್ರಗೊಳಿಸಿಬಿಟ್ಟಿವೆ. ಬ್ರಿಟಿಷ್ ಸರ್ಕಾರದ ಈ ಉದ್ದೇಶಗಳಲ್ಲೂ ಅದನ್ನು ಬೆಂಬಲಿಸುವ ರಾಷ್ಟ್ರದ ಬಗ್ಗೆಯೂ ನನ್ನ ವಿಶ್ವಾಸವೇ ಕುಸಿದು ಬಿದ್ದಿದೆ.

"ನಿಮ್ಮ ಸದುದ್ದೇಶಗಳಲ್ಲಿ ನನ್ನ ನಂಬಿಕೆ ನಂದಿಹೋದರೂ ನಿಮ್ಮ ವೀರ ಸ್ವಭಾವ ವನ್ನು ನಾನರಿತಿದ್ದೇನೆ. ನ್ಯಾಯ ತರ್ಕಗಳ ಒತ್ತಡಕ್ಕೆ ನೀವು ಮಣಿಯದೇ ಹೋದರೂ ವೀರನ ಸಾಹಸಕ್ಕೆ ಮಣಿಯುತ್ತೀರಿ.

"ಈ ಚಕ್ರಾಧಿಪತ್ಯದಿಂದ ಭಾರತಕ್ಕೆ ಆಗಿರುವುದಾದರೂ ಏನು ಬಲ್ಲಿರಾ? ಬ್ರಿಟನ್ನಿನ ಲಾಭಕ್ಕಾಗಿ ಭಾರತದ ಸಂಪತ್ತಿನ ಶೋಷಣೆ; ಸತತವಾಗಿ ಏರುತ್ತಿರುವ ಸೈನ್ಯ ವೆಚ್ಚ. ನಿಮ್ಮ ಉನ್ನತಾಧಿಕಾರಿ ವರ್ಗಗಳ ವೆಚ್ಚ ಜಗತ್ತಿನಲ್ಲೇ ದುಬಾರಿಯಾದುದು. ಭಾರತದ ದಾರಿದ್ರ್ಯವನ್ನು ತುಚ್ಛೀಕರಿಸಿ ಅಗಾಧ ಹಣ ಪೋಲು ಮಾಡುತ್ತಿರುವ ವಿವಿಧ ಸರ್ಕಾರೀ ಇಲಾಖೆಗಳು; ಹೇಡಿ ಜನರಾಗಿ ನಮ್ಮ ಮಧ್ಯೆ ಇರುವ ನಿಮ್ಮನ್ನು ಶಸ್ತ್ರಸಜ್ಜಿತ ದೇಶ ನಿರ್ನಾಮ ಮಾಡೀತೆಂಬ ಶಂಕೆಯಿಂದ ನೀವು ಮಾಡಿದ ಸಂಪೂರ್ಣ ನಿಶ್ಶಸ್ತ್ರೀಕರಣ; ಪರಿಣಾಮವಾಗಿ ಇಡೀ ರಾಷ್ಟ್ರದ ಅಸಹನೀಯ ದುರ್ಬಲತೆ; ಮಾದಕ ದ್ರವ್ಯಗಳ, ಗಾಂಜಾ, ಅಫೀಮುಗಳ ಅನೈತಿಕ ವ್ಯಾಪಾರದಿಂದ, ಅತಿವೆಚ್ಚದ ಸರ್ಕಾರದ ವ್ಯವಸ್ಥೆಗೆ ಹಣ ಸಂಗ್ರಹ; ದೇಶದ ತೀವ್ರ ಸಂಕಟವನ್ನು ಪ್ರಕಟಪಡಿಸುವ ಚಳುವಳಿ ಗಳನ್ನು ಕ್ರೂರವಾಗಿ ದಮನ ಮಾಡಲು ದಿನದಿನಕ್ಕೂ ಹೆಚ್ಚುತ್ತಿರುವ ದಬ್ಬಾಳಿಕೆಯ ಕಾನೂನು ಕಡತಗಳು; ನಿಮ್ಮ ವಸಾಹತುಗಳಲ್ಲಿರುವ ಭಾರತೀಯರನ್ನು ಅವಮಾನಕ್ಕೀಡು ಮಾಡುವ ವರ್ತನೆ; ಈಗ ಪಂಜಾಬಿನ ದುಷ್ಕೃತ್ಯಗಳಿಗೆ ಕಾರಣವಾದ ಅಲ್ಲಿನ ಆಡಳಿತ ವನ್ನು ಹೊಗಳಿ ನಮ್ಮ ಅವಮಾನದ ಮೇಲೆ ಬರೆ ಎಳೆದಿದ್ದೀರಿ, ನಮ್ಮ ಮುಸಲ್ಮಾನರ ಮತೀಯ ಸದ್ಭಾವನೆಗಳನ್ನು ಮಣ್ಣುಗೂಡಿಸಿದ್ದೀರಿ."

"ಪ್ರತಿಭಟಿಸಿ ಹೋರಾಡಿ ನಿಮ್ಮ ಸಾಮ್ರಾಜ್ಯವನ್ನುರುಳಿಸಿ ಬಿಡುವುದಾದರೆ ನೀವು ಬಹುಶಃ ಒಪ್ಪಿಕೊಂಡೀರಿ. ಈ ಸಾಹಸ ಕೈಗೊಳ್ಳದಂತೆ ನಮ್ಮನ್ನು ನಿರ್ವೀರ್ಯ ಗೊಳಿಸಿ ನಿಮ್ಮ ರಕ್ಷಣೆಯನ್ನು ಕಾಯ್ದುಕೊಂಡಿದ್ದರಿಂದ ನಮಗೆ ಬಾಹುಬಲ ಪ್ರತಿ ಭಟನೆ ಅಸಾಧ್ಯವೆಂದು ನೀವು ಬಲ್ಲಿರಿ. ಯುದ್ಧರಂಗದ ವೀರ ಸಾಹಸ ನಮಗಿಂದು ದುಸ್ಸಾಧ್ಯವಾಗಿದೆ. ಆದರೆ ಆತ್ಮಶಕ್ತಿಯ ಹೋರಾಟದಲ್ಲಿ ವಿರಾವೇಶ ನಮಗೆ ಈಗಲೂ

ಸಾಧ್ಯ. ಈ ಶೌರ್ಯಕ್ಕೆ ನೀವು ಮಣಿಯುವಿರೆಂದು ನಾನು ಬಲ್ಲೆ. ಇಂಥ ಶೌರ್ಯ ವನ್ನು ಉಜ್ವಲಗೊಳಿಸುವುದೇ ನನ್ನ ಉದ್ದೇಶ. ಅಸಹಕಾರ ಎಂದರೆ ಆತ್ಮಬಲಿದಾನದ ಶೌರ್ಯ ಶಿಕ್ಷಣ. ನಿಮ್ಮ ದುರಾಡಳಿತದಿಂದ ದಿನ ದಿನವೂ ನಾವು ಗುಲಾಮಗಿರಿಯಲ್ಲಿ ಮುಳುಗುತ್ತಿದ್ದೇವೆಂದು ತಿಳಿದ ಮೇಲೂ ನಾವು ನಿಮ್ಮೊಡನೆ ಏಕೆ ಸಹಕರಿಸಬೇಕು? ಜನತೆ ನನ್ನ ಕರೆಗೆ ಕಿವಿಗೊಟ್ಟುದು ನನ್ನ ವೈಯಕ್ತಿಕ ಪ್ರಭಾವದಿಂದಲ್ಲ. ನನ್ನನ್ನು ನೀವು ಮರೆತು ಬಿಡಿ. ಆಲಿ ಸಹೋದರರನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲ. ನಾನು ಮುಸ್ಲಿಂ ವಿರೋಧಿ ಘೋಷಣೆಗಳಲ್ಲೇನಾದರೂ ತೊಡಗುವ ಹುಚ್ಚಿಗೆ ಬಲಿಯಾದರೆ ನನ್ನ ವ್ಯಕ್ತಿ ಪ್ರಭಾವ ಹಾರಿಹೋದೀತು. ಆಲಿ ಸಹೋದರರೇನಾದರೂ ಉನ್ಮಾದ ವಶರಾಗಿ ಹಿಂದೂ ವಿರೋಧಿ ಕೂಗನ್ನು ಮುಸ್ಲಿಮರೊಳಗೆ ಎತ್ತಲು ಹವಣಿಸಿದರೆ ಅವರ ಕೂಗಿನ ಮೋಹಕ ಮೋಡಿ ನಿರ್ನಾಮವಾದೀತು. ನಿಮ್ಮ ರಾಕ್ಷಸೀ ಪದಾಘಾತಕ್ಕೆ ಸಿಕ್ಕಿ ನರಳುತ್ತಿರುವ ರಾಷ್ಟ್ರದ ಮೂಕ ಸಂಕಟವನ್ನು ಮೊಳಗಿಸುವ ಧ್ವನಿಗೆ ನಾವು ನಿಮಿತ್ತರಾಗಿರುವುದರಿಂದ ನಮ್ಮ ಮಾತನ್ನು ಕೇಳಲು ಜನ ಲಕ್ಷಗಟ್ಟಲೆ ಕಿಕ್ಕಿರಿಯುತ್ತಾರೆ. ಅನ್ಯಥಾ ಅಲ್ಲ.

"ಆಲಿ ಸಹೋದರರು ನನ್ನಂತೆ ನಿಮ್ಮ ಮಿತ್ರರಾಗಿಯೇ ಇದ್ದವರು. ನಾನು ಇನ್ನೂ ಹಾಗೆಯೇ ಇದ್ದೇನೆ. ನಿಮ್ಮನ್ನು ದ್ವೇಷಿಸಲು ನನ್ನ ಧರ್ಮನಿಷ್ಠೆ ಅನುಮತಿಸದು. ನನ್ನ ಶಕ್ತಿಗೆ ನಿಲುಕಿದರೂ ನಿಮ್ಮ ಮೇಲೆ ನಾನೆಂದೂ ಕೈ ಮಾಡಲಾರೆ. ನನ್ನ ಆತ್ಮ ಸ್ಥೈರಣೆಯ ಶಕ್ತಿಯಿಂದಲೇ ನಿಮ್ಮನ್ನು ಗೆಲ್ಲಬಲ್ಲೆನೆಂದುಕೊಂಡಿದ್ದೇನೆ. ಆಲಿಸಹೋದರರು ಹಾಗಲ್ಲ. ತಮ್ಮ ಧರ್ಮವನ್ನೂ ತಮ್ಮ ರಾಷ್ಟ್ರವನ್ನೂ ರಕ್ಷಿಸಿಕೊಳ್ಳಲು ಅವರು ಕತ್ತಿ ಯನ್ನೂ ಹಿರಿದು ನಿಂತಾರು. ಆದರೆ ಇಂದು ನಾವಿಬ್ಬರೂ ಭಾರತದ ಸಮಗ್ರ ಜನತೆಯ ಪರವಾಗಿ ನಿಂತಿದ್ದೇವೆ. ಅವರ ಸಂಕಟವನ್ನು ಸಾರಿ ಹೇಳಲು ಪ್ರಯತ್ನಿಸಿದ್ದೇವೆ. ಅವರ ನೋವಿಗೆ ಪರಿಹಾರ ಮಾರ್ಗವನ್ನು ಶೋಧಿಸುತ್ತಿದ್ದೇವೆ.

"ಈ ರಾಷ್ಟ್ರೀಯ ಭಾವೋದ್ರೇಕದ ಮಹಾಪೂರವನ್ನು ಹತ್ತಿಕ್ಕಲು ಮಾರ್ಗ ವೊಂದನ್ನು ನೀವು ಹುಡುಕುತ್ತಿದ್ದೀರಿ. ಅದರ ಮೂಲ ಕಾರಣಗಳನ್ನು ನಿಮಗೆ ತಿಳಿಸುವ ಸಾಹಸವನ್ನು ನಾನು ಮಾಡುತ್ತೇನೆ. ನಿಮ್ಮ ಕೈಯಲ್ಲಿ ಶಕ್ತಿ ಇದೆ. ಭಾರತೀಯರಿಗೆ ಮಾಡಿರುವ ಅನ್ಯಾಯಗಳಿಗೆ ನೀವು ಪಶ್ಚಾತ್ತಾಪ ಪಡಬೇಕು. ಲಾಯಿಡ್ ಜಾರ್ಜರು ತಮ್ಮ ವಚನವನ್ನು ಪಾಲಿಸುವಂತೆ ನೀವು ಒತ್ತಾಯಪಡಿಸಬಹುದು. ಅವರ ವಾಗ್ದಾನವೂ ಅನೇಕ ನುಸುಳುದಾರಿಗಳಿಂದ ಕೂಡಿದೆ ಎಂದು ಹೇಳಬಲ್ಲೆ. ಈಗಿನ ವೈಸರಾಯ್ ನಿವೃತ್ತರಾಗಿ ಯೋಗ್ಯರಿಗೆ ಸ್ಥಳ ಮಾಡಿಕೊಡುವಂತೆ ನೀವು ಒತ್ತಾಯ ಮಾಡಬಹುದು. ಸರ್ ಮೈಕೆಲ್ ಓಡ್ವಯರ್, ಜನರಲ್ ಡೈಯರ್‌ಗಳ ಬಗ್ಗೆ ನಿಮ್ಮ ಒಲವನ್ನು ಬದಲಿಸ ಬಹುದು. ಅಧಿಕೃತವಾಗಿ ಚುನಾಯಿಸಲಾದ ಜನತಾ ನಾಯಕರನ್ನು ಬರಮಾಡಿ ಕೊಂಡು ಸಮಾಲೋಚಿಸುವಂತೆ ನಿಮ್ಮ ಸರ್ಕಾರಕ್ಕೆ ಕಡ್ಡಾಯ ಮಾಡಬಹುದು. ನಮ್ಮಲ್ಲಿನ ವಿವಿಧಾಭಿಪ್ರಾಯಗಳ ಪ್ರತಿನಿಧಿಗಳನ್ನೂ ಆಹ್ವಾನಿಸಿ ಭಾರತ ಜನತೆಯ

ಮಹತ್ವಾಕಾಂಕ್ಷೆಗಳಿಗನುಗುಣವಾಗಿ ಸ್ವರಾಜ್ಯವನ್ನು ಕೊಡುವ ರೀತಿನೀತಿಗಳನ್ನು ಚರ್ಚಿಸಿ ನಿರ್ಧರಿಸುವಂತೆ ನೀವು ನಿಮ್ಮ ಸರ್ಕಾರಕ್ಕೆ ಕಟ್ಟಪ್ಪಣೆ ಮಾಡಬಹುದು.

"ಆದರೆ ಪ್ರತಿಯೊಬ್ಬ ಭಾರತೀಯನನ್ನೂ ನಿಮ್ಮ ಸರಿಸಮಾನ ಸೋದರನೆಂದು ನೀವು ಪರಿಗಣಿಸಿದಲ್ಲದೆ ಈ ಕಾರ್ಯ ಸಾಧ್ಯವಾಗದು. ನಿಮ್ಮ ಅನುಗ್ರಹವನ್ನು ನಾನು ಯಾಚಿಸುತ್ತಿಲ್ಲ; ಸಂಭವಿಸಿರುವ ಒಂದು ಗಂಭೀರ ಸಮಸ್ಯೆಗೆ ಗೌರವಯುತ ಪರಿಹಾರ ವೊಂದನ್ನು ಸ್ನೇಹಿತನಂತೆ ಸೂಚಿಸುತ್ತೇನಷ್ಟೆ. ಮತ್ತೊಂದು ಮಾರ್ಗ ನಿಮಗೆ ತೆರೆದೆ ಇದೆ–ದಬ್ಬಾಳಿಕೆಯ ಕ್ರಮ. ಅದು ನಿಷ್ಫಲವಾಗುತ್ತದೆಂದು ನಾನು ಎಚ್ಚರಿಸುತ್ತೇನೆ. ಈ ಕ್ರಮವನ್ನಾಗಲೇ ನೀವು ಜಾರಿಗೆ ತಂದಿದ್ದೀರಿ. ಪಾಣಿಪತ್ತಿನ ಇಬ್ಬರು ವೀರರನ್ನು ಅವರ ಸ್ವತಂತ್ರಾಭಿಪ್ರಾಯ ಪ್ರಕಟನೆಗಾಗಿ ಸೆರೆಯಲ್ಲಿ ಹಾಕಲಾಗಿದೆ. ಮತ್ತೊಬ್ಬನನ್ನು ಲಾಹೋರಿನಲ್ಲಿ ಇದಕ್ಕಾಗಿಯೇ ವಿಚಾರಣೆಗೆ ಗುರಿಮಾಡಲಾಗಿದೆ. ಔಧ್‌ನಲ್ಲಿ ಒಬ್ಬರನ್ನು ಜೈಲಿಗೆ ಹಾಕಿ ಮತ್ತೊಬ್ಬನ ಬಗ್ಗೆ ತೀರ್ಪಿಗಾಗಿ ಕಾಯಲಾಗಿದೆ. ನಿಮ್ಮ ಮಧ್ಯೆ ಏನು ನಡೆಯುತ್ತಿದೆ ಎಂಬ ಅರಿವು ನಿಮಗಿರಬೇಕು. ಈ ಕ್ರೂರ ದಬ್ಬಾಳಿಕೆಯ ಮುನ್ಸೂಚನೆ ಯಿಂದಲೇ ನಮ್ಮ ಪ್ರಚಾರ ಕಾರ್ಯ ಪ್ರಾರಂಭವಾಗಿದೆ. ನೀವು ಭಾರತದ ಉಪ್ಪು ತಿಂದು ಬದುಕಿರುವ ಜನ. ಭಾರತೀಯರೊಂದಿಗೆ ಅವರ ಮಹತ್ಕಾರ್ಯದಲ್ಲಿ ಸಹಕರಿಸಿ ಹೋರಾಡಬೇಕೆಂದು ಸವಿನಯವಾಗಿ ನಿಮ್ಮನ್ನು ಆಹ್ವಾನಿಸುತ್ತೇನೆ. ಭಾರತದ ಆಕಾಂಕ್ಷೆ ಗಳನ್ನು ನುಚ್ಚುನೂರಾಗಿಸುವ ಪ್ರಯತ್ನ ಮಾಡುವುದು ರಾಷ್ಟ್ರಕ್ಕೆ ದ್ರೋಹ ಮಾಡಿ ದಂತಾಗುತ್ತದೆ."

ಗಾಂಧಿಯವರ ಚಟುವಟಿಕೆಗಳಿಂದ ಸರ್ಕಾರ ಗಾಬರಿಗೊಂಡಿತು. "ಈ ವರೆವಿಗೆ ಚಳುವಳಿಯ ನಾಯಕರನ್ನು ಅಂಕೆಗೊಳಗುಮಾಡಿಲ್ಲವಾದರೂ ಮುಂದೆ ಕಾನೂನು ಭಂಗ ಮಾಡಿದಲ್ಲಿ ದಂಗೆಗಳನ್ನು ಪ್ರಚೋದಿಸಿದಲ್ಲಿ ಅಥವಾ ಜನತೆಯನ್ನು ಹಿಂಸಾಚಾರ ಗಳಿಗೆ ಉದ್ರೇಕಗೊಳಿಸಿದಲ್ಲಿ ಅವರನ್ನು ಶಿಕ್ಷಿಸಲಾಗುವುದು"–ಎಂದು ಸರ್ಕಾರ ಒಂದು ಬೆದರಿಕೆಯ ಆಜ್ಞೆ ಹೊರಡಿಸಿತು.

ಈ ಪ್ರಕಟನೆಯೇ ಚಳುವಳಿಯ ಮೊದಲ ಗೆಲುವು ಎಂದು ಗಾಂಧೀಜಿ ಅದನ್ನು ಸ್ವಾಗತಿಸಿದರು. ತಾವು ದಸ್ತಗಿರಿಯಾದರೆ ಜನರೇನು ಮಾಡಬೇಕೆಂದು ಸೂಚನೆ ಗಳನ್ನು ಕೊಟ್ಟರು. ನವೆಂಬರಿನ 'ಯಂಗ್–ಇಂಡಿಯಾ. ಪತ್ರಿಕೆಯಲ್ಲಿ ಹೀಗೆ ಬರೆದರು:

"ಜನ ಹುಚ್ಚು ಪ್ರೇಮದಿಂದಲೇ ತಪ್ಪುದಾರಿ ಹಿಡಿದಲ್ಲಿ ಭಾರತದ ಗತಿಯೇನು? ಅಂಥ ಸಂದರ್ಭದಲ್ಲಿ ನನ್ನ ಪಾಡು ಏನಾದೀತು?"

"ಸರ್ಕಾರ ಕ್ರೌರ್ಯದಿಂದ ರಕ್ತದ ಹೊಳೆ ಹರಿಸಿದರೂ ನನಗೆ ಭಯವಿಲ್ಲ; ಆದರೆ ನನಗಾಗಿಯಾಗಲಿ ನನ್ನ ಹೆಸರಿನಿಂದಾಗಲಿ ಸರ್ಕಾರವನ್ನು ತುಚ್ಛವಾಗಿ ಬೈದರೂ ನನಗೆ ತೀವ್ರ ಸಂಕಟವಾಗುತ್ತದೆ. ನನ್ನ ದಸ್ತಗಿರಿಯಾದಾಗ ಜನ ತಾಳ್ಮೆಗೆಟ್ಟು ವರ್ತಿಸಿದರೆ ಅದಕ್ಕಿಂತ ನನ್ನ ಅವಹೇಳನ ಬೇರಿಲ್ಲ. ಕೇವಲ ನನ್ನೊಬ್ಬನನ್ನೇ ಅವಲಂಬಿಸಿದರೆ ರಾಷ್ಟ್ರದ ಪ್ರಗತಿ ಆಗದು. ನಾನು ಸಲಹೆ ಮಾಡಿರುವ ಮಾರ್ಗವನ್ನು ತಿಳಿದು

ಅನುಸರಿಸಿದರೆ ಮಾತ್ರ ಪ್ರಗತಿ ಸಾಧ್ಯ. ಜನ ಪೂರ್ಣಸಂಯಮಿಗಳಾಗಿ ವರ್ತಿಸಬೇಕು. ನನ್ನ ದಸ್ತಗಿರಿಯಾದಂದು ಸಂತೋಷದಿಂದ ನಲಿಯಬೇಕು. ಇದು ನನ್ನ ಇಚ್ಛೆ. ಈಗಿನ ಕೆಲವು ದೌರ್ಬಲ್ಯಗಳೂ ಆ ಸಮಯಕ್ಕೆ ಮಾಯವಾಗಬೇಕು.

"ನನ್ನನ್ನು ದಸ್ತಗಿರಿ ಮಾಡುವುದರಲ್ಲಿ ಸರ್ಕಾರದ ಉದ್ದೇಶವೇನು? ಅವರೇನು ನನ್ನ ಶತ್ರುಗಳಲ್ಲ; ನನಗೆ ಅವರಲ್ಲಿ ಕಿಂಚಿತ್ತೂ ವೈರವಿಲ್ಲ. ಆದರೆ ಈ ಎಲ್ಲ ಪ್ರತಿಭಟನೆಯ ಕೇಂದ್ರ ನಾನು ಎಂದು ಅವರು ನಂಬಿದ್ದಾರೆ. ನಾನೊಬ್ಬ ತೊಲಗಿ ಬಿಟ್ಟರೆ ಸರ್ಕಾರವೂ ಪ್ರಜೆಗಳೂ ಶಾಂತಿಯಿಂದಿರಬಹುದೆಂದು ಅವರ ಎಣಿಕೆ. ಜನ ಕೇವಲ ಕುರುಡು ನಂಬಿಕೆಯಿಂದ ನನ್ನನ್ನು ಹಿಂಬಾಲಿಸುತ್ತಾರೆ, ಎಂದವರ ನಂಬಿಕೆ. ಸರ್ಕಾರವಷ್ಟೇ ಅಲ್ಲ, ನಮ್ಮ ನಾಯಕರಲ್ಲಿ ಕೆಲವರೂ ಹೀಗೆ ಯೋಚಿಸುತ್ತಾರೆ. ಸರ್ಕಾರ ತನ್ನ ಪ್ರಜಾ ಕೋಟಿಯನ್ನು ಪರೀಕ್ಷಿಸುವುದಾದರೂ ಹೇಗೆ? ನನ್ನ ಮಾತುಗಳಿಗೆ ಜನ ಮರುಳಾಗಿ ಬಿಟ್ಟಿದ್ದಾರೋ ಅಥವಾ ವಿವೇಕದಿಂದ ತಿಳಿದು ನಡೆಯುತ್ತಾರೋ ಎಂದು ಅವರಿಗೆ ತಿಳಿಯುವ ಬಗೆ ಹೇಗೆ? ನನ್ನನ್ನು ದಸ್ತಗಿರಿ ಮಾಡುವುದೊಂದೇ ಮಾರ್ಗ. ಬೇರೊಂದು ಮಾರ್ಗವೂ ಉಂಟು. ನಾನು ಈ ಪ್ರತಿಭಟನೆಯ ಸಲಹೆ ನೀಡಲು ಕಾರಣವಾಗಿರುವ ತಮ್ಮ ತಪ್ಪುಗಳನ್ನು ತಿಳಿದು ಸರಿಪಡಿಸಿಕೊಳ್ಳುವುದು. ಅಧಿಕಾರದ ಅಮಲಿನಲ್ಲಿ ಅವರಿಗೆ ತಪ್ಪೇ ಕಾಣಿಸದು. ಕಂಡರೂ ಒಪ್ಪಿಕೊಳ್ಳುವುದು ಇನ್ನೂ ಕಠಿಣ. ಆದ್ದರಿಂದ ಜನರನ್ನು ಪರೀಕ್ಷೆಗೆ ಗುರಿಮಾಡುವುದೇ ಅವರಿಗೆ ಸಾಧ್ಯವಾದ ಮಾರ್ಗ. ಭಯೋತ್ಪಾದಕ ದಬ್ಬಾಳಿಕೆಯಿಂದ ಜನರು ಧೃತಿಗೆಟ್ಟು ಶರಣಾಗಿ ಬಿಟ್ಟರೆ ಪಂಜಾಬದ ಹಾಗೂ ಖಿಲಾಫತ್ ಅನ್ಯಾಯಗಳಿಗೆ ಅವರು ಪಾತ್ರರೆಂದೇ ಹೇಳಬೇಕಾದೀತು.

"ಪ್ರತಿಯಾಗಿ ಹಿಂಸಾತ್ಮಕ ಪ್ರತಿಭಟನೆಯಲ್ಲಿ ತೊಡಗಿದರೆ ಬಹು ಸುಲಭವಾಗಿ ಸರ್ಕಾರದ ಕೈಗೆ ಸಿಕ್ಕಿಬಿಡುತ್ತಾರೆ ಜನ. ಸರ್ಕಾರದ ವಿಮಾನಗಳು ಬಾಂಬು ಸುರಿಸುತ್ತವೆ. ಡೈಯರ್ ಅಂಥವರಿಂದ ಗುಂಡಿನ ಸುರಿಮಳೆಯಾಗುತ್ತದೆ. ಸ್ಮಿತ್‌ನಂಥವರು ಮಹಿಳೆಯರ ಮುಸುಗನ್ನೂ ಓರೆ ಮಾಡುತ್ತಾರೆ. ಮಿಕ್ಕ ಸಣ್ಣಪುಟ್ಟ ಅಧಿಕಾರಿಗಳು ಜನರನ್ನು ಬಲಾತ್ಕಾರವಾಗಿ ಮೂಗುಜ್ಜಿಸುತ್ತಾರೆ; ತೆವಳಿಸುತ್ತಾರೆ; ಚಾವಟಿಯಿಂದ ಹೊಡೆಯುತ್ತಾರೆ. ಹೀಗೆ ಅವ್ಯಾಹತ ಹಿಂಸೆ–ಪ್ರತಿಹಿಂಸೆಗಳ ಆಘಾತಕ್ಕೆ ಗುರಿಯಾಗಿ ಬಿಡುತ್ತೇವೆ. ಇವೆರಡೂ ನಮಗೆ ದೌರ್ಭಾಗ್ಯಕರ ದುಷ್ಪರಿಣಾಮಗಳೇ. ಅವು ಸ್ವರಾಜ್ಯ ಸಾಧಿಸಲಾರವು. ಕೇವಲ ಪಶುಬಲದಿಂದ ಇತರ ರಾಷ್ಟ್ರಗಳು ಸರ್ಕಾರಗಳನ್ನುರುಳಿಸಿದುದೂ ಉಂಟು. ಆದರೆ ಭಾರತ ಅಂಥ ಪಶುಬಲದಿಂದ ಸ್ವರಾಜ್ಯ ಪಡೆಯಲಾರದು ಎಂದು ನಾನು ಸ್ಪಷ್ಟವಾಗಿ ತೋರಿಸಿದ್ದೇನೆ. ಹಾಗಾದರೆ ನನ್ನ ದಸ್ತಗಿರಿಯಾದಾಗ ಜನ ಏನು ಮಾಡಬೇಕು? ಉತ್ತರ ಅತ್ಯಂತ ಸರಳವಾಗಿಯೇ ಇದೆ."

ಶಾಂತಿ ಮತ್ತು ಸ್ಥೈರಣೆಗಳನ್ನು ಕಾಪಾಡಿಕೊಂಡು ಸಂಪೂರ್ಣ ಅಸಹಕಾರವನ್ನು ಜಾರಿಗೆ ತರಬೇಕೆಂದೂ ಪೂರ್ಣ ಸ್ವದೇಶಿಯ ರಚನಾತ್ಮಕ ಕಾರ್ಯಕ್ರಮದಲ್ಲಿ ತನ್ಮಯರಾಗಬೇಕೆಂದೂ ಗಾಂಧೀಜಿ ಜನತೆಗೆ ಮನವಿ ಮಾಡಿದರು. ಈ ಸೂಚನೆಗನುಗುಣವಾಗಿ

ತಾವು ಮೊದಲು ಸಂಕಲ್ಪಿಸಿದರು. ಅರ್ಧ ಗಂಟೆಯ ಸೂತ್ರಯಜ್ಞ ಮಾಡದೆ ಊಟ ಮಾಡುವುದಿಲ್ಲ ಎಂದು ಶಪಥ ಮಾಡಿದರು.

"ಈ ಪರದೇಶಿ ವಸ್ತು ಬಹಿಷ್ಕಾರ ಮತ್ತು ಸ್ವದೇಶಿ ವ್ರತಗಳನ್ನು ಧೃಡ ಸಂಕಲ್ಪ ದಿಂದ ಎಲ್ಲರೂ ಪಾಲಿಸುವುದಾದರೆ ಸ್ವರಾಜ್ಯ ಬರಲು ಒಂದು ವರ್ಷವೂ ಬೇಕಾಗದು. ಈ ಮಟ್ಟದ ಶಕ್ತಿ ನಮಗೆ ಲಭ್ಯವಾದರೆ ಸ್ವರಾಜ್ಯ ಬಂದಂತೆಯೇ ಸರಿ" ಎಂದರು.

"ರಾಷ್ಟ್ರ ಸಮ್ಮತಿಯ ಪೂರ್ಣ ಭರವಸೆಯಿಂದ ನಾನಾಗ ಸ್ವತಂತ್ರನಾಗುತ್ತೇನೆ. ಅದೇ ನನಗೆ ಹರ್ಷದಾಯಕ. ಈಗಿನ ನನ್ನ ಸ್ವಾತಂತ್ರ್ಯ ಸೆರೆಮನೆಯಂತೆ ನನಗೆ ತೋರು ತ್ತದೆ.

"ಹಿಂಸಾಚಾರವೆಸಗಿ ನನ್ನನ್ನು ಬಿಡುಗಡೆ ಮಾಡಿಸುವುದು ಸ್ವರಾಜ್ಯ ಸಾಧನೆಗೆ ನನ್ನನ್ನೇ ಅವಲಂಬಿಸುವುದು ಜನತೆಯ ದೌರ್ಬಲ್ಯದ ಲಕ್ಷಣ. ನಾನಾಗಲೀ ಬೇರೊಬ್ಬ ನಾಗಲೀ ಸ್ವರಾಜ್ಯವನ್ನು ತಂದುಕೊಡಲಾರೆವು. ತನ್ನ ಸ್ವಸಾಮರ್ಥ್ಯದಿಂದಲೇ ರಾಷ್ಟ್ರ ತನ್ನ ಸ್ವಾತಂತ್ರ್ಯವನ್ನು ಗಳಿಸುತ್ತದೆ.

"ಸರ್ಕಾರವನ್ನು ಸುಮ್ಮನೆ ಹಳಿಯುವುದು ತರವಲ್ಲ. ನಮ್ಮ ಅರ್ಹತೆಯ ಪ್ರತಿ ಬಿಂಬವೇ ನಮ್ಮ ಸರ್ಕಾರ. ನಾವು ಉನ್ನತ ಮಟ್ಟಕ್ಕೇರಿದರೆ ಸರ್ಕಾರವೂ ಏರುತ್ತದೆ. ಆಗಲೇ ಸ್ವರಾಜ್ಯ ಪ್ರಾಪ್ತಿ. ರಾಷ್ಟ್ರೋನ್ನತಿಯ ಸಂಕಲ್ಪವೇ ಅಸಹಕಾರದ ತಿರುಳು. ನನ್ನ ದಸ್ತಗಿರಿಯಾದೊಡನೆಯೇ ಈ ದೇಶ ಸಂಕಲ್ಪಿತ ಪಥವನ್ನು ಬಿಟ್ಟು ಸರ್ಕಾರ ದೊಡನೆ ಸಹಕರಿಸಲು ಪ್ರಾರಂಭಿಸುತ್ತದೆಯೇ? ಜನ ಹುಚ್ಚಾಗಿ ಹಿಂಸೆಯಲ್ಲಿ ತೊಡಗಿದ ಪರಿಣಾಮವಾಗಿ ನೆಲದಲ್ಲಿ ತೆವಳುವಂತಾದರೆ, ಮೂಗನ್ನು ಮಣ್ಣಿಗೆ ಉಜ್ಜುವಂತಾದರೆ, ಹದಿನೆಂಟು ಮೈಲಿ ಕಡ್ಡಾಯವಾಗಿ ನಡೆದು ಬ್ರಿಟಿಷ್ ಧ್ವಜಕ್ಕೆ ವಂದನೆ ಮಾಡಬೇಕಾದರೆ ಅದು ಸಾಮ್ರಾಜ್ಯದೊಡನೆ ಸಹಕರಿಸಿದಂತೆಯೇ ಸರಿ. ಈ ಅಸಹ್ಯ ಅವಮಾನಕ್ಕಿಂತ ಸಾಯುವುದೇ ಮೇಲು" ಎಂದು ಬರೆದರು ಗಾಂಧೀಜಿ.

ಡಿಸೆಂಬರ್ ೨೬ರಂದು ನಾಗಪುರದಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿತು. ಶ್ರೀ ವಿಜಯರಾಘವಾಚಾರಿ ಅಧ್ಯಕ್ಷರಾಗಿದ್ದರು. ಹಲವು ಮುಖ್ಯ ವಿಷಯಗಳಲ್ಲಿ ಅವರು ಗಾಂಧೀಜಿಯ ಅಭಿಪ್ರಾಯಗಳನ್ನು ಅನುಮೋದಿಸಲಿಲ್ಲ. ಅಸಹಕಾರದ ಬಗ್ಗೆ ಕಲ್ಕತ್ತಾ ದಲ್ಲಾದ ನಿರ್ಣಯವನ್ನು ಅವರು ಸೂಚ್ಯವಾಗಿ ಆಕ್ಷೇಪಿಸಿದರು.

ಬಂಗಾಳದಿಂದ ದಾಸರ ನೇತೃತ್ವದಲ್ಲಿ ಸದಸ್ಯರ ಒಂದು ದೊಡ್ಡ ತಂಡ ಗಾಂಧೀಜಿ ಯನ್ನು ವಿರೋಧಿಸಲು ಸಿದ್ಧವಾಗಿ ಬಂದಿತ್ತು. ಖಪರ್ದೆ ಮತ್ತು ಕೇಲ್ಕರರ ನಾಯಕತ್ವ ದಲ್ಲಿ ಮಹಾರಾಷ್ಟ್ರೀಯರ ವಿರೋಧವೂ ಪ್ರಬಲವಾಗಿಯೇ ಇತ್ತು. ಆದರೆ ಅಧ್ಯಕ್ಷರ ಅಭಿಪ್ರಾಯ ಏನೇ ಆಗಿದ್ದರೂ ಜಿನ್ನಾ ಸಾಹೇಬರ ನೇತೃತ್ವದಲ್ಲಿ ಹಲವು ನಾಯಕರು ಭವಿಷ್ಯದ ಬಗ್ಗೆ ಭಯ ವ್ಯಕ್ತಮಾಡಿದರೂ, ಅಲ್ಲಿ ನೆರೆದ ಹದಿನಾಲ್ಕು ಸಾವಿರ ಪ್ರತಿನಿಧಿ ಗಳು ಆ ವೇಳೆಗಾಗಲೇ ದೃಢ ನಿಶ್ಚಯ ಮಾಡಿಬಿಟ್ಟಿದ್ದರು. ಕಾಂಗ್ರೆಸ್ಸಿನ ಮುನ್ನಡೆ ಯಲ್ಲಿ ಯಾವುದೇ ವಿಧದ ನಿಧಾನ ಸೂತ್ರವನ್ನೂ ಅವರು ಒಪ್ಪುವಂತಿರಲಿಲ್ಲ. ಕಲ್ಕತ್ತಾ

ಅಧಿವೇಶನದಲ್ಲಾದ ಹಲವು ಅಡೆತಡೆಗಳನ್ನು ತೆಗೆದು ಬಿಡಬೇಕೆಂದೇ ಒತ್ತಾಯ ಮಾಡಿದರು. ಅಸಹಕಾರ ನಿರ್ಣಯ "ವ್ಯಾಪಕವಾಗಿ ಖಚಿತವಾಗಿ ಪರಿಣಾಮಕಾರಿಯಾಗಿ" ಇರಬೇಕೆಂದರು ಗಾಂಧೀಜಿ. ಕಲ್ಕತ್ತಾದಲ್ಲಿ ಅಸಹಕಾರ ತತ್ವವನ್ನು ಅಂಗೀಕರಿಸಿ ಕಾರ್ಯಕ್ರಮ ರೂಪಿಸಲು ಮೊದಲಿಟ್ಟರೂ ಅರ್ಧದಲ್ಲಿ ಹಠಾತ್ತನೆ ಆ ನಿರ್ಣಯ ನಿಂತು ಹೋಗಿತ್ತು. ನಾಗಪುರದಲ್ಲಿ ಗಾಂಧೀಜಿ ಈ ನಿರ್ಣಯಕ್ಕೆ ಖಚಿತ ರೂಪ ಕೊಡಲು ಸಂಕಲ್ಪಿಸಿದರು. ತಮ್ಮ ಸಮಗ್ರ ಕಾರ್ಯಕ್ರಮಕ್ಕೆ ಕಲ್ಕತ್ತಾದಲ್ಲಿ ಮೊದಲ ಹೆಜ್ಜೆಗೇ ವಿರೋಧಿಸಿದ್ದ ಸದಸ್ಯರ ಬೆಂಬಲವನ್ನೂ ಗಳಿಸಿಬಿಟ್ಟರು.

ನ್ಯಾಯಾಲಯ ಬಹಿಷ್ಕಾರ, ವಕೀಲರ ವೃತ್ತಿತ್ಯಾಗಗಳ ಕಾರ್ಯಕ್ರಮಕ್ಕೆ ಪ್ರಬಲವಾದ ವಿರೋಧವಿತ್ತು. ಗಾಂಧೀಜಿ ಜಗ್ಗಲಿಲ್ಲ. ಕಲ್ಕತ್ತಾ ನಿರ್ಣಯವನ್ನು ಪುನಃ ದೃಢೀಕರಿಸಿ ರಾಷ್ಟ್ರದ ಈ ಕರೆಗೆ ವಕೀಲರು ಕಿವಿಗೊಡದೇ ಇರುವುದನ್ನು ಕಾಂಗ್ರೆಸ್ ಮೆಚ್ಚುವುದಿಲ್ಲವೆಂದೂ ಈ ಕಾರ್ಯವನ್ನು ತ್ವರಿತಗೊಳಿಸಲು ಪ್ರಯತ್ನ ಕೈಗೊಳ್ಳಬೇಕೆಂದೂ ನಿರ್ಣಯ ಸಾರಿತು. ಶಿಕ್ಷಣ ಸಂಸ್ಥೆಗಳ ಬಹಿಷ್ಕಾರಕ್ಕೆ ಲಾಲಾ ಲಜಪತ್‌ರಾಯರು ಸೂಚಿಸಿದ ಸಣ್ಣ ತಿದ್ದುಪಡಿಯನ್ನು ಗಾಂಧೀಜಿ ತಕ್ಷಣ ಅಂಗೀಕರಿಸಿದರು. ದಾಸರೂ ಕೆಲವು ಸೂಚನೆಗಳನ್ನಿತ್ತರು. ಆ ನಂತರ ಅಸಹಕಾರ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು.

ಈ ಮುನ್ನುಡಿಯೊಡನೆ ಮೂಲ ನಿರ್ಣಯವನ್ನು ಸ್ಥಿರೀಕರಿಸಲಾಯಿತು :

"ಕಾಂಗ್ರೆಸ್ಸಿನ ಅಭಿಪ್ರಾಯದಲ್ಲಿ ಈ ಸರ್ಕಾರ ವಿಶ್ವಾಸವನ್ನು ಕಳೆದುಕೊಂಡಿದೆ. ಭಾರತದ ಜನತೆ ಸ್ವರಾಜ್ಯ ಸ್ಥಾಪನೆಗೆ ಸಂಕಲ್ಪ ಮಾಡಿದ್ದಾರೆ. ತಮ್ಮ ಹಕ್ಕು, ಸ್ವಾತಂತ್ರ್ಯಗಳನ್ನು ಸ್ಥಾಪಿಸಿಕೊಳ್ಳುವುದಕ್ಕೂ, ತಮಗಾದ ಘಾತಕ ಅನ್ಯಾಯಗಳಿಗೆ ಅದರಲ್ಲಿ ವಿಶೇಷವಾಗಿ ಪಂಜಾಬ ಮತ್ತು ಖಿಲಾಫತ್ ಘಟನೆಗಳಲ್ಲಾದ ಅನ್ಯಾಯಗಳಿಗೆ ಪರಿಹಾರ ಪಡೆಯುವುದಕ್ಕೂ ಈ ವರೆವಿಗೆ ಅನುಸರಿಸಿದ ಮಾರ್ಗಗಳು ವಿಫಲಗೊಂಡಿವೆ. ಆದ್ದರಿಂದ ಈಗ ಅಹಿಂಸಾತ್ಮಕ ಅಸಹಕಾರ ನಿರ್ಣಯವನ್ನು ಪುನಃ ಸ್ಥಿರೀಕರಿಸುತ್ತಾ ಈಗಾಗಲೇ ವಿಶದೀಕರಿಸುವ ಕಾರ್ಯಕ್ರಮದಂತೆ, ಸ್ವಯಂಪ್ರೇರಿತ ಸಹಕಾರಗಳನ್ನೆಲ್ಲಾ ಹಿಂತೆಗೆದುಕೊಳ್ಳುವುದರಿಂದ ಹಿಡಿದು ಕರ ನಿರಾಕರಣೆಯ ಹಂತದವರೆಗೂ ಎಲ್ಲ ಕ್ರಮಗಳನ್ನೂ, ಒಟ್ಟಿಗೆಯಾಗಿ ಆಗಲೀ ಒಂದೊಂದಾಗಿ ಆಗಲೀ ಸೂಕ್ತ ಸಮಯಕ್ಕೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಥವಾ ಅಖಿಲ ಭಾರತ ಕಾಂಗ್ರೆಸ್ ಸಮಿತಿ ನಿರ್ಣಯಿಸಿದಂತೆ ಕೈಗೊಳ್ಳಬೇಕೆಂದು ಘೋಷಿಸುತ್ತದೆ. ಈ ಮಧ್ಯದಲ್ಲಿ ದೇಶವನ್ನು ಈ ಹೋರಾಟಕ್ಕೆ ಸಿದ್ಧಮಾಡಲು ಎಲ್ಲ ಪರಿಣಾಮಕಾರಿ ಕ್ರಮಗಳನ್ನೂ ಕೈಗೊಳ್ಳಬೇಕು."

ಕೆನ್ನಾಟಿನ ಡ್ಯೂಕರು ಭಾರತಕ್ಕೆ ಬಂದ ಕಾಲಕ್ಕೆ ಏರ್ಪಾಡಾಗುವ ಎಲ್ಲ ಗೌರವ ಸಮಾರಂಭಗಳನ್ನೂ ಬಹಿಷ್ಕರಿಸಬೇಕೆಂದು ಜನರನ್ನು ಪ್ರಾರ್ಥಿಸುವ ಇನ್ನೊಂದು ನಿರ್ಣಯವೂ ಆಯಿತು. ಕಾಂಗ್ರೆಸ್ಸಿನ ಪ್ರಧಾನ ಗುರಿಯನ್ನು ಕುರಿತು ಚಕಮಕಿಯ ಚರ್ಚೆಯಾಯಿತು. ಗಾಂಧೀಜಿ ಮಂಡಿಸಿದ್ದ ನಿಬಂಧನೆಗಳಲ್ಲಿ "ಸಾಧ್ಯವಾದರೆ ಬ್ರಿಟಿಷ್

ಚಕ್ರಾಧಿಪತ್ಯದ ಒಳಗೆ ಅಥವಾ ಅಗತ್ಯವಾದರೆ ಅದನ್ನು ಬಿಟ್ಟು ಸ್ವರಾಜ್ಯ ಸ್ಥಾಪಿಸಿಕೊಳ್ಳುವುದೇ ಕಾಂಗ್ರೆಸ್ಸಿನ ಧ್ಯೇಯ" ಎಂದು ಹೇಳಿದ್ದರು. ಮಾಳವೀಯ ಮತ್ತು ಜಿನ್ನಾರವರ ನೇತೃತ್ವದಲ್ಲಿ ಒಂದು ಗುಂಪು ಚಕ್ರಾಧಿಪತ್ಯದೊಳಗೇ ಇರಬೇಕೆಂದು ಇಚ್ಛಿಸಿತು. ಈ ದೃಷ್ಟಿಗೆ ಹೆಚ್ಚು ಬೆಂಬಲವಿರಲಿಲ್ಲ. ಸಾಧನೆಯ ಮಾರ್ಗದಲ್ಲೂ ಭಿನ್ನಾಭಿಪ್ರಾಯವಿತ್ತು. "ಶಾಂತಿಯುತ ನ್ಯಾಯಬದ್ಧ ಮಾರ್ಗಗಳಲ್ಲಿ ಸ್ವರಾಜ್ಯ ಸಾಧಿಸುವುದು" ಎಂಬ ಮಾತು ತರ್ಕಬದ್ಧವೂ ಅಲ್ಲ, ರಾಜಕೀಯ ತಜ್ಞತೆಯೂ ಅಲ್ಲ ಎಂದು ಜಿನ್ನಾ ವಿರೋಧಿಸಿದರು. ರಕ್ತಪಾತವಿಲ್ಲದೆ ಭಾರತ ಎಂದಿಗೂ ಸ್ವತಂತ್ರವಾಗಲಾರದು ಎಂದೇ ಅವರು ವಾದಿಸಿದರು. ಈಗ ರಾಷ್ಟ್ರಕ್ಕೆ ಸಶಸ್ತ್ರ ಮಾರ್ಗವನ್ನು ಕೈಗೊಳ್ಳುವ ಶಕ್ತಿಯಾಗಲೀ ದೃಢಸಂಕಲ್ಪದ ಸಾಮರ್ಥ್ಯವಾಗಲೀ ಇಲ್ಲದೇ ಇರುವುದರಿಂದ ಸಂಪೂರ್ಣ ಸ್ವರಾಜ್ಯದ ಬೇಡಿಕೆ ಆತುರದ ಆಸೆಯಾದೀತು ಎಂದು ಹೇಳಿದರು. ಬ್ರಿಟಿಷ್ ಸಾಮ್ರಾಜ್ಯದೊಡನೆ ಬಾಂಧವ್ಯ ಇಟ್ಟುಕೊಳ್ಳುವುದಕ್ಕೂ ಬಿಡುವುದಕ್ಕೂ ಸಮಾನ ಅವಕಾಶವಿರುವಂತೆ ಈ ಗುರಿಯನ್ನು ಹಿಗ್ಗಿಸಬಹುದು ಎನ್ನುವ ಸೂಚನೆಯನ್ನು ಅವರೊಪ್ಪಲಿಲ್ಲ. "ಈ ನಿರ್ಣಯವನ್ನೊಪ್ಪಿದ ಮೇಲೆ, ಒಂದೇ ವೇದಿಕೆಯ ಮೇಲೆ ನಿಂತು ನಾವೆರಡು ಧೋರಣೆಗಳನ್ನು ಘೋಷಿಸುವುದು ಹೇಗೆ ಸಾಧ್ಯ?" ಎಂದು ಕೇಳಿದರು. ಈ ಧೋರಣೆಯನ್ನೇ ನಿಲ್ಲಿಸಬೇಕೆಂದು ಜಿನ್ನಾ ಗಾಂಧೀಜಿಯನ್ನು ಪ್ರಾರ್ಥಿಸಿದರು. ಈ ಧ್ಯೇಯ ಘೋಷಣೆಯ ಕೂಲಂಕಷ ಚರ್ಚೆಗೆ ಒಂದು ಇಡೀ ದಿನ ಮೀಸಲಾಯಿತು. ಕೊನೆಯ ದಿನ ಕರಡು ನಿಯಮಾವಳಿಯ ಮಿಕ್ಕ ಮೂವತ್ತೆರಡು ನಿಯಮಗಳನ್ನೂ ಸಭೆ ಚರ್ಚಿಸಿತು. ಮಹಮ್ಮದಾಲಿಯವರು ಇವುಗಳನ್ನು ಓದಿ ಭಾಷಾಂತರಿಸಿದರು. ಎಂಟನೆಯ ನಿಯಮದಂತೆ ಭಾರತೀಯ ಸಂಸ್ಥಾನಗಳ ಆಂತರಿಕ ವ್ಯವಹಾರಗಳಲ್ಲಿ ಕಾಂಗ್ರೆಸ್ ಕೈ ಹಾಕಬಾರದೆಂಬ ವಿಷಯ ತೀವ್ರ ಚರ್ಚೆಗೆ ಆಸ್ಪದ ಕೊಟ್ಟಿತು. ಹಲವರು ಇದನ್ನು ಒಪ್ಪಲಿಲ್ಲ. ಮತ್ತೊಂದು ನಿರ್ಣಯದಂತೆ ಈ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರಗಳನ್ನು ಸ್ಥಾಪಿಸುವುದು ಸೂಕ್ತವೆಂದು ಸೂಚನೆ ಮಾಡಿದ್ದುದನ್ನು ಗಾಂಧೀಜಿ ಎತ್ತಿತೋರಿಸಿ ಸಮಾಧಾನ ಕೊಟ್ಟರು. ಈ ಸಂಸ್ಥಾನದ ಪ್ರಜೆಗಳ ಆಶೋತ್ತರಗಳನ್ನು ಪ್ರತಿಬಿಂಬಿಸಲು ಕಾಂಗ್ರೆಸ್‌ಗೆ ಯಾವ ಅಭ್ಯಂತರವೂ ಇರುವುದಿಲ್ಲವೆಂದೂ ಆದರೆ ನೇರವಾದ ಪ್ರತಿಭಟನಾ ಕ್ರಮಗಳನ್ನು ಈ ಸಂಸ್ಥಾನಗಳಲ್ಲಿ ತಾನೇ ಅಧಿಕೃತವಾಗಿ ಕೈಗೊಳ್ಳುವುದು ಕಾಂಗ್ರೆಸ್ಸಿಗೆ ಸಾಧ್ಯವಾಗದೆಂದೂ ಅವರು ವಿವರಿಸಿದರು.

ಕಾಂಗ್ರೆಸ್ಸಿನ ಮುಖ್ಯೋದ್ದೇಶವನ್ನು ಕುರಿತು ಮೊದಲಿನ ನಿರ್ಣಯದಲ್ಲೇ ಹೇಳಲಾಗಿತ್ತು. ಈ ಉದ್ದೇಶವೇ ಮುಂದೆ ಕಾಂಗ್ರೆಸ್ಸಿನ ಪರಮ ಧ್ಯೇಯವೆಂದು ಘೋಷಿಸಲ್ಪಟ್ಟಿತು. ಗಾಂಧೀಜಿಯ ತಿದ್ದುಪಡಿ ಅಂಗೀಕೃತವಾದಾಗ ಅದರಲ್ಲಿ "ಭಾರತೀಯರು ಎಲ್ಲ ರೀತಿಯ ನ್ಯಾಯಬದ್ಧ ಶಾಂತಿಯುತ ಮಾರ್ಗಗಳನ್ನನುಸರಿಸಿ ಸ್ವರಾಜ್ಯ ಸಾಧಿಸುವುದೇ ಕಾಂಗ್ರೆಸ್ಸಿನ ಮುಖ್ಯ ಧ್ಯೇಯ" ಎಂದು ಸ್ಪಷ್ಟವಾಗಿ ಹೇಳಲಾಯಿತು.

ಇಲ್ಲಿಂದಾಚೆಗೆ ಕಾಂಗ್ರೆಸ್ ತನ್ನ ಅಸ್ಪಷ್ಟ ಸ್ವರೂಪವನ್ನು ತೊರೆದು ಆಧುನಿಕವಾದ ವ್ಯವಸ್ಥಿತ ರಾಜಕೀಯ ಪಕ್ಷವಾಯಿತು. ಹದಿನೈದು ವರಿಷ್ಠರ ಉನ್ನತ ಕಾರ್ಯಕಾರೀ ಮಂಡಲದಿಂದ ಹಿಡಿದು ಕಡೆಯ ಗ್ರಾಮದ ಘಟಕದ ವರೆಗೂ ಕವಲೊಡೆದು ನಿಂತಿತು.' ಅದರ ನಿಯಮಾವಳಿಯಂತೆ ರಾಷ್ಟ್ರದ ವಿಂಗಡಣೆಯನ್ನು ಭಾಷಾವಾರು ಆಧಾರದ ಮೇಲೆ ಮಾಡಲಾಯಿತು. ಪುನರ್ರಚಿತ ಕಾಂಗ್ರೆಸ್ ಸಂಸ್ಥೆಯ ಅಂಗಾಂಗಳಾದ ವಿವಿಧ ಆಶ್ರಿತ ಸಮಿತಿಗಳೂ ರಚಿತವಾದವು. ಚುನಾವಣೆಗಳನ್ನೂ ಪ್ರತಿನಿಧಿಗಳ ಸಂಖ್ಯೆಗಳನ್ನೂ ಸುವ್ಯವಸ್ಥಿತಗೊಳಿಸಲಾಯಿತು.

ಈ ಹೊಸ ರಚನೆ ಕುರಿತು ಗಾಂಧೀಜಿ ಹೀಗೆಂದರು: "ಕಾಂಗ್ರೆಸ್ಸಿನ ಸುವ್ಯವಸ್ಥಿತ ನೂತನ ಘಟನೆಗಾಗಿ ನಾನು ಹೆಮ್ಮೆಪಡುತ್ತೇನೆ. ಈ ನಿಯಮಾವಳಿಗಳನ್ನು ನಿಷ್ಠೆಯಿಂದ ಸಂಪೂರ್ಣವಾಗಿ ಅನುಷ್ಠಾನಕ್ಕೆ ತಂದರೆ ಸಾಕು ನಮಗೆ ಪೂರ್ಣ ಸ್ವರಾಜ್ಯ ತಾನಾಗಿಯೇ ಲಭಿಸುತ್ತದೆ. ಈ ಸುಸಂಘಟಿತ ಚಾಲನೆಯ ಜವಾಬ್ದಾರಿಯನ್ನು ಕೈಗೊಂಡುದರಿಂದ ಕಾಂಗ್ರೆಸ್ಸಿನ ರಾಜಕೀಯದಲ್ಲಿ ನಾನು ನಿಜವಾಗಿ ಪ್ರವೇಶಿಸಿದಂತಾಯಿತು"

ಈ ಬದಲಾದ ಪರಿಸ್ಥಿತಿಯಿಂದ ಬ್ರಿಟಿಷ್ ಸಮಿತಿ (British Committee) ಯನ್ನೂ ಅದರ ಆಶ್ರಯದಲ್ಲಿ ಮೂವತ್ತು ವರ್ಷಗಳ ಹಿಂದಿನಿಂದಲೂ ಲಂಡನ್ನಿನಿಂದ ಪ್ರಕಟವಾಗುತ್ತಿದ್ದ 'ಇಂಡಿಯಾ' ಪತ್ರಿಕೆಯನ್ನು ನಿಲ್ಲಿಸಲಾಯಿತು. ಈ ನಿರ್ಣಯಗಳನ್ನು ಕೈಗೊಂಡಾಗ ಗಾಂಧೀಜಿ ಹೀಗೆ ಹೇಳಿದರು:

"ಈ ಪತ್ರಿಕೆಯ ಉಪಯೋಗಕ್ಕಿಂತ ಅದರ ವೆಚ್ಚವೇ ಹೆಚ್ಚು. ಇಂಗ್ಲೆಂಡಿನ ಸಾರ್ವಜನಿಕರ ಮೇಲೆ ಅದರ ವರ್ಚಸ್ಸು ಇಲ್ಲವೇ ಇಲ್ಲ. ಭಾರತದ ಜಾಗ್ರತಿಗಂತೂ ಅದು ತೀರ ಅಸಮರ್ಪಕ ಅಸಡ್ಡೆಯ ಮಾಧ್ಯಮ. ನಾವೀಗ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿರುವುದರಿಂದ ಎಲ್ಲ ರೀತಿಯಲ್ಲೂ ಸ್ವಾವಲಂಬಿಗಳಾಗಲು ದೃಢ ನಿಶ್ಚಯ ಮಾಡಿದ್ದೇವೆ. ಆದ್ದರಿಂದ ಈ ಬ್ರಿಟಿಷ್ ಸಮಿತಿಯನ್ನೂ ಈ 'ಇಂಡಿಯಾ' ಪತ್ರಿಕೆಯನ್ನೂ ಕೂಡಲೆ ವಿಸರ್ಜಿಸುವುದು ಅತ್ಯಗತ್ಯವಾದ ವಿಧಿ. ನಮ್ಮ ಸಂಪೂರ್ಣ ಗಮನವನ್ನೂ, ನಮ್ಮ ಅತ್ಯುತ್ಕೃಷ್ಟ ಕಾರ್ಯಕರ್ತರನ್ನೂ ಭಾರತದಲ್ಲಿನ ಕೆಲಸದ ಕಡೆಗೇ ತಿರುಗಿಸಬಯಸುತ್ತೇನೆ. ಬೆಳೆಯೇನೋ ಹೇರಳವಾಗಿದೆ, ದುಡಿಯುವವರು ಕಡಿಮೆ. ವಿದೇಶಿ ಕೆಲಸಗಳಿಗಾಗಿ ನಾವು ಯಾವ ಕಾರ್ಯಕರ್ತನನ್ನೂ ಬಿಟ್ಟು ಕೊಡುವ ಸ್ಥಿತಿಯಲ್ಲಿಲ್ಲ."

ಜನತೆಯ ಶಕ್ತಿಯುತ ಪ್ರತಿನಿಧಿಯಾಗಿ ಕಾಂಗ್ರೆಸ್ ಗಾಂಧೀಜಿಯ ನಾಯಕತ್ವದಲ್ಲಿ ಒಂದು ಕ್ರಾಂತಿಕಾರಕ ಸಂಸ್ಥೆಯಾಯಿತು. "ಜನತೆಯನ್ನು ಕಾಂಗ್ರೆಸ್ ಅಧ್ಯಕ್ಷನೋ, ನಾಯಕರೋ, ನಿರ್ದೇಶಿಸುವ ಬದಲು ಜನತೆಯ ನಿರ್ದೇಶನದಲ್ಲಿ ಅಧ್ಯಕ್ಷರೂ ನಾಯಕರೂ ನಡೆಯುವಂತಾಯಿತು" ಎಂದು ಅಧ್ಯಕ್ಷರು ನುಡಿದರು.

# ಮೊದಲ ಪರೀಕ್ಷೆ

೧೯೨೧

ಲಿಬರಲ್ ಪಕ್ಷದ ಮಂದಗಾಮಿಗಳನ್ನು ಹೊಸ ಚಳುವಳಿಯ ಕ್ರಾಂತಿಮುಖ ಗಾಬರಿಗೊಳಿಸಿತು. ಶ್ರೀನಿವಾಸ ಶಾಸ್ತ್ರಿಗಳು ಬಹಿರಂಗ ಪತ್ರಗಳನ್ನು ಪ್ರಕಟಿಸಿದರು. "ನಮ್ಮ ಪಕ್ಷದ ಸದಸ್ಯರು ಬೇಡವೆಂದರೂ ನಾನು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನಗಳಲ್ಲಿ ಸಾಧ್ಯವಾದಾಗಲೆಲ್ಲ ಭಾಗವಹಿಸಿದ್ದೇನೆ. ನನ್ನ ಅನುಭವದಿಂದ ನಿರಾಶೆಗೊಂಡಿದ್ದೇನೆ. ೧೯೧೮ರಲ್ಲಿ ಬೊಂಬಾಯಿನ ಅಧಿವೇಶನದಿಂದ ಮೊದಲ್ಗೊಂಡು ಪ್ರತಿಯೊಂದು ಅಧಿವೇಶನದಲ್ಲಿಯೂ ಹಿಂದಿನದಕ್ಕಿಂತ ಹೆಚ್ಚು ಅವ್ಯವಹಾರಿಕ ಕಾರ್ಯಕ್ರಮಗಳನ್ನೇ ಅಂಗೀಕರಿಸುತ್ತಾ ಸರ್ಕಾರದೊಡನೆ ಒಂದು ತರ್ಕ ರಹಿತ ವಿರೋಧವನ್ನೇ ಬೆಳೆಸುತ್ತಿದೆ. ಕಟ್ಟಕಡೆಯ ಅವಕಾಶವಿರುವವರೆಗೂ ನಮ್ಮ ಈ ದಿಕ್ಕೆಟ್ಟ ಸಾಹಸಿಗಳಾದ ದೇಶಬಾಂಧವರನ್ನು ಎಚ್ಚರಿಸುವ ಕರ್ತವ್ಯವನ್ನು ನಾವು ಕೆಲವರು ನಿರ್ವಹಿಸಿದ್ದೇವೆ. ಅವರು ಜಾರಿ ಹೋಗುತ್ತಿರುವ ಮಾರ್ಗದಲ್ಲಿನ ಅಪಾಯಕಾರಿ ಗಂಡಾಂತರಗಳನ್ನು ಅವರಿಗೆ ತಿಳಿಸಿದ್ದೇವೆ. ಅಸಹಕಾರ ಚಳುವಳಿ ಪ್ರಾರಂಭವಾದ ಮೇಲೆ ಅದನ್ನು ವಿರೋಧಿಸುತ್ತಿದ್ದ ರಾಷ್ಟ್ರೀಯವಾದಿಗಳೂ ತಾವು ಬೆಂಬಲ ಕೊಡುವುದು ಕಾಂಗ್ರೆಸ್ಸಿನಲ್ಲಿನ ತಮ್ಮ ನಿಷ್ಠೆಯ ಕರ್ತವ್ಯವೆಂದು ತಪ್ಪು ತಿಳಿದು ಸೇರಿಕೊಂಡ ಮೇಲೆ ನಾವಿದ್ದೇನ್ನು ಮಾಡಬೇಕಾಗಿಲ್ಲ. ಕಾಂಗ್ರೆಸ್ಸಿನ ಅಧಿವೇಶನಗಳಿಗೆ ಹೋಗಬೇಕೆಂಬುದು ನನಗಿನ್ನು ಹಿಡಿಸಲಾರದೆಂಬುದನ್ನು ಒಪ್ಪಿಕೊಳ್ಳುತ್ತೇನೆ." ಎಂದರು. ಅಲ್ಲಿಂದಾಚೆ ಲಿಬರಲ್ ಪಕ್ಷದವರು ಕಾಂಗ್ರೆಸ್ಸಿನಿಂದ ದೂರನಿಂತರೆಂಬುದು ಮಾತ್ರವಲ್ಲ. ಹೊಸ ವ್ಯವಸ್ಥೆಯಲ್ಲಿ ಸರ್ಕಾರದ ಮಂತ್ರಿಗಳೂ ಉನ್ನತಾಧಿಕಾರಿಗಳೂ ಆಗಿ ಸೇರಿ ಬಿಟ್ಟರು. ಅಸಹಕಾರ ಚಳುವಳಿಯನ್ನೂ ಕಾಂಗ್ರೆಸ್ ಸಂಸ್ಥೆಯನ್ನೂ ದಮನ ಮಾಡಲು ಸಹಕಾರಿಗಳಾಗಿ ನಿಂತರು.

ಭಾರತದಲ್ಲಿನ ಈ ಅಶಾಂತಿಯನ್ನು ವೀಕ್ಷಿಸಿ ವರದಿ ಮಾಡಲು ಡ್ಯೂಕ್ ಆಫ್ ಕೆನ್ನಾಟ್ (೫ನೇ ಜಾರ್ಜ್ ದೊರೆಯ ಚಿಕ್ಕಪ್ಪ) ಅವರನ್ನು ಕಳುಹಿಸಿ ಕೊಡಲಾಯಿತು. ೧೯೨೧ರ ಜನವರಿಯಲ್ಲಿ ನಾಲ್ಕು ಉನ್ನತ ಶಾಸನ ಸಭೆಗಳನ್ನು ಉದ್ಘಾಟಿಸಲು ಅವರು ಬಂದರು. ಆಗ ಚಕ್ರವರ್ತಿಗಳು ಕಳಿಸಿದ ಸಂದೇಶದಲ್ಲಿ "ನನ್ನ ಚಕ್ರಾಧಿಪತ್ಯದ ಆಶ್ರಯದಡಿಯಲ್ಲಿ ಭಾರತದ ಸ್ವರಾಜ್ಯಕ್ಕೆ ಇದು ಪ್ರಾರಂಭ" ಎಂದು ಹೇಳಿದರು. ಪಂಜಾಬದ ದುರಂತ ಘಟನೆಗೆ ಪಶ್ಚಾತ್ತಾಪ ಪಟ್ಟು ನೊಂದವರಿಗೆ ಅನುತಾಪವನ್ನು ಸಂದೇಶದಲ್ಲಿ ಸೂಚಿಸಿದ್ದರು.

ಕೆನ್ನಾಟಿನ ಡ್ಯೂಕರಿಗೆ ಗಾಂಧೀಜಿ ಹೀಗೆ ಪತ್ರ ಬರೆದರು :

"ಘನ ಹೊಂದಿದ ರಾಜಮನೆತನದವರಾದ ತಮ್ಮ ಸ್ವಾಗತವನ್ನು ಬಹಿಷ್ಕರಿಸುವುದರಲ್ಲಿ ಪಾಲ್ಗೊಳ್ಳುವುದು ನನಗೆ ಸಂತೋಷದಾಯಕವೇನಲ್ಲ. ನಾನು ಮೂವತ್ತು

ವರ್ಷಗಳಿಗೂ ಮೀರಿ ಅತ್ಯಂತ ನಿಷ್ಠೆ ಭಕ್ತಿಗಳಿಂದ ಸರ್ಕಾರಕ್ಕೆ ಸ್ವಯಂ ಪ್ರೇರಿತ ಸೇವೆ ಯನ್ನು ಅವ್ಯಾಹತವಾಗಿ ಸಲ್ಲಿಸಿದೆ. ನನ್ನ ದೇಶಕ್ಕೆ ಈ ಕ್ರಮದಿಂದಲೇ ಸ್ವಾತಂತ್ರ್ಯ ಲಭಿಸುವುದೆಂಬ ಪೂರ್ಣ ವಿಶ್ವಾಸದಿಂದ ಈ ಸೇವೆಯಲ್ಲಿ ತಲ್ಲೀನನಾದೆ. ನಿಮ್ಮ ಸ್ವಾಗತಕ್ಕೆ ಬಹಿಷ್ಕಾರ ಹಾಕಲು ನನ್ನ ದೇಶ ಬಾಂಧವರಿಗೆ ಸಲಹೆ ಕೊಡುವುದು ನನಗೆ ಕಷ್ಟವೇ ಆಯಿತು. ಒಬ್ಬ ಇಂಗ್ಲಿಷ್ ಸಜ್ಜನರಾಗಿರುವ ನಿಮ್ಮ ಬಗ್ಗೆ ನಮ್ಮಲ್ಲಿ ಯಾರಿಗೂ ಯಾವ ವಿರೋಧವು ಇಲ್ಲ. ನಿಮ್ಮ ವೈಯಕ್ತಿಕ ಗೌರವ–ನಮ್ಮ ಆತ್ಮೀಯ ಗೆಳೆಯರ ಆತ್ಮ ಗೌರವದಷ್ಟೇ ಪವಿತ್ರ. ಅದಕ್ಕೆ ಚ್ಯುತಿ ಬರುವುದಾದರೆ ತಮ್ಮ ಪ್ರಾಣವನ್ನೇ ಪಣ ವಾಗಿಟ್ಟು ರಕ್ಷಿಸಲು ಮುಂದೆ ಬರದೇ ಹೋಗುವಂತಹ ಸ್ನೇಹಿತರೂ ನನಗಿಲ್ಲವೆಂದು ಕೊಂಡಿದ್ದೆ ನೆ.

"ವ್ಯಕ್ತಿಗತ ವಿರೋಧ ನಮಗೆ ಯಾವ ಇಂಗ್ಲಿಷರ ಬಗ್ಗೆಯೂ ಇಲ್ಲ. ಇಂಗ್ಲಿಷ್ ಜೀವನ ವಿನಾಶ ನಮ್ಮ ಗುರಿಯೂ ಅಲ್ಲ. ನಮ್ಮ ದೇಶದ ದೈಹಿಕ, ಮಾನಸಿಕ, ಹಾಗೂ ಆಧ್ಯಾತ್ಮಿಕ ಜೀವನವನ್ನೇ ನಿರ್ವೀರ್ಯಗೊಳಿಸಿರುವ ಆ ನಿಮ್ಮ ಪದ್ಧತಿಯನ್ನು ನಿರ್ಮೂಲ ಮಾಡಬಯಸುತ್ತೇವೆ. ನಿಮ್ಮ ಸ್ವಭಾವದಲ್ಲಿ ಯಾವ ಶಕ್ತಿಗಳ ಪ್ರೇರಣೆಯಿಂದ ಓಡ್ವಯರ್ ಮತ್ತು ಡೈಯರ್‌ರಂತಹವರ ನೀಚ ಕೃತ್ಯಗಳು ಸಂಭವಿಸಿ ಪಂಜಾಬದ ದುರಂತ ಹಾಗೂ ಏಳುಕೋಟಿ ಮುಸ್ಲಿಂ ಬಾಂಧವರ ಧಾರ್ಮಿಕ ನಂಬಿಕೆಗಳ ಮೇಲೆ ದಾಳಿ ಸಾಧ್ಯವಾಯಿತೋ ಆ ದುಷ್ಟ ಶಕ್ತಿಗಳನ್ನೆದುರಿಸಿ ನಮ್ಮ ಸರ್ವ ಶಕ್ತಿಗಳಿಂದಲೂ ಹೋರಾಡಲು ದೃಢ ಸಂಕಲ್ಪ ಮಾಡಿದ್ದೇವೆ. ಮೂವತ್ತು ಕೋಟಿ ಭಾರತೀಯರಿಗೆ ಸಂಬಂಧಿಸಿದ ಮುಖ್ಯ ವಿಷಯಗಳಲ್ಲೂ ಅವರ ಹೃದ್ಗತ ಭಾವನೆಗಳನ್ನು ಹಂತ ಹಂತ ವಾಗಿ ತುಳಿದು ಹಾಕುತ್ತಿರುವ ನಿಮ್ಮ ಸ್ವಪ್ರತಿಷ್ಠೆ ಹಾಗೂ ಅಧಿಕಾರದರ್ಪದಿಂದ ನಮ್ಮ ಸ್ವಾಭಿಮಾನ ಕೆರಳಿ ನಿಂತಿದೆ. ನಮ್ಮ ಅವಹೇಳನ ಇದು. ಒಂದು ಲಕ್ಷ ಇಂಗ್ಲಿಷರು ಮೂವತ್ತು ಕೋಟಿ ಭಾರತೀಯರನ್ನು ನಿರಂತರ ಪ್ರಾಣಭೀತಿಗೀಡುಮಾಡಿ ಸತತ ದಾಸ್ಯದಲ್ಲಿ ನೂಕಿಡುವುದು ನಿಮಗೆ ಭೂಷಣಪ್ರಾಯ ಸಂಗತಿಯೂ ಅಲ್ಲ.

"ರಾಜಮನೆತನದವರಾದ ನೀವು ನಾನು ವಿವರಿಸಿದ ವ್ಯವಸ್ಥೆಯನ್ನು ನಿರ್ಮೂಲನ ಮಾಡಲೆಂದು ಇಲ್ಲಿಗೆ ಬಂದಿಲ್ಲ. ಅದರ ಪ್ರತಿಷ್ಠೆಯನ್ನು ಎತ್ತಿ ಹಿಡಿದು ರಕ್ಷಿಸಲೆಂದೇ ಬಂದಿರುವಿರಿ. ಪ್ರಾರಂಭದಲ್ಲೇ ನೀವು ಲಾರ್ಡ್ ವೆಲ್ಲಿಂಗಡನ್ ಅವರನ್ನು ಹೊಗಳಿದಿರಿ. ಆತ ಒಂದು ಇರುವೆಯನ್ನೂ ನೋಯಿಸ ಬಯಸದ ಸುಕೋಮಲ ಸ್ವಭಾವದವರು; ಪ್ರಾಮಾಣಿಕರು ಎಂದು ನಾನು ಬಲ್ಲೆ. ಆದರೆ ಆಡಳಿತಗಾರರಾಗಿ ನಿಷ್ಪ್ರಯೋಜಕರು. ತಮ್ಮ ಅಧಿಕಾರದ ಬಾಲಬಡುಕರ ಮಾತೇ ಅವರಿಗೆ ಹಿಡಿಸಿತು. ಇಲ್ಲಿನ ದ್ರಾವಿಡ ಪ್ರಾಂತದ ಜನರ ಆಶೋತ್ತರಗಳು ಅವರಿಗೆ ಅರಿವಾಗಲೇ ಇಲ್ಲ. ಬಂಗಾಳದಲ್ಲೂ ಹಾಗೆ. ಅಲ್ಲಿನ ಜನರ ಹೃದಯವನ್ನು ಎಳ್ಳಷ್ಟೂ ಅರಿಯದ ಅವರ ಆಕಾಂಕ್ಷೆಗಳನ್ನೂ ಗ್ರಹಿಸದ ಗೌರ್ನರರಿಗೆ ಪ್ರಶಸ್ತಿ ಪತ್ರ ಕೊಟ್ಟಿದ್ದೀರಿ. ಅವರು ಒಳ್ಳೆಯವರೇನೋ ಹೌದೆಂದು ಕೇಳಿದ್ದೇನೆ. ಬಂಗಾಳ ದೇಶವೆಂದರೆ ಕಲ್ಕತ್ತಾ ನಗರ ಮಾತ್ರವೆ ಅಲ್ಲ.

'ವಿಲಿಯಂ ಕೋಟೆ' ಮತ್ತು ಅಲ್ಲಿನ ಅರಮನೆಗಳೆಲ್ಲ ಬಂಗಾಳದ ಸುಸಂಸ್ಕೃತ ಸಾಧು ಸ್ವಭಾವದ ರೈತ ಬಾಂಧವರ ಕ್ರೂರ ಶೋಷಣೆಯ ಪ್ರತೀಕಗಳು. ಈ ಸುಂದರ ಪ್ರಾಂತದ ಜನತೆ ಅದನ್ನು ಮೂಕವಾಗಿ ಅನುಭವಿಸುತ್ತಿದೆ.

"ಭಾರತದ ತೀವ್ರ ಸಂಕಟ, ದಾರುಣ ಅವಹೇಳನಗಳನ್ನು ಮರೆತು ಮೇಲೆ ಮೇಲೆ ಸವರುವ ಸುಧಾರಣೆಗಳಿಂದ ಮೋಸ ಹೋಗಬಾರದೆಂದೇ ಅಸಹಕಾರ ಚಳುವಳಿಗಾರರು ತೀರ್ಮಾನಿಸಿದ್ದಾರೆ. ಆದರೆ ಅಸಹನೆಯ ಆತುರವಾಗಲಿ ಕೋಪವಾಗಲಿ ಅವರಿಗಿಲ್ಲ. ತಲೆಗೆಟ್ಟ ಹಿಂಸಾಚಾರಕ್ಕೆ ನಾವೆಂದೂ ಕೈ ಹಾಕಬಾರದು. ಇಂದಿನ ನಮ್ಮ ಹೀನಸ್ಥಿತಿಗೆ ನಮ್ಮ ಹೊಣೆಗಾರಿಕೆಯೂ ಉಂಟು ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ಬ್ರಿಟಿಷರ ಬಂದೂಕಗಳಿಗಿಂತ ಹೆಚ್ಚಾಗಿ ನಮ್ಮವರ ಸ್ವಪ್ರೇರಿತ ಸಹಕಾರವೇ ನಮ್ಮ ದಾಸ್ಯಕ್ಕೆ ಕಾರಣ.

"ರಾಜ ಗೌರವಾನ್ವಿತರಾದ ತಮ್ಮ ಸ್ವಾಗತ ಸಮಾರಂಭದಲ್ಲಿ ಭಾಗವಹಿಸದಿರುವುದು ತಮ್ಮ ಸ್ಥಾನ ಘನತೆಯ ವಿರೋಧವಾಗಿ ಅಲ್ಲ. ಯಾವ ರಾಜ್ಯ ವ್ಯವಸ್ಥೆಯನ್ನು ಎತ್ತಿ ಹಿಡಿಯಲು ದಯಮಾಡಿಸಿದ್ದೀರೋ ಅದರ ವಿರೋಧವಾಗಿ.

"ಒಬ್ಬ ಇಂಗ್ಲಿಷ್ ವ್ಯಕ್ತಿ ಇಚ್ಛಿಸಿದರೂ ಇಡೀ ಇಂಗ್ಲಿಷ್ ಸಮಾಜದ ಸ್ವಭಾವವನ್ನು ಹಠಾತ್ತನೆ ಬದಲಿಸುವುದು ಅಶಕ್ಯವೆಂದು ಬಲ್ಲೆ. ನಾವು ಇಂಗ್ಲಿಷರ ಸರಿಸಮರೆನಿಸಬೇಕಾದರೆ ನಿರ್ಭಯರಾಗಬೇಕು. ಸ್ವಾವಲಂಬಿಗಳಾಗಿ ಬ್ರಿಟಿಷ್ ನಿರ್ಮಿತ ಶಾಲೆಗಳು, ಕೋರ್ಟುಗಳನ್ನು ಬಹಿಷ್ಕರಿಸಿ ಅವರ ರಕ್ಷಣೆ ಪೋಷಣೆಗಳನ್ನು ನಿರಾಕರಿಸಬೇಕು. ನಮ್ಮ ಇಚ್ಛೆಗೆ ಮಣಿದು ಪರಿವರ್ತಿತವಾಗಲಾರದ ಸರ್ಕಾರವನ್ನು ಈ ರೀತಿಯಿಂದ ಕೊನೆಗಾಣಿಸುವುದೇ ನಮ್ಮ ಗುರಿ.

"ಆದ್ದರಿಂದಲೇ ಈ ಅಹಿಂಸಕ ಅಸಹಕಾರ. ಮಾತಿನಲ್ಲಿ, ಕೃತಿಯಲ್ಲಿ, ನಾವಿನ್ನೂ ಸಂಪೂರ್ಣ ಅಹಿಂಸಾತ್ಮಕವಾಗಿಲ್ಲ; ಆದರೂ ಈ ವರೆಗಿನ ನಮ್ಮ ಸಾಧನೆ ಅದ್ಭುತವಾದುದೆಂದು ತಮಗೆ ಆಶ್ವಾಸನೆ ಕೊಡುತ್ತಿದ್ದೇನೆ. ಹಿಂದೆಂದಿಗಿಂತಲೂ ಮಿಗಿಲಾಗಿ ಅಹಿಂಸೆಯ ರಹಸ್ಯವನ್ನು ಜನ, ಮನಗಂಡಿದ್ದಾರೆ. ಕಣ್ಣಿದ್ದವರಿಗೆ ಇದೊಂದು ಧಾರ್ಮಿಕ ನಿರ್ಮಲೀಕರಣ ಚಳುವಳಿ. ಮದ್ಯಪಾನ ಬಿಡುತ್ತಿದ್ದೇವೆ, ಅಸ್ಪೃಶ್ಯತೆಯ ಪಾಪದಿಂದ ವಿಮುಕ್ತರಾಗುತ್ತಿದ್ದೇವೆ. ಪಾಶ್ಚಾತ್ಯ ಥಳುಕಿನ ಅಟ್ಟಹಾಸವನ್ನು ಬಿಸುಟು, ಚರಕಕ್ಕೆ ಹಿಂತಿರುಗಿ ನಮ್ಮ ಪ್ರಾಚೀನ ಸರಳ ಜೀವನ ರೀತಿಯನ್ನು ಪುನರುಜ್ಜೀವನಗೊಳಿಸಿ ಈಗಿನ ಹಾನಿಕಾರಕ ವ್ಯವಸ್ಥೆಯನ್ನು ನಿರ್ಮೂಲ ಮಾಡ ಬಯಸಿದ್ದೇವೆ.

"ಈ ಚಳುವಳಿಯನ್ನೂ, ಇದರಿಂದ ಚಕ್ರಾಧಿಪತ್ಯಕ್ಕೂ, ವಿಶ್ವಕ್ಕೂ ಆಗುವ ಪರಿಣಾಮಗಳನ್ನೂ, ಒಬ್ಬ ಇಂಗ್ಲಿಷಿನವನ ದೃಷ್ಟಿಯಿಂದ ನೀವು ಅಧ್ಯಯನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಪಂಚದಲ್ಲಿರುವ ಒಳ್ಳೆಯದನ್ನಾವುದನ್ನೂ ನಾವು ವಿರೋಧಿಸಿ ಹೋರಾಡುತ್ತಿಲ್ಲ. ನಮ್ಮ ರೀತಿಯಲ್ಲಿ ಇಸ್ಲಾಂ ಧರ್ಮವನ್ನು ರಕ್ಷಿಸುವುದರಿಂದ ಸರ್ವ ಧರ್ಮಗಳನ್ನೂ ರಕ್ಷಿಸಿಕೊಳ್ಳುತ್ತಿದ್ದೇವೆ. ಭಾರತದ ಗೌರವವನ್ನು ರಕ್ಷಿಸಿಕೊಳ್ಳುವುದರ

ಮೂಲಕ ಮಾನವ ಕುಲದ ಗೌರವವನ್ನೂ ರಕ್ಷಿಸುತ್ತಿದ್ದೇವೆ. ನಮ್ಮ ಮಾರ್ಗ ಯಾರನ್ನೂ ನೋಯಿಸುವಂಥದಲ್ಲ. ಇಂಗ್ಲಿಷಿನವರೊಡನೆ ಸ್ನೇಹ ಬಯಸುತ್ತೇವೆ. ಆ ಸ್ನೇಹ ಸರಿಸಮಾನರ ಮಧ್ಯದ ಸ್ನೇಹ. ತಾತ್ವಿಕವಾಗಿಯೂ ಆಚರಣೆಯಲ್ಲೂ ಹಾಗೆ ನಡೆಯಬೇಕು. ಈ ಗುರಿ ಮುಟ್ಟುವ ವರೆಗೂ ನಮ್ಮ ಅಸಹಕಾರ. ಅದರ ಅರ್ಥ ನಮ್ಮ ಸ್ವಂತ ಶುದ್ಧೀಕರಣ. ಅಸಹಕಾರದ ಈ ವಿಶಿಷ್ಟ ದೃಷ್ಟಿಯನ್ನು ರಾಜಮನೆತನದ ತಾವು ತಮ್ಮ ಮೂಲಕ ಪ್ರತಿಯೊಬ್ಬ ಇಂಗ್ಲಿಷನವನೂ ಅರ್ಥ ಮಾಡಿಕೊಳ್ಳಬೇಕೆಂದೇ ನನ್ನ ಕೋರಿಕೆ."

ಅಸಹಕಾರದ ಸಂದೇಶ, ಮೊದಲು ಬಂಗಾಳದಲ್ಲಿ ಫಲಿಸಿತು. ಜನವರಿ ತಿಂಗಳಿಗಾಗಲೇ ಮೂರು ಸಾವಿರ ವಿದ್ಯಾರ್ಥಿಗಳು ಚಿತ್ತರಂಜನದಾಸರ ಮನವಿಗೆ ಓಗೊಟ್ಟು ಮುಷ್ಕರ ಹೂಡಿದರು. ಸಾವಿರಾರು ಬಾಲಕ ಬಾಲಕಿಯರು ಶಾಲೆಗಳನ್ನು ಬಿಟ್ಟರು. ಬಂಗಾಳದ ಯುವಕರಿಗೆ ಕೊಟ್ಟ ಸಂದೇಶದಲ್ಲಿ ಗಾಂಧೀಜಿ:

"ಬಂಗಾಳದಿಂದ ನಾನಿದನ್ನು ನಿರೀಕ್ಷಿಸಿದ್ದೆ. ಇದಕ್ಕೂ ಮೀರಿದ ಸಾಧನೆಯನ್ನೂ ಎದುರು ನೋಡುತ್ತಿದ್ದೇನೆ. ನಿಮ್ಮ ಪರಂಪರೆ ಮಹತ್ತರವಾದುದು. ಅಸಾಧರಣ ಜಾಣತನ ಅದಕ್ಕೂ ಹೆಚ್ಚಿನ ಭಾವುಕತೆ. ಭಾರತದ ಆಧ್ಯಾತ್ಮಿಕತೆಯ ವಿಶಿಷ್ಟ ಶಕ್ತಿಯ ಸಿಂಹಪಾಲು ನಿಮ್ಮದು. ನಿಮ್ಮ ಆಕಾಂಕ್ಷೆಯಲ್ಲಿ ಆತ್ಮವಿಶ್ವಾಸದಲ್ಲಿ, ಭಾವ ಸ್ಪಂದನಗಳಲ್ಲಿ ಭಾರತದಲ್ಲೇ ನೀವು ಮಿಗಿಲಾದವರು. ಹೇಡಿತನದ ಕಳಂಕವನ್ನು ಅನೇಕ ಸಂದರ್ಭಗಳಲ್ಲಿ ಮೂಲೋತ್ಪಾಟನೆ ಮಾಡಿದ ಕೀರ್ತಿ ನಿಮ್ಮದು. ಹಿಂದಿನಂತೆಯೇ ಇಂದೂ ನಿಮ್ಮ ನಾಯಕತ್ವವೇ ಏಕೆ ನಡೆಯಬಾರದು? ಇಟ್ಟ ಹೆಜ್ಜೆಯನ್ನು ಹಿಂತೆಗೆಯದಿರಿ. ಕೂಲಂಕಷವಾಗಿ ನೀವು ವಿವೇಚಿಸಿದ್ದೀರಿ. ಅಸಹಕಾರ ನಿರ್ಣಯ ತೆಗೆದುಕೊಂಡ ಕಾಂಗ್ರೆಸ್ ಅಧಿವೇಶನ ನಿಮ್ಮಲ್ಲೇ ಸಮಾವೇಶವಾಯಿತು. ಆತ್ಮ ಶುದ್ಧೀಕರಣ, ಸ್ವಾರ್ಥ ತ್ಯಾಗ, ನಿರ್ಭಯತೆ ಹಾಗೂ ಆಶಾವಾದ, ಇವೇ ಅದರ ಸಂದೇಶ. ಮುಂದೆ ನಾಗಪುರದಲ್ಲಿ ಈ ಹೇಳಿಕೆಯನ್ನೇ ಸ್ಥಿರೀಕರಿಸಲಾಯಿತು. ವಿಶದವಾಗಿ ವಿವರಿಸಲಾಯಿತು. ಪುಷ್ಟೀಕರಿಸಲಾಯಿತು. ಕಲ್ಕತ್ತೆಯಲ್ಲಿ ಘರ್ಷಣೆ, ಅಪನಂಬಿಕೆ, ಅನೈಕ್ಯತೆಗಳ ಮಧ್ಯೆ ಅಂಗೀಕೃತವಾಗಿದ್ದ ಈ ನಿರ್ಣಯವನ್ನು ನಿರಾಕರಿಸಲೂ ಕಾರಣವಿತ್ತು. ಬೆಂಬಲಿಸಲೂ ಹಿಂತೆಗೆಯಬಹುದಾಗಿತ್ತು. ಆದರೆ ನೀವು ಉತ್ತಮ ಪಥವನ್ನೇ ಹಿಡಿದಿರಿ. ಲೌಕಿಕವಾಗಿ ಅಪಾಯಕರ ಎನಿಸಿದರೂ ಹೆಜ್ಜೆ ಇಟ್ಟಿದ್ದೀರಿ. ಏನಾದರೂ ಹಿಂದೆ ಸರಿದು ಬಿಟ್ಟರೆ ನಿಮಗೂ ಘಾತಕ, ನಮ್ಮ ಧ್ಯೇಯಕ್ಕೂ ವಿನಾಶಕಾರಕ ಆಪತ್ತು ಬಂದೀತು. ಇದರಲ್ಲಿ ಒಬ್ಬೊಬ್ಬರೂ ವೈಯ್ಯಕ್ತಿಕವಾಗಿ ಅಂಥಾ ಹೆಚ್ಚಿನ ತ್ಯಾಗವೇನೂ ಮಾಡಬೇಕಾಗುವುದಿಲ್ಲ. ಯೋಚಿಸಿ ನೋಡಿ. ಎಲ್ಲರೂ ಹಂಚಿಕೊಳ್ಳುವುದರಿಂದ ಅಷ್ಟೇನೂ ದುಬಾರಿಯಾಗದು. ನಿಮ್ಮ ಪಾಲಾದರೂ ಎಷ್ಟು? ಒಂದು ವರ್ಷ ಅಥವಾ ಸ್ವರಾಜ್ಯ ಬರುವವರೆಗೆ. ಈ ಅಕ್ಷರಾಭ್ಯಾಸ ವಿದ್ಯೆಯನ್ನು ನಿಲ್ಲಿಸುವುದು; ಅಷ್ಟೇ ತಾನೆ! ನನ್ನ ಗಾಢವಾದ ಶ್ರದ್ಧೆಯನ್ನು ಇಡೀ ವಿದ್ಯಾರ್ಥಿ ಲೋಕಕ್ಕೆ ಪ್ರಚೋದಿಸುವುದು ಸಾಧ್ಯವಾದರೆ ಈ ಬಹಿಷ್ಕಾರ ಒಂದು ವರ್ಷದಷ್ಟೂ ಬೇಕಾಗಲಾರದು" ಎಂದರು.

ಸಂದರ್ಭ ಸಿಕ್ಕಿದೊಡನೆಯೇ ಗಾಂಧೀಜಿ ಬಂಗಾಳಕ್ಕೆ ಬಂದರು. ಅಲ್ಲಿನವರ ಉತ್ಸಾಹ ಇಮ್ಮಡಿಸಿತು. ಫೆಬ್ರುವರಿ ೪ರಂದು ರಾಷ್ಟ್ರೀಯ ಕಾಲೇಜನ್ನು ಉದ್ಘಾಟಿಸಿದರು. ಪಾಟ್ನಾದಲ್ಲಿ ಬಿಹಾರ ವಿದ್ಯಾಪೀಠವನ್ನು ಪ್ರಾರಂಭಗೊಳಿಸಿದರು. ಅಲ್ಲಿಂದಾಚೆ ನಾಲ್ಕು ತಿಂಗಳುಗಳಲ್ಲೇ ಪಾಟ್ನಾ, ಆಲಿಘಡ, ಅಹಮದಾಬಾದ್, ಬೊಂಬಾಯಿ, ವಾರಣಾಸಿ, ದೆಹಲಿಗಳಲ್ಲಿ ರಾಷ್ಟ್ರೀಯ ಮಹಾ ವಿದ್ಯಾಲಯಗಳು ಪ್ರಾರಂಭವಾದವು. ರಾಷ್ಟ್ರೀಯ ಮುಸ್ಲಿಂ ವಿಶ್ವವಿದ್ಯಾನಿಲಯವಾದ ಜಾಮಿಯ ಮಿಲಿಯ ಇಸ್ಲಾಮಿಯಾ ಸಂಸ್ಥೆಯನ್ನು ಗಾಂಧೀಜಿ ಮತ್ತು ಮಹಮ್ಮದಾಲಿಯವರು ಒಟ್ಟುಗೂಡಿ ತಾವೇ ಪ್ರಾರಂಭಿಸಿದರು.

ವಿದ್ಯಾರ್ಥಿಗಳು ಶಾಲೆಗಳನ್ನು ಬಹಿಷ್ಕರಿಸಿದರು. ಅನೇಕ ವಕೀಲರು ನ್ಯಾಯಾಲಯ ಗಳನ್ನು ಬಹಿಷ್ಕರಿಸಿ ವೃತ್ತಿಯನ್ನೇ ತ್ಯಜಿಸಿದರು. ಮೋತಿಲಾಲ್ ನೆಹರು, ಚಿತ್ತರಂಜನ್ ದಾಸ್, ವಲ್ಲಭಾಯಿ ಪಟೇಲ್, ರಾಜೇಂದ್ರ ಪ್ರಸಾದ್, ರಾಜಗೋಪಾಲಾಚಾರಿ, ಇಂಥ ಅತ್ಯುನ್ನತ ಮಟ್ಟದ ಅಗಾಧ ವರಮಾನ ಉಳ್ಳ ನ್ಯಾಯವಾದಿಗಳು ನಿಸ್ಸೀಮ ತ್ಯಾಗ ಮಾಡಿ ದೇಶಸೇವೆಗೆ ಕಂಕಣಬದ್ಧರಾದರು. ಉನ್ನತಾಧಿಕಾರವನ್ನು ತ್ಯಜಿಸಿ ದವರಲ್ಲಿ ಅಗ್ರಗಣ್ಯರಾದವರು ಸುಭಾಸಚಂದ್ರ ಭೋಸರು. ಗಾಂಧೀವಾಣಿಯಿಂದ ಸ್ಫೂರ್ತಿಗೊಂಡು ಇಪ್ಪತ್ತೈದನೇ ವಯಸ್ಸಿನಲ್ಲೇ ಇಂಡಿಯನ್ ಸಿವಿಲ್ ಸರ್ವೀಸ್ ಹುದ್ದೆಯಂತಹ ಉನ್ನತ ಅಧಿಕಾರ ಸ್ಥಾನವನ್ನು ಬೋಸರು ತ್ಯಜಿಸಿಬಿಟ್ಟರು. ಕಲ್ಕತ್ತೆಯ ರಾಷ್ಟ್ರೀಯ ಮಹಾವಿದ್ಯಾಲಯದ ಪ್ರಿನ್ಸಿಪಾಲರಾಗಿ ಕೆಲಸ ವಹಿಸಿಕೊಂಡರು.

ಪ್ರಚಾರ, ಬಿರುಗಾಳಿಯ ವೇಗದಲ್ಲಿ ದೇಶವನ್ನೆಲ್ಲಾ ಆವರಿಸಿತು. ಖಿಲಾಫತ್ ಚಳುವಳಿಯ ಕಾರಣದಿಂದಾಗಿ ಅನೇಕ ಮುಸ್ಲಿಂ ನಾಯಕರು, ಮೌಲ್ವಿಗಳು, ಪ್ರಮುಖ ಪಾತ್ರ ವಹಿಸಿದರು. ಖಿಲಾಫತ್ ಸಮಿತಿ ಮತ್ತು ಜಮಯತ್ ಉಲ್ ಉಲೇಮಾ ಸಂಸ್ಥೆಗಳ ಪ್ರಭಾವ ಕಾಂಗ್ರೆಸ್ಸಿನ ಮೇಲೆ ಸ್ಪಷ್ಟವಾಗಿ ಬಿದ್ದಿತ್ತು. ರಾಜಕೀಯ ಜಾಗೃತಿ ಉಚ್ಛ್ರಾಯ ಸ್ಥಿತಿಗೇರಿತು. ಹಿಂದೂ ಮುಸಲ್ಮಾನರ ಪರಸ್ಪರ ಮೈತ್ರಿ ಹೊರಹೊಮ್ಮಿತು. ಸಂಪ್ರದಾಯಸ್ಥ ಹಿಂದೂಗಳೂ ತಮ್ಮ ಮುಸಲ್ಮಾನ ಸ್ನೇಹಿತರನ್ನು ಊಟಕ್ಕೆ ಕರೆ ಯುತ್ತಿದ್ದರು. ಮುಸ್ಲಿಂ ಮಹಿಳೆಯರು ಸಭೆಗಳಲ್ಲಿ ಸೇರಿ ಭಾಷಣ ಮಾಡಲು ಗಾಂಧಿ ಯವರನ್ನು ಆಹ್ವಾನಿಸುತ್ತಿದ್ದರು. ಇಂಥ ಸಭೆಗಳಿಗೆ ಮುಸ್ಲಿಂ ಗಂಡಸರು ಘರ್ದಾ ಮಹಿಳೆಯರನ್ನು ಕುರಿತು ಮಾತನಾಡಲು ಕಣ್ಣಿಗೆ ಬಟ್ಟೆಕಟ್ಟಿಕೊಂಡು ಹೋಗುತ್ತಿದ್ದರು. "ಗಾಂಧಿಯಂತಹ ನಿರ್ಮಲ ಮನಸ್ಸಿನವರು ಎಲ್ಲಿ ಹೋದರೂ ಚಿಂತೆಯಿಲ್ಲ. ನಮ್ಮಂತ ಹವರಿಗೆ ಹಾಗಾಗದು" ಎನ್ನುತ್ತಿದ್ದರು. ಈ ಚಳುವಳಿ ಅತ್ಯುನ್ನತ ಮಟ್ಟಕ್ಕೇರಿಸಿತು. ಮುಸ್ಲಿಮರು ಗೋಮಾಂಸ ತ್ಯಜಿಸಿದರು. ಕೊನೆಗೆ ಈದ್ ಹಬ್ಬದ ದಿನವೂ ಗೋವಧೆ ಯನ್ನು ನಿರಾಕರಿಸಿದರು.

ಮಾರ್ಚ್ ೩೧ರಂದು ಬೆಜವಾಡದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸೇರಿತು. ಒಂದು ಕೋಟಿ ರೂಪಾಯಿಗಳ ತಿಲಕ್ ಸ್ಮಾರಕನಿಧಿ ಕೂಡಿಸುವುದು; ಒಂದು ಕೋಟಿ ಸದಸ್ಯರನ್ನು ಕಾಂಗ್ರೆಸ್ಸಿಗೆ ಸೇರಿಸುವುದು. ಇಪ್ಪತ್ತು ಲಕ್ಷ ಚರಕಗಳನ್ನು

ಹಳ್ಳಿಗಳಲ್ಲೂ ಪಟ್ಟಣಗಳಲ್ಲೂ ಪ್ರಾರಂಭಿಸುವುದು;–ಎಂದು ನಿರ್ಣಯಗಳಾದವು. ಜೂನ್ ೩೦ರೊಳಗೆ ಇವನ್ನು ಪೂರೈಸಲು ಸಂಕಲ್ಪ ಮಾಡಿದರು. ರಾಷ್ಟ್ರನಾಯಕರು ಒಮ್ಮತದಿಂದ ಹೆಗಲು ಕೊಟ್ಟು ನಿಂತರು ; ಸತತವಾಗಿ ದುಡಿದರು.

ರಾಷ್ಟ್ರದಲ್ಲೆಲ್ಲಾ ಪ್ರಚಂಡ ಬಹಿರಂಗ ಸಭೆಗಳಾದವು. ಲಕ್ಷಾಂತರ ಜನ, ಗಂಡಸರು ಹೆಂಗಸರು ಕಿಕ್ಕಿರಿದು ನೆರೆಯುತ್ತಿದ್ದರು. ಗಾಂಧೀಜಿಯೊಡನೆ ಆಜಾದರೂ, ಆಲಿ ಸಹೋದರರು, ಮಿಕ್ಕ ಕಡೆ ಚಿತ್ತರಂಜನ್ ದಾಸ್, ಮೋತಿಲಾಲ್ ನೆಹರು, ಜವಹರಲಾಲ್ ನೆಹರು ಮುಂತಾದವರು ಭಾಷಣ ಮಾಡುತ್ತಿದ್ದರು. ಹಿಂದೆ ಕಾಣುತ್ತಿದ್ದ ಭಯ, ನಿರುತ್ಸಾಹ ನಿಸ್ಸಹಾಯಕತೆಯ ವಾತಾವರಣ ಸಂಪೂರ್ಣವಾಗಿ ಅಳಿಸಿಹೋಗಿತ್ತು. ಅತಿ ದೂರದ ಸಣ್ಣ ಹಳ್ಳಿಯಲ್ಲೂ ಕಾಂಗ್ರೆಸ್ ಮತ್ತು ಸ್ವರಾಜ್ಯದ ಮಾತು, ಖಿಲಾಫತ್ ಸಮಸ್ಯೆಯ ಚರ್ಚೆ ಹಬ್ಬಿ ನಿಂತಿತ್ತು. ಖಿಲಾಫತ್ ಎಂದರೆ ಉರ್ದು ಶಬ್ದ 'ಖಿಲಾಫ್' ಅಥವಾ ವಿರೋಧಿಸು ಎಂಬರ್ಥ ಮಾಡಿ 'ಸರ್ಕಾರವನ್ನು ವಿರೋಧಿಸುವುದು' ಎಂದು ಕೊಂಡರು ಜನ. ರಾಷ್ಟ್ರೀಯತೆ, ಧರ್ಮಶ್ರದ್ಧೆ ಹಾಗೂ ಅತೀಂದ್ರಿಯ ಸಾಧನೆಗಳ ಒಂದು ವಿಲಕ್ಷಣ ಮಿಶ್ರಣವೆ ಆಗಿಹೋಗಿತ್ತು.

"ಇದುವರೆವಿಗೂ ಸಾಧಿಸಿದ ಪ್ರಗತಿಯ ಬಗ್ಗೆ ಅಸಮಾಧಾನವಿಲ್ಲದಿದ್ದರೂ ನಾವು ಹೆಮ್ಮೆ ಪಡುವಂತಹ ಕಾರ್ಯವೇನೂ ಆಗಿಲ್ಲ" ಎಂದರು ಗಾಂಧೀಜಿ. "ಅಸಹಕಾರವೆಂದರೆ ಬಡಾಯಿ, ಅಬ್ಬರ ಅಥವಾ ಗೊಡ್ಡು ಬೆದರಿಕೆಗಳ ಚಳುವಳಿಯಲ್ಲ. ಅದು ನಮ್ಮ ಪ್ರಾಮಾಣಿಕತೆಯ ಪರೀಕ್ಷೆ–ಸತ್ವಪೂರ್ಣವಾದ ಮೌನ ಬಲಿದಾನ ಸ್ವಾರ್ಥ ತ್ಯಾಗಗಳೇ ಅದಕ್ಕೆ ಶಕ್ತಿ. ನಮ್ಮ ಪ್ರಾಮಾಣಿಕತೆ, ನಮ್ಮ ರಾಷ್ಟ್ರಸೇವೆಯ ಸಾಮರ್ಥ್ಯಗಳಿಗೆ ಅದೊಂದು ದಿಟ್ಟ ಸವಾಲು."

ಜನತೆಯ ನೈತಿಕಶಕ್ತಿ ವೃದ್ಧಿಯಾದಂತೆ ಸರ್ಕಾರದ ಶಕ್ತಿ ಉಡುಗುತ್ತಿತ್ತು. ದಬ್ಬಾಳಿಕೆ ಸ್ವಲ್ಪ ಸ್ವಲ್ಪವಾಗಿ ಪ್ರಾರಂಭವಾಯಿತು. ಅನೇಕ ನಾಯಕರ ಮೇಲೆ ಕಟ್ಟಪ್ಪಣೆಗಳನ್ನು ಹೊರಡಿಸಲಾಯಿತು. ಭಾರತದ ಮೂಲೆಯಿಂದ ಮೂಲೆಗೆ ದಬ್ಬಾಳಿಕೆಯ ಅಲೆ ಹರಡಿತು. ವಾಯುವ್ಯ ಗಡಿ ಪ್ರಾಂತ್ಯದ ಗ್ರಾಮುಗಳಲ್ಲಿ ಶಿಕ್ಷಣ ಹಾಗೂ ಸಮಾಜ ಕಾರ್ಯಗಳಲ್ಲಿ ತೊಡಗಿದ್ದ ಖಾನ್ ಅಬ್ದುಲ್ ಗಫಾರ್ ಖಾನರನ್ನು ಬಂಧಿಸಿ ಮೂರು ವರ್ಷ ಶಿಕ್ಷೆಗೊಳಪಡಿಸಲಾಯಿತು. ತಮ್ಮ ಸಹಾಯ ಅಪ್ಪಣೆಗಳಿಲ್ಲದೆ ಕೈಗೊಂಡ ಯಾವುದೇ ಕಾರ್ಯಕ್ರಮ ತಮಗೆ ವಿರೋಧವಾದುದೆಂದು ಸರ್ಕಾರ ಹೆದರಿ ಕ್ರಮ ಕೈಗೊಳ್ಳುತ್ತಿತ್ತು.

ಸರ್ಕಾರದ ದಬ್ಬಾಳಿಕೆ ಎಷ್ಟು ಹೆಚ್ಚಿದರೂ ತಾಳ್ಮೆ ಇರಬೇಕೆಂದೇ ಗಾಂಧೀಜಿ ಪ್ರತಿಪಾದಿಸಿದರು. ರಚನಾತ್ಮಕ ಕಾರ್ಯಕ್ರಮವೇ ಸ್ವರಾಜ್ಯದ ರಹಸ್ಯ; ಅಹಿಂಸಾತ್ಮಕ ಹೋರಾಟದಲ್ಲಿ ಅತ್ಯಂತ ಶುದ್ಧಮಾರ್ಗ ಅನಿವಾರ್ಯ ಎಂದರು. ಬ್ರಿಟಿಷರ ಅನ್ಯಾಯಾ ಡಳಿತವನ್ನು ಖಂಡಿಸಿದಂತೆಯೇ ಹಿಂದೂ ಸಮಾಜದ ಅಸ್ಪೃಶ್ಯತೆಯ ಅಮಾನುಷ

ಪದ್ಧತಿಯನ್ನು ಪ್ರಬಲವಾಗಿ ವಿರೋಧಿಸಿದರು. ಏಪ್ರಿಲ್ ೧೩ರಂದು ಅಹಮದಾಬಾದಿನ ನಿಮ್ನವರ್ಗದ ಸಮ್ಮೇಳನದಲ್ಲಿ:

"ಅಸ್ಪೃಶ್ಯತೆ ಹಿಂದೂ ಸಮಾಜದ ಅಸಹ್ಯಕಲೆ. ಈ ಭಾವನೆ ನನಗೆ ಬಾಲ್ಯದಲ್ಲೇ ಬೇರೂರಿತ್ತು. ಮಿತ್ರರು ತಿಳಿದಿರುವಂತೆ ಕ್ರಿಶ್ಚಿಯನ್ ಮತೀಯ ಗ್ರಂಥಗಳಾಗಲಿ, ಒಂದು ಕಾಲಕ್ಕೆ ನಾನು ನಿರೀಶ್ವರ ವಾದಿಯಾಗಿದ್ದೆನಾದ್ದರಿಂದಾಗಲಿ ಅಥವಾ ದಕ್ಷಿಣ ಆಫ್ರಿಕಾದ ನನ್ನ ಅವಮಾನದ ಕಟು ಅನುಭವದಿಂದಾಗಲಿ ಈ ಭಾವನೆ ಬಂದುದಲ್ಲ. ಬೈಬಲ್ಲನ್ನಾಗಲೀ ಅಥವಾ ಅದರ ಅನುಯಾಯಿಗಳನ್ನಾಗಲೀ ಕಾಣುವ ಮುನ್ನವೇ ನನಗೆ ಈ ಭಾವನೆ ಬಂದಿತ್ತು.

"ಈ ಭಾವನೆ ನನಗೆ ಬಂದಾಗ ನನಗಿನ್ನೂ ಹನ್ನೆರಡು ವರ್ಷ ಆಗಿರಲಿಲ್ಲ. ನಮ್ಮ ಮನೆಯ ಕಕ್ಕಸು ಗುಡಿಸುವ ಆಳು ಒಬ್ಬ ಇದ್ದ. ಅವನ ಹೆಸರು ಉಕಾ. ಅವನನ್ನೇಕೆ ಮುಟ್ಟಬಾರದು ಎಂದು ತಾಯಿಯವರನ್ನು ಕೇಳುತ್ತಿದ್ದೆ. ಆಕಸ್ಮಿಕವಾಗಿ ಸ್ಪರ್ಶವಾದರೆ ಪ್ರಾಯಶ್ಚಿತ್ತ ವಿಧಿಗಳಿರುತ್ತಿದ್ದವು. ಅವನ್ನು ಮೂಕವಾಗಿ ವಿಧೇಯತೆಯಿಂದ ಮಾಡುತ್ತಿದ್ದೆನಾದರೂ ನಗುತ್ತಲೆ ಪ್ರತಿಭಟಿಸಿ ಹೇಳುತ್ತಿದ್ದೆ; 'ಈ ಅಸ್ಪೃಶ್ಯತೆ ಎಂದಿಗೂ ಧರ್ಮ ಸಮ್ಮತವಲ್ಲ. ಹಾಗೆ ಇರುವುದು ಅಸಂಭವ' ಎಂಬುದಾಗಿ. ತಂದೆ ತಾಯಿಗಳಿಗೆ ವಿಧೇಯನಾಗಿ ಹಲವು ಕಟ್ಟಪ್ಪಣೆಗಳನ್ನು ಪಾಲಿಸಿದರೂ ಅವರೊಡನೆ ಈ ಬಗ್ಗೆ ಪ್ರಬಲವಾಗಿ ವಿರೋಧಿಸಿ ವಾದ ಮಾಡುತ್ತಿದ್ದೆ. ಉಕಾನೊಡನೆ ಸಂಪರ್ಕವೇ ಪಾಪ ಕಾರ್ಯ ಎಂಬ ನಂಬಿಕೆ ಖಂಡಿತ ತಪ್ಪು ಎಂದು ತಾಯಿಯವರಿಗೆ ಖಂಡತುಂಡವಾಗಿ ಹೇಳಿದೆ.

"ಶಾಲೆಯಲ್ಲಿ ಅನೇಕ ಸಲ ಅಸ್ಪೃಶ್ಯರನ್ನು ಮುಟ್ಟುತ್ತಲೇ ಇದ್ದೆ. ಅದನ್ನು ತಾಯಿಯ ಮುಂದೆ ಒಪ್ಪಿಕೊಳ್ಳುತ್ತಲೂ ಇದ್ದೆ. ಯಾವುದನ್ನೂ ನನ್ನ ತಂದೆ ತಾಯಿಗಳಿಂದ ಮರೆ ಮಾಚುತ್ತಿರಲಿಲ್ಲ. ಈ 'ಪಾಪ' ಕ್ಕೊಂದು ಸುಲಭ ಪರಿಹಾರ ಆ ಅಪವಿತ್ರ ಸ್ಪರ್ಶವಾದ ಕೂಡಲೇ ಒಬ್ಬ ಮುಸಲ್ಮಾನನನ್ನು ಮುಟ್ಟಿ ಬಿಡುವುದು ಎಂದು ನನ್ನ ತಾಯಿ ಹೇಳುತ್ತಿದ್ದರು. ಕೇವಲ ನನ್ನ ತಾಯಿಯ ಮೇಲಿನ ಗೌರವದಿಂದ ಕೆಲವು ವೇಳೆ ನಾನು ಹಾಗೆ ಮಾಡಿದುದೂ ಉಂಟು. ಅದೊಂದು ಧಾರ್ಮಿಕ ಕರ್ತವ್ಯ ಎಂದು ನನಗಾವಾಗಲೂ ಅನಿಸಲೇ ಇಲ್ಲ. ಮುಂದೆ ಪೋರ್‌ಬಂದರ್‌ಗೆ ಬಂದು ನೆಲೆಸಿದೆವು. ಅಲ್ಲಿ ನನಗೆ ಸಂಸ್ಕೃತ ವ್ಯಾಸಂಗ ಮೊದಲಾಯಿತು. ಬ್ರಾಹ್ಮಣ ವಿದ್ವಾಂಸರೊಬ್ಬರು ನನಗೂ ನನ್ನ ಅಣ್ಣನಿಗೂ ರಾಮ ರಕ್ಷಾಮಂತ್ರವನ್ನು ವಿಷ್ಣು ಪೂಜೆಯನ್ನೂ ಕಲಿಸಿದರು. ನಮ್ಮನ್ನಾಗ ಇಂಗ್ಲಿಷ್ ಶಾಲೆಗೆ ಕಳುಹಿಸುತ್ತಿರಲಿಲ್ಲ. "ಜಲೇ ವಿಷ್ಣುಃ ಸ್ಥಲೇ ವಿಷ್ಣುಃ" ಎಂಬ ಪಾಠ ನನಗೆ ಚೆನ್ನಾಗಿ ನೆನಪಿದೆ. ನಮ್ಮ ಬಳಿಯಲ್ಲೇ ಒಬ್ಬ ವೃದ್ಧೆ ಇದ್ದಳು. ವಾತ್ಸಲ್ಯದಿಂದ ನಮ್ಮನ್ನು ನೋಡಿಕೊಳ್ಳುತ್ತಿದ್ದಳು. ಆ ಕಾಲಕ್ಕೆ ನಾನು ಸ್ವಲ್ಪ ಅಂಜುಬುರುಕ. ಕತ್ತಲೆಯಾದೊಡನೆ ದೆವ್ವ ಭೂತಗಳನ್ನು ನೆನೆದು ಹೆದರುತ್ತಿದ್ದೆ. 'ಹೆದರಿಕೆಯಾದಾಗ ರಾಮರಕ್ಷಾ ಮಂತ್ರ ಜಪಿಸು; ದೆವ್ವಗಳು ಓಡಿಹೋಗುತ್ತವೆ' ಎಂದು

ಹೇಳುತ್ತಿದ್ದಳು ಆ ಅಜ್ಜಿ. ಹಾಗೆಯೆ ಮಾಡಿದೆ. ನನಗೂ ನಂಬಿಕೆ ಬಂತು. ಈ ರಾಮ ರಕ್ಷಾಮಂತ್ರದಲ್ಲಿ ಎಲ್ಲೂ ಅಸ್ಪೃಶರನ್ನು ಮುಟ್ಟುವುದು ಪಾಪ ಎಂದು ನಿಷೇಧಿಸಿರುವುದು ನನಗೆ ಕಾಣಲಿಲ್ಲ. ಆ ಮಂತ್ರಗಳ ಅರ್ಥ ನನಗೆ ಆಗ ಗೊತ್ತಿರಲಿಲ್ಲ. ಗೊತ್ತಾದರೂ ಅಸ್ಪಷ್ಟವಾಗಿರುತ್ತಿತ್ತು. ಒಂದು ಮಾತು ಮಾತ್ರ ದೃಢವಾಗಿ ಬೇರೂರಿತ್ತು. ಎಲ್ಲ ಭಯಗಳನ್ನು ನಿವಾರಿಸುವ ಈ ಮಂತ್ರಕ್ಕೆ ಅಸ್ಪೃಶ್ಯರನ್ನು ಮುಟ್ಟಿದ ಭಯವನ್ನು ನಿವಾರಿಸಬಲ್ಲ ಶಕ್ತಿ ಇದ್ದೇ ಇರಬೇಕೆಂಬ ವಿಶ್ವಾಸ.

"ನಮ್ಮ ಮನೆಯಲ್ಲಿ ರಾಮಾಯಣದ ಪಾರಾಯಣ ಆಗುತ್ತಿತ್ತು. ಲಾಢಾ ಮಹರಾಜ್ ಎಂಬ ಬ್ರಾಹ್ಮಣರೊಬ್ಬರು ಓದುತ್ತಿದ್ದರು. ಆತ ಕುಷ್ಠರೋಗಿ. ಈ ಪಾರಾಯಣದಿಂದ ರೋಗ ನಿವಾರಣೆ ಆಗುವುದೆಂಬ ವಿಶ್ವಾಸ ಅವರಿಗಿತ್ತು. ಹಾಗೆಯೆ ಅವರಿಗೆ ಗುಣವೂ ಆಯಿತು. ನಾವೀಗ ಅಸ್ಪೃಶ್ಯರೆಂದು ಕರೆಯುವಂತಹನೊಬ್ಬ ತನ್ನ ದೋಣಿಯಲ್ಲಿ ಶ್ರೀರಾಮನನ್ನು ಕೂರಿಸಿಕೊಂಡು ಗಂಗೆಯನ್ನು ದಾಟಿಸಿದನೆಂದು ರಾಮಾಯಣದಲ್ಲಿ ಬರುತ್ತದೆ. ಅಂದ ಮೇಲೆ ಯಾವ ಮನುಷ್ಯನನ್ನೂ ಹುಟ್ಟಿನಿಂದಲೇ ಪಾಪಾತ್ಮನೆಂದು ತಿಳಿದು ಅಸ್ಪೃಶ್ಯನೆಂದು ಕರೆಯುವುದು ಸರ್ವಥಾ ಸಲ್ಲದು ಎಂದೇ ನಾನು ವಿಚಾರ ಮಾಡುತ್ತಿದ್ದೆ. ಪತಿತ ಪಾವನ ಎಂದು ಭಗವಂತನನ್ನು ಕರೆಯುವ ಹಿಂದೂಧರ್ಮದಲ್ಲಿ ಹುಟ್ಟಿದ ಯಾರೊಬ್ಬನನ್ನೂ ಅಪವಿತ್ರ, ಅಸ್ಪೃಶ್ಯ ಎಂದು ತಿಳಿಯುವುದು ಪಾಪ. ಹಾಗೆ ಕರೆಯುವುದು ಒಂದು ಘೋರ ಪಾತಕ. ನನ್ನ ಹನ್ನೆರಡನೆ ವಯಸ್ಸಿನಲ್ಲಿ ಈ ನಂಬಿಕೆ ದೃಢವಾಗಿತ್ತೆಂದು ನಾನು ಹೇಳಲಾರೆ. ಆದರೆ ಆ ವೇಳೆಗೆ ಅಸ್ಪೃಶ್ಯತೆ ಒಂದು ಪಾಪ ಎಂಬ ತಿಳುವಳಿಕೆ ಇತ್ತು. ವೈಷ್ಣವರೆನಿಸಿಕೊಳ್ಳುವವರಿಗೂ, ಸಂಪ್ರದಾಯಸ್ಥ ಹಿಂದೂಗಳಿಗೂ ಈ ನನ್ನ ಕಥೆ ಗೊತ್ತಿರಲೆಂದು ಹೇಳಿದ್ದೇನೆ.

"ನಾನೊಬ್ಬ ಸನಾತನಹಿಂದೂ ಎಂದೇ ಕರೆದುಕೊಳ್ಳುತ್ತೇನೆ. ಶಾಸ್ತ್ರಗಳು ನನಗೆ ತಿಳಿಯವು ಎಂದೇನಲ್ಲ. ಆದರೆ ನಾನಂತಹ ಸಂಸ್ಕೃತ ವಿದ್ವಾಂಸನೆಂದು ಹೇಳಲಾರೆ. ಭಾಷಾಂತರಗಳಲ್ಲಿ ವೇದ ಉಪನಿಷತ್ತುಗಳನ್ನು ಓದಿಕೊಂಡಿದ್ದೇನೆ. ಪಾಂಡಿತ್ಯ ನನಗಿಲ್ಲ. ಅವುಗಳ ನಿಗೂಢ ಅರ್ಥವನ್ನು ತಿಳಿಯುವ ಜ್ಞಾನ ಸಾಧನೆಯೂ ನನಗಿಲ್ಲ. ಆದರೂ ಒಬ್ಬ ನಿಷ್ಠಾವಂತ ಹಿಂದೂವಾಗಿ ವ್ಯಾಸಂಗ ಮಾಡಿದ್ದೇನೆ. ಅವುಗಳ ತಾತ್ವಿಕ ಸತ್ಯವನ್ನು ಕಂಡುಕೊಂಡಿದ್ದೇನೆ. ನನ್ನ ಇಪ್ಪತ್ತೊಂದನೇಯ ವಯಸ್ಸಿನ ವೇಳೆಗೆ ಇತರ ಧರ್ಮಗಳನ್ನು ನಾನು ಅಧ್ಯಯನ ಮಾಡಿದ್ದೆ.

ಹಿಂದೂ ಮತ್ತು ಕ್ರಿಶ್ಚಿಯನ್ ಧರ್ಮಗಳ ನಡುವೆ ಕೆಲವು ಕಾಲ ನನ್ನ ಮನಸ್ಸು ತುಯ್ದಾಡಿತು. ನನಗೆ ಜ್ಞಾನೋದಯವಾದಾಗ ನನ್ನ ಮೋಕ್ಷ ಪಥ ಹಿಂದೂ ಧರ್ಮದ ತತ್ವಾನುಷ್ಠಾನದಿಂದ ಮಾತ್ರ ಗೋಚರವಾದೀತೆಂದು ತಿಳಿದೆ. ಅಲ್ಲಿಂದಾಚೆ ಹಿಂದೂ ಧರ್ಮದಲ್ಲಿ ನನ್ನ ವಿಶ್ವಾಸ ಗಾಢವೂ ಪ್ರಕಾಶಮಯವೂ ಆಗಿ ಬೆಳೆಯಿತು.

ಅಸ್ಪೃಶ್ಯತೆ ಹಿಂದೂಧರ್ಮದ ಒಂದಂಶವೆಂದು ನಾನಾವಾಗಲೂ ನಂಬಿಲ್ಲ. ಒಂದು ವೇಳೆ ಹಾಗಿದ್ದರೆ ಅಂತಹ ಹಿಂದೂಧರ್ಮವನ್ನು ನಾನು ಅಂಗೀಕರಿಸಲಾರೆ."

"ಈಗ ನಿಜವಾಗಿ ಹಿಂದೂಧರ್ಮ ಅಸ್ಪೃಶ್ಯತೆಯನ್ನು ಪಾಪವೆಂದು ಎಣಿಸುವುದಿಲ್ಲ. ಶಾಸ್ತ್ರ ವ್ಯಾಖ್ಯಾನದ ವಾದಕ್ಕೆ ನಾನಿಳಿಯುವುದಿಲ್ಲ. ಭಾಗವತವನ್ನೋ, ಮನುಸ್ಮೃತಿಯನ್ನೋ ಉದಹರಿಸಿ ಸಿದ್ಧಾಂತ ಮಾಡಲು ನನ್ನಿಂದಾಗದು. ಆದರೆ ಹಿಂದೂಧರ್ಮದ ತಿರುಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅಸ್ಪೃಶ್ಯತೆಗೆ ಬೆಂಬಲವಿತ್ತು ಹಿಂದೂಧರ್ಮ ತಾನೇ ಪಾಪವನ್ನೆಸಗಿದೆ. ನಮ್ಮನ್ನು ಅಧೋಗತಿಗಿಳಿಸಿದೆ. ಚಕ್ರಾಧಿಪತ್ಯದಲ್ಲಿ ನಾವು ಅಂತ್ಯಜರು ಎನಿಸಿಕೊಂಡಿದ್ದೇವೆ. ನಮ್ಮೊಡನೆ ಮುಸಲ್ಮಾನರೂ ಈ ಸೋಂಕು ರೋಗಕ್ಕೆ ತುತ್ತಾಗಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ, ಪೂರ್ವ ಆಫ್ರಿಕಾದಲ್ಲಿ ಹಾಗೂ ಕೆನಡಾದಲ್ಲಿ ಹಿಂದೂಗಳೊಡನೆ ಮುಸಲ್ಮಾನರನ್ನೂ ಅಂತ್ಯಜರೆಂದೇ ಸಂಬೋಧಿಸುತ್ತಾರೆ. ಈ ಕೆಡುಕೆಲ್ಲವೂ ಅಸ್ಪೃಶ್ಯತೆಯ ಪಾತಕದ ಪರಿಣಾಮ.

"ನಾನಿಷ್ಟನ್ನು ಮತ್ತೆ ಹೇಳ ಬಯಸುತ್ತೇನೆ: ಎಲ್ಲಿಯವರೆಗೆ ಅಸ್ಪೃಶ್ಯತೆ ತಮ್ಮ ಧರ್ಮದ ಅಂಗವೆಂದು ಹಿಂದೂಗಳು ಹಟಮಾಡುತ್ತಾರೋ, ಎಲ್ಲಿಯವರೆಗೆ ಕೆಲವು ಸೋದರರನ್ನು ಮುಟ್ಟುವುದೇ ಪಾತಕವೆಂದು ಹಿಂದೂ ಜನಾಂಗ ತಿಳಿಯುವರೋ ಅಲ್ಲಿಯ ವರೆಗೆ ಸ್ವರಾಜ್ಯ ಸಾಧನೆ ಅಸಾಧ್ಯ. ಧರ್ಮರಾಯ ತನ್ನ ನಾಯಿಯನ್ನು ಕೂಡ ಹಿಂದೆ ಬಿಟ್ಟು ತಾನು ಸ್ವರ್ಗಕ್ಕೆ ಹೋಗಲು ನಿರಾಕರಿಸಿದನೆನ್ನುತ್ತಾರೆ. ಅವನ ಪರಂಪರೆಯವರಾದ ನಾವು ಅಸ್ಪೃಶ್ಯರನ್ನು ಹಿಂದಕ್ಕೆ ದೂಡಿ ಸ್ವರಾಜ್ಯವನ್ನು ಸಂಪಾದಿಸಬಲ್ಲೆವೇ? ಸರ್ಕಾರವನ್ನು ಯಾವ ಘೋರ ಪಾತಕಗಳಿಗಾಗಿ ನಾವು ಖಂಡಿಸುತ್ತೇವೋ ಅದನ್ನೇ ನಾವು ನಮ್ಮ ನಿರ್ಭಾಗ್ಯ ಅಸ್ಪೃಶ್ಯ ಸೋದರರಿಗೆಸಗಿ ಅದೇ ಪಾಪಕ್ಕೆ ಗುರಿಯಾಗುವುದಿಲ್ಲವೇ?

"ಸೋದರರನ್ನು ಹತ್ತಿಕ್ಕಿದ ಪಾಪ ನಮ್ಮದು. ಅವರನ್ನು ಹೊಟ್ಟೆಯ ಮೇಲೆ ತೆವಳುವಂತೆ ಮಾಡಿದ್ದೇವೆ. ಮಣ್ಣಿಗೆ ಮುಖವಿಟ್ಟು ಉಜ್ಜಿಸಿದ್ದೇವೆ. ಸಿಟ್ಟಿನಿಂದ ಕಿಡಿಕಿಡಿಯಾಗಿ ರೈಲು ಗಾಡಿಗಳಿಂದ ಹೊರದೂಡಿದ್ದೇವೆ. ಇದಕ್ಕಿಂತ ಕ್ರೂರಕೃತ್ಯಗಳೇನನ್ನು ಮಾಡಿದೆ ಬ್ರಿಟಿಷ್ ಆಡಳಿತ? ಜನರಲ್ ಡೈಯರ್, ಓಡ್ವಯರ್ ಮುಂತಾದವರಿಗೆ ನಾವು ಆರೋಪಿಸುವ ದುಷ್ಕೃತ್ಯಗಳನ್ನೇ ಇತರರು, ನಮ್ಮವರೂ ಸಹ, ನಮ್ಮ ಮೇಲೆ ಆರೋಪಿಸಲಾರರೆ? ಈ ಪಾತಕವನ್ನು ನಾವು ನಿರ್ಮೂಲ ಮಾಡಬೇಕು. ನಿಸ್ಸಹಾಯಕರನ್ನೂ, ದುರ್ಬಲರನ್ನೂ ರಕ್ಷಿಸದೆ ಸ್ವರಾಜ್ಯದ ಮಾತನಾಡುವುದು ಕನಸಾದೀತು. ಒಬ್ಬ ವ್ಯಕ್ತಿಯ ಮನನೋಯುವಂತೆ ನಡೆದುಕೊಳ್ಳುವ ಪದ್ಧತಿ ಪ್ರಚಲಿತವಾಗಿರುವವರೆವಿಗೂ ಸ್ವರಾಜ್ಯ ಸಾಧ್ಯವಾಗದು. ಸ್ವರಾಜ್ಯದ ಅರ್ಥವೇ ಅಷ್ಟು ವ್ಯಾಪಕ. ಹಿಂದೂವಾಗಲಿ, ಮುಸಲ್ಮಾನನಾಗಲಿ ಮತ್ತೊಬ್ಬ ನಿಶ್ಶಕ್ತ ಹಿಂದೂವನ್ನೋ ಮುಸಲ್ಮಾನನನ್ನೋ ಅಹಂಕಾರದಿಂದ ತುಳಿದು ಬಿಡುತ್ತೇನೆನ್ನುವುದು ಸ್ವರಾಜ್ಯದಲ್ಲಿ ಸಲ್ಲದು. ಈ ನಿಯಮ ನೆಲೆಗೊಳ್ಳದೆಯೇ ಸಾಧಿಸುವ ಸ್ವರಾಜ್ಯ ಒಂದು ಘಳಿಗೆಯೂ ನಮಗೆ ದಕ್ಕದು; ಮರುಕ್ಷಣದಲ್ಲೇ ಪರತಂತ್ರವಾಗುತ್ತದೆ. ದುರ್ಬಲರಾದ ಸಹೋದರರಿಗೆ ನಾವೆಸಗಿರುವ ಪಾತಕಗಳನ್ನು ತೊಳೆದುಕೊಳ್ಳುವ ವರೆಗೂ ನಾವು ಮಾನವರೆನಿಸಿಕೊಳ್ಳುವುದಿಲ್ಲ, ಪಶುಸದೃಶರಾಗುತ್ತೇವೆ."

ಸಾಮಾಜಿಕ ಸುಧಾರಣೆ ರಚನಾತ್ಮಕ ಕಾರ್ಯಕ್ರಮಗಳನ್ನು ನಿರ್ದೇಶಿಸುತ್ತಿದ್ದ ಈ ಮಹಾನಾಯಕ ರಾಜಕೀಯ ಕ್ಷೇತ್ರವನ್ನು ಮರೆಯಲಿಲ್ಲ. ಬಿಡುವಿಲ್ಲದ ಕೆಲಸದ ಮಧ್ಯೆಯೂ ಈ ಅಹಿಂಸಾ ಸಮರದ ದ್ಯೋತಕವಾಗಿ ಒಂದು ಬಾವುಟವನ್ನು ಇಟ್ಟು ಕೊಳ್ಳಬೇಕೆಂದು ಸೂಚಿಸಿದರು. ಏಪ್ರಿಲ್ ೧೩ರ 'ಯಂಗ್–ಇಂಡಿಯಾ'ದಲ್ಲಿ ಹೀಗೆ ಬರೆದರು :

"ರಾಷ್ಟ್ರಕ್ಕೊಂದು ಧ್ವಜ ಅಗತ್ಯ. ಲಕ್ಷಾಂತರ ಜನ ಧ್ವಜವನ್ನೆತ್ತಿ ಹಿಡಿಯಲು ಬಲಿದಾನ ಮಾಡಿದ್ದಾರೆ. ಅದು ಭಕ್ತಿಯ ಅತಿರೇಕವೆನ್ನಬಹುದು. ಆದರೂ ಅದನ್ನು ನಾಶಮಾಡುವುದು ಪಾಪಕೃತ್ಯ. ರಾಷ್ಟ್ರಧ್ವಜ ಒಂದು ಆದರ್ಶದ ಪ್ರತೀಕ. ಯೂನಿಯನ್ ಜಾಕ್ ಬಾವುಟ ಹಾರಿದಾಗ ಇಂಗ್ಲಿಷರಲ್ಲಾಗುವ ಭಾವಾವೇಶದ ಅದ್ಭುತ ಶಕ್ತಿಯನ್ನಾರು ಅಳೆಯಲು ಸಾಧ್ಯ! ತಮ್ಮ ರಾಷ್ಟ್ರ ಧ್ವಜದ ನಕ್ಷತ್ರಗಳೂ ಪಟ್ಟಿಗಳೂ ಅಮೆರಿಕದವರಿಗೆ ಒಂದು ಬ್ರಹ್ಮಾಂಡದ ಸಾಕ್ಷಾತ್ಕಾರವೆನಿಸುತ್ತವೆ. ಇಸ್ಲಾಂ ಧರ್ಮದವರ ಅರ್ಧಚಂದ್ರ ಮತ್ತು ತಾರೆಗಳ ಸಂಕೇತ ಅದರ ಅನುಯಾಯಿಗಳಲ್ಲಿ ವೀರಾವೇಶವನ್ನೇ ತುಂಬುತ್ತದೆ.

"ಭಾರತೀಯರಾದ ನಮಗೆ–ಹಿಂದೂ ಮುಸ್ಲಿಂ ಕ್ರಿಶ್ಚಿಯನ್ ಯಹೂದಿ, ಪಾರ್ಸಿ, ಮತ್ತೆಲ್ಲ ಧರ್ಮಾನುಯಾಯಿಗಳೂ ಒಟ್ಟಾಗಿ ಯಾವ ಭಾರತವನ್ನು ಮಾತೃ ಭೂಮಿ ಎನ್ನುತ್ತೇವೆಯೋ ಅಂಥ ನಮಗೆ–ಒಂದು ಸರ್ವಸಮ್ಮತ ಧ್ವಜ ಬೇಕು. ಅದಕ್ಕಾಗಿ ನಾವು ದುಡಿದು ಮಡಿಯಲೂ ಸಿದ್ಧವಾಗಬೇಕು.

"ಮಂಸಿಲಿಪಟ್ಟಣದ ರಾಷ್ಟ್ರೀಯ ಕಾಲೇಜಿನ ಶ್ರೀ ಪಿ. ವೆಂಕಯ್ಯ ಎಂಬುವರು ಹಲವು ರಾಷ್ಟ್ರಗಳ ರಾಷ್ಟ್ರಧ್ವಜಗಳನ್ನು ವಿವರಿಸಿ ಒಂದು ಪುಸ್ತಕ ಪ್ರಕಟಿಸಿದ್ದಾರೆ. ಅದರಲ್ಲಿ ಭಾರತದ ಧ್ವಜ ಹೇಗಿರಬೇಕೆಂಬ ಸಲಹೆಗಳೂ ಇವೆ. ನಾಲ್ಕು ವರ್ಷಗಳಿಂದ ಇದಕ್ಕಾಗಿ ಅವರು ಶ್ರಮಿಸುತ್ತಿದ್ದಾರೆ. ಪ್ರತಿಯೊಂದು ಕಾಂಗ್ರೆಸ್ ಅಧಿವೇಶನದಲ್ಲೂ ರಾಷ್ಟ್ರಧ್ವಜ ಪಡೆದುಕೊಳ್ಳುವ ಬಗ್ಗೆ ಸತತವಾಗಿ ಅವರು ಮಾಡುತ್ತಿರುವ ಪ್ರಯತ್ನ ವನ್ನು ನಾನು ಮೆಚ್ಚಿಕೊಂಡರೂ ಅವರ ಸೂಚನೆಯ ಬಗೆಗೆ ನಾನು ಉತ್ಸುಕನಾಗಿಲ್ಲ. ಅವರು ಸೂಚಿಸಿದ ಧ್ವಜ ನಮೂನೆ ಯಾವುದೂ ರಾಷ್ಟ್ರದ ಸುಪ್ತಚೇತನವನ್ನು ಜಾಗೃತ ಗೊಳಿಸಬಲ್ಲ ನಮೂನೆ ಎನಿಸಿರಲಿಲ್ಲ. ಆದರೆ ಪಂಜಾಬಿನ ಲಾಲಾ ಹನ್ಸರಾಜ್ ಅವರು ಮಾಡಿದ ಒಂದು ಸಲಹೆ ಮಿಂಚಿನಂತೆ ನನ್ನನ್ನು ಸೆಳೆಯಿತು. ಚರಕದ ಅಂತಃಶಕ್ತಿಯನ್ನು ಚರ್ಚಿಸುತ್ತಾ ಅವರು ಇದನ್ನೇಕೆ ನಮ್ಮ ರಾಷ್ಟ್ರಧ್ವಜದ ಚಿಹ್ನೆಯನ್ನಾಗಿ ಅಂಗೀಕರಿಸ ಬಾರದು ಎಂದಾಗ ಆ ಸಲಹೆಯ ಸ್ವತಂತ್ರ ಕಲ್ಪನೆಗೆ ನಾನು ಮಾರುಹೋದೆ. ಮುಂದೆ ಬೆಜವಾಡದಲ್ಲಿ ಶ್ರೀ ವೆಂಕಯ್ಯನವರನ್ನು ಕೇಸರಿ (ಹಿಂದೂ ವರ್ಣ) ಮತ್ತು ಹಸಿರು (ಮುಸ್ಲಿಂ ವರ್ಣ)ಗಳ ಹಿನ್ನೆಲೆಯಲ್ಲಿ ಚರಕವನ್ನು ಜೋಡಿಸಿ ಒಂದು ಧ್ವಜದ ನಮೂನೆ ಯನ್ನು ತಯಾರಿಸುವಂತೆ ಕೇಳಿದೆ. ಅತ್ಯುತ್ಸಾಹದಿಂದ ಅವರು ಮೂರೆ ಗಂಟೆಗಳಲ್ಲಿ ಒಂದನ್ನು ತಯಾರಿಸಿ ಬಿಟ್ಟರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಅದನ್ನು ತೋರಿಸಿ ಅಂಗೀಕಾರ ಪಡೆಯಲು ಆಗಲೇ ಕಾಲ ಮಿಂಚಿತ್ತು. ಅದು ಒಳ್ಳೆಯದೇ ಆಯಿತು.

ಸ್ವಲ್ಪ ಯೋಚಿಸಿ ನೋಡಿದಾಗ ಕೇವಲ ಹಿಂದೂ–ಮುಸ್ಲಿಂ ಧರ್ಮಗಳಲ್ಲದೆ ಇತರ ಅನೇಕ ಧರ್ಮಗಳು ಇರುವುದರಿಂದ ಅವಕ್ಕೂ ಒಂದು ಸ್ಥಳ ಧ್ವಜದಲ್ಲಿ ಸಂಕೇತವಾಗ ಬೇಕು ಎನ್ನಿಸಿತು. ಹಿಂದೂ–ಮುಸ್ಲಿಂ ಐಕ್ಯತೆ ಎಂದು ಘೋಷಿಸಿದಾಗ ಕೇವಲ ಎರಡು ಧರ್ಮಗಳನ್ನಷ್ಟೇ ಸಂಬೋಧಿಸುವ ಭಾವನೆಯಿರಲಿಲ್ಲ. ಭಾರತದಲ್ಲಿ ಬೇರೂರಿರುವ ಸರ್ವಧರ್ಮಗಳ ಐಕ್ಯತೆಯ ಸಂಕೇತವೂ ಅದರಲ್ಲಿತ್ತು. ಹಿಂದೂಗಳು ಮುಸ್ಲಿಮರು ಪರಸ್ಪರ ಸಹನೆಯಿಂದಿರುವುದಾದರೆ ಅವರಿಬ್ಬರೂ ಇತರ ಎಲ್ಲ ಧರ್ಮಗಳವರೊಂದಿಗೂ ಸಮರಸವಾಗಲೇಬೇಕು. ಎರಡು ಧರ್ಮಗಳು ಸೇರಿ ಮಿಕ್ಕವುಗಳಿಗೆ ತುತ್ತಾಗುವ ಸಂಭವ ವಿರಲಾಗದು. ಜಗತ್ತಿಗೂ ಅದು ಒಂದು ಪಿಡುಗಾಗಿ ಪರಿಣಮಿಸದು. ಆದ್ದರಿಂದ ಧ್ವಜದ ಹಿನ್ನೆಲೆಯ ಬಣ್ಣಗಳಲ್ಲಿ ಹಸಿರು ಕೆಂಪುಗಳ ಜೊತೆಗೆ ಬಿಳಿಯೂ ಇರಬೇಕೆಂದು ನನ್ನ ಸಲಹೆ. ಬಿಳಿಯ ಬಣ್ಣ ಭಾರತದ ಮಿಕ್ಕೆಲ್ಲ ಧರ್ಮಗಳ ಸಂಕೇತ. ಯಾರು ಅಲ್ಪ ಸಂಖ್ಯಾತರೋ ಅವರನ್ನು ಪ್ರತಿನಿಧಿಸುವ ಬಣ್ಣ ಮೊದಲು ಬರಬೇಕು. ಇಸ್ಲಾಂ ಧರ್ಮದ ಹಸಿರು ನಂತರ ಬಂದು ಕೊನೆಯಲ್ಲಿ ಪ್ರಬಲರೂ ಬಹು ಸಂಖ್ಯಾತರೂ ಆದ ಹಿಂದೂಧರ್ಮದ ಕೆಂಪು. ಅದರ ಸಂಕೇತ ಇಷ್ಟೆ; ಪ್ರಬಲರಾದವರು ದುರ್ಬಲರ ರಕ್ಷಕರಾಗಬೇಕು. ಬಿಳಿಯ ಬಣ್ಣ ಶುಭ್ರತೆಯ ಶಾಂತಿಯ ಚಿನ್ಹೆ. ರಾಷ್ಟ್ರಧ್ವಜವೂ ಅದನ್ನೇ ಪ್ರತಿಬಿಂಬಿಸಬೇಕು. ಇಲ್ಲದಿದ್ದರೆ ಅರ್ಥಹೀನವಾದೀತು. ಕನಿಷ್ಠನಾದವನೂ ಅತ್ಯುನ್ನತನಾದವರೊಂದಿಗೆ ಸರಿಸಮಾನರು ಎಂದು ತೋರಿಸಲು ಈ ಮೂರು ಬಣ್ಣಗಳ ಪಟ್ಟಿಗಳು ಸಮಾನ ಪ್ರಮಾಣದಲ್ಲೇ ಇರಬೇಕು.

" ಆದರೆ ಪ್ರಧಾನವಾಗಿ ಚರಕಕ್ಕಾಗಿಯೇ ಭಾರತ ರಾಷ್ಟ್ರ ಬದುಕಿಗೂ ಬಲಿದಾನಕ್ಕೂ ಸಿದ್ಧವಾಗುತ್ತದೆ. ಚರಕ ಮರೆಯಾದಂದಿನಿಂದಲೇ ಭಾರತದ ಸುಖ ಸಂತೋಷಗಳೂ ಮಾಯವಾದುವು ಎಂದು ಪ್ರತಿಯೊಬ್ಬ ಮಹಿಳೆಯೂ ಹೇಳಬಹುದು. ಮತ್ತೆ ಭಾರತದ ಸ್ತ್ರೀಶಕ್ತಿ ಹಾಗೂ ಸಾಮಾನ್ಯ ಜನಶಕ್ತಿ ಚರಕದ ಸಂದೇಶದಿಂದ ಅದ್ಭುತ ವಾಗಿ ಜಾಗೃತಗೊಂಡಿದೆ. ತನ್ನ ಜೀವನದುಸಿರನ್ನೇ ಭಾರತದ ಜನತೆ ಚರಕದಲ್ಲಿ ಕಂಡು ಕೊಂಡಿದೆ. ಸ್ತ್ರೀಯರಿಗೆ ಅದು ಮಾನರಕ್ಷಕ. ನಾನು ಕಂಡ ಅನೇಕ ವಿಧವೆಯರಿಗೆ ಚರಕ ಆತ್ಮೀಯ ಬಂಧುವಾಗಿ ಪರಿಣಮಿಸಿತ್ತು. ಹಸಿದಿರುವ ಕೋಟಿ ಕೋಟಿ ನಿರ್ಭಾಗ್ಯರಿಗೆ ಚರಕದ ಪುನರುತ್ಥಾನದಿಂದಲೇ ಅನ್ನ. ಈ ವಿಶಾಲದೇಶದ ಸಾವಿರದೊಂಬೈನೂರು ಮೈಲಿ ಉದ್ದ, ಸಾವಿರದೈನೂರು ಮೈಲಿ ಅಗಲದ ಅಗಾಧ ಭೂಭಾಗದಲ್ಲಿ ವಾಸಿಸುವ ಕೋಟ್ಯಂತರ ರೈತರ ಭೀಕರ ಬಡತನ ನೀಗಲು ಯಾವ ಔದ್ಯೋಗಿಕರಣ ಯೋಜನೆಗೂ ಸಾಧ್ಯವಾಗದು. ಇಂಗ್ಲೆಂಡಿನಂತೆ ಒಂದು ಪುಟ್ಟ ದ್ವೀಪವಲ್ಲ ಭಾರತ. ಇದೊಂದು ಖಂಡ. ಇಂಗ್ಲೆಂಡಿನಂತೆ ಭಾರತವನ್ನು ಸಂಪೂರ್ಣ ಯಂತ್ರೋದ್ಯೋಗ ರಾಷ್ಟ್ರವನ್ನಾಗಿ ಪರಿವರ್ತಿಸಲು ಸಾಧ್ಯವೇ ಇಲ್ಲ. ಪ್ರಪಂಚದ ಮತ್ಯಾವ ರಾಷ್ಟ್ರವನ್ನಾದರೂ ಶೋಷಣೆ ಮಾಡಿ ಬದುಕುವ ದಾರಿಯನ್ನು ದೃಢವಾಗಿ ನಾವು ನಿರಾಕರಿಸಬೇಕು. ವ್ಯರ್ಥವಾಗು ತ್ತಿರುವ ಕಾಲವನ್ನುಪಯೋಗಿಸಿ ನಮ್ಮ ಕುಟೀರಗಳಲ್ಲಿ ಹತ್ತಿಯಿಂದ ಬಟ್ಟೆ ಮಾಡುವ

ಕೈಗಾರಿಕೆಯನ್ನು ಕೈಗೊಂಡು ರಾಷ್ಟ್ರೀಯ ಸಂಪತ್ತನ್ನು ವರ್ಧಿಸಬೇಕು. ನಮ್ಮ ಸಂಪೂರ್ಣ ಗಮನ ಈ ಕಾರ್ಯದಲ್ಲಿ ಕೇಂದ್ರಿತವಾದಾಗ ಭವಿಷ್ಯ ಆಶಾದಾಯಕವಾದೀತು. ಗಾಳಿ ನೀರುಗಳಂತೆ ಚರಕವೂ ಭಾರತ ಜೀವನದ ಪ್ರಾಣಶಕ್ತಿ.

ಮುಸ್ಲಿಮರು ಚರಕದ ಬಗ್ಗೆ ಹಿಂದೂಗಳಷ್ಟೇ ಉತ್ಸಾಹಿಗಳು. ವಾಸ್ತವವಾಗಿ ಅವರೇ ಹೆಚ್ಚಾಗಿ ನೂಲತೊಡಗಿದ್ದಾರೆ. ಮುಸ್ಲಿಂಮಹಿಳೆ ಘರ್ದಾ ಪದ್ಧತಿಯಲ್ಲಿ ರುವುದರಿಂದ ಮನೆಯಲ್ಲಿಯೇ ದುಡಿದು ನಾಲ್ಕುಕಾಸನ್ನು ಯಜಮಾನನ ಬಡ ಸಂಪಾದನೆಗೆ ಸೇರಿಸುತ್ತಾಳೆ. ಅತ್ಯಂತ ಸಹಜ ಸುಲಭ ಜೀವನ ಮಾರ್ಗವಾದ ಚರಕ, ರಾಷ್ಟ್ರ ಜೀವನದ ಪ್ರಮುಖ ಅಂಗ. ಅನ್ನ ಬಟ್ಟೆಗಳಿಗಾಗಿ ಯಾರನ್ನೂ ಯಾಚಿಸದೆ ಸ್ವಾವಲಂಬನೆ ಯಿಂದ ನಾವು ಸ್ವತಂತ್ರ ರಾಷ್ಟ್ರವಾಗುವ ದೃಢ ಸಂಕಲ್ಪ ಮಾಡಿದ್ದೇವೆ ಎಂದು ಜಗತ್ತಿನ ಸಮಸ್ತ ರಾಷ್ಟ್ರಗಳಿಗೂ ಘೋಷಿಸುವ ಸಂಕೇತ ಚರಕ. ನನ್ನಂತೆ ಈ ಮಾರ್ಗದಲ್ಲಿ ನಂಬಿಕೆಯುಳ್ಳವರು ಈ ಕೂಡಲೆ ತಮ್ಮ ಮನೆಗಳಲ್ಲಿ ಚರಕವನ್ನು ಸ್ಥಾಪಿಸಬೇಕು. ನಾನು ಸೂಚಿಸಿದ ನಮೂನೆಯ ರಾಷ್ಟ್ರೀಯ ಧ್ವಜವನ್ನು ಇಟ್ಟುಕೊಳ್ಳಬೇಕು.

"ರಾಷ್ಟ್ರಧ್ವಜದ ಬಟ್ಟೆ ಖಾದಿಯೆ ಆಗಬೇಕೆಂದು ಬೇರೆ ಹೇಳಬೇಕಾಗಿಲ್ಲ. ಈ ಒರಟು ಬಟ್ಟೆಯ ಮೂಲಕವೇ ವಿದೇಶಿ ಮಾರುಕಟ್ಟೆಗಳ ಹಿಡಿತದಿಂದ ನಾವು ಮುಕ್ತ ರಾಗುವುದು. ಧಾರ್ಮಿಕ ಸಂಸ್ಥೆಗಳೂ ಕೂಡ ನನ್ನ ವಿಚಾರಗಳನ್ನು ಅಂಗೀಕರಿಸುವು ದಾದರೆ ತಮ್ಮ ತಮ್ಮ ಧ್ವಜಗಳ ಒಂದು ಮೂಲೆಯಲ್ಲಿ ರಾಷ್ಟ್ರಧ್ವಜದ ಚಿನ್ಹೆಯನ್ನು ಹಾಕಬೇಕೆಂದು ನಾನು ಸಲಹೆ ಮಾಡುತ್ತೇನೆ. ಉದಾಹರಣೆಗೆ ಖಿಲಾಫತ್ ಧ್ವಜದ ಮೇಲಿನ ಎಡಬದಿಗೆ ರಾಷ್ಟ್ರಧ್ವಜದ ಸಣ್ಣ ನಕ್ಷೆಯನ್ನು ಸೇರಿಸಬಹುದು. ಚರಕದ ಚಿನ್ಹೆ ಮಾತ್ರ ಧ್ವಜದ ಪೂರ್ಣ ಪ್ರಮಾಣಕ್ಕೆ ಹರಡಿರಬೇಕು."

ಈ ಕಾರ್ಯಕ್ರಮಗಳನ್ನು ಅನೇಕರು ಆಕ್ಷೇಪಿಸಿ ಅಪಹಾಸ್ಯ ಮಾಡಿದರು. "ಕಾಲ ಉರುಳಿಹೋಗುತ್ತದೆ. ನಮ್ಮ ಮಾತಿಗಿಂತ ನಮ್ಮ ಕೃತಿ ಅಸಹಕಾರ ಚಳುವಳಿಯ ಪೂರ್ಣ ಅರ್ಥವನ್ನು ಸಾರುತ್ತದೆ." ಎಂದರು ಗಾಂಧೀಜಿ, ಏಪ್ರಿಲ್ ೩೦ರ 'ಯಂಗ್-ಇಂಡಿಯಾದಲ್ಲಿ'":

"ಭಾರತಕ್ಕೆಸಗಿದ ಘೋರ ಪಾತಕಕ್ಕೆ ಅಂದರೆ ಮುಸಲ್ಮಾನರಿಗೂ, ಪಂಜಾಬಿ ಗಳಿಗೂ ಮಾಡಿದ ಅನ್ಯಾಯಗಳಿಗೆ, ಪಶ್ಚಾತ್ತಾಪ ಪಟ್ಟು ಸರ್ಕಾರವು ಆ ಕಳಂಕವನ್ನು ನಿರ್ಮೂಲನ ಮಾಡಿಕೊಳ್ಳದಿದ್ದರೆ ಅಸಹಕಾರ ಚಳುವಳಿ ಎಂದಿಗೂ ಕೊನೆಗಾಣದು. ನಾನದನ್ನು ತಡೆದಿಡುವುದೂ ಇಲ್ಲ. ಈ ಆಡಳಿತ ವ್ಯವಸ್ಥೆಯೇ ಬದಲಿಸಿ ರಾಷ್ಟ್ರ ಸಂಕಲ್ಪಗಳನ್ನು ಗೌರವಿಸುವಂತಾಗುವವರೆಗೂ ಅದು ನಿಲ್ಲದು. ಬಿರುದು ಬಾವಲಿಗಳು, ನ್ಯಾಯಾಲಯಗಳು, ಶಾಲೆಗಳು, ಶಾಸನ ಸಮಿತಿಗಳ ಬಗ್ಗೆ ಇದ್ದ ಮೋಹ ಜಾಲ ವನ್ನು ಕಳೆಯಬೇಕಾದುದು ಅಗತ್ಯವಾಗಿತ್ತು. ರಾಷ್ಟ್ರೀಯವಾದಿಗಳು ಒಟ್ಟಿನಲ್ಲಿ ಈ ಕರೆಯನ್ನು ಗಂಭೀರ ದೃಷ್ಟಿಯಿಂದ ಮನ್ನಿಸಿದ್ದಾರೆ. ಬಿರುದಾಂಕಿತರಾಗಲಿ ಸನ್ನದ್ದನ್ನು ಬಿಸುಡದ ವಕೀಲನಾಗಲಿ ರಾಷ್ಟ್ರಭಕ್ತರ ಶ್ರೇಣಿಯಲ್ಲಿ ಇಲ್ಲ. ಅಂಥವರಿಗೆ ನಮ್ಮಲ್ಲಿ

ಯಾವ ಮರ್ಯಾದೆಯೂ ಇಲ್ಲ. ಶಾಲಾ ಕಾಲೇಜುಗಳನ್ನು ತ್ಯಜಿಸಿ ಬಂದಿರುವ ಯುವಕ–ಯುವತಿಯರಂತೂ ಅಸಹಕಾರ ಚಳುವಳಿಯಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿದ್ದಾರೆ. ಅಗ್ನಿ ಪರೀಕ್ಷೆಗೊಳಗಾಗುವ ಸಮಯದಲ್ಲಿ ತಮ್ಮ ನಿಸ್ಸೀಮ ತ್ಯಾಗ ಬಲಿದಾನಗಳಿಂದ ಈ ಯುವಜನ ಜಗತ್ತನ್ನೇ ಚಕಿತಗೊಳಿಸುವರೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಶಾಸನ ಸಮಿತಿಗಳನ್ನು ಬಹಿಷ್ಕರಿಸಿದವರು ಅಮೋಘ ಸೇವೆ ಮಾಡಿದ್ದಾರೆ. ಸಮಿತಿಯೊಳಗಿದ್ದು ಅವರು ಇದನ್ನು ಮಾಡಲಾಗುತ್ತಿರಲಿಲ್ಲ. ಬಿರುದುಗಳನ್ನು ತ್ಯಜಿಸಿದ ಕೆಲವರೇ ಇದ್ದರೂ ಇತರರಿಗೆ ಮಾರ್ಗದರ್ಶಕರಾಗಿದ್ದಾರೆ. ಈಗ ಈ ವರ್ಗಗಳಲ್ಲಿ ಭಾಷಣ ಪ್ರಚಾರಗಳ ಅಗತ್ಯವೇನೂ ಇಲ್ಲ. ಬಿರುದುಗಳನ್ನು ಬಿಸುಟು, ಕೋರ್ಟುಗಳನ್ನೂ, ಶಾಲೆಗಳನ್ನೂ, ಕೌನ್ಸಿಲ್ಲುಗಳನ್ನೂ ಬಹಿಷ್ಕರಿಸಿ ತಮ್ಮ ನಿರ್ಭೀತ ಕಾರ್ಯದಿಂದಲೂ ಗುಣದಿಂದಲೂ ಈ ಜನ ಪ್ರಭಾವಯುತವಾಗಿ ಸಂದೇಶ ಸಾರಿದ್ದಾರೆ. ಭಾಷಣಗಳಿಗಿಂತಲೂ ಮಿಗಿಲಾಗಿ ಪ್ರಚಾರ ಮಾಡಿದ್ದಾರೆ. ರಾಷ್ಟ್ರೀಯ ವಿದ್ಯಾಶಾಲೆಗಳು ಎಲ್ಲೆಲ್ಲೂ ಏಳುತ್ತಿವೆ. ವಿದ್ಯಾರ್ಥಿ–ವಿದ್ಯಾರ್ಥಿನಿಯರು ಸರ್ಕಾರಿ ಶಾಲೆಗಳನ್ನು ತ್ಯಜಿಸುತ್ತಲೇ ಇದ್ದಾರೆ. ಸರ್ಕಾರ ಕೊಡುವ ಅಂಕಿ–ಅಂಶಗಳು ಶುದ್ಧ ಸುಳ್ಳು. ಒಬ್ಬ ಕೌನ್ಸಿಲರ್ "ಮೂರು ಸಾವಿರಕ್ಕಿಂತ ಕಮ್ಮಿ ಹುಡುಗರು ಶಾಲೆ ಬಿಟ್ಟು ಬಂದಿದ್ದಾರೆ" ಎಂದರು. ನೂರಾರು ರಾಷ್ಟ್ರೀಯ ವಿದ್ಯಾಲಯಗಳಲ್ಲಿನ ಸಾವಿರಾರು ಮಕ್ಕಳು ಶಾಲೆಗಳನ್ನು ಬಿಟ್ಟು ಬಂದವರೇ ಅಲ್ಲವೇ? ವಕೀಲಿಯನ್ನು ಬಿಡುವವರ, ಬಿರುದುಗಳನ್ನು ಹಿಂದಿರುಗಿಸುವವರ ಸಂಖ್ಯೆ ಬೆಳೆಯುತ್ತಲೇ ಇದೆ. ಈ ಅಸಹಕಾರ ಚಳುವಳಿ ಒಂದು ಧಾರ್ಮಿಕ ಹೋರಾಟ, ಜನರಲ್ಲಿ ಅದು ಸ್ಥಾಯಿಯಾಗಿ ಬೇರೂರಿದೆ ಎಂದು ಅರ್ಥಮಾಡಿಕೊಂಡಾಗ ಉಳಿದ ಅಂಜುಬುರುಕರೂ ಧೈರ್ಯ ಮಾಡಿ ಮುನ್ನುಗ್ಗಿ ತ್ಯಾಗ ಮಾಡುತ್ತಾರೆ.

ದಕ್ಷಿಣ ಆಫ್ರಿಕಾದ ಹೋರಾಟ ಭಾರತದಲ್ಲೂ ಪುನರಾವೃತ್ತಿಗೊಂಡರೆ ನನಗೇನೂ ಆಶ್ಚರ್ಯವಾಗದು. ಭಾರತ ಹಿಂದೆ ಬೀಳುವುದೆಂದು ನಾನು ಎಂದಿಗೂ ಒಪ್ಪಲಾರೆ. ಲಾರ್ಡ್ ಕ್ಯಾನಿಂಗ್ ಅವರಂದಂತೆ ಭಾರತದ ಶುಭ್ರ ನೀಲಾಂಬರದಲ್ಲಿ ಎಲ್ಲೋ ಒಂದು ಅಂಗುಷ್ಠದಗಲದ ತುಣುಕು ಮೋಡ ಕ್ಷಿತಿಜದಲ್ಲಿ ತೇಲಬಹುದು. ಆದರೆ ಅದೇ ಮೋಡ ಅನಿರೀಕ್ಷಿತ ಮಹಾಮೇಘವಾಗಿ ಆವರಿಸಿ ಯಾವ ಕ್ಷಣದಲ್ಲಿ ಸಿಡಿಲೆರಗಿ ಸುರಿದೀತೆಂದು ಯಾರೂ ಹೇಳಲಾರರು. ಭಾರತವೆಲ್ಲ ಒಗ್ಗಟ್ಟಾಗಿ, ಎಂದು ಕಾರ್ಯೋನ್ಮುಖವಾಗುವುದೆಂದು ನಾನೀಗ ಹೇಳಲಾರೆ. ಆದರೆ ರಾಷ್ಟ್ರದ ಬುದ್ಧಿಜೀವಿಗಳಿಗೆ ಮಾಡಿದ ಮನವಿ ಎಂದಿಗೂ ನಿಷ್ಫಲವಾಗದು. ಯಾವುದೇ ಒಂದು ದಿನ–ಬಹುಶಃ ಈ ವರ್ಷದ ಅವಧಿಯಲ್ಲೇ ವಿದ್ಯಾವಂತ ಜನ ರಾಷ್ಟ್ರಗೌರವಕ್ಕೆ ಉಚಿತವಾದ ರೀತಿಯಲ್ಲಿ ಜಾಗೃತಿಗೊಂಡು ಪ್ರತಿಭಟಿಸುತ್ತಾರೆಂದು ನಾನು ದೃಢವಾಗಿ ಹೇಳಬಲ್ಲೆ."

"ಯಾರೇ ಮಾಡಲಿ, ಮಾಡದಿರಲಿ, ಯಾರೂ ಯಾವ ವರ್ಗವೂ ಈ ರಾಷ್ಟ್ರದ ಮುನ್ನಡೆಯನ್ನು ತಡೆಗಟ್ಟಲಾರದು. ಅನಕ್ಷರಸ್ಥ ಕುಶಲಕರ್ಮಿಗಳು, ಮಹಿಳೆಯರು, ಬೀದಿಯಲ್ಲಿನ ಶ್ರೀಸಾಮಾನ್ಯರು ಈ ಹೋರಾಟದಲ್ಲಿ ಭಾಗವಹಿಸುತ್ತಿದ್ದಾರೆ. ಬುದ್ಧಿ

ಜೀವಿಗಳಿಗೆ ಮಾಡಿದ ಮನವಿ ಅವರ ದಾರಿಯನ್ನು ಸುಗಮ ಮಾಡಿತು. ವೀರರನ್ನೂ, ಅಂಜುಬುರುಕರನ್ನೂ ಗುರ್ತಿಸಬೇಕಾಗಿತ್ತು. ಬುದ್ಧಿಜೀವಿ ವರ್ಗ ಈ ಅಗ್ನಿಪರೀಕ್ಷೆಗೊಳಪಡ ಬೇಕಾಗಿತ್ತು. ಅವರ ಮೂಲಕವೇ ಇದರ ಪ್ರಾರಂಭವೂ ಆಗಬೇಕಾಗಿತ್ತು. ದೇವರ ದಯದಿಂದ ಈ ಅಸಹಕಾರ ಚಳುವಳಿ ತನ್ನ ಸ್ವಾಭಾವಿಕವಾದ ನಿರೀಕ್ಷಿತ ಪಥದಲ್ಲೇ ಸಾಗುತ್ತಿದೆ.

" ತೀವ್ರವಾದ ವಿಶಿಷ್ಟವಾದ ಸ್ವರೂಪದಲ್ಲಿ ಸ್ವದೇಶಿ ಪ್ರಚಾರ ಆರಂಭವಾಗ ಬೇಕಾಗಿತ್ತು. ಅದು ತನ್ನ ಸರದಿಯಲ್ಲಿ ಬಂದು ನಿಂತಿದೆ. ಅಸಹಕಾರ ಕಾರ್ಯಕ್ರಮದ ಅವಿಭಾಜ್ಯ ಅಂಗ ಅದು. ಅತಿ ಮುಖ್ಯವಾದ, ಅತಿ ಸುರಕ್ಷಿತವಾದ, ಅತಿ ನಿಶ್ಚಿತವಾದ ಮಾರ್ಗ. ನೂಲುವ ಚರಕದೆಡೆಗೆ ರಾಷ್ಟ್ರದ ಗಮನ ಹರಿಯ ಬೇಕಾಗಿತ್ತು. ತನ್ನ ಪೂರ್ವಾಗ್ರಹಗಳನ್ನೂ, ಮೂಢ ನಂಬಿಕೆಗಳನ್ನೂ, ವರ್ಜಿಸಿ ಮುನ್ನಡೆಯ ಬೇಕಾಗಿತ್ತು. ಬ್ರಿಟಿಷ್ ವಸ್ತುಗಳ ಹಾಗೂ ಎಲ್ಲ ವಿದೇಶಿ ಸಾಮಗ್ರಿಗಳ ಬಹಿಷ್ಕಾರ ಹಾಕಿದ ಮಾತ್ರ ದಿಂದ ಯಾವ ಪುರುಷಾರ್ಥವೂ ಸಾಧಿಸಲಾರದೆಂದು ಅರಿವಾಗಬೇಕಾಗಿತ್ತು. ಸ್ವದೇಶಿ ವಸ್ತುಗಳನ್ನು ತ್ಯಜಿಸಿದಂದಿನಿಂದಲೇ ತನ್ನ ದಾಸ್ಯ ಪ್ರಾರಂಭವಾಯಿತೆಂದು ರಾಷ್ಟ್ರ ಮನದಟ್ಟು ಮಾಡಿಕೊಂಡು ಮತ್ತೆ ಕೈನೂಲಿನ ಕೈಮಗ್ಗದ ಬಟ್ಟೆಯನ್ನು ಸ್ವೀಕರಿಸಿದರೆ ಮಾತ್ರ ಸ್ವಾತಂತ್ರ್ಯ ಲಭ್ಯವಾದೀತೆಂದು ತಿಳಿಯಬೇಕಾಗಿತ್ತು. ನೂಲು ನೇಯುವ ಕಲೆಯನ್ನು ತಿಳಿಯದೆ ನಷ್ಟ ಮಾಡಿಕೊಂಡಾಗಲೇ ತನ್ನ ಸದಭಿರುಚಿಯನ್ನು ಸುಸಂಸ್ಕೃತ ಜೀವನವನ್ನು ನಾಶ ಮಾಡಿಕೊಂಡಿತು. ಬ್ರಿಟಿಷ್ ಸೈನ್ಯದ ವಿಪರೀತ ವೆಚ್ಚದ ಭಾರ ಕ್ಕಿಂತಲೂ ಹೆಚ್ಚಾಗಿ, ಈ ವಸ್ತ್ರೋತ್ಪಾದನೆಯ ಉಪವೃತ್ತಿಯ ನಾಶದಿಂದ ಭಾರತದ ಆರ್ಥಿಕ ಸತ್ವವೇ ಹರಣವಾಗಿ ಪದೇ ಪದೇ ಕ್ಷಾಮ ಡಾಮರಗಳಿಗೆ ಜೀವನವನ್ನೀಡು ಮಾಡಿತೆಂಬ ಪ್ರಜ್ಞೆ ಉದಯಿಸಬೇಕಾಗಿತ್ತು. ಚರಕದ ಈ ಮಹಾಸಂದೇಶದಲ್ಲಿ ಅಪಾರ ಶ್ರದ್ಧೆಯಿರುವ ಕಾರ್ಯಕರ್ತರು ಎಲ್ಲ ಪ್ರಾಂತಗಳಲ್ಲೂ ಮುಂದೆ ಬಂದು ಖಾದಿ ಬಟ್ಟೆಯ ಅಲೌಕಿಕ ಸೌಂದರ್ಯವನ್ನೂ ಉಪಯುಕ್ತತೆಯನ್ನೂ ಮೆಚ್ಚಿಕೊಳ್ಳು ವಂತೆ ಪ್ರಚಾರ ಮಾಡಬೇಕಾಗಿತ್ತು. ಇವೆಲ್ಲವೂ ಈಗ ಸಿದ್ಧಿಸಿವೆ. ಈ ರಾಷ್ಟ್ರೀಯ ಧರ್ಮದ ಪುನರುತ್ಥಾನಕ್ಕಾಗಿಯೇ ಕೋಟಿ ಕಾರ್ಯಕರ್ತರೂ, ಕೋಟಿ ರೂಪಾಯಿಗಳ ನಿಧಿಯೂ ಸಂಗ್ರಹವಾಗಬೇಕು. ಕೇವಲ ಕೆಲವು ಚರಕಗಳನ್ನು ನಡೆಸುವ ಸಮಸ್ಯೆ ಯಲ್ಲ ಇದು. ಭಾರತದ ಆರು ಕೋಟಿ ಗೃಹಗಳಲ್ಲೂ ರಾಟೆ ತಿರುಗುವಂತಾಗಬೇಕು. ಇಡೀ ಭಾರತದ ಜನತೆಗೆ ಬೇಕಾಗುವ ಬಟ್ಟೆಯೆಲ್ಲವೂ ಉತ್ಪಾದನೆಯಾಗಿ ಸರಿಯಾಗಿ ವಿತರಣೆಯಾಗಬೇಕಾದ ಬೃಹತ್ ಸಮಸ್ಯೆ ಇದು. ಈ ದಿಸೆಯಲ್ಲಿ ಭಾರತ ದಿಟ್ಟ ಹೆಜ್ಜೆ ಇಟ್ಟು ಒಂದು ಕೋಟಿ ರೂಪಾಯಿ ಸಂಗ್ರಹಿಸಿ, ಒಂದು ಕೋಟಿ ಕಾರ್ಯಕರ್ತರನ್ನು ಸಿದ್ಧಮಾಡಿ, ಇಪ್ಪತ್ತು ಲಕ್ಷ ಚರಕಗಳು ಅಷ್ಟೇ ಸಂಖ್ಯೆಯ ಕುಟೀರಗಳಲ್ಲಿ ಯಶಸ್ವಿ ಯಾಗಿ ಕೆಲಸಮಾಡುವಂತೆ ಜೂನ್ ಮೂವತ್ತರೊಳಗಾಗಿ ಸಾಧಿಸುವುದಾದರೆ ಸ್ವರಾಜ್ಯ ಸಾಧನೆಗೆ ಹೆಚ್ಚೂಕಡಿಮೆ ಪೂರ್ಣ ಅರ್ಹತೆ ಬಂದಂತೆಯೇ. ಏಕೆಂದರೆ ಈ ಮಹತ್ತರ

ವಾದ ಕಾರ್ಯಸಾಧನೆಯಲ್ಲಿ ಇಡೀ ರಾಷ್ಟ್ರ ಭಾಗವಹಿಸಿ ಸಾತ್ವಿಕತೆ, ಸ್ವಾವಲಂಬನೆ ಮತ್ತು ಪರಿಪೂರ್ಣತೆಗಳನ್ನು ಗಳಿಸಿಕೊಂಡು ಅಪ್ರತಿಹತ ಶಕ್ತಿಯಿಂದ ಎದ್ದು ನಿಲ್ಲುತ್ತದೆ. ಯಾವುದೇ ರಾಷ್ಟ್ರ ತನ್ನ ಆತ್ಮಪ್ರೇರಿತ ಪರಿಶ್ರಮದಿಂದ ವಿದೇಶಿ ವಸ್ತ್ರಾವಲಂಬನೆ ಯನ್ನು ತಿರಸ್ಕರಿಸಿ ನಿಲ್ಲಬಲ್ಲುದೋ ಅಂಥ ರಾಷ್ಟ್ರ, ಸ್ವರಾಜ್ಯಕ್ಕೆ ಸಿದ್ಧವಾದಂತೆಯೇ ಸರಿ. ಇದು ಸಾಧ್ಯವಾದಲ್ಲಿ ಭಾರತದ ನಗರಗಳಲ್ಲಿನ ಅಭೇದ್ಯ ಕೋಟೆಗಳು ಸ್ವಾತಂತ್ರ್ಯ ಹರಣಕ್ಕೆ ಕಾರಣವಾಗದೆ ಮಕ್ಕಳ ಆಟದ ಮೈದಾನಗಳಾಗಿ ಪರಿವರ್ತಿತವಾದಾವು; ಭಾರತ ಇಂಗ್ಲೆಂಡ್ ಬಾಂಧವ್ಯ ಶುದ್ಧವಾದೀತು; ಲಾಂಕ್‌ಷೈರಿನ ಶಕ್ತಿ ನಿರಸನವಾದೀತು. ಆಗ ಬ್ರಿಟಿಷರು ಇಚ್ಛಿಸಿದರೆ ನಮ್ಮ ಸ್ನೇಹಿತರಂತೆ ಸರಿಸಮಾನರಂತೆ ಭಾರತದ ಒಳಿತನ್ನೇ ತಮ್ಮ ಏಕೈಕ ಧ್ಯೇಯವನ್ನಾಗಿಟ್ಟುಕೊಂಡು ನಮ್ಮೊಡನೆಯೇ ಇರಬಹುದು. ಅಸಹ ಕಾರದ ಗುರಿಯೆ ಇದು. ನಮ್ಮೊಡನೆ ಗೌರವಯುತವಾದ ನಿಯಮಗಳನ್ನು ಒಪ್ಪಿ ಕೊಂಡು ಸಹಕರಿಸಬೇಕು. ಇಲ್ಲದಿದ್ದಲ್ಲಿ ಇಲ್ಲಿಂದ ಹೊರಟು ಹೋಗಬೇಕು, ಎಂಬುದೇ ನಮ್ಮ ಆಹ್ವಾನ. ನಮ್ಮಿಬ್ಬರ ಬಾಂಧವ್ಯವನ್ನು ಪರಿಶುದ್ಧ ಬುನಾದಿಯ ಮೇಲೆ ಸ್ಥಿರ ಗೊಳಿಸಿ ನಮ್ಮ ಆತ್ಮ ಗೌರವಕ್ಕೂ ಮರ್ಯಾದೆಗೂ ಚ್ಯುತಿ ಬರದಂತೆ ರಕ್ಷಿಸಿಕೊಳ್ಳು ವುದಕ್ಕಾಗಿಯೇ ಈ ಕಾರ್ಯಕ್ರಮ.

"ಈ ರಚನಾತ್ಮಕ ಚಳುವಳಿಯನ್ನು ಯಾವ ಹೆಸರಿನಿಂದಾದರೂ ಕರೆಯಬಹುದು. 'ಸ್ವದೇಶಿ ಮತ್ತು ಮಿತಾಚಾರ' ಎನ್ನಿ. ಬೇಕಾದರೆ ಈ ಹಿಂದೆ ಮಾಡಿದ ಪ್ರಯತ್ನ ವೆಲ್ಲ ವಿಫಲವಾಯಿತು ಎಂದುಕೊಳ್ಳಿ. ಈಗಲಾದರೂ ಈ ಕೈರಾಟೆಯ ಉದ್ಯಮವನ್ನು ಸಾರ್ವತ್ರಿಕ ಮಾಡಿ ಸಫಲಗೊಳಿಸಲು, ಮದ್ಯಪಾನವನ್ನು ನಿಷೇಧಿಸಲು ಸರ್ಕಾರವೂ ಮತ್ತು ನಮ್ಮ ಮುಂದಗಾಮೀ ಸ್ನೇಹಿತರೂ ಸಹಕರಿಸಬೇಕೆಂದು ಆಹ್ವಾನಿಸುತ್ತೇನೆ. ಈ ಎರಡು ಕಾರ್ಯಕ್ರಮಗಳ ಫಲಿತಾಂಶಗಳನ್ನು ಕುರಿತು ನೀವೇನೂ ಚಿಂತಿಸಬೇಕಾಗಿಲ್ಲ. ಬಿಡುವ ಫಲವೇ ಮರದ ಗುಣಕ್ಕೆ ಸಾಕ್ಷಿ."

# ನಿಧಾನವಾಗಿ ಮುನ್ನಡೆಯಿರಿ

## ೧೯೨೧

ಗಾಂಧೀಜಿಯಿಂದ ಪ್ರಾರಂಭವಾದ ಈ ಹೊಸ ಕಾರ್ಯಕ್ರಮ ಮತ್ತು ಧೋರಣೆಗಳು ಕಾಂಗ್ರೆಸ್ಸಿನ ಪ್ರಗತಿಯನ್ನು ನೂರ್ಮಡಿಸಿ ಹೆಚ್ಚಿಸಿದುವು. ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನತೆಯನ್ನು ನಡೆಸುವ ಶಕ್ತಿ ರಾಜಕೀಯ ಪಕ್ಷವಾಗಿ, ಕಾಂಗ್ರೆಸ್ ಸುದೃಢವಾಗಿ ನಿಂತಿತು. ಅಸಹಕಾರ ಚಳುವಳಿ ವ್ಯಾಪಕವಾಗಿ ಬೆಳೆದುದಲ್ಲದೆ ಇತರ ವಿವಿಧ ರೀತಿಯ ಜನತಾ ಸಂಗ್ರಾಮಗಳೂ ದೇಶದ ನಾನಾ ಕಡೆ ಪ್ರಾರಂಭವಾದುವು. ಪಂಜಾಬಿನಲ್ಲಿ ಸರ್ಕಾರದ ರಕ್ಷಣೆ ಪಡೆದು ಶೋಷಿಸುತ್ತಿದ್ದ ಶ್ರೀಮಂತ 'ಮಹಂತ' ಪಂಗಡದ ಮೇಲೆ ಅಕಾಲಿ ರೈತರು ದಂಗೆ ಎದ್ದರು. ೧೯೨೧ರ ಮಾರ್ಚಿಯಲ್ಲಿ ಗುರು ದ್ವಾರವೊಂದರಲ್ಲಿ ಪ್ರಾರ್ಥನೆಗೆ ಸೇರಿದ್ದ ಸಿಖ್ ಯಾತ್ರಿಕರ ಮೇಲೆ ಹಠಾತ್ತನೆ ದಬ್ಬಾಳಿಕೆ ನಡೆದು ಹಲವರು ಗುಂಡಿನೇಟಿನಿಂದ ಸತ್ತರು. ಈ ಅಕಾಲಿ ಚಳುವಳಿ ರಾಷ್ಟ್ರೀಯ ಜಾಗೃತಿಯ ಪರಿಣಾಮ.

ಏಪ್ರಿಲ್‌ನಲ್ಲಿ ಮಹಾರಾಷ್ಟ್ರದ ಮುಲ್ಸಿಯ ರೈತರು ತಮ್ಮ ಬೇಡಿಕೆಗಳು ಈಡೇರ ದಿದ್ದಲ್ಲಿ ಸತ್ಯಾಗ್ರಹ ಹೂಡುವುದಾಗಿ ಹಠತೊಟ್ಟರು. ಶ್ರೀಮಂತ ತಾತಾ ಮನೆತನ ದವರ ವಿರುದ್ಧ ಬಡ ರೈತರ ಪರವಾಗಿ ಗಾಂಧೀಜಿ ವಾದಿಸಿದರು.

"ಈ ದೀನ ಜನತೆಯ ಬಗೆಗೆ ನನ್ನ ಎದೆ ಕರಗುತ್ತದೆ. ತಾತಾರವರ ಈ ಶ್ರೀಮಂತ ಮನೆತನ ಕೇವಲ ಶಾಸನ ಬಲದ ಮೇಲೆ ವಾದಿಸದೆ ಈ ಬಡ ಜನರೊಡನೆ ಚರ್ಚೆ ಮಾಡಿ ಅವರ ಸಹ ಮತದೊಡನೆ ತಮಗೆ ತೋರಿದ ಕ್ರಮಕ್ಕೆಗೊಳ್ಳಬೇಕೆಂದು ಆಶಿಸು ತ್ತೇನೆ. ರಾಷ್ಟ್ರಾಭಿವೃದ್ಧಿಗಾಗಿ ತಾತಾ ಮನೆತನ ಸ್ಥಾಪಿಸಿರುವ ಉದ್ಯಮಗಳು ಒಬ್ಬ ಬಡ ಭಾರತೀಯನನ್ನು ತುಳಿದು ಶೋಷಣೆ ಮಾಡುವುದಾದರೂ ಅವು ದೇಶಕ್ಕೆ ವರಪ್ರಸಾದವೆಂದು ಹೇಳಿಕೊಳ್ಳಲಾದೀತೆ? ದೇಶದಲ್ಲಿರುವ ಮೂರು ಕೋಟಿ ದೀನ ದಲಿತರನ್ನು ಅರೆ ಹೊಟ್ಟೆಯ ಕಂಗಾಲು ಸ್ತ್ರೀ–ಪುರುಷರನ್ನು, ಜರ್ಜರಿತ ಬಡ ಜನಾಂಗ ವನ್ನು ಗುಂಡಿಟ್ಟು ಕೊಂದು ಹೆಣಗಳನ್ನು ಗೊಬ್ಬರವಾಗಿಸಿ ಕತ್ತಿ ಹಿಡಿಗಳಿಗಾಗಿ ಮೂಳೆ ಗಳನ್ನುಪಯೋಗಿಸಿ ಬಿಟ್ಟರೆ ಒಂದೇ ಸಾರಿಗೆ ದಾರಿದ್ರ್ಯ ರೋಗ ರುಜಿನಗಳೆಲ್ಲ ಕೊನೆ ಗೊಂಡು ಮಿಕ್ಕವರು ಬಹುಶಃ ಭೋಗಲೋಲುಪ್ತರಾಗಬಹುದು. ಹೀಗೆ ವಾದಿಸಿದರೆ ಹುಚ್ಚು ಹಿಡಿದಿದೆ ಎನ್ನುವುದಿಲ್ಲವೇ? ಆದರೂ ಈಗ ಬಡಜನರ ಜೀವನಾಧಾರವಾದ, ಅವರ ಭಾವಾತ್ಮಕ ಸುಖ ಸಂತೋಷಗಳ ಬುನಾದಿಯಾದ, ಅಮೂಲ್ಯ ಭೂ ಸಂಪತ್ತನ್ನು ಕಡ್ಡಾಯವಾಗಿ ಕಸಿದುಕೊಳ್ಳುವ ಕ್ರೌರ್ಯಕ್ಕೆ ಕೈ ಹಾಕಿದಲ್ಲಿ ಗುಂಡಿಟ್ಟು ಕೊಂದಂತಲ್ಲ ವೇನು? ಈ ದುರ್ಬಲ ನಿಸ್ಸಹಾಯಕ ಬಡವರ ಆಶೋತ್ತರಗಳೆಲ್ಲ ನಾಶವಾಗದಂತೆ ವರ್ತಿಸಿದರೆ ಮಾತ್ರವೇ ತಾವು ರಾಷ್ಟ್ರಕಲ್ಯಾಣ ಸಾಧಿಸಿದಂತಾದೀತೆ ಹೊರತು

ಅನ್ಯಥಾ ಆಗದು ಎಂದು ಗೌರವಾನ್ವಿತವಾದ ತಾತಾ ಮನೆತನದ ಪಾಲಕರಿಗೆ ಸೂಚಿಸ ಬಯಸುತ್ತೇನೆ" ಎಂದು ಬರೆದರು.

ಕಾರ್ಮಿಕರಲ್ಲಿ ಸಮರೋತ್ಸಾಹ ಹೆಚ್ಚುತ್ತ ಸಾಗಿತು. ಅಶಾಂತಿ ಎಲ್ಲೆಲ್ಲೂ ಹರಡಿತು. ಪೂರ್ವ ಬಂಗಾಳ ರೈಲ್ವೆಯ ಕಾರ್ಮಿಕರು ಮುಷ್ಕರ ಹೂಡಿದರು. ಸಂಚಾರವೇ ಸ್ಥಗಿತವಾಯಿತು. ೧೯೨೧ರಲ್ಲೇ ಸುಮಾರು ನಾಲ್ಕು ನೂರು ಮುಷ್ಕರಗಳಲ್ಲಿ ಐದು ಲಕ್ಷ ಕಾರ್ಮಿಕರು ಭಾಗವಹಿಸಿದ್ದರು.

ಅಹಿಂಸಾಮಾರ್ಗದ ಧೋರಣೆ ಇದ್ದರೂ ಸಹ, ದೇಶದ ಕೆಲವು ಭಾಗಗಳಲ್ಲಿ ಹಿಂಸಾಚಾರ ತಲೆ ಎತ್ತುತ್ತಿತ್ತು. ಹೀಗಾದಾಗಾಗಲೆಲ್ಲ ಹೋರಾಟದ ಪ್ರಗತಿಯಲ್ಲಿ ಬೆನ್ನಿರಿತವಾದಂತೆ ಎಂದು ಗಾಂಧೀಜಿ ತಿಳಿಯುತ್ತಿದ್ದರು. ೧೯೨೧ರ ಮೇ ೪ರಂದು ಹೀಗೆ ಬರೆದರು. "ಪತ್ರಿಕಾ ಸುದ್ದಿಗಳು ಬಹುಪಾಲು ನಿಜವಾದಲ್ಲಿ ಮಾಲೆಗಾಂವ್‌ನಲ್ಲಿ ಅಸಹಕಾರ ಕಾರ್ಯಕರ್ತರು, ತಮ್ಮ ಧ್ಯೇಯಗಳಿಗೂ, ನಂಬಿಕೆಗಳಿಗೂ, ದೇಶಕ್ಕೂ ದ್ರೋಹ ಬಗೆದಿದ್ದಾರೆ. ಹೋರಾಟದ ಮುನ್ನಡೆಗೆ ತಡೆ ಹಾಕಿ ಹಿಂದಕ್ಕೆ ತಳ್ಳಿದ್ದಾರೆ. ಅಸಹಕಾರ ಆಂದೋಲನದ ಪ್ರಧಾನ ಬುನಾದಿಯೇ ಅಹಿಂಸಾತ್ಮಕ ವರ್ತನೆ. ಅಹಿಂಸೆ ಯಿಲ್ಲದ ತ್ಯಾಗ ಮಣ್ಣು ಪಾಲಾಗುತ್ತದೆ. ಕೃತಕಫಲ ಎಂದೂ ನಿಜವಾದ ಹಣ್ಣೆನಿಸ ಲಾರದು. ಕರ್ತವ್ಯ ನಿಷ್ಠರಾಗಿದ್ದಾರೆಂದು ತಿಳಿದೂ ಅಂಥ ಅಧಿಕಾರಿಗಳ ಕೊಲೆ ಮಾಡಿರುವ ವರದಿ ನಿಜವಾದರೆ ಅದು ಉದ್ದೇಶಪೂರಿತ ಅಪರಾಧ. ಹೇಡಿತನವೆನಿಸುವ ಆಕ್ರಮಣ. ಛಲದಿಂದ ಕೆಲವರು ಕಾನೂನು ಮುರಿದು ಶಿಕ್ಷೆಯನ್ನು ಸ್ವಾಗತಿಸಿದರು. ಆದ್ದರಿಂದ ಸೆರೆಮನೆಯ ಶಿಕ್ಷೆ ಕೊಟ್ಟಾಗ ಅಸಮಾಧಾನ ಪಡುವುದು ನ್ಯಾಯವಲ್ಲ. ಮಾಲೆಗಾಂವ್‌ನಲ್ಲಾದಂತಹ ಹಿಂಸಾಕೃತ್ಯಗಳು ಸರ್ಕಾರದ ದಬ್ಬಾಳಿಕೆಗೆ ಸಹಾಯ ವಾಗುತ್ತವೆ. ಅದರಲ್ಲಿ ತೊಡಗಿದ ಜನ ಸರ್ಕಾರಕ್ಕೆ ಸಹಕಾರಿಗಳೇ ಆಗುತ್ತಾರೆ. ಕೆಲವು ಅಧಿಕಾರಿಗಳು ಬಲಿಯಾಗಿ ಅಸಹಕಾರ ಚಳುವಳಿ ಮುರಿದು ಬೀಳುವುದಾದರೆ ಸರ್ಕಾರ ಸಂತೋಷವಾಗಿಯೇ ಅವರನ್ನು ಬಲಿಕೊಡುತ್ತದೆ. ಇಂಥ ಕೊಲೆಗಳು ಇನ್ನಷ್ಟಾದರೆ ನಾವು ಸಾರ್ವಜನಿಕ ಸಹಾನುಭೂತಿಯನ್ನೇ ಕಳೆದುಕೊಳ್ಳುತ್ತೇವೆ. ನಮ್ಮ ಹಿಂಸಾ ಚಾರವನ್ನು ಅವರು ಸಹಿಸಲಾರರೆಂದು ನನಗೆ ಪೂರ್ಣ ಮನವರಿಕೆಯಾಗಿದೆ. ನಮ್ಮ ಜನ ಶಾಂತ ಸ್ವಭಾವದವರು. ಈ ಹೋರಾಟ ಅಹಿಂಸಾತ್ಮಕವಾದುದರಿಂದಲೇ ಅವರದನ್ನು ಸ್ವಾಗತಿಸಿದ್ದಾರೆ."

ರಾಜಕೀಯ ಪರಿಸ್ಥಿತಿ ಉತ್ಕಟವಾಯಿತು. ಹೊಸ ವೈಸ್‌ರಾಯ್ ಲಾರ್ಡ್ ರೀಡಿಂಗ್, ಗಾಂಧೀಜಿಯನ್ನು ಮೇ ತಿಂಗಳ ಮಧ್ಯಭಾಗದಲ್ಲಿ ಸಮಾಲೋಚನೆಗಾಗಿ ಸಿಮ್ಲಾಕ್ಕೆ ಆಹ್ವಾನಿಸಿದರು.

ರೀಡಿಂಗರು ತಮ್ಮ ಮಗನಿಗೆ ಪತ್ರ ಬರೆದು ತಾವು ಆರು ಬಾರಿ ಗಾಂಧಿಯವ ರೊಡನೆ ಸಂಭಾಷಿಸಿದುದಾಗಿ ತಿಳಿಸಿದರು. "ಮೊದಲ ಬಾರಿ ನಾಲ್ಕೂವರೆ ಗಂಟೆಗಳ ಕಾಲ ಮಾತನಾಡಿದೆವು. ಎರಡನೆಯ ಸಲ ಮೂರು ಗಂಟೆ, ಆಮೇಲೆ ಮೂರು ಸಲವೂ

ಒಂದೂವರೆ ಗಂಟೆಗಳ ಕಾಲ, ಅನಂತರ ಆರನೆಯ ಬಾರಿಗೆ ಮುಕ್ಕಾಲು ಗಂಟೆ. ಗಾಂಧಿಯವರ ವ್ಯಕ್ತಿತ್ವವನ್ನಳೆಯಲು ನನಗೆ ಬೇಕಾದಷ್ಟು ಅವಕಾಶವಿತ್ತು...ಅವರು ಅಂಥದೇನೂ ಸೆರೆಹಿಡಿಯುವ ರೂಪದವರಲ್ಲ...... ದಾರಿಯಲ್ಲಿ ಎದುರಾಗಿದ್ದರೆ ಅವರ ಕಡೆ ನಾನು ಎರಡನೆಯ ಸಲ ಬಹುಶಃ ನೋಡುತ್ತಿರಲಿಲ್ಲ. ಆದರೆ ಅವರ ಮಾತಿನಲ್ಲಿ ಒಂದು ವಿಶೇಷ ಆಕರ್ಷಕ ಗುಣವಿದೆ. ನೇರವಾದ ಮಾತು, ಸುಂದರವಾದ ಇಂಗ್ಲಿಷ್ ಭಾಷೆ ಬಳಸುತ್ತಾರೆ. ತೂಕಮಾಡಿ ಪದ ಪ್ರಯೋಗ ಮಾಡುತ್ತಾರೆ. ಯಾವ ಸಂಕೋಚಕ್ಕೂ ಎಡೆಗೊಡುವುದಿಲ್ಲ. ಕೆಲವು ರಾಜಕೀಯ ಸಮಸ್ಯೆಗಳನ್ನು ಚರ್ಚಿಸುವಾಗ ಬಿಟ್ಟರೆ ಮಿಕ್ಕ ಹಾಗೆ ಅವರ ಸುತ್ತ ವಿಶೇಷ ಪ್ರಾಮಾಣಿಕತೆ ಪ್ರತಿಬಿಂಬಿಸಿರುತ್ತದೆ. ಧಾರ್ಮಿಕ ನಂಬಿಕೆಗಳಲ್ಲಿ ಅವರಿಗೆ ಗಾಢವಾದ ಶ್ರದ್ಧೆ. ಅತಿರೇಕಕ್ಕೆ ಮುಟ್ಟುವಷ್ಟು ತೀವ್ರತೆಯಿಂದಲೇ ಅಹಿಂಸೆ ಮತ್ತು ಪ್ರೇಮದಲ್ಲಿ ಅವರ ಶ್ರದ್ಧೆಯಿದೆ. ಅವುಗಳ ಮೂಲಕವೇ ಭಾರತದ ವಿಮೋಚನೆಯಾಗುವುದೆಂದೂ, ಅವುಗಳ ಶಕ್ತಿಯಿಂದಲೇ ಬ್ರಿಟಿಷ್ ಸರ್ಕಾರವನ್ನು ಎದುರಿಸಲು ಸಾಧ್ಯವೆಂದೂ ನಂಬಿದ್ದಾರೆ. ಅವರ ಧಾರ್ಮಿಕ ಮತ್ತು ನೈತಿಕ ಮೌಲ್ಯಗಳ ಪ್ರಜ್ಞೆ ಮೆಚ್ಚುವಂತಹದು. ಅತ್ಯುಚ್ಚಮಟ್ಟದ ಧೋರಣೆಗಳೆಂದೇ ನಾನು ಭಾವಿಸಿದ್ದೇನೆ. ಆದರೆ ರಾಜಕೀಯ ಕ್ಷೇತ್ರಕ್ಕೆ ಅವುಗಳನ್ನು ಅನ್ವಯಿಸುವ ಅವರ ಪ್ರಯತ್ನ ನನಗೆ ಪೂರ್ಣ ಅರ್ಥವಾಗದು....ನಾವು ಪರಸ್ಪರ ಮನಬಿಚ್ಚಿ ಮಾತನಾಡಿದೆವು. ಅವರು ಅತ್ಯಂತ ವಿನಯದಿಂದ ನಡೆದುಕೊಂಡರು. ಅತ್ಯುತ್ಕೃಷ್ಟ ಸಭ್ಯತೆ ಅವರದು. ತನ್ನ ಮಾತಿಗೆ ಯಾವ ರೀತಿಯಲ್ಲೂ ತಪ್ಪದಂತೆ ಎಚ್ಚರ ವಹಿಸಿ ನನ್ನೊಡನೆ ವಿವಿಧ ಚರ್ಚೆಗಳಲ್ಲಿ ಪಾಲ್ಗೊಂಡರು."

ನಾಲ್ಕು ಪ್ರಮುಖ ವಿಷಯಗಳು ಈ ಭೇಟಿಯಲ್ಲಿ ಚರ್ಚಿಸಲ್ಪಟ್ಟವು. ೧೯೧೯ರ ಪಂಜಾಬ್ ಗಲಭೆಗಳು, ಖಿಲಾಫತ್ ಚಳುವಳಿ, ಸ್ವರಾಜ್ಯದ ಸ್ವರೂಪ, ಆಫ್ಘನ್ನರು ದಂಡೆತ್ತಿ ಬಂದರೆ ಗಾಂಧಿಯವರು ತೆಗೆದುಕೊಳ್ಳಬಹುದಾದ ನಿಲುವು. ಆಲಿ ಸಹೋದರರ ಭಾಷಣಗಳ ಧೋರಣೆಯನ್ನು ಪ್ರಾಸಂಗಿಕವಾಗಿ ವೈಸರಾಯರು ಪ್ರಸ್ತಾಪಿಸಿ ಗಾಂಧಿಯವರ ಅಹಿಂಸಾತ್ಮಕ ಚಳುವಳಿಯ ದೃಷ್ಟಿಗೆ ಅದು ಅಪವಾದವಾದೀತೆಂದು ಅವರ ಗಮನ ಸೆಳೆದರು. ಆ ಭಾಷಣಗಳ ಅಪಾರ್ಥ ಸಾಧ್ಯ ಎಂದು ಗಾಂಧೀಜಿ ಒಪ್ಪಿದರು. ಕೂಡಲೇ ಆಲಿ ಸಹೋದರರಿಂದ ತಾವು ಯಾವ ರೀತಿಯಲ್ಲೂ ಹಿಂಸಾಚಾರವನ್ನು ಪ್ರಚೋದಿಸಿಲ್ಲ ಎಂಬ ಬಹಿರಂಗ ಹೇಳಿಕೆಯನ್ನು ಕೊಡಿಸಿದರು. "ಸ್ವಾತಂತ್ರ್ಯ ಮತ್ತು ಸತ್ಯಕ್ಕಾಗಿ ಹೋರಾಡುತ್ತಿರುವಾಗ ಮಾತಿನಲ್ಲಿ ಅತ್ಯಂತ ಋಜುವಾಗಿರಬೇಕಾದುದು ಅಗತ್ಯ" ಎಂದರು. ವೈಸರಾಯರು ಇದಕ್ಕೆ ಬೇರೆ ಅರ್ಥ ಮಾಡಿದರು. "ಈಗಿನ ಪರಿಸ್ಥಿತಿಯಲ್ಲಿ ಮಹಮ್ಮದಾಲಿಯವರದೇ ಮಹತ್ತರ ಪಾತ್ರ. ಹಿಂದೂ ಮುಸ್ಲಿಮರ ಮಧ್ಯ ಮುಖ್ಯ ಕೊಂಡಿ ಅವರೇ. ಗಾಂಧೀಜಿಗೂ, ಅವರಿಗೂ ಭಿನ್ನಾಭಿಪ್ರಾಯ ಬಂದರೆ ಹಿಂದೂ ಮುಸ್ಲಿಂ ಘರ್ಷಣೆ ಕಟ್ಟಿಟ್ಟದ್ದು. ಕೇವಲ ಗಾಂಧೀಜಿಯ ಅನುಮೋದಕರಾಗಿ ಬಿಟ್ಟರೆ ಮಹಮ್ಮದಾಲಿಯವರ ಪ್ರತಿಷ್ಠೆಗೆ ಕುಂದು ಬರುತ್ತದೆ" ಎಂದು ಕೊಂಡರು.

ಆಫ್ಘಾನಿಸ್ಥಾನದ ಅಮೀರ್ ಭಾರತದ ಮೇಲೆ ದಂಡೆತ್ತಿ ಬಂದರೆ ಆಲಿ ಸಹೋದರರು ಸಹಾಯ ಮಾಡುತ್ತಾರೆ ಎಂಬ ಅಪಪ್ರಚಾರದ ಸುದ್ದಿ ಹುಟ್ಟಿಸಿ ಹಲವು ಕಿಡಿಗೇಡಿಗಳು ಗಾಂಧೀಜಿಗೂ ಆಲಿ ಸಹೋದರರಿಗೂ ಮನಸ್ತಾಪ ಹುಟ್ಟಿಸುವ ಪ್ರಯತ್ನ ಮಾಡಿದರು. ಅದನ್ನು ಕುರಿತು ಗಾಂಧೀಜಿ :

"ಆಫ್ಘನ್ನರು ಭಾರತದ ಮೇಲೆ ದಂಡೆತ್ತಿ ಬರುವರೆಂದು ನಾನು ನಂಬುವುದಿಲ್ಲ. ಹಾಗಾದ ಪಕ್ಷಕ್ಕೆ ಅದನ್ನೆದುರಿಸಲು ಸರ್ಕಾರ ಸನ್ನದ್ಧವಾಗಿದೆ ಎಂದು ತಿಳಿದಿದ್ದೇನೆ. ಅಸಹಕಾರ ಮಾಡುವವನು ತಾನು ಕೊನೆಗಾಣಿಸಬೇಕೆಂದಿರುವ ಸರ್ಕಾರಕ್ಕೆ ಯಾವ ಷರತ್ತೂ ಇಲ್ಲದ ಸಹಾಯ ನೀಡುವುದು ಅವನ ನಂಬಿಕೆಗೇ ವಿರೋಧ. ಆಫ್ಘನ್ನರ ದಂಡಯಾತ್ರೆಯನ್ನು ನಿವಾರಿಸಲೋಸುಗ ಆತ್ಮ ಗೌರವವನ್ನೇ ಕಳೆದುಕೊಳ್ಳುವುದಕ್ಕಿಂತ ಭಾರತ ಆಫ್ಘನ್ನರ ದಾಳಿಯಿಂದ ನಿರ್ನಾಮವಾದರೂ ನನಗೆ ಚಿಂತೆಯಿಲ್ಲ. ಆದರೆ ಪ್ರತಿಯೊಬ್ಬ ಅಸಹಕಾರ ಹೋರಾಟಗಾರನೂ ಯಾವ ಸಶಸ್ತ್ರ ದಾಳಿಯನ್ನೂ ಭಾರತ ಸಹಿಸುವುದಿಲ್ಲವೆಂದು ಆಫ್ಘನ್ನರಿಗೆ ತಿಳಿಯುವಂತೆ ಪ್ರಕಟಿಸಬೇಕು." ಎಂದರು.

"ಈ ಆಫ್ಘನ್ ದಾಳಿ ಸುದ್ದಿಯ ಗುಮ್ಮನನ್ನು ನಂಬಬಾರದೆಂದು ಓದುಗರನ್ನು ಎಚ್ಚರಿಸುತ್ತೇನೆ. ಇಂಥ ಪುಂಡು ದಂಡಯಾತ್ರೆಗಳನ್ನು ಆಗಾಗ್ಗೆ ಎಬ್ಬಿಸುವುದೂ ಉಂಟು. ಸೈನಿಕರಿಗೆ ಶಿಕ್ಷಣ ಕೊಡಲು ಅಥವಾ ಕೆಲಸವಿಲ್ಲದೇ ಕೊಳೆಯುವ ಸೈನಿಕರನ್ನು ಕೆಲಸಕ್ಕೆ ತೊಡಗಿಸಲು ಇಂಥ ತಂತ್ರ ಉಂಟೆಂದು ಸೈನಿಕ ವಿಷಯದ ಬರಹಗಾರರು ತಿಳಿಸಿದ್ದಾರೆ. ಈ ಸರ್ಕಾರದ ಯಾವುದೋ ಮಾಂತ್ರಿಕ ಮೋಡಿಗೆ ಭಾರತ ಬಲಿಯಾಗಿದೆ. ನಿರ್ಬಲ, ನಿಶ್ಶಸ್ತ್ರ, ನಿಸ್ಸಹಾಯಕ, ಮುಗ್ಧ ಭಾರತ ಅದನ್ನರಿಯದು. ನಮ್ಮಲ್ಲಿ ಅತ್ಯಂತ ಮೇಧಾವಿಗಳೆನಿಸಿಕೊಳ್ಳುವವರೂ ಈ ಸೈನ್ಯ ವೆಚ್ಚದ ಹೆಚ್ಚಳಿಕೆ ನಮ್ಮನ್ನು ಪರಕೀಯ ದಾಳಿಗಳಿಂದ ರಕ್ಷಿಸುವುದಕ್ಕಾಗಿಯೇ ಮಾಡಲಾಗುತ್ತಿದೆಯೆಂದು ನಂಬುತ್ತಾರೆ. ನಮ್ಮ ಸಿಖ್, ಗೂರ್ಖಾ, ಪಠಾಣ್ ಮತ್ತು ರಜಪೂತ ಜನಾಂಗಗಳಲ್ಲಿ ಅವರಿಗೆ ಅಪನಂಬಿಕೆಯಿರುವುದರಿಂದಲೇ ಈ ಅಗಾಧ ವೆಚ್ಚದಿಂದ ರಕ್ಷಣಾ ವ್ಯವಸ್ಥೆ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ನಮ್ಮಲ್ಲಿ ಅವರಿಗೆ ನಂಬಿಕೆಯಿಲ್ಲ. ನಮ್ಮನ್ನು ಕಡ್ಡಾಯ ದಾಸ್ಯ ಸ್ಥಿತಿಯಲ್ಲಿಡುವ ಸಲುವಾಗಿಯೇ ಅವರ ಸೈನ್ಯ ವ್ಯವಸ್ಥೆ. ಅಮೀರರೊಡನೆ ರಾಜಿ ಒಪ್ಪಂದಕ್ಕಾಗಿ ಬ್ರಿಟಿಷ್ ಸರ್ಕಾರ ಕಾತುರವಾಗಿದ್ದುದು ರಷ್ಯಾದಿಂದ ಆಕ್ರಮಣ ಭಯವಿದೆ ಎಂದೇನೂ ಅಲ್ಲ; ಭಾರತದ ಸೈನಿಕರ ವಿಶ್ವಾಸವನ್ನೆಲ್ಲಿ ಕಳೆದುಕೊಳ್ಳುವೆವೋ ಎಂದು ಆ ಒಪ್ಪಂದ ಮಾಡಿಕೊಂಡರು. ಈಗಂತೂ ರಷ್ಯಾದಿಂದ ಆಕ್ರಮಣ ಭಯ ಏನೂ ಕಾಣದು. ಬಾಲ್ಶೆವಿಕರಿಂದ ಅಪಾಯವಿದೆ ಎಂದು ನಾನು ನಂಬಿಲ್ಲ. ಬಂಗಾಲದ ಮಹಾನಾಯಕ ಒಮ್ಮೆ ಅಂದಂತೆ 'ಜನತೆಯ ವಿಶ್ವಾಸದ ಮೇಲೆಯೆ ಕಟ್ಟಲಾಗಿರುವ' ಯಾವುದೇ ಭಾರತ ಸರ್ಕಾರ, ರಷ್ಯನ್ನರ, ಬಾಲ್ಶೆವಿಕರ, ಅಥವಾ ಇನ್ನಾವುದೇ ಇತರ ಬೆದರಿಕೆಗೆ ಏಕೆ ಹೆದರಬೇಕು? ತೃಪ್ತರಾದ ಶಕ್ತಿಯುತರಾದ ಭಾರತ ಜನಾಂಗವೊಂದು ಯಾವ ಆಕ್ರಮಣವನ್ನಾದರೂ ಎದುರಿಸುತ್ತದೆ. ಅದಕ್ಕೆ ಬ್ರಿಟನ್ನಿನ ಸಹಾಯವೂ

ಇದ್ದರೆ ಇನ್ನೂ ಹೆಚ್ಚು ಬಲ ಬರುತ್ತದೆ. ಉದ್ದೇಶ ಪೂರ್ವಕವಾಗಿ ನಮ್ಮನ್ನು ನಿಶ್ಶಕ್ತರನ್ನಾಗಿಸಿ ಸುತ್ತಲಿನ ಪ್ರಪಂಚಕ್ಕೂ, ನೆರೆಹೊರೆಯ ದೇಶಗಳಿಗೂ ಸತತವಾಗಿ ಹೆದರುತ್ತಿರುವಂತೆ ಮಾಡಿ ನಮ್ಮ ಸಂಪತ್ತೆಲ್ಲವನ್ನೂ ದೋಚಿಬಿಟ್ಟದೆ ಈ ಸರ್ಕಾರ. ತನ್ನ ರಕ್ಷಣೆಗಾಗಲೀ ಕೊನೆಗೆ ಸರಳ ಸಮಸ್ಯೆಯಾದ ಬಡತನವನ್ನು ಪರಿಹರಿಸುವುದಕ್ಕಾಗಲೀ ಆತ್ಮ ವಿಶ್ವಾಸವನ್ನೇ ಕಳೆದುಕೊಂಡಿದ್ದೇವೆ. ಆದ್ದರಿಂದ ಆಫ್ಘಾನಿಸ್ಥಾನದ ಅಮೀರರು ಈಗಿನ ಈ ಸರ್ಕಾರದೊಡನೆ ಯಾವ ಒಪ್ಪಂದವನ್ನೂ ಮಾಡಿಕೊಳ್ಳಲಾರರೆಂದು ನಾನು ಆಶಿಸುತ್ತೇನೆ. ಭಾರತಕ್ಕೂ ಇಸ್ಲಾಂ ಧರ್ಮಕ್ಕೂ ಅಂಥ ಒಪ್ಪಂದದಿಂದ ದ್ರೋಹವಾಗುತ್ತದೆ. ಈ ಸರ್ಕಾರ 'ತುರ್ತು ಪರಿಸ್ಥಿತಿ' ಎಂಬ ನೆಪದಿಂದ ಓಡ್ವಯರ್ ನಡೆಸಿದ ದುರಾಡಳಿತ ನೀತಿಗಳನ್ನೇ ಮುಂದುವರಿಸುತ್ತದೆ. ಮುಸ್ಲಿಮರಿಗಿತ್ತ ವಾಗ್ದಾನವನ್ನು ನಡೆಸಿಕೊಡಲು ಹಿಂಜರಿಯುತ್ತಿದೆ. ಸಾಮ್ರಾಜ್ಯ ಸರ್ಕಾರ, ಭಾರತ ಸರ್ಕಾರ, ಎರಡೂ ಈ ವಿಷಯಕ್ಕೆ ಒಂದೇ ಎಂದು ನನ್ನ ಭಾವನೆ. ಭಾರತ ದೇಶ ತನ್ನ ಪೂರ್ಣ ಏಳಿಗೆಯನ್ನು ಸಾಧಿಸಲು ಕಂಟಕವಾಗಿ ಪರಿಣಮಿಸಿ ಈ ಸರ್ಕಾರಗಳು ಈಗ ಆಫ್ಘನ್ನರನ್ನು ನಮ್ಮ ಮೇಲೆ ಎದುರು ಬೀಳುವಂತೆ ಪ್ರೇರೇಪಿಸಿವೆ. ಅಸಹಕಾರ ಚಳುವಳಿಗಾರರು ಈ ವಿಷಯಕ್ಕೆ ಸರ್ಕಾರದೊಡನೆ ತಾವಷ್ಟೇ ಅಲ್ಲದೆ ಇತರರೂ ಖಂಡಿತ ಸಹಕರಿಸಬಾರದೆಂದು ಕೋರಲು ಅವರಲ್ಲಿ ಒಮ್ಮತವಿದೆಯೆಂದು ಭಾವಿಸಿದ್ದೇನೆ."

ಹಿಂದೂ ಮುಸ್ಲಿಂ ಐಕ್ಯದ ಬಗ್ಗೆ ಹೀಗೆ ಬರೆದರು: "ನಮ್ಮಲ್ಲಿ ಇನ್ನೂ ಪರಸ್ಪರ ಸಂಶಯ ಕಾಡುತ್ತಿದೆ ಎಂದು ಬಲ್ಲೆ. ಮುಸ್ಲಿಮರ ಪ್ರಾಮಾಣಿಕತೆಯನ್ನು ಹಲವು ಹಿಂದೂಗಳು ನಂಬುತ್ತಿಲ್ಲ. ಸ್ವರಾಜ್ಯ ಬಂದರೆ ಅದು ಮುಸಲ್ಮಾನ ರಾಜ್ಯವೇ ಆದೀತು ಎಂದು ವಾದಿಸುತ್ತಾರೆ. ಬ್ರಿಟಿಷರು ಬಿಟ್ಟು ಹೋದೊಡನೆ ಮುಸ್ಲಿಮರು ಇತರ ಮುಸ್ಲಿಂ ರಾಷ್ಟ್ರಗಳನ್ನೇ ಬೆಂಬಲಿಸಿ ಭಾರತದಲ್ಲಿ ಮುಸ್ಲಿಂ ಸಾಮ್ರಾಜ್ಯವನ್ನೇ ಕಟ್ಟುವರು ಎಂದು ಶಂಕಿಸುತ್ತಾರೆ. ಮುಸ್ಲಿಮರಾದರೊ ಬಹು ಸಂಖ್ಯಾತರಾಗಿರುವ ಹಿಂದೂಗಳು ಸ್ವತಂತ್ರ ಭಾರತದಲ್ಲಿ ನಮ್ಮನ್ನು ಸದೆಬಡೆದು ಬಿಡುತ್ತಾರೆಂದು ಭಯಗ್ರಸ್ತರಾಗಿದ್ದಾರೆ. ಎರಡು ಕಡೆಯ ಈ ಮನೋಧರ್ಮ ಖಂಡಿತವಾಗಿ ಷಂಡತನದ ಕುರುಹು. ತಮಗೆ ಉದಾತ್ತಗುಣ ಇಲ್ಲದಿದ್ದಲ್ಲಿ ಕೊನೆಗೆ ಶಾಂತಿಯುತ ಸಹಬಾಳ್ವೆಗಾದರೂ ಪರಸ್ಪರ ವಿಶ್ವಾಸ, ಪರಸ್ಪರ ಸಹನೆಗಳ ನೀತಿಯನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಈ ಎರಡೂ ಧರ್ಮಗಳಲ್ಲಿ ಪರಸ್ಪರ ವಿರೋಧವಾದುದೇನೂ ಇಲ್ಲ. ಬಲಾತ್ಕರಿಸಿ ಮತಾಂತರ ಮಾಡುವ ದಿನಗಳು ಮುಗಿದು ಹೋದವು. ಗೋಹತ್ಯೆಯ ವಿಷಯ ಬಿಟ್ಟರೆ ಮತ್ತಾವುದರಲ್ಲೂ ಹಿಂದೂಗಳಿಗೆ ದ್ವೇಷಿಸಲು ಕಾರಣವಿಲ್ಲ. ಮುಸಲ್ಮಾನರು ಗೋಹತ್ಯೆ ಮಾಡಿಯೇ ತೀರಬೇಕೆಂಬ ಯಾವ ಧಾರ್ಮಿಕ ನಿಯಮವೂ ಇಲ್ಲ. ನಾವಿಬ್ಬರೂ ಒಂದೇ ಪವಿತ್ರ ಭೂಮಿಯ ಮಕ್ಕಳು, ಮೈತ್ರಿಯಿಂದ ಬಾಳಬೇಕು. ಪರಸ್ಪರ ವಿರೋಧ ಗುಣಗಳನ್ನು ಸರಿಪಡಿಸಿಕೊಂಡು ಐಕ್ಯದಿಂದ ಜೀವಿಸುವ ಯಾವ ಪ್ರಯತ್ನಗಳನ್ನೂ ಈ ಮುಂಚೆ ನಾವು ಮಾಡಲೇ ಇಲ್ಲ ಎಂಬುದು ನಿಜ. ಈಗ ನಮ್ಮೆರಡು ಧರ್ಮಾನುಯಾಯಿ

ಗಳಿಗೂ ಒಂದು ಅಪೂರ್ವ ಸುಸಮಯ ಒದಗಿದೆ. ಖಿಲಾಫತ್ ಪ್ರಶ್ನೆ ನೂರು ವರ್ಷ ಏಳುವುದಿಲ್ಲ. ಮುಸಲ್ಮಾನರೊಡನೆ ಶಾಶ್ವತ ಮೈತ್ರಿಯನ್ನು ಸಾಧಿಸಬೇಕೆಂದಿದ್ದರೆ ಇಸ್ಲಾಂ ಧರ್ಮದ ಗೌರವವನ್ನು ರಕ್ಷಿಸಲು ಅವರೊಡನೆ ಹಿಂದೂಗಳು ಬಲಿದಾನಕ್ಕೆ ಸಿದ್ಧರಾಗಿ ಮಡಿಯಬೇಕು."

ಗಾಂಧೀಜಿ ಒಬ್ಬ ಅವ್ಯವಹಾರಿಕ ಕನಸುಗಾರರೆಂದೇ ಹಲವರು ಟೀಕಿಸಿದರು. ರವೀಂದ್ರನಾಥ ಠಾಕೂರರು ಆಧ್ಯಾತ್ಮಿಕ ದೃಷ್ಟಿಯಿಂದ ಅಸಹಕಾರ ಚಳುವಳಿಯನ್ನು ಖಂಡಿಸಿದರು. ಯೂರೋಪ್ ಪ್ರವಾಸದಲ್ಲಿದ್ದ ರವೀಂದ್ರರು ಭಾರತದಲ್ಲಿನ ತಮ್ಮ ಸ್ನೇಹಿತರಿಗೆ ಈ ಬಗ್ಗೆ ಪತ್ರಗಳನ್ನು ಬರೆದರು. ಮೂರು ಪತ್ರಗಳು ಮಾಡರ್ನ್ ರಿವ್ಯೂದಲ್ಲಿ ಪ್ರಕಟವಾದವು. ಈ ಗಾಂಧಿ–ಠಾಗೂರ್‌ಭಿನ್ನಾಭಿಪ್ರಾಯಗಳಲ್ಲಿ ಇಬ್ಬರೂ ಪರಸ್ಪರ ಗೌರವದಿಂದ ತಮ್ಮ ವಾದ ಮಂಡಿಸಿದರು. "ಮಹಾತ್ಮಾ ಗಾಂಧಿ ನಮ್ಮ ಅತ್ಯುನ್ನತ ನೈತಿಕಶಕ್ತಿಯ ಪ್ರತೀಕ. ಪ್ರಪಂಚದಲ್ಲಿ ಮತ್ತಾರೂ ಅವರಂತೆ ಅದನ್ನು ಪ್ರತಿನಿಧಿಸಲಾರರು. ಆ ಶಕ್ತಿ ನಮಗೆ ಅತ್ಯಗತ್ಯ. ಈ ಸತ್ವಪೂರ್ಣವಾದ ಆಧ್ಯಾತ್ಮಿಕ ಚಿಲುಮೆಯನ್ನು ಅಮೂರ್ತ ಸತ್ಯದ ದೃಷ್ಟಿಯಲ್ಲಿ ಯೋಗ್ಯವಲ್ಲದ ಕಾರಣಗಳಿಗಾಗಿ ಹಾಳುಮಾಡುವುದು ವ್ಯಸನಕರ", ಎಂದರು ಠಾಗೂರರು. ನೈತಿಕಶಕ್ತಿಯನ್ನು ಕೇವಲ ಪಶುಬಲವನ್ನಾಗಿ ಪರಿವರ್ತಿಸುವುದು ಮಹಾಪರಾಧ ಎಂದೇ ಅವರು ಭಾವಿಸಿದರು. ಗಾಂಧೀಜಿಯ ಸ್ವಾರ್ಥತ್ಯಾಗ ಸಿದ್ಧಾಂತವನ್ನು ರವೀಂದ್ರರು ಮೆಚ್ಚಿಕೊಂಡರೂ ಅಸಹಕಾರ ಚಳುವಳಿಯಲ್ಲಿ ಇಂಗಿತವಾದ ನಿಷೇಧಾತ್ಮಕ ತತ್ವವನ್ನು ಅವರೊಪ್ಪಲಿಲ್ಲ. "ವಿಶ್ವದ ಸಮಸ್ತ ಜನಾಂಗಗಳ ಪರಸ್ಪರ ಸಹಕಾರವನ್ನು ಭಾರತ ಪ್ರತಿಬಿಂಬಿಸಬೇಕೆಂಬುದೇ ನನ್ನ ಅನನ್ಯ ಪ್ರಾರ್ಥನೆ. ಭಾರತದ ಮಟ್ಟಿಗೆ ಐಕ್ಯತೆಯೇ ಸತ್ಯ. ವಿಚ್ಛಿದ್ರತೆಯೇ ಪಾಪ. ಸರ್ವವನ್ನೂ ಒಳಗೊಂಡು ಅರ್ಥ ಮಾಡಿಕೊಳ್ಳುವುದೇ ಐಕ್ಯತೆ. ನಿಷೇಧಾತ್ಮಕ ಮನೋವೃತ್ತಿಯಿಂದ ಇದನ್ನು ಸಾಧಿಸಲಾರೆವು. ಪಾಶ್ಚಾತ್ಯ ನಾಗರಿಕತೆಯ ಸತ್ಯಕ್ಕೂ ನಮ್ಮದಕ್ಕೂ ವ್ಯತ್ಯಾಸ ಮಾಡುವ ಈಗಿನ ಪ್ರಯತ್ನ ಆಧ್ಯಾತ್ಮಿಕ ಆತ್ಮಹತ್ಯೆಗೆ ಕಾರಣವಾದೀತು. ಪಾಶ್ಚಾತ್ಯ ನಾಗರಿಕತೆ ವರ್ತಮಾನ ಯುಗವನ್ನಾವರಿಸಿ ನಿಂತಿದೆ. ಕಾರಣ ಅದಕ್ಕೊಂದು ನಿರ್ದಿಷ್ಟ ಸಂದೇಶ ನೀಡುವ ಕರ್ತವ್ಯವಿದೆ. ಪೌರಸ್ತ್ಯರಾದ ನಾವು ಅವರಿಂದ ಕಲಿಯಬೇಕಾದುದಿದೆ. ಎಲ್ಲ ಸಮಸ್ಯೆಗಳೂ ವಿಶ್ವದ ಸಮಸ್ಯೆಗಳೇ. ಪ್ರತ್ಯೇಕಗೊಂಡು ಯಾವ ದೇಶವೂ ತನ್ನ ಮೋಕ್ಷ ಪಥವನ್ನು ತಾನೇ ನಿರ್ಮಿಸಿಕೊಳ್ಳಲಾರದು. ಇಡೀ ಜಗತ್ತು ಒಟ್ಟಿಗೆ ಉದ್ಧಾರವಾಗಬೇಕು ಇಲ್ಲವೇ ಒಟ್ಟಿಗೆ ನಾಶವಾಗಬೇಕು."

ರವೀಂದ್ರರ ಈ ವ್ಯಾಖ್ಯಾನಕ್ಕೆ ಗಾಂಧೀಜಿ ಖಚಿತವಾದ ಆದರೆ ಗೌರವ ಪೂರ್ಣವಾದ ಉತ್ತರವಿತ್ತರು.

"ಅವರು ಸಂಶಯ ಪಟ್ಟಿರುವ ಯಾವ ದುಷ್ಪರಿಣಾಮಕ್ಕೂ ನಾವೀಗ ಕೈಗೊಂಡಿರುವ ವಿಶಿಷ್ಟ ಅಸಹಕಾರ ಚಳುವಳಿ ಎಡೆಗೊಡುವುದಿಲ್ಲ ಎಂದು ಅವರಿಗೂ

ದೇಶಕ್ಕೂ ಭರವಸೆ ಕೊಡಲಿಚ್ಛಿಸುತ್ತೇನೆ. ಈ ಮಾರ್ಗವನ್ನನುಸರಿಸಿದ್ದರಿಂದ ತನ್ನ ರಾಷ್ಟ್ರಗೌರವಕ್ಕೆ ಹಾನಿಯಾಯಿತೆಂದು ಅವರು ತಲೆ ತಗ್ಗಿಸುವ ಕಾರಣವೇನೂ ಇಲ್ಲ. ಅನುಷ್ಠಾನ ಮಾರ್ಗದಲ್ಲಿ ನಾವು ಕಾರಣಾಂತರಗಳಿಂದ ವಿಫಲರಾಗುವುದಾದರೆ ಸತ್ಯ ನಿಷ್ಠರಾದವರಿಗೆ ವ್ಯಾವಹಾರಿಕ ಜೀವನದಲ್ಲಿ ಸೋಲಾದಂತೆ ಕಂಡು ಬರುವ ರೀತಿ ಯಲ್ಲೇ ಇದೂ ಇದೆ. ಅದರಿಂದ ಸಿದ್ಧಾಂತವೇ ದೋಷಪೂರಿತ ಎಂದು ತಿಳಿಯ ಬಾರದು. ಅಸಹಕಾರಕ್ಕೆ ಇನ್ನೂ ಕಾಲಪರಿಸ್ಥಿತಿ ಸಿದ್ಧವಾಗಿಲ್ಲದೇ ಇರಬಹುದು. ಅಲ್ಲಿಯವರೆಗೆ ಕಾಯುವುದಲ್ಲದೆ ನಮಗೆ ಬೇರೆ ಮಾರ್ಗವಿಲ್ಲ. ಭಾರತದ ಮುಂದಿರು ವುದು ಎರಡೇ ಮಾರ್ಗ, ಒಂದು ಹಿಂಸಾತ್ಮಕ ದಂಗೆ, ಮತ್ತೊಂದು ಅಹಿಂಸಾತ್ಮಕ ಅಸಹಕಾರ ಚಳುವಳಿ.

"ಭಾರತಕ್ಕೂ ಪಶ್ಚಿಮ ರಾಷ್ಟ್ರಗಳಿಗೂ ಮಧ್ಯೆ ಒಂದು ಅಭೇದ್ಯಗೋಡೆ ಕಟ್ಟುವ ಪ್ರಯತ್ನ ಈ ಅಸಹಕಾರದ ಉದ್ದೇಶ ಎಂದು ಕವಿವರ್ಯರು ಭಯಪಡುವ ಕಾರಣವಿಲ್ಲ. ಬದಲಾಗಿ ಪರಸ್ಪರ ವಿಶ್ವಾಸ ಮತ್ತು ಮರ್ಯಾದೆಗಳನ್ನಾಧರಿಸಿರುವ ನಿಜವಾದ, ಗೌರವಯುತ, ಸ್ವಯಂಪ್ರೇರಿತ ಸಹಕಾರಕ್ಕೆ ದಾರಿ ಮಾಡುವುದೇ ಅಸಹ ಕಾರದ ಉದ್ದೇಶ. ಬಲಾತ್ಕಾರದ ಸಹಕಾರ, ಏಕಮುಖ ಗುಂಪುಗಾರಿಕೆ, ನಾಗರಿಕತೆಯ ಹೆಸರಿನ ಮುಸುಕು ಹಾಕಿರುವ ಆಧುನಿಕ ಶೋಷಕ ಪದ್ಧತಿಗಳನ್ನು ಶಸ್ತ್ರ ಬಲದಿಂದ ಕಡ್ಡಾಯವಾಗಿ ಹೇರುವುದರ ವಿರುದ್ಧವಾಗಿ ನಮ್ಮ ಈ ಅಸಹಕಾರದ ಹೋರಾಟ.

"ತಿಳಿಯದೆಯೇ ನಮ್ಮ ಇಚ್ಛೆಗೆ ವಿರೋಧವಾಗಿ ಪಾಪಕೃತ್ಯಗಳಲ್ಲಿ ತೊಡಗಿ ರುವುದನ್ನು ಪ್ರತಿಭಟಿಸುವ ಸಲುವಾಗಿ ಈ ಅಸಹಕಾರ.

"ವಿದ್ಯಾರ್ಥಿಗಳ ಬಗೆಗೆ ಕವಿಗಳು ಚಿಂತೆಗೊಳಗಾಗಿದ್ದಾರೆ. ಇತರ ಖಾಸಗಿ ವಿದ್ಯಾಸಂಸ್ಥೆಗಳಿಲ್ಲದಿರುವಾಗ ಸರ್ಕಾರಿ ಶಾಲೆಗಳನ್ನು ತ್ಯಜಿಸುವಂತೆ ಅವರಿಗೆ ಸೂಚಿಸ ಬಾರದಾಗಿತ್ತು ಎಂದಿದ್ದಾರೆ. ನಾನದನ್ನು ಒಪ್ಪಲಾರೆ. ಕೇವಲ ಅಕ್ಷರ ವಿದ್ಯೆಯನ್ನು ಮಹತ್ತರವೆಂದು ನಾನೆಂದೂ ಭಾವಿಸಿದವನಲ್ಲ. ಅಕ್ಷರ ಕಲಿಕೆಯ ಶಿಕ್ಷಣ ಮಾತ್ರದಿಂದ ಯಾವ ನೈತಿಕ ಶಕ್ತಿ ಸಂವರ್ಧನೆಗೂ ಉಪಯೋಗವಾಗದು. ಚಾರಿತ್ರ್ಯಶಿಕ್ಷಣ ಅಕ್ಷರ ಕಲಿಯುವ ಶಿಕ್ಷಣದಿಂದ ಸಂಪೂರ್ಣ ಪ್ರತ್ಯೇಕವಾದುದೆಂದು ನನ್ನ ಅನುಭವ ನನಗೆ ಚೆನ್ನಾಗಿ ಮನದಟ್ಟು ಮಾಡಿದೆ. ಈ ಸರ್ಕಾರೀ ವಿದ್ಯಾಶಾಲೆಗಳೇ ನಮ್ಮನ್ನು ನಿರ್ವೀರ್ಯ ರನ್ನಾಗಿ, ನಿಸ್ಸಹಾಯಕರನ್ನಾಗಿ, ನಾಸ್ತಿಕರನ್ನಾಗಿ ಮಾಡಿವೆ ಎಂಬುದು ನನ್ನ ಖಚಿತಾಭಿ ಪ್ರಾಯ. ಇವು ಅಶಾಂತಿಯನ್ನೆಬ್ಬಿಸಿ ಅದಕ್ಕೆ ಪರಿಹಾರ ಸೂಚಿಸದೆ ನಿರಾಶೆಯಲ್ಲಿ ತಳ್ಳಿವೆ. ಆ ಶಿಕ್ಷಣದ ಉದ್ದೇಶವೇ ಕಾರಕೂನರ ಮತ್ತು ದುಭಾಷಿಗಳ ತಂಡವನ್ನಾಗಿ ನಮ್ಮನ್ನು ಪರಿವರ್ತಿಸುವುದು. ನಾವು ಹಾಗೆಯೇ ಆಗಿದ್ದೇವೆ. ಆ ಅಧಿಕಾರಕ್ಕೊಳ ಪಟ್ಟವರ ಸ್ವಯಂಪ್ರೇರಿತ ಸಹಕಾರದ ಸೋಗಿನಿಂದಲೇ ಸರ್ಕಾರದ ಪ್ರತಿಷ್ಠೆಯ ಸೌಧ ಬೆಳೆಯುತ್ತದೆ. ನಮ್ಮ ಗುಲಾಮಗಿರಿಗೆ ಕಾರಣವಾದ ಸರ್ಕಾರದೊಡನೆ ಸಹ

ಕರಿಸುವುದು ಸರ್ವಥಾ ಯೋಗ್ಯವಲ್ಲ ಎನ್ನುವುದಾದರೆ ನಾವು ಸ್ವಯಂಪ್ರೇರಿತ ಸಹಕಾರ ವನ್ನೆಲ್ಲೆಲ್ಲಿ ಕೊಡಂತ್ತಿದ್ದೆವೆಂದು ಅದು ಭಾವಿಸಿದೆಯೋ ಅಂಥ ಎಲ್ಲ ಸಂಸ್ಥೆಗಳನ್ನೂ ಬಹಿಷ್ಕರಿಸುವುದು ಅನಿವಾರ್ಯವಾದ ಪ್ರಥಮ ಹೆಜ್ಜೆ. ನಾಡಿನ ಯುವಕರೇ ನಾಳಿನ ಆಶಾಕಿರಣ. ನಮ್ಮ ಮೇಲೆ ಹೇರಿದ ಸರ್ಕಾರದ ವ್ಯವಸ್ಥೆ ಸಂಪೂರ್ಣವಾಗಿ ಅಥವಾ ಬಹುಭಾಗ ಪಾಪಪೂರಿತ ಎಂದು ನಮಗೆ ಗೋಚರವಾದ ಮೇಲೂ ನಮ್ಮ ಮಕ್ಕಳನ್ನು ಅದರ ಸಂಪರ್ಕದಲ್ಲಿಟ್ಟಿರುವುದು ಪಾಪಕರವೆಂದು ನನ್ನ ಭಾವನೆ.

"ಅಸಹಕಾರದ ಮೂಲ ಸಿದ್ಧಾಂತವನ್ನೇ ಕವಿವರ್ಯರು ಒಪ್ಪದ ಕಾರಣವಾಗಿ ವಿದ್ಯಾರ್ಥಿಗಳಿಗೆ ಕೊಟ್ಟ ಕರೆಯನ್ನು ಅವರು ವಿರೋಧಿಸಿದ್ದಾರೆ. ನಿಷೇಧಾತ್ಮಕ ಮನೋ ವೃತ್ತಿ ಅವರಿಗೆ ಸಹಿಸಲಾಗದಷ್ಟು ಘೋರ. ಮತಧರ್ಮದ ನಿಷೇಧಾಜ್ಞೆಗಳ ವಿರುದ್ಧ ಅವರ ಇಡೀ ವ್ಯಕ್ತಿತ್ವವೇ ಪ್ರತಿಭಟಿಸಿ ದಂಗೆಯೇಳುವಂತೆ ಕಾಣುತ್ತದೆ. ನನ್ನ ಮಟ್ಟಿಗೆ ವಿನಯದಿಂದ ಹೇಳಬೇಕೆಂದರೆ ಒಂದು ವಸ್ತುವಿನ ನಿರಾಕರಣೆಯೂ ಮಿಕ್ಕ ಕೆಲವದರ ಅಂಗೀಕಾರದಂತೆಯೇ ಸಮಯುವರಿತು ಉಚ್ಚ ಧ್ಯೇಯವಾಗಲೂಬಹುದು. ಅಸತ್ಯದ ನಿರಾಕರಣೆ, ಸತ್ಯದ ಅಂಗೀಕಾರದಷ್ಟೇ ಅಗತ್ಯವಾದ ಕರ್ತವ್ಯ. ಮಾನವನ ಕರ್ಮಕ್ಷೇತ್ರ ದಲ್ಲಿ ಪರಸ್ಪರ ವಿರೋಧೀ ಶಕ್ತಿಗಳೆರಡು ನಮ್ಮ ಮೇಲೆ ಪ್ರಭಾವ ಮಾಡುತ್ತಿರುವುವೆಂದೂ ಒಂದನ್ನು ಅಂಗೀಕರಿಸಿ ಮತ್ತೊಂದನ್ನು ನಿರಾಕರಿಸುವ ಸತತವಾದ ಮಾನವ ಪ್ರಯತ್ನವೇ ಸಾಧನೆಯೆಂದೂ ಎಲ್ಲ ಧರ್ಮಗಳೂ ಬೋಧಿಸುತ್ತಿವೆ. ಪಾಪದೊಡನೆ ಅಸಹಕಾರ, ಪುಣ್ಯದೊಡನೆ ಸಹಕರಿಸುವ ಕರ್ತವ್ಯದಷ್ಟೇ ಮುಖ್ಯ. ಬೌದ್ಧಧರ್ಮದಲ್ಲಿನ ನಿರ್ವಾಣ ಸ್ಥಿತಿಯನ್ನು ಕೇವಲ ನಿಷೇಧಾತ್ಮಕ ಸ್ಥಿತಿ ಎಂದು ವರ್ಣಿಸಿ ಕವಿವರ್ಯರು ತಿಳಿಯದೆಯೇ ಬೌದ್ಧಧರ್ಮಕ್ಕೆ ಅಪಚಾರವೆಸಗಿದ್ದಾರೆ, ಎಂದು ಹೇಳಬಯಸುತ್ತೇನೆ. ಹಿಂದೂ ಧರ್ಮದ 'ಮುಕ್ತಿ, ಅಥವಾ ಮೋಕ್ಷಸ್ಥಿತಿಯೂ ನಿರ್ವಾಣದಂತೆಯೇ ಒಂದು ನಿಷೇಧಾರ್ಥ ಸೂಚಕ ಸ್ಥಿತಿಯೇ ಆಗುತ್ತದೆ. ಉಪನಿಷತ್ತುಗಳ ಅಥವಾ ಬ್ರಹ್ಮವಿದ್ಯೆಯ ಕಟ್ಟಕಡೆಯ ಉದ್ಗಾರ, ಶೂನ್ಯದಲ್ಲೇ ಲೀನವಾಗುತ್ತದೆ. ಉಪನಿಷತ್ತಿನ ಕರ್ತೃಗಳೂ ಬ್ರಹ್ಮವಸ್ತು ವನ್ನು ವಿವರಿಸಲು ಬಳಸಿದ ಅತ್ಯುತ್ಕೃಷ್ಟ ಪದ 'ನೇತಿ'–'ನೇತಿ'.

"ಅಸಹಕಾರದ ನಿಷೇಧಾತ್ಮಕ ನಿಲವನ್ನು ಕಂಡು ಕವಿವರ್ಯರು ಅನಾವಶ್ಯಕವಾಗಿ ಗಾಬರಿಗೊಂಡಿದ್ದಾರೆ. ಪ್ರತಿಭಟಿಸಿ ನಿಂತು 'ಇಲ್ಲ' ಎನ್ನುವ ಶಕ್ತಿಯನ್ನೇ ನಾವು ಕಳೆದು ಕೊಂಡಿದ್ದೇವೆ. ಸರ್ಕಾರದ ಆಜ್ಞೆಗೆ 'ಇಲ್ಲ' ಎಂದರೆ ರಾಜದ್ರೋಹ, ದೈವದ್ರೋಹ, ಎನ್ನುತ್ತಿದ್ದರು. ಉದ್ದೇಶ ಪೂರ್ವಕವಾಗಿಯೇ ಸಹಕರಿಸಲು ನಿರಾಕರಿಸುವ ಈ ಕಾರ್ಯ ಕ್ರಮ ಬೀಜಬಿತ್ತುವ ಮುನ್ನ ರೈತ ಕಳೆಕೀಳುವಂತೆ. ಕಳೆ ಕೀಳುವುದೂ ಬೀಜ ಬಿತ್ತು ವಷ್ಟೇ ಮುಖ್ಯ. ಸಸಿ ಬೆಳೆಯುತ್ತಿರುವಾಗಲೂ ಕಳೆ ಕೀಳುವ ಕೂರಿಗೆ ನಿತ್ಯೋಪಯೋಗಿ ಉಪಕರಣ. ಒಳ್ಳೆಯ ರೈತ ದಿನವೂ ಇದನ್ನು ಉಪಯೋಗಿಸುತ್ತಾನೆ. ಅಸಹಕಾರ, ಸರ್ಕಾರಕ್ಕೆ ಒಂದು ಸದುದ್ದೇಶದ ಆಹ್ವಾನ. ರಾಷ್ಟ್ರದ ಸ್ವಯಂನಿರ್ಣಯದ ನಿಯಮ ವನ್ನಂಗೀಕರಿಸಿ ಸರ್ಕಾರ ಸಹಕಾರ ನಿರೀಕ್ಷಿಸುವುದು ಸರಿ. ಈ ಸಹಜ ಹಕ್ಕು,

ಪ್ರತೀರಾಷ್ಟ್ರಕ್ಕೂ ಉಂಟು. ಇದನ್ನಂಗೀಕರಿಸಿ ನಡೆಯುವುದು ಒಳ್ಳೆಯ ಸರ್ಕಾರದ ಕರ್ತವ್ಯ. ಇನ್ನು ಈ ದಾಸ್ಯ ಸ್ಥಿತಿಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಎಂದು ಸರ್ಕಾರಕ್ಕೆ ರಾಷ್ಟ್ರವಿತ್ತ ಎಚ್ಚರಿಕೆಯ ಪತ್ರ–ಈ ಅಸಹಕಾರ ಕಾರ್ಯಕ್ರಮ. ಸ್ವಭಾವ ಸಹಜವೂ, ಧಾರ್ಮಿಕವೂ ಆದ ಈ ಅಹಿಂಸಾತ್ಮಕ ಅಸಹಕಾರ ಸಿದ್ಧಾಂತವನ್ನು ಅಂಗೀಕರಿಸಿ ಹಿಂಸಾಚಾರದ ಅಸಹಜ ಅಧರ್ಮ ಪಥವನ್ನು ರಾಷ್ಟ್ರ ನಿರಾಕರಿಸಿದೆ. ರವೀಂದ್ರರ ಕನಸಿನ ಸ್ವರಾಜ್ಯ ಎಂದಾದರೊಂದು ದಿನ ನನಸಾಗಲು ಈ ಅಹಿಂಸಾತ್ಮಕ ಅಸಹಕಾರ ಮಾರ್ಗವೊಂದರಿಂದಲೇ ಸಾಧ್ಯ. ವಿಶ್ವಕ್ಕೆ ಶಾಂತಿಮಂತ್ರವನ್ನೇ ಅವರು ಸಾರಲಿ. ಭಾರತ ತನ್ನ ಅಹಿಂಸಾ ವೃತ್ತಿಗನುಗುಣವಾಗಿ ನಡೆಸುವ ಅಸಹಕಾರ ಚಳುವಳಿ ತಮ್ಮ ಈ ಸಂದೇಶಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ ಎಂಬ ಭರವಸೆ ಅವರಿಗಿರಲಿ. ರಾಷ್ಟ್ರಭಕ್ತಿಯ ಉದಾತ್ತ ಉದ್ದೇಶ ಯಾವ ದಿಶೆಯಲ್ಲಿರಬೇಕೆಂದು ಕವಿ ಹೃದಯದ ಉತ್ಕಟ ಬಯಕೆಯಿದೆಯೋ ಅದರ ಸಾರ್ಥಕ ಸಿದ್ಧಿಯೇ ಈ ಕಾರ್ಯಕ್ರಮದ ಗುರಿ. ಯೂರೋಪಿನ ಅಡಿಯಾಳಾಗಿ ಹೊರಳುತ್ತಿರುವ ಭಾರತ, ವಿಶ್ವಕ್ಕೆ ಯಾವ ಆಶ್ವಾಸನವನ್ನು ಕೊಟ್ಟೀತು? ಜಾಗ್ರತವಾದ ಸ್ವತಂತ್ರ ಭಾರತ, ಸಂಕಟತಪ್ತ ವಿಶ್ವಕ್ಕೆ ಶಾಂತಿ ಸೌಹಾರ್ದಗಳ ಸಂದೇಶವನ್ನು ಸಾರಬಲ್ಲುದು. ಆ ದಿವ್ಯ ಸಂದೇಶ ಸಾರಲು ಅದಕ್ಕೊಂದು ಭವ್ಯ ವೇದಿಕೆ ಬೇಕು. ಅದೇ ಅಹಿಂಸಾತ್ಮಕ ಅಸಹಕಾರದ ವ್ಯವಸ್ಥಿತ ಪ್ರಯತ್ನ."

ಉದಾರವಾದಿ (ಲಿಬರಲ್)ಗಳು ತಮ್ಮ ಈ ರಚನಾತ್ಮಕ ಕಾರ್ಯಕ್ರಮಗಳನ್ನು ಅಂಗೀಕರಿಸುವುದರಿಂದ ಇನ್ನೂ ಹೆಚ್ಚಿನ ದೇಶಸೇವೆ ಮಾಡಬಹುದೆಂದು ಮನವಿ ಮಾಡಿದರು.

"ಅಸಹಕಾರ ಹೋರಾಟದ ಕಾರ್ಯಕರ್ತರೂ ತಮ್ಮಂತೆಯೇ ರಾಷ್ಟ್ರಪ್ರೇಮಿಗಳೆಂದು ಒಪ್ಪುವುದಾದರೆ ಯಾವ ಅಂಶಗಳಲ್ಲಿ ಭಿನ್ನಾಭಿಪ್ರಾಯಗಳಿರಲು ಸಾಧ್ಯವಿಲ್ಲವೋ ಅಂಥವುಗಳನ್ನಂಗೀಕರಿಸಲು ನೀವೇಕೆ ಮನಸ್ಸು ಮಾಡಬಾರದು? ಪಾನ ನಿರೋಧ ಅಂಥದಲ್ಲವೇ? ಮದ್ಯಪಾನಕ್ಕೆ ಬಲಿಯಾಗಿರುವ ನಿರ್ಭಾಗ್ಯರನ್ನು ಅವರ ಅಧಃಪತನದಿಂದ ಪಾರು ಮಾಡಬೇಕಾಗಿದೆ. ಅದಕ್ಕಾಗಿ ಅವರು ಮೊರೆಯಿಡುತ್ತಾರೆ. ಪಾನ ನಿರೋಧ ಚಳುವಳಿಗೆ ಈಗ ಸಿಕ್ಕುತ್ತಿರುವ ಜನಬೆಂಬಲವನ್ನು ಬಳಸಿಕೊಳ್ಳಬೇಕೆಂದು ನಿಮ್ಮನ್ನಾಹ್ವಾನಿಸುತ್ತೇನೆ. ಈ ಹೋರಾಟ ಸಹಜ ಸ್ಫೂರ್ತಿಯಿಂದಲೇ ನಿರ್ಮಾಣವಾಗಿದೆ. ಸರ್ಕಾರದ ಬೊಕ್ಕಸಕ್ಕೆ ಈ ಮದ್ಯದ ಹಣದ ವರಮಾನವನ್ನು ತಪ್ಪಿಸುವುದು ಈ ಚಳುವಳಿಯ ಮುಖ್ಯ ಉದ್ದೇಶವಲ್ಲ. ಈ ಭಯಂಕರ ಮದ್ಯಪಾನ ಶಾಪದಿಂದ ಮುಕ್ತವಾಗಲು ರಾಷ್ಟ್ರವೇ ಪರಿತಪಿಸುತ್ತಿದೆ. ಇಡೀ ಜನತೆ ಸುಪ್ರಜ್ಞೆಯಿಂದ ಇದನ್ನರಿತು ಒಮ್ಮತದಿಂದ ಪ್ರತಿಭಟಿಸಿದರೂ ಈ ದುರ್ವ್ಯಾಪಾರವನ್ನು ನಿಲ್ಲಿಸಲು ನಿರಾಕರಿಸುವುದು ಬಹುಶಃ ಬೇರಾವ ದೇಶದಲ್ಲೂ ಸಾಧ್ಯವಾಗದು. ಭಾರತದಲ್ಲಿ ಅದನ್ನು ನೋಡುತ್ತಿದ್ದೇವೆ. ನಾಗಪುರದಲ್ಲಿ ಸಿಟ್ಟಿಗೆದ್ದ ಜನ ಏನೇ ತಪ್ಪುಮಾಡಿ ಹಿಂಸಾಚಾರವೆಸಗಿದ್ದರೂ ಅವರು ನಡೆಸಿದ ಹೋರಾಟ ನ್ಯಾಯವಾದ ಒಂದು

ಧ್ಯೇಯಕ್ಕಾಗಿ. ಜನಾಂಗದ ಸತ್ವವನ್ನೇ ನಾಶ ಮಾಡುತ್ತಿರುವ ಈ ಕುಡಿತದ ಶಾಪವನ್ನು ನಿರ್ಮೂಲ ಮಾಡಲು ಆ ಜನ ಸಂಕಲ್ಪಿಸಿದ್ದರು. 'ಭಾರತದಲ್ಲಿ ಕಡ್ಡಾಯದಿಂದ' ಕುಡಿತವನ್ನು ನಿಲ್ಲಿಸುವುದು ಸರಿಯಲ್ಲ; ಕುಡಿಯಬೇಕೆನ್ನುವವರಿಗೆ ಸೌಲಭ್ಯಗಳನ್ನೊದಗಿಸಬೇಕು' ಎಂಬ ದುಷ್ಟವಾದಕ್ಕೆ ಯಾರೂ ಬಲಿಯಾಗಬಾರದು. ಪ್ರಜೆಗಳ ದುಶ್ಚಟಗಳಿಗೆ ಯಾವ ಸರ್ಕಾರವೂ ಅನುಕೂಲಗಳನ್ನು ಕಲ್ಪಿಸುವುದಿಲ್ಲ. ಕಳ್ಳರಿಗೆ ಕಳ್ಳತನ ಮಾಡಲು ಸೌಲಭ್ಯಗಳನ್ನೊದಗಿಸುತ್ತೇವೆಯೇ? ಕಳ್ಳತನಕ್ಕಿಂತ, ಬಹುಶಃ ವ್ಯಭಿಚಾರಕ್ಕಿಂತಲೂ ಮದ್ಯಪಾನ ಹೀನತಮವಾದುದು. ಮೊದಲಿನೆರಡಕ್ಕೂ ಮದ್ಯಪಾನವೇ ಅನೇಕ ಸಲ ಮೂಲಕಾರಣ. ಈ ಮದ್ಯದ ಆದಾಯವನ್ನು ಸಂಪೂರ್ಣವಾಗಿ ತೊಡೆದು ಹಾಕಿ, ಮದ್ಯದಂಗಡಿಗಳನ್ನು ಮುಚ್ಚಿಸುವ ಪ್ರಯತ್ನದಲ್ಲಿ ನೀವು ರಾಷ್ಟ್ರಕ್ಕೆ ಬೆಂಬಲಿಸಿ ನಿಲ್ಲಬೇಕೆಂದು ಕೇಳುತ್ತೇನೆ. ಈಗ ಮದ್ಯಮಾರುವವರಿಗೆ ಅವರು ಕೊಟ್ಟ ಹಣವನ್ನು ಹಿಂತಿರುಗಿಸುವುದಾದರೆ ತಮ್ಮ ಅಂಗಡಿಗಳನ್ನು ಖಂಡಿತ ಮುಚ್ಚಿ ಬಿಡುತ್ತಾರೆ.

"ಮಕ್ಕಳ ಶಿಕ್ಷಣದ ಗತಿಯೇನು? ಎಂದು ಕೇಳಬಹುದು. ಕುಡಿತದಿಂದ ಬರುವ ಹಣದಿಂದ ತನ್ನ ಮಕ್ಕಳ ವಿದ್ಯಾಭ್ಯಾಸ ಎಂಬ ವ್ಯವಸ್ಥೆಯೇ ದೇಶಕ್ಕೆ ಘೋರ ಅಪಮಾನ ಎಂದು ಬಗೆಯುತ್ತೇನೆ. ಮಕ್ಕಳ ಶಿಕ್ಷಣ ಒಂದು ವೇಳೆ ನಿಲ್ಲಬೇಕಾಗಿ ಬಂದರೂ ಈ ಕುಡಿತದ ಶಾಪವನ್ನು ತೊಡೆದು ಹಾಕುವ ವಿವೇಕವನ್ನು ನಾವು ತೋರದಿದ್ದರೆ ಬರಲಿರುವ ಪೀಳಿಗೆ ನಮ್ಮನ್ನು ಶಪಿಸಿಯಾರು. ಆದರೆ ಶಿಕ್ಷಣವನ್ನು ನಾವೇನೂ ನಿಲ್ಲಿಸಬೇಕಾಗಿಲ್ಲ. ಶಾಲಾ ಕಾಲೇಜುಗಳಲ್ಲಿ ಚರಕದಿಂದ ನೂಲುವುದನ್ನು ಕಲಿಸಿ ಅವನ್ನು ಸ್ವಾವಲಂಬಿ ಸಂಸ್ಥೆಗಳನ್ನಾಗಿ ಮಾಡುವ ಯೋಜನೆ ನಿಮಗೆ ಹಾಸ್ಯಾಸ್ಪದವಾಗಿ ಕಾಣಬಹುದು. ಆದರೆ ಶಿಕ್ಷಣದ ಅನೇಕ ಸಮಸ್ಯೆಗಳನ್ನು ಈ ಸ್ವಾವಲಂಬನ ಯೋಜನೆ ಖಂಡಿತ ಪರಿಹರಿಸ ಬಲ್ಲುದೆಂದು ನಾನು ಭರವಸೆ ಕೊಡುತ್ತೇನೆ. ಹೊಸ ತೆರಿಗೆಗಳ ಭಾರವನ್ನು ದೇಶ ಹೊರಲಾರದು. ಈಗಿರುವ ತೆರಿಗೆಗಳೇ ಬೆನ್ನು ಮುರಿಯುವಷ್ಟಿವೆ. ಮದ್ಯ, ಅಫೀಮುಗಳಿಂದ ಬರುವ ಆದಾಯವನ್ನು ತೊರೆಯುವುದಷ್ಟೇ ಅಲ್ಲದೆ ಬೇಗ ನಮ್ಮ ಜನಕೋಟಿಯ ದಾರಿದ್ರ್ಯವನ್ನು ನಿವಾರಿಸಲು ಮಿಕ್ಕ ಆದಾಯಗಳನ್ನೂ ಸರ್ಕಾರ ಕಡಿಮೆಮಾಡಿಕೊಳ್ಳಲೇ ಬೇಕಾಗುತ್ತದೆ.

"ಪೂರ್ಣ ಕ್ರಾಂತಿಯೇ ಈ ಯುಗದ ಅತ್ಯಂತ ತೀವ್ರವಾದ ಆವಶ್ಯಕತೆ. ಕ್ರಾಂತಿ ಎಂಬ ಪದವೇ ನಿಮಗಿಷ್ಟವಿಲ್ಲದಿರಬಹುದು, ನಾನು ಪ್ರತಿಪಾದಿಸುವುದು ರಕ್ತಕ್ರಾಂತಿಯಲ್ಲ. ಉನ್ನತ ಸೇವಾ ಕ್ಷೇತ್ರಗಳಲ್ಲಿರುವವರ ಜೀವನ ಮಟ್ಟದ ಸಂಪೂರ್ಣ ಪರಿವರ್ತನೆ. ಅದೇ ಕ್ರಾಂತಿ...... ನೀವೀಗ ರಾಜವರ್ಗಕ್ಕೆ ಸೇರಿ ಬಿಟ್ಟಿದ್ದೀರಿ. ನಿಮ್ಮ ಹಿಂದಿನವರ ಅಥವಾ ಜೊತೆಗಾರರಿಗಿಂತ ನೀವು ನಿಸ್ಸತ್ವರೆಂದು ತಿಳಿಯುವಂತಾಗಬಾರದು. ದೇಶದಲ್ಲಿ ಒಂದು ಹೊಸ ಚೈತನ್ಯ ಮೂಡಿದೆ. ಅಂತರ್ವಾಣಿ ಯಾವಾಗಲೂ ಹೊರಗಿನ ಒತ್ತಡಕ್ಕಿಂತ ಪ್ರಬಲವಾದುದು. ಆತ್ಮಸಾಕ್ಷಿಗೆ ನಾವು ಹೆದರಿ ಮಣಿಯಲೇಬೇಕು.

ಈ ಮದ್ಯಪಾನದ ದುರಾಚಾರ ನಿಲ್ಲಿಸಲು ನಿಮ್ಮ ಸಹಕಾರ ದೇಶಕ್ಕೊದಗುವುದಾದರೆ ನಿಮ್ಮ ಸೇವೆಯ ಪರಂಪರೆ ಸ್ಥಾಯಿಯಾಗುತ್ತದೆ. ಈ ಒಂದು ಹೆಜ್ಜೆ ಮುಂದಿನ ಸಾಹಸ ಕ್ಷೇತ್ರಗಳ ಅನಾವರಣಕ್ಕೂ ಕಾರಣವಾಗಬಹುದು."

'ನಂಬಿಕೆಯ ಒಡಂಬಡಿಕೆ' ಎಂದು ಜುಲೈ ೧೩ರಂದು ಹೀಗೆ ಬರೆದರು :

"ಹೆಸರಿಲ್ಲದ ವಿನೂತನ ಪತ್ರವೊಂದು ನನ್ನ ಕೈಸೇರಿದೆ. ಲೋಕಮಾನ್ಯ ತಿಲಕರಿಗೆ ಅತ್ಯಂತ ಪ್ರಿಯವಾಗಿದ್ದ ಮಹಾಕಾರ್ಯವನ್ನೇ ನಾನು ಮುಂದುವರಿಸಿರುವುದನ್ನು ಮೆಚ್ಚಿ ಅವರ ಆತ್ಮ ಪುನಃ ನನ್ನಲ್ಲವತರಿಸಿದೆಯೆಂದೂ, ನಾನವರ ಯೋಗ್ಯ ಅನುಯಾಯಿಯಂತೆ ನಡೆದುಕೊಳ್ಳಬೇಕೆಂದೂ ತಿಳಿಸಲಾಗಿದೆ. ಇಷ್ಟಕ್ಕೆ ನಿಲ್ಲದೆ ಸ್ವರಾಜ್ಯ ಸಾಧನೆಯ ಕಾರ್ಯದಲ್ಲಿ ನಾನು ಎದೆಗುಂದಬಾರದೆಂದು ಬೆದರಿಸಿ ಗೋಖಲೆಯವರ ರಾಜಕೀಯ ಶಿಷ್ಯ ಎಂದು ಬಗೆದು ನಾನು ಜಗತ್ತಿಗೆ ಮೋಸ ಮಾಡುತ್ತಿದ್ದೇನೆಂದು ಆಪಾದಿಸಲಾಗಿದೆ. ಪತ್ರ ಬರೆದವರು ಸಹಿ ಮಾಡದೆ ಪತ್ರ ಬರೆಯುವ ದಾಸ್ಯ ಮನೋಧರ್ಮವನ್ನು ಮೊದಲು ಬಿಡಬೇಕು. ಸ್ವರಾಜ್ಯ ಧೋರಣೆಯನ್ನು ಬೆಳೆಸಿಕೊಳ್ಳುತ್ತಿರುವಾಗ ನಿರ್ಭಯವಾಗಿ ನಮ್ಮ ಮನಸ್ಸನ್ನು ಪ್ರಕಟಿಸುವ ಕೆಚ್ಚು ನಮ್ಮಲ್ಲಿರುವುದಗತ್ಯ. ಈ ಕಾಗದದ ವಿಷಯ ಸಾರ್ವಜನಿಕ ಪ್ರಶ್ನೆಗೆ ಸಂಬಂಧಪಟ್ಟಿರುವುದರಿಂದ ಉತ್ತರಿಸಬೇಕಾಗಿದೆ. ಲೋಕಮಾನ್ಯರ ಅನುಯಾಯಿ ಎಂದು ನಾನು ಹೇಳಿಕೊಳ್ಳಲಾರೆ. ಆ ಗೌರವ ನನಗೆ ಸಲ್ಲದು. ಆದರೆ ಅವರ ಅದಮ್ಯ ಸಂಕಲ್ಪಶಕ್ತಿ, ಜ್ಞಾನ ವಿಸ್ತಾರ, ರಾಷ್ಟ್ರಪ್ರೇಮಗಳಿಗಾಗಿ ಕೋಟ್ಯಂತರ ಭಾರತೀಯರಂತೆ ನಾನೂ ಮಾರುಹೋಗಿದ್ದೇನೆ. ಎಲ್ಲಕ್ಕಿಂತ ಮಿಗಿಲಾಗಿ ಅವರ ನಿಷ್ಕಲ್ಮಷ ಜೀವನ ಮತ್ತು ಸ್ವಾರ್ಥ ತ್ಯಾಗಗಳು ಅದ್ವಿತೀಯ. ಸಮಕಾಲೀನ ನಾಯಕರಲ್ಲಿ ಅವರಂತೆ ಜನಮನವನ್ನು ಸೆರೆ ಹಿಡಿದವರು ಮತ್ತೊಬ್ಬರಿಲ್ಲ. ಸ್ವರಾಜ್ಯ ದುಂದುಭಿಯನ್ನು ನಮ್ಮೆಲ್ಲರಲ್ಲಿ ಮೊಳಗಿಸಿದರು. ಈಗ ಪ್ರಚಲಿತ ಸರ್ಕಾರ ಪದ್ಧತಿಯಲ್ಲಿನ ದೋಷ ಅವರಿಗರಿವಾಗಿತ್ತು. ತಿಲಕರ ಮಹಾಸಂದೇಶವನ್ನು ವಿನಯಪೂರ್ವಕವಾಗಿ ಸಾರುತ್ತಿದ್ದೇನೆಂದು ನನ್ನ ನಂಬಿಕೆ. ಇದರಲ್ಲಿ ಅವರ ಉತ್ತಮ ಶಿಷ್ಯರಂತೆಯೇ ನಾನೂ ಪ್ರಾಮಾಣಿಕವಾಗಿ ನಡೆಯುತ್ತಿದ್ದೇನೆ. ತಿಲಕರು ನನ್ನ ಮಾರ್ಗವನ್ನೆಂದೂ ಅಪನಂಬಿಕೆಯಿಂದ ತಿರಸ್ಕರಿಸಲಿಲ್ಲ ಎಂದೇ ನನ್ನ ನಿಜವಾದ ನಂಬಿಕೆ. ಆದರೆ ನನ್ನ ರೀತಿ ನೀತಿಗಳೂ ತಿಲಕರಿಗಿಂತ ಭಿನ್ನವಾದುದೆಂಬುದನ್ನು ನಾನು ಬಲ್ಲೆ. ಆ ಕಾರಣದಿಂದಲೇ ಹಲವು ಮಹಾರಾಷ್ಟ್ರೀಯರು ನನ್ನದನ್ನೊಪ್ಪುವುದಿಲ್ಲ. ತಿಲಕರ ವಿಶ್ವಾಸ ನನಗೆ ಅಪಾರವಾಗಿ ಲಭಿಸಿತ್ತು. ಜನತೆ ಅಂಗೀಕರಿಸಿ ನಡೆಯುವಂತೆ ಮನವೊಲಿಸುವುದಾದರೆ ನನ್ನ ಕಾರ್ಯವಿಧಾನ ಅತ್ಯುತ್ತಮವೆಂದು ಅವರು ತಮ್ಮ ನಿಧನಕ್ಕೆ ಕೇವಲ ಹದಿನೈದು ದಿನಗಳ ಹಿಂದೆ ಹಲವು ಮಿತ್ರರೆದುರು ಕೊನೆಯ ಮಾತುಗಳನ್ನು ನನ್ನಲ್ಲಾಡಿದ್ದರು. ಆದರೆ ಈ ಬಗೆಗೆ ಶಂಕೆಯನ್ನೂ ವ್ಯಕ್ತಪಡಿಸಿದ್ದರು. ನನಗಂತೂ ಬೇರೆ ಮಾರ್ಗ ಯಾವುದೂ ತಿಳಿಯದು. ಉತ್ಕಟ ಪರೀಕ್ಷಾ ಸಮಯ ಬಂದೊದಗಿದಾಗ ಈ ಅಹಿಂಸಕ ಅಸಹಕಾರದ ಕಾರ್ಯವಿಧಾನವನ್ನು ದೇಶ ಮೈಗೂಡಿಸಿಕೊಂಡಿರುವುದು

ನಿಸ್ಸಂದೇಹವಾಗಿ ಖಚಿತಗೊಳ್ಳುವುದೆಂದೇ ನನ್ನ ಆಸೆ. ನನ್ನ ಇತಿಮಿತಿಗಳ ಅರಿವೂ ನನಗಿದೆ. ತಿಲಕರ ಮಹಾವಿದ್ವತ್ತಾಗಲಿ, ವ್ಯವಸ್ಥಾಕೌಶಲವಾಗಲಿ ನನಗಿಲ್ಲ. ನಿಯಮ ಬದ್ಧವಾದ ಸುವ್ಯವಸ್ಥಿತ ಪಕ್ಷ ನನ್ನ ಹಿಂದಿಲ್ಲ. ಇಪ್ಪತ್ತಮೂರು ವರ್ಷಗಳು ದೇಶ ಭ್ರಷ್ಟನಾಗಿದ್ದುದರಿಂದ ನಮ್ಮ ದೇಶದ ಆಳವಾದ ಪರಿಜ್ಞಾನವೂ ಲೋಕಮಾನ್ಯರಿ ಗಿದ್ದಷ್ಟು ನನಗಿರಲಾರದು. ನಮ್ಮಿಬ್ಬರಲ್ಲೂ ಸಂಪೂರ್ಣ ಒಮ್ಮತವಿದ್ದುದು, ಎರಡು ವಿಷಯಂಗಳಲ್ಲಿ: ರಾಷ್ಟ್ರಪ್ರೇಮ ಹಾಗೂ ಸ್ವರಾಜ್ಯ ಸಾಧನೆಯಲ್ಲಿ ನಿಷ್ಠೆ. ದಿವಂಗತ ಲೋಕಮಾನ್ಯರ ಸ್ಮರಣೆಗೆ ಶ್ರದ್ಧಾಂಜಲಿಯನ್ನರ್ಪಿಸುವುದರಲ್ಲಿ ಯಾರಿಗೂ ಹಿಂದೆ ಬೀಳದೆ ಅವರ ಶಿಷ್ಯ ಕೋಟಿಯೊಡನೆ ಭುಜಕ್ಕೆ ಭುಜಕೊಟ್ಟು, ಸ್ವರಾಜ್ಯ ಸಾಧನೆಗಾಗಿ ಹೋರಾಡುವ ಆಶ್ವಾಸನೆಯನ್ನು ನನ್ನ ಅನಾಮಿಕ ಮಿತ್ರರಿಗೆ ಕೊಡಬಯಸುತ್ತೇನೆ.

"ಶಿಷ್ಯತ್ವ ಒಂದು ವೈಯ್ಯಕ್ತಿಕ ಪವಿತ್ರ ವಿಷಯ. ದಾದಾಭಾಯಿಯವರ ಪಾದ ಧೂಳಿಯನ್ನು ೧೮೮೮ರಲ್ಲಿ ಅರಸಿ ಹೋದೆ. ಆದರೆ ಅವರ ಎತ್ತರವನ್ನು ನಾನು ನಿಲುಕಲಾರದಂತೆ ಕಂಡೆ. ನಾನವರ ಮಗುವೆನಿಸಿಕೊಂಡೇನು, ಶಿಷ್ಯನಾಗಲಾರೆ ಎನಿಸಿತು. ಮಗನಿಗಿಂತ ಶಿಷ್ಯನಾದವನು ಶ್ರೇಷ್ಠ; ಕಾರಣ ಶಿಷ್ಯನಾಗುವುದೆಂದರೆ ದ್ವಿತೀಯ ಜನ್ಮ. ಅದೊಂದು ಶರಣಾಗತಿ. ನನ್ನ ದಕ್ಷಿಣ ಆಫ್ರಿಕದ ಚಳುವಳಿಯ ಸಂಬಂಧದಲ್ಲಿ ೧೮೯೬ರಲ್ಲಿ ಅಂದಿನ ಭಾರತದ ಅತಿಶ್ರೇಷ್ಠ ನಾಯಕರನ್ನೆಲ್ಲ ನಾನು ಭೇಟಿಯಾದೆ. ನ್ಯಾಯಮೂರ್ತಿ ರಾನಡೆ ಅವರನ್ನು ಕಂಡು ಭಯಭಕ್ತಿಯಿಂದ ದೂರ ನಿಂತೆ. ಅವರ ಸನ್ನಿಧಿಯಲ್ಲಿ ಮಾತನಾಡುವುದೂ ಕಷ್ಟವಾಯಿತು. ಬದ್ರುದೀನ್ ತಯಾಬ್ಜಿ ಸಾಹೇಬರು ತಂದೆಯಂತೆ ನನ್ನನ್ನು ಕಂಡರು ಮತ್ತು ರಾನಡೆ ಹಾಗೂ ಫಿರೋಜ್ ಷಾ ಮೆಹತಾರನ್ನುಅನುಸರಿಸು ವಂತೆ ನನಗೆ ಹೇಳಿದರು. ಶ್ರೀ ಮೆಹತಾ ಅವರು ನನ್ನ ಆಶ್ರಯದಾತರಾದರು. ಅವರ ಸಂಕಲ್ಪವೇ ಕೊನೆಯ ನಿರ್ಧಾರ. ಆಜ್ಞೆ ಪಾಲಿಸುವುದಷ್ಟೇ ನಮ್ಮ ಕೆಲಸ. ಅವರು ನನ್ನನ್ನು ಶಿಷ್ಯನೆಂದೆಣಿಸಲೇ ಇಲ್ಲ. ಆ ಪ್ರಯತ್ನವನ್ನೂ ಅವರು ಮಾಡಲಿಲ್ಲ.

"ಜ್ಞಾನದ ಮುಖಮುದ್ರೆಯ ಡಾ. ಭಂಡಾರಕರ ಅವರನ್ನು ಪೂಜ್ಯಭಾವದಿಂದ ಕಂಡೆ. ಆದರೂ ಗುರುವಿನ ಸಿಂಹಾಸನದಲ್ಲವರನ್ನು ಕುಳ್ಳಿರಿಸಲಿಲ್ಲ. ಆ ಪೀಠ ತೆರ ವಾಗಿಯೇ ಉಳಿದಿತ್ತು. ಅನೇಕರು ಮಹಾನಾಯಕರಂತೆ ಆಕರ್ಷಿಸಿದರು, ಯಾರೂ ರಾಜನಂತೆ ನನ್ನ ಹೃದಯ ಪೀಠವನ್ನೇರಲಿಲ್ಲ.

"ಗೋಖಲೆಯವರ ಪ್ರಭಾವವೇ ಬೇರೆಯಾಯಿತು. ಅದೇಕೆಂದು ನಾನು ಹೇಳ ಲಾರೆ. ಕಾಲೇಜು ಮೈದಾನದಲ್ಲಿದ್ದ ಅವರ ಮನೆಯಲ್ಲಿ ಅವರನ್ನು ಕಂಡೆ. ಹಳೆಯ ಸ್ನೇಹಿತರೊಬ್ಬರು ಸಿಕ್ಕಂತೆ; ಬಹಳ ದಿನಗಳಿಂದ ದೂರವಿದ್ದ ತಾಯಿಯ ಬಳಿಗೆ ಬಂದಂತೆ ಭಾಸವಾಯಿತು. ಕ್ಷಣದಲ್ಲಿ ಆ ವಾತ್ಸಲ್ಯಮಯಿಯ ಮುಖ ಸಹಜ ಸಲಿಗೆ ಯಿಂದ ನಡೆದುಕೊಳ್ಳುವಂತೆ ಪ್ರೇರೇಪಿಸಿತು. ದಕ್ಷಿಣ ಆಫ್ರಿಕದಲ್ಲಿನ ನನ್ನ ಕಾರ್ಯವನ್ನು ಕುರಿತು ಕೂಲಂಕಷವಾಗಿ ಪ್ರಶ್ನಿಸಿ ತಿಳಿದುಕೊಂಡಾಗ ಅವರ ಆತ್ಮೀಯತೆಗೆ ಮಾರು

ಹೋಗಿ ಹೃದಯ ಪೀಠಕ್ಕವರನ್ನೇರಿಸಿದೆ. ಬಿಟ್ಟು ಹೊರಟಾಗ ಹೃದಯ ಮಿಡಿದು 'ಈತ ನಿನ್ನ ಆರಾಧ್ಯಮೂರ್ತಿ' ಎಂದು ಮಾರ್ದನಿಸಿತು. ೧೯೦೧ರಲ್ಲಿ ದಕ್ಷಿಣ ಆಫ್ರಿಕ ದಿಂದ ಹಿಂದಿರುಗಿದಾಗ ಪರಿಚಯ ಇನ್ನೂ ನಿಕಟವಾಯಿತು. ನನ್ನನ್ನಂಗೀಕರಿಸಿ ಕೈ ಹಿಡಿದು ವ್ಯಕ್ತಿತ್ವ ರೂಪಿಸಲು ಪ್ರಾರಂಭಿಸಿಯೇ ಬಿಟ್ಟರು. ಮಾತಿನಲ್ಲಿ ಉಡುಗೆಯಲ್ಲಿ, ನಡೆಯಲ್ಲಿ, ಊಟದಲ್ಲಿ ನನ್ನ ವರ್ತನೆಯ ಬಗೆಗೆ ವಿಚಾರ ಮಾಡತೊಡಗಿದರು. ನನ್ನ ತಾಯಿಗಿಂತಲೂ ಹೆಚ್ಚಾಗಿ ಆದರದ ಆಸಕ್ತಿ ವಹಿಸಿದರು. ನಮ್ಮಿಬ್ಬರ ಮಧ್ಯೆ ಯಾವ ಮುಚ್ಚುಮರೆಯೂ ಇರಲಿಲ್ಲ. ಮೊದಲ ನೋಟಕ್ಕೆ ಪ್ರೇಮಿಸಿದ ನಮ್ಮಿಬ್ಬರ ಸ್ನೇಹ ೧೯೧೩ರಲ್ಲಿ ಕಠಿಣ ಪರೀಕ್ಷೆಗೂ ಒಳಗಾಗಿ ಗೆದ್ದಿತು. ರಾಜಕೀಯ ಕಾರ್ಯಕರ್ತ ನಲ್ಲಿ ನಾನು ಬಯಸಿದುದೆಲ್ಲವೂ ಗೋಖಲೆಯವರಲ್ಲಿತ್ತು. ಸ್ಫಟಿಕದಂತೆ ಸ್ವಚ್ಛ, ಕುರಿ ಮರಿಯಷ್ಟು ಸಾಧು, ಸಿಂಹ ಸದೃಶ ಶೌರ್ಯ, ದೋಷ ಕಂಡಾಗ ಔದಾರ್ಯ. ಈ ಗುಣಗಳೆಲ್ಲಕ್ಕಿಂತ ಹೆಚ್ಚಾಗಿ ಅವರಲ್ಲಿ ನಾವಾಡಿಕೊಳ್ಳಬಹುದಾದ ಯಾವ ದುರ್ಗುಣದ ಲವಲೇಶವೂ ಇಲ್ಲದಿರುವುದೇ ನನಗೆ ಸಾಕಾಗಿತ್ತು. ರಾಜಕೀಯ ಕ್ಷೇತ್ರದಲ್ಲಿ ನನಗೆ ಅಂದಿಗೂ, ಇಂದಿಗೂ ಅವರೊಬ್ಬ ಆದರ್ಶ ಪುರುಷ. ನಮ್ಮಲ್ಲಿ ಭಿನ್ನಾಭಿಪ್ರಾಯ ಗಳಿರಲಿಲ್ಲವೆಂದೇನೂ ಅಲ್ಲ. ವಿಧವಾವಿವಾಹ ಮೊದಲಾದ ಸಾಮಾಜಿಕ ಪದ್ಧತಿಗಳ ಬಗ್ಗೆ ೧೯೦೧ರಲ್ಲೇ ನಮ್ಮಿಬ್ಬರಲ್ಲಿ ಭೇದವಿತ್ತು. ಪಾಶ್ಚಾತ್ಯ ನಾಗರಿಕತೆಯ ಬಗೆಗೆ ನಮ್ಮದು ಏಕಾಭಿಪ್ರಾಯವಿರಲಿಲ್ಲ. ಅಹಿಂಸೆಯ ಬಗ್ಗೆ ನನ್ನ ತೀವ್ರ ವಿಶ್ವಾಸ ಅವರಿಗೆ ಒಪ್ಪಿಗೆಯಿರಲಿಲ್ಲವೆಂದು ಮರೆಮಾಚದೇ ತಿಳಿಸಿದ್ದರು. ಈ ವ್ಯತ್ಯಾಸಗಳಾವುವೂ ನಮ್ಮ ಮಧ್ಯೆ ಗಣನೆಗೆ ಬರಲಿಲ್ಲ. ನಮ್ಮನ್ನು ಬೇರ್ಪಡಿಸಲಿಲ್ಲ. ಇಂಥವರು ಬದುಕಿದ್ದರೆ ಏನಾಗುತ್ತಿತ್ತು ಎಂದು ಊಹಿಸುವುದು ದೋಷಪೂರ್ಣವಾದೀತು. ಅವರನ್ನನುಸರಿಸಿಯೇ ಕೆಲಸ ಮಾಡುತ್ತಿರುತ್ತಿದ್ದೆ ಎಂದು ನಾನು ಬಲ್ಲೆ. ನನಗೆ ಬಂದ ಅನಾಮಿಕ ಪತ್ರದಲ್ಲಿ ನನ್ನ ರಾಜಕೀಯ ಶಿಷ್ಯತ್ವವನ್ನು ಮೋಸವೆಂದು ಹಳಿದುದು ತೀವ್ರವೇದನೆಯನ್ನುಂಟು ಮಾಡಿತು. ಆದ ಕಾರಣವೇ ಈ ನಿವೇದನೆ. ಕಣ್ಮರೆಯಾದ ಅವರ ಬಗ್ಗೆ ನಾನು ಕರ್ತವ್ಯ ಭ್ರಷ್ಟನಾಗಲಾರೆ. ಈಗಂತೂ ನಾನು ವಿರೋಧಿ ಪಕ್ಷಕ್ಕೆ ಸೇರಿದ್ದೇನೆಂದು ಭಾರತೀಯ ವಲಯಗಳು ದೂರುತ್ತಿರುವಾಗ ಗೋಖಲೆಯವರಲ್ಲಿ ಪೂರ್ಣ ನಿಷ್ಠೆಯನ್ನು ನಾನು ಘೋಷಿಸಲೇಬೇಕೆಂದು ಯೋಚಿಸಿದೆ."

ಜುಲೈ ೧೯ರಂದು ಮತ್ತೆ 'ಯಂಗ್-ಇಂಡಿಯಾ'ದಲ್ಲಿ ಇಂಗ್ಲಿಷ್ ಜನಾಂಗಕ್ಕೆ ಹೀಗೆ ಮನವಿ ಮಾಡಿದರು ಗಾಂಧೀಜಿ:

"ಎರಡನೇ ಬಾರಿಗೆ ನಿಮ್ಮಲ್ಲಿ ಬಿನ್ನವಿಸಿಕೊಳ್ಳುತ್ತಿದ್ದೇನೆ. ನಿಮ್ಮಲ್ಲಿ ಬಹು ಜನ ಅಸಹಕಾರ ಚಳುವಳಿಯ ಬಗೆಗೆ ಜಿಗುಪ್ಸೆಗೊಂಡಿರುವಿರೆಂದು ಬಲ್ಲೆ. ನನ್ನ ಪ್ರಾಮಾಣಿ ಕತೆಯಲ್ಲಿ ನಿಮಗೆ ನಂಬಿಕೆಯಿದ್ದಲ್ಲಿ ನನ್ನ ಕಾರ್ಯಕ್ರಮದ ಎರಡು ಅಂಶಗಳನ್ನು ಪ್ರತ್ಯೇಕಗೊಳಿಸಿ ಪರಿಶೀಲಿಸಬೇಕೆಂದು ಕೋರುತ್ತೇನೆ.

"ಸಹಜವಾಗಿ ನಿಮಗೆ ಅನ್ನಿಸದಿದ್ದರೆ ನನ್ನ ಪ್ರಾಮಾಣಿಕತೆಯನ್ನು ಸಿದ್ಧಮಾಡಿ ತೋರಿಸಲಾರೆ. ಇಂಗ್ಲಿಷ್ ಪದ್ಧತಿಯನ್ನು ನಾನು ದ್ವೇಷಿಸುತ್ತೇನೆ. ಇಂಗ್ಲಿಷ್ ಜನವನ್ನಲ್ಲ ಎಂದು ಹೇಳಿದರೆ ಇದು ಮೋಸ ಎನ್ನುವ ಭಾರತೀಯರುಂಟು. ಸೋದರರನ್ನು ದ್ವೇಷಿಸದೆಯೇ ಅವನ ದುಷ್ಕೃತ್ಯಗಳನ್ನು ದ್ವೇಷಿಸುವುದು ಸಾಧ್ಯ ಎಂದು ತೋರಿಸಲು ನಾನು ಪ್ರಯತ್ನಿಸುತ್ತಿದ್ದೇನೆ. ಯಹೂದ್ಯ ಧರ್ಮಶಾಸ್ತ್ರಜ್ಞರನ್ನು ಸಂಪ್ರದಾಯ ಶರಣರನ್ನು ಜೀಸಸ್ ದ್ವೇಷಿಸಲಿಲ್ಲ; ಅವರ ಘಾತಕ ವೃತ್ತಿಯನ್ನು ಖಂಡಿಸಿದ. ಮಾನವ ಪ್ರೇಮ ಮತ್ತು ಪಾಪಖಂಡನೆಯ ನಿಯಮ ತನ್ನ ವೈಯಕ್ತಿಕ ಸಾಧನೆಗೆಂದು ಮಾತ್ರವಲ್ಲ ಜೀಸಸ್ ಹೇಳಿದ್ದು; ಸಾರ್ವತ್ರಿಕ ಅನುಷ್ಠಾನಕ್ಕಾಗಿ. ಇದೇ ನಿಯಮ ಜಗತ್ತಿನ ಸರ್ವಧರ್ಮ ಗ್ರಂಥಗಳಲ್ಲೂ ನನಗೆ ಗೋಚರವಾಗುತ್ತಿದೆ.

"ಮಾನವನ ನೈಸರ್ಗಿಕ ಪ್ರವೃತ್ತಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದೇನೆ. ಹಾಗೆಯೇ ನನ್ನ ಅವಗುಣಗಳನ್ನೂ ವಿಶ್ಲೇಷಣೆ ಮಾಡುವ ಸ್ವಭಾವ ನನ್ನದು. ಮಾನವ ತಾನು ಪ್ರತಿಪಾದಿಸುವ ತತ್ವಪ್ರಣಾಲಿಗಿಂತಲೂ ದೊಡ್ಡವನೆಂದು ಕಂಡುಕೊಂಡಿದ್ದೇನೆ. ವ್ಯಕ್ತಿಗಳಾಗಿ ನೀವು ನಿಮ್ಮ ವ್ಯವಸ್ಥಾಬದ್ಧ ಪದ್ಧತಿಗಿಂತ ಬಹುಪಾಲು ಉತ್ತಮರಾಗಿದ್ದೀರಿ ಎಂದೇ ನನ್ನ ಭಾವನೆ. ಅಮೃತಸರದಲ್ಲಿ ಏಪ್ರಿಲ್ ಹತ್ತರ ದುರಂತ ಘಟನೆಗಳ ಸಮಯಕ್ಕೆ ಗುಂಪು ಸೇರಿದ್ದ ನನ್ನ ದೇಶಬಾಂಧವರೂ ಕೂಡ ಆ ಜಂಗುಳಿಯ ಮನೋಧರ್ಮಕ್ಕಿಂತ ಭಿನ್ನವಾದ ವೈಯಕ್ತಿಕ ಗುಣಗಳುಳ್ಳವರು. ಅವರಲ್ಲಿ ಒಬ್ಬೊಬ್ಬನೂ ವೈಯಕ್ತಿಕವಾಗಿ ಆ ಇಂಗ್ಲಿಷ್ ಬ್ಯಾಂಕ್ ಮೇನೇಜರುಗಳನ್ನು ಕೊಲ್ಲಲು ನಿರಾಕರಿಸುತ್ತಿದ್ದ. ಅವರು ನಿರಪರಾಧಿಗಳು ಎಂದು ವ್ಯಕ್ತಿ ವಿಚಾರ ಮಾಡಬಲ್ಲ. ಆ ದೊಂಬಿಯ ಗುಂಪಿನಲ್ಲಿ ಮಾತ್ರ ಎಲ್ಲರೂ ಮೈಮರೆತವರೇ. ಅಧಿಕಾರಶಾಹಿಗೆ ಸೇರಿದ ಇಂಗ್ಲಿಷಿನವನಿಗಿಂತ ಸಾಮಾನ್ಯ ಇಂಗ್ಲಿಷ್ ನಾಗರಿಕ ಭಿನ್ನ ಎಂದೇ ಇದರ ಅರ್ಥ. ಹಾಗೆಯೇ ಭಾರತದಲ್ಲಿನ ಇಂಗ್ಲಿಷ್ ವ್ಯಕ್ತಿಗಿಂತ ಇಂಗ್ಲೆಂಡಿನಲ್ಲೇ ಇರುವ ಇಂಗ್ಲಿಷಿನವ ಬೇರೆಯೇ ವ್ಯಕ್ತಿ. ಒಂದು ಅನಿಷ್ಟವಾದ ಅತ್ಯಂತ ಪಾಪಪೂರಿತ ವ್ಯವಸ್ಥೆಗೆ ಸೇರಿದ ಜನ ನೀವು ಎಂದು ಭಾರತದಲ್ಲಿ ನಿಮ್ಮ ಬಗ್ಗೆ ಭಾವನೆ. ಆದ್ದರಿಂದಲೇ ವೈಯಕ್ತಿಕವಾಗಿ ನಿಮ್ಮನ್ನು ದೂಷಿಸದೆ ದುರುದ್ದೇಶಗಳನ್ನು ಆರೋಪಿಸಿದೆ. ನೀವು ಪ್ರತಿನಿಧಿಸುವ ಕರಾಳ ವ್ಯವಸ್ಥೆಯನ್ನು ಕಠೋರವಾಗಿ ಖಂಡಿಸಬಲ್ಲೆ. ನಮ್ಮಂತೆಯೇ ನೀವೂ ನಿಮ್ಮದೇ ಆದ ದುರ್ವ್ಯವಸ್ಥೆಯ ಗುಲಾಮರಾಗಿದ್ದೀರಿ. ಇದೇ ರೀತಿ ನೀವೂ ವಿಚಾರ ಮಾಡಿ. ನನ್ನ ಮಾತುಗಳಿಗೆ ಯಾವ ದುರುದ್ದೇಶದ ವಿಪರೀತಾರ್ಥವನ್ನೂ ಆರೋಪಿಸಬೇಡಿ. ನನ್ನದು ಒಂದೇ ಉದ್ದೇಶ. ಭಾರತವನ್ನು ಕೇವಲ ಒಂದು ಹಿಡಿ ಜನರ ಗುಲಾಮರನ್ನಾಗಿಸಿರುವ ಈ ದುಷ್ಟ ಸಾಮ್ರಾಜ್ಯ ಪದ್ಧತಿಯನ್ನು ಬದಲಿಸಬೇಕು ಇಲ್ಲವೇ ಕೊನೆಗಾಣಿಸಬೇಕೆಂದು ತೀವ್ರ ಕಾತರನಾಗಿದ್ದೇನೆ. ಇಂಗ್ಲಿಷ್‌ನವರಿಗೂ ಈ ಅನಿಷ್ಟ ಪದ್ಧತಿಯಿಂದ ಕೋಟೆಗಳ ಮತ್ತು ಫಿರಂಗಿಗಳ ರಕ್ಷಣೆಯನ್ನೇ ಸತತವಾಗಿ ಆಶ್ರಯಿಸುವಂತಾಗಿದೆ. ಭಾರತದಲ್ಲೆಲ್ಲೆಲ್ಲೂ ಈ ರಕ್ಷಣಾವ್ಯೂಹಗಳು ತಲೆ ಹಾಕುತ್ತಿರುವುದೇ ಇದಕ್ಕೆ ಸಾಕ್ಷಿ. ಈ ದೃಶ್ಯ ನಮ್ಮಿಬ್ಬರಿಗೂ

ಅವಮಾನಕರವಾದುದು. ಪರಸ್ಪರ ಭಯ ಅವಿಶ್ವಾಸಗಳ ಮೇಲೆ ನಮ್ಮ ಬಾಂಧವ್ಯ ಬೆಳೆದಿದೆ. ಇದು ಖಂಡಿತ ಪೌರುಷಹೀನ ವೃತ್ತಿ ಎಂದು ನೀವೂ ಒಪ್ಪುವಿರಲ್ಲವೆ? ಇಂಥ ಪರಿಸ್ಥಿತಿಗೆ ಕಾರಣವಾಗಿರುವ ಈ ಪದ್ಧತಿಯೇ ಅಮಾನುಷ. ಭಾರತದ ಜನರೊಡನೆ ಸಮರಸವಾಗಿ ಬೆರೆತು ನೀವು ಬಾಳುವಂತಿರಬೇಕು; ಪರದೇಶದ ಶೋಷಕರಂತಲ್ಲ. ಒಂದು ಇಂಗ್ಲಿಷ್ ಜೀವಕ್ಕೆ ಸಾವಿರ ಭಾರತೀಯ ಜೀವಗಳನ್ನು ಪಣವಾಗಿಡುವ ಹಠ ಯಾವುದೋ ಕರಾಳ ನಿರಾಶೆಯ ಸಿದ್ಧಾಂತ. ಆದರೂ ನಿಮ್ಮವರೇ ಆದ ಅತ್ಯುನ್ನತ ಪದವಿಯ ವ್ಯಕ್ತಿಯೇ ೧೯೧೯ರಲ್ಲಿ ಇದನ್ನು ಪ್ರತಿಪಾದಿಸಿದರೆಂಬುದು ನಿಜ.

"ನಮ್ಮಿಬ್ಬರನ್ನು ಈ ದುಸ್ಥಿತಿಯ ಪತನಕ್ಕೆ ನೂಕಿರುವ ಪದ್ಧತಿಯನ್ನು ನಿರ್ಮೂಲ ಮಾಡುವ ಕಾರ್ಯದಲ್ಲಿ ನೀವೂ ನಮ್ಮೊಡನೆ ಸಹಕರಿಸಲು ಸ್ವಾಗತಿಸಬೇಕೆಂಬ ಆಶೆ ನನ್ನದು. ಆದರೆ ಈ ಕೂಡಲೇ ನಾನು ಹಾಗೆ ಮಾಡಲಾರೆನೆಂದೂ ನನಗನಿಸುತ್ತದೆ. ಕಾರಣ ಅಂಥ ಪರಿಪೂರ್ಣ ಪರಾಕಾಷ್ಠೆಯನ್ನು ಮುಟ್ಟಲು ಇನ್ನೂ ನಮ್ಮ ಶ್ರದ್ಧೆ ಸ್ವಾರ್ಥತ್ಯಾಗ ಮತ್ತು ಸಂಯಮಶಕ್ತಿಗಳು ಆಮಟ್ಟಕ್ಕೆ ಬೆಳೆದು ನಿಂತಿಲ್ಲ. ಆದರೂ ಪರದೇಶಿವಸ್ತ್ರ ಬಹಿಷ್ಕಾರ ಮತ್ತು ಮದ್ಯಪಾನ ನಿರೋಧದ ನಮ್ಮ ಈ ಚಳುವಳಿಗಳಲ್ಲಿ ನೀವು ಸಹಾಯ ಮಾಡಬೇಕೆಂದು ಮಾತ್ರ ಕೇಳಿಕೊಳ್ಳುತ್ತೇನೆ."

ಭಾರತದ ಐಕ್ಯತೆಗಾಗಿ ತೀವ್ರ ಪ್ರಚಾರ ಕೈಗೊಂಡರು ಗಾಂಧೀಜಿ. ವಿವಿಧ ಧರ್ಮಗಳ, ಜನಾಂಗಗಳ, ಜಾತಿಗಳ, ಪಕ್ಷಗಳ, ಐಕ್ಯತೆಗೆ ಪ್ರಯತ್ನಿಸಿದರು. ನಿಮ್ನ ವರ್ಗಗಳ ಉತ್ಥಾನಕ್ಕಾಗಿ ಸರ್ವ ಪ್ರಯತ್ನದ ಪಣತೊಟ್ಟರು. ಮಹಿಳೆಯರ ಮೇಲ್ಮೆ ಅವರ ಗಮನವನ್ನು ಪ್ರಬಲವಾಗಿಯೇ ಸೆಳೆದಿತ್ತು. ಪುರುಷನ ಕಾಮವಸ್ತು ಮಾತ್ರ ಎನಿಸಿಕೊಳ್ಳದೆ ಸ್ವತಂತ್ರ ವಿಚಾರವಂತರಾಗಿ ಗೌರವವನ್ನು, ತೇಜಸ್ಸನ್ನು ಗಳಿಸಿಕೊಳ್ಳಿ ಎಂದು ಮಹಿಳೆಯರಿಗೆ ಕರೆಯಿತ್ತರು. "ಸ್ತ್ರೀ ತಾನು ಕೇವಲ ಅಲಂಕಾರದ ವಸ್ತುವಲ್ಲ, ತನ್ನ ಗಂಡನಿಗೂ ಇದು ಮನದಟ್ಟಾಗುವಂತೆ ನಿರಾಕರಿಸಿ ಪುರುಷರೊಡನೆ ಸಮಾನ ಸ್ಥಾನ ಪಡೆಯಬೇಕು. ದೇಹ ಪೂಜೆಯನ್ನು ಬಿಟ್ಟು ಸಾರ್ವಜನಿಕ ಸೇವೆಯಲ್ಲಿ ತೊಡಗಬೇಕು. ಅಪಾಯಂಗಳನ್ನೆದುರಿಸಬೇಕು, ಆದರ್ಶಗಳಿಗಾಗಿ ಬಲಿದಾನ ಮಾಡಬೇಕು. ಕೃಪಾಭಿಕ್ಷೆಯನ್ನು ಬೇಡದೆ ಪುರುಷರೊಡನೆ ಸಮಸಮವಾಗಿಯೇ ಗುರಿ ಸಾಧನೆಗಾಗಿ ಸಂಕಟಗಳನ್ನು ಸಂತೋಷವಾಗಿ ಸ್ವಾಗತಿಸಬೇಕು."

ಪತಿತ ಸೋದರಿಯ ಬಗ್ಗೆಯೂ ಗಾಂಧೀಜಿ ವಿಚಾರ ಮಾಡಿದರು. ಅವರೊಡನೆ ಗೌರವದಿಂದಲೇ ನಡೆದುಕೊಂಡರು. ಅವರೂ ಇವರಲ್ಲಿ ವಿಶ್ವಾಸವಿಟ್ಟರು. ಸಲಹೆ ಬೇಡಿದರು.

'ಯಂಗ್–ಇಂಡಿಯಾ'ದಲ್ಲಿ ಬರೆಯುತ್ತಾ: "ಆಂಧ್ರದ ಕಾಕಿನಾಡದಲ್ಲಿ ಮೊದಲ ಬಾರಿಗೆ ದೇಹ ಮಾರಿ ಬದುಕುತ್ತಿದ್ದ ಮಹಿಳೆಯರನ್ನು ಭೇಟಿಯಾದೆ. ಎರಡನೇ ಬಾರಿ ಬಾರಿಸಾಲ್‌ನಲ್ಲಿ. ನೂರಕ್ಕೂ ಹೆಚ್ಚು ಮಹಿಳೆಯರು ಬಂದು ಭೇಟಿಯಾದರು.

ಭೇಟಿಯನ್ನು ಕೋರಿ ಮೊದಲೇ ಪತ್ರ ಬರೆದಿದ್ದರು. ತಾವು ಕಾಂಗ್ರೆಸ್ ಸದಸ್ಯರೆಂದೂ, ಸ್ವರಾಜ್ಯನಿಧಿಗೆ ಕಾಣಿಕೆ ಸಲ್ಲಿಸಿರುವೆವೆಂದೂ ತಿಳಿಸಿದ್ದರು. ಕಾಂಗ್ರೆಸ್ಸಿನ ಅಧಿಕಾರ ಸ್ಥಾನ ಗಳಿಗೆ ಸ್ಪರ್ಧಿಸಬೇಡಿ ಎಂದು ನಾನು ಹೇಳಿದ್ದು ಅವರಿಗೆ ಅರ್ಥವಾಗಲಿಲ್ಲ. ತಮ್ಮ ಭವಿಷ್ಯದ ಬಗ್ಗೆ ಸಲಹೆ ಕೇಳಲು ಬಯಸಿದ್ದರು. ಅವರ ಪತ್ರವನ್ನು ನನಗೆ ಕೊಟ್ಟ ಮಹನೀಯರು ತುಂಬ ಸಂಕೋಚದಿಂದ ನಾನೇನೆಂದುಕೊಳ್ಳುವೆನೋ ಎಂಬ ಭಯ ದಿಂದ ನನಗೆ ತಲುಪಿಸಿದ್ದರು. ಸಾಧ್ಯವಾದಷ್ಟು ಈ ಸೋದರಿಯರ ಸೇವೆ ಮಾಡಲು ನನಗೆ ತೀವ್ರ ಅಭಿಲಾಷೆಯುಂಟು ಎಂದು ಹೇಳಿದ್ದು ಅವರಿಗೆ ಸಮಾಧಾನವಾಯಿತು. ಈ ಮಹಿಳೆಯರೊಡನೆ ನಡೆದ ಎರಡು ಗಂಟೆಗಳ ಸಂಭಾಷಣೆ ನನಗೆ ಒಂದು ಅಮೂಲ್ಯ ನೆನಪು. ಈ ನೂರು ಸೋದರಿಯರ ಮುಂದೆ ಅವಮಾನದಿಂದಲೇ ನಾನು ತಲೆ ಬಾಗಿಸಿದೆ. ಅವರಲ್ಲಿ ಹಲವರು ಮಧ್ಯವಯಸ್ಸಿನವರು. ಅನೇಕರು ೨೦–೩೦ ವರ್ಷಗಳ ಹರೆಯ ದವರು. ಇಬ್ಬರು ಮೂವರಂತೂ ಹನ್ನೆರಡಕ್ಕೂ ಕಮ್ಮಿಯ ಬಾಲಕಿಯರು. ಸುಧಾರಿಸ ಲಾಗದ ಕರಾಳ ಭವಿಷ್ಯ ತಮ್ಮದು ಎಂದುಕೊಂಡಿರುವ ಈ ಮಹಿಳೆಯರ ದೃಶ್ಯ ಹೃದಯಕ್ಕೆ ಈಟಿ ತಿವಿದಂತೆ ಘಾಸಿ ಮಾಡಿತು. ಇವರಲ್ಲೂ ಜಾಣ್ಮೆ ಸಂಕೋಚ ಪ್ರಕೃತಿ ಗಳು ಎದ್ದು ಕಾಣುತ್ತಿದ್ದವು. ಗಂಭೀರ ಮಾತುಕತೆ, ನಿರ್ಮಲವಾದ ನೇರ ಉತ್ತರ ಅವರದು. ಅವರ ಮನೋದೃಢತೆ ಆ ಸಮಯಕ್ಕೆ ಯಾವ ಸತ್ಯಾಗ್ರಹಿಗೂ ಕಡಮೆ ಎನಿಸಲಿಲ್ಲ. ಅವರಲ್ಲಿ ಹನ್ನೊಂದು ಮಹಿಳೆಯರು ತಮ್ಮ ವೃತ್ತಿಯನ್ನು ವರ್ಜಿಸಿ ಮಾರನೇ ದಿನದಿಂದಲೇ ತಮಗೆ ಸಹಾಯಕರಿದ್ದರೆ ನೂಲುವ ಮತ್ತು ನೇಯುವ ವೃತ್ತಿಯನ್ನವಲಂಬಿಸುವುದಾಗಿ ಮಾತು ಕೊಟ್ಟರು. ಮಿಕ್ಕವರು ಸ್ವಲ್ಪ ಕಾಲ ಯೋಚಿ ಸುತ್ತೇವೆಂದರು. ಮಾತು ಕೊಟ್ಟು ವಂಚಿಸಕೂಡದೆಂದರು."

ಅನಂತರ ಪುರುಷರನ್ನು ಕುರಿತು ಹೇಳುತ್ತಾ, ಸ್ತ್ರೀಯರನ್ನು ಗೌರವಿಸುವಂತೆ ಅವರಿಗೆ ಕರೆ ಕೊಟ್ಟರು ಗಾಂಧೀಜಿ:

"ತನ್ನ ಉತ್ತಮಾರ್ಧವೆನಿಸಿದ ಸ್ತ್ರೀಯನ್ನು ದುರುಪಯೋಗಪಡಿಸಿಕೊಳ್ಳುವುದಂತೂ ಪಾತಕಗಳಲ್ಲೆಲ್ಲಾ ಅತ್ಯಂತ ಹೀನವಾದ ಭಯಾನಕ ವೃತ್ತಿ. ಆಕೆ ಅಬಲೆ ಅಲ್ಲ. ಸಬಲೆ ಯಾದ ಸ್ತ್ರೀ ಎಂದು ಪರಿಗಣಿಸಬೇಕು. ಸ್ತ್ರೀ ಪುರುಷರಲ್ಲಿ ಸ್ತ್ರೀ ಇಂದಿಗೂ ಗಂಭೀರ ಸ್ವಭಾವದ ಗೌರವಾನ್ವಿತೆ. ಸ್ವಾರ್ಥತ್ಯಾಗ, ಸಹಿಷ್ಣುತೆ, ವಿನಯ, ಶ್ರದ್ಧೆ ಮತ್ತು ಜ್ಞಾನ ಗಳ ಪುತ್ಥಳಿ. ತಾನು ಹೆಚ್ಚು ಜ್ಞಾನಿ ಎಂಬ ಅಹಂಕಾರ ಪುರುಷನಿಗಿದ್ದರೂ ಅನೇಕ ವೇಳೆ ಮಹಿಳೆಯ ಅಂತಃಸ್ಫೂರ್ತಿಯೇ ಹೆಚ್ಚು ಸಾಧಿಸಿದೆ. ಸೀತಾರಾಮ, ರಾಧಾಕೃಷ್ಣ, ಅನ್ನುವಾಗ ಸ್ತ್ರೀನಾಮ ಮೊದಲು ಬರುವುದಕ್ಕೆ ಅರ್ಥವುಂಟು. ಪತಿತ ವ್ಯಕ್ತಿಗಳ ಇಂದಿನ ಈ ಜೂಜುಗಾರಿಕೆ ಅನಿವಾರ್ಯ ಎಂಬ ಭ್ರಮೆಗೆ ನಾವು ತುತ್ತಾಗಬಾರದು. ಅದು ವ್ಯಾಪಕವಾಗಿ ಹರಡಿದೆಯೆಂದೂ ಕೆಲವು ಪಾಶ್ಚಾತ್ಯದೇಶಗಳಲ್ಲಿ ಸರ್ಕಾರವೇ ಅದನ್ನು ನಿಯಂತ್ರಿಸುವುದೆಂದೂ ವಾದ ಮಾಡುವುದೂ ಭ್ರಮೆ. ಭಾರತೀಯ ಪರಂ ಪರೆಗೂ ಅದು ಅಂಟಿಕೊಂಡಿದೆ ಎಂದ ಮಾತ್ರಕ್ಕೆ ಈ ಪಾತಕವನ್ನು ನಾವು ಮುಂದು

ವರಿಸಬೇಕಾಗಿಲ್ಲ. ದುರಾಚಾರ, ಸದಾಚಾರಗಳ ವಿವೇಕ ನಮ್ಮಲ್ಲಿ ಬತ್ತಿದೊಡನೆ ನಮ್ಮ ವಿಕಾಸ ಕುಂಠಿತವಾಗುತ್ತದೆ. ಗುಲಾಮರಂತೆ ಹಿಂದಿನದನ್ನೆಲ್ಲಾ ಅನುಸರಿಸುವುದು ಸರಿಯಲ್ಲ. ಅವೇಕೆ ಬಂದವು ಎಂದೂ ನಮಗೆ ಪೂರ್ಣ ತಿಳಿಯದು. ಪ್ರಾಚೀನ ಸಂಸ್ಕೃತಿಯು ಪರಮೋತ್ಕೃಷ್ಟ ಅಂಶಗಳು ಹಲವುಂಟು. ಅವೆಲ್ಲವೂ ನಮಗೆ ಅಮೂಲ್ಯ ಆಸ್ತಿ. ಆದರೆ ಪರಂಪರಾನುಗತ ದುಷ್ಕೃತ್ಯಗಳನ್ನು ಅಧಿಕಗೊಳಿಸುತ್ತಾ ನಮ್ಮ ಸಂಸ್ಕೃತಿಯನ್ನು ಅವಹೇಳನಕ್ಕೆ ಗುರಿ ಮಾಡಬಾರದು. ಆತ್ಮಗೌರವವುಳ್ಳ ಭಾರತ ರಾಷ್ಟ್ರದಲ್ಲಿ ಪ್ರತಿಯೊಬ್ಬ ಸ್ತ್ರೀಯ ಮಾನರಕ್ಷಣೆಯೂ ನಮ್ಮ ಅಕ್ಕ ತಂಗಿಯರಂತೆಯೇ ಎಲ್ಲರ ಜವಾಬ್ದಾರಿಯಲ್ಲವೇನು? ಪ್ರತಿಯೊಬ್ಬ ಭಾರತೀಯ ಸ್ತ್ರೀ ಪುರುಷರು ನಮ್ಮ ಸೋದರ ಸೋದರಿಯರೆಂಬ ಭಾವನೆಯಿಂದ ನಡೆದುಕೊಳ್ಳುವ ಸಾಮರ್ಥ್ಯವೇ ಸ್ವರಾಜ್ಯದ ಅರ್ಥ."

ಗಾಂಧೀಜಿಯ ಅನುಕಂಪ ಪ್ರಾಣಿ ಜಗತ್ತನ್ನೂ ಪಸರಿಸಿ ನಿಂತಿತ್ತು. 'ಗೋ' ರಕ್ಷಣೆಯ ಬಗ್ಗೆ ಅವರು ಹೀಗೆ ಬರೆದರು:

"ಮಾನವೀಯ ವಿಕಾಸ ಮಾರ್ಗದಲ್ಲಿ ನನಗೆ ಗೋರಕ್ಷಣೆ ಲೋಕೋತ್ತರವಾದ ಅಂಶವೆಂದೆನಿಸಿದೆ. ಮಾನವ ತನ್ನ ವಂಶ ವಲಯವನ್ನು ದಾಟಿ ಉದಾತ್ತನಾಗಲು ಇದು ಸಹಾಯ ಮಾಡಿದೆ. ಸಮಸ್ತ ಪ್ರಾಣಿಲೋಕದ ಪ್ರತೀಕವೇ ಗೋವು. ಗೋವಿನ ಮೂಲಕ ಮಾನವ ತನ್ನ ಸುತ್ತಲಿನ ಜೀವಲೋಕದೊಡನೆ ತಾದಾತ್ಮ್ಯವನ್ನು ಪಡೆದುಕೊಳ್ಳುತ್ತಾನೆ. ಗೋವನ್ನು ದೇವತ್ವಕ್ಕೆ ಏರಿಸಿರುವ ಸಂಕೇತವು ಇದೇ ಎಂದು ನನಗೆ ಸ್ಪಷ್ಟವಾಗುತ್ತದೆ. ಭಾರತದಲ್ಲಿ ಗೋವು ಮಾನವನ ಅತಿ ನಿಕಟ ಸಂಗಾತಿ, ಕಾಮಧೇನು ಕ್ಷೀರದಾತೆಯಷ್ಟೇ ಅಲ್ಲ; ವ್ಯವಸಾಯಕ್ಕೂ ಆಧಾರ. ಗೋಮಾತೆ ಎಂದರೆ ಕರುಣೆಯ ಕಾವ್ಯ. ಆ ಸಾಧು ಪ್ರಾಣಿಯಲ್ಲಿ ಕರುಣೆ ಸ್ಫುರಣವಾಗುತ್ತದೆ. ಕೋಟ್ಯಂತರ ಭಾರತೀಯರಿಗೆ ಗೋವು ತಾಯಿಯಂತೆಯೇ ಪೂಜ್ಯ. ಗೋರಕ್ಷಣೆಯೆಂದರೆ ಭಗವಂತನ ಸೃಷ್ಟಿಯಲ್ಲಿ ಸಮಸ್ತ ಮೂಕ ಜೀವರಾಶಿಯ ರಕ್ಷಣೆ. ಪ್ರಾಚೀನ ದಾರ್ಶನಿಕ ಋಷಿ, ಗೋ ಸೇವೆಯಿಂದಲೇ ಮೊದಲಿಟ್ಟ. ಮಾನವನ ಹೊರತು ಮಿಕ್ಕ ಜೀವಕೋಟಿಯೆಲ್ಲ ಮೂಕ ಪ್ರಾಣಿಗಳೆಂಬುದೇ ಸೇವೆಗೆ ಪ್ರಬಲ ಸ್ಫೂರ್ತಿ. ಹಿಂದೂಧರ್ಮದ ಅತ್ಯಮೂಲ್ಯ ಕೊಡುಗೆ ಗೋರಕ್ಷಣೆ."

೧೯೨೧ನೇ ಇಸವಿಯ ಮುಂದಿನ ತಿಂಗಳುಗಳು ಮಹತ್ವಪೂರ್ಣವಾದುವುಗಳು. ಏಕೆಂದರೆ ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ರಚನಾತ್ಮಕ ಕಾರ್ಯಗಳಿಗೆ ಆಗ ವಿಶೇಷ ಮಹತ್ವ ದೊರೆಯುತ್ತಾ ಬಂದಿತು. ಕಾಂಗ್ರೆಸ್ಸಿನ ಹೊಸ ಘಟನಾವಳಿಗನುಗುಣವಾಗಿ ಚುನಾಯಿತವಾದ ಅಖಿಲ ಭಾರತ ಕಾಂಗ್ರೆಸ್ ಸಮಿತಿ, ಜುಲೈ ೨೮ರಂದು ಬೊಂಬಾಯಿನಲ್ಲಿ ಸಮಾವೇಶವಾಯಿತು. ಆಗ ಪ್ರಧಾನವಾಗಿ ಪರದೇಶೀವಸ್ತ್ರ ಬಹಿಷ್ಕಾರವನ್ನು ಸೆಪ್ಟೆಂಬರ್ ೩೦ರೊಳಗೆ ಪೂರ್ಣಗೊಳಿಸಬೇಕೆಂದೂ ಕೈನೂಲು ಕೈಮಗ್ಗಗಳಿಂದ ಖಾದಿ ತಯಾರಿಕೆಯ ಉದ್ಯಮವನ್ನು ಪ್ರಬಲವಾಗಿ ತೀವ್ರಗೊಳಿಸಬೇಕೆಂದೂ ನಿರ್ಧರಿಸಲಾಯಿತು.

ಘಟನೆಗಳು ನಾಗಾಲೋಟದಲ್ಲಿ ಸಾಗಿದ್ದವು. ಕರಾಚಿಯಲ್ಲಿ ಖಿಲಾಫತ್ ಸಮ್ಮೇಳನ ಎರಡು ವಾರಗಳ ಮುಂಚೆ ನಡೆದಿತ್ತು. ಮಹಮ್ಮದಾಲಿಯವರ ಅಧ್ಯಕ್ಷತೆಯಲ್ಲಿ ಒಂದು ಮಹತ್ವಪೂರ್ಣ ನಿರ್ಣಯ ಅಂಗೀಕೃತವಾಗಿತ್ತು. "ಇಂದಿನ ಪರಿಸ್ಥಿತಿಯಲ್ಲಿ ಮುಸ್ಲಿಮರು ಬ್ರಿಟಿಷ್ ಸೈನ್ಯದಲ್ಲಿ ಸೇವೆ ಮಾಡುವುದು ಇಸ್ಲಾಂ ಧರ್ಮಕ್ಕೆ ಅಪಚಾರ ಮಾಡಿದಂತೆ. ಇತರರನ್ನು ಸೈನ್ಯಕ್ಕೆ ಸೇರುವಂತೆ ಪ್ರೇರೇಪಿಸುವುದು ಧರ್ಮ ವಿರುದ್ಧ ವಾಗುತ್ತದೆ. ಈ ಧರ್ಮಪ್ರಜ್ಞೆಯನ್ನು ಸೈನ್ಯದಲ್ಲಿರುವ ಪ್ರತಿಯೊಬ್ಬ ಮುಸಲ್ಮಾನನಲ್ಲೂ ಜಾಗೃತಗೊಳಿಸಲು ಎಲ್ಲ ಮುಸ್ಲಿಮರು ಅದರಲ್ಲೂ ವಿಶೇಷವಾಗಿ ಉಲೇಮಾಗಳು ಪ್ರಯತ್ನಿಸಬೇಕು. ಬರುವ ಕ್ರಿಸ್‌ಮಸ್ ಒಳಗಾಗಿ ಈ ನಮ್ಮ ಚಳುವಳಿಯ ಬಗ್ಗೆ ಯಾವ ಒಪ್ಪಂದವೂ ಆಗದಿದ್ದಲ್ಲಿ ಅಹಮ್ಮದಾಬಾದಿನ ಕಾಂಗ್ರೆಸ್ ಅಧಿವೇಶನದಲ್ಲಿ ಭಾರತ, ಸ್ವತಂತ್ರ ಗಣರಾಜ್ಯವೆಂದು ಘೋಷಿಸುವ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ."

'ನಿಧಾನವಾಗಿ ಮುಂದುವರಿಯಿರಿ' ಎಂದರು ಗಾಂಧೀಜಿ :

"ಅಸಹಕಾರ ಚಳುವಳಿಯ ಮಾತನಾಡುತ್ತಿದ್ದಾರೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರೆಲ್ಲರೂ ಅದನ್ನು ಯಾವಾಗಲೂ ಪ್ರಯೋಗಿಸದಿದ್ದವರೂ ಅದರಿಂದ ಆಕರ್ಷಿತರಾಗಿದ್ದಾರೆ. ಇಂದಿನ ಸಮಸ್ತ ಸಮಸ್ಯೆಗಳಿಗೂ ಅದು ರಾಮಬಾಣ ಎಂಬ ತಪ್ಪು ಗ್ರಹಿಕೆ ಅವರದು. ಅಂಥ ಪರಿಣಾಮಕ್ಕೆ ಸರಿಯಾದ ಪರಿಸರ ನಿರ್ಮಿತ ವಾಗುವುದಾದರೆ ಮಾತ್ರ ಅದು ಅಷ್ಟು ಯಶಸ್ವಿಯಾದೀತು. ವೈಯಕ್ತಿಕವಾಗಿ ಪ್ರಯತ್ನಿ ಸಲು ಯಾವಾಗಲೂ ಅವಕಾಶವುಂಟು. ರಕ್ತಪಾತವಾಗುವ ಸಂಭವ ಸ್ಪಷ್ಟವಾಗಿದ್ದರೆ ಮಾತ್ರ ಇದಕ್ಕೆ ಅವಕಾಶವಿಲ್ಲ. ಅದನ್ನು ಮೀರಿದ ಅತ್ಯುತ್ಕಟ ಪರೀಕ್ಷಾ ಸಮಯವು ಬಂದೊದಗಿದರೆ ಎಂತಹ ತ್ಯಾಗಕ್ಕಾದರೂ ಸಿದ್ಧರಾಗಬೇಕಾಗುತ್ತದೆ. ರಕ್ತಪಾತ ಸಂಭವಿಸುವ ಸೂಚನೆಗಳಿದ್ದರೂ ದೃಢವಾಗಿ ಎಲ್ಲ ಕಾನೂನುಗಳನ್ನು ನಿರಾಕರಿಸುವ ಸಮಯ ಸನ್ನಿಹಿತವಾಗುತ್ತಿರುವುದರ ಸೂಚನೆ ನನಗೀಗ ಖಚಿತವಾಗಿ ಕಾಣುತ್ತಿದೆ. ಕರ್ತವ್ಯ ಭ್ರಷ್ಟನಾಗಿ ದೈವದ್ರೋಹವಾಗುವ ಸಮಯದಲ್ಲಿ ಕಾನೂನುಭಂಗ ಒಂದು ಪವಿತ್ರ ಕರ್ತವ್ಯವಾಗುತ್ತದೆ. ಆದರೆ ಸಾಮೂಹಿಕ ಅಸಹಕಾರ ಚಳುವಳಿಯ ಮೂಲಕ ಕಾನೂನುಭಂಗ ಬೇರೆ ಸ್ವರೂಪದ್ದು. ಶಾಂತ ಪರಿಸರದಲ್ಲಿ ಮಾತ್ರವೇ ಅದನ್ನು ಪ್ರಯೋಗ ಮಾಡುವುದು ಸಾಧ್ಯ.

"ಸರ್ಕಾರಕ್ಕೆ ಭೀತಿ ಹುಟ್ಟಿಸುತ್ತೇವೆಂಬ ಕಲ್ಪನೆಯನ್ನು ದೂರ ಮಾಡಬೇಕು. ಒಬ್ಬರ ದಸ್ತಗಿರಿಯಾದೊಡನೆ ಅತ್ಯಂತ ದೊಡ್ಡ ಪ್ರಮಾಣದ ಪ್ರದರ್ಶನ ಕೈಗೊಂಡು ಸರ್ಕಾರವನ್ನು ಹೆದರಿಸಿ ಬಿಡುತ್ತೇವೆ ಎಂದರೆ ತಪ್ಪಾಗುತ್ತದೆ. ಅಸಹಕಾರದಲ್ಲಿ ತೊಡಗುವ ಸತ್ಯಾಗ್ರಹಿಯ ಜೀವನದ ಸಹಜವಾದ ಅಂಗವಾಗಿಯೇ ದಸ್ತಗಿರಿಗಳು ಬರುತ್ತವೆ. ಯುದ್ಧದಲ್ಲಿ ಸೈನಿಕನಾದವನು ಸಾವನ್ನು ಸ್ವಾಗತಿಸುವಂತೆಯೇ ನಾವು ಈ ಸತ್ಯಾಗ್ರಹ ದಲ್ಲಿ ದಸ್ತಗಿರಿಗಳನ್ನೂ, ಜೈಲು ಶಿಕ್ಷೆಯನ್ನೂ ಸ್ವಾಗತಿಸಬೇಕು. ಶಿಕ್ಷೆಗೊಳಪಡುವುದ

ಕ್ಕಾಗಿಯೇ ಶಾಸನಭಂಗ ಮಾಡಿ ಸರ್ಕಾರದ ವಿರೋಧ ಶಕ್ತಿಯನ್ನು ಪ್ರತಿಭಟಿಸಬೇಕು. ಸಾಮೂಹಿಕವಾಗಿಯೇ ಶಿಕ್ಷೆಗೆ ಗುರಿಯಾಗಲು ಸಿದ್ಧರಾಗಿ ಮುನ್ನುಗ್ಗುವುದು ಇದಕ್ಕಾಗಿ. ಸವಿನಯ ಶಾಸನ ಭಂಗ (civil dis-obedience) ಎಂದರೆ ಒಬ್ಬ ನಿಶ್ಶಸ್ತ್ರ ಪೋಲೀಸ್ ನೌಕರನೆದುರಿಗೂ ಪ್ರತಿಭಟಿಸದೆ ವಶವಾಗುವುದೆಂದು ನನ್ನ ದೃಢವಾದ ಅಭಿಪ್ರಾಯ. ಕಟುಕರಂಗಡಿಗೆ ಎಳೆದೊಯ್ಯುತ್ತಿರುವ ಸಾವಿರ ಕುರಿಮರಿಗಳಂತೆ ನಿರಪರಾಧಿಗಳಾಗಿ ಬಹುಸಂಖ್ಯೆಯ ಜನ ಜೈಲಿಗೆ ಹೋಗುವುದೇ ನಮ್ಮ ವಿಜಯ. ಪ್ರಪಂಚದ ಕುರಿಲೋಕವು ಸ್ವಸಂತೋಷದಿಂದ ವಧ್ಯಸ್ಥಾನಕ್ಕೆ ಹೋಗುವಂತಾಗಿದ್ದರೆ ಕಟುಕನ ಕತ್ತಿಯಿಂದ ಬಹುಕಾಲದ ಹಿಂದೆಯೆ ಪಾರಾಗುತ್ತಿತ್ತು. ನಿರಪರಾಧಿಗಳಾದ ನಮ್ಮನ್ನು ಜೈಲಿಗೆ ಹಾಕುವ ಕ್ರಿಯೆಯೂ ನಮ್ಮ ವಿಜಯೋತ್ಸವವೇ. ನಾವು ಎಷ್ಟೆಷ್ಟು ನಿರ್ದೋಷಿಗಳಾಗಿ ಸೆರೆಮನೆ ಸೇರುವೆವೋ ನಮ್ಮ ಬಲ ಅಷ್ಟಷ್ಟು ವರ್ಧಿಸುತ್ತದೆ. ಗೆಲುವು ಅಷ್ಟೇ ವೇಗವಾಗಿ ನಮ್ಮ ಕೈ ಸೇರುತ್ತದೆ... ನಾವು ಜೈಲು ವಾಸಕ್ಕೆ ಹೆದರುತ್ತೇವೆ ಎಂದೇ ಸರ್ಕಾರ ದಾಳಿ ಮಾಡುತ್ತದೆ. ಜೈಲುಗಳನ್ನು ಆರೋಗ್ಯ ಧಾಮಗಳೆಂದು ತಿಳಿದು ನಮ್ಮ ಸ್ತ್ರೀ ಪುರುಷರು ಅಲ್ಲಿಗೆ ಧಾವಿಸಿ ನಡೆದರೆ ನಮ್ಮ ಬಂಧುಗಳಿಗೆ ಶಿಕ್ಷೆಯಾದ ಬಗ್ಗೆ ನಾವೇನೂ ಆತಂಕ ಪಡಬೇಕಾಗುವುದಿಲ್ಲ. ದಕ್ಷಿಣ ಆಫ್ರಿಕದ ಮಿತ್ರರೆನ್ನುತ್ತಿದ್ದಂತೆ ಅವು 'ನಮ್ಮ ಸಾರ್ವಭೌಮರ ಹೋಟಲುಗಳು.

"ನಮ್ಮ ಬುದ್ಧಿ ಅಂತರಿಕವಾಗಿ ಈ ರಾಜ್ಯಶಾಸನಗಳನ್ನಾಗಲೇ ತಿರಸ್ಕರಿಸಿ ಬಹಳ ಕಾಲವಾಗಿದೆ. ಅನೇಕ ಸಾರಿ ರಹಸ್ಯವಾಗಿ ಅವುಗಳಿಂದ ನುಣುಚಿಕೊಂಡು ಸಾಗಿದ್ದೇವೆ. ಆದ್ದರಿಂದ ಸವಿನಯ ಕಾನೂನು ಭಂಗಕ್ಕೆ ನಾವು ಇನ್ನೂ ಒಗ್ಗಿಕೊಂಡಿಲ್ಲ. ಶಾಸನಭಂಗ ಸವಿನಯವಾಗಬೇಕಾದರೆ ಅದು ಬಹಿರಂಗವಾಗಿಯೂ ಅಹಿಂಸಕವಾಗಿಯೂ ಇರಲೇಬೇಕು.

"ಸಂಪೂರ್ಣ ಸವಿನಯ ಶಾಸನಭಂಗ ಪೂರ್ಣರೂಪದ ಶಾಂತಿಯುತ ದಂಗೆ; ರಾಜ್ಯಶಕ್ತಿ ರೂಪಿಸುವ ಪ್ರತಿಯೊಂದು ಶಾಸನವನ್ನೂ ನಿರಾಕರಿಸುತ್ತದೆ. ಇದು ಸಶಸ್ತ್ರ ದಂಗೆಗಿಂತ ಸಾವಿರಪಾಲು ಅಪಾಯಕಾರಿ. ಪ್ರತಿಭಟಿಸುವ ಸತ್ಯಾಗ್ರಹಿಗಳು ನಿಸ್ಸೀಮ ಬಲಿದಾನಕ್ಕೆ ಸಿದ್ಧರಾಗಿಬಿಟ್ಟರೆ ಈ ದಂಗೆಯನ್ನೆಂದಿಗೂ ದಮನ ಮಾಡಲು ಸಾಧ್ಯವೇ ಇಲ್ಲ. ನಿರಪರಾಧಿಗಳನುಭವಿಸುವ ನೋವು ಅತ್ಯಂತ ಪರಿಣಾಮಕಾರೀ ಅಸ್ತ್ರವೆಂಬ ನಿಸ್ಸಂಶಯ ಶ್ರದ್ಧೆಯೇ ಇದರ ಆಧಾರ. ನಿಶ್ಶಬ್ದವಾಗಿ ಸೆರೆಮನೆಯನ್ನು ಹೊಗುವ ಸವಿನಯ ಹೋರಾಟಗಾರ ಪ್ರಶಾಂತ ಪರಿಸರಕ್ಕೆ ಪೋಷಕನಾಗುತ್ತಾನೆ. ಅನ್ಯಾಯಕಾರನನ್ನು ಅವನಂತೆಯೆ ಪ್ರತಿಭಟಿಸಲು ನಿರಾಕರಿಸಿದಾಗ ಅವನ ಕೃತ್ಯ ಅವನಿಗೇ ಬೇಸರವೆನಿಸುತ್ತದೆ. ಬಲಿಯಾದವನು ಪ್ರತಿಭಟಿಸದಿದ್ದಲ್ಲಿ ದುಷ್ಕರ್ಮಿಗೆ ಆನಂದವೇ ಇರದು. ಯಶಸ್ವೀ ಸವಿನಯ ಶಾಸನ ಭಂಗದ ಚಳುವಳಿಯ ನಿಯಮಗಳ ಪೂರ್ಣ ಗ್ರಹಿಕೆ ಜನಸಾಮಾನ್ಯರ ಪ್ರತಿನಿಧಿಗಳಿಗಾದರೂ ಖಚಿತವಾಗಿರಬೇಕು. ಆಗ ಮಾತ್ರ

ಬೃಹತ್‌ಪ್ರಮಾಣದ ಮಹಾಪ್ರಯತ್ನವನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಪರಿಹಾರ ಮಾರ್ಗ ಅತ್ಯಂತ ಕ್ಷಿಪ್ರ ರೀತಿಯದಾದಷ್ಟು ಅಪಾಯಗಳು ಅಪಾರ. ಅದರ ಸಂಚಾಲನೆಗೂ ಅತ್ಯಂತ ಕೌಶಲ್ಯಬೇಕು. ನಾವು ಪರದೇಶಿ ವಸ್ತ್ರ ಬಹಿಷ್ಕಾರವನ್ನು ಪೂರ್ಣ ಯಶಸ್ವಿ ಗೊಳಿಸಿದರೆ ಒಂದು ಅನುಕೂಲ ಪರಿಸ್ಥಿತಿ ಒದಗಿ, ಯಾವ ಸರ್ಕಾರವೂ ಎದುರಿಸಲಾಗದ ಸವಿನಯ ಶಾಸನಭಂಗ ಚಳುವಳಿಯನ್ನು ನಾವು ಉದ್ಘಾಟಿಸಬಹುದೆಂದು ನನ್ನ ಖಚಿತ ನಂಬಿಕೆ. ಆದ್ದರಿಂದ ಯಾರು ಸವಿನಯ ಶಾಸನ ಭಂಗ ಮಾಡಲು ಅತ್ಯುತ್ಸಕರೋ ಅವರು ತಾಳ್ಮೆ ದೃಢ ಸಂಕಲ್ಪಗಳ ಏಕಾಗ್ರತೆಯಿಂದ ಸ್ವದೇಶಿ ಚಳುವಳಿಯನ್ನು ನಡೆಸ ಬೇಕೆಂದು ನಾನು ಒತ್ತಾಯ ಮಾಡುತ್ತೇನೆ."

ಜುಲೈ ೩೧ರಂದು ಗಾಂಧೀಜಿ ಪರದೇಶಿ ವಸ್ತು ದಹನದ ಸಮಾರಂಭವನ್ನು ಬೊಂಬಾಯಿನ ಪರೇಲದಲ್ಲಿದ್ದ ಉಮರ್ ಸೋಬಾನಿ ಅವರ ಮೈದಾನದಲ್ಲಿ ನೆರ ವೇರಿಸಿದರು. ಸಾವಿರಾರು ಜನ ಆಕರ್ಷಕ ಪ್ರದರ್ಶನವನ್ನು ವೀಕ್ಷಿಸಿದರು. ಜ್ವಾಲೆ ಆವರಿಸಿ ಆ ಅಗಾಧ ವಸ್ತ್ರರಾಶಿ ಸುಟ್ಟು ಭಸ್ಮವಾದಾಗ ಜನಸ್ತೋಮ ಅತ್ಯುತ್ಸಾಹದಿಂದ 'ಉಘೇ' ಎಂದಿತು. ಪ್ರಚಂಡ ಘೋಷಣೆ ವಾಯು ಮಂಡಲವನ್ನಾವರಿಸಿತು. ಅದೇ ಗಳಿಗೆಯಲ್ಲಿ ನಮ್ಮ ದಾಸ್ಯದ ಶೃಂಖಲೆಗಳೇ ಪುಡಿಪುಡಿಯಾದಂತೆ ಭಾಸವಾಯಿತು. ಅಲ್ಲಿ ಸುಟ್ಟದ್ದು ಜೀರ್ಣ ವಸನಗಳಲ್ಲ. ಉತ್ಕೃಷ್ಟ ಅಂಗಿಗಳು, ದುಬಾರಿ ಸೀರೆಗಳು, ಜಾಕೆಟ್ಟುಗಳು ಅಗ್ನಿಗೆ ಆಹುತಿಯಾದವು. ವಿವಾಹಕ್ಕೆಂದು ತಾಯಂದಿರು ಶೇಖರಿಸಿದ್ದ ಅತ್ಯಮೂಲ್ಯ ರೇಷ್ಮೆ ಸೀರೆಗಳು ಹೋಳಿಯಲ್ಲಿ ಭಸ್ಮವಾದವು. ಒಂದೂವರೆ ಲಕ್ಷಕ್ಕೆ ಕಡಿಮೆ ಇಲ್ಲದ ವಿವಿಧ ರೀತಿಯ ಬಟ್ಟೆಗಳು ಆ ಉರಿವ ಬೆಂಕಿಯಲ್ಲಿ ಬೂದಿಯಾದುವು.

ಆಗಸ್ಟ್ ಒಂದರಂದು ಚೌಪಾಟಿ ಸಮುದ್ರತೀರದಲ್ಲಿ ಜನಸ್ತೋಮವನ್ನು ಕುರಿತು ಗಾಂಧೀಜಿ ಭಾಷಣ ಮಾಡಿದರು :

"ಸುಂದರ ನಗರ ಮುಂಬಯಿ– ನಿನ್ನೆ ಒಂದು ಮಹಾ ಅಗ್ನಿ ಜ್ವಾಲೆಯನ್ನು ಹೊತ್ತಿಸಿತು. ಈ ಜ್ವಾಲೆ ಶಾಶ್ವತವಾಗಿ ಉರಿಯಬೇಕು–ಪಾರ್ಸಿ ದೇವಾಲಯದಲ್ಲಿರುವಂತೆ. ನಿನ್ನೆ ನಮ್ಮ ಬಾಹ್ಯ ಮೈಲಿಗೆಯಾದ ಪರದೇಶಿ ವಸ್ತ್ರವನ್ನು ಸುಟ್ಟಂತೆಯೇ ಅದು ಸಂತತವಾಗಿ ನಮ್ಮ ಆಂತರಿಕ ಮಲವನ್ನು ಸುಟ್ಟು ಭಸ್ಮ ಮಾಡುತ್ತಿರಲಿ. ಮತ್ತೆ ಎಂದೂ ಪರದೇಶಿ ವಸ್ತ್ರವನ್ನು ಮುಟ್ಟುವುದಿಲ್ಲವೆಂಬ ನಮ್ಮ ಸತ್ಯ ಸಂಕಲ್ಪಕ್ಕೆ ಇದು ಸಾಕ್ಷೀಭೂತವಾಗಲಿ. ಭಾರತವನ್ನು ತಾಯ್ನಾಡಿಗಾಗಿ ಅಂಗೀಕರಿಸುವ ಪ್ರತಿಯೊಬ್ಬ ಹಿಂದೂ, ಮುಸ್ಲಿಂ, ಜೈನ, ಸಿಖ್, ಪಾರ್ಸಿ ಕ್ರೈಸ್ತ ಯಹೂದಿ ಮತ್ತಿತರ ಧರ್ಮಾನು ಯಾಯಿಗಳೆಲ್ಲರಿಗೂ ಈ ಪರದೇಶಿ ವಸ್ತ್ರಬಹಿಷ್ಕಾರ ಒಂದು ಪರಮ ಕರ್ತವ್ಯವಾಗಿರಲಿ. ನಿನ್ನೆ ನಾವು ಮಾಡಿದುದು ಒಂದು ಧಾರ್ಮಿಕ ಕ್ರಿಯೆ. ಪವಿತ್ರ ಲೋಕಮಾನ್ಯರ ಪವಿತ್ರ ಸ್ಮರಣೆಗಾಗಿ ಮುಂಬಯಿ ಪುನೀತವಾಗಿ ನಿಂತಿತು. ಅವರ ಅಮೋಘ ತ್ಯಾಗ, ನಿರ್ಭೀತ ವೃತ್ತಿ, ಸಂಯಮಪೂರ್ಣ ಸರಳತೆ, ನಮಗೆ ಆದರ್ಶವಾಗಲಿ. ದೇಶಭಕ್ತಿಯೇ

ಪರಮಧರ್ಮ ಎಂದವರು ಅವರು. ಅವರು ಕಂಡ ಸ್ವರಾಜ್ಯದ ಕನಸು ನನಸಾಗಲು ನಮ್ಮ ಜೀವಗಳು ಮುಡಿಪಾಗಲಿ. ಸ್ವರಾಜ್ಯದ ಹೊರತು ಮತ್ತೇನೂ ಅವರ ನಿಜವಾದ ಸ್ಮಾರಕವಾಗಲಾರದು.

"ನಿನ್ನೆ ನಾನೆಂದಂತೆ ನಿಜವಾದ ಸ್ವದೇಶಿ ಅಲ್ಲದೆ ಭಾರತಕ್ಕೆ ಮೋಕ್ಷವಿಲ್ಲ. ಅತ್ಯಗತ್ಯ ವಾದ ಈ ಪವಿತ್ರ ಹೋಮಾಗ್ನಿಯನ್ನು ನಾವು ನಿನ್ನೆ ಹೊತ್ತಿಸಿಟ್ಟಿದ್ದೇವೆ.

"ಬಾಹ್ಯ ಲೋಕಕ್ಕಿದ್ದಂತೆಯೇ ಅಂತರ್ಯದಲ್ಲೂ ಈ ಮಾತು ನಿಜ. ನಿನ್ನೆ ಪ್ರಜ್ವಲಿಸಿದ ಅಗ್ನಿದೇವ ನನಗೆ ಆಂತರ್ಯದ ಜ್ಯೋತಿಯೂ ಹೌದು. ನಮ್ಮ ಹೃದಯ ದೌರ್ಬಲ್ಯ ಗಳನ್ನು ಮಾನಸಿಕ ಮಲಿನತೆಯನ್ನು ಸುಟ್ಟು ಬೂದಿಮಾಡುವ ಬಡಬಾಗ್ನಿ ಅದು. ಇದರಿಂದ ಪುಟವಿಟ್ಟ ವಿವೇಕ ನಮಗೆ ಸ್ವದೇಶಿಯ ಅರ್ಥಶಾಸ್ತ್ರವನ್ನು ದರ್ಶನ ಮಾಡಿಸಬೇಕು. ಶುದ್ಧಗೊಂಡ ಹೃದಯ ವಿದೇಶಿ ವಸ್ತ್ರದ ಮೋಹಕತೆಗೆ ಬಲಿಯಾಗ ದಂತೆ ಶಕ್ತಿಕೊಡಬೇಕು. ಈ ವಸ್ತ್ರ ವಿದೇಶಗಳಲ್ಲಿ ಅಮೂಲ್ಯವೆನಿಸಬಹುದು. ಭಾರತಕ್ಕಂತೂ ಅದು ಅನಿಷ್ಟವೇ.

"ನಿನ್ನೆ ನಾವು ನಡೆಸಿದ ಹೋಳಿ, ಲೋಕಮಾನ್ಯರ ಸ್ಮರಣೆಗಾಗಿ ಇಂದು ನಾವು ಸಲ್ಲಿಸಿದ ಶ್ರದ್ಧಾಂಜಲಿ ಪ್ರಾಮಾಣಿಕವಾಗಿದ್ದುದಾದರೆ ರಾಷ್ಟ್ರವನ್ನೂ, ನಮ್ಮ ಅಂತರ್ ವಾಣಿಯನ್ನೂ ವಂಚಿಸದಂತೆ ನಾವು ನಡೆಯುವ ಎಚ್ಚರ ವಹಿಸಬೇಕು. ಖಾದಿ ಇನ್ನು ಮುಂದೆ ನಮ್ಮ ರಾಷ್ಟ್ರೀಯ ಉಡುಪು. ಶುಭ ಸಮಾರಂಭಗಳಲ್ಲಿ ಇನ್ನು ವಿದೇಶಿ ಮಸ್ಲಿನ್ ಬಟ್ಟೆಗಳಲ್ಲಿ ನಾವು ಅಲಂಕೃತರಾಗುವುದಿಲ್ಲ. ಪವಿತ್ರ ಖಾದಿಯೇ ನಮ್ಮ ಉಡಿಗೆ. ಗುಲಾಮತನದ ದುಡಿಮೆ, ಬಲಾತ್ಕಾರದ ದಾರಿದ್ರ್ಯ ಮತ್ತು ನಿರುದ್ಯೋಗಗಳ ಪ್ರತೀಕವಲ್ಲ ಖಾದಿ. ಶಾಂತಿಯುತ ಗೃಹಜೀವನದ ಕಾವ್ಯವಾಣಿ: ಭವಿಷ್ಯ ಭಾರತದಲ್ಲಿ ಕಡುಬಡವರ ಪುರೋಭಿವೃದ್ಧಿಯ ದಿವ್ಯಸಂಕೇತ. ಕಳೆದ ವರ್ಷ ಯಾವ ಮಹನೀಯನ ಅಂತ್ಯ ಸಂಸ್ಕಾರ ನಡೆಯಿತೋ ಆ ಪವಿತ್ರತಮ ರುದ್ರಭೂಮಿಯಲ್ಲಿ ನಿಂತ, ನಾವು ಇಂದು ಕೈಗೊಂಡಿರುವ ಪ್ರತಿಜ್ಞಾ ಪ್ರದರ್ಶನಕ್ಕೆ ಬೆಲೆಯಿರುವುದಾದರೆ ನಾವೆಂದಿಗೂ ಹಿಮ್ಮೆಟ್ಟಲಾಗದು. ಯಾವ ಕೃತ್ರಿಮವೂ ನಮ್ಮಲ್ಲಿ ಸುಳಿಯಲಾರದು. ಯಾವ ಡಂಭಾ ಚಾರವೂ ಸಲ್ಲದು. ವಿದೇಶಿವಸ್ತ್ರವನ್ನು ಮತ್ತೆಂದಿಗೂ ಧರಿಸುವುದೇ ಇಲ್ಲವೆಂಬ ಪ್ರತಿಜ್ಞೆ ಮಾಡಬೇಕು. ನಮ್ಮಲ್ಲಿರುವ ವಿದೇಶಿ ಬಟ್ಟೆ ಎಷ್ಟೇ ಬೆಲೆಯುಳ್ಳದ್ದಾದರೂ ಹುಳಬಿದ್ದ ಹಾಲಿನಂತೆ ಅದು ಕಸಕ್ಕೆ ಸಮವೆಂದು ಅರಿಯಬೇಕು. ನಾವು ಉಪಯೋಗಿ ಸುವುದಿಲ್ಲವೆಂದು ನಿರಾಕರಿಸಿದ ಬಟ್ಟೆ ಪೆಟ್ಟಿಗೆಯಲ್ಲಿ ದಾಸ್ತಾನಾದರೆ, ಅನವಶ್ಯಕ ಹೊರೆ ಯಲ್ಲವೆ? ಬಳಕೆಯ ಪದ್ಧತಿ ಬದಲಾದೊಡನೆ ಯೂರೋಪಿಸವರು ಬೆಲೆಯುಳ್ಳ ವಸ್ತುಗಳನ್ನೂ ಬಿಸುಟು ಬಿಡುವುದಿಲ್ಲವೆ? ಪ್ರಾರಂಭದಲ್ಲೇ ಈ ಎಚ್ಚರಿಕೆ ಕೊಡ ಬಯಸುತ್ತೇನೆ. ಅನೇಕರು ಈ ಸಂಕಲ್ಪ ತಾತ್ಕಾಲಿಕವೆಂದೂ ಮುಂದೆ ಎಂದಾದರೂ ತಾವು ಮುಚ್ಚಿಟ್ಟ ವಿದೇಶಿ ವಸ್ತ್ರಗಳನ್ನು ಉಪಯೋಗಿಸಲು ಬರುವುದೆಂದೂ ತಿಳಿ ದಿರುವುದನ್ನು ನಾನು ಬಲ್ಲೆ. ಈ ವಸ್ತ್ರ ಸಂಗ್ರಹಣೆ ಒಡವೆ ವಸ್ತುಗಳ ಅಥವಾ ಹಣ

ಸಂಗ್ರಹಣೆಯಂತೆ ಒಂದಂಶವನ್ನು ಕೊಟ್ಟು ಮಿಕ್ಕುದನ್ನು ಇಟ್ಟುಕೊಳ್ಳಲು ಬರುವುದಿಲ್ಲ. ವಿದೇಶಿವಸ್ತ್ರ ಕಸವನ್ನು ಗುಡ್ಡೆ ಹಾಕಿದಂತೆ. ಕುಶಲಮತಿಯಾದ ಗೃಹಿಣಿ ಕಸದ ಕಟ್ಟ ಕಡೆಯ ಚೂರನ್ನೂ ಬಿಸುಡುವಂತೆ ಬಿಸುಡಬೇಕು. ನಮ್ಮ ಅಭಿರುಚಿಯಲ್ಲಿಯೇ ಕ್ರಾಂತಿ ಯಾಗಬೇಕು. ಮಿರುಗುಬಣ್ಣಕ್ಕೆ ಬಲಿಯಾಗದೆ ವಿದೇಶಿ ವಸ್ತ್ರವನ್ನು ನಾವು ಬಹಿಷ್ಕರಿಸಿ ದರೆ ಮಾತ್ರ ನಮ್ಮ ಪೇಟೆಗಳಲ್ಲಿ ಆ ಅಂಗಡಿಗಳು ವಿರಳವಾಗುತ್ತವೆ. ಕೃತಕ ವಸ್ತುಗಳ ಆಸೆ ನಮ್ಮನ್ನಾವರಿಸದಿರಲಿ. ಹಾಗೆ ಸೋತಲ್ಲಿ ಕೃತಕ ಖಾದಿಯೂ ವಿದೇಶದಿಂದಲೇ ನಮಗೆ ಬಂದೀತು. ಸದ್ಯಕ್ಕೆ ಪರಿವರ್ತನಾ ಸಮಯದಲ್ಲಿ ಒರಟಾದ ಕೋರಾ ಖಾದಿಯೇ ನಮಗೆ ಸರ್ವಶ್ರೇಷ್ಠ.

"ಸ್ವದೇಶಿವ್ರತ ನನ್ನ ಪ್ರಬಲವಾದ ಅವಲಂಬನೆ. ನಮ್ಮ ಬುದ್ಧಿ ಕುಶಲತೆಯ ಪ್ರಕಟನೆಗೆ ಇಲ್ಲಿ ಅವಕಾಶವಾಗಿದೆ. ಅಬಾಲವೃದ್ಧರಾದಿಯಾಗಿ ನಮ್ಮ ಜನಕೋಟಿ ಯೆಲ್ಲರ ಪರೀಕ್ಷೆಯೂ ಇದರಿಂದಾಗುತ್ತದೆ. ಸಮಸ್ತ ಭಾರತವೂ ಒಮ್ಮನಸ್ಸಿನಿಂದ ನಡೆದರೆ ಮಾತ್ರ ಇದು ಯಶಸ್ವಿಯಾಗುತ್ತದೆ. ಸ್ವದೇಶಿಯ ಬಗ್ಗೆ ನಾವು ಒಂದಾದರೆ ಸ್ವರಾಜ್ಯದ ರಹಸ್ಯವೇ ನಮಗೆ ಕರಗತವಾದಂತೆ. ಆಗ ವಿಧ್ವಂಸಕ, ರಚನಾತ್ಮಕ ಕೌಶಲ ಗಳೆರಡರಲ್ಲೂ ವೈಜ್ಞಾನಿಕ ಪರಿಣತಿಯನ್ನು ರಾಷ್ಟ್ರ ಪಡೆಯುತ್ತದೆ."

ಬೊಂಬಾಯಿನಲ್ಲಾದ ಈ ಅಗ್ನಿಸ್ಪರ್ಶ ರಾಷ್ಟ್ರವನ್ನೆಲ್ಲ ವ್ಯಾಪಿಸಿತು. ಗಾಂಧೀಜಿಯ ಈ ಚಳುವಳಿಯನ್ನು ಅವರ ಮಿತ್ರರನೇಕರು ಟೀಕಿಸಿದರು. ಶ್ರೀ ಸಿ. ಎಫ್. ಆಂಡ್ರೂಸ್ ಹೀಗೆ ಬರೆದರು. "ಪರದೇಶಿ ಬಟ್ಟೆಯನ್ನು ಸುಡುವುದು, ಅದನ್ನು ಧರಿಸುವುದು ಧಾರ್ಮಿಕ ಪಾತಕವೆನ್ನುವುದು, ಮಾನವರ ಕರ ಕೌಶಲ್ಯದ ಪರಿಣಾಮವಾಗಿ ಬಂದ ವಸ್ತುಗಳನ್ನು ಹೀಗೆ ನಿರ್ನಾಮ ಮಾಡುವುದು, ಏಕೋ ನನಗೆ ಸರಿಯೆನಿಸದು. ನೀವು ಕೊಟ್ಟ ಖಾದಿಯನ್ನು ಧರಿಸಲು ಈಗ ನನಗೆ ಭಯ. ಇತರರನ್ನು ಕಂಡಾಗ 'ನಾನು ನಿಮಗಿಂತ ಪವಿತ್ರ'–ಎಂಬ ಅಹಂಕಾರ ನುಸುಳಿ ಪ್ರಾಚೀನ ಯಹೂದಿ ಕರ್ಮಠನಂತೆ ಎಲ್ಲರ ಬಗ್ಗೆಯೂ ನ್ಯಾಯ ನಿರ್ಣಯಕ್ಕೆ ಹೊರಡುತ್ತೇನೋ ಎಂಬ ಭಯ. ಈ ಭಯ ನನಗೆ ಹಿಂದೆ ಎಂದೂ ಇರಲಿಲ್ಲ."

ಇದಕ್ಕೆ ಗಾಂಧೀಜಿ ಉತ್ತರಿಸಿದರು : "ಪರದೇಶೀ ವಸ್ತುಗಳೆಲ್ಲವನ್ನೂ ಬಹಿಷ್ಕರಿಸಿ ಬಿಟ್ಟಿದ್ದರೇ ಅದು ಜನಾಂಗ ದ್ವೇಷ, ಸಂಕುಚಿತ ರಾಷ್ಟ್ರೀಯತೆ, ದುರುದ್ದೇಶ ಕೃತ್ಯ ಎಂದೆನಿಸಿಕೊಳ್ಳಬಹುದು. ಆದರೆ ಪರದೇಶಿ ವಸ್ತ್ರಗಳನ್ನಷ್ಟೇ ಬಹಿಷ್ಕರಿಸಲು ನನ್ನ ಒತ್ತಾಯ. ಇವೆರಡರ ಉದ್ದೇಶಗಳಲ್ಲಿ ಅಜಗಜಾಂತರ ವ್ಯತ್ಯಾಸ. ಕುಶಲ ರಚನೆಯ ಇಂಗ್ಲಿಷ್ ಗಡಿಯಾರಗಳನ್ನಾಗಲೀ ಜಪಾನಿನ ಸುಂದರ ಅರಗು ಮೆರುಗಿನ ಕಲಾ ವಸ್ತುಗಳನ್ನಾಗಲೀ ನಾನು ತಿರಸ್ಕರಿಸುವುದಿಲ್ಲ. ಆದರೆ ಅತ್ಯುತ್ತಮವೆನಿಸಿಕೊಂಡ ಇಂಗ್ಲಿಷ್ ಮದ್ಯಸಾರವನ್ನು ಧ್ವಂಸ ಮಾಡಲೇಬೇಕು. ಅದರ ಉತ್ಪಾದನೆಯಲ್ಲಿ ಅತ್ಯಂತ ಸೂಕ್ಷ್ಮಬುದ್ಧಿಯ ಕುಶಲತೆಯೇ ಅಡಗಿರಬಹುದು. ಸೈತಾನನ ಬಲೆ

ಅತಿಸೂಕ್ಷ್ಮವಾದುದು. ಯುಕ್ತಾಯುಕ್ತತೆಯ ವ್ಯತ್ಯಾಸ ಅಗೋಚರವೂ ಸೂಕ್ಷ್ಮವೂ ಆದಾಗ ಪಾಪದ ದಾರಿ ಮೋಹಕವಾಗಿಯೇ ಕಾಣುತ್ತದೆ. ಆದರೆ ಆ ವ್ಯತ್ಯಾಸದ ಗೆರೆ ವಾಸ್ತವ, ಅಭೇದ್ಯ, ಅತ್ಯಂತದೃಢ. ಆ ಗೆರೆ ದಾಟಿದರೆ ನಾವೇ ನಾಶವಾದೇವು.

"ಭಾರತ ಇಂದು ವರ್ಣದ್ವೇಷಕ್ಕೆ ಬಲಿಯಾಗಿದೆ. ಜನತೆಯ ದುಷ್ಟ ಆಕ್ರೋಶವನ್ನು ತಡೆಗಟ್ಟಲು ನಾನು ಅಗಾಧ ಪ್ರಯತ್ನ ಕೈಗೊಂಡಿದ್ದೇನೆ. ನಿಸ್ಸಹಾಯಕತೆ, ದುರ್ಬಲತೆಗಳಿಂದ ಕಂಗಾಲಾಗಿ ಅದನ್ನು ಮೀರುವ ಉಪಾಯಗಳನ್ನರಿಯದೆ ಸಾಮಾನ್ಯ ಜನ ಸಮೂಹ ದ್ವೇಷಗ್ರಸ್ತವಾಗಿದೆ. ಆ ದ್ವೇಷ ಭಾವನೆಯನ್ನು ಮನುಷ್ಯರ ಮೇಲಲ್ಲದೆ ವಸ್ತುಗಳ ಕಡೆಗೆ ತಿರುಗಿಸಲು ನಾನು ಪ್ರಯತ್ನ ಮಾಡಿದ್ದೇನೆ.

"ಪರದೇಶಿ ವಸ್ತುಗಳ ಮೋಹದಿಂದ ನಮ್ಮ ಮೇಲೆ ಪರದೇಶದ ಆಕ್ರಮಣ ಸ್ಥಿರವಾಯಿತು. ದಟ್ಟದಾರಿದ್ರ್ಯ ಬಂತು. ಎಲ್ಲಕ್ಕಿಂತ ಹೆಚ್ಚಾಗಿ ಅನೇಕ ಕುಟುಂಬಗಳಿಗೆ ಮಾನಹಾನಿಯ ಶಾಪ ತಟ್ಟಿತು. ಕಾಠೇವಾಡದ ನೂರಾರು 'ಅಸ್ಪೃಶ್ಯ' ನೇಕಾರರು ಉದ್ಯೋಗಗಳನ್ನು ಕಳೆದುಕೊಂಡು ಬೊಂಬಾಯಿನಲ್ಲಿ ಕಸ ಗುಡಿಸುವವರಾದರೆಂಬ ಸಂಗತಿ ಅನೇಕರಿಗೆ ತಿಳಿಯದು. ಅವರ ಜೀವನ ನಿರ್ವಹಣೆ ಅತಿ ದುರ್ಭರವಾಗಿದೆ. ಮಕ್ಕಳನ್ನು ಕಳೆದುಕೊಂಡು ಅನೇಕರು ದೈಹಿಕವಾಗಿ, ನೈತಿಕವಾಗಿ ಪತಿತರಾಗಿದ್ದಾರೆ. ಕೆಲವರಂತೂ ತಮ್ಮ ಹೆಣ್ಣು ಮಕ್ಕಳ, ಕೊನೆಗೆ ಪತ್ನಿಯರ ಮಾನಹಾನಿಯನ್ನು ನಿಸ್ಸಹಾಯಕರಾಗಿ ಸಹಿಸುತ್ತಿದ್ದಾರೆ. ಗುಜರಾತಿನಲ್ಲಿ ನೇಕಾರ ವೃತ್ತಿಯ ಸ್ತ್ರೀಯರನೇಕರು ಗೃಹ ಕೈಗಾರಿಕೆ ನಶಿಸಿದ ನಂತರ ಸಾರ್ವಜನಿಕ ರಸ್ತೆಗಳಲ್ಲಿ ಕೂಲಿಗಳಾಗಿದ್ದಾರೆ. ಅನೇಕ ಪ್ರತ್ಯಕ್ಷ ಪರೋಕ್ಷ ಒತ್ತಡಗಳಿಗೆ ತುತ್ತಾಗಿ ಮಾನವನ್ನು ಮಾರಿಕೊಂಡಿದ್ದಾರೆ. ಇದು ಓದುಗರಿಗೆ ತಿಳಿಯದಿರಬಹುದು. ಪಂಜಾಬದ ವೀರ ಪುರುಷರನೇಕರು ತಮ್ಮ ನೇಕಾರ ವೃತ್ತಿ ನಾಶವಾದ ಮೇಲೆ ಜೀವನ ನಿರ್ವಹಣೆಗೆ ಗುಲಾಮರಾಗಿ, ಮೇಲಧಿಕಾರಿಗಳ ಆಜ್ಞಾಬದ್ಧರಾಗಿ ಕತ್ತಿ ಹಿರಿದು ನಿರಪರಾಧಿಗಳೂ, ಧೀರರೂ, ಆಗಿದ್ದ ಅರಬ್ಬರನ್ನು ಕೊಂದರು. ದೇಶಕ್ಕಾಗಿ ಹೋರಾಟ ಮಾಡಲಿಲ್ಲ. ಮೋಸಕ್ಕೊಳಗಾದ ಈ ಕುರುಡ ಗುಲಾಮರನ್ನೀಗ ಕೊಲೆಗಡುಕತನದಿಂದ ಪಾರುಮಾಡುವ ಪ್ರಯತ್ನ ಕಷ್ಟಸಾಧ್ಯ. ಒಂದು ಕಾಲಕ್ಕೆ ಗೌರವಯುತವಾಗಿದ್ದ ಕುಶಲಕಲೆ ಅವರಿಗೀಗ ಅವಮಾನಕರವೆನಿಸಿಬಿಟ್ಟಿದೆ. ಜಗತ್ಪ್ರಸಿದ್ಧವಾದ ಡಾಕಾ ಮಸ್ಲಿನ್ ನೇಯುತ್ತಿದ್ದ ನೇಕಾರರ ವೃತ್ತಿ ಎಂದಿಗೂ ಹೀನವೃತ್ತಿ ಎಂದು ಪರಿಗಣಿಸಲ್ಪಟ್ಟಿರಲಾರದು.

"ಪರದೇಶಿ ಬಟ್ಟೆಯನ್ನು ಧರಿಸುವುದು ಮಹಾಪಾತಕ ಎಂದು ನಾನು ಮೇಲಿನ ಕಾರಣಗಳಿಗಾಗಿ ಕರೆಯಿತ್ತರೆ ಆಶ್ಚರ್ಯವೇಕೆ? ಜೀರ್ಣಶಕ್ತಿಯೇ ನಾಶವಾದ ಅಶಕ್ತನಿಗೆ ಹೇರಳ ಪೌಷ್ಟಿಕ ಆಹಾರತಿನ್ನು ಎನ್ನುವುದು ಪಾಪಕಾರ್ಯ. ಅಂಥ ಆಹಾರವನ್ನು ಅವನು ನಾಶಮಾಡಬೇಕು ಇಲ್ಲವೆ ಇತರರಿಗೆ ಕೊಟ್ಟು ಬಿಡಬೇಕು. ಖಾಯಿಲೆ ಮಲಗಿರುವ ಮಗನೊಬ್ಬ ತನಗೆ ನಿಷೇಧ ಮಾಡಿರುವ ತಿಂಡಿ ತಿನಸುಗಳನ್ನು ಬಯಸಿದರೆ ಅವುಗಳನ್ನೇನು

ಮಾಡಬೇಕೆಂದು ನಾನು ಬಲ್ಲೆ. ಅವನಿಗೆ ಅದರ ಆಸೆ ತಪ್ಪಿಸಲು ಅವುಗಳನ್ನು ತಿನ್ನಲು ಶಕ್ತನಾದ ನಾನೂ ಸಹ ತಿನ್ನಲು ನಿರಾಕರಿಸುತ್ತಿದ್ದೆ. ಅವನೆದುರಿಗೆ ಆ ಆಹಾರವನ್ನು ಧ್ವಂಸ ಮಾಡಿ ಅದನ್ನು ತಿನ್ನುವುದು ಪಾಪ ಎಂದು ಮನಗಾಣಿಸುತ್ತಿದ್ದೆ.

"ಅತ್ಯುನ್ನತ ನೈತಿಕ ದೃಷ್ಟಿಯಿಂದ ಪರದೇಶಿ ವಸ್ತ್ರವನ್ನು ಧ್ವಂಸ ಮಾಡುವುದೂ ವಿಹಿತ ಕರ್ಮ ಎನಿಸಿದರೆ, ಸ್ವದೇಶಿ ಬಟ್ಟೆಯ ಬೆಲೆ ಸ್ವಲ್ಪ ಹೆಚ್ಚುವ ಸಂಭವ ಉಂಟಾದರೆ ನಾವು ಭಯ ಪಡಬಾರದು. ಇದ್ದುದನ್ನು ನಾಶಮಾಡಿದಾಗ ಉತ್ಪಾದನಾ ಕ್ರಿಯೆಗೂ ಪ್ರಚೋದನೆ ದೊರೆಯುತ್ತದೆ. ನಿಸ್ಸೀಮ ಪ್ರಯತ್ನದಿಂದ ಕ್ಷಿಪ್ರವಾಗಿ ಈ ನಾಶಕಾರ್ಯ ನಡೆಸಿ ಭಾರತವನ್ನು ನಿಷ್ಕ್ರಿಯತೆಯಿಂದ, ಒತ್ತಾಯದ ಸೋಮಾರಿತನದಿಂದ ಎಚ್ಚರಿಸಬೇಕಾಗಿದೆ. ದೇಹದಲ್ಲಿ ಹೊಕ್ಕ ವಿಷವಸ್ತುವಿನಂತೆ ಈ ಪರದೇಶಿ ಬಟ್ಟೆ. ವಿಷನಾಶ ಮಾಡುವುದು ದೇಹದ ಆರೋಗ್ಯಕ್ಕೆ ಎಷ್ಟು ಅವಶ್ಯವೋ ರಾಷ್ಟ್ರದ ಆರೋಗ್ಯಕ್ಕೆ ಈ ಬಟ್ಟೆಯ ನಾಶವೂ ಅಷ್ಟೇ ಅಗತ್ಯ. ಸ್ವದೇಶಿ ಭಾವನೆ ಈ ಕೂಡಲೇ ಅವಶ್ಯವೆನಿಸಿದಲ್ಲಿ ಈ ವಿಧ್ವಂಸಕ ಕಾರ್ಯವೂ ಅನಿವಾರ್ಯವೆಂದೇ ಪರಿಗಣಿಸಬೇಕು.

"ಸಂಪೂರ್ಣ ಸ್ವದೇಶಿ ಭಾವನೆ, ಸಂಕುಚಿತ ಮನೋಧರ್ಮವನ್ನು ಅಥವಾ ಪ್ರತ್ಯೇಕತೆಯನ್ನು ಬೆಳೆಸುತ್ತದೆ ಎಂದೇನೂ ಭಯಪಡಬೇಕಾಗಿಲ್ಲ. ವಿನಾಶಕಾರೀ ಲಾಲಸೆಗಳಿಂದ ನಮ್ಮ ದೇಹ ರಕ್ಷಣೆ ಮಾಡಿಕೊಳ್ಳುವುದು ಪ್ರಥಮ ಕರ್ತವ್ಯ. ಇತರರ ರಕ್ಷಣೆಯ ಹೊಣೆ ಅನಂತರ ಬರತಕ್ಕದ್ದು. ಭಾರತ ಇಂದು ಪರಕೀಯರ ಆಜ್ಞೆಯಂತೆ ಚಲಿಸುವ ನಿರ್ಜೀವ ಜಡರಾಶಿಯಾಗಿದೆ. ಆತ್ಮಸಂಯಮ ಆತ್ಮನಿಗ್ರಹಗಳ ಮೂಲಕ ಆತ್ಮಶುದ್ಧಿಯನ್ನು ಸಾಧಿಸಿ ಭಾರತ ಜೀವಂತವಾದರೆ, ತನಗೂ ವಿಶ್ವಕ್ಕೂ ಅದು ವರದಾನವಾಗುತ್ತದೆ. ಅದಕ್ಕೆ ಬದಲಾಗಿ ಭೋಗಲಾಲಸೆ, ಆಕ್ರಮಣ ಪ್ರವೃತ್ತಿ, ದುರಾಶೆಗಳು ಆವರಿಸುವುದಾದರೆ ಕುಂಭಕರ್ಣನಂತೆ, ಎಚ್ಚೆತ್ತೊಡನೆಯೇ ವಿನಾಶದಲ್ಲಿ ತೊಡಗಿ ಜಗತ್ತಿಗೂ ತನಗೂ ಮಾರಕ ಪಿಡುಗಾಗಿ ಬಿಡುತ್ತದೆ.

"ಸ್ವದೇಶಿ ನಿಷ್ಠೆ ದೃಢವಾಗಿರುವವನಲ್ಲಿ ಪ್ರಾಚೀನ ಯಹೂದಿ ಕರ್ಮಠರಿಗಿದ್ದ ಪಾವಿತ್ರ್ಯತೆಯ ಅಹಂಭಾವವೂ ಇರಬೇಕಾಗಿಲ್ಲ. ಆ ಸಂಪ್ರದಾಯಸ್ಥರು ಸದ್ಗುಣಗಳ ಆಶ್ರಯದಾತರೆನಿಸಿಕೊಂಡವರು. ಆದರೆ ಸ್ವದೇಶೀ ದೃಷ್ಟಿಯಿಂದ ಖಾದಿ ಧಾರಿಯಾದವನು ತನ್ನ ಸಹಜವಾದ ಶ್ವಾಸಕೋಶಗಳನ್ನು ಬಳಸಿದಂತೆ. ಆ ಪ್ರಕೃತಿ ಸಹಜವಾದ ಕರ್ತವ್ಯ ಕರ್ಮ ಮಾಡುವುದು ಆತನ ಅನಿವಾರ್ಯ ಧರ್ಮ. ಅದರ ಹಿಂದೆ ದುರುದ್ದೇಶಗಳೂ ಇರಬಹುದು ಅಥವಾ ಅದರ ಅವಶ್ಯಕತೆಯಾಗಲಿ, ಉಪಯೋಗವಾಗಲಿ, ಇಲ್ಲವೆಂದು ತಿಳಿದು ಸಂಪೂರ್ಣವಾಗಿ ವರ್ಜಿಸಿರಲೂಬಹುದು."

ಸ್ವದೇಶಿ ಚಳುವಳಿಯ ಯಶಸ್ಸಿಗಾಗಿ ಗಾಂಧೀಜಿ ಮಹಿಳೆಯರಲ್ಲಿ ಹೀಗೆ ಮನವಿ ಮಾಡಿದರು : "ಬಹಳಷ್ಟನ್ನು ನೀಡಿರುವ ನೀವು ಈಗ ಮತ್ತಷ್ಟನ್ನೂ ಕೊಡ ಬೇಕಾಗಿದೆ. ತಿಲಕ್ ಸ್ವರಾಜ್ಯ ನಿಧಿಯ ಸಂಗ್ರಹದ ಹೊರೆಯ ಬಹುಭಾಗವನ್ನು ಪುರುಷರೇ ಪೂರ್ಣಗೊಳಿಸಿದರು. ಸ್ವದೇಶಿ ಸಂಕಲ್ಪ ಪೂರ್ಣ ಯಶಸ್ವಿಯಾಗಲು ಬಹುಭಾಗದ ಕೊಡುಗೆ

ಮಹಿಳೆಯರಿಂದ ಬರಬೇಕು. ನಿಮ್ಮಲ್ಲಿರುವ ಎಲ್ಲ ವಿದೇಶಿ ವಸ್ತ್ರವನ್ನು ಈಗ ನೀವು ಅರ್ಪಿಸದೇ ಹೋದಲ್ಲಿ ಬಹಿಷ್ಕಾರ ಪೂರ್ಣವಾಗದು. ಆ ಬಟ್ಟೆಯ ಬಗ್ಗೆ ನಿಮಗಿರುವ ಅಭಿರುಚಿ ನಾಶವಾಗದೇ ಪೂರ್ಣ ಪರಿತ್ಯಾಗವೂ ಸಾಧ್ಯವಾಗದು. ಪೂರ್ಣ ಪರಿತ್ಯಾಗ ವನ್ನೇ ಬಹಿಷ್ಕಾರ ಎನ್ನುವುದು. ಭಗವಂತ ದಯಪಾಲಿಸಿದ ಮಕ್ಕಳು ಹೇಗಿದ್ದರೂ ನಮಗೆ ಪ್ರಿಯ. ಹಾಗೆಯೇ ಭಾರತದಲ್ಲಿ ಉತ್ಪಾದನೆಯಾಗುವ ಎಂಥ ಬಟ್ಟೆಯಾದರೂ ನಮಗೆ ಪ್ರಿಯವಾಗಬೇಕು. ಇತರರಿಗೆ ಕುರೂಪಿಯೆಂದು ಕಂಡರೂ ತಾಯಿಯಾದವಳು ತನ್ನ ಮಗುವನ್ನು ನಿರಾಕರಿಸಿಯಾಳೆ? ಭಾರತದಲ್ಲಿನ ಉತ್ಪಾದಿತ ವಸ್ತುಗಳ ಬಗ್ಗೆಯೂ ದೇಶಾಭಿಮಾನವುಳ್ಳ ಮಾತೆಯರಿಗೆ ಈ ಪ್ರೀತಿ ಇರಬೇಕು. ನಿಮಗಂತೂ ಕೈನೂಲಿನ ಕೈಮಗ್ಗದ ಬಟ್ಟೆ ಮಾತ್ರವೇ ಭಾರತೀಯ ವಸ್ತ್ರ ಎಂದೆನಿಸಬೇಕು. ಪರಿವರ್ತನೆಯ ಸಮಯಕ್ಕೆ ನಿಮಗೆ ಹೇರಳವಾಗಿ ಸಿಗುವುದು ಒರಟು ಖಾದಿ. ಅದನ್ನೇ ನಿಮ್ಮ ಕೌಶಲ ಕಲೆಗಳಿಂದ ನಿಮ್ಮ ಅಭಿರುಚಿಗೆ ಅಣಿಮಾಡಿಕೊಳ್ಳಬೇಕು. ಕೆಲವು ತಿಂಗಳುಗಳು ಒರಟು ಬಟ್ಟೆಯನ್ನೇ ಉಪಯೋಗಿಸಿದರೆ ಕ್ರಮೇಣ ಅತ್ಯುತ್ಕೃಷ್ಟವಾದ ನವುರಾದ ಬಣ್ಣ ಬಣ್ಣದ ದುಕೂಲಗಳಿಗಾಗಿ ಪ್ರಾಚೀನ ಭಾರತದ ಬಗ್ಗೆ ಜಗತ್ತೇ ಅಸೂಯೆ ಪಟ್ಟು ಆಕರ್ಷಿತ ವಾಗಿತ್ತೋ ಅಂಥ ವಸ್ತುಗಳು ಮತ್ತೆ ತಯಾರಾಗುವುದರಲ್ಲಿ ಏನೂ ಸಂದೇಹವಿಲ್ಲ. ಆರು ತಿಂಗಳು ನೀವು ಸಂಯಮದಿಂದ ಒರಟು ಬಟ್ಟೆ ತೊಡುವುದಾದರೆ ಈಗ ನೀವು ಭಾವಿಸಿರುವ ಕಲಾತ್ಮಕ ಉಡಿಗೆ ಕೇವಲ ಕೃತಕ ಅಭಿರುಚಿಯೆಂದೂ ನಿಜವಾದ ಕಲೆ ಮೇಲಿನ ಮೆರಗು ಮಾತ್ರವೇ ಅಲ್ಲ, ಅದರ ಹಿಂದಿನ ಪವಿತ್ರೋದ್ದೇಶವನ್ನು ಒಳ ಗೊಂಡಿರಬೇಕೆಂಬುದನ್ನೂ ಸಂಲಭವಾಗಿ ಮನಗಾಣಿಸಬಲ್ಲೆ. ಪಾಶ್ಚಾತ್ಯ ರಾಷ್ಟ್ರಗಳಿಂದ, ಮತ್ತು ದೂರ ಪ್ರಾಚ್ಯದಿಂದ ನಾವು ಆಮದು ಮಾಡುವ ಈ ನಯವಾದ ಬಟ್ಟೆಗಳಿಂದ ನಮ್ಮ ದೇಶದ ಕೋಟ್ಯಾನುಕೋಟಿ ಸೋದರ ಸೋದರಿಯರ ಕೊಲೆಯಾಗಿದೆ. ಸಹಸ್ರಾರು ಸೋದರಿಯರು ಪತಿತರಾಗಿ ಬಾಳಬೇಕಾಗಿ ಬಂದಿದೆ. ನಿಜವಾದ ಕಲೆ ಕರ್ತೃವಿನ ಆನಂದ, ತೃಪ್ತಿ ಮತ್ತು ನೈರ್ಮಲ್ಯದ ಪ್ರತೀಕವಾಗಿರಬೇಕು. ನಮ್ಮಲ್ಲಿ ಈ ಸತ್ಯವಾದ ಕಲಾಭಿರುಚಿ ಜಾಗೃತವಾಗಬೇಕಾದರೆ ಈ ಸಮಯಕ್ಕೆ ನಿಮ್ಮಲ್ಲಿ ಅತ್ಯಂತ ಶ್ರೇಷ್ಠರೂ ಖಾದಿ ಉಡಿಗೆಯನ್ನು ಧರಿಸುವುದು ಪವಿತ್ರ ಕರ್ತವ್ಯವೆನಿಸಬೇಕು.

"ಸ್ವದೇಶಿ ಕಾರ್ಯಕ್ರಮದ ಯಶಸ್ಸಿಗೆ ಖಾದಿ ಧರಿಸುವುದು ಆವಶ್ಯಕ. ಅಷ್ಟೆ ಅಲ್ಲ, ನಿಮ್ಮಲ್ಲಿ ಪ್ರತಿಯೊಬ್ಬರು ನಿಮ್ಮ ಬಿಡುವು ಸಮಯದಲ್ಲಿ ನೂಲ ಬೇಕಾದುದೂ ಒಂದು ಕಡ್ಡಾಯ ಕರ್ಮವಾಗಬೇಕು. ಮಕ್ಕಳೂ ಪುರುಷರೂ ಕೂಡ ಈ ಸೂತ್ರ ಯಜ್ಞ ಮಾಡಬೇಕೆಂದು ನಾನು ಸೂಚಿಸಿದ್ದೇನೆ. ಸಹಸ್ರಾರು ಜನ ಈಗಾಗಲೇ ನೂಲುವ ಅಭ್ಯಾಸ ಇಟ್ಟುಕೊಂಡಿದ್ದಾರೆಂದು ಬಲ್ಲೆ. ಈ ನೂಲುವ ಉದ್ಯಮ ಬಹುಪಾಲು ಹಿಂದಿನಂತೆ ಮಹಿಳೆಯರ ಮೇಲೆ ಬೀಳುತ್ತದೆ. ಇನ್ನೂರು ವರ್ಷಗಳ ಕೆಳಗೆ ಭಾರತೀಯ ಮಹಿಳೆಯರು ತಮ್ಮ ರಾಷ್ಟ್ರಕ್ಕಷ್ಟೇ ಅಲ್ಲದೆ ಹೊರ ದೇಶಗಳಿಗೆ ರಫ್ತಿಗಾಗಿಯೂ ನೂಲನ್ನು ತಯಾರಿಸುತ್ತಿದ್ದರು. ದಪ್ಪನೂಲನ್ನು ಮಾತ್ರವಲ್ಲ ಜಗತ್ತೇ ಆಶ್ಚರ್ಯ

ಪಡುವಂತಹ ಅತಿ ನವುರಾದ ಕೈನೂಲನ್ನು ನೂಲುತ್ತಿದ್ದರು. ಇದುವರೆಗೆ ಯಾವ ಯಂತ್ರವೂ ನಮ್ಮ ಈ ಪ್ರಾಚೀನರ ಕೈನೂಲಿನ ಸಮಕ್ಕೆ ನೂಲನ್ನು ಸಿದ್ಧಮಾಡಿಲ್ಲ. ಆದ್ದರಿಂದ ಬರುವ ಎರಡು ತಿಂಗಳಲ್ಲಿ ಖಾದಿಯ ಬೇಡಿಕೆಯನ್ನು ಪೂರೈಸಲು ಮತ್ತು ಮುಂದೆಯೂ ಅದು ದೊರೆಯುವಂತೆ ಮಾಡಲು ನೂಲುವವರ ಸಂಘಗಳನ್ನು ಸ್ಥಾಪಿಸಬೇಕು ; ನೂಲವ ಸ್ಪರ್ಧೆಗಳೇರ್ಪಡಬೇಕು. ಭಾರತೀಯ ಮಾರುಕಟ್ಟೆಗಳಲ್ಲೆಲ್ಲಾ ಕೈನೂಲಿನ ಹೊನಲನ್ನು ಹರಿಸಿ ಬಿಡಬೇಕು. ಈ ಕೆಲಸ ನಿರ್ವಹಿಸಲು ನಿಮ್ಮಲ್ಲಿ ಕೆಲವರು ನೂಲುವುದು, ಎಕ್ಕುವುದು, ಚರಕಗಳನ್ನು ಸರಿಪಡಿಸುವುದು ಮುಂತಾದ ಕೆಲಸಗಳಲ್ಲಿ ಕುಶಲರಾಗಬೇಕು. ಸಂತತವಾಗಿ ಇದಕ್ಕಾಗಿ ದುಡಿಯಬೇಕಾಗುತ್ತದೆ. ನೂಲುವುದು ನಿಮಗೆ ಜೀವನೋಪಾಯ ಎಂದು ತಿಳಿಯಬೇಡಿ. ಮಧ್ಯಮ ವರ್ಗಕ್ಕೆ ವರಮಾನವನ್ನು ಸ್ವಲ್ಪ ಹೆಚ್ಚಿಸಲು ಸಹಾಯಕವಾಗುತ್ತದೆ. ಬಡವರಾದ ಹೆಣ್ಣುಮಕ್ಕಳಿಗೆ ಮಾತ್ರ ಇದು ನಿಸ್ಸಂದೇಹವಾಗಿ ಜೀವನೋಪಾಯವಾಗುತ್ತದೆ. ನಿಸ್ಸಹಾಯಕ ವಿಧವೆಗೆ ಚರಕ ಹಿಂದಿನಂತೆಯೇ ಪ್ರೀತಿಯ ಬಂಧುವಿನಂತಿರಬೇಕು. ಈ ಮನವಿಯನ್ನು ಓದುವ ನಿಮಗಂತೂ ಖಾದಿ ಕೆಲಸ ಒಂದು ಪವಿತ್ರ ಧರ್ಮ, ಅಗತ್ಯ ಕರ್ತವ್ಯ. ಭಾರತದ ಶ್ರೀಮಂತ ಮಹಿಳೆಯರೆಲ್ಲರೂ ಸ್ವಲ್ಪ ಕಾಲ ನೂಲುವುದನ್ನು ದಿನವೂ ಕೈಗೊಂಡರೆ ನೂಲು ಅಗ್ಗವಾಗುತ್ತದೆ; ಮತ್ತು ಬಹುಬೇಗ ಒಳ್ಳೆಯ ನವುರಾದ ಕೈನೂಲು ಸಿದ್ಧವಾಗುತ್ತದೆ.

"ಭಾರತದ ಆರ್ಥಿಕ, ನೈತಿಕ ಪುನರುತ್ಥಾನ ಬಹುಪಾಲು ನಿಮ್ಮ ಕೈಲಿದೆ. ಭಾರತದ ಭವಿಷ್ಯ ನಿಮ್ಮ ಮಡಿಲಿನಲ್ಲಿದೆ. ಏಕೆಂದರೆ ಬರಲಿರುವ ಜನಾಂಗಕ್ಕೆ ನೀವೇ ಪೋಷಕರು. ಭಾರತದ ಮಕ್ಕಳು ಸರಳರೂ, ವೀರರೂ, ದೈವಭೀರುಗಳೂ ಆಗುವಂತೆ ನೀವು ಪೋಷಿಸಬಹುದು ಅಥವಾ ಅತ್ಯುಪಚಾರದಿಂದ ಜೀವನದ ಬಿರುಗಾಳಿಗಳನ್ನೆದುರಿಸಲ ಸಮರ್ಥರಾದ ಅಶಕ್ತರನ್ನಾಗಿಯೂ, ಪರದೇಶದ ನಯವಾದ ಬಟ್ಟೆಗಳನ್ನೇ ತೊಟ್ಟು ಅಭ್ಯಾಸವಾಗಿ ಮುಂದೆ ಅವುಗಳನ್ನು ಬಿಡಲಾರದ ದುರ್ಬಲರನ್ನಾಗಿಯೂ ಮಾಡಬಹುದು. ಭಾರತದ ಮಹಿಳೆಯ ಶಕ್ತಿ ಪರೀಕ್ಷೆ ಬರುವ ಕೆಲವು ವಾರಗಳಲ್ಲಿ ನಡೆಯುತ್ತದೆ. ನಿಮ್ಮ ಒಲವು ಯಾವ ಕಡೆಗೆ ಎನ್ನುವುದು ನನಗೆ ಖಚಿತವಾಗಿದೆ. ಯಾವ ರೀತಿಯಲ್ಲಿ ಭೀಕರ ಶೋಷಣೆಯಿಂದ ಭಾರತದ ಸಂಪತ್ಸಮೃದ್ಧಿಯನ್ನು ಹಾಳುಮಾಡಿ ಅದು ತನ್ನ ಶಕ್ತಿಯಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವಂತೆ ಮಾಡಿರುವ ಸರ್ಕಾರಕ್ಕಿಂತ ನಿಮ್ಮ ಕೈಯಲ್ಲಿ ಭಾರತದ ಭವಿಷ್ಯ ಸುರಕ್ಷಿತವಾಗುತ್ತದೆಂದು ನಾನು ಬಲ್ಲೆ. ನಾನು ಪಾಲ್ಗೊಂಡ ಪ್ರತಿಯೊಂದು ಮಹಿಳಾ ಸಭೆಯಲ್ಲೂ ರಾಷ್ಟ್ರಕಾರ್ಯಕ್ಕೆ ನಿಮ್ಮ ಹರಕೆಯನ್ನು ಬೇಡಿದ್ದೇನೆ. ನೀವು ನಿಷ್ಕಳಂಕರು, ಸರಳರು, ದೈವಾಂಶದಿಂದ ಕೂಡಿದವರು. ನಿಮ್ಮ ಆಶೀರ್ವಾದಕ್ಕೆ ದಿವ್ಯ ಪ್ರಭಾವವಿದೆ ಎಂಬ ಗಾಢನಂಬಿಕೆಯಿಂದ ಅದನ್ನು ಬೇಡಿದ್ದೇನೆ. ನಿಮ್ಮ ಪರದೇಶಿ ವಸ್ತ್ರಗಳನ್ನು ತ್ಯಜಿಸಿ ಬಿಡುವಿನ ಸಮಯದಲ್ಲಿ ರಾಷ್ಟ್ರಕ್ಕಾಗಿ ಎಡೆಬಿಡದೆ ನೂಲುವುದಾದರೆ ನೀವು ನಿಮ್ಮ ಹರಕೆಯ ಪ್ರಭಾವ ಸಫಲವಾಗಲು ಕಾರಣರಾಗುತ್ತೀರಿ."

# ಅರೆನಗ್ನ ಫಕೀರ

## ೧೯೨೧

ಗಾಂಧೀಜಿ ವ್ಯಾಪಕವಾದ ಪ್ರವಾಸಗಳನ್ನು ಕೈಗೊಂಡರು: ದೊಡ್ಡ ಪಟ್ಟಣಗಳಾಗಲಿ, ಬಹುದೂರದ ಸಣ್ಣ ಗ್ರಾಮಗಳಾಗಲಿ ಅವರ ಸಂದೇಶ ಕೇಳಲು ಸಹಸ್ರ ಸಹಸ್ರರಾಗಿ ಜನ ಸೇರುತ್ತಿದ್ದರು. ಅಗಾಧ ಜನ ಸಮುದಾಯಗಳನ್ನು ಹೊಸ ಸಿದ್ಧಾಂತಕ್ಕೆ ಪರಿವರ್ತಿಸಿದ ಯಾತ್ರೆಯಂತಿತ್ತು ಈ ಪ್ರವಾಸ. ಅತ್ಯದ್ಭುತ ಪ್ರಸಂಗಗಳು ಆಗ ನಡೆದು ಹೋದುವು. ಬಿಹಾರದ ಒಂದು ಹಳ್ಳಿ; ಮಳೆಯಲ್ಲಿ ಸಿಕ್ಕಿ ಗಾಂಧೀಜಿ ಮತ್ತು ಅನುಯಾಯಿಗಳು ರಸ್ತೆಯ ಮಗ್ಗುಲಲ್ಲಿ ನಿಂತಿದ್ದರು. ಒಬ್ಬ ಮುದುಕಿ ಗಾಂಧೀಜಿಯನ್ನರಸಿ ಬಂದಳು. "ನನಗೀಗ ನೂರಾನಾಲ್ಕು ವರುಷಗಳಾದವು. ಕಣ್ಣು ಮಂಜಾಗಿದೆ. ತೀರ್ಥ ಕ್ಷೇತ್ರಗಳನ್ನೆಲ್ಲಾ ಸಂದರ್ಶಿಸಿದ್ದೇನೆ. ನನ್ನ ಗ್ರಾಮದಲ್ಲಿ ಎರಡು ದೇವಾಲಯಗಳನ್ನು ಕಟ್ಟಿಸಿದ್ದೇನೆ. ರಾಮ ಕೃಷ್ಣರ ಅವತಾರವಾದಂತೆ ಮಹಾತ್ಮಾ ಗಾಂಧೀ ಅವತಾರ ಈಗ ಆಗಿದೆ ಎಂದು ಕೇಳಿದ್ದೇನೆ. ಅವರನ್ನು ಕಾಣುವವರೆಗೆ ನನ್ನ ಜೀವ ಕೊನೆಗಾಣದು." ಎಂದು ಮೊರೆಯಿಟ್ಟಳು. ಈ ಮುಗ್ಧ ನಂಬಿಕೆ ಭಾರತದ ಸಾಮಾನ್ಯ ಜನ ಮಾನಸದಲ್ಲಿ ಎದ್ದು ಕಾಣುತ್ತಿತ್ತು. ಎಲ್ಲೆಲ್ಲೂ 'ಮಹಾತ್ಮಾ ಗಾಂಧೀ ಕಿ ಜೈ' ಮುಗಿಲು ಮುಟ್ಟಿತು. ಬಾರಿಸಾಲದ ವೇಶ್ಯೆಯರು, ಕಲ್ಕತ್ತದ ಮಾರ್ವಾಡಿ ವ್ಯಾಪಾರಿಗಳು, ಒರಿಸ್ಸಾದ ಬಡ ಕೂಲಿಗಾರರು, ಬಂಡಾಯವೆದ್ದ ರೈಲ್ವೆ ಕಾರ್ಮಿಕರು, ಖಾದಿ ಹಚ್ಚಡಗಳನ್ನು ಉತ್ಸಾಹದಿಂದ ಅವರಿಗೆ ಹೊದಿಸುತ್ತಿದ್ದ ಆದಿವಾಸಿ ಸಂತಾಲರು ಎಲ್ಲರೂ ಗಾಂಧೀಜಿಗೆ ನಿಕಟ ಬಂಧುಗಳಂತಾದರು.

ಆಲಿಘಡ, ದಿಬ್ರೂಘರ್, ದಕ್ಷಿಣದ ಮೂಲೆ ತಿನ್ನವೆಲ್ಲಿ, ಹೀಗೆ ಭಾರತದ ಆದ್ಯಂತ ಹಳ್ಳಿಯಿಂದ ಹಳ್ಳಿಗೆ, ಊರಿನಿಂದ ಊರಿಗೆ ಸಾಗಿತು ಗಾಂಧೀಯಾತ್ರೆ. ದೇವಾಲಯಗಳಲ್ಲಿ ಮಸೀದಿಗಳಲ್ಲಿ ಸಭೆಗಳಾದವು. ಹೋದ ಹೋದ ಕಡೆ ಜನರಲ್ಲಿ ಉಕ್ಕಿ ಬರುತ್ತಿದ್ದ ಪ್ರೀತಿ ಉತ್ಸಾಹಗಳ ಒತ್ತಡದ ಹಿಂಸೆಯನ್ನು ಅವರು ಸಹಿಸಬೇಕಾಯಿತು. ಬಾರಿಸಾಲದಲ್ಲಿ ಇಪ್ಪತ್ತೈದು ಸಾವಿರ ಜನಸಂದಣಿ ಕುರಿತು ನಿಷ್ಠುರವಾಗಿ ಹೀಗೆ ನುಡಿದರು ಗಾಂಧೀಜಿ. "ನಾನೊಂದು ಸ್ಥಳಕ್ಕೆ ಹೋಗಿದ್ದೆ. ಎಲ್ಲರೂ 'ಮಹಾತ್ಮಾ ಗಾಂಧೀ ಕಿ ಜೈ' ಎಂದು ಕಿರುಚುತ್ತಿದ್ದರು. ಎಲ್ಲರೂ ನನ್ನ ಕಾಲು ಮುಟ್ಟಿ ನಮಿಸಲು ನುಗ್ಗುತ್ತಿದ್ದರು. ಆದರೆ ಯಾರೊಬ್ಬರೂ ನನ್ನ ಮಾತಿಗೆ ಕಿವಿಗೊಡಲು ಇಚ್ಛಿಸಲೇ ಇಲ್ಲ. ನನಗೆ ಜಿಗುಪ್ಸೆಯಾಯಿತು. ಸುತ್ತಲಿನ ಪರಿಸರ ಅಸಹ್ಯವೆನಿಸಿತು. 'ಗಾಂಧೀ ಕಿ ಜೈ' ಘೋಷಣೆ ಪ್ರತಿಸಾರಿಯೂ ನನ್ನ ಹೃದಯವನ್ನು ಹರಿತವಾದ ಬಾಣದಂತೆ ಚುಚ್ಚುತ್ತದೆ. ಈ ಘೋಷಣೆಯ ಮಾತ್ರದಿಂದಲೇ ಸ್ವರಾಜ್ಯ ಸಾಧಿಸಿ ಬಿಡುವುದಾಗಿದ್ದರೆ ಈ ಕಷ್ಟವನ್ನೂ ಸಹಿಸಲಡ್ಡಿಯಿರಲಿಲ್ಲ. ಆದರೆ ಈ ತುಮುಲದ ಕಿರುಚಾಟದಲ್ಲೇ ಕಾಲಕಳೆದು, ನಿರರ್ಥಕ ಶ್ರಮ

ಪಟ್ಟು ಮಾಡಬೇಕಾದ ಕೆಲಸಗಳನ್ನು ಕಡೆಗಾಣಿಸುವುದು ಸರ್ವಥಾ ಯೋಗ್ಯವಲ್ಲ. ಇದರ ಬದಲು ನನ್ನ ಚಿತೆಯನ್ನು ಸಿದ್ಧಪಡಿಸಿ ಬೆಂಕಿಯಿಡಿ: ನಾನದರಲ್ಲಿ ಧುಮಿಕಿ ನನ್ನ ಹೃದಯುವನ್ನು ದುರ್ಭರವಾಗಿ ದಹಿಸುತ್ತಿರುವ ಬಡಬಾಗ್ನಿಯನ್ನು ಶಾಂತ ಗೊಳಿಸಿಕೊಳ್ಳುತ್ತೇನೆ."

ಪ್ರವಾಸದ ಮೊದಲ ಮೂರು ತಿಂಗಳು ಗಾಂಧೀಜಿ ನ್ಯಾಯಾಲಯಗಳ, ಶಾಲೆ, ಕಾಲೇಜುಗಳ ಬಹಿಷ್ಕಾರ ಚಳುವಳಿಯನ್ನು ಒತ್ತಿ ಹೇಳುತ್ತಿದ್ದರು. ಬರಬರುತ್ತಾ, ಈ ನಿಷೇಧಾತ್ಮಕ ಕಾರ್ಯದ ಮೇಲೆ ಸ್ವರಭಾರ ಕಡಮೆ ಮಾಡಿದರು. ಅಹಿಂಸೆ ಹಿಂದೂ ಮುಸ್ಲಿಂ ಐಕ್ಯತೆ ಮತ್ತು ರಚನಾತ್ಮಕ ಕಾರ್ಯಕ್ರಮಗಳನ್ನು ಒತ್ತಿ ಹೇಳಿದರು.

ಆಗಸ್ಟ್ ತಿಂಗಳಲ್ಲಿ ಮಲಬಾರಿನಲ್ಲಿ ಪ್ರಬಲವಾದ ಮಾಪ್ಲಾ ದಂಗೆಯೊಂದು ನಡೆದು ಹಲವು ತಿಂಗಳುಗಳು ಸಾಗಿತು. ಮಾಪ್ಲಾಗಳು, ಮೀನಂಗಾರಿಕೆ ವ್ಯವಸಾಯಗಳಲ್ಲಿ ತೊಡಗಿದ್ದ ಮುಸ್ಲಿಮರು, ಧರ್ಮಯುದ್ಧ ಘೋಷಿಸಿ ಖಲೀಫ ಸಾಮ್ರಾಜ್ಯ ಸ್ಥಾಪಿಸುವ ಉದ್ದೇಶದಿಂದ ದಂಗೆಯೆದ್ದರು. ಅಂಧ ಶ್ರದ್ಧೆಯ ಆವೇಶದಲ್ಲಿ ಕೆಲವು ಯೂರೋಪಿಯನ್ನರನ್ನೂ ಕೊಂದರು. ಹಲವು ಹಿಂದೂ ಜಮೀನ್ದಾರ ಸಾಹುಕಾರರ ತಲೆ ಕಡಿದರು. ಬಲಾತ್ಕಾರವಾಗಿ ಹಲವು ಹಿಂದೂಗಳನ್ನು ಮತಾಂತರಗೊಳಿಸಿ ದೇವಾಲಯಗಳನ್ನು ನಾಶಮಾಡಿದರು. ಸೆಪ್ಟಂಬರಿನಲ್ಲಿ ಗಾಂಧೀಜಿ ಮಹಮ್ಮದಾಲಿ ಯವರ ಜತೆಗೂಡಿ ಮಾಪ್ಲಾಗಳನ್ನು ಶಾಂತಗೊಳಿಸಲು ಮಲಬಾರಿಗೆ ಹೊರಟರು. ದಾರಿಯ ವಾಲ್ಟೇರ್ ನಿಲ್ದಾಣದಲ್ಲಿ ಸೆಪ್ಟೆಂಬರ್ ೧೪ರಂದು ಸರ್ಕಾರ ಮಹಮ್ಮದಾಲಿ ಯವರನ್ನು ದಸ್ತಗಿರಿ ಮಾಡಿತು. ಸಾರ್ವಜನಿಕ ಸಭೆಯಲ್ಲಿ ಮಾತನಾಡಲು ಅವರು ಹೊರಟಿದ್ದರು. ಕರಾಚಿ ಸಮ್ಮೇಳನದಲ್ಲಿ ಮಾಡಿದ ನಿರ್ಣಯ ಬ್ರಿಟಿಷ್ ಸಿಪಾಯಿಗಳ ರಾಜನಿಷ್ಠೆಯನ್ನು ನಾಶಮಾಡುವ ಉದ್ದೇಶವಾಗಿತ್ತೆಂದೂ ಅದಕ್ಕೆ ಇವರು ಜವಾಬ್ದಾರ ರಾದ್ದರಿಂದ ದಸ್ತಗಿರಿ ಮಾಡಲಾಯಿತೆಂದು ಬೊಂಬಾಯಿ ಸರ್ಕಾರ ವಿವರಣೆಯಿತ್ತಿತ್ತು. ಗಾಂಧೀಜಿ ಪ್ರತಿಭಟಿಸಿ ನುಡಿದರು:

"ಬೊಂಬಾಯಿನ ಗೌರ್ನರರಿಗೆ ತಿಳಿಯದು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಕಳೆದ ಸೆಪ್ಟೆಂಬರಿನಲ್ಲೇ ಸಿಪಾಯಿಗಳಿಗೆ ಕರೆಯಿತ್ತು ಅವರ ರಾಜನಿಷ್ಠೆಯನ್ನು ಮುರಿ ಯಲು ಪ್ರಯತ್ನಿಸಿತು. ಕೇಂದ್ರೀಯ ಖಿಲಾಫತ್ ಸಮಿತಿ ಅದಕ್ಕೂ ಮುಂಚೆ ಕರೆ ಗೊಟ್ಟಿತು. ನಾನಂತೂ ಅದಕ್ಕೂ ಹಿಂದೆ ಈ ಕಾರ್ಯ ಪ್ರಾರಂಭಿಸಿದೆ. ಈ ವಿದ್ರೋಹ ಕಾರ್ಯದ ಗೌರವ ನನಗೆ ಸಲ್ಲಬೇಕು. ಸಿಪಾಯಿಗಳಾಗಲೀ ಬೇರೆ ಯಾವುದೇ ಸರ್ಕಾರಿ ನೌಕರಿ ಮಾಡುವವರಾಗಲೀ ಸರ್ಕಾರದ ದುಷ್ಕಾರ್ಯಗಳಿಗೆಲ್ಲಾ ಜವಾಬ್ದಾರರಾಗುವ ರೆಂದು ಬಹಿರಂಗವಾಗಿ ಹೇಳುವ ಹಕ್ಕು ಭಾರತಕ್ಕುಂಟು ಎಂದು ನಾನು ಸೂಚಿಸಿದೆ. ಕರಾಚಿಯ ಸಮ್ಮೇಳನ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದಂತೆ ಮೇಲಿನ ಕಾಂಗ್ರೆಸ್ ನಿರ್ಣಯುವನ್ನು ಪುನರುಚ್ಚರಿಸಿದೆ. ಮಾನವೀಯತೆಯ ಕಣವಾದರೂ ಇದ್ದ ಯಾರೇ

ಆಗಲಿ, ತನ್ನ ಧರ್ಮದಲ್ಲಿ ಅಲ್ಪವಾದರೂ ಶ್ರದ್ಧೆಯುಳ್ಳ ಯಾವ ಸ್ವಾಭಿಮಾನಿ ಮುಸಲ್ಮಾನನಾಗಲಿ, ಆಲಿ ಸಹೋದರರಂತೆ ಪ್ರತಿಭಟಿಸಿ ನಿಲ್ಲುತ್ತಾನೆ. ಆಲಿ ಸಹೋದರರ ದೇಶದ್ರೋಹವನ್ನು ಎತ್ತಿ ಹೇಳಿರುವುದಕ್ಕಿಂತ ರಾಜನಿಷ್ಠೆಯ ನಾಶದ ಬಗ್ಗೆ ಗೌರವಾನ್ವಿತ ಗೌರ್ನರರು ಹೇಳಿರುವುದು ಹೆಚ್ಚು ಅಕ್ಷಮ್ಯವಾದುದೆಂದು ನನ್ನ ಎಣಿಕೆ. ಕಾಂಗ್ರೆಸ್ಸಿನ ಸಿದ್ಧಾಂತವೇ ರಾಜದ್ರೋಹ ಎಂಬುದನ್ನು ಅವರು ತಿಳಿಯಬೇಕು. ಕಾನೂನು ಬದ್ಧವಾದ ಇಂದಿನ ಸರ್ಕಾರವನ್ನು ತಿರಸ್ಕರಿಸಬೇಕೆಂದು ಪ್ರಚಾರ ಮಾಡುವುದು ಪ್ರತಿಯೊಬ್ಬ ಅಸಹಕಾರಿಯ ಸಂಕಲ್ಪ."

ಮುಂದೆ ತಿರುಚನಾಪಲ್ಲಿಯಲ್ಲಿ ಮಾತನಾಡುತ್ತಾ : "ಕರಾಚಿಯಲ್ಲಿ ಚರಿತ್ರಾರ್ಹ ಮಹಾ ಸಮ್ಮೇಳನದಲ್ಲಿ ಭಾಗವಹಿಸಲು ನನಗೆ ಸಾಧ್ಯವಾಗದೇ ಹೋದುದು ನನ್ನ ದುರ್ದೈವ. ನಾನಲ್ಲಿದ್ದಿದ್ದರೆ ಆ ನಿರ್ಣಯವನ್ನು ಖಂಡಿತವಾಗಿ ಅನುಮೋದಿಸುತ್ತಿದ್ದೆ." ಎಂದರು. ತುಂಡು ಪಂಚೆಯನ್ನುಡುವ ನಿರ್ಧಾರ ಕೈಗೊಂಡು ಗಾಂಧೀಜಿ ತಮ್ಮ ಚಳುವಳಿಯನ್ನು ಮತ್ತಷ್ಟು ತೀವ್ರಗೊಳಿಸಿದರು.

"ಹಠಾತ್ತನೆ ತಮ್ಮ ಎಲ್ಲ ಪರದೇಶಿ ವಸ್ತ್ರಗಳನ್ನೂ ವರ್ಜಿಸುವುದು ಹಲವರಿಗೆ ಕಷ್ಟಸಾಧ್ಯ ಎಂದು ಬಲ್ಲೆ. ಕೊಟ್ಯಂತರ ಬಡವರಿಗೆ ಅದನ್ನು ಬಿಸುಟು ಖಾದಿಕೊಳ್ಳುವ ಶಕ್ತಿಯೂ ಇರದು. ತುಂಡು ಪಂಚೆಯಿಂದಲೇ ತೃಪ್ತಿಗೊಳ್ಳಬೇಕೆಂದು ನನ್ನ ಸಲಹೆ. ನಮ್ಮ ದೇಶದ ಬೇಸಿಗೆ ಹವೆಯ ಹಲವು ತಿಂಗಳುಗಳಲ್ಲಿ ತೊಡಿಗೆಯ ಆವಶ್ಯಕತೆ ಇರುವುದಿಲ್ಲ. ನಮ್ಮ ಉಡಿಗೆಯ ಬಗ್ಗೆ ಸಭ್ಯತೆಯ ನಟನೆ ಇರಬಾರದು. ಭಾರತದಲ್ಲಿ ಯಾವಾಗಲೂ ಪುರುಷರು ಸಂಪೂರ್ಣ ಮೈ ಮುಚ್ಚುವ ಉಡಿಗೆ ಸಭ್ಯತೆಯ ಲಕ್ಷಣವೆಂದು ಭಾವಿಸಿರಲಿಲ್ಲ. ಆದ್ದರಿಂದ ನಾನೇ ಇದನ್ನು ಮೊದಲು ಪ್ರಾರಂಭಿಸುತ್ತೇನೆ. ಅಕ್ಟೋಬರ್ ಕೊನೆಯ ವರೆಗಾದರೂ ನನ್ನ ಟೋಪಿಯನ್ನೂ ಮೇಲಂಗಿಯನ್ನೂ ಕಳಚಿಹಾಕಿ ಕೇವಲ ತುಂಡು ಪಂಚೆ ಧರಿಸಲು ನಿರ್ಧರಿಸಿದ್ದೇನೆ. ಅಗತ್ಯವಾದರೆ ಮೇಲೊಂದು ಹಚ್ಚಡ ಹೊದೆಯುತ್ತೇನೆ. ಇದನ್ನು ನನ್ನಿಂದಲೇ ಪ್ರಾರಂಭ ಮಾಡಿದ್ದೇನೆ. ಏಕೆಂದರೆ ನಾನು ಅನುಸರಿಸಲಾಗದ ಸಲಹೆಯನ್ನು ಯಾವಾಗಲೂ ಕೊಡ ಬಯಸುವುದಿಲ್ಲ. ಅಲ್ಲದೆ ವಿದೇಶಿ ವಸ್ತ್ರವನ್ನು ತೊರೆಯುವ ಅನೇಕ ದೇಶಬಾಂಧವರಿಗೆ ಈ ನನ್ನ ಹೊಸ ಮಾರ್ಗದರ್ಶನದಿಂದ ಪರಿವರ್ತನೆ ಸುಲಭವಾಗುವುದೆಂದು ನನ್ನ ಬಯಕೆ. ಈ ನನ್ನ ಹೊಸ ಉಡಿಗೆ ಒಂದು ರೀತಿಯಲ್ಲಿ ದುಃಖ ಸೂಚಕವೂ ಹೌದು. ಈ ವಸ್ತ್ರತ್ಯಾಗ ಅದಕ್ಕಾಗಿ ನನಗೆ ಅಗತ್ಯವೆನಿಸಿದೆ. ಬರಿತಲೆ, ಮತ್ತು ಬರಿಮೈಗಳು, ನನ್ನ ಪ್ರಾಂತದಲ್ಲಿ ದುಃಖ ಸೂಚಕವೆಂದು ಪರಿಗಣಿಸಲ್ಪಟ್ಟಿವೆ. ವರ್ಷಾಂತ್ಯ ಸಮೀಪಿಸುತ್ತಿದ್ದರೂ ಸ್ವರಾಜ್ಯದಿಂದ ನಾವು ದೂರವೇ ಇದ್ದೇವೆಂಬ ಸಂಗತಿ ನಮ್ಮನ್ನು ಹೆಚ್ಚು ಹೆಚ್ಚು ದುಃಖದಲ್ಲಿ ಮುಳುಗಿಸುತ್ತಿದೆ. ಒಂದು ಮಾತನ್ನು ನಾನು ಸ್ಪಷ್ಟಪಡಿಸಬೇಕು. ನನ್ನ ಸಹೋದ್ಯೋಗಿಗಳಾರೂ ನನ್ನನ್ನನುಕರಿಸಿ ಟೋಪಿಯನ್ನೂ ಮೇಲಂಗಿಯನ್ನೂ ತ್ಯಜಿಸಬೇಕಾಗಿಲ್ಲ.

ಅವರ ಕೆಲಸಕ್ಕೆ ಅವಶ್ಯ ಕಂಡರೆ ಮಾತ್ರ ಅವರು ಹಾಗೆ ಮಾಡಬಹುದು. ಅನ್ಯಥಾ ಅವಶ್ಯವಿಲ್ಲ.

"ಪ್ರತಿಯೊಂದು ಪ್ರಾಂತ, ಪ್ರತಿಯೊಂದು ಜಿಲ್ಲೆ, ಸಾಕಷ್ಟು ಕಾರ್ಯಕರ್ತರಿದ್ದರೆ ತನ್ನ ಆವಶ್ಯಕತೆಗಾಗುವಷ್ಟು ವಸ್ತ್ರ ಉತ್ಪಾದಿಸಬಹುದೆಂದು ನನ್ನ ಖಚಿತ ನಂಬಿಕೆ. ಬೇರೆ ಎಲ್ಲ ಕಾರ್ಯಗಳನ್ನೂ ಬದಿಗೊತ್ತಿ ಸ್ವದೇಶಿ ಚಳುವಳಿಯನ್ನು ಕೈಗೊಳ್ಳ ಬೇಕು. ಮದ್ಯದಂಗಡಿಗಳಲ್ಲಿ ಪಿಕೆಟ್ ಮಾಡುತ್ತಿರುವ ಕಾರ್ಯಕರ್ತರನ್ನೂ ನಾನು ಹಿಂತೆಗೆದುಕೊಳ್ಳ ಬಯಸುತ್ತೇನೆ. ಹೊಸ ಯುಗಧರ್ಮವನ್ನರಿತು ಕುಡುಕರು ತಾವೇ ಶುದ್ಧೀಕರಣ ಮಾಡಿಕೊಳ್ಳುವರೆಂಬ ನಂಬಿಕೆಯಿಡುತ್ತೇನೆ. ಆಗಾಗ್ಗೆ ಜೈಲು ಶಿಕ್ಷೆಯನ್ನು ಅನುಭವಿಸುವುದು ಸಹಜ ಪ್ರಾಪ್ತವೆಂದು ಬಗೆದು ಪ್ರತಿಯೊಬ್ಬ ಅಸಹಕಾರ ಕಾರ್ಯಕರ್ತನೂ ಅದರ ಬಗ್ಗೆ ಚಿಂತಿಸಕೂಡದೆಂದು ನನ ಸಲಹೆ. ಈ ಅಕ್ಟೋಬರಿನಲ್ಲಿ ಕಾರ್ಯಕರ್ತರು ವ್ಯವಸ್ಥಿತವಾಗಿ ಖಾದಿ ಉತ್ಪಾದನೆಯನ್ನು ಹೆಚ್ಚಿಸುತ್ತಾ ವಿದೇಶಿ ವಸ್ತ್ರಗಳನ್ನು ಸಂಗ್ರಹಿಸುತ್ತಾ ಆವೇಶಪೂರಿತ ಸಭೆಗಳನ್ನು ಬಿಟ್ಟು ಶಾಂತವಾಗಿ ಕೆಲಸ ಮಾಡುವುದಾದರೆ ಅಹಿಂಸಾತ್ಮಕ ಸವಿನಯ ಶಾಸನಭಂಗ ಚಳುವಳಿಗೆ ಅಗತ್ಯವಾದ ವಾತಾವರಣ ಸೃಷ್ಟಿಯಾದೀತು. ಅಗತ್ಯವಾದರೆ ಅದನ್ನು ನಡೆಸಲು ಸಾಧ್ಯ. ನಮ್ಮ ಚಾರಿತ್ರ್ಯಶಕ್ತಿ ಸ್ಪಷ್ಟವಾಗಿ ಪ್ರಕಟವಾದಲ್ಲಿ, ವ್ಯವಸ್ಥಾ ಕುಶಲತೆ ಹೆಚ್ಚಿದಲ್ಲಿ, ಅನುಪಮ ಆತ್ಮ ಸಂಯಮ, ಚೈತನ್ಯ ಸ್ಫುರಣಗೊಂಡಲ್ಲಿ, ಸಂಪೂರ್ಣ ಸ್ವದೇಶಿವ್ರತ ಯಶಸ್ವಿ ಯಾಗಿ, ಸ್ವರಾಜ್ಯ ತಾನಾಗಿಯೇ ಲಭಿಸುತ್ತದೆ, ಎಂದು ನನಗೆ ದೃಢವಾದ ನಂಬಿಕೆಯಿದೆ."

ಅರ್ಧ ನಗ್ನ ಫಕೀರನಾಗಲು ಗಾಂಧೀಜಿಗೆ ಹೆಚ್ಚು ಸಮಯ ಹಿಡಿಯಲಿಲ್ಲ. ಸೆಪ್ಟೆಂಬರ್ ೨೧ರಂದು ಬೆಳಿಗ್ಗೆ ೧೦ ಗಂಟೆಗೆ ನಾಯಿಂದನನ್ನು ಕರೆದು ತಲೆ ಬೋಳಿಸಿ ಬಿಟ್ಟರು. ಮಾರನೇ ದಿನ ಕರೈಕುಡಿಯಿಂದ ಅರವತ್ತು ಮೈಲಿ ಕಾರಿನಲ್ಲಿ ಪ್ರಯಾಣ ಮಾಡಿ ಮಧುರೆಯನ್ನು ತಲುಪಬೇಕಾಗಿತ್ತು. ಮುಂಜಾನೆ ಬೇಗ ಎದ್ದರು. ತಮ್ಮ ಉಡುಗೆಯನ್ನು ಪೂರ್ಣವಾಗಿ ಬದಲಿಸಿ ಬಿಟ್ಟರು. ಟೋಪಿ ಮೇಲಂಗಿಗಳು ಹೋದವು. ಅಂಗಿಯ ಜೇಬಿನಲ್ಲಿಡುತ್ತಿದ್ದ ಚಿಕ್ಕವಸ್ತುಗಳಿಗಾಗಿ ಒಂದು ಸಣ್ಣ ಕೈಚೀಲ ಬಂತು. ಸೊಂಟದ ಸುತ್ತ ಮೊಳ ಅಗಲದ ಖಾದಿಯನ್ನು ಸುತ್ತಿ ಉಟ್ಟರು. ಮಿತ್ರರು ಈ ಉಡಿಗೆ ಬೇಡವೆಂದರು. "ಇದರಿಂದ ನಾನೇನು ಸನ್ಯಾಸಿಯಾಗಿಬಿಟ್ಟೆನೆಂದು ಭಾವಿಸ ಬೇಡಿ; ದಕ್ಷಿಣ ಭಾರತದವರಿಗೆ ಈ ಹೊಸ ಉಡಿಗೆ ಅಸಂಗತವೆನಿಸದು" ಎಂದರು. ಈ ತುಂಡು ಪಂಚೆಯ ಉಡಿಗೆಯನ್ನು ದೃಢ ಸಂಕಲ್ಪದಿಂದ ತೊಟ್ಟರು ಗಾಂಧೀಜಿ. ಮಹಾ ಘಟನೆಗಳ ಪರಂಪರೆಯೇ ಭಾರತ ಚರಿತ್ರೆಯ ಹೊಸ್ತಿಲಲ್ಲಿ ನಿಂತಂತೆ ಭಾಸ ವಾಯಿತು.

೨೪ನೇ ಸೆಪ್ಟೆಂಬರಿನಲ್ಲಿ ಗಾಂಧೀಜಿ ಮುಸ್ಲಿಮರಿಗೆ ಒಂದು ಮನವಿ ಮಾಡಿದರು: "ಸೈನಿಕರ ಕರ್ತವ್ಯ ಕುರಿತು ಆಲಿ ಸಹೋದರರು ಮಾಡಿದ ಸೂತ್ರವಾಕ್ಯವನ್ನು ನಾವು

ಪುನರುಚ್ಚರಿಸಬೇಕು. ಜೈಲು ಶಿಕ್ಷೆಯನ್ನು ಸ್ವಾಗತಿಸಬೇಕು." ಅಕ್ಟೋಬರ್ ೪ರಂದು ಬೊಂಬಾಯಿನಲ್ಲಿ ರಾಷ್ಟ್ರನಾಯಕರ ಸಮ್ಮೇಳನ ಕರೆದರು. ಸರ್ಕಾರವನ್ನು ಧಿಕ್ಕರಿಸಿ ನಿಂತು ಕಠಿಣತಮ ಶಿಕ್ಷೆಯನ್ನಾಹ್ವಾನಿಸುವ ಒಂದು ಮಹಾ ಪ್ರಣಾಲಿ ಸಿದ್ಧ ಮಾಡಲು ಹೇಳಿದರು.

"ಅಲಿ ಸಹೋದರರ ಹಾಗೂ ಇತರರ ಮೇಲೆ ಕಾನೂನಿನ ಕ್ರಮ ಜಾರಿ ಮಾಡಿ ಸೆಪ್ಟೆಂಬರ್ ೧೫ರಂದು ಹೊರಡಿಸಿರುವ ಬೊಂಬಾಯಿ ಸರ್ಕಾರದ ಪ್ರಕಟನೆ ನಮ್ಮ ಗಮನ ಸೆಳೆದಿದೆ. ಸರ್ಕಾರದ ಸೇವೆಯಲ್ಲಿರುವ ಅಥವಾ ಸೇವೆ ಸಲ್ಲಿಸುವ ಸೈನಿಕನಾಗಲೀ, ನೌಕರನಾಗಲೀ, ಅಂಥ ಹಿರಿಯ ನಾಗರಿಕರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವಂತಹ ಆಜನ್ಮ ಹಕ್ಕು ಉಂಟು ಎಂದು ಕೆಳಗೆ ಸಹಿ ಹಾಕಿರುವ ನಾವು ನಮ್ಮ ವೈಯಕ್ತಿಕ ದೃಷ್ಟಿಯಿಂದ ತಿಳಿಸಲಿಚ್ಛಿಸುತ್ತೇವೆ. ನಮ್ಮ ಅಭಿಪ್ರಾಯದಲ್ಲಿ ಯಾವ ಸರ್ಕಾರ, ಭಾರತದ ಆರ್ಥಿಕ, ನೈತಿಕ ಮತ್ತು ರಾಜನೈತಿಕ ಅವನತಿಗೆ ಕಾರಣವಾಗಿದೆಯೋ ಅಂಥ ಸರ್ಕಾರದ ಸೇವೆ ಮಾಡುವುದು ನಮ್ಮ ರಾಷ್ಟ್ರೀಯ ಗೌರವಕ್ಕೆ ದ್ರೋಹ ಬಗೆದಂತೆ. ಅದರಲ್ಲೂ ಸೈನಿಕನಾಗಿ ಸೇವೆ ಸಲ್ಲಿಸುವುದು ಇನ್ನೂ ಹೇಯವಾದುದು. ಅಲ್ಲದೆ ಈ ಸರ್ಕಾರ ನಮ್ಮ ರಾಷ್ಟ್ರೀಯ ಆಶೋತ್ತರಗಳನ್ನು ದಮನ ಮಾಡಿ ದಬ್ಬಾಳಿಕೆ ನಡೆಸಲು ಪೋಲೀಸು ಮತ್ತು ಸೈನಿಕ ದಳಗಳನ್ನುಪಯೋಗಿಸುತ್ತಿದೆ. ರೌಲತ್ ಕಾಯಿದೆ ವಿರೋಧದ ಸಮಯಕ್ಕೆ ಇದು ಸ್ಪಷ್ಟವಾಗಿದೆ. ನಮ್ಮ ಸೈನ್ಯಪಡೆಗಳನ್ನು ಅರಬ್ಬರ, ತುರ್ಕಿಗಳ ಹಾಗೂ ಇತರ ದೇಶಗಳ ಸ್ವಾತಂತ್ರ್ಯ ದಮನ ಮಾಡಲೂ ಉಪಯೋಗಿಸಲಾಗಿದೆ. ಈ ದೇಶಗಳು ಭಾರತಕ್ಕೇನೂ ಹಾನಿ ಮಾಡಿಲ್ಲ. ನಮ್ಮ ಅಭಿಪ್ರಾಯದಲ್ಲಿ ಭಾರತೀಯ ರಾದ ಎಲ್ಲ ರೀತಿಯ ಸರ್ಕಾರೀ ನೌಕರರು ಭಾರತೀಯ ಸೈನಿಕರೂ, ಸರ್ಕಾರದ ಸೇವೆ ಯನ್ನು ತ್ಯಜಿಸುವುದು ಅವರ ಆದ್ಯ ಕರ್ತವ್ಯ: ಬೇರಾವುದಾದರೂ ರೀತಿಯ ಜೀವ ನೋಪಾಯಗಳನ್ನು ಅವರು ರೂಢಿಸಿಕೊಳ್ಳಬೇಕು."

ಗಾಂಧೀಜಿಯವರೊಡನೆ ಅಬುಲ್ ಕಲಾಮ್ ಅಜಾದ್, ಅಜಮಲ್ ಖಾನ್, ಲಜಪತ್‌ರಾಯ್, ಮೋತಿಲಾಲ್ ನೆಹರು, ಸರೋಜಿನಿ ನಾಯ್ಡು, ಅಬ್ಬಾಸ್ ತಯಾಬ್ಜಿ, ಎನ್. ಸಿ. ಕೇಲ್ಕರ್, ವಿ. ಜೆ. ಪಟೇಲ್, ವಲಭಾಯಿ ಪಟೇಲ್, ಎಂ. ಆರ್. ಜಯಕರ್, ಜವಹರಲಾಲ್ ನೆಹರು, ಗಂಗಾಧರರಾವ್ ದೇಶಪಾಂಡೆ, ಉಮರ್ ಸೋಬಾನಿ, ಜಮನ್‌ಲಾಲ್ ಬಜಾಜ್, ಎಂ.ಎಸ್. ಅಣೆ, ಡಾ. ಅನ್ಸಾರಿ, ಅಬ್ದುಲ್ ಬಾರಿ, ಸಿ. ರಾಜಗೋಪಾಲಾಚಾರಿ, ರಾಜೇಂದ್ರ ಪ್ರಸಾದ್, ಹಜರತ್ ಮೊಹಾನಿ, ಯಾಕುಬ್ ಹಸನ್, ಡಾ. ಮುಂಜೆ, ಇವರೇ ಮೊದಲಾಗಿ ಐವತ್ತು ಜನ ರಾಷ್ಟ್ರನಾಯಕರು ಇದಕ್ಕೆ ಸಹಿ ಹಾಕಿದರು.

ಅಕ್ಟೋಬರ್೫ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಬೊಂಬಾಯಿಯಲ್ಲಿ ಸೇರಿತು. ಮೇಲಿನ ಪ್ರಣಾಳಿಕೆಯನ್ನು ಬೆಂಬಲಿಸಿ ನಿರ್ಣಯ ಮಾಡಿತು. ನೂರಾರು

ಜನ ಅಸಂಖ್ಯಾತ ವೇದಿಕೆಗಳಿಂದ ಈ ಪ್ರಣಾಳಿಕೆಯನ್ನು ಘೋಷಿಸಿದರು. ಆದರೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಅಧಿಕಾರಶಾಹಿ ದಿಗ್ಭ್ರಮೆಗೊಂಡಿತ್ತು. ದೇಶದಾದ್ಯಂತ ಭುಗಿಲೆದ್ದು ನಿಂತ ಈ ಹಠಾತ್ ಪರಿಸ್ಥಿತಿಯನ್ನು ಅವರು ನಿರೀಕ್ಷಿಸಿರಲಿಲ್ಲ

ಗಾಂಧೀಜಿಯ ಈ ಚಳುವಳಿ ಒಂದು ಬೌದ್ಧಿಕ ನಿರಂಕುಶತೆಗೆ ಕಾರಣವಾದೀತಂ ಎಂಬ ಶಂಕೆ ರವೀಂದ್ರನಾಥ ಠಾಗೂರರಿಗೆ. ಸೆಪ್ಟೆಂಬರ್‌ನಲ್ಲಿ ಗಾಂಧೀಜಿ ಅವರನ್ನು ಭೇಟಿಯಾದಾಗ ಇಬ್ಬರೂ ತಮ್ಮ ಅಭಿಪ್ರಾಯ ಭೇದವನ್ನು ಉಳಿಸಿಕೊಳ್ಳಲು ಸಮ್ಮತಿಸಿದರು. 'ಉರುಳುತ್ತಿರುವ ಪ್ರವಾಹದೆದುರು ತಮ್ಮ ನಾವೆಯ ಹುಟ್ಟು ಹಾಕಬೇಕು' ಎಂದುಕೊಂಡರು ಠಾಕೂರ್. 'ಸತ್ಯದ ಕರೆ' ಎಂದು ಮಾಡರನ್ ರೆವ್ಯು ಪತ್ರಿಕೆಯ ಅಕ್ಟೋಬರ್ ೧೯೨೧ರ ಸಂಚಿಕೆಯಲ್ಲಿ ಠಾಗೂರರು ತಮ್ಮ ಪ್ರಣಾಳಿಕೆಯನ್ನು ಪ್ರಕಟಿಸಿದರು. "ಯಾವುದೋ ಬಾಹ್ಯ ಶಕ್ತಿಯೊಂದಕ್ಕೆ ಮಣಿದು ಕುಸಿದಿದ್ದಾರೆ ನಮ್ಮ ಜನ. ಯಾವುದೋ ಒಂದು ಅಚ್ಚಿಗೆ ಅಳವಡಿಸಿ, ಒಂದೇ ಮಾತನ್ನು ಒಂದೇ ರೀತಿ ಪುನರುಚ್ಚರಿಸುವಂತೆ ಮಾಡಿ ಅವರನ್ನು ಗಾಣದಲ್ಲಿ ಹಿಂಡುತ್ತಿದೆ. ತರ್ಕಬದ್ಧ ವಿವೇಕವನ್ನೂ, ಸುಸಂಸ್ಕೃತ ರೀತಿನೀತಿಗಳನ್ನು ತ್ಯಜಿಸಿ ಬಿಡಬೇಕೆಂದೇ ಎಲ್ಲ ಕಡೆಯ ಕೂಗು ಕೇಳಿ ಬರುತ್ತಿದೆ. ಅಂಧಶ್ರದ್ಧೆಯ ಆಜ್ಞಾ ಪಾಲನೆಯ ಭಾವನೆಯೇ ಎಲ್ಲೆಲ್ಲೂ ಪಸರಿಸಿದೆ. ಯಾವುದೋ ಬಾಹ್ಯ ಸ್ವಾತಂತ್ರ್ಯದ ಹೆಸರಿನಲ್ಲಿ ಆತ್ಮದ ನೈಜ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಅದೆಷ್ಟು ಸುಲಭ! ಭಾರತದ ರಾಷ್ಟ್ರೀಯ ಗುರಿಯಂತಹ ಮಹೋನ್ನತ ವಿಷಯ ಏಕೈಕ ನಾಯಕನ ನಿರ್ಣಯವನ್ನವಲಂಬಿಸುವುದು ಸರಿಯಲ್ಲ.

"ದಾರಿ ದುರ್ಗಮವಾದುದು. ಅತಿ ಗಹನವೂ ಹೌದು. ಭಾವುಕತೆ ಉತ್ಸಾಹ ಬೇಕು. ಆದರೆ ವೈಜ್ಞಾನಿಕತೆ ವೈಚಾರಿಕತೆಗಳು ಅಗತ್ಯ. ರಾಷ್ಟ್ರದ ನೈತಿಕ ಶಕ್ತಿಯೆಲ್ಲ ಕ್ರೋಢೀಕೃತವಾಗಬೇಕು. ಅರ್ಥಶಾಸ್ತ್ರಜ್ಞರು ವ್ಯಾವಹಾರಿಕ ಚಿಕಿತ್ಸೆಗಳನ್ನರಸಬೇಕು. ಶಿಕ್ಷಣ ತಜ್ಞರು ಪಾಠ ಹೇಳಬೇಕು. ರಾಜನೀತಿಜ್ಞರು ಆಳವಾಗಿ ಚಿಂತಿಸಬೇಕು. ಕಾರ್ಯಕರ್ತರು ಕೆಲಸ ಮಾಡಬೇಕು. ಪ್ರತ್ಯಕ್ಷವಾಗಲಿ, ಪರೋಕ್ಷವಾಗಲಿ, ಯಾವ ಬಲಾತ್ಕಾರದ ಒತ್ತಡವೂ ವಿವೇಕವನ್ನು ಹತ್ತಿಕ್ಕಬಾರದು" ಎಂದು ಬರೆದರು. ನೂಲುವುದು, ನೇಯುವುದು, ಪ್ರತಿಯೊಬ್ಬರ ಕರ್ತವ್ಯ ಎಂದು ಗಾಂಧೀಜಿ ಹೇಳಿದುದು ಠಾಗೂರರಿಗೆ ಸರಿದೋರಲಿಲ್ಲ. "ಈ ಕ್ರಿಯಾತ್ಮಕ ಹೊಸಯುಗದ ಧರ್ಮವಾಗಬಲ್ಲುದೇ ಇದು? ದೊಡ್ಡ ಯಂತ್ರ ಪಾಶ್ಚಿಮಾತ್ಯ ದೇಶಗಳಿಗೆ ಅಪಾಯ ತರುವುದಾದರೆ ಈ ಸಣ್ಣ ಯಂತ್ರಗಳು ನಮಗಿನ್ನೂ ಅಪಾಯಕಾರಿಯಲ್ಲವೇ?" ಎಂದು ಪ್ರಶ್ನಿಸಿದರು.

ಅಕ್ಟೋಬರ್ ೧೩ರಂದು 'ಯಂಗ್ ಇಂಡಿಯಾ'ದಲ್ಲಿ ಗಾಂಧೀಜಿ ಇದನ್ನು ವಿವೇಚಿಸಿ ಖಂಡಿತ ನುಡಿಗಳನ್ನು ಬರೆದರು:

"ಶಾಂತಿನಿಕೇತನದ ಕವಿ ಇಂದಿನ ಚಳುವಳಿಯ ಬಗ್ಗೆ 'ಮಾಡರನ್ ರೆವ್ಯು' ಪತ್ರಿಕೆಯಲ್ಲಿ ಒಂದು ಉಜ್ವಲ ಲೇಖನ ಬರೆದಿದ್ದಾರೆ. ಅವರಿಗೇ ಮಾತ್ರ ಸಾಧ್ಯವಾಗ

ಬಹುದಾದ ಶೈಲಿಯಲ್ಲಿ ನುಡಿ ಚಿತ್ರಗಳನ್ನು ನೇಯ್ದಿದ್ದಾರೆ. ನಿರಂಕುಶಾಧಿಕಾರ, ಗುಲಾಮ ಮನೋಧರ್ಮಗಳ ಬಗ್ಗೆ ಅದೊಂದು ಪ್ರಬಲ ಪ್ರತಿಭಟನೆಯಂತಿದೆ. ಭಯದಿಂದಲೋ, ಆಸೆಯಿಂದಲೋ, ಒಂದು ತಾತ್ಕಾಲಿಕ ಭಾವೋದ್ರೇಕದ ಬಿರುಗಾಳಿಗೆ ಸಿಕ್ಕಿ ಯಾವುದನ್ನು ಅಂಧಶ್ರದ್ಧೆಯಿಂದ ಒಪ್ಪಿಕೊಂಡು ಬಿಡುತ್ತೇವೆಯೋ ಆ ಮನೋ ಧರ್ಮವನ್ನು ಕುರಿತು ಪ್ರತಿಭಟಿಸಿದ್ದಾರೆ. ಪ್ರತಿಯೊಬ್ಬ ಕಾರ್ಯಕರ್ತನಿಗೂ ಈ ಎಚ್ಚರಿಕೆ ಸ್ವಾಗತಾರ್ಹ, ಹಿತಕರ. ನಾವು ತಾಳ್ಮೆಗೆಡಬಾರದು, ಎಷ್ಟೇ ಉನ್ನತ ಸ್ಥಾನ ದಲ್ಲಿದ್ದರೂ ಅಧಿಕಾರವನ್ನು ಹೇರಬಾರದು ಎಂದಿದ್ದಾರೆ. ನಮ್ಮ ಹೃದಯಕ್ಕೂ ಮನಸ್ಸಿಗೂ ಯಾವುದು ಒಪ್ಪಿಗೆಯಲ್ಲವೊ ಅದೆಲ್ಲವನ್ನೂ ಸಂಪೂರ್ಣವಾಗಿ ತಿರಸ್ಕರಿಸ ಬೇಕು ಎನ್ನುತ್ತಾರೆ ಕವಿ ರವೀಂದ್ರರು. ನಾವು ನಂಬಿರುವ ಸತ್ಯ ಯಾವುದೋ—ಅದಕ್ಕಾಗಿ ಸರ್ವತ್ಯಾಗಕ್ಕೂ ಸಿದ್ಧರಾಗಿ ನಿಂತರೆ ನಮಗೆ ಸ್ವರಾಜ್ಯ ಲಭ್ಯವಾದೀತು. ತನ್ನ ಸಂದೇಶ ಮಾನ್ಯವಾಗಲಿಲ್ಲ ಎಂದು ಕೋಪಗೊಳ್ಳುವ ಸುಧಾರಕ ಆ ಕ್ಷಣದಲ್ಲಿ ಅಲ್ಲಿಂದ ದೂರ ವಾಗಿ ಕಾಡು ಸೇರಬೇಕು. ತಾಳ್ಮೆಯಿಂದ ಅವಲೋಕಿಸುವುದನ್ನೂ, ನಿಂತು ಕಾಯು ವುದನ್ನೂ, ಬಲಸಂವರ್ಧನೆಗಾಗಿ ಪ್ರಾರ್ಥಿಸುವುದನೂ ಕಲಿಯಬೇಕು. ಈ ಮಾತು ಸರ್ವ ಮಾನ್ಯ. ಕವಿಗಳಿಗೆ ಅದಕ್ಕಾಗಿ ಧನ್ಯವಾದ ಸಲ್ಲಬೇಕು. ಸತ್ಯ ಮತ್ತು ವಿವೇಕದ ಧೀರ ಮಾರ್ಗವನ್ನು ಎತ್ತಿ ಹಿಡಿದು ಉಪಕಾರ ಮಾಡಿದ್ದಾರೆ. ನಮ್ಮ ವಿವೇಕವನ್ನು ಪರಭಾರೆ ಮಾಡಿದರೆ ಹಿಂದಿನದಕ್ಕಿಂತ ಮುಂದೆ ಹೆಚ್ಚು ಅಧೋಗತಿಗೆ ಬಿದ್ದೇವು. ರಾಷ್ಟ್ರ ಯಾವ ವಿವೇಚನೆಯನ್ನೂ ಮಾಡದೆ ಅಂಥ ರೀತಿಯಲ್ಲಿ ನನ್ನ ಮಾತುಗಳನ್ನೂ ಕಾರ್ಯಕ್ರಮಗಳನ್ನೂ ಅನುಸರಿಸುವುದೆಂದು ಕಂಡರೆ ನನಗೆ ಅತ್ಯಂತ ಸಂಕಟವಾಗುತ್ತದೆ. ಪ್ರೇಮಕ್ಕೆ ಕಣ್ಣುಮುಚ್ಚಿ ಶರಣಾಗುವುದು ಅನೇಕ ವೇಳೆ ಧೂರ್ತ ಸರ್ವಾಧಿಕಾರಿಯು ಹೊಡೆತಕ್ಕೆ ಬಲಾತ್ಕಾರದಿಂದ ಮಣಿಯುವುದಕ್ಕಿಂತಲೂ ಹೆಚ್ಚು ಅಪಾಯಕಾರಿ ಎಂದು ನನಗೆ ಅರಿವುಂಟು. ಪಶುಶಕ್ತಿಯ ಬಲಾತ್ಕಾರಕ್ಕೆ ಬಾಗಿ ಗುಲಾಮನಾದವನಿಗೆ ಬಿಡುಗಡೆಯ ಅವಕಾಶವಿದೆ. ಆದರೆ ಪ್ರೇಮದ ಗುಲಾಮನಿಗೆ ಆ ಆಸೆಯೇ ಇರದು. ದುರ್ಬಲರಿಗೆ ಬಲವಾಗ ಬಲ್ಲುದು ಪ್ರೇಮ. ಆದರೆ ಒಲ್ಲದವರ ಮೇಲೆ ಬಲಾತ್ಕಾರ ಮಾಡುವಂತಹ ಪ್ರೇಮ, ಕ್ರೂರ ದಬ್ಬಾಳಿಕೆ. ಅರ್ಥವಾಗದ ಮಂತ್ರವನ್ನುಚ್ಚರಿಸುವುದು ಪೌರುಷಹೀನ ಕರ್ಮ. ಹಾಗೆ ಕೇವಲ ದಾಸರಾಗಿ ಅನುಕರಿಸಿ ಚರಕದಿಂದ ನೂಲುವುದನ್ನು ಕೈಗೊಂಡಿ ರುವವರು ಪ್ರತಿಭಟಿಸಿ ಬಿಸುಟುಬಿಡಿ ಎಂದು ಕವಿಗಳು ಕರೆ ಕೊಟ್ಟಿರುವುದು ನಿಜಕ್ಕೂ ಒಳ್ಳೆಯದು. ನಮ್ಮ ತಾಳ್ಮೆಗೆಟ್ಟ ಆತುರದಲ್ಲಿ ಇತರರ ಬಗ್ಗೆ ಅಸಹನೆ ಭಿನ್ನ ಮತೀಯರ ಮೇಲೆ ಕ್ರೋಧದ ಹಿಂಸಾಚಾರಗಳಲ್ಲಿ ತೊಡಗುವಂತಹ ತಪ್ಪುದಾರಿಗೆ ನಾವು ಇಳಿದಿದ್ದರೆ ಕವಿವರ್ಯರ ಈ ಲೇಖನ ನಮಗೆ ಗಂಭೀರ ಎಚ್ಚರಿಕೆ ಕೊಡುವ ಉಪಕಾರ ಮಾಡಿದೆ. ಅಂಧಾಭಿಮಾನ, ಸೋಮಾರಿತನ, ಅಸಹನೆ, ಅಜ್ಞಾನ ನಿಷ್ಕ್ರಿಯತೆ ಮುಂತಾದ ಅಪಾಯಕಾರಿ ದುಷ್ಟಶಕ್ತಿಗಳು ನಮ್ಮನ್ನಾಕ್ರಮಿಸದಂತೆ ಎಚ್ಚರಿಸಿ ಕಾಯಲು ಸನ್ನದ್ಧ ರಾಗಿರುವ ದಿವ್ಯ ಕಾವಲುಗಾರ ಎಂದು ಕವಿಗಳನ್ನು ನಾನು ತಿಳಿಯುತ್ತೇನೆ.

"ಆದರೆ ನಾವು ಎಚ್ಚರ ತಪ್ಪಿ ವಿಚಾರಶೂನ್ಯರಾಗದಂತೆ ಜಾಗ್ರತರಾಗಿರುವ ಆವಶ್ಯಕತೆಯನ್ನು ಕವಿವರ್ಯರು ನುಡಿದಿದ್ದಾರೆಂದು ಒಪ್ಪಿದರೂ ಈಗ ದೇಶದಲ್ಲಿ ಆ ರೀತಿಯ ಅಂಧಾನುಸರಣೆ ತುಂಬಿ ಹೋಗಿದೆ ಎಂದು ನಾನು ಅಂಗೀಕರಿಸಿದ್ದೇನೆಂದು ಯಾರೂ ಭಾವಿಸಬಾರದು. ನಾನು ಪದೇ ಪದೇ ವಿವೇಚನೆಗೇ ಕರೆಯಿತ್ತಿದ್ದೇನೆ. ಚರಕದ ಸಂದೇಶವನ್ನು ಸ್ವಸಂತೋಷದಿಂದ ರಾಷ್ಟ್ರ ಅಂಗೀಕರಿಸಿದ್ದರೆ, ಚರಕ ಒಂದು ಕಾಮಧೇನು ಎಂದು ತಿಳಿದು ಒಪ್ಪಿಕೊಂಡಿದ್ದರೆ ಅದು ದೀರ್ಘವಾಗಿ ಪ್ರಯಾಸ ಪೂರ್ಣವಾಗಿ ವಿಚಾರ ಮಾಡಿದ್ದರ ಫಲ: ಹಿಂಜರಿದು ಹಿಂಜರಿದು ಕೊನೆಗೆ ಕಂಡು ಕೊಂಡ ಮಾರ್ಗ. ಆದರೆ ಇಂದಿಗೂ ಭಾರತದ ಬುದ್ಧಿಜೀವಿಗಳು ಚರಕದ ತಳಹದಿ ಯಾದ ತತ್ವಪ್ರಣಾಲಿಯನ್ನು ಅರಗಿಸಿಕೊಂಡಿದ್ದಾರೆ ಎಂದು ಹೇಳಲಾರೆ. ಕವಿವರ್ಯರು ಇನ್ನೂ ಆಳವಾಗಿ ಪ್ರವೇಶಿಸಿ, ಜನತೆ ವಿವೇಕಕ್ಕೊಪ್ಪುವ ಆವಶ್ಯಕತೆ ಎಂದೇ ಚರಕ ವನ್ನು ಅಂಗೀಕರಿಸಿದೆಯೋ ಅಥವಾ ಅದು ಕೇವಲ ಅಂಧಶ್ರದ್ಧೆಯೋ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು.

"ಕವಿಯಾಗಲಿ ಋಷಿಯಾಗಲಿ ಯಜ್ಞರೂಪವಾಗಿ ನೂಲಲೇಬೇಕೆಂದು ನಾನು ಹೇಳುತ್ತೇನೆ. ಯುದ್ಧ ಘೋಷಿಸಲ್ಪಟ್ಟರೆ ಕವಿ ತನ್ನ ವಾದ್ಯವನ್ನೂ, ವಕೀಲ ತನ್ನ ಕಡತನವನ್ನೂ ವಿದ್ಯಾರ್ಥಿ ತನ್ನ ಪುಸ್ತಕಗಳನ್ನೂ ತ್ಯಜಿಸಿ ಬರುತ್ತಾರೆ. ಯುದ್ಧ ನಿಂತ ಮೇಲೆಯೇ ಕವಿ ನಿಜವಾದ ಕಾವ್ಯವನ್ನು ಹಾಡುತ್ತಾನೆ; ಜನರಿಗೆ ಜಗಳವಾಡಲು ಪುರಸೊತ್ತಿರುವಾಗ ಮತ್ತೆ ವಕೀಲ ತನ್ನ ನ್ಯಾಯಕಡತಗಳ ಕಡೆಗೆ ಗಮನ ಕೊಡುತ್ತಾನೆ. ಮನೆಗೆ ಬೆಂಕಿ ಬಿದ್ದಾಗ ಎಲ್ಲರೂ ಆ ಕಡೆ ಧಾವಿಸುವುದಿಲ್ಲವೆ? ಒಬ್ಬೊಬ್ಬರೂ ಬಕೆಟ್ಟು ಗಳನ್ನು ಹಿಡಿದು ಬೆಂಕಿಯನ್ನಾರಿಸಲು ತೊಡಗುತ್ತಾರೆ. ನನ್ನ ಸುತ್ತಲು ಹಸಿವಿನಿಂದ ಜನ ಸಾಯುತ್ತಿರುವಾಗ ಹಸಿದವರಿಗೆ ಅನ್ನ ನೀಡುವುದೊಂದೇ ನನ್ನ ಕೆಲಸ. ದಿನ ದಿನವೂ ತನ್ನ ಪೌರುಷವೇ ನಿರ್ನಾಮವಾಗುತ್ತಿರುವುದಕ್ಕೆ ಸಾಕ್ಷಿಯಾಗಿ ನಿಂತ ಭಾರತ ಬೆಂಕಿಯ ಜ್ವಾಲೆಯಿಂದ ತಪ್ತವಾಗಿದೆ ಎಂಬುದು ನನ್ನ ನಂಬಿಕೆ. ನಿರುದ್ಯೋಗದಿಂದ ಅನ್ನಕ್ಕೆ ಹಣವಿಲ್ಲದೆ ಜನತೆ ಹಸಿವಿನಿಂದ ಸಾಯುತ್ತಿದೆ. ಖುಲ್ನಾ ಜಿಲ್ಲೆಯಲ್ಲಿ ಜನ ಕೆಲಸವೇ ಇಲ್ಲದುದರಿಂದ ಹಸಿವಿನಿಂದ ಬಳಲುತ್ತಿದ್ದಾರೆ. ಕೆಲಸ ಮಾಡಲು ಅವರು ಹಿಂಜರಿದಿಲ್ಲ. ಆಂಧ್ರದ ಸೀಡೆಡ್ ಜಿಲ್ಲೆ ನಾಲ್ಕನೆಯ ಬಾರಿ ಕ್ಷಾಮವನ್ನನುಭವಿಸುತ್ತಿದೆ. ಕ್ಷಾಮಕ್ಕೆ ತುತ್ತಾದ ಹಳೆಯ ರೋಗಗ್ರಸ್ತ ಪ್ರಾಂತ ಒರಿಸ್ಸಾ. ಭಾರತ ನಮ್ಮ ನಗರ ಗಳಲ್ಲಿಲ್ಲ, ತನ್ನ ಏಳು ಲಕ್ಷ ಹಳ್ಳಿಗಳಲ್ಲಿ ಭಾರತ ಜೀವಿಸುತ್ತಿದೆ. ನಗರಗಳು ಗ್ರಾಮಗಳನ್ನು ಅವಲಂಬಿಸಿ ಬಾಳುತ್ತಿವೆ. ಅಲ್ಲಿನ ಸಂಪತ್ತು ಪರದೇಶಗಳಿಂದ ಬರುತ್ತಿಲ್ಲ. ಅಮೆರಿಕ, ಯೂರೋಪ್ ಮತ್ತು ಜಪಾನ್ ದೇಶಗಳ ದೊಡ್ಡ ವ್ಯಾಪಾರಿ ಸಂಸ್ಥೆಗಳಲ್ಲಿ ನಗರ ದವರು ದಳ್ಳಾಳಿಗಳಾಗಿ ಕೆಲಸ ಮಾಡುತ್ತಾರೆ. ಇನ್ನೂರು ವರುಷಗಳಿಂದ ಈ ವ್ಯಾಪಾರೀ ಸಂಸ್ಥೆಗಳು ನಮ್ಮ ಹಳ್ಳಿಗಳ ರಕ್ತವನ್ನೇ ಹೀರುತ್ತಿವೆ. ಈ ದಂಧೆಯಲ್ಲಿ ನಗರದವರು ಸಹಕರಿಸುತ್ತಿದ್ದಾರೆ. ಅನುಭವದಿಂದ ಹೇಳುತ್ತಿದ್ದೇನೆ. ದಿನ ದಿನವೂ ಭಾರತ ಬಡತನದಲ್ಲಿ

ಮುಳುಗುತ್ತಿದೆ. ಭಾರತದ ಪಾದಗಳು ರಕ್ತ ಚಲನೆಯಿಲ್ಲದೆ ಆಗಲೇ ತಣ್ಣಗಾಗುತ್ತಿವೆ. ನಾವು ಎಚ್ಚರಗೊಳ್ಳದಿದ್ದರೆ ಭಾರತ ನಿಶ್ಶಕ್ತವಾಗಿ ಕುಸಿದು ಬಿದ್ದೀತು.

"ಹಸಿದು ಕಂಗಾಲಾಗಿರುವ ಜನಸ್ತೋಮಕ್ಕೆ ದೇವರೇ ಆದರೂ ಅನ್ನಾವತಾರ ಮಾಡಿ ಬರಬೇಕು. ಅನ್ನ ಕೊಡುವ ಕೂಲಿಯ ರೂಪದಲ್ಲಿ ಅವರ ಕೈಸೇರಬೇಕು. ಅನ್ನಕ್ಕಾಗಿ ದುಡಿ ಎಂದು ಭಗವಂತ ಮನುಷ್ಯನನ್ನು ಸೃಷ್ಟಿಸಿದ್ದಾನೆ. ದುಡಿಯದೇ ಉಣ್ಣುವವನು ಕಳ್ಳ ಎಂದು ಹೇಳಿದ್ದಾನೆ. ಭಾರತದ ಜನತೆಯಲ್ಲಿ ಶೇಕಡಾ ಎಂಬತ್ತರಷ್ಟು ಜನ ವರ್ಷದಲ್ಲಿ ಅರ್ಧಭಾಗ ಏನೂ ಕೆಲಸವಿಲ್ಲದೆ ಬಲಾತ್ಕಾರದಿಂದ ಕಳ್ಳರಾಗಿದ್ದಾರೆ. ಇಡೀ ಭಾರತವೇ ಒಂದು ದೊಡ್ಡ ಬಂದೀಖಾನೆ ಎನಿಸುವುದರಲ್ಲಿ ಆಶ್ಚರ್ಯವೇನು? ಹಸಿವಿನ ಬಡಬಾಗ್ನಿ ನೀಗಲೆಂದು ಭಾರತ ಚರಕವನ್ನು ಅವಲಂಬಿಸಬೇಕಾಗಿದೆ. ಚರಕದ ಕರೆ ಅತ್ಯಂತ ಪವಿತ್ರ, ಪ್ರೇಮವೇ ಅದಕ್ಕೆ ಆಧಾರ. ಪ್ರೇಮಕ್ಕೆ ಪರ್ಯಾಯ ಪದವೇ ಸ್ವರಾಜ್ಯ. ಆವಶ್ಯಕ ವಸ್ತುಗಳಿಗಾಗಿ ಮಾಡಲೇಬೇಕಾದ ಶರೀರಶ್ರಮ, ಬುದ್ಧಿ ಕುಶಲತೆಯನ್ನು ದಮನ ಮಾಡುತ್ತದೆ. ಎನ್ನುವುದಕ್ಕಾಗುವುದಿಲ್ಲ; ಹಾಗೆಯೇ ಚರಕದ ಪರಿಶ್ರಮವೂ. ಪಶುಗಳಿಗಿಂತ ಕಡೆಯಾಗಿ ಬಾಳುತ್ತಾ ಮರಣದ ಅಂಚಿನಲ್ಲೇ ಇರುವ ಕೋಟಿ ಕೋಟಿ ಮಾನವ ಜೀವಿಗಳನ್ನು ಕುರಿತು ನಾವು ಯೋಚಿಸಬೇಕು. ಹೀಗೆ ಸಾಯುತ್ತಿರುವ ಅಸಂಖ್ಯಾತ ಸ್ತ್ರೀ ಪುರುಷ ದೇಶ ಬಾಂಧವರಿಗೆ ಚರಕ ಜೀವದಾನದ ಝರಿ. ಹೊಟ್ಟೆಗಾಗಿ ಈ ದುಡಿಮೆಯನ್ನವಲಂಬಿಸಬೇಕಾಗಿಲ್ಲದಿರುವಾಗ ನಾನೇಕೆ ನೂಲಬೇಕು? ಎಂದು ಕೇಳಬಹುದು. ನನ್ನದಲ್ಲದುದನ್ನು ಭುಂಜಿಸುತ್ತಿದ್ದೇನೆಂದು ಈ ಕಾರ್ಯ ಮಾಡಬೇಕು. ನನ್ನ ದೇಶಬಾಂಧವರ ದುಡಿಮೆಯನ್ನು ಲೂಟಿ ಮಾಡಿ ನಾನು ಬದುಕುತ್ತಿದ್ದೇನೆ. ನಮ್ಮ ಜೇಬು ಸೇರುವ ಪ್ರತಿಯೊಂದು ಕಾಸಿನ ಮೂಲವನ್ನೂ ಶೋಧ ಮಾಡಿದರೆ, ನಾನು ಹೇಳುವ ಸತ್ಯಾಂಶ ಅರಿವಾದೀತು. ತಮ್ಮ ಮೇಲೆಬಲಾತ್ಕಾರವಾಗಿ ಹೇರಲ್ಪಟ್ಟ ನಿಷ್ಕ್ರಿಯತೆಯನ್ನು ನೀಗಿ ಉದ್ಯೋಗಶೀಲರಾಗಲು ಕಲಿಯದಿದ್ದರೆ ಜನ ಕೋಟಿಗೆ ಸ್ವರಾಜ್ಯ ಅರ್ಥಹೀನವಾಗುತ್ತದೆ. ಅಂಥ ಸ್ವರಾಜ್ಯವನ್ನು ಕ್ಷಿಪ್ರವಾಗಿ ಸಾಧಿಸಲು ಚರಕದ ಪುನರುತ್ಥಾನವೊಂದೇ ದಾರಿ.

"ಅಭಿವೃದ್ಧಿ, ಆತ್ಮ ನಿರ್ಣಯದ ಹಕ್ಕು, ಸ್ವಾತಂತ್ರ್ಯ ಇವು ನನಗೂ ಅವಶ್ಯವಾಗಿ ಬೇಕು. ಆದರೆ ಇವೆಲ್ಲವೂ ಆತ್ಮ ಸಂಸ್ಕಾರಕ್ಕಾಗಿ ನನಗೆ ಬೇಕು. ಉಕ್ಕಿನ ಯುಗ ಶಿಲಾಯುಗಕ್ಕಿಂತ ಪ್ರಗತಿಪರ ಎನ್ನುವುದು ನನಗೆ ಸಂದೇಹ. ಆ ಬಗ್ಗೆ ನಾನು ನಿರಾಸಕ್ತ. ಆತ್ಮ ವಿಕಾಸಕ್ಕಾಗಿ ನಮ್ಮ ಬುದ್ಧಿ ಚತುರತೆಯೂ ಇತರ ಎಲ್ಲ ರೀತಿಯ ಸಾಮರ್ಥ್ಯಗಳೂ ವಿನಿಯೋಗವಾಗಬೇಕು. ಆಧುನಿಕ ವಿಜ್ಞಾನ ಸಲಕರಣೆಗಳಿಂದ ಸುಸಜ್ಜಿತನಾದ ಮನುಷ್ಯ ಮಾನವ ಕೋಟಿಯ ನೆಮ್ಮದಿಗಾಗಿ ಹೊಸದಾದ ಶಾಶ್ವತ ಮೌಲ್ಯವುಳ್ಳ ಸಂಶೋಧನೆ ಮಾಡುವುದು ಸಾಧ್ಯ ಎಂದು ನಾನು ಸುಲಭವಾಗಿ ಊಹಿಸ ಬಲ್ಲೆ. ಆದರೆ ಶಿಲಾಯುಗದವನೊಬ್ಬ ತನ್ನ ಶಿಲೆ ಮೊಳೆಗಳಿಂದ ಬೆಂಕಿಯನ್ನು ಹೊತ್ತಿಸಿಕೊಂಡೋ,

ತನ್ನ ಬೇಟೆಯ ಅಸ್ತ್ರಗಳನ್ನು ಹಿಡಿದೋ ಸುಂದರ ಭಕ್ತಿಕವನಗಳನ್ನು ಹಾಡುತ್ತಾ ಸಂಕಟಮಯ ಜಗತ್ತಿಗೆ ಶಾಂತಿ ಸೌಹಾರ್ದಗಳ ದಿವ್ಯ ಸಂದೇಶವನ್ನು ಪ್ರಭಾವಯುತ ರಾಗಿ ಸಾರುವುದು ಸಾಧ್ಯ ಎಂಬುದನ್ನು ಊಹಿಸುವುದು ನನಗೆ ಇನ್ನೂ ಸುಲಭವೆನಿ ಸುತ್ತದೆ. ದುಡಿಮೆಯ ಗೌರವವನ್ನು ಮಾನ್ಯ ಮಾಡಲು ಮನವಿ ಮಾಡುವುದೇ ಚರಕದ ಪ್ರತಿಷ್ಠಾಪನೆಯ ಉದ್ದೇಶ.

"ಚರಕ ನಶಿಸಿ ಹೋದುದರಿಂದ ನಮ್ಮ ಒಂದು ಶ್ವಾಸಕೋಶವೇ ಹೋಗಿದೆ. ಆದ್ದರಿಂದ ತೀಕ್ಷ್ಣ ಕ್ಷಯರೋಗಕ್ಕೆ ತುತ್ತಾಗಿದ್ದೇವೆ. ಚರಕವನ್ನು ಪುನರುಜ್ಜೀವನ ಗೊಳಿಸಿದರೆ ಈ ಕೆಟ್ಟ ರೋಗವನ್ನು ತಡೆಗಟ್ಟಬಹುದು. ಕೆಲವು ಸಮಯಗಳಲ್ಲಿ ಎಲ್ಲರೂ ಎಲ್ಲ ಕಾಲಗಳಲ್ಲೂ ಮಾಡಬೇಕಾದ ಕೆಲಸ ಬಂದೊದಗುತ್ತದೆ. ಚರಕದಿಂದ ನೂಲು ವುದು ಅಂಥ ಒಂದು ಕ್ರಿಯೆ; ಈ ಪರಿವರ್ತನ ಸಮಯಕ್ಕೆ ಎಲ್ಲರೂ ಮಾಡಲೇ ಬೇಕಾದ ದುಡಿಮೆ. ಇದು ಬಹುಸಂಖ್ಯಾತರು ಮುಂದೆಯೂ ಶಾಶ್ವತವಾಗಿ ಅವಲಂಬಿಸಬೇಕಾದ ಉದ್ಯಮ.

"ಪರದೇಶಿ ವಸ್ತ್ರವ್ಯಾಮೋಹ ಚರಕವನ್ನು ಅದರ ಗೌರವ ಸ್ಥಾನದಿಂದ ಉರುಳಿಸಿತು. ಆದ್ದರಿಂದಲೇ ವಿದೇಶಿ ವಸ್ತ್ರ ಧರಿಸುವುದು ಪಾಪ ಎನ್ನುತ್ತೇನೆ. ಅರ್ಥ ಶಾಸ್ತ್ರಕ್ಕೂ, ನೀತಿಶಾಸ್ತ್ರಕ್ಕೂ ಯಾವ ಭೇದವನ್ನೂ ನಾನು ಮಾಡುವುದಿಲ್ಲ. ವ್ಯಕ್ತಿ ಗಾಗಲಿ ರಾಷ್ಟ್ರಕ್ಕಾಗಲಿ ನೈತಿಕ ಪತನಕ್ಕೆ ಕಾರಣವಾಗುವ ಅರ್ಥಶಾಸ್ತ್ರ ಮಾನ್ಯವಾದುದಲ್ಲ. ಅದು ಅನೀತಿಶಾಸ್ತ್ರ, ಪಾಪಕರ ವೃತ್ತಿ, ಹಾಗೆಯೇ ಯಾವ ಅರ್ಥರಚನೆ ಒಂದು ರಾಷ್ಟ್ರ ಇನ್ನೊಂದನ್ನು ತಿಂದು ಬದುಕಲು ಆಸ್ಪದ ಕೊಡುತ್ತದೋ ಅದು ಅನೀತಿ. ಕಡ್ಡಾಯ ದುಡಿಮೆಯಿಂದ ಉತ್ಪಾದಿತವಾದ ವಸ್ತುಗಳನ್ನು ಉಪಯೋಗಿಸುವುದೂ ಪಾಪಕರವೇ. ಅಮೆರಿಕದ ಗೋಧಿ ಬಳಸಿ ನನ್ನ ನೆರೆಯವನ ಬೆಳೆಗೆ ಗಿರಾಕಿಯಿಲ್ಲದೆ ಉಪವಾಸ ಬೀಳುವಂತಾಗುವುದೂ ಪಾಪಕೃತ್ಯವೇ. ನನ್ನ ನೆರೆಹೊರೆಯ ನೂಲು ವವರು ನೇಯ್ಗೆಯವರು ಉತ್ಪಾದಿಸುವ ಬಟ್ಟೆಯನ್ನು ಕೊಟ್ಟರೆ ನನಗೆ ಬಟ್ಟೆಯೂ ಆಯಿತು ಅವರಿಗೆ ಊಟ ಉಡಿಗೆ ಎರಡೂ ಆಯಿತು ಎಂದು ತಿಳಿದಿದ್ದರೂ ವಿದೇಶಿ ರೀಜೆಂಟ ರಸ್ತೆಯ ಅತ್ಯಾಧುನಿಕ ಮೆರಗು ಬಟ್ಟೆಯನ್ನು ಧರಿಸುವುದು ಮಹಾಪಾತಕ ವೆಂದು ನನ್ನ ಎಣಿಕೆ. ನನ್ನ ಪಾಪದ ಭಾರದಿಂದ ತಲ್ಲಣಿಸುತ್ತಿರುವಾಗ ನನ್ನ ಮೇಲಿನ ಪರದೇಶಿವಸ್ತ್ರವನ್ನು ಜ್ವಲಿಸುವ ಬೆಂಕಿಗೆ ಹೋಮಮಾಡಿ ಶುದ್ಧನಾಗಬೇಕು. ಮುಂದೆ ನನ್ನ ನೆರೆಹೊರೆ ತಯಾರಿಸಿದ ಒರಟು ಖಾದಿಯನ್ನು ತೊಟ್ಟು ಸಮಾಧಾನ ಪಡಬೇಕು. ಹಿಂದೆಯೇ ಬಿಟ್ಟು ಹೋಗಿರುವ ನೂಲುವ ಉದ್ಯೋಗವನ್ನು ನನ್ನ ನೆರೆಹೊರೆ ತಕ್ಷಣ ಸಂತೋಷದಿಂದ ಸ್ವಾಗತಿಸಲಿಲ್ಲ ಎಂದು ಕಂಡರೆ ನಾನೇ ಅದನ್ನು ಕೈಗೆತ್ತಿಕೊಂಡು ಪ್ರಚಾರದಿಂದ ಜನಪ್ರಿಯವಾಗುವಂತೆ ಮಾಡಬೇಕು.

"ಕವಿಗಳು ತಾವು ಸ್ವಂತ ಬಳಸುತ್ತಿರುವ ವಿದೇಶಿ ಬಟ್ಟೆಯನ್ನು ಮಾತ್ರವೇ ಸುಟ್ಟು ಭಸ್ಮ ಮಾಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಬಡವರಿಗೂ

ಅರೆನಗ್ನ ದರಿದ್ರರಿಗೂ ಸೇರಿದ್ದ ಬಟ್ಟೆಗಳೆಂದು ಅವರು ತಿಳಿದಿದ್ದರೆ ಕೂಡಲೇ ಆ ಕಡುಬಡವರಿಗೆ ಅದನ್ನು ಹಿಂತಿರುಗಿಸುತ್ತಿದ್ದರು. ನನ್ನ ಮೈಮೇಲಿನ ವಿದೇಶಿ ವಸ್ತ್ರ ಸುಡುವುದು ನನ್ನ ಅವಮಾನವನ್ನು ಕಳೆದುಕೊಂಡಂತೆ. ನಗ್ನರಾದ ಬಡವರಿಗೂ ಅವರಿಗೆ ಅತ್ಯಗತ್ಯವಾಗಿರುವ ಉದ್ಯೋಗವನ್ನು ಕೊಡುವುದನ್ನು ಬಿಟ್ಟು ಅವರಿಗೆ ಬೇಡದ ಬಟ್ಟೆ ಕೊಟ್ಟು ಅವಮಾನಗೊಳಿಸಲಾರೆ. ಅವರ ಆಶ್ರಯದಾತ ಎನಿಸಿಕೊಳ್ಳುವ ಪಾಪಕ್ಕೆ ನಾನು ಕೈ ಹಾಕುವುದಿಲ್ಲ. ಅವರ ಬಡತನಕ್ಕೆ ನಾನೂ ಕಾರಣ ಎಂದರಿತ ಮೇಲೆ ಅವರನ್ನು ಯಥೋಚಿತವಾಗಿ ಗೌರವಿಸುತ್ತೇನೆ. ಬಿಸುಟ ತಿಂಡಿಯನ್ನೋ, ಅಂಗಿಯನ್ನೋ ಅವರತ್ತ ಎಸೆಯದೆ, ನನ್ನ ಉತ್ಕೃಷ್ಟ ಅನ್ನ ವಸ್ತ್ರಗಳನ್ನೇ ಅವರೊಡನೆ ಹಂಚಿಕೊಂಡು ಅವರ ಉತ್ಪಾದಕ ದುಡಿಮೆಯಲ್ಲಿ ನಾನೂ ಸಂತೋಷದಿಂದ ಪಾಲ್ಗೊಳ್ಳುತ್ತೇನೆ.

"ಅಸಹಕಾರ ಅಥವಾ ಸ್ವದೇಶಿ ಚಳುವಳಿ ಯಾವುದೋ ಒಂದು ಸೀಮಿತವಾದ ಸಿದ್ಧಾಂತವಲ್ಲ. ಅಸಹಕಾರ, ಅಹಿಂಸೆ ಮತ್ತು ಸ್ವದೇಶಿ–ಇವು ಇಡೀ ವಿಶ್ವಕ್ಕೇ ಅನ್ವಯ ವಾಗುವಂತಹ ಸಂದೇಶಗಳೆಂದು ಎತ್ತರದಲ್ಲಿ ನಿಂತು ಮುಕ್ತಕಂಠದಿಂದ ಘೋಷಿಸಲು ನನ್ನ ವಿನಯ ಅಡ್ಡ ಬರುತ್ತದೆ ಅಷ್ಟೆ. ಯಾವ ರಾಷ್ಟ್ರ ಆ ಸಂದೇಶವನ್ನು ಸಾರಿದೆಯೋ ಅಲ್ಲೇ ಅದು ನಿಷ್ಫಲವಾದರೆ ಅದು ಮಣ್ಣು ಪಾಲಾಗುತ್ತದೆ. ಈ ಕ್ಷಣದಲ್ಲಿ ಭಾರತ ವಿಶ್ವದೊಡನೆ ಏನನ್ನು ತಾನೇ ಹಂಚಿಕೊಂಡೀತು? ಆಕೆಯ ಪಾಲಿಗಿರುವುದು ದುರ್ಭರ ಅವನತಿ. ದಾರಿದ್ರ್ಯದ ದುಃಖ–ಮತ್ತು ರೋಗ ರುಜಿನಗಳಷ್ಟೇ. ಪ್ರಾಚೀನ ಭಾರತದ ಶಾಸ್ತ್ರ ಭಂಡಾರವನ್ನು ರಫ್ತು ಮಾಡೋಣವೇ? ಅವುಗಳ ಮುದ್ರಣ ಹೇರಳವಾಗಿದೆ. ಸಂಶಯಗ್ರಸ್ತವೂ, ಅಂಧಭಕ್ತಿ ಪೂರ್ಣವೂ ಆದ ನಮ್ಮ ಸುತ್ತಲಿನ ಪ್ರಪಂಚ ಅವು ಗಳನ್ನು ಕಡೆಗಣಿಸಿದೆ. ಕಾರಣ ಅವುಗಳ ಉತ್ತರಾಧಿಕಾರಿಗಳು, ರಕ್ಷಕರು, ಆದ ನಾವೇ ಆ ರೀತಿಯಲ್ಲಿ ಬಾಳುತ್ತಿಲ್ಲ. ವಿಶ್ವದೊಡನೆ ಹಂಚಿಕೊಳ್ಳುವ ಮುನ್ನ ನಾವದನ್ನು ಮೊದಲು ಪಡೆಯಬೇಕು. ಬ್ರಿಟಿಷರೊಡನಾಗಲೀ, ಯೂರೋಪಿಯನ್ನರೊಡನಾಗಲೀ, ಅಲ್ಲ ನಮ್ಮ ಅಸಹಕಾರ. ಭೌತಿಕ ನಾಗರಿಕತೆ ಮತ್ತು ಅದರ ಪೀಳಿಗೆಯಾದ ದುರಾಸೆ ಹಾಗೂ ದುರ್ಬಲರ ಶೋಷಣೆ ಇವುಗಳೊಡನೆ ನಮ್ಮ ಅಸಹಕಾರ. ಬಾಹ್ಯದಿಂದ ವಿರಮಿಸಿ ನಮ್ಮಲ್ಲಿ ನಾವು ಅಂತರ್ಗತವಾಗುವುದೇ ಅದರ ವ್ಯಾಖ್ಯೆ. ಬ್ರಿಟಿಷ್ ಆಡಳಿತ ಗಾರರ ಸ್ವಾರ್ಥಪರ ನಿಯಮ ನಿಬಂಧನೆಗಳನ್ನು ಮಾನ್ಯ ಮಾಡಲು ನಿರಾಕರಿಸುವುದೇ ನಮ್ಮ ಅಸಹಕಾರ. ನಮ್ಮ ನಿಯಮಗಳಂತೆ ನಮ್ಮೊಡನೆ ಬಂದು ನೀವು ಸಹಕರಿಸಿ, ನಿಮಗೂ ವಿಶ್ವಕ್ಕೂ ಅದರಿಂದ ಶುಭವಾಗುವುದು" ಎಂದವರಿಗೆ ಹೇಳುತ್ತಿದ್ದೇವೆ..

"ಗಾಳಿಯಲ್ಲಿ ತೂರಿಹೋಗಲು ನಾವು ನಿರಾಕರಿಸಬೇಕು. ನೀರಿನಲ್ಲಿ ಮುಳುಗು ತ್ತಿರುವವರು ಇತರರನ್ನು ಬದುಕಿಸಲಾರರು. ಅವರು ತಮ್ಮ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು. ಭಾರತದ ರಾಷ್ಟ್ರೀಯತೆ ವಿವಕ್ತವಾದುದಲ್ಲ, ಆಕ್ರಮಣಕಾರಿಯಲ್ಲ, ವಿಧ್ವಂಸಕವಲ್ಲ. ಅದು ವಿಶ್ವದ ಆರೋಗ್ಯಕ್ಕೆ ಕಾರಣವಾದದ್ದು, ಧಾರ್ಮಿಕವಾದದ್ದು,

ಆದ್ದರಿಂದಲೇ ಅದು ಮಾನವೀಯ. ತಾನು ಬದುಕುವುದನ್ನು ಕಲಿತು ವಿಶ್ವಕ್ಕಾಗಿ ಆತ್ಮಾರ್ಪಣೆ ಮಾಡುವ ಆಕಾಂಕ್ಷೆ ಬೆಳಸಿಕೊಳ್ಳಬೇಕು ಭಾರತ. ಬೆಕ್ಕಿನ ಬಾಯಿಗೆ ಸಿಕ್ಕ ಇಲಿಯ ಬಲಾತ್ಕಾರದ ಬಲಿದಾನ ಯಾವ ಪ್ರಯೋಜನಕ್ಕೂ ಬಾರದು.

"ಕವಿ ಸಹಜವಾದ ಮನೋವೃತ್ತಿ ನಾಳಿನ ಜಗತ್ತಿನಲ್ಲಿ ವಿಹರಿಸುತ್ತದೆ. ನಮ್ಮನ್ನೂ ಹಾಗೆ ಮಾಡಲು ಆಹ್ವಾನಿಸುತ್ತದೆ. ಮುಂಬೆಳಗಿನ ಸುಂದರ ಪರಿಸರದಲ್ಲಿ ಗೀತೆಗಳನ್ನು ಹಾಡುತ್ತಾ ಗಗನಕ್ಕೆ ಹಾರುವ ಪಕ್ಷಿಯ ಚಿತ್ತಾಕರ್ಷಕ ಚಿತ್ರವನ್ನು ಕವಿವರ್ಯರು ನಮ್ಮ ಮುಂದೆ ಮೂಡಿಸಿದ್ದಾರೆ. ಅದಕ್ಕೆ ನಾವೂ ಮಾರುಹೋಗುತ್ತೇವೆ. ಹಗಲಿನಲ್ಲಿ ನೆಮ್ಮದಿಯಾಗಿ ಉಂಡು ರಾತ್ರಿ ವಿಶ್ರಮಿಸಿದ ಈ ಹಕ್ಕಿಗಳ ಧಮನಿಗಳಲ್ಲಿ ಹೊಸ ರಕ್ತ ಹರಿದು ರೆಕ್ಕೆ ಬಲಿತು ಅವು ಗಗನಕ್ಕೆ ಹಾರುತ್ತವೆ. ನಿರ್ಬಲವಾಗಿ ರೆಕ್ಕೆಯನ್ನೇ ಬಡಿಯುಲಾರದೆ ಮುದುಡಿ ಬಿದ್ದ ಹಕ್ಕಿಗಳನ್ನು ವೀಕ್ಷಿಸುವ ದೌರ್ಭಾಗ್ಯ ನನ್ನದು. ಭಾರತದ ಮುಗಿಲಿನಡಿಯಲ್ಲಿನ ಮಾನವಪಕ್ಷಿ ರಾತ್ರಿ ವಿಶ್ರಾಂತಿಯ ಸೋಗು ಹಾಕಿ ಮುಂಬೆಳಗಿನಲ್ಲಿ ನಿನ್ನೆಗಿಂತ ದುರ್ಬಲವಾಗಿ ಏಳುತ್ತದೆ. ಕೋಟ್ಯಂತರ ಮಾನವರಿಗೆ ಈ ಜೀವನವೊಂದು ನಿರಂತರ ಜಾಗರಣೆ ಅಥವಾ ಅನಂತ ಮೂರ್ಛೆ. ಆ ಸ್ಥಿತಿಯ ದಾರುಣತೆ ವರ್ಣನಾತೀತ. ಅನುಭವದಿಂದ ಮಾತ್ರವೇ ಅರಿಯಲು ಸಾಧ್ಯ. ಸಂಕಟದಿಂದ ನರಳುತ್ತಿರುವ ರೋಗಿಯನ್ನು ಕಬೀರನ ಗೀತೆ ಹಾಡಿ ಸಾಂತ್ವನಗೊಳಿಸಲು ನನಗೆ ಸಾಧ್ಯವಾಗದು. ಹಸಿದ ಜನಕೋಟಿ ಕೋರುವುದೊಂದೇ ಗೀತ– ಚೈತನ್ಯದಾಯಕ ಅನ್ನ. ಅದನ್ನು ಯಾರೂ ಕೊಡಲು ಬರುವುದಿಲ್ಲ. ಅವರೇ ಸಂಪಾದಿಸಬೇಕು. ಶ್ರಮನಿಷ್ಠೆಯಿಂದ ಮಾತ್ರ ಈ ಸಂಪಾದನೆ ಸಾಧ್ಯವಾದೀತು."

ಗಾಂಧೀಜಿ ಪದೇ ಪದೇ ಒತ್ತಿ ನುಡಿಯುತ್ತಿದ್ದರು: "ಇಂದಿನ ಬಗ್ಗೆ ಎಚ್ಚರದಿಂದ ಇರುವುದಾದರೆ ನಾಳಿನದನ್ನು ಭಗವಂತ ಭದ್ರ ಮಾಡುತ್ತಾನೆ. ಸಾವಿನ ಭಯದಿಂದ ಮುಕ್ತರಾಗುವುದೇ ಸ್ವರಾಜ್ಯ" ನೈತಿಕ ಶಕ್ತಿ ಹಾಗೂ ತರ್ಕ ಸಾಮರ್ಥ್ಯಗಳಿಂದ ಭಾರತವನ್ನು ದಾಸ್ಯಮನೋಭಾವದಿಂದ ಪ್ರತಿಭಟನೆಯ ಶೌರ್ಯದೆಡೆಗೆ ಪರಿವರ್ತಿಸುವ ಮಹಾಪ್ರಯತ್ನ ಕೈಗೊಂಡರು. "ಸ್ವರಾಜ್ಯ ಸಿದ್ಧಿಯಾಗುವ ವೇಳೆಗೆ ನಮ್ಮಲ್ಲನೇಕರು ಸಾವಿನ ಭಯದಿಂದಲೂ ಮುಕ್ತರಾಗುತ್ತೇವೆ. ಇಲ್ಲದಿದ್ದಲ್ಲಿ ನಮಗೆ ಸ್ವರಾಜ್ಯವೇ ದಕ್ಕದು. ಮಕ್ಕಳೋ, ಯುವಕರೋ, ವೃದ್ಧರೊ, ತೀರಿಕೊಂಡರೆ ನಾವೇಕೆ ಇಷ್ಟು ವಿಷಣ್ಣರಾಗಬೇಕು? ಪ್ರತಿ ನಿಮಿಷವೂ ಈ ವಿಶ್ವದಲ್ಲಿ ಸಾವು ಹುಟ್ಟು ನಿರಾತಂಕವಾಗಿ ನಡದೇ ಇದೆ. ಹುಟ್ಟಿದೊಡನೆ ಹಿಗ್ಗಿ, ಸತ್ತರೆ ಶೋಕಪಡುವ ಮೌಢ್ಯ ನಮ್ಮನ್ನಾವರಿಸಿದೆ. ಆತ್ಮ ನಿಷ್ಠೆಯಿದ್ದವನಿಗೆ ಆತ್ಮ ಚಿರಾಯು ಎಂದು ಗೊತ್ತು. ಹಿಂದೂ, ಪಾರ್ಸಿ, ಮುಸಲ್ಮಾನ ಎಲ್ಲರಿಗೂ ಈ ನಂಬಿಕೆಯಿದೆ. ಈ ವಿಚಾರ ಸರಣಿಯೇ ನಮ್ಮನ್ನು ನಿರ್ಭಯರನ್ನಾಗಿ ಮಾಡಬೇಕು. ಸಾವಿಗೇ ಅಂಜದಿರುವ ವೀರಾಗ್ರಣಿಗೆ ಸೆರೆಮನೆಯ ಬಂಧನ ಏನು ಲೆಕ್ಕ! ನಾನಿದನ್ನು ಬರೆಯುವ ಕಾರಣವಿಷ್ಟೆ, ಇದೇ ವರ್ಷ ಸ್ವರಾಜ್ಯ

ಸಾಧಿಸಬೇಕು ಎಂದರೆ ನಾವು ಸಾವಿಗೂ ಸಿದ್ಧರಾಗಲೇಬೇಕು. ವೀರನಾದವನು ಹರ್ಷದಿಂದಲೇ ಮಡಿಯುತ್ತಾನೆ. ಆದರೂ ಜಾಗರೂಕನಾಗಿರುತ್ತಾನೆ. ಈ ಅಹಿಂಸಕ ಸಮರದಲ್ಲಿ ಹುಚ್ಚು ಸಾಹಸಕ್ಕೆ ಎಳ್ಳಷ್ಟೂ ಸ್ಥಳವಿಲ್ಲ. ಅನೀತಿಕೃತ್ಯವೆಸಗಿ ಜೈಲಿಗೆ ಹೋಗುವುದಿಲ್ಲ; ವಧೆಗೆ ಸಿದ್ಧರಾಗುವುದಿಲ್ಲ. ದಬ್ಬಾಳಿಕೆಯಿಂದ ತುಳಿಯಲೆಣಿಸುವ ಸರ್ಕಾರೀ ಶಾಸನಗಳನ್ನು ನಿರ್ಭಯವಾಗಿ ಪ್ರತಿಭಟಿಸಿ ನಾವು ಗಲ್ಲಿಗೇರಬೇಕು."

ಆಲಿ ಸಹೋದರರ ದಸ್ತಗಿರಿ ವಿಚಾರಣೆ ಮತ್ತು ಶಿಕ್ಷೆಗಳಿಂದ ಅಸಹಕಾರ ಚಳುವಳಿಗೆ ವಿಶೇಷವಾದ ಪ್ರಚೋದನೆ ಸಿಕ್ಕಿತು. ನವೆಂಬರ್ ೧ರಂದು ಕರಾಚಿಯಲ್ಲಿ ನಡೆದ ಈ ಐತಿಹಾಸಿಕ ವಿಚಾರಣೆಯಲ್ಲಿ ಆಲಿ ಸಹೋದರರನ್ನೂ ಅವರ ಸಹೋದ್ಯೋಗಿಗಳನ್ನೂ ಎರಡು ವರ್ಷಗಳ ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. ಈ ಕ್ರೂರ ದಮನದ ಕ್ರಮವನ್ನು ಇಡೀ ರಾಷ್ಟ್ರ ತೀವ್ರವಾಗಿ ಪ್ರತಿಭಟಿಸಿತು. ದೆಹಲಿಯಲ್ಲಿ ನವೆಂಬರ್ ೪ರಂದು ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಬೊಂಬಾಯಿ ಪ್ರಣಾಳಿಕೆಯನ್ನು ಅನುಮೋದಿಸಿತು. ಪ್ರತಿಯೊಂದು ಪ್ರಾಂತವೂ ತಮ್ಮ ಜವಾಬ್ದಾರಿಯ ಮೇಲೆ ಸವಿನಯ ಶಾಸನಭಂಗ ಕಾರ್ಯಕ್ರಮ ಪ್ರಾರಂಭಿಸಲು ಅನುಮತಿಕೊಟ್ಟಿತು. ಕರನಿರಾಕರಣೆ ಮಾಡಲೂ ಸಮ್ಮತಿಸಿತು. ಈ ಹೋರಾಟದ ನಿಸ್ವಾರ್ಥ ಸ್ವರೂಪವನ್ನು ಸ್ಪಷ್ಟಪಡಿಸಲು ಕಾಂಗ್ರೆಸ್ ತನ್ನ ಸತ್ಯಾಗ್ರಹಿಗಳಿಗಾಗಲಿ ಅವರ ಕುಟುಂಬಗಳಿಗಾಗಲಿ ಯಾವುದೇ ರೀತಿಯ ಆರ್ಥಿಕ ನೆರವನ್ನು ಕೊಡಲಾಗುವುದಿಲ್ಲವೆಂದು ಘೋಷಿಸಿತು.

ಗಾಂಧೀಜಿ ಮೊದಲು ತಾವೇ ಸ್ವತಃ ಬಾರ್ದೋಲಿ ಸತ್ಯಾಗ್ರಹವನ್ನು ಪ್ರಾರಂಭಿಸುವುದಾಗಿಯೂ ಅನಂತರ ಅದನ್ನು ನೋಡಿ ಇತರರು ಪ್ರಾರಂಭಿಸಬೇಕೆಂದೂ ಪ್ರಾರ್ಥಿಸಿದರು. ಹಜರತ್ ಮೊಹಾನಿಯವರು ದೇಶದಲ್ಲೆಲ್ಲಾ ಏಕಕಾಲದಲ್ಲಿ ಈ ಹೋರಾಟ ಪ್ರಾರಂಭವಾದರೆ ಮಾತ್ರ ಯಶಸ್ವಿಯಾಗುವುದೆಂದು ವಾದಿಸಿದರು. ಇಲ್ಲದಿದ್ದರೆ ಸರ್ಕಾರ ಒಂದೇ ಕಡೆ ತನ್ನ ದಮನಶಕ್ತಿಯನ್ನೆಲ್ಲ ಕ್ರೋಢೀಕರಿಸುತ್ತದೆ ಎಂದರು. ಗಾಂಧೀಜಿ ಈ ತರ್ಕಕ್ಕೆ ಮಣಿಯಲಿಲ್ಲ. ತಮ್ಮ ನಿರ್ಣಯ ಮಂಡಿಸುತ್ತಾ ಹೀಗೆಂದರು :

"ಗುಜರಾತದ ಸೂರತ್ ಜಿಲ್ಲೆಗೆ ಸೇರಿದ ಬಾರ್ದೋಲಿ ತಾಲ್ಲೂಕಿನಲ್ಲಿ ನಾನು ಸಾಮೂಹಿಕ ಸವಿನಯ ಶಾಸನಭಂಗ ಚಳುವಳಿಯನ್ನು ಪ್ರಾರಂಭಿಸಲಿದ್ದೇನೆ. ಈ ಹೋರಾಟದ ವ್ಯವಸ್ಥೆ ನನ್ನ ಸ್ವಂತ ಮೇಲ್ವಿಚಾರಣೆಯಲ್ಲಿರುತ್ತದೆ. ನನ್ನ ಈ ಪ್ರಯತ್ನದಲ್ಲಿ ಸ್ನೇಹಪೂರ್ಣ ಸಹಾನುಭೂತಿ ಮತ್ತು ಸಕ್ರಿಯ ಜಾಗೃತಿ ಇರಲೆಂದು ಭಾರತದ ಇತರ ಪ್ರಾಂತಗಳ ಮಹಾನಾಯಕರನ್ನು ಪ್ರಾರ್ಥಿಸುತ್ತೇನೆ. ಅವರ ಕ್ಷೇತ್ರಗಳಲ್ಲಿ ಯಾವ ಶಾಂತಿಭಂಗ ಪ್ರಯತ್ನವೂ ನಡೆಯದಂತೆ ಅವರು ನೋಡಿಕೊಳ್ಳಬೇಕು. ಇತರ ಎಲ್ಲ ಪ್ರಾಂತಗಳಲ್ಲೂ ಈ ಸಮಯಕ್ಕೆ ಶಾಂತಿ ನೆಲೆಸಿದ್ದರೆ ನಮ್ಮ ಪ್ರಯತ್ನಕ್ಕೆ ಖಂಡಿತ ಯಶಸ್ಸು ದೊರೆಯುವುದೆಂಬುದರಲ್ಲಿ ನನಗೆ ಸಂದೇಹವಿಲ್ಲ."

ಇದೇ ರೀತಿ ಹೇಳುತ್ತಾ ಈ ಹೊಸ ಚಳುವಳಿಯಲ್ಲಿ ಕಾಂಗ್ರೆಸ್ಸಿನವರ ಗುರುತರ ಜವಾಬ್ದಾರಿ ಎಷ್ಟಿದೆ ಎಂಬುದನ್ನು ಗಾಂಧೀಜಿ ಮನದಟ್ಟು ಮಾಡಿಕೊಟ್ಟರು. " ಜನತೆಯು

ಸಾಮೂಹಿಕ ಸವಿನಯ ಶಾಸನಭಂಗ ಕಾರ್ಯಕ್ರಮ ಒಂದು ಭೂಕಂಪವಾದಂತೆ. ರಾಜಕೀಯ ಕ್ಷೇತ್ರದಲ್ಲಿ ಇದೊಂದು ಆಂದೋಲನ. ಎಲ್ಲಿ ಈ ಶಾಸನಭಂಗ ಪ್ರಾರಂಭವೋ ಅಲ್ಲಿ ಪ್ರತಿಷ್ಠಿತ ಸರ್ಕಾರ ಸ್ಥಗಿತವಾಗುತ್ತದೆ. ಅಲ್ಲಿನ ಪ್ರತಿಯೊಬ್ಬ ಪೋಲೀಸಿನವ, ಸೈನಿಕ, ಪ್ರತಿಯೊಬ್ಬ ಸರ್ಕಾರಿ ಅಧಿಕಾರಿ ಸ್ಥಳ ಬಿಟ್ಟು ಹೊರಡಬೇಕು ಅಥವಾ ಸ್ವರಾಜ್ಯ ಸೇವೆಗೆ ದಾಖಲಾಗಬೇಕು. ಪೋಲೀಸ್ ಠಾಣೆಗಳು, ನ್ಯಾಯಾಲಯ ಕಛೇರಿಗಳು, ಮುಂತಾದವು ಸರ್ಕಾರದ ಒಡೆತನದಿಂದ ಕಳಚಿಬಿದ್ದು ಜನತೆಯ ಒಡೆತನಕ್ಕೆ ಸೇರುತ್ತವೆ. ಆದರೆ ಇದಕ್ಕಾಗಿ ಜನ ಅನಾವಶ್ಯಕ ಬಲ ಪ್ರದರ್ಶನವನ್ನಾಗಲೀ ಬಲಾತ್ಕಾರ ಕ್ರಮಗಳನ್ನಾಗಲೀ ಕೈಗೊಳ್ಳ ಬೇಕಾಗಿಲ್ಲ. ನಮ್ಮ ಶಾಸನೋಲ್ಲಂಘನೆ ಶಾಂತಿಯುತವಾಗಿ ಸಂಪೂರ್ಣವಾಗಿ ನಡೆಯಬೇಕು. ಸರ್ಕಾರ 'ಬಲಕ್ಕೆ ನಡೆಯಿರಿ' ಎಂದು ಆಜ್ಞೆಯಿತ್ತರೆ ನಾವು ಸ್ವಲ್ಪವೂ ಹಿಂಜರಿಯದೇ ಎಡಕ್ಕೆ ನಡೆಯಬೇಕು. ಸರ್ಕಾರದ ವಿರೋಧ, ಪ್ರತಿಭಟನೆ, ಅಚಲವಾಗಿ ಸಶಕ್ತವಾದ ರೀತಿಯಲ್ಲಿರಬೇಕು. ಆದರೆ ಸವಿನಯ ಶಾಸನಭಂಗವನ್ನು ಅತ್ಯಂತ ಶಾಂತಿಯುತವಾಗಿ ನಡೆಸುವ ಮನೋಧರ್ಮವೇ ಅದರ ಮುಖ್ಯಪ್ರಾಣ. ಈ ಶಾಂತ ರೀತಿಯ ಉಲ್ಲಂಘನೆ ಸಾಧ್ಯವಾಗದೇ ಹೋದಲ್ಲಿ ಶೌರ್ಯಾಟೋಪ ಸಾಹಸ ಪ್ರದರ್ಶನಗಳಿಗಾಗಿ ಅದನ್ನು ಕೈಗೊಂಡಲ್ಲಿ, ಅಥವಾ ಕ್ರೋಧದ ಅಮಲಿನಿಂದಾಗಲಿ ಆಕ್ರೋಶದಿಂದಾಗಲಿ ಪ್ರತೀಕಾರ ಮನೋಭಾವದಿಂದಾಗಲಿ ನಡೆಸಿದರೆ ಅಂಥ ಶಾಸನಭಂಗ 'ಸವಿನಯ'ವಾಗುವುದಿಲ್ಲ. ಬದಲಾಗಿ ಸತ್ವದಲ್ಲಿಯೂ ವಾಸ್ತವ ದೃಷ್ಟಿಗೂ ಅದು 'ದುಷ್ಕೃತ್ಯ'ವಾಗುತ್ತದೆ. ಆದ್ದರಿಂದ ಇಂಥ ಸವಿನಯ ಶಾಸನಭಂಗ ಹೋರಾಟದಲ್ಲಿ ಪಾಲ್ಗೊಳ್ಳಲು ಎಂಥವರಾದರೂ ಅರ್ಹರು ಎಂದು ಸ್ವೀಕರಿಸಲು ಸಾಧ್ಯವಿಲ್ಲ."

ಭಾಷಣವನ್ನು ಮುಕ್ತಾಯ ಮಾಡುತ್ತಾ ಗಾಂಧೀಜಿ "ಸ್ವರಾಜ್ಯ ಧ್ವಜ ಬಾರ್ದೋಲಿಯ ಕ್ಷೇತ್ರದಲ್ಲಿ ಯಶಸ್ವಿಯಾಗಿ ನಿಂತ ಕೂಡಲೇ ಪಕ್ಕದ ತಾಲ್ಲೂಕಿನವರು ಅದನ್ನನುಸರಿಸಿ ತಮ್ಮ ಭೂಮಿಯಲ್ಲೂ ಈ ಧ್ವಜವನ್ನೇರಿಸಬೇಕು. ಜಿಲ್ಲೆಯಾದ ಮೇಲೆ ಜಿಲ್ಲೆ ಹೀಗೆ ಧ್ವಜಾರೋಹಣ ಮಾಡುತ್ತಾ ಕ್ರಮೇಣ ಭಾರತದ ಆದ್ಯಂತ ಸ್ವರಾಜ್ಯ ಧ್ವಜ ಮುಗಿಲಿನಲ್ಲಿ ಹಾರಾಡಬೇಕು. ಆದರೆ ಈ ವ್ಯಾಪಕ ಚಳುವಳಿ ಸಾಗುತ್ತಿರುವಾಗ ದೇಶದ ಯಾವುದೇ ಭಾಗದಲ್ಲಾಗಲೀ ಅತ್ಯಲ್ಪ ಹಿಂಸಾಚಾರ ತಲೆಹಾಕಿದರೂ ಸಹ ಈ ಚಳುವಳಿಯನ್ನು ಮುಂದುವರಿಸುವುದು ಕ್ಷೇಮವೂ ಅಲ್ಲ, ಅಪೇಕ್ಷಣೀಯವೂ ಅಲ್ಲ. ಸವಿನಯ ಶಾಸನಭಂಗ ಯಶಸ್ವಿಯಾಗಲು ದೇಶದಾದ್ಯಂತ ಅತ್ಯಂತ ಸೌಹಾರ್ದಪೂರ್ಣ ವಿಶ್ವಾಸ ಹಾಗೂ ಸುಂದರ ಸಾಮರಸ್ಯದ ಭಾವನೆ ತುಂಬಿ ಬರಬೇಕು. ಆದರೆ ಈ ಹೋರಾಟದಲ್ಲಿ ಪಾಲ್ಗೊಂಡಿರುವ ಜನತೆ ಯಾವ ಮೂಲ್ಲೆಯಲ್ಲಾದರೂ ಯಾವುದೇ ರೀತಿಯ ಹಿಂಸೆ ತಲೆಯೆತ್ತಿದರೆ ಇಡೀ ಚಳುವಳಿಯೇ ತನ್ನ ಶಾಂತ ಸ್ವರೂಪವನ್ನು ಕಳೆದುಕೊಂಡು ಬಿಡುತ್ತದೆ, ವೀಣೆಯ ತಂತಿ ಒಂದು ಕಡಿದು ಹೋದರೂ ಅಪಸ್ವರವೇ ಹೊರಹೊಮ್ಮುವಂತೆ."

ಕೆಲವು ದಿನಗಳನಂತರ ಬೊಂಬಾಯಿಯ ಮೂಲಕ ಬಾರ್ದೋಲಿಗೆ ಹೊರಟರು. ನವೆಂಬರ್ ೧೭ರಂದು ಇಂಗ್ಲೆಂಡಿನ ರಾಜಕುಮಾರ (ಪ್ರಿನ್ಸ್ ಆಫ್ ವೇಲ್ಸ್) ಬೊಂಬಾಯಿಗೆ ಬಂದಿಳಿಯುವ ದಿನದಿಂದಲೇ ಶಾಸನಭಂಗ ಚಳುವಳಿಯೂ ಪ್ರಾರಂಭವಾಗಬೇಕೆಂದು ಗೊತ್ತಾಗಿತ್ತು. ರಾಜ ಮನೆತನದ ಈ ಅತಿಥಿಗೆ ಭಾರತದ ಆದ್ಯಂತ ಮುಷ್ಕರಗಳ ನಿಷೇಧಾತ್ಮಕ ಸ್ವಾಗತ ದೊರೆಯಿತು.

ಬೊಂಬಾಯಿನಲ್ಲಿ ಅಂದು ಸಂಪೂರ್ಣ ಹರತಾಳ. ಕೆಲವು ಯೂರೋಪಿಯನ್ನರು, ಆಂಗ್ಲೋ ಇಂಡಿಯನರು ಮತ್ತು ಪಾರ್ಸಿಗಳಷ್ಟೇ ಇದಕ್ಕೆ ಅಪವಾದವಾಗಿದ್ದವರು. ಕೆಲವು ಹಿಂದೂ ಮತ್ತು ಮುಸ್ಲಿಂ ಪ್ರಮುಖರೂ ಹರತಾಳ ಆಚರಿಸಲಿಲ್ಲ. ದೊಡ್ಡದೊಂದು ವಿದೇಶಿ ವಸ್ತ್ರದಹನ ಕಾರ್ಯಕ್ರಮಕ್ಕೆಂದು ಪರೇಲದಲ್ಲಿ ಬೊಂಬಾಯಿನ ನಾಗರಿಕರು ಅಗಾಧ ಸಂಖ್ಯೆಯಲ್ಲಿ ಸೇರಿದ್ದರು. ಗಾಂಧೀಜಿ ಆ ಸಭೆಯನ್ನು ಕುರಿತು ಮಾತನಾಡಿದರು. ಬಾರ್ದೋಲಿಯಲ್ಲಿ ತಾವು ಸದ್ಯದಲ್ಲೇ ಸವಿನಯ ಶಾಸನಭಂಗ ಚಳುವಳಿ ಪ್ರಾರಂಭಿಸುವುದಾಗಿಯೂ ಅಲ್ಲಿ ಬಹುಶಃ ಸೈನಿಕರ ಗುಂಡುಗಳನ್ನೂ ಎದುರಿಸಬೇಕಾಗಬಹುದೆಂದು ನುಡಿದರು. ಜನ ಕುತೂಹಲದಿಂದ ಆಲಿಸಿದರು. ಕೊನೆಯಲ್ಲಿ "ಬಾರ್ದೋಲಿಯಲ್ಲಿ ಏನೇ ಆಗಲಿ ನೀವು ಯಾವ ಪರಿಸ್ಥಿತಿಯಲ್ಲೂ ತಾಳ್ಮೆಗೆಟ್ಟು ಹುಚ್ಚರಾಗಬೇಡಿ "ಎಂದು ಬೊಂಬಾಯಿಯ ಜನತೆಯನ್ನು ಎಚ್ಚರಿಸಿದರು.

ಈ ಬೃಹತ್ ಸಭೆಯಲ್ಲಿ ಗಾಂಧೀಜಿ ಮಾತನಾಡುತ್ತಿರುವ ಸಮಯಕ್ಕೆ ಮತ್ತೊಂದೆಡೆ ದೊಂಬಿಕಾರರು ಜನರನ್ನು ಬೆದರಿಸಿ ಸಂಚಾರವನ್ನು ಸ್ಥಗಿತಗೊಳಿಸಲು ಪ್ರಾರಂಭಿಸಿದರು. ಮಧ್ಯಾಹ್ನದ ಹೊತ್ತಿಗೆ ಜನ ತಮ್ಮ ಜಯದಿಂದ ಉನ್ಮತ್ತರಾಗಿ ಕೋಪಾವೇಶದಿಂದ ಮುನ್ನುಗ್ಗಿದರು. ಗಂಭೀರವಾದ ಅಶಾಂತ ಪರಿಸ್ಥಿತಿ ಉತ್ಪನ್ನವಾಗಬಹುದೆಂದೂ ನಗರದ ವಿವಿಧ ಕಡೆಗಳಲ್ಲಿ ವಿಪರೀತ ಅಶಿಸ್ತು ತಲೆದೋರಿದೆಯೆಂದೂ ಗಾಂಧೀಜಿಗೆ ತಿಳಿಸಲಾಯಿತು. ತಕ್ಷಣ ಈ ದೊಂಬಿಯನ್ನು ತಡೆಗಟ್ಟಲು ಅವರು ಮುಂದಾದರು. ಪಾರ್ಸಿ ಜನಾಂಗ ಇತರ ನಾಗರಿಕರೆಲ್ಲರ ಸಾಮೂಹಿಕ ಪ್ರತಿಭಟನೆಯಲ್ಲಿ ಪಾಲ್ಗೊಳ್ಳದೇ ರಾಜ ಕುಮಾರರಿಗೆ, ಸ್ವಾಗತ ಬಯಸಲು ಸಿದ್ಧರಾದುದು ಜನತೆಯ ಈ ಆಕ್ರೋಶಕ್ಕೆ ಕಾರಣವಾಗಿತ್ತು. ಆ ಸ್ವಾಗತ ಸಮಾರಂಭದಿಂದ ಅವರು ಹಿಂತಿರುಗುತ್ತಿರುವಾಗ ಅವರ ಮೈ ಮೇಲಿನ ವಿದೇಶಿ ವಸ್ತ್ರಗಳನ್ನೂ ಟೋಪಿಗಳನ್ನೂ ಜನ ಕಿತ್ತು ಬೆಂಕಿಗೆ ಹಾಕಿದರು. ಹೆಂಡದಂಗಡಿಗಳನ್ನು ಧ್ವಂಸ ಮಾಡಿದರು. ಕೆಲವು ಟ್ರಾಮ್ ಬಂಡಿಗಳನ್ನು ನಾಶ ಮಾಡಲಾಯಿತು. ಪೋಲೀಸ್ ಠಾಣೆಯೊಂದನ್ನೂ ಪಕ್ಕದ ಕಟ್ಟಡವನ್ನೂ ಸುಟ್ಟರು. ನಾಲ್ವರು ಪೋಲೀಸಿನವರು ಜನತೆಯ ದೊಂಬಿಯಲ್ಲಿ ಸತ್ತರು. ಕೆಲವರಿಗೆ ಗಾಯವಾಯಿತು. ಅಪರಿಮಿತ ಜನಸಂದಣಿಯಿಂದ ತಡೆಯಲಾಗದ ಗದ್ದಲ ಗೊಂದಲ ಎಲ್ಲೆಲ್ಲೂ ತುಂಬಿತ್ತು. ಗಾಂಧೀಜಿ ಅಲ್ಲಿಗೆ ಧಾವಿಸಿದರು. ಅವರನ್ನು ಕಂಡೊಡನೆ ಇಡೀ ಜನಸ್ತೋಮ ಅತ್ಯುತ್ಸಾಹದಿಂದ ಹುಚ್ಚರಾದರು. 'ಮಹಾತ್ಮಾ ಗಾಂಧೀ ಕಿ ಜೈ' ಮುಗಿಲು ಮುಟ್ಟಿತು. ಗಾಂಧೀಜಿ ಇದನ್ನು ಕಂಡು ಕ್ರುದ್ಧರಾದರು. ಜನರನ್ನು ಭರ್ತ್ಸನೆ ಮಾಡಿದರು. ಚದುರಲು ಅಪ್ಪಣೆ

ಮಾಡಿದರು. ಗಾಯಗೊಂಡ ಪೋಲೀಸರಿಗೆ ಶೈತ್ಯೋಪಚಾರ ಮಾಡುತ್ತಾ ಗಾಂಧೀಜಿ ಸ್ವಲ್ಪ ಹೊತ್ತು ಅಲ್ಲೇ ನಿಂತರು. ಅವರನ್ನು ಆಸ್ಪತ್ರೆಗೆ ಸಾಗಿಸಿದನಂತರ ತಾವು ಅಲ್ಲಿಂದ ಹೊರಟರು.

ನಗರದ ನಾನಾ ಭಾಗಗಳಿಂದ ಅತಿರೇಕದ ಹಿಂಸಾಚಾರ, ಕೊಲೆ, ದೊಂಬಿ, ದುರಾಚಾರಗಳ ವರದಿಗಳು ರಾತ್ರಿ ಹತ್ತರ ವರೆಗೂ ಒಂದೇ ಸಮನೆ ಬರುತ್ತಿದ್ದವು. ಈ ಭಯಾನಕ ಪರಿಸ್ಥಿತಿಯನ್ನು ಕಣ್ಣಾರೆ ಕಂಡ ಗಾಂಧೀಜಿಗೆ ತಡೆಯಲಾಗದಷ್ಟು ಆಘಾತವಾಯಿತು. ನಿರಾಶೆ ವಿಷಣ್ಣತೆಗಳಿಂದ ತಪ್ತರಾಗಿ ರಾತ್ರಿ ಒಂದು ಗಂಟೆಯ ವರೆಗೂ ಅವರು ಎಚ್ಚರವಾಗಿದ್ದರು. ದುಃಖ ಸಂಕಟಗಳ ದುರ್ಭರ ವೇದನೆಯಿಂದ, ತಾವು ಚಳುವಳಿಯ ಬಗ್ಗೆ ಉನ್ನತ ಆಶೋತ್ತರಗಳನ್ನಿಟ್ಟು ಕೊಂಡುದನ್ನು ಸ್ಮರಿಸಿದರು. ಅವೆಲ್ಲವೂ ಈಗ ಗಾಳಿಯ ಪಾಲಾಗಿದ್ದವು. ವಿಪರೀತ ಹಿಂಸಾ ಮನೋಧರ್ಮ ಅನಿರ್ಬಂಧಿತವಾಗಿ ಹೆಚ್ಚಿತ್ತು. ಇಂತಹ ಕ್ರೋಧ, ಹಿಂಸೆಗಳ ಹುಚ್ಚು ಉದ್ವೇಗದ ವಿರುದ್ಧ ಮೊದಲಿನಿಂದಲೇ ತಾವು ಕ್ರಮ ಕೈಗೊಳ್ಳುವ ಜಾಣ್ಮೆ ಇಲ್ಲವಾಯಿತೇ? ಎಂದುಕೊಂಡರು. ತೀವ್ರ ನಿರಾಶೆಯಿಂದ ಬೇಗುದಿಗೊಂಡು ಪದೇ ಪದೇ ಆತ್ಮನಿಂದೆಯ ಸ್ವಗತ ನುಡಿಗಳನ್ನೇ ಆಡಿಕೊಳ್ಳುತ್ತಿದ್ದರು.

ಈ ದೊಂಬಿಗಳ ಹಿಂಸಾಚಾರ ಸಿಡಿದೆದ್ದುದರ ಹಿಂದೆ ಪ್ರಬಲವಾದ ಗುಪ್ತ ಶಕ್ತಿಗಳು ಕೆಲಸ ಮಾಡುತ್ತಿವೆಯೆಂದೂ ಗಾಂಧೀಜಿಗೆ ಮನವರಿಕೆಯಾಯಿತು. ಬೊಂಬಾಯಿ ನಗರದಲ್ಲಿ ಸಾರ್ವತ್ರಿಕ ಹಿಂಸಾಮಯ ದೊಂಬಿಗಳನ್ನು ಈ ಅಜ್ಞಾತ ದುಷ್ಟಶಕ್ತಿಗಳು ಪ್ರಚೋದಿಸುತ್ತಾ ಮುಂದುವರಿದರೆ ಬಾರ್ದೋಲಿಯ ಸತ್ಯಾಗ್ರಹವು ಒಂದು ಮರೀಚಿಕೆಯಾದೀತು ಎನಿಸಿತು ಗಾಂಧೀಜಿಗೆ. "ಭಗವಂತ ನನ್ನನ್ನು ಕಾಪಾಡಿದ. ಬೊಂಬಾಯಿಗೆ ಬರಲು ನನಗಿಚ್ಛೆಯಿರಲಿಲ್ಲ. ಭಗವಂತನೇ ಕಡ್ಡಾಯವಾಗಿ ನನ್ನನ್ನಿಲ್ಲಿಗೆ ಕರೆತಂದು ಈ ದೃಶ್ಯಗಳನ್ನು ಅನಾವರಣ ಮಾಡಿದ್ದಾನೆ. ನಾನಿಂದು ಅಹಮದಾಬಾದಿನಲ್ಲೇ ಉಳಿದಿದ್ದರೆ ಇಲ್ಲಿನ ಹಿಂಸಾಚಾರಗಳನ್ನು ಬಹುಶಃ ಅಲ್ಪವೆಂದೇ ಭಾವಿಸಿ ಕಡೆಗಣಿಸುತ್ತಿದ್ದೆನೋ ಏನೋ. ನನ್ನ ಕಣ್ಣೆದುರಿಗೇ ನಡೆದು ಹೋದ ಈ ರಾಕ್ಷಸೀ ದೃಶ್ಯಗಳನ್ನು ನಾನೆಂದಿಗೂ ತಳ್ಳಿ ಹಾಕಲಾರೆ. ಇಂತಹ ಉತ್ಕಟ ಪರಿಸ್ಥಿತಿಯಲ್ಲಿ ನಾನು ಬಾರ್ದೋಲಿಯ ಸವಿನಯ ಶಾಸನಭಂಗವನ್ನೂ ಪ್ರಾರಂಭಿಸಿ ಬಿಟ್ಟರೆ ಮತ್ತೆಷ್ಟು ಭೀಕರವಾದ ದುರ್ಘಟನೆಗಳು ಸಂಭವಿಸುವುವೋ ಹೇಳುವರಾರು?"

ಅದೇ ರಾತ್ರಿ ತಮ್ಮ ಸೂರತ್ ಮತ್ತು ಬಾರ್ದೋಲಿ ಕಾರ್ಯಕ್ರಮಗಳನ್ನು ಗಾಂಧೀಜಿ ರದ್ದುಪಡಿಸಿದರು. ಮಗ ದೇವದಾಸನನ್ನು ಸೂರತ್ತಿಗೆ ಕಳುಹಿಸಿ ಸವಿನಯ ಶಾಸನಭಂಗದ ಸಿದ್ಧತೆಯ ಏರ್ಪಾಟುಗಳನ್ನೆಲ್ಲಾ ನಿಲ್ಲಿಸಬೇಕೆಂದು ಅಪ್ಪಣೆ ಮಾಡಿದರು.

ಮರುದಿನ ಬೆಳಿಗ್ಗೆ ನವೆಂಬರ್ ೧೮. ಪಾರ್ಸಿಗಳು, ಆಂಗ್ಲೋ ಇಂಡಿಯನ್ನರು, ಯಹೂದಿಗಳು ರೋಷೋನ್ಮತ್ತರಾಗಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಪ್ರತೀಕಾರ ದಾಹದಿಂದ ಸಮರಕ್ಕನುವಾದರು. ಕಾಂಗ್ರೆಸ್ ಸದಸ್ಯರು ಈ ಮಧ್ಯೆ ಜನರನ್ನು

ಸಾಂತ್ವನಗೊಳಿಸಲು ನಗರದಲ್ಲಿ ಸುತ್ತಾಡಿದರು. ಆದರೆ ಪರಿಸ್ಥಿತಿ ಹತೋಟಿ ಮೀರಿತ್ತು. ಪ್ರತೀಕಾರಕ್ಕೆ ಪ್ರತೀಕಾರ ಮರುಕಳಿಸುತ್ತಿತ್ತು. ಹೇಗೆ ಪರ್ಯವಸಾನ ವಾಗುವುದೆಂದು ಯಾರಿಗೂ ತಿಳಿದಿರಲಿಲ್ಲ.

ಗಾಂಧೀಜಿಗೆ ತಮ್ಮ ಸಮಸ್ತ ಶಕ್ತಿಯೂ ಉಡುಗಿ ಹೋದಂತೆ ಭಾಸವಾಯಿತು. "ಜನ ಜಂಗುಳಿಯ ಮೇಲೆ ಪ್ರಭಾವ ಬೀರಲು ನಾನೇಕೆ ಅಸಮರ್ಥನಾದೆ? ಅಹಿಂಸಾ ಶಕ್ತಿ ನನ್ನಲ್ಲೆಲ್ಲಿದೆ? ನಾನೇನು ಮಾಡಬೇಕಾಗಿತ್ತು? ಸಂಕಟಕ್ಕೊಳಗಾದ ಜನರನ್ನು ಸರ್ಕಾರದ ಕಡೆಗೆ ಸಹಾಯ ಬೇಡಲು ಹೋಗಿ ಎಂದು ನಾನು ಹೇಳಲಾರದೇ ಹೋದೆ. ಹೇಳಲು ಸಾಧ್ಯವೂ ಇರಲಿಲ್ಲ. ನ್ಯಾಯ ನಿರ್ಣಯ ಮಾಡಲು ಬೇರೆ ಪಂಚಾಯಿತಿಗಳು ನಮ್ಮಲ್ಲಿಲ್ಲ. ಶಾಂತಿಯನ್ನು ತರಬಲ್ಲ ಬೇರಾರೂ ನನಗೆ ಕಾಣಲಿಲ್ಲ" ಎಂದು ಅಳಲಿಟ್ಟರು. ಉನ್ಮತ್ತ ಜನಜಂಗುಳಿಯ ಹಿಂಸಾ ದೊಂಬಿಗೆ ಬಲಿಯಾದವರ ಸಂಕಟವನ್ನು ಅವರು ನಿವಾರಿಸುವುದಾದರೂ ಹೇಗೆ? ಆ ಸಮಯಕ್ಕೆ ತಮ್ಮ ಜೀವನವನ್ನೇ ತ್ಯಾಗ ಮಾಡಲು ಅವರು ಹಿಂಜರಿಯುತ್ತಿರಲಿಲ್ಲ. ಆದರೆ ಅದರಿಂದಾಗುವ ಪ್ರಯೋಜನವಾದರೂ ಏನು? ಎಂದು ತವಕ ಪಟ್ಟರು. "ಸಕಾರಣವಾಗಿ ಕ್ರೋಧದಿಂದ ಬೆಂಕಿಯಾಗಿರುವ ಕ್ರಿಶ್ಚಿಯನ್ನರ ಅಥವಾ ಪಾರ್ಸಿಗಳ ಕೈಗೆ ಸಿಕ್ಕಿ ನಾನು ನುಚ್ಚುನೂರಾದರೆ ಅದರಿಂದ ಮತ್ತೆ ರಕ್ತಪಾತ ಅಗಾಧವಾಗಿ ಹೆಚ್ಚೀ ಆದೀತು. ಒಬ್ಬ ಸೈನಿಕನಂತೆ ಅನಿವಾರ್ಯ ಅಪಾಯಗಳನ್ನೆದು ರಿಸಲೇ ಬೇಕಾದರೂ ಎಚ್ಚರಗೇಡಿಯಾಗಿ ಕಡೆ ಹಾಯ್ದು ಸಾವಿಗೆ ತುತ್ತಾಗುವುದು ಸರಿಯಲ್ಲ. ಹಾಗಾದರೆ ನಾನು ಮಾಡಬೇಕಾದುದಾದರೂ ಏನು?"

ಹೀಗೆ ಅತಿ ತೀಕ್ಷ್ಣವಾದ ಆತ್ಮಪರೀಕ್ಷೆಗೊಳಗಾದ ಗಾಂಧೀಜಿಗೆ ಉಪವಾಸದ ಮಾರ್ಗ ಹಠಾತ್ತನೆ ಗೋಚರವಾಯಿತು. "ಮಾನವರ ಕೈಯಲ್ಲಿ ಬಲಿಯಾಗಿ ನಾನು ಸಾಯಲಾರೆ ಎಂದಾದರೆ ಭಗವಂತನ ಪಾದಗಳಲ್ಲಿ ಆತ್ಮಾರ್ಪಣೆ ಮಾಡಿ ಅಸುನೀಗು ವುದೇ ಪರಮ ಧರ್ಮ. ನನ್ನ ಹೃದಯಾಂತರಾಳದ ಪ್ರಾರ್ಥನೆಗೆ ಭಗವಂತ ಕಿವಿ ಗೊಡುವವರೆಗೂ ನಿರಶನ ವ್ರತ ಕೈಗೊಳ್ಳುವುದೇ ಸರಿ. ನಿರ್ಗತಿಕನಾಗಿರುವ ನನಗೆ ಈಗ ಅದೊಂದೇ ದಾರಿ. ಜನತೆಯ ಮುಗ್ಧ ಮನಸ್ಸಿನ ಶಕ್ತಿಯನ್ನಾಧರಿಸಿ ನಾನು ವ್ಯವಹರಿಸಲು ಶಕ್ತನಾಗಲಿಲ್ಲ. ನವೆಂಬರ್ ೧೭ರಂದು ನಾನೇ ಹೋಗಿ ಮಾಡಿಕೊಂಡ ಮನವಿ ರೂಪದ ಚೆಕ್ಕನ್ನು ಅವರು ಗೌರವಿಸದೇ ನಿರಾಕರಿಸಿದ್ದಾರೆ. ಅವರಲ್ಲಿ ನಾನು ವಿಶ್ವಾಸಾರ್ಹತೆಯನ್ನೇ ಕಳೆದುಕೊಂಡಿದ್ದೇನೆ. ಹೇಗಾದರೂ ಪ್ರಯತ್ನ ಪಟ್ಟು ಪುನಃ ಅದನ್ನು ಸಂಪಾದಿಸುವುದೇ ನನ್ನ ಕರ್ತವ್ಯ. ಆ ಪ್ರಯತ್ನದಲ್ಲಿ ಸತ್ತರೂ ಚಿಂತೆಯಿಲ್ಲ. ಭಗವಂತನ ಇಚ್ಛೆ ನೆರವೇರುವಂತೆ ಕಿಂಕರನಾಗಿ ಕೆಲಸ ಮಾಡಲು ಅವನ ಕೃಪೆಯನ್ನೇ ಆಶ್ರಯಿಸಿ ಶಕ್ತಿ ಪಡೆಯಬೇಕು. ವಿನೀತನಾಗಿ ಮಣಿದು, ಅವನಡಿಯ ಧೂಳಿನಲ್ಲಿ ಮೈಗೆಡವಿ, ಅವನು ನೀಡಿರುವ ಆಹಾರವನ್ನು ಬಿಟ್ಟು ಉಪವಾಸ ಮಾಡುವ ವ್ರತ ದಿಂದಲೇ ಅವನ ಕೃಪೆ ಲಭಿಸೀತು. ನನ್ನಲ್ಲಿ ಶ್ರದ್ಧೆಯಿದೆ ಎಂದು ಸಾವಿರ ರೀತಿಯಲ್ಲಿ ನಾನು ಭಗವಂತನನ್ನು ಒಪ್ಪಿಸಬೇಕು. ಆತನ ಕೈಂಕರ್ಯ ಕೈಗೊಳ್ಳಲು ನಾನು

ಅನರ್ಹನಾದರೆ ನನ್ನನ್ನು ತನ್ನ ಪಾದಾರವಿಂದಕ್ಕೆ ಸೇರಿಸಿಕೊಳ್ಳಲಿ. ತನ್ನ ಮಹೋದ್ದೇಶಗಳು ಈಡೇರುವಂತೆ ವರ್ತಿಸಲು ನನ್ನ ಸಾಮರ್ಥ್ಯ ಪುನರಾವರ್ತಿಸುವಂತೆ ಅನುಗ್ರಹಿಸಲಿ ಎಂದು ಭಗವಂತನಲ್ಲಿ ಬಿನ್ನೈಸಿಕೊಳ್ಳುತ್ತೇನೆ."

ನವಂಬರ್ ೧೯ರಂದು ತಾವು ನಿರಶನ ವ್ರತ ಕೈಗೊಳ್ಳುವುದಾಗಿ ಗಾಂಧೀಜಿ ಘೋಷಿಸಿದರು :

"ಎರಡು ದಿನಗಳಿಂದ ನಾನನುಭವಿಸಿದ ತೀವ್ರ ವೇದನೆ ಹೇಳ ತೀರದು. ಬೆಳಗಿನ ಜಾವ ಮೂರೂವರೆ ಗಂಟೆಯಲ್ಲಿ ಪ್ರಶಾಂತ ಹೃದಯದಿಂದ ಇದನ್ನು ಬರೆಯುತ್ತಿದ್ದೇನೆ. ಎರಡು ಗಂಟೆಯ ಧ್ಯಾನ ಪ್ರಾರ್ಥನೆಗಳಿಂದ ಈ ಶಾಂತಿ ಲಭಿಸಿತು. ಇಂದಿನಿಂದ ಉಪವಾಸ ಕೈಗೊಂಡಿದ್ದೇನೆ. ಬೊಂಬಾಯಿನ ಹಿಂದೂಗಳೂ, ಮುಸಲ್ಮಾನರೂ, ಇಲ್ಲಿನ ಪಾರ್ಸಿ, ಕ್ರಿಶ್ಚಿಯನ್, ಮತ್ತು ಯಹೂದಿಗಳೊಡನೆ ಶಾಂತಿಯ ಒಪ್ಪಂದಕ್ಕೆ ಬರುವವರೆಗೆ, ಅಸಹಕಾರ ಸತ್ಯಾಗ್ರಹಿಗಳು ಸಹಕಾರ ಮಾಡುತ್ತಿರುವ ಪ್ರಜೆಗಳೊಂದಿಗೆ ರಾಜಿಯಾಗುವ ವರೆಗೂ, ನಾನು ಆಹಾರ ಪಾನೀಯಗಳನ್ನು ತೆಗೆದುಕೊಳ್ಳುವುದಿಲ್ಲ.

"ಎರಡು ದಿನಗಳಿಂದ ನಾನು ಕಂಡ ಸ್ವರಾಜ್ಯದ ವಿರೂಪ ಮುಖ ಅಸಹ್ಯ ಹುಟ್ಟಿಸಿದೆ. ಹಿಂದೂ ಮುಸ್ಲಿಮರು ಐಕ್ಯವಾಗಿ ಮಿಕ್ಕ ಹಿಡಿಜನರಾದ ಪಾರ್ಸಿ, ಕ್ರಿಶ್ಚಿಯನ್ ಯಹೂದಿಗಳಿಗೆ ಕುತ್ತಾಗಿ ಪರಿಣಮಿಸಿದ್ದಾರೆ. ಅಸಹಕಾರಿಗಳು ಹೇಳಿಕೊಳ್ಳುವ ಅಹಿಂಸೆ ಸಹಕಾರಿಗಳ ಹಿಂಸೆಗಿಂತಲೂ ಅಸಹನೀಯವಾಗಿ ಬಿಟ್ಟಿದೆ. ಅಹಿಂಸೆಯನ್ನು ಹೇಳುತ್ತಾ ಭಿನ್ನಮತದವರಲ್ಲಿ ಭೀತಿ ಹುಟ್ಟಿಸಿದ್ದೇವೆ. ಅದರಿಂದ ನಮ್ಮ ದೇವರನ್ನೇ ನಿರಾಕರಿಸಿ ದ್ದೇವೆ. ಕೊರಾನ್, ಝುಂಡವೆಸ್ತಾ, ಟಾಲ್ಮಡ್ ಅಥವಾ ಗೀತಾ, ಯಾವುದರ ಮೂಲಕ ದರ್ಶನ ಮಾಡಿದರೂ ಭಗವಂತ ಒಬ್ಬನೇ. ಅವನು ಸತ್ಯ ಸ್ವರೂಪಿ. ಪ್ರೇಮ ಸ್ವರೂಪಿ. ಈ ಮೂಲಶ್ರದ್ಧೆಯನ್ನು ಸ್ಥಿರಪಡಿಸುವುದೇ ನನ್ನ ಜೀವಿತೋದ್ದೇಶ. ಬೇರಾವುದಕ್ಕೂ ನಾನು ಬದುಕಲಾರೆ. ಇಂಗ್ಲಿಷಿನವನನ್ನಾಗಲಿ, ಬೇರೆ ಯಾರನ್ನೇ ಆಗಲಿ ನಾನು ದ್ವೇಷಿಸ ಲಾರೆ. ಅವರು ನಿರ್ಮಿಸಿರುವ ಅನೇಕ ವ್ಯವಸ್ಥಾ ಪದ್ಧತಿಗಳನ್ನೂ ಅದರಲ್ಲೂ ಭಾರತ ದಲ್ಲಿನ ಅವರ ಪದ್ಧತಿಗಳನ್ನು ವಿರೋಧಿಸಿ ಕಟುವಾಗಿ ಬರೆದಿದ್ದೇನೆ, ಮಾತನಾಡಿದ್ದೇನೆ. ಮುಂದೆಯೂ ಹಾಗೆ ಮಾಡಿಯೇನು ; ಆದರೆ ಒಂದು ಪದ್ಧತಿಯನ್ನು ಖಂಡಿಸಿದಾಗ ಅದರ ಹಿಂದಿನ ಮನುಷ್ಯನನ್ನು ಖಂಡಿಸಿದೆ ಎಂದು ತಿಳಿಯಬಾರದು. "ಆ ಮನುಷ್ಯನನ್ನು ನಿನ್ನಂತೆಯೇ ಪ್ರೀತಿಸು" ಎಂದು ನನ್ನ ಧರ್ಮ ಆಜ್ಞೆ ಮಾಡುತ್ತಿದೆ. ಈ ಉತ್ಕಟ ಸಮಯದಲ್ಲಿ ನಾನದನ್ನು ಸ್ಥಿರಪಡಿಸದೇ ಹೋದಲ್ಲಿ ದೇವರನ್ನು ನಿರಾಕರಿಸಿದಂತೆ.

"ಪಾರ್ಸಿಗಳ ಬಗ್ಗೆ ನಾನು ಹೇಳಿದ ಪ್ರತಿಯೊಂದು ಮಾತೂ ನಿಜ. ಅವರನ್ನೂ, ಅವರ ಮಾನವನ್ನೂ, ಹಿಂದೂಗಳು ಮುಸಲ್ಮಾನರೂ ತಮ್ಮ ಜೀವ ಕೊಟ್ಟು ರಕ್ಷಿಸದೇ ಹೋದಲ್ಲಿ ಸ್ವಾತಂತ್ರ್ಯಕ್ಕೆ ಅನರ್ಹರಾಗುತ್ತೇವೆ. ಹಿಂದೂ, ಮುಸಲ್ಮಾನರು ಮುಕ್ತ ಹೃದಯದಿಂದ ತಮ್ಮ ಅಕೃತ್ಯಗಳಿಗೆ ಪಶ್ಚಾತ್ತಾಪ ವ್ಯಕ್ತಮಾಡದೇ ಹೋದಲ್ಲಿ ಕಳೆದ ಹದಿನೇಳನೇ ತಾರೀಕು ನಾನು ಭೇಟಿಯಾದ ಪಾರ್ಸಿ, ಸ್ತ್ರೀ ಪುರುಷ ಸಮೂಹದ

ಹೃದಯವಿದ್ರಾವಕ ದೈನ್ಯತೆಯನ್ನು ಮತ್ತೆ ಎದುರಿಸಲಾರೆ. ಭಾರತೀಯ ಕ್ರಿಶ್ಚಿಯನ್ನರನ್ನು ನಮ್ಮ ಬಂಧುಗಳಂತೆ ಜೀವವನ್ನೇ ಪಣವಾಗಿಟ್ಟು ರಕ್ಷಿಸುವುದು ಕರ್ತವ್ಯ. ಅವರ ನಷ್ಟವನ್ನು ತುಂಬಿಕೊಟ್ಟು ಪರಿಹಾರ ಸೂಚಿಸಬೇಕು. ಇಲ್ಲದಿದ್ದಲ್ಲಿ ಪೂರ್ವ ಆಫ್ರಿಕಾ ದಿಂದ ಹಿಂದಿರುಗುತ್ತಿರುವ ಗೆಳೆಯ ಆಂಡ್ರೂಸ್‌ರನ್ನು ನಾನು ಹೇಗೆ ಸಂಧಿಸಲಿ? ಪಾರ್ಸಿಗಳಾಗಲಿ, ಕ್ರಿಶ್ಚಿಯನ್ನರಾಗಲಿ ಆತ್ಮರಕ್ಷಣೆಗಾಗಿಯೋ ಪ್ರತೀಕಾರ ಬುದ್ಧಿ ಯಿಂದಲೋ ನಮ್ಮಲ್ಲಿ ಕೆಲವರಿಗೆ ಅಕೃತ್ಯವೆಸಗಿದ್ದರೆ ಈಗ ಅದನ್ನು ಮರೆಯೋಣ.

"ಬಹುಮಟ್ಟಿಗೆ ನನ್ನ ಕಾರಣದಿಂದಾಗಿ ಉದ್ಭವವಾದ ಶಕ್ತಿಗಳಿಗೆ ಬಲಿಯಾಗಿ ನೊಂದಿರುವ ಈ ಹಿಡಿಜನ ಸ್ತ್ರೀ ಪುರುಷರಿಗೆ ನನ್ನ ಶಕ್ತಿಮೀರಿ ಸಹಾಯ ಮಾಡ ಬೇಕಾದುದು ಧರ್ಮ. ಪ್ರತಿಯೊಬ್ಬ ಹಿಂದೂವೂ ಮುಸಲ್ಮಾನನೂ ಹಾಗೆಯೇ ಮಾಡಲು ಆಹ್ವಾನಿಸುತ್ತೇನೆ. ಆದರೆ ಯಾರೂ ಉಪವಾಸ ಸತ್ಯಾಗ್ರಹವನ್ನು ಕೈ ಗೊಳ್ಳಕೂಡದು. ಭಕ್ತಿ ಪರವಶತೆಯ ಪ್ರಾರ್ಥನೆಗೆ ಉತ್ತರ ರೂಪವಾಗಿ ಮಾತ್ರ ಉಪವಾಸವ್ರತ ಸ್ಫುರಣವಾದೀತು; ಅಂತರಾತ್ಮನ ಹಂಬಲ ಪ್ರಕಟವಾದಾಗ ಬಂದೀತು. ಹಿಂದೂಗಳೂ ಮುಸಲ್ಮಾನರೂ ಮನೆಗಳಿಗೆ ಹಿಂತಿರುಗಿ ಕ್ಷಮೆಗಾಗಿ ಭಗವಂತನಲ್ಲಿ ಮೊರೆಯಿಟ್ಟು ಆ ದುಃಖಿತಪ್ತ ಭಿನ್ನಮತೀಯ ಬಾಂಧವರನ್ನು ಹೃದಯಾಂತರಾಳ ದಿಂದ ಪ್ರೀತಿಸಿ ಸ್ನೇಹ ಬೆಳಸಲಿ.

"ನನ್ನ ಬಗ್ಗೆ ಸಹಾನುಭೂತಿಯ ಮಳೆಗರೆಯಬೇಕಾದ ಕಾರಣವಿಲ್ಲ. ಅದರ ಅಗತ್ಯವೂ ಇಲ್ಲ. ನಾನದಕ್ಕೆ ಅರ್ಹನೂ ಅಲ್ಲ. ಆದರೆ ವಿನಾಶಕ ದುಷ್ಟಶಕ್ತಿಗಳನ್ನು ಹದ್ದಿ ನಲ್ಲಿಡುವ ನೈತಿಕಶಕ್ತಿ ಮರಳಿ ಬರುವಂತೆ ಎಲ್ಲರೂ ಅವಿಶ್ರಾಂತವಾಗಿ ಶ್ರಮಿಸಬೇಕು. ಇದೊಂದು ಸತ್ಯವಾದ ಉಗ್ರ ಹೋರಾಟ. ಇದರಲ್ಲಿ ಕಪಟವಾಗಲಿ ವಂಚನೆಯಾಗಲಿ ಸಲ್ಲದು. ನಮ್ಮ ಹೋರಾಟದಲ್ಲಿ ಮುಂದಿನ ಹೆಜ್ಜೆ ಇಡುವ ಮುನ್ನ ನಮ್ಮ ಹೃದಯ ಗಳು ಶುದ್ಧವಾಗಲೇ ಬೇಕು.

"ನಮ್ಮ ಮುಸಲ್ಮಾನ ಸೋದರರಿಗೆ ಒಂದು ವಿಶೇಷ ಮನವಿ. ಖಿಲಾಫತ್ ಒಂದು ಧರ್ಮಸಮರವೆಂದೇ ನಾನದರಲ್ಲಿ ಪ್ರವೇಶಿಸಿದ್ದೇನೆ. ಹಿಂದೂಗಳೂ ಮುಸಲ್ಮಾನರೂ ಪರಸ್ಪರ ವೈರವನ್ನೇ ಸಾಧಿಸಿ ಸಹಜ ಶತ್ರುಗಳೆಂದು ಭಾವಿಸಿದರೆ ದೇವರಿಗೆ ನಾವಿಬ್ಬರೂ ದ್ರೋಹ ಬಗೆದಂತೆ, ಅದಕ್ಕಾಗಿ ನಾನು ಹಿಂದೂ ಮುಸ್ಲಿಂ ಐಕ್ಯತೆಗೆ ಶ್ರಮಿಸುತ್ತಿದ್ದೇನೆ. ಈ ಐಕ್ಯತೆಯಿಲ್ಲದೆ ಭಾರತ ಎಂದೂ ಸ್ವತಂತ್ರವಾಗಿ ಬಾಳಲಾರದು. ಅಲಿ ಸಹೋದರರು ಸತ್ಯನಿಷ್ಠ ದೈವ ಭೀರುಗಳೆಂದು ಅವರ ತೆಕ್ಕೆ ಯನ್ನಾಲಂಗಿಸಿದ್ದೇನೆ. ನನಗೆ ತಿಳಿದಂತೆ ಈ ಎರಡು ದಿನಗಳ ಕಗ್ಗೊಲೆಯ ಕೃತ್ಯದಲ್ಲಿ ಮುಸಲ್ಮಾನರು ಪ್ರಮುಖ ಪಾತ್ರವಹಿಸಿದ್ದಾರೆ. ನನಗಿದು ತೀವ್ರವೇದನೆ. ಪ್ರತಿಯೊಬ್ಬ ಮುಸಲ್ಮಾನನೂ ತನ್ನ ಧಾರ್ಮಿಕ ಕರ್ತವ್ಯವನ್ನರಿತು ಪೂರ್ಣ ಮಾನವತೆಗೇರಿ ಈ ಕಗ್ಗೊಲೆಗಳು ಸಂಪೂರ್ಣವಾಗಿ ನಿಲ್ಲುವಂತೆ ಮಾಡಬೇಕು."

ನವೆಂಬರ್ ೧೯ರಂದು ಮಗ ದೇವದಾಸನನ್ನು ಗಾಂಧೀಜಿ ಬೊಂಬಾಯಿಗೆ ಮತ್ತೆ ಕರೆಸಿದರು. ಉದ್ದೇಶಪೂರ್ವಕವಾಗಿಯೇ ಕರೆಸಿದ್ದೇನೆ ಎಂದರು. ನಮ್ಮ ಈ ನೆರೆಹೊರೆಯಲ್ಲಿ ಏನಾದರೂ ಮತ್ತೆ ಹಿಂಸಾಚಾರದ ಕಾಡ್ಗಿಚ್ಚು ಸಿಡಿದರೆ ಅವನನ್ನು 'ಯಜ್ಞಪಶು'ವಿನಂತೆ ದಂಗೆಕೋರರ ಆಕ್ರೋಶಕ್ಕೆ ಬಲಿಯಾಗಿ ಮಡಿಯಲು ಕಳುಹಿಸುತ್ತೇನೆ ಎಂದು ಹೇಳಿದರು. ಉಪವಾಸ ಮುಂದುವರೆಯುತ್ತಿತ್ತು. ಗಾಂಧೀಜಿಗೆ ಮಾತ್ರ ಒಂದು ನಿಮಿಷವೂ ವಿಶ್ರಾಂತಿಯಿರಲಿಲ್ಲ. ಈ ದಂಗೆಯನ್ನು ಶಮನ ಮಾಡುವ ಕ್ರಮಗಳ ಬಗ್ಗೆ ಅವರ ಸೂಚನೆ ಪಡೆಯಲು ಕಾರ್ಯಕರ್ತರು ಸದಾ ತುಂಬಿರುತ್ತಿದ್ದರು. ಅವರು ಮಾತ್ರ "ಉಪವಾಸದಿಂದ ನನ್ನ ಶಕ್ತಿ ಹೆಚ್ಚಿದೆ. ನಿರಂತರ ಪ್ರಶಾಂತತೆ ನನ್ನ ಹೃದಯವನ್ನು ತುಂಬಿದೆ" ಎನ್ನುತ್ತಿದ್ದರು. ಈ ಉಪವಾಸಾನುಭವದ ಪರಿಣಾಮವಾಗಿಯೇ ಗಾಂಧೀಜಿ ಸ್ವರಾಜ್ಯ ಸಾಧನೆಯಾಗುವ ವರೆಗೂ ಪ್ರತಿ ಸೋಮವಾರ ಇಪ್ಪತ್ತನಾಲ್ಕು ಗಂಟೆಗಳ ಉಪವಾಸ ಮಾಡುವ ಪ್ರತಿಜ್ಞೆ ಕೈಗೊಂಡರು.

ಪರಿಸ್ಥಿತಿ ಬಹುಬೇಗ ಶಾಂತವಾಯಿತು. ನವೆಂಬರ್ ೨೨ರಂದು ಗಾಂಧೀಜಿ ತಮ್ಮ ಪಶ್ಚಾತ್ತಾಪ ರೂಪದ ಉಪವಾಸವನ್ನು ಮುಕ್ತಾಯಗೊಳಿಸಿದರು. ಅಸಹಕಾರಿಗಳು, ಸಹಕಾರಿಗಳು, ಹಿಂದೂಗಳು, ಮುಸಲ್ಮಾನರು, ಪಾರ್ಸಿಗಳು ಎಲ್ಲರೂ ಅಲ್ಲಿ ಉಪಸ್ಥಿತರಿದ್ದರು.

೨೩ರಂದು ಬೊಂಬಾಯಿನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿತು. ಬಾರ್ದೋಲಿ ಸತ್ಯಾಗ್ರಹವನ್ನು ಮುಂದೂಡಲಾಯಿತು. ದೇಶದಾದ್ಯಂತ ಕಾಂಗ್ರೆಸ್ ಸಮಿತಿಗಳು ಸ್ವಯಂ ಸೇವಕ ದಳಗಳನ್ನು ವ್ಯವಸ್ಥೆ ಮಾಡಬೇಕೆಂದೂ, ಪ್ರತಿಯೊಬ್ಬ ಸದಸ್ಯನೂ ಅಹಿಂಸೆಯನ್ನು ಮಾತು ಮತ್ತು ಕೃತಿಗಳಿಂದ ಅನುಸರಿಸುವ ಪ್ರತಿಜ್ಞೆ ಮಾಡಬೇಕೆಂದೂ, ಇತರರಲ್ಲೂ ಅಹಿಂಸಾ ಮನೋಧರ್ಮ ಬೆಳೆಯುವಂತೆ ಪ್ರಯತ್ನಿಸಬೇಕೆಂದೂ ನಿರ್ಣಯವಾಯಿತು.

ಭಾರತದಲ್ಲಿ ನೆಲೆಸಿದ್ದ ಯೂರೋಪಿಯನ್ನರು ವೈಸ್‌ರಾಯರನ್ನು ಕ್ರಮ ಕೈಗೊಳ್ಳುವಂತೆ ಒತ್ತಾಯ ಮಾಡಿದರು. ಭಾರತಾದ್ಯಂತ ಕಠಿಣ ನಿಯಮಗಳು ಹೇರಲ್ಪಟ್ಟವು. ಬ್ರಿಟಿಷ್ ರಾಜಕುಮಾರರ ಭೇಟಿಯ ಸಮಯಕ್ಕೆ ಎಲ್ಲೂ ಗಲಭೆಯಾಗದಂತೆ ನೋಡಿಕೊಳ್ಳಲು ವಿವಿಧ ಕಡೆಗಳಲ್ಲಿ ವಿವಿಧ ಕಾನೂನು ಕ್ರಮಗಳನ್ನು ಕೈಗೊಳ್ಳಲಾಯಿತು. ಬಂಗಾಳದ ಸರ್ಕಾರ ನವೆಂಬರ್ ೧೯ರಂದು ಆಜ್ಞೆ ಹೊರಡಿಸಿ ಕಾಂಗ್ರೆಸ್ ಮತ್ತು ಖಿಲಾಫತ್ ಆಶ್ರಯದಲ್ಲಿನ ಎಲ್ಲ ಅಂಗ ಸಂಸ್ಥೆಗಳೂ ಕಾನೂನು ಬಾಹಿರ ಎಂದು ಘೋಷಿಸಿತು. ರಾಜಕೀಯ ಸಭೆಗಳನ್ನು ರದ್ದು ಪಡಿಸಿತು. ಪಂಜಾಬ್, ಸಂಯುಕ್ತ ಪ್ರಾಂತ, ಬಿಹಾರ್, ಅಸ್ಸಾಂ ಸರ್ಕಾರಗಳೂ ಇದೇ ಕ್ರಮ ಕೈಗೊಂಡವು. ಎಲ್ಲ ಕಡೆಯೂ ಜನ ಪ್ರತಿಭಟಿಸಿ ನಿಂತು ನಿಯಮಗಳನ್ನುಲ್ಲಂಘಿಸಿದರು. ಸಂಯುಕ್ತ ಪ್ರಾಂತ ಕಾಂಗ್ರೆಸ್ ಸಮಿತಿಯ ಐವತ್ತೈದು ಸದಸ್ಯರು ಒಟ್ಟಿಗೆ ದಸ್ತಗಿರಿಯಾದರು. ಅಲಹಾಬಾದಿನಲ್ಲಿ ಒಂದು ತಂತುರ್ತು ಸಭೆ ಕರೆದು ಅವರೆಲ್ಲರೂ ಸ್ವಯಂ ಸೇವಕ ದಳದ

ಬಗ್ಗೆ ಚರ್ಚಿಸುತ್ತಿರುವಾಗಲೇ ಪೋಲೀಸರು ಅವರನ್ನೆಲ್ಲಾ ಒಂದೇ ಸಾರಿಗೆ ಬಂಧಿಸಿದರು. ದೇಶದಾದ್ಯಂತ ಪ್ರಮುಖರೆಲ್ಲರೂ ದಸ್ತಗಿರಿ ಮಾಡಲ್ಪಟ್ಟರು. ಲಾಲಾ ಲಜಪತ್ ರಾಯ್, ಪಂಡಿತ ಮೋತಿಲಾಲ್ ನೆಹರು, ಚಿತ್ತರಂಜನ್ ದಾಸ್, ಮೌಲಾನಾ ಅಜಾದ್, ಜವಹರಲಾಲ್ ನೆಹರು ಈ ಪ್ರಸಿದ್ಧ ನಾಯಕರೆಲ್ಲರ ಬಂಧನವಾಯಿತು.

ಸಾವಿರಾರು ಸ್ವಯಂ ಸೇವಕರು ಜೈಲಿಗೆ ಹೋದರು. ಅವರ ಹಿಂದೆಯೇ ಮತ್ತೆ ಸಾವಿರಾರು ಸ್ವಯಂ ಸೇವಕರು ದಳಗಳಿಗೆ ಸೇರಿದರು. ಪ್ರವಾಹ ಹರಿದು ಸಾಗಿತು. ಬೊಂಬಾಯಿನ ಘಟನೆಯಿಂದ ಚೇತರಿಸಿಕೊಂಡು ಬೃಹತ್ ಪ್ರಮಾಣದಲ್ಲಿ ಬೆಳೆದು ನಿಂತಿತು. ವೇಲ್ಸದ ರಾಜಕುಮಾರ ಹೋದೆಡೆಯಲ್ಲೆಲ್ಲಾ ಪ್ರಚಂಡ ಹರತಾಳಗಳ ಸರಣಿಯೇ ನಡೆದು ಹೋಯಿತು. ಸರ್ಕಾರ ತನ್ನ ನಗ್ನ ದಬ್ಬಾಳಿಕೆಯಿಂದ ಅಹಿಂಸೆ ಯನ್ನೆದುರಿಸಿತು.' ಗಾಂಧಿ ಟೋಪಿ" ಖಾದಿ ಉಡುಪುಗಳು ಅಧಿಕಾರಿಗಳಿಗೆ ಸಹಿಸಲಸಾಧ್ಯ ವೆನಿಸಿತು ; ಅದನ್ನು ಧರಿಸಿದವರನ್ನು ಅವಮಾನಗೊಳಿಸಿ ಹೀಯಾಳಿಸಿದರು. ಸುಳ್ಳು ಮೊಕದ್ದಮೆಗಳನ್ನು ಅವರ ಮೇಲೆ ಹೇರಿದರು. ಸ್ವಯಂಸೇವಕರ ಮೇಲೆ ಅಕ್ರಮದಾಳಿ, ಅವರ ಬಟ್ಟೆಗಳನ್ನು ಕಿತ್ತೊಗೆಯುವುದು, ಬಲಾತ್ಕಾರವಾಗಿ ಗ್ರಾಮ ಗಳ ಕೆರೆಗಳಲ್ಲಿ ಅವರನ್ನು ನೂಕಿ ತಮಾಷೆ ನೋಡುವುದು, ಇವು ಪೊಲೀಸರ ಹವ್ಯಾಸ ವಾದುವು. ಕಾಂಗ್ರೆಸ್ ಮತ್ತು ಖಿಲಾಫತ್ ಕಾರ್ಯಾಲಯಗಳನ್ನು ಧ್ವಂಸ ಮಾಡಿದರು. ರಾಷ್ಟ್ರೀಯ ವಿದ್ಯಾಸಂಸ್ಥೆಗಳ ಕಾಗದ ಪತ್ರಗಳನ್ನೆಲ್ಲಾ ನಾಶಮಾಡಿದರು. ಹಠದಿಂದ ಪ್ರತಿಭಟಿಸಿದವರ ಮನೆಗಳನ್ನು ಸುಟ್ಟು, ಬೆಳೆಯನ್ನು ನಾಶಮಾಡಿ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಲಾಯಿತು. ಮಹಿಳೆಯರ ಮೇಲಿನ ಒಡವೆಗಳನ್ನು ದೋಚಿ ಅನೇಕ ಕಡೆ ಅವರನ್ನು ಅವಮಾನಗೊಳಿಸಿದುದಕ್ಕೂ ಸಾಕ್ಷಿಗಳು ದೊರೆತವು.

ಈ ಕಠೋರ ದಮನವನ್ನು ಕಂಡು ಪಂಡಿತ ಮಾಲವೀಯರಿಗೆ ತೀವ್ರ ವೇದನೆ ಯಾಯಿತು. ವೈಸರಾಯರೊಡನೆ ಸಂಧಾನ ಪ್ರಯತ್ನ ನಡೆಸಿದರು. ಕಲ್ಕತ್ತೆಗೆ ರಾಜ ಕುಮಾರ ಬಂದಾಗ ಶಾಂತಿ ಕಾಪಾಡಿಕೊಳ್ಳುವ ಸಲುವಾಗಿ ವೈಸರಾಯ ಲಾರ್ಡ್ ರೀಡಿಂಗರು ಗಾಂಧಿಯವರೊಡನೆ ಸಂಧಾನ ಮಾಡುವಂತೆ ಮಾಳವೀಯರು ಪ್ರೇರೇಪಿ ಸಿದರು. ಡಿಸೆಂಬರ್ ೧೯ರಂದು ಮಾಳವೀಯರಿಗೆ ಗಾಂಧೀಜಿಯಿಂದ ತಂತಿ ಬಂತು. "ದಬ್ಬಾಳಿಕೆಗಾಗಿ ನೀವು ಚಿಂತಿಸಬೇಡಿ–ಸರ್ಕಾರ ಪಶ್ಚಾತ್ತಾಪ ಪಡದೇ ಸಮ್ಮೇಳನ ಸಾರ್ಥಕವಾಗದು. ಪಂಜಾಬ್, ಖಿಲಾಫತ್ ಮತ್ತು ಸ್ವರಾಜ್ಯ ಈ ಮೂರು ಪ್ರಶ್ನೆ ಗಳಿಗೆ ಸರ್ಕಾರ ಉತ್ತರಿಸದಿದ್ದಲ್ಲಿ ಏನೂ ಸಾಗದು."

ಕಲ್ಕತ್ತಾ ಜೈಲಿನಲ್ಲಿ ಡಿಸೆಂಬರ್ ೧೭ರಂದು ಸಿ. ಆರ್. ದಾಸರನ್ನೂ, ಅಜಾದರನ್ನೂ ಮಾಳವೀಯರು ಭೇಟಿಯಾದರು. ವೈಸರಾಯರು ಒಪ್ಪಿಕೊಂಡಿರುವ ಒಂದು ಸಲಹೆಗೆ ಇವರಿಬ್ಬರೂ ಒಪ್ಪಿದರೆ ಗಾಂಧಿಯವರನ್ನು ಒಪ್ಪಿಸಬಹುದೆಂದು ಮಾಳವೀಯರ ಯೋಚನೆ. ಡಿಸೆಂಬರ್ ೧೮ರಂದು ದಾಸರೂ, ಅಜಾದರೂ ಕೆಲವು ನಿಯಮಗಳ ಮೇಲೆ ಕಲ್ಕತ್ತದ ಹರತಾಳ ನಿಲ್ಲಿಸಬಹುದು ಎಂದು ಶಿಫಾರ್ಸು ಮಾಡಿದರು. ಗಾಂಧೀಜಿ

ಮತ್ತೆ ತಂತಿ ಕೊಟ್ಟರು. "ಸಮ್ಮೇಳನದ ತಾರೀಕು ಆಹ್ವಾನಿತರ ಪಟ್ಟಿ ಮುಂಚೆಯೇ ನಿರ್ಧಾರವಾಗಬೇಕು. ಫಟ್ವಾಸ್ (Fatwas) ಅಪರಾಧಕ್ಕಾಗಿ ಶಿಕ್ಷಿತರಾದವರೆಲ್ಲರ (ಕರಾಚಿಯಲ್ಲಿ ದಸ್ತಗಿರಿಯಾದವರೂ ಸೇರಿದಂತೆ) ಬಿಡುಗಡೆಯಾಗಬೇಕು–ನಿಮ್ಮ ಸಲಹೆಯೂ ಸೇರಿ ಮೇಲ್ಕಂಡ ನಿಯಮಗಳಿಗೊಪ್ಪಿದರೆ ಮಾತ್ರ ಕಲ್ಕತ್ತಾದ ಹರತಾಳ ವನ್ನು ನಿಲ್ಲಿಸಬಹುದು" ಈ ತಂತಿಯನ್ನು ಮಾಳವೀಯರು ರೀಡಿಂಗ್ ಸಾಹೇಬರಿಗೆ ತೋರಿಸಿದಾಗ ಅವರಿಗೆ ವಿಪರೀತ ಕೋಪ ಬಂತು. ಸಂಧಾನ ಪ್ರಯತ್ನಗಳೇನೋ ಸಾಗಿದುವು; ಆದರೆ ವೈಸರಾಯರ ದುರುದ್ದೇಶಗಳು ಗಾಂಧೀಜಿಗೆ ಸ್ಪಷ್ಟವಾಗಿದ್ದವು. ಡಿಸೆಂಬರ್ ೨೧ರಂದು ಮಾಳವೀಯರಿಗೆ ಮತ್ತೊಂದು ತಂತಿ ಕಳುಹಿಸಿದರು "ನೀವು ಕೇಳಿರುವ ಆಶ್ವಾಸನೆ ಕೊಡಲಾರೆನೆಂದು ತುಂಬ ವಿಷಾದದಿಂದ ತಿಳಿಸುತ್ತಿದ್ದೇನೆ. ಸಮ್ಮೇಳನ ತೃಪ್ತಿಕರವಾಗಿ ನಡೆದು ಸಮಾಧಾನಕರ ಫಲಿತಾಂಶವಿದ್ದರೆ ಮಾತ್ರ ಅಸಹಕಾರ ಚಳುವಳಿ ನಿಲ್ಲುತ್ತದೆ. ಕಾಂಗ್ರೆಸ್ ಪರವಾಗಿ ನಿರ್ಧರಿಸಲು ನನಗೆ ಅಧಿಕಾರ ವಿಲ್ಲ" ಸಂಧಾನ ಅಲ್ಲಿಗೆ ಮುರಿದು ಬಿತ್ತು.

ಕ್ರಾಂತಿ ಆಸ್ಫೋಟವಾಗಲು ಎಲ್ಲೆಲ್ಲೂ ಹೊಗೆಯಾಡುತ್ತಿತ್ತು. ಕಾಂಗ್ರೆಸ್ ಡಿಸೆಂಬರ್ ಕೊನೆಯವಾರ ಅಹಮದಾಬಾದಿನಲ್ಲಿ ಸೇರಿದಾಗ ಸಿಡಿದೊಡೆಯಲು ಸಿದ್ಧವಾದಂತಿತ್ತು. ಆ ಸನ್ನಿವೇಶ ರೋಮಾಂಚನಕಾರಿಯಾಗಿತ್ತು. ಗಾಂಧೀಯವರೇ ನೇತಾರರು, ಸರ್ಕಾರ ಅವರನ್ನು ದಸ್ತಗಿರಿ ಮಾಡುವ ಧೈರ್ಯ ಮಾಡಲಿಲ್ಲ. ಚುನಾಯಿತ ಅಧ್ಯಕ್ಷ ಶ್ರೀ ಸಿ. ಆರ್. ದಾಸ್ ಸೆರೆಮನೆ ಸೇರಿದ್ದರು. ಹಕೀಂ ಅಜಮಲ್ ಖಾನರು ಹಂಗಾಮಿ ಅಧ್ಯಕ್ಷರಾಗಿ ನೇಮಿಸಲ್ಪಟ್ಟರು.

ಅರ್ಧ ಮೈಲಿಗೂ ಮಿಕ್ಕಿ ಖಾದಿ ಬಟ್ಟೆಯಿಂದಲೇ ನಿರ್ಮಿತವಾಗಿದ್ದ ಕಾಂಗ್ರೆಸ್ ಶಿಬಿರ 'ಖಾದಿ ನಗರ' ಎಂದು ಕರೆಯಲ್ಪಟ್ಟಿತು. ಗುಜರಾತಿನಲ್ಲಿ ಉತ್ಪಾದಿತ ವಾದ ಮೂರೂವರೆ ಲಕ್ಷ ರೂಪಾಯಿನ ಖಾದಿಯನ್ನು ಸ್ವಾಗತ ಸಮಿತಿ ಬಳಸಿತ್ತು. ಕುರ್ಚಿ ಬೆಂಚುಗಳು ಇರಲಿಲ್ಲ. ಒಂದು ಲಕ್ಷ ಪ್ರೇಕ್ಷಕರಿಗೆ ಸ್ಥಳವಿತ್ತು. ಬಂದವರು ಎರಡು ಲಕ್ಷಕ್ಕೂ ಮೀರಿದ್ದರು. ಖಾದಿನಗರದ ಪಕ್ಕದಲ್ಲಿ ಮುಸ್ಲಿಂ ನಗರ, ಖಿಲಾಫತ್ ಮಂಟಪಗಳು ಐಕ್ಯತೆಯ ಪ್ರಚಂಡ ಕುರುಹುಗಳಾಗಿದ್ದವು; ಖಾದಿಯ ಜನಪ್ರಿಯತೆಯ ಸಾಕ್ಷಿಯೂ ಆಗಿತ್ತು. ಎರಡು ಸಾವಿರ ಸ್ವಯಂಸೇವಕ ಸೇವಕಿಯರು ಖಾದಿ ಧರಿಸಿ ವ್ಯವಸ್ಥೆಯ ಹೊಣೆಗಾರಿಕೆ ಹೊತ್ತಿದ್ದರು.

ಎಂಟು ದಿನಗಳ ಕಾಲ ಅಸಂಖ್ಯಾತ ಪ್ರೇಕ್ಷಕರಿಗೆ ಕಾಂಗ್ರೆಸ್ ಆಕರ್ಷಣ ಕೇಂದ್ರ ವಾಯಿತು. ಹತ್ತಿರದಲ್ಲೇ ಏರ್ಪಟ್ಟಿದ್ದ ವಸ್ತು ಪ್ರದರ್ಶನ ದಿನವೂ ನಲವತ್ತು ಸಾವಿರಕ್ಕೂ ಮೀರಿ ಪ್ರೇಕ್ಷಕರನ್ನು ಆಕರ್ಷಿಸುತ್ತಿತ್ತು. ಶಾಂತಿ ನಿಕೇತನದ ಸುಂದರ ವರ್ಣಚಿತ್ರ ಗಳಿಂದ ಹಿಡಿದು ವಿವಿಧ ಕೆತ್ತನೆಯ ಕೆಲಸದವರೆಗೆ ಕಲಾವೈಭವ ಅಲ್ಲಿ ಮೆರೆಯಿತು. ಭಾರತಾದ್ಯಂತದಿಂದ ಬಂದಿದ್ದ ಪ್ರಸಿದ್ಧ ಸಂಗೀತಗಾರರ ಕಚೇರಿಗಳು ಎಲ್ಲರನ್ನು ಸೆಳೆಯುತ್ತಿದ್ದವು. ಖಾದಿ ಉತ್ಪಾದನೆಯ ವಿವಿಧ ಕ್ರಿಯೆಗಳನ್ನೆಲ್ಲವನ್ನು ಪ್ರದರ್ಶಿಸಲಾಗಿತ್ತು.

ಸ್ವಾಗತ ಸಮಿತಿಯ ಅಧ್ಯಕ್ಷ ವಲ್ಲಭಾಯಿ ಪಟೇಲರು ತಮ್ಮ ಹಿಂದಿ ಭಾಷಣವನ್ನು ಹದಿನೈದು ನಿಮಿಷಗಳಲ್ಲಿ ಮುಗಿಸಿದರು. ಅಧ್ಯಕ್ಷ ಭಾಷಣ ಇಪ್ಪತ್ತು ನಿಮಿಷಗಳಾದವು. ಎಲ್ಲ ಭಾಷಣಗಳೂ ಸಮಯೋಚಿತ, ನಿರ್ದಿಷ್ಟ, ಖಚಿತ. ಕಾಡುಹರಟೆಯಲ್ಲಿ ಯಾರೂ ಸಮಯ ಕಳೆಯಲಿಲ್ಲ. ಕಾಗ್ರೆಸ್ಸಿನ ಹೊಸ ಘಟನಾವಳಿ ಒಂದು ವರ್ಷ ಜಾರಿಯಲ್ಲಿದ್ದು ಅತ್ಯಂತ ಯಶಸ್ವಿಯಾಗಿತ್ತು. ವಿಷಯ ನಿಯಾಮಕ ಸಮಿತಿ ಕೂಲಂಕಷವಾಗಿ ಚರ್ಚಿಸಿ ಶ್ರದ್ಧೆಯಿಂದಲೂ ದಕ್ಷತೆಯಿಂದಲೂ ಕಾರ್ಯ ನಿರ್ವಹಿಸಿತು. ಅಸ್ತವ್ಯಸ್ತವಾಗಿ ಆಲೋಚನೆಯಿಲ್ಲದೆ ಚುನಾಯಿಸಿದ ಸಮಿತಿಯಾಗದೆ ಮತದಾರರು ವಿಶೇಷ ದಕ್ಷತೆಯಿಂದ ಆರಿಸಿದ ಸಮಿತಿಯಾಗಿತ್ತು. ಮತದಾನಕ್ಕೆ ಮುಂಚೆ ಪ್ರತಿನಿಧಿಗಳೆಲ್ಲರೂ ಚರ್ಚಿಸಿ ಸಂಶಯಗಳನ್ನೆಲ್ಲಾ ನಿವಾರಿಸಿಕೊಂಡರು.

ಕಾಂಗ್ರೆಸ್ ಧೋರಣೆಯ ಮೇಲೆ ಪ್ರಭಾವ ಬೀರಲು ಅಹಮದಾಬಾದಿನಲ್ಲಿ ಎರಡು ವಿಚಾರ ಮಾರ್ಗಗಳು ಪ್ರಯತ್ನಿಸಿದವು. ದುಂಡುಮೇಜಿನ ಪರಿಷತ್ತನ್ನು ಕೂಡಿಸಲು ಕಾಂಗ್ರೆಸ್ ಕರೆ ನೀಡಬೇಕೆಂದು ಮಾಳವೀಯರು ನಿರ್ಣಯ ಮಂಡಿಸಿದರು. ಅತ್ಯಧಿಕ ಸಂಖ್ಯೆಯ ವಿರೋಧದಿಂದ ಅದು ಬಿದ್ದು ಹೋಯಿತು. ಶಾಂತಿ ಸೂಚನೆಯ ಮತ್ತೊಂದು ಸಲಹೆಯನ್ನು ಮಂಡಿಸುತ್ತಾ ಗಾಂಧೀಜಿ "ಪ್ರಧಾನವಾಗಿ ನಾನೊಬ್ಬ ಶಾಂತಿ ಸೇವಕ ಆದರೆ ನನಗೆ ಬೇಕಾದುದು ಸ್ಮಶಾನ ಶಾಂತಿಯಲ್ಲ" ಎಂದರು. ಸಹಸ್ರಾರು ದೇಶಸೇವಕರ ದಸ್ತಗಿರಿ ಹಲವು ಕಾಂಗ್ರೆಸ್ಸಿನವರಿಗೆ ಅಸಹನೀಯವಾಗಿ ಅವರು ರೋಷಗೊಂಡಿದ್ದರು. ಮೌಲಾನಾ ಹಜರತ್ ಮೊಹಾನಿ ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳನ್ನೂ ಕಾರ್ಯವಿಧಾನವನ್ನೂ ಬದಲಿಸಬೇಕೆಂದು ವಾದಿಸಿದರು. ಕಾಂಗ್ರೆಸ್ ವೇದಿಕೆಯಿಂದಲೂ ನಂತರ ಮುಸ್ಲಿಂ ಲೀಗ್ ವೇದಿಕೆಯಿಂದಲೂ ಸಂಪೂರ್ಣ ಸ್ವಾತಂತ್ರ್ಯ ಕರೆಗಾಗಿ ಮೌಲಾನಾ ಅವರು ತೀಕ್ಷ್ಣ ಹೋರಾಟವನ್ನೇ ಮಾಡಿದರು. ಆದರೆ ಎರಡು ಕಡೆಯೂ ಅವರಿಗೆ ಬಹುಮತದ ಬೆಂಬಲ ಸಿಕ್ಕಲಿಲ್ಲ.

ಉತ್ತರವಾಗಿ ಗಾಂಧೀಜಿ ಹೀಗೆಂದರು: "ನೂರು ಬಾರಿ ಯೋಚಿಸಿ ನಿಮ್ಮ ಹೆಜ್ಜೆ ನಿರ್ಣಯಿಸಿ. ಕೊನೆಯಲ್ಲಿ ಅದು ನಮಗೆ ಅನುಕೂಲವೂ ಸಹಾಯಕವೂ ಆಗದೇ ಹೋಗಬಹುದು. ಬದಲಾಗಿ ಅದರಿಂದ ಹೋರಾಟಕ್ಕೆ ಮತ್ತೆ ಸರಿ ಮಾಡಲಾಗದ ತೀವ್ರ ಆಘಾತವೂ ಆದೀತು. ಮೊದಲು ನಮ್ಮ ಶಕ್ತಿಯನ್ನೆಲ್ಲಾ ಕ್ರೋಢೀಕರಿಸೋಣ. ಅರಿಯದಿರುವ ಆಳಕ್ಕೆ ನಾವು ಧುಮುಕಬಾರದು. ನಮ್ಮ ಧ್ಯೇಯ ಧೋರಣೆಗಳು ಹಳೆಯ ಬಟ್ಟೆಯಂತೆ ಮನಸ್ಸು ಬಂದಾಗ ಕಿತ್ತೊಗೆಯುವಷ್ಟು ಹಗುರ ವಿಷಯವಲ್ಲ. ಯುಗ ಯುಗಗಳಿಂದ ಜನತೆ ಅದಕ್ಕಾಗಿ ಬಲಿದಾನ ಮಾಡಿದೆ. ಅದಕ್ಕಾಗಿ ಬದುಕಿದೆ. ನಮ್ಮದೊಂದು ವ್ಯಾಪಕ ಸಿದ್ಧಾಂತ. ಅದರಲ್ಲಿ ಅತ್ಯಂತ ದುರ್ಬಲರಿಗೂ, ಸಬಲರಲ್ಲಿ ಸಬಲರಿಗೂ ಸಮಾನ ಅವಕಾಶವುಂಟು. ಮೌಲಾನಾ ಮೋಹಾನಿಯವರು ಸೂಚಿಸಿರುವ ಸಿದ್ಧಾಂತ ನಮ್ಮ ದುರ್ಬಲ ಸಹೋದರರನ್ನು ತಳ್ಳಿ ಹಾಕುತ್ತದೆ. ಆದ್ದರಿಂದ ಸಲಹೆಯನ್ನು ನಿರಾಕರಿಸಬೇಕೆಂದು ಅತ್ಯಂತ ವಿಶ್ವಾಸದಿಂದ ಕೇಳಿಕೊಳ್ಳುತ್ತೇನೆ."

ಆಕ್ರಮಣ ಶಕ್ತಿಯುಳ್ಳ ಸರ್ಕಾರದ ಎಲ್ಲ ಕಾನೂನುಗಳನ್ನೂ ಘಟನಾವಳಿಗಳನ್ನೂ ನಿರಾಕರಿಸುವ ಸವಿನಯ ಶಾಸನಭಂಗ, ಅಹಿಂಸಾತ್ಮಕ ಹೋರಾಟ, ಸರ್ಕಾರದ ನಿರ್ಬಂಧಗಳನ್ನು ಮೀರಿ ದೇಶದಾದ್ಯಂತ ಸಾರ್ವಜನಿಕ ಸಭೆಗಳು, ಸ್ವಯಂ ಸೇವಕ ದಳಗಳಲ್ಲಿ ಸೇರಿ ಎಲ್ಲ ಭಾರತೀಯರು ಶಾಂತಿಯುತವಾಗಿ ದಸ್ತಗಿರಿ ಶಿಕ್ಷೆಗಳಿಗೆ ಒಳಗಾಗುವುದು, ಈ ಕಾರ್ಯಕ್ರಮದ ನಿರ್ಣಯವನ್ನು ಗಾಂಧೀಜಿ ಮಂಡಿಸಿದರು. ಆರು ಸಾವಿರ ಪ್ರತಿನಿಧಿಗಳು ಉತ್ಸಾಹದಿಂದ ಅನುಮೋದಿಸಿದರು.

ಸರ್ಕಾರಕ್ಕೂ ಒಂದು ಮನವಿ ಪ್ರಕಟಿಸಿ: "ನೀವು ಏನೇ ಕ್ರಮ ಕೈಗೊಳ್ಳಿ, ಎಷ್ಟೇ ಕ್ರೂರವಾಗಿ ದಮನಮಾಡಿ, ಒಂದಲ್ಲ ಒಂದು ದಿನ ನೀವು ಬಲಾತ್ಕಾರವಾಗಿ ಪಶ್ಚಾತ್ತಾಪಕ್ಕೆ ಗುರಿಯಾಗುವಂತೆ ಮಾಡಿಯೇ ಮಾಡುತ್ತೇವೆ; ಕಾಲ ಮಿಂಚುವ ಮುನ್ನ ಯೋಚಿಸಿ, ನಿಮ್ಮ ಕಾರ್ಯಗಳಲ್ಲಿ ಎಚ್ಚರವಿರಲಿ, ಮೂವತ್ತು ಕೋಟಿ ಭಾರತೀಯರೂ ಕಟ್ಟಕಡೆಗೆ ಸರ್ವಕಾಲಕ್ಕೂ ನಿಮ್ಮ ಶತ್ರುಗಳಾಗದಂತೆ ವರ್ತಿಸಿರಿ" ಎಂದರು ಗಾಂಧೀಜಿ.

ಕಾಂಗ್ರೆಸ್ ಅಧಿವೇಶನ ಮುಗಿಯುವುದರೊಳಗಾಗಿ ಹಲವು ನಾಯಕರ ದಸ್ತಗಿರಿಯಾಗುವ ಸಂಭವವಿತ್ತು. ಗಾಂಧೀಜಿಗೆ ಸಂಪೂರ್ಣ ಕಾರ್ಯಾಧಿಕಾರವನ್ನು ನೀಡಲಾಯಿತು. ಅಂಗೀಕೃತ ರಾಷ್ಟ್ರೀಯ ಧ್ಯೇಯ ಧೋರಣೆಗಳನ್ನು ಬದಲಾಯಿಸಕೂಡದು, ಕಾಂಗ್ರೆಸ್ಸಿನ ಸಮ್ಮತಿಯಿಲ್ಲದೆ ಸರ್ಕಾರದೊಡನೆ ಯಾವ ಒಪ್ಪಂದಕ್ಕೂ; ಒಡಂಬಡಿಕೆ ನೀಡಬಾರದು ಎಂಬ ನಿಯಮಗಳನ್ನೊಪ್ಪಿ ಕಾರ್ಯ ಮಾಡಲು ನಿರ್ದೇಶಿಸಿತು.

ಮುಂದೆ 'ಯಂಗ್–ಇಂಡಿಯಾ'ದಲ್ಲಿ 'ಆತ್ಮ ನಿರೀಕ್ಷಣೆ' ಎಂಬ ಲೇಖನ ಬರೆದರು ಗಾಂಧೀಜಿ. "ಬರುವ ಜನವರಿಯೊಳಗಾಗಿ ಸ್ವರಾಜ್ಯ ಲಭಿಸದಿದ್ದರೆ, ಆ ವೇಳೆಗೆ ನೀವು ಜೈಲಿನಿಂದ ಹೊರಗಿದ್ದರೆ, ಆತ್ಮಹತ್ಯೆ ಮಾಡಿಕೊಳ್ಳಬಾರದು, ಎಂದು ಅತ್ಯಂತ ದೈನ್ಯದಿಂದ ಸ್ನೇಹಿತರನೇಕರು ಬರೆದಿದ್ದಾರೆ. ನಮ್ಮ ತೀವ್ರಭಾವನೆಗಳನ್ನು ಪ್ರಕಟಿಸುವಾಗ ಭಾಷೆ ಕುಂಟುತ್ತದೆ. ವಿಚಾರ ಗೊಂದಲ ಅಥವಾ ಅಪೂರ್ಣ ಆಲೋಚನೆಗಳಿದ್ದಾಗಂತೂ ಇನ್ನೂ ತಡವರಿಸುತ್ತದೆ. ನವಜೀವನ ಪತ್ರಿಕೆಯಲ್ಲಿ ನಾನು ಬರೆದ ಲೇಖನ ಸ್ಪಷ್ಟವಾಗಿತ್ತೆಂದು ನಂಬಿದ್ದೆ. ಅದರ ಭಾಷಾಂತರವನ್ನೋದಿ ಅನೇಕರು ಅಪಾರ್ಥ ಮಾಡಿಕೊಂಡಿದ್ದಾರೆ. ಮೂಲ ಲೇಖನವೂ ಇದೇ ದುರಂತಕ್ಕೊಳಗಾಗಿದೆ.

"ಪ್ರಥಮ ಕಾರಣವೆಂದರೆ ನಾನೊಬ್ಬ ಆದರ್ಶ ಮಾನವ ಎಂದು ತಿಳಿದಿರುವ ತಪ್ಪು ಭಾವನೆ. ಗೀತೆಯ ಬಗ್ಗೆ ನನ್ನ ಆದರವನ್ನು ತಿಳಿದ ಅನೇಕ ಮಿತ್ರರು ಅದರ ಶ್ಲೋಕಗಳನ್ನೇ ಉದಹರಿಸಿದ್ದಾರೆ. ಆತ್ಮಹತ್ಯೆಯ ಬೆದರಿಕೆಯನ್ನು ನಾನು ಹಾಕಿರುವುದು ಹೇಗೆ ನನ್ನ ಜೀವನ ತತ್ವಗಳಿಗೆ ವಿರೋಧ ಎಂದು ವಾದಿಸಿದ್ದಾರೆ. ಈ ಎಲ್ಲ ಸಹೃದಯ ಸಲಹೆಗಾರರೂ ನಾನೊಬ್ಬ ನಮ್ರ ಸತ್ಯಾನ್ವೇಷಕ ಮಾತ್ರ ಎಂಬುದನ್ನು ಮರೆಯುತ್ತಾರೆ. ಆತ್ಮದರ್ಶನ ಅಂತಿಮ ಧ್ಯೇಯಸಿದ್ಧಿ ಹಾಗೂ ನಿಷ್ಕಳಂಕ ಪೂರ್ಣತೆ

ಕೈಗೂಡಿದಾಗ ಮಾತ್ರವೇ ಸಂಪೂರ್ಣ ಸತ್ಯದರ್ಶನವಾದಂತೆ. ನನಗೊಂದು ಮಾರ್ಗ ದರ್ಶನ ಮಾತ್ರ ಆಗಿದೆ ಎಂದು ಹೇಳಿಕೊಳ್ಳಬಲ್ಲೆ. ಸಿದ್ಧಿಗಾಗಿ ನಿರಂತರ ಪ್ರಯತ್ನ ನನ್ನದು. ನಾನಿನ್ನೂ ಆ ಪೂರ್ಣ ದರ್ಶನ ಪಡೆದಿಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ನನ್ನ ದೌರ್ಬಲ್ಯಗಳೆಷ್ಟೆಂಬ ಅರಿವು ನನಗಿದೆ. ಆ ಅರಿವೇ ನನ್ನ ಎಲ್ಲ ಶಕ್ತಿಯ ಮೂಲ. ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನ ಅಪೂರ್ವ ಬಲ.

"ನಾನು ಪರಿಪೂರ್ಣನಾಗಿದ್ದರೆ ನನ್ನ ಸುತ್ತಲಿನ ಜನರ ಸಂಕಟ ನನ್ನನ್ನು ವಿಹ್ವಲ ನನ್ನಾಗಿ ಮಾಡುತ್ತಿರಲಿಲ್ಲ. ಆದರ್ಶ ಮಾನವ ವಿಚಲಿತನಾಗಿ ದುಃಖವನ್ನು ನಿರೀಕ್ಷಿಸಿ, ಪರಿಹಾರ ಮಾರ್ಗವನ್ನು ಸೂಚಿಸಿ, ತನ್ನ ನಿರ್ವಿವಾದಿತ ಸತ್ಯದ ಪ್ರಖರ ಶಕ್ತಿಯಿಂದ ತನ್ನ ಸೂಚನೆಗಳಿಗೆ ಕಡ್ಡಾಯ ಚಾಲನೆ ಕೊಡುತ್ತಾನೆ. ಸದ್ಯಕ್ಕೆ ನನ್ನಲ್ಲಿ ಆ ಶಕ್ತಿಯಿಲ್ಲ. ಮಸಕು ಮಸಕಾಗಿದೆ ನನ್ನ ದರ್ಶನ, ಮಸಿ ಹಿಡಿದ ಕನ್ನಡಿಯಲ್ಲಿದ್ದಂತೆ. ಆದ್ದರಿಂದಲೇ ನಂಬಿಕೆಯನ್ನು ರೂಢಿಸುವುದು ನನಗೆ ಕಷ್ಟಕರವೂ, ನಿಧಾನವೂ ಆದ ಕೆಲಸ. ಅದರಲ್ಲಿಯೂ ಅನೇಕ ವೇಳೆ ಯಶಸ್ವಿಯಾಗಲಾರೆ. ಹೀಗಿರುವಾಗ ನನ್ನ ದೇಶದಲ್ಲಿ ತಪ್ಪಿಸಬಹುದಾದ ಅನೇಕ ದಾರುಣ ಸಂಕಟ ಪರಿಸ್ಥಿತಿಗಳು ಸುತ್ತಲೂ ಪಸರಿಸಿರುವುದನ್ನರಿತು, ಜಗನ್ನಿಯಾಮಕನ ನೆರಳಿನಡಿಯಲ್ಲಿ ಸಹಸ್ರಾರು ಅಸ್ಥಿಪಂಜರಗಳು ಬಳಲುವುದನ್ನು ಕಂಡು, ಈ ಮೂಕ ಕೋಟಿಯ ದುಃಖತಪ್ತ ಹೃದಯ ಬಡಿತದೊಡನೆ ಮಿಲನವಾಗದಿದ್ದಲ್ಲಿ ನಾನು ಎಂದಿಗೂ ಮಾನವನೆನಿಸಿಕೊಳ್ಳಲಾರೆ. ಆ ದುಃಖ ಕ್ರಮೇಣ ಕಡಮೆಯಾಗುವ ಮಹದಾಸೆಯೇ ನನ್ನ ಊರುಗೋಲು. ಆದರೆ ಸಂಕಟವನ್ನು ಕಂಡು ತೀವ್ರ ಅನುಕಂಪ, ಸುಖ ದುಃಖಗಳ ಶೀತೋಷ್ಣಗಳ ಸೂಕ್ಷ್ಮ ಅನುಭವ, ಆಗುತ್ತಿದ್ದರೂ, ಚರಕದ ಸಾಂತ್ವನ ಸಂದೇಶವನ್ನು ಹೃದಯಸ್ಪರ್ಶಿಯಾಗುವಂತೆ ಬಿತ್ತರಿಸುವ ನನ್ನ ಸತತ ಪ್ರಯತ್ನ ನಡೆದಿದ್ದರೂ ಕೂಡ ಆ ಮಾತು ಕೇವಲ ಕಿವಿಯನ್ನು ಮುಟ್ಟಿ ಹೃದಯಕ್ಕೆ ನಾಟದೇ ಹೋಗಬಹುದು. ಒಂದು ವರ್ಷದ ನಂತರವೂ ಜನ ಸಂಶಯಗ್ರಸ್ತರಾಗಿಯೇ ಉಳಿದು ಈಗಿನಂತೆಯೇ ಚರಕದ ಮೂಲಕ ಅಹಿಂಸಕ ಆಂದೋಳನದಿಂದ ಸ್ವರಾಜ್ಯ ಸಾಧನೆ ಆಗುವುದಿಲ್ಲ ಎನ್ನಲೂಬಹುದು. ಕಳೆದ ಹನ್ನೆರಡು ತಿಂಗಳುಗಳಿಗಿಂತಲೂ ಹೆಚ್ಚು ಕಾಲ ದೇಶದಾದ್ಯಂತ ನಡೆದುದು ಕೇವಲ ಭಾವೋದ್ರೇಕದ ಪರಿಣಾಮ, ಬಾಹ್ಯ ಪ್ರಚೋದನೆಯ ಪ್ರಭಾವ, ಎಂದು ಸಿದ್ಧವಾಗಿ ಬಿಟ್ಟರೆ; ಮತ್ತು ಈ ಕಾರ್ಯ ಕ್ರಮದಲ್ಲಿ ದೃಢವಾದ ನಂಬಿಕೆ ಬೇರೂರದೇ ಹೋದರೆ ನನ್ನ ಶ್ರಮ ವ್ಯರ್ಥವೆನಿಸ ಬಹುದು. ಕೊನೆಯದಾಗಿ ಈ ಶಾಂತಿ ಸಂದೇಶ ಇಂಗ್ಲಿಷಿನವರ ಹೃದಯಾಂತರಾಳ ವನ್ನು ಮುಟ್ಟಲು ವಿಫಲವಾದಲ್ಲಿ ನನ್ನ ತಪಶ್ಚರ್ಯೆ ವಿಫಲವೆನಿಸುತ್ತದೆ. ಈ ಹೋರಾಟ ವನ್ನು ನಡೆಸಲು ನನಗಾವ ಅರ್ಹತೆ ಉಳಿದೀತು? ನಿಜವಾದ ಮಾನವನಾದಲ್ಲಿ ಆಗ ನಾನೇನು ಮಾಡಬೇಕು? ಸೃಷ್ಟಿಕರ್ತನ ಮುಂದೆ ವಿನೀತನಾಗಿ ಮಣಿದು ಈ ವ್ಯರ್ಥ ದೇಹವನ್ನು ಕೊನೆಗಾಣಿಸಿ ನನ್ನನ್ನು ಸೇವಾಕಾರ್ಯಕ್ಕೆ ತಕ್ಕುದಾದ ನಿಜ ಉಪಕರಣ ವನ್ನಾಗಿ ಪರಿವರ್ತಿಸು ಎಂದು ಮೊರೆಯಿಡುವುದಂ ನನ್ನ ಕರ್ತವ್ಯವಲ್ಲವೆ?

"ಸ್ವರಾಜ್ಯ ಅಂದರೆ ಈಗಿನ ಸರ್ಕಾರ ಬದಲಾಗಿ ಜನತೆಯ ನಿಜವಾದ ನಿಯಂತ್ರಣ ಅದರ ಮೇಲೆ ಬರಬೇಕೆಂಬುದೇನೋ ನಿಜ. ಅದು ಬಾಹ್ಯರಚನೆ ಮಾತ್ರ. ಸಾಧನೆಯ ಮಾರ್ಗದ ದೃಢ ಅಂಗೀಕಾರ ಹಾಗೂ ಸಾಮಾನ್ಯ ಜನತೆಯ ನಿಜವಾದ ಹೃದಯ ಪರಿವರ್ತನೆ ಇವು ನನ್ನ ಉತ್ಕಟ ಹಂಬಲ. ಹಿಂದೂಗಳು ಅಸ್ಪೃಶ್ಯತೆಯ ಕಳಂಕವನ್ನು ತೊಡೆದು ಹಾಕುವುದಕ್ಕಾಗಲಿ, ಹಿಂದೂಗಳು ಮುಸ್ಲಿಮರೂ ದ್ವೇಷಬಿಟ್ಟು ರಾಷ್ಟ್ರೀಯ ಜೀವನದ ಶಾಶ್ವತ ಅಂಗಗಳಾಗಿರುವಂತೆ ಹೃತ್ಪೂರ್ವಕ ಸ್ನೇಹ ಬೆಳೆಸುವುದಕ್ಕಾಗಲಿ, ಭಾರತದ ಆರ್ಥಿಕ ವಿಮೋಚನೆಗೆ ಚರಕವೇ ಏಕೈಕ ಸಾರ್ವತ್ರಿಕ ಸಾಧನ ಎಂದು ಅಂಗೀಕರಿಸುವುದಕ್ಕಾಗಲಿ, ಕೊನೆಗೆ ಭಾರತದ ವಿಮೋಚನೆ ಅಹಿಂಸಾತ್ಮಕ ಮಾರ್ಗದಿಂದಲ್ಲದೇ ಅನ್ಯಥಾ ಅಸಾಧ್ಯ ಎಂದು ಎಲ್ಲರೂ ನಂಬಿ ನಡೆಯುವುದಕ್ಕಾಗಲೀ, ಯುಗಯುಗಗಳೇನೂ ಉರುಳಬೇಕಾಗಿಲ್ಲ ಎಂದು ನನ್ನ ನಂಬಿಕೆ. ಈ ಕಾರ್ಯವನ್ನು ನಿರ್ದಿಷ್ಟವಾಗಿ ಬುದ್ಧಿವಂತಿಕೆಯಿಂದ ನಿಸ್ಸಂಕೋಚವಾಗಿ ರಾಷ್ಟ್ರ ಅಂಗೀಕರಿಸುವುದೇ ನಿಜವಾದ ಗೆಲುವಿನ ತಿರುಳು. ಅಧಿಕಾರ ವರ್ಗಾವಣೆ ಇದರ ಪ್ರತೀಕವಾಗಿ ಅನುಸರಿಸುವ ನೆರಳು. ಬಿತ್ತಿದ ಬೀಜ ಬೆಳೆದು ಮರವಾಗಲೇಬೇಕು.

"ಪುಣೆಯಲ್ಲಿ ಸ್ನೇಹಿತರೊಡನೆ ಮಾತನಾಡುತ್ತಾ ಪ್ರಾಸಂಗಿಕವಾಗಿ ನನ್ನ ದೌರ್ಬಲ್ಯಗಳನ್ನು ನಿವೇದಿಸಿಕೊಂಡಿದ್ದೆ. ಅನಂತರ ಇತರರಲ್ಲೂ ಪ್ರಸ್ತಾಪಿಸಿದ್ದೆ. ಯಾವ ಮಹಾಧ್ಯೇಯ ಸಾಧನೆಗಾಗಿ ನಾನೀಗ ತಾತ್ಕಾಲಿಕ ನಾಯಕನಾಗಿದ್ದೇನೆಯೋ ಅದಕ್ಕೆ ನನ್ನ ಯೋಗ್ಯತೆ ಏನೂ ಸಾಲದು ಎಂದು ನನ್ನ ಅಳಲನ್ನು ತೋಡಿಕೊಂಡಿದ್ದೆ. ಅದೀಗ ಓದುಗರಿಗೆ ಸ್ಪಷ್ಟವಾಗಿರಬೇಕು. ನಿರಾಶಾವಾದವನ್ನು ನಾನು ಪ್ರತಿಪಾದಿಸುತ್ತಿಲ್ಲ. ಬದಲಾಗಿ ಈ ವರ್ಷದೊಳಗಾಗಿಯೇ ನಮ್ಮ ಉದ್ದೇಶದ ಮುಖ್ಯಾಂಶಗಳನ್ನು ಸಾಧಿಸಿಯೇವು ಎಂಬ ಭರವಸೆ ನನ್ನಲ್ಲಿ ತುಂಬಿ ಬರುತ್ತಿದೆ. ನಾನೊಬ್ಬ ವ್ಯಾವಹಾರಿಕ ಆದರ್ಶವಾದಿ. ಅದರಿಂದ ಯಾವುದೇ ಪರಿಸ್ಥಿತಿಯಲ್ಲಿ ಈ ಧ್ಯೇಯ ಸಾಧನೆಗೆ ನನ್ನ ಸಾಮರ್ಥ್ಯ ಸಾಲದೆಂಬ ಭೀತಿ ಬರುತ್ತದೋ ಅಂದು ನನ್ನ ನಾಯಕತ್ವ ಬಿಟ್ಟು ಕೊಡಬೇಕಾದುದು ಕರ್ತವ್ಯ. ಇದನ್ನು ನಾನು ಹೇಳಿದ್ದೇನೆ. ನಿಷ್ಠುರ ಸತ್ಯಾನ್ವೇಷಣೆ ಅನಾಸಕ್ತಿಯೋಗದ ತತ್ವಾರ್ಥ. ಹಾಗೆಯೇ ತಪ್ಪು ಹೆಜ್ಜೆ ಅರಿವಾದೊಡನೆ ಹಿಂತೆಗೆದುಕೊಳ್ಳುವುದೂ, ಕಾರ್ಯಸಾಧನೆಗೆ ಅನರ್ಹನೆಂದು ಸ್ಪಷ್ಟವಾದೊಡನೆ ನಾಯಕತ್ವವನ್ನು ಯಾತನೆಪಡದೆ ತ್ಯಾಗಮಾಡುವುದೂ ಮುಖ್ಯ. ಈಶ್ವರ ಶಕ್ತಿಯೊಡನೆ ಪೂರ್ಣವಾಗಿ ಲೀನವಾಗಿ ಕರಗಿ ಹೋಗಬೇಕೆಂಬ ನನ್ನ ಹಂಬಲದ ಛಾಯೆ ನನ್ನ ಮಾತುಗಳಲ್ಲಿದೆ. ಆ ದೇವ ಕುಂಬಾರನ ಕೈಯಲ್ಲಿ ಮಣ್ಣಿನ ಮುದ್ದೆಯಾಗಿ ನಿರಹಂಕಾರಿಯಾಗಬೇಕು. ಆಗ ನನ್ನ ಅಸುರೀ ಸ್ವಭಾವಗಳೆಲ್ಲ ಕರಗಿ ನನ್ನ ನಿಜವಾದ ಶಕ್ತಿ ಖಚಿತವಾಗುವಂತೆ ಜಗನ್ನಿಯಾಮಕ ರೂಪಿಸುತ್ತಾನೆ. ಇದು ನನ್ನ ಜೀವನಾಕಾಂಕ್ಷೆ."

ಸ್ವರಾಜ್ಯ ಸಾಧನೆಗೆಂದು ನಿಗದಿಯಾಗಿದ್ದ ವರ್ಷ ಯಾವ ಗುರಿಯನ್ನೂ ಮುಟ್ಟದೇ ಕರಗಿಹೋಯಿತು ಎಂದು ಹಲವರು ವಿಮರ್ಶೆ ಮಾಡಿದರು. ಶ್ರೀಮತಿ ಬೆಸೆಂಟರು

ಕಟುವಾಗಿ ನುಡಿದರು. "ಸ್ವರಾಜ್ಯ ಇಳಿದು ಬರಬೇಕಾಗಿತ್ತು. ಸೆಪ್ಟೆಂಬರ್ ಮೂವತ್ತಾಯಿತು; ಅಕ್ಟೋಬರ್ ಒಂದು, ಅಕ್ಟೋಬರ್ ೩೧, ಡಿಸೆಂಬರ್ ೩೧ ಕಾಂಗ್ರೆಸ್ಸಿನ ಹೊಸ್ತಿಲಿಗೆ ಅದು ಬರಲೇ ಇಲ್ಲ. ಇಂದಿಗೂ ಅದು ಎಂದಿನಷ್ಟೇ ದೂರದಲ್ಲಿದೆ."

ಗಾಂಧೀಜಿ ಉತ್ತರ ಕೊಟ್ಟರು:

"ಕಾಲದ ಗಡಿ ಹಾಕಿದುದಕ್ಕೆ ನನ್ನನ್ನು ದೂಷಿಸುವುದು ಸರಿಯಲ್ಲ. ಹಾಗೆ ಮಾಡದಿದ್ದಲ್ಲಿ ಅದು ತಪ್ಪಾಗುತ್ತಿತ್ತು. ಜನತೆ ಸುಲಭವಾಗಿ ಈಡೇರಿಸಬಹುದಾಗಿದ್ದ ನಿಯಮಗಳನ್ನು ನಾನು ಹಾಕಿದ್ದೆ. ಅವುಗಳೆಲ್ಲವನ್ನೂ ಈಡೇರಿಸಿದ್ದಲ್ಲಿ ಹನ್ನೆರಡು ತಿಂಗಳುಗಳೊಳಗೆ ಸ್ವರಾಜ್ಯ ಖಂಡಿತವಾಗಿ ಪ್ರಾಪ್ತವಾಗುತ್ತಿತ್ತು. ಜನಕೋಟಿಯನ್ನು ಉದ್ರೇಕಗೊಳಿಸುವುದಕ್ಕಲ್ಲ ಕಾಲ ನಿಯತಿ ಹಾಕಿದ್ದು. ಕಾಂಗ್ರೆಸ್ ಸದಸ್ಯರಾದ ಸ್ತ್ರೀ ಪುರುಷರು ತಮ್ಮ ಕರ್ತವ್ಯ ಪಾಲನೆಯ ತೀವ್ರತೆಯನ್ನರಿತು ಕ್ರಿಯಾಶೀಲರಾಗಬೇಕು, ಅದರ ಪರಿಣಾಮ ಅತ್ಯದ್ಭುತವಾಗುತ್ತದೆಂದು ಮನಗಾಣಿಸಬೇಕಾಗಿತ್ತು. ಈ ಕಾಲ ನಿಯಮವಿಲ್ಲದೇ ಹೋಗಿದ್ದರೆ ಈ ಕೋಟಿ ರೂ.ಗಳ ನಿಧಿ ಸಂಗ್ರಹವಾಗಲಿ, ಅಸಂಖ್ಯಾತ ಚರಕಗಳ ವಿತರಣೆಯಾಗಲಿ, ಕಡುಬಡವರಿಗೆ ಲಕ್ಷಾಂತರ ರೂಪಾಯಿನ ಕೂಲಿ ಹಂಚಲು ಸಾಧ್ಯವಾಗುವಂತೆ ಮಾಡಿದ ಅಗಾಧ ಖಾದಿ ಉತ್ಪನ್ನವಾಗಲಿ ಸಾಧ್ಯವಾಗುತ್ತಿರಲಿಲ್ಲ. ಬಂಗಾಳದಲ್ಲಿ, ಉತ್ತರ ಪ್ರಾಂತದಲ್ಲಿ ಪಂಜಾಬಿನಲ್ಲಿ ಇಷ್ಟು ಬೃಹತ್ ಸಂಖ್ಯೆಯಲ್ಲಿ ಸತ್ಯಾಗ್ರಹಿಗಳು ಮುಂದೆ ಬಂದು ಸರ್ಕಾರದ ನಿರೀಕ್ಷಣೆಯನ್ನೆಲ್ಲಾ ಮೀರಿ ಸೆರೆಮನೆ ಸೇರಿದುದು ಅಲ್ಪ ಸಾಧನೆ ಎನ್ನಲಾಗದು; ನಮ್ಮ ಶಿಸ್ತು ಸಬಲವಾದುದು ಎನ್ನುವುದರ ನಿದರ್ಶನ ಇದು. ಈ ಮೂರೂ ಕಡೆಗಳ ಅದೃಷ್ಟಶಾಲಿಗಳಂತೆಯೇ ಇತರ ಪ್ರಾಂತಗಳಲ್ಲಿಯೂ ಹಿಂಸಾತ್ಮಕ ಕ್ರೂರ ದಬ್ಬಾಳಿಕೆಯನ್ನು ಎದುರಿಸಿ ನಿಂತು ಹೋರಾಡುವ ತೇಜಸ್ವೀ ಕಾರ್ಯಕರ್ತರು ಎದ್ದು ನಿಲ್ಲುವರೆಂಬುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ."

ಸ್ವರಾಜ್ಯದ ಉದಯವಾಗಲಿಲ್ಲ; ಆದರೆ ದಾಸ್ಯ ಶೃಂಖಲೆಯಲ್ಲಿ ಬಿದ್ದಿದ್ದ ರಾಷ್ಟ್ರ ಚೇತನ ವಿಮುಕ್ತವಾಯಿತು.

# ಚೌರಿ-ಚೌರ

೧೯೨೨

ಈ ವೇಳೆಗೆ ಗಾಂಧೀಜಿ ಕಾಂಗ್ರೆಸ್ಸಿನ ಮಹಾಸೇನಾನಿಯಾಗಿದ್ದರು. ಎಲ್ಲ ನಾಯಕರೂ ಬಂಧನದಲ್ಲಿದ್ದರು. ವಾರವಾರವೂ ಜೈಲುವಾಸವನ್ನು ಸ್ವಾಗತಿಸಿ ಹೋರಾಡುತ್ತಿದ್ದ ಸ್ವಯಂಸೇವಕರ ಪಟ್ಟಿಯನ್ನು 'ಯಂಗ್-ಇಂಡಿಯಾ' ಹೆಮ್ಮೆಯಿಂದ ಪ್ರಕಟಿಸುತ್ತಿತ್ತು. ಯಾವ ಪ್ರಚೋದನೆ ಇರದಿದ್ದರೂ ರಾಜಕೀಯ ಕೈದಿಗಳನ್ನು ಅವಮಾನಗೊಳಿಸಿ, ಸದೆಬಡಿದು ಕಠಿಣಶ್ರಮ ಮಾಡಿಸುತ್ತಿದ್ದರು. ಉಪವಾಸ ಅಥವಾ ನಾಯಿಗಳಿಗೆ ಹಾಕುವಂತಹ ಆಹಾರ; ವಿಪರೀತ ಚಳಿಯಿಂದ ರಕ್ಷಿಸಿಕೊಳ್ಳಲು ಏನೇನೂ ಸಾಲದ ಅರಿವೆಯ ತುಂಡುಗಳು; ಹೊದಿಕೆಯಂತೂ ಇಲ್ಲವೇ ಇಲ್ಲ; ಬಟ್ಟೆಗೆ ಹತ್ತಿದ ಕ್ರಿಮಿಕೀಟಗಳು, ಕೂರೆಗಳು, ರಕ್ತಗಟ್ಟಿದ ಹಸೀಕಲೆಗಳು; ಸಾಮಾನ್ಯ ಘಾತುಕರು ಉಟ್ಟು ಬಿಸುಟ ಚಿಂದಿ ಬಟ್ಟೆ–ಇವು ದೇಶ ಭಕ್ತರ ಪಾಲಿಗೆ ಬಂದ ಬವಣೆ. ಜೈಲಿನ ಭಯಾನಕ ಅನುಭವಗಳನ್ನು ಶ್ರೀ ಮಹದೇವದೇಸಾಯಿ ಒಂದು ಜೈಲಿನಿಂದ ಮತ್ತೊಂದಕ್ಕೆ ವರ್ಗಾವಣೆ ಆದಾಗ ಗಾಂಧೀಜಿಗೆ ಬರೆದು ತಿಳಿಸಿದರು; ಗಾಂಧೀಜಿ ಈ ಪತ್ರವನ್ನು ಪ್ರಕಟಿಸಿದರು. ಅದರ ಬಗ್ಗೆ ಬರೆಯುತ್ತಾ: "ಶಿಸ್ತನ್ನು ಮುರಿಯುವುದೆಂದರೆ ನನಗೆ ಸಹಿಸದು; ಆದರೆ ಈ ಸಂದರ್ಭದಲ್ಲಿ ನನಗೆ ಬೇರೆ ಮಾರ್ಗವಿಲ್ಲ. ಈ ಪತ್ರ ಪ್ರಕಟಿಸುವುದು ನನ್ನ ಕರ್ತವ್ಯ. ಮಹದೇವ್ ಭಾಯಿಗೂ ಹೀಗನ್ನಸಿಯೇ ಬರೆದರು. ಈ ಅಶಿಸ್ತಿಗಾಗಿ ದೇಸಾಯರನ್ನು ಕ್ರೂರ ಛಡಿ ಏಟಿಗೆ ಗುರಿಮಾಡಿದರೂ ಚಿಂತೆಯಿಲ್ಲ. ಅಸಹ್ಯದ ಬಟ್ಟೆಗಳನ್ನು ನಿರಾಕರಿಸುವ ಅಪರಾಧಕ್ಕಿಂತ ಇಂಥ ಅಶಿಸ್ತು ಹೆಚ್ಚು ಹಾನಿಕರ ಎಂದು ನನ್ನ ಭಾವನೆ" ಎಂದರು.

'ಯಂಗ್ ಇಂಡಿಯಾ'ದ ಪುಟ ಪುಟಗಳಲ್ಲಿ ಈ ದಬ್ಬಾಳಿಕೆಯ ವರದಿಗಳು ತುಂಬಿದವು. ಗಾಂಧೀಜಿ ಬರೆದರು: "ಜಲಿಯನ್‌ವಾಲಾ ಬಾಗ್ ಹೀನಕೃತ್ಯ ಭೀಕರ ಸ್ವರೂಪದ್ದಾದರೂ ಅಲ್ಲಿ ಸರ್ಕಾರದ ದುರುದ್ದೇಶಗಳು ಬಹಿರಂಗವಾಗಿ ಸ್ಪಷ್ಟವಾದುವು ಅದರಿಂದ ನಮಗೂ ಅಗತ್ಯವಾಗಿದ್ದ ಕಟು ಅನುಭವ ಸಿಕ್ಕಿತು. ಶೀತಲ ಜೈಲು ಗೋಡೆಗಳ ಮರೆಯಲ್ಲಿ, ಕಾಣದ ಹಳ್ಳಿ ಹಳ್ಳಿಗಳಲ್ಲಿ ಈಗ ಕ್ರೂರ ದಮನ ನಡೆದಿದೆ. ಅದಕ್ಕೆ ಬಾಹ್ಯ ಪ್ರದರ್ಶನ ಕಾಣದು. 'ಸೈನ್ಯ ಶಾಸನವನ್ನೇ ತನ್ನಿ ಈ ಅಸಹ್ಯ ದುರ್ಬುದ್ಧಿಯನ್ನೂ ಬಿಡಿ'–ಎಂದೇ ಸವಾಲು ಹಾಕಿ ನಾವು ಪ್ರತಿಭಟನೆಯನ್ನಾಹ್ವಾನಿಸಬೇಕು. ನಿರ್ಭಯವಾಗಿ ಗುಂಡಿನ ಸುರಿಮಳೆಯನ್ನೆದುರಿಸಬೇಕು. ೧೯೧೯ರಲ್ಲಾದಂತೆ ಬೆನ್ನು ತಿರುಗಿಸದೆ ನಿರ್ವೈರ ಮನೋಧರ್ಮದಿಂದ ನಮ್ಮ ಎದೆ ಚಾಚಿ ಗುಂಡೇಟನ್ನು ಸ್ವಾಗತಿಸಿ ನಿಲ್ಲಬೇಕು."

೧೯೨೨ರಲ್ಲಿ ಮ್ಯಾಜಿಸ್ಟ್ರೇಟರ ಮುಂದೆ ಜವಾಹರಲಾಲ್ ನೆಹರು ಕೊಟ್ಟ ಹೇಳಿಕೆಯಲ್ಲಿ ಅಂದಿನ ಯುಗಧರ್ಮ ಪ್ರತಿಬಿಂಬಿಸಿತು. "ವಿಶ್ವಾಸ ಮತ್ತು ವಿಧೇಯತೆ

ಹೃದಯ ಗಮ್ಯವಾದ ಗುಣಗಳು. ಪೇಟೆಯಲ್ಲಿ ಕೊಳ್ಳುವ ವಸ್ತುಗಳಲ್ಲ. ಬಂದೂಕ ಹಿಡಿದು ಬಲಾತ್ಕರಿಸಿ ಪಡೆಯುವುದಂತೂ ಅಸಾಧ್ಯ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಬಾಳ ನಂಬಿಕೆಗಳಿಗಾಗಿ ನಾವು ಹೋರಾಡುತ್ತಿದ್ದೇವೆ. ಅದಕ್ಕಾಗಿ ಸ್ವಂತ ಇಚ್ಛೆಯಿಂದಲೇ ಸಂತೋಷವಾಗಿ ಪದೇ ಪದೇ ಜೈಲಿಗೆ ಹೋಗುತ್ತೇವೆ. ಅದೇ ನಮಗೆ ಸ್ವರ್ಗ ಸದೃಶ ಸ್ಥಳ. ಪವಿತ್ರ ಯಾತ್ರಾಸ್ಥಳ. ನನ್ನ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಯುವುದೇ ನನ್ನ ಅಪೂರ್ವ ಭಾಗ್ಯ. ಮಹಾತ್ಮಾ ಗಾಂಧಿಯಂತಹವರ ನಾಯಕತ್ವದಲ್ಲಿ ಅದು ಇನ್ನೂ ದ್ವಿಗುಣಗೊಳ್ಳುತ್ತದೆ. ನನ್ನ ಪ್ರೇಮದ ಭಾರತಕ್ಕಾಗಿ ಬಲಿದಾನ ಮಾಡು ವುದಕ್ಕಿಂತ ಮಿಗಿಲಾದ ಭಾಗ್ಯವಾದರೂ ಯಾವುದು? ನಮ್ಮ ಸ್ವರ್ಣ ಸ್ವಪ್ನದ ಸಾಕ್ಷಾ ತ್ಕಾರಕ್ಕಾಗಿ ಈ ಹೋರಾಟದಲ್ಲಿ ಮಡಿಯುವುದೂ ಅತ್ಯುತ್ಕೃಷ್ಟ ಭಾಗ್ಯವಲ್ಲವೇ?"

೧೯೨೨ರ ಜನವರಿ ೫ರಂದು ಯಂಗ್–ಇಂಡಿಯಾದ 'ನಮ್ಮ ತತ್‌ಕ್ಷಣದ ಸಮಸ್ಯೆ' ಎಂಬ ಶೀರ್ಷಿಕೆಯಲ್ಲಿ ಗಾಂಧೀಜಿ ಹೀಗೆ ಬರೆದರು :

"ಸ್ವರಾಜ್ಯ, ಖಿಲಾಫತ್ ಮತ್ತು ಪಂಜಾಬ್ ಸಮಸ್ಯೆಗಳಿಗಿಂತ ಈಗ ಸರ್ಕಾರ ದೇಶದ ಮೇಲೆ ಬಲಾತ್ಕಾರಿಸಿರುವ ನಿರ್ಬಂಧಗಳ ಪ್ರತಿಭಟನೆ ಹೆಚ್ಚು ಮುಖ್ಯವಾಗಿದೆ. ವಾಕ್‌ಸ್ವಾತಂತ್ರ್ಯ, ಮತ್ತು ಸಂಘಸ್ವಾತಂತ್ರ್ಯಗಳನ್ನು ನಾವೀಗ ಪಡೆದುಕೊಂಡರೆ ಮಾತ್ರ ನಮ್ಮ ಗುರಿಯತ್ತ ಸಾಗಿಯೇವು? ನೇರವಾಗಿ ಮೇಲೆರಗಿ ಬಂದು ನಮ್ಮನ್ನು ನಿರ್ನಾಮ ಮಾಡಿ ಬಿಡುವ ಇಚ್ಛೆ ಸರ್ಕಾರಕ್ಕಿದ್ದೀತು. ವಾಕ್ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯಗಳ ಹೋರಾಟದಲ್ಲಿ ಸೋಲೊಪ್ಪಿದರೆ ನಮಗದು ದುರ್ಭರ ದುರಂತವಾಗುತ್ತದೆ. ಅಹಿಂಸಾತ್ಮಕ ಚಟುವಟಿಕೆಗಳೂ ತನ್ನ ಅಸ್ತಿತ್ವಕ್ಕೆ ಕುತ್ತಾಗಬಹುದೆಂಬ ಶಂಕೆಯಿಂದ ಸರ್ಕಾರ ಅವುಗಳನ್ನು ನಿರ್ಮೂಲ ಮಾಡುವುದಾದರೆ ಮುಂದಗಾಮಿಗಳಾದ ಲಿಬರಲ್ ಪಕ್ಷದ ಚಟುವಟಿಕೆಗಳೂ ನಿರ್ನಾಮವಾಗುತ್ತವೆ. ಆದ್ದರಿಂದ ಸರ್ವರಿಗೂ ಸಾಮಾನ್ಯ ವಾದ ಈ ಮೂಲಭೂತ ಹಕ್ಕುಗಳನ್ನು ನಮ್ಮ ಪ್ರಾಣವನ್ನೇ ಪಣವಾಗಿಟ್ಟು ರಕ್ಷಿಸಿ ಕೊಳ್ಳುವುದಗತ್ಯ. ನಮ್ಮ ಸ್ವಯಂಸೇವಾ ಸಂಘಗಳನ್ನಾಗಲೀ ನಮ್ಮ ವಿಕಾಸಕ್ಕೆ ಅಗತ್ಯವೆಂದು ನಾವು ನಡೆಸುತ್ತಿರುವ ಯಾವುದೇ ಚಟುವಟಿಕೆಗಳನ್ನಾಗಲೀ ವಿಸರ್ಜಿಸ ಬೇಕೆಂಬ ದಬ್ಬಾಳಿಕೆಯ ಬಲಾತ್ಕಾರವನ್ನು ನಾವು ನಿರಾಕರಿಸಬೇಕು.

"ನಮ್ಮ ಮೇಲಿನ ನಿರ್ಬಂಧನಗಳನ್ನು ಧಿಕ್ಕಾರ ಮಾಡಿ ಕಡೆಗಣಿಸುವುದು ನಮ್ಮ ರಕ್ಷಣೆಯ ಅತಿಶೀಘ್ರವಾದ ಅಪಾಯರಹಿತ ಮಾರ್ಗ. ಗುಂಡಿನ ಮಳೆ ಸುರಿಸಿದರೂ ಸತ್ಯದಿಂದ ಕದಲದ ದೃಢ ಸಂಕಲ್ಪರಾಗಬೇಕು. ಶಸ್ತ್ರಾಘಾತಗಳಿಗೆ ಹೆದರದೆ ಐಕ್ಯತೆ ಯನ್ನುಳಿಸಬೇಕು. ಈ ಮೂಲಭೂತ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಯಾವ ಬೆಲೆ ಕೊಟ್ಟರೂ ಹೆಚ್ಚಲ್ಲ. ಇದರಲ್ಲಿ ಒಪ್ಪಂದಗಳಿಗಾಗಲಿ, ಸಮಾಲೋಚನೆಗಳಿಗಾಗಲಿ, ಸಮ್ಮೇಳನಗಳಿಗಾಗಲಿ ಸ್ಥಳವಿಲ್ಲ. ವಿಸರ್ಜನೆಯ ಅಪ್ಪಣೆಗಳನ್ನೂ ಪ್ರತಿಬಂಧಕ

ಆಜ್ಞೆಗಳನ್ನೂ ಹಿಂತೆಗೆದುಕೊಂಡು, ಅಹಿಂಸಕ ಚಟುವಟಿಕೆಗಳಲ್ಲಿ ಭಾಗವಹಿಸಿದ ಖೈದಿಗಳನ್ನೆಲ್ಲ ಬಿಡುಗಡೆ ಮಾಡಿದ ನಂತರವೇ ಸಮ್ಮೇಳನ ಅಥವಾ ಒಪ್ಪಂದಗಳ ಮಾತು. ಸ್ವತಂತ್ರ ಮಾನವರಾಗಿ ಬದುಕಲಾಗದಿದ್ದರೆ ನಮಗೆ ಸಾವೇ ಲೇಸು ಎಂದು ದೃಢ ಸಂಕಲ್ಪರಾಗೋಣ.

"ಸವಿನಯ ಕಾನೂನುಭಂಗದಿಂದ ಯಾವ ಅರಾಜಕತೆಯೂ ಬಂದೊದಗದು ಎಂದು ಎಲ್ಲರಿಗೂ ಮನದಟ್ಟು ಮಾಡಿಕೊಡಬೇಕೆಂದು ನನ್ನ ಇಚ್ಛೆ. ಕೊಲೆಗಡುಕತನದ ಕಾನೂನುಭಂಗದಿಂದ ಅರಾಜಕತೆ ಬಂದೀತು. ಇಂಥ ದಂಗೆಯನ್ನು ಯಾವ ರಾಷ್ಟ್ರವೇ ಆಗಲಿ ದಮನ ಮಾಡೀತು. ಇಲ್ಲದಿದ್ದರೆ ರಾಷ್ಟ್ರವೇ ನಿರ್ನಾಮವಾಗುತ್ತದೆ. ಆದರೆ ಸವಿನಯ ಕಾನೂನು ಭಂಗವನ್ನು ದಮನ ಮಾಡುವುದು ಎಂದರೆ ಅಂತರ್ವಾಣಿಯನ್ನೇ ಬಂಧಿಸಿದ ಹಾಗೆ. ಶಕ್ತಿ ಹಾಗೂ ಚಾರಿತ್ರ್ಯಶುದ್ಧಿ ಈ ಸವಿನಯ ಕಾನೂನು ಭಂಗದಿಂದ ವರ್ಧಿಸುತ್ತವೆ. ನಿಶಸ್ತ್ರನಾದುದರಿಂದ ಈ ಚಳುವಳಿಯ ಸತ್ಯಾಗ್ರಹಿಯಿಂದ ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ಕೊಡುವ ಯಾವ ರಾಜ್ಯಕ್ಕೂ ಅಪಾಯವಿಲ್ಲ. ಸರ್ವಾಧಿಕಾರಿ ಸರ್ಕಾರಗಳಿಗೆ ಅವನು ಅಪಾಯಕಾರಿ. ತಾನು ಯಾವ ಕಾನೂನುಗಳನ್ನು ಪ್ರತಿಭಟಿಸುವನೋ ಅದರ ಬೆಂಬಲಕ್ಕೆ ಸಾರ್ವಜನಿಕಾಭಿಪ್ರಾಯವನ್ನು ರೂಢಿಸಿ ಅಂಥ ಸರ್ಕಾರದ ಪತನಕ್ಕೆ ಕಾರಣನಾಗುತ್ತಾನೆ. ರಾಜ್ಯದಲ್ಲಿ ಅರಾಜಕತೆ ಅಥವಾ ಭ್ರಷ್ಟಾಚಾರ ತುಂಬಿದಾಗ ಸವಿನಯ ಕಾನೂನುಭಂಗ ಒಂದು ಪವಿತ್ರ ಕರ್ತವ್ಯ. ಇಂಥ ರಾಜ್ಯದೊಡನೆ ವ್ಯವಹರಿಸುವ ನಾಗರಿಕನೂ ಅದರ ಅರಾಜಕತೆಯ ಭ್ರಷ್ಟಾಚಾರದಲ್ಲಿ ಸಹಭಾಗಿಯಾಗುತ್ತಾನೆ.

"ಯಾವುದೋ ಒಂದು ವಿಶಿಷ್ಟ ಶಾಸನವನ್ನು ಭಂಗ ಮಾಡುವ ವಿಚಾರದಲ್ಲಿ ಭಿನ್ನಾಭಿಪ್ರಾಯವಿರಬಹುದು. ಆ ಬಗೆಗೆ ನಿಧಾನಿಸಬೇಕೆಂದೋ, ಎಚ್ಚರ ವಹಿಸಬೇಕೆಂದೋ ಸಲಹೆ ಮಾಡಲೂ ಬಹುದು. ಆದರೆ ಈ ಹಕ್ಕು ಮಾತ್ರ ನಿರ್ವಿವಾದವಾಗಿ ಪ್ರತಿಯೊಬ್ಬನಿಗೂ ಇರಬೇಕು. ಈ ಜನ್ಮಸಿದ್ಧ ಹಕ್ಕನ್ನು ರಾಜ್ಯಕ್ಕೊಪ್ಪಿಸಿ ಬಿಟ್ಟರೆ ಆತ್ಮಗೌರವವನ್ನೇ ಕಳೆದುಕೊಂಡಂತೆ.

"ಶಾಸನಭಂಗದ ಹಕ್ಕನ್ನು ಸ್ಥಾಪಿಸಿಕೊಳ್ಳುವಾಗ ಸರ್ವರೀತಿಯ ಸಂಯಮವನ್ನೂ ಕಾಪಾಡಿಕೊಳ್ಳಬೇಕಾದುದು ಅಗತ್ಯ. ಹಿಂಸಾಚಾರ ಸಂಭವಿಸಿದರೆ ಅರಾಜಕತೆ ತಲೆಹಾಕಿದರೆ ಎದುರಿಸಲು ಸಮರ್ಥವಾದ ರೀತಿನೀತಿಗಳಿರಬೇಕಾಗುತ್ತದೆ. ಒಂದು ಗೊತ್ತಾದ ಸೀಮಿತ ವಿಷಯಕ್ಕೆ ಚಳುವಳಿಯನ್ನು ನಿರ್ದೇಶಿಸಿದಾಗ ಅದರ ವ್ಯಾಪ್ತಿ ವಿಸ್ತೀರ್ಣಗಳೂ ಅತ್ಯಂತ ಕನಿಷ್ಠ ಪ್ರಮಾಣಕ್ಕೆ ಸೀಮಿತವಾಗುವಂತೆ ಎಚ್ಚರವಹಿಸಬೇಕು. ಪ್ರಸ್ತುತ ಪರಿಸ್ಥಿತಿ ವಾಕ್‌ಸ್ವಾತಂತ್ರ್ಯ ಮತ್ತು ಸಂಘ ಸ್ವಾತಂತ್ರ್ಯಗಳನ್ನು ರಕ್ಷಿಸಿಕೊಳ್ಳಲು ಮಾತ್ರ ಉಗ್ರ ಪ್ರತಿಭಟನೆ ಸೀಮಿತವಾಗಬೇಕು. ಎಲ್ಲಿಯವರೆಗೆ ಸವಿನಯ ಶಾಸನಭಂಗ ಚಳುವಳಿ ಅಹಿಂಸಕ ರೀತಿಯದ್ದಾಗಿರುತ್ತದೋ ಅಲ್ಲಿಯವರೆಗೂ ಅದಕ್ಕೆ

ಯಾರ ಅಡ್ಡಿ ಅಡಚಣೆಗಳೂ ಬಾರದಂತೆ ನೋಡಿಕೊಳ್ಳಬೇಕು. ಅಂಥ ಸ್ಥಿತಿ ಉಂಟಾದಾಗ ಒಂದು ಪ್ರಾತಿನಿಧಿಕ ಸಭೆ ಕರೆದು ಖಿಲಾಫತ್, ಪಂಜಾಬು ಮತ್ತು ಸ್ವರಾಜ್ಯ ಸಮಸ್ಯೆಗಳ ಬಗ್ಗೆ ಪರಿಹಾರ ಹುಡುಕಬಹುದು. ಅಲ್ಲಿಯವರೆಗೆ ಸಾಧ್ಯವಾಗದು."

ಯಂಗ್–ಇಂಡಿಯಾದ ಮುಂದಿನ ಸಂಚಿಕೆಯಲ್ಲೇ ಮತ್ತೆ ಬರೆದರು. ಅದರ ಶೀರ್ಷಿಕೆ 'ಪತ್ರಿಕಾ ಸ್ವಾತಂತ್ರ್ಯ':

"ಪರಿಸ್ಥಿತಿಯ ಒತ್ತಡದಿಂದ ಸರ್ಕಾರದ ಸುಳ್ಳು ಮುಖವಾಡಗಳು ಒಂದೊಂದಾಗಿ ಕಳಚಿ ಬೀಳುತ್ತಿದೆ. ತಮ್ಮ ಸುಧಾರಣಾ ನೀತಿಗಳಿಂದ ಹೆಚ್ಚು ಹೆಚ್ಚು ಸ್ವಾತಂತ್ರ್ಯ ರಿಯಾಯಿತಿಗಳನ್ನು ಕೊಟ್ಟು ಜನಾಭಿಪ್ರಾಯಕ್ಕೆ ಮನ್ನಣೆ ಕೊಡುತ್ತಿದ್ದೇವೆಂಬ ಭರವಸೆ ಟೊಳ್ಳಾಗುತ್ತಿದೆ. ಗುರುತರವಾದ ಪರೀಕ್ಷೆಗೊಳಪಟ್ಟಾಗ ಭದ್ರವಾಗಿ ನಿಂತರೆ ಈ ಕೋರಿಕೆಗಳಿಗೆ ಗೌರವವಿರುತ್ತದೆ. ಇಲ್ಲಿ ವಾಕ್‌ಸ್ವಾತಂತ್ರ್ಯವೆಂದರೆ ಕಟುತರ ಟೀಕೆಗೂ ಅವಕಾಶ ಎಂದರ್ಥ. ಪತ್ರಿಕಾ ಸ್ವಾತಂತ್ರ್ಯವೆಂದರೂ ಅಷ್ಟೆ: ಯಾವುದೇ ಕ್ರಮವನ್ನಾಗಲೀ ಕಟುತರವಾಗಿ ಖಂಡನೆ ಮಾಡುವ ಹಕ್ಕು ಪತ್ರಿಕೆಗಿರಬೇಕು. ಕೊನೆಗೆ ಅಪಾರ್ಥ ಮಾಡುವ ಹಕ್ಕೂ ಇರಬೇಕು. ಹೀಗೆ ತಪ್ಪಾಗಿ ವರದಿಯಾದಾಗ ತಪ್ಪಿತಸ್ಥರನ್ನು ಶಿಕ್ಷಿಸಬೇಕೇ ಹೊರತು ಪ್ರತಿಬಂಧಕ ಆಜ್ಞೆಗಳನ್ನು ಹೊರಡಿಸಿಯಾಗಲೀ, ಪತ್ರಿಕೆಯನ್ನು ಬಲಾತ್ಕಾರವಾಗಿ ನಿಲ್ಲಿಸುವುದಾಗಲೀ ಸಲ್ಲದು. ಪತ್ರಿಕೆಗೆ ಯಾವ ನಿರ್ಬಂಧಗಳೂ ಇರಬಾರದು. ಸಂಘ ಸ್ವಾತಂತ್ರ್ಯವೆಂದರೆ ಎಂಥ ಕ್ರಾಂತಿಕಾರಕ ವಿಷಯವನ್ನಾದರೂ ಚರ್ಚಿಸುವ ಸ್ವಾತಂತ್ರ್ಯ ಇರಬೇಕು. ರಾಜ್ಯದ ಭದ್ರತೆಗೆ ಅಪಾಯವಾಗುವ ಕ್ರಾಂತಿ ಸಿಡಿಯುವುದನ್ನು ತಡೆಯಲು ಸಾರ್ವಜನಿಕ ಅಭಿಪ್ರಾಯವನ್ನು ತನ್ನ ಬೆಂಬಲಕ್ಕೆ ಒಲಿಸಿಕೊಳ್ಳಬೇಕು ಅಥವಾ ನಾಗರಿಕ ಪೋಲೀಸ್‌ದಳವನ್ನು ಬಳಸಬೇಕು, ಅನಾಗರಿಕ ಸೈನ್ಯ ಶಕ್ತಿಯಿಂದಲ್ಲ.

"ಈ ಮೂರೂ ಸ್ವಾತಂತ್ರ್ಯಗಳನ್ನು ಭಾರತ ಸರ್ಕಾರ ಪ್ರಬಲವಾಗಿ ಹತ್ತಿಕ್ಕಲು ಪ್ರಯತ್ನಿಸಿದೆ. ಸಾರ್ವಜನಿಕಾಭಿಪ್ರಾಯವನ್ನು ದಮನ ಮಾಡಲು ಕ್ರಮ ಕೈಗೊಂಡಿದೆ. ತನ್ನ ನಿರಂಕುಶತೆಯನ್ನೂ ಸರ್ವಾಧಿಕಾರ ಮನೋಧರ್ಮವನ್ನೂ ಸ್ಪಷ್ಟವಾಗಿ ತೋರಿಸಿಕೊಂಡಿರುವುದು ಒಳ್ಳೆಯದೇ. ಸ್ವರಾಜ್ಯ, ಖಿಲಾಫತ್, ಮತ್ತು ಪಂಜಾಬ್‌ಗಳ ಬಗೆಗೆ ಹೋರಾಟವೆಂದರೆ ಎಲ್ಲಕ್ಕಿಂತ ಮೊದಲು ಈ ಮುಮ್ಮುಖ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವ ಹೋರಾಟ.

'ಇಂಡಿಪೆಂಡೆಂಟ್' ಪತ್ರಿಕೆ ಅಚ್ಚಾಗುತ್ತಿಲ್ಲ. 'ಡೆಮಾಕ್ರಾಟ್' ಪತ್ರಿಕೆ ನಿಂತು ಹೋಯಿತು. ಈಗ ಲಾಹೋರಿನ 'ಪ್ರತಾಪ್' ಮತ್ತು 'ಕೇಸರಿ' ಪತ್ರಿಕೆಗಳ ಮೇಲೆ ಗದಾ ಪ್ರಹಾರವಾಗಿದೆ. ಲಾಲಾಲಜಪತ್‌ರಾಯರ 'ವಂದೇ ಮಾತರಂ' ಪತ್ರಿಕೆ ಎರಡು ಸಾವಿರ ರೂ. ಠೇವಣಿ ಕಟ್ಟಿ ಬದುಕಿಕೊಂಡಿತು. ಇನ್ನೆರಡು ಪತ್ರಿಕೆಗಳ ಎರಡು ಸಾವಿರ ಠೇವಣಿ ಮುಟ್ಟುಗೋಲಾಗಿ ಮತ್ತೆ ಹತ್ತು ಸಾವಿರ ಠೇವಣಿಗಾಗಿ ಅವಕ್ಕೆ

ಹತ್ತುದಿನಗಳ ನೋಟೀಸ್ ಕೊಡಲಾಗಿದೆ. ಈ ಹತ್ತು ಸಾವಿರದ ಠೇವಣಿಕೊಡಲು ಅವು ನಿರಾಕರಿಸುವುವೆಂದು ನಾನು ಆಶಿಸಿದ್ದೇನೆ.

"ಪಂಜಾಬ್ ಮತ್ತು ಉತ್ತರ ಪ್ರಾಂತಗಳಲ್ಲಿ ನಡೆಯುತ್ತಿರುವ ಈ ಕರಾಳ ಕ್ರಮಗಳು ಎಲ್ಲ ಕಡೆಯೂ ಕ್ರಮೇಣ ಹಬ್ಬುತ್ತವೆಂಬ ಶಂಕೆ ಇದ್ದೇ ಇದೆ. ಈ ಪಿಡುಗನ್ನು ನಿರ್ನಾಮ ಮಾಡಲು ತಕ್ಕ ಪ್ರತಿಭಟನಾ ಕಾರ್ಯಕ್ರಮಗಳನ್ನು ಸಾರ್ವಜನಿಕರು ಕೈಗೊಳ್ಳದಿದ್ದರೆ ಇದರಿಂದ ಮುಕ್ತರಾಗುವುದಿಲ್ಲ.

"ಇಂಡಿಪೆಂಡೆಂಟ್ ಪತ್ರಿಕೆ ಮಾಡಿದಂತೆ ಬಹಿರಂಗವಾಗಿ ನಿರ್ಭೀತರಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಲು ಮೇಲ್ಕಂಡ ಪತ್ರಿಕೆಗಳನ್ನು ನಾನು ಒತ್ತಾಯದಿಂದ ಕೋರುತ್ತೇನೆ. ತನ್ನ ಚಲನವಲನಗಳು ಬಂಧಿತವಾಗುವವರೆಗೂ, ಜನಪ್ರಿಯನಾಗಿರುವ ಒಬ್ಬ ಪತ್ರಿಕಾಸಂಪಾದಕ ವಿವೇಕಪೂರ್ಣ ಅಭಿಪ್ರಾಯಗಳಿದ್ದಲ್ಲಿ ಅವನ್ನು ನಿರ್ಭೀತನಾಗಿ ಬರೆದು ಪ್ರಕಟಿಸುತ್ತಿರಬೇಕು. ಅವರನ್ನಾರೂ ಅದುಮಿ ಬಿಡಲಾರರು. ಆತನನ್ನು ದೈಹಿಕವಾಗಿ ಬಂಧಿಸುವುದಾದರೆ ಅವನ ಸಂದೇಶ ಜನಕ್ಕೆ ಮುಟ್ಟಿದಂತೆಯೇ. ಲೋಕಮಾನ್ಯ ತಿಲಕರ ದಿವ್ಯ ಸಂದೇಶ ಕೇಸರಿ ಪತ್ರಿಕೆಯ ಅಚ್ಚಾದ ಪುಟಗಳಿಗಿಂತ ಅವರು ಮಾಂಡಲೆ ಜೈಲಿನ ಕೋಟೆಯಲ್ಲಿ ಬಂಧಿತರಾದಾಗ ಹೆಚ್ಚು ಪ್ರಸಾರವಾಯಿತು. ಆ ಕಠಿಣ ಶಿಕ್ಷೆಗೊಳಪಟ್ಟು ಅವರ ಪ್ರಭಾವ ನೂರ್ಮಡಿಸಿತು. ಅನಂತರದ ಅವರ ಮಾತು ಅವರ ಬರಹಗಳ ಶಕ್ತಿ ಅಗಾಧವಾಗಿ ವರ್ಧಿಸಿತು. ಅವರೀಗ ಕಣ್ಮರೆಯಾದರೂ ಆ ಮಹಾಚೇತನ ಜನಕೋಟಿಯ ಧಮನಿಗಳಲ್ಲಿ ಸಂಕಲ್ಪಶಕ್ತಿಯಾಗಿ ಪ್ರವಹಿಸುತ್ತಲೇ ಇದೆ. ತಾನು ಕಂಡ ಕನಸನ್ನು ಸಾಧಿಸುವ ಪ್ರೇರಣೆಯನ್ನು ಮಾತು ಬರಹಗಳನ್ನು ಮೀರಿದ ಸತ್ಯಪೂರ್ಣ ಸಂಪಾದಕೀಯಂಗಳಿಂದ ಕೊಡುತ್ತಲೇ ಇದ್ದಾರೆ. ದೇಹಧಾರಿಯಾಗಿ ನಮ್ಮೊಡನಿದ್ದರೂ ಈ ಮಂತ್ರ ಪ್ರಸಾರವನ್ನು ಇದಕ್ಕಿಂತ ಹೆಚ್ಚು ಮಾಡಲಾಗುತ್ತಿರಲಿಲ್ಲ. ನನ್ನಂಥ ವಿಮರ್ಶಕರು ಅವರ ಬರಹಗಳಲ್ಲಿ ಅಲ್ಲೊಂದು ಇಲ್ಲೊಂದು ದೋಷಗಳನ್ನೆತ್ತಿ ಆಡುತ್ತಿದ್ದೆವು. ಅವೆಲ್ಲವೂ ಈಗ ಸ್ತಬ್ಧವಾಗಿವೆ. ಅವರಿತ್ತ ದಿವ್ಯ ಮಂತ್ರ ನಿರ್ಮಲವಾಗಿ ಪ್ರಜ್ವಲಿಸುತ್ತದೆ. ಕೋಟಿ ಹೃದಯಗಳಲ್ಲಿ ಧೃತಿಶಕ್ತಿಯಾಗಿ ನಿಂತು ತಮ್ಮ ಜೀವಿತ ಕಾಲದಲ್ಲಿ ಆ ಮಂತ್ರವನ್ನು ಸಾಕ್ಷಾತ್ಕಾರಗೊಳಿಸಿಕೊಂಡು ಶ್ರೇಷ್ಠ ಶಾಶ್ವತ ಸ್ಮಾರಕವನ್ನು ನಿರ್ಮಿಸುವ ಕಡೆಗೆ ಧಾವಿಸುತ್ತಿದೆ.

"ಲೋಹಮಯ ಅಚ್ಚುಗಳ ಜಡಯಂತ್ರದ ಮೂರ್ತಿಪೂಜೆಯನ್ನು ಮೊದಲು ತ್ಯಜಿಸೋಣ. ಲೇಖನಿಯ ಕುಲುಮೆಯನ್ನು ನಂಬಿ ವಿಶ್ವಾಸದಿಂದ ಪ್ರತಿ ಮಾಡುವ ಲಿಪಿಗಾರರೇ ನಮ್ಮ ಅಚ್ಚುಕೂಟಗಳಾಗಲಿ. ಒಂದು ಮಹಾ ಧ್ಯೇಯದ ಮೂರ್ತಿವೆತ್ತ ಪ್ರತೀಕವಾದಾಗ ಮಾತ್ರ ಹಿಂದೂ ಧರ್ಮ ಮೂರ್ತಿಪೂಜೆಯನ್ನಂಗೀಕರಿಸುತ್ತದೆ. ಆ ಜಡ ಪ್ರತಿಮೆಯೇ ಪ್ರಧಾನವಾಗಿ ಬಿಟ್ಟರೆ ಅದೊಂದು ದೋಷಪೂರ್ಣ ಡಂಭಾಚಾರವಾದೀತಂ. ಅನಿರ್ಬಂಧಿತವಾಗಿ ವಿಚಾರ ಪ್ರಚಾರ ಸಾಧ್ಯವಾಗುವವರೆಗೂ

ಈ ಯಂತ್ರ ಸಾಧನೆಗಳನ್ನುಪಯೋಗಿಸೋಣ. ಆದರೆ ಪೋಷಕ ಸೋಗಿನ ಈ ಸರ್ಕಾರ ಮೊಳೆಯಚ್ಚಿನ ಜೋಡಣೆಯನ್ನೂ ಅಚ್ಚುಯಂತ್ರದ ಚಾಲನೆಯನ್ನೂ ಕಣ್ಣಿಟ್ಟು ನೋಡುತ್ತಾ ನಿಯಂತ್ರಿಸುತ್ತಾ ಇಚ್ಛೆ ಬಂದಂತೆ ಅಡ್ಡಿಮಾಡಿ ಯಂತ್ರ ಸೌಲಭ್ಯಗಳನ್ನು ಕಿತ್ತು ಕೊಂಡರೆ ನಾವು ನಿಸ್ಸಹಾಯಕರಾಗಿ ನಿಲ್ಲಬೇಕಾಗಿಲ್ಲವೆಂದು ನನ್ನ ಭಾವನೆ.

"ಈ ಕೈಬರಹದ ಪತ್ರಿಕೆ ಒಂದು ಉತ್ಕಟ ಪರಿಸ್ಥಿತಿಯಲ್ಲಿನ ತೀಕ್ಷ್ಣ ಚಿಕಿತ್ಸೆ ಎಂದು ನಾನು ಬಲ್ಲೆ. ಆದರೆ ಇದರಿಂದ ಎಲ್ಲ ಕಾಲಕ್ಕೂ ಅಚ್ಚಿನ ಸ್ವಾತಂತ್ರ್ಯ ನಮಗೆ ಲಭ್ಯವಾದಂತಾಗುತ್ತದೆ. ಅಚ್ಚುಯಂತ್ರದ ಮೊಳೆಯಚ್ಚು ಮಣೆಗಳ ಅವಲಂಬನೆ ಯನ್ನು ನಾವು ತಿರಸ್ಕರಿಸಿ ಸಾಗಿದಾಗ ಆ ಸಾಧನೆಗಳು ಒಳಗಾಗಿರುವ ಬಂಧನವೂ ಸಡಿಲಿ ಹೋಗುತ್ತದೆ. ವಾಕ್ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯ ಇವು ಮೂರೂ ಸಾಧಿತವಾದರೆ ಹೆಚ್ಚು ಕಡಿಮೆ ಪೂರ್ಣ ಸ್ವರಾಜ್ಯ ಬಂದಂತೆಯೇ."

ಲಿಬರಲ್ ಪಕ್ಷದ ಕೆಲವರು ಕಾಂಗ್ರೆಸ್ ಮತ್ತು ಸರ್ಕಾರಗಳ ನಡುವೆ ಒಪ್ಪಂದ ಕುದುರಿಸುವ ಪ್ರಯತ್ನಕ್ಕೆ ಕಾತುರರಾಗಿದ್ದರು. ಜನವರಿ ೧೪ರಂದು ಪಂಡಿತ ಮಾಳವೀಯರು ಮತ್ತು ಮಹಮ್ಮದಾಲಿ ಜಿನ್ನಾ ಒಂದು ಸರ್ವ ಪಕ್ಷೀಯ ಸಮ್ಮೇಳನ ವನ್ನು ಬೊಂಬಾಯಿನಲ್ಲಿ ಏರ್ಪಡಿಸಿದರು. ಶಾಂತಿ ಒಪ್ಪಂದಗಳ ಕರಾರುಗಳನ್ನು ಚರ್ಚಿಸುವುದು ಇದರ ಉದ್ದೇಶವಾಗಿತ್ತು. ಸರ್. ಸಿ. ಶಂಕರನ್ ನಾಯರ್ ಅವರ ಅಧ್ಯಕ್ಷತೆಯಲ್ಲಿ ಸುಮಾರು ಮುನ್ನೂರು ಪ್ರಮುಖ ಪ್ರತಿನಿಧಿಗಳು ಸೇರಿದ್ದರು. ಅಸಹಕಾರ ಚಳುವಳಿಗಾರರು ಆಹ್ವಾನಿತರಾಗಿ ಮಾತ್ರ ಉಪಸ್ಥಿತರಿದ್ದರು; ಸದಸ್ಯ ರಾಗಿರಲಿಲ್ಲ. ಎನ್. ಸಿ. ಕೇಳ್ಕರರ ಸೂಚನೆಯ ಮೇರೆಗೆ ಕಾಂಗ್ರೆಸ್ ಪರವಾಗಿ ಗಾಂಧೀಜಿ ಏಕೈಕ ಪ್ರತಿನಿಧಿಯಾದರು.

ಕರಡು ನಿರ್ಣಯಂಗಳನ್ನು ಮಾಳವೀಯ ಮತ್ತು ಜಿನ್ನಾ ಸಿದ್ಧಮಾಡಿದರು. ಅದರಲ್ಲಿ ಆಲಿ ಸಹೋದರರ ಮತ್ತು ಇತರ 'ಫಟ್ವಾ' ಬಂಧಿಗಳ ಬಿಡುಗಡೆಯ ಪ್ರಶ್ನೆಯನ್ನು ಕೈ ಬಿಟ್ಟಿದ್ದರು. ಈ ಬಿಡುಗಡೆ, ಮುಖ್ಯ ಕರಾರೆಂದು ಗಾಂಧೀಜಿ ಒತ್ತಾಯಿಸಿದರು.

ಶಂಕರನ್ ನಾಯರಿಗೆ ಇದರಿಂದ ಸಿಟ್ಟು ಬಂದು ಸಭೆಯಿಂದ ಹೊರಟು ಹೋದರು. ಅನಂತರ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಸಭೆ ಅಧ್ಯಕ್ಷರನ್ನಾಗಿ ನೇಮಿಸಿತು.

ಆಲಿ ಸಹೋದರರು ಮತ್ತು ಇತರ ಖಿಲಾಫತ್ ಬಂಧಿಗಳ ಬಿಡುಗಡೆಯ ಕರಾರಿನ ಮೇಲೆ ಒಂದು ದುಂಡು ಮೇಜಿನ ಪರಿಷತ್ತನ್ನು ಕರೆಯಬೇಕೆಂದು ಸಭೆಯಲ್ಲಿ ನಿರ್ಣಯ ವಾಯಿತು. ಸರ್ಕಾರದ ದಬ್ಬಾಳಿಕೆಯನ್ನು ಖಂಡಿಸಲಾಯಿತು. ಕಾಂಗ್ರೆಸ್ ತನ್ನ ಅಹಿಂಸಕ ಕಾನೂನುಭಂಗ ಕಾರ್ಯಕ್ರಮವನ್ನು ತಡೆಹಿಡಿದು ಮಾತುಕತೆಗಳಿಗೆ ಅವಕಾಶ ಮಾಡಿಕೊಡ ಬೇಕೆಂದು ಮನವಿ ಮಾಡಲಾಯಿತು. ಖಿಲಾಫತ್ ಪಂಜಾಬ್ ಮತ್ತು ಸ್ವರಾಜ್ಯ

ಸಮಸ್ಯೆಗಳ ಬಗ್ಗೆ ಅಧಿಕೃತ ಒಪ್ಪಂದಕ್ಕೆ ಬರುವ ಅಧಿಕಾರವುಳ್ಳ ಒಂದು ದುಂಡು ಮೇಜಿನ ಪರಿಷತ್ತನ್ನು ಜಾಗ್ರತೆಯಾಗಿ ಏರ್ಪಡಿಸಬೇಕೆಂದು ಸಮ್ಮೇಳನ ಸೂಚನೆ ಮಾಡಿತು.

"ಸರ್ಕಾರ ಸೂಚಿಸುವ ದಾರಿಯಲ್ಲೇ ನಡೆದರೆ ಭಾರತಕ್ಕೆಂದಿಗೂ ಸ್ವಾತಂತ್ರ್ಯ ಲಭಿಸದು. ಸೂಚಿಸಿದ ಸಮ್ಮೇಳನ ನಡೆಯುವುದಾದರೂ ಸವಿನಯ ಶಾಸನೋಲ್ಲಂಘನೆಯ ಸಿದ್ಧತೆ ನಡೆದೇ ಇರುತ್ತದೆ. ಇದು ಜನತೆಯಿಂದ ಕಸಿದುಕೊಳ್ಳಲಾಗದ ಹಕ್ಕು" ಎಂದು ಗಾಂಧೀಜಿ ಪ್ರಬಲವಾಗಿ ಪ್ರತಿಪಾದಿಸಿದರು. ಸ್ವಯಂಸೇವಕರನ್ನು ಒಟ್ಟುಗೂಡಿಸುವುದು ಸ್ವದೇಶಿ ಪ್ರಚಾರ ಸತ್ಯಾಗ್ರಹ ಶಿಕ್ಷಣ ಮತ್ತು ಮತೀಯ ಐಕ್ಯತೆಯ ಸಾಧನೆ ಇವೇ ಪೂರ್ವಸಿದ್ಧತೆಯ ಕ್ರಮಗಳು ಎಂದು ಸ್ಪಷ್ಟೀಕರಿಸಿದರು.

ಜನವರಿ ಇಪ್ಪತ್ತೊಂಬತ್ತು ಬಾರ್ದೋಲಿಯ ಜನ ಅತ್ಯಂತ ಪ್ರಮುಖ ನಿರ್ಣಯ ಕೈಗೊಂಡು ಸಾಮೂಹಿಕ ಶಾಸನಭಂಗ ಚಳುವಳಿಯನ್ನು ಕೈಗೊಳ್ಳಲು ತೀರ್ಮಾನಿಸಿದರು. ಐನೂರು ಮಹಿಳೆಯರೂ ಸೇರಿದ್ದ ನಾಲ್ಕು ಸಾವಿರ ಖಾದಿಧಾರಿ ಸತ್ಯಾಗ್ರಹಿಗಳ ಪ್ರಚಂಡಸಭೆಯಲ್ಲಿ ಈ ತೀರ್ಮಾನವಾಯಿತು.

ಇಂಥ ಸವಿನಯ ಶಾಸನೋಲ್ಲಂಘನೆಗೆ ಗಾಂಧೀಜಿ ನಿರೀಕ್ಷಿಸಿದ್ದ ಎಲ್ಲ ನಿಯಮಗಳ ಬಗ್ಗೆಯೂ ಸಭೆಯ ಒಪ್ಪಿಗೆಯನ್ನು ಪಡೆಯಲಾಯಿತು. "ಹಿಂದೂ ಮುಸ್ಲಿಂ ಪಾರ್ಸಿ ಕ್ರಿಶ್ಚಿಯನ್ ಒಕ್ಕೂಟದ ಅನ್ವಯಾರ್ಥವನ್ನು ಅವರರಿತರು. ಸತ್ಯ ಅಹಿಂಸೆಗಳ ತತ್ತ್ವಾರ್ಥವನ್ನು ಮನಗಂಡರು; ಅಸ್ಪೃಶ್ಯತಾ ನಿವಾರಣೆ ಏಕೆ? ಎಂಬುದನ್ನು ತಿಳಿದುಕೊಂಡರು; ತಾವೇ ರಾಷ್ಟ್ರೀಯ ವಿದ್ಯಾಲಯಗಳನ್ನು ಪ್ರೋತ್ಸಾಹಿಸಿದ್ದಲ್ಲದೆ, 'ಅಸ್ಪೃಶ್ಯ' ಮಕ್ಕಳನ್ನೂ ಶಾಲೆಗೆ ಸೇರುವಂತೆ ಪ್ರೇರೇಪಿಸಿದರು. ನೆರೆಹೊರೆಯವರು ರೋಗಕ್ಕೆ ತುತ್ತಾದಾಗ ಶುಶ್ರೂಷೆ ಮಾಡುವಂತೆಯೇ ಅಸ್ಪೃಶ್ಯರಿಗೂ ಆ ಸೇವೆ ಸಲ್ಲಬೇಕೆಂದರಿತರು. ಕರನಿರಾಕರಣೆಯ ಚಳುವಳಿಯನ್ನಾಗಲೀ ಇತರ ರೀತಿಯ ಅಹಿಂಸಕ ಹೋರಾಟವನ್ನಾಗಲೀ ನಡೆಸುವ ಅರ್ಹತೆ ಬರಲು ನಾನು ಸೂಚಿಸಿದ ಮಾರ್ಗದಲ್ಲಿ ತಮ್ಮನ್ನು ತಾವೇ ಸ್ವಚ್ಛಗೊಳಿಸಿಕೊಳ್ಳದೆ ಸಾಧ್ಯವಿಲ್ಲ ಎಂದು ಅವರಿಗೆ ಗೊತ್ತಾಯಿತು. ಉದ್ಯೋಗ ನಿರತರಾಗಿ ತಮ್ಮ ಬಟ್ಟೆ ಪಡೆದುಕೊಳ್ಳಲು ತಾವೇ ನೂತು ತಾವೇ ನೆಯ್ದು ಖಾದಿ ತೊಡಬೇಕೆಂದು ಅರಿತರು. ಕಟ್ಟಕಡೆಗೆ ಈ ಹೋರಾಟದಲ್ಲಿ ಜೈಲುವಾಸವನ್ನೋ ಅಗತ್ಯವಿದ್ದರೆ ಸಾವನ್ನೂ ಸ್ವಾಗತಿಸಲು ಸಿದ್ಧರಾಗಿ ಯಾವ ರೀತಿಯ ದ್ವೇಷವನ್ನೂ ಬೆಳೆಸದಿರಲು ಅವರು ಸಂಕಲ್ಪಿಸಿದ್ದರು."

ಬಾರ್ದೋಲಿ ಗ್ರಾಮವಾಸಿಗಳ ಆ ಮಹಾಸಭೆ ಹೀಗೆ ನಿರ್ಣಯಿಸಿತು. "ಈ ರಾಷ್ಟ್ರ ಕಾರ್ಯಕ್ಕಾಗಿ ಬಲಿದಾನ ಮಾಡುವುದರಲ್ಲಿ ನಮ್ಮ ಬಾರ್ದೋಲಿ ತಾಲ್ಲೂಕು ಪ್ರಥಮ ಸ್ಥಾನಪಡೆಯಬೇಕೆಂದು ನಮ್ಮ ಆಕಾಂಕ್ಷೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಬೇರೆ ಕಾರಣಗಳಿಗಾಗಿ ತನ್ನ ನಿರ್ಣಯವನ್ನು ಬದಲಿಸುವುದಾದರೆ ಅಥವಾ ಸೂಚಿತವಾದ

ದುಂಡುಮೇಜಿನ ಪರಿಷತ್ತು ಸಮಾವೇಶವಾಗುವುದಾದರೆ ಮಾತ್ರ ನಾವು ಪುನರಾಲೋಚಿಸುತ್ತೇವೆ. ಇಲ್ಲದೇ ಹೋದಲ್ಲಿ ಸಾಮೂಹಿಕ ಸವಿನಯ ಶಾಸನೋಲ್ಲಂಘನೆಯ ಕಾರ್ಯಕ್ರಮವನ್ನು ಗಾಂಧೀಜಿಯ ನಿರ್ದೇಶನದಲ್ಲಿ ಈ ಕೂಡಲೇ ನಮ್ಮ ತಾಲ್ಲೂಕಿನಲ್ಲಿ ಪ್ರಾರಂಭಿಸಲಾಗುವುದು."

ಮಧ್ಯವರ್ತಿಗಳ ರಾಜಿ ಪ್ರಯತ್ನ ವಿಫಲವಾಯಿತು. ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸೂರತ್‌ನಲ್ಲಿ ಜನವರಿ ೩೧ಕ್ಕೆ ಸಭೆ ಸೇರಿತು. ಬಾರ್ದೋಲಿ ಜನಕ್ಕೆ ಹೋರಾಟ ನಡೆಸಲು ಅನುಮತಿ ಕೊಟ್ಟಿತು. ರಾಷ್ಟ್ರದ ಮಿಕ್ಕಾವ ಭಾಗದಲ್ಲಿಯೂ ಸಾಮೂಹಿಕ ಅಥವಾ ವೈಯಕ್ತಿಕ ಉಗ್ರ ಚಳುವಳಿಗಳನ್ನು ಈಗಲೇ ಪ್ರಾರಂಭಿಸದೆ ಬಾರ್ದೋಲಿಯ ಸತ್ಯಾಗ್ರಹಕ್ಕೆ ಪೂರ್ಣ ಬೆಂಬಲಕೊಡಬೇಕೆಂದೂ, ಎಲ್ಲ ಚಳುವಳಿಗಳಿಗೂ ಗಾಂಧೀಜಿಯವರ ಪೂರ್ವ ಸಮ್ಮತಿ ಅತ್ಯಗತ್ಯವೆಂದೂ ಘೋಷಿಸಲಾಯಿತು.

ಹೋರಾಟವನ್ನು ಮುಂದೆ ಹಾಕಲಾಗಿದ್ದ ಗಡಿ ಜನವರಿ ೩೧ಕ್ಕೆ ಮುಗಿಯಿತು. ಫೆಬ್ರವರಿ ೧ರಂದು ಗಾಂಧೀಜಿ ವೈಸರಾಯರಿಗೆ ಕೊನೆಯ ಎಚ್ಚರಿಕೆಯನ್ನು ಪ್ರಕಟಿಸಿದರು.

"ಬಾರ್ದೋಲಿ ಬೊಂಬಾಯಿ ಪ್ರಾಂತದ ಸೂರತ್ ಜಿಲ್ಲೆಯಲ್ಲಿನ ಒಂದು ಸಣ್ಣ ತಹಸೀಲು. ಅದರ ಜನಸಂಖ್ಯೆ ಸುಮಾರು ೮೭ ಸಾವಿರ.

"೨೯ರಂದು ವಿಠಲಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಲ್ಲಿನ ಜನ ಸಾಮೂಹಿಕ ಸವಿನಯ ಕಾನೂನುಭಂಗ ಚಳುವಳಿಯನ್ನು ಪ್ರಾರಂಭಿಸಲು ನಿರ್ಧರಿಸಿದ್ದಾರೆ. ಕಳೆದ ನವೆಂಬರಿನಲ್ಲಿ ದೆಹಲಿಯಲ್ಲಿ ಸಮಾವೇಶವಾಗಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ನಿರ್ಣಯದಲ್ಲಿ ಸೂಚಿತವಾದ ಎಲ್ಲ ನಿಯಮಗಳನ್ನೂ ಪಾಲಿಸುವ ಅರ್ಹತೆಯನ್ನು ಈ ಜನ ಸಿದ್ಧಪಡಿಸಿದ್ದಾರೆ. ನಾನು ಈ ಬಾರ್ದೋಲಿ ನಿರ್ಣಯಕ್ಕೆ ಮುಖ್ಯ ಕಾರಣಕರ್ತನಾದ್ದರಿಂದ ಘನಹೊಂದಿದ ತಮಗೂ ಸಾರ್ವಜನಿಕರಿಗೂ ಈ ನಿರ್ಣಯದ ಹಿನ್ನೆಲೆಯನ್ನೂ ಅಲ್ಲಿನ ಪರಿಸ್ಥಿತಿಯನ್ನೂ ವಿವರಿಸುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ.

"ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ನಿರ್ಣಯದಂತೆ ಬಾರ್ದೋಲಿ ತಾಲ್ಲೂಕಿನಲ್ಲಿ ಸಾಮೂಹಿಕ ಸವಿನಯ ಶಾಸನಭಂಗ ಚಳುವಳಿಯನ್ನು ಇಡೀ ರಾಷ್ಟ್ರದ ಪ್ರತಿಭಟನೆಯ ಮೊದಲ ಸಂಕೇತವಾಗಿ ಪ್ರಾರಂಭಿಸಬೇಕೆಂದು ಗೊತ್ತಾಯಿತು. ಖಿಲಾಫತ್, ಪಂಜಾಬ್ ಮತ್ತು ಸ್ವರಾಜ್ಯ ಬೇಡಿಕೆಗಳ ಬಗ್ಗೆ ಭಾರತ ತಳೆದಿರುವ ದೃಢ ನಿರ್ಧಾರಗಳನ್ನು ಸರ್ಕಾರ ಸತತವಾಗಿ ದುರುದ್ದೇಶದಿಂದಲೇ ತಿರಸ್ಕರಿಸುತ್ತಾ ಬಂದಿರುವುದರ ವಿರುದ್ಧ ಜಾಗೃತ ರಾಷ್ಟ್ರ ಪ್ರಬಲವಾಗಿ ಪ್ರತಿಭಟಿಸುವ ಮೊದಲ ಸೂಚನೆಯಾಗಿ ಜನತಾ ಸತ್ಯಾಗ್ರಹ ಪ್ರಾರಂಭಿಸಲು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸೂಚಿಸಿತು.

"ದುರದೃಷ್ಟವಶಾತ್ ಆ ನಿರ್ಣಯವಾದನಂತರ ನವೆಂಬರ್ ೧೭ರಂದು ಬೊಂಬಾಯಿ ನಗರದಲ್ಲಿ ಹಿಂಸಾತ್ಮಕ ದಂಗೆಯಾಯಿತು. ಈ ದುಃಖಕರ ಪ್ರಸಂಗದಿಂದಾಗಿ ಬಾರ್ದೋಲಿಯ ಸತ್ಯಾಗ್ರಹ ಪ್ರಾರಂಭಿಸುವುದನ್ನು ಮುಂದೂಡಲಾಯಿತು.

"ಈ ಮಧ್ಯೆ ಭಾರತ ಸರ್ಕಾರದ ಸಮ್ಮತಿಯಿಂದ ಬಂಗಾಳ, ಅಸ್ಸಾಂ ಉತ್ತರ ಪ್ರಾಂತ, ಪಂಜಾಬ್, ದೆಹಲಿಗಳಲ್ಲೂ ಕೆಲಮಟ್ಟಿಗೆ ಬಿಹಾರ ಒರಿಸ್ಸಾ ಮತ್ತಿತರ ಪ್ರದೇಶಗಳಲ್ಲಿಯೂ ಅತಿಕ್ರೂರ ದಬ್ಬಾಳಿಕೆಯಿಂದ ಜನತೆಯನ್ನು ಹತ್ತಿಕ್ಕಲಾಯಿತು. 'ದಬ್ಬಾಳಿಕೆ' ಎಂಬ ಪದನ್ನು ನೀವು ಆಕ್ಷೇಪಿಸಿದ್ದೀರಿ ಎಂದು ಬಲ್ಲೆ. ಈ ಪ್ರಾಂತಗಳಲ್ಲಿ ಅಧಿಕಾರಿಗಳು ಕೈಗೊಂಡ ದಮನ ಕ್ರಮಗಳನ್ನು ಹೀಗೆ ವರ್ಣಿಸಲು ನೀವು ಒಪ್ಪುವುದಿಲ್ಲ. ಆ ಸಂದರ್ಭಕ್ಕೆ ಅತಿಯಾದ ಕ್ರಮ ಕೈಗೊಳ್ಳುವುದು ದಬ್ಬಾಳಿಕೆ ಎಂದೇ ನನ್ನ ಮತ. ಆಸ್ತಿ ಪಾಸ್ತಿಗಳನ್ನು ದೋಚುವುದು, ನಿರಪರಾಧಿಗಳ ಮೇಲೆ ದೌರ್ಜನ್ಯ, ಜೈಲುಗಳಲ್ಲಿ ಖೈದಿಗಳ ಮೇಲೆ ಕ್ರೂರ ವರ್ತನೆ, ಛಡಿ ಏಟಿನ ಶಿಕ್ಷೆ, ಈ ಅನುಚಿತಕ್ರಮಗಳು ಖಂಡಿತ ನ್ಯಾಯಬದ್ಧ ನಾಗರಿಕ ವರ್ತನೆಗಳೆನಿಸಲಾರವು. ಅಧಿಕಾರಿಗಳ ಈ ಅರಾಜಕ ದುರ್ವರ್ತನೆಯನ್ನು ನ್ಯಾಯರಹಿತ ದಬ್ಬಾಳಿಕೆ ಎಂದೇ ಕರೆಯಬೇಕು. ಹರತಾಳ ಮತ್ತು ಪಿಕೆಟಿಂಗ್ ನಡೆಸುವಾಗ ಅಸಹಕಾರ ಚಳುವಳಿಗಾರರೂ ಅವರ ಬೆಂಬಲಿಗರೂ ಸ್ವಲ್ಪ ಮಟ್ಟಿಗೆ ಭಯೋತ್ಪಾದಕ ರೀತಿಯಲ್ಲಿ ವರ್ತಿಸಿರಬಹುದಾದರೂ ಪ್ರತೀಕಾರ ರೂಪದ ಈ ಸಾರ್ವತ್ರಿಕ ದಬ್ಬಾಳಿಕೆಯನ್ನು ಶಾಂತಿಯುತಸ್ವಯಂ ಸೇವಕರ ಮೇಲೆ ಹೇರುವುದಾಗಲಿ, ಸಾರ್ವಜನಿಕ ಸಭೆಗಳನ್ನು ಚದುರಿಸುವ ಒತ್ತಾಯವಾಗಲಿ ಸಮರ್ಥಿಸಲಸಾಧ್ಯವಾದ ನ್ಯಾಯಬಾಹಿರ ವರ್ತನೆ. ಉದ್ದೇಶಪೂರ್ವಕವಾಗಿ ಉಗ್ರಕ್ರಮಗಳಿಂದ ಹಿಂಸಾಚಾರ ವೆಸಗುವ ಸಂದರ್ಭಕ್ಕೆ ಅನ್ವಯವಾಗುವ ವಿಶೇಷ ರೀತಿಯ ಕಾನೂನುಗಳ ದುರುಪಯೋಗ ಮಾಡಿದ್ದೀರಿ. ಸಾಮಾನ್ಯವಾದ ಕಾನೂನುಗಳನ್ನೂ ನ್ಯಾಯಬಾಹಿರ ರೀತಿಯಲ್ಲಿ ಅರ್ಥಮಾಡಿ ಅನೇಕ ಸಂದರ್ಭಗಳಲ್ಲಿ ನಿರಪರಾಧಿಗಳಾದ ಸಾಮಾನ್ಯರ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ದಬ್ಬಾಳಿಕೆ ಎನ್ನದೆ ಮತ್ತೇನನ್ನಬೇಕು? ಹಾಗೆಯೇ ಯಾವುದನ್ನು ಬದಲಾಯಿಸಲು ವಾಗ್ದಾನ ಮಾಡಲಾಗಿದೆಯೋ ಅಂಥ ಪತ್ರಿಕಾ ಶಾಸನದ ರಕ್ಷಣೆಯಲ್ಲಿ ಮತ್ತು ಅದರ ಸ್ವಾತಂತ್ರ್ಯದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುತ್ತಿದೆಯೋ ಅಂಥ ನಡವಳಿಕೆ ದಬ್ಬಾಳಿಕೆ ಎನಿಸಿಕೊಳ್ಳುತ್ತದೆ.

"ವಾಕ್ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯಗಳನ್ನು ಈಗ ಒದಗಿರುವ ಅಪಾಯದಿಂದ ರಕ್ಷಿಸಿಕೊಳ್ಳುವುದೇ ರಾಷ್ಟ್ರದ ಪ್ರಪ್ರಥಮ ಕರ್ತವ್ಯ. ಮಾಳವೀಯರೇರ್ಪಡಿಸಿದ ಸಮ್ಮೇಳನದ ಮುಖ್ಯ ಉದ್ದೇಶ ಒಂದು ದುಂಡು ಮೇಜಿನ ಪರಿಷತ್ತನ್ನು ಏರ್ಪಡಿಸಲು ತಮ್ಮನ್ನು ಪ್ರೇರೇಪಿಸುವುದೇ ಆಗಿದ್ದುದರಿಂದ ಅಸಹಕಾರ ಚಳುವಳಿಗಾರರು ಅದನ್ನು ಅಂಗೀಕರಿಸಲು ಸಿದ್ಧರಿರಲಿಲ್ಲ. ಸರ್ಕಾರದ ಈಗಿನ ಮನೋಧೋರಣೆ ಹಾಗೂ ದೇಶದಲ್ಲಿ ಪಸರಿಸುತ್ತಿದ್ದ ಹಿಂಸಾತ್ಮಕ ಕೃತ್ಯಗಳನ್ನು ಸಂಪೂರ್ಣವಾಗಿ ಹತೋಟಿಯಲ್ಲಿಡಲು ದೇಶದ ಅಸಾಮರ್ಥ್ಯ, ಈ ಕಾರಣಗಳಿಂದ ಅವರು ಹಾಗೆ ಎಣಿಸಿದ್ದರು. ಎಲ್ಲ ಅನಾವಶ್ಯಕ ನೋವು ಸಂಕಟಗಳನ್ನೂ ಆದಷ್ಟು ತಪ್ಪಿಸಲು ನಾನು ಆತುರನಾಗಿದ್ದೆ. ಮಾಳವೀಯರ ಸಮ್ಮೇಳನದ ಸೂಚನೆಗಳನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಒಪ್ಪಬೇಕೆಂದು ನಾನೇ ಯಾವ ಸಂಕೋಚವೂ ಇಲ್ಲದೆ ಶಿಫಾರ್ಸು

ಮಾಡಿದ್ದೆ. ನೀವು ಕಲ್ಕತ್ತಾದಲ್ಲಿ ಮಾಡಿದ ಭಾಷಣ ಮತ್ತು ಇತರ ಕಡೆಗಳಿಂದ ನಾನು ಅರಿತಂತೆ ಆ ಸಮ್ಮೇಳನದ ಸೂಚನೆಗಳು ನಿಮ್ಮ ಆವಶ್ಯಕತೆಗಳಿಗೆ ಅನುಕೂಲವಾಗಿಯೇ ಇದ್ದರೂ ಕೂಡ ನೀವು ಅದನ್ನು ಸಂಪೂರ್ಣವಾಗಿ ನಿರಾಕರಿಸಿ ಬಿಟ್ಟಿರಿ.

"ಹೀಗಿರುವಾಗ ದೇಶಕ್ಕೆ ಬೇರೆ ದಾರಿಯೇ ಇಲ್ಲ. ಯಾವುದಾದರೊಂದು ಅಹಿಂಸಾ ಮಾರ್ಗವನ್ನನುಸರಿಸಿ ತನ್ನ ಬೇಡಿಕೆಗಳನ್ನು ಒತ್ತಾಯಪಡಿಸಿ ಮೂಲಭೂತ ಹಕ್ಕುಗಳಾದ ವಾಕ್‌ಸ್ವಾತಂತ್ರ್ಯ, ಸಂಘಸ್ವಾತಂತ್ರ್ಯ ಮತ್ತು ಪತ್ರಿಕಾಸ್ವಾತಂತ್ರ್ಯಗಳನ್ನು ಪಡೆದುಕೊಳ್ಳಬೇಕಾಗಿದೆ. ಈ ಹಿಂದೆ ಆಲಿ ಸಹೋದರರು ಔದಾರ್ಯದಿಂದಲೂ ಪುರುಷಯೋಗ್ಯ ಕೆಚ್ಚೆದೆಯಿಂದಲೂ ಯಾವ ಷರತ್ತೂ ಇಲ್ಲದೇ ಕ್ಷಮಾಪಣೆ ಪ್ರಕಟಿಸಿದ ಸಮಯಕ್ಕೆ ಘನ ಹೊಂದಿದ ತಾವು ಹಾಕಿದ ನಾಗರಿಕತೆಯ ಅಧಿಕೃತ ಧೋರಣೆಯನ್ನು ಸಂಪೂರ್ಣವಾಗಿ ಕಡೆಗಣಿಸಿದ್ದೀರಿ. ಮಾತಿನಲ್ಲಿಯೂ ಕಾರ್ಯ ಚಟುವಟಿಕೆಗಳಲ್ಲಿಯೂ ಅಸಹಕಾರ ಚಳುವಳಿಗಾರರೂ ಅಹಿಂಸಾತ್ಮಕವಾಗಿರುವವರೆಗೂ ಕೊಟ್ಟು ಭಾರತ ಸರ್ಕಾರ ಅದರಲ್ಲಿ ಯಾವ ಹಸ್ತಕ್ಷೇಪವನ್ನೂ ಮಾಡುವುದಿಲ್ಲ ಎಂಬ ಭರವಸೆ ಈಗ ಹಿಂತೆಗೆದಿದ್ದೀರಿ. ಸರ್ಕಾರ ಪಕ್ಷಪಾತವಿಲ್ಲದೆ ದೂರನಿಂತು ಸಾರ್ವಜನಿಕಾಭಿಪ್ರಾಯ ರೂಪುಗೊಂಡು ಪ್ರಭಾವಯುತವಾಗಿ ಪರಿಣಾಮ ಮಾಡುವ ಅವಕಾಶ ಕೊಟ್ಟಿದ್ದರೆ ಈ ಉಗ್ರಪ್ರತಿಭಟನೆಯ ಚಳುವಳಿಯನ್ನು ಮುಂದೆ ಹಾಕುವಂತೆ ಜನತೆಯ ಮನವೊಲಿಸಲು ಸಾಧ್ಯವಾಗುತ್ತಿತ್ತು. ಕಾಂಗ್ರೆಸ್ ಸಂಸ್ಥೆ ಹಿಂಸಾಪ್ರವೃತ್ತಿಯ ದುಷ್ಟ ಶಕ್ತಿಗಳ ಮೇಲೆ ತನ್ನ ಹತೋಟಿಯನ್ನಿಟ್ಟುಕೊಂಡು ತನ್ನ ಬೆಂಬಲಿಗರಲ್ಲಿ ಇನ್ನೂ ಹೆಚ್ಚಿನ ಶಿಸ್ತು ಸಂಯಮಗಳನ್ನು ಸಾಧಿಸಲು ಸಹಕಾರಿಯಾಗುತ್ತಿತ್ತು. ಈಗ ನಡೆದಿರುವ ನ್ಯಾಯ ಬಾಹಿರ ದಬ್ಬಾಳಿಕೆ ಈ ದೇಶದ ಇತಿಹಾಸದಲ್ಲೇ ಹಿಂದೆಂದೂ ನಡೆದಿಲ್ಲ. ಆ ಕಾರಣಕ್ಕಾಗಿಯೇ ಈ ಕೂಡಲೇ ಸಾಮೂಹಿಕ ಸವಿನಯ ಶಾಸನಭಂಗ ಚಳುವಳಿಯನ್ನು ಹೂಡುವುದು ಅನಿವಾರ್ಯವಾಗಿದೆ. ಸದ್ಯಕ್ಕೆ ನಾನು ಆರಿಸಿದ ಕೆಲವು ಕ್ಷೇತ್ರಗಳಿಗೆ ಈ ಚಳುವಳಿ ಸೀಮಿತವಾಗಿರಬೇಕೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ತೀರ್ಮಾನಿಸಿದೆ. ಅದರಂತೆ ಈಗ ಬಾರ್ದೋಲಿ ತಾಲ್ಲೂಕಿನಲ್ಲಿ ಮಾತ್ರ ಪ್ರಾರಂಭಿಸಲಾಗುತ್ತಿದೆ. ಹಾಗೆಯೇ ಮದ್ರಾಸ್ ಪ್ರಾಂತದಲ್ಲಿನ ಗುಂಟೂರು ಕ್ಷೇತ್ರದಲ್ಲೂ ಈ ಹೋರಾಟಕ್ಕೆ ನಾನು ಅನುಮತಿ ಕೊಡಬಲ್ಲೆ. ಒಂದು ನೂರು ಹಳ್ಳಿಗಳ ವ್ಯಾಪ್ತಿಯಲ್ಲಿ ಈ ಕೂಡಲೇ ಅಲ್ಲಿ ಪ್ರಾರಂಭಿಸಲೂಬಹುದು. ಅವರು ಕೆಲವು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲು ಒಪ್ಪಬೇಕಾಗುತ್ತದೆ. ಅಹಿಂಸಾತ್ಮಕ ವರ್ತನೆ, ಜಾತೀಯ ಐಕ್ಯತೆ, ಕೈನೂಲಿನ ಖಾದಿ ಕೊಡಿಗೆ ಮತ್ತು ಉತ್ಪಾದನೆ, ಅಸ್ಪೃಶ್ಯತಾ ನಿವಾರಣೆ ಇವು ಮೂಲಭೂತ ನಿಯಮಗಳು.

"ಬಾರ್ದೋಲಿಯ ಜನ ಈ ಮಹಾ ಸಂಗ್ರಾಮವನ್ನು ಆರಂಭಿಸುವ ಮುನ್ನ ಭಾರತ ಸರ್ಕಾರದ ಅತ್ಯುನ್ನತ ಪ್ರಮುಖರಾದ ನಿಮ್ಮಲ್ಲಿ ನಿಮ್ಮ ಸರ್ಕಾರದ ಧೋರಣೆಯನ್ನು ಸಂಪೂರ್ಣವಾಗಿ ಬದಲಿಸಿರಿ ಎಂದು ಮತ್ತೊಮ್ಮೆ ಗೌರವದಿಂದ ವಿನಂತಿಸಿ

ಕೊಳ್ಳುತ್ತೇನೆ. ಅಹಿಂಸಾತ್ಮಕ ಅಸಹಕಾರ ಚಳುವಳಿಗಾಗಿ ಸೆರೆಹಿಡಿದಿರುವ ಬಂದಿಗಳ ಬಿಡುಗಡೆ; ದೇಶದಲ್ಲಿ ನಡೆಯುವ ಯಾವ ಅಹಿಂಸಾತ್ಮಕ ಚಟುವಟಿಕೆಗಳಲ್ಲೂ ಸರ್ಕಾರ ಯಾವ ರೀತಿಯ ಹಸ್ತಕ್ಷೇಪ ಮಾಡದೆ ಸಂಪೂರ್ಣವಾಗಿ ತಟಸ್ಥರಾಗಿರಲು ಬದ್ಧರಾಗಿರುವಂತೆ ಸ್ಪಷ್ಟವಾದ ನೀತಿಯ ಘೋಷಣೆ; ಖಿಲಾಫತ್ ಚಳುವಳಿ, ಪಂಜಾಬದ ಅಕೃತ್ಯ ಪ್ರತಿಭಟನೆ, ಸ್ವರಾಜ್ಯದ ಬೇಡಿಕೆ ಅಥವಾ ಮತ್ತಾವುದೇ ರೀತಿಯ ಜನತಾ ಚಳುವಳಿಗಳಾಗಲಿ ಅವು ಅಹಿಂಸಾತ್ಮಕವಾಗಿದ್ದಲ್ಲಿ ಈಗಿರುವ 'ಪೀನಲ್ ಕೋಡ್' 'ಕ್ರಿಮಿನಲ್ ಪ್ರೊಸೀಜರ್ ಕೋಡ್'ಗಳ ಅನ್ವಯದ ಪರಿಧಿಯೊಳಗೆ ಬಂದರೂ ಕೂಡ ಕ್ರೂರ ದಮನಕ್ರೊಳಗಾಗದೆ ಇರುವಂತೆ ಸರ್ಕಾರದ ತಟಸ್ಥ ನೀತಿಯ ಅನುಸರಣೆ; ಇವು ನಿಮ್ಮ ನಿಯಮಗಳಾಗಬೇಕು. ಪತ್ರಿಕಾ ಪ್ರಪಂಚದ ಮೇಲಿನ ಸರ್ಕಾರೀ ನಿಯಂತ್ರಣಗಳನ್ನು ಕೊನೆಗೊಳಿಸಿ ಇತ್ತೀಚೆಗೆ ಪತ್ರಿಕೆಗಳ ಮೇಲೆ ಹೊರಿಸಿರುವ ದಂಡಗಳನ್ನೂ ಮುಟ್ಟುಗೋಲು ಆಜ್ಞೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯದಿಂದ ಬೇಡುತ್ತೇನೆ. ಯಾವುದೇ ಸರ್ಕಾರ ನಾಗರಿಕ ರೀತಿಯದೆಂದೆನಿಸಿಕೊಳ್ಳಲು ಇತರ ದೇಶಗಳಲ್ಲಿ ಹೇಗೆ ನಡೆದುಕೊಳ್ಳುತ್ತದೆಯೋ ಹಾಗೆ ನಡೆದುಕೊಳ್ಳಬೇಕೆಂದು ನಿಮ್ಮನ್ನು ಪ್ರಾರ್ಥಿಸುವುದೇ ಈ ಬೇಡಿಕೆಗಳ ಉದ್ದೇಶ. ಈ ಬೇಡಿಕೆಗೆ ಕಿವಿಗೊಟ್ಟು ಇನ್ನು ಏಳು ದಿನಗಳೊಳಗಾಗಿ ಅಧಿಕೃತ ಘೋಷಣೆಯೊಂದನ್ನು ಹೊರಡಿಸುವುದಾದರೆ ಈಗ ಸೆರೆಯಲ್ಲಿಯಲ್ಲಿರುವ ಕಾರ್ಯಕರ್ತರು ಹೊರ ಬಂದು ಪರಿಸ್ಥಿತಿಯನ್ನು ಹೊಸದಾಗಿ ಪರಿಶೀಲಿಸಿ ನಿರ್ಣಯಕ್ಕೆ ಬರುವವರೆಗೂ ಈಗಿನ ಉಗ್ರರೂಪದ ಕಾನೂನುಭಂಗ ಚಳುವಳಿಯನ್ನು ಮುಂದೂಡುವಂತೆ ನಾನು ಸೂಚನೆ ಕೊಡುತ್ತೇನೆ. ಸಾರ್ವಜನಿಕ ಅಭಿಪ್ರಾಯಕ್ಕೆ ಗೌರವಕೊಟ್ಟು ಪ್ರಾಮಾಣಿಕ ಸದುದ್ದೇಶಗಳಿಂದ ಸರ್ಕಾರ ವರ್ತಿಸುತ್ತದೆಯೆಂದು ಮೇಲ್ಕಂಡ ಘೋಷಣೆಯಿಂದ ನನಗೆ ಸಮಾಧಾನವಾದೀತು. ಅದರಂತೆ ನನ್ನ ದೇಶ ಬಾಂಧವರಿಗೂ ಅತ್ಯಂತ ಅಹಿಂಸಾತ್ಮಕವಾಗಿ ವರ್ತಿಸಿ ಹಿಂಸಾಚಾರಗಳಿಗೆಡೆಗೊಡದೆ ಜನಾಭಿಪ್ರಾಯವನ್ನು ಪ್ರಬಲವಾಗಿ ಸಂಘಟಿಸುವುದಾದರೆ ಬದಲಿಸಲಾಗದ ಅವರ ಖಚಿತ ಬೇಡಿಕೆಗಳು ಈಡೇರಲು ಸಮರ್ಥ ಜಾಗೃತಿ ಉಂಟಾಗುವುದೆಂಬ ಭರವಸೆ ಹೊಂದಬೇಕೆಂದೂ ವಿನಂತಿ ಮಾಡುತ್ತೇನೆ. ಯಾವ ಸಮಯಕ್ಕೆ ಸರ್ಕಾರ ಕಟ್ಟುನಿಟ್ಟಾದ ತಟಸ್ಥ ನೀತಿಯನ್ನು ಬದಿಗೊತ್ತುವುದೋ ಅಥವಾ ಭಾರತದ ಜನತೆಯ ಬಹುಸಂಖ್ಯಾತರು ಸ್ಪಷ್ಟವಾಗಿ ಖಚಿತವಾಗಿ ಪ್ರಕಟಿಸುವ ಸಾರ್ವಜನಿಕಾಭಿಪ್ರಾಯಕ್ಕೆ ಮಣಿಯಲು ದರ್ಪದಿಂದ ನಿರಾಕರಿಸುತ್ತದೆಯೋ ಆಗ ಮಾತ್ರ ಉಗ್ರರೂಪದ ಸವಿನಯ ಕಾನೂನುಭಂಗ ಚಳುವಳಿಯನ್ನು ಕೈಗೊಳ್ಳಲಾಗುವುದು."

ಫೆಬ್ರುವರಿ ೬ರಂದು ಗಾಂಧೀಜಿಯ ಈ ಎಲ್ಲ ಬೇಡಿಕೆಗಳನ್ನೂ ನಿರಾಕರಿಸುವ ಪ್ರಕಟನೆಯೊಂದನ್ನು ಸರ್ಕಾರ ಪ್ರಕಟಿಸಿತು. ಬೊಂಬಾಯಿನ ಉಗ್ರದಂಗೆಗಳನ್ನು ದಮನ ಮಾಡುವುದಕ್ಕಾಗಿಯೇ ಈ ದಬ್ಬಾಳಿಕೆಯ ಕ್ರಮಗಳೆಂದು ವೈಸ್‌ರಾಯ್ ತಮ್ಮ ನೀತಿಯನ್ನು ಸಮರ್ಥಿಸಿಕೊಂಡರು. ಅಪಾಯಕರ ಅರಾಜಕತೆ ಹರಡುತ್ತಿದೆಯೆಂದೂ

ಸ್ವಯಂ ಸೇವಕ ಸಂಸ್ಥೆಗಳಂ ಎಲ್ಲ ಕಡೆಯೂ ಭಯೋತ್ಪಾದನೆ ಮಾಡುತ್ತಾ ಕಾನೂನಿಗೆ ಅಡ್ಡಿಮಾಡುತ್ತಿದೆಯೆಂದೂ ಆಪಾದಿಸಿದರು. ಫೆಬ್ರುವರಿ ೭ರಂದು ಗಾಂಧೀಜಿ ಇದಕ್ಕೆ ಉತ್ತರಿಸಿದರು. ವಾಸ್ತವಾಂಶಗಳನ್ನು ಪಟ್ಟಿಮಾಡಿ ಪ್ರಕಟಿಸಿದರು. "ಕಲ್ಕತ್ತಾ ದಲ್ಲಿ ಗೋಲಿಬಾರ್, ಸಶಸ್ತ್ರ ರಕ್ಷಣಾ ಪಡೆಗಳ ದೌರ್ಜನ್ಯ ಕೃತ್ಯಗಳು, ಡಾಕಾ, ಅಲಿಘಡ ಗಳಲ್ಲಿ ಸಾರ್ವಜನಿಕ ಸಭೆಗಳನ್ನು ಬಲಾತ್ಕಾರವಾಗಿ ಚದುರಿಸಿದ್ದು, ಸ್ವಯಂಸೇವಕರ ಮೇಲಿನ ಅಮಾನುಷವಾದ ಅಪ್ರಕೃತ ದೌರ್ಜನ್ಯ, ಜಲಂಧರ್, ಲಾಹೋರ್, ಡೆಹರಾ ಡೂನ್‌ಗಳಲ್ಲಿ ಜನರ ಮೇಲೆ ಕ್ರೂರವರ್ತನೆ, ಬಿಹಾರದಲ್ಲಿ ಹಳ್ಳಿಗಳ ದರೋಡೆ, ಸೋನೇಪುರದಲ್ಲಿ ಕಾಂಗ್ರೆಸ್ಸಿಗೆ ಸೇರಿದ ಕಾಗದ ಪತ್ರಗಳನ್ನೂ ಖಾದಿಯನ್ನೂ ಸುಟ್ಟು ಹಾಕಿದ ಪ್ರಕರಣ, ಖಿಲಾಫತ್ ಮತ್ತು ಕಾಂಗ್ರೆಸ್ ಕಾರ್ಯಾಲಯಗಳಿಗೆ ಮಧ್ಯ ರಾತ್ರಿಯ ದಾಳಿಗಳು ಮತ್ತು ಬಂಧನಗಳು, ಇಂಥ ಅನೇಕ ಘಟನೆಗಳನ್ನು ಉದಾಹರಿಸಿ ದರು. ಅಧಿಕಾರಶಾಹಿ ಕಾನೂನು ಧಿಕ್ಕರಿಸಿ ಬರ್ಬರ ರೀತಿಯಲ್ಲಿ ವರ್ತಿಸಿದ ಅಸಂಖ್ಯಾತ ಘಟನೆಗಳಿಗೆ ನಿರಾಕರಿಸಲಸಾಧ್ಯವಾದ ಸಾಕ್ಷ್ಯಗಳಿವೆ. ಮೇಲೆ ಹೇಳಿದವು ಕೆಲವು ಉದಾಹರಣೆಗಳು; ದೇಶದಲ್ಲಾಗುತ್ತಿರುವುದರಲ್ಲಿ ಇವು ತಿಲಾಂಶ ಮಾತ್ರ" ಎಂದರು.

ಈ ಕೊನೆಯೆಚ್ಚರಿಕೆ ಹಾಗೂ ಪ್ರತಿಭಟನಾ ಪತ್ರವನ್ನು ಬಾರ್ದೋಲಿಯಿಂದ ಕಳುಹಿಸಲಾಯಿತು. ಅಲ್ಲಿ ಚಳುವಳಿಯನ್ನು ನಿರ್ದೇಶಿಸಲು ಗಾಂಧೀಜಿ ಹೋಗಿದ್ದರು. ದೇಶಕ್ಕೆ ದೇಶವೇ ಚಕಿತವಾಯಿತು. ಈ ಪ್ರತಿಭಟನಾ ಪತ್ರ ಹೋಯಿತೆನ್ನುವಷ್ಟರಲ್ಲೇ ಚೌರಿ–ಚೌರಾದಲ್ಲಿ ಫೆಬ್ರುವರಿ ೫ರಂದು ಗಲಭೆಯಾಯಿತೆಂಬ ಸುದ್ದಿ ೮ರಂದು ಪ್ರಕಟ ವಾಯಿತು. ಸಂಯುಕ್ತ ಪ್ರಾಂತದ ಗೋರಖಪುರ ಜಿಲ್ಲೆಯ ಒಂದು ಗ್ರಾಮ ಚೌರಿ–ಚೌರ. ಅಲ್ಲಿ ಮೆರವಣಿಗೆ ಆದಾಗ ಅಥವಾ ಅದು ಹಾದು ಹೋದ ಮೇಲೆ ಪೋಲೀಸರು ಕೆಲವರನ್ನು ಹಿಡಿದು ಬೈದು ಗಲಭೆ ಮಾಡಿದರು. ಇದರಿಂದ ಗಲಭೆ ಹೆಚ್ಚಾಗಿ ಪೋಲೀಸರು ಗುಂಡು ಹಾರಿಸಬೇಕಾಯಿತು. ಅವರಲ್ಲಿದ್ದ ಮದ್ದುಗುಂಡುಗಳು ಮುಗಿದುಹೋದವು. ಅವರೆಲ್ಲರೂ ಪೋಲೀಸ್ ಠಾಣೆಯೊಳಕ್ಕೆ ಹೋಗಿ ಸೇರಿಕೊಂಡರು. ಉದ್ರೇಕಗೊಂಡಿದ್ದ ಜನಸಂದಣಿ ಅಲ್ಲಿಗೆ ನುಗ್ಗಿ ಠಾಣೆಗೆ ಬೆಂಕಿ ಹಚ್ಚಿ ಬಿಟ್ಟಿತು. ಇಪ್ಪತ್ತೆಂಟು ಜನ ಪೋಲೀಸರು ಜೀವಂತವಾಗಿ ದಹನ ಮಾಡಲ್ಪಟ್ಟರು. ಇದನ್ನು ಕೇಳಿ ಗಾಂಧೀಜಿಗೆ ತೀವ್ರ ದಿಗ್ಭ್ರಮೆ ಯಾಯಿತಂ.

ಆ ಕ್ಷಣದಲ್ಲಿ ಗಾಂಧೀಜಿ ಈ ಜನತಾ ಹೋರಾಟವನ್ನು ರದ್ದುಗೊಳಿಸಲು ನಿರ್ಧರಿಸಿಬಿಟ್ಟರು. ಪರಿಸ್ಥಿತಿ ಗಂಭೀರವಾಯಿತಂ. ಕೆಲವು ದಿನಗಳ ಹಿಂದೆ ವೈಸರಾಯರಿಗೆ ಕೊನೆಯೆಚ್ಚರಿಕೆ ಕೊಟ್ಟಿದ್ದರು. ಹಿಂತೆಗೆದರೆ ಇಡೀ ಹೋರಾಟ ಹಾಸ್ಯಾಸ್ಪದವಾಗು ವುದು ಎನಿಸಿತ್ತು. ಆದರೂ ವಿಧಿಯಿರಲಿಲ್ಲ. "ಸೈತಾನ ಅದನ್ನು ತಡೆಹಿಡಿದು ಬಿಟ್ಟ" ಎಂದರು. ಈ ಸೈತಾನನದು ಅಹಂಕಾರ ವಾಣಿ ಎಂದು ಅರಿತಂ ತಮ್ಮ ಕೊನೆಯೆಚ್ಚರಿಕೆ ಯನ್ನೂ ಹಿಂತೆಗೆದುಕೊಂಡುಬಿಟ್ಟರು.

ಫೆಬ್ರುವರಿ ೧೧ರಂದು ಕಾರ್ಯಕಾರೀ ಸಮಿತಿಯವರಲ್ಲಿ ತಮ್ಮ "ತೀವ್ರ ಸಂಶಯಗಳನ್ನೂ ಕಠಿಣ ತೊಂದರೆಗಳನ್ನೂ" ನಿವೇದಿಸಿದರು. ಅವರು ಗಾಂಧೀಜಿಯ ಅಭಿಪ್ರಾಯಗಳನ್ನು ಒಪ್ಪಲಿಲ್ಲ. ಆದರೂ ಗಾಂಧೀಜಿಯ ನಿರ್ಧರವಾದ ಬೇಡಿಕೆಯ ಮೇರೆಗೆ ಸಾಮೂಹಿಕವಾಗಿ ಸವಿನಯ ಶಾಸನಭಂಗ ಹೋರಾಟವನ್ನು ರದ್ದುಗೊಳಿಸುವ ನಿರ್ಣಯವಾಯಿತು. ಅದರ ಬದಲು ರಚನಾತ್ಮಕ ಕಾರ್ಯಗಳಾದ ನೂಲುವುದು, ಮದ್ಯಪಾನ ನಿರೋಧ, ಸಮಾಜ ಸುಧಾರಣೆ ಮತ್ತು ಶಿಕ್ಷಣ ಕಾರ್ಯಗಳನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

ಫೆಬ್ರುವರಿ ೧೨ರಂದು ಗಾಂಧೀಜಿ ಐದು ದಿನಗಳ ಉಪವಾಸ ಪ್ರಾರಂಭಿಸಿದರು. ೧೬ನೇ ಫೆಬ್ರುವರಿಯಂದು 'ಯಂಗ್ ಇಂಡಿಯಾ'ದಲ್ಲಿ ಬರೆದ ಲೇಖನ ಮಾನವನ ಇತಿಹಾಸದಲ್ಲೇ ಅದ್ವಿತೀಯ ವಿಶಿಷ್ಟ ಪ್ರಮಾಣ ಪತ್ರವಾಯಿತು.

"ಭಗವಂತನಿಗೆ ನನ್ನಲ್ಲಿ ಅಪಾರ ಕರುಣೆ. ಸಾಮೂಹಿಕ ಶಾಸನ ಭಂಗವನ್ನು ಸಮರ್ಥಿಸಲು ಅತ್ಯಗತ್ಯ ಅಹಿಂಸಾತ್ಮಕ ಸತ್ಯನಿಷ್ಠ ಪರಿಸರ ಭಾರತದಲ್ಲಿ ಇನ್ನೂ ಉಂಟಾಗಿಲ್ಲ; ಶಾಸನಭಂಗ ನಿಜವಾಗಿ 'ಸವಿನಯ' ಎನ್ನಿಸಿಕೊಳ್ಳಲು ಅದು ಸೌಮ್ಯ ಸತ್ಯಪೂರ್ಣವಿನೀತ, ಜಾಗೃತ, ಹಠವಿದ್ದರೂ ಪ್ರೇಮಮಯ, ದ್ವೇಷಘಾತಕತನ ಎಳ್ಳಷ್ಟೂ ಇಲ್ಲದ ವರ್ತನೆ ಆಗಬೇಕು ಎಂದು ಭಗವಂತ ಮೂರನೆಯ ಬಾರಿ ಎಚ್ಚರಿಸಿದ್ದಾನೆ.

"ರೌಲತ್ ಕಾಯಿದೆಯ ವಿರುದ್ಧ ೧೯೧೯ರಲ್ಲಿ ಚಳುವಳಿ ಪ್ರಾರಂಭವಾದಾಗ ಎಚ್ಚರಿಸಿದ. ಅಹಮದಾಬಾದ್, ವೀರಮ್‌ಗಾಮ್, ಖೇಡಾಗಳಲ್ಲಿ ತಪ್ಪು ಹೆಜ್ಜೆಯಿಟ್ಟು ಗಲಭೆಯಾಯಿತು. ಅಮೃತಸರ ಕಾಸೂರಗಳು ತಪ್ಪು ಹಾದಿ ಹಿಡಿದವು. ನನ್ನ ಹೆಜ್ಜೆಯನ್ನಾಗ ಹಿಂತೆಗೆದುಕೊಂಡೆ. 'ಹಿಮಾಲಯದಂತಹ ತಪ್ಪಾಯಿತು' ಎಂದೆ. ದೈವ ಹಾಗೂ ಮಾನವ ಸಮಕ್ಷಮ ವಿನೀತನಾಗಿ ತಲೆಬಾಗಿದೆ. ಜನತೆಯ ಸಾಮೂಹಿಕ ಚಳುವಳಿಯನ್ನು ನಿಲ್ಲಿಸಿದೆ. ಸವಿನಯವೂ ಅಹಿಂಸಾತ್ಮಕವಾಗಿಯೂ ಆಗಬೇಕೆಂದು ಬಯಸಿದ್ದ ನನ್ನ ವೈಯಕ್ತಿಕ ಕಾರ್ಯಕ್ರಮವನ್ನು ರದ್ದು ಮಾಡಿದೆ.

"ಎರಡನೆಯ ಬಾರಿ ಬೊಂಬಾಯಿನ ಭಯಂಕರ ಘಟನೆಯ ಮೂಲಕ ಭಗವಂತನ ಎಚ್ಚರಿಕೆ ಬಂತು. ನವೆಂಬರ್ ೧೭ರಂದು ಬೊಂಬಾಯಿನ ಜನಜಂಗುಳಿ ಎಸಗಿದ ಕ್ರೂರಕೃತ್ಯಗಳಿಗೆ ನಾನೇ ಪ್ರತ್ಯಕ್ಷ ಸಾಕ್ಷಿಯಾಗುವಂತೆ ಮಾಡಿದ. ಅಸಹಕಾರ ಚಳುವಳಿಯ ಬೆಂಬಲಕ್ಕಾಗಿಯೇ ಇಷ್ಟೆಲ್ಲ ಮಾಡಿದರು. ಆದರೆ ಆ ಸಮಯಕ್ಕೆ ಬಾರ್ದೋಲಿಯಲ್ಲಿ ಪ್ರಾರಂಭವಾಗಬೇಕಾಗಿದ್ದ ಸವಿನಯ ಶಾಸನಭಂಗದ ಸಾಮೂಹಿಕ ಚಳುವಳಿಯನ್ನು ನಿಲ್ಲಿಸುವ ಇಚ್ಛೆಯನ್ನು ಪ್ರಕಟಿಸಿದೆ. ೧೯೧೯ಕ್ಕಿಂತ ಹೆಚ್ಚಿನ ತೇಜೋವಧೆಯಾಯಿತು. ಅದರಿಂದ ನನಗೆ ಒಳಿತಾಯಿತು. ಚಳುವಳಿ ನಿಲ್ಲಿಸಿದುದು ರಾಷ್ಟ್ರಕ್ಕೂ ಲಾಭವಾಯಿತೆಂದು ನನ್ನ ಖಚಿತಾಭಿಪ್ರಾಯ. ಹಾಗೆ ರದ್ದು ಮಾಡಿದುದರಿಂದ ಭಾರತ ಸತ್ಯ ಅಹಿಂಸೆಗಳಿಗಾಗಿ ಸುಭದ್ರವಾಗಿ ನಿಂತಿತು.

"ಅತ್ಯಂತ ಕಹಿಯಾದ ತೇಜೋವಧೆ ಇನ್ನೂ ಆಗಬೇಕಾಗಿತ್ತು. ಮದ್ರಾಸಿನಿಂದ ಎಚ್ಚರಿಕೆ ಬಂತು. ನಾನದನ್ನು ಗಮನಿಸದೇ ಹೋದೆ. ಆದರೆ ಚೌರಿ–ಚೌರದ ದುರಂತ ಘಟನೆಯಿಂದ ಭಗವಂತ ಸ್ಪಷ್ಟವಾಗಿ ಪ್ರಬಲವಾಗಿ ಎಚ್ಚರಿಸಿದ. ಅತಿ ಕ್ರೌರ್ಯದ ಕೊಲೆಗೆ ತುತ್ತಾದ ಆ ಪೋಲೀಸರೂ ಕೂಡ ಉದ್ಧಟರಾಗಿ ಜನರನ್ನು ಕೆರಳಿಸಿದ್ದರೆಂದು ತಿಳಿಯಿತು. ಇನ್‌ಸ್ಪೆಕ್ಟರರು ಜನರನ್ನು ಯಾವ ರೀತಿಯಲ್ಲೂ ಹಿಂಸಿಸುವುದಿಲ್ಲವೆಂದು ಆಶ್ವಾಸನೆ ಕೊಟ್ಟರೂ ಮೆರವಣಿಗೆ ಮುಂದೆ ಹೋದ ನಂತರ ಹಿಂದುಳಿದ ಕೆಲವರನ್ನು ಪೋಲೀಸರು ತಡೆದು ಹೀನಾಯವಾಗಿ ಬೈದು ತಮ್ಮ ಮಾತಿಗೆ ತಪ್ಪಿದ್ದರು. ಚಿತ್ರಹಿಂಸೆ ಗೊಳಗಾದವರು ಕೂಗಿಕೊಂಡಾಗ ಜನರ ಗುಂಪು ಹಿಂತಿರುಗಿತು. ಪೋಲೀಸರು ಗುಂಡು ಹಾರಿಸಿದರು. ಅವರಲ್ಲಿದ್ದ ಸ್ವಲ್ಪ ಗುಂಡು ಮದ್ದು ಪೂರೈಸಿತು. ಪೋಲೀಸ್ ಠಾಣೆಯ ಸುರಕ್ಷಿತ ಕಟ್ಟಡಕ್ಕೆ ಹೋಗಿ ರಕ್ಷಣೆ ಪಡೆದರು. ಸಿಟ್ಟಿಗೆದಿದ್ದ ಜನಜಂಗುಳಿ ಠಾಣೆಗೇ ಬೆಂಕಿಯಿಟ್ಟಿತು. ಪೋಲೀಸರು ಹೊರಗೆ ಓಡಿ ಹೋಗಬೇಕಾಯಿತು. ಓಡುತ್ತಿದ್ದವರನ್ನು ನಿಷ್ಕರುಣೆಯಿಂದ ಹಿಡಿದು ಕತ್ತರಿಸಿ ಚಿಂದಿ ಮಾಡಿಬಿಟ್ಟರು. ಶವಗಳನ್ನು ಉರಿಯುತ್ತಿದ್ದ ಬೆಂಕಿಗೆ ಎಸೆದು ಬಿಟ್ಟರು.

"ಈ ರಾಕ್ಷಸೀ ಕೃತ್ಯದಲ್ಲಿ ಅಸಹಕಾರ ಚಳುವಳಿಯ ಸ್ವಯಂ ಸೇವಕರೂ ಸೇರಿದ್ದರೆಂದು ವರದಿ. ಆ ಜಿಲ್ಲೆಯಲ್ಲಿ ಪೋಲೀಸರಿಂದ ನಡೆದಿದ್ದ ಕ್ರೂರ ದಬ್ಬಾಳಿಕೆಗಳೆಲ್ಲಾ ಜನರ ಮನಸ್ಸಿನಲ್ಲಿತ್ತೆಂದು ಆ ಕ್ಷಣದ ಕಿಚ್ಚು ನಿಮಿತ್ತವಾಯಿತೆಂದೂ ಹೇಳಲಾಗಿದೆ. ಅದೆಷ್ಟೇ ಕೆರಳಿಸುವ ಪರಿಸ್ಥಿತಿಯಿರಲಿ ಈ ಅಮಾನುಷ ಕೊಲೆಗಡುಕತನ ಅಕ್ಷಮ್ಯ. ನಿಶ್ಶಸ್ತ್ರರಾಗಿ ರಕ್ಷಣೆಯಿಲ್ಲದೆ ಜನಜಂಗುಳಿಯ ಕ್ರೌರ್ಯಕ್ಕೆ ಈಡಾದವರ ಕೊಲೆಯನ್ನು ಯಾರೂ ಸಮರ್ಥಿಸಲಾರರು. ಅಹಿಂಸಾತ್ಮಕವಾಗಿ ನಡೆಯುವೆವೆಂದು ಹೇಳಿಕೊಂಡು, ಅಹಿಂಸೆಯಿಂದಲೇ ಸ್ವಾತಂತ್ರ್ಯ ಸೋಪಾನವನ್ನು ಏರಬೇಕೆಂದು ಆಶಿಸಿರುವ ಭಾರತ, ಉದ್ರೇಕಗೊಳ್ಳಲು ಅದೆಷ್ಟೇ ಕಾರಣಗಳಿದ್ದರೂ ಈ ಸಾಮೂಹಿಕ ದೌರ್ಜನ್ಯಕ್ಕೆಡೆ ಗೊಡುವುದು ಖಂಡಿತ ಶುಭಲಕ್ಷಣವಾಗಲಾರದು. ಒಂದು ವೇಳೆ ಬಾರ್ದೋಲಿಯಲ್ಲಿ ಅಹಿಂಸಾತ್ಮಕ ಶಾಸನಭಂಗ ಚಳುವಳಿ ಯಶಸ್ವಿಯಾಗುವಂತೆ ಭಗವಂತ ಅನುಗ್ರಹಿಸಿದ್ದಿದ್ದರೆ, ಭಾರತ ಸರ್ಕಾರ ಬಾರ್ದೋಲಿಯ ವಿಜಯಿಗಳಿಗೆ ಅಧಿಕಾರ ಒಪ್ಪಿಸಿ ನಿರ್ಗಮಿಸುತ್ತಿತ್ತು. ಅದೇ ಸಮಯಕ್ಕೆ ಉದ್ರೇಕ ಕೆರಳಿದ ಕಾರಣಗಳನ್ನು ಮುಂದೆ ಮಾಡಿ ಅಮಾನುಷ ದುಷ್ಕೃತ್ಯಗಳಲ್ಲಿ ದಂಗೆಕೋರರು ತೊಡಗಿದ್ದರೆ ಹತೋಟಿಯಲ್ಲಿಡಲು ಯಾರನ್ನು ಆಶ್ರಯಿಸಬೇಕಾಗಿತ್ತು? ಅಹಿಂಸೆಯ ಮೂಲಕ ಸ್ವರಾಜ್ಯ ಸಾಧನೆ ಎಂದರೆ ದೇಶದ ಹಿಂಸಾತ್ಮಕ ಪ್ರವೃತ್ತಿಯ ಮೇಲೆ ಅಹಿಂಸೆಯ ನಿಯಂತ್ರಣ. ದೇಶದ ಗೂಂಡಾ ಜನರನ್ನು ನಿಯಂತ್ರಿಸುವುದು ಸಾಧ್ಯವಾದಾಗ ಮಾತ್ರ ಅಹಿಂಸಾತ್ಮಕ ಅಸಹಕಾರ ಜಯಗಳಿಸುತ್ತದೆ. ಇದರ ಅರ್ಥ ಅಂಥ ಜನ ದೇಶಭಕ್ತಿಯಿಂದಲೋ, ಧಾರ್ಮಿಕ ವೃತ್ತಿಯಿಂದಲೋ ತಮ್ಮ ಹಿಂಸಾತ್ಮಕ ಕಾರ್ಯಗಳಿಂದ ದೂರವಿರುವಂತಾಗಬೇಕು.

ಜನತಾ ಚಳುವಳಿಗಳು ನಡೆಯುವ ಸಮಯಕ್ಕಾದರೂ ಅವರು ತಟಸ್ಥರಾಗಬೇಕು. ಆದ್ದರಿಂದಲೇ ಚೌರಿ–ಚೌರದ ದುರಂತ ನನ್ನನ್ನು ಆಳವಾಗಿ ಕಲಕಿತು.

"ವೈಸರಾಯ್‌ರಿಗೆ ಕೊಟ್ಟ ಮನವಿ ಮತ್ತು ಆತನ ಉತ್ತರಕ್ಕೆ ಪ್ರತಿಯಾಗಿ ನೀಡಿದ ಪ್ರತಿಭಟನೆ ಇವುಗಳ ಗತಿಯೇನು? ಎಂದು ಸೈತಾನನು ಪ್ರಶ್ನಿಸಿದಂತೆ ಭಾಸವಾಯಿತು. ನುಂಗಲಾಗದ ಅವಮಾನದ ತುತ್ತಾಗಿತ್ತು ಅದು. ಬಾರ್ಡೋಲಿ ಜನರಿಗೆ ಪ್ರತಿಜ್ಞಾವಚನಕೊಟ್ಟು, ಸರ್ಕಾರಕ್ಕೆ ಆಟಾಟೋಪದ ಬೆದರಿಕೆಯನ್ನು ಹಾಕಿ ಮಾರನೆಯ ದಿನವೇ ಎಲ್ಲರನ್ನು ಹಿಂತೆಗೆದುಕೊಳ್ಳುವುದು ಹೇಡಿತನವಲ್ಲವೆ? ಈ ಸೈತಾನವಾಣಿ ಮತ್ತೆ ಕೆಣಕಿತು. ಸತ್ಯವನ್ನು ತಿರಸ್ಕರಿಸಿ ಧರ್ಮಭ್ರಷ್ಟನಾಗಲು ಅರ್ಥಾತ್ ಭಗವಂತನನ್ನೇ ನಿರಾಕರಿಸಲು ಇದು ಆಹ್ವಾನದಂತಿತ್ತು. ಬಳಿಯಿದ್ದ ಮಿತ್ರರಲ್ಲಿಯೂ, ಕಾಂಗ್ರೆಸ್ ಕಾರ್ಯ ಸಮಿತಿ ಸದಸ್ಯರಲ್ಲೂ ನನ್ನ ಸಂದೇಹಗಳ ಬಗ್ಗೆ, ಸಂಕಟಗಳ ಬಗ್ಗೆ ಸಮಾಲೋಚನೆ ಮಾಡಿದೆ. ಮೊದಲ ಬಾರಿಗೆ ಅವರೂ ನನ್ನ ಅಭಿಪ್ರಾಯಗಳನ್ನು ಒಪ್ಪದೇ ಹೋದರು. ಹಲವರೂ ಬಹುಶಃ ಈಗಲೂ ಒಪ್ಪಲಾರರು. ಆದರೆ ಅತ್ಯಂತ ದಾಕ್ಷಿಣ್ಯಪರರೂ, ಕ್ಷಮಾಶೀಲರೂ, ಆದ ಸಹೋದ್ಯೋಗಿಗಳನ್ನೂ ಸ್ನೇಹಿತರನ್ನೂ ಹೊಂದಿರುವುದು ನನ್ನ ಸೌಭಾಗ್ಯ. ನನ್ನ ಕಷ್ಟಗಳನ್ನರಿತು ತಾಳ್ಮೆಯಿಂದ ನನ್ನ ವಾದವನ್ನು ಕೇಳಿದರು. ಅದರ ಪರಿಣಾಮವಾಗಿಯೇ ಆದ ಕಾರ್ಯಕಾರೀ ಸಮಿತಿಯ ನಿರ್ಣಯ ಸಾರ್ವಜನಿಕರ ಮುಂದಿದೆ. ಶಕ್ತಿಯುತವಾದ ಹೋರಾಟವನ್ನು ಹೆಚ್ಚು ಕಡಿಮೆ ಪೂರ್ತಿಯಾಗಿ ಹಿಂತೆಗೆದುಕೊಂಡದ್ದು ರಾಜಕೀಯ ದೃಷ್ಟಿಯಿಂದ ಅಹಿತವೂ, ವಿವೇಕ ರಹಿತವೂ ಆಗಿರಬಹುದು. ಆದರೆ ಧಾರ್ಮಿಕ ದೃಷ್ಟಿಯಿಂದ ಅದು ಅತ್ಯಂತ ಉಚಿತ ನಿರ್ಣಯ. ನನ್ನ ಅವಮಾನ ಮತ್ತು ತಪ್ಪೊಪ್ಪಿಗೆಯ ಅಗ್ನಿಪರೀಕ್ಷೆಯಿಂದ ರಾಷ್ಟ್ರಕ್ಕೆ ಖಂಡಿತವಾಗಿ ಹಿರಿದಾದ ಲಾಭವಾಗಿದೆಯೆಂದು ಸಂದೇಹಗ್ರಸ್ಥರಿಗೆ ಭರವಸೆ ನೀಡಬಯಸುತ್ತೇನೆ.

"ಸತ್ಯ ಅಹಿಂಸೆಗಳೆರಡನ್ನು ಮಾತ್ರ ಶ್ರೇಷ್ಠ ಸದ್ಗುಣಗಳೆಂದು ನಾನು ಅಂಗೀಕರಿಸುತ್ತೇನೆ. ಅತಿಮಾನವ ಶಕ್ತಿಗಳಾವುವೂ ನನ್ನಲ್ಲಿಲ್ಲ. ನನಗೆ ಅವುಗಳ ಅಗತ್ಯವೂ ಇಲ್ಲ. ಅತ್ಯಂತ ದುರ್ಬಲ ಸಹಜೀವಿಯಷ್ಟೇ ನಾನೂ ದೇಹ ದೌರ್ಬಲ್ಯಗಳಿಗೆ ತುತ್ತಾಗಬಹುದಾದ ಸಾಮಾನ್ಯ ಮಾನವ. ತಪ್ಪು ಮಾಡುವುದೂ ಸಹಜ. ನನ್ನ ಸೀಮಿತ ಶಕ್ತಿಗಳ ಮೂಲಕವೇ ನಾನು ಸೇವೆ ಸಲ್ಲಿಸಬಲ್ಲೆ. ನನ್ನ ಅಪೂರ್ಣತೆಗಳೆಷ್ಟಿದ್ದರೂ ಈವರೆವಿಗೆ ಭಗವಂತ ನನ್ನನ್ನು ಅನುಗ್ರಹಿಸುತ್ತಲೇ ಬಂದಿದ್ದಾನೆ.

"ತಪ್ಪೊಪ್ಪಿಗೆ ಕಸಗುಡಿಸುವ ಸಾಧನ. ಕಷ್ಮಲವನ್ನೆಲ್ಲಾ ಗುಡಿಸಿ ವೇದಿಕೆಯನ್ನು ಹಿಂದಿಗಿಂತ ಸ್ವಚ್ಛವಾಗಿ ಶುಭ್ರಗೊಳಿಸುತ್ತದೆ. ನನ್ನ ಶಕ್ತಿ ಈ ತಪ್ಪೊಪ್ಪಿಗೆಯಿಂದಾಗಿ ವರ್ಧಿಸುತ್ತದೆ. ಹೆಜ್ಜೆಯನ್ನು ಹಿಂತೆಗೆದ ಕಾರಣವಾಗಿ ಧ್ಯೇಯ ಸಾಧನೆ ಹೆಚ್ಚು ಯಶಸ್ವಿಯಾಗುತ್ತದೆ. ಋಜುಮಾರ್ಗವನ್ನು ತ್ಯಜಿಸಿ ಅಡ್ಡಹಾದಿಗಳಿಂದ ಯಾವ ಮನುಷ್ಯನೂ ಸಿದ್ಧಿಯನ್ನು ಪಡೆದುದಿಲ್ಲ.

"ಚೌರಿ–ಚೌರದ ಘಟನೆ ಬಾರ್ದೋಲಿಯ ಮೇಲೆ ಪರಿಣಾಮವನ್ನುಂಟು ಮಾಡದು. ಬಾರ್ದೋಲಿಯ ಜನ ದುರ್ಬಲರಾದಲ್ಲಿ ಮಾತ್ರ ಈ ಘಟನೆಯಿಂದ ವಿಚಲಿತರಾಗಿ ಹಿಂಸಾಚಾರಗಳಿಗೆ ಜಾರುವ ಅಪಾಯವುಂಟು. ಎಂದು ವಾದಿಸು ವವರೂ ಇದ್ದಾರೆ. ನನಗೂ ಇದರಲ್ಲಿ ಅನುಮಾನವಿಲ್ಲ. ಬಾರ್ದೋಲಿಯ ಜನ ಭಾರತದಲ್ಲೇ ಅತ್ಯಂತ ಶಾಂತಿಪ್ರಿಯರು ಎಂದು ನನ್ನ ಮತ. ಆದರೆ ಭಾರತದ ಭೂ ಪಟದಲ್ಲಿ ಬಾರ್ದೋಲಿ ಒಂದು ಚುಕ್ಕೆ. ದೇಶದ ಇತರ ಕಡೆಗಳ ಪೂರ್ಣ ಸಹಕಾರ ವಿಲ್ಲದೆ ಬಾರ್ದೋಲಿಯ ಪ್ರಯತ್ನ ಯಶಸ್ವಿಯಾಗದು. ಬಾರ್ದೋಲಿಯ ಶಾಸನ ಭಂಗ ಹೋರಾಟ, ಸವಿನಯ ಸ್ವರೂಪದ್ದಾಗಬೇಕಾದರೆ ಭಾರತದ ಇತರ ಭಾಗ ಗಳೆಲ್ಲವೂ ಶಾಂತವಾಗಿರಬೇಕಾದುದು ಅಗತ್ಯ. ಒಂದು ತೊಟ್ಟು ವಿಷ ಬಿದ್ದರೂ ಹಾಲು ಅಪೇಯವಾಗುವಂತೆ ಚೌರಿ–ಚೌರದ ಘೋರ ವಿಷಜ್ವಾಲೆ ಬಾರ್ದೋಲಿಯ ಸವಿನಯತೆಯ ಯಶಸ್ಸನ್ನು ತೊಡೆದು ಹಾಕುತ್ತದೆ. ಬಾರ್ದೋಲಿಯಷ್ಟೇ ಚೌರಿ–ಚೌರವೂ ಭಾರತದ ಒಂದು ಭಾಗ.

"ಚೌರಿ–ಚೌರದ ಘಟನೆ ಅತಿರೇಕದ ಸಂಕೇತ. ದಬ್ಬಾಳಿಕೆ ನಡೆದ ಇತರ ಎಲ್ಲೆಡೆ ಯಲ್ಲೂ ಯಾವ ಹಿಂಸಾತ್ಮಕ ಪ್ರತಿಭಟನೆಯೂ ನಡೆದಿಲ್ಲ ಎಂದು ನಾನೇನೂ ಅಂದು ಕೊಂಡಿಲ್ಲ. ಆದರೆ ದಬ್ಬಾಳಿಕೆಯ ರಾಕ್ಷಸೀ ಪ್ರಮಾಣದೆದುರು ಜನತೆಯ ಈ ಅಲ್ಪ ಸ್ವಲ್ಪ ಹಿಂಸೆ ಖಂಡಿತ ಗಣನೀಯವಾದುದಲ್ಲವೆಂದು ನನ್ನ ನಂಬಿಕೆ. ಯಂಗ್–ಇಂಡಿಯಾದ ಬರಹಗಳು ಇದನ್ನು ಸಂಪೂರ್ಣವಾಗಿ ಸಮರ್ಥಿಸುತ್ತವೆ. ನಿಷೇಧಾಜ್ಞೆಗಳಿರುವ ಕಡೆ ಪ್ರತಿರೋಧಿಸಿ ಸಭೆ ನಡೆಸುವುದನ್ನು ನಾನು ಹಿಂಸಾಚಾರ ಎಂದು ಕರೆಯಲಾರೆ. ಕಲ್ಲೆಸೆತ ಮುಂತಾದ ಭಯೋತ್ಪಾದಕ ಕೃತ್ಯಗಳೂ, ಬಲಾತ್ಕಾರಗಳೂ ಎಲ್ಲೋ ಕೆಲವೆಡೆ ಗಳಲ್ಲಿ ನಡೆದಿರುವುದನ್ನು ಕುರಿತು ಮಾತ್ರ ನಾನು ಹೇಳುತ್ತಿದ್ದೇನೆ. ವಾಸ್ತವವಾಗಿ ಸವಿನಯ ಶಾಸನಭಂಗದಲ್ಲಿ ಎಲ್ಲೂ ಆವೇಶಕ್ಕೆಡೆಗೊಡಬಾರದು. ನಿಶ್ಶಬ್ದವಾಗಿ ಸಂಕಟ ವನ್ನನುಭವಿಸಲು ಸಿದ್ಧರಾಗುವುದೇ ಸವಿನಯ ಶಾಸನಭಂಗ. ಅರಿವಿಲ್ಲದೆಯೇ ನಯವಾಗಿ ಅತ್ಯಮೋಘ ಪರಿಣಾಮ ಅದರಿಂದ ಆಗುತ್ತದೆ. ಆದರೂ ಅಲ್ಪಸ್ವಲ್ಪ ಭಾವಾವೇಶ ಅನಿವಾರ್ಯ; ಅರಿವಿಲ್ಲದೆಯೇ ಸಂಭವಿಸುವ ಅಲ್ಪ ಸ್ವಲ್ಪ ಕ್ಷಮ್ಯ ಹಿಂಸಾಚಾರವೂ ಇದ್ದೀತು ; ಆದರ್ಶ ಪರಿಸ್ಥಿತಿ ಸ್ವಲ್ಪ ಕುಂಠಿತವಾದರೂ ಸವಿನಯ ಶಾಸನಭಂಗ ಅಸಾಧ್ಯ ವೆಂದೇನೂ ನಾನು ನಂಬಿಲ್ಲ. ಪರಿಸ್ಥಿತಿ ಆದರ್ಶವಾಗಿದ್ದಾಗ ಸವಿನಯತೆಯುಳ್ಳ ಶಾಸನಭಂಗದ ಬಿಸಿಯೇ ತಟ್ಟದು. ಪ್ರತಿಕೂಲ ಸಂದರ್ಭವಿದ್ದರೂ ಸಾಹಸದಿಂದ ಕೈಗೊಂಡ ಅಪಾಯಕಾರೀ ಪ್ರಯೋಗವೇ ಈ ಚಳುವಳಿ ಎಂದು ನಾನು ಒಪ್ಪುತ್ತೇನೆ.

"ಚೌರಿ–ಚೌರದ ದುರಂತ ನಿಜವಾಗಿಯೂ ಒಂದು ಅಳತೆಗೋಲು. ತೀವ್ರ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳದಿದ್ದರೆ ಭಾರತ ಎತ್ತಸಾಗುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಅಹಿಂಸೆಯಿಂದ ಹಿಂಸೆ ಹುಟ್ಟಿ ಬರದಂತೆ ಎಚ್ಚರ ವಹಿಸಲು ನಮ್ಮ ಹೆಜ್ಜೆಯನ್ನು ಹಿಂತೆಗೆದುಕೊಳ್ಳಬೇಕೆಂಬುದು ಸುಸ್ಪಷ್ಟ. ಶಾಂತಿಯುತ ಪರಿಸರವನ್ನು

ಪುನರ್ನಿರ್ಮಿಸಿ, ಕಾರ್ಯಕ್ರಮಗಳನ್ನು ಪುನರ್ವ್ಯವಸ್ಥೆಗೊಳಿಸಬೇಕು. ಸಾಮೂಹಿಕ ಜನತಾ ಚಳುವಳಿ ಇದ್ದರೂ, ಸರ್ಕಾರದ ಪ್ರಚೋದಕ ವರ್ತನೆ ಎದುರಾದರೂ ಶಾಂತಸ್ಥಿತಿ ಕದಡದೆಂಬ ಪೂರ್ಣ ಭರವಸೆಯಿಲ್ಲದೆ ಸವಿನಯ ಶಾಸನಭಂಗ ಚಳುವಳಿಯನ್ನು ಪ್ರಾರಂಭಿಸಬಾರದು.

"ಕಾಂಗ್ರೆಸ್ ಇನ್ನೂ ಅಪರಿಪೂರ್ಣ ಸಂಸ್ಥೆ. ಅದರ ಸೂಚನೆಗಳನ್ನು ಇನ್ನೂ ಮನಸ್ಸಿಲ್ಲದೆ ಕಾಟಾಚಾರಕ್ಕಾಗಿ ಅನುಸರಿಸಲಾಗುತ್ತಿದೆ. ಗ್ರಾಮಗಳಲ್ಲೆಲ್ಲಾ ಕಾಂಗ್ರೆಸ್ ಸಮಿತಿಗಳಾಗಿಲ್ಲ. ಇರುವ ಕಡೆಯೂ ನಮ್ಮ ಸೂಚನೆಗಳು ಸಂಪೂರ್ಣವಾಗಿ ಅಂಗೀಕೃತವಾಗಿಲ್ಲ. ಸದಸ್ಯ ಸಂಖ್ಯೆ ಬಹಳವಾದರೆ ಒಂದು ಕೋಟಿ ಇದ್ದೀತು. ಫೆಬ್ರುವರಿ ಮಧ್ಯಭಾಗದಲ್ಲಿದ್ದರೂ ಅನೇಕರು ನಾಲ್ಕಾಣೆ ಚಂದಾ ಹಣವನ್ನಿನ್ನೂ ಪಾವತಿ ಮಾಡಿಲ್ಲ. ಸ್ವಯಂಸೇವಕರನ್ನು ಅಸಡ್ಡೆಯಿಂದಲೇ ಸೇರಿಸಿಕೊಳ್ಳಲಾಗುತ್ತಿದೆ. ಪ್ರತಿಜ್ಞೆಗಳನ್ನವರು ಪೂರ್ಣವಾಗಿ ಪಾಲಿಸುವುದಿಲ್ಲ. ಕೈನೂಲಿನ ಕೈಮಗ್ಗದ ಖಾದಿ ಕೂಡ ತೊಡುವುದಿಲ್ಲ. ಹಿಂದೂ ಸ್ವಯಂಸೇವಕರು ಅಸ್ಪೃಶ್ಯತೆಯ ಪಾಪ ದೋಷದಿಂದ ಮುಕ್ತರಾಗಿಲ್ಲ. ಹಿಂಸೆಯ ಕಳಂಕದಿಂದ ಎಲ್ಲರೂ ನಿರ್ಲಿಪ್ತರೇನಲ್ಲ. ಕೇವಲ ಸೆರೆಮನೆಯ ಶಿಕ್ಷೆ ಅನುಭವಿಸಿದ ಮಾತ್ರಕ್ಕೆ ಸ್ವರಾಜ್ಯ ಬರದು ; ಖಿಲಾಫತ್‌ನ ಪವಿತ್ರಧ್ಯೇಯ ಸಾಧಿಸದು ಅಥವಾ ದ್ರೋಹವೆಸಗಿದ ಸೇವಕರ ಸಂಭಾವನೆ ನಿಲ್ಲಿಸಲೂ ಶಕ್ತರಾಗೆವು. ಕೆಲವರು ಉದ್ದೇಶವಿಲ್ಲದೆ ತಪ್ಪು ಮಾಡಬಹುದು. ಮತ್ತೆ ಕೆಲವರು ಮಾತ್ರ ಉದ್ದೇಶಪೂರ್ವಕ ಮಾಡುತ್ತಾರೆ. ತಾವು ಅಹಿಂಸೆಯನ್ನು ನಂಬದಿದ್ದರೂ, ನಡೆಸಬೇಕೆಂದು ಒಪ್ಪದಿದ್ದರೂ ಸ್ವಯಂಸೇವಕ ದಳಕ್ಕೆ ಸೇರುತ್ತಾರೆ. ಸರ್ಕಾರವನ್ನು ಅಸತ್ಯಕ್ಕಾಗಿ ದೂಷಿಸಿ ನಾವೇ ಸತ್ಯದ್ರೋಹಿಗಳಾಗುತ್ತಿದ್ದೇವೆ. ಸತ್ಯ ಅಹಿಂಸೆಗಳಿಗೆ ಕೇವಲ ಔಪಚಾರಿಕ ಮನ್ನಣೆ ಕೊಟ್ಟರೆ ನಾವು ಸ್ವಾತಂತ್ರ್ಯ ಸಾಮ್ರಾಜ್ಯಕ್ಕೆ ಕಾಲಿಡಲಾರೆವು.

"ಸಾಮೂಹಿಕ ಸವಿನಯ ಶಾಸನ ಭಂಗ ಚಳುವಳಿಯ ನಿಲುಗಡೆ ಮತ್ತು ಭಾವೋದ್ರೇಕದ ಶಮನವಾಗದೆ ಮುಂದೆ ಹೆಜ್ಜೆಯಿಡಲಾಗದು. ಅವನತಿಯನ್ನು ನಿವಾರಿಸಲೂ ಅದು ಅನಿವಾರ್ಯ. ಆದ್ದರಿಂದ ಚಳುವಳಿಯನ್ನು ರದ್ದುಗೊಳಿಸಿದ್ದರಿಂದ ಯಾವ ಕಾಂಗ್ರೆಸ್ ಸದಸ್ಯನಾಗಲಿ, ಮಹಿಳೆಯಾಗಲಿ ನಿರಾಶರಾಗುವ ಅಗತ್ಯವಿಲ್ಲ. ಬದಲಾಗಿ ಒಂದು ಅಸತ್ಯದೋಷದಿಂದ, ರಾಷ್ಟ್ರೀಯ ಪಾತಕದಿಂದ, ದೂರಾದೆವೆಂಬ ಆತ್ಮತೃಪ್ತಿಯೇ ಅವರಿಗಾಗಬೇಕು.

"ನಮ್ಮ ಸೋಲೆನ್ನಿಸಿಕೊಳ್ಳುವ ಹಿಮ್ಮೆಟ್ಟುವಿಕೆ ತೇಜೋವಧೆಗಳಿಂದಾಗಿ ಶತ್ರುಪಕ್ಷ ಅಟ್ಟಹಾಸದಿಂದ ವರ್ತಿಸಿದರೆ ಚಿಂತೆಯಿಲ್ಲ. ನಾವು ವಚನಭ್ರಷ್ಟರಾಗಿ ದೈವದ್ರೋಹದ ಘೋರ ಪಾತಕವನ್ನೆಸಗುವುದಕ್ಕಿಂತ ಅಸಮರ್ಥರೂ ಹೇಡಿಗಳೂ ಎಂಬ ದೂರಿಗೆ ತುತ್ತಾಗುವುದೇ ಲೇಸು. ಜಗತ್ತಿನೆದುರು ನಾವು ಅಸತ್ಯವಂತರೆನಿಸಿಕೊಳ್ಳಬೇಕಾಗಿ ಬಂದರೂ ಆತ್ಮವಂಚನೆಯ ದೋಷಕ್ಕಿಂತ ಅದು ಕೋಟಿಪಾಲು ಉತ್ತಮವೆಂದು ಹೇಳಬೇಕು.

"ಚೌರಿ–ಚೌರದ ಜನತೆ ಎಸಗಿದ ರಾಕ್ಷಸೀ ಹಿಂಸೆಗೆ ಅನೈಚ್ಛಿಕವಾಗಿಯಾದರೂ ನಾನು ಕಾರಣನಾಗಿದೇನೆ. ಸಾಮೂಹಿಕ ಸವಿನಯ ಶಾಸನಭಂಗವನ್ನು ಮತ್ತು ಉತ್ಸಾಹ ತುಂಬಲುದ್ದೇಶಿತವಾದ ಹಲವು ಗೌಣ ಕಾರ್ಯಕ್ರಮಗಳನ್ನು ರದ್ದು ಮಾಡುವುದು– ನನ್ನ ಪಾಪಕ್ಕೆ ಪೂರ್ಣ ಪ್ರಾಯಶ್ಚಿತ್ತವೆನಿಸದು.

"ನಾನು ಈಗ ಆತ್ಮಸ್ವಚ್ಛತೆಯ ಕ್ರಮಕ್ಕೈಗೊಳ್ಳಬೇಕು. ನನ್ನ ಪರಿಸರದಲ್ಲಿ ಅತ್ಯಲ್ಪ ನೈತಿಕ ದೋಷ ಹುಟ್ಟಿದರೂ ನನ್ನಲ್ಲಿ ಪ್ರತಿಫಲಿತವಾಗುವಂತಹ ಸೂಕ್ಷ್ಮ ಉಪಕರಣ ವಾಗಬೇಕು ನಾನು. ನನ್ನ ಪ್ರಾರ್ಥನೆ ಸತ್ಯದ ಆಳದಿಂದ ಹೊರ ಹೊಮ್ಮಬೇಕು. ನಾನು ವಿನಮ್ರನಾಗಬೇಕು. ಈ ಶುದ್ಧೀಕರಣ ಕ್ರಿಯೆಗೆ ಉಪವಾಸ ವ್ರತ ನನಗೊಂದು ದಿವ್ಯಾಸ್ತ್ರ. ಮನಸ್ಸಿನ ಸಹಕಾರದೊಡನೆ ಕೈಗೊಂಡ ಉಪವಾಸ ಅತ್ಯಂತ ಸಹಾಯಕಾರಿ.

"ಮನೋಧರ್ಮ ಎಲ್ಲಕ್ಕಿಂತ ಮಿಗಿಲಾದುದು. ಪ್ರಾರ್ಥನೆ ಹಲವು ವೇಳೆ ಗಿಳಿ ಪಾಠದಂತೆ ಯಾಂತ್ರಿಕವಾಗಬಹುದು. ಅಂತೆಯೇ ಉಪವಾಸವೂ ಕೇವಲ ದೇಹದಂಡನೆ ಯಾಗಬಹುದು. ಇಂಥ ಜಡ ಯಾಂತ್ರಿಕ ಕ್ರಿಯೆಗಳು ಉದ್ದೇಶ ಸಾಧನೆಗೆ ನಿಷ್ಪ್ರಯೋಜಕ. ಜಡ ಮಂತ್ರೋಚ್ಚಾರಣೆ ಹೇಗೆ ಧ್ವನಿ ಶಿಕ್ಷಣವಾಗಬಲ್ಲುದೋ ಹಾಗೆಯೇ ಯಾಂತ್ರಿಕ ಉಪವಾಸ ದೇಹಶುದ್ಧಿಗೆ ಕಾರಣವಾಗಬಹುದು: ಆದರೆ ಅಂತರಾತ್ಮವನ್ನು ಎರಡೂ ಸ್ಪರ್ಶ ಮಾಡಲಾರವು.

"ಆತ್ಮಶಕ್ತಿಯ ಪೂರ್ಣ ಪ್ರಕಟನೆಗಾಗಿ, ಭೌತದೇಹದ ಮೇಲೆ ಆತ್ಮನ ಸಾರ್ವ ಭೌಮತ್ವಕ್ಕಾಗಿ ಕೈಗೊಂಡ ಉಪವಾಸವ್ರತ ವ್ಯಕ್ತಿ ವಿಕಾಸ ಮಾರ್ಗದಲ್ಲಿ ಒಂದು ಅಪೂರ್ವ ಪ್ರಬಲಶಕ್ತಿ. ಐದು ದಿನಗಳ ಅವಿಚ್ಛಿನ್ನ ಉಪವಾಸ ಕೈಗೊಂಡಿದ್ದೇನೆ. ಜಲಪಾನ ಮಾತ್ರ ಮಾಡುತ್ತೇನೆ. ಭಾನುವಾರ ಸಂಜೆ ಪ್ರಾರಂಭವಾಗಿದೆ. ಶುಕ್ರವಾರದ ಸಂಜೆಗೆ ಮುಕ್ತಾಯ. ಇದು ನಾನು ಮಾಡಲೇ ಬೇಕಾದ ಕನಿಷ್ಟ ಕರ್ತವ್ಯ.

"ಬರಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯನ್ನು ದೃಷ್ಟಿ ಯಲ್ಲಿಟ್ಟುಕೊಂಡು ಈ ಕ್ರಮ ಕೈಗೊಂಡಿದ್ದೇನೆ. ಈ ಐದು ದಿನದ ಉಪವಾಸದಿಂದ ನನ್ನ ಮಿತ್ರರನೇಕರಿಗೆ ಆತಂಕ ವ್ಯಾಕುಲಗಳಾಗುವುದೆಂದು ಬಲ್ಲೆ. ಆದರೆ ಈ ತಪಶ್ಚರ್ಯೆ ಯನ್ನು ಮುಂದೂಡಲಾರೆ, ಅಥವಾ ಕಡಮೆ ಮಾಡಲಾರೆ.

"ನನ್ನ ಸಂಗಡಿಗರು ನನ್ನನ್ನನುಕರಿಸಬಾರದು. ಕಾರಣ ಅವರಿಗೆ ಸ್ವಂತ ಪ್ರೇರಣೆ ಇರುವುದಿಲ್ಲ. ಸವಿನಯ ಶಾಸನಭಂಗದ ಪ್ರವರ್ತನೆ ಅವರಿಂದ ಆಗಲಿಲ್ಲ. ಅಪಾಯ ಸ್ಥಿತಿಯಲ್ಲಿರುವ ರೋಗಿಗೆ ಶಸ್ತ್ರ ಚಿಕಿತ್ಸೆ ಮಾಡ ಹೊರಟಿರುವ ವೈದ್ಯ ಅಸಮರ್ಥ ನೆಂದು ಸ್ಥಿರಪಟ್ಟಂತಾಗಿದೆ ನನ್ನ ದುಃಸ್ಥಿತಿ. ನಾನು ಸಾಮರ್ಥ್ಯ ಪಡೆಯಬೇಕು ಇಲ್ಲವೇ ನಿರ್ಗಮಿಸಬೇಕು. ವೈಯ್ಯಕ್ತಿಕ ತಪಸ್ಸು ನನಗೆ ಅಗತ್ಯವಷ್ಟೇ ಅಲ್ಲ ಕರ್ತವ್ಯವೂ ಹೌದು. ಮಿಕ್ಕೆಲ್ಲರೂ ಕಾರ್ಯಕಾರೀ ಸಮಿತಿ ಸೂಚಿಸಿರುವ ಉತ್ಕೃಷ್ಟ ಸಂಯಮ ನಿಯಮ ಗಳನ್ನನುಸರಿಸುವುದು ಶ್ರೇಷ್ಠ ಕ್ರಮ. ಅದೇನೂ ಕಡಮೆ ಗುಣದ ತಪಶ್ಚರ್ಯೆಯಲ್ಲ.

ಪ್ರಾಮಾಣಿಕರಾಗಿ ಸತ್ಯನಿಷ್ಠರಾಗಿ ಈ ವ್ರತ ಪಾಲಿಸುವುದು ಉಪವಾಸಕ್ಕಿಂತಲೂ ನೈಜವಾದ ಉತ್ತಮ ಕಾರ್ಯವಾಗಬಲ್ಲದು. ಸತ್ಯ ಅಹಿಂಸೆಗಳನ್ನು ದೇಹ, ಮಾತು, ಮನಸ್ಸುಗಳಿಂದ ಅನುಸರಿಸಿ ಆ ಮನೋಧರ್ಮವನ್ನು ಸುತ್ತಲೂ ಪಸರಿಸುವುದಕ್ಕಿಂತ ಹೆಚ್ಚು ಸಾರ್ಥಕವಾದ ಸಮೀಚೀನವಾದ ಕ್ರಮ ಮತ್ತೊಂದುಂಟೆ? ನನ್ನ ಸಂಗಾತಿಗಳು ಒಣ ಚರ್ಚೆಯಲ್ಲಿ ತೊಡಗದೆ ನೀರವವಾಗಿ ಕಾರ್ಯಕಾರೀ ಸಮಿತಿ ಅನುಮೋದಿಸಿರುವ ರಚನಾತ್ಮಕ ಕಾರ್ಯಗಳಲ್ಲಿ ಪೂರ್ಣ ನಿರತರಾದುದನ್ನು ಈ ವಾರದಲ್ಲಿ ಕಂಡರೆ ಅದು ನನಗೆ ಆಹಾರಕ್ಕಿಂತಲೂ ಹೆಚ್ಚು ಶಕ್ತಿದಾಯಕವಾಗುತ್ತದೆ. ಈ ಸಮಯದಲ್ಲಿ ಸ್ವರಾಜ್ಯ ಸಾಧನೆಗಾಗಿ ಕಾಂಗ್ರೆಸ್ ಅಂಗೀಕರಿಸಿರುವ ತತ್ವವೆಂದರೆ ಅಹಿಂಸಾಸಿದ್ಧಾಂತವನ್ನು ಒಪ್ಪುವವರನ್ನು ಮಾತ್ರ ಸದಸ್ಯರನ್ನಾಗಿ ನೊಂದಾಯಿಸುವುದು. ಪ್ರತಿಯೊಬ್ಬರೂ ಪ್ರತಿದಿನ ನಿಯಮಿತ ಸಮಯದಲ್ಲಿ ಸೂತ್ರಯಜ್ಞ ಕೈಗೊಳ್ಳುವುದು, ಸ್ವಾತಂತ್ರ್ಯ ಸೌಭಾಗ್ಯಗಳ ಪ್ರತೀಕವಾದ ಚರಕದ ದಿವ್ಯ ಸಂದೇಶವನ್ನು ಮನೆ ಮನೆಗೆ ಮುಟ್ಟಿಸುವುದು, 'ಅಸ್ಪೃಶ್ಯರ' ವಸತಿಗಳಿಗೆ ಭೇಟಿಕೊಟ್ಟು ಅವರ ಅಗತ್ಯಗಳನ್ನು ತಿಳಿಯುವುದು, ರಾಷ್ಟ್ರೀಯ ವಿದ್ಯಾಲಯಗಳಲ್ಲಿ ಅಸ್ಪೃಶ್ಯರ ಮಕ್ಕಳಿಗೆ ಪ್ರವೇಶ ದೊರಕಿಸಿಕೊಡುವುದು, ಎಲ್ಲ ಮಟ್ಟದ ಸ್ತ್ರೀ ಪುರುಷರಿಗೆ ಒಂದು ಸಮಾನ ಸಾರ್ವಜನಿಕ ವೇದಿಕೆಯನ್ನು ನಿರ್ಮಿಸುವಂತಹ ಸಮಾಜಸೇವೆ, ಮದ್ಯಪಾನದ ಶಾಪದಿಂದ ಜರ್ಝರಿತವಾಗುತ್ತಿರುವ ದುರ್ಭಾಗ್ಯ ಕುಟೀರಗಳಿಗೆ ಭೇಟಿ, ನಿಜವಾದ ಗ್ರಾಮಪಂಚಾಯಿತಿಗಳ ಸ್ಥಾಪನೆ, ರಾಷ್ಟ್ರೀಯ ವಿದ್ಯಾಲಯಗಳ ಸುವ್ಯವಸ್ಥೆ, ಇವೇ ಮೊದಲಾದ ಕಾರ್ಯಗಳನ್ನು ಕೈಗೊಳ್ಳಬೇಕು. ಕಾರ್ಯಕರ್ತರಿಗೆ ಈ ಕಾರ್ಯಕ್ರಮ ಉಪವಾಸಕ್ಕಿಂತ ಶ್ರೇಷ್ಠ. ಸುಳ್ಳುಸಹಾನುಭೂತಿಯಿಂದಾಗಲೀ, ಉಪವಾಸದ ಆಧ್ಯಾತ್ಮಿಕ ಮೌಲ್ಯಗಳಲ್ಲಿ ಮೂಢ ನಂಬಿಕೆಯಿಂದಲಾಗಲೀ ಯಾರೂ ನನ್ನೊಡನೆ ಉಪವಾಸಕ್ರಮ ಕೈಗೊಳ್ಳುವುದಿಲ್ಲವೆಂದು ನಾನು ನಂಬಿದ್ದೇನೆ.

"ಉಪವಾಸ ಮತ್ತು ಇತರ ತಪಶ್ಚರ್ಯೆಗಳು ಸಾಧ್ಯವಾದ ಮಟ್ಟಿಗೂ ರಹಸ್ಯವಾಗಿ ನಡೆಯಬೇಕು. ನನ್ನ ವ್ರತ ತಪಶ್ಚರ್ಯೆಯಷ್ಟೇ ಅಲ್ಲ, ಶಿಕ್ಷೆಯೂ ಹೌದು. ಶಿಕ್ಷೆ ಯಾವಾಗಲೂ ಸಾರ್ವಜನಿಕವಾಗಿಯೇ ಆಗಬೇಕು. ನನ್ನ ಮಟ್ಟಿಗೆ ಇದು ತಪಶ್ಚರ್ಯೆ. ನಾನು ಯಾರ ಸೇವೆ ಮಾಡಲಿಚ್ಛಿಸಿರುವೆನೋ, ಯಾರಿಗಾಗಿ ನಾನು ಬದುಕಲಿಚ್ಛಿಸುವೆನೊ, ಯಾರಿಗಾಗಿ ಬಲಿದಾನಕ್ಕೂ ನಾನು ಸಿದ್ಧನೋ ಅವರಿಗೆ ಇದು ಶಿಕ್ಷೆ. ತಿಳಿಯದೆಯೇ ಅವರು ಕಾಂಗ್ರೆಸ್ಸಿನ ನಿಯಮಗಳನ್ನುಲ್ಲಂಘಿಸಿದ್ದಾರೆ. ಅನೇಕರು ನೇರವಾದ ಸದಸ್ಯರಲ್ಲದಿದ್ದರೂ ಬೆಂಬಲಿಗರಾಗಿ ಅಕೃತ್ಯವೆಸಗಿದ್ದಾರೆ. ಬಹುಶಃ ಮಹಾತ್ಮಾ ಗಾಂಧಿ–ಕಿ–ಜೈ ಎನ್ನುತ್ತಲೇ ಆ ಜನ ಪೋಲೀಸರನ್ನೂ ಇತರ ದೇಶ ಬಾಂಧವರನ್ನೂ ಸಹಜೀವಿಗಳನ್ನೂ, ನಿರ್ದಯವಾಗಿ ಕೊಚ್ಚಿ ಹಾಕಿರಬಹುದು. ಸಂಕಟವನ್ನನುಭವಿಸುವ ಶಿಕ್ಷೆ ಕೊಡುವುದೇ ಪ್ರೇಮಕ್ಕಿರುವ ಏಕೈಕ ಮಾರ್ಗ. ಅಕೃತ್ಯವೆಸಗಿದವರನ್ನು ಸೆರೆಹಿಡಿಯಬೇಕೆಂದೂ ನಾನು ಇಚ್ಛಿಸಲಾರೆ. ಆದರೆ ಅವರು ಮಾಡಿರುವ ನಿಯಮೋಲ್ಲಂಘನೆಯ

ಪಾಪಕ್ಕೆ ನಾನೇ ಗುರಿಯಾಗಿ ಸಂಕಟವನ್ನನುಭವಿಸುವೆನೆಂದು ಅವರಿಗೆ ಮನದಟ್ಟು ಮಾಡಿಕೊಡುತ್ತೇನೆ. ಯಾರು ಆತ್ಮಸಾಕ್ಷಿಯಾಗಿ ಅಪರಾಧಿಗಳೋ, ಪಶ್ಚಾತ್ತಾಪದಿಂದ ಪರಿತಪ್ತರೋ ಅಂಥವರು ಸ್ವಯಂಪ್ರೇರಿತರಾಗಿ ಸರ್ಕಾರಕ್ಕೆ ಶರಣುಹೋಗಿ ತಪ್ಪನ್ನೊಪ್ಪಿ ಶಿಕ್ಷೆಯನ್ನು ಸ್ವಾಗತಿಸಲೆಂದು ನನ್ನ ಸಲಹೆ. ಗೋರಖ್‌ಪುರದ ಕಾರ್ಯಕರ್ತರು ಈ ಅಕೃತ್ಯಕಾರರನ್ನು ಎಲ್ಲಿದ್ದರೂ ಪತ್ತೆ ಹಚ್ಚಬೇಕು. ಸರ್ಕಾರಕ್ಕೆ ಶರಣಾಗಿ ಶಿಕ್ಷೆಯನ್ನಂಗೀ ಕರಿಸುವಂತೆ ಅವರ ಮನವೊಲಿಸಬೇಕು. ತಾವು ಏನನ್ನು ಬಯಸಿ, ಈ ಕೃತ್ಯಗಳಿಗೆ ಕೈ ಹಾಕಿದರೋ ಆ ಧ್ಯೇಯಕ್ಕೇ ಧಕ್ಕೆ ಬಂದು, ಬಾರ್ದೋಲಿಯ ಚಳುವಳಿ ಮುಂದೆ ಹೋಗಿ ಸ್ವರಾಜ್ಯ ಸಂಗ್ರಾಮಕ್ಕೆ ತೀಕ್ಷ್ಣವಾದ ಪೆಟ್ಟು ಬಿದ್ದಿದೆಯೆಂದಾದರೂ ಈ ಕೊಲೆ ಗಡುಕರು ಅರಿಯುವಂತಾಗಬೇಕು. ನನ್ನ ಇತರ ಸಲಹೆಗಳನ್ನು ಅಂಗೀಕರಿಸುವುದೂ ಬಿಡುವುದೂ ಅವರಿಗೇ ಸೇರಿದ್ದು. ಈ ಹೋರಾಟ ಮುಂದೆ ಹಿಂಸಾಮಾರ್ಗಕ್ಕೆ ಅನು ವಾಗುವ ಸಿದ್ಧತೆಯೆಂದಾಗಲಿ, ಸೋಗಿನ ಪರದೆಯೆಂದಾಗಲಿ, ಅವರು ಖಂಡಿತ ತಿಳಿಯ ಬಾರದು. ಹೋರಾಟ ಹಿಂಸೆಯ ಮಾರ್ಗ ಹಿಡಿಯದಂತೆ ಅಥವಾ ಹಿಂಸಾಚಾರಕ್ಕೆ ಬುನಾದಿಯಾಗದಂತೆ ನನ್ನ ಸರ್ವಶಕ್ತಿಯನ್ನೂ ಪಣವಾಗಿಟ್ಟು ಪ್ರಾಣತ್ಯಾಗಕ್ಕೂ ಸಿದ್ಧ ನಾಗುತ್ತೇನೆ. ಅಪಮಾನ, ಚಿತ್ರಹಿಂಸೆ, ಸಂಪೂರ್ಣ ಸಾಮಾಜಿಕ ಬಹಿಷ್ಕಾರ, ಯಾವುದಕ್ಕೂ ಲೆಕ್ಕಿಸದೆ ತಡೆಗಟ್ಟುತ್ತೇನೆ. ಬಂದಿಗಳಾಗಿ ಸೆರೆಮನೆಯಲ್ಲಿರುವ ನನ್ನ ಮಿತ್ರರ ಸಂಕಟದಲ್ಲಿ ನಾನೂ ಭಾಗಿಯಾಗುವುದನ್ನು ಬಿಟ್ಟುಕೊಟ್ಟಿರುವ ಕಾರಣಕ್ಕಾಗಿ ನನ್ನ ಉಪವಾಸ ವ್ರತವನ್ನು ಬಹಿರಂಗವಾಗಿ ಆಚರಿಸುತ್ತಿದ್ದೇನೆ. ತಕ್ಷಣದ ಸಮಸ್ಯೆ ಬದಲಾಗಿದೆ. ಇಸ್ತಿಹಾರುಗಳನ್ನು ಹಿಂತೆಗೆದುಕೊಳ್ಳುವಂತೆ, ಬಂದಿಗಳನ್ನು ಬಿಡುಗಡೆ ಮಾಡುವಂತೆ ಸರ್ಕಾರದ ಮೇಲೆ ನಾವೀಗ ಯಾವ ಒತ್ತಾಯವನ್ನೂ ತರುವಹಾಗಿಲ್ಲ. ಚೌರಿ–ಚೌರದ ಪಾತಕಕ್ಕಾಗಿ ನಾವೂ ಅವರೂ ಕೂಡಿ ಸಂಕಟವನ್ನನುಭವಿಸಬೇಕಾಗಿದೆ. ಈ ಘಟನೆ, ನಾವು ಬಯಸಲಿ ಬಯಸದಿರಲಿ, ಜೀವನದ ಸಮಗ್ರತೆಯನ್ನು ಸಮರ್ಥಿಸುತ್ತದೆ. ಅಧಿಕಾರವರ್ಗವೂ ಸೇರಿ ಎಲ್ಲರೂ ಈ ಪಾಪದ ಪರಿಣಾಮವನ್ನನುಭವಿಸಿಯೇ ತೀರ ಬೇಕು. ಸರ್ಕಾರ ಮತ್ತಷ್ಟು ಕ್ರೂರವಾಗಬಹುದು ; ಪೋಲೀಸರು ಮತ್ತಷ್ಟು ಭ್ರಷ್ಟಾ ಚಾರಕ್ಕಿಳಿಯಬಹುದು, ಮತ್ತಷ್ಟು ಪ್ರತೀಕಾರ ದಬ್ಬಾಳಿಕೆಗಳಿಂದಾಗಿ ಜನತೆ ಧೈರ್ಯ ಗೆಟ್ಟು ಕಂಗಾಲಾಗಬಹುದು. ಆದ್ದರಿಂದ ಚಳುವಳಿಯ ನಿಲುಗಡೆ ಮತ್ತು ನನ್ನ ಉಪವಾಸ ವ್ರತ ನಮ್ಮನ್ನು ಈ ದುರಂತಕ್ಕಿಂತ ಪೂರ್ವದಲ್ಲಿದ್ದ ಯಥಾಸ್ಥಿತಿಗೆ ಕೊಂಡೊಯ್ಯುತ್ತದೆ. ನಿಯಮ ನಿಷ್ಠೆಯ ಶಿಸ್ತು ಮತ್ತು ಶುದ್ಧೀಕರಣಗಳಿಂದ ನಮ್ಮ ನೈತಿಕ ವಿಶ್ವಾಸ ಹಿಂತಿರು ಗುತ್ತದೆ. ಆಗ ಇಸ್ತಿಹಾರುಗಳನ್ನು ಹಿಂತೆಗೆದುಕೊಳ್ಳಲು ಕೇಳಬಹುದು, ಬಂದಿಗಳ ಬಿಡುಗಡೆಗೆ ಒತ್ತಾಯಿಸಬಹುದು.

"ಈ ದುರಂತದಿಂದ ಪೂರ್ಣಪಾಠ ಕಲಿತಲ್ಲಿ ಶಾಪವೂ ಒಂದು ಅನುಗ್ರಹ ವಾಗುತ್ತದೆ. ಸತ್ಯ ಅಹಿಂಸೆಗಳಲ್ಲಿ ಶ್ರದ್ಧೆಯಿಟ್ಟು ವಿಚಾರ ಆಚಾರಗಳನ್ನು ಅನುಷ್ಠಿಸಿ, ಸ್ವದೇಶಿ ಚಳುವಳಿಯಾದ ಖಾದಿ ಕಾರ್ಯಕ್ರಮವನ್ನು ಪೂರ್ಣಗೊಳಿಸುವುದಾದರೆ

ನಾವು ಸಂಪೂರ್ಣ ಸ್ವರಾಜ್ಯವನ್ನು ಸ್ಥಾಪಿಸಲು ಸಾಧ್ಯ. ಸವಿನಯಶಾಸನಭಂಗವನ್ನು ಯಾರೊಬ್ಬರೂ ಅನುಸರಿಸಬೇಕಾದ ಅವಶ್ಯಕತೆಯಿಲ್ಲದೆಯೇ ಖಿಲಾಫತ್‌ನ ಅನ್ಯಾಯವನ್ನೂ ಪಂಜಾಬದ ಅಕೃತ್ಯಗಳನ್ನೂ ನೇರ್ಪಡಿಸಬಹುದು.

ಬಂಧನದಲ್ಲಿದ್ದ ಕಾಂಗ್ರೆಸ್ ನಾಯಕವರ್ಗದಲ್ಲಿ ಬಾರ್ದೋಲಿ ಹೋರಾಟದ ನಿಲುಗಡೆಯಿಂದ ದಿಗ್ಭ್ರಾಂತಿಯುಂಟಾಯಿತು. ಸಾಮಾನ್ಯ ಕಾರ್ಯಕರ್ತರು ಕೋಪಗೊಂಡರು. ಎಲ್ಲ ಕಡೆಯಿಂದಲೂ ಗಾಂಧಿಯವರನ್ನು ದೂಷಿಸಲಾಯಿತು. ಮೋತಿಲಾಲರೂ, ಲಜಪತ್‌ರಾಯರೂ ಸೆರೆಮನೆಯಿಂದ ಕೆರಳಿ ಪತ್ರ ಬರೆದರು. "ಕನ್ಯಾಕುಮಾರಿಯ ಬಳಿ ಗ್ರಾಮವೊಂದು ಅಹಿಂಸೆಯನ್ನಾಚರಿಸಲಿಲ್ಲವೆಂದು ಹಿಮಾಲಯ ತಪ್ಪಲಿನ ಊರೊಂದಕ್ಕೆ ಶಿಕ್ಷೆ ವಿಧಿಸುವುದೇ? ಗೋರಖ್‌ಪುರವನ್ನೂ ಚೌರಿ–ಚೌರವನ್ನೂ ಪ್ರತ್ಯೇಕಿಸಿಬಿಡಿ. ವ್ಯಕ್ತಿಶಃ ಹಾಗೂ ಸಾಮೂಹಿಕವಾಗಿ ಸವಿನಯ ಶಾಸನಭಂಗ ಮುಂದುವರೆಸಿ" ಎಂದರು ಮೋತಿಲಾಲರು.

ಫೆಬ್ರುವರಿ ೧೯ರಂದು ಗಾಂಧೀಜಿ ಜೈಲಿನಲ್ಲಿದ್ದ ಜವಹರಲಾಲರಿಗೆ ಹೀಗೆ ಬರೆದರು.

"ನೀವೆಲ್ಲರೂ ಕಾರ್ಯಕಾರೀ ಸಮಿತಿಯ ನಿರ್ಣಯವನ್ನು ಕಂಡು ವಿಪರೀತ ಕ್ರುದ್ಧರಾಗಿರುವಿರಿ. ನಿಮ್ಮಲ್ಲಿ ನನಗೆ ಸಹಾನುಭೂತಿಯುಂಟು. ತಂದೆಯವರ ಬಗೆಗಂತೂ ನನ್ನ ಹೃದಯ ಮಿಡಿಯುತ್ತದೆ. ಆ ಘಳಿಗೆಯಲ್ಲಿ ಅವರನುಭವಿಸಿರಬಹುದಾದ ತೀವ್ರಯಾತನೆಯನ್ನು ಊಹಿಸಬಲ್ಲೆ. ಪ್ರಥಮ ಆಘಾತದ ಅನಂತರ ವಾಸ್ತವಿಕ ಪರಿಸ್ಥಿತಿಯ ಅರಿವಾಗಿರಬಹುದೆಂತಲೂ ಬಲ್ಲೆ. ಈ ಪತ್ರದ ಆವಶ್ಯಕತೆ ಇರಲಾರದು. ದೇವದಾಸನ ಬಿಸಿರಕ್ತದ ಉತ್ಸಾಹದ ಅತಿರೇಕಗಳಿಗೆ ಮಾರುಹೋಗಬಾರದು. ಪಾಪ! ಆ ಹುಡುಗ ಮುಗ್ಗರಿಸಿ ವಿವೇಕವನ್ನು ಕಳೆದು ಕೊಂಡಿದ್ದಾನು. ಆದರೆ ಅಸಹಕಾರ ಹೋರಾಟಕ್ಕೆ ಬೆಂಬಲವಾಗಿ ಆ ಹುಚ್ಚೆದ್ದ ಜನಜಂಗುಳಿ ಪೋಲೀಸರ ಕಗ್ಗೊಲೆಗೆ ಕಾರಣರಾದುದನ್ನು ಮಾತ್ರ ಯಾರೂ ನಿರಾಕರಿಸುವುದಿಲ್ಲ. ಅದು ರಾಜಕೀಯ ಉದ್ದೇಶಪ್ರೇರಿತವಾದ ಸಮುದಾಯ ಎನ್ನುವುದನ್ನೂ ಮರೆಯುವಂತಿಲ್ಲ. ಇಂಥ ಸಂಸ್ಪಷ್ಟ ಎಚ್ಚರಿಕೆಯನ್ನು ಧಿಕ್ಕರಿಸಿ ನಡೆಯುವುದು ಘೋರ ಅಪರಾಧವಾದೀತು.

"ಈ ಘಟನೆ ಒಂದೇ ಕಟ್ಟಕಡೆಯ ಪೆಟ್ಟೇನೂ ಅಲ್ಲ. ವೈಸರಾಯರಿಗೆ ನಾನು ಬರೆದ ಪತ್ರದಲ್ಲಿ ನಾನೀ ಶಂಕೆಯನ್ನು ವ್ಯಕ್ತಪಡಿಸಿದ್ದೆ. ಅದರಲ್ಲಿ ಬಳಸಿರುವ ಮಾತುಗಳಿಂದ ಯಾರಿಗಾದರೂ ಇದು ಸ್ಪಷ್ಟವಾದೀತು. ಮದ್ರಾಸಿನ ಘಟನೆಯೇ ನನ್ನನ್ನು ಕಂಪಿಸಿತು. ಆ ಎಚ್ಚರಿಕೆಯ ವಾಣಿಯನ್ನು ಅದುಮಿಬಿಟ್ಟೆ. ಕಲ್ಕತ್ತಾ, ಪಂಜಾಬ್, ಅಲಹಾಬಾದುಗಳಿಂದ ಅನೇಕ ಹಿಂದೂಗಳೂ, ಮುಸಲ್ಮಾನರೂ ಬರೆದು ತಿಳಿಸಿದ್ದರು. 'ಭಯಾನಕ ಕೃತ್ಯಗಳು ಸರ್ಕಾರದ ದಬ್ಬಾಳಿಕೆಗೆ ಮಾತ್ರ ಸೀಮಿತವಾಗಿಲ್ಲ. ಜನರೂ ದಾರಿ ತಪ್ಪಿ ಕ್ರೂರ ವರ್ತನೆಗೆ ಕೈಹಾಕಿದ್ದಾರೆ; ಉಗ್ರ ಆಕ್ರಮಣ, ಉದ್ಧಟತನ, ಭಯೋತ್ಪಾದನೆಗಳು ಕೈ ಮೀರಿ ಹೋಗಿವೆ. ಅಹಿಂಸೆಯ ಮನೋಧರ್ಮ ಮರೆಯಾಗುತ್ತಿದೆ'

ಎಂದು ಗೋರಖ್‌ಪುರದ ಘಟನೆಗೆ ಮುಂಚೆಯೇ ಹಲವರು ಬರೆದಿದ್ದರು. ಫಿರೋಜ್‌ಪುರ ಜಿರ್ಕಾದಲ್ಲಾದ ಹೀನಕೃತ್ಯಗಳಿಂದ ಸರ್ಕಾರ ತಲೆತಗ್ಗಿಸಬೇಕೆಂಬುದು ನಿಜ. ಆದರೆ ನಾವು ನಿರ್ದೋಷಿಗಳಾಗಿ ವರ್ತಿಸಿಲ್ಲ. ಹಕೀಮ್ ಅಜಮಲ್‌ಖಾನರು ಬರೈಲಿಯ ಬಗ್ಗೆ ದೂರಿದರು. ಜಜ್ಜಾರ್ ಬಗ್ಗೆ ನಾನೂ ಕಟುವಾಗಿ ಟೀಕಿಸಿದ್ದೆ. ಷಹಜಾನ್‌ಪುರದಲ್ಲಿ ಅಲ್ಲಿನ ಪುರಭವನವನ್ನು ಬಲಾತ್ಕಾರವಾಗಿ ಆಕ್ರಮಿಸುವ ಪ್ರಯತ್ನ ನಡೆಯಿತು. ಸ್ವಯಂಸೇವಕರಾದ ಬಾಲಕರು ಶಿಸ್ತುಮೀರಿ ನಡೆಯುತ್ತಿದ್ದಾರೆಂದೂ, ಶಾಲೆಗಳು ನಡೆಯುವುದನ್ನು ತಡೆದು ಅಲ್ಲಿಗೆ ಹೋಗುವ ಇತರ ಬಾಲಕರನ್ನು ಹಿಂಸಿಸುತ್ತಿದ್ದಾರೆಂದೂ ಕನೂಜಿನ ಕಾಂಗ್ರೆಸ್ ಕಾರ್ಯದರ್ಶಿ ತಂತಿ ಕೊಟ್ಟಿದ್ದಾರೆ. ಗೋರಖಪುರದಲ್ಲಿ ಕಾಂಗ್ರೆಸ್ಸಿಗೆ ಸೇರಿದ ಜನ ಮೂವತ್ತಾರು ಸಾವಿರ. ಅವರಲ್ಲಿ ನೂರು ಜನರೂ ಕಾಂಗ್ರೆಸ್ ನಿಯಮಗಳನ್ನನುಸರಿಸಲಿಲ್ಲ. ಕಲ್ಕತ್ತಾದಲ್ಲಿ ಸ್ವಯಂಸೇವಕರೂ ವಿದೇಶಿ ಉಡುಪಿನಲ್ಲೇ ಇದ್ದಾರೆ. ಅಹಿಂಸೆಯಲ್ಲವರಿಗೆ ನಂಬಿಕೆಯಿಲ್ಲ. ಅವ್ಯವಸ್ಥೆ ವಿಪರೀತವಾಗಿದೆ ಎಂದು ಜಮುನ್‌ಲಾಲ್ ಬಜಾಜ್‌ರು ಹೇಳುತ್ತಾರೆ. ದಕ್ಷಿಣ ಭಾರತದಿಂದಲೂ ಇಂಥ ಅನೇಕ ಸುದ್ದಿ ಬಂದಿದೆ. ಇಷ್ಟೆಲ್ಲ ಸಾಕ್ಷ್ಯ ನನ್ನಲ್ಲಿದ್ದಾಗ ಚೌರಿ–ಚೌರದ ಘಟನೆ–ಸಿಡಿಲಿನಂತೆರಗಿ ಬಂದು ಮದ್ದಿನ ರಾಶಿಗೆ ಬೆಂಕಿಯಿಟ್ಟಂತಾಯಿತು. ಅಹಿಂಸಾಪಥದ ಸುಗಂಧಸಮೀರ, ಪುಷ್ಪರಾಶಿಯ ದಿವ್ಯಕಂಪಿನಂತೆ ದೇಶದಲ್ಲಿ ಹರಡುತ್ತಿರುವುದೇನೋ ನಿಜ. ಆದರೆ ಹಿಂಸಾಚಾರದ ಅಸಹ್ಯ ದುರ್ವಾತ ಪ್ರಬಲವಾಗಿಯೇ ಬಂದು ಅಡರುತ್ತಿದೆ. ಅದನ್ನು ನಿರ್ಲಕ್ಷಿಸುವುದು ವಿವೇಕವಲ್ಲ. ನಮ್ಮ ಈ ಹಿನ್ನಡೆಯಿಂದ ಧ್ಯೇಯ ಸಾಧನೆಯ ಪ್ರಯತ್ನ ಇನ್ನೂ ಪ್ರಬಲಗೊಂಡೀತು. ಅರಿವಿಲ್ಲದೆ ನಮ್ಮ ಹೋರಾಟದ ಪಥ ಅಡ್ಡದಾರಿ ಹಿಡಿದಿತ್ತು. ಮತ್ತೆ ಸತ್ಯನಿಷ್ಠ ಪಥಕ್ಕೆ ಹಿಂತಿರುಗಿದ್ದೇವೆ. ಮತ್ತೆ ನೇರವಾಗಿ ಮುಂದುವರೆಯಬಲ್ಲೆವು. ಹೊರಗಿನ ಘಟನೆಗಳನ್ನು ವಿವೇಚಿಸಿ, ನಿರ್ಣಯಿಸಲು ನಿಮಗಿಂತ ನಾನು ಹೆಚ್ಚು ಅನುಕೂಲ ಪರಿಸ್ಥಿತಿಯಲ್ಲಿದ್ದೇನೆ. ಸೆರೆಮನೆಯೊಳಗೆ ನಿಮಗೆ ಅದಿಲ್ಲದಿರಬಹುದು.

"ದಕ್ಷಿಣ ಆಫ್ರಿಕಾದ ನನ್ನ ಅನುಭವವನ್ನೂ ನಿಮಗೆ ಹೇಳುತ್ತೇನೆ. ಅಲ್ಲಿ ಹೋರಾಟ ನಡೆದಾಗ ಜೈಲಿನೊಳಕ್ಕೆ ಅನೇಕ ಸುದ್ದಿಗಳು ನುಸುಳಿ ಬರುತ್ತಿದ್ದವು. ಮೊದಲೆರಡು ಮೂರು ದಿನಗಳಲ್ಲಿ ನಮಗದನ್ನು ಕೇಳಿ ಆನಂದವಾಗುತ್ತಿತ್ತು. ಬಹುಬೇಗ ನನಗೆ ಇಂಥ ಅನೀತಿಯುತ ಸಮಾಧಾನಗಳಲ್ಲಿ ತೊಡಗಬಾರದೆಂದು ಅರಿವಾಯಿತು. ಆದರೂ ನಾನೇನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ನಾನು ಕೊಟ್ಟ ಉಪಯುಕ್ತ ಸೂಚನೆಗಳಾವುವೂ ಹೊರಗೆ ತಲುಪಲವಕಾಶವಿರಲಿಲ್ಲ. ವ್ಯರ್ಥವಾಗಿ ವ್ಯಥೆ ಪಟ್ಟುಕೊಳ್ಳುತ್ತಿದ್ದೆ. ಜೈಲಿನೊಳಗಿಂದ ಹೋರಾಟವನ್ನು ನಿರ್ದೇಶಿಸುವುದಸಾಧ್ಯ ಎನಿಸಿತು. ಹೊರಗಡೆ ಸ್ವತಂತ್ರವಾಗಿರುವವರನ್ನು ಭೇಟಿಯಾಗಿ ಮುಕ್ತ ಚರ್ಚೆ ಮಾಡುವವರೆಗೆ ಕಾಯಬೇಕೆಂದು ನಿರ್ಧರಿಸಿದೆ. ಆಗಲೂ ಸುತ್ತಲಿನ ಘಟನೆಗಳ ಬಗ್ಗೆ ಬೌದ್ಧಿಕವಾಗಿ ವಿವೇಚನೆ ಮಾಡುತ್ತಿದ್ದೆನೆ ಹೊರತು ಯಾವ ಸತ್ಯ ನಿರ್ಣಯ ಮಾಡುವುದೂ ಸಮಂಜಸವಾಗಲಾರದೆಂದು

ಭಾವಿಸಿ ಸುಮ್ಮನೇ ಇದ್ದು ಬಿಡುತ್ತಿದ್ದೆ. ನನ್ನ ನಿಲುವು ಅದೆಷ್ಟು ಸಮಂಜಸವೂ ನಿರ್ದೋಷವೂ ಆಗಿರುತ್ತಿತ್ತೆಂದು ಅನಂತರ ನನಗೆ ಮನದಟ್ಟಾಯಿತು. ಈ ಮಾತನ್ನು ನೀವು ನಂಬಬೇಕೆಂದು ಬೇಡುತ್ತೇನೆ. ಪ್ರತಿಯೊಂದು ಸಾರಿ ಜೈಲಿನಿಂದ ಹೊರಗೆ ಬಂದಾಗಲೂ ಕಣ್ಣಾರೆ ನೋಡಿದವರಿಂದಲೇ ನಿಜವಾದ ಪರಿಸ್ಥಿತಿಯ ಅರಿವಾಗುತ್ತಿತ್ತು. ಸೆರೆಯಲ್ಲಿದ್ದಾಗಿನ ಅನೇಕ ಅಭಿಪ್ರಾಯಗಳನ್ನು ನಾನೆಷ್ಟು ಬದಲಾಯಿಸಿ ಕೊಳ್ಳ ಬೇಕಾಯಿತು ಎಂಬುದು ನನಗೆ ಸ್ಪಷ್ಟವಾಗಿ ನೆನಪಿದೆ. ಜೈಲಿನ ವಾತಾವರಣವೇ ಹಾಗೆ. ಮನಸ್ಸಿನ ವಿಚಾರಸಾಮರ್ಥ್ಯ ಅಲ್ಲಿ ಕುಂಠಿತವಾಗಿ ಬಿಡುತ್ತದೆ. ಆದ್ದರಿಂದ ಜೈಲಿನ ಹೊರಗಿನ ಪ್ರಪಂಚವನ್ನು ನೀವು ಮರೆತು ಬಿಡಿ. ಯಾವುದನ್ನೂ ಗಣನೆಗೆ ತೆಗೆದುಕೊಳ್ಳಬೇಡಿ ಎಂದು ತಿಳಿಸಬಯಸುತ್ತೇನೆ. ಇದು ಕಷ್ಟಸಾಧ್ಯ ಎಂಬುದನ್ನು ಬಲ್ಲೆ. ಆದರೆ ಗಂಭೀರವಾದ ಯಾವುದಾದರೊಂದು ಅಧ್ಯಯನ ಮತ್ತು ಶರೀರ ಶ್ರಮ ಕಾರ್ಯಕೈಗೊಂಡರೆ ಇದು ಖಂಡಿತ ಸಾಧ್ಯ. ನೀವೇನೇ ಕೈಗೊಂಡರೂ ಚರಕ ವನ್ನು ಮಾತ್ರ ದ್ವೇಷಿಸಬೇಡಿ. ನನ್ನ ನಿಮ್ಮ ಅನೇಕ ಕಾರ್ಯಗಳು ವ್ಯರ್ಥವಾಗಿ ನಮಗೆ ಸಹ್ಯವಾಗದಿರಬಹುದು. ನಮ್ಮ ನಂಬಿಕೆಗಳನೇಕವು ತಪ್ಪಿರಲೂಬಹುದು. ಆದರೆ ಚರಕದಲ್ಲಿ ಶ್ರದ್ಧೆಯಿಟ್ಟುದಾಗಲೀ ಅದರ ಮೂಲಕ ಪ್ರತಿನಿತ್ಯ ರಾಷ್ಟ್ರಸೇವೆಯ ಕುರುಹಾಗಿ ಸ್ವಲ್ಪ ನೂಲನ್ನು ಉತ್ಪಾದನೆ ಮಾಡಿದುದಾಗಲೀ ಎಂದಿಗೂ ವ್ಯರ್ಥವಾಯಿತೆಂದು ವ್ಯಥೆಪಡಬೇಕಾಗುವುದಿಲ್ಲ. ಭಗವದ್ಗೀತೆ ನಿಮ್ಮ ಬಳಿಯಿದೆ. ಎಡ್ವಿನ್ ಆರ್ನಾಲ್ಡರ ದಿವ್ಯ ಭಾಷಾಂತರವನ್ನು ನಾನು ಅನುಕರಿಸಲಾರೆ. ಆದರೆ ಒಂದು ಶ್ಲೋಕ ಹೀಗಿದೆ: "There is no waste of energy, there is no destruction in this; even a little of this Dharma saves one from many a pit fall." (ನೇಹಾಭಿಕ್ರಮ ನಾಶೋಽಸ್ತಿ, ಪ್ರತ್ಯವಾಯೋ ನ ವಿದ್ಯತೇ। ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋಭಯಾತ್ II 40) ಮೂಲ ಪಾಠದಲ್ಲಿ ಈ 'ಧರ್ಮ' ಅಂದರೆ ಕರ್ಮಯೋಗ. ನಮ್ಮ ಯುಗದ ಕರ್ಮಯೋಗವೇ ಸೂತ್ರಯಜ್ಞ. ಪ್ಯಾರೆಲಾಲ ರೊಡನೆ ನೀವು ಕಳುಹಿಸಿದ ಕಹಿಟೀಕೆಯು ಕೊರೆತದನಂತರ ನನ್ನನ್ನು ಉಲ್ಲಾಸಗೊಳಿಸು ವಂತಹ ಮತ್ತೊಂದು ಪತ್ರವನ್ನು ನಿಮ್ಮಿಂದ ನಿರೀಕ್ಷಿಸುತ್ತಿದ್ದೇನೆ."

ಬಾರ್ದೋಲಿಯ ನಿರ್ಣಯ ಸರ್ಕಾರಕ್ಕೆ ಧೈರ್ಯ ತುಂಬಿತು. ಬ್ರಿಟನ್ನಿನ ಭಾರತಸಚಿವ ಮಾಂಟೆಗೋ ದರ್ಪದಿಂದ ನುಡಿದರು "ಸಾಮ್ರಾಜ್ಯದ ಅಸ್ತಿತ್ವವನ್ನೇ ಅಲುಗಾಡಿಸಿದರೆ, ಬ್ರಿಟಿಷ್ ಭಾರತಸರ್ಕಾರ ಕರ್ತವ್ಯಪಾಲನೆಮಾಡುವಾಗ ಅಡ್ಡ ಬಂದರೆ, ನಾವು ಭಾರತದಿಂದ ಹಿಮ್ಮೆಟ್ಟುತ್ತೇವೆಂಬ ತಪ್ಪು ಭಾವನೆಯಿಂದ ಬೇಡಿಕೆ ಗಳನ್ನು ಮುಂದಿಟ್ಟರೆ, ಪ್ರಪಂಚದಲ್ಲೇ ಅತಿ ದೃಢ ಸಂಕಲ್ಪದ ರಾಷ್ಟ್ರದೊಂದಿಗೆ ಭಾರತ ಹೋರಾಡಿ ಸೋಲಬೇಕಾಗುತ್ತದೆ. ಪ್ರತಿಭಟನೆಯ ಸವಾಲನ್ನು ನಾವು ಮತ್ತೆ ಅದೇ ಪ್ರಬಲಶಕ್ತಿಯಿಂದ ದೃಢವಾಗಿ ಎದುರಿಸುತ್ತೇವೆ." ಗ್ರೇಟ್ ಬ್ರಿಟನ್ ತನ್ನ 'ಗಡಸುಶಕ್ತಿ' ಯನ್ನೇನೂ ಸ್ವಲ್ಪವೂ ಕಳೆದುಕೊಂಡಿಲ್ಲ ಎಂದು ಲಾರ್ಡ್ ಬರ್ಕನ್‌ಹೆಡ್ ಎಚ್ಚರಿಸಿದರು.

ಗಾಂಧೀಜಿ ಈ ಸವಾಲಿಗೆ ಮಾರುತ್ತರಿಸಿದರು. ಫೆಬ್ರುವರಿ ೨೩ರಂದು 'ಯಂಗ್–ಇಂಡಿಯಾ'ದಲ್ಲಿ "ಜುಟ್ಟನ್ನು ಹಿಡಿದು ಅಲ್ಲಾಡಿಸುವುದು" ಎಂಬ ಅಗ್ರಲೇಖನ ಬರೆದರು.

"ತನ್ನ ರಕ್ತಸಿಂಚಿತ ನಖಗಳನ್ನು ಬ್ರಿಟಿಷ್ ಸಿಂಹ ನಮ್ಮ ಮುಖಕ್ಕೆ ಚಾಚಿ ಮೇಲೆ ಬೀಳುತ್ತಿರುವಾಗ ಪರಸ್ಪರ ಒಪ್ಪಂದದ ಮಾತು ಹೇಗೆ ಸಾಧ್ಯ? ಬ್ರಿಟನ್ನಿಗೆ ತನ್ನ 'ಗಡಸು ಶಕ್ತಿ' ಕುಂದಿಲ್ಲವೆಂದು ಲಾರ್ಡ್ ಬರ್ಕನ್ ಹೆಡ್ ನಮಗೆ ಜ್ಞಾಪಿಸಿದ್ದಾರೆ. ಮಿ. ಮಾಂಟೆಗೂ ಅವರು 'ತಮ್ಮ ಉದ್ದೇಶ ಸಾಧನೆಗೆ ಎದುರಾಗುವವರನ್ನು ದಮನ ಮಾಡಿ ಬಿಡುವ ಸಂಕಲ್ಪ ಶಕ್ತಿಯಲ್ಲಿ ಬ್ರಿಟನ್ ಪ್ರಪಂಚದಲ್ಲೇ ಪ್ರಥಮ ರಾಷ್ಟ್ರ' ಎಂದು ನೇರವಾಕ್ಯಗಳಲ್ಲಿ ನಮಗೆ ಹೇಳಿದ್ದಾರೆ……

"ಸಮುದ್ರದಾಚೆಯಿಂದ ಬರುವ ಈ ಗಡಸು ಶಕ್ತಿಗಳೆಲ್ಲಕ್ಕೂ ಸಿದ್ಧವಾಗಿಯೇ ಭಾರತ ಎದ್ದು ನಿಂತಿದೆ ಎಂದು ಲಾರ್ಡ್ ಬರ್ಕನ್ ಹೆಡ್‌ಅವರೂ ಮಾಂಟೆಗೂ ಅವರೂ ಅರಿಯರು. ೧೯೨೦ರ ಸೆಪ್ಟೆಂಬರಿನಲ್ಲೇ ಕಲ್ಕತ್ತಾದಲ್ಲಿ ಸ್ವರಾಜ್ಯ ಸಾಧನೆ, ಖಿಲಾಫತ್ ಮತ್ತು ಪಂಜಾಬಗಳ ಅನ್ಯಾಯಗಳಿಗೆ ಪೂರ್ಣ ಪರಿಹಾರ ಇವುಗಳಲ್ಲದೆ ಬೇರಾವುದರಿಂದಲೂ ಭಾರತ ತೃಪ್ತವಾಗದು ಎಂಬ ಸವಾಲನ್ನು ಮುಂದಿಡಲಾಗಿದೆ. ಬ್ರಿಟಿಷ್ ಸಾಮ್ರಾಜ್ಯದ ಅಸ್ತಿತ್ವವನ್ನೇನೂ ಇದರಿಂದ ನಿರಾಕರಿಸಿದಂತಾಗಲಿಲ್ಲ. ಆ ಸಾಮ್ರಾಜ್ಯ ನಿಶ್ಶಬ್ದವಾಗಿ ಪರಿವರ್ತನೆ ಹೊಂದಿ ಸ್ವತಂತ್ರ ರಾಷ್ಟ್ರ ಸಮೂಹದ ಒಕ್ಕೂಟವಾಗಬೇಕು. ಸರಿಸಮಾನ ಹಕ್ಕುಗಳುಳ್ಳ ಗೌರವಯುತ ಸ್ನೇಹಮಯ ಪಾಲುಗಾರಿಕೆ ಅದರಲ್ಲಿದ್ದು ಇಚ್ಛಿಸಿದಾಗ ಪ್ರತ್ಯೇಕವಾಗುವ ಅಧಿಕಾರವಿರುವಂತಹ ಈ ಒಕ್ಕೂಟಕ್ಕೆ ಈಗಿನ ಬ್ರಿಟಿಷ್ ಸಾರ್ವಭೌಮ ಸರ್ಕಾರದ ನೇತಾರರು ಒಪ್ಪದಿದ್ದಲ್ಲಿ ಸಂಕಲ್ಪ ಶಕ್ತಿಯಲ್ಲಿ ಪ್ರಪಂಚಕ್ಕೇ ಮೊದಲ ರಾಷ್ಟ್ರವಾಗಿರಲಿ, ಎಷ್ಟೇ ಗಡಸು ಸತ್ವ ತುಂಬಿತುಳುಕಲಿ, ಭಾರತದ ಎಚ್ಚೆತ್ತ ದೃಢ ಸಂಕಲ್ಪ ಮಣಿಯುವುದೂ ಇಲ್ಲ; ಮುರಿಯುವುದೂ ಇಲ್ಲ. ಭಾರತದ ಆತ್ಮಶಕ್ತಿಯನ್ನು ನಾಶಮಾಡುವ ಪ್ರಯತ್ನವೆಲ್ಲವೂ ವಿಫಲವಾಗುತ್ತದೆ. ನಮ್ಮಲ್ಲಿ ಅವರಷ್ಟು ಗಡಸು ಸತ್ವ ಇಲ್ಲದಿರಬಹುದು. ಆದರೆ ಅನ್ನತಿನ್ನುವ ಕುಬ್ಜ ಭಾರತೀಯ ಜನಕೋಟಿ ತಮ್ಮ ಭವಿಷ್ಯ ರೂಪಿಸಲು ದೃಢವಾಗಿ ನಿರ್ಣಯಿಸಿದ್ದಾರೆ. ಪರಪೋಷಣೆಯನ್ನು ತ್ಯಜಿಸಿ ನಿಶ್ಶಸ್ತ್ರರಾಗಿ ಈ ಕಾರ್ಯದಲ್ಲಿ ತೊಡಗಿದ್ದಾರೆ. ಲೋಕಮಾನ್ಯ ತೀಲಕರ ಮಾತಿನಲ್ಲಿ ಅದು ಅವರ 'ಜನ್ಮಸಿದ್ಧಹಕ್ಕು' ಯಾವ ಗಡಸುಶಕ್ತಿಯನ್ನೂ ಲೆಕ್ಕಿಸದೆ ಯಾವ ಕಠಿಣ ಆಡಳಿತ ವ್ಯವಸ್ಥೆಯ ದಬ್ಬಾಳಿಕೆಗೂ ಕುಗ್ಗದೆ ಆ ಹಕ್ಕನ್ನು ಪಡದೇ ಪಡೆಯುತ್ತಾರೆ. ದುರಹಂಕಾರದ ಈ ಧಿಕ್ಕಾರವನ್ನು ಅದೇ ರೀತಿಯ ಪ್ರತಿ ಧಿಕ್ಕಾರದಿಂದ ಭಾರತ ಎದುರಿಸುವುದಿಲ್ಲ. ಅದು ತನ್ನ ವಚನ ಪಾಲನೆಯ ಧ್ಯೇಯವನ್ನನುಸರಿಸಿದಲ್ಲಿ ಇಂತಹ ಉಗ್ರಪೀಡೆಯಿಂದ ಪಾರಾಗಲು ಭಗವಂತನಲ್ಲಿ ಸಲ್ಲಿಸಿದ ಪ್ರಾರ್ಥನೆ ವ್ಯರ್ಥವಾಗದು. ಅಧಿಕಾರಮತ್ತತೆಯ ಅಮಲಿನಲ್ಲಿ ಮೈಮರೆತು ದುರ್ಬಲ ಜನಾಂಗಗಳ ಲೂಟಿಯಿಂದ ಬದುಕುವ ಯಾವ ಸಾಮ್ರಾಜ್ಯವೂ ಜಗತ್ತಿನಲ್ಲಿ ಬಹುಕಾಲ ಬಾಳಿಲ್ಲ. ಭೂಮಿಯ ಮೇಲಿನ ನಿರ್ಮಲ ಜನತೆಯ ಜನಾಂಗಗಳ ವ್ಯವಸ್ಥಿತ

ಶೋಷಣೆ ಮತ್ತು ಪಶುಬಲದ ಸತತ ಪ್ರದರ್ಶನಗಳ ಆಧಾರದ ಮೇಲೆ ನಿಂತಿರುವ ಈ ಬ್ರಿಟಿಷ್ ಚಕ್ರಾಧಿಪತ್ಯ, ನ್ಯಾಯನಿಷ್ಠ ಜಗನ್ನಿಯಾಮಕನೊಬ್ಬನಿದ್ದರೆ, ಖಂಡಿತವಾಗಿ ಬದುಕಲಾರದು. ಬ್ರಿಟಿಷ್ ಚಕ್ರಾಧಿಪತ್ಯದ ಪ್ರತಿನಿಧಿಗಳೆಂದು, ಕರೆಸಿಕೊಳ್ಳುವ ಈ ಕೆಲವರು, ನಮ್ಮಲ್ಲಿ ಶ್ರೇಷ್ಠ ಭಾರತೀಯರನೇಕರು ಅವರ 'ಗಡಸುಶಕ್ತಿ'ಯನ್ನು ಎದುರಿಸಿ ನಿಂತು ಈಗಾಗಲೇ ಹೋರಾಡಿದ್ದಾರೆಂಬುದನ್ನು ಮರೆತಿರಬಹುದು. ಚೌರಿ–ಚೌರದ ಈ ದುರ್ಘಟನೆಯಿಂದ ರಾಷ್ಟ್ರೀಯ ಹೋರಾಟದ ಬಲಿದಾನಕ್ಕೆ ಅಡಚಣೆಯಾಗದೇ ಹೋಗಿದ್ದಿದ್ದರೆ ಬ್ರಿಟಿಷ್ ಸಿಂಹದ ಇನ್ನೂ ಹೆಚ್ಚಿನ ಆ ಕ್ರೌರ್ಯಕ್ಕೆ ಇನ್ನೂ ಉಲ್ಲಾಸ ನೀಡುವ ಪ್ರಾಣಾರ್ಪಣೆಗಳೂ ಆಗುತ್ತಿದ್ದವು. ಆದರೆ ಭಗವಂತನ ಇಚ್ಛೆಯೇ ಬೇರೆಯಾಗಿತ್ತು. ಲಂಡನ್ ಡೌನಿಂಗ್ ರಸ್ತೆಯ ಮತ್ತು ವೈಟ್‌ಹಾಲಿನ ಆ ಪ್ರತಿನಿಧಿಗಳು ಇನ್ನೂ ಉಗ್ರಕ್ರಮ ಕೈಗೊಳ್ಳುವುದಕ್ಕೆ ಏನೂ ಅಡ್ಡಿಯಿಲ್ಲ. ಸಮುದ್ರದಾಚೆಯಿಂದ ಬಂದ ಗರ್ವದ ಬೆದರಿಕೆಗಳ ಬಗ್ಗೆ ನಾನು ಕಟುವಾಗಿಯೇ ನುಡಿದಿದ್ದೇನೆಂದು ಬಲ್ಲೆ. ಆದರೆ ನಾವು ೧೯೨೦ರಲ್ಲಿ ಪ್ರಾರಂಭಿಸಿದ ಹೋರಾಟ ಅಂತಿಮವಾದುದೆಂದೂ, ತಿಂಗಳುಗಳೋ ವರ್ಷಗಳೋ ಈ ಸಂಗ್ರಾಮದಲ್ಲಿ ಉರುಳಿ ಹೋದರೂ ಅದು ನಿಲ್ಲದೆಂದೂ ಬ್ರಿಟಿಷ್ ಜನತೆಗೆ ಅರಿವಾಗುವುದು ಅಗತ್ಯ. ಬ್ರಿಟಿಷ್ ಪ್ರತಿನಿಧಿಗಳ ಕ್ರೌರ್ಯದ ದಬ್ಬಾಳಿಕೆಗಳು ಸಿಪಾಯಿದಂಗೆಯ ಕಾಲದ ಅವರ್ಣನೀಯ ಘೋರತೆಗೂ ಮೀರಿ ಇಮ್ಮಡಿಸಿದರಾಗಲಿ ಅಥವಾ ಅದಿಲ್ಲದಿರಲಿ ಭಾರತ, ಸ್ವಾತಂತ್ರ್ಯದ ಹೋರಾಟದಿಂದ ಎಂದಿಗೂ ವಿರಮಿಸುವುದಿಲ್ಲ. ಕಟ್ಟಕಡೆಯ ಜಯಗಳಿಸುವವರೆಗೂ ಅಹಿಂಸಾ ಪಥವನ್ನುಳಿಸಿಕೊಳ್ಳಲು ಭಾರತಕ್ಕೆ ಸಾಕಷ್ಟು ನಮ್ರತೆಯನ್ನೂ, ಶಕ್ತಿಯನ್ನೂ, ಭಗವಂತ ಅನುಗ್ರಹಿಸಲಿ ಎಂಬುದಷ್ಟೇ ನನ್ನ ಅನನ್ಯ ಪ್ರಾರ್ಥನೆ. ಸಾಮ್ರಾಜ್ಯ ಕೇಂದ್ರದಿಂದ ಆಗಾಗ್ಗೆ ರವಾನಿಸಲ್ಪಡುವ ಗರ್ವದ ದೌರ್ಜನ್ಯದ ಆಜ್ಞೆಗಳ ಸವಾಲಿಗೆ ಭಾರತ ಎಂದಿಗೂ ಮಣಿಯುವುದಿಲ್ಲ.

೨೪ನೇ ಫೆಬ್ರುವರಿಯಂದು ದೆಹಲಿಯಲ್ಲಿ ಅಖಿಲಭಾರತ ಕಾಂಗ್ರೆಸ್‌ಸಮಿತಿ ಸೇರಿತು ಗಾಂಧೀಜಿ ಅನೇಕ ಟೀಕೆಗಳನ್ನೆದುರಿಸಬೇಕಾಯಿತು. ಸಭೆಗೆ ಮುಂಚೆ ವಿವಿಧ ಪ್ರಾಂತಗಳ ಪ್ರತಿನಿಧಿಗಳನ್ನು ಭೇಟಿಯಾದರು. ನಿರ್ಣಯ ರಚನೆಯ ಮೊದಲು ಕಾರ್ಯಕಾರಿ ಸಮಿತಿ, ಸದಸ್ಯರೊಡನೆ ಸಮಾಲೋಚಿಸಿತು. ಬಾರ್ಡೋಲಿ ನಿರ್ಣಯವನ್ನು ಪ್ರಬಲವಾಗಿ ಖಂಡಿಸಿ ಮೋತಿಲಾಲರೂ, ಲಜಪತ್‌ರಾಯರೂ, ಬರೆದಿದ್ದ ಪತ್ರಗಳನ್ನು ಗಾಂಧೀಜಿ ಓದಿ ಹೇಳಿದರು. ಉತ್ತರವಾಗಿ ಒಂದೇ ಮಾತು ನುಡಿದರು "ಜೈಲಿನಲ್ಲಿರುವವರು ವಾಸ್ತವವಾಗಿ ಕಣ್ಮರೆಯಾದಂತೆಯೇ ಸರಿ. ಹೊರಗಿರುವವರಿಗೆ ಸೂಚನೆ ಕೊಡಲು ಅವರು ಬಯಸಲೂ ಬಾರದು, ಕೊಡಲೂ ಬಾರದು; ಪ್ರತಿನಿಧಿಗಳು ಸ್ವತಂತ್ರವಾಗಿಯೇ ವಿಚಾರ ಮಾಡಬೇಕು."

ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಗಾಂಧೀಜಿ ತಮ್ಮ ನಿರ್ಣಯವನ್ನು ಮಂಡಿಸಿದರು. ಬಾರ್ಡೋಲಿ ನಿರ್ಣಯಕ್ಕೆ ಒಂದು ಸಣ್ಣ ತಿದ್ದುಪಡಿಯಿತ್ತು. ಪ್ರಾಂತೀಯ

ಸಮಿತಿಗಳ ಅನುಮತಿಯಿದ್ದಲ್ಲಿ ವೈಯಕ್ತಿಕ ಸವಿನಯ ಶಾಸನಭಂಗ, ವಿದೇಶಿ ವಸ್ತ್ರ ಹಾಗೂ ಮದ್ಯದಂಗಡಿಗಳ ತಡೆ, ಮುಂತಾದ ಚಳುವಳಿಗಳನ್ನು ನಡೆಸುವ ಹಕ್ಕುಂಟೆಂದು ನಿರ್ಣಯದಲ್ಲಿ ಸೇರಿಸಲಾಗಿತ್ತು. ಮುಂದೆ ಸವಿನಯ ಶಾಸನಭಂಗ ಚಳುವಳಿ ಹೂಡುವ ಮುನ್ನ ಜನತೆ ಸಿದ್ಧತೆ ಮಾಡಿಕೊಳ್ಳಬೇಕೆಂದು ಗಾಂಧೀಜಿ ಸೂಚಿಸಿದರು. ಅದಕ್ಕಾಗಿ ಒಂದು ರಚನಾತ್ಮಕ ಕಾರ್ಯಕ್ರಮ ರೂಪಿಸಿಕೊಟ್ಟರು. ಅನೇಕ ಸದಸ್ಯರಿಗೆ ಹೋರಾಟದ ಈ ಮಂದಗತಿ ಸಹಿಸದಾಯಿತು. ಸವಿನಯ ಶಾಸನಭಂಗ ಚಳುವಳಿಯನ್ನು ನಿಲ್ಲಿಸಿದುದಕ್ಕಾಗಿ ಅನೇಕರು ಪ್ರತಿಭಟಿಸಿದರು. ದೇಶದ ಉಜ್ವಲ ಉತ್ಸಾಹ ಕುಸಿದುಹೋಗುತ್ತದೆ ಎಂದರು. ಡಾ. ಮೂಂಜೆ ಮತ್ತು ಜೆ. ಎಂ. ಸೇನ್‌ಗುಪ್ತ ಈ ನಿರ್ಣಯವನ್ನೇ ರದ್ದು ಮಾಡಿ ಬಿಡಿ ಎಂದರು. ಮಹಾರಾಷ್ಟ್ರ ಮತ್ತು ಬಂಗಾಳಗಳು ಗಾಂಧಿಯವರನ್ನು ಬಹಿರಂಗವಾಗಿಯೇ ವಿರೋಧಿಸಿದವು. "ಶಾಸನಭಂಗ ಚಳುವಳಿಯನ್ನೇಕೆ ಮುಂದುವರಿಸಬಾರದು? ಹೋರಾಟಗಾರರೇಕೆ ಖಾದಿ ತೊಡಬೇಕು?" ಎಂದರು. ಅಸ್ಪೃಶ್ಯತಾ ನಿವಾರಣೆ ಮತ್ತು ಸ್ವದೇಶಿ ನಿರ್ಣಯಗಳ ಬಗ್ಗೆ ಕಡ್ಡಾಯವಿರಕೂಡದೆಂದು ನಾಗಪುರ ಜಿಲ್ಲಾ ಕಾಂಗ್ರೆಸ್ ಸಮಿತಿ ಮಾಡಿದ್ದ ನಿರ್ಣಯವನ್ನು ಡಾ. ಮೂಂಜೆ ಕಾರ್ಯಕಾರಿ ಸಮಿತಿಯ ಮುಂದಿಟ್ಟಿದ್ದರು. ಬಾರ್ದೋಲಿ ನಿರ್ಣಯದ ಪ್ರತಿಯೊಂದು ಅಂಶವೂ ಟೀಕೆಗೊಳಗಾಯಿತು. ಡಾ. ಮೂಂಜೆ, ಗಾಂಧೀಜಿಯವರ ಮೇಲೆ ಅವಿಶ್ವಾಸ ನಿರ್ಣಯವನ್ನೇ ಮಂಡಿಸಿದರು. ಗಾಂಧೀಜಿ ಆತ್ಮರಕ್ಷಣೆಗಾಗಿಯೂ ಕೂಡ ಒಂದು ಮಾತನ್ನೂ ಆಡಲಿಲ್ಲ. ಹಕೀಂ ಅಜಮಲ್‌ಖಾನರ ಗೈರುಹಾಜರಿಯಲ್ಲಿ ಗಾಂಧಿಯವರೇ ಅಧ್ಯಕ್ಷತೆ ವಹಿಸಿದ್ದರು. ಡಾ. ಮೂಂಜೆಯವರ ಬೆಂಬಲಿಗರಿಗೆ ಮಾತನಾಡಲು ಪೂರ್ಣ ಅವಕಾಶವಿತ್ತರು. ಅವರ ವಿರುದ್ಧವಿರುವವರು ಯಾವ ಮಾತನ್ನೂ ಆಡದೆ ಸಂಯಮವನ್ನು ಕಾಯ್ದುಕೊಳ್ಳಬೇಕು ಎಂದರು. ಬಿರುಗಾಳಿ ಬೀಸಿ ತಣ್ಣಗಾಯಿತು.

ಕೊನೆಯಲ್ಲಿ ಗಾಂಧೀಜಿಯೇ ವಿಜಯಿಗಳಾದರು. ಆದರೆ ಅವರಿಗೆ ತೀವ್ರವಾದ ನೋವಾಗಿತ್ತು. ಬಹುಸಂಖ್ಯಾತ ಜನ ನಿಜವಾಗಿ ತಮ್ಮನ್ನು ಬೆಂಬಲಿಸುತ್ತಿಲ್ಲವೆಂದು ಅರಿತರು. ತಮ್ಮ ಪರವಾಗಿ ಬೆಂಬಲಿಸಿದ ಕೆಲವರು ತಮ್ಮನ್ನು ಬೆನ್ನಹಿಂದೆ 'ಸರ್ವಾಧಿಕಾರಿ' ಎಂದು ದೂರುತ್ತಿದ್ದುದು ಅವರಿಗೆ ತಿಳಿದಿತ್ತು. ರಾಷ್ಟ್ರದ ಮನೋಧರ್ಮವನ್ನು ತಾವಿನ್ನು ಪ್ರತಿಬಿಂಬಿಸುತ್ತಿಲ್ಲವೆಂದು ಅವರಿಗನಿಸಿತು.

ಮಾರ್ಚ್ ೩ರಂದು ಒಂದು ಲೇಖನ ಬರೆದು ಇದನ್ನೊಪ್ಪಿಕೊಂಡರು :

"ತಿಳಿದೋ ತಿಳಿಯದೆಯೋ ಅನೇಕ ಹಿಂಸಾಚಾರಗಳ ಆಂತರಿಕ ಝರಿ ಅಗಾಧವಾಗಿ ಹರಿಯುತ್ತಲೇ ಇದೆ. ಇದನ್ನು ಕಂಡು ನನಗೆ ಘೋರವಾದ ಸೋಲು ಉಂಟಾಗಲೆಂದು ಗುಪ್ತವಾಗಿ ಪ್ರಾರ್ಥಿಸುತ್ತಿದ್ದೆ. ನನ್ನದು ಯಾವಾಗಲೂ ಅಲ್ಪಮತದ ಅಭಿಪ್ರಾಯವೇ, ದಕ್ಷಿಣ ಆಫ್ರಿಕಾದಲ್ಲಿ ಸರ್ವಾನುಮತ ಬೆಂಬಲದಿಂದ ಪ್ರಾರಂಭಿಸಿ ಅನಂತರ ಅರವತ್ತನಾಲ್ಕರ ಕೊನೆಗೆ ಹದಿನಾರರಷ್ಟು ಅತ್ಯಲ್ಪ ಸಂಖ್ಯಾತ ಬೆಂಬಲ ಉಳಿದಿತ್ತು.

ಮತ್ತೆ ಮುಂದೆ ಅಗಾಧ ಬಹುಸಂಖ್ಯಾತರ ಬೆಂಬಲವನ್ನೂ ಗಳಿಸಿದೆ. ಯಾವಾಗ ಅತ್ಯಲ್ಪ ಸಂಖ್ಯಾತರು ಬೆಂಬಲಿಸಿದ್ದರೋ ಅದೇ ಕಾಲಕ್ಕೆ ಅತ್ಯುತ್ಕೃಷ್ಟವಾದ ಅಡಿಗಲ್ಲಿನ ಕೆಲಸವಾಯಿತು. ನನ್ನ ಬೆಂಬಲಕ್ಕೆ ಇರುವ ಈ ಅಗಾಧ ಬಹುಸಂಖ್ಯೆಯನ್ನು ಕಂಡೇ ಸರ್ಕಾರ ಹೆದರಿದೆ ಎಂದು ಬಲ್ಲೆ. ನಾನೂ ಅದನ್ನು ಕಂಡು ಅವರಿಗಿಂತ ಹೆಚ್ಚು ಹೆದರಿದ್ದೇನೆಂದು ಅವರು ಅರಿಯರು. ವಿಚಾರಶೂನ್ಯರಾದ ಕುರುಡು ಆರಾಧಕರ ಸಂದಣಿಯಿಂದ ನಾನು ಬೇಸತ್ತಿದ್ದೇನೆ. ನಮ್ಮನ್ನವರು ತಿರಸ್ಕರಿಸಿ ತುಚ್ಛೀಕರಿಸಿದ್ದರೆ ನನ್ನ ಸ್ಥಾನ ನನಗರಿವಾಗುತ್ತಿತ್ತು. ನನ್ನ ಸರ್ವಾಧಿಕಾರವನ್ನು ದುರುಪಯೋಗಿಸಬಾರದೆಂದು ಸ್ನೇಹಿತರೊಬ್ಬರು ಎಚ್ಚರಿಸಿದರು. ಆದರೆ ಅರಿವಿಲ್ಲದಯೇ ನಾನೂ ಅತ್ಯಂತ ದುರುಪಯೋಗ ಪಡಿಸಿಕೊಳ್ಳಬಹುದಾದ ವ್ಯಕ್ತಿಯಾಗಿ ಬಿಡುತ್ತಿದ್ದೇನೆಯೋ ಎಂದು ನನ್ನ ಭಯ. ಹಿಂದೆಂದೂ ಇಲ್ಲದಿದ್ದ ಈ ಭಯ ಇಂದು ನನ್ನನ್ನಾವರಿಸಿದೆ. ನಾಚಿಕೆ ಬಿಟ್ಟ ನನ್ನ ಪ್ರವೃತ್ತಿಯೇ ನನ್ನ ಏಕೈಕ ರಕ್ಷಣೆ. ನನ್ನ ಮನೋಧರ್ಮವನ್ನು ತಿದ್ದಲಸಾಧ್ಯವೆಂದು ಕಾರ್ಯಕಾರಿ ಸಮಿತಿ ಸದಸ್ಯರನ್ನು ನಾನು ಎಚ್ಚರಿಸಿದ್ದೇನೆ. ಜನತೆ ತಪ್ಪು ಮಾಡಿದ ಸಮಯಗಳಲ್ಲೆಲ್ಲಾ ಅವು ನನ್ನದೆಂದೇ ಒಪ್ಪಿಕೊಳ್ಳುತ್ತಾ ಸಾಗುತ್ತೇನೆ. ನನ್ನ ಆಂತರ್ಯದ ಅಂತರ್ವಾಣಿಯೊಂದೇ ನನ್ನನ್ನು ನಿಯಂತ್ರಿಸುವ ಸರ್ವಾಧಿಕಾರಿ. ಕೇವಲ ಒಬ್ಬನಾಗಿ ಉಳಿಯಬೇಕಾದ ಪ್ರಸಂಗ ಬಂದರೂ ನಿರ್ಭಯವಾಗಿ ಆ ಶೋಚನೀಯ ಪರಿಸ್ಥಿತಿಯಲ್ಲೂ ಹೋರಾಡುತ್ತೇನೆಂದು ನಮ್ರತೆಯಿಂದ ನಂಬುತ್ತೇನೆ. ಅದೇ ನನ್ನ ಏಕೈಕ ಸತ್ಯನಿಷ್ಠ ನಿಲುವು. ಆದರೆ ಇಂದು ನನಗೆ ದುಃಖವೂ ಆಗಿದೆ, ವಿವೇಕವೂ ಮೂಡಿದೆ. ನಮ್ಮ ಅಹಿಂಸೆ ಕೇವಲ ಮೇಲು ಹೊದಿಕೆಯದು ಮಾತ್ರ ಎಂದು ಅರಿತಿದ್ದೇನೆ. ಕಡುಕೋಪದಿಂದ ನಾವು ಉರಿಯುತ್ತಿದ್ದೇವೆ. ತನ್ನ ವಿವೇಕಶೂನ್ಯ ಕೃತ್ಯಗಳಿಂದ ಸರ್ಕಾರವೂ ಅದನ್ನು ಪೋಷಿಸುತ್ತಿದೆ. ಇಡೀ ರಾಷ್ಟ್ರದಲ್ಲಿ ಕೊಲೆ, ಬೆಂಕಿ, ದರೋಡೆ, ಸುಲಿಗೆಗಳು ವ್ಯಾಪಕವಾಗಿ ಹರಡಿ ನಿಲ್ಲಬೇಕೆಂಬುದು ಸರ್ಕಾರದ ಇಚ್ಛೆ. ಅದನ್ನು ದಮನ ಮಾಡಲು ತನ್ನ ಶಕ್ತಿಯೊಂದೇ ಸಮರ್ಥವೆಂದು ಸ್ಥಾಪಿಸುವುದು ಅದರ ಉದ್ದೇಶ.

"ನಮ್ಮ ನಿಸ್ಸಹಾಯಕತೆಯಿಂದ ನಾವು ಅಹಿಂಸೆಯನ್ನಪ್ಪಿದೆವೋ ಎನಿಸುತ್ತಿದೆ. ಅವಕಾಶವೊದಗಿದೊಡನೆ ಘೋರ ಪ್ರತೀಕಾರ ತೆಗೆದುಕೊಳ್ಳುವ ಆಕಾಂಕ್ಷೆಯನ್ನು ಅಡಗಿಸಿಟ್ಟುಕೊಂಡಿದ್ದೇವೆಂದು ಕಾಣಿಸುತ್ತದೆ. ದುರ್ಬಲರ ಈ ತೋರಿಕೆಯ ಅಹಿಂಸೆಯಿಂದ ನಿಜವಾದ ಸ್ವಯಂಪ್ರೇರಿತ ಅಹಿಂಸಾಶಕ್ತಿ ಎಂದಾದರೂ ಚಿಮ್ಮಿ ಬರುವುದುಂಟೆ? ನಾನು ತೊಡಗಿರುವ ಈ ಮಹಾಪ್ರಯೋಗ ನಿರರ್ಥಕವಲ್ಲವೇ? ಕೋಪಾಗ್ನಿ ಭುಗಿಲೆದ್ದು ಉರಿಯುವಾಗ ಸಾಮಾನ್ಯ ಸ್ತ್ರೀ ಪುರುಷರು ಹಸುಳೆಗಳೂ ಆಹುತಿಯಾಗುವುದಾದರೆ, ಪ್ರತಿಯೊಬ್ಬರು ತಮ್ಮ ಸಹಜೀವಿಯ ಮೇಲೆ ಎರಗಿ ಕೈ ಮಾಡುವುದಾದರೆ ಮತ್ತೇನು ತಾನೆ ಆದೀತು? ಇಂಥ ಘೋರ ದುರಂತಗಳು ಆಗುತ್ತಲೆ ಸಾಗಿದರೆ ನಾನುಪವಾಸ ಮಾಡಿ ಅಸುನೀಗಿದರೂ ಏನು ಪ್ರಯೋಜನ? ನಾವು ಸತ್ಯನಿಷ್ಠರಾಗಿ ನಿಲ್ಲುವುದೊಂದೇ

ಮಾರ್ಗ. ಶಸ್ತ್ರಶಕ್ತಿಯಿಂದಲೇ ನಮ್ಮ ಸ್ವರಾಜ್ಯ ಸಾಧಿಸುವ ಇಚ್ಛೆಯಾದರೆ ಈ ಅಹಿಂಸೆಯನ್ನು ತ್ಯಜಿಸಿ ನಮ್ಮ ಕೈಲಾದ ಹಿಂಸಾಚಾರ ಪಥವನ್ನೇ ತುಳಿಯುವುದು ಸರಿ. ಆಗ ಅದು ನಿಜವಾದ ಪೌರುಷವಾದೀತು; ಪ್ರಾಮಾಣಿಕವಾದ ವಿವೇಕಯುತ ಕ್ರಮ ಎನಿಸೀತು. ಆಗ ನಮ್ಮನ್ನು ಯಾರೂ ಅಪ್ರಮಾಣಿಕ ಮೋಸಗಾರರೆಂದು ಜರಿಯಲಾರರು. ನನ್ನ ಈ ಎಚ್ಚರಿಕೆಯ ಅನಂತರವೂ ನನ್ನ ಬಹು ಸಂಖ್ಯಾತ ಬೆಂಬಲಿಗರು ಯಾವುದನ್ನೂ ಬದಲಿಸದೆ, ಅಂಗೀಕರಿಸಿದರೂ ಉದ್ದೇಶಿತ ಗುರಿಯಲ್ಲಿ ನಂಬಿಕೆಯಿಡದಿದ್ದರೆ, ತಮ್ಮ ಜವಾಬ್ದಾರಿಯನ್ನು ತಾವೇ ಅರಿತುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಸವಿನಯ ಶಾಸನಭಂಗಕ್ಕೆ ಧಾವಿಸಲು ಅವರೇನೂ ಬದ್ಧರಲ್ಲ. ನಿಶ್ಶಬ್ದವಾಗಿ ರಚನಾತ್ಮಕ ಪುನರ್ರಚನೆಯ ಕಾರ್ಯದಲ್ಲಿ ಅವರು ನಿರತರಾಗಿ ನಿಲ್ಲಬೇಕು. ಜಾಗೃತರಾಗಿಲ್ಲದಿದ್ದರೆ ಅರಿಯದ ಆಳದಲ್ಲಿ ನಾವು ಮುಳುಗಿ ಹೋಗುತ್ತೇವೆ."

ಅಲ್ಪ ಸಂಖ್ಯಾತರನ್ನು ಕುರಿತು, ಗಾಂಧೀಜಿ: "ಸತ್ಯ ಅಹಿಂಸೆಗಳನ್ನು ಕಟ್ಟುನಿಟ್ಟಾಗಿ ನಿಷ್ಠೆಯಿಂದನುಸರಿಸುವುದು ರಾಷ್ಟ್ರಭಕ್ತಿಯ ಪ್ರತೀಕ. ಯಾರಿಗೆ ಅದರಲ್ಲಿ ನಂಬಿಕೆಯಿಲ್ಲವೋ ಅವರು ಕಾಂಗ್ರೆಸ್ಸಿನಿಂದ ನಿವೃತ್ತರಾಗಬೇಕು" ಎಂದರು.

ಈ ಮಾತುಗಳಲ್ಲಿ ಅತೀವ ದುಃಖ ತುಂಬಿತ್ತು. ಗಾಂಧೀಜಿಯ ಬಂಧನವೂ ಕಾದು ನಿಂತಿತ್ತು. "ನನ್ನನ್ನು ಜನತೆಯ ಮಧ್ಯದಿಂದ ಬೇರ್ಪಡಿಸುವುದು ಜನತೆಗೂ ಲಾಭಕರವೇ. ನನಗಂತೂ ಅತ್ಯಾವಶ್ಯಕವಾದ ದೈಹಿಕ ವಿರಾಮವೂ, ಶಾಂತಿಯೂ, ಲಭಿಸುವುದು" ಎಂದು ಬರೆದರು.

# ಮಹಾವಿಚಾರಣೆ

## ೧೯೨೨

ಬಾರ್ಡೋಲಿಯ ನಿರ್ಣಯದಿಂದ ಅಸಹಕಾರ ಚಳುವಳಿ ಮುಕ್ತಾಯದ ಕಡೆಗೆ ತಿರುಗುತ್ತದೆಂದು ಲಾರ್ಡ್ ರೀಡಿಂಗ್ ದೃಢವಾಗಿ ನಂಬಿದ್ದರು. ಆದರೂ ಆ ನಿರ್ಣಯಗಳು ವೈಸರಾಯರನ್ನು ವಿಚಾರಗೊಂದಲದಲ್ಲಿ ಕೆಡವಿದುವು. ಚಳುವಳಿಯ ನಿಲುಗಡೆಯ ನಂತರ ತಮ್ಮ ಧೋರಣೆಯನ್ನು ನಿರ್ಧರಿಸಬೇಕಾದ ಅನಿವಾರ್ಯ ಪರಿಸ್ಥಿತಿ ಬಂದಿತು. ೧೯೨೨ರ ಫೆಬ್ರುವರಿ ೧೨ರಂದು ಗಾಂಧೀಜಿಯ ದಸ್ತಗಿರಿಯಾಗತಕ್ಕದ್ದೆಂದು ತೀರ್ಮಾನವಾಗಿತ್ತು. ಆ ದಿನವೇ ಈ ನಿರ್ಣಯವೂ ಅಂಗೀಕರಿಸಲ್ಪಟ್ಟಿತು. ೧೪ನೇ ತಾರೀಕಿನಂದು ಗಾಂಧೀಜಿಯನ್ನು ಸೆರೆಹಿಡಿಯಲು ಬೊಂಬಾಯಿ ಸರ್ಕಾರಕ್ಕೆ ಸೂಚನೆ ಕೊಡಲಾಗಿದೆ ಎಂದು ಲಾರ್ಡ್ ರೀಡಿಂಗ್ ಮಾಂಟೆಗೂ ಅವರಿಗೆ ತಿಳಿಸಿದ್ದರು. ಶಾಸನಭಂಗ ಚಳುವಳಿ ರದ್ದು ಮಾಡಿದ ಮಾತ್ರಕ್ಕೆ ಗಾಂಧೀಜಿಯ ಮೇಲೆ ಹೊರಿಸಿರುವ ಆಪಾದನೆಗಳೇನೂ ಬದಲಾಗುವುದಿಲ್ಲವೆಂದೂ ಚಳುವಳಿ ಮಾತ್ರ ಮುಂದೆ ಹೋಗಿದೆಯೆಂದೂ ಲಾರ್ಡ್ ರೀಡಿಂಗ್ ಅಭಿಪ್ರಾಯ ಪಟ್ಟಿದ್ದರು. ಗಾಂಧಿಯವರನ್ನು ಸ್ವತಂತ್ರವಾಗಿ ಬಿಟ್ಟಿರುವ ಬಗ್ಗೆಯೂ ಇಂಗ್ಲೆಂಡಿನಲ್ಲಿ ಸಾರ್ವಜನಿಕ ಅಸಂತೋಷವಿತ್ತು. ಫೆಬ್ರುವರಿಯ ಮೊದಲಿನಲ್ಲಿ ಅವರನ್ನು ಬಂಧಿಸದೇ ಮುಂದೆ ಹಾಕಿದುದು ತಮಗೆ ಅರ್ಥವಾಗದೆಂದು ಮಾಂಟೆಗೂ ತಂತಿ ಕಳುಹಿಸಿದ್ದರು. ಬ್ರಿಟಿಷ್ ಪಾರ್ಲಿಮೆಂಟು ಫೆಬ್ರುವರಿ ೧೪ರಂದು ಸೇರುವುದಿತ್ತು. ಅಷ್ಟರೊಳಗೆ ಈ ದಸ್ತಗಿರಿಯಾಗಬೇಕೆಂದೂ, ಆಗಿದೆ ಎಂದು ಪಾರ್ಲಿಮೆಂಟಿಗೆ ತಾವು ತಿಳಿಸಬೇಕೆಂದೂ ರೀಡಿಂಗ್ ಮತ್ತು ಮಾಂಟೆಗೂ ಇವರಿಬ್ಬರೂ ತವಕ ಪಡುತ್ತಿದ್ದರು. ಇದೇ ಸಮಯಕ್ಕೆ ಸ್ವಲ್ಪ ನಿಧಾನ ಮಾಡುವುದು ಒಳ್ಳೆಯದೆಂದು ವೈಸರಾಯರ ಸಮಿತಿಯ ಭಾರತೀಯ ಸದಸ್ಯರೂ ಅತ್ಯಂತ ಪ್ರಬಲವಾಗಿ ಪ್ರತಿಪಾದಿಸಿ ಮನವಿ ಮಾಡಿದ್ದರು. ಅದನ್ನು ಕಡೆಗಣಿಸಿ ನಡೆಯುವುದು ಹೆಚ್ಚು ಅಪಾಯಕಾರಿಯಾದೀತೆಂದೂ ತಕ್ಷಣ ಕ್ರಮಕೈಗೊಳ್ಳುವುದರಿಂದ ಭಾರತದಲ್ಲೂ ಹೊರಗೂ ಅಸಮಾಧಾನ ಉಲ್ಬಣವಾಗುವ ಸಾಧ್ಯತೆ ಉಂಟೆಂದೂ, ಸ್ವಲ್ಪ ಕಾಯುವುದೇ ಹೆಚ್ಚು ವಿಹಿತವೆಂದೂ ಲಾರ್ಡ್ ರೀಡಿಂಗ್ ವಿಚಾರ ಮಾಡಿ ನಿರ್ಣಯಿಸಿದರು. ಗಾಂಧೀಜಿಯ ದಸ್ತಗಿರಿಯನ್ನು ಮುಂದೆ ಹಾಕುವಂತೆ ಸೂಚಿಸಿದರು. ಬೊಂಬಾಯಿ, ಬಂಗಾಳ ಮತ್ತು ಮದ್ರಾಸು ಗೌರ್ನರುಗಳನ್ನು ದೆಹಲಿಗೆ ಕರೆಸಿಕೊಂಡು ಸಮಾಲೋಚಿಸಿದರು. ಮುಂದೆ ಸೂಕ್ತ ಸಮಯದಲ್ಲಿ ಗಾಂಧೀಜಿಯ ಮೇಲೆ ಭಾರತ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿದರು.

ಹಲವು ದಿನಗಳಿಂದಲೂ ಗಾಂಧೀಜಿ ತಮ್ಮ ದಸ್ತಗಿರಿಯನ್ನು ನಿರೀಕ್ಷಿಸುತ್ತಿದ್ದರು. "ನನ್ನನ್ನು ದಸ್ತಗಿರಿ ಮಾಡಿದಲ್ಲಿ" ಎಂಬ ಮಾರ್ಚ್ ೯ನೇ ತಾರೀಖಿನ ಲೇಖನದಲ್ಲಿ

ಈ ಬಗ್ಗೆ ಪ್ರಸ್ತಾಪಿಸಿದ್ದರು. "ನನ್ನನ್ನು ಈ ಕೂಡಲೇ ದಸ್ತಗಿರಿ ಮಾಡುವರೆಂಬ ವದಂತಿ ಮತ್ತೆ ಹಬ್ಬಿದೆ. ಫೆಬ್ರವರಿ ೧೧,೧೨ನೇ ತಾರೀಕುಗಳಲ್ಲೇ ನನ್ನನ್ನು ಸೆರೆಹಿಡಿಯದೇ ಹೋದುದು ತಪ್ಪಾಯಿತೆಂದು ಕೆಲವು ಅಧಿಕಾರಿಗಳ ಅಭಿಪ್ರಾಯವೆಂದು ಕೇಳಿದ್ದೇನೆ. ಬಾರ್ಡೋಲಿಯ ನಿರ್ಣಯ ಸರ್ಕಾರದ ಕಾರ್ಯಕ್ರಮವನ್ನು ಬದಲಾಯಿಸುವಂತಾಗ ಬಾರದಾಗಿತ್ತು, ಎಂದವರ ಮತ. ನನ್ನನ್ನು ದಸ್ತಗಿರಿ ಮಾಡಿ ಗಡೀಪಾರುಮಾಡಿ ಬಿಡಬೇಕೆಂದು ಲಂಡನ್ನಿನ ಸಾರ್ವಜನಿಕ ಕ್ಷೇತ್ರದ ಒತ್ತಡ ಬಹಳ ಪ್ರಬಲವಾಗಿದೆ ಯೆಂದೂ ಸರ್ಕಾರ ಅದಕ್ಕೆ ಮನ್ನಣೆ ಕೊಡಲೇ ಬೇಕಾದೀತೆಂದು ಕೇಳಿದ್ದೇನೆ. ವ್ಯಕ್ತಿ ಗತವಾದ ಅಥವಾ ಸಾಮೂಹಿಕ ಸವಿನಯ ಶಾಸನಭಂಗ ಪೂರ್ಣವಾಗಿ ನಿಂತು ಹೋಗ ಬೇಕು ಎಂಬ ಅಭಿಲಾಷೆಯುಳ್ಳ ಸರ್ಕಾರ ನನ್ನನ್ನು ದಸ್ತಗಿರಿ ಮಾಡದೆ ಇರಲು ಹೇಗೆ ಸಾಧ್ಯ ಎಂದು ನನಗೂ ಅನಿಸುತ್ತದೆ.

"ಸರ್ಕಾರ ಹರಿಸುವ ರಕ್ತದ ಕೋಡಿ ನನ್ನನ್ನು ಬೆದರಿಸಲು ಸಾಧ್ಯವಿಲ್ಲ. ಆದರೆ ನನ್ನ ದಸ್ತಗಿರಿಯ ಸುದ್ದಿ ಕೇಳಿ ಜನ ಎಲ್ಲಿ ಆವೇಶದಿಂದ ಮೈಮರೆಯುವರೋ ಎಂಬ ಹೆದರಿಕೆ ನನಗಿದೆ" ಎಂದರು ಗಾಂಧೀಜಿ. "ನನ್ನ ದಸ್ತಗಿರಿಯಾದ ದಿನ ಜನ ಪೂರ್ಣ ಸಂಯಮದಿಂದಿದ್ದು ಉತ್ಸವದ ದಿನದಂತೆಯೇ ಆಚರಿಸಬೇಕು. ನಾನು ಈ ಚಳುವಳಿಯ ಕೇಂದ್ರ ಬಿಂದುವೆಂದು ಸರ್ಕಾರ ತಿಳಿದು ನನ್ನನ್ನು ಸೆರೆಯಲ್ಲಿಟ್ಟರೆ ತಾವು ಶಾಂತ ರಾಗಿರಬಹುದೆಂದುಕೊಂಡಿದೆ. ಜನತೆಯ ಶಕ್ತಿಯನ್ನು ಅಳೆಯುವುದು ಇನ್ನೂ ಉಳಿದೇ ಇದೆ. ಸಂಪೂರ್ಣ ಶಾಂತಿಯಿಂದಲೂ ಸಮಾಧಾನದಿಂದಲೂ ಜನ ವರ್ತಿಸಬೇಕೆಂಬುದು ನನ್ನ ಆಸೆ. ವ್ಯಾಪಕವಾದ ಹಿಂಸಾಚಾರ ನಡೆಯುತ್ತದೆಂಬ ಭಯದಿಂದ ಸರ್ಕಾರ ನನ್ನನ್ನು ದಸ್ತಗಿರಿ ಮಾಡದೆ ಬಿಡುವುದು ನನಗೇನೂ ಹೆಮ್ಮೆಯ ಅಥವಾ ಸಂತೋಷಕರವಾದ ಮಾತಲ್ಲ, ಅತ್ಯಂತ ಅವಮಾನಕರವಾದುದೆಂದೇ ನನ್ನ ಭಾವನೆ.

"ರಚನಾತ್ಮಕ ಕಾರ್ಯಕ್ರಮದ ಎಲ್ಲ ಕೆಲಸಗಳನ್ನೂ ಜನ ಕೈಗೊಂಡು ನಡೆಸಲಿ, ಹರತಾಳಗಳು, ಪ್ರದರ್ಶನಗಳೂ ಕೂಡದು. ಸರ್ಕಾರದೊಡನೆ ಸಹಕರಿಸುವುದೂ ಬೇಡ. ಅತ್ಯಂತ ವ್ಯವಸ್ಥಿತವಾಗಿ ಶಿಸ್ತಿನಿಂದ ಸಹಕಾರ ಹಿಂತೆಗೆದುಕೊಳ್ಳುವ ಕಾರ್ಯ ನಡೆಯಬೇಕು. ಹೀಗೆ ಮಾಡುವುದು ಜನತೆಗೆ ಸಾಧ್ಯವಾದರೆ ಜಯ ಖಂಡಿತ."

೮ನೇ ಮಾರ್ಚಿಯಿಂದಂತೂ ಗಾಂಧೀಜಿಯ ದಸ್ತಗಿರಿಯ ವದಂತಿ ನಿಬಿಡವಾಯಿತು. ತುರ್ತು ಆಹ್ವಾನವೊಂದರ ಸಲುವಾಗಿ ಆ ದಿನ ಅವರು ಅಜ್ಮೀರಕ್ಕೆ ಹೊರಟರು. ದಾರಿಯಲ್ಲೇ ಸೆರೆಹಿಡಿಯುವ ಸುದ್ದಿಯಿತ್ತು. ಅಜ್ಮೀರದಿಂದ ಬಂದ ಅನುಮಾನದ ತಂತಿ–ವರ್ತಮಾನ ಕೇಳಿ ಕಸ್ತೂರಿಬಾ ಸಾಬರಮತಿ ನಿಲ್ದಾಣಕ್ಕೆ ಧಾವಿಸಿ ಬಂದಿದ್ದರು. ಗಾಂಧೀಜಿ ೧೦ನೇ ತಾರೀಖು ಸುಖವಾಗಿ ಬಂದು ತಲುಪಿದರು.

ಆಶ್ರಮದಲ್ಲಿ ಈ ವದಂತಿಗಳನ್ನು ಗಮನಿಸುತ್ತಿರಲಿಲ್ಲ. ಸವಿನಯ ಶಾಸನಭಂಗ ಪ್ರಾರಂಭವಾದಂದಿನಿಂದಲೂ ಅನೇಕ ಸಲ 'ಕೊನೆಯ ಬೀಳ್ಕೊಡಿಗೆ'ಗಳು ನಡೆದಿದ್ದವು. ನವೆಂಬರ್ ಕೊನೆಯಿಂದಲೂ ಅವರು ದಸ್ತಗಿರಿಯಾಗುವುದು ಬಳಕೆಯ ಮಾತಾಗಿ

ಬಿಟ್ಟಿತು. ಆಶ್ರಮದ ದಿನಚರಿ ಯಾವ ಆತಂಕವೂ ಇಲ್ಲದೇ ನಡೆಯುತ್ತಿತ್ತು. ಆ ದಿನ ಸಂಜೆಯಾಗುತ್ತಿದ್ದಂತೆ ಪ್ರಾರ್ಥನೆಯ ಗಂಟೆ ಬಾರಿಸಿದಾಗ ಆಶ್ರಮವಾಸಿಗಳು ಸ್ವಲ್ಪ ದುಗುಡದಿಂದ ಧಾವಿಸಿ ಬಂದು ಗಾಂಧೀಜಿಯವರೊಡನೆ ಕುಳಿತಾಗ 'ಇನ್ನು ದೀರ್ಘ ಕಾಲ ಅವರ ಸಹವಾಸ ತಪ್ಪಿ ಹೋಗಬಹುದು, ಇದೇ ಕೊನೆಯ ಪ್ರಾರ್ಥನಾಸಭೆ ಆದೀತೇ' ಎಂಬ ಅಳುಕು ಪಸರಿಸಿತ್ತು. ಅಂದಿನ ಸಭೆಯಲ್ಲಿ ತಮ್ಮ ದಸ್ತಗಿರಿಯ ವದಂತಿ ಯನ್ನು ಕುರಿತು ಗಾಂಧೀಜಿಯೂ ಮಾತನಾಡಿದರು. ಅದೇ ರಾತ್ರಿ ತಮ್ಮನ್ನು ಬಂಧಿಸುವ ಸಂಭವವಿದೆಯೆಂದು ತಿಳಿಸಿದರು.

ಪ್ರಾರ್ಥನೆಯನಂತರ ಎಂದಿನಂತೆ ಗಾಂಧೀಜಿ ತಮ್ಮ ದಿನಚರಿಯ ಕಾರ್ಯಕ್ಕೆ ತೊಡಗಿ ಪತ್ರಗಳಿಗೆ ಉತ್ತರ ಬರೆಸತೊಡಗಿದರು. ತಾವು ದಸ್ತಗಿರಿಯಾದನಂತರ 'ಯಂಗ್–ಇಂಡಿಯಾ' ಪತ್ರಿಕೆಯನ್ನು ನಡೆಸುವ ವ್ಯವಸ್ಥೆ ಬಗ್ಗೆ ಸೂಚನೆಗಳನ್ನಿತ್ತರು. ನಗರದಿಂದ ಬರುತ್ತಲೇ ಇದ್ದ ಗೆಳೆಯರು ದಸ್ತಗಿರಿಯ ವದಂತಿಯನ್ನು ಸಮರ್ಥಿಸುವ ಸುದ್ದಿಗಳನ್ನೇ ತರುತ್ತಿದ್ದರು. ರಾತ್ರಿ ಒಂಬತ್ತೂ ಮುಕ್ಕಾಲು ಗಂಟೆ. ಗಾಂಧೀಜಿ ಮಲಗುವ ಮುನ್ನ ಶೌಚ ವಿಧಿಗಾಗಿ ಎದ್ದರು. ಸುತ್ತಲಿದ್ದ ಗುಂಪೂ ಚದುರಿತು. ಸೂಚನೆಗಳನ್ನು ಪಡೆಯಲು ಬಂದಿದ್ದ ಶಂಕರಲಾಲ್ ಬ್ಯಾಂಕರ್ ಆಶ್ರಮದಿಂದ ನಿರ್ಗಮಿಸಿದರು. ಸ್ವಲ್ಪ ದೂರ ಅವರು ಸಾಗುವುದರಲ್ಲೇ ಪೋಲೀಸ್ ಸೂಪರಿಂಟೆಂಡೆಂಟ್ ಎದುರಾಗಿ ಅವರನ್ನು ದಸ್ತಗಿರಿ ಮಾಡಿದರು. ಪೋಲೀಸುದಳ ಅನಂತರ ಆಶ್ರಮಕ್ಕೆ ಬಂದಿತು. ಗಾಂಧೀಜಿಗೆ ಮುಖ್ಯಾಧಿಕಾರಿಗಳು ಹೇಳಿ ಕಳುಹಿಸಿ ತಮಗೆ ಬೇಕಾದಷ್ಟು ಸಮಯ ತೆಗೆದುಕೊಂಡು ದಸ್ತಗಿರಿಗೆ ಸಿದ್ಧರಾಗಬೇಕೆಂದು ಕೋರಿದರು. ಆಶ್ರಮ ವಾಸಿಗಳೆಲ್ಲ ಗಾಂಧಿಯವರ ಕುಟೀರದಲ್ಲಿ ಸೇರಿದರು. ಪ್ರತಿಯೊಬ್ಬರಿಗೂ ಗಾಂಧೀಜಿ ಸೂಚನೆಗಳನ್ನಿತ್ತರು. ಅನಂತರ ಎಲ್ಲರೂ ಕುಳಿತು ವೈಷ್ಣವ ಜನತೋ ಭಜನೆ ಹಾಡು ವಂತೆ ತಿಳಿಸಿದರು. ಗುಜರಾತಿನ ಸಂತ ನರಸಿಮೆಹ್ತ, ನಿಜವಾದ ವೈಷ್ಣವನ ಗುಣ ಗಳನ್ನು ಬಣ್ಣಿಸಿರುವ ಈ ಹಾಡನ್ನು ಎಲ್ಲರೂ ಹಾಡಿದರು. ಕಡೆಗೆ ಗಾಂಧೀಜಿ ಎಲ್ಲರನ್ನೂ ಹರಸಿದರು. ಆಗ ತಾನೇ ಆಶ್ರಮಕ್ಕೆ ಆಗಮಿಸಿದ್ದ ಹಜರತ್ ಮೊಹಾನಿ ಅವರನ್ನು ಅಪ್ಪಿಕೊಂಡರು. ತಮಗಾಗಿ ಕಾದಿದ್ದ ಕಾರಿನಲ್ಲಿ ಹತ್ತಿ ಕುಳಿತರು. ಶುಕ್ರವಾರ ಮಾರ್ಚ್ ೧೦ರ ಆ ರಾತ್ರಿ ಗಾಂಧೀಜಿ ಸಬರ್ಮತಿ ಸೆರೆಮನೆಯನ್ನು ಸೇರಿದರು. ಒಂದು ಪ್ರತ್ಯೇಕ ತುಂಡು ಪಂಚೆ, ಎರಡು ಕಂಬಳಿಗಳು ಮತ್ತು ಐದು ಪುಸ್ತಕಗಳು ಇವಿಷ್ಟೇ ಗಾಂಧಿ ಯವರೊಡನಿದ್ದ ಗಂಟು. ಗೀತೆ, ರಾಮಾಯಣ, ರಾಡ್‌ವೆಲ್ಲನ ಕೊರಾನ್ ಭಾಷಾಂತರ, ಆಶ್ರಮ ಪ್ರಾರ್ಥನೆಯ ಪುಸ್ತಕ ಮತ್ತು ಒಂದು ಪ್ರತಿ 'ಸರ್ಮನ್ ಆನ್ ದಿ ಮೌಂಟ್' ಇವು ಅವರೊಡನಿದ್ದ ಗ್ರಂಥಗಳು.

ಮಾರ್ಚ್ ೧೧ರಂದು ಗಾಂಧೀಜಿ ಮತ್ತು ಶಂಕರಲಾಲ್ ಬ್ಯಾಂಕರ್ ಅವರನ್ನು ಊರ ಹೊರಗೆ ದಂಡಿನ ಪ್ರದೇಶದ ರಕ್ಷಣೆಯಲ್ಲಿದ್ದ ಕಮೀಷನರ್ ಕಛೇರಿಯಲ್ಲಿ ಮ್ಯಾಜಿಸ್ಟ್ರೇಟ್ ಬ್ರೌನ್ ಸಾಹೇಬರ ಮುಂದೆ ಹಾಜರ್ಪಡಿಸಲಾಯಿತು. ಪೋಲೀಸು

ಮುಖ್ಯಾಧಿಕಾರಿಗಳು ಮೊದಲು ಸಾಕ್ಷ್ಯ ನುಡಿದರು. ಗಾಂಧೀಜಿಯವರು ಯಂಗ್-ಇಂಡಿಯಾ ಪತ್ರಿಕೆಯಲ್ಲಿ ಬರೆದ ನಾಲ್ಕು ಲೇಖನಗಳಿಗಾಗಿ ಅವರ ಮೇಲೆ ಆಪಾದನೆ ಹೊರಿಸಿ ಬೊಂಬಾಯಿ ಸರ್ಕಾರ ನಮೂದಿಸಿದ್ದ ಆಜ್ಞೆಯನ್ನು ಮುಂದಿಟ್ಟರು. ಅದರಲ್ಲಿದ್ದುದು ಹೀಗೆ:

"ಗಾಂಧಿ, ವಯಸ್ಸು ಐವತ್ತೆರಡು, ಉದ್ಯೋಗ ಬೇಸಾಯ ಮತ್ತು ನೇಕಾರಿಕೆ ಎಂದು ಹೇಳಿಕೊಳ್ಳುತ್ತಾರೆ. ಸಬರ್ಮತಿ ಆಶ್ರಮದಲ್ಲಿ ವಾಸ, ಅವರ ಹೇಳಿಕೆ:

"ಸರ್ಕಾರದಲ್ಲಿ ಅವಿಶ್ವಾಸ ಹರಡುವ ಅಪರಾಧ ಮಾಡಿದ್ದೇನೆ ಎಂಬ ಒಪ್ಪಿಗೆಯನ್ನು ಸಮಯ ಬಂದಾಗ ಸಮರ್ಥಿಸಿಕೊಳ್ಳುತ್ತೇನೆಂದು ಮಾತ್ರ ಹೇಳಬಯಸುತ್ತೇನೆ. ನಾನು ಯಂಗ್-ಇಂಡಿಯಾ ಪತ್ರಿಕೆಯ ಸಂಪಾದಕ ಹೌದು. ನನ್ನ ಮುಂದೆ ಓದಿದ ಲೇಖನಗಳೂ ನಾನು ಬರೆದವು. ಪತ್ರಿಕೆಯ ಮಾಲೀಕರೂ, ಪ್ರಕಾಶಕರೂ ಅದರ ನೀತಿಯನ್ನು ರೂಪಿಸುವ ಪೂರ್ಣ ಜವಾಬ್ದಾರಿಯನ್ನು ನನಗೆ ವಹಿಸಿದ್ದಾರೆ."

ವಿಚಾರಣೆಯನ್ನು ಹಿರಿಯ ನ್ಯಾಯಸ್ಥಾನಕ್ಕೆ ಒಪ್ಪಿಸಿ ಗಾಂಧೀಜಿಯವರನ್ನು ಸಬರ್ಮತಿ ಸೆರೆಮನೆಯಲ್ಲಿ ಬಂಧಿಸಿಡಲಾಯಿತು. ಮಾರ್ಚ್ ೧೮ ವಿಚಾರಣೆ ಎಂದು ಗೊತ್ತು ಮಾಡಲ್ಪಟ್ಟಿತು. ವಿಚಾರಣೆಯ ಪೂರ್ವದಲ್ಲಿ ಒಂದು ವಾರ ಭೇಟಿಗೆ ಬಂದ ಸ್ನೇಹಿತರನ್ನು ನೋಡುವ ಕಾರ್ಯವೇ ಆಯಿತು. ಯಾವ ನಿರ್ಬಂಧವೂ ಇರಲಿಲ್ಲ. ಅಪಾಯಕಾರಿ ಎನ್ನಲಾಗದ ಪತ್ರ ವ್ಯವಹಾರವನ್ನು ಮುಖ್ಯಾಧಿಕಾರಿಗೆ ತೋರಿಸಿ ನಡೆಸುವ ಅವಕಾಶ ಮಾಡಿಕೊಡಲಾಗಿತ್ತು. ರಚನಾತ್ಮಕ ಕಾರ್ಯ ಮುಂದುವರಿಸುವಂತೆ ಒತ್ತಾಯ ಮಾಡಿ ಹಲವು ಸ್ನೇಹಿತರಿಗೆ ಗಾಂಧೀಜಿ ಬರೆದರು. ಕಾಂಗ್ರೆಸ್ ಅಧ್ಯಕ್ಷ ಹಕೀಮ್ ಅಜಮಲ್ ಖಾನರಿಗೆ ಮಾರ್ಚಿ ೧೨ರಂದು ಹೀಗೆ ಬರೆದರು:

"ಪ್ರತಿನಿತ್ಯದ ಸೂತ್ರಯಜ್ಞ ಮತ್ತು ಕರ್ತವ್ಯ ನಿಷ್ಠರಾಗಿ ಅಭಿಮಾನದಿಂದ ಖಾದಿ ತೊಡುವುದು ಇವೆರಡರಿಂದ ಭಾರತದ ಐಕ್ಯತೆ ಪುನಶ್ಚೇತನಗಳು ಸಾಧಿತವಾಗುವಂತೆ ಮತ್ತಾವುದರಿಂದಲೂ ಸಾಧ್ಯವಾಗದು. ಬಿರುದು ಬಾವಲಿಗಳನ್ನು ತ್ಯಜಿಸುವವರು, ಶಾಲಾ ಕಾಲೇಜುಗಳನ್ನು ಸರ್ಕಾರಿ ಸಮಿತಿಗಳನ್ನು ಬಹಿಷ್ಕರಿಸುವವರು ಅಧಿಕೃತ ಸ್ಥಾನಗಳನ್ನು ತ್ಯಜಿಸುವ ಸೈನಿಕರು, ಅಧಿಕಾರಿಗಳು ಹೆಚ್ಚಾಗಬೇಕೆಂದು ನಾನು ಅಪೇಕ್ಷಿಸಿದ್ದರೂ ಈಗಾಗಲೇ ಫಲಪ್ರದವಾದುದನ್ನು ಸಂಘಟಿಸುವ ಕಾರ್ಯದಲ್ಲಿ ರಾಷ್ಟ್ರ ತೊಡಗಬೇಕೆಂದು ನನ್ನ ಒತ್ತಾಯ ಪೂರ್ವಕ ಬಿನ್ನಹ. ಯಾವ ಆಡಳಿತ ಪದ್ಧತಿಯನ್ನು ಪರಿವರ್ತಿಸಬೇಕು ಅಥವಾ ಕೊನೆಗಾಣಿಸಬೇಕೆಂದು ಸಂಕಲ್ಪಿಸಿದ್ದೇವೆಯೋ ಅದರೊಡನೆ ಅಸಹಕಾರ ಘೋಷಿಸುವಂತೆ ಹೆಚ್ಚು ಹೆಚ್ಚು ಭಾರತೀಯರನ್ನು ಆಕರ್ಷಿಸುವ ತನ್ನ ಶಕ್ತಿಯಲ್ಲಿ ರಾಷ್ಟ್ರಕ್ಕೆ ನಂಬಿಕೆ ಹುಟ್ಟಬೇಕು. ನನ್ನ ದಸ್ತಗಿರಿಯ ಪ್ರಭಾವ ಇನ್ನೂ ದೀರ್ಘಕಾಲದ ಚಳುವಳಿಗೆ ಸಾಕು ಎಂದು ಹೇಳಿಕೊಳ್ಳುವ ಸಾಹಸ ಮಾಡುತ್ತೇನೆ. ಯಾರ ಬಗ್ಗೆಯೂ ನನಗೆ ದ್ವೇಷವಿಲ್ಲ ಎಂದು ನಮ್ರತೆಯಿಂದ ನಂಬಿದ್ದೇನೆ. ನನ್ನಷ್ಟೇ ನನ್ನ ಹಲವು ಮಿತ್ರರೂ ಅಹಿಂಸಾನಿಷ್ಠರಾಗಿರಲೇಬೇಕೆಂಬ ಕಾರಣವಿಲ್ಲ. ನಮ್ಮ

ಪೈಕಿ ಅತ್ಯಂತ ಮುಗ್ಧ ನಿರಪರಾಧಿಗಳು ಬಂಧಿತರಾಗಬೇಕೆಂದು ನಮ್ಮ ಕಲ್ಪನೆಯಿತ್ತು. ನನ್ನನ್ನು ನೀವು ಹಾಗೆ ತಿಳಿಯುವುದಾದರೆ ನನ್ನ ಅನಂತರ ಮತ್ತಾರೂ ಸೆರೆಮನೆಗೆ ಹೋಗಬೇಕಾಗಿಲ್ಲವೆಂಬುದು ಸ್ಪಷ್ಟ. ಆದರೆ ದಸ್ತಗಿರಿಯಾಗಲು ಹಿಂಜರಿಯಬೇಕೆಂದು ಅರ್ಥಮಾಡಬಾರದು. ನನ್ನ ಎಚ್ಚರಿಕೆಯ ಉದ್ದೇಶ ಅದಲ್ಲ. ಪ್ರತಿಯೊಬ್ಬ ಅಹಿಂಸಕ ಅಸಹಕಾರ ಕಾರ್ಯಕರ್ತನನ್ನೂ ಸರ್ಕಾರ ಬಂಧಿಸುವುದಾದರೆ ನನಗೆ ಸಂತೋಷವೇ. ಆದರೆ ರಕ್ಷಣೋಪಾಯಕ್ಕಾಗಲಿ, ಪ್ರತಿಭಟನೆಗಾಗಲಿ, ಸವಿನಯ ಶಾಸನಭಂಗವನ್ನು ಮುಂದುವರಿಸಿ ಸೆರೆಮನೆ ಸೇರಕೂಡದೆಂದಷ್ಟೇ ನನ್ನ ಸೂಚನೆ. ಬಂಧಿತರಾಗಿರುವವರ ಕಾರಣಕ್ಕಾಗಿಯೂ ರಾಷ್ಟ್ರ ಆಕ್ರೋಶಗೊಳ್ಳಬಾರದು. ಶಿಕ್ಷೆಗೆ ಗುರಿಯಾದವರು ಪೂರ್ಣ ಕಾಲ ಅನುಭವಿಸುವುದು ಅವರಿಗೂ ರಾಷ್ಟ್ರಕ್ಕೂ ಒಳ್ಳೆಯದೇ. ಅಷ್ಟರೊಳಗೆ ಸ್ವರಾಜ್ಯ ಲೋಕಸಭೆ ಬಂದು ಬಿಡುಗಡೆ ಮಾಡಿದರೆ ಮಾತ್ರ ಆಗಬಹುದು. ಸಾರ್ವತ್ರಿಕವಾಗಿ ಖಾದಿಯನ್ನಂಗೀಕರಿಸುವುದೇ ಸ್ವರಾಜ್ಯ ಎಂಬ ನಂಬಿಕೆ ಸುದೃಢವಾಗಿ ನನ್ನಲ್ಲಿ ಬೇರೂರಿದೆ."

ಅಹಮದಾಬಾದಿನ ಜಿಲ್ಲಾ ನ್ಯಾಯಾಧಿಪತಿ ಮಿ. ಬ್ರೂಮ್‌ಫೀಲ್ಡ್ ಐ.ಸಿ.ಎಸ್. ಅವರ ಸಮ್ಮುಖದಲ್ಲಿ ಮಾರ್ಚಿ ೧೮ರ ಶನಿವಾರ ವಿಚಾರಣೆ ಪ್ರಾರಂಭವಾಯಿತು.

ಸರ್ಕಾರದ ಮುಖ್ಯ ವಕೀಲ ಸರ್ ಜೆ.ಟಿ. ಸ್ಟ್ರ್ಯಾಂಗ್‌ಮನ್ನರು ಅಧಿಕೃತ ಫಿರ್ಯಾದಿ ಯಾಗಿದ್ದರು. ಆಪಾದಿತರಾದ ಗಾಂಧೀಜಿ ಮತ್ತು ಶಂಕರಲಾಲ್ ಬ್ಯಾಂಕರ್ ಪರ ಪ್ರತಿವಾದಿಸಲು ಯಾರೂ ಇರಲಿಲ್ಲ. ಕೋರ್ಟಿನ ಮುಂದೆ ತರಲಾಗಿದ್ದ ಆಪಾದನೆಗಳ ಪಟ್ಟಿಯಲ್ಲಿ ಸ್ವಲ್ಪ ತಪ್ಪಿದೆ ಎಂದು ಹೇಳಿ ನ್ಯಾಯಾಧೀಶರು ಅದನ್ನು ಸರಿಪಡಿಸಿದರು. ಅನಂತರ ಅಪರಾಧಗಳ ಆಪಾದನೆಯನ್ನು ಓದಿ ಹೇಳಲಾಯಿತು. ಯಂಗ್–ಇಂಡಿಯಾ ದಲ್ಲಿ ಬರೆದ "ರಾಜನಿಷ್ಠೆಯನ್ನು ಬುಡಮೇಲು ಮಾಡುವುದು" "ಸಮಸ್ಯೆ ಮತ್ತು ಅದರ ಪರಿಹಾರ" ಮತ್ತು "ಜುಟ್ಟನ್ನು ಹಿಡಿದು ಅಲ್ಲಾಡಿಸುವುದು" ಎಂಬ ಮೂರು ಲೇಖನಗಳು ಅಪರಾಧಗಳಾಗಿದ್ದವು.

"ಈ ಆಪಾದನೆಗಳನ್ನು ಓದಿಬಿಟ್ಟರೆ ಸಾಲದು ಅವುಗಳನ್ನು ವಿವರಿಸಬೇಕೆಂದು ಕಾನೂನು ವಿಧಿಸುತ್ತದೆ. ಆದರೆ ಈ ಸಂದರ್ಭದಲ್ಲಿ ಹೆಚ್ಚೇನೂ ವಿವರಣೆ ಕೊಡುವ ಆವಶ್ಯಕತೆಯಿಲ್ಲ. ಈ ಆಪಾದನೆಗಳೆಲ್ಲವೂ ಒಂದೇ ರೀತಿಯವು. ಬ್ರಿಟಿಷ್ ಇಂಡಿಯಾದ ಕಾನೂನುಬದ್ಧ ಸಾರ್ವಭೌಮ ಸರ್ಕಾರದ ಬಗ್ಗೆ ಅವಿಶ್ವಾಸವನ್ನು ಪ್ರಚೋದಿಸುವ ಅಥವಾ ಪ್ರಚೋದಿಸಲು ಪ್ರಯತ್ನಿಸುವ, ಅದರ ಬಗ್ಗೆ ದ್ವೇಷ ಹುಟ್ಟಿಸುವ, ತಿರಸ್ಕಾರ ಹುಟ್ಟಿಸುವ, ಅಥವಾ ಹಾಗೆ ಪ್ರಯತ್ನಿಸುವ ಅಪರಾಧಕ್ಕೆ ಗುರಿಮಾಡಲಾಗಿದೆ." ಎಂದು ನ್ಯಾಯಾಧೀಶರು ತಿಳಿಸಿದರು. ಕಾನೂನಿನ ೧೨೪–ಎ ಸೆಕ್ಷನ್ನಿಗನುಗುಣವಾಗಿ ಇಬ್ಬರು ಅಪರಾಧಿಗಳ ಮೇಲೂ ಈ ಮೂರು ಲೇಖನಗಳಲ್ಲಿನ ಅಭಿಪ್ರಾಯಗಳಿಗಾಗಿ ಅಪರಾಧ ಹೊರಿಸಲಾಗಿದೆ. ಗಾಂಧಿಯವರು ಬರೆದು ಬ್ಯಾಂಕರರು ಅವುಗಳನ್ನು ಪ್ರಕಟಿಸಿದ್ದಾರೆ. ಆಪಾದನೆಗಳನ್ನು ಓದಿದ ನಂತರ ಆಪಾದಿತರು ಅವುಗಳ ಬಗ್ಗೆ ವಾದ

ಮಾಡುವಂತೆ ನ್ಯಾಯಾಧೀಶರು ಹೇಳಿದರು. ಗಾಂಧಿಯವರನ್ನು ಕುರಿತು "ಆಪಾದನೆಗಳನ್ನು ಒಪ್ಪಿ ತಪ್ಪಿತಸ್ಥರೆಂದು ಸಮ್ಮತಿಸುವಿರೋ, ವಿಚಾರಣೆ ಮಾಡಲು ಬೇಡುವಿರೋ" ಎಂದು ಕೇಳಿದರು.

ಉತ್ತರವೀಯುತ್ತಾ ಗಾಂಧೀಜಿ "ಎಲ್ಲ ಅಪರಾಧಗಳ ಆರೋಪಣೆಯನ್ನೂ ಒಪ್ಪಿಕೊಳ್ಳುತ್ತೇನೆ. ಆಪಾದನೆಗಳಲ್ಲಿ ಚಕ್ರವರ್ತಿಗಳ ಹೆಸರನ್ನು ಬಿಡಲಾಗಿದೆ. ಅದು ಸರಿ ಎಂದೇ ನನ್ನ ಮತ" ಎಂದರು. ಬ್ಯಾಂಕರರು ಅದೇ ರೀತಿ ತಪ್ಪೊಪ್ಪಿಕೊಂಡರು.

ತಪ್ಪೊಪ್ಪಿದೊಡನೆ ನ್ಯಾಯಾಧೀಶರು ಶಿಕ್ಷೆ ವಿಧಿಸುವ ತೀರ್ಪನ್ನು ಕೊಡಲನುವಾದರು. ಆದರೆ ಸರ್ ಸ್ಟ್ರ್ಯಾಂಗ್‌ಮನ್ನರು ವಿಚಾರಣೆಯ ಎಲ್ಲ ಕ್ರಮಗಳನ್ನೂ ಅನುಸರಿಸಬೇಕು ಎಂದರು. ಬೊಂಬಾಯಿ, ಮಲಬಾರ್ ಮತ್ತು ಚೌರಿ–ಚೌರಗಳಲ್ಲಾದ ಘಟನೆಗಳನ್ನು ಪರಿಣಾಮವಾಗಿ ನಡೆದ ದೊಂಬಿ ಕೊಲೆಗಳನ್ನೂ ಗಣನೆಗೆ ತೆಗೆದುಕೊಂಡು ತೀರ್ಪುಕೊಡಬೇಕೆಂದು ಸರ್ಕಾರೀ ಪ್ರಧಾನ ವಕೀಲರು ವಾದಿಸಿದರು. ಮುಂದುವರಿದು "ಈ ಲೇಖನಗಳಲ್ಲಿ ಅಹಿಂಸೆಯನ್ನು ಪ್ರಬಲವಾಗಿ ಪ್ರತಿಪಾದಿಸಲಾಗಿದೆ, ಅದನ್ನೇ ಮುಖ್ಯ ಧ್ಯೇಯ ಎಂದು ಹೇಳಲಾಗಿದೆ. ಆದರೆ ಅಹಿಂಸೆಯನ್ನು ಹೇಳಿ ಸತತವಾಗಿ ಸರ್ಕಾರದಲ್ಲಿ ಅವಿಶ್ವಾಸವನ್ನು ಪ್ರಚಾರ ಮಾಡುತ್ತಾ ಅಂಥ ವಿಶ್ವಾಸ ಘಾತಕ ಸರ್ಕಾರವನ್ನು ಪ್ರತಿಭಟಿಸಲು ಸೂಚಿಸಿದರೆ ಅದರಿಂದ ಏನು ಪ್ರಯೋಜನ? ಇತರರನ್ನೂ ಪ್ರೇರೇಪಿಸಿ ಸರ್ಕಾರವನ್ನು ಬುಡಮೇಲು ಮಾಡಲು ಬಹಿರಂಗವಾಗಿ ಉದ್ದೇಶಪೂರ್ವಕವಾಗಿ ಪ್ರಚೋದಿಸಿದರೆ ಅಹಿಂಸೆಯ ಫಲವಾದರೂ ಏನು?" ಈ ಕೆಲವು ವಿಷಯಗಳನ್ನು ಪರಿಗಣಿಸಿ ನ್ಯಾಯನಿರ್ಣಯ ಮಾಡಲು ಕೇಳಿದರು. ಶಂಕರಲಾಲ್ ಬ್ಯಾಂಕರರ ಅಪರಾಧ ಸ್ವಲ್ಪ ಹಗುರವಾದುದ್ದಾಗಿತ್ತು. ಅವರು ಪ್ರಕಾಶಕರು, ಬರಹಗಾರರಲ್ಲ. ಆದರೆ ಬ್ಯಾಂಕರರು ಶ್ರೀಮಂತರೆಂದೂ ಆದ್ದರಿಂದ ಅವರ ಮೇಲೆ ದೊಡ್ಡ ಜುಲ್ಮಾನೆಯನ್ನು ಸೆರೆಮನೆಯ ಶಿಕ್ಷೆಯೊಡನೆ ಸೇರಿಸಬೇಕೆಂದೂ ಸರ್ ಸ್ಟ್ರ್ಯಾಂಗ್‌ಮನ್ನರು ಕೋರ್ಟಿಗೆ ಸೂಚನೆಯಿತ್ತರು.

ಜಡ್ಜರು: ಗಾಂಧಿಯವರೆ, ತೀರ್ಪಿನ ಬಗ್ಗೆ ನೀವೇನಾದರೂ ಹೇಳಬಯಸುವಿರಾ?
ಗಾಂಧೀಜಿ: ಹೌದು ಹೇಳಬಯಸುತ್ತೇನೆ.
ಜಡ್ಜರು: ದಾಖಲೆ ಮಾಡಲನುಕೂಲವಾಗುವಂತೆ ಬರೆದು ಕೊಡುತ್ತೀರಾ?"
ಗಾಂಧೀಜಿ: ನಾನು ನನ್ನ ಹೇಳಿಕೆಯನ್ನು ಓದಿ ಮುಗಿಸಿದೊಡನೆ ಕೊಡುತ್ತೇನೆ.

ಹೇಳಿಕೆಯನ್ನು ಓದುವ ಮುನ್ನ ಪ್ರಸ್ತಾವನೆಯಾಗಿ ಗಾಂಧೀಜಿ ಕೆಲವು ಮಾತುಗಳನ್ನಾಡಿದರು :

"ನನ್ನ ಹೇಳಿಕೆಯನ್ನು ಓದುವುದಕ್ಕಿಂತ ಮುಂಚೆ ಮಾನ್ಯ ಮುಖ್ಯ ವಕೀಲರವರು ನನ್ನ ಬಗ್ಗೆ ಮಾಡಿದ ಟೀಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆಂದು ಹೇಳಲಿಚ್ಛಿಸುತ್ತೇನೆ. ಅವರಿತ್ತ ಹೇಳಿಕೆಗಳಲ್ಲೆಲ್ಲಾ ನನ್ನ ಬಗ್ಗೆ ಬಹಳ ನ್ಯಾಯೋಚಿತ

ವಾಗಿಯೇ ಉಲ್ಲೇಖಿಸಿದ್ದಾರೆ. ಈಗ ಪ್ರಚಲಿತವಾಗಿರುವ ಈ ಸರ್ಕಾರದ ವ್ಯವಸ್ಥೆಯ ಬಗ್ಗೆ ಅವಿಶ್ವಾಸವನ್ನು ಬೋಧಿಸುವುದು ನನಗೆ ಒಂದು ಉತ್ಕಟ ಆಕಾಂಕ್ಷೆಯೇ ಆಗಿಬಿಟ್ಟಿದೆ ಎಂಬುದು ಸತ್ಯವಾದ ಮಾತು. ಈ ನ್ಯಾಯಾಲಯದಿಂದ ಅದನ್ನು ಮರೆ ಮಾಚಲು ನನಗೆ ಕಿಂಚಿತೂ ಇಚ್ಛೆಯಿಲ್ಲ. ಈ ಅವಿಶ್ವಾಸ ಬೋಧನೆಯನ್ನು ಯಂಗ್–ಇಂಡಿಯಾದೊಡನೆ ನಾನು ಪ್ರಾರಂಭಿಸಲಿಲ್ಲ. ಮುಂಚೆಯೇ ಮಾಡುತ್ತಿದ್ದೆ ಎಂದು ಅಡ್ವೋಕೇಟ್ ಜನರಲ್ಲರು ಹೇಳಿರುವುದೂ ಸಂಪೂರ್ಣವಾಗಿ ನಿಜವಾದುದು. ಅವರು ಹೇಳಿರುವುದಕ್ಕಿಂತ ಮುಂಚೆಯೇ ಈ ನನ್ನ ಅಪರಾಧ ಪ್ರಾರಂಭವಾಗಿತ್ತೆಂದು ಈ ನ್ಯಾಯಾಲಯದ ಮುಂದೆ ಒಪ್ಪಿಕೊಳ್ಳುವುದು ನನ್ನ ಪಾಲಿನ ದುಃಖಪೂರ್ಣ ಕರ್ತವ್ಯ ವೆಂಬುದನ್ನು ನಾನೀಗ ನಿಮ್ಮ ಮುಂದಿಡುವ ಹೇಳಿಕೆಯಲ್ಲಿ ತಿಳಿಸುತ್ತಿದ್ದೇನೆ. ಈ ಕರ್ತವ್ಯಪಾಲನೆಯಲ್ಲಿ ನಾನು ಅತ್ಯಂತ ತೀವ್ರವಾದ ವೇದನೆಗೂ ಗುರಿಯಾಗಿದ್ದೇನೆ. ನನ್ನ ಜವಾಬ್ದಾರಿಯನ್ನರಿತು ಈ ಕರ್ತವ್ಯಪಾಲನೆ ಮಾಡಬೇಕಾಗಿದೆ. ಅಡ್ವೋಕೇಟ್ ಜನರಲ್ಲರು ನನ್ನ ಮೇಲೆ ಹೊರಿಸಿರುವ ಆಪಾದನೆಯಂತೆ ಬೊಂಬಾಯಿ, ಮದ್ರಾಸು ಮತ್ತು ಚೌರಿ–ಚೌರಾಗಳ ಘಟನೆಗಳಿಗೆಲ್ಲಕ್ಕೂ ನಾನೇ ಜವಾಬ್ದಾರನೆಂದೂ ಸಂಪೂರ್ಣ ವಾಗಿ ಒಪ್ಪಿಕೊಳ್ಳುತ್ತೇನೆ. ಚೌರಿ–ಚೌರಾದಲ್ಲಾದ ಅಮಾನುಷ ಕೃತ್ಯಗಳನ್ನೂ, ಬೊಂಬಾ ಯಿನ ಮತಿಗೆಟ್ಟ ದೌರ್ಜನ್ಯಗಳನ್ನೂ ಕುರಿತು ಆಳವಾಗಿ ಯೋಚಿಸಿದ್ದೇನೆ. ಯೋಚಿಸುತ್ತಲೇ ಅನೇಕ ರಾತ್ರಿಗಳು ಕಳೆದು ಹೋಗಿವೆ. ನಾನು ಈ ಘಟನೆಗಳ ನಿಕಟ ಬಾಂಧವ್ಯವನ್ನು ಹೇಗೆ ತಾನೆ ನಿರಾಕರಿಸಲಿ! ನನ್ನಂಥ ಜವಾಬ್ದಾರಿಯುತ ಮನುಷ್ಯ, ತಕ್ಕಮಟ್ಟಿಗೆ ವಿದ್ಯಾವಂತನೆನಿಸಿಕೊಂಡಿರುವವನು, ಪ್ರಪಂಚದ ಅನುಭವವೂ ಸಾಕಷ್ಟಿರುವವನೂ ನನ್ನ ಪ್ರತಿಯೊಂದು ಕಾರ್ಯದ ಪರಿಣಾಮವನ್ನು ಅರಿತಿರಬೇಕಾಗಿತ್ತೆಂದು ಅವರು ಹೇಳಿರುವುದು ಸಮಂಜಸವಾಗಿಯೇ ಇದೆ. ನನಗೆ ಅವು ಗೊತ್ತಿವೆ. ಬೆಂಕಿಯೊಡನೆ ಸರಸವಾಡುತ್ತಿದ್ದೇನೆಂದೂ ನಾನು ಅರಿತಿದ್ದೆ. ಅಪಾಯಕ್ಕೆ ಅರಿತೇ ತಲೆಯೊಡ್ಡಿದೆ. ಮತ್ತೆ ಬಿಡುಗಡೆಯಾದೊಡನೆ ಅದನ್ನೇ ಮಾಡುತ್ತೇನೆ. ಈ ಮಾತನ್ನು ಹೇಳದೆ ಹೋದರೆ ಕರ್ತವ್ಯಭ್ರಷ್ಟನಾಗುತ್ತೇನೆಂದು ಈ ಬೆಳಿಗ್ಗೆ ನನಗೆ ಅನಿಸಿತು.

"ಹಿಂಸೆಗೆ ಅವಕಾಶ ಕೊಡಬಾರದೆಂಬುದು ನನ್ನ ಇಚ್ಛೆಯಾಗಿತ್ತು. ಅಹಿಂಸೆ ನನ್ನ ಪ್ರಪ್ರಥಮ ಧರ್ಮಸಂಹಿತೆ. ನನ್ನ ನಂಬಿಕೆಯ ಕೊನೆಯ ವಾಕ್ಯವೂ ಅದೇ ಆಗಿದೆ. ಆದರೆ ನಾನೊಂದು ಸಂದಿಗ್ಧ ಪರಿಸ್ಥಿತಿಯಲ್ಲಿದ್ದೆ. ನನ್ನ ದೇಶಕ್ಕೆ ಭರಿಸಲಾರದ ಕೆಡುಕನ್ನು ಮಾಡಿರುವ ಈ ವ್ಯವಸ್ಥೆಗೆ ನಾನು ಮಣಿಯಬೇಕಾಗಿತ್ತು; ಇಲ್ಲವೇ ನನ್ನಿಂದ ಸತ್ಯ ವನ್ನರಿತ ನಮ್ಮ ಜನ ಹುಚ್ಚೆದ್ದು ಆಸ್ಫೋಟಿಸುವ ಅಪಾಯವನ್ನು ಎದುರಿಸಬೇಕಾಗಿತ್ತು. ಕೆಲವು ಸಾರಿ ನನ್ನ ಜನ ಮತಿಗೆಟ್ಟು ಹುಚ್ಚರಾಗಿದ್ದರೆಂಬುದನ್ನು ಬಲ್ಲೆ. ಅದಕ್ಕಾಗಿ ನಾನು ಪಶ್ಚಾತ್ತಾಪ ಪಡುವುದಷ್ಟೇ ಅಲ್ಲ ಪ್ರತಿಫಲವಾಗಿ ಅತ್ಯಂತ ಕಠಿಣಶಿಕ್ಷೆಗೆ ಸಿದ್ಧ ನಾಗಿದ್ದೇನೆ. ಕರುಣೆಯ ಭಿಕ್ಷೆಯನ್ನೆಂದಿಗೂ ಕೇಳಲಾರೆ. ತಪ್ಪನ್ನು ಗೌಣವಾಗೆಣಿಸ

ಬೇಕೆಂದು ನಾನು ವಾದಿಸುವುದೂ ಇಲ್ಲ. ಕಾನೂನು ಯಾವ ಶಾಸನಭಂಗವನ್ನು ಉದ್ದೇಶಪೂರ್ವಕ ಮಾಡಿದ ಘೋರ ಅಪರಾಧವೆಂದು ಭಾವಿಸುವುದೋ ಅದನ್ನು ನಾನು ನಾಗರಿಕನೊಬ್ಬನ ಅತ್ಯುನ್ನತ ಕರ್ತವ್ಯವೆಂದು ಭಾವಿಸಿದ್ದೇನೆ. ಆದ ಕಾರಣ ಆ ಅಪರಾಧಕ್ಕೆ ವಿಧಿಸುವ ಅತ್ಯಂತ ಕಠಿಣ ಶಿಕ್ಷೆಯನ್ನು ಸಂತೋಷದಿಂದ ಸ್ವಾಗತಿಸಿ ಅನುಭವಿಸಲೆಂದು ಇಲ್ಲಿ ನಿಂತಿದ್ದೇನೆ. ನ್ಯಾಯ ಪೀಠದಲ್ಲಿ ಕುಳಿತಿರುವ ನಿಮಗೆ ಬೇರಾವ ಮಾರ್ಗವೂ ಇಲ್ಲ. ನಿಮ್ಮ ನ್ಯಾಯನೀಡುವ ವ್ಯವಸ್ಥೆಯಲ್ಲಿ ನಿಮಗೆ ನಂಬಿಕೆಯಿದ್ದು ಅದರಿಂದ ಜನತೆಗೆ ಕಲ್ಯಾಣವಾಗುವುದೆಂದು ಭಾವಿಸಿದ್ದರೆ ಈ ಅಪರಾಧಕ್ಕೆ ಅತ್ಯಂತ ಕಠಿಣ ಶಿಕ್ಷೆಯನ್ನು ನನಗೆ ವಿಧಿಸಬೇಕು ಇಲ್ಲವೇ ನಿಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಈ ವ್ಯವಸ್ಥೆಯನ್ನು ಧಿಕ್ಕರಿಸಬೇಕು. ನಿಮ್ಮಲ್ಲಿ ಆ ರೀತಿಯ ಪರಿವರ್ತನೆಯನ್ನು ನಾನು ನಿರೀಕ್ಷಿಸುವುದಿಲ್ಲ. ನನ್ನ ಹೇಳಿಕೆಯನ್ನು ಓದಿ ಮುಗಿಸಿದ ಮೇಲೆ ನನ್ನ ಎದೆಯೊಳಗೆ ಎಂಥ ಬಡಬಾಗ್ನಿ ಜ್ವಲಿಸುತ್ತಿದೆಯೋ, ಯಾವುದರ ಪ್ರೇರಣೆಯಿಂದ ನಾನು ಈ ಅಪಾಯಕರ ಅವಿವೇಕವೆನಿಸುವ ಕಾರ್ಯಕ್ಕೆ ಕೈ ಹಾಕಿರುವೆನೋ ಅದರ ಮಿಂಚುನೋಟ ನಿಮ್ಮ ಅರಿವಿನೊಳಗೆ ಸುಳಿಯಬಹುದು."

ನಂತರ ಗಾಂಧೀಜಿ ತಮ್ಮ ಹೇಳಿಕೆಯನ್ನೋದಿದರು :

"ದೃಢವಾದ ರಾಜನಿಷ್ಠೆಯಿಂದ ಸರ್ಕಾರದೊಡನೆ ಸಹಕರಿಸುತ್ತಿದ್ದ ನಾನು ಏಕೆ ಹೀಗೆ ಯಾವುದಕ್ಕೂ ಸಗ್ಗದ ತೀವ್ರ ಅವಿಶ್ವಾಸವಾದಿಯಾದೆ. ಅಸಹಕಾರಕ್ಕೆ ಮೊದಲಿಟ್ಟೆ ಎಂಬುದನ್ನು ಭಾರತೀಯರಿಗೂ, ಇಂಗ್ಲಿಷರಿಗೂ ವಿವರಿಸಬೇಕಾದುದು ನನ್ನ ಕರ್ತವ್ಯ. ಇಂಗ್ಲೆಂಡ್ ಜನತೆಯನ್ನು ಸಮಾಧಾನ ಪಡಿಸುವುದಕ್ಕೋಸ್ಕರ ನನ್ನನ್ನು ನ್ಯಾಯಾಲಯಕ್ಕೆ ಗುರಿ ಮಾಡಲಾಗಿದೆ. ಭಾರತದಲ್ಲಿ ಕಾನೂನುಬದ್ಧವಾಗಿ ಸ್ಥಾಪಿತವಾಗಿರುವ ಸರ್ಕಾರದ ವಿರುದ್ಧ ಅವಿಶ್ವಾಸವನ್ನು ಪ್ರಚಾರ ಮಾಡಿ ಅಪರಾಧವನ್ನು ನಾನೇಕೆ ಒಪ್ಪಿಕೊಳ್ಳುತ್ತಿದ್ದೇನೆ ಎಂದು ನ್ಯಾಯಾಲಯಕ್ಕೂ ನಾನು ಹೇಳಬೇಕು.

"೧೮೯೩ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನನ್ನ ಸಾರ್ವಜನಿಕ ಜೀವನ ಸಂಘರ್ಷಣೆಯ ವಾತಾವರಣದಲ್ಲಿ ಪ್ರಾರಂಭವಾಯಿತು. ಆ ದೇಶದಲ್ಲಿ ಬ್ರಿಟಿಷ್ ಸರ್ವಾಧಿಕಾರ ದೊಡನೆ ನನ್ನ ಮೊದಲ ಸಮಾಗಮ ಅಷ್ಟೇನೂ ಸಂತೋಷದಾಯಕವಾಗಿರಲಿಲ್ಲ. ಮಾನವನಾಗಿ, ಭಾರತೀಯನಾಗಿ ನನಗೆ ಅಲ್ಲಿ ಯಾವ ಹಕ್ಕೂ ಇಲ್ಲದಿದ್ದುದು ನನಗೆ ಗೋಚರವಾಯಿತು. ಭಾರತೀಯನಾದುದರಿಂದಲೇ ಮಾನವನಿಗೆ ಸಹಜವಾದ ಹಕ್ಕೂ ಕೂಡ ನನಗಿಲ್ಲವಾಯಿತು ಎನ್ನುವುದು ಹೆಚ್ಚು ಸತ್ಯವಾದ ಮಾತು.

"ಇದರಿಂದ ನಾನು ಅಧೀರನಾಗಲಿಲ್ಲ. ಅಂತರ್ಯದಲ್ಲಿ ಮೂಲಭೂತವಾಗಿ ಒಳ್ಳೆಯದೇ ಆಗಿರುವ ವ್ಯವಸ್ಥೆಯಲ್ಲಿ ಈ ರೀತಿ ಭಾರತೀಯರಿಗೆ ಆಗಿರುವ ಅನ್ಯಾಯ ಯಾವುದೋ ಮಲಿನತೆ ಮಾತ್ರ ಎಂದೆನಿಸಿತು. ಸ್ವಯಂಪ್ರೇರಿತನಾಗಿ ಹೃತ್ಪೂರ್ವಕ

ವಾಗಿ ಸರ್ಕಾರದೊಡನೆ ಸಹಕರಿಸುತ್ತಾ ಎಲ್ಲಿ ದೋಷವಿತ್ತೋ ಅಲ್ಲಿ ಪ್ರತಿಭಟಿಸುತ್ತಿದ್ದೆ. ಸರ್ಕಾರದ ಪದಚ್ಯುತಿಯನ್ನು ನಾನಾಗ ಬಯಸಿರಲಿಲ್ಲ.

"೧೮೯೯ರಲ್ಲಿ ಬೋಯರ್ ಯುದ್ಧವಾದಾಗ ಸಾಮ್ರಾಜ್ಯಸರ್ಕಾರದ ಅಸ್ತಿತ್ವಕ್ಕೇ ಅಪಾಯ ಒದಗಿತು. ಆ ಸಮಯಕ್ಕೆ ನನ್ನ ಸೇವೆಯನ್ನು ಸರ್ಕಾರಕ್ಕೆ ಮುಡಿಪಾಗಿಟ್ಟೆ. ಗಾಯಾಳುಗಳ ಚಿಕಿತ್ಸೆಗಾಗಿ ಸ್ವಯಂಸೇವಕ ಪಡೆಯೊಂದನ್ನು ಆಗ ವ್ಯವಸ್ಥೆ ಮಾಡಿದೆ. ಲೇಡಿಸ್ಮಿತ್ ಎಂಬಲ್ಲಿ ನಡೆದ ಸಂಘರ್ಷಣೆಗಳಲ್ಲಿ ಅನೇಕ ಬಾರಿ ಸೇವೆಯನ್ನು ಸಲ್ಲಿಸಿದೆ. ಹಾಗೆಯೇ ೧೯೦೬ರಲ್ಲಿ ಝುಲು ದಂಗೆಯಾಯಿತು. ಅದು ಮುಗಿಯುವವರೆಗೂ ಗಾಯಗೊಂಡವರನ್ನು ಸಾಗಿಸುವ ಪಡೆಯೊಂದನ್ನು ನಿರ್ಮಿಸಿ ಕೆಲಸಮಾಡಿದೆ. ಈ ಎರಡು ಸಂದರ್ಭಗಳಲ್ಲೂ ನನಗೆ ಚಿನ್ನದ ಪದಕದ ಪ್ರಶಸ್ತಿ ದೊರೆಯಿತು. ನನ್ನ ಹೆಸರೂ ಪ್ರಕಟವಾಗುತ್ತಿತ್ತು. ಲಾರ್ಡ್‌ಹಾರ್ಡಿಂಜರು ದಕ್ಷಿಣಆಫ್ರಿಕದಲ್ಲಿನ ನನ್ನ ಸೇವೆಯನ್ನು ಮೆಚ್ಚಿ ಕೈಸರ್-ಇ-ಹಿಂದ್ ಸ್ವರ್ಣ ಪದಕವನ್ನು ಕೊಟ್ಟರು. ಇಂಗ್ಲೆಂಡ್ ಮತ್ತು ಜರ್ಮನಿಗೆ ೧೯೧೪ರಲ್ಲಿ ಮಹಾಯುದ್ಧ ಸಂಭವಿಸಿದಾಗ ಲಂಡನ್ನಿನಲ್ಲಿ ಪ್ರಥಮ ಚಿಕಿತ್ಸೆಯ ಸ್ವಯಂಸೇವಾ ದಳವನ್ನು ರಚಿಸಿದೆ. ಆಗ ಲಂಡನ್ನಿನಲ್ಲಿದ್ದ ಭಾರತೀಯರು ಹೆಚ್ಚಾಗಿ ವಿದ್ಯಾರ್ಥಿಗಳು, ಈ ಪಡೆಗೆ ಸೇರಿದ್ದರು. ಅಧಿಕಾರಿಗಳು ಈ ಪಡೆಯ ಕಾರ್ಯ ವನ್ನು ಬಹುವಾಗಿ ಮೆಚ್ಚಿಕೊಂಡರು. ಕೊನೆಯದಾಗಿ ೧೯೧೮ರ ಯುದ್ಧಸಮ್ಮೇಳನ ದಲ್ಲಿ ಲಾರ್ಡ್ ಚೆಲ್ಮ್ಸ್‌ಫರ್ಡರು ಭಾರತದಲ್ಲಿ ಸೈನಿಕರ ಸೇರ್ಪಡೆಗೆ ಕರೆಯಿತ್ತಾಗ ನಾನದರಲ್ಲಿ ಆರೋಗ್ಯವನ್ನೂ ಲೆಕ್ಕಿಸದೆ ಕೆಲಸಮಾಡಿದೆ. ಖೇಡಾ ಜಿಲ್ಲೆಯಲ್ಲಿ ಸುತ್ತಾಡಿ ಸೈನ್ಯಕ್ಕೆ ಜನರನ್ನು ಸೇರಿಸಿದೆ. ಅಷ್ಟರಲ್ಲಿ ಯುದ್ಧ ನಿಂತಿತು. ಹೊಸ ಸೈನಿಕ ಜಮಾವಣೆ ಬೇಡವೆಂದು ಅಪ್ಪಣೆ ಮಾಡಲಾಯಿತು. ಈ ಎಲ್ಲ ಸೇವಾಕಾರ್ಯಗಳನ್ನು ಮಾಡು ವಾಗಲು ನನ್ನ ಅಭಿಲಾಷೆ ಒಂದೇ ಆಗಿತ್ತು. ಸೇವೆ ಮಾಡುತ್ತಾ ಹೋದಂತೆ ನನ್ನ ದೇಶ ಬಾಂಧವರಿಗೆ ಈ ಚಕ್ರಾಧಿಪತ್ಯದಲ್ಲಿ ಸಂಪೂರ್ಣ ಸಮಾನತೆಯ ಸ್ಥಾನ ದೊರಕು ವುದೆಂಬ ಅದಮ್ಯ ನಂಬಿಕೆ.

"ರೌಲತ್ ಕಾಯಿದೆ ಮೊದಲ ಸಿಡಿಲಿನಂತೆ ಬಂದೆರಗಿ ನನ್ನ ನಂಬಿಕೆಗೆ ಆಘಾತ ವಾಯಿತು. ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಸಿದುಕೊಳ್ಳುವ ಕಾಯಿದೆ ಅದು. ಅದನ್ನು ವಿರೋಧಿಸಿ ಪ್ರಬಲವಾದ ಚಳುವಳಿ ಮಾಡುವ ಪ್ರೇರಣೆಯಾಯಿತು. ಅದರ ಹಿಂದೆಯೇ ಪಂಜಾಬಿನ ಘೋರ ಪ್ರಕಟನೆಗಳಾದವು. ಜಲಿಯನ್‌ವಾಲಾ ಬಾಗ್ ಕಗ್ಗೊಲೆಯಿಂದ ಪ್ರಾರಂಭವಾಗಿ ಹೀನವಾದ ತೆವಳುವ ಆಜ್ಞೆಗಳು, ಬಹಿರಂಗ ಛಡಿ ಶಿಕ್ಷೆ, ಮತ್ತಿತರ ಅವರ್ಣನೀಯ ಅವಮಾನಗಳಲ್ಲಿ ಪರ್ಯವಸಾನವಾಯಿತು. ಹಾಗೆಯೆ ಬ್ರಿಟಿಷ್ ಪ್ರಧಾನಿ ಭಾರತೀಯ ಮುಸಲ್ಮಾನರಿಗೆ ವಾಗ್ದಾನ ಮಾಡಿ ತುರ್ಕಿಸ್ಥಾನದ ಸಮಗ್ರತೆಯನ್ನುಳಿಸಲೂ, ಇಸ್ಲಾಮಿನ ಪವಿತ್ರ ಕ್ಷೇತ್ರಗಳನ್ನುಳಿಸಲೂ ಹಿಂತೆಗೆದು ವಚನಭ್ರಷ್ಟರಾದುದು ನನಗೆ ಗೊತ್ತಾಯಿತು. ಅಮೃತಸರದ ೧೯೧೯ರ ಕಾಂಗ್ರೆಸ್

ಅಧಿವೇಶನದಲ್ಲಿ ಸ್ನೇಹಿತರು ಎಚ್ಚರಿಸಿದರೂ ನಾನು ಸರ್ಕಾರದೊಡನೆ ಸಹಕರಿಸಬೇಕೆಂದೇ ವಾದಿಸಿದೆ. ಮಾಂಟಿಗೋ–ಚೆಲ್ಮ್ಸ್‌ಫರ್ಡ್ ಸುಧಾರಣೆಗಳ ಪ್ರಯೋಗ ಮಾಡಬೇಕೆಂದು ಹೇಳಿದೆ. ಬ್ರಿಟಿಷ್ ಪ್ರಧಾನಿ ಭಾರತೀಯ ಮುಸಲ್ಮಾನರಿಗಿತ್ತ ವಚನ ಪಾಲಿಸುವರೆಂದೂ, ಪಂಜಾಬದ ಘೋರ ಅಕೃತ್ಯಗಳಿಗೆ ಸಾಂತ್ವನ ನೀಡಲಾಗುವುದೆಂದೂ, ಸುಧಾರಣೆಗಳು ಎಷ್ಟೇ ಅತೃಪ್ತಿಕರವಾದರೂ ಅಸಮರ್ಪಕವಾದರೂ ಭಾರತೀಯ ಜೀವನದಲ್ಲಿ ಹೊಸ ಅಧ್ಯಾಯದ ಪ್ರಾರಂಭವಾಗಬಹುದೆಂದೂ ನಾನು ಆಸೆಯಿಟ್ಟುಕೊಂಡಿದ್ದೆ.

"ಈ ಎಲ್ಲ ಆಕಾಂಕ್ಷೆಗಳೂ ನುಚ್ಚು ನೂರಾದವು. ಖಿಲಾಫತ್ ವಾಗ್ದಾನವನ್ನು ಮುರಿಯಲಾಯಿತು. ಪಂಜಾಬಿನ ಘೋರ ಅಕೃತ್ಯಗಳ ಬಗ್ಗೆ ತಿಪ್ಪೆ ಸಾರಿಸಿ ಬಿಟ್ಟರು. ಅಪರಾಧಿಗಳೆಲ್ಲ ಶಿಕ್ಷೆ ತಪ್ಪಿಸಿಕೊಂಡರು. ತಮ್ಮ ಸ್ಥಾನಗಳಲ್ಲಿ ಮುಂದುವರೆದು ಕೆಲವರಿಗೆ ಭಾರತದ ಬೊಕ್ಕಸದಿಂದಲೇ ವಿಶ್ರಾಂತಿ ವೇತನ ಸಿಕ್ಕಿತು. ಅಷ್ಟೇ ಅಲ್ಲದೆ ಕೆಲವರಿಗೆ ಬಹುಮಾನಗಳೂ ಬಂದವು. ಸುಧಾರಣೆಗಳಲ್ಲಿ ಯಾರ ಹೃದಯ ಪರಿವರ್ತನೆಯ ಚಿಹ್ನೆಯೂ ಕಾಣಲಿಲ್ಲ. ಅದರ ಬದಲು ಭಾರತದ ಸಂಪತ್ತನ್ನೆಲ್ಲಾ ಮತ್ತಷ್ಟು ಹೀರುವ, ದಾಸ್ಯವನ್ನು ಇನ್ನೂ ಮುಂದುವರಿಸುವ ಕುಹಕ ಉದ್ದೇಶವೇ ಅವುಗಳಲ್ಲಿತ್ತು.

"ಆರ್ಥಿಕವಾಗಿ, ರಾಜಕೀಯವಾಗಿ ಭಾರತವನ್ನು ನಿಸ್ತೇಜ ಮಾಡಿ ಹಿಂದೆಂದೂ ಇಲ್ಲದಷ್ಟು ನಿಸ್ಸಹಾಯಕತೆಗೆ ನೂಕಿತು ಬ್ರಿಟಿಷ್ ಆಡಳಿತ. ನನ್ನ ಇಚ್ಛೆಗೆ ವಿರೋಧವಾಗಿ ನನ್ನಲ್ಲಿ ಈ ಅಭಿಪ್ರಾಯ ದೃಢಪಟ್ಟಿತು. ಆಕ್ರಮಣಕಾರನ ದಬ್ಬಾಳಿಕೆಗೆ ಪ್ರತಿಯಾಗಿ ಸಶಸ್ತ್ರ ಹೋರಾಟ ನಡೆಸಲು ನಿಶ್ಶಸ್ತ್ರ ಭಾರತಕ್ಕೆ ಪ್ರತಿಭಟನಾಶಕ್ತಿಯೇ ಇಲ್ಲ. ಈ ಸ್ಥಿತಿಯನ್ನು ಕಂಡ ನಮ್ಮಲ್ಲಿ ಕೆಲವು ಶ್ರೇಷ್ಠ ಭಾರತೀಯರೂ ನಮ್ಮ ದೇಶ ಸ್ವಯಮಾಡಳಿತ ಮಟ್ಟಕ್ಕೆ ಬರಲು ಇನ್ನೂ ಹಲವಾರು ತಲೆಮಾರುಗಳು ಕಳೆಯಬೇಕೆನ್ನುತ್ತಾರೆ. ಕಡುಬಡತನದಲ್ಲಿ ಬಿದ್ದ ದೇಶ, ಕ್ಷಾಮ ಡಾಮರಗಳನ್ನೆದುರಿಸಲೂ ಕೂಡ ನಿಶ್ಶಕ್ತವಾಗಿದೆ. ಬ್ರಿಟಿಷರು ಇಲ್ಲಿ ಕಾಲಿಡುವ ಮುನ್ನ ನಮ್ಮ ದೇಶದ ಕೋಟ್ಯಂತರ ಕುಟೀರಗಳಲ್ಲಿ ಕೈನೂಲು, ಕೈಮಗ್ಗದ ಬಟ್ಟೆ ಉತ್ಪಾದನೆ ಆಗುತ್ತಿತ್ತು. ಅಲ್ಪವಾದ ವ್ಯವಸಾಯೋತ್ಪನ್ನಕ್ಕೆ ಈ ಉದ್ಯಮ ಹೆಚ್ಚು ಕೂಡಿಸುತ್ತಿತ್ತು. ನಮ್ಮ ಜೀವನಕ್ಕೆ ಜೀವಾಳವಾಗಿದ್ದ ಈ ಗೃಹಕೈಗಾರಿಕೆಯನ್ನು ಊಹಿಸಲಸಾಧ್ಯವಾದ ಉದ್ದೇಶಪೂರ್ವಕ ನಿಷ್ಕರುಣೆಯಿಂದ ನಾಶಮಾಡಲಾಯಿತು. ಬ್ರಿಟಿಷರೇ ಈ ಬಗ್ಗೆ ವರ್ಣಿಸಿದ್ದಾರೆ. ಅರೆಹೊಟ್ಟೆಯ ಭಾರತದ ಜನಕೋಟಿ ದಿನ ದಿನವೂ ಹೇಗೆ ನಿರ್ಜೀವವಾಗುತ್ತಿದೆ ಎಂಬುದನ್ನು ನಮ್ಮ ನಗರವಾಸಿಗಳು ಅರಿಯರು. ವಿದೇಶಿ ಶೋಷಕರ ದಳ್ಳಾಳಿಗಳಾಗಿ ನಾಲ್ಕು ಕಾಸು ಗಳಿಸಿ ತಮ್ಮ ಅಸಹ್ಯ ಭೋಗ ನಡೆದಿದೆಯೆಂದೂ ಅವರಿಗೆ ಗೋಚರಿಸದು. ಈ ದಳ್ಳಾಳಿ ಹಣ ನಮ್ಮ ಜನಕೋಟಿಯ ರಕ್ತ ಹೀರಿ ಬಂದ ದುರ್ಲಾಭ. ಚಾಣಾಕ್ಷತೆಯ ಮಾತುಗಳಿಂದಾಗಲಿ, ಅಂಕಿ ಅಂಶಗಳ ಸರ್ಕಸ್ಸಿನಿಂದಾಗಲಿ ಹಳ್ಳಿಗಳಲ್ಲಿನ ದಾರಿದ್ರ್ಯದ ನಗ್ನಸತ್ಯಕ್ಕೆ ಸಾಕ್ಷಿಯಾಗಿರುವ ಅಸ್ಥಿಪಂಜರಗಳ ದೃಶ್ಯವನ್ನಳಿಸ

ಲಾಗದು. ಕಾನೂನು ಬದ್ಧವಾಗಿ ಭಾರತದಲ್ಲಿ ಸ್ಥಾಪಿಸಲಾಗಿರುವ ಬ್ರಿಟಿಷ್ ಆಡಳಿತ ಜನಕೋಟಿಯ ಶೋಷಣೆಗಾಗಿಯೇ ನಿರ್ಮಿತವಾಗಿದೆ ಎಂದು ಪಟ್ಟಣಿಗರಿಗೆ ಅರ್ಥವಾಗುವುದಿಲ್ಲ. ಇತಿಹಾಸದಲ್ಲೆಲ್ಲೂ ಕಂಡರಿಯದ ಈ ಮಾನವ ದ್ರೋಹದ ಪಾತಕಕ್ಕಾಗಿ ಜಗನ್ನಿಯಾಮಕನೆದುರು ಒಂದಲ್ಲ ಒಂದು ದಿನ ಇಂಗ್ಲೆಂಡ್ ದೇಶವೂ ನಮ್ಮ ಪಟ್ಟಣವಾಸಿಗಳೂ ಉತ್ತರಿಸಬೇಕಾದೀತೆಂಬುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಪರದೇಶದ ಶೋಷಕನಿಗೆ ಅನುಕೂಲವಾಗಬೇಕೆಂದು ಈ ದೇಶದ ಕಾನೂನು ಕಟ್ಟಳೆಗಳು ರೂಪಿತವಾಗಿವೆ. ಪಂಜಾಬಿನ ಸೈನ್ಯಕಾಯಿದೆ ಪ್ರಕರಣದಲ್ಲಿ ನಾನು ನಿಷ್ಪಾಕ್ಷಿಕವಾಗಿ ವಿಚಾರಣೆ ಮಾಡಿದಾಗ ಶೇಕಡ ೯೫ರಷ್ಟು ಶಿಕ್ಷೆಗಳಲ್ಲಿ ಅನ್ಯಾಯವಾಗಿರುವುದು ಕಂಡಿತು. ಭಾರತದಲ್ಲಿ ನಡೆಯುತ್ತಿರುವ ರಾಜಕೀಯ ಕಟ್ಟಳೆಗಳಲ್ಲಿ ನೂರಕ್ಕೆ ತೊಂಬತ್ತು ನಿರಪರಾಧಿಗಳಿಗೆ ಶಿಕ್ಷೆಯಾಗುತ್ತಿದೆ. ಇದು ನನ್ನ ಅನುಭವದಿಂದಲೆ ಸಿದ್ಧವಾದ ಮಾತು. ದೇಶಭಕ್ತಿಯೇ ಅವರ ಅಪರಾಧ. ಭಾರತದ ನ್ಯಾಯಾಲಯಗಳಲ್ಲಿ ಯೂರೋಪಿಯನ್ನರ ವಿರೋಧವಾಗಿ ಭಾರತೀಯರು ಮಾಡಿದ ಕಟ್ಟಳೆಗಳಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಪಾಲು ಭಾರತೀಯರಿಗೆ ಅನ್ಯಾಯವಾಗಿದೆ. ನಾನೇನೂ ಉತ್ಪ್ರೇಕ್ಷೆ ಮಾಡುತ್ತಿಲ್ಲ. ಇಂಥ ನ್ಯಾಯಾಲಯಗಳ ಪರಿಚಯವಿರುವ ಎಲ್ಲ ಭಾರತೀಯರದೂ ಇದೇ ಅನುಭವ. ನ್ಯಾಯ ನಿರ್ಣಯ ಅತ್ಯಾಚಾರ ಭ್ರಷ್ಟತೆಯ ಅಧೋಗತಿಗಿಳಿದು ತಿಳಿದೋ ತಿಳಿಯದೆಯೋ ಶೋಷಕವರ್ಗಕ್ಕೆ ಅನುಕೂಲವಾಗಿ ಪರಿಣಮಿಸಿದೆ.

"ಇಂಗ್ಲಿಷರೂ ಮತ್ತು ಆಡಳಿತ ಕ್ರಮದಲ್ಲಿ ಅವರ ಸಹಕಾರಿಗಳಾದ ಭಾರತೀಯರು ಈ ಪಾತಕದಲ್ಲಿ ಭಾಗಿಗಳೆಂಬುದನ್ನು ತಿಳಿಯದಿರುವುದು ಮತ್ತೂ ದಾರುಣ ದೌರ್ಭಾಗ್ಯ. ಹಲವು ಇಂಗ್ಲಿಷರೂ ಭಾರತೀಯ ಅಧಿಕಾರಿಗಳೂ ತಮ್ಮ ಆಡಳಿತ ವ್ಯವಸ್ಥೆ ಜಗತ್ತಿನಲ್ಲೇ ಅತ್ಯುತ್ಕೃಷ್ಟವಾದುದೆಂದೂ ಅದರಿಂದ ನಿಧಾನವಾದರೂ ಪ್ರಗತಿ ಮಾರ್ಗದಲ್ಲಿ ಭಾರತ ಸಾಗುತ್ತಿದೆಯೆಂದೂ ಪ್ರಾಮಾಣಿಕವಾಗಿ ನಂಬಿದ್ದಾರೆಂದು ನನಗೆ ಗೊತ್ತಿದೆ. ದಕ್ಷವಾದ ಸೂಕ್ಷ್ಮರೀತಿಯ ಒಂದು ಭಯೋತ್ಪಾದಕ ವ್ಯವಸೆ ಮತ್ತು ಚೆನ್ನಾಗಿ ಕ್ರಮಗೊಳಿಸಿದ ದಬ್ಬಾಳಿಕೆಯ ಪ್ರದರ್ಶನ ಒಂದು ಕಡೆ; ಆತ್ಮರಕ್ಷಣೆ ಸಾಧ್ಯವಿಲ್ಲದಂತೆ ಪ್ರತಿಭಟನಾ ಸಾಮರ್ಥ್ಯವನ್ನೇ ನಾಶಮಾಡಿರುವುದು ಮತ್ತೊಂದು ಕಡೆ; ಇವು ಜನತೆಯನ್ನು ನಿರ್ವೀರ್ಯಗೊಳಿಸಿ ಅವರ ಅಂಧಾನುಕರಣೆಯ ಅಧಃಪತನಕ್ಕೆ ಕಾರಣವಾಗಿರುವುದನ್ನು ಇವರು ಗಮನಿಸುವುದೇ ಇಲ್ಲ. ಈ ದುರಭ್ಯಾಸ ಆಡಳಿತಗಾರರ ಅಜ್ಞಾನ ಆತ್ಮವಂಚನೆಗಳಿಗೆ ಅವಕಾಶಮಾಡಿದೆ. ನಾಗರಿಕ ಹಕ್ಕುಗಳನ್ನು ಕಸಿದುಕೊಳ್ಳುವುದಕ್ಕಾಗಿಯೇ ರೂಪಿತವಾಗಿರುವ ಕಾಯಿದೆಗಳ ಜಾಲದಲ್ಲಿ ಇಂಡಿಯನ್ ಪೀನಲ್ ಕೋಡಿನ ೧೨೪–ಎ ಸೆಕ್ಷನ್ ಬಹುಶಃ ಅತ್ಯಂತ ಪ್ರಬಲ. ಅಂಥ ಕಾನೂನುಗಳ ರಾಜ ಅದು. ನಾನು ದಸ್ತಗಿರಿಯಾದುದು ಅದರ ವ್ಯಾಪ್ತಿಯಲ್ಲಿ. ಕಾನೂನಿನಿಂದ ವಿಶ್ವಾಸವನ್ನು ಉತ್ಪಾದನೆ ಮಾಡುವುದಾಗಲಿ, ನಿಯಂತ್ರಿಸುವುದಾಗಲಿ ಸಾಧ್ಯವಿಲ್ಲ. ವ್ಯಕ್ತಿಯಲ್ಲಾಗಲಿ, ಸಂಸ್ಥೆಯಲ್ಲಾಗಲಿ ಯಾರಿಗಾದರೂ ವಿಶ್ವಾಸವಿಲ್ಲದೇ ಹೋದಲ್ಲಿ ಅದನ್ನು

ಮುಕ್ತವಾಗಿ ಪ್ರಕಟಿಸಲು ಅವಕಾಶವಿರಲೇಬೇಕು. ಹಾಗೆ ಮಾಡುವಾಗ ಹಿಂಸಾಚಾರ ವನ್ನು ಪ್ರಚೋದಿಸುವುದಾಗಲಿ, ಪ್ರಸಾರ ಮಾಡುವುದಾಗಲಿ, ಉದ್ದೇಶಿಸುವುದಾಗಲಿ ಕೂಡದು ಅಷ್ಟೆ. ಆದರೆ ಯಾವ ಸೆಕ್ಷನ್ನಿನ ಪ್ರಕಾರವಾಗಿ ನನ್ನನ್ನೂ, ಬ್ಯಾಂಕರರನ್ನೂ ವಿಚಾರಣೆಗೆ ಗುರಿಮಾಡಿದರೂ ಅದರಲ್ಲಿ ಅವಿಶ್ವಾಸದ ಪ್ರಚಾರ ಮಾಡಿದರೂ ಸಾಕು. ಶಿಕ್ಷೆಗೆ ಗುರಿ ಮಾಡಬಹುದು. ಈ ಕಾನೂನಿನ ಪ್ರಕಾರ ವಿಚಾರಣೆ ನಡೆದ ಹಲವು ಮೊಕದ್ದಮೆಗಳನ್ನು ನಾನು ಬಲ್ಲೆ. ಭಾರತೀಯ ದೇಶಭಕ್ತರಲ್ಲಿ ಅತ್ಯಂತ ಆದರಣೀಯ ರಾದ ಹಲವರು ಈ ಕಾನೂನಿನಡಿಯಲ್ಲಿ ಶಿಕ್ಷೆಗೆ ಗುರಿಯಾಗಿದ್ದಾರೆ. ಆದ್ದರಿಂದ ಅದೇ ಸೆಕ್ಷನ್ನಿನ ಅನ್ವಯದಂತೆ ನಾನೂ ಅಪರಾಧಿಯಾದುದು ನನಗೊಂದು ಭಾಗ್ಯ. ನನ್ನ ಅವಿಶ್ವಾಸಕ್ಕೆ ಕಾರಣಗಳನ್ನು ಸಂಕ್ಷಿಪ್ತವಾಗಿ ಬಣ್ಣಿಸಿದ್ದೇನೆ. ಯಾರೊಬ್ಬ ಉನ್ನತಾಧಿ ಕಾರಿಯ ಮೇಲೂ ನನಗೆ ವ್ಯಯಕ್ತಿಕ ದ್ವೇಷವಿಲ್ಲ. ಬ್ರಿಟಿಷ್ ರಾಜರ ಬಗ್ಗೆ ದ್ವೇಷ ಇರುವ ಕಾರಣವಂತೂ ಇಲ್ಲವೇ ಇಲ್ಲ. ಹಿಂದಿನ ಎಲ್ಲ ಆಡಳಿತ ವ್ಯವಸ್ಥೆಗಿಂತಲೂ ಒಟ್ಟಿನಲ್ಲಿ ಅತ್ಯಂತ ಕೆಡುಕನ್ನುಂಟು ಮಾಡಿರುವ ಈಗಿನ ಸರ್ಕಾರ ಪದ್ಧತಿಯನ್ನು ಅವಿಶ್ವಾಸದಿಂದ ತಿರಸ್ಕರಿಸುವುದು ಉತ್ತಮ ಗುಣವೆಂದು ನನ್ನ ಮತ. ಬ್ರಿಟಿಷರ ಆಳ್ವಿಕೆಯಡಿಯಲ್ಲಿ ಹಿಂದೆಂದಿಗಿಂತಲೂ ಭಾರತ ನಿರ್ವೀರ್ಯವಾಗಿ ಬಿಟ್ಟಿದೆ. ಅಂಥ ವ್ಯವಸ್ಥೆಯಲ್ಲಿ ವಿಶ್ವಾಸವಿಡುವುದು ಒಂದು ಹೀನ ಪಾತಕ. ಆದ್ದರಿಂದ ನನ್ನ ಅಪರಾಧ ವನ್ನು ಸಿದ್ಧ ಮಾಡಲು ಯಾವ ಲೇಖನಗಳನ್ನು ಉಲ್ಲೇಖಿಸಲಾಗಿದೆಯೋ ಅದನ್ನು ಬರೆದು ಪ್ರಕಟಿಸಲು ಅವಕಾಶ ಸಿಕ್ಕಿದುದು ಒಂದು ಭಾಗ್ಯವೆಂದು ಎಣಿಸುತ್ತೇನೆ.

" ಇಂಗ್ಲೆಂಡ್ ಮತ್ತು ಭಾರತ ಎರಡೂ ಯಾವ ಅಸಹಜ ಬಾಂಧವ್ಯದಲ್ಲಿ ತೊಳಲು ತ್ತಿವೆಯೋ ಅದರಿಂದ ಪಾರಾಗಲು ಅಸಹಕಾರ ಚಳುವಳಿಯ ಮಾರ್ಗವನ್ನು ತೋರಿಸಿ ಎರಡು ದೇಶಗಳಿಗೂ ವಾಸ್ತವವಾಗಿ ಉಪಕಾರ ಮಾಡಿದ್ದೇನೆಂದು ನನ್ನ ನಂಬಿಕೆ. ಪುಣ್ಯದೊಡನೆ ಸಹಕರಿಸುವುದು ಹೇಗೆ ಕರ್ತವ್ಯವೋ ಹಾಗೆಯೇ ಪಾಪದೊಡನೆ ಅಸಹಕರಿಸುವುದೂ ಕರ್ತವ್ಯ ಎಂಬುದು ನನ್ನ ನಮ್ರ ಅಭಿಪ್ರಾಯ. ಆದರೆ ಈ ಹಿಂದೆ ಪಾಪವೆಸಗಿದವರ ಮೇಲೆ ಕ್ರೂರ ಹಿಂಸೆಯ ಪ್ರತೀಕಾರ ರೂಪವನ್ನು ತಾಳುವುದು ಅಸಹಕಾರದ ರೀತಿಯಾಗಿತ್ತು. ಹಿಂಸಾತ್ಮಕ ಅಸಹಕಾರ, ಪಾಪಕೃತ್ಯಗಳನ್ನು ಇಮ್ಮಡಿ ಸುತ್ತದೆ. ಅಕೃತ್ಯಕ್ಕೆ ಹಿಂಸೆ ಆಧಾರವಾಗಿ ನಿಲ್ಲುವುದರಿಂದ, ಅಕೃತ್ಯವನ್ನು ತೊಡೆದು ಹಾಕಲು ಹಿಂಸೆಯನ್ನು ಪೂರ್ಣವಾಗಿ ವರ್ಜಿಸುವುದು ಅತ್ಯಾವಶ್ಯಕ. ಈ ಅಂಶವನ್ನು ನನ್ನ ದೇಶಬಾಂಧವರಿಗೆ ಮನದಟ್ಟು ಮಾಡಿಕೊಡಲು ನಾನು ಶ್ರಮಿಸಿದ್ದೇನೆ. ಅಕೃತ್ಯ ದೊಡನೆ ಅಸಹಕರಿಸಿದಾಗ ಶಿಕ್ಷೆಗೆ ಗುರಿಯಾಗ ಬೇಕಾದಲ್ಲಿ ಸ್ವಯಂ ಪ್ರೇರಿತವಾಗಿ ಅದನ್ನು ಸ್ವಾಗತಿಸುವುದೇ ಅಹಿಂಸೆ. ಆದ್ದರಿಂದ ಯಾವ ಕೃತ್ಯಗಳನ್ನು ಕಾನೂನಿನ ದೃಷ್ಟಿಯಿಂದ ನೀವು ಅಪರಾಧ ಎನ್ನುತ್ತೀರೋ, ನನ್ನ ದೃಷ್ಟಿಯಲ್ಲಿ ಯಾವುದು ನಾಗರಿಕನೊಬ್ಬನ ಆದ್ಯಕರ್ತವ್ಯವೋ, ಅಂಥ ಕೃತ್ಯಕ್ಕೆ ನೀವು ಅತ್ಯಂತ ಕಠಿಣ ಶಿಕ್ಷೆಯನ್ನೇ

ವಿಧಿಸಬೇಕೆಂದು ಸಂತೋಷದಿಂದ ಕೇಳಿಕೊಳ್ಳುತ್ತೇನೆ. ನ್ಯಾಯಾಧೀಶರಾದ ನಿಮಗೂ ನ್ಯಾಯ ನಿರ್ಣಯಿಸುವ ಸಹಾಯಕರಿಗೂ ಇರುವುದು ಒಂದೇ ಮಾರ್ಗ. ಈ ಕಾನೂನು ನ್ಯಾಯ ಬಾಹಿರ ಪಾತಕವೆಂದು ತಿಳಿದು ನಾನು ನಿರಪರಾಧಿ ಎಂದು ಭಾವಿಸಿದರೆ ನಿಮ್ಮ ಸ್ಥಾನಗಳಿಗೆ ರಾಜೀನಾಮೆಯಿತ್ತು ಪಾಪ ಮುಕ್ತರಾಗಬೇಕು ಅಥವಾ ನಿಮ್ಮ ಈ ಆಡಳಿತ ಮತ್ತು ಕಾನೂನುಗಳು ನಮ್ಮ ದೇಶದ ಜನಕ್ಕೆ ಅತ್ಯಂತ ಹಿತಕಾರಿಯೆಂದೂ ನಾನು ಮಾಡಿದುದು ಜನತೆಯ ಹಿತಕ್ಕೆ ದ್ರೋಹ ಮಾಡಿದಂತಾಗಿದೆಯೆಂದೂ ನೀವು ನಂಬುವುದಾದರೆ ಅಂಥ ಅಪರಾಧಕ್ಕೆ ಗೊತ್ತಾದ ಅತ್ಯಂತ ಕಠಿಣ ಶಿಕ್ಷೆಯನ್ನು ವಿಧಿಸಬೇಕು. ಅನ್ಯಥಾ ಮಾರ್ಗವಿಲ್ಲ."

ನ್ಯಾಯಾಧೀಶ ಬ್ಲೂಮ್ ಫೀಲ್ಡ್ ಅನಂತರ ಹೀಗೆ ತಮ್ಮ ತೀರ್ಪನ್ನಿತ್ತರು:

"ಗಾಂಧಿಯವರೇ, ಅಪರಾಧವನ್ನೊಪ್ಪಿ ನೀವು ನನ್ನ ಕೆಲಸವನ್ನು ಒಂದು ರೀತಿಯಲ್ಲಿ ಹಗುರ ಮಾಡಿದ್ದೀರಿ. ಆದರೆ ಉಳಿದಿರುವ ನ್ಯಾಯವಾದ ತೀರ್ಪನ್ನು ನಿರ್ಣಯಿಸುವ ಕಾರ್ಯ ಈ ದೇಶದ ನ್ಯಾಯಾಧೀಶನೊಬ್ಬ ಎದುರಿಸಬಹುದಾದ ಅತ್ಯಂತ ಕಠಿಣ ಕಾರ್ಯಗಳಲ್ಲೊಂದು ಎನಿಸುತ್ತದೆ. ಕಾನೂನು ಯಾವಾಗಲೂ ವ್ಯಕ್ತಿಗಳನ್ನು ಗಮನಿಸುವುದಿಲ್ಲ. ಆದರೆ ನಾನು ಹಿಂದೆ ವಿಚಾರಣೆಗೊಳಪಡಿಸಿ ಬಹುಶಃ ಮುಂದೆ ಒಳಪಡಿಸಬೇಕಾಗಿರುವ ಎಲ್ಲ ವ್ಯಕ್ತಿಗಳಿಗಿಂತಲೂ ನೀವು ಭಿನ್ನರಾದವರೆಂಬುದನ್ನು ನಾನು ಕಡೆಗಣಿಸಲು ಸಾಧ್ಯವಿಲ್ಲ. ಕೋಟ್ಯಾಂತರ ನಿಮ್ಮ ದೇಶಬಾಂಧವರ ದೃಷ್ಟಿಯಲ್ಲಿ ನೀವೊಬ್ಬ ನಿಸ್ಸೀಮ ದೇಶಭಕ್ತರು, ಬಹುದೊಡ್ಡ ನಾಯಕರು; ಈ ಸತ್ಯಸಂಗತಿಯನ್ನು ಮರೆಯಲು ಸಾಧ್ಯವಿಲ್ಲ. ರಾಜನೀತಿಯಲ್ಲಿ ನಿಮ್ಮೊಡನೆ ಭಿನ್ನಾಭಿಪ್ರಾಯವಿದ್ದವರೂ ಕೂಡ ನಿಮ್ಮನ್ನು ಅತ್ಯಂತ ಉನ್ನತ ಧ್ಯೇಯವಾದಿಯೆಂದೂ, ಉತ್ಕೃಷ್ಟ ಮಾನವನೆಂದೂ ಕೆಲವರು ಸಂತ ಪುರುಷನೆಂದೂ, ಗೌರವಿಸುತ್ತಾರೆ. ಆದರೆ ನಾನುನಿಮ್ಮನ್ನು ನೋಡಬೇಕಾದುದು ಒಂದೇ ಸಂಕುಚಿತ ದೃಷ್ಟಿಯಿಂದ. ನ್ಯಾಯಾಧೀಶನ ಕರ್ತವ್ಯ ಮಾಡುವಾಗ ನಿಮ್ಮ ಬೇರಾವ ವ್ಯಕ್ತಿತ್ವಗುಣಗಳನ್ನೂ ಕುರಿತು ನಾನು ನಿರ್ಣಯಿಸುವುದಿಲ್ಲ. ಟೀಕೆಯನ್ನು ಮಾಡುವುದಿಲ್ಲ. ಅದು ನನ್ನ ಕರ್ತವ್ಯವೂ ಅಲ್ಲ. ನ್ಯಾಯ ನಿರ್ಣಯಕ್ಕೊಳಪಟ್ಟ ಮನುಷ್ಯರೊಬ್ಬರೆಂದು ಮಾತ್ರ ತಿಳಿದು ನಾನು ನನ್ನ ತೀರ್ಪು ಕೊಡಬೇಕಾದುದು ಕರ್ತವ್ಯ. ಶಾಸನಭಂಗ ಮಾಡಿರುವುದನ್ನು ತಾವೇ ಒಪ್ಪಿಕೊಂಡಿರುವುದರಿಂದ ಸಾಧಾರಣ ಮನುಷ್ಯರ ದೃಷ್ಟಿಯಲ್ಲಿ ರಾಜ್ಯಾಧಿಕಾರಕ್ಕೆ ತೀವ್ರ ಅಪಚಾರವೆಸಗಿದ್ದೀರೆಂಬುದು ಸ್ಪಷ್ಟ. ನೀವು ಸತತವಾಗಿ ಹಿಂಸಾಚಾರವನ್ನು ವಿರೋಧಿಸಿ ಪ್ರಚಾರ ಮಾಡಿರುವುದನ್ನು ನಾನು ಮರೆಯುವುದಿಲ್ಲ. ಅನೇಕ ವೇಳೆ ಹಿಂಸಾಕೃತ್ಯಗಳನ್ನು ತಡೆಯಲು ಅಗಾಧ ಪ್ರಯತ್ನ ಮಾಡಿರುವುದನ್ನೂ ನಾನು ನಂಬುತ್ತೇನೆ. ನಿಮ್ಮ ರಾಜಕೀಯ ಸಿದ್ಧಾಂತವನ್ನು ಮನ್ನಿಸಿದರೆ, ಅದನ್ನು ಕೇಳಿದ ಜನತೆಯ ಸಹಜ ಪ್ರವೃತ್ತಿಯನ್ನು

ಗಮನಿಸಿದರೆ, ಹಿಂಸೆ ಮತ್ತು ಅನಾಯಕತ್ವಗಳು ಅನಿವಾರ್ಯವಾಗುವುದಿಲ್ಲವೆಂದು ನೀವು ಹೇಗೆ ನಂಬುತ್ತಲೇ ಹೋದಿರೆಂಬುದು ಮಾತ್ರ ನನ್ನ ಬುದ್ಧಿಗೆ ಗೋಚರವಾಗದು.

"ನಿಮ್ಮನ್ನು ಸ್ವತಂತ್ರವಾಗಿ ಬಿಡಲು ಯಾವ ಸರ್ಕಾರಕ್ಕೂ ಸಾಧ್ಯವಾಗದ ರೀತಿಯಲ್ಲಿ ನೀವೊಂದು ವಿಶೇಷ ಪರಿಸ್ಥಿತಿಯನ್ನು ನಿರ್ಮಿಸಿ ಬಿಟ್ಟಿದ್ದೀರಿ. ಇದನ್ನು ಕಂಡು ನಿಜವಾಗಿ ದುಃಖ ಪಡದೆ ಇರುವವರು ಭಾರತದಲ್ಲಿ ವಿರಳ. ಆದರೆ ಅದು ವಾಸ್ತವ ಸಂಗತಿ. ನಿಮಗೆ ಸಲ್ಲಬೇಕಾದ ಗೌರವ ಮತ್ತು ನನಗೆ ತೋರಿದಂತೆ ಜನತೆಯ ಹಿತರಕ್ಷಣೆಗಾಗಿ ಅಗತ್ಯವಾದ ನನ್ನ ಕರ್ತವ್ಯ ನಿರ್ವಹಣೆ–ಇವೆರಡರ ನಡುವೆ ಒಂದು ಸಮತೋಲನವನ್ನರಸುತ್ತಿದ್ದೇನೆ. ಇದೇ ರೀತಿಯ ಮತ್ತೊಂದು ಸಂದರ್ಭದಲ್ಲಿ ಹನ್ನೆರಡು ವರ್ಷಗಳ ಹಿಂದೆ ತೀರ್ಮಾನವಾದ ಮೊಕದ್ದಮೆಯೊಂದರ ತೀರ್ಪನ್ನೇ ನಾನು ಅನುಸರಿಸಬಯಸುತ್ತೇನೆ. ಇದೇ ಸೆಕ್ಷನ್ನಿನ ಪ್ರಕಾರ ವಿಚಾರಣೆಗೆ ಗುರಿಯಾಗಿದ್ದ ಶ್ರೀ ಬಾಲಗಂಗಾಧರ ತಿಲಕರ ಮೊಕದ್ದಮೆ ಅದು. ತೀರ್ಪಿನಲ್ಲಿ ಕೊನೆಗೆ ಶ್ರೀ ತಿಲಕರಿಗೆ ಆರು ವರ್ಷಗಳ ಸಾದಾ ಸಜ ವಿಧಿಸಲಾಗಿತ್ತು. ನಿಮ್ಮನ್ನೂ ಶ್ರೀ ತಿಲಕರಂತೆಯೇ ಕಂಡು ಅವರಿಗೆ ವಿಧಿಸಿದಂತೆಯೇ ಒಂದೊಂದು ಅಪರಾಧಕ್ಕೂ ಎರಡು ವರ್ಷ ಸಜದ ಶಿಕ್ಷೆ ವಿಧಿಸಿ ಒಟ್ಟು ಆರು ವರ್ಷಗಳ ಜೈಲುವಾಸದ ಶಿಕ್ಷೆಯನ್ನು ಕೊಡುವುದು ನನ್ನ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಇದನ್ನು ನೀವು ಅಸಂಗತವೆನ್ನಲಾರಿರೆಂದು ತಿಳಿಯುತ್ತೇನೆ. ಆದರೆ ಭಾರತದ ಪರಿಸ್ಥಿತಿಯೇ ಬದಲಾಯಿಸಿ ಈ ಶಿಕ್ಷೆಯನ್ನು ಬದಲಿಸಿ ನಿಮ್ಮನ್ನು ಬಿಡುಗಡೆ ಮಾಡುವುದು ಸರ್ಕಾರಕ್ಕೆ ಸಾಧ್ಯವಾಗುವುದಾದರೆ ನಾನು ಅತ್ಯಂತ ಹರ್ಷಿಸುತ್ತೇನೆ."

ಅನಂತರ ಶ್ರೀ ಬ್ಯಾಂಕರ್ ಅವರ ಕಡೆ ತಿರುಗಿ "ನಿಮ್ಮ ನಾಯಕರ ಪ್ರಭಾವ ನಿಮ್ಮ ಮೇಲೆ ಅಗಾಧವೆಂದು ನನಗನಿಸುತ್ತದೆ. ಆದ್ದರಿಂದ ನಿಮ್ಮ ಮೇಲೆ ಮೊದಲಿನೆರಡು ಅಪರಾಧಗಳಿಗಾಗಿ ಆರಾರು ತಿಂಗಳು ಸಾದಾ ಸಜವನ್ನೂ, ಮೂರನೆಯದಕ್ಕಾಗಿ ಒಂದು ಸಾವಿರ ರೂಪಾಯಿಗಳ ಜುಲ್ಮಾನೆಯನ್ನೂ ವಿಧಿಸಿರುತ್ತೇನೆ. ಜುಲ್ಮಾನೆ ಕೊಡಲು ತಪ್ಪಿದರೆ ಮತ್ತೆ ಆರು ತಿಂಗಳ ಜೈಲುವಾಸ" ಎಂದರು.

ವಿನಯದಿಂದ ವರ್ತಿಸಿದ ನ್ಯಾಯಾಧೀಶರಿಗೆ ಗಾಂಧೀಜಿಯವರೂ ಸರಿಸಮನಾಗಿಯೇ ವರ್ತಿಸಿದರು. ತೀರ್ಪಿತ್ತನಂತರ ಮಾತನಾಡಿ "ಒಂದು ಮಾತು; ಲೋಕಮಾನ್ಯ ಬಾಲಗಂಗಾಧರ ತಿಲಕರ ವಿಚಾರಣೆಯನ್ನು ಸ್ಮರಿಸಿ ಅವರ ಪುಣ್ಯನಾಮದೊಡನೆ ನನ್ನನ್ನೂ ಸೇರಿಸಿ ಗೌರವಿಸಿದ್ದೀರಿ. ಇದು ನನಗೊಂದು ಅಸಾಧಾರಣ ಭಾಗ್ಯ. ಅತ್ಯಂತ ಹೆಮ್ಮೆಯ ವಿಷಯ. ನೀವು ಕೊಟ್ಟಿರುವ ಶಿಕ್ಷೆಯೂ ಅಷ್ಟೆ. ಯಾವ ನ್ಯಾಯಾಧೀಶನಾದರೂ ಇದಕ್ಕಿಂತ ಹೆಚ್ಚು ಹಗುರವಾದ ಶಿಕ್ಷೆ ವಿಧಿಸಲಾರ. ವಿಚಾರಣೆಯನ್ನು ನೀವು ನಡೆಸಿದ ರೀತಿ ಮತ್ತು ನೀವು ತೋರಿರುವ ಅಪೂರ್ವ ಗೌರವ ಇವುಗಳನ್ನು ಕುರಿತು ಹೇಳುವುದಾದರೆ ಇದಕ್ಕಿಂತ ಹೆಚ್ಚಿನ ಸೌಜನ್ಯವನ್ನು ನಾನು ನಿರೀಕ್ಷಿಸಿರಲಿಲ್ಲ."

ಈ ಮಹಾ ವಿಚಾರಣೆಯ ಸಮಯದಲ್ಲಿ ಹಾಜರಿದ್ದ ಶ್ರೀಮತಿ ಸರೋಜಿನಿ ನಾಯ್ಡು ಅವರು ಅತ್ಯಂತ ಪ್ರಭಾವಿತರಾಗಿ ಹೀಗೆ ಬರೆದರು :

"ನ್ಯಾಯಾಲಯದ ದೃಷ್ಟಿಯಲ್ಲಿ ಅವರೊಬ್ಬ ಖೈದಿ, ಒಬ್ಬ ಅಪರಾಧಿ; ಆದರೂ ಸಹಖೈದಿ ಮತ್ತು ನೆಚ್ಚಿನ ಶಿಷ್ಯ ಶಂಕರಲಾಲ್ ಬ್ಯಾಂಕರ್‌ರೊಡನೆ ಮಹಾತ್ಮಾಗಾಂಧಿ ಪ್ರವೇಶಿಸಿದೊಡನೆ, ತೆಳುವಾದ ಶರೀರ, ಗಂಭೀರ ಮುದ್ರೆ, ತುಂಡುಬಟ್ಟೆ ಧರಿಸಿದ ಅಪ್ರತಿಹತ ವ್ಯಕ್ತಿತ್ವದ ಈ ಮಹಾತ್ಮನಿಗೆ ಇಡೀ ನ್ಯಾಯಾಲಯವೇ ಸಹಜ ಪ್ರೇರಣೆಯಿಂದ ಎದ್ದು ನಿಂತು ಪ್ರಣಾಮ ಸಲ್ಲಿಸಿತು."

ನನ್ನನ್ನು ಕುರಿತು "ನಾನೇನಾದರೂ ಕುಸಿದು ಬಿಟ್ಟರೆ ಊರುಗೋಲಾಗಿರಲು ನೀನಿಲ್ಲಿ ನನ್ನ ಬಳಿ ಕುಳಿತಿರುವೆಯಲ್ಲವೆ?" ಎಂದು ಸಂತೋಷದಿಂದ ಗಹಗಹಿಸಿ ನಕ್ಕುಬಿಟ್ಟರು. ಆ ದಿವ್ಯ ನಗು ಶಿಶುಮುಗ್ಧತೆಯ ಸರ್ವಸ್ವವೇ ತನ್ನ ಅಂತರಾಳದಿಂದ ಹೊರ ಹೊಮ್ಮಿದ ನಿಷ್ಕಳಂಕ ಮಹಾಜ್ಯೋತಿಯಂತೆ ಪ್ರಕಾಶಿಸಿತು. ದೂರ ದೂರದಿಂದ ಬಂದು ಪ್ರೇಮದ ಕಾಣಿಕೆಯನ್ನರ್ಪಿಸಲು ಸುತ್ತಲೂ ನೆರೆದಿದ ಚಿರಪರಿಚಿತ ಜನಸ್ತೋಮವನ್ನು ಕುರಿತು "ಇದೊಂದು ಕೌಟುಂಬಿಕ ಮಿತ್ರಮಿಲನದಂತೆ ಕಾಣುತ್ತಿದೆ. ನ್ಯಾಯಾಲಯದಂತೆ ಕಾಣುವುದಿಲ್ಲವಲ್ಲ!" ಎಂದರು.

"ನ್ಯಾಯಾಧೀಶರು ಪೀಠವನ್ನಲಂಕರಿಸಿದರು. ಎಲ್ಲರ ಹೃದಯಗಳಲ್ಲಿ ಯಾವುದೋ ಅಸ್ಪಷ್ಟ ರೋಮಾಂಚನ. ಭಯ, ಹೆಮ್ಮೆ, ಆಕಾಂಕ್ಷೆ, ಅಳಲುಗಳ ವಿಚಿತ್ರ ಮಿಶ್ರಣ. ಆ ನ್ಯಾಯಾಧೀಶನ ಧೀರ ನಿಷ್ಠುರ ಕರ್ತವ್ಯ ನಿಷ್ಠೆ, ನಿಷ್ಕಪಟ ವಿನಯ, ಆ ವಿಶಿಷ್ಟ ಪರಿಸ್ಥಿತಿಯ ಅರಿವು ಮತ್ತು ಅಂದಿನ ಅದ್ವಿತೀಯ ಮಹಾ ವ್ಯಕ್ತಿಗೆ ಅವರು ಸಲ್ಲಿಸಿದ ಅಭಿವಂದನೆಗಳಿಗಾಗಿ ನಾವೆಲ್ಲ ಮಾರುಹೋದೆವು.

"ಅಪರೂಪದ ಮಹಾವಿಚಾರಣೆ ಮುಂದುವರಿಯಿತು. ನನ್ನ ಪ್ರೀತಿಪಾತ್ರ ಮಹಾಗುರುವಿನ ಮುಖದಿಂದ ಪ್ರವಾದಿಯ ಭವಿಷ್ಯವಾಣಿಯಂತೆ ಮಿಂಚಿ ಹರಿದ ಆ ಅಮರ ಭಾಷಣವನ್ನು ತಲ್ಲೀನಳಾಗಿ ಕೇಳಿದೆ. ಮನಸ್ಸು ಶತಮಾನಗಳ ಹಿಂದಕ್ಕೆ ಚಾಚಿ ನಿಂತು ಮತ್ತೊಂದು ಯುಗದ ಮತ್ತೊಂದು ಭೂಭಾಗದ ಸ್ಮರಣೆಯಲ್ಲಿ ಲೀನವಾಯಿತು. ಇಂಥದೇ ಒಂದು ನ್ಯಾಯನಿರ್ಣಯ ನಾಟಕ ನಡೆದು ಮತ್ತೊಬ್ಬ ಅತಿ ವಿನೀತ ಮಹಾ ಪ್ರವಾದಿಯೊಬ್ಬ ಇಂಥದೇ ಪ್ರೇಮಸಂದೇಶವನ್ನು ಧೀರನಂತೆ ಸಾರಿ ಶಿಲುಬೆಗೇರಿದ್ದ. ದೀನರ ಮಧ್ಯೆ ಕೊಟ್ಟಿಗೆಯ ತೊಟ್ಟಿಲಿನಲ್ಲಿ ಬೆಳೆದ ನಜರತ್ತಿನ ಆ ಏಸು; ಇಲ್ಲಿ ಕರುಣಾಮಯಿಯಾದ ಅತ್ಯುತ್ಕೃಷ್ಟ ಮಾನವ ಪ್ರೇಮಿಯಾದ ಈ ಅಜೇಯ ಭಾರತೀಯ ಸ್ವಾತಂತ್ರ್ಯ ಪ್ರವರ್ತಕ; ಆತನದೇ ಸುಂದರ ಮಾತಿನಲ್ಲಿ ದೀನರ ಮನೋಧರ್ಮದಿಂದಲೇ ದೀನರ ಸೇವೆಗಾಗಿ ಧಾವಿಸಿದ' ಈ ಯುಗಪುರುಷ! ಇವೆರಡರ ಮಧ್ಯೆ ಎಂತಹ ಸಾಮ್ಯ! ಬೇರಾವುದೂ ಸಮಂಜಸವಾದ ಸಾಮ್ಯ ಎನಿಸಲಿಲ್ಲ.

"ಆಧುನಿಕ ಕಾಲದ ಐತಿಹಾಸಿಕ ಘಟನೆ ಕೊನೆಗೊಂಡಿತು. ತಡೆಗಟ್ಟಿದ್ದ ಭಾವೋದ್ರೇಕ

ಜನತೆಯ ಹೃದಯದಿಂದ ಚಿಮ್ಮಿ ದುಃಖ ಆವರಿಸಿತ್ತು. ನೀರವವಾಗಿ ನಿಧಾನವಾಗಿ ಶೋಕತಪ್ತ ಯಾತ್ರೆ ಸಾಲುಗಟ್ಟಿ ಅವರೆಡೆಗೆ ಸಾಗಿ ಅವರನ್ನು ಬೀಳ್ಕೊಟ್ಟಿತು. ದಣಿವರಿಯದೇ ಸೇವೆಗೈಯುತ್ತಿದ್ದ ಆ ಕೈಗಳನ್ನು ಪ್ರೇಮದಿಂದ ಒತ್ತಿ ಹಿಡಿದರು. ದೇಶ ಸೇವೆಗಾಗಿಯೇ ಸತತವಾಗಿ ನಡೆಯುತ್ತಿದ್ದ ಪಾದಗಳಿಗೆ ಎರಗಿದರು. ಈ ಸಹಸ್ರ ಮುಖದ ವೇದನೆಗಳ ಮಧ್ಯೆ ಕೋಟಿ ಹೃದಯಗಳ ದುಃಖ ಪ್ರಕಟನೆಯ ಕೇಂದ್ರವಾಗಿ ಆ ಮಹಾವ್ಯಕ್ತಿ ಅಚಲವಾಗಿ ಅತೀತವಾಗಿ ನಿಂತಿದ್ದರು. ಅದೇ ಸರಳತೆಯ ದಿವ್ಯ ತೇಜಸ್ಸು; ಮೂರ್ತಿವೆತ್ತ ಭಾರತ ದೇಶದ ಮಹಾ ಪ್ರತೀಕ! ಭಾರತದ ದಿವ್ಯ ಪಾವಿತ್ರ್ಯ ಬಲಿದಾನಗಳ ಜೀವಂತ ಸಾಕ್ಷಿ."

# ಯರವಾಡದಲ್ಲಿ

೧೯೨೨–೨೩

ಮಾರ್ಚಿ ೨೦, ೧೯೨೨ ಗಾಂಧೀಜಿ ಮತ್ತು ಬ್ಯಾಂಕರ್ ಅವರನ್ನು ಸಬರ್ಮತಿ ಜೈಲಿನಿಂದ ಬೇರಾವುದೋ ಸ್ಥಳಕ್ಕೆ ಒಯ್ಯುವುದಾಗಿ ರಾತ್ರಿ ಹತ್ತು ಗಂಟೆಯಲ್ಲಿ ತಿಳಿಸ ಲಾಯಿತು. ಹನ್ನೊಂದುವರೆ ಗಂಟೆಯಲ್ಲಿ ಅವರಿಗಾಗಿ ಕಾದಿದ್ದ ವಿಶೇಷ ರೈಲಿಗೆ ಅವರನ್ನು ಪೋಲೀಸ್ ಸೂಪರಿಂಟೆಂಡೆಂಟರು ಕರೆದೊಯ್ದರು. ಅವರೊಂದಿಗೆ ಒಂದು ಹಣ್ಣಿನ ಬುಟ್ಟಿ ಇಡಲಾಗಿತ್ತು. ಪ್ರವಾಸದಲ್ಲಿ ಅನುಕೂಲಗಳನ್ನೆಲ್ಲ ಕಲ್ಪಿಸಲಾಗಿತ್ತು. ಗಾಂಧಿ ಯವರಿಗೆ ಅಭ್ಯಾಸವಾಗಿರುವ ಆಹಾರವನ್ನು ಜೈಲಿನ ವೈದ್ಯರ ಅಪ್ಪಣೆಯಂತೆ ಕೊಡ ಲಾಗುತ್ತಿತ್ತು. ಆರೋಗ್ಯ ರಕ್ಷಣೆ ಮತ್ತು ಮತೀಯ ಆಚಾರಗಳಿಗೆ ಅದು ಅನುಗುಣ ವಾಗಿರುತ್ತಿತ್ತು. ಗಾಂಧೀಜಿಗೆ ಆಡಿನ ಹಾಲು, ಬ್ಯಾಂಕರರಿಗೆ ಹಸುವಿನ ಹಾಲನ್ನು ಪ್ರವಾಸ ಕಾಲದಲ್ಲಿ ಒದಗಿಸುವಂತೆ ಅವರ ಜತೆಯಲ್ಲಿದ್ದ ಪೋಲೀಸ್ ಅಧಿಕಾರಿಗೆ ಸೂಚನೆ ಕೊಡಲಾಗಿತ್ತು. ಗಾಂಧೀಜಿ ಮತ್ತು ಅವರ ಪರಿವಾರವನ್ನು ಕರ್ಕಿ ರೇಲ್ವೆ ನಿಲ್ದಾಣದಲ್ಲಿ ಇಳಿಸಿದರು. ಅಲ್ಲಿ ಪೋಲೀಸ್ ಮೋಟಾರು ಸಿದ್ಧವಾಗಿ ನಿಂತಿತ್ತು. ಅದು ಇವರನ್ನು ಯರವಾಡಾ ಸೆರೆಮನೆಗೆ ಕರೆದೊಯ್ದಿತು.

ನ್ಯಾಯಾಧೀಶ ಬ್ಲೂಮ್‌ಫೀಲ್ಡರು ಕೋರ್ಟಿನಲ್ಲಿ ತೋರಿದಂತಹ ವಿನಯ ಬಹಳ ಕಾಲ ಮುಂದುವರಿಯಲಿಲ್ಲ. ಇಂಗ್ಲೆಂಡಿನ ನ್ಯಾಯವಾದೀ ಮಂಡಲ (ಬೆಂಚರ್ಸ್ ಆಫ್ ದಿ ಇನ್ಸ್ ಆಫ್ ಕೋರ್ಟ್ಸ್) ಗಾಂಧೀಜಿಯ ಹೆಸರನ್ನು ಬ್ಯಾರಿಸ್ಟರುಗಳ ಪಟ್ಟಿ ಯಿಂದ ತೆಗೆದು ಹಾಕಿತು. ಯರವಾಡದ ಸೆರೆಮನೆಯಲ್ಲಿ ಜೈಲುನಿಯಮಗಳನ್ನು ಕಠಿಣವಾಗಿಯೇ ಹೇರಿದರು. ಅವರ ಉದ್ದ ಅಳೆದು ಐದು ಅಡಿ, ಐದು ಅಂಗುಲ ಎಂದು ದಾಖಲೆ ಮಾಡಿದರು. ಗುರ್ತಿಸುವ ಗುರುತುಗಳನ್ನು ಬರೆದುಕೊಂಡರು. ಬಲ ತೊಡೆಯ ಮೇಲೆ ಒಂದು ಮಚ್ಚೆ, ಬಲಗಣ್ಣಿನ ಕೆಳರೆಪ್ಪೆಯಲ್ಲಿ ಒಂದು ಸಣ್ಣ ಗುಳ್ಳೆ, ಎಡ ಮೊಣಕೈಯ ಕೆಳಗೆ ಒಂದು ಅವರೇ ಕಾಳಿನಷ್ಟಿನ ಗಾಯದ ಕಲೆ, ಹೀಗೆ ಪಟ್ಟಿ ಮಾಡಿದರು. ಪ್ರತಿದಿನ ಜೈಲುಕೋಣೆಗೆ ಹಾಕುವಾಗ ಅವರನ್ನು ಶೋಧಿಸ ಲಾಗುತ್ತಿತ್ತು. ಜೈಲರನು ಒರಟಾಗಿಯೇ ವರ್ತಿಸುತ್ತಿದ್ದ. ತುಂಡು ಪಂಚೆಯಿಲ್ಲದೆ ಬೇರಾವ ಉಡುಗೆ ಇಲ್ಲದಿದ್ದರೂ ತೊಡೆ ಸಂದುಗಳನ್ನು ಒರಟಾಗಿ ಹಿಸುಕಿ ನೋಡು ತ್ತಿದ್ದನು. ಕಂಬಳಿಯನ್ನೂ ಇತರ ವಸ್ತುಗಳನ್ನೂ ಶೋಧಿಸುತ್ತಿದ್ದನು. ಬೂಡ್ಸು ಕಾಲಿನಿಂದಲೇ ಅವರಿಟ್ಟುಕೊಂಡಿದ್ದ ಮಡಕೆಯನ್ನಲ್ಲಾಡಿಸುತ್ತಿದನು. ಗಾಂಧೀಜಿಗೆ ಹೆಚ್ಚು ಸಹಿಸಲಾಗಲಿಲ್ಲ. ಜೈಲರನ್ನು ಆಕ್ಷೇಪಿಸಿ ಎಚ್ಚರಿಸಿದರು. ಇದರಿಂದ ಇತರ ಖೈದಿಗಳ ಬಗ್ಗೆಯೂ ಜೈಲರನ ವರ್ತನೆ ಸುಧಾರಿಸಿತು.

ಏಪ್ರಿಲ್‌ನಲ್ಲಿ ಮೊದಲಬಾರಿಗೆ ಗಾಂಧೀಜಿಯ ಮಗ ದೇವದಾಸ್ ಮತ್ತು

ರಾಜಗೋಪಾಲಾಚಾರಿ ಅವರನ್ನು ಭೇಟಿಯಾದರು. ಭೇಟಿಯ ಸಮಯಕ್ಕೆ ನಿಂತೇ ಮಾತನಾಡಬೇಕಾಯಿತ್ತು. ಜೈಲಿನ ಮುಖ್ಯಾಧಿಕಾರಿ ಮತ್ತು ಜೈಲರರಿಬ್ಬರೂ ಮಾತಿನಲ್ಲಿ ಮಧ್ಯೆ ಪ್ರವೇಶಿಸಿ ತಡೆಯುತ್ತಿದ್ದರು. ನಿಯಮ ನಿಷ್ಠ ಖೈದಿಯಂತೆ ಗಾಂಧೀಜಿ ಯಾವುದಕ್ಕೂ ಆಕ್ಷೇಪಿಸಲಿಲ್ಲ.

ಜೈಲಿನಲ್ಲಿ ಗಾಂಧೀಜಿ ಸ್ವಯಂ ಪ್ರೇರಿತರಾಗಿ ಕೆಲವು ನಿಯಮಗಳನ್ನನುಸರಿಸುತ್ತಿದ್ದರು. ಸವಿನಯ ಅಸಹಕಾರಿಗಳು ಇದನ್ನನುಸರಿಸಬೇಕೆಂದರು. "ನಾವು ಜೈಲುಗಳನ್ನು ನಾಶಮಾಡಲು ಹೊರಟಿಲ್ಲ. ಸ್ವರಾಜ್ಯದಡಿಯಲ್ಲೂ ಜೈಲುಗಳಿರಬೇಕಾದೀತು. ನಿಜವಾದ ಅಪರಾಧಿಗಳನ್ನು ಸ್ವರಾಜ್ಯ ಸರ್ಕಾರ ಸುಮ್ಮನೆ ಬಿಡುಗಡೆ ಮಾಡಿ ಬಿಡುವುದೆಂದೋ ಬಹಳ ಹಗುರವಾಗಿ ಅವರೊಡನೆ ವರ್ತಿಸುವುದೆಂದೋ ತಿಳಿದರೆ ಅನಾಹುತವಾಗುತ್ತದೆ. ಸ್ವರಾಜ್ಯದಡಿ ಜೈಲುಗಳ ಬದಲು ಪರಿವರ್ತನ ಸಂಸ್ಥೆಗಳನ್ನು ನಾನು ಬಯಸುವುದಾದರೂ ಅಲ್ಲಿಯೂ ಕಾನೂನು ಬದ್ಧ ಶಿಸ್ತು ಇರಬೇಕಾದುದು ಅಗತ್ಯ. ಅಶಿಸ್ತಿಗೆ ಪ್ರೋತ್ಸಾಹ ನೀಡಿದರೆ ಸ್ವರಾಜ್ಯ ಸಾಧನೆ ದೂರವಾಗುತ್ತದೆ. ಕ್ಷಿಪ್ರವಾಗಿ ಸ್ವರಾಜ್ಯ ಸಾಧಿಸಬೇಕೆನ್ನುವ ಮಾತಿನ ಹಿಂದೆ ನಾವು ಸಂಸ್ಕೃತ ಜನಾಂಗ; ಆದ್ದರಿಂದ ನಿಯಮನಿಷ್ಠ ವ್ಯವಸ್ಥೆಯೊಂದನ್ನು ಬಹುಬೇಗ ರೂಢಿಸ ಬಲ್ಲೆವು ಎಂಬ ವಿಶ್ವಾಸವೂ ಇದೆ. ಸವಿನಯ ಶಾಸನಭಂಗದಲ್ಲಿ ಅನ್ಯಾಯವಾಗಿ ಅನೀತಿಯುತವಾದ ಶಾಸನಗಳನ್ನು ತಿರಸ್ಕರಿಸಿ ನಡೆಯಬೇಕೆಂದೂ ಅಂತಹ ರಾಜ್ಯವ್ಯವಸ್ಥೆಯನ್ನು ನಿರಾಕರಿಸಬೇಕೆಂದು ಹೇಳಿದರೂ ಕಾನೂನುಭಂಗಕ್ಕಾಗಿ ವಿಧಿಸಲ್ಪಟ್ಟ ಶಿಕ್ಷೆಯನ್ನೂ ಇತರ ಕಷ್ಟನಷ್ಟಗಳನ್ನೂ ವಿನಯವಾಗಿ ಸಂತೋಷವಾಗಿ ಅನುಭವಿಸಲೇಬೇಕು."

ಸತ್ಯಾಗ್ರಹಿಯಾದವನು ದಸ್ತಗಿರಿಯಾದೊಡನೆ ಎಲ್ಲ ಪ್ರಕಟನೆಯನ್ನೂ ನಿಲ್ಲಿಸಿ ಎಲ್ಲ ನಿಯಮಗಳಿಗೂ ಅಧೀನನಾಗಿ ನಡೆದುಕೊಳ್ಳಬೇಕೆಂಬುದು ಗಾಂಧೀಜಿಯ ಮತ. "ಆತನ ಶಾಸನಭಂಗ ಸವಿನಯವಾಗಿರುವುದರಿಂದ ಬಂಧನದಲ್ಲಿ ಯಾವ ವಿಶೇಷ ಸೌಲಭ್ಯಗಳನ್ನೂ ಆತ ಬೇಡುವುದಿಲ್ಲ. ಜೈಲಿನೊಳಗೆ ತನ್ನ ಶ್ರೇಷ್ಠತಮ ನಡುವಳಿಕೆಯಿಂದ ಸುತ್ತಲಿನ ಪಾತಕಿಗಳನ್ನೂ ಸುಧಾರಿಸುತ್ತಾನೆ. ಅಧಿಕಾರಿಗಳ ಹೃದಯವನ್ನು ಮೃದುಗೊಳಿಸುತ್ತಾನೆ." ರಹಸ್ಯವಾಗಿ ಜೈಲು ನಿಯಮಗಳನ್ನುಲ್ಲಂಘಿಸುವುದನ್ನು ಅವರು ಅನುಮೋದಿಸುತ್ತಿರಲಿಲ್ಲ. "ಹೆದರಿಕೆಯಿಂದಲ್ಲ, ನಿರ್ಭೀತ ಶಕ್ತಿಯ ಸಂಕೇತವಾಗಿ ವಿನಯ ಬರಬೇಕು: ಕಷ್ಟಸಹಿಷ್ಣುತೆ ಕ್ರೂರ ವೇದನೇಯಾಗಬಾರದು. ವಿನಯವೆಂದರೆ ಹುಳುವಿನಂತೆ ತೆವಳುವುದಲ್ಲ. ಆದ್ದರಿಂದ ಶಿಸ್ತಿನ ಹೆಸರಿನಲ್ಲಿಗೆ ಜೈಲರನ ಮುಂದೆ ನಗ್ನನಾಗಿ ನಿಲ್ಲು ಎಂದು ಅಪ್ಪಣೆಯಾದರೆ ಅದನ್ನು ಪ್ರತಿಭಟಿಸಬೇಕು. ಏಕಾಕಿ ಬಂಧನಕ್ಕೊಳಪಡಿಸುವ ಶಿಕ್ಷೆ ವಿಧಿಸಿದರೂ, ಗುಂಡಿಕ್ಕಿ ಕೊಲ್ಲುವೆನೆಂದರೂ ಆತನ ಅಪ್ಪಣೆಯನ್ನು ನಿರಾಕರಿಸಬೇಕು. ದುರ್ನಾತದ ಕೊಳೆ ಬಟ್ಟೆ ತೊಡಲು ನಿರಾಕರಿಸಬೇಕು. ಅಸ್ವಚ್ಛವಾದ ಅನಾರೋಗ್ಯಕರವಾದ ಆಹಾರವನ್ನು ತಿರಸ್ಕರಿಸಬೇಕು. ಮರ್ಯಾದೆಯ ಹೆಸರಿನಲ್ಲಿ

ಕಡ್ಡಾಯವಾಗಿ ಕೈ ಜೋಡಿಸುವುದನ್ನಾಗಲಿ, ಮೊಳಕಾಲೂರಿ ಬಗ್ಗುವುದಕ್ಕಾಗಲಿ, ಜೈಲು ಅಧಿಕಾರಿ ಹಾದು ಹೋದಾಗ "ಸರ್ಕಾರ್ ಏಕ್‌ಹೈ" "ಸರ್ಕಾರ್ ಸಲಾಮ್" ಎಂದು ಮುಂತಾಗಿ ಕೂಗುವುದಕ್ಕಾಗಲೀ ಸಮ್ಮತಿಸಬಾರದು. ಜೈಲಿನೊಳಗೆ ಇಂಥ ಅಗ್ನಿಪರೀಕ್ಷೆಗಳಿಗೆ ಸರ್ಕಾರ ನಮ್ಮನ್ನು ಈಡುಮಾಡುವುದಾದರೆ ನಮ್ಮ ಬೆನ್ನು ಮುರಿಯಲು ಚಿತ್ರಹಿಂಸೆಗಳಿಗೆ ಗುರಿಮಾಡಿದರೆ, ನಾವು ಮರ್ಯಾದೆಯಿಂದಲೇ ಈ ಅವಮಾನಗಳನ್ನು ತಿರಸ್ಕರಿಸಿ ಪ್ರತಿಭಟಿಸಬೇಕು."

ಸೆರೆಯಲ್ಲಿದ್ದಾಗ ಗಾಂಧೀಜಿ ವರ್ಷಕ್ಕೆ ನಾಲ್ಕು ಕಾಗದಗಳನ್ನು ಮಾತ್ರ ಬರೆಯಬಹುದಾಗಿತ್ತು. ಏಪ್ರಿಲ್‌ನಲ್ಲಿ ಮೊದಲೆರಡನ್ನು ಕಸ್ತೂರಿ ಬಾ ಅವರಿಗೂ ಅಜಮಲ್ ಖಾನರಿಗೂ ಬರೆದರು. ಅವೆರಡನ್ನೂ ಬೊಂಬಾಯಿ ಗೌರ್‍ನರ್ ತಡೆಹಿಡಿದು ಬಿಟ್ಟರು. ಅದರಲ್ಲಿನ ಕೆಲವು ಭಾಗಗಳು ಆಕ್ಷೇಪಣೀಯವೆಂದು ಆಪಾದಿಸಿ ತೆಗೆದುಬಿಡಬೇಕೆನ್ನಲು ಗಾಂಧೀಜಿ ಮುಂದೆ ಕಾಗದಗಳನ್ನು ಬರೆಯಲೇ ಇಲ್ಲ.

ಹಕೀಂ ಅಜಮಲ್‌ಖಾನರಿಗೆ ಏಪ್ರಿಲ್ ೧೪ರಂದು ಬರೆದ ಪತ್ರದಲ್ಲಿ ಯರವಾಡ ಜೈಲಿನ ಜೀವನಾನುಭವಗಳನ್ನು ಬಣ್ಣಿಸಿದರು

"ಹಿಂದೆ ಖೈದಿಗಳಾಗಿದ್ದವರಿಂದ ಇಲ್ಲಿನ ಜೈಲುವಾಸ ಹಿತಕರವಲ್ಲವೆಂದು ತಿಳಿದು ಎಲ್ಲ ರೀತಿಯ ತೊಂದರೆಗಳಿಗೂ ಸಿದ್ಧನಾಗಿದ್ದೆ. ಪ್ರತಿದಿನವೂ ಸೂತ್ರಯಜ್ಞ ಮಾಡುವ ಪ್ರತಿಜ್ಞೆಯನ್ನು ಯುಗಾದಿಯ ದಿನ ನಾನು ತೆಗೆದುಕೊಂಡಿದ್ದೆ. ಖಾಯಿಲೆ ಇದ್ದಾಗ ಅಥವಾ ಪ್ರಯಾಣದಲ್ಲಿದ್ದಾಗ ಬಿಟ್ಟು ಮಿಕ್ಕ ಹಾಗೆ ಸ್ವಲ್ಪ ಹೊತ್ತು ನೂಲುವ ನನ್ನ ದಿನಚರಿಗೆ ಅಡ್ಡ ಬಂದರೆ ಉಪವಾಸ ಮಾಡುತ್ತೇನೆಂದು ಈ ಹಿಂದೆಯೇ ಶಂಕರಲಾಲ್ ಬ್ಯಾಂಕರ್‌ರಿಗೆ ಹೇಳಿದ್ದೆ. ಹೀಗೆ ಮಾಡಬೇಕಾಗಿ ಬಂದರೆ ಅವರು ಗಾಬರಿಗೊಳ್ಳಬೇಕಾಗಿಲ್ಲವೆಂದೂ ಸಹಾನುಭೂತಿಯಿಂದ ನನ್ನೊಡನೆ ತಾವೂ ಉಪವಾಸ ಆರಂಭಿಸಬಾರದೆಂದೂ ತಿಳಿಸಿದ್ದೆ. ಈ ಬಗ್ಗೆ ನನ್ನ ದೃಷ್ಟಿ ಏನು ಎಂದು ಅವರರಿತಿದ್ದರು.

"ಜೈಲಿನೊಳಗೆ ಬಂದೊಡನೆ ನಮ್ಮ ಚರಕಗಳನ್ನೂ ಹಣ್ಣಿನ ಬುಟ್ಟಿಯನ್ನೂ ಹೊರಗಿಡಲು ಜೈಲು ಡಾಕ್ಟರು ಹೇಳಿದಾಗ ನಮಗೇನೂ ಆಶ್ಚರ್ಯವೆನಿಸಲಿಲ್ಲ. ಸಬರ್ಮತಿಯಲ್ಲಿ ದಿನವೂ ನೂಲಲು ನಮ್ಮಿಬ್ಬರಿಗೂ ಅನುಮತಿ ಕೊಟ್ಟಿದ್ದರು ಎಂದು ಪ್ರಬಲವಾಗಿ ವಾದಿಸಿದೆ. ನನ್ನ ವ್ರತಪಾಲನೆಗೆ ನೂಲಲೇಬೇಕು ಎಂದೆ. ಒಂದೇ ಮಾತು ಉತ್ತರ ಬಂತು: 'ಯರವಾಡ ಸಬರ್ಮತಿಯಲ್ಲ'

"ಆರೋಗ್ಯ ದೃಷ್ಟಿಯಿಂದ ಬಯಲಿನಲ್ಲಿ ಮಲಗಲು ಸಬರ್ಮತಿ ಸೆರೆಮನೆಯಲ್ಲಿ ಅವಕಾಶ ಕೊಟ್ಟಿದ್ದರು ಎಂದು ಮುಖ್ಯಾಧಿಕಾರಿಗೆ ತಿಳಿಸಿದೆ. ಇಲ್ಲಿ ಆ ಸೌಲಭ್ಯವನ್ನು ನಿರೀಕ್ಷಿಸಲಾಗಲಿಲ್ಲ.

"ಮೊದಲ ಅನುಭವ ಕಹಿಯಾಗಿಯೇ ಇತ್ತು. ನನಗದರಿಂದ ಹೆಚ್ಚು ಚಿಂತೆಯಾಗಲಿಲ್ಲ. ಹಿಂದಿನೆರಡು ದಿನ ಉಪವಾಸವನ್ನೇ ಮಾಡಿದ್ದ ನನಗೆ ಅಷ್ಟೇನೂ ವ್ಯತ್ಯಾಸ

ಕಾಣಲಿಲ್ಲ. ಬ್ಯಾಂಕರರಿಗೆ ಮಾತ್ರ ಸಹಿಸಲು ಕಷ್ಟವಾಯಿತು. ರಾತ್ರಿಯಲ್ಲಿ ಅವರಿಗೆ ಘೋರ ಸ್ವಪ್ನಗಳ ಭಯ ಇದ್ದುದರಿಂದ ಒಬ್ಬರೇ ಮಲಗುತ್ತಿರಲಿಲ್ಲ. ಅಲ್ಲದೆ ಅವರಿಗೆ ಜೈಲುವಾಸ ಇದು ಮೊದಲ ಅನುಭವ. ನಾನಾದರೋ ಆಗಲೇ ಈ ಪಂಜರದಲ್ಲಿ ಪಳಗಿದ್ದೆ.

"ಮರುದಿನ ಬೆಳಿಗ್ಗೆ ಜೈಲು ನಿರ್ದೇಶಕರು ಕ್ಷೇಮ ವಿಚಾರಿಸಲು ಬಂದರು. ಮೊದಲ ನೋಟಕ್ಕೆ ನಾನು ಅಂದುಕೊಂಡಷ್ಟು ಕಠಿಣವಾಗಿ ಅವರು ತೋರಲಿಲ್ಲ ಆಗ ಅವರೂ ಕೋಪಗೊಂಡಿದ್ದರು. ನಾವು ಹೊತ್ತುಮೀರಿ ಬಂದಿದ್ದೆವು; ನಾವು ಕೇಳಿದ ಸೌಲಭ್ಯಗಳು ಅವರಿಗೆ ವಿಚಿತ್ರವಾಗಿಯೂ ಕಂಡಿರಬೇಕು. ಈಗ ಅವರಿಗೆ ಸ್ವಲ್ಪ ಅರ್ಥ ವಾಯಿತು. ಚರಕವನ್ನು ಇಟ್ಟುಕೊಳ್ಳಲು ಕೇಳಿದ್ದು ವಕ್ರಬುದ್ಧಿಯಿಂದಲ್ಲ ನನಗದು ಒಂದು ಧಾರ್ಮಿಕ ವೃತ್ತಿ ಎಂದರಿತರು. ಸಂಭಾಷಣೆಯಲ್ಲಿ ನಾವು ಉಪವಾಸ ಮುಷ್ಕರ ವನ್ನೇನೂ ಯೋಚಿಸುತ್ತಿಲ್ಲ ಎಂದೂ ತಿಳಿದ ಮೇಲೆ ನಮ್ಮ ಚರಕಗಳನ್ನು ಹಿಂತಿರುಗಿ ಕೊಡುವಂತೆ ಅಜ್ಞಾಪಿಸಿದರು. ಹಾಗೆಯೇ ನಮ್ಮ ಆಹಾರ, ನಮ್ಮ ಇಚ್ಛೆಯಂತೆ ಇರುವುದಕ್ಕೂ ಅಡ್ಡಿಮಾಡಲಿಲ್ಲ. ಈ ಸೆರೆಮನೆಯಲ್ಲಿ ಭೌತಿಕ ಆವಶ್ಯಕತೆಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎನಿಸುತ್ತದೆ. ನಮ್ಮ ಮುಖ್ಯಾಧಿಕಾರಿಗಳೂ ಮೇಲ್ವಿ ಚಾರಕರೂ ಚಾಣಾಕ್ಷರು, ಸ್ನೇಹಪರರು ಎನಿಸಿತು. ಮೊದಲ ದಿನಗಳು ಅಷ್ಟೇನೂ ಗಣನೆಗೆ ಬಾರವು. ಖೈದಿಗೂ ಮೇಲ್ವಿಚಾರಕನಿಗೂ ಇರಬಹುದಾದ ಒಳ್ಳೆಯ ಬಾಂಧವ್ಯ ಸೆರೆಮನೆಯ ಅಧಿಕಾರಿಗಳೊಡನೆ ಇತ್ತೆಂದು ಹೇಳಬಲ್ಲೆ.

"ನಮ್ಮ ಜೈಲು ವ್ಯವಸ್ಥೆಯಲ್ಲಿ ಮಾನವೀಯತೆಗೆ ಸ್ಥಳವಿಲ್ಲ ಎಂದು ಸ್ಪಷ್ಟ ವಾಗುತ್ತದೆ. ಇತರ ಖೈದಿಗಳನ್ನೂ ನನ್ನಂತೆಯೇ ನೋಡಿಕೊಳ್ಳುತ್ತಿರುವುದಾಗಿ ಮುಖ್ಯಾಧಿ ಕಾರಿಗಳೆಂದರು. ಖೈದಿಗಳ ಭೌತಿಕ ಆವಶ್ಯಕತೆಗಳ ಪೂರೈಕೆ ಸಮರ್ಪಕವಾಗಿದೆ. ಮಾನ ವೀಯ ಆವಶ್ಯಕತೆಗಳ ಬಗ್ಗೆ ಯಾರೂ ಚಿಂತಿಸಿಯೇ ಇಲ್ಲ. ಸೆರೆಮನೆಯ ನಿಯಮಗಳೇ ಹಾಗೆ.

"ಸೆರೆಮನೆಯ ಮೇಲ್ವಿಚಾರಕ ಸಮಿತಿ ಒಂದಿದೆ. ಮುಖ್ಯಾಧಿಕಾರಿ, ಒಬ್ಬ ಪಾದ್ರಿ ಮತ್ತೆ ಕೆಲವರಿದ್ದಾರೆ. ನಾವು ಬಂದ ಮೂರನೇ ದಿನವೇ ಈ ಸಮಿತಿ ಸಭೆಸೇರಿತ್ತು. ನಮ್ಮ ಯೋಗಕ್ಷೇಮ ವಿಚಾರಿಸಲು ಬಂದರು. ಬ್ಯಾಂಕರರು ನರಗಳ ದೌರ್ಬಲ್ಯದಿಂದ ನರಳುತ್ತಿದ್ದಾರೆಂದೂ ರಾತ್ರಿಯಲ್ಲಿ ನನ್ನ ಕೋಣೆಯಲ್ಲೇ ಬಾಗಿಲು ತೆಗೆದು ಮಲಗಲು ಅನುಮತಿ ಕೊಡಬೇಕೆಂದೂ ಕೇಳಿದೆ. ಅವರು ತೋರಿಸಿದ ಹೇಯ ತಿರಸ್ಕಾರವನ್ನೂ ಕಲ್ಲೆದೆಯ ತಾತ್ಸಾರವನ್ನೂ ನಾನು ಬಣ್ಣಿಸಲಾರೆ. ಹಿಂತಿರುಗುವಾಗ ಅವರಲ್ಲೊಬ್ಬರು ತುಚ್ಛವಾಗಿ 'ನಾನ್ಸೆನ್ಸ್' ಎಂದುದು ಕೇಳಿಸಿತು. ಬ್ಯಾಂಕರರ ಗೌರವಸ್ಥಾನ ವಿದ್ಯಾ ಅರ್ಹತೆಗಳು ಅವರಿಗೆ ಹೇಗೆ ಅರಿವಾದೀತು. ಅವರನ್ನು ಕಂಡು ಈ ಬಗ್ಗೆ ಚರ್ಚಿಸಿ ನಾನೇಕೆ ಈ ಮನವಿ ಮಾಡಿದೆನೆಂದು ತಿಳಿಯುವ ಸೌಜನ್ಯ ಅವರಿಗೆ ದೂರವಾಗಿತ್ತು. ಬ್ಯಾಂಕರರಿಗೆ ಒಳ್ಳೆಯ ಆಹಾರಕ್ಕಿಂತಲೂ ಸುಖನಿದ್ರೆ ಅತ್ಯಾವಶ್ಯಕವಾಗಿತ್ತು.

"ಈ ಸಂಭಾಷಣೆಯಾಗಿ ಒಂದು ಗಂಟೆ ಕಳೆದಿರಬಹುದು; ಒಬ್ಬ ಮೇಲ್ವಿಚಾರಕ ಬಂದು ಬ್ಯಾಂಕರರಿಗೆ ಬೇರೊಂದು ವಿಭಾಗಕ್ಕೆ ಅವರನ್ನು ವರ್ಗ ಮಾಡುವುದಾಗಿ ತಿಳಿಸಿದ. ತನ್ನ ಒಂದೇ ಶಿಶುವನ್ನು ಕಳೆದುಕೊಳ್ಳುವ ತಾಯಿಯಂತಾಯಿತು ನನ್ನ ಸ್ಥಿತಿ. ನನ್ನೊಡನೆ ಬ್ಯಾಂಕರರೂ ವಿಚಾರಣೆಗೊಳಗಾಗಿ ಒಡನೆಯೇ ಶಿಕ್ಷೆಯನ್ನನುಭವಿಸಲು ಬಂದಿದ್ದು ದೈವಕೃಪೆ ಎಂದು ಭಾವಿಸಿದ್ದೆ. ಸಬರ್ಮತಿಯಲ್ಲಿದ್ದಾಗಲೇ ಅಧಿಕಾರಿಗಳಿಗೆ ಬ್ಯಾಂಕರರು ನನ್ನೊಡನಿರಲು ಅವಕಾಶವಿತ್ತರೆ ಉಪಕಾರವಾದೀತೆಂದೂ ಪರಸ್ಪರ ಸಹಾಯಕರಾಗಿ ನಾವಿರಲಾದೀತೆಂದೂ ತಿಳಿಸಿದ್ದೆ. ನಾನವರಿಗೆ ಗೀತೆಯ ಪಾಠ ಹೇಳುತ್ತಿದ್ದೆ. ನನ್ನ ದೈಹಿಕ ಆವಶ್ಯಕತೆಗಳನ್ನವರು ನೋಡುತ್ತಿದ್ದರು. ಅವರ ತಾಯಿ ಕೇವಲ ಕೆಲವು ತಿಂಗಳುಗಳ ಹಿಂದೆ ಸ್ವರ್ಗಸ್ಥರಾಗಿದ್ದರು. ಅದಕ್ಕೆ ಸ್ವಲ್ಪ ದಿನ ಹಿಂದೆ ನಾನವರನ್ನು ಕಂಡಿದ್ದೆ. ನನ್ನೊಡನೆ ಆ ತಾಯಿ ಮಾತನಾಡುತ್ತಾ ತನ್ನ ಮಗ ನನ್ನ ರಕ್ಷಣೆಯಲ್ಲಿರುವುದರಿಂದ ಸಮಾಧಾನವಾಗಿ ತಾನು ನಿರ್ಗಮಿಸಬಹುದು ಎಂದಿದ್ದರು. ಆ ಉದಾತ್ತ ಮಾತೆ ತನ್ನ ಮಗನ ರಕ್ಷಣೆಯ ಪ್ರಶ್ನೆ ಬಂದಾಗ ನಾನೆಷ್ಟು ನಿಸ್ಸಹಾಯಕನಾಗುತ್ತೇನೆಂದು ಹೇಗೆ ಬಲ್ಲರು? ಬ್ಯಾಂಕರರನ್ನು ನಾನು ಬೀಳ್ಕೊಡುವಾಗ ಭಗವಂತನ ರಕ್ಷಣೆಗೆ ಅವರನ್ನೊಪ್ಪಿಸಿದೆ. ದೈವ ಕೃಪೆ ರಕ್ಷಿಸುವುದೆಂಬ ಭರವಸೆಯನ್ನೂ ಅವರ ಮನಸ್ಸಿಗೆ ತುಂಬಿದೆ.

"ಈಚೆಗೆ ಪ್ರತಿದಿನ ಬ್ಯಾಂಕರರು ನನ್ನಲ್ಲಿಗೆ ಅರ್ಧಗಂಟೆ ಕಾಲ ಬಂದು ಹತ್ತಿ ಎಕ್ಕುವುದನ್ನು ಹೇಳಿಕೊಡಲು ಅನುಮತಿ ಸಿಕ್ಕಿದೆ. ಇದರಲ್ಲಿ ಅವರು ಪ್ರವೀಣರು. ಈ ಕೆಲಸ ಮಾಡುವಾಗ ಜೈಲಿನ ಮೇಲ್ವಿಚಾರಕರೊಬ್ಬರಿರುತ್ತಾರೆ. ಕೆಲಸಕ್ಕೆ ಸಂಬಂಧಪಟ್ಟಷ್ಟು ಮಾತ್ರ ನಾವು ಸಂಭಾಷಿಸಬೇಕು. ಈ ಅರ್ಧಗಂಟೆ ನಮಗೆ ಗೀತೆಯನ್ನೋದಲು ಅವಕಾಶ ಮಾಡಿಕೊಡಬೇಕೆಂದು ಮೇಲ್ವಿಚಾರಕರನ್ನೂ ನಿರ್ದೇಶಕರನ್ನೂ ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಅವರು ವಿಚಾರ ಮಾಡುವುದಾಗಿ ಹೇಳಿದ್ದಾರೆ.

"ನನ್ನಲ್ಲಿ ಏಳು ಪುಸ್ತಕಗಳನ್ನುಳಿಸಿಕೊಳ್ಳಲು ನನ್ನ ಬುದ್ಧಿ ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಬೇಕಾಯಿತು. ಅವುಗಳಲ್ಲಿ ಐದು ಧರ್ಮಗ್ರಂಥಗಳು. ಒಂದು ಹಳೆಯ ನಿಘಂಟು, ನನಗದು ಅಮೂಲ್ಯ, ಮತ್ತು ಮೌಲಾನಾ ಅಬ್ದುಲ್ ಕಲಾಮ್ ಅಜಾದರು ಕೊಟ್ಟ ಉರ್ದು ಪಠ್ಯಪುಸ್ತಕ. ಜೈಲಿನ ಪುಸ್ತಕ ಭಂಡಾರದಲ್ಲಿರುವ ಪುಸ್ತಕಗಳನ್ನಲ್ಲದೆ ಬೇರಾವುದನ್ನು ಓದುವುದಕ್ಕೂ ಅವಕಾಶವಿಲ್ಲವೆಂಬ ಕಟ್ಟುನಿಟ್ಟಾದ ಆಜ್ಞೆ ಇದೆ. ನನ್ನ ಇಚ್ಛೆ ಇದಕ್ಕೆ ವಿರೋಧವಾಗಿತ್ತು. ನನ್ನ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಕೊಟ್ಟು ಅಲ್ಲಿಂದ ಮರಳಿ ಪಡೆಯಬೇಕೆಂದು ಸೂಚಿಸಿದರು. ನನ್ನ ಇತರ ಪುಸ್ತಕಗಳನ್ನು ಹೀಗೆ ಕೊಡಲು ಸಂತೋಷಿಸುತ್ತೇನೆ. ಆದರೆ ಈ ಪುಸ್ತಕಗಳು ಅದರಲ್ಲಿನ ಧಾರ್ಮಿಕ ವಿಷಯಕ್ಕಾಗಿಯೂ ಅವು ಸ್ನೇಹದ ಕೊಡುಗೆಗಳಾಗಿರುವುದರಿಂದಲೂ ನನಗೆ ಅತ್ಯಮೂಲ್ಯ. ನನ್ನ ಬಲತೋಳನ್ನೇ ಕತ್ತರಿಸಿಕೊಡಲು ಕೇಳಿದಂತೆ ಎಂದೆ; ಮುಖ್ಯಾಧಿಕಾರಿಗಳು

ತಮ್ಮ ಮೇಲಿನವರನ್ನು ಹೇಗೆ ಒಲಿಸಿಕೊಂಡರೋ ಕಾಣೆ; ಅಂತೂ ನನ್ನ ಪುಸ್ತಕಗಳನ್ನಿಟ್ಟುಕೊಳ್ಳಲು ಸಮ್ಮತಿಯಿತ್ತರು.

"ನನ್ನಲ್ಲಿದ್ದ ಸಣ್ಣ ಚಾಕು ಮತ್ತೊಂದು ಸಮಸ್ಯೆಯಾಯಿತು. ನನ್ನ ಬ್ರೆಡ್ಡನ್ನು ಕತ್ತರಿಸಿ ಸುಟ್ಟಲ್ಲದೆ ನಾನು ತಿನ್ನಲಾರೆ. ಹಾಗೆ ಕತ್ತರಿಸಲು ಮತ್ತು ನಿಂಬೆಹಣ್ಣನ್ನು ಹೋಳುಮಾಡಲು ಚಾಕು ಅಗತ್ಯವಾಗಿತ್ತು. ಆದರೆ ಜೇಬಿನ ಚಾಕು ಒಂದು 'ಅಪಾಯಕರ ಅಸ್ತ್ರ' ಎಂದು ಎಣಿಸಲಾಗಿತ್ತು. ಆ ಬಗ್ಗೆ ಹಗರಣವಾದನಂತರವೇ ನನ್ನ ಚಾಕು ನನಗೆ ಬಂತು. ನನ್ನ ಮೇಲ್ವಿಚಾರಕನಲ್ಲಿ ಅದಿರುತ್ತದೆ. ನನಗೆ ಬೇಕಾದಾಗ ಮಾತ್ರ ನನ್ನ ಕೈಗೆ ಕೊಡುತ್ತಾರೆ. ರಾತ್ರಿಯ ವೇಳೆ ಮುಖ್ಯ ವಾರ್ಡರ್ ಅದನ್ನಿಟ್ಟುಕೊಂಡಿದ್ದು ಬೆಳಗಾದೊಡನೆ ನನ್ನನ್ನು ನೋಡಿಕೊಳ್ಳುವ ಖೈದಿವಾರ್ಡರ್ ಕೈಗೆ ಕೊಡುತ್ತಾರೆ.

"ಖೈದಿವಾರ್ಡರ್ ನಿಮಗೆ ಹೊಸ ಹೆಸರು. ದೀರ್ಘಕಾಲ ಸೆರೆಯಲ್ಲಿದ್ದು ಒಳ್ಳೆಯ ವರ್ತನೆಯವರಾಗಿರುವ ಖೈದಿಗಳಿಗೆ ಮೇಲ್ವಿಚಾರಕರ ಉಡುಪು ಕೊಟ್ಟು ಸಣ್ಣ ಪುಟ್ಟ ಕೆಲಸಗಳಿಗೆ ನೇಮಿಸುತ್ತಾರೆ. ವಾರ್ಡರನ ಉಡುಪು ಧರಿಸಿದರೂ ಅವನ ಮೇಲೆ ಮತ್ತೊಬ್ಬನ ಪಹರೆ ಯಾವಾಗಲೂ ಇರುತ್ತದೆ. ಕೊಲೆಯ ಆಪಾದನೆಗೆ ಶಿಕ್ಷಿತ ಖೈದಿಯೊಬ್ಬ ಹಗಲು ಹೊತ್ತು ನನ್ನ ಮೇಲ್ವಿಚಾರಕ. ರಾತ್ರಿಯಲ್ಲಿ ಅವನಿಗೊಬ್ಬ ಸಹಾಯಕ ಬರುತ್ತಾನೆ. ಅವನನ್ನು ನೋಡಿದರೆ ಷೌಕತಾಲಿಯವರ ಜ್ಞಾಪಕ ಬರುತ್ತದೆ. ನಾನು ಬಾಗಿಲು ತೆಗೆದು ಮಲಗಲು ಅನುಮತಿ ಕೊಟ್ಟ ಮೇಲೆ ಈ ಏರ್ಪಾಡಾಗಿದೆ. ಇಬ್ಬರೂ ಮೇಲ್ವಿಚಾರಕರು ನಿರುಪದ್ರವಿಗಳು, ನನಗೇನೂ ತೊಂದರೆ ಕೊಡುವುದಿಲ್ಲ. ನಾನಂತೂ ಮಾತನಾಡುವುದಿಲ್ಲ ವಾರ್ಡರನ ಜೊತೆಗೆ ಆಗೀಗ, ಹಗಲು ವೇಳೆಯಲ್ಲಿ ಅವನು ಕೆಲಸದಲ್ಲಿರುವಾಗ, ನನಗೆ ಬೇಕಾಗುವ ಪದಾರ್ಥಗಳನ್ನು ಕೇಳಲು ಮಾತನಾಡುತ್ತೇನೆ. ಬೇರೆ ಸಮಯದಲ್ಲಿ ಮಾತಿಲ್ಲ.

"ಒಂದು ತ್ರಿಕೋಣಾಕಾರದ ವಠಾರದಲ್ಲಿದೆ ನನ್ನ ಕೋಣೆ. ಪಶ್ಚಿಮದ ಕಡೆಗೆ ಹನ್ನೊಂದು ಕೋಣೆಗಳಿರುವ ಉದ್ದನೆಯ ಭುಜ. ಅದೇ ವಿಭಾಗದಲ್ಲಿ ಅರಬ್‌ದೇಶದ ರಾಜ್ಯ ಖೈದಿಯೊಬ್ಬ ಇದ್ದಾನೆ. ಅವನಿಗೆ ಹಿಂದುಸ್ತಾನಿ ಬರದು. ಅರಾಬಿಕ್ ಭಾಷೆ ನನಗೆ ಗೊತ್ತಿಲ್ಲ. ಆದ್ದರಿಂದ ಪರಸ್ಪರ 'ನಮಸ್ತೆ' ಅಷ್ಟೇ ನಮ್ಮ ಸಂಭಾಷಣೆ. ಈ ತ್ರಿಕೋಣದ ಅಡಿಯಲ್ಲಿ ಒಂದು ದೊಡ್ಡಗೋಡೆ. ಮತ್ತೊಂದು ಕಡೆ ಮುಳ್ಳುತಂತಿಯ ಬೇಲಿ. ಅದರ ಮಧ್ಯೆ ಸಣ್ಣ ಬಾಗಿಲಿದೆ. ಅದರಾಚೆಗೆ ಒಂದು ವಿಶಾಲವಾದ ಚೌಕ ಪ್ರದೇಶ. ಈ ಮಧ್ಯ ವಠಾರದ ತ್ರಿಕೋಣ ಜಾಗದ ಮಧ್ಯದಲ್ಲಿ ಸುಣ್ಣದ ಗೆರೆ ಎಳೆದು ಭಾಗ ಮಾಡಿದ್ದರು. ನಾನು ಅದನ್ನು ದಾಟಲು ನಿಷೇಧಿಸಲಾಗಿತ್ತು. ನನ್ನ ಕಡೆಗೆ ಸುಮಾರು ೭೦ ಅಡಿ ಜಾಗ. ಅದರಲ್ಲಷ್ಟೇ ನನ್ನ ಚಲನೆ. ಇತ್ತೀಚೆಗೆ ಮುಖ್ಯಾಧಿಕಾರಿಗಳಾದ ಖಾಂಭಟ್ ಅವರು ಬಂದಾಗ ಈ ಸುಣ್ಣದ ರೇಖೆಯನ್ನು ತೋರಿಸಿ ಸೆರೆಮನೆ ಆಡಳಿತದಲ್ಲಿ ಮಾನವೀಯತೆ ಇಲ್ಲದಿರುವುದಕ್ಕೆ ಇದು ಸಾಕ್ಷಿ ಎಂದೆ. ಆತನಿಗೂ ಈ ನಿರ್ಬಂಧ ಸರಿಯೆನಿಸಲಿಲ್ಲ. ಹಾಗೆಯೇ ಆತ ವರದಿ ಮಾಡಿದುದರಿಂದ ತ್ರಿಕೋಣದೊಳಗಿನ

ನಿರ್ಬಂಧ ಹೋಗಿ ೧೪೦ ಅಡಿ ದೂರ ಓಡಾಡಲು ನನಗೆ ಸ್ವಾತಂತ್ರ್ಯ ದೊರೆಯಿತು. ಸಣ್ಣ ಬಾಗಿಲಿನಿಂದಾಚೆಗಿರುವ ವಿಶಾಲ ಜಾಗದ ಮೇಲೆ ನನ್ನ ಕಣ್ಣು, ಅಷ್ಟು ದೂರ ಅವರ ಮಾನವೀಯತೆ ಬಹುಶಃ ಹರಿಯದು. ಸುಣ್ಣದ ರೇಖೆಯನ್ನು ಗೆದ್ದ ಮೇಲೆ ಮುಂದೊಂದು ದಿನ ಈ ಮುಳ್ಳುತಂತಿಯ ಬೇಲಿಯೂ ಹೋದೀತೆಂಬ ಆಸೆ ಇದೆ. ನಿರ್ದೇಶಕನಿಗೆ ಬಹುಶಃ ಇದು ಕ್ಲಿಷ್ಟ ಸಮಸ್ಯೆಯೇ ಇದ್ದೀತು. ಆಳವಾದ ಪರ್ಯಾಲೋಚನೆಗೆ ಸಮಯವೂ ಬೇಕಾದೀತು.

"ನಾನೀಗ ಏಕಾಂತ ಸೆರೆಯಲ್ಲಿದ್ದೇನೆ. ಯಾರೊಡನೆಯೂ ಮಾತನಾಡುವ ಹಾಗಿಲ್ಲ. ಧಾರವಾಡದಿಂದ ಬಂದ ಹಲವು ಖೈದಿಗಳು ಇದೇ ಸೆರೆಮನೆಯಲ್ಲಿದ್ದಾರೆ. ನನಗಾರೂ ಕಾಣಿಸಲಿಲ್ಲ. ನನ್ನ ಸಹವಾಸದಿಂದ ಅವರಿಗೇನು ಹಾನಿಯಾದೀತೆನ್ನುವುದು ನನಗೆ ಗೊತ್ತಿಲ್ಲ. ಅವರಿಂದಲೂ ನನಗೆ ಹಾನಿಯಾಗದು. ನಾವಿಬ್ಬರೂ ಸೇರಿ ಇಲ್ಲಿಂದ ಓಡಿ ಹೋಗುವ ಪ್ರಯತ್ನ ಮಾಡಲಾರೆವು. ಅಂಥ ಪಿತೂರಿಯನ್ನೂ ಮಾಡೆವು. ನಾವು ಹಾಗೆ ಮಾಡುವುದಾದರೆ ಅದರಿಂದ ನಮಗಿಂತ ಹೆಚ್ಚಾಗಿ ಸರ್ಕಾರಕ್ಕೇ ಅನುಕೂಲವಾದೀತು. ಬಹುಶಃ ನನ್ನ ಅಪಾಯಕರ ವಿಚಾರಗಳು ಅವರಲ್ಲಿ ಹರಡಬಾರದೆಂದು ರಕ್ಷಿಸಲು ಪ್ರಯತ್ನವಾದರೆ ನನ್ನನ್ನೀಗ ಪ್ರತ್ಯೇಕಗೊಳಿಸುವುದು ಬಹಳ ತಡವಾಯಿತು. ಅವರಲ್ಲಿ ಈ ವಿಚಾರಗಳಾಗಲೇ ಚೆನ್ನಾಗಿ ಬೇರೂರಿವೆ. ಇಲ್ಲಿ ನಾನು ಮಾಡಬಹುದಾದುದು ಒಂದೇ ಪ್ರಚಾರ. ಚರಕದ ಬಗ್ಗೆ ಅವರ ಉತ್ಸಾಹ ಇಮ್ಮಡಿಸುವಂತೆ ಮಾಡಿಯೇನು.

"ಪ್ರತ್ಯೇಕಗೊಳಿಸುತ್ತಿರುವ ಬಗ್ಗೆ ನಾನಾಡಿದುದು ದೂರಿನ ಮಾತಲ್ಲ. ನಾನೀಗ ಹರ್ಷವಾಗಿಯೇ ಇದ್ದೇನೆ. ಏಕಾಂತತೆ ನನ್ನ ಸಹಜ ಸ್ವಭಾವ. ಪ್ರಶಾಂತತೆಯನ್ನು ಪ್ರೀತಿಸುತ್ತೇನೆ. ಬಾಹ್ಯ ಪ್ರಪಂಚದಲ್ಲಿ ಸಮಯವೊದಗದೆ ಬದಿಗಿಟ್ಟಿದ್ದ ವ್ಯಾಸಂಗದಲ್ಲಿ ತೊಡಗಲು ನನಗೆ ಒಳ್ಳೆಯ ಅವಕಾಶವಾಗಿದೆ.

"ಆದರೆ ಎಲ್ಲ ಖೈದಿಗಳೂ ಇಂಥ ಏಕಾಂತ ಸೆರೆಯಲ್ಲಿರಲು ನನ್ನಂತೆ ಹರ್ಷಿಸಲಾರರು. ಆ ಶಿಕ್ಷೆ ಅಮಾನುಷವಾದುದು, ಅದರ ಅಗತ್ಯವೂ ಇಲ್ಲ. ಖೈದಿಗಳನ್ನು ಸರಿಯಾಗಿ ವಿಂಗಡಿಸಿ ಹಂಚುವುದರಿಂದ ಅದನ್ನು ಮಾರ್ಪಡಿಸಬಹುದು. ಈಗ ಎಲ್ಲ ರೀತಿಯ ಖೈದಿಗಳನ್ನೂ ಸಂಮ್ಮನೆ ಒಟ್ಟುಗೂಡಿಸಿ ಸೆರೆ ಹಾಕಲಾಗುತ್ತಿದೆ. ನಿರ್ದೇಶಕನಾದವನು ಎಷ್ಟೇ ಮಾನವೀಯ ದೃಷ್ಟಿ ಇದ್ದವನಾದರೂ ತನಗೆ ವಹಿಸಲ್ಪಟ್ಟಿರುವ ವಿವಿಧ ರೀತಿಯ ಸ್ತ್ರೀ ಪುರುಷರೆಲ್ಲರನ್ನೂ ನ್ಯಾಯೋಚಿತವಾಗಿ ನೋಡಿಕೊಳ್ಳುವುದು ಕಷ್ಟಸಾಧ್ಯ. ಅವನಿಗೆ ಸ್ವತಂತ್ರ ನಿರ್ಣಯದ ಅಧಿಕಾರವೂ ಇರುವುದಿಲ್ಲ. ಆದ್ದರಿಂದ ಆತ ಖೈದಿಗಳ ದೈಹಿಕ ವ್ಯವಸ್ಥೆಯನ್ನಷ್ಟೇ ಮಾಡಿ ಅವರ ಆತ್ಮದ ಆವಶ್ಯಕತೆಗಳನ್ನು ಅಸಡ್ಡೆ ಮಾಡುತ್ತಾನೆ.

"ರಾಜಕೀಯ ದುರುದ್ದೇಶಗಳಿಗೂ ಸೆರೆಮನೆಯನ್ನುಪಯೋಗಿಸಿಕೊಳ್ಳಲು ಸಾಧ್ಯ. ಜೈಲಿನ ನಾಲ್ಕು ಗೋಡೆಗಳ ಮಧ್ಯೆಯೂ ರಾಜಕೀಯ ಖೈದಿಯನ್ನು ಚಿತ್ರಹಿಂಸೆಗೊಳಪಡಿಸಬಹುದು.

"ಸೆರೆಮನೆಯಲ್ಲಿ ನನ್ನ ದಿನಚರಿ ತಿಳಿಸಿ ಈ ವರ್ಣನೆ ಮುಗಿಸುತ್ತೇನೆ. ನನ್ನ ಕೋಣೆ ಶುಭ್ರವಾಗಿ ಗಾಳಿ ಬೆಳಕು ಬರುವಂತೆ ಚೆನ್ನಾಗಿದೆ. ಬಯಲಿನಲ್ಲಿ ಮಲಗಲು ನನಗೆ ಅನುಮತಿ ಸಿಕ್ಕಿರುವುದು ಒಂದು ಭಾಗ್ಯ. ನನಗೆ ಹೊರಗೆ ಬಯಲಿನಲ್ಲೇ ಮಲಗಿ ಅಭ್ಯಾಸ. ಬೆಳಗಿನ ನಾಲ್ಕುಗಂಟೆಗೆ ಪ್ರಾರ್ಥನೆಗಾಗಿ ಏಳುತ್ತೇನೆ. ನನಗೆ ಕಂಠಪಾಠ ವಾಗಿರುವ ಶ್ಲೋಕಗಳನ್ನು ಹೇಳುತ್ತೇನೆ. ಬೆಳಗಿನ ಈ ಪ್ರಾರ್ಥನೆ ಆತಂಕವಿಲ್ಲದೆ ನಡೆಸುತ್ತಿದ್ದೇನೆಂದು ತಿಳಿದು ಸಬರ್ಮತಿ ಆಶ್ರಮವಾಸಿಗಳು ಹರ್ಷಿಸುತ್ತಾರೆಂದು ನಾನು ಬಲ್ಲೆ. ಬೆಳಕು ಹರಿದ ಮೇಲೆ ಆರು ಗಂಟೆಗೆ ನನ್ನ ವ್ಯಾಸಂಗ ಪ್ರಾರಂಭ. ನನಗಿಲ್ಲಿ ದೀಪಕೊಟ್ಟಿಲ್ಲವಾದ್ದರಿಂದ ಬೆಳಕಾಗುವವರೆಗೆ ಕಾಯಬೇಕು. ಸಂಜೆ ಕತ್ತಲಾಗುವ ಹೊತ್ತಿಗೆ, ಏಳು ಗಂಟೆಗೆ, ನನ್ನ ಕೆಲಸ ಮುಗಿಸುತ್ತೇನೆ. ರಾತ್ರಿ ಎಂಟಕ್ಕೆ ನನ್ನ ಸಂಜೆ ಪ್ರಾರ್ಥನೆ. ಅನಂತರ ವಿಶ್ರಾಂತಿ. ಕೋರಾನ್, ತುಳಸಿ ರಾಮಾಯಣ, ಕ್ರೈಸ್ತ ಧರ್ಮದ ಬಗ್ಗೆ ಕೆಲವು ಗ್ರಂಥಗಳು, ಉರ್ದುಪಾಠ ಮತ್ತಿತರ ಹಲವು ಪುಸ್ತಕಗಳನ್ನು ಅಧ್ಯಯನ ಮಾಡುತ್ತಿದ್ದೇನೆ. ಆರು ಗಂಟೆ ಈ ಬೌದ್ಧಿಕ ಅಭ್ಯಾಸ ನಡೆಯುತ್ತದೆ. ನಾಲ್ಕು ಗಂಟೆ ಚರಕದಿಂದ ನೂಲುವುದು, ಹತ್ತಿ ಎಕ್ಕುವುದು. ಮೊದಮೊದಲು ಹತ್ತಿಯ ಅಭಾವದಿಂದ ಕೇವಲ ಮೂವತ್ತು ನಿಮಿಷ ನೂಲುತ್ತಿದ್ದೆ. ಈಗ ಬೇಕಾದಷ್ಟು ಹತ್ತಿ ಒದಗಿಸುತ್ತಾರೆ. ಆದರೆ ಬಹಳ ಕೊಳೆ ಇರುತ್ತದೆ. ಎಕ್ಕುವ ಶಿಕ್ಷಣ ಪಡೆಯಲು ಇದು ಬಹಳ ಸಹಾಯಕ, ಒಂದು ಗಂಟೆ ಎಕ್ಕಿ ಮತ್ತೆ ಮೂರುಗಂಟೆ ನೂಲುತ್ತೇನೆ. ಅನುಸೂಯ ಬೆಹೆನ್, ಮಗನ್ ಲಾಲ್ ಗಾಂಧಿ, ಇವರು ದಾರಸುತ್ತುವ ಉರುಳೆಗಳನ್ನು ಕಳುಹಿಸಿದ್ದಾರೆ. ಇನ್ನೂ ಹೆಚ್ಚಿಗೆ ಬೇಡವೆಂದು ಅವರಿಗೆ ತಿಳಿಸಬೇಕು. ಅದರ ಬದಲು ಸ್ವಚ್ಛಮಾಡಿದ ಒಳ್ಳೆ ಹತ್ತಿ ಸ್ವಲ್ಪ ಕಳುಹಿಸಿದರೆ ತುಂಬ ಉಪಕಾರವಾಗುತ್ತದೆ. ಅದನ್ನೂ ಒಂದು ಸಾರಿಗೆ ಎರಡು ಪೌಂಡುಗಳಿಗಿಂತ ಹೆಚ್ಚು ಕಳುಹಿಸಬಾರದು. ನನ್ನದೇ ಉರುಳೆಗಳನ್ನು ಮಾಡಿ ಕೊಳ್ಳುವ ಪ್ರಯತ್ನದಲ್ಲಿದ್ದೇನೆ. ನೂಲುವವರು ಹತ್ತಿ ಎಕ್ಕುವುದನ್ನೂ ಕಲಿಯಬೇಕು. ಒಂದು ಗಂಟೆಯಲ್ಲಿ ನಾನು ಕಲಿತೆ. ನೂಲುವುದಕ್ಕಿಂತ ಅದು ಹೆಚ್ಚು ಕಷ್ಟದ ಕೆಲಸ.

"ನೂಲುವುದು ಹೆಚ್ಚು ಹೆಚ್ಚು ನನ್ನ ಆತ್ಮದ ಹಸಿವನ್ನು ತಣಿಸುತ್ತದೆ. ದಿನ ದಿನವೂ ಬಡವರಲ್ಲಿ ಬಡವರ ಸಮೀಪಕ್ಕೆ ಕರೆದೊಯ್ದು ಅವರಲ್ಲಿ ಭಗವಂತನ ದರ್ಶನ ವಾಗುತ್ತಿದೆ. ಸೂತ್ರಯಜ್ಞದ ನಾಲ್ಕು ಗಂಟೆ ಇತರ ಎಲ್ಲಕ್ಕಿಂತ ನನಗೆ ಅಮೂಲ್ಯ ವೆನಿಸುತ್ತದೆ. ನನ್ನ ಶ್ರಮದ ಪ್ರತಿಫಲ ಕಣ್ಣಮುಂದೆಯೇ ಇರುತ್ತದೆ. ಈ ಸಮಯದಲ್ಲಿ ಮನಸ್ಸು ನಿರ್ಮಲ. ಒಂದು ಕೆಟ್ಟ ಆಲೋಚನೆಯೂ ಬಾರದು. ಅದೇ ಸುಮ್ಮನೇ ಗೀತೆಯನ್ನೋ, ಕೋರಾನ್ ರಾಮಾಯಣಗಳನ್ನೋ ಓದುವಾಗ ಮನಸ್ಸು ಹತ್ತು ಕಡೆ ಹರಿಯುತ್ತಿರುತ್ತದೆ. ಚರಕಕ್ಕೆ ಕೈ ಹಾಕಿದೊಡನೆ ಮನಸ್ಸು ಒಂದು ಬಿಂದುವಿನಲ್ಲಿ ಏಕಾಗ್ರವಾಗಿ ಬಿಡುತ್ತದೆ. ಎಲ್ಲರಿಗೂ ಈ ಅನುಭವವಾಗುತ್ತದೆಂದು ನಾನೆನ್ನುವುದಿಲ್ಲ. ಕಡು ದಾರಿದ್ರ್ಯದಲ್ಲಿರುವರ ಭಾರತದ ಆರ್ಥಿಕ ವಿಮೋಚನೆ ಚರಕದೊಡನೆ ಸಮ್ಮಿಳಿತ ಎಂದು ನಾನು ಅರಿತಿದ್ದೇನೆ. ಅದರಿಂದ ನೂಲುವ ಕ್ರಿಯೆ ಅಪೂರ್ವ ಹರ್ಷ ಕೊಡುತ್ತದೆ.

ಒಂದು ಕಡೆ ಚರಕ ಮತ್ತೊಂದು ಕಡೆ ಪುಸ್ತಕಗಳು ಇವೆರಡರ ಮಧ್ಯೆ ನನ್ನ ಹೃದಯ ಡೋಲಾಯಿಸುತ್ತದೆ. ಮುಂದಿನ ಕಾಗದದಲ್ಲಿ ಬಹುಶಃ ನಾನು ಹೆಚ್ಚು ಸಮಯವನ್ನು ನೂಲುವುದು ಎಕ್ಕುವುದರಲ್ಲೇ ಕಳೆಯುತ್ತೇನೆಂದು ಬರೆದೇನು.

"ಮೌಲಾನಾ ಅಬ್ದುಲ್ ಬಾರಿ ಈಗ ನೂಲುವುದಕ್ಕೆ ಪ್ರಾರಂಭಿಸಿರುವುದಾಗಿ ಬರೆದಿದ್ದರು. ಅದರ ಪ್ರಗತಿಯಲ್ಲಿ ಅವರು ನನ್ನೊಡನೆ ಜೊತೆಯಾಗುವಂತೆ ತಿಳಿಸಿ. ಅವರ ಮೇಲ್ಪಂಕ್ತಿ ಇತರರಿಗೂ ಈ ಮುಖ್ಯ ಕೆಲಸ ಮಾಡಲು ಪ್ರೇರಣೆಯಾಗುತ್ತದೆ. ಇದರ ಮೇಲೆ ನಾನೊಂದು ಸಣ್ಣ ಮಾರ್ಗದರ್ಶಿ ಪುಸ್ತಕ ಬರೆದಿದ್ದೇನೆ. ಅದನ್ನು ಆಶ್ರಮವಾಸಿಗಳಿಗೆ ಕಳುಹಿಸುತ್ತೇನೆಂದು ತಿಳಿಸಿ. ಹಾಗೆಯೇ ಧರ್ಮದ ಬಗ್ಗೆ ಒಂದು ಮಾರ್ಗದರ್ಶಿ ಮತ್ತು ದಕ್ಷಿಣ ಆಫ್ರಿಕಾದಲ್ಲಿ ನಮ್ಮ ಸತ್ಯಾಗ್ರಹದ ಇತಿಹಾಸ, ಈ ಪುಸ್ತಕಗಳನ್ನು ಸಿದ್ಧ ಮಾಡುವ ಯೋಚನೆಯಿದೆ. ಸಾಧ್ಯವಾದೀತು.

"ದಿನಚರಿಯನ್ನು ಇನ್ನೂ ಪರಿಷ್ಕರಿಸಲು ದಿನಕ್ಕೆ ಮೂರು ಬಾರಿಗೆ ಬದಲಾಗಿ ಎರಡೇ ಬಾರಿ ಊಟ ಮಾಡುತ್ತಿದ್ದೇನೆ. ಆರೋಗ್ಯ ಚೆನ್ನಾಗಿದೆ. ಆಹಾರದ ಬಗ್ಗೆ ಮೇಲ್ವಿಚಾರಕರು ಸಹಕಾರಿಗಳಾಗಿದ್ದಾರೆ. ಮೂರು ದಿನಗಳಿಂದ ಆಡಿನ ಹಾಲು, ಬೆಣ್ಣೆ ಕೊಡುತ್ತಾರೆ. ಸ್ವಲ್ಪ ದಿನಗಳಲ್ಲೇ ಚಪಾತಿಗಳನ್ನೂ ಮಾಡಿಕೊಳ್ಳುವ ನಂಬಿಕೆಯಿದೆ.

"ಬೆಚ್ಚಗಿನ ಎರಡು ಕಂಬಳಿಗಳಲ್ಲದೆ ಒಂದು ಚಾಪೆ ಎರಡು ಚದ್ದರಗಳನ್ನು ಕೊಟ್ಟಿದ್ದಾರೆ. ಈಚೆಗೆ ಒಂದು ತಲೆದಿಂಬೂ ಬಂತು. ಅದಿಲ್ಲದಿದ್ದರೂ ನನಗೆ ತೊಂದರೆ ಯಿರಲಿಲ್ಲ. ಪುಸ್ತಕಗಳನ್ನೋ, ಬಟ್ಟೆಗಳನ್ನೋ ದಿಂಬಾಗಿ ಉಪಯೋಗಿಸುತ್ತಿದ್ದೆ. ರಾಜ ಗೋಪಾಲಾಚಾರಿ ತಮ್ಮ ಪ್ರಭಾವವನ್ನೆಲ್ಲಾ ಪ್ರಯೋಗಿಸಿ ನನಗೆ ದಿಂಬನ್ನು ಕೊಡಿಸಿದ್ದಾರೆ. ಸಣ್ಣ ಸ್ನಾನದ ಮನೆ ನನಗಾಗಿ ಇದೆ. ಬೀಗಹಾಕಿಕೊಳ್ಳಬಹುದು. ಕೆಲಸಕ್ಕಾಗಿ ಒಂದು ವಿಶೇಷ ಕೋಣೆಯನ್ನೂ ಬಿಟ್ಟುಕೊಟ್ಟಿದ್ದಾರೆ. ಬೇರೆ ಕಾರ್ಯಕ್ಕೆ ನಿಯೋಜಿತವಾಗಿಲ್ಲ ದಿರುವಾಗ ನಾನು ಉಪಯೋಗಿಸಬಹುದು. ಸ್ವಚ್ಛತೆ ಈಗ ಎಷ್ಟೋ ಸುಧಾರಿಸಿದೆ.

"ಆದ್ದರಿಂದ ನನ್ನ ಬಗ್ಗೆ ಸ್ನೇಹಿತರು ಕಾತುರರಾಗಬೇಕಾಗಿಲ್ಲ. ಹಕ್ಕಿಯಂತೆ ಹರ್ಷ ವಾಗಿದ್ದೇನೆ. ಹೊರಗಿದ್ದು ಸಾಧಿಸಬಹುದಾದ್ದನ್ನೇ ಇಲ್ಲಿಯೂ ಮಾಡುತ್ತಿದ್ದೇನೆಂಬ ಸಮಾಧಾನವಿದೆ. ನನಗಿದೊಂದು ಶಿಕ್ಷಣ ಶಾಲೆ. ಸಹಕಾರ್ಯಕರ್ತರಿಂದ ನನ್ನನ್ನು ಪ್ರತ್ಯೇಕಿಸಿರುವುದೂ ಒಳ್ಳೆಯದೇ. ನಮ್ಮದು ಸ್ವತಂತ್ರವಾಗಿ ವಿಕಸಿತವಾಗುವ ಜೀವಂತ ಚಳುವಳಿಯೋ, ಒಬ್ಬ ವ್ಯಕ್ತಿಯ ಸುತ್ತ ಹೆಣೆದುಕೊಂಡ ಕ್ಷಣಿಕ ಆಂದೋಲನವೋ ಎನ್ನುವುದು ಸ್ಪಷ್ಟವಾದೀತು. ನನಗಂತು ಯಾವ ಭಯವೂ ಇಲ್ಲ. ಹೊರಗೆ ಏನಾಗುತ್ತಿದೆ ಎಂದು ತಿಳಿಯುವ ಕುತೂಹಲವೂ ಇಲ್ಲ. ನನ್ನ ಹೃದಯಾಂತರಾಳದ ನಂಬಿಕೆಯಿಂದ ಬರುವ ಪ್ರಾರ್ಥನೆ ಪ್ರಾಮಾಣಿಕವಾದರೆ ಎಷ್ಟೋ ಉಪಯೋಗವಾದೀತು. ಮಿಕ್ಕ ಗಡಿಬಿಡಿಯ ಚಟುವಟಿಕೆಗಳಿಗಿಂತ ಅದು ಹೆಚ್ಚು ಶಕ್ತವಾದುದು.

“ಗೆಳೆಯರಾದ ಸಿ. ಆರ್. ದಾಸರ ಆರೋಗ್ಯ ಕುರಿತು ಆತಂಕಗೊಂಡಿದ್ದೇನೆ. ಅವರ ಪತ್ನಿ ಈ ಬಗೆಗೆ ನನಗೆ ಏನೂ ತಿಳಿಸದೇ ಹೋದುದಕ್ಕಾಗಿ ಅವರನ್ನು ಆಕ್ಷೇಪಿಸುತ್ತೇನೆ. ಮೋತಿಲಾಲರ ಉಬ್ಬಸರೋಗ ಕಡಿಮೆಯಾಗಿದೆಯೆಂದು ನಂಬಿದ್ದೇನೆ.

“ನನ್ನ ಹೆಂಡತಿಗೆ ನನ್ನನ್ನು ಇಲ್ಲಿ ಬಂದು ಕಾಣಬೇಡವೆಂದು ತಿಳಿಸಿ. ದೇವದಾಸನು ಇಲ್ಲಿ ಬಂದಾಗ ದೊಡ್ಡ ಹಗರಣವೇ ಆಯಿತು. ಸೆರೆಮನೆಯ ಮುಖ್ಯ ಅಧಿಕಾರಿಯ ಮುಂದೆ ನಿಂತಿದ್ದಾಗ ದೇವದಾಸನನ್ನು ಒಳಗೆ ಕರೆದಿದ್ದರು. ನಾನು ನಿಂತಿರುವುದನ್ನು ನೋಡಿ ಅವನಿಗೆ ಸಹಿಸಲಾಗಲಿಲ್ಲ. ಅವನು ಆತ್ಮಾಭಿಮಾನಿ. ಆರ್ದ್ರ ಹೃದಯದವನು. ನನ್ನನ್ನು ಕಂಡೊಡನೆ ದುಃಖ ಉಕ್ಕಿಬಂದು ಬಿಟ್ಟಿತು. ಅವನ ಕಣ್ಣೀರೊರೆಸಿ ಸಮಾಧಾನ ಪಡಿಸುವುದೇ ಕಷ್ಟವಾಯಿತು. ನಾನೀಗ ಒಬ್ಬ ಖೈದಿ ಎಂದು ಅವನಿಗರಿವಾಗಬೇಕಾಗಿತ್ತು. ಖೈದಿಯಾದವನು ಮುಖ್ಯಾಧಿಕಾರಿಯ ಸಾನ್ನಿಧ್ಯದಲ್ಲಿ ಕುಳಿತುಕೊಳ್ಳುವುದು ಸಾಧ್ಯವಿಲ್ಲ. ಆದರೆ ನೋಡಲು ಬಂದ ರಾಜಾಜಿಯವರಿಗೆ ದೇವದಾಸನಿಗೆ ಕುಳಿತುಕೊಳ್ಳಲು ಅವರು ಹೇಳಬಹುದಿತ್ತು. ಮುಖ್ಯಾಧಿಕಾರಿಗೆ ಸೌಜನ್ಯವಿರಲಿಲ್ಲವೆಂದಲ್ಲ. ಇಂಥ ಸಭೆಗಳು ಅವನಿಗೆ ತೀರ ಹೊಸದು; ಅಷ್ಟೇ. ನನ್ನ ಬಗ್ಗೆ ಸೌಜನ್ಯ ತೋರಿಸುವ ಅಪಾಯಕ್ಕೆ ಅವನು ಕೈಹಾಕಲಿಲ್ಲ. ನನ್ನ ಹೆಂಡತಿ ಇಲ್ಲಿ ಬಂದು ಮತ್ತೆ ಈ ಘಟನೆ ಜರಗುವುದು ಬೇಡ. ಅಲ್ಲದೆ ನನ್ನ ಬಗ್ಗೆ ವಿಶೇಷ ರಿಯಾಯಿತಿ ತೋರಿಸಿ ಬಂದಾಗ ಕುರ್ಚಿಗಳನ್ನೊದಗಿಸಿ ಕೊಡುವುದೂ ಬೇಡ. ನಿಂತುಕೊಂಡಿದ್ದರೂ ನನ್ನ ಗೌರವಕ್ಕೆ ಏನೂ ಚ್ಯುತಿಯಿಲ್ಲ. ನಮಗೆ ತಾಳ್ಮೆಯೂ ಅಗತ್ಯ. ಇಂಗ್ಲಿಷರು ಇನ್ನೂ ಹೆಚ್ಚು ಸುಸಂಸ್ಕೃತರಾಗಿ ತಮ್ಮ ಸುಂದರ ವಿನಯಶೀಲತೆಯನ್ನು ಎಲ್ಲ ಪರಿಸರಕ್ಕೂ ಸಾರ್ವತ್ರಿಕವಾಗಿ ಅನ್ವಯಿಸಿ ಭಾರತೀಯರಾದ ನಮ್ಮಲ್ಲೂ ಬಲಾತ್ಕಾರವಿಲ್ಲದೆ ವಿನಯ ತೋರಿಸುವ ತನಕ ನಾವು ತಾಳಬೇಕು. ಅದು ಅಲ್ಲದೆ ನನ್ನನ್ನು ಮಿತ್ರರು ಬಂದು ಭೇಟಿಯಾಗಬೇಕೆಂಬ ಬಯಕೆಯೂ ನನಗಿಲ್ಲ. ಬಂಧುಗಳೂ ಸ್ನೇಹಿತರೂ ಈ ಬಗ್ಗೆ ಸಂಯಮ ತೋರಿಸಬೇಕು. ಕೇವಲ ವ್ಯಾವಹಾರಿಕ ಕೆಲಸಗಳಿಗಾಗಿ ಬಂದುನೋಡಬಹುದು. ಅದಕ್ಕೆ ಬಾಹ್ಯ ಪರಿಸ್ಥಿತಿಗಳು ಏನೂ ಅಡ್ಡಿಯಾಗುವುದಿಲ್ಲ.

“ಪಂಚ್‌ಮಹಲ್, ಖಾಂದೇಶ್ ಮತ್ತು ಆಗ್ರಾಗಳಲ್ಲಿನ ಬಡ ಮುಸ್ಲಿಂ ಮಹಿಳೆಯರಿಗೆ ಚೋಟಾ ನಿಮಿಯಾನ್ ಅವರು ಚರಕಗಳನ್ನು ಹಂಚಿದ್ದಾರೆಂದು ನಂಬಿದ್ದೇನೆ. ಆಗ್ರಾದಿಂದ ನನಗೆ ಪತ್ರ ಬರೆದ ಪಾದ್ರಿ ಮಹಿಳೆಯ ಹೆಸರು ಮರೆತಿದ್ದೇನೆ. ಇದು ನನ್ನ ದುರದೃಷ್ಟ. ಬಹುಶಃ ಕ್ರಿಸೋದಾಸ್ ಅವರಿಗೆ ಅದು ಜ್ಞಾಪಕವಿರಬೇಕು.

“ಉರ್ದು ಪುಸ್ತಕ ಇನ್ನೇನು ಮುಗಿಯಿತು. ಉರ್ದು ನಿಘಂಟು ಒಂದು ಕಳುಹಿಸಿದರೆ ಉಪಕೃತನಾಗುತ್ತೇನೆ. ನೀವೂ ಡಾ. ಅನ್ಸಾರಿ ಸೇರಿ ಚುನಾಯಿಸಿದ ಪುಸ್ತಕಗಳನ್ನೂ ಸ್ವಾಗತಿಸುತ್ತೇನೆ.

"ನೀವು ಆರೋಗ್ಯವೆಂದು ನನ್ನ ನಂಬಿಕೆ. ಶಕ್ತಿ ಮೀರಿ ಕೆಲಸ ಮಾಡಬೇಡಿ ಎಂದು ನಿಮಗೆಹೇಳುವುದು ಅಸಾಧ್ಯ. ಭಗವಂತ ನಿಮ್ಮ ಆರೋಗ್ಯ ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ."

ಮೊದಲಿನ ಕೆಲವು ಕಹಿ ಪ್ರಸಂಗಗಳ ನಂತರ ಜೈಲು ಅಧಿಕಾರಿಗಳಿಗೂ ಗಾಂಧೀಜಿಗೂ ಪರಸ್ಪರ ಬಾಂಧವ್ಯ ಸುಧಾರಿಸಿತು. ಆದರೆ ಸೆರೆಮನೆಯೊಳಗಿನ ಜೀವನ ನಿರಾತಂಕವಾಗಿ ನಡೆಯುತ್ತಿರಲಿಲ್ಲ. ತಮಗೆ ವಿಶೇಷ ಸೌಲಭ್ಯಗಳು ಬೇಕಿಲ್ಲ; ಆದರೆ ಇತರ ಖೈದಿಗಳಿಗಿ ಕಡಿಮೆಯಾಗಬಾರದು ಎಂದು ಗಾಂಧೀಜಿ ಒತ್ತಾಯ ಮಾಡುತ್ತಿದ್ದರು. ಮೇ ಒಂದರಂದು ಮತ್ತೆ ನವೆಂಬರ್ ೧೨, ೧೯೨೩ರಂದು ಜೈಲು ಸೂಪರಿಂಟೆಂಡೆಂಟರಿಗೆ ಹೀಗೆ ಬರೆದರು:

"ಕೆಲವು ಖೈದಿಗಳನ್ನು ವಿಶೇಷ ವರ್ಗದವರೆಂದು ಪಟ್ಟಿ ಮಾಡಿ ಅದರಲ್ಲಿ ನನ್ನ ಹೆಸರನ್ನೂ ಸೇರಿಸಿದ್ದ ಸರ್ಕಾರೀ ಆಜ್ಞೆಯನ್ನು ನೀವು ಕೃಪೆಯಿಟ್ಟು ನನಗೆ ತೋರಿಸಿದ್ದೀರಿ. ಮಿತ್ರರಾದ ಕೌಜಲಗಿ, ಜೈರಾಮ್‌ದಾಸ್, ಭನ್ಸಾಲಿಯಂತಹವರನ್ನು ಕಠಿಣ ಶ್ರಮ ಮಾಡಬೇಕಾದ ವರ್ಗಕ್ಕೆ ಸೇರಿಸಿದ್ದೀರಿ. ನನಗಿಂತ ಅವರು ಹೀನ ಅಪರಾಧಿಗಳೆಂದೇಕೆ ಪರಿಗಣಿಸಬೇಕು? ಬಹುಶಃ ನನಗಿಂತ ಅವರು ಹೆಚ್ಚು ಉತ್ತಮ ವರ್ಗಕ್ಕೇ ಸೇರಿದಂತಹವರು. ಇಷ್ಟಂತೂ ನಿಜ, ಅವರು ನಿತ್ಯಜೀವನದಲ್ಲಿ ಅನುಕೂಲ ಸೌಲಭ್ಯಗಳನ್ನು ಹೆಚು ಬಳಸುವ ಅಭ್ಯಾಸವಿದ್ದವರು. ಬಹುಕಾಲದ ಅಭ್ಯಾಸದಿಂದ ನಾನು ಶ್ರಮ ಜೀವನಕ್ಕೆ ಒಗ್ಗಿಕೊಂಡಂತೆ ಅವರು ಒಗ್ಗಿಲ್ಲ. ಅಂತಹವರನ್ನು ವಿಶೇಷ ವರ್ಗದ ಖೈದಿಗಳ ಪಟ್ಟಿಗೆ ಸೇರಿಸದೆ ಇರುವ ತನಕ ನನಗೆ ಕೊಡಲಾಗಿರುವ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಲಾರೆ. ಆದ್ದರಿಂದ ದಯಮಾಡಿ ಈ ವಿಶೇಷ ವರ್ಗದ ಪಟ್ಟಿಯಿಂದ ನನ್ನ ಹೆಸರನ್ನು ಹೊಡೆದುಹಾಕಿದರೆ ತುಂಬಾ ಕೃತಜ್ಞನಾಗಿರುತ್ತೇನೆ.

"ನನ್ನ ಮಿತ್ರ ಅಬ್ದುಲ್ ಗನಿಯವರಿಗೆ ಆಹಾರದ ಅಧಿಕೃತ ವೆಚ್ಚವನ್ನು ಮೀರುವಂತಹ ಯಾವುದೇ ಊಟದ ಏರ್ಪಾಟು ಮಾಡಲಾಗುವುದಿಲ್ಲವೆಂದು ತಿಳಿಸಿದ್ದಿರಿ. ಈ ಹಿಂದೆ ಅಧಿಕಾರಿಗಳು ನನಗೂ ನನ್ನ ಎಲ್ಲ ಮಿತ್ರರಿಗೂ ನಮ್ಮದೇ ರೀತಿಯ ಊಟ ತಿಂಡಿಗಳನ್ನು ಏರ್ಪಡಿಸಿಕೊಳ್ಳಲು ಅನುಮತಿ ನೀಡಿದ್ದರೆಂಬುದನ್ನು ಆಗ ನಿಮ್ಮ ಗಮನಕ್ಕೆ ತಂದಿದ್ದೆ. ಹೀಗೆ ಮಿತ್ರ ಗನಿಯವರಿಗೆ ನಿರಾಕರಿಸಲ್ಪಟ್ಟ ಸೌಲಭ್ಯವನ್ನು ನಾನು ಪಡೆಯುವುದು ನನಗೆ ಸರಿತೋರುವುದಿಲ್ಲವೆಂದೂ ನಿಮಗೆ ತಿಳಿಸಿದ್ದೆ. ನನ್ನ ಆಹಾರವನ್ನೂ ನಿಯಮಬದ್ಧ ಅಳತೆಗೆ ಮೀರದಂತೆ ಬದಲಾಯಿಸಿ ಅಬ್ದುಲ್ ಗನಿಯವರಿಗೆ ಕೊಡುವ ಊಟವನ್ನೇ ನನಗೂ ಕೊಡಲು ತಿಳಿಸಿದ್ದೆ. ಮೇಲಧಿಕಾರಿಗಳು ಸದ್ಯದಲ್ಲೇ ಭೇಟಿಕೊಡುವವರೆಂದೂ ಆಗ ಈ ಪ್ರಶ್ನೆಯನ್ನು ಚರ್ಚಿಸಿ ಬಗೆಹರಿಸಲಾಗುವುದೆಂದೂ ಅಲ್ಲಿಯವರೆಗೆ ನಾನು ಹಿಂದಿನಂತೆಯೇ ಆಹಾರ ಸಾಮಗ್ರಿಗಳನ್ನು ಸ್ವೀಕರಿಸಬೇಕೆಂದೂ ನೀವು ದಯಮಾಡಿ ತಿಳಿಸಿದ್ದಿರಿ. ಈಗ ಹತ್ತು ದಿವಸ ಕಾದಿದ್ದೇನೆ. ನನ್ನ ಮನಸ್ಸಾಕ್ಷಿಯಂತೆ ನಡೆದುಕೊಳ್ಳಲು ಇನ್ನು ಕಾಯಲಾರೆ. ಮೇಲಧಿಕಾರಿಯೊಡನೆ

ನಾನು ಚರ್ಚೆ ಮಾಡುವ ವಿಷಯವೂ ಇಲ್ಲ. ಅಬ್ದುಲ್ ಗನಿಯುವರಿಗೆ ನೀವು ಹಾಕಿದ ನಿಯಮಗಳನ್ನು ಕುರಿತು ನನ್ನ ಆಕ್ಷೇಪಣೆ ಏನೂ ಇಲ್ಲ. ಅವರಿಗೆ ಸಹಾಯ ಮಾಡ ಬೇಕೆಂದರೂ ನೀವು ಅಸ್ವತಂತ್ರರೆಂದು ನಾನು ಬಲ್ಲೆ. ಸೆರೆಮನೆಯ ಆಹಾರ ನಿಯಮ ಗಳನ್ನು ಬದಲಿಸುವ ಪ್ರಯತ್ನದಲ್ಲೂ ನಾನು ತೊಡಗಿಲ್ಲ. ಸೌಲಭ್ಯಗಳಲ್ಲಿ ತಾರತಮ್ಯ ವಿರದಂತೆ ನಾನು ಎಚ್ಚರ ವಹಿಸಬೇಕಾದುದು ಅಗತ್ಯ. ಅದೊಂದೇ ನನ್ನ ಬಯಕೆ.

"ಆದ್ದರಿಂದ ಬರುವ ಬುಧವಾರದಿಂದ ನನಗೆ ಕೊಡುತ್ತಿರುವ ಕಿತ್ತಲೆ ಹಣ್ಣು, ದ್ರಾಕ್ಷಿಹಣ್ಣುಗಳನ್ನು ನಿಲ್ಲಿಸಿ ಬಿಡಿ. ಆದರೂ ನನ್ನ ಊಟದ ವೆಚ್ಚ ನಿಯಮಗಳಿಗಿಂತ ಹೆಚ್ಚಾಗಬಹುದು. ನನಗೆ ನಾಲ್ಕು ಪೌಂಡು ಆಡಿನ ಹಾಲೂ ಹೆಚ್ಚೇ. ನಿಯಮಿಂತ ವೆಚ್ಚಕ್ಕನುಗುಣವಾಗಿ ಕಡಿಮೆ ಮಾಡಲು ನೀವು ನಿರಾಕರಿಸುವವರೆಗೆ ಮನಸ್ಸಿಲ್ಲದಿದ್ದರೂ ಅಷ್ಟನ್ನು ತೆಗೆದುಕೊಳ್ಳುತ್ತಿರುತ್ತೇನೆ.

"ಇದರಲ್ಲಿ ಮನಸ್ತಾಪವೇನೂ ಇಲ್ಲವೆಂದು ಭರವಸೆ ಕೊಡುತ್ತೇನೆ. ನನ ಆಂತರಿಕ ಸಮಾಧಾನಕ್ಕಾಗಿ ನನ್ನ ಆಹಾರವನ್ನು ಹೀಗೆ ನಿಯಮಿತಗೊಳಿಸಬೇಕೆಂಬುದು ನನ್ನ ಪ್ರಾರ್ಥನೆ. ನೀವಿದನ್ನು ಅರಿತು ಅನುಮತಿ ನೀಡಬೇಕೆಂದು ಬೇಡುತ್ತೇನೆ."

ಒಂದು ತಿಂಗಳು ಗಾಂಧೀಜಿ ಕೇವಲ ಹಾಲನ್ನು ಸೇವಿಸುತ್ತಿದ್ದರು. ಪರಿಣಾಮವಾಗಿ ತೂಕ ಹದಿನಾಲ್ಕು ಪೌಂಡು ಇಳಿಯಿತು. ಕಸ್ತೂರಿ ಬಾ ಬಂದು ನೋಡಿ ಗಾಬರಿ ಯಾದರು. ಗಾಂಧೀಜಿ ನಿಶ್ಶಕ್ತರಾಗಿರುವುದನ್ನು ಕಂಡು ಎಂದಿನಂತೆ ಸರಿಯಾದ ಆಹಾರ ತೆಗೆದುಕೊಳ್ಳಲು ಮನವೊಲಿಸಿದರು. ಇನ್ನು ಮೇಲೆ ಆಕ್ಷೇಪಿಸಲು ಗಾಂಧೀಜಿಗೆ ಕಾರಣವಿಲ್ಲ ಎಂದರು ಸೂಪರಿಂಟೆಂಡೆಂಟರು. ಕಸ್ತೂರಿ ಬಾ "ನನ್ನ ಪತಿಯನ್ನು ನಾನು ಬಲ್ಲೆ. ಬಹಳ ಚೇಷ್ಟೆಯವರು" ಎಂದು ನಕ್ಕರು.

ಆಳವಾದ ವ್ಯಾಸಂಗ ಮಾಡಲು ಗಾಂಧೀಜಿ ಒಂದು ದೊಡ್ಡ ಕಾರ್ಯಕ್ರಮವನ್ನೇ ರೂಪಿಸಿದ್ದರು. ಅದು ನೆರವೇರಲು ಆರುವರ್ಷಗಳು ಸಾಲದಾಗಿತ್ತು. ಮೊದಲು ಮೂರು ತಿಂಗಳಿನಲ್ಲಿ ದೇಶದ ಜನ ಇಡಿಯಾಗಿ ಜಾಗೃತವಾಗುವ ಆಸೆಯಿಟ್ಟುಕೊಂಡಿದ್ದರು. "ವಿದೇಶಿವಸ್ತ್ರ ಬಹಿಷ್ಕಾರ ಪೂರ್ಣವಾಗಿ ಬಿಡುತ್ತದೆ, ಸೆರೆಮನೆಯ ಬಾಗಿಲುಗಳು ತೆರೆಯುತ್ತವೆ"–ಎಂದು ಕನಸು ಕಂಡಿದ್ದರು. ಬರುಬರುತ್ತಾ "ತಾಳ್ಮೆಯಿಂದ ಸಂತತ ಶ್ರಮದಿಂದ ದೇಶವನ್ನು ಸಂಘಟಿಸಲು ಕಡೆಯ ಪಕ್ಷ ಐದು ವರ್ಷಗಳಾದರೂ ಬೇಕು" ಎಂದು ಅರಿತುಕೊಂಡರು. ಅಲ್ಲಿಂದಾಚೆ ತಮ್ಮ ವ್ಯಾಸಂಗದಲ್ಲಿ ನವಯುವಕರಂತೆ ತಲ್ಲೀನರಾದರು. ಐವತ್ತನಾಲ್ಕು ವರ್ಷದ ಇಳಿವಯಸ್ಸಿನವರು ಇಪ್ಪತ್ತನಾಲ್ಕರ ಹರಯದ ವಿದ್ಯಾರ್ಥಿಯಾದರು. ತಮ್ಮ ಜೀವನದ ಕ್ಷಣ ಕ್ಷಣವನ್ನೂ ಲೆಕ್ಕ ಹಾಕಿ ಒಂದು ನಿಮಿಷ ವನ್ನೂ ವ್ಯರ್ಥಮಾಡದೆ ೧೫೦ ಗ್ರಂಥಗಳನ್ನೂ ಓದಿ ಪೂರೈಸಿದರು. ಧರ್ಮ, ಸಾಹಿತ್ಯ, ಮಾನವಿಕ ಹಾಗೂ ನೈಸರ್ಗಿಕ ವಿಜ್ಞಾನ ಅದರಲ್ಲಿ ಸೇರಿತ್ತು. ಗುಜರಾತಿ ಭಾಷೆಯಲ್ಲಿ ಸಂಪೂರ್ಣ ಮಹಾಭಾರತ ಹಿಂದೂ ಶಾಸ್ತ್ರದ ಷಡ್ದರ್ಶನಗಳನ್ನು ಓದಿ ಮುಗಿಸಿದರು.

ಇಂಗ್ಲಿಷಿನಲ್ಲಿ ಬುಲ್ಹರ್, ಭಾಷಾಂತರಿಸಿರುವ ಮನುಸ್ಮೃತಿ, ಮ್ಯಾಕ್ಸಮುಲ್ಲರನ ಉಪನಿಷತ್ತುಗಳನ್ನು ವ್ಯಾಸಂಗ ಮಾಡಿದರು. ಬೌದ್ಧ, ಸಿಖ್, ಇಸ್ಲಾಂ, ಕ್ರೈಸ್ತ ಮತ್ತು ಜಾರತೂಷ್ಟ್ರ ಧರ್ಮಗಳ ಬಗ್ಗೆ ವ್ಯಾಪಕವಾಗಿ ಅಭ್ಯಸಿಸಿದರು. ಪಾಲ್‌ಕಾರಸ್‌ನ 'ಗಾಸ್ಪಲ್ ಆಫ್ ಬುದ್ಧ' ರೈಸ್ ಡೇವಿಸ್‌ನ 'ಲೆಕ್ಚರ್ಸ್ ಆಫ್ ಬುದ್ಧಿಸಮ್'; ಅಮೀರ್ ಆಲಿಯ 'ದಿ ಸ್ಪಿರಿಟ್ ಆಫ್ ಇಸ್ಲಾಂ' ಮತ್ತು 'ಹಿಸ್ಟರಿ ಆಫ್ ಸಾರಸೆನ್ಸ್' ಷಿಬ್ಲಿಯವರ 'ಲೈಫ್ ಆಫ್ ದಿ ಪ್ರಾಫೆಟ್' ಮಹಮ್ಮದಾಲಿಯವರ 'ಕೋರಾನ್' ಫರಾರನ 'ಸೀಕರ್ಸ ಆಫ್ಟರ್ ಗಾಡ್' ಮಾಲ್ಟನ್ನರ 'ಅರ್ಲಿ ಜೋರೋಆಸ್ಟ್ರಿಯಾನಿಸಮ್' ಜೇಮ್ಸನ 'ದಿ ವೆರೈಟೀಸ್ ಆಫ್ ರಿಲೀಜಸ್ ಎಕ್ಸಪೀರಿಯನ್ಸ' ಮತ್ತು ಹಾಪ್ಕಿನ್ಸನ 'ಆರಿಜನ್ ಅಂಡ್ ಎವಲ್ಯೂಷನ್ ಆಫ್ ರಿಲಿಜನ್' ಈ ಎಲ್ಲ ಗ್ರಂಥಗಳೂ ಸೇರಿದ್ದವು.

ಮಾನವಿಕ ವಿಜ್ಞಾನದಲ್ಲಿ ಗಿಬ್ಸನ್ನನ 'ರೋಮನ್ ಚಕ್ರಾಧಿಪತ್ಯದ ಪತನ' ಬೇಕನ್ನನ 'ವಿಸ್ಡಮ್ ಆಫ್ ದಿ ಏನ್ಷೆಂಟ್ಸ್' ಬಕಲ್‌ನ 'ನಾಗರಿಕತೆಯ ಚರಿತ್ರೆ' ಹೇಕಲ್‌ನ 'ಮಾನವನ ವಿಕಾಸ' ಗ್ಯೂಜಾಟ್ ಬರೆದ ಕಿಡ್ಸನ 'ಸೋಷಿಯಲ್ ಎವಿಲ್ಯೂಷನ್' ಮೋಟ್ಲಿಯ 'ರೈಸ್ ಆಫ್ ದಿ ಡಚ್ ರಿಪಬ್ಲಿಕ್' ವೆಲ್ಸನ 'ಜಗತ್ತಿನ ಇತಿಹಾಸ ರೇಖೆಗಳು' ಲೆಕಿಯ 'ಯೂರೋಪಿಯನ್ ಮಾರಲ್ಸ' ಮತ್ತು ರೋಸ್ ಬರಿಯ 'ಪಿಟ್ಟನ ಜೀವನ ಚರಿತ್ರೆ' ಗಯಟೆಯ 'ಫಾಸ್ಟ' ಠಾಕೂರರ 'ಸಾಧನ' ಬರ್ನರ್ಡ ಷಾನ 'ಮ್ಯಾನ್ ಅಂಡ್ ಸೂಪರ್ ಮ್ಯಾನ್' ಕೆಪ್ಲಿಂಗನ 'ಬ್ಯಾರೆಕ್ ರೂಮ್ ಬ್ಯಾಲೆಡ್ಸ್' ಇವೆಲ್ಲವನ್ನೂ ಓದಿದರು.

ಇದಾದ ಮೇಲೆ ಗಾಂಧೀಜಿ ತಾವು ಓದಿದ ಪುಸ್ತಕಗಳಿಗೆ ವ್ಯಾಖ್ಯಾನಗಳನ್ನೂ ಬರೆದಿಡುತ್ತಿದ್ದರು. ಇತಿಹಾಸಕ್ಕೆ ಆಧ್ಯಾತ್ಮಿಕ ಮೌಲ್ಯವೂ ಒಂದುಂಟೆಂಬುದರಲ್ಲಿ ಅವರಿಗೆ ಆಸಕ್ತಿ. "ನಮ್ಮ ಹಿಂದೂ ಪೂರ್ವಿಕರು ಚರಿತ್ರೆಯನ್ನು ಈಗಿನವರಂತೆ ಅರ್ಥಮಾಡದೆ ಸಣ್ಣ ಸಣ್ಣ ಘಟನೆಗಳಿಗೂ ವಿಶೇಷ ತಾಂತ್ರಿಕ ಜ್ಞಾನದ ಮಹಾಸೌಧನಗಳನ್ನೇ ನಿರ್ಮಿಸಿ ನಿಲ್ಲಿಸುತ್ತಿದ್ದರು. ಮಹಾಭಾರತ ಅಂಥ ಒಂದು ನಿದರ್ಶನ...... ಈ ಎಲ್ಲ ಕಥೆಗಳ ತಿರುಳೂ ಒಂದೇ; "ನಾಮ ರೂಪಗಳಿಗೆ ಮಹತ್ವವಿಲ್ಲ. ಅವು ಕ್ಷಣಿಕ, ಕೇವಲ ಘಟನೆಗಳನ್ನೆಣಿಸುವ ಚರಿತ್ರೆಕಾರನಿಂದ ಶಾಶ್ವತವಾದ ಮೌಲ್ಯವೊಂದು ನುಣುಚಿ ಹೋಗುತ್ತದೆ. ಸತ್ಯ ಇತಿಹಾಸಕ್ಕೆ ಅತೀತವಾದುದು" ಎಂದು ಬರೆದರು.

# ಸ್ವರಾಜ್ಯಪಕ್ಷ

(೧೯೨೨–೨೩)

ಗಾಂಧೀಜಿಯ ಬಂಧನವನ್ನು ದೇಶ ಗಂಭೀರವಾಗಿ ಸ್ವೀಕರಿಸಿ ಅವರ ಸಂದೇಶವಾದ ಆತ್ಮಸಂಯಮ ಮತ್ತು ಅಹಿಂಸೆಗಳನ್ನನುಸರಿಸಿ ನಡೆಯಲು ಸಂಕಲ್ಪ ಮಾಡಿತು. ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಹೀಗೆ ನಿರ್ಣಯಿಸಿತು: "ಗಾಂಧೀಜಿಯ ಬಂಧನದಿಂದ ದೇಶದ ನೆಚ್ಚಿನ ಪ್ರೀತಿಪಾತ್ರ ನಾಯಕ ಜನತೆಯಿಂದ ದೂರವಾಗಿದ್ದಾರೆ. ಆದರೆ ಪರದಾಸ್ಯದಲ್ಲಿದ್ದರೂ ಆ ಮಹಾಪುರುಷನ ಸಂದೇಶದ ಮೂಲಕ ಭಾರತ ಸತ್ಯ ಮತ್ತು ಅಹಿಂಸೆಗಳ ತನ್ನ ಆರ್ಷೇಯ ಸಂದೇಶವನ್ನು ಜಗತ್ತಿಗೆ ನೀಡುತ್ತಿರುವುದಕ್ಕಾಗಿ ಸಮಿತಿ ಸಂತೋಷಿಸುತ್ತದೆ."

ಗಾಂಧೀಜಿಯ ಈ ಸತ್ಯಾಗ್ರಹದ ಅಸ್ತ್ರ ಆಕರ್ಷಕವಾಗುತ್ತಿತ್ತು. ಜರ್ಮನಿಯ ರೂರ್ಹ್ ಜಿಲ್ಲೆಯಲ್ಲಿ ಜರ್ಮನರು ಆಂಶಿಕವಾಗಿ ಇದನ್ನು ಪ್ರಯೋಗಿಸಿದರು. ಆ ಬಗ್ಗೆ ಅಮೆರಿಕದ 'ನೇಷನ್' ಪತ್ರಿಕೆ ವಿಮರ್ಶೆ ಮಾಡಿ "ಅಸಹಕಾರ ಚಳುವಳಿಯ ನಿಷ್ಠಾವಂತ ಪ್ರವಾದಿಯಾದ ಗಾಂಧೀಜಿ, ಭಾರತದ ಹಿಂದೂ ಮುಸಲ್ಮಾನರನ್ನು ಒಟ್ಟು ಗೂಡಿಸಿ ಸ್ವರಾಜ್ಯ ಹೋರಾಟಕ್ಕೆ ಸಿದ್ಧಮಾಡಿದ್ದಾರೆ. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಬುನಾದಿಯೇ ಇದರಿಂದ ತತ್ತರಿಸುತ್ತಿದೆ. ನಿರ್ದಯರಾದ ಪಾಶ್ಚಿಮಾತ್ಯರ ಪ್ರಜ್ಞೆಗೂ ಅರಿವಾಗುವಂತೆ ಭಾರತ ಸ್ವಾತಂತ್ರ್ಯ ಸಂಗ್ರಾಮ ರಭಸದಿಂದ ಮುನ್ನುಗ್ಗುತ್ತಿದೆ. ಜರ್ಮನಿಗೂ ಇಂಥ ಒಬ್ಬ ಜರ್ಮನ್ ಗಾಂಧಿಯ ಆವಶ್ಯಕತೆಯಿದೆ" ಎಂದು ಬರೆಯಿತು.

೧೯೨೨ರ ಜೂನ್ ಏಳರಂದು ಲಕ್ನೋದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸೇರಿ ದೇಶದ ಪರಿಸ್ಥಿತಿಯನ್ನು ಪರಿಶೀಲಿಸಿತು. ಮೋತಿಲಾಲರು ಆಗತಾನೆ ಬಿಡುಗಡೆಯಾಗಿದ್ದರು. ಕಾರ್ಯದರ್ಶಿ ರಾಜಗೋಪಾಲಾಚಾರಿ ಹಾಜರಿದ್ದರು. ಇವರ ನೇತೃತ್ವದಲ್ಲಿ ಸವಿನಯ ಶಾಸನಭಂಗ ಚಳುವಳಿಯ ವಿಚಾರಣಾ ಸಮಿತಿಯೊಂದು ರಚಿತವಾಯಿತು. ಹಕೀಮ್ ಅಜಮಲ್ ಖಾನ್, ಮೋತಿಲಾಲ್ ನೆಹರು, ರಾಜಾಜಿ, ಡಾ. ಅನ್ಸಾರಿ, ವಿಠಲ್ ಭಾಯ್ ಪಟೇಲ್ ಮತ್ತು ಕಸ್ತೂರಿ ರಂಗಯ್ಯಂಗಾರ್ ಇವರನ್ನು ಸಮಿತಿಯ ಸದಸ್ಯರಾಗಿ ನೇಮಿಸಲಾಯಿತು.

ಗಾಂಧೀಜಿ ಯರವಾಡದ ಸೆರೆಯ ಗೋರಿಯಲ್ಲಿ ಅಜ್ಞಾತರಾದರು. ಆದರೆ ವಿಚಾರದ ಅಲೆಗಳನ್ನು ತಡೆಗಟ್ಟಲು ಸೆರೆಮನೆ ಅಸಮರ್ಥವಾಯಿತು. ಗಾಂಧೀ ಚೈತನ್ಯ ಭಾರತದ ನಾಡಿ ನಾಡಿಯಲ್ಲಿ ಹರಿಯತೊಡಗಿತು.

ಆಗಸ್ಟ್ ೧೯೨೨ರಲ್ಲಿ ಗುರುದ್ವಾರದ ಪೂಜಾಸ್ಥಳವಾದ 'ಗುರು–ಕ–ಬಾಗ್'ನಲ್ಲಿ ಅಹಿಂಸಾತ್ಮಕ ಬಲಿದಾನ ಪ್ರಾರಂಭವಾಯಿತು. ಧಾರ್ಮಿಕ ಆವೇಶದಿಂದ ಸಿಖ್ ಮತದ ಒಂದು ಶಾಖೆಯಾದ ಅಕಾಲಿ ಪಂಥದವರು ಈ ಸ್ಥಳವನ್ನು ಶುದ್ಧಗೊಳಿಸುವ

ಸಂಕಲ್ಪ ತೊಟ್ಟರು. ಅನೀತಿವಂತರು ಅವುಗಳನ್ನಾಕ್ರಮಿಸಿ ಬಿಟ್ಟುಕೊಡಲು ನಿರಾಕರಿಸಿದ್ದರು. ಸರ್ಕಾರ ಅವರಿಗೆ ಬೆಂಬಲವಾಗಿತ್ತು. ಆ ಪವಿತ್ರ ಸ್ಥಳದಲ್ಲಿ ಒಂದು ಸಾವಿರ ಅಕಾಲಿಗಳು ಸೇರಿದರು. ಹತ್ತು ಮೈಲಿ ಆಚೆಯಿದ್ದ ಅಮೃತಸರದ ಸ್ವರ್ಣಮಂದಿರ (ಗೋಲ್ಡನ್ ಟೆಂಪಲ್)ದಲ್ಲಿ ಇನ್ನೂ ನಾಲ್ಕು ಸಾವಿರ ಅಕಾಲಿಗಳು ಬಿಡಾರ ಮಾಡಿದರು. ಪ್ರತಿದಿನ ಇಪ್ಪತ್ತೈದು ಜನ ಭವ್ಯಾಕೃತಿಯ ಸಿಖ್ ಸತ್ಯಾಗ್ರಹಿಗಳು ಸ್ವರ್ಣ ಮಂದಿರದ ಪವಿತ್ರ ಸ್ಥಳದಲ್ಲಿ ಮಾತು ಮತ್ತು ಕೃತಿಗಳೆರಡರಲ್ಲೂ ಅಹಿಂಸಾವ್ರತ ಪಾಲನೆಯ ಪ್ರತಿಜ್ಞೆ ಮಾಡಿ ಅಲ್ಲಿಂದ ಗುರು–ಕ–ಬಾಗ್ ಕಡೆಗೆ ತೆರಳುತ್ತಿದ್ದರು. ಅವರಲ್ಲನೇಕರು ನಿವೃತ್ತ ಸೈನಿಕರು. ಹೋರಾಟದಲ್ಲಿ ಪ್ರಜ್ಞೆ ತಪ್ಪಿ ಕರೆದೊಯ್ಯಲ್ಪಡುತ್ತಿದ್ದರು. ಮೊದಲಿನ ಸಾವಿರ ಅಕಾಲಿಗಳ ಗುಂಪಿನಿಂದಲೂ ಹೀಗೆಯೇ ಇಪ್ಪತ್ತೈದು ಇಪ್ಪತ್ತೈದು ಜನ ಅದೇ ಪ್ರತಿಜ್ಞೆ ಮಾಡಿ ಹೊರಡುತ್ತಿದ್ದರು. ಆ ಪವಿತ್ರ ಸ್ಥಳ ಸೇರುವ ಮುನ್ನ ಪೋಲೀಸರು ಕಬ್ಬಿಣದ ಸಲಾಕಿಗಳನ್ನು ಹಿಡಿದು ಮೇಲೇರಿ ಬಂದು ಬಡಿದು ಚದುರಿಸಲು ನುಗ್ಗುತ್ತಿದ್ದರು. ಅಕಾಲಿಗಳು ತಮ್ಮ ಕರಿಯ ಪೇಟದ ಮೇಲೆ ಒಂದು ಹೂಮಾಲೆ ಸುತ್ತಿ ಪ್ರತಿದಿನ ನೇರವಾಗಿ ಅಲ್ಲಿ ಬಂದು ಎದುರಾಗುತ್ತಿದ್ದರು. ಅನತಿ ದೂರದಲ್ಲಿ ಮೌನ ಪ್ರಾರ್ಥನೆಯನ್ನು ಕೈಕೊಂಡು ಗಂಭೀರವಾಗಿ ನಿಲ್ಲುತ್ತಿದ್ದರು. ಪೋಲೀಸರ ನಿರ್ದಯ ಹೊಡೆತಕ್ಕೆ ಮಣಿಯದೆ ಎದುರಿಸಿದಾಗ ದೇಹದಿಂದ ರಕ್ತ ಚಿಮ್ಮುತ್ತಿತ್ತು. ಧೀರ ಸಿಖ್ಖರು ಪ್ರಜ್ಞೆ ತಪ್ಪಿ ಅಲ್ಲೇ ಉರುಳುತ್ತಿದ್ದರು. ಒಂದು ನೂತನ ವೀರಾವೇಶ ಅಲ್ಲಿ ಆವಿರ್ಭಾವವಾಗಿತ್ತು. ಆತ್ಮವೇದನೆಯ ಧೃತಿ ಉಕ್ಕಿನಂತೆ ಧೃಡವಾಗಿ ನಿಂತು ಆತ್ಮ ಶಕ್ತಿಯ ಹೋರಾಟ ತೇಜಸ್ವಿಯಾಗಿ ನಡೆಯಿತು.

ಅಕ್ಟೋಬರ್ ೩೦ರ ವೇಳೆಗೆ ವಿಚಾರಣಾ ಸಮಿತಿಯ ವರದಿ ಸಿದ್ಧವಾಯಿತು. ಆ ವೇಳೆಗೆ ಚಿತ್ತರಂಜನ್‌ದಾಸರು ಸೆರೆಯಿಂದ ಬಿಡುಗಡೆಯಾಗಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ವಹಿಸಿಕೊಂಡರು. ವರದಿಯನ್ನವರಿಗೆ ಒಪ್ಪಿಸಲಾಯಿತು. ಆ ಸಮೀಕ್ಷೆಯಲ್ಲಿ ಹೀಗೆ ಹೇಳಿದ್ದರು: “ ಇಂದು ಯರವಾಡದ ಸೆರೆಮನೆಯಲ್ಲಿ ಬಂಧಿಯಾಗಿರುವ ಯುಗ ಪುರುಷನ ಮಹತ್ಕಾರ್ಯವನ್ನು ಪರಿಶೀಲಿಸುವ ಕಾರ್ಯ ನಮಗೆ ಬಂದಿದೆ. ಈ ಗುರುತರ ಹೊಣೆಗಾರಿಕೆಯ ಕಾರ್ಯದ ಮಹತ್ವ ಹೆಜ್ಜೆ ಹೆಜ್ಜೆಗೆ ನಮಗರಿವಾಗತೊಡಗಿತು. ವಿಚಾರಣೆ ಮುಂದುವರಿದಂತೆ ಆಳವಾಗಿ ಮನದಟ್ಟಾಯಿತು. ಮೊನ್ನೆ ಮೊನ್ನೆಯ ವರೆಗೆ ತಾನೇ ಹೋರಾಟದ ನಿರ್ದೇಶಕನಾಗಿದ್ದ ಈ ಮಹಾಪ್ರವಾದಿ ಅತ್ಯಂತ ಪ್ರತಿಭಾನ್ವಿತ ರೀತಿಯಲ್ಲಿ ರಚಿಸಿದ ಕಾರ್ಯ ಯೋಜನೆ, ಅವರು ನೀಡುತ್ತಿದ್ದ ಮಾರ್ಗದರ್ಶನ ನಮಗೆ ಪ್ರತಿಯೊಂದು ಘಟ್ಟದಲ್ಲಿಯೂ ಸ್ಪಷ್ಟವಾಗುತ್ತಿತ್ತು. ಅವರು, ಪ್ರತ್ಯಕ್ಷ ಮಾರ್ಗ ದರ್ಶನದಿಂದ ದೂರವಿರುವಾಗ ಇವುಗಳನ್ನು ಲಘುವಾಗಿ ಎಣಿಸಲು ನಮಗೆ ಸಹಜವಾಗಿಯೇ ಅಸಾಧ್ಯವಾಗುತ್ತಿತ್ತು. ಆದರೆ ಮಹಾತ್ಮಾ ಗಾಂಧಿಯವರಲ್ಲಿ ನಮಗಿದ್ದ ಅಪಾರ ಗೌರವ ಮೆಚ್ಚಿಕೆಗಳು ನಮ್ಮನ್ನೆಂದೂ ಕರ್ತವ್ಯಕ್ಕೆ ಕುರುಡಾಗುವಂತೆ ಮಾಡಲು ಬಿಡಲಿಲ್ಲ. ಅವರ ಕಾರ್ಯವನ್ನು ಮರ್ಯಾದೆಯಿಂದಲೂ ವಿಚಕ್ಷಣ ದೃಷ್ಟಿಯಿಂದಲೂ

ಪರೀಕ್ಷಿಸಿದ್ದೇವೆ. ಈ ಮಹಾಚುಳುವಳಿಯ ಧ್ಯೇಯ ಧೋರಣೆಗಳಲ್ಲಿ ಪೂರ್ಣ ಶ್ರದ್ಧೆಯಿಟ್ಟು ಮುಕ್ತ ಮನಸ್ಸಿನಿಂದ ಸದ್ಯದ ಪರಿಸ್ಥಿತಿಯ ವಾಸ್ತವಾಂಶಗಳನ್ನು ಗಮನಿಸಲು ಉದ್ಯುಕ್ತರಾದೆವು. ಈಗಿನ–ಅಹಿಂಸಾತ್ಮಕ ಅಸಹಕಾರ ಯೋಜನೆಯ ವಿರುದ್ಧ ಪ್ರತಿಭಟಿಸಿ ನಿಲ್ಲುವುದನ್ನು ನಾವು ಸಂಪೂರ್ಣರಾಗಿ ನಿರಾಕರಿಸುತ್ತೇವೆ. ಆದರೆ ಅದರ ಅತ್ಯಂತ ಸೂಕ್ಷ್ಮ ವಿವರಗಳಿಗೆ ಅನಿವಾರ್ಯ ವಿಧೇಯತೆಯನ್ನಂಗೀಕರಿಸುವುದು ಸಾಧುವಲ್ಲವೆಂದು ಸ್ಪಷ್ಟಪಡಿಸುತ್ತೇನೆ."

ಸದ್ಯದ ಪರಿಸ್ಥಿತಿಯಲ್ಲಿ ಸವಿನಯ ಶಾಸನಭಂಗ ಅವ್ಯಾವಹಾರಿಕ ಎಂದು ಅಭಿಪ್ರಾಯ ಪಡಲಾಯಿತು. ಸದಸ್ಯರಲ್ಲಿ ಅರ್ಧಜನ ಅದನ್ನು ಬಿಟ್ಟು ಸರ್ಕಾರದ ಕೌನ್ಸಿಲ್ಲುಗಳಲ್ಲಿ ಕೆಲಸ ಮಾಡುವಂತಹ ಪ್ರತ್ಯೇಕ ಪಕ್ಷವನ್ನೇ ಕಟ್ಟಬೇಕೆಂದು ಸೂಚಿಸಿದರು. ಮೋತಿಲಾಲ್ ನೆಹರು, ಹಕೀಮ್ ಅಜಮಲ್ ಖಾನ್, ವಿಠ್ಠಲಭಾಯಿ ಪಟೇಲರು ಕೌನ್ಸಿಲ್ ಪ್ರವೇಶದ ಪರವಾಗಿಯೇ ಇದ್ದರು. "ಕಾಲ ಬದಲಾಗಿದೆ. ಪರಿಸ್ಥಿತಿ ವ್ಯತ್ಯಾಸ ವಾಗಿದೆ. ಹೋರಾಟ ಅನಿರ್ದಿಷ್ಟ ಕಾಲದ ವರೆಗೆ ನಡೆಯಬೇಕಾಗಿದೆ. ವರ್ಷ ವರ್ಷವೂ ಜನತೆಯ ಹಿತಾಸಕ್ತಿಗಳಿಗೆ ಸಂಬಂಧಪಟ್ಟ ಅನೇಕ ಕಾನೂನು ಕಟ್ಟಳೆಗಳು ಶಾಸನ ಸಭೆಯಿಂದ ಬರುತ್ತಲೇ ಇವೆ. ಇಚ್ಛೆಯಿರಲಿ ಬಿಡಲಿ ಜನತೆ ಅವನ್ನು ಅಂಗೀಕರಿಸ ಬೇಕಾಗಿದೆ. ಹೀಗಿರುವಾಗ ಜನತೆಯ ಮೇಲೆ ಕಾಂಗ್ರೆಸ್ಸಿನ ಪ್ರಭಾವ ಎಷ್ಟು ದಿನ ನಿಲ್ಲಬಲ್ಲದು ಎಂದು ಪರ್ಯಾಲೋಚಿಸಬೇಕು. ಈಗಿರುವ ಕೌನ್ಸಿಲ್ಲುಗಳನ್ನು ಕಾಂಗ್ರೆಸ್ ಮಾತ್ರ ಬಹಿಷ್ಕರಿಸಿ, ಚುನಾವಣೆಗಳಲ್ಲಿ ಹೆಚ್ಚು ಜನ ಭಾಗವಹಿಸಿದಲ್ಲಿ ಕಾಂಗ್ರೆಸ್ಸಿಗೆ ತೇಜೋವಧೆಯಾದೀತು. ಈ ಬಹಿಷ್ಕಾರ ಕಾರ್ಯಕ್ರಮ ಈಗ ಹಳಸಿದೆ. ಬರಲಿರುವ ಚುನಾವಣೆಗಳಲ್ಲಿ ಹೆಚ್ಚು ಜನ ಮತದಾನ ಮಾಡುವ ನಿರೀಕ್ಷೆಯೂ ಇದೆ. ಹಾಗಾದಲ್ಲಿ ನಾವು ಹಿಂದಿನ ಚುನಾವಣೆಯಲ್ಲಿ ಗೆದ್ದು ಬಂದುದು ಮರೆತು ಹೋಗಿ ನಮ್ಮ ಚಳು ವಳಿಗೆ ಭಂಗ ಬರುತ್ತದೆ" ಎಂದು ಬರೆದರು.

ಅದೇ ಡಿಸೆಂಬರಿನಲ್ಲಿ ಚಿತ್ತರಂಜನದಾಸರ ಅಧ್ಯಕ್ಷತೆಯಲ್ಲಿ ಗಯಾದ ಕಾಂಗ್ರೆಸ್ ಅಧಿವೇಶನ ಸೇರಿತು. ಅಧ್ಯಕ್ಷ ಭಾಷಣದಲ್ಲಿ ಅವರು ಕೌನ್ಸಿಲ್ ಪ್ರವೇಶವನ್ನು ಬೆಂಬಲಿ ಸಿದರು. ಅಡ್ಡಿಗಳನ್ನೊಡ್ಡುವ ಕಾರ್ಯಕ್ರಮವೊಂದನ್ನೂ ಸೂಚಿಸಿದರು. ಖಿಲಾಫತ್ ಸಮ್ಮೇಳನ ಇದನ್ನು ವಿರೋಧಿಸುವುದಾದರೆ ಈ ಕಾರ್ಯಕ್ರಮವನ್ನು ಬಿಟ್ಟುಬಿಡು ವುದಾಗಿ ಹೇಳಿದರು. ಕೌನ್ಸಿಲ್‌ಗಳಿಗೆ ಕಾಂಗ್ರೆಸ್ಸಿಗರು ಬಹು ಸಂಖ್ಯೆಯಲ್ಲಿ ಚುನಾಯಿತ ರಾಗಿ ಸರ್ಕಾರದ ಎಲ್ಲ ಶಾಸನ ಚಟುವಟಿಕೆಗಳನ್ನು ವಿರೋಧಿಸಬೇಕೆಂದರು. ಆಗ ಸರ್ಕಾರ ಕಡ್ಡಾಯವಾಗಿ ಜನಪ್ರಿಯ ಬೇಡಿಕೆಗಳನ್ನು ಒಪ್ಪಬೇಕು ಇಲ್ಲವೆ ತನಗಿರುವ ಸಮರ್ಥನಾಧಿಕಾರದಿಂದ ಕಾರ್ಯಭಾರ ಮಾಡಬೇಕಾಗುತ್ತದೆ. ಎರಡನೆ ಮಾರ್ಗ ಹಿಡಿದರೆ ಕಾಂಗ್ರೆಸ್ ಸದಸ್ಯರು ರಾಜಿನಾಮೆ ಕೊಟ್ಟು ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸ ಬೇಕು. ತಿರುಗಿ ಅದೇ ವಿರೋಧ ವ್ಯಕ್ತಮಾಡಬೇಕು. ಇಷ್ಟಕ್ಕೂ ಸರ್ಕಾರ ಮಣಿ

ಯೆಂದಿದ್ದಲ್ಲಿ ಮತದಾರರಿಗೆ ನೇರವಾಗಿ ಮನವಿ ಮಾಡಿ ಕರನಿರಾಕರಣೆ ಮಾಡುವಂತೆ ಹೇಳಿ ಮತ್ತೆ ಶಾಸನಭಂಗ ಚಳುವಳಿ ಪ್ರಾರಂಭಿಸಬೇಕು. ದಾಸ್ ಅವರು ಕೌನ್ಸಿಲ್ ಪ್ರವೇಶ ಮಾಡುವುದೊಂದನ್ನು ಬಿಟ್ಟು ಉಳಿದೆಲ್ಲ ರೀತಿಯಲ್ಲಿಯೂ ಅಸಹಕಾರವನ್ನೇ ಅನುಮೋದಿಸಿದರು.

ರಾಜಗೋಪಾಲಾಚಾರಿ ಅವರು ಸಂಪೂರ್ಣ ಅಸಹಕಾರವನ್ನು ಕೈಗೊಳ್ಳಬೇಕೆಂದು ವಾದಿಸಿದರು. ಕೌನ್ಸಿಲ್ಲುಗಳಿಗೆ ಬಹಿಷ್ಕಾರ ಹಾಕುವ ಅವರ ನಿರ್ಣಯ ೭೪೦– ೮೯೦ ಓಟುಗಳ ಬಹುಮತದಿಂದ ಅಂಗೀಕೃತವಾಯಿತು. ಅಸಹಕಾರ ಚಳುವಳಿಯನ್ನು ಮುಂದುವರಿಸಿಕೊಂಡು ಹೋಗುವ ಸಂಕಲ್ಪ ಮಾಡಿ ಅಧಿವೇಶನ ಮುಕ್ತಾಯವಾಯಿತು. ಖಿಲಾಫತ್ ಸಮ್ಮೇಳನವೂ ಅದೇಸಮಯಕ್ಕೆ ನಡೆದು ಅಲ್ಲಿಯೂ ಸಂಪೂರ್ಣವಾದ ಅಸಹಕಾರವನ್ನೇ ಅನುಮೋದಿಸಲಾಯಿತು.

ದಾಸ್ ಅವರು ಮತ್ತು ಮೋತಿಲಾಲರು ಇದನ್ನು ಪ್ರತಿಭಟಿಸಿ ನಿಂತರು; ಮತ್ತು ೧೯೨೩ ಜನವರಿ ಒಂದರಂದು ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದರು. ದಾಸರೇ ಅಧ್ಯಕ್ಷರು. ಮೋತಿಲಾಲ್ ನೆಹರು ಅದರ ಕಾರ್ಯದರ್ಶಿ. ಕಾಂಗ್ರೆಸ್ಸಿನೊಳಗಿದ್ದು ಕೊಂಡೇ ಕೆಲಸ ಮಾಡುವುದಾಗಿ ಸ್ವರಾಜ್ಯಪಕ್ಷ ಘೋಷಿಸಿತು. ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳಿಗೆ ಬದ್ಧರಾಗಿರುವುದೆಂದೂ ಗಯಾ ಕಾಂಗ್ರೆಸ್ಸಿನ ನಿರ್ಣಯ ಕ್ಷಿಪ್ರವಾಗಿ ಸ್ವರಾಜ್ಯ ಸಾಧನೆ ಮಾಡಲನುಕೂಲವಲ್ಲವೆಂದೂ ಸಾರಿತು.

ಮೇ ತಿಂಗಳಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ನಡೆದಾಗ ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ದಾಸರು ರಾಜೀನಾಮೆ ಕೊಟ್ಟರು. ಒಂದು ಸಣ್ಣ ಗುಂಪು ಕೇಂದ್ರಿತವಾಗಿ ಡಾ. ಅನ್ಸಾರಿಯವರನ್ನು ಅಧ್ಯಕ್ಷರನ್ನಾಗಿಯೂ, ಜವಹರ್‌ಲಾಲ್ ನೆಹರೂ ಅವರನ್ನು ಕಾರ್ಯದರ್ಶಿಯನ್ನಾಗಿಯೂ ಆರಿಸಿ ಕಾರ್ಯಕಾರೀ ಸಮಿತಿ ರಚಿಸಿತು. ಆದರೆ ಆ ವ್ಯವಸ್ಥೆ ನಿಲ್ಲಲಿಲ್ಲ. ಬದಲಾವಣೆ ಕೂಡದೆಂಬ ಗುಂಪಿನಲ್ಲಿ ಗುಜರಾತ್ ಪ್ರಬಲವಾಗಿತ್ತು. ಕೇಂದ್ರದ ಆದೇಶಗಳನ್ನು ಮಾನ್ಯ ಮಾಡಲು ಅದು ನಿರಾಕರಿಸಿತು. ನಾಗಪುರದಲ್ಲಿ ಮತ್ತೊಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ಸೇರಿತು. ಅನ್ಸಾರಿ ಕಾರ್ಯಕಾರಿ ಸಮಿತಿ ರಾಜಿನಾಮೆ ಕೊಡಬೇಕಾಯಿತು. ಅಜಾದರು ಕೇವಲ ನಾಲ್ಕು ಓಟುಗಳ ಬಹುಮತ ಗಳಿಸಿ ಅಧ್ಯಕ್ಷರಾದರು. ಸ್ವರಾಜ್ಯ ಪಕ್ಷದವರೆಲ್ಲ ಅವರಿಗೆ ಬೆಂಬಲವಿತ್ತಿದ್ದರು.

ಮೇ ಒಂದರಂದು ನಾಗಪುರದ ಧ್ವಜ ಸತ್ಯಾಗ್ರಹ ಪ್ರಾರಂಭವಾಯಿತು. ಇದನ್ನು ನಡೆಸಲು ವಲಭ ಭಾಯಿಯವರಿಗೆ ಪೂರ್ಣಾಧಿಕಾರ ಕೊಡಲ್ಪಟ್ಟಿತ್ತು. ಎರಡು ಸಾವಿರ ಕಾರ್ಯಕರ್ತರು ಭಾಗವಹಿಸಿದ್ದರು. ಚಳುವಳಿ ಯಶಸ್ವಿಯಾಗಿ ನಡೆಯಿತು. ಆಗಸ್ಟ್ ೧೮ರಂದು ರಾಷ್ಟ್ರೀಯ ಧ್ವಜದೊಂದಿಗೆ ಮೆರವಣಿಗೆ ನಡೆಸಲು ಸರ್ಕಾರ ಏನೂ ಅಡ್ಡಿ ಮಾಡಲಿಲ್ಲ.

ಸ್ವರಾಜ್ಯಪಕ್ಷಕ್ಕೂ, ಯಥಾಸ್ಥಿತಿ ಪರವಾದ ಸದಸ್ಯರಿಗೂ ಸೆಣಸಾಟ ನಡೆದೇ ಇತ್ತು. ಮೊದಲಿನವರೇ ಕ್ರಮೇಣ ಪ್ರಬಲರಾದರು. ಸೆಪ್ಟಂಬರಿನಲ್ಲಿ ದೆಹಲಿಯಲ್ಲಾದ ಕಾಂಗ್ರೆಸ್ ವಿಶೇಷ ಅಧಿವೇಶನದಲ್ಲಿ ಸ್ವರಾಜ್ಯಪಕ್ಷ ಮತ್ತಷ್ಟು ಪ್ರಬಲವಾಗುವ ಘಟ್ಟ ಬಂತು. ಅಜಾದರು ಅಧ್ಯಕ್ಷರಾಗಿದ್ದರು. ಆಗತಾನೆ ಬಿಡುಗಡೆಯಾಗಿದ್ದ ಲಾಲ ಲಜಪತ್‌ರಾಯರು ಕಾಂಗ್ರೆಸ್ಸಿನಲ್ಲಿ ಐಕ್ಯತೆಗಾಗಿ ಮನವಿ ಮಾಡಿದರು. ಚಿತ್ತರಂಜನ್ ದಾಸರು ಮತ್ತು ಮೋತಿಲಾಲ್ ನೆಹರು ಇಲ್ಲದ ಕಾಂಗ್ರೆಸ್ ಸಪ್ಪೆಯಾದೀತೆಂದರು. ನಿರ್ಬಂಧ ತೆಗೆದರೂ ತಾವು ಚುನಾವಣೆಯಲ್ಲಿ ಭಾಗವಹಿಸುವ ಇಷ್ಟವೂ ಇಲ್ಲವೆಂದು ತಿಳಿಸಿದರು. ರಾಜಗೋಪಾಲಾಚಾರಿಯವರು ಸಭೆಗೆ ಬಂದಿರಲಿಲ್ಲ. ಮುಹಮ್ಮದಾಲಿ ಯವರು ಆಗ ತಾನೆ ಸೆರೆಮನೆಯಿಂದ ಬಂದಿದ್ದರು. ಅವರ ಕೈಗೆ ಎಲ್ಲವನ್ನೂ ರಾಜಾಜಿ ವಹಿಸಿದ್ದರು. ಮುಹಮ್ಮದಾಲಿ ಒಂದು ಹೇಳಿಕೆ ಕೊಟ್ಟು ತಾವು “ಯರವಾಡದ ಬೀಗದ ಕೈಗಾಗಿ ಹುಡುಕುತ್ತಿದ್ದೇನೆ” ಎಂದರು. ಸ್ವರಾಜ್ಯ ಪಕ್ಷದ ಪರವಾಗಿ ಗಾಂಧೀಜಿ ತಂತಿ ಕಳುಹಿಸಿ ಬೆಂಬಲಿಸಿದ್ದಾರೆ ಎಂದು ಪ್ರಕಟಿಸಿ ಆ ಪಕ್ಷಕ್ಕೆ ವಿಜಯ ಗಳಿಸಿಕೊಟ್ಟರು. ವಾಸ್ತವವಾಗಿ ತಂತಿ ಬಂದಿರಲಿಲ್ಲ ಅದು ಅವರ ಜೀವಂತ ಕಲ್ಪನೆಯ ಕಥಾನಕ. ಚುನಾವಣೆಗೆ ನಿಲ್ಲಲು ಯಾರಿಗೆ ತಾತ್ವಿಕ ಅಭ್ಯಂತರವಿಲ್ಲವೋ ಅಂಥವರು ನಿಲ್ಲಬಹುದೆಂಬ ನಿರ್ಣಯವನ್ನೂ ಕೌನ್ಸಿಲ್ ಪ್ರವೇಶಕ್ಕೆ ವಿರುದ್ಧವಾಗಿ ಪ್ರಚಾರ ಮಾಡಬಾರದೆಂಬ ಸಲಹೆಯನ್ನೂ ಮುಹಮ್ಮದಾಲಿ ಮಂಡಿಸಿದರು. ವಲ್ಲಭಾಯಿ ಪಟೇಲರೂ, ರಾಜೇಂದ್ರ ಪ್ರಸಾದರೂ, ತಟಸ್ಥರಾಗಿದ್ದರು. ಬಹುಮತದಿಂದ ನಿರ್ಣಯ ಅನುಮೋದಿತವಾಯಿತು.

ದೆಹಲಿಯಲ್ಲಿ ಸ್ವರಾಜ್ಯಪಕ್ಷ ವಿಜಯಿಯಾಯಿತು. ೧೯೨೩ರ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವರಿಗೆ ಅನುಮತಿ ಸಿಕ್ಕಿತು. ತಮ್ಮದೇ ಆದ ದಕ್ಷ ಪಕ್ಷೀಯ ವ್ಯವಸ್ಥೆ ಯನ್ನೂ ಅವರು ಬಲ ಪಡಿಸಿದ್ದರು. ನಿಧಿ ಕೂಡಿಸಿ ಕಾರ್ಯಕರ್ತರನ್ನು ರೂಢಿಸಿ ಕೊಂಡು ಪಕ್ಷದ ಒಂದು ಪತ್ರಿಕೆಯನ್ನೂ ವ್ಯವಸ್ಥೆ ಮಾಡಿದ್ದರು. ಮಂತದಾರರಲ್ಲಿ ಪ್ರಚಾರ ಕಾರ್ಯವನ್ನು ಕೆಲವು ತಿಂಗಳುಗಳಿಂದಲೂ ಮಾಡುತ್ತಲೂ ಬಂದಿದ್ದರು. ಹಲವು ಪ್ರಾಂತಗಳಲ್ಲಿ ಸ್ವರಾಜ್ಯಪಕ್ಷ ಬಹುಮತಗಳಿಸಿ ಚುನಾವಣೆಯಲ್ಲಿ ಯಶಸ್ವಿ ಯಾಯಿತು. ಕೇಂದ್ರದ ಶಾಸನ ಸಭೆಗೆ ಅರ್ಧಕ್ಕಿಂತ ಸ್ವಲ್ಪ ಕಡಮೆ ಸಂಖ್ಯೆಯಲ್ಲಿ ಆರಿಸಿ ಬಂದಿದ್ದರು. ಚಿತ್ತರಂಜನ್‌ದಾಸ್ ಮತ್ತು ಮೋತಿಲಾಲ್ ನೆಹರು ಅವರ ಶಕ್ತ ನಾಯಕತ್ವದ ಪರಿಣಾಮವಾಗಿ ಯಶಸ್ಸು ಲಭಿಸಿತು. ದಾಸರ ಅಮೋಘ ವಾಕ್ಪಟುತ್ವ, ಮೋತಿಲಾಲರ ವ್ಯವಸ್ಥಾದಕ್ಷತೆ, ಮತ್ತು ಶಿಸ್ತು, ಪ್ರಭಾವಶಾಲಿಯಾಯಿತು, ಅವರಿಬ್ಬರಲ್ಲಿ ಪರಸ್ಪರ ಪೂರ್ಣ ವಿಶ್ವಾಸವಿತ್ತು. ಇನ್ನೊಬ್ಬರನ್ನು ಕೇಳದೇ ಯಾವುದೇ ಹೇಳಿಕೆಗೆ ಇಬ್ಬರ ಸೂಹಿ ಹಾಕಬಹುದೆಂದೂ ಒಪ್ಪಿದ್ದರು. ಸ್ವರಾಜ್ಯಪಕ್ಷಕ್ಕೆ ಈ ನಾಯಕರಿಂದ ಗೌರವವೂ ಪ್ರಾಬಲ್ಯವೂ ಲಭಿಸಿತು.

ಚುನಾವಣೆಗಳಾದ ಸ್ವಲ್ಪ ದಿನದಲ್ಲೇ ಡಿಸೆಂಬರ್ ತಿಂಗಳಲ್ಲಿ ಕಾಂಗ್ರೆಸ್ ಅಧಿವೇಶನ ಕಾಕಿನಾಡದಲ್ಲಿ ಸಮಾವೇಶಗೊಂಡಿತು. ಅಧ್ಯಕ್ಷಪೀಠದಿಂದ ಶ್ರೀ ಮುಹಮ್ಮದಾಲಿ

ಮಹಾತ್ಮಾ ಗಾಂಧಿಯುವರನ್ನು ಮುಕ್ತಕಂಠದಿಂದ ಪ್ರಶಂಸಿಸಿ ಹೀಗೆಂದರು: "ಎಂದಿಗಿಂತ ಇಂದು ನಮಗೆ ಮಹಾನಾಯಕ ಮಹಾತ್ಮಾ ಗಾಂಧಿಯವರ ಮಾರ್ಗದರ್ಶನಬೇಕು. ಅವರನ್ನು ಬಂಧಿಸಲು ಮುಖ್ಯ ಕಾರಣನಾದ ವ್ಯಕ್ತಿ ತೃಪ್ತಿಯಿಂದ ಅವರನ್ನು ಜೀವಂತ ವಾಗಿ ಸಮಾಧಿ ಮಾಡಿದ್ದೇವೆ. ದೇಶದಲ್ಲಿ ಅವರು ಪ್ರಜ್ವಲಿಸಿದ ಚೈತನ್ಯವನ್ನೂ ಧ್ವಂಸ ಮಾಡುತ್ತೇವೆ" ಎಂದು ಕೊಂಡರು. ಆದರೆ ಮಹಾತ್ಮಾ ಗಾಂಧಿಯುವರಷ್ಟೇ ಅವರ ಪ್ರಭಾವವೂ ಜ್ವಲಂತವಾಗಿಯೇ ಜೀವಿಸಿದೆ. ಅಮೃತಸರದಲ್ಲಿ, ಕಲ್ಕತ್ತಾದಲ್ಲಿ, ನಾಗಪುರ ಅಹಮದಾಬಾದುಗಳ ಅಧಿವೇಶನಗಳಲ್ಲಿ ನಮ್ಮನ್ನು ಯಾವ ಮಹತ್ಮ ಮುನ್ನಡೆಸಿದರೋ ಅವರೇ ಇಂದೂ ಮಾರ್ಗದರ್ಶನ ಮಾಡಬಲ್ಲವರು. ಪ್ರತಿಯೊಂದು ಅಧಿವೇಶನಕ್ಕೂ ಚುನಾಯಿತ ಅಧ್ಯಕ್ಷರೊಬ್ಬರಿದ್ದರೂ ಕೂಡ ಅವರೇ ನಾಯಕರಾಗಿದ್ದರು. ಇಂದು ನಮ್ಮ ಸೇನಾನಿ, ಶತ್ರುಗಳ ಬಂಧನದಲ್ಲಿದ್ದಾರೆ. ಅವರಿಲ್ಲದಿರುವ ಈ ಶೂನ್ಯವನ್ನು ಮತ್ತಾರೂ ತುಂಬಲು ಸಾಧ್ಯವಿಲ್ಲ. ಕಷ್ಟ ಸಹಿಷ್ಣುತೆಯಿಂದ ಆತ್ಮಶುದ್ಧಿ; ಸರ್ಕಾರ ನಡೆಸುವ ಜವಾಬ್ದಾರಿಯನ್ನು ಹೊರುವ ನೈತಿಕ ಸಿದ್ಧತೆ: ಸ್ವರಾಜ್ಯ ಪಡೆಯುವ ಮುನ್ನ ಆತ್ಮ ಸಂಯಮ ಸಾಧನೆ; ಇವೇ ಮಹಾತ್ಮ ಗಾಂಧಿಯುವರ ಧ್ಯೇಯ–ಧರ್ಮ. ಅಹಮದಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ ಕೊನೆಗೊಂಡ ಆ ಸುವಿಖ್ಯಾತ ವರ್ಷದಲ್ಲಿ ಜೀವಂತರಾಗಿದ್ದ ನಾವು ಇಡೀ ಜನಸ್ತೋಮದ ನಡೆ, ನುಡಿ, ವಿಚಾರ ಮತ್ತು ಭಾವನೆ ಗಳನ್ನೆಲ್ಲ ಆವರಿಸಿ ಪ್ರಜ್ವಲಿಸಿದ ಆ ಮಹಾತ್ಮನ ಪ್ರಭಾವವನ್ನು ಕಂಡೆವು."

ಸ್ವರಾಜ್ಯ ಪಕ್ಷದವರು ಕೌನ್ಸಿಲ್ಲುಗಳನ್ನು ಪ್ರವೇಶಿಸಲು ಕಾಂಗ್ರೆಸ್ ಅನುಮತಿ ಯಿತ್ತಿತು. ರಚನಾತ್ಮಕ ಕಾರ್ಯಕ್ರಮವನ್ನು ಕೈಗೊಂಡು ಸವಿನಯ ಶಾಸನಭಂಗ ಚಳುವಳಿಗೆ ಪೂರ್ವಸಿದ್ಧತೆ ಮಾಡಿಕೊಳ್ಳಬೇಕೆಂದು ಜನತೆಗೆ ಕರೆಕೊಟ್ಟಿತು. ಈ ಒಪ್ಪಂದದ ನಿರ್ಣಯವನ್ನು ರಾಜಗೋಪಾಲಾಚಾರಿ ಅವರು ಮಂಡಿಸಿದರು, ದಾಸ್ ಅವರು ಅನುಮೋದಿಸಿದರು.

೧೯೨೩ರಲ್ಲಿ ಹಿಂದೂ ಮುಸ್ಲಿಂ ಸಹಕಾರ ಸ್ವಲ್ಪ ಕಳೆಗುಂದಿ ಅಲ್ಲಲ್ಲಿ ಜಾತೀಯ ಗಲಭೆಗಳು ಕಾಣಿಸಿಕೊಂಡವು. ಖಿಲಾಫತ್ ಸಮಸ್ಯೆಯನ್ನು ತುರ್ಕಿಯವರೇ ಪರಿಹರಿಸಿ ಕೊಂಡಿದ್ದರು. ಮುಸ್ತಫಾ ಕಮಾಲರ ನೇತೃತ್ವದಲ್ಲಿ ತುರ್ಕಿಯವರು ದಂಗೆಯೆದ್ದು ಹಳೆಯ ಕಲೀಫ್ ಸುಲ್ತಾನರನ್ನು ಪದಚ್ಯುತಿಗೊಳಿಸಿದರು. ಹೊಸ ಕಲೀಫ್‌ರೊಬ್ಬರನ್ನು ಗದ್ದುಗೆಗೇರಿಸಿ ಅವರಿಗೆ ರಾಜ್ಯಾಧಿಕಾರ ಇಲ್ಲದಂತೆ ಮಾಡಿದ್ದರು. ಹಳೆಯ ಸುಲ್ತಾನರು ಬ್ರಿಟಿಷ್ ನೌಕೆಯೊಂದರಲ್ಲಿ ಮಾಲ್ಟಾಗೆ ಓಡಿಹೋಗಿ ಆಶ್ರಯಪಡೆದರು. ಮುಸ್ತಫಾ ಕಮಾಲರು ಚುನಾಯಿತರಾಗಿ ಸರ್ವಾಧಿಕಾರ ವಹಿಸಿದರು. ಖಿಲಾಫತ್ ಪರ ಚಳುವಳಿ ಮಾಡಿದವರು ಕೂಡ ಕಮಾಲರ ನಿರ್ಧಾರವನ್ನು ಪ್ರತಿಭಟನೆಯಿಲ್ಲದೆ ಒಪ್ಪಿಕೊಂಡರು. ಭಾರತೀಯ ಮುಸ್ಲಿಮರ ಬೆಂಬಲ ಈ ಮಟ್ಟದಲ್ಲಿ ಯಾವ ಪ್ರಯೋಜನಕ್ಕೂ ಬಾರ ದೆಂದು ನಿರ್ಣಯಿಸಿದರು. ಹೋರಾಟ ಮುಕ್ತಾಯವಾಗಿತ್ತು. ಅವರ ಉತ್ಸಾಹ ಆರಿಹೋಗಿತ್ತು.

ದೊಡ್ಡ ನಗರಗಳಲ್ಲಿ ಅತ್ಯಂತ ಅಮಾನುಷ ಕೃತ್ಯಗಳಲ್ಲಿ ತೊಡಗಿದ ಜಾತೀಯ ದಂಗೆಗಳಾದವು. ಜಾತಿವಾದಿಗಳ ಕೈ ಮೇಲಾಯಿತು. ವಿವಿಧ ರೀತಿಯ ರಾಜಕೀಯ ಪ್ರತಿಗ್ರಾಮಿಗಳು ಅಜ್ಞಾತಸ್ಥಿತಿಯಿಂದ ಹೊರ ಬಂದರು. ರಾಷ್ಟ್ರೀಯ ಹಿತಾಸಕ್ತಿಗಳನ್ನು ಹತ್ತಿಕ್ಕಿ ಜಾತೀಯ ಗಲಭೆಗಳು ಹರಡಿದವು.

ಭಯೋತ್ಪಾದಕ ಚಳುವಳಿಗಳೂ ಮತ್ತೆ ತಲೆಯೆತ್ತಿದವು. ಬಂಗಾಳದ ಭಾವುಕ ಯುವಜನ ಗಾಂಧೀಜಿಯವರ ವ್ಯಕ್ತಿತ್ವಕ್ಕೆ ಮಾರುಹೋಗಿ ಅವರ ಧ್ಯೇಯ ಧೋರಣೆಗಳನ್ನಂಗೀಕರಿಸಿದ್ದರೂ ರಾಜಕೀಯದ ಆಯುಧವನ್ನಾಗಿ ಹಿಂಸೆಯನ್ನು ಪ್ರಬಲವಾಗಿ ನಂಬಿದ್ದರು. ಅಹಿಂಸಾತ್ಮಕ ಅಸಹಕಾರದ ಏರಿಳಿತಗಳ ಸ್ಪಷ್ಟ ಹೆಜ್ಜೆಗಳು ಬಂಗಾಲದಲ್ಲಿ ಕಾಣಿಸಿದವು. ಗಾಂಧೀಜಿಯ ಚಳುವಳಿ ಇಳಿಮುಖವಾದೊಡನೆ ಭಯೋತ್ಪಾದಕ ಕ್ರಾಂತಿಕಾರರು ಹೊರಹೊಮ್ಮಿ ಹಿಂಸಾಬಲದ ಆವಶ್ಯಕತೆಯನ್ನು ಪ್ರಚಾರ ಮಾಡತೊಡಗಿದರು. ರಾಜಕೀಯ ಡಕಾಯಿತಿಗಳು ಮತ್ತೊಮ್ಮೆ ಭಯಾನಕ ಕೊಲೆಗಳಲ್ಲಿ ಪರ್ಯವಸಾನಗೊಂಡವು. ಆಲಿಪುರ ಫಿತೂರಿ ಮೊಕದ್ದಮೆಯಲ್ಲಿ ಅಪರಾಧಿಗಳನ್ನು ಹಿಡಿದು ಶಿಕ್ಷಿಸಲು ಸರ್ಕಾರ ಅಸಮರ್ಥವಾಯಿತು. ಚಿಟ್ಟಿಗಾಂಗಿನಲ್ಲಿ ಶಸ್ತ್ರಸಜ್ಜಿತ ಯುವಕ ಪಡೆಯೊಂದು ಭಯಾನಕ ದರೋಡೆಯಲ್ಲಿ ತೊಡಗಿ ಅದರಿಂದ ಒಬ್ಬ ಪೋಲೀಸ್ ಅಧಿಕಾರಿಯ ಕೊಲೆಯಾಯಿತು. ಅದರ ಅನಂತರ ಕೆಲವು ದಿನಗಳಲ್ಲೇ ಪೋಲೀಸ್ ಕಮೀಷನರೆಂಬ ತಪ್ಪು ತಿಳುವಳಿಕೆಯಿಂದ ಕಲ್ಕತ್ತೆಯಲ್ಲಿ ಮಿ. ಡೇಯವರನ್ನು ನಡುಹಗಲಿನಲ್ಲಿ ಕೊಲೆ ಮಾಡಿದರು.

೧೯೨೩ರಲ್ಲಿ ಫ್ರಾನ್ಸಿನ ರೊಮೇನ್‌ರೋಲಾ ಅವರು ಗಾಂಧೀಜಿಯ ಜೀವನ ಚರಿತ್ರೆ ಬರೆದರು. ಅದರಲ್ಲಿ ಅವರು "ಮೂವತ್ತು ಕೋಟಿ ಭಾರತೀಯರನ್ನು ಎಚ್ಚರಗೊಳಿಸಿ ಹೋರಾಟಕ್ಕೆ ಸಿದ್ಧಪಡಿಸಿದ ಮಹನೀಯನಿವನು. ಬ್ರಿಟಿಷ್ ಚಕ್ರಾಧಿಪತ್ಯದ ಅಡಿಗಲ್ಲುಗಳನ್ನು ಅಲ್ಲಾಡಿಸಿದ್ದಾನೆ. ಎರಡು ಸಾವಿರ ವರ್ಷಗಳ ಚರಿತ್ರೆಯಲ್ಲೇ ಅತ್ಯಂತ ಪ್ರಭಾವಶಾಲಿಯಾದ ಧಾರ್ಮಿಕ ತೇಜಸ್ಸನ್ನು ಮಾನವನ ರಾಜಕೀಯ ಕ್ಷೇತ್ರಕ್ಕೆ ಯಶಸ್ವಿಯಾಗಿ ಪ್ರವೇಶಗೊಳಿಸಿದ್ದಾನೆ" ಎಂದು ಹೇಳಿದರು.

# ಮರಣದಿಂದ ಪಾರಾದುದು

## ೧೯೨೪

ಸೆರೆವಾಸದ ಕೊನೆಯ ವರ್ಷಗಳಲ್ಲಿ ಗಾಂಧೀಜಿ ಯಾವುದೋ ದಾರುಣ ಖಾಯಿಲೆಗೆ ತುತ್ತಾದರು. ಅದು ಉಲ್ಬಣಿಸಿ ಕರುಳುಬಾಲದ ರೋಗ (appendicitis) ವಾಯಿತು. ೧೯೨೪ರ ಜನವರಿ ೧೧ರಂದು ಅವರನ್ನು ಪೂನಾದ ಸಸೂನ್ ಆಸ್ಪತ್ರೆಗೆ ವರ್ಗಾಯಿಸಲಾಯಿತು. ಆಸ್ಪತ್ರೆಯ ಶಸ್ತ್ರವೈದ್ಯರು ಆ ರೋಗದ ತೀವ್ರತೆ ಯನ್ನು ಗಮನಿಸಿ ತಮ್ಮ ಆಸ್ಪತ್ರೆಗೆ ಸ್ವಂತ ಕಾರಿನಲ್ಲೇ ಕರೆದೊಯ್ದು ತಕ್ಷಣ ಶಸ್ತ್ರ ಚಿಕಿತ್ಸೆ ಮಾಡಲು ತೀರ್ಮಾನಿಸಿದರು. ಈ ಬಗ್ಗೆ ಸರ್ಕಾರದ ಒಂದು ಸಣ್ಣ ಪ್ರಕಟನೆ ಹೊರಬಿತ್ತು. ಜನವರಿ ೧೩ರಂದು "ತೀಕ್ಷ್ಣವಾದ ಕರುಳು ಬಾಲದ ರೋಗಕ್ಕಾಗಿ (ಅಪೆಂಡಿಸೈಟಿಸ್) ಗಾಂಧಿಯವರಿಗೆ ಕಳೆದ ರಾತ್ರಿ ಶಸ್ತ್ರ ಚಿಕಿತ್ಸೆ ಮಾಡಲಾಯಿತು" ಎಂದಷ್ಟೇ ಸುದ್ದಿ ಹೊರಬಿತ್ತು. ದೇಶಕ್ಕೆ ದೇಶವೇ ಆತಂಕದಿಂದ ಪರಿತಪಿಸಿ ಸ್ತಬ್ಧವಾಯಿತು.

ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಯವರು ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿ ನಡೆದುದರ ಬಗ್ಗೆ ಜನವರಿ ೧೩ರಂದು ಪತ್ರಿಕಾ ಪ್ರಕಟಣೆ ಕೊಟ್ಟರು. ಅದರಲ್ಲಿ ಅವರು ವಿವರಗಳನ್ನಿತ್ತರು:

"ಡಾ. ವಿ. ಬಿ. ಗೋಖಲೆಯವರು ರಾತ್ರಿ ೮-೪೫ರಲ್ಲಿ ನನ್ನಲ್ಲಿಗೆ ಬಂದರು. ನಾನು ಆಗ ತಾನೇ ರಾತ್ರಿಯ ಊಟ ಮುಗಿಸಿದ್ದೆ. ಗಾಂಧಿಯವರನ್ನು ಯರವಾಡದಿಂದ ಪೂನಾದ ಸಸೂನ್ ಆಸ್ಪತ್ರೆಗೆ ಸಾಗಿಸಿದ್ದಾರೆಂದು ತಿಳಿಸಿದರು. ಕರುಳು ಬೇನೆಗೆ ಶಸ್ತ್ರ ಚಿಕಿತ್ಸೆ ಕೂಡಲೇ ಅವರಿಗೆ ಆಗಬೇಕಾಗಿದೆ. ರೋಗಿಯ ಸ್ಥಿತಿ ಗಂಭೀರವಾಗಿದ್ದುದರಿಂದ ಅವರಿಗೆ ತಿಳಿದ ಯಾರಾದರೂ ವೈದ್ಯರನ್ನು ಕರೆಸಿಕೊಳ್ಳುವಂತೆ ತಿಳಿಸಲಾಯಿತು. ಬೊಂಬಾಯಿನ ಡಾ. ದಲಾಲ್‌ರನ್ನು ಬರೋಡದಲ್ಲಿದ್ದ ಡಾ. ಜೀವರಾಜ್ ಮೆಹ್ತ ಅವರನ್ನು ಕರೆಸುವಂತೆ ಗಾಂಧೀಜಿ ಕೇಳಿದರು. ಇಬ್ಬರಿಗೂ ತಂತಿ ಕಳುಹಿಸಿ ಬರಮಾಡಿ ಕೊಳ್ಳುವ ಪ್ರಯತ್ನ ಮಾಡಿದರೂ ಸಫಲವಾಗಲಿಲ್ಲ. ಡಾ. ದಲಾಲರೊಡನೆ ಟೆಲಿ ಫೋನಿನಲ್ಲಿ ಸಂಪರ್ಕ ಪಡೆಯುವುದೂ ಸಾಧ್ಯವಾಗಲಿಲ್ಲ. ರೋಗಿಯ ಜ್ವರ ಮತ್ತು ನಾಡಿಯ ಬಡಿತವನ್ನು ಗಮನಿಸಿ ರೋಗದ ಉಲ್ಬಣ ಸ್ಥಿತಿಯನ್ನು ಕಂಡು ಆ ಕೂಡಲೇ ಶಸ್ತ್ರ ಚಿಕಿತೆ ಮಾಡಲೇಬೇಕೆಂದು ನಿರ್ಣಯಿಸಿದರು. ತಮ್ಮ ಸ್ನೇಹಿತರಾರಾದರೂ ಹತ್ತಿರವಿದ್ದರೆ ಕರೆಸಿಕೊಳ್ಳುವಂತೆ ಗಾಂಧೀಜಿಗೆ ಹೇಳಲಾಯಿತು. ನನ್ನನ್ನೂ, ಅಸಹಕಾರ ಚಳುವಳಿಯಲ್ಲಿದ್ದ ಡಾ. ಫಾಟಕ್ ಮತ್ತು ಎನ್. ಸಿ. ಕೇಲ್ಕರ್ ಅವರನ್ನು ಬರಮಾಡಿ ಕೊಳ್ಳಲು ತಿಳಿಸಿದರು. ಡಾ. ಗೋಖಲೆಯವರೂ ನಾನೂ ಹೊರಟು ದಾರಿಯಲ್ಲಿ ಡಾ. ಫಾಟಕರನ್ನು ಕರೆದೊಯ್ದೆವು. ಕೇಲ್ಕರರು ಸತಾರಕ್ಕೆ ಹೋಗಿದ್ದರು. ಕೋಣೆ ಯನ್ನು ಪ್ರವೇಶ ಮಾಡುತ್ತಲೇ ನಮಸ್ಕರಿಸಿ ಶಸ್ತ್ರ ಚಿಕಿತ್ಸೆಯ ಬಗ್ಗೆ ಗಾಂಧೀಜಿ ಏನು

ಹೇಳುತ್ತಾರೆಂದು ಕೇಳಿದೆ. ಅವರು ನಿರ್ಧರವಾಗಿ "ಡಾಕ್ಟರುಗಳು ಈ ಬಗ್ಗೆ ಖಚಿತ ನಿರ್ಣಯಕ್ಕೆ ಬಂದಿದ್ದಾರೆ. ಅದಕ್ಕೆ ನನ್ನದೂ ಸಮ್ಮತಿಯಿದೆ," ಎಂದರು. ವಿವರವಾಗಿ ವಿಚಾರಿಸಿದಾಗ ಆ ವೈದ್ಯಶಾಸ್ತ್ರಜ್ಞರಲ್ಲಿ ತಮಗೆ ಸಂಪೂರ್ಣ ವಿಶ್ವಾಸವಿದೆಯೆಂದೂ, ಅಲ್ಲಿ ತಮ್ಮನ್ನು ಅತ್ಯಂತ ಎಚ್ಚರಿಕೆಯಿಂದ ಚೆನ್ನಾಗಿ ನೋಡಿಕೊಳ್ಳುತ್ತಿರುವರೆಂದೂ ತಿಳಿಸಿದರು. ಈ ಬಗ್ಗೆ ಸಾರ್ವಜನಿಕ ಕ್ಷೋಭೆ ತಲೆದೋರಿದಲ್ಲಿ ತಮಗೆ ಅಧಿಕಾರಿವರ್ಗದ ಮೇಲೆ ಯಾವ ಅಸಮಾಧಾನವೂ ಇಲ್ಲವೆಂದೂ ತಮ್ಮ ಶರೀರದ ಆವಶ್ಯಕತೆಗಳ ಬಗ್ಗೆ ಅವರು ಅತ್ಯಂತ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದಾರೆ ಎಂದು ಜನರಿಗೆ ತಿಳಿಸಬೇಕೆಂದೂ ನನ್ನನ್ನು ಕೇಳಿಕೊಂಡರು.

"ಕಸ್ತೂರಿ ಬಾ ಅವರಿಗೆ ನಿಮ್ಮ ದೇಹಸ್ಥಿತಿಯ ಬಗ್ಗೆ ತಿಳಿಸಲಾಗಿದೆಯೇ ಎಂದು ಕೇಳಿದೆ. ಆಕೆಗೆ ಇತ್ತೀಚಿನ ವಿದ್ಯಮಾನಗಳು ತಿಳಿದಿರಲಾರವೆಂದೂ ಈಗ ಸ್ವಲ್ಪ ದಿನಗಳಿಂದ ತಮ್ಮ ಆರೋಗ್ಯ ಕೆಟ್ಟಿರುವ ಬಗ್ಗೆ ಆಕೆಗೆ ತಿಳಿದಿತ್ತೆಂದೂ ಆಕೆಯಿಂದ ಪತ್ರ ನಿರೀಕ್ಷಿಸುತ್ತಿರುವುದಾಗಿಯೂ ಗಾಂಧೀಜಿ ಉತ್ತರಿಸಿದರು. ನನ್ನ ಹೆಂಡತಿಯ ಕ್ಷೇಮವನ್ನು ವಿಚಾರಿಸಿದರು. ಸರ್ವೆಂಟ್ಸ ಆಫ್ ಇಂಡಿಯಾ ಸಂಸ್ಥೆಯ ಇತರ ಮಿತ್ರರ ಬಗ್ಗೆ ವಿಚಾರಿಸಿದರು. ನೀವು ಪದೇ ಪದೇ ಕೈಗೊಳ್ಳುವ ವಿದೇಶಿ ಪ್ರವಾಸಗಳಿಂದ ಆರೋಗ್ಯ ಸುಧಾರಿಸಿದೆಯೇ? ಎಂದು ನನ್ನನ್ನು ಮಹಾತ್ಮರು ಕೇಳಿದರು.

"ಗಾಂಧೀಜಿ ಸಹಿ ಹಾಕಬೇಕಾಗಿದ್ದ ಹೇಳಿಕೆಯ ಕರಡನ್ನು ಡಾ. ಪಾಟಕ್ ಓದಿ ಹೇಳಿದರು. ಶಸ್ತ್ರಚಿಕಿತ್ಸೆಗಾಗಿ ಅವರ ಸಮ್ಮತಿ ಅದರಲ್ಲಿತ್ತು. ಕೇಳಿದ ನಂತರ ಅದನ್ನು ಕೈಗೆ ತೆಗೆದುಕೊಂಡು ಕನ್ನಡಕ ಏರಿಸಿ ತಾವೇ ಓದಿಕೊಂಡರು ಗಾಂಧೀಜಿ. ಪದಜೋಡಣೆಯನ್ನು ಬದಲಾಯಿಸಲು ಇಚ್ಛಿಸಿದರು. ವೈದ್ಯರಾದ ಕರ್ನಲ್ ಮೆಡಾಕ್ ಅವರನ್ನು 'ನೀವೇನೆನ್ನುತ್ತೀರಿ?' ಎಂದು ಕೇಳಿದರು. 'ಬರಹದಲ್ಲಿ ನೀವೇ ಪರಿಣಿತರು ನಾನು ಹೇಳುವುದೇನಿದೆ?" ಎಂದರು ಕ. ಮೆಡಾಕ್. ಅನಂತರ ಗಾಂಧೀಜಿ ದೀರ್ಘ ಹೇಳಿಕೆಯೊಂದನ್ನು ನನಗೆ ಹೇಳಿ ಬರೆಯಿಸಿದರು. ಪೆನ್ಸಿಲ್ಲಿನಲ್ಲಿ ಅದನ್ನು ಬರೆದೆ. ಶಸ್ತ್ರ ಚಿಕಿತ್ಸೆ ನಡೆಸುವವರಾಗಿದ್ದ ಕರ್ನಲ್ ಮೆಡಾಕರನ್ನು ಅದು ಉದ್ದೇಶಿಸಿತ್ತು. ಕರ್ನಲ್ಲರು ತಮ್ಮ ಬಗೆಗೆ ತೋರಿಸಿದ ಅಪಾರ ಕರುಣೆ ವಿಚಕ್ಷಣೆ; ಸರ್ಜನ್ ಜನರಲ್ಲರೂ ಇತರ ವೈದ್ಯಕೀಯ ಅಧಿಕಾರಿಗಳೂ ನಡೆದುಕೊಂಡ ಒಳ್ಳೆಯ ರೀತಿ, ಇವುಗಳನ್ನು ಪತ್ರದಲ್ಲಿ ಉಲ್ಲೇಖಿಸಿದ್ದರು. ಕರ್ನಲ್ ಮೆಡಾಕ್‌ರಲ್ಲಿ ತಮಗಿರುವ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿದರು. ತಮ್ಮ ಖಾಸಗಿ ವೈದ್ಯರುಗಳನ್ನು ಕರೆಸಿಕೊಳ್ಳುವ ಅನುಮತಿಯಿತ್ತುದಕ್ಕಾಗಿ ಸರ್ಕಾರವನ್ನು ವಂದಿಸಿದರು. ಕ. ಮೆಡಾಕರು ಪ್ರಾಮಾಣಿಕ ಪ್ರಯತ್ನ ಮಾಡಿದಾಗ್ಯೂ ಆ ವೈದ್ಯರನ್ನು ಸಮಯದಲ್ಲಿ ಕರೆಸಿಕೊಳ್ಳಲು ಸಾಧ್ಯವಾಗದೇ ಹೋಗಿದ್ದರಿಂದಲೂ, ತಡವಾದಷ್ಟೂ ರೋಗ ಅಪಾಯಕಾರಿಯಾದೀತೆಂದು ಕರ್ನಲರು ಅಭಿಪ್ರಾಯ ಪಟ್ಟುದರಿಂದಲೂ ತಾವು ಕರ್ನಲ್ಲರನ್ನು ಈ ಕೂಡಲೇ ಶಸ್ತ್ರ ಚಿಕಿತ್ಸೆ ಮಾಡಲು

ಪ್ರಾರ್ಥಿಸಿಕೊಂಡುದಾಗಿಯೂ ಬರೆಸಿದರು. ಬರೆದನಂತರ ನಾನು ಅವರಿಗೆ ಓದಿ ಹೇಳಿದೆ. ಕರ್ನಲ್ ಮೆಡಾಕರನ್ನು ಹತ್ತಿರ ಕರೆದು ಮತ್ತೆ ಓದಿಸಿದರು. ಕರ್ನಲ್ಲರಿಗೆ ಸಮಾಧಾನ ವಾಯಿತು. "ಸರಿಯಾದ ಭಾಷೆಯನ್ನು ಬಳಸಲು ನೀವೇ ಸಮರ್ಥರು" ಎಂದರು. ಅನಂತರ ಗಾಂಧೀಜಿ ಆ ಕಾಗದವನ್ನು ತೊಡೆಯ ಮೇಲಿಟ್ಟುಕೊಂಡು ಪೆನ್ಸಿಲ್ಲಿನಲ್ಲೇ ಸಹಿ ಹಾಕಿಕೊಟ್ಟರು. ನಿಶ್ಶಕ್ತಿಯಿಂದ ಕೈ ಬಹಳ ನಡುಗುತ್ತಿತ್ತು. ಕೊನೆಯ ಅಕ್ಷರದ ಮೇಲೆ ಚುಕ್ಕೆ ಹಾಕುವುದಾಗಲಿಲ್ಲ. ಡಾಕ್ಟರನ್ನು ಕುರಿತು 'ನನ್ನ ಕೈ ಕಂಪಿಸುವುದನ್ನು ನೋಡಿ; ನೀವೇ ಅದನ್ನು ಸುಧಾರಿಸಬೇಕು' ಎಂದರು. ಕ. ಮೆಡಾಕರು 'ಮಣಗಟ್ಟಲೆ ಶಕ್ತಿಯನ್ನು ತುಂಬುತ್ತೇವೆ' ಎಂದು ಧೈರ್ಯಕೊಟ್ಟರು.

"ಶಸ್ತ್ರಚಿಕಿತ್ಸಾ ಮಂದಿರದಲ್ಲಿ ವ್ಯವಸ್ಥೆಯಾಗುತ್ತಿತ್ತು. ವೈದ್ಯರುಗಳು ಹೊರಗೆ ಹೋದರು. ನಾನೊಬ್ಬನೇ ಮಹಾತ್ಮರ ಬಳಿ ಉಳಿದೆ. ಸ್ವಲ್ಪ ಮಾತುಕತೆಯ ನಂತರ 'ನೀವೇನಾದರೂ ವಿಶೇಷವಾಗಿ ಹೇಳುವುದಿದೆಯೇ' ಎಂದೆ. ಅದಕ್ಕಾಗಿ ಕಾದಿದ್ದರೋ ಎಂಬಂತೆ ಕಾತರತೆಯಿಂದ ನೋಡಿ 'ನನ್ನ ಚಿಕಿತ್ಸೆಯನಂತರ ದೇಶದಲ್ಲಿ ಏನಾದರೂ ಚಳುವಳಿ ಪ್ರಾರಂಭವಾದರೆ—ಹಾಗಾಗಬಾರದೆಂದು ನನ್ನ ಇಚ್ಛೆ—ಅದು ಅತ್ಯಂತ ಸಂಯಮ ದಿಂದ ನಡೆಯಬೇಕು. ಸರ್ಕಾರದೊಡನೆ ನನ್ನ ಹೋರಾಟ, ನಮ್ಮ ಗುರಿಮುಟ್ಟುವ ವರೆಗೂ ಇದ್ದೇ ಇರುತ್ತದೆ. ಆದರೆ ನಾನು ಯಾವ ನಿಯಮಗಳನ್ನೂ ಕಡ್ಡಾಯ ಮಾಡಲಾರೆ. ನನ್ನನ್ನು ಬಂಧನದಲ್ಲಿಟ್ಟಿರುವುದು ಸಾಕೆನ್ನಿಸಿದರೆ ಸರ್ಕಾರ ಬಿಡುಗಡೆ ಮಾಡಬಹುದು. ಅದು ಗೌರವಯುತವೂ ಆದೀತು. ನಾನು ನಿರಪರಾಧಿ, ನನ್ನ ಉದ್ದೇಶಗಳು ಸಾಧುವಾದವು. ಸರ್ಕಾರದೊಡನೆ ಹೋರಾಡಿದರೂ ಅನೇಕ ಇಂಗ್ಲಿಷ ಮಿತ್ರರೊಡನೆ ನನಗೆ ಮಧುರ ಬಾಂಧವ್ಯವುಂಟು, ಎಂದವರು ತಿಳಿದುಕೊಂಡರೆ ನನ್ನನ್ನು ಬಿಡುಗಡೆ ಮಾಡಿಯಾರು. ಆದರೆ ಮತ್ತಾವ ಸುಳ್ಳು ಕಾರಣಕೊಟ್ಟು ಬಿಡುಗಡೆ ಮಾಡಿದರೂ ಸರಿಯಲ್ಲ. ಒತ್ತಾಯದ ಚಳುವಳಿ ಮಾಡಬೇಕಾದರೆ ಅದು ಪೂರ್ಣ ವಾಗಿ ಅಹಿಂಸಾತ್ಮಕವಾಗಿರಬೇಕು. ಈ ನನ್ನ ಬಯಕೆಯನ್ನು ಬಹುಶಃ ನನ್ನ ಮಾತುಗಳು ಸ್ಪಷ್ಟಪಡಿಸದೇ ಹೋದಲ್ಲಿ ನೀವು ನಿಮ್ಮ ಅದ್ವಿತೀಯ ಭಾಷಾ ಶೈಲಿಯಲ್ಲಿ ಅದನ್ನು ತಿಳಿಯ ಪಡಿಸಿ' ಎಂದರು. ಕೇಂದ್ರಶಾಸನ ಸಭೆಯಲ್ಲಿ ಮಂಡಿಸಲಾಗಿರುವ ಠರಾವಿನ ಬಗ್ಗೆ ನಾನವರ ಗಮನವನ್ನು ಸೆಳೆದು ಬೇರೆ ಪರಿಸ್ಥಿತಿಯಲ್ಲಿ ಸರ್ಕಾರ ಅದನ್ನು ವಿರೋಧಿಸಬಹುದಾದರೂ ಈಗ ಬೇರೆ ರೀತಿಯಲ್ಲೇ ವಿಚಾರ ಮಾಡೀತು ಎಂದು ತಿಳಿಸಿದೆ.

"ಜನತೆಗಾಗಿ ಸಂದೇಶವೊಂದನ್ನು ಕೊಡಲು ನಾನು ಮತ್ತೆ ಒತ್ತಾಯ ಮಾಡಿದೆ. ದೇಶಕ್ಕೂ ಕಾರ್ಯಕರ್ತರಿಗೂ ಅದು ಬೇಕು ಎಂದೆ. ಆದರೆ ಈ ವಿಷಯಕ್ಕೆ ಅವರು ಅಚಲರಾಗಿದ್ದರು. ದೃಢವಾಗಿ ನಿರಾಕರಿಸಿದರು. 'ಸರ್ಕಾರದ ಖೈದಿಯಾಗಿ ಅದರ ನಿಯಮಗಳನ್ನು ಅತ್ಯಂತ ನಿಷ್ಠೆಯಿಂದ ಪಾಲಿಸಬೇಕು. ಈಗ ತಮ್ಮ ಸಾರ್ವಜನಿಕ

ಜೀವನಮುಖ ಸ್ತಬ್ಧವೆಂದೇ ಭಾವಿಸಬೇಕು. ಹೊರಗೆ ನಡೆಯುತ್ತಿರುವ ವಿದ್ಯಮಾನಗಳ ಅರಿವು ನನಗೀಗ ಇಲ್ಲ. ಸಾರ್ವಜನಿಕ ಸಂಪರ್ಕ ನನಗಿಲ್ಲ. ಯಾವ ಸಂದೇಶವನ್ನೂ ನಾನು ಕೊಡಲಾರೆ' ಎಂದರು.

"ಮತ್ತೆ ಮಹಮ್ಮದಾಲಿಯವರು ನಿಮ್ಮಿಂದ ಸಂದೇಶ ಬಂದಿದೆ ಎಂದು ಹೇಗೆ ತಾನೆ ಪ್ರಕಟಿಸಿದರು? ಎಂದು ಕೇಳಿಬಿಟ್ಟೆ. ತಕ್ಷಣ ಅದನ್ನಾಡಬಾರದಾಗಿತ್ತು ಎನಿಸಿತು. ಹಿಂತೆಗೆದುಕೊಳ್ಳಲೂ ಅಸಾಧ್ಯವಾಯಿತು. ಗಾಂಧೀಜಿಗೆ ಆಶ್ಚರ್ಯವಾಯಿತು. 'ಮಹಮ್ಮದಾಲಿಯವರಿಗೆ! ನನ್ನ ಸಂದೇಶವೇ!' ಎಂದು ಉದ್ಗಾರ ತೆಗೆದರು. ಅಷ್ಟರಲ್ಲಿ ಅದೃಷ್ಟವಶಾತ್ ದಾದಿಯೊಬ್ಬಳು ಬಟ್ಟೆಗಳನ್ನು ಹಿಡಿದು ಒಳಗೆ ಬಂದು ನನ್ನನ್ನು ಹೊರಗೆ ಹೋಗುವಂತೆ ಹೇಳಿದಳು. ಕೆಲವು ನಿಮಿಷಗಳಲ್ಲೇ ಶಸ್ತ್ರ ಚಿಕಿತ್ಸೆಯ ಕೊಠಡಿಗೆ ಅವರನ್ನು ಕರೆದೊಯ್ದರು.

"ನಾನು ಹೊರಗೆ ಕುಳಿತೆ. ಆಲೋಚನೆಗಳು ಧಾವಿಸಿ ಬಂದುವು. ಸಾಧಾರಣ ಮಾನವ ಸ್ವಭಾವಕ್ಕೆ ಅತೀತವಾದ ಆ ಉನ್ನತ ಮನೋಧರ್ಮ, ಆ ಕ್ಷಮಾಗುಣ, ಆ ವೀರಧರ್ಮ, ಆ ಪ್ರೇಮ ದೀಕ್ಷೆಗಳನ್ನು ನೆನೆನೆನೆದು ಆಶ್ಚರ್ಯಪಡುತ್ತಿದ್ದೆ; ಇಂಥ ಪವಿತ್ರತಮ ದೃಷ್ಟಿ; ಸೂಕ್ಷ್ಮವಾದ ಗೌರವ ನಿಷ್ಠೆಗಳನ್ನುಳ್ಳ ಮಹಾನಾಯಕ ದೇಶದ ಅಸಹಕಾರ ಚಳುವಳಿಗೆ ದೊರಕಿದುದು ಅದೆಂತಹ ದೈವಕೃಪೆ! ಸರ್ಜನ್ ಜನರಲ್ಲರೂ, ಸೆರೆಮನೆಗಳ ಅತ್ಯುನ್ನತ ಮುಖ್ಯಾಧಿಕಾರಿಗಳೂ ಅಲ್ಲಿದ್ದರು. ಅವರ ಮೇಲಿದ್ದ ಗುರುತರ ಜವಾಬ್ದಾರಿಯ ಭಾರದಿಂದವರು ಕುಗ್ಗಿದ್ದರು. ಶಸ್ತ್ರ ಚಿಕಿತ್ಸೆಯ ಕಾಲಕ್ಕೆ ರೋಗಿಗೆ ಯಾವ ತೊಂದರೆಯೂ ಆಗಲಿಲ್ಲ. ಕರುಳಿನಲ್ಲಿ ಸ್ವಲ್ಪ ಕೀವುಗಟ್ಟಿದುದೂ ಕಂಡಿತು. ಶಸ್ತ್ರ ಚಿಕಿತ್ಸೆಯನ್ನು ತಡಮಾಡದೆ ಕೂಡಲೇ ಕೈಗೊಂಡುದು ಒಳ್ಳೆಯದಾಯಿತು. ಮಾರ್ಫಿಯಾ ಕೊಟ್ಟುದರ ಪ್ರಭಾವದಿಂದ ಅವರು ಇನ್ನೂ ಸ್ವಲ್ಪ ಹೊತ್ತು ನಿದ್ರೆಯಲ್ಲಿರುವರೆಂದು ತಿಳಿದು ನಾವಲ್ಲಿಂದ ಚದುರಿದೆವು."

ಜನವರಿ ೧೨ರಂದು ರಾತ್ರಿ ಹತ್ತು ಗಂಟೆಯಲ್ಲಿ ಅವರನ್ನು ಶಸ್ತ್ರ ಚಿಕಿತ್ಸೆಯ ಮೇಜಿನ ಮೇಲೆ ಮಲಗಿಸಿದರು. ಶಸ್ತ್ರ ಚಿಕಿತ್ಸೆಯ ಮಧ್ಯದಲ್ಲೇ ಸಿಡಿಲಿನ ಮಳೆ ಬಂದು ವಿದ್ಯುಚ್ಛಕ್ತಿ ನಿಂತು ಹೋಯಿತು. ದಾದಿಯೊಬ್ಬಳ ಬಳಿಯಿದ್ದ ಟಾರ್ಚ್ ದೀಪ ಸ್ವಲ್ಪ ಹೊತ್ತಿದ್ದು ಅದೂ ಕೆಟ್ಟು ಹೋಯಿತು. ಒಂದು ದೊಡ್ಡ ಲಾಂಧ್ರದ ಬೆಳಕಿನಲ್ಲೇ ಶಸ್ತ್ರಚಿಕಿತ್ಸೆ ಮಾಡಬೇಕಾಯಿತು. ಈ ಅಪಾಯಕರ ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಿ ಆ ಚಿಕಿತ್ಸೆ ಮುಗಿಸಲು ಅತ್ಯಂತ ಸಮರ್ಥರಾದ ಶಸ್ತ್ರ ವೈದ್ಯರಿಗೆ ಒಂದು ಗಂಟೆ ಹಿಡಿಯಿತು.

ಜನವರಿ ೨೪ರಂದು ಯಂಗ್-ಇಂಡಿಯಾದಲ್ಲಿ ಮಹದೇವ್ ದೇಸಾಯಿ ಹೀಗೆ ಬರೆದರು :

"ಆ ದಿನ ಬಾಪುವಿನ ಬಗ್ಗೆ ಯಾರಾದರೂ ಏನಾದರೂ ಬರೆಯುವಂತೆ ಹೇಳಿದ್ದರೆ ನನಗೇನೂ ತೋಚುತ್ತಲೇ ಇರಲಿಲ್ಲ. ಅವರ ಸ್ಥಿತಿ ತೀರ ಚಿಂತಾಜನಕವಾಗಿತ್ತು ಕ್ಷೀಣವಾಗಿ ಹೋಗಿದ್ದರು. ದೇಹ ಮುದುಡಿ ಹೋದಂತಿತ್ತು. ಆ ಸ್ಥಿತಿಯಲ್ಲಿ ನೋಡಿ ದೊಡನೆ ಯಾರಿಗಾದರೂ ಗಾಬರಿಯಾಗುತ್ತಿತ್ತು. ಹೇಳಲೂ ಬರೆಯಲೂ ಧೈರ್ಯ ಕುಸಿದು ಹೋದಂತಾಗಿತ್ತು. ಆದರೆ ನನಗೀಗ ಧೈರ್ಯಬಂದಿದೆ. ಈಗ ಪವಿತ್ರ ಯಾತ್ರಾಸ್ಥಳವಾಗಿ ಬಿಟ್ಟಿರುವ ಈ ಸ್ಥಳದಲ್ಲಿ ಏನು ನಡೆಯುತ್ತಿದೆ ಎಂದು ಹರ್ಷದಿಂದ ಈಗ ಹೇಳಬಲ್ಲೆ.

"ನಮ್ಮ ಸ್ಮೃತಿಯಲ್ಲಿ ಅಚ್ಚಳಿಯದ ದಿನಗಳಿವು. ಪೂಜ್ಯ ನಾಯಕನೊಬ್ಬ ಸತತ ವಾಗಿ ಕೆಲಸ ಮಾಡುವುದನ್ನೂ, ಮಣ್ಣುಪುತ್ಥಳಿಗಳಾದವರನ್ನೂ ಧೀರ ಯೋಧರನಾಗಿ ಕಡೆದು ನಿಲ್ಲಿಸಿದ ಕೌಶಲ್ಯವನ್ನೂ, ನೋಡುವ ಪುಣ್ಯ, ನಮ್ಮ ದೇಶಕ್ಕೆ ಲಭಿಸಿತ್ತು. ಆತನ ರೋಗಶಯ್ಯೆಯಿಂದಲೂ ದಿವ್ಯಸಂದೇಶ ಪಸರಿಸಿ ಹರಡಬೇಕಾಗಿತ್ತು. ಆತನ ಕಣ್ಣೆದುರಿಗೇ ಅದು ಕಾರ್ಯಗತವಾಗಬೇಕಿತ್ತು. ಕಳೆದ ಎರಡು ವಾರಗಳಲ್ಲಿ ಹಾಗಾಗಿ ರುವುದು ಸರ್ವವೇದ್ಯ. ಕಾಲದೇಶಗಳ ಎಲ್ಲೆ ಮೀರಿ ಪ್ರಜ್ವಲಿಸುತ್ತಿರುವ ದೇದಿಪ್ಯಮಾನ ಬೆಳಕೊಂದು ಇಂದು ಇಲ್ಲಿ ಈ ಕೋಣೆಯಲ್ಲಿದ್ದಂತೆ ಭಾಸವಾಗುತ್ತಿದೆ. ದಿವ್ಯ ಪ್ರೇಮ ಜೀವಂತವಾಗಿ ಇಲ್ಲಿ ಪಸರಿಸಿರುವುದು ಅನುಭವವಾಗುತ್ತಿದೆ.

"ಎರಡು ವರ್ಷಗಳ ಕೆಳಗೆ ಇಂಥದೇ ಕಷ್ಟ ಪರಿಸ್ಥಿತಿಯಲ್ಲಿ ಗಾಂಧಿಯವರೊಡನಿದ್ದೆ. ಈಗಲೂ ಈ ಹತ್ತು ದಿನಗಳೂ ಅವರೊಡನಿರುವ ಸೌಭಾಗ್ಯ ದೊರೆತಿದೆ. ನೇರವಾಗಿ ಸೇವೆ ಮಾಡುವ ಅವಕಾಶ ಮಾತ್ರ ಇಲ್ಲ. ಆಸ್ಪತ್ರೆಯ ದಾದಿಯರು ಸಂಪೂರ್ಣವಾಗಿ ಅದನ್ನು ವಹಿಸಿಬಿಟ್ಟಿದ್ದಾರೆ. ಒಬ್ಬಾಕೆ ಬಹಳ ಅನುಭವವುಳ್ಳ ಇಂಗ್ಲಿಷ್ ಮಹಿಳೆ. ಆಕೆ ನಿಶ್ಶಬ್ದವಾಗಿ ಸೇವಾಸಕ್ತಳಾಗಿ ಹತ್ತಿರ ಬಂದಾಗ ಗಾಂಧೀಜಿಯ ಮಂದಹಾಸ ಚಿಮ್ಮುತ್ತದೆ. ಆಕೆ ಒಂದು ದಿನ ತನ್ನ ಮುದ್ದು ನಾಯಿಗಳ ಬಗ್ಗೆ ಸರಸವಾಗಿ ಗಾಂಧೀಜಿಗೆ ಹೇಳುತ್ತಾಳೆ. ವಿವಿಧ ನಾಯಿಜಾತಿಗಳ ಬಗ್ಗೆ ಅವರ ಕುತೂಹಲ ಕೆರಳಿಸುತ್ತಾಳೆ. ಮತ್ತೊಂದು ದಿನ ಇಂಗ್ಲೆಂಡಿನ ಮತ್ತು ಆಫ್ರಿಕದ ಆಸ್ಪತ್ರೆಗಳಲ್ಲಿ ತನ್ನ ಅನುಭವವನ್ನು ಕುರಿತಾಡುತ್ತಾಳೆ. ತನ್ನ ಮೇಲ್ವಿಚಾರಕ ವೈದ್ಯರುಗಳು ಸೂಚಿಸಿದಂತೆ ಹೇಗೆ ತನ್ನ ಜೀವಮಾನದಲ್ಲೆಲ್ಲಾ ಕೇವಲ ಹೊಗಳಿಕೆ ಗಳಿಸುವ ಕಡೆ ಗಮನವಿಡದೆ ಸೇವೆ ಮಾಡಿ ರುವಳೆಂದು ತಿಳಿಸುತ್ತಾಳೆ. ಮುಗದೊಂದು ದಿನ ಕೋಣೆಯನ್ನೆಲ್ಲ ಸುಂದರ ಪುಷ್ಪ ಗಳಿಂದ ಸಿಂಗರಿಸಿ ಬಾಪುವಿನ ಮೆಚ್ಚುಗೆಯನ್ನು ಕೋರುತ್ತಾಳೆ. ಈಕೆಗಿಂತ ಮತ್ತೊಬ್ಬ ದಾದಿ ಚಿಕ್ಕವಳು. ಆಕೆಗೂ ಬಾಪುವಿನ ಬಗ್ಗೆ ಮಮತೆ. ದಾದಿಯ ಶಿಕ್ಷಣ ಮುಗಿದೊಡನೆ ತನಗೆ ಸಿಕ್ಕಿದ ಮೊದಲ 'ಖಾಸಗಿ ರೋಗಿ' ಬಾಪು, ಎಂದವಳ ಹೆಮ್ಮೆ. 'ರೋಗಿಯ ಶುಶ್ರೂಷೆ ಯಾವಾಗಲೂ ಸಂತೋಷಕರ ಕೆಲಸವೆನ್ನಲಾಗದು. ಕೆಲವು ವೇಳೆ ದುರ್ಭರ ವಾಗುತ್ತದೆ ಆದರೆ ಗಾಂಧೀಜಿಯ ಶುಶ್ರೂಷೆ ಒಂದು ಸಂತತ ಆನಂದ ಎನಿಸುತ್ತದೆ,' ನನ್ನ ದಿನಚರಿಯ ವರದಿ ಎಂದಿಗಿಂತಲೂ ಈಗ ಉತ್ತಮವಾಗಿದೆಯಲ್ಲ! ಎನ್ನುತ್ತಾರೆ

ನನ್ನ ಡಾಕ್ಟರು. ನನಗೆ ಸಿಕ್ಕಿದ ರೋಗಿಗಳಲ್ಲೆಲ್ಲಾ ಅತ್ಯುತ್ತಮ ರೋಗಿ ಸಿಕ್ಕಿರುವುದೇ ಕಾರಣ ಎಂದು ನಾನು ಮಾರುತ್ತರಿಸುತ್ತೇನೆ' ಎನ್ನುತ್ತಾಳೆ ಆಕೆ ನಗುಮುಖದಿಂದ.

"ಗಾಂಧೀಜಿ ಬಗ್ಗೆ ನನ್ನ ಮಮತೆ ಕಂಡು ನನ್ನ ಸ್ನೇಹಿತರು ಹಾಸ್ಯ ಮಾಡುತ್ತಾರೆ. ಆ ಶುಶ್ರೂಷೆಯ ಸೌಭಾಗ್ಯ ನಿಮಗಿದ್ದಿದ್ದರೆ ನೀವೂ ಹಾಗೆಯೇ ಮಾಡುತ್ತಿದ್ದಿರಿ, ಎನ್ನುತ್ತೇನೆ' ಎಂದಳು ಮತ್ತೊಂದು ದಿನ ಆಕೆ.

"ಶಸ್ತ್ರ ವೈದ್ಯರಿಗೂ ಗಾಂಧೀಜಿಯವರಲ್ಲಿ ದಾದಿಯರಷ್ಟೇ ಅಪಾರ ಪ್ರೇಮ. ಅವರ ಸೇವೆಯ ಸದವಕಾಶ ಸಿಕ್ಕಿದ್ದಕ್ಕಾಗಿ ಅಭಿನಂದನಾಪತ್ರಗಳೂ, ತಂತಿಗಳೂ, ಧಾರಾಕಾರವಾಗಿ ಬರುತ್ತಿದ್ದವು. 'ನಾನು ಹೇಗೆ ಉತ್ತರಿಸಲಿ ಪತ್ರಿಕೆಯಲ್ಲಿ ಎಲ್ಲಕ್ಕೂ ಧನ್ಯವಾದ ಪ್ರಕಟಿಸಲೇ' ಎಂದು ಸಂಕೋಚದಿಂದಲೇ ಹೇಳುತ್ತಿದ್ದರು, ಆ ವೈದ್ಯರು.

"ರಾಜ್ಯ ಸರ್ಕಾರದ ರಾಜಕೀಯ ಖೈದಿಯೊಬ್ಬನ ಸೇವೆ ಮಾಡುತ್ತಿದ್ದೇವೆಂಬ ಭಾವನೆ ಅಲ್ಲಿ ಯಾರಲ್ಲೂ ಕಾಣಲಿಲ್ಲ. ಶುದ್ಧ ಪ್ರೇಮದ ಬುಗ್ಗೆ ಮತ್ತೆಲ್ಲ ಪ್ರಜ್ಞೆಯನ್ನೂ ಮುಳುಗಿಸಿ ಬಿಡುತ್ತದೆ.

"ಖೈದಿಯ ಮೇಲ್ವಿಚಾರಕರಾಗಿ ನಿಯಮಿತವಾಗಿದ್ದ ಅಧಿಕಾರಿಯೂ ಕೂಡ ಅವರ ಬಗ್ಗೆ ಇತರರಂತೆಯೇ ವರ್ತಿಸುತ್ತಿದ್ದರು. ಯರವಾಡ ಸೆರೆಮನೆಯ ಮುಖ್ಯಾಧಿಕಾರಿ ಕರ್ನಲ್ ಮುರ್ರೆ ಒಮ್ಮೆ ಬಂದು ಗಾಂಧೀಜಿಯ ಭೇಟಿಯಾದರು. 'ನಾನು ನಿಮ್ಮನ್ನು ಉಪೇಕ್ಷಿಸಿದ್ದೇನೆಂದು ದಯಮಾಡಿ ತಿಳಿಯಬೇಡಿ. ನಿಮಗೆ ಆಯಾಸವಾದೀತೆಂದು ನಾನು ಬರಲಿಲ್ಲ ಅಷ್ಟೆ. ಹಲವು ದಿನಗಳ ಮೇಲೆ ನೋಡಿದಾಗ ಈಗ ಎಷ್ಟೋ ಸುಧಾರಿಸಿದ್ದೀರಿ. ನಿಮ್ಮ ವೈದ್ಯರು ನೀವು ಬೇಗನೆ ಗುಣಮುಖರಾಗುತ್ತಿದ್ದೀರೆಂದು ಹೇಳುತ್ತಾರೆ. ನಿಮ್ಮ ಸ್ನೇಹಿತರೆಲ್ಲರೂ ನಿಮ್ಮನ್ನು ನೆನೆಸುತ್ತಾರೆ. ಅಬ್ದುಲ್ ಗನಿಯವರು ನೀವು ಸೂಚಿಸಿದಂತೆ ಬೆಳಗಿನ ನಾಲ್ಕು ಗಂಟೆಗೇ ಈಗಲೂ ಏಳುತ್ತಿದ್ದೇನೆಂದು ನಿಮಗೆ ತಿಳಿಸಲು ಹೇಳಿದ್ದಾರೆ. ಮಿಕ್ಕವರೆಲ್ಲ ಚೆನ್ನಾಗಿದ್ದಾರೆ. ನೀವು ಇಲ್ಲದಿರುವುದೊಂದೇ ಅವರ ದುಃಖ. ಇದು ಶಾಶ್ವತವಾಗಲೆಂದೇ ನನ್ನ ಹಾರೈಕೆ' ಎಂದು ನುಡಿದರು. ಅವರ ವಿನಯ ಹೃದಯಸ್ಪರ್ಶಿಯಾಗಿತ್ತು. 'ತುಂಬ ವಂದನೆಗಳು, ಆದರೆ ಮತ್ತೆ ನಾನು ಉತ್ಸಾಹದಿಂದ ಕರ್ತವ್ಯ ಮುಖನಾಗಿ ಮತ್ತೆ ಯರವಾಡದ ಸೆರೆಮನೆಯಲ್ಲಿ ನಿಮ್ಮ ಕೃಪಾಶ್ರಯಕ್ಕೆ ಬರುವುದೇ ನನಗೆ ಹೆಚ್ಚು ಸಂತೋಷ' ಎಂದರು ಬಾಪು. ತಿಳಿಯದಿದ್ದವರಿಗೆ ಒಬ್ಬ ಜೈಲು ಮುಖ್ಯಾಧಿಕಾರಿ ತನ್ನ ಅಧೀನಲ್ಲಿರುವ ಖೈದಿಯೊಡನೆ ಮಾತನಾಡುತ್ತಿದ್ದಂತೆ ಭಾಸವಾಗುತ್ತಿರಲಿಲ್ಲ. ಯರವಾಡ ಸೆರೆಮನೆಯಲ್ಲಿಯೂ ಎಂತಹ ಪ್ರೇಮಮಯ ಪರಿಸರವನ್ನು ಬಾಪು ಹಬ್ಬಿಸಿದ್ದರು ಎಂದು ಊಹಿಸಬಹುದಾಗಿತ್ತು.

"ಅವರ ಪ್ರೇಮಸ್ವಭಾವದ ಚಮತ್ಕಾರವನ್ನೇ ಹೇಳುತ್ತಾ ಹೋಗದೆ ಅವರ ಆರೋಗ್ಯ ಸ್ಥಿತಿಯನ್ನು ಸ್ವಲ್ಪ ತಿಳಿಸಬೇಕು. ಇನ್ನೂ ಕೃಷವಾಗಿಯೇ ಇದ್ದಾರೆ ಬಾಪು.

ಆದರೆ ಅವರ ಖಾಯಿಲೆಯ ಪ್ರಮಾಣದಿಂದ ನೋಡಿದರೆ ಉತ್ತಮರಾಗಿದ್ದಾರೆಂದೇ ಹೇಳಬೇಕು. ರಾಜಾಜಿ ಅವರಿಗೆ ಈ ಬಗ್ಗೆ ಹೇಳುತ್ತಾ ನೀವು ಇರಬೇಕಾದ್ದಕ್ಕಿಂತ ಹೆಚ್ಚು ಕೃಶವಾಗಿಯೇ ಇಲ್ಲವೆ?" ಎಂದು ನಕ್ಕರು. ಅವರ ತೂಕ ಜೈಲಿನಲ್ಲಿದ್ದಾಗ್ಗೆ ೧೧೨ ಪೌಂಡುಗಳಿಗೆ ಮೀರಿರಲಿಲ್ಲ. ಈಗಂತೂ ಒಂದು ಮಣಕ್ಕೆ ಮೀರಿರಲಾರ ದೆಂದೆನಿಸುತ್ತಿತ್ತು. ಹಾಸಿಗೆ ಹಿಡಿದಿರುವುದರಿಂದ ಖಚಿತವಾಗಿ ತೂಕ ಮಾಡಲಾಗು ವುದಿಲ್ಲ. ಅವರನ್ನು ಅಲುಗಾಡಿಸಕೂಡದೆಂದಿದ್ದಾರೆ. ಆದರೆ ದಿನದಿನವೂ ಶಕ್ತರಾಗು ತ್ತಿದ್ದಾರೆನ್ನುವುದು ಖಚಿತ. ಹಿಡಿದುಕೊಂಡು ಎದ್ದು ಕುಳಿತುಕೊಳ್ಳಲು ಅಥವಾ ಮಗ್ಗುಲಾಗಲು ಅನುಕೂಲವಾಗುವಂತೆ ಅವರ ಹಾಸಿಗೆಯ ಮೇಲೆ ಒಂದು ಸರಪಳಿ ಯನ್ನು ಇಳಿಯಬಿಟ್ಟಿದ್ದಾರೆ. ಸ್ನೇಹಿತರೊಬ್ಬರಿಗೆ ಅದನ್ನು ತೋರಿಸಿ 'ನನ್ನ ವ್ಯಾಯಾಮ ಕ್ಕಾಗಿ ಇದು' ಎಂದರು ಬಾಪು. ಬೆರಳುಗಳು ಈಗಲೂ ಸ್ವಲ್ಪ ನಡುಗುತ್ತವೆ. ಆದರೆ ಹಿಂದಿನಷ್ಟಿಲ್ಲ. ಆಹಾರ ಎಂದಿನ ಪ್ರಮಾಣದಲ್ಲಿ ಅರ್ಧ. ಎರಡು ಪೌಂಡು ಹಾಲು, ಕೆಲವು ಕಿತ್ತಲೆ, ಮತ್ತು ದ್ರಾಕ್ಷಿ ಹಣ್ಣುಗಳು. ಎನಿಮಾ ಸಹಾಯವಿಲ್ಲದೆ ಮಲವಿಸರ್ಜನೆ ಆಗುತ್ತಿದೆ. ಆಗಾಗ್ಗೆ ಹಗುರವಾದ ಭೇದಿ ಔಷಧ ಬೇಕಾಗುತ್ತದೆ. ಈಚಿನ ಹಲವು ವರ್ಷಗಳಿಂದ ಕಾಣದ ಸುಖನಿದ್ರೆ ಮಾಡುತ್ತಾರೆ. ಅದೇ ಎಲ್ಲಕ್ಕಿಂತ ದೊಡ್ಡ ಸಮಾಧಾನ. ಜೈಲಿನಲ್ಲಿ ಕೂಡ ಎಡೆಬಿಡದ ಕಾರ್ಯಶೀಲತೆ ಪ್ರಶಾಂತತೆಗೆ ದೂರ ವಾಗಿಯೇ ಸಾಗಿತ್ತು. ಅವರ ಆರೋಗ್ಯದ ಬಗ್ಗೆ ಆತಂಕಕ್ಕೇನೂ ಕಾರಣವಿಲ್ಲ ಎಂದು ಶಸ್ತ್ರವೈದ್ಯರು ತಿಳಿಸುತ್ತಾರೆ. ಪೂರ್ಣ ಸುಧಾರಿಸಲು ಇನ್ನೂ ಬಹಳ ಸಮಯ ಬೇಕಾದೀತು. ಅನಿರ್ದಿಷ್ಟ ಕಾಲ ಹಿಡಿಯಲೂಬಹುದು.

"ಭಾರತದ ಮೂಲೆ ಮೂಲೆಯಿಂದ ಧಾರಾಕಾರವಾಗಿ ಪ್ರೇಮ ವಿಶ್ವಾಸಗಳ ಹೊಳೆಯೇ ಪುಣೆಯ ಕಡೆ ಹರಿದು ಬರುತ್ತಿದೆಯೆಂದು ಹೇಳಬೇಕೆ? ತಮ್ಮ ತಂದೆಯ ಯೋಗಕ್ಷೇಮ ಕೆಲಸದಲ್ಲಿ ತೊಡಗಿರಬೇಕಾದ ದೇವದಾಸರಿಗೆ ಬಾಪುವಿನ ದೇಹಸ್ಥಿತಿ ಯನ್ನು ವಿಚಾರಿಸಿ ಬರುವ ಅಸಂಖ್ಯಾತ ಪತ್ರಗಳಿಗೆ ಉತ್ತರಿಸುವುದೇ ಸಾಕಷ್ಟು ಸಮಯ ಹಿಡಿಯುತ್ತಿದೆ. ಈ ಪ್ರೇಮದ ಹೊಳೆ ತಂತಿಗಳಿಗೂ, ಪತ್ರಗಳಿಗೂ, ಸೀಮಿತ ವಾಗಿಲ್ಲ. ಬಹುದೂರದ ತಂಜಾವೂರಿನಿಂದ ಅಲ್ಲಿನ ಮಿತ್ರರು ತಾವು ಬಾಪುವಿನ ಆರೋಗ್ಯ ಭಾಗ್ಯಕ್ಕೆ ಪ್ರಾರ್ಥಿಸಿ ಮಾಡಿದ ಅರ್ಚನೆ ಅಭಿಷೇಕಗಳ ಬಗ್ಗೆ ತಿಳಿಸಿ ವಿಭೂತಿಯನ್ನೂ ಕುಂಕುಮವನ್ನೂ ಮಹಾತ್ಮಾಜಿಯವರಿಗೆ ಕಳುಹಿಸಿದ್ದರು. ಕಾಶಿಯ ಮೃತ್ಯುಂಜಯ ಮಹದೇವ ಮಂದಿರದಲ್ಲಿ ವಿಶೇಷ ಜಪ ನಡೆದಿದೆಯೆಂದೂ ನೂರಾರು ಬ್ರಾಹ್ಮಣರು ತಮ್ಮ ಅನುಷ್ಠಾನಗಳನ್ನು ಮಹಾತ್ಮಾಜಿಯವರು ಪೂರ್ಣ ಗುಣ ಹೊಂದುವವರೆಗೂ ನಡೆಸುವರೆಂದೂ ಮಿತ್ರರು ದೇವದಾಸರಿಗೆ ಬರೆದಿದ್ದರು. ಅಲ್ಲಿಂದ ಗಂಗಾಜಲ ಮತ್ತು ವಿಭೂತಿ ಪ್ರಸಾದ ಕಳುಹಿಸುವುದನ್ನೂ ಮರೆಯಲಿಲ್ಲ. ತಿರುಪೂರ್ ಜಿಲ್ಲೆಯ ಪಿಯಾಲಿ ಮತ್ತು ದಿಂಡಿಗಲ್‌ಗಳಲ್ಲಿ ಹಿಂದೂಗಳೊಡನೆ ನಾಗೋರಿನ ಮುಸ್ಲಿಂ ಸೋದರರೂ ವಿಶೇಷ ಪ್ರಾರ್ಥನೆಗಳ ಸ್ಪರ್ಧೆ ನಡೆಸಿದ್ದರು. ಮತ್ತು ಅವರಿಂದ ವಿಶೇಷ 'ಟಬಾರುಕ್'

ಪ್ರಸಾದಮ್' ಒಂದು 'ಆಲಿಯಾ'ದಿಂದ ಬಂದಿತ್ತು. ಪಾರ್ಸಿ ಸೋದರಿಯೊಬ್ಬರು ರಕ್ತದಾನ ಮಾಡಲು ಸಿದ್ಧಳಾಗಿ ಮಹಾತ್ಮಾಜಿಗೆ ಅಗತ್ಯವಾದರೆ ತಿಳಿಸಬೇಕೆಂದಳು. ಇಂಗ್ಲಿಷ ಮಹಿಳೆಯೊಬ್ಬರು ಆಹಾರ ನಿಯಮಗಳ ಬಗ್ಗೆ ಪ್ರೀತಿಯಿಂದ ಬರೆದಿದ್ದರು. ಮಹಾತ್ಮಾಜಿ ಖಾಯಿಲೆಯ ಕಾರಣದಿಂದ ನೂಲುವುದನ್ನು ನಿಲ್ಲಿಸಿರುವುದರಿಂದ ತಾನು ಒಂದು ಗಂಟೆ ಅವರ ಪರವಾಗಿ ಹೆಚ್ಚು ನೂಲುವುದಾಗಿ ಬೊಂಬಾಯಿನ ಶ್ರೀಮತಿ ಗೋಖಲೆ ತಿಳಿಸಿದ್ದರು.

" ಆಸ್ಪತ್ರೆಗೆ ಭೇಟಿ ಕೊಡುವವರಿಗೆ ಕೊನೆ ಮೊದಲಿರಲಿಲ್ಲ. ಅವರನ್ನು ಬಾಗಿಲಲ್ಲಿ ತಡೆದು ಕಾಯುವುದೇ ನನ್ನ ಕೆಲಸವಾಗಿತ್ತು. ಅವರಲ್ಲಿ ಒಬ್ಬ ನಿವೃತ್ತ ಇಂಗ್ಲಿಷ್ ಸೈನ್ಯಾಧಿಕಾರಿ ತಪ್ಪದೆ ಆಗಾಗ್ಗೆ ಬರುತ್ತಿದ್ದ. ಕೈಯಲ್ಲಿ ಒಂದು ಹೂವಿನ ಗೊಂಚಲು ಹಿಡಿದು ಅಡೆತಡೆಯಿಲ್ಲದೆ ನೇರವಾಗೆ ಬಾಪುವಿನ ಕೋಣೆಗೆ ನುಗ್ಗುತ್ತಿದ್ದ. ಅವನನ್ನು ತಡೆಯಲು ಸಾಧ್ಯವಾಗುತ್ತಲೇ ಇರಲಿಲ್ಲ. ನೇರವಾಗಿ ಬಾಪುವಿನೆಡೆಗೆ ಧಾವಿಸಿ ಕೈಹಿಡಿದು ಕುಲುಕಿ ಧ್ವನಿಯೆತ್ತಿ ನಾಲ್ಕು ಉತ್ತೇಜಿತ ಮಾತುಗಳ ಸಂದೇಶ ನೀಡಿ ಹೊರಟು ಬಿಡುತ್ತಿದ್ದ. 'ತಾತ ಹರ್ಷವಾಗಿರಿ. ನಿನ್ನೆಗಿಂತ ಇಂದು ನೀವು ಸುಧಾರಿಸಿದ್ದೀರಿ; ಸುಧಾರಿಸಲೇ ಬೇಕು. ನಿಮಗೆಷ್ಟು ವಯಸ್ಸು? ಐವತ್ತೈದು, ಅಷ್ಟೇ ಅಲ್ಲವೆ? ಅದೇನು ಮಹಾ. ನನಗೀಗ ಎಂಬತ್ತೆರಡು. ಬೇಗ ಗುಣಹೊಂದಲು ಮನಸ್ಸು ಮಾಡಿ' ಎನ್ನುತ್ತಿದ್ದ. ಒಂದು ದಿನ ಸ್ವಲ್ಪ ನಿಂತು 'ನಿಮಗೇನಾದರೂ ಸಹಾಯ ಮಾಡಲೇ ಗಾಂಧಿಯವರೇ' ಎಂದು ಕೇಳಿದ. ಬಾಪು 'ಏನೂ ಬೇಡ ನನಗಾಗಿ ಪ್ರಾರ್ಥನೆ ಮಾಡಿ' ಎಂದರು. 'ಅದನ್ನು ಮಾಡುತ್ತೇನೆ, ಆದರೆ ಇನ್ನೇನಾದರೂ ಮಾಡಬಲ್ಲೆನೆ ಹೇಳಿ. ನಿಮ್ಮ ಸೋದರನೆಂದು ತಿಳಿಯಿರಿ ಎಂದ. ಬಾಪು ನಕ್ಕು ನುಡಿದರು. 'ನನ್ನ ಸ್ನೇಹಿತರಲ್ಲಿ ಅನೇಕ ಇಂಗ್ಲಿಷರಿದ್ದಾರೆ. ಅವರನ್ನು ಸೋದರರರಿಗಿಂತಲೂ ಹೆಚ್ಚೆಂದು ಭಾವಿಸುತ್ತಿದ್ದೇನೆ' ಆ ಮಾತು ಅತನ ಹೃದಯದಲ್ಲಿ ಮಾರ್ದನಿಸಿತು. ಹೊರಗಡೆ ಹೋಗುತ್ತಾ 'ಗಾಂಧಿಯವರಿಗಾಗಿ ದಿನವೂ ಮೂರು ಸಾರಿ ಪ್ರಾರ್ಥನೆ ಸಲ್ಲಿಸುತ್ತೇನೆ. ನನ್ನ ವಯಸ್ಸಿಗೂ ಮೀರಿ ಜೀವಿಸಲೆಂದು ಹಾರೈಸುತ್ತೇನೆ. ಹಾಗೆಯೇ ಅನೇಕ ಇಂಗ್ಲಿಷರು ಮಾಡುತ್ತಿದ್ದಾರೆ. ಹಲವು ಉನ್ನತಾಧಿ ಕಾರಿಗಳು ಅವರ ಆರೋಗ್ಯ ವಿಚಾರಿಸುತ್ತಲೇ ಇದ್ದಾರೆ' ಎಂದು ನಮ್ಮನ್ನು ಕುರಿತು ಹೇಳಿದ.

" ತಮ್ಮ ನೆಚ್ಚಿನ ಮಹಾನಾಯಕನನ್ನು ಕಾಣಲು ಪುಣೆಗೆ ಬರುತ್ತಿದ್ದ ಪ್ರಸಿದ್ಧ ರಾಷ್ಟ್ರೀಯ ಮುಖಂಡರ ಬಗ್ಗೆ ಹೇಳದೆ ಈ ಚಿತ್ರ ಪೂರ್ಣವಾಗದು. ಗಾಂಧೀಜಿಗೆ ತೊಂದರೆಯಾದೀತೋ ಏನೋ ಎಂದು ಇದುವರೆವಿಗೂ ಅವರು ಬರುತ್ತಿರಲಿಲ್ಲ. ಜಯಕರರಂತಹವರೂ ಒಂದು ದರ್ಶನ ಮಾತ್ರ ಪಡೆಯುವುದಕ್ಕಾಗಿ ದೂರದಲ್ಲೇ ಇರುತ್ತೇನೆನ್ನುತ್ತಿದ್ದರು. ಜವಹರರು ನಾನು ಕೊನೆಯಲ್ಲಿ ಬರುತ್ತೇನೆ ಎಂದು ದೇವ ದಾಸರಿಗೆ ತಿಳಿಸಿದ್ದರು. ದೊಡ್ಡಣ್ಣ ಷೌಕತ್ ಆಲಿ ನೀರವವಾಗಿ ಬಂದು ಹಾಸಿಗೆಯ

ಅಂಚಿನಲ್ಲಿ ಕಾತರತೆಯಿಂದ ತಡಕಿ ಕಾಲುಗಳ ಮೇಲಿನ ಹೊದಿಕೆ ಸರಿಸಿ ಮುದ್ದಿಟ್ಟು ತಮ್ಮೊಡನೆ ಮಾತನಾಡಲೂ ಅವಕಾಶ ಕೊಡದೆ ನಡೆದು ಬಿಡುತ್ತಿದ್ದರು. ಶಂಕರಲಾಲರಿಗೆ ದುಃಖ ಉಕ್ಕಿ ಕಣ್ಣುಗಳು ಒದ್ದೆಯಾಗುತ್ತಿದ್ದವು. ಮೋತಿಲಾಲರಿಗೆ ಅಲ್ಲಿಂದ ಕಾಲ್ತೆಗೆಯುವುದೇ ಕಷ್ಟವಾಗುತ್ತಿತ್ತು. ರೈಲಿಗೆ ಹೋದವರು ಬೇಕಂತಲೇ ತಪ್ಪಿಸಿ ಮರಳಿ ಬಂದು ಮತ್ತೊಮ್ಮೆ ಬೀಳ್ಕೊಳ್ಳುತ್ತಿದ್ದರು. ಲಜಪತರಾಯರಿಗೆ ಮಹಾತ್ಮಾಜಿಯವರೊಡನೆ ಮಾತನಾಡುವ ಹಂಬಲ. ಆದರೂ ಸಂಯಮದಿಂದ ತಡೆದು ಪಕ್ಕದಲ್ಲಿ ನಿಲ್ಲುತ್ತಿದ್ದರು. ಪೂನಾ ಬಿಡುವ ಮುನ್ನ ಮತ್ತೆ ಬರುತ್ತಿದ್ದರು. ಏನೋ ಮೂಕ ವೇದನೆ ಎದ್ದು ಕಾಣುತ್ತಿತ್ತು. ಕಣ್ಣೀರು ಒತ್ತರಿಸಿ ಕಾತುರತೆಯನ್ನು ಅಡ್ಡಗಟ್ಟಿ ನಿಲ್ಲಿಸುತ್ತಿತ್ತು. ತಡೆಯಲಾರದೆ ಅತ್ತು ಬಿಡುತ್ತಿದ್ದರು. ಬಾಪು ಮಂದಹಾಸದಿಂದಲೇ 'ಲಾಲಾಜಿ ಇದು ತುಂಬ ತಮಾಷೆಯಾಗಿದೆ. ನನ್ನ ಹೊಟ್ಟೆಯಲ್ಲಿ ಹೊಲಿದಿರುವ ಹೊಲಿಗೆ ಬಿಚ್ಚಿ ಹೋದೀತೆಂಬ ಹೆದರಿಕೆಯಿಂದ ಉಕ್ಕಿ ಬರುತ್ತಿರುವ ನಗುವನ್ನು ತಡೆದುಕೊಂಡಿದ್ದೇನೆ' ಎಂದು ಹಾಸ್ಯ ಮಾಡಿದರು. ಇದನ್ನು ಕೇಳಿ ಲಾಲಾಜಿಯ ಭಾರವಾದ ಹೃದಯ ಹಗುರವಾಗುತ್ತಿತ್ತು. ಇತರರಿಗೂ ಭರವಸೆ ಹೇಳುತ್ತಿದ್ದರು. 'ಭಗವಂತನ ಕೃಪೆ ನಮ್ಮ ಮೇಲೆ ಅಪಾರವಾದ ಕರುಣೆ ತೋರಿದೆ, ಸಂತೋಷ ಪಡೋಣ' ಅನ್ನುತ್ತಿದ್ದರು".

ಫೆಬ್ರುವರಿ ೫ರಂದು ಗಾಂಧೀಜಿ ಮತ್ತು ಆಂಡ್ರೂಸ್ ಮಾತನಾಡುತ್ತಿದ್ದರು. ಅದೇ ಸಮಯಕ್ಕೆ ಕರ್ನಲ್ ಮೆಡಾಕರು ಬಂದು ಗಾಂಧಿಯವರ ಬಿಡುಗಡೆಯ ಸುದ್ದಿ ಪ್ರಕಟಿಸಿದರು.

ಕೆಲವು ನಿಮಿಷಗಳು ಗಾಂಧೀಜಿ ಮೌನವಾದರು. ಅನಂತರ ಕಿರುನಗೆಯಿಂದ ಕರ್ನಲ್ ಮೆಡಾಕ್ ಅವರನ್ನು ಕುರಿತು "ಕೆಲವು ಕಾಲ ನಿಮ್ಮ ರೋಗಿಯಾಗಿರಲು ಮತ್ತು ಅತಿಥಿಯಾಗಿರಲು ಒಪ್ಪುವಿರಿ ತಾನೆ?" ಎಂದರು. ಮೆಡಾಕರು ಜೋರಾಗಿ ನಕ್ಕು ವೈದ್ಯನ ಅಪ್ಪಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ರೋಗಿಯಾಗುವಿರೆಂದು ನಂಬಿರುವುದಾಗಿಯೂ ಗಾಂಧಿಯವರು ಪೂರ್ಣಾರೋಗ್ಯ ಪಡೆಯುವುದನ್ನು ನೋಡುವ ಸೌಭಾಗ್ಯವೂ ತೃಪ್ತಿಯೂ ತಮಗಾಗುತ್ತದೆಂದೂ ತಿಳಿಸಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗಲೇ ಗಾಂಧಿಯವರ ಮೊದಲ ಸಾರ್ವಜನಿಕ ಹೇಳಿಕೆ ಬಂತು. ಮುಹಮ್ಮದಾಲಿಯವರಿಗೆ ಪತ್ರ ಬರೆದರು :

"ಕಾಂಗ್ರೆಸ್ ಅಧ್ಯಕ್ಷರಾದ ನಿಮಗೆ ನನ್ನ ಆಕಸ್ಮಿಕ ಬಿಡುಗಡೆಯ ಸಮಯಕ್ಕೆ ಪತ್ರ ಬರೆಯುತ್ತಿದ್ದೇನೆ. ನನ್ನ ದೇಶ ಬಾಂಧವರೂ ಈ ಕೆಲವು ಮಾತುಗಳನ್ನು ನಿರೀಕ್ಷಿಸುತ್ತಾರೆ. ನನ್ನ ಅನಾರೋಗ್ಯದ ಕಾರಣವಾಗಿ ಸರ್ಕಾರ ನನ್ನನ್ನು ಮುಂಚೆಯೇ ಬಿಡುಗಡೆ ಮಾಡಿದುದು ನನಗೆ ವ್ಯಸನವನ್ನುಂಟು ಮಾಡಿದೆ. ಇಂಥ ಬಿಡುಗಡೆ ನನಗೆ ಸಂತೋಷಕರವಲ್ಲ. ಅನಾರೋಗ್ಯದ ಕಾರಣಕ್ಕಾಗಿ ಖೈದಿಯನ್ನು ಬಿಡುಗಡೆ ಮಾಡುವ ನಿಯಮವೇ ಇಲ್ಲ.

"ನನಗೆ ಖಾಯಿಲೆಯಾದಾಗ ಜೈಲಿನ ಮತ್ತು ಆಸ್ಪತ್ರೆಯ ಅಧಿಕಾರಿಗಳು ಅತ್ಯಂತ ಜಾಗರೂಕತೆಯಿಂದ ನೋಡಿಕೊಂಡರು. ಇದನ್ನು ಸಾರ್ವಜನಿಕರಿಗೆ ತಿಳಿಸದೇ ಹೋದಲ್ಲಿ ದ್ರೋಹವೆಸಗಿದಂತಾದೀತು. ನನ್ನ ಖಾಯಿಲೆ ಗಂಭೀರ ಸ್ವರೂಪದ್ದೆಂದು ತಿಳಿದ ತಕ್ಷಣ ಜೈಲು ಮುಖ್ಯಾಧಿಕಾರಿ ಕರ್ನಲ್ ಮುರ್ರೆ, ವೈದ್ಯರಾದ ಕರ್ನಲ್ ಮೆಡಾಕರನ್ನು ಸಹಾಯಕ್ಕೆ ಕರೆದುಕೊಂಡರು. ಅತ್ಯಂತ ಕ್ಷಿಪ್ರ ಚಿಕಿತ್ಸೆ ದಕ್ಷ ವೈದ್ಯರಿಂದ ದೊರಕಲು ಬೇಕಾದ ಎಲ್ಲ ಏರ್ಪಾಟುಗಳನ್ನು ಮಾಡಿಕೊಟ್ಟರು. ಸರಿಯಾಗಿ ಸಮಯಕ್ಕೆ ಡೇವಿಡ್ ಮತ್ತು ಜೇಕಬ್ ಸಸೂನ್ ಆಸ್ಪತ್ರೆಗೆ ನನ್ನನ್ನು ಸೇರಿಸಿದರು. ಕರ್ನಲ್ ಮೆಡಾಕ್ ಮತ್ತು ಅವರ ಸಿಬ್ಬಂದಿ ಅತ್ಯಂತ ಎಚ್ಚರಿಕೆಯಿಂದ, ಕರುಣೆಯಿಂದ ಶುಶ್ರೂಷೆ ಮಾಡಿದರು. ಸೋದರಿಯರಂತೆ ಎಚ್ಚರಿಕೆ ತೆಗೆದುಕೊಂಡ ದಾದಿಯರನ್ನು ಮರೆಯಲಾರೆ. ನಾನೀಗ ಈ ಆಸ್ಪತ್ರೆಯನ್ನು ಬಿಡಲು ಸ್ವತಂತ್ರನಾಗಿದ್ದರೂ, ಬೇರಾವ ಕಡೆಯೂ ಇದಕ್ಕಿಂತ ಉತ್ತಮ ಚಿಕಿತ್ಸೆ ದೊರೆಯದೆಂದು ಇಲ್ಲಿಯೇ ಇರಲು ಇಚ್ಛಿಸಿದ್ದೇನೆ. ಕರ್ನಲ್ ಮೆಡಾಕರ ಪ್ರೇಮಪೂರ್ಣ ಕೃಪಾಶ್ರಯದಲ್ಲಿ ನನ್ನ ಗಾಯಗಳು ಪೂರ್ಣವಾಗಿ ಗುಣವಾಗಿ ಮುಂದೆ ಯಾವ ಚಿಕಿತ್ಸೆಯೂ ಅಗತ್ಯವಿಲ್ಲವೆನ್ನುವ ವರೆಗೂ ಇಲ್ಲಿಯೇ ಇರಲು ನಿಶ್ಚಯಿಸಿದ್ದೇನೆ.

"ಇನ್ನೂ ಕೆಲವು ಸಮಯ ನನಗೆ ಸಕ್ರಿಯ ಚಟುವಟಿಕೆಗಳಲ್ಲಿ ಪಾತ್ರವಹಿಸುವುದು ಸಾಧ್ಯವಿಲ್ಲ. ಇದನ್ನರಿತು ನನ್ನ ಆರೋಗ್ಯ ಸುಧಾರಿಸುವುದರಲ್ಲಿ ಆಸಕ್ತಿಯುಳ್ಳ ಸ್ನೇಹಿತರು ಕೃಪೆಯಿಟ್ಟು ನನ್ನ ಭೇಟಿಗೆ ಬರುವ ಆಸೆಯನ್ನು ಒತ್ತಿ ಹಿಡಿಯಬೇಕು. ಇನ್ನೂ ಹಲವು ವಾರಗಳ ವರೆಗೆ ನಾನು ಹೆಚ್ಚು ಭೇಟಿಗಳನ್ನು ಸ್ವಾಗತಿಸಲು ಅಸಮರ್ಥ. ನನ್ನ ಸ್ನೇಹಿತರು ನನ್ನನ್ನು ಭೇಟಿಯಾಗುವ ಬದಲು ತಮ್ಮ ರಾಷ್ಟ್ರೀಯ ಕಾರ್ಯ ಚಟುವಟಿಕೆಗಳಲ್ಲಿ ಏಕಾಗ್ರತೆಯಿಂದ ತೊಡಗಿದರೆ ಅವರ ಪ್ರೇಮ ವಿಶ್ವಾಸಗಳು ನನಗೆ ಮೆಚ್ಚುಗೆಯಾಗುತ್ತವೆ. ವಿಶೇಷವಾಗಿ ನೂಲುವ ಕಾರ್ಯದಲ್ಲಿ ತೊಡಗಬೇಕು.

"ನನ್ನ ಬಿಡುಗಡೆಯಿಂದ ನನಗೇನೂ ಸಮಾಧಾನವಾಗಿಲ್ಲ. ಜೈಲಿನೊಳಗಿದ್ದಾಗ ಅಲ್ಲಿನ ನಿಯಮಪಾಲನೆ ಮಾಡುತ್ತಾ ಸೇವೆಯ ಶಕ್ತಿಯನ್ನು ವೃದ್ಧಿಮಾಡಿಕೊಳ್ಳು ವುದೊಂದೇ ನನ್ನ ಜವಾಬ್ದಾರಿಯಾಗಿತ್ತು. ಈಗ ನನ್ನ ಕರ್ತವ್ಯ ಜವಾಬ್ದಾರಿಗಳು ನೂರ್ಮಡಿ ಹಿಗ್ಗಿವೆ. ಆದರೆ ನನ್ನ ದೇಹ ಅದನ್ನು ಮಾಡಲು ಅಸಮಥವಾಗಿದೆ ಎಂಬ ದುಃಖ ನನಗಿದೆ. ಅಭಿನಂದನೆಯ ತಂತಿಗಳು ಮಳೆಗರೆಯುತ್ತಿವೆ ನನ್ನ ದೇಶಬಾಂಧವರ ಅಪಾರ ಪ್ರೇಮದ ಕುರುಹು ಅದು. ಅದರಿಂದ ನನಗೂ ಸ್ವಲ್ಪ ಸಮಾಧಾನವೇ. ಆದರೆ ಅನೇಕ ತಂತಿಗಳಲ್ಲಿ ನಾನು ಮಾಡಬಹುದಾದ ಸೇವೆ ಮತ್ತು ಅದರ ಪರಿಣಾಮ ಲಾಭಗಳ ಬಗ್ಗೆ ಅಗಾಧವಾಗಿ ಹೇಳಿರುವುದು ನನ್ನನ್ನು ಭಯಗೊಳಿಸಿದೆ. ನನ್ನ ಮುಂದಿರುವ ಕೆಲಸ ನಿರ್ವಹಿಸಲು ನನ್ನ ದುರ್ಬಲ ದೇಹಸ್ಥಿತಿ ಕಂಡು ನಾನು ವಿನೀತನಾಗಿದ್ದೇನೆ.

"ದೇಶದ ಇಂದಿನ ಪರಿಸ್ಥಿತಿ ನನಗೆ ಪೂರ್ಣ ತಿಳಿದಿಲ್ಲ. ಆದರೆ ಬಾರ್ದೋಲಿ ನಿರ್ಣಯದ ವೇಳೆಗೇ ಅತ್ಯಂತ ಸಂಕ್ಲಿಷ್ಟವಾಗಿದ್ದ ಪರಿಸ್ಥಿತಿ ಈಗ ಇನ್ನೂ ಹೆಚ್ಚು

ಬಿಗಡಾಯಿಸಿದೆ ಎಂದು ನನಗರಿವಾಗಿದೆ. ಹಿಂದೂ ಮುಸ್ಲಿಂ ಸಿಖ್, ಪಾರ್ಸಿ ಮತ್ತು ಕ್ರಿಶ್ಚಿಯನ್ ಹಾಗೂ ಇನ್ನಿತರ ಭಾರತೀಯರ ಮಧ್ಯೆ ಐಕ್ಯತೆ ಮೂಡದೇ ಸ್ವರಾಜ್ಯದ ಮಾತು ವ್ಯರ್ಥ. ಇದು ನನಗೆ ಸ್ಪಷ್ಟವಾಗಿದೆ. ೧೯೨೨ರಲ್ಲಿ ಒಂದು ಸಮರಸ ಐಕ್ಯತೆ ಬಹಳ ಮಟ್ಟಿಗೆ ಉಂಟಾಗಿದೆ ಎಂದು ನಾನು ನಂಬಿಕೊಂಡಿದ್ದೆ. ಆದರೆ ಈಗ ಅದು ಹುಸಿಯಾಗಿದೆ. ಹಿಂದೂ ಮತ್ತು ಮುಸ್ಲಿಮರ ಮಧ್ಯೆ ವಿರಸ ಹೆಚ್ಚಾಗುತ್ತಿದೆ. ಪರಸ್ಪರ ವಿಶ್ವಾಸ ಮಾಯವಾಗಿದೆ. ಸ್ವಾತಂತ್ರ್ಯ ಸಿದ್ಧಿಯಾಗಲು ಎಲ್ಲ ವಿವಿಧ ಧರ್ಮಾನುಯಾಯಿಗಳ ಮಧ್ಯೆ ಸೌಹಾರ್ದ ಶಾಶ್ವತವಾಗಿ ನೆಲಸಬೇಕಾದುದು ಅಗತ್ಯ. ನನ್ನ ಬಿಡುಗಡೆಯ ಬಗ್ಗೆ ಎಲ್ಲರೂ ಸಲ್ಲಿಸುತ್ತಿರುವ ವಂದನಾರ್ಪಣೆ ಇಂಥ ಸೌಹಾರ್ದವನ್ನು ನೆಲೆಗೊಳಿಸಿದರೆ ತುಂಬ ಸಂತೋಷ. ನನ್ನ ಆರೋಗ್ಯಕ್ಕೂ ಅದು ಶಕ್ತಿವರ್ಧಕವಾದೀತು. ಮತ್ತಾವ ಚಿಕಿತ್ಸೆಯಾಗಲಿ ವಿಶ್ರಾಂತಿಯ ಉಪಚಾರವಾಗಲೀ ಬೇಕಾಗುವುದಿಲ್ಲ. ಜೈಲಿನೊಳಗಿದ್ದಾಗ ದೇಶದಲ್ಲಿ ನಡೆದ ಹಿಂದೂ ಮುಸ್ಲಿಂ ವೈಷಮ್ಯದ ಗಲಭೆಗಳ ಸುದ್ದಿ ಕೇಳಿ ನನ್ನ ಹೃದಯ ಹಠಾತ್ತನೆ ಕುಸಿಯಿತು. ನನ್ನ ಎದೆಯಾಳದಲ್ಲಿ ಇಂಥ ವಿರಸದ ವೇದನೆ ಸತತವಾಗಿ ಇದ್ದರೆ ನನ್ನ ವಿಶ್ರಾಂತಿಯೂ ಹುಸಿಯಾಗುತ್ತದೆ. ಆದ್ದರಿಂದ ನನ್ನ ಯೋಗಕ್ಷೇಮವನ್ನು ಬಯಸುವ ಸ್ನೇಹಿತರು ಕೃಪೆ ಮಾಡಿ ಈ ಐಕ್ಯತೆಯ ಕಾರ್ಯದಲ್ಲಿ ತೊಡಗಬೇಕೆಂದು ಪ್ರಾರ್ಥಿಸುತ್ತೇನೆ. ಇದು ಕಷ್ಟಸಾಧ್ಯವೆಂದು ಬಲ್ಲೆ. ಭಗವಂತನಲ್ಲಿ ಜೀವಂತ ಶ್ರದ್ಧೆಯಿಟ್ಟರೆ ಯಾವುದೂ ಅಸಾಧ್ಯವಲ್ಲ. ನಮ್ಮ ದೌರ್ಬಲ್ಯಗಳನ್ನು ಅರಿತು ಅವನನ್ನು ಪ್ರಾರ್ಥಿಸೋಣ. ಖಂಡಿತವಾಗಿ ಸಹಾಯ ಒದಗುತ್ತದೆ. ದೌರ್ಬಲ್ಯದಿಂದ ಭಯ, ಭಯದಿಂದ ಪರಸ್ಪರ ಸಂಶಯ. ಭಯವನ್ನು ವರ್ಜಿಸೋಣ. ಯಾರೊಬ್ಬರು ನಿರ್ಭಯರಾದರೂ ಸಾಕು, ಘರ್ಷಣೆ ನಿಲ್ಲುತ್ತದೆ. ನಿಮ್ಮ ಅಧಿಕಾರದ ಸಮಯಕ್ಕೆ ಈ ಐಕ್ಯತೆಯನ್ನೆಷ್ಟು ಸಾಧಿಸುವಿರಿ ಎನ್ನುವುದರಿಂದಲೇ ನಿಮ್ಮ ಯೋಗ್ಯತೆ ಸಿದ್ಧವಾದೀತು. ನಮ್ಮಿಬ್ಬರ ಮಧ್ಯವಿರುವ ಭ್ರಾತೃಪ್ರೇಮದಿಂದ ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಈ ಅನಾರೋಗ್ಯ ಸ್ಥಿತಿಯಿಂದ ಪಾರಾಗಲು ನನ್ನ ಹೃದಯ ನಿರಾಳವಾಗಿರುವಂತೆ ಮಾಡಲು ನೀವೂ ಸಹಾಯಮಾಡಬೇಕು.

"ದೇಶದ ದುರ್ಭರ ದಾರಿದ್ರ್ಯದ ಅರಿವು ನಮಗಾಗಿ, ಚರಕದ ಉದ್ಯಮವೊಂದೇ ಆ ರೋಗಕ್ಕೆ ಪರಿಣಾಮಕಾರಿ ಪರಿಹಾರವೆಂದು ತಿಳಿದರೆ ಆ ಪ್ರಚಾರ ಕೆಲಸ ನಮ್ಮ ಸಮಯವನ್ನೆಲ್ಲ ಆವರಿಸಿ ಜಗಳಕ್ಕೆ ವಿರಾಮವೇ ಇರದು. ಎರಡು ವರ್ಷ ಚಿಂತನೆಗೆ ಸಾಕಷ್ಟು ಸಮಯವೂ ಏಕಾಂತವೂ ನನಗೆ ದೊರೆತಿತ್ತು. ಬಾರ್ದೋಲಿ ನಿರ್ಣಯದಲ್ಲಿನ ಕಾರ್ಯಕ್ರಮದ ಬಗ್ಗೆ ನನಗೆ ಪೂರ್ಣ ಶ್ರದ್ಧೆಯುಂಟಾಗಿದೆ. ಜಾತೀಯ ಐಕ್ಯತೆ, ಚರಕ, ಅಸ್ಪೃಶ್ಯತಾ ನಿವಾರಣೆ ಮತ್ತು ಮಾತು, ಮನಸ್ಸು ಮತ್ತು ಕೃತಿಗಳಲ್ಲಿ ಅಹಿಂಸೆಯ ಅನುಷ್ಠಾನ ಇವು ಸ್ವರಾಜ್ಯ ಸಾಧನೆಗೆ ಅನಿವಾರ್ಯ ಎಂಬ ನಂಬಿಕೆ ದೃಢವಾಗಿದೆ. ಈ ಕಾರ್ಯಕ್ರಮಗಳನ್ನು ನಿಶ್ಚಲಶ್ರದ್ಧೆಯಿಂದ ಪೂರ್ಣವಾಗಿ ಕೈಗೊಂಡಲ್ಲಿ ಸವಿನಯ ಶಾಸನಭಂಗದ ಅವಶ್ಯಕತೆಯೇ ಇರಲಾರದು. ಹಾಗಾದೀತೆಂದು ನಾನು ಆಶಿಸುತ್ತೇನೆ.

ಆದರೆ ನನ್ನ ಪ್ರಾರ್ಥನಾಮಯ ಏಕಾಂತದಲ್ಲಿ ಆಳವಾಗಿ ಮುಳುಗಿ ವಿಚಾರ ಮಾಡಿದಷ್ಟೂ ಸವಿನಯ ಶಾಸನಭಂಗದ ಶಕ್ತಿಯಲ್ಲಿ ಅದರ ನ್ಯಾಯಬದ್ಧತೆಯಲ್ಲಿ ನನ್ನ ನಂಬಿಕೆ ಎಳ್ಳಷ್ಟೂ ಕಡಿಮೆಯಾಗಿಲ್ಲ. ಆತ್ಮಸತ್ವವೇ ಅಳಿಸಿ ಹೋಗುವ ಅಪಾಯವೊದಗಿದಾಗ ವ್ಯಕ್ತಿಗಾಗಲಿ, ದೇಶಕ್ಕಾಗಲಿ ಸವಿನಯ ಶಾಸನಭಂಗ, ಹಕ್ಕೂ ಹೌದು, ಕರ್ತವ್ಯವೂ ಹೌದು. ಹಿಂದೆಂದಿಗಿಂತಲೂ ಇಂದು ನನಗೆ ಅದು ದೃಢವಾಗಿದೆ. ಯುದ್ಧಕ್ಕಿಂತ ಇದು ಕಡಮೆ ಅಪಾಯಕಾರಿ. ಜಯಗಳಿಸಿದಾಗ ಗೆದ್ದವರು ಸೋತವರಿಬ್ಬರಿಗೂ ಇದು ಲಾಭಕರವೇ ಆಗುತ್ತದೆ. ಯುದ್ಧದಿಂದ ಬಂದ ಜಯ ಸೋತವನಿಗೂ ಗೆದ್ದವನಿಗೂ ಅನಿಷ್ಟ ಪರಿಣಾಮವನ್ನು ತರುತ್ತದೆಂದು ನನ್ನ ಮನಸ್ಸಿಗೆ ಅತ್ಯಂತ ಖಚಿತವಾಗಿದೆ.

"ಶಾಸನ ಸಭೆಗಳಿಗೆ ಕಾಂಗ್ರೆಸಿಗರು ಮತ್ತೆ ಹೋಗುವ ವಿವಾದಾಸ್ಪದ ಪ್ರಶ್ನೆಯನ್ನು ಕುರಿತು ನಾನೀಗ ಏನೂ ಹೇಳಲಾರೆ. ಶಾಸನಸಭೆಗಳು, ನ್ಯಾಯಾಲಯಗಳು, ಸರ್ಕಾರಿ ಶಾಲೆಗಳು ಇವುಗಳನ್ನು ಬಹಿಷ್ಕರಿಸುವ ವಿಚಾರದಲ್ಲಿ ನನ್ನ ಅಭಿಪ್ರಾಯ ಬದಲಾಗಿಲ್ಲ. ದೆಹಲಿ ಅಧಿವೇಶನದಲ್ಲಾದ ನಿರ್ಣಯದ ಬಗ್ಗೆ ನನಗೆ ವಿವರಗಳೇನೂ ಗೊತ್ತಿಲ್ಲ. ರಾಷ್ಟ್ರಹಿತದೃಷ್ಟಿಯಿಂದ ಯೋಚಿಸಿ ಶಾಸನಸಭೆಗಳ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳುವಂತೆ ಸೂಚಿಸಿರುವ ರಾಷ್ಟ್ರದ ಅಗ್ರನಾಯಕರೊಡನೆ ಇದನ್ನು ನಾನಿನ್ನೂ ವಿಚಾರ ಮಾಡಿಲ್ಲ; ಆದ್ದರಿಂದ ಈ ವಿಷಯದಲ್ಲಿ ನಾನು ನಿರ್ಣಯ ಕೊಡುವುದು ಸರಿಯಲ್ಲವೆಂದೇ ನನ್ನ ಅಭಿಪ್ರಾಯ.

"ನನ್ನನ್ನು ಅಭಿನಂದಿಸಿರುವ ಸ್ನೇಹಿತರಿಗೆಲ್ಲ ನಿಮ್ಮ ಮೂಲಕ ವಂದನೆಗಳನ್ನರ್ಪಿಸುತ್ತೇನೆ. ಪ್ರತ್ಯೇಕವಾಗಿ ಪ್ರತಿಯೊಬ್ಬರಿಗೂ ಬರೆದು ತಿಳಿಸಲಾರೆ. ಮಂದಗಾಮಿ ಸಿದ್ಧಾಂತದ ನನ್ನ ಅನೇಕ ಮಿತ್ರರು ಪತ್ರ ಬರೆದುದನ್ನು ಕಂಡು ನನಗೆ ಬಹಳ ಹರ್ಷವಾಯಿತು. ಅವರೊಡನೆ ನನ್ನ ಅಥವಾ ಅಸಹಕಾರ ಸತ್ಯಾಗ್ರಹಿಗಳ ಘರ್ಷಣೆಗೆ ಕಾರಣವೇ ಇಲ್ಲ. ಅವರು ದೇಶಭಕ್ತರು, ಅವರಿಗೆ ತಿಳಿದ ರೀತಿಯಲ್ಲಿ ರಾಷ್ಟ್ರಸೇವೆ ಮಾಡುತ್ತಿದ್ದಾರೆ. ಅವರು ತಪ್ಪುದಾರಿ ಹಿಡಿದಿರುವರೆಂದು ನಮಗನಿಸಿದರೆ ತಾಳ್ಮೆಯಿಂದ ವಿನಯಪೂರ್ಣವಾದದಿಂದ ಒಲಿಸಿಕೊಳ್ಳಬಹುದೇ ವಿನಹ ಅವರನ್ನು ಮನಸ್ಸೀ ದೂಷಿಸುವುದರಿಂದ ಪ್ರಯೋಜನವಿಲ್ಲ. ಇಂಗ್ಲಿಷರನ್ನೂ ನಾವು ಸ್ನೇಹಿತರೆಂದು ಪರಿಗಣಿಸುವುದು ನಮ್ಮ ಇಚ್ಛೆ. ವೈರಿಗಳೆಂದು ತಿಳಿದು ಪರಸ್ಪರ ತಪ್ಪು ತಿಳವಳಿಕೆಗೆ ಆಸ್ಪದ ಕೊಡಲಾಗದು. ಬ್ರಿಟಿಷ್ ಸರ್ಕಾರದೊಡನೆ ನಮ್ಮ ಹೋರಾಟ, ಅವರು ನಡೆಸುತ್ತಿರುವ ಆಡಳಿತ ಪದ್ಧತಿಯ ವಿರುದ್ಧವಾಗಿಯೇ ಹೊರತು ವ್ಯಕ್ತಿಶಃ ಇಂಗ್ಲಿಷರ ಮೇಲಲ್ಲ ಎಂದು ತಿಳಿಯಬೇಕು. ಈ ಸೂಕ್ಷ್ಮ ಪ್ರಭೇದವನ್ನರಿಯಲು ನಮ್ಮಲ್ಲಿ ಅನೇಕರು ವಿಫಲಗೊಂಡಿದ್ದಾರೆಂದು ನಾನು ಬಲ್ಲೆ. ಅನೇಕರಲ್ಲಿ ಈ ದೌರ್ಬಲ್ಯ ಎಷ್ಟಿದೆಯೋ ಅಷ್ಟರ ಮಟ್ಟಿಗೆ ನಮ್ಮ ಹೋರಾಟಕ್ಕೂ ಹಾನಿಯೇ ಆಗಿದೆ ಎಂದು ನನ್ನ ಮತ".

## ಜುಹುವಿನಲ್ಲಿ

೧೯೨೪

ಬೊಂಬಾಯಿಯ ಹೊರ ಬಡಾವಣೆಯಲ್ಲಿರುವ ಜುಹು ಸಮುದ್ರತೀರಕ್ಕೆ ಗಾಂಧೀಜಿ ೧೯೨೪ರ ಮಾರ್ಚಿ ೧೧ರಂದು ಹೋದರು. ಬಿಡುಗಡೆಯಾದನಂತರ ಪ್ರಥಮವಾಗಿ ಅವರು ಮಾಡಿದ ವಿದೇಶಿ ಪತ್ರ ವ್ಯವಹಾರ ರೋಮೆನ್‌ರೋಲಾ ಅವರೊಂದಿಗೆ. ಮಾರ್ಚಿ ೨೨ರಂದು ಅವರಿಗೆ ತಮ್ಮ ಮೊದಲ ಪತ್ರ ಬರೆದರು. ಅವರಿಬ್ಬರ ಗಾಢ ಸ್ನೇಹದ ಬುನಾದಿಯಾಯಿತು ಆ ಪತ್ರ. ಗಾಂಧೀಜಿಯ ವಿಚಾರಗಳಿಗೆ ಯೂರೋಪಿನಲ್ಲಿ ರೋಮೆನ್‌ರೋಲಾ ಪ್ರಚಾರಕರಾಗಿ ನಿಂತರು. ಫ್ರೆಂಚ್‌ಭಾಷೆಯಲ್ಲಿ ಪ್ರಕಟವಾದ ಗಾಂಧೀಜಿಯ ಯಂಗ್ ಇಂಡಿಯಾದಲ್ಲಿನ ಕೆಲವು ಲೇಖನಗಳ ಸಂಕಲನಕ್ಕೆ ಅವರು ಮುನ್ನುಡಿ ಬರೆದರು. ಅದರಲ್ಲಿ "ಆತ್ಮಶಕ್ತಿಯ ಮೂಲಶ್ರೋತ ಸಿಂಧೂಕ್ಷೇತ್ರದ ಬಯಲಿನಿಂದ ಮತ್ತೊಮ್ಮೆ ಈ ಕೃಶದೇಹದ ಅಜೇಯ ಮಹಾತ್ಮನಿಂದ ಚಿಮ್ಮಿ ಭೋರ್ಗರೆಯುವುದನ್ನು ಕಂಡೆ. ಯೂರೋಪಿನಲ್ಲಿಯೂ ಅದನ್ನು ಪುನರ್ನಿರ್ಮಿಸಲು ನಾನೂ ಅನುವಾಗಿ ನಿಂತೆ" ಎಂದಿದ್ದಾರೆ.

ಯೂರೋಪಿನಲ್ಲಿ ಆಗ ಪ್ರಚಲಿತವಾಗಿದ್ದ ಶಾಂತಿವಾದದ ದುರ್ಬಲ ಪ್ರತಿ ರೂಪವೇ ಗಾಂಧಿ ವಿಚಾರವೆಂದೂ ಬೆನ್ನು ಬಗ್ಗಿಸಿ ನರಳುತ್ತಾ ಎಲ್ಲದಕ್ಕೂ ಸಮ್ಮತಿಸಿ ಬಿಡುವುದು ಅದರ ಸ್ವರೂಪವೆಂದೂ ಪಾಶ್ಚಾತ್ಯರಲ್ಲಿ ತಪ್ಪು ಭಾವನೆ ಹರಡಿತ್ತು. ರೋಲಾರವರು ಗಾಂಧೀ ಚಳುವಳಿಯ ಹೋರಾಟದ ಸತ್ವವನ್ನು ಅವರ ಗಮನಕ್ಕೆ ತಂದರು. "ರಷ್ಯದಲ್ಲಿ ಹೋರಾಡುತ್ತಿರುವ ಸಾಮ್ಯವಾದಿ ಸಿದ್ಧಾಂತ ಮತ್ತು ಭಾರತದಲ್ಲಿ ಗಾಂಧೀ ಪ್ರಣೀತ ಸವಿನಯ ಶಾಸನಭಂಗ ಚಳುವಳಿ ಇವುಗಳಲ್ಲಿ ಒಂದೇ ಮಹಾಕ್ರಾಂತಿಯ ಎರಡು ಮುಖಗಳನ್ನು ಕಾಣುತ್ತೇನೆ" ಎಂದರು. ತಮ್ಮ ನಿಲುವನ್ನು ಇನ್ನೂ ವಿವರಿಸಿ "ಇವೆರಡೂ ತಮ್ಮ ಸಮಾನಗುರಿಯ ಪ್ರಜ್ಞೆಯಿಂದ ಸಮನ್ವಯವಾಗುವಂತೆ ನಿಯಂತ್ರಿತ ವಾಗಲಿ" ಎಂದು ಆಶಿಸಿದರು. ಈ ಎರಡು ಚಳುವಳಿಗಳ ನಾಯಕರಿಗೆ ಈ ವಾದ ಸಮಂಜಸವೆನಿಸಲಿಲ್ಲ. "ಇಂಥ ಒಂದು ಯೋಜನೆ ಎರಡೂ ಕಡೆಯ ಹಠವಾದಿಗಳ ಕಪಿ ಮುಷ್ಟಿಗೆ ಸಿಕ್ಕಿ ನುಚ್ಚು ನೂರಾಗುತ್ತದೆ; ಕಾರಣ ಇಬ್ಬರೂ ತಾವು ಕಂಡದ್ದೇ ಸತ್ಯ ಎಂದು ನಂಬಿ ಇನ್ನೊಬ್ಬರು ಕಂಡ ಸತ್ಯ ತಮ್ಮ ವಿರೋಧ ಶಕ್ತಿ ಎಂದೇ ಭಾವಿಸುವ ಜನ" ಎಂದು ಹೇಳಿದರು. ಆದರೆ ಅವರ ಶ್ರದ್ಧೆ ಅಚಲವಾಗಿತ್ತು. "ಸಾಮಾಜಿಕವಾದ ಹಾಗೂ ಧಾರ್ಮಿಕವಾದ ಅತ್ಯಂತ ಶಕ್ತಿಯುತ ಸಿದ್ಧಾಂತಗಳು– ಕೇವಲ ಶಾಸ್ತ್ರಾಂಧತೆ ಅಲ್ಲ– ಮಾನವನ ಪ್ರಗತಿ ವಿಕಾಸಗಳಿಗೆ ದಾರಿತೋರುವ ಪ್ರಭಾವಯುತ ನಿಯಮಗಳು ಎಂದು ನಾನು ನಂಬುತ್ತೇನೆ. ಆದ್ದರಿಂದ ರಷ್ಯದ ಸಾಮ್ಯವಾದ ಸಿದ್ಧಾಂತ ಮತ್ತು ಭಾರತದ ಗಾಂಧಿ ವಿಚಾರ ಮಾರ್ಗ ಎರಡೂ ಗಾಂಧಿಯವರು ಒಪ್ಪಿಕೊಳ್ಳುವಂತೆಯೆ

ಎರಡು ಮಹಾಕ್ರಾಂತಿ ಪ್ರಯೋಗಗಳು. ಎರಡೂ ಹಿಂದಿನ ಎಲ್ಲ ಪ್ರಯೋಗಗಳಿಗಿಂತ ಮಹತ್ವಪೂರ್ಣ ಅತ್ಯಂತ ಸಮರ್ಥ ಪ್ರಯೋಗಗಳು. ಮಾನವಲೋಕ ಯಾವ ದುರಂತದ ಅಂಚಿನಲ್ಲಿ ಬಂದು ನಿಂತಿದೆಯೋ ಅದರಿಂದ ಪಾರುಮಾಡಲು ಇವೆರಡು ಸಿದ್ಧಾಂತಗಳ ಸಾಮರ್ಥ್ಯ ಏಕೈಕ ಸಾಧನ. ಈ ಎರಡು ಪ್ರಬಲ ಪ್ರವಾಹಗಳು ಒಟ್ಟು ಗೂಡಿದರೂ ಲೋಕದ ಮುಕ್ತಿ ಸಾಧಿತವಾಗುವ ಸಾಧ್ಯತೆ ಕಡಿಮೆಯೇ. ಆದ್ದರಿಂದ ಪರಸ್ಪರ ವಿನಾಶಕ್ಕೆ ಕೈ ಹಾಕದೆ ಈ ಎರಡು ಪ್ರಬಲ ಹೋರಾಟ ಶಕ್ತಿಗಳೂ ಒಂದು ಗೂಡಿ ಎರಡಕ್ಕೂ ಸಮಾನವಾದ ಪ್ರತಿರೋಧೀ ದುಷ್ಟಶಕ್ತಿಗಳನ್ನು ದಮನ ಮಾಡು ವಂತೆ ಮಾಡಬಾರದೆ? ನಾನಿದರಲ್ಲಿ ವಿಫಲನಾದರೂ ಅಂಥ ಪ್ರಯತ್ನ ಮಾಡಿದ್ದಕ್ಕಾಗಿ ನಾನು ಖಂಡಿತ ದುಃಖ ಪಡಲಾರೆ" ಎಂದು ಬರೆದರು ರೊಮೆನ್‌ರೋಲಾ.

ಈ ಎರಡು ವರ್ಷಗಳನಂತರ ಗಾಂಧೀಜಿ ಮತ್ತೆ ಯಂಗ್ ಇಂಡಿಯಾ ಮತ್ತು ನವಜೀವನ ಪತ್ರಿಕೆಗಳ ಸಂಪಾದಕತ್ವವನ್ನು ಏಪ್ರಿಲ್ ಮೊದಲ ವಾರದಲ್ಲಿ ವಹಿಸಿ ಕೊಂಡರು. ಕೆಲವು ತಿಂಗಳುಗಳು ವಿಶ್ರಾಂತಿ ಪಡೆಯಲು ಯಾವ ಕೆಲಸವನ್ನೂ ಕೈಗೊಳ್ಳ ಬಾರದೆಂದು ಸ್ನೇಹಿತರು ಒತ್ತಾಯ ಮಾಡಿದರು. "ಹೆಚ್ಚು ಜನ ವಿಶ್ವಾಸ ಪ್ರೀತಿ ಗಳಿಂದ ಕಾತರರಾಗಿ ತಮ್ಮ ಭೇಟಿಗೆ ಬರದೆ ಏಕಾಂತತೆಗೆ ಅವಕಾಶ ಮಾಡಿಕೊಟ್ಟರೆ ಈ ಸಂಪಾದಕೀಯ ಕೆಲಸ ಮನೋಲ್ಲಾಸ ಕಾರ್ಯವಾಗಿಯೇ ಪರಿಣಮಿಸುತ್ತದೆ, ಏನೂ ಶ್ರಮವಾಗುವುದಿಲ್ಲ" ಎಂದರು ಗಾಂಧೀಜಿ.

ಗಾಂಧೀಜಿಯವರಿಲ್ಲದಿದ್ದಾಗ ಯಂಗ್ ಇಂಡಿಯಾ ಪತ್ರಿಕೆಯ ಗ್ರಾಹಕರ ಸಂಖ್ಯೆ ಬಹಳವಾಗಿ ಇಳಿದು ಹೋಗಿತ್ತು. ಅವರು ಸೆರೆಮನೆಗೆ ಹೋದಾಗ ೨೧,೫೦೦ ಇದ್ದದ್ದು ಈಗ ಕೇವಲ ಮೂರು ಸಾವಿರಕ್ಕೆ ಇಳಿದಿತ್ತು. ಶೌಯಿಬ್ ಖುರೇಷಿ, ಗೋಪಾಲಾಚಾರಿ ಮತ್ತು ಜಾರ್ಜ್ ಜೋಸೆಫ್ ಸಂಪಾದಕರಾಗಿ ಕೆಲಸ ನೋಡುತ್ತಿದ್ದರು. ಗಾಂಧಿಯವರು ಈಗ ಸಂಪಾದಕರಾಗಿ ಹಿಂತಿರುಗಿದ್ದರಿಂದ ಆ ಸಂಚಿಕೆಯ ಪ್ರತಿಗಳನ್ನು ಹೆಚ್ಚಾಗಿ ಅಚ್ಚು ಮಾಡುವಂತೆ ವ್ಯವಸ್ಥಾಪಕರಿಗೆ ತಿಳಿಸಲಾಯಿತು. ಏಪ್ರಿಲ್ ೩ರ ಯಂಗ್ ಇಂಡಿಯಾ ಸಂಚಿಕೆಯಲ್ಲಿ "ಯಂಗ್ ಇಂಡಿಯಾದ ಹಿಂದಿನ ಮತ್ತು ಈಗಿನ ಓದುಗರಿಗೆ" ಎಂಬ ತಮ್ಮ ಮೊದಲ ಲೇಖನವನ್ನು ಗಾಂಧೀಜಿ ಪ್ರಕಟಿಸಿದರು.

"ಸ್ವಲ್ಪ ಅಳುಕಿನಿಂದಲೇ ನಾನು ಯಂಗ್‌ಇಂಡಿಯಾದ ಸಂಪಾದಕತ್ವಕ್ಕೆ ಹಿಂತಿರುಗಿ ದ್ದೇನೆ. ಪ್ರತಿಕೆ ನಡೆಸುವ ಶ್ರಮ ಭರಿಸುವಷ್ಟು ಶಕ್ತಿ ನನ್ನಲ್ಲಿದೆಯೇ ಎಂಬ ಅನುಮಾನ ನನಗೆ. ಭವಿಷ್ಯ ಹೇಳಲಾರೆ. ಯರವಾಡದ ಸೆರೆಮನೆಯಿಂದ ಮುಕ್ತಗೊಳಿಸುವುದರಲ್ಲಿ ಭಗವಂತನ ಉದ್ದೇಶವೇನು ಎಂಬುದರ ಅಸ್ಪಷ್ಟ ಅರಿವು ಮಾತ್ರ ನನಗಿದೆ. ನವಜೀವನ ಮತ್ತು ಯಂಗ್ ಇಂಡಿಯಾ ಪತ್ರಿಕೆಗಳನ್ನು ವಹಿಸಿಕೊಂಡುದೂ ನನ್ನ ಆ ಅಂತ ಸ್ಫೂರ್ತಿಯ ಬೆಳಕಿನಲ್ಲಿ ಹೆಜ್ಜೆಯಿಡುವ ಪ್ರಯತ್ನ.

"ಹೊಸ ಸಂದೇಶವಾವುದನ್ನೂ ನಾನೀಗ ಕೊಡಲಾರೆ. ಸ್ವತಂತ್ರ ಭಾರತದ ಲೋಕಸಭೆಯ ನಿರ್ಣಯವೊಂದರ ಪರಿಣಾಮವಾಗಿ ನಾನು ಬಿಡುಗಡೆಯಾದೇನೆಂಬ ಆಸೆಯಿತ್ತು. ಅನಂತರ ಸ್ವತಂತ್ರ ದೇಶಕ್ಕೆ ನನ್ನ ನಮ್ರಸೇವೆ ಸಲ್ಲಿಸುವೆನೆಂದು ಕೊಂಡಿದ್ದೆ. ಆದರೆ ಆದು ಸಾಧ್ಯವಾಗಲಿಲ್ಲ.

"ನಮಗಿನ್ನೂ ಸ್ವಾತಂತ್ರ್ಯ ಬರಬೇಕಾಗಿದೆ. ಹೊಸ ಕಾರ್ಯಕ್ರಮವಾವುದೂ ನನ್ನ ಬಳಿಯಿಲ್ಲ. ಹಳೆಯ ಮಾರ್ಗದಲ್ಲಿ ನನ್ನ ಶ್ರದ್ಧೆ ಕುಂದಿಲ್ಲ, ಇನ್ನೂ ಹೆಚ್ಚು ಜ್ವಲಂತ ವಾಗಿದೆ ಎನ್ನಬೇಕು. ಕ್ಷಿತಿಜದಲ್ಲಿ ಕಾರ್ಮೋಡಗಳು ದಟ್ಟವಾದಾಗಲೇ ನಮ್ಮ ಯೋಜನೆ ಗಳಲ್ಲೂ ಕಾರ್ಯವಿಧಾನಗಳಲ್ಲೂ ನಮಗಿರುವ ಶ್ರದ್ಧೆ ನಿಜವಾದ ಪರೀಕ್ಷೆಗೊಳಗಾಗುತ್ತದೆ.

"ಆದ್ದರಿಂದ ನನ್ನ ಮನಸ್ಸಿನಲ್ಲಿ ಈಗಾವುದೂ ಹೊಸ ಸೂಚನೆಗಳಾಗಲಿ, ಹೊಸ ಕಾರ್ಯಕ್ರಮವಾಗಲೀ ಇಲ್ಲ. ಯಂಗ್—ಇಂಡಿಯಾದ ಪುಟಗಳಲ್ಲಿ ಹೊಸದಿಲ್ಲ ಎಂಬ ಕಾರಣಕ್ಕಾಗಿ ಅದು ಹಳಸಲಾರದೆಂದು ನನ್ನ ನಂಬಿಕೆ. ಸತ್ಯ ಎಂದಿಗೂ ಹಳಸಲಾರದು. ಆದ್ದರಿಂದ ಈ ಪುಟಗಳೂ ಅಷ್ಟೆ. ಭಗವಂತನ ಸಮಕ್ಷಮ ದರ್ಶನವೇ ನನ್ನ ಆಕಾಂಕ್ಷೆ. ದೇವರು ಸತ್ಯ ಸ್ವರೂಪಿ ಎಂದು ಬಲ್ಲೆ. ಅವನ ದರ್ಶನಕ್ಕೆ ನನಗಿರುವುದೊಂದೇ ಸಾಧನ; ಅಹಿಂಸೆ ಅಥವಾ ಪ್ರೇಮ. ಭಾರತದ ಸ್ವಾತಂತ್ರ್ಯ ಸತ್ಯದಿಂದ ಒಂದು ಅಂಶವೆಂದು, ಅದಕ್ಕಾಗಿ ಬದುಕುತ್ತೇನೆ. ಅದಕ್ಕಾಗಿ ಬಲಿಯಾಗಲೂ ಸಿದ್ಧ. ಭಾರತ ಸ್ವತಂತ್ರ ವಾದಾಗ ನಿಜವಾದ ಭಗವಂತನನ್ನಾರಾಧಿಸಲು ಸಾಧ್ಯ. ಭಾರತದಲ್ಲಿ ಬದುಕಿ ಅದರ ಸಂಸ್ಕೃತಿಯಲ್ಲಿ ಪಾಲ್ಗೊಂಡಿರುವುದರಿಂದ ಭಾರತದ ಸೇವೆಗೆ ನಾನು ಅತ್ಯಂತ ಸಮರ್ಥ. ಆ ಸೇವೆ ಮೊದಲು ನನ್ನ ತಾಯ್ನಾಡಿಗೆ ಸಲ್ಲಬೇಕು ಎಂದು ತಿಳಿದು ಭಾರತ ಸ್ವಾತಂತ್ರ್ಯ ಕ್ಕಾಗಿ ನಾನು ಕೆಲಸ ಮಾಡುತ್ತೇನೆ. ನನ್ನ ಸ್ವದೇಶಿ ವ್ರತ ಇದನ್ನೇ ಕಲಿಸುತ್ತದೆ. ಆದರೆ ನನ್ನ ದೇಶಭಕ್ತಿ ಸಂಕುಚಿತವಾಗಲಾರದು. ಬೇರಾವ ದೇಶಕ್ಕೂ ಹಾನಿಯುಂಟು ಮಾಡುವ ಉದ್ದೇಶ ನನಗಿಲ್ಲ. ನಿಜವಾದ ಅರ್ಥದಲ್ಲಿ ಎಲ್ಲ ರಾಷ್ಟ್ರಗಳಿಗೂ ಲಾಭ ವಾಗುವಂತೆ ನನ್ನ ಕಾರ್ಯ ನಿಯೋಜಿತವಾಗಿದೆ. ನನ್ನ ದೃಷ್ಟಿಯಲ್ಲಿ ಭಾರತದ ಸ್ವಾತಂತ್ರ್ಯ ಎಂದಿಗೂ ಲೋಕ ಕಂಟಕವಾಗಲಾರದು.

"ಹಾಗೆ ಲೋಕ ಕಂಟಕವಾಗದಿರಲು ನಮಗಿರುವುದೊಂದೇ ದಾರಿ. ನಮ್ಮ ಸಾಧನ ಮಾರ್ಗ ಕಟ್ಟುನಿಟ್ಟಾಗಿ ಅಹಿಂಸಾಪಥವನ್ನನುಸರಿಸಬೇಕು. ಹಿಂಸಾಮಾರ್ಗದಲ್ಲಿ ಭಾರತ ಸ್ವಾತಂತ್ರ್ಯ ಸಾಧನೆಗೆ ತೊಡಗಿದರೆ ನನಗದರಲ್ಲಿ ಎಳ್ಳಷ್ಟೂ ಆಸಕ್ತಿಯಿರದು. ಅದರಿಂದ ಬರುವ ಸ್ವಾತಂತ್ರ್ಯ ನಿಜವಾಗಿ ಮರೆಮಾಚಿದ ದಾಸ್ಯ. ಮಾತು ಮತ್ತು ಕೃತಿಗಳಲ್ಲಿ ಅಹಿಂಸಾ ಪಥ ಹಿಡಿದಿರುವುದರಿಂದ ನಾವಿನ್ನೂ ಸ್ವತಂತ್ರರಾಗಿಲ್ಲ. ಬೇರಾವ ಮಾರ್ಗದಿಂದಲೂ ಸ್ವತಂತ್ರರಾಗಲು ಸಾಧ್ಯವಿಲ್ಲವೆಂದೇ ಅಹಿಂಸೆಯನ್ನು ಸಾಧನವನ್ನಾಗಿ ಮಾಡಿಕೊಂಡಿದ್ದೇವೆಂಬುದು ನಿಜ. ಆದರೆ ನಮ್ಮ ಕಾರ್ಯನೀತಿ ಎಂದಿಗೂ ವೇಷಗಾರಿಕೆ ಅಲ್ಲ. ಹಾಗಾಗಲೂ ಬಾರದು. ಅಹಿಂಸೆಯ ಪರದೆಯ ಹಿಂದೆ ಹಿಂಸಾಚಾರಕ್ಕೆಡೆಗೊಡ

ಕೂಡದು. ಒಂದು ನಿಶ್ಚಿತ ಉದ್ದೇಶಕ್ಕಾಗಿ ನಿಶ್ಚಿತ ಕಾಲದಲ್ಲಿ ನಾವು ಅಹಿಂಸಾ ಮಾರ್ಗ ಅನುಸರಿಸಲು ಬದ್ಧರಾದಾಗ ಆ ಕಾಲಕ್ಕೆ ಆ ಉದ್ದೇಶಕ್ಕೆ ಅನುಗುಣವಾದ ಆಚರಣೆಗೆ ನಮ್ಮ ವಿಚಾರ, ನಮ್ಮ ಮಾತು, ಹೊಂದಿಕೊಳ್ಳಬೇಕು. ಪ್ರಾಮಾಣಿಕನಾದ ಒಬ್ಬ ಜೈಲು ಅಧಿಕಾರಿ ಕೂಡ ಮರಣದಂಡನೆಗೆ ಗುರಿಯಾದ ಖೈದಿಯ ಬಗೆಗೆ ಹೀಗೆಯೇ ನಡೆದುಕೊಳ್ಳುತ್ತಾನೆ. ನಿರ್ದೇಶಿತವಾದ ಆ ಕೊನೆಯ ಘಳಿಗೆ ಬರುವವರೆಗೆ ತನ್ನ ಜೀವವನ್ನೇ ಪಣವಾಗಿಟ್ಟು ಖೈದಿಯನ್ನು ರಕ್ಷಿಸಿಕೊಳ್ಳುತ್ತಾನೆ. ಅವನ ರಕ್ಷಣೆಯನ್ನು ಕುರಿತು ಆಲೋಚಿಸುತ್ತಾನೆ, ಮಾತನಾಡುತ್ತಾನೆ. ಆ ಸಮಯಕ್ಕೆ ವ್ಯಕ್ತಿಯ ಬಗೆಗೆ ದೇಹ, ಮಾತು ಮತ್ತು ಮನಸ್ಸುಗಳಿಂದಲೂ ಅಹಿಂಸಾತ್ಮಕವಾಗಿ ವರ್ತಿಸುತ್ತಾನೆ.

"ನಾವು ಪರಸ್ಪರವಾಗಿ ನಮ್ಮ ವಿರೋಧಿಗಳ ವಿಚಾರದಲ್ಲಿಯೂ—ಅವರು ಅಧಿಕಾರಿಗಳಾಗಲಿ, ಸರ್ಕಾರದ ಸಹಕಾರಿಗಳಾಗಲಿ—ಅಹಿಂಸಾತ್ಮಕವಾಗಿ ವರ್ತಿಸುವ ಪ್ರತಿಜ್ಞೆ ಮಾಡಿದ್ದೇವೆ. ಅವರ ಮನವೊಲಿಸಿ ಹೃದಯ ಪರಿವರ್ತನೆಯ ಪ್ರೇರಣೆ ಮಾಡಬೇಕೇ ಹೊರತು ಭಯ ಹುಟ್ಟಿಸಿ ನಮ್ಮ ಸಲಹೆಯನ್ನಂಗೀಕರಿಸುವಂತೆ ಬಗ್ಗಿಸುವುದು ತರವಲ್ಲ. ನಮ್ಮಲ್ಲಿ ಕ್ರಿಯಾತ್ಮಕವಾಗಿ ಕೆಲಸ ಮಾಡುವ ಬಹು ಸಂಖ್ಯಾತ ಕಾರ್ಯಕರ್ತರು ತಿಳಿದೋ ತಿಳಿಯದೆಯೋ ವಚನ ಭ್ರಷ್ಟರಾಗುತ್ತಿದ್ದೇವೆ; ನಮ್ಮ ವಿರೋಧಿಗಳ ವಿಚಾರ ದಲ್ಲಿತಾಳ್ಮೆಗೆಟ್ಟಿದ್ದೇವೆ; ನಮ್ಮ ದೇಶಬಾಂಧವರನೇಕರ ಅವಿಶ್ವಾಸಕ್ಕೆ ಗುರಿಯಾಗಿದ್ದೇವೆ. ನಮ್ಮ ಅಹಿಂಸೆಯಲ್ಲವರಿಗೆ ಏನೂ ನಂಬಿಕೆಯಿಲ್ಲ. ಅನೇಕ ಕಡೆ ಹಿಂದೂ ಮುಸಲ್ಮಾನ ಸೋದರರು ಅಹಿಂಸೆಯ ಮಾದರಿಗಳಾಗುವ ಬದಲು ಹಿಂಸಾಚಾರದ ಉದಾಹರಣೆಗಳೇ ಆಗಿದ್ದಾರೆ. ನಮ್ಮಲ್ಲೇ ಕಾರ್ಯ ಬದಲಾವಣೆಯ ಪರ ಮತ್ತು ವಿರೋಧಿಗಳ ಪರಸ್ಪರ ರೋಷದಿಂದ ಹೊಡೆದಾಡಿದ್ದಾರೆ. ತನ್ನದೇ ಸತ್ಯ ಎಂದು ವಾದಿಸಿ ಹಠಮಾರಿತನದ ಮೌಢ್ಯದಿಂದ ಎದುರಾಳಿಯ ನಿಸ್ಸಹಾಯಕ ತಿಳಿಗೇಡಿತನವನ್ನು ಶಪಿಸಿದ್ದೇವೆ.

"ಸಾರ್ವಜನಿಕ ಗಮನ ಸೆಳೆಯುವ ಎಲ್ಲ ಸಮಸ್ಯೆಗಳಲ್ಲೂ ಅಹಿಂಸೆಯ ಆವಶ್ಯಕತೆ ಮತ್ತು ಉಪಯುಕ್ತತೆಗಳನ್ನು ಕುರಿತು ಉದಾಹರಿಸುವ ಲೇಖನಗಳು 'ಯಂಗ್–ಇಂಡಿಯಾ' ಪತ್ರಿಕೆಯ ಪುಟಗಳನ್ನು ತುಂಬಿರುವುದು ಅನಿವಾರ್ಯ."

ಗಾಂಧೀಜಿ ಸಂಪಾದಕರಾದ ಕೂಡಲೇ ಪತ್ರ ವ್ಯವಹಾರಗಳ ಪ್ರಶ್ನೆಗಳ ಸುರಿಮಳೆಯೇ ಬರತೊಡಗಿತು: ಯಂಗ್—ಇಂಡಿಯಾದ ಮೊದಲ ಸಂಚಿಕೆಯಲ್ಲಿಯೇ ತಾವೇಕೆ ಶಸ್ತ್ರ ಚಿಕಿತ್ಸೆಗೆ ಒಪ್ಪಿದರೆಂಬ ಬಗ್ಗೆ ಅವರು ಉತ್ತರಿಸಬೇಕಾಯಿತು. ತಮ್ಮ 'ಹಿಂದ್ ಸ್ವರಾಜ್ಯ' ಗ್ರಂಥದಲ್ಲಿನ ಉದೇಶಗಳನ್ನು ತಾವೇ ಏಕೆ ಮೀರಿದರೆಂದು ಕೇಳಿದ್ದರು. ಗಾಂಧೀಜಿ ಹೀಗೆ ಬರೆದರು : "ಆದರ್ಶ ಸ್ಥಿತಿಯೊಂದನ್ನು ಕುರಿತು ನಾನಲ್ಲಿ ವಿವರಿಸಿದ್ದೇನೆ. ಆ ಪುಸ್ತಕ ಬರೆಯುವ ಸಮಯಕ್ಕೂ ನನಗೆ ಅಮೂಲ್ಯ ಸ್ನೇಹಿತರಾಗಿದ್ದ ವೈದ್ಯರಿದ್ದರು. ಅವರ ಸಲಹೆಗಳನ್ನು ಅಗತ್ಯವಿದ್ದಾಗ ಪಡೆಯಲು ಹಿಂಜರಿಯಲಿಲ್ಲ. ಔಷಧಿಯ ಉಪಯೋಗದ ವಿಚಾರ, ನನ್ನ ನಂಬಿಕೆಗೆ ವಿರೋಧವಾಗಿಯೇ ಇತ್ತು ಎಂಬುದನ್ನು

ವಾಚಕರು ಸೂಚಿಸಿ ಬರೆದಿದ್ದಾರೆ. ನೇರವಾಗಿಯೇ ಅನೇಕ ಮಿತ್ರರು ಹೇಳಿದ್ದಾರೆ. ನನ್ನ ಅಪರಾಧಗಳನ್ನು ಒಪ್ಪಿಕೊಳ್ಳುತ್ತೇನೆ. ನಾನಿನ್ನೂ ಪೂರ್ಣ ಮಾನವನಲ್ಲವೆಂಬುದೇ ನನ್ನ ಒಪ್ಪಿಗೆ. ಆದರ್ಶದಿಂದ ನಾನಿನ್ನೂ ದೂರವಿದ್ದೇನೆ. ಅದಕ್ಕೆ ಮಾರ್ಗ ಮಾತ್ರ ನನಗೆ ಖಚಿತ. ದಾರಿ ತಿಳಿದೊಡನೆಯೇ ಗುರಿಯನ್ನು ಮುಟ್ಟಿದಂತಾಗದು. ನಾನು ಆದರ್ಶ ಮಾನವನಾಗಿದ್ದು, ಮನಸ್ಸಿನಿಂದ ಕೂಡ ವಿಷಯಾಸಕ್ತನಾಗದ ಇಂದ್ರಿಯ ಸಂಯಮ ನನ್ನಲ್ಲಿದ್ದರೆ ನನ್ನ ದೇಹಾರೋಗ್ಯವೂ ಆದರ್ಶಸ್ಥಿತಿಯಲ್ಲೇ ಇರುತ್ತಿತ್ತು. ಈ ಸಾಧನೆಯಲ್ಲಿ ನಾನು ವಿಜಯಿಯಾದರೆ ನನ್ನಿಂದಾಬಗಬಹುದಾದ ಸೇವೆಗೆ ಅತ್ಯದ್ಭುತ ಪ್ರಭಾವಶಕ್ತಿ ತುಂಬಿಕೊಂಡೀತು. ನನ್ನ ಕರುಳುಬೇನೆ ಹೇಗೆ ನನ್ನ ಮನಸ್ಸಿನ ದುಷ್ಟ ವಿಚಾರಗಳ ಪರಿಣಾಮವೆಂದು ನಾನು ಅರಿತಿದ್ದೇನೋ ಹಾಗೆಯೇ ಶಸ್ತ್ರಚಿಕಿತ್ಸೆಗೊಳ ಗಾದುದೂ ಒಂದು ಮನೋದೌರ್ಬಲ್ಯದ ಚಿಹ್ನೆ. ನನ್ನ ಸ್ವಾರ್ಥಶೂನ್ಯವಾಗಿದ್ದಿದ್ದರೆ ಚಿಕಿತ್ಸೆಯನ್ನು ನಿರಾಕರಿಸಿ ಅನಿವಾರ್ಯ ಪರಿಣಾಮವನ್ನೆದುರಿಸಲು ಸಿದ್ಧನಾಗುತ್ತಿದ್ದೆ. ದೇಹವನ್ನುಳಿಸಿಕೊಂಡು ಜೀವಿಸಲು ನನ್ನ ಇಚ್ಛೆಯಾಯಿತು. ಸಂಪೂರ್ಣ ನಿರ್ಲಿಪ್ತತೆ ಜೀವಂತ ದೇಹದ ವಿಷಯಕ್ಕೆ ಒಂದು ಯಾಂತ್ರಿಕ ಪ್ರತಿಕ್ರಿಯೆ ಅಲ್ಲ. ಸಂತತವಾದ ತಪಶ್ಚರ್ಯೆ ಮತ್ತು ನಿರಂತರ ಪ್ರಾರ್ಥನೆಗಳಿಂದ ಮಾತ್ರ ಆ ಸ್ಥಿತಿಯನ್ನು ನಾವು ಸಾಧಿಸಬೇಕಾಗುತ್ತದೆ."

ವಾರವಾರಕ್ಕೂ ಗಾಂಧೀಜಿಯ ಲೇಖನಗಳು ಹರಿದು ಬರುತ್ತಿದ್ದವು. ಹತ್ತು ಲೇಖನಗಳ ಸರಣಿಯೊಂದರಲ್ಲಿ ತಮ್ಮ ಸೆರೆಮನೆಯ ಅನುಭವಗಳನ್ನು ಬಣ್ಣಿಸಿದ್ದರು. ಅತ್ಯುತ್ಕೃಷ್ಟ ಮಾನವೀಯ ಸ್ಪಂದನಗಳ ಕೃತಿ ಅದು. ವಿವಾದಾಸ್ಪದವಾದ ಶಾಸನಸಭಾ ಪ್ರವೇಶದ ಪ್ರಶ್ನೆಯೊಂದನ್ನು ಬಿಟ್ಟು ಬೇರೆ ಎಲ್ಲ ವಿಷಯಗಳ ಮೇಲೂ ವಿಪುಲವಾಗಿ ಬರೆದರು. ಚಿತ್ತರಂಜನ್‌ದಾಸ್ ಮತ್ತು ಮೋತಿಲಾಲರ ನೇತೃತ್ವದಲ್ಲಿ ಸ್ವರಾಜ್ಯವಾದಿಗಳು ವಿಜಯಗಳಿಸಿದ್ದರೂ ಗಾಂಧೀಜಿಯ ಹರಕೆಗಾಗಿ ಅವರು ಕಾತರರಾಗಿದ್ದರು. ಏಪ್ರಿಲ್‌ನಲ್ಲಿ ನಾಯಕರಿಬ್ಬರೂ ಜುಹುಗೆ ತೆರಳಿ ಅವರನ್ನು ಭೇಟಿಯಾದರು. ರಾಜಕೀಯ ಪರಿಸ್ಥಿತಿ ಯನ್ನು ಕುರಿತು ಚರ್ಚಿಸಿದರು. ಸ್ವರಾಜ್ಯವಾದಿಗಳ ನಿಲುವನ್ನು ವಿವರಿಸಿ ಅವರ ಕ್ರಿಯಾತ್ಮಕ ಬೆಂಬಲವಿಲ್ಲದೇ ಹೋದರೂ ಸಹಾನುಭೂತಿಯ ಸಹಾಯವನ್ನು ಬೇಡಿದರು. ಗಾಂಧೀಜಿಗೆ ಅದು ಸ್ವಲ್ಪವೂ ಒಪ್ಪಿಗೆಯಾಗಲಿಲ್ಲ. ಅಭಿಪ್ರಾಯ ಭೇದವನ್ನು ಇಬ್ಬರೂ ಒಪ್ಪಿಕೊಂಡರು. ಅದೇ ರೀತಿಯ ಹೇಳಿಕೆಗಳನ್ನೂ ಪ್ರಕಟಿಸಲಾಯಿತು. ಮೇ ೨೨ ರಂದು ಪತ್ರಿಕೆಗಳಿಗೆ ಕೊಟ್ಟ ಹೇಳಿಕೆಯಲ್ಲಿ ಗಾಂಧೀಜಿ ಹೀಗೆ ಹೇಳಿದರು :

"ಸ್ವರಾಜ್ಯವಾದಿಗಳೊಡನೆ ಶಾಸನಸಭೆ ಮತ್ತು ಪರಿಷತ್ತುಗಳಿಗೆ ಕಾಂಗ್ರೆಸ್ಸಿಗರು ಪ್ರವೇಶಿಸುವ ಕ್ಲಿಷ್ಟ ಪ್ರಶ್ನೆಯನ್ನು ಕೂಲಂಕಷವಾಗಿ ಚರ್ಚಿಸಿದ್ದೇನೆ. ಅವರ ಅಭಿಪ್ರಾಯ ವನ್ನು ಒಪ್ಪಲು ನನಗೆ ಸಾಧ್ಯವಾಗಲಿಲ್ಲ ಎಂದು ದುಃಖದಿಂದ ಹೇಳಬೇಕಾಗಿದೆ. ಅವರ ವಾದವನ್ನು ಒಪ್ಪಲು ಪ್ರಯತ್ನವನ್ನೇ ಮಾಡದಂತಹ ಅನಾದರಣೆ ನನ್ನಲ್ಲಿ

ಖಂಡಿತ ಇರಲಿಲ್ಲವೆಂದು ಸಾರ್ವಜನಿಕರಿಗೆ ಭರವಸೆ ಕೊಡುತ್ತೇನೆ. ಅವರ ವಾದ ದೊಡನೆ ನನ್ನ ಮನಸ್ಸು ಸಮ್ಮಿಳಿತವಾಗಿದ್ದಿದ್ದರೆ ನನ್ನ ಕೆಲಸ ಇನ್ನೂ ಹಗುರವಾಗುತ್ತಿತ್ತು. ಇಂತಹ ಅಮೂಲ್ಯ ಗೌರವಾನ್ವಿತ ನಾಯಕರನ್ನು ಮನಸ್ಸಿನಿಂದ ಕೂಡ ವಿರೋಧಿಸ ವುದು ನನಗೇನೂ ಸಂತೋಷದಾಯಕವಲ್ಲ. ತಾಯ್ನಾಡಿಗಾಗಿ ಅವರು ಮಾಡಿರುವ ತ್ಯಾಗ ನಿಸ್ಸೀಮ; ಅದ್ವಿತೀಯವಾದುದು. ದೇಶದ ಸ್ವಾತಂತ್ರ್ಯದ ಬಗೆಗೆ ಅವರಿಗಿರುವ ಅಪರಿಮಿತ ಪ್ರೇಮ ಯಾರಿಗೂ ಕಡಿಮೆಯಾದುದಲ್ಲ. ಆದರೆ ನಾನೆಷ್ಟು ಸದುದ್ದೇಶ ದಿಂದ ಪ್ರಯತ್ನಿಸಿದರೂ ಅವರ ಪ್ರತಿಪಾದನೆಯನ್ನು ಅಂಗೀಕರಿಸಲು ನನಗೆ ಸಾಧ್ಯ ವಾಗಲಿಲ್ಲ. ನಮ್ಮ ನಡುವಿನ ಮತಭೇದ ಕೇವಲ ಸಣ್ಣ ವಿವರಗಳಿಗೆ ಸಂಬಂಧಿಸಿದವು ಗಳಲ್ಲ. ಪ್ರಾಮಾಣಿಕವಾದ ಮೂಲಭೂತವಾದ ದೃಷ್ಟಿಭೇದ ನಮ್ಮಲ್ಲಿದೆ. ನಾನು ನಿರ್ಧರಿಸಿಕೊಂಡಿರುವ ಅಸಹಕಾರ ಮಾರ್ಗಕ್ಕೆ ಈ ಶಾಸನಸಭಾ ಪ್ರವೇಶ ಖಂಡಿತ ಹೊಂದಿ ಕೊಳ್ಳಲಾರದೆಂದು ನನಗೆ ಖಚಿತವೆನಿಸಿದೆ. ಇದು 'ಅಸಹಕಾರ' ಎಂಬ ಪದದ ವಿಶ್ಲೇಷಣೆ ಯಲ್ಲಿ ಕಂಡು ಬರುವ ವ್ಯತ್ಯಾಸ ಮಾತ್ರವೆಂದು ನಾನು ಭಾವಿಸಿಲ್ಲ. ಮನೋಧೋರಣೆ ಗಳ ವ್ಯತ್ಯಾಸವೇ ಇಲ್ಲಿ ಎದ್ದು ಕಾಣುತ್ತದೆ. ಜೀವಂತ ಸಮಸ್ಯೆಗಳನ್ನೆದುರಿಸುವ ವಿಧಾನ ಗಳ ಮೇಲೆ ಅದು ಪರಿಣಾಮ ಬೀರುತ್ತದೆ. ಈ ಮನೋವೃತ್ತಿಯಲ್ಲಿನ ಬದಲಾವಣೆ ಯಿಂದ ನಮ್ಮ ತ್ರಿವಿಧ ಬಹಿಷ್ಕಾರದ ಪರಿಣಾಮವನ್ನು ನಾವು ಅಳೆಯಬೇಕು. ಕೇವಲ ಬಾಹ್ಯ ಸ್ಥೂಲ ಪರಿಣಾಮಗಳಿಂದ ಮಾತ್ರವಲ್ಲ. ಈ ದೃಷ್ಟಿಯಿಂದ ಶಾಸನ ಸಭೆಗಳ ಸದಸ್ಯರಾಗುವುದಕ್ಕಿಂತ ಅದರ ಹೊರಗೆ ಉಳಿಯುವುದು ದೇಶದ ಹೋರಾಟಕ್ಕೆ ಹೆಚ್ಚು ಉಪಕಾರಿಯಾದೀತು ಎಂದು ನಾನು ಭಾವಿಸುತ್ತೇನೆ. ಆದರೆ ಸ್ವರಾಜ್ಯ ಪಕ್ಷದ ನನ್ನ ಸ್ನೇಹಿತರನ್ನು ಒಪ್ಪಿಸಲು ನಾನು ಅಸಮರ್ಥನಾಗಿದ್ದೇನೆ. ಅವರು ನನ್ನಿಂದ ಭಿನ್ನವಾದ ಅಭಿಪ್ರಾಯ ಉಳ್ಳವರಾಗಿರುವವರೆಗೂ ಅವರ ಸ್ಥಾನ ಶಾಸನ ಸಭೆಯಲ್ಲಿ ಎಂದು ನಾನು ಅಂಗೀಕರಿಸುತ್ತೇನೆ. ನಮಗೆಲ್ಲರಿಗೂ ಇದು ಉತ್ತಮ ಮಾರ್ಗ.

"ಸಂಭಾಷಣೆಯಲ್ಲಿ ನಾನು ಪ್ರತಿಪಾದಿಸಿದುದನ್ನು ಸ್ವರಾಜ್ಯ ಪಕ್ಷದವರು ಒಪ್ಪ ಬಹುದೆಂದು ನಿರೀಕ್ಷಿಸುವುದು ತಪ್ಪು. ಅವರಲ್ಲಿ ಅನೇಕರು ಅತ್ಯಂತ ಸಮರ್ಥರಾದ ಅನುಭವಿಗಳಾದ ಪ್ರಾಮಾಣಿಕ ದೇಶಭಕ್ತರು. ಈ ಶಾಸನ ಸಭೆಗಳನ್ನು ಪ್ರವೇಶಿಸುವ ಮುನ್ನ ಆಳವಾಗಿ ಕೂಲಂಕಷವಾಗಿ ಆಲೋಚನೆಯನ್ನು ಮಾಡಿರುತ್ತಾರೆ. ಅನುಭವ ದಿಂದ ಅವರ ಈ ಹೆಜ್ಜೆ ನಿಷ್ಫಲವಾದುದೆಂದು ಅವರಿಗನಿಸುವವರೆಗೂ ತಮ್ಮ ಸ್ಥಾನ ಗಳಿಂದ ಅವರು ಹೊರಬರಲಾರರು.

"ಅದ್ದರಿಂದ ನನಗೂ ಸ್ವರಾಜ್ಯಪಕ್ಷದ ನಾಯಕರಿಗೂ ಇರುವ ಭಿನ್ನತೆಯಲ್ಲಿ ಯಾರದು ಸರಿ ಎಂಬ ಜಿಜ್ಞಾಸೆಗೆ ತೊಡಗುವುದಲ್ಲ ಈಗಿರುವ ಪ್ರಶ್ನೆ. ಶಾಸನ ಸಭಾ ಪ್ರವೇಶದ ನಿರ್ಣಯವಾಗಿಬಿಟ್ಟಿರುವಾಗ ಈಗೇನು ಮಾಡಬೇಕು ಎಂಬುದೇ ದೇಶದ ಮುಂದಿರುವ ಪ್ರಧಾನ ಪ್ರಶ್ನೆ. ಅಸಹಕಾರವಾದಿಗಳು ಸ್ವರಾಜ್ಯವಾದಿಗಳನ್ನು ಬಹಿರಂಗ

ವಾಗಿ ಪ್ರತಿಭಟಿಸಬೇಕೇ ಅಥವಾ ತಟಸ್ಥರಾಗಿರಬೇಕೆ ಅಥವಾ ಎಲ್ಲೆಲ್ಲಿ ತಾತ್ವಿಕಾಭಾಸವಾಗಲಾರದೋ ಅಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಹಕರಿಸುವುದೇ?

"ದೆಹಲಿ ಮತ್ತು ಕಾಕಿನಾಡ ಅಧಿವೇಶನಗಳಲ್ಲಾದ ನಿರ್ಣಯಗಳು ಯಾರಿಗೆ ತಾತ್ವಿಕ ಗೊಂದಲವಿಲ್ಲವೋ ಅಂತಹ ಕಾಂಗ್ರೆಸ್ಸಿಗರಿಗೆ ಕೌನ್ಸಿಲ್ಲುಗಳನ್ನೂ ಶಾಸನ ಸಭೆಗಳನ್ನು ಪ್ರವೇಶಿಸಲು ಅನುಮತಿ ಕೊಟ್ಟಿವೆ. ಆದ್ದರಿಂದ ಸ್ವರಾಜ್ಯವಾದಿಗಳು ಶಾಸನ ಸಭೆಗಳನ್ನು ಪ್ರವೇಶಿಸುವುದು ಕ್ರಮಬದ್ಧವೆಂಬುದು ನನ್ನ ಮತ. ಬದಲಾವಣೆಯ ವಿರೋಧಿಗಳಿಂದ ಪೂರ್ಣ ತಾಟಸ್ಥ್ಯ ನೀತಿಯನ್ನು ಅವರು ನಿರೀಕ್ಷಿಸಬಹುದು. ಸಭೆಗಳಲ್ಲಿ ಕಾರ್ಯಕ್ರಮಕ್ಕೆ ತಡೆ ಒಡ್ಡುವ ನೀತಿ ಅನುಸರಿಸುವುದೂ ಕ್ರಮಬದ್ಧವೆ. ಅದನ್ನವರು ಸ್ಪಷ್ಟ ಮಾಡಿದ್ದರು. ಕಾಂಗ್ರೆಸ್ ಅವರ ಸಭಾ ಪ್ರವೇಶಕ್ಕೆ ಯಾವ ಷರತ್ತುಗಳನ್ನೂ ಹಾಕಿಲ್ಲ. ಸ್ವರಾಜ್ಯವಾದಿಗಳು ಯಶಸ್ವಿಯಾಗಿ, ದೇಶದ ಹೋರಾಟಕ್ಕೆ ಅನುಕೂಲವಾದರೆ ಅಂಥ ಪ್ರತ್ಯಕ್ಷ ಪ್ರಮಾಣದಿಂದ ನನ್ನಂತಹ ಸಂದೇಹವಾದಿಗಳ ಕಣ್ಣು ತೆರೆದೀತು. ಹಾಗೆಯೇ ಈ ಅನುಭವದಿಂದ ಭ್ರಮ ನಿರಸನವಾದರೆ ಸ್ವರಾಜ್ಯವಾದಿಗಳು ತಮ್ಮ ಹೆಜ್ಜೆಯನ್ನು ಹಿಂತೆಗೆದುಕೊಳ್ಳುವ ಸಾಹಸೀ ದೇಶಪ್ರೇಮಿಗಳೆಂದು ನಾನು ಬಲ್ಲೆ. ಆದ್ದರಿಂದ ಅವರ ದಾರಿಯಲ್ಲಿ ನಾನು ಆತಂಕ ತಂದೊಡ್ಡಲು ಬಯಸಲಾರೆ. ಸ್ವರಾಜ್ಯವಾದಿಗಳ ಕೌನ್ಸಿಲ್ ಪ್ರವೇಶದ ವಿರುದ್ಧ ಪ್ರಚಾರ ಮಾಡಲಾರೆ. ನಾನು ನಂಬದಿರುವ ಕಾರ್ಯಕ್ರಮವೊಂದರಲ್ಲಿ ಸಕ್ರಿಯವಾಗಿ ನಾನು ಸಹಕರಿಸಲಾರೆ ಅಷ್ಟೆ. ದೆಹಲಿ ಮತ್ತು ಕಾಕಿನಾಡ ನಿರ್ಣಯಗಳು ಸ್ವರಾಜ್ಯವಾದಿಗಳಿಗೆ ಶಾಸನಸಭಾ ಪ್ರವೇಶ ಮಾರ್ಗವನ್ನು ಪ್ರಯೋಗ ಮಾಡಿನೋಡಲು ಅವಕಾಶ ಕೊಡಬೇಕೆಂಬ ಉದ್ದೇಶದಿಂದ ಮಾಡಿದವು. ಆದ್ದರಿಂದ ಬದಲಾವಣೆಯನ್ನು ವಿರೋಧಿಸುವ ಪಕ್ಷ ಅತ್ಯಂತ ಪ್ರಾಮಾಣಿಕತೆಯಿಂದ ಅವರಿಗೆ ಯಾವ ಆತಂಕಗಳನ್ನೂ ತಂದೊಡ್ಡದೆ ಶಾಸನ ಸಭೆಗಳಲ್ಲಿ ಅವರು ಸಂಪೂರ್ಣ ಸ್ವಾತಂತ್ರ್ಯದಿಂದ ಕಾರ್ಯ ಮಾಡಲು ಅವಕಾಶಕೊಟ್ಟರೆ ಮಾತ್ರ ಆ ಉದ್ದೇಶ ಸಫಲವಾಗುತ್ತದೆ.

ಕೌನ್ಸಿಲ್ಲುಗಳಿಗೆ ಪ್ರವೇಶ ಮಾಡಿ ಕಾರ್ಯ ಮಾಡುವಾಗ ನಮ್ಮ ಕಾರ್ಯಕ್ರಮಗಳಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸಮಾಡಬೇಕೆಂದು ನನ್ನ ಅಭಿಪ್ರಾಯ. ಆದ್ದರಿಂದ ನಾನೇನಾದರೂ ಕೌನ್ಸಿಲ್ ಸದಸ್ಯನಾಗುವುದಾದರೆ ಸರ್ವಸಾಮಾನ್ಯವಾಗಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ತರುವುದನ್ನು ಒಂದು ನೀತಿಯನ್ನಾಗಿ ಮಾಡದೆ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಗಳಿಗೆ ಸಹಾಯವಾಗುವಂತೆ ನನ್ನ ನೀತಿಯನ್ನು ರೂಪಿಸಿಕೊಂಡೇನು. ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಕೈನೂಲಿನ ಕೈಮಗ್ಗದ ಖದ್ದರ್ ಬಟ್ಟೆಯನ್ನು ತಮ್ಮ ಉಪಯೋಗಕ್ಕೆ ಖರೀದಿ ಮಾಡಬೇಕೆಂಬ ನಿರ್ಣಯವನ್ನು ಮಂಡಿಸುವುದು ಒಂದು ಉದಾಹರಣೆ. ಹಾಗೆಯೇ ಪರದೇಶಿ ಬಟ್ಟೆಯ ಮೇಲೆ ಭಾರವಾದ ತೆರಿಗೆ ಹಾಕಿ ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಮದ್ಯಪಾನ

ಮತ್ತು ಇತರ ಅಮಲೇರಿಸುವ ವಸ್ತುಗಳ ಮೇಲಿಂದ ಬರುವ ತೆರಿಗೆ ಹಣವನ್ನು ಕೂಡಲೆ ನಿಲ್ಲಿಸುವುದು. ಅದೇ ಪ್ರಮಾಣದಲ್ಲಿಯಾದರೂ ಸೈನ್ಯ ವೆಚ್ಚವನ್ನು ಕಡಮೆ ಮಾಡುವುದು ಮುಂತಾದ ಕ್ರಮಗಳಿಗೆ ಯತ್ನ ಮಾಡಬೇಕು.

"ಇಂಥ ನಿರ್ಣಯಗಳನ್ನು ಸಭೆ ಅಂಗೀಕರಿಸಿದ ಮೇಲೆ ಸರ್ಕಾರ ಜಾರಿ ಮಾಡಲು ನಿರಾಕರಿಸಿದರೆ ಸಭೆಗಳನ್ನು ವಿಸರ್ಜಿಸಲು ಕೇಳಬೇಕು. ಅದೇ ವಿಷಯಗಳನ್ನು ಜನತೆಯ ಮುಂದಿಟ್ಟು ಮರುಚುನಾವಣೆ ಮಾಡುವಂತೆ ಒತ್ತಾಯ ಮಾಡಬೇಕು. ಅದಕ್ಕೂ ಸರ್ಕಾರದ ವಿಸರ್ಜನೆಯಾಗದಿದ್ದರೆ ರಾಜಿನಾಮೆ ಕೊಟ್ಟು ದೇಶವನ್ನು ಶಾಸನಭಂಗ ಚಳುವಳಿಗೆ ಸಿದ್ಧಮಾಡಬೇಕು. ಅಂಥ ಘಟ್ಟಕ್ಕೆ ಪರಿಸ್ಥಿತಿಯನ್ನು ಕೊಂಡೊಯ್ಯು ವುದಾದರೆ ಆಗ ಸ್ವರಾಜ್ಯವಾದಿಗಳೊಡನೆ ನಾನು ಸಂತೋಷವಾಗಿ ಸೇರಿ ಅವರ ನಿರ್ದೇಶನದಲ್ಲಿ ಕೆಲಸ ಮಾಡಿಯೇನು. ಸವಿನಯ ಶಾಸನಭಂಗಕ್ಕೆ ಸಿದ್ಧವಾಗುವ ಪರೀಕ್ಷೆಯ ಸೂತ್ರಗಳನ್ನು ಮಾತ್ರ, ಹಿಂದೆ ನಾನು ಹೇಳಿದ್ದನ್ನೇ ಅಕ್ಷರಶಃ ಮತ್ತೆ ಒತ್ತಾಯ ಮಾಡುತ್ತೇನೆ.

"ಪ್ರಯೋಗದ ಸಮಯಕ್ಕೆ ಸ್ವರಾಜ್ಯವಾದಿಗಳು ಏನು ಹೇಳುವರು, ಏನು ಮಾಡುವರೆಂದು ಬದಲಾವಣೆ ವಿರೋಧಿ ಪಕ್ಷದವರು ಮನಸ್ಸಿಗೆ ಹಚ್ಚಿಕೊಳ್ಳಬಾರದು. ತದೇಕ ನಿಷ್ಠೆಯಿಂದ ಅವರು ರಚನಾತ್ಮಕ ಕಾರ್ಯಕ್ರಮಗಳನ್ನು ಮಾಡಿ ಅವುಗಳಲ್ಲಿ ತಮ್ಮ ಪೂರ್ಣ ನಂಬಿಕೆಯನ್ನು ಪ್ರಕಟಪಡಿಸಬೇಕು. ನಿಶ್ಶಬ್ದವಾಗಿ ನಿರಾಡಂಬರವಾಗಿ ಪ್ರಾಮಾಣಿಕ ಕೆಲಸ ಮಾಡಲು ಸಿದ್ಧರಾದರೆ ಈಗಿರುವ ಕಾರ್ಯಕರ್ತರೆಲ್ಲರಿಗೂ ಸಾಕಾಗುವಷ್ಟು ಕೆಲಸ ಖಾದೀಕ್ಷೇತ್ರ ಮತ್ತು ದೇಶಿಯ ಶಿಕ್ಷಣ ಕ್ಷೇತ್ರಗಳಲ್ಲಿ ಇದೆ. ಹಿಂದೂ ಮುಸ್ಲಿಂ ಐಕ್ಯತೆಯೂ ನಮ್ಮಲ್ಲಿನ ಉತ್ತಮ ಕಾರ್ಯಕರ್ತರ ಶ್ರದ್ಧೆಗೆ ಒಂದು ದೊಡ್ಡ ಸವಾಲು. ಬದಲಾವಣೆವಿರೋಧಿ ಪಂಗಡ ತಮ್ಮ ರಚನಾತ್ಮಕ ಕಾರ್ಯವನ್ನು ಪರಿಣಾಮಕಾರಿ ನಿಷ್ಠೆಯಿಂದ ಕೈಗೊಂಡರೆ ಮಾತ್ರ ತಮ್ಮ ವಿರೋಧಕ್ಕೆ ಸಮಂಜಸ ಸಮರ್ಥನೆ ತೋರಿಸ ಬಹುದು. ಹಾಗೆಯೇ ಬದಲಾವಣೆಯ ಪರವಾಗಿರುವವರೂ ಸಭಾ ಪ್ರವೇಶದ ಸ್ಪಷ್ಟ ಪರಿಣಾಮಗಳಿಂದ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಅವರೂ ಕೂಡ ರಚನಾತ್ಮಕ ಕಾರ್ಯಕ್ರಮವನ್ನು ಒಪ್ಪುತ್ತಾರೆ. ಆದರೆ ಅಷ್ಟು ಮಾತ್ರವೇ ನಮ್ಮ ದೇಶದ ಗುರಿಯನ್ನು ಮುಟ್ಟಿಸಲಾರದು ಎಂದು ಅವರ ವಾದ. ಶಾಸನ ಸಭೆ ಗಳಿಂದ ಹೊರಗೆ ಈ ಪರ–ವಿರೋಧಿ ಪಂಗಡಗಳೆರಡೂ ಖಂಡಿತವಾಗಿ ಒಟ್ಟುಗೂಡಿ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡು ಅಗತ್ಯವಾದರೆ ತಮ್ಮ ತಮ್ಮ ಸಂಸ್ಥೆಗಳ ಮೂಲಕ ಅವುಗಳನ್ನು ಯಶಸ್ವಿಗೊಳಿಸುವುದು ಸಾಧ್ಯ."

ಮೇ ೨೯ರ 'ಯಂಗ್–ಇಂಡಿಯಾ' ಸಂಚಿಕೆ ಹಿಂದೂ ಮುಸ್ಲಿಂ ಸಮಸ್ಯೆಗೆ ಮೀಸ ಲಾಗಿತ್ತು. "ಇದಕ್ಕಿಂತ ಗುರುತರವಾದ ತುರ್ತಾದ ಸಮಸ್ಯೆ ನನ್ನ ದೃಷ್ಟಿಯಲ್ಲಿ ಮತ್ತೊಂ ದಿಲ್ಲ. ಎಲ್ಲ ಪ್ರಗತಿಯೂ ಇದರಿಂದ ಕುಂಠಿತವಾಗಿದೆ" ಎಂದು ಬರೆದರು ಗಾಂಧೀಜಿ.

ಜನರ ಗಮನವನ್ನು ವಿಶೇಷವಾಗಿ ಈ ಸಮಸ್ಯೆಯ ಕಡೆ ಸೆಳೆಯಲು "ಹಿಂದೂ ಮುಸ್ಲಿಂ ಘಟನೆಗಳು–ಕಾರಣ ಮತ್ತು ಪರಿಹಾರ" ಎಂಬ ಶೀರ್ಷಿಕೆಯನ್ನು ದಪ್ಪ ಅಕ್ಷರಗಳಲ್ಲಿ ದೊಡ್ಡದಾಗಿ ಹಾಕಿದ್ದರು. ಹತ್ತು ಪುಟಗಳ ತುಂಬಾ ಆ ಲೇಖನ ಬೆಳೆದಿತ್ತು.

ಕೆಲವು ಪ್ರಾಂತಗಳಲ್ಲಿ ಆರ್ಥಿಕ ಕಾರಣಗಳಿಗಾಗಿ ಘರ್ಷಣೆಗಳು ನಡೆದಿದ್ದುವು. ಭೂಮಾಲಿಕರು ಮತ್ತು ಗುತ್ತಿಗೆದಾರರು, ಸಾಹುಕಾರರು–ಸಾಲಗಾರರು, ಇವರುಗಳ ಮಧ್ಯದ ವಿರಸಗಳಿಗೆ ಜಾತೀಯ ಬಣ್ಣವನ್ನು ಲೇಪಿಸಲಾಗಿತ್ತು. ಮತಾಂಧ ಗುಂಪುಗಳು ಇತರ ಮತಾನುಯಾಯಿಗಳ ಮೇಲೆ ದಾಳಿ ಮಾಡಿ ಮತಾಂತರಗೊಳಿಸಿ ತಮ್ಮ ಜಾತಿಗಳಿಗೆ ಹೆಚ್ಚು ಜನ ಸೇರಿಸಲು ಹವಣಿಸುತ್ತಿದ್ದರು. ಮುಸ್ಲಿಮರು 'ತಾಬ್ಲಿಕ್' ಹಕ್ಕನ್ನೂ, ಹಿಂದೂಗಳು 'ಶುದ್ಧಿ'ಯ ಹಕ್ಕನ್ನೂ ಪ್ರಬಲವಾಗಿ ಪ್ರತಿಪಾದಿಸಿ ಪರಸ್ಪರ ವಿರೋಧಿಸಿದರು. ಈ ಮತಾಂತರಗಳಿಂದ ಘರ್ಷಣೆ ಹುಟ್ಟುತ್ತಿತ್ತು. ಹಸ್ತಪತ್ರಿಕೆಗಳು ಪುಸ್ತಿಕೆಗಳ ಮೂಲಕ ಪರಸ್ಪರ ದೂಷಣೆ ಬೆಳೆಯಿತು. ಇವೇ ಅನೇಕ ಘರ್ಷಣೆಗಳಿಗೆ ಕಾರಣವಾದವು. ದೇಶದಲ್ಲೆಲ್ಲಾದರು ಒಂದು ಕಡೆ ಈ ಅಶಾಂತ ಸ್ಥಿತಿಯ ವರದಿಯಿಲ್ಲದೆ ಒಂದು ವಾರವೂ ಕಳೆಯುತ್ತಿರಲಿಲ್ಲ. ಬೆಂಕಿ ಹಚ್ಚುವುದು, ದರೋಡೆ, ಆಸ್ತಿಪಾಸ್ತಿಗಳ ನಾಶ ಮತ್ತು ಪವಿತ್ರ ಸ್ಥಳಗಳನ್ನು ಧ್ವಂಸ ಮಾಡುವ ಅನೇಕ ಅಕೃತ್ಯಗಳೂ ನಡೆದು ಹೋದವು.

ಈ ಘಟನೆಗಳಿಗೆ ಗಾಂಧೀಜಿ ಕಾರಣವೆಂದು ಕೆಲವು ಹಿಂದೂಗಳು ಹಳಿದರು. "ಖಿಲಾಫತ್ ಸಮಸ್ಯೆಯ ಬಗ್ಗೆ ಹೋರಾಡಲು ಹಿಂದೂ ಮುಸಲ್ಮಾನರನ್ನು ನೀವು ಒಗ್ಗೂಡಿಸಿದಿರಿ, ಅದರಿಂದ ಮುಸ್ಲಿಮರಲ್ಲಿ ಜಾಗೃತಿಯೂ ಐಕ್ಯತೆಯೂ ಉಂಟಾಗಲು ಕಾರಣವಾಯಿತು. ಖಿಲಾಫತ್ ಪ್ರಶ್ನೆ ಮುಗಿದ ನಂತರ ಈಗ ಜಾಗ್ರತರಾದ ಮುಸ್ಲಿಮರು ಹಿಂದೂಗಳ ಮೇಲೆ ಧರ್ಮಯುದ್ಧವನ್ನು ಘೋಷಿಸಿದ್ದಾರೆ" ಎಂದು ದೂಷಿಸಿದರು. ಮುಸ್ಲಿಮರೂ ಗಾಂಧೀಜಿಯನ್ನು ದೂಷಿಸಿದರು. "ಸರಳ ಮನಸ್ಸಿನವರಾದ ನಮ್ಮನ್ನು ಉಚಿತ ರೀತಿಯಲ್ಲಿ ನೀವು ನೋಡಿಕೊಳ್ಳಲಿಲ್ಲ. ನಿಮ್ಮ ಚಳುವಳಿಯ ಕಾರಣವಾಗಿ ಮಹಮ್ಮದಾಲಿಯವರನ್ನು ನಿಮ್ಮ ಕಡೆಗೆ ಸೆಳೆದು ಬಿಟ್ಟಿರಿ. ಸರ್ ಸಯ್ಯದ್ ಮಹಮ್ಮದರು ಅಪಾರಶ್ರದ್ಧೆಯಿಂದ ಕಟ್ಟಿದ ಆಲಿಘಡ್ ವಿದ್ಯಾ ಸಂಸ್ಥೆಯನ್ನು ನೀವು ಪ್ರತಿಭಟಿಸಿದಿರಿ, ಶಾಸನ ಸಭಾ ಪ್ರವೇಶವನ್ನೂ ಬಹಿಷ್ಕರಿಸಿದುದರಿಂದ ನಮ್ಮ ಅನೇಕ ದಕ್ಷ ನಾಯಕರು ಅಲ್ಲಿ ಹೋಗಿ ನಮ್ಮ ಜಾತೀಯ ಹಿತಾಸಕ್ತಿಗಳನ್ನು ರಕ್ಷಿಸಲು ಸಾಧ್ಯವಾಗದೇ ಹೋಯಿತು" ಇದು ಮುಸ್ಲಿಮರ ತರ್ಕ.

ಹಿಂದೂ ಮುಸ್ಲಿಂ ವಿರಸ ಕುರಿತು ಗಾಂಧೀಜಿ ಮತ್ತೆ ಬರೆದರು. ಕಾರಣಗಳನ್ನು ವಿಶ್ಲೇಷಿಸಿ ಪರಿಹಾರಗಳನ್ನು ಸೂಚಿಸಿದರು. ತಾವು ಈವರೆಗೆ ಕೈಗೊಂಡ ಕಾರ್ಯಕ್ರಮಗಳಿಗಾಗಿ ಯಾವ ರೀತಿಯಲ್ಲೂ ತಾವು ಪಶ್ಚಾತ್ತಾಪ ಪಡಬೇಕಾಗಿಲ್ಲವೆಂದು ನುಡಿದರು. "ಈ ರೀತಿ ಆಗುವುದೆಂದು ನಾನು ಮುಂಚೆಯೇ ತಿಳಿದುಕೊಳ್ಳುವ ಪ್ರವಾದಿಯಾಗಿದ್ದರೂ

ಕೂಡ ಖಿಲಾಫತ್ ಚಳುವಳಿಯಲ್ಲಿ ನಾನು ಖಂಡಿತ ಧುಮುಕುತ್ತಿದ್ದೆ. ಜನಸಾಮಾನ್ಯರು ಜಾಗೃತರಾದುದು ನಮ್ಮ ಜನಶಿಕ್ಷಣದ ಪ್ರಮುಖ ಅಂಶ. ಅದರಿಂದ ಮಹತ್ವದ ಲಾಭ ಆಗಿದೆ. ಮತ್ತೆ ಜನತೆ ನಿದ್ರಿಸಲು ನಾನೆಂದಿಗೂ ಅವಕಾಶ ಕೊಡುವುದಿಲ್ಲ."

ಈ ಲೇಖನವನ್ನು ಪ್ರತ್ಯೇಕ ಪುಸ್ತಕವನ್ನಾಗಿ ಪ್ರಕಟಿಸಿ ಗಾಂಧೀಜಿ ಅದಕ್ಕೊಂದು ಮುನ್ನುಡಿ ಬರೆದರು.

"ಅಹಿಂಸೆಯನ್ನು ತಮ್ಮ ಪರಮ ಧ್ಯೇಯವನ್ನಾಗಿ ಅಂಗೀಕರಿಸಲು ನನ್ನ ದೇಶಬಾಂಧವರನ್ನು ನಾನು ಪ್ರಾರ್ಥಿಸುತ್ತಿದ್ದೇನೆ. ವಿವಿಧ ಜನಾಂಗಗಳ ಮಧ್ಯೆ ಇರುವ ಬಾಂಧವ್ಯಗಳನ್ನು ನಿಯಂತ್ರಿಸುವುದಕ್ಕೂ ಸ್ವರಾಜ್ಯ ಸಾಧಿಸುವುದಕ್ಕೂ ಇದೇ ಮಾರ್ಗ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸಿಖ್ ಮತ್ತು ಪಾರ್ಸಿ ಜನಾಂಗಗಳು ಪರಸ್ಪರಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಲು ಹಿಂಸೆಗೆ ಕೈ ಹಾಕಬಾರದು. ಸ್ವರಾಜ್ಯವನ್ನು ಸಂಪಾದಿಸುವ ಮಾರ್ಗವೂ ಅಹಿಂಸಾತ್ಮಕವಾಗಿಯೇ ಇರಬೇಕು. ಈ ದಿವ್ಯಾಸ್ತ್ರ ನಿರ್ಬಲರ ಸಾಧನವೆಂದಲ್ಲ. ಸಶಕ್ತರ ಪ್ರಬಲ ಅಸ್ತ್ರವೆಂದು ಭಾರತದ ಮುಂದೆ ನಾನದನ್ನು ಮಂಡಿಸಿದ್ದೇನೆ ಧರ್ಮಪ್ರತಿಪಾದನೆಯಲ್ಲಿ ಬಲಾತ್ಕಾರಕ್ಕೆ ಸ್ಥಳವಿಲ್ಲವೆಂದು ಹಿಂದೂಗಳೂ ಮುಸಲ್ಮಾನರೂ ಕೊಚ್ಚಿಕೊಳ್ಳುತ್ತಾರೆ. ಆದರೆ ಒಂದು ಹಸುವನ್ನು ರಕ್ಷಿಸುತ್ತೇವೆಂದು ಮುಸಲ್ಮಾನನನ್ನು ಕೊಲ್ಲುವುದು ಬಲಾತ್ಕಾರವಲ್ಲವೇನು? ಬಲ ಪ್ರದರ್ಶನದಿಂದ ಮುಸ್ಲಿಮನನ್ನು ಹಿಂದೂ ಧರ್ಮಕ್ಕೆ ಮತಾಂತರಗೊಳಿಸಿದಂತೆಯೇ ಇದು. ಹಾಗೆಯೇ ಉದ್ಧಟ ಹಿಂಸಾಚಾರವನ್ನವಲಂಬಿಸಿ ಮುಸ್ಲಿಮರು ತಮ್ಮ ಮಸೀದಿಗಳ ಮುಂದೆ ವಾದ್ಯ ಮಾಡಬಾರದೆಂದು ಹಿಂದೂಗಳನ್ನು ದಮನ ಮಾಡಿದರೆ ಬಲಾತ್ಕಾರವಲ್ಲವೇನು? ತನ್ನ ಬಾಹ್ಯ ಪ್ರಪಂಚದಲ್ಲಾಗುವ ಸದ್ದುಗದ್ದಲಗಳನ್ನೆಲ್ಲ ಮರೆತು ಧ್ಯಾನದಲ್ಲಿ ಲೀನವಾಗುವುದು ಧಾರ್ಮಿಕ ಪ್ರಾರ್ಥನೆಯ ದಿವ್ಯಗುಣ. ನಾವಿಬ್ಬರೂ ಪರಸ್ಪರವಾಗಿ ಹೀಗೆ ನಮ್ಮ ನಮ್ಮ ಧರ್ಮಾಚರಣೆಗಳನ್ನು ಗೌರವಿಸಬೇಕು. ಬಲಾತ್ಕಾರದ ಹಿಂಸೆಗೆ ಕೈ ಹಾಕಿದರೆ ಬರಲಿರುವ ಪೀಳಿಗೆಗಳು ನಮ್ಮನ್ನು ಅಧಾರ್ಮಿಕ ಬರ್ಬರರೆಂದು ನಿರ್ಣಯಿಸುತ್ತಾರೆ.

"ನಮ್ಮ ಮೂಲಶ್ರದ್ಧೆಯಾದ ಅಹಿಂಸೆಯನ್ನು ನಾವು ಮತ್ತೆ ಅಂಗೀಕರಿಸಿ ಮೇಲೆ ಹೇಳಿದ ಎರಡು ಕ್ಷೇತ್ರಗಳಿಗೆ ಸೀಮಿತಮಾಡಿ ಅಭ್ಯಸಿಸಿದರೆ ಬಹುಮಟ್ಟಿಗೆ. ಈ ಹಿಂದೂ ಮುಸ್ಲಿಂ ಘರ್ಷಣೆಗಳು ಅಡಗಿ ಹೋಗುತ್ತವೆ. ನಮ್ಮಿಬ್ಬರ ನಡುವಿನ ಪಾರಸ್ಪರಿಕತೆ ಉತ್ತಮಗೊಳ್ಳಲು ಅಹಿಂಸಾ ಮನೋಧರ್ಮ ಅತ್ಯಗತ್ಯ ಅವಶ್ಯಕತೆಯೆಂದು ಅರಿತು ಅನಂತರ ವಿರಸವನ್ನು ಪರಿಹರಿಸಿಕೊಳ್ಳುವ ಪ್ರಯತ್ನಕ್ಕೆ ಕೈಹಾಕಬೇಕಾದುದು ಅನಿವಾರ್ಯ. ಈ ಎರಡು ಧರ್ಮಾನುಯಾಯಿಗಳು ಸಾಮಾನ್ಯ ನಿಯಮವೊಂದಕ್ಕೆ ತಲೆಬಾಗಬೇಕು. ತಾವೇ ನ್ಯಾಯ ನಿರ್ಣಯದ ಅಧಿಕಾರ ತೆಗೆದುಕೊಂಡು ಬಿಡಬಾರದು. ಎಲ್ಲೆಲ್ಲಿ ಯಾವಾಗ ವಿವಾದಾಂಶಗಳು ಉದ್ಭವಿಸುವುವೋ ಅಂತಹ ಸಮಯಗಳಲ್ಲೆಲ್ಲಾ ಅವುಗಳ ನ್ಯಾಯ ನಿರ್ಣಯವನ್ನು ಒಂದು ಖಾಸಗಿ ಪಂಚಾಯಿತಿಗೋ

ಈಗ ಇರುವ ನ್ಯಾಯಾಲಯಗಳಿಗೋ ಒಪ್ಪಿಸುವುದು ಕ್ಷೇಮಕರ. ಜಾತೀಯ ಕಲಹಗಳ ಪ್ರಶ್ನೆಗೆ ಸಂಬಂಧಿಸಿದಂತೆ ಅಹಿಂಸಾ ಪಥದ ಕ್ರಮವೇ ಇದು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ನಾವು ಲೌಕಿಕ ಭಿನ್ನಾಭಿಪ್ರಾಯಗಳನ್ನೂ ಜಗಳಗಳನ್ನೂ ಬಗೆಹರಿಸಿ ಕೊಳ್ಳಲು ಹೇಗೆ ಪರಸ್ಪರ ತಲೆಯೊಡೆಯಲು ಕೈಹಾಕುವುದಿಲ್ಲವೋ ಹಾಗೆಯೇ ಮತೀಯ ಭಿನ್ನಾಭಿಪ್ರಾಯಗಳ ಘರ್ಷಣೆಯಲ್ಲೂ ನಡೆದುಕೊಳ್ಳಬೇಕು. ಎರಡು ವಿರೋಧ ಪಕ್ಷಗಳ ಮಧ್ಯೆ ಈ ಕೂಡಲೇ ಆಗಬೇಕಾದ ಒಪ್ಪಂದ ಇದು. ಮಿಕ್ಕೆಲ್ಲವೂ ಅದನ್ನು ಅನುಸರಿಸಿ ಸಾಗುತ್ತದೆ.

"ಈ ಮೂಲಭೂತ ಅಂಶದ ಕಡೆ ಗಮನ ಕೊಡದಿದ್ದಲ್ಲಿ ನಮ್ಮಿಬ್ಬರ ನಡುವೆ ಒಂದು ಗೌರವಯುತವಾದ ಸ್ಥಾಯಿಯಾದ ಒಪ್ಪಂದ ಉಂಟಾಗುವಂತೆ ಪರಸ್ಪರ ತಪ್ಪು ತಿಳುವಳಿಕೆಗಳನ್ನು ದೂರಮಾಡಲು ಅನುಕೂಲವಾದ ವಾತಾವರಣ ಸೃಷ್ಟಿ ಯಾಗದು. ನಮ್ಮೆರಡು ಧರ್ಮ ಪಂಥಗಳ ನಡುವೆ ಈ ಸಾಮಾನ್ಯ ಒಡಂಬಡಿಕೆಗೆ ಸಮ್ಮತಿ ಸಿಗುವುದೆಂದು ನಂಬಿ ಆ ಘರ್ಷಣೆಗಳಿಗೆ ಕಾರಣವಾಗುವ ಅಂಶಗಳನ್ನು ಚರ್ಚಿಸೋಣ.

"ಪ್ರೀತಿಯ ಬಂಧು ಬಾಂಧವರನ್ನು ರಕ್ಷಿಸದೆ ಅಪಾಯಕ್ಕೀಡು ಮಾಡಿ ಓಡಿ ಹೋಗುವುದನ್ನು ನನ್ನ ಅಹಿಂಸಾಧರ್ಮ ಎಂದಿಗೂ ಸಹಿಸಲಾರದು. ಹೇಡಿಯಂತೆ ಓಡಿ ಹೋಗುವ ಬದಲು ಹಿಂಸೆಯನ್ನೇ ಅವಲಂಬಿಸಬೇಕಾಗಿ ಬಂದರೂ ಅಡ್ಡಿಯಿಲ್ಲ. ಹೇಡಿತನಕ್ಕಿಂತ ಹಿಂಸೆ ಎಷ್ಟೋ ಉತ್ತಮ. ಹೇಡಿಯಾದವನಿಗೆ ನಾನೆಂದಿಗೂ ಅಹಿಂಸೆ ಯನ್ನು ಉಪದೇಶಿಸಲಾರೆ. ಕುರುಡನಿಗೆ ನಿಸರ್ಗವನ್ನು ನೋಡಿ ಆನಂದಿಸು ಎಂದು ಹೇಳಿದಂತಾಗುತ್ತದೆ. ಧೀರವೃತ್ತಿಯ ತುತ್ತತುದಿಯೇ ಅಹಿಂಸೆ. ಹಿಂಸಾತ್ಮಕ ಪ್ರತಿ ಭಟನೆಯಲ್ಲಿ ಶಿಕ್ಷಣ ಪಡೆದ ಯೋಧರಿಗೆ ಅಹಿಂಸೆಯ ಶ್ರೇಷ್ಠತೆಯನ್ನು ಪ್ರಾಯೋಗಿಕ ವಾಗಿ ತೋರಿಸಿಕೊಡುವುದು ನನ್ನ ಅನುಭವದಲ್ಲಿ ಅಷ್ಟೇನು ಕಷ್ಟವಾಗಿ ತೋರಲಿಲ್ಲ. ನನ್ನ ಹೇಡಿತನವನ್ನು ಕಿತ್ತುಹಾಕಿದ ಮೇಲೆ ಮಾತ್ರ ನಾನು ಅಹಿಂಸೆಯನ್ನು ಶ್ಲಾಘಿಸಲು ಪ್ರಾರಂಭಿಸಿದೆ. ಕರ್ತವ್ಯದಲ್ಲಿ ನಿರತರಾಗಿದ್ದವರು ಏನೋ ಅಪಾಯವೊದಗಿತೆಂದು ಓಡಿ ಹೋದ ಆ ಹಿಂದೂಗಳು ಖಂಡಿತ ಅಹಿಂಸಾನಿಷ್ಠರಲ್ಲ. ಪ್ರತಿಭಟಿಸಿ ವಿರೋಧಿಗಳನ್ನು ಹೊಡೆಯಲು ಹೆದರಿದರೆಂದೂ ಅಲ್ಲ; ಬಲಿದಾನಕ್ಕಾಗಲೀ, ಕೊನೆಗೆ ಸಣ್ಣ ಪುಟ್ಟ ಘಾಯಗಳಿಗೂ ಅವರು ಸಿದ್ಧರಾಗಿರಲಿಲ್ಲ. ಕ್ರೂರ ನಾಯಿಯೊಂದನ್ನೆದುರಿಸಲಾರದೆ ಓಡಿ ಹೋಗುವ ಭೀತ ಮೊಲ, ಖಂಡಿತ ಅಹಿಂಸೆಯ ನಿದರ್ಶನವಲ್ಲ. ನಾಯನ್ನು ಕಂಡರೆ ಥರಗುಟ್ಟಿ ನಡುಗುತ್ತದೆ. ಮರಣಭಯದಿಂದ ಒಂದೇ ಉಸುರಿಗೆ ಓಡಿ ಬಿಡುತ್ತದೆ.

"ಅಖಾಡಗಳ ನಿರ್ಮಾಣದಿಂದ ಸಮಸ್ಯೆಯ ಪರಿಹಾರಕ್ಕೆ ಮಾರ್ಗ ಸಿಗುವುದಿಲ್ಲ. ಅವುಗಳನ್ನು ನಿರಾಕರಿಸುತ್ತೇನೆಂದಲ್ಲ. ವ್ಯಾಯಾಮಕ್ಕಾಗಿ ಅವು ಖಂಡಿತ ಬೇಕು. ಎಲ್ಲರಿಗೂ ಸ್ವಾಗತವಿರುವ ಅಖಾಡಗಳಾಗಬೇಕು. ಹಿಂದೂ ಮುಸಲ್ಮಾನ ಘರ್ಷಣೆಯ

ಸಮಯಕ್ಕೆ ಆತ್ಮ ರಕ್ಷಣೆಯ ಸಿದ್ಧತೆ ಮಾತ್ರ ಅಖಾಡಗಳ ಉದ್ದೇಶವಾದರೆ ಅವು ನಾಶವಾಗುತ್ತವೆ. ಮುಸಲ್ಮಾನರೂ ಅದೇ ಆಟದಲ್ಲಿ ಸ್ಪರ್ಧಿಸುವರು. ರಹಸ್ಯವಾಗಿ ಯಾಗಲಿ, ಬಹಿರಂಗವಾಗಿಯಾಗಲಿ, ಇಂಥ ಪ್ರಯತ್ನಗಳು ಸಂಶಯಗಳನ್ನೂ ಕಿರುಕುಳ ಗಳನ್ನೂ ಹೆಚ್ಚಿಸುತ್ತವೆ. ಪರಿಹಾರ ಮಾರ್ಗ ಸಿಗುವುದಿಲ್ಲ. ಸಾರ್ವಜನಿಕ ಪಂಚಾಯಿತರ ನ್ಯಾಯಕ್ಕೆ ಎಲ್ಲ ವಿವಾದಗಳನ್ನೂ ಒಪ್ಪಿಸುವ ನೇರ ಮಾರ್ಗ ಜನಪ್ರಿಯವೂ ಕರ್ತವ್ಯವೂ ಆಗಿ ಘರ್ಷಣೆಗಳೇ ತಪ್ಪಿಹೋಗುವಂತೆ ಕೆಲವು ವಿಚಾರ ಶೀಲರಾದರೂ ಪ್ರಯತ್ನ ಮಾಡಬೇಕು.

"ಎಲ್ಲ ಧರ್ಮಗಳೂ ಹೆಚ್ಚು ಕಡಿಮೆ ಸತ್ಯವಾದುವು. ಎಂದು ನನ್ನ ಹಿಂದೂ ಮನೋಧರ್ಮ ನನ್ನೊಳಗೆ ಮಾರ್ದನಿಸುತ್ತದೆ. ಎಲ್ಲದರ ಉಗಮಸ್ಥಾನ ಈಶ್ವರ ಶಕ್ತಿ. ಆದರೆ ಎಲ್ಲವೂ ಅಪೂರ್ಣನಾದ ಮಾನವನ ಮಾಧ್ಯಮದಿಂದ ಹರಿದು ಬಂದಿರು ವುದರಿಂದ ಸಮಾನವಾಗಿ ಎಲ್ಲವೂ ಅಪೂರ್ಣ. ತನ್ನ ತನ್ನ ಧರ್ಮ ಮಾರ್ಗದಲ್ಲಿ ಪೂರ್ಣತೆ ಪಡೆಯುವ ಪ್ರಯತ್ನವೇ ನಿಜವಾದ 'ಶುದ್ಧಿ' ಚಳುವಳಿ. ಶೀಲವೇ ಅದರ ಒರೆಗಲ್ಲು. ಯಾವ ನೈತಿಕ ಪ್ರಗತಿಯೂ ಆಗದೆ ಒಂದು ಆವರಣದಿಂದ ಮತ್ತೊಂದಕ್ಕೆ ಹಾರುವುದರಿಂದೇನು ಪ್ರಯೋಜನ? 'ಶುದ್ಧಿ'ಯಾಗಲಿ 'ತಬ್ಲೀಘ್' ಆಗಲಿ ಭಗವಂತನ ಕೈಂಕರ್ಯಕ್ಕೆ ಸಾಧನವಾದ ಕ್ರಿಯೆಯಾಗಬೇಕೆಂದೇ ಉದ್ದೇಶಿಸಲಾಗಿದೆ. ಆದರೆ ತಮ್ಮ ಕ್ರಿಯೆಗಳಿಂದ ದಿನದಿನವೂ ಭಗವಂತನನ್ನು ನಿರಾಕರಿಸುತ್ತಿರುವವರು ನನ್ನ ಧರ್ಮದಲ್ಲಿ ಹೆಚ್ಚಾದರೆ ನಾನು ಇತರರನ್ನು ಮತಾಂತರಗೊಳಿಸಿ ಏನಾದೀತು? ವೈದ್ಯ ತನ್ನ ವ್ಯಾಧಿ ಯನ್ನು ನಿವಾರಿಸಿಕೊಳ್ಳಬೇಕಾದುದು ಧಾರ್ಮಿಕ ಕ್ಷೇತ್ರದಲ್ಲಿ ಲೌಕಿಕಕ್ಕಿಂತ ಹೆಚ್ಚು ಅನ್ವಯವಾಗುವುದು ಅಗತ್ಯ.

"ಒಬ್ಬ ಆರ್ಯಸಮಾಜದ ಪ್ರಚಾರಕನಾಗಲಿ, ಒಬ್ಬ ಮುಸಲ್ಮಾನ ಧರ್ಮ ಪ್ರಚಾರಕನಾಗಲಿ, ತನ್ನ ಆತ್ಮಸಾಕ್ಷಿಗನುಗುಣವಾಗಿ ತನ್ನ ಸಿದ್ಧಾಂತವನ್ನು ಪ್ರಚಾರ ಮಾಡಿದಾಗ ಅಷ್ಟರಿಂದಲೇ ಹಿಂದೂ ಮುಸ್ಲಿಂ ಐಕ್ಯತೆ ಒಡೆದು ಹೋಗುವುದಾದರೆ ಅದು ಕೇವಲ ತೋಗಟೆ. ಇಂಥ ಚಳುವಳಿಗಳಿಂದ ನಾವು ಗಾಬರಿಯಾಗಬೇಕೆ? ಪ್ರಾಮಾಣಿಕ ಶ್ರದ್ಧೆಯಿರುವುದು ಮುಖ್ಯವಾದ ಅಂಶ. ಮಲ್ಕಾನಾಗಳು ಹಿಂದೂಧರ್ಮಕ್ಕೆ ಹಿಂತಿರುಗಲು ಬಯಸಿದ್ದರೆ ಅವರಿಗೆ ಹಾಗೆ ಮಾಡಲು ಪೂರ್ಣ ಹಕ್ಕುಂಟು. ಆದರೆ ಬೇರೆ ಧರ್ಮದ ಅವಹೇಳನಕ್ಕೆ ಅವಕಾಶ ನೀಡುವ ಪ್ರಚಾರ ಕೂಡದು. ಪರಮತ ಸಹಿಷ್ಣುತೆ ಇದರಿಂದ ನಾಶವಾಗುತ್ತದೆ. ಇಂಥ ಪ್ರಚಾರಗಳನ್ನು ಬಹಿರಂಗವಾಗಿ ಖಂಡಿಸುವುದು ಸರಿಯಾದ ಮಾರ್ಗ. ಪ್ರತಿ ಚಳುವಳಿಯೂ ಒಂದು ಗೌರವಯುತ ಮುಖವಾಡ ಹಾಕಿಕೊಂಡು ಬರುತ್ತದೆ. ಸಾರ್ವಜನಿಕವಾಗಿ ಈ ಹೊರ ಹೊದಿಕೆಯನ್ನು ನಾಶಮಾಡಿದರೆ ಅದು ತಾನಾಗಿಯೇ ಗೌರವ ಕಳೆದುಕೊಂಡು ಸಾಯುತ್ತದೆ. ಹಿಂದೂ ಮುಸ್ಲಿಂ ಘರ್ಷಣೆಗೆ ಯಾವಾಗಲೂ ಕಾರಣವಾಗುವ ಎರಡು ವಿಷಯಗಳನ್ನು ಕುರಿತು ವಿಚಾರ ಮಾಡಲು ಈಗ ಸಮಯ ಬಂದಿದೆ.

"ಮೊದಲನೇಯದು ಗೋವಧೆ. ಹಿಂದೂಧರ್ಮಕ್ಕೆ ಗೋರಕ್ಷಣೆ ಜೀವತತ್ವಗಳಲ್ಲೊಂದೆಂದು ನಾನು ಒಪ್ಪುತ್ತೇನೆ. ಮೇಲ್ವರ್ಗಗಳಿಗೂ ಸಾಮಾನ್ಯ ಜನತೆಗೂ ಇದರಲ್ಲಿ ಮತಭೇದವಿಲ್ಲ. ಆದರೆ ಈ ವಿಷಯ ಮುಸಲ್ಮಾನರನ್ನು ದ್ವೇಷಿಸಲು ಏಕೆ ಕಾರಣವಾಗಬೇಕೆಂದು ನನಗರ್ಥವಾಗುವುದಿಲ್ಲ. ಇಂಗ್ಲಿಷರಿಗಾಗಿ ದಿನವೂ ಆಗುತ್ತಿರುವ ಗೋವಧೆ ಕುರಿತು ನಾವೇನೂ ಹೇಳುವುದೇ ಇಲ್ಲ. ಒಬ್ಬ ಮುಸಲ್ಮಾನ ಗೋವಧೆ ಮಾಡಿದರೆ ಮಾತ್ರ ನಾವು ಕೆಂಡದಂತೆ ಕೆರಳುತ್ತೇವೆ. ಗೋವಿನ ಹೆಸರಿನಲ್ಲಿ ನಡೆದಿರುವ ದಂಗೆಗಳೆಲ್ಲ ನಿಷ್ಫಲ ಶಕ್ತಿಹ್ರಾಸ. ಅದರಿಂದ ಒಂದು ಗೋವಿನ ರಕ್ಷಣೆಯೂ ಆಗಿಲ್ಲ. ಮುಸಲ್ಮಾನರ ಮನೋಧರ್ಮ ವ್ಯಗ್ರವಾಗಿ ಇನ್ನಷ್ಟು ಕ್ರೂರ ಗೋವಧೆ ನಡೆದಿದೆ ಅಷ್ಟೇ. ಗೋ ಸಂಕ್ಷರಣೆ ನಮ್ಮಿಂದಲೇ ಮೊದಲಾಗಬೇಕು. ಭಾರತದ ಗೋವು ಅನುಭವಿಸುತ್ತಿರುವ ಚಿತ್ರಹಿಂಸೆಯನ್ನು ಬಹುಶಃ ಮತ್ತಾವ ದೇಶದಲ್ಲೂ ಕಾಣಲು ಬಾರದು. ಕಬ್ಬಿಣದ ತುದಿ ಕಟ್ಟಿದ ಬಾರುಕೋಲುಗಳಿಂದ ತಮ್ಮ ಬಳಲಿದ ಎತ್ತುಗಳನ್ನು ನಿರ್ದಯವಾಗಿ ಬಡಿಯುತ್ತಾ ಬಲಾತ್ಕಾರವಾಗಿ ಗಾಡಿ ಎಳೆಸುವ ಹಿಂದೂ ಚಾಲಕರನ್ನು ನಾನು ನೋಡಿದ್ದೇನೆ. ನೋಡಿ ದುಃಖದಿಂದ ಗೋಳಾಡಿದ್ದೇನೆ. ನಮ್ಮ ಪಶು ಸಂಪತ್ತಿನಲ್ಲಿ ಅರ್ಧಕ್ಕಿಂತ ಹೆಚ್ಚು ದನಗಳು ಅರೆ ಹೊಟ್ಟೆಯ ಅಸ್ಥಿ ಪಂಜರಗಳು. ಇದು ನಮಗೆ ನಾಚಿಕೆಗೇಡು. ಹಿಂದೂಗಳು ಕಟುಕರಿಗೆ ಈ ಗೋವುಗಳನ್ನು ಮಾರುವುದರಿಂದಲೇ ಅವು ಅವರ ಕತ್ತಿಗೆ ಬಲಿಯಾಗುತ್ತವೆ. ಮುಸಲ್ಮಾನರ ಸ್ನೇಹ ಬೆಳೆಸಿ ವಿಶ್ವಾಸದಿಂದ ಅವರನ್ನೂ ಆತ್ಮ ಸಾಕ್ಷಿಯಾಗಿ ಗೋ–ರಕ್ಷಣೆಯಲ್ಲಿ ತೊಡಗುವಂತೆ ಮನವೊಲಿಸುವುದು ಅತ್ಯಂತ ಪರಿಣಾಮಕಾರಿಯಾದ ಗೌರವಯುತವಾದ ಮಾರ್ಗ. ಗೋರಕ್ಷಣಾ ಸಂಘಗಳು, ದನಗಳ ಮೇವು, ಪ್ರಾಣಿಹಿಂಸೆ ನಿಷೇಧ, ಗೋಮಾಳಗಳ ರಕ್ಷಣೆ, ಹೊಸತಳಿಗಳ ಸಂವರ್ಧನೆ, ಬಡವರಾದ ಗೋಪಾಲಕರಿಂದ ದನಗಳನ್ನು ಕೊಂಡು ಪಿಂಜರಾಪೋಲುಗಳನ್ನು, ಮಾದರಿ ಪಶುಸಂಗೋಪನಾ ಕೇಂದ್ರಗಳನ್ನಾಗಿ ಪರಿವರ್ತಿಸುವುದು ಇವೇ ಮುಂತಾದ ಕ್ರಮಗಳನ್ನು ಕೈಗೊಳ್ಳಬೇಕು. ಇವುಗಳಲ್ಲಿ ಯಾವುದನ್ನು ನಿರ್ಲಕ್ಷಿಸಿದರೂ ಹಿಂದೂಗಳು ದೇವರಿಗೂ ಮಾನವರಿಗೂ ದ್ರೋಹ ಬಗೆದಂತೆ. ಮುಸಲ್ಮಾನನೊಬ್ಬ ಪಶುವಧೆ ಮಾಡುವುದನ್ನು ತಪ್ಪಿಸಲು ಸಾಧ್ಯವಾಗದೆ ಹೋದಲ್ಲಿ ದೊಡ್ಡ ಪಾತಕವಾಗಲಾರದು. ಆದರೆ ಗೋರಕ್ಷಣೆ ಮಾಡಲು ಹೋಗಿ ಮುಸಲ್ಮಾನರೊಡನೆ ಜಗಳವಾಡಿದರೆ ಅದು ಹೆಚ್ಚಿನ ಪಾತಕವಾಗಿ ಪರಿಣಮಿಸುತ್ತದೆ.

"ಮಸೀದಿಗಳ ಮುಂದೆ ವಾದ್ಯ ಮಾಡುವುದು ಮತ್ತು ಈಚೆಗೆ ಹಿಂದೂ ದೇವಾಲಯಗಳಲ್ಲಿ 'ಆರತಿ' ಮಾಡುವ ಪದ್ಧತಿಗಳನ್ನು ಕುರಿತು ಭಕ್ತಿಪೂರ್ವಕವಾಗಿ ವಿಚಾರ ಮಾಡುತ್ತಿದ್ದೇನೆ. ಗೋವಧೆಯಿಂದ ಹಿಂದೂಗಳು ಹೇಗೆ ಉದ್ವಿಗ್ನರಾಗುವರೋ ಅಂತೆಯೇ ಮುಸಲ್ಮಾನರಿಗೆ ಈ ವಿಷಯ. ಗೋವಧೆಯನ್ನು ನಿಲ್ಲಿಸಲು ಮುಸಲ್ಮಾನರನ್ನು ಹೇಗೆ ಬಲಾತ್ಕರಿಸಲಾಗುವುದಿಲ್ಲವೋ ಹಾಗೆಯೇ ಹಿಂದೂಗಳು ಉತ್ಸವದ ವಾದ್ಯ ಮಾಡುವುದನ್ನಾಗಲಿ ಆರತಿ ಮಾಡುವುದನ್ನಾಗಲಿ ಬಲಾತ್ಕಾರದಿಂದ ನಿಲ್ಲಿಸುವುದು

ಸಾಧ್ಯವಿಲ್ಲ. ಹಿಂದೂ ಬಾಂಧವರ ಸದ್ವಿವೇಕವನ್ನು ನಂಬಿ ನಡೆಯಬೇಕು. ನಾನು ಹಿಂದೂವಾಗಿ ನನ್ನ ಹಿಂದೂ ಬಾಂಧವರಲ್ಲೂ ಈ ಮನವಿ ಮಾಡಿಕೊಳ್ಳುತ್ತೇನೆ. ಯಾವ ಚೌಕಾಸಿಯನ್ನೂ ಮುಂದಿಡದೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮುಸಲ್ಮಾನರ ಮನ ನೋಯದಂತೆ ಅವರೊಡನೆ ಸಮಾಲೋಚಿಸಿ ನಡೆದುಕೊಳ್ಳುವುದು ಶ್ರೇಷ್ಠ ಮಾರ್ಗ. ಕೆಲವು ಕಡೆ ಉದ್ದೇಶಪೂರ್ವಕವಾಗಿಯೇ ಮುಸಲ್ಮಾನರ ಪ್ರಾರ್ಥನಾ ಸಮಯಕ್ಕೆ ಹಿಂದೂಗಳು ತಮ್ಮ ದೇವರ ಆರತಿಯ ವಾದ್ಯಗಳನ್ನೂ ಪ್ರಾರಂಭಿಸಿ ಅವರ ಸಿಟ್ಟು ಕೆರಳಿಸುವರೆಂದು ಕೇಳಿದ್ದೇನೆ. ಇದು ದಯೆಯಿಲ್ಲದ ಸ್ನೇಹ ರಹಿತ ಪ್ರವೃತ್ತಿ. ಸ್ನೇಹಿತನ ಭಾವನೆಗಳಿಗೆ ಅಪಚಾರವಾಗದಂತೆ ನಡೆದುಕೊಳ್ಳುವ ಎಚ್ಚರವೇ ಸ್ನೇಹದ ಬುನಾದಿ. ಪ್ರತಿಫಲದ ಮಾತು ಇಲ್ಲಿ ಸಲ್ಲದು. ಆದರೆ ಮುಸಲ್ಮಾನರೂ ಬಲದ ಬಲಾತ್ಕಾರದಿಂದ ಹಿಂದೂವಾದ್ಯಗಳನ್ನು ನಿಲ್ಲಿಸುತ್ತೇವೆಂದು ನಿರೀಕ್ಷಿಸಕೂಡದು. ಹೆದರಿಕೆಗಾಗಲಿ, ಹಿಂಸೆಯನ್ನನುಭವಿಸುವ ಭಯಕ್ಕಾಗಲಿ, ಮಣಿಯುವುದು ಆತ್ಮಗೌರವಕ್ಕೆ ಕಳಂಕ. ಧಾರ್ಮಿಕ ನಂಬಿಕೆಗಳಿಗೆ ಅಪಚಾರ. ಯಾರು ಬೆದರಿಕೆಗೆ ಮಣಿಯುವುದಿಲ್ಲವೋ ಅವನು ಇತರರನ್ನು ಕೆರಳಿಸುವ ಯಾವ ಕೆಲಸಕ್ಕೂ ಕೈಹಾಕುವುದಿಲ್ಲ. ಅಂಥ ಸಂದರ್ಭಗಳನ್ನು ಬಹುಪಾಲು ದೂರ ಮಾಡುತ್ತಾನೆ.

"ನಾಯಕರು ಹೊಡೆದಾಡದಿದ್ದರೆ ಸಾಮಾನ್ಯ ಜನಕ್ಕೆ ಘರ್ಷಣೆ ಸಹಿಸದೆಂಬುದು ನನ್ನ ದೃಢ ವಿಶ್ವಾಸ. ಈ ಪರಸ್ಪರ ವೈಷಮ್ಯಗಳು ಸಾರ್ವಜನಿಕ ಜೀವನದಲ್ಲಿ ಇತರ ಪ್ರಗತಿಪರ ದೇಶಗಳಲ್ಲಿದ್ದಂತೆ ನಮ್ಮಲ್ಲೂ ನಿರ್ಮೂಲವಾಗಬೇಕೆಂದೂ ಅಂಥ ವರ್ತನೆ ಅನಾಗರಿಕ, ಅಧಾರ್ಮಿಕವೆಂದೂ ತಿಳಿದು ನಡೆದರೆ ಜನಸಾಮಾನ್ಯರು ತಕ್ಷಣಅದನ್ನು ಅಂಗೀಕರಿಸುವರೆಂಬುದರಲ್ಲಿ ನನಗಾವ ಸಂದೇಹವೂ ಇಲ್ಲ.

"ವಿವಿಧ ಜನಾಂಗಗಳಲ್ಲಿ ಐಕ್ಯತೆಯನ್ನು ಹಿಂದೂಗಳು ಇಚ್ಛಿಸಿದಲ್ಲಿ ಅಲ್ಪ ಸಂಖ್ಯಾತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಧೈರ್ಯ ಮಾಡಬೇಕು. ಬೇರೆ ಒಪ್ಪಂದಗಳು ಕಹಿಯನ್ನೇ ಉಳಿಸಿಯಾವು. ಜನಸಾಮಾನ್ಯರೆಲ್ಲರಿಗೂ ಶಾಸಕರೋ, ಪುರಸಭಾ ಸದಸ್ಯರೋ, ಆಗುವ ಹಂಬಲ ಇರಲಾರದು. ಸತ್ಯಾಗ್ರಹದ ನಿಜವಾದ ಅರ್ಥ ಅನ್ಯಾಯದ ಆಡಳಿತವನ್ನು ಪ್ರತಿಭಟಿಸುವುದೇ. ಹಿಂದೂ ಮುಸಲ್ಮಾನ ಎಂಬುದನ್ನು ಗಣನೆಗೆ ತರದೆ ಅನ್ಯಾಯವನ್ನೆದುರಿಸುವುದು. ದಕ್ಷನಾದ ನ್ಯಾಯಪರನಾದ ಅಧಿಕಾರಿ ಯಾವ ಧರ್ಮದವನಾದರೂ ಸರಿ, ನಮಗೆ ಸಹ್ಯವಾಗಬೇಕು. ಜಾತೀಯ ವೈಷಮ್ಯವನ್ನು ತೊಡೆದು ಹಾಕಬೇಕೆಂದು ನಮ್ಮ ಇಚ್ಛೆ. ಬಹು ಸಂಖ್ಯಾತರೇ ಇದನ್ನು ಮೊದಲು ಪ್ರಾರಂಭಿಸಿ ಭರವಸೆ ತುಂಬಿ ಅಲ್ಪ ಸಂಖ್ಯಾತರನ್ನು ಹುರಿದುಂಬಿಸಬೇಕು. ದುರ್ಬಲರ ಒಪ್ಪಿಗೆಯನ್ನು ಕಾಯದೇ ಸಶಕ್ತರಾದವರು ಸ್ವಪ್ರೇರಣೆಯಿಂದ ಕಾರ್ಯೋನ್ಮುಖರಾದಾಗ ಮಾತ್ರ ಈ ರೀತಿಯ ಪರಸ್ಪರ ಒಡಂಬಡಿಕೆ ಸಾಧ್ಯವಾದೀತು.

"ಸರ್ಕಾರಿ ಉದ್ಯೋಗಗಳಲ್ಲಿ ಜಾತೀಯ ವೈಷಮ್ಯಗಳನ್ನು ತಂದೊಡ್ಡುವುದು ಒಳ್ಳೆಯ ಆಡಳಿತ ವ್ಯವಸ್ಥೆಗೆ ಅತ್ಯಂತ ಅಪಾಯಕಾರಿ. ಆಡಳಿತ ದಕ್ಷತೆ ಇರಬೇಕಾದರೆ

ಅತ್ಯಂತ ಸಮರ್ಥರ ಕೈಯಲ್ಲಿ ಅಧಿಕಾರ ಇರಬೇಕು. ಇದರಲ್ಲಿ ಸ್ವಪಕ್ಷಪಾತ ಸಲ್ಲದು. ಐದು ದಕ್ಷ ಇಂಜಿನಿಯರುಗಳು ಬೇಕಾದಲ್ಲಿ ಸಮರ್ಥರಾದ ಐವರನ್ನು ಆರಿಸಬೇಕೆ ಹೊರತು ಪ್ರತಿಜಾತಿಯಿಂದ ಒಬ್ಬೊಬ್ಬರು ಎಂಬ ಸೂತ್ರ ಸರಿಯಲ್ಲ. ಐವರೂ ಮುಸ್ಲಿಮರೋ ಪಾರ್ಸಿಗಳೋ ಆದಲ್ಲಿ ಏನೂ ಚಿಂತೆಯಿಲ್ಲ. ಕೆಳಗಿನ ಹಂತದ ಸಾಮಾನ್ಯ ಚಾಕರಿಗಳಿಗೆ ಆರಿಸುವಾಗ ಅದಕ್ಕಾಗಿಯೇ ಒಂದು ಪರೀಕ್ಷೆ ನಡೆಸಲು ಎಲ್ಲ ಮತೀಯು ರಿರುವ ನಿಷ್ಪಕ್ಷಪಾತ ಸಮಿತಿಯೊಂದನ್ನು ನೇಮಿಸಿಕೊಳ್ಳಬಹುದು. ಆದರೆ ಒಂದೊಂದು ಜಾತಿಯ ಶೇಕಡಾವಾರು ಸಂಖ್ಯೆಗಳಿಗನುಗುಣವಾಗಿ ಈ ನೇಮಕಗಳಾಗಬಾರದು. ಶೈಕ್ಷಣಿಕವಾಗಿ ಹಿಂದುಳಿದ ಪಂಗಡಗಳಿಗೆ ಶಿಕ್ಷಣ ಸೌಲಭ್ಯಗಳನ್ನು ಇತರರಿಗಿಂತ ಹೆಚ್ಚಾಗಿ ಒದಗಿಸುವುದು ರಾಷ್ಟ್ರೀಯ ಸರ್ಕಾರವೊಂದರ ಕರ್ತವ್ಯವಾಗುತ್ತದೆ. ಈ ಶಿಕ್ಷಣ ವ್ಯವಸ್ಥೆಯನ್ನು ಯಶಸ್ವಿಯಾಗಿ ಪರಿಣಾಮಕಾರಿಯಾಗಿ ಕೈಗೊಳ್ಳಲು ಸಾಧ್ಯ. ರಾಷ್ಟ್ರೀಯ ಸರ್ಕಾರದಲ್ಲಿ ಜವಾಬ್ದಾರಿಯುತ ಅಧಿಕಾರ ಸ್ಥಾನಗಳನ್ನಲಂಕರಿಸಬೇಕೆಂಬ ಇಚ್ಛೆಯಿರುವವರೆಲ್ಲ ಅದಕ್ಕನುಗುಣವಾದ ಪರೀಕ್ಷೆಗಳಲ್ಲಿ ಉತ್ತಮವಾಗಿ ತೇರ್ಗಡೆ ಯಾಗಲೇ ಬೇಕಾದುದು ಅನಿವಾರ್ಯ.

"ಹಿಂದೂ ಮುಸ್ಲಿಂ ಪ್ರಶ್ನೆಯೊಂದೇ ನನಗೆ ಕಾಣುವಂತೆ ದೇಶದ ಇಂದಿನ ಪ್ರಧಾನ ಸಮಸ್ಯೆ; ತಕ್ಷಣ ಪರಿಹಾರ ಮಾಡಬೇಕಾದ ಪ್ರಶ್ನೆ. ಹಿಂದೂ ಮುಸ್ಲಿಂ ಐಕ್ಯತೆಯೇ ಸ್ವರಾಜ್ಯ ಎಂದು ಜಿನ್ನಾ ಸಾಹೇಬರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಭಾರತದ ಹಿಂದೂಗಳೂ ಮುಸಲ್ಮಾನರೂ ಆತ್ಮೀಯ ವಿಶ್ವಾಸದಿಂದ ಒಂದುಗೂಡದೇ ಇದ್ದಲ್ಲಿ ಈ ದುರ್ಭಾಗ್ಯ ದೇಶ ಏನನ್ನೂ ಸಾಧಿಸಲೂ ದಾರಿಯೇ ಕಾಣಿಸದು. ಈ ಕೂಡಲೇ ಇದು ಸಾಧ್ಯವಾಗುತ್ತದೆಂದು ನನ್ನ ನಂಬಿಕೆ. ಏಕೆಂದರೆ ಐಕ್ಯತೆ ನಮ್ಮಿಬ್ಬರಿಗೂ ಸಹಜ ಮತ್ತು ಅದು ಅತ್ಯಂತ ಆವಶ್ಯಕವೂ ಹೌದು; ಅಲ್ಲದೆ ಮಾನವನ ಮಾನವೀಯತೆ ಯಲ್ಲಿ ನನಗೆ ಅಪಾರ ನಂಬಿಕೆ. ಮುಸಲ್ಮಾನರು ಅನೇಕ ಸಂದರ್ಭಗಳಲ್ಲಿ ತಪ್ಪಿತಸ್ಥರೇ ಇರಬಹುದು. ಯಾರನ್ನು ಅತ್ಯಂತ ಧೂರ್ತರು ಎಂದು ಬಗೆಯುತ್ತೇವೆಯೋ ಅಂಥವರ ಗುಂಪಿನೊಡನೆಯೂ ನನಗೆ ನಿಕಟ ಸಂಪರ್ಕವುಂಟು. ಅದರಿಂದ ಪಶ್ಚಾತ್ತಾಪ ಪಡುವಂತಹ ಯಾವ ಸನ್ನಿವೇಶವೂ ಅವರಿಂದ ನನಗೊದಗಿಲ್ಲ. ಮುಸಲ್ಮಾನರು ಧೈರ್ಯ ಶಾಲಿಗಳು, ಉದಾರಿಗಳು, ವಿಶ್ವಾಸಿಗಳೂ ಹೌದು. ಪರಸ್ಪರ ಸಂಶಯ ನಿವಾರಣೆ ಯಾದೊಡನೆ ಅವರ ಗುಣ ಪ್ರಕಟವಾಗುತ್ತದೆ. ತಾವು ಗಾಜಿನ ಮನೆಯಲ್ಲಿ ವಾಸ ಮಾಡುತ್ತಾ ಹಿಂದೂಗಳು ಇತರರ ಮನೆಗಳ ಮೇಲೆ ಕಲ್ಲೆಸೆಯಬಾರದು. ನಮ್ಮಲ್ಲೇ ಒಂದು ಅಂಗವಾದ ದಲಿತ ವರ್ಗಗಳ ಬಗೆಗೆ ನಾವು ನಡೆದುಕೊಂಡ, ನಡೆದುಕೊಳ್ಳು ತ್ತಿರುವ ರೀತಿ ನ್ಯಾಯವೇ?

"ಭಗವಂತ ನೇರವಾಗಿ ಶಿಕ್ಷಿಸುವುದಿಲ್ಲ. ಆತನ ಲೀಲೆ ನಿಗೂಢ. ನಮ್ಮ ಈಗಿನ ಬವಣೆಯೆಲ್ಲ ನಮ್ಮ ಸೋದರರ ಬಗ್ಗೆ ಅನ್ಯಾಯ ಮಾಡಿದ ಪ್ರತಿಫಲವೇ

ಏಕಿರಬಾರದು? ಆಗಾಗ್ಗೆ ನೈತಿಕ ಶಿಖರದಿಂದ ಉರುಳಿರುವ ಸಂದರ್ಭಗಳಿದ್ದರೂ ಇಸ್ಲಾಂ ಧರ್ಮದ ಇತಿಹಾಸದಲ್ಲಿ ಸುವರ್ಣ ಪುಟಗಳೆಷ್ಟಿಲ್ಲ? ಉಚ್ಛ್ರಾಯ ಸ್ಥಿತಿಯಲ್ಲಿ ಅದು ಪರಮತಗಳನ್ನು ಅಸಹಿಷ್ಣುತೆಯಿಂದ ಕಾಣಲಿಲ್ಲ. ವಿಶ್ವದ ಗೌರವ ಆ ಧರ್ಮಕ್ಕೆ ಸಂದಿತು. ಪಾಶ್ಚಾತ್ಯರು ಅಂಧಕಾರದಲ್ಲಿ ಮುಳುಗಿದ್ದಾಗ ಪೂರ್ವ ದಿಗಂತದಲ್ಲಿ ಒಂದೇ ಅಪೂರ್ವ ಜ್ಯೋತಿ ಆವಿರ್ಭವಿಸಿ ತೀವ್ರ ವೇದನೆಯಿಂದ ನರಳುತ್ತಿದ್ದ ಪ್ರಪಂಚಕ್ಕೆ ಬೆಳಕನ್ನೂ ಶಾಂತಿ ಸಮಾಧಾನಗಳನ್ನೂ ಹರಿಸಿತು. ಇಸ್ಲಾಂ ಧರ್ಮ ಕಪಟ ಧರ್ಮವಲ್ಲ. ಭಕ್ತಿಯಿಂದ ಅಭ್ಯಸಿಸಿದರೆ ನನ್ನಂತೆ ಎಲ್ಲರೂ ಆ ಧರ್ಮವನ್ನು ಪ್ರೀತಿಸುತ್ತಾರೆ. ನಮ್ಮಲ್ಲಿ ಅದು ಕಗ್ಗಲ್ಲಾಗಿ ಮತ ಭ್ರಾಂತಿಯಿಂದ ವರ್ತಿಸುತ್ತಿದ್ದಲ್ಲಿ ಅದಕ್ಕೆ ನಾವೂ ನಮ್ಮ ಪಾಲಿನ ಜವಾಬ್ದಾರಿಯನ್ನು ಒಪ್ಪಿಕೊಳ್ಳಬೇಕು. ಹಿಂದೂಗಳು ತಮ್ಮ ಧರ್ಮಸೌಧ ವನ್ನು ಸರಿಪಡಿಸಿಕೊಂಡರೆ ಇಸ್ಲಾಂ ಧರ್ಮವೂ ತನ್ನ ಪೂರ್ವ ಉದಾತ್ತ ಸಂಪ್ರದಾಯ ಗಳನ್ನು ಮತ್ತೆ ಕುದುರಿಸಿಕೊಂಡು ನಮ್ಮೊಡನೆ ಮಿಳಿತವಾಗುವುದರಲ್ಲಿ ನನಗೇನೂ ಸಂದೇಹವಿಲ್ಲ. ಇದರ ಹೊಣೆಗಾರಿಕೆ ಹಿಂದೂಗಳ ಕೈಯಲ್ಲೇ ಇದೆ. ನಾವು ಹೇಡಿತನವನ್ನೂ ಸಂಕೋಚವನ್ನೂ ತ್ಯಜಿಸಿ ಮುಂದೆ ನುಗ್ಗೋಣ; ವಿಶ್ವಾಸವಿಡುವ ನಿರ್ಭಯತೆ ನಮ್ಮ ದಾಗಲಿ, ಎಲ್ಲವೂ ಸರಿಹೋಗುತ್ತದೆ."

ಹಿಂದೂ ಮುಸ್ಲಿಂ ಐಕ್ಯತೆಯ ಸಮಸ್ಯೆಯನ್ನು ಆಳವಾಗಿ ಚರ್ಚಿಸಿ ಅನಂತರ ಮೇ ೨೮ ರಂದು ಗಾಂಧೀಜಿ ಜುಹುವಿನಿಂದ ಸಬರ್ಮತಿಗೆ ತೆರಳಿದರು.

# ಪರಾಭವ; ಅಭಿಮಾನಭಂಗ

೧೯೨೪

ದಾಸ್ ಮತ್ತು ಮೋತಿಲಾಲ್ ನೆಹರೂರವರ ನೇತೃತ್ವದಲ್ಲಿ ಸ್ವರಾಜ್ಯವಾದಿಗಳು ಸಾಧಿಸಿದ ಕೆಲಸ ಶ್ಲಾಘ್ಯವಾಗಿತ್ತು. ಅವರುಗಳು ಪರಿಮಿತ ರಾಜ್ಯಾಂಗದಲ್ಲಿ ಎಷ್ಟು ಸಾಧ್ಯವಾಗಬಹುದೋ ಅಷ್ಟನ್ನೂ ಸಾಧಿಸಿದರು. ದೇಶದಾದ್ಯಂತ ಪ್ರಮುಖ ಕಾಂಗ್ರೆಸಿಗರು ಪೌರಸಭೆಗಳ ಅಧ್ಯಕ್ಷರುಗಳಾದರು. ದಾಸ್ ಕಲ್ಕತ್ತಾದ ಪ್ರಪ್ರಥಮ ಮೇಯರ್ ಆದರು; ವಿಠಲಭಾಯ್ ಪಟೇಲ್ ಬೊಂಬಾಯಿ ಕಾರ್ಪೊರೇಷನ್ನಿನ ಅಧ್ಯಕ್ಷರಾದರು. ವಲಭಭಾಯ್ ಪಟೇಲ್ ಅಹಮದಾಬಾದ್ ಪೌರಸಭೆಗೂ, ರಾಜೇಂದ್ರ ಪ್ರಸಾದ್ ರವರು ಪಾಟ್ನಾ ಪೌರಸಭೆಗೂ, ಜವಹರಲಾಲ್ ನೆಹರೂ ಅಲಹಾಬಾದ್ ಪೌರಸಭೆಗೂ ಅಧ್ಯಕ್ಷರಾದರು. ಪೂನಾ ಪೌರಸಭೆಯು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ ಮುನಿಸಿ ಪಲ್ ಮಾರುಕಟ್ಟೆಯಲ್ಲಿ ಲೋಕಮಾನ್ಯ ತಿಲಕರ ಪ್ರತಿಮೆಯನ್ನು ಸ್ಥಾಪಿಸಲು ನಿರ್ಧರಿಸಿತು. ಬೊಂಬಾಯಿ ಕಾರ್ಪೊರೇಷನ್ ಮತ್ತು ಅಹಮದಾಬಾದ್ ಪೌರಸಭೆ, ಗಾಂಧಿಯವರಿಗೆ ಮಾನಪತ್ರಗಳನ್ನು ಅರ್ಪಿಸಿದುವು. ಕರಾಚಿ, ಬೊಂಬಾಯಿ, ಕಲ್ಕತ್ತಾ ಮತ್ತು ಪಾಟ್ನಾ ನಗರಸಭೆಗಳ ಅಧ್ಯಕ್ಷರುಗಳು ವೈಸರಾಯರ ಗೌರವಾರ್ಥ ಸರ್ಕಾರವು ಏರ್ಪಡಿಸಿದ ಅಧಿಕೃತ ಸಮಾರಂಭಗಳಿಗೆ ಹೋಗಲು ನಿರಾಕರಿಸಿದರು. ಭಾರತಾದ್ಯಂತ ಪೌರಸಭೆಗಳು ಉತ್ಸಾಹದಿಂದ ಕೆಲಸಮಾಡಿದುವು; ಸರಕಾರದವರೊಂದಿಗೆ ಘರ್ಷಣೆಯೂ ಆರಂಭವಾಯಿತು. ಕೌನ್ಸಿಲ್ಲುಗಳಲ್ಲೂ ಪೌರಸಭೆಗಳಲ್ಲೂ ನಡೆದ ಕೆಲಸ ಕಣ್ಣಿಗೆ ಕಾಣುವಂತಹದ್ದೇನೂ ಆಗಿರಲಿಲ್ಲ. ಆದರೂ ಎಷ್ಟೋ ವೇಳೆ ಅನೇಕ ಜನರಲ್ಲಿ ಈರ್ಷ್ಯಾಸೂಯೆಗಳನ್ನುಂಟುಮಾಡಿತ್ತು. ದೇಶದಲ್ಲಿ ನಿರಾಶೆಯ ವಾತಾವರಣ ಮೂಡಿತು. ಜನರು ಮಾರ್ಗದರ್ಶನಕ್ಕಾಗಿ ಮತ್ತೆ ಗಾಂಧಿಯವರತ್ತ ನೋಡತೊಡಗಿದರು.

೧೯೨೪ರ ಜೂನ್ ೧೯ರಂದು 'ಯಂಗ್ ಇಂಡಿಯಾ'ದಲ್ಲಿ ಗಾಂಧಿಯವರು ತಮ್ಮ ಯೋಜನೆಯನ್ನು ಪ್ರಕಟಿಸಿದರು.

"ಮುಂಬರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಈ ಕೆಳಕಂಡ ನಾಲ್ಕು ನಿರ್ಣಯಗಳನ್ನು ಮಂಡಿಸಲು ನಾನು ಉದ್ದೇಶಿಸಿದ್ದೇನೆ:

"೧ ಚರಖ ಮತ್ತು ಅದರ ಉತ್ಪನ್ನವಾದ ಖದ್ದರ್, ಸ್ವರಾಜ್ಯ ಸ್ಥಾಪನೆಗೆ ಅತ್ಯಗತ್ಯವೆಂದು ಪರಿಗಣಿಸಲ್ಪಟ್ಟಿದ್ದರೂ, ಅವುಗಳ ಅಂಗೀಕಾರ ಸವಿನಯ ಕಾನೂನು ಭಂಗಕ್ಕೆ ಪೂರ್ವ ಸಿದ್ಧತೆ ಎಂದು ಕಾಂಗ್ರೆಸ್ ಭಾವಿಸಿದಾಗ್ಯೂ, ದೇಶದಾದ್ಯಂತ ಇಂದೂ ಕಾಂಗ್ರೆಸ್ ಸಂಸ್ಥೆಗಳ ಸದಸ್ಯರೇ ಕೈಯಾರ ನೂಲುವುದನ್ನು ಅಲಕ್ಷ್ಯಮಾಡಿದ್ದಾರೆ; ಆದ್ದರಿಂದ ಎ.ಐ.ಸಿ.ಸಿ. ಈ ಮೂಲಕ ನಿರ್ಣಯ ಮಾಡುವುದೇನೆಂದರೆ, ವಿವಿಧ ಪ್ರಾತಿನಿಧಿಕ ಕಾಂಗ್ರೆಸ್ ಸಂಸ್ಥೆಗಳ ಎಲ್ಲ ಸದಸ್ಯರೂ (ಕಾಹಿಲೆಯಿಂದ ಅಶಕ್ತರಾಗಿರುವವರು ಮತ್ತು

ಸತತ ಪ್ರವಾಸದಿಂದಾಗಿ ಅವಕಾಶವಾಗದಿರುವವರನ್ನು ಬಿಟ್ಟು) ಪ್ರತಿದಿನವೂ ತಪ್ಪದೆ ಕಡೆಯಪಕ್ಷ ಅರ್ಧಗಂಟೆ ನೂಲಬೇಕು ಮತ್ತು ಪ್ರತಿಯೊಬ್ಬರೂ ಹತ್ತು ಕೌಂಟಿಗೆ ಕಡಿಮೆಯಿಲ್ಲದ, ಚೆನ್ನಾಗಿ ಹುರಿಮಾಡಿದ, ಹತ್ತು ತೊಲಗಳಷ್ಟು ನೂಲನ್ನಾದರೂ ಪ್ರತಿ ತಿಂಗಳೂ ೧೫ನೆಯ ತಾರೀಖಿನೊಳಗಾಗಿ ಅಖಿಲ ಭಾರತೀಯ ಖಾದಿ ಮಂಡಲಿಯ ಕಾರ್ಯದರ್ಶಿಗೆ ಕಳುಹಿಸಬೇಕು. ಮೊದಲನೆಯ ಕಂತನ್ನು ೧೯೨೪ನೆಯ ಆಗಸ್ಟ್ ೧೫ರೊಳಗೆ ಕಳುಹಿಸತಕ್ಕದ್ದು; ತದನಂತರ ಪ್ರತಿ ತಿಂಗಳೂ ಹಾಗೆಯೇ ತಪ್ಪದೆ ಕಳುಹಿಸಿ ಕೊಡಬೇಕು. ಹೀಗೆ ನಿಗದಿಗೊಳಿಸಲ್ಪಟ್ಟ ಪ್ರಮಾಣದ ನೂಲನ್ನು ಗೊತ್ತಾದ ತಾರೀಖಿಗೆ ಕಳುಹಿಸದೆ ಇರುವ ಸದಸ್ಯರು ಯಾರೇ ಆಗಲಿ, ಅವರು ತಮ್ಮ ಸ್ಥಾನವನ್ನು ತೆರವು ಮಾಡಿದ್ದಾರೆಂದು ಭಾವಿಸಲಾಗುವುದು. ಮತ್ತು ಆ ರೀತಿ ತೆರವಾದ ಸ್ಥಾನವನ್ನು ಮಾಮೂಲು ಪದ್ಧತಿಯಂತೆ ತುಂಬಿಸಲಾಗುವುದು. ಹಾಗೆ ಸ್ಥಾನವನ್ನು ಬಿಟ್ಟು ಕೊಟ್ಟವನು ಮುಂದೆ ವಿವಿಧ ಸಂಸ್ಥೆಗಳ ಸದಸ್ಯ ಸ್ಥಾನಗಳಿಗೆ, ಸಾರ್ವತ್ರಿಕ ಚುನಾವಣೆ ಗಳು ನಡೆಯುವ ವರೆಗೆ, ಮರುಚುನಾವಣೆಗೆ ನಿಲ್ಲುವಂತಿಲ್ಲ.

"೨ ಕಾಂಗ್ರೆಸ್ ಸಂಸ್ಥೆಗಳ ಪ್ರಾಂತೀಯ ಕಾರ್ಯದರ್ಶಿಗಳೂ ಮತ್ತಿತರ ಸದಸ್ಯರು ಗಳೂ ತಮಗೆ ಆಗಿಂದಾಗ್ಗೆ ಮೇಲ್ಪಟ್ಟ ಅಧಿಕಾರಿಗಳಿಂದ ಬರುವ ಸೂಚನೆಗಳನ್ನು ಕಾರ್ಯಗತ ಮಾಡುತ್ತಿಲ್ಲವೆಂದು ದೂರುಗಳು ಬಂದಿವೆ. ಆದ್ದರಿಂದ ಗೊತ್ತುಪಡಿಸಿದ ವಿಷಯಗಳಿಗೆ ಜವಾಬ್ದಾರರಾಗಿರುವವರು ಮೇಲಧಿಕಾರಿಗಳಿಂದ ಬರುವ ಸೂಚನೆ ಗಳನ್ನು ಮಾನ್ಯ ಮಾಡದಿದ್ದರೆ ಅವರು ತಮ್ಮ ಅಧಿಕಾರ ಸ್ಥಾನಗಳನ್ನು ತೆರವು ಮಾಡಿ ದ್ದಾರೆಂದು ಭಾವಿಸಬೇಕೆಂದೂ, ಹಾಗೆ ತೆರವಾದ ಸ್ಥಾನಗಳನ್ನು ಯಥಾವಿಧಿಯಂತೆ ಭರ್ತಿ ಮಾಡತಕ್ಕದ್ದೆಂದೂ, ಅವರುಗಳು ಮುಂದೆ ಸಾರ್ವತ್ರಿಕ ಚುನಾವಣೆ ನಡೆಯುವ ವರೆಗೆ ಮರುಚುನಾವಣೆಗೆ ನಿಲ್ಲಲು ಅರ್ಹರಾಗುವುದಿಲ್ಲವೆಂದೂ ಎ.ಐ.ಸಿ.ಸಿ. ನಿರ್ಣಯಿ ಸುತ್ತದೆ.

"೩ ಕಾಂಗ್ರೆಸ್ ಸಂಸ್ಥೆಯಲ್ಲಿ ವಿವಿಧ ಅಧಿಕಾರ ಸ್ಥಾನಗಳಿಗೆ ಚುನಾಯಿಸುವ ಕಾಂಗ್ರೆಸ್ಸಿನ ಮತದಾರರು, ಕಾಂಗ್ರೆಸ್ಸಿನ ಸಿದ್ಧಾಂತವನ್ನು ಆಜೀವಪರ್ಯಂತ ಸಂಪೂರ್ಣ ವಾಗಿ ಅನುಸರಿಸುವವರನ್ನು ಮತ್ತು ಗಿರಣಿದಾರರಿಂದ ಮಾಡಿದ ಬಟ್ಟೆ, ಸರ್ಕಾರಿ ನ್ಯಾಯಾಲಯಗಳು, ಶಾಲೆಗಳು, ಬಿರುದುಗಳು ಮತ್ತು ಶಾಸನಸಭೆಗಳು–ಇವೆಲ್ಲಕ್ಕೂ ಬಹಿಷ್ಕಾರ ಹಾಕಿ ಕಾಂಗ್ರೆಸ್ ಅಂಗೀಕರಿಸಿರುವ ಅಸಹಕಾರದ ನಿರ್ಣಯಗಳನ್ನು ಸ್ವತಃ ಕಾರ್ಯಗತಮಾಡುವವರನ್ನು ಮಾತ್ರ ಚುನಾಯಿಸುವುದು ಅಪೇಕ್ಷಣೀಯವೆಂದು ಎ.ಐ.ಸಿ.ಸಿ.ಯ ಅಭಿಪ್ರಾಯವಾಗಿದೆ. ಈ ಬಹಿಷ್ಕಾರಗಳಲ್ಲಿ ನಂಬಿಕೆ ಇಲ್ಲದ ಮತ್ತು ಅವುಗಳನ್ನು ತಮ್ಮ ಜೀವನದಲ್ಲಿ ಅನುಷ್ಠಾನ ಮಾಡದಿರುವ ಸದಸ್ಯರುಗಳು ತಮ್ಮ ಸ್ಥಾನಗಳನ್ನು ಬಿಟ್ಟುಕೊಡಬೇಕು; ಆ ಸ್ಥಾನಗಳಿಗೆ ಹೊಸದಾಗಿ ಚುನಾವಣೆಗಳು ನಡೆಯಬೇಕು. ಆದರೆ ಈ ಸಂಬಂಧವಾಗಿ ಸ್ಥಾನವನ್ನು ತ್ಯಜಿಸಿದವರು ಇಷ್ಟಪಟ್ಟರೆ

ಮರುಚುನಾವಣೆಗೆ ತಮ್ಮ ಹೆಸರುಗಳನ್ನೇ ಸೂಚಿಸಬಹುದು—ಎಂದು ಎ.ಐ.ಸಿ.ಸಿ. ನಿರ್ಣಯ ಮಾಡುತ್ತದೆ.

"೪ ದಿವಂಗತ ಗೋಪಿನಾಥ ಸಹಾರವರಿಂದ ಶ್ರೀ ಡೇಯವರ ಕೊಲೆ ಆದ ಬಗ್ಗೆ ಎ.ಐ.ಸಿ.ಸಿ. ವಿಷಾದ ಪಡುತ್ತದೆ ಮತ್ತು ಅವರ ಕುಟುಂಬಕ್ಕೆ ಸಂತಾಪ ಸೂಚಿಸುತ್ತದೆ. ಶ್ರೀ ಡೇಯವರ ಕೊಲೆಗೆ ಗಾಢವಾದ, ಆದರೆ ತಿಳಿಗೇಡಿತನದ, ದೇಶಪ್ರೇಮ ಪ್ರೇರಕ ವಾಗಿದ್ದರೂ ಎ.ಐ.ಸಿ.ಸಿ.ಯು ಇದನ್ನೂ ಇದೇ ತರಹದ ಎಲ್ಲ ರಾಜಕೀಯ ಕೊಲೆ ಗಳನ್ನೂ ತೀವ್ರವಾಗಿ ಖಂಡಿಸುತ್ತದೆ. ಇಂತಹ ಎಲ್ಲ ಕೃತ್ಯಗಳೂ ಕಾಂಗ್ರೆಸ್ಸಿನ ಸಿದ್ಧಾಂತಕ್ಕೂ ಮತ್ತು ಅದರ ಅಹಿಂಸಾತ್ಮಕ ಅಸಹಕಾರದ ನಿರ್ಣಯಕ್ಕೂ ವಿರುದ್ಧವಾಗಿವೆ; ಇವು ಸ್ವರಾಜ್ಯದೆಡೆಗಿನ ನಮ್ಮ ಪ್ರಗತಿಯನ್ನು ವಿಲಂಬಗೊಳಿಸುತ್ತವೆ. ಪರಿಶುದ್ಧವಾದ ತ್ಯಾಗ ವನ್ನು ಪ್ರಚೋದಿಸಬಲ್ಲ ಸವಿನಯ ಕಾನೂನುಭಂಗ ಚಳವಳಿಯನ್ನು ಪೂರ್ಣವಾಗಿ ಶಾಂತವಾತವರಣದಲ್ಲಿ ಮಾತ್ರ ನಡೆಸಬಹುದು. ಅಂತಹ ಸವಿನಯ ಕಾನೂನು ಭಂಗದ ಸಿದ್ಧತೆಗೆ ಇಂತಹ ಕೃತ್ಯಗಳು ಅಡ್ಡಿಯೊಡ್ಡುತ್ತವೆ ಎಂಬುದು ಎ.ಐ.ಸಿ.ಸಿ.ಯ ಅಭಿಪ್ರಾಯ ವಾಗಿದೆ."

ಈ ನಾಲ್ಕು ನಿರ್ಣಯಗಳು ಕಾಂಗ್ರೆಸ್ಸಿಗರಲ್ಲಿ ಭಿನ್ನತೆಯನ್ನುಂಟು ಮಾಡುತ್ತವೆಂದು ಗಾಂಧಿಯವರಿಗೆ ಗೊತ್ತಿತ್ತು. ಆದರೆ ಅನಿಶ್ಚಿತ ಪರಿಸ್ಥಿತಿಯನ್ನು ನಿವಾರಿಸಲು ಅವರು ದೃಢ ಮನಸ್ಕರಾಗಿದ್ದರು.

"ನಾವು ಎಲ್ಲಿದ್ದೇವೆ ಎಂದು ಅರಿತುಕೊಳ್ಳಲು ಸ್ವಲ್ಪ ಮಟ್ಟಿಗೆ ಚರ್ಚೆ ಅನಿವಾರ್ಯ. ನಾನು ಅದ್ಭುತ ಕಾರ್ಯಗಳನ್ನು ಸಾಧಿಸುತ್ತೇನೆಂದೂ ದೈವನಿಯಮಿತ ಗುರಿಗೆ ದೇಶ ವನ್ನು ಮುಟ್ಟಿಸುತ್ತೇನೆಂದೂ ಜನ ಭಾವಿಸಿದ್ದಾರೆ. ಅದೃಷ್ಟವಶಾತ್ ನನಗೆ ಅಂತಹ ಭ್ರಮೆ ಇಲ್ಲ. ಆದರೆ ನಾನು ಒಬ್ಬ ನಮ್ರಯೋಧ ಎಂದು ಹೇಳಿಕೊಳ್ಳಬಲ್ಲೆ. ಓದುಗರು ನಗದಿದ್ದರೆ, ಕೆಲವೊಂದು ಮಾಮೂಲು ಷರತ್ತುಗಳೊಳಗೆ ನಾನು ದಕ್ಷ ಸೇನಾಪತಿ ಆಗಬಲ್ಲೆ ಎಂದು ಹೇಳಿಕೊಳ್ಳುತ್ತೇನೆ. ನನಗೆ ವಿಧೇಯರಾಗಿರುವ ಯೋಧರು ನನಗೆ ಬೇಕು. ಅವರು ತಮ್ಮಲ್ಲೂ ತಮ್ಮ ಸೇನಾಪತಿಯಲ್ಲೂ ನಂಬಿಕೆ ಇಟ್ಟಿದ್ದು ಆಜ್ಞೆಗಳನ್ನು ಮನಃಪೂರ್ವಕವಾಗಿ ಕಾರ್ಯಗತ ಮಾಡಬೇಕು. ನನ್ನ ಕಾರ್ಯಯೋಜನೆ ಯಾವಾಗಲೂ ಮುಚ್ಚುಮರೆಯಿಲ್ಲದ್ದು ಮತ್ತು ಸುಸ್ಪಷ್ಟ. ಸರಿಯಾದರೀತಿಯಲ್ಲಿ ಯೋಜಿಸಿರುವ ಷರತ್ತುಗಳನ್ನು ಪೂರ್ಣಗೊಳಿಸಿದಲ್ಲಿ ಜಯವು ಶತಸ್ಸಿದ್ಧ. ಆದರೆ ಯೋಧರು ಷರತ್ತು ಗಳನ್ನು ಒಪ್ಪಿ ಅವನ್ನು ತಮ್ಮ ಜೀವನದಲ್ಲಿ ಕಾರ್ಯಗತ ಮಾಡದಿದ್ದರೆ, ಅವುಗಳಲ್ಲಿ ನಂಬಿಕೆಯನ್ನೂ ಹೊಂದಿಲ್ಲದಿದ್ದರೆ ಬಡ ಸೇನಾಪತಿ ಏನು ತಾನೇ ಮಾಡಬಲ್ಲ? ಈ ನಿರ್ಣಯಗಳ ಉದ್ದೇಶ ಯೋಧರ ಅರ್ಹತೆಗಳನ್ನು ಪರೀಕ್ಷಿಸುವುದೇ ಆಗಿದೆ.

"ಇಂದು ಸೈನಿಕರು ತಮ್ಮ ಸೇನಾಪತಿಯನ್ನು ತಾವೇ ಆರಿಸಿಕೊಳ್ಳುವ ಹರ್ಷ ದಾಯಕ ಸ್ಥಿತಿಯಲ್ಲಿದ್ದಾರೆ. ಸೇನಾಪತಿಯಾಗುವವನು ತನ್ನ ಹುದ್ದೆಯ ಸ್ಥಿತಿಗತಿ

ಗಳನ್ನು ತಿಳಿದುಕೊಳ್ಳಬೇಕು. ನನ್ನ ನಿಲುಮೆ ೧೯೨೦ರಲ್ಲಿದ್ದಂತೆಯೇ ಇದೆ. ವರ್ಷಗಳು ಕಳೆದಂತೆಲ್ಲ ಅವುಗಳಲ್ಲಿ ನನ್ನ ನಂಬಿಕೆ ಇನ್ನೂ ಹೆಚ್ಚಾಗಿದೆ. ನನ್ನ ದಣಿಗಳ ನಿಲುವೂ ಅದೇ ಆಗಿದ್ದರೆ ದೇಹ ಮತ್ತು ಮನಸ್ಸುಗಳಿಂದ ನಾನು ಅವರವನು. ಇನ್ನು ಬೇರೆ ಯಾವ ಯೋಜನೆಯಲ್ಲೂ ನನಗೆ ನಂಬಿಕೆ ಇಲ್ಲ. ಆದುದರಿಂದ ಮತ್ತಾವ ಷರತ್ತುಗಳ ಮೇಲೂ ನಾನು ಜವಾಬ್ದಾರಿಯನ್ನು ವಹಿಸಿಕೊಳ್ಳಲಾರೆ. ನನಗೆ ಇಷ್ಟವಿಲ್ಲ ಎಂಬ ಕಾರಣದಿಂದಲ್ಲ; ನಾನು ಅದಕ್ಕೆ ಅನರ್ಹ ಎಂದು. ಆರು ಅಡಿ ಆರು ಅಂಗುಲ ಇರುವ ಮೂವತ್ತೈದು ವರ್ಷದ ಕೆಂಚು ಕೂದಲಿನ ಯುವಕ ಬೇಕೆಂಬ ಜಾಹೀರಾತಿಗೆ ಉತ್ತರ ವಾಗಿ ಐವತ್ತೈದು ವರ್ಷ ವಯಸ್ಸಿನ ನರೆಗೂದಲಿನ ಹಾಗೂ ಬೊಚ್ಚು ಬಾಯಿನ ರೋಗಗ್ರಸ್ತ ಮುದುಕ ಸೇವೆ ಸಲ್ಲಿಸುವುದಾಗಿ ಬಂದರೆ ಏನಾದೀತು!

"ಈ ನಾಲ್ಕು ನಿರ್ಣಯಗಳೇ ನಾನು ಈ ಹುದ್ದೆಗೆ ಸಲ್ಲಿಸುವ ಅರ್ಜಿ. ಅವು ನನ್ನ ಅರ್ಹತೆಗಳನ್ನೂ ಪರಿಮಿತಿಗಳನ್ನೂ ಗೊತ್ತುಪಡಿಸುತ್ತವೆ. ಇಲ್ಲಿ ನಿರಂಕುಶ ಪ್ರಭುತ್ವದ ಹೇರಿಕೆ ಇಲ್ಲ; ಅಸಾಧ್ಯವಾದ ಬೇಡಿಕೆ ಇಲ್ಲ. ಸದಸ್ಯರುಗಳು ದೇಶನಿಷ್ಠರಾಗಿದ್ದು ಪ್ರಾಮಾಣಿಕರಾಗಿದ್ದರೆ ನಾನು ತಪ್ಪು ಮಾಡಿದಲ್ಲಿ ನನ್ನನ್ನು ಮನ್ನಿಸಬೇಕಾಗಿಲ್ಲ. ದೇಶದ ಕಲ್ಯಾಣಕ್ಕೆ ಯಾವೊಬ್ಬ ವ್ಯಕ್ತಿಯಾಗಲೀ ಅನಿವಾರ್ಯ ಎಂದು ನಾನು ಭಾವಿಸು ವುದಿಲ್ಲ. ಇಂದಿನ ಕೆಲಸಗಳನ್ನು ಹಂಚುವಾಗ ಹಿಂದೆ ಸಲ್ಲಿಸಿರುವ ಸೇವೆಗಳನ್ನು–ಅವು ಎಷ್ಟೇ ಉಜ್ವಲವಾಗಿರಲಿ–ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿಲ್ಲ. ಒಬ್ಬನಿಗಾಗಿ ಅಥವಾ ನೂರು ಜನರಿಗಾಗಿ ದೇಶದ ಹಿತವನ್ನು ಬಲಿಗೊಡಬಾರದು. ಬದಲಾಗಿ, ಆತನನ್ನು ಅಥವಾ ಅವರುಗಳನ್ನು ದೇಶದ ಹಿತಕ್ಕಾಗಿ ಕೈಬಿಡಬೇಕಾಗುತ್ತದೆ. ಎ.ಐ.ಸಿ.ಸಿ. ಸದಸ್ಯರು ಯಾವುದೇ ರೀತಿಯ ಪಕ್ಷಪಾತ, ತಪ್ಪುಭಾವನೆ ಅಥವಾ ಭಾವಾತಿರೇಕ ಬಿಟ್ಟು ದೃಢ ಸಂಕಲ್ಪದಿಂದ ತಮ್ಮ ಕಾರ್ಯಭಾರವನ್ನು ನಿರ್ವಹಿಸಬೇಕು. ಪರೀಕ್ಷೆ ಮಾಡದೆಯೇ ನನ್ನಲ್ಲಿನ ನಂಬಿಕೆಯಿಂದ ನನ್ನನ್ನು ಅಂಗೀಕರಿಸಬೇಡಿರೆಂದು ಅವರನ್ನು ಶ್ರದ್ಧಾಪೂರ್ವಕ ವಾಗಿ ಪ್ರಾರ್ಥಿಸುತ್ತೇನೆ. ಏನೇ ಆಗಲಿ, ನಾನು ಹೇಳಿದೆನೆಂದ ಮಾತ್ರಕ್ಕೆ ಅದು ಸರಿ ಯಾಗಿರಬೇಕಾಗಿಲ್ಲ. ಅದನ್ನು ಅವರು ತಮ್ಮ ತಮ್ಮಲ್ಲೇ ನಿರ್ಧರಿಸಿಕೊಳ್ಳಬೇಕು. ಈ ಹೊತ್ತಿಗಾಗಲೇ ಅವರಿಗೆ ತಿಳಿದಿರಬೇಕು–ನನ್ನ ಸಹವಾಸ ಕಷ್ಟ: ನಾನು ಚೆನ್ನಾಗಿ ಕೆಲಸ ತೆಗೆಯುವವನು ಎಂದು. ಈಗ ನಾನಿನ್ನೂ ಹೆಚ್ಚು ನಿಷ್ಠುರ ಎಂದು ಅವರಿಗೆ ಗೊತ್ತಾಗು ತ್ತದೆ."

ಎ.ಐ.ಸಿ.ಸಿ. ಅಧಿವೇಶನಕ್ಕೆ ಮುನ್ನ ಗಾಂಧಿಯವರು ಒಂದು ಮನವಿಯನ್ನು ಹೊರಡಿಸಿದರು:

"ಒಂದು ವರ್ಷದಲ್ಲಿ ಸ್ವರಾಜ್ಯ ಪಡೆಯುವ ನಿರ್ಣಯವೊಂದನ್ನು ಕಾಂಗ್ರೆಸ್ ೧೯೨೦ರಲ್ಲಿ ಅಂಗೀಕರಿಸಿತು. ಆ ವರ್ಷದ ಕೊನೆಯಲ್ಲಿ ಇನ್ನೇನು ಅದನ್ನು ಪಡೆಯು ವುದರಲ್ಲಿದ್ದೆವು. ಆಗ ಈ ಸ್ವಾತಂತ್ರ್ಯಗಳಿಕೆಯಲ್ಲಿ ವಿಫಲರಾದೆವೆಂದ ಮಾತ್ರಕ್ಕೆ ಅದು

ಅನಿರ್ದಿಷ್ಟ ಕಾಲದ ವರೆಗೆ ಮುಂದೆ ಹೋಯಿತು ಎಂದು ಭಾವಿಸಬೇಕಾಗಿಲ್ಲ. ನಾವು ಮೊದಲಿನಂತೆಯೇ ಆಶಾಭಾವನೆ ತಾಳಬೇಕು. ಸುತ್ತಲೂ ಕವಿದಿರುವ ನಿರುತ್ಸಾಹದ ವಾತಾವರಣ ಸೂಚಿಸುವುದಕ್ಕಿಂತ ಹೆಚ್ಚು ಜಾಗ್ರತೆಯಾಗಿ ನಾವು ಸ್ವರಾಜ್ಯ ಪಡೆಯುವ ಸಂಕಲ್ಪ ಮಾಡಬೇಕು.

"ಆ ಭಾವನೆಯಿಂದಲೇ ಈ ನಿರ್ಣಯಗಳನ್ನು ರೂಪಿಸಿ ನಿಮ್ಮ ಪರ್ಯಾಲೋಚನೆಗೆ ಒಪ್ಪಿಸಿದ್ದೇನೆ. ಒಂದು ವಾರದಿಂದ ಅವುಗಳನ್ನು ದೇಶದ ಮುಂದೆ ಇಡಲಾಗಿದೆ. ಅವುಗಳಿಗೆ ವಿರೋಧವಾಗಿ ಬಂದಿರುವ ಕೆಲವು ಟೀಕೆಗಳನ್ನು ನಾನು ಓದಿದ್ದೇನೆ. ಅವು ಸರಿ ಎಂದು ನನಗೆ ಮನದಟ್ಟು ಮಾಡಿಸಿದರೆ ಅವನ್ನು ಅಂಗೀಕರಿಸಲು ನಾನು ಸಿದ್ಧನಾಗಿದ್ದೇನೆ. ಆದರೆ ಆ ಟೀಕೆಗಳು ಇದುವರೆಗೆ ನನ್ನ ನಿಲುವನ್ನು ಬದಲಾಯಿಸಲಿಲ್ಲ, ಇಲ್ಲಿ ನಾನು ಸಾಧಿಸಬೇಕಾದ ಸ್ವಾರ್ಥವೇನಿಲ್ಲ. ಹಾಗೇನಾದರೂ ಸ್ವಾರ್ಥವಿದ್ದರೆ ಅದಿಷ್ಟೇ–ನಮ್ಮ ದಾರಿಯಲ್ಲಿರುವ ಅಡ್ಡಿಗಳೆಲ್ಲವನ್ನೂ ಬುಡಸಮೇತ ಕಿತ್ತೊಗೆಯುವುದು.

"ನನಗೆ ಖದ್ದರಿನಲ್ಲಿ ನಂಬಿಕೆಯಿದೆ; ಚರಖಾದಲ್ಲೂ ನಂಬಿಕೆಯುಂಟು. ಅದಕ್ಕೆ ಎರಡು ಮುಖಗಳಿವೆ; ಒಂದು ಕಠೋರ, ಮತ್ತೊಂದು ಕಾರುಣ್ಯಶೀಲ. ನಿಷ್ಠುರವಾಗಿ ನೋಡಿದರೆ, ನಮ್ಮ ರಾಷ್ಟ್ರದ ಸ್ವಾತಂತ್ರ್ಯವನ್ನು ಪಡೆಯುವುದಕ್ಕೆ ಅಗತ್ಯವಾದದ್ದು ಏಕಮೇವ ಬಹಿಷ್ಕಾರ; ವಿದೇಶೀ ಬಟ್ಟೆಗಳ ಬಹಿಷ್ಕಾರ. ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ನಮ್ಮ ನೈತಿಕ ಮೌಲ್ಯಗಳಿಗೇ ಚ್ಯುತಿತರುವ ಬ್ರಿಟಿಷರ ಸ್ವಾರ್ಥದ ನಿರ್ಮೂಲನೆ ಇದರಿಂದ ಮಾತ್ರ ಸಾಧ್ಯ; ಇದರ ಹಿತಕರ ಭಾವವೆಂದರೆ ಹಳ್ಳಿಗನಿಗೆ ಹೊಸ ಜೀವನದ ಭರವಸೆಯ ನೀಡಿಕೆ. ಇದರಿಂದ ಮಾತ್ರ ಗ್ರಾಮೀಣ ಜನರೊಂದಿಗೆ ಸಂಪರ್ಕವನ್ನೂ ಸಾಮರಸ್ಯವನ್ನೂ ತರಲು ಸಾಧ್ಯ. ಇದು ಲಕ್ಷಾಂತರ ಬಡಜನರ ಹಸಿದ ಹೊಟ್ಟೆಯನ್ನು ತುಂಬಬಲ್ಲುದು. ಇದೇ ಅತಿ ಶ್ರೇಷ್ಠವಾದ ಜನತಾ ಶಿಕ್ಷಣ; ಇದೀಗ ಪ್ರಾಣದಾಯಿನಿ. ಶಸ್ತ್ರಾಸ್ತ್ರಗಳನ್ನುಪಯೋಗಿಸಿ ಇಂಗ್ಲೆಂಡಿನೊಡನೆ ಹಿಂಸಾತ್ಮಕ ಹೋರಾಟ ನಡೆಸುವುದರಲ್ಲಿ ನನಗೆ ನಂಬಿಕೆ ಇದ್ದಿದ್ದರೆ, ಅವುಗಳ ಉಪಯೋಗದಲ್ಲಿ ರಾಷ್ಟ್ರವನ್ನು ತರಪೇತು ಮಾಡಲು, ಕಾಂಗ್ರೆಸ್ ಸಂಸ್ಥೆಯನ್ನು ಸಜ್ಜುಗೊಳಿಸಲು ನಾನು ಹಿಂಜರಿಯುತ್ತಿರಲಿಲ್ಲ. ಹಾಗೆಯೇ ಸ್ವರಾಜ್ಯವನ್ನು ಸಾಧಿಸುವ ವರೆಗೆ ಕಾಂಗ್ರೆಸ್ಸನ್ನು ಕೇವಲ ಖದ್ದರ್ ಉತ್ಪನ್ನ ಮಾಡುವ ಹಾಗೂ ಖದ್ದರ್ ಪ್ರಚಾರ ಮಾಡುವ ಸಂಸ್ಥೆಯನ್ನಾಗಿ ಮಾಡಲು ನಾನು ಸ್ವಲ್ಪವೂ ಹಿಂಜರಿಯುವುದಿಲ್ಲ. ಕಾಂಗ್ರೆಸ್ ನಿಜವಾಗಿಯೂ ರಾಷ್ಟ್ರೀಯ ಸಂಸ್ಥೆಯಾಗಿರಬೇಕಾದರೆ ದೇಶವನ್ನು ಸ್ವರಾಜ್ಯದತ್ತ ಅತ್ಯಂತ ತ್ವರಿತವಾಗಿ ಕೊಂಡೊಯ್ಯುವ ಕಾರ್ಯಕ್ರಮಕ್ಕೆ ಮುಡುಪಾಗಿಟ್ಟುಕೊಳ್ಳಬೇಕು. ಸ್ವರಾಜ್ಯವನ್ನು ದೊರಕಿಸಿ ಕೊಡಲು ಖದ್ದರ್‌ಗೆ ಇರುವ ಸಾಮರ್ಥ್ಯದಲ್ಲಿ ನನಗೆ ನಂಬಿಕೆಯಿದೆ. ಆದ್ದರಿಂದಲೇ ನಮ್ಮ ಕಾರ್ಯಕ್ರಮದಲ್ಲಿ ಅದಕ್ಕೆ ಅತಿ ಮುಖ್ಯಸ್ಥಾನ ಕೊಟ್ಟಿದ್ದೇನೆ. ನಿಮಗೆ ಅದರಲ್ಲಿ ನಂಬಿಕೆಯಿಲ್ಲದಿದ್ದರೆ ನೀವದನ್ನು ಸಂಪೂರ್ಣವಾಗಿ ತಿರಸ್ಕರಿಸಲು ಹಿಂಜರಿಯಬೇಕಾಗಿಲ್ಲ.

"ಈ ಪಂಚ ಬಹಿಷ್ಕಾರಗಳು ಕಾಂಗ್ರೆಸ್ಸಿಗೆ ಅತಿ ಮುಖ್ಯವಾದುವು. ಜನಸಾಮಾನ್ಯರಿಗೆ ಸ್ವರಾಜ್ಯ ಸಿದ್ಧಿಯಾಗಬೇಕಾದರೆ ಇವು ಅತ್ಯಾವಶ್ಯಕ. ಇಂತಹ ಮುಖ್ಯ ಪ್ರಶ್ನೆಯನ್ನು ಕೇವಲ ಕೈಗಳನ್ನು ಎತ್ತುವುದರ ಮೂಲಕ ತೀರ್ಮಾನಿಸುವುದಕ್ಕಾಗುವುದಿಲ್ಲ. ತರ್ಕ ದಿಂದಲೂ ನಿರ್ಧರಿಸುವುದಕ್ಕಾಗುವುದಿಲ್ಲ. ನಾವು ಪ್ರತಿಯೊಬ್ಬರೂ ಅಂತರ್‌ವಾಣಿಯನ್ನು ಆಲಿಸುವುದರ ಮೂಲಕ ಇದನ್ನು ಬಗೆಹರಿಸಬೇಕು. ನಾವು ಪ್ರತಿಯೊಬ್ಬರೂ ದೇವರ ಮನೆಯ ಏಕಾಂತತೆಯಲ್ಲಿ ಭಗವಂತನನ್ನು ಸ್ಪಷ್ಟ ಮಾರ್ಗದರ್ಶನಕ್ಕಾಗಿ ಬೇಡಬೇಕು. ಈ ಸ್ವಾತಂತ್ರ್ಯ ಸಮರ ನನಗಾಗಲೀ ನಿಮಗಾಗಲೀ ಆಟದ ಮಾತಲ್ಲ. ಅದು ನಮ್ಮಗಳ ಜೀವನದಲ್ಲಿ ಅತಿ ಗುರುತರವಾದ ವಿಷಯ. ಆದ್ದರಿಂದ, ನಾನು ರೂಪಿಸಿರುವ ಕಾರ್ಯಕ್ರಮ ನಿಮಗೆ ಸರಿಯೆನಿಸದಿದ್ದರೆ ನೀವು ಹಿಂದು ಮುಂದು ನೋಡದೆ ತಿರಸ್ಕರಿಸಿ; ಪರಿಣಾಮ ಏನಾದರೂ ಸರಿಯೇ".

ಅಹಮದಾಬಾದ್‌ನಲ್ಲಿ ಎ.ಐ.ಸಿ.ಸಿ. ಜೂನ್ ೨೭ರಂದು ಸಮಾವೇಶಗೊಂಡಿತು. ಗಾಂಧಿಯವರು ಸಲ್ಲಿಸಿದ್ದ ನಾಲ್ಕು ನಿರ್ಣಯಗಳನ್ನು ಕಾರ್ಯಕಾರೀ ಸಮಿತಿ ಅಂಗೀಕರಿಸಿತು. ಆದರೆ ಸ್ವರಾಜ್ಯವಾದಿಗಳು ಮೂರುದಿನಗಳ ಅಧಿವೇಶನದಲ್ಲಿ ವಿರೋಧಮಾಡಿದರು. ಗಾಂಧಿಯವರ ಮತ್ತು ಸ್ವರಾಜ್ಯವಾದಿಗಳ ನಡುವೆ ತೀವ್ರ ವಿವಾದ ತಲೆದೋರಿತು. ಕಾಂಗ್ರೆಸ್ಸಿನ ಅಂಗರಚನೆಯಲ್ಲಿ ಮೂಲಭೂತ ಮಾರ್ಪಾಡನ್ನು ಗಾಂಧಿಯವರು ಸೂಚಿ ಸಿದ್ದರು; ಚುನಾವಣೆಯ ಹಕ್ಕು ಮತ್ತು ಸದಸ್ಯತ್ವದ ವಿಧಿಗಳ ಬಗ್ಗೆ ಬದಲಾವಣೆಗಳು ಈ ಸೂಚನೆಯಲ್ಲಿ ಅಡಕವಾಗಿದ್ದುವು. ಅಲ್ಲಿಯವರೆಗೆ, ಕಾಂಗ್ರೆಸ್‌ನ ಅಂಗರಚನೆಯ ಮೊದಲ ವಿಧಿ, ಸ್ವರಾಜ್ಯದ ಹಾಗೂ ಶಾಂತಿಯುತ ಮಾರ್ಗಾವಲಂಬನೆಯ ಧ್ಯೇಯ ವನ್ನು ಒಪ್ಪಿ, ನಾಲ್ಕಾಣೆಯನ್ನು ಕೊಟ್ಟರೆ ಪ್ರತಿಯೊಬ್ಬರೂ ಕಾಂಗ್ರೆಸ್ ಸದಸ್ಯರಾಗ ಬಹುದಾಗಿತ್ತು. ಈಗ ನಾಲ್ಕಾಣೆಗೆ ಬದಲಾಗಿ ನಿಯಮಿತ ಪ್ರಮಾಣದಲ್ಲಿ ತಾವೇ ನೂತ ನೂಲನ್ನು ಕೊಟ್ಟವರಿಗೆ ಮಾತ್ರ ಸದಸ್ಯತ್ವವನ್ನು ಮಿತಿಗೊಳಿಸಲು ಅವರು ಇಚ್ಛೆಪಟ್ಟರು. ಹಾಗೆ ಮಾಡಲು ಎ.ಐ.ಸಿ.ಸಿ.ಗೆ ಅಧಿಕಾರವಿರಲಿಲ್ಲ. ಆದರೆ ಗಾಂಧಿ ಯವರು ಅಂಗರಚನೆಯ ಅಕ್ಷರಶಃ ವ್ಯಾಖ್ಯೆಗೆ ಪುರಸ್ಕಾರ ಕೊಡಲು ಸಿದ್ಧರಿರಲಿಲ್ಲ.

ಗಾಂಧಿಯವರು ಮಾಡಿದ್ದು ಸರ್ವಾಧಿಕಾರಿಯ ಮನೋಭಾವದಿಂದ ಕೂಡಿದೆ ಯೆಂದು ಬಣ್ಣಿಸಿದ ಮೋತೀಲಾಲ್ ನೆಹರೂರವರು ಕಾಂಗ್ರೆಸ್ ಸಂಸ್ಥೆ ಬಗ್ಗೆ ತಂದಿರುವ ನಿರ್ಣಯಗಳು ಅಂಗರಚನೆಗೆ ಹೊರತಾದುವೆಂದು ಭಾವಿಸಿದರು. ಆದರೆ ಮೋತೀಲಾಲ್ ನೆಹರೂ ಮತ್ತು ದಾಸ್‌ರು ಎತ್ತಿದ ಕ್ರಿಯಾಲೋಪದ ವಿಧಿಯನ್ನು ಬಹುಸಂಖ್ಯಾತ ಸದಸ್ಯರು ತಳ್ಳಿಹಾಕಿದರು. ಮೂರನೆಯ ದಿನ ಗಾಂಧಿಯವರು ನಿರ್ಣಯವನ್ನು, ಮಂಡಿಸಿದಾಗ, ನೆಹರೂರವರು ತಮ್ಮ ಹೇಳಿಕೆ ಓದಿದರು. ಅನಂತರ ನೆಹರು, ದಾಸ್, ಶ್ರೀನಿವಾಸ ಅಯ್ಯಂಗಾರರ ನೇತೃತ್ವದಲ್ಲಿ ಸ್ವರಾಜ್ಯವಾದಿಗಳು ಸಭೆಯನ್ನು ಬಿಟ್ಟು ಹೋದರು. ಅವರ ಗೈರುಹಾಜರಿಯಲ್ಲಿ ನಿರ್ಣಯವು ಅಂಗೀಕೃತವಾಯಿತು.

ಆದರೆ ನಿರ್ಣಯದಲ್ಲಿದ್ದ ನಿಯಮದ ಉಲ್ಲಂಘನೆಗೆ ಹಾಕಿದ್ದ ದಂಡದ ವಿಧಿಯನ್ನು ತೆಗೆಯುವಂತೆ ಗಾಂಧಿಯವರು ಸೂಚಿಸಿದರು. ಅದರಂತೆ ಸೂಚನೆ ಒಪ್ಪಲ್ಪಟ್ಟಿತು.

ಇದಾದ ಮೇಲೆ ಗಾಂಧಿಯವರೊಂದಿಗೆ ಸ್ವರಾಜ್ಯವಾದಿಗಳು ದೀರ್ಘ ಸಮಾಲೋಚನೆ ನಡೆಸಿದರು; ಸಭೆಗೂ ಹಾಜರಾದರು. ಮಿಲ್‌ಬಟ್ಟೆ, ನ್ಯಾಯಾಲಯಗಳು, ಶಾಲಾಕಾಲೇಜುಗಳು, ಬಿರುದಾಂಕಿತಗಳು, ಮತ್ತು ಶಾಸನಸಭೆಗಳು– ಇವೈದಕ್ಕೂ ಬಹಿಷ್ಕಾರ ಹಾಕುವ ಅವರ ನಿರ್ಣಯವನ್ನು ಸ್ವಲ್ಪ ಮಾರ್ಪಾಟು ಮಾಡಿದರು. ಆದರೆ ಕ್ರಾಂತಿಕಾರಿ ಗೋಪೀನಾಥ್‌ಸಹಾ ಅವರಿಗೆ ಸಂಬಂಧಿಸಿದ ನಿರ್ಣಯವನ್ನು ಮಾತ್ರ ಯಾವ ಬದಲಾವಣೆಯೂ ಇಲ್ಲದೆ ಮಂಡಿಸಲಾಯಿತು. ಅದು ಕೇವಲ ಎಂಟರ ಬಹುಮತದಿಂದ ಅಂಗೀಕಾರವಾಯಿತು. ಈ ನಿರ್ಣಯವನ್ನು ದಾಸ್ ವಿರೋಧಿಸಿದ ಮೇಲೆ ದೊಡ್ಡ ವಾಗ್ಯುದ್ಧವೇ ನಡೆಯಿತು. ತಮಗೆ ಅತ್ಯಂತ ಆತ್ಮೀಯರಾಗಿದ್ದ ಕೆಲವು ಸಹೋದ್ಯೋಗಿಗಳೇ ನಿರ್ಣಯಂದ ಬಗ್ಗೆ ವಿರುದ್ಧ ಮತವನ್ನು ಕೊಟ್ಟಿದ್ದನ್ನು ನೋಡಿ ಗಾಂಧಿಯವರಿಗೆ ಬಹಳ ನಿರಾಶೆಯಾಯಿತು. ಅವರು ಬಹಿರಂಗವಾಗಿ ಕಣ್ಣೀರು ಸುರಿಸಿದರು.

ಎ.ಐ.ಸಿ.ಸಿ.ಯಲ್ಲಿ ನಡೆದ ಗದ್ದಲದ ವಾದ ವಿವಾದಗಳು ಗಾಂಧಿಯವರ ಲೇಖನಿಯಿಂದ ಎರಡು ಲೇಖನಗಳನ್ನು ಮೂಡಿಸಿದವು. 'ಯಂಗ್ ಇಂಡಿಯಾ'ದಲ್ಲಿ ಪ್ರಕಟವಾದ ಈ ಲೇಖನಗಳಲ್ಲಿ ಅವರ ಅಂತರಾಳದ ಭಾವನೆಗಳು ವ್ಯಕ್ತವಾದುವು.

"ಮೊದಲನೆಯ ನಿರ್ಣಯದಲ್ಲಿ ನಿಯಮೋಲ್ಲಂಘನೆಗೆ ದಂಡ ವಿಧಿಸುವ ಅಂಶವಿಲ್ಲ. ನನ್ನ ಪರಾಜಯದ ಪರಂಪರೆಗಳಲ್ಲಿ ಇದು ಮೊದಲನೆಯದು. ಬಹುಮತಗಳಿಂದ ನಾನು ವಂಚಿತನಾಗಲಾರೆ. ಅಲ್ಪ ಬಹುಮತದಲ್ಲಿ ತೃಪ್ತನಾಗಲು ನನಗೆ ಸಾಧ್ಯವೇ ಇರಲಿಲ್ಲ. ಏಕೆಂದರೆ ಸ್ವರಾಜ್ಯವಾದಿಗಳು ಸಭೆಯಿಂದ ಹೊರಗೆ ಹೋಗಿಲ್ಲದಿದ್ದರೆ ಸೋಲು ಖಚಿತವಾಗಿತ್ತೆಂಬುದನ್ನು ನಾವು ಗಮನಕ್ಕೆ ತೆಗೆದುಕೊಳ್ಳಲೇಬೇಕು. ಆದ್ದರಿಂದಲೇ ನಾನು ಹೊರಗೆ ಹೋದವರನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ಸಭೆಯನ್ನು ಒತ್ತಾಯಪಡಿಸಿದೆ. ನಿರ್ಣಯದಲ್ಲಿ ಅಡಕವಾಗಿದ್ದ ದಂಡದ ವಿಧಿಯನ್ನು ತೆಗೆಯಬೇಕೆಂದೂ ಆಗ್ರಹ ಮಾಡಿದೆ.

"ಎರಡನೆಯ ನಿರ್ಣಯ ಮೂಲ ಕರಡು ನಿರ್ಣಯದಂತಿಲ್ಲ. ಆದರೆ ಅದರ ತಾತ್ಪರ್ಯ ಹೆಚ್ಚು ಕಡಿಮೆ ಹಾಗೇ ಇದೆ. ಶಿಸ್ತಿನ ಕ್ರಮವನ್ನು ಉಳಿಸಿಕೊಳ್ಳಲಾಗಿದೆ.

"ಮೂರನೆಯ ನಿರ್ಣಯ ನಿಜವಾಗಿ ವಿಫಲವಾಗಿದೆ. ಕಾಂಗ್ರೆಸ್ಸಿನ ಚುನಾಯಿತ ಸಂಸ್ಥೆಗಳು ಕಾರ್ಯಾಂಗವೆಂದು ಈಗಲೂ ನನ್ನ ಭಾವನೆ. ಆದ್ದರಿಂದ ಪ್ರಸ್ತುತ ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಯಾವುದೇ ರೀತಿಯಲ್ಲಿ ಅಡ್ಡಿ ಮಾಡದೆ ಅಥವಾ ಹ್ರಸ್ವಗೊಳಿಸದೆ ಅದನ್ನು ಹೃತ್ಪೂರ್ವಕವಾಗಿ ಒಪ್ಪಿ ಪೂರ್ಣವಾಗಿ ಕಾರ್ಯಗತ ಮಾಡುವವರು ಆ ಸಂಸ್ಥೆಗಳಲ್ಲಿರಬೇಕು. ಆದರೆ ನಿಬಂಧನೆಗೆ ಸಂಬಂಧಪಟ್ಟಂತೆ ಉದ್ಭವವಾದ ತೊಡಕನ್ನು

ನಿವಾರಿಸಲಾಗಲಿಲ್ಲ. ಕಾಕಿನಾಡಾ ಕಾರ್ಯಕ್ರಮದ ಮೇಲೆ ಯಾವುದೇ ರೀತಿಯ ನಿರ್ಬಂಧ ವಿಧಿಸಿದರೆ ಅದು ಕಾಂಗ್ರೆಸ್ ನಿಬಂಧನೆಯ ಉಲ್ಲಂಘನೆಯಾಗುತ್ತದೆ. ಆದರೆ ಈ ಉಲ್ಲಂಘನೆ, ಮೂಲನಿರ್ಣಯದಲ್ಲಿ ನಾನು ಈಗಲೂ ಕೊಡುತ್ತಿರುವ ವ್ಯಾಖ್ಯೆಯನ್ನೇ ಅನ್ವಯಿಸಿದರೆ, ಇರುವುದಿಲ್ಲ. ಆದರೆ ಈ ಬಗ್ಗೆ ನನ್ನದೇ ಆದ ಅರ್ಥವನ್ನು ಕೊಡಲು ನನಗೆ ಹಕ್ಕಿಲ್ಲವೆಂದೂ, ಶಾಸನಸಭೆಗಳಿಗೆ ಹೋದವರು ಕಾರ್ಯಸಮಿತಿಗಳಲ್ಲಿರಲು ಯಾವ ನಿಷೇಧವಿಲ್ಲವೆಂದೂ ಹೇಳಲು ಸ್ವರಾಜ್ಯವಾದಿಗಳಿಗೆ ಅಧಿಕಾರವಿದೆಯೆಂದೂ ನನಗೆ ಹೇಳಿದ್ದಾರೆ. ವಾಸ್ತವವಾಗಿ ಸ್ವರಾಜ್ಯವಾದಿಗಳು ಈಗಾಗಲೇ ಕಾರ್ಯಕಾರೀ ಸಮಿತಿಯಲ್ಲಿರುವರೆಂದೂ ಅವರು ತೋರಿಸಿದ್ದಾರೆ. ಈ ವಾದ ನನಗೆ ಹಿಡಿಸಿತು; ಜೊತೆಗೆ ಕಾರ್ಯಾಂಗಗಳಲ್ಲಿ ಸ್ವರಾಜ್ಯವಾದಿಗಳು ಇರಲು ಅನರ್ಹರೆಂದು ತಿಳಿಸುವ ಮೂಲ ನಿರ್ಣಯ ಕೇವಲ ಅಲ್ಪ ಬಹುಮತದಿಂದ ಅಂಗೀಕೃತವಾಗ ಬಹುದೆಂಬ ಅರಿವೂ ನನಗಿತ್ತು. ಆಖೈರಾಗಿ ಅಂಗೀಕೃತವಾದ ನಿರ್ಣಯವನ್ನು ನಾನು ಒಪ್ಪಿಕೊಳ್ಳಲು ಅದೇ ಕಾರಣ. ಅದರಿಂದ ನನಗೆ ಸಮಾಧಾನವೇನಿಲ್ಲ. ಆದರೆ ಅದೊಂದೇ ನನಗೆ ಉಳಿದಿದ್ದ ಮಾರ್ಗ. ಇಲ್ಲದಿದ್ದರೆ ಇಡೀ ನಿರ್ಣಯವನ್ನೇ ಕೈಬಿಡಬೇಕಾಗುತ್ತಿತ್ತು. ಅದು, ದೇಶದ ಮುಂದೆ ಕಾಂಗ್ರೆಸ್ ಸಾಮರಸ್ಯವುಳ್ಳ ಸಂಸ್ಥೆ ಎಂದು ತೋರುವುದಕ್ಕೂ ರಾಜಕಾರಣದಲ್ಲಿ ಸಸ್ನಡತೆಯ ಪಾವಿತ್ರ್ಯವನ್ನು ಒತ್ತಾಯಪಡಿಸುವುದಕ್ಕೂ ಅಗತ್ಯವಾಗಿತ್ತು. ಪ್ರತಿನಿಧಿಗಳು ಬೇರೆಯವರಿಗೆ ವಿಧಿಸುವ ಆದರ್ಶದ ಮಟ್ಟಕ್ಕೆ ತಾವೂ ಏರಬೇಕು. ಕಾಂಗ್ರೆಸ್ ಸಂಸ್ಥೆ ಯಾಚಕ ಸಂಘವಾಗಿ ಈಗ ಉಳಿದಿಲ್ಲ; ಅದು ಮೂಲತಃ ಸ್ವಯಂ ಶುದ್ಧಿಯಿಂದ ಅಂತಃಸತ್ವವನ್ನು ಬೆಳಸಿಕೊಂಡು ತನ್ನ ಗುರಿಯನ್ನು ಮುಟ್ಟಲು ರೂಪಿತವಾಗಿದೆ ಎಂಬ ಅಂಶಗಳನ್ನು ಅನೇಕ ವಿಧಗಳಲ್ಲಿ ಈಗ ತೋರಿಸಬೇಕಾಗಿದೆ. ರಾಷ್ಟ್ರೀಯ ಜೀವನಕ್ಕೆ ಅಗತ್ಯವಾದ ವಿಷಯಗಳ ಪರವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಬೇಕಾಗಿದೆ. ಅದಕ್ಕೆ ಶ್ರೇಷ್ಠಮಾರ್ಗವೆಂದರೆ ಯೋಜನೆಗಳನ್ನು ರೂಪಿಸಿ ಅವುಗಳಿಗೆ ಬೆಂಬಲವನ್ನು ಪಡೆದುಕೊಳ್ಳುವುದು. ತಾತ್ಕಾಲಿಕವಾಗಿ ಭಿನ್ನತೆಗಳು ಉಂಟಾಗಬಹುದೆಂಬುದನ್ನು ನಾನು ಅರಿತಿದ್ದೇನೆ. ಆದರೆ ಉಭಯ ಪಕ್ಷಗಳೂ ಪರಸ್ಪರ ಅಡ್ಡಿ ಆತಂಕಗಳನ್ನು ಒಡ್ಡಬಾರದೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

"ನಾಲ್ಕನೆಯ ನಿರ್ಣಯ ನನ್ನ ಸೋಲನ್ನು ಪೂರ್ಣಗೊಳಿಸಿತು. ಗೋಪೀನಾಥ್ ಗೊತ್ತುವಳಿ ಅಲ್ಪ ಬಹುಮತದಿಂದ ಅಂಗೀಕೃತವಾಯಿತು, ನಿಜ. ಅಲ್ಪ ಬಹುಮತಕ್ಕೆ ಬದಲಾಗಿ ಸ್ಪಷ್ಟ ಬಹುಮತ ಬಂದಿದ್ದರೆ ನನಗೆ ಸಂತೋಷವಾಗುತ್ತಿತ್ತು. ದಾಸ್ ಅವರ ತಿದ್ದುಪಡಿಗೆ ಮತ ನೀಡಿದವರಲ್ಲಿ ಬಹುಮಂದಿ ಸಂಭವನೀಯ ದಸ್ತಗಿರಿಗಳ ವದಂತಿಯಿಂದಾಗಿ ಮತ ನೀಡಿದರೆಂಬುದನ್ನು ನಾನು ಮರೆಯಲಾರೆ. ದೇಶಕ್ಕಾಗಿ ಅಮೂಲ್ಯ ಸೇವೆ ಸಲ್ಲಿಸಿ ಮಹಾತ್ಯಾಗ ಮಾಡಿದ ಗೌರವಾನ್ವಿತ ಮುಖಂಡ ಹಾಗೂ ಜೊತೆಗಾರನನ್ನು ರಕ್ಷಿಸುವುದು ಸಂಭಾವಿತತನವೆಂದು ಅನೇಕರು ಸ್ವಾಭಾವಿಕವಾಗಿಯೇ ಭಾವಿಸಿದರು. ಭಾವುಕತೆ ಅನೇಕವೇಳೆ ನೈತಿಕ ಗಣನೆಗಳನ್ನು ಹಿಂದೆ ಹಾಕುವುದುಂಟು.

ದಾಸ್ ಮತ್ತು ಅವರ ಬೆಂಬಲಿಗರನ್ನು ಬಂಧಿಸಿದಲ್ಲಿ ಬಂಗಾಲ ಸರ್ಕಾರವು ದೊಡ್ಡ ತಪ್ಪು ಮಾಡುವುದೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಅಭಿಪ್ರಾಯಗಳಿಗಾಗಿ ದಂಡಿಸುವ ಕಾಲ ಮುಗಿದು ಹೋಯಿತು. ದಾಸ್‌ರವರ ತಿದ್ದುಪಡಿಗೆ ಬೆಂಬಲ ತೋರಿಸಲು ನೈತಿಕ ಗಣನೆ ಅಡ್ಡಿಬರದಿದ್ದಲ್ಲಿ ನಾನೇ ಸ್ವತಃ ಅದನ್ನು ಸಮರ್ಥಿಸಲು ಹಿಂಜರಿಯುತ್ತಿರಲಿಲ್ಲ. ಆದರೆ ಅದು ನನಗೆ ಸಾಧ್ಯವಿರಲಿಲ್ಲ; ಯಾವ ಕಾಂಗ್ರೆಸ್ಸಿಗನಿಗೂ ಅದು ಆಗುವಂತಿರಲಿಲ್ಲ. ದಾಸ್‌ರವರು ನನ್ನ ನಿರ್ಣಯಕ್ಕೂ ತಮ್ಮ ನಿರ್ಣಯಕ್ಕೂ ಯಾವ ವ್ಯತ್ಯಾಸವನ್ನೂ ಕಾಣುವುದಿಲ್ಲ. ನಾನು ಅದನ್ನು ಆತ್ಮವಂಚನೆಯೆಂದೇ ಕರೆಯುತ್ತೇನೆ. ಅವರ ನಿರ್ಣಯವನ್ನು ಸಮರ್ಥಿಸಿ ಮಾತನಾಡಿದವರು ಸ್ಪಷ್ಟವಾಗಿಯೇ ಹೇಳಿದರು. ಅವರ ಸಿದ್ಧಾಂತದಲ್ಲಿ ರಾಜಕೀಯ ಕೊಲೆಗೆ ಅವಕಾಶವಿತ್ತು; ಹೇಳಿಕೇಳಿ ಅದು ಸಾಮಾನ್ಯ ಜನರ ಸಿದ್ಧಾಂತವಲ್ಲವೇ? ನಾಗರಿಕರೆನ್ನಿಸಿಕೊಳ್ಳುವ ಬಹುಜನಕ್ಕೆ ಅದರಲ್ಲಿ ನಂಬಿಕೆಯಿದೆ. ಸಂದರ್ಭ ಬಂದರೆ ಅದರಂತೆಯೇ ನಡೆದುಕೊಳ್ಳುತ್ತಾರೆ. ಅವರ ಅಭಿಪ್ರಾಯದಲ್ಲಿ ದಬ್ಬಾಳಿಕೆಗೆ ಒಳಗಾದ ಅಸಂಘಟಿತ ಜನತೆಗೆ ರಾಜಕೀಯ ಕೊಲೆಯೊಂದೇ ಪರಿಹಾರ. ಅದು ತಪ್ಪು ಸಿದ್ಧಾಂತ. ಜಗತ್ತನ್ನು ಉತ್ತಮಗೊಳಿಸಲು ಅದು ವಿಫಲವಾಗಿದೆ. ಇವೆರಡೂ ನಿಜ. ದಾಸ್‌ರವರು ಮತ್ತು ಅವರ ಬೆಂಬಲಿಗರು ತಪ್ಪು ಮಾಡಿದ್ದರೆ, ಬಹುಮಟ್ಟಿನ 'ನಾಗರಿಕ' ಜನರ ಅಭಿಪ್ರಾಯ ಅವರಂತೆ ಇದೆ ಎಂದು ನಾನು ಹೇಳಬಯಸುತ್ತೇನೆ. ಭಾರತೀಯರ ವಿದೇಶೀ ಪ್ರಭುಗಳ ವರ್ತನೆ ಅದಕ್ಕಿಂತ ಉತ್ತಮವೇನಲ್ಲ. ಕಾಂಗ್ರೆಸ್ಸು ತನ್ನ ಧ್ಯೇಯ ಸಾಧನೆಯ ಬಗ್ಗೆ ಯಾವುದೇ ನೈತಿಕ ಪರಿಮಿತಿಯಿಲ್ಲದ ರಾಜಕೀಯ ಸಂಸ್ಥೆಯಾಗಿದ್ದರೆ ದಾಸ್‌ರವರ ತಿದ್ದುಪಡಿಯ ಗುಣಾವಗುಣಗಳ ಬಗ್ಗೆ ವಿಮರ್ಶೆ ಮಾಡಲು ಅವಕಾಶವಿರುತ್ತಿರಲಿಲ್ಲ. ಆಗ ಪ್ರಶ್ನೆ ಅನುಕೂಲಸಿಂಧು ನೀತಿಯನ್ನು ಅನುಸರಿಸುವ ಮಟ್ಟಕ್ಕಿಳಿಯುತ್ತಿತ್ತು......"

"ನಾನು ಸೋತೆ; ನನ್ನ ಅಭಿಮಾನ ಭಂಗವಾಯಿತು" ಎಂದು ಅವರು ಬಹಿರಂಗವಾಗಿ ಹೇಳಿಕೊಂಡರು.

"ಎ.ಐ.ಸಿ.ಸಿ.ಯ ಈ ನಡವಳಿಕೆಗಳು, ನಾನು ಸೆರೆಮನೆಗೆ ಹೋಗುವುದಕ್ಕೆ ಮುಂಚೆ ದೆಹಲಿಯಲ್ಲಿ ನಡೆದದ್ದನ್ನು ನೆನಪಿಗೆ ತಂದುವು. ದೆಹಲಿಯಲ್ಲಿ ನನಗೆ ಆದ ಭ್ರಮನಿರಸನ ಅಹಮದಾಬಾದಿನಲ್ಲೂ ಕಾದಿತ್ತು. ನನ್ನ ನಾಲ್ಕು ನಿರ್ಣಯಗಳಿಗೂ ಯಾವಾಗಲೂ ಅಲ್ಪ ಬಹುಮತವೇ ದೊರೆಯಿತು. ಆದರೆ ನಾನು ಅದನ್ನು ಅಲ್ಪ ಸಂಖ್ಯಾಮತವೆಂದೇ ಪರಿಗಣಿಸುತ್ತೇನೆ. ಸಭೆಯಲ್ಲಿ ಹೆಚ್ಚು ಕಡಿಮೆ ಸರಿಸಮನಾಗೇ ವಿಭಜನೆಯಿತ್ತು. ಗೋಪೀನಾಥ್‌ಸಹಾ ಅವರ ಗೊತ್ತುವಳಿ ನಿರ್ಧಾರಕವಾಯಿತು. ಭಾಷಣಗಳು, ಫಲಿತಾಂಶ ಮತ್ತು ತದನಂತರ ನಾನು ಕಂಡ ದೃಶ್ಯಗಳು ಪೂರ್ಣವಾಗಿ ನನ್ನ ಕಣ್ಣು ತೆರಸಿದುವು. ಎಂಟು ಮತಗಳಿಂದ ಅವರ ನಿರ್ಣಯ ಸೋಲಿಸಲ್ಪಟ್ಟರೂ ಅದು ದಾಸ್‌ರವರ ವಿಜಯವೆಂದೇ ನಾನು ನಿಸ್ಸಂದೇಹವಾಗಿ ಭಾವಿಸುತ್ತೇನೆ. ಮತ ನೀಡಿದ

೧೪೮ ಜನರಲ್ಲಿ ಎಪ್ಪತ್ತುಮಂದಿ ಅವರ ಬೆಂಬಲಿಗರೆಂಬ ಸಂಗತಿ ನನಗೆ ತುಂಬಾ ಪ್ರಮುಖವಾದುದು. ಅದು ಮಂದಪ್ರಕಾಶದಿಂದಲಾದರೂ ಸರಿಯೆ, ಅಂತೂ ಕತ್ತಲೆ ಹರಿಸಿತು.

"ಮತದಾನದ ಫಲಿತಾಂಶ ಪ್ರಕಟವಾಗುವ ವರೆಗೆ ಅದೊಂದು ಬೃಹತ್ ವಿನೋದವೆಂದು ಆನಂದದಿಂದಿದ್ದೆ. ಆದರೆ ಅದೆಷ್ಟು ದೊಡ್ಡ ತಮಾಷೆಯೋ ಅಷ್ಟೇ ಗಂಭೀರವಾದ ವಿಷಯವೆಂದೂ ನನಗೆ ಗೊತ್ತಿತ್ತು. ಆಗಿನ ನನ್ನ ಸಂತೋಷ ಮೇಲ್ತೋರಿಕೆ ಯದೆಂದು ನನಗೀಗ ಅನ್ನಿಸುತ್ತಿದೆ. ಅಂತರಾಳದಲ್ಲಿ ಆಗುತ್ತಿದ್ದ ಸಂಕಟವನ್ನು ಅದು ಮುಚ್ಚಿತ್ತು.

"ಪ್ರಕಟಣೆಯನಂತರ ಮುಖ್ಯ ಪಾತ್ರಧಾರಿಗಳು ಅದೃಶ್ಯರಾದರು. ಸಭೆ ಹುಡುಗಾಟಿಕೆಗೆ ತೊಡಗಿತು. ಹಿಂದು ಮುಂದು ಯೋಚಿಸದೆ ಮುಖ ನಿರ್ಣಯಗಳೆಲ್ಲವನ್ನೂ ಅಂಗೀಕರಿಸಿತು. ನಿರ್ಣಯಗಳ ಮಧ್ಯೆ ಆಗಿಂದಾಗ್ಗೆ ಹಾಸ್ಯ ಪರಿಹಾಸಗಳು ಚಿಮ್ಮುತ್ತಿದ್ದುವು. ಕ್ರಿಯಾಲೋಪವೆತ್ತಿ ಅಥವಾ ಮಾಹಿತಿ ಕೇಳಿ ಪ್ರತಿಯೊಬ್ಬರೂ ಏಳುತ್ತಿದ್ದರು. ಈ ಕಠಿನ ಸನ್ನಿವೇಶ ಎಂತಹ ಅಧ್ಯಕ್ಷರ ತಾಳ್ಮೆಯನ್ನಾದರೂ ಪರೀಕ್ಷಿಸುವಂತಹದ್ದು. ಮೌಲಾನಾ ಮಹಮ್ಮದಾಲಿಯವರು ಎಲ್ಲವನ್ನೂ ನಿಭಾಯಿಸಿದರು. ಅವರು ತಮ್ಮ ತಾಳ್ಮೆಯನ್ನು ಪಾಲಿಸಿಕೊಂಡೇ ಬಂದರು. ಮಾಹಿತಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಮನ್ನಣೆ ಕೊಡಲು ಅವರು ನಿರಾಕರಿಸಿದ್ದು ಸರಿಯೇ ಆಗಿತ್ತು. ಕೀರ್ತಿಯನ್ನರಸಿ ಬಂದ ಪ್ರತಿನಿಧಿಗಳೆಲ್ಲ ಅಧ್ಯಕ್ಷರ ಕ್ಷಿಪ್ರ ಕ್ರಮಗಳನ್ನು ಪ್ರಸನ್ನತೆಯಿಂದಲೇ ಅಂಗೀಕರಿಸಿದರೆಂದು ನಾನು ಹೇಳಲೇಬೇಕು.

"ಏನೇ ಆಗಲಿ, ಗೋಪೀನಾಥ್ ಗೊತ್ತುವಳಿಯನಂತರ ಸಭೆಯ ಘನತೆ ಮಾಯವಾಯಿತು. ನಾನು ನನ್ನ ಕಡೆಯ ನಿರ್ಣಯವನ್ನು ಅಂತಹ ಸಭೆಯ ಮುಂದೆ ಮಂಡಿಸಬೇಕಾಯಿತು. ಸಭೆಯ ನಡೆವಳಿಕೆಗಳು ಮುಂದುವರಿದಂತೆಲ್ಲ ನಾನು ಹೆಚ್ಚು ಹೆಚ್ಚು ಗಂಭೀರನಾದೆನೆಂದು ಕಾಣುತ್ತದೆ. ಎಷ್ಟೋ ಬಾರಿ ಆ ವೇದನಾಮಯ ಸನ್ನಿವೇಶದಿಂದ ಪಲಾಯನ ಮಾಡಬೇಕೆನ್ನಿಸುತ್ತಿತ್ತು. ನನಗೆ ವಹಿಸಿದ್ದ ಗೊತ್ತುವಳಿಯನ್ನು ಮಂಡಿಸಲು ನನಗೆ ಭಯವೇ ಆಯಿತು. ನಿರ್ಣಯವನ್ನು ಮುಂದೆ ಹಾಕಬೇಕೆಂದು ನಾನು ಕೇಳಬಹುದಿತ್ತು. ಆದರೆ ಅದು ಸಾಧ್ಯವಿರಲಿಲ್ಲ. ಸಭೆಗೆ ಮುನ್ನವೇ ನಾನು ಈ ಪರಿಸ್ಥಿತಿಗೆ ಸೂಕ್ತ ಪರಿಹಾರವನ್ನು ಸೂಚಿಸುವೆನೆಂದು ಆಶ್ವಾಸನೆ ನೀಡಿದ್ದೆ, ಅದು ಆಗದಿದ್ದರೆ, ನ್ಯಾಯಾಲಯಗಳೂ ಸೇರಿದಂತೆ ಪಂಚ ಬಹಿಷ್ಕಾರದ ತತ್ವದಲ್ಲಿ ನಂಬಿಕೆಯಿಲ್ಲದವರೂ ಹಾಗೂ ಅವುಗಳನ್ನು ತಮ್ಮ ಜೀವನದಲ್ಲಿ ಕಾರ್ಯಗತ ಮಾಡದವರೂ ರಾಜೀನಾಮೆ ನೀಡಬೇಕೆಂಬ ಕೋರಿಕೆ ಇದ್ದ ಮೂರನೆಯ ನಿರ್ಣಯದಿಂದ ನ್ಯಾಯಾರ್ಥಿಗಳನ್ನು ರಕ್ಷಿಸಲು, ನಾನು ಗೊತ್ತುವಳಿ ಮಂಡಿಸಲು ಒಪ್ಪಿದ್ದೆ. ಒಂದುವೇಳೆ ವಾದಿ ಅಥವಾ ಪ್ರತಿವಾದಿಗಳಾಗಿ ನ್ಯಾಯಾಲಯಗಳಿಗೆ ಎಳೆಯಲ್ಪಟ್ಟರೆ ಅಂತಹವರಿಗೆ ರಕ್ಷಣೆ

ಕೊಡುವುದು ನನ್ನ ಉದ್ದೇಶವಾಗಿತ್ತು. ಸದಸ್ಯರುಗಳಿಗೆ ಪೂರ್ವಭಾವಿಯಾಗಿ ತಿಳಿಸಿದ್ದ ಹಾಗೂ ಕಾರ್ಯಕಾರೀ ಸಮಿತಿಯಲ್ಲಿ ಅಂಗೀಕಾರವಾಗಿದ್ದ ನಿರ್ಣಯವು ಈ ರಕ್ಷಣೆ ಕೊಟ್ಟಿದ್ದಿತು. ಆದರೆ ಈ ನಿರ್ಣಯವನ್ನು ಬಿಟ್ಟು ಬೇರೊಂದು ನಿರ್ಣಯವನ್ನು ಎ.ಐ.ಸಿ.ಸಿ.ಯು ಅಂಗೀಕರಿಸಿತು. ಓದುಗರಿಗೆ ತಿಳಿದಿರುವಂತೆ ಕಾಕಿನಾಡಾ ನಿರ್ಣಯ ಅನ್ವಯವಾಗುವವರಿಗೆ ಈ ನಿರ್ಣಯದಿಂದ ವಿನಾಯಿತಿ ದೊರೆಯುತ್ತದೆ. ಆ ನಿರ್ಣಯ ವನ್ನು ರಚಿಸುವಾಗ ನಾನು ನ್ಯಾಯಾರ್ಥಿಗಳನ್ನು ರಕ್ಷಿಸಿರಲಿಲ್ಲ. ಪ್ರತ್ಯೇಕ ನಿರ್ಣಯ ದಿಂದಲೇ ರಕ್ಷಣೆ ಕೊಡಲು ನಾನು ಬಯಸಿದ್ದೆ. ನಿರ್ಣಯವನ್ನು ಸೂಚಿಸಿದ ಸಮಯ ದಲ್ಲಿ ಆ ಸಂಗತಿಯನ್ನೂ ಪ್ರಕಟಿಸಿದ್ದೆ. ನಾನು ಭರವಸೆ ಕೊಟ್ಟಿದ್ದ ಆ ನಿರ್ಣಯವೇ 'ಅಗೋಚರ ಕತ್ತಲಿನಿಂದ' ಹೊರಗೆ ನನಗೆ ದಾರಿ ತೋರಿಸಿತು. ಪ್ರಾತಃಕಾಲ ನಾನು ಮಾಡಿದ್ದ ವಾಗ್ದಾನವನ್ನು ನೆರವೇರಿಸುವುದಕ್ಕಾಗಿಯೇ ಈ ನಿರ್ಣಯ ತಂದಿದ್ದೇನೆಂದು ಪೀಠಿಕೆಯಲ್ಲಿ ಹೇಳಿ ಅದನ್ನು ಮಂಡಿಸಿದೆ. ಗಂಗಾಧರ ದೇಶಪಾಂಡೆಯವರ ನಿದರ್ಶನ ವನ್ನೂ ಕೊಟ್ಟೆ. ವಿನಾಯಿತಿಗಳನ್ನು ಕೊಡುವುದರಲ್ಲೂ 'ಆದಷ್ಟು ಮಟ್ಟಿಗೆ' ಎಂದು ಹೇಳುತ್ತಾ ಹೋಗುವುದರಲ್ಲಿ ನನಗೆ ನಂಬಿಕೆ ಇರಲಿಲ್ಲ. ಆದರೆ ತೀವ್ರ ಅಸಹಕಾರಿಗಳೂ ಸಹ ಕೆಲವು ವೇಳೆ ನ್ಯಾಯಾಲಯಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ನಾನು ಬಲ್ಲೆ. ಕೆಲವು ನೀಚ ಸಾಲಗಾರರು ಅಸಹಕಾರಿಗಳಿಗೆ ಕೊಡಬೇಕಾದ ಸಾಲದ ಹಣವನ್ನು ಕೊಡಲು ನಿರಾಕರಿಸಿದ್ದಾರೆ. ಅಸಹಕಾರಿಗಳು ತಮ್ಮ ಮೇಲೆ ಕೋರ್ಟಿನಲ್ಲಿ ದಾವಾ ಹಾಕುವುದಿಲ್ಲವೆಂಬ ನಂಬುಗೆಯೇ ಅದಕ್ಕೆ ಕಾರಣ. ಇದೇ ರೀತಿ, ಅಸಹಕಾರಿ ಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಿಲ್ಲವೆಂಬ ಭಾವನೆಯಿಂದ ಅವರ ಮೇಲೆ ಮೊಕದ್ದಮೆಗಳನ್ನು ಹಾಕಿರುವ ಜನರನ್ನೂ ನಾನು ಬಲ್ಲೆ. ಕುತೂಹಲವಿರುವವರು ಈ ಸದಸ್ಯ ಸಮೂಹದಲ್ಲಿ ವಿಚಾರಿಸಿ ನೋಡಿದರೆ, ಸ್ವಯಂ ರಕ್ಷಣೆ ಮಾಡಿಕೊಳ್ಳು ವುದಕ್ಕಾಗಲೀ, ದಾವಾ ಮಾಡುವುದಕ್ಕಾಗಲೀ ಇಷ್ಟಪಡದೆ ತುಂಬಾ ನಷ್ಟವನ್ನು ಅನುಭವಿಸಿದ ಅಸಹಕಾರಿಗಳ ಸಂಖ್ಯೆ ಬಹಳಷ್ಟಿರುವುದನ್ನು ನೋಡಿ ಆಶ್ಚರ್ಯ ಚಕಿತರಾಗಬಹುದು. ಆದರೂ, ಈ ಪ್ರತಿಬಂಧಕವನ್ನು ಸದಸ್ಯರು ಎಲ್ಲ ಸಂದರ್ಭ ಗಳಲ್ಲೂ ಚಾಚೂ ತಪ್ಪದೆ ಪಾಲಿಸಿಲ್ಲವೆಂಬುದೂ ಸಹ ಪೂರ್ಣಸತ್ಯ. ವಾಸ್ತವವಾಗಿ ಮೊಕದ್ದಮೆಗಳನ್ನು ಹೂಡುವುದನ್ನೂ, ನ್ಯಾಯಾಲಯಗಳಲ್ಲಿ ತಮ್ಮ ರಕ್ಷಣೆ ಮಾಡಿ ಕೊಳ್ಳುವುದನ್ನೂ ನೋಡಿಯೂ ಸುಮ್ಮನಿರುವುದೇ ಅಭ್ಯಾಸವಾಗಿದೆ. ಈ ಅಭ್ಯಾಸ ವನ್ನು ಸ್ವಲ್ಪಮಟ್ಟಿಗಾದರೂ ಕಾನೂನುಬದ್ಧವನ್ನಾಗಿ ಮಾಡಲು ಸಮಿತಿಯು ಆಗಿಂದಾಗೆ ಕೆಲವು ವಿಧಿಗಳನ್ನು ಮಾಡಿದೆ. ಬಹಿಷ್ಕಾರಗಳನ್ನು ಅನುಸರಿಸುವ ಬಗ್ಗೆ ಈಗ ಎ.ಐ.ಸಿ.ಸಿ ಗಡುಸಾದ ಧೋರಣೆ ತಾಳುತ್ತಿರುವುದರಿಂದ ನ್ಯಾಯಾರ್ಥಿಗಳ ಸ್ಥಿತಿಯೇನೆಂಬುದನ್ನು ಸ್ಪಷ್ಟಪಡಿಸಬೇಕೆಂದು ನಾನು ಆಲೋಚಿಸಿದೆ. ಎಲ್ಲ ಬಹಿಷ್ಕಾರಗಳನ್ನೂ ಪೂರ್ಣವಾಗಿ ಕಾರ್ಯಗತಮಾಡುವಂತಹವರೇ ಕಾಂಗ್ರೆಸ್ಸಿನ ಕಾರ್ಯಾಂಗದಲ್ಲಿದ್ದರೆ ಅದರಿಂದ ನನಗಾಗು ವಷ್ಟು ಸಂತೋಷ ಬೇರೆ ಯಾವುದರಿಂದಲೂ ಆಗದು. ಆದರೆ ಈಗಿನ ಸ್ಥಿತಿಯಲ್ಲಿ

ನ್ಯಾಯಾಲಯಗಳ ಪೂರ್ಣ ಬಹಿಷ್ಕಾರ ಅನೇಕರಿಗೆ ಸಾಧ್ಯವಾಗುವುದೇ ಇಲ್ಲ. ಸ್ವಯಂ ಪ್ರೇರಿತ ದಾರಿದ್ರ್ಯ ಈ ಉದ್ದೇಶಸಾಧನೆಗೆ ಅಗತ್ಯ. ಅಂತಹ ಸ್ತ್ರೀ ಪುರುಷರಿಂದಲೇ ಕಾಂಗ್ರೆಸ್ ಸಂಸ್ಥೆಯನ್ನು ನಡೆಸಬೇಕಾದರೆ. ಅದರಲ್ಲೂ ದಕ್ಷತೆಯಿಂದ ನಡೆಸಬೇಕಾದರೆ ಇನ್ನೂ ಕಾಲಬೇಕು. ಇದನ್ನು ಮನಗಂಡು, ವಿನಾಯಿತಿ ಕೊಡುವ ಆ ನಿರ್ಣಯವನ್ನು ಮಂಡಿಸುವಂತಹ ಅಪ್ರಿಯ ಕಾರ್ಯ ಮಾಡಲೂ ಸಿದ್ಧನಾದೆ. ನಾನಿನ್ನೂ ಓದಿ ಮುಗಿಸಿದ್ದೆನೋ ಇಲ್ಲವೋ ಧೈರ್ಯದಿಂದ ಹರಿಸರ್ವೋತ್ತಮರಾವ್ ಅವರು ಎದ್ದು ನಿಂತು ತಮ್ಮ ಓಜಸ್ವೀ ಪ್ರಭಾವಶಾಲೀ ಭಾಷಣದಲ್ಲಿ ಅದನ್ನು ವಿರೋಧಿಸಿದರು. ನನ್ನನ್ನು ವಿರೋಧಿಸುವುದು ತಮಗೆ ನೋವುಂಟು ಮಾಡಿದರೂ ಅದು ತಮ್ಮ ಕರ್ತವ್ಯ ವೆಂದು ಅವರು ಹೇಳಿದರು. ನಾನೇ ಸ್ವತಃ ಸಮರ್ಥಿಸಿಕೊಳ್ಳಲಾಗದ ನಿರ್ಣಯವನ್ನು ಮಂಡಿಸಿದ್ದರಿಂದ ನೋವು ನನ್ನದೇ ಎಂದು ಅವರಿಗೆ ಹೇಳಿದೆ. ಇಂತಹ ಅಸಮರ್ಥನೀಯ ನಿರ್ಣಯವನ್ನು ವಿರೋಧಿಸುವುದರಿಂದಲೂ ಏನೇ ಆಗಲಿ ಕಾಂಗ್ರೆಸ್ ಸಂಸ್ಥೆಯನ್ನು ಪರಿಶುದ್ಧವನ್ನಾಗಿಡುವ ಈ ಪ್ರಯತ್ನದಿಂದಲೂ ಅವರಿಗೇ ಆನಂದವಾಗಿರಬೇಕು. ಈ ರೀತಿಯ ವಿರೋಧವನ್ನು ನಾನು ಮೆಚ್ಚಿಕೊಂಡೆ ಹಾಗೂ ಮತದಾನವನ್ನು ಕುತೂಹಲದಿಂದ ಎದುರುನೋಡುತ್ತಿದ್ದೆ. ಆದರೆ ವಿರೋಧಿಗಳು ಮತ ನೀಡಿದೊಡ ನೆಯೇ ಸ್ವಾಮಿ ಗೋವಿಂದಾನಂದರು ಒಂದು ಸಂವಿಧಾನಾತ್ಮಕ ಆಕ್ಷೇಪಣೆ ಎತ್ತಿದರು. ಸಮಿತಿಯ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ಮಾಡಿದ್ದು, ಅದಕ್ಕೇ ಧಕ್ಕೆ ತರುವ ಇನ್ನೊಂದು ನಿರ್ಣಯವನ್ನು ಅದೇ ಅಧಿವೇಶನದಲ್ಲಿ ತರುವುದಕ್ಕೆ ಆಗುವುದಿಲ್ಲ ಎಂಬುದೇ ಅವರ ಆಕ್ಷೇಪಣೆ. ಅಧ್ಯಕ್ಷರು ಈ ಆಕ್ಷೇಪಣೆಯನ್ನು ತಳ್ಳಿ ಹಾಕಿದುದು ಸಮಂಜಸವೇ ಆಗಿತ್ತು. ಅದರ ಹಿಂದಿನ ದಿನವೂ ಮೊದಲನೆಯ ನಿರ್ಣಯ ಬಹುಮತ ದಿಂದ ಅಂಗೀಕೃತವಾಗಿದ್ದು ಅನಂತರವೇ ಅದಕ್ಕೆ ತಿದ್ದುಪಡಿಯನ್ನು ತರಲಾಗಿತ್ತು. ಆದರೆ ಡಾ. ಚೌಯಿತ್ರಾಂರವರು ಉದ್ದೇಶಪೂರ್ವಕವಾಗಿ ಅಲ್ಲದಿದ್ದರೂ ಅದನ್ನು ಕೊನೆಯ ಘಟ್ಟಕ್ಕೆ ಮುಟ್ಟಿಸಿದರು. ಅವರು ಹೊಣೆಯರಿತ ವ್ಯಕ್ತಿ ಎಂದು ನಾನು ಬಲ್ಲೆ. ಅವರಿಗೆ ದೀರ್ಘಕಾಲದ ಸೇವೆಯ ಹಿರಿಮೆ ಇದೆ. ದೇಶಕ್ಕೋಸ್ಕರ ಅವರು ದಾರಿದ್ರ್ಯ ವನ್ನು ವರಿಸಿದ್ದಾರೆ. ಬಹಿಷ್ಕಾರಕ್ಕೆ ಸಂಬಂಧಿಸಿದ ನಿರ್ಣಯವನ್ನು ಸಮಿತಿಯು ಹಿಂದೆ ಅನೇಕ ವೇಳೆ ಸರಳಗೊಳಿಸಿದ್ದಾಗ್ಯೂ ಆ ಬಗ್ಗೆ ನಿಬಂಧನಾತ್ಮಕ ಆಕ್ಷೇಪಣೆ ಅವರಿಂದ ಬರುವುದೆಂದು ನಾನು ನಿರೀಕ್ಷಿಸಿರಲಿಲ್ಲ. ನನ್ನ ಗೊತ್ತುವಳಿ, ಕಾಂಗ್ರೆಸ್ ಬಹಿಷ್ಕಾರಗಳ ಬಗ್ಗೆ ಮಾಡಿದ ನಿರ್ಣಯಕ್ಕೆ ವಿರೋಧವಾಗಿಲ್ಲವೇ ಎಂದು ಅವರು ವಿವೇಚನೆ ಮಾಡದೆ ಕೇಳಿದರು. ಈ ಆಕ್ಷೇಪಣೆ ನ್ಯಾಯಸಮ್ಮತವಲ್ಲವೇ ಎಂದು ಮೌಲಾನ ಮುಹಮ್ಮದ್ ಅಲಿಯವರು ನನ್ನನ್ನು ಕೇಳಿದರು. ಹೌದು, ನಿಜ ಎಂದು ನಾನು ಹೇಳಿದೆ. ಆದ್ದರಿಂದ ನನ್ನ ನಿರ್ಣಯ, ನಿಬಂಧನೆಗೆ ವಿರೋಧವಾದದ್ದು ಎಂದು ಅವರು ನಿರ್ಧರಿಸಲೇ ಬೇಕಾಯಿತು. ಆಗ ನನ್ನಲ್ಲೇ ನಾನು ಕುಗ್ಗಿ ಹೋದೆ. ಯಾರ ಭಾಷಣದಲ್ಲೂ ವರ್ತನೆ ಯಲ್ಲೂ ಲವಲೇಶವೂ ತಪ್ಪಿರಲಿಲ್ಲ. ಎಲ್ಲರ ಟಿಪ್ಪಣಿಗಳೂ ಸಂಕ್ಷಿಪ್ತವಾಗಿದ್ದುವು.

ಅವರಲ್ಲಿ ಸೌಜನ್ಯವಿತ್ತು. ಮೇಲಾಗಿ ನೋಡುವುದಕ್ಕೆ ಅವರು ಸರಿಯೆಂದೇ ಭಾಸವಾಗುತ್ತಿತ್ತು. ಆದಾಗ್ಯೂ ಅದೆಲ್ಲ ನಿರಾಶಾಮಯವೂ ಅವಾಸ್ತವವೂ ಆಗಿತ್ತು. ಆ ಆಕ್ಷೇಪಣೆಗಳೆಲ್ಲಾ ಹಸಿದು ಅಸ್ಥಿಪಂಜರವಾಗಿರುವ ಮನುಷ್ಯನ ಮುಂದೆ ಸಂಯಮದ ಮಹತ್ವದ ಬಗ್ಗೆ ಧರ್ಮಪ್ರವಚನ ಮಾಡಿದಂತಿತ್ತು. ಪ್ರತಿಯೊಬ್ಬರೂ ತಮ್ಮ ಪಾತ್ರವನ್ನು ಅನೈಚ್ಛಿಕವಾಗಿ ಮುನ್ನೆಚ್ಚರವಿಲ್ಲದೆ ನಿರ್ವಹಿಸಿದರು. ದೇವರು ಅವರುಗಳ ಮೂಲಕವಾಗಿ ನನ್ನೊಡನೆ ಮಾತನಾಡುತ್ತ ಹೀಗೆ ಹೇಳುತ್ತಿರುವಂತೆ ಭಾಸವಾಯಿತು "ಏ ಮೂರ್ಖ, ನಿನಗೆ ಇದು ಸಾಧ್ಯವಾಗದೆಂದು ಅರಿವಾಗಲಿಲ್ಲವೇ? ನಿನ್ನ ಕಾಲ ಮುಗಿಯಿತು". ತಾವು ರಾಜೀನಾಮೆ ಕೊಡಬಹುದೇ ಎಂದು ಗಂಗಾಧರರಾವ್ ನನ್ನನ್ನು ಕೇಳಿದರು. ತಕ್ಷಣ ಅವರು ಹಾಗೆ ಮಾಡಬೇಕೆಂದು ನಾನು ಒಪ್ಪಿದೆ. ಅವರು ತಡಮಾಡದೆ ರಾಜೀನಾಮೆ ಪತ್ರ ನೀಡಿದರು. ಅಧ್ಯಕ್ಷರು ಸಭೆಯ ಮುಂದೆ ಅದನ್ನು ಓದಿದರು. ಹೆಚ್ಚು ಕಡಿಮೆ ಸರ್ವಾನುಮತದಿಂದ ಅದು ಅಂಗೀಕೃತವಾಯಿತು. ಅದರಿಂದ ಗಂಗಾಧರರಾವ್‌ಗೆ ಅನುಕೂಲವೇ ಆಯಿತು.

"ಮೌಲಾನ ಶೌಕತ್ ಆಲಿ ನನ್ನ ಎದುರಿಗೇ ಆರು ಗಜಗಳಷ್ಟು ದೂರದಲ್ಲಿ ಕುಳಿತಿದ್ದರು. ಅವರ ಇರುವಿಕೆ ನಾನು ಹೊರಗೆ ಓಡಿಹೋಗದಂತೆ ತಡೆಯಿತು: ಯಾವಾಗಲಾದರೂ ತಪ್ಪಿನಿಂದ ಒಳಿತು ಮೂಡಿ ಬರಲು ಸಾಧ್ಯವೇ? ನಾನು ಕೆಡುಕಿನೊಡನೆ ಸಹಕರಿಸುತ್ತಿರಲಿಲ್ಲವೇ?' ಎಂದು ನನ್ನನ್ನೇ ನಾನು ಪ್ರಶ್ನಿಸಿಕೊಳ್ಳುತ್ತಿದ್ದೆ. ಶೌಕತ್ ಆಲಿಯವರು ತಮ್ಮ ವಿಶಾಲ ಕಣ್ಣುಗಳ ಮೂಲಕ 'ತಪ್ಪೇನೂ ಆಗಿಲ್ಲ, ಎಲ್ಲವೂ ಸರಿಹೋಗುತ್ತದೆ' ಎಂದು ಸೂಚಿಸುತ್ತಿರುವಂತೆ ಕಂಡಿತು. ಆ ಮೋಹಕ ಶಕ್ತಿಯಿಂದ ಪಾರಾಗಲು ನಾನು ಹೋರಾಡುತ್ತಿದ್ದೆ. ಆದರೆ ನನಗೆ ಅದು ಸಾಧ್ಯವಾಗಲಿಲ್ಲ.

"ಈಗ ಸಭೆಯನ್ನು ವಿಸರ್ಜಿಸಲೇ?' ಎಂದು ಅಧ್ಯಕ್ಷರು ವಿಚಾರಿಸಿದರು, 'ಅಗತ್ಯವಾಗಿ' ಎಂದೆ. ಆದರೆ ಮೌಲಾನಾ ಅಬುಲ್ ಕಲಾಂ ಅಜಾದ್ ನನ್ನ ಮುಖ ಮುದ್ರೆಯಲ್ಲಿ ಆಗುತ್ತಿದ್ದ ಬದಲಾವಣೆಗಳನು ಕಣ್ಣಲ್ಲಿ ಕಣ್ಣಿಟ್ಟು ಗಮನಿಸುತ್ತಿದ್ದವರು, ಕೂಡಲೆ ಎದ್ದು ಬಂದು ಹೇಳಿದರು: 'ನೀವು ವಾಗ್ದಾನ ಮಾಡಿದಂತೆ ನಿಮ್ಮ ಸಂದೇಶ ಕೇಳದೆ ನಾವು ಸಭೆಯಿಂದ ಚದುರಲಾರೆವು'.

"ಮೌಲಾನಾ ಸಾಹೇಬರೇ, ನಾನು ಮುಂದಿನ ಯೋಜನೆಗಳ ಬಗ್ಗೆ ಕೆಲವು ಮಾತು ಹೇಳಬೇಕೆಂದಿದ್ದುದು ನಿಜ. ಆದರೆ ಗೋಪೀನಾಥ ಗೊತ್ತುವಳಿಯನಂತರ ಕಳೆದ ಒಂದು ಗಂಟೆಯಿಂದ ನಾನು ಗಮನಿಸುತ್ತಿರುವ ಸಂಗತಿಗಳು ನನಗೆ ದುಃಖವುಂಟು ಮಾಡಿವೆ. ನಾನು ಎಲ್ಲಿದ್ದೇನೆ ಮತ್ತು ಏನು ಮಾಡಬೇಕು, ಯಾವುದೂ ತೋರುತ್ತಿಲ್ಲ.' ಎಂದು ನಾನು ಉತ್ತರ ನೀಡಿದೆ. 'ಹಾಗಾದರೆ ಅಷ್ಟೇ ಆದರೂ ಹೇಳಿ ಬಿಡಿ.' ಎಂದರವರು. ಅದಕ್ಕೆ ಒಪ್ಪಿದೆ. ಹಿಂದೂಸ್ತಾನಿಯಲ್ಲಿ ಮಾಡಿದ ಪುಟ್ಟ ಭಾಷಣದಲ್ಲಿ ನನ್ನ ಹೃದಯವನ್ನೇ ತೆರೆದಿಟ್ಟೆ. ಅಲ್ಲಿ ಒಸರುತ್ತಿದ್ದ ರಕ್ತಸ್ರಾವವನ್ನು ನೋಡಲೂ

ಅವಕಾಶ ಮಾಡಿಕೊಟ್ಟೆ. ನನಗೆ ಅಳು ಬರುವಂತೆ ಮಾಡುವುದು ಸಾಮಾನ್ಯ ವಿಷಯ ವೇನಲ್ಲ. ಕಣ್ಣೀರು ಸುರಿಸಬೇಕಾದ ಸಂದರ್ಭಗಳಲ್ಲೂ ನಾನು ಅದನ್ನು ತಡೆಯುತ್ತೇನೆ. ಧೈರ್ಯವಾಗಿರಬೇಕೆಂದು ನಾನು ಎಷ್ಟೇ ಪ್ರಯತ್ನಿಸಿದರೂ ಆಗಲಿಲ್ಲ; ಕುಸಿದೆ. ಸಭಿಕರ ಮೇಲಾದ ಪರಿಣಾಮ, ಅವರ ಪ್ರತಿಕ್ರಿಯೆ ಕಣ್ಣಿಗೆ ಕಾಣುತ್ತಿತ್ತು. ನಾನು ಸಾಗಿ ಬಂದ ವಿವಿಧ ಘಟ್ಟಗಳನ್ನೂ ವಿವರಿಸಿದೆ. ನಾನು ಪಲಾಯನ ಮಾಡುವುದನ್ನು ತಪ್ಪಿಸಿದವರು ಶೌಕತ್ ಆಲಿ ಎಂಬುದನ್ನೂ ತಿಳಿಸಿದೆ. ಮುಸಲ್ಮಾನರ ಗೌರವ ರಕ್ಷಣೆಗೆ ನಾನು ಹೊಣೆ ಗಾರನೆಂದು ಹೆಮ್ಮೆಯಿಂದ ಹೇಳಿಕೊಳ್ಳುವಂತೆ ಶೌಕತ್ ಆಲಿಯವರು ಹಿಂದೂಗಳ ಮರ್ಯಾದೆಯ ರಕ್ಷಕ ಎಂದು ನಾನು ಭಾವಿಸಿದ್ದೇನೆ, ಎಂದೆ. ನನ್ನ ಮುಂದಿನ ಕ್ರಮ ಗಳನ್ನು ಹೇಗೆ ರೂಪಿಸುತ್ತೇನೆಂದು ಹೇಳಲು ಸಾಧ್ಯವಿಲ್ಲವೆಂದೂ ತಿಳಿಸಿದೆ. ಅವರೊಂದಿಗೂ ಆತ್ಮೀಯರಾದ ಇತರ ಕಾರ್ಯಕರ್ತರೊಂದಿಗೂ ಸಮಾಲೋಚಿಸುವುದಾಗಿ ಹೇಳಿದೆ. ನಾನು ಇದುವರೆಗೆ ಮಾಡಿದ ಭಾಷಣಗಳಲ್ಲೆಲ್ಲಾ ಅತ್ಯಂತ ವಿಷಾದಕರ ಭಾಷಣ ಇದು. ಅದನ್ನು ಮುಗಿಸಿ ಮೌಲಾನಾ ಅಬುಲ್ ಕಲಾಂ ಅಜಾದ್‌ರನ್ನು ಹುಡುಕಲು ಸುತ್ತಲೂ ಕಣ್ಣು ಹಾಯಿಸಿದೆ. ಅವರು ನನ್ನಿಂದ ತಪ್ಪಿಸಿಕೊಂಡು ದೂರ ಹೋಗಿ ಎದುರುಗಡೆ ಕೊನೆಯ ಅಂಚಿನಲ್ಲಿ ನಿಂತಿದ್ದರು. ನಾನು ಈಗ ಹೊರಡಲು ಇಚ್ಛಿಸುತ್ತೇನೆಂದು ಅವರಿಗೆ ಹೇಳಿದೆ. 'ಈಗಲೇ ಇಲ್ಲ, ನಾವೂ ಮಾತನಾಡುವುದಿದೆ' ಎಂದರು ಅವರು. ಮಾತನಾಡಲು ಸಭಿಕರಿಗೆ ಕರೆ ಕೊಟ್ಟರು. ಭಾಷಣ ಮಾಡಿದವರು ದುಃಖದಿಂದ ಬಿಕ್ಕುತ್ತಲೇ ಮಾತನಾಡಿದರು. ನರೆತ ತಲೆಯ ಸಿಖ್ ಗೆಳೆಯರು ಅವರುದ್ಧ ಕಂಠದಿಂದ ಮಾತನಾಡಲು ಯತ್ನಿಸಿದುದು ನನ್ನ ಮನಸ್ಸಿಗೆ ತೀವ್ರವಾಗಿ ನಾಟಿತು. ಶೌಕತ್ ಆಲಿ ಹಾಗೂ ಇತರರೂ ಮಾತನಾಡಿದರು. ಎಲ್ಲರೂ ಕ್ಷಮೆ ಬೇಡಿದರು. ನನಗೆ ಅವರ ಅಚಲ ಬೆಂಬಲದ ಭರವಸೆ ನೀಡಿದರು. ಮುಹಮ್ಮದಾಲಿ ಎರಡು ಸಾರಿ ಕುಸಿದರು. ನಾನು ಅವರನ್ನು ಸಂತೈಸಲು ಯತ್ನಿಸಿದೆ.

"ನಾನು ಕ್ಷಮೆ ನೀಡುವಂತಹುದೇನೂ ಇರಲಿಲ್ಲ. ನನ್ನ ಬಗ್ಗೆ ಯಾರೂ ತಪ್ಪು ಮಾಡಿರಲಿಲ್ಲ. ವೈಯಕ್ತಿಕವಾಗಿ ಅವರೆಲ್ಲರೂ ನನ್ನ ವಿಷಯದಲ್ಲಿ ಪ್ರೀತಿಯಿಂದಲೇ ಇದ್ದರು. ನನ್ನ ದುಃಖವಾಗಲು ಕಾರಣವಿಷ್ಟೇ, ನಾವೇ ಸೃಜಿಸಿದ ತಕ್ಕಡಿಯಲ್ಲಿ–ಕಾಂಗ್ರೆಸ್ ಸಿದ್ಧಾಂತದ ಪಾಲನೆಯಲ್ಲಿ–ನಾವು ನಿರೀಕ್ಷಿಸಿದ ಮಟ್ಟಕ್ಕೆ ಏರಲಿಲ್ಲ; ನಾವು ರಾಷ್ಟ್ರದ ಸತ್ವಹೀನ ಪ್ರತಿನಿಧಿಗಳು. ನನಗೆ ಅಲ್ಲಿ ಸ್ಥಾನವಿಲ್ಲವೆಂಬ ಭಾವನೆ ತೀವ್ರವಾಯಿತು. ನನ್ನನ್ನು ಅನುಸರಿಸ ಬಯಸದವರಿಗೆ ನಾನು ಮಾರ್ಗದರ್ಶಿಯಾಗಿರಲು ಶಕ್ಯವೇ ಎಂಬ ಸಂದೇಹ ನನ್ನನ್ನು ಬಾಧಿಸಿತು.

"ನನ್ನ ಸೋಲು ಸಂಪೂರ್ಣವಾಯಿತು; ನಾನು ಅವನತನಾದೆ. ಆದರೆ ಪರಾಭವ ನನ್ನನ್ನು ನಿರುತ್ಸಾಹಗೊಳಿಸುವುದಿಲ್ಲ; ಅದು ನನ್ನನ್ನು ಪುಟಕ್ಕೆ ಹಾಕುತ್ತದೆ. ನನ್ನ ತತ್ವದಲ್ಲಿ ನನಗೆ ನಂಬಿಕೆ ಅಚಲವಾಗಿದೆ. ದೇವರು ನನಗೆ ಮಾರ್ಗ ತೋರುತ್ತಾನೆಂಬುದನ್ನು ನಾನು ಬಲ್ಲೆ. ಮನುಷ್ಯನ ವಿವೇಕಕ್ಕಿಂತ ಸತ್ಯವೇ ಶ್ರೇಷ್ಠವಾದುದು".

ಮೇಲಿನದಷ್ಟನ್ನೂ ಜೂನ್ ೩೦ರಂದು ಬರೆಯಲಾಗಿತ್ತು. ಆದರೆ ಅದು ಗಾಂಧಿಯವರಿಗೆ ಸಮಾಧಾನವನ್ನುಂಟುಮಾಡಲಿಲ್ಲ. "ಅದನ್ನು ಓದಿದ ಮೇಲೆ ನಾನು ಸಭೆಗೇ ಆಗಲಿ ನನಗೇ ಆಗಲಿ ನ್ಯಾಯ ತೋರಿಲ್ಲ ಎಂಬ ಭಾವನೆ ಉಂಟಾಗಿದೆ" ಹೀಗೆಂದು ಅವರು ಮತ್ತೆ ಟಿಪ್ಪಣಿ ಬರೆದರು.

"ಅನೌಪಚಾರಿಕ ಸಭೆ ಮಹತ್ವಪೂರ್ಣದ್ದಾಗಿತ್ತು ನಿಜ; ಆದರೆ ನನಗೆ ಯಾತನೆಯನ್ನುಂಟು ಮಾಡಿದ ಅದರ ಹಿಂದಿನ ಸಭೆ ಕಡಿಮೆ ಮಹತ್ವದ್ದಾಗಿರಲಿಲ್ಲ. ಭಾಷಣಕಾರರು ಯಾರಿಗೂ ನನ್ನ ಮೇಲೆ ದ್ವೇಷವಿರಲಿಲ್ಲವೆಂಬುದನ್ನು ಸ್ಪಷ್ಟಪಡಿಸಿರುವೆನೋ ಇಲ್ಲವೋ ಕಾಣೆ. ನನ್ನ ಮನಸ್ಸನ್ನು ಕೊರಗಿಸಿದ ವಿಷಯಗಳೆಂದರೆ, ಅಪ್ರಜ್ಞಾಪೂರ್ವಕವಾದ ಬೇಜವಾಬ್ದಾರಿತನ ಮತ್ತು ಕಾಂಗ್ರೆಸ್ ಸಿದ್ಧಾಂತ ಅಥವಾ ಅಹಿಂಸಾ ನೀತಿಯ ಬಗ್ಗೆ ತೋರಿದ ತಾತ್ಸಾರ.

"ಅನೌಪಚಾರಿಕ ಸಭೆ ಹೃದಯಶೋಧಿಯಾಗಿತ್ತು. ಅದು ವಾತಾವರಣವನ್ನು ನಿರ್ಮಲಗೊಳಿಸಿತು. ನನ್ನ ಪರಿಸ್ಥಿತಿಯ ಬಗ್ಗೆ ಸಹೋದ್ಯೋಗಿಗಳೊಡನೆ ಚರ್ಚೆ ಮಾಡುವುದರಲ್ಲಿ ಇಡೀದಿನ ಮಂಗಳವಾರ ಕಳೆದದ್ದಾಯಿತು. ಕಾಂಗ್ರೆಸ್ಸಿನಿಂದ ನಿವೃತ್ತನಾಗಿ ಕೇವಲ ಹಿಂದೂ–ಮುಸ್ಲಿಂ ಐಕ್ಯತೆ, ಖದ್ದರ್ ಮತ್ತು ಅಸ್ಪೃಶ್ಯತಾ ನಿವಾರಣೆಗಾಗಿ ನನ್ನ ಚಟುವಟಿಕೆಗಳನ್ನು ಸೀಮಿತಗೊಳಿಸುವುದೇ ನನ್ನ ಅಂತರಾಳದ ಇಚ್ಛೆಯಾಗಿತ್ತು; ಈಗಲೂ ಅದೇ ಆಗಿದೆ. ಆದರೆ ಅವರು ನನಗೆ ಕಿವಿಗೊಡಲಿಲ್ಲ. ರಾಷ್ಟ್ರದ ಇತಿಹಾಸದಲ್ಲೇ ಅತಿ ಸಂದಿಗ್ಧವಾದ ಈ ಸಮಯದಲ್ಲಿ ನಿವೃತ್ತನಾಗುವ ಹಕ್ಕು ನನಗಿಲ್ಲವೆಂದು ಅವರು ಹೇಳಿದರು. ನನ್ನ ನಿವೃತ್ತಿಯಿಂದ ಪರಿಸ್ಥಿತಿ ಸುಧಾರಿಸುವುದಿಲ್ಲ. ಅದರಿಂದ ನಿರುತ್ಸಾಹ ಮೂಡುವುದಲ್ಲದೆ ಕಾಂಗ್ರೆಸ್ಸಿನ ಸಭೆಗಳಲ್ಲಿ ಪರಿಣಾಮಕಾರಿ ನಿಗ್ರಹದ ಅಭಾವ ಉಂಟಾಗುತ್ತದೆ. ಬಹುಸಂಖ್ಯಾತ ಸದಸ್ಯರ ಬೆಂಬಲವಿರುವವರೆಗೆ ನಾನೇ ರೂಪಿಸಿರುವ ಕಾರ್ಯಕ್ರಮವನ್ನು ಚಟುವಟಿಕೆಯಿಂದ ಕಾರ್ಯಗತ ಮಾಡಬೇಕು. ಎ.ಐ.ಸಿ.ಸಿ.ಯಲ್ಲಿ ಆದ ಮತದಾನ ಸೂಚಿಸುವುದಕ್ಕಿಂತ ಹೆಚ್ಚು ಬಹುಮತ ಈ ಕಾರ್ಯಕ್ರಮಕ್ಕಿದೆ. ನಾನು ದೇಶದಲ್ಲಿ ಪ್ರವಾಸಕೈಕೊಂಡು ವಿದ್ಯಮಾನಗಳನ್ನು ಸ್ವತಃ ಪರಿಶೀಲಿಸಬೇಕು. ಎಂದರು ಕಾಂಗ್ರೆಸ್ ಸಿದ್ಧಾಂತವನ್ನು ಪೂರ್ಣವಾಗಿ ಒಪ್ಪುವವರೆಲ್ಲ ನಿವೃತ್ತರಾಗಿ, ಸ್ವರಾಜ್ಯವಾದಿಗಳಿಗೆ ಎಡೆ ಮಾಡಿಕೊಡಬೇಕೆಂಬುದು ನನ್ನ ಎರಡನೆಯ ಸೂಚನೆಯಾಗಿತ್ತು. ಅದರ ವಿರುದ್ಧ ವಾದ ಬೆಳೆದಿದ್ದರಿಂದ ಅದು ವಿವೇಚನಾರಹಿತವಾದ ಸೂಚನೆಯೆಂದು ನಾನೇ ತಳ್ಳಿ ಹಾಕಿದೆ. ಸ್ವರಾಜ್ಯವಾದಿಗಳು ಅದನ್ನು ಬಯಸಿರಲಿಲ್ಲ. ಅಸಾಧ್ಯವಾದುದನ್ನು ಅವರು ಮಾಡುವಂತೆ ನಿರೀಕ್ಷಿಸುವುದು ಅವರಿಗೆ ಹಿಂಸೆಯನ್ನುಂಟು ಮಾಡಿದಂತೆ ಎಂದು ನಾನು ಭಾವಿಸಿದೆ. ಅವರು ಮೊದಲನೆಯ ಸೂಚನೆಯನ್ನು ಅಂಗೀಕರಿಸುವುದಿಲ್ಲವೆಂದು ನಾನು ತಿಳಿದಿದ್ದೆ. ಈ ವಿಷಯವನ್ನು ಜುಹುವಿನಲ್ಲಿ ಮೊದಲು ನಾನು ಅವರ ಮುಂದಿಟ್ಟೆ. ಅನಂತರ ಅಹಮದಾಬಾದಿನಲ್ಲೂ ಮತ್ತೆ ಸೂಚಿಸಿದೆ. ಆದ್ದರಿಂದ ನಾನು

ಕಹಿಯೆಲ್ಲಾ ನುಂಗಿಕೊಂಡು ಮನಸ್ಸಿಲ್ಲದ ಮನಸ್ಸಿನಿಂದ ಈ ನಿರ್ಧಾರವನ್ನು ಕೈಗೊಂಡಿದ್ದೇನೆ. ಕಾಂಗ್ರೆಸ್ ನನ್ನನ್ನು ಅಲ್ಪ ಸಂಖ್ಯಾತನನ್ನಾಗಿ ಮಾಡುವವರೆಗೆ ಕಾಂಗ್ರೆಸ್ ಸಂಸ್ಥೆಯಲ್ಲೇ ಮುಂದುವರೆದು ಅದರ ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ಹೊರುತ್ತೇನೆ.

"ನಾನು ಹತ್ತಿರದ ದಾರಿ ಹಿಡಿಯಲಾರೆ. ಶ್ರಮದಿಂದಲೇ ಸಾಗಬೇಕು. ನನ್ನನ್ನು ಕಾಂಗ್ರೆಸ್ಸಿನಿಂದ ಹೊರದೂಡುವವವರೆಗೆ ನನ್ನ ಸ್ವಾಭಿಮಾನವನ್ನು ಅಡಗಿಸಿಟ್ಟುಕೊಂಡು ಕಾಯಬೇಕು. ನಾನು ಪಕ್ಷಕ್ಕೆ ಸೇರಿದವನೆಂದೂ ಕಾಣಿಸಿಕೊಳ್ಳಬೇಕು. ಮತ್ತು ಪಕ್ಷಾತೀತನಾಗಿ ಕೆಲಸ ಮಾಡಬಲ್ಲೆನೆಂದೂ ತೋರಿಸಬೇಕು. ಮುಂಬರುವ ಕಾಂಗ್ರೆಸ್ಸಿನಲ್ಲಿ ನಾನು ಬಹುಮತಕ್ಕಾಗಿ ಪ್ರಯತ್ನಿಸಬೇಕು. ಆದಷ್ಟು ಮಟ್ಟಿಗೆ ಪಕ್ಷಪಾತವಿಲ್ಲದೆ ಕೆಲಸ ಮಾಡಬೇಕು. ಅದು ಸತ್ಯಾಗ್ರಹಿಯ ಸಾಮರ್ಥ್ಯಕ್ಕೆ ಮೀರಿದ್ದೇನಲ್ಲ.

"ಎರಡು ಮಾರ್ಗಗಳೂ ಎರಡು ತದ್ವಿರುದ್ಧ ಮನೋಭಾವಗಳನ್ನು ಪ್ರತಿನಿಧಿಸುತ್ತವೆ. ಅಂದ ಮಾತ್ರಕ್ಕೆ ಒಂದು ಸರಿಯಾಗಿದ್ದರೆ ಮತ್ತೊಂದು ತಪ್ಪಾಗಿರಬೇಕೆಂದು ಹೇಳುವುದಿಲ್ಲ. ಅದರದರ ಸ್ಥಾನದಲ್ಲಿ ಪ್ರತಿಯೊಂದೂ ಸರಿಯಾಗಿಯೇ ಇರಬಹುದು. ಆದರೆ ಒಂದೇ ಸಂಸ್ಥೆಯಲ್ಲಿ ಎರಡೂ ಪಂಥ ಕೆಲಸ ಮಾಡಿದಲ್ಲಿ ಒಂದನ್ನೊಂದು ದುರ್ಬಲಗೊಳಿಸಿ ರಾಷ್ಟ್ರದ ಹಿತಕ್ಕೆ ಅಪಾಯ ತರುತ್ತದೆ. ಶಾಸನ ಮಂಡಲಗಳ ಮೂಲಕ ಜನತೆಗೆ ರಾಜಕೀಯ ಶಿಕ್ಷಣ ಕೊಡುವುದಾಗಿ ಒಂದು ಪಂಥ ಹೇಳಿಕೊಂಡರೆ, ಮತ್ತೊಂದು ಪಂಥ ಜನತೆಯ ಮಧ್ಯೆ ಕೆಲಸ ಮಾಡಿ ಅದರ ಸಂಘಟನಾ ಸಾಮರ್ಥ್ಯವನ್ನು ಹಾಗೂ ಆಡಳಿತದ ಅನುಭವವನ್ನು ಬೆಳೆಸುವುದರ ಮೂಲಕ ಶಿಕ್ಷಣ ನೀಡುವುದಾಗಿ ಹೇಳುತ್ತದೆ. ಸಾರ್ವತ್ರಿಕ ಮುನ್ನಡೆಗೆ ಸರ್ಕಾರದತ್ತ ನೋಡಬೇಕೆಂದು ಒಂದು ಪಂಥ ಬೋಧಿಸುತ್ತದೆ; ಜನರ ಸ್ವಪ್ರಭುತ್ವವಿರುವ ಕಡೆ, ಅತ್ಯುತ್ತಮ ಆದರ್ಶ ಸರ್ಕಾರದ ಪಾತ್ರ, ರಾಷ್ಟ್ರದ ಬೆಳವಣಿಗೆಯಲ್ಲಿ ತೀರ ಕಡಿಮೆ ಪ್ರಾಮುಖ್ಯದ್ದೆಂದು ಮತ್ತೊಂದು ಪಂಥ ತೋರಬಯಸುತ್ತದೆ. ರಚನಾತ್ಮಕ ಕಾರ್ಯಕ್ರಮವೊಂದೇ ಸ್ವರಾಜ್ಯವನ್ನು ಸಾಧಿಸಲಾರದೆಂದು ಒಂದು ಪಕ್ಷ ಜನತೆಗೆ ಹೇಳಿದರೆ, ಆ ಕಾರ್ಯಕ್ರಮದಿಂದ ಮಾತ್ರವೇ ಅದು ಸಾಧ್ಯವೆಂದು ಮತ್ತೊಂದು ಪಕ್ಷ ಬೋಧಿಸುತ್ತದೆ.

"ದುರದೃಷ್ಟದಿಂದ ಈ ಸುಸ್ಪಷ್ಟ ಸತ್ಯವನ್ನು ಸ್ವರಾಜ್ಯವಾದಿಗಳಿಗೆ ಮನವರಿಕೆ ಮಾಡಿಕೊಡಲು ನನಗೆ ಸಾಧ್ಯವಾಗಲಿಲ್ಲ. ಕಾಂಗ್ರೆಸ್ಸನ್ನು ಸಾಮರಸ್ಯವುಳ್ಳ ಸಂಸ್ಥೆಯನ್ನಾಗಿ ಮಾಡುವುದರಲ್ಲಿ ನಿಬಂಧನಾತ್ಮಕ ಅಡಚಣೆಯನ್ನು ಕಂಡೆ. ಆದ್ದರಿಂದ ಈಗ ನಾವು ಇದ್ದುದರಲ್ಲಿ ಉತ್ತಮವಾದ ಮುಂದಿನ ಕೆಲಸ ಮಾಡಬೇಕು. ಡಿಸೆಂಬರ್‌ನಲ್ಲಿ ಏನಾಗಬಹುದೆಂದು ಯೋಚಿಸದೆ, ಕಾಂಗ್ರೆಸ್ ಒಪ್ಪಲಿ ಬಿಡಲಿ, ನಮಗಂತೂ ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲವೆಂಬ ಪೂರ್ಣ ನಂಬಿಕೆಯಿಂದ ನಾವು ಸದ್ದುಗದ್ದಲವಿಲ್ಲದೆ ರಚನಾತ್ಮಕ ಕಾರ್ಯಕ್ರಮವನ್ನು ಮಾಡಿಕೊಂಡು ಹೋಗಬೇಕು."

ಎ.ಐ.ಸಿ.ಸಿ. ಅಂಗೀಕರಿಸಿದ ನಿರ್ಣಯಗಳಲ್ಲೆಲ್ಲ ನೂಲುವುದಕ್ಕೆ ಸಂಬಂಧಿಸಿದ್ದು ಅತಿ ಮುಖ್ಯವಾದುದೆಂದು ಅವರು ಭಾವಿಸಿದರು. "ಅದನ್ನು ಅಪಹಾಸ್ಯಮಾಡುವ ಪ್ರವೃತ್ತಿ ಇದೆ. ಖದ್ದರ್‌ನ ಆರ್ಥಿಕ ಮೌಲ್ಯವನ್ನು ಒಪ್ಪಿಕೊಂಡರೆ ಅನುಭವದಿಂದ ಗೊತ್ತಾದೀತು–ಆರ್ಥಿಕ ಕ್ರಾಂತಿಯನ್ನು ತರಲು ಆ ನಿರ್ಣಯ ಅಗತ್ಯವಾಗಿತ್ತು ಎಂದು. ಆ ನಿರ್ಣಯದ ಪರವಾಗಿ ಓಟು ಮಾಡಿದವರು ತಮ್ಮ ಮಾತಿನ ಗೌರವ ಕಾಯ್ದುಕೊಳ್ಳಲು ಅದನ್ನು ಕಾರ್ಯಗತಮಾಡುವ ಜವಾಬ್ದಾರಿ ಹೊತ್ತುಕೊಳ್ಳಬೇಕು. ಈಗ ದಂಡನೆಯ ವಿಧಿಯನ್ನು ತೆಗೆದಿರುವುದರಿಂದ ಅದರ ಆಕ್ಷೇಪಕರೂ ಕೂಡ ನಿರ್ಣಯದಂತೆ ನಡೆದುಕೊಳ್ಳುವರೆಂದು ನಂಬಿದ್ದೇನೆ. ಅದರಿಂದ ಆಗಬಹುದಾದ ಅನುಕೂಲ ಅಪಾರ. ಬೇರೆ ಇನ್ನೇನನ್ನೂ ಗಮನಿಸದಿದ್ದರೂ ಬಡವರಿಗೋಸ್ಕರ ವಾದರೂ ಈ ಶ್ರಮ ಕೈಗೊಳ್ಳುವುದು ಪ್ರಯೋಜನಕಾರಿಯಲ್ಲವೇ? ದೀನದಲಿತರ ಮೇಲೆ ಅಂತಹ ಕೆಲಸದ ಪರಿಣಾಮವನ್ನು ಊಹಿಸಿ ನೋಡಿ! ಕಾಂಗ್ರೆಸ್ಸಿಗರು ತಮಗಾಗಿ ದುಡಿಯುತ್ತಾರೆಂಬ ತಿಳುವಳಿಕೆ ಬಂದರೆ ಬಡವರಲ್ಲಿ ಹೊಸ ಆಸೆ ಮೂಡುತ್ತದೆ".

ಶಾಸನ ಮಂಡಲಗಳಿಗೆ ಬಹಿಷ್ಕಾರ ಹಾಕುವುದರ ಬಗೆಗೆ 'ಏನೂ ಬದಲಾವಣೆ ಕೂಡದು' ಎನ್ನುವ ಪಂಥದವರ ಹಾಗೆ ಗಾಂಧಿಯವರು ಹಠ ಹಿಡಿಯಲಿಲ್ಲ. ಆ ಘಟ್ಟ ದಲ್ಲಿ ಸ್ವರಾಜ್ಯವಾದಿಗಳು ಶಾಸನಮಂಡಲಗಳಿಂದ ನಿವೃತ್ತರಾದರೆ ಅನಾಹುತವಾಗುತ್ತದೆ! ಎಂದು ಗಾಂಧಿಯವರು ಎ.ಐ.ಸಿ.ಸಿ. ಅಧಿವೇಶನದನಂತರ ಮೋತಿಲಾಲ್ ನೆಹರೂಗೆ ಹೇಳಿದರು. ಇದರಿಂದ ಆಶ್ಚರ್ಯಭರಿತರಾದ ನೆಹರೂ ಅವರು ಹಿಂದೆ ಬರೆದಿದ್ದನ್ನು ನುಡಿದಿದ್ದನ್ನು ಪ್ರಸ್ತಾಪಿಸಿದರು. ಗಾಂಧಿಯವರಿಗೆ ಅದರಲ್ಲಿ ಯಾವ ವಿರೋಧಾಭಾಸವೂ ಕಾಣಲಿಲ್ಲ. "ಒಂದು ಹೇಳಿಕೆ ತತ್ವವನ್ನು ಆಧರಿಸಿದ್ದು, ಶಾಶ್ವತ ಸತ್ಯವನ್ನೊಳಗೊಂಡಿದೆ. ಮತ್ತೊಂದು ಈ ತಕ್ಷಣಕ್ಕೆ ಅನ್ವಯಿಸುತ್ತದೆ; ಪ್ರಸ್ತುತ ಸಂದರ್ಭಕ್ಕೆ ಸಿಂಧುವಾಗಿದೆ. ಸರಕಾರಿ ವಲಯಗಳಲ್ಲಿ ಸ್ವರಾಜ್ಯವಾದಿಗಳು ಕೋಲಾಹಲವನ್ನೆಬ್ಬಿಸಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ಈ ಸಂದರ್ಭದಲ್ಲಿ ಹಿಂದೆ ಸರಿದರೆ ಅದನ್ನು ಸೋಲು ಹಾಗೂ ದೌರ್ಬಲ್ಯ ವೆಂದು ಅವರು ತಪ್ಪು ತಿಳಿಯುವುದರಲ್ಲಿ ಸಂದೇಹವಿಲ್ಲ". ಈ ಸಂದರ್ಭದಲ್ಲಿ ಅವರ ವಾಪಸಾತಿಯಿಂದ ದೇಶದಲ್ಲಿ ನಿರುತ್ಸಾಹ ಹೆಚ್ಚಿ ನಿರಂಕುಶ ಸರ್ಕಾರದ ಹಸ್ತವನ್ನು ಬಲಗೊಳಿಸಿದಂತಾದೀತು ಎನ್ನುವ ಈ ಕಾರಣದಿಂದ ಗಾಂಧಿಯವರು ಆ ಕ್ರಮವನ್ನು ಇಷ್ಟಪಡಲಿಲ್ಲ. "ನಾವು ಭಾವಿಸಿರುವಂತೆ ಯಾವ ಕಾರ್ಯಕ್ರಮದಿಂದ ಮಾತ್ರ ಸ್ವರಾಜ್ಯ ಪ್ರಾಪ್ತವಾಗುತ್ತದೆಯೋ ಆ ಕಾರ್ಯಕ್ರಮವನ್ನು ಅದರಲ್ಲಿ ನಂಬಿಕೆ ಇರುವವರೆಲ್ಲ ಪೂರ್ಣವಾಗಿ ಕಾರ್ಯಗತಮಾಡಲು ಶೀಘ್ರವಾಗಿ ತೊಡಗಬೇಕು; ಆಗ ಸ್ವರಾಜ್ಯವಾದಿಗಳು ಹೊರಗೆ ಬರಲು ಸರಿಯಾದ ಸಮಯವಾಗುತ್ತದೆ". ಶಾಸನ ಮಂಡಲಗಳು "ಮಸಾಲೆಯನ್ನು ಒದಗಿಸಬಲ್ಲವೇ ಹೊರತು ರೊಟ್ಟಿಯನ್ನಲ್ಲ" ಎಂಬ ಈ ಕಹಿ ಅನುಭವ ಸ್ವರಾಜ್ಯವಾದಿಗಳಿಗೆ ಬರಬೇಕೆಂದು ಅವರು ಬಯಸಿದರು. ಅವರು

ಗಳು ತಮ್ಮ ಪೂರ್ಣ ವೇಳೆಯನ್ನೂ ಗಮನವನ್ನು ರಚನಾತ್ಮಕ ಕಾರ್ಯಕ್ಕಾಗಿ ವಿನಿಯೋಗಿಸಬೇಕೆಂದು ಇಚ್ಛಿಸಿದರು.

ತಿಲಕರ ಅನುಯಾಯಿಗಳಲ್ಲಿ ಒಂದು ಗುಂಪಿನವರು ಅವರನ್ನು ಟೀಕಿಸಿದರು. ತಿಲಕರ ವಾರ್ಷಿಕ ಪುಣ್ಯತಿಥಿಯ ಸಂದರ್ಭದಲ್ಲಿ ಅವರ ನೆನಪಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಗಾಂಧಿಯವರು ಹೀಗೆ ಹೇಳಿದರು. "ಜವಾಬ್ದಾರಿ ಗುರುತರವಾದದ್ದು. ೧೯೨೦ರಲ್ಲಿ ಆ ಮರೆಯಲಾಗದ ರಾತ್ರಿ ಮೃತ್ಯುಕೋಣೆಯಲ್ಲಿದ್ದ ಪಾರ್ಥಿವ ಶರೀರವನ್ನು ನೋಡಿಕೊಂಡು ಸರ್ದಾರ್ ಗೃಹದಿಂದ ವಾಪಸ್ ಬಂದಾಗ ನನ್ನಲ್ಲಿ ಅತ್ಯಂತ ಕ್ಲೇಷಕರವಾದ ಏಕಾಂಗಿತನದ ಭಾವನೆ ಮೂಡಿತು. ಲೋಕಮಾನ್ಯರ ಸನಿಹದಲ್ಲಿ ನಾನು ನಿಶ್ಚಿಂತನಾಗಿದ್ದೆ. ಅವರ ನಿಧನದನಂತರ ತೀರ ಅಭದ್ರ ಮನೋಭಾವ ಉಂಟಾಯಿತು. ನಾನು ಅವರೊಂದಿಗೆ ಭಿನ್ನಾಭಿಪ್ರಾಯ ತಾಳಬಹುದಾಗಿತ್ತು. ನನ್ನ ಭಿನ್ನಾಭಿಪ್ರಾಯವನ್ನು ಗೌರವಯುತವಾದ ರೀತಿಯಲ್ಲಿ ವ್ಯಕ್ತಪಡಿಸಬಹುದಾಗಿತ್ತು. ಆದರೆ ಯಾವಾಗಲೂ ನಾವು ಪರಸ್ಪರ ತಪ್ಪು ತಿಳಿದುಕೊಂಡವರಲ್ಲ. ಅವರ ಅನುಯಾಯಿಗಳೊಂದಿಗೆ ಅದೇ ಭಾವನೆಯಿಂದಿರಲು ಸಾಧ್ಯವಾಗಿಲ್ಲ. ಅವರು ನನ್ನಲ್ಲಿ ನಂಬಿಕೆಯಿಟ್ಟಿಲ್ಲವೆಂದಲ್ಲ; ಆದರೆ ಅವರಿಗೆ ಯಾರ ಮಾತು ವೇದವಾಕ್ಯವಾಗಿತ್ತೋ ಅಂತಹ ಮಾರ್ಗದರ್ಶಕರನ್ನು ಕಳೆದುಕೊಂಡ ಮೇಲೆ ಅರಕ್ಷಿತ ಮನೋಭಾವ ಉಂಟಾಗಿದೆ. ನನ್ನ ಅಭಿಪ್ರಾಯಗಳನ್ನು ಒಪ್ಪಲು ಅವರು ಹಿಂದೆಗೆಯುತ್ತಿದ್ದಾರೆ. ಅವರವರಲ್ಲಿ ಪೂರ್ಣ ಒಡಂಬಡಿಕೆಯೂ ಇಲ್ಲ. ಅವರ ಗುಂಪಲ್ಲಿ ಒಡಕುಂಟಾಗುವುದನ್ನು ನಾನು ಎಂದಿಗೂ ಬಯಸಿರಲಿಲ್ಲ. ಮಹಾರಾಷ್ಟ್ರದ ಪಕ್ಷದ ಬಗ್ಗೆ ನಾನು ಅನೇಕ ಸಾರಿ ಮೆಚ್ಚಿಗೆ ವ್ಯಕ್ತಪಡಿಸಿದ್ದೇನೆ. ಅದಕ್ಕೆ ಒಂದು ನಿರ್ದಿಷ್ಟ ನೀತಿ ಇದೆ. ಅದರಲ್ಲಿ ಶಿಸ್ತು ಇದೆ, ಸಾಮರ್ಥ್ಯ ಇದೆ. ಅದಕ್ಕೆ ಅಪಾರ ತ್ಯಾಗದ ಹಿನ್ನೆಲೆ ಇದೆ. ನಾನು ಆ ಪಕ್ಷವನ್ನು ಒಡೆಯುವುದಕ್ಕೆ ಬದಲು ಪೂರ್ಣವಾಗಿ ನನ್ನ ಕೈಯಲ್ಲಿಟ್ಟುಕೊಳ್ಳಲು ಇಚ್ಛಿಸಿದೆ. ಈಗಲೂ ಅದೇ ನನ್ನ ಆಸೆ. ಸ್ವರಾಜ್ಯವನ್ನು ಗಳಿಸುವ ಸಾಧನದ ಬಗ್ಗೆ ನನ್ನ ದೃಷ್ಟಿಕೋನಕ್ಕೆ ಅವರನ್ನು ಪರಿವರ್ತಿಸಿಕೊಳ್ಳಲು ಬಯಸಿದ್ದೆ; ಈಗಲೂ ಬಯಸುತ್ತೇನೆ. ಲೋಕಮಾನ್ಯರು ಬದುಕಿದ್ದಾಗ ನಾನು ಅವರೊಬ್ಬರನ್ನು ಪರಿವರ್ತಿಸಿದ್ದರೆ ಸಾಕಾಗಿತ್ತು ಅಥವಾ ಅವರಿಂದ ನಾನು ಬದಲಾಗಬೇಕಾಗಿತ್ತು. ವಿವಿಧ ವಿದ್ಯಮಾನಗಳನು, ಸಂದರ್ಭಗಳನ್ನು ಸರಿಯಾಗಿ ಅರಿಯುವ ಸಹಜ ಪ್ರವೃತ್ತಿ ಅವರಿಗಿತ್ತು, 'ಜನತೆ ನಿಮ್ಮ ಮಾರ್ಗವನ್ನು ಅನುಸರಿಸಿದರೆ ನಾನು ನಿಮ್ಮವ' ಎಂದು ಒಮ್ಮೆ ಅವರು ಹೇಳಿದ್ದರು. ನನಗೆ ನಾನು ನಿಷ್ಠನಾಗಿರುವ ಮೂಲಕ ಅವರು ಬಿಟ್ಟು ಹೋಗಿರುವ ಪರಂಪರೆಗೆ ಅರ್ಹನಾಗಬಲ್ಲೆ".

ಸ್ವರಾಜ್ಯವಾದಿಗಳು ಮತ್ತು ಬದಲಾವಣೆ ಒಪ್ಪದವರು ಕಾಂಗ್ರೆಸ್ಸಿಗರು ಮತ್ತು ಉದಾರವಾದಿಗಳು, ಹಿಂದೂಗಳು ಮತ್ತು ಮುಸಲ್ಮಾನರು, ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು–ಇವರುಗಳ ನಡುವಣ ಭಿನ್ನಾಭಿಪ್ರಾಯ ಬೆಳೆಯುತ್ತಿತ್ತು. ಇದನ್ನು

ನಿಲ್ಲಿಸಿ ಎಲ್ಲ ವಿಚಾರ ಪಂಥಗಳನ್ನು ಒಂದು ಗೂಡಿಸಲು ಗಾಂಧಿಯವರು ಸಂಕಲ್ಪ ಮಾಡಿದ್ದರು. ಈ ದಿಸೆಯಲ್ಲಿ ಅವರ ಮೊದಲನೆಯ ಹೇಳಿಕೆ ಆಗಸ್ಟ್ ೩೧ರಂದು ಹೊರಬಂದಿತು. "ನಾವೆಲ್ಲರೂ ಒಪ್ಪಬಹುದಾದ ಕನಿಷ್ಠವಾದ ಕಾರ್ಯಸಂಹಿತೆಯನ್ನು ರೂಪಿಸಲು ಸಾಧ್ಯವಿಲ್ಲವೆಂದು ಹೇಳಲು ಕಾರಣವಿಲ್ಲ. ಕೆಲವು ವಿಚಾರಗಳಿಗಾದರೂ ನಾವೆಲ್ಲ ಒಂದೇ ಛಾವಣಿಯ ಕೆಳಗೆ ಒಟ್ಟಾಗಿ ಸೇರಲು ಸಾಧ್ಯ" ಆದ್ದರಿಂದ ಅಸಹಕಾರ ವನ್ನು –ಅದರಲ್ಲೂ ಕ್ಷಾತ್ರಸ್ವರೂಪದ್ದನ್ನು–ನಿಲ್ಲಿಸಿ, ಕೈಲಿ ನೂಲುವುದು, ಹಿಂದೂ–ಮುಸಲ್ಮಾನರ ಐಕ್ಯತೆ ಮತ್ತು ಅಸ್ಪೃಶ್ಯತಾ ನಿವಾರಣೆ ಇವುಗಳ ಮೇಲೆ ಕಾಂಗ್ರೆಸ್‌ನ ಗಮನವನ್ನು ಕೇಂದ್ರೀಕರಿಸಬೇಕೆಂದು ಸಲಹೆ ಮಾಡಿದರು. ಸೆಪ್ಟೆಂಬರ್ ೧೧ರ 'ಯಂಗ್ ಇಂಡಿಯಾ'ದಲ್ಲಿ ಹೀಗೆ ಬರೆದರು:

"ವಾಸ್ತವವಾಗಿ ನಮ್ಮ ಅಸಹಕಾರ ಸರ್ಕಾರದ ಜೊತೆ ಆಗಿರದೆ ನಮ್ಮ ನಮ್ಮಲ್ಲೇ ಪರಸ್ಪರ ಅಸಹಕಾರದ ಸ್ವರೂಪ ತಾಳಿದೆ. ನಾವು ಅಪೇಕ್ಷೆ ಪಡದೆಯೇ ಒಬ್ಬರನ್ನೊಬ್ಬರು ದುರ್ಬಲಗೊಳಿಸುತ್ತಿದ್ದೇವೆ; ತನ್ಮೂಲಕ ನಾವು ನಾಶ ಮಾಡಬೇಕೆಂದಿರುವ ವ್ಯವಸ್ಥೆ ಯನ್ನು ಬಲಗೊಳಿಸುತ್ತಿದ್ದೇವೆ. ನಮ್ಮ ಅಸಹಕಾರ, ಜೀವಂತ, ಕಾರ್ಯಶೀಲ ಅಹಿಂಸಾ ಶಕ್ತಿಯಾಗಬೇಕಿತ್ತು; ಪ್ರಸ್ತುತ ವ್ಯವಸ್ಥೆಯ ಹಿಂಸಾಸ್ವರೂಪವನ್ನು ಸಮಸಮನಾಗಿ ಎದುರಿಸಬೇಕಿತ್ತು. ದುರದೃಷ್ಟದಿಂದ ಈ ಅಸಹಕಾರವು ಯಾವಾಗಲೂ ಕಾರ್ಯಶೀಲ ಅಹಿಂಸೆ ಆಗಲಿಲ್ಲ. ಅಸಹಾಯಕರೂ ದುರ್ಬಲರೂ ನಡೆಸುವ ಭೌತಿಕ ಅಹಿಂಸೆಯನ್ನು ಪಾಲಿಸುವುದರಲ್ಲಿ ನಾವುಗಳು ತೃಪ್ತರಾದೆವು. ಆ ವ್ಯವಸ್ಥೆಯನ್ನು ನಾಶಗೊಳಿಸುವಂತಹ ತಕ್ಷಣದ ಪರಿಣಾಮವನ್ನುಂಟು ಮಾಡಲು ನಾವು ವಿಫಲರಾದೆವು. ಅದು ದ್ವಿಗುಣ ಬಲದಿಂದ ನಮ್ಮ ಮೇಲೆ ತಿರುಗಿ ಬಿದ್ದಿದೆ. ನಾವು ಬೇಗ ಎಚ್ಚೆತ್ತುಕೊಳ್ಳದಿದ್ದರೆ ಅದು ನಮ್ಮನ್ನೇ ನಾಶಗೊಳಿಸುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ನಮ್ಮ ನಮ್ಮಲ್ಲಿನ ಜಗಳಗಳಲ್ಲಿ ಭಾಗವಹಿಸಬಾರದೆಂದು ನಾನು ನಿರ್ಧರಿಸಿದ್ದೇನೆ; ಸಂಬಂಧಪಟ್ಟ ಇತರ ರೆಲ್ಲರೂ ಹಾಗೆಯೇ ಮಾಡಬೇಕೆಂದು ಅಪೇಕ್ಷಿಸುತ್ತೇನೆ. ಸಕ್ರಿಯವಾಗಿ ಸಹಾಯ ಮಾಡಲು ಆಗದಿದ್ದರೆ ತಡೆಯನ್ನಂತೂ ಒಡ್ಡದಿದ್ದರೆ ಸರಿ. ಪಂಚ ಬಹಿಷ್ಕಾರಗಳಲ್ಲಿ ನನಗೆ ಎಂದಿನ ತೀವ್ರ ನಂಬಿಕೆ ಈಗಲೂ ಇದೆ. ಎ.ಐ.ಸಿ.ಸಿ. ಸಮಯದಲ್ಲಿ ನನಗೆ ಗೋಚರವಾಗದೆ, ಈಗ ಸ್ಪಷ್ಟವಾಗಿ ಅರಿವಾಗಿರುವ ಅಂಶ– ಈ ಬಹಿಷ್ಕಾರಗಳನ್ನು ವ್ಯಕ್ತಿಗತವಾಗಿ ನಾವು ಉಳಿಸಿಕೊಂಡು ಬರಬಹುದೇ ಹೊರತು ವ್ಯಾಪಕವಾಗಿ ಕಾರ್ಯಗತ ಮಾಡಲು ಸರಿಯಾದ ವಾತಾವರಣವಿಲ್ಲ. ಈಗ ಎಲ್ಲೆಲ್ಲೂ ಅಪನಂಬಿಕೆ ತುಂಬಿದೆ. ಪ್ರತಿಯೊಂದು ಕೆಲಸವನ್ನೂ ಸಂದೇಹದಿಂದ ನೋಡುತ್ತಿದ್ದಾರೆ ಮತ್ತು ಅದಕ್ಕೆ ಅಪಾರ್ಥ ಕಲ್ಪಿಸುತ್ತಿದ್ದಾರೆ. ವಿವರಣೆ–ಪ್ರತಿವಿವರಣೆ, ಇವುಗಳ ಸಮರದಲ್ಲಿ ನಾವು ಉದ್ಯುಕ್ತ ರಾಗಿದ್ದರೆ, ನಮ್ಮ ಹೊಸ್ತಿಲ ಬಳಿ ಇರುವ ಶತ್ರು ತನ್ನ ಶಕ್ತಿಯನ್ನು ಸಂಘಟಿಸಿಕೊಳ್ಳು ತ್ತಿದ್ದಾನೆ. ಆದ್ದರಿಂದ ಎಲ್ಲ ರಾಜಕೀಯ ಪಕ್ಷಗಳೂ ಸರ್ವಸಮ್ಮತವಾದ ಕನಿಷ್ಠ ಕಾರ್ಯಕ್ರಮವನ್ನು ಆರಿಸಬೇಕೆಂದು ನಾನು ಸಲಹೆ ಮಾಡಿದ್ದೇನೆ. ಅಂತಹ ಕಾರ್ಯ

ಕ್ರಮವನ್ನು ಕಾಂಗ್ರೆಸ್ ವೇದಿಕೆಯ ಮೂಲಕ ಆಗು ಮಾಡಿಸಲು ಸಹಕರಿಸಬೇಕೆಂದು ಅವರೆಲ್ಲರಿಗೂ ಆಹ್ವಾನ ನೀಡುತ್ತೇನೆ. ಇದು ಆಂತರಿಕ ಅಭಿವೃದ್ಧಿಯ ಕೆಲಸ. ಅದಿಲ್ಲದೆ ಪರಿಣಾಮಕಾರಿಯಾದ ಬಾಹ್ಯ ರಾಜಕೀಯ ಒತ್ತಡವಿರುವುದಿಲ್ಲ. ಕಾಂಗ್ರೆಸ್ ಅಧಿಕಾಧಿಕ ವಾಗಿ ಜನಸಾಮಾನ್ಯರನ್ನು ಪ್ರತಿನಿಧಿಸಬೇಕು. ಅವರಿಗಿನ್ನೂ ರಾಜಕೀಯದ ಸೋಂಕು ತಗುಲಿಲ್ಲ. ನಾವು ಅವರ ದುಃಖದಲ್ಲಿ ಭಾಗಿಗಳಾಗಬೇಕು, ಅವರ ಕಷ್ಟಗಳನ್ನು ಅರಿತು ಕೊಳ್ಳಬೇಕು. ಮತ್ತು ಅವರ ಅಪೇಕ್ಷೆಗಳೇನೆಂಬುದನ್ನು ಗ್ರಹಿಸಬೇಕು".

ಅವರ ಪ್ರಾಮಾಣಿಕತೆ ಸಾಂಕ್ರಾಮಿಕ ಸ್ವರೂಪ ತಾಳಿತು. ಅವರ ಕಟು ವಿರೋಧಿ ಶ್ರೀಮತಿ ಬೆಸೆಂಟ್ 'ಯಂಗ್ ಇಂಡಿಯಾ' ಮೂಲಕ ಹೀಗೆ ತಿಳಿಸಿದರು. "ಕಾಂಗ್ರೆಸ್ ಕಾರ್ಯಕ್ರಮಕ್ಕೆ ಗಾಂಧಿಯವರ ಕೊಡುಗೆಯಾದ ಈ ಮೂರು ಸೂತ್ರಗಳನ್ನು ಒಪ್ಪು ತ್ತೇನೆ. ಅಧಿಕಾರದಲ್ಲಿರುವವರು ಕಾಂಗ್ರೆಸ್ಸಿನ ಪರವಾಗಿ ಅವುಗಳಿಗೆ ಒಪ್ಪಿಗೆ ನೀಡಿದರೆ ನಾನು ಪುನಃ ಕಾಂಗ್ರೆಸ್ಸಿಗೆ ಸೇರುತ್ತೇನೆ".

ಕಾಂಗ್ರೆಸ್ಸಿನ ಮುಂದಿನ ಅಧ್ಯಕ್ಷ ಸ್ಥಾನಕ್ಕೆ ಗಾಂಧಿಯವರ ಹೆಸರು ಸೂಚಿಸಲ್ಪಟ್ಟಿತು. ಆಗಿನ ಕ್ಲಿಷ್ಟ ಪರಿಸ್ಥಿತಿಯಲ್ಲಿ ಅವರು ಕಾಂಗ್ರೆಸ್ಸಿನ ಅಧಿಕಾರ ಸ್ಥಾನದಲ್ಲಿರಬೇಕೆಂದು ಅನೇಕರಿಗೆ ಅನಿಸಿತು. ಗಾಂಧಿಯವರು ಹೇಳಿದರು, "ನನ್ನ ಸ್ಥಿತಿ ಏನು ಎಂಬುದು ನನಗೇ ಇನ್ನೂ ಸ್ಪಷ್ಟವಾಗಿಲ್ಲ. ಒಡಕು ತರಲು ನಾನು ಅಧ್ಯಕ್ಷನಾಗುವುದಿಲ್ಲ. ನಾನು ಸಮ್ಮತಿ ಕೊಟ್ಟರೆ ಅದರಿಂದ ಎಂತಾದರೂ ದೇಶಕ್ಕೆ ಒಳಿತಾಗುವುದಾದರೆ ನಾನು ಆ ಗೌರವವನ್ನು ಒಪ್ಪಿಕೊಳ್ಳುತ್ತೇನೆ. ಈ ಭಿನ್ನತೆಗಳಿಂದಾಗಿ ನನಗೆ ಬೇಸರ ಬಂದಿದೆ. ನಾನು ಯರವಾಡ ಸೆರೆಮನೆಯಲ್ಲಿ ಎರಡನೆಯ ಬಾರಿಗೆ 'ಫೌಸ್ಟ್' ಓದಿದೆ. ಕೆಲವು ವರ್ಷಗಳ ಹಿಂದೆ ಮೊದಲ ಬಾರಿ ಅದನ್ನು ಓದಿದಾಗ ನನ್ನ ಮೇಲೆ ಯಾವ ಪರಿಣಾಮವೂ ಆಗಿರಲಿಲ್ಲ. ನನಗೆ ಗಯಟೇಕವಿಯ ಸಂದೇಶವನ್ನು ಗ್ರಹಿಸಲು ಆಗಿರಲಿಲ್ಲ. ಈಗಲೂ ಅದನ್ನು ಪೂರ್ಣವಾಗಿ ಅರಿತಿದ್ದೇನೋ ಇಲ್ಲವೋ ಗೊತ್ತಿಲ್ಲ. ಸ್ವಲ್ಪ ಮಟ್ಟಿಗಾದರೂ ಅದನ್ನು ಅರ್ಥ ಮಾಡಿಕೊಂಡಿದ್ದೇನೆಂದು ಹೇಳಬಹುದು. ಮಾರ್ಗರೆಟ್ ದಾರುಣ ವ್ಯಥೆಯನ್ನನುಭವಿಸುತ್ತ ಖಿನ್ನಳಾಗಿ ಕುಳಿತಿದ್ದಾಳೆ. ಬೇರಾವುದರಿಂದಲೂ ಅವಳಿಗೆ ನೆಮ್ಮದಿ ಸಿಗದೆ ಕಡೆಗೆ ರಾಟೆಯ ಸಂಗೀತದಿಂದ ಅವಳ ದುಃಖ ಶಮನವಾಗುತ್ತದೆ. ಕವಿಯ ಈ ಕಲ್ಪನೆ ನನ್ನನ್ನು ಬಹಳವಾಗಿ ಆಕರ್ಷಿಸಿತು. ಮಾರ್ಗರೆಟ್, ಶಂಕೆ ಮತ್ತು ನಿರಾಶೆಗಳ ತಾಕಲಾಟದಿಂದ ಬಳಲುತ್ತ ಏಕಾಂಗಿಯಾಗಿ ತನ್ನ ಕೊಟಡಿಯಲ್ಲಿದ್ದಾಳೆ. ಕವಿ ಅವಳನ್ನು ಎಲ್ಲ ಬಿಟ್ಟು ಮೂಲೆಯೊಂದರಲ್ಲಿದ್ದ ರಾಟೆಯ ಬಳಿ ಕಳುಹಿಸುತ್ತಾನೆ. ಅವಳ ಬಳಿ ಆರಿಸಿ ಜೋಡಿಸಿದ ಉತ್ತಮ ಪುಸ್ತಕಗಳ ಭಂಡಾರವಿದ್ದಿರಬೇಕು; ಆರಿಸಿದ ವರ್ಣಚಿತ್ರಗಳಿದ್ದಿರಬೇಕು; ಹಸ್ತಲಿಖಿತ ಚಿತ್ರಾಲಂಕಾರವುಳ್ಳ ಬೈಬಲ್‌ಪ್ರತಿಯೂ ಇದ್ದೇ ಇರಬೇಕು; ಇದೆಲ್ಲ ಓದುಗರಿಗೆ ತಿಳಿದೇ ಇದೆ. ಆದರೆ ಚಿತ್ರಗಳಾಗಲಿ, ಪುಸ್ತಕಗಳಾಗಲಿ, ಆ ಮಹಾನ್ ಪುಸ್ತಕ ಬೈಬಲ್ ಆಗಲಿ ಮಾರ್ಗರೇಟಳಿಗೆ ಸಾಂತ್ವನ ಕೊಡಲಿಲ್ಲ;

ಅರಿವಿಲ್ಲದೆಯೇ ಅವಳು ರಾಟೆಯ ಬಳಿಗೆ ಹೋಗಿ ಅದನ್ನು ಯಾಂತ್ರಿಕವಾಗಿ ತಿರುಗಿಸುತ್ತಾಳೆ; ಶಾಂತಿಯನ್ನರಸಲು ನಿರಾಕರಿಸುತ್ತಿದ್ದಂತೆಯೇ ಅವಳಿಗೆ ತಾನಾಗಿ ಶಾಂತಿ ಲಭಿಸುತ್ತದೆ. ಆ ಪ್ರಶಸ್ತ ಸಾಲುಗಳು ಹೀಗಿವೆ:

ನನಗಿನ್ನಿಲ್ಲ ಶಾಂತಿ;ಹೃದಯ ಬೇಯುಂತಿದೆ.
ನಾನಾತನನ್ನು ಕಳೆದುಕೊಂಡೆ; ಕಳೆದುಕೊಂಡೆ ಎಂದೆಂದಿಗೂ.
ಆ ಜಾಗ, ಆತನಿಲ್ಲದ ಆ ಜಾಗ, ನನಗದು ಗೋರಿ;
ಜಗವೆಲ್ಲ ದುಃಖ, ವ್ಯಥೆ, ನಿರಾಶೆ.
ನೋವಿನಿಂದ ನನ್ನ ತಲೆ ಸಿಡಿಯುತಿದೆ;
ನನ್ನೆದೆ ಸೀಳಿದೆ ದುಃಖದಿಂದ.
ನನಗಿನ್ನಿಲ್ಲ ಶಾಂತಿ; ನನ್ನೆದೆ ಬೇಯುತಿದೆ
ನನ್ನ ಪ್ರೇಮಿಯನ್ನೆಂದೆಂದಿಗೂ ಕಳೆದುಕೊಂಡೆ.

"ಈ ಸಾಲುಗಳ ಭಾವಾನುವಾದ ಮಾಡಿದರೆ ಅದು ನನ್ನ ಪರಿಸ್ಥಿತಿಯನ್ನು ಹೆಚ್ಚು ಕಡಿಮೆ ಪ್ರತಿ ಬಿಂಬಿಸುತ್ತದೆ. ಪ್ರಿಯತಮನನ್ನು ಕಳೆದುಕೊಂಡು ಸಂಭ್ರಾಂತವಾಗಿರುವಂತಾಗಿದೆ ನನ್ನ ಸ್ಥಿತಿ. ಆತನ ಸನ್ನಿಧಿಯಲ್ಲೇ ನಾನು ಸದಾ ಇದ್ದಂತೆ ಅನಿಸಿದರೂ ಆತ ನನ್ನನ್ನು ಬಿಟ್ಟು ದೂರ ಇದ್ದಂತೆ ಭಾಸವಾಗುತ್ತಿದೆ. ನನಗೆ ಮಾರ್ಗದರ್ಶನ ಮಾಡಲು, ಕಟ್ಟು ನಿಟ್ಟಾದ ಆಜ್ಞೆ ನೀಡಲು ಆತ ನಿರಾಕರಿಸುತ್ತಾನೆ. ಗೋಪಿಯರ ಸಮ್ಮುಖದಲ್ಲಿ ತುಂಟಾಟ ಮಾಡುತ್ತಿದ್ದ ಕೃಷ್ಣನಂತೆ ಒಮ್ಮೊಮ್ಮೆ ಕಾಣಿಸುತ್ತಾನೆ, ಅದೃಶ್ಯನಾಗುತ್ತಾನೆ; ಮತ್ತೆಲ್ಲೋ ಪ್ರತ್ಯಕ್ಷನಾಗುತ್ತಾನೆ. ನನ್ನ ಆತಂಕ ಇನ್ನಷ್ಟು ಹೆಚ್ಚುತ್ತದೆ. ನನ್ನ ಕಣ್ಮುಂದೆ ಬೆಳಕು ಸ್ಪಷ್ಟವಾಗಿ ಗೋಚರವಾಗಿ, ನನ್ನ ದಾರಿ ನಾನು ಕಂಡುಕೊಂಡಾಗ, ಓದುಗರನ್ನು ನನ್ನನ್ನನುಸರಿಸುವಂತೆ ಕೋರುತ್ತೇನೆ.

"ಅಲ್ಲಿಯ ವರೆಗೆ ನಾನು ಕೇವಲ ರಾಟೆಯನ್ನೆತ್ತಿಕೊಂಡು ಅದರ ಬಗ್ಗೆ ಮಾತಾಡಬಲ್ಲೆ; ಬರೆಯಬಲ್ಲೆ; ಓದುಗರಿಗೆ ಅದರ ಪ್ರಶಂಸೆ ಮಾಡಬಲ್ಲೆ. ಈ ನನ್ನ ಒಂಟಿತನದಲ್ಲಿ ಅದೊಂದೇ ನನ್ನ ನೆಚ್ಚಿನ ಬಂಧು; ಮತ್ತು ಶಾಂತಿದಾಯಕಶಕ್ತಿ".

# ಐಕ್ಯತೆಗಾಗಿ ಪ್ರಾಯಶ್ಚಿತ್ತ

೧೯೨೪

ಹಿಂದೂ ಮುಸಲ್ಮಾನರ ನಡುವೆ ಬಿಕ್ಕಟ್ಟನ್ನು ನಿವಾರಿಸಲು ಗಾಂಧಿಯವರು ತಮ್ಮ ಕೈಲಾದಮಟ್ಟಿಗೂ ಪ್ರಯತ್ನಿಸಿದರು. ಅವರ ಬರಹಗಳೂ ಭಾಷಣಗಳೂ ವ್ಯಾಪಕವಾಗಿ ಚರ್ಚಿಸಲ್ಪಟ್ಟವು. ಆದರೆ ಅವುಗಳಿಂದ ಲಾಭ ಪಡೆದವರು ಬಹಳ ಕಡಿಮೆ. ದೇಶದಲ್ಲಿ ಹಿಂಸಾಕೃತ್ಯಗಳು ಹೆಚ್ಚಾದುವು. ಸ್ವಲ್ಪ ಸಮಯದಲ್ಲೇ ಅಮೆಠಿ, ಸಂಬಾಲ್ ಮತ್ತು ಗುಲ್ಬರ್ಗಾಗಳಲ್ಲಿ ಹಿಂದೂ ದೇವಸ್ಥಾನಗಳನ್ನು ಮುಸಲ್ಮಾನರು ಅಪವಿತ್ರ ಗೊಳಿಸಿದರು. ಇದರ ಪರಿಣಾಮವಾಗಿ ಭಯಂಕರ ಗಲಭೆಗಳಾದುವು. ಇವೆಲ್ಲವನ್ನೂ ಮೀರಿಸುವಂತೆ ಸೆಪ್ಟೆಂಬರ್ ೧೯೨೪ರಲ್ಲಿ ಕೊಹಾತ್‌ನಲ್ಲಿ ಸಂಭವಿಸಿದ ದೊಂಬಿಯಲ್ಲಿ ೩೬ ಮಂದಿಯ ಕೊಲೆಯಾಯಿತು ಮತ್ತು ೧೪೫ ಜನರು ಘಾಯಗೊಂಡರು. ಒಂಬತ್ತು ಲಕ್ಷ ರೂಪಾಯಿಗಳಷ್ಟು ಮೌಲ್ಯದ ಆಸ್ತಿಪಾಸ್ತಿ ನಾಶವಾಯಿತು. ಕೊಹಾತ್‌ನಲ್ಲಿದ್ದ ಎಲ್ಲ ಹಿಂದೂಗಳು ಊರು ಬಿಟ್ಟು ಹೋದರು. ಈ ಗಲಭೆಗೆ ಪ್ರಚೋದನೆ, ಪ್ರವಾದಿಯ ಬಗ್ಗೆ ಪ್ರಕಟವಾದ ಅಶ್ಲೀಲ ಜೀವನ ಚರಿತ್ರೆ—ರಂಗಿಲಾ ರಸುಲ್. ಅದನ್ನು ರಚಿಸಿದ ಹಿಂದೂ ಲೇಖಕನನ್ನು ಕೊಲ್ಲಲಾಯಿತು.

ಗಾಂಧಿಯವರ ಮನಸ್ಸು ಕಲಕಿಹೋಯಿತು. "ಕೋಹತ್‌ನಿಂದ ಬಂದ ಸುದ್ದಿ, ಒಳಗೊಳಗೇ ಉರಿಯಾಡುತ್ತಿದ್ದುದನ್ನು ಪ್ರಜ್ವಲಿಸುವಂತೆ ಮಾಡಿತು. ಏನನ್ನಾದರೂ ಮಾಡಲೇಬೇಕೆನ್ನಿಸಿತು. ಎರಡು ರಾತ್ರಿ ತಳಮಳ ಹಾಗೂ ಸಂಕಟದಿಂದ ಕಳೆದೆ" ಎಂದು ಗಾಂಧಿ ಹೇಳಿದರು. ೧೯೨೪ನೇ ಸೆಪ್ಟೆಂಬರ್ ೧೮ರಂದು ೨೧ ದಿನಗಳ ಉಪವಾಸದ ನಿರ್ಧಾರ ಕೈಗೊಂಡರು. ದೆಹಲಿಯಲ್ಲಿನ ಮಹಮದ್ ಅಲಿಯವರ ನಿವಾಸದಿಂದ ಅವರು ಒಂದು ಹೇಳಿಕೆಯನ್ನು ನೀಡಿದರು. "ಇತ್ತೀಚಿನ ಘಟನೆಗಳು ಅಸಹನೀಯ. ನನಗಂತೂ ನಿಸ್ಸಹಾಯಕನಾಗಿ ನೋಡುತ್ತಿರುವುದು ಇನ್ನು ಅಸಾಧ್ಯ. ಅಪರಿಹಾರ್ಯ ವಾದ ಉತ್ಕಟ ಪರಿಸ್ಥಿತಿ ಸಂಭವಿಸಿದಾಗ, ಉಪವಾಸ ಮಾಡು ಮತ್ತು ಪ್ರಾರ್ಥಿಸು ಎಂದು ನನ್ನ ಧರ್ಮ ಬೋಧಿಸುತ್ತದೆ. ನನಗೆ ಅತ್ಯಂತ ಆತ್ಮೀಯರಾದವರ ವಿಷಯ ದಲ್ಲಿಯೂ ಹೀಗೆಯೇ ವರ್ತಿಸಿದ್ದೆ. ಈಗ ಏನನ್ನು ಹೇಳಿದರೂ ಅಥವಾ ಬರೆದರೂ ಅದು ಎರಡೂ ಕೋಮುಗಳನ್ನು ಹತ್ತಿರ ತರಲಾರದು. ಆದುದರಿಂದ ಇಂದಿನಿಂದ ಆರಂಭ ಮಾಡಿ ಅಕ್ಟೋಬರ್ ೬ ರಂದು ಬುಧವಾರ ಮುಗಿಯುವ ಇಪ್ಪತ್ತೊಂದು ದಿನಗಳ ನಿರಶನವನ್ನು ಕೈಗೊಂಡಿದ್ದೇನೆ. ಉಪ್ಪು ಬೆರಸಿದ ಅಥವಾ ಬೆರಸದೇ ಇರುವ ನೀರು ಕುಡಿಯುವ ಸ್ವಾತಂತ್ರ್ಯವನ್ನು ಮಾತ್ರ ಇಟ್ಟುಕೊಂಡಿದ್ದೇನೆ. ಇದು ಪ್ರಾಯ ಶ್ಚಿತ್ತವೂ ಹೌದು, ಪ್ರಾರ್ಥನೆಯೂ ಹೌದು. ಕೇವಲ ಪ್ರಾಯಶ್ಚಿತ್ತವಾಗಿದ್ದರೆ ಈ ಬಗ್ಗೆ ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿರಲಿಲ್ಲ. ಇದುವರೆಗೂ ಒಂದಾಗಿ

ದುಡಿದು ಈಗ ಆತ್ಮನಾಶಕ್ಕೆ ಹೊರಟಿರುವ ಹಿಂದೂ ಮತ್ತು ಮುಸಲ್ಮಾನರಿಗೆ ಇದು ಪರಿಣಾಮಕಾರಿಯಾದ ಪ್ರಾರ್ಥನೆಯಾಗುವುದೆಂದು ನಂಬಿ ಈ ನಿರಶನವನ್ನು ಪ್ರಕಟಿಸುತ್ತೇನೆ. ಆಂಗ್ಲೇಯರೂ ಸೇರಿದಂತೆ ಎಲ್ಲ ಕೋಮುಗಳ ಮುಖ್ಯಸ್ಥರೂ ಸೇರಿ ಧರ್ಮಕ್ಕೂ ಮಾನವತೆಗೂ ಅಗೌರವ ತರುತ್ತಿರುವ ಈ ಜಗಳವನ್ನು ಕೊನೆಗಾಣಿಸಬೇಕೆಂದು ಅವರಲ್ಲಿ ಗೌರವಯುತವಾಗಿ ಕೋರುತ್ತೇನೆ. ದೇವರನ್ನು ಪದಚ್ಯುತನನ್ನಾಗಿ ಮಾಡಿದಂತೆ ಭಾಸವಾಗುತ್ತದೆ. ಆತನನ್ನು ನಮ್ಮ ಹೃದಯದಲ್ಲಿ ಪುನಃ ಪ್ರತಿಷ್ಠಾಪನೆ ಮಾಡಿಕೊಳ್ಳೋಣ".

ಹಾಸಿಗೆಯಲ್ಲಿ ಮಲಗಿದ್ದಂತೆಯೇ ಅವರು ಕಷ್ಟಪಟ್ಟು ಕೆಲಸ ಮಾಡುತ್ತಿದ್ದರು. ಸೆಪ್ಟಂಬರ್ ೨೫ರ 'ಯಂಗ್ ಇಂಡಿಯಾ' ಪೂರ್ತಿಯಾಗಿ ಅವರಿಂದಲೇ ಬರೆಯಲ್ಪಟ್ಟಿತು. ನಿರಶನದ ಎರಡನೆಯ ದಿನ ಗಯಟೆಯ 'ಫೌಸ್ಟ್' ಅನ್ನು ದೀರ್ಘವಾಗಿ ಉದ್ಧರಿಸಿ "ದೇವರು ಒಬ್ಬನೇ" ಎಂಬ ಲೇಖನವನ್ನು ಬರೆದರು. ನಾಲ್ಕನೆಯ ದಿನ, ಆದಿವಾಸಿಗಳ ಬಗ್ಗೆ 'ನಮ್ಮ ಕರ್ತವ್ಯ'ದ ವಿಷಯ ಬರೆದರು. "ಕೆಲಸ ಮಾಡದಿದ್ದರೆ ಓಟಿಲ್ಲ" ಎಂಬ ಶೀರ್ಷಿಕೆಯಲ್ಲಿ ಆರನೆಯ ದಿನ ಸಂಪಾದಕೀಯ ಬರೆದರು. ಸಂಪಾದಕೀಯದ ಜವಾಬ್ದಾರಿಯನ್ನು ನಿಲ್ಲಿಸಬೇಕೆಂದು ವೈದ್ಯರು ಸಲಹೆ ಮಾಡಿದರು. ಸೆಪ್ಟಂಬರ್ ೨೨ರಂದು 'ನಿರಶನದ ಬಗ್ಗೆ ಪೂರ್ಣ ಮಾಹಿತಿ' ಎಂಬ ಶೀರ್ಷಿಕೆಯಲ್ಲಿ ಗಾಂಧೀಜಿ ಹೀಗೆ ಬರೆದರು: "ಪೂರ್ವಾಪರ ಯೋಚನೆ ಮಾಡದೆ ನಿರಶನವನ್ನು ಕೈಗೊಂಡಿಲ್ಲವೆಂದು ಓದುಗರಿಗೆ ಭರವಸೆ ಕೊಡುತ್ತೇನೆ. ವಾಸ್ತವವಾಗಿ ಅಸಹಕಾರ ಆರಂಭವಾದಾಗಿನಿಂದ ನನ್ನ ಪ್ರಾಣವನ್ನು ಒತ್ತೆ ಇಟ್ಟಿದ್ದೇನೆ. ಅಂಥನಾಗಿ ಅದನ್ನು ಆರಂಭಿಸಲಿಲ್ಲ. ಅದರಿಂದ ಸಂಭವಿಸಬಹುದಾದ ಅಪಾಯಗಳ ಬಗ್ಗೆ ನನಗೆ ಸಾಕಷ್ಟು ಮುನ್ಸೂಚನೆ ಇತ್ತು. ಪ್ರಾರ್ಥನೆ ಮಾಡದೆ ನಾನು ನನ್ನ ಯಾವುದೇ ಕೆಲಸ ಮಾಡುವುದಿಲ್ಲ. ಮಾನವ ಎಡವತಕ್ಕ ಪ್ರಾಣಿ. ಅವನು ಇಡುವ ಹೆಜ್ಜೆಗಳ ವಿಷಯ ಖಾತರಿಯಾಗಿ ಹೇಳಲಿಕ್ಕಾಗುವುದಿಲ್ಲ. ಯಾವುದನ್ನು ತನ್ನ ಪ್ರಾರ್ಥನೆಗೆ ಉತ್ತರವೆಂದು ಭಾವಿಸುತ್ತಾನೋ ಅದು ಕೇವಲ ತನ್ನ ಹಮ್ಮಿನ ಪ್ರತಿಧ್ವನಿ ಆಗಿರಬಹುದು. ಎಂದಿಗೂ ತಪ್ಪದ ಮಾರ್ಗದರ್ಶನಕ್ಕಾಗಿ ಮನುಷ್ಯ ಪಾಪವನ್ನು ಅರಿಯದ ಪರಿಶುದ್ಧ ಮುಗ್ಧ ಹೃದಯವನ್ನು ಹೊಂದಿರಬೇಕು. ನಾನು ಅಂತಹವನೆಂದು ಹೇಳಿಕೊಳ್ಳಲಾರೆ. ನನ್ನದು, ಹೋರಾಡುತ್ತಾ, ಪ್ರಯತ್ನಿಸುತ್ತಾ ಇರುವ ಹಾಗೂ ತಪ್ಪು ಮಾಡುತ್ತಿರುವ ಅಪರಿಪೂರ್ಣ ಆತ್ಮ. ನನ್ನ ಮೇಲೆ ಹಾಗೂ ಬೇರೆಯವರ ಮೇಲೆ ಪ್ರಯೋಗಗಳನ್ನು ಮಾಡುತ್ತಾ ಕಲಿಯುತ್ತಾ ನಾನು ಮೇಲೇಳಲು ಸಾಧ್ಯ. ದೇವರು ಏಕಮೇವಾದ್ವಿತೀಯ ಎಂಬುದರಲ್ಲಿ ನನಗೆ ನಂಬಿಕೆ ಇದೆ. ಆದುದರಿಂದ ಮಾನವತೆಯಲ್ಲೂ ನಂಬಿಕೆ ಇದೆ. ನಮಗೆ ಅನೇಕ ದೇಹಗಳಿದ್ದರೇನಂತೆ? ನಮಗಿರುವ ಆತ್ಮ ಒಂದೇ. ವಕ್ರೀಕರಣದಿಂದ ಸೂರ್ಯನ ಕಿರಣಗಳು ಅನೇಕವಾಗಿ ಕಾಣುತ್ತವೆ. ಆದರೆ ಅವುಗಳ ಮೂಲ ಒಂದೇ. ಆದುದರಿಂದ ಅತ್ಯಂತ ನೀಚವಾದ ಆತ್ಮದಿಂದ ಕೂಡ ನಾನು ಬೇರೆ ಹೋಗಲಾರೆ. (ಅತ್ಯಂತ ಪುಣ್ಯಕರವಾದ ಆತ್ಮದಿಂದಲೂ ಅನನ್ಯತೆ

ಯನ್ನು ಕಳೆದುಕೊಳ್ಳಲಾರೆ). ನನಗಿಷ್ಟವಿರಲಿ ಬಿಡಲಿ ಇಡೀ ನನ್ನ ಜನಾಂಗವನ್ನು ಈ ಶೋಧನಾ ಮಾರ್ಗದಲ್ಲಿ ಸೇರಿಸಿಕೊಳ್ಳಲೇಬೇಕಾಗುತ್ತದೆ. ಶೋಧನೆ ನಡೆಸದೆ ನಾನು ಇರಲಾರೆ. ಜೀವನ, ಕೊನೆಯಿಲ್ಲದ ಶೋಧನೆಗಳ ಸರಮಾಲೆ.

"ಅಸಹಕಾರ ಅಪಾಯಕಾರಿ ಪ್ರಯೋಗವೆಂದು ನನಗೆ ಗೊತ್ತಿತ್ತು. ಅಸಹಕಾರ ವಷ್ಟನ್ನೇ ಗಣಿಸಿದರೆ ಅದು ಅಸ್ವಭಾವಿಕ, ದುಷ್ಟ ಹಾಗೂ ಪಾಪಕರ. ಆದರೆ ಕೆಲವು ವೇಳೆ ಅಹಿಂಸಾತ್ಮಕ ಅಸಹಕಾರವು ಪವಿತ್ರ ಕರ್ತವ್ಯವಾಗುತ್ತದೆಂದು ನನಗೆ ಮನ ದಟ್ಟಾಗಿದೆ. ಅನೇಕ ಸಂದರ್ಭಗಳಲ್ಲಿ ಅದನ್ನು ತೋರಿಸಿಯೂ ಕೊಟ್ಟಿದ್ದೇನೆ. ಭಾರಿ ಜನಸಮುದಾಯಗಳಿಗೆ ಅದನ್ನು ಅನ್ವಯಿಸಿದಾಗ ತಪ್ಪು ಮಾಡುವ ಸಂಭವವೂ ಇತ್ತು. ಅರಾಜಕತೆ ಮತ್ತು ಅದಕ್ಕೂ ಅಧ್ವಾನವಾದ ಮಾರ್ಗಗಳಿಗೆ ಅಹಿಂಸಾತ್ಮಕ ಅಸಹಕಾರವೊಂದೇ ಪರ್ಯಾಯಮಾರ್ಗ ಉಳಿದಿದ್ದು. ಅದು ಅಹಿಂಸಾತ್ಮಕವಾಗಿರ ಬೇಕಾಗಿದ್ದರಿಂದ ನಾನು ನನ್ನ ಪ್ರಾಣವನ್ನೂ ಪಣವೊಡ್ಡಬೇಕಾಗಿತ್ತು.

"ಎರಡು ವರ್ಷಗಳ ಹಿಂದಿನ ವರೆಗೆ ಸ್ನೇಹಿತರಂತೆ ಒಟ್ಟಿಗೆ ಕೆಲಸ ಮಾಡುತ್ತಿದ್ದ ಹಿಂದೂಗಳು ಹಾಗೂ ಮುಸಲ್ಮಾನರು ಈಗ ಕೆಲವು ಕಡೆಗಳಲ್ಲಿ ಬೆಕ್ಕು ಮತ್ತು ನಾಯಿಗಳಂತೆ ಜಗಳವಾಡುತ್ತಿದ್ದಾರೆ. ಇದನ್ನು ನೋಡಿದರೆ ಅವರುಗಳು ಪ್ರಯೋಗಿಸಿದ ಅಸಹಕಾರ ಅಹಿಂಸಾತ್ಮಕವಾಗಿರಲಿಲ್ಲವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನಾನು ಇದರ ಲಕ್ಷಣಗಳನ್ನು ಬೊಂಬಾಯಿ, ಚೌರಿಚೌರ ಮತ್ತು ಇತರ ಹತ್ತಾರು ಸಣ್ಣ ಪುಟ್ಟ ಪ್ರಸಂಗಗಳಲ್ಲಿ ಕಂಡೆ. ಆಗ ನಾನು ಪ್ರಾಯಶ್ಚಿತ್ತ ಮಾಡಿಕೊಂಡೆ. ಅಷ್ಟರಮಟ್ಟಿಗೆ ಅದರ ಪ್ರಭಾವವೂ ಇತ್ತು. ಆದರೆ ಇಂತಹ ಹಿಂದೂ ಮುಸಲ್ಮಾನರ ನಡುವಿನ ಬಿಕ್ಕಟ್ಟನ್ನು ಯೋಚಿಸಿಯೂ ಇರಲಿಲ್ಲ. ಕೊಹಾತ್ ದುರಂತದ ಸುದ್ದಿ ಕೇಳಿ ಸಹಿಸಲ ಸಾಧ್ಯವಾದ ವೇದನೆಯಾಯಿತು. ಸಬರಮತಿಯಿಂದ ದೆಹಲಿಗೆ ಹೊರಡುವ ಮುನ್ನ ಸರೋಜಿನಿದೇವಿ ಬರೆದಿದ್ದ ಪತ್ರದಲ್ಲಿ ಶಾಂತಿಯ ಬಗೆಗೆ ಭಾಷಣಗಳು ಹಾಗೂ ನೀತಿ ಬೋಧೆ ಪ್ರಯೋಜನವಾಗಲಾರದೆಂದು ತಿಳಿಸಿದ್ದರು. ನಾನು ಪರಿಣಾಮಕಾರಿಯಾದ ಪರಿಹಾರವನ್ನು ಕಂಡು ಹಿಡಿಯಬೇಕು. ಆಕೆ ನನ್ನ ಮೇಲೆ ಜವಾಬ್ದಾರಿ ಹೊರಿಸಿದ್ದು ಸರಿಯೇ. ಜನರಲ್ಲಿ ಅಪಾರ ಚೈತನ್ಯವನ್ನು ಮೂಡಿಸುವುದರಲ್ಲಿ ನಾನು ಸಾಧನ ವಾಗಿರಲಿಲ್ಲವೆ? ಆ ಚೈತನ್ಯ ಸ್ವಯಂನಾಶಕಾರಿಯಾಗಿ ಪರಿಣಮಿಸಿದಲ್ಲಿ ಅದಕ್ಕೆ ಪರಿಹಾರ ವನ್ನು ನಾನೇ ಕಂಡು ಹಿಡಿಯಬೇಕು. ಪ್ರಯಾಸದಿಂದಲೇ ಅದನ್ನು ಕಂಡುಕೊಳ್ಳ ಬೇಕೆಂದು ಹೇಳಿ ನಾನು ಬರೆದೆ. ಬರಿಯ ಪ್ರಾರ್ಥನೆಯಿಂದ ಏನೂ ಆಗದು. ಅದಕ್ಕೆ ಪರಿಹಾರ ಈ ದೀರ್ಘ ನಿರಶನವೆಂದು ನನಗೆ ಆಗ ತಿಳಿದಿರಲಿಲ್ಲ. ಆದರೆ ನನ್ನ ಆತ್ಮದ ಬೇನೆಯನ್ನು ನಿವಾರಿಸಲು ಈ ನಿರಶನ ಸಾಕಷ್ಟು ದೀರ್ಘವಲ್ಲವೆಂದೂ ನನಗನ್ನಿಸುತ್ತದೆ. ನಾನು ತಪ್ಪಿದ್ದೇನೆಯೇ? ಅಸಹನೆ ತೋರಿದ್ದೇನೆಯೇ? ಪಾಪದೊಂದಿಗೆ ರಾಜಿ ಮಾಡಿಕೊಂಡಿದ್ದೇನೆಯೇ? ನಾನು ಇವೆಲ್ಲವನ್ನೂ ಮಾಡಿರಬಹುದು ಅಥವಾ ಯಾವು

ದೊಂದನ್ನೂ ಮಾಡದಿರಬಹುದು. ನಾನು ಎದುರಿಗೆ ಕಾಣುತ್ತಿರುವುದೆಷ್ಟೋ ಅಷ್ಟೇ ನನಗೆ ಗೊತ್ತಿರುವುದು. ಈಗ ಕಾದಾಡುತ್ತಿರುವ ಜನರು ನಿಜವಾದ ಅಹಿಂಸೆ ಮತ್ತು ಸತ್ಯಮಾರ್ಗವನ್ನು ಅನುಸರಿಸಿದ್ದರೆ ಎರಡೂ ಪಂಗಡಗಳ ನಡುವೆ ಇಂದು ಇರುವ ರಕ್ತಮಯ ಹೋರಾಟ ಸಂಭವಿಸುತ್ತಲೇ ಇರಲಿಲ್ಲ. ನನ್ನ ಹೊಣೆಗಾರಿಕೆ ಇಲ್ಲೆಲ್ಲೋ ಇದೆಯೆಂಬುದು ಸುಸ್ಪಷ್ಟ.

"ಅಮೆಥಿ, ಸಂಬಾಲ್ ಮತ್ತು ಗುಲ್ಬರ್ಗ ಘಟನೆಗಳು ನನ್ನ ಮನಸ್ಸಿನ ಶಾಂತಿಯನ್ನು ಕಲಕಿಬಿಟ್ಟವು. ಅಮೆಥಿ ಮತ್ತು ಸಂಬಾಲ್ ಬಗ್ಗೆ ಹಿಂದೂ ಮತ್ತು ಮುಸಲ್ಮಾನ್ ಸ್ನೇಹಿತರು ತಯಾರು ಮಾಡಿದ್ದ ವರದಿಯನ್ನು ಓದಿದ್ದೆ. ಗುಲ್ಬರ್ಗಕ್ಕೆ ಹೋಗಿದ್ದ ಹಿಂದೂ ಮತ್ತು ಮುಸಲ್ಮಾನಮಿತ್ರರ ಒಟ್ಟಿನ ತೀರ್ಪನ್ನು ತಿಳಿದುಕೊಂಡಿದ್ದೆ. ನಾನು ತೀವ್ರ ಯಾತನೆಯಿಂದ ವಿಲಿವಿಲಿ ಒದ್ದಾಡುತ್ತಿದ್ದೆ. ಆದರೂ ಯಾವ ಪರಿಹಾರವೂ ನನಗೆ ತೋರಲಿಲ್ಲ. ಒಳಗೊಳಗೆ ಹೊಗೆಯಾಡುತ್ತಿದ್ದುದು ಕೊಹಾತ್‌ನ ಸುದ್ದಿಯಿಂದ ಭಗ್ಗನೆ ಹತ್ತಿಕೊಂಡಿತು. ಏನಾದರೂ ಮಾಡಲೇ ಬೇಕಾಗಿತ್ತು. ಸ್ವಲ್ಪವೂ ಶಾಂತಿ ಇಲ್ಲದೆ ಯಾತನೆಯಿಂದ ಎರಡು ರಾತ್ರಿ ಕಳೆದೆ. ಬುಧವಾರ ಪರಿಹಾರ ತಿಳಿಯಿತು. ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಸತ್ಯಾಗ್ರಹ ಆಶ್ರಮದಲ್ಲಿ ಪ್ರಾತಃಕಾಲದ ಪ್ರಾರ್ಥನೆಯ ವೇಳೆಯಲ್ಲಿ, ದಯಾಮಯಿ ಶಿವನನ್ನು, ಅರಿತೋ ಅರಿಯದೆಯೋ ನಾವು ಮಾಡತಕ್ಕ ಪಾಪಗಳನ್ನು ಮನ್ನಿಸು, ಎಂದು ಬೇಡಿಕೊಳ್ಳುತ್ತೇವೆ. ನಾನು ತಿಳಿಯದೆ ಮಾಡಿರಬಹುದಾದ ಪಾಪಗಳನ್ನು ಕ್ಷಮಿಸು ಎಂದು ತಳಮಳಿಸುತ್ತಿರುವ ಹೃದಯ ಮಾಡುವ ಪ್ರಾರ್ಥನೆಯ ರೂಪ ಈ ಪ್ರಾಯಶ್ಚಿತ್ತ.

"ನನ್ನನ್ನು ಪ್ರೀತಿಸುವುದಾಗಿ ಹೇಳಿಕೊಳ್ಳುವ ಹಿಂದೂಗಳಿಗೂ ಮುಸಲ್ಮಾನರಿಗೂ ಇದು ಎಚ್ಚರಿಕೆಯಾಗಲಿ. ಅವರು ನಿಜವಾಗಿ ನನ್ನನ್ನು ಪ್ರೀತಿಸಿದ್ದರೆ ಮತ್ತು ಅದರ ಪ್ರೇಮಕ್ಕೆ ನಾನು ಅರ್ಹನಾಗಿದ್ದರೆ, ಅವರುಗಳು ತಮ್ಮ ಹೃದಯದಲ್ಲಿ ಪ್ರತಿಷ್ಠಿತನಾದ ದೇವರನ್ನು ನಿರಾಕರಿಸಿದ ಕಡುಪಾಪಕ್ಕಾಗಿ ನನ್ನೊಡನೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಒಬ್ಬರು ಮತ್ತೊಬ್ಬರ ಧರ್ಮವನ್ನು ದೂಷಿಸುವುದು, ಮುಂದಾಲೋಚನೆ ಇಲ್ಲದೆ ಹೇಳಿಕೆಗಳನ್ನು ಕೊಡುವುದು, ಅಸತ್ಯ ನುಡಿಯುವುದು, ಮುಗ್ಧ ಜನರ ತಲೆ ಕತ್ತರಿಸುವುದು, ದೇವ ಮಂದಿರ ಅಥವಾ ಮಸೀದಿಗಳನ್ನು ಅಪವಿತ್ರಗೊಳಿಸುವುದು— ಇವೆಲ್ಲ ಆ ದೇವರನ್ನು ನಿರಾಕರಿಸಿದಂತೆಯೇ. ನಮ್ಮ ಮಧ್ಯೆ ನಡೆಯುತ್ತಿರುವ ಕಚ್ಚಾಟವನ್ನು ಜಗತ್ತು ವೀಕ್ಷಿಸುತ್ತಿದೆ. ಇದನ್ನು ನೋಡಿ ಕೆಲವರು ಹಿಗ್ಗುತ್ತಿದ್ದಾರೆ, ಮತ್ತೆ ಕೆಲವರು ದುಃಖಿಸುತ್ತಾರೆ. ನಾವು ಸೈತಾನನ ಮಾತನ್ನು ಕೇಳುತ್ತಿದ್ದೇವೆ. ನೀವು ಯಾವುದೇ ಹೆಸರಿನಿಂದ ಕರೆಯಿರಿ, ಧರ್ಮವು ನಿಷ್ಠುರ ಸತ್ವದಿಂದ ಸಂಘಟಿತವಾಗಿದೆ. ಹಿಂದೂ ಮತ್ತು ಮುಸಲ್ಮಾನರ ಪ್ರಾಯಶ್ಚಿತ್ತದ ಸ್ವರೂಪ ನಿರಶನವಲ್ಲ. ತಪ್ಪುದಾರಿಯಿಂದ ಹಿಂದೆ ಸರಿಯುವುದೂ, ಹಿಂದೂ ಭ್ರಾತೃವಿನ ಬಗ್ಗೆ ಯಾವುದೇ ಬಗೆಯ

ದ್ವೇಷವನ್ನಿಟ್ಟುಕೊಳ್ಳದಿರುವುದೂ ಮುಸಲ್ಮಾನರಿಗೆ ನಿಜವಾದ ಪ್ರಾಯಶ್ಚಿತ್ತ. ಹಾಗೆಯೇ ಮುಸಲ್ಮಾನ ಸೋದರನ ಬಗ್ಗೆ ಹಗೆತನ ಇಟ್ಟುಕೊಳ್ಳದಿರುವುದು ಹಿಂದೂಗಳಿಗೆ ನೈಜ ಪ್ರಾಯಶ್ಚಿತ್ತ. ಹಿಂದೂ ಅಥವಾ ಮುಸಲ್ಮಾನ ತನ್ನ ಧಾರ್ಮಿಕ ತತ್ತ್ವದಲ್ಲಿ ಲವಲೇಶವನ್ನಾಗಲೀ ಬಿಟ್ಟುಕೊಡಬೇಕೆಂದು ನಾನು ಹೇಳುವುದಿಲ್ಲ. ಅದು ಧರ್ಮ ಎಂಬ ಬಗ್ಗೆ ಆತ ಖಾತರಿಯಾಗಿರಲಿ ಅಷ್ಟೆ. ಹಿಂದುವೇ ಆಗಲಿ ಮುಸಲ್ಮಾನನೇ ಆಗಲಿ ಐಹಿಕ ಲಾಭಕ್ಕಾಗಿ ಹೊಡೆದಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ನನ್ನ ಉಪವಾಸದ ಕಾರಣದಿಂದ ಯಾವುದೇ ಒಂದು ಪಂಗಡ ಧಾರ್ಮಿಕ ತತ್ತ್ವವನ್ನು ತ್ಯಾಗ ಮಾಡಿದಲ್ಲಿ ನನಗೆ ತುಂಬಾ ನೋವಾಗುತ್ತದೆ. ಭಗವಂತನಿಗೂ ನನಗೂ ಸಂಬಂಧಿಸಿದ್ದು ಈ ನನ್ನ ಉಪವಾಸ.

"ನಾನು ಸ್ನೇಹಿತರೊಂದಿಗೆ ಸಮಾಲೋಚನೆ ಮಾಡಲಿಲ್ಲ. ಬುಧವಾರ ಬಹಳ ಹೊತ್ತು ಹಕೀಂ ಸಾಹೇಬರ ಜೊತೆಯಲ್ಲೇ ಇದ್ದೆ. ಅವರೊಂದಿಗೂ ವಿಚಾರ ಮಾಡಲಿಲ್ಲ. ಮೌಲಾನಾ ಮಹಮ್ಮದಾಲಿಯವರ ಮನೆಯಲ್ಲೇ ಇದ್ದು ಅವರ ಆತಿಥ್ಯದ ಸುಯೋಗದ ಲಾಭ ಪಡೆಯುತ್ತಿದ್ದರೂ ಅವರೊಂದಿಗೆ ಸಹಾ ಸಮಾಲೋಚನೆ ಮಾಡಲಿಲ್ಲ. ಮನುಷ್ಯ ತನ್ನ ನಿಯಾಮಕನೊಂದಿಗೆ ಹೊಂದಿಕೊಳ್ಳಬೇಕಾದಾಗ ಮೂರನೆಯವರೊಂದಿಗೆ ಸಮಾಲೋಚಿಸುವುದಿಲ್ಲ. ಹಾಗೆ ಮಾಡಲೂ ಕೂಡದು. ಆ ವಿಷಯದಲ್ಲಿ ತನಗೆ ಸಂದೇಹವಿದ್ದರೆ ಕೇಳಬೇಕಾಗುತ್ತದೆ, ನಿಜ. ಆದರೆ ನಾನು ಕೈಗೊಂಡ ಕ್ರಮದ ಆವಶ್ಯಕತೆ ಬಗ್ಗೆ ಸಂದೇಹವೇ ಇರಲಿಲ್ಲ. ನಾನು ಉಪವಾಸ ಮಾಡದಂತೆ ತಡೆಯುವುದು ತಮ್ಮ ಕರ್ತವ್ಯವೆಂದು ಸ್ನೇಹಿತರು ಭಾವಿಸುತ್ತಾರೆ. ಅಂತಹ ವಿಷಯಗಳು ಸಮಾಲೋಚನೆಗಾಗಲೀ ವಿವಾದಕ್ಕಾಗಲೀ ಸಂಬಂಧಿಸಿದ್ದಲ್ಲ. ಅವು ಭಾವನೆಗೆ ಸಂಬಂಧಿಸಿರುತ್ತವೆ. ರಾಮ ತನ್ನ ಹೊಣೆಯನ್ನು ಪೂರೈಸಲು ನಿಶ್ಚಯಿಸಿದ ಮೇಲೆ ಅವನು ತನ್ನ ತಾಯಿಯ ಗೋಳುಕರೆಯಿಂದಾಗಲೀ ಗುರುವರ್ಯರ ಉಪದೇಶದಿಂದಾಗಲೀ ಜನತೆಯ ಒತ್ತಾಯದಿಂದಾಗಲೀ ತನ್ನ ನಿರ್ಧಾರದಿಂದ ವಿಚಲಿತನಾಗಲಿಲ್ಲ. ತನ್ನ ನಿರ್ಧಾರವನ್ನು ಕಾರ್ಯಗತ ಮಾಡಿದರೆ ತನ್ನ ತಂದೆಯ ಸಾವು ಖಚಿತವೆಂದು ಗೊತ್ತಿದ್ದರೂ ಅವನು ವಿಚಲಿತನಾಗಲಿಲ್ಲ. ಇವೆಲ್ಲವೂ ಕ್ಷಣಿಕವಾದುವು. ಪ್ರತಿಯೊಂದು ಬಗೆಯ ಪ್ರಲೋಭನದ ವಿರುದ್ಧ ರಾಮ ತನ್ನ ಹೃದಯವನ್ನು ಗಟ್ಟಿಮಾಡಿಕೊಳ್ಳದೆ ಇದ್ದಿದ್ದರೆ ಹಿಂದೂಧರ್ಮ ಅಷ್ಟಾಗಿ ಧರ್ಮ ಎಂದೆನಿಸುತ್ತಿರಲಿಲ್ಲ. ತಾನು ಮಾನವತೆಗೆ ಸೇವೆ ಸಲ್ಲಿಸಬೇಕಾದರೆ ಹಾಗೂ ಮುಂದಿನ ಪೀಳಿಗೆಗಳಿಗೆ ಮಾದರಿಯಾಗಬೇಕಾದರೆ ಎಲ್ಲ ಸಂಕಷ್ಟಗಳನ್ನೂ ದಾಟಿಕೊಂಡು ಹೋಗಬೇಕೆಂದು ಅವನಿಗೆ ತಿಳಿದಿತ್ತು.

"ಮುಸಲ್ಮಾನರೊಬ್ಬರ ಮನೆಯಲ್ಲಿದ್ದುಕೊಂಡು ನಿರಶನ ಮಾಡುವುದು ನನಗೆ ಸರಿಯೆ? ಹೌದು, ಸರಿ. ಯಾವೊಬ್ಬ ಮನುಷ್ಯನ ವಿರುದ್ಧ ದ್ವೇಷದಿಂದಾಗಿ ಈ ಉಪವಾಸ ಆರಂಭವಾಗಿಲ್ಲ. ನಾನು ಮುಸಲ್ಮಾನರೊಬ್ಬರ ಮನೆಯಲ್ಲಿರುವುದರಿಂದ ಅಂತಹ

ಸುದ್ದಿ ಕೇಳಿದೆ. ನನ್ನನ್ನು ನಾನೇ ಪ್ರಶ್ನಿಸಿಕೊಂಡೆ. 'ಈಗ ನೀನು ಏನು ಮಾಡುಂತ್ತೀಯೆ?' ಎಂದು. ನಾನು ಅದಮ್ಯ ಆಶಾವಾದಿ. ನನ್ನ ಆಶಾವಾದ ಸ್ಪಷ್ಟ ಸಂಗತಿಗಳ ಆಧಾರದ ಮೇಲೆ ನಿಂತಿರತಕ್ಕದ್ದು. ನೀವೂ ಅದಮ್ಯ ಆಶಾವಾದಿಗಳೇ ಆಗಿದ್ದೀರಿ. ಆದರೆ ನೀವು ಎಷ್ಟೋ ವೇಳೆ ಅದನ್ನು ಮರಳಿನ ಮೇಲೆ ನಿರ್ಮಿಸಿರುತ್ತೀರಿ. ಇಂದು ಯಾರೂ ನಿಮಗೆ ಕಿವಿಗೊಡುವುದಿಲ್ಲ. ಗುಜರಾತಿನ ವಿಸಾ ನಗರದಲ್ಲಿ ಜನರು ಅಬ್ಬಾಸ್ ತ್ಯಾಬ್‌ಜಿ ಮತ್ತು ಮಹದೇವರನ್ನು ಅನಾದರಣೆ ಮಾಡಿದರು. ಅಹಮ್ಮದಾಬಾದಿನಲ್ಲಿ ಏಳುತ್ತಿದ್ದ ಚಂಡಮಾರುತವನ್ನು ಆರಂಭದಲ್ಲಿ ತಡೆಯಲಾಯಿತು. ನಾನು ಗುಜರಾತನ್ನು ಬಿಟ್ಟಾಗ ಉಮ್‌ರೆತ್‌ನಲ್ಲಿ ತಂಟೆ ಆರಂಭವಾಗುವುದರಲ್ಲಿತ್ತು. ಇವೆಲ್ಲಕ್ಕೂ ನಾನು ನಿಷ್ಕ್ರಿಯ ಸಾಕ್ಷಿಯಾಗಿದ್ದೆನೆಂದರೆ ಅದು ನನ್ನ ಅಸಮರ್ಥತೆಯ ಪರಿಮಾಣವನ್ನು ಸೂಚಿಸುತ್ತದೆ. ನೂರಾರು ಸಹೋದರಿಯರು ಈಗಲೂ ನನ್ನಲ್ಲಿ ಪ್ರೇಮ ಮತ್ತು ವಿಶ್ವಾಸ ಇಟ್ಟಿದ್ದಾರೆ. ಅವರೆಲ್ಲರೂ ಈಗ ತೀವ್ರವಾಗಿ ಭಯಗ್ರಸ್ತರಾಗಿದ್ದಾರೆ. ಅವರಿಗೆ ನನ್ನದೇ ಉದಾಹರಣೆ ಮೂಲಕ ಸಾಯುವ ಮಾರ್ಗವನ್ನು ತೋರಿಸಬಯಸುತ್ತೇನೆ.

"ಹೋರಾಟವನ್ನು ನಾನು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. ಆದರೆ ಅದು ಎರಡೂ ಪಂಗಡಗಳ ಮಧ್ಯೆ ಧೀರ ಹೋರಾಟವಾಗಬೇಕು; ಮತ್ತು ಆ ಹೋರಾಟ ನ್ಯಾಯ ಸಮ್ಮತವೂ ಗೌರವಯುತವೂ ಆಗಿರಬೇಕು, ಆದರೆ ಇಂದಿನದು ಶುದ್ಧಾಂಗ ಹೇಡಿತನದ ಕತೆ. ಅವರು ಕಲ್ಲೆಸೆದು ಓಡಿಹೋಗುತ್ತಾರೆ. ಕೊಲೆಮಾಡಿ ಪರಾರಿಯಾಗುತ್ತಾರೆ. ನ್ಯಾಯಾಲಯಕ್ಕೆ ಹೋಗಿ ಸುಳ್ಳು ಸಾಕ್ಷಿಗಳನ್ನು ಮುಂದಿಟ್ಟುಕೊಂಡು ತಪ್ಪು ಸಾಕ್ಷ್ಯ ನೀಡುತ್ತಾರೆ. ಎಂತಹ ಶೋಚನೀಯ ಸಂಗತಿ? ನಾನು ಅವರುಗಳನ್ನು ಧೈರ್ಯಶಾಲಿಗಳನ್ನಾಗಿ ಮಾಡುವ ಬಗೆ ಹೇಗೆ? ನೀವು ನಿಮ್ಮ ಕೈಲಾದಷ್ಟನ್ನೂ ಮಾಡುತ್ತಿದ್ದೀರಿ. ನಾನು ನನ್ನ ಕೈಲಾದಮಟ್ಟಿಗೂ ಪ್ರಯತ್ನಿಸಬೇಕು. ಅವರುಗಳ ಮೇಲೆ ನನ್ನ ಪ್ರತಿಕ್ರಿಯೆ ಪರಿಣಾಮಕಾರಿಯಾಗುವಂತೆ ನನ್ನ ಶಕ್ತಿಯನ್ನು ಪುನಃ ಪಡೆದುಕೊಳ್ಳಬೇಕು".

ಶೌಕತ್ ಆಲಿ ಹೇಳಿದರು: "ಇಲ್ಲ, ನೀವು ವಿಫಲರಾಗಿಲ್ಲ. ಅವರು ನಿಮ್ಮ ಮಾತು ಕೇಳಿದರು; ಕೇಳುತ್ತಲೂ ಇದ್ದರು. ನಿಮ್ಮ ಗೈರುಹಾಜರಿಯಲ್ಲಿ ಅವರಿಗೆ ಬೇರೆ ಇತರ ಸಲಹೆಗಾರರಿದ್ದರು. ಅವರ ಸಲಹೆ ಕೇಳಿ ಅಪಮಾರ್ಗಕ್ಕಿಳಿದರು. ಅವರ ಮಾರ್ಗ ತಪ್ಪೆಂಬುದನ್ನು ಕಂಡುಕೊಳ್ಳುತ್ತಾರೆ. ಜನರ ಮನಸ್ಸಿನಲ್ಲಿ ತುಂಬಿರುವ ವಿಷವನ್ನು ಕಡಿಮೆ ಮಾಡಲು ನೀವು ತುಂಬಾ ಶ್ರಮಿಸಿದ್ದೀರಿ. ಈ ಘರ್ಷಣೆಗಳ ಬಗ್ಗೆ ನಾನು ಅಷ್ಟಾಗಿ ಚಿಂತಿಸುವುದೇ ಇಲ್ಲ. ಅವರಲ್ಲಿಗೆ ಹೋಗಿ ನಾನು ಹೇಳೇನು. 'ಪಿಶಾಚಿಗಳಿರಾ, ನಿಮಗೆ ತೃಪ್ತಿಯಾಗುವವರೆಗೂ ಈ ಆಟ ಆಡಿರಿ. ಭಗವಂತ ಇದ್ದೇ ಇರುತ್ತಾನೆ. ನೀವು ಒಬ್ಬರನ್ನೊಬ್ಬರು ಕೊಂದು ಹಾಕಬಹುದು. ಭಗವಂತನನ್ನು ಕೊಲ್ಲಲಾರಿರಿ'- ದೇವರ ಹಾದಿಯಲ್ಲಿ ಅಡ್ಡ ಬರಬೇಡಿ. ನೀವು ಅವನೊಂದಿಗೆ ಹೋರಾಡುತ್ತಿದ್ದೀರಿ. ಅವನ ದಾರಿ ಅವನಿಗೆ ಬಿಡಿ".

“ನಾನು ಭಗವಂತನ ಜೊತೆ ಹೋರಾಡುತ್ತಿದ್ದೇನೆ!” ಚಕಿತರಾಗಿ ಹೇಳಿದರು ಗಾಂಧೀ. “ನನ್ನಲ್ಲಿ ಗರ್ವ ಅಥವಾ ಪ್ರತಿಭಟನಾ ಶಕ್ತಿ ಏನೂ ಉಳಿದಿಲ್ಲ. ಅಯ್ಯಾ ಈ ನಿರಶನ ಅನೇಕ ದಿನಗಳ ನಿರಂತರ ಪ್ರಾರ್ಥನೆಯ ಫಲ. ನಾನು ಮಧ್ಯರಾತ್ರಿ ಮೂರು ಗಂಟೆಗೆ ನಿದ್ರೆಯಿಂದ ಎದ್ದು, ಏನು ಮಾಡಬೇಕೆಂದು ದೇವರನ್ನು ಕೇಳಿದೆ. ಸೆಪ್ಟೆಂಬರ್ ೧೭ರಂದು ಮಿಂಚಿನಂತೆ ಬಂತು ಉತ್ತರ. ನಾನು ತಪ್ಪು ಮಾಡಿದ್ದರೆ ದೇವರು ಕ್ಷಮಿಸುತ್ತಾನೆ. ನಾನು ಮಾಡಿರುವುದೆಲ್ಲ—ಈಗ ಮಾಡುತ್ತಿರುವುದೆಲ್ಲ, ದೈವ ಭೀರುತ್ವ ಭಾವನೆಯಿಂದ—ಅದೂ ದೇವರಲ್ಲಿ ಭಯಭಕ್ತಿ ಇಟ್ಟಿರುವ ಮುಸಲ್ಮಾನ ರೊಬ್ಬರ ಮನೆಯಲ್ಲಿ. ತ್ಯಾಗಕ್ಕೆ ಸಿದ್ಧನಾಗಿರುವವನು ಮಾತ್ರ ದೇವರ ಪ್ರಾರ್ಥನೆ ಮಾಡಬಲ್ಲನೆಂದು ನನ್ನ ಧರ್ಮ ಸಾರುತ್ತದೆ. ನಿರಶನ ಮತ್ತು ಪ್ರಾರ್ಥನೆ ನನ್ನ ಧರ್ಮದ ಸಾಮಾನ್ಯ ಕಟ್ಟಳೆಗಳು. ಇಸ್ಲಾಂ ಧರ್ಮದಲ್ಲಿ ಕೂಡ ಇದೇ ರೀತಿಯ ಪ್ರಾಯಶ್ಚಿತ್ತ ಇದೆಯೆಂದು ತಿಳಿದಿದ್ದೇನೆ. ಪ್ರವಾದಿಯು ಆಗಾಗ ನಿರಶನ ಮತ್ತು ಪ್ರಾರ್ಥನೆ ಮಾಡುತ್ತಿದ್ದರೆಂದೂ ಇತರರು ಆ ಬಗ್ಗೆ ಅವರನ್ನು ಅನುಸರಿಸಬಾರದೆಂದು ಕಟ್ಟಪ್ಪಣೆ ಮಾಡಿದ್ದರೆಂದೂ ನಾನು ಪ್ರವಾದಿಯ ಜೀವನ ಚರಿತ್ರೆಯಲ್ಲಿ ಓದಿದ್ದೇನೆ. ತಾವು ಮಾಡುತ್ತಿದ್ದುದನ್ನು ಬೇರೆಯವರೂ ಮಾಡಲು ಏಕೆ ಅವಕಾಶ ಕೊಡುವುದಿಲ್ಲ ವೆಂದು ಯಾರೋ ಕೇಳಿದರಂತೆ: ‘ನಾನು ದೈವೀ ಆಹಾರದಿಂದ ಜೀವಿಸುತ್ತೇನೆ’ ಎಂದರಂತೆ ಪ್ರವಾದಿ. ಅವರು ನಿರಶನ ಮತ್ತು ಪ್ರಾರ್ಥನೆಯಿಂದಲೇ ಅನೇಕ ಸಾಧನೆಗಳನ್ನು ಸಾಧಿಸಿದರು. ದೇವರಲ್ಲಿ ಎಂದಿಗೂ ಅಳಿಯದ ಭಕ್ತಿ ಇಟ್ಟುಕೊಂಡಿರುವವನು ಮಾತ್ರ ನಿರಶನ ಮಾಡಬಲ್ಲನೆಂಬುದನ್ನು ನಾನು ಅವರಿಂದ ತಿಳಿದೆ. ಪ್ರವಾದಿಯು ದಿವ್ಯ ದರ್ಶನ ಪಡೆದದ್ದು ಆರಾಮವಾಗಿ ಸುಖಜೀವನ ನಡೆಸುತ್ತಿದ್ದಾಗಲ್ಲ. ಅವರು ನಿರಶನ ಮಾಡಿದರು, ಪ್ರಾರ್ಥನೆ ಮಾಡಿದರು, ಒಟ್ಟಿಗೆ ಅನೇಕ ರಾತ್ರಿಗಳು ಎಚ್ಚರವಾಗಿಯೇ ಇದ್ದರು, ದಿವ್ಯದರ್ಶನ ಪಡೆಯುವಾಗಲಂತೂ ರಾತ್ರಿಯ ಎಲ್ಲ ಜಾವಗಳಲ್ಲೂ ನಿಂತೇ ಇರುತ್ತಿದ್ದರು. ಈ ಘಳಿಗೆಯಲ್ಲಿ ಸಹ ಪ್ರವಾದಿಯು ನಿರಶನ ಮಾಡುತ್ತಾ ಪ್ರಾರ್ಥನೆ ಮಾಡುತ್ತಿರುವ ಚಿತ್ರ ನನ್ನ ಕಣ್ಣಮುಂದೆ ನಿಲ್ಲುತ್ತದೆ. ಪ್ರಿಯ ಶೌಕತ್, ನೀವು ಮತ್ತು ನಿಮ್ಮ ಸಹೋದರ ನನಗೆ ನೀಡಿದ್ದ ವಾಗ್ದಾನವನ್ನು ಮುರಿದಿರೆಂದು ಜನರು ಆರೋಪಿ ಸುವುದನ್ನು ನಾನು ತಡೆದುಕೊಳ್ಳಲಾರೆ. ಅಂತಹ ಆರೋಪಣೆಯನ್ನು ನಾನು ಯೋಚಿ ಸಲೂ ಸಾಧ್ಯವಿಲ್ಲ. ನಾನು ಅದಕ್ಕೋಸ್ಕರ ಸಾಯಬೇಕು. ನನ್ನ ಶುದ್ಧೀಕರಣಕ್ಕಾಗಿ ಹಾಗೂ ನನ್ನ ಬಲ ಸಂವರ್ಧನೆಗಾಗಿ ಈ ಉಪವಾಸ. ನನ್ನ ಬಗ್ಗೆ ತಪ್ಪು ತಿಳಿದುಕೊಳ್ಳ ಬೇಡಿ. ನಾನೊಬ್ಬ ಮುಸಲ್ಮಾನನೆಂದೇ ಭಾವಿಸಿಕೊಂಡು ನಿಮ್ಮೊಡನೆ ಮಾತನಾಡು ತ್ತಿದ್ದೇನೆ. ಇಸ್ಲಾಂ ಬಗ್ಗೆ ನೀವಿಟ್ಟಿರುವ ಗೌರವವನ್ನೇ ನಾನೂ ಬೆಳಸಿಕೊಂಡಿದ್ದೇನೆ. ನಾನು ಈ ನಿರಶನವನ್ನೂ ಪ್ರಾರ್ಥನೆಯನ್ನೂ ಮುಗಿಸಿದ ಮೇಲೆ, ಇಸ್ಲಾಂ ಬಗ್ಗೆ ನಾನಿಟ್ಟಿರುವ ಗೌರವದ ನಿಮಿತ್ತ ಎರಡೂ ಪಂಗಡಗಳಿಗೆ ನಾನು ಮನವಿ ಮಾಡಿಕೊಳ್ಳಲು ಇನ್ನೂ ಹೆಚ್ಚು ಶಕ್ತನಾಗಿರುತ್ತೇನೆ. ಶರೀರವನ್ನು ದಂಡಿಸಿದಂತೆಲ್ಲ ಅಷ್ಟೇ ಪ್ರಮಾಣದಲ್ಲಿ

ಆತ್ಮಶಕ್ತಿ ವರ್ಧಿಸುವುದೆಂದು ನನ್ನ ದೃಢ ನಂಬಿಕೆ. ಪುಂಡುತನದ ವಿರುದ್ಧ ನಾವು ಹೋರಾಡಬೇಕು. ಹಾಗೆ ಮಾಡಲು ನಮಗೆ ಸಾಕಷ್ಟು ಆತ್ಮಶಕ್ತಿ ಇಲ್ಲ".

ಕೋಮುವಾರು ಐಕ್ಯತೆಯನ್ನು ಮೂಡಿಸಲು ವಿಧಿವಿಧಾನಗಳನ್ನು ಕಂಡು ಹಿಡಿಯುವುದಕ್ಕಾಗಿ ದೆಹಲಿಗೆ ಸ್ನೇಹಿತರೂ ಅಭಿಮಾನಿಗಳೂ ಬಂದು ಸೇರಿದರು. ಮೋತಿಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ಐಕ್ಯತಾ ಸಮ್ಮೇಳನ ಸೆಪ್ಟೆಂಬರ್ ೨೬ ರಂದು ಆರಂಭವಾಯಿತು. ಸಮ್ಮೇಳನದಲ್ಲಿ ಸೇರಿದ್ದ ಮುನ್ನೂರು ಮಂದಿ ಜನರು ರಾಷ್ಟ್ರದ ವಿವಿಧ ವಿಚಾರಧಾರೆಗಳನ್ನು ಪ್ರತಿನಿಧಿಸುತ್ತಿದ್ದರು. ಸಮ್ಮೇಳನಕ್ಕೆ ಆಗಮಿಸಿದ್ದ ಪ್ರಮುಖರಲ್ಲಿ ಕಲ್ಕತ್ತಾದ ಬಿಷಪ್ ವೆಸ್ಟ್‌ಕಾಟ್, ಶ್ರೀಮತಿ ಬೆಸೆಂಟ್, ಶೌಕತ್ ಆಲಿ, ಅಜ್ಮಲ್ ಖಾನ್, ಸ್ವಾಮಿ ಶ್ರದ್ಧಾನಂದ, ಮಾಳವೀಯ ಮತ್ತು ಆರ್ಥರ್ ಮೂರ್ ಮೊದಲಾದವರಿದ್ದರು.

ಸ್ವಾಗತ ಸಮಿತಿ ಅಧ್ಯಕ್ಷ ಮಹಮ್ಮದಾಲಿಯವರು ಗಾಂಧಿಯವರಿಗೆ ದೀರ್ಘ ಆಯುಸ್ಸನ್ನು ಕೋರುತ್ತಾ ಸಮ್ಮೇಳನದ ಕಾರ್ಯಕಲಾಪಗಳನ್ನು ಆರಂಭಿಸಿದರು. ಅಲ್ಲಿ ಹಾಜರಿದ್ದ ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮಕ್ಕನುಗುಣವಾಗಿ ಪ್ರಾರ್ಥನೆ ಸಲ್ಲಿಸಿದರು. ಮೊದಲನೆಯ ದಿನ ಈ ಕೆಳಕಂಡ ನಿರ್ಣಯವನ್ನು ಅಂಗೀಕರಿಸಲಾಯಿತು.

"ಮಹಾತ್ಮ ಗಾಂಧಿ ಕೈಗೊಂಡಿರುವ ನಿರಶನಕ್ಕಾಗಿ ಈ ಸಮ್ಮೇಳನವು ತನ್ನ ತೀವ್ರ ದುಃಖವನ್ನೂ ಆತಂಕವನ್ನೂ ವ್ಯಕ್ತಪಡಿಸುತ್ತದೆ.

"ಆತ್ಮ ಸಾಕ್ಷಿ ಮತ್ತು ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ ಇರಬೇಕೆಂಬುದು ಈ ಸಮ್ಮೇಳನದ ಸ್ಪಷ್ಟ ಅಭಿಪ್ರಾಯ. ಯಾವುದೇ ಧರ್ಮಕ್ಕೆ ಸಂಬಂಧಿಸಿದ ಪೂಜಾ ಮಂದಿರಗಳನ್ನು ಅಪವಿತ್ರಗೊಳಿಸುವುದು ಖಂಡನೀಯ. ಅಂತೆಯೇ ಹೊಸಧರ್ಮವನ್ನು ಒಪ್ಪಿಕೊಳ್ಳುವ ಅಥವಾ ಹಳೆಯ ಧರ್ಮವನ್ನು ಮತ್ತೆ ಸ್ವೀಕರಿಸುವ ಜನರನ್ನು ಶಿಕ್ಷೆಗೆ ಒಳಪಡಿಸುವುದಾಗಲೀ ಅವರಿಗೆ ಕಿರುಕುಳ ಕೊಡುವುದಾಗಲಿ ಖಂಡನಾರ್ಹ. ಜನರನ್ನು ಬಲವಂತವಾಗಿ ಧರ್ಮಾಂತರಗೊಳಿಸುವ ಪ್ರಯತ್ನಗಳನ್ನೂ ಅಥವಾ ತಮ್ಮ ಧರ್ಮದ ಕಟ್ಟಳೆಗಳನ್ನು ಬೇರೆಯವರ ಮೇಲೆ ಬಲಾತ್ಕಾರವಾಗಿ ಹೇರುವುದನ್ನೂ ಈ ಸಮ್ಮೇಳನ ಖಂಡಿಸುತ್ತದೆ.

"ಈ ತತ್ವಗಳನ್ನು ಕಾರ್ಯಗತಮಾಡಲು ಸರ್ವ ಪ್ರಯತ್ನಗಳನ್ನು ಮಾಡು ವುದಾಗಿ ಈ ಸಮ್ಮೇಳನದ ಸದಸ್ಯರೆಲ್ಲರೂ ಸಂಕಲ್ಪ ಮಾಡುತ್ತಾರೆ. ಎಂತಹದೇ ಪ್ರಚೋದನೆ ಇರಲಿ, ಈ ತತ್ತ್ವಗಳನ್ನು ಮೀರಿದಲ್ಲಿ ಅದನ್ನು ಖಂಡಿಸುತ್ತೇವೆ, ಎಂದು ಮಹಾತ್ಮ ಗಾಂಧಿಯವರಿಗೆ ಭರವಸೆ ನೀಡುತ್ತೇವೆ.

"ಮೇಲ್ಕಂಡ ಬಗೆಯಲ್ಲಿ ಸಮ್ಮೇಳನವು ಮಹಾತ್ಮಾಗಾಂಧಿಯವರಿಗೆ ನೀಡಿರುವ ಭರವಸೆಯನ್ನು ಮುಖತಃ ಅವರಿಗೆ ತಿಳಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡುತ್ತದೆ, ಮತ್ತು ಮಹಾತ್ಮಾ ಗಾಂಧಿಯವರು ಈ ತಕ್ಷಣ ಉಪವಾಸವನ್ನು ಮುಕ್ತಾಯ

ಗೊಳಿಸಿ ದೇಶದಲ್ಲಿ ಹಬ್ಬುತ್ತಿರುವ ದುಷ್ಕೃತ್ಯಗಳನ್ನು ತಡೆಯಲು ಶೀಘ್ರ ಮಾರ್ಗ ವನ್ನು ಕಂಡು ಹಿಡಿಯಲು ಸಮ್ಮೇಳನಕ್ಕೆ ಅವರು ಸಹಕಾರ, ಸಲಹೆ ಮತ್ತು ಮಾರ್ಗ ದರ್ಶನ ನೀಡಬೇಕೆಂಬ ಒಟ್ಟಿನ ಅಭಿಲಾಷೆಯನ್ನು ಮಹಾತ್ಮಾ ಗಾಂಧಿಯವರಲ್ಲಿ ಬಿನ್ನ ವಿಸಿಕೊಳ್ಳಲು ಅಧ್ಯಕ್ಷರಿಗೆ ಅಧಿಕಾರ ನೀಡುತ್ತದೆ."

ಮೋತಿಲಾಲ್ ನೆಹರೂರವರಿಗೆ ಗಾಂಧಿಯವರ ಪ್ರತ್ಯುತ್ತರ ಮಾರನೆ ದಿನ ಬಂತು.

"ಸಭೆಯ ಅಭಿಲಾಷೆಯನ್ನು ನಾನು ಈಡೇರಿಸಲು ಸಾಧ್ಯವಾಗಿದ್ದಿದ್ದರೆ ನಾನು ಸಂತೋಷವಾಗಿ ಈಡೇರಿಸುತ್ತಿದ್ದೆನೆಂದು ಸಭೆಗೆ ಖಚಿತವಾಗಿ ತಿಳಿಸಿ. ನಾನು ನನ್ನನ್ನೇ ಮತ್ತೆ ಮತ್ತೆ ಪರೀಕ್ಷೆ ಮಾಡಿಕೊಂಡಿದ್ದೇನೆ; ಆದರೆ ನಿರಶನವನ್ನು ನಿಲ್ಲಿಸಲು ಸಾಧ್ಯ ವಾಗುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಒಮ್ಮೆ ಮಾಡಿದ ವಾಗ್ದಾನವನ್ನಾಗಲೀ ಒಮ್ಮೆ ಕೈಗೊಂಡ ವ್ರತವನ್ನಾಗಲೀ ಮುರಿಯಲಾಗದೆಂದು ನನ್ನ ಧರ್ಮ ಬೋಧಿಸುತ್ತದೆ. ಅದೇ ಆಧಾರದ ಮೇಲೆ ಕಳೆದ ನಲವತ್ತು ವರ್ಷಗಳಿಂದಲೂ ನನ್ನ ಜೀವನ ನಡೆದು ಬಂದಿದೆಯೆಂಬ ಸಂಗತಿ ನಿಮಗೆ ಗೊತ್ತಿದೆ."

"ನಿರಶನದ ಕಾರಣಗಳು ನಾನು ಈ ಕಾಗದಲ್ಲಿ ವಿವರಿಸಲಾಗದಷ್ಟು ಆಳವಾಗಿವೆ. ಈ ನಿರಶನದ ಮೂಲಕ ನನ್ನ ನಂಬಿಕೆಯನ್ನು ಅಭಿವ್ಯಕ್ತಗೊಳಿಸುತ್ತಿರುವುದು ಒಂದು ಮುಖ್ಯ ವಿಚಾರ. ಅಸಹಕಾರ ಯಾವೊಬ್ಬ ಆಂಗ್ಲೇಯನ ಬಗ್ಗೆ ಕ್ರೋಧ ಅಥವಾ ದ್ವೇಷದಿಂದ ಉತ್ಪನ್ನವಾದುದಲ್ಲ. ಆದರೆ ಅಹಿಂಸಾತ್ಮಕ ಗುಣದಿಂದಾಗಿ ಆಂಗ್ಲೇಯರನ್ನು ಪ್ರೇಮದಿಂದ ಗೆಲ್ಲುವ ಉದ್ದೇಶವಿತ್ತು. ಆ ಉದ್ದೇಶ ನೆರವೇರಲಿಲ್ಲ; ಬದಲಾಗಿ ಅದರಿಂದ ಉತ್ಪನ್ನವಾದ ಶಕ್ತಿಯು ನಮ್ಮ ನಮ್ಮಲ್ಲೇ ಪರಸ್ಪರ ದ್ವೇಷವನ್ನು ಉಂಟು ಮಾಡಿದೆ. ಈ ಸಂಗತಿಯ ಅರಿವು ನನ್ನನ್ನು ಕುಗ್ಗಿಸಿತು; ಹಾಗೂ ಮಾರ್ಪಡಿಸಲಾಗದ ಈ ಪ್ರಾಯಶ್ಚಿತ್ತದ ಕ್ರಮವನ್ನು ನನ್ನ ಮೇಲೆ ಹೇರಿತು.

"ಈ ನಿರಶನ ಭಗವಂತನಿಗೂ ನನಗೂ ಸಂಬಂಧಿಸಿದ ವಿಷಯ. ನಾನು ಉಪವಾಸವನ್ನು ಮುಗಿಸದೆ ಇರುವುದಕ್ಕೆ ಕ್ಷಮಿಸಬೇಕೆಂದು ನಿಮ್ಮನ್ನು ಕೇಳಿಕೊಳ್ಳು ತ್ತೇನೆ; ಅಷ್ಟೇ ಅಲ್ಲ. ನೀವು ನನಗೆ ಆ ಬಗ್ಗೆ ಪ್ರೋತ್ಸಾಹ ನೀಡಿ ಅದು ಯಶಸ್ವಿಯಾಗಿ ಮುಕ್ತಾಯವಾಗುವಂತೆ ಪ್ರಾರ್ಥನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

"ನಾನು ಸಾಯುವುದಕ್ಕಾಗಿ ಈ ನಿರಶನ ಕೈಗೊಂಡಿಲ್ಲ. ದೇಶ ಸೇವೆಗಾಗಿ ಉತ್ತಮ ಹಾಗೂ ಇನ್ನೂ ಹೆಚ್ಚು ಪರಿಶುದ್ಧವಾದ ಬಾಳನ್ನು ಬಾಳುವುದಕ್ಕಾಗಿ ಇದನ್ನು ಕೈಗೊಂಡಿದ್ದೇನೆ. ಆದುದರಿಂದ ಒಂದು ಪಕ್ಷ ಆಪತ್ತಿನ ಸ್ಥಿತಿ ಉಂಟಾದಲ್ಲಿ (ಮನುಷ್ಯ ಸಂಕಲ್ಪದಲ್ಲಿ ಅಂತಹ ಸ್ಥಿತಿ ಸಂಭವಿಸಲಾರದು) ಮೃತ್ಯು ಮತ್ತು ಆಹಾರ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾದರೆ ಆಗ ಉಪವಾಸವನ್ನು ಖಂಡಿತ ಮುಕ್ತಾಯ ಮಾಡುತ್ತೇನೆ. ಆದರೆ ನನ್ನ ಕಡೆ ತುಂಬಾ ನಿಗಾಕೊಟ್ಟು ಜಾಗರೂಕತೆಯಿಂದ ನನ್ನನ್ನು

ನೋಡಿಕೊಳ್ಳುತ್ತಿರುವ ಡಾ. ಅನ್ಸಾರಿ ಮತ್ತು ಡಾ. ಅಬ್ದುಲ್ ರಹಮಾನರುಗಳ ಪ್ರಕಾರ ನಾನು ತುಂಬಾ ಲವಲವಿಕೆಯಿಂದ ಇದ್ದೇನೆ.

"ನಿರ್ಣಯದಲ್ಲಿ ಸೂಚ್ಯವಾಗಿರುವ ವೈಯಕ್ತಿಕ ಪ್ರೇಮವನ್ನೆಲ್ಲ ಸಮ್ಮೇಳನದ ಮೂಲಧ್ಯೇಯವಾದ ಐಕ್ಯತೆಯ ಸಿದ್ಧಿಗಾಗಿ ಸ್ಪಷ್ಟ ಶ್ರದ್ಧಾಯುತ ಹಾಗೂ ನಿಜ ರೂಪದ ದುಡಿಮೆಯತ್ತ ತಿರುಗಿಸಬೇಕೆಂದು ಗೌರವಪೂರ್ವಕವಾಗಿ ಒತ್ತಾಯ ಪಡಿಸುತ್ತೇನೆ".

ಐಕ್ಯತಾ ಸಮ್ಮೇಳನವು ಹಲವು ದಿನಗಳ ಕಾಲ ನಡೆದು ಅನೇಕ ನಿರ್ಣಯಗಳನ್ನು ಅಂಗೀಕರಿಸಿತು. ಸಮ್ಮೇಳನದ ವಾತಾವರಣ ಅಷ್ಟೇನೂ ತೃಪ್ತಿದಾಯಕವಾಗಿರಲಿಲ್ಲ. ಯಾವುದೇ ನಿಷ್ಕೃಷ್ಟ ಸಾಧನೆಯೂ ಇಲ್ಲದೆ ಸಭೆ ಮುಕ್ತಾಯವಾಗಿ ಬಿಡುವಂತೆ ಕಾಣುತ್ತಿತ್ತು. ಪರಸ್ಪರ ವಿರೋಧವಾಗಿದ್ದ ಪಂಗಡಗಳು ಷರತ್ತುಗಳ ಮೇಲೆ ಪ್ರತಿ ಷರತ್ತುಗಳನ್ನು ಮುಂಡಿಸಿದ್ದುವು.

ಸಮ್ಮೇಳನದಲ್ಲಿ ಗಂಭೀರ ಭಾವನೆಯನ್ನು ಮೂಡಿಸಲು ಪ್ರಯತ್ನಿಸಿದವರಲ್ಲಿ ಮೌಲಾನಾ ಅಜಾದರೂ ಒಬ್ಬರು. ನಿರಾಕರಿಸಲಾಗದ ಅತಿರೇಕಗಳು ಸಂಭವಿಸಿದ್ದಲ್ಲಿ ಅದನ್ನು ತೇಲಿಸಿ ಬಿಡಕೂಡದೆಂದೂ ಅನುಕೂಲ ಸಿಂಧು ನೀತಿಯಿಂದ ಯಾವುದೇ ಪಕ್ಷದ ತರ್ಕಶೂನ್ಯ ಬೇಡಿಕೆಗಳನ್ನು ಒಪ್ಪಬಾರದೆಂದೂ ಸಂಕಲ್ಪಮಾಡಿ ತಾವು ಸಮ್ಮೇಳನಕ್ಕೆ ಬಂದಿರುವುದಾಗಿ ಅವರು ಹೇಳಿದರು. ಅಲ್ಲದೆ ಸತ್ಯ ಎಷ್ಟೇ ಕಹಿಯಾದರೂ ಮತ್ತು ಅದರ ಪ್ರಕಟಣೆ ಯಾರಿಗೆ ಎಷ್ಟೇ ನೋವುಂಟು ಮಾಡಿದರೂ ಸರಿಯೇ ಅದನ್ನು ಮರೆಮಾಚ ಕೂಡದು, ಎಂದೂ ತಿಳಿಸಿದರು. ಅಜಾದ್ ಇಲ್ಲದಿದ್ದರೆ ಎರಡನೆಯ ಹಾಗೂ ಅತಿ ಮುಖ್ಯವಾದ ನಿರ್ಣಯ ಅಂಗೀಕೃತವಾಗುವುದು ಕಷ್ಟವಾಗುತ್ತಿತ್ತು. "ಯಾರೇ ಆಗಲಿ ಪ್ರತೀಕಾರ ಅಥವಾ ಶಿಕ್ಷೆ ಮಾಡುವ ಉದ್ದೇಶದಿಂದ ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುವುದು ನ್ಯಾಯ ಹಾಗೂ ಧರ್ಮಗಳಿಗೆ ವಿರೋಧವಾದ ಅಪರಾಧವಾಗುತ್ತದೆ ಎಂಬುದನ್ನು ಈ ಸಮ್ಮೇಳನ ಸ್ಪಷ್ಟಪಡಿಸುತ್ತದೆ. ಅಲ್ಲದೆ ವಿವಾದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಖಾಸಗಿ ಪಂಚಾಯಿತಿಯ ತೀರ್ಪಿಗೆ ಬಿಡತಕ್ಕದ್ದು. ಅದು ಸಾಧ್ಯವಾಗದಿದ್ದ ಪಕ್ಷದಲ್ಲಿ ನ್ಯಾಯಾಲಯಕ್ಕೆ ಒಪ್ಪಿಸತಕ್ಕದ್ದು".

ಇನ್ನೂ ಕ್ಲಿಷ್ಟವಾದ ಪ್ರಶ್ನೆ ಎಂದರೆ ಗೋವಿಗೆ ಸಂಬಂಧಿಸಿದ್ದು. ಅಜಾದರು ರಕ್ಷಣೆಗೆ ಬಂದರು. ಎರಡೂ ಪಂಗಡಗಳಿಗೆ ಅವರು ಮಾಡಿಕೊಂಡ ಮನವಿ ಚರ್ಚೆಗೆ ತಿರುವು ಕೊಟ್ಟಿತು. ಯಜ್ಞಕ್ಕಾಗಿ ಕೂಡ ಗೋಹತ್ಯೆ ಮಾಡಬೇಕೆಂದು ತಮ್ಮ ಧರ್ಮ ಎಲ್ಲಿಯೂ ಹೇಳಿಲ್ಲವೆಂದು ತಮ್ಮ ಸಹಧರ್ಮಿಗಳು ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ಅವರು ಹೇಳಿದರು. ಹಸುವಿನ ಮಾಂಸದ ರುಚಿಯನ್ನೇ ನೋಡದ ಮುಸಲ್ಮಾನ ನಾಯಕರು ಗಣನೀಯ ಸಂಖ್ಯೆಯಲ್ಲಿದ್ದಾರೆಂದೂ ಹಿಂದೂಗಳೊಡನೆ ಭ್ರಾತೃತ್ವ ಭಾವನೆಯನ್ನು ತೋರಿಸುವುದಕ್ಕಾದರೂ ಮುಸಲ್ಮಾನರಲ್ಲಿ ಅದರ ಸೇವನೆಯನ್ನು ಕಡಿಮೆ ಮಾಡಿಸಲು ಅವರುಗಳು ಪ್ರಯತ್ನಿಸುತ್ತಿರುವುದಾಗಿಯೂ ಹಿಂದೂಗಳಿಗೆ ಆಶ್ವಾಸನೆ

ಕೊಟ್ಟರು. ಮೊದಲಬಾರಿಗೆ ಸಮ್ಮೇಳನದಲ್ಲಿ ಉತ್ಸಾಹದ ಅಲೆ ತುಂಬಿ ಬಂತು. ಸಮ್ಮೇಳನದಿಂದ ನಿರೀಕ್ಷಿಸಿದ್ದ ಎಲ್ಲ ಒಳ್ಳೆಯ ಫಲಗಳೂ ಕೈಗೂಡಲಿಲ್ಲ ನಿಜ; ಆದು ತತ್ಕಾಲಕ್ಕೆ ಸದ್ಭಾವನೆಯನ್ನು ಮೂಡಿಸಿತು.

ಗಾಂಧೀಜಿ ಅಕ್ಟೋಬರ್ ೬ ರಂದು ಹೇಳಿದರು: "ಇಂದು ನನ್ನ ಪ್ರಾಯಶ್ಚಿತ್ತ ಹಾಗೂ ಪ್ರಾರ್ಥನೆಯ ಇಪ್ಪತ್ತನೆ ದಿವಸ. ಈಗ ಪ್ರಶಾಂತ ಪ್ರಪಂಚದಿಂದ ಹೋರಾಟದ ಜಗತ್ತಿಗೆ ಇಳಿಯುತ್ತೇನೆ. ಆ ಬಗ್ಗೆ ಹೆಚ್ಚು ಚಿಂತಿಸಿದ ಹಾಗೆಲ್ಲ ಹೆಚ್ಚು ಹೆಚ್ಚು ಅಸಹಾಯ ಕತೆ ತೋರುತ್ತಿದೆ. ಐಕ್ಯತಾ ಸಮ್ಮೇಳನವು ಆರಂಭಿಸಿದ ಕೆಲಸವನ್ನು ಪೂರೈಸಲು ಅನೇಕರು ನನ್ನ ಕಡೆ ನೋಡುತ್ತಿದ್ದಾರೆ. ರಾಜಕೀಯ ಪಕ್ಷಗಳನ್ನೆಲ್ಲ ಒಂದುಗೂಡಿಸ ಬೇಕೆಂದು ಅನೇಕರು ಅಪೇಕ್ಷೆ ಪಡುತ್ತಿದ್ದಾರೆ. ನಾನು ಏನೂ ಮಾಡಲಾರನೆಂದು ನನಗೆ ಗೊತ್ತು. ಭಗವಂತ ಎಲ್ಲವನ್ನೂ ಮಾಡತಕ್ಕವನು ಓ, ದೇವರೇ ನನ್ನನ್ನು ನಿನ್ನ ಸಮರ್ಥ ಸಾಧನವನ್ನಾಗಿ ಮಾಡಿಕೋ, ಮತ್ತು ನಿನ್ನ ಇಷ್ಟದಂತೆ ನನ್ನನ್ನು ಉಪಯೋಗಿಸಿಕೋ. ಮನುಷ್ಯ ಶೂನ್ಯ. ನೆಪೋಲಿಯನ್ ಅತಿಯಾಗಿ ಆಸೆಪಟ್ಟಿದ್ದ. ಆದರೆ ಅವನಿಗೆ ಬಂದ ಗತಿ ಸೇಂಟ್ ಹೆಲೆನಾದಲ್ಲಿ ಸೆರೆಮನೆ ವಾಸ. ಬಲಿಷ್ಠ ಕೈಸರ್ ಯೂರೋಪಿನ ಚಕ್ರವರ್ತಿಯಾಗುವ ಗುರಿ ಇಟ್ಟುಕೊಂಡಿದ್ದ. ಆದರೆ ಅವನು ಸಾಮಾನ್ಯ ಮನುಷ್ಯನ ದರ್ಜೆಗೆ ಇಳಿಸಲ್ಪಟ್ಟ. ದೇವರ ಇಚ್ಛೆ ಹಾಗಿತ್ತು. ಅಂತಹ ಉದಾಹರಣೆ ಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ರರಾಗಿರೋಣ".

ಗಾಂಧಿಯವರು ಅಕ್ಟೋಬರ್ ೮ರಂದು ನಿರಶನವನ್ನು ಮುಕ್ತಾಯಗೊಳಿಸಿದರು. ಸಿ. ಎಫ್ ಆಂಡ್ರೂಸ್‌ರವರು ಆ ಚಿರಸ್ಮರಣೀಯ ಸಂದರ್ಭದ ವರ್ಣನೆ ಮಾಡಿದ್ದಾರೆ.

"ಉಪವಾಸವನ್ನು ಮುಕ್ತಾಯಗೊಳಿಸುವ ಹಿಂದಿನ ದಿನ ಸಂಜೆ ಮಹಾತ್ಮಾ ಗಾಂಧಿಯವರಲ್ಲಿ ಬೆರಗುಗೊಳಿಸುವಷ್ಟು ಗೆಲುವು ಮತ್ತು ಉಲ್ಲಾಸ ಇತ್ತು. ಅವರ ಆತ್ಮೀಯ ಮಿತ್ರರನೇಕರು ಅವರನ್ನು ನೋಡಲು ಬಂದರು. ಅವರು ಮನೆಯ ಮಾಳಿಗೆಯ ಮೇಲೆ ತಮ್ಮ ಹಾಸಿಗೆಯಲ್ಲಿ ಪವಡಿಸಿದ್ದರು. ಬೆಳದಿಂಗಳು ಚೆಲ್ಲಿದ್ದಿತು. ಹುಣ್ಣಿಮೆಗೆ ಇನ್ನು ನಾಲ್ಕು ದಿನ ಮಾತ್ರ ಇತ್ತು.

"ಸಾಯಂಕಾಲದ ಪ್ರಾರ್ಥನೆಯ ಕಾಲ ಬಂತು. ಸೇವೆಯಲ್ಲಿ ತೊಡಗಿದ್ದ ಸ್ವಯಂಸೇವಕರೂ ಸೇರಿದಂತೆ ಮನೆಯಲ್ಲಿದ್ದ ಪ್ರತಿಯೊಬ್ಬರನ್ನೂ ಮಾಮೂಲಿನಂತೆ ತಮ್ಮ ಸಾಯಂ ಪ್ರಾರ್ಥನೆಯಲ್ಲಿ ಜೊತೆಗೂಡಲು ಕರೆದರು. ಸಬರಮತಿ ಆಶ್ರಮದಲ್ಲಿ ಪ್ರತಿದಿನ ರಾತ್ರಿ ಪಠಿಸುವ ಗೀತೆಯ ಭಾಗವನ್ನು ಒಟ್ಟಿಗೆ ಪಠಿಸಲಾಯಿತು. ಶರೀರದ ಇಂದ್ರಿಯಗಳನ್ನೂ ಸಹಜ ಪ್ರವೃತ್ತಿಗಳನ್ನೂ ಆತ್ಮವು ಸಂಪೂರ್ಣವಾಗಿ ಗೆಲ್ಲುವುದರ ಬಗ್ಗೆ ಅದು ತಿಳಿಸುತ್ತದೆ. ಅವುಗಳನ್ನು ಜಯಿಸಿದವನ ಹೃದಯದಲ್ಲಿರುವ ದಿವ್ಯಶಾಂತಿ ಎಂತಹುದೆಂಬುದನ್ನು ಅದರ ಕೊನೆಯ ಭಾಗ ತಿಳಿಸುತ್ತದೆ. ನನ್ನೆದುರಿಗಿದ್ದ ಮಂದಸ್ಮಿತ ವದನವನ್ನು ನೋಡುತ್ತಿರುವಾಗ ಅಲ್ಲಿ ಪಠಿಸಲ್ಪಡುತ್ತಿದ್ದ ಪದಗಳ ಅರ್ಥ ನನಗೆ ಚೆನ್ನಾಗಿ ಆಯಿತು.

"ಗೀತೆ ಆದನಂತರ ಕಬೀರರ ಸಂಕೀರ್ತನೆಯೊಂದನ್ನು ಹಾಡಲಾಯಿತು. ಅದೇ ಸಂಜೆ ಸ್ವಲ್ಪ ಹೊತ್ತಾದ ಮೇಲೆ ಅದರ ಭಾಷಾಂತರ ಬೇಕೆಂದು ಕೇಳಿದೆ. ಅದರಲ್ಲಿ ಕಬೀರರು ತಮ್ಮನ್ನು ತಾವು ಪಾಪಿಗಳ ಅಗ್ರಗಣ್ಯರೆಂದು ಕರೆದುಕೊಂಡು ತಮ್ಮನ್ನು ತಿದ್ದಿಕೊಳ್ಳುವ ಉದ್ದೇಶದಿಂದ ದೇವರನ್ನು ಕುರಿತು ಎದೆಗುದಿಯಿಂದ ಹಾಡುತ್ತಾರೆ. ಪರಮಾತ್ಮನೇ ಅವರ ಏಕೈಕ ಆಶ್ರಯ. ಈ ಭಾವದಲ್ಲಿ ಹಾಡಿದ ಸಂಕೀರ್ತನೆಗಳು ಪ್ರಾಯಶ್ಚಿತ್ತ ಮತ್ತು ನಿರಶನದ ಅವಧಿಯಲ್ಲಿ ಅವರಿಗೆ ಅತ್ಯಂತ ಸುಖವನ್ನು ಕೊಡುತ್ತಿತ್ತೆಂದು ನಾನು ಅನುಭವದೀದ ತಿಳಿದಿದ್ದೇನೆ. ಅನಂತರ ಕಠೋಪನಿಷತ್ ಮೇಲೆ ವಿನೋಬಾರವರಿಂದ ಅದ್ಭುತ ಪ್ರವಚನ ನಡೆಯಿತು. ಅನಂತರ ಬಹಳ ಹೊತ್ತು ಮೌನ. ಮಿತ್ರರು ಒಬ್ಬೊಬ್ಬರಾಗಿ ನಿಷ್ಕ್ರಮಿಸಿದರು. ಏಕಾಂತದಲ್ಲಿ ಅವರೊಬ್ಬರೇ ಉಳಿದರು.

"ಮಾರನೆ ದಿನ ಮುಂಜಾನೆ ನಾಲ್ಕು ಗಂಟೆಗೆ ಮುಂಚೆಯೇ ನಮ್ಮನ್ನೆಲ್ಲಾ ಪ್ರಾತಃಕಾಲದ ಪ್ರಾರ್ಥನೆಗೆ ಕರೆಯಲಾಯಿತು. ಚಂದ್ರ ಕಾಣುತ್ತಿರಲಿಲ್ಲ; ಕತ್ತಲು ದಟ್ಟವಾಗಿತ್ತು. ಮೂಡಲಿನಿಂದ ತಂಗಾಳಿ ಬೀಸುತ್ತಿತ್ತು. ಚಾವಣಿಯ ಏಣಿಯ ಮೇಲುಗಡೆ ನಿರ್ಮಲ ಆಕಾಶದಲ್ಲಿ ಬೆಳ್ಳಿ ಚುಕ್ಕಿಗಳು ಮಿನುಗುತ್ತಿತ್ತು. ಮಾರುತಕ್ಕೆ ಸಿಕ್ಕಿದ ಮರಗಳ ನೆರಳಿನ ಹೊಯ್ದಾಟವನ್ನು ನಾವು ಕುಳಿತಿದ್ದ ತೆರೆದ ಕೊಠಡಿಯಿಂದಲೇ ನೋಡಬಹುದಾಗಿತ್ತು. ಬಾಪೂಗೆ ಬೆಚ್ಚನೆಯ ಕಪ್ಪು ಶಾಲನ್ನು ಹೊದಿಸಲಾಗಿತ್ತು. ಚೆನ್ನಾಗಿ ನಿದ್ರೆ ಮಾಡಿದಿರಾ ಎಂದು ನಾನು ಅವರನ್ನು ಕೇಳಿದೆ. "ಓಹೋ, ತುಂಬಾ ಚೆನ್ನಾಗಿ ಮಾಡಿದೆ" ಎಂದು ಅವರು ಉತ್ತರ ಕೊಟ್ಟರು. ಅವರ ಧ್ವನಿಯು ಹಿಂದಿನ ದಿನ ಮುಂಜಾನೆ ಇದ್ದುದಕ್ಕಿಂತ ದುರ್ಬಲವಾಗಿರದೆ ಬಲಯುತವಾಗಿರುವುದನ್ನು ಗಮನಿಸಿದೆ. ಅದು ತುಂಬಾ ಸಂತೋಷದಾಯಕವಾಗಿತ್ತು. ದೀರ್ಘ ಉಪವಾಸದ ಕೊನೆಯ ದಿನ ಅಂದು. ಮನೆಯವರೆಲ್ಲ ಬಂದು ಸೇರಲೆಂದು ಕಾಯುತ್ತಾ ನಾವು ಕುಳಿತಿದ್ದೆವು. ಆಗ ಮೌನ ಆವರಿಸಿತ್ತು. ಆ ಮೌನದಲ್ಲಿ ಅಡಗಿದ್ದ ಭಾವನೆಯನ್ನು ವರ್ಣಿಸುವುದು ಕಷ್ಟಸಾಧ್ಯ. ಮಂಕ್ರಾಯದ ದಿನ ಬಂದಿತೆಂದು ನಾವೆಲ್ಲರೂ ನೆನೆಯುತ್ತಿದ್ದೆವು. ಅವರು ವಿಶ್ರಮಿಸುತ್ತಿದ್ದ ಕೊಠಡಿಯ ಎಲ್ಲ ಕಿಟಕಿಗಳೂ ತೆರೆಯಲ್ಪಟ್ಟಿದ್ದುವು. ನಾನು ಒಮ್ಮೆ ಹಾಸಿಗೆಯನ್ನು ಒರಗಿ ಕುಳಿತಿದ್ದ ಶ್ಯಾಮಲ ವರ್ಣದ ವ್ಯಕ್ತಿಯನ್ನೂ ಮತ್ತೊಮ್ಮೆ ಹೊರಗಡೆ ನಕ್ಷತ್ರಗಳನ್ನೂ ದಿಟ್ಟಿಸಿ ನೋಡುತ್ತಾ ಕುಳಿತಿದ್ದೆ.

"ಪ್ರಾತಃಕಾಲದ ಈ ವಿಶೇಷ ಪೂಜೆಯ ಸಂದರ್ಭದಲ್ಲಿ ಹಾಡಿದ ಸಂಕೀರ್ತನೆ ಮಹಾತ್ಮಾಜಿಯವರಿಗೆ ಅತ್ಯಂತ ಪ್ರಿಯವಾದುದು. ಅದು ಗುಜರಾತಿಯಲ್ಲಿದೆ. ಅದರ ಸಂದೇಶ ಇದು. 'ಪರಮಾತ್ಮನ ಪಥ ವೀರರಿಗೆ ಮಾತ್ರ ಮೀಸಲು; ಹೇಡಿಗಳಿಗಲ್ಲ. ಅದಕ್ಕೆ ಸಂಪೂರ್ಣ ಶರಣಾಗತಿ ಬೇಕು. ಭಗವಂತನಿಗಾಗಿ ಸರ್ವಸ್ವವನ್ನೂ ತ್ಯಜಿಸಿ ಬಿಡುವವರಿಗೆ ಮಾತ್ರ ಅದು ಲಭ್ಯ. ಮುತ್ತುಗಳಿಗಾಗಿ ವಿಗಾಹಕನು ಸಮುದ್ರದ ಅಂತರಾಳಕ್ಕೆ ಮುಳುಗುವಂತೆ ಧೀರಾತ್ಮರು ಭಗವಂತನ ಅನ್ವೇಷಣೆಯಲ್ಲಿ ಮುಳುಗುತ್ತಾರೆ'

"ಪ್ರಾರ್ಥನೆಯನಂತರ ಮುಂಜಾನೆಯ ಹೊತ್ತು ಗದ್ದಲವಿಲ್ಲದೆ ಕಳೆದು ಹೋಯಿತು. ಆದರೆ ಎಂಟು ಗಂಟೆಗೆ ಮುಂಚೆಯೇ ಅಧಿಕ ಸಂಖ್ಯೆಯಲ್ಲಿ ಜನರು ಬರಲಾರಂಭಿಸಿದರು. ಮಹಾತ್ಮರ ದರ್ಶನ ಮಾಡಲು ಅವಕಾಶ ಕೊಟ್ಟಮೇಲೆ ಕೆಲವರು ವಾಪಸು ಹೊರಟು ಹೋದರು. ಮತ್ತಿತರರು ಉಪವಾಸದ ಮುಕ್ತಾಯಕ್ಕಾಗಿ ಕಾದು ಕುಳಿತರು. ಸುಮಾರು ಹತ್ತುಗಂಟೆ ಸಮಯದಲ್ಲಿ ಮಹಾತ್ಮಾಜಿ ನನ್ನನ್ನು ಕರೆದು, 'ನನಗೆ ಪ್ರಿಯವಾದ ಕ್ರೈಸ್ತ ಸ್ತೋತ್ರ ಪಾಠದ ಪದಗಳು ನಿಮಗೆ ಜ್ಞಾಪಕ ವಿದೆಯೇ?' ಎಂದು ಕೇಳಿದರು. 'ಹೌದು, ಜ್ಞಾಪಕವಿದೆ, ಈಗ ಹಾಡಲೇ?' ಎಂದೆ:

"ಈಗ ಬೇಡ. ಉಪವಾಸ ಮುಕ್ತಾಯ ಮಾಡುವ ಸಮಯದಲ್ಲಿ ಧಾರ್ಮಿಕ ಐಕ್ಯತೆಯನ್ನು ಸೂಚಿಸಲು ಒಂದು ಸಣ್ಣ ಸಮಾರಂಭವನ್ನು ಇಟ್ಟುಕೊಳ್ಳುವ ಯೋಜನೆ ಇದೆ. ಇಮಾಂಸಾಹೇಬರು ಕೊರಾನಿನ ಮೊದಲ ಪಾಠವನ್ನು ಪಠಿಸಲೆಂದು ನನ್ನ ಇಚ್ಛೆ. ಆಗ ನೀವು ಕ್ರೈಸ್ತ ಸ್ತೋತ್ರ ಪಾಠವನ್ನು ಪಠಿಸಬೇಕು. ನನ್ನ ಮನಸ್ಸಿನಲ್ಲಿರುವುದು ಯಾವುದೆಂದು ನಿಮಗೆ ಗೊತ್ತಿರಬಹುದು. ಅದು 'ಅದ್ಭುತ ಶಿಲುಬೆಯನ್ನು ನಾನು ಪ್ರತೀಕ್ಷಿಸಿದಾಗ...'ಎಂದು ಆರಂಭವಾಗಿ 'ಅಷ್ಟು ಅತಿಶಯಪ್ರೇಮ... ಅಷ್ಟು ದೈವೀ ಪ್ರೇಮ, ನನ್ನ ಆತ್ಮ, ನನ್ನ ಪ್ರಾಣ ಮತ್ತು ನನ್ನ ಸರ್ವಸ್ವವನ್ನು ಕೇಳುತ್ತದೆ'. ಎಂದು ಕೊನೆಯಾಗುತ್ತದೆ. 'ಕಟ್ಟಕಡೆಗೆ ವಿನೋಬಾ ಉಪನಿಷತ್ ವಾಚನ ಮಾಡಬೇಕು; ನಿಜ ವೈಷ್ಣವನನ್ನು ವರ್ಣಿಸುವ ವೈಷ್ಣವ ಗೀತೆಯನ್ನು ಬಾಲಕೃಷ್ಣ ಹಾಡಬೇಕು'

"ಮಧ್ಯಾಹ್ನದ ಸುಮಾರಿಗೆ ಎಲ್ಲ ನಾಯಕರೂ ಸ್ನೇಹಿತರೂ ಬಂದು ಸೇರಿದರು. ಮಹಾತ್ಮರ ಸೇವೆ ಮಾಡಲು ಬಯಸಿದ್ದ ಮಹಿಳೆಯರು ಅಲ್ಲಿ ನೆರೆದಿದ್ದರು. ಇನ್ನೇನು ಮುಹೂರ್ತ ಸಮೀಪಿಸಿತೆಂದು ಅರಿತು ನಾನು ಪುನಃ ಮಹಡಿ ಹತ್ತಿಹೋದೆ. ಮನೆ ಯಲ್ಲಿ ಕೆಲಸ ಮಾಡುವ ಸೇವಕರಿಂದ ಹಿಡಿದು ಎಲ್ಲರೂ ಹಾಜರಾಗಿದ್ದಾರೆಯೇ ಎಂಬುದನ್ನು ಸ್ವತಃ ನೋಡಿಕೊಳ್ಳಬೇಕೆಂದು ನನಗೆ ಅವರು ಸೂಚಿಸಿದರು. ಅದಕ್ಕೆ ಮುಂಚೆ ಮುಂಜಾವಿನಲ್ಲೇ ಝಾಡಮಾಲಿಯನ್ನು ಅವರಲ್ಲಿಗೆ ಕರೆದುಕೊಂಡುಹೋಗಿದ್ದೆ. ಆತ ನಮಗೆಲ್ಲಾ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದ. ಮಹಾತ್ಮರು ಅವನೊಂದಿಗೆ ಕೆಲವು ಪ್ರೀತಿಯ ಮಾತುಗಳನ್ನಾಡಿ ಕೃತಜ್ಞತೆ ಸೂಚಿಸುವಂತೆ ಮುಗುಳುನಗೆ ಬೀರಿದ್ದರು.

"ಕಡೆಗೆ ನಡು ಮಧ್ಯಾಹ್ನ ಬಂದೇ ಬಿಟ್ಟಿತು. ಉಪವಾಸ ಮುಕ್ತಾಯವಾಗುವ ವೇಳೆ ಅದು. ಸ್ವಯಂ ಆಗಿ ವೈದ್ಯರುಗಳು ಮೊದಲು ಬಂದು ನಿಂತರು. ಅವರು ತಮಗೆ ನೀಡಿದ ಪ್ರೇಮಮಯ ಶ್ರದ್ಧಾಪೂರ್ಣ ನೆರವಿಗಾಗಿ ಅವರನ್ನು ಹೃದಯಸ್ಪರ್ಶಿ ವಚನಗಳಿಂದ ವಂದಿಸಿದರು. ನಂತರ ಹಕೀಂ ಅಜ್ಮಲ್ ಖಾನರನ್ನು ಕರೆಯಲಾಯಿತು. ಅವರು ವೈದ್ಯರೂ ಮಿತ್ರರೂ ಆಗಿದ್ದರು ನಿರಶನ ಸಮಯದಲ್ಲಿ ಉತ್ತೇಜನಕೊಟ್ಟು ಸಹಾಯಮಾಡಿದ್ದರು. ಮೃದುಸ್ವಭಾವದವರೂ ಅತ್ಯಂತ ಪ್ರಿಯರೂ ಆಗಿದ್ದ ಅವರ ಆತಿಥೇಯ ಮೌಲಾನ ಮಹಮ್ಮದ್ ಅಲಿಯವರು ಅನಂತರ ಬಂದರು. ಅವರಾದ

ಮೇಲೆ ಯಾವ ಕ್ರಮಾನುಸರಣೆಯೂ ಇಲ್ಲದೆ ಒಬ್ಬರಾದ ಮೇಲೊಬ್ಬರು ಸದ್ದಿಲ್ಲದೆ ಅವರ ಕೊಠಡಿಗೆ ಹೋಗಿ ಪ್ರೀತಿಯಿಂದ ವಂದಿಸಿ ಕುಳಿತುಕೊಂಡರು. ಹಾಸಿಗೆಯ ಬಳಿಯಲ್ಲಿ ಸ್ತ್ರೀಯರು ಕುಳಿತುಕೊಂಡರು. ಸ್ವಾಮಿ ಶ್ರದ್ಧಾನಂದರು ಹಾಸಿಗೆಯ ಅಡಿಯಲ್ಲಿ ಕುಳಿತು ಕಣ್ಣುಮುಚ್ಚಿಕೊಂಡು ಧ್ಯಾನಾಸಕ್ತರಾಗಿದ್ದರು. ಪಂಡಿತ ಮೋತಿಲಾಲ್ ನೆಹರೂ, ದೇಶಬಂಧು ದಾಸ್, ಮೌಲಾನಾ ಅಜಾದ್, ಆಲಿ ಸೋದರರು, ಇತರರೊಡಗೂಡಿ ಹಾಸಿಗೆಯ ಬಳಿ ಕುಳಿತಿದ್ದರು.

"ದಕ್ಷಿಣ ಆಫ್ರಿಕಾದಲ್ಲಿಯೂ ಸಬರಮತಿ ಆಶ್ರಮದಲ್ಲೂ ಅತ್ಯಂತ ನಿಕಟವರ್ತಿಯಾಗಿದ್ದ ಇಮಾಂ ಸಾಹೇಬರು ಅರಬ್ಬಿ ಭಾಷೆಯಲ್ಲಿರುವ ಕೊರಾನಿನ ಮೊದಲ ಪಾದವನ್ನು ಅಮೋಘವಾಗಿ ಹಾಡಿದರು. ಗಂಭೀರ ಭಾಷೆಯಲ್ಲಿರುವ ಆ ಸ್ತುತಿಯಲ್ಲಿ ದೇವರ ವರ್ಣನೆ ಹೀಗಿದೆ: 'ಪರಮಾತ್ಮನದು ಅತಿಶಯವಾದ ಅನುಕಂಪ. ಅವನು ಅತ್ಯಂತ ದಯಾಮಯ. ಜಗತ್ತಿನ ಸೃಷ್ಟಿಸ್ಥಿತಿಗಳಿಗೆ ಅವನೇ ಕಾರಣ. ಅವನು ಮಾನವ ಕೋಟಿಯ ಸಹಾಯಕ'–ಆ ಸ್ತುತಿಯ ಕೊನೆಯಲ್ಲಿ, ಪಾಪಿಗಳ ಜಾಡು ಬೇಡವೆಂದೂ ಧರ್ಮಮಾರ್ಗಾವಲಂಬನೆಗೆ ಪರಮಾತ್ಮನ ಸಹಾಯ ಬೇಕೆಂದೂ ಕೋರುವ ಪ್ರಾರ್ಥನೆ ಇದೆ. ಅದಾದನಂತರ, ಮೊದಲೇ ಗೊತ್ತುಮಾಡಿದ್ದ ಪ್ರಕಾರ, ಕ್ರೈಸ್ತ ಸ್ತುತಿಪಾಠವನ್ನು ಪಠಿಸಲಾಯಿತು. ತರುವಾಯ ವಿನೋಬಾರವರು ಉಪನಿಷತ್ತಿನ ಕೆಲವು ಸುಂದರ ಭಾಗಗಳನ್ನು ಪಠಿಸಿದರು. ಅವುಗಳ ಪೈಕಿ ಮೂರು ಶ್ಲೋಕಗಳ ಅರ್ಥ ಇದು:

" 'ಸತ್ಯ, ಆತ್ಮಸಂಯಮ, ಧ್ಯಾನ ಮತ್ತು ಇಂದ್ರಿಯ ನಿಗ್ರಹ–ಇವುಗಳನ್ನು. ಸತತವಾಗಿ ಸಾಧಿಸುತ್ತಾ ಪರಿಶುದ್ಧವಾಗಿರುವವರು ಮಾತ್ರ ಅಂತರಾತ್ಮದಲ್ಲಿ ದಿವ್ಯ ಜ್ಯೋತಿಯನ್ನು ಸಿದ್ಧಿಸಿಕೊಳ್ಳುತ್ತಾರೆ'.

"'ನಿರಂತರ ಸತ್ಯಾನುಸರಣೆಯಿಂದ ಪುರಾತನ ಋಷಿಗಳು ತಮ್ಮ ಗುರಿ ಮುಟ್ಟಿದರು, ಪರಮಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡರು'.

"'ನನ್ನ ಮಾತುಗಳು ನನ್ನ ಆಲೋಚನೆಗಳನ್ನು ಅಸತ್ಯಗೊಳಿಸದಿರಲಿ; ನನ್ನ ಆಲೋಚನೆ ನನ್ನ ಮಾತುಗಳನ್ನು ಹುಸಿ ಮಾಡದಿರಲಿ. ದಿವ್ಯಜ್ಯೋತಿ ಯಾವಾಗಲೂ ನನ್ನ ಮುಂದೆ ಪ್ರಕಾಶಿಸುತ್ತಿರಲಿ. ನನ್ನ ಜ್ಞಾನ ನನ್ನನ್ನು ಕೈಬಿಡದಿರಲಿ. ಸರಿಯಾದುದ್ದನ್ನೇ ಹೇಳುತ್ತೇನೆ. ಸತ್ಯವನ್ನೇ ನುಡಿಯುತ್ತೇನೆ'.

" 'ಓಂ ಶಾಂತಿಃ ಶಾಂತಿಃ ಶಾಂತಿಃ' ಎಂದು ತೀವ್ರ ಭಕ್ತಿಯಿಂದ ಸ್ತುತಿಸಿದ ಮೇಲೆ ಬಾಲಕೃಷ್ಣ ಹಾಡಲು ಆರಂಭಿಸಿದರು. ನಿಜ ವೈಷ್ಣವನನ್ನು ವರ್ಣಿಸುವ ಗೀತೆಯನ್ನು ಅವರು ಹಾಡಿದರು:

"ಮತ್ತೊಬ್ಬರ ಸಂಕಷ್ಟಗಳನ್ನು ತನ್ನವೆಂದೇ ಮರುಗುವವನು ನಿಜವಾದ ವೈಷ್ಣವ. ಸೇವೆಗೆ ಅವನು ಸದಾಸಿದ್ಧ. ಆದರೆ ಅವನು ಜಂಭಕೊಚ್ಚಿಕೊಳ್ಳುವುದಿಲ್ಲ. ಪ್ರತಿಯೊಬ್ಬರಿಗೂ ಬಾಗುತ್ತಾನೆ. ಯಾರನ್ನೂ ಜರಿಯುವುದಿಲ್ಲ. ಅವನ ಆಲೋಚನೆ,

ಮಾತು, ಕೃತಿ, ಎಲ್ಲವೂ ಪರಿಶುದ್ಧ. ಅವನ ಜನ್ಮದಾತೆ ಕೃತಾರ್ಥಳು. ಪ್ರತಿಯೊಬ್ಬ ಮಹಿಳೆಯಲ್ಲೂ ಆತ ಮಾತೃಭಕ್ತಿ ಇಟ್ಟಿರುತ್ತಾನೆ. ಅವನದು ಸಮಚಿತ್ತ. ಅವನ ತುಟಿಗಳಿಗೆ ಸುಳ್ಳಿನ ಕಳಂಕವಿಲ್ಲ. ಅವನು ಬೇರೊಬ್ಬರ ದ್ರವ್ಯವನ್ನು ಮುಟ್ಟುವುದಿಲ್ಲ. ಆಸಕ್ತಿಯ ಸಂಕೋಲೆಗಳು ಅವನನ್ನು ಬಂಧಿಸಲಾರವು. ರಾಮನಾಮಕ್ಕೆ ಮೇಳವಾಗಿರುವ ಅವನ ದೇಹದಲ್ಲಿ ಎಲ್ಲಾ ಯಾತ್ರಾ ಸ್ಥಳಗಳೂ ಸಮಾವೇಶಗೊಂಡಿರುತ್ತವೆ. ಕಾಮ, ಕ್ರೋಧ, ಲೋಭ, ವಂಚನೆಗಳಿಂದ ವಿಮುಕ್ತನಾಗಿರುವ ಅವನೇ ನಿಜವಾದ ವೈಷ್ಣವ'.

"ಅವುಗಳನ್ನೆಲ್ಲಾ ಒಂದೊಂದಾಗಿ ಪಠಿಸುತ್ತಿದ್ದಾಗ ಅವು ಬಹಳ ಔಚಿತ್ಯಪೂರ್ಣವೆನಿಸುತ್ತಿತ್ತು. ಅಲ್ಲಿ ಮಲಗಿಕೊಂಡಿದ್ದು ಇನ್ನೇನು ನಿರಶನ ಮುಕ್ತಾಯಗೊಳಿಸಲಿದ್ದ ಆ ವ್ಯಕ್ತಿಯು ಸಂಕಷ್ಟಗಳ ಕಠಿಣಮಾರ್ಗದ ಮೂಲಕ ಆದರ್ಶವನ್ನು ಹತ್ತಿರ ಹತ್ತಿರ ಹೇಗೆ ಮುಟ್ಟಿದ್ದಾರೆಂದು ಯೋಚಿಸುವುದು ಅಪೂರ್ವವೂ ಭವ್ಯವೂ ಆಗಿ ತೋರುತ್ತಿತ್ತು. ಅವುಗಳ ಔಚಿತ್ಯವನ್ನು ಎಲ್ಲರೂ ಮನಗಂಡರು. ಎಲ್ಲರ ಹೃದಯಗಳೂ ಒಂದಾದುವು.

"ನಿರಶನವನ್ನು ಮುಕ್ತಾಯಗೊಳಿಸುವುದಕ್ಕೆ ಮುಂಚೆ ಮಹಾತ್ಮಾ ಗಾಂಧಿಯವರು ಮೌಲಾನಾ ಮಹಮ್ಮದ್ ಆಲಿ, ಹಕೀಂ ಅಜ್ಮಲ್ ಖಾನ್ ಮತ್ತು ಮೌಲಾನಾ ಅಬುಲ್ ಕಲಂ ಅಜಾದ್‌ರವರ ಕಡೆಗೆ ತಿರುಗಿ ಅವರೊಂದಿಗೆ ಮಾತನಾಡಿದರು. ಅವರು ಮಾತನಾಡುತ್ತಿದ್ದಾಗ ಭಾವಾವೇಶ ತುಂಬಿತ್ತು. ಶರೀರ ದುರ್ಬಲವಾಗಿದ್ದುದರಿಂದ ಅವರ ಮಾತು ಅತ್ಯಂತ ಸಮೀಪದಲ್ಲಿದ್ದವರನ್ನು ಬಿಟ್ಟರೆ ಮತ್ತಾರಿಗೂ ಕೇಳುವಂತಿರಲಿಲ್ಲ. ಕಳೆದ ಮೂವತ್ತು ವರ್ಷಗಳಿಂದ ಹಿಂದೂ–ಮುಸಲ್ಮಾನರ ಐಕ್ಯತೆ ತಮ್ಮ ಪ್ರಧಾನ ಗುರಿಯಾಗಿರುವುದೆಂದೂ ಅದನ್ನು ಸಾಧಿಸಲು ಇನ್ನೂ ಆಗಿಲ್ಲವೆಂದೂ ಮಹಾತ್ಮರು ಅವರುಗಳಿಗೆ ತಿಳಿಸಿದರು. ದೇವರ ಇಚ್ಛೆ ಹೇಗಿದೆಯೋ ಗೊತ್ತಿಲ್ಲ; ಆದರೆ ಆ ಉದ್ದೇಶಕ್ಕಾಗಿ ಅಗತ್ಯವಿದ್ದರೆ ಅವರುಗಳು ಪ್ರಾಣವನ್ನಾದರೂ ತ್ಯಾಗ ಮಾಡುವ ವಾಗ್ದಾನವನ್ನು ತಮಗೆ ನೀಡಬೇಕೆಂದು ಕೇಳಿಕೊಂಡರು. ಹಿಂದೂಗಳು ತಮ್ಮ ದೇವಸ್ಥಾನಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯದಿಂದ ಪೂಜೆ ಸಲ್ಲಿಸುವಂತೆ ಆಗಬೇಕು. ಹಾಗೆಯೇ ಮುಸ್ಲಿಮರು ತಮ್ಮ ಮಸೀತಿಗಳಲ್ಲಿ ಪೂರ್ಣ ಸ್ವಾತಂತ್ರ್ಯದಿಂದ ಅವರ 'ಅರ್ಜ಼್' ಪಠಿಸಲು ಹಾಗೂ ಪ್ರಾರ್ಥನೆ ಮಾಡಲು ಅವಕಾಶವಾಗಬೇಕು. ಈ ಮೂಲಭೂತ ಪೂಜಾ ಸ್ವಾತಂತ್ರ್ಯ ಎಲ್ಲೆಡೆಯಲ್ಲೂ ಸಾಧಿಸಲ್ಪಡದಿದ್ದರೆ ಹಿಂದೂ ಧರ್ಮಕ್ಕಾಗಲೀ ಇಸ್ಲಾಂಗಾಗಲೀ ಬೆಲೆ ಇರುವುದಿಲ್ಲ.

"ಹಕೀಂ ಅಜ್ಮಲ್ ಖಾನ್ ಮತ್ತು ಮೌಲಾನಾ ಅಬುಲ್ ಕಲಂ ಅಜಾದ್‌ರವರುಗಳು ಮುಸಲ್ಮಾನ್ ಜನಾಂಗದ ಪರವಾಗಿ ಪ್ರತಿಜ್ಞೆಯನ್ನು ಮತ್ತೆ ಹೊಸದಾಗಿ ಕೈಗೊಂಡರು.

"ಡಾ. ಅನ್ಸಾರಿಯವರು ಸ್ವಲ್ಪ ಕಿತ್ತಳೆಹಣ್ಣಿನ ರಸವನ್ನು ಮುಂದೆ ತಂದಿಟ್ಟರು. ಮಹಾತ್ಮಾ ಗಾಂಧಿಯವರು ಅದನ್ನು ಕುಡಿದರು. ಅಲ್ಲಿಗೆ ನಿರಶನ ಮುಕ್ತಾಯ

ಗೊಂಡಿತು. ಅಲ್ಲಿ ಹಾಜರಿದ್ದವರ ಸಂತೋಷ ಮತ್ತು ಕೃತಜ್ಞತಾ ಭಾವವನ್ನು ವರ್ಣಿಸಲು ಅಸಾಧ್ಯ. ಅಭಿನಂದನೆಗಳ ಸುರಿಮಳೆ ಆಗುತ್ತಿದ್ದ ಆ ಸಮಯದಲ್ಲಿ ಮಹಾತ್ಮಾಜಿಯವರು ನಿಶ್ಚಲರಾಗಿ ವಿಶ್ರಮಿಸಿಕೊಳ್ಳುತ್ತಿದ್ದರು. ಕ್ಷಿಪ್ರದಲ್ಲಿಯೇ ಕೊಠಡಿ ಯಿಂದ ಎಲ್ಲರೂ ನಿರ್ಗಮಿಸಿದರು. ಗಾಂಧಿಯವರು ಮೌನವಾಗಿದ್ದರು. ನಿರಶನ ಮುಕ್ತಾಯದ ಅತಿ ಪ್ರಯಾಸದ ಕಾರ್ಯ ಮುಗಿಯಿತು".

ಉಪವಾಸದ ಸಮಯದಲ್ಲಿ ಅವರನ್ನು ಭೇಟಿ ಮಾಡಿದವರ ಪೈಕಿ ಶಾಂತಿನಿಕೇತನದ ವಿದ್ಯಾರ್ಥಿ ರಾಮಚಂದ್ರನ್ ಒಬ್ಬ. ಆತನನ್ನು ಗಾಂಧಿಯವರಿಗೆ ಆಂಡ್ರೂಸ್ ಪರಿಚಯ ಮಾಡಿಕೊಡುತ್ತಾ: "ಈತ ನಿಮ್ಮ ಮುಂದೆ ಕೆಲವು ಪ್ರಶ್ನೆಗಳನ್ನು ಮಂಡಿಸಲು ಬಯಸುತ್ತಾನೆ. ಅವನು ನಾಳೆ ಶಾಂತಿನಿಕೇತನಕ್ಕೆ ವಾಪಸ್ಸು ಹೋಗುವ ಮುಂಚೆ ನೀವು ಅವನ ಸಂಗಡ ಸ್ವಲ್ಪ ಹೊತ್ತು ಮಾತನಾಡಿದರೆ ನನಗೆ ತುಂಬಾ ಸಂತೋಷ ವಾಗುತ್ತದೆ".

ಮಾರನೆಯ ದಿನ ಸೋಮವಾರ· ಮೌನದ ದಿನ. ಆದುದರಿಂದ ರಾಮಚಂದ್ರನ್ ಒಂದು ದಿನ ಹೆಚ್ಚಾಗಿ ಉಳಿದನು. ಮಂಗಳವಾರ ಮುಂಜಾನೆ ಐದೂವರೆ ಗಂಟೆಗೆ ಪ್ರಾರ್ಥನೆಯ ಅನಂತರ ಅವನನ್ನು ಕರೆಸಲಾಯಿತು.

"ನಿಮ್ಮನ್ನು ಪ್ರೀತಿಸುವ ಹಾಗೂ ಮೆಚ್ಚುವ ಅನೇಕ ಮಂದಿ ದೊಡ್ಡ ಮನುಷ್ಯರೂ ಕೂಡ, ರಾಷ್ಟ್ರೀಯ ಪುನರುಜ್ಜೀವನ ಯೋಜನೆಯಲ್ಲಿ ನೀವು ಅರಿತೋ ಅರಿಯದೆಯೋ ಕಲೆಯನ್ನು ವರ್ಜಿಸಿದ್ದೀರೆಂದು ಭಾವಿಸಿದ್ದಾರೆ. ಅದು ಹೇಗೆ?" ಎಂದು ಆತ ಕೇಳಿದ.

"ಈ ವಿಷಯದಲ್ಲಿ ನನ್ನನ್ನು ಅಪಾರ್ಥ ಮಾಡಿಕೊಂಡಿರುವುದು ವಿಷಾದದ ಸಂಗತಿ. ಎಲ್ಲ ವಸ್ತುಗಳಿಗೂ ಎರಡು ಮುಖಗಳುಂಟು– ಅಂತರಂಗ ಮತ್ತು ಬಹಿರಂಗ. ನನ್ನ ಮಟ್ಟಿಗೆ ಹೇಳುವುದಾದರೆ ಇವುಗಳಲ್ಲಿ ಪ್ರಾಧಾನ್ಯ ಯಾವುದಕ್ಕೆ ಎಂಬುದೇ ಮುಖ್ಯ ಪ್ರಶ್ನೆ. ಅಂತರಂಗದ ವಿಕಾಸಕ್ಕೆ ಅನುವಾಗದಿದ್ದರೆ ಬಹಿರಂಗ ಅರ್ಥಶೂನ್ಯ ವಾಗುತ್ತದೆ. ಆತ್ಮದ ಅಭಿವ್ಯಕ್ತಿಯೇ ನಿಜವಾದ ಕಲೆ. ಈ ಆತ್ಮದ ಅಭಿವ್ಯಕ್ತಿ ಎಷ್ಟರ ಮಟ್ಟಿಗೆ ಆಗುತ್ತದೆಯೋ ಅಷ್ಟರ ಮಟ್ಟಿಗೆ ಬಾಹ್ಯರೂಪಗಳಿಗೆ ಬೆಲೆ" ಎಂದು ಹೇಳಿದರು ಗಾಂಧೀ. ರಾಮಚಂದ್ರನ್ ಹಿಂಜರಿಯುತ್ತಲೇ ಹೇಳಿದ: "ಶ್ರೇಷ್ಠ ಕಲಾವಿದರೇ ಹೇಳಿ ದ್ದಾರೆ–ಕಲಾವಿದನ ಅನಿಸಿಕೆ, ಅರಸಿಕೆಗಳೇ ಶಬ್ದ ವರ್ಣ ಆಕಾರಗಳಾಗಿ ಪ್ರಕಟವಾಗುತ್ತದೆ. ಅದೇ ಕಲೆ".

"ಹೌದು, ಅಂತಹ ಕಲೆ ನನ್ನ ಮನಸ್ಸಿಗೆ ತುಂಬಾ ಹಿಡಿಸುತ್ತದೆ. ಅನೇಕರು ಕಲಾವಿದರು ಎಂದು ಕರೆದುಕೊಳ್ಳುತ್ತಾರೆ. ಅವರಿಗೆ ಮನ್ನಣೆಯೂ ಇದೆ. ಆದರೆ ಅವರ ಕೃತಿಗಳಲ್ಲಿ ಆತ್ಮೋನ್ನತಿಯ ಪ್ರಯತ್ನದ ಕುರುಹುಗಳಾಗಲೀ ಆ ವಿಚಾರದಲ್ಲಿ ತದಿಗುದಿ ಯಾಗಲಿ ಕಾಣುವುದಿಲ್ಲ". ಎಂದರು ಗಾಂಧೀ.

"ಯಾವುದಾದರೂ ದೃಷ್ಟಾಂತ ನಿಮ್ಮ ಮನಸ್ಸಿನಲ್ಲಿದೆಯೇ? ಎಂದು ಕೇಳಿದ ರಾಮಚಂದ್ರನ್.

"ನಿಜ ಆಸ್ಕರ್ ವೈಲ್ಡ್ ವಿಚಾರ ತೆಗೆದುಕೋ. ನಾನು ಇಂಗ್ಲೆಂಡಿನಲ್ಲಿದ್ದಾಗ ಅವನ ಬಗ್ಗೆ ತುಂಬಾ ಜಿಜ್ಞಾಸೆ ಎದ್ದಿತ್ತು. ಅವನ ಮಾತು ನಾನು ಹೇಳಬಲ್ಲೆ" ಎಂದರು ಗಾಂಧೀ.

"ರಾಮಚಂದ್ರನ್ ಹೇಳಿದ: "ಆಸ್ಕರ್ ವೈಲ್ಡ್ ಆಧುನಿಕ ಕಾಲದ ಶ್ರೇಷ್ಠ ಸಾಹಿತಿಗಳಲ್ಲೊಬ್ಬನೆಂದು ನಾನು ಕೇಳಿದ್ದೇನೆ".

ಗಾಂಧಿಯವರು ಹೇಳಿದರು: "ಅದೇ ನನಗೆ ಬಂದಿರುವ ಕಷ್ಟ. ಬಾಹ್ಯ ರೂಪಗಳಲ್ಲಿ ಉನ್ನತ ಕಲೆಯನ್ನು ಕಂಡ ವೈಲ್ಡ್. ಅದರ ಫಲವಾಗಿ ದುರ್ನೀತಿಗೆ ಅೀದದ ಬಣ್ಣ ಬಳಿದ. ಜೀವಿಯು ತನ್ನ ಅಂತರಾತ್ಮದ ದರ್ಶನ ಮಾಡಿಕೊಳ್ಳಲು ನಿಜವಾದ ಕಲೆ ನೆರವಾಗಬೇಕು. ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಆತ್ಮಸಾಕ್ಷಾತ್ಕಾರಕ್ಕೆ ಬಾಹ್ಯ ರೂಪ ವಸ್ತುಗಳ ಅವಶ್ಯಕತೆ ಇಲ್ಲ. ನನ್ನ ಸುತ್ತಮುತ್ತ ಕಲಾಕೃತಿಗಳಾಗಲೀ ಕಲಾವಸ್ತುಗಳಾಗಲೀ ಇಲ್ಲ. ಆದರೂ ನನ್ನ ಜೀವನ ಕಲಾಪೂರ್ಣವೆಂದು ನಾನು ಹೇಳುತ್ತೇನೆ. ನನ್ನ ಕೊಠಡಿಯ ಗೋಡೆಗಳ ಮೇಲೆ ಏನೂ ಇಲ್ಲದೆ ಶೂನ್ಯವಾಗಿ ಕಾಣಬಹುದು. ನೆತ್ತಿಯ ಮೇಲೆ ನೀಳಾಗಿ ಹರಡಿರುವ ಅನಂತ ಸೌಂದರ್ಯದಿಂದ ತುಂಬಿದ ತಾರಾಮಂಡಲವನ್ನು ವೀಕ್ಷಿಸುವುದಕ್ಕೋಸ್ಕರ ಮೇಲ್ಛಾವಣಿಯನ್ನೂ ಕಟ್ಟಿಯೇನು. ಮೇಲೆ ತಲೆಯೆತ್ತಿ ನೋಡಿದರೆ ಮಿನುಗುತಾರೆಗಳಿಂದ ಕೂಡಿದ ಆಕಾಶದಲ್ಲಿ ಕಣ್ಮನಗಳನ್ನು ತಣಿಸುವ ಆ ರಮಣೀಯ ದೃಶ್ಯಗಳನ್ನು ಯಾವ ಮಾನವ ಕಲಾಕೃತಿ ಕೊಡಬಲ್ಲುದು? ಹೀಗೆಂದ ಮಾತ್ರಕ್ಕೆ ಸಾಮಾನ್ಯ ಕಲಾವಸ್ತುಗಳ ಬೆಲೆಯನ್ನು ಅಲ್ಲಗಳೆಯುತ್ತೇನೆಂದಲ್ಲ. ನಿಸರ್ಗ ಸೌಂದರ್ಯದ ಚಿರಂತನ ಪ್ರತೀಕಗಳಿದಿರು ಇವು ಎಷ್ಟು ನಿಸ್ಸಾರವೆಂಬುದನ್ನು ತೋರಿಸಿದೆ; ಅಷ್ಟೆ. ಮಾನವಕೃತಕಲೆಗಳು ಆತ್ಮವಿಕಾಸಕೆ ಎಷ್ಟರಮಟ್ಟಿಗೆ ಸಹಾಯಕವಾಗುತ್ತವೆಯೋ ಅಷ್ಟರಮಟ್ಟಿಗೆ ಅವಕ್ಕೆ ಬೆಲೆ ಸಿಕ್ಕುತ್ತದೆ"

"ಬಾಹ್ಯ ಸೌಂದರ್ಯದಲ್ಲಿ ಸತ್ಯವನ್ನು ಕಂಡಿದ್ದೇವೆ. ಸತ್ಯದರ್ಶನ ಬಾಹ್ಯ ರೂಪದಲ್ಲಿದೆ ಎನ್ನುತ್ತಾರೆ ಕಲಾವಿದರು. ಆ ಮೂಲಕ ಸತ್ಯದರ್ಶನ ಸಾಧ್ಯವೆ?" ಎಂದು ಪ್ರಶ್ನಿಸಿದ ರಾಮಚಂದ್ರನ್.

ಗಾಂಧಿ ತಕ್ಷಣ ಹೇಳಿದರು. "ಇದನ್ನು ನಾನು ತಲೆಕೆಳಗು ಮಾಡುತ್ತೇನೆ. ನಾನು ಸತ್ಯದಲ್ಲಿ ಸೌಂದರ್ಯವನ್ನು ಕಾಣುತ್ತೇನೆ, ಅಥವಾ ಸತ್ಯದ ಮೂಲಕ ಸೌಂದರ್ಯವನ್ನು ನೋಡುತ್ತೇನೆ. ಸತ್ಯ ವಿಚಾರಗಳಷ್ಟೇ ಅಲ್ಲ. ಸತ್ಯವನ್ನು ಪ್ರತಿಬಿಂಬಿಸುವ ಎಲ್ಲ ವಸ್ತುಗಳೂ ಸುಂದರವೇ. ನಿಜವಾದ ರೂಪಗಳು, ನಿಜವಾದ ಚಿತ್ರಗಳು ಅಥವಾ ನಿಜವಾದ ಗೀತೆಗಳು—ಇವೆಲ್ಲವೂ ಸೌಂದರ್ಯಪೂರ್ಣ. ಜನರು ಸಾಮಾನ್ಯವಾಗಿ ಸತ್ಯದಲ್ಲಿ ಚೆಲುವನ್ನು ಕಾಣುವುದಿಲ್ಲ. ಸಾಮಾನ್ಯ ಮನುಷ್ಯ ಸತ್ಯದ ಚೆಲುವನ್ನರಿಯಲಾರದೆ

ಅದರಿಂದ ದೂರ ಹೋಗುತ್ತಾನೆ. ಜನರು ಸತ್ಯದಲ್ಲಿ ಚೆಲುವನ್ನು ಕಾಣಲಾರಂಭಿಸಿದಾಗ ನಿಜವಾದ ಕಲೆ ಉದಯಿಸುತ್ತದೆ."

ರಾಮಚಂದ್ರನ್ ಪ್ರಶ್ನಿಸಿದ: "ಸತ್ಯವನ್ನು ಸೌಂದರ್ಯದಿಂದಲೂ ಸೌಂದರ್ಯವನ್ನು ಸತ್ಯದಿಂದಲೂ ಬೇರ್ಪಡಿಸಲಾಗದೆ?"

ಗಾಂಧೀ ಹೇಳಿದರು: "ಸೌಂದರ್ಯವೇನೆಂಬುದನ್ನು ಸ್ಪಷ್ಟವಾಗಿ ತಿಳಿಯಬೇಕಲ್ಲ. ಸಾಧಾರಣವಾಗಿ ಜನರು ಯಾವುದನ್ನು ಸೌಂದರ್ಯ ಅನ್ನುತ್ತಾರೋ ಅದೇ ಸೌಂದರ್ಯ ಎನಿಸಿದರೆ ಸತ್ಯ ಸೌಂದರ್ಯಗಳೆರಡೂ ಒಂದಕ್ಕೊಂದು ಬಲುದೂರ. ಅಂದವಾದ ದೈಹಿಕ ಲಕ್ಷಣಗಳಿರುವ ಹೆಣ್ಣನ್ನು ಸೌಂದರ್ಯವತಿ ಎನ್ನಲೇ ಬೇಕೆ?"

ರಾಮಚಂದ್ರನ್ ವಿಚಾರ ಮಾಡದೆ ತಟ್ಟನೆ "ಹೌದು" ಎಂದ.

"ಅವಳ ಶೀಲ ಚೆನ್ನಾಗಿಲ್ಲದಿದ್ದರೂ ಅವಳು ಚೆಲುವೆಯೇನು?" ಪ್ರಶ್ನಿಸಿದರು ಗಾಂಧೀ.

ರಾಮಚಂದ್ರನ್ ಸ್ವಲ್ಪ ತಬ್ಬಿಬ್ಬಾದ, ಆಮೇಲೆ ಹೇಳಿದ: "ಹಾಗಾದರೆ ಅವಳ ಮುಖ ಸುಂದರವಾಗಿರಲಾರದು. ಒಳಗಿನ ಸ್ವಭಾವಕ್ಕೆ ಮುಖ ಕನ್ನಡಿ ಇದ್ದಂತೆ. ಅಪೂರ್ವ ದೃಷ್ಟಿಗ್ರಾಹ್ಯವುಳ್ಳ ಕಲಾವಿದ ಸರಿಯಾದ ಭಾವವನ್ನೇ ಅಭಿವ್ಯಕ್ತಗೊಳಿಸುತ್ತಾನೆ".

ಗಾಂಧೀ ನುಡಿದರು: "ನಿನ್ನ ತರ್ಕಕ್ಕೆ ಆಧಾರವೇ ಇಲ್ಲವಾಗಿದೆ. ಬಾಹ್ಯರೂಪ ಸೊಗಸಾಗಿದ್ದ ಮಾತ್ರಕ್ಕೆ ವಸ್ತು ಚಲುವಲ್ಲ ಎಂದು ನೀನೇ ಒಪ್ಪುತ್ತಿದ್ದೀಯೆ. ಹೊರಗೆ ಹೇಗಾದರೂ ಇರಲಿ, ಅಂತರಂಗದಲ್ಲಿ ಸತ್ತ್ವ ಮಿಂಚುತ್ತಿರುವ ಮುಖವೇ ನಿಜವಾದ ಕಲಾವಿದನಿಗೆ ಚೆಲುವು. ಹೀಗೆಂದರೇನು ತಿಳಿಯಿತೆ? ಸತ್ಯವಿಲ್ಲದೆ ಸೌಂದರ್ಯವಿಲ್ಲ. ಅಷ್ಟೇ ಅಲ್ಲ, ಹೊರನೋಟಕ್ಕೆ ಸ್ವಲ್ಪವೂ ಅಂದವಿಲ್ಲದ ವಸ್ತುವಿನಲ್ಲಿಯೂ ಸತ್ಯ ಅಭಿವ್ಯಕ್ತವಾಗಬಹುದು. ಸಾಕ್ರಟೀಸ್ ಆ ಕಾಲಕ್ಕೆಲ್ಲ ಬಹಳ ಸತ್ಯವಂತ ಎನಿಸಿಕೊಂಡಿದ್ದ ವ್ಯಕ್ತಿ. ಆದರೆ ಅವನಷ್ಟು ಕುರೂಪಿಯಾದ ವ್ಯಕ್ತಿ ಗ್ರೀಸ್ ದೇಶದಲ್ಲಿ ಬೇರೆ ಯಾರೂ ಇರಲಿಲ್ಲವಂತೆ. ಆದರೆ ಸಾಕ್ರಟೀಸನ ಬಾಳೆಲ್ಲ ಸತ್ಯಶೋಧನೆ, ಸತ್ಯಸಾಧನೆಯ ಪ್ರಯೋಗ. ಅಂತೆಯೇ ನನ್ನ ದೃಷ್ಟಿಯಲ್ಲಿ ಸಾಕ್ರಟೀಸನು ಚೆಲುವ. ಫಿಡಿಯೋ ಖ್ಯಾತ ಕಲಾವಿದ. ಬಹಿರಂಗರೂಪದಲ್ಲಿಯೂ ಸೌಂದರ್ಯವನ್ನು ಕಾಣುತ್ತಿದ್ದ ರಸಿಕ. ಆದರೂ ಸಾಕ್ರಟೀಸನ ಸತ್ಯಜೀವನದ ಸೌಂದರ್ಯವನ್ನು ಮೆಚ್ಚಲು ಅವನಿಗೆ ಆ ಕುರೂಪ ಅಡ್ಡಿಬರಲಿಲ್ಲ".

ರಾಮಚಂದ್ರನ್ ಹೇಳಿದ: "ಜಗತ್ತಿನ ಅತ್ಯುತ್ತಮ ಕಲಾಕೃತಿಗಳಲ್ಲಿ ಅನೇಕವು ಹೊಲಸು ಬಾಳುಬಾಳಿದ ಜನರಿಂದ ರಚಿತವಾಗಿವೆಯಲ್ಲ"?

ಗಾಂಧೀ ನುಡಿದರು: "ಅದರ ಅರ್ಥ ಇಷ್ಟೆ. ಬಾಳಿನಲ್ಲಿ ಸತ್ಯ ಅಸತ್ಯಗಳೆರಡೂ ಕಾಣಬರುತ್ತವೆ. ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಒಟ್ಟಿಗೆ ಇರುವುದುಂಟು. ಕಲಾವಿದರಲ್ಲೂ ಒಳ್ಳೆಯ ದೃಷ್ಟಿ ಹಾಗೂ ಕಲುಷಿತ ದೃಷ್ಟಿ ಎರಡೂ ಇರುವುದುಂಟು.

ಅವರ ನೋಟ ಸತ್ಯದಲ್ಲಿ ಸುಳಿದರೆ ಅದು ರಸವಾಗಿ ರಮಣೀಯ ಕಲಾಕೃತಿ ಆಗುತ್ತದೆ. ಅಂಥ ರಸನಿಮಿಷಗಳು ಬಾಳಿನಲ್ಲಿ ಅಪರೂಪವಾದರೆ ಕಲೆಯಲ್ಲೂ ಅಪರೂಪವಾಗುತ್ತವೆ".

ರಾಮಚಂದ್ರನ್: "ಸತ್ಯದ ಅಥವಾ ಒಳ್ಳೆಯ ವಸ್ತುಗಳು ಮಾತ್ರ ಸುಂದರವೆನಿಸಿದರೆ ನೀತಿ ನಿರಪೇಕ್ಷವಾದ ವಸ್ತುಗಳು ಸುಂದರವಾಗಿರುವುದು ಹೇಗೆ? ನೀತಿ, ದುರ್ನೀತಿಗಳೆರಡಕ್ಕೂ ಅತೀತವಾದ ವಸ್ತುಗಳಲ್ಲಿ ಸತ್ಯ ಇದೆಯೇ? ಸೂರ್ಯಾಸ್ತದಲ್ಲಿ ಸತ್ಯ ಇದೆಯೆ? ರಾತ್ರಿ ನಕ್ಷತ್ರಗಳ ಮಧ್ಯೆ ಪ್ರಕಾಶಿಸುವ ಅರ್ಧಚಂದ್ರನಲ್ಲಿ ಸತ್ಯ ಇದೆಯೆ?

ಗಾಂಧಿ: "ನಿಜ, ಈ ಸೌಂದರ್ಯಗಳು ಸತ್ಯವಾದುವು. ಏಕೆಂದರೆ ಅವುಗಳ ಹಿನ್ನೆಲೆಯಲ್ಲಿರುವ ಸೃಷ್ಟಿಕರ್ತನನ್ನು ಕುರಿತು ಆಲೋಚನೆ ಮಾಡುವಂತೆ ನನ್ನನ್ನು ಪ್ರೇರೇಪಿಸುತ್ತವೆ. ಸೃಷ್ಟಿಯ ಕೇಂದ್ರದಲ್ಲಿ ಅವು ಇರುವುದೆಂಬ ಸತ್ಯವೇ ಅವಕ್ಕೆ ಚೆಲುವನ್ನು ಕೊಡುತ್ತದೆ. ಹಾಗಿಲ್ಲದಿದ್ದರೆ ಅವಕ್ಕೆ ಚೆಲುವೆಲ್ಲಿಂದ ಬರಬೇಕು. ಸೂರ್ಯಾಸ್ತದ ಸೋಜಿಗವನ್ನಾಗಲೀ ಚಂದ್ರನ ಸೊಬಗನ್ನಾಗಲೀ ನೋಡಿ ಆನಂದಿಸುವಾಗ ಸೃಷ್ಟಿಕರ್ತನ ಧ್ಯಾನದಲ್ಲಿ ಮುಳುಗಿ ನನ್ನ ಆತ್ಮ ಅರಳುತ್ತದೆ. ಸರ್ವಸೃಷ್ಟಿಯಲ್ಲೂ ಆತನನ್ನೂ ಆತನ ದಯಾಪರತೆಯನ್ನೂ ಕಾಣಲು ಯತ್ನಿಸುತ್ತೇನೆ. ಆತನ ನೆನಪನ್ನೇ ಮಾಡಿಕೊಡದಿದ್ದರೆ ಸೂರ್ಯನ ಉದಯ ಅಸ್ತಗಳು ಕೂಡ ಆತಂಕಕಾರಿಯೇ ಆಗುತ್ತವೆ. ಆತ್ಮೋನ್ನತಿಗೆ ಅಡ್ಡಿಯಾಗುವುದೆಲ್ಲ ಬರಿಯ ಭ್ರಾಂತಿ, ಒಂದು ಜಾಲ; ನಮ್ಮ ದೇಹವಿದ್ದಂತೆ. ದೇಹವೂ ಕೂಡ ಎಷ್ಟೋ ವೇಳೆ ನಮ್ಮ ಮುಕ್ತಿಗೆ ಅಡ್ಡ ಬರುತ್ತದೆ".

ರಾಮಚಂದ್ರನ್: "ಹಾಗಾದರೆ ಸತ್ಯವೇ ಪ್ರಧಾನವಾದ ವಿಷಯ. ಸೌಂದರ್ಯ ಮತ್ತು ಸತ್ಯ ಒಂದೇ ವಸ್ತುವಿನ ಎರಡು ಮುಖಗಳಲ್ಲ."

ಗಾಂಧೀ ಮತ್ತೆ ಒತ್ತಿಹೇಳಿದರು: "ಮೊದಲು ಸತ್ಯವನ್ನು ಅನ್ವೇಷಣೆ ಮಾಡಬೇಕು. ಅದಾದರೆ ಸೌಂದರ್ಯ ಮತ್ತು ಒಳ್ಳೆಯತನ ತಾನೇ ತಾನಾಗಿಸೇರಿಕೊಳ್ಳುತ್ತವೆ. ನನ್ನ ದೃಷ್ಟಿಯಲ್ಲಿ ಜೀಸಸ್ ಶ್ರೇಷ್ಠ ಕಲೋಪಾಸಕ. ಆತ ಸತ್ಯವನ್ನು ಕಂಡ. ಅದನ್ನು ಅಭಿವ್ಯಕ್ತಿಗೊಳಿಸಿದ. ಮುಹಮ್ಮದನೂ ಹಾಗೆಯೇ. ವಿದ್ವಾಂಸರೇ ಹೇಳಿರುವಂತೆ ಅರಾಬಿಕ್ ಸಾಹಿತ್ಯದಲ್ಲೆಲ್ಲ ಕೊರಾನ್ ಅತ್ಯಂತ ಪರಿಪೂರ್ಣ ಕೃತಿ. ಅವರಿಬ್ಬರೂ ಮೊದಲು ಸತ್ಯಕ್ಕಾಗಿ ಹೋರಾಡಿದ್ದರಿಂದ ಸ್ವಾಭಾವಿಕವಾಗಿಯೇ ಅವರ ಅಭಿವ್ಯಕ್ತಿಯಲ್ಲಿ ಸೊಬಗು ಮೂಡಿಬಂತು. ಆದಾಗ್ಯೂ ಜೀಸಸ್ ಆಗಲೀ ಮುಹಮ್ಮದ್ ಆಗಲಿ ಕಲೆಯ ಬಗ್ಗೆ ಬರೆಯಲಿಲ್ಲ. ಅಂತಹ ಸತ್ಯ ಮತ್ತು ಸೌಂದರ್ಯದ ಸಾಕ್ಷಾತ್ಕಾರಕ್ಕಾಗಿ ನಾನು ತವಕಪಡುತ್ತೇನೆ, ಬಾಳುತ್ತೇನೆ; ಹಾಗೂ ಮಡಿಯುತ್ತೇನೆ".

ಅನಂತರ ರಾಮಚಂದ್ರನ್ ಹೇಳಿದ: ಕಲೆಯ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಅದನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ಒಪ್ಪಿಕೊಳ್ಳುತ್ತೇನೆ. ನಿಮ್ಮ ಅಭಿಪ್ರಾಯಗಳನ್ನು ಬರೆದು ಪ್ರಕಟಿಸಿದರೆ ತರುಣ ಪೀಳಿಗೆಗೆ ಉಪಕಾರವಾದೀತು".

ಅದಕ್ಕೆ ಮಂದಹಾಸ ಬೀರುತ್ತಾ ಗಾಂಧೀಜಿ ಉತ್ತರ ನೀಡಿದರು: "ಅದನ್ನು ಎಂದಿಗೂ ಮಾಡಲಾರೆ. ಕಲೆಯ ವಿಷಯವಾಗಿ ನಾನು ಹೇಳಲು ಹೊರಟರೆ ಅಧಿಕ ಪ್ರಸಂಗವಾಗುತ್ತದೆ. ಈ ವಿಚಾರಗಳು ನನ್ನ ಮಟ್ಟಿಗೆ ಮೂಲಭೂತ ಸಿದ್ಧಾಂತ. ಆದರೆ ನಾನೇನೂ ಕಲಾಭ್ಯಾಸಿಯಲ್ಲವಾದ್ದರಿಂದ ಬರೆದು ಪ್ರಕಟಿಸುವ ಗೋಜಿಗೆ ಹೋಗುವುದಿಲ್ಲ. ನನ್ನ ಇತಿಮಿತಿಗಳನ್ನು ನಾನು ಚೆನ್ನಾಗಿ ಅರಿತಿದ್ದೇನೆ. ಆ ಅರಿವೇ ನನ್ನ ಶಕ್ತಿಯ ಮೂಲ. ನನ್ನ ಬಾಳಿನಲ್ಲಿ ನಾನು ಏನಾದರೂ ಸಾಧಿಸಿದ್ದರೆ ಅದೆಲ್ಲವೂ ಈ ಅರಿವಿನಿಂದಲೇ ಆದುದು. ನನ್ನ ಕೆಲಸಗಳೇ ಬೇರೆ, ಕಲಾವಿದನ ಕೆಲಸಗಳೇ ಬೇರೆ. ನನ್ನ ದಾರಿ ಬಿಟ್ಟು ಕಲಾವಿದನ ಮಾತನ್ನೇಕೆ ಆಡಲಿ?".

ರಾಮಚಂದ್ರನ್ ಮತ್ತೊಂದು ಪ್ರಶ್ನೆ ಎತ್ತಿದ: "ನೀವು ಎಲ್ಲ ಯಂತ್ರಗಳಿಗೂ ವಿರೋಧಿಯೆ?"

ಈ ಸರಳ ಪ್ರಶ್ನೆಯನ್ನು ಕೇಳಿ ಗಾಂಧಿ ತುಸು ನಗುತ್ತಾ ಹೇಳಿದರು. "ಅದು ಹೇಗೆ ಸಾಧ್ಯ? ನನ್ನ ದೇಹವೇ ಒಂದು ಕುಶಲವಾದ ಯಂತ್ರವಲ್ಲವೇ? ಚರಖವೂ ಕೂಡ ಒಂದು ಯಂತ್ರ. ಹಲ್ಲಿನ ಸಂದಿಯಲ್ಲಿ ಸೇರಿದ ಕಷ್ಮಲ ತೆಗೆಯುವ ಹುಲ್ಲುಕಡ್ಡಿಯೂ ಒಂದು ಯಂತ್ರವೇ. ನಾನು ಯಂತ್ರವನ್ನು ಬೇಡ ಎನ್ನುವುದಿಲ್ಲ; ಯಂತ್ರದ ಮೇಲಿನ ಅತಿಯಾದ ಭ್ರಮೆ ಬೇಡ ಎನ್ನುತ್ತೇನೆ. ಶರೀರಶ್ರಮವನ್ನು ತಪ್ಪಿಸುವ ಯಂತ್ರ ಬೇಕೆಂಬ ಹುಚ್ಚು ತುಂಬಾ ಇದೆ. ಶ್ರಮವನ್ನು ಉಳಿಸುತ್ತಾ ಹೋಗಿ ಕಡೆಗೆ ಸಹಸ್ರಾರು ಜನ ಕೆಲಸವಿಲ್ಲದೆ ಹಸಿವಿನಿಂದ ಸಾಯಲಾಗಿ ಬೀದಿಯಲ್ಲಿ ಬಿದ್ದಾರು. ಶ್ರಮ ಮತ್ತು ಸಮಯವನ್ನು ಕೇವಲ ಕೆಲವೇ ಮಂದಿಗೆ ಉಳಿಸಬಯಸುವುದಿಲ್ಲ; ಇಡೀ ಮಾನವ ಜನಾಂಗಕ್ಕೆ ಉಳಿಸಬಯಸುತ್ತೇನೆ. ಸಂಪತ್ತು ಕೇವಲ ಹಿಡಿ ಜನರ ಕೈಯಲ್ಲಿ ಕೇಂದ್ರೀಕೃತವಾಗದೆ ಎಲ್ಲರ ಕೈಯಲ್ಲೂ ಸೇರಬೇಕೆಂಬುದೇ ನನ್ನ ಇಷ್ಟ. ಇಂದು ಕೆಲವೇ ಜನರು ಯಂತ್ರದ ಸಹಾಯದಿಂದ ಲಕ್ಷಾಂತರ ಮಂದಿ ಜನರ ಬೆನ್ನ ಮೇಲೆ ಸವಾರಿ ಮಾಡುವ ಹಾಗೆ ಆಗಿದೆ. ಇದರ ಹಿಂದಿರುವ ಉದ್ದೇಶ ದುಡಿತ ಕಡಿಮೆ ಮಾಡುವ ಔದಾರ್ಯವಲ್ಲ; ಲೋಭ. ನಾನು ನನ್ನ ಸರ್ವಶಕ್ತಿಯಿಂದಲೂ ಹೋರಾಡುತ್ತಿರುವುದು ಈ ಪರಿಯ ವ್ಯವಸ್ಥೆಯ ವಿರುದ್ಧ".

ರಾಮಚಂದ್ರನ್: "ಹಾಗಾದರೆ ನಿಮ್ಮ ಹೋರಾಟ ಯಂತ್ರದ ವಿರುದ್ಧ ಅಲ್ಲ. ಅದರ ದುರುಪಯೋಗದ ವಿರುಂದ್ಧ ಅಲ್ಲವೆ?"

ಗಾಂಧಿ: "ನಿಸ್ಸಂಕೋಚವಾಗಿ ಹೌದು ಎನ್ನುತ್ತೇನೆ. ಆದರೆ ಒಂದು ಮಾತು. ವಿಜ್ಞಾನದ ಸತ್ಯಸೂತ್ರಗಳು ಹಾಗೂ ಸಂಶೋಧನೆಗಳು ಲೋಭದ ಸಾಧನವಾಗುವುದು ತಪ್ಪಬೇಕು. ಆಗ ಕೆಲಸಗಾರರ ಶೋಷಣೆ ಆಗುವುದಿಲ್ಲ. ಯಂತ್ರದಿಂದ ಯಾವ ಅಡ್ಡಿಯೂ

ಇರುವುದಿಲ್ಲ. ಅದು ಸಹಾಯಕವಾಗಿರುತ್ತದೆ. ನನ್ನ ಉದ್ದೇಶ ಯಂತ್ರಗಳ ನಿರ್ಮೂಲನ ವಲ್ಲ; ಅವುಗಳನ್ನು ಮಿತಿಯಲ್ಲಿಡುವುದು ಅಷ್ಟೆ".

ರಾಮಚಂದ್ರನ್: "ತರ್ಕಬದ್ಧವಾಗಿ ನೋಡುವುದಾದರೆ ಕ್ಲಿಷ್ಟವಾದ ಶಕ್ತಿ–ಚಾಲಿತ ಯಂತ್ರಗಳೆಲ್ಲಾ ಹೋಗಬೇಕು ತಾನೆ?"

ಗಾಂಧಿ "ಹೋಗಬೇಕಾಗಬಹುದೆಂಬುದನ್ನು ಒಪ್ಪುತ್ತೇನೆ. ಆದರೆ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಮಾನವನೇ ಪರಮಲಕ್ಷ್ಯ. ಯಂತ್ರದ ಬಳಕೆ ಯಿಂದಾಗಿ ಮನುಷ್ಯನ ಕೈಕಾಲುಗಳಿಗೆ ಕೆಲಸವಿಲ್ಲದೆ ಅವು ಕ್ಷೀಣವಾಗಬಾರದು. ಉದಾಹರಣೆಗೆ, ಕೆಲವು ವಿವೇಚನಾಪೂರಿತ ಅಪವಾದಗಳನ್ನು ನಾನೇ ತೋರಿಸುತ್ತೇನೆ. ಬಟ್ಟೆ ಹೊಲಿಯುವ ಸಿಂಗರ್ ಯಂತ್ರ ನೋಡು. ಈಗ ಕಂಡು ಹಿಡಿಯಲಾಗಿರುವ ವಸ್ತುಗಳಲ್ಲೆಲ್ಲ ಅತಿ ಉಪಯುಕ್ತವಾದುದರಲ್ಲಿ ಅದೂ ಒಂದು. ಈ ಯಂತ್ರದ ಹಿನ್ನೆಲೆ ಯಲ್ಲಿ ಒಂದು ಪ್ರೇಮಮಯ ಕಥೆಯೇ ಇದೆ. ತನ್ನ ಹೆಂಡತಿಯು ಕೈಲಿ ಬಟ್ಟೆ ಹೊಲಿ ಯುವಾಗ ಪಡುತ್ತಿದ್ದ ಕಷ್ಟನೋಡಿ ಸಿಂಗರನಿಗೆ ಮನಸ್ಸು ಕರಗಿತು. ಅವಳಲ್ಲಿಟ್ಟಿದ್ದ ಪ್ರೇಮದಿಂದಾಗಿ ಅವನು ಸಿಂಗರ್‌ಯಂತ್ರವನ್ನು ಕಂಡು ಹಿಡಿದ. ಅನಾವಶ್ಯಕ ಶ್ರಮವನ್ನು ತಪ್ಪಿಸುವುದೇ ಅವನ ಉದ್ದೇಶವಾಗಿತ್ತು. ಅದರಿಂದ ಆಕೆಯೊಬ್ಬಳಿಗಲ್ಲ, ಆ ಯಂತ್ರ ವನ್ನು ಕೊಳ್ಳಬಲ್ಲವರಿಗೆಲ್ಲ ಶ್ರಮ ಕಡಿಮೆಮಾಡಿದ."

ರಾಮಚಂದ್ರನ್: "ಹಾಗಿದ್ದ ಪಕ್ಷದಲ್ಲಿ ಸಿಂಗರ್ ಹೊಲಿಗೆಯಂತ್ರಗಳನ್ನು ತಯಾರಿಸಲು ಕಾರ್ಖಾನೆ ಇರಬೇಕಾಗುತ್ತದೆ. ಅಲ್ಲಿ ಶಕ್ತಿ ಚಾಲಿತ ಯಂತ್ರಗಳನ್ನು ಉಪಯೋಗಿಸಬೇಕಾಗುತ್ತೆ".

ರಾಮಚಂದ್ರನ್‌ರ ವಿರೋಧಕ್ಕೆ ನಸುನಕ್ಕು ಗಾಂಧೀ ಹೇಳಿದರು. "ಹೌದು, ಅಂತಹ ಕಾರ್ಖಾನೆಗಳ ರಾಷ್ಟ್ರೀಕರಣವಾಗಬೇಕು ಅಥವಾ ಅವು ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರಬೇಕೆಂದು ಹೇಳುವಷ್ಟು ಮಟ್ಟಿಗೆ ನಾನು ಸಮಾಜವಾದಿ. ಅವು ಅತ್ಯಂತ ಆದರ್ಶರೀತಿಯಲ್ಲಿ ನಡೆಯಬೇಕು. ಅವುಗಳ ಧ್ಯೇಯ ಲಾಭದಗಳಿಕೆಯಾಗಿರದೆ ಮಾನವ ಕಲ್ಯಾಣ ಸಾಧನೆ ಆಗಿರಬೇಕು. ಲೋಭದ ಸ್ಥಾನದಲ್ಲಿ ಪ್ರೇಮ ವಿರಾಜಮಾನವಾಗಬೇಕು. ಕಾರ್ಮಿಕರ ಸ್ಥಿತಿಗತಿಗಳಲ್ಲಿ ಸುಧಾರಣೆಯನ್ನು ನಾನು ಬಯಸುತ್ತೇನೆ. ಧನಸಂಗ್ರಹಣೆಯ ಈ ಹುಚ್ಚು ಓಟ ನಿಲ್ಲಬೇಕು. ಕಾರ್ಮಿಕರಿಗೆ ಜೀವನ ವೇತನದ ಭರವಸೆ ಕೊಡಬೇಕು ಅವರ ಕೆಲಸ ಬೇಸರಿಕೆಯ ಶ್ರಮವಾಗಿರದೆ ಹಿತವಾದ ದಿನಚರಿ ಆಗಬೇಕು. ಇಂತಹ ಪರಿಸ್ಥಿತಿಯಲ್ಲಿ ಯಂತ್ರ ಉಪಯೋಗವಾದರೆ ಕಾರ್ಮಿಕನಿಗೂ ಸರ್ಕಾರಕ್ಕೂ ಯಂತ್ರದ ಮಾಲೀಕನಿಗೂ ಎಲ್ಲರಿಗೂ ಅನುಕೂಲ. ಹಾಗಾದರೆ ಇಂದಿನ ಹುಚ್ಚು ಓಟ ನಿಂತು ಕೆಲಸಗಾರರು ಆಕರ್ಷಕವೂ ಆದರ್ಶವೂ ಆದ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಾರೆ. ಇದು ನನ್ನ ಮನಸ್ಸಿನಲ್ಲಿರುವ ಅಪವಾದಗಳಲ್ಲೊಂದು. ಹೊಲಿಗೆಯ ಯಂತ್ರದ ಹಿನ್ನೆಲೆಯಲ್ಲಿ ಪ್ರೇಮ ತುಂಬಿದೆ. ವ್ಯಕ್ತಿಯೇ ಪರಮ ಲಕ್ಷ್ಯ. ವ್ಯಕ್ತಿಯ ಶ್ರಮವನ್ನು ಉಳಿಸುವ ಧ್ಯೇಯದ ಹಿಂದೆ ಪ್ರಾಮಾಣಿಕವಾದ ಮಾನವೀಯ ದೃಷ್ಟಿ ಇರಬೇಕು

ದುರಾಶೆ ಇರಬಾರದು. ಉದಾಹರಣೆಗೆ ಸೊಟ್ಟಾಗಿರುವ ಕದುರುಗಳನ್ನು ನೇರಮಾಡುವ ಯಂತ್ರವನ್ನು ನಾನು ಸ್ವಾಗತಿಸುತ್ತೇನೆ. ಅಂದ ಮಾತ್ರಕ್ಕೆ ಕಮ್ಮಾರರು ಕದುರುಗಳನ್ನು ಮಾಡಬಾರದೆಂದಲ್ಲ. ಕದುರುಗಳನ್ನು ಅವರೇ ಮಾಡಬೇಕು. ಆದರೆ ಅವುಗಳು ಕೆಟ್ಟು ಹೋದಾಗ ಸರಿಪಡಿಸಿಕೊಳ್ಳಲು ಯಂತ್ರವೊಂದು ನೂಲುವವರ ಬಳಿ ಇರಬೇಕು. ಆದುದರಿಂದ, ಲೋಭಕ್ಕೆ ಬದಲಾಗಿ ಪ್ರೇಮ ಇರಲಿ, ಎಲ್ಲವೂ ಸರಿಹೋಗುತ್ತದೆ".

"ಸಿಂಗರ್ ಹೊಲಿಗೆಯ ಯಂತ್ರ ಮತ್ತು ಕದುರಿನ ಬಗ್ಗೆ ಅಪವಾದ ತೋರಿದರೆ, ಈ ಅಪವಾದಗಳಿಗೆ ಕೊನೆ ಎಲ್ಲಿ" ಎಂದ ರಾಮಚಂದ್ರನ್.

"ಮನುಷ್ಯನಿಗೆ ನೆರವಾಗುವುದನ್ನು ಬಿಟ್ಟು ಅವನ ವ್ಯಕ್ತಿತ್ವಕ್ಕೆ ಧಕ್ಕೆ ತಂದಾಗಲೇ ಯಂತ್ರಕ್ಕೆ ಕೊನೆ. ಮನುಷ್ಯನ ಕೈಕಾಲುಗಳನ್ನು ಕುಂಠಿತಗೊಳಿಸಲು ಯಂತ್ರಕ್ಕೆ ಅವಕಾಶ ವಿರಬಾರದು". ಎಂದರು ಗಾಂಧಿ.

"ನಾನು ವ್ಯವಹಾರಿಕ ದೃಷ್ಟಿಯಿಂದ ಆಲೋಚಿಸುತ್ತಿಲ್ಲ. ಆದರ್ಶ ವ್ಯವಸ್ಥೆಯಲ್ಲಿ ಎಲ್ಲ ಯಂತ್ರಗಳನ್ನೂ ನೀವು ತಳ್ಳಿ ಹಾಕುವುದಿಲ್ಲವೇ? ನೀವು ಹೊಲಿಗೆ ಯಂತ್ರಕ್ಕೆ ಅವಕಾಶ ಕೊಟ್ಟರೆ ಬೈಸಿಕಲ್, ಮೋಟಾರು ಕಾರು ಇತ್ಯಾದಿಗಳಿಗೂ ಅವಕಾಶ ಕೊಡಬೇಕಾಗುತ್ತದೆ, ಅಲ್ಲವೇ?" ಎಂದು ಪ್ರಶ್ನಿಸಿದ ರಾಮಚಂದ್ರನ್.

"ಇಲ್ಲ, ನಾನು ಅವಕಾಶ ಕೊಡಲಾರೆ. ಏಕೆಂದರೆ, ಅವು ಮನುಷ್ಯನ ಮೂಲಭೂತ ಆವಶ್ಯಕತೆಗಳೇನಲ್ಲ. ಮೋಟಾರು ಕಾರಿನ ವೇಗದಲ್ಲಿ ದೂರ ಪ್ರಯಾಣಗಳನ್ನು ಕೈಗೊಳ್ಳುವುದು ಮನುಷ್ಯನ ಮೂಲ ಆವಶ್ಯಕತೆಯಲ್ಲ. ಆದರೆ ಸೂಜಿ ಅತ್ಯಗತ್ಯ ವಸ್ತು. ಅದರ ಆವಶ್ಯಕತೆ ಮೂಲಭೂತ ಸ್ವರೂಪದ್ದು. ಆದರ್ಶದ ದೃಷ್ಟಿಯಿಂದ ಹೇಳುವುದಾದರೆ ನಾನು ಎಲ್ಲ ಯಂತ್ರಗಳನ್ನೂ ನಿರಾಕರಿಸಿಯೇನು. ಅಷ್ಟೇಕೆ, ನನ್ನ ಮೋಕ್ಷಕ್ಕೆ ನೆರವಾಗದ ಈ ನನ್ನ ದೇಹವನ್ನೂ ತಿರಸ್ಕರಿಸಿ ಆತ್ಮದ ಪೂರ್ಣ ವಿವೇಚನೆಯನ್ನು ಅರಸುತ್ತೇನೆ. ಆ ದೃಷ್ಟಿಯಿಂದ ಎಲ್ಲ ಯಂತ್ರಗಳನ್ನೂ ತಿರಸ್ಕರಿಸುತ್ತೇನೆ. ಆದರೆ ಯಂತ್ರಗಳು ಇದ್ದೇ ಇರುತ್ತವೆ. ನಮ್ಮ ಮೈ ಹೇಗೆ ಇದ್ದೇ ಇರಬೇಕೋ ಹಾಗೆಯೇ ಯಂತ್ರವೂ ಇದ್ದೇ ಇರಬೇಕಾಗುತ್ತದೆ. ನಾನು ಆಗಲೇ ಹೇಳಿದಂತೆ ದೇಹವೂ ಕೂಡ ಒಂದು ಪವಿತ್ರ ಯಾಂತ್ರಿಕ ಕೌಶಲ. ಆತ್ಮದ ಉತ್ತುಂಗ ಆರೋಹಣಕ್ಕೆ ದೇಹ ಅಡ್ಡಿಯಾಗುವುದಾದರೆ ಅದೂ ತ್ಯಾಜ್ಯವೇ".

ರಾಮಚಂದ್ರನ್ ಮತ್ತೆ ಪ್ರಶ್ನೆ ಮಾಡಿದ: "ಹಾಗಾದರೆ ಅದೊಂದು ಅನಿಷ್ಟವಾದ ಅನಿವಾರ್ಯವೇ. ಕೆಲವರಾದರೂ ಕಲಾವಿದರು ಸೌಂದರ್ಯದಲ್ಲಿ ಹಾಗೂ ಸೌಂದರ್ಯದ ಮೂಲಕ ಸತ್ಯವನ್ನು ಕಾಣಲು ಸಾಧ್ಯವಿಲ್ಲವೆ?"

"ಕೆಲವರಿಗೆ ಆಗಬಹುದು" ಎಂದು ಒಪ್ಪಿದರು ಗಾಂಧಿ. "ಆದರೆ, ಇಲ್ಲಿ ಕೂಡ ನಾನು ಕೋಟ್ಯಂತರ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಆಲೋಚಿಸಬೇಕು. ಸೌಂದರ್ಯದ ಕಲ್ಪನೆಯನ್ನು ತಂದುಕೊಂಡು ಅದರಲ್ಲಿ ಸತ್ಯವನ್ನು ಕಾಣುವ ವಿಷಯದಲ್ಲಿ ಕೋಟ್ಯಂತರ

ಜನರಿಗೆ ಶಿಕ್ಷಣ ಕೊಡುವುದು ಅಸಾಧ್ಯದ ಮಾತು. ಅವರಿಗೆ ಮೊದಲು ಸತ್ಯ ದರ್ಶನವಾಗಲಿ, ಅನಂತರ ಸೌಂದರ್ಯವನ್ನು ಅವರೇ ಕಾಣುತ್ತಾರೆ: ನನ್ನ ಕನಸು ಮನಸುಗಳಲ್ಲೆಲ್ಲಾ ಒರಿಸ್ಸಾ ಸಮಸ್ಯೆ ಸುಳಿದಾಡುತ್ತಿದೆ. ಹಸಿವಿನಿಂದ ನರಳುತ್ತಿರುವ ಈ ಲಕ್ಷಾಂತರ ಜನರಿಗೆ ಯಾವುದರಿಂದ ಪ್ರಯೋಜನವಾಗುತ್ತದೆಯೋ ಅದು ನನ್ನ ಪಾಲಿಗೆ ಚೆಲುವು. ಮೊದಲು ನಾವು ಜೀವನದ ಆವಶ್ಯಕವಸ್ತುಗಳನ್ನು ಒದಗಿಸೋಣ. ಅನಂತರ ಜೀವನದ ಅಂದಚೆಂದಗಳು ಬಂದೇ ಬರುತ್ತವೆ".

# ಬೆಳಗಾಂ ಕಾಂಗ್ರೆಸ್

## ೧೯೨೪

ಗಾಂಧಿಯವರ ಉಪವಾಸ ಮುಕ್ತಾಯವಾಗುವ ಹೊತ್ತಿಗೆ ಅನಿರೀಕ್ಷಿತ ಘಟನೆಗಳು ಕಾದಿದ್ದುವು. ಅವರು ಮುಸಲ್ಮಾನ ಸ್ನೇಹಿತರೊಂದಿಗೆ ಕೊಹಾತ್‌ಗೆ ಹೋಗಲು ಯೋಚಿಸಿದ್ದರು. ಅಲ್ಲಿ ಹಿಂದೂ ಮುಸಲ್ಮಾನರ ನಡುವೆ ಉಂಟಾಗಿದ್ದ ವಿರಸಕ್ಕೆ ಕಾರಣವನ್ನು ಖುದ್ದಾಗಿ ಸ್ಥಳೀಯ ಜನರಿಂದ ತಿಳಿಯಲು ಅಪೇಕ್ಷಿಸಿದ್ದರು; ಎರಡೂ ಪಂಗಡಗಳ ನಡುವೆ ಶಾಂತಿಯನ್ನು ಮೂಡಿಸಲು ತವಕಗೊಂಡಿದ್ದರು. ಆದರೆ ಅವರು ಕೊಹಾತ್‌ಗೆ ಹೋಗಲು ಸರ್ಕಾರ ಅನುಮತಿ ಕೊಡಲಿಲ್ಲ.

ಬಂಗಾಳದಲ್ಲಿ ಸರ್ಕಾರ ಗದಾಪ್ರಹಾರ ಮಾಡಿತು. ಸ್ವರಾಜ್ಯವಾದಿಗಳ ವಿರುದ್ಧ ಗೌರ್ನರ್‌ರವರೇ ಕಾರ್ಯಾಚರಣೆಯನ್ನು ಆರಂಭಿಸಿದರು. ದಾಸ್ ಮತ್ತು ಅವರ ಅನುಯಾಯಿಗಳು ದೇಶದ ಶತ್ರುಗಳೆಂದೂ ಅವರು ಸರ್ಕಾರದ ಆಡಳಿತವನ್ನು ಭಗ್ನಗೊಳಿಸಿದ್ದಾರೆಂದೂ ಆರೋಪ ಮಾಡಲಾಯಿತು. ೧೯೨೪ರ ಅಕ್ಟೋಬರ್ ೨೫ರಂದು ಗೌರ್ನರ್ ಅವರು ಸುಗ್ರೀವಾಜ್ಞೆಯೊಂದನ್ನು ಹೊರಡಿಸಿದರು; ಕಲ್ಕತ್ತ ಹಾಗೂ ಬಂಗಾಳದ ಇತರ ಅನೇಕ ಕಡೆಗಳಲ್ಲಿ ತಾರತಮ್ಯವಿಲ್ಲದೆ ಸಾಮೂಹಿಕ ದಸ್ತಗಿರಿಗಳೂ ಆದುವು; ಮನೆಗಳ ಶೋಧನೆ ನಡೆಯಿತು; ಅಧಿಕಾರಶಾಹಿ ದಬ್ಬಾಳಿಕೆಯು ಹುಚ್ಚು ಕುಣಿತ ತಾಂಡವವಾಡಿತು. ಅಂದು ಮುಂಜಾನೆ ಆರಂಭವಾದ ದಾಳಿಯ ಕಾರ್ಯಾಚರಣೆ ಇಡೀದಿನ ನಡೆಯಿತು. ಸುಮಾರು ಅರವತ್ತು ಮನೆಗಳ ಮೇಲೆ ದಾಳಿ ಮಾಡಲಾಯಿತು. ಕಾಂಗ್ರೆಸ್ ಕಛೇರಿಗಳನ್ನೂ ಸ್ವರಾಜ್ಯಪಕ್ಷದ ಕಾರ್ಯಾಲಯಗಳನ್ನೂ ಪ್ರಮುಖ ಸ್ವರಾಜ್ಯವಾದಿಗಳ ಮನೆಗಳನ್ನೂ ಶೋಧಿಸಲಾಯಿತು. ಕಲ್ಕತ್ತೆ ಪೌರಸಭೆಯ ಪ್ರಧಾನ ಅಧಿಕಾರಿಯೂ ದಾಸರ ನಿಷ್ಠಾವಂತ ಅನುಯಾಯಿಯೂ ಆಗಿದ್ದ ಸುಭಾಸ್‌ಚಂದ್ರ ಬೋಸರೂ ಸೇರಿದಂತೆ ಸುಮಾರು ನಲವತ್ತು ಜನ ಕಾಂಗ್ರೆಸ್ ಪ್ರಮುಖರನ್ನೂ ಸ್ವರಾಜ್ಯವಾದೀ ಮುಖಂಡರುಗಳನ್ನೂ ಬಂಧಿಸಲಾಯಿತು. ಮನೆಗಳನ್ನು ಜಫ್ತಿಮಾಡಲು ಹೊರಡಿಸಿದ್ದ ಆಜ್ಞೆಯಲ್ಲಿ, ಬಂದೂಕಗಳನ್ನೂ ಬಾಂಬುಗಳನ್ನೂ, ಸ್ಫೋಟಕ ವಸ್ತುಗಳನ್ನೂ ಸಂಗ್ರಹಿಸಿಡಲಾಗಿದೆಯೆಂಬ ಸುದ್ದಿ ಬಂದಿದೆಯೆಂದೂ ಅವುಗಳನ್ನು ವಶಪಡಿಸಿಕೊಳ್ಳುವುದೇ ಜಫ್ತಿಯ ಉದ್ದೇಶವೆಂದೂ ತಿಳಿಸಲಾಗಿತ್ತು. ಆದರೆ ಈ ದಾಳಿಗಳ ಪರಿಣಾಮವಾಗಿ ಅವುಗಳು ಏನೂ ಸಿಕ್ಕಲಿಲ್ಲ. ಪೋಲೀಸರು ಸ್ವರಾಜ್ಯಪಕ್ಷಕೆ ಸೇರಿದ್ದ ಪುಸ್ತಕಗಳನ್ನೂ ಕಾಗದ ಪತ್ರಗಳನ್ನೂ ತೆಗೆದುಕೊಂಡು ಹೋದರು.

ಭಾರತದಾದ್ಯಂತ ಜನ ರೊಚ್ಚಿಗೆದ್ದರು; ಪ್ರತಿಭಟನೆಗಳ ಚಂಡಮಾರುತವೆದ್ದಿತು. ನೂರಾರು ಪ್ರತಿಭಟನಾ ಸಭೆಗಳು ನಡೆದುವು. ಸುಗ್ರೀವಾಜ್ಞೆಯನ್ನು ಖಂಡಿಸಿ ನಿರ್ಣಯಗಳಾದುವು. ಸ್ವರಾಜ್ಯವಾದಿಗಳ ನೀತಿಯನ್ನು ಒಪ್ಪದೇ ಇದ್ದ ಶಾಸ್ತ್ರಿ, ಜಿನ್ನಾ ಮುಂತಾ

ದವರು ಕೂಡ ಸರ್ಕಾರದ ಕ್ರಮವನ್ನು ಒಕ್ಕೊರಲಿನಿಂದ ಖಂಡಿಸಿದರು. ಅತ್ಯಂತ ಕಟುವಾದ ಖಂಡನೆ ಗಾಂಧಿಯವರಿಂದ ಬಂದಿತು. "ಹಿಂಸೆಯ ಸುಗ್ರೀವಾಜ್ಞೆ" ಎಂಬ ಶೀರ್ಷಿಕೆಯಲ್ಲಿ ಅಕ್ಟೋಬರ್ ೩೧ರ "ಯಂಗ್ ಇಂಡಿಯಾ"ದಲ್ಲಿ ಹೀಗೆ ಬರೆದರು:

"ನಿರೀಕ್ಷಿಸಿದಂತೆಯೇ ಆಯಿತು. ಇಂಗ್ಲೀಷ್ ವೃತ್ತಪತ್ರಿಕೆಗಳು ವೈಸರಾಯರು ಸ್ಫೋಟಿಸಬಹುದಾದ ಬಾಂಬುಗಳ ಬಗ್ಗೆ ಪೂರ್ವಸೂಚನೆ ಕೊಟ್ಟೇ ಇದ್ದುವು. ಇದು ಬಂಗಾಳಕ್ಕೆ–ತನ್ಮೂಲಕ ಇಡೀ ಭಾರತಕ್ಕೆ ಯುಗಾದಿಯ ಉಡುಗೊರೆ. ಈ ಕ್ರಮದಿಂದ ನಮಗೆ ಆಶ್ಚರ್ಯವೂ ಆಗಬಾರದು; ಭಯವೂ ಆಗಕೂಡದು. ರೌಲತ್ ಕಾಯಿದೆ ಯೇನೋ ಸತ್ತಿದೆ; ಆದರೆ ಅದರ ಹಿಂದಿದ್ದ ಮನೋಭಾವ ಹಚ್ಚ ಹಸುರಾಗಿಯೇ ಇದೆ. ಎಲ್ಲಿಯವರೆಗೆ ಇಂಗ್ಲೀಷರ ಹಿತಕ್ಕೂ ಭಾರತೀಯರ ಹಿತಕ್ಕೂ ಪರಸ್ಪರ ವಿರೋಧ ಇರುತ್ತದೆಯೋ ಅಲ್ಲಿಯವರೆಗೆ ಅರಾಜಕಹಿಂಸೆ ಹಾಗೂ ಅದರ ಭೀತಿ ಇದ್ದೇ ಇರುತ್ತದೆ. ರೌಲತ್ ಕಾಯಿದೆಯ ಪುನರಾವೃತ್ತಿ ಆಗುತ್ತದೆ. ಅದಕ್ಕೆ ಅಹಿಂಸಾತ್ಮಕ ಅಸಹಕಾರ ಪರಿಹಾರವಾಗಿತ್ತು. ಆದರೆ ಅದನ್ನು ಸಾಕಷ್ಟು ಕಾಲ ಹಾಗೂ ದೂರ ಪ್ರಯೋಗಿಸಲು ನಮಗೆ ಸಹನೆ ಇರಲಿಲ್ಲ.

"ಬಂಗಾಲದ ಸರ್ಕಾರಕ್ಕೆ ಸಾರ್ವಜನಿಕ ಅಭಿಪ್ರಾಯದ ಬೆಂಬಲವಿಲ್ಲವೆಂಬುದನ್ನು ದೇಶಬಂಧು ದಾಸ್ ಅವರು ಬಂಗಾಲದ ಕೌನ್ಸಿಲ್‌ನಲ್ಲಿ ತಾವು ಮಾಡಿದ ಕೆಲಸದ ಮೂಲಕ ತೋರಿಸಿಕೊಟ್ಟಿದ್ದಾರೆ. ಅವರು ಒಂದು ತೆರನಾದ ಭಯೋತ್ಪಾದಕ ವ್ಯವಸ್ಥೆ ಯನ್ನು ನಿರ್ಮಿಸಿದ್ದಾರೆಂಬ ಮಾತನ್ನು ತಳ್ಳಿಹಾಕಬೇಕು. ಅಂತಹ ಆಪಾದನೆಗೆ ಬುಡವೇ ಇಲ್ಲ. ಭಯೋತ್ಪಾದಕ ಚಟುವಟಿಕೆಗಳಿಂದ ನೀವು ಚುನಾವಣೆಗಳನ್ನು ಗೆಲ್ಲಲಾರಿರಿ; ಅವುಗಳಿಂದ ದೊಡ್ಡ ಪಕ್ಷವೊಂದನ್ನು ಸಂಘಟಿಸಲೂ ಸಾಧ್ಯವಿಲ್ಲ. ಬಂಗಾಳದಲ್ಲಿ ದೇಶಬಂಧು ದಾಸ್‌ರವರು ಅವರ ಪಕ್ಷದ ಅಪ್ರತಿಮ ನಾಯಕರೆಂದು ಮನ್ನಣೆ ಪಡೆದಿದ್ದಾರೆ. ಜನಕ್ಕೆ ಮೆಚ್ಚುಗೆ ಆಗುವ ಗುಣ ಅವರಲ್ಲಿ ಇರುವುದೇ ಅದಕ್ಕೆ ಕಾರಣ. ಅದು ಚೆನ್ನಾಗಿ ಎದ್ದು ಕಾಣುತ್ತದೆ. ಜನತೆಗೆ ಅಧಿಕಾರ ಪ್ರಾಪ್ತವಾಗಬೇಕೆಂದು ಅವರು ಬಯಸುತ್ತಾರೆ. ಆಳರಸರಿಗೆ ಅವರು ಮಣಿಯುವುದಿಲ್ಲ. ಬಂಗಾಲ ಹಾಗೂ ಭಾರತ ವನ್ನು ತ್ರಿವಿಧ ಹೊರೆಯಿಂದ ವಿಮೋಚನೆಗೊಳಿಸಲು ಅವರು ಕಾತುರರಾಗಿದ್ದಾರೆ. ಒಂದು ಪಕ್ಷ ಅವರು ರಾಗ ಬದಲಾಯಿಸಿ ಜನಕ್ಕೆ ಸ್ವಾತಂತ್ರ್ಯ ಬೇಡ ಎಂದಲ್ಲಿ ಅವರ ಪ್ರಭಾವ ಅಳಿಯುತ್ತದೆ. ಭಯೋತ್ಪಾದಕ ಚಟುವಟಿಕೆಗಳದ್ದೂ ಏನೂ ನಡೆಯಲಾರದು. ದೇಶಬಂಧುವಿನೊಂದಿಗೆ ನನಗೆ ಭಿನ್ನಾಭಿಪ್ರಾಯಗಳು ಇವೆ, ನಿಜ. ಆದರೆ ಆ ಭಿನ್ನಾಭಿ ಪ್ರಾಯಗಳು ಅವರ ಜ್ವಲಂತ ದೇಶಪ್ರೇಮ ಹಾಗೂ ಅವರ ಅಪಾರ ತ್ಯಾಗವನ್ನು ಮರೆಮಾಚಲಾರವು. ಅವರ ದೇಶಪ್ರೇಮ ನಮ್ಮಲ್ಲಿ ಅತಿಶ್ರೇಷ್ಠರ ದೇಶಪ್ರೇಮದಷ್ಟೇ ಗಾಢವಾಗಿದೆ. ಅವರ ನಿಕಟ ಅನುಯಾಯಿಗಳನ್ನು ಅವರಿಂದ ದೂರ ಮಾಡಲಾಗಿದೆ. ಅವರುಗಳೆಲ್ಲ ಗಣ್ಯ ಮಹನೀಯರು; ಅವರೆಲ್ಲರೂ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರ ರಾಗಿದ್ದಾರೆ, ಅವರನ್ನು ನ್ಯಾಯರೀತಿಯಲ್ಲಿ ಮಾಮೂಲು ಕ್ರಮದಲ್ಲಿ ಬಹಿರಂಗ

ವಿಚಾರಣೆಗೆ ಏಕೆ ಗುರಿ ಮಾಡಬಾರದು? ವಿಶೇಷ ಅಧಿಕಾರದ ಮೂಲಕ ಅವರುಗಳನ್ನು ಸಾಮೂಹಿಕವಾಗಿ ಬಂಧಿಸಿರುವುದು ಸರ್ಕಾರದ ಖಂಡನಾರ್ಹ ಅಸ್ತಿತ್ವಕ್ಕೆ ದ್ಯೋತಕ. ಕೋಟ್ಯಂತರ ಜನರ ಮಧ್ಯೆ ತೀರ ಕಡಿಮೆ ಜನರು ಬಂದೂಕ, ಸಿಡಿಮದ್ದು ಹಾಗೂ ನಿರಂಕುಶ ಅಧಿಕಾರದ ಬಲದಿಂದ ಜೀವಿಸುವುದು ಅನಾಗರಿಕವಷ್ಟೇ ಅಲ್ಲ; ಮಹಾಪರಾಧ. ಬಹುಸಂಖ್ಯಾತ ಜನರ ಮೇಲೆ ಅಧಿಕಾರವನ್ನು ಚಲಾಯಿಸುತ್ತಿರುವುದು ಅವರ ಸಾಮರ್ಥ್ಯದ ಪ್ರದರ್ಶನವೆಂಬುದರಲ್ಲಿ ಸಂದೇಹವಿಲ್ಲ; ಆದರೆ ಅದು ನಾಗರಿಕತೆಯ ಲೇಪವಿರುವ ಅಸಂಸ್ಕೃತ ಪದ್ಧತಿಯೂ ಹೌದು.

"ವಿಚಾರಣೆಗೆ ಗುರಿಯಾಗಿರುವ ಬಂಗಾಳಿಗಳಿಗೆ ನಾನು ಗೌರವಪೂರ್ವಕವಾಗಿ ಹೇಳುವುದು ಇಷ್ಟೆ: 'ನೀವುಗಳು ನಿರಪರಾಧಿಗಳಾಗಿದ್ದರೆ–ನಿಮ್ಮಲ್ಲಿ ಅನೇಕರು ನಿರಪರಾಧಿಗಳೆಂದು ನನಗೆ ನಂಬಿಕೆ ಇದೆ– ನಿಮ್ಮ ಬಂಧನದಿಂದ ದೇಶಕ್ಕೂ ನಿಮಗೂ ಒಳ್ಳೆಯದೇ ಆಗುತ್ತದೆ. ಅದನ್ನು ಸರಿಯಾದ ಮನೋಭಾವದಿಂದ ಸ್ವೀಕರಿಸಬೇಕು. ನಾವು ಕಷ್ಟ ಪಡದೆ ಸ್ವಾತಂತ್ರ್ಯವನ್ನು ಗೆಲ್ಲಲಾಗುವುದಿಲ್ಲ.' ಅರಾಜಕವಾದಿಗಳಿಗೂ ಹಿಂಸೆಯಲ್ಲಿ ನಂಬಿಕೆ ಇರುವವರಿಗೂ ನಾನು ಒತ್ತಿ ಹೇಳುವುದು ಇಷ್ಟೇ; ನಿಮ್ಮ ದೇಶಪ್ರೇಮದ ಬಗ್ಗೆ ನನ್ನ ಮೆಚ್ಚಿಗೆ ಇದೆ; ಆದರೆ ನಿಮ್ಮ ಪ್ರೇಮ ಕುರುಡಾದುದೆಂದು ಹೇಳಬಯಸುತ್ತೇನೆ. ಹಿಂಸೆಯಿಂದ ಭಾರತದ ಸ್ವಾತಂತ್ರ್ಯ ಎಂದಿಗೂ ಸಾಧ್ಯವಿಲ್ಲವೆಂಬುದು ನನ್ನ ಅಭಿಪ್ರಾಯ. ಪ್ರತೀಕಾರ ಭಾವನೆಯಿಲ್ಲದೆ ಪರಿಶುದ್ಧ ಮನಸ್ಸಿನಿಂದ ಕಷ್ಟಪಟ್ಟರೆ ಮಾತ್ರ ಸ್ವಾತಂತ್ರ್ಯ ಪ್ರಾಪ್ತಿ. ಅದೇ ಅತ್ಯಂತ ಖಚಿತವಾದ ಹಾಗೂ ಅತಿ ಶೀಘ್ರವಾದ ಮಾರ್ಗ. ಹಿಂಸಾ ಮಾರ್ಗದಲ್ಲೇ ನಿಮಗೆ ನಂಬಿಕೆ ಇರುವುದಾದಲ್ಲಿ ಅದನ್ನು ಧೈರ್ಯವಾಗಿ ಹೇಳಿಬಿಡಿ. ಅದರಿಂದ ಪ್ರಾಣಹೋದರೂ ಸರಿಯೇ ಎಲ್ಲ ಕಷ್ಟಕ್ಕೂ ಸಿದ್ಧರಾಗಿ. ಹಾಗೆ ಮಾಡಿದಲ್ಲಿ ನಿಮ್ಮ ಧೈರ್ಯವನ್ನೂ ಪ್ರಾಮಾಣಿಕತೆಯನ್ನೂ ತೋರಿಸಿದ ಹಾಗೆ ಆಗುತ್ತದೆ. ಅಲ್ಲದೆ ಅನೇಕ ನಿರಪರಾಧಿಗಳನ್ನು ಅನಪೇಕ್ಷಿತ ತೊಂದರೆಯಿಂದ ಪಾರು ಮಾಡಿದಂತಾಗುತ್ತದೆ".

ಆರೋಗ್ಯ ಸರಿಯಾಗಿಲ್ಲದಿದ್ದರೂ ಗಾಂಧಿಯವರು ಕಲ್ಕತ್ತೆಗೆ ಧಾವಿಸಿದರು. ಅವರು ಅಲ್ಲಿದ್ದುದರಿಂದ ಜನರಿಗೆ ಧೈರ್ಯ ಬಂದಿತು; ಸಮಾಧಾನವಾಯಿತು. ಸಹಸ್ರ ಸಂಖ್ಯೆಯಲ್ಲಿ ಜನರು ಸಾರ್ವಜನಿಕ ಸಭೆಗಳಿಗೆ ಬರುತ್ತಿದ್ದರು. "ನನಗೆ ಎಲ್ಲ ರೀತಿಯ ಹಿಂಸೆಯೂ ಜಿಗುಪ್ಸೆ ಉಂಟುಮಾಡುತ್ತದೆ, ಆದರೆ ಸರ್ಕಾರದ ಅರಾಜಕತೆ ಹಾಗೂ ಪೋಲೀಸರ ಪೀಡನೆ ಇನ್ನೂ ಅಸಹ್ಯಕರವಾದುದು" ಎಂದು ಗಾಂಧಿ ಹೇಳಿದರು. "ಬಂಗಾಳದ ಜನ ಈಗ ಕೆರಳಿರುವಷ್ಟು ಹಿಂದೆಂದೂ ಕೆರಳಿರಲಿಲ್ಲ. ಸರ್ಕಾರಕ್ಕೆ ಎದ್ದು ಕಾಣುವ ವಿಷಯವೆಂದರೆ ಇತ್ತೀಚೆಗೆ ಮತ್ತೆ ಲಭ್ಯವಾಗಿರುವ ಹಿಂದೂ–ಮುಸಲ್ಮಾನರ ಒಗ್ಗಟ್ಟು" ಎಂದರವರು. ಸರ್ಕಾರದ ಪ್ರಹಾರವನ್ನು ತಡೆದುಕೊಳ್ಳಲು ಗಾಂಧಿ, ದಾಸ್ ಮತ್ತು ಮೋತಿಲಾಲ್ ನೆಹರೂ ವಿಧಿವಿಧಾನಗಳನ್ನು ಯೋಜಿಸಿದರು; ಕಲ್ಕತ್ತದಿಂದ ನವೆಂಬರ್ ೬ರಂದು ಈ ಕೆಳಕಂಡ ಹೇಳಿಕೆಯನ್ನು ಪ್ರಕಟಿಸಿದರು.

"ಸ್ವರಾಜ್ಯ ಸಾಧನೆ ಎಲ್ಲ ಪಕ್ಷಗಳ ಗುರಿಯಾಗಿದ್ದರೂ ವಿವಿಧ ಪಕ್ಷಗಳು ಪರಸ್ಪರ ವಿರೋಧಿ ಎಂದು ತೋರುವ ರೀತಿಯಲ್ಲಿ ಕಾರ್ಯವೆಸಗುತ್ತಿರುವುದರಿಂದ ದೇಶದಲ್ಲಿ ಒಡಕುಂಟಾಗಿದೆ; ಅಂತಹ ವಿರೋಧಿ ಚಟುವಟಿಕೆಯಿಂದ ಸ್ವರಾಜ್ಯದತ್ತ ರಾಷ್ಟ್ರದ ಪ್ರಗತಿ ಕುಂಠಿತವಾಗುತ್ತದೆ; ಆದುದರಿಂದ ಆದಷ್ಟು ಮಟ್ಟಿಗೆ ಎಲ್ಲ ಪಕ್ಷ ಗಳನ್ನು ಕಾಂಗ್ರೆಸ್ಸಿನೊಳಗೆ ಸಮಾವೇಶಗೊಳಿಸಿ ಒಂದೇ ವೇದಿಕೆಯ ಮೇಲೆ ತರುವುದು ಅಪೇಕ್ಷಣೀಯ; ಕಾಂಗ್ರೆಸ್ಸಿನೊಳಗೆ ಕೂಡ ಎರಡು ಪರಸ್ಪರ ವಿರೋಧದ ಗುಂಪು ಗಳಿರುವುದರಿಂದ ಕಾಂಗ್ರೆಸ್ ಒಡೆದು ಹೋಗಿ ದೇಶದ ಹಿತಕ್ಕೆ ಧಕ್ಕೆಯಾಗಿರುವುದರಿಂದ ಒಟ್ಟಿನ ಧ್ಯೇಯ ಸಾಧನೆಗಾಗಿ ಈ ಪಕ್ಷಗಳನ್ನೂ ಒಂದುಗೂಡಿಸುವುದು ಅಪೇಕ್ಷಣೀಯ ವಾಗಿದೆ; ಗೌರ್ನರ್ ಜನರಲ್ಲರ ಮಂಜೂರಾತಿಯಿಂದ ಬಂಗಾಳದಲ್ಲಿ ಸ್ಥಳೀಯ ಸರ್ಕಾರ ದಬ್ಬಾಳಿಕೆಯ ನೀತಿಯನ್ನು ಆರಂಭಿಸಿದೆ. ನಮ್ಮ ಅಭಿಪ್ರಾಯದಲ್ಲಿ ಈ ದಮನಕಾರಿ ರೀತಿಯನ್ನು ಹಿಂಸೆಯ ಪರವಾಗಿರುವ ಯಾವುದೇ ಪಕ್ಷದ ವಿರುದ್ಧ ತಾಳದೆ ವಾಸ್ತವವಾಗಿ ಬಂಗಾಳದ ಸ್ವರಾಜ್ಯಪಕ್ಷದ ವಿರುದ್ಧ ಅನುಸರಿಸಲಾಗುತ್ತಿವೆ; ಅಂದರೆ ವಿಧಿವತ್ತಾದ ವ್ಯವಸ್ಥಿತ ಚಟುವಟಿಕೆಯ ವಿರುದ್ಧ ಆದಂತಾಯಿತು. ಆದುದರಿಂದ, ದಬ್ಬಾಳಿಕೆಯ ವಿರುದ್ಧ ರಾಷ್ಟ್ರದ ಒಟ್ಟು ಶಕ್ತಿಯನ್ನು ಕ್ರೋಢೀಕರಿಸಲು ಎಲ್ಲ ಪಕ್ಷಗಳ ಸಹಕಾರವನ್ನು ಪಡೆಯುವುದು ಅತ್ಯಂತ ಜರೂರಿನ ವಿಷಯವಾಗಿದೆ; ಈ ಕೆಳಗೆ ಕಾಣಿಸಿರುವುದನ್ನು ಎಲ್ಲ ಪಕ್ಷಗಳೂ ಒಪ್ಪಿಕೊಂಡು ಕಡೆಗೆ ಬೆಳಗಾಂನಲ್ಲಿ ಸೇರುವ ಕಾಂಗ್ರೆಸ್ ಅಧಿವೇಶನದಲ್ಲಿ ಅಂಗೀಕರಿಸಬೇಕೆಂದು ನಾವು ಒತ್ತಾಯ ಪೂರ್ವಕವಾಗಿ ಶಿಫಾರಸು ಮಾಡುತ್ತೇವೆ:

"ರಾಷ್ಟ್ರೀಯ ಕಾರ್ಯಕ್ರಮವಾಗಿರುವ ಅಸಹಕಾರ ಚಳವಳಿಯನ್ನು ಕಾಂಗ್ರೆಸ್ ಈಗ ಸದ್ಯಕ್ಕೆ ನಿಲ್ಲಿಸಬೇಕು. ಆದರೆ ವಿದೇಶೀ ಬಟ್ಟೆಯನ್ನು ಉಪಯೋಗಿಸುವ ಅಥವಾ ಧರಿಸುವ ಬಗ್ಗೆ ಇರುವ ಬಹಿಷ್ಕಾರಕ್ಕೆ ಇದು ಅನ್ವಯಿಸುವುದಿಲ್ಲ.

"ಕಾಂಗ್ರೆಸ್ಸಿನ ವಿವಿಧ ವಿಭಾಗಗಳ ಕೆಲಸಕಾರ್ಯಗಳನ್ನು, ಆವಶ್ಯಕತೆಗನುಗುಣವಾಗಿ, ಕಾಂಗ್ರೆಸ್ಸಿನ ವಿವಿಧ ಭಾಗಗಳವರು ಮಾಡತಕ್ಕದ್ದೆಂದು ಕಾಂಗ್ರೆಸ್ ನಿರ್ಣಯ ಮಾಡ ಬೇಕು; ಆದರೆ, ಕೈಯಲ್ಲಿ ನೂಲುವುದು, ಕೈಯಲ್ಲಿ ನೇಯುವುದು ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಮಾಡುವುದು ಹಾಗೂ ಕೈಯಲ್ಲಿ ನೂತ ನೂಲಿನಿಂದ ಕೈಮಗ್ಗದಲ್ಲಿ ಮಾಡಿದ ಖಾದಿಯನ್ನು ಪ್ರಚಾರ ಮಾಡುವುದು; ವಿವಿಧ ಪಂಗಡಗಳ ನಡುವೆ—ಅದರಲ್ಲಿ ಹಿಂದೂ ಮತ್ತು ಮುಸಲ್ಮಾನರ ಮಧ್ಯೆ—ಒಗ್ಗಟ್ಟನ್ನು ಮೂಡಿಸು ವುದು, ಹಿಂದೂಗಳು ತಮ್ಮಲ್ಲಿ ಪ್ರಚಲಿತವಾಗಿರುವ ಅಸ್ಪೃಶ್ಯತೆಯನ್ನು ತೊಡೆದು ಹಾಕುವುದು— ಈ ಕಾರ್ಯಕ್ರಮಗಳನ್ನು ಕಾಂಗ್ರೆಸ್ಸಿನ ಎಲ್ಲ ವಿಭಾಗಗಳವರೂ ಮಾಡ ತಕ್ಕದ್ದೆಂದು ಕಾಂಗ್ರೆಸ್ ನಿರ್ಣಯಿಸಬೇಕು; ಕೇಂದ್ರ ಮತ್ತು ಪ್ರಾಂತೀಯ ಶಾಸನ ಮಂಡಲಗಳಿಗೆ ಸಂಬಂಧಿಸಿದ ಕೆಲಸವನ್ನು ಸ್ವರಾಜ್ಯಪಕ್ಷವು ಕಾಂಗ್ರೆಸ್ ಸಂಸ್ಥೆಯ ಘಟಕವಾಗಿದ್ದುಕೊಂಡು ಕಾಂಗ್ರೆಸ್ಸಿನ ಪರವಾಗಿ ನಿರ್ವಹಿಸತಕ್ಕದ್ದು; ಆ ಕೆಲಸಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ಸ್ವರಾಜ್ಯಪಕ್ಷವೇ ಮಾಡಿಕೊಳ್ಳಬೇಕು; ಅದಕ್ಕೆ

ಅಗತ್ಯವಾದ ಹಣವನ್ನು ಕೂಡಿಸಿ ಖರ್ಚುಮಾಡುವ ಜವಾಬ್ದಾರಿಯೂ ಅದರದೇ ಆಗಿರಬೇಕು. ಸಾರ್ವತ್ರಿಕವಾಗಿ ನೂಲು ತೆಗೆಯದಿದ್ದರೆ ಭಾರತವು ಬಟ್ಟೆಗೆ ಸಂಬಂಧಿಸಿದಂತೆ ಸ್ವಪರಿಪೂರ್ಣವಾಗುವುದಿಲ್ಲವೆಂಬುದು ಅನುಭವವೇದ್ಯವಾಗಿದೆ; ಅಲ್ಲದೆ ಕೈಯಲ್ಲಿ ನೂಲುವುದರ ಮೂಲಕ ಜನಸಾಮಾನ್ಯರಿಗೂ ಕಾಂಗ್ರೆಸ್ಸಿನಲ್ಲಿರುವ ಸ್ತ್ರೀ ಪುರುಷರಿಗೂ ಮಧ್ಯೆ ಕಣ್ಣಿಗೆ ಕಾಣುವಂತಹ ಪರಿಣಾಮಕಾರಿ ಸಂಬಂಧವುಂಟಾಗುತ್ತದೆ; ಈ ದೃಷ್ಟಿಯಿಂದಲೂ ಮತ್ತು ಕೈಯಲ್ಲಿ ನೂಲುವುದನ್ನೂ ಕೈನೂಲಿನ ಸಾಮಗ್ರಿಗಳನ್ನು ಪ್ರಚಾರ ಮಾಡುವ ದೃಷ್ಟಿಯಿಂದಲೂ ಕಾಂಗ್ರೆಸ್ ತನ್ನ ಅಂಗರಚನೆಯ ಏಳನೆಯ ವಿಧಿಯನ್ನು ತೆಗೆದುಹಾಕಬೇಕು; ಅದಕ್ಕೆ ಬದಲಾಗಿ ಇದನ್ನು ಸೇರಿಸಬೇಕು: ಹದಿನೆಂಟು ವರ್ಷಕ್ಕೆ ಕಡಿಮೆ ಇರುವ ಮತ್ತು ಕೈಯಲ್ಲಿ ನೂತು ನೇಯ್ಗೆ ಮಾಡಿದ ಖದ್ದರ್ ಅನ್ನು ಕಾಂಗ್ರೆಸ್ ಸಮಾರಂಭಗಳಲ್ಲಿ ಅಥವಾ ಕಾಂಗ್ರೆಸ್ಸಿನ ಕೆಲಸದಲ್ಲಿ ನಿರತರಾಗಿದ್ದಾಗ ಧರಿಸದ ಯಾರೂ ಕಾಂಗ್ರೆಸ್ಸಿನ ಯಾವುದೇ ಸಮಿತಿಯಲ್ಲಾಗಲೀ ಸಂಸ್ಥೆಯಲ್ಲಾಗಲೀ ಸದಸ್ಯರಾಗಿರುವಂತಿಲ್ಲ; ಅಷ್ಟೇ ಅಲ್ಲದೆ, ಸ್ವಂತವಾಗಿ ತಿಂಗಳಿಗೆ ಎರಡು ಸಾವಿರ ಗಜಗಳಷ್ಟು ಸಮನಾಗಿ ನೂತ ದಾರವನ್ನು ಕೊಡದಿದ್ದರೆ ಸದಸ್ಯರಾಗುವ ಹಾಗಿಲ್ಲ; ಒಂದು ಪಕ್ಷ ಖಾಯಿಲೆ ಇದ್ದರೆ, ಮನಸ್ಸಿಲ್ಲದಿದ್ದರೆ, ಅಥವಾ ಅಂತಹ ಮತ್ತಾವುದೇ ಕಾರಣದಿಂದ ಸ್ವಂತ ನೂಲಲು ಆಗದಿದ್ದರೆ ಅಷ್ಟು ಪ್ರಮಾಣದ ನೂಲನ್ನು ಬೇರೆಯವರಿಂದಲಾದರೂ ಪಡೆದು ಸಲ್ಲಿಸಬೇಕು".

ಮೇಲ್ಕಂಡ ಹೇಳಿಕೆ ಬಗ್ಗೆ ವಿವರಣೆ ನೀಡುತ್ತಾ ಗಾಂಧಿಯವರು ಹೀಗೆ ಬರೆದರು: "ನನ್ನ ಕೈಲಿ ಎಷ್ಟು ಸಾಧ್ಯವಿತ್ತೋ ಅಷ್ಟರವರೆಗೆ ನಾನು ಸ್ವರಾಜ್ಯವಾದಿಗಳಿಗೆ ಬಿಟ್ಟು ಕೊಟ್ಟಿದ್ದೇನೆ. ನಾನು ಬಿಟ್ಟುಕೊಟ್ಟಿದ್ದು ನನ್ನ ನಿರೀಕ್ಷೆಯನ್ನೂ ಮೀರಿತು, ಎನ್ನಬೇಕು. ಹಾಗೆ ಮಾಡಲು ದೇವರು ನನಗೆ ಶಕ್ತಿ ಕೊಟ್ಟನಲ್ಲ, ಅದಕ್ಕೆ ಅವನನ್ನು ವಂದಿಸುತ್ತೇನೆ. ಈ ಒಪ್ಪಂದದ ಪ್ರಕಾರ ಸ್ವರಾಜ್ಯ ವಾದಿಗಳನ್ನೂ ಬದಲಾವಣೆ ಬೇಡವೆನ್ನುವವರನ್ನೂ ಸಮಾನವಾಗಿ ಪರಿಗಣಿಸಿದಂತೆ ಆಗುತ್ತದೆ. ತನ್ನ ತತ್ವಗಳನ್ನು ಬಿಟ್ಟುಕೊಡದೆ ಆದಷ್ಟು ಮಟ್ಟಿಗೆ ಇತರರೊಂದಿಗೆ ಹೊಂದಿಕೊಂಡು ಹೋಗುವುದೇ ಅಹಿಂಸೆಯ ಅರ್ಥ. ತಮ್ಮದು ಉದಯೋನ್ಮುಖ ಸಂಸ್ಥೆಯೆಂದು ಸ್ವರಾಜ್ಯವಾದಿಗಳು ಹೇಳಿಕೊಳ್ಳುತ್ತಾರೆ. ಅವರು ಸರ್ಕಾರದ ಮೇಲೆ ಪರಿಣಾಮ ಬೀರಿದ್ದಾರೆಂಬುದರಲ್ಲಿ ಸಂದೇಹವೇ ಇಲ್ಲ. ಇದರ ಪ್ರಯೋಜನ ಎಷ್ಟು ಎನ್ನುವ ಬಗ್ಗೆ ಭಿನ್ನಾಭಿಪ್ರಾಯವಿರಬಹುದು. ಆದರೆ ಅವರು ಪರಿಣಾಮ ಬೀರಿದ್ದಾರೆಂಬ ಅಂಶವನ್ನು ಅಲ್ಲಗಳೆಯುವ ಹಾಗಿಲ್ಲ. ಅವರು ದೃಢ ಸಂಕಲ್ಪವನ್ನು ತೋರಿದ್ದಾರೆ; ಅವರಲ್ಲಿ ಶಿಸ್ತಿದೆ; ಸಾಮರಸ್ಯವಿದೆ. ಪ್ರಭುತ್ವವನ್ನು ಪ್ರತಿಭಟಿಸುವ ಮಟ್ಟಿಗೆ ಅವರ ನೀತಿ ಮುಂದೆ ಸಾಗಿದೆ. ಶಾಸನ ಮಂಡಲವನ್ನು ಪ್ರವೇಶಿಸುವುದು ಅಪೇಕ್ಷಣೀಯ ಎಂದು ಭಾವಿಸಿದ ಮೇಲೆ ಅವರು ಈ ಮಂಡಲಗಳಲ್ಲಿ ಹೊಸ ಚೇತನವನ್ನು ಮೂಡಿಸಿದ್ದಾರೆಂಬುದನ್ನು ಒಪ್ಪಿಕೊಳ್ಳಬೇಕು. ಅವರ ಪ್ರತಿಭೆ, ಬುದ್ಧಿವಂತಿಕೆಯೆಲ್ಲ ದೇಶದ ದೃಷ್ಟಿಯನ್ನು ಬೇರೆ ಕಡೆಗೆ ಹೊರಳಿಸುತ್ತೆಂಬುದು

ನನ್ನಂತಹವರಿಗೆ ವಿಷಾದಕರ ಸಂಗತಿಯೇ ಸರಿ. ಆದರೆ ಸಮರ್ಥರಾದ ನಮ್ಮ ಜನರು ಶಾಸನಸಭೆಗಳಲ್ಲಿ ನಂಬಿಕೆ ಇಟ್ಟಿರುವವರೆಗೆ ಶಾಸನ ಮಂಡಲಗಳ ಪೂರ್ಣ ಪ್ರಯೋಜನ ವನ್ನು ಪಡೆಯಬೇಕಾಗುತ್ತದೆ. ಬದಲಾವಣೆಗೆ ಸರ್ವಥಾ ಒಪ್ಪದ ನಾನು ಅವರ ನಿಲುವನ್ನು ಸಹಿಸಲೇ ಬೇಕು, ಅವರ ಜೊತೆ ಕೆಲಸ ಮಾಡಬೇಕು. ಅಷ್ಟೇ ಅಲ್ಲ; ಸಾಧ್ಯವಾದೆಡೆ ಅವರನ್ನು ನಾನು ಬಲಗೊಳಿಸಲೂ ಬೇಕು."

ಸ್ವರಾಜ್ಯವಾದಿಗಳೊಂದಿಗೆ ಒಡಂಬಡಿಕೆಗೆ ಬಂದದ್ದಕ್ಕಾಗಿ ಗಾಂಧಿಯವರು ಟೀಕೆ ಗಳಿಗೆ ಗುರಿಯಾದರು. ಅದಕ್ಕೆ ಗಾಂಧಿಯವರ ಉತ್ತರ ಹೀಗಿತ್ತು:

"ಸ್ವರಾಜ್ಯವಾದಿಗಳೊಡನೆ ನಾನು ಮಾಡಿಕೊಂಡ ಒಪ್ಪಂದದ ಬಗೆಗೆ 'ಬದಲಾವಣೆ ಬೇಡವೆನ್ನುವವರು' ತೀವ್ರ ಅಸಮಾಧಾನಗೊಂಡಿದ್ದರೆ ಆಶ್ಚರ್ಯವಿಲ್ಲ. ಅಹಿಂಸಾ ಶಾಸ್ತ್ರದ ನಮ್ರಶೋಧಕ ನಾನು ಎಂದು ಎಷ್ಟೋ ಸಲ ಹೇಳಿದ್ದೇನೆ. ಅಹಿಂಸೆಯ ಅಂತರಾಳ ನನ್ನನ್ನೇ ಎಷ್ಟೋ ವೇಳೆ ತಬ್ಬಿಬ್ಬು ಮಾಡಿದೆ; ಹಾಗಿರುವಾಗ ನನ್ನ ಸಹ ಕಾರ್ಯಕರ್ತರ ವಿಚಾರ ಹೇಳಬೇಕಾಗೇ ಇಲ್ಲ. ಈ ಒಪ್ಪಂದವು ಸಂಬಂಧಪಟ್ಟ ಪಕ್ಷಗಳನ್ನು ಬಿಟ್ಟರೆ ಮತ್ತೆ ಯಾರಿಗೂ ಸಮಾಧಾನ ತಂದಿಲ್ಲವೆಂಬುದನ್ನು ಗ್ರಹಿಸಿದ್ದೇನೆ. ನಾನು ಸ್ವರಾಜ್ಯವಾದಿಗಳಿಗೆ ಶರಣಾಗತನಾಗಿ ಬಿಟ್ಟಿದ್ದೇನೆಂದು ಅನೇಕ ಮಂದಿ ಆಂಗ್ಲೇಯರು ಭಾವಿಸಿದ್ದಾರೆ. 'ಬದಲಾವಣೆ ಬೇಡದವರು' ಇದನ್ನು ದ್ರೋಹ ಇಲ್ಲವೇ ತೀವ್ರ ಲೋಪ ಎಂದೇ ಭಾವಿಸಿದ್ದಾರೆ. ವಿದ್ಯಾರ್ಥಿಗಳಂತೂ ದಿಗ್ಭ್ರಾಂತಿಗೊಂಡಿದ್ದಾರೆಂದು ಒಬ್ಬ ಮಿತ್ರ ಹೇಳುತ್ತಾರೆ. ಅಸಹಕಾರ ಚಳುವಳಿಯನ್ನು ಸ್ಥಗಿತಗೊಳಿಸಿರುವುದರಿಂದ ನಾವು ರಾಷ್ಟ್ರೀಯ ಶಾಲೆಗಳಲ್ಲಿ ಏಕೆ ಓದಬೇಕು ಎಂದು ಅವರು ಕೇಳುತ್ತಾರೆ. ಅವರ ತ್ಯಾಗ ಅಪಾರ; ಒಪ್ಪಂದದಲ್ಲಿ ಅವರ ಬಗ್ಗೆ ಲಕ್ಷ್ಯ ತೋರಿಲ್ಲ. ಆಂಧ್ರದ ಮಿತ್ರನೊಬ್ಬ ಬರೆದಿರುವ ಪತ್ರ ನನ್ನ ತೀವ್ರ ಗಮನವನ್ನು ಸೆಳೆದಿದೆ. ಆತ ತರ್ಕಬದ್ಧ ಉತ್ತರವನ್ನು ಕೇಳಿದ್ದಾನೆ.

"ನಾನು ಬಹಳ ಮಟ್ಟಿಗೆ ನನ್ನ ನಿಲುವನ್ನು ಬಿಟ್ಟುಕೊಟ್ಟಿದ್ದೇನೆ ಎಂಬುದರಲ್ಲಿ ಸಂದೇಹವಿಲ್ಲ. ಅದನ್ನು ಪೂರ್ಣ ಪರಿಜ್ಞಾನದಿಂದಲೇ ಮಾಡಿದ್ದೇನೆ. ಆದರೆ ಆಂಗ್ಲ ಪತ್ರಿಕೆಯೊಂದು ಬರೆದಿರುವ ಹಾಗೆ ನಾನು ಹಿಂಸೆಯ ಪಕ್ಷಕ್ಕೆ ಶರಣಾಗಿಲ್ಲ. ಸ್ವರಾಜ್ಯ ಪಕ್ಷ ಹಿಂಸೆಯಲ್ಲಿ ನಂಬಿಕೆ ಇಟ್ಟಿರುವ ಪಕ್ಷ ಎಂಬುದನ್ನು ನಾನು ನಿರಾಕರಿಸುತ್ತೇನೆ. ಅಂತಹ ಆರೋಪಣೆಗಳನ್ನು ದಾದಾಭಾಯಿ ನವರೋಜಿ ಮತ್ತು ನ್ಯಾಯಾಧೀಶ ರಾನಡೆ ವಿರುದ್ಧವೂ ಮಾಡಲಾಗಿತ್ತು. ಅವರಲ್ಲಿ ಅಪನಂಬಿಕೆಯಿದ್ದು ಅವರ ಹಿಂದೆ ಗೂಢಚಾರರನ್ನು ಹಾಕಲಾಗಿತ್ತು. ದಿವಂಗತ ಹರಿಕೃಷ್ಣಲಾಲರಿಗೆ ಯಾವ ಹಿಂಸಾಕಾರಿ ಪಕ್ಷದೊಡನೆಯೂ ಸಂಬಂಧವಿರಲಿಲ್ಲ. ಆದರೂ ಸರ್ ಮೈಕೆಲ್ ಓಡಯರ್‌ರು ಅವರನ್ನು ಬಂಧಿಸಿ ಸೆರೆಮನೆಯಲ್ಲಿಟ್ಟರು. ಸ್ವರಾಜ್ಯಪಕ್ಷಕ್ಕೆ ನಾನು ಈ ಪರಿಸ್ಥಿತಿಯಲ್ಲಿ ನೆರವು ನೀಡದಿದ್ದರೆ ನಾನು ದೇಶಕ್ಕೆ ಅನ್ಯಾಯ ಮಾಡಿದಂತೆ ಆಗುತ್ತಿತ್ತು. ಅದು

ಹಿಂಸಾಕೃತ್ಯದಲ್ಲಿ ತೊಡಗಿದುದರ ಬಗ್ಗೆ ಸ್ಪಷ್ಟವಾಗಿ ತೋರಿಸಿ ಕೊಟ್ಟಲ್ಲಿ ಅದನ್ನು ಕಟುವಾಗೆ ಖಂಡಿಸಲು ನಾನು ತಯಾರಿದ್ದೇನೆ. ಹಾಗೆ ರುಜುವಾತು ಮಾಡಿಕೊಟ್ಟರೆ ಅದರೊಂದಿಗೆ ನನ್ನ ಸಂಬಂಧವನ್ನು ತ್ಯಜಿಸಲು ಸಿದ್ಧ. ಆದರೆ ಎಲ್ಲಿಯವರೆಗೆ ಅದನ್ನು ರುಜುವಾತು ಮಾಡುವುದಿಲ್ಲವೋ ಅಲ್ಲಿಯವರೆಗೆ ನಾನು ಅದಕ್ಕೆ ಬೆಂಬಲಕೊಡುವುದು ಶತಸ್ಸಿದ್ಧ. ಶಾಸನ ಮಂಡಲವನ್ನು ಪ್ರವೇಶಿಸುವುದರಲ್ಲಿಯಾಗಲೀ ಅಲ್ಲಿ ನಡೆಸುವ ವಾಗ್ಯುದ್ಧದ ರೀತಿನೀತಿಯಲ್ಲಾಗಲೀ ನನಗೆ ನಂಬಿಕೆ ಇಲ್ಲ; ಆದರೂ ಈಗ ನಾನು ಆ ಪಕ್ಷಕ್ಕೆ ಬೆಂಬಲ ಕೊಡಲೇ ಬೇಕು.

"ಆ ಪಕ್ಷವನ್ನು ಕಾಂಗ್ರೆಸ್ ಸಂಸ್ಥೆಯ ಭಾಗವೆಂದು ಪರಿಗಣಿಸಿದ ಮಾತ್ರಕ್ಕೆ ಸದಸ್ಯರುಗಳು ವೈಯಕ್ತಿಕವಾಗಿ ತಮ್ಮ ಅಸಹಕಾರ ಚಳುವಳಿಯನ್ನು ಕೈಬಿಟ್ಟಂಟತಾಗು ವುದಿಲ್ಲ. ಸ್ವರಾಜ್ಯ ಪಕ್ಷವು ಕಾಂಗ್ರೆಸ್ಸಿನ ಬಲಿಷ್ಠ ಹಾಗು ವರ್ಧಮಾನ ವಿಭಾಗ ಎಂಬುದನ್ನು ಮನಗಾಣುವಂತಾಗುತ್ತದೆ ಅಷ್ಟೆ. ಅದು ಹೋರಾಟವಿಲ್ಲದೆ ಹಿಮ್ಮೆಟ್ಟಲು ನಿರಾಕರಿಸಿದರೆ ಅಥವಾ ಘರ್ಷಣೆಯನ್ನು ತಪ್ಪಿಸುವುದು ಅಗತ್ಯ ಹಾಗೂ ಸಾಧುವೆಂದು ಭಾವಿಸುವು ದಾದರೆ, ಅದಕ್ಕೆ ಅಧಿಕೃತ ಮನ್ನಣೆ ಕೊಡಬೇಕಾದುದು ಅನಿವಾರ್ಯವಾಗುತ್ತದೆ. ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಎಲ್ಲ ಅಂಶಗಳಲ್ಲೂ ನಂಬಿಕೆ ಇಟ್ಟಿರುವನೆಂದು ಭಾವಿಸ ಲಾಗುವುದಿಲ್ಲ. ನನ್ನ ನಿಲುವು ಈ ಸಂದರ್ಭದಲ್ಲಿ ಸ್ವಲ್ಪ ಬದಲಾಗಿದೆ ಎನ್ನುವುದನ್ನು ಒಪ್ಪುತ್ತೇನೆ. ಈ ಒಪ್ಪಂದ ಅಸ್ತಿತ್ವಕ್ಕೆ ಬರಲು ನಾನು ಕಾರಣನಾಗಿದ್ದೇನೆ. ಅದಕ್ಕಾಗಿ ನಾನು ವಿಷಾದಪಡುವುದಿಲ್ಲ. ಸರಿಯೋ, ತಪ್ಪೋ ಮಾರ್ಗದರ್ಶನಕ್ಕಾಗಿ ದೇಶ ನನ್ನ ಕಡೆ ನೋಡುತ್ತದೆ. 'ಬದಲಾವಣೆ ಬೇಡವೆನ್ನುವವರ' ಕಡೆಯಿಂದ ಯಾವ ಅಡೆತಡೆಗಳೂ ಇಲ್ಲದೆ ಸ್ವರಾಜ್ಯ ಪಕ್ಷವು ತನ್ನ ಕಾರ್ಯಕ್ರಮವನ್ನು ಈಡೇರಿಸಲು ಪೂರ್ಣ ಅವಕಾಶ ವಿರಬೇಕೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಅದು ದೇಶದ ಹಿತದಿಂದ ಸಾಧುವೆಂದು ಭಾವಿಸಿದ್ದೇನೆ. 'ಬದಲಾವಣೆ ಬೇಡವೆನ್ನುವವರು' ತಮಗೆ ಇಷ್ಟವಿಲ್ಲದಿದ್ದಲ್ಲಿ ಸ್ವರಾಜ್ಯ ಪಕ್ಷದ ಚಟುವಟಿಕೆಗಳಲ್ಲಿ ಭಾಗವಹಿಸಬೇಕಾಗಿಲ್ಲ. ಅವರುಗಳು ರಚನಾತ್ಮಕ ಕಾರ್ಯವನ್ನೇ ಮಾಡಿಕೊಂಡು ಹೋಗಲು ಅಭ್ಯಂತರವಿಲ್ಲ. ಅವರು ವೈಯಕ್ತಿಕ ಅಸಹಕಾರದ ಕಾರ್ಯ ಕ್ರಮ ಇಟ್ಟುಕೊಳ್ಳಲು ಸ್ವತಂತ್ರರು. ಕಾಂಗ್ರೆಸ್ ಅಸಹಕಾರವನ್ನು ತಾತ್ಕಾಲಿಕವಾಗಿ ನಿಲ್ಲಿಸಿದೆ ಎಂದರೆ, ಅರ್ಥ ಇಷ್ಟೆ: ವೈಯಕ್ತಿಕವಾಗಿ ಅಸಹಕಾರ ಚಳವಳಿ ನಡೆಸುವವರಿಗೆ ಕಾಂಗ್ರೆಸ್ ಸಂಸ್ಥೆಯ ಬೆಂಬಲ ಇರುವುದಿಲ್ಲ. ಅವರು ತಮ್ಮ ಸ್ವಶಕ್ತಿಯಿಂದಲೇ ಮಾಡ ಬೇಕು. ಅವರ ಶಕ್ತಿಯೆಲ್ಲ ಅಂತರಾತ್ಮನಿಂದ ಬರಬೇಕು. ಅದೇ ಅವರ ಪರೀಕ್ಷೆ. ಅವರ ನಂಬಿಕೆ ದೃಢವಾಗಿದ್ದರೆ ಅವರಿಗೂ ಶ್ರೇಯಸ್ಸು, ಅಸಹಕಾರಕ್ಕೂ ಜಯ. ಈ ನಿಲುಗಡೆಯಿಂದ ಅವರ ನಂಬಿಕೆ ಮಾಯವಾದಲ್ಲಿ ಅಸಹಕಾರಕ್ಕೆ ಮೃತ್ಯುವೇ ಸರಿ. ಸಾರ್ವಜನಿಕ ಜೀವನದಲ್ಲಿ ಅದು ಒಂದು ಶಕ್ತಿಯಾಗಿ ಉಳಿಯುವುದಿಲ್ಲ. 'ನೀವೇ ಹಿಂದೇಟು ಹಾಕಿದರೆ ಸಾಮಾನ್ಯ ಜನರ ಮಾತೇನು' ಎಂದು ಕೇಳುತ್ತಾರೆ ಒಬ್ಬ ಸ್ನೇಹಿತರು. ನಾನು ಹಿಂದೇಟು ಹಾಕಿಲ್ಲವೆನ್ನುತ್ತೇನೆ. ಅಸಹಕಾರದಲ್ಲಿ ನನ್ನ ನಂಬಿಕೆ

ಎಂದಿನಂತೆಯೇ ಜ್ವಲಂತವಾಗಿದೆ. ಮೂವತ್ತು ವರ್ಷಗಳಿಗೂ ಹಿಂದಿನಿಂದ ಅದು ನನ್ನ ಜೀವನದ ಸೂತ್ರವಾಗಿದೆ. ಆದರೆ ನನ್ನ ವೈಯಕ್ತಿಕ ನಂಬಿಕೆಯನ್ನು ಬೇರೆಯವರ ಮೇಲೆ ಹೊರಿಸಲಾರೆ, ರಾಷ್ಟ್ರೀಯ ಸಂಸ್ಥೆಯ ಮೇಲಂತೂ ಹಾಗೆ ಮಾಡಲು ಸಾಧ್ಯವಿಲ್ಲ. ಅದರ ಸೊಬಗನ್ನೂ ಉಪಯುಕ್ತತೆಯನ್ನೂ ದೇಶಕ್ಕೆ ಮನದಟ್ಟುಮಾಡಲು ಪ್ರಯತ್ನ ಮಾಡುತ್ತೇನೆ. ರಾಷ್ಟ್ರದ ಮನಸ್ಸು ಹೇಗಿದೆ ಎಂಬುದನ್ನು ಅವರ ಪ್ರತಿನಿಧಿಯಾಗಿರುವ ಕಾಂಗ್ರೆಸ್ಸಿನ ಮೂಲಕ ತಿಳಿದುಕೊಂಡಿದ್ದೇನೆ. ಈಗ ಸ್ವಲ್ಪ ಸಂಧಾರಿಸಿಕೊಳ್ಳಲು ಅದಕ್ಕೆ ಅವಕಾಶ ಬೇಕೆನಿಸಿದಾಗ ಅಸಹಕಾರವನ್ನು ನಿಲ್ಲಿಸುವುದು ಅಗತ್ಯವಾಗಿದೆ. ಕಾಂಗ್ರೆಸ್ಸಿನ ಮನಸ್ಸು ಹೇಗಿದೆ ಎಂಬುದನ್ನು ತಿಳಿಯುವುದರಲ್ಲಿ ನಾನು ತಪ್ಪು ಮಾಡಬಹುದು. ಆಗ ಕಾಂಗ್ರೆಸ್ಸಿನಲ್ಲಿ ನನ್ನ ಪ್ರಭಾವ ಏನೂ ಇರುವುದಿಲ್ಲ. ಅದರಿಂದ ಯಾವ ಅನಾಹುತವೂ ಆಗುವುದಿಲ್ಲ. ಆದರೆ ಬೇರೆ ಮಾರ್ಗಗಳಲ್ಲಿ ದೇಶದ ಪ್ರಗತಿಯಾಗುವುದಾದರೆ ಅದನ್ನು ನನ್ನ ಮೊಂಡುತನದಿಂದ ತಡೆಯಲು ಹೋದರೆ ಆಗ ದುರಂತವಾದೀತು. ಆ ಮಾರ್ಗಗಳ ಅವಲಂಬನೆಯಿಂದ ದೇಶಕ್ಕೆ ಯಾವ ತೊಂದರೆಯೂ ಇಲ್ಲವೆಂಬುದು ಸ್ಪಷ್ಟವಾದರೆ ಸಾಕು. ಉದಾಹರಣೆಗೆ, ಒಂದುಪಕ್ಷ ಹಿಂಸಾಮಾರ್ಗಗಳನ್ನು ಅನುಸರಿಸುವುದಾದಲ್ಲಿ ನಾನೊಬ್ಬನೇ ಆದರೂ ಸರಿ, ಅದರ ವಿರುದ್ಧ ಏಳುತ್ತೇನೆ. ಆದರೆ ಹಿಂಸಾಮಾರ್ಗ ದಿಂದಲಾದರೂ ಸರಿಯೆ, ಸ್ವಾತಂತ್ರ್ಯ ಪಡೆಯಲು ದೇಶ ಇಷ್ಟಪಟ್ಟರೆ, ಆ ಹಕ್ಕು ರಾಷ್ಟ್ರಕ್ಕಿದೆಯೆಂಬುದನ್ನು ಅಂಗೀಕರಿಸಿದ್ದೇನೆ. ಹಾಗೆ ಆದಲ್ಲಿ, ಭಾರತ ನನ್ನ ಪ್ರೇಮದ ನಾಡಾಗಿರುವುದಿಲ್ಲ. ಕೇವಲ ಜನ್ಮಭೂಮಿಯಾಗಿರುತ್ತದೆ. ನನ್ನ ತಾಯಿ ದಾರಿತಪ್ಪಿ ಹೋದರೆ ನಾನು ಅವಳಲ್ಲಿ ಅಭಿಮಾನ ಇಟ್ಟುಕೊಳ್ಳಲು ಹೇಗೆ ಅಸಾಧ್ಯವಾಗುತ್ತದೆಯೋ ಹಾಗೆ ಆಗುತ್ತದೆ. ಆದರೆ ಸ್ವರಾಜ್ಯ ಪಕ್ಷ ವ್ಯವಸ್ಥಿತ ಪ್ರಗತಿಯನ್ನು ಅಪೇಕ್ಷಿಸುವ ಪಕ್ಷ, ನನ್ನ ಹಾಗೆ ಅದು ಅಹಿಂಸೆಯ ದೀಕ್ಷೆ ತೆಗೆದುಕೊಂಡಿಲ್ಲದಿರಬಹುದು. ಆದರೆ ಅಹಿಂಸಾ ನೀತಿಯನ್ನು ಅದು ಒಪ್ಪಿದೆ. ಹಿಂಸಾಮಾರ್ಗ ಅನುಪಯುಕ್ತ ಹಾಗೂ ಹಾನಿಕರವೆಂದು ಭಾವಿಸಿ ಅದನ್ನು ತಿರಸ್ಕರಿಸಿದೆ. ಆ ಪಕ್ಷಕ್ಕೆ ಕಾಂಗ್ರೆಸ್ಸಿನಲ್ಲಿ ಪ್ರಾಧಾನ್ಯವಿದೆ. ಒಂದು ವೇಳೆ ಬಲಾಬಲದ ಪರೀಕ್ಷೆಯಾದಲ್ಲಿ ಅದು ಕಾಂಗ್ರೆಸ್ಸಿನಲ್ಲಿ ಉನ್ನತ ಸ್ಥಾನವನ್ನೂ ಗಳಿಸಬಹುದು. ಕಾಂಗ್ರೆಸ್ಸಿನಿಂದ ನಾನು ಹೊರಗೆ ಬಂದು ಆ ಪಕ್ಷವು ಕಾಂಗ್ರೆಸ್ ಅನ್ನು ನಡೆಸಿಕೊಂಡು ಹೋಗುವಂತೆ ಮಾಡುವುದು ಸುಲಭದ ಕೆಲಸ. ಆ ಪಕ್ಷದೊಂದಿಗೆ ನನ್ನ ಒಪ್ಪಿಗೆಯಾಗುವ ಸಾಮಾನ್ಯ ಅಂಶ ಯಾವುದೂ ಇಲ್ಲವೆನಿಸಿದಾಗ ನಾನು ಹಾಗೆ ಮಾಡಬಲ್ಲೆ; ಮಾಡೇ ತೀರುತ್ತೇನೆ. ಆದರೆ ಅದನ್ನು ವಿಮೋಚನೆಗೊಳಿಸುವ ಸಾಧ್ಯತೆಯು ಆಸೆ ಎಳ್ಳಷ್ಟು ಇರುವ ತನಕ, ಮಗು ತನ್ನ ತಾಯಿಯ ಎದೆಗೆ ಅವುಚಿಕೊಳ್ಳುವಂತೆ ನಾನೂ ಅದನ್ನು ಅವುಚಿಕೊಂಡಿರುತ್ತೇನೆ. ಆದರೆ ನಾನು ಅದರ ಕೈಬಿಡುವುದರ ಮೂಲಕ, ತೆಗಳುವಿಕೆಯ ಮುಖೇನ ಅಥವಾ ಕಾಂಗ್ರೆಸ್ಸಿನಿಂದ ನಿವೃತ್ತನಾಗುವುದರ ಮೂಲಕ ಅದನ್ನು ದುರ್ಬಲಗೊಳಿಸುವುದಿಲ್ಲ.

"ವಿಮೋಚನೆ ಎಂಬ ಪದವನ್ನು ನೋವುಂಟು ಮಾಡುವ ಅರ್ಥದಲ್ಲಿ ಉಪಯೋಗಿಸಿಲ್ಲ. ನನ್ನದೇ ಆದ ರೀತಿಯು 'ಶುದ್ಧಿ ಮತ್ತು ತಬ್ಲೀಗ್' ಇದೆ. ಇದುವರೆಗೆ ಜಗತ್ತು ಕಂಡಿರುವುದರಲ್ಲಿ ಅದು ಉತ್ಕೃಷ್ಟವಾದದ್ದು. ನನ್ನ ನೆಲೆ ಹಾಗೂ ಸಾಮರ್ಥ್ಯದ ಅರಿವು ನನಗೆ ಇದೆ. ಅದನ್ನರಿತು ಪಕ್ಷವು ನನ್ನ ಮೇಲೆ ಎಷ್ಟು ಸಾಧ್ಯವೋ ಅಷ್ಟು ಪ್ರಭಾವವನ್ನು ಬೀರಲಿ ಎಂದು ಅದಕ್ಕೆ ಅವಕಾಶಕೊಟ್ಟಿದ್ದೇನೆ. ಅದರ ಸಾಮರ್ಥ್ಯದ ಕಲ್ಪನೆ ನನಗೆ ಆಗುತ್ತದೆ. ಅದರ ಪ್ರಭಾವದಲ್ಲಿದ್ದುಕೊಂಡು ಅದನ್ನು ನನ್ನ ಮಾರ್ಗಕ್ಕೆಳೆಯಲು ಪ್ರಯತ್ನ ಮಾಡುತ್ತೇನೆಂಬುದು ಸ್ಪಷ್ಟವಾಗಿರುವ ಸಂಗತಿ. ಈ ಮಧ್ಯೆ ನನ್ನನ್ನು ತನ್ನ ಕಡೆಗೆ ಸೆಳೆದುಕೊಂಡು ಪರಿವರ್ತನೆ ಮಾಡಿದಲ್ಲಿ ಅದಕ್ಕೆ ಎಲ್ಲ ಗೌರವ ಸಲ್ಲುತ್ತದೆ. ಆಗ ನಾನು ಪರಿವರ್ತನೆಯಾಗಿದ್ದೇನೆಂದು ಘಂಟಾಘೋಷವಾಗಿ ಹೇಳುತ್ತೇನೆ. ಅದು ತರ್ಕದಿಂದ ತರ್ಕಕ್ಕೆ ಆಗುವ ಶುದ್ಧಿ; ಹೃದಯಂಗಳ ಸಮ್ಮಿಳನದಿಂದ ಆಗುವ ಶುದ್ಧಿ. ಅದು ಅಹಿಂಸಾತ್ಮಕವಾಗಿ ಮಾಡಿದ ಪರಿವರ್ತನೆ. ಅಸಹಕಾರಿಗಳು ನನ್ನೊಡನೆ ಸೇರಲಿ. ತಮ್ಮ ವೈಯಕ್ತಿಕ ನಡತೆಯಲ್ಲಿ ದೃಢವಾಗಿರಲಿ. ಅವರ ಅಸಹಕಾರದ ಮೂಲದಲ್ಲಿ ಪ್ರೇಮ ಇದ್ದರೆ ಅವರು ಸ್ವರಾಜ್ಯವಾದಿಗಳನ್ನು ಪರಿವರ್ತಿಸುತ್ತಾರೆಂದು ನಾನು ಆಶ್ವಾಸನೆ ಕೊಡುತ್ತೇನೆ. ಒಂದು ಪಕ್ಷ ಅವರು ಯಶಸ್ವಿಗಳಾಗದಿದ್ದರೆ ಅವರಿಗೆ ವೈಯಕ್ತಿಕ ನಷ್ಟವೇನೂ ಆಗುವುದಿಲ್ಲ ದೇಶ, ಅವರ ಹಿಂದೆ ಸ್ವರಾಜ್ಯವಾದಿಗಳು ಅವರನ್ನು ಹಿಂಬಾಲಿಸದಿದ್ದರೆ, ಸ್ವರಾಜ್ಯವಾದಿಗಳಿಗೆ ಗಣ್ಯತೆ ಇರುವುದಿಲ್ಲ. ಒಂದು ಪಕ್ಷ ಸ್ವರಾಜ್ಯವಾದಿಗಳು ಮುಂದಿನ ಹನ್ನೆರಡು ತಿಂಗಳುಗಳ ಅವಧಿಯಲ್ಲಿ ಬಲ ಸಂವರ್ಧನೆ ಮಾಡಿಕೊಂಡು ಕಾಂಗ್ರೆಸ್ಸಿನಲ್ಲಿ ಅಧಿಕಾರಾರೂಢರಾದರೆ ಅಸಹಕಾರಿಗಳು ಅಲ್ಪಸಂಖ್ಯಾತರಾಗಿರಲು ತಯಾರಿರಬೇಕು. ಆ ಅಲ್ಪಸಂಖ್ಯಾತರಲ್ಲಿ ನನ್ನನ್ನೂ ಮುಂದಾಗಿಯೇ ದಾಖಲು ಮಾಡಿಕೊಳ್ಳಬಹುದು".

ಕಾಂಗ್ರೆಸ್ ಅಧ್ಯಕ್ಷ ಮಹಮದ್ ಆಲಿಯವರು ನವಂಬರ್ ೨೧ಕ್ಕೆ ಬೊಂಬಾಯಿಯಲ್ಲಿ ಸಮ್ಮೇಳನವೊಂದನ್ನು ಕರೆದರು. ಸರ್ವಪಕ್ಷಗಳನ್ನು ಒಂದುಗೂಡಿಸಲು ಹಾಗೂ ೧೯೨೦ರಲ್ಲಿ ಕಾಂಗ್ರೆಸ್‌ನಿಂದ ನಿರ್ಗಮಿಸಿದ್ದವರನ್ನು ಪುನಃ ಕಾಂಗ್ರೆಸ್ಸಿಗೆ ಬರಮಾಡಿಕೊಳ್ಳಲು ಗಾಂಧೀ, ದಾಸ್ ಮತ್ತು ಮೋತಿಲಾಲ್ ನೆಹರೂರವರು ಹೊರಡಿಸಿದ್ದ ಮನವಿಯನ್ನು ಪರಿಶೀಲಿಸುವುದು ಸಮ್ಮೇಳನದ ಉದ್ದೇಶವಾಗಿತ್ತು. ಬಂಗಾಳದಲ್ಲಿ ಸ್ವರಾಜ್ಯ ಪಕ್ಷದ ಮೇಲೆ ಸರ್ಕಾರವು ಆರಂಭಿಸಿದ್ದ ದಬ್ಬಾಳಿಕಾ ನೀತಿಯನ್ನು ಪರಿಶೀಲಿಸುವುದುಸಹ ಸಮ್ಮೇಳನದ ಉದ್ದೇಶವಾಗಿತ್ತು. ಸುಮಾರು ನಾಲ್ಕುನೂರು ಜನ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಶ್ರೀಮತಿ ಬೆಸೆಂಟ್, ಬಿ. ಸಿ. ಪಾಲ್, ಶ್ರೀನಿವಾಸ ಶಾಸ್ತ್ರೀ, ಜಿನ್ನಾ, ಸಿ. ವೈ. ಚಿಂತಾಮಣಿ, ಜಯಕರ್, ನೆಹರೂ, ದಾಸ್ ಮತ್ತು ವಿಠಲ್ ಭಾಯಿ ಪಟೇಲ್‌ರವರುಗಳು ಹಾಜರಿದ್ದರು. ಇವರಲ್ಲದೆ ಮೌಲ್ವಿಗಳೂ, ಪಂಡಿತರೂ ಬ್ರಾಹ್ಮಣೇತರ ನಾಯಕರೂ ಬಂದಿದ್ದರು. ತುಂಬಿದ ಆಶಾಭಾವನೆಯಿಂದ ಗಾಂಧಿ

ಯವರು ಭಾಗವಹಿಸಿದ್ದರು. ಮಹಮ್ಮದಾಲಿಯವರು ಅಧ್ಯಕ್ಷಸ್ಥಾನವನ್ನು ಸರ್ ದಿನ್ ಷಾ ಪೆಟಿಟ್‌ರವರಿಗೆ ಬಿಟ್ಟುಕೊಟ್ಟರು. ಸಮ್ಮೇಳನವು ಬಂಗಾಳದಲ್ಲಿ ನಡೆಯುತ್ತಿದ್ದ ದಬ್ಬಾಳಿಕೆಯನ್ನು ಖಂಡಿಸಿತು. ಕಾಂಗ್ರೆಸ್ಸಿನ ಎಲ್ಲ ಪಕ್ಷಗಳನ್ನೂ ಪುನರ್ ಸಂಘಟಿಸುವ ಉತ್ತಮಮಾರ್ಗವೇನೆಂಬುದನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಿತು. ಕೋಮುವಾರು ಸೌಹಾರ್ದದ ಬಗ್ಗೆ ಒಪ್ಪಂದವೂ ಸೇರಿದಂತೆ ಸ್ವರಾಜ್ಯ ಸಾಧನೆಗೆ ಯೋಜನೆ ಮಾಡುವ ಕೆಲಸವನ್ನು ಈ ಸಮಿತಿಗೆ ವಹಿಸಲಾಯಿತು.

ಈ ಸಮ್ಮೇಳನದ ತರುವಾಯ ಎ.ಐ.ಸಿ.ಸಿ. ಸಮಾವೇಶಗೊಂಡಿತು. ಅದು ಗಾಂಧಿ, ದಾಸ್ ಮತ್ತು ಮೋತಿಲಾಲ್ ನೆಹರೂ ಇವರುಗಳ ಸಂಯುಕ್ತ ಹೇಳಿಕೆಯನ್ನು ಅಂಗೀಕರಿಸಿತು. ಐಕ್ಯತೆಯ ದೃಷ್ಟಿಯಿಂದ ಅಸಹಕಾರ ಚಳವಳಿಯನ್ನು ತಾತ್ಕಾಲಿಕ ವಾಗಿ ನಿಲ್ಲಿಸಲು ತೀರ್ಮಾನಿಸಿತು. ಇನ್ನು ಮುಂದೆ ಕಾಂಗ್ರೆಸ್ ಸದಸ್ಯರು ನಾಲ್ಕಾಣೆ ಚಂದಾ ಕೊಡುವ ಬದಲು ಪ್ರತಿ ತಿಂಗಳೂ ಎರಡು ಸಾವಿರ ಗಜ ಕೈಯಲ್ಲಿ ನೂತ ನೂಲನ್ನು ಕೊಡಬೇಕೆಂದು ನಿರ್ಧಾರವಾಯಿತು. "ಕಾಂಗ್ರೆಸ್ ಸದಸ್ಯರು ಯಾರಾದರೂ ಮನಸ್ಸಾಕ್ಷಿಗನುಗುಣವಾಗಿ ಅಸಹಕಾರ ಚಳವಳಿ ಮಾಡಲು ಇಚ್ಛಿಸಿದರೆ ಅದಕ್ಕೆ ಅಭ್ಯಂತರವಿರುವುದಿಲ್ಲ. ಆದರೆ ಕಾಂಗ್ರೆಸ್ಸಿನ ಪರವಾಗಿ ಸ್ವರಾಜ್ಯಪಕ್ಷವು ಮಾಡುವ ಕೆಲಸಗಳಿಗೆ ಅವರ ಅಸಹಕಾರ ಅಡ್ಡಿಬರಬಾರದು" ಎಂದು ತಿಳಿಸಲಾಯಿತು.

ಎ.ಐ.ಸಿ.ಸಿ. ಆದ ತರುಣದಲ್ಲಿಯೇ ದಾಸ್‌ರವರು ಸುಮಾರು ಎಂಟು ಲಕ್ಷ ರೂಪಾಯಿಗಳಷ್ಟು ಬೆಲೆಬಾಳುವ ತಮ್ಮ ಮನೆಯನ್ನೂ ಇತರ ಆಸ್ತಿಪಾಸ್ತಿಗಳನ್ನೂ ರಾಷ್ಟ್ರೀಯ ಹಾಗೂ ಪರೋಪಕಾರಿ ಚಟುವಟಿಕೆಗಳಿಗಾಗಿ ದಾನ ಕೊಟ್ಟರು.

ಕಾಂಗ್ರೆಸ್ ಅಧಿವೇಶನಕ್ಕೆ ಮುಂಚೆ ಗಾಂಧಿಯವರು ಬರೆದರು: "ನನ್ನ ಅಧ್ಯಕ್ಷತೆ ಯಲ್ಲಿ ನಡೆಯುವ ಮುಂಬರುವ ಕಾಂಗ್ರೆಸ್ ಅಧಿವೇಶನ ಕೇವಲ ವ್ಯವಹಾರ ನಿಷ್ಠ ವಾಗಿರುವುದೆಂಬುದನ್ನು ಕಾರ್ಯಕರ್ತರು ತಿಳಿಯಬೇಕು. ಪ್ರದರ್ಶನ ಸ್ವರೂಪದ ಏನು ಕಾರ್ಯಕ್ರಮವಿದ್ದರೂ ಅದು ವಸ್ತುಪ್ರದರ್ಶನ ಮತ್ತು ಅದಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳಲ್ಲಿ ವ್ಯಕ್ತವಾಗಬೇಕು. ಅಲ್ಲಿ ನಾವು ಸ್ಪಷ್ಟವಾಗಿ ಏನನ್ನಾದರೂ ಸಾಧಿಸಬೇಕಾದರೆ ಕಾರ್ಯಕರ್ತರು ಮೊದಲೇ ಕಾರ್ಯಕ್ರಮವನ್ನು ರೂಪಿಸಿಕೊಂಡಿರ ಬೇಕು. ಅದಕ್ಕಾಗಿ ಕಾರ್ಯಕರ್ತರೆಲ್ಲರೂ ಭಾಗವಹಿಸಿ ನೆರವು ನೀಡಬೇಕು. ಈಗ ಆಗಿರುವ ಒಪ್ಪಂದವನ್ನು ಸರಿಯಾಗಿ ಅರ್ಥಮಾಡಿಕೊಂಡು ಹೃತ್ಪೂರ್ವಕವಾಗಿ ಅದನ್ನು ಸ್ವೀಕರಿಸದಿದ್ದರೆ ಆ ಉದ್ದೇಶ ನೆರವೇರುವುದಿಲ್ಲ. ಕೇವಲ ಸ್ವಾಮಿನಿಷ್ಠೆಯಿಂದ ಸ್ವರಾಜ್ಯ ವಾದಿಗಳಾಗಲೀ 'ಬದಲಾವಣೆ ಬೇಡವೆನ್ನುವವರಾಗಲೀ' ಸಮ್ಮತಿ ನೀಡುವುದು ನನಗೆ ಇಷ್ಟವಿಲ್ಲ. ಒಪ್ಪಂದವನ್ನು ತೋರಿಕೆಗಾಗಿ ಮಾಡಿಕೊಂಡಿಲ್ಲ. ಬೇರೆಯವರನ್ನು ಮೆಚ್ಚಿ ಸುವುದಕ್ಕೆ ಮಾಡಿಕೊಂಡಿಲ್ಲ; ನಮಗೆ ಮೆಚ್ಚಿಗೆ ಆಗಬೇಕಷ್ಟೆ. ಮನಸ್ಸಿಗೆ ಒಪ್ಪಿಗೆ ಇಲ್ಲದೆ ಸಹಕಾರ ಮನೋಭಾವವೂ ಇಲ್ಲದೆ ಕೇವಲ ಬಾಯಿಮಾತಿನ ಒಪ್ಪಿಗೆ ನೀಡಿದರೆ ಅದು

ಅಪ್ರಯೋಜಕವಾಗುತ್ತದೆ. ಇದುವರೆಗೆ ಸ್ವರಾಜ್ಯವಾದಿಗಳಿಂದ ಟೀಕೆಗಳೇನೂ ಬಂದಿಲ್ಲ. ಸದಸ್ಯತ್ವದ ನಿಯಮವನ್ನು ಬದಲಾಯಿಸಬಾರದೆಂದು ಕೆಲವರು ಮನವಿ ಸಲ್ಲಿಸಿದ್ದಾರೆ; ಅಷ್ಟೆ. ಆದರೆ 'ಬದಲಾವಣೆ ಬೇಡವೆನ್ನುವವರು' ಕೋಪಗೊಂಡು ಪ್ರತಿಭಟಿಸಿದ್ದಾರೆ, ವಿಷಾದ ಸೂಚಿಸಿದ್ದಾರೆ. ನನ್ನ ಕೈಲಾದ ಮಟ್ಟಿಗೂ ಈ ಲೇಖನಗಳ ಮೂಲಕ ವಸ್ತುಸ್ಥಿತಿಯನ್ನು ವಿವರಿಸಿ ಅವರುಗಳ ಅನುಮಾನಗಳನ್ನು ಪರಿಹರಿಸಲು ಪ್ರಯತ್ನಪಡುತ್ತಿದ್ದೇನೆ. ಆದರೆ ಬಿಚ್ಚು ಮನಸ್ಸಿನಿಂದ ಎಲ್ಲವನ್ನೂ ಚರ್ಚಿಸುವುದರ ಸಮಾನವಿಲ್ಲ. ಎ.ಐ.ಸಿ.ಸಿ. ಸಮಯದಲ್ಲಿ 'ಬದಲಾವಣೆ ಬೇಡವೆನ್ನುವವರ' ಸಂಗಡ ಒಂದು ಗಂಟೆ ಮಾತುಕತೆ ನಡೆಸಿದೆ. ಆದರೆ ಅಷ್ಟು ಸ್ವಲ್ಪ ಸಮಯದ ಚರ್ಚೆಯಿಂದ ಯಾರಿಗೂ ಸಮಾಧಾನವಾಗೀವಂತಿರಲಿಲ್ಲ. ಆದುದರಿಂದ ಈ ತಿಂಗಳು ಇಪ್ಪತ್ತನೇ ತಾರೀಖು ಒಂದು ದಿನ ಪೂರ್ತಿ ಬೆಳಗಾವಿಯಲ್ಲಿ 'ಬದಲಾವಣೆ ಬೇಡವೆನ್ನುವವರ' ಸಮ್ಮೇಳನದಲ್ಲಿ ಭಾಗವಹಿಸುವುದಕ್ಕಾಗಿ ಮೀಸಲಾಗಿಡುತ್ತೇನೆ. ಅದಕ್ಕಾಗಿ ಆ ದಿನ ಮುಂಜಾನೆಯೇ ನಾನು ಬೆಳಗಾವಿ ತಲಪುತ್ತೇನೆ. ನಾನು ಬೆಳಗಾವಿಗೆ ಸದ್ದಿಲ್ಲದೆ ಬಂದಿಳಿಯುತ್ತೇನೆ. ಪ್ರದರ್ಶನ ಮೆರವಣಿಗೆ, ಏನೂ ಬೇಡ ಎಂದು ಗಂಗಾಧರರಾವ್ ದೇಶಪಾಂಡೆಗೆ ತಿಳಿಸಲಿದ್ದೇನೆ. ಸುಮ್ಮನೆ ಕಾಲವ್ಯಯವಾಗಬಾರದೆಂಬ ಉದ್ದೇಶದಿಂದ ಹೀಗೆ ಮಾಡುತ್ತಿದ್ದೇನೆ. 'ಬದಲಾವಣೆ ಬೇಡವೆನ್ನುವವರ' ಪೈಕಿ ಚರ್ಚೆಯಲ್ಲಿ ಭಾಗವಹಿಸಲು ಇಚ್ಛಿಸುವವರೆಲ್ಲರೂ ಈ ಅನೌಪಚಾರಿಕ ಸಭೆಗೆ ಬರಬೇಕೆಂದು ಕೋರುತ್ತೇನೆ. ಅಂದಮಾತ್ರಕ್ಕೆ ಎಲ್ಲ ಕಾರ್ಯಕರ್ತರೂ ಅಷ್ಟು ಬೇಗನೇ ಬೆಳಗಾವಿಗೆ ಬಂದು ಧುಮುಕಬಾರದೆಂದು ಎಚ್ಚರಿಸುತ್ತೇನೆ. ಕಾಂಗ್ರೆಸ್ ಅಧಿವೇಶನ ಈ ತಿಂಗಳು ೨೬ನೇ ತಾರೀಖಿಗೆ ಮುಂಚೆ ಆರಂಭವಾಗುವುದಿಲ್ಲ. ಖಿಲಾಫತ್ ಸಮ್ಮೇಳನ ೨೪ಕ್ಕೆ ಮುಂಚೆ ನಡೆಯುವುದಿಲ್ಲ. ರಾಷ್ಟ್ರೀಯ ಸಮಾವೇಶವೂ ಅದಕ್ಕೆ ಮುನ್ನ ಆಗುವುದಿಲ್ಲ. 'ಬದಲಾವಣೆ ಬೇಡವೆನ್ನುವವರು' ಪ್ರತಿಯೊಂದು ಪ್ರಾಂತದಿಂದಲೂ ಇಬ್ಬರು ಅಥವಾ ಮೂರು ಮಂದಿಯನ್ನು ಆರಿಸಿ ಕಳುಹಿಸಬಹುದು. ಅವರ ಮೂಲಕ ಒಟ್ಟು ಅಭಿಪ್ರಾಯವನ್ನು ಹೇಳಿ ಕಳುಹಿಸಬಹುದು. ೨೦ನೇ ತಾರೀಖು ಮಧ್ಯಾಹ್ನವೆಲ್ಲ ವಿಚಾರವಿನಿಮಯ ಮಾಡಬಹುದು. ಅಗತ್ಯವಿದ್ದರೆ ೨೧ರಂದೂ ಚರ್ಚೆ ಮುಂದುವರಿಸಬಹುದು. ಇದೇ ರೀತಿ ಸ್ವರಾಜ್ಯವಾದಿಗಳೊಂದಿಗೂ ನಾನು ಚರ್ಚೆ ನಡೆಸಬೇಕೇ ಎಂದು ಕೇಳಿ ದೇಶಬಂಧು ದಾಸ್ ಮತ್ತು ಮೋತಿಲಾಲ್ ನೆಹರೂರವರಿಗೆ ಬರೆದಿದ್ದೇನೆ. ಅವರಿಗಾಗಿ ೨೧ರಂದು ಸ್ವಲ್ಪ ಹೊತ್ತನ್ನು ಮೀಸಲಾಗಿಡುತ್ತೇನೆ. ಎರಡು ಪಕ್ಷಗಳಿಂದಲೂ ಪರಮಾವಧಿ ಸಂಖ್ಯೆಯಲ್ಲಿ ಪ್ರತಿನಿಧಿಗಳು ಬಂದು ಅಧಿವೇಶನದಲ್ಲಿ ಭಾಗವಹಿಸುತ್ತಾರೆಂದು ನಂಬಿದ್ದೇನೆ. ನನ್ನ ಮಟ್ಟಿಗೆ ಹೇಳುವುದಾದರೆ, ಮುಖ್ಯವಾದ ಯಾವುದೊಂದು ನಿರ್ಣಯವನ್ನು ಓಟಿನ ಆಧಾರದ ಮೇಲೆ ಮಂಜೂರು ಮಾಡಿಸಲು ಇಷ್ಟಪಡುವುದಿಲ್ಲ. ಆದರೆ ಪ್ರತಿನಿಧಿಗಳ ಮನಸ್ಸು ಹೇಗಿದೆ ಎಂಬುದನ್ನು ತಿಳಿಯಲು ನಾನು ಆಸಕ್ತನಾಗಿದ್ದೇನೆ. ಅವರುಗಳು ನಿರಾಸಕ್ತಿಯಿಂದಾಗಲೀ, ಅಸಡ್ಡೆಯಿಂದಾಗಲೀ, ಜುಗುಪ್ಸೆಯಿಂದಾಗಲೀ, ಗೈರು

ಹಾಜರಾದರೆ ಅವರಲ್ಲಿರುವ ನಂಬಿಕೆಗೆ ಅರ್ಹವಾಗಿ ಕರ್ತವ್ಯ ಪಾಲಿಸಿದಂತೆ ಆಗುವುದಿಲ್ಲ. ರಾಷ್ಟ್ರದ ಕೆಲಸಕ್ಕೆ ಕಾಲ ಮತ್ತು ಗಮನವನ್ನು ಕೊಡಲಾರದವನು ಪ್ರತಿನಿಧಿಯಾಗಲು ಮುಂದೆ ಬರಬಾರದು. ಅಧಿವೇಶನದಲ್ಲಿ ಭಾಗವಹಿಸಿ, ಮುಂಬರುವ ವರ್ಷಕ್ಕೆ ಕಾಂಗ್ರೆಸ್ಸಿನ ನೀತಿಯನ್ನು ರೂಪಿಸುವುದರಲ್ಲಿ ನೆರವು ನೀಡುವುದು ಆದ್ಯ ಕರ್ತವ್ಯ".

ಅಧಿವೇಶನಕ್ಕೆ ಮುಂಚೆ ಒಂದುವಾರ ಗಾಂಧಿಯವರು 'ಬದಲಾವಣೆ ಬೇಡ ವೆನ್ನುವವರನ್ನೂ' ಸ್ವರಾಜ್ಯವಾದಿಗಳನ್ನೂ ಅನೌಪಚಾರಿಕ ಸಮ್ಮೇಳನಗಳಲ್ಲಿ ಕಂಡು ಮಾತನಾಡಿದರು. ಎರಡು ಗುಂಪಿನವರೂ ಪರಸ್ಪರ ಅರ್ಥಮಾಡಿಕೊಳ್ಳಬೇಕೆಂದು ತಿಳಿಸಿದರು. ಚರ್ಚೆಗಳಲ್ಲಿ ಚರಖದ ಪ್ರಾಧಾನ್ಯತೆಯನ್ನು ಒತ್ತಿ ಒತ್ತಿ ಹೇಳಿದರು. ಹೋರಾಟದ ಕಾರ್ಯಕ್ರಮ ಬೇಕೆಂದು ಕಾರ್ಯಕರ್ತರು ಕೇಳಿದಾಗ ಗಾಂಧಿಯವರ ಉತ್ತರ ಹೀಗಿತ್ತು, "ವಿದೇಶೀ ವಸ್ತ್ರದ ಬಹಿಷ್ಕಾರ ಹೋರಾಟದ ಕಾರ್ಯಕ್ರಮ, ಅದನ್ನು ಪೂರ್ಣವಾಗಿ ಕಾರ್ಯಗತಗೊಳಿಸಿದರೆ ಸವಿನಯ ಕಾನೂನುಭಂಗಕ್ಕೆ ತಕ್ಕ ವಾತಾವರಣ ಮೂಡುತ್ತದೆ".

ಕಾಂಗ್ರೆಸ್ ಸದಸ್ಯರಾಗುವವರು ನಾಲ್ಕಾಣೆ ಕೊಡುವುದರ ಬದಲು ನೂಲನ್ನು ಕೊಡಬೇಕೆಂಬ ವಿಷಯದಲ್ಲಿ ತುಂಬಾ ಚರ್ಚೆಯಾಯಿತು. ಅಸಹಕಾರ ಚಳವಳಿಯನ್ನು ತಾತ್ಕಾಲಿಕವಾಗಿ ನಿಲ್ಲಿಸುವುದಕ್ಕೂ ಸ್ವರಾಜ್ಯವಾದಿಗಳನ್ನು ಕಾಂಗ್ರೆಸ್ಸಿಗರೆಂದು ಮನ್ನಣೆ ನೀಡಿ ಅವರು ಕಾಂಗ್ರೆಸ್ಸಿನ ಪರವಾಗಿ ಶಾಸನಮಂಡಲಗಳಲ್ಲಿ ಕೆಲಸಮಾಡಲು ಅವಕಾಶ ಮಾಡಿಕೊಡುವುದಕ್ಕೂ ತಾವು ಒಡ್ಡಿರುವ ಷರತ್ತು ನೂಲಿಗೆ ಸಂಬಂಧಿಸಿದ ಅಂಶ ವೆಂಬುದನ್ನು ಗಾಂಧೀಜಿ ಸ್ಪಷ್ಟಪಡಿಸಿದರು.

ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮೂವತ್ತೊಂಬತ್ತನೆಯ ಅಧಿವೇಶನ ಡಿಸೆಂಬರ್ ಕೊನೆಯಲ್ಲಿ ಬೆಳಗಾವಿಯಲ್ಲಿ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ದೆಹಲಿ ಮತ್ತು ಬೊಂಬಾಯಿ ನಗರಗಳಲ್ಲಿ ಸೇರಿದ್ದ ಐಕ್ಯತಾ ಸಮ್ಮೇಳನಗಳ ಅನಂತರ ನಡೆದ ಈ ಅಧಿವೇಶನದಲ್ಲಿ ದೇಶದ ಎಲ್ಲ ರಾಜಕೀಯ ಪಕ್ಷಗಳನ್ನೂ ಒಂದುಗೂಡಿಸುವ ಪ್ರಯತ್ನ ನಡೆಯಿತು. ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ ಎಲ್ಲ ಪಕ್ಷಗಳೂ ಅವುಗಳ ಸಮ್ಮೇಳನಗಳನ್ನು ಬೆಳಗಾವಿಯಲ್ಲಿ ಅದೇ ಸಮಯದಲ್ಲಿ ನಡೆಸಬೇಕೆಂದು ಎಲ್ಲ ನಾಯಕರುಗಳಿಗೂ ಆಹ್ವಾನ ನೀಡಲಾಯಿತು.

ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಮಹತ್ವಪೂರಿತವಾಗಿತ್ತು. ಅಲ್ಲಿನ ಯಶಸ್ವೀ ವ್ಯವಸ್ಥೆಯನ್ನೂ ಡಾ. ಹಾರ್ಡೀಕರ್‌ರವರ ಸೇವಾದಳವನ್ನೂ ಗಾಂಧೀ ಮೆಚ್ಚಿದರು. ರಸ್ತೆಗಳು ವಿಶಾಲವಾಗಿದ್ದು ಅವು ಅಚ್ಚುಕಟ್ಟಾಗಿದ್ದುವು. "ನೈರ್ಮಲ್ಯದ ವ್ಯವಸ್ಥೆ ಚೆನ್ನಾಗಿತ್ತು ನಿಜ. ಆದರೆ ಅದು ವೈಜ್ಞಾನಿಕ ದೃಷ್ಟಿಯಿಂದ ಇನ್ನೂ ಚೆನ್ನಾಗಿರ ಬಹುದಾಗಿತ್ತು" ಎಂದರು ಗಾಂಧೀಜಿ. "ಬಳಸಿದ ನೀರನ್ನು ವಿಲೇವಾರಿ ಮಾಡುವ ರೀತಿ ಅನಾಗರಿಕವಾಗಿತ್ತು". ಗಾಂಧೀಜಿ ಖಾದಿ ಗುಡಿಸಲಿನಲ್ಲಿ ಇರಬಯಸಿದ್ದರು. ಆದರೆ

"ಖಾದಿ ಅರಮನೆಯಲ್ಲಿ ಇಳಿಸಿ ಅಪಚಾರ ಮಾಡಿದರು" ಎಂದು ಟೀಕಿಸಿದರು. ಈ ಅದ್ದೂರಿಯ ವ್ಯವಸ್ಥೆ ಉದಾರ ಹೃದಯದಿಂದ ಮೂಡಿಬಂದದ್ದು. "ಆದರೆ ನಲವತ್ತು ವರ್ಷಗಳ ಸಂಪ್ರದಾಯವನ್ನು ಒಮ್ಮೆಲೇ ಮುರಿಯಲಾಗುವುದಿಲ್ಲ. ಹೇಳಿದ್ದನ್ನು ಕೇಳಲು ತಯಾರಿಲ್ಲದವರ ಮುಂದೆ ಟೀಕೆ ಮಾಡಿ ಫಲವಿಲ್ಲ". ಮಾಮೂಲಿನಂತೆ, ಕಾಂಗ್ರೆಸ್ ಅಧಿವೇಶನವು ಅನೇಕರಿಗೆ ಬೋಧಪ್ರದವೂ ಮನೋರಂಜಕವೂ ಆಗಿದ್ದಿತು. ಸಂಗೀತ ಕಾರ್ಯಕ್ರಮವು ಸಹಸ್ರಾರು ಮಂದಿ ಜನರಿಗೆ ರಸದೌತಣವಾಗಿತ್ತು. ದೊಡ್ಡ ರಾಷ್ಟ್ರೀಯ ಉದ್ಯಮವಾದ ನೇಯ್ಗೆ ಉದ್ಯಮದ ಅವನತಿಯ ದುರಂತ ಕಥೆಯನ್ನು ಮತ್ತು ಅದನ್ನು ಪುನರುತ್ಥಾನಗೊಳಿಸುವ ವಿಧಾನಗಳನ್ನೂ ತಿಳಿಸಲು ಸತೀಶ್‌ದಾಸ್ ಗುಪ್ತ ಅವರು ಮಾಯಾದೀಪದ ಚಿತ್ರಗಳನ್ನು ತೋರಿಸಿ ಉಪನ್ಯಾಸಗಳನ್ನು ಕೊಟ್ಟರು. ದೇಶೀಯ ಕಲೆ ಮತ್ತು ಕೈಗಾರಿಕೆಗಳ ವಸ್ತುಪ್ರದರ್ಶನವೂ ಏರ್ಪಾಡಾಗಿತ್ತು.

ಗಾಂಧೀ–ನೆಹರೂ–ದಾಸ್ ಒಪ್ಪಂದವನ್ನು ಬೆಳಗಾಂ ಅಧಿವೇಶದಲ್ಲಿ ಐಕ್ಯರಾಗಿ ಒಪ್ಪಲಾಯಿತು. ಕಾಂಗ್ರೆಸ್ ಸದಸ್ಯತ್ವದ ಅರ್ಹತೆ ಬಗ್ಗೆ ನಿಯಮವನ್ನು ಬದಲಾಯಿಸ ಲಾಯಿತು. ಸದಸ್ಯತ್ವಕ್ಕೆ ಅರ್ಹತೆ, ನಾಲ್ಕಾಣೆ ಚಂದಾಕ್ಕೆ ಬದಲಾಗಿ ನೂಲುವ ನಿಯಮ ಜಾರಿಗೆ ಬಂತು.

ಗಾಂಧಿಯವರ ಅಧ್ಯಕ್ಷ ಭಾಷಣ ಕಾಂಗ್ರೆಸ್ ದಾಖಲೆಗಳಲ್ಲೆಲ್ಲಾ ಅತ್ಯಂತ ಸಂಕ್ಷಿಪ್ತ ವಾಗಿತ್ತು. ಭಾಷಣದ ಪ್ರತಿಗಳನ್ನು ಆಗಲೇ ಹಂಚಿತ್ತಾದ್ದರಿಂದ ಅದನ್ನು ಎಲ್ಲರೂ ಓದಿದ್ದಾರೆಂದು ಭಾವಿಸಿ, ಭಾಷಣದ ಕೆಲವು ಭಾಗಗಳನ್ನು ಮಾತ್ರ ಮಹಾಧಿವೇಶನದಲ್ಲಿ ಓದಿದರು. ಅವರು ಆರಂಭದಲ್ಲಿ ಹೀಗೆ ನುಡಿದರು: "ಇಂದು ನನಗೆ ನೀವು ಸಲ್ಲಿಸಿರುವ ಗೌರವದ ಹೊಣೆಯನ್ನು ಶಂಕೆಯಿಂದಲೇ ಒಪ್ಪಿಕೊಂಡೆ. ದೇಶದ ಒಳಗೂ ಹೊರಗೂ ಉಂಟಾಗಿರುವ ವಿದ್ಯಮಾನಗಳ ದೆಸೆಯಿಂದ ಈ ಭಾರವನ್ನು ಹೊರಲು ಒಪ್ಪಿಕೊಳ್ಳ ಬೇಕಾಯಿತು."

ವಿದೇಶಗಳಲ್ಲಿನ ವಿದ್ಯಮಾನಗಳನ್ನು ವಿಮರ್ಶಿಸಿ ಅವುಗಳನ್ನು ಭಾರತದಲ್ಲಿನ ವಿದ್ಯಮಾನಗಳಿಗೆ ಹೋಲಿಸಿದರು.

"ಈಗಿನ ದಬ್ಬಾಳಿಕೆಯ ವ್ಯವಸ್ಥೆ ಸತತ ವ್ಯಾಧಿಯೊಂದರ ನಿತ್ಯ ಚಿಹ್ನೆ. ಐರೋಪ್ಯರ ಪ್ರಾಧಾನ್ಯ ಹಾಗೂ ಏಷ್ಯಾದವರ ದೈನ್ಯ ಈಗಿನ ಸೂತ್ರವಾಗಿದೆ. ಒಮ್ಮೊಮ್ಮೆ ಅದನ್ನು ಇನ್ನೂ ಸಂಕ್ಷೇಪವಾಗಿ ಬಿಳಿಯ ಮತ್ತು ಕಪ್ಪು ಜನರ ಮಧ್ಯೆ ಪರಸ್ಪರ ವಿರೋಧ ಎಂದು ಹೇಳುವುದುಂಟು. ಕಿಪ್ಲಿಂಗನು ಇದನ್ನು ಶ್ವೇತವರ್ಣೀಯರ ದಬ್ಬಾಳಿಕೆ ಎನ್ನುವುದರ ಬದಲು ಶ್ವೇತವರ್ಣೀಯರ ಜವಾಬ್ದಾರಿ ಎಂದು ತಪ್ಪು ಅರ್ಥಮಾಡಿದ. ಮಲಯಾ ಪರ್ಯಾಯದ್ವೀಪದಲ್ಲಿ ಪ್ರಚಲಿತವಾಗಿರುವ ವರ್ಣಭೇದ ತಾತ್ಕಾಲಿಕ ಸ್ವರೂಪದ್ದೆಂದು ಭಾವಿಸಲಾಗಿತ್ತು. ಆದರೆ ಅದು ಈಗ ಶಾಶ್ವತಪದ್ಧತಿಯಾಗಿ ಬಿಟ್ಟಿದೆ. ಮಾರಿಷಸ್‌ನ ಪ್ಲಾಂಟರನು ಭಾರತೀಯ ಕಾರ್ಮಿಕರನ್ನು ನೇಮಿಸಿಕೊಳ್ಳಲು ಅಭ್ಯಂತರ

ಇರಬಾರದು. ಕೆನ್ಯಾದಲ್ಲಿ ಭಾರತೀಯರಿಗೆ ನ್ಯಾಯವಾಗಿ ಪ್ರಥಮ ಪ್ರಾಶಸ್ತ್ಯ ಇರಬೇಕು. ಆದರೆ ಅಲ್ಲಿ ಐರೋಪ್ಯರು ಅವರ ಮೇಲೆ ಯಶಸ್ವಿಯಾಗಿ ಅಧಿಕಾರ ಚಲಾಯಿಸುತ್ತಿದ್ದಾರೆ. ಸಾಧ್ಯವಾಗುವುದಾದರೆ, ಪ್ರತಿಯೊಬ್ಬ ಭಾರತೀಯನನ್ನೂ ಹೊರಹಾಕಲು ದಕ್ಷಿಣ ಆಫ್ರಿಕಾದ ಪ್ರಭುತ್ವ ಸಿದ್ಧವಾಗಿದೆ. ಆ ಬಗ್ಗೆ ಹಿಂದೆ ಒಪ್ಪಲಾಗಿದ್ದ ಹೊಣೆಗಾರಿಕೆಯನ್ನೆಲ್ಲಾ ಸಂಪೂರ್ಣವಾಗಿ ತಳ್ಳಿ ಹಾಕಲು ಅದು ತಯಾರಾಗಿದೆ. ಈ ಎಲ್ಲ ವಿಷಯಗಳಲ್ಲೂ ಭಾರತ ಸರ್ಕಾರ ಹಾಗೂ ಸಾರ್ವಭೌಮ ಪ್ರಭುತ್ವ ಅಸಹಾಯಕ ಪರಿಸ್ಥಿತಿಯಲ್ಲೇನಿಲ್ಲ. ಆದರೆ ಅಲ್ಲಿ ನೆಲಸಿರುವ ಭಾರತೀಯರ ಹಿತವನ್ನು ರಕ್ಷಿಸಲು ಮನಸ್ಸಿಲ್ಲ; ಅಥವಾ ಅಗತ್ಯವಿದ್ದಷ್ಟು ಪಟ್ಟಿಗೆ ಒತ್ತಾಯ ತರಲು ತಯಾರಿಲ್ಲ.

"ಅಕಾಲಿಗಳ ಅದಮ್ಯ ಚೇತನವನ್ನು ಅದುಮಿ ಬಿಡಲು ಮಾಡುತ್ತಿರುವ ಪ್ರಯತ್ನ ಅದೇ ಜಾಡ್ಯದ ಚಿಹ್ನೆ. ಅಕಾಲಿಗಳು ತಾವು ನಂಬಿರುವ ಧ್ಯೇಯವನ್ನು ತಮ್ಮ ಪ್ರಾಣದಷ್ಟೆ ಅಮೂಲ್ಯವೆಂದು ಭಾವಿಸಿ ಅದಕ್ಕಾಗಿ ನೀರಿನಂತೆ ರಕ್ತ ಚೆಲ್ಲಿದ್ದಾರೆ. ಅವರು ತಪ್ಪುಮಾಡಿರಬಹುದು. ಹಾಗೆ ತಪ್ಪು ಮಾಡಿದ್ದರೆ ಅದರ ಫಲ ಅವರೇ ಉಂಡಿದ್ದಾರೆ; ತಮ್ಮ ರಕ್ತವನ್ನು ತಾವೇ ಬಸಿದುಕೊಂಡಿದ್ದಾರೆ. ಬೇರೆಯವರಿಗೆ ಏನೂ ತೊಂದರೆ ಮಾಡಿಲ್ಲ. ಅವರ ಧೈರ್ಯ, ಮೂಕತ್ಯಾಗ ಹಾಗೂ ಧರ್ಮ ಬಲಿಗೆ ಸಾಕ್ಷಿಗಳಾಗಿ ನಾನ್‌ಕಾನ ಸಾಹೇಬ್, ಗುರು-ಕ-ಬಾಗ್ ಮತ್ತು ಜೈತೋಗಳು ನಿಂತಿವೆ. ಆದರೆ ಅಕಾಲಿಗಳನ್ನು ಸದೆ ಬಡಿಯಲು ಪಂಜಾಬಿನ ಗೌರ್ನರ್ ಪ್ರತಿಜ್ಞೆ ಮಾಡಿರುವುದಾಗಿ ವರದಿಯಾಗಿದೆ.

"ಬರ್ಮೀ ಜನಾಂಗದ ಚೇತನವನ್ನು ದಮನ ಮಾಡಲು ಹಿಂಸಾತ್ಮಕ ದಬ್ಬಾಳಿಕೆ ನಡೆಯುತ್ತಿರುವುದಾಗಿ ಕೇಳಿ ಬಂದಿದೆ. ಈಜಿಪ್ಟ್ ಕೂಡ ನಮ್ಮ ಸ್ಥಿತಿಯಲ್ಲೇ ಇದೆ. ಈಜಿಪ್ಟಿನ ಹಂಚ್ಚನೊಬ್ಬ ಬ್ರಿಟಿಷ್ ಅಧಿಕಾರಿಯನ್ನು ಕೊಲೆಮಾಡಿದ. ಅದು ನಿಜವಾಗಿಯೂ ಅಸಹನೀಯ ಅಪರಾಧವೇ ಸರಿ. ಅದಕ್ಕಾಗಿ ವಿಧಿಸಿರುವ ಶಿಕ್ಷೆ ಜುಗುಪ್ಸೆ ತರುವಂತಹ ಕೃತ್ಯ; ಅಷ್ಟೇಅಲ್ಲ, ಅದು ಮಾನವತೆಯ ಮೇಲೆ ನಡೆಸಿದ ಅತ್ಯಾಚಾರ. ಈಜಿಪ್ಟ್ ಏನೇನು ಸಾಧಿಸಿದ್ದಿತೋ ಅದನ್ನೆಲ್ಲ ಹೆಚ್ಚು ಕಡಿಮೆ ಕಳೆದುಕೊಂಡಂತಾಯಿತು. ಕೇವಲ ಒಬ್ಬ ಮನುಷ್ಯನ ಅಪರಾಧಕ್ಕಾಗಿ ಇಡೀ ದೇಶವನ್ನು ನಿರ್ದಯದಿಂದ ಶಿಕ್ಷಿಸಲಾಗಿದೆ. ನಿಜ, ಆ ಖೂನಿಗೆ ಈಜಿಪ್ಟ್ ಜನರ ಸಹಾನುಭೂತಿ ಇದ್ದಿರಬಹುದು. ಅಂದಮಾತ್ರಕ್ಕೆ ಅಲ್ಲಿನ ಪ್ರಭುತ್ವವು ಭಯಾನಕವಾದ ಹಿಂಸಾಕಾರಿ ದಬ್ಬಾಳಿಕೆಯನ್ನು ಮಾಡಿದ್ದು ನ್ಯಾಯವೇ? ಹಾಗೆ ಮಾಡದೆಯೇ ಅದು ತನ್ನ ಹಿತವನ್ನು ರಕ್ಷಿಸಿಕೊಳ್ಳಬಹುದಾಗಿತ್ತು.

"ಆದುದರಿಂದ, ಬಂಗಾಳದಲ್ಲಿ ಆಗುತ್ತಿರುವ ದಬ್ಬಾಳಿಕೆಯಲ್ಲಿ ಏನೂ ವಿಶೇಷವಿಲ್ಲ. ಇಂತಹವು ಒಂದಲ್ಲ ಒಂದು ರೀತಿಯಲ್ಲಿ, ಒಂದಲ್ಲ ಒಂದು ಪ್ರಾಂತದಲ್ಲಿ ಆಗಾಗ್ಗೆ ಸಂಭವಿಸುತ್ತಲೇ ಇರುತ್ತವೆ. ನಾವು ಸ್ವತಂತ್ರರಾಗುವ ವರೆಗೆ ಇದನ್ನು ಮಾಮೂಲು ಸ್ಥಿತಿಯೆಂದೇ ಪರಿಗಣಿಸಬೇಕು".

ಚರಖಾ, ಹಿಂದೂ ಮುಸಲ್ಮಾನರ ನಡುವೆ ಐಕ್ಯತೆ ಮತ್ತು ಅಸ್ಪೃಶ್ಯತೆಯ ನಿವಾರಣೆ—ಇವುಗಳ ಬಗ್ಗೆ ತಮ್ಮ ನಂಬಿಕೆಯನ್ನು ಪುನಃ ಸ್ಪಷ್ಟಪಡಿಸಿದರು. ರಾಜಕೀಯ ಪಕ್ಷಗಳನ್ನು ಒಂದುಗೂಡಿಸುವ ಬಗ್ಗೆ ಪ್ರಸ್ತಾಪಿಸಿದರು. ಸ್ವರಾಜ್ಯವಾದಿಗಳು ಹಾಗೂ 'ಬದಲಾವಣೆ ಬೇಡವೆನ್ನುವವರ' ನಡುವೆ ಪೂರ್ಣ ಹೊಂದಾಣಿಕೆಯ ಆವಶ್ಯಕತೆಯನ್ನು ಒತ್ತಿ ಹೇಳಿದರು. ಅಸಹಕಾರ ಚಳವಳಿ ಬೆಳೆದು ಬಂದ ಬಗೆಯನ್ನು ವಿವರಿಸಿ ಅನೈತಿಕ ಹಾಗೂ ದೌರ್ಬಲ್ಯ ತುಂಬಿರುವ ಈ ಪರಿಸ್ಥಿತಿಯಲ್ಲಿ ಅದನ್ನು ನಿಲ್ಲಿಸಬೇಕಾಗಿರುವ ಆವಶ್ಯಕತೆಯನ್ನು ತಿಳಿಸಿದರು. ಆದರೆ ಸವಿನಯ ಕಾನೂನುಭಂಗದಲ್ಲಿ ಅವರ ಅಚಲವಾದ ನಂಬಿಕೆ ಸ್ಪಷ್ಟವಾಗಿತ್ತು. "ಸವಿನಯ ಕಾನೂನು ಭಂಗದಲ್ಲಿ ನನಗೆ ಪೂರ್ಣನಂಬಿಕೆ ಇದೆ. ಆದರೆ ನಾವು ವಿದೇಶಿ ವಸ್ತ್ರವನ್ನು ಬಹಿಷ್ಕಾರ ಮಾಡುವ ಶಕ್ತಿ ಪಡೆಯುವವರೆಗೆ ಸವಿನಯ ಕಾನೂನುಭಂಗದ ಮೂಲಕ ಸ್ವರಾಜ್ಯವನ್ನು ಸಾಧಿಸಲು ಸಾಧ್ಯವೇ ಆಗದು".

ಅನಂತರ ಅವರು ತಕ್ಷಣದ ಗುರಿಯೇನೆಂಬುದನ್ನು ತಿಳಿಸಿದರು. "ಕೋಮುವಾರು ಅಥವಾ ಪಂಗಡದ ಆಧಾರದ ಮೇಲೆ ಪ್ರಾತಿನಿಧ್ಯ ಕೊಡುವುದನ್ನು ಆದಷ್ಟು ಬೇಗ ತೆಗೆಸಿ ಹಾಕುವುದು ನಮ್ಮ ಗುರಿ ಆಗಿರಬೇಕು. ಕೇವಲ ಅರ್ಹತೆಯ ಆಧಾರದ ಮೇಲೆ ನಿಷ್ಪಕ್ಷಪಾತವಾಗಿ ಪ್ರತಿನಿಧಿಗಳನ್ನು ಆರಿಸಲು ಸಾಮಾನ್ಯ ಚುನಾಯಕ ಸಮುದಾಯ ಇರಬೇಕು. ಹಾಗೆಯೇ ಆಡಳಿತ ಸೇವಾಕ್ಷೇತ್ರಗಳಲ್ಲಿ ನಿಷ್ಪಕ್ಷಪಾತವಾಗಿ ಕೆಲಸಮಾಡುವ ಅರ್ಹ ಸ್ತ್ರೀಪುರುಷರು ಇರಬೇಕು. ಅಂತಹ ಸಮಯ ಬರುವವರೆಗೆ ಹಾಗೂ ಕೋಮುವಾರು ಈರ್ಷ್ಯೆ ಹಾಗೂ ಪಕ್ಷಪಾತಗಳು ಮಾಯವಾಗುವವರೆಗೆ, ಬಹು ಸಂಖ್ಯಾತರ ಉದ್ದೇಶಗಳ ಬಗ್ಗೆ ಸಂದೇಹಪಡುವ ಅಲ್ಪ ಸಂಖ್ಯಾತರುಗಳು ತಮ್ಮ ಹಿತರಕ್ಷಣೆ ಮಾಡಿಕೊಳ್ಳಲು ಅವಕಾಶ ಇರಬೇಕು. ಬಹು ಸಂಖ್ಯಾತರು ಸ್ವಾರ್ಥ ತ್ಯಾಗದ ಮೇಲ್ಪಂಕ್ತಿ ಹಾಕಿ ಕೊಡಬೇಕು".

ಭಾರತದ ರಾಜಕೀಯ ಗುರಿಯ ಬಗೆಗೆ ಪ್ರಸ್ತಾಪಿಸಿ, ಪೂರ್ಣ ಸ್ವಾತಂತ್ರ್ಯಕ್ಕಿಂತ ಪರಸ್ಪರಾವಲಂಬಿಗಳಾದ ಮಿತ್ರರಾಷ್ಟ್ರಗಳ ಒಕ್ಕೂಟ ಲೇಸೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. "ಬ್ರಿಟಿಷ್ ಸರ್ಕಾರ ಆಡಿದಂತೆ ನಡೆದು ನಾವು ಸರಿಸಮಾನರಾಗಲು ಸಹಾಯಕವಾದಲ್ಲಿ, ಅದಕ್ಕಿಂತ ಮಿಗಿಲಾದ ಜಯ ಬೇರೊಂದಿಲ್ಲ. ಬ್ರಿಟಿಷರ ಸಂಪರ್ಕವನ್ನು ಪೂರ್ಣವಾಗಿ ಕಡಿದು ಹಾಕುವುದಕ್ಕಿಂತ ಹೆಚ್ಚಿನ ಗೆಲುವು ಅದಾಗಿರುತ್ತದೆ. ಆದುದರಿಂದ ಬ್ರಿಟಿಷ್ ಚಕ್ರಾಧಿಪತ್ಯದ ವ್ಯಾಪ್ತಿಯೊಳಗೆ ಸ್ವರಾಜ್ಯ ಹೊಂದಲು ನಾನು ಪ್ರಯತ್ನಿಸುತ್ತೇನೆ. ಆದರೆ ಬ್ರಿಟಿಷರ ತಪ್ಪಿನ ಕಾರಣದಿಂದಾಗಿ ನಾವು ಅವರಿಂದ ಪ್ರತ್ಯೇಕವಾಗುವುದು ಅನಿವಾರ್ಯವೇ ಆದಲ್ಲಿ ಅವರೊಂದಿಗಿರುವ ಎಲ್ಲ ಸಂಬಂಧಗಳನ್ನೂ ಕಡಿಯಲು ನಾನು ಹಿಂಜರಿಯುವುದಿಲ್ಲ. ಆಗ ಅದಕ್ಕೆ ಕಾರಣ ಬ್ರಿಟಿಷ್ ಜನರೇ ಎಂದು ಹೇಳುತ್ತೇನೆ."

ಗಾಂಧೀಜಿ ತಮ್ಮ ಭಾಷಣವನ್ನು ಪರಿಸಮಾಪ್ತಿಗೊಳಿಸುತ್ತಾ ತಮ್ಮ ನಂಬಿಕೆ

ಯನ್ನು ಹೀಗೆ ಪ್ರತಿಪಾದಿಸಿದರು: "ಕಾಂಗ್ರೆಸ್ಸಿನ ಅಖಂಡತೆಯನ್ನು ಉಳಿಸಿಕೊಳ್ಳುವುದು ನನ್ನ ಇಚ್ಛೆ. ಈ ಉದ್ದೇಶದಿಂದ ಅಸಹಕಾರ ಚಳವಳಿಯನ್ನು ಸದ್ಯಕ್ಕೆ ನಿಲ್ಲಿಸಬೇಕೆಂದು ಸಲಹೆ ಮಾಡುತ್ತೇನೆ. ಅಸಹಕಾರಕ್ಕೆ ದೇಶ ಸಿದ್ಧವಾಗಿಲ್ಲದಿರುವುದೇ ಇದಕ್ಕೆ ಕಾರಣ. ಆದರೆ ವೈಯಕ್ತಿಕವಾಗಿ ನನ್ನ ಮಟ್ಟಿಗೆ ಹೇಳುವುದಾದರೆ, ಎಲ್ಲಿಯವರೆಗೆ ಸರ್ಕಾರ ಈಗಿರುವ ರೀತಿಯಲ್ಲೇ ಇರುವುದೋ ಅಲ್ಲಿಯವರೆಗೆ ನನ್ನ ಅಸಹಕಾರ ಇದ್ದೇ ಇರುತ್ತದೆ. ಇದು ಕೇವಲ ನೀತಿಯ ಮಾತಲ್ಲ; ನನ್ನ ನಂಬಿಕೆಯ ಮೂಲಸೂತ್ರ. ಅಸಹಕಾರ ಮತ್ತು ಸವಿನಯ ಶಾಸನೋಲ್ಲಂಘನೆ–ಇವೆರಡೂ ಸತ್ಯಾಗ್ರಹ ವೃಕ್ಷದ ಬೇರೆ ಬೇರೆ ಕೊಂಬೆಗಳು. ಅದು ನನ್ನ ಕಲ್ಪತರು, ಜೀವದ ಜೀವ, ಕಾಮಧೇನು. ಸತ್ಯಾನ್ವೇಷಣೆಯೇ ಸತ್ಯಾಗ್ರಹ. ದೇವರೇ ಸತ್ಯ. ಅಹಿಂಸೆಯಿಂದ ನನಗೆ ಸತ್ಯದ ಬೆಳಕು ಗೋಚರವಾಗುತ್ತದೆ. ನನಗೆ ಸ್ವರಾಜ್ಯವೆಂದರೆ ಸತ್ಯದ ಒಂದು ಭಾಗ. ದಕ್ಷಿಣ ಆಫ್ರಿಕಾದಲ್ಲಿ ಆಗಲೀ ಖೇಡಾ ಅಥವಾ ಚಂಪಾರಣ್ಯದಲ್ಲಾಗಲೀ ಸತ್ಯಾಗ್ರಹ ವಿಫಲವಾಗಲಿಲ್ಲ. ಹೀಗೇ ಇನ್ನೂ ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು. ಸತ್ಯಾಗ್ರಹದಲ್ಲಿ ಹಿಂಸೆ ಅಥವಾ ದ್ವೇಷಕ್ಕೆ ಎಡೆಯಿಲ್ಲ. ಆದುದರಿಂದ ನಾನು ಆಂಗ್ಲೇಯರನ್ನು ದ್ವೇಷಿಸಲಾರೆ; ದ್ವೇಷಿಸು ವುದಿಲ್ಲ, ಅವರ ದಬ್ಬಾಳಿಕೆಯನ್ನು ಸಹಿಸುವುದೂ ಇಲ್ಲ. ಬ್ರಿಟಿಷರ ವಿಧಾನಗಳನ್ನೂ ಸಂಸ್ಥೆಗಳನ್ನೂ ಭಾರತದ ಮೇಲೆ ಹೊರಿಸುವ ಅಪವಿತ್ರ ಪ್ರಯತ್ನಗಳನ್ನು ತಡೆಯಲು ಆಮರಣಾಂತ ಹೋರಾಡಬೇಕು. ಆದರೆ ನಾನು ಅಹಿಂಸಾತ್ಮಕವಾಗಿ ಹೋರಾಡುತ್ತೇನೆ. ಬ್ರಿಟಿಷ್ ಆಡಳಿತಗಾರರ ವಿರುದ್ಧ ಅಹಿಂಸಾತ್ಮಕವಾಗಿ ಹೋರಾಡಲು ಭಾರತಕ್ಕೆ ಸಾಮರ್ಥ್ಯವಿದೆ. ಆ ಬಗ್ಗೆ ನಡೆದಿರುವ ಪ್ರಯೋಗ ವಿಫಲವಾಗಿಲ್ಲ. ಅದು ಯಶಸ್ವಿ ಯಾಗಿದೆ. ಆದರೆ ನಾವು ನಿರೀಕ್ಷಿಸಿದಷ್ಟು ಯಶಸ್ಸು ದೊರೆತಿಲ್ಲದಿರಬಹುದಷ್ಟೆ. ನನಗೆ ನಿರಾಶೆ ಏನಿಲ್ಲ. ಭಾರತವೂ ಸತ್ಯಾಗ್ರಹದ ಮೂಲಕವೇ ತನ್ನ ಸ್ಥಾನವನ್ನು ಕ್ಷಿಪ್ರದಲ್ಲೇ ಪಡೆಯುತ್ತದೆ ಎಂಬುದು ನನ್ನ ನಂಬಿಕೆ. ಈಗ ಉದ್ದೇಶಿಸಿರುವ ಅಸಹಕಾರದ ನಿಲುಗಡೆ ನಮ್ಮ ಪ್ರಯೋಗದ ಒಂದು ಅಂಗ. ನಾನು ಈಗ ರೂಪಿಸಿರುವ ಕಾರ್ಯಕ್ರಮವನ್ನು ಈಡೇರಿಸುವುದಾದರೆ ಅಸಹಕಾರವನ್ನು ಮತ್ತೆ ಹೂಡುವ ಆವಶ್ಯಕತೆಯೇ ಬರಲಾರದು. ಈ ಕಾರ್ಯಕ್ರಮ ವಿಫಲವಾದರೆ ಅಹಿಂಸಾತ್ಮಕ ಅಸಹಕಾರವನ್ನು ಒಂದಲ್ಲ ಒಂದು ರೀತಿಯಲ್ಲಿ–ಕಾಂಗ್ರೆಸ್ಸಿನ ಮೂಲಕವಾಗಲೀ ಅಥವಾ ಅದಕ್ಕೆ ಹೊರತಾಗಲೀ–ಪುನಃ ಹೂಡಬೇಕಾಗುವುದು. ಸತ್ಯಾಗ್ರಹಕ್ಕೆ ಸೋಲಿಲ್ಲ. ಸತ್ಯಸ್ಥಾಪನೆಗೆ ಒಬ್ಬ ಪರಿಪೂರ್ಣನಾದ ಸತ್ಯಾಗ್ರಹಿ ಇದ್ದರೂ ಸಾಕು. ಅಂತಹ ಪರಿಪೂರ್ಣ ಸತ್ಯಾಗ್ರಹಿಗಳಾಗಲು ನಾವೆಲ್ಲರೂ ಪ್ರಯತ್ನಿಸೋಣ. ಅಂತಹ ಪ್ರಯತ್ನ ಮಾಡಲು ಅಗತ್ಯವಾದ ಗುಣವನ್ನು ಪಡೆಯಲು ನಮ್ಮಲ್ಲಿ ಅತ್ಯಂತ ಕನಿಷ್ಠರಿಗೂ ಸಾಧ್ಯ. ಮುಖ್ಯವಾಗಿ, ಸತ್ಯಾಗ್ರಹ ಅಂತರಂಗದ ಚೇತನಕ್ಕೆ ಸಂಬಂಧಿಸಿದ ಲಕ್ಷಣ. ಅದು ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಅಂತರ್ಗತವಾಗಿರುತ್ತದೆ. ಸ್ವದಂತೆಸ ರಾಜ್ಯತ್ಯಾಗ್ರಹವೂ ನಮ್ಮ ಜನ್ಮಸಿದ್ಧವಾದ ಹಕ್ಕು. ಅದನ್ನು ನಾವು ತಿಳಿದಿರಬೇಕು".

ಕಾಂಗ್ರೆಸ್ ಅಧಿವೇಶನದ ಕಾರ್ಯಕಲಾಪಗಳನ್ನು ಉಪಸಂಹಾರ ಮಾಡುತ್ತಾ ಹೀಗೆ ನುಡಿದರು: "ನೀವು ನನ್ನ ಮೇಲೆ ತೋರಿರುವ ಉದಾತ್ತ ಪ್ರೇಮ ಮತ್ತು ಔದಾರ್ಯಗಳನ್ನು, ನಮ್ಮೆಲ್ಲರನ್ನೂ ಒಂದುಗೂಡಿಸಿರುವ ನೆಚ್ಚಿನ ಸ್ವರಾಜ್ಯದತ್ತ ಹರಿಸ ಬೇಕೆಂದು ಕೋರುತ್ತೇನೆ. ನಮಗೆ ಸ್ವರಾಜ್ಯ ಬೇಕಾದರೆ ಅದನ್ನು ಪಡೆಯಲು ಅಗತ್ಯ ವಾದ ಷರತ್ತುಗಳೇನೆಂಬುದನ್ನು ತಿಳಿದಿರಬೇಕು. ಒಪ್ಪಂದಕ್ಕೆ ಸಂಬಂಧಿಸಿದಂತೆ ದಾಸ್ ಮಂಡಿಸಿದ ಗೊತ್ತುವಳಿಯಲ್ಲಿದ್ದ ಆ ಷರತ್ತುಗಳನ್ನು ನೀವು ಅಂಗೀಕರಿಸಿದ್ದೀರಿ. ಆ ಷರತ್ತುಗಳು ಎಲ್ಲರಿಗೂ ವೇದ್ಯವಾಗಿವೆ. ಅವನ್ನು ನೀವು ಕಾಯೇನವಾಚಾಮನಸಾ ಕಾರ್ಯಗತಮಾಡಬೇಕು. ಬೇರೆಯವರು ಹಾಗೆ ಮಾಡುವಂತೆ ಪ್ರೇಮ ಮಾರ್ಗದಲ್ಲಿ ಒತ್ತಾಯ ಮಾಡಬೇಕು. ಪ್ರೇಮದಿಂದ ಎಷ್ಟು ಪ್ರಭಾವ ಬೀರಬಹುದೋ ಒತ್ತಡ ತರಬಹುದೋ ಅಷ್ಟನ್ನೂ ಸಂಬಂಧಪಟ್ಟ ಪ್ರತಿಯೊಬ್ಬರ ಮೇಲೂ ತನ್ನಿ. ನಿಮ್ಮ ನಿಮ್ಮ ಜಿಲ್ಲೆಗಳಲ್ಲಿ ಪ್ರವಾಸಮಾಡಿ ಖದ್ದರ್‌ನ ಸಂದೇಶವನ್ನು ಸಾರಿರಿ; ಹಿಂದೂ–ಮುಸ್ಲಿಂ ಐಕ್ಯತೆಯ ಸಂದೇಶವನ್ನು ಹೇಳಿ; ಅಸ್ಪೃಶ್ಯತಾ ನಿವಾರಣೆಯ ಸಂದೇಶವನ್ನು ಬಿತ್ತರಿಸಿರಿ; ದೇಶದ ಯುವಕರನ್ನು ಸಂಘಟಿಸಿ ಅವರನ್ನು ಸ್ವರಾಜ್ಯದ ನೈಜ ಯೋಧ ರನ್ನಾಗಿ ಮಾಡಿ. 'ಬದಲಾವಣೆ ಬೇಡವೆನ್ನುವವರೂ' ಸ್ವರಾಜ್ಯವಾದಿಗಳೂ ಪರಸ್ಪರ ದ್ವೇಷ ಮಾಡಿದರೆ, ಅಸೂಯೆ ಪಟ್ಟರೆ, ಈ ಕೆಲಸ ಮಾಡಲಾರಿರಿ. ಅದು ಸಾಧ್ಯವಾಗ ಬೇಕಾದರೆ ನೀವು ಎಲ್ಲ ದ್ವೇಷಗಳನ್ನೂ ಮರೆಯಬೇಕು. ಅಸೂಯೆಪಡಬಾರದು. ಕೋಪತಾಪಗಳನ್ನು ಬಿಡಬೇಕು. ಹೃದಯದಲ್ಲಿರುವ ಎಲ್ಲ ಕ್ಲೇಶಗಳನ್ನೂ ತೊಡೆದು ಹಾಕಬೇಕು. ಅದೇನಿದ್ದರೂ ಭೂಗತ ಮಾಡಿರಿ. ದಹನ ಮಾಡಿಬಿಡಿ; ಏನು ಬೇಕಾದರೂ ಮಾಡಿರಿ, ಈ ಪವಿತ್ರ ನಿರ್ಣಯವನ್ನು ನಿಮ್ಮೊಂದಿಗೆ ಕೊಂಡೊಯ್ಯಿರಿ. ಆಕಾಶ ಕಳಚಿ ಬಿದ್ದರೂ ಸರಿಯೆ, ಸ್ವರಾಜ್ಯವಾದಿಗಳನ್ನೂ 'ಬದಲಾವಣೆ ಬೇಡವೆನ್ನುವವರನ್ನೂ' ಒಂದುಗೂಡಿಸಿರುವ ಸೂತ್ರ ಎಂದಿಗೂ ಕಡಿದು ಹೋಗಕೂಡದು."

# ಪೂರ್ವಸಿದ್ಧತೆಯ ಪ್ರವಾಸ

೧೯೨೫

೧೯೨೫ರಲ್ಲಿ ಕೇವಲ ಪಕ್ಷನಿಷ್ಠವಾದ ಯಾವುದೇ ಸೂಚನೆ ಅಥವಾ ಸಲಹೆ ಯನ್ನು ಒಪ್ಪಬಾರದೆಂದು ಗಾಂಧಿಯವರು ಸೂಚಿಸಿದರು. "ಕಾಂಗ್ರೆಸ್ಸಿನೊಳಗೇ ವಿರೋಧ ತುಂಬಿದ್ದರೆ ಚರಖದ ಕಾರ್ಯಕ್ರಮವನ್ನಾಗಲಿ, ವಿದೇಶೀ ವಸ್ತ್ರದ ಬಹಿಷ್ಕಾರವನ್ನಾಗಲೀ ತ್ವರಿತವಾಗಿ ಕಾರ್ಯಗತ ಮಾಡಲು ಆಗುವುದಿಲ್ಲ. ಈ ರಾಷ್ಟ್ರೀಯ ವಿಧಾಯಕ ಕಾರ್ಯಕ್ರಮಕ್ಕೆ ಕಾಂಗ್ರೆಸ್ಸೇತರರ ಬೆಂಬಲವನ್ನೂ ಪಡೆಯಲು ನಾವು ಪ್ರಯತ್ನಿಸಬೇಕು. ಅವರು ಸದಸ್ಯತ್ವದ ಹಕ್ಕಿನ ಭಾಗವಾಗಿ ನೂಲುವುದನ್ನಾಗಲೀ ಖಾದಿ ಬಳಕೆಯನ್ನಾಗಲೀ ಒಪ್ಪದಿರಬಹುದು. ಆದರೆ ನೂಲುವ ಉದ್ಯಮವನ್ನು ಕುಟೀರ ಉದ್ಯೋಗವನ್ನಾಗಿ ಪರಿಗಣಿಸಲು ಅನೇಕ ಉದಾರವಾದಿಗಳು (liberals) ಸಿದ್ಧರಿದ್ದಾರೆ. ಕಾಂಗ್ರೆಸ್ ಸದಸ್ಯತ್ವದ ನಿಯಮದ ಸಂಬಂಧ ಬಿಟ್ಟರೆ, ಖಾದಿ ಬಳಕೆಯ ಬಗ್ಗೆ ಅವರದೇನೂ ಆಕ್ಷೇಪಣೆ ಇರಲಿಕ್ಕಿಲ್ಲ. ಕಾಂಗ್ರೆಸ್ಸಿನ ಪ್ರಸ್ತುತ ಸಿದ್ಧಾಂತವನ್ನೂ ಸದಸ್ಯತ್ವದ ಹೊಸ ಕಟ್ಟಳೆಯನ್ನೂ ಒಪ್ಪಲು ಎಲ್ಲ ಪಕ್ಷಗಳಿಗೂ ಸಂವಿಧಾನಾತ್ಮಕ ಅಡಚಣೆ ಬರುತ್ತದೆ. ಆದುದರಿಂದ ಎಲ್ಲ ಪಕ್ಷಗಳವರೂ ಕಾಂಗ್ರೆಸ್ಸಿಗರಾಗಲಾರರು. ಆದರೆ ಕಾಂಗ್ರೆಸ್ಸಿನ ಈ ಸಿದ್ಧಾಂತ ಅಥವಾ ಸದಸ್ಯತ್ವದ ನವ್ಯಸೂತ್ರ ಸಾಧ್ಯವಾದೆಡೆಗಳಲ್ಲಿ ಸಂಯುಕ್ತ ಕಾರ್ಯಕ್ರಮಕ್ಕೆ ಅಡ್ಡಿ ಬರಲಾರದೆಂದು ನಾನು ಆಶಿಸುತ್ತೇನೆ."

ಕಾಂಗ್ರೆಸ್ಸಿನೊಳಗೇ ಇದ್ದ ಎರಡೂ ಪಂಗಡಗಳನ್ನು ಒಂದುಗೂಡಿಸುವುದು ಗಾಂಧಿಯವರ ಉದ್ದೇಶವಾಗಿತ್ತು. ಕಾರ್ಯಕಾರೀಸಮಿತಿಗೆ ಸದಸ್ಯರುಗಳನ್ನು ನಾಮ ಕರಣಮಾಡುವ ಜವಾಬ್ದಾರಿಯನ್ನು ಗಾಂಧೀ, ದಾಸ್ ಮತ್ತು ನೆಹರೂರವರಿಗೆ ಎ.ಐ.ಸಿ.ಸಿ. ಒಪ್ಪಿಸಿತು. "ಬದಲಾವಣೆ ಬೇಡವೆನ್ನುವವರ" ಗುಂಪಿಗೆ ಸೇರಿದ ರಾಜ ಗೋಪಾಲಾಚಾರಿ, ವಲ್ಲಭಭಾಯ್ ಪಟೇಲ್ ಮತ್ತು ಬ್ಯಾಂಕರ್ ಇವರುಗಳನ್ನು ಗಾಂಧಿ ಯವರು ಬೇಕೆಂದೇ ಕಾರ್ಯಕಾರೀಸಮಿತಿಗೆ ಸೇರಿಸಿಕೊಳ್ಳಲಿಲ್ಲ. ಸರ್ವಮಾನ್ಯವಾದ ಕಾರ್ಯಕ್ರಮವನ್ನು ಸರ್ವಮಾನ್ಯ ವಿಧಾನದಲ್ಲಿ ಕಾರ್ಯಗತ ಮಾಡಬೇಕಾಗಿತ್ತು. ಅವರ ತರ್ಕ ಹೀಗಿತ್ತು: "ಬದಲಾವಣೆ ಬೇಡವೆನ್ನುವವರೇ ಸ್ಪಷ್ಟ ಬಹುಮತ ಹೊಂದಿರುವ ಕಾರ್ಯಕಾರೀ ಸಮಿತಿಯಲ್ಲಿ ಖಾದಿ ಕೆಲಸಕ್ಕೆ ಸಂಬಂಧಿಸಿದ ಪ್ರಬಲವಾದ ನಿರ್ಣಯಗಳನ್ನು ನಿಸ್ಸಂದೇಹವಾಗಿ ಅಂಗೀಕರಿಸಬಹುದು. ಆದರೆ ಸದಸ್ಯತ್ವದ ಬಗ್ಗೆ ಖಾದಿ ನಿಯಮವನ್ನು ಅರೆಮನಸ್ಸಿನಿಂದ ಒಪ್ಪಿಕೊಂಡಿರುವವರ ಮೇಲೆ ಅವು ಅಷ್ಟಾಗಿ ಪರಿಣಾಮ ಬೀರ ಲಾರವು. ಆದರೆ ಕಾರ್ಯಕಾರೀ ಸಮಿತಿಯಲ್ಲಿ ಸ್ವರಾಜ್ಯವಾದಿಗಳದು ಮೇಲುಗೈಯಾಗಿದ್ದರೆ ಸಮಿತಿಯು ಅಂಗೀಕರಿಸುವ ನಿರ್ಣಯಗಳು ಎಷ್ಟೇ ಮೃದುವಾಗಿದ್ದರೂ ಅವು ಸ್ವರಾಜ್ಯವಾದಿಗಳ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ. ಸ್ವರಾಜ್ಯವಾದಿಗಳನ್ನೂ

ಹೃತ್ಪೂರ್ವಕವಾಗಿ ನನ್ನೊಂದಿಗೆ ಕರೆದುಕೊಂಡು ಹೋಗುವುದು ನನ್ನ ಕೆಲಸವಾಗಿದೆ. ನಾನು ಅವರ ಮೇಲೆ ಪ್ರಭಾವ ಬೀರಲು ಇಚ್ಛಿಸುತ್ತೇನೆ, ಹಾಗೆಯೇ ಅವರು ನನ್ನ ಮೇಲೆ ಪ್ರಭಾವ ಬೀರಲಿ ಎಂಬುದೇ ನನ್ನ ಆಸೆ. ಸ್ವರಾಜ್ಯವಾದೀ ನಾಯಕರಲ್ಲಿ ಸದಸ್ಯತ್ವದ ಹೊಸಕಟ್ಟಳೆಯನ್ನು ಪೂರ್ಣ ವಿರೋಧಿಸುವವರು ಮತ್ತು ನಾನು ಒಟ್ಟಿಗೆ ಸೇರಿ ಕೆಲಸವನ್ನು ತೂಗಿಸಿಕೊಂಡು ಹೋಗಬೇಕು. ಅದಕ್ಕಿಂತ ಉತ್ತಮ ವಾದುದು ಬೇರೆ ಇರಲಾರದು".

ಗಾಂಧಿಯವರು ಕಾರ್ಯಕಾರೀ ಸಮಿತಿಗೆ ಕೇಲ್ಕರ್ ಮತ್ತು ಆಣೆ ಅವರ ಜೊತೆಗೆ ದಾಸ್, ಮೋತೀಲಾಲ್ ನೆಹರೂ, ಶ್ರೀಮತಿ ನಾಯ್ಡು, ಮಹಮದ್ ಆಲಿ, ಅಜಾದ್, ಸರ್ದಾರ್ ಮಂಗಳಸಿಂಗ್ ಮತ್ತು ಡಾ. ವರದರಾಜುಲು ನಾಯ್ಡು, ಇವರುಗಳನ್ನು ತೆಗೆದುಕೊಂಡರು. ರೇವಾಶಂಕರ್‌ಝುವೇರಿ ಅವರು ಮತ್ತು ಜಮುನಾಲಾಲ್ ಬಜಾಜ್ ಜಂಟಿ ಕಾರ್ಯದರ್ಶಿಗಳಾಗಿ ನೇಮಕಗೊಂಡರು. ಗಾಂಧಿಯವರ ಅಪೇಕ್ಷೆಯಂತೆ ಜವಹರ ಲಾಲ್ ನೆಹರೂರವರು ಎ.ಐ.ಸಿ.ಸಿ.ಯ ನಿರ್ವಾಹಕ ಕಾರ್ಯದರ್ಶಿಯಾಗಿ ಪುನಃ ಚುನಾಯಿಸಲ್ಪಟ್ಟರು.

ಸದಸ್ಯತ್ವದ ಹೊಸ ನಿಯಮವು ಅಸಮಾಧಾನಕ್ಕೆಡೆಗೊಟ್ಟಿತು. ನಿರ್ಣಯವು ಅಂಗೀಕಾರವಾದಮೇಲೆ ಶ್ರೀಮತಿ ಬೆಸೆಂಟ್‌ರವರು ಅದನ್ನು ಕುರಿತು ಮಾತನಾಡಲು ಅವಕಾಶ ಪಡೆದರು. ಅವರು ನಿರ್ಣಯದ ಬಗೆಗೆ ಕೆಲವು ಸಂದೇಹಗಳನ್ನು ವ್ಯಕ್ತ ಪಡಿಸಿದರು. "ನಾನು ಪ್ರತಿನಿತ್ಯ ಪ್ರಾತಃಕಾಲ ಅರ್ಧತಾಸು ನೂಲುವುದಾಗಿ ನಿಮ್ಮ ಅಧ್ಯಕ್ಷರಿಗೆ ವಚನ ಕೊಟ್ಟಿದ್ದೆ. ಅದರಂತೆ ಮಾಡಿದ್ದೇನೆ. ಆದರೆ ಪ್ರತಿ ತಿಂಗಳೂ ಎರಡು ಸಾವಿರ ಅಡಿಗಳಷ್ಟು ನೂಲನ್ನು ತೆಗೆಯುತ್ತೇನೆಂದು ನಾನು ಪ್ರತಿಜ್ಞೆ ಮಾಡಲಾರೆ. ಆ ಗತಿಯಲ್ಲಿ ನಾನು ಕೆಲಸ ಮಾಡಲಾರೆ. ಅದಕ್ಕಾಗಿ ಬೇರೊಬ್ಬರನ್ನು ಗೊತ್ತು ಮಾಡುವುದೂ ಇಲ್ಲ. ಹಾಗೆ ಮಾಡುವುದು ಒಳ್ಳೆಯದಲ್ಲವೆಂದೇ ನನ್ನ ಭಾವನೆ. ಸ್ವಹಸ್ತದಿಂದ ಕೆಲಸ ಮಾಡಲಾಗದಿದ್ದ ಮೇಲೆ ಅದಕ್ಕೆ ನಾನು ಗಮನಕೊಡುವುದಿಲ್ಲ."

ಸದಸ್ಯರಾದವರು ನೂಲಬೇಕೆಂಬ ನಿಯಮದ ಬಗ್ಗೆ ತಲೆದೋರಿದ್ದ ಸಂದೇಹ ಗಳನ್ನು ಗಾಂಧಿಯವರು ನಿವಾರಿಸಿದರು. ಆ ಬಗ್ಗೆ 'ಯಂಗ್ ಇಂಡಿಯಾ'ದಲ್ಲಿ ೧೯೨೫ರ ಜನವರಿ ೧ರ ಸಂಚಿಕೆಯಲ್ಲಿ ಹೀಗೆ ಬರೆದರು:

"ಪ್ರಗತಿಯತ್ತ ಕಾಂಗ್ರೆಸ್, ಭೀಮಹೆಜ್ಜೆಯನ್ನಿಟ್ಟಿದೆ. ಅಥವಾ ಕೆಲವರು ಹೇಳುವಂತೆ, ಹುಚ್ಚು ಮನುಷ್ಯನ ಮಾತು ಕೇಳಿ ಅದು ದೊಡ್ಡ ತಪ್ಪು ಮಾಡಿದೆ. ಪ್ರತಿಯೊಬ್ಬ ಕಾಂಗ್ರೆಸ್ಸಿಗನಿಂದಲೂ ನಿಷ್ಠೆ ಹಾಗೂ ಕ್ರಮಬದ್ಧ ಪರಿಶ್ರಮವನ್ನು ಕಾಂಗ್ರೆಸ್ ಅಪೇಕ್ಷಿಸುತ್ತದೆ. ಹಾಗೆ ಪರಿಶ್ರಮ ಮಾಡಲು ಆತನಿಗೆ ಇಷ್ಟವಿಲ್ಲದಿದ್ದರೆ ಅದನ್ನು ಬೇರೆಯವರ ಮೂಲಕ ಮಾಡಿಸಬೇಕು. ಇದೇನೋ ಕಷ್ಟತಮವಾದ ಕೆಲಸ. ಅದು ಅಷ್ಟು ಸುಲಭವಾಗಿದ್ದರೆ ನಾವು ನಿರೀಕ್ಷಿಸುವ ಮಹಾಸಾಧನೆ ಶಕ್ಯವಾಗುವುದು.

ಈ ಕಾರ್ಯಕ್ರಮದ ಯಶಸ್ವೀ ನಿರ್ವಹಣೆಯಿಂದ ಲಭಿಸುವ ಪರಿಣಾಮ ಅದ್ಭುತ ವಾದದ್ದು. ವರ್ಷಕ್ಕೆ ನಾಲ್ಕಾಣೆಯನ್ನು ವಸೂಲು ಮಾಡುವ ಕೆಲಸವೂ ಸಹ ಕಷ್ಟ ದಾಯಕವೇ ಎಂಬುದು ಮನವರಿಕೆ ಆಗಿರುವ ಸಂಗತಿ. ಇಂದು ಕಾಂಗ್ರೆಸ್ ದಫ್ತರದಲ್ಲಿ ದಾಖಲಾಗಿರುವ ಅಂತಹ ಸದಸ್ಯರ ಸಂಖ್ಯೆ, ಎಲ್ಲ ಪ್ರಾಂತಗಳದು ಒಟ್ಟು ಸೇರಿಸಿದರೂ, ಐವತ್ತು ಸಾವಿರ ಆಗುವುದಿಲ್ಲ. ಈಗ ಪ್ರತಿಯೊಬ್ಬ ಸದಸ್ಯನೂ ತಿಂಗಳಿಗೆ ಎರಡು ಸಾವಿರ ಅಡಿಯಷ್ಟು ನೂಲಬೇಕು ಅಥವಾ ಆತನ ಪರವಾಗಿ ಬೇರೊಬ್ಬರಿಂದಲಾದರೂ ಅಷ್ಟು ಮೊತ್ತದ ನೂಲನ್ನು ತೆಗೆಸಬೇಕು, ಎಂದು ಕಾಂಗ್ರೆಸ್ ನಿರೀಕ್ಷಿಸುತ್ತದೆ. ಇದರಿಂದಾಗಿ ಕಾರ್ಯಕರ್ತರು ನೂಲುವವರೊಂದಿಗೆ ನಿರಂತರ ಸಂಪರ್ಕ ಹೊಂದಿರಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಹೊಸ ಸದಸ್ಯತ್ವದ ಶಕ್ತಿ ಅಡಗಿರುವುದು ಅಲ್ಲಿಯೇ. ಜನರಿಗೆ ಇದರಿಂದ ಪ್ರೌಢವಾದ ರಾಜಕೀಯ ಶಿಕ್ಷಣ ದೊರೆಯುತ್ತದೆ. ಇಂದು ಭಾರತಾದ್ಯಂತ ಕನಿಷ್ಠಪಕ್ಷ ಐವತ್ತು ಲಕ್ಷ ರಾಟೆಗಳಾದರೂ ತಿರುಗುತ್ತಿವೆ. ನೂಲುವುದೇ ಕಸುಬಾಗಿರುವ ಅಷ್ಟು ಜನರೂ ಸುಲಭವಾಗಿ ಕಾಂಗ್ರೆಸ್ಸಿನವರಾಗಬಹುದು. ಅವರಿಂದ ಕೆಲಸ ತೆಗೆದು ಕೊಳ್ಳುತ್ತಿರುವವರು ಅವರಿಗೆ ಹೇಳಬಹುದು; "ನಿಮ್ಮ ದಿನಚರಿಯಲ್ಲಿ ಅರ್ಧಗಂಟೆ ಕಾಲ ದೇಶಕ್ಕಾಗಿ ನೂಲಿರಿ" ಎಂದು. ಈಗಾಗಲೇ ನೂಲುತ್ತಿರುವವರು ತಮ್ಮ ಸ್ನೇಹಿತರಿಗೂ ನೆರೆಹೊರೆಯವರಿಗೂ ನೂಲುವ ಕೆಲಸ ಹಚ್ಚಿ ಅವರುಗಳು ಕಾಂಗ್ರೆಸ್ ಸದಸ್ಯರುಗಳಾಗುವಂತೆ ಮಾಡಬೇಕು. ಇದನ್ನು ಮಾಡುವ ಶ್ರೇಷ್ಠ ವಿಧಾನ, ಪ್ರತಿಯೊಬ್ಬ ಕಾರ್ಯಕರ್ತನೂ ತಲಾ ಇಪ್ಪತ್ತು ಸದಸ್ಯರಿರುವ ನೂಲುವವರ ಮಂಡಲಗಳನ್ನು ರಚಿಸುವುದು. ಸ್ವತಃ ನೂಲಲು ಇಷ್ಟವಿಲ್ಲವೆಂದು ಪ್ರಾಮಾಣಿಕವಾಗಿ ಹೇಳುವವನು ತನಗೋಸ್ಕರ ತನ್ನ ಮನೆಯಲ್ಲಿ ಯಾರಿಂದಲಾದರೂ ನೂಲನ್ನು ತೆಗೆಸಬಹುದು. ನೂಲಲು ಇಷ್ಟವಿಲ್ಲವೆಂದು ಸುಮ್ಮನೆ ಹೇಳುವ ಸದಸ್ಯರು ತಮ್ಮ ಪಾಲಿನ ನೂಲನ್ನು ಪಡೆಯಲು ಕಸುಬಿನ ಕೆಲಸಗಾರರನ್ನು ನೇಮಿಸಿಕೊಳ್ಳಬಹುದು. ಇವು ಯಾವುದನ್ನೂ ಮಾಡದೆ ಮಾರುಕಟ್ಟೆಯಲ್ಲಿ ನೂಲನ್ನು ಕೊಂಡು ವಂತಿಗೆ ಸಲ್ಲಿಸುವ ಸದಸ್ಯರು ಕಡೆಯ ದರ್ಜೆಗೆ ಸೇರುತ್ತಾರೆ. ಅವರು ಕೊಳ್ಳುವ ನೂಲು ಅಸಲಿಯದಾಗಿರದೆ ನಕಲಿ ಯದಾಗಿರುವ ಅಪಾಯವೂ ಇರುತ್ತದೆ. ದೇಶಕ್ಕಾಗಿ, ಕಾಂಗ್ರೆಸ್ಸಿನ ಸಲುವಾಗಿ, ನೂಲಲು ಇಷ್ಟಪಡದೇ ಇರುವ ಸ್ತ್ರೀ ಪುರುಷರ ಸಂಖ್ಯೆ ಅತಿ ವಿರಳ ಎಂಬುದೇ ನನ್ನ ನಂಬಿಕೆ. ಸದಸ್ಯತ್ವಕ್ಕೆ ಸಂಬಂಧಿಸಿರುವ ನಿಯಮದಲ್ಲಿ ನೂಲಲು 'ಇಷ್ಟಪಡದಿರುವ' ಎಂಬ ಪದವನ್ನು ಹಿರಿಯ ಕಾಂಗ್ರೆಸ್ಸಿಗರಿಗೆ ಉಂಟಾಗಬಹುದಾದ ಕಷ್ಟವನ್ನು ಮನಗಂಡು ಸೇರಿಸಲಾಗಿದೆ. ಈ ಸಂಬಂಧವಾಗಿ ಅವರು ಕಾಂಗ್ರೆಸ್ಸನ್ನು ಬಿಡಲು ಇಚ್ಛಿಸಿದರೂ ಅವರನ್ನು ಕಳುಹಿಸಿಕೊಡಲು ನಾನು ಸಿದ್ಧನಿಲ್ಲ. ಆದರೆ ಮನಸ್ಸಿಲ್ಲವೆಂಬ ಧೋರಣೆಗೆ ಈಗ ಉತ್ತೇಜನವಿರುವುದಿಲ್ಲವೆಂದು ನಾನು ಆಶಿಸುತ್ತೇನೆ. ಕೇವಲ ಕೈನೂಲಿನ ಉತ್ಪನ್ನವು ಸೋಮಾರಿಯನ್ನೂ ಹಸಿದವನನ್ನೂ ಕೆಲಸಕ್ಕೆ ಹಚ್ಚುವುದಿಲ್ಲ. ಶ್ರಮನಿಷ್ಠ ದುಡಿಮೆಯ ವಾತಾವರಣ ಉಂಟಾದರೆ, ಅದರಲ್ಲೂ ಕೈಲಿ ನೂಲುವುದರಿಂದ ಅಂತಹ ಪರಿಸ್ಥಿತಿ

ಯನ್ನು ತಂದರೆ, ಲಕ್ಷಾಂತರ ಜನರು ಪುನಃ ರಾಟೆಯನ್ನು ಕೈಗೆತ್ತಿಕೊಳ್ಳುತ್ತಾರೆ. ಸ್ವತಃ ನೂಲುವುದು ಗೌರವದ ಕೆಲಸವೆಂದು ಭಾವಿಸಿ ಎಲ್ಲಾ ಕಾಂಗ್ರೆಸ್ಸಿಗರೂ ನೂತರೆ ಅಂತಹ ವಾತಾವರಣವನ್ನು ಸೃಷ್ಟಿಮಾಡಬಹುದು".

ಗಾಂಧಿಯವರ ಮನವಿಗೆ ತುಂಬಾ ಒಳ್ಳೆಯ ಪುರಸ್ಕಾರ ದೊರೆಯಿತು "ಏಪ್ರಿಲ್ ೩೦ರ ಒಳಗೆ ಮಧುರೆ ನಗರದಲ್ಲಿ ಹತ್ತು ಸಹಸ್ರ ಚರಖಗಳನ್ನು ಚಾಲ್ತಿಗೆ ತರುವುದಾಗಿ ಆಶ್ವಾಸನೆ ಕೊಡುತ್ತೇನೆ" ಎಂದು ಕಾಂಗ್ರೆಸ್ಸಿಗರೊಬ್ಬರು ಬರೆದರು.

ಗಾಂಧಿಯವರ ಅಧ್ಯಕ್ಷ ಪದವಿಯ ಅವಧಿ ಮುಗಿಯುವ ಹೊತ್ತಿಗೆ ನೂಲುವ ಕಸುಬಿನ ಐದು ಸಾವಿರ ಮುಸಲ್ಮಾನರನ್ನು ಸದಸ್ಯರನ್ನಾಗಿ ಮಾಡುವುದಾಗಿ ಮೌಲಾನಾ ಜಫರ್ ಅಲಿಖಾನ್ ವಚನಕೊಟ್ಟರು. ಮೌಲಾನಾರವರು ಕೊಟ್ಟಿರುವ ಆಶ್ವಾಸನೆ ಪವಿತ್ರವಾದುದೆಂದೂ ಅದನ್ನು ಅವರು ಪೂರ್ಣಗೊಳಿಸದಿದ್ದರೆ ತಾವು ಉಪವಾಸ ಮಾಡಬೇಕಾಗುವುದೆಂದು ಗಾಂಧಿ ಮೌಲಾನಾರಿಗೆ ತಿಳಿಸಿದರು. "ನೀವು ಆತ್ಮಹತ್ಯ ಮಾಡಿಕೊಳ್ಳಬೇಕೆಂದು ನಾನು ಬಯಸುವುದಿಲ್ಲ" ಎಂದು ಮೌಲಾನಾ ಪ್ರತ್ಯುತ್ತರ ಕೊಟ್ಟರು. "ಅದನ್ನು ಈಡೇರಿಸುವ ಬಗ್ಗೆ ಶ್ರದ್ಧೆ ಇಲ್ಲದಿದ್ದರೆ ಅಥವಾ ಅದು ಅಸಾಧ್ಯ ವೆಂದು ತಿಳಿದಿದ್ದರೆ ನಾನು ಆಶ್ವಾಸನೆಯನ್ನು ಕೊಡುತ್ತಲೇ ಇರಲಿಲ್ಲ" ಎಂದರು ಮೌಲಾನಾ. ಗೌರವಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯಲು ಎಲ್ಲ ಪ್ರಾಂತಗಳೂ ಪೈಪೋಟಿ ನಡೆಸಿದುವು; ಕಡೆಗೆ ಆ ಗೌರವ ಗುಂಜರಾತಿಗೆ ಲಭಿಸಿತು.

ಕಾಂಗ್ರೆಸ್ ಅಧಿವೇಶನ ಮುಗಿದ ಕೂಡಲೆ ಗಾಂಧೀಜಿ ಕೈಗೊಂಡ ಮೊದಲ ಕಾರ್ಯಕ್ರಮವೆಂದರೆ ತೀವ್ರಸಿದ್ಧತೆಯ ಪ್ರವಾಸ. ವರ್ಷದ ಆದಿಯಲ್ಲಿ ಕಾಥೆವಾಡ, ಮಧ್ಯಭಾರತ, ಬಂಗಾಳ, ಮಲಬಾರ್ ಮತ್ತು ತಿರುವಾಂಕೂರಿನ ಹಳ್ಳಿಗಳಿಗೆ ಭೇಟಿ ಕೊಟ್ಟರು. ಕಳಕಳಿಯ ಆವೇಶಪೂರಿತ ವಾಗ್ಝರಿಯನ್ನು ಹರಿಸಿದರು. "ಜನಸಾಮಾನ್ಯರು ನನ್ನನ್ನು ಕಾಣಲು ಇಚ್ಛಿಸುತ್ತಾರೆಂದು ಭಾವಿಸಿ ನಾನು ಪ್ರವಾಸ ಕೈಗೊಂಡಿದ್ದೇನೆ. ಅವರನ್ನು ಕಾಣಲು ನನಗೆ ನಿಜವಾಗಿಯೂ ಇಷ್ಟ. ಕೆಲವೇ ಮಾತುಗಳಲ್ಲಿ ಅವರಿಗೆ ನನ್ನ ಸಂದೇಶವನ್ನು ತಿಳಿಸುತ್ತೇನೆ. ಇದರಿಂದ ನನಗೂ ತೃಪ್ತಿ, ಅವರಿಗೂ ತೃಪ್ತಿ. ಅದು ನಿಧಾನವಾಗಿ, ಆದರೆ ಖಚಿತವಾಗಿ ಜನರ ಮನಸ್ಸಿನಲ್ಲಿ ಸೇರಿ ನಿಲ್ಲುತ್ತದೆ".

ಮರಗಳೇ ಇಲ್ಲದ ಕಾಥೇವಾಡದ ರಸ್ತೆಗಳು. ಕೆಂಡವಾಗಿ ಕಾಯುತ್ತಿದ್ದ ನೆಲ. ಅದರ ಮೇಲೆ ಬರಿಗಾಲಲ್ಲಿಯೇ ನಿಂತು ಅಸ್ಪೃಶ್ಯರು ಕಾಂಗ್ರೆಸ್ ಅಧ್ಯಕ್ಷರನ್ನು ಸ್ವಾಗತಿಸಿದರು. ಅವರ ದೂರು ಇದು: "ಆ ಕಡೆ ಕಣ್ಣೆತ್ತಿ ಭಾವಿಯಿರುವ ಕಡೆ ನೋಡಿ; ಅಲ್ಲಿ ಜನ ನೀರು ಸೇದುತ್ತಿದ್ದಾರೆ. ಆ ಭಾವಿಯ ನೀರನ್ನು ನಾವು ಬಳಸುವಂತಿಲ್ಲ. ನಾವೇ ಒಂದು ಭಾವಿಯನ್ನು ನಿರ್ಮಿಸಿಕೊಳ್ಳೋಣವೆಂದರೆ ನಾವು ಕಡುಬಡವರು. ಭಾವಿಗೆ ಹೊಂದಿದಂತೆ ಕಟ್ಟಿರುವ ದನಗಳ ನೀರಿನ ತೊಟ್ಟಿಯಿಂದ ಮಾತ್ರ ನಾವು ನೀರು ತೆಗೆದುಕೊಳ್ಳಬೇಕು. ಅದೂ ತೊಟ್ಟಿಗೆ ನೀರು ಬಿಟ್ಟಾಗ ಕಾದು ತೆಗೆದುಕೊಳ್ಳಬೇಕು". ಗಾಂಧಿಯವರು

ಅವರಿಗೆ ಸಮಾಧಾನ ಹೇಳಿದರು; ಅವರೊಂದಿಗೆ ವಿಚಾರ ಮಾಡಿದರು. ಈ ವಿಷ ಚಕ್ರದೀದ ಹೊರಬರಲು ಸಂಪ್ರದಾಯಸ್ಥ ಹಿಂದೂ ನಿರಾಕರಿಸುವಂತೆ ಅಸ್ಪೃಶ್ಯನೂ ನಿರಾಕರಿಸುತ್ತಾನೆ. "ನಿಮಗೆ ಕುಡಿಯುವುದಕ್ಕೂ ಸ್ನಾನ ಬಟ್ಟೆಗಳಿಗೂ ಶುಚಿಯಾದ ನೀರನ್ನು ಕೊಡಿಸುವ ಜವಾಬ್ದಾರಿ ನನ್ನದು. ಆದರೆ ನೀವು ಸತ್ತ ಪ್ರಾಣಿಗಳ ಕೊಳೆತ ಮಾಂಸ ತಿನ್ನುವುದನ್ನು ಬಿಡುತ್ತೀರಾ? ಅದು ಹೇಯ ಅಭ್ಯಾಸ. ಅದನ್ನು ನೀವು ಬಿಡುವವರೆಗೆ ನಾನೇನೊ ನಿಮ್ಮನ್ನು ಮುಟ್ಟಬಹುದು; ಆದರೆ ಸಂಪ್ರದಾಯಸ್ಥ ಬ್ರಾಹ್ಮಣರನ್ನು ಒಪ್ಪಿಸುವ ಯತ್ನ ಯಶಸ್ವಿಯಾಗುವುದಿಲ್ಲ". ಮದ್ಯಪಾನ ಮಾಡುತ್ತೀರಿ, ಮಿಲ್ ಬಟ್ಟೆ ಧರಿಸುತ್ತೀರಿ ಎಂದು ಮಾಡಿದ ಆಪಾದನೆಗಳಿಗೆ, ಅವು ತಮ್ಮ ತಪ್ಪು ಎಂದು ಅವರು ಒಪ್ಪಿಕೊಂಡರು. ಆದರೆ ಸತ್ತ ಪ್ರಾಣಿಗಳ ಮಾಂಸಭಕ್ಷಣೆ ಬಗ್ಗೆ ತಮ್ಮನ್ನು ಸಮರ್ಥಿಸಿಕೊಳ್ಳಲು ಅವರು ಪ್ರಯತ್ನಿಸಿದರು. "ಸತ್ತ ದನಕರುಗಳನ್ನು ನಾವೇ ಸಾಗಿಸಬೇಕೆಂದು ನಿರೀಕ್ಷಿಸುತ್ತೀರಿ. ಅಂದ ಮೇಲೆ ಅವುಗಳ ಮಾಂಸವನ್ನು ತಿನ್ನಬಾರದೆಂದು ಹೇಗೆ ನಿರೀಕ್ಷಿಸುತ್ತೀರಿ?" ಈ ವಾದ ಒಪ್ಪುವಂತಹುದಾಗಿರಲಿಲ್ಲ. "ಪಟ್ಟಣಗಳಲ್ಲಿರುವ ಚರ್ಮ ಹದಮಾಡುವ ಕಾರ್ಖಾನೆಗಳಲ್ಲಿ ಬ್ರಾಹ್ಮಣರೂ ಮೇಲ್ವರ್ಗ ಹಿಂದೂಗಳೂ ಮೇಲ್ವಿಚಾರಕರಾಗಿದ್ದಾರೆ. ನಾನೂ ಒಂದು ದಿನ ಚರ್ಮಶಾಲೆಯನ್ನು ನಡೆಸೇನು. ಆದರೆ ಅವರುಗಳಾಗಲೀ ನಾನಾಗಲೀ ಸತ್ತ ಪ್ರಾಣಿಯ ಮಾಂಸವನ್ನು ಬಳಸುವುದಿಲ್ಲ"

ಮಂಗ್ರೋಲ್‌ನಲ್ಲಿ ಗಾಂಧೀ ಹೇಳಿದರು: "ಸಂಪ್ರದಾಯಸ್ಥ ಜನ ಸಭೆಯನ್ನು ಬಿಟ್ಟು ಹೋದರೂ ಸರಿಯೇ; ಆದರೆ ಅಸ್ಪೃಶ್ಯರು ಪ್ರತ್ಯೇಕವಾದ ಸ್ಥಳದಲ್ಲಿ ಕುಳಿತುಕೊಂಡು ತಮ್ಮ ಭಾಷಣವನ್ನು ಕೇಳಲಿ ಎಂಬುದನ್ನು ಒಪ್ಪುವುದಿಲ್ಲ" ಎಂದರು. ದೃಷ್ಟಾಂತಗಳನ್ನು ತಿಳಿಸಿ ಕತೆ ಹೇಳಿ ಟೀಕೆ ಮಾಡಿ ಜನರಲ್ಲಿ ಮಾರ್ಪಾಟನ್ನು ತಂದರು; ಕಡೆಗೆ ಧೇಡ್ (Dhed) ಸಂಗೀತಗಾರನೊಬ್ಬ ಜೈನರೊಬ್ಬರ ಮನೆಯಲ್ಲಿ ಕಛೇರಿ ನಡೆಸುವವರೆಗೆ ಸುಧಾರಣೆ ಆಯಿತು. ಅಸ್ಪೃಶ್ಯರಿಗಾಗಿ ಗ್ರಾಮ ಮಂದಿರವನ್ನು ಕಟ್ಟಿಸಲು ಗಾಂಧಿಯವರು ಹಣವನ್ನು ಕೂಡಿಸಿದರು. ಅದೊಂದು ರೀತಿಯ ಸ್ವಯಂ ಶಿಕ್ಷಣ. ಬಾಲಕಿಯೊಬ್ಬಳ ಕತ್ತಿನಲ್ಲಿ ಭಾರವಾದ ಬೆಳ್ಳಿಯ ನಗ ಇದ್ದುದನ್ನು ಕಂಡು "ಇದು ನಿನಗೆ ಕುತ್ಸಿಕವಾದ ತೊಡರಲ್ಲವೇ? ನಾನು ಅದನ್ನು ತೆಗೆದುಕೊಂಡು ಬಿಡಲೇ?" ಎಂದು ಕೇಳಿದರು. ಅವಳು ಸಂತೋಷವಾಗಿ ತೆಗೆದುಕೊಟ್ಟಳು. ಅವಳ ತಾಯಿ ತಂದೆಯರೂ ಪ್ರೋತ್ಸಾಹ ಕೊಟ್ಟರು. ಇದೇ ರೀತಿ ಅನೇಕ ಕುಟುಂಬಗಳ ಜನರು ಅವರ ಪ್ರಭಾವಕ್ಕೆ ಒಳಗಾದರು; ಅವರುಗಳಲ್ಲಿದ್ದ ಒಡವೆಗಳು ಅವರ ಕೈಬಿಟ್ಟವು.

ಪುರೋಹಿತನೊಬ್ಬ ಮುಂದೆ ಬಂದು ಅಸ್ಪೃಶ್ಯತಾ ನಿರೋಧ ಚಳುವಳಿಯನ್ನು ಪ್ರತಿಭಟಿಸಿದನು. "ನಾನು ಜನರಿಗೆ ಎಲ್ಲ ವಿಷಯಗಳಲ್ಲೂ ಉಪದೇಶ ನೀಡುತ್ತೇನೆ. ನಾನೊಬ್ಬ ಜ್ಯೋತಿಷಿಯೂ ಕೂಡ" ಎಂದು ಗಾಂಧಿಯವರ ಸಮ್ಮುಖದಲ್ಲಿ ಹೇಳಿದನು.

"ನನ್ನ ಭವಿಷ್ಯವೇನು ಹೇಳುವೆಯಾ?" ಎಂದು ಕೇಳಿದರು ಗಾಂಧೀ. "ಓಹೋ! ಅಗತ್ಯವಾಗಿ ಆಗಲಿ" ಎಂದುತ್ತರ ಕೊಟ್ಟ ಪುರೋಹಿತ. ಪಂಚಾಂಗ ತರುವುದಕ್ಕಾಗಿ ಹುಡುಗನೊಬ್ಬನನ್ನು ಮನೆಗೆ ಕಳುಹಿಸಿದ. ಪಂಚಾಂಗವೂ ಬಂದಿತು. "ನನ್ನ ಭವಿಷ್ಯ ಹೇಳು" ಎಂದರು ಗಾಂಧೀ. "ನೀವು ಇಡೀ ರಾಷ್ಟ್ರದ ಭವಿಷ್ಯವನ್ನೇ ಹೇಳುತ್ತಿದ್ದೀರಿ; ನಿಮಗೆ ಭವಿಷ್ಯ ನುಡಿಯಲು ನಾನು ಯಾರು?" ಎಂದು ಸ್ವಲ್ಪ ಮೃದುವಾಗಿ ನುಡಿದ ಪುರೋಹಿತ. "ಇಲ್ಲ, ಇಲ್ಲ, ದಯವಿಟ್ಟು ಹೇಳು" ಎಂದು ಒತ್ತಾಯ ಮಾಡಿದರು ಗಾಂಧೀ. "ಇಲ್ಲ, ಅದು ಧಾರ್ಷ್ಟ್ಯದ ಮಾತಾಗುತ್ತದೆ. ಬೇಕಾದರೆ ಅಲ್ಲಿ ನಿಂತಿರುವವನ ಭವಿಷ್ಯ ಹೇಳುತ್ತೇನೆ" ಎಂದ ಪುರೋಹಿತ. "ಒಳ್ಳೆಯದು, ಆ ಪಂಚಾಂಗ ಇಲ್ಲಿ ಕೊಡು; ನೀನು ಹೇಗೆ ಈ ಉದ್ಯೋಗವನ್ನು ಮಾಡುತ್ತೀಯೋ ನೋಡೋಣ" ಎಂದರು ಗಾಂಧಿ. ಅವನು ಅದನ್ನು ಕೊಟ್ಟ. "ನೋಡು, ಇದನ್ನು ದಯವಿಟ್ಟು ಓದು" ಎಂದರು ಗಾಂಧಿ. ಆ ಮುಂದುಕ ಜ್ಞಾಪಕದ ಮೇಲೆ ಏನೇನೋ ಹೇಳಿದ. ಅವನ ಕಣ್ಣುಗಳು ಮಾತ್ರ ಪಂಚಾಂಗದ ಮೇಲೆ ಇದ್ದುವು. "ಇಲ್ಲಿರುವುದನ್ನು ಓದು ಎಂದು ಕೇಳುತ್ತಿದ್ದೇನೆ. ಇಲ್ಲೇನಿದೆ ಹೇಳು" ಎಂದು ಗಾಂಧಿಯವರು ಹೇಳಿ, ಎರಡು ಮೂರು ಸಾಲುಗಳ ಮೇಲೆ ಬೆರಳಿಟ್ಟು ತೋರಿಸಿದರು. ಅವನು ನಾಚಿಕೆ ಇಲ್ಲದೆ ಹೇಳಿದ: "ಹಾಗೆ ಮಾಡಲು ಹೇಳಬೇಡಿ. ಓದಲು ನನಗೆ ಬರುವುದಿಲ್ಲ. ಇದು ನನ್ನ ಹೊಟ್ಟೆ ಪಾಡು ಅಷ್ಟೆ. ಇದು ಕೈಲಿದ್ದರೆ ಸಾಕು, ನನ್ನ ಜೀವನ ನಡೆಯುತ್ತದೆ. ಅನೇಕ ಬ್ರಾಹ್ಮಣರು ಜೀವಿಸುವುದು ಇದೇ ರೀತಿಯಲ್ಲೇ".

"ಇದು ಅವರ ದೇವರು!" ಗಾಂಧಿಯವರು ನಿರ್ದಾಕ್ಷಿಣ್ಯವಾಗಿ ಹೇಳಿ. ಆತನ ಕಾಪಟ್ಯವನ್ನು ಬಯಲಿಗೆಳೆದರು. ಅಂತಹ ಅಯೋಗ್ಯ ನಾಯಕನನ್ನು ತೊರೆಯಬೇಕೆಂದು ಅವನ ಅನುಯಾಯಿಗಳಿಗೆ ಹೇಳಿದರು. ಇನ್ನು ಮುಂದೆಯೂ ಅವನು ಮೂಢ ಶ್ರದ್ಧೆಯುಳ್ಳ ಜನರನ್ನು ಮೋಸಮಾಡಿ ತನ್ನ ಬೊಜ್ಜು ಬೆಳೆಸಲು ಅವಕಾಶ ಕೊಡಬೇಡಿ; ಹಸಿದಿದ್ದರೂ ಸರಿಯೇ ಅವನ ಕಡೆ ಲಕ್ಷ್ಯಕೊಡಬೇಡಿರೆಂದು ಸಲಹೆ ಮಾಡಿದರು.

ಸೊಯಿತ್ರದಲ್ಲಿ ಸಮ್ಮೇಳನವೊಂದು ನಡೆಯಿತು. ಪಾನನಿರೋಧ ಮತ್ತು ಖಾದಿಯ ಬಳಕೆ ಬಗ್ಗೆ ನಿರ್ಣಯಗಳನ್ನು ಅಲ್ಲಿ ಅಂಗೀಕರಿಸಲಾಯಿತು. ಗಾಂಧಿಯವರ ಸಂದೇಶ ಕೇಳಲು ದೂರ ದೂರ ಹಳ್ಳಿಗಳಿಂದ ಜನರು ಬಂದಿದ್ದರು. ಸುಮಾರು ಹತ್ತು ಸಾವಿರ ಮಹಿಳೆಯರು ಹಾಜರಿದ್ದರು. ಎಲ್ಲ ಕಡೆಯೂ ವ್ಯವಸ್ಥೆ ಸರಳವೂ ಪರಿಣಾಮಕಾರಿಯೂ ಆಗಿದ್ದಿತು. ವೆಡ್ಚಿಯಲ್ಲಿ ಮಾಡಿದ್ದ ಏರ್ಪಾಡು ಎಲ್ಲ ನಿರೀಕ್ಷಣೆಗಳನ್ನೂ ಮೀರಿತ್ತು. ಗಾಂಧಿಯವರು ಈ ರೀತಿ ಬರೆದರು: "ವೆಡ್ಚಿಯ ಸಮ್ಮೇಳನದ ವ್ಯವಸ್ಥೆ ಭವ್ಯವಾಗಿತ್ತು. ಅಲ್ಲಿ ಕಂಡು ಬಂದ ಸರಳತೆ, ಸ್ವಾಭಾವಿಕತೆ ಹಾಗೂ ಕಲಾತ್ಮಕ ಸೌಂದರ್ಯ ಇನ್ನೆಲ್ಲೂ ಕಂಡು ಬಂದಿರಲಿಲ್ಲವೆಂಬ ಪ್ರಶಂಸಾಪೂರ್ವಕ ಮಾತು ನನ್ನ ಬಾಯಿಂದ ತಾನೇ ತಾನಾಗಿ

ಬಂದಿತು. ಸಮ್ಮೇಳನದ ಸ್ಥಳವನ್ನು ಆರಿಸಿ ಇಡೀ ವ್ಯವಸ್ಥೆಯನ್ನು ಯೋಜಿಸಿದಾತ ನಿಜವಾಗಿಯೂ ಪ್ರಕೃತಿಯ ಕಲಾತ್ಮಕ ಶಿಶುವಾಗಿರಬೇಕು. ಸಮ್ಮೇಳನಕ್ಕೆ ಗೊತ್ತು ಮಾಡಿದ್ದ ಜಾಗ ನದಿಯ ದಡದ ಮೇಲಿತ್ತು. ಮರಗಿಡ ಹೊದರುಗಳಿಂದ ಆವೃತವಾದ ಎರಡು ಬೆಟ್ಟದ ಸಾಲುಗಳ ನಡುವೆ ನದಿ ಹರಿಯುತ್ತಿತ್ತು. ನದಿಯ ತಳದಲ್ಲಿ ಕೆಸರು ಮಣ್ಣಿರದೆ ಮರಳಿತ್ತು. ಮುಖ್ಯ ವೇದಿಕೆಯನ್ನು ನದಿಯ ಮೇಲೆ ನಿರ್ಮಿಸಲಾಗಿತ್ತು. ಆ ವೇದಿಕೆಯ ಎತ್ತರ ಎಂಟು ಅಡಿ ಇತ್ತು. ವೇದಿಕೆಯ ಮೊದಲ ಮೆಟ್ಟಲು ಒಂದು ಮರಳಿನ ಮೂಟೆಯಾಗಿತ್ತು. ವೇದಿಕೆಯ ಮುಂಭಾಗದಲ್ಲಿ ಜನಸ್ತೋಮವಿತ್ತು. ಕೆಲವು ಜನರು ಎದುರಿನ ಬೆಟ್ಟದ ತುದಿಯ ಮೇಲೂ ಕುಳಿತಿದ್ದರು. ಬೊಂಬುಬಗಳನ್ನು ಕಟ್ಟಿ ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿತ್ತು. ಅಲಂಕಾರಕ್ಕಾಗಿ ಎಲ್ಲೂ ಒಂದು ಪಟವನ್ನೂ ಇಟ್ಟಿರಲಿಲ್ಲ; ಅದಕ್ಕಾಗಿ ಒಂದುಚೂರು ಕಾಗದವನ್ನಾಗಲೀ ನೂಲನ್ನಾಗಲೀ ಉಪಯೋಗಿಸಿರಲಿಲ್ಲ. ಅಂತಹ ಅಲಂಕಾರದ ವ್ಯವಸ್ಥೆಯಲ್ಲಿ ನೂಲಿ ಗೆಡೆಯಿಲ್ಲ; ಅದನ್ನು ಉಪಯೋಗಿಸಿದರೆ ಅಮೂಲ್ಯ ವಸ್ತುವನ್ನು ವ್ಯರ್ಥಮಾಡಿ ದಂತಾಗುತ್ತದೆ. ಸೀಳಿದ ಬೊಂಬುಗಳನ್ನೂ ಹಚ್ಚ ಹಸುರಾದ ಎಲೆಗಳನ್ನೂ ಉಪಯೋಗಿಸಿ ಮೇಲ್ಚಪ್ಪರವನ್ನು ನಿರ್ಮಿಸಲಾಗಿತ್ತು. ಅದರ ಚೆಲುವು ಆಪ್ಯಾಯಮಾನವಾಗಿತ್ತು. ವೇದಿಕೆಯ ಮುಂಭಾಗದಲ್ಲಿದ್ದ ರಸ್ತೆಯ ಇಕ್ಕೆಲಗಳಲ್ಲೂ ಹನ್ನೆರಡು ಸಾವಿರಕ್ಕೂ ಮೀರಿದ ಜನಸ್ತೋಮ ನಿಶ್ಶಬ್ದವಾಗಿ ಕುಳಿತಿತ್ತು".

ಗುಜರಾತಿನ ಜನರು ಅವರಿಗೆ ಅಪರಿಮಿತ ಪ್ರೇಮವನ್ನು ತೋರಿಸಿದರು. "ನಾನೊಬ್ಬ ಸಾಮಾನ್ಯ ಮನುಷ್ಯ. ನಿಮ್ಮಂತೆಯೇ ಒಲುಮೆ, ಪ್ರೇಮ, ರಾಗಗಳಿಗೆ ಒಳಗಾದವನು" ಎಂದರು ಗಾಂಧೀಜಿ. "ಆದರೆ ಅವುಗಳನ್ನು ನಿಗ್ರಹಿಸಲು ಸತತವಾಗಿ ಪ್ರಯತ್ನಿಸುತ್ತೇನೆ. ನಾನು ಕೇಳುವುದು ಶಾಂತಿಯನ್ನು ಮೂಡಿಸುವ ಪ್ರೇಮ; ಅದು ತಡೆಯಲಸಾಧ್ಯವಾದ ಹೊರೆ ಆಗಲಾರದು. ಪ್ರೇಮಾಗ್ನಿ ನನ್ನನ್ನು ಪರಿಶುದ್ಧಗೊಳಿಸ ಬೇಕು, ದಹಿಸಬಾರದು. ನಿಮ್ಮ ಪ್ರೇಮವನ್ನೆಲ್ಲ ರಾಷ್ಟ್ರೀಯ ಕಾರ್ಯಕ್ರಮದ ಪೂರೈಕೆ ಗಾಗಿ ಪರಿವರ್ತಿಸಿರಿ".

ಕಾಠೇವಾಡದ ರಾಜಕೀಯ ಸಮ್ಮೇಳನ ಭಾವನಗರದಲ್ಲಿ ಜನವರಿ ೮ರಂದು ಸಮಾವೇಶಗೊಂಡಿತು. ಆ ಸಂದರ್ಭದಲ್ಲಿ ರಾಜ ಮಹಾರಾಜರುಗಳ ಹಾಗೂ ಅವರ ಪ್ರಜೆಗಳ ಕರ್ತವ್ಯದ ಬಗೆಗೆ ಗಾಂಧಿಯವರು ತಮ್ಮ ಅಭಿಪ್ರಾಯಗಳನ್ನು ಮುಚ್ಚು ಮರೆ ಇಲ್ಲದೆ ವ್ಯಕ್ತಪಡಿಸಿದರು:

"ಭಾರತದ ದೇಶೀಯ ಸಂಸ್ಥಾನಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಕೈ ಹಾಕ ಬಾರದೆಂಬ ಸಾಮಾನ್ಯ ನೀತಿಯನ್ನು ಕಾಂಗ್ರೆಸ್ ತಾಳಬೇಕೆಂದು ನಾನು ಅನೇಕ ಬಾರಿ ತಿಳಿಸಿದ್ದೇನೆ. ಈಗ ಬ್ರಿಟಿಷರ ನೇರ ಆಳ್ವಿಕೆಯಲ್ಲಿರುವ ಭಾರತದ ವಿವಿಧ ಪ್ರಾಂತಗಳಲ್ಲಿನ ಜನರೇ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ; ಈ ಸಮಯದಲ್ಲಿ ಅವರು

ದೇಶೀಯ ಸಂಸ್ಥಾನಗಳ ಆಂತರಿಕ ವಿಷಯಗಳ ವಿಚಾರದಲ್ಲಿ ಕೈಹಾಕಲು ಹೋದರೆ ಅದು ದುರ್ಬಲತೆಯ ಪ್ರದರ್ಶನವಾಗುತ್ತದೆ. ದೇಶೀಯ ಸಂಸ್ಥಾನಗಳಿಗೂ ಬ್ರಿಟಿಷ್ ಸರ್ಕಾರಕ್ಕೂ ಇರುವ ಸಂಬಂಧದ ಬಗೆಗೆ ಕಾಂಗ್ರೆಸ್ಸಿನ ಮಾತು ಏನೂ ನಡೆಯದು. ಹಾಗೆಯೇ ದೇಶೀಯ ಸಂಸ್ಥಾನಗಳಿಗೂ ಅಲ್ಲಿರುವ ಪ್ರಜೆಗಳಿಗೂ ಇರುವ ಸಂಬಂಧದಲ್ಲಿ ಕಾಂಗ್ರೆಸ್ ಕೈ ಹಾಕಿದರೆ ಅದು ಪರಿಣಾಮಕಾರಿಯಾಗಿರುವುದಿಲ್ಲ.

"ಆದರೂ ಬ್ರಿಟಿಷರ ನೇರ ಆಡಳಿತಕ್ಕೊಳಪಟ್ಟಿರುವ ಪ್ರದೇಶದ ಜನರೂ ದೇಶೀಯ ಸಂಸ್ಥಾನಗಳಲ್ಲಿರುವ ಜನರೂ ಒಂದೇ ಆಗಿದ್ದಾರೆ; ಏಕೆಂದರೆ ಭಾರತ ಒಂದು. ಉದಾಹರಣೆಗೆ ಬರೋಡಾ ಮತ್ತು ಅಹಮದಾಬಾದಿನಲ್ಲಿರುವ ಭಾರತೀಯರ ಆವಶ್ಯಕತೆಗಳೂ, ಪದ್ಧತಿಗಳೂ, ಕಟ್ಟಳೆಗಳೂ ಒಂದೇ ಆಗಿವೆ. ಅವುಗಳಲ್ಲಿ ಯಾವ ಬೇಧವೂ ಇಲ್ಲ. ಒಂದೇ ಜನಾಂಗಕ್ಕೆ ಸೇರಿದವರುಗಳು ಬೇರೆ ಬೇರೆ ಪ್ರಭುತ್ವ ನೀತಿಗಳಿಗೆ ಒಳಗಾಗಿರುವ ಸ್ಥಿತಿ ಬಹಳ ದಿನ ಮುಂದುವರಿಯುವುದಿಲ್ಲ. ಆದುದರಿಂದ ಕಾಂಗ್ರೆಸ್ಸು ನೇರವಾಗಿ ಕೈ ಹಾಕದಿದ್ದರೂ ಅಗೋಚರವಾದ ಪರಿಸ್ಥಿತಿಗಳ ಒತ್ತಡದಿಂದ ನೀತಿಧೋರಣೆಗಳ ಸಮೀಕರಣ ಆಗಿಯೇ ತೀರುತ್ತದೆ. ಪ್ರಸ್ತುತ ಪ್ರತ್ಯೇಕತಾ ವಲಯಗಳೇನೇ ಇದ್ದರೂ ಅವು ಅಡ್ಡಿಯಾಗಲಾರವು. ವೈವಿಧ್ಯದಲ್ಲಿ ಐಕ್ಯತೆಯನ್ನು ಸಾಧಿಸುವ ಸಾಮರ್ಥ್ಯದ ಮೇಲೆ ನಮ್ಮ ನಾಗರಿಕತೆಯ ಪರೀಕ್ಷೆ ಮತ್ತು ಸೊಗಸು ನಿಂತಿವೆ.

"ಬ್ರಿಟಿಷರ ನೇರ ಆಳ್ವಿಕೆಯಲ್ಲಿರುವ ಭಾರತವು—ಬ್ರಿಟಿಷ್ ಇಂಡಿಯಾ—ಎಲ್ಲಿಯವರೆಗೆ ಸ್ವತಂತ್ರವಾಗುವುದಿಲ್ಲವೋ, ಅಲ್ಲಿನ ಜನರು ಎಲ್ಲಿಯವರೆಗೆ ನಿಜವಾದ ರಾಜಕೀಯ ಅಧಿಕಾರವನ್ನು ಪಡೆಯುವುದಿಲ್ಲವೋ, ಅಲ್ಲಿಯವರೆಗೆ ಬ್ರಿಟಿಷ್ ಇಂಡಿಯಾ ಹಾಗೂ ದೇಶೀಯ ಸಂಸ್ಥಾನಗಳೂ ಸೇರಿದಂತೆ ಭಾರತವು ಗೊಂದಲಮಯ ಸ್ಥಿತಿಯಲ್ಲಿರುತ್ತದೆ. ಅಂತಹ ಸ್ಥಿತಿ ಇದ್ದಷ್ಟು ಕಾಲವೂ ಮೂರನೆಯ ಅಧಿಕಾರ ಬಣದ ಅಸ್ತಿತ್ವಕ್ಕೆ ಅವಕಾಶವಿರುತ್ತದೆ. ಬ್ರಿಟಿಷ್‌ಇಂಡಿಯಾ ಸ್ವರಾಜ್ಯಗಳಿಸಿದಾಗ ನಮ್ಮ ಆಂತರಿಕ ವ್ಯವಸ್ಥೆಯನ್ನು ಸರಿಮಾಡಿಕೊಳ್ಳಬಹುದು. ಸ್ವರಾಜ್ಯ ಪ್ರಾಪ್ತಿಯಾದ ಮೇಲೆ ದೇಶೀಯ ಸಂಸ್ಥಾನಗಳ ವಿನಾಶಕ್ಕೆ ಬ್ರಿಟಿಷ್‌ಇಂಡಿಯಾ ಇಚ್ಛಿಸುವುದಿಲ್ಲ; ಬದಲಾಗಿ ಸಹಾಯಕವಾಗಿರುತ್ತದೆ. ದೇಶೀಯ ಸಂಸ್ಥಾನಗಳೂ ಸಹ ಇದೇ ಮನೋಭಾವವನ್ನು ಬ್ರಿಟಿಷ್ ಇಂಡಿಯಾದ ಬಗ್ಗೆ ತಾಳುತ್ತವೆ.

"ದೇಶೀಯ ಸಂಸ್ಥಾನಗಳಲ್ಲಿನ ಇಂದಿನ ಸ್ಥಿತಿ ಕರುಣಾಜನಕವಾಗಿದೆ. ರಾಜಮಹಾರಾಜರುಗಳಿಗೆ ಸ್ವಾತಂತ್ರ್ಯವಿಲ್ಲ. ನಿಜವಾದ ಅಧಿಕಾರ, ಪ್ರಜೆಗಳಿಗೆ ಮರಣ ದಂಡನೆ ವಿಧಿಸುವ ಶಕ್ತಿಯಲ್ಲ; ಅದು ಇಡೀ ವಿಶ್ವವೇ ಎದುರುಬಿದ್ದರೂ ಸರಿಯೇ ತಮ್ಮ ಪ್ರಜೆಗಳನ್ನು ರಕ್ಷಣೆ ಮಾಡುವ ಮನಸ್ಸು ಹಾಗೂ ಸಾಮರ್ಥ್ಯ. ಇಂದು ದೇಶೀಯ ಸಂಸ್ಥಾನಗಳಿಗೆ ಆ ಸಾಮರ್ಥ್ಯವಿಲ್ಲ: ಆ ಸಾಮರ್ಥ್ಯ ಪ್ರಯೋಗದಲ್ಲಿಲ್ಲದಿದ್ದ ಮೇಲೆ ಮನಸ್ಸಿದ್ದರೂ ಇಲ್ಲದ ಹಾಗೆಯೇ. ಆದರೆ ಅಲ್ಲಿನ ಪ್ರಜೆಗಳ ಮೇಲೆ ದಬ್ಬಾಳಿಕೆ

ನಡೆಸುವ ಅವರ ಅಧಿಕಾರ ಶಕ್ತಿ ಮಾತ್ರ ಹೆಚ್ಚಾದಂತೆ ಕಾಣುತ್ತದೆ. ಇಡೀ ಚಕ್ರಾಧಿಪತ್ಯದಲ್ಲೇ ಅರಾಜಕತೆ ಇರುವಂತೆ, ಈ ಚಕ್ರಾಧಿಪತ್ಯಕ್ಕೆ ಸಾಮಂತವಾಗಿರುವ ಸಂಸ್ಥಾನಗಳಲ್ಲೂ ಅರಾಜಕತೆ ಇದೆ. ಸಂಸ್ಥಾನಗಳಲ್ಲಿರುವ ಅರಾಜಕತೆಗೆ ಅಲ್ಲಿನ ರಾಜರುಗಳು ಅಷ್ಟು ಕಾರಣರಲ್ಲ; ಮುಖ್ಯವಾದ ಕಾರಣ ಭಾರತದ ಇಂದಿನ ಸ್ಥಿತಿ. ಭಾರತದ ಒಂದು ಭಾಗ ಸ್ವರಾಜ್ಯ ಸಾಧಿಸಿದರೆ ಎಲ್ಲವೂ ಸರಿಹೋಗುತ್ತದೆ ಎಂಬುದೇ ನನ್ನ ಸ್ಪಷ್ಟ ಅಭಿಮತ. "ಬ್ರಿಟಿಷ್ ಇಂಡಿಯಾ ಮಾರ್ಗದರ್ಶನ ಮಾಡಬೇಕೆಂಬುದು ಸ್ಪಷ್ಟವಾಗಿರುವ ವಿಷಯ. ಅಲ್ಲಿನ ಜನರಿಗೆ ತಮ್ಮ ಭೀಕರ ಪರಿಸ್ಥಿತಿಯು ಅರಿವಿದೆ; ಸ್ವತಂತ್ರರಾಗುವ ಅಪೇಕ್ಷೆ ಇದೆ. ಅಪೇಕ್ಷೆಯಿಂದ ತಿಳುವಳಿಕೆ ಮೂಡುತ್ತದೆ. ಆಪತ್ತಿನಿಂದ ಪಾರಾಗಬೇಕೆಂಬ ಮನಸ್ಸು ಜನರಿಗೆ ಬರಬೇಕು. ಅಂತಹ ಜನರು ಪರಿಹಾರೋಪಾಯವನ್ನು ಕಂಡುಹಿಡಿದು ವಿಮೋಚನೆ ಪಡೆಯುತ್ತಾರೆ. ಬ್ರಿಟಿಷ್ ಇಂಡಿಯಾ ಸ್ವತಂತ್ರವಾಗುವ ಪವಿತ್ರದಿನ ಬಂದಾಗ ದೇಶೀಯ ಸಂಸ್ಥಾನಗಳಲ್ಲಿ ರಾಜರ ಮತ್ತು ಪ್ರಜೆಗಳ ಸಂಬಂಧ ಕಡಿದು ಹೋಗುವುದಿಲ್ಲ; ಪವಿತ್ರಗೊಳ್ಳುತ್ತದೆ".

ರಾಜ ಮಹಾರಾಜರುಗಳು ಜನತೆಯ ಯೋಗಕ್ಷೇಮವನ್ನು ನಿರ್ಲಕ್ಷಿಸಿ ದುಂದುವೆಚ್ಚದಲ್ಲಿ ತೊಡಗಿರುವುದನ್ನು ಗಾಂಧಿಯವರು ಟೀಕಿಸಿದರು. ಆದರೆ ಕುಂದುಕೊರತೆಗಳ ಬಗ್ಗೆ ಸಮ್ಮೇಳನವು ಯಾವುದೇ ನಿರ್ಣಯವನ್ನು ಮಾಡಬಾರದೆಂದು ಅವರು ಸಲಹೆ ಮಾಡಿದರು. ಪ್ರತಿನಿಧಿಗಳು ಆತ್ಮ ಸಂಯಮವನ್ನು ವರ್ಧಿಸಿಕೊಂಡು ಕಷ್ಟಸಹಿಷ್ಣುತೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದರು. ಕುಂದುಕೊರತೆಗಳನ್ನು ನಿವಾರಿಸಲು ತಮ್ಮ ಸಾಧನ ಸಾಮರ್ಥ್ಯಗಳನ್ನು ಉಪಯೋಗಿಸುವುದಾಗಿ ಗಾಂಧಿಯವರು ಆಶ್ವಾಸನೆ ಕೊಟ್ಟರು. ತಮ್ಮ ಭಾಷಣವನ್ನು ಮುಕ್ತಾಯಗೊಳಿಸುತ್ತಾ ಹೀಗೆ ಹೇಳಿದರು: "ನನ್ನ ಭಾಷಣ ಅಪೂರ್ಣ ಹಾಗೂ ನಿಸ್ಸಾರವೆಂದು ಕೆಲವರಿಗೆ ತೋರಬಹುದು. ಆದರೆ ನನ್ನ ಮಿತಿಯನ್ನು ಮೀರಿ ವ್ಯಾವಹಾರಿಕವಾದ ಅಥವಾ ಉಪಯುಕ್ತ ಉಪದೇಶವನ್ನು ಕೊಡಲಾರೆ. ಪ್ರೇಮದ ನಿಯಮ ನನ್ನನ್ನು ಆಕರ್ಷಿಸಿದೆ. ನನ್ನ ಸ್ವರಾಜ್ಯ, ಭಂಗಿಗಳನ್ನೂ, ಧೇಡರನ್ನೂ, ದುಬ್ಲಾಗಳನ್ನೂ, ದುರ್ಬಲರಲ್ಲಿ ಅತಿ ದುರ್ಬಲರನ್ನೂ ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಇವರುಗಳ ಮೈತ್ರಿಯನ್ನು ಗಳಿಸಲು ಚರಖಾ ಬಿಟ್ಟರೆ ಮತ್ತೆ ಯಾವ ಸಾಧನವೂ ತೋರದು. ನಿಮ್ಮ ಸ್ಥಳೀಯ ಸಮಸ್ಯೆಗಳ ಪರಿಚಯ ನನಗಿಲ್ಲವಾದ್ದರಿಂದ ಅವುಗಳನ್ನು ನಾನು ಚರ್ಚಿಸಿಲ್ಲ. ಸಂಸ್ಥಾನಕ್ಕೆ ಆದರ್ಶ ಸಂವಿಧಾನ ಯಾವುದೆಂಬ ಪ್ರಶ್ನೆಯನ್ನೂ ನಾನು ಎತ್ತಿಕೊಂಡಿಲ್ಲ; ಏಕೆಂದರೆ ಅದನ್ನು ನೀವೇ ರಚಿಸಬೇಕಾಗಿದೆ. ರಾಷ್ಟ್ರವು ತನ್ನ ಸಂಕಲ್ಪವನ್ನು ಈಡೇರಿಸಿಕೊಳ್ಳಲು ತಕ್ಕ ಶಕ್ತಿಯನ್ನೂ ಬೆಳೆಸಿಕೊಳ್ಳಬೇಕು; ಆ ಬಗ್ಗೆ ಸಾಧನಗಳನ್ನು ಹುಡುಕಿ ಅನ್ವಯ ಮಾಡುವುದೇ ನನ್ನ ಕರ್ತವ್ಯ. ರಾಷ್ಟ್ರಕ್ಕೆ ತನ್ನ ಶಕ್ತಿಯ ಅರಿವಾದರೆ ಅದು ತನ್ನ ದಾರಿಯನ್ನು ಕಂಡುಕೊಳ್ಳುತ್ತದೆ. ಅಥವಾ ನಿರ್ಮಿಸಿಕೊಳ್ಳುತ್ತದೆ. ಜನಸೇವಕರಲ್ಲಿ ಶ್ರೇಷ್ಠನೆನಿಸಿದ ರಾಜನು ನನಗೆ ಅಂಗೀಕಾರಾರ್ಹನಾಗುತ್ತಾನೆ. ಪ್ರಜೆಗಳೇ ನಿಜವಾದ ಪ್ರಭುಗಳು. ಅದು ನನ್ನ

ಆದರ್ಶವಾಗಿರುವುದರಿಂದ ನನ್ನ ಕಲ್ಪನೆಯ ಸ್ವರಾಜ್ಯದಲ್ಲಿ ದೇಶೀಯ ಸಂಸ್ಥಾನಗಳಿಗೆ ಎಡೆಯುಂಟು; ಅಲ್ಲಿ ಜನರ ಹಕ್ಕುಗಳೆಲ್ಲವೂ ಖಾತರಿಯಾಗಿ ರಕ್ಷಿಸಲ್ಪಡುತ್ತವೆ. ಹಕ್ಕುಗಳ ನಿಜವಾದ ಮೂಲ ಇರುವುದು ಕರ್ತವ್ಯಪಾಲನೆಯಲ್ಲಿ. ಆದುದರಿಂದ ನಾನು ರಾಜರುಗಳ ಹಾಗೂ ಪ್ರಜೆಗಳ ಕರ್ತವ್ಯಗಳ ಬಗ್ಗೆ ಮಾತ್ರ ಮಾತನಾಡಿದ್ದೇನೆ."

ಸರ್ವಪಕ್ಷಗಳ ಸಮ್ಮೇಳನದ ಅಧ್ಯಕ್ಷತೆ ವಹಿಸುವುದಕ್ಕಾಗಿ ಅವರು ಜನವರಿ ೨೩ರಂದು ದೆಹಲಿಗೆ ಹೋದರು. ಹಿಂದೂ–ಮುಸ್ಲಿಂ ಒಪ್ಪಂದ, ಸರ್ವಪಕ್ಷಗಳ ಒಡಂಬಡಿಕೆ, ಈ ವಿಷಯಗಳ ಬಗ್ಗೆ ಷರತ್ತುಗಳನ್ನು ಸೂಚಿಸಲು ಮತ್ತು ಸ್ವರಾಜ್ಯದ ರೂಪರೇಷೆಯನ್ನು ಗೊತ್ತುಪಡಿಸಲು ಉಪಸಮಿತಿಯೊಂದನ್ನು ರಚಿಸಬೇಕೆಂಬ ಅವರ ಸಲಹೆ ಬಗ್ಗೆ ದೀರ್ಘ ಚರ್ಚೆ ಆಯಿತು. ಸಮ್ಮೇಳನಕ್ಕೆ ಅನೇಕ ಪ್ರಮುಖರು ಬಂದಿದ್ದರು. ಮೋತಿಲಾಲ್ ನೆಹರೂ, ಜಿನ್ನ, ಆಲಿ ಸಹೋದರು, ಶ್ರೀಮತಿ ಬೆಸೆಂಟ್, ಶ್ರೀಮತಿ ನಾಯ್ಡು, ಸ್ವಾಮಿ ಶ್ರದ್ಧಾನಂದ, ರಾಜೇಂದ್ರ ಪ್ರಸಾದ್, ಜವಾಹರಲಾಲ್ ನೆಹರೂ, ಲಜಪತರಾಯ್, ಪಂಡಿತ್ ಕುಂಜ್ರು, ಚಿಂತಾಮಣಿ, ಜಯಕರ್, ಮೌಲಾನಾ ಅಜಾದ್ ಮುಂತಾದ ಪ್ರಮುಖರು ಬಂದಿದ್ದರು. ನಲವತ್ತು ಮಂದಿ ಸದಸ್ಯರನ್ನೊಳಗೊಂಡ ಪ್ರಾತಿನಿಧ್ಯಪೂರ್ಣ ಉಪಸಮಿತಿಯನ್ನು ರಚಿಸಲಾಯಿತು. ಉಪಸಮಿತಿಯ ಪ್ರಥಮ ಸಭೆ ಫೆಬ್ರುವರಿಯಲ್ಲಿ ಸಮಾವೇಶಗೊಂಡಿತ್ತು. ಎರಡೂ ಪಂಗಡಗಳ ನಡುವೆ ಯಾವೊಂದು ಪ್ರಮುಖ ವಿಷಯದ ಬಗೆಗೂ ಒಪ್ಪಂದ ಅಸಾಧ್ಯವೆಂದು ಮನವರಿಕೆಯಾಗಿ ಸಭೆಯು ಅನಿರ್ದಿಷ್ಟ ಕಾಲಕ್ಕೆ ಮುಂದುವರಿಸಲ್ಪಟ್ಟಿತು.

"ಅವರುಗಳು ಪರಸ್ಪರ ಭಯಪಡದೆ ತಮ್ಮ ಧ್ಯೇಯಕ್ಕೆ ನಿಷ್ಠರಾಗಿದ್ದು ಪರಿಹಾರ ಹುಡುಕಲು ಕೆಲಸ ಮಾಡಿದರೆ ಇಂದಿನ ಸೋಲು ಮುಂದಿನ ಯಶಸ್ಸಿಗೆ ಸೋಪಾನವಾಗಬಹುದು."ಎಂದರು ಗಾಂಧಿ. ನ್ಯಾಯಯುತ ಪರಿಹಾರ ಹುಡುಕಲು ಸರಿಯಾದ ವಾತಾವರಣ ಇರಲಿಲ್ಲ. ಆಲೀ ಸಹೋದರರು ಮತ್ತು ಗಾಂಧಿಯವರ ನಡುವೆ ಇದ್ದ ವಿರಸದ ಸಂಗತಿ ಮಾರ್ಚ್ ೨೬ರ ಯಂಗ್ ಇಂಡಿಯಾದಲ್ಲಿ ಪ್ರಪ್ರಥಮವಾಗಿ ಪ್ರಕಟವಾಯಿತು. ಭಿನ್ನಾಭಿಪ್ರಾಯ ಮೂಲಭೂತ ಸ್ವರೂಪದ್ದಾಗಿತ್ತು. ಆದುದರಿಂದ ಅದು ಬಗೆ ಹರಿಯಲಿಲ್ಲ. ಕೋಹಾತ್‌ಗೆ ಸಂಬಂಧಿಸಿದಂತೆ ಎರಡು ಹೇಳಿಕೆಗಳು ಪ್ರತ್ಯೇಕವಾಗಿ ಪ್ರಕಟಿಸಲ್ಪಟ್ಟುವು. "ಆಲಿ ಸಹೋದರರು ಮತ್ತು ನನ್ನ ನಡುವೆ ಅನೇಕ ಸಾರ್ವಜನಿಕ ವಿಷಯಗಳ ಬಗೆಗೆ ಒಮ್ಮತವಿರುವುದೆಂದು ಜನರು ತಿಳಿದಿದ್ದಾರೆ. ಕೆಲವು ವಿಷಯಗಳಲ್ಲಿ ನಮಗೆ ಅಭಿಪ್ರಾಯ ಭೇದವಿರುವುದೆಂಬುದನ್ನು ಜನರು ತಿಳಿಯಬೇಕು. ಭಿನ್ನಾಭಿಪ್ರಾಯವಿದ್ದರೂ ನಮ್ಮಲ್ಲಿ ಪರಸ್ಪರ ಅಪನಂಬಿಕೆಯಿಲ್ಲ. ಪಕ್ಷಪಾತ ದೃಷ್ಟಿಯಿಂದಿದ್ದು ವಸ್ತುಸ್ಥಿತಿಯನ್ನು ಮರೆಮಾಚುವರೆಂಬ ಶಂಕೆ ಪರಸ್ಪರ ಇಲ್ಲ. ನಮ್ಮ ಪ್ರೀತಿ ವಿಶ್ವಾಸಗಳಿಗೆ ಚ್ಯುತಿ ಬರದು". ಆಲಿ ಸಹೋದರರು ಮತ್ತು ಗಾಂಧಿಯವರ ನಡುವಿನ ಮೈತ್ರಿಯ ಸಮಾಪ್ತಿಗೆ ಅದು ಅಂಕುರಾರ್ಪಣೆ ಆಯಿತು.

ಉತ್ತರ ಭಾರತದ ಪ್ರವಾಸವಾದ ಮೇಲೆ ಗಾಂಧಿಯವರು ದಕ್ಷಿಣದ ಕಡೆ ತಿರುಗಿ ಮಾರ್ಚ್ ೮ರಂದು ಮದರಾಸಿಗೆ ಬಂದರು. ಉತ್ತರ ಭಾರತದಲ್ಲಿ ಅವರು ಎದುರಿಸಿದ ಸಮಸ್ಯೆ ಹಿಂದೂ–ಮುಸ್ಲಿಂ ಸಮಸ್ಯೆ. ದಕ್ಷಿಣಭಾರತ ಹೇಳಿ ಕೇಳಿ ಸಂಪ್ರದಾಯಸ್ಥರ ಬಲಿಷ್ಠ ಕೋಟೆ. ಅಲ್ಲಿ ಅವರು ಅಸ್ಪೃಶ್ಯತಾ ಸಮಸ್ಯೆಯನ್ನು ಎದುರಿಸ ಬೇಕಾಯಿತು. ಮಾರ್ಚ್ ೯ರಂದು ವೈಕೋಂ ತಲುಪಿದರು. ಅಲ್ಲಿ ಒಂದು ವರ್ಷದ ಹಿಂದಿನಿಂದ ಸತ್ಯಾಗ್ರಹ ನಡೆಯುತ್ತಿತ್ತು.

ಅಸ್ಪೃಶ್ಯತೆಯ ಕೇಡು ಎಷ್ಟು ತೀವ್ರ ಸ್ವರೂಪದ್ದೆಂಬುದು ಜನರಿಗೆ ಮೊದಲು ಗೊತ್ತಾದದ್ದು ವೈಕೋಂ ಸತ್ಯಾಗ್ರಹದಿಂದ. ಅಸ್ಪೃಶ್ಯರೆಂದು ಕರೆಯಲ್ಪಡುವವರು ದೇವಸ್ಥಾನದ ಸುತ್ತಲಿನ ರಸ್ತೆಯಲ್ಲಿ ಅಥವಾ ರಸ್ತೆಯ ಚೌಕದಲ್ಲಿ ನಡೆದರೆ ದೇವಸ್ಥಾನ ಅಪವಿತ್ರವಾಗುತ್ತದೆ ಎನ್ನುತ್ತಿದ್ದರು; ಅನಂತರ, ಸ್ವಲ್ಪ ಬದಲಾವಣೆ ಮಾಡಿಕೊಂಡು ಅಸ್ಪೃಶ್ಯರ ನೆರಳು ದೇವಸ್ಥಾನಕ್ಕೆ ಹೋಗುವ ಭಕ್ತಾದಿಗಳ ಮೇಲೆ ಬಿದ್ದರೆ ಮೈಲಿಗೆಯಾಗುತ್ತದೆ ಎಂದು ಭಾವಿಸುತ್ತಿದ್ದರು. ಅಸ್ಪೃಶ್ಯರೆಂದು ಕರೆಯಲ್ಪಟ್ಟವರಲ್ಲಿ ಎಜವಾ ಕೋಮಿನವರು, ಪುಲಯರು, ಪರಯ್ಯಾಗಳು ಮತ್ತು ಷಾನರುಗಳು ಇದ್ದರು. ಎಜವಾ ಕೋಮಿಗೆ ಸೇರಿದ ಸುಮಾರು ಹತ್ತುಲಕ್ಷ ಜನರಲ್ಲಿ, ನಾಡಿನ ಅತ್ಯಂತ ಘನತೆವೆತ್ತ ಜನರಷ್ಟೇ ಸುಸಂಸ್ಕೃತರೂ ವಿದ್ಯಾವಂತರೂ ಇದ್ದರು. ಪುಲಯರ ಸಂಖ್ಯೆ ಸುಮಾರು ಒಂದು ಲಕ್ಷ. ಅವರು ಕೃಷಿ ಕಾರ್ಮಿಕರು. ಅವರ ದುಡಿಮೆ ಇಲ್ಲದೆ ಸವರ್ಣ ಹಿಂದೂಗಳು ಒಂದು ದಿನವೂ ಬದುಕಲು ಆಗುತ್ತಿರಲಿಲ್ಲ. ಪರಯ್ಯಾಗಳು ಮೂರು ಲಕ್ಷ ಇದ್ದರು. ಅವರು ಉತ್ಪನ್ನ ಮಾಡಿದ ವಸ್ತುಗಳನ್ನು ದೇವಸ್ಥಾನಗಳಲ್ಲೂ ಉಪಯೋಗಿಸಬಹುದಾಗಿತ್ತು. ಷಾನರುಗಳು ಬೆಲ್ಲದ ತಯಾರಿಕೆ ಕೆಲಸಕ್ಕೆ ಬೇಕಾಗಿದ್ದವರು. ಅವರು ತಯಾರಿಸಿದ ಬೆಲ್ಲವನ್ನು ಎಲ್ಲ ಕೋಮಿನವರೂ ಬಳಸುತ್ತಿದ್ದರು. ಸತ್ಯಾಗ್ರಹದ ತಕ್ಷಣದ ಗುರಿ ಸೀಮಿತವಾಗಿತ್ತು. ದೇವಸ್ಥಾನದ ಪ್ರವೇಶಕ್ಕಲ್ಲ; ಅದರ ಸುತ್ತಲೂ ಇದ್ದ ರಸ್ತೆಗಳಲ್ಲಿ ಓಡಾಟಕ್ಕೆ ಅವಕಾಶ ಕೇಳಿ ಸತ್ಯಾಗ್ರಹ ಹೂಡಲಾಗಿತ್ತು. ಈ ರಸ್ತೆಗಳಲ್ಲಿ ಹಿಂದೂಗಳಲ್ಲದವರೂ ಓಡಾಡುವ ಅವಕಾಶವಿತ್ತು.

ತಿರುವಾಂಕೂರು ಹಾಗೂ ಮಲಬಾರ್‌ಗೆ ಸಂಬಂಧಿಸಿದಂತೆ ವೈಕೋಮಿನದು ಪರೀಕ್ಷಾ ಪ್ರಕರಣವಾಗಿತ್ತು. ತಿರುವಾಂಕೂರಿನ ಜನಸಂಖ್ಯೆಯಲ್ಲಿ ಆರನೆಯ ಒಂದು ಭಾಗದಷ್ಟು ಜನರ ಹಿತಕ್ಕೆ ಇದು ಸಂಬಂಧಿಸಿತ್ತು. ಸರಕಾರವು ಸಂಪ್ರದಾಯಸ್ಥ ಪಂಗಡದ ಕಡೆ ಇತ್ತು. ಅದರ ಬೆಂಬಲಕ್ಕೆ ಪೋಲೀಸ್ ನೆರವು ಕೊಟ್ಟಿತ್ತು. ಜನರು ಬರದಂತೆ ರಸ್ತೆಗಳಲ್ಲಿ ಅಡ್ಡಗಟ್ಟೆಗಳನ್ನೂ ಕಟಕಟೆಗಳನ್ನೂ ನಿರ್ಮಿಸಲಾಗಿತ್ತು. ದೇವಸ್ಥಾನಕ್ಕೆ ಯಾರೂ ಸುಳಿಯದಂತೆ ಪೋಲೀಸರು ಸುತ್ತಲೂ ಕಾವಲು ನಿಂತಿದ್ದರು. ದೇವಸ್ಥಾನದ ಸುತ್ತ ಇರುವ ರಸ್ತೆಗಳಿಗೆ ಪ್ರವೇಶವನ್ನು ಪ್ರತಿಬಂಧಿಸಿ ಸ್ಥಳೀಯ ನ್ಯಾಯಾಧೀಶರು ಆಜ್ಞೆ ಹೊರಡಿಸಿದ್ದರು. ಆ ಆಜ್ಞೆಯನ್ನು ಉಲ್ಲಂಘಿಸುವುದರ ಮೂಲಕ ಸ್ವಯಂಸೇವಕರು ಸತ್ಯಾಗ್ರಹ ಆರಂಭಿಸಿದ್ದರು.

ವಾರದಿಂದ ವಾರಕ್ಕೆ ಬೆಳೆಯುತ್ತಿದ್ದ ಈ ಹೋರಾಟದ ಬಗೆಯನ್ನು ಗಾಂಧಿಯವರು ವೀಕ್ಷಿಸುತ್ತಿದ್ದರು. ಸತ್ಯಾಗ್ರಹಿಗಳಿಗೆ ಮಾರ್ಗದರ್ಶನ ನೀಡುವುದರ ಜೊತೆಗೆ 'ಯಂಗ್ ಇಂಡಿಯಾ' ಮೂಲಕ ಅವರನ್ನು ಹುರಿದುಂಬಿಸುತ್ತಿದ್ದರು: "ಪೂರ್ವಾಗ್ರಹದ ಕಬ್ಬಿಣದ ಗೋಡೆಯನ್ನು ನಾಶಮಾಡುವ ಪ್ರಯತ್ನ ಇದು. ಈ ಬಗ್ಗೆ ಕೆಲವು ಸುಧಾರಕರ ಒಂದು ವರ್ಷದ ತ್ಯಾಗ ಏನು ಮಹಾತ್ಯಾಗವೇ? ಈಗ ತಾಳ್ಮೆಗೆಟ್ಟರೆ ಹೋರಾಟದಲ್ಲಿ ಸೋತಂತೆಯೇ" ಎಂದು ಎಚ್ಚರಿಸಿದರು. ಅನಂತರ ವೈಕೋಮಿಗೆ ಭೇಟಿ ಕೊಟ್ಟರು. ಅಲ್ಲಿ ಸತ್ಯಾಗ್ರಹಿಗಳೊಂದಿಗೆ ಇದ್ದು ನಿಜ ಸತ್ಯಾಗ್ರಹದ ರೀತಿನೀತಿಗಳನ್ನೂ ಪರಿಣಾಮಗಳನ್ನೂ ವಿವರಿಸಿದರು:

"ಈ ಕಾರ್ಯಕ್ರಮದ ರಾಜಕೀಯ ಮುಖವನ್ನು ನೀವು ಮರೆಯಬೇಕು. ರಾಜಕೀಯದ ಮೇಲೆ ಈ ಹೋರಾಟವು ಪರಿಣಾಮ ಬೀರುವುದಾದರೂ ಅದನ್ನು ನೀವು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ನೀವು ಅದನ್ನು ಹಚ್ಚಿಕೊಂಡರೆ ನಿಜವಾದ ಫಲ ದೊರೆಯುವುದಿಲ್ಲ. ಕಡೆಗೆ ರಾಜಕೀಯ ಪರಿಣಾಮಗಳೂ ತಪ್ಪಿ ಹೋಗುತ್ತವೆ. ಹೋರಾಟದ ನಿಜವಾದ ಕಾವು ಏರಿದಾಗ ನೀವು ಪರಿಸ್ಥಿತಿಯನ್ನೆದುರಿಸಲು ಅಸಮರ್ಥರಾಗಿ ಬಿಡುತ್ತೀರಿ. ನಿಮಗೆ ಗಾಬರಿ ಆದರೂ ಪರವಾಗಿಲ್ಲ: ಹೋರಾಟದ ನಿಜವಾದ ಸ್ವರೂಪವನ್ನು ವಿವರಿಸಲು ನಾನು ಕುತೂಹಲದಿಂದಿದ್ದೇನೆ. ಹಿಂದೂಗಳ ತೀವ್ರ ಧಾರ್ಮಿಕ ಭಾವನೆಗಳಿಗೆ ಸಂಬಂಧಿಸಿದ್ದು ಈ ಹೋರಾಟ. ಹಿಂದೂಧರ್ಮಕ್ಕೆ ಅಂಟಿರುವ ದೊಡ್ಡ ಕಳಂಕವನ್ನು ತೊಡೆದು ಹಾಕಲು ನಾವು ಪ್ರಯತ್ನ ಪಡುತ್ತಿದ್ದೇವೆ. ಪೂರ್ವಾಗ್ರಹದ ವಿರುದ್ಧ ನಾವು ಹೋರಾಡುತ್ತಿದ್ದೇವೆ. ಈ ಪೂರ್ವಾಗ್ರಹ ಯುಗಾಂತರದಿಂದ ಬಂದದ್ದು. ದೇವಸ್ಥಾನದ ಸುತ್ತ ಇರುವ ಸಾರ್ವಜನಿಕ ರಸ್ತೆಗಳಲ್ಲಿ ಓಡಾಡಲು ಅಸ್ಪೃಶ್ಯರಿಗೂ ಅವಕಾಶವಿರಬೇಕೆಂದು ಹೂಡಲಾಗಿರುವ ಈ ಹೋರಾಟ ನಾವು ನಡೆಸಬೇಕಾಗಿರುವ ದೊಡ್ಡ ಸಮರದ ಒಂದು ಪುಟ್ಟ ಘರ್ಷಣೆ ಅಷ್ಟೆ. ವೈಕೋಮಿನಲ್ಲಿ ರಸ್ತೆಗಳನ್ನು ತೆರೆಯಿಸಿಟ್ಟ ಮೇಲೆ ನಮ್ಮ ಸಂಘರ್ಷ ಮುಗಿಯುವುದಾಗಿದ್ದರೆ ನಾನು ಇಷ್ಟು ಹಚ್ಚಿಕೊಳ್ಳುತ್ತಲೇ ಇರಲಿಲ್ಲ. ವೈಕೋಮಿನ ರಸ್ತೆಗಳಲ್ಲಿ ಓಡಾಡಲು ಅಸ್ಪೃಶ್ಯರಿಗೆ ಅವಕಾಶ ಸಿಕ್ಕಿದರೆ ನಿಮ್ಮ ಹೋರಾಟ ಮುಗಿಯುವುದೆಂದು ನೀವು ತಿಳಿದರೆ ಅದು ತಪ್ಪು ತಿಳುವಳಿಕೆ ಆಗುತ್ತದೆ. ರಸ್ತೆಗಳು ತೆರೆಯಲ್ಪಡಬೇಕು. ಅವು ತೆರೆಯುವಂತೆ ಮಾಡಲೇ ಬೇಕು. ಆದರೆ ಅದು ಗುರಿ ಸಾಧನೆಗೆ ಮೊದಲ ಹೆಜ್ಜೆ. ತಿರುವಾಂಕೂರು ಸಂಸ್ಥಾನದಲ್ಲಿರುವ ಅಂತಹ ಎಲ್ಲ ರಸ್ತೆಗಳನ್ನೂ ಅಸ್ಪೃಶ್ಯರಿಗೆ ತೆರೆಸುವುದು ನಮ್ಮ ಗುರಿ. ಅಷ್ಟೆ ಅಲ್ಲ, ನಮ್ಮ ಈ ಪ್ರಯತ್ನದಿಂದ ಅಸ್ಪೃಶ್ಯರ ಜೀವನ ಸ್ಥಿತಿ ಉತ್ತಮಗೊಳ್ಳುವುದೆಂದು ನಿರೀಕ್ಷಿಸುತ್ತೇವೆ. ಅದಕ್ಕೆ ತುಂಬಾ ತ್ಯಾಗ ಮಾಡಬೇಕು.

"ನಮ್ಮ ಎದುರಾಳಿಗಳನ್ನು ಹಿಂಸಿಸಿ ಕಾರ್ಯಸಾಧಿಸುವುದು ನಮ್ಮ ಧ್ಯೇಯವಲ್ಲ. ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಹಿಂಸೆ ಅಥವಾ ಒತ್ತಾಯವನ್ನು ತಂದರೆ ನಾವು ಆತ್ಮನಾಶಮಾಡಿಕೊಳ್ಳುತ್ತೇವೆ. ನಾವು ಈ ಹೋರಾಟವನ್ನು ಕಟ್ಟುನಿಟ್ಟಾದ ಅಹಿಂಸೆಯ

ಮಾರ್ಗದಲ್ಲಿ ನಡೆಸಿಕೊಂಡು ಹೋಗಬೇಕು. ಅಂದರೆ ಕಷ್ಟನಷ್ಟಗಳನ್ನೆಲ್ಲಾ ನಾವೇ ಅನುಭವಿಸಬೇಕು. ಸತ್ಯಾಗ್ರಹದ ಅರ್ಥ ಇದೇ. ನಿಮ್ಮ ಮುಂದೆ ಇರುವ ಪ್ರಶ್ನೆ ಇದು: ಗುರಿ ಸಾಧನೆಯ ಮಾರ್ಗದಲ್ಲಿ ನಿಮ್ಮ ಪಾಲಿಗೆ ಬರಬಹುದಾದ ಕೋಟಲೆಗಳನ್ನು ಅನುಭವಿಸುವುದೇ ನಿಮ್ಮ ಪಾಡಾಗಬಹುದು. ಅವನ್ನು ಸಹಿಸಲು ನೀವು ಸಮರ್ಥ ರಾಗಿದ್ದೀರಾ? ನೀವು ಎಷ್ಟೇ ಕಷ್ಟಗಳಿಗೆ ಗುರಿಯಾಗಿದ್ದರೂ ನಿಮ್ಮ ಎದುರಾಳಿ ಗಳ ಬಗ್ಗೆ ಯಾವುದೇ ರೀತಿಯ ಕಹಿಭಾವನೆಯನ್ನೂ ಲವಲೇಶವೂ ಇಟ್ಟುಕೊಳ್ಳ ಕೂಡದು. ಅದು ಕೇವಲ ಯಾಂತ್ರಿಕ ಕೃತಿಯಲ್ಲವೆಂದು ತಿಳಿಯಬಯಸುತ್ತೇನೆ. ನೀವು ನಿಮ್ಮ ಎದುರಾಳಿಗಳನ್ನು ಪ್ರೀತಿಸುವ ಮನೋಭಾವ ತಾಳಬೇಕು; ನಿಮ್ಮ ಉದ್ದೇಶ ಎಷ್ಟು ಪ್ರಾಮಾಣಿಕವೋ ನಿಮ್ಮ ಎದುರಾಳಿಗಳ ಉದ್ದೇಶವೂ ಅಷ್ಟೇ ಪ್ರಾಮಾಣಿಕ ವೆಂಬುದನ್ನು ನೀವು ಮನಗಾಣಬೇಕು. ಆಗ ಅವರನ್ನು ಪ್ರೀತಿಸುವ ಮನಸ್ಸು ಬರುತ್ತದೆ. ಅದು ಕಷ್ಟಕರವಾದ ಕೆಲಸವೆಂಬುದು ನನಗೆ ಗೊತ್ತು. ಅಸ್ಪೃಶ್ಯರನ್ನು ದೇವಸ್ಥಾನದ ರಸ್ತೆಗಳಲ್ಲಿ ಬಿಡದಿರಲು ತಮಗೆ ಹಕ್ಕಿದೆಯೆಂದು ನಿನ್ನೆ ಆ ಸ್ನೇಹಿತರು ವಾದಿಸುತ್ತಿದ್ದಾಗ ಅವರ ಉದ್ದೇಶ ಪ್ರಾಮಾಣಿಕವಾದುದೆಂದು ಭಾವಿಸಲು ನನಗೆ ಕಷ್ಟವಾಯಿತು. ಅವರ ಮಾತಿನ ಹಿನ್ನೆಲೆಯಲ್ಲಿ ಸ್ವಾರ್ಥವಿತ್ತೆಂಬುದನ್ನು ಒಪ್ಪುತ್ತೇನೆ. ಆದುದರಿಂದ ಅವರ ಉದ್ದೇಶದಲ್ಲಿ ಪ್ರಾಮಾಣಿಕತೆಯನ್ನು ಕಾಣುವುದಾದರೂ ಹೇಗೆ? ಇದೇ ವಿಷಯವಾಗಿ ನಿನ್ನೆ ಮತ್ತು ಈ ದಿನ ಪ್ರಾತಃಕಾಲ ಆಲೋಚನೆ ಮಾಡುತ್ತಿದ್ದೆ. 'ಅವರ ಸ್ವಾರ್ಥ ಅಥವಾ ಸ್ವಹಿತ ಎಲ್ಲಿದೆ?' ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡೆ. ಕೆಲವು ಉದ್ದೇಶಗಳ ಸಾಧನೆಯೇ ಅವರ ಗುರಿ, ನಿಜ. ಹಾಗೆಯೇ ನಾವು ಕೆಲವು ಗುರಿಗಳ ಸಾಧನೆಗೆ ಹೊರಟಿದ್ದೇವೆ. ನಮ್ಮ ಉದ್ದೇಶಗಳು ಪವಿತ್ರವಾಗಿವೆ; ಆದುದರಿಂದ ನಾವು ಸ್ವಾರ್ಥರಹಿತರು ಎಂದು ತಿಳಿಯುತ್ತೇವೆ. ಆದರೆ ನಿಸ್ವಾರ್ಥತೆಯ ಕೊನೆ ಎಲ್ಲಿ, ಸ್ವಾರ್ಥದ ಆರಂಭ ಎಲ್ಲಿ ಎಂದು ತೀರ್ಮಾನ ಮಾಡುವವರು ಯಾರು? ನಿಃಸ್ವಾರ್ಥತೆ ಎನ್ನುವುದು ಸ್ವಾರ್ಥದ ಪರಿಶುದ್ಧರೂಪವಿರಬಹುದು. ಕೇವಲ ತರ್ಕಕ್ಕಾಗಿ ನಾನು ಹೀಗೆ ಹೇಳುತ್ತಿಲ್ಲ. ನಿಜವಾಗಿಯೂ ನನಗೆ ಹಾಗೆನ್ನಿಸುತ್ತಿದೆ. ಅವರ ದೃಷ್ಟಿಕೋನ ದಿಂದ ಅವರ ಮಾನಸಿಕ ಸ್ಥಿತಿಯನ್ನು ಪರಿಶೀಲಿಸುತ್ತಿದ್ದೇನೆ; ನನ್ನ ಮೂಗಿನ ನೇರಕ್ಕೆ ನೋಡುತ್ತಿಲ್ಲ. ಅವರು ಹಿಂದೂಗಳಾಗಿಲ್ಲದಿದ್ದರೆ ನಿನ್ನೆ ಅವರು ಈ ರೀತಿ ಮಾತನಾಡು ತ್ತಿರಲಿಲ್ಲ. ನಮ್ಮ ವಿರೋಧಿಗಳು ಯೋಚಿಸುವ ಧಾಟಿಯಲ್ಲೇ ನಾವು ಯೋಚಿಸಲು ಆರಂಭಿಸಿದ ತಕ್ಷಣ ಅವರಿಗೆ ನಾವು ಪೂರ್ಣ ನ್ಯಾಯ ತೋರಿದಂತಾಗುತ್ತದೆ. ಇದಕ್ಕೆ ಅನಾಸಕ್ತ ಮನಸ್ಸು ಬೇಕು; ಆ ಸ್ಥಿತಿಯನ್ನು ಮುಟ್ಟುವುದು ಕಷ್ಟ; ಇದನ್ನೆಲ್ಲಾ ನಾನು ಬಲ್ಲೆ. ಆದರೂ ಸತ್ಯಾಗ್ರಹಿಗೆ ಇದು ಅತ್ಯಾವಶ್ಯಕ. ನಮ್ಮ ಎದುರಾಳಿಗಳ ಮನಹೊಕ್ಕು ಅವರ ನಿಲುವೇನೆಂಬುದನ್ನು ಅರ್ಥಮಾಡಿಕೊಂಡರೆ ಮುಕ್ಕಾಲು ಮೂರು ವೀಸ ಪಾಲು ಜಗತ್ತಿನ ಕಷ್ಟಸಂಕಷ್ಟಗಳೂ ಮನಸ್ತಾಪಗಳೂ ಮಾಯವಾಗುವುವು. ಆಗ ನಮ್ಮ ಎದುರಾಳಿಗಳೊಂದಿಗೆ ಬೇಗ ಒಪ್ಪಂದಕ್ಕೆ ಬರುತ್ತೇವೆ ಇಲ್ಲವೇ ಅವರ ಬಗ್ಗೆ

ಉದಾರವಾಗಿ ಯೋಚಿಸುತ್ತೇವೆ. ಪ್ರಸ್ತುತ ಸಂದರ್ಭದಲ್ಲಿ ಅವರೊಂದಿಗೆ ತಕ್ಷಣ ಒಪ್ಪಂದಕ್ಕೆ ಬರುವ ಮಾತೇ ಇಲ್ಲ; ಏಕೆಂದರೆ ಉಭಯತ್ರರ ಧ್ಯೇಯಗಳಲ್ಲಿ ತೀವ್ರ ಭೇದವಿದೆ. ಆದರೆ ಅವರ ಬಗ್ಗೆ ನಾವು ಉದಾರವಾಗಿ ವರ್ತಿಸೋಣ; ನಿಜವಾಗಿ ಅವರ ಮನಸ್ಸಿನಲ್ಲಿರುವುದನ್ನೇ ಅವರು ಹೇಳುತ್ತಿದ್ದಾರೆಂದು ನಂಬೋಣ. ಅಸ್ಪೃಶ್ಯರಿಗೆ ರಸ್ತೆಗಳನ್ನು ತೆರೆಯಲು ಅವರು ಇಷ್ಟಪಡುವುದಿಲ್ಲ. ಅದಕ್ಕೆ ಕಾರಣ ಅವರ ಸ್ವಾರ್ಥ ಇರಬಹುದು; ಅಜ್ಞಾನ ಇರಬಹುದು. ಅವರು ಹಾಗೇ ಹೇಳುವುದು ತಪ್ಪೆಂದು ನಾವು ನಿಜವಾಗಿ ನಂಬಿದ್ದೇವೆ. ಆದುದರಿಂದ ಅವರದು ತಪ್ಪು ಎಂದು ತೋರಿಸಿ ಕೊಡುವುದು ನಮ್ಮ ಕೆಲಸ. ಹಾಗೆ ತೋರಿಸಿಕೊಡಲು ನಾವು ಕಷ್ಟಪಡೋಣ. ಯುಗಾಂತರಗಳಿಂದ ಬಂದ ಪೂರ್ವಗ್ರಹಗಳಿಗೆ ಧರ್ಮದ ಸೋಗೂ ಇದ್ದಲ್ಲಿ ಅವನ್ನು ಹೋಗಲಾಡಿಸಲು ತರ್ಕವೊಂದೇ ಸಾಲದು. ಕಷ್ಟಾನುಭವದಿಂದ ತರ್ಕಕ್ಕೆ ಪುಷ್ಟಿ ಕೊಡಬೇಕು. ಕಷ್ಟದಿಂದ ತಿಳಿವಳಿಕೆಯ ಕಣ್ತೆರೆಸಬಹುದು. ಆದುದರಿಂದ ನಮ್ಮ ಕೃತಿಗಳಲ್ಲಿ ಬಲಪ್ರಯೋಗ ಕಿಂಚಿತ್ತೂ ಕೂಡದು. ನಾವು ಅನುಸರಿಸುತ್ತಿರುವ ಮಾರ್ಗದ ಬಗ್ಗೆ ಅಚಲವಾದ ನಂಬಿಕೆ ಇರಬೇಕು. ನಾವು ಈಗ ಅನುಸರಿಸುತ್ತಿರುವ ವಿಧಾನ ಇದು; ನಾಲ್ಕು ಕಟಕಟೆಗಳ ಬಳಿಗೂ ನಾವು ಹೋಗುವುದು; ಅಲ್ಲಿ ನಮ್ಮನ್ನು ತಡೆದರೆ ಅಲ್ಲೇ ದಿನಗಟ್ಟಲೆ ಕುಳಿತು ನೂಲುತ್ತಾ ಇರುವುದು; ಇದರಿಂದ ರಸ್ತೆಗಳು ತೆರೆಯಲ್ಪಡು ತ್ತವೆ ಎಂಬ ನಂಬಿಕೆ ನಮ್ಮಲ್ಲಿರಬೇಕು. ಇದು ಕ್ಲಿಷ್ಟ ಹಾಗೂ ನಿಧಾನವಾದ ವಿಧಾನ ಎಂದು ನನಗೆ ಗೊತ್ತು. ನಿಮಗೆ ಸತ್ಯಾಗ್ರಹದ ಸಿಂಧುತ್ವದಲ್ಲಿ ನಂಬಿಕೆ ಇದ್ದರೆ ನೀವು ಈ ತರಹ ನಿಧಾನದ ಕಿರುಕುಳ ಹಾಗೂ ಕಷ್ಟವನ್ನು ಸಂತೋಷದಿಂದ ಅನುಭವಿಸುತ್ತೀರಿ; ಪ್ರತಿದಿನವೂ ನೀವು ಉರಿ ಬಿಸಲಿನಲ್ಲಿ ಹೋಗಿ ಕುಳಿತಾಗ ಉಂಟಾಗುವ ತೊಂದರೆ ಯನ್ನು ಮನಸ್ಸಿಗೆ ತಂದುಕೊಳ್ಳುವುದಿಲ್ಲ. ನಿಮಗೆ ನಿಮ್ಮ ಧ್ಯೇಯದಲ್ಲಿ, ಸಾಧನದಲ್ಲಿ, ಮತ್ತು ದೇವರಲ್ಲಿ ನಂಬಿಕೆ ಇದ್ದರೆ ಉರಿಬಿಸಲೂ ಸಹ ತಂಪಾಗಿರುತ್ತದೆ. ನೀವು ಬಳಲಿ, 'ಎಷ್ಟು ದಿವಸವಪ್ಪಾ' ಎಂದು ಉದ್ಗಾರ ತೆಗೆಯಬಾರದು; ಕೋಪಗೊಳ್ಳ ಬಾರದು. ಹಿಂದೂಧರ್ಮ ಮಾಡಿರುವ ಪಾಪಕ್ಕೆ ಆಗಬೇಕಾದ ಪ್ರಾಯಶ್ಚಿತ್ತದ ಒಂದು ಭಾಗ– ನಿಮ್ಮ ಈ ಕೆಲಸ."

ಸತ್ಯಾಗ್ರಹ ಅನೇಕ ತಿಂಗಳುಗಳ ಕಾಲ ನಡೆಯಿತು. ಕಡೆಗೆ ಸರ್ಕಾರವು ತನ್ನ ಪಟ್ಟನ್ನು ಸಡಿಲಿಸಿತು; ದೇವಸ್ಥಾನದ ಮೂರು ಪಾರ್ಶ್ವಗಳ ರಸ್ತೆಗಳು ತೆರೆಯಲ್ಪಟ್ಟವು. ಗಾಂಧಿಯವರ ದೃಷ್ಟಿಯಲ್ಲಿ ವೈಕೋಂನ ಒಪ್ಪಂದ 'ಹುರುಳಿಲ್ಲದ' ಒಪ್ಪಂದವಾಗಿತ್ತು. ಆದರೆ ಅದು "ಪ್ರಜೆಗಳಿಗೂ ಸರ್ಕಾರಕ್ಕೂ ನಡುವೆ ಆಗಿದ್ದ ಒಪ್ಪಂದದ ದಾಖಲೆ ಆಗಿದ್ದುದರಿಂದ ಸ್ವಾತಂತ್ರ್ಯದೆಡೆಗೆ ಒಂದು ದೊಡ್ಡ ಹೆಜ್ಜೆ" ಎಂದು ಗಾಂಧಿ ವರ್ಣಿಸಿದರು.

ತಿರುವಾಂಕೂರಿನಲ್ಲಿ ಅವರಿದ್ದಷ್ಟು ದಿನವೂ ನಿರಂತರ ಪ್ರಯಾಣ ಮತ್ತು ಸಭೆಗಳ ಕಾರ್ಯಕ್ರಮವಿತ್ತು. ತಿರುವಾಂಕೂರಿನ ಉತ್ತರ ಗಡಿಯಲ್ಲಿರುವ ವೈಕೋಂನಿಂದ ಆರಂಭಿಸಿ ದಕ್ಷಿಣದ ತುತ್ತತುದಿ ಕನ್ಯಾಕುಮಾರಿಯವರೆಗೆ ಪ್ರವಾಸ ಮಾಡಿದರು.

ಈ ಪ್ರದೇಶದ ಪ್ರಕೃತಿ ಸೌಂದರ್ಯ ಅವರ ಮನಸ್ಸನ್ನು ಸೆಳೆಯಿತು. ಮಲಬಾರಿನ ಮಹಿಳೆಯರನ್ನು ಕಂಡು ಇನ್ನೂ ಬೆರಗಾದರು.

"ಮಲಬಾರಿನ ಮಹಿಳೆಯರು ನನ್ನ ಮನಸ್ಸನ್ನು ಸೂರೆಗೊಂಡಿದ್ದಾರೆ.ಇಲ್ಲಿನ ಮಹಿಳೆಯರ ಉಡುಪು ಸರಳ ಆದರೂ ಭೂಷಣಪ್ರಾಯ. ಭಾರತದ ಇನ್ನಾವ ಕಡೆಯಲ್ಲೂ ಸ್ತ್ರೀಯರು ಈ ತರಹ ಉಡುಪು ಧರಿಸುವುದನ್ನು ನಾನು ನೋಡಿಲ್ಲ".

ತಿರುವಾಂಕೂರಿನ ಚಿರಸ್ಮರಣೀಯ ಪ್ರವಾಸ ಮಾರ್ಚ್‌ತಿಂಗಳ ಕೊನೆಗೆ ಮುಗಿಯಿತು. ಅನಂತರ ಗಾಂಧಿಯವರು ತಮ್ಮ ಪ್ರಾಂತದಲ್ಲಿನ ಕೆಲಸವನ್ನು ಮುಂದುವರಿಸಿದರು. ನವಸಾರಿ ಮತ್ತು ಬ್ರೋಚ್‌ನಲ್ಲಿ ಹದಿನೈದು ದಿನಗಳ ಪ್ರವಾಸ ಕೈಗೊಂಡು ರಚನಾತ್ಮಕ ಕಾರ್ಯಕ್ರಮದ ಸಂದೇಶವನ್ನು ಬೀರಿದರು. "ದಕ್ಷರಾದ ಅಹಿಂಸಾನಿಷ್ಠ ಕಾರ್ಯಕರ್ತರನ್ನು ತಯಾರು ಮಾಡಲು ನಾನು ಈಗ ಗಮನ ಕೊಡಬೇಕಾಗಿದೆ; ಆ ಕಾರ್ಯಕರ್ತರಿಗೆ ಕೈಯಲ್ಲಿ ನೂಲುವುದರಲ್ಲೂ ಖದ್ದರ್‌ನಲ್ಲೂ ಜೀವಂತ ನಂಬಿಕೆ ಇರಬೇಕು; ಅಂತೆಯೇ ಹಿಂದೂ–ಮುಸ್ಲಿಂ ಐಕ್ಯತೆಯಲ್ಲಿ ನಂಬಿಕೆ ಇರಬೇಕು; ಅವರು ಹಿಂದೂಗಳಾಗಿದ್ದರೆ ಅಸ್ಪೃಶ್ಯತೆಯ ನಿವಾರಣೆಯಲ್ಲಿಯೂ ಸಹ ಶ್ರದ್ಧೆ ಇರಬೇಕು. ಈ ವರ್ಷಕ್ಕಂತೂ ಇದೇ ರಾಷ್ಟ್ರೀಯ ಕಾರ್ಯಕ್ರಮ. ಮತ್ತಿನ್ನಾವ ಕಾರ್ಯಕ್ರಮವೂ ಇಲ್ಲ".

ಏಪ್ರಿಲ್ ಕೊನೆಯ ಹೊತ್ತಿಗೆ ಗಾಂಧಿ ಬಂಗಾಳಕ್ಕೆ ಹೋಗಿ ತಲುಪಿದರು. ಅವರ ಆರೋಗ್ಯ ಸ್ಥಿತಿ ಸೂಕ್ಷ್ಮವಾಗಿತ್ತು. ಆದುದರಿಂದ ಮೊದಲನೆಯ ದರ್ಜೆಯ ವಿಶೇಷ ಸವಲತ್ತಿನ ರೈಲುಡಬ್ಬಿಯನ್ನು ಅವರ ಪ್ರಯಾಣಕ್ಕೆ ವ್ಯವಸ್ಥೆಮಾಡಲಾಗಿತ್ತು. ಅದಕ್ಕಾಗಿ ಗಾಂಧಿ ಪ್ರತಿಭಟಿಸಿದರು. "ನನಗೆ ಈ ರೀತಿ ಸುಖಕರವಾದ ವ್ಯವಸೆ ಮಾಡಿದಲ್ಲಿ ಈ ಪ್ರವಾಸದಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದೇ ನನ್ನ ಭಾವನೆ. ಕೋಟ್ಯಂತರ ಬಡಜನರು ಬದುಕುತ್ತಿರುವ ರೀತಿಯಲ್ಲಿ ನಾನು ಬದುಕಬೇಕು; ಆದಷ್ಟು ಮಟ್ಟಿಗೆ ಅವರು ಪ್ರಯಾಣಮಾಡುವ ರೀತಿಯಲ್ಲೇ ನಾನು ಪ್ರಯಾಣ ಮಾಡಬೇಕು; ಇಲ್ಲವೇ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣವನ್ನೇ ಮಾಡಬಾರದು. ಸಂಧಿಸಲಸಾಧ್ಯವಾದ ಸಿಮ್ಲಾದ ಎತ್ತರದ ಸ್ಥಾನದಲ್ಲಿ ಕುಳಿತಿರುವ ವೈಸರಾಯರು ಕೋಟ್ಯಂತರ ಭಾರತೀಯರ ಹೃದಯವನ್ನು ಆಳಲು ಹೇಗೆ ಸಾಧ್ಯವಿಲ್ಲವೋ ಹಾಗೆ, ನಾನು ಮೊದಲನೆಯ ದರ್ಜೆಗಿಂತ ಐದುಪಟ್ಟು ಶ್ರೇಷ್ಠವಾದ ಡಬ್ಬಿಯ ಮಾತಿರಲಿ–ಎರಡನೆಯ ದರ್ಜೆಯಲ್ಲಿ ಪ್ರಯಾಣ ಮಾಡಿದರೂ ಸಹ ಜನಸಾಮಾನ್ಯರಿಗೆ ಪರಿಣಾಮಕಾರಿಯಾದ ಸಂದೇಶ ಮುಟ್ಟಿಸಲಾರೆ".

ಕಲ್ಕತ್ತಾದಲ್ಲಿ ಮೇ ಒಂದರಂದು ಗಾಂಧಿಯವರು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಲಾರ್ಡ್ ಬರ್ಕೆನ್ ಹೆಡ್ ಮತ್ತು ದಾಸ್ ನಡುವೆ ಸಂಧಾನವಾಗುತ್ತಿದೆಯೆಂಬ ವದಂತಿಯನ್ನು ಪ್ರಸ್ತಾಪಿಸಿ ಆ ಬಗ್ಗೆ ತಮಗೆ ಏನೂ ಗೊತ್ತಿಲ್ಲವೆಂದು ಹೇಳಿದರು. ರಾಜತಂತ್ರ ಕಲೆಯಲ್ಲಿ ಅಪ್ರತಿಮ ನೈಪುಣ್ಯ ಪಡೆದಿರುವ ಇಂಗ್ಲೆಂಡಿನ ರಾಜತಂತ್ರಜ್ಞ

ರೊಡನೆ ವ್ಯವಹಾರ ನಡೆಸುವುದಕ್ಕೆ ಬದಲಾಗಿ ತಾವು ರಚನಾತ್ಮಕ ಕಾರ್ಯಕ್ರಮದ ಕಡೆ ಗಮನ ಹರಿಸಿ ಭಾರತದ ಅಂತಃಶಕ್ತಿಯನ್ನು ಬೆಳೆಸಲು ಆಶಿಸುವುದಾಗಿ ತಿಳಿಸಿದರು. ಹಿಂದೂ–ಮುಸ್ಲಿಂ ಸಮಸ್ಯೆಯನ್ನು ಪ್ರಸ್ತಾಪಿಸಿ ಹೀಗೆ ನುಡಿದರು: "ಆ ಬಗ್ಗೆ ನನ್ನ ಅಸಮರ್ಥತೆಯನ್ನು ಒಪ್ಪಿಕೊಂಡಿದ್ದೇನೆ. ಈ ವ್ಯಾಧಿಗೆ ನಾನು ಸೂಚಿಸಿರುವ ಪರಿಹಾರ ಪಥ್ಯವಾಗಿಲ್ಲ. ನಾನು ಸೂಚಿಸುವ ಪರಿಹಾರವನ್ನು ಹಿಂದೂಗಳಾಗಲೀ ಮುಸಲ್ಮಾನ ರಾಗಲೀ ಒಪ್ಪಲು ಸಿದ್ಧರಾಗಿಲ್ಲವೆಂದು ತಿಳಿದಿದ್ದೇನೆ. ಆದುದರಿಂದ ಈಚಿನ ದಿನಗಳಲ್ಲಿ ನಾನು ಸುಮ್ಮನೆ ಅದನ್ನು ಪ್ರಸ್ತಾಪಿಸಿ ಬಿಟ್ಟುಬಿಡುತ್ತೇನೆ. ನಮ್ಮ ದೇಶದ ವಿಮೋಚನೆ ಯನ್ನು ನಾವು ಬಯಸುವುದಾದರೆ, ಒಂದಲ್ಲ ಒಂದು ದಿನ, ಹಿಂದೂಗಳೂ ಮುಸಲ್ಮಾನರೂ ಒಟ್ಟುಗೂಡಬೇಕಾಗುವುದೆಂದು ಹೇಳಿ ತೃಪ್ತಿಪಟ್ಟುಕೊಳ್ಳುತ್ತೇನೆ. ನಾವು ಒಟ್ಟಾಗುವ ಮುನ್ನ ಪರಸ್ಪರ ರಕ್ತದ ಕೋಡಿ ಹರಿಸಲೇಬೇಕಾದರೆ ಅದು ಬೇಗನೆ ಆಗಿಬಿಟ್ಟರೆ ಒಳ್ಳೆಯದು. ಒಬ್ಬರು ಮತ್ತೊಬ್ಬರ ಶಿರಚ್ಛೇದನ ಮಾಡ ಬಯಸಿದರೆ ಅದನ್ನು ಪೌರುಷ ಮಾರ್ಗದಲ್ಲಿ ಮಾಡಿ ಬಿಡೋಣ. ಎಲ್ಲಿಯವರೆಗೆ ಅಸ್ಪೃಶ್ಯತೆಯು ಹಿಂದೂಧರ್ಮವನ್ನು ವಿಕಾರಗೊಳಿಸುತ್ತಾ ಇರುವುದೋ ಅಲ್ಲಿಯ ವರೆಗೆ ಸ್ವರಾಜ್ಯ ಸಾಧನೆ ಅಸಾಧ್ಯ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಒಂದು ಪಕ್ಷ ಬ್ರಿಟಿಷ್ ಪ್ರಭುಗಳು ಭಾರತಕ್ಕೆ ಸ್ವರಾಜ್ಯವನ್ನು ಬಳುವಳಿಯಾಗಿ ಕೊಡುತ್ತಾರೆನ್ನಿ; ನಾವು ಅಸ್ಪೃಶ್ಯತೆಯ ಅನಿಷ್ಟವನ್ನು ತೊಲಗಿಸದಿದ್ದರೆ ಆ ಬಳುವಳಿ ನಮ್ಮ ನಾಡಿಗೆ ಶಾಪವಾಗಿ ಪರಿಣಮಿಸುತ್ತದೆ".

ಮೇ ೨ರಂದು ಬಂಗಾಳದ ರಾಜಕೀಯ ಸಮ್ಮೇಳನ ಫರೀದ್‌ಪುರದಲ್ಲಿ ದಾಸ್ ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ದಾಸ್ ರೋಗಗ್ರಸ್ತರಾಗಿದ್ದು ದುರ್ಬಲರಾಗಿದ್ದರು. ಅವರ ಧ್ವನಿ ಕುಗ್ಗಿ ಹೋಗಿತ್ತು. ಆದರೂ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಲು ಅವರು ತೀರ್ಮಾನ ಮಾಡಿದ್ದರು. ಸರ್ಕಾರಕ್ಕೆ ಕೆಲವು ಷರತ್ತುಗಳ ಮೇಲೆ ಸಹಕಾರ ನೀಡಲು ತಯಾರಾಗಿರುವುದಾಗಿ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ತಿಳಿಸಿದರು.

"ಮೊದಲನೆಯದಾಗಿ, ಸರ್ಕಾರವು ತನ್ನ ಮನಸ್ಸಿಗೆ ಬಂದಂತೆ ಜನರನ್ನು ಬಂಧಿಸಿಡುವ ಅಧಿಕಾರವನ್ನು ತ್ಯಜಿಸಬೇಕು; ಈಗ ಸೆರೆಯಲ್ಲಿರುವ ರಾಜಕೀಯ ಖೈದಿಗಳನ್ನೆಲ್ಲಾ ಬಿಟ್ಟುಬಿಡಬೇಕು; ಎರಡನೆಯದಾಗಿ ಕಾಮನ್‌ವೆಲ್ತಿನ ವ್ಯಾಪ್ತಿಯಲ್ಲಿ, ಆದಷ್ಟು ಬೇಗ ಸ್ವರಾಜ್ಯ ಪಡೆದುಕೊಳ್ಳುವ ಹಕ್ಕನ್ನು ಭಾರತಕ್ಕೆ ನೀಡಬೇಕು. ಈ ಹಕ್ಕನ್ನು ಸರ್ಕಾರ ಮನ್ನಿಸಿ ಆ ಬಗೆಗೆ ಭರವಸೆ ಕೊಡಬೇಕು; ಈ ಮಧ್ಯೆ–ಸ್ವರಾಜ್ಯ ಪ್ರಾಪ್ತಿಯಾಗುವವರೆಗೆ–ಸ್ವರಾಜ್ಯದ ಸದೃಢ ಅಸ್ತಿಭಾರವನ್ನು ಈಗಲೇ ಹಾಕಬೇಕು. ಸದೃಢ ಅಸ್ತಿಭಾರದ ವಿಷಯವನ್ನು ಚರ್ಚಿಸಿ ಒಪ್ಪಂದಕ್ಕೆ ಬರಬೇಕು; ಉಭಯತ್ರರೂ ಗೌರವಯುತವಾದ ಷರತ್ತುಗಳ ಮೇಲೆ ಶಾಂತಿಯನ್ನು ಸಾಧಿಸಲು ಸಾಧ್ಯ ಎಂದು ಬ್ರಿಟಿಷರಿಗೆ ಹೇಳಬಯಸುತ್ತೇನೆ. ನಾವು ವಾಸ್ತವ ಅಂಶವೊಂದನ್ನು ಅರಿತುಕೊಳ್ಳಬೇಕು.

ಒಡಂಬಡಿಕೆಗೆ ಬರುವ ಆಸೆ ಕೈಗೂಡದಿದ್ದರೆ ಸವಿನಯ ಕಾನೂನುಭಂಗ ಮಾಡುವುದು ಅನಿವಾರ್ಯವಾಗುವುದು. ಮಹಾತ್ಮಾ ಗಾಂಧಿಯವರು ನಿಯೋಜಿಸಿರುವ ರಚನಾತ್ಮಕ ಕಾರ್ಯಕ್ರಮವನ್ನು ಪೂರ್ಣವಾಗಿ ಕಾರ್ಯಗತ ಮಾಡದಿದ್ದರೆ ಸವಿನಯ ಕಾನೂನು ಭಂಗಕ್ಕೆ ಭಾರತವು ಸಮರ್ಥವಾಗಿರುವುದಿಲ್ಲ. ನಮ್ಮ ಗುರಿಯ ಕಡೆ ಗಮನ ಇದ್ದೇ ಇರಬೇಕು; ಸ್ವಾತಂತ್ರ್ಯವನ್ನು ಪಡೆಯಲೇಬೇಕು."

ಗಾಂಧಿಯವರು ಮೇ ೩ರಂದು ಸಮ್ಮೇಳನದಲ್ಲಿ ಭಾಗವಹಿಸಿದರು. "ದಾಸ್‌ರವರು ಬಂಗಾಳಿಯಲ್ಲಿ ಮಾಡಿದ ಭಾಷಣದ ಇಂಗ್ಲೀಷ್ ಭಾಷಾಂತರವನ್ನು ಕಲ್ಕತ್ತಾದಲ್ಲಿ ಓದಿದೆ. ಅವರು ನನ್ನ ಆಲೋಚನೆಗಳನ್ನೇ ಮುಂದಿಟ್ಟಿದ್ದಾರೆ; ಭಾಷೆ ಮಾತ್ರ ಬೇರೆ ಅಷ್ಟೇ" ಅಂದರು ಗಾಂಧಿ. ದೇಶನಿಷ್ಠೆ ಇದ್ದು, ೧೯೨೦ರಲ್ಲಿ ಕಲ್ಕತ್ತಾದಲ್ಲಿ ರೂಪಿಸಿದ ನೀತಿಗೆ ಬದ್ಧರಾಗಿದ್ದರೆ, ಆ ಭಾಷಣದ ಬಗ್ಗೆ ಯಾರೂ ದೂಷಣೆ ಮಾಡಲಾರರು. ದಾಸ್‌ರವರು ಹೇಗೆ ಘಾತಿಸಲ್ಪಟ್ಟಿದ್ದಾರೆ ಎಂಬುದು ಎಲ್ಲರಿಗೂ ತಿಳಿದ ವಿಷಯ; ಅವರ ನಿಂದಕರಲ್ಲಿ ಐರೋಪ್ಯರಿದ್ದಾರೆ. ನಮ್ಮ ದೇಶೀಯರೂ ಇದ್ದಾರೆ; ಅಷ್ಟೇ ಏಕೆ ಅವರ ಪಕ್ಷದಲ್ಲೂ ಇದ್ದಾರೆ. ಅವರು ಅಡ್ಡಗೋಡೆಯ ಮೇಲೆ ನಿಂತಿದ್ದಿರಬಹುದು. ಆದರೆ ಅವರಿಗೆ ಸ್ವರಾಜ್ಯದ ವಿಚಾರದಲ್ಲಿ ತೀವ್ರತೆ ಇತ್ತು. ಜನರ ಇತಿಮಿತಿಗಳ ಅರಿವೂ ಇತ್ತು. ಬ್ರಿಟಿಷ್ ಪ್ರಭುತ್ವವನ್ನು ಉಲ್ಲಂಘಿಸಲು ಅವರಿಗೆ ಆಗಲಿಲ್ಲ. ಆ ಬಗ್ಗೆ ದಾಸ್‌ರವರು ತಮ್ಮ ಮತ್ತು ತಮ್ಮ ದೇಶೀಯರ ಅಸಮರ್ಥತೆಯನ್ನು ಒಪ್ಪಿಕೊಂಡಿದ್ದಾರೆ. ಪ್ರಾಣಬಿಡುವ ಅಥವಾ ಪ್ರಾಣ ಕಳೆಯುವ ಸಾಮರ್ಥ್ಯವನ್ನು ಪಡೆದುಕೊಂಡರೆ ಸಾಲದು; ಕಷ್ಟ ಕಾರ್ಪಣ್ಯಗಳ ಚಂಡಮಾರುತಗಳ ಮಧ್ಯೆ ಬದುಕುವ ಧೈರ್ಯವನ್ನೂ ಬೆಳೆಸಿಕೊಳ್ಳಬೇಕು. ಹಾಗಿಲ್ಲದೆ ಸ್ವಾತಂತ್ರ್ಯ ಪಡೆಯುವುದು ಹೇಗೆ ಸಾಧ್ಯ? ಪ್ರಾಣ ಬಿಟ್ಟರೆ ಅಥವಾ ಬೇರೆಯವರ ಪ್ರಾಣ ತೆಗೆದರೆ ಖಂಡಿತ ಸ್ವರಾಜ್ಯ ಬರುವುದಿಲ್ಲ; ಹಿಂದೂ–ಮುಸ್ಲಿಂ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ ಹಾಗೂ ರಾಟೆಯ ಮೂಲಕ ಸ್ವರಾಜ್ಯ ಲಭಿಸುತ್ತದೆ–ಎಂದು ಹೇಳಿದರು ಗಾಂಧಿ. ಮತಿಹೀನ ಎಂದು ನನ್ನನ್ನು ಕರೆಯದೆ ಇರುವ ದಿನ ಸಮೀಪಿಸುತ್ತಿದೆ; ಅದು ಬಹಳ ದೂರವಿಲ್ಲ–ಎಂದು ಅವರು ನುಡಿದರು. ನೂಲಲು ಎಡೆಮಾಡಿಕೊಡಿ; ಭಾರತಕ್ಕೆ ಸ್ವರಾಜ್ಯವನ್ನು ನೂಲುವೂದರ ಮೂಲಕವೇ ತರುತ್ತೇನೆ ಎಂದರು.

ಮೇ ಮತ್ತು ಜೂನ್ ತಿಂಗಳುಗಳಲ್ಲಿ ಗಾಂಧಿಯವರು ಬಂಗಾಳದ ಹಳ್ಳಿಗಳಿಗೆ ಭೇಟಿ ಕೊಟ್ಟರು. ಅಲ್ಲಿ ಅವರು ಕಂಡಿದ್ದು ತೃಪ್ತಿ ತಂದಿತು. "ಬಂಗಾಳದಲ್ಲಿ ಖದ್ದರ್ ಇಷ್ಟು ವ್ಯಾಪಕವಾಗಿ ಹರಡಿದೆ ಎಂಬುದು ನನಗೆ ತಿಳಿದೇ ಇರಲಿಲ್ಲ. ಇಲ್ಲಿ ಬಂದ ಮೇಲೆ ಕಂಡುಕೊಂಡೆ" ಎಂದು ಹೇಳಿದರು. ಕೋಮಿಲ್ಲಾದಲ್ಲಿ ನೀಡಲಾದ ಸಾರ್ವಜನಿಕ ಮಾನಪತ್ರದಲ್ಲಿ ಹೊಸ ನಮೂನೆ ಕಾಣಬಂದಿತು. "ಶೇಕಡ ಎರಡರಷ್ಟು ಜನ ಖಾದಿ ಧರಿಸುತ್ತಾರೆ, ಶೇಕಡ ಆರು ಮಂದಿ ಮಿಲ್ ಖಾದಿ ಉಡುತ್ತಾರೆ; ಶೇಕಡ ಇಪ್ಪತ್ತು ಜನ ಅರ್ಧ ಖಾದಿಧಾರಿಗಳು; ಶೇಕಡ ಎರಡಷ್ಟು ಮಂದಿ ತಪ್ಪದೆ ನೂಲುತ್ತಾರೆ".

ಈ ಧಾಟಿಯಲ್ಲಿ ಮಾನಪತ್ರ ಬರೆಯಲಾಗಿತ್ತು. ಈ ವಾಸ್ತವಾಂಶಗಳನ್ನು ತಿಳಿದು ಗಾಂಧಿ ಬೆರಗಾದರು. ಚಂದಪುರದಲ್ಲಿ ಕೊಟ್ಟ ಮಾನಪತ್ರದಲ್ಲಿ ಸ್ಥಳೀಯ ಚಟುವಟಿಕೆಗಳ ಬಗೆಗೆ ವಿವರಣೆ ಇತ್ತು. ಅಲ್ಲಿನ ಇತಿಮಿತಿಗಳನ್ನು ಕುರಿತು ಮರೆಮಾಚದೆ ಹೇಳಲಾಗಿತ್ತು. 'ಈ ಅಸಾಧಾರಣವಾದ ಮಾತಪತ್ರ'ದ ಬಗ್ಗೆ 'ಯಂಗ್ ಇಂಡಿಯಾದಲ್ಲಿ ಆತ್ಮೀಯ ಶ್ಲಾಘನೆ ವ್ಯಕ್ತವಾಯಿತು. ಹೀಗೆ ಸಾರ್ವಜನಿಕ ಮಾನಪತ್ರಗಳು ಬಹಳವಾಗಿ ಅರ್ಪಿಸಲ್ಪಟ್ಟವು. ಗಾಂಧೀ ನೂಲುತ್ತಲೇ ಕುಳಿತಿದ್ದು ಈ ಮಾನಪತ್ರಗಳನ್ನು ಸ್ವೀಕರಿಸಿದರು; ಇವುಗಳಿಗೆ ಉತ್ತರ ಕೊಡುವಾಗಲೂ ಅವರ ಕೈಗಳು ರಾಟೆಯ ಮೇಲಿರುತ್ತಿದ್ದುವು. "ನೂಲುವುದನ್ನು ಪ್ರತ್ಯಕ್ಷವಾಗಿ ತೋರಿಸಿ ಅದನ್ನು ನಿಮಗೆ ಕಲಿಸಬೇಕೆಂದು ಇಚ್ಛಿಸಿದ್ದೆ. ಚರಖದ ಮೂಲಕ ನೀವು ಭಾರತದ ಭವಿಷ್ಯವನ್ನು ನೂಲಿರಿ, ರೂಪಿಸಿರಿ. ಇಂದು ನಾನು ರಾಟೆಯನ್ನು ತಿರುಗಿಸಿ ಹಂಜಿಯನ್ನು ಎಳೆದಾಗ ಒಂದು ಎಳೆ ದಾರ ಬರುವುದನ್ನು ಮಾತ್ರ ನೋಡುತ್ತಿದ್ದೀರಿ. ಆದರೆ ಒಂದೊಂದು ಎಳೆಯನ್ನು ತೆಗೆಯುವಾಗಲೂ ನಾನು ಭಾರತದ ಭವಿಷ್ಯವನ್ನು ನೂಲುತ್ತಿದ್ದೇನೆಂಬುದು ನನ್ನ ನಿಜವಾದ ನಂಬಿಕೆ. ರಾಟೆಯಿಲ್ಲದೆ ನಮ್ಮ ದೇಶಕ್ಕೆ ಮೋಕ್ಷವಿಲ್ಲವೆಂಬ ನಂಬಿಕೆ ದೃಢವಾಗುತ್ತಿದೆ; ನಾನು ರಾಟೆಯನ್ನು ತಿರುಗಿಸುತ್ತಿರುವಂತೆಯೇ, ನೀವೂ ಸಹ ತಿರುಗಿಸಬೇಕು. ದಿನವು ಅರ್ಧಗಂಟೆ ಕಾಲ ನಿಮ್ಮ ಮಾತುಕತೆಗಳನ್ನೂ ಬರವಣಿಗೆಯನ್ನೂ, ಆಟಪಾಟವನ್ನೂ ಬದಿಗೊತ್ತಿ ಆ ಸಮಯವನ್ನು ನೂಲುವುದಕ್ಕೆ ವಿನಿಯೋಗಿಸಿರಿ" ಎಂದು ಹೇಳಿದರು.

ಸಾರ್ವಜನಿಕ ಸಭೆಗಳಿಗೆ ಸಹಸ್ರಾರು ಜನರು ಬರುತ್ತಿದ್ದರು. ಮಾನಪತ್ರವನ್ನಿಟ್ಟು ಅರ್ಪಿಸಿದ ಸಂಪುಟಗಳು ಸ್ಥಳೀಯ ಕಲಾವಿದರಿಂದ ಮಾಡಲ್ಪಟ್ಟಿದ್ದುವು. ಅವೂ ನಯವೂ ಕಲಾಪೂರ್ಣವೂ ಆಗಿದ್ದುವು. ಆದರೂ ಅವುಗಳು ಅಷ್ಟು ದುಬಾರಿಯಾಗಿರಲಿಲ್ಲ. ಡಾಕ್ಕಾದಲ್ಲಿ ಬಿಟ್ಟರೆ ಮಿಕ್ಕೆಲ್ಲ ಕಡೆಗಳಲ್ಲೆ ಕೊಟ್ಟ ಮಾನಪತ್ರಗಳಲ್ಲಿ ವಾಸ್ತವ ಅಂಕಿ ಅಂಶಗಳು ಯಥಾರ್ಥವಾಗಿ ನಮೂದಿಸಲ್ಪಡುತ್ತಿದ್ದುವು. ಬಹುಪಾಲು ಮಾನಪತ್ರಗಳು ಬಂಗಾಳಿ ಭಾಷೆಯಲ್ಲಿದ್ದುವು. ಕಡೆಯ ಪಕ್ಷ ನಾಲ್ಕು ಸಂಸ್ಕೃತ ಭಾಷೆಯಲ್ಲಿದ್ದುವು. ಮೂರು ಮಾನಪತ್ರಗಳನ್ನು ಹಿಂದಿಯಲ್ಲಿ ಬರೆಯಲಾಗಿತ್ತು.

ಗಾಂಧಿಯವರು ಕಾಲ್ನಡಗೆಯಲ್ಲಿ ಹೊರಟು ಅನೇಕ ಕಡೆ ಹೊದರುಗಳನ್ನೂ ಮುಳ್ಳು ಪೊದೆಗಳನ್ನೂ ದಾಟಿಕೊಂಡು ಪ್ರಯಾಣ ಮಾಡಿದರು. ಕೆಸರಿನಲ್ಲೂ ನೀರಿನಲ್ಲೂ ನಡೆದುಕೊಂಡು ಹೋದರು. ವಸ್ತುಸ್ಥಿತಿಯನ್ನು ಕಣ್ಣಾರೆ ನೋಡಲು ದಿನಗಟ್ಟಲೆ ಅಲೆದಾಡಿದರು. ದೋಣಿ ಹತ್ತಿ ಹೊಳೆಗಳನ್ನು ದಾಟಿದರು. ಇದ್ದದ್ದನ್ನು ಇದ್ದಂತೆ ಕಂಡರು. ದಿಘೀರ್‌ಪುರದ ಬಳಿ ಒಂದು ಹಳ್ಳಿಯಲ್ಲಿ ಮೂವತ್ತು ವಿದ್ಯಾರ್ಥಿಗಳು ಶಾಲೆಯ ಅಂಗಳದಲ್ಲಿ ನೂಲುತ್ತಿರುವುದನ್ನು ಕಂಡರು. ಅವರು ಒಮ್ಮೆ ಎಲ್ಲವನ್ನೂ ವೀಕ್ಷಿಸಿ ಅಧ್ಯಾಪಕರಿಗೆ ಹೇಳಿದರು: "ಈ ಚರಖಗಳನ್ನು ನೋಡಿ ನಾನು ಚಕಿತನಾಗಿದ್ದೇನೆ. ಚರಖಗಳನ್ನು ಜನಪ್ರಿಯವನ್ನಾಗಿ ಮಾಡುವುದರಲ್ಲಿ ನಾವು ವಿಫಲರಾದರೆ ಸೋಜಿಗವೇನಿಲ್ಲ. ನಾನು ಇಲ್ಲಿಗೆ ಬಂದುದಕ್ಕೆ ಸಂತೋಷಪಡುತ್ತೇನೆ. ಹಾಗಿಲ್ಲದಿದ್ದರೆ, ನಾನು

ಇಲ್ಲಿನ ವೈಫಲ್ಯಕ್ಕೆ ಹಳ್ಳಿಯನ್ನೇ ದೂರುತ್ತಿದ್ದೆ. ದೋಷ ನಮ್ಮದೇ ಎಂದು ಈಗ ತಿಳಿಯಿತು. ರಾಟೆಗಳು ಶಿಥಿಲವಾಗಿವೆ; ಕದಿರುಗಳು ದಪ್ಪನಾಗಿವೆ. ಅವು ಕರ್ಕಶವಾದ ಶಬ್ದ ಮಾಡುತ್ತವೆ. ನೂಲುವಾಗ ಹುಡುಗರು ಹೇಗೆ ತಾನೇ ಹಾಡಲು ಸಾಧ್ಯ! ರಾಟೆಯ ಸಂಗೀತಕ್ಕೂ ಅವರ ಹಾಡುಗಾರಿಕೆಗೂ ಮೇಳ ಇದ್ದರೆ ತಾನೆ ಅವರು ಹಾಡುವುದು?" ಈ ಬಗೆಗೆ 'ಯಂಗ್ ಇಂಡಿಯಾ' ದ ಮೇ ೨೪ರ ಸಂಚಿಕೆಯಲ್ಲಿ 'ನ್ಯೂನತೆಗಳು' ಎಂಬ ಶೀರ್ಷಿಕೆಯಲ್ಲಿ ಹೀಗೆ ಬರೆದರು.

"ಬಂಗಾಳದ ಜನಜೀವನವನ್ನು ಹೆಚ್ಚು ಹೆಚ್ಚು ನೋಡಿದಂತೆಲ್ಲ ಅನೇಕ ಮುಖಗಳಲ್ಲಿ ಆಗಬಹುದಾದ ಸಾಧನೆಗಳ ಅರಿವು ಹೆಚ್ಚು ಹೆಚ್ಚಾಗಿ ಆಗುತ್ತದೆ. ಬಂಗಾಳದ ಸ್ತ್ರೀ ಪುರುಷರೆಲ್ಲರೂ ನೂಲುವುದರಲ್ಲಿ ವಿಶೇಷ ಪ್ರೌಢಿಮೆ ಹೊಂದಿದ್ದಾರೆ. ಗಂಡಸರು, ಹೆಂಗಸರು ನೂಲುವುದನ್ನು ಚಂದಪುರ, ಚಿಟ್ಟಿಗಾಂಗ್ ಮಹಾಜನ ಹತ್, ನೌಖಾಲಿ, ಕೋಮಿಲ್ಲಾ, ಡಾಕ್ಕಾ ಮತ್ತು ಮೈಮೆನ್‌ಸಿಂಗ್‌ಗಳಲ್ಲಿ ನೋಡಿದ್ದೇನೆ. ಅವರುಗಳ ಕೆಲಸ ತುಂಬಾ ಉತ್ತಮವಾಗಿರುವುದೆಂಬುದನ್ನು ನಾನು ಅರಿತಿದ್ದೇನೆ; ಅಷ್ಟರ ಮಟ್ಟಿಗೆ ಉತ್ತಮವಾಗಿ ಕೆಲಸಮಾಡುವವರನ್ನು ಭಾರತದ ಇನ್ನು ಯಾವ ಭಾಗದಲ್ಲೂ ನಾನು ಕಂಡಿಲ್ಲ. ನೂಲುವುದು ಅವರ ಕಸಬುದಾರಿ ಉದ್ಯಮವೇನಲ್ಲ. ಅವರುಗಳು ಅಭ್ಯಾಸಪೂರ್ವಕವಾಗಿ ದಿನವೂ ನೂಲತಕ್ಕವರೂ ಅಲ್ಲ. ಅವರಲ್ಲಿ ಅನೇಕರು ನನ್ನನ್ನು ಸಂತೋಷಗೊಳಿಸಲು ಅಥವಾ ಗೌರವಿಸಲು ಬಂದಿದ್ದರು, ನನ್ನನ್ನು ತೃಪ್ತಿಗೊಳಿಸಲು ಬಂದಿದ್ದರೂ ಬಂದಿದ್ದಿರಬಹುದು. ಆದಾರೂ ಅವರ ಕೆಲಸವನ್ನೇನೂ ತೆಗಳುವ ಹಾಗಿರಲಿಲ್ಲ. ಆದರೆ ತಂತ್ರಕೌಶಲ್ಯದ ಅಭಾವದಿಂದ ಅವರಪ್ರೌಢಿಮೆ ಹಾಗೂ ತ್ಯಾಗವೆಲ್ಲವೂ ವ್ಯರ್ಥವಾಗುತ್ತಿವೆ. ನಾನು ನೋಡಿದ ರಾಟೆಗಳಲ್ಲಿ ಅನೇಕವು ಯದ್ವಾತದ್ವಾ ತಿರುಗುತ್ತಿದ್ದುವು. ಅವು ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ; ಇಲ್ಲವೇ ಅವುಗಳ ರಚನೆಯಲ್ಲೇ ದೋಷವಿದ್ದಿರಬೇಕು; ಅವು ಭಾರವಾಗಿದ್ದು ಪರಮಾವಧಿ ಮಟ್ಟದಲ್ಲಿ ಕದಿರುಗಳು ಸುತ್ತಲೂ ತಿರುಗದೆ ಕನಿಷ್ಠ ಪ್ರಮಾಣದ ಸುತ್ತುಗಳು ಆಗುತ್ತಿದ್ದುವು. ಆದುದರಿಂದ ಅವುಗಳ ಉತ್ಪನ್ನ ಬಹಳ ಕಡಿಮೆ. ಅಂತಹ ಒಂದು ರಾಟೆಯಲ್ಲಿ ಮೂವತ್ತು ನಿಮಿಷಗಳ ಕಾಲ ನೂತೆ. ಅರ್ಧಗಂಟೆಯಲ್ಲಿ ನಾನು ಸರಾಸರಿ ತೆಗೆಯುವ ನೂಲು ೧೩೦ ಗಜ. ಆದರೆ ಬಂಗಾಳಿ ರಾಟೆಯಲ್ಲಿ ತೆಗೆದದ್ದು ಕೇವಲಮೂವತ್ತು ಗಜ. ಸರಿಯಾದ ಚರಖದಲ್ಲಿ ಮುಪ್ಪಟ್ಟು ಉತ್ಪನ್ನವನ್ನು ಹೆಚ್ಚಿಸಬಹುದು. ಒಂದು ಗಂಟೆ ಅವಧಿಯಲ್ಲಿ ಪಡೆಯುವ ವರಮಾನವನ್ನು ಮೂರುಪಟ್ಟು ಹೆಚ್ಚಿಸಲು ಸಾಧ್ಯವಾದರೆ ಅದರಿಂದ ವ್ಯಕ್ತಿಗಾಗಲೀ ದೇಶಕ್ಕಾಗಲೀ ಆಗುವ ಲಾಭ ಕಡಮೆಯೇನಲ್ಲ. ಬಂಗಾಳದ ರಾಟೆ ಉತ್ತಮ ದರ್ಜೆಯದು ಮತ್ತು ಅಗ್ಗವಾಗಿ ತಯಾರಾದುದು. ಖಾದಿ ಪ್ರತಿಷ್ಠಾನದ ರಾಟೆ ತುಂಬಾ ಚೆನ್ನಾಗಿದೆ. ಅದರ ಬೆಲೆ ಎರಡೂವರೆ ರೂಪಾಯಿ ಅಷ್ಟೆ. ಆ ರೀತಿಯ ರಾಟೆ ಅಷ್ಟು ಕಡಿಮೆ ಬೆಲೆಗೆ ಭಾರತದ ಮತ್ಯಾವ ಭಾಗದಲ್ಲೂ ದೊರೆಯುವುದಿಲ್ಲ. ಪ್ರತಿಷ್ಠಾನದ ಮಾದರಿಯ ರಾಟೆಯನ್ನು ಬಂಗಾಳವು ಬಳಸು

ವುದೆಂದು ನಾನು ಆಶಿಸುತ್ತೇನೆ. ಎಲ್ಲೆಲ್ಲಿ ರಾಟೆಯ ಕೆಲಸ ನಡೆಯುತ್ತಿದೆಯೊ ಅಲ್ಲಲ್ಲಿಗೆ ತಜ್ಞನೊಬ್ಬನು ಭೇಟಿ ಕೊಡುತ್ತಿರಬೇಕು; ರಾಟೆಗಳು ಸರಿಯಾದ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಒಂದುವೇಳೆ ಸರಿ ಮಾಡಲು ಸಾಧ್ಯವೇ ಆಗದಿರುವ ರಾಟೆಗಳನ್ನು ನಾಶಪಡಿಸಿಬಿಡಬೇಕು. ತಜ್ಞನು ತಾನು ಶಿಫಾರಸು ಮಾಡಬಹುದಾದ ರಾಟೆಯ ಉತ್ಕೃಷ್ಟತೆಯನ್ನು ಪ್ರದರ್ಶಿಸಿ ತೋರಿಸಬೇಕು. ಇಷ್ಟೆಲ್ಲ ಆಗಬೇಕಾದರೆ ಕೆಲಸವನ್ನು ಅರಿತ ಜನ, ಮಿಕ್ಕೆಲ್ಲ ಕಾರ್ಯಗಳನ್ನೂ ಬದಿಗೊತ್ತಿ, ತಮ್ಮ ಎಲ್ಲ ಕಾಲ ಮತ್ತು ಗಮನವನ್ನು ಖದ್ದರ್‌ನ ಕಾರ್ಯಕ್ಕಾಗಿ ವಿನಿಯೋಗಿಸಬೇಕು. ಅಂತಹ ಸಂಸ್ಥೆ ಖಾದಿ ಪ್ರತಿಷ್ಠಾನ; ಅಂತಹ ಪ್ರವೀಣ ಸತೀಶ್‌ದಾಸ್ ಗುಪ್ತ. ರಾಟೆಗಾಗಿ ಆತ ತನ್ನ ಸರ್ವಸ್ವವನ್ನೂ ತ್ಯಾಗಮಾಡಿದ್ದಾನೆ”.

ಎಲ್ಲೆಲ್ಲೂ ವಿದ್ಯಾರ್ಥಿಗಳು ಗಾಂಧಿಯವರನ್ನು ಆತ್ಮೀಯ ಮಾತುಕತೆಗೆ ಸೆಳೆದುಕೊಂಡುದು ಸುದೈವದ ಸಂಗತಿ. ಇಂಗ್ಲೆಂಡಿನ ಬಾಲಕನಿಗೆ ನೌಕಾ ಉದ್ಯಮದ ತರಪೇತಿ ಅಗತ್ಯವಾಗಿರುವಂತೆ, ಪೂರ್ವಬಂಗಾಳದ ಬಾಲಕನಿಗೆ ಈಜುವ ಮತ್ತು ದೋಣಿ ನಡೆಸುವ ಶಿಕ್ಷಣ ಮುಖ್ಯವಾಗಿರುವಂತೆ ಎಲ್ಲ ಭಾರತೀಯ ವಿದ್ಯಾರ್ಥಿಗಳಿಗೂ ನೂಲುವ ಶಿಕ್ಷಣ ಅಗತ್ಯ ಎಂದು ಚಿತ್ತಗಾಂಗ್‌ನಲ್ಲಿ ವಿದ್ಯಾರ್ಥಿಗಳಿಗೆ ಗಾಂಧಿ ತಿಳಿಸಿದರು. ಕೋಮಿಲ್ಲ ವಿದ್ಯಾರ್ಥಿಗಳು ರಾಷ್ಟ್ರೀಯ ಶಿಕ್ಷಣವೆಂದರೇನೆಂಬುದನ್ನು ಗಾಂಧಿಯವರಿಂದ ತಿಳಿದರು. “ನಿಮ್ಮ ದೇಶದ ಜನರ ಬಗೆಗೆ ನಿಮ್ಮಲ್ಲಿ ಭ್ರಾತೃತ್ವ ಭಾವನೆಯನ್ನು ಮೂಡಿಸುವ ಶಿಕ್ಷಣವೇ ರಾಷ್ಟ್ರೀಯ ಶಿಕ್ಷಣ. ನಿಮ್ಮ ದೇಶಬಾಂಧವರು ಕಷ್ಟದಲ್ಲಿದ್ದಾಗ ನಿಮ್ಮ ಮನಸ್ಸು ಕರಗುವಂತೆ ಹದಮಾಡುವ ಶಿಕ್ಷಣವೇ ರಾಷ್ಟ್ರೀಯ ಶಿಕ್ಷಣ. ರಾಟೆಯನ್ನು ಬಿಟ್ಟರೆ ಸಾರ್ವತ್ರಿಕವಾಗಿ ಉಪಯೋಗಕರವಾದ ವಸ್ತು ಬೇರೊಂದಿಲ್ಲ”.

ಡಾಕ್ಕಾದಲ್ಲಿ ವಿದ್ಯಾರ್ಥಿಯೊಬ್ಬನ ಮಾತು ಹೀಗಿತ್ತು. “ನೂಲುವುದರಿಂದ ಶಕ್ತಿ ಮತ್ತು ಕಾಲ, ಎರಡೂ ದುರ್ವ್ಯಯವಾಗುತ್ತದೆ. ನಿಮ್ಮ ಸಲಹೆಯಲ್ಲಿ ಶ್ರಮವಿಭಜನೆಯ ತತ್ವಕ್ಕೆ ಮನ್ನಣೆಯಿಲ್ಲ”. ವಿದ್ಯಾರ್ಥಿಯ ಈ ಮಾತಿನಿಂದ ಗಾಂಧಿ ಸ್ವಲ್ಪ ಪ್ರಚೋದಿತರಾದರು. “ದಿನವೆಲ್ಲಾ ನೂಲಿರೆಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆಯೆ? ಅದನ್ನು ಮುಖ್ಯ ಕಸುಬನ್ನಾಗಿ ಅಂಗೀಕರಿಸಿರೆಂದು ಹೇಳುತ್ತಿದ್ದೇನೆಯೇ? ಹಾಗಿದ್ದರೆ ಶ್ರಮ ವಿಭಜನೆ ತತ್ವದ ಉಲ್ಲಂಘನೆಯ ಮಾತು ಎಲ್ಲಿ ಬಂದಿತು? ನೀವು ಅನ್ನ ಪಾನಾದಿಗಳಲ್ಲಿ ಶ್ರಮ ವಿಭಜನೆ ಮಾಡುವಿರಾ? ನಾವು ಪ್ರತಿಯೊಬ್ಬರೂ ಅನ್ನ ಪಾನಾದಿಗಳನ್ನು ಸೇವಿಸಲೇ ಬೇಕು; ಬಟ್ಟೆಯನ್ನು ಧರಿಸಲೇಬೇಕು; ಹಾಗೆಯೇ ನಾವು ಪ್ರತಿಯೊಬ್ಬರೂ ನೂಲುವುದೂ ಅಗತ್ಯವೇ. ನಿಮ್ಮ ದೇಶದ ಜನರ ಬಗ್ಗೆ ಭ್ರಾತೃತ್ವ ಭಾವನೆ ತುಂಬಾ ಇದೆ ಎಂದು ಹೇಳಿಕೊಳ್ಳುತ್ತೀರಿ. ಮಾನವೀಯ ಕರುಣೆಯ ಸುಧೆಯಿಲ್ಲದಿದ್ದ ಮೇಲೆ ಅದೆಂತಹ ಭ್ರಾತೃಭಾವನೆ? ಹಸು ತನ್ನ ಕರುವಿಗೆ ತೋರುವ ಅಥವಾ ತಾಯಿ ತನ್ನ ಮಗುವಿಗೆ ತೋರುವ ಪ್ರೇಮದ ರೀತಿಯಲ್ಲಿ ನೀವು ತೋರುತ್ತೀರಾ? ತಮ್ಮ ಕಂದಗಳನ್ನು ಕಂಡ ತಕ್ಷಣ ಹಸುವಿನ ಕೆಚ್ಚಲಿನಿಂದಲೂ ತಾಯಿಯ ಸ್ತನಗಳಿಂದಲೂ

ಹಾಲು ಉಕ್ಕಿ ಬರುತ್ತದೆ. ಹೊಟ್ಟೆಗಿಲ್ಲದೆ ಕೃಶರಾಗಿರುವ ನಿಮ್ಮ ದೇಶೀಯರನ್ನು ಕಂಡಾಗ ನಿಮ್ಮ ಹೃದಯದಲ್ಲಿ ಪ್ರೇಮ ಉಕ್ಕಿಬರುತ್ತದೆಯೇ? ನನ್ನ ಸ್ನೇಹಿತರೆ, ನೀವು ನೂಲುವುದರ ಮೂಲಕ ಅವರ ಬಗ್ಗೆ ನಿಮ್ಮ ಪ್ರೇಮವನ್ನು ತೋರಿಸಬಹುದು. ನೀವು ನೂಲಿರಿ ಮತ್ತು ಅವರು ಸೋಮಾರಿತನವನ್ನು ತೊಡೆದು ಹಾಕುವಂತೆ ಮಾಡಿರಿ. ಒಬ್ಬ ಮಿತ್ರ ಜನಜಂಗುಳಿ ಇರುವೆಡೆ ಹೋಗಿ ಸುಂದರವಾಗಿ ಹಾಡುತ್ತಾನೆ; ಅವರ ಹೃದಯಗಳನ್ನು ಮೀಟುತ್ತಾನೆ. ಹಾಗೆ ಮಾಡುವುದು ಪರಿಶ್ರಮದ ದುರ್ವ್ಯಯವೆ? ಒಂದು ಪಕ್ಷ ಅವನು ಅವರ ಮುಂದೆ ನಿರರ್ಥಕವಾಗಿ 'ವಂದೇ ಮಾತರಂ' ಎಂದು ಅರಚಿಕೊಂಡರೆ ಅದು ವ್ಯರ್ಥ ಶ್ರಮವಾಗುತ್ತದೆ ನಿಜ. ನೂಲುವುದರ ಮಹತ್ವ ಇನ್ನೂ ಹೆಚ್ಚಿನದು. ಅದಕ್ಕೆ ಸ್ಪಷ್ಟ ಉದ್ದೇಶವಿದೆ; ಅದರಿಂದ ಉತ್ಪನ್ನವೂ ಹೆಚ್ಚುತ್ತದೆ. ಜನಸಾಮಾನ್ಯರೊಂದಿಗೆ ಮೈತ್ರಿಯನ್ನು ಬೆಸೆಯುವುದು ಅದರ ಉದ್ದೇಶ. ಯಾಂತ್ರಿಕ ಪರಿಶ್ರಮದಲ್ಲಿ ಸ್ವಲ್ಪ ಪರಿಣಾಮ ಇರುತ್ತದೆ; ಆದರೆ ಹೆಚ್ಚು ಶ್ರಮವೂ ಕೌಶಲವೂ ಇಲ್ಲದೆ ಎಲ್ಲರೂ ಮಾಡಬಹುದಾದದ್ದು ನೂಲುವ ಕೆಲಸ. ಕೋಟ್ಯಂತರ ಜನ ಕೈಗೊಳ್ಳಬಹುದಾದದ್ದು ಇದು: ನಮ್ಮಲ್ಲಿ ವರಿಷ್ಠರೂ ಸಾಮಾನ್ಯರೂ ಎಲ್ಲರೂ ಮಾಡುವಂತಹುದು. ವಿದ್ಯಾರ್ಥಿಗಳೆಲ್ಲರೂ ಇದನ್ನು ವಿಶೇಷತಃ ಮಾಡಲೇ ಬೇಕಾದ್ದು. ಏಕೆಂದರೆ ಅವರು ಜಗತ್ತಿನ ಸಾರಪ್ರಾಯರು. ಅವರ ಜೀವನ ಇನ್ನೂ ಆರಂಭವಾಗ ಬೇಕಾಗಿದೆ. ಅವರು ಹೊಸ ವಿಚಾರಗಳನ್ನು ಅಳವಡಿಸಿಕೊಳ್ಳಬಹುದು; ಬೇರೆಯವರಿಗೆ ಅದು ಅಸಾಧ್ಯ. ಮತ್ತು ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸುವ ಅವಕಾಶ ಅವರಿಗೆ ಇದೆ. ನೀವು ಬಹುಶಃ ಮನಸ್ಸಿನಲ್ಲಿ ಇಂಗ್ಲೆಂಡಿನ ಬಗ್ಗೆ ವಿಚಾರ ಮಾಡಬಹುದು; ಅಲ್ಲಿನ ವ್ಯಾಪಕವಾದ ಯಂತ್ರ ವ್ಯವಸ್ಥೆ ನಿಮ್ಮ ಮನಸ್ಸಿಗೆ ಬರಬಹುದು. ಬೇರೆ ರಾಷ್ಟ್ರಗಳನ್ನು ಶೋಷಿಸಿ ಅದು ಜೀವಿಸುತ್ತಿದೆ. ಅದರಿಂದ ಆರ್ಥಿಕ ಸಂಪತ್ತು ಹೊರಕ್ಕೆ ಕೊಚ್ಚಿ ಹೋಗುತ್ತದೆ; ಬ್ರಿಟಿಷರು ತಮ್ಮ ಸ್ವಂತ ಸಿಬ್ಬಂದಿ ಖರ್ಚಿಗಾಗಿ ನಮ್ಮ ದೇಶದಿಂದ ತೆಗೆದುಕೊಂಡು ಹೋಗುವ ಸಂಪತ್ತು ಮತ್ತಿತರ ಬಾಬುಗಳ ವಿಚಾರದಲ್ಲಿ ದಾದಾಭಾಯಿ ನವರೋಜಿ ನಮ್ಮ ಕಣ್ಣು ತೆರೆಯಿಸಿದರು; ಅವುಗಳಿಗಿಂತ ಹೆಚ್ಚು ಪ್ರಮಾದಕರ ವಾದುದು ಈ ಆರ್ಥಿಕ ಕೊಳ್ಳೆ. ಈ ಅಗೋಚರ ಕೊಳ್ಳೆಯನ್ನು ದಾದಾಭಾಯ್ ರವರೂ ಗುರುತಿಸಲಿಲ್ಲ. ನಾನು ಅವರ ಶಿಷ್ಯನಾಗಿ ಅವರ ಮಾರ್ಗದಲ್ಲೇ ಕಾರ್ಯ ನಿರತನಾದ್ದರಿಂದ ನಿಗೂಢವಾದ ಈ ಕೊಳ್ಳೆಯ ಸಂಗತಿಯನ್ನು ಕಂಡುಕೊಂಡೆ. ಇದರಿಂದಾಗಿ ನಮ್ಮ ದೇಶ ಸೋಮಾರಿಗಳ ರಾಷ್ಟ್ರವಾಯಿತು. ಎಲ್ಲಕ್ಕಿಂತಲೂ ಅತ್ಯಂತ ಮಾರಕವಾದ ಸಂಗತಿ ಇದು".

ಸಾಮಾನ್ಯವಾಗಿ ಅವರ ಭಾಷಣಗಳೆಲ್ಲ ಹಿಂದೀ ಭಾಷೆಯಲ್ಲಿಯೇ ಇರುತ್ತಿದ್ದುವು. ಇಂಗ್ಲೀಷ್ ಬಗ್ಗೆ 'ಬಂಗಾಳಿಗಳ ಶೋಚನೀಯ 'ವ್ಯಾಮೋಹ'ವನ್ನು ಪರಿಗಣಿಸಿ ಕೆಲವು ಸಭೆಗಳಲ್ಲಿ ಇಂಗ್ಲೀಷಿನಲ್ಲೂ ಮಾತನಾಡುತ್ತಿದ್ದರು. "ಭಾರತದ ದಾಸ್ಯ, ಅತ್ಯಂ"ತ ಒರಟು ಖದ್ದರ್‌ಗಿಂತ ಒರಟಾದುದೆಂದು ತಿಳಿಯಿರಿ; ಭಾರತದ ದಿವಾಳಿತನ ಅತ್ಯಂತ

ಒರಟಾದ ಚಿತ್ತಗಾಂಗ್ ಖದ್ದರ್‌ಗಿಂತ ಅತಿ ಒರಟು ಎಂಬುದನ್ನು ಮನಗಾಣಿರಿ" ಎಂದು ಚಿತ್ತಗಾಂಗಿನಲ್ಲಿ ಕಳಕಳಿಯಿಂದ ಮನವಿ ಮಾಡಿದರು. ಡಾಕ್ಕಾದಲ್ಲಿ ಅರ್ಪಿಸಲಾದ ಮಾನಪತ್ರಕ್ಕೆ ಉತ್ತರ ಕೊಡುತ್ತಾ "ನಾನು ಇದಕ್ಕೆಲ್ಲ ಬೆಲೆ ಕೊಡುತ್ತೇನೆ; ಆದರೆ ಹೃದಯದ ಅಲಿಖಿತ ಭಾಷೆಗೆ ಇನ್ನೂ ಹೆಚ್ಚಿನ ಬೆಲೆ ಕಟ್ಟುತ್ತೇನೆ. ನನ್ನ ಸಂದೇಶಕ್ಕೆ ನಿಮ್ಮ ಹೃದಯದಲ್ಲಿ ಸ್ವಲ್ಪ ಜಾಗವಿರಲಿ" ಎಂದು ಹೇಳಿದರು.

ಆಲಿ ಸಹೋದರರು ತಮ್ಮ ಸಂಗಡ ಇಲ್ಲದಿರುವುದನ್ನು ಹೋದೆಡೆಯಲ್ಲೆಲ್ಲಾ ಪ್ರಸ್ತಾಪಿಸುತ್ತಿದ್ದರು. ಮೈಮೆನ್‌ಸಿಂಗ್‌ನಲ್ಲಿ ಅವರಿಗೆ ತಮ್ಮ ಭಾವನೆಯನ್ನು ತಡೆದು ಕೊಳ್ಳಲಾಗಲಿಲ್ಲ; ಗದ್ಗದ ಕಂಠದಿಂದ ಈ ಮಾತುಗಳನ್ನಾಡಿದರು. "ಆಲಿ ಸಹೋದರರ ಪೈಕಿ ಒಬ್ಬರಾದರೂ ಸಂಗಡ ಇಲ್ಲದೆ ನಾನು ಒಬ್ಬಂಟಿಗನಾಗಿ ಬಿಟ್ಟಿದ್ದೇನೆ. ಅವರು ಜೊತೆಗಿದ್ದರೆ ಸುರಕ್ಷಿತನೆಂಬ ಭಾವನೆ ನನ್ನಲ್ಲಿರುತ್ತಿತ್ತು. ಅವರ ಮೂಲಕ ಸುಲಭವಾಗಿ ಮುಸ್ಲಿಮರ ಹೃದಯವನ್ನು ಮುಟ್ಟುತ್ತಿದ್ದೆ". ಅದೇ ಭಾಷಣದಲ್ಲಿ ಹಿಂದೂ–ಮುಸ್ಲಿಂ ಸಮಸ್ಯೆಯನ್ನು ಪ್ರಧಾನವಾಗಿ ಪ್ರಸ್ತಾಪಿಸಿದರು. ಹಿಂದೂಗಳೂ, ಮುಸ್ಲಿಮರೂ ತಮ್ಮ ತಮ್ಮಲ್ಲಿ ಹೊಡೆದಾಡುವುದನ್ನು ತೀಕ್ಷ್ಣವಾಗಿ ಖಂಡಿಸಿದರು; "ಅವರುಗಳ ಹೋರಾಟ ಅಧಿಕಾರ ಸ್ಥಾನಗಳಿಗಾಗಿಯೂ ಅಲ್ಲ; ಕೇವಲ ಕಲ್ಲುಗಳಿಗಾಗಿ. ನಾಯಿ ಮಾಂಸದ ತುಂಡನ್ನು ಬಿಟ್ಟು ಅದರ ನೆರಳಿಗಾಗಿ ಕಚ್ಚಾಡುವಂತೆ ಇವರೂ ಕಚ್ಚಾಡು ತ್ತಿದ್ದಾರೆ" ಎಂದು ರೋಷಾವೇಶದಿಂದ ಹೇಳಿದರು. ಈ ಸಮಸ್ಯೆಗೆ ಪೂರ್ಣ ಶರಣಾ ಗತಿಯೇ ತಕ್ಕುದೆಂಬ ಮಾತನ್ನು ಪುನಃ ಒತ್ತಿ ಹೇಳಿದರು. "ಶರಣಾಗತಿ ಎಂದರೆ ಪ್ರಧಾನವಾದ ಮೌಲಿಕ ವಿಷಯಗಳನ್ನು ಬಿಟ್ಟು ಕೊಡಬೇಕೆಂದರ್ಥವಲ್ಲ; ಅಪ್ರಧಾನ ವಾದ ವಿಷಯಗಳನ್ನು ಬಿಟ್ಟು ಕೊಡುವುದಷ್ಟೇ" ಎಂದರು. ಹಿಂದೂಗಳು ಮತ್ತು ಮುಸಲ್ಮಾನರು ಇಬ್ಬರೂ ತಮ್ಮ ಸಿದ್ಧಾಂತಕ್ಕೆ ಅನ್ವಯವಾಗುವ ಇನ್ನೊಂದು ಸೂತ್ರ ವನ್ನು ಅಳವಡಿಸಿಕೊಳ್ಳಬೇಕು–ಒಬ್ಬರನ್ನು ಬಿಟ್ಟು ಇನ್ನೊಬ್ಬರು ಇರಲಾರರೆಂದರು.

ಬೊಗುರಾದಲ್ಲಿ ಏಳು ವರ್ಷದ ಮುಸ್ಲಿಂ ಬಾಲಕಿಯೊಬ್ಬಳು ಗಂಟೆಗೆ ಐನೂರು ಗಜಕ್ಕೂ ಮೀರಿ ನೂಲು ತೆಗೆಯುತ್ತಿದ್ದುದನ್ನು ಕಂಡು ಗಾಂಧಿ ಆನಂದ ಪಟ್ಟರು. ಅವರು ಆ ಹುಡುಗಿಯ ಮುಂದೆ ಬಂದು ನಿಂತುಕೊಂಡರೂ ಅವಳು ತಲೆ ಎತ್ತಿ ನೋಡಲೇ ಇಲ್ಲ. ಅವಳ ಕಿವಿ ಹಿಡಿದು ಕೇಳಿದರು. "ಮಹಾತ್ಮಾ ಗಾಂಧಿಯವರು ನಿನಗೆ ಗೊತ್ತೇ?" ಎಂದು. ನೂಲುತ್ತಿದ್ದ ಮುಸಲ್ಮಾನರ ಪೈಕಿ ಕೆಲವು ಮಂದಿ ಮಹಿಳೆ ಯರಿಗೆ ಎಂಬತ್ತು ವರ್ಷ ವಯಸ್ಸಾಗಿತ್ತು; ರಚನಾತ್ಮಕ ಕಾರ್ಯ ಮಾಡುತ್ತಲೇ ಕಣ್ಣಿನ ದೃಷ್ಟಿ ಕಳೆದುಕೊಂಡಿದ್ದ ಕೆಲವು ಜನರಿಗೆ ಮಹಾತ್ಮಾ ಗಾಂಧಿ ಯಾರೆಂಬುದೇ ಗೊತ್ತಿರಲಿಲ್ಲ. ಮನೆಯಲ್ಲೇ ಇದ್ದುಕೊಂಡು ರಾಟೆಯಿಂದ ತಿಂಗಳಿಗೆ ಎಂಟು ರೂಪಾಯಿ ಸಂಪಾದನೆ ಮಾಡುತ್ತಿರುವುದಾಗಿ ಒಬ್ಬ ಮಹಿಳೆ ಹೆಮ್ಮೆಯಿಂದ ಹೇಳಿದಳು.

ಬಂಗಾಳದ ಮೇಲೆ ಗಾಂಧಿಯವರು ತುಂಬಾ ಪ್ರಭಾವ ಬೀರಿದರು. ಹೊಸ ಸದಸ್ಯತ್ವದ ನಿಯಮದ ಮೇರೆಗೆ ಬಂಗಾಳದಲ್ಲಿ ಕಾಂಗ್ರೆಸ್ಸಿನ ಸದಸ್ಯತ್ವ ಅತ್ಯಂತ ಹೆಚ್ಚಿನ

ದಾಗಿತ್ತು. ಬಡರೈತನಿಂದ ಹಿಡಿದು ಉಚ್ಚ ಬುದ್ಧಿಜೀವಿಯ ವರೆಗೆ, ಎಲ್ಲರೂ ರಾಟೆಯ ಸಂದೇಶವನ್ನು ಮನಗಂಡಿದ್ದರು. ಡಾ. ಪಿ.ಸಿ.ರೇ ಅವರಿಗೆ ವಿಜ್ಞಾನ ಮತ್ತು ಖಾದಿ ಎರಡರಲ್ಲೂ ಸಮಾನ ಪ್ರೇಮವಿತ್ತು. ಪಿ. ಸಿ. ಘೋಷ್ ಮತ್ತು ಸತೀಶ್‌ದಾಸ್ ಗುಪ್ತ ರಂತಹ ವಿಜ್ಞಾನಿಗಳು, ಖಾದಿ ಕೆಲಸವನ್ನು ಸಂಘಟಿಸಿದರು. ಖಾದಿ ಪ್ರತಿಷ್ಠಾನದಂತಹ ಸಂಸ್ಥೆಗಳು ಸ್ಥಾಪಿತವಾದುವು.

ಗಾಂಧಿಯವರು ಸಮಾಜದ ಎಲ್ಲ ವರ್ಗಗಳ ಜನರ ಮನಸ್ಸನ್ನು ಸೂರೆಗೊಂಡರು. "ನಿನ್ನ ಸಹೋದರನ ಮುಂದೆ ಘರದಾ ಇಲ್ಲ" ಎಂದು ಗಾಂಧಿ ಮೃದುವಾಗಿ ಮುಸ್ಲಿಂ ಮಹಿಳೆಯೋರ್ವಳಿಗೆ ಹೇಳಿದರು. ಆಗ ಅವಳು ತಕ್ಷಣ ತನ್ನ ಮುಸುಕನ್ನುತೆಗೆದಳು. ಮಾದರಿಪುರದಲ್ಲಿ ಮಹಿಳೆಯರ ಸಭೆ ಸೇರಿತ್ತು; ಇನ್ನೂರು ಚರಖಾಗಳು ತಿರುಗು ತ್ತಿದ್ದುವು. ಸುರೇಶ ಬಾಬುಗಳ ಹೆಂಡತಿ ಮಾನಪತ್ರ ಓದುತ್ತಿದ್ದಾಗ ಬೆಳಕು ತೋರಲು ಆತ ಲಾಟೀನು ಎತ್ತಿ ಹಿಡಿದಿದ್ದರು. ಲಾಟೀನು ಸಾಕಷ್ಟು ಸಮೀಪದಲ್ಲಿರಲಿಲ್ಲ. ಇದನ್ನು ನೋಡಿ ಗಾಂಧಿಯವರು ಲಾಟೀನನ್ನು ಕಿತ್ತುಕೊಂಡು ತಾವೇ ಅದನ್ನು ಹಿಡಿದು ನಿಂತರು. ಗಾಂಧಿಯವರು ತಮ್ಮ ಭಾಷಣದಲ್ಲಿ ಪತಿತ ಮಹಿಳೆಯರ ಬಗೆಗೆ ಪ್ರಸ್ತಾಪಿ ಸಿದರು. ಅವರ ಪೈಕಿ ಕೆಲವರು ಮೂಲೆಯಲ್ಲಿ ನೂಲುತ್ತಾ ಕುಳಿತಿದ್ದರು. ಅಲ್ಲಿದ್ದ ಸ್ವಯಂಸೇವಕರನ್ನುದ್ದೇಶಿಸಿ ಹೇಳಿದರು. "ಈ ಪತಿತ ಸೋದರಿಯರನ್ನು ರಕ್ಷಿಸುವ ಕೆಲಸವನ್ನು ಕೈಗೊಳ್ಳಿ. ಮಹಿಳೆಯರ ಸ್ವಯಂಸೇವಕಸಂಸ್ಥೆಯನ್ನು ಸ್ಥಾಪಿಸಿ ಅವರ ಮೂಲಕ ಪತಿತ ಮಹಿಳೆಯರ ಪುನರ್ ವ್ಯವಸ್ಥೆಗೆ ಕೆಲಸಮಾಡಿರಿ. 'ಮಾದರಿಪುರವು ಕ್ರಾಂತಿಕಾರೀಕೇಂದ್ರಗಳಲ್ಲಿ ಮುಖ್ಯವಾಗಿದೆಯೆಂದು ಸರ್ಕಾರ ಭಾವಿಸಿದೆ' ಎಂಬುದಾಗಿ ನಿಮ್ಮ ಮಾನಪತ್ರದಲ್ಲಿ ತಿಳಿಸಿದ್ದೀರಿ. ಈ ದುಷ್ಟ ಪದ್ಧತಿಯನ್ನು ತಡೆಗಟ್ಟಲು ಭಾರತೀಯ ಮಹಿಳೆಯರಲ್ಲಿ ಕ್ರಾಂತಿಯೇ ಆಗಬೇಕಾಗಿದೆ. ಅಂತಹ ಕ್ರಾಂತಿಗೆ ಮಾದರಿಪುರ ಅಸ್ತಿಭಾರ ಹಾಕಲಿ" ಎಂದರು. ನೌಖಾಲಿಯಲ್ಲಿ ವಯಸ್ಸಾದ ವೇಶ್ಯೆಯರು ನೂಲುವುದರಿಂದಲೇ ಜೀವನವನ್ನು ನಿರ್ವಹಿಸುತ್ತಿದ್ದರು. ಅವರಲ್ಲಿ ಕೆಲವರು ತಮ್ಮ ಕಸುಬನ್ನು ಬಿಟ್ಟಿರ ದಿದ್ದರೂ ರಾಟೆ ತಿರುಗಿಸುವುದನ್ನು ಆರಂಭಿಸಿದ್ದರು.

ಗಾಂಧಿ ಅಲ್ಲಿಂದ ನಿರ್ಗಮಿಸಿದುದನ್ನು ಕಂಡ ಚಿಟ್ಟಗಾಂಗಿನ ಜವಳಿವರ್ತಕರು ವಿಶೇಷ ಸಭೆಯನ್ನು ಬೇರೊಂದೆಡೆ ಏರ್ಪಡಿಸಿ ಗಾಂಧಿಯವರಿಗೆ ಮಾನಪತ್ರ ಅರ್ಪಿಸಿದರು. ಗಾಂಧಿಯವರು ಅದಕ್ಕೆ ಉತ್ತರವಾಗಿ "ವರ್ತಕರಿಂದಲೇ ಭಾರತವು ತನ್ನ ಸ್ವಾತಂತ್ರ್ಯ ವನ್ನು ಕಳೆದುಕೊಂಡಿತೆಂದು ನನ್ನ ಖಚಿತಾಭಿಪ್ರಾಯ. ಅದನ್ನು ನಾವು ಅವರ ಮೂಲಕವೇ ಪಡೆದುಕೊಳ್ಳುತ್ತೇವೆಂಬುದೂ ಅಷ್ಟೇ ಖಚಿತವಾದ ವಿಷಯ. ನಮ್ಮ ವರ್ತಕರಿಂದ ಪೂರ್ಣ ಸಹಕಾರ ದೊರೆತಾಗ ಸ್ವರಾಜ್ಯ ತಾನೇ ತಾನಾಗಿ ಬರುತ್ತದೆ" ಎಂದು ಹೇಳಿದರು. ಮಹಜನ ಹಟ್ ಮತ್ತು ಮೈಮೆನ್‌ಸಿಂಗ್‌ನಲ್ಲಿ ಭೇಟಿಯಾದ ಜಮೀನ್ದಾರರುಗಳೊಡನೆ ಮಾತನಾಡುತ್ತಾ "ನೀವು ಸ್ವಂತವಾಗಿ ಅಗಸನನ್ನು ಗೊತ್ತು ಮಾಡಿಕೊಳ್ಳುವಂತೆ

ನೇಯ್ಗೆಯುವವನನ್ನೂ ಏಕೆ ಗೊತ್ತು ಮಾಡಿಕೊಳ್ಳಬಾರದು? ಉತ್ತಮವಾದ ಹಾಗೂ ಆಕರ್ಷಕವಾದ ನೂಲನ್ನು ಒದಗಿಸಲು ನಿಮ್ಮ ಕಡೆ ಉತ್ಕೃಷ್ಟವಾಗಿ ನೂಲುವವರು ಇದ್ದಾರೆ" ಎಂದರು.

ಈ ಪ್ರವಾಸದ ಸಮಯದಲ್ಲಿ ಅವರು ಶಾಂತಿನಿಕೇತನಕ್ಕೆ ನೀಡಿದ ಭೇಟಿ ಹೆಚ್ಚು ಮಹತ್ವದ್ದಾಗಿತ್ತು. ಪಿತೃಗೃಹಕ್ಕೆ ಯಾತ್ರೆ ಮಾಡುತ್ತಿರುವುದಾಗಿ ಗಾಂಧಿ ವರ್ಣಿಸಿದರು. ಅಲ್ಲಿ ರವೀಂದ್ರನಾಥ ಠಾಕೂರರ ಸಹೋದರ ಬರೋದಾದಾ ಅವರ ಪ್ರೇಮಪೂರ್ಣ ಸ್ವಾಗತ ಅವರಿಗೆ ಕಾದಿತ್ತು. ಕವಿ ರವೀಂದ್ರನಾಥ ಠಾಕೂರರೊಡನೆ ದೀರ್ಘ ಮಾತುಕತೆ ನಡೆಸಿದರು. ಆಗ ತಾನೇ ದೀರ್ಘಪ್ರವಾಸ ಮುಗಿಸಿ ವಿದೇಶದಿಂದ ವಾಪಸು ಬಂದಿದ್ದ ಕವಿವರ್ಯರು ಸಹಜವಾಗಿಯೇ ದೇಶದ ಸ್ಥಿತಿಗತಿಗಳನ್ನು ಖುದ್ದಾಗಿ ತಿಳಿಯಬಯಸಿದ್ದರು. ಅಲ್ಲದೆ ಅವರು ಪುನಃ ವಿದೇಶ ಪ್ರವಾಸ ಹೋಗುವವರಿದ್ದರು. ಬರೋದಾದಾ ರವರೊಡನೆ ಸಮಾಗಮ ಹೃದಯಸ್ಪರ್ಶಿಯಾಗಿತ್ತು. ಮೂವತ್ತೈದು ವರ್ಷಗಳಹಿಂದೆ ದಾದಾಭಾಯ್‌ರವರ ಪಾದದಡಿ ಕುಳಿತಿದ್ದ ರೀತಿಯಲ್ಲೇ ಈಗ ಬರೋದಾದಾರವರ ಬಳಿ ಕುಳಿತಿದ್ದರು. ಗಾಂಧಿಯವರು ಕುರ್ಚಿಯ ಮೇಲೆ ಕುಳಿತುಕೊಳ್ಳಲೇಬೇಕೆಂದು ಬರೋದಾದಾ ಒತ್ತಾಯಪಡಿಸಿದಾಗ "ಇತರರ ದೃಷ್ಟಿಯಲ್ಲಿ ನಾನೇನು ಬೇಕಾದರೂ ಆಗಿರಬಹುದು; ಆದರೆ ಈ ಸ್ಥಳದಲ್ಲಾದರೂ ನಾನು ಉತ್ತುಂಗ ಶಿಖರದಿಂದ ಕೆಳಗಿಳಿಯ ಬೇಕು. ಮಹಾತ್ಮ ಪದವಿಯನ್ನು ಬಿಟ್ಟುಕೊಡಬೇಕು" ಎಂದವರು ಹೇಳಿದರು. ಮೂರು ದಿನಗಳ ಪರ್ಯಂತ ಬರೋದಾದಾರ ಬಿಚ್ಚು ಮಾತುಗಳನ್ನು ಗಾಂಧಿ ಕೇಳಿದರು. "ಹಿಂಸಾಗ್ನಿ ಎಲ್ಲೆಲ್ಲೂ ಹಬ್ಬಿ ಎಲ್ಲವನ್ನೂ ದಹಿಸಿದರೂ ನೀವು ಮಾತ್ರ –ತನ್ನ ಬೂದಿ ಯಿಂದಲೇ ಮತ್ತೆ ಮೇಲೆದ್ದು ಬರುವ ದೃಷ್ಟಾಂತ ಕತೆಯ ಫೀನಿಕ್ಸ್ ಪಕ್ಷಿಯಂತೆ– ಯಾವ ಅಪಾಯವೂ ಘಾಸಿಯೂ ಇಲ್ಲದೆ ನಿಲ್ಲುತ್ತೀರೆಂದು ನಾನು ದೃಢವಾಗಿ ನಂಬಿದ್ದೇನೆ. ಬುದ್ಧ ೨೫೦೦ ವರ್ಷಗಳ ಹಿಂದೆ ಬದುಕಿದ್ದ. ಕಾಲಾಂತರದಲ್ಲಿ ಬೌದ್ಧ ಮತವು ನಮ್ಮ ನಾಡಿನಿಂದ ಕಣ್ಮರೆಯಾಯಿತು. ಆದರೂ ತಲತಲಾಂತರದಿಂದ ನಮ್ಮ ಅಂತರ್ಗತವಾಗಿರುವ ಅಹಿಂಸೆ ಬುದ್ಧನ ಬಳುವಳಿ. ಅದರಲ್ಲಿ ನಂಬಿಕೆಯಿಟ್ಟು ಕಾರ್ಯವೆಸಗಿಸಿರಿ" ಎಂದರು.

"ನೀವು ನನ್ನ ನಿರಾಶೆಯನ್ನು ಹೋಗಲಾಡಿಸಿದಿರಿ" ಎಂದು ಬರೋದಾದಾ ರವರು ತಿಳಿಸಿದರು. ಅವರು ಮುಂದುವರೆದು ಹೀಗೆ ಹೇಳಿದರು. "ನನ್ನ ಪಯಣದ ದುರ್ಗಮ ಹಾದಿಯಲ್ಲಿ ಇನ್ನು ಮುಂದೂ ಕಾಣಬಹುದಾದ ಮರುಭೂಮಿಯನ್ನು ಸುರಕ್ಷಿತವಾಗಿ ದಾಟಿಹೋಗಲು ಈ ದಿನದ ನೆನಪುಗಳು ಸಹಾಯಕವಾಗುವುವೆಂದು ನಂಬುತ್ತೇನೆ. ನಿಮ್ಮನ್ನು ವಿರೋಧಿಸುವವರೆಲ್ಲ ಕಾಲ ಪ್ರವಾಹದಲ್ಲಿ ನೀರ್ಗುಳ್ಳೆಗಳಂತೆ ಮಾಯವಾಗಿ ಬಿಡುತ್ತಾರೆ. ಸತ್ಯಕ್ಕೆ ಜಯ ಖಂಡಿತ"

# ದೇಶಬಂಧು ಚಿರಾಯುವಾಗಲಿ

೧೯೨೫

ದಾಸ್‌ರವರ ಒತ್ತಾಯಪೂರ್ವಕ ಮನವಿಯನ್ನು ಪುರಸ್ಕರಿಸಿ ಗಾಂಧಿಯವರು ಐದು ದಿನಗಳ ಕಾಲ ಡಾರ್ಜಲಿಂಗ್‌ನಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಸಮ್ಮತಿಸಿದರು. ಜೂನ್ ೪ರಂದು ದೇಶಬಂಧು ಅವರ ನಿವಾಸ ಆಕರ್ಷಣೆಯ ಕೇಂದ್ರವಾಯಿತು. ಆ ಗಿರಿಧಾಮದಲ್ಲಿ ಚರಖಗಳ ನಿನಾದ ಮೊಳಗಿತು. ಮನೆಗಳಲ್ಲಿದ್ದ ಮಹಿಳೆಯರು ನೂಲುತ್ತಿದ್ದರು. ಗಾಂಧಿಯವರನ್ನು ನೋಡಲು ಬಂದವರೂ ಪ್ರಭಾವಿತರಾಗಿ ರಾಟೆಯನ್ನು ಕೈಗೆತ್ತಿಕೊಂಡರು. ಕೆಲವರಂತೂ ಇದನ್ನು ಹೊಸದಾಗಿಯೇ ಕಲಿತರು. ಅಲ್ಲಿ ನಡೆಯುತ್ತಿದ್ದ ಸಂಭಾಷಣೆ ಸಾಮಾನ್ಯವಾಗಿ ಚರಖಕ್ಕೆ ಸಂಬಂಧಿಸಿತ್ತು.

ಗಾಂಧಿಯವರ ಭಾವಚಿತ್ರ ತೆಗೆಯುವವರು ಮತ್ತು ಅವರ ಹಸ್ತಾಕ್ಷರ ಕೇಳುವವರು ತುಂಬಾ ಜನ ಇದ್ದರು. ಇವರೊಂದಿಗೆ ತಕ್ಕ ರೀತಿಯಲ್ಲಿ ವ್ಯವಹರಿಸಲು ಗಾಂಧೀಜಿ ಒಂದು ಉಪಾಯ ಮಾಡಿದರು. ಇದಕ್ಕೆಲ್ಲ ಬೆಲೆ ತೆರಬೇಕೆಂದರು. "ನಾನು ಗೊತ್ತುಮಾಡುವ ಬೆಲೆ ಅಷ್ಟೇನು ದುಬಾರಿಯಲ್ಲ; ದೇಶಕ್ಕಾಗಿ ಪ್ರತಿದಿನವೂ ಅರ್ಧ ಗಂಟೆ ನೂಲಬೇಕು; ಖಾದಿ ಧರಿಸುವ ಪ್ರತಿಜ್ಞೆ ತೊಡಬೇಕು ಎಂದರು. ಹೀಗೆ ಹೇಳುತ್ತಿದ್ದ ಹಾಗೆಯೇ ಕೆಲವರು ಹಿಮ್ಮೆಟ್ಟಿದರು; ಮತ್ತೆ ಕೆಲವರು ಸ್ವಲ್ಪ ಸಮಯ ತೆಗೆದುಕೊಂಡು ಯೋಚಿಸಬಯಸಿದರು; ಹಲವರು ಒಪ್ಪಿಕೊಂಡರು.

ಹಸ್ತಾಕ್ಷರ ಕೋರಿ ಬಂದಿದ್ದ ಓರ್ವ ತರುಣಿ ತನ್ನ ಪುಸ್ತಕದೊಂದಿಗೆ ವಾಪಸು ಹೊರಟು ಹೋಗಿದ್ದಳು. ಮಾರನೆಯದಿನ ಆಕೆ ಪುನಃ ಬಂದು ಷರತ್ತನ್ನು ಕಾರ್ಯಗತ ಮಾಡುವುದಾಗಿ ಪ್ರತಿಜ್ಞೆಮಾಡಿದಳು. "ನಿನಗೆ ವಂದನೆಗಳು" ಎಂದು ಹೇಳಿ "ಇಲ್ಲಿದೆ ನನ್ನ ಹಸ್ತಾಕ್ಷರ" ಎಂದರು. ಅವಳ ಪುಸ್ತಕದಲ್ಲಿ ಹೀಗೆ ಬರೆದರು. "ಆತುರದಲ್ಲಿ ಯಾವಾಗಲೂ ಆಶ್ವಾಸನೆ ನೀಡಬೇಡ. ಒಮ್ಮೆ ಪ್ರತಿಜ್ಞೆ ಮಾಡಿದೆಯೆಂದರೆ, ನಿನ್ನ ಪ್ರಾಣ ಹೋದರೂ ಸರಿಯೆ, ಅದನ್ನು ಕಾರ್ಯಗತ ಮಾಡಬೇಕು".

ಮಾಮೂಲಿನಂತೆ ಸಭೆ ಸಮಾರಂಭಗಳು ನಡೆದುವು. ನೀಟುಗಾರ ಜನರು ಖದ್ದರ್ ಉಡುಪು ಧರಿಸಿ ಸಭೆಗಳಿಗೆ ಬಂದಿದ್ದರು. ಕೆಲವು ಪಾದ್ರಿಗಳೊಂದಿಗೆ ನಡೆಸಿದ ಸಭೆಯು ಮಹತ್ವಪೂರ್ಣದ್ದಾಗಿತ್ತು. ಅವರುಗಳಲ್ಲಿ ಸುಮಾರು ನೂರು ಮಂದಿ, ಗಾಂಧಿಯವರನ್ನು ದೀನದಲಿತರ ಉದ್ಧಾರಕರೆಂದೂ ಭಾರತದ ಶ್ರೇಷ್ಠ ಸೇವಕರೆಂದೂ ಸಂಕಷ್ಟದಲ್ಲಿರುವ ಮಾನವರ ಮಹಾಸೇವಕರೆಂದೂ ವರ್ಣಿಸಿ ಸ್ವಾಗತಿಸಿದರು. "ಕ್ರಿಸ್ತನ ಸೇವೆಯನ್ನು ಮತ್ತಷ್ಟು ಉತ್ತಮವಾಗಿ ಮಾಡುವುದು ಹೇಗೆ?" ಎಂಬುದು ಚರ್ಚೆಯ ವಿಷಯವಾಗಿತ್ತು. ಈ ವಿಷಯವು ಗಾಂಧಿಯವರ ಹೃದಯಾಂತರಾಳವನ್ನು ಮುಟ್ಟಿತು. ಅಲ್ಲಿಂದಲೇ ಅವರ ಮಾತುಗಳು ಮೂಡಿಬಂದುವು.

ಗಾಂಧಿಯವರು ಮೊದಲು ತಮ್ಮ ಜೀವನದ ಧ್ಯೇಯವನ್ನು ವಿವರಿಸಿದರು. "ನನ್ನ ದೃಷ್ಟಿಯಲ್ಲಿ ಧರ್ಮರಹಿತವಾದ ರಾಜಕೀಯ, ಕಸಕ್ಕೆ ಸಮಾನವಾದದ್ದು. ಆದುದರಿಂದ ಅದು ತ್ಯಾಜ್ಯ. ರಾಜಕಾರಣರಾಷ್ಟ್ರಗಳಿಗೆ ಸಂಬಂಧಿಸಿದ್ದು; ಯಾವುದು ರಾಷ್ಟ್ರಗಳ ಕಲ್ಯಾಣಕ್ಕೆ ಸಂಬಂಧಿಸಿದ್ದೊ ಅದು ಧರ್ಮನಿಷ್ಠನಾದ ಮನುಷ್ಯನಿಗೆ, ಅಂದರೆ ದೇವರ ಹಾಗೂ ಸತ್ಯದ ಅನ್ವೇಷಕನಿಗೆ ಸಂಬಂಧಿಸಿದ ವಿಷಯಗಳಲ್ಲಿ ಒಂದಾಗಿರುತ್ತದೆ. ನನಗಾದರೋ, ದೇವರೆಂದರೂ ಒಂದೇ ಸತ್ಯವೆಂದರೂ ಒಂದೇ. ಒಂದು ಪಕ್ಷ ಯಾರಾದರೂ ದೇವರನ್ನು ಅಸತ್ಯದ ಮೂರ್ತಿಯೆಂದೂ ಹಿಂಸೆಯ ಮೂರ್ತಿಯೆಂದೂ ಹೇಳಿದರೆ ಆ ದೇವರನ್ನು ನಾನು ಪೂಜಿಸುವುದಿಲ್ಲ. ಆದುದರಿಂದ ರಾಜಕಾರಣದಲ್ಲಿಯೂ ಭಗವಂತನ ಸಾಮ್ರಾಜ್ಯವನ್ನು ಸೃಜಿಸಬೇಕು" ಎಂದು ಹೇಳಿದರು.

ತಮ್ಮ ಜೀವನದ ಧ್ಯೇಯವನ್ನು ಸ್ಪಷ್ಟಪಡಿಸಿದ ಮೇಲೆ ಚರ್ಚೆಯ ಮುಖ್ಯ ವಿಷಯಕ್ಕೆ ಬಂದರು. ೧೯೧೬ರಲ್ಲಿ ಮದ್ರಾಸಿನ ಕ್ರೈಸ್ತ ಸಂಸ್ಥೆಯಲ್ಲಿ ತಾವು ಮಾಡಿದ ಭಾಷಣವನ್ನು ಜ್ಞಾಪಿಸಿಕೊಂಡು, ಪ್ರಚಾರಕ ಧರ್ಮಗಳೆಲ್ಲವೂ ಕೈಗೊಳ್ಳುವ ಧರ್ಮಾಂತರ ಚಟುವಟಿಕೆ ಬಗೆಗೆ ತಮ್ಮ ಸ್ಪಷ್ಟ ಹಾಗೂ ಸ್ವತಂತ್ರ ಅಭಿಪ್ರಾಯವನ್ನು ವ್ಯಕ್ತಪಡಿಸಿದರು:

"ಮತಾಂತರ ಸ್ವಲ್ಪಮಟ್ಟಿಗೆ ಒಳ್ಳೆಯದನ್ನು ಮಾಡಿದೆ, ನಿಜ. ಆದರೆ ಅದರಿಂದ ಅನಿಷ್ಟವೇ ಹೆಚ್ಚಾಗಿದೆ. ನೀವು ಅವಲಂಬಿಸುವ ಧರ್ಮ ಯಾವುದಾದರೂ ಆಗಬಹುದು. ಅದೇನು ಮಹತ್ವದ ವಿಷಯವಲ್ಲ. ನಾವು ಯಾವ ಧರ್ಮವನ್ನು ಅವಲಂಬಿಸಿದ್ದೇವೆಂಬುದಕ್ಕಿಂತ, ತುಟಿಗಳಿಂದ ಏನನ್ನು ಹೇಳುತ್ತೇವೆನ್ನುವುದಕ್ಕಿಂತ, ನಮ್ಮ ಹೃದಯದಲ್ಲಿರುವ ನಂಬಿಕೆ ಎಂತಹದು ಎನ್ನುವುದು ಮುಖ್ಯ. ಅದನ್ನೇ ಭಗವಂತ ನಮ್ಮಲ್ಲಿ ಪರೀಕ್ಷೆ ಮಾಡುವುದು. ಬೈಬಲ್‌ನ ಅರಿವಿಲ್ಲದೆ, ಜೀಸಸ್‌ನ ಹೆಸರನ್ನಾಗಲೀ ಅವನ ಅಪ್ರತಿಮ ತ್ಯಾಗವನ್ನಾಗಲೀ ಕೇಳರಿಯದ ಸಹಸ್ರಾರು ಸ್ತ್ರೀ ಪುರುಷರು ಜಗತ್ತಿನಲ್ಲಿದ್ದಾರೆ. ಅವರುಗಳು ಬೈಬಲ್‌ನ ಜ್ಞಾನ ಹೊಂದಿದ್ದು ತಪ್ಪದೆ ಪ್ರಾರ್ಥನೆ ಸಲ್ಲಿಸುವ ಹಾಗೂ ಹತ್ತು ದೈವಾಜ್ಞೆಗಳನ್ನು ಪರಿಪಾಲಿಸುತ್ತಿದ್ದೇವೆಂದು ತಿಳಿದಿರುವ ಕ್ರೈಸ್ತರಿಗಿಂತ ಹೆಚ್ಚು ದೈವಭೀರುಗಳಾಗಿದ್ದಾರೆಂಬುದರಲ್ಲಿ ಲವಲೇಶವೂ ಸಂದೇಹವಿಲ್ಲ. ಧರ್ಮ ಬಹು ಕಟ್ಟುನಿಟ್ಟಾದುದು. ಈಗಿರುವ ಧರ್ಮವನ್ನು ಬಿಟ್ಟು ಬೇರೆಯದನ್ನು ಅವಲಂಬಿಸಿದರೆ ಉತ್ತಮರಾಗುವುದಾಗಿ ಯಾರಾದರೂ ಹೇಳಿದರೆ ಅವರನ್ನು ಅರ್ಥ ಮಾಡಿಕೊಳ್ಳುವುದು ನಮ್ಮಂಥ ದುರ್ಬಲ ಜನರಿಗೆ ಅಸಾಧ್ಯವಾಗುತ್ತದೆ". ಎಂದರು ಗಾಂಧಿ. ತಾವು ದಕ್ಷಿಣ ಆಫ್ರಿಕಾದಲ್ಲಿದ್ದಾಗ ನಡೆದ ಘಟನೆಯೊಂದನ್ನು ನೆನಸಿಕೊಂಡರು. ಅಲ್ಲಿ ಪಾದ್ರಿಯೊಬ್ಬ ಇವರನ್ನು ನಿರಂತರ ಪ್ರಶ್ನೋತ್ತರಗಳಿಗೆ ಗುರಿಮಾಡಿ ಕಡೆಗೆ ಮತಾಂತರಗೊಳಿಸುವ ಪ್ರಯತ್ನ ಕೈಬಿಡುವುದಾಗಿ ಹೇಳಿದ್ದ. "ದೇವರೇ ದೇವರೇ, ಎಂದು ಸುಮ್ಮನೆ ಉಚ್ಚರಿಸುವವನು ಭಗವಂತನ ಸಾಮ್ರಾಜ್ಯಕ್ಕೆ ಹೋಗುವುದಿಲ್ಲ. ಆದರೆ ಭಗವಂತನ ಇಚ್ಛೆಯನ್ನು ನೆರವೇರಿಸುವವನು ಮಾತ್ರ ಹೋಗುತ್ತಾನೆ—ಎಂದು

ನಾನು ಹೇಳಿದೆ. ನನ್ನ ದೌರ್ಬಲ್ಯದ ಅರಿವು ನನಗಿದೆ ಎಂಬುದನ್ನು ಅವನಿಗೆ ಜ್ಞಾಪಿಸಿದೆ. ಆ ದೌರ್ಬಲ್ಯವನ್ನು ಹೋಗಲಾಡಿಸಲು ಹೋರಾಡುತ್ತೇನೆ. ಆ ಹೋರಾಟವನ್ನು ನನ್ನ ಬಲದಿಂದ ಅಲ್ಲ, ದೇವರ ಬಲದಿಂದ ನಡೆಸುತ್ತೇನೆ. ಅದು ಸಾಕೋ ಅಥವಾ ನನ್ನ ಪಾಪಗಳನ್ನು ಜೇಸಸ್ ತೊಳೆದು ಬಿಟ್ಟಿದ್ದಾನೆ ಎಂದು ಗಿಳಿಯ ಪಾಠಮಾಡಿ ಹೇಳಬೇಕೆಂದು ನೀವು ಬಯಸುತ್ತೀರೋ? ಎಂದೆ. ಆತ ಅಲ್ಲಿಗೆ ನನ್ನ ಮಾತನ್ನು ತಡೆದು: 'ನೀನು ಹೇಳುತ್ತಿರುವುದು ನನಗೆ ಅರ್ಥವಾಯಿತು' ಎಂದು ಹೇಳಿದ. ಆದುದರಿಂದ ನಾನು ಹೇಳುವುದು ಇಷ್ಟು: ಕ್ರೈಸ್ತರ ಸಂಖ್ಯೆ ಎಷ್ಟಿದೆ ಎಂಬುದನ್ನು ಎಣಿಸುವುದನ್ನು ಬಿಟ್ಟು, ಸರ್ ಗಿಬ್ಬೀ ಮಾದರಿಯಲ್ಲಿ ಜನರ ಮಧ್ಯೆ ಸದ್ದಿಲ್ಲದೆ ಕೆಲಸ ಮಾಡಿ. ನಿಮ್ಮ ಕೆಲಸವು ನಿಮ್ಮ ಸಾಮರ್ಥ್ಯಕ್ಕೆ ಸಾಕ್ಷಿಯಾಗಿ ನಿಲ್ಲಲಿ. ಯಾವ ಪುರುಷಾರ್ಥ ಕ್ಕೋಸ್ಕರ ಅವರುಗಳನ್ನು ಮತಾಂತರಗೊಳಿಸುತ್ತೀರಿ? ನಿಮ್ಮ ಸಂಪರ್ಕದಿಂದ ಅವರು ಉತ್ತಮ ಶೀಲರೆನಿಸಿದರೆ, ಅಸತ್ಯವನ್ನೂ ಕೆಟ್ಟತನವನ್ನೂ ಮರೆಯುವಂತಾದರೆ, ಮತ್ತು ಅವರಲ್ಲಿ ಆಶಾಕಿರಣ ಮೂಡಿದರೆ ಸಾಲದೆ? ಅಥವಾ ನೀವು ಒಬ್ಬ ಅನಾಥನ ಪೋಷಣೆ ಯನ್ನು ಕೈಗೊಂಡಿದ್ದೀರೆಂದು ಇಟ್ಟುಕೊಳ್ಳಿ. ಆತನಿಗೆ ಅನ್ನ, ಬಟ್ಟೆ ನೀಡಿದರೆ ಸಾಲದೇ? ಅದರಲ್ಲೇ ಸಾರ್ಥಕತೆ ಇಲ್ಲವೆ? ಕ್ರೈಸ್ತನಾದೆನೆಂದು ಯಾಂತ್ರಿಕವಾಗಿ ಅವನು ಒಪ್ಪಿ ಕೊಳ್ಳುವಂತೆ ಮಾಡಬೇಕೇಕೆ? ಇಂದು ತಮ್ಮ ತಮ್ಮ ಧರ್ಮಗಳಿಗೆ ಎಷ್ಟೆಷ್ಟು ಮಂದಿ ಅನುಯಾಯಿಗಳಿದ್ದಾರೆಂಬ ಬಗ್ಗೆ ವಿವಿಧ ಧರ್ಮಗಳ ಮಧ್ಯೆ ಪೈಪೋಟಿ ಹಾಗೂ ಸಮರ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ನಮ್ಮ ನಮ್ಮ ಧರ್ಮಕ್ಕೆ ಇಷ್ಟಿಷ್ಟು ಜನರನ್ನು ಸೇರಿಸಿಕೊಂಡಿದ್ದೇವೆಂಬ ಮಹಾಸಾಧನೆಯ ಮಾತನ್ನು ಕೇಳಿದಾಗ ನಾನು ತುಂಬಾ ಅವಮಾನಿತನಾಗಿ ಭಾವಿಸಿಕೊಳ್ಳುತ್ತೇನೆ. ಇಂತಹ ಒಂದೊಂದು ಪ್ರಸಂಗದಲ್ಲೂ ದೇವರನ್ನು ಅಲ್ಲಗಳೆಯುವುದಲ್ಲದೆ ನಮ್ಮನ್ನು ನಾವು ವಂಚಿಸಿಕೊಳ್ಳುತ್ತೇವೆ" ಎಂದರು.

ಭಾರತೀಯ ಭಾಷೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಪರಿಶ್ರಮ ಮಾಡಿ ಭಾರತೀ ಯರಿಗೆ ಅವರ ಪರಂಪರೆಯ ಸಂಪತ್ತನ್ನು ತೋರಿಸಿಕೊಟ್ಟ ಪಾದ್ರಿಗಳನ್ನು ಶ್ಲಾಘಿಸಿ ದರು. ಡಾರ್ಜಿಲಿಂಗ್‌ನಲ್ಲಿ ಪಾದ್ರಿಗಳು ನಡೆಸುತ್ತಿದ್ದ ಭಾಷಾಶಿಕ್ಷಣ ಸಂಸ್ಥೆಯ ಮುಖ್ಯಸ್ಥರನ್ನು ಅಭಿನಂದಿಸಿದರು. ಕ್ರಿಸ್ತನ ಸೇವೆಯನ್ನು ಇನ್ನೂ ಚೆನ್ನಾಗಿ ಮಾಡ ಬೇಕಾದರೆ ಅಷ್ಟೇ ಸಾಲದೆಂದೂ ಹೇಳಿದರು. ಮಾನವರಲ್ಲಿ ಅತ್ಯಂತ ಬಡವರಾದವರನ್ನು ಅರಿಸಿಕೊಂಡು ಅವರ ಕಷ್ಟಸುಖಗಳಲ್ಲಿ ಒಂದಾಗಿರಬೇಕು. ಈ ಕಾರ್ಯದಲ್ಲಿ ಪ್ರಭುತ್ವ ಶಕ್ತಿಯನ್ನು ಆಶ್ರಯಿಸಲೇಬಾರದು. ದೈವಶಕ್ತಿಯನ್ನೇ ಕೊಂಡಾಡುತ್ತ ಸಾಮರ್ಥ್ಯ ವನ್ನು ಗಳಿಸಿಕೊಳ್ಳಬೇಕು. "ನಿಮ್ಮ ಜೀವನವನ್ನು ಕೈಯಲ್ಲಿ ಹಿಡಿದುಕೊಂಡು ಜನ ಸಾಮಾನ್ಯರ ಒಳಹೊಕ್ಕು ಸೇವೆ ಮಾಡಬೇಕು".

ವಿಧಾಯಕ ಕಾರ್ಯಕರ್ತರು ಹಿಮಾಲಯದವರೆಗೂ ಪ್ರಸರಿಸಿ ನಿಸ್ವಾರ್ಥತೆ ಯಿಂದ ದುಡಿಯುತ್ತಿದ್ದುದನ್ನು ಗಾಂಧಿಯವರು ಕಂಡರು. ಆ ಪೈಕಿ ಒಬ್ಬ ಬಿಹಾರದ ಚಾಪ್ರದಿಂದ ಬಂದು ನೆಲೆಸಿದ್ದ. ಆತ ಸಿಲಿಗುರಿಯಲ್ಲಿ ಗಾಂಧಿಯವರನ್ನು ಭೇಟಿಮಾಡಿ,

ಅವರು ವಾಪಸು ಬರುವಾಗ ಆ ಊರಿನಲ್ಲಿ ಸ್ವಲ್ಪಕಾಲ ತಂಗಬೇಕೆಂದು ಕೇಳಿದ. ಗಾಂಧೀಜಿ ಆಗಲೆಂದು ಆಶ್ವಾಸನೆ ಕೊಟ್ಟರು. ಮತ್ತೊಬ್ಬಾತನು ಯು.ಪಿ.ಯ ಬಾಲಿಯಾ ದಿಂದ ಬಂದಿದ್ದ. ತಿಂಧಾರಿಯಾದಲ್ಲಿ ಒಂದು ಅಂಗಡಿ ಇಟ್ಟಿದ್ದ. ಆತ ಖಾದಿಧಾರಿ. ಗಾಂಧಿಯವರ ಕೈಯಲ್ಲಿ ಹತ್ತು ರೂಪಾಯಿಗಳನ್ನಿಟ್ಟ, ತಾನು ನವಜೀವನವನ್ನು ಓದುತ್ತಿರುವುದಾಗಿ ಹೇಳಿದ. ಆತ ಪತ್ನಿಯೊಡಗೂಡಿ ಮತ್ತೆ ಗಾಂಧಿಯವರನ್ನು ಸಂದರ್ಶಿಸಿದ. ರೈಲ್ವೆ ನಿಲ್ದಾಣದಲ್ಲಿ ಅವರನ್ನು ಬೀಳ್ಕೊಡುವಾಗ ಇಪ್ಪತ್ತು ರೂಪಾಯಿ ಕೊಟ್ಟ. ಹಾಗೆಯೇ ಮಾತನಾಡುತ್ತಾ: "ನಾನು ನವಜೀವನದ ಎರಡು ಪ್ರತಿಗಳನ್ನು ತರಿಸುತ್ತೇನೆ. ಒಂದನ್ನು ನನ್ನ ಸ್ವಂತ ಧಫ್ತರದಲ್ಲಿ ಸೇರಿಸಿಟ್ಟುಕೊಳ್ಳುತ್ತೇನೆ. ಇನ್ನೊಂದನ್ನು ಹಿಂದಿಯನ್ನು ಬಲ್ಲ ಗಿರಿಜನರಿಗೆ ಓದಲು ಕೊಡುತ್ತೇನೆ" ಎಂದು ಹೇಳಿದ. ರೈಲು ಹೊರಡುವ ಸಮಯಕ್ಕೆ ಮಹದೇವ ದೇಸಾಯಿಯನ್ನು ಉದ್ದೇಶಿಸಿ, 'ಖದ್ದರ್ ಕೆಲಸಕ್ಕಾಗಿ ಆಗಿಂದಾಗ್ಗೆ ಮಂತಿಗೆಗಳನ್ನು ಎಲ್ಲಿಗೆ ಕಳುಹಿಸಬೇಕು?' ಎಂದು ಕೇಳಿದ.

ಗಾಂಧಿಯವರು ಡಾರ್ಜಿಲಿಂಗ್‌ನಿಂದ ಬಂಗಾಳದ ಕೆಲವು ಸ್ಥಳಗಳಿಗೆ ತೆರಳಿದರು. ಮೊದಲಿನ ಪ್ರವಾಸದಲ್ಲಿ ಈ ಸ್ಥಳಗಳು ಬಿಟ್ಟು ಹೋಗಿದ್ದುವು. ಉತ್ತರದ ತುತ್ತ ತುದಿಯಲ್ಲಿರುವ ಜಲಪೈಗುರಿ ಮತ್ತು ದಕ್ಷಿಣದ ಕೊನೆಯಲ್ಲಿರುವ ಬಾರಿಸಾಲ್ ಮತ್ತು ಖುಲ್ನಾ, ಇವೇ ಆ ಸ್ಥಳಗಳು. ಈ ಊರುಗಳಲ್ಲೆಲ್ಲಾ ಮಾನಪತ್ರಗಳು ಸಮರ್ಪಿ ಸಲ್ಪಟ್ಟುವು. ಜಲಪೈಗುರಿಯಲ್ಲಿ ವಿದ್ಯಾರ್ಥಿಗಳೇ ಬಹುಸಂಖ್ಯೆಯಲ್ಲಿದ್ದ ಸ್ವಯಂಸೇವಕರಿಗೆ ಗಾಂಧಿಯವರು ಹೆಚ್ಚು ಸಮಯ ನೀಡಿದರು. ಅವರನ್ನುದ್ದೇಶಿಸಿ ಹೇಳಿದರು: "ನೂಲು ವುದರಲ್ಲಿ ಯಾವ ವಿನೋದವೂ ಇಲ್ಲವೆಂದು ಹೇಳುತ್ತೀರಿ. ಆದರೆ ನಾನು ಕೇಳುತ್ತೇನೆ–ಗಾಯಂತ್ರಿಯನ್ನು ಪಠಿಸುವುದರಲ್ಲಿ ಯಾವ ವಿನೋದ ಇದೆ? ಕಾಲ್ಮವನ್ನು ಪಠಿಸು ವುದರಲ್ಲಿ ಏನಾದರೂ ತಮಾಷೆ ಇದೆಯೆ? ಅದೊಂದು ಪವಿತ್ರ ಕರ್ತವ್ಯವೆಂದು ಮಾಡುತ್ತೀರಿ. ಭಾರತ ಕ್ಷಯಿಸುತ್ತಿದೆ. ಅದು ಮರಣ ಶಯ್ಯೆಯಲ್ಲಿದೆ. ಸಾಯುತ್ತಿರುವ ಮನುಷ್ಯನನ್ನು ನೀವು ಯಾವಾಗಾದರೂ ನೋಡಿದ್ದೀರಾ? ಆತನ ಕಾಲುಗಳನ್ನು ಮುಟ್ಟಿದ್ದೀರಾ? ಅವುಗಳು ತಣ್ಣಗಾಗಿ ಜಡವಾಗಿರುತ್ತವೆ; ತಲೆಯಲ್ಲಿ ಸ್ವಲ್ಪ ಶಾಖ ವಿರುವುದನ್ನು ತಿಳಿದು ಅವನ ಪ್ರಾಣ ಇನ್ನೂ ಹೋಗಿಲ್ಲವೆಂದು ಭ್ರಮಿಸುತೀರಿ. ಆದರೆ ಅದು ಕ್ಷೀಣಿಸುತ್ತಾ ಇರುತ್ತದೆ. ಅದೇ ಸ್ಥಿತಿ ಭಾರತದ ಜನಸಾಮಾನ್ಯರದ್ದಾಗಿದೆ. ಭಾರತಮಾತೆಯ ಪಾದಗಳು ತಣ್ಣಗೆ ನಿಶ್ಚೇತನವಾಗುತ್ತಾಬರುತ್ತಿವೆ. ಭಾರತವನ್ನು ರಕ್ಷಿಸುವ ಅಪೇಕ್ಷೆ ನಿಮಗಿದ್ದರೆ ನಾನು ಹೇಳಿದಂತೆ ಸ್ವಲ್ಪ ಮಾಡಿ. ಈಗಲೇ ನಾನು ಎಚ್ಚರಿಕೆ ಕೊಡುತ್ತಿದ್ದೇನೆ. ಕಾಲ ಮಿಂಚುವ ಮುನ್ನ ರಾಟೆಯನ್ನು ತೆಗೆದುಕೊಳ್ಳಿ; ಇಲ್ಲದಿದ್ದರೆ ನಾಶವಾಗುತ್ತೀರಿ".

ಯುವಕರು ಉದ್ರೇಕದಿಂದ ಆಡಿದ ಮಾತುಗಳಿಗೆ ಅನೇಕ ಸಂದರ್ಭಗಳಲ್ಲಿ ಗಾಂಧಿಯವರು ಉತ್ತರ ಕೊಡಬೇಕಾಗಿತ್ತು. ಒಮ್ಮೆ ಒಬ್ಬ ಮುಸ್ಲಿಂ ಬಂಧು ತನ್ನ ಕುಂದುಕೊರತೆಗಳ ಪಟ್ಟಿಯನ್ನು ಮುಂದಿಟ್ಟ. ಹಿಂದೂಗಳು ಮುಸ್ಲಿಮರನ್ನು ಅಸ್ಪೃಶ್ಯ

ರೆಂದು ಕಾಣುತ್ತಾರೆ, ಎಂಬುದು ಮೊದಲನೆಯ ದೂರು. ಎರಡನೆಯದು ಗೋ ಹತ್ಯೆಯ ಸಂಬಂಧವಾಗಿ ಇರುವ ಭಿನ್ನಾಭಿಪ್ರಾಯ; ಮೂರನೆಯದು ಅಸಮರ್ಪಕ ಪ್ರಾತಿನಿಧ್ಯ; ನಾಲ್ಕನೆಯದು ಇಸ್ಲಾಂ ವಿರುದ್ಧ ಪುಸ್ತಕಗಳ ಪ್ರಕಟಣೆ; ಐದನೆಯದು ಅಪಹರಣ ಹಾಗೂ ಇತರ ಅಪರಾಧಗಳನ್ನು ಮುಸ್ಲಿಮರ ಮೇಲೆ ಆರೋಪಿಸುವುದು; ಆರನೆಯದು ನೌಕರಿಗಳಲ್ಲಿ ಅವಕಾಶಕೊಡದಿರುವುದು; ಏಳನೆಯದು, ಸಾಹುಕಾರರು ಗಳಿಂದ ಸುಲಿಗೆ; ಎಂಟನೆಯದು, ಕಾಳಿಪೂಜೆಗಾಗಿ ಜಮೀನ್ದಾರರು ಮಾಡುವ ವಸೂಲಿ. ಗಾಂಧಿಯವರು ಆತನಿಗೆ ಸಮಾಧಾನ ಹೇಳಿದರು. ಈ ಕುಂದುಕೊರತೆಗಳಲ್ಲಿ ಕೆಲವು ಸ್ಥಳೀಯ ಸ್ವರೂಪದ್ದು; ಮತ್ತೆ ಕೆಲವು ನಿರ್ದಿಷ್ಟ ವ್ಯಕ್ತಿಗಳಿಗೆ ವಿರೋಧವಾದುವು; ಹಲವು ಪಾರಸ್ಪರಿಕವಾದುವು. ಮುಖ್ಯವಾದ ಸಮಸ್ಯೆಯೆಂದರೆ ಮೊದಲನೆಯದು. ಅದೇ ಮುಖ್ಯವಾದ ಸಮಸ್ಯೆಯೆಂದೂ ಉಳಿದ ಕುಂದುಕೊರತೆಗಳು ಮೂಲಸಮಸ್ಯೆ ಯಿಂದ ಉದ್ಭವವಾದುವೆಂದೂ ಆತ ತಕ್ಷಣ ಒಪ್ಪಿಕೊಂಡ. "ಅವರು ನಮಗೆ ಮಿಠಾಯಿ ಗಳನ್ನು ಸಹಾ ಮಾರುವುದಿಲ್ಲ" ಎಂದು ಆತ ಹೇಳಿದ. "ಸರಿ, ನನಗೆ ಅರ್ಥವಾಯಿತು". ಎಂದರು ಗಾಂಧೀಜಿ. ಅವರು ಮುಂದುವರೆದು "ಅಸಮಾಧಾನಕ್ಕೆ ನಿಜವಾದ ಕಾರಣ ಅದು. ಆದರೆ ನೀನು ಮೊದಲು ಮಾಡಿದಂತೆ, ಎಲ್ಲವನ್ನೂ ದೊಡ್ಡದು ಮಾಡಿ ಇಡೀ ಮುಸ್ಲಿಂ ಸಮುದಾಯಕ್ಕೆ ಒದಗಿರುವ ಸಂಕಷ್ಟವೆಂದು ಹೇಳಬೇಡ. ಹಿಂದೂಗಳು ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಮೈಲಿಗೆ ಬಗ್ಗೆ ದೊಡ್ಡ ಕಟ್ಟಳೆಯನ್ನೇ ರಚಿಸಿಕೊಳ್ಳುತ್ತಾ ಹೋಗುವುದಾದಲ್ಲಿ ಆ ಧರ್ಮ ಅಳಿಯುವುದೇ ಲೇಸು, ಎಂದು ಹಿಂದೂಗಳಿಗೆ ನಾನು ಹೇಳುತ್ತೇನೆ. ಭಾರತವನ್ನು 'ಜಜಿರಾತ್-ಉಲ್ ಅರಬ್' ಆಗಿ ನೀವು ಮಾಡಲಾರಿರಿ. ಹಿಂದೂಗಳು ಹಿಂದೆ ಅನೇಕ ರಾಷ್ಟ್ರೀಯರನ್ನು ತಮ್ಮ ವರನ್ನಾಗಿ ಮಾಡಿಕೊಂಡು ಬಿಟ್ಟಿದ್ದಾರೆ. ಮೈಲಿಗೆ ಬಗ್ಗೆ ನಮ್ಮ ಕಟ್ಟಳೆಗಳನುಪರಿಷ್ಕರಿಸ ಬೇಕು. ಅನಾವಶ್ಯಕ ಅಡ್ಡಿ ಆತಂಕಗಳು ಹಿಂದೂಧರ್ಮಕ್ಕೆ ಬಲಕೊಡುವುದಕ್ಕೆ ಬದಲಾಗಿ ಉರುಲಾಗಿವೆ. ನಾವು ಎಂದೂ ಪ್ರತ್ಯೇಕವಾದಿಗಳಾಗಿರಲಿಲ್ಲ. ಎಲ್ಲವನ್ನೂ ಒಳಗೊಂಡ ಧರ್ಮ ನಮ್ಮದು. ಇಸ್ಲಾಂ ಅಥವಾ ಕ್ರೈಸ್ತ ಧರ್ಮದಂತೆ, ಅನುಯಾಯಿಗಳ ಸಂಖ್ಯೆ ಯನ್ನು ಯಾವಾಗಲೂ ಎಣಿಸುವ ಪ್ರಚಾರಕ ಧರ್ಮವಾಗಿರಲಿಲ್ಲ ಅದು. ಅದೇ ಅದರ ಚೆಲುವು. ಸ್ವಾಭಾವಿಕವಾಗಿ ಅಂಗವೃದ್ಧಿಯಾಗುವಂತೆ ಅದು ಅಗೋಚರವಾಗಿ ಎಲ್ಲವನ್ನೂ ಅಳವಡಿಸಿಕೊಂಡು ಹೋಗಿದೆ. 'ಐರೋಪ್ಯ ತಯಾರಕರಿಂದ ಚಾಕೊಲೇಟ್ ಗಳನ್ನು ತೆಗೆದುಕೊಳ್ಳಲು ನಮಗೆ ಅಭ್ಯಂತರವಿಲ್ಲದಿರುವಾಗ, ಹಿಂದೂಗಳು ಮುಸ್ಲಿಮರಿಗೆ ಮಿಠಾಯಿ ಮಾರುವುದನ್ನು ಪ್ರತಿಬಂಧಿಸುವುದೇಕೆ?' ಎಂದು ನನ್ನ ಹಿಂದೂ ಮಿತರು ಗಳನ್ನು ಕೇಳುತ್ತೇನೆ" ಎಂದರು ಗಾಂಧಿಜೀ.

"ನೀವು ಅಸ್ಪೃಶ್ಯತೆಯನ್ನು ಮೂಲೋತ್ಪಾಟನೆ ಮಾಡಬೇಕು" ಎಂದು ಉದ್ರಿಕ್ತ ನಾದ ಯುವಕನೊಬ್ಬ ಹೇಳಿದ. "ಹಾಗೆಂದರೇನು?" ಎಂದು ಕೇಳಿದರು ಗಾಂಧಿ.

"ಸಹಭೋಜನದ ಮೇಲಿನ ನಿರ್ಬಂಧಗಳೂ ಹೋಗಬೇಕು" ಎಂದು ಆತ ಉತ್ತರಕೊಟ್ಟ.

"ಜನರು ಒಂದೇ ತಟ್ಟೆಯಲ್ಲಿ ಊಟಮಾಡಬೇಕೆನ್ನುತ್ತೀಯಾ?"

"ಇಲ್ಲ"

"ಹಾಗಾದರೆ ನನ್ನೊಡನೆ ನಿನಗೆ ಸಹಮತ ಇದೆ"

"ವಿವಿಧ ಜಾತಿ ಮತ್ತು ಪಂಥಗಳಿಗೆ ಸೇರಿದವರು ಒಂದೇ ಕೊಠಡಿಯಲ್ಲಿ ಅಥವಾ ಒಂದೇ ಸಾಲಿನಲ್ಲಿ ಕುಳಿತು ಊಟ ಮಾಡುವುದನ್ನು ನೀವು ಒಪ್ಪುವುದಿಲ್ಲವೇ?" ಎಂದು ಕೇಳಿದ ಆ ಯುವಕ.

"ಹಾಗೆ ಮಾಡಬಹುದು. ಅದನ್ನು ಸಹಭೋಜನ ಎಂದು ನಾನು ಕರೆಯುವುದಿಲ್ಲ". ಎಂದರು ಗಾಂಧೀ.

ಆ ಯುವಕ ಮತ್ತೊಂದು ಪ್ರಶ್ನೆಗೆ ಹಾರಿದ.

"ಸರಿ ಸ್ವಾಮಿ, ನಿಮ್ಮನ್ನು ಕನ್ಯಾಕುಮಾರಿ ದೇವಸ್ಥಾನದೊಳಕ್ಕೆ ಬಿಡದಿದ್ದಾಗ ನೀವೇಕೆ ಬಲವಂತದಿಂದ ನುಗ್ಗಲಿಲ್ಲ? ಅದು ಅವಮಾನಕರ ಪ್ರಸಂಗ. ನೀವು ಅದನ್ನು ಸಹಿಸಿಕೊಳ್ಳಬಾರದಾಗಿತ್ತು. ನೀವು ವಿಶ್ವಜ್ಯೋತಿ. ನಿಮ್ಮನ್ನೇ ತಡೆಗಟ್ಟಲು ಅವರು ಯಾರು?" ಎಂದು ಹೇಳಿದ.

"ಹೌದಪ್ಪಾ" ಎಂದು ನಗುತ್ತಾ ಹೇಳಿದರು ಗಾಂಧೀ: "ನಾನು ವಿಶ್ವಜ್ಯೋತಿ ಆಗಿರದೆ ಇರಬಹುದು. ಆದುದರಿಂದ ನನ್ನನ್ನು ಹೊರಗಿರಿಸಲು ಅವರಿಗೆ ಸಮಂಜಸವಾಗಿ ತೋರಿರಬಹುದು, ಇಲ್ಲವೇ ನಾನು ವಿಶ್ವಜ್ಯೋತಿ ಆಗಿರಬೇಕು. ಆ ಕಾರಣದಿಂದ ನಾನು ಒಳಗೆ ಬಲವಂತದಿಂದ ಹೋಗದೆ ಇದ್ದಿರಬೇಕು."

ಯುವಕ ಮತ್ತೊಂದು ಪ್ರಶ್ನೆ ಹಾಕಿದ: "ವ್ಯಭಿಚಾರಿಯಾದ ಮುಸಲ್ಮಾನ ಮಹಾತ್ಮಾ ಗಾಂಧಿಗಿಂತ ಎಷ್ಟೋ ಉತ್ತಮ ಎಂದು ಮೌಲಾನ ಮಹಮ್ಮದಾಲಿ ಹೇಳುತ್ತಾರೆ. ಹೀಗಿರುವಾಗ ಹಿಂದೂ ಮುಸಲ್ಮಾನರ ನಡುವೆ ಐಕ್ಯತೆ ಸಾಧ್ಯವಿದೆಯೆ?".

"ಕ್ಷಮಿಸು, ಅವರು ಹಾಗೆಯೆ ಹೇಳಿಯೇ ಇಲ್ಲ. ಆತ ಒಂದು ವಿಧದಲ್ಲಿ–ಅಂದರೆ ಸಿದ್ಧಾಂತಕ್ಕೆ ಸಂಬಂಧಿಸಿದ ವಿಷಯದಲ್ಲಿ–ಉತ್ತಮ ಎಂದು ಅವರು ಹೇಳಿದರು. ರಂಜಕವಾಗಿ ಕಣ್ಣಿಗೆ ಕಟ್ಟುವಂತೆ ಹೇಳುವ ರೀತಿ ಅವರದು. ಅದರಲ್ಲಡಗಿರುವ ಸರಳ ವಿಷಯವನ್ನು ಏಕೆ ನೀನು ಅರ್ಥಮಾಡಿಕೊಳ್ಳಬಾರದು? ಒಂದು ಪಕ್ಷ ನನ್ನಲ್ಲಿ ಕೊಹಿನೂರು ವಜ್ರ ಇದೆ ಅಂತ ಭಾವಿಸಿಕೊ. ಈ ವಜ್ರವನ್ನು ಹೊಂದಿರುವ ಗಾಂಧಿ, ಜಮೀನ್ದಾರನಿಗಿಂತ ಮೇಲು ಎಂದು ಯಾರಾದರೂ ಹೇಳಬಹುದಲ್ಲವೆ? ಪ್ರತಿಯೊಬ್ಬನಿಗೂ ತನ್ನ ಧರ್ಮವೇ ವಿಶ್ವಕ್ಕೆಲ್ಲ ಉತ್ಕೃಷ್ಟವಾದ ಧರ್ಮ ಎಂಬ ಭಾವನೆ. ನೀತಿವಂತ ಮನುಷ್ಯನಿಗೆ ತನ್ನ ಹೆಂಡತಿಯೇ ಲೋಕದಲ್ಲೆಲ್ಲಾ ಅತ್ಯಂತ ಸುಂದರಿ ಎನ್ನಿಸುವಹಾಗೆ ಅದು. ಅದೇ ರೀತಿ ಮಹಮ್ಮದ್ ಆಲಿ ಹೇಳಿದರು. ಬೇರೆಯವರಿಗಿಂತ ಮೇಲಾದ

ಸಿದ್ಧಾಂತ ತಪ್ಪಾದುದ್ದರಿಂದ ಮುಸ್ಲಿಮನು ಯಾವನೇ ಆಗಿರಲಿ ಅವನು ನನಗಿಂತ ಉತ್ತಮ ಎಂದು".

"ಹಾಗಾದರೆ ನಾನು ಓದಿ ತಿಳಿದುಕೊಂಡಿರುವ ರೀತಿಯಲ್ಲಿ ಅವರು ಹೇಳಿಕೆ ಕೊಟ್ಟಿಲ್ಲ".

"ನೀನು ಜಾಗರೂಕತೆಯಿಂದ ಅದನ್ನು ಓದಿಲ್ಲ. ಅವರು ಆ ವಿಧವಾಗಿ ಏನನ್ನೂ ಹೇಳಿಲ್ಲ. ಮನುಷ್ಯನಾಗಿ ವೈಯಕ್ತಿಕವಾಗಿ ನೋಡಿದರೆ ನಾನು ಅವರ ತಾಯಿ ಮತ್ತು ಗುರುವಿಗಿಂತ ಎಷ್ಟೋ ಉತ್ತಮ ಎಂದು ಹೇಳಿದ್ದಾರೆ; ಅವರ ತಾಯಿ ಮತ್ತು ಗುರುವನ್ನು ಆರಾಧಿಸುವ ವ್ಯಕ್ತಿ ಅವರು. ಅವರು ನೀಡಿದ ಹೇಳಿಕೆ ನಿಷ್ಕೃಷ್ಟವಾದದ್ದು. ಈ ಪ್ರಶ್ನೆಗೆ ಮತ್ತೊಂದು ಮುಖ ಇದೆ ಎಂಬುದನ್ನು ನಾನು ಒಪ್ಪುತ್ತೇನೆ; ನಿಜ. ಮನುಷ್ಯ ಎಲ್ಲಿಯವರೆಗೆ ತನ್ನ ಸಿದ್ಧಾಂತಕ್ಕನುಗುಣವಾಗಿ ಬಾಳುತ್ತಾನೋ ಅಲ್ಲಿಯ ವರೆಗೆ ಆ ಸಿದ್ಧಾಂತ ಒಳ್ಳೆಯದಾಗಿರುತ್ತದೆ. ಅನುಸರಣೆ, ಮೇಲ್ಪಂಕ್ತಿ ಇಲ್ಲದ ಸಿದ್ಧಾಂತ ಶೂನ್ಯ. ಮೌಲಾನಾ ಮುಹಮ್ಮದ್ ಆಲಿಯವರು ತಮ್ಮ ನಿಲುವನ್ನು ತರ್ಕ ಶಾಸ್ತ್ರಜ್ಞನಂತೆ ಪ್ರತಿಪಾದಿಸುತ್ತಿದ್ದರು. ಅವರು ಮಾಡಿರುವ ಭೇದ, ಘೋರ ಸ್ವರೂಪದ್ದಾದರೂ ತರ್ಕದ ದೃಷ್ಟಿಯಿಂದ ಸರಿಯಾಗಿದೆಯೆಂಬುದರಲ್ಲಿ ಸಂದೇಹವಿಲ್ಲ".

ಗಾಂಧೀ ಖುಲ್ನಾ ತಲಪುವ ಹೊತ್ತಿಗೆ ರಾಷ್ಟ್ರೀಯ ದುರಂತದ ಮಬ್ಬು ಕವಿದಿತ್ತು. ಜೂನ್ ೧೬ರಂದು ಡಾರ್ಜಿಲಿಂಗ್‌ನಲ್ಲಿ ಸಿ. ಆರ್. ದಾಸರು ಹಠಾತ್ ನಿಧನರಾದ ವಾರ್ತೆ ಖುಲ್ನಾಗೆ ಬಂದ ತಕ್ಷಣ ತಿಳಿಯಿತು. ಸಾರ್ವಜನಿಕ ಸಭೆ ವಿನಹ ಮಿಕ್ಕೆಲ್ಲ ಕಾರ್ಯಕ್ರಮಗಳೂ ರದ್ದು ಮಾಡಲ್ಪಟ್ಟುವು. ಅಲ್ಲಿ ಭಾಷಣ ಮಾಡುತ್ತಾ, "ದಾಸ್‌ರವರು ಪುರುಷಶ್ರೇಷ್ಠರಲ್ಲಿ ಒಬ್ಬರಾಗಿದ್ದರು" ಎಂದು ಮೊದಲನೆಯ ವಾಕ್ಯ ಹೇಳುತ್ತಿದ್ದಂತೆಯೇ ಗಾಂಧಿಯವರಿಗೆ ದುಃಖ ಉಕ್ಕಿ ಬಂತು. ದಾಸ್‌ರವರ ಬಗ್ಗೆ ಅವರು ಉತ್ಕಟ ಭಾವನೆಯಿಂದ ಮಾತನಾಡಿದರು. "ಅವರ ಜ್ಞಾಪಕ ನಿರಂತರ ವಾಗಿರಲು ನಾವು ಏನು ಮಾಡೋಣ? ಕಣ್ಣೀರು ಸುರಿಸುವುದು ಸುಲಭ. ಆದರೆ ಬರೀ ಕಣ್ಣೀರು ನಮಗಾಗಲೀ ಅವರ ಸಮೀಪದ ಆಪ್ತ ವರ್ಗಕ್ಕಾಗಲೀ ಏನೂ ಸಹಾಯಕವಾಗಲಾರದು. ಭಾರತೀಯರೆಂದು ಕರೆಸಿಕೊಳ್ಳುವ ನಾವೆಲ್ಲರೂ–ಹಿಂದೂಗಳು, ಮುಸ್ಲಿಮರು, ಪಾರ್ಸಿಗಳು ಮತ್ತು ಕ್ರೈಸ್ತರು–ಅವರಿಗೆ ಪ್ರಿಯವಾಗಿದ್ದ ಕೆಲಸವನ್ನು ಮಾಡುವ ಪ್ರತಿಜ್ಞೆ ಮಾಡಿದಲ್ಲಿ ನಾವು ಸ್ವಲ್ಪ ಮಟ್ಟಿಗಾದರೂ ಕೆಲಸ ಮಾಡಿದಂತಾಗು ತ್ತದೆ. ನಾವು ದೇವರನ್ನು ನಂಬತಕ್ಕವರು. ದೇಹ ಕ್ಷಯಿಸತಕ್ಕದೆಂಬುದನ್ನು ನಾವು ತಿಳಿದಿರಬೇಕು. ಆತ್ಮ ಅವಿನಾಶಿಯಾದದ್ದು. ದೇಶಬಂಧು ದಾಸರ ದೇಹ ನಾಶವಾಗಿದೆ; ಆದರೆ ಅವರ ಆತ್ಮ ಅಮರವಾಗಿರುತ್ತದೆ. ಅವರ ಆತ್ಮ ಅಷ್ಟೇ ಅಲ್ಲ; ಅಪಾರ ಸೇವೆ ಮತ್ತು ತ್ಯಾಗ ಮಾಡಿದ ಅವರ ಹೆಸರೂ ಅಮರವಾಗಿ ಉಳಿಯುತ್ತದೆ. ಚಿಕ್ಕವರಾಗಲೀ ದೊಡ್ಡವರಾಗಲೀ ಅವರ ಮೇಲ್ಪಂಕ್ತಿಯನ್ನು ಕಿಂಚಿತ್ತಾದರೂ ಅನುಸರಿಸಿದರೆ ಅವರ ಪ್ರೇಮ ಸ್ಮರಣೆಯನ್ನು ನಿರಂತರವಾಗಿ ಮಾಡಿದಂತಾಗುತ್ತದೆ".

ಗಾಂಧಿಯವರು ಅಸ್ಸಾಂ ಪ್ರಾಂತದ ಪ್ರವಾಸವನ್ನು ರದ್ದುಗೊಳಿಸಿ ದಾಸ್‌ರವರ ಪಾರ್ಥಿವ ಶರೀರದ ಅಂತಿಮಯಾತ್ರೆಯ ಮೆರವಣಿಗೆಯಲ್ಲಿ ಭಾಗವಹಿಸಲು ಕಲ್ಕತ್ತಾಗೆ ತೆರಳಿದರು. ಜೂನ್ ೧೮ರಂದು ಡಾರ್ಜಿಲಿಂಗ್‌ನಿಂದ ದಾಸ್‌ರವರ ಪಾರ್ಥಿವ ಶರೀರವನ್ನು ಕಲ್ಕತ್ತಾಕ್ಕೆ ತರಲಾಯಿತು. ಅದನ್ನು ಸೀಲ್ಡಾ ನಿಲ್ದಾಣದಿಂದ ನೇರವಾಗಿ ರುದ್ರಭೂಮಿಗೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಶವವನ್ನು ಗಾಂಧಿ ಮತ್ತು ಅಜಾದರು ಹೊತ್ತರು. ಇಹಲೋಕ ತ್ಯಜಿಸಿದ ನಾಯಕನಿಗೆ ಎಲ್ಲ ವರ್ಗಗಳ, ಎಲ್ಲ ಪಕ್ಷಗಳ, ಎಲ್ಲ ಜಾತಿಗಳ ಜನರೂ ಅಂತಃಪ್ರವೃತ್ತರಾಗಿ ಒಟ್ಟುಗೂಡಿ ತಮ್ಮ ಪ್ರೇಮ ಹಾಗೂ ಗೌರವವನ್ನು ಪ್ರದರ್ಶಿಸಿದರು.

ದೇಶಬಂಧು ದಾಸ್‌ರವರ ಸಾವು ಮೋತಿಲಾಲ್ ನೆಹರೂರವರನ್ನು ಅತೀವ ದುಃಖಕ್ಕೀಡುಮಾಡಿತು. ಸುದ್ದಿ ಅವರಿಗೆ ಮುಟ್ಟಿದಾಗ ಅವರು ಒಂದು ಮಾತನ್ನೂ ಆಡದೆ ಸ್ತಬ್ಧರಾಗಿ ಬಹಳಹೊತ್ತು ತಲೆತಗ್ಗಿಸಿಕೊಂಡು ಕುಳಿತುಬಿಟ್ಟರು. ಅವರಿಗೆ ಅತ್ಯಂತ ಹತ್ತಿರದವರಾಗಿದ್ದ ಸ್ನೇಹಿತರನ್ನು ಕಳೆದುಕೊಂಡಿದ್ದರು. ಈಗ ಪೂರ್ಣ ಜವಾಬ್ದಾರಿಯನ್ನು ಅವರೊಬ್ಬರೇ ಹೊರಬೇಕಾಗಿ ಬಂತು.

ಈ ಮಹಾವಿಯೋಗದ ಬಗ್ಗೆ ಗಾಂಧಿಯವರು ಜೂನ್ ೧೭ರಂದು ಹೀಗೆ ಬರೆದರು: "ಹೃದಯದಲ್ಲಿ ತೀವ್ರವೇದನೆ ಉಂಟಾಗಿರುವಾಗ ಲೇಖನಿ ಮುಂದೋಡುವುದಿಲ್ಲ. ನಾನು ದುಃಖದ ಮಡುವಿನ ಮಧ್ಯೆ ಇದ್ದೇನೆ. ಆದುದರಿಂದ ಯಂಗ್ ಇಂಡಿಯಾದ ಓದುಗರ ಸಲುವಾಗಿ ತಂತಿ ಮೂಲಕ ಹೆಚ್ಚು ಬರೆದು ಕಳುಹಿಸಲಾರೆ. ಆ ಮಹಾ ದೇಶಭಕ್ತರೊಡನೆ ಐದುದಿನಗಳ ಕಾಲ ಡಾರ್ಜಿಲಿಂಗ್‌ನಲ್ಲಿ ನಡೆದ ಸಮಾಗಮದಿಂದ ನಾವಿಬ್ಬರೂ ಎಂದಿಗಿಂತ ಪರಸ್ಪರ ಹೆಚ್ಚು ಸಮೀಪಕ್ಕೆ ಬಂದಿದ್ದೆವು. ದೇಶಬಂಧು ಎಷ್ಟು ದೊಡ್ಡವರು ಎನ್ನುವುದರ ಜೊತೆಗೆ ಅವರು ಎಷ್ಟು ಒಳ್ಳೆಯವರು ಎಂಬುದನ್ನೂ ನಾನು ಅಲ್ಲಿ ಅರಿತುಕೊಂಡೆ. ಭಾರತವು ಒಂದು ಅನರ್ಘ್ಯ ರತ್ನವನ್ನು ಕಳೆದುಕೊಂಡಿದೆ. ಸ್ವರಾಜ್ಯವನ್ನು ಪಡೆಯುವುದರ ಮೂಲಕ ನಾವು ಅದನ್ನು ಮತ್ತೆ ಗಳಿಸಿಕೊಳ್ಳಬೇಕು".

ಸ್ವರಾಜ್ಯಪಕ್ಷದ ಮುಖಪತ್ರ ಫಾರ್ವರ್ಡ್‌ನಲ್ಲಿ "ದೇಶಬಂಧು ಚಿರಾಯುವಾಗಲಿ" ಎಂಬ ಶೀರ್ಷಿಕೆಯಲ್ಲಿ ಅಗ್ರಲೇಖನವಾಗಿ ಅವರ ಹೃದಯಸ್ಪರ್ಶಿ ಲೇಖನ ಪ್ರಕಟವಾಯಿತು.

"ದೇಶಬಂಧು ಅವರ ಪ್ರಭಾವ ಬಂಗಾಳದ ಮೇಲೆ—ಏಕೆ ಇಡೀ ಭಾರತದ ಮೇಲೆ—ಎಷ್ಟಿತ್ತೆಂಬುದು ನಿನ್ನೆ ಕಲ್ಕತ್ತದಲ್ಲಿ ಪ್ರದರ್ಶಿತವಾಯಿತು. ಬೊಂಬಾಯಿಯಂತೆ ಕಲ್ಕತ್ತೆಯೂ ಸರ್ವಸಮದರ್ಶಿ ನಗರ. ಎಲ್ಲ ಪ್ರಾಂತಗಳ ಜನರೂ ಅಲ್ಲಿದ್ದಾರೆ. ಬಂಗಾಳಿಗಳಂತೆಯೇ ಇತರ ಎಲ್ಲ ಜನರೂ ಹೃತ್ಪೂರ್ವಕವಾಗಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಭಾರತದ ಎಲ್ಲ ಭಾಗಗಳಿಂದಲೂ ಸಂತಾಪ ಸೂಚಕ ತಂತಿಗಳು ಬರುತ್ತಿರುವುದು ಭಾರತಾದ್ಯಂತ ಅವರ ಜನಪ್ರಿಯತೆಗೆ ದ್ಯೋತಕ.

"ಕೃತಜ್ಞತೆಗೆ ಹೆಸರಾದ ಜನರು ಮತ್ತಾವ ರೀತಿಯಲ್ಲಿಯೂ ವರ್ತಿಸಲಾರರು. ಜನತೆಯ ಕೃತಜ್ಞತೆಗೆ ಅವರು ಪೂರ್ಣ ಅರ್ಹರಾಗಿದ್ದರು. ಅವರ ತ್ಯಾಗ ಅಪಾರ. ಅವರ ಔದಾರ್ಯಕ್ಕೆ ಎಲ್ಲೆಯೇ ಇರಲಿಲ್ಲ. ಅವರ ಪ್ರೇಮಹಸ್ತ ಎಲ್ಲರಿಗೂ ಎಟಕುವಂತಿತ್ತು. ಲಕ್ಷ್ಯವಿಲ್ಲದೆ ದಾನಧರ್ಮ ಮಾಡುತ್ತಿದ್ದರು. ಇದನ್ನು ತಾರತಮ್ಯವರಿತು ಮಾಡ ಬಹುದಾಗಿತ್ತು ಎಂದು ಮೊನ್ನೆ ಮೊನ್ನೆ ಅವರಿಗೆ ನಾನು ಹೇಳಿದಾಗ ಅವರಿಂದ ತಕ್ಷಣ ಉತ್ತರಬಂತು, 'ತಾರತಮ್ಯವಿಲ್ಲದೆ ಕೊಟ್ಟುದರಿಂದ ನನಗೇನೂ ನಷ್ಟವಾಗಿಲ್ಲ.' ರಾಜರಿಂದ ಹಿಡಿದು ನಿರ್ಗತಿಕರವರೆಗೆ ಎಲ್ಲರಿಗೂ ಅವರ ಮನೆಯಲ್ಲಿ ಆತಿಥ್ಯ ದೊರೆಯುತ್ತಿತ್ತು. ಸಂಕಷ್ಟದಲ್ಲಿರುವವರನ್ನು ಸಾಂತ್ವನಗೊಳಿಸಲು ಅವರ ಹೃದಯ ತವಕಿಸುತ್ತಿತ್ತು. ದೇಶಬಂಧುರವರಿಗೆ ಒಂದಲ್ಲ ಒಂದು ರೀತಿಯಲ್ಲಿ ಋಣಿಯಾಗಿರದ ಯುವಕರು ಯಾರಾದರೂ ಬಂಗಾಳದಲ್ಲಿದ್ದಾರೆಯೆ? ನ್ಯಾಯಶಾಸ್ತ್ರದಲ್ಲಿ ಅವರಿಗಿದ್ದ ಅಪ್ರತಿಮ ಜ್ಞಾನದ ಫಲ ಬಡವರಿಗೆ ಸಹ ಒದಗುತ್ತಿತ್ತು. ಒಂದು ಕಾಸು ಸಂಭಾವನೆಯೂ ಇಲ್ಲದೆ ಅವರು ಅನೇಕ ರಾಜಕೀಯ ಖೈದಿಗಳ ಪರವಾಗಿ ವಾದಿಸಿದುದನ್ನು ನಾನು ಬಲ್ಲೆ. ಪಂಜಾಬಿನ ವಿದ್ಯಮಾನಗಳ ತನಿಖೆಗಾಗಿ ಅವರು ಅಲ್ಲಿಗೆ ಹೋದಾಗ ಎಲ್ಲ ವೆಚ್ಚವನ್ನೂ ಅವರೇ ಭರಿಸಿದರು. ಅಲ್ಲಿ ರಾಜಯೋಗ್ಯ ವ್ಯವಸ್ಥೆಯನ್ನೇ ಮಾಡಿದ್ದರು. ಪಂಜಾಬಿನಲ್ಲಿದ್ದ ಅವಧಿಯಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ದುದಾಗಿ ಅವರೇ ನನಗೆ ಹೇಳಿದರು. ಅಪೇಕ್ಷಿಸಿದವರಿಗೆಲ್ಲ ಸಹಾಯ ನೀಡುವ ವಿಶಾಲ ಹೃದಯ ಅವರದಾಗಿತ್ತು. ಆದುದರಿಂದಲೇ ಅವರು ಸಹಸ್ರಾರು ಯುವಜನರ ಹೃದಯದಲ್ಲಿ ನೆಲೆಸಿದ್ದರು.

"ಅವರು ಉದಾರಿಗಳಾಗಿದ್ದಷ್ಟೇ ನಿರ್ಭಯ ಸ್ವಭಾವದವರೂ ಆಗಿದ್ದರು. ಅಮೃತಸರದಲ್ಲಿ ಅವರು ಮಾಡಿದ ಪ್ರಚಂಡ ಭಾಷಣ ನನ್ನನ್ನು ಸ್ತಬ್ಧಗೊಳಿಸಿತ್ತು. ತಕ್ಷಣ ದೇಶದ ವಿಮೋಚನೆ ಆಗಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ಆ ನಿಲುವಿನಲ್ಲಿ ಯಾವ ರೀತಿಯ ಬದಲಾವಣೆಗೂ ಅವರು ತಯಾರಿರಲಿಲ್ಲ; ಅಷ್ಟೆ ಏಕೆ, ಒಂದು ಗುಣವಾಚಕವನ್ನು ತೆಗೆಯಲೂ ಇಷ್ಟಪಡಲಿಲ್ಲ. ಇದಕ್ಕೆ ಅವರ ಮೊಂಡತನ ಕಾರಣ ವಾಗಿರಲಿಲ್ಲ. ದೇಶವನ್ನು ಅವರು ಅಷ್ಟು ಅಪಾರವಾಗಿ ಪ್ರೀತಿಸುತ್ತಿದ್ದುದೇ ಕಾರಣ. ಅದಕ್ಕಾಗಿ ಅವರು ಪ್ರಾಣ ತೆತ್ತರು. ಅವರು ಅಪರಿಮಿತ ಶಕ್ತಿಗಳನ್ನು ಹತೋಟಿ ಯಲ್ಲಿಟ್ಟುಕೊಂಡಿದ್ದರು. ಅವರು ತಮ್ಮ ಅದಮ್ಯ ಉತ್ಸಾಹದಿಂದಲೂ ಸತತ ಪರಿಶ್ರಮದಿಂದಲೂ ತಮ್ಮ ಪಕ್ಷಕ್ಕೆ ಚೈತನ್ಯ ತಂದಿದ್ದರು. ತಮ್ಮ ಅಪಾರ ಶಕ್ತಿ ಸಾಮರ್ಥ್ಯಗಳನ್ನು ಒಂದೇ ಸಮನೆ ವ್ಯಯಿಸಿದುದರಿಂದ ಪ್ರಾಣವನ್ನೇ ಕಳೆದುಕೊಂಡರು. ಇದು ಮನಃಪೂರ್ವಕವಾಗಿ ಮಾಡಿದ ಬಲಿದಾನ, ಅತಿಪವಿತ್ರವಾದದ್ದು.

"ಫರೀದ್‌ಪುರ ಅವರಿಗೆ ಕೀರ್ತಿಕಳಶವನ್ನಿಟ್ಟಿತು. ಅಲ್ಲಿ ಅವರು ಆಡಿದ ಮಾತು ಅವರ ಉತ್ಕೃಷ್ಟ ವಿವೇಚನಾಶಕ್ತಿಯನ್ನೂ ಮುತ್ಸದ್ದಿತನವನ್ನೂ ಪ್ರದರ್ಶಿಸಿತು. ಅದು ಉದ್ದೇಶಪೂರ್ವಕವಾಗಿ ಆಡಿದ ಮಾತು. ದ್ವಂದ್ವಾರ್ಥಕ್ಕೆಡೆಯೇ ಇರಲಿಲ್ಲ. ಅವರೇ

ನನಗೆ ಹೇಳಿದಂತೆ, ಅಹಿಂಸೆಯೊಂದೇ ಮಾರ್ಗವೆಂದು ಆಖೈರಾಗಿ ಅವರು ಅಲ್ಲಿ ಒಪ್ಪಿಕೊಂಡರು. ಅಹಿಂಸೆಯೇ ಭಾರತದ ರಾಜಕೀಯ ಸಿದ್ಧಾಂತವೆಂಬುದನ್ನು ಅಂಗೀಕರಿಸಿದರು.

"ಪಂಡಿತ ಮೋತಿಲಾಲ್ ನೆಹರೂ ಮತ್ತು ಮಹಾರಾಷ್ಟ್ರದ ಶಿಸ್ತಿನ ಮುಂದಾಳುಗಳ ಬೆಂಬಲದಿಂದ ವಿಕಾಸಶೀಲವಾದ ದೊಡ್ಡ ಸ್ವರಾಜ್ಯಪಕ್ಷವನ್ನು ಕಟ್ಟಿದರು. ಆರಂಭದಲ್ಲಿ ಯಾವ ಸಾಧನ ಸಂಪತ್ತೂ ಇಲ್ಲದಿದ್ದರೂ, ತಮಗೆ ಸರಿಯೆಂದು ತೋರಿದ್ದನ್ನು ಮಾಡಬೇಕೆಂದು ನಿರ್ಧರಿಸಿದ ಮೇಲೆ– ಪರಿಣಾಮಗಳೇನೇ ಆಗಲೀ ಅವನ್ನು ಲೆಕ್ಕಿಸದೆ–ಅಪೂರ್ವ ಸಂಕಲ್ಪಶಕ್ತಿ ಸ್ವಪ್ರತಿಭೆ ಹಾಗೂ ವ್ಯವಹಾರಿಕ ಜಾಣ್ಮೆಯಿಂದ ಮಹಾಪಕ್ಷವನ್ನು ಕಟ್ಟಿದರು. ಇಂದು ಸ್ವರಾಜ್ಯಪಕ್ಷ ಅಚ್ಚುಕಟ್ಟಾದ ಶಿಸ್ತಿನ ಪಕ್ಷವಾಗಿದೆ. ಶಾಸನ ಮಂಡಲಕ್ಕೆ ಪ್ರವೇಶ ಮಾಡುವ ಬಗ್ಗೆ ನನ್ನ ಭಿನ್ನಾಭಿಪ್ರಾಯಗಳು ಮೂಲಭೂತ ಸ್ವರೂಪದ್ದಾಗಿದ್ದುವು; ಈಗಲೂ ಆಗಿವೆ. ಆದರೆ ಸರ್ಕಾರವನ್ನು ಪೇಚಿಗೆ ಸಿಕ್ಕಿಸಲು ಹಾಗೂ ನಿರಂತರವಾಗಿ ಅದರ ತಪ್ಪನ್ನು ಎತ್ತಿತೋರಿಸಲು ಶಾಸನ ಮಂಡಲದ ಪ್ರವೇಶದಿಂದ ಉಪಯೋಗವಿದೆಯೆಂಬುದರಲ್ಲಿ ನನಗೆ ಸಂದೇಹವೇ ಇರಲಿಲ್ಲ. ಈ ಮಂಡಲಗಳಲ್ಲಿ ಪಕ್ಷವು ಮಾಡಿರುವ ಮಹತ್ವಪೂರ್ಣ ಕೆಲಸವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅದರ ಕೀರ್ತಿ ಬಹುಮಟ್ಟಿಗೆ ದೇಶಬಂಧುವಿಗೇ ಸಲ್ಲತಕ್ಕದ್ದು. ನಾನು ಬಿಚ್ಚುಮನಸ್ಸಿನಿಂದಲೇ ಅವರೊಂದಿಗೆ ಒಪ್ಪಂದಕ್ಕೆ ಬಂದೆ. ಅಂದಿನಿಂದ ನನ್ನ ಕೈಲಾದ ಮಟ್ಟಿಗೆ ಆ ಪಕ್ಷಕ್ಕೆ ನೆರವು ನೀಡಿದ್ದೇನೆ. ಅವರ ನಿಧನದಿಂದಾಗಿ ನನ್ನ ಕರ್ತವ್ಯ ಇಮ್ಮಡಿಯಾಗಿದೆ. ನಾಯಕನು ಕಣ್ಮರೆಯಾಗಿರುವುದರಿಂದ ಸ್ವರಾಜ್ಯಪಕ್ಷಕ್ಕೆ ಬೆಂಬಲವಾಗಿ ನಾನು ನಿಲ್ಲಬೇಕು. ಒಂದುವೇಳೆ ಸಹಾಯ ಮಾಡಲಾಗದಿದ್ದರೂ ಅದರ ಪ್ರಗತಿಗೆ ಧಕ್ಕೆ ತರುವಂತಹದೇನನ್ನೂ ನಾನು ಮಾಡುವುದಿಲ್ಲ.

"ಫರೀದ್‌ಪುರದ ಭಾಷಣಕ್ಕೆ ಮತ್ತೆ ಬರುತ್ತೇನೆ. ಶ್ರೀಮತಿ ವಾಸಂತಿದೇವಿಯವರಿಗೆ ಸಂತಾಪಸೂಚಕ ಸಂದೇಶವನ್ನು ಕಳುಹಿಸಿರುವ ಹಂಗಾಮಿ ವೈಸರಾಯರ ಸೌಜನ್ಯವನ್ನು ರಾಷ್ಟ್ರವು ಮೆಚ್ಚುತ್ತದೆ. ದಿವಂಗತರ ಬಗ್ಗೆ ಹೃತ್ಪೂರ್ವಕ ಪ್ರಶಂಸೆ ಮಾಡಿರುವ ಆಂಗ್ಲೋ–ಇಂಡಿಯನ್ ಪತ್ರಿಕೆಗಳಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ. ಶುದ್ಧ ಪ್ರಾಮಾಣಿಕತೆಯಿಂದ ಕೂಡಿದ್ದ ಫರೀದ್‌ಪುರದ ಭಾಷಣವು ಬಹುಮಂದಿ ಆಂಗ್ಲೇಯರ ಮನಸ್ಸಿನ ಮೇಲೆ ಪರಿಣಾಮ ಬೀರಿದೆ. ಈ ನಿಧನಕ್ಕಾಗಿ ಕೇವಲ ಸೌಜನ್ಯದ ಪ್ರದರ್ಶನಮಾಡಿ ಮುಗಿಸಿದರೆ ಸಾಲದು, ಎಂದು ನಾನು ತೀವ್ರವಾಗಿ ಭಾವಿಸುತ್ತೇನೆ. ಫರೀದ್‌ಪುರದ ಭಾಷಣದ ಹಿನ್ನೆಲೆಯಲ್ಲಿ ಉನ್ನತ ಉದ್ದೇಶವಿತ್ತು. ಈ ಮಹಾದೇಶಭಕ್ತರು ತಮ್ಮ ನಿಲುವೇನೆಂಬುದನ್ನು ಸ್ಪಷ್ಟಪಡಿಸಬೇಕೆಂದೂ ಮೊದಲ ಪ್ರಸ್ತಾಪ ಅವರಿಂದ ಆಗಬೇಕೆಂದೂ ನಿರೀಕ್ಷಿಸಿದ್ದ ಆಂಗ್ಲೋ–ಇಂಡಿಯನ್ ಸ್ನೇಹಿತರಿಗೆ ಉದಾರವಾಗಿ ತೋರಿದ ಪ್ರತಿಕ್ರಿಯೆ ಅದು. ಅವರ ನಿರೀಕ್ಷೆಯಂತೆಯೇ ಮೊದಲ ಹೆಜ್ಜೆ ಇಟ್ಟಿದ್ದಾಗಿತ್ತು. ಈ ಸ್ನೇಹಪೂರ್ಣ ನಡೆಯನ್ನಿಟ್ಟ ಇವರನ್ನು ಮೃತ್ಯುವಿನ ಕ್ರೂರ

ಬಾಹು ನಮ್ಮ ಮಧ್ಯದಿಂದ ಸೆಳೆದುಕೊಂಡು ಹೋಯಿತು. ಆಂಗ್ಲೇಯರಲ್ಲಿ ಯಾರಿಗಾದರೂ ದೇಶಬಂಧುವಿನ ಉದ್ದೇಶದ ಪ್ರಾಮಾಣಿಕತೆ ಬಗೆಗೆ ಅನುಮಾನವಿದ್ದಲ್ಲಿ ನಾನು ಅವರಿಗೆ ಆ ವಿಷಯ ಭರವಸೆಕೊಡುತ್ತೇನೆ. ಡಾರ್ಜಿಲಿಂಗ್‌ನಲ್ಲಿ ನಾನು ಅವರೊಂದಿಗೆ ಕಳೆದಷ್ಟು ದಿನವೂ ನನಗೆ ತುಂಬಾ ಸ್ಪಷ್ಟವಾಗಿ ತೋರಿದ ಅಂಶವೇದರೆ ಅವರ ನುಡಿಯಲ್ಲಿನ ಉತ್ಕಟ ಪ್ರಾಮಾಣಿಕತೆ. ಎಲ್ಲ ಮನೋಯಾತನೆಗಳನ್ನು ಗುಣಪಡಿಸಲು ಮತ್ತು ಅಪನಂಬಿಕೆಗಳನ್ನು ಮರೆಯಲು ಅವರ ದಿವ್ಯ ಮರಣವನ್ನು ಉಪಯೋಗಿಸಿಕೊಳ್ಳಲಾಗದೆ? ನಾನು ಒಂದು ಸರಳವಾದ ಸೂಚನೆ ನೀಡುತ್ತೇನೆ. ಸರ್ಕಾರವು ಚಿತ್ತರಂಜನದಾಸ್‌ರವರ ನೆನಪಿನ ಗೌರವಾರ್ಥವಾಗಿ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬಾರದೆ? ಅವರೆಲ್ಲರೂ ನಿರಪರಾಧಿಗಳೆಂದು ದಾಸ್‌ರವರು ಭಾವಿಸಿದ್ದರು. ಅವರ ಪರ ವಾದಿಸಲು ಈಗ ದಾಸ್‌ರವರು ಇಲ್ಲ. ಅವರುಗಳು ನಿರಪರಾಧಿಗಳೆಂಬ ಕಾರಣದ ಮೇಲೆ ಅವರನ್ನು ಬಿಡುಗಡೆ ಮಾಡಿ ಎಂದು ನಾನು ಈಗ ಕೇಳುತ್ತಿಲ್ಲ. ಅವರ ಅಪರಾಧದ ಬಗ್ಗೆ ಸರ್ಕಾರದ ಬಳಿ ಉತ್ತಮವಾದ ರುಜುವಾತು ಇರಬಹುದು. ದಿವಂಗತರಿಗೆ ಗೌರವ ಸೂಚಕವಾಗಿ ಅವರುಗಳನ್ನು ಬಿಡುಗಡೆ ಮಾಡಿರಿ; ಈ ವಿಷಯದಲ್ಲಿ ಪೂರ್ವಾಗ್ರಹಕ್ಕೆಡೆ ಕೊಡಬೇಡಿರಿ; ಎಂದು ನಾನು ಕೇಳಿಕೊಳ್ಳುತ್ತೇನೆ. ಭಾರತೀಯರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಅವರನ್ನು ಸಮಾಧಾನಗೊಳಿಸುವ ಇಷ್ಟ ಸರ್ಕಾರಕ್ಕಿದ್ದರೆ ಇದಕ್ಕಿಂತ ಉತ್ತಮ ಮುಹೂರ್ತ ಬೇರೆ ಬರಲಾರದು. ಹೊಸ ವಾತಾವರಣವನ್ನು ಉಂಟುಮಾಡಬೇಕಾದರೆ ಖೈದಿಗಳನ್ನು ಬಿಡಗಡೆ ಮಾಡುವುದದಕ್ಕಿಂತ ಬೇರೆ ಉತ್ತಮ ಕ್ರಮ ಇರಲಾರದು. ನಾನು ಸಾಮಾನ್ಯವಾಗಿ ಬಂಗಾಳದ ಎಲ್ಲ ಭಾಗಗಳಲ್ಲೂ ಪ್ರವಾಸ ಮಾಡಿದ್ದೇನೆ. ಈ ವಿಷಯದಲ್ಲಿ ಸಾರ್ವಜನಿಕರ ಭಾವನೆ–ಸ್ವರಾಜ್ಯವಾದಿಗಳದ್ದಷ್ಟೇ ಅಲ್ಲ–ತೀವ್ರವಾಗಿದೆ. ನಿನ್ನೆ ದೇಶಬಂಧು ದಾಸ್‌ರ ಪಾರ್ಥಿವ ಶರೀರವನ್ನು ದಹಿಸಿದ ಅಗ್ನಿಯು ಶಂಕೆ ಮತ್ತು ಅಪನಂಬಿಕೆಯನ್ನೂ ಭಯವನ್ನೂ ದಹಿಸಲಿ. ತದನಂತರ, ಸರ್ಕಾರಕ್ಕೆ ಇಚ್ಛೆಯಿದ್ದಲ್ಲಿ, ಭಾರತೀಯರ ಕೇಳಿಕೆಯನ್ನು–ಅದು ಯಾವುದೇ ಸ್ವರೂಪದ್ದಾಗಿರಲಿ–ಪರಿಶೀಲಿಸಲು ಸಮ್ಮೇಳನವೊಂದನ್ನು ಕರೆಯಲಿ.

"ಸರ್ಕಾರವು ತನ್ನ ಪಾತ್ರವನ್ನು ನಿರ್ವಹಿಸಬೇಕಾದಲ್ಲಿ ನಾವು ನಮ್ಮ ಪಾತ್ರವನ್ನು ನಿರ್ವಹಿಸಬೇಕು. ನಮ್ಮದು ಏಕಪಾತ್ರಾಭಿನಯವಲ್ಲವೆಂಬುದನ್ನು ತೋರಿಸಿಕೊಡಬೇಕಾಗುತ್ತದೆ. ಯುದ್ಧ ಸಮಯದಲ್ಲಿ ವ್ಯವಹಾರ ಎಂದಿನಂತೆ ಎಂದು ಚರ್ಚಿಲ್ ನುಡಿದಿದ್ದ. ಹಾಗೆಯೆ ನಾವೂ ಹೇಳುವ ಸ್ಥಿತಿಯಲ್ಲಿರಬೇಕು. ಸ್ವರಾಜ್ಯಪಕ್ಷವನ್ನು ಪುನರ್‌ರಚಿಸಬೇಕು. ಬರಸಿಡಿಲು ಬಿದ್ದಂತೆ ಅಕಸ್ಮಾತ್ತಾಗಿ ಸಂಭವಿಸಿರುವ ಆಪತ್ತಿನ ದೆಸೆಯಿಂದ ಪಂಜಾಬಿನ ಹಿಂದೂಗಳು ಮತ್ತು ಮುಸ್ಲಿಮರು ಕೂಡ ತಮ್ಮ ಪರಸ್ಪರ ಜಗಳಗಳನ್ನು ಮರೆತಿರುವಂತಿದೆ. ಎರಡು ಪಕ್ಷಗಳೂ ಭೇದ ಮರೆತು ಒಂದಾಗಲು ತಕ್ಕ ಚೈತನ್ಯ ಮತ್ತು ವಿವೇಕವನ್ನು ತೋರಿಸಬಲ್ಲೆವೇ? ದೇಶಬಂಧುವಿಗೆ ಹಿಂದೂ–ಮುಸ್ಲಿಂ ಐಕ್ಯತೆಯಲ್ಲಿ ನಂಬಿಕೆಯೂ ಇತ್ತು, ಆದರವೂ ಇತ್ತು. ಅತ್ಯಂತ ಸಂದಿಗ್ಧ ಪರಿಸ್ಥಿತಿಯಲ್ಲೂ

ಅವರು ಹಿಂದೂ ಮತ್ತು ಮುಸಲ್ಮಾನರನ್ನು ಒಟ್ಟಿಗೆ ಸೇರಿಸಿಕೊಂಡಿದ್ದರು. ಅವರ ಚಿತಾಗ್ನಿ ನಮ್ಮ ಅನೈಕ್ಯತೆಯನ್ನು ಹೋಗಲಾಡಿಸಬಲ್ಲುದೆ? ಬಹುಶಃ ಅದಕ್ಕೆ ಪೂರ್ವ ಭಾವೀ ಕ್ರಮವೆಂದರೆ ಸಾಮಾನ್ಯ ವೇದಿಕೆಯ ಮೇಲೆ ಎಲ್ಲ ಪಕ್ಷಗಳನ್ನೂ ಸಮಾವೇಶ ಗೊಳಿಸುವುದು. ಅದಕ್ಕಾಗಿ ದೇಶಬಂಧು ಹಾತೊರೆಯುತ್ತಿದ್ದರು. ಅವರು ತಮ್ಮ ಎದುರಾಳಿಗಳ ಬಗ್ಗೆ ಕಹಿಯಾಗಿ ಮಾತನಾಡಬಲ್ಲವರಾಗಿದ್ದರು. ಆದರೆ ನಾನು ಡಾರ್ಜಿ ಲಿಂಗ್‌ನಲ್ಲಿದ್ದಾಗ, ಯಾವ ರಾಜಕೀಯ ವಿರೋಧಿಯ ವಿಷಯದಲ್ಲಾಗಲೀ ಅವರು ಒಂದು ಒರಟು ಮಾತನಾಡಿದ್ದನ್ನು ನಾನು ಕೇಳಲಿಲ್ಲ. ಎಲ್ಲ ಪಕ್ಷಗಳನ್ನೂ ಒಂದುಗೂಡಿಸಲು ನನ್ನ ಸಹಾಯವನ್ನು ಅಪೇಕ್ಷಿಸಿದ್ದರು. ಆದುದರಿಂದ ಅವರ ಕನಸನ್ನು ನನಸು ಮಾಡು ವುದು ವಿದ್ಯಾವಂತ ಭಾರತೀಯರಾದ ನಮ್ಮ ಕರ್ತವ್ಯ. ಹಾಗೆ ಮಾಡಿದರೆ ಸ್ವರಾಜ್ಯದ ಏಣಿಯ ಮೇಲ್ಮೆಟ್ಟಲಿನ ಕೊನೆಯನ್ನು ಈಗ ತಕ್ಷಣ ಮುಟ್ಟದಿದ್ದರೂ ಕೆಲವು ಮೆಟ್ಟಲು ಗಳನ್ನಾದರೂ ಏರಿ ಅವರ ಜೀವನದ ಆಸೆಯನ್ನು ನೆರವೇರಿಸಿದಂತಾಗುತ್ತದೆ. ಆಗ ಮಾತ್ರ ನಮ್ಮ ಹೃದಯಾಂತರಾಳದಿಂದ ಉದ್ಗಾರಮಾಡಬಹುದು: 'ದೇಶಬಂಧು ಸತ್ತಿದ್ದಾರೆ, ದೇಶಬಂಧು ಚಿರಾಯುವಾಗಲಿ'".

"ಬಂಗಾಳವು ಇಂದು ವಿಧವೆಯಂತೆ ಕಾಣುತ್ತದೆ" ಎಂದು ಉದ್ಗಾರ ತೆಗೆದರು ಗಾಂಧೀಜಿ. "ಲೋಕಮಾನ್ಯರನ್ನು ಕ್ರೂರವಿಧಿ ನಮ್ಮಿಂದ ಸೆಳೆದುಕೊಂಡು ಹೋದಾಗ ನಾನು ಅನಾಥನಾದೆ ಎನಿಸಿತ್ತು. ಆ ಆಘಾತದಿಂದ ನಾನು ಇನ್ನೂ ಚೇತರಿಸಿಕೊಂಡಿಲ್ಲ; ಕಾರಣ ಅವರ ನೆಚ್ಚಿನ ಅನುಯಾಯಿಗಳ ಮನವೊಲಿಸಲು ಇನ್ನೂ ಪ್ರಯತ್ನಿಸುತ್ತಿದ್ದೇನೆ. ಆದರೆ ದೇಶಬಂಧುವಿನ ಕಣ್ಮರೆಯಿಂದ ನನಗೆ ಉಂಟಾಗಿರುವ ದುರವಸ್ಥೆ ಇನ್ನೂ ಹೆಚ್ಚಿನದು. ಲೋಕಮಾನ್ಯರು ನಮ್ಮನ್ನು ತೊರೆದು ಹೋದಾಗ ದೇಶದಲ್ಲಿ ಆಶಾ ಪೂರ್ಣ ವಾತಾವರಣವಿತ್ತು. ಹಿಂದೂಗಳೂ ಮುಸಲ್ಮಾನರೂ ಶಾಶ್ವತವಾಗಿ ಒಂದಾಗಿ ದ್ದಾರೆಂಬ ಭಾವನೆ ಇತ್ತು. ನಾವು ಆಗ ಸಮರದ ಹೊಸ್ತಿಲಿನಲ್ಲಿದ್ದೆವು. ಆದರೆ ಈಗ?"

ದೇಶಬಂಧು ಸ್ಮಾರಕಕ್ಕಾಗಿ ಹಣ ನೀಡಬೇಕೆಂದು ಗಾಂಧೀಜಿ ಮನವಿ ಮಾಡಿ ಕೊಂಡರು. ದಾಸ್‌ರವರ ದೊಡ್ಡ ಮಹಲ್‌ಅನ್ನು ಸ್ತ್ರೀಯರ ಮತ್ತು ಮಕ್ಕಳ ಆಸ್ಪತ್ರೆ ಯಾಗಿ ಪರಿವರ್ತಿಸಲು ಎರಡು ತಿಂಗಳೊಳಗಾಗಿ ಹತ್ತು ಲಕ್ಷ ರೂಪಾಯಿಗಳ ನಿಧಿ ಯನ್ನು ಕೂಡಿಸಿದರು. ಬಂಗಾಳದಲ್ಲಿ ಸ್ವರಾಜ್ಯ ಪಕ್ಷವನ್ನು ಬಲಪಡಿಸಲು ತಮ್ಮ ಸರ್ವ ಪ್ರಯತ್ನವನ್ನೂ ಮಾಡಿದರು. ದಾಸ್‌ರವರು ನಿರ್ವಹಿಸುತ್ತಿದ್ದ ತ್ರಿಮುಖ ಜವಾಬ್ದಾರಿಯನ್ನು ಜೆ. ಎಂ. ಸೇನ್‌ಗುಪ್ತ ಅವರು ಹೊರಲು ಅನುವಾದರು. ಸೇನ್ ಗುಪ್ತರವರು ಕಲ್ಕತ್ತೆಯ ಮೇಯರ್ ಆಗಿ ಆಯ್ಕೆಯಾದರು. ಬಂಗಾಳದ ಸ್ವರಾಜ್ಯ ಪಕ್ಷ ಹಾಗೂ ಬಂಗಾಳದ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಆದರು.

ಡಾರ್ಜಿಲಿಂಗ್‌ನಲ್ಲಿ ಹಿಂದೆ ನಡೆದ ಮಾತುಕತೆ ಸಮಯದಲ್ಲಿ ಲಾರ್ಡ್ ಬರ್ಕನ್ ಹೆಡ್‌ರವರಿಂದ ತಾವು ಹೆಚ್ಚು ನಿರೀಕ್ಷಣೆ ಮಾಡುತ್ತಿರುವುದಾಗಿ ದಾಸ್, ಗಾಂಧೀಜಿಗೆ

ಹೇಳಿದ್ದರು. ಕಡೆಗೆ ಜುಲೈ ೧೧ರಂದು ಭಾರತೀಯ ವ್ಯವಹಾರಗಳ ಕಾರ್ಯದರ್ಶಿಯಿಂದ ಹೇಳಿಕೆ ಹೊರಬಿತ್ತು. ಲಾರ್ಡ್‌ರೀಡಿಂಗ್‌ರೊಂದಿಗೆ ಯಾವ ನಿರ್ಧಾರಕ್ಕೂ ಬಂದಿಲ್ಲವೆಂದೂ ಯಾವುದೇ ಬದಲಾವಣೆಗಳನ್ನು ಮಾಡಬೇಕಾಗಿದ್ದರೂ ಲೆಜಿಸ್ಲೇಟಿವ್ ಅಸೆಂಬ್ಲಿಯೊಂದಿಗೆ ಪರ್ಯಾಲೋಚಿಸಬೇಕಾಗುವುದೆಂದೂ ಅವರು ಹೇಳಿದರು. ಕಾಯಿಂದೆಯಲ್ಲಿ ಗೊತ್ತು ಮಾಡಿರುವ ಅವಧಿಗೆ ಮುಂಚಿತವಾಗಿ ಸಂವಿಧಾನವನ್ನು ಮಾರ್ಪಾಟು ಮಾಡಬೇಕಾದರೆ ತಕ್ಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕಾಗುತ್ತದೆ. ಭಾರತೀಯ ನಾಯಕರುಗಳು ಸುಧಾರಣೆಗಳನ್ನು ತೆಗಳಿ ಅವುಗಳಿಗೆ ಕಳಂಕ ತಂದಿದ್ದಾರೆ; ಭಾರತದಲ್ಲಿ ಸುವ್ಯಸ್ಥಿತವಾಗಿರುವ ಪಕ್ಷ ಅವುಗಳನ್ನು ನಾಶಮಾಡಲು ಹೊರಟಿದೆ, ಆದಾಗ್ಯೂ ಸುಧಾರಣೆಗಳು ವಿಫಲವಾಗಿಲ್ಲ. ಹತ್ತು ವರ್ಷಗಳನಂತರ ಸಂವಿಧಾನವನ್ನು ಪುನರ್ ವಿಮರ್ಶೆ ಮಾಡುವುದು ಅಗತ್ಯವಾಗುತ್ತದೆ. ಆಗ ಅದರ ಸ್ವರೂಪ ಸಂಪೂರ್ಣವಾಗಿ ಬದಲಾವಣೆ ಹೊಂದುತ್ತದೆ;–ಈ ರೀತಿಯಲ್ಲಿ ಪ್ರಕಟಣೆ ಹೊರಟಿತ್ತು. ಪ್ರಭುತ್ವದ ಕಾರ್ಯದರ್ಶಿಯವರ ಹೇಳಿಕೆಯನ್ನು ಕುರಿತು ಗಾಂಧೀಜಿ ಹೀಗೆ ಬರೆದರು:

"ಭಾರತೀಯ ವ್ಯವಹಾರಗಳ ಕಾರ್ಯದರ್ಶಿಯವರ ಭಾಷಣ ತುಂಬಾ ನಿರಾಶಾದಾಯಕವಾಗಿದೆ. ನಿರಾಶೆಗೆ ಕಾರಣ, ಭಾಷಣವು ಏನನ್ನೂ ಕೊಟ್ಟಿಲ್ಲ ಎಂಬುದಕ್ಕಿಂತ ಹೆಚ್ಚಾಗಿ ಈಗ ಉಂಟಾಗಿರುವ ಅವಾಸ್ತವಿಕ ಪರಿಸ್ಥಿತಿ ಎನ್ನಬಹುದು. ಇದಕ್ಕೆ ಕಾರ್ಯದರ್ಶಿಯದೇ ಜವಾಬ್ದಾರಿ......

"ಲಾರ್ಡ್ ಬರ್ಕನ್ ಹೆಡ್‌ರವರ ಮುಂದೆ ಮುದ್ದಿಮನ್ ಸಮಿತಿಯ ಅಲ್ಪ ಸಂಖ್ಯಾತರ ವರದಿ ಇತ್ತು. ಅಂದರೆ ಆ ವರದಿ ಡಾ. ಸಪ್ರು ಮತ್ತು ಜಿನ್ನಾರವರದು. ಅವರಿಬ್ಬರೂ ಭಾರತದ ಅತ್ಯಂತ ಬುದ್ಧಿವಂತ ವಕೀಲರು. ಅವರುಗಳು ಎಂದೂ ಅಸಹಾಕಾರದ ಅಪರಾಧಕ್ಕೆ ಗುರಿಯಾದವರಲ್ಲ. ಅವರಲ್ಲಿ ಒಬ್ಬರು ವೈಸರಾಯರ ಮಂತ್ರಿಮಂಡಲದ ಸದಸ್ಯರೂ ಆಗಿದ್ದರು. ಅವರಿಗೂ ಅವರ ಸಹೋದ್ಯೋಗಿಗಳಿಗೂ ಅವರ ಉದ್ಯಮದ ತಿಳುವಳಿಕೆಯೇ ಇಲ್ಲವೆಂದು ಹೇಳಲಾಗಿದೆ. ಆದುದರಿಂದ ಒಂದು ಪಕ್ಷ ಮೋತಿಲಾಲರು ಸಂವಿಧಾನವನ್ನು ರಚಿಸಿ ಅದನ್ನು ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿ ಮತ್ತು ಮಿಯರ್ಾ ಫಜ್ಲಿ ಹುಸೇನರು ಅನುಮೋದಿಸಿದರೂ ಅದಕ್ಕೆ ಇನ್ನೂ ಒಳ್ಳೆಯ ಸ್ವಾಗತ ದೊರಕುವ ಸಾಧ್ಯತೆ ಇದೆಯೆ? ಲಾರ್ಡ್ ಬರ್ಕನ್ ಹೆಡ್‌ರ ಯೋಜನೆ ಅಜಾಗರೂಕರನ್ನು ಬೋನಿಗೆ ಬೀಳಿಸುವ ಹಂಚಿಕೆ ಅಲ್ಲವೆ?"

"ನಾವು ನಮ್ಮ ವ್ಯವಹಾರಗಳನ್ನು ನೆಟ್ಟಗಿಟ್ಟುಕೊಳ್ಳಬೇಕೆಂದು ಸೂಚನೆ ಕೊಟ್ಟಿದೆ ಆ ಭಾಷಣ. ಅದಕ್ಕಾಗಿ ನಾನು ಆಭಾರಿ"–ಎಂದು ಹೇಳಿದರು. ಜುಲೈ ೧೬ರಂದು ಸಮಾವೇಶಗೊಂಡಿದ್ದ ಸ್ವರಾಜ್ಯಪಕ್ಷದ ಸಾಮಾನ್ಯ ಅಧಿವೇಶನದಲ್ಲಿ ನೆಹರೂ, ಜಯಕರ್ ಪಟೇಲ್, ಗಾಂಧಿ ಮುಂತಾದವರು ಭಾಗವಹಿಸಿದ್ದರು. ಸುದೀರ್ಘ ಚರ್ಚೆಯನಂತರ ಫರೀದ್‌ಪುರದ ಭಾಷಣದಲ್ಲಿ ಹೇಳಿದ್ದುದನ್ನೆಲ್ಲ ಅಧಿವೇಶನವು ಅನುಮೋದಿಸಿತು. ಬರ್ಕನ್‌ಹೆಡ್‌ರ ಹೇಳಿಕೆಯಲ್ಲಿನ "ಧ್ವನಿ ಹಾಗೂ ಭಾಷೆಯನ್ನು ಗಮನಿಸಿದರೆ ಗೌರವ

ಯುತ ಸಹಕಾರ ಕಷ್ಟಸಾಧ್ಯವಾಗಿದೆ; ಅಸಾಧ್ಯವೆಂದರೂ ಸಲ್ಲುತ್ತದೆ". ಎಂದು ವಿಷಾದ ವನ್ನು ವ್ಯಕ್ತಪಡಿಸಿತು.

ಕಾಂಗ್ರೆಸ್ ಆಡಳಿತ ಯಂತ್ರವನ್ನು ಗಾಂಧಿಯವರು ಮೋತಿಲಾಲ್‌ರಿಗೆ ಒಪ್ಪಿಸಿದ್ದು, ಈ ಸಭೆಯ ಮುಖ್ಯವಾದ ಪರಿಣಾಮ.

"ದೇಶಬಂಧುವಿನ ನೆನಪಿಗಾಗಿಯೂ ಲಾರ್ಡ್ ಬರ್ಕೆನ್ ಹೆಡ್‌ರ ಭಾಷಣದಿಂದ ಉಂಟಾಗಿರುವ ಪರಿಸ್ಥಿತಿಯನ್ನು ಎದುರಿಸುವುದಕ್ಕೂ ನಾನು ವಿಶೇಷವಾಗಿ ಯಾವ ಕಾಣಿಕೆ ನೀಡಬಹುದೆಂದು ಈಚಿನ ಕೆಲವು ದಿನಗಳಲ್ಲಿ ತುಂಬಾ ಪೇಚಾಡುತ್ತಿದ್ದು ಆ ಬಗ್ಗೆ ಒಂದು ನಿರ್ಧಾರಕ್ಕೆ ಬಂದಿದ್ದೇನೆ. ಕಳೆದ ವರ್ಷದ ಒಪ್ಪಂದದ ಪ್ರಕಾರ, ಸ್ವರಾಜ್ಯ ಪಕ್ಷದ ಮೇಲೆ ಹೇರಿದ್ದ ವಿಧಿಯನ್ನು ತೆಗೆಯಬೇಕು ಎಂಬುದೇ ಆ ನಿರ್ಧಾರ. ಇದರಿಂದಾಗಿ, ಇನ್ನು ಮುಂದೆ ಕಾಂಗ್ರೆಸ್ ಪ್ರಧಾನವಾಗಿ ನೂಲುವ ಸಂಸ್ಥೆಯಾಗಿರಬೇಕಾಗಿಲ್ಲ. ಆ ಭಾಷಣದಿಂದ ಉದ್ಭವವಾಗಿರುವ ಪ್ರಸ್ತುತ ಪರಿಸ್ಥಿತಿಯಲ್ಲೇ ಸ್ವರಾಜ್ಯಪಕ್ಷದ ಅಧಿಕಾರ ಹಾಗೂ ಪ್ರಭಾವ ಹೆಚ್ಚಾಗಬೇಕೆಂಬುದನ್ನು ನಾನು ಮನಗಂಡಿದ್ದೇನೆ. ಆ ಪಕ್ಷವನ್ನು ಸಂವರ್ಧನೆಗೊಳಿಸಲು ನನ್ನ ಕೈಲಾಗುವ ಒಂದು ಕೆಲಸವನ್ನು ನಿರ್ಲಕ್ಷಿಸಿದರೂ ನಾನು ಕರ್ತವ್ಯಲೋಪ ಮಾಡಿದಂತಾಗುತ್ತದೆ. ಕಾಂಗ್ರೆಸನ್ನು ಪ್ರಧಾನವಾಗಿ ರಾಜಕೀಯ ಸಂಸ್ಥೆಯನ್ನಾಗಿ ಮಾಡಿದರೆ ಸ್ವರಾಜ್ಯ ಪಕ್ಷದ ಬಲ ವರ್ಧಿಸುತ್ತದೆ. ಹಿಂದಿನ ಒಪ್ಪಂದದ ಪ್ರಕಾರ ಕಾಂಗ್ರೆಸಿನ ಚಟುವಟಿಕೆಗಳು ರಚನಾತ್ಮಕ ಕಾರ್ಯಕ್ರಮಕ್ಕೆ ಮಾತ್ರ ಸೀಮಿತ ವಾಗಿರಬೇಕೆಂಬ ನಿರ್ಬಂಧ ಇತ್ತು. ಈಗ ದೇಶದಲ್ಲಿ ತಲೆದೋರಿರುವ ಹೊಸ ಪರಿಸ್ಥಿತಿ ಯಲ್ಲಿ ಈ ನಿರ್ಬಂಧವು ಮುಂದುವರಿಯಬೇಕೆಂದು ಮನಗಂಡಿದ್ದೇನೆ. ವೈಯಕ್ತಿಕವಾಗಿ ನಿಮ್ಮನ್ನು ಈ ನಿರ್ಬಂಧದಿಂದ ಮುಕ್ತರನ್ನಾಗಿ ಮಾಡುವುದರ ಜೊತೆಗೆ ಮುಂಬರುವ ಎ.ಐ.ಸಿ.ಸಿ.ಯು ಅದೇ ರೀತಿ ಮಾಡಬೇಕೆಂದು ಕೇಳುವವನಿದ್ದೇನೆ. ಅಷ್ಟೆ ಅಲ್ಲದೆ, ಕಾಂಗ್ರೆಸ್ ಪೂರ್ಣವಾಗಿ ನಿಮ್ಮ ವಶಕ್ಕೆ ಒಪ್ಪಿಸಲ್ಪಡಬೇಕೆಂದು ಕೇಳುತ್ತೇನೆ. ಆಗ ನೀವು ದೇಶದ ಹಿತದೃಷ್ಟಿಯಿಂದ ಸೂಕ್ತವಾದ ರಾಜಕೀಯ ನಿರ್ಣಯಗಳನ್ನು ಸಂಸ್ಥೆಯ ಅಧಿವೇಶನದ ಮುಂದೆ ತರಬಹುದು. ವಾಸ್ತವವಾಗಿ ನಾನು ನಿಮ್ಮವನೇ ಆಗಿದ್ದೇನೆಂದು ತಿಳಿದುಕೊಳ್ಳಬೇಕು. ಆತ್ಮಸಾಕ್ಷಿಯಾಗಿ ನಾನು ಯಾವ ಯಾವ ರೀತಿಯಲ್ಲಿ ನಿಮಗೂ ಸ್ವರಾಜ್ಯಪಕ್ಷಕ್ಕೂ ಸೇವೆ ಸಲ್ಲಿಸಬಹುದೋ ಆ ರೀತಿಯಲ್ಲಿ ಸಲ್ಲಿಸುತ್ತೇನೆ".

ಅಖಿಲ ಬಂಗಾಳದಲ್ಲಿ ಸ್ಮಾರಕ ನಿರ್ಮಾಣಕ್ಕಾಗಿ ನಿಧಿಯನ್ನು ಕೂಡಿಸುವುದರಲ್ಲಿ ಯಶಸ್ಸು ಗಳಿಸಿದ ಮೇಲೆ ಗಾಂಧಿಯವರು ಅಖಿಲ ಭಾರತ ದೇಶಬಂಧು ಸ್ಮಾರಕದತ್ತ ಗಮನ ಹರಿಸಿದರು. ಜುಲೈ ೨೩ರ 'ಯಂಗ್‌ಇಂಡಿಯಾ'ದಲ್ಲಿ ಗಾಂಧಿ, ನೆಹರು, ಠಾಕೂರ್, ಅಜಾದ್ ಮತ್ತಿತರರ ಹಸ್ತಾಕ್ಷರಗಳನ್ನೊಳಗೊಂಡ ಮನವಿ ಪ್ರಕಟ ವಾಯಿತು. "ಚರಖಾ ಮತ್ತು ಖದ್ದರ್‌ಅನ್ನು ಈಗ ಸಾರ್ವತ್ರಿಕವಾಗಿ ಪ್ರಚುರ ಪಡಿಸು ವುದಕ್ಕಿಂತ ಮಿಗಿಲಾದ ಮತ್ತಾವ ಸ್ಮಾರಕವನ್ನೂ ನಾವು ಆಲೋಚಿಸಲಾರೆವು. ಆದುದರಿಂದ

ಆ ಉದ್ದೇಶಕ್ಕಾಗಿ ಹಣವನ್ನು ನೀಡಬೇಕೆಂದು ಕೋರುತ್ತೇವೆ. ಹಣ ಕೂಡಿದಷ್ಟೂ ಸಾರ್ಥಕವಾಗಿ ಉಪಯೋಗಿಸುವ ಸಾಧ್ಯತೆ ಇರುವುದರಿಂದ ಈ ಸ್ಮಾರಕಕ್ಕೆ ಎಷ್ಟು ಹಣ ಬೇಕೆಂಬುದನ್ನು ಅಂಕಿತ ಮಾಡುವುದಿಲ್ಲ".

ಗಾಂಧಿಯವರ ಪ್ರಾಮಾಣಿಕತೆ ಬಗ್ಗೆ ಎಳ್ಳಷ್ಟು ಸಂಶಯವಿಲ್ಲದಿದ್ದರೂ ಅವರು ತಮ್ಮ ಎದುರಾಳಿಗಳ ಹಾಗೂ ಟೀಕೆ ಮಾಡುವವರ ವಿಚಾರದಲ್ಲಿ ಸ್ನೇಹ ತಾಳುತ್ತಾರೆಯೇ ಎಂದು ಕೆಲವರಿಗೆ ಸಂದೇಹವಿತ್ತು. ಗಾಂಧೀಜಿಯವರು ಬಂಗಾಳದಲ್ಲಿ ವಾಸ್ತವ್ಯವನ್ನು ಮಾಡಿದ ಈ ದೀರ್ಘ ಅವಧಿಯಲ್ಲಿ ಆ ವಿಚಾರದಲ್ಲಿದ್ದ ಭೀತಿಯನ್ನು ನಿವಾರಣೆ ಮಾಡಿದರು.ರೋಟರಿ ಕ್ಲಬ್‌ನವರ ಆಹ್ವಾನದ ಮೇಲೆ ಗಾಂಧಿಯವರು ಐರೋಪ್ಯರನ್ನುದ್ದೇಶಿಸಿ ಚರಖಾದ ಆರ್ಥಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಕುರಿತು ಮಾತನಾಡಿದರು. ಆಗಸ್ಟ್ ೮ನೇ ತಾರೀಖಿನಂದು ಕಲ್ಕತ್ತೆಯ ಗ್ರಾಂಡ್ ಹೋಟೆಲ್ ನಲ್ಲಿನಡೆದ ಈ ಸಭೆಯು ರೋಟರಿ ಕ್ಲಬ್‌ನ ಇತಿಹಾಸದಲ್ಲಿ ಅಪೂರ್ವವಾಗಿತ್ತು. ಅಧ್ಯಕ್ಷ ಜೇಮ್ಸ್‌ರವರು ಸ್ವಾಗತ ಭಾಷಣ ಮಾಡುತ್ತಾ, ಗಾಂಧಿಯವರನ್ನು ಸಮಾಜ ಸೇವಕರೆಂದೂ ಜೀವನದಲ್ಲಿ ಸ್ವಾರ್ಥವನ್ನು ಹಿಂಬದಿಯಲ್ಲಿಟ್ಟು ಸೇವೆಯನ್ನು ಮುಂದೆ ಮಾಡಿಕೊಂಡಿರುವವರೆಂದೂ ರಾಟೆಯು ಅವರ ಚಟುವಟಿಕೆಗಳ ಕೇಂದ್ರವೆಂದೂ ಬಣ್ಣಿಸಿದರು. ಸಭೆಯಲ್ಲಿ ಸುಮಾರು ನೂರು ಜನ ಬ್ರಿಟಿಷರೂ ಕೆಲವು ಜನ ಭಾರತೀಯ ಅತಿಥಿಗಳೂ ಇದ್ದರು. ಅದು 'ಮಹಿಳೆಯರ ದಿನ'. ಗಣ್ಯ ಅತಿಥಿಯ ಗೌರವಾರ್ಥವಾಗಿ ಕಟ್ಟುನಿಟ್ಟಾದ ಸಸ್ಯಾಹಾರ ಭೋಜನವನ್ನು ಏರ್ಪಡಿಸಲಾಗಿತ್ತು. ಅಂದಿನ ಭೋಜನ ಕೂಟವನ್ನು ಬಂಗಾಳಿ ವಿಧವೆಯ ಭೋಜನ ಕೂಟವನ್ನಾಗಿ ಮಾರ್ಪಡಿಸಿದ ಅವರ 'ಸೂಕ್ಷ್ಮವಾದ ಸೌಜನ್ಯ' ವನ್ನು ಗಾಂಧಿ ಮೆಚ್ಚಿದರು. ರೋಟೇರಿಯನ್‌ಗಳ ಮುಂದೆ ಹರಡಿದ್ದ ಸಪ್ಪೆ ಆಲೂಗಡ್ಡೆ ಮತ್ತು ಕೋಸಿನಷ್ಟೆ ಸಪ್ಪೆಯಾದ ವಿಷಯದ ಮೇಲೆ ಮಾತನಾಡಲು ಆಹ್ವಾನಿಸಿದ್ದಕ್ಕೆ ಶ್ಲಾಘಿಸಿದರು.

ನೂಲಿನ ಗಿರಣಿಗಳಿಗೆ ಚರಖವು ಸ್ಪರ್ಧಿಯಾಗಿದೆಯೆಂಬ ವಾದವನ್ನು ಭಾಷಣಕಾರರು ಎಷ್ಟು ಗಂಭೀರವಾಗಿ ಹೇಳಿದರೋ ಅಷ್ಟೇ ಗಂಭೀರವಾಗಿ ಸಭಿಕರು ಕೇಳಿದರು. ದೇಶಾದ್ಯಂತ ಪ್ರಸರಿಸಿರುವ ಏಳು ಲಕ್ಷ ಹಳ್ಳಿಗಳಲ್ಲಿರುವ (ಅವುಗಳಲ್ಲಿ ಅನೇಕ ಹಳ್ಳಿಗಳಿಗೆ ರೈಲಿನ ಸಂಪರ್ಕವೇ ಇಲ್ಲ) ಕೋಟ್ಯಂತರ ಜನರಲ್ಲಿ ಸ್ವಲ್ಪ ಜನರನ್ನಾದರೂ ಮುಟ್ಟಲು ಗಿರಣಿಗಳಿಗೆ ಸಾಧ್ಯವಿಲ್ಲ. ಜನಸಂಖ್ಯೆಯಲ್ಲಿ ಹತ್ತನೇ ಒಂದು ಭಾಗದಷ್ಟು ಜನರಿಗೆ ಒಪ್ಪೊತ್ತೇ ಊಟ. ಒಣರೊಟ್ಟಿ ಮತ್ತು ಸ್ವಲ್ಪ ಕೊಳಕಾದ ಉಪ್ಪು, ಅಷ್ಟೇ ಅವರ ಆಹಾರ. ಲಾರ್ಡ್ ಕರ್ಜನ್ ಉದಾರವಾಗಿ ಲೆಕ್ಕಾಚಾರ ಮಾಡಿದ್ದರೂ ಸಹ ಜನರ ತಿಂಗಳ ಸರಾಸರಿ ವರಮಾನ ತಲಾ ಮೂರು ರೂಪಾಯಿಗಿಂತ ಹೆಚ್ಚಾಗಿಲ್ಲ. ಈ ಅಲ್ಪ ವರಮಾನದ ಜೊತೆಗೆ ತಿಂಗಳಿಗೆ ಐದು ಅಥವಾ ಆರು ರೂಪಾಯಿ ಸೇರಿದರೆ ಅವರಿಗೆ ಭಾಗ ಬಂದಂತಾಗುವುದಿಲ್ಲವೆ? ಕೋಟ್ಯಂತರ ಜನರಿಗೆ ಚರಖದ ಅರ್ಥ ಅದು. ಅದೊಂದೇ ಸಾರ್ವತ್ರಿಕವಾಗಿ ಉಪಯೋಗಕ್ಕೆ ಬರುವಂತಹುದು. ಅದನ್ನು

ಕಲಿಯಲು ವಿಶೇಷ ನೈಪುಣ್ಯವೇನೂ ಬೇಕಾಗಿಲ್ಲ. ಬೆರಗುಗೊಳಿಸುವಷ್ಟು ಅಗ್ಗವಾಗಿದೆ ಅದು. ಭಾರತದಲ್ಲಿನ ಆರ್ಥಿಕ ದುರ್ದೆಸೆ, ಪ್ರವಾಹ ಹಾಗೂ ಕ್ಷಾಮದ ಸಮಸ್ಯೆಯನ್ನು ಬಗೆಹರಿಸಲು ಇದಕ್ಕಿಂತ ಹೆಚ್ಚು ಸಮರ್ಪಕವಾದ ಸಾಧನವಿಲ್ಲವೆಂದು ಗಾಂಧಿ ನುಡಿದರು. "ಗಿರಣಿಗಳು ಈಗಾಗಲೇ ಶ್ರೀಮಂತರಾಗಿರುವವರ ಶ್ರೀಮಂತಿಕೆಯನ್ನು ಅನಾವಶ್ಯಕವಾಗಿ ಹೆಚ್ಚಿಸುತ್ತವೆ. ಆದರೆ ಶ್ರೀಮಂತರಾಗಿಲ್ಲದ ಹಸಿದಿರುವ ಕೋಟ್ಯಂತರ ಜನರ ಕೈಗೆ ಹಣ ಬರುವಂತೆ ಮಾಡುವ ಚರಖವು ಪಾರಮಾರ್ಥಿಕವಾಗಿ ಶ್ರೇಷ್ಠವಾಗಿದೆ". ಗಾಂಧಿಯವರು ಮುಂದುವರೆದು: "'ಆಧ್ಯಾತ್ಮಿಕ ಜಗತ್ತಿನಲ್ಲಿ ನೈಸರ್ಗಿಕ ನಿಯಮ' ಎಂಬ ಡ್ರಮ್ಮಂಡನ ಪುಸ್ತಕವನ್ನು ಬಹಳ ಹಿಂದೆ ತೀವ್ರ ಆಸಕ್ತಿಯಿಂದ ಓದಿದ್ದೆ. ಆ ಲೇಖಕರ ಬರವಣಿಗೆಯ ಶೈಲಿ ನನಗಿದ್ದಿದ್ದರೆ ನೈಸರ್ಗಿಕ ಜಗತ್ತಿನಲ್ಲಿ ಆಧ್ಯಾತ್ಮಿಕ ನಿಯಮವಿದೆ ಯೆಂಬುದನ್ನು ಇನ್ನೂ ಚೆನ್ನಾಗಿ ತೋರಿಸಿಕೊಡುತ್ತಿದ್ದೆ". ಎಂದರು. ಹಸಿವು, ರೋಗ ಮತ್ತು ದುರ್ಬಲತೆಯಿಂದ ನರಳುತ್ತಿರುವವರನ್ನು ವಿದ್ಯುತ್ ಸ್ಪರ್ಶದಿಂದ ನಿರ್ನಾಮ ಮಾಡಬೇಕೆಂದು ಸ್ವಸ್ಥಬುದ್ಧಿಯುಳ್ಳ ಕೆಲವು ಜನರು ಬರೆದಿರುವುದನ್ನು ತಾವು ಓದಿರುವುದಾಗಿ ಹೇಳಿದರು. "ಅದು ಆರ್ಥಿಕವಾಗಿ ಶ್ರೇಷ್ಠ ಪರಿಹಾರವಾಗಿರಬಹುದು. ಆದರೆ ಅದು ಮಾನವೀಯ ಅಥವಾ ಪಾರಮಾರ್ಥಿಕ ಪರಿಹಾರವಲ್ಲ. ಅವರು ಚರಖ ವನ್ನು ಜನರಿಗೆ ಆಧ್ಯಾತ್ಮಿಕ ಪರಿಹಾರವಾಗಿ ನೀಡಿದ್ದರು. ಈ ಪರಿಹಾರ ಯುಗ ಯುಗಾಂತರಗಳಿಂದ ರೂಢಿಯಲ್ಲಿದ್ದುದರಿಂದ ಎಲ್ಲರಿಗೂ ಚಿರಪರಿಚಿತ. ಈ ಪರಿಹಾರ ವನ್ನು ತೀವ್ರವಾಗಿ ಪ್ರಯೋಗಿಸಿದರೆ ನಗರ ಹಾಗೂ ಕಾರ್ಖಾನೆಯ ಜೀವನದ ಘೋರ ಪರಿಣಾಮಗಳಿಂದ ಪಾರಾಗಬಹುದು. ಈ ಸರಳ ಸಾಧನದಿಂದ ಮನಸ್ಸಿನ ಮೇಲೆ ಆಗುವ ಆಧ್ಯಾತ್ಮಿಕ ಪ್ರತಿಕ್ರಿಯೆಯ ಬಗ್ಗೆ ಏನಾದರೂ ಹೇಳುವ ಅಗತ್ಯವಿದೆಯೇ? ಅದನ್ನು ಪ್ರಯೋಗಿಸಿದವರೆಲ್ಲರೂ ಗೊಂದಲದಿಂದ ವಿಚಲಿತವಾಗಿದ್ದ ಮನಸ್ಸಿಗೆ ಶಾಂತಿ ಯನ್ನು ಮೂಡಿಸಿಕೊಂಡಿರುವುದು ಕಾಣುತ್ತದೆ. ಗಯಟೆ ಅದರ ಪರಿಣಾಮವೆಂತಹು ದೆಂಬುದನ್ನು ತನ್ನ ಅಮರ ಕಾವ್ಯದಲ್ಲಿಳಿಸಿದ್ದಾನೆ. ಅವನ ಕಾವ್ಯದಲ್ಲಿ ಬರುವ ಮಾರ್ಗರೆಟ್ ನೂಲುತ್ತಾ ಸ್ಫೂರ್ತಿಯಿಂದ ಹಾಡುವ ಹಾಡು ರಾಟೆಯ ನೂಲಿನಷ್ಟೇ ಪರಿಪೂರ್ಣ ವಾದದ್ದು. ಶುದ್ಧವಾದದ್ದು. ಆತ ಹೊಸ ಯಂತ್ರ ಸಾಧನಗಳ ಶತ್ರುವೇನಲ್ಲ. ಆದರೆ ಸ್ಥಳಪಲ್ಲಟವಾದ ವಸ್ತು ಕಸವಾಗುತ್ತದೆ. ಅಂತೆಯೇ ಹೊಸಯಂತ್ರ ಸಾಧನ ಗಳು ಮಾನವತೆಯ ಘನತೆ ಹಾಗೂ ಶಾಂತಿಗೆ ಸಹಾಯಕವಾಗದಿದ್ದರೆ ಅವುಗಳು ಹೇಯವಾಗುತ್ತವೆ. ಅಂತಹವುಗಳನ್ನು ತ್ಯಜಿಸಬೇಕು."

ಗಾಂಧಿಯವರು ತಮ್ಮ ಭಾಷಣದುದ್ದಕ್ಕೂ ಚರಖದ ರಾಜಕೀಯ ಮುಖದ ಬಗೆಗೆ ಬೇಕಂತಲೇ ಪ್ರಸ್ತಾಪ ಮಾಡಿರಲಿಲ್ಲ. ಆದರೆ ಕಡೆಯಲ್ಲಿ ರೊಟೇರಿಯನ್ ಡಾ ಸರ್ವಾಧಿಕಾರಿ ಆ ವಿಚಾರ ಮಾತನಾಡುವಂತೆ ಒತ್ತಾಯಪಡಿಸಿದರು. "ಹಿಂದೂಗಳ ಧರ್ಮಾಚರಣೆಯಲ್ಲಿ ಚರಖವು ಅಷ್ಟೊಂದು ಮಹತ್ವ ಪಾತ್ರವಹಿಸಿದ್ದು. ಬಂಗಾಳಿ ಗೃಹದಲ್ಲಿ ಈಗ ಜೀವಂತವಾಗಿರುವ ಪಕ್ಷದಲ್ಲಿ ಅದು ನಿರುಪಯುಕ್ತವಾಗಿ ಬಿದ್ದಿರಲು

ಕಾರಣವೇನು? ಚರಖದ ಉತ್ಪನ್ನದ ಖರ್ಚು ದುಬಾರಿಯಾಗಿರುವುದರಿಂದಲ್ಲವೆ ಅದು ಹೊರದೂಡಲ್ಪಟ್ಟಿರುವುದು?" ಎಂದು ಸರ್ವಾಧಿಕಾರಿ ಕೇಳಿದರು.

"ಅದರಲ್ಲಿ ಆಧ್ಯಾತ್ಮಿಕ ಮುಖವೂ ಸೇರಿದೆ" ಎಂದು ಗಾಂಧೀಜಿ ಹೇಳಿದರು. ತಮಗೆ ರಾಣಿ ಎಲಿಜಬತ್‌ರ ಅಧಿಕಾರವಿದ್ದಲ್ಲಿ ಆಕೆ ನಡೆದುಕೊಂಡ ರೀತಿಯಲ್ಲೇ ತಾವು ಈ ಬಗ್ಗೆ ನಡೆದುಕೊಳ್ಳುವುದಾಗಿ ಹೇಳಿದರು. ತನ್ನ ಪ್ರಜೆಗಳು ಹಾಲೆಂಡಿನಿಂದ ಲೇಸ್‌ಅನ್ನು ಆಮದು ಮಾಡಿಕೊಳ್ಳುವುದು ಅಪರಾಧವೆಂದು ಆಕೆ ಸಾರಿದಳು. ಹೊರದೇಶದಿಂದ ಕುಶಲ ಕಾರ್ಮಿಕರನ್ನು ಕರೆಸಿ ಅದನ್ನು ತಯಾರುಮಾಡಲು ತನ್ನ ಜನಕ್ಕೆ ಕಲಿಸುವ ಏರ್ಪಾಟು ಮಾಡಿದಳು. ಅಲ್ಲಿಯವರೆಗೆ ಅದರ ಬಳಕೆಯನ್ನು ನಿಷೇಧಿಸಿದ್ದಳು. ತಾವು ಅನಿರ್ಬಂಧ ಮುಕ್ತ ವ್ಯಾಪಾರವನ್ನು ಒಪ್ಪುವುದಿಲ್ಲವೆಂದೂ ತಮಗೆ ಅಧಿಕಾರವಿದ್ದಿದ್ದರೆ ದುಬಾರಿ ಆಮದು ಕರವನ್ನು ವಿಧಿಸಿ ಪರದೇಶದಿಂದ ಬಟ್ಟೆಯ ಆಮದನ್ನು ನಿಲ್ಲಿಸುತ್ತಿದ್ದುದಾಗಿ ತಿಳಿಸಿದರು. "ಈ ಕೈಗಾರಿಕೆ ಹೇಗೆ ನಾಶ ವಾಯಿತು ಎಂದು ನೀವು ಕೇಳಿದ್ದೀರಿ. ಅದಕ್ಕೆ ಉತ್ತರ ಕೊಡಲು ನೋವಾಗುತ್ತದೆ. ಆದರೂ ನಾನು ಉತ್ತರ ನೀಡಲೇಬೇಕು. ಅದು ಸಾಯುವಂತೆ ಮಾಡಲಾಯಿತು". ಎಂದು ಆವೇಶದಿಂದ ಹೇಳಿದರು. ಈ ಬಗ್ಗೆ ಈಸ್ಟ್ ಇಂಡಿಯಾ ಕಂಪನಿಯ ದಾಖಲೆ ಯನ್ನು ಕಳಂಕಗೊಳಿಸುವ ದಾರುಣಕಥೆಯನ್ನು ಅವರು ಹೇಳಬಹುದಾಗಿತ್ತು. ಆದರೆ ಅವರು ಸಂಯಮ ತಂದುಕೊಂಡರು. "ಕಂಪನಿಯ ನೌಕರರೇ ಬರೆದ (ಭಾರತೀಯರು ಬರೆದದ್ದಲ್ಲ) ಇತಿಹಾಸದ ಪುಟಗಳನ್ನು ಓದುತ್ತಾ ಹೋದರೆ ಪ್ರತಿಯೊಬ್ಬ ಪ್ರಾಮಾಣಿಕ ಪುರುಷ ಹಾಗೂ ಸ್ತ್ರೀಯ ರಕ್ತಕುದಿಯುತ್ತದೆ. ಘೋರ ಕಷ್ಟವನ್ನು ತಪ್ಪಿಸಿಕೊಳ್ಳಲು ಜನರು ತಮ್ಮ ಹೆಬ್ಬೆಟ್ಟುಗಳನ್ನು ಕತ್ತರಿಸಿಕೊಳ್ಳಬೇಕಾಯಿತು, ಎಂದು ನಾನು ತಿಳಿಸಿದಲ್ಲಿ ನಿಮಗೆ ಪರಿಸ್ಥಿತಿಯ ಅರಿವಾಗುತ್ತದೆ. ಡಾ. ಸರ್ವಾಧಿಕಾರಿ ಹೇಳಿದಂತೆ ಚರಖವು ಪ್ರತಿಯೊಂದು ಮನೆಯಲ್ಲೂ ಜೀವಂತವಾಗಿಲ್ಲ. ಅದನ್ನು ನಾಶಮಾಡಲಾಗಿತ್ತು. ಈಗ ಪುನರುಜ್ಜೀವನಗೊಳಿಸಲಾಗುತ್ತಿದೆ. ಪ್ರತಿಯೊಂದು ದೇಶವೂ ತನ್ನ ಕೈಗಾರಿಕೆಗಳನ್ನು ಬೆಳಸಬೇಕಾಗುತ್ತದೆ. ಪ್ರಾರಂಭದಲ್ಲಿ ಅವುಗಳ ಉತ್ಪನ್ನಗಳಿಗೆ ಹೆಚ್ಚು ಬೆಲೆ ಕೊಡ ಬೇಕಾದರೂ ಪರವಾಗಿಲ್ಲ".

"ಸ್ವಾರ್ಥಕ್ಕಿಂತ ಸೇವೆಯೇ ಮುಂದು" ಎಂಬುದು ಕ್ಲಬ್ಬಿನ ಧ್ಯೇಯ. ಇದನ್ನು ರೊಟೇರಿಯನ್ನರಿಗೆ ನೆನಪು ಮಾಡಿಕೊಡುತ್ತಾ ಗಾಂಧೀಜಿ ಹೇಳಿದರು: "ಭಾರತದ ಜನರ ಅಭ್ಯುದಯದ ಧರ್ಮದರ್ಶಿಗಳು ನೀವು. ಸ್ವಾರ್ಥಕ್ಕೆ ಬದಲಾಗಿ ಸೇವೆಯ ಧ್ಯೇಯವನ್ನು ನೀವು ಮುಂದಿಟ್ಟುಕೊಳ್ಳಬೇಕು. ಜನರು ತಮ್ಮ ಮನೆಗಳಲ್ಲೇ ಬಟ್ಟೆಯನ್ನು ತಯಾರಿಸಿ ಕೊಳ್ಳುವ ಸಾಧ್ಯತೆ ಇರುವಾಗ ಮ್ಯಾಂಚೆಸ್ಟರ್ ಕ್ಯಾಲಿಕೋ ಬಟ್ಟೆಯನ್ನಾಗಲೀ ಗಿರಣಿ ಯಲ್ಲಿ ಮಾಡಿದ ಬಟ್ಟೆಯನ್ನಾಗಲೀ ತೆಗೆದುಕೊಳ್ಳಬಾರದೆಂದು ಜನರಿಗೆ ನೀವು ಬೋಧಿಸ ಬೇಕು" ಎಂದರು. ಮುಂದುವರಿದು, ಒಂದು ದೃಷ್ಟಾಂತ ಕೊಟ್ಟರು. ಡಚ್ ನೌಕಾ ಕಂಪೆನಿಗೂ ಬ್ರಿಟಿಷ್ ಕಂಪೆನಿಗೂ ತೀವ್ರಪೈಪೋಟಿ ಬಿದ್ದಾಗ ಡಚ್ ಕಂಪೆನಿಯು ಡೆಕ್‌ನಲ್ಲಿ

ಕುಳಿತು ಪ್ರಯಾಣ ಮಾಡುವವರನ್ನು ಉಚಿತವಾಗಿ ಕರೆದುಕೊಂಡು ಹೋಗುವುದಾಗಿ ಪ್ರಕಟಿಸಿತು. ಅದಕ್ಕೆ ಮೊದಲು ಆ ವರ್ಗದ ಪ್ರಯಾಣಕ್ಕೆ ೯೧ ರೂಪಾಯಿಗಳನ್ನು ಕೊಡಬೇಕಾಗಿತ್ತು. "ಸ್ವಸ್ಥ ಕೈಗಾರಿಕೆಯು ಅಂತಹ ಪೈಪೋಟಿಯನ್ನು ಎದುರಿಸಲಾರದು. ಅಂತಹ ಅನೈತಿಕ ಸ್ಪರ್ಧೆಯ ವಿರುದ್ಧ ಜಗತ್ತಿನ ಅಭಿಪ್ರಾಯವನ್ನು ನೀವು ಮೂಡಿಸ ಬೇಕು. ನನಗೆ ಬೇಕಾದುದು ನ್ಯಾಯಯುತವಾದ ಸ್ಪರ್ಧೆ. ಅಸಮಾನವಾದ ಅನುಕೂಲ ಗಳುಳ್ಳ ವ್ಯವಸ್ಥೆ ನನಗೆ ಬೇಕಾಗಿಲ್ಲ" ಎಂದರು ಗಾಂಧೀಜಿ.

ಯುವಜನರನ್ನು ಕಾಡುತ್ತಿದ್ದ ಮತ್ತೊಂದು ಪ್ರಶ್ನೆಯನ್ನು ಓವರ್‌ಟೂನ್ ಭವನದಲ್ಲಿ ಸೇರಿದ್ದ ಸಭೆಯಲ್ಲಿ ಪ್ರಸ್ತಾಪಿಸಿದರು. "ನಮ್ಮ ಮೇಲೆ ಆಧಿಪತ್ಯ ನಡೆಸು ತ್ತಿರುವವರ ಬಗೆಗೆ ನಮ್ಮ ಹೃದಯದಲ್ಲಿ ಸ್ವಲ್ಪವೂ ಪ್ರೀತಿಯಿಲ್ಲ. ಅವರನ್ನು ದ್ವೇಷಿಸದೆ ನಮ್ಮ ದೇಶವನ್ನು ಪ್ರೀತಿಸುವುದು ಸಾಧ್ಯವೆ?" ಎಂಬುದೇ ಸಮಸ್ಯೆ. ಅದು ಸಾಧ್ಯವೇ ಇಲ್ಲ ಎಂದು ಅನೇಕರು ಹೇಳುತ್ತಾರೆ. ಮೂವತ್ತು ವರ್ಷಗಳ ಪರ್ಯಂತ ಈ ಸಮಸ್ಯೆ ಯನ್ನು ಅಭ್ಯಸಿಸಿರುವುದಾಗಿ ಗಾಂಧೀಜಿ ಹೇಳಿ, ನಮಗಿಷ್ಟವಿಲ್ಲದ ಪ್ರಭುತ್ವವನ್ನು ನಡೆಸುತ್ತಿರುವವರನ್ನು ಪ್ರೀತಿಸುವುದು ನಮ್ಮ ರಾಷ್ಟ್ರೀಯ ಭಾವನೆಗೆ ಪೂರ್ಣ ಸಮಂಜಸವೆಂಬ ತಮ್ಮ ನಿಶ್ಚಿತ ಸಿದ್ಧಾಂತವನ್ನು ಪ್ರಕಟಿಸಿದರು. ದಕ್ಷಿಣ ಆಫ್ರಿಕಾದಲ್ಲೂ ಭಾರತದಲ್ಲೂ ತಾವು ಎದುರಿಸಬೇಕಾಗಿ ಬಂದ ತೊಡಕುಗಳನ್ನು ಪರಿಗಣಿಸಿದರೆ, ತಮ್ಮ ಸಹಚರರನ್ನು ದ್ವೇಷಿಸಲು ಸಾಕಷ್ಟು ಕಾರಣಗಳಿದ್ದುವು. ಆದರೆ ತಮ್ಮ ಬುದ್ಧಿಯನ್ನು ಸ್ಥಿಮಿತದಲ್ಲಿಟ್ಟುಕೊಂಡಿದ್ದುದರಿಂದ ಹಾಗೆ ಮಾಡಲಿಲ್ಲ. ತಪ್ಪೋ, ಸರಿಯೋ, ವಿನಾಕಾರಣವಾಗಿ ತಾನು ತೀವ್ರ ಕಿರುಕುಳಕ್ಕೊಳಗಾಗಿರುವುದಾಗಿ ವ್ಯಕ್ತಿ ಭಾವಿಸುತ್ತಾನೆ. ಇದಕ್ಕೆ ಕಾರಣ, ತನ್ನನ್ನು ಆಳುವವರಿಗೂ ತನಗೂ ಇರುವ ವರ್ಣ ಭೇದವೇ ಎಂದು ಆತ ಭಾವಿಸುತ್ತಾನೆ. ಆಗ ಅಂತಹ ಆಳರಸರನ್ನು ಪ್ರೀತಿಸುವುದು ಹೇಗೆ? ಎಂಬುದೇ ಪ್ರಶ್ನೆ. ಪ್ರೇಮ ನೈಜವಾದ ಪರಮಶಕ್ತಿಯಾದುದರಿಂದ ಪೀಡಿಸು ವವನನ್ನು ಪ್ರೀತಿಸುವುದು ಸಾಧ್ಯವೇ ಇಲ್ಲ– ಎಂಬ ವಾದ ಇದೆ. ಯುದ್ಧಗಳ ದೃಷ್ಟಾಂತ ವನ್ನೂ ನಾಗರಿಕ ಸಮಾಜಗಳಲ್ಲಿ ಕಾನೂನುಗಳನ್ನು ಅನ್ವಯ ಮಾಡುವ ವಿಧಾನವನ್ನು ತಿಳಿಸಿ ದ್ವೇಷವೇ ರಾಷ್ಟ್ರೀಯತೆಯ ತಿರುಳು ಎಂದು ಹೇಳುವವರಿದ್ದಾರೆ. ಆದರೆ ಹಾಗೆ ಹೇಳುವುದು ಭ್ರಾಂತಿಯ ಪರಮಾವಧಿ. "ಎಲ್ಲಿಯ ವರೆಗೆ ಹೆಚ್ಚು ಮಂದಿ ಸ್ತ್ರೀ ಪುರುಷರು ಅಂತಹ ಮನೋಧರ್ಮ ತಾಳಿರುತ್ತಾರೆಯೋ ಅಲ್ಲಿಯ ವರೆಗೆ ದೇಶದ ಹಾಗೂ ಜಗತ್ತಿನ ಪ್ರಗತಿಗೆ ತಡೆ ಉಂಟಾಗುತ್ತದೆ. ದ್ವೇಷದಿಂದ ಜಗತ್ತು ಬೇಸತ್ತಿದೆ. ಪಾಶ್ಚಾತ್ಯ ರಾಷ್ಟ್ರಗಳು ಬಳಲಿರುವುದನ್ನು ನಾವು ಕಾಣುತ್ತಿದ್ದೇವೆ. ಈ ದ್ವೇಷದ ಹಾಡಿನಿಂದ ಮಾನವತೆಗೆ ಪ್ರಯೋಜನವಾಗಿಲ್ಲವೆಂಬುದನ್ನು ನಾವು ನೋಡು ತ್ತಿದ್ದೇವೆ. ಹೊಸ ಹಾಳೆಗಳನ್ನು ಮಗುಚಿ ವಿಶ್ವಕ್ಕೆ ಪಾಠವನ್ನು ಸಿದ್ಧಪಡಿಸುವ ಭಾಗ್ಯ ಭಾರತದ್ದಾಗಿರಲಿ. ಒಂದು ಲಕ್ಷ ಮಂದಿ ಆಂಗ್ಲೇಯರನ್ನು ಮೂವತ್ತು ಕೋಟಿ ಜನರು ದ್ವೇಷಿಸುವ ಅಗತ್ಯವಿದೆಯೇ? ಈ ಸಂಜೆಯ ಭಾಷಣದ ವಿಷಯವನ್ನು

ಇಷ್ಟರ ಮಟ್ಟಿಗೆ ವಾಸ್ತವಿಕ ಸ್ವರೂಪಕ್ಕಿಳಿಸಬಹುದು. ಆಂಗ್ಲೇಯರ ಬಗ್ಗೆ ಒಂದು ಕ್ಷಣ ದ್ವೇಷ ತಾಳುವುದೂ ಮಾನವತೆಗೆ ಹೀನಾಯಮಾಡಿದಂತೆ; ಭಾರತದ ಘನತೆಗೆ ಕುಂದು ತಂದಂತೆ, ಎಂಬುದು ನನ್ನ ನಮ್ರ ಅಭಿಪ್ರಾಯ. ದ್ವೇಷವನ್ನು ಸಂಪೂರ್ಣವಾಗಿ ಮೂಲೋತ್ಪಾಟನೆ ಮಾಡುವುದು ಜನಸ್ತೋಮಕ್ಕೆ ಬಹು ಕಷ್ಟಸಾಧ್ಯವಾದ ಮಾತು. ಆದುದರಿಂದ ನಿಮ್ಮ ದ್ವೇಷವನ್ನು ಕೆಡುಕು ಮಾಡುವವನ ಮೇಲೆ ತೋರುವುದಕ್ಕೆ ಬದಲಾಗಿ ಕೆಡುಕಿನ ವಿರುದ್ಧ ತೋರಿಸಿ. ಕೆಡುಕನ್ನು ದ್ವೇಷಿಸಿ; ಕೆಡಕು ಮಾಡುವವನನ್ನಲ್ಲ" ಎಂಬ ಸೂತ್ರವನ್ನು ಮುಂದಿಟ್ಟರು.

ಕೆಲವೇ ವಾಕ್ಯಗಳಲ್ಲಿ ತಮ್ಮ ಸಿದ್ಧಾಂತವನ್ನು ಗಾಂಧೀಜಿ ಪ್ರತಿಪಾದಿಸಿದರು. "ನಾವು ಸಿಕ್ಕಿಕೊಂಡಿರುವ ಆಡಳಿತ ವ್ಯವಸ್ಥೆಯ ಭ್ರಷ್ಟ ಸ್ವರೂಪದ ವಿಷಯದಲ್ಲೂ ಆಂಗ್ಲ ಆಳರಸರ ವಿಷಯದಲ್ಲೂ ನನ್ನಷ್ಟು ಕಟುವಾಗಿ ಭಾರತದಲ್ಲಿ ಇನ್ನಾರೂ ಮಾತ ನಾಡಿರಲಾರರು. ನನ್ನ ಶತ್ರುಗಳೆಂದು ಹೇಳಿಕೊಳ್ಳುವವರ ಬಗೆಗೆ ನನಗೆ ಯಾವ ದ್ವೇಷವೂ ಇಲ್ಲ. ವೈಯಕ್ತಿಕವಾಗಿ ಹೇಳುವುದಾದರೆ, ಅವರ ವಿಚಾರದಲ್ಲಿ ನನಗೆ ಪ್ರೇಮವೇ ಇದೆ. ಅಂದ ಮಾತ್ರಕ್ಕೆ ಅವರ ಲೋಪದೋಷಗಳ ಮೇಲೆ ನಾನು ಕುರುಡಾಗಿದ್ದೇನೆಂದಲ್ಲ. ನಾವು ಪ್ರೀತಿಸುವವರಲ್ಲಿ ಒಳ್ಳೆಯ ಗುಣಗಳಿವೆಯೆಂದು (ಅದು ನಿಜವಾಗಿರಬಹುದು ಅಥವಾ ಊಹೆಯಾಗಿರಬಹುದು) ಅವರನ್ನು ಪ್ರೀತಿಸಿದರೆ ಅದು ಪ್ರೇಮ ಎನಿಸಿ ಕೊಳ್ಳುವುದಿಲ್ಲ. ನನಗೆ ನಾನು ನಿಷ್ಠನಾಗಿದ್ದರೆ, ಮಾನವತೆಗೆ ನಿಷ್ಠನಾಗಿದ್ದರೆ, ಮಾನವ ಸ್ವಭಾವದಲ್ಲಿನ ಎಲ್ಲ ದೋಷಗಳನ್ನೂ ನಾನು ಅರಿತುಕೊಳ್ಳಬೇಕು. ನನ್ನ ಎದುರಾಳಿಗಳ ದೌರ್ಬಲ್ಯಗಳನ್ನೂ ದೋಷಗಳನ್ನೂ ಅರ್ಥಮಾಡಿಕೊಳ್ಳಬೇಕು. ಅಷ್ಟೆಲ್ಲ ಅವರು ಗಳಲ್ಲಿದ್ದರೂ ಅವರನ್ನು ದ್ವೇಷಿಸಬಾರದು, ಪ್ರೀತಿಸಬೇಕು. ಈಗ ನಾವು ಏಗುತ್ತಿರುವ ಪ್ರಭುತ್ವದ ವ್ಯವಸ್ಥೆಯನ್ನು ಪೈಶಾಚಿಕವೆಂದು ಕರೆಯಲು ನಾನು ಹಿಂಜರಿದಿಲ್ಲ. ಹಾಗೆ ಹೇಳಿದ್ದರಲ್ಲಿ ಏನನ್ನೂ ವಾಪಸು ತೆಗೆದುಕೊಳ್ಳುವುದಿಲ್ಲ. ಆದರೆ ಕೆಡಕು ಮಾಡುವವರನ್ನು ಶಿಕ್ಷಿಸಲು ಸಾಧನೋಪಾಯಗಳನ್ನು ಹುಡುಕುತ್ತಾ ಹೋದರೆ ಆ ವ್ಯವಸ್ಥೆಯೊಂದಿಗೆ ವ್ಯವಹರಿಸಲಾಗುವುದಿಲ್ಲವೆಂಬುದನ್ನು ನಾನು ಬಲ್ಲೆ. ಅವರನ್ನು ಪ್ರೀತಿಸಿ ತಾಳ್ಮೆ ಹಾಗೂ ಸಭ್ಯ ವರ್ತನೆಯಿಂದ ಅವರನ್ನು ಪರಿವರ್ತಿಸುವುದು ನನ್ನ ಕೆಲಸ. ಅಸಹಕಾರವು ದ್ವೇಷದ ಸ್ತುತಿಯಲ್ಲ. ಸತ್ಯಾಗ್ರಹಿಗಳು ಅಥವಾ ಅಸಹಕಾರಿಗಳು ಎಂದು ಕರೆದು ಕೊಳ್ಳುವ ಅನೇಕರು ಆ ಹೆಸರನ್ನಿಟ್ಟುಕೊಳ್ಳುವ ಅರ್ಹತೆ ಪಡೆದಿಲ್ಲವೆಂಬುದನ್ನು ಬಲ್ಲೆ. ಅವರೇ ತಮ್ಮ ಸಿದ್ಧಾಂತವನ್ನು ಭಂಗಗೊಳಿಸಿದ್ದಾರೆ. ನಿಜವಾದ ಅಸಹಕಾರ ವೆಂದರೆ ಕೆಡಕಿನೊಂದಿಗೆ ಅಸಹಕಾರವೇ ಹೊರತು ಕೆಡಕು ಮಾಡುವವನೊಂದಿಗೆ ಅಲ್ಲ".

ತತ್ವಕ್ಕೆ ಸಂಬಂಧಿಸಿದ ಸೂಕ್ಷ್ಮ ವಿಚಾರಗಳ ಮೀಮಾಂಸೆಗೆ ಅದು ತಕ್ಕ ಸ್ಥಳ ವಾಗಿರಲಿಲ್ಲ. ಎಲ್ಲ ಸುವ್ಯವಸ್ಥಿತ ಕುಟುಂಬಗಳಲ್ಲೂ ಅನ್ವಯ ಮಾಡಲ್ಪಟ್ಟಿರುವ ನಿಯಮ ಅದು. ಅದೇ ನಿಯಮವನ್ನು ರಾಜಕೀಯ ಕ್ಷೇತ್ರಕ್ಕೂ ಅನ್ವಯಿಸಬೇಕೆಂದು ಗಾಂಧೀಜಿ ಮನವಿ ಮಾಡಿದರು. ತಪ್ಪುಮಾಡಿರುವ ಮಗ ಅಥವಾ ತಂದೆಯನ್ನು

ಶಿಕ್ಷೆ ಮಾಡುವುದಕ್ಕಾಗಲೀ ಉತ್ತೇಜನಕೊಡುವುದಕ್ಕಾಗಲೀ ಪ್ರಯತ್ನ ಮಾಡುವುದಿಲ್ಲ. ಬದಲಾಗಿ ತಂದೆ ಮಗನನ್ನು ಅಥವಾ ಮಗ ತಂದೆಯನ್ನು ತಿದ್ದಲು ಪ್ರಯತ್ನಿಸುತ್ತಾನೆ. ತಪ್ಪು ಮಾಡಿದ ಮಕ್ಕಳನ್ನು ಕುರುಡು ಪ್ರೇಮದಿಂದ ಅತಿಯಾಗಿ ಪ್ರೀತಿಸಿದ ಪಿತೃಗಳ ದೃಷ್ಟಾಂತವೂ ಇವೆ. ಹಾಗೆಯೇ ತಪ್ಪು ಮಾಡಿದ ಪಿತೃಗಳನ್ನು ಪ್ರೇಮದ ತಪ್ಪು ಕಲ್ಪನೆಯಿಂದ ಓಲೈಸಿಕೊಂಡು ಹೋದ ಪುತ್ರರ ನಿದರ್ಶನಗಳೂ ಇವೆ, ನಿಜ. ಆದರೆ ಗಾಂಧೀಜಿ ಒತ್ತಿ ಹೇಳುತ್ತಿದ್ದುದು "ತಾರತಮ್ಯವನ್ನರಿತ ಪ್ರೇಮ; ವಿವೇಚನೆಯಿಂದ ಕೂಡಿದ ಪ್ರೇಮ; ಯಾವೊಂದು ದೋಷವನ್ನೂ ಮರೆಮಾಚದ ಪ್ರೇಮ–ಸುಧಾರಕನ ಪ್ರೇಮ." ಈ ಗುಟ್ಟನ್ನು ನಾವು ಕಂಡುಕೊಂಡ ತಕ್ಷಣ ಕೇಡು ಕಣ್ಮರೆಯಾಗುತ್ತದೆ.

ಸುಧಾರಕನ ಪ್ರೇಮ ಎಂತಹ ಪಾತ್ರವನ್ನು ವಹಿಸಬಹುದು ಮತ್ತು ಹಿಂದೆ ಎಂತಹ ಪರಿಣಾಮಕಾರಿಯಾದ ಪಾತ್ರವಹಿಸಿತ್ತು ಎಂಬ ಬಗೆಗೆ ಉದಾಹರಣೆಗಳನ್ನು ಕೊಟ್ಟರು. ಒಂದೇ ಪಂಗಡಕ್ಕೆ ಸೇರಿದ ಸದಸ್ಯರುಗಳ ನಡುವೆ ಇದನ್ನು ಅನ್ವಯಿಸ ಬಹುದು; ಅಂತೆಯೆ ವಿವಿಧ ಜನಾಂಗಗಳಿಗೂ ಅನ್ವಯಮಾಡಲು ಸಾಧ್ಯ. ಅಸ್ಪೃಶ್ಯತೆಯು ಹಿಂದೂಧರ್ಮದ ಅವಿಭಾಜ್ಯ ಅಂಗ ಎಂದು ಭಾವಿಸುವ ಕೆಲವು ಮಂದಿ ಹಿಂದೂ ಗಳಿದ್ದಾರೆ. ಅದಕ್ಕೆ ಶಾಸ್ತ್ರದ ಆಧಾರವಿದೆಯೆಂದು ತೋರಲು ಶಾಸ್ತ್ರಗಳನ್ನು ಉದ್ಧರಿಸು ತ್ತಾರೆ. ವಿದ್ಯಾವಂತರಾಗಿ ತಿಳುವಳಿಕೆ ಹೊಂದಿರುವ ಜನರು ತಿಳುವಳಿಕೆ ಇಲ್ಲದವರ ಶಿರಚ್ಛೇಧನ ಮಾಡಬೇಕೇ? ಖಂಡಿತ ಅದಲ್ಲ ಪರಿಹಾರ. ಅದರ ರಹಸ್ಯ, ಸತತವಾದ ಅಹಿಂಸಾತ್ಮಕ ನಡೆಯಲ್ಲಿ ಅಡಗಿದೆ. ಸ್ವಯಂ ಕಷ್ಟಸಹಿಷ್ಣುತೆಯು ಇನ್ನೂ ಉತ್ತಮ ಮಾರ್ಗ. ವೈಕೋಂ ಇದಕ್ಕೆ ಒಂದು ನಿದರ್ಶನ. ತಿರುವಾಂಕೂರಿನಲ್ಲಿ ಅಸ್ಪೃಶ್ಯತೆಯ ಬುಡ ಕುಸಿದು ಬಿದ್ದಿರುವುದಕ್ಕೆ ಕಾರಣರಾದವರು ವೈಕೋಮಿನ ತರುಣರು.

ಉಪಸಂಹಾರ ಮಾಡುತ್ತಾ ಗಾಂಧೀಜಿ ಹೇಳಿದರು:

"ಕಷ್ಟ ಸಹಿಷ್ಣುತೆಯಲ್ಲಿ ಅಡಗಿದೆ ರಹಸ್ಯ. ರಾಷ್ಟ್ರೀಯತೆ ಎಂದರೇನೆಂಬುದನ್ನು ಅರ್ಥಮಾಡಿಕೊಳ್ಳೋಣ. ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ನಾವು ಬಯಸುತ್ತೇವೆ. ಆದರೆ ಬೇರೆಯವರ ಶೋಷಣೆಗಾಗಿ ನಾವು ಅದನ್ನು ಕೇಳುವುದಿಲ್ಲ. ಇತರ ದೇಶಗಳನ್ನು ದುಃಸ್ಥಿತಿಗಿಳಿಸುವ ಉದ್ದೇಶವೂ ಇಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ, ಭಾರತದ ಸ್ವಾತಂತ್ರ್ಯವೆಂದರೆ, ಇಂಗ್ಲೆಂಡಿನ ಅಳಿವೂ ಅಲ್ಲ, ಆಂಗ್ಲೇಯರ ವಿನಾಶವೂ ಅಲ್ಲ. ಭಾರತದ ಸ್ವಾತಂತ್ರ್ಯದ ಅರ್ಥ ಅದಾದರೆ ನಾನು ಅಂತಹ ಸ್ವಾತಂತ್ರ್ಯವನ್ನು ಬಯಸು ವುದೇ ಇಲ್ಲ. ಸ್ವತಂತ್ರ ಭಾರತದಿಂದ ಇತರ ದೇಶಗಳು ಸ್ವಲ್ಪಮಟ್ಟಿಗಾದರೂ ಕಲಿತು ಕೊಳ್ಳಲಿ. ನನ್ನ ದೇಶದ ಸಾಧನ ಸಂಪತ್ತು ಮಾನವ ಕಲ್ಯಾಣಕ್ಕೆ ವಿನಿಯೋಗವಾಗಲಿ, ಎಂಬ ಉದ್ದೇಶದಿಂದ ನಮ್ಮ ದೇಶದ ಸ್ವಾತಂತ್ರ್ಯವನ್ನು ನಾನು ಬಯಸುತ್ತೇನೆ. ವ್ಯಕ್ತಿ ತನ್ನ ಗ್ರಾಮದ ಒಳಿತಿಗಾಗಿ ಪ್ರಾಣತ್ಯಾಗ ಮಾಡಬೇಕು; ಗ್ರಾಮ ಜಿಲ್ಲೆಯ ಹಿತಕ್ಕಾಗಿ, ಜಿಲ್ಲೆ ಪ್ರಾಂತಕ್ಕಾಗಿ, ಪ್ರಾಂತ್ಯ ದೇಶಕ್ಕಾಗಿ, ಮಡಿಯಬೇಕು, ಎಂಬುದನ್ನು ರಾಷ್ಟ್ರ

ಭಕ್ತಿಯ ಪಂಥ ಬೋಧಿಸುತ್ತದೆ. ಅದೇ ರೀತಿ ಅಗತ್ಯ ಬಿದ್ದರೆ, ಒಂದು ದೇಶವು ಜಗತ್ತಿನ ಒಳಿತಿಗಾಗಿ ಮಡಿಯಬೇಕಾದರೆ ಅದಕ್ಕೆ ಸ್ವಾತಂತ್ರ್ಯವಿರಬೇಕು. ನನ್ನ ಅರ್ಥದಲ್ಲಿ ರಾಷ್ಟ್ರ ಪ್ರೇಮವೆಂದರೆ, ನನ್ನ ದೇಶಕ್ಕೆ ಸ್ವಾತಂತ್ರ್ಯ ಲಭಿಸಬೇಕು. ಒಂದು ಪಕ್ಷ ಮಾನವ ಜನಾಂಗದ ಉಳಿವಿಗೆ ಅಗತ್ಯವೆಂದು ತೋರಿದರೆ ನನ್ನ ದೇಶ ಬಲಿದಾನ ಮಾಡಬೇಕು. ಅಲ್ಲಿ ಜನಾಂಗ ದ್ವೇಷಕ್ಕೆಡೆಯೇ ಇಲ್ಲ. ಅದು ನಮ್ಮ ರಾಷ್ಟ್ರೀಯತೆ ಆಗಿರಲಿ".

ಇಂಪೀರಿಯಲ್ ಪುಸ್ತಕ ಭಂಡಾರದ ಗ್ರಂಥಪಾಲಕ ಜಾಪ್‌ಮನ್ ಪ್ರಶ್ನೆಯೊಂದನ್ನು ಹಾಕಿದ: "ಭಾರತೀಯರು ಸ್ವಪ್ರಭುತ್ವಕ್ಕೆ ಸಮರ್ಥರಾಗಿಲ್ಲದಿರುವುದರಿಂದ ಅವರು ರಾಜಕೀಯ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಕೇಳುವುದು ಜನಾಂಗದ ದ್ವೇಷಕ್ಕೆ ಪೋಷಕವಾಗುವುದಿಲ್ಲವೇ?" ಈ ಪ್ರಶ್ನೆಗೆ ಗಾಂಧೀ ತಕ್ಕ ಉತ್ತರ ನೀಡಿದರು: "ನಾವು ನಮ್ಮ ವ್ಯವಹಾರಗಳನ್ನು ನೋಡಿಕೊಳ್ಳುವ ಸಾಮರ್ಥ್ಯ ಪಡೆದುಕೊಳ್ಳುವ ತನಕ ಈ ಪ್ರಭುತ್ವವನ್ನು ಸಹಿಸಿಕೊಳ್ಳಬೇಕೆಂಬ ಮಾತನ್ನು ನೀನು ಅಪಾರ್ಥ ಮಾಡಿಕೊಂಡಿದ್ದೀಯೆ. ನಾವು ಈ ವ್ಯವಸ್ಥೆಯನ್ನು ನಿರೋಧಿಸುವುದರ ಮೂಲಕವೇ ನಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಸಾಧ್ಯ. ಭಾರತೀಯರು ತಮ್ಮನ್ನು ತಾವು ಆಳಿಕೊಳ್ಳಲು ಅಸಮರ್ಥರು ಎಂದು, ಈ ಪ್ರಶ್ನೆ ಹಾಕಿದಾತ ಹೇಳಿ ತನ್ನ ಜನಾಂಗದ ಪೂರ್ವಾಗ್ರಹವನ್ನು ತನಗರಿವಿಲ್ಲದಂತೆಯೇ ತೋರ್ಪಡಿಸಿಕೊಂಡಿದ್ದಾನೆ. 'ಜಗತ್ತಿನ ವ್ಯವಹಾರಗಳನ್ನೆಲ್ಲ ನಿಭಾಯಿಸುವುದಕ್ಕಾಗಿಯೇ ಆಂಗ್ಲೇಯರು ಹುಟ್ಟಿದ್ದಾರೆ.' ಶ್ರೇಷ್ಠತ್ವ ಭಾವನೆ ಹಾಗೂ ದುರಹಂಕಾರ ಈ ಪೂರ್ವಾಗ್ರಹದಲ್ಲಿ ಅಡಗಿದೆ. ಆ ವಿಚಾರದ ವಿರುದ್ಧ ಹೋರಾಡುವುದಕ್ಕಾಗಿಯೇ ನನ್ನ ಜೀವನ ಮುಡುಪಾಗಿದೆ. ಆಂಗ್ಲೇಯರನ್ನು ಆ ಸ್ಥಿತಿಯಿಂದ ಉಚ್ಚಾಟನೆ ಮಾಡಿದ ಹೊರತು ಭಾರತದಲ್ಲಿ ಶಾಂತಿ ಇರುವುದಿಲ್ಲ. ವಿಶ್ವದ ದುರ್ಬಲ ಜನಾಂಗಗಳಿಗೂ ಶಾಂತಿ ಇರುವುದಿಲ್ಲ. ಕೆಟ್ಟ ಆಡಳಿತ ನಡೆಸಿಕೊಳ್ಳುವ ಪೂರ್ಣಹಕ್ಕು ಭಾರತಕ್ಕೆ ಇದೆ. ಯಾವುದೇ ವಿದೇಶೀಯನು ಬಂದು ನನ್ನ ದೇಶದ ಮೇಲೆ ಶಾಂತಿಯನ್ನು ಹೇರಿಸುವುದರ ವಿರುದ್ಧ ನನ್ನ ಮನಸ್ಸು ಬಂಡಾಯ ಹೂಡುತ್ತದೆ; ನಮ್ಮ ದೇಶದಲ್ಲಿ ಬ್ರಿಟಿಷರು ಶಾಂತಿಯನ್ನು ಹೇರಿಸುವುದನ್ನು ನನ್ನ ಹೃದಯ ಪ್ರತಿಭಟಿಸುತ್ತದೆ."

ಗಾಂಧಿಯವರನ್ನು ಕಂಡು ಯಾವುದಾದರೂ ವಿಷಯದ ಬಗ್ಗೆ ಸ್ಪಷ್ಟೀಕರಣ ಪಡೆಯಲು ಜನರಿಗೆ ಅವಕಾಶ ಕೊಡಲಾಗಿತ್ತು. ಇದುವರೆಗೆ ಆಂಗ್ಲೋ–ಇಂಡಿಯನ್ನರ ಜೊತೆ ಸಂಪರ್ಕ ದೊರೆಯುತ್ತಿದ್ದುದು ರೈಲು ಪ್ರಯಾಣದ ಸಂದರ್ಭದಲ್ಲಿ ಮಾತ್ರ. ಅವರುಗಳು ಸಾರ್ವಜನಿಕ ಸಭೆಗಳಿಗೆ ಬರಲು ಸಂಕೋಚ ಪಡುತ್ತಿದ್ದರು. ಕಡೆಗೆ ಅವರೂ ಸಹ ಕಲ್ಕತ್ತೆಯಲ್ಲಿ ಸಭೆಯನ್ನೇರ್ಪಡಿಸಿ, ಭಾಷಣ ಮಾಡಲು ಗಾಂಧಿಯವರನ್ನು ಆಹ್ವಾನಿಸಿದರು. ಅವರುಗಳು ಅನುಕರಣೆಯ ಅಭ್ಯಾಸವನ್ನು ತೊರೆದು ಜನಸಾಮಾನ್ಯರ ಮಧ್ಯೆ ಸೇರಿ ಅವರ ಆಗುಹೋಗುಗಳಲ್ಲಿ ಭಾಗವಹಿಸಬೇಕೆಂದು ಗಾಂಧೀಜಿ ಹೇಳಿದರು. "ನನ್ನ ಯೋಜನೆಯಲ್ಲಿ ಇತರ ಅಲ್ಪ ಸಂಖ್ಯಾತರ ಹಿತಗಳು ರಕ್ಷಿಸಲ್ಪಡುವಂತೆ ನಿಮ್ಮ ಹಿತವೂ ರಕ್ಷಿಸಲ್ಪಡುತ್ತದೆ. ಆದರೆ ಅದು ಸ್ವಯಂಪ್ರೇರಿತವಾದ ಒಪ್ಪಂದದ ಮೂಲಕ

ಆಗಬೇಕು. ಆ ಒಪ್ಪಂದಕ್ಕೆ ಶಾಸನದ ಬೆಂಬಲ ಬೇಕಾಗಿಲ್ಲ, ಶಾಸನದ ಬೆಂಬಲವನ್ನು ನಿರೀಕ್ಷಿಸಿದರೆ ಮೂರನೆಯ ಪಕ್ಷವೊಂದನ್ನು ಮಧ್ಯೆ ತಂದಂತೆ ಆಗುತ್ತದೆ. ನಾನು ಹೇಳುವ ಸ್ವಯಂಪ್ರೇರಿತ ಒಪ್ಪಂದ ನನಗೂ ಸ್ವರಾಜ್ಯಪಕ್ಷಕ್ಕೂ ಆದ ಒಪ್ಪಂದದಂತಿರ ಬೇಕು; ದೆಹಲಿಯಲ್ಲಿ ಮುಸಲ್ಮಾನರಿಗೆ ಸೂಚಿಸಿದ ಒಡಂಬಡಿಕೆಯ ಮಾದರಿಯಲ್ಲಿರ ಬೇಕು" ಎಂದು ಹೇಳಿದರು ಗಾಂಧಿ. ಅದೇ ವಿಷಯವನ್ನು ಬೆಳೆಸುತ್ತಾ ಹೀಗೆ ಹೇಳಿದರು: "ನಿಮ್ಮ ಕರ್ತವ್ಯವನ್ನು ನಾನು ಹೇಳಿದ್ದೇನೆ. ನನ್ನ ಕರ್ತವ್ಯದ ಬಗ್ಗೆ ತಿಳಿಸಲು ನೀವು ಸ್ವಾಭಾವಿಕವಾಗಿ ಇಚ್ಛಿಸುತ್ತೀರಿ. ನಾನು ಭಾರತದ ವೈಸ್‌ರಾಯ್ ಆದರೆ–ಹಾಗೆ ಆಗುವ ಸಂಭವವೇನೊ ಇಲ್ಲ–ನೀವೂ ಸೇರಿದಂತೆ ಎಲ್ಲ ಅಲ್ಪ ಸಂಖ್ಯಾತರೂ ತಮಗೆ ಬೇಕಾದುದನ್ನು ತೆಗೆದುಕೊಳ್ಳಿ, ಎಂದು ಹೇಳುತ್ತೇನೆ. ಎಲ್ಲ ಪಕ್ಷಗಳ ನಾಯಕರ ಸಮ್ಮೇಳನವನ್ನು ಕರೆದು ನನ್ನ ಯೋಜನೆಯನ್ನು ಮಂಡಿಸುತ್ತೇನೆ. ಅನಂತರ ನಿಮ್ಮಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವವರನ್ನು ಮೊದಲು ಕರೆದು ನಿಮಗೆ ಏನು ಬೇಕೆಂಬು ದನ್ನು ಕೇಳುತ್ತೇನೆ. ಸೇವಾ ನೌಕರಿಗಳಲ್ಲಿ ಚೊಕ್ಕವಾದ ಪರೀಕ್ಷೆಯನ್ನು ನಡೆಸುವಂತೆ ಕೇಳುತ್ತೇನೆ. ಅಭ್ಯರ್ಥಿಗಳನ್ನು ನಾನು ಕೇಳುವ ಪ್ರಶ್ನೆ ಇಷ್ಟೆ. "ನಿನ್ನಲ್ಲಿ ಎಷ್ಟರಮಟ್ಟಿಗೆ ಪುರುಷತ್ವ ಅಥವಾ ಸ್ತ್ರೀಧರ್ಮ ಇದೆ? ಸಂದರ್ಭ ಬಂದಲ್ಲಿ ಪರಿಸ್ಥಿತಿಯನ್ನು ಎದುರಿಸ ಬಲ್ಲೆಯಾ?" ಈ ಪರೀಕ್ಷೆಯಲ್ಲಿ ತೇರ್ಗಡೆಯಾದ ಸ್ತ್ರೀ ಪುರುಷರ ಪೈಕಿ ನೇಮಕದಲ್ಲಿ ಮೊದಲ ಆದ್ಯತೆ ಅತ್ಯಂತ ಅಲ್ಪ ಸಂಖ್ಯಾತ ಅಭ್ಯರ್ಥಿಗೆ ಕೊಡುತ್ತೇನೆ. ಭಾರತದ ಅಭ್ಯುದಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಎಲ್ಲ ಅಲ್ಪ ಸಂಖ್ಯಾತರಿಗೂ ನ್ಯಾಯ ಸಮ್ಮತ ರೀತಿಯಲ್ಲಿ ಪ್ರಾಶಸ್ತ್ಯ ಕೊಡುತ್ತೇನೆ. ನಿಮ್ಮನ್ನು ಹೊಗಳುವುದೂ ಇಲ್ಲ, ಉಬ್ಬಿಸುವುದೂ ಇಲ್ಲ. ನಿಮಗೆ ಸಲ್ಲಬೇಕಾದುದನ್ನು ಸಲ್ಲಿಸುತ್ತೇನೆ."

ಈ ದೀರ್ಘವಾದ ವಾಸ್ತವ್ಯದ ಅವಧಿಯಲ್ಲಿ ಗಾಂಧಿಯವರು ವಿಧವೆಯಾದ ಬಂಗಾಳವನ್ನು ಸಂತೈಸಿದ್ದಷ್ಟೇ ಅಲ್ಲ; ಅದರ ಹೃದಯವನ್ನೂ ಗೆದ್ದುಕೊಂಡರು.

# ಕಾಲದೊಂದಿಗೆ ಮುನ್ನಡೆ

## ೧೯೨೫

ಎ.ಐ.ಸಿ.ಸಿ.ಯ ಪ್ರಥಮ ಅಧಿವೇಶನವು ೧೯೨೫ರ ಸೆಪ್ಟಂಬರ್‌ನಲ್ಲಿ ಸೇರುವಂತೆ ಗಾಂಧಿಯವರು ಗೊತ್ತುಮಾಡಿದರು. ಬದಲಾವಣೆ ಬೇಡವೆನ್ನುವವರ ಕಡೆಯಿಂದ ಬಲವಾದ ಪ್ರತಿಭಟನೆಗಳು ಬರಲಾರಂಭಿಸಿದುವು, "ಕಳೆದ ವರ್ಷ ನೀವು ಸ್ವರಾಜ್ಯ ವಾದಿಗಳೊಂದಿಗೆ ಒಪ್ಪಂದಕ್ಕೆ ಬಂದಿರಿ. ಅವರು ಬೆಳಗಾವಿಯಲ್ಲಿ ಮಾತುಕೊಟ್ಟಂತೆ ನಿಷ್ಠೆಯಿಂದ ನಡೆದುಕೊಂಡಿದ್ದಾರೆಯೆ? ನಿಮಗೆ ಗೊತ್ತಿರುವಂತೆ 'ಬದಲಾವಣೆ ಬೇಡ' ವೆನ್ನುವವರು ಬಹುಮಂದಿ ಒಪ್ಪಂದವನ್ನು ಇಷ್ಟಪಟ್ಟಿರಲಿಲ್ಲ. ತಮಗಿಚ್ಛೆ ಇಲ್ಲದಿದ್ದರೂ ನಿಮಗೋಸ್ಕರ ಅವರು ಅದನ್ನು ಒಪ್ಪಿದ್ದರು. ಈಗ ಅವರುಗಳೊಂದಿಗೆ ಸಮಾಲೋಚನೆ ಗಳನ್ನು ನಡೆಸದೆ ಸ್ವರಾಜ್ಯವಾದಿಗಳಿಗೆ ಆಶ್ವಾಸನೆ ನೀಡಿ ಅವರನ್ನು ನಿರಾಕರಿಸಿದ್ದೀರಿ. ವಿಧಾನ ಮಂಡಲಕ್ಕೆ ಹೋಗುವುದೊಂದೇ ರಾಜಕೀಯ ಕಾರ್ಯಕ್ರಮವೇ? ಸ್ವರಾಜ್ಯ ವಾದಿಗಳಿಗೆ ನಿಮ್ಮ ನೂಲುವ ಸಂಘ ಬೇಕಾಗಿಲ್ಲ. ಅದನ್ನು ಕಾಂಗ್ರೆಸ್ಸಿನಿಂದ ಹೊರಗೆ ಸ್ಥಾಪಿಸಿ ಸ್ವರಾಜ್ಯವಾದಿಗಳಿಗೆ ಪೂರ್ಣ ಶರಣಾಗತರಾಗಬಾರದೇ?"

೧೯೨೫ರ ಆಗಸ್ಟ್ ೨೦ರ 'ಯಂಗ್ ಇಂಡಿ'ಯಾ ದಲ್ಲಿ ಗಾಂಧಿಯವರು ಲೇಖನ ಬರೆದು ತಮ್ಮ ನಿಲುವನ್ನು ವಿವರಿಸಿದರು:

"ನಾನು ಆಗಾಗ್ಗೆ ನನ್ನ ನಿಲುವನ್ನು ಬದಲಾಯಿಸುತ್ತಿರುವ ಹಾಗೆ ಕಾಣು ವುದರಿಂದ ಯಾರಿಗೂ ಮಾರ್ಗದರ್ಶನ ಕೊಡುತ್ತೇನೆಂದಾಗಲೀ ಅದರಲ್ಲಿ ನನ್ನ ಪಾಲು ಇದೆ ಎಂದಾಗಲೀ ನಾನು ಹೇಳಿಕೊಳ್ಳುತ್ತಿಲ್ಲ. ಇದನ್ನು ಲೇಖಕರು ಮರೆಯುತ್ತಾರೆ. ನನಗಂತೂ ನಾನು ಸತತವಾಗಿ ಬೆಳೆಯುತ್ತಿರುವ ಹಾಗೇ ಭಾಸವಾಗುತ್ತದೆ. ಬದಲಾಗು ತ್ತಿರುವ ಪರಿಸ್ಥಿತಿಗೆ ನಾನು ಪ್ರತಿಕ್ರಿಯೆ ತೋರಬೇಕು; ಆದರೂ ಅಂತರ್ಯದಲ್ಲಿ ಸ್ಥಿರ ವಾಗಿರಬೇಕು. ಯಾರನ್ನೂ ಬಲವಂತವಾಗಿ ಎಳೆದುಕೊಂಡು ಹೋಗಲು ನಾನು ಇಚ್ಛಿಸುವುದಿಲ್ಲ. ನಾನು ಸದಾ ಬುದ್ಧಿ ಮತ್ತು ಹೃದಯಗಳೆರಡಕ್ಕೂ ಒಟ್ಟಿಗೆ ಮನವಿ ಮಾಡಿಕೊಳ್ಳುತ್ತೇನೆ. ಮುಂಬರುವ ಎ.ಐ.ಸಿ.ಸಿ. ಸಭೆಯಲ್ಲಿ ಮುಕ್ತ ಹಾಗೂ ಅನಿರ್ಬಂಧ ಚರ್ಚೆನಡೆಯಲಿ; ಅಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳ ಜೊತೆಗೆ ನನ್ನದೂ ಒಂದು ಅಭಿಪ್ರಾಯ ಎಂಬುದನ್ನು ಮಾತ್ರ ಪರಿಗಣಿಸಲಿ. ಇದು ಕೇವಲ ಅಪದ್ಧವೆಂದು ಅನೇಕರಿಗೆ ತೋರಬಹುದು. ನಾನು ನನ್ನ ಅಭಿಪ್ರಾಯವನ್ನು ಒಂದೇ ಸಮನೆ ಅನಿರ್ಬಂಧಿತವಾಗಿ ವ್ಯಕ್ತಪಡಿಸುತ್ತೇನೆಂದು ಭಾವಿಸಬಹುದು. ತಮ್ಮನ್ನು ಬಲವಂತವಾಗಿ ಎಳೆದುಕೊಂಡು ಹೋಗುತ್ತಿರುವುದಾಗಿ ಭಾವಿಸುವವರೂ ಇರಬಹುದು. ಅಂತಹವರು ನನ್ನನ್ನು ಎದು ರಿಸಲಿ. ನಾನು ಮಾಡಿರುವುದಾದರೂ ಏನು? ಭಾರತದ ವಿದ್ಯಾವಂತ ಜನರ ಮನಸ್ಸು ಹೇಗಿದೆ ಎಂಬುದನ್ನು ಅಳೆದಿದ್ದೇನೆ, ಅಷ್ಟೇ ಅಲ್ಲವೆ? ಭಾರತದ ವಿದ್ಯಾವಂತರ ಕೈ

ಯಿಂದ ಕಾಂಗ್ರೆಸ್ ಅನ್ನು ಬಲವಂತವಾಗಿ ಕಸಿದುಕೊಳ್ಳಲು ನಾನು ಇಷ್ಟಪಡುವುದಿಲ್ಲ. ಹೊಸ ವಿಚಾರವಿದ್ದಲ್ಲಿ ಅದಕ್ಕನುಗುಣವಾಗಿ ವಿದ್ಯಾವಂತ ಸಮುದಾಯ ಬೆಳೆಯಬೇಕು.

“೧೯೨೦ರಲ್ಲಿ ಕೈಗೊಂಡ ಅಸಹಕಾರ ಕ್ರಮದ ವಿಧಾನದಲ್ಲಿ ನಂಬಿಕೆ ಇಲ್ಲದವರು ಈಗ ಅದನ್ನು ಪುನಃ ಪ್ರಯೋಗಿಸಲು ಸಲಹೆ ಮಾಡುವಂತಿಲ್ಲ. ಅಥವಾ ಮೂರನೆಯ ಮಾರ್ಗವನ್ನು ಕಂಡು ಹಿಡಿಯುವಂತೆಯೂ ಇಲ್ಲ. ಅಸಹಕಾರದಲ್ಲಿ ನಂಬಿಕೆಯುಳ್ಳ ನನ್ನಂತಹವರು ಪ್ರಸ್ತುತ ಅದರ ಉಪಯೋಗವನ್ನು ತೋರಿಸಬೇಕಾಗಿದೆ. ಹಾಗೆ ಮಾಡಿದರೆ ಸಂದೇಹವಾದಿಗಳು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಬಹುದು. ನಾನು ಒಂದು ಮಾತು ಸ್ಪಷ್ಟಪಡಿಸಬೇಕು. ಅಸಹಕಾರದ ಬಗೆಗೆ ಅಂತರಂಗದಲ್ಲಿ ಶ್ರದ್ಧೆ ಇಟ್ಟುಕೊಳ್ಳದೆ ತತ್‌ಕ್ಷಣ ಸ್ವಾತಂತ್ರ್ಯ ಬರುವುದೆಂಬ ಆಸೆಯಿಂದ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದವರ ಮುಂದೆ ನಾನು ಆವೇಶ, ಚಾತುರ್ಯಗಳ ಪ್ರದರ್ಶನ ಮಾಡಲಾರೆ. ನಿರೀಕ್ಷಿಸಿದ ರೀತಿಯಲ್ಲಿ ವಿಮೋಚನೆ ಆಗದಿದ್ದ ಮೇಲೆ ಅಗತ್ಯ ಬದಲಾವಣೆಗಳೊಂದಿಗೆ ಹಿಂದಿನ ಕಾರ್ಯಕ್ರಮಕ್ಕೆ ಮರಳಿದ ಜನರನ್ನು ದೂಷಿಸುವುದು ಯಾರಿಗೆ ಸಾಧ್ಯ? ನನ್ನಂತಹ ‘ಕನಸುಗಾರರು’ ರಾಟೆಯಂತಹ ‘ನಿರುಪದ್ರವಿ ಆಟದ ಸಾಮಾನಿನ’ ಮೂಲಕ ಸತತವಾದ ಚುರುಕು ಕಾರ್ಯಕ್ರಮವನ್ನು ನಡೆಸುತ್ತೇವೆಂದು ನಿರೀಕ್ಷಿಸಬಹುದು. ಆದರೆ ಹಳೆಯ ವಿಧಾನದಲ್ಲಿ ಬಿಡುವಿಲ್ಲದ ರಾಜಕೀಯ ಜೀವನವನ್ನು ಸಾಗಿಸಿದವರು ಈಗ ಕೈಕಟ್ಟಿಕೊಂಡು ಕೂರಲಿ ಎಂದು ನಿರೀಕ್ಷಿಸಲಾಗುವುದಿಲ್ಲ. ಕಾಂಗ್ರೆಸನ್ನು ಅಸ್ತಿತ್ವಕ್ಕೆ ತಂದವರು ಅವರು, ಆದುದರಿಂದ ಕಾಂಗ್ರೆಸ್ ಪೂರ್ಣವಾಗಿ ನೂಲುವವರ ಸಂಘವಾಗಬೇಕಾದರೆ ಆ ವಿಚಾರದಲ್ಲಿ ಅವರುಗಳ ಮನಸ್ಸು ಪರಿವರ್ತನೆಯಾಗುವ ತನಕ ನಾನು ಕಾಯಬೇಕು.

“ಸದಸ್ಯತ್ವದ ಹಕ್ಕಿಗೆ ನೂಲುವ ಷರತ್ತನ್ನು ಪರ್ಯಾಯವಾಗಿಟ್ಟಿರುವುದನ್ನೂ ಸದಸ್ಯತ್ವದ ಅರ್ಹತೆಗೆ ಖಾದಿ ಉಡುಪಿನ ನಿಯಮವಿರುವುದನ್ನೂ ಯಾರು ಬೇಕಾದರೂ ವಿರೋಧಿಸಬಹುದು. ಅಂತೆಯೇ ನೂಲುವ ಹಾಗೂ ಖಾದಿ ಧಾರಣೆಯ ನಿಯಮಗಳನ್ನು ಉಳಿಸಿಕೊಳ್ಳಬೇಕೆಂದು ಒತ್ತಾಯ ಪಡಿಸುವ ಅವಕಾಶ ಬೇರೆಯವರಿಗೂ ಇದ್ದೇ ಇರುತ್ತದೆ. ಜನರ ಅಭಿಪ್ರಾಯವನ್ನು ಕುರಿತು ನಾವು ಕುತರ್ಕ ಮಾಡಬಹುದು. ಅದು ಅಸಹನೆಯ ಕುರುಹಾಗುತ್ತದೆ ಅಷ್ಟೆ. ಪ್ರತಿಯೊಬ್ಬನಿಗೂ ತನ್ನ ಕಾರ್ಯಕ್ರಮದಲ್ಲಿ ನಿಷ್ಠೆ ಇರಬೇಕು. ಅಗತ್ಯಬಿದ್ದಲ್ಲಿ ಏಕಾಂಗಿಯಾಗಿಯೇ ಅದನ್ನು ಕಾರ್ಯಗತ ಮಾಡಲು ತಯಾರಾಗಿರಬೇಕು.

“ದೇಶದಲ್ಲಿ ನೂಲುವ ಕಾರ್ಯಕ್ರಮ ಹಾಗೂ ವಿಧಾನ ಮಂಡಲಗಳ ಪ್ರವೇಶದ ಕಾರ್ಯಕ್ರಮ–ಇವೆರಡಕ್ಕೂ ಸಾಕಷ್ಟು ಅವಕಾಶವಿದೆಯೆಂದು ನನ್ನ ಅನುಭವದಿಂದ ಅರಿತಿದ್ದೇನೆ. ತಾತ್ವಿಕವಾಗಿ ವಿಧಾನಮಂಡಲಗಳ ಪ್ರವೇಶದ ಬಗೆಗೆ ನನ್ನ ಸ್ವಂತ ಅಭಿಪ್ರಾಯಗಳನ್ನು ನಾನು ಹೊಂದಿದ್ದೇನೆ. ಆದರೆ ನನ್ನ ಆದರ್ಶಗಳನ್ನು ಚೆನ್ನಾಗಿ

ಪಾಲಿಸುವವರೂ ಅಧಿಕಾರಶಾಹಿಯನ್ನು ಎದುರಿಸುವ ಸಾಮರ್ಥ್ಯವನ್ನು ಹೆಚ್ಚಾಗಿ ಹೊಂದಿರುವವರೂ ರಾಟೆ ಮತ್ತು ಖದ್ದರ್‌ನಲ್ಲಿ ಹೆಚ್ಚು ವಿಶ್ವಾಸ ಉಳ್ಳವರೂ ವಿಧಾನ ಮಂಡಲಕ್ಕೆ ಹೋಗುವುದನ್ನು ನಾನು ಸಮರ್ಥಿಸಲೇಬೇಕು. ಇವರುಗಳೆಲ್ಲ ಸಾಮಾನ್ಯ ವಾಗಿ ಸ್ವರಾಜ್ಯವಾದಿಗಳೇ ಆಗಿದ್ದಾರೆ.

"ಈ ಹೊಸ ಯೋಜನೆಯಲ್ಲಿ ನೂಲುವ ಸಂಸ್ಥೆಯೊಂದರ ಅವಶ್ಯಕತೆ ಬಂದೇ ಬರುತ್ತದೆ. ಕಾಂಗ್ರೆಸ್ ಎಲ್ಲಿಯ ವರೆಗೆ ಅದನ್ನು ಪೋಷಿಸುವುದೋ ಅಲ್ಲಿಯ ವರೆಗೆ ಅದು ಕಾಂಗ್ರೆಸ್ಸಿನ ಆಶ್ರಯದಲ್ಲೇ ಇರಬೇಕು. ಕಾಂಗ್ರೆಸ್ಸಿನ ವಿಚಾರದಲ್ಲಿ ನನಗೆ ತುಂಬಾ ಗೌರವವಿದೆ. ಆದುದರಿಂದ ಅದಕ್ಕೆ ಹೊರತಾಗಿರಲು ಇಷ್ಟವಿಲ್ಲ. ಅನೇಕ ರೀತಿಯ ಕಲಹ ತಿಕ್ಕಾಟಗಳು ಸಂಭವಿಸಿದರೂ ಅವುಗಳನ್ನೆಲ್ಲ ಎದುರಿಸಿ ನಿಂತಿರುವ ಸಂಸ್ಥೆ ಅದೊಂದೇ. ಭಾರತದ ವಿದ್ಯಾವಂತ ಜನರು ಅನೇಕ ವರ್ಷಗಳ ಕಾಲ ತಾಳ್ಮೆಯಿಂದ ದುಡಿದುದರ ಫಲ ಅದು. ಅದರ ಉಪಯುಕ್ತತೆಯನ್ನು ನಾನು ಕುಂಠಿತಗೊಳಿಸುವುದಿಲ್ಲ".

ಹದಿನೈದು ದಿನಗಳನಂತರ ಮತ್ತೆ ಮನವಿ ಮಾಡಿ, ಸದಸ್ಯರುಗಳು ಅಧಿಕ ಸಂಖ್ಯೆ ಯಲ್ಲಿ ಬಂದು ನಿಯೋಜಿತ ಬದಲಾವಣೆಗಳ ಬಗೆಗೆ ನಿಷ್ಪಕ್ಷಪಾತವಾದ ತೀರ್ಪನ್ನು ಕೊಡಬೇಕೆಂದರು: "ಸಂವಿಧಾನದಲ್ಲಿ ಬದಲಾವಣೆ ಮಾಡಬೇಕೆಂಬ ಒತ್ತಾಯಪೂರ್ವಕ ವಾದ ಬೇಡಿಕೆ ಸರ್ವಾನುಮತದಿಂದ ಬಂದಲ್ಲಿ ಮಾತ್ರ ಅದು ಸಮರ್ಥನೀಯ ವಾಗುತ್ತದೆ. ಎಷ್ಟೇ ಕಷ್ಟವಾಗಲಿ, ಪ್ರತಿಯೊಬ್ಬ ಸದಸ್ಯರೂ ಬಂದು ಸಭೆಯಲ್ಲೇ ಹಾಜರಾದರೆ ಸರ್ವಾನುಮತದ ಒತ್ತಾಯ ಇದೆ ಎಂಬುದು ಋಜುವಾತಾಗುತ್ತದೆ. ಎಲ್ಲವೂ ತೀರ್ಮಾನವಾಗಿ ಬಿಟ್ಟಿದೆ, ಸಭೆಯಲ್ಲಿ ಹಾಜರಿರುವವರು ಇಷ್ಟಬಂದಂತೆ ಮಾಡಿಕೊಳ್ಳಲಿ, ಎಂಬ ಭಾವನೆ ತಾಳುವುದು ಸದಸ್ಯರಿಗೆ ಸಲ್ಲದು. ಸಕಾರಣವಿಲ್ಲದೆ ಸಭೆಯಿಂದ ಗೈರುಹಾಜರಾದರೆ ಹೊಣೆಗಾರಿಕೆಪ್ರಜ್ಞೆಯ ಅಭಾವವನ್ನು ಸೂಚಿಸುತ್ತದೆ. ಈ ವರ್ಷಪರ್ಯಂತ ಸದಸ್ಯರುಗಳಿಗೆ ನಾನು ತೊಂದರೆ ಕೊಟ್ಟಿಲ್ಲ. ವಿಶೇಷ ಪರಿಸ್ಥಿತಿ ಇಲ್ಲದಿದ್ದರೆ, ಈಗಲೂ ತೊಂದರೆ ಕೊಡುತ್ತಿರಲಿಲ್ಲ, ಎಂಬುದನ್ನು ಸದಸ್ಯರು ಮನಗಾಣ ಬೇಕು.

"ಎಲ್ಲವೂ ಸುಸೂತ್ರವಾಗಿ ನಡೆದರೆ ಅದೇ ಸಭೆಯಲ್ಲಿ ಅಖಿಲ ಭಾರತ ನೂಲು ವವರ ಸಂಘವನ್ನು ಉದ್ಘಾಟಿಸುವ ಉದ್ದೇಶ ನನಗಿದೆ. ಆದುದರಿಂದ ಅದರ ಉದ್ಘಾಟನೆ ಯಲ್ಲಿ ಆಸಕ್ತಿಯುಳ್ಳ ಖಾದಿ ಕಾರ್ಯಕರ್ತರೆಲ್ಲರೂ—ಅವರು ಎ.ಐ.ಸಿ.ಸಿ. ಸದಸ್ಯರಾಗಿರಲಿ, ಬಿಡಲಿ—ಪಾಟ್ನಕ್ಕೆ ಬಂದು ಆ ಸಂದರ್ಭದಲ್ಲಿ ಹಾಜರಿದ್ದು ತಮ್ಮ ಅಮೂಲ್ಯ ಸಲಹೆ ಗಳನ್ನು ನೀಡಬೇಕೆಂದು ಕೋರುತ್ತೇನೆ.

"ಮುಂಬರುವ ಕಾಂಗ್ರೆಸ್ ಅಧಿವೇಶನದ ಭಾರವನ್ನು ಆದಷ್ಟು ಕಡಿಮೆ ಮಾಡ ಬೇಕು; ಕಾಂಗ್ರೆಸ್ಸಿಗರ ನಡುವೆ ಇರಬಹುದಾದ ಭಿನ್ನಾಭಿಪ್ರಾಯಗಳನ್ನು ಸರಿಪಡಿಸ ಬೇಕು; ಎಲ್ಲ ಪಕ್ಷಗಳೂ ಕೈಗೊಳ್ಳಬಹುದಾದ ಸಾಮಾನ್ಯ ಕಾರ್ಯಕ್ರಮವೊಂದನ್ನು ರೂಪಿಸುವ ಸಾಧ್ಯತೆಗಳನ್ನು ಪರಿಶೀಲಿಸಬೇಕು; ಹಾಗೂ ಅಗತ್ಯವಿದ್ದಲ್ಲಿ ಹೊಸ ನೀತಿ

ನಿಯಮಗಳನ್ನೂ ಕಾರ್ಯಕ್ರಮಗಳನ್ನೂ ಉಪಕ್ರಮಿಸಲು, ಕಾಂಗ್ರೆಸಿಗೆ ಅವಕಾಶ ಇರಬೇಕು–ಎಂಬ ವಿಚಾರಗಳು ನನ್ನ ಮನಸ್ಸಿನಲ್ಲಿವೆ."

ಕಾಂಗ್ರೆಸ್ಸಿನ ನಿಬಂಧನೆಯಲ್ಲಿ ಮಾರ್ಪಾಟಾಗಬೇಕಾದ ಆವಶ್ಯಕತೆಯನ್ನು ವಾರ ವಾರವೂ ಯಂಗ್ ಇಂಡಿಯಾ ದಲ್ಲಿ ಗಾಂಧಿಯವರು ಲೇಖನಗಳನ್ನು ಬರೆದು ವಿವರಿಸಿದರು. ತಮ್ಮನ್ನು ಟೀಕೆ ಮಾಡುವವರಿಗೆ ವೇದಿಕೆಯನ್ನು ಕಲ್ಪಿಸಿ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಿದರು. "ಇದು ಹಿಮಾಲಯ ಸದೃಶವಾದ ತಪ್ಪಲ್ಲವೆ? ಇದು ಅಸಂಬದ್ಧವಲ್ಲದಿದ್ದರೆ ಅತಿಯಾದ ಆತ್ಮವಿಶ್ವಾಸವಾಗುವುದಿಲ್ಲವೇ?" ಎಂದು ಟೀಕ ಮಾಡುವವರು ಕೇಳಿದರು. ಗಾಂಧೀಜಿಯ ಉತ್ತರ ಹೀಗಿತ್ತು: "ಅಧೈರ್ಯದಿಂದಿರಬೇಕಾದ ಪ್ರಮೇಯವಿದ್ದರೂ ಸತ್ಯಾನ್ವೇಷಿಯು ಸದಾ ಆತ್ಮವಿಶ್ವಾಸ ಹೊಂದಿರಬೇಕು. ಸತ್ಯಕ್ಕಾಗಿ ಸಮರ್ಪಣೆ ಮಾಡಿಕೊಂಡಾತನಿಗೆ ಪೂರ್ಣ ಆತ್ಮವಿಶ್ವಾಸ ಇದ್ದೇ ಇರಬೇಕು. ತಪ್ಪು ಮಾಡುವುದು ಮಾನವ ಸ್ವಭಾವ ಎಂಬ ಅರಿವು ಆತನನ್ನು ನಮ್ರನನ್ನಾಗಿ ಮಾಡಬೇಕು. ತಾನು ತಪ್ಪು ಮಾಡಿದ್ದೇನೆಂದು ತಿಳಿದ ತಕ್ಷಣ ತಿದ್ದಿಕೊಳ್ಳಬೇಕು. ಹಿಂದೆ ಹಿಮಾಲಯ ಸದೃಶ್ಯವಾದ ತಪ್ಪುಗಳನ್ನು ಮಾಡಿದ್ದ ಮಾತ್ರಕ್ಕೆ ಈಗ ಅವನ ಆತ್ಮವಿಶ್ವಾಸಕ್ಕೆ ಚ್ಯುತಿ ಬರಬಾರದು. ತಾನು ಮಾಡಿದ್ದನ್ನು ಒಪ್ಪಿಕೊಂಡು ಪ್ರಾಯಶ್ಚಿತ್ತ ಮಾಡಿಕೊಂಡ ಮೇಲೆ ಆತ ತನ್ನ ಮುಂದಿನ ಕಾರ್ಯಕ್ಕೆ ಬಲ ಸಂವರ್ಧನೆ ಮಾಡಿಕೊಳ್ಳುತ್ತಾನೆ. ತಪ್ಪುಗಳನ್ನು ಕಂಡ ಮೇಲೆ ಸತ್ಯದ ಆರಾಧಕನು ಎಲ್ಲ ವಿಷಯಗಳಲ್ಲೂ ಜಾಗರೂಕನಾಗಿರುತ್ತಾನೆ. ಯಾವ ನಿರ್ಧಾರ ಕೈಗೊಳ್ಳಬೇಕಾದರೂ ಹುಷಾರಿನಿಂದ ಇರುತ್ತಾನೆ. ಆದರೆ ಒಮ್ಮೆ ನಿರ್ಧಾರ ಕೈಗೊಂಡನೆಂದರೆ ಅವನ ಆತ್ಮವಿಶ್ವಾಸ ಅಚಲವಾಗಿರಬೇಕು. ಆತನ ತಪ್ಪುಗಳ ದೆಸೆಯಿಂದಾಗಿ ಅವನ ನಿರ್ಧಾರಗಳ ಬಗೆಗೆ ಜನರ ವಿಶ್ವಾಸ ಕಳಚಬಹುದು. ಆದರೆ ಒಮ್ಮೆ ನಿರ್ಧಾರ ಕೈಗೊಂಡನಂತರ ತನ್ನ ನಿಲುವಿನ ಸತ್ಯಾಸತ್ಯತೆಯನ್ನು ಕುರಿತುಸಂದೇಹ ತಾಳಬಾರದು. ನನ್ನ ದೋಷಗಳೇನಿದ್ದರೂ ತಪ್ಪು ಎಣಿಕೆಯಿಂದ ಉಂಟಾದುವು. ಮನುಷ್ಯರು ಎಂತಹವರು ಎಂದು ತೀರ್ಮಾನಿಸುವಾಗ ನಾನು ತಪ್ಪು ಮಾಡಿರಬಹುದು. ಆದರೆ ಸತ್ಯ ಮತ್ತು ಅಹಿಂಸೆಯ ನಿಜ ಸ್ವರೂಪವನ್ನು ಮೆಚ್ಚುವುದರಲ್ಲಾಗಲೀ ಅವುಗಳನ್ನು ಅನ್ವಯ ಮಾಡುವುದರಲ್ಲಾಗಲೀ ತಪ್ಪು ಮಾಡಿಲ್ಲ. ನಾನು ಮಾಡಿರುವ ತಪ್ಪುಗಳನ್ನು ತಕ್ಷಣ ಒಪ್ಪಿಕೊಂಡು ಬಿಟ್ಟಿರುವುದರಿಂದ ಸತ್ಯ ಮತ್ತು ಅಹಿಂಸೆಯ ಪರಿಣಾಮಗಳ ಬಗೆಗೆ ಇನ್ನೂ ಖಚಿತವಾದ ಪರಿಜ್ಞಾನ ಹೊಂದಲು ನನಗೆ ಸಾಧ್ಯವಾಗಿದೆ. ಅಹಮ್ಮದಾಬಾದ್, ಬೊಂಬಾಯಿ ಮತ್ತು ಬಾರ್ಡೋಲಿಗಳಲ್ಲಿ ಸವಿನಯ ಕಾನೂನುಭಂಗ ಚಳವಳಿಯನ್ನು ನಿಲ್ಲಿಸಿದುದರಿಂದ ಭಾರತೀಯ ಸ್ವಾತಂತ್ರ್ಯ ಹಾಗೂ ವಿಶ್ವಶಾಂತಿ ಸಾಧನೆಗೆ ಅನುವಾಗಿದ್ದೇನೆಂಬುದು ನನ್ನ ಖಚಿತವಾದ ನಂಬಿಕೆ. ಚಳುವಳಿಯ ನಿಲುಗಡೆಯಿಂದ ಸ್ವರಾಜ್ಯದತ್ತ ನಾವು ಸಾಗಿದ್ದೇವೆ, ಹಾಗೆ ಮಾಡದಿದ್ದರೆ ನಾವು ಸ್ವರಾಜ್ಯಕ್ಕೆ ಇಷ್ಟು ಸಮೀಪವಾಗುತ್ತಿರಲಿಲ್ಲ ಎಂಬುದೇ ನನ್ನ ಅಭಿಮತ. ಸುತ್ತಲೂ ನಿರಾಶೆಯ ವಾತಾವರಣ ಕವಿದಿದ್ದರೂ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ನಂಬಿಕೆ ಹೀಗಿರುವಾಗ,

ಸ್ವರಾಜ್ಯವಾದಿಗಳ ಸಂಬಂಧದಲ್ಲಾಗಲೀ ಬೇರೆ ವಿಷಯುಗಳಲ್ಲಾಗಲೀ ನನ್ನ ಈಗಿನ ನಿಲುವಿನ ಬಗ್ಗೆ ಆತ್ಮವಿಶ್ವಾಸದಿಂದ ಇರುವುದು ಸಹಜವಾಗಿದೆ. ಈ ನಂಬಿಕೆಯು ಮೂಲ, ಸತ್ಯ ಮತ್ತು ಅಹಿಂಸೆಯು ಪರಿಣಾಮುಗಳ ಬಗೆಗೆ ನನಗಿರುವ ಜೀವಂತ ಅರಿವು".

ಸ್ವರಾಜ್ಯವಾದಿಗಳ ಕೈಗೆ ಅಧಿಕಾರ ವರ್ಗಾವಣೆಯುನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಪಾಟ್ನಾದಲ್ಲಿ ಸೆಪ್ಟೆಂಬರ್ ೨೨ರಂದು ಮಾಡಿತು. ಬೆಳಗಾಂ ಒಪ್ಪಂದದ ಷರತ್ತುಗಳಿಂದ ಸ್ವರಾಜ್ಯ ಪಕ್ಷವನ್ನು ಮುಕ್ತಗೊಳಿಸಲಾಯಿತು. ವರ್ಷಕ್ಕೆ ನಾಲ್ಕು ಆಣೆ ಚಂದಾ ಅಥವಾ ಎರಡು ಸಾವಿರ ಗಜಗಳಷ್ಟು ನೂಲನ್ನು ಕೊಡುವವರು ಯಾರು ಬೇಕಾದರೂ ಕಾಂಗ್ರೆಸ್ ಸದಸ್ಯರಾಗಬಹುದು ಎಂಬ ನಿಯುಮ ಜಾರಿಗೆ ಬಂದಿತು. ಸ್ವರಾಜ್ಯಪಕ್ಷ ಕಾಂಗ್ರೆಸ್ಸಿನ ಒಂದು ತುಕಡಿ ಆಗಿದ್ದುದು ಈಗ ಕಾಂಗ್ರೆಸ್ಸೇ ಆಗಿಬಿಟ್ಟಿತು. "ದೇಶದ ಹಿತದೃಷ್ಟಿಯಿಂದ ಅಗತ್ಯವಾದ ಎಲ್ಲ ರಾಜಕೀಯ ಕಾರ್ಯಕ್ರಮವನ್ನೂ ಕಾಂಗ್ರೆಸ್ ಉಪಕ್ರಮಿಸಿ ನಡೆಸಿಕೊಂಡು ಹೋಗತಕ್ಕದ್ದು; ಇದಕ್ಕಾಗಿ ಕಾಂಗ್ರೆಸ್ಸಿನ ಆಡಳಿತಯಂತ್ರ ಹಾಗೂ ಹಣಕಾಸನ್ನು ಉಪಯೋಗಿಸತಕ್ಕದ್ದು; ಆದರೆ ಅಖಿಲ ಭಾರತ ಖದ್ದರ್ ಮಂಡಲಿ ಮತ್ತು ಪ್ರಾಂತೀಯ ಖದ್ದರ್ ಮಂಡಲಿಗಳಿಗೆ ಅಂಕಿತ ವಾಗಿಟ್ಟಿರುವ ಹಣವನ್ನು ಮಾತ್ರ ಅಖಿಲಭಾರತ ನೂಲುವವರ ಸಂಘಕ್ಕೆ ಕೊಡಬೇಕು" ಎಂಬ ನಿರ್ಣಯ ಅಂಗೀಕೃತವಾಯಿತು.

ಅಖಿಲ ಭಾರತ ನೂಲುವವರ ಸಂಘದ ಸ್ಥಾಪನೆಯು ಪಾಟ್ನಾದಲ್ಲಿ ನಡೆದ ಮುಖ್ಯವಾದ ಘಟನೆ.

"ಕೈನೂಲಿನ ಉದ್ಯಮ ಹಾಗೂ ಖದ್ದರ್‌ನ ಅಭಿವೃದ್ಧಿಗೆ ಪರಿಣತ ಸಂಸ್ಥೆ ಯೊಂದನ್ನು ಸ್ಥಾಪಿಸಬೇಕಾದ ಸಮಯು ಈಗ ಬಂದೊದಗಿದೆ. ರಾಜಕಾರಣದ ನಿಯಂತ್ರಣ ದಿಂದಲೂ ರಾಜಕೀಯ ಸಂಸ್ಥೆಗಳು ಹಾಗೂ ಬದಲಾವಣೆಗಳಿಂದಲೂ ಹೊರತಾಗಿರುವ ಶಾಶ್ವತ ಸಂಸ್ಥೆ–ಅಖಿಲಭಾರತ ನೂಲುವವರಸಂಘ–ಸ್ಥಾಪಿಸಲ್ಪಟ್ಟಿದೆ. ಅದು ಕಾಂಗ್ರೆಸ್ಸಿನ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಸಮ್ಮತಿಯಿಂದ ಸ್ಥಾಪಿಸಲ್ಪಟ್ಟದೆ; ಅದರ ಅವಿಭಾಜ್ಯ ಭಾಗವಾಗಿರುತ್ತದೆ. ಆದರೆ ಅದಕ್ಕೆ ಸ್ವತಂತ್ರವಾದ ಅಸ್ತಿತ್ವವೂ ಅಧಿಕಾರ ಗಳೂ ಇರುತ್ತವೆ."

ಅಖಿಲ ಭಾರತ ನೂಲುವವರ ಸಂಘದಲ್ಲಿ ಸದಸ್ಯರಂಗಳೂ ಸಹವರ್ತಿಗಳೂ ಹಾಗೂ ದಾನಿಗಳೂ ಇದ್ದರು. ಅದರ ಕಾರ್ಯಕಾರೀ ಸಮಿತಿಯಲ್ಲಿ ಗಾಂಧೀಜಿ, ಶೌಕತ್ ಆಲಿ, ರಾಜೇಂದ್ರ ಪ್ರಸಾದ್, ಸತೀಶಚಂದ್ರದಾಸ್ ಗುಪ್ತ, ಮಗನ್‌ಲಾಲ್ ಗಾಂಧೀ, ಜಮ್ನಾಲಾಲ್ ಬಜಾಜ್ (ಖಜಾಂಚಿ) ಮತ್ತು ಮೂರು ಮಂದಿ ಕಾರ್ಯದರ್ಶಿಗಳು ಷಯೀಬ್ ಖುರೇಷಿ, ಶಂಕರ್‌ಲಾಲ್ ಬ್ಯಾಂಕರ್‌ಮತ್ತು ಜವಾಹರ್‌ಲಾಲ್ ನೆಹರೂ ಇದ್ದರು. ಪ್ರತಿಯೊಬ್ಬ ಸದಸ್ಯರೂ ತಿಂಗಳಿಗೆ ಒಂದು ಸಹಸ್ರಗಜ ನೂಲನ್ನು ನೂಲಬೇಕು, ಖದ್ದರ್ ಧರಿಸಬೇಕು ಮತ್ತು ಚರಖವನ್ನು ಪ್ರಚಾರ ಮಾಡಬೇಕು–ಎಂಬ ಕಡ್ಡಾಯ ನಿಯುಮವಿತ್ತು.

ಕಾಂಗ್ರೆಸಿನ ಸಂವಿಧಾನದಲ್ಲಿನ ಬದಲಾವಣೆ ಕುರಿತು ಎ.ಐ.ಸಿ.ಸಿ.ಯಲ್ಲಿ ಉತ್ಸಾಹ ಪೂರ್ಣ ಚರ್ಚೆ ನಡೆಯಿತು. ಆದರೆ ನಿರ್ಣಯದ ವಿವಿಧ ಭಾಗಗಳನ್ನು ಓಟಿಗೆ ಹಾಕಿದಾಗ ಬಂದ ಬಹುಮತ ಗಾಂಧೀ ನಿರೀಕ್ಷಿಸಿದಷ್ಟು ಅಥವಾ ಬಯಸಿದ್ದಷ್ಟು ದೊಡ್ಡದಾಗಿರಲಿಲ್ಲ. ಬದಲಾವಣೆ ಬಗೆಗೆ ವ್ಯಾಖ್ಯಾನ ಮಾಡುತ್ತಾ 'ಯಂಗ್ ಇಂಡಿಯಾ' ದಲ್ಲಿ ಹೀಗೆ ಬರೆದರು;

"ಈಗ ಮಾಡಿರುವುದರಲ್ಲಿ ಮೂಲಭೂತ ಸ್ವರೂಪದ ತೀವ್ರ ಬದಲಾವಣೆ ಏನೂ ಆಗಿಲ್ಲ. ಯಾವ ಹಿತಕ್ಕೂ ಧಕ್ಕೆ ಬಂದಿಲ್ಲ. ಯಾವೊಬ್ಬ ವ್ಯಕ್ತಿಯ ಸದಸ್ಯತ್ವವನ್ನೂ ಕಿತ್ತುಕೊಂಡಿಲ್ಲ. ಬದಲಾವಣೆ ಮಾಡುವುದಕ್ಕೆ ಮುಂಚೆ ಇದ್ದ ಪರಿಸ್ಥಿತಿಗಿಂತ ಅನಾನುಕೂಲ ಸ್ಥಿತಿಯಲ್ಲಿ ಯಾವೊಂದು ಪಕ್ಷವೂ ಇಲ್ಲ. ರಾಷ್ಟ್ರೀಯ ನೀತಿಯಾಗಿದ್ದ ಅಸಹಕಾರವನ್ನು ಸ್ಥಗಿತಗೊಳಿಸಿರುವುದರಿಂದ ಅಸಹಕಾರಿಗಳು ದೂರುವಂತಿಲ್ಲ, ರಚನಾತ್ಮಕ ಕಾರ್ಯ ಕ್ರಮವನ್ನು ನಡೆಸಿಕೊಂಡು ಹೋಗಲು ಅಭ್ಯಂತರವಿಲ್ಲ. ನೂಲುವ ಹಾಗೂ ಖದ್ದರ್‌ನ ಕಾರ್ಯಕ್ರಮ ಈಗಲೂ ರಾಷ್ಟ್ರೀಯ ಕಾರ್ಯಕ್ರಮದ ಅಂಗವಾಗಿದೆ. ವಿಧಾನಮಂಡಲ ಗಳಲ್ಲಿನ ಕಾರ್ಯಕ್ರಮವನ್ನು ಇದುವರೆಗೆ ಕಾಂಗ್ರೆಸ್ಸಿನ ಹೆಸರಿನಲ್ಲಿ ಸ್ವರಾಜ್ಯಪಕ್ಷವೇ ನಡೆಸುತ್ತಿತ್ತು. ಆದರೆ, ಈಗ ಆ ಕಾರ್ಯಕ್ರಮವನ್ನು ಸ್ವರಾಜ್ಯಪಕ್ಷದ ಹೆಸರಿನಲ್ಲಿ ಕಾಂಗ್ರೆಸ್ ನಡೆಸುತ್ತದೆ. ಇದನ್ನು ತೋರಿಕೆಯ ಬದಲಾವಣೆ ಎಂದು ಭಾವಿಸಬಹುದು. ರಾಜಕೀಯ ಕಾರ್ಯಕ್ರಮಕ್ಕಿಂತ ನೂಲುವುದಕ್ಕೆ ಹೆಚ್ಚು ಪ್ರಾಶಸ್ತ್ಯಕೊಟ್ಟವರಿಗೂ, ರಾಜಕೀಯ ಕಾರ್ಯಕ್ರಮವನ್ನು ಪೂರ್ಣವಾಗಿ ಬಿಟ್ಟು ನೂಲುವುದರಲ್ಲಿ ನಂಬಿಕೆ ಇಟ್ಟವರಿಗೂ ಯಾವ ಅನ್ಯಾಯವೂ ಆಗಿಲ್ಲ. ಏಕೆಂದರೆ ಅದರ ಅಭಿವೃದ್ಧಿಗೆ ಪ್ರತ್ಯೇಕ ಸಂಸ್ಥೆ ಏರ್ಪಟ್ಟಿದೆ. ಅಲ್ಲದೆ ಕಾಂಗ್ರೆಸ್ ಸದಸ್ಯತ್ವದ ಅರ್ಹತೆಗೆ ಕೈಯಲ್ಲಿ ನೂಲುವ ವಿಧಿಯು ಪರ್ಯಾಯ ನಿಯಮವಾಗಿದೆ. ಕಾಂಗ್ರೆಸ್ ಮತ್ತಿತರ ಅಧಿಕೃತ ಸಮಾರಂಭ ಗಳಲ್ಲಿ ಖದ್ದರ್ ಧರಿಸಬೇಕೆಂಬ ಕಡ್ಡಾಯ ಈಗಲೂ ಇದೆ. ಈ ಬದಲಾವಣೆಯಿಂದ ಕಾಂಗ್ರೆಸಿನ ಹೊರಗಿರುವ ಇತರ ಪಕ್ಷಗಳಿಗೂ ತೊಡಕಾಗಿಲ್ಲ. ಬೆಳಗಾವಿಯ ನಿರ್ಣಯದ ಪ್ರಕಾರ ಅವರುಗಳು ಸ್ವರಾಜ್ಯವಾದಿಗಳೊಂದಿಗೂ ಬದಲಾವಣೆ ಬೇಡವೆನ್ನುವವ ರೊಂದಿಗೂ ಸಂಧಾನ ಮಾಡಬೇಕಾಗಿತ್ತು. ಈಗ ಸ್ವರಾಜ್ಯವಾದಿಗಳನ್ನು ಪರಿವರ್ತಿಸಿದರೆ ಅಥವಾ ಅವರೊಂದಿಗೆ ಮಾತುಕತೆ ನಡೆಸಿದರೆ ಸಾಕಾಗುತ್ತದೆ. ಈ ಬದಲಾವಣೆಯಿಂದ ಎಲ್ಲ ವಿಧದಲ್ಲೂ ಪ್ರಾತಿನಿಧ್ಯದ ವ್ಯಾಪ್ತಿ ವಿಸ್ತಾರವಾಗುತ್ತದೆ. ಎಲ್ಲ ಪಕ್ಷಗಳ ಐಕ್ಯ ಸಾಧನೆ ಸುಲಭವಾಗುತ್ತದೆ. ಜನತೆಯ ಸ್ವಾತಂತ್ರ್ಯವನ್ನು ವಿಸ್ತರಿಸುವ ಬದಲಾವಣೆ ಕುರಿತು ಯಾವ ಕಾಂಗ್ರೆಸ್ಸಿಗನೂ ಅಸಮಾಧಾನಪಡುವಂತಿಲ್ಲ. ಮೇಲಾಗಿ, ಕಾಂಗ್ರೆಸ್ಸಿ ನೊಂದಿಗೆ ಮಿಳಿತವಾಗಿರುವವರ ಅಗತ್ಯತೆಗಳಿಗನುಗುಣವಾಗಿ ಈ ಬದಲಾವಣೆಯನ್ನು ತರಲಾಗಿದೆ."

ಕಾಂಗ್ರೆಸ್ಸಿಗರಿಗೆಲ್ಲಾ ಖಾದಿಯನ್ನು ರಾಷ್ಟ್ರೀಯ ಉಡುಪನ್ನಾಗಿ ಮಾಡಬೇಕೆಂಬ ಒಲವು ಕಾಂಗ್ರೆಸ್ ಅಧಿವೇಶನಕ್ಕೆ ಬಂದಿದ್ದ ಬಹುತೇಕ ಮಂದಿ ಸದಸ್ಯರಿಗಿತ್ತು. ಇದು ಗಾಂಧಿಯವರಿಗೆ ಮೆಚ್ಚಿಗೆ ಆಯಿತು. ಈ ಸಂಬಂಧವಾಗಿ ನಿರ್ಣಯವೊಂದನ್ನು

ತರುವ ಯೋಚನೆ ಇತ್ತು. ಆದರೆ ಅಂತಹ ನಿರ್ಣಯದಿಂದ ಸ್ವರಾಜ್ಯಪಕ್ಷಕ್ಕೆ ಪೇಚುಂಟಾಗುವುದೆಂಬ ಕಾರಣದಿಂದ ಅದನ್ನು ಒತ್ತಾಯಪಡಿಸಲಿಲ್ಲ. ಆದರೆ ಬೆಳಗಾವಿ ನಿರ್ಣಯಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗುವ ವಿಧಿಯನ್ನು ಒಪ್ಪಲಾಯಿತು, ಕಾಂಗ್ರೆಸ್ಸಿನ ಅಥವಾ ಇತರ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸುವಾಗ ಖಾದಿ ಹಾಕಿಕೊಂಡರೆ ಸಾಲದು; ಕಾಂಗ್ರೆಸ್ಸಿಗರು ಸತತ ಖಾದಿಧಾರಿಗಳಾಗಿರಬೇಕೆಂದು ನಿರೀಕ್ಷಿಸಲಾಗುತ್ತದೆ. ಯಾವುದೇ ಸಂದರ್ಭದಲ್ಲೂ ವಿದೇಶೀ ಬಟ್ಟೆಯನ್ನು ಅವರು ಉಪಯೋಗಿಸಬಾರದು ಎಂದು ತಿಳಿಸಲಾಯಿತು. ಗಾಂಧಿಯವರು ಸ್ವರಾಜ್ಯ ಪಕ್ಷಕ್ಕೆ ಎಲ್ಲ ವಿಧದಲ್ಲೂ ರಿಯಾಯಿತಿ ತೋರಿಸಿದರು. ಇದಕ್ಕೆ ಕಾರಣ ಸದಸ್ಯತ್ವಕ್ಕೆ ಖದ್ದರ್ ನಿಯಮದ ಬಗ್ಗೆ ಅನುಕೂಲ ಪ್ರತಿಕ್ರಿಯೆ ಇರಲಿಲ್ಲವೆಂದಲ್ಲ (ಏಕೆಂದರೆ, ೧೦,೦೦೦ ಸದಸ್ಯರು ದಾಖಲೆಯಲ್ಲಿದ್ದರು) ಆದರೆ ಸ್ವರಾಜ್ಯ ಪಕ್ಷವನ್ನು ತಮ್ಮ ಕೈಲಾದ ಮಟ್ಟಿಗೂ ಬಲಪಡಿಸುವುದು ಅವರ ಉದ್ದೇಶವಾಗಿತ್ತು.

ಆದರೆ ವಿಧಿ ಬೇರೊಂದು ಬಗೆದಿತ್ತು. ಸ್ವರಾಜ್ಯಪಕ್ಷದಲ್ಲಿ ಒಡಕು ಬಂದು ಬಿಟ್ಟಿತು. "ಒಳಗಿದ್ದುಕೊಂಡು ವಿರೋಧಿಸುವ" ಉದ್ದೇಶದಿಂದ ಸ್ವರಾಜ್ಯಪಕ್ಷವು ಶಾಸನ ಮಂಡಲಗಳಿಗೆ ದಾಳಿಮಾಡಿದ್ದಿತು. ಸರ್ಕಾರವು ಮಧ್ಯೆ ಕೈಹಾಕಿ ಸ್ವರಾಜ್ಯಪಕ್ಷದಲ್ಲಿ ಒಡಕನ್ನುಂಟು ಮಾಡಿತು. ಅಧಿಕಾರದ ಆಸೆಯನ್ನೂ ಇತರ ನೂರೆಂಟು ಆಮಿಷಗಳನ್ನೂ ಪ್ರೋತ್ಸಾಹಗಳನ್ನೂ ದುರ್ಬಲ ಸದಸ್ಯರ ಮುಂದೊಡ್ಡಿತು. ಅಲ್ಲಲ್ಲಿ ಸದಸ್ಯರು ಬಿಡಿಬಿಡಿಯಾಗಿ ಮೆತ್ತಗೆ ಎದುರು ಪಕ್ಷಕ್ಕೆ ಜಾರಿಕೊಂಡರು. ಕಾಂಗ್ರೆಸ್ಸಿಗೆ ವಿರೋಧವಾಗಿದ್ದ ಮದ್ರಾಸಿನ ಜಸ್ಟೀಸ್ ಪಕ್ಷದಂತಹ ಪಕ್ಷಗಳಿಗೆ ಸರ್ಕಾರವು ತುಂಬಾ ಉತ್ತೇಜನ ಕೊಟ್ಟಿತು. ಹೊಸ ಪಕ್ಷಗಳು ಹುಟ್ಟಿಕೊಂಡವು, ಸುಧಾರಣೆಯ ಯೋಜನೆಯನ್ನು ಕಾರ್ಯಗತ ಮಾಡುವ ಉದ್ದೇಶದಿಂದ ೧೯೨೪ರ ಜುಲೈನಲ್ಲಿ 'ಪಂಜಾಬ್ ನ್ಯಾಷನಲ್ ಯೂನಿಯನಿಸ್ಟ್' ಪಕ್ಷ ಜನ್ಮತಾಳಿತು. ಸ್ವಲ್ಪ ಕಾಲಾನಂತರ ಜಿನ್ನಾರ ನಾಯಕತ್ವದಲ್ಲಿ ಸೆಂಟ್ರಲ್ ಆಸೆಂಬ್ಲಿಯಲ್ಲಿ ಇಂಡಿಪೆಂಡೆಂಟ್ ಪಕ್ಷದ ಸ್ಥಾಪನೆ ಆಯಿತು. ಅದು ಕ್ರಮೇಣ ಸ್ವರಾಜ್ಯವಾದಿಗಳಿಗೆ ವಿರೋಧವಾಗಿ ಕೆಲಸ ಮಾಡಲಾರಂಭಿಸಿತು. ಆಗಸ್ಟ್ ೧೯೨೫ರಲ್ಲಿ ಬಂಗಾಲದ ಕೌನ್ಸಿಲ್‌ನ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯ ಪ್ರಕರಣವು ಗಾಳಿಯು ಎತ್ತ ಬೀಸುತ್ತಿದೆ ಎಂಬುದನ್ನು ಸ್ಪಷ್ಟಪಡಿಸಿತು. ಅಂತಿಮ ಸ್ಪರ್ಧೆ, ಸ್ವತಂತ್ರ ಅಭ್ಯರ್ಥಿ ಹಾಗೂ ಸ್ವರಾಜ್ಯವಾದಿಗಳ ನಡುವೆ ನಡೆದು ಸ್ವತಂತ್ರ ಅಭ್ಯರ್ಥಿಯು ಆರುಮತಗಳನ್ನು ತನ್ನ ಪ್ರತಿಸ್ಪರ್ಧಿಗಿಂತ ಹೆಚ್ಚಾಗಿ ಪಡೆದು ಜಯಶೀಲನಾದನು. ಡಾ. ಎ. ಸುಹ್ರವರ್ದಿಯನ್ನು ಅಧ್ಯಕ್ಷ ಸ್ಥಾನಕ್ಕೆ ಸ್ವರಾಜ್ಯಪಕ್ಷದ ಅಭ್ಯರ್ಥಿ ಎಂದು ಘೋಷಿಸಿದ ಕೆಲವು ಗಂಟೆಗಳ ತರುವಾಯ ಅವರು ಬಂಗಾಳದ ಗೌರ್ನರ್‌ಅನ್ನು ಸಂದರ್ಶಿಸಿದರು. ಆ ವಿಚಾರದಲ್ಲಿ ಗಾಂಧಿಯವರು ತೀವ್ರ ಆಕ್ಷೇಪಣೆ ಎತ್ತಿದರು. ಸುಹ್ರವರ್ದಿಯವರ ವರ್ತನೆ ಸರಿಯಾದುದಲ್ಲವೆಂದೂ ಈ ವರ್ತನೆಯಿಂದ ಅವರು "ತಮ್ಮ ದೇಶವನ್ನು ಮಾರಿದ್ದಾರೆಂದೂ" ಆರೋಪಣೆ ಮಾಡಿದರು. ಆಮೇಲೆ ಡಾ. ಸುಹ್ರವರ್ದಿಯವರು ಸ್ವರಾಜ್ಯಪಕ್ಷಕ್ಕೆ ರಾಜೀನಾಮೆ

ನೀಡಿದರು; "ಹೊಸ ದಬ್ಬಾಳಿಕೆಯಲ್ಲಿ ಬದುಕಿರುವುದಕ್ಕಿಂತ ರಾಜಕೀಯ ಆತ್ಮಹತ್ಯೆ ಹೆಚ್ಚು ಗೌರವಯುತವಾದುದು" ಎಂದು ಸುಹ್ರವರ್ದಿ ಹೇಳಿದರು. ಗಾಂಧಿಯವರು ತಮ್ಮ ಮೊದಲಿನ ಹೇಳಿಕೆಯನ್ನು ಸಮರ್ಥಿಸಿಕೊಳ್ಳುತ್ತಾ "ಸ್ವರಾಜ್ಯ ಪಕ್ಷದ ಸದಸ್ಯರು ಪಕ್ಷದ ಅನುಮತಿ ಇಲ್ಲದೆ ಸರ್ಕಾರಿ ಅಧಿಕಾರಿಗಳನ್ನು ಭೇಟಿ ಮಾಡುವುದನ್ನು ಪ್ರತಿಬಂಧಿಸುವ ನಿಯಮ ಹಿತಕರವಾದುದು" ಎಂದು ತಿಳಿಸಿದರು.

ಸ್ವರಾಜ್ಯ ಪಕ್ಷವು ಇತರ ಪಕ್ಷಗಳಿಗಿಂತ ತೀವ್ರಗಾಮಿ ನೀತಿಯನ್ನು ತಾಳಿತ್ತು. ಇದು ಪರಿಣಾಮದ ವ್ಯತ್ಯಾಸವೇ ಹೊರತು ಗುಣಸ್ವಭಾವದ್ದಲ್ಲ. ಸಂಸಂಬದ್ಧವಾದ ವಿರೋಧವು ಸಹಕಾರಕ್ಕೆಡೆ ಮಾಡಿಕೊಟ್ಟಿತು. ಯಾವುದಕ್ಕೂ ಜಗ್ಗದೇ ಇದ್ದ ಮೋತಿಲಾಲ್ ನೆಹರೂರವರೇ ಸ್ಕೀನ್ ಸಮಿತಿಯೆಂದು ಜನಪ್ರಿಯವಾಗಿದ್ದ ಸಂಧುರಸ್ಟ್ ಸಮಿತಿಯ ಸದಸ್ಯತ್ವವನ್ನು ಒಪ್ಪಿಕೊಂಡುಬಿಟ್ಟರು.

ಸ್ವರಾಜ್ಯವಾದಿಗಳ ಅಗ್ರನಾಯಕ ವಿಠ್ಠಲ್ ಭಾಯ್ ಪಟೇಲ್ ಕೇಂದ್ರ ವಿಧಾನ ಸಭೆಯ ಪ್ರಪ್ರಥಮ ಖಾಸಗಿ ಅಧ್ಯಕ್ಷರಾಗಿ ಆಗಸ್ಟ್‌ನಲ್ಲಿ ಚುನಾಯಿತರಾದರು. "ತೆರೆದ ಕಣ್ಣುಗಳಿಂದಲೇ ಈ ಹುದ್ದೆಯನ್ನು ಅಂಗೀಕರಿಸಿದ್ದೇನೆ; ಇದರ ಪರಿಣಾಮಗಳೇನೆಂಬುದರ ಪೂರ್ಣ ಅರಿವು ನನಗೆ ಇದೆ". ಎಂದು ಅವರು ಹೇಳಿದರು. ತಾವು ಈ ಬಗೆಗೆ ತೀವ್ರ ಆಲೋಚನೆ ಮಾಡಿ, ಅಧ್ಯಕ್ಷ ಪದವಿಯನ್ನು ಒಪ್ಪಿಕೊಳ್ಳುವುದರ ಮೂಲಕ ಭಾರತಕ್ಕೆ ತಾವು ಇನ್ನೂ ಉತ್ತಮವಾದ ಸೇವೆ ಸಲ್ಲಿಸಬಹುದೆಂಬ ತೀರ್ಮಾನಕ್ಕೆ ಬಂದಿರುವುದಾಗಿ ತಿಳಿಸಿದರು. "ಸ್ವರಾಜ್ಯವಾದಿಗಳನ್ನು ದಮನಕಾರಿ ಟೀಕೆಗಾರರೆಂದು ಬಣ್ಣಿಸಲಾಗಿದೆ. ತಾವು ಎಂತಹ ಸೃಜನಶೀಲರೆಂಬುದನ್ನು ಈಗ ತೋರಿಸಿಕೊಡಬೇಕಾಗಿದೆ. ವೈಸರಾಯರು ಸಹಕಾರವನ್ನು ಕೋರಿದ್ದರು. ಅವರ ಹಿಂದಿನವರೂ ಸಹಕಾರವನ್ನು ಕೇಳಿದ್ದರು" ಎಂದು ಹೇಳಿದರು ಪಟೇಲ್. ನಾನು ಈಗ ಪಕ್ಷನಿಷ್ಠವ್ಯಕ್ತಿಯಾಗಿಲ್ಲ, ಎಲ್ಲ ಪಕ್ಷಗಳಿಗೂ ಸೇರಿದವನಾಗಿದ್ದೇನೆ, ಎಂದು ಹೇಳಿದರು. ಸ್ವರಾಜ್ಯವಾದಿಯಾಗಿ ತಮ್ಮ ಮೇಲಿದ್ದ ಎಲ್ಲ ಹೊಣೆಗಳಿಂದಲೂ ತಮ್ಮನ್ನು ಮುಕ್ತಗೊಳಿಸಬೇಕೆಂದೂ ಆ ವಿಚಾರದಲ್ಲಿ ನಿರ್ಣಯ ಮಾಡಬೇಕೆಂದೂ ಪಕ್ಷದ ನಾಯಕರನ್ನು ಕೇಳಿದರು. ವೈಸರಾಯರೊಂದಿಗೆ ತಾವಿಟ್ಟು ಕೊಂಡಿರುವ ಸಂಬಂಧವನ್ನು ಕುರಿತು ಉಂಟಾದ ಊಹಾಪೋಹವನ್ನು ನಿರ್ಲಕ್ಷಿಸಿದರು. ತಮ್ಮ ಹುದ್ದೆಯ ಕಾರ್ಯಭಾರದ ಸಲುವಾಗಿ ಅಗತ್ಯವೆನಿಸಿದರೆ ವೈಸರಾಯರನ್ನು ದಿನಕ್ಕೆ ಹತ್ತು ಬಾರಿ ಬೇಕಾದರೂ ಭೇಟಿ ಮಾಡುವುದಾಗಿ ತಿಳಿಸಿದರು.

ಎ.ಐ.ಸಿ.ಸಿ. ನಡೆದ ತರುಣದಲ್ಲಿಯೇ ಮಧ್ಯಪ್ರಾಂತದ ಸ್ವರಾಜ್ಯವಾದಿ ನಾಯಕ ಎ. ಬಿ. ತಾಂಬೆಯವರು ಅಲ್ಲಿನ ಪ್ರಾಂತ ಸರ್ಕಾರದ ಸಚಿವ ಪದವಿಯನ್ನು ಒಪ್ಪಿಕೊಂಡರು. ಅವರ ವರ್ತನೆಯಿಂದಾಗಿ ಸ್ವರಾಜ್ಯಪಕ್ಷವು ಮೇಲಿಂದ ಕೆಳಗಿನವರೆಗೂ ಭಿನ್ನವಾಯಿತು. ತಾಂಬೆಯ ವರ್ತನೆಯನ್ನು ಮೋತಿಲಾಲ್ ನೆಹರೂ ಖಂಡಿಸಿದರು. ಈ ಬಗೆಗೆ ಪತ್ರಿಕೆಗಳಲ್ಲಿ ತೀವ್ರವಾದ ವಿವಾದ ಎದ್ದಿತು. ಈ ವಿವಾದದ ಮೊದಲಲ್ಲೇ ಸ್ವರಾಜ್ಯಪಕ್ಷದ ನಾಯಕ ಡಾ. ಬಿ. ಎಸ್. ಮೂಂಜೆ ಹೇಳಿಕೆ ಕೊಟ್ಟರು. ಸ್ವರಾಜ್ಯ

ಪಕ್ಷದಿಂದ ಪಕ್ಷಾಂತರ, ತಾಂಬೆಯವರಿಗೆ ಮಾತ್ರ ಸೀಮಿತವಾಗಿಲ್ಲವೆಂಬುದು ಈ ಹೇಳಿಕೆಯಿಂದ ಸ್ಪಷ್ಟವಾಯಿತು, "ಸ್ವರಾಜ್ಯಪಕ್ಷವು ಅಧಿಕಾರ ಸ್ಥಾನಗಳನ್ನು ತಕ್ಷಣದಲ್ಲಿ ಒಪ್ಪಿಕೊಳ್ಳಬೇಕೆಂದು ನಾನು ಹೇಳುವುದಿಲ್ಲ. ಆದರೆ, ಅಸಹಕಾರ ಚಳುವಳಿಯು ವಿಫಲವಾಗಿರುವುದರಿಂದ ಸಹಾನುಭೂತಿಯುಳ್ಳ ಸಹಕಾರವೊಂದೇ ಉಳಿದಿರುವ ಮಾರ್ಗ" ಎಂದು ಡಾ. ಮೂಂಜೆ ಹೇಳಿದರು. ಅದಕ್ಕಿಂತ ಗಹನವಾದ ವಿಷಯವೆಂದರೆ ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಸ್ವರಾಜ್ಯಪಕ್ಷದ ನಾಯಕರಾದ ಜಯಕರ್ ಕೊಟ್ಟ ಹೇಳಿಕೆ: "ಅಧಿಕಾರದ ಹುದ್ದೆಗಳನ್ನು ಒಪ್ಪಿಕೊಂಡಿರುವುದರಲ್ಲಿ ತಾಂಬೆಗೂ ಪಟೇಲರಿಗೂ ಇರುವ ವ್ಯತ್ಯಾಸ ಪಾರಿಭಾಷಿಕ ಸ್ವರೂಪದ್ದು. ಸ್ವರಾಜ್ಯವಾದಿಗಳು ಒಂದು ಕಡೆ ಸೇರಿ ತಮ್ಮ ಕಾರ್ಯಕ್ರಮವನ್ನು ಪುನರ್ ಪರಿಶೀಲನೆ ಮಾಡಬೇಕಾದ ಕಾಲ ಈಗ ಬಂದಿದೆ. ಪಕ್ಷದ ಕಾರ್ಯಕ್ರಮ ಯಶಸ್ಸು ಪಡೆದಲ್ಲಿ ಅದನ್ನು ಬಲಪಡಿಸಬೇಕು. ಇಲ್ಲದಿದ್ದರೆ ಸ್ವರಾಜ್ಯವಾದಿಗಳು ಅಧಿಕಾರ ಸ್ಥಾನಗಳನ್ನು ಅಂಗೀಕರಿಸಬೇಕು."

ಅಕ್ಟೋಬರ್ ೨೬ರಂದು ಸಮಾವೇಶಗೊಂಡಿದ್ದ ಬೀರಾರ್ ಸ್ವರಾಜ್ಯ ಪಕ್ಷವು ಒಂದು ವಾಕ್ಯದಲ್ಲಿ ಎಸ್. ಬಿ. ತಾಂಬೆಯವರ ವರ್ತನೆಯನ್ನು ಖಂಡಿಸಿತು. ಆದರೆ 'ಸ್ವರಾಜ್ಯ ಪಕ್ಷವು ಸಹಾನುಭೂತಿಯುಳ್ಳ ಸಹಕಾರ ನೀತಿಯನ್ನನುಸರಿಸುವ ಕಾಲ ಬಂದೊದಗಿದೆ,' ಎಂದು ಘೋಷಿಸಿತು. ಮಹಾರಾಷ್ಟ್ರದ ಪ್ರಮುಖ ಸ್ವರಾಜ್ಯವಾದಿ ಎನ್. ಸಿ. ಕೇಲ್ಕರ್‌ರವರು ತಾಂಬೆಗೆ ಅಭಿನಂದನಾ ಸಂದೇಶ ಕಳುಹಿಸಿದ್ದಷ್ಟೇ ಅಲ್ಲ. ಪಕ್ಷದ ಕಾರ್ಯಕಾರಿ ಸಮಿತಿ ಸಭೆ ಸೇರುವ ಸಮಯದಲ್ಲಿ ಅವರು ಪಕ್ಷದ ಬಿಗಿಯಾದ ಶಿಸ್ತಿನ ನಿಯಮವನ್ನು ಟೀಕಿಸಿದರು: "ಶಾಸನಸಭೆಯಲ್ಲಿ ನಾವು ವಿಧಾಯಕ ಸಲಹೆಯೊಂದನ್ನೂ ಮಾಡದೆ ಇದ್ದ ಕಾಲ ಒಂದಿತ್ತು. ಮಸೂದೆಯೊಂದನ್ನು ಚುನಾಯಿತ ಸಮಿತಿಯ ಪರಿಶೀಲನೆಗೆ ಒಪ್ಪಿಸಿ ಎಂದು ಹೇಳುವ ನಿರ್ಣಯವನ್ನು ಸಹ ತರುವ ಹಾಗಿರಲಿಲ್ಲ. ಆ ಪರಿಸ್ಥಿತಿ ಬದಲಾಗಿ, ಅಂತಹ ನಿರ್ಣಯಗಳನ್ನು ತರಬಹುದು; ಆದರೆ ಯಾವುದೇ ಸಮಿತಿಯ ಸದಸ್ಯತ್ವವನ್ನು ಒಪ್ಪಿಕೊಳ್ಳಕೂಡದು ಎಂಬ ಕಾಲ ಬಂದಿತು. ತದನಂತರ ಸಮಿತಿಗಳಲ್ಲಿ ಚುನಾಯಿತ ಸ್ಥಾನಗಳನ್ನು ಮಾತ್ರ ಒಪ್ಪಿಕೊಳ್ಳಬಹುದು ಎಂದಾಯಿತು. ಕಾಲ ಮತ್ತೂ ಬದಲಾಗಿ ಸರ್ಕಾರದವರು ವಿಶೇಷವಾಗಿ ನಾಮಕರಣ ಮಾಡುವ ಸ್ಥಾನಗಳನ್ನೂ ಅಂಗೀಕರಿಸಬಹುದು ಎಂದಾಯಿತು. ಈ ಎಲ್ಲ ಬೆಳವಣಿಗೆಗಳೂ ಸ್ವಾಭಾವಿಕವಾದುವು ಮತ್ತು ನಿರ್ದಿಷ್ಟವಾದ ಹೊಸ ನೀತಿಯ ಚಿಹ್ನೆಗಳು ಎಂಬುದನ್ನು ನಾನು ಒಪ್ಪುತ್ತೇನೆ. ಈ ಹೊಸ ನೀತಿಯು ಮೊದಲಿನದಕ್ಕಿಂತ ಭಿನ್ನವಾಗಿದೆ. ಮೊದಲು ಕೇವಲ ಸಂಕುಚಿತ ದೃಷ್ಟಿಯಿಂದ ಅಡ್ಡಿ ತಂದೊಡ್ಡುವ ನೀತಿಯನ್ನು ಅನುಸರಿಸಲಾಗಿತ್ತು" ಎಂದು ಕೇಲ್ಕರ್ ತಮ್ಮ ಹೇಳಿಕೆಯಲ್ಲಿ ತಿಳಿಸಿದರು.

ಅಖಿಲ ಭಾರತ ಸ್ವರಾಜ್ಯ ಪಕ್ಷದ ಕಾರ್ಯಕಾರೀ ಸಮಿತಿ ನವೆಂಬರ್ ಒಂದರಂದು ನಾಗಪುರದಲ್ಲಿ ಸಮಾವೇಶಗೊಂಡಿತ್ತು. ತಾಂಬೆಯವರ ವರ್ತನೆ ಅಶಿಸ್ತಿನ ಪರಮಾವಧಿ

ಯೆಂದೂ ಪಕ್ಷಕ್ಕೆ ದ್ರೋಹವೆಂದೂ ತಿಳಿಸಿ ಖಂಡನೆ ಮಾಡುವ ನಿರ್ಣಯವನ್ನು ಸಮಿತಿ ಅಂಗೀಕರಿಸಿತು. ಮೋತಿಲಾಲ್ ನೆಹರೂರವರು ನಾಗಪುರದಿಂದ ಬೊಂಬಾಯಿಗೆ ಧಾವಿಸಿದರು. ಬೊಂಬಾಯಿಯಲ್ಲಿ ಜಯಕರ್ ಮತ್ತು ಕೇಲ್ಕರ್ ನವಂಬರ್ ೧೧ರಂದು ಅಖಿಲ ಭಾರತ ಸ್ವರಾಜ್ಯಪಕ್ಷದ ಕಾರ್ಯಕಾರೀ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿ ಬಂಡಾಯವೆದ್ದಿದ್ದರು. ಈ ಬಂಡಾಯವನ್ನು ದಮನ ಮಾಡುವುದು ಮೋತಿಲಾಲ್ ನೆಹರೂರವರ ಉದ್ದೇಶವಾಗಿತ್ತು. ಬೊಂಬಾಯಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಮೋತಿಲಾಲ್ ನೆಹರೂರವರು ತಮ್ಮ ಪಕ್ಷದ ಮುಂದಿನ ಕಾರ್ಯಕ್ರಮವನ್ನು ವಿವರಿಸಿದರು. ಸ್ವರಾಜ್ಯ ಪಕ್ಷವು ತನ್ನದೇ ಆದ ಪ್ರಗತಿಯನ್ನು ಬಯಸುತ್ತದೆ. ರಾಷ್ಟ್ರದ ಹಿತಕ್ಕನುಗುಣವಾಗಿ ಸಂದರ್ಭೋಚಿತ ಸಹಕಾರ ಮತ್ತು ಅಸಹಕಾರ, ವಿಧಾಯಕ ಹಾಗೂ ವಿನಾಶಕ ನೀತಿಯನ್ನು ಅನುಸರಿಸುತ್ತದೆ. ರಾಷ್ಟ್ರದ ಹಿತದೃಷ್ಟಿಯಿಂದ ಅಸಹಕಾರವನ್ನು ತ್ಯಜಿಸಬೇಕೆಂದು ಪಕ್ಷವು ಭಾವಿಸುವುದಾದಲ್ಲಿ ಹಾಗೆ ಮಾಡಲು ಸಿದ್ಧ. ಸ್ವರಾಜ್ಯಪಕ್ಷವು ಪ್ರಧಾನವಾಗಿ ಕೃತಿಶೀಲವಾದ ಪಕ್ಷ. ಆದುದರಿಂದ ಜೀವನದ ತಿರುಳಾದ ಬದಲಾವಣೆಗಳು ಸ್ವರಾಜ್ಯಪಕ್ಷಕ್ಕೆ ಅನಿವಾರ್ಯ ಎಂದು ಮೋತಿಲಾಲ್ ನೆಹರೂ ಹೇಳಿದರು. ಅವರು ತಮ್ಮ ಭಾಷಣವನ್ನು ಮುಗಿಸುತ್ತಾ, ಪಕ್ಷದ ಕಾರ್ಯಕ್ರಮದಲ್ಲಿ ಬದಲಾವಣೆ ಅಗತ್ಯವೆಂದು ಕೆಲವರಿಂದ ಒತ್ತಾಯ ಬಂದಿದೆ. ಬದಲಾವಣೆ ಏನಿದ್ದರೂ ಮುಂದೆ ಕಾನ್ಪುರದಲ್ಲಿ ಸೇರಲಿರುವ ಕಾಂಗ್ರೆಸ್ ಅಧಿವೇಶನದಲ್ಲಿ ಮಾಡಲು ಸಾಧ್ಯ– ಎಂದರು. ಲಾಲಾ ಲಜಪತರಾಯ್‌ರವರ ಮಧ್ಯಸ್ಥಿಕೆ ಫಲವಾಗಿ ಸ್ವರಾಜ್ಯ ಪಕ್ಷದ ನಾಯಕರ ಹಾಗೂ ಸಹಾನುಭೂತಿಯುಳ್ಳ ಸಹಕಾರ ನೀಡಬೇಕೆನ್ನುವವರ ಸಮ್ಮೇಳನವೊಂದು ಬೊಂಬಾಯಿಯಲ್ಲಿ ನಡೆಯಿತು. ಕಾಂಗ್ರೆಸ್ ಅಧಿವೇಶನವು ಸದ್ಯದಲ್ಲೇ ಸೇರುವುದನ್ನು ಗಮನದಲ್ಲಿಟ್ಟುಕೊಂಡು ಅಲ್ಲಿಯವರೆಗೆ ಸ್ವರಾಜ್ಯಪಕ್ಷದ ನೀತಿಯ ಬಗ್ಗೆ ಸಾರ್ವಜನಿಕ ವಾದ ವಿವಾದವನ್ನು ನಿಲ್ಲಿಸಬೇಕೆಂದು ಆ ಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು.

ಸ್ವರಾಜ್ಯವಾದಿಗಳು ನಡೆಸುತ್ತಿದ್ದ ವಾಗ್ಯುದ್ಧದವಿಚಾರದಲ್ಲಿ ಗಾಂಧಿ ಮೌನವಾಗಿದ್ದು ತಮ್ಮ ಪ್ರವಾಸವನ್ನು ಬಿಹಾರ್, ಯು.ಪಿ. ಮತ್ತು ಕಚ್‌ಗಳಲ್ಲಿ ಮುಂದುವರಿಸಿದರು. ಉಪವಾಸದ ಅನಂತರ ನಿರಂತರ ಪ್ರವಾಸ ಕಾರ್ಯಕ್ರಮದಲ್ಲಿ ತೊಡಗಿದ್ದುದರಿಂದ ಅವರ ದೇಹಸ್ಥಿತಿ ಕೆಟ್ಟಿತ್ತು. ಆದುದರಿಂದ ಅವರು ತಮ್ಮ ತತ್ತ್ವಗಳಿಗೆ ವಿರುದ್ಧವಾಗಿ ರೈಲಿನಲ್ಲಿ ಎರಡನೆ ದರ್ಜೆ ಗಾಡಿಯಲ್ಲಿ ಪ್ರಯಾಣ ಮಾಡಬೇಕಾಯಿತು. ಅವರ ಶ್ರಮವನ್ನು ಹಗುರಗೊಳಿಸುವ ದೃಷ್ಟಿಯಿಂದ ಬಿಹಾರಿನ ಪ್ರವಾಸವು ಅಕ್ಟೋಬರ್ ೧೫ರ ತನಕ ಮಾತ್ರ ನಡೆಯತಕ್ಕದ್ದೆಂದು ರಾಜೇಂದ್ರ ಪ್ರಸಾದರು ಗೊತ್ತುಪಡಿಸಿದರು. ಈ ಅವಧಿಯಲ್ಲಿ ವಾರಕ್ಕೆರಡು ದಿನ 'ಯಂಗ್ ಇಂಡಿಯಾ'ದ ಸಂಪಾದಕೀಯ ಕೆಲಸಕ್ಕೆ ಮೀಸಲಾಗಿಡುತ್ತಿದ್ದರು.

ಬಿಹಾರದಲ್ಲಿ ಕಾಂಗ್ರೆಸ್ಸಿಗರು, ಮುಂಡಾಗಳೇ ಮುಂತಾದ ಆದಿವಾಸಿಗಳ ನಡುವೆ ಸದ್ದುಗದ್ದಲವಿಲ್ಲದೆ ಸಮಾಜಸೇವೆ ಮಾಡುತ್ತಿದ್ದರು. ಇದು ಗಾಂಧಿಯವರಿಗೆ ತುಂಬಾ

ಮೆಚ್ಚಿಗೆ ಆಯಿತು. ಸುಧಾರಣೆಯ ಕೆಲಸ ೧೯೨೧ರಲ್ಲೇ ಆರಂಭವಾಗಿದ್ದಿತು. ಅನೇಕ ಮಂದಿ ಆದಿವಾಸಿಗಳು ಸತ್ತಪ್ರಾಣಿಗಳ ಮಾಂಸ ಭಕ್ಷಣೆಯನ್ನು ತ್ಯಜಿಸಿದ್ದರು. ಕೆಲವರು ಕೇವಲ ಸಸ್ಯಾಹಾರಿಗಳಾಗಿ ಬಿಟ್ಟಿದ್ದರು. ಈ ಬುಡಕಟ್ಟಿನ ಜನರ ಪೈಕಿ ಭಕ್ತಾಗಳೆಂಬುವವರು ಇದ್ದಲ್ಲಿಗೆ ಗಾಂಧೀಜಿ ಬಂದರು. ಅವರುಗಳು ತಾವೇ ಕೈಲಿ ತಯಾರಿಸಿದ ಖಾದಿಯನ್ನು ಧರಿಸುತ್ತಿದ್ದುದು ಕಂಡು ಬಂದಿತು. ಅವರಲ್ಲಿ ಅನೇಕರು ಚರಖವನ್ನು ಹೆಗಲ ಮೇಲಿಟ್ಟು ಕೊಂಡು ಮೈಲಿಗಟ್ಟಲೆ ನಡೆದು ಬಂದಿದ್ದರು. ಗಾಂಧಿಯವರು ಭಾಷಣ ಮಾಡಿದ ಸಭೆಯಲ್ಲಿ ನೂರಾರು ಮಂದಿ ನೂಲುತ್ತಾ ಕುಳಿತಿದ್ದರು. ಚಳವಳಿಯ ಶಾಶ್ವತ ಪರಿಣಾಮ ಹೋದೆಡೆಯಲ್ಲೆಲ್ಲಾ ಎದ್ದು ಕಾಣುತ್ತಿತ್ತು. ರಾಜಕಾರಣದಲ್ಲಿ ಅಲಿಪ್ತ ರಾಗಿದ್ದವರೂ ಸಹ ಈ ಪರಿಣಾಮದಿಂದ ಹೊರತಾಗಿರಲಿಲ್ಲ. ದೇವಗಢದ ಪಂಡಾಗಳೂ ಮುಗ್ಧರಾದ ಮುಹರೀಗಳೂ ಸಂತಾಲರೂ ರಚನಾತ್ಮಕ ಕಾರ್ಯದಲ್ಲಿ ಭಾಗವಹಿಸು ತ್ತಿದ್ದರು.

ಕಾಂಗ್ರೆಸ್ ಕಾರ್ಯಕರ್ತರು ಖಾದಿ ಕೆಲಸವನ್ನು ಬೆಳೆಸುವುದರ ಜೊತೆಗೆ ಹಳ್ಳಿಯ ಜನರಿಗೆ ತಮಗೆ ತಿಳಿದಷ್ಟು ಮಟ್ಟಿಗೆ ವೈದ್ಯಕೀಯ ಸೌಲಭ್ಯವನ್ನೂ ನೀಡುತ್ತಿದ್ದರು. ಅವರ ಪರಿಶ್ರಮದ ಫಲವಾಗಿ ಬಿಹಾರಿನ ಹಳ್ಳಿಗಳಲ್ಲಿ ಏಳು ಸಹಸ್ರ ರಾಟೆಗಳು ತಿರುಗುತ್ತಿದ್ದುವು. ಎರಡೂವರೆ ಸಾವಿರ ಕೈಮಗ್ಗಗಳಲ್ಲಿ ಕೈನೂಲಿನಿಂದ ಬಟ್ಟೆಯನ್ನು ನೂಲುವ ವ್ಯವಸ್ಥೆ ಆಗಿತ್ತು.

ಯು.ಪಿ.ಯಲ್ಲಿ ಎರಡು ದಿನ ಇದ್ದ ಅವಧಿಯಲ್ಲಿ ಗಾಂಧಿಯವರಿಗೆ ಬಾಲಿಯ, ವಾರಣಾಸಿ ಮತ್ತು ಲಕ್ನೋದಲ್ಲಿ ಮಾನಪತ್ರಗಳನ್ನು ಅರ್ಪಿಸಲಾಯಿತು. ಸೀತಾಪುರದಲ್ಲಿ ಹಿಂದೀ ಸಾಹಿತ್ಯ ಸಮ್ಮೇಳನ ನಡೆಯಿತು. ಅಲ್ಲಿ ಗಾಂಧೀಜಿ ಮಾತನಾಡುತ್ತಾ ಹೀಗೆ ತಿಳಿಸಿದರು: “ಸಂಸ್ಕೃತ ಪದಗಳಿಂದ ತುಂಬಿ ಹೋಗಿರುವ ಹಿಂದಿಯನ್ನೂ ಪರ್ಷಿಯನ್ನಿ ನಿಂದ ತುಂಬಿರುವ ಉರ್ದುವನ್ನೂ ಬಳಸಬಾರದು. ಅವೆರಡೂ ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ. ಹಿಂದೂಸ್ತಾನಿಯನ್ನು ಸಾರ್ವತ್ರಿಕ ಮಾಧ್ಯಮವಾಗಿ ನಾನು ಒಪ್ಪಿಕೊಂಡಿದ್ದೇನೆ. ಏಕೆಂದರೆ ಭಾರತದಲ್ಲಿ ಇಪ್ಪತ್ತು ಕೋಟಿಗಿಂತ ಹೆಚ್ಚು ಜನಕ್ಕೆ ಇದು ಅರ್ಥವಾಗುತ್ತದೆ. ಇದು ಲಕ್ನೋವಿನ ಕೃತಕವಾದ ಉರ್ದುವೂ ಅಲ್ಲ ಅಥವಾ ಸಮ್ಮೇಳನದ ಹಿಂದಿಯೂ ಅಲ್ಲ. ಸಮ್ಮೇಳನದಲ್ಲಿನ ಭಾಷಣ ಸಾಮಾನ್ಯರಾದ ಹಿಂದೂ ಗಳಿಗೂ ಮುಸಲ್ಮಾನರಿಗೂ ಅರ್ಥವಾಗಬೇಕೆಂದು ಅಪೇಕ್ಷಿಸುವುದು ಸ್ವಾಭಾವಿಕ. ಈಶ್ವರನ ಹೆಸರನ್ನು ಉಚ್ಚರಿಸುವ ಪ್ರಾಣಿ ಖುದಾ ಎಂದು ಹೇಳಲು ಅಂಜಿದರೆ ಅಥವಾ ಖುದಾ ಹೆಸರನ್ನು ಉಚ್ಚರಿಸುವವನು ಈಶ್ವರನ ಹೆಸರನ್ನು ಉಚ್ಚರಿಸುವುದು ಪಾಪಕರ ಎಂದು ತಿಳಿದರೆ ಅಂತಹವನು ಆಕರ್ಷಕ ಮಾನವನಾಗುವುದಿಲ್ಲ”

ಸಾಹಿತ್ಯವನ್ನು ಉತ್ತಮ ಪಡಿಸುವುದರ ಮೂಲಕ ಯು.ಪಿ.ಯಲ್ಲಿ ಹಿಂದಿಯ ಪ್ರಚಾರವಾಗಬೇಕೆಂದು ಗಾಂಧಿಯವರು ಹೇಳಿ, ಓರ್ವ ಹಿಂದೀ ರವೀಂದ್ರನಾಥರು

ಕಾಣಿಸಿಕೊಳ್ಳುವಂತಹ ವಾತಾವರಣವನ್ನು ಸೃಷ್ಟಿಸಬೇಕೆಂದು ತಿಳಿಸಿದರು. ಯು.ಪಿ.ಯ ಹೊರಗಡೆ ಹಿಂದೂಸ್ತಾನಿಯನ್ನು ಪ್ರಸಾರ ಮಾಡುವ ಉದ್ದೇಶದಿಂದ ಸಮ್ಮೇಳನವು ಬೇರೆ ಬೇರೆ ಭಾಷೆಗಳಲ್ಲಿರುವ ಉತ್ತಮ ಗ್ರಂಥಗಳನ್ನು ದೇವನಾಗರಿ ಲಿಪಿಯಲ್ಲಿ ಪ್ರಕಾಶನಗೊಳಿಸಬೇಕೆಂದು ಹೇಳಿದರು.

ಅಕ್ಟೋಬರ್ ಕೊನೆಯ ವಾರದಲ್ಲಿ ಗಾಂಧಿಯವರು ಹದಿನೈದು ದಿನಗಳ ಕಾಲ ಕಚ್ ಪ್ರದೇಶದಲ್ಲಿ ಪ್ರವಾಸ ಕೈಗೊಂಡರು. ಭುಜ್‌ನಲ್ಲಿ ಅವರಿಗೆ ಸಾರ್ವಜನಿಕ ಮಾನ ಪತ್ರವನ್ನು ಅರ್ಪಿಸಲಾಯಿತು. ಅಸ್ಪೃಶ್ಯತೆಯ ನಿವಾರಣೆಗೆ ಅವರು ಮಾಡಿದ್ದ ಸೇವೆ ಯನ್ನು ಪ್ರಶಂಸಿಸಲಾಗಿತ್ತು. ಕಚ್‌ನಲ್ಲಿ ಅಸ್ಪೃಶ್ಯತಾ ಸಮಸ್ಯೆಯನ್ನು ನಿವಾರಿಸಲು ಕ್ರಮಕೈಗೊಳ್ಳಲಾಗುತ್ತಿದೆಯೆಂದೂ ಆ ಬಗ್ಗೆ ಸಲಹೆ ನೀಡಬೇಕೆಂದೂ ಮಾನಪತ್ರದಲ್ಲಿ ಕೋರಲಾಗಿತ್ತು. ಆದರೆ ಅಲ್ಲಿ ವ್ಯಕ್ತಪಡಿಸಿದ್ದ ಭಾವನೆಗೆ ವ್ಯತಿರಿಕ್ತವಾದ ಆಚರಣೆ ನಡೆದಿತ್ತು; ಅಸ್ಪೃಶ್ಯರನ್ನು ಸಭೆಯ ಒಂದು ಕೊಟ್ಟಕೊನೆಯ ಮೂಲೆಯಲ್ಲಿ ಪ್ರತ್ಯೇಕ ವಾಗಿ ಕೂಡಿಸಲಾಗಿತ್ತು. ಇದು ಗಾಂಧಿಯವರಿಗೆ ಹೊಸ ಅನುಭವವೇನಲ್ಲ. ಅವರು ಕಟ್ಟುನಿಟ್ಟಾಗಿ ಎಚ್ಚರಿಕೆ ನೀಡಿದರು. "ಈ ವಿಷಯದಲ್ಲಿ ನಾನು ಏನನ್ನೂ ನುಂಗಿಕೊಂಡು ಹೇಳುವುದಿಲ್ಲ. ನಾನು ನನ್ನನ್ನು ಅಸ್ಪೃಶ್ಯ, ಜಲಗಾರ ಎಂದು ಕರೆದುಕೊಳ್ಳುತ್ತೇನೆ. ಅಹಂಕಾರದಿಂದಾಗಲಿ ಅಜ್ಞಾನದಿಂದಾಗಲೀ ಹಾಗೆ ಹೇಳಿಕೊಳ್ಳುವುದಿಲ್ಲ ಅಥವಾ ಪಾಶ್ಚಾತ್ಯ ರೀತಿನೀತಿಗಳನ್ನು ಒಪ್ಪಿದವನಂತೆ ಹೇಳುತ್ತಿಲ್ಲ. ಹಾಗಿದ್ದುಕೊಂಡು ಇನ್ನೂ ಚೆನ್ನಾಗಿ ಅವರ ಸೇವೆ ಮಾಡಬೇಕು ಎಂಬುದೇ ನನ್ನ ಹಂಬಲ. ಅಸ್ಪೃಶ್ಯತೆಯ ಬಗೆಗೆ ನನ್ನ ಅಭಿಪ್ರಾಯಗಳು ಪಾಶ್ಚಾತ್ಯ ಪ್ರಭಾವದಿಂದ ಮೂಡಿಲ್ಲ. ಅವು ಶುದ್ಧ ಆಚಾರಶೀಲ ಹಿಂದೂ ವಾತಾವರಣ ಹಾಗೂ ಸಂಪ್ರದಾಯದಲ್ಲಿ ಹುಟ್ಟಿ ಬೆಳೆದ ಮನುಷ್ಯನು ಬುದ್ಧಿ ಪೂರ್ವಕವಾಗಿ ಒಪ್ಪಿಕೊಂಡ ಸಿದ್ಧಾಂತಗಳು; ಆಚಾರವಂತರಾದ ತಂದೆತಾಯಿಗಳನ್ನು ಅನುಕರಿಸುವುದರ ಮೂಲಕ ಹಿಂದೂಧರ್ಮದ ಬೋಧನೆಗಳನ್ನು ಪಾಲಿಸಿದ ವ್ಯಕ್ತಿಯ ನಂಬಿಕೆಗಳು ಇವು; ಮನುಷ್ಯನ ಶರೀರವನ್ನೂ ಅದರೊಳಗೆ ವಿರಾಜಿಸುವವನನ್ನೂ ಅಭ್ಯಸಿಸಿರುವ ವ್ಯಕ್ತಿಯ ಅಭಿಪ್ರಾಯಗಳು; ಪೂರ್ಣ ನಂಬಿ ಮತ್ತು ತನ್ಮಯತೆಯಿಂದ ಶಾಸ್ತ್ರಗಳನ್ನು ಅಭ್ಯಾಸ ಮಾಡಿರುವವನ ವಿಚಾರಗಳು ಇವು; ಭಾರತಾದ್ಯಂತ ಸುತ್ತಾಡಿ ಈ ಬಗೆಗೆ ಶಾಸ್ತ್ರಿಗಳೊಂದಿಗೂ ಪಂಡಿತರೊಂದಿಗೂ ಚರ್ಚೆ ನಡೆಸಿದ ಪರಿಣಾಮವಾಗಿ ತನ್ನ ನಂಬಿಕೆಗಳನ್ನು ದೃಢಪಡಿಸಿಕೊಂಡವನ ಮಾತು ಇದು; ಎಂದು ಗಾಂಧೀ ನುಡಿದರು. ನೀವು ನನ್ನನ್ನು ಆಹ್ವಾನಿಸಿದಾಗ ಅಸ್ಪೃಶ್ಯರಲ್ಲಿ ನಾನೂ ಒಬ್ಬ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿತ್ತು. ಅಂತಹ ಅಭಿಪ್ರಾಯಗಳನ್ನು ಹೊಂದಿರುವ ಮನುಷ್ಯನನ್ನು ಕರೆದು ತಪ್ಪು ಮಾಡಿದೆವಲ್ಲಾ ಎಂದು ನೀವು ಈಗಲೂ ಭಾವಿಸುವುದಾದರೆ, ನಿಮ್ಮ ಹೆಜ್ಜೆಯನ್ನು ಹಿಂದಕ್ಕಿರಿಸಿ, ನನ್ನನ್ನು ಸೌಜನ್ಯಪೂರಕವಾಗಿ ವಾಪಸು ಕಳುಹಿಸಿಬಿಡಿ. ನೀವು ಹಾಗೆ ಮಾಡಿದರೆ ನಿಮ್ಮನ್ನು ಮೆಚ್ಚುತ್ತೇನೆ. ನಿಮ್ಮ ವಿಚಾರದಲ್ಲಿ ತಪ್ಪು ಭಾವನೆ ಇಟ್ಟುಕೊಳ್ಳುವುದಿಲ್ಲ, ಎಂದು ಭರವಸೆ ನೀಡುತ್ತೇನೆ. ನನ್ನನ್ನು ಸೇರಿಸಿಕೊಳ್ಳದೆ ಇದ್ದರೆ

ನಾನು ಅದನ್ನು ಗೌರವವೆಂದೇ ಭಾವಿಸುತ್ತೇನೆ. ಆದರೆ ಆ ಮಿತ್ರರನ್ನು ಸೇರಿಸಿಕೊಳ್ಳದೆ ದೂರ ಇರಿಸಿದರೆ ನನಗೆ ತುಂಬಾ ನೋವಾಗುತ್ತದೆ. ರಾಮನ ಹೆಸರನ್ನು ಮಲಿನ ಗೊಳಿಸುವುದನ್ನು ರಾಮಾಯಣದ ವಿದ್ಯಾರ್ಥಿ ಹೇಗೆ ಸಹಿಸುವುದಿಲ್ಲವೋ ಹಾಗೆ ಅಸ್ಪೃಶ್ಯರು ಅವಮಾನಕ್ಕೀಡಾದ ಜಾಗದಲ್ಲಿ ನಾನು ಇರಲೊಲ್ಲೆ. ಆದುದರಿಂದ ಅವರು ಗಳು ನಿಮ್ಮೊಡನೆ ಬಂದು ಕೂರಲು ಅವಕಾಶಕೊಡಿ; ಇಲ್ಲದಿದ್ದರೆ ನಾನೇ ಹೋಗಿ ಅವರ ಮಧ್ಯೆ ಕೂರಲು ಅನುಮತಿಕೊಡಿ. ನೀವು ಮಧ್ಯದಲ್ಲಿ ನಿರ್ಮಿಸಿರುವ ಕಾವಲು ತಡೆ, ಮೂಲಭೂತ ವಿಚಾರಗಳಿಗೆ ವಿರೋಧವಾದಂತಹದು. ಆ ರಕ್ಷಾವರಣವನ್ನು ತೆಗೆದುಬಿಡಿ; ಇಲ್ಲವೇ ನನ್ನನ್ನು ಈ ಸಹೋದರರ ಮಧ್ಯೆ ಕೂಡಿಸಿರಿ. ಆದರೆ ಒಂದು ಮಾತು. ನೀವು ಏನೇ ಮಾಡಿದರೂ ಮನಃಪೂರ್ವಕವಾಗಿ ಧೈರ್ಯವಾಗಿ ಮಾಡಿ; ನನ್ನನ್ನು ಮೆಚ್ಚಿಸಲು ಮಾಡಬೇಡಿ. ನನ್ನನ್ನು ಹೊರ ಹಾಕಿದರೆ ನಿಮ್ಮ ಧೈರ್ಯವನ್ನೂ ನಿಮ್ಮ ಅಸ್ತಿತ್ವದ ರಕ್ಷಣೆ ಬಗ್ಗೆ ನೀವು ತೋರುವ ಆದರವನ್ನೂ ಮೆಚ್ಚಿ ನಿಮ್ಮನ್ನು ಅಭಿನಂದಿಸುತ್ತೇನೆ. ಅಸ್ಪೃಶ್ಯರನ್ನು ನಿಮ್ಮೊಡನೆ ಸೇರಿಸಿಕೊಳ್ಳುವುದಾದರೆ ನೀವು ಪೂರ್ಣ ವಾಗಿ ಆಲೋಚಿಸಿ ಸೇರಿಸಿಕೊಳ್ಳಿರಿ. ಮಂಗ್ರೋಲಿನ ಜನ ಮಾಡಿದಂತೆ ಮಾಡಿ ಅವರಂತೆ ಪೇಚಿಗೆ ಸಿಕ್ಕಿಕೊಳ್ಳಬೇಡಿ. ಅಲ್ಲಿಯ ಜನರು ನಾನು ನಿರ್ಗಮಿಸಿದ ಮೇಲೆ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿ ತಮ್ಮ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಂಡರು. ಇದು ಸತ್ಯಾಗ್ರಹದಲ್ಲಿ ನಿಮಗೆ ಎಚ್ಚರಿಕೆಯ ಪಾಠವಾಗಲಿ" ಎಂದರು.

ಗಾಂಧಿಯವರು ಕೊಟ್ಟ ಎಚ್ಚರಿಕೆ ಪರಿಣಾಮಕಾರಿಯೇ ಆಯಿತು. ಓಟು ತೆಗೆದುಕೊಂಡಾಗ ಸಂಪ್ರದಾಯಸ್ಥರ ಅಭಿಪ್ರಾಯದ ಕಡೆಗೆ ತುಸು ಹೆಚ್ಚು ಬಹುಮತ ಬಂದಿತು. ಆಗ ಅಸ್ಪೃಶ್ಯರಿದ್ದ ಕಡೆಗೇ ಹೋಗಿ ಅಲ್ಲಿಂದಲೇ ಭಾಷಣ ಮಾಡಲು ಗಾಂಧಿಯವರು ಅನುಮತಿ ಕೇಳಿದರು. ಈ ಕೆಲಸವನ್ನು ಹೆಮ್ಮೆ ಹಾಗೂ ಹರ್ಷದಿಂದಲೇ ಮಾಡಿದರು. ಅವರ ಮುಂದೆ ಇಟ್ಟಿದ್ದ ಮೇಜನ್ನು ಸ್ವಯಂ ಸೇವಕರು ತೆಗೆದು ರಕ್ಷಾವರಣ ದಾಚೆಗೆ ಇಟ್ಟಾಗ ಯಾರೂ ತುಟಿಪಿಟಿಕ್ ಅನ್ನಲಿಲ್ಲ. ಗಾಂಧಿಯವರು ಹೊಸ ವೇದಿಕೆ ಯಿಂದ ಮಾಡಿದ ಭಾಷಣವನ್ನು ಸಭಿಕರು ಕುಳಿತು ಕೇಳಿದರು. ಅವರುಗಳು ಇಟ್ಟಿದ್ದ ನಂಬಿಕೆಯನ್ನು ಧೈರ್ಯವಾಗಿ ವ್ಯಕ್ತಪಡಿಸಿದ್ದಕ್ಕೆ ಅವರನ್ನು ಅಭಿನಂದಿಸಿದರು. ಆದರೆ ಮುಂದೆ ಏರ್ಪಾಟು ಮಾಡುವ ಸಭೆಗಳ ವಿಷಯದಲ್ಲಿ ಕಟ್ಟುನಿಟ್ಟಾದ ನಿಯಮವನ್ನು ಹಾಕಿದರು. "ರಕ್ಷಾವರಣಗಳು ಇರಕೂಡದು. ರೈಲ್ವೆ ಗಾಡಿಗಳಲ್ಲಿ ಐರೋಪ್ಯರಿಗೂ ಆಂಗ್ಲೋ–ಇಂಡಿಯನ್ನರಿಗೂ ಸ್ಥಳಗಳನ್ನು ಮೀಸಲಿಡುವಂತೆ ಸಂಪ್ರದಾಯಸ್ಥರು ಈ ಸಭೆಗಳಲ್ಲಿ ಸ್ಥಳಗಳನ್ನು ಕಾದಿರಿಸಿಕೊಳ್ಳಲಿ. ಅಸ್ಪೃಶ್ಯರನ್ನು ಸಂಪೂರ್ಣವಾಗಿ ಪ್ರತ್ಯೇಕ ವಾಗಿರಿಸುವ ಸ್ಥಳದಿಂದ ಬೇಕಾದರೆ ನಾನು ಭಾಷಣ ಮಾಡುತ್ತೇನೆ. ಆದರೆ ಅವರನ್ನು ಕೀಳಾಗಿ ಕಂಡು ಅವಮಾನಗೊಳಿಸಿದ ಕಡೆ ನಾನು ನಿಂತು ಮಾತನಾಡಲಾರೆ."

ಭುಜ್‌ನಲ್ಲಿ ಎರಡನೆ ದಿನದ ಕಾರ್ಯಕ್ರಮದಲ್ಲಿ ಎರಡು ಗಣನೀಯ ವೈಶಿಷ್ಟ್ಯ ಗಳಿದ್ದುವು. ಗೋರಕ್ಷಣೆಗೆ ಹಣ ನೀಡಬೇಕೆಂದು ಮನವಿ ಮಾಡಿಕೊಂಡಿದ್ದು ಮೊದಲ

ವೈಶಿಷ್ಟ್ಯ. ಕಚ್‌ನ ಜನರು ನೀಡಿದ ಹಣವನ್ನೆಲ್ಲ ಕಚ್ ಪ್ರದೇಶದಲ್ಲೇ ಖರ್ಚು ಮಾಡ ಬೇಕೆಂಬ ಸಿದ್ಧಾಂತವನ್ನು ಗಾಂಧಿಯವರು ಅಲ್ಲಗಳೆದರು. ಇದು ಮತ್ತೊಂದು ವೈಶಿಷ್ಟ್ಯದ ಸಂಗತಿ. ಗೋರಕ್ಷಣೆಯನ್ನು ಕುರಿತು ಮಾತನಾಡುತ್ತಾ "ಗೋಸೇವಕರ ದೆಸೆಯಿಂದಾಗಿ ಗೋರಕ್ಷಣೆಯು ಕೆಲಸಕ್ಕೆ ತುಂಬಾ ತೊಂದರೆಯಾಗಿದೆ. ಮುಸಲ್ಮಾನರು 'ಕುರ್‌ಬಾನ್ನಿ' ಗಾಗಿ ಕೊಲ್ಲುವ ಹಸುಗಳ ಸಂಖ್ಯೆಗೆ ನೂರರಷ್ಟು ಹಸುಗಳನ್ನು ವ್ಯಾಪಾರದ ಉದ್ದೇಶ ದಿಂದ ಕೊಲ್ಲಲಾಗುತ್ತಿದೆ, ಎಂಬುದನ್ನೇ ಮರೆಯುತ್ತೇವೆ. ನಮ್ಮ ದೇಶದಲ್ಲಿ ಕಸಾಯಿ ಖಾನೆಗಳನ್ನು ಮುಖ್ಯವಾಗಿ ಸೈನ್ಯಕ್ಕೋಸ್ಕರ ಹಾಗೂ ಹದ ಮಾಡಿದ ಚರ್ಮಕ್ಕೋಸ್ಕರ ನಡೆಸಲಾಗುತ್ತಿದೆ. ಬಹುತೇಕ ಕಸಾಯಿಖಾನೆಗಳನ್ನು ನಡೆಸಲು ಮುಖ್ಯ ಕಾರಣ ಗಳೆಂದರೆ, ನಮ್ಮ ಕೋಟ್ಯಾಧೀಶರುಗಳ ಸಂಕುಚಿತ ಮನೋಭಾವ ಮತ್ತು ಅಜ್ಞಾನ ಹಾಗೂ ಧರ್ಮಬೋಧಕರ ಜಡ ಮನಸ್ಸಾಕ್ಷಿ. ಹೆಚ್ಚು ಕಡಿಮೆ ಹಸುಗಳ ಮಾಲೀಕರು ಗಳೆಲ್ಲ ಹಿಂದೂಗಳೇ. ಇವರುಗಳು ಹಸುಗಳನ್ನು ಮಾರಲು ನಿರಾಕರಿಸಿದರೆ ಗೋಹತ್ಯೆ ಮಾಡುವವರ ವ್ಯಾಪಾರ ನಿಂತೇ ಹೋಗುತ್ತದೆ. ಚರ್ಮದ ಪಾದರಕ್ಷೆಗಳನ್ನು ಉಪ ಯೋಗಿಸುವ ನಾವುಗಳು ಪ್ರತಿಯೊಬ್ಬರೂ ಹತ್ಯೆಗೆ ಭಾಗಿಗಳು. ಏಕೆಂದರೆ, ಚರ್ಮ ಶಾಲೆಗಳಲ್ಲಿ ಹತ್ಯ ಮಾಡಿದ ಪ್ರಾಣಿಗಳ ಚರ್ಮವನ್ನು ಹದ ಮಾಡುವಷ್ಟು ಸುಲಭ ವಾಗಿ ಸತ್ತ ಪ್ರಾಣಿಗಳ ಚರ್ಮವನ್ನು ಮಾಡುವುದಿಲ್ಲ. ಆದುದರಿಂದ ಈ ಪ್ರಾಣಿಗಳ ಸೇವೆ ಮಾಡಲು ನಾವು ತೀವ್ರ ಅಭಿಲಾಷೆ ಹೊಂದಿದ್ದ ಪಕ್ಷದಲ್ಲಿ ನಮ್ಮ ಕೋಟ್ಯಾಧಿ ಪತಿಗಳು ಚರ್ಮಾಲಯಗಳನ್ನೂ ಹಾಲಿನ ಡೈರಿಗಳನ್ನೂ ನಡೆಸಬೇಕು. ಮತ್ತು ನಾವು ಚರ್ಮ ಹದಮಾಡುವುದರಲ್ಲೂ ಹಾಲಿನ ಡೈರಿಗಳನ್ನು ನಡೆಸುವುದರಲ್ಲೂ ಪರಿಣತ ರಾಗಬೇಕು. ಈ ಉದ್ದೇಶಕ್ಕೆ ಹೇರಳವಾಗಿ ಹಣಬೇಕೆಂದು ತಿಳಿಸಿದರೆ ಅದು ಅತಿಶಯೋಕ್ತಿ ಯಾಗಲಾರದು."

ಕಚ್ ಪ್ರದೇಶದ ಜನರಿಂದ ವಸೂಲು ಮಾಡಿದ ನಿಧಿಯನ್ನು ಅಲ್ಲೇ ಖರ್ಚು ಮಾಡಬೇಕೆಂಬ ಪ್ರಚಾರದ ಬಗ್ಗೆ ಪ್ರಸ್ತಾಪಿಸಿ ಹೀಗೆ ಹೇಳಿದರು: "ತಾಳ್ಮೆ ಕಳೆದು ಕೊಂಡ ಕಚ್ ಮಿತ್ರರಿಗೆ ಒಂದು ಮಾತು ಹೇಳುತ್ತೇನೆ. ಕಚ್‌ನಲ್ಲಿ ಸಂಗ್ರಹಿಸಿದ ಹಣ ವನ್ನು ಅಲ್ಲೇ ಖರ್ಚು ಮಾಡುವುದಿದ್ದರೆ ನಾನು ಅಷ್ಟು ದೂರದಿಂದ ಕಚ್‌ಗೆ ಏಕೆ ಬರಬೇಕು? ನಿಮ್ಮ ಪ್ರದೇಶದೊಳಗಿನ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ನೀವು ಸಮರ್ಥರಾಗಿದ್ದೀರೆಂಬುದು ನನಗೆ ಗೊತ್ತಿಲ್ಲವೇ? ನಿಮಗೆ ಹಣ ಸಂಗ್ರಹಿಸಿಕೊಡು ವುದಕ್ಕಾಗಿ ನನ್ನನ್ನು ಕಚ್‌ಗೆ ಆಹ್ವಾನಿಸುವುದು ತರವೇ? ನಿಮ್ಮ ಆವಶ್ಯಕತೆಗಳ ಪೂರೈಕೆಗೆ ನೀವುಗಳೇ ಹಣ ಕೂಡಿಸಬಲ್ಲಿರಿ. ಅದು ನನಗೆ ಗೊತ್ತು. ನೀವು ಅದನ್ನು ಮಾಡಿಕೊಳ್ಳ ಬೇಕು. ಹಣದ ವಿಷಯದಲ್ಲಿ ನಿಮಗೆ ನನ್ನ ಮೇಲೆ ನಂಬಿಕೆ ಇದ್ದರೆ ಅದನ್ನು ಎಲ್ಲಿ ಮತ್ತು ಹೇಗೆ ಉಪಯೋಗಿಸಬೇಕೆಂಬುದು ನನಗೆ ಗೊತ್ತೆಂಬ ಪೂರ್ಣ ಅರಿವೂ ನಿಮಗೆ ಇರಬೇಕು. ಅನೇಕ ಮಾರ್ವಾಡಿ ಸ್ನೇಹಿತರು ನಾನು ಕೇಳಿದಾಗಲೆಲ್ಲ ಹಣ ನೀಡುತ್ತಾರೆ. ಅವರೇನಾದರೂ ಷರತ್ತನ್ನು ಹಾಕುತ್ತಾರೆಯೆ? ಮದ್ರಾಸಿನಲ್ಲಿ ಹಿಂದಿ ಪ್ರಚಾರಕ್ಕಾಗಿ

ಅವರು ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರು; ಅಸ್ಪೃಶ್ಯತಾನಿವಾರಣೆಗೂ ಗೋರಕ್ಷಣೆಗೂ ಅವರು ಹಣ ಕೊಡುತ್ತಿದ್ದಾರೆ. ಅವರು ಕೊಡುವ ಹಣವನ್ನು ಮಾರವಾಡದಲ್ಲೇ ಉಪಯೋಗಿಸಬೇಕೆಂದು ಅವರು ಒತ್ತಾಯಪಡಿಸುತ್ತಾರೆಯೇ? ಪರೋಪಕಾರಕ್ಕೆ ಹೆಸರಾದ ಕಚ್ ಜನರಿಂದ ಇಂತಹ ಮಾತುಕೇಳಿ ನನಗೆ ತುಂಬಾ ನೋವುಂಟಾಗಿದೆ. ಇಂತಹ ಸಂಕುಚಿತ ಪ್ರಾಂತೀಯ ಭಾವನೆ ನಿಮಗೆ ಸರಿಯಲ್ಲವೆಂದು ಎಚ್ಚರಿಸುತ್ತೇನೆ. ಅದು ನಿಮಗೆ ಒಳ್ಳೆಯದಲ್ಲ; ಯಾರಿಗೂ ಒಳ್ಳೆಯದಲ್ಲ."

ಭುಜ್‌ನಲ್ಲಿ ಆದ ತಪ್ಪು ಮರುಕಳಿಸದಂತೆ ನೋಡಿಕೊಳ್ಳಲು ಮಾಂಡ್ವಿಯ ಸಂಪ್ರದಾಯಸ್ಥ ಜನರು ಶ್ರೀಮಂತ ಸಾಧುವೊಬ್ಬನ ನೇತೃತ್ವದಲ್ಲಿ ನಿರ್ಧರಿಸಿದರು. ಭುಜ್‌ನಲ್ಲಿದ್ದಂತೆಯೇ ಎರಡು ಅಂಕಣಗಳಿರಬೇಕು, ಒಂದು ದ್ವಾರದಿಂದ ಅಸ್ಪೃಶ್ಯರು ಪ್ರವೇಶ ಮಾಡತಕ್ಕದ್ದು, ಮತ್ತೊಂದರ ಮೂಲಕ ಸ್ಪೃಶ್ಯರು ಬರತಕ್ಕದ್ದು—ಎಂದು ನಿರ್ಧರಿಸಿದರು. ಅಸ್ಪೃಶ್ಯರಿಗೆ ಗೊತ್ತುಮಾಡಿದ್ದ ಪ್ರವೇಶ ದ್ವಾರದಿಂದ ಗಾಂಧೀಜಿ ಪ್ರವೇಶ ಮಾಡಿದ್ದು ಅವರ ಎಣಿಕೆಯನ್ನು ತಲೆಕೆಳಕು ಮಾಡಿತು. ಇದನ್ನು ನೋಡಿ ಸಾಧುವು ಕೋಪಗೊಂಡು ಬಿಟ್ಟ. ಮಾರನೆಯ ದಿನದ ಸಭೆಯೂ ಹೆಚ್ಚು ಕಡಿಮೆ ಇದೇ ರೀತಿ ಸಜ್ಜಾಗಿದ್ದಿತು. ಗಾಂಧೀಜಿ ಮತ್ತು ಇತರ ಸುಧಾರಕರು ಅಸ್ಪೃಶ್ಯರ ಪ್ರವೇಶ ದ್ವಾರದಿಂದ ಹೋಗಲು ಅವಕಾಶ ಮಾಡಲಾಗಿತ್ತು. ಆದರೆ ಸಂಪ್ರದಾಯಸ್ಥರು ಕುಳಿತಿದ್ದ ಜಾಗಕ್ಕೆ ಬೇರೆಯವರು ಬರಲಾಗದಂತೆ ಎಚ್ಚರಿಕೆ ವಹಿಸಿದ್ದರು. ಗಾಂಧಿಯವರು ಕುಳಿತಿದ್ದ ವೇದಿಕೆಯ ಮೇಲೆ ಕುಳಿತುಕೊಳ್ಳುವುದೋ ಬಿಡುವುದೋ ಎಂಬ ಡೋಲಾಯಮಾನ ಸ್ಥಿತಿಯಲ್ಲಿ ಅಧ್ಯಕ್ಷ ಇದ್ದ. ಮಾನಪತ್ರವನ್ನು ಇಟ್ಟಿದ್ದ ಕರಂಡವನ್ನು ಗಾಂಧಿಯವರ ಕೈಗೆ ಕೊಟ್ಟರೆ ಎಲ್ಲಿ ಮೈಲಿಗೆ ಆಗುತ್ತದೆಯೋ ಎಂದು ಭಾವಿಸಿ ಅದನ್ನು ಅವರ ಕೈಗೆ ಎತ್ತಿಹಾಕಿ ಅಧ್ಯಕ್ಷನು ನಗೆಪಾಟಲಿಗೆ ಈಡಾದ. ಗಾಂಧಿಯವರು ಮುನ್ನಿನ ದಿನ ಸಂಜೆ ನೀಡಿದ್ದ ಸಲಹೆಗನುಗುಣವಾಗಿ ತಾನು ನಡೆಯುತ್ತಿದ್ದೇನೆಂದು ಅವನು ಭಾವಿಸಿದ. ಏಕೆಂದರೆ, ಹಿಂದಿನ ದಿನ ಸಾಧುವು ಸಭೆಯನ್ನು ಬಿಟ್ಟು ಹೊರಟು ಹೋದಾಗ ಗಾಂಧೀ ಹೀಗೆ ಹೇಳಿದ್ದರು: "ಅವರು ಹೊರಟು ಹೋಗುವುದರ ಬದಲಾಗಿ ನನ್ನನ್ನು ಮುಟ್ಟಿಸಿಕೊಳ್ಳದೆ ಮಾನಪತ್ರವನ್ನು ನನ್ನ ಕೈಗೆ ಎತ್ತಿಹಾಕಬಹುದಾಗಿತ್ತು" ಎಂದು. ಸ್ಪೃಶ್ಯರೆನಿಸಿದ್ದ ಭಾಷಣಕಾರರು ಎಲ್ಲರೆದುರಿಗೆ ಅಸ್ಪೃಶ್ಯರನ್ನು ಮುಟ್ಟಿದ ಕಾರಣದಿಂದ ಅಸ್ಪೃಶ್ಯರಾಗಿ ಭಾವಿಸಲ್ಪಟ್ಟಿದ್ದರು.

ಮುಂಧ್ರಾದಲ್ಲೂ ಅಸ್ಪೃಶರಿಗೂ ಸುಧಾರಕರಿಗೂ ಪ್ರತ್ಯೇಕ ಅಂಕಣವನ್ನು ನಿರ್ಮಿಸಲಾಗಿತ್ತು. ಆದರೆ ಆ ಕಡೆಗೆ ಯಾರೊಬ್ಬ ಸ್ಪೃಶ್ಯರೂ ಹೋಗದಂತೆ ವ್ಯವಸ್ಥೆ ಮಾಡಲಾಗಿತ್ತು. ಅಧ್ಯಕ್ಷರೂ ಎಲ್ಲ ಹಿಂದೂ ಸ್ವಯಂಸೇವಕರೂ ನಗರದ ಗಣ್ಯ ಮುಸಲ್ಮಾನರೂ ಅಸ್ಪೃಶ್ಯ ಬಾಲಕರ ಶಾಲೆಯ ಉಪಾಧ್ಯಾಯರೂ ಸ್ಪೃಶ್ಯರಿಗೆ ಗೊತ್ತುಮಾಡಿದ್ದ ಅಂಕಣದಲ್ಲಿ ಕುಳಿತುಕೊಂಡಿದ್ದರು. ಗಾಂಧಿಯವರನ್ನು ಅವರ ಸತ್ಯಾಗ್ರಹ ಮತ್ತು ಅಹಿಂಸೆಯ ತತ್ವಗಳಿಗಾಗಿ ಕೊಂಡಾಡುವುದರಲ್ಲಿ ಅವರೆಲ್ಲರೂ

ನಿಸ್ಸೀಮರಾಗಿದ್ದರು. ಮಾಂಡ್ವಿಯ ಘಟನೆ ಹಾಸ್ಯಾಸ್ಪದವಾಗಿದ್ದರೆ ಮುಂಧ್ರಾದಲ್ಲಿ ಬೇಸರ ತರುವಂತಹದಾಗಿತ್ತು. ಇದು ಗಾಂಧಿಯವರಿಗೆ ಅಸಹನೀಯವಾಯಿತು. ಆ ಸಂಜೆ ಅವರು ಭಾಷಣ ಮಾಡುತ್ತಾ ಸಂಕಟದಿಂದ ಹೇಳಿದರು: "ಪರಮಾತ್ಮಾ, ಇದೇ ಹಿಂದೂಧರ್ಮವಾಗಿದ್ದಲ್ಲಿ ಅದು ಎಷ್ಟು ಬೇಗ ನಾಶವಾದರೆ ಅಷ್ಟೂ ಒಳ್ಳೆಯದು. ಅದೇ ನನ್ನ ತೀವ್ರ ಪ್ರಾರ್ಥನೆ." ಪ್ರವಾಸದ ವ್ಯವಸ್ಥಾಪಕರು ತಮ್ಮನ್ನು ಅಂಜಾರ್‌ಗೆ ಕರೆದೊಯ್ಯುವುದರ ವಿರುದ್ಧ ಗಾಂಧಿಎಚ್ಚರಿಕೆ ನೀಡಿದರು. ಸಭಿಕರು ತಮ್ಮ ಹೃದಯಗಳನ್ನು ಶೋಧಿಸಿ ಶುದ್ಧಗೊಳಿಸಿಕೊಳ್ಳಬೇಕೆಂದು ಹೇಳಿದರು. ಆದರೆ ವ್ಯವಸ್ಥಾಪಕರು ಅಂಜಾರ್‌ಗೆ ಭೇಟಿಕೊಡುವ ಕಾರ್ಯಕ್ರಮವನ್ನು ಕೈಬಿಡಲು ಇಷ್ಟಪಡಲಿಲ್ಲ. ಆದುದರಿಂದ ಗಾಂಧಿ ಅಲ್ಲಿಗೂ ಹೋದರು.

ಅಂಜಾರದಲ್ಲಿ ತಮ್ಮ ಆತಿಥೇಯರಾಗಿದ್ದ ಸಂಪ್ರದಾಯಸ್ಥ ಅಧ್ಯಕ್ಷನಿಗೆ ಗಾಂಧೀಜಿ ಹೇಳಿದರು: "ಸಭೆ ಮತ್ತು ಮಾನ ಪತ್ರದ ಕಾರ್ಯಕ್ರಮವನ್ನು ರದ್ದು ಮಾಡಿರಿ. ಅದರ ಬದಲಾಗಿ ಅಸ್ಪೃಶ್ಯರ ವಸತಿ ಕೇಂದ್ರದಲ್ಲಿ ಒಂದು ಸಾಮಾನ್ಯ ಸಭೆಯನ್ನಿಟ್ಟುಕೊಳ್ಳಿ. ಬೇಕಾದರೆ ಮಾರನೆಯ ದಿನ ಸಂಪ್ರದಾಯಸ್ಥರೊಡನೆ ಸಭೆ ನಡೆಸೋಣ"–ಎಂದರು. ಆತಿಥೇಯ ಹೇಳಿದ: "ನಾವು ಈಗಾಗಲೇ ಸಿದ್ಧತೆಗಳನ್ನು ಮಾಡಿದ್ದೇವೆ. ನಿಮ್ಮ ಕೆಲವು ಅಭಿಪ್ರಾಯಗಳನ್ನು ನಾವು ಒಪ್ಪದೇ ಇರಬಹುದು. ಅದು ಸ್ವಾಭಾವಿಕವಲ್ಲವೇ? ನಾವು ನಿಮಗೆ ಗೌರವ ಸಲ್ಲಿಸಬೇಕು. ನಿಮ್ಮ ಬುದ್ಧಿವಾದವನ್ನು ಕೇಳುವ ಸುಯೋಗ ವನ್ನು ತಪ್ಪಿಸಬೇಡಿ."

ಗಾಂಧೀಜಿ ಹೇಳಿದರು:" ನನಗೆ ಅತ್ಯಂತ ಪ್ರಿಯವಾದ ವಿಷಯವನ್ನು ನೀವು ಒಪ್ಪಿಕೊಳ್ಳುತ್ತಿಲ್ಲ. ನನ್ನ ಪ್ರಾಣಕ್ಕಿಂತ ಹೆಚ್ಚು ಪ್ರಿಯರಾದ ಜನರನ್ನು ನೀವು ಅವಮಾನ ಗೊಳಿಸುತ್ತೀರಿ. ಹೀಗಿರುವಾಗ ನೀವು ನನ್ನನ್ನು ಗೌರವಿಸುವುದರಲ್ಲಿ ಅರ್ಥವೇನಿದೆ? ಯಾವುದಕ್ಕೂ ಔಚಿತ್ಯವಿರಬೇಕು. ಪರಿಮಾಣದ ಪರಿಜ್ಞಾನವಿರಬೇಕು. ನಾನು ಎಷ್ಟೋ ಐರೋಪ್ಯರ ಸಭೆಗಳಲ್ಲಿ ಭಾಷಣ ಮಾಡಿದ್ದೇನೆ. ಅವರು ನನ್ನ ಯಾವುದೇ ವಿಚಾರವನ್ನು ಒಪ್ಪುವುದಿಲ್ಲ. ಆದರೆ ಅವರಿಗೆ ನಡವಳಿಕೆಯ ಪರಿಜ್ಞಾನ ಚೆನ್ನಾಗಿದೆ. ನನ್ನ ವಿಚಾರಗಳನ್ನು ಒರೆಗಲ್ಲಿಗಿಡದೆ ಬಿಡುವುದಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತಾರೆ. ಆದರೆ ಅತಿಥಿಯನ್ನು ಹೇಗೆ ಗೌರವಿಸಬೇಕೆಂಬುದನ್ನು ಅವರು ತಿಳಿದಿದ್ದಾರೆ. ಕಲ್ಕತ್ತೆಯಲ್ಲಿ ನನ್ನ ಮೇಲಿನ ಅಭಿಮಾನದಿಂದ ಅವರು ಕೇವಲ ಸಸ್ಯಾಹಾರಿ ಭೋಜನವನ್ನು ಏರ್ಪಡಿಸಿ ದ್ದರು. ಆದರೆ ಇಲ್ಲಿ ಭುಜ್‌ನಲ್ಲಿ ನಾನು ತಾತ್ಕಾಲಿಕವಾಗಿ ಒಂದು ವ್ಯವಸ್ಥೆಯನ್ನು ಸೂಚಿಸಿದ್ದಕ್ಕೆ ಅದನ್ನೇ ನೀವು ನಿಮ್ಮ ಅನುಕೂಲಕ್ಕೆ ಬೇಕಾದಂತೆ ತಿರುಗು ಮುರುಗು ಮಾಡುತ್ತೀರಿ. ಮುಂಧ್ರಾದಲ್ಲಿ ಮಾಡಿದಂತೆ ಹಾಸ್ಯಾಸ್ಪದ ಮಟ್ಟಕ್ಕೆ ಇಳಿಸಲು ನೀವು ಹಿಂಜರಿಯುವುದಿಲ್ಲ. ಒಂದು ಉದಾಹರಣೆ ತೆಗೆದುಕೊಳ್ಳಿ; ನಿನಗಿಷ್ಟ ಬಂದರೆ ಎಷ್ಟು ಬೇಕಾದರೂ ಬೈಯಬಹುದು ಎಂದು ನನ್ನ ಮಗನಿಗೆ ಹೇಳುತ್ತೇನೆಂದುಕೊಳ್ಳಿ; ಅವನು ಅದನ್ನೇ ಎತ್ತಿಕೊಂಡು ಪ್ರತಿದಿನವೂ ಬೆಳಿಗ್ಗೆ ಅವನಿಗೆ ತೃಪ್ತಿಯಾಗುವಷ್ಟು

ನನ್ನನ್ನು ಬೈಯುತ್ತಾ ಹೋದರೆ ಹೇಗೆ ಕಾಣುತ್ತದೆ? ನೀವು ಮಾಡಿರುವುದು ಅದೇ. ಮಾಂಡವಿಯಲ್ಲಿ ನಾನು ಪ್ರಥಮ ಸಭೆಯಲ್ಲಿ ಹೇಳಿದ್ದೆ, ಅಧ್ಯಕ್ಷನು ಮಾನಪತ್ರವನ್ನು ನನ್ನ ಕೈಗೆ ದೂರದಿಂದ ಎತ್ತಿಹಾಕಬಹುದಾಗಿತ್ತು ಎಂದು. ಮಾರನೆಯ ದಿನ ಆ ಸಲಹೆಯ ಲಾಭ ಪಡೆದು ಅಧ್ಯಕ್ಷನು ಹಾಗೆಯೇ ಮಾಡಿಬಿಟ್ಟ. ನೀವು ನನ್ನನ್ನು ಗೌರವಿಸಲು ಇಚ್ಛಿಸುವುದು ಈ ರೀತಿಯಲ್ಲೇ?"

ಸ್ವಾಗತ ಸಮಿತಿಯು ಸಮಾವೇಶಗೊಂಡು, ಸಾರ್ವಜನಿಕ ಸಭೆಯ ಹದ್ದುಬಸ್ತು ಹಾಗೂ ವೇದಿಕೆಯ ವ್ಯವಸ್ಥೆ ಹೇಗಿರಬೇಕೆಂಬ ಬಗ್ಗೆ ಬಹಳ ಎಚ್ಚರಿಕೆಯಿಂದ ತೀರ್ಮಾನಿಸಿತು. ಅಧ್ಯಕ್ಷನು ದೂರದಲ್ಲಿ ನಿಂತೇ ಮಾತನಾಡಬೇಕು, ಸಮಿತಿಯ ಎಂಟು ಮಂದಿ ಸದಸ್ಯರು ಅಸ್ಪೃಶ್ಯರ ಮಧ್ಯೆ ಕುಳಿತುಕೊಳ್ಳಬೇಕು, ನಗರದ ಸಾಹುಕಾರನು ಗಾಂಧಿಯವರ ಕೈಗೆ ಮಾನಪತ್ರ ಕೊಡಬೇಕು. ಆದರೆ ಮಾಂಡವಿಯಲ್ಲಿ ಮಾಡಿದಂತೆ ಎತ್ತಿ ಹಾಕಬಾರದು; ಅನಂತರ ಅವನು ಮನೆಗೆ ಹೋಗಿ ಶುದ್ಧಿಸ್ನಾನ ಮಾಡಬೇಕು—ಇಷ್ಟೆಲ್ಲ ತೀರ್ಮಾನವಾಯಿತು. ಗಾಂಧಿಯವರು ಸೋಲನ್ನು ಒಪ್ಪಿಕೊಂಡು ಸಭೆಗೆ ಹೋಗಿ ಮಾನಪತ್ರವನ್ನು ಸ್ವೀಕರಿಸಿದರು. ಅವರು ಅಲ್ಲಿ ಭಾಷಣ ಮಾಡುತ್ತಾ, ತಮ್ಮನ್ನು ಪ್ರೀತಿ ವಿಶ್ವಾಸಗಳಿಂದ ನೋಡಿಕೊಂಡು ಭೌತಿಕ ನೆಮ್ಮದಿಯನ್ನು ಒದಗಿಸಿದ್ದಕ್ಕಾಗಿ ವ್ಯವಸ್ಥಾಪಕರಿಗೆ ವಂದನೆ ಸಲ್ಲಿಸಿದರು. ಸುಖ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಕಚ್‌ನ ಜನರು ಬೇರೆಯವರಿಗೆ ಹಿಂದೆ ಬಿದ್ದಿಲ್ಲ. ಆದರೆ ನಾನು ಸುಖ ಸೌಲಭ್ಯಗಳನ್ನು ಅನುಭವಿಸುವುದಕ್ಕೆ ಬಂದಿಲ್ಲ. ಇಲ್ಲಿಗೆ ಬಂದುದರ ಉದ್ದೇಶವೇ ಬೇರೆ. ಮನಸ್ಸು ಬಿಚ್ಚಿ ಅದನ್ನು ಹೇಳಲು ನನಗೆ ಯಾತನೆಯಾಗುತ್ತದೆ; ಕೇಳುವವರಿಗೂ ನೋವುಂಟಾಗುತ್ತದೆ. ಸಂಕಷ್ಟದಲ್ಲಿರುವವರನ್ನು ಸಾಂತ್ವನಗೊಳಿಸಲು ಜಗತ್ತಿನ ಎಲ್ಲ ಧರ್ಮಗಳೂ ದೇವರನ್ನು ತೋರಿಸಿವೆ. ದ್ರೌಪದಿಯು ಕಷ್ಟದಲ್ಲಿದ್ದಾಗ, ತನ್ನ ಗಂಡಂದಿರು ರಕ್ಷಣೆ ಮಾಡದಿದ್ದಾಗ, ಆಕೆ ಕೃಷ್ಣನಿಗೆ ಮೊರೆ ಇಟ್ಟಳು. ಅವಳು ರಕ್ಷಿತಳಾದಳು. ಸೀತೆಯು ಅಶೋಕವನದಲ್ಲಿದ್ದಾಗ ಅವಳ ಬಾಯಲ್ಲಿ ಕೇವಲ ರಾಮನಾಮ ಬರುತ್ತಿತ್ತು. ಅದರಿಂದ ಅವಳು ನೆಮ್ಮದಿ ಪಡೆದಳು. ಇಂದು ಕಷ್ಟದೆಸೆಯಲ್ಲಿರುವ ನಾನು ರಾಮನನ್ನು ನೆನೆದು ಅವನ ನಾಮಸ್ಮರಣೆ ಮಾಡುತ್ತೇನೆ. ಸಾರ್ವಜನಿಕ ಸಭೆಯಲ್ಲಿ ನಾನು ಎಂದೂ ಹೀಗೆ ಮಾಡಿರಲಿಲ್ಲ. ವಿವೇಚನೆಯಿಂದಲೇ ಹಾಗೆ ವರ್ತಿಸುತ್ತಿದ್ದೆ. ಹಿಂದೂಗಳೂ ಮುಸಲ್ಮಾನರೂ ಕ್ರೈಸ್ತರೂ ಇರುವ ಸಭೆಗಳಲ್ಲಿ ಹಾಗೆ ಮಾಡುತ್ತಿರಲಿಲ್ಲ. ಆದರೆ ಈ ಸಂಜೆ ಬೇರೆ ಮಾರ್ಗವೇ ಉಳಿದಿಲ್ಲ. ಇದನ್ನು ಇಷ್ಟಪಡದಿದ್ದವರ ಕ್ಷಮೆ ಯಾಚಿಸುತ್ತೇನೆ. ರಾಮನಾಮ ಸ್ಮರಣೆ ಮಾಡಿ ನನ್ನ ದುಃಖತಪ್ತ ಹೃದಯವನ್ನು ಅವನ ಕಡೆ ತಿರುಗಿಸಿ ನೆಮ್ಮದಿ ಪಡೆಯುತ್ತೇನೆ" ಎಂದು ಗಾಂಧೀಜಿ ನುಡಿದರು.

ಪೌರಸಭೆಗಳು ತಮಗೆ ಮಾನಪತ್ರವನ್ನು ನೀಡುವುದರಲ್ಲಿ ಔದಾರ್ಯ ತೋರಿ ಜನರ ಹಿತಸಾಧನೆ ಬಗ್ಗೆ ಕೃಪಣತನವನ್ನು ತೋರುವುದನ್ನು ಕಟುವಾಗಿ ಟೀಕಿಸಿದರು. 'ಯಂಗ್ ಇಂಡಿಯಾ'ದಲ್ಲಿ ಈ ರೀತಿ ಬರೆದರು:

"ಪೌರಸಭೆಗಳೂ ಸ್ಥಳೀಯ ಸಂಸ್ಥೆಗಳೂ ಕಾಂಗ್ರೆಸ್ ಪ್ರಮುಖರಿಗೆ ಮಾನಪತ್ರ ಗಳನ್ನರ್ಪಿಸುವುದು ಖಾಯಂ ಆಗಿ ರೂಢಿಯಾಗಿಬಿಟ್ಟಿದೆ. ಈ ದೆಸೆಯಿಂದಾಗಿ ಭಾರತಾದ್ಯಂತ ಪೌರಸಭೆಗಳ ಕೆಲಸ ಕಾರ್ಯಗಳ ಪರಿಚಯ ನನಗಾಗಿದೆ. ಪೌರಸಭೆಗಳು ಎದುರಿಸಬೇಕಾದ ಅತ್ಯಂತ ದೊಡ್ಡ ಸಮಸ್ಯೆ ನೈರ್ಮಲ್ಯ ರಕ್ಷಣೆಗೆ ಸಂಬಂಧಿಸಿದ್ದು. ಇದು ಭಾರಿ ಸಮಸ್ಯೆ ಎಂಬುದರ ಅರಿವು ನನಗಿದೆ. ನಮ್ಮ ರಾಷ್ಟ್ರದಲ್ಲಿ ಜನರ ಕೆಟ್ಟ ಅಭ್ಯಾಸಗಳು ವರ್ಣನಾತೀತ. ಎಂತಹಂದೇ ಮಾನವೀಯ ಪರಿಶ್ರಮಕ್ಕೂ ಸಗ್ಗದ ದುರಭ್ಯಾಸಗಳು ರಾಷ್ಟ್ರದಲ್ಲಿ ಮನೆಮಾಡಿಕೊಂಡಿವೆ. ನಾನು ಎಲ್ಲಿ ಹೋದರೂ ಅನೈರ್ಮಲ್ಯದ ಹೊಲಸುಸ್ಥಿತಿ ಒಂದಲ್ಲ ಒಂದು ರೂಪದಲ್ಲಿ ಕಾಣುತ್ತದೆ. ಪೌರಸಭೆಗಳೂ ಸ್ಥಳೀಯ ಸಂಸ್ಥೆಗಳೂ ತಮ್ಮ ತಮ್ಮ ಚೌಕಟ್ಟಿನಲ್ಲಿರುವ ಗಲೀಜನ್ನು ನಿರ್ಮೂಲ ಮಾಡಬೇಕು. ಈ ಕರ್ತವ್ಯ ನಿರ್ವಹಣೆಯು ಗೌರವ ಪ್ರಾಯವಾದದ್ದೆಂದು ತಿಳಿಯಬೇಕು. ನಾವು ನಗರಗಳಲ್ಲಿ ಬದುಕಿ ವ್ಯವಸ್ಥಿತ ಜೀವನವನ್ನು ನಡೆಸಬೇಕಾದರೆ, ಆರೋಗ್ಯವಂತರಾಗಿಯೂ ವಿವೇಕಶಾಲಿಗಳಾಗಿಯೂ ಬೆಳೆಯಬೇಕಾದರೆ ಒಂದಲ್ಲ ಒಂದು ದಿನ ಅನೈರ್ಮಲ್ಯ ಸ್ಥಿತಿಯನ್ನು ನಿವಾರಣೆ ಮಾಡಬೇಕು. ಎಷ್ಟು ಬೇಗ ಅದನ್ನು ಮಾಡಿದರೆ ಅಷ್ಟೂ ಒಳ್ಳೆಯದು. ಸ್ವರಾಜ್ಯ ಬರುವ ತನಕ ಎಲ್ಲವನ್ನೂ ಮುಂದೆ ಹಾಕುವುದು ಬೇಡ. ಕೆಲವು ವಿಷಯಗಳನ್ನು ಪೂರೈಸಲು ಆ ಸುದಿನಕ್ಕೆ ಕಾಯಬೇಕು ನಿಜ. ಅನೇಕ ಕೆಲಸಗಳನ್ನು ಸ್ವರಾಜ್ಯದಲ್ಲಿ ಹೇಗೋ ಹಾಗೆ ಈಗಲೂ ಮಾಡಲು ಸಾಧ್ಯ. ಅವು ರಾಷ್ಟ್ರೀಯ ಹಾಗೂ ನಾಗರಿಕ ಸಮಷ್ಟಿ ಜೀವನದ ಕುರುಹುಗಳು. ಅವುಗಳನ್ನೆಲ್ಲ ಮಾಡದಿದ್ದರೆ ಸ್ವರಾಜ್ಯ ಬರುವುದೇ ಇಲ್ಲ. ಈ ಸಮಸ್ಯೆಯನ್ನು ತ್ವರಿತವಾಗಿ ಪರಿಹರಿಸಲು ಪೌರಸಭೆಗಳಿಗಿಂತ ಉತ್ತಮವಾದ ಬೇರೆ ಸಂಸ್ಥೆಯಾವುದೂ ಇಲ್ಲ. ನನಗೆ ಗೊತ್ತಿರುವಂತೆ, ಈ ಸಂಬಂಧವಾಗಿ ಪೌರಸಭೆಗಳಿಗೆ ಸಾಕಷ್ಟು ಅಧಿಕಾರಗಳಿವೆ. ಅಗತ್ಯವಾದರೆ ಇನ್ನೂ ಹೆಚ್ಚು ಅಧಿಕಾರಗಳನ್ನು ಪಡೆಯಬಹುದು. ಈಗ ಬೇಕಾಗಿರುವುದು ಮನಸ್ಸಂಕಲ್ಪ. ಮಾದರಿಯಾದ ಶೌಚಾಲಯಗಳನ್ನೂ ಹಗಲಿರುಳೂ ಚೊಕ್ಕಟವಾಗಿರುವ ರಸ್ತೆಗಳನ್ನೂ ಹೊಂದಿರದ ಪೌರಸಭೆಗಳು ಆ ಹೆಸರನ್ನಿಟ್ಟುಕೊಳ್ಳಲು ಅರ್ಹತೆ ಪಡೆಯುವುದಿಲ್ಲ. ಈ ವಿಷಯವನ್ನು ಪೌರಸಭೆಗಳು ಮನಗಂಡಂತಿಲ್ಲ. ಪೌರಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರುಗಳ ಸತತ ಪರಿಶ್ರಮವಿಲ್ಲದೆ ಈ ಸುಧಾರಣೆಯನ್ನು ತರಲಾಗುವುದಿಲ್ಲ. ಎಲ್ಲ ಪೌರಸಭೆಗಳನ್ನೂ ಒಟ್ಟಾಗಿ ಪರಿಗಣಿಸಿ, ಪ್ರತಿಯೊಂದರಲ್ಲೂ ಏಕಕಾಲದಲ್ಲಿ ಕೆಲಸ ಆರಂಭವಾಗುವವರೆಗೆ ಕಾಯುತ್ತಾ ಕುಳಿತರೆ ಸುಧಾರಣೆಗೆ ಆಗುವುದೇ ಇಲ್ಲ. ಅನಿರ್ದಿಷ್ಟ ಕಾಲದವರೆಗೆ ಅದನ್ನು ಮುಂದೆ ಹಾಕಿದಂತೆ ಆಗುತ್ತದೆ. ದೃಢ ಮನಸ್ಸು ಮತ್ತು ಸಾಮರ್ಥ್ಯವಿರುವವರು ಮೊದಲು ಸುಧಾರಣೆಯನ್ನು ಆರಂಭಿಸಲಿ, ಅನಂತರ ಬೇರೆಯವರು ಅವರನ್ನು ಅನುಸರಿಸುತ್ತಾರೆ."

ಪ್ರಯಾಸಕರವಾದ ಕಚ್ ಪ್ರವಾಸ ನವೆಂಬರ್ ಐದಕ್ಕೆ ಮುಕ್ತಾಯವಾಯಿತು. ಗಾಂಧಿಯವರು ವಿಶ್ರಾಂತಿಗಾಗಿ ಸಬರಮತಿಗೆ ತೆರಳಿದರು.

# ಸತ್ಯಶೋಧನೆ

೧೯೨೫

ಗಾಂಧಿಯವರು ಚರಖಕ್ಕೆ ಕೊಡುತ್ತಿದ್ದ ಅತಿಯಾದ ಮಹತ್ವವನ್ನು ಕುರಿತು ಬುದ್ಧಿಜೀವಿಗಳು ಅಪಹಾಸ್ಯ ಮಾಡಿದರು. ಖಾದಿಯ ಉಪಾಸನೆ ವಿರುದ್ಧ ಪ್ರಚೋದಿತರಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಪಡಿಸಿದವರಲ್ಲಿ ರವೀಂದ್ರನಾಥ ಠಾಕೂರರು ಪ್ರಮುಖರು. ೧೯೨೫ ನವೆಂಬರ್ ೫ ರ 'ಯಂಗ್ ಇಂಡಿಯಾ'ದಲ್ಲಿ ಗಾಂಧೀಜಿ ತಮ್ಮ ಪ್ರತ್ಯುತ್ತರವನ್ನು ಪ್ರಕಟಿಸಿದರು.

"ಚರಖಾದ ಸಂಬಂಧವಾಗಿ ಕವಿವರ್ಯರ ಹಾಗೂ ಆಚಾರ್ಯ ಸೀಲ್‌ರವರ ನಿಲುವಿನ ಬಗೆಗೆ ಆಚಾರ್ಯ ರೇ ಅವರು ತಾಳ್ಮೆಗೆಟ್ಟು ಮಾತನಾಡಿದರು; ಅದನ್ನು ತೀವ್ರವಾಗಿ ಆಕ್ಷೇಪಿಸಿ ಈ ಟೀಕೆ ಬಂದಿತು. ಅಷ್ಟೇ ಅಲ್ಲ, ಚರಖದ ಬಗ್ಗೆ ನನಗಿರುವ ಅತಿಶಯವಾದ ಪ್ರೇಮವನ್ನು ಕುರಿತು ಮೃದುವಾಗಿ ಆಕ್ಷೇಪಣೆ ಮಾಡಿದ್ದಾರೆ. ಕವಿವರ್ಯರು ಚರಖದ ಉನ್ನತ ಆರ್ಥಿಕ ಮೌಲ್ಯವನ್ನು ಅಲ್ಲಗಳೆಯುವುದಿಲ್ಲವೆಂಬುದನ್ನು ಸಾರ್ವಜನಿಕರು ತಿಳಿದಿರಲಿ. ಅವರು ತಮ್ಮ ಟೀಕೆಯನ್ನು ಬರೆದನಂತರ ಅಖಿಲ ಭಾರತ ದೇಶಬಂಧು ಸ್ಮಾರಕದ ಮನವಿಗೆ ರುಜು ಹಾಕಿದರೆಂಬುದನ್ನು ಜನರು ತಿಳಿಯಲಿ. ಮನವಿಯಲ್ಲಿ ಅಡಕವಾಗಿದ್ದುದನ್ನು ಜಾಗರೂಕತೆಯಿಂದ ಓದಿಯೇ ಅವರು ಅದಕ್ಕೆ ಸಹಿ ಹಾಕಿದರು. ಆ ಸಂದರ್ಭದಲ್ಲೇ ನನಗೆ ಅವರು ಒಂದು ಸಂದೇಶ ಕಳುಹಿಸಿದರು; ತಾವು ಚರಖದ ವಿಷಯ ಸ್ವಲ್ಪ ಬರೆದಿರುವುದಾಗಿಯೂ ಅದು ನನಗೆ ಪ್ರಿಯವಾಗಲಾರದೆಂದೂ ತಿಳಿಸಿದ್ದರು. ಅದು ಏನೆಂಬುದು ನನಗೆ ಗೊತ್ತಿತ್ತು. ಆದರಿಂದ ನಾನು ಅಸಂತುಷ್ಟನಾಗಲಿಲ್ಲ. ನನ್ನ ಅಭಿಪ್ರಾಯಗಳನ್ನು ಒಪ್ಪದಿದ್ದ ಮಾತ್ರಕ್ಕೆ ನನಗೆ ಏಕೆ ಅಸಂತೋಷವಾಗಬೇಕು? ಎಲ್ಲ ವಿಷಯಗಳ ಬಗ್ಗೆಯೂ ಪರಸ್ಪರ ಒಪ್ಪಿಗೆಯಾಗುವುದು ಸಾಧ್ಯವಿಲ್ಲ. ಆದುದರಿಂದ ಪ್ರತಿಯೊಂದು ಭಿನ್ನಾಭಿಪ್ರಾಯವೂ ಅಸಂತೋಷವನ್ನುಂಟು ಮಾಡುವುದಾದರೆ ಜೀವನ ಅಹಿತ ಭಾವನೆಗಳ ಕಂತೆಯಾಗುತ್ತದೆ. ಪೂರ್ಣವಾಗಿ ಅಸಹ್ಯವಾಗುತ್ತದೆ. ನಿಜ ಹೇಳಬೇಕೆಂದರೆ ಮುಚ್ಚುಮರೆಯಿಲ್ಲದ ಯಥಾರ್ಥವಾದ ಟೀಕೆ ನನಗೆ ಪ್ರಿಯವಾಗುತ್ತದೆ. ಭಿನ್ನಾಭಿಪ್ರಾಯಗಳ ಮೂಲಕವೇ ನಮ್ಮ ಸ್ನೇಹ ಸಂಬಂಧ ಶ್ರೀಮಂತವಾಗುತ್ತದೆ. ಸ್ನೇಹಿತರು ಪರಸ್ಪರ ಸ್ನೇಹದಲ್ಲಿ ಅನೇಕ ವಿಷಯುಗಳನ್ನು ಒಪ್ಪಿಕೊಳ್ಳಬೇಕೆಂದೇನಿಲ್ಲ. ಅದು ಸ್ನೇಹಧರ್ಮವೇನಲ್ಲ. ಭಿನ್ನಾಭಿಪ್ರಾಯುಗಳನ್ನು ವ್ಯಕ್ತಪಡಿಸುವಾಗ ಕಾಠಿಣ್ಯ ಇರಬಾರದು. ಕಹಿಯಂತೂ ಇರಲೇಕೂಡದು. ಇವರ ಟೀಕೆಯಲ್ಲಿ ಇವೆರಡೂ ಇಲ್ಲವೆಂಬುದನ್ನು ಒಪ್ಪುತ್ತೇನೆ.

"ಅಸೂಯೆಯೇ ಈ ಎಲ್ಲ ಟೀಕೆಗಳಿಗೂ ಮೂಲಕಾರಣವೆಂದು ವದಂತಿ ಕೇಳಿ ಬರುತ್ತಿರುವುದರಿಂದ ನಾನು ಪೀಠಿಕಾ ರೂಪವಾಗಿ ಇಷ್ಟೆಲ್ಲಾ ಹೇಳಬೇಕಾಯಿತು.

ಇಂತಹ ಆಧಾರ ರಹಿತ ಸಂಶಯವು ದೌರ್ಬಲ್ಯ ಹಾಗೂ ಅಸಹನೆಯ ವಾತಾವರಣ ವನ್ನು ಸೂಚಿಸುತ್ತದೆ. ಸ್ವಲ್ಪ ಆಲೋಚನೆ ಮಾಡಿದರೆ ಸಾಕು, ಈ ಕ್ರೂರವಾದ ಆಪಾದನೆಯ ಬುಡವೇ ಇಲ್ಲವಾಗುತ್ತದೆ. ಈ ಕವಿ ಏತಕ್ಕೋಸ್ಕರ ನನ್ನ ಬಗ್ಗೆ ಅಸೂಯೆ ತಾಳಬೇಕು? ಅಸೂಯೆ ಇರಬೇಕಾದರೆ ಪ್ರತಿಸ್ಪರ್ಧೆಯ ಸಂಭವವಿರಬೇಕು. ನನ್ನ ಜೀವಮಾನದಲ್ಲೆಲ್ಲಾ ನಾನು ಒಂದು ಪದ್ಯವನ್ನೂ ಬರೆಯುವುದರಲ್ಲಿ ಯಶಸ್ವಿಯಾಗಿಲ್ಲ. ಕವಿಗೆ ಇರಬೇಕಾದ ಯಾವ ಲಕ್ಷಣವೂ ನನ್ನಲ್ಲಿಲ್ಲ. ಅವರಿಗೆ ಇರುವ ದೊಡ್ಡತನ ಹಾಗೂ ಕೀರ್ತಿಯನ್ನೂ ನಾನು ಬಯಸುವಂತಿಲ್ಲ. ಅವರು ನಿಸ್ಸಂದೇಹವಾಗಿ ಸಿದ್ಧಪುರುಷರು. ಪ್ರಪಂಚದಲ್ಲಿ ಇಂದು ಅವರನ್ನು ಸರಿಗಟ್ಟಬಲ್ಲ ಮತ್ತೊಬ್ಬ ಕವಿ ಇಲ್ಲ. ನನ್ನ 'ಮಹಾತ್ಮ' ತನಕ್ಕೂ ಅವರ ವಿವಾದ ರಹಿತಸ್ಥಾನಕ್ಕೂ ಯಾವ ಸಂಬಂಧವೂ ಇಲ್ಲ. ನಮ್ಮಿಬ್ಬರ ಕ್ಷೇತ್ರಗಳು ತೀರ ಭಿನ್ನವಾದುವು. ಒಂದು ಮತ್ತೊಂದರ ಮೇಲೆ ಯಾವ ಭಾಗದಲ್ಲೂ ಎರಗುವ ಮಾತೇ ಇಲ್ಲ ಎಂಬುದನ್ನು ಈಗಲಾದರೂ ಮನಗಾಣಬೇಕು. ಕವಿವರ್ಯರು ತಾವೇ ಸೃಜಿಸಿಕೊಂಡ ಅದ್ಭುತ ಜಗತ್ತಿನಲ್ಲಿ ವಿಹರಿಸುತ್ತಾರೆ. ಅವರದು ವಿಚಾರ ಪ್ರಪಂಚ. ನಾನಾದರೋ ಮತ್ತೊಬ್ಬರು ಸೃಷ್ಟಿಸಿದ ವಸ್ತುವಿನ–ಚರಖದ–ದಾಸ. ಕವಿಯು ತಮ್ಮ ಕೊಳಲಿನ ನಿನಾದಕ್ಕೆ ತನ್ನ ಗೋಪಿಯರು ನರ್ತಿಸುವಂತೆ ಮಾಡುತ್ತಾರೆ. ನಾನು ನನ್ನ ಪ್ರಿಯತಮೆ ಸೀತೆಯು–ಅಂದರೆ ಚರಖದ–ಬೆನ್ನಟ್ಟಿ ಅಲೆಯುತ್ತೇನೆ. ಅವಳನ್ನು ಜಪಾನ್, ಮ್ಯಾಂಚೆಸ್ಟರ್, ಪ್ಯಾರಿಸ್ ಇತ್ಯಾದಿ ರೂಪದಲ್ಲಿರುವ ಹತ್ತು ತಲೆಗಳ ರಾಕ್ಷಸನಿಂದ ವಿಮೋಚನೆ ಮಾಡಲು ನಾನು ಹೊರಟಿದ್ದೇನೆ. ಕವಿಯು ಸೃಜನಶೀಲರು; ಅವರು ಸೃಷ್ಟಿಸುತಾರೆ, ದಹಿಸುತ್ತಾರೆ ಮತ್ತೆ ನಿರ್ಮಿಸುತ್ತಾರೆ. ನಾನು ಒಬ್ಬ ಪರಿಶೋಧಕ. ಶೋಧನೆ ಮಾಡಿ ಹುಡುಕಿದ್ದನ್ನು ಬಲವಾಗಿ ಹಿಡಿದು ಕೊಳ್ಳಬೇಕಾಗಿದೆ. ಕವಿಯು ದಿನ ನಿತ್ಯವೂ ಹೊಸ ಆಕರ್ಷಣೀಯ ಸಂಗತಿಗಳನ್ನು ಜಗತ್ತಿನ ಮುಂದೆ ಇಡುತ್ತಾರೆ. ನಾನು ಪುರಾತನವಾದ ಹಳೆಯ ಪಳಕೆಯ ವಸ್ತುಗಳಲ್ಲಿ ಅಡಗಿರುವ ಮಹತ್ವವನ್ನು ಮಾತ್ರ ತೋರಬಲ್ಲೆ. ಈ ಜಗತ್ತಿನಲ್ಲಿ, ಬೆರಗುಗೊಳಿಸುವ ಹೊಸ ವಸ್ತುಗಳನ್ನು ಸೃಷ್ಟಿಮಾಡುವ ಗಾರುಡಿಗನಿಗೆ ಸುಲಭವಾಗಿ ಗೌರವಸ್ಥಾನ ದೊರಕುತ್ತದೆ. ಆದರೆ ನನ್ನ ಹಳೆಯ ಪಳಕೆಯ ವಸ್ತುಗಳಿಗೆ ಒಂದು ಕೊಂಚ ಸ್ಥಳವನ್ನು ಸಂಪಾದಿಸಿಕೊಳ್ಳಲು ನಾನು ಬಹಳ ಪ್ರಯಾಸಪಡಬೇಕು. ನಮ್ಮಿಬ್ಬರ ಮಧ್ಯೆ ಸ್ಪರ್ಧೆಯ ಮಾತೇ ಇಲ್ಲ. ಆದರೆ ನಮ್ಮಿಬ್ಬರ ಚಟುವಟಿಕೆ ಪರಸ್ಪರ ಪೂರಕವಾಗಿದೆಯೆಂದು ನಮ್ರವಾಗಿ ಹೇಳುತ್ತೇನೆ.

"ವಾಸ್ತವವಾಗಿ ಕವಿಯ ಟೀಕೆಯು ಕವಿತಾ ಸ್ವಾತಂತ್ರ್ಯದ ಪ್ರಯೋಗ. ಅದನ್ನು ವಾಚ್ಯಾರ್ಥದಲ್ಲಿ ಪರಿಗಣಿಸುವವರು ಪೇಚಿಗೆ ಸಿಕ್ಕಿಕೊಳ್ಳುವ ಅಪಾಯವಿದೆ. ಪುರಾತನ ಕವಿಯೊಬ್ಬ ಹೇಳಿದ, ಸಾಲೋಮನ್ ಸಕಲಕೀರ್ತಿಗಳಿಂದ ಮೆರೆಯುತ್ತಿದ್ದರೂ ಅವನ ಹಿರಿಮೆಯು ಸ್ವಾಭಾವಿಕವಾಗಿ ಬೆಳೆವ ಶ್ವೇತ ಕಮಲದಂತಿರಲಿಲ್ಲ ಎಂದು. ಈ ಸಂದರ್ಭ ದಲ್ಲಿ ಅವನು ಕಮಲದ ನೈಸರ್ಗಿಕ ಸೌಂದರ್ಯ ಹಾಗೂ ಮುಗ್ಧತೆಯನ್ನು ಪ್ರಸ್ತಾಪಿಸಿದ್ದ.

ಅದಕ್ಕೂ ಸಾಲೋಮನ್ನನ ಕೀರ್ತಿಯ ಕೃತಕತೆಗೂ—ಅವನೆಷ್ಟೇ ಒಳ್ಳೆಯ ಕೆಲಸಗಳನ್ನು ಮಾಡಿದ್ದರೂ ಅವನಲ್ಲಿದ್ದ ಕೆಡುಕುತನಕ್ಕೂ—ಇರುವ ವ್ಯತ್ಯಾಸವನ್ನು ತೋರಿಸಿದನು. ಅಥವಾ ಕವಿತಾ ಸ್ವಾತಂತ್ರ್ಯದ ಈ ಉದಾಹರಣೆ ತೆಗೆದುಕೊಳ್ಳಿ: 'ಸೂಜಿಯ ಕಣ್ಣಿನ ಮೂಲಕ ಹೋಗಲು ಒಂಟೆಗೆ ಸುಲಭಸಾಧ್ಯವಾದರೂ ಆಗಬಹುದು; ಆದರೆ ಸ್ವರ್ಗದ ರಾಜ್ಯವನ್ನು ಪ್ರವೇಶಿಸಲು ಧನಿಕರಿಗೆ ಸಾಧ್ಯವಿಲ್ಲ'. ಯಾವ ಒಂಟೆಯೂ ಸೂಜಿಯ ಕಣ್ಣಿನ ಮೂಲಕ ಹಾದು ಹೋಗಿಲ್ಲ, ಎಂಬುದು ನಮಗೆ ಗೊತ್ತು. ಜನಕನಂತಹ ಧನಿಕನು ಸ್ವರ್ಗಕ್ಕೆ ಹೋದನೆಂಬುದೂ ನಮಗೆ ತಿಳಿದಿರುವ ವಿಷಯ. ಅಥವಾ ಮತ್ತೊಂದು ಸಾದೃಶ್ಯ ನೋಡಿ; ಮನುಷ್ಯರ ಹಲ್ಲುಗಳನ್ನು ದಾಳಿಂಬೆ ಬೀಜಗಳಿಗೆ ಹೋಲಿಸುತ್ತಾರೆ. ಮೂರ್ಖರಾದ ಹೆಂಗಸರು ಕಾವ್ಯದ ಅತಿಶಯೋಕ್ತಿಯನ್ನು ವಾಚ್ಯಾರ್ಥದಲ್ಲಿ ತೆಗೆದು ಕೊಂಡು ತಮ್ಮ ಹಲ್ಲುಗಳನ್ನು ಅವಲಕ್ಷಣ ಮಾಡಿಕೊಳ್ಳುತ್ತಾರೆ. ಅವುಗಳಿಗೆ ಕೇಡ ನ್ನುಂಟು ಮಾಡುವುದೂ ಉಂಟು. ಕಲಾವಿದರೂ ಕವಿಗಳೂ ತಮ್ಮ ಕೃತಿಗಳಿಗೆ ನಿಜವಾದ ಸಮೀಚೀನತೆಯನ್ನು ಕೊಡಲು ಅವುಗಳ ಪರಿಮಾಣವನ್ನು ಹಿಗ್ಗಿಸುತ್ತಾರೆ. ಚರಖದ ಬಗ್ಗೆ ಕವಿಯ ದೂಷಣೆಯನ್ನು ವಾಚ್ಯಾರ್ಥದಲ್ಲಿ ತೆಗೆದುಕೊಳ್ಳುವವರು ಕವಿಗೆ ಅನ್ಯಾಯ ಬಗೆಯುತ್ತಾರೆ; ತಮಗೆ ತಾವೇ ತೊಂದರೆ ಮಾಡಿಕೊಳ್ಳುತ್ತಾರೆ.

"ಕವಿಯು 'ಯಂಗ್ ಇಂಡಿಯಾ' ಓದುವುದಿಲ್ಲ. ಅವರು ಅದನ್ನು ಓದಬೇಕೆಂದು ನಿರೀಕ್ಷಿಸಬೇಕಾಗಿಲ್ಲ. ಅದು ಅವರಿಗೆ ಆವಶ್ಯಕವೂ ಅಲ್ಲ. ಲೋಕಾಭಿರಾಮವಾಗಿ ಮಾತನಾಡುತ್ತಿದ್ದಾಗ ಎಷ್ಟು ತಿಳಿದುಕೊಳ್ಳಬಹುದೋ ಅಷ್ಟನ್ನು ಮಾತ್ರ ಅವರು ಚಳುವಳಿಯ ಬಗ್ಗೆ ತಿಳಿದುಕೊಂಡಿದ್ದಾರೆ. ಆದುದರಿಂದಲೇ ಅವರು ಚರಖಾ ಉಪಾಸನೆಯ ಅತಿರೇಕ ಎಂದು ಏನನ್ನು ಊಹಿಸಿಕೊಂಡಿದ್ದಾರೋ, ಅದನ್ನು ಖಂಡಿಸಿದ್ದಾರೆ.

"ಪ್ರತಿಯೊಬ್ಬರೂ ತಮ್ಮ ಎಲ್ಲ ಕೆಲಸಬಿಟ್ಟು ಸದಾಕಾಲ ನೂಲಲಿ ಎಂದು ನಾನು ಹೇಳುತ್ತಿದ್ದೇನೆ ಎಂಬುದು ಕವಿವರ್ಯರ ಭಾವನೆ. ಅಂದರೆ ಕವಿಯು ಕಾವ್ಯರಚನೆ ಯನ್ನು ಬಿಟ್ಟುಬಿಡಲಿ, ರೈತ ನೇಗಿಲನ್ನು ಒತ್ತಟ್ಟಿಗಿಡಲಿ, ವಕೀಲ ತನ್ನ ವಕೀಲಿಯನ್ನು ಬದಿಗಿಡಲಿ ಮತ್ತು ವೈದ್ಯ ತನ್ನ ಶಸ್ತ್ರಗಳನ್ನು ತೊರೆಯಲಿ—ಎಂದು ನಾನು ಹೇಳಿದಂತೆ ಅವರು ಯೋಚಿಸಿದ ಹಾಗಿದೆ. ಅದು ಸತ್ಯಕ್ಕೆ ದೂರವಾದ ಸಂಗತಿ. ಯಾರೇ ಆಗಲೀ ತಮ್ಮ ಉದ್ಯೋಗವನ್ನು ತ್ಯಜಿಸಿ ಎಂದು ನಾನು ಹೇಳಿಲ್ಲ. ಪ್ರತಿಯೊಬ್ಬರೂ ದೇಶಕ್ಕಾಗಿ ಪ್ರತಿದಿನ ಮೂವತ್ತು ನಿಮಿಷಗಳ ಕಾಲ ಸೂತ್ರಯಜ್ಞ ಮಾಡಲಿ ಆ ಮೂಲಕ ತಮ್ಮ ಉದ್ಯೋಗಕ್ಕೆ ಮೆರಗು ಕೊಡಲಿ—ಎಂಬುದೇ ನನ್ನ ಇಚ್ಛೆ. ಕೆಲಸವಿಲ್ಲದೆ ಹಸಿವಿ ನಿಂದ ನರಳುತ್ತಿರುವ ಸ್ತ್ರೀ ಪುರುಷರು ಜೀವಿಕೆಗಾಗಿ ನೂಲುವುದನ್ನು ಕೈಗೊಳ್ಳಬೇಕೆಂದು ನಾನು ಹೇಳಿದ್ದೇನೆ. ಅರೆಹೊಟ್ಟೆ ಉಂಡು ಬದುಕುತ್ತಿರುವ ರೈತನು ತನ್ನ ಬಿಡುವಿನ ವೇಳೆಯಲ್ಲಿ ನೂಲನ್ನು ತೆಗೆದು ತನ್ನ ಅಲ್ಪ ಆದಾಯದ ಜೊತೆಗೆ ಸ್ವಲ್ಪ ಹಣ ಕೂಡಿಸಿ ಕೊಳ್ಳಬೇಕೆಂದು ನಾನು ಹೇಳಿದ್ದೇನೆ. ಕವಿವರ್ಯರು ಪ್ರತಿದಿನ ಅರ್ಧಗಂಟೆ ನೂಲು

ತೆಗೆದರೆ ಅವರ ಕಾವ್ಯ ವ.ತ್ರಷ್ಟು ಶ್ರೀಮಂತವಾಗುತ್ತದೆ. ಆಗ ಅವರ ಕಾವ್ಯ ಬಡವನ ಆಶೋತ್ತರಗಳನ್ನು ಕಷ್ಟ ಕಾರ್ಪಣ್ಯಗಳನ್ನೂ ಇನ್ನೂ ಹೆಚ್ಚು ಶಕ್ತಿಯುತವಾಗಿ ಪ್ರತಿ ಬಿಂಬಿಸುತ್ತದೆ.

"ರಾಷ್ಟ್ರದಲ್ಲಿ ಮೃತ್ಯುಸದೃಸವಾದ ಏಕರೂಪತೆಯನ್ನು ತರಲು ಚರಖವನ್ನು ಹವಣಿಸಲಾಗಿದೆ ಎಂಬುದು ಕವಿಯ ಭಾವನೆಯಾಗಿದೆ. ಆದುದರಿಂದಲೇ ಅವರು ತಮಗೆ ಸಾಧ್ಯವಾದಲ್ಲಿ ಅದನ್ನು ದೂರವಿಡಲು ಇಚ್ಛಿಸುತ್ತಾರೆ. ಆದರೆ ಸತ್ಯವಾದ ಸಂಗತಿಯೆಂದರೆ, ಭಾರತದ ಅಸಂಖ್ಯಾತ ಹಿತಗಳಲ್ಲಿ ಅತ್ಯಂತ ಅಗತ್ಯವಾದ ಹಾಗೂ ಜೀವಂತವಾದ ಹಿತವೊಂದನ್ನು ಸಾಧಿಸಲು ಚರಖ ಹವಣಿಸುತ್ತದೆ. ಪ್ರಕೃತಿಯಲ್ಲಿ ಅಭೂತಪೂರ್ವವಾದ ಹಾಗೂ ಎಡೆಬಿಡದೆ ವ್ಯತ್ಯಾಸಹೊಂದುತ್ತಿರುವ ಉಜ್ವಲವಸ್ತು ಗಳ ತಂಡವಿರುವುದನ್ನು ಕಾಣುತ್ತೇವೆ. ಅವೆಲ್ಲವೂ ವೈವಿಧ್ಯ ಪೂರ್ಣ. ಆದರೂ ಅವೆಲ್ಲದರ ಹಿಂದೆ ಒಂದು ಸಾಮಾನ್ಯ ಉದ್ದೇಶ, ವಿನ್ಯಾಸ ಹಾಗೂ ರೂಪ ಇರುವುದನ್ನು ನಿಚ್ಚಳವಾಗಿ ಕಾಣಬಹುದು.ಸಂಪೂರ್ಣವಾಗಿ ಹೋಲುವ ಇಬ್ಬರು ವ್ಯಕ್ತಿಗಳನ್ನು ಕಾಣಲಾರೆವು. ಅವಳಿ ಜವಳಿ ಮಕ್ಕಳಲ್ಲೂ ಅಂತಹ ಪೂರ್ಣ ಹೋಲಿಕೆ ಇರುವುದಿಲ್ಲ. ಆದರೂ ಇಡೀ ಮಾನವತ್ವಕ್ಕೆ ಅನಿವಾರ್ಯವಾಗಿ ಸರ್ವೇಸಾಮಾನ್ಯವಾಗಿರುವ ಲಕ್ಷಣ ಇದ್ದೇ ಇರುತ್ತದೆ. ಒಂದೇ ರೀತಿಯ ದೇಹ ರಚನೆ ಇರುವುದಷ್ಟೇ ಅಲ್ಲ; ಒಂದೇ ರೀತಿಯ ಜೀವ ಎಲ್ಲರಲ್ಲೂ ವ್ಯಾಪಿಸಿದೆ. ಈ ಏಕರೂಪತೆ ಅಥವಾ ಅದ್ವೈತ ವಿಚಾರವನ್ನು ಶಂಕರರು ಅತ್ಯಂತ ತರ್ಕಬದ್ಧವಾಗಿ ಬೆಳಸಿದರು. ಸತ್ಯ ಒಂದೇ, ದೇವರು ಒಬ್ಬನೇ–ಅದೇ ಬ್ರಹ್ಮ. ಮಿಕ್ಕೆಲ್ಲ ರೂಪವೂ ನಾಮರೂಪ, ಭ್ರಾಂತಿ, ನಶ್ವರ, ಎಂದು ಅವರು ಹೇಳಿದರು. ನಾವು ಕಾಣು ತ್ತಿರುವುದು ನಿಜವಾದುದಲ್ಲವೇ? ನಿಜವಲ್ಲದುದರ ಹಿಂದೆ ನಿಜವಾದುದು ಇದ್ದು ಅದು ನಮಗೆ ಕಾಣುತ್ತಿಲ್ಲವೇ? ಈ ತರ್ಕವನ್ನು ನಾವು ಮಾಡಬೇಕಾಗಿಲ್ಲ. ನೀವು ಇಚ್ಛಿಸಿದಲ್ಲಿ ಎರಡೂ ನಿಜವೇ ಎಂದಿಟ್ಟುಕೊಳ್ಳಿ. ಆದರೆ ನಾನು ಹೇಳುವುದು ಇಷ್ಟೇ. ಅನೇಕದಲ್ಲಿ ಹಾಗೂ ವೈವಿಧ್ಯದಲ್ಲಿ ಒಂದು ಸಾಮಾನ್ಯವಾದ ಅಂಶವಿದೆ, ಲಕ್ಷಣವಿದೆ, ಹಾಗೂ ಏಕತ್ವ ಇದೆ. ಅದೇರೀತಿಯಲ್ಲಿ ವೈವಿಧ್ಯಪೂರ್ಣವಾದ ಉದ್ಯೋಗಗಳಲ್ಲಿಯೂ ಅನಿವಾರ್ಯವಾದ ಸಮಾನ ಉದ್ಯೋಗವೊಂದಿದೆ. ಮಾನವ ಕೋಟಿಯ ಬಹು ಸಂಖ್ಯಾತ ಜನರಿಗೆ ಕೃಷಿ ಸರ್ವೇಸಾಮಾನ್ಯವಾಗಿಲ್ಲವೆ? ರಾಜನಾಗಲೀ ರೈತನಾಗಲೀ ಊಟ ಮಾಡಲೇಬೇಕು. ಬಟ್ಟೆ ಉಡಲೇಬೇಕು. ಹಾಗೆಯೇ ಅವರುಗಳು ತಮ್ಮ ಈ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಪರಿಶ್ರಮ ಪಡಬೇಕು. ರಾಜನು ಈ ಕೆಲಸ ವನ್ನು ಸಂಕೇತರೂಪವಾಗಿ ಹಾಗೂ ತ್ಯಾಗರೂಪವಾಗಿ ಮಾಡಬಹುದು. ಆತ ತನಗೂ ತನ್ನ ಪ್ರಜೆಗಳಿಗೂ ನಿಷ್ಠನಾಗಿರಬೇಕಾದರೆ ಅಷ್ಟನ್ನಾದರೂ ಮಾಡುವುದು ಅನಿವಾರ್ಯ. ಸದ್ಯದಲ್ಲಿ ಐರೋಪ್ಯರು ಈ ಮುಖ್ಯ ಆವಶ್ಯಕತೆಯನ್ನು ಅರಿತುಕೊಳ್ಳಲಾರರು. ಏಕೆಂದರೆ, ಈಗ ಐರೋಪ್ಯೇತರ ಜನಾಂಗಗಳನ್ನು ಶೋಷಣೆ ಮಾಡುವುದು ಅವರ ಧರ್ಮವಾಗಿ ಬಿಟ್ಟಿದೆ. ಆದರೆ ಅದು ಅಧರ್ಮ. ಕ್ಷಿಪ್ರದಲ್ಲಿಯೇ ಅದು ಅಳಿಯಲೇ

ಬೇಕು. ಐರೋಪ್ಯೇತರರು ಬಹಳ ಕಾಲ ತಮ್ಮನ್ನು ತಾವು ಶೋಷಣೆಗೆ ಗುರಿಮಾಡಿ ಕೊಳ್ಳುವುದಿಲ್ಲ. ನಾನು ಅದಕ್ಕೆ ಶಾಂತಿಯುತವೂ ಮಾನವೀಯವೂ ಉತ್ಕೃಷ್ಟವೂ ಆದ ಪರಿಹಾರಮಾರ್ಗವನ್ನು ತೋರಿಸಲು ಪ್ರಯತ್ನಿಸಿದ್ದೇನೆ. ಅದನ್ನು ಬೇಕಾದರೆ ತಿರಸ್ಕರಿಸ ಬಹುದು. ಹಾಗೆ ಮಾಡಿದರೆ, ಪರಸ್ಪರ ಅಧಃಪತನಕ್ಕೆ ತಳ್ಳುವ ನಿರಂತರ ಸಮರವೇ ಪರ್ಯಾಯ ಮಾರ್ಗವಾಗುತ್ತದೆ. ಐರೋಪ್ಯೇತರರು ಐರೋಪ್ಯರನ್ನು ಶೋಷಿಸಲು ಪ್ರಯತ್ನಿಸಿದಾಗ ಚರಖದ ಸತ್ಯ ಸ್ಪಷ್ಟವಾಗುತ್ತದೆ. ನಾವು ಬದುಕಿರಬೇಕಾದರೆ, ನಾವು ಉಸಿರಾಡುವ ಗಾಳಿಯನ್ನು ಇಂಗ್ಲೆಂಡಿನಿಂದ ಆಮದು ಮಾಡಿಕೊಳ್ಳಬಾರದು. ಆಹಾರ ವನ್ನು ಅಲ್ಲಿಂದ ತರಿಸಿಕೊಳ್ಳಬಾರದು. ಹಾಗೆಯೇ ಬಟ್ಟೆಯ ವಿಷಯದಲ್ಲೂ ಅಷ್ಟೆ, ಇಂಗ್ಲೆಂಡಿನಲ್ಲಿ ತಯಾರಾದ ಬಟ್ಟೆಯನ್ನು ಆಮದು ಮಾಡಿಕೊಳ್ಳಬಾರದು. ಈ ತತ್ತ್ವವನ್ನು ತಾರ್ಕಿಕವಾಗಿ ಮುಂದುವರಿಸಿ, ಬಂಗಾಳವು ತನಗೆ ಬೇಕಾದ ಬಟ್ಟೆಯನ್ನು ಬೊಂಬಾಯಿನಿಂದಾಗಲೀ ವಂಗಲಕ್ಷ್ಮಿಯಿಂದಾಗಲೀ ತರಿಸಿಕೊಳ್ಳಬಾರದೆಂದು ಹೇಳಲು ನಾನು ಹಿಂಜರಿಯುವುದಿಲ್ಲ. ಬಂಗಾಳವು ಭಾರತದ ಇತರ ಭಾಗಗಳನ್ನಾಗಲೀ ಹೊರ ಗಡೆಯ ಜಗತ್ತನ್ನಾಗಲೀ ಶೋಷಣೆ ಮಾಡದೆ ಸ್ವಾಭಾವಿಕವಾದ ಸ್ವತಂತ್ರ ಜೀವನವನ್ನು ನಡೆಸಬೇಕಾದರೆ ತನ್ನ ಗ್ರಾಮಗಳಲ್ಲಿ ತನಗೆ ಬೇಕಾದ ಧಾನ್ಯಗಳನ್ನು ಉತ್ಪಾದನೆ ಮಾಡಿ ಕೊಳ್ಳುವಂತೆ ಬಟ್ಟೆಯನ್ನು ಮಾಡಿಕೊಳ್ಳಬೇಕು. ಯಂತ್ರಕ್ಕೆ ತನ್ನದೇ ಆದ ಸಾನವಿದೆ. ಅದು ಇದ್ದೇ ಇರುತ್ತದೆ. ಆದರೆ ಅದು ಅಗತ್ಯವಾದ ಮಾನವ ಶ್ರಮವನ್ನು ತಳ್ಳಿ ಹಾಕಬಾರದು. ಆಮದು ಮಾಡಿಕೊಂಡ ನೇಗಿಲು ಒಳ್ಳೆಯ ವಸ್ತುವಾಗಿರಬಹುದು. ಒಂದು ಪಕ್ಷ ಒಬ್ಬನೇ ವ್ಯಕ್ತಿ ತಾನು ಕಂಡು ಹಿಡಿದ ಯಾಂತ್ರಿಕ ಸಾಧನದಿಂದ ಇಡೀ ಭಾರತದ ಜಮೀನನ್ನು ಕೃಷಿ ಮಾಡಿದನೆಂದು ಭಾವಿಸೋಣ. ಉತ್ಪನ್ನದ ಮೇಲೆಲ್ಲಾ ಅವನದೇ ಹತೋಟಿ ಇರುತ್ತದೆ. ಆಗ ಉದ್ಯೋಗವಿಲ್ಲದ ಕೋಟ್ಯಂತರ ಜನ ದರಿದ್ರ ರಾಗುತ್ತಾರೆ. ಕೆಲಸವಿಲ್ಲದೆ ಸೋಮಾರಿಗಳಾಗಿ ದಡ್ಡರಾಗಿ ಬಿಡುತ್ತಾರೆ. ಈಗಾಗಲೇ ಎಷ್ಟೋ ಜನ ಅಂತಹವರಿದ್ದಾರೆ. ಇನ್ನೂ ಅನೇಕಜನ ಆ ದುಸ್ಥಿತಿಗಿಳಿಯುವ ಭಯ ನಿರಂತರವಾಗಿದೆ. ಗೃಹಕೈಗಾರಿಕೆಯಲ್ಲಿ ಬಳಸುವ ಯಂತ್ರವನ್ನು ಉತ್ತಮ ಪಡಿಸುವುದಕ್ಕೆ ನನ್ನ ಬೆಂಬಲವಿದೆ. ಆದರೆ ಕೋಟ್ಯಂತರ ಜನ ರೈತರಿಗೆ ಬೇರೊಂದು ಉದ್ಯೋಗವನ್ನು ಅವರ ಮನೆಗಳಲ್ಲಿಯೇ ಕಲ್ಪಿಸಿಕೊಡದೆ, ವಿದ್ಯುತ್ ಚಾಲಿತ ಕದಿರುಗಳನ್ನು ಆರಂಭಿಸಿ ಕೈನೂಲಿನ ಉದ್ಯಮವನ್ನು ನಾಶಪಡಿಸುವುದು ಅಪರಾಧವೆಂದೇ ನನ್ನ ಭಾವನೆ.

"ಇಂಗ್ಲೆಂಡಿನೊಡನೆ ಹೋಲಿಕೆ ಮಾಡುವುದರಿಂದ ಅಷ್ಟೇನೂ ಪ್ರಯೋಜನವಿಲ್ಲ. ಆರ್ಥಿಕ ಸಹಕಾರದ ಆವಶ್ಯಕತೆಯನ್ನು ಮನಗಾಣಿಸುವಮಟ್ಟಿಗೆ ಅದು ಒಳ್ಳೆಯದು. ಭಾರತದ ಸ್ಥಿತಿಗತಿಗಳು ಬೇರೆಯಾದ್ದರಿಂದ ಸಹಕಾರವನ್ನು ಪಡೆಯುವ ವಿಧಾನದಲ್ಲಿ ವ್ಯತ್ಯಾಸವಿರಬೇಕು. ೧೯೦೦ ಮೈಲಿಯುದ್ದ ೧೫೦೦ ಮೈಲಿ ಅಗಲವಿರುವ ಈ ಪರ್ಯಾಯ ದ್ವೀಪದ ಬಹುಸಂಖ್ಯಾತ ನಿವಾಸಿಗಳ ಆರ್ಥಿಕ ಸಂಕಷ್ಟವನ್ನು ನಿವಾರಿಸುವ ಸಹಕಾರದ ಪ್ರಯತ್ನಗಳಿಗೆಲ್ಲ ಚರಖವೇ ಕೇಂದ್ರವಾಗಿರಬೇಕು. ಸರ್ ಗಂಗಾರಾಮ್

ರವರು ಮಾದರಿ ಕೃಷಿ ಕೇಂದ್ರದ ಯೋಜನೆ ಕೊಡಬಹುದು. ಆದರೆ ಸರಾಸರಿ ಎರಡು ಮೂರು ಎಕರೆಗಳ ಹಿಡುವಳಿ ಇಟ್ಟುಕೊಂಡಿರುವ ಭಾರತೀಯ ರೈತನ ಕೈಲಿ ಪುಡಿ ಕಾಸೂ ಇಲ್ಲ. ಈ ಹಿಡುವಳಿಯೂ ಮತ್ತೆ ಛಿದ್ರವಾಗುವ ಅಪಾಯ ಇದ್ದೇ ಇದೆ. ಹೀಗಿರುವಾಗ ಮಾದರಿ ಹಿಡುವಳಿ ಎಂಬುದು ಈತನಿಗೆ ಅನ್ವಯಿಸುವುದಿಲ್ಲ,

"ರಾಷ್ಟ್ರಸೇವಕನು ಚರಖವನ್ನು ಕೇಂದ್ರವನ್ನಾಗಿಟ್ಟುಕೊಂಡು ಕೆಲಸ ಮಾಡ ಬೇಕಾದರೆ, ಸೋಮಾರಿತನವನ್ನು ತೊರೆದಿರುವ ಸಹಕಾರಾಪೇಕ್ಷೀ ಜನರ ಮಧ್ಯೆ ಕೆಲಸ ಮಾಡಬೇಕು. ಮಲೇರಿಯಾ ನಿರೋಧ ಚಳವಳಿ, ಉತ್ತಮ ನೈರ್ಮಲ್ಯ ವ್ಯವಸ್ಥೆ, ಗ್ರಾಮದಲ್ಲಿನ ವಿವಾದಗಳ ಪರಿಹಾರ. ದನಕರುಗಳ ಸಂರಕ್ಷಣೆ ಹಾಗೂ ಸಂವರ್ಧನೆ ಇತ್ಯಾದಿ ನೂರಾರು ಪ್ರಯೋಜನಕಾರಿ ಕಾರ್ಯಕ್ರಮಗಳನ್ನು ಆತ ಕೈಗೊಳ್ಳಬೇಕು. ಈ ಎಲ್ಲ ಚಟುವಟಿಕೆಗಳಿಗೂ ಚರಖವೇ ಕೇಂದ್ರಬಿಂದು. ಎಲ್ಲೆಲ್ಲಿ ಚರಖದ ಕೆಲಸ ಸುವ್ಯವಸ್ಥಿತವಾಗಿರುವುದೋ ಅಲ್ಲಲ್ಲಿ ಇಂತಹ ಒಳಿತಿನ ಕಾರ್ಯಕ್ರಮಗಳು ಹಳ್ಳಿಯವರ ಹಾಗೂ ಕಾರ್ಯಕರ್ತರ ಸಾಮರ್ಥ್ಯಕ್ಕನುಗುಣವಾಗಿ ನಡೆಯುತ್ತಿವೆ.

"ಕವಿವರ್ಯರು ಮುಂದಿಟ್ಟಿರುವ ಎಲ್ಲ ವಾದಗಳನ್ನೂ ಸುದೀರ್ಘವಾಗಿ ಪ್ರಸ್ತಾಪಿ ಸುವುದು ನನ್ನ ಉದ್ದೇಶವಲ್ಲ. ಎಲ್ಲಿ ನಮ್ಮಿಬ್ಬರ ನಡುವೆ ಮೂಲಭೂತವಾದ ಭಿನ್ನಾಭಿ ಪ್ರಾಯಗಳಿಲ್ಲವೋ (ಆ ಭಿನ್ನಾಭಿಪ್ರಾಯಗಳು ಯಾವುವು ಎಂಬುದನ್ನು ನಾನು ತಿಳಿಸಲು ಪ್ರಯತ್ನಿಸಿದ್ದೇನೆ) ಅಲ್ಲಿ ಅವರು ಹೇಳಿರುವುದನ್ನು ನಾನು ಅನುಮೋದಿಸದೆ ಇರುವುದು ಯಾವುದೂ ಇಲ್ಲ. ಆದರೆ ಚರಖದ ಬಗ್ಗೆ ನನ್ನ ನಿಲುವು ಹಾಗೇ ಇದೆ. ಆ ವಿಷಯದಲ್ಲಿ ಅವರು ಅಪಹಾಸ್ಯ ಮಾಡಿರುವ ಅನೇಕ ಸಂಗತಿಗಳನ್ನು ನಾನು ಹೇಳಿಯೇ ಇಲ್ಲ. ಕವಿಯ ಪ್ರಹಾರದಿಂದ, ಚರಖವನ್ನು ಕುರಿತು ನಾನು ಹೇಳಿರುವ ಉನ್ನತ ಅಂಶಗಳಿಗೇನೂ ಧಕ್ಕೆ ಬಂದಿಲ್ಲ."

ದಿನನಿತ್ಯದ ನೈತಿಕ, ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳ ಕಡೆ ಗಾಂಧಿ ಯವರು ಪೂರ್ಣ ಸಮಯವನ್ನು ನೀಡಿದರು. ಈ ಎಲ್ಲ ಕೆಲಸದ ನಡುವೆ ವಾರಕ್ಕೆ ಒಂದು ಅಧ್ಯಾಯದಂತೆ ಸತ್ಯಶೋಧನೆಯ ಕಥೆಯನ್ನು ಬರೆಯಲು ಆರಂಭಿಸಿದರು. ನಾಲ್ಕು ವರ್ಷಗಳ ಹಿಂದೆ ತಮ್ಮ ಸಹೋದ್ಯೋಗಿಗಳ ಒತ್ತಾಯದ ಮೇರೆಗೆ ತಮ್ಮ ಆತ್ಮಕಥೆಯನ್ನು ಬರೆಯಲು ಒಪ್ಪಿದ್ದರು. ೧೯೨೧ರಲ್ಲಿ ಬರೆಯಲಾರಂಭಿಸುತ್ತಿದ್ದ ಹಾಗೆಯೇ ಬೊಂಬಾಯಿನಲ್ಲಿ ದೊಂಬಿ ಸಂಭವಿಸಿದ್ದರಿಂದ ಅಲ್ಲಿಗೆ ಧಾವಿಸಿದ್ದರು. ಯರವಾಡ ಸೆರೆಮನೆಯಲ್ಲಿದ್ದಾಗ ಮತ್ತೆ ಬರೆಯಲು ಯೋಚಿಸಿದ್ದರು. ಆದರೆ ಅಷ್ಟರಲ್ಲೆ ಅವರ ಬಿಡುಗಡೆ ಆಗಿಬಿಟ್ಟಿತು. ಕಡೆಗೆ ೧೯೨೫ರ ಡಿಸೆಂಬರ್ ೩ರಂದು 'ಯಂಗ್ ಇಂಡಿಯಾ'ದಲ್ಲಿ ಈ ಐತಿಹಾಸಿಕ ಆತ್ಮಕಥೆಯ ಪ್ರಕಟಣೆ ಆರಂಭವಾಯಿತು. ಇದಕ್ಕೆ ಪ್ರಸ್ತಾವನೆ ಬರೆಯುತ್ತಾ ಹೀಗೆ ತಿಳಿಸಿದರು: "ಸತ್ಯಶೋಧನೆಯಲ್ಲಿ ನನ್ನ ಅನೇಕ ಪ್ರಯೋಗಗಳ ಕಥೆಯನ್ನು ತಿಳಿಸುವುದೇ ನನ್ನ ಇಚ್ಛೆ; ನನ್ನ ಜೀವನ, ಈ ಪ್ರಯೋಗಗಳ ಸರಮಾಲೆಯಾದ್ದರಿಂದ ಈ ಕಥೆಯು ನನ್ನ ಆತ್ಮಕಥೆಯ ರೂಪ

ತಾಳುತ್ತದೆ. ಪ್ರತಿಯೊಂದು ಪುಟವೂ ಈ ಪ್ರಯೋಗಗಳನ್ನು ಮಾತ್ರ ತಿಳಿಸಿದರೂ ಪರವಾಗಿಲ್ಲ, ನಾನು ಈ ಮೂವತ್ತು ವರ್ಷಗಳ ಪರ್ಯಂತವೂ ಸಾಧಿಸಬಯಸುತ್ತಿರುವುದು, ಹಂಬಲಿಸುತ್ತಿರುವುದು, ಆತ್ಮ ಸಾಕ್ಷಾತ್ಕಾರ. ಅಂದರೆ ಭಗವಂತನನ್ನು ಪ್ರತ್ಯಕ್ಷವಾಗಿ ನೋಡುವುದೇ ನನ್ನ ಆಸೆ. ನನ್ನ ಬದುಕು, ಚಲನವಲನ ಹಾಗೂ ನನ್ನ ಅಸ್ತಿತ್ವವೆಲ್ಲ ಈ ಗುರಿಸಾಧನೆಗಾಗಿಯೇ. ನನ್ನ ಮಾತು, ಬರಹ ಮತ್ತು ರಾಜಕೀಯ ಉದ್ಯಮಗಳೆಲ್ಲದರ ಗುರಿಯೂ ಇದೇ. ಈ ಲೇಖನಗಳಲ್ಲಿ ಅಹಂಕಾರದ ವಾಸನೆಯೇನಾದರೂ ಓದುಗನಿಗೆ ಕಂಡು ಬಂದರೆ ನನ್ನ ಈ ಅನ್ವೇಷಣೆಯಲ್ಲಿ ಏನೋ ತಪ್ಪಿದೆ, ನಾನು ಕಂಡಿರುವುದೆಲ್ಲ ಭ್ರಾಂತಿ, ಎಂದು ಆತ ತಿಳಿಯಲಿ. ನನ್ನಂತಹ ನೂರಾರು ಮಂದಿ ಅಳಿಯಲಿ; ಆದರೆ ಸತ್ಯ ಜಯಿಸಲಿ. ಸತ್ಯಾಗ್ರಹ ಶಾಸ್ತ್ರದಲ್ಲಿ ನನ್ನ ಪ್ರಯೋಗಗಳನ್ನು ವರ್ಣಿಸುವುದು ನನ್ನ ಧ್ಯೇಯವೇ ಹೊರತು ನಾನು ಎಷ್ಟು ಒಳ್ಳೆಯವನೆಂದು ಹೇಳುವುದಲ್ಲ. ನನ್ನನ್ನು ನಾನು ಪರೀಕ್ಷಿಸಿಕೊಳ್ಳುವಾಗ ಸತ್ಯದಷ್ಟೇ ನಿಷ್ಠುರವಾಗಿರಲು ಪ್ರಯತ್ನಿಸುತ್ತೇನೆ. ಇತರರೂ ಹಾಗೆಯೇ ಮಾಡಬೇಕೆಂದು ಬಯಸುತ್ತೇನೆ."

'ಯಂಗ್ ಇಂಡಿಯಾ'ದ ಅದೇ ಸಂಚಿಕೆಯಲ್ಲಿ ಗಾಂಧಿಯವರ ಇತ್ತೀಚಿನ ಉಪವಾಸದ ಮೇಲೆ ಒಂದು ಟಿಪ್ಪಣಿ ಇತ್ತು. ಅವರ ಸತತ ಸತ್ಯಶೋಧನೆಗೆ ಹೃದಯಸ್ಪರ್ಶಿಯಾದ ಉದಾಹರಣೆಯಾಗಿತ್ತು ಆ ಟಿಪ್ಪಣಿ.

"ಸಾರ್ವಜನಿಕರು ನನ್ನ ಉಪವಾಸಗಳ ಬಗೆಗೆಲಕ್ಷ್ಯ ಕೊಡಬೇಕಾಗಿಲ್ಲ. ಆ ವಿಚಾರ ಚಿಂತಿಸಲೂ ಕೂಡದು. ಉಪವಾಸಗಳು ನನ್ನ ಜೀವನಕ್ಕೆ ಅಂಟಿಕೊಂಡಿವೆ. ನನಗೆ ಕಣ್ಣುಗಳಿಲ್ಲದೆ ಇದ್ದರೆ ಯಾವ ಸ್ಥಿತಿಯೋ ಉಪವಾಸವಿಲ್ಲದಿದ್ದರೂ ಅದೇ ಸ್ಥಿತಿ. ಬಾಹ್ಯ ಜಗತ್ತಿಗೆ ಕಣ್ಣುಗಳು ಹೇಗೋ ಹಾಗೆ ಅಂತರಂಗಕ್ಕೆ ಉಪವಾಸಗಳು. ನನ್ನ ಇತ್ತೀಚಿನ ಉಪವಾಸವೇ ಕೊನೆಯ ಉಪವಾಸವಾಗಲಿ ಎಂದು ನಾನು ಎಷ್ಟೇ ಇಚ್ಛಿಸಿದರೂ ಅದು ಆಗಲಾರದು. ನಾನು ಇನ್ನೂ ಇಂತಹ ಅನೇಕ ಉಗ್ರ ಪರೀಕ್ಷೆಗಳಿಗೆ ಗುರಿಯಾಗಬೇಕೆಂದು ನನ್ನ ಅಂತರಂಗ ಹೇಳುತ್ತದೆ. ಮುಂದಿನ ಪರೀಕ್ಷೆಗಳು ಇನ್ನೂ ಎಷ್ಟು ಕಠಿಣವಾಗಿರುವುದೋ ಯಾರಿಗೆ ಗೊತ್ತು? ಈ ವಿಷಯದಲ್ಲಿ ನನ್ನದೇ ಪೂರ್ಣ ತಪ್ಪಿರಬಹುದು. ಆಗ 'ಏ, ಮೂರ್ಖ, ನಿನಗೆ ತಕ್ಕುದೇ ಆಯಿತು' ಎಂದು ಜಗತ್ತು ನನ್ನ ಸಮಾಧಿಯ ಮೇಲೆ ಬರೆಯಲು ಸಾಧ್ಯವಾಗಬಹುದು. ಆದರೆ ಸದ್ಯಕ್ಕೆ ನನ್ನ ತಪ್ಪೇ–ಅದು ತಪ್ಪೆನಿಸಿದರೆ–ನನಗೆ ಆಸರೆ ಕೊಡಬೇಕು. ಬೇರೆಯವರ ಮಾತು ದೋಷಾತೀತವಲ್ಲವೆಂದು ತಿಳಿದಾಗ ಅವರು ಎಷ್ಟೇ ಸ್ನೇಹಭಾವದಿಂದ ಹೇಳಿದರೂ ಅವರ ಮಾತಿಗೆ ಓಗೊಡದೆ ನನ್ನ ಆತ್ಮಸಾಕ್ಷಿಯನ್ನು ತೃಪ್ತಿಪಡಿಸುವುದು ಉತ್ತಮವಾದುದಲ್ಲವೆ? ನನ್ನ ಆತ್ಮಸಾಕ್ಷಿಯು ಪರಿಪೂರ್ಣವಾಗಿ ಶುದ್ಧವಾಗಿಲ್ಲವಾದ್ದರಿಂದ ಅದು ತಪ್ಪುದಾರಿಗೆಳೆದರೂ ಸರಿಯೇ ಅದನ್ನೇ ತೃಪ್ತಿ ಪಡಿಸಬೇಕಾಗುತ್ತದೆ. ದೋಷಯುಕ್ತವಾದ ನಿರಶನದಿಂದ ಯಾರಿಗೆ ನಷ್ಟ? ನನಗೆ ತಾನೆ ನಷ್ಟವಾಗುವುದು? ಆದರೆ ನಾನು ಸಾರ್ವಜನಿಕ ಸ್ವತ್ತು, ಎಂದು ಹೇಳುವುದುಂಟು. ಅದು ಸರಿ ಎನ್ನೋಣ.

ಆದರೆ ನನ್ನನ್ನು ನನ್ನ ದೋಷಗಳ ಸಮೇತ ಪರಿಗಣಿಸಬೇಕು. ನಾನು ಸತ್ಯಶೋಧಕ. ಹಿಮಾಲಯದ ಸುಸಜ್ಜಿತ ಆರೋಹಣಕ್ಕಿಂತ ನನ್ನ ಪ್ರಯೋಗಗಳು ಹೆಚ್ಚು ಪ್ರಮುಖ ವಾದುವೆಂದು ನನ್ನ ಭಾವನೆ. ಫಲಿತಾಂಶವೇನು?– ಎಂದು ಕೇಳಬಹುದು. ಈ ಶೋಧನೆಯು ವೈಜ್ಞಾನಿಕವಾಗಿದ್ದರೆ ಇವೆರಡಕ್ಕೂ ಯಾವ ರೀತಿಯ ಹೋಲಿಕೆಯೂ ಖಂಡಿತವಾಗಿ ಸಾಧ್ಯವಿಲ್ಲ. ಆದುದರಿಂದ ನನ್ನ ಜಾಡಿನಲ್ಲಿ ನಾನು ಹೋಗಬೇಕು. ನಾನು ನನ್ನ ನಿಶ್ಚಲ ಮೃದು ಅಂತರ್‌ವಾಣಿಯನ್ನು ಅದುಮಿದ ಕ್ಷಣವೇ ನನ್ನ ಉಪ್ಪ ಯುಕ್ತತೆಯನ್ನು ಕಳೆದುಕೊಳ್ಳುತ್ತೇನೆ.

"ಈ ನಿರಶನವು ಸಾರ್ವಜನಿಕರಿಗೆ ಸಂಬಂಧಿಸಿದ್ದಲ್ಲ. ಸತ್ಯಾಗ್ರಹ ಆಶ್ರಮವೆಂಬ ದೊಡ್ಡ ಸಂಸ್ಥೆಯನ್ನು ನಾನು ನಡೆಸುತ್ತಿದ್ದೇನೆ. ನನ್ನಲ್ಲಿ ನಂಬಿಕೆ ಇಟ್ಟಿರುವ ಮಿತ್ರರು ಈ ಗಾಗಲೇ ಜಮೀನು ಮತ್ತು ಕಟ್ಟಡಗಳಿಗಾಗಿಯೇ ಎರಡು ಲಕ್ಷ ರೂಪಾಯಿಗಳಿಗೂ ಹೆಚ್ಚಾಗಿ ಹಣ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಅದರ ನಿರ್ವಹಣೆಗಾಗಿ ಪ್ರತಿವರ್ಷವೂ ಹದಿನೆಂಟು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಕೊಡುತ್ತಿದ್ದಾರೆ. ನಾನು ಚಾರಿತ್ರ್ಯ ನಿರ್ಮಾಣ ಮಾಡುತ್ತಿದ್ದೇನೆಂಬ ಆಸೆಯಿಂದ ಅವರು ಕೊಡುತ್ತಾರೆ. ಆಶ್ರಮದಲ್ಲಿ ವಯಸ್ಕರಾದ ಪುರುಷರೂ ಸ್ತ್ರೀಯರೂ ಇದ್ದಾರೆ. ಬಾಲಕ ಬಾಲಕಿಯರೂ ಇದ್ದಾರೆ. ಈ ಬಾಲಕ ಬಾಲಕಿಯರು ಸಾಧ್ಯವಾದ ಮಟ್ಟಿಗೂ ಅವಿವಾಹಿತರಾಗಿ ಉಳಿಯಲೆಂಬ ಉದ್ದೇಶದಿಂದ ಅವರಿಗೆ ತರಪೇತು ಕೊಡಲಾಗುತ್ತಿದೆ. ನನಗೆ ತಿಳಿದಿರುವಂತೆ, ಆಶ್ರಮ ದಲ್ಲಿ ಮಹಿಳೆಯರು ಮತ್ತು ಬಾಲಕಿಯರು ಅನುಭವಿಸುವಷ್ಟು ಸ್ವಾತಂತ್ರ್ಯವನ್ನು ಬೇರೆ ಎಲ್ಲೂ ಅನುಭವಿಸುವುದಿಲ್ಲ. ಇದು ನನ್ನ ಅತ್ಯುತ್ತಮವಾದ ಏಕೈಕ ಸೃಷ್ಟಿ. ಇದರ ಫಲಿತಾಂಶಗಳಿಂದ ಜಗತ್ತು ನನ್ನನ್ನು ಅಳೆಯುತ್ತದೆ. ನಾನು ಒಪ್ಪದಿದ್ದರೆ ಇಲ್ಲಿ ಯಾವೊಬ್ಬ ಪುರುಷ ಅಥವಾ ಸ್ತ್ರೀ, ಬಾಲಕ ಅಥವಾ ಬಾಲಕಿ ಇರುವ ಹಾಗಿಲ್ಲ. ಭಾರತದಲ್ಲಿರುವ ಅತ್ಯಂತ ಪರಿಶುದ್ಧ ಚಾರಿತ್ರ್ಯವನ್ನುಳ್ಳವರಲ್ಲಿ ಕೆಲವರು ಇಲ್ಲಿದ್ದಾ ರೆಂಬುದು ನನ್ನ ನಂಬಿಕೆ. ಈಸಂಸ್ಥೆಗೆ ನೆರವು ನೀಡುವ ಸ್ನೇಹಿತರ ಪೂರ್ಣ ನಂಬಿಕೆಗೆ ನಾನು ಅರ್ಹನಾಗಿರಬೇಕಾದರೆ ನಾನು ತುಂಬಾ ಜಾಗರೂಕನಾಗಿರಬೇಕು. ಏಕೆಂದರೆ ಆ ಮಿತ್ರರು ಲೆಕ್ಕಪತ್ರಗಳನ್ನಾಗಲೀ ಆಶ್ರಮದ ಚಟುವಟಿಕೆಗಳನ್ನಾಗಲೀ ಪರೀಕ್ಷಿಸುವುದಿಲ್ಲ. ಬಾಲಕರಲ್ಲಿ ಹಾಗೂ ಸ್ವಲ್ಪಮಟ್ಟಿಗೆ ಬಾಲಕಿಯರಲ್ಲಿ ದೋಷಗಳಿದ್ದುದನ್ನು ನಾನು ಕಂಡುಕೊಂಡೆ. ನಾನು ಹೇಳುತ್ತಿರುವ ದೋಷಗಳು ಸರ್ವೇಸಾಮಾನ್ಯವಾಗಿ ಎಲ್ಲ ಶಾಲೆಗಳಲ್ಲೂ ಸಂಸ್ಥೆಗಳಲ್ಲೂ ಕಾಣುವಂತಹವೇ. ರಾಷ್ಟ್ರದ ಪೌರುಷತ್ವವನ್ನು ಕುಂದಿಸುವ ಹಾಗೂ ಯುವಕರ ಶೀಲವನ್ನು ಶಿಥಿಲಗೊಳಿಸುವ ದೋಷಗಳಿಂದ ಆಶ್ರಮವು ಮುಕ್ತ ವಾಗಬೇಕೆಂಬ ತೀವ್ರ ಕಾತರದಿಂದ ಇದ್ದೇನೆ. ಹುಡುಗರನ್ನು ಶಿಕ್ಷಿಸುವುದು ಸೂಕ್ತ ವಾಗಿರಲಿಲ್ಲ. ನನ್ನ ಹತೋಟಿಯಲ್ಲಿರುವ ಎರಡು ಶಾಲೆಗಳಲ್ಲಿ ಕಲಿತ ಅನುಭವ ಇದು, ಶಿಕ್ಷೆಯು ಮಕ್ಕಳನ್ನು ಪರಿಶುದ್ಧಗೊಳಿಸುವುದಿಲ್ಲ. ಅದು ಅವರನ್ನು ಮೊಂಡರನ್ನಾಗಿ ಮಾಡುತ್ತದೆ. ದಕ್ಷಿಣ ಆಫ್ರಿಕಾದಲ್ಲಿದ್ದಾಗ ಅಂತಹ ಸಂದರ್ಭಗಳಲ್ಲಿ ಉಪವಾಸ ಕೈ

ಗೊಳ್ಳುತ್ತಿದ್ದೆ. ಪರಿಣಾಮ ಅತ್ಯಂತ ಉತ್ತಮವಾಗಿರುತ್ತಿತ್ತು. ಇಲ್ಲಿಯೂ ಅದೇ ವಿಧಾನವನ್ನು ಅನುಸರಿಸಿದ್ದೇನೆ. ಆದರೆ ಇದು ಅದಕ್ಕಿಂತ ಲಘುವಾದದ್ದು. ನನ್ನ ಕೃತಿಗೆ ಆಧಾರ ಪರಸ್ಪರ ಪ್ರೇಮ. ಬಾಲಕ ಬಾಲಕಿಯರ ಪ್ರೇಮ ನನ್ನ ಮೇಲಿದೆ ಎನ್ನುವುದು ನನಗೆ ಗೊತ್ತು. ನನ್ನ ಪ್ರಾಣತ್ಯಾಗದಿಂದ ಅವರ ಚಾರಿತ್ರ್ಯ ಪರಿಶುದ್ಧ ವಾಗುವುದಾದರೆ ಅತ್ಯಂತ ಸಂತೋಷದಿಂದ ತ್ಯಾಗ ಮಾಡೇನು. ಇದಕ್ಕಿಂತ ಕಡಮೆಯಾದ ಕ್ರಮವನ್ನು ಕೈಗೊಳ್ಳಲಾಗುತ್ತಿರಲಿಲ್ಲ

"ಆದರೆ ಇದರ ಫಲವನ್ನು ಕಾಣಲಾಗದಿದ್ದರೆ ಹೇಗೆ? ನನಗೆ ತಿಳಿದಂತೆ ದೇವರ ಇಚ್ಛೆಯನ್ನು ನೆರವೇರಿಸಬಲ್ಲೆ. ಫಲ ಆತನಿಗೆ ಬಿಟ್ಟದ್ದು. ವಿಷಯ ದೊಡ್ಡದಾಗಲೀ ಸಣ್ಣದಾಗಲೀ ಅದಕ್ಕಾಗಿ ಸಂಕಷ್ಟ ಪಡಬೇಕು. ಅದೇ ಸತ್ಯಾಗ್ರಹದ ಮೂಲಸೂತ್ರ".

ತಮ್ಮ ಉಪವಾಸದ ಪ್ರತಿಕ್ರಿಯೆಯನ್ನು ವರ್ಣಿಸುತ್ತಾ ಗಾಂಧಿ ಹೀಗೆ ಬರೆದರು:

"ಕಳೆದ ವರ್ಷ ಹಾಗೂ ಈ ವರ್ಷದ ಉಪವಾಸದ ಅವಧಿಯಲ್ಲಿ ನೀರಿಗೆ ಸ್ವಲ್ಪ ಉಪ್ಪು ಮತ್ತು ಸೋಡಾಪುಡಿಯನ್ನು ಸೇರಿಸಿತೆಗೆದುಕೊಂಡೆ. ಅದರ ಹಿಂದಿನ ಉಪವಾಸದಲ್ಲಿ ಹಾಗೆ ಮಾಡಿರಲಿಲ್ಲ. ನಿರಶನದ ಸಮಯದಲ್ಲಿ ನನಗೆ ನೀರು ಅಸಹ್ಯ ವಾಗಿ ಬಿಡುತ್ತದೆ. ಅದಕ್ಕೆ ಸ್ವಲ್ಪ ಉಪ್ಪನ್ನೂ ಸೋಡವನ್ನೂ ಸೇರಿಸುವುದರಿಂದ ತೆಗೆದು ಕೊಳ್ಳಲು ಸಾಧ್ಯ. ಯಥೇಚ್ಛವಾಗಿ ನೀರು ಕುಡಿಯುವುದರಿಂದ ದೇಹವನ್ನು ಶುಚಿ ಯಾಗಿಡಬಹುದು; ಬಾಯಿಯಲ್ಲಿ ತೇವ ಇರುತ್ತದೆ. ಆರೆಂಟು ಔನ್ಸ್ ನೀರಿಗೆ ಐದು ಗ್ರೇನ್‌ನಷ್ಟು ಉಪ್ಪು ಮತ್ತು ಅಷ್ಟೇ ಪ್ರಮಾಣದಲ್ಲಿ ಸೋಡಾಸೇರಿಸ ಲಾಗುತ್ತಿತ್ತು. ದಿನದಲ್ಲಿ ಆರು ಅಥವಾ ಎಂಟು ಸಾರಿ ಸೇವಿಸುತ್ತಿದ್ದ ನೀರಿನ ಒಟ್ಟು ಪ್ರಮಾಣ ನಲವತ್ತರಿಂದ ನಲವತ್ತೆಂಟು ಔನ್ಸ್‌ಗಳಾಗುತ್ತಿತ್ತು. ಪ್ರತಿದಿನವೂ ತಪ್ಪದೆ ಎನಿಮಾ ತೆಗೆದುಕೊಳ್ಳುತ್ತಿದೆ. ಮುಕ್ಕಾಲು ಸೀಸೆ ನೀರಿನಲ್ಲಿ ಸುಮಾರು ನಲವತ್ತು ಗ್ರೇನಿನಷ್ಟು ಉಪ್ಪನ್ನು ಅಷ್ಟೇ ತೂಕದ ಸೋಡವನ್ನೂ ಕರಗಿಸಿ ಎನಿಮಾ ತೆಗೆದುಕೊಳ್ಳುತ್ತಿದ್ದೆ. ನೀರು ಯಾವಾಗಲೂ ಬೆಚ್ಚಗಿರುತ್ತಿತ್ತು. ಹಾಸಿಗೆಯಲ್ಲಿ ಮಲಗಿದ್ದ ಹಾಗೆಯೇಸ್ಪಂಜ್ ಸ್ನಾನ ಮಾಡಿಸಲಾಗುತ್ತಿತ್ತು. ಹೋದ ವರ್ಷದ ಉಪವಾಸದ ಸಮಯದಲ್ಲೂ ಈ ವರ್ಷದ ನಿರಶನದ ಕಾಲದಲ್ಲೂ ದಿನವೂ ರಾತ್ರಿ ಚೆನ್ನಾಗಿ ನಿದ್ದೆ ಮಾಡುತ್ತಿದ್ದೆ. ಹಗಲು ಹೊತ್ತು ಒಂದು ಗಂಟೆ ಹೊತ್ತಾದರೂ ನಿದ್ರಿಸುತ್ತಿದ್ದೆ. ಕಳೆದ ಉಪವಾಸದ ಅವಧಿಯಲ್ಲಿ ಮೊದಲ ಮೂರೂವರೆ ದಿನಗಳು ಹೆಚ್ಚು ಕಡಿಮೆ ಬೆಳಿಗ್ಗೆ ನಾಲ್ಕರಿಂದ ರಾತ್ರಿ ಎಂಟು ಗಂಟೆ ವರೆಗೆ ಕೆಲಸಮಾಡುತ್ತಿದ್ದೆ; ನನ್ನ ಉಪವಾಸಕ್ಕೆ ಸಂಬಂಧಿಸಿದ ವಿಷಯದ ಮೇಲೆ ಚರ್ಚೆ ನಡೆಸುತ್ತಿದ್ದೆ. ನನ್ನ ದಿನನಿತ್ಯದ ಪತ್ರವ್ಯವಹಾರ, ಸಂಪಾದಕೀಯ—ಈ ಎಲ್ಲ ಕೆಲಸವನ್ನೂ ಮಾಡುತ್ತಿದ್ದೆ. ನಾಲ್ಕನೆಯ ದಿನ ಭೀಕರ ತಲೆನೋವು ಬಂತು.ದಣಿವು ತಡೆಯಲಾರದಾಯಿತು. ನಾಲ್ಕನೆಯ ದಿನ ಮಧ್ಯಾಹ್ನ ನನ್ನ ಕೆಲಸಗಳನ್ನೆಲ್ಲಾ ನಿಲ್ಲಿಸಿದೆ. ಮಾರನೆ ದಿನ ಸ್ವಲ್ಪ ಚೇತರಿಸಿಕೊಂಡೆ. ಬಳಲಿಕೆ ಹೋಗಿತ್ತು. ತಲೆನೋವು ಹೆಚ್ಚು

ಕಡಿಮೆ ನಿಂತಿತ್ತು. ಆರನೆಯ ದಿನ ಉಲ್ಲಾಸದಿಂದಲೇ ಇದ್ದೆ. ಏಳನೆಯ ದಿನ ಮೌನದ ದಿನ. ಅಂದು ಎಷ್ಟು ಉಲ್ಲಾಸ ಮತ್ತು ಶಕ್ತಿ ಇತ್ತೆಂದರೆ ದೃಢವಾಗಿ ಲೇಖನಿ ಹಿಡಿದು ಉಪವಾಸದ ಮೇಲೆ ಲೇಖನ ಬರೆಯಲೂ ಸಾಧ್ಯವಾಯಿತು.

"ಉಪವಾಸದ ಅವಧಿಯ ಪರ್ಯಂತ ಹಸಿವಿನ ಬಾಧೆಯಿಂದ ನರಳಿದ ಅರಿವೇ ನನಗಿಲ್ಲ. ನಿಜವಾಗಿ ಹೇಳುವುದಾದರೆ ಉಪವಾಸವನ್ನು ಮುಗಿಸುವ ದಿನ ಆತುರವೇ ಇರಲಿಲ್ಲ. ಅರ್ಧಗಂಟೆ ತಡವಾಗಿಯೇ ಉಪವಾಸವನ್ನು ಮುಗಿಸಿದೆ. ಉಪವಾಸದ ಸಮಯದಲ್ಲಿ ನೂಲುವುದಕ್ಕೆ ಅಡ್ಡಿಯಿರಲಿಲ್ಲ. ಪ್ರತಿದಿನ ಅರ್ಧಗಂಟೆಗಿಂತ ಹೆಚ್ಚುಕಾಲ ಎದ್ದು ಕುಳಿತುಕೊಳ್ಳುತ್ತಿದ್ದೆ. ಬೆನ್ನಿಗೆ ದಿಂಬನ್ನು ಒರಗಿಸಿಕೊಂಡು ಕುಳಿತು ಮಾಮೂಲು ಗತಿಯಲ್ಲೇ ನೂಲುತ್ತಿದ್ದೆ. ಯಥಾವಿಧಿಯಂತೆ ತ್ರಿಕಾಲದ ಪ್ರಾರ್ಥನಾಸಭೆಗಳು ನಡೆಯುತ್ತಿದ್ದುವು. ಕಡೆಯ ನಾಲ್ಕು ದಿನಗಳಲ್ಲಿ ಈ ಸಭೆಗಳಿಗೆ ಮಂಚದ ಮೇಲೆ ಕೂಡಿಸಿ ಕರೆದೊಯ್ಯುತ್ತಿದ್ದರು. ಸ್ವಲ್ಪ ಪ್ರಯಾಸದಿಂದ ಸಭೆಯಲ್ಲಿ ಎದ್ದು ಕುಳಿತಿರಬಹುದಾಗಿತ್ತು. ಆದರೆ ಇರುವ ಶಕ್ತಿಯನ್ನು ಕಾಪಾಡಿಕೊಳ್ಳುವುದು ಒಳ್ಳೆಯದು ಎಂದು ಭಾವಿಸಿದೆ. ದೈಹಿಕವಾಗಿ ನಾನು ಯಾವುದೇ ಬಾಧೆಯನ್ನು ಅನುಭವಿಸಿದಂತೆ ಕಾಣುವುದಿಲ್ಲ. ನನಗೆ ಜ್ಞಾಪಕ ಇರುವಂತೆ, ಆಗಾಗ್ಗೆ ಓಕರಿಕೆ ಬರುತ್ತಿದ್ದುದರಿಂದ ಸ್ವಲ್ಪ ತೊಂದರೆಯಾಗುತ್ತಿತ್ತು. ಚಮಚದಲ್ಲಿ ಕೊಂಚ ಕೊಂಚವಾಗಿ ನೀರನ್ನು ಸೇವಿಸುತ್ತಿದ್ದುದರಿಂದ ಆ ತೊಂದರೆ ನಿವಾರಣೆಯಾಗುತ್ತಿತ್ತು.

"ಕಿತ್ತಳೆ ಮತ್ತು ದ್ರಾಕ್ಷಿರಸ ಕುಡಿದು ಉಪವಾಸ ಮುಕ್ತಾಯ ಮಾಡಿದೆ. ನಾನು ಸೇವಿಸಿದ್ದು ಸುಮಾರು ಆರು ಔನ್ಸ್ ಹಣ್ಣಿನ ರಸ. ಒಂದು ಕಿತ್ತಳೆಹಣ್ಣಿನ ತೊಳೆಯನ್ನು ಚೀಪಿಕೊಂಡು ರಸ ಕುಡಿದೆ. ಎರಡು ಗಂಟೆ ಅನಂತರ ಅದನ್ನೇ ಪುನರಾವರ್ತನೆ ಮಾಡಿದೆ. ಆಗ ಹತ್ತು ದ್ರಾಕ್ಷಿಗಳನ್ನು ಚೀಪಿಕೊಂಡು ಸಿಪ್ಪೆಯನ್ನು ಬಿಸಾಡಿದೆ. ಮಧ್ಯಾಹ್ನದನಂತರ ಎನಿಮಾ ತೆಗೆದುಕೊಂಡದ್ದಾಯಿತು. ಆಮೇಲೆ ಆರು ಔನ್ಸ್ ಆಡಿನ ಹಾಲಿಗೆ ಎರಡು ಔನ್ಸ್ ನೀರು ಬೆರಸಿ ತೆಗೆದುಕೊಂಡೆ. ಜೊತೆಗೆ ಒಂದು ಕಿತ್ತಳೆ ಹಣ್ಣನ್ನೂ ಹತ್ತು ದ್ರಾಕ್ಷಿಯನ್ನೂ ಸೇವಿಸಿದೆ. ಸಂಜೆ ಪುನಃ ಹಾಲು, ನೀರು ಮತ್ತು ಹಣ್ಣು ತೆಗೆದುಕೊಂಡೆ. ಮಾರನೆದಿನ ಹಾಲಿನ ಪ್ರಮಾಣ ಹದಿನೆಂಟು ಔನ್ಸಿಗೆ ಏರಿತು. ಅದಕ್ಕೆ ಯಾವಾಗಲೂ ನೀರು ಸೇರಿಸಿ ತೆಗೆದುಕೊಳ್ಳುತ್ತಿದ್ದೆ. ದಿನಕ್ಕೆ ಆರ ಔನ್ಸಿನಂತೆ ಹಾಲಿನ ಪ್ರಮಾಣವನ್ನು ಹೆಚ್ಚಿಸುತ್ತಾ ಹೋದೆ. ನಲವತ್ತೆಂಟು ಔನ್ಸಿಗೆ ಏರುವ ತನಕ ಹೀಗೆ ನಡೆಯಿತು. ಈಗಲೂ ಹಾಲಿಗೆ ನೀರು ಬೆರಸಿ ತೆಗೆದುಕೊಳ್ಳುತ್ತೇನೆ. ಆದರೆ ಈಗ ಪ್ರತಿಸಾರಿಯೂ ಒಂದು ಔನ್ಸ್ ನೀರನ್ನು ಮಾತ್ರ ಸೇರಿಸುತ್ತೇನೆ. ಒಂದೂವರೆ ದಿನ ನೀರನ್ನು ಸೇರಿಸದೆ ಹಾಲು ತೆಗೆದುಕೊಂಡೆ. ಆಗ ಹೊಟ್ಟೆ ಭಾರವಾಗಿ ತೋರಿತು. ಹಾಲಿಗೆ ನೀರು ಬೆರಸದೆ ತೆಗೆದುಕೊಂಡಿದ್ದೇ ಇದಕ್ಕೆ ಕಾರಣವೆಂದು ನಾನು ತಿಳಿದೆ; ಮತ್ತೆ, ನೀರು ಬೆರಸಿದ ಹಾಲನ್ನೇ ತೆಗೆದುಕೊಳ್ಳಲಾರಂಭಿಸಿದೆ.

"ಉಪವಾಸ ಮುಗಿಸಿದ ಹನ್ನೆರಡನೆ ದಿನವಾದ ಇಂದು ಈ ಟಿಪ್ಪಣಿಗಳನ್ನು ಬರೆಯುತ್ತಿದ್ದೇನೆ. ಇದುವರೆಗೂ ಗಟ್ಟಿ ಆಹಾರವನ್ನೇನೂ ತೆಗೆದುಕೊಂಡಿಲ್ಲ. ಸ್ವಲ್ಪ ಹಣ್ಣನ್ನು ರಸಮಾಡಿ ಸೇವಿಸುತ್ತೇನೆ. ಕಳೆದ ಮೂರು ದಿನಗಳಲ್ಲಿ ದ್ರಾಕ್ಷಿ ಮತ್ತು ಕಿತ್ತಳೆ ಜೊತೆಗೆ ಪರಂಗಿ ಅಥವಾ ದಾಳಿಂಬೆ ಮತ್ತು ಸಪೋಟಾಗಳನ್ನು ಸೇರಿಸಿದ್ದೇನೆ. ಅತಿ ಹೆಚ್ಚು ಪ್ರಮಾಣದಲ್ಲಿ ಹಾಲು ತೆಗೆದುಕೊಂಡಿರುವುದು ಎಂದರೆ ಅರುವತ್ತು ನಾಲ್ಕು ಔನ್ಸ್. ಸರಾಸರಿ ಎಂದರೆ ನಲವತ್ತೆಂಟು ಔನ್ಸ್. ಒಮ್ಮೊಮ್ಮೆ ಅಂಗಡಿಯಿಂದ ತಂದ ಬ್ರೆಡ್ ಅಥವಾ ಮನೆಯಲ್ಲಿ ಮಾಡಿದ ತೆಳುವಾದ ಚಪಾತಿ ತಿನ್ನುತ್ತೇನೆ. ತಿಂಗಳಂಗಟ್ಟಲೆ ಬರೀ ಹಾಲು ಹಣ್ಣಿನಲ್ಲೇ ಕಳೆದುಬಿಟ್ಟಿದ್ದೇನೆ. ಅದರಿಂದ ನನ್ನ ದೇಹಸ್ಥಿತಿಯು ಚೆನ್ನಾಗಿಯೇ ಇದೆ.

"ಜೈಲಿನಿಂದ ಬಿಡುಗಡೆಯಾಗಿ ಬಂದ ಮೇಲೆ ನನ್ನ ತೂಕ ಹೆಚ್ಚೆಂದರೆ ೧೧೨ ಪೌಂಡ್‌ಗೆ ಏರಿತ್ತು. ಏಳು ದಿನಗಳ ಉಪವಾಸದ ಕಾಲದಲ್ಲಿ ಕಳೆದುಕೊಂಡ ತೂಕ ೯ ಪೌಂಡು. ನನಗೆ ಅಷ್ಟು ತೂಕ ಪುನಃ ಪ್ರಾಪ್ತಿಯಾಗಿದೆ. ನನ್ನ ಈಗಿನ ತೂಕ ೧೦೩ ಪೌಂಡಿಗೆ ಸ್ವಲ್ಪ ಹೆಚ್ಚಾಗಿದೆ. ಕಳೆದ ಮೂರುದಿನ ನಿತ್ಯವೂ ತಪ್ಪದೆ ಬೆಳಿಗ್ಗೆ ಸಂಜೆ ವ್ಯಾಯಾಮ ಮಾಡಿದ್ದೇನೆ. ಅದರಿಂದ ಕೊಂಚವೂ ಬಳಲಿಕೆ ಆಗಲಿಲ್ಲ. ಸಮನಾದ ನೆಲದ ಮೇಲೆ ನಡೆದರೆ ಕಷ್ಟವಾಗುವುದಿಲ್ಲ. ಮೆಟ್ಟಲು ಹತ್ತಿ ಇಳಿದರೆ ಸ್ವಲ್ಪಶ್ರಮಕಾಣುತ್ತದೆ. ಕಾಲ ಪ್ರವೃತ್ತಿ ಸರಿಯಾಗಿ ಆಗುತ್ತದೆ. ನನಗೆ ಇಷ್ಟಬಂದಾಗ ನಿದ್ದೆ ಮಾಡಬಹುದು.

"ಇಪ್ಪತ್ತೊಂದು ದಿನಗಳ ನಿರಶನದಿಂದಾಗಲೀ ಈಚಿನ ಏಳು ದಿನಗಳ ಉಪವಾಸದಿಂದಾಗಲೀ ದೈಹಿಕವಾಗಿ ನಾನು ಏನನ್ನೂ ಕಳೆದುಕೊಂಡಿಲ್ಲವೆಂಬುದು ನನ್ನ ಅಭಿಪ್ರಾಯ. ಏಳು ದಿನಗಳ ಉಪವಾಸದ ಅವಧಿಯಲ್ಲಿ ಅಷ್ಟು ತೂಕ ಕಡಿಮೆಯಾದದ್ದು ಸ್ವಲ್ಪ ಆತಂಕಕಾರಿ ವಿಷಯವೇನೋ ನಿಜ. ಅದಕ್ಕೆ ಕಾರಣ, ಮೊದಲ ಮೂರನೆಯ ದಿನ ನಾನು ಮಾಡಿದ ಅತಿಯಾದ ಕೆಲಸ ನನ್ನ ದೇಹ ಶಕ್ತಿಗೆ ಮೀರಿದ್ದು. ಇನ್ನು ಸ್ವಲ್ಪ ವಿಶ್ರಾಂತಿ ತೆಗೆದುಕೊಂಡರೆ ಸಾಕು. ಉಪವಾಸ ಆರಂಭಿಸುವುದಕ್ಕೆ ಮುಂಚೆ ನನ್ನಲ್ಲಿದ್ದ ತ್ರಾಣ ಪುನಃ ಬರುತ್ತದೆ. ಅಷ್ಟೇ ಅಲ್ಲ, ಕಚ್ ಪ್ರವಾಸದ ಅವಧಿಯಲ್ಲಿ ಕಳೆದುಕೊಂಡಿದ್ದ ತೂಕ ಮತ್ತು ಶಕ್ತಿಯನ್ನು ಮತ್ತೆ ಪಡೆಯುತ್ತೇನೆ.

"ಯಾವುದೇ ಉದ್ದೇಶದಿಂದ ಉಪವಾಸ ಮಾಡುವವರ ಸಲುವಾಗಿ ನಾನು ಈ ಕೆಳಕಂಡ ನಿಯಮಗಳನ್ನು ಸೂಚಿಸುತ್ತೇನೆ. ಇವು ಕೇವಲ ಸಾಮಾನ್ಯ ಮನುಷ್ಯನ ಹಾಗೂ ಕೇವಲ ದೈಹಿಕ ದೃಷ್ಟಿಯಿಂದ ಬರೆದ ನಿಯಮಗಳು.

"೧. ಆರಂಭದಿಂದಲೇ ನಿಮ್ಮ ದೈಹಿಕ ಹಾಗೂ ಮಾನಸಿಕಶಕ್ತಿಯನ್ನು ಕಾಪಾಡಿಕೊಳ್ಳಬೇಕು.

೨. ಉಪವಾಸ ಮಾಡುತ್ತಿರುವ ಸಮಯದಲ್ಲಿ ಆಹಾರದ ಯೋಚನೆಯೇ ನಿಮ್ಮಲ್ಲಿ ಸುಳಿಯಬಾರದು.

೩. ನಿಮಗೆಷ್ಟು ಸಾಧ್ಯವೋ ಅಷ್ಟು ತಣ್ಣನೆಯ ನೀರನ್ನು ಕುಡಿಯಬೇಕು. ಬೇಕಿದ್ದರೆ ಸೋಡ ಮತ್ತು ಉಪ್ಪನ್ನು ಸೇರಿಸಿ ಕುಡಿಯಬಹುದು. ಸ್ವಲ್ಪ ಸ್ವಲ್ಪವೇ ನೀರನ್ನು ಕುಡಿಯಬೇಕು. ನೀರನ್ನು ಕುದಿಸಿ, ಶೋಧಿಸಿ, ಆರಿಸಿ ಕುಡಿಯಬೇಕು. ಉಪ್ಪು ಮತ್ತು ಸೋಡ ಸೇರಿಸಲು ಹೆದರಬೇಕಾಗಿಲ್ಲ. ಏಕೆಂದರೆ, ಸ್ವಾಭಾವಿಕ ವಾಗಿ ನೀರಿನಲ್ಲಿ ಈ ಲವಣಗಳು ಇದ್ದೇ ಇರುತ್ತವೆ.

೪. ದಿನವೂ ಬೆಚ್ಚಗೆ ಸ್ಪಂಜು ಮಾಡಿಕೊಳ್ಳಿ.

೫. ಉಪವಾಸದ ಅವಧಿಯಲ್ಲಿ ದಿನವೂ ತಪ್ಪದೆ ಎನಿಮಾ ತೆಗೆದುಕೊಳ್ಳ ಬೇಕು. ನೀವು ದಿನವೂ ವಿಸರ್ಜಿಸುವ ಕಲ್ಮಷಗಳನ್ನು ನೋಡಿದರೆ ನಿಮಗೇ ಆಶ್ಚರ್ಯವಾಗುತ್ತದೆ.

೬. ಬಯಲಿನಲ್ಲಿ ಮಲಗಿ ಎಷ್ಟು ಸಾಧ್ಯವೋ ಅಷ್ಟು ನಿದ್ರೆ ಮಾಡಬೇಕು

೭. ಬೆಳಿಗ್ಗೆ ಸೂರ್ಯನ ಬೆಳಕಿಗೆ ಮೈಯೊಡ್ಡಬೇಕು. ನೀರಿನ ಸ್ನಾನದಷ್ಟೇ ಬಿಸಲಿನ ಮತ್ತು ಗಾಳಿಯ ಸ್ನಾನವೂ ಶುದ್ಧೀಕರಣದ ಮಹಾಸಾಧನ.

೮. ಉಪವಾಸದ ವಿಷಯವೊಂದನ್ನು ಬಿಟ್ಟು ಏನನ್ನು ಬೇಕಾದರೂ ಯೋಚನೆ ಮಾಡಿ.

೯. ನೀವು ಯಾವ ಉದ್ದೇಶದಿಂದ ಉಪವಾಸ ಮಾಡುತ್ತಿದ್ದರೂ ಸರಿಯೆ; ಈ ಪವಿತ್ರ ಸಮಯದಲ್ಲಿ ನೀವು ಸೃಷ್ಟಿಕರ್ತನನ್ನೂ ನಿಮ್ಮ ಮತ್ತು ಆತನ ನಡುವಿನ ಸಂಬಂಧವನ್ನೂ ಆತನ ಇತರ ಸೃಷ್ಟಿಯೊಂದಿಗೆ ಬಾಂಧವ್ಯವನ್ನು ಕುರಿತು ಆಲೋಚಿಸಿ. ಆಗ ನೀವು ಕನಸಿನಲ್ಲೂ ಯೋಚಿಸಲಾಗದಂತಹ ಅದ್ಭುತ ಸಂಗತಿಗಳನ್ನು ಕಂಡುಕೊಳ್ಳುತ್ತೀರಿ.

"ವೈದ್ಯಮಿತ್ರರ ಕ್ಷಮೆಕೋರಿ ನನ್ನ ಮತ್ತು ನನ್ನಂತೆಯೇ ವಕ್ರರಾದ ಸಹಪಾಠಿ ಗಳ ಅನುಭವದ ಮೇರೆಗೆ ಈ ಮುಂದೆ ಕಾಣಿಸಿರುವ ಸಂದರ್ಭಗಳಲ್ಲಿ ಉಪವಾಸ ಮಾಡಿರೆಂದು ನಿಸ್ಸಂಕೋಚವಾಗಿ ಹೇಳುತ್ತೇನೆ: (೧) ನಿಮಗೆ ಮಲಬದ್ಧತೆಯಾಗಿದ್ದರೆ (೨) ರಕ್ತಹೀನತೆಯಿಂದ ನೀವು ದುರ್ಬಲರಾಗಿದ್ದರೆ (೩) ಜ್ವರಪೀಡಿತರಾಗಿದ್ದರೆ (೪) ಅಜೀರ್ಣವಾಗಿದ್ದರೆ (೫) ತಲೆನೋವಿದ್ದರೆ (೬) ವಾಯುನೋವಿದ್ದರೆ (೭) ಸಂಧಿ ವಾತವಾಗಿದ್ದರೆ (೮) ಕೋಪತಾಪಗಳಾಗಿದ್ದರೆ (೯) ನಿಮ್ಮ ಮನಸ್ಸು ಕುಗ್ಗಿದ್ದರೆ (೧೦) ನೀವು ಅತಿಯಾಗಿ ಸಂತೋಷ ಭರಿತರಾಗಿದ್ದರೆ–ಉಪವಾಸ ಮಾಡಿರಿ. ವೈದ್ಯ ಸಲಹೆಗಳನ್ನೂ ಪ್ರಸಿದ್ಧ ಔಷಧಿಗಳನ್ನು ತ್ಯಜಿಸಿರಿ.

"ಹಸಿದಿರುವಾಗ ಮತ್ತು ನಿಮ್ಮ ಆಹಾರಕ್ಕಾಗಿ ನೀವು ಶ್ರಮವಹಿಸಿ ದುಡಿದಾಗ ಮಾತ್ರ ಊಟ ಮಾಡಬೇಕು.''

ಗಾಂಧೀಜಿ ನಿಶ್ಶಕ್ತರಾಗಿದ್ದರೂ ತಮ್ಮ ಕಾರ್ಯಕ್ರಮಗಳನ್ನೆಲ್ಲಾ ಪೂರೈಸಿದರು. ಆದರೆ ಮಾತನಾಡುತ್ತಿದ್ದುದು ಸ್ವಲ್ಪವೇ. ಅವರ ಸಂದೇಶ ಹೀಗಿತ್ತು. "ಭಗವಂತ

ಜಗತ್ತಿನ ಸೂತ್ರಧಾರನೆಂದು ವರ್ಣಿಸಲಾಗಿದೆ. ಅದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ. ಈ ವರ್ಣನೆಯಲ್ಲಿ ಬ್ರಹ್ಮಾಂಡದಷ್ಟು ಅರ್ಥವಿದೆ. ಆತನ ಹೆಸರಿನಲ್ಲಿ ನಾಡಿನ ಬಡ ಜನರಿಗೋಸ್ಕರ ನೀವು ದಾರವನ್ನು ಎಳೆಯುವುದಿಲ್ಲವೆ?"

ಬರಲಿರುವ ಕಾಂಗ್ರೆಸ್ ಅಧಿವೇಶನವು ಅದರ ಇತಿಹಾಸದಲ್ಲಿ ಮಹತ್ವಪೂರ್ಣವಾದದ್ದು ಎಂದು ಗಾಂಧೀಜಿ ಹೇಳಿದರು. ಮಹಿಳೆಯರನ್ನು ರಾಜಕೀಯರಂಗಕ್ಕೆ ಎಳೆದಿದ್ದವರು ಅವರೇ. ಅವರೊಂದಿಗೆ ಹತ್ತು ವರ್ಷ ಕೆಲಸ ಮಾಡಿದ್ದ ಶ್ರೀಮತಿ ಸರೋಜಿನಿನಾಯ್ಡು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸುವವರಾಗಿದ್ದರು. "ರಾಷ್ಟ್ರವು ತೋರಿಸಬಹುದಾದ ಅಪಾರ ಗೌರವದ ಸ್ಥಾನ ಈ ಸಾರಿ ಪ್ರಪ್ರಥಮವಾಗಿ ಭಾರತೀಯ ಮಹಿಳೆಯೊಬ್ಬರಿಗೆ ದೊರಕುತ್ತದೆ. ನಾವು ದೂಷಣೆಗೊಳಗಾಗಿರಬಹುದು; ಗುಲಾಮರಾಗಿರಬಹುದು, ಅಸಹಾಯಕರಾಗಿರಬಹುದು. ಈ ಕಾರಣಗಳಿಂದಾಗಿ ಜಗತ್ತು ನಮ್ಮ ರಾಷ್ಟ್ರೀಯ ಅಧಿವೇಶನವನ್ನು ಲೆಕ್ಕಿಸದೆ ಇರಬಹುದು. ಆದರೆ ನಮ್ಮ ಅಧಿವೇಶನದ ಅಧ್ಯಕ್ಷರು ನಮಗೆ ಸಕಲ ಸರ್ವಸ್ವ. ಈ ಸಾಲಿನ ಅಪೂರ್ವ ಗೌರವ ಆಕೆಗೆ ಸಲ್ಲುತ್ತದೆ. ಅದು ಆಕೆಯ ಹಕ್ಕು".

ಕಾಂಗ್ರೆಸ್ ಅಧಿವೇಶನ ಡಿಸೆಂಬರ್ ೨೬ರಂದು ಆರಂಭವಾಯಿತು. ಗಾಂಧಿಯವರು ಮಾತನಾಡಿದ್ದು ಕೇವಲ ಐದು ನಿಮಿಷ. "ಈ ಐದು ವರ್ಷಗಳ ಕಾರ್ಯವನ್ನು ಸಿಂಹಾವಲೋಕನ ಮಾಡಿದ್ದರಲ್ಲಿ ಹಿಮ್ಮೆಟ್ಟತಕ್ಕ ವಿಷಯ ಏನೂ ಇಲ್ಲ; ವಾಪಸ್ಸು ತೆಗೆದುಕೊಳ್ಳಬೇಕಾದ ಹೇಳಿಕೆ ಒಂದೂ ಇಲ್ಲ"–ಎಂದರು ಗಾಂಧಿ. "ಜನರಲ್ಲಿ ಕೆಚ್ಚು ಮತ್ತು ಉತ್ಸಾಹ ಇರುವುದೆಂದು ನನಗೆ ಮನದಟ್ಟಾದರೆ ಈ ದಿನವೇ ಸವಿನಯ ಕಾನೂನುಭಂಗ ಆರಂಭಿಸಿಯೇನು. ದುರದೃಷ್ಟವಶಾತ್ ಅವು ಕಾಣುವುದಿಲ್ಲ! ದಕ್ಷಿಣ ಆಫ್ರಿಕಾದ ಪ್ರಶ್ನೆ ಸೂಕ್ಷ್ಮವಾದ ಸಮಸ್ಯೆಯೆಂದು ಅನೇಕರು ಭಾವಿಸುತ್ತಾರೆ. ಅಧಿಕ ಸಂಖ್ಯೆಯಲ್ಲಿ ಜನರು ಅದನ್ನೇ ಹೇಳಿದರೂ ನಾನು ಲಕ್ಷಿಸುವುದಿಲ್ಲ." ಎಂದು ಹೇಳಿದರು.

ಶ್ರೀಮತಿ ನಾಯ್ಡುರವರ ಅಧ್ಯಕ್ಷ ಭಾಷಣ ಪುಟ್ಟದಾಗಿತ್ತು. ಹಿಂದೆ ಯಾವ ಕಾಂಗ್ರೆಸ್ ಅಧ್ಯಕ್ಷರೂ ಅಷ್ಟು ಪುಟ್ಟ ಲಿಖಿತ ಭಾಷಣ ಮಾಡಿರಲಿಲ್ಲ. ಜನತೆಯ ಹೋರಾಟಗಳನ್ನೂ ಆಶೋತ್ತರಗಳನ್ನೂ ಶ್ರೀಮತಿ ನಾಯ್ಡು ಸಂಕ್ಷೇಪವಾಗಿ ತಿಳಿಸಿದರು. ಆಕೆ ಯಾವ ನೀತಿಯನ್ನೂ ನಿರೂಪಿಸಲಿಲ್ಲ. ಆ ಜವಾಬ್ದಾರಿ ಮೋತಿಲಾಲ್ ನೆಹರೂರವರ ಮೇಲೆ ಬಿತ್ತು. ಎರಡನೆಯ ದಿನ ಅವರು ಪ್ರಧಾನ ನಿರ್ಣಯವನ್ನು ಮಂಡಿಸಿ ರಾಜಕೀಯ ಕಾರ್ಯಕ್ರಮದ ರೂಪರೇಷೆಯನ್ನು ಕೊಟ್ಟರು. ಕೇಂದ್ರ ಶಾಸನ ಸಭೆಯು ೧೯೨೪ನೆಯ ಫೆಬ್ರುವರಿಯಲ್ಲಿ ಅಂಗೀಕರಿಸಿದ ನಿರ್ಣಯಕ್ಕೆ ಸರ್ಕಾರದಿಂದ ಸಮರ್ಪಕ ಪ್ರತಿಕ್ರಿಯೆ ಬರದಿದ್ದರೆ ಸ್ವರಾಜ್ಯವಾದಿಗಳು ಶಾಸನಸಭೆಗಳಲ್ಲಿನ ಸ್ಥಾನಗಳನ್ನು ತ್ಯಜಿಸಬೇಕು; ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬಾರದು; ಆದರೆ ಶಾಸನ ಸಭೆಗಳಲ್ಲಿನ ಸ್ಥಾನಗಳು ತೆರವಾಗಿವೆ ಎಂದು ಘೋಷಣೆ ಮಾಡುವುದನ್ನು ನಿವಾರಿಸುವುದಕ್ಕಾಗಿ ಮಾತ್ರ ಹಾಜರಾತಿ ಹಾಕಬೇಕು, ಎಂದು ನಿರ್ಣಯದಲ್ಲಿ ತಿಳಿಸಲಾಯಿತು. ಪಕ್ಷದ

ವಿಶೇಷ ಸಮಿತಿಯು ಎ.ಐ.ಸಿ.ಸಿ.ಯನ್ನು ಕರೆದು ಕಾಂಗ್ರೆಸ್ ಹಾಗೂ ಸ್ವರಾಜ್ಯಪಕ್ಷ ಕೈಗೊಳ್ಳಬೇಕಾದ ಕಾರ್ಯಕ್ರಮವನ್ನು ರೂಪಿಸತಕ್ಕದ್ದು; ಸಾರ್ವತ್ರಿಕ ಚುನಾವಣೆ ಹಾಗೂ ಸವಿನಯ ಕಾನೂನುಭಂಗ ಚಳವಳಿ ಇತ್ಯಾದಿ ವಿಷಯಗಳ ಬಗೆಗೆ ಜನರಿಗೆ ಶಿಕ್ಷಣ ಕೊಡುವುದು, ಈ ಕಾರ್ಯಕ್ರಮದಲ್ಲಿ ಅಡಗಿರಬೇಕು–ಎಂದು ತಿಳಿಸಲಾಯಿತು. ಚರ್ಚೆಯಲ್ಲಿ ಗಾಂಧೀಜಿ ಭಾಗವಹಿಸಲಿಲ್ಲ. ನೆಹರೂರವರ ಧೋರಣೆಯನ್ನು ಜಯಕರ್, ಕೇಲ್ಕರ್ ಮತ್ತು ಡಾ. ಮೂಂಜೆಯವರು ಒಪ್ಪಲಿಲ್ಲ. ಶಾಸನ ಸಭೆಯ ಸದಸ್ಯತ್ವಕ್ಕೆ ಆ ಮೂವರು ಅಲ್ಲೇ ರಾಜೀನಾಮೆ ನೀಡಿದರು. ಅವರು ಶಾಸನ ಸಭೆಗೆ ಸ್ವರಾಜ್ಯಪಕ್ಷದ ಪರವಾಗಿ ನಿಂತು ಚುನಾಯಿತರಾಗಿದ್ದರು. ಸಹಾನುಭೂತಿಯ ಸಹಕಾರದ ವಿಷಯದಲ್ಲಿ ಜನರಿಗೆ ತಿಳುವಳಿಕೆ ನೀಡಲು ಅವರು ಬಯಸಿದ್ದರು.

ಕಾಂಗ್ರೆಸ್ಸಿನ ನಡವಳಿಕೆಗಳು ಸಾಮಾನ್ಯವಾಗಿ ಹಿಂದೂಸ್ತಾನಿ ಭಾಷೆಯ ಮೂಲಕ ನಡೆಯಬೇಕೆಂದು ಕಾನ್ಪುರದಲ್ಲಿ ನಿರ್ಧಾರವಾಯಿತು.

ಗಾಂಧಿಯವರ ರಚನಾತ್ಮಕ ಕಾರ್ಯಕ್ರಮ ಕಾಂಗ್ರೆಸ್ ನೀತಿಯ ಪ್ರಧಾನ ನೆಲೆಯಾಗಿತ್ತು.

# ವರ್ಷಪರ್ಯಂತ ಮೌನ

೧೯೨೬

ಕಾನ್‌ಪುರದ ಅಧಿವೇಶನದಲ್ಲಿ ರಾಜಕೀಯ ನಿರ್ಣಯದ ಮೇಲಿನ ಚರ್ಚೆಯಲ್ಲಿ ಗಾಂಧೀಜಿ ಭಾಗವಹಿಸಲಿಲ್ಲ. ರಾಜಕೀಯ ಚಟುವಟಿಕೆಗಳಿಂದ ತಾವು ಹಿಂದೆ ಸರಿಯು ವುದಾಗಿ ಈ ಮೂಲಕ ಸೂಚನೆ ಕೊಟ್ಟರು. ಒಂದು ವರ್ಷಕಾಲ ಪ್ರವಾಸದ ಕಾರ್ಯ ಕ್ರಮವನ್ನೆಲ್ಲ ನಿಲ್ಲಿಸುವುದಾಗಿ ೧೯೨೬ರ ಯಂಗ್ ಇಂಡಿಯಾದ ಪ್ರಥಮ ಸಂಚಿಕೆಯಲ್ಲಿ ಪ್ರಕಟಿಸಿದರು. "ಕನಿಷ್ಠಪಕ್ಷ ಮುಂದಿನ ಡಿಸೆಂಬರ್ ೨೦ರ ವರೆಗೆ ನಾನು ಆಶ್ರಮ ಬಿಟ್ಟು ಹೋಗುವುದಿಲ್ಲ. ಅಹಮದಾಬಾದಿನಿಂದಲಂತೂ ಹೊರಗೆ ಕಾಲಿಡುವುದಿಲ್ಲ. ಆರೋಗ್ಯದ ಕಾರಣಗಳಿಂದ ಅಥವಾ ಯಾವುದಾದರೂ ಅಗೋಚರ ಘಟನೆ ಒದಗಿದಾಗ ಮಾತ್ರ ಹೋಗಬೇಕಾಗಬಹುದು ಅಷ್ಟೆ". ಎಂದು ತಿಳಿಸಿದರು. ಈ ನಿರ್ಧಾರ ಕೈಗೊಳ್ಳುವುದಕ್ಕೆ ಮುಂಚೆ ಕಾನ್‌ಪುರದ ಕಾಂಗ್ರೆಸ್ಸಿನಲ್ಲಿ ಪ್ರಮುಖ ಸಹಪಾಠಿಗಳೊಂದಿಗೆ ಸಮಾಲೋಚನೆ ನಡೆಸಿದ್ದರು. ಈ ನಿರ್ಧಾರಕ್ಕೆಕಾರಣಗಳು ಇವು: ಮೊದಲನೆಯದಾಗಿ, ಬಳಲಿ ಕೃಷವಾಗಿದ್ದ ತಮ್ಮ ಕೈಕಾಲುಗಳಿಗೆ ಆದಷ್ಟು ವಿಶ್ರಾಂತಿ ಕೊಡಬೇಕಾಗಿತ್ತು. ಡಾ. ಅನ್ಸಾರಿಯವರು ವಿವರವಾಗಿ ಸೂಚನೆಗಳನ್ನು ಕಳುಹಿಸಿದ್ದರು. ಸಾಧ್ಯವಾದಷ್ಟು ಮಟ್ಟಿಗೆ ಮಾನಸಿಕ ಶ್ರಮವನ್ನು ವರ್ಜಿಸಬೇಕೆಂದು ಅವರು ತಿಳಿಸಿದ್ದರು. ಎರಡನೆಯದಾಗಿ, ಸಬರಮತಿ ಆಶ್ರಮಕ್ಕೆ ವೈಯಕ್ತಿಕವಾಗಿ ನಿಗಾ ಕೊಡಬೇಕಾಗಿತ್ತು, ೧೯೧೫ರಲ್ಲಿ ಅದನ್ನು ಸ್ಥಾಪಿಸಿದಾಗ ಅದಕ್ಕೆ ಸ್ವಲ್ಪ ಗಮನಕೊಟ್ಟಿದ್ದರು. ಅನಂತರ ಆಕಡೆ ಗಮನಕೊಡಲು ಆಗಿರಲಿಲ್ಲ. ಮೂರನೆಯದಾಗಿ, ಅಖಿಲ ಭಾರತ ನೂಲುವವರ ಸಂಘದ ವಿದ್ಯಮಾನಗಳನ್ನು ಸಂವ್ಯವಸ್ಥಿತಗೊಳಿಸಬೇಕಾಗಿತ್ತು.

ಈ ಕಾರ್ಯಕ್ರಮದಂತೆಯೇ ಅವರು ನಡೆದುಕೊಂಡರು. ತಮ್ಮ ಪತ್ರಿಕೆಯ ಮುಖಾಂತರವೇ ಇಡೀ ದೇಶದೊಡನೆ ಸಂಪರ್ಕ ಇಟ್ಟುಕೊಂಡಿದ್ದರು. 'ಯಂಗ್ ಇಂಡಿಯಾ'ದಲ್ಲಿ ಪ್ರತಿವಾರವೂ ಅವರ ಆತ್ಮಕಥೆಯು ಒಂದೊಂದು ಅಧ್ಯಾಯವಾಗಿ ಪ್ರಕಟವಾಗುತ್ತಾ ಬಂದಿತು. ಅದು ವಿಶ್ವದಾದ್ಯಂತ ಜನರ ಆಸಕ್ತಿಯನ್ನು ಕೆರಳಿಸಿತು. ಅವರ ಆತ್ಮಕಥೆಯನ್ನು ಸಾಮಾನ್ಯವಾಗಿ ಭಾರತದ ಎಲ್ಲ ವೃತ್ತಪತ್ರಿಕೆಗಳೂ ನಿರ್ಬಂಧ ವಿಲ್ಲದೆ ಪ್ರಕಟಿಸುತ್ತಿದ್ದುವು. "ನನ್ನ ಪತ್ರಿಕೆಗಳಲ್ಲಿ ಪ್ರಕಟವಾಗುವ ಲೇಖನಗಳೆಲ್ಲ ಸರ್ವರಿಗೂ ಸೇರಿದ ಆಸ್ತಿ. ಕಾಪಿರೈಟ್ ಎಂಬುದು ಸ್ವಾಭಾವಿಕವಾದುದಲ್ಲ. ಅದು ಆಧುನಿಕ ವ್ಯವಸ್ಥೆ. ಸ್ವಲ್ಪಮಟ್ಟಿಗೆ ಅಪೇಕ್ಷಣೀಯ ಎನ್ನಬಹುದು. ಆತ್ಮಕಥೆಯ ಅಧ್ಯಾಯಗಳನ್ನು ವೃತ್ತಪತ್ರಿಕೆಗಳು ಪ್ರಕಟಿಸಬಾರದೆಂದು ಹೇಳಿ 'ಯಂಗ್ ಇಂಡಿಯಾ' ಮತ್ತು 'ನವಜೀವನ'ದ ಪ್ರಸಾರವನ್ನು ಅಧಿಕಗೊಳಿಸುವ ಆಸೆ ನನಗಿಲ್ಲ."ಎಂದು ಗೆಳೆಯರೊಬ್ಬರಿಗೆ ಉತ್ತರನೀಡಿದರು. ಆದರೆ ಆತ್ಮಕಥೆಯನ್ನು ಪುಸ್ತಕ ರೂಪದಲ್ಲಿ

ಪ್ರಕಟಿಸಲು ಇಚ್ಛಿಸಿದ ಆಸೆಬುರುಕ ಪ್ರಕಾಶಕರಿಗೆ ಅನುಮತಿ ಕೊಡಲಿಲ್ಲ. "ಈ ಕಥೆ ಯಾವಾಗ ಮುಗಿಯುತ್ತದೆ ಎಂಬ ಕಲ್ಪನೆ ನನಗೇ ಇಲ್ಲ. ಈ ಅಧ್ಯಾಯುಗಳನ್ನು ನಾನು ಪುನರ್ ವಿಮರ್ಶಿಸಬೇಕು. ಅಥವಾ ನನ್ನ ನಿರ್ದೇಶನದಲ್ಲಿ ಅದರ ಪುನರ್ವಿಮರ್ಶೆ ಆಗಬೇಕು. ಅಲ್ಲಿಯು ವರೆಗೆ ಬಿಡಿಬಿಡಿ ಭಾಗಗಳಾಗಿ ಪ್ರಕಟಿಸಲು ಇಚ್ಛಿಸುವುದಿಲ್ಲ" ಎಂದು ತಿಳಿಸಿದರು. ಸತ್ಯ ಶೋಧನೆಯ ಕಥೆ ಮೂರು ವರ್ಷಗಳ ಕಾಲ ಧಾರಾವಾಹಿ ಯಾಗಿ ಪ್ರಕಟವಾಯಿತು. ಅದು ಪುಸ್ತಕ ರೂಪದಲ್ಲಿ ಎರಡು ಸಂಪುಟಗಳಲ್ಲಿ ಹೊರ ಬಂದಿತು. ಮೊದಲನೆಯದು ೧೯೨೭ರಲ್ಲೂ ಎರಡನೆಯದು ೧೯೨೯ರಲ್ಲೂ ಪ್ರಕಟ ವಾಯಿತು. ಗುಜರಾತಿ ಮೂಲದಿಂದ ಇಂಗ್ಲೀಷಿಗೆ ಭಾಷಾಂತರ ಮಾಡಿದವರು ಮುಖ್ಯವಾಗಿ ಮಹದೇವ ದೇಸಾಯಿ. ಪ್ಯಾರೆಲಾಲರೂ ಸ್ವಲ್ಪಭಾಗ ಮಾಡಿದರು. ಭಾಷಾಂತರವು ಗಾಂಧಿಯವರ ಮಾರ್ಗದರ್ಶನದಲ್ಲಿ ನಡೆಯಿತು. ಆಗಾಗ್ಗೆ ಶ್ರೀನಿವಾಸ ಶಾಸ್ತ್ರಿ ಮತ್ತು ಮಿಸ್ ಸ್ಲೇಡ್—ಈಗ ಮೀರಾ ಬಹೆನ್— ಮಾರ್ಗದರ್ಶನ ನೀಡುತ್ತಿದ್ದರು. ಗಾಂಧೀಆತ್ಮಕಥೆ ನಾಗಪುರ ಕಾಂಗ್ರೆಸ್ಸಿನ ಅಧ್ಯಾಯದೊಂದಿಗೆ ಮುಕ್ತಾಯವಾಯಿತು. ಭಾರತದ ರಾಜಕೀಯದಲ್ಲಿ ಅವರು ಸ್ಪಷ್ಟವಾಗಿ ಕೆಲಸ ಆರಂಭಿಸಿದ್ದು ನಾಗಪುರ ಕಾಂಗ್ರೆಸ್ಸಿನಲ್ಲೇ. "ಅಂದಿನಿಂದ ಮುಂದಕ್ಕೆ ನನ್ನ ಜೀವನ ಎಲ್ಲರಿಗೂ ಗೊತ್ತಿರತಕ್ಕದ್ದೆ. ಜನಕ್ಕೆ ತಿಳಿಯದೇ ಇರುವ ಸಂಗತಿ ಯಾವುದೂ ಇಲ್ಲ." ಎಂದು ಹೇಳಿ ಮುಗಿಸಿದರು. ಆತ್ಮಕಥೆಯ ಜೊತೆಯಲ್ಲಿ 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ' ಎಂಬ ಗ್ರಂಥ ೧೯೨೮ರಲ್ಲಿ ಪ್ರಕಟವಾಯಿತು. ಅದನ್ನು ನೆನಪಿನಿಂದಲೇ ಬರೆದದ್ದು. ಸ್ವಲ್ಪ ಭಾಗ ಯರವಾಡ ಜೈಲಿನಲ್ಲಿ ಬರೆದಿದ್ದರು. ಉಳಿದ ಭಾಗವನ್ನು ಬಿಡುಗಡೆ ಆದನಂತರ ಬರೆದರು.

ಆತ್ಮಕಥೆಯು ಮುಚ್ಚುಮರೆಯಿಲ್ಲದ ಚರ್ಚೆಗೆ ಎಡೆಮಾಡಿತು. ಅನೇಕ ವಿಷಯ ಗಳ ಮೇಲೆ ಓದುಗರಿಂದ ಪ್ರಶ್ನೆಗಳ ಸುರಿಮಳೆ ಆಯಿತು. "ಬ್ರಹ್ಮಚರ್ಯೆ ಮತ್ತು ಅದರ ಸಾಧನೆಯುಮೇಲೆ ಪತ್ರಗಳ ಮಹಾಪೂರ ಬಂದಿದೆ. ಈ ವಿಷಯದಲ್ಲಿ ಹಿಂದೆ ಬರೆ ದದ್ದನ್ನೇ ಬೇರೆ ಮಾತುಗಳಲ್ಲಿ ಹೇಳುತ್ತೇನೆ" ಎಂದು ಬರೆದರು ಗಾಂಧಿ. ಅವರು ೧೯೦೬ರಿಂದಲೇ ಬ್ರಹ್ಮಚರ್ಯವನ್ನು ಆಚರಣೆಗೆ ತಂದಿದ್ದರು. ಇತರರಿಗೂ ಅದನ್ನೇ ಶಿಫಾರಸು ಮಾಡಿದರು. ಆಧ್ಯಾತ್ಮಿಕ ಕಾರಣಗಳಿಗಷ್ಟೇ ಅಲ್ಲದೆ ಸ್ವಾರ್ಥ ರಹಿತ ಸಾರ್ವ ಜನಿಕ ಕೆಲಸಕ್ಕಾಗಿಯೂ ಅದನ್ನು ಅನುಸರಿಸಬೇಕೆಂದು ಹೇಳಿದರು. ಭಾರತದ ಮೂಲ ಆವಶ್ಯಕತೆ ಸಂತಾನ ನಿಯಂತ್ರಣ ಎಂದು ಅವರಿಗೆ ತಿಳಿಯಿತು. ಅದಕ್ಕೆ ಪಾಶ್ಚಾತ್ಯ ಪದ್ಧತಿಗಳನ್ನು ಅವರು ಅನುಸರಿಸಲಿಲ್ಲ. ಭಾರತದ ಸಾಂಪ್ರದಾಯಕ ಪದ್ಧತಿಯಂತೆ ಬ್ರಹ್ಮಚರ್ಯವನ್ನು ಅವಲಂಬಿಸಿದರು. ೧೯೨೦ರಲ್ಲಿ ಜನತಾ ಹೋರಾಟ ಆರಂಭ ವಾದಾಗ ಅವರು ಹೀಗೆ ಬರೆದರು. "ನಮ್ಮಲ್ಲಿರುವ ರೋಗರುಜಿನಗಳು, ಕ್ಷಾಮ ಡಾಮರಗಳು, ದಾರಿದ್ರ್ಯ, ಕೋಟ್ಯಂತರ ಜನರ ಹಸಿವು—ಇವೆಲ್ಲ ಸಾಮಾನ್ಯ ಸ್ವರೂಪದ್ದಲ್ಲ. ನಾವು ಅಸಹಾಯಕರು, ರೋಗಗ್ರಸ್ತರು, ಕ್ಷಾಮಪೀಡಿತರು. ಹೀಗಿರುವ ನಾವು ಸಂತಾನೋತ್ಪತ್ತಿಯನ್ನು ಮುಂದುವರಿಸಿದರೆ ಗುಲಾಮರನ್ನೂ ದುರ್ಬಲರನ್ನೂ ಅಧಿಕ

ಸಂಖ್ಯೆಯಲ್ಲಿ ಹೆಚ್ಚಿಸುತ್ತೇವೆ. ಭಾರತಕ್ಕೆ ಸ್ವಾತಂತ್ರ್ಯ ಬಂದು ಹಸಿವನ್ನು ನಿರ್ಮೂಲ ಮಾಡಬೇಕು. ಕ್ಷಾಮಕಾಲದಲ್ಲೂ ಜನರಿಗೆ ಅನ್ನ ಒದಗಿಸುವ ಸಾಮರ್ಥ್ಯ ಪಡೆದು ಕೊಳ್ಳಬೇಕು. ಮಲೇರಿಯಾ, ಕಾಲರಾ, ಇನ್‌ಫ್ಲುಯೆಂಜ ಇತ್ಯಾದಿ ಸಾಂಕ್ರಾಮಿಕ ರೋಗಗಳನ್ನು ತಡೆಯುವ ಜ್ಞಾನ ಪಡೆದುಕೊಳ್ಳಬೇಕು. ಆಗ ಮಾತ್ರ ಸಂತತಿಯನ್ನು ಬೆಳೆಸುವ ಹಕ್ಕು ನಮಗೆ ಬರುತ್ತದೆ. ಆದಕ್ಕೆ ಮುಂಚೆ ಆ ಹಕ್ಕು ನಮಗಿಲ್ಲ. ಭಾರತದಲ್ಲಿ ಜನನಗಳ ವಾರ್ತೆ ಕೇಳಿದಾಗ ನನಗೆಷ್ಟು ದುಃಖವಾಗುತ್ತದೆಂಬುದನ್ನು ಓದುಗರಿಂದ ಮುಚ್ಚಿಡಲಾರೆ. ಸ್ವಯಂ ನಿಗ್ರಹದಿಂದ ಸಂತತಿ ಬೆಳವಣಿಗೆಯನ್ನು ಸ್ಥಗಿತಗೊಳಿಸ ಬಹುದೆಂಬುದನ್ನು ನಾನು ಪರ್ಯಾಲೋಚಿಸಿ ತಿಳಿದಿದ್ದೇನೆ. ಇದು ಸಮಾಧಾನಕರವಾದ ಸಂಗತಿ. ತನ್ನ ಜನಸಂಖ್ಯೆಯನ್ನು ಪೋಷಿಸಲು ಇಂದು ಭಾರತಕ್ಕೆ ಸಾಮರ್ಥ್ಯವಿಲ್ಲ, ಇದಕ್ಕೆ ಕಾರಣ ಮಿತಿ ಮೀರಿದ ಜನಸಂಖ್ಯೆಯಲ್ಲ. ಬಲವಂತದ ಪರಕೀಯ ಆಧಿಪತ್ಯ. ಭಾರತದ ಸಾಧನ ಸಂಪತ್ತನ್ನು ಹೆಚ್ಚುಹೆಚ್ಚು ಪ್ರಮಾಣದಲ್ಲಿ ಶೋಷಿಸುವುದೇ ಆ ಪ್ರಭುತ್ವದ ಉದ್ದೇಶ".

ಗಾಂಧಿಯವರ ಪ್ರಕಾರ, ಈ ಸಮಸ್ಯೆಗೆ ಪರಿಹಾರ ಸಂತಾನ ನಿಯಂತ್ರಣವಲ್ಲ, ಸ್ವಯಂ ಸಂಯಮ. "ಸಂತಾನೋತ್ಪತ್ತಿಯನ್ನು ಸದ್ಯಕ್ಕೆ ತಡೆಯುವುದು ಹೇಗೆ? ಯೂರೋಪಿನಲ್ಲಿ ಪ್ರಚಲಿತವಾಗಿರುವ ಅನೈತಿಕ ಹಾಗೂ ಕೃತಕಮಾರ್ಗಗಳಿಂದ ಅಲ್ಲ. ಆತ್ಮಸಂಯಮದ ಶಿಸ್ತಿನ ಜೀವನದ ಮೂಲಕವೇ ತಡೆಯಬೇಕು. ತಂದೆತಾಯಿಗಳು ಮಕ್ಕಳಿಗೆ ಬ್ರಹ್ಮಚರ್ಯದ ಪಾಲನೆಯನ್ನು ಕಲಿಸಬೇಕು. ಹಿಂದೂಶಾಸ್ತ್ರಗಳ ಪ್ರಕಾರ ಗಂಡು ಮಕ್ಕಳ ಮದುವೆಯ ಕನಿಷ್ಠ ವಯಸ್ಸು ಇಪ್ಪತ್ತೈದು ವರ್ಷ. ವಿವಾಹ ಜೀವನಕ್ಕೆ ಬಾಲಕ ಬಾಲಕಿಯರನ್ನು ಸಜ್ಜುಮಾಡುವುದು ಪಾಪಕರವೆಂದು ಭಾರತದ ತಾಯಂದಿರಿಗೆ ಮನವರಿಕೆ ಮಾಡಿಕೊಟ್ಟರೆ ಅರ್ಧಕ್ಕರ್ಧ ಮದುವೆಗಳು ತಾನೇ ತಾನಾಗಿ ನಿಂತು ಹೋಗುತ್ತವೆ. ಉಷ್ಣ ವಾಯುಗುಣದ ನಿಮಿತ್ತ ನಮ್ಮ ದೇಶದಲ್ಲಿ ಬಾಲಕಿಯರು ಬೇಗ ಮೈನೆರೆಯುತ್ತಾರೆ, ಎಂದು ನಾವು ಮೂಢಭಾವನೆ ಇಟ್ಟುಕೊಳ್ಳಬೇಕಾಗಿಲ್ಲ. ಅಕಾಲಿಕವಾಗಿ ಮೈನೆರೆಯುವುದಕ್ಕೆ ಕಾರಣ ನಮ್ಮ ಕೌಟುಂಬಿಕ ಜೀವನವನ್ನು ಆವರಿ ಸಿರುವ ಮಾನಸಿಕ ಹಾಗೂ ನೈತಿಕ ವಾತಾವರಣ. ಒಂದು ಯುಕ್ತ ವಯಸ್ಸಿಗೆ ಬಂದಾಗ ಮದುವೆ ಮಾಡಿಕೊಳ್ಳಬೇಕೆಂದು ಮುಗ್ಧ ಮಕ್ಕಳಿಗೆ ತಾಯಂದಿರೂ ಬಂಧುಗಳೂ ಹೇಳಿಕೊಡುತ್ತಾರೆ. ಹೀಗೆ ಹೇಳಿಕೊಡುವುದು ಒಂದು ಧಾರ್ಮಿಕ ಕರ್ತವ್ಯವೆಂದೇ ಅವರು ಭಾವಿಸುತ್ತಾರೆ. ಹಸುಳೆಗಳಾಗಿರುವಾಗ ಅಷ್ಟೇ ಅಲ್ಲ, ಕೈಗೂಸಾಗಿರುವಾಗಲೇ ಲಗ್ನದ ನಿಶ್ಚಿತಾರ್ಥ ಮಾಡುತ್ತಾರೆ. ಮಕ್ಕಳ ಆಹಾರ ಮತ್ತು ಉಡಿಗೆ ತೊಡಿಗೆಗಳೂ ಕಾಮೋದ್ರೇಕವನ್ನು ಉತ್ತೇಜಿಸುತ್ತವೆ. ಬೊಂಬೆಗಳಿಗೆ ತೊಡಿಸುವಂತೆ ನಾವು ಮಕ್ಕಳಿಗೆ ಬಟ್ಟೆಯನ್ನು ತೊಡಿಸುತ್ತೇವೆ. ಇದು ಅವರ ಸಂತೋಷಕ್ಕಲ್ಲ; ನಮ್ಮ ಬಡಾಯಿಗಾಗಿ ಮಾಡುವ ಕೆಲಸ. ಉಷ್ಣಕಾರಿಯೂ ಉತ್ತೇಜಕವೂ ಆದ ಎಲ್ಲ ಬಗೆಯ ತಿಂಡಿ ತಿನಸುಗಳನ್ನು ಅವರಿಗೆ ಕೊಡುತ್ತೇವೆ. ಇದರಿಂದ ನಿಸ್ಸಂದೇಹವಾಗಿ ಅವರು ಬೇಗ

ತರುಣಾವಸ್ಥೆಗೆ ಬರುತ್ತಾರೆ. ಪ್ರಾಪ್ತಕಾಲಕ್ಕೆ ಮುಂಚೆಯೇ ಮಕ್ಕಳನ್ನು ಪಡೆಯುತ್ತಾರೆ. ಬಹುಬೇಗ ಸಾಯುತ್ತಾರೆ. ತಂದೆತಾಯಿಗಳ ಉದಾಹರಣೆಯನ್ನು ಮಕ್ಕಳು ಬೇಗ ಗ್ರಹಿಸಿಕೊಳ್ಳುತ್ತಾರೆ. ತಂದೆತಾಯಿಗಳ ಮಿತಿಮೀರಿದ ಕಾಮೋಲ್ಲಾಸಗಳು ಮಕ್ಕಳಿಗೆ ಅನುಕರಣೀಯ ಆದರ್ಶಗಳಾಗಿ ಬಿಡುತ್ತವೆ. ಅವು ಸಂಯಮ ರಹಿತ ಪರವಾನೆಯ ಮಾದರಿಗಳಾಗುತ್ತವೆ. ಸಮಯ ಸಂದರ್ಭವಿಲ್ಲದೆ ಕುಟುಂಬದಲ್ಲಿ ಒಂದೊಂದು ಮಗು ಹುಟ್ಟಿದಾಗಲೂ ಬಾಜಾ ಭಜಂತ್ರಿಯಿಂದ ಅದನ್ನು ಸ್ವಾಗತಿಸಲಾಗುತ್ತದೆ. ಹಬ್ಬದ ಔತಣಮಾಡಿ ಆನಂದ ಪಡಲಾಗುತ್ತದೆ. ಸೋಜಿಗದ ಸಂಗತಿಯೆಂದರೆ, ನಮಗೆ ಪರಿಸ್ಥಿತಿಯ ಪರಿವೆಯೇ ಇಲ್ಲದೆ ಸಂಯಮಹೀನರಾಗಿದ್ದೇವೆ. ವಿವಾಹಿತ ಜನರು ದೇಶದ ಹಿತವನ್ನು ಬಯಸುವುದಾದರೆ, ನಮ್ಮ ರಾಷ್ಟ್ರವು ಸಶಕ್ತಿ ಹಾಗೂ ಪೂರ್ಣ ಸ್ವರೂಪದ ಸ್ತ್ರೀಪುರುಷರ ರಾಷ್ಟ್ರವಾಗಬೇಕೆಂದು ಅಪೇಕ್ಷಿಸುವುದಾದರೆ, ಅವರುಗಳು ಸದ್ಯಕ್ಕೆ ಪೂರ್ಣವಾಗಿ ಆತ್ಮ ಸಂಯಮವನ್ನು ಪಾಲಿಸುತ್ತಾರೆ. ಸದ್ಯಕ್ಕೆ ಸಂತಾನೋತ್ಪತ್ತಿ ಕಾರ್ಯವನ್ನು ನಿಲ್ಲಿಸುತ್ತಾರೆ. ಇದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ."

ಪೂರ್ಣ ಬ್ರಹ್ಮಚರ್ಯೆಯನ್ನು ಸಾಧಿಸುವುದು ತಮಗೂ ಕಷ್ಟಸಾಧ್ಯವಾದುದೆಂದು ಗಾಂಧೀಜಿ ಒಪ್ಪಿಕೊಂಡರು. "ಅದು ಆದರ್ಶಸ್ಥಿತಿ. ಅದನ್ನು ಸಾಧಿಸುವುದು ಅಪರೂಪ. ಯೂಕ್ಲಿಡ್‌ನ ಗೆರೆ ಇದ್ದಂತೆ–ಆ ಗೆರೆಯನ್ನು ಮನಸ್ಸಿನಲ್ಲಿ ಊಹಿಸಬಹುದೇ ಹೊರತು ಎಳೆಯುವುದಕ್ಕೆ ಆಗುವುದಿಲ್ಲ. ಆದರೂ ಜ್ಯಾಮಿತಿ ಶಾಸ್ತ್ರದಲ್ಲಿ ಅದಕ್ಕೆ ತುಂಬಾ ಪ್ರಾಮುಖ್ಯತೆ ಇದ್ದು ಬಹಳ ಪ್ರಯೋಜನಕಾರಿಯಾಗಿದೆ. ಅದೇ ರೀತಿಯಲ್ಲಿ ಪರಿಪೂರ್ಣ ಬ್ರಹ್ಮಚಾರಿಯು ಕಲ್ಪನೆಯಲ್ಲಿ ಮಾತ್ರ ಸಾಧ್ಯ. ಆದರೆ ಸತತವಾಗಿ ಅವನು ನಮ್ಮ ಮನಸ್ಸಿನಲ್ಲಿಲ್ಲದಿದ್ದರೆ ನಮ್ಮ ಸ್ಥಿತಿ ಚುಕ್ಕಾಣಿ ಇಲ್ಲದ ನೌಕೆಯಂತಾಗುತ್ತದೆ. ಕಲ್ಪನೆಯ ಅವಸ್ಥೆಗೆ ಸಮೀಪಿಸಿದಂತೆಲ್ಲ ಹೆಚ್ಚು ಹೆಚ್ಚು ಪರಿಪೂರ್ಣತೆ ಸಾಧ್ಯ".

ಬ್ರಹ್ಮಚರ್ಯೆಯಲ್ಲಿ ತಮ್ಮ ಅನುಭವ ವ್ಯಾಪಕವಾದುದರಿಂದ ಅದರ ಪ್ರಯೋಜನಗಳಲ್ಲಿ ಕೆಲವನ್ನು ಓದುಗರ ಮುಂದಿಡಲು ಇಚ್ಛಿಸಿದರು.

"ಮನಸ್ಸು ಹಗ್ಗವನ್ನು ಹಾವೆಂದು ಭ್ರಮಿಸುತ್ತದೆ. ಆ ಭ್ರಮೆಗೆ ತುತ್ತಾದ ಮನುಷ್ಯ ಹೆದರಿ ಪಲಾಯನ ಮಾಡುತ್ತಾನೆ ಅಥವಾ ಹಾವೆಂದು ಭ್ರಮಿಸಿದುದನ್ನು ಹೊಡೆದು ಹಾಕಲು ಕೋಲನ್ನು ಕೈಗೆತ್ತಿಕೊಳ್ಳುತ್ತಾನೆ. ಮತ್ತೊಬ್ಬನು ಸಹೋದರಿಯನ್ನು ಹೆಂಡತಿಯಿರಬಹುದೆಂದು ತಪ್ಪುತಿಳಿಯುತ್ತಾನೆ. ಆಗ ಅವನ ಮೃಗ ಸ್ವಭಾವದ ಕಾಮೋದ್ರೇಕ ಉಕ್ಕಿ ಬರುತ್ತದೆ. ತಪ್ಪನ್ನು ಕಂಡುಕೊಂಡ ತಕ್ಷಣ ಅವನ ಉದ್ರೇಕ ಇಳಿಯುತ್ತದೆ.

"ಇದು ಕೀಳುದರ್ಜೆಯ ಸುಖಾನುಭವ ಎಂಬ ಕಾರಣದ ಮೇಲೆ ಅದನ್ನು ತಡೆದುಕೊಂಡರೆ ಆಗ ಅವನ ಕೋಪತಾಪಗಳು ಕಾಣಿಸಿಕೊಂಡು ಪ್ರೇಮ ದುರ್ಬಲವಾಗಬಹುದು. ಇದರಲ್ಲಿ ಸಂದೇಹವಿಲ್ಲ. ಆದರೆ ಪ್ರೇಮದ ಬಾಂಧವ್ಯವನ್ನು ಬಲಪಡಿಸಬೇಕು; ಅದನ್ನು ಪವಿತ್ರಗೊಳಿಸಬೇಕು. ಜೀವ ಚೈತನ್ಯವನ್ನು ಇನ್ನೂ ಒಳ್ಳೆಯ ಉದ್ದೇಶಕ್ಕೆ

ವಿನಿಯೋಗಿಸಬೇಕೇ ಹೊರತು ಕೋಪತಾಪಗಳ ವರ್ಧನೆಗಲ್ಲ–ಈ ಭಾವನೆಗಳಿಂದ ಸಂಯಮವನ್ನು ಪಾಲಿಸಿದರೆ ಅದರಿಂದ ಸ್ಥಿತಪ್ರಜ್ಞತೆ ಉಂಟಾಗುತ್ತದೆ; ಪ್ರೇಮ ಬಂಧವನ್ನು ಸಡಿಲಗೊಳಿಸುವುದಕ್ಕೆ ಬದಲಾಗಿ ಅದನ್ನು ಬಲಪಡಿಸುತ್ತದೆ. ಮೃಗ ಸ್ವಭಾವದ ಕಾಮ ಪಿಪಾಸೆಯ ಮೇಲೆ ಪ್ರೇಮ ಆಧಾರಿತವಾಗಿದ್ದರೆ ಅದು ಸ್ವಾರ್ಥ ಮಯವಾಗಿರುತ್ತದೆ. ಸ್ವಲ್ಪ ಬಿಕ್ಕಟ್ಟು ಬಂದರೂ ಅದು ಭಗ್ನವಾಗುವ ಸಂಭವ ಉಂಟು. ಕೆಳಮಟ್ಟದ ಪ್ರಾಣಿಗಳಲ್ಲಿ ಲೈಂಗಿಕ ಕರ್ಮವು ಪವಿತ್ರಕರ್ಮವೆಂದೆನಿಸಿಲ್ಲ; ಮಾನವರಲ್ಲಿ ಏಕೆ ಹಾಗೆನಿಸಬೇಕು? ವಾಸ್ತವವಾಗಿ ಜನಾಂಗವನ್ನು ಬೆಳೆಸಲು ಸಂತಾನೋತ್ಪತ್ತಿ ಮಾಡಲೋಸುಗ ನಾವು ಅಸಹಾಯಕರಾಗಿ ಈ ಸರಳಕರ್ಮಕ್ಕೆ ಎಳೆಯಲ್ಪಡುತ್ತೇವೆ. ಈ ನೈಜ ಸಂಗತಿಯನ್ನು ನಾವೇಕೆ ಗಮನಿಸಬಾರದು? ಸ್ವಲ್ಪ ಮಟ್ಟಿಗೆ ಸ್ವತಂತ್ರ ಇಚ್ಛಾ ಶಕ್ತಿ ಇರುವ ಮನುಷ್ಯನು ಮಾತ್ರ ಇತರ ಪ್ರಾಣಿಗಳಿಗಿಂತ ಮೇಲಾಗಿ ತನ್ನ ಜೀವನದ ಉನ್ನತ ಉದ್ದೇಶಕ್ಕಾಗಿ ಸ್ವಯಂನಿಗ್ರಹದ ಮಾನವೀಯ ಹಕ್ಕನ್ನು ಚಲಾಯಿಸುತ್ತಾನೆ. ಸಂತಾನೋತ್ಪತ್ತಿಗೇ ಅಲ್ಲದೆ ಪ್ರೇಮದ ವರ್ಧನೆಗೂ ಲೈಂಗಿಕ ಕ್ರಿಯೆ ಅಗತ್ಯವೆಂಬ ಭಾವನೆ ಬಂದಿರುವುದು ಕೇವಲ ಅಭ್ಯಾಸದ ಬಲ ಅಷ್ಟೆ. ಇದರಿಂದ ಪ್ರೇಮ ಗಾಢ ವಾಗುವುದಿಲ್ಲ. ಪ್ರೇಮವನ್ನು ಕಾಪಾಡಿಕೊಳ್ಳುವುದಕ್ಕಾಗಲೀ ಅಥವಾ ಶ್ರೀಮಂತ ಗೊಳಿಸುವುದಕ್ಕಾಗಲೀ ಲೈಂಗಿಕ ಕ್ರಿಯೆ ಅಗತ್ಯವಿಲ್ಲ, ಎನ್ನುವುದಕ್ಕೆ ಅನೇಕ ನಿದರ್ಶನ ಗಳಿವೆ. ಭೋಗದ ವರ್ಜನೆಯಿಂದ ಬಾಂಧವ್ಯವು ಬಲಗೊಂಡಿರುವ ನಿದರ್ಶನಗಳು ಬೇಕಾದಷ್ಟಿವೆ. ಭೋಗವರ್ಜನೆಯು ಸ್ವಯಂಪ್ರೇರಿತವಾಗಿರಬೇಕು; ಪರಸ್ಪರ ನೈತಿಕ ಅಭ್ಯುದಯ ಅದರ ಉದ್ದೇಶವಾಗಿರಬೇಕು.

"ಮಾನವ ಸಮಾಜ ನಿರಂತರವಾಗಿ ಬೆಳೆಯುತಕ್ಕದ್ದು. ಆಧ್ಯಾತ್ಮಿಕವಾಗಿ ವಿಕಾಸ ವಾಗತಕ್ಕದ್ದು. ಹಾಗಿದ್ದ ಪಕ್ಷದಲ್ಲಿ, ದೈಹಿಕ ಲಾಲಸೆಗಳ ಮೇಲೆ ಹೆಚ್ಚುಹೆಚ್ಚು ಸಂಯಮ ಇರಬೇಕಾಗುತ್ತದೆ. ಮದುವೆಯೆಂದರೆ ದಂಪತಿಗಳ ಮೇಲೆ ಶಿಸ್ತನ್ನು ವಿಧಿಸುವ ಒಂದು ಧಾರ್ಮಿಕ ಸಂಸ್ಕಾರ ಎಂದು ಭಾವಿಸಬೇಕು. ಸಂತಾನವಾಗಬೇಕೆಂದು ಇಬ್ಬರೂ ಇಚ್ಛಿಸಿದಾಗ ಮತ್ತು ಅದಕ್ಕೆ ತಯಾರಾಗಿರುವಾಗ ಮಾತ್ರ ಅವರಿಬ್ಬರೂ ದೈಹಿಕ ಭೋಗ ಮಾಡಬೇಕೆಂಬ ನಿಬಂಧನೆ ಇಟ್ಟುಕೊಳ್ಳಬೇಕು.

"ಸಂತಾನೋತ್ಪತ್ತಿಗೇ ಅಲ್ಲದೆ ಲೈಂಗಿಕ ಕ್ರಿಯೆ ಸ್ವಾಭಾವಿಕವಾಗಿ ಆವಶ್ಯಕ ಎಂದು ಪತ್ರಕರ್ತನು ಹೇಳಿದ್ದಾನೆ. ಆತನ ವಾದವನ್ನು ಆಧಾರವಾಗಿಟ್ಟುಕೊಂಡರೆ ಚರ್ಚೆಯು ಮುಗಿದಂತೆಯೇ. ಎಲ್ಲ ದೇಶಗಳಲ್ಲೂ ಮಾನವ ಜನಾಂಗದ ಹಲವು ಶ್ರೇಷ್ಠ ಜನರು ಪೂರ್ಣವಾಗಿ ಭೋಗದ ವರ್ಜನೆ ಮಾಡಿರುವುದನ್ನು ಉದಹರಿಸಿದರೆ ಆತನ ವಾದಕ್ಕೆ ಬುಡವಿರುವುದಿಲ್ಲ. ಭೋಗವನ್ನು ತ್ಯಜಿಸುವುದು ಮಾನವ ಕೋಟಿಯ ಬಹು ಸಂಖ್ಯಾತ ಜನರಿಗೆ ಸಾಧ್ಯವಿಲ್ಲ; ಅದು ಸಾಧುವೂ ಅಲ್ಲ ಎಂದು ಹೇಳುವುದು ತರ್ಕವಾಗುವುದಿಲ್ಲ. ನೂರು ವರ್ಷಗಳ ಹಿಂದೆ ಬಹುಸಂಖ್ಯಾತ ಜನರಿಗೆ ಯಾವುದು ಅಸಾಧ್ಯವೆನಿಸಿತ್ತೋ ಅದು ಈಗ ಸಾಧ್ಯವಾಗಿದೆ. ಅಖಂಡವಾದ ಪ್ರಗತಿಗೆ ಅನುವಾಗುವ ಕಾಲಚಕ್ರದಲ್ಲಿ

ನೂರು ವರ್ಷ ಎಂಬುದು ಏನು ಮಹಾ? ವಿಜ್ಞಾನಿಗಳು ಹೇಳುವುದು ನಿಜವಾದರೆ, ನಮಗೆ ಮಾನವ ಶರೀರ ಇದೆ ಎಂದು ಗೊತ್ತಾದದ್ದು ಇನ್ನೂ ನಿನ್ನೆ ಮೊನ್ನೆ. ಅದರ ಇತಿಮಿತಿಗಳು ಇಷ್ಟೇ ಎಂದು ತಿಳಿದವರು ಯಾರು? ಅದನ್ನು ಗೊತ್ತು ಮಾಡುವ ಧೈರ್ಯ ಯಾರಿಗೆ ಬಂದೀತು? ಒಳ್ಳೆಯದನ್ನಾಗಲೀ ಕೆಟ್ಟದ್ದನ್ನಾಗಲೀ ಮಾಡಲು ಅದಕ್ಕಿರುವ ಅಪಾರ ಸಾಮರ್ಥ್ಯದ ಬಗ್ಗೆ ದಿನನಿತ್ಯವೂ ನಾವು ಹೊಸಹೊಸ ವಿಷಯ ಗಳನ್ನು ಕಂಡುಕೊಳ್ಳುತ್ತಿದ್ದೇವೆ.

"ಭೋಗದ ವರ್ಜನೆ ಸಾಧ್ಯ ಹಾಗೂ ಅಪೇಕ್ಷಣೀಯ ಎಂದು ಒಪ್ಪಿಕೊಂಡ ಮೇಲೆ ನಾವು ಅದನ್ನು ಸಾಧಿಸುವ ವಿಧಾನವನ್ನು ಕಂಡು ಹಿಡಿಯಬೇಕು. ಜೀವನವನ್ನು ಪುನರ್ ವ್ಯವಸ್ಥಿತಗೊಳಿಸಬೇಕು. ಜನನೇಂದ್ರಿಯಗಳ ಮೇಲೆ ಸಂಯಮ ಇಟ್ಟುಕೊಂಡು ನಾವು ಬಾಳಬೇಕಾದರೆ ಇತರ ವಿಷಯಗಳ ಬಗ್ಗೆಯೂ ಸಂಯಮ ಇಟ್ಟುಕೊಳ್ಳಬೇಕು. ಪಂಚೇಂದ್ರಿಯಗಳನ್ನು ಹೋದ ಹಾಗೆಯೇ ಬಿಟ್ಟರೆ ಲೈಂಗಿಕ ಅಂಗವನ್ನು ತಡೆಯಲು ಆಗುವುದೇ ಇಲ್ಲ. ಶೀಘ್ರಕೋಪ, ಉನ್ಮಾದ, ಹುಚ್ಚುತನ–ಇವೆಲ್ಲಕ್ಕೂ ಕಾರಣ ನಿಜವಾದ ಇತರ ಇಂದ್ರಿಯಗಳ ಮೇಲೆ ಸಂಯಮ ಇಡದೆ ಇರುವುದು. ಯಾವುದೇ ಪಾಪ ವನ್ನಾಗಲೀ ನಿಸರ್ಗ ನಿಯಮಗಳ ಉಲ್ಲಂಘನೆಯನ್ನಾಗಲೀ ಮಾಡಿದರೆ ಶಿಕ್ಷೆ ಶತಸ್ಸಿದ್ಧ. ಅದನ್ನು ಅನುಭವಿಸಿಯೇ ತೀರಬೇಕು.

"ಪದಗಳ ವಿಷಯದಲ್ಲಿ ನಾನು ಕಲಹ ಮಾಡಬೇಕಾಗಿಲ್ಲ. ಸಂತಾನ ನಿರೋಧಕ್ಕೆ ಕೃತಕ ಸಾಧನಗಳನ್ನು ಉಪಯೋಗಿಸಿದರೆ ನಿಸರ್ಗದ ನಿಯಮಕ್ಕೆ ಹೇಗೆ ಅಡ್ಡಿಯಾದೀತೋ ಆತ್ಮಸಂಯಮದಿಂದಲೂ ಅಡ್ಡಿ ಆದೀತು ಎನ್ನಬಹುದು. ಹಾಗೆಂದರೆ ಅಂದುಕೊಳ್ಳಲಿ. ಆದರೆ ಆ ಬಗ್ಗೆ ನನ್ನ ನಿಲುವು ಇದು: ಒಂದರಿಂದ ಆಗುವ ಅಡ್ಡಿ ನಿಯಮಬದ್ಧ ಮತ್ತು ಅಪೇಕ್ಷಣೀಯ. ಏಕೆಂದರೆ ಅದರಿಂದ ವ್ಯಕ್ತಿಗಳ ಹಾಗೂ ಸಮಾಜದ ಹಿತ ಸಾಧಿತ ವಾಗುತ್ತದೆ. ಮತ್ತೊಂದರಿಂದ ಸಮಾಜಕ್ಕೂ ವ್ಯಕ್ತಿಗಳಿಗೂ ಅಧೋಗತಿ ಉಂಟಾಗುತ್ತದೆ. ಆದುದರಿಂದ ಅದು ನಿಯಮ ಬಾಹಿರ. ಜನನಗಳ ಸಂಖ್ಯೆಯನ್ನು ನಿಯಂತ್ರಣ ಗೊಳಿಸುವುದಕ್ಕೆ ಆತ್ಮಸಂಯಮ ಖಚಿತವಾದ ವಿಧಾನ. ಅದೊಂದೇ ನಿಜವಾದ ಸಾಧನ. ಕೃತಕ ನಿರೋಧಗಳಿಂದ ಜನನ ನಿಯಂತ್ರಣ ಮಾಡಿದರೆ ಜನಾಂಗದ ಆತ್ಮಹತ್ಯೆ ಆಗುತ್ತದೆ."

ಬ್ರಹ್ಮಚರ್ಯೆಯ ಮೇಲೆ ಅವರ ಮೂಲ ವಿಚಾರವನ್ನು ಸಂಗ್ರಹವಾಗಿ ಹೇಳು ವುದಾದರೆ ಇಷ್ಟು:

"ಮಾನವ ಸಮಾಜ ನಿರಂತರವಾಗಿ ಬೆಳೆಯತಕ್ಕದ್ದು. ಆಧ್ಯಾತ್ಮಿಕವಾಗಿ ವಿಕಾಸ ಶೀಲವಾದದ್ದು. ಲೈಂಗಿಕ ಭೋಗದ ಇಚ್ಛೆಯ ಬಗ್ಗೆ ತಲೆತಗ್ಗಿಸುವ ಪ್ರಮೇಯವೇನಿಲ್ಲ. ಸಂತಾನೋತ್ಪತ್ತಿಗೆ ಮಾತ್ರ ಅದು ಸೀಮಿತವಾಗಿರಬೇಕು. ಪರಿಪೂರ್ಣ ಬ್ರಹ್ಮಚರ್ಯೆ ಅಥವಾ ಎಲ್ಲ ಇಂದ್ರಿಯಗಳ ನಿಯಂತ್ರಣವನ್ನು ಎಲ್ಲ ಕಾಲ ದೇಶಗಳಲ್ಲೂ ಕಾಯೇನ

ವಾಚಾ ಮನಸಾ ಸಾಧಿಸುವುದು ಅತ್ಯಂತ ಅಪೇಕ್ಷಣೀಯ. ಹಾಗೆ ಮಾಡಲು ಧೈರ್ಯ ವಿಲ್ಲದಿದ್ದರೆ ಮದುವೆ ಮಾಡಿಕೊಳ್ಳಲಿ. ಆಗಲೂ ಆತ್ಮಸಂಯಮದ ಜೀವನ ನಡೆಸು ವುದು ಅಗತ್ಯ. ವಿವಾಹವೆಂದರೆ ಉಭಯತ್ರರ ಮೇಲೂ ಶಿಸ್ತನ್ನು ವಿಧಿಸುವ ಧಾರ್ಮಿಕ ಸಂಸ್ಕಾರ. ಸಂತಾನಾಪೇಕ್ಷೆ ಇಬ್ಬರಿಗೂ ಇದ್ದು ಅದಕ್ಕೆ ತಯಾರಾಗಿದ್ದರೆ ಮಾತ್ರ ಅವರು ದೈಹಿಕ ಸಂಪರ್ಕ ಮಾಡಬೇಕು. ದೇವರಲ್ಲಿ ಜೀವಂತಶ್ರದ್ಧೆ ಇದ್ದ ಹೊರತು ಇಂದ್ರಿಯ ನಿಗ್ರಹ ಅಸಾಧ್ಯ. ಸ್ತ್ರೀಯು ತನ್ನ ಜೀವನದ ಸಾರ್ಥಕತೆಯನ್ನು ಪಡೆಯ ಬೇಕಾದರೆ ತಾನು ಪುರುಷನ ಕಾಮದ ಸಾಧನ, ಆಟದ ಗೊಂಬೆ ಎಂಬುದನ್ನು ಮರೆಯ ಬೇಕು. ಜನನಗಳ ನಿಯಂತ್ರಣಕ್ಕೆ ಆತ್ಮ ಸಂಯಮ ಖಾತರಿಯಾದ ಏಕೈಕ ವಿಧಾನ. ಕೃತಕ ಸಾಧನಗಳಿಂದ ಜನನ ನಿಯಂತ್ರಣ ಮಾಡುವುದು ಅನೈತಿಕ ಮತ್ತು ಆತ್ಮನಾಶಕ. ಲೈಂಗಿಕ ಸಂಬಂಧಗಳಲ್ಲಿ ಸ್ವಸ್ಥ ಹಾಗೂ ಪವಿತ್ರ ದೃಷ್ಟಿಯಿಟ್ಟುಕೊಂಡು ಮುಂದಿನ ಪೀಳಿಗೆಗಳ ನೈತಿಕ ಅಭ್ಯುದಯಕ್ಕೆ ನಾವು ಧರ್ಮದರ್ಶಿಗಳೆಂಬ ಭಾವನೆ ತಾಳಿದರೆ ಇಂದಿನ ಅನೇಕ ಕಷ್ಟಕಾರ್ಪಣ್ಯಗಳು ಕೊನೆಗೊಂಡಾವು."

ಲೈಂಗಿಕ ವಿಷಯದಲ್ಲಿ ಗಾಂಧಿಯವರು ತೀವ್ರ ರೀತಿಯ ಸಂಪ್ರದಾಯಸ್ಥ ರೆಂದು ಹೇಳಿ ಅವರ ಅಭಿಪ್ರಾಯಗಳನ್ನು ಅನೇಕರು ಟೀಕಿಸಿದರು. ಬಾಲವಿವಾಹ ಗಳನ್ನು ಗಾಂಧೀಜಿ ಖಂಡಿಸಿದ್ದನ್ನು ಸಂಪ್ರದಾಯಸ್ಥರು ಇಷ್ಟಪಡಲಿಲ್ಲ. ವಿಧವಾ ವಿವಾಹ ವನ್ನು ಅವರು ಪ್ರತಿಪಾದನೆ ಮಾಡಿದ್ದರು. ಅದನ್ನು ಕೆಲವು ಸುಧಾರಕರು ಒಪ್ಪಲಿಲ್ಲ. ಅದರ ಮೇಲೆ ಗಾಂಧಿ ಹೀಗೆ ಬರೆದರು:

"ವಿಧವಾ ವಿವಾಹ ಪಾಪಕರವಲ್ಲ. ಅದು ಪಾಪಕರವಾದರೆ ವಿಧುರನ ಮದುವೆ ಯಷ್ಟೇ ಪಾಪಕರವಾದೀತು ಅಷ್ಟೆ.

"ಧರ್ಮದ ಹೆಸರಿನಲ್ಲಿ ಗೋರಕ್ಷಣೆಯ ಉದ್ಗಾರ ಎತ್ತುತ್ತೇವೆ. ಆದರೆ ಬಾಲ ವಿಧವೆಯ ರೂಪದಲ್ಲಿರುವ ಮಾನವ ಹಸುವಿಗೆ ರಕ್ಷಣೆ ನೀಡಲು ನಿರಾಕರಿಸುತ್ತೇವೆ. ವಿವಾಹ ಸಂಸ್ಕಾರದ ಅರ್ಥವೇ ಗೊತ್ತಿಲ್ಲದ ಮೂರು ಲಕ್ಷ ಬಾಲಕಿಯರನ್ನು ಧರ್ಮದ ಹೆಸರಿನಲ್ಲಿ ಬಲವಂತದ ವೈಧವ್ಯಕ್ಕೆ ತಳ್ಳುತ್ತೇವೆ. ಸಣ್ಣ ವಯಸ್ಸಿನ ಬಾಲಕಿಯರನ್ನು ಬಲವಂತದ ವೈಧವ್ಯಕ್ಕೆ ಗುರಿಮಾಡುವುದು ಅತಿ ಕ್ರೌರ್ಯದ ಅಪರಾಧ. ಈ ಅಪರಾಧ ಕ್ಕಾಗಿ ಹಿಂದೂಗಳಾದ ನಾವು ದಿನನಿತ್ಯವೂ ದುಬಾರಿಯಾದ ಬೆಲೆ ತೆರುತ್ತಿದ್ದೇವೆ. ನಮ್ಮ ಮನಸ್ಸಾಕ್ಷಿ ನಿಜವಾಗಿಯೂ ಜಾಗೃತವಾಗಿದ್ದಿದ್ದರೆ, ವೈಧವ್ಯದ ಮಾತು ಹಾಗಿರಲಿ, ಹದಿನೈದು ವರ್ಷ ವಯಸ್ಸಿಗೆ ಮುನ್ನ ಯಾವ ಮದುವೆಯೂ ನಡೆಯು ತ್ತಿರಲಿಲ್ಲ. ಈ ಮೂರು ಲಕ್ಷ ಬಾಲಕಿಯರು ನಿಜವಾಗಿಯೂ ಧಾರ್ಮಿಕವಾಗಿ ಮದುವೆ ಯಾಗಿರಲಿಲ್ಲವೆಂದು ಘೋಷಿಸುತ್ತಿದ್ದೆವು. ಇಂತಹ ವೈಧವ್ಯ ಸ್ಥಿತಿಗೆ ಯಾವ ಹಿಂದೂ ಶಾಸ್ತ್ರದಲ್ಲೂ ಆಧಾರವೇ ಇಲ್ಲ. ತನ್ನ ಪತಿಯ ಪ್ರೇಮವನ್ನು ಅನುಭವಿಸಿದ್ದ ಮಹಿಳೆಯು ಸ್ವಯಂ ಪ್ರೇರಿತಳಾಗಿ ವೈಧವ್ಯವನ್ನು ಒಪ್ಪಿಕೊಂಡು ನಡೆದರೆ ಜೀವನಕ್ಕೆ ಮರ್ಯಾದೆಯೂ

ಘನತೆಯೂ ಬರುತ್ತದೆ; ಮನೆಯನ್ನು ಪವಿತ್ರಗೊಳಿಸುತ್ತದೆ. ಧರ್ಮ ಉಚ್ಚ್ರಾಯ ವಾಗುತ್ತದೆ. ಧರ್ಮ ಅಥವಾ ಸಂಪ್ರದಾಯದ ಬಲದಿಂದ ಹೇರಲ್ಪಟ್ಟ ವೈಧವ್ಯ ತಡೆ ಯಲಾರದ ಹೊರೆ. ರಹಸ್ಯವಾಗಿ ನಡೆಯುವ ಕೆಟ್ಟತನವು ಮನೆಯನ್ನು ಅಪವಿತ್ರ ಗೊಳಿಸುತ್ತದೆ. ಐವತ್ತು ವರ್ಷ ಮೀರಿದ ರೋಗಪೀಡಿತ ಜನರು ಬಾಲ್ಯ ವಯಸ್ಸಿನ ಹೆಣ್ಣುಮಕ್ಕಳನ್ನು ಪತ್ನಿಯರನ್ನಾಗಿ ಪಡೆಯುತ್ತಾರೆ; ಕೊಂಡುಕೊಳ್ಳುತ್ತಾರೆ ಎಂದರೆ ಇನ್ನೂ ಸಮಂಜಸವಾಗುತ್ತದೆ. ಅವರಲ್ಲಿ ಕೆಲವರು ಒಬ್ಬ ಪತ್ನಿ ಇರುವಾಗ ಮತ್ತೊಬ್ಬ ಳನ್ನು ಮಾಡಿಕೊಳ್ಳುವುದೂ ಉಂಟು. ಹೀಗಿರುವಾಗ ಹಿಂದೂ ವಿಧವೆಯ ಅವಸ್ಥೆ ಯನ್ನು ಯೋಚಿಸಿದರೆ ತುಂಬಾ ಅಸಹ್ಯವಾಗುವುದಿಲ್ಲವೆ? ನಮ್ಮ ಮಧ್ಯೆ ಸಹಸ್ರಾರು ವಿಧವೆಯರು ಇರುವ ಪರ್ಯಂತ ನಾವು ಜ್ವಾಲಾಮುಖಿಯ ಮೇಲೆ ಕುಳಿತಿದ್ದಂತೆಯೇ. ಅದು ಯಾವ ಘಳಿಗೆಯಲ್ಲಾದರೂ ಸ್ಫೋಟಗೊಳ್ಳಬಹುದು. ನಾವು ಪರಿಶುದ್ಧರಾಗಿರ ಬೇಕಾದರೆ, ಹಿಂದೂ ಧರ್ಮವನ್ನು ರಕ್ಷಿಸಬೇಕಾದರೆ, ಬಲವಂತದ ವೈಧವ್ಯ ಎಂಬ ವಿಷವನ್ನು ನಿರ್ಮೂಲ ಮಾಡಬೇಕು. ಯಾರ ಮನೆಯಲ್ಲಿ ಬಾಲವಿಧವೆಯರು ಇದ್ದಾರೆಯೋ ಅಲ್ಲಿಂದಲೇ ಸುಧಾರಣೆ ಆರಂಭವಾಗಬೇಕು. ಆ ಮನೆಯವರು ಧೈರ್ಯತಾಳಿ ತಮ್ಮ ವಶದಲ್ಲಿರುವ ಬಾಲವಿಧವೆಯರಿಗೆ ಮದುವೆ ಮಾಡಬೇಕು. ಅದು ಪುನರ್ವಿವಾಹ ಎನಿಸುವುದಿಲ್ಲ. ಏಕೆಂದರೆ ಅವರುಗಳಿಗೆ ನಿಜವಾಗಿ ಮದುವೆಯೇ ಆಗಿರಲಿಲ್ಲ."

ಸಮಾಜ ಸುಧಾರಣೆ ವಿಷಯದಲ್ಲಿ ಗಾಂಧಿಯವರ ದೃಷ್ಟಿ ಇತರ ಸುಧಾರಕರಿಗಿಂತ ಭಿನ್ನವಾಗಿತ್ತು. ಸಮಾಜ ಸುಧಾರಣೆಯಷ್ಟೇ ಸ್ವರಾಜ್ಯವೂ ಮುಖ್ಯವೆಂದು ಅವರು ಭಾವಿಸಿದ್ದರು. "ವಾಸ್ತವಾಂಶವೆಂದರೆ ರಾಜಕೀಯ ವಿಮೋಚನೆಯಿಂದ ಜನಸಾಮಾನ್ಯರ ಜಾಗೃತಿ ಆಗುತ್ತದೆ. ರಾಷ್ಟ್ರ ಜೀವನದ ಎಲ್ಲ ಪ್ರಾಕಾರಗಳನ್ನೂ ಮುಟ್ಟದೆ ಅದು ಆಗಲಾರದು. ಪ್ರತಿಯೊಂದು ಸುಧಾರಣೆಯ ಅರ್ಥ ಜಾಗೃತಿ. ಒಮ್ಮೆ ಜಾಗೃತ ವಾಯಿತೆಂದರೆ, ಜೀವನದ ಒಂದು ಪ್ರಾಕಾರದ ಸುಧಾರಣೆ ಆದರೆ ಸಾಲದು. ರಾಷ್ಟ್ರಕ್ಕೆ ಅಷ್ಟರಿಂದ ತೃಪ್ತಿಯಾಗುವುದಿಲ್ಲ. ಎಲ್ಲ ಚಳುವಳಿಗಳೂ ಮುಂದುವರಿಯ ಬೇಕು; ಪ್ರತಿಯೊಂದೂ ಒಟ್ಟಿಗೇ ಮುಂದುವರಿಯಬೇಕು."

ಸಂಪೂರ್ಣ ಪಾನ ನಿರೋಧವನ್ನು ತಮ್ಮ ಚುನಾವಣಾ ಪ್ರಚಾರದ ಮುಖ್ಯ ಅಂಶವನ್ನಾಗಿಟ್ಟುಕೊಳ್ಳಬೇಕೆಂದು ಸ್ವರಾಜ್ಯವಾದಿಗಳಿಗೆ ಅವರು ಹೇಳಿದರು. "ಪಾನ ನಿರೋಧಕ್ಕೆ ಬೆಂಬಲಕೊಟ್ಟರೆ ಸಾಲದು. ಸಂಪೂರ್ಣ ಪಾನನಿರೋಧ ಚಳುವಳಿಯನ್ನು ಉಪಕ್ರಮಿಸಿ ಅದನ್ನು ನಡೆಸಿಕೊಂಡು ಹೋಗುವ ಪ್ರತಿಜ್ಞೆಯನ್ನು ಪ್ರತಿಯೊಬ್ಬ ಸದಸ್ಯನೂ ತೆಗೆದುಕೊಳ್ಳಬೇಕು. ಈ ಅನೈತಿಕ ಬಾಬಿನಿಂದ ಎಷ್ಟು ಹಣದ ಆದಾಯ ವಿದೆಯೋ ಅಷ್ಟು ಮೊಬಲಗನ್ನು ಲಷ್ಕರಿ ಬಾಬಿನ ಒಟ್ಟು ಖರ್ಚಿನಲ್ಲಿ ಕಳೆಯಬೇಕು. ಪೂರ್ಣ ಪಾನನಿರೋಧವನ್ನು ತರಲು ಇದೊಂದೇ ಮಾರ್ಗ. ಸಂಪೂರ್ಣ ಪಾನ ನಿರೋಧಕ್ಕೆ ಒತ್ತಾಯ ಮಾಡುವಾಗ ಜೊತೆ ಜೊತೆಯಾಗಿ ಸೈನ್ಯ ಸಿಬ್ಬಂದಿಯ

ಮೇಲಿನ ಖರ್ಚನ್ನು ಕಡಿಮೆಮಾಡಲೂ ಒತ್ತಾಯಮಾಡಬೇಕು. ಈ ವಿಚಾರದಲ್ಲಿ ಜನರ ಅಭಿಪ್ರಾಯವನ್ನು ಸಂಗ್ರಹಿಸುವ ಯೋಜನೆಯನ್ನು ಮುಂದಿಟ್ಟು ಇದರ ಪರಿಹಾರ ವನ್ನು ತಡಮಾಡಕೂಡದು. ಭಾರತದಲ್ಲಿ ಈ ಸಂಬಂಧವಾಗಿ ಜನಮತಗಣನೆಗೆ ಅಗತ್ಯ ವಾದ ಕಾರಣವೇ ಇಲ್ಲ. ಏಕೆಂದರೆ, ಕುಡಿತದ ಹಾಗೂ ಅಫೀಮು ಸೇವನೆಯ ಅಭ್ಯಾಸವು ಕೆಟ್ಟದ್ದು ಎಂಬುದು ಸಾರ್ವತ್ರಿಕವಾಗಿ ಗೊತ್ತಾಗಿರುವ ವಿಷಯ. ಪಶ್ಚಿಮ ದೇಶಗಳಲ್ಲಿ ಕುಡಿತವನ್ನು ಅನುಕರಣೀಯ ಸಂಪ್ರದಾಯವೆಂದು ಭಾವಿಸುತ್ತಾರೆ. ಭಾರತದಲ್ಲಿ ಹಾಗೆ ಭಾವಿಸುವುದಿಲ್ಲ. ಭಾರತದಲ್ಲಿ ಜನಮತ ಸಂಗ್ರಹಣೆಯ ಮಾತು ಕೆಲಸಕ್ಕೆ ಬಾರದ್ದು. ಸಮಸ್ಯೆಯನ್ನು ಲಘುವಾಗಿ ಕಾಣುವುದೇ ಇದರ ಉದ್ದೇಶ."

ಗಾಂಧಿಯವರ ಮುಖ್ಯ ಗಮನ ಚರಖದ ಕಡೆ ಇತ್ತು. ಅಖಿಲ ಭಾರತ ನೂಲು ವವರ ಸಂಘದ ಅಧ್ಯಕ್ಷರಾಗಿ ಅವರು ತಮ್ಮ ಹೆಚ್ಚು ಸಮಯವನ್ನು ಖದ್ದರ್ ಚಟುವಟಿಕೆ ಗಳಿಗಾಗಿ ವಿನಿಯೋಗಿಸಿದರು. ದೇಶಾದ್ಯಂತ ವ್ಯಾಪಕವಾಗಿದ್ದ ಖಾದಿಕೇಂದ್ರಗಳ ಜೊತೆಗೆ ನಿರಂತರ ಸಂಪರ್ಕವಿಟ್ಟುಕೊಂಡಿದ್ದರು. ಅವುಗಳಿಂದ ಅಂಕಿ ಅಂಶಗಳನ್ನು ತರಿಸಿ ಕೊಂಡು ಅವುಗಳ ರೇಖಾಪಟಮಾಡಿ 'ಯಂಗ್ ಇಂಡಿಯಾ'ದಲ್ಲಿ ಆಗಿಂದಾಗ್ಗೆ ಪ್ರಕಟಿ ಸುತ್ತಿದ್ದರು. ೧೯೨೬ರ ಕೊನೆಯ ಹೊತ್ತಿಗೆ ಸಂಘದಲ್ಲಿ ೧೧೦ ಮಂದಿ ಪೂರ್ಣವೇಳೆಯ ಕಾರ್ಯಕರ್ತರೂ ೪೨೯೫೯ ಮಂದಿ ನೂಲುವವರೂ ಮತ್ತು ೩೪೦೭ ಮಂದಿ ನೇಯ್ಗೆ ಯವರೂ ಇದ್ದರು. ಅವರುಗಳಿಗೆ ಪಾವತಿಯಾಗುತ್ತಿದ್ದ ಒಟ್ಟು ಹಣ ಒಂಬತ್ತು ಲಕ್ಷ ರೂಪಾಯಿಗಳಿಗೆ ಕಡಿಮೆ ಇರಲಿಲ್ಲ. ಸುಮಾರು ೧೫೦೦ ಗ್ರಾಮಗಳ ಆವಶ್ಯಕತೆಗಳನ್ನು ಪೂರೈಸುತ್ತಿದ್ದ ೧೫೦ ಉತ್ಪಾದನಾ ಕೇಂದ್ರಗಳ ಮೂಲಕ ವಿತರಣೆಯ ಕಾರ್ಯ ನಡೆಯುತ್ತಿತ್ತು.

ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಖಾದಿಗೆ ಮುಖ್ಯಸ್ಥಾನಕಲ್ಪಿಸಿ ಆ ಕೆಲಸಕ್ಕೆ ತೀವ್ರ ಚಾಲನೆ ಕೊಟ್ಟರು ಗಾಂಧೀಜಿ. "ಸಾರ್ವತ್ರಿಕ ಪ್ರದರ್ಶನಕ್ಕೆ ಖದ್ದರ್ ಒಂದೇ ಉತ್ತಮ ಸಾಧನ" ಎಂದು ರಾಷ್ಟ್ರೀಯ ಸಪ್ತಾಹದ ಸಮಾರಂಭದ ಸಮಯದಲ್ಲಿ ಬರೆದರು. ಏಪ್ರಿಲ್ ೬ರಿಂದ ಆರಂಭವಾಗುವ ಸಪ್ತಾಹದ ಅವಧಿಯಲ್ಲಿ ಸತತವಾದ ಖಾದಿ ಪ್ರಚಾರ ಮಾಡಬೇಕೆಂದು ಶಿಫಾರಸು ಮಾಡಿದರು.

"ಹೆಚ್ಚು ಶ್ರಮವಿಲ್ಲದೆ ಎಲ್ಲರೂ ಕೈಗೊಳ್ಳಬಹುದಾದ, ಭಾರತದ ಸಂಪತ್ತನ್ನು ಹೆಚ್ಚಿಸಬಲ್ಲ, ಸಂಸ್ಥೆಯ ಶಕ್ತಿಯನ್ನು ವರ್ಧಿಸುವ ಹಾಗೂ ನಾವು ಒಬ್ಬರಿಗೊಬ್ಬರು ಸಮಾನರು ಎಂಬ ಭಾವನೆಯನ್ನುಂಟು ಮಾಡುವ ವಸ್ತು ಯಾವುದು? ಇದಕ್ಕೆ ಉತ್ತರ ನಿಸ್ಸಂದೇಹವಾಗಿ ಚರಖ" ಎಂದು ಬರೆದರು. ಇದಕ್ಕೆ ಬಂದ ಪ್ರತಿಕ್ರಿಯೆ ಅದ್ಭುತವಾಗಿತ್ತು. ಎಲ್ಲ ಕಡೆಯೂ ರಾಟೆಯ ರವ ಮೊಳಗಿತು. ಗಂಡಸರು, ಹೆಂಗಸರು ಮತ್ತು ಮಕ್ಕಳು ಎಲ್ಲರೂ ಭಾಗವಹಿಸಿ ರಾಷ್ಟ್ರೀಯ ಸಪ್ತಾಹವನ್ನು ಯಶಸ್ವಿಗೊಳಿಸಿದರು.

ಮೋತಿಲಾಲ್ ನೆಹರೂರವರು ಖಾದಿ ಹೊತ್ತುಕೊಂಡು ಅಲಹಾಬಾದಿನ ರಸ್ತೆಗಳಲ್ಲಿ ಮಾರಾಟ ಮಾಡಿದರು. "ಭಾರತದಲ್ಲಿಯೂ ಸಹ ಪಂಡಿತ್ ನೆಹರೂರರು ತಮ್ಮನ್ನು ತಾವು ಅಪಹಾಸ್ಯಕ್ಕೀಡು ಮಾಡಿಕೊಳ್ಳುತ್ತಾರೆಂಬುದನ್ನು ಮನಗಾಣಬೇಕು" ಎಂದು 'ಟೈಂಸ್ ಆಫ್ ಇಂಡಿಯಾ' ಟೀಕೆ ಮಾಡಿತು. "ಕಾಂಗ್ರೆಸ್ಸಿನ ಪೂರ್ಣ ಅವಸಾನ, ಕಾಂಗ್ರೆಸ್ಸಿನ ಸಿದ್ಧಾಂತ ಎನಿಸಿಕೊಂಡಿರುವುದರ ನಿರರ್ಥಕತೆ, ಕಾಂಗ್ರೆಸ್ಸಿನ ಬೆಂಬಲಿಗಲ್ಲಿ ಜವಾಬ್ದಾರಿಯುತ ರಾಜಕೀಯ ವಿಚಾರದ ಅಭಾವ, ಇವೆಲ್ಲವೂ ಅಲಹಾಬಾದಿನಿಂದ ಬಂದ ತಂತಿಯಲ್ಲಿ ವ್ಯಕ್ತವಾಗಿದೆ" ಎಂದು ಪ್ರಕಟಿಸಿತು. ಖದ್ದರ್ ಅನ್ನು ಸ್ಮಶಾನದ ವಸ್ತುವೆಂದು ವರ್ಣಿಸಿತು, ಆ ಪತ್ರಿಕೆ. ಈ ಬಗ್ಗೆ ಗಾಂಧಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ 'ಟೈಂಸ್ ಆಫ್ ಇಂಡಿಯಾ' ಪತ್ರಿಕೆಯು ಬ್ರಿಟಿಷ್ ಸಾರ್ವಜನಿಕ ಅಭಿಪ್ರಾಯವನ್ನು ಪ್ರತಿಬಿಂಬಿಸುವುದು ನಿಜವಾಗಿದ್ದಲ್ಲಿ ಖದ್ದರ್ ಅಪೇಕ್ಷಿತ ಪರಿಣಾಮವನ್ನುಂಟು ಮಾಡಿದೆ." ಎಂದರು.

ನೂಲುವ ಕಾರ್ಯಕ್ರಮವು ಶಾಲಾಮಕ್ಕಳ ಮನಸ್ಸನ್ನು ಸೆಳೆಯಿತು. "ಇದು ಮಹಾತ್ಮಾಜಿಯ ಆಜ್ಞೆ, ಇದನ್ನು ಪಾಲಿಸಬೇಕು" ಎಂದು ಅವರು ಹೇಳಿದರು. ಅವರು ಪ್ರತಿದಿನವೂ ಶ್ರದ್ಧೆಯಿಂದ ಕೆಲಸ ಮಾಡಿ ತಾವು ಸ್ವಯಂ ತಯಾರಿಸಿದ ನೂಲನ್ನು ಅಖಿಲ ಭಾರತ ನೂಲುವವರ ಸಂಘಕ್ಕೆ ಕಳುಹಿಸಿಕೊಟ್ಟರು. ಅವರಲ್ಲಿ ಕೆಲವರು ಗಾಂಧಿಯವರ ಸಂದೇಶವನ್ನು ಕೇಳಿದರು. ಗಾಂಧೀ ಅವರಿಗೆ ಬರೆದರು. "ಎಷ್ಟೋ ವೇಳೆ ಧ್ಯೇಯ ಮನುಷ್ಯನಿಗಿಂತ ಹಿರಿದಾಗಿರುತ್ತದೆ. ರಾಟೆಯು ನಿಜ ವಾಗಿಯೂ ನನಗಿಂತ ಹಿರಿದು" ಮಕ್ಕಳು ಚರಖದ ಮಹತ್ವವನ್ನು ವಿವೇಚಿಸಬೇಕೆಂದು ಅವರು ಬಯಸಿದರು. "ಭಾರತೀಯ ಜನರ ಅಭ್ಯುದಯ ಅದರೊಂದಿಗೆ ಮಿಳಿತವಾಗಿದೆ ಎನ್ನುವುದು ನನ್ನ ಅಭಿಪ್ರಾಯ. ಜನಸಾಮಾನ್ಯರ ಕಡು ಬಡತನದ ಬಗ್ಗೆ ವಿದ್ಯಾರ್ಥಿಗಳ ಮಟ್ಟಿಗಾದರೂ ಅರಿತುಕೊಳ್ಳಬೇಕು. ಛಿದ್ರವಾಗುತ್ತಿರುವ ನಮ್ಮ ಹಳ್ಳಿಗಳಲ್ಲಿ ಕೆಲವನ್ನಾದರೂ ಅವರು ಪ್ರತ್ಯಕ್ಷ ನೋಡಿ ತಿಳಿಯಬೇಕು. ಭಾರತದ ಜನಸಂಖ್ಯೆ ಅವರಿಗೆ ತಿಳಿದಿರಬೇಕು. ಈ ಪರ್ಯಾಯ ದ್ವೀಪದ ವ್ಯಾಪಕ ವಿಸ್ತೀರ್ಣದ ಕಲ್ಪನೆ ಅವರಿಗಿರ ಬೇಕು. ಅತಿ ವಿರಳವಾಗಿರುವ ಸಂಪತ್ತನ್ನು ಹೆಚ್ಚಿಸಲು ಕೋಟ್ಯಂತರ ಜನ ಏನು ಮಾಡಬಹುದೆಂಬುದನ್ನು ಅವರು ತಿಳಿಯಬೇಕು. ಬಡವರ ಹಾಗೂ ದಲಿತರ ನಡುವೆ ಇದ್ದು ಅವರೊಂದಿಗೆ ಬೆರೆಯುವುದನ್ನು ಕಲಿಯಬೇಕು. ಅತ್ಯಂತ ಬಡವರಿಗೆ ಎಟುಕದ ವಸ್ತುಗಳನ್ನು ವರ್ಜಿಸುವ ಪ್ರವೃತ್ತಿಯನ್ನು ಅವರಲ್ಲಿ ಬೆಳೆಸಬೇಕು. ಆಗ ಕೈಯಲ್ಲಿ ನೂಲುವುದರ ಮಹತ್ವ ಅವರಿಗೆ ಗೊತ್ತಾಗುತ್ತದೆ. ಆಗ ಎಂತಹುದೇ ಹೊಡೆತ ಬಂದರೂ–ನನ್ನ ಬಗ್ಗೆ ಭ್ರಾಂತಿ ನಿವಾರಣೆ ಆದರೂ–ಅದು ತಡೆದುಕೊಳ್ಳಲು ಸಾಧ್ಯ ವಾಗುತ್ತದೆ. ರಾಟೆಯ ಮೂಲತತ್ತ್ವ ತುಂಬಾ ಹಿರಿದು; ಒಳ್ಳೆಯದು. ವ್ಯಕ್ತಿಪೂಜೆಯ ಆಧಾರದ ಮೇಲೆ ಅದು ನಿಲ್ಲಬೇಕಾಗಿಲ್ಲ. ಅದು ಶಾಸ್ತ್ರೀಯವಾದ ಆರ್ಥಿಕ ಪ್ರಯೋಗಕ್ಕೆ ಬದ್ಧವಾಗತಕ್ಕದ್ದು."

ಗುಜರಾತ್ ವಿದ್ಯಾಪೀಠದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಗಾಂಧೀಜಿ ಹೀಗೆ ಹೇಳಿದರು. "ಏಳು ಲಕ್ಷ ಹಳ್ಳಿಗಳಿರುವ ಭಾರತದಲ್ಲಿ ರೈಲ್ವೆ ನಿಲ್ದಾಣಗಳ ಸಂಖ್ಯೆ ಏಳುಸಾವಿರ. ಆ ಏಳುಸಾವಿರ ಹಳ್ಳಿಗಳ ಹೆಸರುಗಳನ್ನು ತಿಳಿದಿದ್ದೇವೆಂದು ನಾವು ಹೇಳಿಕೊಳ್ಳುವ ಹಾಗಿಲ್ಲ. ರೈಲ್ವೆ ನಿಲ್ದಾಣಗಳಿಂದ ದೂರವಿರುವ ಗ್ರಾಮಗಳ ಸ್ಥಿತಿಗತಿಗಳನ್ನು ನಾವು ತಿಳಿದುಕೊಂಡಿರುವುದು ಇತಿಹಾಸದ ಮೂಲಕ ಅಷ್ಟೆ. ಹಳ್ಳಿಗಳೊಂದಿಗೆ ಪ್ರೇಮಪೂರ್ಣ ಸಂಬಂಧವನ್ನು ಕಲ್ಪಿಸಬಹುದಾದ ಸಾಧನ ರಾಟೆ. ಇದನ್ನು ತಿಳಿದುಕೊಳ್ಳದೆ ಇದ್ದರೆ ಈ ಸಂಸ್ಥೆಯಲ್ಲಿದ್ದುದು ನಿರರ್ಥಕವಾಗುತ್ತದೆ. ಭಾರತದಲ್ಲಿ ಕೋಟ್ಯಾಂತರ ಜನ ಹಸಿವಿನಿಂದ ನರಳುತ್ತಿದ್ದಾರೆ. ಈ ಜನರನ್ನು ಗಮನಕ್ಕೆ ತೆಗೆದುಕೊಂಡು ಅವರ ಸಮಸ್ಯೆಗೆ ಪರಿಹಾರವನ್ನು ಹುಡುಕದೆ ಇದ್ದರೆ ಶಿಕ್ಷಣವು 'ರಾಷ್ಟ್ರೀಯ' ಎನಿಸುವುದಿಲ್ಲ. ಹಳ್ಳಿಗಳೊಂದಿಗೆ ಸರ್ಕಾರ ಇಟ್ಟುಕೊಂಡಿರುವ ಸಂಬಂಧ ಕಂದಾಯ ವಸೂಲಿ ನಿಮಿತ್ತಮಾತ್ರ. ಅದನ್ನು ವಸೂಲು ಮಾಡುವಷ್ಟರ ಮಟ್ಟಿಗೆ ಸರ್ಕಾರದ ಸಂಪರ್ಕ. ಗ್ರಾಮಸ್ಥರೊಂದಿಗೆ ನಮ್ಮ ಸಂಬಂಧ ರಾಟೆಯ ಮೂಲಕ ಸೇವೆಯಿಂದ ಆರಂಭವಾಗುತ್ತದೆ. ಅದು ಅಷ್ಟಕ್ಕೇ ಮುಗಿಯುವುದಿಲ್ಲ. ರಾಟೆಯು ಗ್ರಾಮಸೇವೆಯ ಕೇಂದ್ರವಾಗಿರುತ್ತದೆ. ನೀವು ಮುಂಬರುವ ರಜೆಯ ಕಾಲವನ್ನು ದೂರದ ಒಳನಾಡಿನ ಹಳ್ಳಿಗಳಲ್ಲಿ ಕಳೆದರೆ, ಅಲ್ಲಿಯ ಜನರು ನಿರುತ್ಸಾಹಿಗಳೂ ಭಯಗ್ರಸ್ತರೂ ಆಗಿರುವುದನ್ನು ಕಾಣುತ್ತೀರಿ. ಅವರ ಮನೆಗಳು ಹಾಳಾಗಿರುವುದು ನಿಮಗೆ ಗೋಚರವಾಗುತ್ತದೆ. ಅಲ್ಲಿ ಅನೈರ್ಮಲ್ಯದ ಸ್ಥಿತಿಯನ್ನು ಕಾಣುತ್ತೀರಿ. ದನಕರುಗಳ ಸ್ಥಿತಿ ಶೋಚನೀಯವಾಗಿರುತ್ತದೆ. ಎಲ್ಲೆಲ್ಲೂ ಸೋಮಾರಿತನ ಮನೆ ಮಾಡಿಕೊಂಡಿರುವುದನ್ನು ಕಾಣುತ್ತೀರಿ. ಹಿಂದೆ ಅವರು ಮನೆಗಳಲ್ಲಿ ರಾಟೆಗಳಿದ್ದ ವಿಷಯವನ್ನು ನಿಮಗೆ ತಿಳಿಸುತ್ತಾರೆ. ಆದರೆ ಈಗ ಅದರ ಮಾತೆತ್ತಿದರೆ ಅವರು ನಿಮಗೆ ಕಿವಿಗೊಡುವುದೇ ಇಲ್ಲ. ಯಾವ ಗೃಹಕೈಗಾರಿಕೆಯೂ ಬೇಡ ಎನ್ನುತ್ತಾರೆ. ಅವು ಯಾವುದರಲ್ಲೂ ಅವರಿಗೆ ನಂಬಿಕೆ ಉಳಿದಿಲ್ಲ. ಸಾಯಲಾರದೆ ಇರುವುದರಿಂದ ಇನ್ನೂ ಜೀವ ಹಿಡಿದುಕೊಂಡಿದ್ದಾರೆ. ನೀವು ನೂಲುವುದಾದಲ್ಲಿ ಅವರು ನೂಲುತ್ತಾರೆ. ಮುನ್ನೂರು ಜನ ಇರುವ ಗ್ರಾಮದಲ್ಲಿ ಒಂದುನೂರು ಜನ ನೂಲುವುದಾದರೆ ಆ ಗ್ರಾಮದ ಆದಾಯ ವರ್ಷಕ್ಕೆ ೧೮೦೦ ರೂ.ನಷ್ಟು ಹೆಚ್ಚುತ್ತದೆ. ಆ ಭರವಸೆಯನ್ನು ನೀವು ಅವರಿಗೆ ಕೊಡಬಹುದು. ಪ್ರತಿಗ್ರಾಮದ ಆದಾಯದ ಮೇಲೆ ನೀವು ದೃಢವಾದ ಸುಧಾರಣೆಯ ತಳಹದಿ ಹಾಕಬಹುದು. ಇದನ್ನು ಹೇಳುವುದು ಸುಲಭ. ಮಾಡಿ ತೋರಿಸುವುದು ಕಷ್ಟ. ದೃಢನಂಬಿಕೆ ಇದ್ದರೆ ಅದು ಸುಲಭವಾಗುತ್ತದೆ. 'ನಾನು ಒಬ್ಬಂಟಿಗ, ಏಳು ಲಕ್ಷ ಹಳ್ಳಿಗಳನ್ನು ಮುಟ್ಟುವುದಾದರೂ ಹೇಗೆ?' ಈ ತರ್ಕ ಏಳುತ್ತದೆ. ನಮ್ಮ ಅಹಂಭಾವದಿಂದ ಮೂಡುತ್ತದೆ ಈ ತರ್ಕ. ಒಂದು ಹಳ್ಳಿಯಲ್ಲಿ ಪಟ್ಟಾಗಿ ಕುಳಿತು ಕೆಲಸ ಮಾಡಿದರೆ ಗೆಲ್ಲುತ್ತೇನೆ ಎಂಬ ವಿಶ್ವಾಸದಿಂದ ಹೊರಡಿ. ಅನಂತರ ಮಿಕ್ಕೆಲ್ಲವೂ ಸರಿಹೋಗುತ್ತವೆ. ಆಗ ಪ್ರಗತಿ ನಿಸ್ಸಂದೇಹವಾಗಿ ಆಗುತ್ತದೆ. ನಿಮ್ಮನ್ನು ಅಂತೂ

ಕಾರ್ಯಕರ್ತರನ್ನಾಗಿ ಮಾಡುವುದೇ ವಿದ್ಯಾಲಯದ ಆಸೆ. ಅದು ನಿರುತ್ಸಾಹಕರವಾದ ಕೆಲಸವಾದರೆ ವಿದ್ಯಾಲಯವೂ ಉತ್ಸಾಹಹೀನವಾಗುತ್ತದೆ. ಆಗ ಅದನ್ನು ತೊರೆಯುವುದೇ ಲೇಸು."

ಸತ್ಯಾಗ್ರಹ ಆಶ್ರಮದ ನಿವಾಸಿಗಳ ಬಗ್ಗೆಯೂ ವಿದ್ಯಾಪೀಠದ ವಿದ್ಯಾರ್ಥಿಗಳ ವಿಷಯದಲ್ಲೂ ಗಾಂಧೀಜಿ ವೈಯಕ್ತಿಕವಾಗಿ ಲಕ್ಷ್ಯ ನೀಡುತ್ತಿದ್ದರು. ಗೀತೆ, ಹೊಸ ಒಡಂಬಡಿಕೆ ಮತ್ತು ತುಲಸೀದಾಸ ರಾಮಾಯಣ ಇವುಗಳನ್ನು ಅವರಿಗೆ ಓದಿ ಹೇಳುತ್ತಿದ್ದರು. ಕ್ರೈಸ್ತ ಧರ್ಮದಲ್ಲಿ ಗಾಂಧಿಯವರಿಗೆ ನಂಬಿಕೆ ಇದೆ ಎಂಬ ಟೀಕೆ ಬಂತು. "ನಮ್ಮ ಪವಿತ್ರ ಗ್ರಂಥಗಳಲ್ಲಿ ಇರದೇ ಇರುವ ವಿಶೇಷ ವಿಚಾರ ಬೈಬಲ್‌ನಲ್ಲಿ ಏನಿದೆ?" ಎಂದು ಟೀಕೆ ಮಾಡುವವರು ಕೇಳಿದರು. ಗಾಂಧಿಯವರ ಉತ್ತರ ಹೀಗಿತ್ತು:

"ಜಗತ್ತಿನ ಧರ್ಮಗ್ರಂಥಗಳನ್ನು ಸಹಾನುಭೂತಿಯಿಂದ ಓದುವುದು ಪ್ರತಿಯೊಬ್ಬ ಸುಸಂಸ್ಕೃತ ಪುರುಷ ಹಾಗೂ ಸ್ತ್ರೀಯ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ. ನಮ್ಮ ಸ್ವಂತ ಧರ್ಮವನ್ನು ಅನ್ಯ ಧರ್ಮೀಯರು ಗೌರವಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ. ಹಾಗೆಯೇ ಅನ್ಯ ಧರ್ಮೀಯರ ಧರ್ಮಗಳನ್ನು ನಾವು ಗೌರವಿಸಬೇಕು. ಹಾಗೆ ಮಾಡಬೇಕಾದರೆ ಜಗತ್ತಿನ ಧಾರ್ಮಿಕ ಗ್ರಂಥಗಳನ್ನು ಓದುವುದು ಪವಿತ್ರ ಕರ್ತವ್ಯ. ನಮ್ಮ ಧರ್ಮಕ್ಕೆ ಹೊರತಾದ ಬೇರೆ ಧರ್ಮಗಳ ಪ್ರಭಾವ ನಮ್ಮ ಬೆಳೆದ ಮಕ್ಕಳ ಮೇಲೆ ಹೇಗಿರುವುದೆಂಬ ಭಯ ನಮಗಿರಬೇಕಾಗಿಲ್ಲ. ಪರಿಶುದ್ಧವಾಗಿರುವುದನ್ನೆಲ್ಲ ಸ್ವತಂತ್ರವಾಗಿ ಓದುವುದನ್ನು ಪ್ರೋತ್ಸಾಹಿಸೋಣ. ಅದರಿಂದ ಅವರ ಜೀವನದೃಷ್ಟಿ ವಿಶಾಲವಾಗುತ್ತದೆ. ಉದಾರವಾಗುತ್ತದೆ. ಮತ್ತೊಬ್ಬರನ್ನು ತಮ್ಮ ಧರ್ಮಕ್ಕೆ ಗೋಪ್ಯವಾಗಿ ಅಥವಾ ಬಹಿರಂಗವಾಗಿ ಪರಿವರ್ತನೆಗೊಳಿಸುವ ಉದ್ದೇಶದಿಂದ ತಮ್ಮ ಧರ್ಮ ಗ್ರಂಥಗಳನ್ನೇ ಚಿಕ್ಕವರ ಮುಂದೆ ಓದಿದರೆ ಆಗ ಭಯಪಡಬೇಕಾಗುತ್ತದೆ, ನಿಜ. ಹಾಗೆ ಮಾಡುವವನ ಪಕ್ಷಪಾತ ತನ್ನ ಧರ್ಮಗ್ರಂಥಗಳ ಕಡೆಗೇ ಇರುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಪೂರ್ಣ ಸನಾತನ ಹಿಂದು. ಬೈಬಲ್, ಕೊರಾನ್ ಮತ್ತಿತರ ಧರ್ಮಗ್ರಂಥಗಳನ್ನು ನಾನು ಭಕ್ತಿಯಿಂದ ಓದುತ್ತೇನೆ. ಇದರಲ್ಲಿ ಅಸಮಂಜಸವಾದ ಅಂಶ ಯಾವುದೂ ಇಲ್ಲ. ಇದು ಪ್ರಾಚೀನವಾಗಿ ಬಂದಿದೆ. ಸಂಸ್ಕೃತ ಪುಸ್ತಕವೊಂದರಲ್ಲಿ ಅದಕ್ಕೆ ಸಮರ್ಥನೆ ಇದೆ. ಕೆಟ್ಟದ್ದನ್ನೂ ಒಳ್ಳೆಯದೇ ಎಂದು ಸಾಧಿಸುವ ಕಟ್ಟಾ ಮತ ಭ್ರಾಂತ ಮನುಷ್ಯ ಸನಾತನ ಹಿಂದೂ ಎನಿಸಿಕೊಳ್ಳುವುದಿಲ್ಲ. ನಾನು ನಿಷ್ಠ ಸನಾತನ ಹಿಂದೂ ಎಂದು ಕರೆದುಕೊಳ್ಳುತ್ತೇನೆ. ಶಾಸ್ತ್ರಗಳಲ್ಲಿ ನನ್ನ ನೈತಿಕ ಪ್ರಜ್ಞೆಗೆ ವಿರೋಧವಾದದ್ದನ್ನೆಲ್ಲ ತಿರಸ್ಕರಿಸುತ್ತೇನೆ. ಆದರೂ ಹಿಂದೂ ಧರ್ಮಗ್ರಂಥಗಳು ಆತ್ಮದ ಆವಶ್ಯಕತೆಗಳನ್ನು ಪೂರೈಸುತ್ತವೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಇತರ ಧರ್ಮಗಳನ್ನು ನಾನು ಭಕ್ತಿಯಿಂದ ಅಭ್ಯಾಸ ಮಾಡಿದ್ದರಿಂದ ಹಿಂದೂ ಧರ್ಮಗ್ರಂಥಗಳ ಬಗೆಗೆ ನನ್ನ ಗೌರವ ಹಾಗೂ ನಂಬಿಕೆ ಕಡಿಮೆಯಾಗಿಲ್ಲ. ಮೇಲಾಗಿ, ಹಿಂದೂಶಾಸ್ತ್ರ

ಗಳಲ್ಲಿ ನನ್ನ ಅರಿವು ಗಾಢವಾಗಿದೆ. ನನ್ನ ಜೀವನದ ದೃಷ್ಟಿ ವಿಶಾಲವಾಗಿದೆ. ಹಿಂದೂ ಶಾಸ್ತ್ರಗಳಲ್ಲಿ ಮಸುಕಾಗಿ ಉಳಿದಿದ್ದ ಅನೇಕ ಭಾಗಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

"ಗೋಪ್ಯವಾಗಿ ನಾನು ಕ್ರೈಸ್ತನಾಗಿದ್ದೇನೆಂಬ ಆಪಾದನೆ ಹೊಸದೇನಲ್ಲ. ಇದು ಒಂದು ರೀತಿಯಲ್ಲಿ ಅವಹೇಳನ, ಮತ್ತೊಂದು ರೀತಿಯಲ್ಲಿ ಶ್ಲಾಘನೆ. ಬಹಿರಂಗ ವರ್ತನೆಗೆ ಹೆದರಿ ಗೋಪ್ಯದಲ್ಲಿ ಏನಾದರೂ ಮಾಡುತ್ತೇನೆಂದು ನಂಬುವವರು ಈಗಲೂ ಇದ್ದಾರಲ್ಲ–ಇದು ಅವಹೇಳನಕರವಾದ ಸಂಗತಿ. ಕ್ರೈಸ್ತಧರ್ಮ ಅಥವಾ ಮತ್ತಾವ ಧರ್ಮವನ್ನಾಗಲೀ ಅಪ್ಪಿಕೊಳ್ಳಬೇಕೆಂದು ನನಗೆ ಸತ್ಯವಾಗಿ ಅನಿಸಿದಲ್ಲಿ, ಅದು ಅಗತ್ಯ ವೆಂದು ತೋರಿಬಂದಲ್ಲಿ, ನನ್ನನ್ನು ತಡೆಯುವವರು ಈ ಜಗತ್ತಿನಲ್ಲಿ ಯಾರೂ ಇಲ್ಲ. ಭಯವಿದ್ದ ಕಡೆ ಧರ್ಮಕ್ಕೆ ಜಾಗವಿಲ್ಲ. ಕ್ರೈಸ್ತಧರ್ಮದ ಚೆಲುವನ್ನು ಮೆಚ್ಚಿಕೊಳ್ಳುವ ಸಾಮರ್ಥ್ಯ ನನಗಿದೆಯೆಂದು ಮನಸ್ಸಿಲ್ಲದ ಮನಸ್ಸಿನಿಂದಲಾದರೂ ಅವರು ಒಪ್ಪಿ ಕೊಳ್ಳುತ್ತಾರೆ. ಆದುದರಿಂದ ಇದೊಂದು ರೀತಿಯಲ್ಲಿ ಶ್ಲಾಘನೆಯೇ ಸರಿ. ಬೈಬಲ್ ಅಥವಾ ಕುರಾನ್ ಅನ್ನು ನಾನು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ನೋಡುವುದಾದಲ್ಲಿ ನಾನೊಬ್ಬ ಕ್ರೈಸ್ತ ಅಥವಾ ಮುಸಲ್ಮಾನ ಎಂದು ಕರೆದುಕೊಳ್ಳಲು ಹಿಂಜರಿಯುವುದಿಲ್ಲ. ಆಗ ಹಿಂದೂ, ಕ್ರೈಸ್ತ ಮತ್ತು ಮುಸಲ್ಮಾನ ಎಂಬುದು ಪರ್ಯಾಯ ಪದಗಳಾಗುತ್ತವೆ. ಪರಲೋಕದಲ್ಲಿ ಹಿಂದೂಗಳಾಗಲೀ ಕ್ರೈಸ್ತರಾಗಲೀ ಮುಸಲ್ಮಾನರಾಗಲೀ ಇಲ್ಲವೇ ಇಲ್ಲವೆಂದು ನನ್ನ ನಂಬಿಕೆ. ಅಲ್ಲಿ ಅವರನ್ನು ಅವರು ಹೇಳಿಕೊಳ್ಳುವ ಧರ್ಮ ಅಥವಾ ನಂಬಿಕೆಗಳಿಗನುಸಾರವಾಗಿ ನೋಡುವುದಿಲ್ಲ; ಅವರವರ ಕರ್ಮಗಳಿಗನುಸಾರವಾಗಿ ಕಾಣ ಲಾಗುತ್ತದೆ. ಇಹದಲ್ಲಿ ನಾವು ಬಾಳುವಾಗ ನಾವು ಇಂತಹ ಮತಧರ್ಮಗಳವರೆಂಬ ಗುರುತಿನ ಪಟ್ಟಿಗಳಿದ್ದೇ ಇರುತ್ತವೆ; ಆದುದರಿಂದ ಪಿತೃ ಪಿತಾಮಹರಿಂದ ಪಾರಂಪಾರ್ಯ ವಾಗಿ ಬಂದ ಧರ್ಮದ ಹೆಸರನ್ನು ನಾನು ಇಟ್ಟುಕೊಳ್ಳುತ್ತೇನೆ; ಎಲ್ಲಿಯ ವರೆಗೆ ಅದು ನನ್ನ ಬೆಳವಣಿಗೆಯನ್ನು ಕುಂದಿಸುವುದಿಲ್ಲವೋ ಮತ್ತು ಬೇರೆಡೆಯಲ್ಲಿ ದೊರೆಯುವ ಒಳ್ಳೆಯದನ್ನು ನನ್ನದನ್ನಾಗಿ ಮಾಡಿಕೊಳ್ಳಲು ಅದು ಅಡ್ಡಿಮಾಡುವುದಿಲ್ಲವೋ ಅಲ್ಲಿಯ ವರೆಗೆ ಆ ಹೆಸರಿಗೆ ಅಂಟಿಕೊಂಡಿರುತ್ತೇನೆ.

"ಪತ್ರ ಬರೆದಿರುವವರು ಪ್ರದರ್ಶಿಸಿರುವ ಅತಿಸೂಕ್ಷ್ಮ ಪ್ರವೃತ್ತಿಯು ಈ ನತ ದೃಷ್ಟನಾಡಿನಲ್ಲಿ ಎದ್ದಿರುವ ಅಸಹನೆಯ ಮಾರುತದ ದ್ಯೋತಕ. ಯಾರಿಗೆ ಸಾಧ್ಯವೋ ಅಂತಹವರು ಇದರಿಂದ ವಿಚಲಿತರಾಗದೆ ನಿಲ್ಲಲಿ."

೧೯೨೭ರಲ್ಲಿ ಒಂದು ವರ್ಷ ಕಾಲ ಹೊರಗಡೆ ಗಾಂಧಿ ಮಾತನಾಡಿದ್ದು ಬಹಳ ಅಪರೂಪ. ತಮ್ಮ ಸಂಸ್ಥೆಗಳಲ್ಲೇನೋ ಅವರು ಮಾತನಾಡುತ್ತಿದ್ದರು. ಆದರೆ ಏಪ್ರಿಲ್ ನಲ್ಲಿ ನಡೆದ ರಾಷ್ಟ್ರೀಯ ಸಂಗೀತ ಸಮ್ಮೇಳನದಲ್ಲಿ ಅವರು ಭಾಷಣ ಮಾಡಿದ್ದು ಒಂದು ವಿಶೇಷವೇ ಸರಿ. ಸಂಗೀತದ ಗಂಧವೇ ಇಲ್ಲದ ಅಹಮದಾಬಾದಿನಲ್ಲಿ ಸಂಗೀತ ವನ್ನು ಪ್ರಚಲಿತಗೊಳಿಸಲು ಅವರು ಇಷ್ಟಪಟ್ಟರು.

"ಪ್ರಸಿದ್ಧವಾದ ನಾಣ್ಣುಡಿ ಒಂದಿದೆ–ಸಂಗೀತದ ಪ್ರಜ್ಞೆ ಇಲ್ಲದ ಮನುಷ್ಯ ಸನ್ಯಾಸಿಯಾಗಿರಬೇಕು ಅಥವಾ ಮೃಗವಾಗಿರಬೇಕು. ಅದು ಈಗ ಗಾದೆಯ ಮಾತೇ ಆಗಿಬಿಟ್ಟಿದೆ. ನಾವುಗಳಂತೂ ಸಂತರಲ್ಲ; ಆದುದರಿಂದ ಸಂಗೀತದ ಪ್ರಜ್ಞೆ ನಮ್ಮಲ್ಲಿ ಯಾವ ಪ್ರಮಾಣದಲ್ಲಿ ಇಲ್ಲವೋ ಅಷ್ಟರ ಮಟ್ಟಿಗೆ ನಾವು ಮೃಗಸಮಾನ. ಸಂಗೀತ ಬಲ್ಲೆವು ಎಂದರೆ, ಅದನ್ನು ಜೀವನಕ್ಕೆ ಅನ್ವಯಿಸಬೇಕು ಎಂದರ್ಥ. ಇಂದಿನ ವೈಮನಸ್ಯ, ಗೊಂದಲ ನಮ್ಮ ಶೋಚನೀಯ ಸ್ಥಿತಿಗೆ ಕನ್ನಡಿ ಹಿಡಿಯುವಂತಹದು. ಸಾಮರಸ್ಯ ವಿಲ್ಲದಿದ್ದರೆ, ಸಂಗೀತವಿಲ್ಲದಿದ್ದರೆ, ಸ್ವರಾಜ್ಯವೂ ಇರಲಾರದು.

"ಎಲ್ಲಿ ಅಸಾಂಗತ್ಯವಿದ್ದು ಒಬೊಬ್ಬನೂ ತನ್ನದೇ ಶ್ರುತಿಯನ್ನು ಬಾರಿಸುತ್ತಾನೋ ಅಲ್ಲಿ ಪ್ರಭುತ್ವವಿರುವುದಿಲ್ಲ ಅಥವಾ ಅರಾಜಕತೆ ಇರುತ್ತದೆ. ನಮ್ಮಲ್ಲಿ ಸಂಗೀತ ಪ್ರಜ್ಞೆ ಇಲ್ಲದಿರುವುದರಿಂದ ಸ್ವರಾಜ್ಯದ ಕೆಲಸ ನಮ್ಮ ಮನಸ್ಸಿಗೆ ಮುಟ್ಟುವುದಿಲ್ಲ. ಕೋಟ್ಯಂತರ ಜನರು ಸಾಮರಸ್ಯದಿಂದ ಹಾಡಿದಾಗ ಅಥವಾ ದೇವರ ಹೆಸರನ್ನು ಒಕ್ಕೊರಲಿನಿಂದ ಹೇಳಿದಾಗ ಒಂದು ಬಗೆಯ ಸಂಗೀತ ಮೂಡುತ್ತದೆ; ಆಗ ನಾವು ಸ್ವರಾಜ್ಯದತ್ತ ಮೊದಲ ಹೆಜ್ಜೆ ಇಡುತ್ತೇವೆ. ಇಷ್ಟು ಸರಳವಾದದ್ದನ್ನೂ ನಾವು ಸಾಧಿಸದಿದ್ದರೆ ಸ್ವರಾಜ್ಯವನ್ನು ಗೆಲ್ಲುವುದು ಹೇಗೆ?

"ಅಹಮದಾಬಾದಿನಲ್ಲಿ ಉಚಿತ ಸಂಗೀತ ತರಗತಿಗಳು ನಡೆಯುತ್ತಿವೆ. ಪರಿಣತ ರೊಬ್ಬರು ಅದನ್ನು ನಡೆಸುತ್ತಿದ್ದಾರೆ. ಹಾಜರಾತಿ ಪುಸ್ತಕದಲ್ಲಿ ಇರುವವರ ಸಂಖ್ಯೆ ಹತ್ತು; ಸರಿಯಾಗಿ ಹಾಜರಾಗುವವರು ನಾಲ್ಕು ಮಂದಿ. ನಾವು ಅಷ್ಟರಿಂದಲೇ ತೃಪ್ತ ರಾಗಬೇಕಾಗಿದೆ. ಉತ್ಸಾಹ ಶೂನ್ಯವಾದ ಸಮಾಧಾನ ಇದು; ಆದರೂ ಭರವಸೆ ಇಟ್ಟು ನಾವು ಬದುಕಬೇಕು. ಕೊಳಕು, ಶ್ವಪಚತನ, ಮತ್ತು ದಾರಿದ್ರ್ಯವಿದ್ದೆಡೆ ಸಂಗೀತ ಕ್ಕೆಡೆಯಿಲ್ಲ. ಸಂಗೀತಕ್ಕೆ ಬೇರೆ ವಿಧವಾದ ವಾತಾವರಣವೇ ಇರಬೇಕು. ಸಂಗೀತವನ್ನು ವಿಶಾಲವಾದ ಅರ್ಥದಲ್ಲಿ ನೋಡಿದರೆ ಐಕ್ಯತೆ, ಸಾಮರಸ್ಯ, ಪರಸ್ಪರ ಸಹಾಯ ಎಲ್ಲವೂ ಅದರಲ್ಲಿ ಅಡಗಿರುತ್ತದೆ. ಈ ದೃಷ್ಟಿಯಿಂದ ಜೀವನದ ಯಾವ ಪ್ರಾಕಾರದಲ್ಲೂ ಸಂಗೀತವನ್ನು ಬಿಡಲಾಗುವುದಿಲ್ಲ.

"ಇಂದು ಸಂಗೀತವೆಂದರೆ ಹಣಕ್ಕೆ ಹಾಡುವ ಗಾಯಕಿಯ ಕಂಠಶೋಷಣೆ ಎಂಬ ಅರ್ಥ ಬರುವಷ್ಟು ಅದು ಅಧೋಗತಿಗಿಳಿದಿದೆ. ಸಂಗೀತ ಪಾಠಶಾಲೆಗಳಿಗೆ ನಮ್ಮ ಸಹೋದರಿಯರನ್ನೂ, ಹೆಣ್ಣು ಮಕ್ಕಳನ್ನೂ ಕಳುಹಿಸಲು ನಾವು ಹಿಂಜರಿಯುತ್ತೇವೆ. ಮಾಧುರ್ಯವಿಲ್ಲದ ಕಂಠ ಅತ್ಯುತ್ತಮವಾದುದೆಂಬ ಮೂಢನಂಬಿಕೆ ಇರುವಂತಿದೆ. ಸಂಗೀತವು ನಿಜವಾಗಿಯೂ ಪ್ರಾಚೀನವಾದ ಪವಿತ್ರಕಲೆ. ಸಾಮವೇದದ ಋಕ್ಕುಗಳು ಸಂಗೀತದ ಗಣಿ. ಕೊರಾನಿನ ಅಯುತ್ ಅನ್ನು ಸುಶ್ರಾವ್ಯವಾಗಿಯೇ ಹೇಳಬೇಕು. ಡೇವಿಡ್‌ನ ಸ್ತೋತ್ರ ಗೀತೆಗಳು ಪರಮಾನಂದಕರವಾಗಿರುತ್ತವೆ; ಅದನ್ನು ಕೇಳು ತ್ತಿದ್ದರೆ ಸಾಮವೇದದ ಋಕ್ಕುಗಳು ನೆನಪಿಗೆ ಬರುತ್ತವೆ. ಈ ಕಲೆಯನ್ನು ಪುನರುಜ್ಜೀವನ ಗೊಳಿಸೋಣ.

"ಸಂಗೀತ ಸಮಾರಂಭಗಳಲ್ಲಿ ಹಿಂದೂ ಮತ್ತು ಮುಸಲ್ಮಾನ ಗಾಯಕರು ಒಟ್ಟಿಗೆ ಕುಳಿತು ಹಾಡುವುದನ್ನು ಕಂಡಿದ್ದೇವೆ. ಜೀವನದ ಇತರ ರಂಗಗಳಲ್ಲಿಯೂ ಇದೇ ರೀತಿಯ ಸೌಹಾರ್ದಪೂರ್ಣ ಒಕ್ಕೂಟವನ್ನು ನಾವು ಕಾಣುವುದು ಎಂದು? ಅದು ಸಾಧಿತವಾದಾಗ ನಮ್ಮ ತಂಟಿಗಳ ಮೇಲೆ ರಾಮ ಮತ್ತು ರಹಮಾನರ ಹೆಸರು ಏಕಕಾಲದಲ್ಲಿ ನಲಿಯುತ್ತದೆ."

ಒಂದು ಸಂದರ್ಭವನ್ನು ಬಿಟ್ಟರೆ ಗಾಂಧಿಯವರು ಅಹಮದಾಬಾದ್ ಬಿಟ್ಟು ಹೊರಗಡೆ ಹೋಗಲಿಲ್ಲ. ಮೇ ತಿಂಗಳಲ್ಲಿ ಬೊಂಬಾಯಿ ಗೌರ್ನರ್ ಅವರನ್ನು ಕಾಣಲು ಮಹಾಬಲೇಶ್ವರಕ್ಕೆ ಹೋಗಿದ್ದರು ಅಷ್ಟೆ. ಕೃಷಿಗೆ ಸಂಬಂಧಿಸಿದ ಸಮಸ್ಯೆಯನ್ನು ಕುರಿತು ಚರ್ಚಿಸಲು ಅವರನ್ನು ಆಹ್ವಾನಿಸಲಾಗಿತ್ತು. ಪ್ರಭುತ್ವದ ಆಯೋಗದೊಂದಿಗೆ ತಾವು ಯಾವ ವಿಧದಲ್ಲೂ ಸಂಬಂಧವಿಟ್ಟುಕೊಳ್ಳಲು ಸಿದ್ಧರಿಲ್ಲವೆಂದು ಗೌರ್ನರ್‌ಗೆ ತಿಳಿಸಿದರು. ಅಸಹಕಾರದಲ್ಲಿ ತಮ್ಮ ಅಭಿಪ್ರಾಯ ದೃಢವಾಗಿರುವುದಾಗಿಯೂ ಆಯೋಗ ಗಳಲ್ಲಿ ತಮಗೆ ನಂಬಿಕೆ ಇಲ್ಲವೆಂದೂ ತಿಳಿಸಿದರು. ಗೌರ್ನರ್ ಜೊತೆ ಭೇಟಿ ಮಾಡಿದ ಎರಡು ಸಂದರ್ಭಗಳಲ್ಲೂ ಗಾಂಧಿಯವರು ವ್ಯವಸಾಯ, ದನಕರುಗಳ ಸಮಸ್ಯೆ, ಮತ್ತು ರಾಟೆ, ಈ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದರು. ವಾಪಸು ಬರುವಾಗ ಕಾಂಗ್ರೆಸ್ ಕಾರ್ಯಕರ್ತರು ಅವರನ್ನು ಅಡ್ಡಹಾಕಿ, "ನೀವು ಅಸಹಕಾರಿ ಎಂದು ಕರೆದು ಕೊಳ್ಳುತ್ತೀರಿ; ಗೌರ್ನರನ್ನು ನೋಡಲು ಹೇಗೆ ಹೋದಿರಿ?" ಎಂದು ಕೇಳಿದರು.

"ನಮ್ಮ ಸಂಹಿತೆಗೆ ವಿರುದ್ಧವಾಗಿ ನಾನು ಏನನ್ನೂ ಮಾಡುವುದಿಲ್ಲವೆಂಬುದನ್ನು ಅಸಹಕಾರಿಗಳು ಸ್ವಾಭಾವಿಕವಾಗಿ ಮನಗಾಣಬೇಕು. ಒಂದು ವೇಳೆ ನಾನು ಹಾಗೆ ಮಾಡಿದರೆ–ನಾನು ತಪ್ಪು ಮಾಡಬಹುದು ಎಂದು ಒಪ್ಪಿಕೊಳ್ಳುತ್ತೇನೆ–ಅವರುಗಳು ನನ್ನನ್ನು ತೊರೆಯಬೇಕು. ಹಾಗೂ ತಮ್ಮ ನಂಬಿಕೆಗಳಿಗನುಸಾರವಾಗಿ ದೃಢವಾಗಿ ನಿಲ್ಲಬೇಕು" ಎಂದು ಗಾಂಧಿಯವರು ಉತ್ತರ ನೀಡಿದರು.

# ವಿಧಾನ ಮಂಡಲದ ಕ್ಷೇತ್ರದಲ್ಲಿ

೧೯೨೬

ದೆಹಲಿಯಲ್ಲಿ ಸೇರಿದ್ದ ಎ.ಐ.ಸಿ.ಸಿ. ಅಧಿವೇಶನವು ೧೯೨೬ರ ಮಾರ್ಚ್ ೨೬ರಂದು 'ಸಭಾಪರಿತ್ಯಾಗ'ದ ನಿರ್ಣಯವನ್ನು ಅಂಗೀಕರಿಸಿತು. ಕಾಂಗ್ರೆಸ್ ಗೊತ್ತುಪಡಿಸಿದ್ಧ ಮಾರ್ಗದಲ್ಲಿ ಮುಂಬರುವ ಮಹಾಚುನಾವಣೆಗಳಿಗೆ ಸಿದ್ಧವಾಗತಕ್ಕದ್ದೆಂದೂ, ಗಾಂಧಿಯವರು ರೂಪಿಸಿದ್ದ ರಚನಾತ್ಮಕ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ ನಿರ್ಣಯವಾಯಿತು.

ಮಾರ್ಚ್ ಎಂಟರಂದು ವಿಧಾನಸಭೆಯಲ್ಲಿ ಮೋತೀಲಾಲ್ ನೆಹರೂ ಹೇಳಿಕೆ ನೀಡಿ, ಸುಧಾರಣೆಗೆ ಸಂಬಂಧಿಸಿದಂತೆ ಸಭಾ ಪರಿತ್ಯಾಗ ಮಾಡಲು ಸ್ವರಾಜ್ಯಪಕ್ಷಕ್ಕೆ ಆದೇಶವಿದೆ ಎಂದು ತಿಳಿಸಿದರು. "ಈ ಠಕ್ಕಿನ ಸಂಸ್ಥೆಗಳಿಂದ ನಮಗೆ ಇನ್ನು ಯಾವ ಪ್ರಯೋಜನವೂ ಇಲ್ಲವೆಂಬುದು ಮನವರಿಕೆಯಾಗಿದೆ. ನಮ್ಮ ದೇಶದ ಘನತೆ ಹಾಗೂ ಆತ್ಮಗೌರವವನ್ನು ಕಾಪಾಡಿಕೊಳ್ಳಲು ನಾವು ಮಾಡಬಹುದಾದ ಕೆಲಸವೆಂದರೆ ಈ ಸಂಸ್ಥೆಗಳಿಂದ ಹೊರಗೆ ಬಂದು ದೇಶಕ್ಕಾಗಿ ದುಡಿಯುವುದು. ರಾಷ್ಟ್ರದ ಒತ್ತಾಯಪೂರ್ವಕ ಕೇಳಿಕೆಗಳನ್ನು ಈಡೇರಿಸಿಕೊಳ್ಳಲು ಅಗತ್ಯವಾದ ಶಕ್ತಿಯನ್ನು ಸಂಚಯಿಸಲು ಪ್ರಯತ್ನಪಡುತ್ತೇವೆ. ಸರ್ಕಾರವು ಮಣಿಯುವಂತೆ ಮಾಡಲು ಅದೊಂದೇ ಮಾರ್ಗ." ಎಂದು ಮೋತಿಲಾಲ್ ನೆಹರೂ ಘೋಷಿಸಿದರು.

ಸ್ವರಾಜ್ಯವಾದಿಗಳು ಒಟ್ಟಾಗಿ ಸಭಾತ್ಯಾಗ ಮಾಡಿ ಹೊರಟು ಹೋದ ಮೇಲೆ ಶಾಸನಸಭೆಯ ಅಧ್ಯಕ್ಷ ವಿಠಲ್‌ಭಾಯ್ ಪಟೇಲ್ ಅವರು ಸಭೆಯನ್ನು ಮಾರನೆಯ ದಿನಕ್ಕೆ ಮುಂದೂಡಿ ಹೀಗೆ ಘೋಷಿಸಿದರು:

"ಇಲ್ಲಿನ ಅತ್ಯಂತ ಬಹುದೊಡ್ಡ ಪಕ್ಷವು ಸಭೆಯಿಂದ ನಿರ್ಗಮಿಸತಕ್ಕ ಪರಿಸ್ಥಿತಿಯುಂಟಾದುದಕ್ಕೆ, ಅಧ್ಯಕ್ಷನಾಗಿ ನಾನು ವಿಷಾದಿಸುತ್ತೇನೆ. ಭಾರತ ಸರ್ಕಾರದ ಕಾನೂನಿನನ್ವಯ ಸಭೆಯು ಪ್ರಾತಿನಿಧ್ಯ ಪೂರ್ಣವಾಗಿರಬೇಕು; ಆದರೆ ಈಗ ಪ್ರಾತಿನಿಧ್ಯದ ಸ್ವರೂಪಕ್ಕೆ ಚ್ಯುತಿಯುಂಟಾಗಿದೆ. ಈಗಿರುವಂತೆ ಶಾಸನ ಸಭೆಯು ಮಾಡುತ್ತಿರುವ ಕೆಲಸ, ಸರ್ಕಾರದ ಕಟ್ಟಳೆಗಳಿಗೆ ಕೇವಲ ಅಂಕಿತ ನೀಡುವುದು. ಇನ್ನೇನೂ ಮಾಡುವುದು ಸಾಧ್ಯವಿಲ್ಲ. ಇದೇ ರೀತಿ ಎಷ್ಟು ದಿನ ಈ ಸಭೆಯು ನಡೆಯಬೇಕೆಂಬುದನ್ನು ಸರ್ಕಾರ ಗಂಭೀರವಾಗಿ ಪರಿಶೀಲಿಸಬೇಕು. ಸಭೆಯು ಹೀಗೆಯೇ ಮುಂದುವರೆಯಬೇಕೆಂದು ಸರ್ಕಾರ ಭಾವಿಸಿದರೆ, ನಾನು ಕೊಡುವ ಸಲಹೆ ಇಷ್ಟು: ಆಡಳಿತ ನಡೆಸಿಕೊಂಡು ಹೋಗಲು ಎಷ್ಟು ಅವಶ್ಯವೋ ಅಷ್ಟು ಮಾತ್ರ ಕಾರ್ಯಕ್ರಮ ಇಟ್ಟುಕೊಳ್ಳಲಿ; ವಿವಾದಾತ್ಮಕವಾದ ವಿಧಿಗಳನ್ನು ಸಭೆಯ ಮುಂದೆ ತರುವುದು ಬೇಡ. ಭಾರತ ಸರ್ಕಾರದ ಕಾನೂನಿನ ಅನ್ವಯ ಜಾರಿಯಲ್ಲಿರುವ ವ್ಯವಸ್ಥೆಯ ದುರುಪಯೋಗದಿಂದ ದೇಶದ

ಜನಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಅಧ್ಯಕ್ಷನ ಕರ್ತವ್ಯ. ಈ ಕರ್ತವ್ಯವನ್ನು ನಿರ್ವಹಿಸಲು ಅಧ್ಯಕ್ಷನಿಗೆ ಸಾಕಷ್ಟು ಅಧಿಕಾರಗಳಿವೆ. ಸಭೆಯನ್ನು ಅನಿರ್ದಿಷ್ಟ ಕಾಲದ ವರೆಗೆ ಮುಂದೂಡಬಹುದು; ಅಥವಾ ಯಾವ ನಿರ್ಣಯವನ್ನಾದರೂ ಸಭೆಯ ಮುಂದೆ ಮಂಡಿಸಲು ನಿರಾಕರಿಸಬಹುದು."

ಅಖಿಲ ಭಾರತ ಹಿಂದೂ ಮಹಾಸಭೆಯ ಅಧಿವೇಶನವು ದೆಹಲಿಯಲ್ಲಿ ಮಾರ್ಚ್ ಹದಿಮೂರರಂದು ಸೇರಿತ್ತು. ಶಾಸನಮಂಡಲಗಳನ್ನು ಪ್ರವೇಶಿಸುವುದರ ಬಗೆಗೆ ಅದು ನಿರ್ಣಯಮಾಡಿತು. "ಹಿಂದೂಗಳ ಹಿತವನ್ನು ರಕ್ಷಿಸಲು ಸೂಕ್ತಕ್ರಮಗಳನ್ನು ಕೈಗೊಳ್ಳಬೇಕು. ಈ ಉದ್ದೇಶಕ್ಕಾಗಿ ಅಗತ್ಯ ಬಿದ್ದರೆ ತಮ್ಮದೇ ಅಭ್ಯರ್ಥಿಗಳನ್ನು ನಿಲ್ಲಿಸತಕ್ಕದ್ದು." ಎಂದು ನಿರ್ಣಯದಲ್ಲಿ ಹೇಳಲಾಯಿತು. ಸಮ್ಮೇಳನದಲ್ಲಿ ಪಂಡಿತ ಮಾಳವೀಯ, ಲಜಪತ್‌ರಾಯ್, ಸ್ವಾಮಿ ಶ್ರದ್ಧಾನಂದ, ಭಾಯ್ ಪರಮಾನಂದ, ಡಾ ಚೊಲುತ್ ರಾಮ್, ಜೈರಾಂದಾಸ್ ದೌಲತ್‌ರಾಂ, ಜಮನಾ ದಾಸ್ ಮೆಹತಾ ಮತ್ತು ಡಾ. ಮೂಂಜೆ ಮುಂತಾದವರು ಭಾಗವಹಿಸಿದ್ದರು. ಸಹಾನುಭೂತಿಯುತವಾದ ಸಹಕಾರ ಕೊಡಬೇಕೆನ್ನುವವರು ಸಮ್ಮೇಳನದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಈ ಅಧಿವೇಶನಕ್ಕೆ ಮೋತಿಲಾಲ್ ನೆಹರೂ ಒಂದು ಟಿಪ್ಪಣಿ ಒಪ್ಪಿಸಿದ್ದರು. ಮಹಾಸಭೆಯ ಧೋರಣೆಯಲ್ಲಿ ಆಗಿರುವ ಬದಲಾವಣೆಯನ್ನು ಅವರು ಟೀಕೆ ಮಾಡಿ ಅದು ಸಮ್ಮತವಲ್ಲವೆಂದು ಹೇಳಿದ್ದರು; ಮಹಾಸಭೆಗೆ ನಿರ್ದಿಷ್ಟ ರಾಜಕೀಯ ಕಾರ್ಯಕ್ರಮ ಇಲ್ಲ; ಅದು ತನ್ನ ವೇದಿಕೆಯ ಮೇಲೆ ವಿವಿಧ ಗುರಿಗಳುಳ್ಳ–ವಿರುದ್ಧ ಗುರಿಗಳುಳ್ಳ ಸಂಘಗಳನ್ನೂಕೂಡ ಒಳಗೊಂಡು–ಸಮಾವೇಶಗೊಳಿಸುತ್ತಿದೆ ಎಂಬ ಅಂಶವನ್ನೂ ಅದರಲ್ಲಿ ನಮೂದಿಸಿದ್ದರು.

ಹಿಂದೂ ಮಹಾಸಭೆಯ ಧೋರಣೆಯಲ್ಲಿ ಕಂಡುಬಂದ ಹೊಸ ತಿರುವಿನ ಬಗ್ಗೆ ಖಿಲಾಫತ್ ಸಮ್ಮೇಳನದಲ್ಲಿ ಪ್ರತಿಕ್ರಿಯೆ ಉಂಟಾಯಿತು. ಮಹಾಸಭೆಯ ಅಧಿವೇಶನವಾದ ಮೂರು ತಿಂಗಳ ಮೇಲೆ ಖಿಲಾಫತ್ ಸಮ್ಮೇಳನ ಸೇರಿತ್ತು. ಅದು ಪ್ರಾತಿನಿಧ್ಯಪೂರ್ಣವಾದ ಸಮ್ಮೇಳನವಾಗಿತ್ತು. ಆಲಿ ಸಹೋದರರು, ಹಕೀಂ ಅಜ್ಮಲ್ ಖಾನ್ ಮತ್ತು ಅಜಾದ್ ಮುಂತಾದವರು ಭಾಗವಹಿಸಿದ್ದರು. ಅಧ್ಯಕ್ಷ ಸುಲೇಮಾನ್‌ನಾಡ್ವಿಯವರು ಮಾತನಾಡುತ್ತಾ, ಸಂಘಟನೆ ಬಗ್ಗೆ ಭಾರತದ ಮುಸಲ್ಮಾನರಿಗೆ ಚಿಂತೆಯಿಲ್ಲ, ಆದರೆ ಶುದ್ಧಿಯ ಮಾತು ಅವರಿಗೆ ಆತಂಕವುಂಟು ಮಾಡುತ್ತದೆ, ಎಂದು ನುಡಿದರು. ಮಹಮ್ಮದ್ ಆಲಿಯವರು ತಬ್‌ಲಿಗ್ ಅನ್ನು ಸಮರ್ಥಿಸಿ ಮಾತನಾಡುತ್ತಾ ಮುಸ್ಲಿಮೇತರರನ್ನು ಇಸ್ಲಾಂಗೆ ಪರಿವರ್ತನೆ ಮಾಡುವುದು ಪ್ರತಿಯೊಬ್ಬ ಮುಸಲ್ಮಾನನ ಕರ್ತವ್ಯವೆಂದು ಹೇಳಿದರು. ಗಾಂಧಿಯವರನ್ನು ಇಸ್ಲಾಂಗೆ ಪರಿವರ್ತನೆ ಮಾಡುವ ದಿನಕ್ಕಾಗಿ ತಾವು ಮೊರೆಯಿಡುತ್ತಿರುವುದಾಗಿ ಹೇಳಿದರು. ಶೌಕತ್ ಆಲಿಯವರು ಖಿಲಾಫತ್‌ನ ಸದಸ್ಯರನ್ನು ಪ್ರಶಂಸಿಸಿದರು; ಹಿಂದೂಗಳ ವರ್ತನೆ ಹೇಗೇ ಇದ್ದರೂ ಅದನ್ನು ಗಮನಿಸದೆ ರಾಷ್ಟ್ರೀಯ ಧ್ಯೇಯ ಸಾಧನೆಗಾಗಿ ಖಿಲಾಫತರು ಮಾಡುತ್ತಿರುವ ಸೇವೆಯನ್ನು ಕೊಂಡಾಡಿದರು. ಹಿಂದೂಗಳಾಗಲೀ ಅಥವಾ ಬೇರೆ ಪಂಗಡದವರಾಗಲೀ ಮುಸಲ್ಮಾನರ

ಮೇಲೆ ಬಿದ್ದರೆ ಮುಸಲ್ಮಾನರು ಅದೇ ರೀತಿಯಲ್ಲಿ ಅವರಿಗೆ ಹಿಂದಿರುಗಿಸಬೇಕೆಂದು ಒತ್ತಾಯ ಮಾಡಿದರು. ಈ ಕೋಮುವಾರು ಗೊಂದಲವನ್ನು ಅಂಟಿಸಿಕೊಳ್ಳದೆ ಅಜಾದರು ದೂರ ಇದ್ದರು. ಡಾ. ಅನ್ಸಾರಿಯವರು ಮುಸ್ಲಿಂ ಲೀಗಿನ ಸದಸ್ಯತ್ವವನ್ನು ಬಿಟ್ಟಿರುವುದಾಗಿ ಘೋಷಿಸಿದರು; ಮತ್ತಾವುದೇ ಕೋಮುವಾರು ಪಕ್ಷದಲ್ಲಿ ಇರುವುದಿಲ್ಲ ವೆಂದೂ ಹೇಳಿದರು.

ಸಹಾನುಭೂತಿಯುತ ಸಹಕಾರ ನೀಡಬಯಸುವವರು ಸ್ವತಂತ್ರರೊಂದಿಗೆ ಸೇರಿ ಭಾರತೀಯ ರಾಷ್ಟ್ರೀಯ ಪಕ್ಷವನ್ನು ಏಪ್ರಿಲ್ ೩ರಂದು ಸ್ಥಾಪಿಸಿದರು. ಹೊಸ ಪಕ್ಷದ ರಚನೆಯು ಸ್ವರಾಜ್ಯಪಕ್ಷಕ್ಕೆ ಸವಾಲಾಗಿದೆಯೆಂದು ಮೋತಿಲಾಲ್ ನೆಹರೂ ಭಾವಿಸಿದರು.

ಸ್ವರಾಜ್ಯಪಕ್ಷದ ಉಭಯ ಪಂಗಡಗಳ ಸಭೆಯು ಏಪ್ರಿಲ್ ೨೦ರಂದು ಸಬರ್ ಮತಿಯಲ್ಲಿ ಸೇರಿತ್ತು. ಗಾಂಧೀಜಿ, ಶ್ರೀಮತಿ ನಾಯ್ಡು, ಮೋತಿಲಾಲ್ ನೆಹರೂ, ಲಜಪತ್‌ರಾಯ್, ಕೇಲ್ಕರ್, ಜಯಕರ್, ಆಣೆ ಮತ್ತು ಡಾ. ಮೂಂಜೆಭಾಗವಹಿಸಿದ್ದರು. "ಪ್ರಾಂತಗಳಲ್ಲಿ ಮಂತ್ರಿಗಳು ಪರಿಣಾಮಕಾರಿಯಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ಸೂಕ್ತ ಅಧಿಕಾರ, ಜವಾಬ್ದಾರಿ ಮತ್ತು ಸವಲತ್ತುಗಳನ್ನು ಕೊಡು ವುದಾದಲ್ಲಿ ಸ್ವರಾಜ್ಯಪಕ್ಷವು ೧೯೨೪ರ ಫೆಬ್ರುವರಿಯಲ್ಲಿ ಮಂಡಿಸಿದ್ದ ಬೇಡಿಕೆಗೆ ಸಮಾಧಾನ ಕರ ಪ್ರತಿಕ್ರಿಯೆ ಸರ್ಕಾರದಿಂದ ಬಂದಂತೆ ಎಂಬುದಾಗಿ ಭಾವಿಸತಕ್ಕದ್ದು" ಎಂದು ಸಭೆ ಯಲ್ಲಿ ತೀರ್ಮಾನವಾಯಿತು.

ನಿಷ್ಠ ಕಾಂಗ್ರೆಸ್ಸಿಗರು ಸಬರಮತಿ ಒಪ್ಪಂದವನ್ನು ಪ್ರತಿಭಟಿಸಿದರು. ಸ್ವರಾಜ್ಯ ವಾದಿಗಳು ಮುಂದಾಗಿ ಮಂತ್ರಿಮಂಡಲಗಳನ್ನು ರಚಿಸುತ್ತಾರೆಂಬ ಭಾವನೆ ಮೂಡಿತು. ಮೋತಿಲಾಲ್ ನೆಹರೂರವರು ಸ್ಪಷ್ಟೀಕರಣ ನೀಡಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು. ಅಧಿಕಾರವನ್ನು ಸ್ವೀಕರಿಸುವುದಕ್ಕೆ ಮುನ್ನ ಮೂರು ಷರತ್ತುಗಳು ಈಡೇರಬೇಕೆಂದು ಅವರು ಹೇಳಿದರು. ಮೊದಲನೆಯದಾಗಿ, ಮಂತ್ರಿಗಳು ಪೂರ್ಣವಾಗಿ ವಿಧಾನ ಮಂಡಲ ಗಳಿಗೆ ಜವಾಬ್ದಾರರಾಗಿರಬೇಕು; ಸರ್ಕಾರದ ನಿಯಂತ್ರಣ ಲೇಶವೂ ಇರಕೂಡದು; ಎರಡನೆಯದಾಗಿ, ಆದಾಯದಲ್ಲಿ ಗಣನೀಯ ಪ್ರಮಾಣದಷ್ಟು ಹಣವನ್ನು ರಾಷ್ಟ್ರ ನಿರ್ಮಾಣದ ಇಲಾಖೆಗಳ ಬೆಳವಣಿಗೆಗೆ ಒದಗಿಸಬೇಕು; ಮೂರನೆಯದಾಗಿ, ತಮಗೆ ಸಂಬಂಧಿಸಿದ ಇಲಾಖೆಗಳ ನೌಕರರ ಮೇಲೆ ಮಂತ್ರಿಗಳಿಗೆ ಪೂರ್ಣ ಹತೋಟಿಯಿರಬೇಕು.

ನೆಹರೂರವರು ಸಬರಮತಿ ಒಪ್ಪಂದವನ್ನು ತಲೆಕೆಳಗುಮಾಡಿ ಅದನ್ನು ಪೂರ್ಣ ವಾಗಿ ನಿರಾಕರಿಸಿದ್ದಾರೆ, ಎಂದು ಜಯಕರ್ ಹೇಳಿದರು. ಸಬರಮತಿ ಒಪ್ಪಂದವನು ಅನುಮೋದಿಸಲು ಮೇ ೪ರಂದು ಎ.ಐ.ಸಿ.ಸಿ. ಅಹಮದಾಬಾದಿನಲ್ಲಿ ಸೇರಿತ್ತು. ಸಹಾನು ಭೂತಿಯ ಸಹಕಾರ ನೀಡಬೇಕೆನ್ನುವ ಬಣದವರು ಅಧಿವೇಶನದಲ್ಲಿ ಭಾಗವಹಿಸಲಿಲ್ಲ. ಒಪ್ಪಂದಕ್ಕೆ ಸಹಿಮಾಡಿದ ಪ್ರತಿಯೊಂದು ಗುಂಪಿನವರೂ ತಮಗೆ ತೋರಿದ ರೀತಿಯಲ್ಲಿ ಅರ್ಥಮಾಡಿಕೊಂಡು ಸಹಿ ಮಾಡಿದರೆಂದೂ ಅವರುಗಳ ದೃಷ್ಟಿಕೋನದಲ್ಲಿ ಭೇದ ವಿತ್ತೆಂದೂ ಮೋತಿಲಾಲ್ ನೆಹರೂ ಹೇಳಿದರು. ಸುಧಾರಣೆಗಳಲ್ಲಿ ಅಡಕವಾಗಿದ್ದ

ಒಳ್ಳೆಯ ಅಂಶಗಳನ್ನು ತೆಗೆದುಕೊಂಡು ಅವನ್ನು ಕಾರ್ಯಗತಮಾಡಬೇಕೆಂಬ ದೃಷ್ಟಿಯಿಂದ ಸಹಕಾರದ ಬಣದವರು ಒಪ್ಪಂದವನ್ನು ಸಮರ್ಥಿಸಿದ್ದರು. ಆದರೆ ನೆಹರೂ ದೃಷ್ಟಿ ಬೇರೆಯದಾಗಿತ್ತು. ಫರೀದ್‌ಪುರದ ಭಾಷಣದಲ್ಲಿ ಸಿ. ಆರ್. ದಾಸ್ ಮಂಡಿಸಿದ್ದ ಷರತ್ತುಗಳನ್ನು ಸರ್ಕಾರ ಒಪ್ಪುವುದಾದರೆ ಮಾತ್ರ ಸಹಕಾರ ನೀಡಬೇಕೆಂದು ಅವರು ವಾದಿಸಿದರು. ಹೀಗಾಗಿ ಸಬರಮತಿ ಒಪ್ಪಂದ ಕಾರ್ಯಗತವಾಗದೆ ರದ್ದಾಯಿತು.

ಎಲ್ಲ ಪ್ರಾಂತಗಳಲ್ಲೂ ಪ್ರತ್ಯೇಕತಾ ಪ್ರವೃತ್ತಿ ಕಂಡು ಬಂದಿತು. ಆಗಸ್ಟ್ ಏಳರಂದು ಲಾಲಾ ಲಜಪತ್‌ರಾಯ್ ಸ್ವರಾಜ್ಯಪಕ್ಷಕ್ಕೆ ರಾಜೀನಾಮೆ ನೀಡಿದರು. ಆ ಪಕ್ಷವನ್ನು ವಿರೋಧಿಸುವ ಸಲುವಾಗಿ ಸ್ವತಂತ್ರ ಕಾಂಗ್ರೆಸ್ ಪಕ್ಷದ ಸ್ಥಾಪನೆಗೆ ಅವರು ಮಾಳವೀಯರಿಗೆ ಸಹಾಯ ಮಾಡಿದರು. ಹೊಸ ಪಕ್ಷವು ಹೆಚ್ಚು ಮಂದಗಾಮಿಯಾಗಿತ್ತು. ಸ್ವರಾಜ್ಯ ಪಕ್ಷಕ್ಕಿಂತ ಮಿಗಿಲಾಗಿ ಬಲಪಂಥದ ಜಾಡನ್ನು ಹಿಡಿದಿತ್ತು. ಅಷ್ಟೇ ಅಲ್ಲದೆ ಅದು ಪೂರ್ಣವಾಗಿ ಹಿಂದೂಗಳ ಪಕ್ಷವಾಗಿದ್ದು ಹಿಂದೂ ಮಹಾಸಭೆಯೊಂದಿಗೆ ಸಹಕರಿಸಿ ಕೆಲಸಮಾಡುತ್ತಿತ್ತು. ಲಾಲಾ ಲಜಪತ್‌ರಾಯ್‌ರವರು ತಮ್ಮ ಚುನಾವಣಾ ಭಾಷಣಗಳಲ್ಲಿ ಸ್ವರಾಜ್ಯವಾದಿಗಳನ್ನು–ಅದರಲ್ಲೂ ಮುಖ್ಯವಾಗಿ ನೆಹರೂರವರನ್ನು–ತೀವ್ರವಾಗಿ ಟೀಕಿಸಿದರು. ಅವರುಗಳು ಕಾಬೂಲಿನೊಂದಿಗೆ ಸಂಚು ನಡೆಸುತ್ತಿದ್ದಾರೆಂದು ಆರೋಪ ಮಾಡಿದರು. ಇದೊಂದು ನಿರುತ್ಸಾಹಕ ವಿದ್ಯಮಾನವಾಗಿತ್ತು. ಈ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ಗಾಂಧಿಯವರಿಗೆ ಏನೂ ಮಾಡಲಾಗಲಿಲ್ಲ. ಅವರು ಹೀಗೆ ಬರೆದರು:

“ಮೋತಿಲಾಲ್‌ಜಿ ಮತ್ತು ಲಾಲಾಜಿ ನಡುವೆ ನಡೆಯುತ್ತಿರುವ ಕುತ್ಸಿತ ವಾಗ್ವಾದವು ಹೋರಾಟದ ಒಂದು ಮುಖ ಅಷ್ಟೆ. ಭಾರತ ಸ್ವಾತಂತ್ರ್ಯದ ಶತ್ರುಗಳು ಈ ಭಿನ್ನಾಭಿಪ್ರಾಯಗಳನ್ನು ನೋಡಿ ಬೇಕಾದಷ್ಟು ನಲಿಯಲಿ. ಅವರ ನಲಿದಾಟ ಮುಗಿಯುವುದರೊಳಗಾಗಿಯೇ ಈ ದೇಶಭಕ್ತರು ಒಂದೇ ಧ್ವಜದಡಿಯಲ್ಲಿ ಕೆಲಸ ಮಾಡುತ್ತಾ ಇರುತ್ತಾರೆ. ಅವರಿಬ್ಬರೂ ದೇಶಪ್ರೇಮಿಗಳು. ಕೋಮುವಾರು ಭಾವನೆ ತಾಳದೆ ವಿಧಿಯಿಲ್ಲ ಎಂದು ಲಾಲಾಜಿ ಭಾವಿಸಿದ್ದಾರೆ. ಪಂಡಿತ್‌ಜೀ ಆ ರೀತಿ ಯೋಚನೆಯನ್ನು ಮಾಡರು. ಇವರಲ್ಲಿ ಒಬ್ಬರದು ಮಾತ್ರ ಸರಿ ಎಂದು ಯಾರು ಹೇಳಬಲ್ಲರು? ಎರಡೂ ದೃಷ್ಟಿಕೋನಗಳು ಇಂದಿನ ವಾತಾವರಣದಿಂದ ಮೂಡಿಬಂದಿರತಕ್ಕವು. ಲಾಲಾಜಿಯವರು ಸ್ವರಾಜ್ಯ ಎನ್ನುವ ಪದವನ್ನು ನಾಲಿಗೆಯ ಮೇಲಿಟ್ಟುಕೊಂಡೇ ಸಾರ್ವಜನಿಕ ಜೀವನ ಪ್ರವೇಶಿಸಿದವರು. ಈಗ ಅದರ ದ್ವೇಷಿಯಾಗಲು ಸಾಧ್ಯವಿಲ್ಲ. ಕೋಮುವಾರು ಭಾವನೆಯು ನಮ್ಮ ಬೆಳವಣಿಗೆಯ ಅತ್ಯಗತ್ಯವಾದ ಮಜಲು ಎಂದು ಅವರ ಭಾವನೆ. ಆ ಕೋಮುವಾರು ಮಾರ್ಗದಿಂದಲೇ ಸ್ವರಾಜ್ಯವನ್ನು ಮುಟ್ಟಲು ಅವರು ಯೋಚಿಸುತ್ತಿದ್ದಾರೆ. ಕೋಮುವಾರು ಭಾವನೆಯು ಸ್ವರಾಜ್ಯಕ್ಕೆ ಅಡ್ಡಿ ಎಂದು ಪಂಡಿತ್‌ಜೀ ಭಾವಿಸುತ್ತಾರೆ. ಆರೋಗ್ಯವೇ ಜೀವನದ ನಿಯಮ, ಅನಾರೋಗ್ಯವಲ್ಲ, ಎಂಬ ಭಾವನೆಯಿಂದ ಸ್ವಯಂ ಪ್ರೇರಣಾವಾದಿಗಳು ವ್ಯಾಧಿಯನ್ನು ನಿರ್ಲಕ್ಷಿಸುವ

ರೀತಿಯಲ್ಲಿ ಅವರು ಕೋಮುವಾದವನ್ನು ಉಪೇಕ್ಷಿಸುತ್ತಾರೆ. ನಮ್ಮ ರಾಷ್ಟ್ರವು ಸರ್ ಅಬ್ದುಲ್ ರಹೀಂರನ್ನಾಗಲೀ ಹಕೀಂ ಅಜ್ಮಲ್ ಖಾನ್‌ರನ್ನಾಗಲೀ ಬಿಟ್ಟುಕೊಡಲಾರದು. ಗೋಖಲೆಯುವರೊಡಗೂಡಿ ಇಸ್ಲಿಂಗ್‌ಟನ್ ಆಯೋಗದ ಬಗ್ಗೆ ಮಹತ್ವಪೂರ್ಣ ಟಿಪ್ಪಣಿ ಬರೆದ ಸರ್ ಅಬ್ದುಲ್ ರಹೀಂರವರು ದೇಶದ ಶತ್ರುವಲ್ಲ. ಹಿಂದೂಗಳೊಡನೆ ಸರಿಸಮಾನರಾಗಿ ಮುಸಲ್ಮಾನರು ಸ್ಪರ್ಧಿಸದಿದ್ದರೆ ದೇಶದ ಪ್ರಗತಿಯಾಗುವುದಿಲ್ಲ, ಎಂದು ಅವರು ಭಾವಿಸಿದರೆ ಅವರನ್ನು ದೂಷಿಸಲಾಗುತ್ತದೆಯೆ? ಅವರು ಅನುಸರಿಸುತ್ತಿರುವ ಮಾರ್ಗ ತಪ್ಪಿರಬಹುದು. ಆದರೆ ಅವರು ಸ್ವತಂತ್ರಪ್ರಿಯರೂ ಹೌದು. ಈ ಎಲ್ಲ ವಿಚಾರ ಪ್ರಣಾಳಿಗಳೂ ನನ್ನ ಮನಸ್ಸಿನಲ್ಲಿ ಎಡೆಕೊಟ್ಟರೂ ನನಗೆ ಕಾಣುವ ದಾರಿ ಒಂದೇ. ಕೋಮುವಾರು ಭಾವನೆಯಲ್ಲಿ ನನಗೆ ನಂಬಿಕೆ ಇಲ್ಲ. ಅದನ್ನು ಒಂದು ಮಜಲು ಎಂದು ಹೇಳಿದರೂ ಅದನ್ನು ನಾನು ನಂಬುವುದಿಲ್ಲ. ಇನ್ನೂ ಮುಂದೆ ಹೋಗಿ ಹೇಳುವುದಾದಲ್ಲಿ, ಆ ಮಜಲಿನಲ್ಲಿ ನಿಂತು ಕೆಲಸ ಮಾಡುವ ಸಾಮರ್ಥ್ಯ ನನಗಿಲ್ಲ. ಆದುದರಿಂದ ಈ ಬಿರುಗಾಳಿಯೆಲ್ಲಾ ಮುಗಿದು ಪುನರ್ ನಿರ್ಮಾಣದ ಕಾರ್ಯ ಆರಂಭವಾಗುವ ವರೆಗೆ ನಾನು ನನ್ನ ಶಕ್ತಿಯನ್ನು ಹೀಗೆಯೇ ಕಾಪಾಡಿಕೊಂಡು ದೂರ ಇರುತ್ತೇನೆ.

"ವಿಧಾನ ಮಂಡಲಗಳಲ್ಲಿ ನಡೆಯುವ ಹೋರಾಟವನ್ನು ಸಾಕಷ್ಟು ದೂರದಲ್ಲೇ ನಿಂತು ವೀಕ್ಷಿಸಬಲ್ಲೆ. ಅವುಗಳಲ್ಲಿ ನಂಬಿಕೆಯನ್ನಿಟ್ಟು ಉತ್ಸಾಹದಿಂದ ಕಾರ್ಯನಿರ್ವಹಿಸುವವರನ್ನು ನಾನು ಗೌರವಿಸುತ್ತೇನೆ.

"ಭಾರತದ ವಿದ್ಯಾವಂತ ಜನರು ಸಿಡಿದುಹೋಗಿ ಬೇರೆ ಬೇರೆ ಪಕ್ಷಗಳಲ್ಲಿದ್ದಾರೆ. ಈ ಪಕ್ಷಗಳನ್ನು ಒಂದುಗೂಡಿಸಲು ನಾನು ಅಸಮರ್ಥ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅವರ ವಿಧಾನವೇ ಬೇರೆ; ನನ್ನದೇ ಬೇರೆ. ತಳದಿಂದ ಮೇಲಕ್ಕೆ ನಿರ್ಮಾಣಮಾಡಲು ನಾನು ಪ್ರಯತ್ನಿಸುತ್ತಿದ್ದೇನೆ. ಇದು ತೀರಾ ನಿಧಾನದ ಕೆಲಸ ಎಂದು ಹೊರಗಿನಿಂದ ನೋಡುವವರು ಭಾವಿಸುತ್ತಾರೆ. ಅವರುಗಳು ಮೇಲಿನಿಂದ ಆರಂಭಿಸಿ ಕೆಳಕ್ಕೆ ಬರುವ ವಿಧಾನದಲ್ಲಿ ಕೆಲಸಮಾಡುತ್ತಿದ್ದಾರೆ—ಈ ವಿಧಾನ ನನ್ನದಕ್ಕಿಂತ ತೀರ ಕ್ಲಿಷ್ಟವೂ ತೊಡಕಿನದೂ ಆಗಿದೆ."

ನವೆಂಬರ್‌ನಲ್ಲಿ ಮಹಾಚುನಾವಣೆಗಳು ನಡೆದುವು. ಕೋಮುವಾರು ಭಾವನೆಯ ಬೆಳವಣಿಗೆಯಿಂದಾಗಿ ಸ್ವರಾಜ್ಯಪಕ್ಷಕ್ಕೆ ಹಾನಿಯುಂಟಾಯಿತು. ಕೆಲವು ಮುಸಲ್ಮಾನ ಸದಸ್ಯರು ಪಕ್ಷವನ್ನು ತ್ಯಜಿಸಿ ಕೋಮುವಾರು ಸಂಸ್ಥೆಗಳಿಗೆ ಸೇರಿದರು. ಕೆಲವು ಮಂದಿ ಹಿಂದೂಗಳು ರಾಷ್ಟ್ರೀಯ ಪಕ್ಷವನ್ನು ಸೇರಿದರು. ಲಾಲಾ ಲಜಪತ್‌ರಾಯ್ ಮತ್ತು ಪಂಡಿತ ಮಾಳವೀಯರು ಒಟ್ಟಾಗಿ ಹಿಂದೂ ಮತದಾರರ ಮೇಲೆ ತುಂಬಾ ಪ್ರಭಾವ ಬೀರಿದರು. ಸ್ವರಾಜ್ಯಪಕ್ಷ ಅಥವಾ ಕಾಂಗ್ರೆಸ್ಸಿನ ಪರವಾಗಿ ಚುನಾವಣೆಯಲ್ಲಿ ಹೋರಾಡುವ ಭಾರ ಮೋತಿಲಾಲ್ ನೆಹರೂ ಮೇಲೆ ಬಿತ್ತು. ವಿರೋಧಿಗಳ ಬಲಸಂವರ್ಧನೆಯಾಗಿದ್ದುದರಿಂದ ನೆಹರೂರವರು ತಮ್ಮ ಸರ್ವಶಕ್ತಿಯನ್ನೂ ಚುನಾವಣಾ ಪ್ರಚಾರಕ್ಕೆ

ವಿನಿಯೋಗಿಸಬೇಕಾಗಿತ್ತು. ಆದರೂ ರಾಷ್ಟ್ರೀಯ ಪಕ್ಷಕ್ಕೆ ಮಹತ್ವಪೂರ್ಣ ಯಶಸ್ಸು ದೊರಕಿತು. ಪಂಜಾಬ್ ವಿಧಾನಸಭೆಗೆ ಒಬ್ಬನಾದರೂ ಹಿಂದೂ ಅಥವಾ ಮುಸಲ್ಮಾನ ಸದಸ್ಯ ಸ್ವರಾಜ್ಯ ಪಕ್ಷದಿಂದ ಗೆಲ್ಲಲಿಲ್ಲ. ಲಜಪತರಾಯ್ ಪ್ರಚಂಡ ಬಹುಮತದಿಂದ ಗೆದ್ದರು. ಯು.ಪಿ.ಯಲ್ಲಿ ಮೋತಿಲಾಲ್‌ನೆಹರೂ ಬಿಟ್ಟರೆ ಯಾವೊಬ್ಬ ಸ್ವರಾಜ್ಯ ವಾದಿಯೂ ಗೆಲ್ಲಲಿಲ್ಲ. ಮಧ್ಯಪ್ರಾಂತ್ಯದಲ್ಲಿ ಸ್ವರಾಜ್ಯವಾದಿಗಳಿಗೆ ಲಭಿಸಿದ್ದು ಒಂದೇ ಸ್ಥಾನ. ಸ್ವರಾಜ್ಯವಾದಿಗಳು ಪೂರ್ಣವಾಗಿ ಸೋತು ಹೋದರು. ಸಹಾನುಭೂತಿಯ ಸಹಕಾರ ನೀಡಬೇಕೆನ್ನುವವರು ಮದ್ರಾಸ್ ಬಿಟ್ಟು ಮಿಕ್ಕೆಲ್ಲ ಕಡೆ ಸುಲಭವಾಗಿ ಆಯ್ಕೆ ಯಾದರು.

ಚುನಾವಣೆಯ ಸಮಯದಲ್ಲಿ ಪ್ರಚೋದಿತವಾದ ಕೋಮುವಾರು ಭಾವನೆಯು ಕಹಿ ಅಳಿಯಲಿಲ್ಲ. ಒಂದಕ್ಕಿಂತ ಹೆಚ್ಚು ಪ್ರಾಂತದಲ್ಲಿ ಕೋಮುವಾರು ಮಂತ್ರಿಮಂಡಲ ಗಳು ರಚಿತವಾದುವು. ಮುಸಲ್ಮಾನ ಮಂತ್ರಿಮಂಡಲಗಳ ಮೂಲಕ ಸುಧಾರಣೆಗಳನ್ನು ಕಾರ್ಯಗತಮಾಡುವ ಉದ್ದೇಶದಿಂದ ಅಧಿಕಾರವರ್ಗದವರೂ ನಾಮಕರಣ ಸದಸ್ಯರೂ ಪ್ರಯತ್ನಗಳನ್ನು ಮಾಡುತ್ತಿದ್ದರು. ಇದರಿಂದ ಪಂಜಾಬ್, ಬಂಗಾಲ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿನ ಹಿಂದೂಗಳಲ್ಲಿ ಭೀತಿ ತಲೆದೋರಿತು. ಹಿಂದೂಗಳು ಶುದ್ಧಿ ಮತ್ತು ಸಂಘಟನೆ ಕಾರ್ಯಕ್ರಮವನ್ನು ಕೈಗೊಂಡರು. ಮುಸಲ್ಮಾನರೂ ಸ್ಪರ್ಧೆಗಿಳಿದರು. ಕೋಮುವಾರು ಭೇದಗಳು ಉಲ್ಬಣಿಸಿ ರಕ್ತಪಾತಕ್ಕೆಡೆಯಾಯಿತು.

ಈ ವರ್ಷ ಮೂವತ್ತೈದು ಹಿಂದೂ–ಮುಸ್ಲಿಂ ಘರ್ಷಣೆಗಳು ನಡೆದುವು. ದೇಶದಲ್ಲಿ ನಿರಾಶೆಯ ವಾತಾವರಣ ಮೂಡಿತ್ತು. ಗಾಂಧಿಯವರು ಮಾತ್ರ ನಿರಾಶರಾಗಲಿಲ್ಲ

"ಹಿಂದೂ–ಮುಸ್ಲಿಂ ಜಗಳಗಳು ಒಂದು ರೀತಿಯಲ್ಲಿ ಸ್ವರಾಜ್ಯಕ್ಕೆ ನಡೆಯುವ ಹೋರಾಟ; ನಮಗೆ ಅರಿವಿಲ್ಲದೆಯೇ ಆಗುತ್ತಿರುವ ಹೋರಾಟ. ಸ್ವರಾಜ್ಯ ಬರುತ್ತದೆ ಎಂಬ ಅರಿವು ಪ್ರತಿಯೊಂದು ಪಕ್ಷಕ್ಕೂ ಇದೆ. ಅದು ಬಂದಾಗ್ಗೆ ಅದನ್ನು ನಿರ್ವಹಿಸಲು ಸಮರ್ಥವಾಗಿರಬೇಕೆಂದು ಪ್ರತಿಯೊಂದು ಪಕ್ಷವೂ ಬಯಸುತ್ತದೆ. ತಾವು ದೈಹಿಕವಾಗಿ ಮುಸಲ್ಮಾನರಿಗಿಂತ ದುರ್ಬಲರು ಎಂದು ಹಿಂದೂಗಳು ಭಾವಿಸುತ್ತಾರೆ; ಮುಸ್ಲಿಮರು ತಾವು ಶೈಕ್ಷಣಿಕ ಹಾಗೂ ಐಹಿಕ ಸಾಧನೆಗಳಲ್ಲಿ ಹಿಂದುಳಿದಿರುವುದಾಗಿ ಭಾವಿಸುತ್ತಾರೆ. ದುರ್ಬಲರು ಇದುವರೆಗೆ ನಡೆದು ಬಂದ ರೀತಿಯಲ್ಲೇ ಇವರುಗಳೂ ನಡೆಯುತ್ತಿದ್ದಾರೆ. ಈ ಹೋರಾಟ ಎಷ್ಟೇ ದುರದೃಷ್ಟಕರವೆಂದು ಭಾವಿಸಲ್ಪಟ್ಟರೂ ಅದು ಒಂದು ಬೆಳವಣಿಗೆಯ ಲಕ್ಷಣ. 'ವಾರ್ ಆಫ್ ರೋಸಸ್'ನಂತೆ ಇದು. ಇದರಿಂದ ಬಲಾಢ್ಯ ದೇಶದ ಉದಯವಾಗುತ್ತದೆ. ಈ ರಕ್ತಪಾತದ ಮಾರ್ಗಕ್ಕಿಂತ ಉತ್ತಮವಾದ ಮಾರ್ಗ ೧೯೨೦ರಲ್ಲಿ ಗೋಚರವಾಗಿತ್ತು. ಆದರೆ ಅದನ್ನು ನಾವು ರೂಢಿಸಿಕೊಳ್ಳಲಿಲ್ಲ. ಅಸಹಾಯ ಕತೆ ಹಾಗೂ ಪೌರುಷ ಹೀನತೆಗಿಂತ ರಕ್ತಪಾತದ ಮಾರ್ಗ ಎಷ್ಟೋ ಉತ್ತಮ."

ಡಿಸೆಂಬರ್ ೨ ರಂದು ಗಾಂಧಿಯವರು ತಮ್ಮ ಮೌನವನ್ನು ಅಂತ್ಯಗೊಳಿಸಿದರು.

ಅವರ ಶೀಘ್ರಗತಿಯ ಪ್ರವಾಸ ಆರಂಭವಾಯಿತು. ಗೌಹತಿ ಕಾಂಗ್ರೆಸ್ ಅಧಿವೇಶನಕ್ಕೆ ಹೋಗುವ ಮಾರ್ಗದಲ್ಲಿ ಅಮ್ರೋತಿ, ನಾಗಪುರ ಮತ್ತು ಗೊಂಡಿಯಾಗಳಿಗೆ ಭೇಟಿ ಕೊಟ್ಟರು. ಅವರ ಭಾಷಣಗಳಲ್ಲಿ ಹಿಂದಿನ ಕಾರ್ಯಕ್ರಮವನ್ನು ಪುನರುಚ್ಚರಿಸಿದರು. ಅವರ ಮೊದಲನೆ ಮಹತ್ವಪೂರ್ಣ ಭಾಷಣ ಆದದ್ದು ವಾರ್ಧಾದಲ್ಲಿ.

"ವರ್ಷ ಪರ್ಯಂತ ಮೌನದಿಂದ ಇದ್ದಾಗ ನಾನು ಆಳವಾಗಿ ಚಿಂತನ ಮಾಡಿದ್ದೇನೆ; ಅದರ ಪರಿಣಾಮ ಈ ನನ್ನ ತೀರ್ಮಾನ. ತ್ರಿವಿಧದ ಕಾರ್ಯಕ್ರಮವನ್ನು ಪೂರ್ಣ ಗೊಳಿಸಿದರೆ ಸ್ವರಾಜ್ಯವನ್ನೇ ಏಕೆ, ರಾಮರಾಜ್ಯವನ್ನೂ ಪಡೆಯಬಹುದು. ಈ ಕಾರ್ಯ ಕ್ರಮದಲ್ಲಿ ಸ್ತ್ರೀ ಪುರುಷರು, ಹಿರಿಯರು ಮತ್ತು ಕಿರಿಯರು, ಹಿಂದೂಗಳು, ಮುಸಲ್ಮಾನರು ಕ್ರೈಸ್ತರು, ಸರ್ಕಾರಿ ನೌಕರರು, ಎಲ್ಲರೂ ಭಾಗವಹಿಸಬಹುದು. ಹಿಂದೂ–ಮುಸ್ಲಿಂ ಐಕ್ಯತೆ ಇಲ್ಲದಿದ್ದರೆ, ಅಸ್ಪೃಶ್ಯತೆಯ ಶಾಪಕ್ಕೆ ನಾವಿನ್ನೂ ಬಲಿಯಾಗಿದ್ದರೆ, ಮತ್ತು ಮಧ್ಯಮವರ್ಗದ ಜನರು ಸ್ವದೇಶಿ ತತ್ತ್ವವನ್ನು ಮನಗಾಣದಿದ್ದರೆ ಸ್ವರಾಜ್ಯ ನಮಗೆ ದಕ್ಕುವುದೇ ಇಲ್ಲ. ಈ ಬಗ್ಗೆ ನನ್ನ ನಂಬಿಕೆ ಎಂದಿಗಿಂತ ಹೆಚ್ಚು ದೃಢವಾಗಿದೆ. ಮೊಂಡತನ ದಿಂದಾಗಲೀ ವಕ್ರದೃಷ್ಟಿಯಿಂದಾಗಲಿ ಈ ತ್ರಿವಿಧ ಕಾರ್ಯಕ್ರಮಕ್ಕೆ ಅಂಟಿಕೊಂಡಿ ದ್ದೇನೆಂದು ಭಾವಿಸಬೇಡಿ. ಸತ್ಯ ಮತ್ತು ಅಹಿಂಸೆ–ಇವೆರಡನ್ನೂ ಬಿಡಲಾರೆ. ಇವು ಹೊರತಾಗಿ, ದೇಶಕ್ಕಾಗಿ ನಾನು ಏನನ್ನಾದರೂ ತ್ಯಾಗಮಾಡಲು ಸಿದ್ಧ. ಇಡೀ ಜಗತ್ತನ್ನೇ ಕೊಡುತ್ತೇನೆಂದರೂ ಸತ್ಯ ಮತ್ತು ಅಹಿಂಸೆಯನ್ನು ನಾನು ತೊರೆಯಲಾರೆ. ನನಗೆ ಸತ್ಯವೇ ದೇವರು ಸತ್ಯಾನ್ವೇಷಣೆಗೆ ಅಹಿಂಸೆಯನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ. ಸತ್ಯ ಅಥವಾ ದೇವರನ್ನು ತ್ಯಜಿಸಿ ಭಾರತದ ಸೇವೆ ಮಾಡಲಾರೆ. ನನಗೆ ಚೆನ್ನಾಗಿ ಗೊತ್ತು–ಸತ್ಯವನ್ನು ಮರೆಯುವಾತನು ದೇಶವನ್ನೂ ಮರೆಯಬಲ್ಲ! ತನಗೆ ನಿಕಟವಾದ ಆತ್ಮೀಯರನ್ನೂ ಮರೆಯಬಲ್ಲ. ಕಾರ್ಯ ನಿರ್ವಹಣೆಗೆ ಇದು ಸೂಕ್ತಕಾಲ. ಎಲ್ಲಿಯ ವರೆಗೆ ಮಾತನಾಡುತ್ತಾ ಕೂರುವುದು? ಒಂದು ಸಾರಿ, ಎರಡು ಸಾರಿ......ನೂರು ಸಾರಿ ಮಾತನಾಡಬಹುದು. ಆದರದು ಕೊನೆಗೆ ಕೃತಿಯಲ್ಲಿ ಅಥವಾ ಮೇಲ್ಪಂಕ್ತಿಯಲ್ಲಿ ಪರಿಣಮಿಸಲೇಬೇಕು. ಇಡೀ ಭಾರತವೇ ಒಂದುಕಡೆ ಸೇರಿ ಹಿಂದೂ–ಮುಸ್ಲಿಂ ಐಕ್ಯತೆ ಅಸಾಧ್ಯ ಎಂದು ಘೋಷಿಸಿದರೂ ನಾನು ಅದನ್ನು ಒಪ್ಪುವುದಿಲ್ಲ. ಅದು ಖಂಡಿತ ಸಾಧ್ಯ ಎಂದು ನಾನು ಘೋಷಿಸುತ್ತೇನೆ. ಜಗತ್ತಿನಲ್ಲಿ ಸತ್ಯ ಅಥವಾ ದೇವರು ಇರುವುದು ನಿಜವಾದಲ್ಲಿ ಹಿಂದೂ–ಮುಸ್ಲಿಂ ಐಕ್ಯತೆಯೂ ಸಾಧ್ಯ. ಖಾದಿ ಕಾರ್ಯಕ್ರಮವು ವಿವೇಕ ರಹಿತವಾದುದೆಂದು ಹೇಳಿ ಜನರು ಖಾದಿಯನ್ನು ಬಹಿರಂಗವಾಗಿ ಸುಟ್ಟರೆ, ಅಂತಹ ಜನರು ಹುಚ್ಚರೆಂದು ನಾನು ಘೋಷಿಸುತ್ತೇನೆ, ಅದೇ ರೀತಿ ಭಾರತದ ಹಿಂದೂಗಳೆಲ್ಲರೂ ಒಟ್ಟಾಗಿ ನನ್ನ ವಿರುದ್ಧ ತಿರುಗಿ ಇಂದಿನ ಅಸ್ಪೃಶ್ಯತಾ ಪದ್ಧತಿಗೆ ಶಾಸ್ತ್ರ ಹಾಗೂ ಸ್ಮೃತಿ ಗಳ ಸಮ್ಮತಿ ಇದೆ ಎಂದು ಹೇಳಿದರೆ ಅಂತಹ ಶಾಸ್ತ್ರಗಳೂ ಸ್ಮೃತಿಗಳೂ ಅಸತ್ಯ ವಾದುವೆಂದು ಘೋಷಿಸುತ್ತೇನೆ. ನಾನು ಹೋದೆಡೆಯಲ್ಲೆಲ್ಲಾ ನನ್ನ ಸಿದ್ಧಾಂತದ ಈ ಮೂರು ಸೂತ್ರಗಳನ್ನು–ಅದೇ ನನ್ನ ಕಾಲ್ಮ, ನನ್ನ ಗಾಯಿತ್ರಿ–ಹೇಳುತ್ತಾ ಹೋಗುತ್ತೇನೆ.

ಹಾಗೆ ಮಾಡುವುದರಿಂದ ನನಗೂ ನನ್ನ ಸೃಷ್ಟಿಕರ್ತನಿಗೂ ನಾನು ನಿಷ್ಠನಾಗಿ ಉಳಿಯ ಬಹುದು"

ಡಿಸೆಂಬರ್ ೨೩ರಂದು ಶ್ರದ್ಧಾನಂದರು ಕೊಲೆ ಮಾಡಲ್ಪಟ್ಟರು. ಈ ಸುದ್ದಿ ಗಾಂಧಿಯವರಿಗೆ ಸೋರಭಾಗ ರೈಲ್ವೆ ನಿಲ್ದಾಣದಲ್ಲಿ ಮುಟ್ಟಿತು. 'ಯಂಗ್ ಇಂಡಿಯಾ, ದಲ್ಲಿ ಅವರು ಹೀಗೆ ಬರೆದರು:

"ನಿರೀಕ್ಷಿಸಿದಂತೆಯೇ ಆಯಿತು. ಆರು ತಿಂಗಳ ಹಿಂದೆ ಸ್ವಾಮಿ ಶ್ರದ್ಧಾನಂದರು ಸಬರಮತಿಯ ಸತ್ಯಾಗ್ರಹ ಆಶ್ರಮದಲ್ಲಿ ಒಂದೆರಡು ದಿನ ತಂಗಿದ್ದರು. ಆಗ ಅವರು ನನ್ನೊಡನೆ ಮಾತನಾಡುತ್ತಾ, ತಮ್ಮ ಪ್ರಾಣಕ್ಕೆ ಬೆದರಿಕೆ ಹಾಕುವ ಪತ್ರಗಳು ಮೇಲೆ ಮೇಲೆ ಬರುತ್ತಿವೆ, ಎಂದು ಹೇಳಿದ್ದರು. ಪ್ರಾಣವನ್ನು ಒತ್ತೆಯಾಗಿಡದ ಸುಧಾರಕ ಎಲ್ಲಾದರೂ ಇದ್ದಾರೆಯೆ? ಆದುದರಿಂದ ಅಂತಹ ಬೆದರಿಕೆ ಪತ್ರಗಳು ಬರುವುದು ಅಸಹಜವೇನಲ್ಲ. ಕೊಲೆಯಾದುದೂ ಅಷ್ಟೆ. ಅದರಲ್ಲೂ ಆಶ್ಚರ್ಯವೇನಿಲ್ಲ.

"ಸ್ವಾಮಿಜಿ ಸುಧಾರಕರಾಗಿದ್ದರು. ಅವರು ಕರ್ಮಯೋಗಿ. ಅವರು ಮಾತುಗಾರ ರಾಗಿರಲಿಲ್ಲ. ಅವರದು ಜೀವಂತ ನಂಬಿಕೆ. ಅದಕ್ಕಾಗಿ ಅವರು ಕಷ್ಟ ಅನುಭವಿಸಿದ್ದಾರೆ. ಧೈರ್ಯವೇ ಮೂರ್ತಿವೆತ್ತಂತ್ತಿದ್ದರು ಅವರು. ಅಪಾಯಕ್ಕೆ ಎಂದಿಗೂ ಅಂಜಿದವರಲ್ಲ. ಅವರು ಮಹಾ ಯೋಧರು. ಯೋಧನು ಕದನರಂಗಲ್ಲಿ ಮಡಿಯಲು ಇಚ್ಛಿಸುತ್ತಾನೆಯೇ ಹೊರತು ರೋಗಪೀಡಿತನಾಗಿ ಅಲ್ಲ.

"ಒಂದು ತಿಂಗಳ ಹಿಂದೆ ಶ್ರದ್ಧಾನಂದಜಿಯವರು ತೀವ್ರ ರೋಗಗ್ರಸ್ತರಾದರು. ಅವರ ವೈದ್ಯರಾದ ಡಾ. ಅನ್ಸಾರಿಯವರು ಕೈಲಾದ ಮಟ್ಟಿಗೂ ಆದರದಿಂದ ನೋಡಿ ಕೊಂಡರು. ಈ ತಿಂಗಳ ಮೊದಲಲ್ಲಿ ನಾನು ವಿಚಾರಿಸಿದಾಗ, ಉತ್ತರವಾಗಿ ಅವರ ಮಗ ಇಂದ್ರ ತಂತಿ ಕಳುಹಿಸಿ ಉತ್ತಮಗೊಳ್ಳುತ್ತಿರುವುದಾಗಿ ತಿಳಿಸಿದ್ದ. ನನ್ನ ಸ್ನೇಹ ಹಾಗೂ ಪ್ರಾರ್ಥನೆ ಆವಶ್ಯಕವೆಂದೂ ಹೇಳಿದ್ದ. ಅವನು ಕೇಳುವುದಕ್ಕೆ ಮುಂಚೆಯೇ ನನ್ನಿಂದ ಅವನ್ನು ಪಡೆದಾಗಿತ್ತು.

"ಅವರು ಹುತಾತ್ಮರಾಗಿ ಸಾಯಬೇಕೆಂಬುದು ದೇವರ ಇಚ್ಛೆಯಾಗಿತ್ತು. ಅವರು ರೋಗಗ್ರಸ್ತರಾಗಿ ಮಲಗಿದ್ದಾಗಲೇ ಕೊಲೆಗಾರನ ಕೈಯಿಂದ ಮರಣಹೊಂದಿದರು. ಹತ್ಯಾಕಾರಿಯು ಸ್ವಾಮಿಯವರೊಂದಿಗೆ, ಇಸ್ಲಾಂ ಬಗ್ಗೆ ವಿಚಾರ ವಿನಿಮಯ ಮಾಡ ಬೇಕೆಂದು ತಿಳಿಸಿದ್ದ. ಸ್ವಾಮೀಜಿ ಆತನನ್ನು ತಮ್ಮ ಬಳಿಗೆ ಬರಮಾಡಿಕೊಂಡರು. ತನಗೆ ಬಾಯಾರಿಕೆಯಾದ್ದರಿಂದ ನೀರು ಬೇಕೆಂದು ಆತ ನಟಿಸಿದ. ಸ್ವಾಮೀಜಿಯ ನಿಷ್ಠ ಶಿಷ್ಯ ಧರ್ಮಸಿಂಗ್ ನೀರು ತರಲು ಹೊರಗೆ ಹೋದಾಗ ಆತನು ಸ್ವಾಮೀಜಿಯ ಎದೆಗೆ ಗುರಿಯಿಟ್ಟು ಎರಡು ಗುಂಡುಗಳನ್ನು ಹೊಡೆದು ತೀರಿಸಿದ. ಸ್ವಾಮೀಜಿಯ ಕಡೆಯ ಮಾತುಗಳೇನು ಎಂಬುದು ನಮಗೆ ಗೊತ್ತಿಲ್ಲ. ನಾನು ಅವರನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಲ್ಲಿ, ಅವರು ಭಗವಂತನನ್ನು ಪ್ರಾರ್ಥಿಸಿ, ತಾನು ತಪ್ಪು ಮಾಡುತ್ತಿ

ದ್ದೇನೆಂದು ಅರಿಯದ ಆ ಮನುಷ್ಯನನ್ನು ಕ್ಷಮಿಸು, ಎಂದಿರಬೇಕು. ಇದರಲ್ಲಿ ನನಗೆ ಸಂದೇಹವೇ ಇಲ್ಲ. ಗೀತೆಯ ಭಾಷೆಯಲ್ಲಿ ಹೇಳುವುದಾದರೆ 'ಇಂತಹ ಪಾವನಕರ ಮೃತ್ಯುವನ್ನು ಪಡೆಯುವ ಯೋಧನೇ ಸುಖಿ'.

"ಸಾವು ಯಾವಾಗ ಬಂದರೂ ಮಂಗಳಕರವೇ. ತನ್ನ ಧ್ಯೇಯಕ್ಕಾಗಿ, ಅಂದರೆ ಸತ್ಯಕ್ಕಾಗಿ ಮಡಿಯುವ ಯೋಧನಿಗೆ ಸಾವು ಇಮ್ಮಡಿ ಕಲ್ಯಾಣಕಾರಿ. ಮೃತ್ಯು ರಾಕ್ಷಸನಲ್ಲ; ಮಿತ್ರರಲ್ಲಿ ಮಿತ್ರ. ಯಾತನೆಯಿಂದ ನಮ್ಮನ್ನು ವಿಮೋಚನೆ ಮಾಡುತ್ತಾನೆ ಆತ. ನಮಗೆ ಇಷ್ಟವಿಲ್ಲದಿದ್ದರೂ ಆತ ಸಹಾಯ ಮಾಡುತ್ತಾನೆ. ನಮಗೆ ಹೊಸ ಅವಕಾಶಗಳನ್ನೂ ಭರವಸೆಗಳನ್ನೂ ಕೊಡುತ್ತಾನೆ. ಆತ ಸುಖನಿದ್ದೆಯಂತೆ ಮನೋಜ್ಞ ಉದ್ಧಾರಕ. ಹಿತವಾದ ಪುನಸ್ಥಾಪಕ. ಆದಾಗ್ಯೂ ಸ್ನೇಹಿತರೊಬ್ಬರು ಸತ್ತಾಗ ಸಂತಾಪ ವ್ಯಕ್ತ ಪಡಿಸುವುದು ಸಂಪ್ರದಾಯ. ಹುತಾತ್ಮನಾದಾಗ ಶೋಕಸೂಚನೆಯ ಸಂಪ್ರದಾಯ ಪಾಲಿಸುವ ಆವಶ್ಯಕತೆಯಿಲ್ಲ. ಅವರ ಸಾವಿಗೆ ನಾನು ವ್ಯಥೆಪಡಲಾರೆ. ಅವರ ಜೀವನ ಮತ್ತು ಸಾವಿನ ರೀತಿ ಎರಡೂ ಅಪೇಕ್ಷಣೀಯವೇ. ಶ್ರದ್ಧಾನಂದಜೀ ಸತ್ತಿದ್ದರೂ ಜೀವಂತವಾಗಿದ್ದಾರೆ. ಮಹಾಕಾಯದ ಅವರು ನಮ್ಮೊಡನೆ ಓಡಾಡುತ್ತಿದ್ದಾಗ ಇದ್ದು ದಕ್ಕಿಂತಲೂ ಮೇಲಾದ ರೀತಿಯಲ್ಲಿ ಜೀವಂತರಾಗಿದ್ದಾರೆ. ಇಂತಹ ಮಹತ್ವಪೂರ್ಣ ಸಾವನ್ನು ಅಪ್ಪಿದ ವ್ಯಕ್ತಿಯ ವಂಶವನ್ನೂ ದೇಶವನ್ನೂ ಅಭಿನಂದಿಸಬೇಕು. ಅವರು ವೀರರಾಗಿ ಬದುಕಿದ್ದರು; ವೀರರಾಗಿಯೇ ಮಡಿದಿದ್ದಾರೆ.

"ಇದಕ್ಕೆ ಇನ್ನೊಂದು ಮುಖವಿದೆ. ನಾನು ಮುಸಲ್ಮಾನರ ಮಿತ್ರ. ಅವರು ನನ್ನ ಸಹೋದರರು. ಅವರ ತಪ್ಪುಗಳು ನನ್ನ ತಪ್ಪುಗಳೇ. ಅವರ ಸುಖದುಃಖಗಳಲ್ಲಿ ನಾನು ಭಾಗಿ. ಒಬ್ಬ ಹಿಂದೂ ದುಷ್ಕೃತ್ಯಮಾಡಿದರೆ ಹೇಗೆ ನೋವಾಗುತ್ತದೆಯೋ ಹಾಗೆಯೇ ಮುಸಲ್ಮಾನನೊಬ್ಬ ಮಾಡುವ ಕೆಟ್ಟ ಕೆಲಸದಿಂದ ನನಗೆ ನೋವುಂಟಾಗುತ್ತದೆ. ಮುಸಲ್ಮಾನನೆಂದು ಹೆಸರು ಹೊತ್ತ ಮನುಷ್ಯನಿಂದ ಈ ಅಕಾರ್ಯ ನಡೆದಿದೆ. ಮುಸಲ್ಮಾನರ ಸ್ನೇಹಿತನಾಗಿ ನಾನು ಈ ಘಟನೆಗಾಗಿ ತುಂಬಾ ವಿಷಾದಿಸುತ್ತೇನೆ. ತಪ್ಪುದಾರಿಗೆಳೆಯಲ್ಪಟ್ಟ ಸಹೋದರನಿಂದ ಈ ಕೆಲಸವಾಯಿತಲ್ಲ ಎಂಬುದು ದುಃಖಕರ ಸಂಗತಿ. ಅವರ ಸ್ವರ್ಗಾರೋಹಣದಿಂದುಂಟಾದ ಸಂತೋಷವನ್ನು ಇದು ಕುಗ್ಗಿಸಿದೆ. ಆದುದರಿಂದ ಹುತಾತ್ಮನಾಗಿ ಸಾಯಬೇಕೆಂದು ಆಶಿಸಲೇ ಬಾರದು. ನಮ್ಮ ಅಪೇಕ್ಷೆ ಇಲ್ಲದೆಯೇ ಅದು ತಾನೇ ತಾನಾಗಿ ಬಂದಾಗ ಸಂತೋಷದ ಸಂಗತಿಯಾಗುತ್ತದೆ. ನಮ್ಮಲ್ಲಿ ತೀರ ಕೀಳುಮಟ್ಟದಲ್ಲಿರುವವರ ತಪ್ಪುಗಳಿಂದ ನಾವು ಹಿಗ್ಗಬಾರದು.

"ವಾಸ್ತವ ಸಂಗತಿಯೆಂದರೆ, ಇಂತಹ ತಪ್ಪುಗಳು ಸ್ಪಷ್ಟವಾಗಬೇಕಾದರೆ ಅವು ಭಯಂಕರ ಸ್ವರೂಪ ತಾಳಿದ ಮೇಲೆಯೇ. ಅವು ಕೊನೆಗಾಣಬೇಕಾದರೆ ಸಾಕಷ್ಟು ಅವಹೇಳನ ಮಾಡಿದ ಮೇಲೆಯೇ.

"ಈ ದುರಂತ, ರಾಷ್ಟ್ರೀಯ ಮಹತ್ವವುಳ್ಳದ್ದು. ರಾಷ್ಟ್ರದ ಸತ್ವವನ್ನೇ ಹೀರುತ್ತಿರುವ

ಕೆಡಕಿನ ಬಗ್ಗೆ ಅದು ಎಲ್ಲರ ಗಮನವನ್ನು ಸೆಳೆಯುತ್ತಿದೆ. ಹಿಂದೂಗಳೂ ಮುಸಲ್ಮಾನರೂ ನಿರ್ಣಯಿಸಬೇಕಾದ ಪ್ರಸಂಗ ಇದು. ನಾವುಗಳಿಬ್ಬರೂ ಪರೀಕ್ಷೆಗೊಳಗಾಗಿದ್ದೇವೆ.

"ಹಿಂದೂಗಳು ಅಸಮಾಧಾನಗೊಂಡು ಹಿಂದೂಧರ್ಮಕ್ಕೇ ಕಳಂಕ ತರಬಹುದು. ಅಗತ್ಯವಾಗಿ ಮೂಡಬೇಕಾದ ಐಕ್ಯತೆಯನ್ನು ಮುಂದೂಡಬಹುದು. ಅವರು ಸಂಯಮ ದಿಂದ ವರ್ತಿಸುವುದರ ಮೂಲಕ ಉಪನಿಷತ್ತುಗಳ ಸಂದೇಶಕ್ಕೆ ತಕ್ಕಂತೆ ನಡೆದುಕೊಳ್ಳ ಬಹುದು; ಕ್ಷಮೆಯೇ ಮೂರ್ತಿಭವಿಸಿದ್ದ ಯುಧಿಷ್ಠಿರನ ಹೆಸರು ಹೇಳಲು ಅರ್ಹರಾಗ ಬಹುದು. ಒಬ್ಬ ವ್ಯಕ್ತಿ ಮಾಡಿದ ಅಪರಾಧಕ್ಕಾಗಿ ಇಡೀ ಜನಾಂಗವನ್ನೇ ಆರೋಪಣೆ ಗೀಡು ಮಾಡುವುದು ಬೇಡ. ಮುಯ್ಯಿಗೆ ಮುಯ್ಯಿ ತೀರಿಸುವ ಮನೋಭಾವವನ್ನು ನಾವು ತೋರಬಾರದು. ಈ ಅಕೃತ್ಯವನ್ನು ಓರ್ವ ಹಿಂದೂವಿನ ವಿರುದ್ಧ ಮುಸಲ್ಮಾನ ನೊಬ್ಬ ಮಾಡಿದ್ದೆಂದು ಪರಿಗಣಿಸುವುದು ಬೇಡ. ವೀರಾಗ್ರಣಿಯ ವಿರುದ್ಧ ಅಪಮಾರ್ಗಿ ಯಾದ ಸಹೋದರನೊಬ್ಬ ಮಾಡಿದ ಅಪರಾಧ ಎಂದು ಪರಿಗಣಿಸಬೇಕು.

"ಮುಸಲ್ಮಾನರು ಉಗ್ರ ಪರೀಕ್ಷೆಯಿಂದ ಪಾರಾಗಬೇಕಾಗಿದೆ. ಅವರು ತುಂಬಾ ಸ್ವೇಚ್ಛೆಯಿಂಥ ಬಾಕು ಮತ್ತು ಬಂದೂಕವನ್ನು ಬಳಸುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಕತ್ತಿಯು ಇಸ್ಲಾಂನ ಲಾಂಛನವೇನಲ್ಲ. ಆದರೆ ಖಡ್ಗವೇ ಪರಮ ಶಾಸನ ಎಂಬ ತಿಳುವಳಿಕೆ ಇದ್ದ—ಮತ್ತು ಈಗಲೂ ಇರುವ—ಪರಿಸರದಲ್ಲಿ ಇಸ್ಲಾಂ ಹುಟ್ಟಿತು. ಜೀಸಸ್‌ನ ಸಂದೇಶ ಪರಿಣಾಮಕಾರಿಯಾಗದೆ ಇದ್ದುದಕ್ಕೆ ಕಾರಣ ಅದನ್ನು ಸ್ವೀಕರಿಸುವ ವಾತಾವರಣ ಸಿದ್ಧವಾಗಿರಲಿಲ್ಲ. ಪ್ರವಾದಿಯ ಸಂದೇಶದಲ್ಲೂ ಅಷ್ಟೆ. ಮುಸಲ್ಮಾನರಲ್ಲಿ ಖಡ್ಗಕ್ಕೆ ಈಗಲೂ ವಿಶೇಷ ಮಾನ್ಯತೆ ಇದೆ. ಇಸ್ಲಾಂ ಅರ್ಥ ಶಾಂತಿ; ಅದು ಅನ್ವರ್ಥವಾಗ ಬೇಕಾದರೆ ಖಡ್ಗವನ್ನು ಒರೆಗೆ ಹಾಕಿ ಮುಚ್ಚಿಡಬೇಕು. ಹತ್ಯಾಕಾರಿಯ ಹುಚ್ಚುಕೃತ್ಯ ವನ್ನು ಮುಸಲ್ಮಾನರು ರಹಸ್ಯವಾಗಿ ಅನುಮೋದಿಸುವ ಭಯವಿದೆ. ಹಾಗೆ ಮಾಡಿದರೆ ಅದು ಒಂದು ದುರಂತವೇ ಸರಿ. ಅದು ಅವರ ದುರಂತ ಮಾತ್ರವಲ್ಲ, ಇಡೀ ಜಗತ್ತಿನ ದುರಂತ. ಏನೇ ಆದರೂ ನಮ್ಮ ಸಮಸ್ಯೆ ಇಡೀ ಜಗತ್ತಿನ ಸಮಸ್ಯೆ ಎಂಬುದನ್ನು ಮರೆಯಬಾರದು. ಕತ್ತಿಯ ಮೇಲೆ ಭರವಸೆ ಇಡುವುದಾದರೆ ದೇವರ ಮೇಲಿನ ನಂಬಿಕೆ ಅರ್ಥಹೀನವಾಗುತ್ತದೆ. ಅವರ ಕಡೆಯಿಂದ ಈ ಹೇಯಕೃತ್ಯದ ಸ್ಪಷ್ಟ ಖಂಡನೆ ಆಗಬೇಕು. ಅಬ್ದುಲ್ ರಷೀದನ ಪರವಾಗಿ ನಾನು ಹೇಳುತ್ತೇನೆ: ಅವನಾರೆಂಬುದನ್ನು ನಾನು ಅರಿಯೆ. ಆ ಕೃತ್ಯಮಾಡಲು ಅವನನ್ನು ಪ್ರಚೋದಿಸಿದ ಸಂಗತಿ ಯಾವುದೆಂಬುದು ನನಗೆ ಬೇಕಿಲ್ಲ. ತಪ್ಪು ನಮ್ಮದು. ಪತ್ರಿಕಾಕರ್ತ ಈಗ ಓಡಾಡುವ ಪ್ಲೇಗ್ ಆಗಿಬಿಟ್ಟಿದ್ದಾನೆ. ಸುಳ್ಳುಗಳನ್ನೂ ಮಿಥ್ಯಾಪವಾದಗಳನ್ನೂ ಸಾಂಕ್ರಾಮಿಕದಂತೆ ಹಬ್ಬಿಸುತ್ತಾನೆ ಆತ. ತನಗೆ ಗೊತ್ತಿರುವ ಹೊಲಸು ಭಾಷೆಯನ್ನೆಲ್ಲ ಬಳಸಿ ಮುಗ್ಧರಾದ ತೆರೆದ ಮನಸ್ಸಿನ ಓದುಗರಲ್ಲಿ ವಿಷಬೀಜ ಬಿತ್ತುತ್ತಾನೆ. 'ಅಲಂಕಾರಾತಿಶಯದ ತಮ್ಮ ಭಾಷೆಯಿಂದಲೇ ಉನ್ಮತ್ತರಾದ ನಾಯಕರುಗಳು ತಮ್ಮ ನಾಲಿಗೆ ಅಥವಾ ಲೇಖನಿಯ ಮೇಲೆ ಹತೋಟಿ

ಇಟ್ಟುಕೊಳ್ಳುವುದನ್ನು ಅರಿತಿಲ್ಲ. ಗುಟ್ಟಾಗಿ ಮಾಡಿದ ದ್ರೋಹದ ಪ್ರಚಾರದಿಂದಾಗಿ ಈ ಕರಾಳ ಭೀಕರ ಕೃತ್ಯ ಅಡ್ಡಿ ಆತಂಕವಿಲ್ಲದೆ ನಿರ್ಲಜ್ಜತೆಯಿಂದ ನಡೆದು ಹೋಯಿತು. ಅಬ್ದುಲ್ ರಷೀದ್‌ನಲ್ಲಿ ತುಂಬಿದ್ದ ಉದ್ರಿಕ್ತ ಭಾವನೆಗೆ ನಾವೆಲ್ಲರೂ–ವಿದ್ಯಾವಂತರೂ ಅರೆ ವಿದ್ಯಾವಂತರೂ ಎಲ್ಲರೂ– ಕಾರಣರು.

"ವಿರೋಧಿ ಪಂಗಡಗಳಲ್ಲಿ ತಾರತಮ್ಯ ತೋರಿ ಒಂದೊಂದರ ಅಪರಾಧ ಇಷ್ಟಿಷ್ಟೆಂದು ಹೇಳುವುದು ಅನಗತ್ಯ. ಅಪರಾಧ ಇಬ್ಬರದೂ ಆಗಿರುವಾಗ ಯಾರ ತಪ್ಪು ಎಷ್ಟೆಷ್ಟೆಂದು ಚಿನ್ನದ ತ್ರಾಸಿನಲ್ಲಿ ತೂಕಮಾಡಿ ಹೇಳಲು ಯಾರಿಗೆ ಸಾಧ್ಯ? ಸುಳ್ಳು ಹೇಳುವುದರಿಂದಾಗಲೀ ಅತಿಶಯೋಕ್ತಿಯ ಉಪಯೋಗದಿಂದಾಗಲೀ ಸ್ವರಕ್ಷಣೆ ಮಾಡಿಕೊಳ್ಳತಕ್ಕದ್ದಲ್ಲ.

"ಸ್ವಾಮೀಜಿಯ ರಕ್ತವು ನಮ್ಮ ಪಾಪವನ್ನು ತೊಳೆದು, ನಮ್ಮ ಹೃದಯಗಳನ್ನು ಶುದ್ಧಗೊಳಿಸಿ, ಮಾನವ ಕುಟುಂಬದ ಈ ಎರಡು ಬಲಿಷ್ಠ ಪಂಗಡಗಳನ್ನು ಒಟ್ಟುಗೂಡಿಸಲಿ, ಎಂದು ಬಯಸುವುದು ಅತಿ ಆದೀತು. ಆದರೆ ಅಂತಹ ಆಸೆಯನ್ನೂ ಸಾಧ್ಯಗೊಳಿಸುವಷ್ಟಿನ ಮಹಾವ್ಯಕ್ತಿಯಾಗಿದ್ದರು ಸ್ವಾಮೀಜಿ."

ಅಸ್ಸಾಂನಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ ಡಿಸೆಂಬರ್ ೨೬ರಂದು ಸಮಾವೇಶಗೊಂಡಿತ್ತು. ವ್ಯವಸ್ಥೆಯ ದೃಷ್ಟಿಯಿಂದ ಗೌಹತಿ ಹಿಂದಿನ ದಾಖಲೆಗಳನ್ನೆಲ್ಲ ಮೀರಿಸಿತ್ತು. ಬ್ರಹ್ಮಪುತ್ರ ನದಿಯ ದಡದ ಮೇಲೆ ಪ್ರಕೃತಿ ಸೌಂದರ್ಯದ ಪರಿಸರದಲ್ಲಿ ಖಾದಿಯ ಡೇರೆಗಳನ್ನೊಳಗೊಂಡ ಒಂದು ಪಟ್ಟಣವೇ ನಿರ್ಮಾಣವಾಗಿತ್ತು. ಅದರ ನಿರ್ಮಾಣ ಕಾರ್ಯ ಬಹಳ ಸ್ವಲ್ಪ ಅವಧಿಯಲ್ಲೇ ಮುಗಿದಿತ್ತು. ಈ ಸಂದರ್ಭಕ್ಕಾಗಿ ಕಲಾತ್ಮಕವಾಗಿ ನಿರ್ಮಿಸಲಾಗಿದ್ದ ಗುಡಿಸಲುಗಳ ನಿರ್ಮಾಣಕ್ಕೆ ಉಪಯೋಗಿಸಿದ್ದ ಬಂಬು, ಮಣ್ಣು, ಬಿದಿರು ಹಾಗೂ ಶ್ರಮ–ಸರ್ವವೂ ಅಸ್ಸಾಮಿನದೇ ಆಗಿತ್ತು.

ಸುಮಾರು ಹತ್ತು ಸಹಸ್ರ ಮಂದಿ ಕಾಂಗ್ರೆಸ್ ಅಧಿವೇಶನಕ್ಕೆ ಬಂದಿದ್ದರು. ಶ್ರೀನಿವಾಸ ಅಯ್ಯಂಗಾರ್ ಅವರಿಂದ ಅಧ್ಯಕ್ಷ ಭಾಷಣವಾದ ಕೂಡಲೇ ಗಾಂಧಿಯವರು ಸಂತಾಪಸೂಚಕ ನಿರ್ಣಯವನ್ನು ಮಂಡಿಸಿದರು. ಆಗ ಮಾತನಾಡುತ್ತಾ: "ನಾವು ಕಣ್ಣೀರು ಸುರಿಸುವುದು ಬೇಡ; ನಮ್ಮ ಹೃದಯಗಳನ್ನು ಪರಿಶುದ್ಧಗೊಳಿಸಿಕೊಳ್ಳೋಣ. ಶ್ರದ್ಧಾನಂದಜೀಯವರಲ್ಲಿದ್ದ ಕೆಚ್ಚು ಮತ್ತು ನಂಬಿಕೆಯಲ್ಲಿ ಸ್ವಲ್ಪವನ್ನಾದರೂ ಇಟ್ಟುಕೊಂಡು ನಮ್ಮ ಹೃದಯಗಳನ್ನು ಗಟ್ಟಿ ಮಾಡಿಕೊಳ್ಳೋಣ. ಅವರು ತಮ್ಮ ಅಸಮಾನ ಧೈರ್ಯದಿಂದ ರಾಷ್ಟ್ರವನ್ನು ಚಕಿತಗೊಳಿಸಿದ್ದಾರೆ. ಪರಸ್ಪರ ದ್ವೇಷವನ್ನು ಪ್ರಚೋದಿಸಿದವರೇ ನಿಜವಾದ ಅಪರಾಧಿಗಳು. ಹಿಂದೂ ಮತ್ತು ಮುಸ್ಲಿಮರ ಅಭಿಪ್ರಾಯಗಳನ್ನು ರೂಪಿಸತಕ್ಕ ನಾಯಕರೇ ತಪ್ಪಿತಸ್ಥರು" ಎಂದು ಗಾಂಧೀ ಹೇಳಿದರು. ಶ್ರದ್ಧಾನಂದರ ಸಾವಿನಿಂದ ಎಲ್ಲರೂ ಪಾಠ ಕಲಿಯಬೇಕು. ಅವರು ಬದುಕಿದ್ದಾಗ ದೇಶಕ್ಕಾಗಿ ಅವರು ಮಾಡಿದ ಸೇವೆಯಿಂದಲೂ ಪಾಠ ಕಲಿಯಬೇಕು,

ಎಂದು ಹೇಳಿ, "ಸ್ವಾಮೀಜಿಯವರ ನಿಷ್ಕಲಂಕ ರಕ್ತದಿಂದ ನಮ್ಮ ಹೃದಯಗಳನ್ನು ತೊಳೆದು ಪರಿಶುದ್ಧಗೊಳಿಸೋಣ" ಎಂದು ನುಡಿದರು.

ಮಹಮ್ಮದಾಲಿಯವರು ನಿರ್ಣಯವನ್ನು ಸಮರ್ಥಿಸಿ ಮಾತನಾಡುತ್ತಾ, "ಈ ಹೇಯ ಕೃತ್ಯವನ್ನು ಖಂಡಿಸುವವರ ಜೊತೆ ನಾನೂ ಸೇರಿ ಹೃತ್ಪೂರ್ವಕವಾಗಿ ಅದರ ಖಂಡನೆ ಮಾಡುತ್ತೇನೆ. ಆದರೆ ಸ್ವಾಮಿ ಶ್ರದ್ಧಾನಂದರು ಅವರ ಜೀವಿತಕಾಲದಲ್ಲಿ ಮಾಡಿದ ಕೆಲಸಗಳಿಗೆ ಹಿಂದೂಗಳು ಕಟ್ಟುವ ಬೆಲೆಯನ್ನು ಮುಸ್ಲಿಮರು ಕಟ್ಟುವುದಿಲ್ಲ. ಇದನ್ನು ನಾನು ಹೇಳದಿದ್ದರೆ ನನ್ನ ಸಿದ್ಧಾಂತಕ್ಕೂ ನನ್ನ ರಾಷ್ಟ್ರಕ್ಕೂ ನಿಷ್ಠೆ ತೋರಿದಂತಾಗುವುದಿಲ್ಲ" ಎಂದರು.

ಗಾಂಧಿಯವರು ಮಂಡಿಸಿದ ಮತ್ತೊಂದು ನಿರ್ಣಯ ದಕ್ಷಿಣ ಆಫ್ರಿಕಾಕ್ಕೆ ಸಂಬಂಧಿಸಿತ್ತು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ಅನುಭವಿಸುತ್ತಿರುವ ವರ್ಣ ದ್ವೇಷವು ಭಾರತದಲ್ಲಿರುವ ಅಸ್ಪೃಶ್ಯತೆಯ ಪ್ರತಿಧ್ವನಿ, ಎಂದು ಹೇಳಿ ಆ ಬಗ್ಗೆ ಜನತೆಯ ಗಮನವನು ಸೆಳೆದರು. ಆದುದರಿಂದ ಮೊದಲು ತಮ್ಮ ದೇಶದಲ್ಲೇ ಉತ್ತಮ ಪರಿಸ್ಥಿತಿಯನ್ನುಂಟು ಮಾಡುವುದು ಜನತೆಯ ಕರ್ತವ್ಯವೆಂದು ತೋರಿದರು. ದಕ್ಷಿಣ ಆಫ್ರಿಕಾದ ಮುತ್ಸದ್ದಿಗಳಿಗೂ ಈ ರೀತಿ ಎಚ್ಚರಿಕೆ ನೀಡಿದರು. ಅಧಿಕಾರವುಳ್ಳವರು ಅದರ ದುರುಪಯೋಗ ಮಾಡಿದರೆ ತಮ್ಮ ಸರ್ವನಾಶಕ್ಕೆ ಎಡೆಮಾಡಿಕೊಂಡಂತೆ ಎಂದು ಇತಿಹಾಸ ಮತ್ತೆ ಮತ್ತೆ ಸಾರಿ ಹೇಳುತ್ತದೆ. ಇನ್ನಾದರೂ ಇದನ್ನು ಮನಗಂಡು ಭಾರತೀಯರಿಗೆ ಮೂಲಭೂತ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿದರು.

ಶಾಸನಮಂಡಲಗಳಲ್ಲಿನ ಕೆಲಸವನ್ನು ಕುರಿತು ಕಾಂಗ್ರೆಸ್ಸಿಗರಿಗೆ ನಿರ್ದಿಷ್ಟ ಸೂಚನೆ ನೀಡಲಾಯಿತು. ಅವರುಗಳು ಸಚಿವ ಸ್ಥಾನವನ್ನಾಗಲೀ ಸರ್ಕಾರವು ಕೊಡಬಹುದಾದ ಇನ್ನಾವ ಹುದ್ದೆಯನ್ನಾಗಲೀ ಸ್ವೀಕರಿಸಕೂಡದು. ಅಷ್ಟೇ ಅಲ್ಲ, ಇತರ ಪಕ್ಷಗಳು ಮಂತ್ರಿಮಂಡಲ ರಚಿಸುವುದನ್ನು ವಿರೋಧಿಸಬೇಕು. ಸರ್ಕಾರವು ತನ್ನ ಅಧಿಕಾರವನ್ನು ಬಲಗೊಳಿಸಿಕೊಳ್ಳಲು ಮಾಡಬಹುದಾದಂತಹ ಎಲ್ಲ ಮಸೂದೆಗಳನ್ನೂ ತಿರಸ್ಕರಿಸಬೇಕು, ಎಂದು ಕಾಂಗ್ರೆಸ್ ಶಾಸಕರಿಗೆ ತಿಳಿಸಲಾಯಿತು. ರಾಷ್ಟ್ರೀಯ ಜೀವನದ ತೃಪ್ತಿಕರ ಬೆಳವಣಿಗೆಗೆ ಅಗತ್ಯವಾದ ಮತ್ತು ಕೃಷಿ, ಕೈಗಾರಿಕೆ, ವಾಣಿಜ್ಯ ಹಾಗೂ ಆರ್ಥಿಕ ಹಿತಗಳನ್ನು ವರ್ಧಿಸುವ ಮತ್ತು ವ್ಯಕ್ತಿ ಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ, ಸಾಂಘಿಕ ಹಾಗೂ ಪತ್ರಿಕಾ ಸ್ವಾತಂತ್ರ್ಯಗಳನ್ನು ರಕ್ಷಿಸುವ ಮಸೂದೆಗಳನ್ನು ಮಂಡಿಸಿ ಅವುಗಳನ್ನು ಸಮರ್ಥಿಸಬೇಕೆಂದು ಸಲಹೆ ಮಾಡಲಾಯಿತು.

ಕಾಂಗ್ರೆಸಿಗನಾಗಿ ಮತಚಲಾಯಿಸುವ ಹಕ್ಕನ್ನು ಅಪೇಕ್ಷಿಸುವ ಪ್ರತಿಯೊಬ್ಬನೂ ಸತತ ಖಾದಿಧಾರಿಯಾಗಿರಬೇಕೆಂಬ ಕಡ್ಡಾಯ ನಿಯಮವನ್ನು ಜಾರಿಗೆ ತರುವ ನಿರ್ಣಯವು ಕಾಂಗ್ರೆಸ್ಸಿನ ವಿಷಯ ನಿಯಾಮಕ ಸಮಿತಿಯ ಮುಂದೆ ಬಂದಿತು. ಆಣೆ

ಯಂವರು ತಮಗೆ ಖದ್ದರ್‌ನಲ್ಲಿ ನಂಬಿಕೆಯಿಲ್ಲವೆಂದು ಹೇಳಿ ನಿರ್ಣಯವನ್ನು ಬಲವಾಗಿ ವಿರೋಧಿಸಿದರು. ಆಣೆಯವರನ್ನು ಸಮರ್ಥಿಸಿ ಮಾತನಾಡಿದ ಮತ್ತೊಬ್ಬ ಸದಸ್ಯರು, ಈ ವಿಚಾರದಲ್ಲಿ ಗಾಂಧಿಯವರು ನ್ಯಾಯ ಮತ್ತು ನಿಷ್ಪಕ್ಷಪಾತ ದೃಷ್ಟಿ ತಾಳಬೇಕೆಂದು ಪ್ರಾರ್ಥಿಸಿದರು. ಅಧ್ಯಕ್ಷರ ಕೋರಿಕೆಯ ಮೇಲೆ, ಈ ಸಂದರ್ಭದಲ್ಲಿ ಹಾಜರಿದ್ದ ಗಾಂಧಿಯವರು ಈ ವಿಷಯವನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿದರು.

"ಮತದಾನದ ಹಕ್ಕು ಪಡೆಯಲು ನೂಲಬೇಕೆಂಬ ನಿಯಮವನ್ನು ಮತ್ತೆ ಜಾರಿಗೆ ತಂದರೆ ಮಾತ್ರ ನ್ಯಾಯಪಾಲನೆಯಾಯಿತೆಂಬ ಸಮಾಧಾನವಾಗುತ್ತದೆಂದು ಹೇಳಬಯಸುತ್ತೇನೆ. ರಾಷ್ಟ್ರದ ಬೆಳವಣಿಗೆಗಾಗಿ ಮತದಾನದ ನಿಯಮವನ್ನು ಬಿಗಿಗೊಳಿಸುವುದು ಅಗತ್ಯವೆಂದು ಭಾವಿಸಿದರೆ, ಪಕ್ಷದಲ್ಲಿ ನಾನು ಆ ಬಗೆಗೆ ಷರತ್ತುಗಳನ್ನು ವಿಧಿಸಿದರೆ, ಅದರಲ್ಲಿ ತಪ್ಪೇನಿದೆ? ಯಾವುದೇ ಪಕ್ಷವನ್ನು ಹೊರಗಿಡುವ ಉದ್ದೇಶದಿಂದ ನಾನು ಹೀಗೆ ಮಾಡುತ್ತಿದ್ದೇನೆಂದು ಯಾರಾದರೂ ಆರೋಪಿಸಿದರೆ– ಅಪಮಾನಕರವೆಂದು ಭಾವಿಸದಿದ್ದರೂ–ನನಗೆ ತುಂಬಾ ವಿಷಾದವಾಗುತ್ತದೆ. ಶುದ್ಧೀಕರಣಕ್ಕಾಗಿ ನಾನು ಮಂಡಿಸುವ ಮನವಿ ಈ ತಿದ್ದುಪಡಿ. ಇದನ್ನು ಉಲ್ಲಂಘಿಸಬಹುದೆಂದು ನೀವು ಭಾವಿಸುವುದಾದರೆ, ಇಲ್ಲಿ ಅಂಗೀಕಾರ ಮಾಡಿ ಅಧಿವೇಶನವನ್ನು ಬಿಟ್ಟು ಹೋದನಂತರ ನಿರ್ಲಕ್ಷ್ಯ ಮಾಡುವುದಾದರೆ, ಅದನ್ನು ತಿರಸ್ಕರಿಸುವುದೇ ಲೇಸು ಎಂದು ಹೇಳುತ್ತೇನೆ. ಈಗ ಜಾರಿಯಲ್ಲಿರುವ ನಿಯಮ ಅವಮಾನಕರವಾಗಿದೆ. ಅದನ್ನು ತೆಗೆದು ಹಾಕಿಬಿಡಬೇಕು ಅಥವಾ ತೀವ್ರವಾದ ಬದಲಾವಣೆ ತರಬೇಕು. ಖದ್ದರ್ ತನ್ನ ಕಾಲಮೇಲೆ ತಾನು ನಿಲ್ಲಬೇಕು. ನೀವು ನಿರ್ಣಯವನ್ನು ಅಂಗೀಕರಿಸುವುದಾದರೆ ಅದರ ಸಾಧಕ ಬಾಧಕಗಳನ್ನೆಲ್ಲಾ ಅರಿತು ಮಾಡಿ. ಅವು ಏನೆಂಬುದನ್ನು ನಾನು ತಿಳಿಸಿದ್ದೇನೆ. ನನಗೆ ಯಾವ ಆಶ್ರಯ ಅಥವಾ ಮಾನ್ಯತೆ ಬೇಕಾಗಿಲ್ಲ. ನಾನು ಅದು ಯಾವುದನ್ನೂ ಕೊಡತಕ್ಕವನೂ ಅಲ್ಲ. ನನಗೆ ನನ್ನ ಸ್ವಾತಂತ್ರ್ಯವು ಪ್ರಿಯ. ಆದುದರಿಂದ ನಿಮ್ಮ ಸ್ವಾತಂತ್ರ್ಯವನ್ನು ನಿರ್ಬಂಧಗೊಳಿಸಲು ನಾನೇನನ್ನೂ ಮಾಡುವುದಿಲ್ಲ" ಎಂದು ಗಾಂಧಿಯವರು ನುಡಿದರು. ಪ್ರಚಂಡ ಬಹುಮತದಿಂದ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಗೌಹತಿಯಲ್ಲಿ ಗಾಂಧೀಜಿ ನಿಷ್ಕ್ರಿಯ ಪ್ರೇಕ್ಷಕರಾಗಿರಲಿಲ್ಲ. ಕಾರ್ಯಕಲಾಪಗಳಲ್ಲಿ ಅವರು ಲವಲವಿಕೆಯಿಂದ ಭಾಗವಹಿಸಿದ್ದರು. ಇದರ ಪರಿಣಾಮವಾಗಿ, ವಿಷಯ ನಿಯಾಮಕ ಸಮಿತಿ ಅಂಗೀಕರಿಸಿದ್ದ ಎರಡು ನಿರ್ಣಯಗಳನ್ನು ಮಾರನೇ ದಿವಸ ವಾಪಸು ತೆಗೆದುಕೊಳ್ಳಬೇಕಾಯಿತು. ಅವುಗಳಲ್ಲಿ ಒಂದು ನಾಭಾ ಸಂಸ್ಥಾನಕ್ಕೆ ಸಂಬಂಧಿಸಿದ್ದು. ಎರಡನೆಯದು ನಾಣ್ಯ ಚಲಾವಣೆಯ ಪದ್ಧತಿಗೆ ಸಂಬಂಧಿಸಿದ್ದು. ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮೂರನೆಯ ನಿರ್ಣಯವನ್ನು ಗಾಂಧಿಯವರು ಕಾಂಗ್ರೆಸ್‌ನ ವೇದಿಕೆಯಿಂದ ಟೀಕೆ ಮಾಡಿದರು. 'ಯಂಗ್ ಇಂಡಿಯಾ'ದಲ್ಲೂ ಪ್ರಸ್ತಾಪಿಸಿದರು.

"ಪ್ರತಿ ವರ್ಷವೂ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ಸಿನ ಗುರಿಯಾದ ಸ್ವರಾಜ್ಯವನ್ನು ಪೂರ್ಣಸ್ವಾತಂತ್ರ್ಯ ಎಂದು ವ್ಯಾಖ್ಯೆ ಮಾಡುವ ತಿದ್ದುಪಡಿ ನಿರ್ಣಯವನ್ನು

ಮಂಡಿಸಲಾಗುತ್ತಿದೆ. ಆ ನಿರ್ಣಯವನ್ನು ವರ್ಷ ವರ್ಷವೂ ಅತಿಯಾದ ಬಹುಮತದಿಂದ ಕಾಂಗ್ರೆಸ್ ತಿರಸ್ಕರಿಸುತ್ತಿರುವುದು ಸಂತೋಷದ ಸಂಗತಿ. ನಿರ್ಣಯದ ತಿರಸ್ಕಾರ ಕಾಂಗ್ರೆಸ್ಸಿನ ಚಿತ್ತಸ್ವಾಸ್ಥ್ಯಕ್ಕೆ ಪುರಾವೆ. ಈ ನಿರ್ಣಯವನ್ನು ಮಂಡಿಸುವ ಕೆಲವು ಉತ್ಸಾಹೀ ಕಾಂಗ್ರೆಸಿಗರು ಪ್ರಸ್ತುತ ಪರಿಸ್ಥಿತಿಯಲ್ಲಿ ಮನ್ನಿಸಬಹುದಾದ ಆತುರವನ್ನು ತೋರಿದ್ದಾರೆ. ಅವರುಗಳಿಗೆ ಬ್ರಿಟಿಷರ ಉದ್ದಿಶ್ಯಗಳಲ್ಲಿ ನಂಬಿಕೆ ಇಲ್ಲ; ಬ್ರಿಟಿಷರಿಂದ ಭಾರತಕ್ಕೆ ಎಂದಿಗೂ ನ್ಯಾಯದೊರೆಯದು ಎಂದು ಅವರ ಭಾವನೆ. ಪೂರ್ಣ ಸ್ವಾತಂತ್ರ್ಯ ಬೇಕೆಂದು ವಾದಿಸುವವರು ಮನುಷ್ಯತ್ವದಲ್ಲಿ ನಂಬಿಕೆ ಕಳೆದುಕೊಂಡರೆ ತಮ್ಮಲ್ಲೂ ತಾವು ನಂಬಿಕೆ ಕಳೆದುಕೊಂಡಂತೆ ಎಂಬುದನ್ನು ಮರೆತಂತೆ ಕಾಣುತ್ತದೆ. ಬ್ರಿಟಿಷ್ ಜನರಿಗೆ ಮಾರ್ಗದರ್ಶನ ನೀಡುತ್ತಿರುವವರಲ್ಲಿ ಹೃದಯ ಪರಿವರ್ತನೆ ಆಗುವುದೇ ಇಲ್ಲ ಎಂದು ಅವರು ಏಕೆ ಭಾವಿಸಬೇಕು? ನಾವು ದುರ್ಬಲರಾಗಿರುವುದರಿಂದ ಅವರಲ್ಲಿ ಹೃದಯ ಪರಿವರ್ತನೆ ಆಗಿಲ್ಲವೆಂದು ಮನಗಾಣುವುದು ಹೆಚ್ಚು ಸಹಜವಾದುದು ಹಾಗೂ ಗೌರವಯುತವಾದುದಲ್ಲವೆ? (ದೌರ್ಬಲ್ಯವನ್ನು ಪ್ರಕೃತಿ ವಿರೋಧಿಸುತ್ತದೆ.) ನಮಗೆ ಬ್ರಿಟಿಷರ ಅಥವಾ ಈ ಜಗತ್ತಿನ ಕೃಪೆ ಬೇಕಿಲ್ಲ; ನಮಗೆ ಸಲ್ಲಬೇಕಾದ ನ್ಯಾಯ ಸಲ್ಲಬೇಕು. ನಾವು ಬಲಿಷ್ಠರಾದರೆ ಮತ್ತು ಬಲಿಷ್ಠರು ಎಂಬ ಭಾವನೆ ನಮ್ಮಲ್ಲಿ ಮೂಡಿ ಬಂದರೆ ನ್ಯಾಯಕ್ಕೆ ನಾವು ಅರ್ಹರಾಗುತ್ತೇವೆ.

"ಸಂಪೂರ್ಣ ಸ್ವಾತಂತ್ರ್ಯಬೇಕೆಂದು ದೃಢವಾಗಿ ವಾದಿಸುವವನೂ ಸಹ ಬ್ರಿಟಿಷರೊಂದಿಗೆ ಯಾವುದೇ ರೀತಿಯ ಸಂಬಂಧವೇ ಬೇಡವೆನ್ನಲಾರ; ಇದು ನನ್ನ ಖಚಿತ ಭಾವನೆ. ಸಂಬಂಧವೇ ಬೇಡ ಎಂದು ಅವನು ಹೇಳಿದಾಗ ಅವನ ಭಾವನೆ, ಬ್ರಿಟಿಷರು ಸಮಾನತೆಯ ಆಧಾರದ ಮೇಲೆ ಬಾಂಧವ್ಯವನ್ನು ಎಂದಿಗೂ ಇಟ್ಟುಕೊಳ್ಳುವುದಿಲ್ಲ, ಎಂದು. ನಿರ್ಣಯದ ಸಮರ್ಥಕರೊಬ್ಬರು ಈ ಅಂಶವನ್ನು ಒಪ್ಪಿಕೊಂಡರು. ಆದರೆ ಹೀಗೆ ಹೇಳುವುದಕ್ಕೂ ಬ್ರಿಟಿಷರೊಂದಿಗೆ ಯಾವ ಷರತ್ತಿನ ಮೇಲೂ ಸಂಬಂಧ ಇಟ್ಟುಕೊಳ್ಳುವುದಿಲ್ಲ ಎನ್ನುವುದಕ್ಕೂ ತುಂಬಾ ವ್ಯತ್ಯಾಸವಿದೆ.

"ನಿಜವಾಗಿಯೂ 'ಸ್ವರಾಜ್ಯ' ಎಂಬ ಪದದ ಅರ್ಥ ವ್ಯಾಪಕವಾದದ್ದು. ಪೂರ್ಣ ಸ್ವಾತಂತ್ರ್ಯವೂ ಅದರಲ್ಲಿ ಅಡಗಿದೆ. ಇನ್ನೂ ಅನೇಕ ಇತರ ವಿಷಯಗಳೂ ಅದರಲ್ಲಿ ಅಡಕವಾಗಿವೆ. ಅದಕ್ಕೆ ನಿರ್ದಿಷ್ಟ ಅರ್ಥಕೊಡಲು ಹೋದರೆ ನಮ್ಮ ದೃಷ್ಟಿಯನ್ನು ಸಂಕುಚಿತಗೊಳಿಸಿದಂತಾಗುತ್ತದೆ. ಅಮಿತ ಅರ್ಥವುಳ್ಳದ್ದನ್ನು ಮಿತಿಗೊಳಿಸಿದಂತಾಗುತ್ತದೆ. ರಾಷ್ಟ್ರೀಯ ಭಾವನೆ ಹಾಗೂ ಆಶೋತ್ತರಗಳು ಬೆಳೆದಂತೆಲ್ಲ ಸ್ವರಾಜ್ಯದ ಸತ್ವವೂ ವೃದ್ಧಿಯಾಗಬೇಕು. ಬ್ರಿಟಿಷ್ ಚಕ್ರಾಧಿಪತ್ಯದೊಳಗೆ ನಮಗೆ ಸ್ವತಂತ್ರವಾದ ಸ್ಥಾನಮಾನ ದೊರೆತರೆ ಅದರಿಂದ ನಮಗೆ ಇಂದು ತೃಪ್ತಿಯಾಗಬಹುದು. ಮುಂದಿನ ಪೀಳಿಗೆಗಳಿಗೆ ಅದು ತೃಪ್ತಿಯಾಗದಿರಬಹುದು. ಅವರು ಇನ್ನೂ ಉತ್ತಮವಾದ ಸ್ಥಾನವನ್ನು ಬಯಸಬಹುದು. ಯಾವ ವಿಶೇಷಣವೂ ಇಲ್ಲದ ಸ್ವರಾಜ್ಯದಲ್ಲಿ, ನಾವು ಇಂದು ಕಲ್ಪಿಸಿಕೊಳ್ಳುವ ಅಥವಾ ಹೊಂದಿರುವ ಉತ್ತಮ ವ್ಯವಸ್ಥೆಗಿಂತ ಮಹೋತ್ತಮವಾದುದು

ಅಡಕವಾಗಿದೆ. ಚಕ್ರಾಧಿಪತ್ಯದಲ್ಲಿ ಸ್ವತಂತ್ರ್ಯ ಸ್ಥಾನಮಾನ ಹೊಂದಿರುವಾಗ ಇಷ್ಟ ಬಂದರೆ ಸಂಪೂರ್ಣ ಸ್ವಾತಂತ್ರ್ಯವನ್ನು ಘೋಷಿಸುವ ಸಾಮರ್ಥ್ಯವೂ ಇರುತ್ತದೆ. ಅದು ಸ್ವರಾಜ್ಯದ ಅರ್ಥ. ಎಲ್ಲಿಯವರೆಗೆ ನಾವು ಆ ಸಾಮರ್ಥ್ಯವನ್ನು ಹೊಂದಿರುವುದಿಲ್ಲವೋ ಅಲ್ಲಿಯವರೆ ಇಗ ನಮಗೆ ಸ್ವರಾಜ್ಯವಿಲ್ಲದು ಅದರ ಕನಿಷ್ಠ ಅರ್ಥ. ದಕ್ಷಿಣ ಆಫ್ರಿಕಾವು ಇಂದು ಆ ಸ್ಥಾನಮಾನವನ್ನು ಗಳಿಸಿದೆ. ಸ್ವತಂತ್ರ ಜನಾಂಗಗಳು ಸ್ವಇಚ್ಛೆಯಿಂದ ಜೊತೆಗಾರರಾಗಿರುವ ರೀತಿ ಅದು. ಬ್ರಿಟನ್ ಮತ್ತು ಡೊಮಿನಿಯನ್‌ಗಳ ನಡುವೆ ಸ್ವಚ್ಛೆಯಿಂದ ಪಾಲುದಾರಿಕೆ ವ್ಯವಸ್ಥೆ ಆಗಿದೆ. ಸಮಾನತೆ ಹಾಗೂ ಪರಸ್ಪರ ಪ್ರಯೋಜನದ ಆಧಾರದ ಮೇಲೆ ಅದು ಆಗಿದೆ. ತನಗೆ ಏನಾಗಬೇಕೆಂದು ಅಖೈರು ತೀರ್ಮಾನವನ್ನು ಭಾರತವೇ ತೆಗೆದುಕೊಳ್ಳಬೇಕು. ಈ ತೀರ್ಮಾನಗಳನ್ನು ಕೈಗೊಳ್ಳುವ ಅನಿರ್ಬಂಧ ಅಧಿಕಾರ ಈಗಿನ ಸಿದ್ಧಾಂತದಲ್ಲಿದೆ. ಬ್ರಿಟಿಷ್ ಚಕ್ರಾಧಿಪತ್ಯ ಅಥವಾ ಬ್ರಿಟಿಷ್ ಕಾಮನ್‌ವೆಲ್ತಿನ ಒಳಗೆ ಸ್ವರಾಜ್ಯದ ಬೆಳವಣಿಗೆಯ ಸಾಧ್ಯತೆಯನ್ನು ಈ ಸಿದ್ಧಾಂತ ಉಳಿಸಿಕೊಳ್ಳುತ್ತದೆ. ಸಾಧ್ಯವಾದರೆ ಬ್ರಿಟಿಷ್ ಚಕ್ರಾಧಿಪತ್ಯದೊಳಗಿರುವುದು; ಅಗತ್ಯ ಬಂದಲ್ಲಿ ಅದಕ್ಕೆ ಹೊರತಾಗಿರುವುದೆಂಬುದೇ ಸ್ವರಾಜ್ಯದ ಅರ್ಥ–ಎಂದು ಸಂಕ್ಷೇಪವಾಗಿ ನಾನು ಅನೇಕ ಸಾರಿ ಹೇಳಿದ್ದೇನೆ. ಈ ಕಲ್ಪನೆಗಿಂತ ಉತ್ತಮವಾದುದನ್ನು ಯೋಚಿಸುವುದು ಸಾಧ್ಯವಿಲ್ಲ. ಇದು ರಾಷ್ಟ್ರದ ಆತ್ಮಗೌರವಕ್ಕೆ ಪೂರ್ಣವಾಗಿ ಅನುಗುಣವಾಗಿದೆ. ಇದರಿಂದ ರಾಷ್ಟ್ರದ ಪರಮಾವಧಿ ಏಳಿಗೆ ಸಾಧ್ಯ.

"ನಮ್ಮ ಕೃತಿಯಿಂದ ಹಾಗೂ ನಮ್ಮ ಗುರಿಯನ್ನು ಸಾಧಿಸಲು ನಾವು ಅನುಸರಿಸುವ ಮಾರ್ಗದಿಂದ ನಿಜವಾದ ಅರ್ಥ ಗೊತ್ತಾಗುತ್ತದೆ. ಸಾಧನದ ಕಡೆಗೆ ನಾವು ಪೂರ್ಣ ಗಮನವನ್ನು ಕೊಟ್ಟಿದ್ದೇ ಆದರೆ ಸ್ವರಾಜ್ಯ ತನ್ನಷ್ಟಕ್ಕೆ ತಾನೇ ಸಿದ್ಧಿಯಾಗುತ್ತದೆ. ನಿಷ್ಕೃಷ್ಟವಾಗಿ ಹೇಳಲಾಗದ ಸ್ವರಾಜ್ಯದ ಅರ್ಥವನ್ನು ಗೊತ್ತುಮಾಡುವುದಕ್ಕೆ ಬದಲಾಗಿ ಅದನ್ನು ಸಾಧಿಸುವ ವಿಧಿ ವಿಧಾನಗಳನ್ನು ಪರಿಶೋಧಿಸುವ ಕಡೆ ನಮ್ಮ ಗಮನ ಹರಿಯಬೇಕು."

# ಮೌನದ ಅಂತ್ಯ

## ೧೯೨೭

ಗಾಂಧಿಯವರು ಗೌಹತಿಯಲ್ಲಿ ತಮ್ಮ ರಾಜಕೀಯ ಮೌನವನ್ನು ಅಂತ್ಯಗೊಳಿಸಿ, ೧೯೨೫ರಲ್ಲಿ ಆರಂಭಿಸಿದ್ದ ಕೆಲಸವನ್ನು ಮತ್ತೆ ಮುಂದುವರಿಸಿದರು. ಈಗ ಅವರು ನೀಡಿದ ಸಂದೇಶ ಒಂದೇ– ಅದು ಚರಖದ ಸಂದೇಶ. ಅವರ ಮುಂದೆ ಇಟ್ಟುಕೊಂಡಿದ್ದ ಏಕಮಾತ್ರ ಧ್ಯೇಯ–ದೇಶಬಂಧು ದಾಸ್ ಸ್ಮಾರಕ ನಿಧಿಗೆ ಹಣ ಸಂಗ್ರಹ. "ಅಖಿಲ ಭಾರತ ದೇಶಬಂಧು ಸ್ಮಾರಕದ ಉದ್ದೇಶ ಗ್ರಾಮ ವ್ಯವಸ್ಥೆಯಾದುದರಿಂದಲೂ ಮತ್ತು ಅದು ನೂಲುವ ಚಳವಳಿಯ ಮೂಲಕ ನಡೆಯಬೇಕಾದುದರಿಂದಲೂ ಇದಕ್ಕಾಗಿ ವಸೂಲಾದ ಹಣವೆಲ್ಲ ಅಖಿಲ ಭಾರತ ನೂಲುವವರ ಸಂಘಕ್ಕೆ ಸಲ್ಲುತ್ತದೆ. ಸ್ಮಾರಕದ ಸಂಬಂಧವಾಗಿ ವಸೂಲಾಗಿರುವ ಹಣವನ್ನು ಈ ಸಂಸ್ಥೆಯು ಮೇಲೆ ಕಾಣಿಸಿದ ಉದ್ದೇಶಕ್ಕಾಗಿ ವಿನಿಯೋಗಿಸುತ್ತದೆ" ಎಂದು ತಿಳಿಸಿದರು.

೧೯೨೭ರಲ್ಲಿ ತಮ್ಮ ಕಾರ್ಯಕ್ರಮವೇನೆಂಬುದನ್ನು ಪ್ರಕಟಿಸಿದರು: "ಎಲ್ಲವೂ ಸರಿಯಾಗಿದ್ದರೆ ಈ ವರ್ಷದಲ್ಲಿ ಬಿಹಾರ, ಮಹಾರಾಷ್ಟ್ರದ ಒಂದು ಭಾಗ, ಕರ್ನಾಟಕವೂ ಸೇರಿದಂತೆ ಮದ್ರಾಸ್ ಪ್ರಾಂತ, ಯು.ಪಿ. ಬಂಗಾಳ ಮತ್ತು ಒರಿಸ್ಸಾಗಳಲ್ಲಿ ಪ್ರವಾಸ ಮಾಡುವ ಆಸೆ ಹೊಂದಿದ್ದೇನೆ. ಸಮಯವೂ ಸಿಕ್ಕು ಆರೋಗ್ಯವೂ ಚೆನ್ನಾಗಿದ್ದರೆ, ಮತ್ತು ಖಾದಿ ಕೆಲಸಕ್ಕಾಗಿ ಸ್ಮಾರಕ ನಿಧಿಗೆ ಹಣ ದೊರೆಯುವುದಾದಲ್ಲಿ ಇತರ ಪ್ರಾಂತಗಳಲ್ಲೂ ಪ್ರವಾಸ ಮಾಡಲು ಇಷ್ಟ ಪಡುತ್ತೇನೆ.

"ಒರಿಸ್ಸಾಕ್ಕೆ ಹೋಗಿ ಸಾಧ್ಯವಾದ ಮಟ್ಟಿಗೂ ನವೆಂಬರ್ ತಿಂಗಳನ್ನು ಅಲ್ಲಿ ಕಳೆಯುವುದಾಗಿ ಮಾತು ಕೊಟ್ಟಿದ್ದೇನೆ. ಹೇರಳವಾಗಿ ಹಣ ವಸೂಲು ಮಾಡುವ ನಿರೀಕ್ಷೆ ಇಟ್ಟುಕೊಂಡೇನೂ ಅಲ್ಲಿಗೆ ಹೋಗುತ್ತಿಲ್ಲ. ನಮ್ಮ ದಾರುಣ ಪರಿಸ್ಥಿತಿಯ ಸಂಕ್ಷೇಪ ಚಿತ್ರ ಒರಿಸ್ಸಾ ಪ್ರಾಂತದಲ್ಲಿ ಕಾಣಸಿಗುತ್ತದೆ. ಒರಿಸ್ಸಾದಲ್ಲಿ ಪುನರುತ್ಥಾನವಾದರೆ ಇಡೀ ಭಾರತದ ಪುನರುತ್ಥಾನವಾದಂತೆಯೇ. ಆ ಪ್ರಾಂತ ಭಾರತದಲ್ಲೆಲ್ಲ ಅತ್ಯಂತ ಬಡತನದ ಪ್ರದೇಶವಾಗಿ ಇರಬೇಕಾಗಿರಲಿಲ್ಲ. ಅಲ್ಲಿನ ಜನರು ಭಾರತದ ಇತರ ಭಾಗಗಳ ಜನರಿಗಿಂತ ಯಾವ ರೀತಿಯಲ್ಲೂ ಕೀಳಾಗಿಲ್ಲ. ಅವರದೇ ಆದ ಒಳ್ಳೆಯ ಇತಿಹಾಸ ಇದೆ. ಭವ್ಯವಾದ ದೇವಸ್ಥಾನಗಳನ್ನು ಅವರು ಹೊಂದಿದ್ದಾರೆ. ತಾನು ಸೃಷ್ಟಿ ಮಾಡಿದ್ದರಲ್ಲಿ ಯಾವ ತಾರತಮ್ಯವನ್ನೂ ತೋರದ ಜಗನ್ನಾಥ ಅವರ ಮಧ್ಯೆ ಇದ್ದಾನೆ. ಆದರೆ ಅತಿ ದುಃಖದ ಸಂಗತಿ ಎಂದರೆ, ಆ ದೊಡ್ಡ ದೇವಸ್ಥಾನದ ನೆರಳಿನಲ್ಲೇ ಸಹಸ್ರಾರು ಜನರು ಹಸಿವಿನಿಂದ ಸಾಯುತ್ತಾರೆ. ಅದು ಸತತ ಬಡತನದ, ನಿರಂತರ ಕ್ಷಾಮದ, ಯಾವಾಗಲೂ ರೋಗಪೀಡಿತವಾದ ಭೂಮಿ. ಒರಿಸ್ಸಾದ ಜನರ ಕಣ್ಣಿನಲ್ಲಿ ಕಾಣುವಷ್ಟು ಕಾಂತಿಹೀನತೆಯನ್ನು, ಅವರಲ್ಲಿರುವಷ್ಟು ನಿರಾಸೆಯನ್ನು, ಅಲ್ಲಿರುವಷ್ಟು

ಕಳಾಹೀನತೆಯನ್ನು ಬೇರೆಲ್ಲೂ ನಾನು ನೋಡಿಲ್ಲ. ನವೆಂಬರ್‌ನಲ್ಲಿ ನಾನು ಅಲ್ಲಿ ಇರುವ ಕಾರ್ಯಕ್ರಮವನ್ನು ದುಃಖ ಮಿಶ್ರಿತ ಸಂತೋಷದಿಂದ ಎದುರು ನೋಡುತ್ತೇನೆ.

"ಆ ಪ್ರಾಂತದ ಜನರಿಗೆ ಕೆಲಸವಿಲ್ಲದಿರುವುದರಿಂದ ಅಲ್ಲಿ ನೂಲುವ ಕೆಲಸದ ವ್ಯವಸ್ಥೆ ಮಾಡುವುದು ಸುಲಭ; ಅಗತ್ಯವೂ ಹೌದು. ಇಡೀ ಒರಿಸ್ಸಾದ ಜನರನ್ನು ಬಂಗಾಳದ ಕಾರ್ಖಾನೆಗಳಿಗಾಗಲೀ ಭಾರತದಲ್ಲಿನ ಎಲ್ಲ ಕಾರ್ಖಾನೆಗಳಿಗಾಗಲೀ ಹೊತ್ತು ಹಾಕುವುದು ಸಾಧ್ಯವಾಗದ ಮಾತು. ಒಂದು ಪಕ್ಷ ಸಾಧ್ಯವಿದ್ದರೂ ಅದನ್ನು ಮಾಡಿದರೆ ತಪ್ಪಾಗುತ್ತದೆ. ಅದು ಸಾಧ್ಯವಿಲ್ಲವೆಂಬ ಸಂಗತಿ ಸಂತೋಷಕರವಾದದ್ದೇ. ಜನರು ತಮ್ಮ ನೆಲದ ಮೇಲೇ ನಿಂತು ಜೀವಿಸಬೇಕು. ತಮ್ಮ ಸಾಧನ ಸಾಮರ್ಥ್ಯಗಳನ್ನು ಉಪಯೋಗಿಸಿಕೊಳ್ಳುವುದನ್ನು ಕಲಿಯಬೇಕು. ಕಾರ್ಯತತ್ಪರರಾಗಬೇಕು. ಸುಖವಾಗಿರುವುದನ್ನು ಕಲಿಯಬೇಕು. ಸುಖವೇನೆಂಬುದನ್ನೇ ಅವರು ಮರೆತಿದ್ದಾರೆ. ಒರಿಸ್ಸಾದ ಕಾರ್ಯಕರ್ತರು ತಮ್ಮ ಹೊಣೆಯನ್ನು ಅರಿತುಕೊಳ್ಳಬೇಕು. ಅವರುಗಳು ಹೃತ್ಪೂರ್ವಕವಾಗಿ ನೂಲುವ ಚಳವಳಿಯಲ್ಲಿ ಧುಮುಕುತ್ತಾರೆಂದು ನಾನು ನಿರೀಕ್ಷಿಸುತ್ತೇನೆ. ಇಡೀ ಒರಿಸ್ಸಾ ಪ್ರಾಂತದ ಬಗ್ಗೆ ಅವರು ಚಿಂತಿಸಬೇಕಾಗಿಲ್ಲ. ಅವರುಗಳು ಬಿಡಿ ಬಿಡಿ ಹಳ್ಳಿಗಳ ಕಡೆ ಮನಸ್ಸನ್ನು ಹರಿಸಲಿ; ಅಲ್ಲಿ ಅವರುಗಳು ನೆಲೆಸಲಿ. ಪ್ರಾರ್ಥನಾ ಪೂರ್ವಕವಾದ ಸತತ ಶ್ರಮದಿಂದ ನಿರಾಶೆಯಲ್ಲಿ ಮುಳುಗಿರುವ ಅಲ್ಲಿನ ಜನರನ್ನು ಮೇಲಕ್ಕೆತ್ತಲಿ.

ನಾನು ಆಗಲೇ ಹೇಳಿರುವಂತೆ ಅಲ್ಲಿ ಹೆಚ್ಚು ಹಣ ಸಂಗ್ರಹ ಮಾಡುವ ನಿರೀಕ್ಷೆ ಹೊಂದಿಲ್ಲ. ಆದರೂ ಸಭೆಗಳಿಗೆ ಬರುವ ಜನರು ಕೊಡುವ ಬಿಡಿಕಾಸುಗಳನ್ನು ಆದರದಿಂದ ಸ್ವೀಕರಿಸುತ್ತೇನೆ. ೧೯೨೧ರಲ್ಲಿ ಪ್ರವಾಸದಲ್ಲಿದ್ದಾಗ ಹಾಗೆಯೇ ಮಾಡಿದ್ದೆ. ವೃದ್ಧರಾದ ಜನರು ತಮ್ಮ ಅದುರುವ ಬೆರಳುಗಳಿಂದ ಬಿಗಿಯಾದ ಗಂಟನ್ನು ಬಿಚ್ಚಿ ಕಾಸನ್ನು ನನಗೆ ಕೊಡುತ್ತಿದ್ದ ದೃಶ್ಯವನ್ನು ಎಂದಿಗೂ ಮರೆಯಲಾರೆ. ಅದನ್ನೇ ನಾನು ಪುನಃ ನೋಡಲು ಇಚ್ಛಿಸುತ್ತೇನೆ. ನಿರಾಸೆಯ ಚಳಿಗಾಲ ಮುಗಿಸಿ ಸುಖ ಸಂತೋಷದ ವಸಂತವನ್ನು ನಿರ್ದಿಷ್ಟ ಅವಧಿಯಲ್ಲೇ ಆರಂಭಿಸುವ ಸಂಕಲ್ಪವನ್ನು ಪುನರುಚ್ಚಾರ ಮಾಡಲು ಇಚ್ಛಿಸುತ್ತೇನೆ.

"ನಾನು ನಿರಂತರವಾಗಿ ಪ್ರವಾಸ ಮಾಡುತ್ತೇನೆ. ನನಗೆ ದೊರಕುವ ಬಿಡುವಿನ ವೇಳೆಯಲ್ಲಿ ಹಾಗೂ ರೈಲು ಪ್ರಯಾಣದ ಸಮಯದಲ್ಲಿ ಸಂಪಾದಕೀಯ ಕೆಲಸ ಹಾಗೂ ಪತ್ರವ್ಯವಹಾರದ ಕೆಲಸ ಮಾಡುತ್ತೇನೆ. ಇದನ್ನು ವ್ಯವಸ್ಥಾಪಕರು ಗಮನದಲ್ಲಿಟ್ಟು ಕೊಂಡಿರಬೇಕು. ಅಲ್ಲದೆ ಸೋಮವಾರದಂದು ಮಜ್ಜನ ಮತ್ತು ಊಟ ತಿಂಡಿಗೆ ಬೇಕಾಗುವ ಸಮಯವನ್ನಲ್ಲದೆ ಮೂರು ಗಂಟೆ ಕಾಲ ನನಗಾಗಿ ಬಿಡಬೇಕು. ರಾತ್ರಿಯೆಲ್ಲ ಪ್ರದರ್ಶನ ನಡೆಸುವುದನ್ನು ತಪ್ಪಿಸಬೇಕು. ದಿನವೆಲ್ಲ ಶ್ರಮಪಟ್ಟು ಕೆಲಸಮಾಡಿ ರಾತ್ರಿ ಮಲಗಿದ ಮೇಲೆ ತೊಂದರೆಪಡಿಸಿದರೆ ಕಷ್ಟವಾಗುತ್ತದೆ.

"ಇದು ಕೇವಲ ವ್ಯವಹಾರ ನಿಷ್ಠವಾದಪ್ರವಾಸ. ಸಭೆಯನ್ನು ಏರ್ಪಡಿಸುವ ರೀತಿ, ಸಭಿಕರು ಕೂಡುವ ಏರ್ಪಾಟು ಸರಿಯಾಗಿರಬೇಕು. ಹಣವನ್ನು ವಸೂಲು

ಮಾಡುವವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಡಲು ಜಾಗವಿರಬೇಕು. ಎಲ್ಲ ರೀತಿಯ ಘೋಷಣೆಗಳನ್ನೂ ಗದ್ದಲವನ್ನೂ ತಪ್ಪಿಸಬೇಕು. ದಕ್ಷತೆಯಿಂದ ವ್ಯವಸ್ಥೆ ಮಾಡಿದ ಕಡೆ ಹಣದ ವಸೂಲಿ ಚೆನ್ನಾಗಿ ಆಗುವುದನ್ನು ನಾನು ನೋಡಿದ್ದೇನೆ. ಸಾಮಾನ್ಯವಾಗಿ ಸಭಿಕರು ಸಹಾನುಭೂತಿಯಿಂದ ಸಹಕಾರ ನೀಡುತ್ತಾರೆಂಬುದನ್ನು ನಾನು ಕಂಡಿದ್ದೇನೆ. ಶ್ರೀಮಂತರಿಂದ ಬರುವ ಸಹಸ್ರಾರು ರೂಪಾಯಿಗಳ ಮಂತಿಕೆಗೆ ಸ್ವಾಗತವೇನೋ ಇದೆ. ಆದರೆ ಬಡವರಿಂದ ಬರುವ ಪ್ರತಿಯೊಂದು ಕಾಸು ಅಥವಾ ರೂಪಾಯಿನಿಂದ ನಮ್ಮ ಚಳುವಳಿ ಪುನೀತವಾಗುತ್ತದೆಂದು ನಾನು ತಿಳಿದಿದ್ದೇನೆ. ಅವರು ಶಕ್ತ್ಯಾನುಸಾರ ಕಾಣಿಕೆ ನೀಡಲಿ."

ಕಾಂಗ್ರೆಸ್ ಅಧಿವೇಶನ ಮುಗಿಸಿದ ಕೂಡಲೇ ಅವರು ಕಲ್ಕತ್ತಾ, ಸೋದೆಪುರ ಮತ್ತು ಕೊಮಿಲ್ಲಾದಲ್ಲಿ ಒಂದು ವಾರ ಕಳೆದರು. ಕಲ್ಕತ್ತಾದಲ್ಲಿದ್ದ ಅಲ್ಪಾವಧಿಯಲ್ಲಿ ಬಿಡುವಿಲ್ಲದ ಕಾರ್ಯಕ್ರಮವಿತ್ತು.

ಸೇವಾಸದನ, ದಾಸ್ ಮತ್ತು ಗಾಂಧಿಯವರ ಕೂಸು. ದಾಸ್‌ರವರು ತಮ್ಮ ಮನೆಯನ್ನು ಧರ್ಮಾರ್ಥ ಉದ್ದೇಶಗಳಿಗಾಗಿ ದಾನಮಾಡಿದ್ದರು. ಸಾಲಕ್ಕಾಗಿ ದಾಸರು ಭೋಗ್ಯಕ್ಕೆ ಹಾಕಿದ್ದ ಮನೆಯನ್ನು ದೇಶಬಂಧು ಸ್ಮಾರಕ ನಿಧಿಯ ಧರ್ಮದರ್ಶಿಗಳು ಬಿಡಿಸಿಕೊಂಡು ಚಿತ್ತರಂಜನ್ ಸೇವಾ ಸದನ ಎಂಬ ಹೆಸರಿನಲ್ಲಿ ಮಹಿಳೆಯರ ಆಸ್ಪತ್ರೆಯನ್ನು ನಿರ್ಮಿಸಿದರು. ಈ ಆಸ್ಪತ್ರೆಯ ಶಂಕುಸ್ಥಾಪನೆಗೆ ಗಾಂಧಿಯವರನ್ನು ಆಹ್ವಾನಿಸಲಾಗಿತ್ತು. "ನಾನು ಈ ದಿನ ಒಂದು ಸಾಮಾನ್ಯವಾದ ಪ್ರಸೂತಿ ಗೃಹದ ಶಂಕುಸ್ಥಾಪನೆ ಮಾಡುತ್ತಿರುವಂತೆ ಕಾಣಬಹುದು. ಆದರೆ ದೇಶಬಂಧುವಿನ ದೃಷ್ಟಿಯಿಂದ ಸ್ವರಾಜ್ಯದತ್ತ ಇದೊಂದು ಮುನ್ನಡೆಯೇ ಸರಿ". ಎಂದು ಹೇಳಿದರು. ಬಂಗಾಳಿಗಳು ಸಂಕುಚಿತ ಪ್ರಾಂತೀಯ ಮನೋಭಾವದವರಾದ್ದರಿಂದ ದೇಶಬಂಧುವಿನ ಸ್ಮಾರಕವೂ ಸಂಕುಚಿತ ಸ್ವರೂಪವನ್ನು ತಾಳೀತು, ಎಂದು ಕೆಲವರು ವ್ಯಕ್ತಪಡಿಸಿದ್ದ ಸಂದೇಹವನ್ನು ಕುರಿತು ಪ್ರಸ್ತಾಪಿಸಿದರು. "ಬಂಗಾಳಿಗಳು ಭಾರತವನ್ನೆಲ್ಲ ಬಂಗಾಳದಲ್ಲಿ ಲೀನ ಮಾಡಿಕೊಂಡರೂ ನನ್ನ ಅಭ್ಯಂತರವಿಲ್ಲ. ಆಗ ಉತ್ತರ ಪ್ರದೇಶದವರಾದ ಮುದಿ ವಯಸ್ಸಿನ ಪಂಡಿತ್‌ಜೀ ಮತ್ತು ಗುಜರಾತಿನ ಮುದಿ ವೈಶ್ಯನಾದ ನಾನು ನಿರಾಳವಾಗಿ ಸುಧಾರಿಸಿಕೊಳ್ಳಬಹುದು ಬಂಗಾಳವು ರವೀಂದ್ರನಾಥ, ರಾಮಮೋಹನ ರಾಯ್, ಕೇಶವ ಚಂದ್ರಸೇನ್,ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರಿಗೆ ಜನ್ಮ ಕೊಟ್ಟಿದೆ. ಚೈತನ್ಯರ ಪಾದಧೂಳಿಯಿಂದ ಪವಿತ್ರವಾಗಿದೆ. ಗಂಗಾ ಮತ್ತು ಬ್ರಹ್ಮಾಪುತ್ರ ನದಿಗಳಿಂಥ ಪುನೀತವಾಗಿದೆ. ಇಂತಹ ಬಂಗಾಳದಲ್ಲಿ ಇಡೀ ಭಾರತ ಲೀನವಾದರೆ ನನ್ನ ಅಭ್ಯಂತರ ಸ್ವಲ್ಪವೂ ಇರುವುದಿಲ್ಲ ಆದರೆ ಡಾ. ಬಿಪಿನಚಂದ್ರ ರಾಯ್ ಹೇಳಿರುವಂತೆ ಆ ಹೆದರಿಕೆಗೆ ಬುಡವಿಲ್ಲ. ದೇಶಬಂಧು ತನ್ನ ಮಾತೃಭೂಮಿಗೆ ಸೇವೆ ಸಲ್ಲಿಸಿದ ವಿಶಾಲ ದೃಷ್ಟಿಗನುಗುಣವಾಗೆಯೇ ಸೇವಾ ಸದನ ನಡೆಸಲ್ಪಡುತ್ತದೆ. ಮಹಿಳೆಯರ, ನಮ್ಮ ಕಾಮೋನ್ಮಾದಗಳಿಗೆ ಬಲಿಯಾಗಿರುವ ಸಹೋದರಿಯರ, ವಿಮೋಚನೆಯ ಗುರಿಯನ್ನು ಹೃದಯದಲ್ಲಿಟ್ಟುಕೊಂಡಿದ್ದಾತನಿಗೆ

ಈ ಸಂಸ್ಥೆ ಜೀವಂತ ಸ್ಮಾರಕ. ಇದು ಒಬ್ಬಿಬ್ಬ ಧರ್ಮದರ್ಶಿಗಳಿಗೆ ಸೇರಿದ್ದಲ್ಲ. ಇಡೀ ದೇಶಕ್ಕೆ ಸೇರಿದೆ. ದೇಶಬಂಧುವಿನ ಹೆಸರು ಹೇಳುವ ಅರ್ಹತೆಯುಳ್ಳ ಸಂಸ್ಥೆಯನ್ನಾಗಿ ಮಾಡಲು ಶ್ರಮಿಸೋಣ. ಭಾರತದಲ್ಲಿ ಅವರ ಸ್ಮರಣೆಯನ್ನು ಅದು ಅಮರವನ್ನಾಗಿ ಮಾಡಲಿ."

ಕಲ್ಕತ್ತಾದಲ್ಲಿನ ಬಡಾವಣೆಯಾದ ಸೋದೆಪುರಕ್ಕೆ ಖಾದಿ ಪ್ರತಿಷ್ಠಾನದ ಸತೀಶ್ ದಾಸ್ ಗುಪ್ತರ ಕರೆಯ ಮೇರೆಗೆ ಅವರು ಭೇಟಿ ಕೊಟ್ಟರು. ಅಲ್ಲಿ ಸತೀಶ್ ಬಾಬು ತನ್ನ ಸಹಕಾರ್ಯಕರ್ತರೊಂದಿಗೆ ನಿಷ್ಠೆಯಿಂದ ರಚನಾತ್ಮಕ ಕಾರ್ಯ ಮಾಡುತ್ತಿದ್ದರು. ಒಂಬತ್ತು ತಿಂಗಳ ಅವಧಿಯಲ್ಲಿ ಮೂವತ್ತು ಭಿಗಗಳಷ್ಟು ಜಮೀನು ಪಡೆದುಕೊಂಡು ಅಲ್ಲಿ ಪ್ರತಿಷ್ಠಾನದ ತಾಂತ್ರಿಕ ವಿಭಾಗಕ್ಕಾಗಿ ಕಟ್ಟಡಗಳನ್ನು ಕಟ್ಟಿದ್ದರು. ಇವುಗಳ ಮೇಲೆ ಹೂಡಿದ್ದ ಬಂಡವಾಳ ಎಪ್ಪತ್ತು ಸಾವಿರ ರೂಪಾಯಿಗಳು. ಸದ್ದುಗದ್ದಲ ವಿಲ್ಲದೆ ನಡೆದ ಈ ಸಮಾರಂಭದಲ್ಲಿ ಸಹಸ್ರಾರು ಮಂದಿ ಭಾಗವಹಿಸಿದ್ದರು.

ಅನಂತರ ಕೋಮಿಲ್ಲಾಗೆ ಹೋಗಿ ಅಭಯಾಶ್ರಮದಲ್ಲಿ ಒಂದೆರಡು ದಿನ ತಂಗಿದ್ದರು. ಸುರೇಶ ಬಾಬು ಮತ್ತು ಅವರ ನೆಚ್ಚಿನ ಸಂಗಡಿಗರು ಆಶ್ರಮವನ್ನು ಉತ್ಸಾಹ ಮತ್ತು ನಿಷ್ಠೆಯಿಂದ ಬೆಳೆಸಿದ್ದರು. ಅಸ್ಪೃಶ್ಯ ಬಾಲಕ ಬಾಲಕಿಯರಿಗಾಗಿ ಏಳು ಶಾಲೆಗಳನ್ನು ನಡೆಸುತ್ತಿದ್ದುದು ಆಶ್ರಮದ ಸಮಾಜಸೇವಾ ಕಾರ್ಯದ ವೈಶಿಷ್ಟ್ಯವಾಗಿತ್ತು. ಆಶ್ರಮವು ಗಣನೀಯವಾಗಿ ವೈದ್ಯಕೀಯ ಪರಿಹಾರವನ್ನೂ ನೀಡುತ್ತಿತ್ತು.

ಸುರೇಶ ಬಾಬು ಮತ್ತು ಸತೀಶ ಬಾಬು ಅವರ ಕೆಲಸದ ಬಗ್ಗೆ ಗಾಂಧಿಯವರು ಪ್ರಾರ್ಥನಾಸಭೆಯಲ್ಲಿ ಪ್ರಸ್ತಾಪಿಸಿದರು. "ನೀವು ಆದ್ಯ ಪ್ರವರ್ತಕರು, ಜಮುನೋತ್ರಿ ಮತ್ತು ಗಂಗೋತ್ರಿಗಳಂತೆ ಜೊತೆಗೂಡಿದ್ದೀರಿ. ಅವೆರಡು ನದಿಗಳಂತೆ ನೀವೂ ಇರಿ. ನಿಮ್ಮಿಬ್ಬರನ್ನೂ ನೋಡಿದಾಗ ಖಾದಿಯ ರಥವನ್ನು ಪೂರ್ಣಗತಿಯಲ್ಲಿ ಎಳೆದು ಕೊಂಡು ಹೋಗುತ್ತಿರುವ ಎರಡು ಕುದುರೆಗಳ ಚಿತ್ರವನ್ನು ಭಾವಿಸಿಕೊಳ್ಳುತ್ತೇನೆ. ನೀವು ವಿಶಿಷ್ಟ ರೀತಿಯಲ್ಲಿ ಯಶಸ್ಸು ಪಡೆದಿದ್ದೀರಿ. ನೀವು ಉತ್ಪಾದಿಸುವ ವಸ್ತುಗಳ ಸಲುವಾಗಿ ಬೇರೆ ಯಾವ ಪ್ರಾಂತದ ಸಹಾಯವನ್ನೂ ಕೋರುತ್ತಿಲ್ಲ. ಇದು ವಿಶೇಷ ಸಂಗತಿ. ನಿಮ್ಮ ಧ್ಯೇಯಕ್ಕೆ ಬಂಗಾಳದ ಮಹಿಳೆಯರು ಬಾಗುವಂತೆ ಮಾಡಿದ್ದೀರಿ–ಅವರಿಗೆ ಎಲ್ಲ ಗೌರವವೂ ಸಲ್ಲತಕ್ಕದ್ದು. ನೀವು ಸರಬರಾಜು ಮಾಡುವ ಸೀರೆಗಳನ್ನು ಉಡಲು ಅವರು ಇಂದು ಹೆಮ್ಮೆ ಪಡುತ್ತಾರೆ. ಈರ್ವರ ಶಕ್ತಿ ಮತ್ತು ದೌರ್ಬಲ್ಯಗಳು ಪರಸ್ಪರ ಇಬ್ಬರಿಗೂ ಸಮಾನವಾಗಿರಲಿ. ಖಾದಿ ಪ್ರತಿಷ್ಠಾನಕ್ಕೆ ತೊಂದರೆ ಒದಗಿದಾಗ ಅದು ಅಭಯಾಶ್ರಮದ ಕಡೆ ನೋಡಲಿ, ಅಂತೆಯೇ ಅಭಯಾಶ್ರಮಕ್ಕೆ ತೊಂದರೆ ಯಾದ ಸಮಯದಲ್ಲಿ ಅದು ಖಾದಿ ಪ್ರತಿಷ್ಠಾನದತ್ತ ನೋಡಲಿ."

ಜನವರಿ ಐದರಂದು ಕೋಮಿಲ್ಲದಲ್ಲಿ ಸಾರ್ವಜನಿಕ ಸಭೆ ಸೇರಿತ್ತು. ಗಾಂಧಿ ಯವರು ಹಿಂದಿಯಲ್ಲಿ ಮಾತನಾಡಲು ಆರಂಭಿಸಿದಾಗ ಸಭಿಕರಿಗೆ ಸ್ವಲ್ಪ ನಿರಾಸೆ

ಆಯಿತು. ಆದರೆ ಅವರು ಶಿಸ್ತಿನಿಂದ ಇದ್ದರು. ಅವರ ತಾಳ್ಮೆಗೆ ಪುರಸ್ಕಾರ ನೀಡಿ, ದೇಶದ ಮುಂದಿರುವ ಕೆಲಸದ ಬಗ್ಗೆ ತಮ್ಮ ಉತ್ಕಟ ವಿಚಾರವನ್ನು ಇಂಗ್ಲಿಷಿನಲ್ಲಿ ಮಂಡಿಸಿದರು.

"ಹಿಂದಿಯಲ್ಲಿ ಮಾತನಾಡಲು ನನಗೆ ಅವಕಾಶ ಕೊಟ್ಟು ನೀವು ದಯೆ ತೋರಿದ್ದೀರಿ. ನಿಮ್ಮ ಕರುಣೆಯನ್ನು ಮೆಚ್ಚಿ ನಾನು ಕೆಲವು ಮಾತುಗಳನ್ನು ಇಂಗ್ಲೀಷಿನಲ್ಲಿ ಆಡುತ್ತೇನೆ. ನಮ್ಮ ದೇಶದ ಜನಗಳ ಮುಂದೆ ಇಂಗ್ಲಿಷಿನಲ್ಲಿ ಮಾತನಾಡಬೇಕಾದ ಪ್ರತಿ ಸಂದರ್ಭದಲ್ಲೂ ನನಗೆ ತುಂಬಾ ನಾಚಿಕೆಯಾಗುತ್ತದೆ. ಅಭಿಮಾನಭಂಗವಾಗುತ್ತದೆ. ನಾನು ಎಷ್ಟೋ ಬಾರಿ ಬಂಗಾಳದ ಸಭಿಕರನ್ನು ಒತ್ತಾಯ ಪೂರ್ವಕವಾಗಿ ಕೇಳಿ ಕೊಂಡಿದ್ದೇನೆ, ನನ್ನ ನಿಷ್ಠೆಯನ್ನು ಹ್ರಾಸಗೊಳಿಸಬೇಡಿ. ಭಾರತ ಮಾತೆಯ ಮೇಲೆ ಈ ಹೊರೆ ಹೊರಿಸಬೇಡಿ, ಎಂದು. ವಿಂಧ್ಯದ ಉತ್ತರಕ್ಕಿರುವ ಯಾವ ಭಾರತೀಯನಿಗಾದರೂ ಹಿಂದಿ ಕಲಿತುಕೊಳ್ಳುವುದು ಅತ್ಯಂತ ಸುಲಭ. ಒಂದು ತಿಂಗಳಲ್ಲಿ ಕಲಿತು ಬಿಡಬಹುದು. ಪ್ರಯತ್ನಿಸಿ ನೋಡಿ, ನಾನು ಹೇಳುವುದು ಸರಿಯೋ ಅಲ್ಲವೋ ಎಂಬುದನ್ನು. ನಮ್ಮ ಮಾತೃಭಾಷೆ ಕೇವಲ ಬಂಗಾಳಿ ಅಥವಾ ಗುಜರಾತಿ ಅಥವಾ ಪಂಜಾಬಿ ಎಂದು ಹೇಳುವುದು ಬೇಡ. ಇವೆಲ್ಲ ಪ್ರಾಂತೀಯ ಭಾಷೆಗಳು. ನಾವು ನಮ್ಮ ಮಾತೃಭೂಮಿಯನ್ನು ಪ್ರಶಂಸಿಸಿ 'ವಂದೇ ಮಾತರಂ' ಹಾಡಿದಾಗ ಇಡೀ ಭಾರತಕ್ಕೆ ಅನ್ವಯಿಸಿ ಹಾಡುತ್ತೇವೆ. ನಾವು ಅದಕ್ಕೆ ತಕ್ಕುದಾಗಿ ನಡೆದುಕೊಳ್ಳಬೇಡವೆ? ಆದುದರಿಂದ ನನ್ನ ಬಿನ್ನಹ ಇದು. ಮುಂದಿನ ಸಾರಿ ನಾನು ಇಲ್ಲಿಗೆ ಬಂದಾಗ ಅಥವಾ ನೀವು ನನ್ನನ್ನು ಆಹ್ವಾನಿಸಿದಾಗ ಹಿಂದಿಯಲ್ಲೇ ಮಾತನಾಡುವಂತೆ ನನ್ನನ್ನು ಒತ್ತಾಯಪಡಿಸಬೇಕು. ಅದು ಒಂದು ವಿಷಯವಾಯಿತು.

"ಕಾಂಗ್ರೆಸ್ಸಿನ ಕಳೆದ ಅಧಿವೇಶನವನ್ನು ನಾವು ವೀಕ್ಷಿಸಿದ್ದೇವೆ. ಬ್ರಹ್ಮಪುತ್ರ ನದಿಯ ದಡದಲ್ಲಿ, ಜಗತ್ತಿನಲ್ಲಿ ಮತ್ತೆಲ್ಲೂ ಕಾಣದ ತರುಲತಾಪುಷ್ಪಗಳ ರಮಣೀಯ ಸೌಂದರ್ಯದ ಮಧ್ಯದಲ್ಲಿ, ನಮ್ಮ ನಾಯಕರು ಕುಳಿತು ಚರ್ಚೆ ನಡೆಸಿದರು. ಶಾಸನ ಮಂಡಲಗಳಿಗೆ ಸಂಬಂಧಿಸಿದಂತೆ ಅವರು ಕಾರ್ಯಕ್ರಮವೊಂದನ್ನು ರೂಪಿಸಿದ್ದಾರೆ. ನಮ್ಮಲ್ಲಿ ಎಷ್ಟು ಮಂದಿ ವಿಧಾನ ಮಂಡಲಗಳನ್ನು ಪ್ರವೇಶ ಮಾಡಬಲ್ಲೆವು?. ಈ ಸಭೆಗಳಿಗೆ ಪ್ರತಿನಿಧಿಗಳನ್ನು ಚುನಾಯಿಸಲು ನಮ್ಮಲ್ಲಿ ಎಷ್ಟು ಜನಕ್ಕೆ ಹಕ್ಕಿದೆ? ಲಕ್ಷಾಂತರ ಗ್ರಾಮವಾಸಿಗಳಿಗೆ ಓಟಿನ ಅಧಿಕಾರವಿದೆಯೇ? ಭಾರತದ ಜೀವಾಳವಿರುವುದು ಹತ್ತಿಪ್ಪತ್ತು ಪಟ್ಟಣಗಳಲ್ಲಿಯೋ ಅಥವಾ ಏಳು ಲಕ್ಷ ಹಳ್ಳಿಗಳಲ್ಲಿಯೋ? ೧೯೦೦ ಮೈಲಿಗಳಷ್ಟು ಉದ್ದ ೧೫೦೦ ಮೈಲಿಗಳಷ್ಟು ಅಗಲವುಳ್ಳ ಈ ವಿಸ್ತಾರ ದೇಶದ ಏಳು ಲಕ್ಷ ಹಳ್ಳಿಗಳಲ್ಲಿ ಹರಡಿರುವ ಮೂವತ್ತು ಕೋಟಿ ಜನರನ್ನು ಒಟ್ಟುಗೂಡಿಸುವ ಕಾರ್ಯಕ್ರಮ ಯಾವುದು? ಪ್ರತಿಯೊಬ್ಬ ಹಳ್ಳಿಗನೂ–ಗಂಡಸು, ಹೆಂಗಸು, ಬಾಲಕ, ಬಾಲಕಿ, ಹಿಂದೂ ಮತ್ತು ಮುಸಲ್ಮಾನ್ ಪ್ರತಿಯೊಬ್ಬನೂ ಲಾಭದಾಯಕವಾಗಿ ಕೈಗೊಳ್ಳ

ಬಹುದಾದ ಹಾಗೂ ಇಡೀ ಭಾರತವನ್ನು ಮೇಲಕ್ಕೆತ್ತಬಹುದಾದ ಕೆಲಸ ಯಾವುದು? ಇದಕ್ಕೆ ಸ್ಪಷ್ಟವಾದ ಏಕಮಾತ್ರ ಉತ್ತರ, ಚರಖ ಮತ್ತು ಖದ್ದರ್. ನಾವು ಮನಸ್ಸು ಮಾಡಿದರೆ ಖದ್ದರ್‌ನ ಸಂದೇಶವು ಮೂಲೆಗುಂಪಾಗಿರುವ ಹಳ್ಳಿಗಳಿಗೂ ತಲುಪಲು ಸಾಧ್ಯ. ವಿದೇಶೀಯರಿಂದಲೇ ಅಲ್ಲದೆ ನಮ್ಮಿಂದಲೂ ತುಳಿಯಲ್ಪಟ್ಟು ದಿವಾಳಿಗಳಾಗಿ ಅತ್ಯಂತ ಅಧೋಗತಿಯಲ್ಲಿರುವ ಲಕ್ಷಾಂತರ ಮಂದಿ ಗ್ರಾಮಸ್ಥರು ರಾಟೆಯನ್ನು ತಿರುಗಿಸಬಹುದು. ನಗರಗಳಲ್ಲಿ ವಾಸಮಾಡುವ ನಾವುಗಳು ಗ್ರಾಮಸ್ಥರ ದುಡಿಮೆ ಹಾಗೂ ಸಂಪತ್ತಿನಿಂದ ಬದುಕಿದ್ದೇವೆ. ಅಮೆರಿಕಾ ಅಥವಾ ಬ್ರಿಟಿಷರಂತಲ್ಲ ನಾವು. ಅವರುಗಳು ಏಷ್ಯಾದ ಜನಾಂಗಗಳನ್ನು ಅಥವಾ ವಿಶ್ವದ ದುರ್ಬಲ ಜನಾಂಗಗಳನ್ನು ಶೋಷಣೆ ಮಾಡಿ ಜೀವಿಸುತ್ತಾರೆ. ಭಾರತ, ಚೀಣಾ, ಆಫ್ರಿಕಾ, ಮತ್ತಿತರ ದೇಶಗಳನ್ನು ಶೋಷಣೆ ಮಾಡಲು ಅವರಿಗೆ ಆಗದಿದ್ದರೆ ಅವರೂ ಸಹ ರಾಟೆಯನ್ನೋ ಅಥವಾ ಅದಕ್ಕೆ ಪರ್ಯಾಯವಾದದ್ದನ್ನೋ ಅವಲಂಬಿಸಬೇಕಾಗುತ್ತದೆ. ನಾವು ಅವರುಗಳನ್ನು ಶೋಷಿಸುತ್ತಿಲ್ಲ. ಯತ್ನವಿಲ್ಲ, ಸುಮ್ಮನಿದ್ದೇವೆ. ಆದರೆ ನಾವು ಯಾವೊಂದು ರಾಷ್ಟ್ರವನ್ನೂ—ಅದು ಎಷ್ಟೇ ದುರ್ಬಲವಾಗಿರಲಿ—ಶೋಷಣೆ ಮಾಡುವುದಿಲ್ಲ, ಎಂದು ತುಂಬು ಹೃದಯದಿಂದ ಹಾಗೂ ವಿಶಾಲ ರಾಷ್ಟ್ರೀಯ ದೃಷ್ಟಿಯಿಂದ ಘೋಷಿಸುವ ಕಾಲ ಸನ್ನಿಹಿತವಾಗುತ್ತಿದೆ. ನಮ್ಮ ಜೀವಮಾನದಲ್ಲಿ ಮತ್ತು ನನ್ನ ಜೀವಮಾನದಲ್ಲಿ ಸ್ವಾತಂತ್ರ್ಯದ ಪ್ರಾಪ್ತಿಯಾಗುತ್ತದೆ. ಸ್ವಾತಂತ್ರ್ಯವು ಲಭ್ಯವಾದಾಗ ನಾವು ಎಲ್ಲ ರಾಷ್ಟ್ರಗಳಿಗೂ ಸಾರೋಣ—ನಮ್ಮಿಂದ ನಿಮಗೆ ಯಾವ ಭಯವೂ ಇಲ್ಲ, ಎಂದು. ನಾವುಗಳು ನಾಗರಿಕ ಎಂದು ಹೇಳಿಕೊಳ್ಳುವ ರಾಷ್ಟ್ರಗಳಿಂದಾಗಿ ಸತತವಾದ ಭೀತಿಯಲ್ಲಿ ಬದುಕಿದ್ದೇವೆ. ಹಾಗೆ ಬೇರೆ ದೇಶಗಳು ಭಯಗ್ರಸ್ತರಾಗಿ ಬದುಕುವುದು ಬೇಡ. ನಾನು ಹೇಳುವುದನ್ನು ನೀವು ಇಂದು ನಂಬದೆ ಇರಬಹುದು. ನೀವು ನನ್ನನ್ನು ಹುಚ್ಚ ಎಂದು ಬೇಕಾದರೂ ಕರೆಯಿರಿ. ಆದರೆ ಈ ಮುದುಕ ಹೇಳಿದ್ದು ಸರಿ ಎಂದು ನೀವು ಹೇಳುವ ಕಾಲ ಬರುತ್ತಿದೆ. ಭಾರತದ ಏಳಿಗೆ ಆಗಬೇಕಾದರೆ ಹಳ್ಳಿಗಳ ಏಳಿಗೆ ಆಗಬೇಕು; ಪಟ್ಟಣಗಳದ್ದಲ್ಲ; ಎಂಬುದು ನಿಜವಾದರೆ ರಾಟೆಯೇ ಭಾರತದ ಏಳಿಗೆಯ ಸಾಧನ. ಅದು ಭಾರತದ ಸ್ವಾತಂತ್ರ್ಯದ ಸಾಧನ.

"ಗೌಹತಿಯಲ್ಲಿ ನೀವು ಕಂಡ ಸಂಗತಿ ಅದೇ. ಅದನ್ನು ನಾನು ನಿರೀಕ್ಷಿಸಿರಲಿಲ್ಲ. ಅದು ಇಷ್ಟವಾಗಿದ್ದರೂ ಅದನ್ನು ನಾನು ಕೇಳಿರಲಿಲ್ಲ. ಖದ್ದರ್‌ಗೆ ಹೊಂದಿಕೊಂಡಂತೆ ಸದಸ್ಯತ್ವದ ನಿಯಮವನ್ನು ಉತ್ತಮಗೊಳಿಸಿದ ಅಪೂರ್ವ ಪ್ರಸಂಗವನ್ನು ಗೌಹತಿಯಲ್ಲಿ ನೋಡಿದಿರಿ. ಆ ಬಗ್ಗೆ ಸ್ವಲ್ಪ ತಿಕ್ಕಾಟವಿತ್ತೆಂಬುದು ನನಗೆ ಗೊತ್ತು. ಸದಸ್ಯತ್ವಕ್ಕೆ ಸಂಬಂಧಿಸಿದಂತೆ ಉತ್ತಮ ನಿಯಮವು ಬರಲು ಜನಮನದ ಒತ್ತಡವೇ ಕಾರಣವೆಂಬುದೂ ನನಗೆ ಗೊತ್ತು. ಗ್ರಾಮಸ್ಥರ ಹೃದಯಗಳನ್ನು ಮುಟ್ಟಲು ಖದ್ದರ್ ಒಂದೇ ಸಾಧನವೆಂಬುದನ್ನು ಅರಿತ ನಾಯಕರು ಈ ಪ್ರಮುಖವಾದ ಮಾರ್ಪಾಟು ಮಾಡಿದರು. ಸ್ವರಾಜ್ಯವಾದಿಗಳು ಚುನಾವಣೆಗಳಲ್ಲಿ ಗೆಲ್ಲಲು ಖದ್ದರ್ ಕಾರಣವೆಂಬುದನ್ನು

ನಿಮಗೆ ಸ್ಪಷ್ಟವಾಗಿ ತಿಳಿಸುತ್ತೇನೆ. ಮದ್ರಾಸಿನಲ್ಲಿ ಖದ್ದರ್‌ನ ವಿರೋಧಿಗಳಾಗಿದ್ದವರೂ ಸಹ ಚುನಾವಣೆಯ ಸಮಯದಲ್ಲಿ ಅದನ್ನು ಕೈಗೆತ್ತಿಕೊಂಡರು. ಈ ವಿಷಯ ನಿಮಗೆ ತಿಳಿಯದೆ ಇರಬಹುದು ಅಥವಾ ತಿಳಿದಿದ್ದರೂ ಇರಬಹುದು.

"ದಿನಗಳು ಉರುಳಿದಂತೆಲ್ಲಾ ಖದ್ದರ್‌ನ ಪ್ರಾಮುಖ್ಯತೆ ಹೆಚ್ಚುವುದೆಂಬುದನ್ನು ಕಾಣುತ್ತೀರಿ. ಇದಕ್ಕೆ ಕಾರಣಗಳು ಇವು: ಖದ್ದರ್‌ಗೆ ಅಂತಃಸತ್ವ ಇದೆ. ಖದ್ದರ್‌ನ ಸಂಸ್ಥೆಯಲ್ಲಿರುವಷ್ಟು ಮಂದಿ ನಿಸ್ವಾರ್ಥ, ತ್ಯಾಗನಿಷ್ಠ, ದಕ್ಷ ವಿದ್ಯಾವಂತರು ಬೇರೆ ಯಾವ ರಾಷ್ಟ್ರೀಯ ಸಂಸ್ಥೆಯಲ್ಲೂ ಇಲ್ಲ. ಗೌರವಯುತವಾದ ಸರಳ ಜೀವನವನ್ನು ನಡೆಸುತ್ತಾ ಹಳ್ಳಿಗರೊಂದಿಗೆ ಬೆರತು ಅವರ ತಿಂಡಿ ತಿನಸು ಹಾಗೂ ಸುಖ ದುಃಖಗಳಲ್ಲಿ ಭಾಗಿಗಳಾಗಬೇಕೆಂದು ಬಯಸುವ ಅಮಿತ ಸಂಖ್ಯೆಯ ರಾಷ್ಟ್ರಭಕ್ತ ಯುವಕರಿಗೆ ಇದು ಉದ್ಯೋಗ ಕೊಡುವಷ್ಟು ಬೇರೆ ಯಾವ ಸಂಸ್ಥೆಯೂ ಕೊಡುವುದಿಲ್ಲ. ಅಂತಹ ಸಾಮರ್ಥ್ಯ ಪಡೆದಿರುವ ಮತ್ತಾವುದಾದರೂ ಸಂಸ್ಥೆಯನ್ನು ತೋರಿಸಿ ಎಂದು ನಿಮ್ಮನ್ನು ಕೇಳುತ್ತೇನೆ.

"ಖದ್ದರ್ ಸಾಯುತ್ತಿರುವ ಸಿದ್ಧಾಂತವಲ್ಲ. ಈ ನನ್ನ ಮಾತನ್ನು ನಂಬಿ. ಖದ್ದರ್‌ನ ಏಳಿಗೆಯಲ್ಲಿ ಕುಸಿತವಿಲ್ಲ. ಐದು ವರ್ಷಗಳಲ್ಲಿ ಅದು ಒಂದೇ ಸಮನೆ ಏರುತ್ತಿರುವುದು ಅನುಭವದ ಮಾತು. ಭರವಸೆಯನ್ನು ತುಂಬತಕ್ಕ ಸಂಗತಿ. ಪರಿಸ್ಥಿತಿ ಇದಕ್ಕಿಂತ ಬೇರೆಯಾಗಿರಲು ಕಾರಣವಿರಲಿಲ್ಲ. ಭಾರತಕ್ಕೆ ಬೇಕಾಗಿರುವುದರಿಂದಲೂ ಕೋಟ್ಯಾಂತರ ಜನರಿಗೆ ಅವರ ಚೈತನ್ಯವನ್ನು ಕಾಪಾಡಿಕೊಳ್ಳಲು ಪುಷ್ಕಳ ಆಹಾರ ಬೇಕಾಗಿರುವುದರಿಂದಲೂ ಕಾಂಗ್ರೆಸ್ ಈ ನಿರ್ಣಯ ಮಾಡಿತು. ನಿರ್ಣಯದ ಪರಿಣಾಮವಾಗಿ ಕಾಂಗ್ರೆಸ್ಸಿಗರು ಖದ್ದರ್ ಅನ್ನು ಸದಾ ಧರಿಸಬೇಕಾಗುತ್ತದೆ. ಸಭೆ ಸಮಾರಂಭಗಳಲ್ಲಿ ಮಾತ್ರ ಅಲ್ಲ. ತೀರ ಅಗತ್ಯವಾದರೆ, ಅಪರೂಪ ಸಂದರ್ಭಗಳಲ್ಲಿ ಅವರು ಉದರ ಪೋಷಣೆಗಾಗಿ ಗಿರಣಿ ಬಟ್ಟೆಯನ್ನು ಧರಿಸಬಹುದು. ಆದರೆ ಅವರು ನಿಷ್ಠಾವಂತ ಪ್ರಾಮಾಣಿಕ ಕಾಂಗ್ರೆಸ್ಸಿಗರಾದರೆ ಕೈನೂಲಿನಿಂದ ಮಗ್ಗದಲ್ಲಿ ನೇಯ್ದ ಬಟ್ಟೆಯನ್ನೇ ಸತತವಾಗಿ ಧರಿಸಿಯಾರು.

"ಅಸ್ಪೃಶ್ಯತೆ ಬಗ್ಗೆ ಒಂದು ಮಾತು. ಮಹಾಧೀರಪುರುಷ ಹಾಗೂ ರಾಷ್ಟ್ರಭಕ್ತರಾಗಿದ್ದ ಸ್ವಾಮಿ ಶ್ರದ್ಧಾನಂದರು ಅಸ್ಪಶ್ಯರ ಸಲುವಾಗಿ ಸತ್ತರು. ಅವರನ್ನು ತಮ್ಮ ಮಕ್ಕಳಂತೆಯೇ ಪ್ರೀತಿಸುತ್ತಿದ್ದರು. ಅವರಿಗೆ ಅಧಿಕಾರವಿದ್ದಲ್ಲಿ ಅಸ್ಪೃಶ್ಯತೆಯನ್ನು ಭಾರತದಿಂದ ತೊಲಗಿಸುತ್ತಿದ್ದರು. ಅದನ್ನು ತೊಲಗಿಸುವುದೆಂದರೆ ಏನು? ಅದರ ಅರ್ಥ ವಿಶ್ವಪ್ರೇಮ, ಗೀತೆಯ ಮಹಾಸಂದೇಶವನ್ನು ಕೃತಿಗಿಳಿಸುವುದು ಎಂದರ್ಥ. ದೇವರನ್ನು ನೀವು ಅರ್ಥಮಾಡಿಕೊಂಡಿದ್ದ ಪಕ್ಷದಲ್ಲಿ ಬ್ರಾಹ್ಮಣನನ್ನೂ ಭಂಗಿಯನ್ನೂ ಸಮಾನವಾಗಿ ಕಾಣಿರಿ. ಅವರು ಸಮಾನ ಹೇಗೆ? ಎಷ್ಟೇ ಹೇಳಿದರೂ ಬ್ರಾಹ್ಮಣ ಭಂಗಿಗಿಂತ ಜ್ಞಾನದಲ್ಲಿ ಶ್ರೇಷ್ಠ, ಅವರಿಬ್ಬರನ್ನೂ ಸಮಾನವಾಗಿ ಕಾಣುವುದು ಹೇಗೆ?

ಗೀತೆಯು ಹೇಳುವುದೇನೆಂದರೆ, ನಿಮ್ಮನ್ನು ಅವರು ಹೇಗೆ ಕಾಣಬೇಕೆಂದು ನಿರೀಕ್ಷಿಸುತ್ತೀರೋ ಹಾಗೆಯೇ ಅವರನ್ನು ಕಾಣಿರಿ. ಅಥವಾ ನೀವು ನಿಮ್ಮನು ಹೇಗೆ ನೋಡಿಕೊಳ್ಳುತ್ತೀರೋ ಹಾಗೇ ಅವರನ್ನು ನೋಡಿಕೊಳ್ಳಿ. ಆ ಮಹಾಧೀರ ಹಾಗೂ ಹುತಾತ್ಮ. ಈ ಬೋಧನೆಯನ್ನು ತನ್ನ ಜೀವನದಲ್ಲಿ ಕೃತಿಗಿಳಿಸಿದರು. ಅದನ್ನು ಪುನೀತಗೊಳಿಸಿದರು, ಕಡೆಗೆ ತನ್ನ ರಕ್ತದ ಮುದ್ರೆ ಒತ್ತಿದರು. ಅವರು ಬಸಿದ ರಕ್ತ ನಮ್ಮನ್ನು ಪರಿಶುದ್ಧಗೊಳಿಸಲಿ. ನಾವು ನಮ್ಮ ಅಹಂಕಾರದಿಂದ ಯಾರನ್ನು 'ಅಸ್ಪೃಶ್ಯರು' ಎಂದು ಕರೆಯುತ್ತೇವೋ ಅಂತಹ ಸಹೋದರರ ಬಗ್ಗೆ ನಮ್ಮಲ್ಲಿರುವ ಪ್ರತ್ಯೇಕತಾ ಭಾವನೆಯ ಕಳಂಕವನ್ನು ಅದು ನಿವಾರಣೆ ಮಾಡಲಿ. ಅವರು ಅಸ್ಪೃಸ್ಯರಲ್ಲ, ನಾವು ಅಸ್ಪೃಶ್ಯರು. ಅವರಿಗೆ ನಮ್ಮಿಂದ ಸಲ್ಲಬೇಕಾದ ಗಮನ ಮತ್ತು ಕರುಣೆ ಎಲ್ಲವೂ ಸಲ್ಲಲಿ. ಕೋಮಿಲ್ಲಾಕ್ಕೆ ನಾನು ಭೇಟಿ ಕೊಟ್ಟಾಗ ಅಸ್ಪೃಶ್ಯರೆನಿಸಿಕೊಳ್ಳುವವರೇ ಹೆಚ್ಚಾಗಿರುವ ಎರಡು ಹಳ್ಳಿಗಳನ್ನು ನೋಡಿದೆ. ನನಗೆ ಪೂರ್ವಭಾವಿಯಾಗಿ ಹೇಳಿಲ್ಲದಿದ್ದರೆ ಅವರುಗಳು ಅಸ್ಪೃಶ್ಯರು ಎಂದು ನನಗೆ ಗೊತ್ತಾಗುತ್ತಲೇ ಇರಲಿಲ್ಲ. ಅವರಿಗೂ ಅವರೊಡನೆ ನಿಂತಿದ್ದ ಇತರರಿಗೂ ಯಾವ ವ್ಯತ್ಯಾಸವನ್ನೂ ನಾನು ಕಾಣಲಿಲ್ಲ. ನಮ್ಮಂತೆಯೇ ಅವರೂ ಊಟ ಮಾಡುತ್ತಾರೆ, ಪಾನಮಾಡುತ್ತಾರೆ, ಯೋಚಿಸುತ್ತಾರೆ ಹಾಗೂ ಭಾವಿಸುತ್ತಾರೆ. ಅವರ ಗುಣದೋಷಗಳನ್ನೂ ಅವರಿಗೆ ಸಲ್ಲಿಸದಿರುವ ಸೌಲಭ್ಯಗಳನ್ನೂ ಲೆಕ್ಕಹಾಕಿ ನಮ್ಮ ಗುಣದೋಷಗಳನ್ನೂ ನಾವು ಅನುಭವಿಸುತ್ತಿರುವ ಸೌಲಭ್ಯಗಳನ್ನೂ ಲೆಕ್ಕಹಾಕಿ ನೋಡಿದರೆ, ದೇವರ ದೃಷ್ಟಿಯಲ್ಲಿ ನಮ್ಮ ದೋಷಗಳ ಭಾರವೇ ಅವರದ್ದಕ್ಕಿಂತ ಹೆಚ್ಚಾಗಿದ್ದೀತು. ಇದರಲ್ಲಿ ನನಗೆ ಸಂದೇಹವೇ ಇಲ್ಲ. ಆದುದರಿಂದ ಜಗತ್ತಿನಲ್ಲಿ ಯಾವೊಬ್ಬನನ್ನೂ ಅಸ್ಪೃಶ್ಯನೆಂದು ಇನ್ನು ಬಗೆಯುವುದು ಬೇಡ. ದಕ್ಷಿಣ ಆಫ್ರಿಕಾದಿಂದ ನಾವು ಕಲಿಯಬೇಕಾದ ಪಾಠ ಅದು. ನಾವು ನಮ್ಮ ಪಾಪವನ್ನು ಕೊಡವಿಕೊಂಡ ತಕ್ಷಣವೇ, ಅಸ್ಪೃಶ್ಯತೆಯ ಶಾಪದಿಂದ ನಾವು ಮುಕ್ತರಾದ ತಕ್ಷಣವೇ, ದಕ್ಷಿಣ ಆಫ್ರಿಕಾದಲ್ಲಿರುವ ನಮ್ಮ ಜನರ ಶೃಂಖಲೆ ಕಳಚಿ ಬೀಳುವುದನ್ನು ನೀವು ನೋಡುತ್ತೀರಿ.

"ಹಿಂದೂ ಮುಸ್ಲಿಂ ಐಕ್ಯತೆಯ ಸಮಸ್ಯೆ ಬಗ್ಗೆ ಪ್ರಸ್ತಾಪಿಸಲು ನನಗೆ ಧೈರ್ಯವಿಲ್ಲ. ಅದು ಮನುಷ್ಯ ಯತ್ನವನ್ನು ಮೀರಿ ದೇವರ ಕೈ ಸೇರಿದೆ. ದ್ರೌಪದಿಯನ್ನು ತನ್ನ ಗಂಡಂದಿರು ಕೈಬಿಟ್ಟಾಗ ಇತರ ಪುರುಷರೂ ದೇವತೆಗಳೂ ತೊರೆದಾಗ ಆಕೆ ಭಗವಂತನಿಗೇ ಮೊರೆ ಇಟ್ಟಳು. ಭಗವಂತನು ಕೈಬಿಡದೆ ರಕ್ಷಣೆ ನೀಡಿದ. ಹಾಗೆಯೇ ನಾನೂ ಭಗವಂತನಲ್ಲಿ ಮೊರೆಯಿಡಬೇಕು. ಪ್ರತಿಯೊಬ್ಬರೂ ಹಾಗೆಯೇ ಮಾಡಬೇಕು. ನಾವು ಸರ್ವಶಕ್ತನಾದ ಪರಮಾತ್ಮನ ಸಹಾಯವನ್ನು ಬೇಡೋಣ. ಆತನ ಸೃಷ್ಟಿಯ ಜೀವಿಗಳಾದ ನಾವು ನಮ್ಮ ಕರ್ತವ್ಯದಲ್ಲಿ ವಿಫಲರಾಗಿದ್ದೇವೆಂದು ಆತನಿಗೆ ಹೇಳಿಕೊಳ್ಳೋಣ. ನಾವು ಒಬ್ಬರಿಗೊಬ್ಬರು ದ್ವೇಷಮಾಡುತ್ತೇವೆ, ಪರಸ್ಪರ ಅಪನಂಬಿಕೆ ಪಡುತ್ತೇವೆ; ಕಚ್ಚಾಡುತ್ತೇವೆ ಮತ್ತು ಹತ್ಯಾಕಾರಿಗಳೂ ಆಗುತ್ತೇವೆ; ಎಂದು ತಿಳಿಸೋಣ. ನಮ್ಮ ಹೃದಯದ ಕೂಗು ಆತನ ಸಿಂಹಾಸನವನ್ನು ಮುಟ್ಟಲಿ, ರಕ್ತಕಣ್ಣೀರಿನಿಂದ

ಆತನ ಚರಣಗಳನ್ನು ತೊಳೆಯೋಣ. ನಮ್ಮ ಹೃದಯಗಳಲ್ಲಿರುವ ದ್ವೇಷವನ್ನು ನಿರ್ಮೂಲ ಮಾಡೆಂದು ಆತನನ್ನು ಬೇಡೋಣ. ನಾವು ಪರಸ್ಪರ ಅಪನಂಬಿಕೆ ಇಟ್ಟು ಕೊಂಡು ಒಬ್ಬರನ್ನೊಬ್ಬರು ಕಂಡರೆ ಹೆದರುತ್ತಿದ್ದೇವೆ. ಇದರಿಂದ ನಾವು ಭಗವಂತನು ಸೃಷ್ಟಿಸಿರುವ ಈ ಜಗತ್ತಿಗೆ ಅವಮಾನ ಮಾಡುತ್ತಿದ್ದೇವೆ. ಆತನ ಹೆಸರಿಗೂ ಈ ಪವಿತ್ರ ಭೂಮಿಗೂ ಅಪಕೀರ್ತಿ ತರುತ್ತಿದ್ದೇವೆ. ನಾವೆಲ್ಲರೂ ಈ ಮಾತೃಭೂಮಿಯ ಮಕ್ಕಳಾಗಿದ್ದರೂ ಒಂದೇ ರೀತಿಯ ಆಹಾರವನ್ನು ಊಟಮಾಡಿದರೂ ಒಬ್ಬರನ್ನೊಬ್ಬರು ಇರಗೊಡಲು ಬಿಡುತ್ತಿಲ್ಲ. ಪರಮಾತ್ಮ! ನಮಗೆ ಸರಿಯಾದ ಪ್ರಜ್ಞೆ ಕೊಡು, ವಿವೇಕ ಕೊಡು, ಎಂದು ನಮ್ರತೆಯಿಂದ ಪ್ರಾರ್ಥಿಸೋಣ.

"ನಾನು ಹೇಳಿದ್ದನ್ನು ನೀವು ಅತ್ಯಂತ ಗಮನವಿಟ್ಟು ಕೇಳಿದ್ದೀರಿ. ನಾನು ಮನಃ ಪೂರ್ವಕವಾಗಿ ಸಭಿಕರಿಗೆ ಕೊಡದಿರುವುದನ್ನು—ಅಂದರೆ ಇಂಗ್ಲಿಷಿನಲ್ಲಿ ಭಾಷಣವನ್ನು—ನೀಡಿ ದ್ದೇನೆ. ಅದೂ ಸ್ವಲ್ಪ ಹೆಚ್ಚಾಗಿಯೇ ಆಯಿತು. ಅದಕ್ಕೆ ಪ್ರತಿಫಲ ಬೇಕು. ನನ್ನ ಸಂದೇಶ ನಿಮಗೆ ಮುಟ್ಟಿದ್ದರೆ—ದಿವಾಳಿ ಸ್ಥಿತಿಯಲ್ಲಿರುವ ಭಾರತೀಯರ ಸಂದೇಶ ನಿಮಗೆ ತಟ್ಟಿದ್ದರೆ— ನಾಳೆಯೇ ನೀವೆಲ್ಲ ಅಭಯಾಶ್ರಮಕ್ಕೆ ಬರಬೇಕು. ಅಲ್ಲಿನ ದಾಸ್ತಾನಿನಲ್ಲಿರುವ ಎಲ್ಲ ಖದ್ದರ್ ಬಟ್ಟೆಯನ್ನೂ ನೀವು ಕೊಳ್ಳಬೇಕು ಆಶ್ರಮದಲ್ಲಿ ಆ ಜನರಿಗಾಗಿ, ನಿಮಗಾಗಿ ಕಾರ್ಯಕರ್ತರ ತಂಡವೇ ಕೆಲಸಮಾಡುತ್ತಿದೆ. ಅವರ ನಿಮಗೂ ಗ್ರಾಮಸ್ಥರಿಗೂ ಸಂಪರ್ಕ ಸಾಧನವಾಗಿದ್ದಾರೆ. ಮಾತೃಭೂಮಿಯ ಸೇವೆ ಮಾಡಲು ಅವರು ತಮ್ಮ ಕೈಲಾದ ಮಟ್ಟಿಗೂ ಕೆಲಸ ಮಾಡುತ್ತಿದ್ದಾರೆ. ನೀವು ನಿಮ್ಮ ಜೇಬುಗಳಿಗೆ ಕೈಹಾಕಿ ಅದರಲ್ಲಿ ಏನಿದೆಯೋ ಅದನ್ನು ನನಗೆ ಕೊಡಿ. ಸಾಧ್ಯವಿದ್ದಷ್ಟು ಕೊಡಿ. ಮನಸ್ಸುಬಂದಷ್ಟು ಕೊಡಿ. ಅದನ್ನು ನಾಚಿಕೆಯಿಂದ ಕೊಡಬೇಕಾಗಿಲ್ಲ. ಏನೋ ಉಪಕಾರ ಮಾಡುತ್ತೇವೆಂಬ ಭಾವನೆಯಿಂದಾಗಲೀ ನನ್ನ ಮೇಲಿನ ಪ್ರೇಮದಿಂದಾಗಲೀ ಕೊಡಬೇಕಾಗಿಲ್ಲ. ನಿಮ್ಮ ಪ್ರೇಮವನ್ನು ನನಗೆ ಕೊಡುವುದಾದರೆ ಅದನ್ನು ಬೇರೆ ಕಾರ್ಯಕ್ಕೆ ಉಪಯೋಗಿಸಿ ಕೊಳ್ಳುತ್ತೇನೆ. ಈಗ ಏನೂ ಇಲ್ಲದ ನಿರ್ಗತಿಕರ ಸಲುವಾಗಿ, ದಿನಕ್ಕೆ ಒಂದು ಊಟವೂ ದೊರೆಯದೆ ಇರತಕ್ಕವರ ಸಲುವಾಗಿ, ನಿಮ್ಮ ಕೈಲಾದ್ದನು ಕೊಡಿರೆಂದು ಕೇಳುತ್ತಿದ್ದೇನೆ.

"ಭಾರತದ ಹಳ್ಳಿಗಳ ಕೈಗಾರಿಕಾಕರಣವಾಗಬೇಕಾದರೆ ರಾಟೆಗಿಂತ ಉತ್ತಮವಾದ ಸಾಧನವಿಲ್ಲ. ವರ್ಷದಲ್ಲಿ ಕನಿಷ್ಠ ಪಕ್ಷ ನಾಲ್ಕು ತಿಂಗಳ ಕಾಲ ಏನೂ ಕೆಲಸವಿಲ್ಲದೆ ಇರುವ ಕೋಟ್ಯಾಂತರ ಭಾರತೀಯರಿಗೆ, ಒಂದು ಹೊತ್ತಿನ ಊಟವೂ ಇಲ್ಲದ ಜನರಿಗೆ, ಒಂದಾಣೆ ಎಂದರೆ ನಿಕ್ಷೇಪ ಎಂದು ಭಾವಿಸುವ ಜನಕ್ಕೆ—ನಾನು ಅವರ ಪರ ವಾದಿಸುತ್ತೇನೆ— ರಾಟೆಗಿಂತ ಮೇಲಾದ ಬದಲಿ ಸಾಧನವನ್ನು ಇದುವರೆಗೆ ಯಾರೂ ತೋರಿಸಿಲ್ಲ. ಅಷ್ಟೇಕೆ, ರಾಟೆಯಷ್ಟೇ ಪರಿಣಾಮಕಾರಿಯಾದ ಸರಿಸಮಾನ ಸಾಧನವನ್ನೂ ತೋರಿಸಿಲ್ಲ."

ಜನವರಿ ಮಧ್ಯಭಾಗದಲ್ಲಿ ಗಾಂಧೀಜಿ ವಾರಣಾಸಿಗೆ ಭೇಟಿ ಕೊಟ್ಟರು. ಕೃಪಲಾನಿ ನಡೆಸುತ್ತಿದ್ದ ಗಾಂಧೀ ಆಶ್ರಮದ ವಾರ್ಷಿಕ ಸಮಾರಂಭದಲ್ಲಿ ಭಾಗವಹಿಸುವ ಕಾರ್ಯಕ್ರಮ ಇತ್ತು. ಆಶ್ರಮದ ಇತಿಹಾಸದಲ್ಲಿ ನಾನಾ ಅವಸ್ಥೆಗಳ ಅನುಭವವಾಗಿತ್ತು. ಮೊದಲು

ಹಿಂದೂವಿಶ್ವವಿದ್ಯಾಲಯದಿಂದ ವಾಪಸು ಕರೆಸಲ್ಪಟ್ಟ ೨೦೦ ವಿದ್ಯಾರ್ಥಿಗಳಿಗಾಗಿ ವಿದ್ಯಾಪೀಠ ಏರ್ಪಟ್ಟಿತ್ತು. ಅವರಲ್ಲಿ ಕೆಲವರು ಬಿಟ್ಟು ಹೋಗಿ ಸಂಖ್ಯೆ ಕಡಿಮೆಯಾಗಿತ್ತು. ಆದರೆ ದೃಢಮನಸ್ಕರಾದ ಕೆಲವು ಕಾರ್ಯಕರ್ತರು ಖಾದಿ ಕೆಲಸದಲ್ಲಿ ತೊಡಗಿದ್ದರು. ಅವರ ದೃಢ ಸಂಕಲ್ಪಕ್ಕೆ ಜಯವಾಯಿತು. ೧೯೨೧ರಲ್ಲಿ ಆಶ್ರಮವು ಉತ್ಪಾದಿಸಿದ್ದ ಖಾದಿಯ ಮೌಲ್ಯ ೪೮ ರೂ. ಆಗಿದ್ದುದು ಕೇವಲ ಐದು ವರ್ಷಗಳ ಅವಧಿಯಲ್ಲಿ ಉತ್ಪನ್ನದ ಮೌಲ್ಯ ೬೫,೩೧೨ ರೂಪಾಯಿಗಳಿಗೆ ಏರಿದ್ದಿತು. ಆಶ್ರಮದಲ್ಲಿ ಉತ್ಪಾದಿಸಲ್ಪಟ್ಟ ಖಾದಿಗೆ ಸ್ಥಳೀಯ ಬೇಡಿಕೆಯನ್ನು ಕುದುರಿಸಲು ಗಾಂಧೀಜಿ ವಾರಣಾಸಿಗೆ ಭೇಟಿ ಕೊಟ್ಟರು.

ಮಾಳವೀಯರ ಆಹ್ವಾನದ ಮೇರೆಗೆ ಗಾಂಧಿಯವರು ಹಿಂದೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಖದ್ದರ್‌ನ ಸಂದೇಶ ನೀಡಿದರು. ಅವರ ಮಾತನ್ನು ಕೇಳಲು ಎರಡು ಸಹಸ್ರ ಮಂದಿ ತರುಣರು ಸೇರಿದ್ದರು. ಅದಕ್ಕೆ ಒಂದು ವಾರ ಹಿಂದೆ ವೈಸರಾಯರು ಬಂದಿದ್ದ ಸಂದರ್ಭದಲ್ಲಿ ವಿಶೇಷವಾಗಿ ನಿರ್ಮಿಸಲಾಗಿದ್ದ ವಿಶಾಲವಾದ ಶಾಮಿಯಾನದಲ್ಲಿಯೇ ಈ ಸಭೆ ನಡೆಯಿತು. ಗಾಂಧೀಜಿ ಮಾತನಾಡುತಾ ಹೀಗೆ ಹೇಳಿದರು:

"ಯಾರೊಬ್ಬರೂ ನಿಮ್ಮ ಮಾತನ್ನು ಕೇಳದಿರುವಾಗ ಖದ್ದರ್ ಬಗ್ಗೆ ಮಾತನಾಡುವುದನ್ನು ನಿಲ್ಲಿಸಬಾರದೆ? ಎಂದು ಅನೇಕ ಮಂದಿ ಪತ್ರ ಬರೆದಿದ್ದಾರೆ. ಪುರಾಣದ ಪ್ರಹ್ಲಾದನಿಗೆ ಸಾವಿಗಿಂತ ಕಷ್ಟವಾದ ಚಿತ್ರಹಿಂಸೆ ಇತ್ತರೂ ಅವನು ರಾಮನಾಮದ ಉಚ್ಚಾರಣೆಯನ್ನು ಬಿಡಲಿಲ್ಲ. ಅಂತಹ ಉದಾಹರಣೆ ನನ್ನ ಮುಂದೆ ಇರುವಾಗ ನನಗೆ ಪ್ರಿಯವಾದ ಮಂತ್ರವನ್ನು ಏಕೆ ಬಿಡಲಿ? ಇದುವರೆಗೆ ನಾನು ಯಾವ ಚಿತ್ರಹಿಂಸೆಯನ್ನೂ ಅನುಭವಿಸಿಲ್ಲ. ದೇಶದ ಪರಿಸ್ಥಿತಿ ನನ್ನ ಕಿವಿಯಲ್ಲಿ ಉಸುರುತ್ತಿರುವ ಏಕಮಾತ್ರ ಸಂದೇಶವನ್ನೂ ನಾನು ಹೇಗೆ ಬಿಟ್ಟುಕೊಡಲಿ? ನಿಮಗೋಸ್ಕರ ಪಂಡಿತ್‌ಜೀಯವರು ರಾಜ ಮಹಾರಾಜರುಗಳಿಂದ ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ. ಈಗಲೂ ಸಂಗ್ರಹಿಸುತ್ತಿದ್ದಾರೆ. ಈ ಹಣ ಶ್ರೀಮಂತ ರಾಜರುಗಳಿಂದ ಬರುತ್ತಿರುವಂತೆ ತೋರಿದರೂ ಅದು ನಿಜವಾಗಿಯೂ ಕೋಟ್ಯಾಂತರ ಬಡವರಿಂದ ಬಂದ ಹಣ. ಇಲ್ಲಿನ ಸ್ಥಿತಿ ಯುರೋಪಿನಂತಲ್ಲ. ನಮ್ಮ ದೇಶದ ಶ್ರೀಮಂತರು ಗ್ರಾಮಸ್ಥರನ್ನು ಸುಲಿಗೆ ಮಾಡಿ ಧನಿಕರಾಗುತ್ತಾರೆ. ಈ ಗ್ರಾಮಸ್ಥರಲ್ಲಿ ಬಹುಮಂದಿಗೆ ಒಪ್ಪತ್ತು ಊಟಕ್ಕೂ ಗತಿ ಇಲ್ಲ. ಇಂದು ನೀವು ಪಡೆಯುತ್ತಿರುವ ಶಿಕ್ಷಣದ ಖರ್ಚನ್ನು ಹೊಟ್ಟೆಗಿಲ್ಲದ ಹಳ್ಳಿಯವರು ಭರಿಸುತ್ತಿದ್ದಾರೆ. ಅವರಿಗಾದರೋ ಇಂತಹ ಶಿಕ್ಷಣ ಎಂದಿಗೂ ದೊರೆಯುವ ಅವಕಾಶವೇ ಇಲ್ಲ. ಬಡವರಿಗೆ ಎಟುಕದ ಶಿಕ್ಷಣವನ್ನು ಪಡೆಯಲು ನಿರಾಕರಿಸಬೇಕಾದುದು ನಿಮ್ಮ ಕರ್ತವ್ಯ. ಆದರೆ ಹಾಗೆ ಮಾಡಿ ಎಂದು ಈಗ ನಾನು ಹೇಳುತ್ತಿಲ್ಲ. ಒಂದು ಸಣ್ಣ ಯಜ್ಞ ಮಾಡುವುದರ ಮೂಲಕ ಬಡವರಿಗೆ ಕಿಂಚಿತ್ತು ಪ್ರತ್ಯುಪಕಾರ ಮಾಡಿ ಎಂದು ಹೇಳುತ್ತಿದ್ದೇನೆ. ತನ್ನ ಯಜ್ಞವನ್ನು ಮಾಡದೆ ಊಟ ಮಾಡಿದರೆ, ಆ ಅನ್ನವನ್ನು ಕದ್ದಂತೆ ಎಂದು ಗೀತೆ ಹೇಳುತ್ತದೆ. ಯುದ್ಧ ಸಮಯದಲ್ಲಿ

ಬ್ರಿಟಿಷ್ ನಾಗರಿಕರು ಒಂದು ರೀತಿಯ ಯಜ್ಞ ಮಾಡಬೇಕಾಗಿತ್ತು. ಪ್ರತಿ ಕುಟುಂಬವೂ ತನ್ನ ಮನೆಯಂಗಳದಲ್ಲಿ ಆಲೂಗಡ್ಡೆ ಬೆಳೆಯಬೇಕಾಗಿತ್ತು. ಪ್ರತಿ ಕುಟುಂಬವೂ ಸ್ವಲ್ಪ ಹೊಲಿಗೆ ಕೆಲಸ ಮಾಡಬೇಕಾಗಿತ್ತು. ಈ ಕಾಲದಲ್ಲಿ ನಮಗಾಗಿ ನಾವು ಮಾಡಬೇಕಾದ ಯಜ್ಞ ರಾಟೆಯದು. ದಿನ ಬೆಳಗಾದರೆ ನಾನು ಆ ವಿಷಯ ಹೇಳುತ್ತಿದ್ದೇನೆ, ಬರೆಯುತ್ತಿದ್ದೇನೆ. ಇಂದು ಹೆಚ್ಚಾಗಿ ನಾನು ಏನನ್ನೂ ಹೇಳಬಯಸುವುದಿಲ್ಲ. ಭಾರತದ ಬಡ ಜನತೆಯ ಸಂದೇಶ ನಿಮ್ಮ ಹೃದಯಗಳನ್ನು ಮುಟ್ಟಿದ್ದರೆ ನಾಳೆಯೇ ನೀವು ಕೃಪಲಾನಿಯವರ ಖಾದಿ ಭಂಡಾರಕ್ಕೆ ಮುತ್ತಿಗೆ ಹಾಕಿ ಅಲ್ಲಿರುವ ಎಲ್ಲ ಬಟ್ಟೆಯನ್ನೂ ಕೊಂಡುಕೊಳ್ಳಿರಿ. ನಿಮ್ಮ ಜೇಬಿನಲ್ಲಿರುವುದನ್ನೆಲ್ಲ ಕೊಟ್ಟುಬಿಡಿ. ಪಂಡಿತ್‌ಜೀಯವರು ಯಾಚನೆಯ ಕಲೆಯನ್ನು ಸಿದ್ಧಿಸಿಕೊಂಡಿದ್ದಾರೆ. ನಾನು ಅದನ್ನು ಅವರಿಂದ ಕಲಿತೆ. ಅವರು ರಾಜರುಗಳಿಂದ ವಸೂಲು ಮಾಡುವುದರಲ್ಲಿ ನಿಸ್ಸೀಮರು. ಆದರೆ ನಾನು ನಿಸ್ಸಂಕೋಚವಾಗಿ ಬಡವರ ಜೇಬನ್ನು ಬರಿದು ಮಾಡುತ್ತೇನೆ. ಅವರಿಗಿಂತ ಹೆಚ್ಚು ಬಡತನದಲ್ಲಿರುವವರ ಪ್ರಯೋಜನಕ್ಕಾಗಿ ವಸೂಲು ಮಾಡುತ್ತೇನೆ."

ಜನವರಿ ೯ ಶ್ರದ್ಧಾನಂದರ ಪುಣ್ಯ ದಿನ. ಅಂದು ಬೆಳಿಗ್ಗೆ ಗಾಂಧಿ ಮತ್ತು ಪಂಡಿತ ಮಾಳವೀಯರು ಗಾಂಧೀ ಆಶ್ರಮದಿಂದ ದಶಾಶ್ವಮೇಧ ಘಟ್ಟಕ್ಕೆ ಮೆರವಣಿಗೆಯಲ್ಲಿ ನಡೆದು ಹೋದರು. ಸ್ನಾನಾದಿಗಳನ್ನು ಮುಗಿಸಿ ವಿಶ್ವನಾಥ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಿದರು. ದೇವಾಲಯದ ಮುಂದೆ ಸ್ವಲ್ಪ ದೂರದಲ್ಲಿ ನೆರೆದಿದ್ದ ಜನರಗುಂಪು ಸಭೆಯಾಗಿ ರೂಪುಗೊಂಡಿತು. ಮಹಿಮಾಸ್ತೋತ್ರದ ಪಠನೆಯಾಯಿತು. ಒಬ್ಬರು ಸಾಮೂಹಿಕ ರಾಮನಾಮ ಪಠನೆಯನ್ನು ನಡೆಸಿದರು. ಗಾಂಧಿಯವರು ಪುಟ್ಟ ಭಾಷಣ ಮಾಡಿ ಶ್ರದ್ಧಾನಂದರ ಬಲಿದಾನದ ಮಹತ್ವವನ್ನು – ಆತ್ಮ ಹಾಗೂ ಧರ್ಮದ ಶುದ್ಧೀಕರಣ ಮತ್ತು ಆತ್ಮಸಂಯಮ ಸಾಧಿಸಲು ಸತತ ಪ್ರಯತ್ನವನ್ನು–ಒತ್ತಿ ಹೇಳಿದರು.

ಜನವರಿ ೧೧ರಂದು ಗಾಂಧಿಯವರ ಬಿಹಾರದ ಪ್ರವಾಸ ಪ್ರಾರಂಭವಾಯಿತು. "ನಾನು ಇಲ್ಲಿಗೆ ವ್ಯವಹಾರ ಮಾಡಲು ಬಂದಿದ್ದೇನೆ, ಚರಖ ಮತ್ತು ಖಾದಿಗೆ ಹಣ ಕೂಡಿಸಲು ಮತ್ತು ಖಾದಿಯನ್ನು ಮಾರಲು ಬಂದಿದ್ದೇನೆ. ಯಾರಿಗೆ ಗೊತ್ತು, ಬಿಹಾರದಲ್ಲಿ ಇದು ನನ್ನ ಕೊನೆಯ ಪ್ರವಾಸವಿರಬಹುದು! ಎಷ್ಟು ಸಾಧ್ಯವೋ ಅಷ್ಟು ವ್ಯವಹಾರ ಮಾಡುತ್ತೇನೆ." ಇದು ರೈಲ್ವೆ ನಿಲ್ದಾಣವೊಂದರಲ್ಲಿ ಅವರನ್ನು ಸ್ವಾಗತಿಸಲು ಬಂದು ಸೇರಿದ್ದ ಜನರನ್ನುದ್ದೇಶಿಸಿ ಮಾಡಿದ ಒಂದು ನಿಮಿಷದ ಸಂಕ್ಷಿಪ್ತ ಭಾಷಣ. ಛೋಟಾ ನಾಗಪುರದ ಡಾಲ್ಟನ್‌ಗಂಜ್‌ನಿಂದ ಆರಂಭಿಸಿ ಗಯಾದ ಕಲ್ಲಿದ್ದಲು ಗಣಿಗಳ ಪ್ರದೇಶವನ್ನು ಹಾದು ಪಾಟ್ನಾದಲ್ಲಿ ಗಂಗೆಯನ್ನು ದಾಟಿದರು. ಛಪ್ರ ಜಿಲ್ಲೆಯ ಫಲವತ್ತಾದ ಪ್ರದೇಶದಲ್ಲಿ ನೇರವಾಗಿ ಹೊರಟು ಜಿರಾದೇಹಿ ಹಳ್ಳಿಯಲ್ಲಿ ಒಂದು ದಿನ ಶಾಂತವಾಗಿ ಕಳೆದರು. ಅಲ್ಲಿಂದ ಮುಂದೆ ಹೊರಟು ಕಂಗೊಳಿಸುವ ಪ್ರಕೃತಿ ಸೌಂದರ್ಯವುಳ್ಳ ಇನ್ನೂ ಕೆಲವು ಭಾಗಗಳನ್ನು ದಾಟಿ ಮತ್ತೆ ದರ್ಭಾಂಗದ ಪೂರ್ವ ಮತ್ತು ದಕ್ಷಿಣದ ಭಾಗಗಳಲ್ಲಿ ಸಂಚರಿಸಿದರು.

ಡಾಲ್ಟನ್‌ಗಂಜ್‌ನಲ್ಲಿ ಸಹಸ್ರಾರು ಮಂದಿ ಗ್ರಾಮಸ್ಥರು ಸೇರಿದ್ದರು. ಅವರು ಗುಡ್ಡಗಾಡಿನ ಕಡೆಯವರು. ಇಪ್ಪತ್ತಕ್ಕೂ ಹೆಚ್ಚು ಮೈಲಿದೂರದಿಂದ ಬಂದಿದ್ದರು. ಒಂದು ಭಾಷಣ ಅಥವಾ ಒಬ್ಬ ಭಾಷಣಕಾರ ಒಂದೇ ಸಮಯದಲ್ಲಿ ಎಲ್ಲರನ್ನೂ ಮುಟ್ಟುವ ಹಾಗಿರಲಿಲ್ಲ. ಆದುದರಿಂದ ಮೊದಲು ಮುಂದುಗಡೆ ಇದ್ದವರನ್ನುದ್ದೇಶಿಸಿ ಮಾತನಾಡಿದರು; ಅನಂತರ ಹಿಂದುಗಡೆ ಇದ್ದ ಜನರ ಬಳಿ ಹೋಗಿ ಮಾತನಾಡಿದರು; ಆ ಮೇಲೆ ಪಾರ್ಶ್ವಗಳಲ್ಲಿದ್ದವರನ್ನುದ್ದೇಶಿಸಿ ಭಾಷಣ ಮಾಡಿದರು. ಈ ಸಭೆಯಲ್ಲಿ ವಸೂಲಾದ ಒಟ್ಟು ಹಣ ೫೨೬ ರೂಪಾಯಿ. ಜನರು ನೀಡಿದ್ದ ಹಣದಲ್ಲಿ ತಾಮ್ರ ಮತ್ತು ನಿಕ್ಕಲ್ ನಾಣ್ಯಗಳೇ ಹೆಚ್ಚಾಗಿದ್ದುವು.

ಮೇರ್ವಾದಲ್ಲಿ ನಡೆದ ಸಭೆ ಅದ್ಭುತವಾಗಿತ್ತು. ಮೂವತ್ತು ಸಹಸ್ರಕ್ಕಿಂತ ಹೆಚ್ಚು ಜನ ಕುಳಿತಿದ್ದರು. ಅವರನ್ನು ನೋಡಿದರೆ ಕದನಕ್ಕೆ ಸಜ್ಜಾಗಿ ಕುಳಿತಿರುವಂತೆ ಕಾಣುತ್ತಿತ್ತು. ಆನೆಗಳ ಮೇಲೆ ಕುಳಿತು ಬಂದಿದ್ದವರು ಆನೆಗಳನ್ನು ಅಲ್ಲೇ ಕಟ್ಟಿದ್ದರು. ಆ ದೃಶ್ಯ ಒಂದು ಶಾಂತಿಯುತ ಸೈನಿಕ ಶಿಬಿರವನ್ನು ಹೋಲುತ್ತಿತ್ತು. ಗಾಂಧೀಜಿ ಬಂದಾಗ ಒಂದು ಸ್ವಲ್ಪವೂ ಗದ್ದಲವಾಗಲಿಲ್ಲ. ಒಂದು ಮೂಲೆಯಲ್ಲಿ ಬುರುಕಿ ಹಾಕಿಕೊಂಡು ಕುಳಿತಿದ್ದ ಸ್ತ್ರೀಯರನ್ನುದ್ದೇಶಿಸಿ ಮೊದಲು ಕೆಲವು ಮಾತುಗಳನ್ನಾಡುತ್ತಾರೆಂದು ತಿಳಿಸಿದಾಗಲೂ ಸದ್ದುಗದ್ದಲವಾಗಲಿಲ್ಲ. ಅನಂತರ ಹತ್ತಾರು ಕಡೆ ನಿಂತು ಮಾತನಾಡಿದರು. ಅವರ ಸಂದೇಶ ಸಂಕ್ಷೇಪವಾಗಿತ್ತು. "ಬಡವರಿಗಾಗಿ ನಿಮ್ಮ ಜೇಬುಗಳನ್ನು ಬರಿದು ಮಾಡಿಕೊಳ್ಳಿ." ಪ್ರತಿಕ್ರಿಯೆ ಔದಾರ್ಯಪೂರ್ಣವಾಗಿತ್ತು. ರಾಶಿರಾಶಿಯಾಗಿ ಬಿದ್ದ ಸಣ್ಣ ನಾಣ್ಯಗಳನ್ನು ಹೊರಲು ಮೂರು ಜನ ಬೇಕಾಯಿತು. ಗ್ರಾಮಸ್ಥರು ಕೊಟ್ಟದ್ದು ಒಟ್ಟು ಒಂದು ಸಾವಿರ ರೂಪಾಯಿ. ಅಲ್ಲಿ ಸೇರಿದ್ದವರಿಂದ ತಲಾ ಆರು ಕಾಸು ವಸೂಲಾಗಿದ್ದಿತು. ಗೋಪಾಲ್‌ಗಂಜ್‌ನಲ್ಲಿಯೂ ಅಷ್ಟೇ ದೊಡ್ಡ ಸಂದಣಿ ಸೇರಿತ್ತು. ಆದರೆ ವಸೂಲಾದ ಹಣ ಬಹಳ ಕಡಿಮೆ. ಜನಸಂದಣಿ ದಟ್ಟವಾಗಿದ್ದು ಹಣ ಸಂಗ್ರಹಕ್ಕಾಗಿ ಓಡಾಡಲು ಮಧ್ಯೆ ಜಾಗವೇ ಇರಲಿಲ್ಲ.

ರಾಜಕೀಯ ಹೋರಾಟದಲ್ಲಿ ಎಷ್ಟೇ ಏರುಪೇರುಗಳಾಗಿದ್ದರೂ ಗ್ರಾಮಾಂತರ ಪ್ರದೇಶದಲ್ಲಿ ಜೀವಕಳೆ ಇತ್ತು. ನಗರಗಳಿಗಿಂತ ಹಳ್ಳಿಗಳಲ್ಲೇ ಖಾದಿ ಹೆಚ್ಚಾಗಿ ಕಾಣುತ್ತಿತ್ತು. ಹಣ ಸಂಗ್ರಹಣೆಯ ವಿಷಯದಲ್ಲೂ ಅಷ್ಟೆ. ಹಳ್ಳಿಗರು ಉದಾರವಾಗಿ ಕೊಡುತ್ತಿದ್ದರು. ಎಲ್ಲ ಕಡೆಯಂತೆ, ಮೇಲ್ವರ್ಗದ ಜನರು ಆರ್ಥಿಕ ವಿಷಣ್ಣತೆಯಿಂದ ತೊಂದರೆಗೀಡಾಗಿದ್ದರು. ಆದುದರಿಂದ ಪಟ್ಟಣವಾಸಿಗಳಿಂದ ಹಣದ ಕಾಣಿಕೆ ತೃಪ್ತಿಕರವಾಗಿರಲಿಲ್ಲ. ಗಯಾದಲ್ಲಿ ವ್ಯವಸ್ಥೆ ಉತ್ತಮವಾಗಿದ್ದಿದ್ದರೆ ನಿಧಿ ಸಂಗ್ರಹ ಹೆಚ್ಚಾಗಿರಬಹುದಾಗಿತ್ತು. ಛಪ್ರ ಮತ್ತು ಸೇರ್ವಾಗಳಲ್ಲಿ ಆದ ವಸೂಲಿ ತುಂಬಾ ಕಡಿಮೆ. ಆದರೆ ಬಡವರಿಂದ ಸಂದಾಯವಾದ ಹಣ ಮೆಚ್ಚುಗೆಗೆ ಪಾತ್ರವಾಗಿತ್ತು. ಬಿಹಾರದ ಪ್ರವಾಸದಲ್ಲಿ ಅತ್ಯಂತ ಹೆಚ್ಚು ನಿಧಿ ಕೂಡಿದ್ದೆಂದರೆ ಜನವರಿ ೧೮. ಅಂದು ದಾಲ್‌ಸಿಂಗ್ ಸರೈ, ಸಮಸ್ತಿಪುರ ಮತ್ತು ಧರ್ಬಾಂಗಗಳಲ್ಲಿ ವಸೂಲಾದ ಒಟ್ಟು ಮೊತ್ತ ೭೫೦೦ ರೂಪಾಯಿಗಳು.

ಮಹಿಳೆಯರ ಸಭೆಗಳಲ್ಲಿ ಬಹಳ ಮಂದಿ ಇರುತ್ತಿದ್ದರು. ಅವರ ಕೊಡುಗೆ ಉದಾರವಾಗಿರುತ್ತಿತ್ತು. ಮಹಿಳೆಯರಿಗೆ ಗಾಂಧಿಯವರ ಸಂದೇಶ, 'ಬುರುಕಿಯನ್ನು ಕಿತ್ತುಹಾಕಿ' ಎಂಬುದಾಗಿತ್ತು. "ಕೃತಕವಾಗಿ ಪಾತಿವ್ರತ್ಯವನ್ನು ಅಥವಾ ಜಿತೇಂದ್ರಿಯತ್ವವನ್ನು ಸಾಧಿಸಲಾಗುವುದಿಲ್ಲ. ಮೇಲಿಂದ ಅದನ್ನು ಹೊರಿಸಲೂ ಆಗುವುದಿಲ್ಲ. ಬುರುಕಿಯ ಪರದೆಯೊಳಗೆ ಅದನ್ನು ರಕ್ಷಿಸಲೂ ಸಾಧ್ಯವಿಲ್ಲ. ಅದು ಅಂತರಂಗದಿಂದ ದೃಢವಾಗಿ ಮೂಡಬೇಕು. ಅನಪೇಕ್ಷಣೀಯವಾಗಿ ಬರುವ ಆಕರ್ಷಣೆಗಳನ್ನು ತಡೆದುಕೊಳ್ಳಲು ಸಾಮರ್ಥ್ಯವಿಲ್ಲದಿದ್ದರೆ ಅದಕ್ಕೆ ಅರ್ಥವಿರುವುದಿಲ್ಲ. ಸೀತೆಯು ಮಾಡಿದ ರೀತಿಯಲ್ಲಿ ನಿರಾಕರಣೆ ಮಾಡಬೇಕು. ಪುರುಷರ ದೃಷ್ಟಿಯನ್ನು ತಡೆಯಲಾಗದಿದ್ದರೆ ಅದು ಅರ್ಥಹೀನ ಜಿತೇಂದ್ರಿಯತೆಯಾಗುತ್ತದೆ. ಪುರುಷರು ಪುರುಷರೇ ಆಗಿರಬೇಕಾದರೆ ಅವರು ತಮ್ಮ ಸ್ತ್ರೀಯರನ್ನು ನಂಬಬೇಕು. ಸ್ತ್ರೀಯರು ಗಂಡಸರನ್ನು ನಂಬಲೇ ಬೇಕಾದ ಪರಿಸ್ಥಿತಿ ಇಲ್ಲವೆ? ನಮ್ಮ ಒಂದು ಭಾಗವನ್ನು ಕ್ಷಯಿಸಿ ಬಾಳುವುದು ಬೇಡ. ತನ್ನಷ್ಟೇ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದ ಸೀತೆ ಇರದಿದ್ದರೆ ರಾಮ ಎಲ್ಲಿರುತ್ತಿದ್ದ? ನಿಚ್ಚಳವಾದ ಸ್ವಾತಂತ್ರ್ಯವನ್ನು ಅನುಭವಿಸಿದ ದ್ರೌಪದಿ ಇನ್ನೂ ಉತ್ತಮ ಉದಾಹರಣೆ. ಕೋಮಲತೆಯು ಮೂರ್ತಿವೆತ್ತಿತ್ತು ಸೀತೆಯಲ್ಲಿ. ಆಕೆ ಕೋಮಲ ಪುಷ್ಪ. ದ್ರೌಪದಿ ಕೆಚ್ಚೆದೆಯ ವೀರ ರಮಣಿ. ಮಹಾಶಕ್ತಿವಂತನಾದ ಭೀಮನನ್ನೇ ತನ್ನ ಪ್ರಬಲ ಇಚ್ಛೆಗೆ ಬಾಗುವಂತೆ ಮಾಡಿದಳು. ಅವಳಿಗೆ ಪಾಂಡವರಾರಿಂದಲೂ ರಕ್ಷಣೆಯೇ ಬೇಕಾಗಿರಲಿಲ್ಲ. ಭಾರತದ ಮಹಿಳೆಯರ ಅನಿರ್ಬಂಧಬೆಳವಣಿಗೆಗೆ ಅಡ್ಡಿಬರುವುದರ ಮೂಲಕ ನಾವು ಸ್ವತಂತ್ರ ಮನೋಭಾವದ ಕೆಚ್ಚೆದೆಯ ಪುರುಷರ ಬೆಳವಣಿಗೆಗೆ ಅಡ್ಡಿಬರುತ್ತಿದ್ದೇವೆ. ನಾವು ನಮ್ಮ ಮಹಿಳೆಯರಿಗೆ ಏನು ಮಾಡುತ್ತಿದ್ದೇವೆಯೋ, ಅಸ್ಪೃಶ್ಯರಿಗೆ ಏನು ಮಾಡುತ್ತಿದ್ದೇವೆಯೋ ಅದು ನಮಗೆ ಸಾವಿರಪಟ್ಟು ಘೋರವಾಗಿ ತಟ್ಟುತ್ತದೆ. ನಮ್ಮ ದೌರ್ಬಲ್ಯಕ್ಕೂ ಅನಿಶ್ಚಿತ ಮನೋಭಾವಕ್ಕೂ ಸಂಕುಚಿತತೆಗೂ ಅಸಹಾಯಕಸ್ಥಿತಿಗೂ ಅದೇ ಕಾರಣ. ಬಲವಾದ ಒಂದು ಪ್ರಯತ್ನದಿಂದ ಬುರುಕಿ ಪದ್ಧತಿಯನ್ನು ಕಿತ್ತು ಹಾಕೋಣ."

ಮಹಿಳೆಯರ ಸಭೆಗಳ ವೈಶಿಷ್ಟ್ಯವೆಂದರೆ ಒಡವೆ ವಸ್ತುಗಳ ವಸೂಲಿ. ಸೋನೆಪುರದಲ್ಲಿ ಇದು ಚೆನ್ನಾಗಿ ಆರಂಭವಾಯಿತು.

"ಸೀತೆಯನ್ನು ನೆನಪು ಮಾಡಿಕೊಳ್ಳಿ. ರಾಮನ ಜೊತೆ ಹದಿನಾಲ್ಕು ವರ್ಷ ವನವಾಸ ಮಾಡುತ್ತಿದ್ದಾಗ ಆಕೆ ನಿಮ್ಮಂತೆ ಭಾರವಾದ ಒಡವೆಗಳನ್ನು ಧರಿಸಸಿದ್ದಳೆಂದು ತಿಳಿದಿದ್ದೀರಾ? ಒಡವೆಗಳು ನಿಮ್ಮ ಸೌಂದರ್ಯ ವರ್ಧಕಗಳೆಂದು ಭಾವಿಸಿದ್ದೀರಾ? ಸೀತೆಯು ತನ್ನ ಆತ್ಮ ಸೌಂದರ್ಯದ ಕಡೆ ಗಮನಕೊಟ್ಟಳು. ತನ್ನ ದೇಹವನ್ನು ಪರಿಶುದ್ಧವಾದ ಖದ್ದರಿನಿಂದ ಮುಚ್ಚಿಕೊಂಡಿದ್ದಳು. ನೀವು ಧರಿಸಿರುವ ಒಡವೆ ವೈಢೂರ್ಯಗಳು ಲಕ್ಷಣವಾಗಿಲ್ಲ. ಅವುಗಳಿಂದ ನಿಮಗೆ ತೊಂದರೆಯೇ ಆದೀತು;

ಕಾರಣ, ಅವುಗಳ ಮೇಲೆ ಧೂಳು ಕೂರುತ್ತದೆ. ಈ ಸಂಕೋಲೆಗಳನ್ನು ಕಳಚಿಕೊಳ್ಳಿ. ಒಡವೆಗಳ ಮಾತಿರಲಿ, ಹಾಕಿಕೊಳ್ಳಲು ಬಟ್ಟೆಯೂ ಇಲ್ಲದ ಜನ ಇದ್ದಾರೆ. ಅವರ ಬಡತನ ಹೋಗಿಸಲು ಅವುಗಳನ್ನು ಕೊಟ್ಟುಬಿಡಿ."ಹೀಗೆ ಹೇಳುತ್ತಿರುವಂತೆಯೇ ಭಾರವಾದ ಒಡವೆ ವೈಡೂರ್ಯಗಳು ಗಾಂಧಿಯವರ ಕೈಸೇರುತ್ತಿದ್ದುವು.

ಸೋನೆಪುರದಲ್ಲಿ ಗಾಂಧಿಯವರು ಹೊಸಪದ್ಧತಿಯನ್ನು ಆರಂಭಿಸಿದರು. ಖಾದಿ ಬಟ್ಟೆಯ ಕಟ್ಟೊಂದನ್ನು ಅವರೇ ಹೊತ್ತುಕೊಂಡು ಪ್ರತಿ ನಿಲ್ದಾಣದಲ್ಲೂ ಮತ್ತು ಪ್ರತಿಸಭೆಯಲ್ಲೂ ಮಾರಲಾರಂಭಿಸಿದರು. ಮಾರಾಟ ಚೆನ್ನಾಗಿಯೇ ಆಯಿತು. ಜನವರಿ ಕೊನೆಯ ಹೊತ್ತಿಗೆ ಅವರು ಬಿಹಾರಿನ ಪ್ರವಾಸ ಮುಗಿಸಿದರು.

ಜನವರಿ ೨೦ರಂದು ಯಂಗ್ ಇಂಡಿಯಾಕ್ಕೆ ಬರೆದ ಲೇಖನದಲ್ಲಿ ನೂಲುವ ಚಳವಳಿಯ ಸ್ಥಿತಿಯನ್ನು ಅವಲೋಕಿಸಿದರು.

"ಇದುವರೆಗಿನ ಪ್ರವಾಸದಲ್ಲಿ ನಾನು ನೋಡಿ ತಿಳಿದಿರುವ ಸಂಗತಿ ಇದು. ನೂಲುವ ಸಂಸ್ಥೆಗಳಲ್ಲಿ ನೂಲುವವರ ಕರಾರುವಾಕ್ಕು ದಾಖಲೆ ಇಲ್ಲ. ನೂಲುವವರಿಗೆ ನೀಡಲಾದ ಕೂಲಿಯ ಆಧಾರದ ಮೇಲೆ ನನಗೆ ಅಂಕಿಅಂಶಗಳನ್ನು ನೀಡಲಾಗಿದೆ. ಅವನ್ನೇ ನಾನು ಆಗಿಂದಾಗ್ಗೆ ಪ್ರಕಟಿಸಿದ್ದೇನೆ. ಅಂಕಿಅಂಶಗಳ ಸಂಗ್ರಹಣೆಯ ದೃಷ್ಟಿಯಿಂದ ಇದು ಸರಿಯಾಗಿಯೇ ಇದೆ. ಏಕೆಂದರೆ, ವಾಸ್ತವವಾಗಿ ಇರುವುದಕ್ಕಿಂತ ಸ್ವಲ್ಪ ಕಡಿಮೆ ಇದ್ದರೆ ಚಿಂತೆಯಿಲ್ಲ. ಆದರೆ ಚಳವಳಿಯ ಹಿತದೃಷ್ಟಿಯಿಂದ ಅದು ಒಳ್ಳೆಯದಲ್ಲ. ನೂಲುವವ ಚಳವಳಿಯು ಶಾಶ್ವತವಾಗಿರಬೇಕಾದರೆ ಕಾರ್ಯಕರ್ತರ ಹಾಗೂ ನೂಲುವವರ ಮಧ್ಯೆ ನೇರ ಹಾಗೂ ಪರಿಣಾಮಕಾರಿ ಸಂಪರ್ಕವಿರಬೇಕು. ಆಗ ಮಾತ್ರ ನಾವು ನೂಲುವವರ ಅಪೇಕ್ಷೆಗಳನ್ನೂ ಆಶೋತ್ತರಗಳನ್ನೂ ಇತಿಮಿತಿಗಳನ್ನೂ ಅರಿಯಲು ಸಾಧ್ಯ. ಭಾರತದ ಅಸಂಖ್ಯಾತ ಹಳ್ಳಿಗಳಲ್ಲಿ ಮೂಲೆ ಗುಂಪಾಗಿರುವ ಮನೆಗಳಿಗೂ ಹೋಗಿ ಅವುಗಳಲ್ಲಿ ಆಶಾಕಿರಣವನ್ನು ಮೂಡಿಸುವುದು ನಮ್ಮ ಉದ್ದೇಶ. ನಾವು ನೂಲುವವರೊಂದಿಗೆ ಜೀವಂತ ಸಂಬಂಧವನ್ನಿಟ್ಟುಕೊಳ್ಳದಿದ್ದರೆ ಅದು ಅಸಾಧ್ಯವಾಗುತ್ತದೆ. ಆದುದರಿಂದ ನಮಗೆ ಗೊತ್ತಿಲ್ಲದ ಮಧ್ಯವರ್ತಿಗಳ ಕೆಲಸದಿಂದ ನಾವು ತೃಪ್ತರಾಗುವಂತಿಲ್ಲ. ಪ್ರತಿಯೊಂದು ಕಾಸೂ ಸುರಕ್ಷಿತವಾಗಿ ನೂಲುವವರ ಕೈಗೆ ತಲುಪುವಂತೆ ನಾವು ಎಚ್ಚರ ವಹಿಸಬೇಕು. ಈ ಚಳುವಳಿಯ ಪ್ರಧಾನ ಅಂಶವೆಂದರೆ ನೂಲುವುದು–ನೇಯ್ಗೆಯಲ್ಲ, ಬಣ್ಣ ಹಾಕುವುದಲ್ಲ, ಅಚ್ಚು ಹಾಕುವುದಲ್ಲ; ನೂಲು ನೂಲುವುದಕ್ಕೆ ಪೂರ್ವಭಾವಿ ಕೆಲಸವಾದ ಎಕ್ಕುವುದಾಗಲೀ ಹತ್ತಿಯಿಂದ ಬೀಜವನ್ನು ಬೇರ್ಪಡಿಸುವುದಾಗಲೀ ಅಲ್ಲ. ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. .ಏಕೆಂದರೆ, ಅರೆಹೊಟ್ಟೆಯಿಂದಿರುವ ಕೋಟ್ಯಾಂತರ ಜನರಲ್ಲಿ ಬಹುಮಂದಿಗೆ ಉಪಕಸುಬನ್ನು ಒದಗಿಸುವುದರಲ್ಲಿ ಆರ್ಥಿಕ ಪರಿಹಾರ ಅಡಗಿದೆ. ನೂಲುವುದು ಅತ್ಯಂತ ಉತ್ತಮವಾದ ಉದ್ಯೋಗವಾಗುತ್ತದೆ. ಅದನ್ನು ಬಿಟ್ಟರೆ ಇನ್ನಾವುದೂ ಇಲ್ಲ.

"ಅಂಕಿ ಅಂಶಗಳ ಪ್ರಕಾರ ಬಿಹಾರಿನಲ್ಲಿ ೨೯೮೮ ನೂಲುವವರಿದ್ದರೆ ೪೮೯ ಮಂದಿ ನೇಯ್ಗೆಯುವರಿದ್ದಾರೆ. ನನ್ನ ಲೆಕ್ಕದ ಪ್ರಕಾರ ಒಬ್ಬ ನೇಯ್ಗೆಯುವನಿಗೆ ಪೂರ್ಣ ಕೆಲಸ ಕೊಡಬೇಕಾದರೆ ಹತ್ತು ಮಂದಿ ಪೂರ್ಣ ಉದ್ಯೋಗದ ನೂಲುವವರು ಇರ ಬೇಕು. ನೂಲುವವರಿಗೆಲ್ಲ ಎಕ್ಕುವ ಕೆಲಸ ಮತ್ತು ಹತ್ತಿಯಿಂದ ಬೀಜವನ್ನು ಬೇರ್ಪಡಿಸುವ ಕೆಲಸ ಕಲಿಸಬೇಕೆಂಬುದು ನಮ್ಮ ಆಸೆ. ಅದನ್ನು ಮಾಡುವುದರಿಂದ ಅವರುಗಳು ಹೆಚ್ಚಿನ ಶ್ರಮ ಅಥವಾ ತರಪೇತು ಇಲ್ಲದೆ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳ ಬಹುದು. ಇದನ್ನು ಬಿಹಾರ, ಬಂಗಾಳ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ವ್ಯಾಪಕವಾಗಿ ಮಾಡಲಾಗುತ್ತಿದೆ. ನೂಲುವವರ ಸಂಘವು ಜನಸಾಮಾನ್ಯರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದರ ಮೂಲಕ ತನ್ನ ಅಸ್ತಿತ್ವವನ್ನು ಸಾರ್ಥಕ ಪಡಿಸಿಕೊಳ್ಳಬೇಕು. ಅತಿ ಸ್ವಲ್ಪ ಕಾಲದಲ್ಲಿ ಜನಸಾಮಾನ್ಯರನ್ನು ಮುಟ್ಟಲು ಇದನ್ನು ಬಿಟ್ಟರೆ ಮತ್ತೊಂದು ಸಾಧನವಿಲ್ಲ.

"ಕೋಟ್ಯಾಂತರ ಜನರ ಹಿತವನ್ನು ಕಾಪಾಡುವುದರ ಮೂಲಕ ಈ ಚಳವಳಿಯು ತನ್ನ ಪ್ರಭಾವವನ್ನು ಬೆಳಸಿಕೊಳ್ಳಬೇಕು. ಸತ್ವಪೂರ್ಣವಾಗಬೇಕು. ಇದುವರೆಗೆ ಈ ಚಳುವಳಿಯು ಜನತೆಯಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಮುಟ್ಟಿದೆ. ವಿನಾಶದ ಅಪಾಯವೇ ಇಲ್ಲದೆ ನೂಲುವ ಕಾರ್ಯ ತನ್ನಷ್ಟಕ್ಕೆ ತಾನೇ ನಡೆದುಕೊಂಡು ಹೋಗುವ ಸ್ಥಿತಿ ಬರುವ ತನಕ ನೂಲುವವರ ಹೆಸರುಗಳ ಸಂಪೂರ್ಣ ದಾಖಲೆ ಇರುವುದು ಅಗತ್ಯ. ದಾಖಲೆ ಇಡಲು ತಗುಲುವ ಖರ್ಚು ಸಮರ್ಥನೀಯವೇ. ಚಳವಳಿಯನ್ನು ಸುಭದ್ರ ತಳಹದಿಯ ಮೇಲೆ ನಿಲ್ಲಿಸಬೇಕಾದರೆ ಅದು ಅಗತ್ಯ. ಬ್ಯಾಂಕಿಗೆ ಬಂದು ಹೋಗುವ ಪ್ರತಿಯೊಂದು ಕಾಸನ್ನೂ ಒಮ್ಮೆಲೇ ಜಮಾ ಖರ್ಚು ಮಾಡಿಕೊಳ್ಳುವುದು ಬ್ಯಾಂಕಿನ ಪ್ರಾಮಾಣಿಕ ಅಸ್ತಿತ್ವ ಮತ್ತು ಬೆಳವಣಿಗೆಗೆ ಹೇಗೆ ಅಗತ್ಯವೋ ಹಾಗೆಯೇ ನೂಲು ವರರ ಬಗ್ಗೆ ಕರಾರುವಾಕ್ಕಾದ ದಾಖಲೆಯನ್ನಿಡುವುದು ನೂಲುವ ಚಳವಳಿಯ ಪ್ರಾಮಾಣಿಕ ಅಸ್ತಿತ್ವ ಮತ್ತು ಬೆಳವಣಿಗೆಗೆ ಅಗತ್ಯ. ಆದುದರಿಂದ ಪ್ರತಿಯೊಂದು ನೂಲುವ ಸಂಸ್ಥೆಯೂ ಸ್ವಲ್ಪವೂ ವಿಳಂಬ ಮಾಡದೆ ನೂಲುವವರ ಪರಿಪೂರ್ಣವಾದ ಹಾಗೂ ಇಂದಿನವರೆಗಿನ ದಾಖಲೆಯನ್ನು ಇಡುವುದೆಂದು ನಂಬುತ್ತೇನೆ. ಈ ದಾಖಲೆ ಗಳನ್ನು ಇಡುವ ಹಾಗೂ ನೂಲುವವರೊಡನೆ ಸಂಪರ್ಕ ಹೊಂದುವ ಪುರುಷರು (ಸ್ತ್ರೀಯರಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು) ಅಪನಂಬಿಕೆಗೆ ಎಡೆಯಿಲ್ಲದ ಪರಿಶುದ್ಧ ವ್ಯಕ್ತಿಗಳಾಗಿರಬೇಕೆಂದು ಹೇಳಬೇಕಾಗಿಲ್ಲ. ಅಭಯಾಶ್ರಮದ ವರದಿಯನ್ನು ಪರಿಶೀಲಿಸಿ ದಾಗ ಅಂಕಿ ಅಂಶಗಳ ವರದಿಯಲ್ಲಿ 'ಸುಮಾರು' 'ಹತ್ತಿರ ಹತ್ತಿರ' ಎಂಬುದು ಇರ ಕೂಡದು ಎಂದು ಹೇಳಿದ್ದೆ. ಸಂಬಂಧಪಟ್ಟವರಿಗೆಲ್ಲ ಮತ್ತೆ ಹೇಳುತ್ತೇನೆ. ತುಂಬಾ ಪರಿಣಾಮಕಾರಿಯಾದ ಈ ಚಳುವಳಿಯಲ್ಲಿ ಸೇರಿರುವ ನಮ್ಮ ಸಂಸ್ಥೆಗಳ ಸದಸ್ಯರು ಯಾವುದೇ ರೀತಿಯ ಸಂಶಯಕ್ಕೆ ಆಸ್ಪದ ಕೊಡಬಾರದು ಎಂದು ಎಷ್ಟು ಹೇಳಿದರೂ ತೀರದು. ಆ ಮಟ್ಟದ ಪರಿಶುದ್ಧತೆಯನ್ನು ಸಾಧಿಸಬೇಕಾದರೆ ನಾವು ಮುಟ್ಟಿದರೆ

ಮುನಿಯಾಗಿರಕೂಡದು. ಸದುದ್ದೇಶದ ಸಲಹೆಗಳೂ ಟೀಕೆಗಳೂ, ಬಂದರೆ ಅವನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳಬೇಕು."

ರಸ್ಕಿನ್ ಹೇಳುತ್ತಿದ್ದಂತೆ "ಆತ್ಮಗಳ ನಿರ್ಮಾಣ" ಗಾಂಧಿಯವರ ಜೀವನದ ಧ್ಯೇಯವಾಗಿತ್ತು:

"ಗ್ರಾಮಗಳನ್ನು ಒಳಹೊಕ್ಕು ಅಲ್ಲಿ ಭೇಟಿ ಮಾಡುವ ಹಳ್ಳಿಗರ ಕಾಂತಿಹೀನ ಕಣ್ಣುಗಳನ್ನು ನೋಡಿದಂತೆಲ್ಲ ನಾನು ತಲ್ಲಣಿಸುತ್ತೇನೆ. ಇನ್ನೇನೂ ಗತ್ಯಂತರವಿಲ್ಲದೆ ಕೂಲಿಯಾಳುಗಳಾಗಿ ಎತ್ತುಗಳ ಜೊತೆಯಲ್ಲಿ ಕೆಲಸಮಾಡುತ್ತಿರುವ ಅವರು ಎತ್ತುಗಳಂತೆಯೇ ಆಗಿಬಿಟ್ಟಿದ್ದಾರೆ. ಕೋಟ್ಯಾಂತರ ಜನರು ತಮ್ಮ ಕೈಗಳನ್ನು ಕೈಗಳನ್ನಾಗಿ ಉಪಯೋಗಿಸುವುದನ್ನು ಬಿಟ್ಟಿರುವುದು ಅತ್ಯಂತ ದುರಂತಕಾರಿಯಾದ ಸಂಗತಿ. ಮಾನವರಾದ ನಮಗೆ ಪ್ರಕೃತಿಯು ವರಪ್ರದಾನ ಮಾಡಿರುವುದನ್ನು ವ್ಯರ್ಥಮಾಡುತ್ತಿರುವುದರಿಂದ ಅದು ನಮ್ಮ ಮೇಲೆ ಘೋರವಾದ ಸೇಡು ತೀರಿಸಿಕೊಳ್ಳುತ್ತಿದೆ. ನಮಗೆ ಕೊಟ್ಟಿರುವ ಕೊಡುಗೆಯನ್ನು ನಾವು ಪೂರ್ಣವಾಗಿ ಉಪಯೋಗಿಸುತ್ತಿಲ್ಲ. ಮೃಗಗಳಿಗೂ ನಮಗೂ ವ್ಯತ್ಯಾಸವನ್ನು ತೋರಿಸುವ ಕೆಲವೇ ಅಂಗಗಳಲ್ಲಿ ಅಂದವಾದ ಕೈಗಳೂ ಸೇರಿವೆ. ನಮ್ಮಲ್ಲಿ ಕೋಟ್ಯಾಂತರ ಜನ ಅವುಗಳನ್ನು ಕೇವಲ ಪಾದಗಳೋಪಾದಿಯಲ್ಲಿ ಉಪಯೋಗಿಸುತ್ತಿದ್ದೇವೆ. ಇದರ ಪರಿಣಾಮವೇನೆಂದರೆ ದೇಹಕ್ಕೂ ಬುದ್ಧಿಗೂ ಆಹಾರವಿಲ್ಲದೇ ಇರುವುದು. ಈ ರೀತಿ ವ್ಯರ್ಥ ಮಾಡುವುದರಿಂದ ನಾವು ನಿಶ್ಚೇಷ್ಟ ಸ್ಥಿತಿಯಲ್ಲಿದ್ದೇವೆ. ಪ್ರತಿಯೊಂದು ಮನೆಯನ್ನೂ ನೂಲುವ ಗಿರಣಿಯನ್ನಾಗಿ ಮಾಡಿದಾಗಲೇ ಅದರ ಪುನರುತ್ಥಾನ ಸಾಧ್ಯ. ಅದರೊಂದಿಗೆ ಪುರಾತನವಾದ ಗ್ರಾಮ್ಯ ಕಲೆಯನ್ನೂ ಸಂಗೀತವನ್ನೂ ಪುನರುತ್ಥಾನ ಮಾಡಲು ಸಾಧ್ಯವಾಗುತ್ತದೆ. ಅರೆಹೊಟ್ಟೆಯಿಂದಿರುವ ರಾಷ್ಟ್ರವು ಧರ್ಮವನ್ನಾಗಲೀ ಕಲೆಯನ್ನಾಗಲೀ ಸಾಂಘಿಕ ವ್ಯವಸ್ಥೆಯನ್ನಾಗಲೀ ಹೊಂದಿರುವುದಿಲ್ಲ."

ಚರಖದಲ್ಲಿ ಅಂತಹ ನಂಬಿಕೆಯಿಟ್ಟು ಅವರು ಜನರಿಗೆ ಸಂದೇಶ ನೀಡಿದರು. ಬಿಹಾರಿನಿಂದ ಮಧ್ಯ ಪ್ರದೇಶಕ್ಕೆ ತೆರಳಿದರು. ಅವರ ದರ್ಶನಕ್ಕಾಗಿ ಬಿಹಾರಿನಲ್ಲಿ ಜನರ ನೂಕುನುಗ್ಗಲು ಇರುತ್ತಿದ್ದಂತೆ ಇಲ್ಲಿರಲಿಲ್ಲ. ಬಿಹಾರಿನಲ್ಲಿ ಏನು ವ್ಯವಸ್ಥೆಯಿತ್ತೋ ಅದು ತಾನೇ ತಾನಾಗಿ ಜನರಿಂದ ಮೂಡಿ ಬಂದಿತ್ತು. ರಾಜೇಂದ್ರ ಪ್ರಸಾದರು ಯಾವಾಗಲೂ ಎಲೆಯ ಮರೆಯ ಕಾಯಂತೆ ಇರುತ್ತಿದ್ದರು. ಮಧ್ಯಪ್ರಾಂತ ಮತ್ತು ಬೀರಾರ್‌ನಲ್ಲಿ ಇವರು ಹೋದಕಡೆಯೆಲ್ಲಾ ಜಮ್ನಾಲಾಲ್ ಬಜಾಜ್ ಇರುತ್ತಿದ್ದರು. ಸಂದರ್ಶನಕ್ಕೆ ಅನೇಕ ದಿನಗಳ ಮುಂಚೆಯೇ ಪ್ರವಾಸದ ಪೂರ್ವಸಿದ್ಧತೆ ಮಾಡಿದ್ದರು. ಏಳುದಿನಗಳ ಅವಧಿಯಲ್ಲಿ ಹದಿನೇಳು ಸ್ಥಳಗಳಿಗೆ ಗಾಂಧಿಯವರು ಭೇಟಿ ಕೊಡುವಂತೆ ಏರ್ಪಾಟು ಮಾಡಿದ್ದರು.

ಮಧ್ಯಪ್ರದೇಶದಲ್ಲಿ ವಿದ್ಯಾವಂತರು ಸಾಮಾನ್ಯವಾಗಿ ಉದಾಸೀನರಾಗಿದ್ದರು. ಸಾಮಾನ್ಯ ಜನರಿಗೆ ತಿಲಕರಿಂದ ಶಿಸ್ತಿನ ಶಿಕ್ಷಣ ದೊರೆತಿತ್ತು. ಆದರೆ ಈಗ ಅವರಿಗೆ

ಮಾರ್ಗದರ್ಶನ ನೀಡುವ ಕಾರ್ಯಕರ್ತರು ಬಹಳ ವಿರಳವಾಗಿದ್ದರು. ಗಾಂಧಿಯವರ ಪ್ರವಾಸ ಮಲ್ಕಪುರ ಜಿಲ್ಲೆಯ ಪಶ್ಚಿಮ ತುದಿಯಲ್ಲಿನ ಗೋಂಡಿಯಾದಿಂದ ಆರಂಭ ವಾಗಿ ಪೂರ್ವದ ಅಂಚಿನಲ್ಲಿದ್ದ ಮಲ್ಕಪುರದಲ್ಲಿ ಕೊನೆಗೊಂಡಿತು. ಅವರ ಆಗಮನವನ್ನು ನಿರೀಕ್ಷಿಸಿ ಗೊಂಡಿಯಾದಲ್ಲಿ ೫೫೦೦ ರೂಪಾಯಿಗಳ ನಿಧಿಯನು ಸಂಗ್ರಹಿಸಲಾಗಿತ್ತು. ಆದುದರಿಂದ ಅಲ್ಲಿ ಹಣ ವಸೂಲಿಯ ಕೆಲಸವೇನೂ ಇರಲಿಲ್ಲ. ಖಾದಿ ಭಂಡಾರವನ್ನು ಆರಂಭಿಸುವ ಕಾರ್ಯಕ್ರಮ ಇತ್ತು. ಅಲ್ಲಿ ಗಾಂಧಿ ಹೊಸವಿಧಾನವನ್ನು ಅನುಸರಿಸಿದ್ದರು. ಅವರು ಭಾಷಣ ಮಾಡಿ ಅದನ್ನು ಆರಂಭಗೊಳಿಸಲಿಲ್ಲ. ಸುಮ್ಮನೆ ಕುಳಿತು ಗಜಕಡ್ಡಿ ಕೈಗೆ ತೆಗೆದುಕೊಂಡರು, ಕತ್ತರಿ ಹಿಡಿದರು. ರಸೀತಿ ಪುಸ್ತಕವನ್ನು ಮುಂದಿಟ್ಟುಕೊಂಡರು. ಜನರ ಗುಂಪು ಅಸಾಧ್ಯವಾಗಿತ್ತು. ಕೊಳ್ಳಲು ಬಂದ ಪ್ರತಿಯೊಬ್ಬರಿಗೂ ಗಾಂಧಿಯವರೇ ಬಟ್ಟೆಯನ್ನು ಮಾರಾಟಮಾಡಿದರು. ರಸೀತಿಯ ಮೇಲೆ ಮಾರಾಟಗಾರನೆಂದು ತಾವೇ ಸಹಿ ಹಾಕಿದರು. ಅಲ್ಲಿ ಕುಳಿತಿದ್ದುದು ಸುಮಾರು ಒಂದು ಗಂಟೆ ಕಾಲ. ನಿಮಿಷಕ್ಕೆ ಹತ್ತು ರೂಪಾಯಿಯಂತೆ ಖಾದಿಯನು ಮಾರಾಟಮಾಡಿ ಮುಂದಿನ ಜಾಗಕ್ಕೆ ತೆರಳಿದರು.

"ನನ್ನ ಕೃತಿಯೇ ನನ್ನ ಮಾತು. ಗೋಂಡಿಯಾದಲ್ಲಿ ನಾನು ಮಾತನಾಡಲೇ ಇಲ್ಲ. ಅಲ್ಲಿ ೫೦೦ ರೂಪಾಯಿಗಳಷ್ಟು ಖಾದಿಯನ್ನು ಮಾರಿದೆ. ಅದರಿಂದ ನನಗೆ ಆನಂದ ವಾಯಿತು. ನನ್ನ ಸಂತೋಷಕ್ಕೆ ಕಾರಣವೇನು? ಅದರಲ್ಲೂ ನಮ್ಮ ದೇಶದೊಳಕ್ಕೆ ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆಬಾಳುವ ಬಟ್ಟೆಯನ್ನು ತಂದು ತುರುಕುತ್ತಿರುವ ಈ ಕಾಲದಲ್ಲಿ ೫೦೦ ರೂಪಾಯಿ ಬೆಲೆಯ ಖಾದಿ, ಸಾಗರದಲ್ಲಿನ ಒಂದು ತೊಟ್ಟು ನೀರಿಗೆ ಸಮಾನವಲ್ಲವೇ? ನಾನು ಖಾದಿಯನ್ನು ಮಾರಿ ರಸೀತಿಗೆ ನಾನೇ ರುಜು ಮಾಡಿಕೊಡುವುದರ ಮೂಲಕ ನಿಮ್ಮನ್ನು ಆಕರ್ಷಿಸಬೇಕಾಯಿತು. ಅದು ನಾಚಿಕೆಗೇಡಿನ ವಿಷಯ ಎಂಬುದು ನನಗೆ ಗೊತ್ತು. ಖಾದಿಯಂತಹ ಸರಳವಾದ ವಿಚಾರವನ್ನು ನೀವು ತಿಳಿದುಕೊಳ್ಳದಿದ್ದರೆ ನಾನೇನು ಮಾಡಬೇಕು?"

ಹೋದೆಡೆಯಲ್ಲೆಲ್ಲಾ ಲೋಕಮಾನ್ಯರ ಘೋಷಣೆಯಾದ "ಸ್ವರಾಜ್ಯ ನನ್ನ ಆಜನ್ಮ ಹಕ್ಕು" ಎಂಬುದನ್ನು ಪುನರುಚ್ಚರಿಸಿ "ಖದ್ದರ್ ಇಲ್ಲದೆ ಅದನ್ನು ಪಡೆಯಲಾರಿರಿ" ಎಂಬ ತಮ್ಮದೇ ಆದ ಅನುಸಿದ್ಧಾಂತವನ್ನು ಸೇರಿಸಿದರು. ಸ್ವರಾಜ್ಯದ ಅರ್ಥವನ್ನು ಒತ್ತಿಹೇಳಿ ಸ್ವರಾಜ್ಯವಾದಿ ಯಾರೆಂಬುದನ್ನು ನಿಷ್ಕೃಷ್ಟವಾಗಿ ಹೇಳಿದರು:

"ಸ್ವರಾಜ್ಯವಾದಿಯ ಕೆಲಸ, ಸಾಗರದ ವೃದ್ಧ ಮನುಷ್ಯನ ಕಥೆಯಂತೆ, ಬಡವರ ಮೇಲೆ ಸವಾರಿ ಮಾಡುವುದಲ್ಲ. ಖಾದಿಯನ್ನು ಧರಿಸಿ ಅದನ್ನು ಪ್ರಚಾರ ಮಾಡುವುದರ ಮೂಲಕ ಅವರಿಗೆ ಪ್ರತ್ಯುಪಕಾರ ಮಾಡಬೇಕು. ದಿನನಿತ್ಯ ನೀವು ಶೋಷಣೆ ಮಾಡು ತ್ತಿರುವ ಗ್ರಾಮಸ್ಥನಿಗೆ ಏನಾದರೂ ಪ್ರಯೋಜನಕಾರಿಯಾದ ಕೆಲಸಮಾಡದೆ ಸ್ವರಾಜ್ಯ ವನ್ನು ಗೆಲ್ಲುವ ಮಾತನಾಡಬೇಡಿ" ಎಂದು ಹೇಳಿದರು. ಚಂದಾದಲ್ಲಿ ಪೌರಸಭೆಯು ಪ್ರತಿವರ್ಷವೂ ಖಾದಿ ಕಾರ್ಯಕ್ಕೆ ಮಂತಿಗೆ ಕೊಡುತ್ತಿತ್ತು. ಅಲ್ಲಿ ಮಾತನಾಡುತ್ತಾ

"ಹಾರಗಳಿಗಾಗಿ ನಿಮ್ಮ ಹಣವನ್ನು ವ್ಯರ್ಥ ಮಾಡಬೇಡಿ. ಈ ಹಾರಗಳಿಗಾಗಿ ಖರ್ಚು ಮಾಡುವ ಪ್ರತಿಯೊಂದು ರೂಪಾಯಿಯಿಂದ ೧೭ ಮಂದಿ ಮಹಿಳೆಯರಿಗೆ ಒಪ್ಪತ್ತು ಊಟ ಹಾಕಬಹುದು. ಯಾರ ಬೆವರಿನಿಂದ ನಾವು ಬದುಕಿದ್ದೇವೋ ಯಾರ ಭೂಮಿಯಿಂದ ನಾವು ಜೀವನಾಧಾರವಾದ ವಸ್ತುವನ್ನು ಪಡೆಯುತ್ತಿದ್ದೇವೆಯೋ ಅಂತಹ ಬಡವರ ಆರ್ತನಾದದ ಬಗ್ಗೆ ನಾವು ಕಿವುಡರಾಗಿರುವುದು ನಾಚಿಕೆಗೇಡಲ್ಲವೆ? ಅವರು ತಯಾರು ಮಾಡಿದ ಖಾದಿಯನ್ನಾದರೂ ಹಾಕಿಕೊಳ್ಳದಿದ್ದರೆ 'ಲೋಕಮಾನ್ಯಕೀ ಜೈ' ಎನ್ನುವುದನ್ನು ನಿಲ್ಲಿಸಿಬಿಡಿ. ಅವರ ಅಂತಃಕರಣದಲ್ಲಿ ಸ್ವಲ್ಪವನ್ನಾದರೂ ತೋರಿಸಿ; ಅವರು ಮಾಡಿದ್ದರಲ್ಲಿ ಕಿಂಚಿತ್ತನ್ನಾದರೂ ಮಾಡಿರಿ. ಅವರು ಬಡವರಿಗಾಗಿ ತೋರುತ್ತಿದ್ದ ತುಂಬು ಪ್ರೇಮದ ಒಂದು ಕಣದಷ್ಟು ಪ್ರೇಮವನ್ನಾದರೂ ನೀವು ನಿಮ್ಮ ಕೃತಿಯಲ್ಲಿ ತೋರಿಸಿ. ಆ ಮೇಲೆ ಅವರ ಹೆಸರನ್ನು ಹೇಳಿ" ಎಂದರು.

ಭಾರತವು ಅತ್ಯಂತ ಬಡದೇಶ. ಇಲ್ಲಿನ ಕೋಟ್ಯಾಂತರ ಜನ ಅರೆ ಹೊಟ್ಟೆಯಿಂದ ನರಳುತ್ತಿದ್ದಾರೆ. ಅವರ ದಿನವಹಿ ವರಮಾನ ಒಂಬತ್ತು ಕಾಸಿಗಿಂತ ಕಡಿಮೆ, ಎಂಬುದನ್ನು ಒತ್ತಿ ಹೇಳಿದರು. ಮಿತವ್ಯಯದ ದೃಷ್ಟಿಯಿಂದ ವ್ಯವಸ್ಥಾಪಕರಿಗೆ ಸೂಚನೆಗಳನ್ನು ನೀಡಿದರು. "ಜನರ ಗಮನವನ್ನು ಸೆಳೆಯಲು ಎಷ್ಟು ಬೇಕೋ ಅಷ್ಟು ವ್ಯವಸ್ಥೆ ಮಾಡಿ. ಆಡಂಬರದ ಎಲ್ಲ ಅಲಂಕಾರಗಳನ್ನೂ ತೊರೆಯಿರಿ. ಸಾಧ್ಯವಾದಷ್ಟು ಉಳಿಸಿರಿ. ಹಾಗೆ ಆಲೋಚಿಸಿದರೆ, ಕನಿಷ್ಠ ಖರ್ಚಿನಲ್ಲಿ ಅಥವಾ ಖರ್ಚೇ ಇಲ್ಲದೆ ಕಲಾತ್ಮಕವಾಗಿ ಏರ್ಪಾಟು ಮಾಡಬಹುದು. ಉಪಯೋಗಕ್ಕೆ ಬರದ ಖಾದಿಯಿಂದ ಬಾವುಟಗಳನ್ನೂ ತೋರಣಗಳನ್ನೂ ಮಾಡಬಹುದು. ಹೂವಿನ ಹಾರಗಳನ್ನು ಪೂರ್ಣವಾಗಿ ಬಿಟ್ಟು ಬಿಡಬಹುದು. ಅದಕ್ಕೆ ಬದಲಾಗಿ ನೂಲಿನ ಹಾರಗಳನ್ನು ಹಾಕಬಹುದು. ನೂಲಿನ ಹಾರದಲ್ಲಿ ಗಂಟುಗಳನ್ನು ಹಾಕಿ ನಷ್ಟಮಾಡಬಾರದು. ನೂಲಿನ ಹಾರವನ್ನು ಬಟ್ಟೆ ಮಾಡುವುದಕ್ಕಾಗಲೀ ಮತ್ತಾವುದಕ್ಕಾಗಲೀ ಉಪಯೋಗ ಮಾಡುವಂತಿರಬೇಕು. ಬಿನ್ನವತ್ತಳೆಗಳನ್ನು ಅಚ್ಚು ಹಾಕಿಸಲು ಮಾಡುತ್ತಿರುವ ಖರ್ಚನ್ನು ನಿಲ್ಲಿಸಿ ಹಣ ಉಳಿಸಬಹುದು. ವ್ಯವಸ್ಥಾಪಕರ ಪೈಕಿ ತುಂಬಾ ಅಂದವಾಗಿ ಬರೆಯಬಲ್ಲವರು ಬಿನ್ನವತ್ತಳೆಯನ್ನು, ಕೈಯಲ್ಲಿ ತಯಾರು ಮಾಡಿದ ಸರಳವಾದ ಕಾಗದದ ಮೇಲೆ ಬರೆಯಬಹುದು. ಕಾಗದವನ್ನು ಖದ್ದರ್‌ನ ಚಿಕ್ಕ ಬಟ್ಟೆಯ ಮೇಲೆ ನಯವಾಗಿ ಹೊಲಿಸಬಹುದು; ಅಥವಾ ಸ್ವಯಂಸೇವಕನಾದ ಬಾಲಕನೋ ಬಾಲಕಿಯೋ ಕಸೂತಿ ಕೆಲಸದಿಂದ ಅಕ್ಷರಗಳನ್ನು ಖಾದಿಯ ಬಟ್ಟೆಯ ಮೇಲೆ ಹೊಲಿಯಬಹುದು. ಕಸೂತಿ ಕೆಲಸಕ್ಕೆ ಉಪಯೋಗಿಸುವ ದಾರವೂ ಕೈಯಲ್ಲಿ ಮಾಡಿದ್ದೇ ಆಗಿದ್ದರೆ ಇನ್ನೂ ಒಳ್ಳೆಯದು. ಈ ಖದ್ದರ್‌ನ ಬಿನ್ನವತ್ತಳೆಗಳನ್ನು ಸ್ಥಳೀಯವಾಗಿ ಸಿಕ್ಕುವ ಅಗ್ಗದ ಹಾಗೂ ಕಲಾತ್ಮಕವಾದ ಕರಂಡದಲ್ಲಿಟ್ಟು ಕೊಡುವುದಾದರೆ ವ್ಯವಸ್ಥಾಪಕರಿಗೆ ಒಳ್ಳೆಯ ಶಿಕ್ಷಣವೇ ಆಗುತ್ತದೆ."

ಪ್ರತಿ ಸಾರ್ವಜನಿಕ ಸಭೆಯಲ್ಲೂ ಜನರು ಮುಂದೆ ನುಗ್ಗಿ ಖದ್ದರ್ ಅನ್ನು ಕೊಳ್ಳುವುದು ಸರ್ವೇಸಾಮಾನ್ಯವಾಗಿತ್ತು. ಎಲ್ಲ ಕಡೆಯಲ್ಲೂ ನಿಧಿ ಸಂಗ್ರಹಣೆ ಗಣನೀಯ

ವಾಗಿರುತ್ತಿತ್ತು. ಸರ್ಕಾರಿ ಅಧಿಕಾರಿಗಳೂ ಮಿರೋಪಂತ್ ಜೋಷಿಯಂತಹ ಉದಾರ ವಾದಿ ರಾಜಕೀಯ ಪಂಥದವರೂ ಸಹ ಧಾರಾಳವಾಗಿ ವಂತಿಗೆ ನೀಡಿದರು. ಸಹಾನುಭೂತಿಯ ಸಹಕಾರ ನೀಡಬೇಕೆನ್ನುವವರ ಪ್ರಬಲ ಕೇಂದ್ರಗಳಾಗಿದ್ದ ಯಾತ್‌ಮಲ್ ಮತ್ತು ಅಮ್ರೋತಿಗಳಲ್ಲೂ ಖದ್ದರ್ ವ್ಯಾಪಾರ ಗಣನೀಯವಾಗಿತ್ತು. ಹಣ ವಸೂಲಿ ಚೆನ್ನಾಗಿದ್ದರೂ ಬಿಹಾರದಲ್ಲಾದಷ್ಟು ಆಗಿರಲಿಲ್ಲ. ಅಕೋಲದಲ್ಲಿ ನಾನಾಭಾಯ್ ಮಶ್ರುವಾಲರವರು, ಅಸಹಕಾರಿಗಳಿಗೂ ಇತರರಿಗೂ ಮಧ್ಯೆ, ಸಂಪರ್ಕ ಸಾಧನವಾಗಿ ಕೆಲಸ ಮಾಡಿದ್ದರಿಂದ ಕೆಲವು ವಕೀಲರುಸಹ ಸಮಾರಂಭಗಳಲ್ಲಿ ಭಾಗವಹಿಸಿದ್ದರು. ಇಲ್ಲಿನ ಮಹಿಳೆಯರು ೫೦೦ ರೂಪಾಯಿಗಳ ನಿಧಿಯನ್ನು ಕೂಡಿಸಿದ್ದರಲ್ಲದೆ ಚರಖಾ ತರಗತಿಯನ್ನು ಉದ್ಘಾಟಿಸಬೇಕೆಂದು ಗಾಂಧಿಯವರನ್ನು ಆಹ್ವಾನಿಸಿದ್ದರು.

ಗಾಂಧಿಯವರು ನಾಗಪುರವನ್ನು ಪ್ರವೇಶಿಸುತ್ತಿದ್ದ ಹಾಗೆಯೇ ಪೂರ್ಣ ಖಾದಿ ಧಾರಿಯಾಗಿದ್ದ ಪಾರ್ಸಿ ಮಹಿಳೆಯರು ಅವರನ್ನು ಸ್ವಾಗತಿಸಿದರು. ಶ್ರೀಮತಿ ಬೈರಂಜೀಯನ್ನು ಪರಿಚಯಮಾಡಿಕೊಟ್ಟ ಡಾ॥ ಚೋಲ್ಕರ್ ಅವರು: "ವರ್ಷಕ್ಕೆ ೧೦೦೦ ರೂಪಾಯಿಗಳ ವರೆಗೆ ಖದ್ದರ್ ಕೊಂಡುಕೊಳ್ಳುತ್ತಾರೆ ಈ ಪಾರ್ಸಿ ಮಹಿಳೆ" ಎಂದು ಹೇಳಿದರು. ಆಕೆ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು; ಆ ವಿಧವೆಯು ತನ್ನ ಶಕ್ತಿಗನುಗುಣವಾಗಿ ೨೦೦ ರೂಪಾಯಿಗಳ ಕಾಣಿಕೆ ನೀಡಿದರು ಮತ್ತು ಸಬರಮತಿ ಆಶ್ರಮದಿಂದ ೧೦೦೦ ಸಾವಿರ ರೂಪಾಯಿಗಳಷ್ಟು ಖಾದಿಯನ್ನು ಕಳುಹಿಸಬೇಕೆಂದು ಗಾಂಧಿಯವರಿಗೆ ತಿಳಿಸಿದರು.

ಹೊಸ ಚಳವಳಿಯ ಫಲವಾಗಿ ಮಧ್ಯಪ್ರಾಂತದಲ್ಲಿ ಸ್ಥಾಪಿತವಾದದ್ದು ಖಾಮಗಾಂ ರಾಷ್ಟ್ರೀಯ ಶಾಲೆ. ಅದು ವರ್ಧಿಸುತ್ತಿದ್ದ ಶಾಲೆ. ಸಾರ್ವಜನಿಕ ನಿಧಿಯಿಂದ ಇನ್ನೂರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿತ್ತು. ಅವರಲ್ಲಿ ಐವತ್ತು ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿಯನ್ನು ಒದಗಿಸಲಾಗುತ್ತಿತ್ತು. ಶಾಲಾ ಕಟ್ಟಡವನ್ನು ವಿದ್ಯಾರ್ಥಿಗಳೇ ನಿರ್ಮಿಸಿದ್ದರು. ಖಾದಿಯನ್ನು ಧರಿಸುವುದು ಮತ್ತು ನೂಲುವುದು ಶಾಲೆಯಲ್ಲಿ ಕಡ್ಡಾಯವಾಗಿತ್ತು. ಗಾಂಧಿಯವರು ಅಲ್ಲಿಗೆ ಭೇಟಿ ಕೊಟ್ಟಾಗ ಪ್ರತಿಭಾವಂತ ವಿದ್ಯಾರ್ಥಿಗಳ ಇಂಗ್ಲಿಷ್ ಮತ್ತು ಸಂಸ್ಕೃತ ಜ್ಞಾನವನ್ನು ಪರೀಕ್ಷಿಸಿದರು. ಅವರು ಹೇಗೆ ನೂಲುತ್ತಾರೆಂಬುದನ್ನು ಪರೀಕ್ಷಿಸಿದರು. ಫಲಿತಾಂಶದಿಂದ ಗಾಂಧಿಯವರಿಗೆ ತೃಪ್ತಿಯಾಗಲಿಲ್ಲ. ಸಂಸ್ಕೃತ ಮತ್ತು ಇಂಗ್ಲಿಷ್ ಅನ್ನು ಹೇಗೆ ಬೋಧಿಸಬೇಕೆಂಬ ಬಗ್ಗೆ ಅಧ್ಯಾಪಕರಿಗೆ ವಿವರವಾಗಿ ಸೂಚನೆ ಕೊಟ್ಟರು. ಮೇಲಿನ ಮೂರು ತರಗತಿಗಳ ವಿದ್ಯಾರ್ಥಿಗಳಿಗೆ ಬಡಗಿ ಶಿಕ್ಷಣ, ಜೇಡಿಮಣ್ಣಿನಲ್ಲಿ ಮಾದರಿಗಳನ್ನು ತಯಾರಿಸುವ ವಿಧಾನ, ಹೊಲಿಗೆ ಮತ್ತು ಚಿತ್ರಕಲೆ, ಇವುಗಳಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆಯಿತ್ತು. ವಿದ್ಯಾರ್ಥಿಗಳು ಆ ಪೈಕಿ ಯಾವುದಾದರೊಂದು ಆಯ್ದುಕೊಳ್ಳಬಹುದಾಗಿತ್ತು. ಅಧ್ಯಾಪಕರನ್ನುದ್ದೇಶಿಸಿ ಮಾತನಾಡುತ್ತಾ, ಪಠ್ಯಕ್ರಮದಲ್ಲಿ ಚರಖದ ಸ್ಥಾನದ ಬಗ್ಗೆ ಹೇಳಿದರು: "ನಿಮ್ಮ

ಕಾರ್ಯಕ್ರಮದಲ್ಲಿ ಚರಖಕ್ಕೆ ಸ್ಥಾನವಿದೆ, ನಿಜ; ಆದರೆ ನೀವು ಬೋಧಿಸುವ ನಾಲ್ಕೈದು ವಿಷಯಗಳಲ್ಲಿ ಅದೂ ಒಂದು. ಚರಖಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆಯೆಂದು ನೀವು ತಿಳಿಯಬೇಕು. ಅದರ ಕಾರಣ ನಿಮಗೆ ವೇದ್ಯವಾಗಿರಬೇಕು. ನೀವು ಕಲಿಸುವ ಉದ್ಯೋಗಗಳ ಪೈಕಿ ಚರಖ ಒಂದು ಉದ್ಯೋಗವಲ್ಲ. ಉದ್ಯೋಗವೆಂದರೆ ಜೀವಿಕೆಯನ್ನು ಗಳಿಸುವ ಸಾಧನ. ಚರಖವನ್ನು ಒಂದು ಉದ್ಯೋಗವೆಂದು ಗಣಿಸಿ ಅದನ್ನು ಕಲಿಸುವುದಾದರೆ ನಿಮ್ಮ ಪಠ್ಯಕ್ರಮದಲ್ಲಿ ಅದಕ್ಕೆ ಸ್ಥಾನವಿರಕೂಡದು. ಅದಕ್ಕೊಂದು ವಿಶಿಷ್ಟ ಉದ್ದೇಶವಿದೆ. ಅದನ್ನು ಬಡಗಿ ಶಿಕ್ಷಣ, ಜೇಡಿ ಮಣ್ಣಿನ ಮಾದರಿ ನಿರ್ಮಾಣ ಹಾಗೂ ಚಿತ್ರಕಲೆಯೊಂದಿಗೆ ಜೋಡಿಸಿದರೆ ನಿಮ್ಮ ವಿಚಾರದಲ್ಲಿ ಗೊಂದಲವಿದೆಯೆಂಬುದು ಗೊತ್ತಾಗುತ್ತದೆ. ಚರಖವು ಸೇವಾಸಾಧನ. ರಾಷ್ಟ್ರೀಯ ಸೇವಕರನ್ನು ತರಪೇತು ಮಾಡುವ ರಾಷ್ಟ್ರೀಯ ಶಾಲೆಗಳಲ್ಲಿ ಅಧ್ಯಯನ ಯೋಜನೆಯ ಕೇಂದ್ರ ಬಿಂದು ಚರಖವಾಗಿರಬೇಕು. ಅದು ತನ್ನದೇ ಆದ ಶಾಸ್ತ್ರವನ್ನು ಹೊಂದಿದೆ; ಜನಸಾಮಾನ್ಯ ಸ್ಥಿತಿಯನ್ನು ಸುಧಾರಿಸುವ ಸಾಧನದ ಜ್ಞಾನವನ್ನು ಕೊಡುತ್ತದೆ. ಯಂತ್ರ ಕೌಶಲವನ್ನು ಕಲಿಸುವ ಹಾಗೂ ಒಳ್ಳೆಯ ಕದಿರುಗಳನ್ನು ತಯಾರಿಸುವ ಒಂದಾದರೂ ರಾಷ್ಟ್ರೀಯ ಸಂಸ್ಥೆ ಇಲ್ಲವೆಂಬುದು ನಿಮಗೆ ಗೊತ್ತೇ? ನೀವು ಯಂತ್ರ ಕೌಶಲ್ಯವನ್ನು ಕಲಿಯುವುದಾದರೆ ಒಳ್ಳೆಯ ಕದಿರನ್ನು ಮಾಡುವುದು ಹೇಗೆ ಮತ್ತು ಕೆಟ್ಟು ಹೋದ ಕದಿರನ್ನು ಸರಿ ಮಾಡುವುದು ಹೇಗೆ ಎಂಬುದನ್ನು ಕಲಿಯುವುದರ ಬಗ್ಗೆ ಪೂರ್ಣ ಗಮನ ಕೊಡಿ. ಉತ್ತಮವಾದ ರಾಟೆಯ ಚಕ್ರದ ಸುತ್ತಳತೆ ಎಷ್ಟು, ಅಚ್ಚಿನಿಂದ ತುದಿಯ ವರೆಗೂ ಇರುವ ಉದ್ದವೆಷ್ಟು, ನಿಮ್ಮ ಕದಿರು ಎಷ್ಟು ಸುತ್ತುಗಳನ್ನು ಸುತ್ತುತ್ತವೆ, ಇತ್ಯಾದಿ ವಿಶಿಷ್ಟ ಸಂಗತಿಗಳನ್ನೂ ನೀವು ತಿಳಿಸಲು ಸಮರ್ಥರಾಗಿರಬೇಕು. ರಾಷ್ಟ್ರೀಯ ಶಾಲೆಯಲ್ಲಿರುವ ಬಡಗಿಯ ಆಸೆ ಅತ್ಯುತ್ತಮವಾದ ಪೆಟ್ಟಿಗೆ ಮಾಡುವುದು ಹೇಗೆ ಎಂಬುದಾಗಿರಬಾರದು; ಅತ್ಯುತ್ತಮವಾದ ಚರಖವನ್ನು ತಯಾರಿಸುವ ಅಭಿಲಾಷೆ ಅವನಲ್ಲಿರಬೇಕು. ಸಂಕ್ಷೇಪವಾಗಿ ಹೇಳುವುದಾದರೆ ನೀವು ಚರಖವನ್ನು ವೈಜ್ಞಾನಿಕವಾಗಿ ಧಾರ್ಮಿಕ ಶ್ರದ್ಧಾಸಕ್ತಿಯಿಂದ ಅಭ್ಯಾಸ ಮಾಡಬೇಕು; ರಾಷ್ಟ್ರೀಯ ವಿಮೋಚನೆಯ ಸಾಧನವನ್ನಾಗಿ ಅದನ್ನು ಅಣಿಗೊಳಿಸುವ ದೃಷ್ಟಿಯಿಂದ ಅಭ್ಯಾಸ ಮಾಡಬೇಕು."

ಖಾಮಗಾಂವ್‌ನಲ್ಲಿ ಅಸ್ಪೃಶ್ಯತೆಯ ಬಗ್ಗೆ ಮಾತನಾಡುತ್ತಾ ಗಾಂಧಿ ಹೀಗೆ ಹೇಳಿದರು. "ರಾಷ್ಟ್ರದ ಹಿತಕ್ಕೆ ಆತಂಕಕಾರಿಯಾದ ಯಾವುದೇ ವಿಷಯವಾದರೂ ಅಸ್ಪೃಶ್ಯವಾಗುತ್ತದೆ; ಆದರೆ ಯಾವ ಮಾನವನೂ ಅಸ್ಪೃಶ್ಯನಲ್ಲ. ನಾಡಿನ ಐದನೇ ಒಂದು ಭಾಗದ ಜನರನ್ನು ಅಸ್ಪೃಶ್ಯರೆಂದು ಕರೆಯುವುದು ಅಮಾನುಷವಾದುದು ಅಥವಾ ಪೈಶಾಚಿಕವಾದುದು ಎಂದು ನನ್ನ ಭಾವನೆ." ಅಕೋಲಾದಲ್ಲಿ ಈ ರೀತಿ ಮಾತನಾಡಿದರು. "ಯಾವ ಶಾಸ್ತ್ರೀಯ ಗ್ರಂಥವೂ ಐದನೆಯ ವರ್ಣದ ಬಗ್ಗೆ ಹೇಳಿಲ್ಲ. ಬ್ರಾಹ್ಮಣನನ್ನೂ ಭಂಗಿಯನ್ನೂ ಸಮಾನವಾಗಿ ಕಾಣು ಎಂದು ಗೀತೆ ಆಜ್ಞೆ ಮಾಡುತ್ತದೆ. ಆದರೂ ಹಿಂದೂಧರ್ಮದ ಮೇಲಿನ ಈ ಕಳಂಕವನ್ನು ಹಾಗೆಯೇ ಇಟ್ಟುಕೊಂಡಿರಲು ಪ್ರಯತ್ನಿ

ಸುತ್ತಿದ್ದೇವೆ; ಇದೇಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಅಸ್ಪೃಶ್ಯರ ಸೇವೆಗಾಗಿಯೇ ಶ್ರದ್ಧಾನಂದರು ತಮ್ಮ ಜೀವನದ ಬಹು ಅಮೂಲ್ಯ ಸಮಯವನ್ನು ಸಮರ್ಪಣೆ ಮಾಡಿದರು. ದಲಿತವರ್ಗದ ಸೇವೆಯಲ್ಲೇ ತಮ್ಮ ಜೀವನವನ್ನು ಸವೆಸಿದರು. ಅಧಾರ್ಮಿಕ ದೃಷ್ಟಿಯನ್ನು ಧರ್ಮದೃಷ್ಟಿಯೆಂದು ಹೇಳುವ ಚಂಡಿತನಕ್ಕೆ ಏನೆಂದು ಹೇಳಬೇಕು? ನಾವು ನಮ್ಮ ಹೃದಯ ಪರಿಶೋಧನೆ ಮಾಡಿಕೊಳ್ಳೋಣ; ಅಲ್ಲಿರುವ ಎಲ್ಲ ಸಂಕುಚಿತ ಭಾವನೆಯನ್ನೂ ನಿರ್ಮೂಲ ಮಾಡೋಣ; ದಕ್ಷಿಣ ಆಫ್ರಿಕಾದಲ್ಲಿ ನಮ್ಮನ್ನು ಶಿಕ್ಷಿಸು ಸುತ್ತಿರುವುದು ಇದಕ್ಕೆ ತಕ್ಕಪ್ರತೀಕಾರವೆಂಬುದನ್ನು ಅರ್ಥಮಾಡಿಕೊಳ್ಳೋಣ. ಇಲ್ಲಿ ನಮ್ಮ ಸಹೋದರರ ಬಗ್ಗೆ ನಾವು ತೋರಿಸುತ್ತಿರುವ ಅನ್ಯಾಯಕರವಾದ ವರ್ತನೆ, ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು ನಮ್ಮ ದೇಶ ಬಾಂಧವರಿಗೆ ತೋರುತ್ತಿರುವ ವರ್ತನೆಗಿಂತ ಕಡಿಮೆಯಾದ್ದೇನಲ್ಲ. ಇದನ್ನು ನಾವು ಅರಿಯಬೇಕು."

ವಿದ್ಯಾವಂತರು ಗಾಂಧಿಯವರ ರಾಜಕಾರಣದಿಂದ ಹೊರತಾಗಿ ದೂರವಿದ್ದು ದರಿಂದ ವಿಚಾರವಿನಿಮಯಕ್ಕೆ ಸಂದರ್ಭವೇ ಇರಲಿಲ್ಲ. ಆದರೆ ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿದ ಪಾರ್ಲಿಮೆಂಟ್ ಸದಸ್ಯ ಸಕ್ಲತ್‌ವಾಲಾ ಅವರು ಗಾಂಧಿಯೊಡನೆ ಯೋತ್ ಮಲ್‌ನಲ್ಲಿ ದೀರ್ಘ ಸಮಾಲೋಚನೆ ನಡೆಸಿದರು. ಸಕ್ಲತ್‌ವಾಲಾ ಹೇಳಿದ್ದನ್ನು ಅವರು ತಾಳ್ಮೆಯಿಂದ ಕೇಳಿದರು. ಅವರ ಮನವಿಯನ್ನು ಯಂಗ್ ಇಂಡಿಯಾದಲ್ಲಿ ಪ್ರಕಟಿಸಿದರು "ಇಲ್ಲ ಹಾಗೂ ಹೌದು" ಎಂಬ ಶೀರ್ಷಿಕೆಯಲ್ಲಿ ಅದಕ್ಕೆ ಉತ್ತರ ಪ್ರಕಟಿಸಿದರು.

"ಸಾಥಿ ಸಕ್ಲತ್‌ವಾಲಾರವರ ಕಳಕಳಿ ಅತಿಶಯವಾದದ್ದು. ಅವರದು ಶುದ್ಧ ಪ್ರಾಮಾಣಿಕತೆ. ಅವರ ತ್ಯಾಗ ಅನುಪಮವಾದದ್ದು. ಬಡವರ ಬಗ್ಗೆ ಅವರ ಅನುಕಂಪ ಪ್ರಶ್ನಾತೀತ ವಾದದ್ದು. ಪ್ರಾಮಾಣಿಕ ದೇಶಭಕ್ತ ಹಾಗೂ ಮಾನವೀಯವಾದಿಯ ತೀವ್ರ ಮನವಿಗೆ ಎಷ್ಟು ಗಮನ ಕೊಡಬೇಕೋ ಅಷ್ಟು ಗಮನವನ್ನು ನಾನು ನೀಡಿದ್ದೇನೆ. ಅವರ ಮನವಿಗೆ 'ಆಗಲಿ' ಎಂದು ಹೇಳಬೇಕೆಂಬ ಇಚ್ಛೆ ನನ್ನಲ್ಲಿ ಎಷ್ಟೇ ತೀವ್ರವಾಗಿದ್ದರೂ ನಾನು ಹಾಗೆ ಹೇಳಲಾರೆ. ಪ್ರಾಮಾಣಿಕತೆಗೆ ಪ್ರತಿಯಾಗಿ ಪ್ರಾಮಾಣಿಕತೆಯನ್ನು ಸಲ್ಲಿಸ ಬೇಕಾದರೆ ಅಥವಾ ನನ್ನ ಸಿದ್ಧಾಂತಕ್ಕನುಗುಣವಾಗಿ ನಾನು ನಡೆದುಕೊಳ್ಳಬೇಕಾದರೆ 'ಇಲ್ಲ' ಎಂದೇ ನಾನು ಹೇಳಬೇಕು. ಅವರ ಮನವಿಗೆ ನನ್ನದೇ ರೀತಿಯಲ್ಲಿ 'ಆಗಲಿ' ಎಂದು ಹೇಳಬಲ್ಲೆ. ಅವರ ಷರತ್ತುಗಳ ಮೇಲೆ ನಾನು ಅವರೊಂದಿಗೆ ಸಹಕರಿಸಬೇಕೆಂಬ ಉತ್ಕಟ ಅಪೇಕ್ಷೆಯ ಹಿನ್ನೆಲೆಯಲ್ಲಿ, ಅವರ ವಾದವು ನನಗೆ ಸರ್ವವಿಧದಲ್ಲೂ ಒಪ್ಪಿಗೆ ಯಾದರೆ ಮಾತ್ರ 'ಆಗಲಿ' ಎಂದು ನಾನು ಹೇಳಬೇಕೆಂಬ ಇಂಗಿತವಿದೆ. ಸುಮ್ಮನೆ ತೃಪ್ತಿ ಗೊಳಿಸುವ ಉದ್ದೇಶದಿಂದ ಅಥವಾ ತೊಂದರೆಯನ್ನು ತಪ್ಪಿಸಿಕೊಳ್ಳುವ ನೆವದಿಂದ 'ಆಗಲಿ' ಎಂದು ಹೇಳುವುದಕ್ಕಿಂತ ಅಂತರಂಗದ ತೀವ್ರ ನಂಬಿಕೆಯಿಂದ 'ಇಲ್ಲ' ಎಂದು ಹೇಳುವುದು ಎಷ್ಟೋ ಉತ್ತಮವಾದದ್ದು.

"ಹೃತ್ಪೂರ್ವಕ ಸಹಕಾರ ನೀಡಬೇಕೆಂಬ ಅಪೇಕ್ಷೆ ಎಷ್ಟೇ ಇದ್ದರೂ ಹಾಗೆ ಮಾಡಲು ಸಾಧ್ಯವಾಗುತ್ತಿಲ್ಲ. ಅವರು ಹೇಳುವ ಸಂಗತಿಗಳು ಕಾಲ್ಪನಿಕವಾದುವು.

ಈ ಕಾಲ್ಪನಿಕ ಸಂಗತಿಗಳಿಗನುಗುಣವಾಗಿ ಅವರು ಮಾಡಿಕೊಂಡಿರುವ ನಿರ್ಧಾರಗಳು ಆಧಾರ ರಹಿತವಾದುವು. ಯಾವ ಸಂಗತಿಗಳು ನಿಜವಾಗಿವೆಯೋ–ನನ್ನ ಮಟ್ಟಿಗೆ–ಅವುಗಳ ವಿಷಪೂರಿತ ಪರಿಣಾಮಗಳನ್ನೂ ನಿರ್ಮೂಲನ ಮಾಡುವುದರಲ್ಲಿ ನನ್ನ ಶಕ್ತಿಯೆಲ್ಲ ಕೇಂದ್ರೀಕೃತವಾಗುತ ದೆ. ನಾವಿಬ್ಬರೂ ಅಜಗಜಾಂತರ ದೂರದಲ್ಲಿದ್ದೇವೆ. ಇದನ್ನು ಹೇಳಲು ವಿಷಾದವಾಗುತ್ತದೆ. ಆದರೆ ನಮ್ಮಿಬ್ಬರಲ್ಲೂ ಒಂದು ಅತಿಶಯವಾದ ಸರಿಸಮಾನ ಅಂಶವಿದೆ. ದೇಶದ ಹಾಗೂ ಮಾನವತೆಯ ಒಳ್ಳಿತನ್ನು ಸಾಧಿಸುವುದ ನಮ್ಮಿಬ್ಬರ ಏಕಮಾತ್ರ ಗುರಿಯಾಗಿದೆ. ನಾವು ಈಗ ಪರಸ್ಪರ ಎದುರು ಬದುರು ದಿಕ್ಕುಗಳಲ್ಲಿ ಹೋಗುತ್ತಿರುವಂತೆ ಕಾಣುತ್ತಿದ್ದರೂ ಒಂದಲ್ಲ ಒಂದು ದಿನ ನಾವು ಸಂಧಿಸುತ್ತೇವೆಂದು ನಿರೀಕ್ಷಿಸುತ್ತೇನೆ. ನನ್ನ ತಪ್ಪನ್ನು ಕಂಡುಕೊಂಡಾಗ ಸೂಕ್ತ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆಂಬ ಭರವಸೆ ಕೊಡುತ್ತೇನೆ. ಈ ಮಧ್ಯೆ ನನ್ನ ತಪ್ಪು–ನಾನು ಅದನ್ನು ತಪ್ಪು ಎಂದು ಮಾನ್ಯ ಮಾಡುವುದಿಲ್ಲ–ನನ್ನ ರಕ್ಷಾಕವಚವಾಗಿರಬೇಕು; ನನ್ನನ್ನು ಸಂತೈಸಬೇಕು.

"ಅಪೇಕ್ಷೆಗಳನ್ನು ಹೆಚ್ಚಿಸಿಕೊಂಡು ಅವುಗಳ ಪೂರೈಕೆಗೆ ಯಂತ್ರಗಳ ಸಹಾಯವನ್ನು ಪಡೆಯುವುದರಿಂದ ಪ್ರಪಂಚವು ತನ್ನ ಗುರಿಯತ್ತ ಒಂದು ಹೆಜ್ಜೆಯಾದರೂ ಮುಂದೆ ಹೋಗುತ್ತದೆಯೆಂದು ನಾನು ಭಾವಿಸುವುದಿಲ್ಲ. ನನಗೂ ಸಕ್ಲತ್‌ವಾಲಾರಿಗೂ ಇರುವ ಭಿನ್ನಾಭಿಪ್ರಾಯ ಅದು. ಆಧುನಿಕ ನೂಕುನುಗ್ಗಲು ಸಾಥಿ ಸಕಲತ್‌ವಾಲಾಗೆ ತುಂಬಾ ಹಿಡಿಸುತ್ತದೆ. ದೂರ ಮತ್ತು ಕಾಲವನ್ನು ನಾಶಗೊಳಿಸುವ ಹುಚ್ಚು ಆಸೆಯನ್ನೂ ಮೃಗಗಳಂತೆ ಸ್ವೇಚ್ಛಾಭಿಲಾಷೆಗಳನ್ನಿಟ್ಟುಕೊಳ್ಳುವುದನ್ನೂ ಅವುಗಳ ತೃಪ್ತಿಗಾಗಿ ಭೂಮಿಯ ಒಂದು ಕೊನೆಯಿಂದ ಮತ್ತೊಂದು ಕೊನೆಗೆ ಹೋಗುವುದನ್ನೂ ನೋಡಿದರೆ ನನಗೆ ಅಸಹ್ಯವಾಗುತ್ತದೆ. ಇದನ್ನೆಲ್ಲ ನಾನು ಹೃತ್ಪೂರ್ವಕವಾಗಿ ತಿರಸ್ಕರಿಸುತ್ತೇನೆ. ಆಧುನಿಕ ನಾಗರಿಕತೆಯು ಇವೆಲ್ಲವನ್ನು ಪ್ರತಿನಿಧಿಸುವುದಾದರೆ–ಅದು ಪ್ರತಿನಿಧಿಸುತ್ತದೆ ಎಂಬುದು ನನ್ನ ತಿಳುವಳಿಕೆ–ಅದನ್ನು ನಾನು ಪೈಶಾಚಿಕ ಎನ್ನುತ್ತೇನೆ. ಅಂತೆಯೇ ಈ ನಾಗರಿಕತೆಯನ್ನು ಪ್ರತಿಪಾದಿಸುವ ಈಗಿನ ಸರ್ಕಾರದ ವ್ಯವಸ್ಥೆಯೂ ಪೈಶಾಚಿಕವೇ. ಬಡವರ ಏಳಿಗೆಗಾಗಿ ಅದು ಕೈಗೊಳ್ಳುವ ಯೋಜನೆಗಳಲ್ಲಿ ನನಗೆ ನಂಬಿಕೆ ಇಲ್ಲ. ಅದರ ನಾಣ್ಯ ಪದ್ಧತಿಯಲ್ಲಿ ನಂಬಿಕೆಯಿಲ್ಲ. ಅದರ ಸೈನ್ಯ ಹಾಗೂ ನೌಕಾಬಲದಲ್ಲೂ ನಂಬಿಕೆಯಿಲ್ಲ. ನಾಗರಿಕತೆಯ ಹೆಸರಿನಲ್ಲಿ ಹಾಗೂ ತನ್ನ ಸ್ವಂತ ಸುರಕ್ಷತೆಗಾಗಿ ಈ ಸರ್ಕಾರವು ಸತತವಾಗಿ ಜನತೆಯನ್ನು ಸುಲಿಗೆ ಮಾಡಿದೆ. ಜನರನ್ನು ಗುಲಾಮರನ್ನಾಗಿ ಮಾಡಿದೆ. ಪ್ರಬಲರಾದವರಿಗೆ ಪ್ರಶಸ್ತಿಗಳನ್ನೂ ಧನಕನಕಗಳನ್ನೂ ಕೊಟ್ಟು ಭ್ರಷ್ಟಾಚಾರವೆಸಗಿದೆ. ಹೊಗಳಿಕೆಯಿಂದಾಗಲೀ ಧನದಿಂದಾಗಲೀ ಒಲಿಸಿಕೊಳ್ಳಲಾಗದ ಸ್ವತಂತ್ರಪ್ರಿಯ ರಾಷ್ಟ್ರಭಕ್ತರನ್ನು ತನ್ನ ದಬ್ಬಾಳಿಕೆಯಿಂದ ದಮನ ಮಾಡಹತ್ತಿದೆ. ನನಗೆ ಶಕ್ತಿ ಇದ್ದಿದ್ದರೆ ಇಂದೇ ಈ ವ್ಯವಸ್ಥೆಯನ್ನು ನಾಶಮಾಡುತ್ತಿದ್ದೆ. ಅದನ್ನು ನಾಶ ಮಾಡಲು ಸಾಧ್ಯವೆಂದು ನನ್ನಲ್ಲಿ ನಂಬಿಕೆ ಮೂಡಿದರೆ ಮಾರಕಾಸ್ತ್ರಗಳನ್ನು ಉಪ

ಯೋಗಿಸಲೂ ಸಿದ್ಧ. ನಾನು ಈ ವಿಧಾನವನ್ನು ಅನುಸರಿಸದೆ ಸಂಯಮದಿಂದ ಇದ್ದೇನೆ. ಕಾರಣ, ಈ ಅಸ್ತ್ರಗಳು ಇಂದಿನ ಆಡಳಿತಗಾರರನ್ನೇನೋ ನಾಶಮಾಡಬಹುದು. ಆದರೆ ಇದೇ ವ್ಯವಸ್ಥೆಯನ್ನು ಅದು ಪೋಷಿಸುತ್ತದೆ. ಯಾರು ವ್ಯಕ್ತಿಗಳ ನಡವಳಿಕೆಗಳನ್ನು ದಮನ ಮಾಡದೆ ವ್ಯಕ್ತಿಗಳನ್ನೇ ನಾಶಮಾಡಲು ಹೋಗುತ್ತಾರೋ ಅವರದು ತಪ್ಪುಗ್ರಹಿಕೆಯಾಗಿರುತ್ತದೆ. ವ್ಯಕಿ ಗಳೊಂದಿಗೆ ಅವರ ನಡವಳಿಕೆಗಳೂ ಹೋಗಿಬಿಡುತ್ತವೆಂದು ಅವರು ಭಾವಿಸುತಾ ರೆ. ಅವರಿಗೆ ಕೆಡುಕಿನ ಬುಡ ಯಾವುದು ಎಂಬ ಅರಿವಿಲ್ಲ.

"ಆತ್ಮರಹಿತವಾದ ವ್ಯವಸ್ಥೆಯನ್ನು ಹಿಂಸೆಯ ವಿಧಾನದಲ್ಲಿ ಸುಧಾರಿಸಲು ಆಗುವುದಿಲ್ಲ. ಹಾಗೆ ಮಾಡಲು ಹೋದರೆ ನಾವು ಆತ್ಮನಾಶ ಮಾಡಿಕೊಳ್ಳುತ್ತೇವೆ. ಆ ವ್ಯವಸ್ಥೆಯ ಪಿಡುಗಿಗೆ ನಾವು ಸಿಕ್ಕಿಕೊಳ್ಳದೆ ಅದನ್ನು ಸುಧಾರಿಸಬಹುದು. ಅಂದರೆ ಅಸಹಕಾರದ ಮೂಲಕ– ಈ ಪೈಶಾಚಿಕ ಪ್ರಭುತ್ವವು ಒಡ್ಡುವ ಬಲೆಗೆ ಬೀಳದೆ ಅದಕ್ಕೆ 'ಇಲ್ಲ' ಎಂದು ಸ್ಪಷ್ಟವಾಗಿ ಹೇಳುವುದರ ಮೂಲಕ ಅದನ್ನು ಸುಧಾರಿಸಬಹುದು. ೧೯೨೦ರ ಚಳವಳಿಯ ಉದ್ದೇಶ ಅದೇ ಆಗಿತ್ತು. ಆ ಚಳವಳಿಗೆ ಸ್ವಲ್ಪ ತಡೆ ಬಂತು. ಆದರೆ ಅದು ಸತ್ತಿಲ್ಲ. ನಾನು ಕೊಟ್ಟಿದ್ದ ಆಶ್ವಾಸನೆ ಷರತ್ತಿನ ಆಶ್ವಾಸನೆಯಾಗಿತ್ತು. ಷರತ್ತುಗಳು ಸರಳವೂ ಸುಲಭವೂ ಆಗಿದ್ದುವು. ಆದರೆ ಚಳವಳಿಯ ನಾಯಕತ್ವ ವಹಿಸಿದ್ದವರಿಗೆ ಅವು ಕಷ್ಟವಾಗಿ ತೋರಿದುವು.

"ಸಾಥಿ ಸಕ್ಲತ್‌ವಾಲಾರವರು ಯಾವುದನ್ನು ನನ್ನ ತಪ್ಪು ಮತ್ತು ವಿಫಲತೆಯೆಂದು ಕರೆಯುತ್ತಾರೋ ಅದನ್ನು ನಾನು ನನ್ನ ಶಕ್ತಿಯ ಹಾಗೂ ನಂಬಿಕೆಯ ಪ್ರದರ್ಶನ ಎಂದು ಭಾವಿಸುತ್ತೇನೆ. ಅದು ತಪ್ಪಾಗಿರಬಹುದು. ಆದರೆ ಸತ್ಯವೇ ಶಾಶ್ವತ ಎಂಬ ನಂಬಿಕೆ ಎಲ್ಲಿಯ ವರೆಗೆ ನನ್ನಲ್ಲಿ ಇರುತ್ತದೋ ಅಲ್ಲಿಯ ವರೆಗೆ ನನ್ನ ತಪ್ಪೇ ನನಗೆ ಚೈತನ್ಯ ಕೊಡುತ್ತದೆ. ಬಾರ್ಡೋಲಿಯಲ್ಲಿ ನಾನು ಹಿಮ್ಮೆಟ್ಟಿದ್ದು ವಿವೇಕಪೂರ್ಣವಾದ ಕೆಲಸ ಎಂದು ಭಾವಿಸುತ್ತೇನೆ. ಅದರಿಂದ ದೇಶಕ್ಕೆ ಅತ್ಯುತ್ತಮ ಸೇವೆ ಸಲ್ಲಿಸಿದಂತಾಯಿತು. ಆ ನಿರ್ಧಾರದಿಂದ ಸರ್ಕಾರ ಮತ್ತಷ್ಟು ದುರ್ಬಲವಾಯಿತು. ವೈಸರಾಯರಿಗೆ ನಾನು ಸಲ್ಲಿಸಿದ್ದ ಅಂತಿಮ ಎಚ್ಚರಿಕೆಯ ಪತ್ರದಲ್ಲಿ ತಿಳಿಸಿದ್ದ ಅಂಶಗಳನ್ನು ಚೌರಿ ಚೌರ ಪ್ರಕರಣದ ಅನಂತರವೂ ಕಾರ್ಯಗತ ಮಾಡಲು ಹೊರಟಿದ್ದರೆ ಸರ್ಕಾರವು ತಾನು ಕಳೆದುಕೊಂಡಿದ್ದ ಸ್ಥಾನವನ್ನು ಮತ್ತೆ ಪಡೆದುಕೊಳ್ಳುತ್ತಿತ್ತು.

"ದಕ್ಷಿಣ ಆಫ್ರಿಕಾದ ಚಳವಳಿ ವಿಫಲವಾಯಿತೆಂದು ನನ್ನ ಸಾಥಿ ಹೇಳುವ ಮಾತು ತಪ್ಪು. ಹಾಗಿದ್ದ ಪಕ್ಷದಲ್ಲಿ ನನ್ನ ಇಡೀ ಜೀವನವೇ ವಿಫಲವಾಯಿತೆಂದು ಬರೆಯಬೇಕಾಗುತ್ತದೆ. ಮತ್ತು ಅವರ ಪಂಥಕ್ಕೆ ನಾನು ಸೇರಬೇಕೆಂಬ ಅವರ ಆಹ್ವಾನಕ್ಕೂ ಅರ್ಥವಿಲ್ಲವಾಗುತ್ತದೆ. ನನ್ನ ಜೀವನದ ಧ್ಯೇಯಕ್ಕೆ ದಕ್ಷಿಣ ಆಫ್ರಿಕಾ ಚಾಲನೆ ಕೊಟ್ಟಿತು. ಕಳೆದ ಯುದ್ಧದ ಸಮಯದಲ್ಲಿ ಆಂಬುಲೆನ್ಸ್ ಪಡೆಯ ಸದಸ್ಯರಾಗಿ ಸೇರಲು ನಾನು

ಮತ್ತು ನನ್ನ ಜೊತೆಗಾರರು ಮುಂದೆ ಬಂದದ್ದು ತಪ್ಪು ಎಂದು ಭಾವಿಸುವುದಿಲ್ಲ. ಕಾರಣ, ಆಗ ನನ್ನ ನಂಬಿಕೆಗಳು ಹಾಗಿದ್ದುವು.

"ಈ ಮಹಾಶಾಸಕ, ಆತುರದಲ್ಲಿದ್ದಾರೆ. ವಸ್ತುಸ್ಥಿತಿಯನ್ನು ಅರಿಯಲು ಅವರಿಗೆ ಅಸಡ್ಡೆ. ಖಾದಿ ಚಳವಳಿ ಇಳಿಮುಖವಾಗಿಲ್ಲವೆಂದು ಅವರಿಗೆ ತಿಳಿಸ ಬಯಸುತ್ತೇನೆ. ಕಳೆದ ವರ್ಷ ಅದರ ಸಾಧನೆ ೧೯೨೦ರಲ್ಲಿ ಇದ್ದುದಕ್ಕಿಂತ ಇಪ್ಪತ್ತುಪಟ್ಟು ಹೆಚ್ಚಾಗಿತ್ತು. ಈಗ ಅದು ೧೫೦೦ ಹಳ್ಳಿಗಳಲ್ಲಿರುವ ೫೦,೦೦೦ ನೂಲುವವರಿಗೆ ಸಹಾಯ ನೀಡಿದೆ. ಅಲ್ಲದೆ ನೇಯ್ಗೆಯವರು, ದೋಭಿಗಳು, ಅಚ್ಚುಮಾಡುವವರು, ಬಣ್ಣ ಹಾಕುವವರು ಮತ್ತು ದರ್ಜಿಗಳು—ಈ ಎಲ್ಲ ಜನರಿಗೂ ಸಹಾಯವಾಗಿದೆ.

"ಖದ್ದರ್‌ನ ಧ್ಯೇಯವೇನೆಂದು ಸಕ್ಲತ್‌ವಾಲಾ ಕೇಳುತ್ತಾರೆ. ಅದರ ಧ್ಯೇಯ ಸರಳತೆ; ಕೃತಕತೆಯಲ್ಲ. ಬಡವರ ಭುಜದ ಮೇಲೆ ಅದು ಚೆನ್ನಾಗಿ ಕುಳಿತುಕೊಳ್ಳುತ್ತದೆ. ಶ್ರೀಮಂತರೂ ಅತ್ಯಂತ ಕಲಾಭಿಮಾನಿಗಳೂ ಆದ ಸ್ತ್ರೀ ಪುರುಷರು ಧರಿಸುವಂತಹುದನ್ನು ಮಾಡಬಹುದು. ಹಿಂದೆ ಒಂದು ಕಾಲದಲ್ಲಿ ಅಂತಹ ಬಟ್ಟೆ ತಯಾರಾಗುತ್ತಿತ್ತು. ಅದು ಪುರಾತನ ಕಲೆಯನ್ನೂ ಕುಶಲ ಕೆಲಸಗಳನ್ನೂ ಪುನರುತ್ಥಾನ ಮಾಡುತ್ತದೆ. ಎಲ್ಲ ಯಂತ್ರಗಳನ್ನೂ ನಾಶ ಮಾಡುವ ಉದ್ದೇಶ ಅದಕ್ಕಿಲ್ಲ. ಆದರೆ ಯಂತ್ರಗಳ ಉಪಯೋಗ ವನ್ನು ಕ್ರಮಗೊಳಿಸುತ್ತದೆ. ಹಾನಿಕರವಾದ ಹಾಗೂ ಕಳಪೆಯಾದ ಯಂತ್ರಗಳ ಬೆಳವಣಿಗೆ ಯನ್ನು ತಡೆಗಟ್ಟುತ್ತದೆ. ಯಂತ್ರಗಳನ್ನು ಬಡಜನರಿಗಾಗಿ ಅವರುಗಳ ಕುಟೀರಗಳಲ್ಲೇ ಉಪಯೋಗಿಸುತ್ತದೆ. ರಾಟೆಯೇ ಒಂದು ಸುಂದರವಾದ ಯಂತ್ರ.

"ಬಡವರನ್ನು ಶ್ರೀಮಂತರ ಬಂಧನದಿಂದ ವಿಮೋಚನೆ ಮಾಡುತ್ತದೆ. ಖದ್ದರ್ ವರ್ಗಗಳ ಹಾಗೂ ಜನಸಾಮಾನ್ಯರ ಮಧ್ಯೆ ಅದು ನೈತಿಕಹಾಗೂ ಆಧ್ಯಾತ್ಮಿಕ ಸಂಬಂಧ ವನ್ನು ಬೆಳಸುತ್ತದೆ. ಶ್ರೀಮಂತರು ಬಡವರಿಂದ ಏನನ್ನು ಕಸಿದುಕೊಂಡಿರುವರೋ ಅದರಲ್ಲಿ ಸ್ವಲ್ಪ ಭಾಗವನ್ನು ಮತ್ತೆ ಅವರಿಗೆ ವಾಪಸು ಸಲ್ಲಿಸುತ್ತದೆ.

"ಖದ್ದರ್ ಯಾವೊಂದು ಕುಟೀರ ಉದ್ಯೋಗದ ಸ್ಥಾನವನ್ನೂ ಆಕ್ರಮಿಸಿ ಕೊಳ್ಳುವುದಿಲ್ಲ. ಬದಲಾಗಿ, ಅದು ಇತರ ಎಲ್ಲ ಗ್ರಾಮ ಕೈಗಾರಿಕೆಗಳಿಗೂ ಕೇಂದ್ರವಾಗಿದೆ ಯೆಂಬುದು ನಿತ್ಯವೂ ಮನವರಿಕೆಯಾಗುತ್ತಿರುವ ಸಂಗತಿ. ವಿಧವೆಯ ಭಗ್ನ ಜೀವನಕ್ಕೆ ಖದ್ದರ್ ಆಶಾಕಿರಣವಾಗಿದೆ. ಹೆಚ್ಚು ಹಣ ಸಂಪಾದಿಸಲು ಆಕೆಗೆ ಸಾಧ್ಯವಾಗುವುದಾದರೆ ಅದನ್ನು ತಪ್ಪಿಸುವುದಿಲ್ಲ. ಇನ್ನೂ ಉತ್ತಮವಾದ ಉದ್ಯೋಗ ಬಯಸಿ ಹೋಗು ವವರನ್ನು ಅದು ತಡೆಯುವುದಿಲ್ಲ. ಗೌರವಯುತವಾದ ಉದ್ಯೋಗ ಬೇಕೆಂದು ಬಯಸುವವರಿಗೆ ಅದನ್ನು ಖದ್ದರ್ ಒದಗಿಸುತ್ತದೆ. ರಾಷ್ಟ್ರದಲ್ಲಿ ವ್ಯರ್ಥವಾಗಿ ಕಳೆಯು ಲಾಗುತ್ತಿರುವ ಸಮಯವನ್ನು ಅದು ಉಪಯೋಗಿಸುತ್ತದೆ. ಇನ್ನೂ ಹೆಚ್ಚು ಲಾಭ ದಾಯಕವಾದ ಕೆಲಸವನ್ನು ಕೊಡುವವರ ಬಗ್ಗೆ ಈ ಮಾನ್ಯಮಿತ್ರರು ಹೇಳುತ್ತಾರೆ. ಆ ಕೆಲಸವನ್ನು ಖದ್ದರ್ ತಾನೇ ತಾನಾಗಿ ಮಾಡುತ್ತದೆಂಬುದನ್ನು ಆತ ಅರಿಯಬೇಕು.

ಕೆಲವರ ಜೇಬಿಗೆ ರೂಪಾಯಿಗಳನ್ನು ಹಾಕದೆ ಬಡವರ ಜೇಬುಗಳಿಗೆ ಆಣೆಗಳನ್ನು ಹಾಕಲು ಅದಕ್ಕೆ ಸಾಧ್ಯವಿಲ್ಲ. ಆದರೆ ಪಟ್ಟಣದಲ್ಲಿ ಕೆಲಸವನ್ನಾರಂಭಿಸುವವರು ಒಳ್ಳೆಯ ಕೆಲಸವನ್ನೇನೋ ಮಾಡುತ್ತಿದ್ದಾರೆ. ಆದರೆ ಅವರು ಸಮಸ್ಯೆಯ ಅಂಚನ್ನು ಮುಟ್ಟು ತ್ತಾರೆ ಅಷ್ಟೆ. ಖದ್ದರ್ ಆದರೆ ಸಮಸ್ಯೆಯ ಕೇಂದ್ರವನ್ನೇ ಮುಟ್ಟುತ್ತದೆ. ಆದುದರಿಂದ ಅದು ಎಲ್ಲವನ್ನೂ ಅಳವಡಿಸಿಕೊಳ್ಳಲು ಸಾಧ್ಯ.

"ಈ ತಾಳ್ಮೆಗೇಡಿ ಕಮ್ಯೂನಿಸ್ಟರ ಪಾತ್ರ ಕೇವಲ ನಗರಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ. ಅದರಿಂದಾಗಿ ಅದು ಭಾರತವನ್ನು ಉಪೇಕ್ಷಿಸುತ್ತದೆ. ಏಳು ಲಕ್ಷ ಹಳ್ಳಿಗಳಲ್ಲಿ ಕಾಣಬರುವ ಭಾರತದ ಸ್ಥಿತಿಗತಿಗಳನ್ನು ಪರಿಗಣಿಸುವುದಿಲ್ಲ. ಈಗಿನ ಆರು ಆಧುನಿಕ ನಗರಗಳು ಅಸಹಜವಾದುವುಗಳು. ಅವುಗಳು ಈಗ ಗ್ರಾಮಸ್ಥರ ರಕ್ತ ಹೀರುವ ಕೆಟ್ಟ ಉದ್ದೇಶದ ಸಾಧನವಾಗಿವೆ. ಇದನ್ನು ಬದಲಾಯಿಸಿ ಹಳ್ಳಿಗಳಿಗೂ ಪಟ್ಟಣಗಳಿಗೂ ಮಧ್ಯೆ ಉತ್ತಮ ಸಂಬಂಧವನ್ನು ಸ್ಥಾಪಿಸುವುದು ಖದ್ದರ್‌ನ ಉದ್ದೇಶ. ಕರ್ತವ್ಯ ವಿಮುಖರಾದ ದುರಹಂಕಾರದ ಜನರನ್ನೊಳಗೊಂಡ ನಗರಗಳು ಗ್ರಾಮಸ್ಥರ ಜೀವನಕ್ಕೂ ಸ್ವಾತಂತ್ರ್ಯಕ್ಕೂ ಪಿಡುಗಾಗಿವೆ.

"ಖದ್ದರ್‌ಗೆ ವ್ಯವಸ್ಥಾಪಕ ಶಕ್ತಿ ವ್ಯಾಪಕವಾಗಿದೆ. ಏಕೆಂದರೆ, ಅದು ಸ್ವಯಂ ವ್ಯವಸೆ ಯಾಗತಕ್ಕದ್ದು ಮತ್ತು ಅದರ ಪರಿಣಾಮ ಭಾರತಕ್ಕೆಲ್ಲ ತಟ್ಟುತ್ತದೆ. ಮೇಲಿನ ಸ್ಥಾನದಿಂದ ಖದ್ದರ್ ಕೆಳಗೆ ಉರುಳುವುದಾದಲ್ಲಿ ಅದು ದುರಂತದ ಸಂಗತಿ. ಅದನ್ನು ಲಕ್ಷಾಂತರ ಹಸಿದ ಜನರ ಹಾಗೂ ಸಹಸ್ರಾರು ಮಂದಿ ಮಧ್ಯಮವರ್ಗದ ಸ್ತ್ರೀ ಪುರುಷರ ಮನಃಪೂರ್ವಕ ಸಹಕಾರದಿಂದ ವ್ಯವಸ್ಥೆಮಾಡಬೇಕು. ಅದು ಯಶಸ್ವಿ ಯಾದರೆ ಶಾಂತಿಯುತ ಮಾರ್ಗದಲ್ಲಿ ಸಾಧಿಸಿದ ಉತ್ತಮ ವ್ಯವಸ್ಥೆಯಾಗುತ್ತದೆ. ಅಡಿಗೆ ಮಾಡುವ ಕಲೆಯನ್ನು ಪುನರುಜ್ಜೀವನಗೊಳಿಸಬೇಕಾಗಿದ್ದರೆ ಮತ್ತು ಇದೇ ತರಹೆ ವ್ಯವಸ್ಥೆ ಬೇಕಾಗುವುದಾದರೆ, ಖದ್ದರ್‌ಗೆ ನಾನು ಯಾವ ಯೋಗ್ಯತೆಯಿದೆ ಯೆಂದು ಹೇಳುತ್ತೇನೋ ಅದೇ ಯೋಗ್ಯತೆ ಅದಕ್ಕೂ ಇದೆ ಅನ್ನುತ್ತೇನೆ.

"ಜಮ್‌ಶೆಡ್‌ಪುರದಲ್ಲಿ ಕಾರ್ಮಿಕರ ಮಧ್ಯೆ ನಾನು ಮಾಡಿದ ಕೆಲಸದ ಬಗ್ಗೆ ನನ್ನ ಕಮ್ಯೂನಿಸ್ಟ್ ಮಿತ್ರರು ಆಕ್ಷೇಪಣೆ ಮಾಡುತ್ತಾರೆ. ಅಲ್ಲಿ ನಾನೇನೂ ತಾತಾರವರಿಂದ ಬಿನ್ನವತ್ತಳೆ ಸ್ವೀಕರಿಸಲಿಲ್ಲ. ಕೆಲಸಗಾರರು ನೀಡಿದ ಬಿನ್ನವತ್ತಳೆಯನ್ನು ಸ್ವೀಕರಿಸಿದೆ. ಆದರೆ ಅಂದಿನ ಸಭೆಯ ಅಧ್ಯಕ್ಷತೆಯನ್ನು ದಿವಂಗತ ರತನ್ ತಾತಾ ವಹಿಸಿದ್ದರು. ಅದಕ್ಕೋಸ್ಕರವೇ ಆತನ ಆಕ್ಷೇಪಣೆ ಇರಬೇಕು. ಈ ಗೌರವಕ್ಕಾಗಿ ನಾನು ನಾಚಿಕೆಪಟ್ಟು ಕೊಳ್ಳಬೇಕಾಗಿಲ್ಲ. ತಾತಾರವರು ಮಾನವೀಯ ಹಾಗೂ ಸಹಾನುಭೂತಿಪರ ವ್ಯಕ್ತಿ ಯಾಗಿ ನನಗೆ ಕಂಡರು ಕಾರ್ಮಿಕರು ಮಾಡಿಕೊಂಡಿದ್ದ ಮನವಿಗಳನ್ನೆಲ್ಲ ಅವರು ತಕ್ಷಣವೇ ಪುರಸ್ಕರಿಸಿದರು, ಎಂಬುದು ನನ್ನ ಭಾವನೆ. ಆಗಿನ ಒಪ್ಪಂದವನ್ನು ಗೌರವ ಯುತವಾಗಿ ಈಡೇರಿಸಿದುದಾಗಿ ನಾನು ಕೇಳಿದ್ದೇನೆ. ನನ್ನ ಕೆಲಸಕ್ಕಾಗಿ ಶ್ರೀಮಂತರನ್ನೂ ಬಡವರನ್ನೂ ಕೇಳಿ ಅವರಿಂದ ಹಣ ಪಡೆಯುತ್ತಿದ್ದೇನೆ. ಶ್ರೀಮಂತರು ಸಂತೋಷ

ದಿಂದಲೇ ದಾನ ಮಾಡುತ್ತಿದ್ದಾರೆ. ಇದು ನನ್ನ ವೈಯಕ್ತಿಕ ಜಯವೇನಲ್ಲ. ಅದು ಅಹಿಂಸೆಗೆ ಆದ ಜಯ. ಎಷ್ಟೇ ಅಸಮರ್ಪಕ ಎನಿಸಿದರೂ ನಾನು ಅಹಿಂಸೆಯನ್ನು ಪ್ರತಿನಿಧಿಸಲು ಯತ್ನಿಸುತ್ತಿದ್ದೇನೆ. ಅದಕ್ಕೆ ಸಂದ ಜಯ ಇದು. ನಾನು ಯಾರ ತತ್ತ್ವಗಳನ್ನೂ ಧೋರಣೆಗಳನ್ನೂ ವಿರೋಧಿಸುತ್ತೇನೋ ಅವರುಗಳ ಪ್ರೀತಿ ಮತ್ತು ವಿಶ್ವಾಸವನ್ನು ಉಳಿಸಿಕೊಂಡಿದ್ದೇನೆಂಬುದು ನನಗೆ ಎಂದೆಂದಿಗೂ ಸಮಾಧಾನ ಕೊಡುವ ವಿಷಯ. ದಕ್ಷಿಣ ಆಫ್ರಿಕಾದ ಜನರು ನನ್ನಲ್ಲಿ ವೈಯಕ್ತಿಕವಾಗಿ ನಂಬಿಕೆ ಇಟ್ಟಿದ್ದರು. ಸ್ನೇಹ ಹಸ್ತ ನೀಡಿದ್ದರು. ಬ್ರಿಟಿಷರ ನೀತಿಯನ್ನೂ ವ್ಯವಸ್ಥೆಯನ್ನೂ ನಾನು ಎಷ್ಟು ಬಗೆಯಲ್ಲಿ ಖಂಡಿಸುತ್ತಿದ್ದರೂ ನಾನು ಅನೇಕ ಮಂದಿ ಆಂಗ್ಲ ಮಹನೀಯರ ಹಾಗೂ ಮಹಿಳೆಯರ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದೇನೆ. ಆಧುನಿಕ ಐಹಿಕ ನಾಗರಿಕತೆಯನ್ನು ನಾನು ತೀವ್ರವಾಗಿ ಖಂಡಿಸಿದ್ದರೂ ಯೂರೋಪ್ ಅಮೆರಿಕಾ ಖಂಡಗಳಲ್ಲಿ ನನ್ನ ಮಿತ್ರರ ಸಂಖ್ಯೆ ಏರುತ್ತಲೇ ಇದೆ. ಅದೆಲ್ಲ ಅಹಿಂಸೆಗೆ ದೊರೆತ ಜಯ. ಕಡೆಯದಾಗಿ, ನಗರಗಳಲ್ಲಿರುವ ಕಾರ್ಮಿಕರ ವಿಷಯ. ಆ ವಿಚಾರದಲ್ಲಿ ಯಾವ ತಪ್ಪು ಗ್ರಹಿಕೆಯೂ ಬೇಡ. ಕಾರ್ಮಿಕರ ಸಂಘಟನೆಗೆ ನನ್ನ ವಿರೋಧವಿಲ್ಲ. ಇನ್ನೆಲ್ಲ ವಿಷಯಗಳ ಬಗ್ಗೆ ಹೇಳಿರುವ ಮಾತು ಇದಕ್ಕೂ ಅನ್ವಯಿಸುತ್ತದೆ. ಕಾರ್ಮಿಕರ ಸಂಘಟನೆ ಭಾರತೀಯ ಮಾದರಿಯಲ್ಲಿ ಆಗಬೇಕು. ನಾನು ಅದನ್ನೇ ಮಾಡುತ್ತಿದ್ದೇನೆ. ಭಾರತೀಯ ಕಾರ್ಮಿಕ ಇದನ್ನು ಸ್ವಾಭಾವಿಕವಾಗಿಯೇ ತಿಳಿದಿದ್ದಾನೆ. ಬಂಡವಾಳವು ಕಾರ್ಮಿಕನ ಶತ್ರು ಎಂದು ನಾನು ಭಾವಿಸುವುದಿಲ್ಲ. ಅವೆರಡರ ಸಮನ್ವಯ ಸಾಧ್ಯವಿದೆ. ದಕ್ಷಿಣ ಆಫ್ರಿಕಾ, ಚಂಪಾರಣ್ಯ ಅಥವಾ ಅಹಮದಾಬಾದಿನಲ್ಲಿ ನಾನು ಕಾರ್ಮಿಕರ ಸಂಘಟನೆ ಮಾಡಿದ್ದು ಬಂಡವಾಳಗಾರರ ಮೇಲಿನ ದ್ವೇಷಭಾವದಿಂದಲ್ಲ. ಹೋರಾಟ ನಡೆದ ಸಂದರ್ಭದಲ್ಲೆಲ್ಲಾ ಅಗತ್ಯವಿದ್ದಷ್ಟು ಮಟ್ಟಿಗೆ ಹೋರಾಟ ನಡೆಯಿತು. ಅದು ಸಂಪೂರ್ಣ ಯಶಸ್ವಿಯೂ ಆಯಿತು. ನನ್ನ ಆದರ್ಶ, ಸಮಾನ ವಿತರಣೆ. ಆದರೆ ನಾನು ಕಂಡಂತೆ ಅದು ಸಾಧ್ಯವಾಗದ ಮಾತು. ಆದುದರಿಂದ ನ್ಯಾಯೋಚಿತ ಹಂಚಿಕೆಗೆ ನಾನು ಶ್ರಮಿಸುತ್ತೇನೆ. ಅದನ್ನು ಖದ್ದರ್‌ನ ಮೂಲಕ ಸಾಧಿಸಲು ಯತ್ನಿಸುತ್ತೇನೆ. ಅದು ಸಾಧಿತವಾದರೆ ಬ್ರಿಟಿಷರ ಶೋಷಣೆಯನ್ನು ಅದರ ಉಗಮ ಸ್ಥಾನದಲ್ಲೇ ಭಗ್ನಗೊಳಿಸಲು ಸಾಧ್ಯವಾಗುತ್ತದೆ. ಅದರಿಂದ ಬ್ರಿಟಿಷರೊಡನಿರುವ ಸಂಬಂಧ ಪರಿಶುದ್ಧವಾಗುತ್ತದೆ. ಆ ದೃಷ್ಟಿಯಲ್ಲಿ ಖದ್ದರ್‌ನಿಂದ ಸ್ವರಾಜ್ಯ ಸಿದ್ಧಿಸುತ್ತದೆ.

"ಮಹಾತ್ಮನನ್ನು ಆತನ ವಿಧಿಗೆ ಬಿಡುತ್ತೇನೆ. ಯಾರಾದರೂ ನನ್ನನ್ನು ಮಹಾತ್ಮಾ ಎಂದು ಕರೆದರೆ ಅಥವಾ ನನ್ನ ಪಾದಗಳನು ಮುಟ್ಟಿದರೆ ಅದನ್ನು ಅಪರಾಧ ಎಂದು ತಿಳಿಸುವ ಮಸೂದೆಯನ್ನು ತಂದರೆ ಅದಕ್ಕೆ ನಾನು ಬೆಂಬಲ ಕೊಡುತ್ತೇನೆ. ನಾನು ಅಸಹಕಾರಿಯಾದರೂ ಪರವಾಗಿಲ್ಲ, ಈ ವಿಷಯದಲ್ಲಿ ನಾನು ಸಹಕಾರ ನೀಡುತ್ತೇನೆ. ನಾನೇ ಈ ಕಟ್ಟಳೆಯನ್ನು ಜಾರಿಗೆ ತರಲು ಸಾಧ್ಯವಿರುವೆಡೆ—ಅಂದರೆ ಆಶ್ರಮದಲ್ಲಿ—ಅದನ್ನು ಅಪರಾಧವೆಂದೇ ಪರಿಗಣಿಸಲಾಗಿದೆ."

# ಯಾತ್ರಿಕನ ಮುನ್ನಡೆ

## ೧೯೨೭

ಬೀರಾರ್‌ನ ಪ್ರವಾಸದ ಕಡೆಯ ಘಟ್ಟದಲ್ಲಿ ಮಲ್ಕಾಪುರಕ್ಕೆ ಬಂದರು. ಅಲ್ಲಿ ಗಾಂಧಿಯವರನ್ನು ನೋಡಿಕೊಳ್ಳಲು ದಸ್ತನೆ ಎಂಬ ಕಾರ್ಯಕರ್ತನನ್ನು ಜಮ್ನಾಲಾಲ್ ಬಜಾಜ್ ನೇಮಿಸಿದ್ದರು. ಖಾನ್‌ದೇಶದ ಕಾರ್ಯಕರ್ತರಾದ ದಸ್ತನೆ ಹಿಂದೆ ವಕೀಲರಾಗಿದ್ದವರು. ಖಾದಿ ಉತ್ಪನ್ನಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲೂ ಕಾರ್ಯಕರ್ತರಿಗೆ ತರಪೇತು ಕೊಡುವದಕ್ಕಾಗಿ ಪಿಂಪ್ರಿಯಲ್ಲಿ ಅವರು ಒಂದು ಆಶ್ರಮವನ್ನು ಸ್ಥಾಪಿಸಿದ್ದರು. ದಸ್ತನೆ ಮತ್ತು ಥಕ್ಕರ್‌ರವರು ಹಳ್ಳಿಹಳ್ಳಿಗೂ ಖಾದಿಯ ಸಂದೇಶವನ್ನು ಕೊಂಡೊಯ್ದಿದ್ದರು. ಅವರುಗಳ ಶ್ರಮ ಫಲದಾಯಕವಾಗಿತ್ತು. ಚೋಪ್ರಾದಲ್ಲಿ ಗಾಂಧಿಯವರಿಗೆ ಒಳ್ಳೆಯ ಮೊತ್ತದ ನಿಧಿಯನ್ನರ್ಪಿಸಿದ್ದಲ್ಲದೆ ೧,೪೦,೦೦೦ ಗಜಗಳಷ್ಟು ನೂಲನ್ನು ಅರ್ಪಿಸಲಾಯಿತು. ಹಣಸಂಗ್ರಹದ ದೃಷ್ಟಿಯಿಂದ ಈ ಪ್ರವಾಸ ಕಳೆದ ಸಾರಿಯ ಪ್ರವಾಸದಷ್ಟೇ ಯಶಸ್ವಿಯಾಗಿತ್ತು. ಗ್ರಾಮಗಳಿಂದ ಬಂದ ಜನರು ಎಲ್ಲೆಲ್ಲೂ ಕಿಕ್ಕಿರಿದಿರುತ್ತಿದ್ದರು. ಕೆಲವು ಕಡೆಗಳಲ್ಲಿ ಮಾರಾಟಕ್ಕಾಗಿ ಇಡಲಾಗಿದ್ದ ಖಾದಿಯೆಲ್ಲವೂ ಖರ್ಚಾಗುತ್ತಿತ್ತು.

೧೯೨೭ರ ಫೆಬ್ರುವರಿ ಎರಡನೆ ವಾರದಲ್ಲಿ ಮಹಾರಾಷ್ಟ್ರದ ಪ್ರವಾಸ ಆರಂಭವಾಯಿತು. ಖಾನ್‌ದೇಶದ ಜಿಲ್ಲೆಗಳ ಪೂರ್ವದ ತುದಿಯಿಂದ ಆರಂಭ ಮಾಡಿ ಎರಡೂ ಜಿಲ್ಲೆಗಳ ಮಧ್ಯದಲ್ಲಿ ಸಂಚರಿಸಿ ಪಶ್ಚಿಮದ ಷಹದೆಗೆ ಹೋದರು. ಅನಂತರ ಧೂಲಿಯಾದಲ್ಲಿ ಉಳಿದಿದ್ದು ಅಲ್ಲಿಂದ ನಾಸಿಕ್ ಮತ್ತು ಅಹಮದ್ ನಗರದ ಜಿಲ್ಲೆಗಳಿಗೆ ಪ್ರಯಾಣ ಬೆಳಸಿದರು. ಖಾನ್‌ದೇಶದ ಜಿಲ್ಲೆಗಳಲ್ಲಿ ಒಂದೇ ವಾರದ ಅವಧಿಯಲ್ಲಿ ಸುಮಾರು ಮೂವತ್ತು ಸ್ಥಳಗಳಿಗೆ ಭೇಟಿಕೊಟ್ಟರು.

ಬಿನ್ನವತ್ತಳೆಗಳನ್ನಿಟ್ಟುಕೊಟ್ಟಿದ್ದ ಕರಂಡಗಳನ್ನು ಹರಾಜು ಹಾಕುತ್ತಿದ್ದುದು ಈ ಪ್ರವಾಸದ ವಿಶಿಷ್ಟ ಲಕ್ಷಣಗಳಲ್ಲಿ ಒಂದು. ಜಲಗಾಂನಲ್ಲಿ ಆರಂಭವಾದ ಈ ಪದ್ಧತಿಯನ್ನು ಧೂಲಿಯಾದ ವರೆಗೂ ಮುಂದುವರಿಸಲಾಯಿತು.

"ಈ ಕರಂಡಗಳನ್ನು ನಾನು ಹೊತ್ತುಕೊಂಡು ಹೋಗಲಾರೆ ಎಂದು ನೀವು ತಿಳಿಯಬೇಕು. ನನ್ನೊಡನೆ ಪೆಟ್ಟಿಗೆಗಳನ್ನು ತಂದಿಲ್ಲ; ಅವುಗಳನ್ನು ಇಟ್ಟುಕೊಳ್ಳಲು ಆಶ್ರಮದಲ್ಲಿ ತಕ್ಕ ವ್ಯವಸ್ಥೆಯೂ ಇಲ್ಲ. ಹೀಗೆ ಮಾಡುವುದರಿಂದ ನಿಮ್ಮ ಕೊಡುಗೆಯ ಹಿಂದಿರುವ ಪ್ರೇಮವನ್ನು ಕಡೆಗಣಿಸುತ್ತಿದ್ದೇನೆಂದಾಗಲೀ ತೃಣೀಕರಿಸುತ್ತಿದ್ದೇನೆಂದಾಗಲೀ ಭಾವಿಸಬೇಡಿ. ಇದು ನಿಮ್ಮ ಪ್ರೇಮಕ್ಕೆ ಪ್ರತಿಯಾಗಿ ಪ್ರೇಮ ತೋರುವ ರೀತಿ. ಈ ಕರಂಡಗಳನ್ನು ಹಣಕ್ಕೆ ಪರಿವರ್ತಿಸಿ ಅದನ್ನು ನನಗೆ ಪ್ರಿಯವಾದ ಕೆಲಸಕ್ಕೆ ವಿನಿಯೋಗಿಸುತ್ತೇನೆ. ನಾನು ಈ ಕೆಲಸ ಮಾಡುತ್ತಿರುವುದರಿಂದಲೇ ನೀವು ನನ್ನ ಮೇಲೆ ಅಷ್ಟೊಂದು ಪ್ರೇಮ

ವನ್ನು ತೋರುತ್ತಿದ್ದೀರಿ." ಎಂದು ಗಾಂಧೀ ಹೇಳಿದರು. ಅವರ ಮಾತು ಜನಕ್ಕೆ ಹಿಡಿಸಿತು. ಷಹದೆ ಎಂಬ ಹಳ್ಳಿಯಲ್ಲಿ ಒಂದು ಸಾಮಾನ್ಯವಾದ ಕರಂಡಕ್ಕೆ ಮುನ್ನೂರು ರೂಪಾಯಿ ಬಂದಿತು.

ಟೀಕಾಕಾರರು ಪ್ರಶ್ನೆಗಳನ್ನು ಗಾಂಧಿಯವರಿಗೆ ಕಳುಹಿಸಿ ಅವುಗಳಿಗೆ ಉತ್ತರಗಳನ್ನು ಸಾರ್ವಜನಿಕ ಸಭೆಗಳಲ್ಲಿ ಪಡೆಯುತ್ತಿದ್ದರು. ಇದು ಈ ಪ್ರವಾಸದ ಮತ್ತೊಂದು ವೈಶಿಷ್ಟ್ಯ. ಬಟ್ಟೆಯ ಗಿರಣಿ ಕಾರ್ಮಿಕರಿಗೆ ಚರಖದ ಸಂದೇಶವನ್ನು ತಲುಪಿಸುವ ಉಪಯುಕ್ತತೆಯ ವಿಚಾರವಾಗಿ ಸಂದೇಹವನ್ನು ಅಮಲನರ್‌ನಲ್ಲಿ ವ್ಯಕ್ತಪಡಿಲಾಯಿತು. "ಇಲ್ಲಿ ೨೦೦೦ ಮಂದಿ ಕಾರ್ಮಿಕರಿದ್ದಾರೆ. ಇಲ್ಲಿನ ಜನಸಂಖ್ಯೆಯಲ್ಲಿ ಅವರೇ ಹೆಚ್ಚಾಗಿದ್ದಾರೆ. ಅವರು ಖಾದಿ ಧಾರಿಗಳಾಗಬೇಕೆಂದು ನೀವು ಬಯಸುತ್ತೀರಾ? ಗಿರಣೀ ಮಾಲೀಕರು ಸಹ ಖಾದಿ ಹಾಕಿ ಕೊಳ್ಳಬೇಕೆಂದು ನೀವು ಇಚ್ಛಿಸುತ್ತೀರಾ?" ಗಾಂಧೀಜಿಯ ಉತ್ತರ ಹೀಗಿತ್ತು: "ನೀವೇನೋ ಇಲ್ಲಿ ಎರಡು ಸಾವಿರ ಜನರಿಗೆ ಕೆಲಸಕೊಟ್ಟಿರಬಹುದು; ಭೂಮಿಗೆ ಅಂಟಿಕೊಟ್ಟಿದ್ದ ಅವರನ್ನು ಹೊರಗೆಳೆದು ತಂದಿದ್ದೀರೆಂಬುದನ್ನು ಮರೆಯಬೇಡಿ. ನಿಮ್ಮ ಗಿರಣಿಗಳು ಕೇವಲ ಸ್ವಲ್ಪ ಮಂದಿಗೆ ಮಾತ್ರ ಉದ್ಯೋಗಕೊಡಬಹುದು. ಭೂಮಿಗೆ ಅಂಟಿಕೊಂಡಿರುವ ಕೋಟ್ಯಂತರ ಜನರಿಗೆ ಇನ್ನೂ ಹೆಚ್ಚು ಉದ್ಯೋಗ ಬೇಕಾಗಿದೆ. ಅವರನ್ನೆಲ್ಲಾ ಅಲ್ಲಿಂದ ಹೊರಡಿಸಿ ಉದ್ಯೋಗ ಕೊಡಲು ಸಾಧ್ಯವಿಲ್ಲ. ಈ ಅಂಶಗಳನ್ನು ಮರೆಯಬೇಡಿ. 'ಗಿರಣಿ ಕೈಗಾರಿಕೆಯನ್ನು ನಾಶಮಾಡಲು ಹೊರಟಿದ್ದೀರಾ?' ಎಂದು ನನ್ನನ್ನು ಅನೇಕ ಬಾರಿ ಪ್ರಶ್ನಿಸಲಾಗಿದೆ. ಹಾಗೆ ನಾನು ಅಪೇಕ್ಷಿಸಿದ್ದರೆ ಕೇಂದ್ರ ಉತ್ಪಾದನಾ ಸುಂಕವನ್ನು ರದ್ದು ಮಾಡಿರೆಂದು ನಾನು ಒತ್ತಾಯಪಡಿಸುತ್ತಿರಲಿಲ್ಲ. ಗಿರಣಿ ಕೈಗಾರಿಕೆಯು ಏಳಿಗೆಯಾಗ ಲೆಂದೇ ನನ್ನ ಅಪೇಕ್ಷೆ. ಆದರೆ ಅದರ ಏಳಿಗೆಯಿಂದ ದೇಶದ ಹಿತಕ್ಕೆ ಧಕ್ಕೆಯಾಗಬಾರದು. ನನಗೆ ಬೆಂಬಲ ನೀಡುವ ಗಿರಣಿ ಮಾಲೀಕರು ನನ್ನ ಮನೋಭಾವವನ್ನು ಅರಿತಿದ್ದಾರೆ. ತಮಗೆ ನಷ್ಟವಾದರೂ ಪರವಾಗಿಲ್ಲ, ಈ ಚಳವಳಿಯು ಜಯಪ್ರದವಾಗಬೇಕೆಂದು ಅವರು ಆಶಿಸುತ್ತಾರೆ.

ತಿಲಕ್ ಸ್ವರಾಜ್ಯನಿಧಿಗೆ ಕೊಟ್ಟ ಒಂದು ಕೋಟಿ ರೂಪಾಯಿಗಳು ಏನಾದವು? ಎಂಬ ಪ್ರಶ್ನೆ ಕೆಲವು ಕಡೆ ಎದ್ದಿತು. ಅದಕ್ಕೆ ಗಾಂಧೀಜಿ ಹೀಗೆ ಉತ್ತರ ನೀಡಿದರು: "ಸ್ವರಾಜ್ಯನಿಧಿಗೆ ಒಂದು ಕಾಸು ಕೊಟ್ಟಿಲ್ಲದೇ ಇದ್ದರೂ ಸರಿಯೆ, ಈ ಪ್ರಶ್ನೆಯನ್ನು ಯಾರು ಬೇಕಾದರೂ ಹಾಕಬಹುದು. ಅದು ಅವರ ಹಕ್ಕು. ಸಾರ್ವಜನಿಕ ನಿಧಿ ಸಾರ್ವ ಜನಿಕ ಸ್ವತ್ತು. ಆದುದರಿಂದ ನಿಧಿಯ ಆಡಳಿತದ ವಿವರಗಳನ್ನು ಕೇಳಿ ತಿಳಿಯಲು ಸಾರ್ವಜನಿಕರಿಗೆ ಅಧಿಕಾರವಿದೆ.

"ಎ.ಐ.ಸಿ.ಸಿ.ಯು ತಪ್ಪದೆ ಲೆಕ್ಕಪತ್ರಗಳನ್ನು ಪ್ರಕಟಿಸಿದೆ. ಆಡಿಟ್ ಆದ ಲೆಕ್ಕದ ಪ್ರತಿಗಳನ್ನು ಯಾವಾಗಬೇಕಾದರೂ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಿಂದಾಗಲೀ ಖಜಾಂಚಿ ಗಳಿಂದಾಗಲೀ ಪಡೆದುಕೊಳ್ಳಬಹುದು. ಪ್ರತಿಯೊಂದು ಕಾಸಿಗೂ ಲೆಕ್ಕ ಇದೆ. ಕೆಲವು

ಸಂದರ್ಭಗಳಲ್ಲಿ ಹಣ ಪಡೆದಿದ್ದ ಕೆಲವರು ನಂಬಿಕೆಯನ್ನುಳಿಸಿಕೊಳ್ಳಲಿಲ್ಲ ಎಂಬುದು ನಿಸ್ಸಂದೇಹವಾದ ವಿಷಯ. ಇತರ ಸಂಸ್ಥೆಗಳಂತೆ ಕಾಂಗ್ರೆಸ್ ಸಹ ಅಪರಿಪೂರ್ಣವಾದ ಸಂಸ್ಥೆ; ಅಲ್ಲಿ ಎಲ್ಲ ತರದ ವ್ಯಕ್ತಿಗಳೂ ಇದ್ದಾರೆ. ಅಪ್ರಾಮಾಣಿಕರಾದ ಪ್ರತಿನಿಧಿಗಳಿಲ್ಲದ ಸಂಸ್ಥೆ ಜಗತ್ತಿನಲ್ಲಿ ಎಲ್ಲೂ ಇಲ್ಲ ಎಂಬುದು ನನಗೆ ಗೊತ್ತು. ಕಾಂಗ್ರೆಸ್ ಇದಕ್ಕೆ ಅಪವಾದವಾಗಿಲ್ಲ. ಆದರೆ ನಾನು ಇಷ್ಟು ಹೇಳಬಲ್ಲೆ. ಜಾಗರೂಕನಾದ ವರ್ತಕನೊಬ್ಬ ಎಷ್ಟರ ಮಟ್ಟಿಗೆ ನಷ್ಟಕ್ಕೊಳಗಾಗಬಹುದೋ ಅಷ್ಟರಮಟ್ಟಿಗೆ ಇಲ್ಲಿ ನಷ್ಟವಾಗಿರಬಹುದು. ಅದಕ್ಕಿಂತ ಹೆಚ್ಚಾಗಿಲ್ಲ. ಆಗಿರುವ ಸ್ವಲ್ಪ ನಷ್ಟವು ಅಜಾಗರೂಕತೆಯಿಂದ ಆದುದಲ್ಲ. ಎಷ್ಟೇ ಜಾಗರೂಕರಾಗಿದ್ದು ಪರಿಶೋಧನೆ ಮಾಡಿ ಪರಾಮರ್ಶೆ ಮಾಡಿದಾಗ್ಯೂ ಇದು ಸಂಭವಿಸಿತು. ಇನ್ನೊಂದು ಸಂಗತಿ ಜ್ಞಾಪಕದಲ್ಲಿರಬೇಕು. ಪಂಡಿತ ಜವಹರ್‌ಲಾಲ್ ನೆಹರೂ ಮತ್ತು ಶೇಠ್ ಜಮುನಾಲಾಲ್ ಬಜಾಜ್‌ರವರು ಕ್ರಮವಾಗಿ ಕಾಂಗ್ರೆಸ್ಸಿನ ನಿರ್ವಾಹಕ ಕಾರ್ಯದರ್ಶಿ ಮತ್ತು ನಿರ್ವಾಹಕ ಖಜಾಂಚಿಯಾಗಿದ್ದಾರೆ. ಅವರಿಬ್ಬರೂ ಅಪ್ರತಿಮ ಪ್ರಾಮಾಣಿಕರು. ಮೇಲಾಗಿ, ವಸೂಲಾದ ನಿಧಿಯಲ್ಲಿ ಶೇಕಡ ಎಪ್ಪತ್ತೈದು ಭಾಗ ಸ್ಥಳೀಯವಾಗಿಯೇ ವಿನಿಯೋಗಿಸಲ್ಪಟ್ಟಿತು. ಆಯಾ ಸ್ಥಳಗಳಲ್ಲಿ ಯಾರು ಯಾರು ನಿಧಿ ಸಂಗ್ರಹದಲ್ಲಿ ಸಹಾಯಕರಾಗಿದ್ದರೋ ಯಾರಲ್ಲಿ ಸ್ಥಳೀಯ ಜನರಿಗೆ ನಂಬಿಕೆ ಇತ್ತೋ ಅವರೇ ನಿಧಿಯ ಆಡಳಿತದ ಜವಾಬ್ದಾರಿ ವಹಿಸಿದ್ದರು. ಕಡೆಯದಾಗಿ, ಬಹು ಭಾಗದ ಮೊತ್ತವನ್ನು ನಿರ್ದಿಷ್ಟ ಕಾರ್ಯಗಳಿಗೆ ಅಂಕಿತಮಾಡಿಕೊಡಲಾಗಿತ್ತು. ಆ ಮೊತ್ತದ ಮೇಲೆ ದಾನಿಗಳು ನಿಯಂತ್ರಣ ಹೊಂದಿದ್ದರು. ಆದರೆ ಅಂಕಿತನಿಧಿಯನ್ನು ಅಸಹಕಾರ ಕಾರ್ಯಕ್ರಮದ ವ್ಯಾಪ್ತಿಗೊಳಗಾಗುವ ಉದ್ದೇಶಗಳಿಗೆ ಮಾತ್ರ ಖರ್ಚು ಮಾಡಬೇಕು. ಮತ್ತು ಲೆಕ್ಕವನ್ನು ಪರೀಕ್ಷಿಸುವ ಅಧಿಕಾರ ಕಾಂಗ್ರೆಸ್ಸಿನ ಪ್ರತಿನಿಧಿಗಳಿಗಿರಬೇಕು, ಎಂಬ ನಿಯಮಗಳನ್ನು ಮಾತ್ರ ಹಾಕಲಾಗಿತ್ತು. ನಿಧಿ ಸಂಗ್ರಹ ಮಾಡಿದ್ದಕ್ಕೆ ನಾನು ವಿಷಾದಿಸುವುದಿಲ್ಲ. ಆದರೆ ಆಡಳಿತದ ವಿಷಯದಲ್ಲಿ ನನ್ನ ಆತ್ಮಸಾಕ್ಷಿ ನಿಷ್ಕಳಂಕವಾಗಿದೆ. ದಗಾ ಮೋಸ ಮತ್ತು ದುರುಪಯೋಗವನ್ನು ತಡೆಗಟ್ಟಲು ಮನುಷ್ಯ ಪ್ರಯತ್ನದಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೂ ಮಾಡಲಾಗಿತ್ತು. ಸ್ವರಾಜ್ಯನಿಧಿಯಿಂದ ರಾಷ್ಟ್ರದ ಮಹೋದ್ದೇಶ ಸಾಧಿತವಾಗಿದೆ. ಶ್ರೀಮಂತರೂ ಬಡವರೂ ಉದಾರವಾಗಿ ಕಾಣಿಕೆ ನೀಡಿದ್ದ ಈ ರಾಷ್ಟ್ರೀಯ ಮಹಾನಿಧಿಯ ನೆರವಿಲ್ಲದಿದ್ದರೆ ಇಷು ಬೇಗ ಈ ದೊಡ್ಡ ಸಂಸ್ಥೆಯನ್ನು ನಿರ್ಮಿಸಲಾಗುತ್ತಿರಲಿಲ್ಲ."

ಧೂಲಿಯಾದಲ್ಲಿ ಬಿಡುವಿಲ್ಲದ ಕಾರ್ಯಕ್ರಮವಿತ್ತು. ಆದರೆ ಎಲ್ಲವನ್ನೂ ತುಂಬಾ ವ್ಯವಸ್ಥಿತವಾಗಿ ಏರ್ಪಾಟುಮಾಡಿದ್ದುದರಿಂದ ಗಾಂಧಿಯವರು ಒಂದೇದಿನ ಆರು ಸಭೆಗಳಲ್ಲಿ ಮಾತನಾಡಲು ಸಾಧ್ಯವಾಯಿತು. ಅವರು ಭಾಷಣ ಮಾಡುವಾಗ ಚರಖದಿಂದ ನೂಲು ತೆಗೆಯುತ್ತಲೇ ಇದ್ದರು. "ನಾನು ನೂಲುತ್ತಲೇ ಭಾಷಣ ಮಾಡುತ್ತಿದ್ದೇನೆ. ಇದನ್ನು ಅಧಿಕ ಪ್ರಸಂಗಿತನವೆಂದು ಭಾವಿಸಬೇಡಿ. ಇಲ್ಲಿ ವಿಸ್ಮಯಕಾರಿಯಾದ ಪ್ರಶಾಂತತೆ ಇರುವುದರಿಂದ ಹಾಗೆ ಮಾಡುತ್ತಿದ್ದೇನೆ. ಅಷ್ಟೇ ಅಲ್ಲ, ನಾನು ನಂಬಿರುವ ವಿಷಯದಲ್ಲಿ

ನಿಮಗೆ ಪ್ರತ್ಯಕ್ಷವಾದ ಶಿಕ್ಷಣ ನೀಡಿ ಆ ಮೂಲಕ ನಿಮ್ಮ ಪ್ರೀತಿ ವಿಶ್ವಾಸಗಳಿಗೆ ತಕ್ಕುದಾಗಿ ವರ್ತಿಸುತ್ತೇನೆಂದು ಭಾವಿಸುತ್ತೇನೆ".

ಮಹಾರಾಷ್ಟ್ರದ ಪ್ರವಾಸಕಾಲದಲ್ಲಿ ವಿದ್ಯಾವಂತರೂ ಬುದ್ಧಿಜೀವಿಗಳೂ ನಿರ್ಲಕ್ಷ್ಯ ತೋರಿದರು. ಆದರೆ ಜನಸಾಮಾನ್ಯರಿಂದ ಒಳ್ಳೆಯ ಪ್ರತಿಕ್ರಿಯೆ ಬಂತು. ಅಹಮದ್ ನಗರ, ಸಂಗಮ್‌ನೇರ್, ಷೋಲಾಪುರ್ ಮತ್ತು ಗುಲರ್ಗ ಈ ಊರುಗಳಲ್ಲಿ ಇದ್ದ ಖಾದಿಯೆಲ್ಲ ಬಿಕರಿಯಾಯಿತು. ಕೆಲವೆಡೆಗಳಲ್ಲಿ ಜನರು ಕೇಳಿದಷ್ಟು ಒದಗಿಸಲು ಸಾಕಷ್ಟು ಖಾದಿಯೇ ಇರಲಿಲ್ಲ. ಹಣ ಸಂಗ್ರಹಣೆಯೂ ಚೆನ್ನಾಗಿ ಆಯಿತು. ಅಹಮದ್ ನಗರದಲ್ಲಿ ಗಾಂಧಿಯವರು ಕರಂಡಗಳನ್ನಲ್ಲದೆ ಹೂವಿನ ಹಾರಗಳನ್ನೂ ಹರಾಜು ಹಾಕಿದರು. ಹರಾಜಿನ ಪರಿಣಾಮ, ಜನರ ಉತ್ಸಾಹವನ್ನು ಇಮ್ಮಡಿಸಿದ್ದು ಆಶ್ಚರ್ಯಕರ ಸಂಗತಿ. ಅಲ್ಲಿ ಮೊದಲು ಸಂಗ್ರಹಿಸಲಾಗಿದ್ದ ಹಣ ೧೭೦೦ ರೂಪಾಯಿಗಳು; ಹರಾಜುಗಳಾದ ನಂತರ ಆ ಮೊತ್ತ ೫೦೦೦ ರೂಪಾಯಿಗಳಿಗೆ ಏರಿತು. ಇದನ್ನೆಲ್ಲ ವಿವಿವರವಾಗಿ ಗಾಂಧಿಯವರು ಪರಿಶೀಲಿಸಿದ್ದರು. ಇದೇ ಪ್ರಯೋಗವನ್ನು ಮುಂದೆ ಇತರ ನಗರಗಳಲ್ಲೂ ಯಶಸ್ವಿಯಾಗಿ ಮಾಡಿದರು. ಅಕ್ಕಲಕೋಟೆಯಂತಹ ಸಣ್ಣ ಊರಿನಲ್ಲೂ ಹಾರಗಳ ಹರಾಜಿನಿಂದ ೫೦ ರೂಪಾಯಿಗಳು ಬಂದುವು.

ಹೋದೆಡೆಯಲ್ಲೆಲ್ಲಾ ಸ್ಥಳೀಯ ಸಂಸ್ಥೆಗಳು ಪೌರಮಾನ ಪತ್ರಗಳನ್ನು ಅರ್ಪಿಸಿದುವು. ಧೂಲಿಯಾದಲ್ಲಿ ಅವರು ಮಾರ್ಮಿಕವಾಗಿ ಹೇಳಿದರು: "ನಾನು ಭಾರತದಾದ್ಯಂತ ಓಡಾಡಿದ್ದೇನೆ; ಆದರೆ ಸ್ವತಂತ್ರವಾಗಿ ಕಾರ್ಯಕ್ರಮಗಳನ್ನು ಉಪಕ್ರಮಮಾಡಿ ನಿರ್ವಹಿಸುವ ಆದರ್ಶವಾದ ಸ್ಥಳೀಯ ಸಂಸ್ಥೆಯನ್ನು ನಾನು ಇದುವರೆಗೂ ಕಂಡಿಲ್ಲ. ಲಿಯೋನೆಲ್ ಕುರ್ಟಿಸ್‌ರವರು ಭಾರತದ ಹಾಗೂ ಇಂಗ್ಲೆಂಡಿನ ಹಳ್ಳಿಗಳಿಗೆ ಇರುವ ವ್ಯತ್ಯಾಸವನ್ನು ತೋರುತ್ತಾ ಹೀಗೆ ಹೇಳಿದರು: 'ಭಾರತದ ಹಳ್ಳಿಗಳು ಚೊಕ್ಕಟವಾಗಿರುವುದಿಲ್ಲ; ಅವುಗಳನ್ನು ಗೊಬ್ಬರದ ಕುಪ್ಪೆಯ ಮೇಲೆ ನಿರ್ಮಿಸಿರುವಂತೆ ಭಾಸವಾಗುತ್ತದೆ. ಇಂಗ್ಲೆಂಡಿನ ಹಳ್ಳಿಗಳು ನಿರ್ಮಲವಾಗಿಯೂ ಆರೋಗ್ಯಕರವಾಗಿಯೂ ಸುಂದರವಾಗಿಯೂ ಇವೆ.' ಕುರ್ಟಿಸ್‌ರವರಿಗೆ ಭಾರತೀಯ ಗ್ರಾಮಸ್ಥನ ಸ್ಥಿತಿಗತಿಗಳ ಪರಿಚಯ ಇಲ್ಲ. ಭಾರತೀಯ ಗ್ರಾಮಸ್ಥನ ದಿನ ನಿತ್ಯದ ವರಮಾನ ಇಂಗ್ಲಿಷ್ ಗ್ರಾಮಸ್ಥನ ವರಮಾನದಲ್ಲಿ ಶೇಕಡ ಐದರಷ್ಟೂ ಇಲ್ಲ. ಆದರೆ ಆತನ ಹೇಳಿಕೆಯಲ್ಲಿರುವ ಸತ್ಯದ ಅಂಶವನ್ನು ಉಪೇಕ್ಷಿಸುವುದು ಬೇಡ. ನಮ್ಮ ಗ್ರಾಮಸ್ಥರಿಗೆ ಗ್ರಾಮ ನೈರ್ಮಲ್ಯದ ವಿಷಯದಲ್ಲಿ ಲವಲೇಶ ಪರಿಜ್ಞಾನವೂ ಇಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು, ದಕ್ಷಿಣ ಆಫ್ರಿಕಾದಲ್ಲಿನ ಐರೋಪ್ಯರ ವರ್ಣದ್ವೇಷವನ್ನು ನಾವು ಖಂಡಿಸಬಹುದು. ಆದರೆ ಅವರುಗಳು ತಮ್ಮ ನಗರಗಳನ್ನು ಆರೋಗ್ಯಕರವಾಗಿ ಹಾಗೂ ಅಚ್ಚುಕಟ್ಟಾಗಿ ಇಟ್ಟುಕೊಳ್ಳಲು ಮಾಡಿರುವ ಪ್ರಯತ್ನ ಸಾಹಸಪೂರ್ಣವಾದುದು; ಅನುಕರಣೆಗೆ ಯೋಗ್ಯವಾದುದು. ರಾಜಕೀಯವೇ ಎಲ್ಲ ವೇಳೆಯನ್ನು ತೆಗೆದುಕೊಂಡು ಬಿಡುತ್ತದೆ; ಇನ್ನಾವುದಕ್ಕೂ ಬಿಡುವೇ ಇಲ್ಲ, ಎಂದು ನೀವು ಹೇಳಬೇಡಿ. ಅದು ಕುಂಟು ನೆಪ ಅಷ್ಟೆ. ನಮ್ಮ ಗ್ರಾಮ ಮತ್ತು ನಗರವನ್ನು

ನಿರ್ಮಲವಾಗಿಟ್ಟುಕೊಳ್ಳುವ ಸಾಮರ್ಥ್ಯ ನಮಗಿದ್ದರೆ ಸ್ವರಾಜ್ಯಕ್ಕೂ ಸಾಮರ್ಥ್ಯ ವಿದ್ದಂತೆ. ಇವುಗಳನ್ನು ನಿರ್ಮಲವಾಗಿಟ್ಟುಕೊಳ್ಳುತ್ತೇವೆಂಬುದನ್ನು ಪ್ರದರ್ಶಿಸಿದ್ದೇ ಆದರೆ ನಮ್ಮ ಮತ್ತು ಸ್ವರಾಜ್ಯದ ನಡುವೆ ಅಡ್ಡನಿಲ್ಲುವ ಶಕ್ತಿ ಜಗತ್ತಿನಲ್ಲಿಯಾವುದೂ ಇರ ಲಾರದು. ಅದನ್ನು ಗಳಿಸಲು ನಾವು ಎಷ್ಟರಮಟ್ಟಿಗೆ ಸಾಮರ್ಥ್ಯವನ್ನು ತೋರುತ್ತೇವೋ ಅಷ್ಟರಮಟ್ಟಿಗೆ ಅದನ್ನು ಉಳಿಸಿಕೊಳ್ಳುವ ಸಾಮರ್ಥ್ಯವನ್ನೂ ಪಡೆಯುತ್ತೇವೆ. ಸರ್ಕಾರಿ ಅಧಿಕಾರಿಗಳು ಉಪಯೋಗಿಸಬಹುದಾದ ರಸ್ತೆಗಳನ್ನು ಮಾತ್ರ ಸ್ಥಳೀಯ ಸಂಸ್ಥೆಗಳು ಅಚ್ಚುಕಟ್ಟಾಗಿಟ್ಟುಕೊಳ್ಳುತ್ತವೆ. ಬಡ ಗ್ರಾಮಸ್ಥರು ಯಾವಾಗಲೂ ಉಪಯೋಗಿಸುವ ಹಾಗೂ ಅವರ ಎತ್ತುಗಳು ಓಡಾಡುವ ರಸ್ತೆಗಳನ್ನು ಎಲ್ಲೂ ಚೆನ್ನಾಗಿಟ್ಟಿರುವುದಿಲ್ಲ. ಗ್ರಾಮಸ್ಥರಿಗೆ ಹಾಗೂ ಎತ್ತುಗಳಿಗೆ ತೊಂದರೆ ಕಡಿಮೆ ಯಾಗುವ ರೀತಿಯಲ್ಲಿ ಏನಾದರೂ ಮಾಡಲಾಗುವುದಿಲ್ಲವೆ?"

ಷೋಲಾಪುರದಲ್ಲಿ ಪೌರಸಭಾ ಸದಸ್ಯರಿಗೆ ಹೇಳಿದ ಮಾತು ಇದು: "ಒಂದು ರಾಷ್ಟ್ರದಲ್ಲಿ ಜಾರಿಯಲ್ಲಿರುವ ನಗರ ಯೋಜನೆ ಅದರ ನಾಗರೀಕತೆಯ ಅಳತೆಗೋಲು ಎಂದು ಪೆಟ್ರಿಕ್ ಗೆಡ್ಡೀಸ್ ಹೇಳಿರುವುದನ್ನು ಒಪ್ಪುತೇನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ವ್ಯಕ್ತಿಗತವಾದ ನೈರ್ಮಲ್ಯವಷ್ಟೇ ಅಲ್ಲದೆ, ಸಾಮೂ ಹಿಕ ಹಾಗೂ ಪೌರ ನೈರ್ಮಲ್ಯವು ದೈವತ್ವದ ಹಿಂದಿನ ಮಜಲು"–ಎಂದು ಹೇಳಿದರು.

ಪ್ರತಿಷ್ಠಾಪರರಾದ ಬುದ್ಧಿಜೀವಿಗಳು ಗಾಂಧಿಯವರನ್ನು ಪೀಡಿಸಿದರು. ಆದರೆ ಅವರಿಗೆ ಗಾಂಧೀ ಜಗ್ಗಲಿಲ್ಲ. ಅವರನ್ನು ಎದುರಿಸಬೇಕಾದೀತೆಂಬ ಊಹಾಪೋಹವೆದ್ದಿತ್ತು. ಗಾಂಧಿಯವರು ತಮ್ಮೊಂದಿಗೆ ಐರೋಪ್ಯ ಗೆಳೆಯರನ್ನು ಕರೆತರುತ್ತಾರೆಂದು ಪಂಡರಾ ಪುರದ ದೇವಸ್ಥಾನದ ಮೇಲ್ವಿಚಾರಕರಿಗೆ ಹೇಗೋ ಗೊತ್ತಾಯಿತು. ಈ ವಿಷಯವನ್ನು ತಮ್ಮ ಸಾರ್ವಜನಿಕ ಭಾಷಣದಲ್ಲಿ ಗಾಂಧಿಯವರು ಸ್ಪಷ್ಟವಾಗಿ ಪ್ರಸ್ತಾಪಿಸಿದರು. "ವಾರಣಾಸಿಯಲ್ಲಿ ನನ್ನೊಂದಿಗೆ ಇದ್ದ ಬೌದ್ಧಮತಾವಲಂಬಿಯಾಗಲೀ ಅಥವಾ ನಾನು ದತ್ತು ತೆಗೆದುಕೊಂಡಿರುವ 'ಅಸ್ಪೃಶ್ಯ' ಹುಡುಗಿಯಾಗಲೀ ನನ್ನ ಜೊತೆ ಈಗ ಇಲ್ಲ ದಿರುವುದು ವಿಷಾದಕರ ಸಂಗತಿ. ಅವರುಗಳು ನನ್ನ ಜೊತೆಯಿದ್ದಿದ್ದರೆ ಅವರನ್ನು ಬಿಟ್ಟು ನಾನು ದೇವಸ್ಥಾನಕ್ಕೆ ಹೋಗುತ್ತಿರಲಿಲ್ಲ. ಇದನ್ನು ಚೆನ್ನಾಗಿ ಮನಗಾಣಿರಿ. ಹಾಗೆ ಅವರನ್ನು ಬಿಟ್ಟು ನಾನೇ ದೇವಸ್ಥಾನಕ್ಕೆ ಹೋಗಿದ್ದರೆ ವಿಠೋಬನಿಗೇ ಅವಮಾನ ಮಾಡಿದಂತಾಗುತ್ತಿತ್ತು. ದೇವರಲ್ಲಿ ನಂಬಿಕೆ ಇಲ್ಲದವನು ದೇವಸ್ಥಾನಕ್ಕೆ ಹೋದರೂ ನನಗೆ ಚಿಂತೆ ಇರುವುದಿಲ್ಲ; ಏಕೆಂದರೆ ದೇವರು ತನ್ನನ್ನು ತಾನು ನೋಡಿಕೊಳ್ಳಬಲ್ಲ. ಪ್ರತಿಮಾರೂಪದಲ್ಲಿರುವ ದೇವರನ್ನು ಅವಮಾನಗೊಳಿಸಬಲ್ಲವರು ಈ ಜಗತ್ತಿನಲ್ಲಿ ಯಾರಿದ್ದಾರೆ? ನನ್ನೊಡನಿದ್ದ ಗೆಳತಿ ಬೌದ್ಧಮತಾವಲಂಬಿ. ಆದುದರಿಂದ ಆಕೆ ಹಿಂದೂ ತಾನೆ? ದೇವಸ್ಥಾನಕ್ಕೆ ಹೋಗಲು ಆಕೆಗೆ ಅವಕಾಶವಿಲ್ಲದಿದ್ದರೆ ಮತ್ತಾರಿಗೆ ಸಾಧ್ಯ? ನಾನು ಅನೇಕ ಯಾತ್ರಾಸ್ಥಳಗಳಿಗೆ ಹೋಗಿದ್ದೇನೆ. ಅಲ್ಲಿ ಕಂಡುಬರುವ ಆಷಾಢಭೂತಿತನ ಹಾಗೂ ಲೋಭಬುದ್ಧಿಯನ್ನು ನೋಡಿ ವ್ಯಸನಪಟ್ಟಿದ್ದೇನೆ. ಈ ಕೆಲವು ದೇವಸ್ಥಾನಗಳ

ಮೇಲ್ವಿಚಾರಣೆ ನಡೆಸುವ ಭಕ್ತರು ಕುಡುಕರೂ ವಿಷಯ ಲಂಪಟರೂ ಆಗಿದ್ದಾರೆ. ಅವರನ್ನು ಮೊದಲು ಶುದ್ಧಗೊಳಿಸುವುದು ಅಗತ್ಯ. ನಾವು ಜಾಗ್ರತರಾಗಿ ಅಗತ್ಯವಾದ ಪ್ರಾಯಶ್ಚಿತ್ತ ಮಾಡಿಕೊಂಡು ಪರಿಶುದ್ಧರಾಗದೆ, ವಸ್ತುಸ್ಥಿತಿಯು ಹೀಗೆಯೇ ಮುಂದು ವರಿದರೆ, ಇಪ್ಪತ್ತೆರಡು ಕೋಟಿ ಜನ ಹಿಂದೂಗಳೆಲ್ಲ ಸೇರಿದರೂ ಹಿಂದೂಧರ್ಮವನ್ನು ಉಳಿಸಲಿಕ್ಕಾಗುವುದಿಲ್ಲ. ಅಸಂಖ್ಯಾತ ಋಷಿ ಮುನಿಗಳು ಗುಹೆಗಳಲ್ಲಿದ್ದು ಶುದ್ಧ ಚಾರಿತ್ರ್ಯ ದಿಂದ ತಪಸ್ಸು ಮಾಡುತ್ತಾ ತಮ್ಮ ಜೀವವನ್ನೇ ತೇಯ್ದಿದ್ದರಿಂದ ಹಿಮಾಲಯವು ಅಪ್ರತಿಮ ಶುಭ್ರತೆಯನ್ನು ಹೊಂದಿದೆ. ಇಂದು ಅಂತಹ ತಪಸ್ಸು ಹಾಗೂ ಪ್ರಾಯಶ್ಚಿತ್ತ ನಮ್ಮ ಧರ್ಮವನ್ನು ಅಧಃಪತನದಿಂದ ರಕ್ಷಿಸಬಹುದು.”

ಫೆಬ್ರುವರಿ ಕೊನೆಯ ಹೊತ್ತಿಗೆ ಅವರು ಕೊಂಕಣಕ್ಕೆ ಹೋದರು. ಪಶ್ಚಿಮ ಭಾರತದ ಈ ಪ್ರದೇಶ, ದೂರವೂ ದುರ್ಗಮವೂ ಆಗಿದ್ದುದರಿಂದ ರಾಜಕೀಯ ನಾಯಕರು ಅಲ್ಲಿಗೆ ಹೋಗುವುದೇ ಅಪರೂಪವಾಗಿತ್ತು. ಅವರು ಸಾವಂತವಾಡಿಯಿಂದ ಹೊರಟು ವೆನ್‌ಗುರ್ಲ ತಲುಪಿದರು. ಅಲ್ಲಿಂದ ಉತ್ತರಕ್ಕೆ ಪ್ರಯಾಣ ಮಾಡಿ ಸಮುದ್ರ ತೀರದಲ್ಲೇ ಹಾದು ಕೊಲಾಬ ಜಿಲ್ಲೆಗೆ ಬಂದರು. ಕೊಂಕಣದಲ್ಲಿ ಅವರಿಗೆ ಬಿಡುವಿಲ್ಲದ ಕಾರ್ಯಕ್ರಮ ವಿತ್ತು. ಸೋಮವಾರ ಮೌನ ದಿನವಾದರೂ ಅದನ್ನು ವಿಶ್ರಾಂತಿ ಹಾಗೂ ಸದ್ದುಗದ್ದಲ ವಿಲ್ಲದ ಕೆಲಸಕ್ಕೆ ವಿನಿಯೋಗಿಸಲಾಗಲಿಲ್ಲ. ಅಪ್ಪಾಸಾಹೇಬ್ ಪಟವರ್ಧನ್‌ರೊಡಗೂಡಿ ಒಂದು ವಾರದ ಅವಧಿಯಲ್ಲಿ ಇಪ್ಪತ್ತೈದು ಸ್ಥಳಗಳಿಗೆ ಭೇಟಿಕೊಟ್ಟರು. ಕಂಡರಿಯದ ಈ ಪ್ರದೇಶಗಳಲ್ಲಿ ಸ್ಥಳೀಯ ಜನರ ಉತ್ಸಾಹ ಅತಿಶಯವಾಗಿತ್ತು.

ಸಾವಂತವಾಡಿ ತಲುಪುವ ಹೊತ್ತಿಗೆ ಮಧ್ಯರಾತ್ರಿಯಾಗಿತ್ತು. ಸಂಸ್ಥಾನದ ರಾಜರು ಕಾದಿದ್ದು, ಗಾಂಧಿಯವರನ್ನು ಸ್ವಾಗತಿಸಿದರು. ಪದ್ಧತಿಯಂತೆ ಆ ದಿನ ನೂಲ ಬೇಕಾದುದನ್ನು ಮುಗಿಸಲು ಮಧ್ಯರಾತ್ರಿಯಲ್ಲೇ ಗಾಂಧೀ, ರಾಟೆ ಹಿಡಿದು ಕುಳಿತರು. ಚರಖದ ವಿಚಾರವಾಗಿ ರಾಜರೊಡನೆ ಸಂಭಾಷಣೆಯನ್ನು ಅದೇ ಕಾಲದಲ್ಲಿ ನಡೆಸಿದರು. ಮಾರನೆಯ ದಿನ ಗಾಂಧೀಜಿ ಮತ್ತು ಕಸ್ತೂರಬಾರವರನ್ನು ಅರಮನೆಗೆ ಆಹ್ವಾನಿಸಿ ಒಂದು ಸಹಸ್ರ ರೂಪಾಯಿಗಳ ನಿಧಿಯನ್ನು ಕೊಡಲಾಯಿತು. ಹೋದೆಡೆಯೆಲ್ಲಾ ಮಾಮೂಲಿನಂತೆ ಹಾರಗಳನ್ನೂ ಸಂಪುಟಗಳನ್ನೂ ಬಳುವಳಿಯಾಗಿ ಬಂದ ಇತರ ವಸ್ತುಗಳನ್ನೂ ಹರಾಜು ಹಾಕಲಾಯಿತು. ಎಲ್ಲ ಕಡೆಯೂ ಖಾದಿಯ ವ್ಯಾಪಾರ ಚೆನ್ನಾಗಿ ನಡೆಯಿತು.

ಗಾಂಧಿಯವರು ದೂರದ ಮೋಟಾರ್ ಪ್ರಯಾಣ ಮಾಡಿಕೊಂಡು ಮಧ್ಯರಾತ್ರಿ ಹೊತ್ತಿಗೆ ಲಾಂಜೆಯನ್ನು ತಲುಪಿದರು. ಅವರ ಭಾಷಣವನ್ನು ಕೇಳಲು ಜನರು ಕುತೂಹಲದಿಂದ ಕಾದು ಕುಳಿತಿದ್ದರು. “ನಿಮ್ಮನ್ನು ಇಷ್ಟು ಸರಿಹೊತ್ತಿನವರೆಗೆ ಕಾಯಿಸಿ ದ್ದಕ್ಕಾಗಿ ನಿಮ್ಮ ಬಗ್ಗೆ ಕನಿಕರ ತೋರಬೇಕೋ ಅಥವಾ ನಾನೇ ಕನಿಕರಪಟ್ಟುಕೊಳ್ಳ ಬೇಕೋ ಕಾಣೆ. ಆದರೆ ನಾವು ಗೀತೆಯ ಯೋಗಿಯಂತೆ ಕೆಲಸ ಮಾಡಿದ್ದೇವೆ. ಸಾಮಾನ್ಯ ಮನುಷ್ಯರು ನಿದ್ರಿಸುವ ರಾತ್ರಿಯ ಸಮಯ ಯೋಗಿಗೆ ಹಗಲಾಗಿರುತ್ತದೆ. ನಿಮ್ಮ

ಯೋಗಕ್ಕಾಗಿ ನಾನು ಅಭಿನಂದಿಸುತ್ತೇನೆ. ಆದರೆ ನೀವು ನಮ್ಮ ಖಾದಿಯನ್ನೆಲ್ಲಾ ಕೊಂಡು ಬಡವರಿಗೆ ಸಹಾಯ ಮಾಡಿದರೆ ನಿಜವಾದ ಯೋಗಿಗಳೆನಿಸುತ್ತೀರಿ. ಆಗ ನನ್ನ ಅಭಿನಂದನೆಗೆ ಇನ್ನೂ ಹೆಚ್ಚು ಪಾತ್ರರಾಗುತ್ತೀರಿ."

ರತ್ನಗಿರಿ ತಲುಪಿದಾಗ "ಲೋಕಮಾನ್ಯರ ಜನ್ಮಸ್ಥಳ ನನಗೊಬ್ಬನಿಗೇ ಅಲ್ಲದೆ ಇಡೀ ಭಾರತಕ್ಕೆ ಯಾತ್ರಾಸ್ಥಳವಾಗಿದೆ" ಎಂದು ಗಾಂಧೀಜಿ ಹೇಳಿದರು. ಸಾವರ್ಕರ್‌ರವರು ವಾಸಮಾಡುತ್ತಿರುವ ಸ್ಥಳವೂ ಇದೇ ಎಂಬುದನ್ನು ನೆನಸಿಕೊಂಡರು. ಸಾವರ್ಕರ್‌ರನ್ನು ಇಂಗ್ಲೆಂಡಿನಲ್ಲಿ ನೋಡಿದ್ದು ಅವರನ್ನು ಚೆನ್ನಾಗಿ ಬಲ್ಲವರಾಗಿದ್ದರು. . ಅವರ ತ್ಯಾಗ ಮತ್ತು ದೇಶಭಕ್ತಿಯೂ ವೇದ್ಯವಾಗಿತ್ತು. "ಆಗಲೂ ನಮ್ಮಿಬ್ಬರಿಗೂ ಭಿನ್ನಾಭಿಪ್ರಾಯಗಳಿದ್ದುವು; ಈಗಲೂ ಇವೆ. ಆದರೆ ಅವುಗಳಿಂದ ನಮ್ಮ ಸ್ನೇಹಕ್ಕೆ ಚ್ಯುತಿಬಂದಿಲ್ಲ. ಭಿನ್ನಾಭಿಪ್ರಾಯಗಳು ಎಂದಿಗೂ ದ್ವೇಷವೆನಿಸಬಾರದು." ಭಾವಾವೇಶರಾಗಿ ಮತ್ತೂ ಹೀಗೆ ಹೇಳಿದರು: "ಲೋಕಮಾನ್ಯರ ಮಂತ್ರವನ್ನು ಕಾರ್ಯಗತ ಮಾಡಲು ನಾನು ಮಾಡಿರುವಷ್ಟು ಪ್ರಯತ್ನವನ್ನು ಅವರ ಅನುಯಾಯಿಗಳಲ್ಲಿ ಯಾರೂ ಮಾಡಿಲ್ಲ. ನನ್ನ ಪ್ರಯತ್ನಕ್ಕೆ ಸರಿಸಮನಾಗಿ ಪ್ರಯತ್ನ ಮಾಡಿರುವವರು ಅನೇಕರಿರಬಹುದು ; ಆದರೆ ನನಗಿಂತ ಹೆಚ್ಚು ಶ್ರಮಪಟ್ಟಿದ್ದೇವೆಂದು ಯಾರೂ ಹೇಳಿಕೊಳ್ಳುವಂತಿಲ್ಲ. ಸ್ವರಾಜ್ಯವು ನಮ್ಮ ಆಜನ್ಮಸಿದ್ಧ ಹಕ್ಕು; ಅಷ್ಟೇ ಅಲ್ಲ, ಅದನ್ನು ಸಾಧಿಸುವುದು ನಮ್ಮ ಪವಿತ್ರವಾದ ಕರ್ತವ್ಯವೂ ಹೌದು. ಇದನ್ನು ನಾನು ಚೆನ್ನಾಗಿ ಬಲ್ಲೆ. ಸ್ವರಾಜ್ಯದಿಂದ ನಾವು ಎಷ್ಟರ ಮಟ್ಟಿಗೆ ಹೊರತಾಗಿರುತ್ತೇವೆಯೋ ಅಷ್ಟರಮಟ್ಟಿಗೆ ಮನುಷ್ಯತ್ವದಿಂದಲೂ ಹೊರತಾಗಿರುತ್ತೇವೆ. ಸ್ವರಾಜ್ಯವಿಲ್ಲದೆ ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳೂ ಪ್ರಕಟವಾಗುವುದಿಲ್ಲ. ಲೋಕಮಾನ್ಯರ ದೃಷ್ಟಿಯಲ್ಲಿ ಸ್ವರಾಜ್ಯವೆಂದರೆ, ರತ್ನಗಿರಿ ಜನರಿಗೆ ಮಾತ್ರ ಸ್ವರಾಜ್ಯವಲ್ಲ; ಅಥವಾ ಮಹಾರಾಷ್ಟ್ರದವರಿಗೆ ಮಾತ್ರ ಅಲ್ಲ; ಇಡೀ ಭಾರತಕ್ಕೆ ಸ್ವರಾಜ್ಯ. ಬಡವ ಬಲ್ಲಿದರೆಲ್ಲರಿಗೂ ಸ್ವರಾಜ್ಯ. ಬಡಜನರಿಗೆ ತಿನ್ನಲು ಅನ್ನವಿಲ್ಲದಿದ್ದರೆ ಸ್ವರಾಜ್ಯ ಅರ್ಥಶೂನ್ಯವಾಗುತ್ತದೆ.

"ಕೊಂಕಣದಲ್ಲಿ ಬಡತನವಿದೆಯೆಂದು ಎಲ್ಲ ಕಡೆಯೂ ನನಗೆ ಹೇಳಿದ್ದಾರೆ. ನೀವು ಬಡವರಾಗಿದ್ದರೆ ಪರಿಸ್ಥಿತಿಯೂ ಅಸಹನೀಯವಾಗಿರಬೇಕು. ನಿಮ್ಮ ಕಡೆಯ ಬಡಜನರು ಬೊಂಬಾಯಿಗೆ ಹೋಗಿ ಜೀವನ ಸಾಗಿಸುತ್ತಾರೆಂದು ನೀವು ಹೇಳುತ್ತೀರಿ. ಅವರು ಅಲ್ಲಿ ಜೀವನ ಮಾಡಲು ತೆರಬೇಕಾದ ಬೆಲೆಯೇನು ನಿಮಗೆ ಗೊತ್ತೆ? ಅವರು ಗಾಳಿ ಬೆಳಕಿಲ್ಲದ ಜೋಪಡಿಗಳಲ್ಲಿ ವಾಸಮಾಡುತ್ತಾರೆ. ಕೆಲವೇ ಚದುರಡಿಗಳಿರುವ ಒಂದೊಂದು ಜೋಪಡಿಯಲ್ಲಿ ಹಲವಾರು ಗಂಡಸರು ಮತ್ತು ಹೆಂಗಸರು ಒಟ್ಟಿಗೆ ಇರಬೇಕು. ನೈರ್ಮಲ್ಯ ಅಥವಾ ಮರ್ಯಾದೆಯ ಪರಿಜ್ಞಾನ ಯಾವುದೂ ಇರುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ವಾಸ ಮಾಡಲು ನಿಮ್ಮ ತಾಯಿ ಮತ್ತು ಸಹೋದರಿಯರನ್ನು ಕಳುಹಿಸಲು ತಯಾರಾಗಿದ್ದೀರಾ? ಬೊಂಬಾಯಿನ ಗಿರಣಿಗಳಿಗೆ ಹೋಗುವ ಹೆಂಗಸರು ನಿಮ್ಮ ತಾಯಂದಿರು ಹಾಗೂ ಸಹೋದರಿಯರೆಂದು ನೀವು ಒಪ್ಪುವುದಿಲ್ಲವೆ? ಅಲ್ಲಿಗೆ ಹೋಗುವ ಗಂಡಸರು ನಿಮ್ಮ

ಸಹೋದರರಲ್ಲವೆ? ನಿಮ್ಮ ಸಹೋದರ ಸಹೋದರಿಯರು ಕುಡುಕರಾಗಿ ಅವಮಾನಕರವಾದ ಜೀವನವನ್ನು ಅವಲಂಬಿಸಿ ಇತರರಿಗೂ ಅವರ ಕೆಟ್ಟಚಾಳಿಯನ್ನು ಕಲಿಸುವುದನ್ನು ನೋಡಲು ನೀವು ಸಿದ್ಧರಿರುವಿರಾ? ಅವರು ಅಲ್ಲಿ ಗಳಿಸುವ ಎಂಟು ಆಣೆಗೋಸ್ಕರ ಇಂತಹ ಬೆಲೆಯನ್ನು ಕೊಡುವುದು ತರವೇ?

"ನಮಗೆ ಸರಿಯಾದ ರೀತಿಯಲ್ಲಿ ಗೋರಕ್ಷಣೆ ಮಾಡುವುದು ಗೊತ್ತಿಲ್ಲ. ಆದುದರಿಂದ ದನಕರುಗಳು ನಾಶವಾಗುತ್ತಿವೆ. ನಮಗೆ ಸರಿಯಾದ ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರ ತಿಳಿದಿಲ್ಲವಾದ್ದರಿಂದ ನಮ್ಮ ಗ್ರಾಮಗಳು ಹಾಳಾಗುತ್ತಿವೆ. ಈ ವಿನಾಶವನ್ನು ಚರಖ ನಿಲ್ಲಿಸಬಹುದು. ನಮ್ಮ ದೇಶದಲ್ಲಿ ದಿನದ ತಲಾ ಆದಾಯ ಎಷ್ಟೆಂಬುದು ನಿಮಗೆ ಗೊತ್ತೆ? ಸುಮಾರು ಒಂದೂವರೆ ಆಣೆ ಎಂದು ನಮ್ಮ ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಈ ಅಂಕಿ ಸಹ ತಪ್ಪುದಾರಿಗೆಳೆಯತಕ್ಕದ್ದೆ. ಒಂದು ನದಿಯ ಆಳ ಕೆಲವು ಕಡೆ ಆರು ಅಡಿಗಳಷ್ಟಿದ್ದು ಇತರ ಕಡೆಗಳಲ್ಲಿ ಎರಡು ಅಡಿಗಳಿರುತ್ತದೆ; ಎಂದಿಟ್ಟುಕೊಳ್ಳಿ. ಅದರ ಸರಾಸರಿ ಆಳ ನಾಲ್ಕು ಅಡಿಗಳೆಂದು ಹೇಳಿಕೊಂಡು ಅದನ್ನು ದಾಟಲು ಹೋದರೆ ಆತ ಮುಳುಗಿ ಹೋಗುವುದಿಲ್ಲವೇ? ಅದೇ ರೀತಿ ಅಂಕಿ ಅಂಶಗಳು ತಪ್ಪುದಾರಿಗೊಯ್ಯುವುದು. ಬಡಮನುಷ್ಯನಿಗೂ ವೈಸರಾಯರಿಗೂ ಲಕ್ಷಾಧೀಶರಿಗೂ ಬರುವ ಆದಾಯಗಳನ್ನು ಒಟ್ಟುಗೂಡಿಸಿ ಸರಾಸರಿ ಆದಾಯವನ್ನು ಕಂಡುಹಿಡಿಯುತ್ತಾರೆ. ಆದುದರಿಂದ ನಿಜವಾದ ತಲಾ ಆದಾಯ ಒಂದೂವರೆ ಆಣೆಯಷ್ಟೂ ಆಗುವುದಿಲ್ಲ. ಚರಖದ ಸಹಾಯದಿಂದ ಈ ಆದಾಯವನ್ನು ಮತ್ತೆ ಒಂದೂವರೆ ಆಣೆಯಷ್ಟಾದರೂ ಹೆಚ್ಚಿಸಿದರೆ ಆಗ ಚರಖವನ್ನು ನನ್ನ ಕಾಮಧೇನು ಎಂದು ಕರೆಯುವುದು ಸರಿಯಲ್ಲವೆ? ನನಗೆ ಅತಿಮಾನವ ಶಕ್ತಿ ಇದೆ ಎಂದು ಕೆಲವರು ಹೇಳುತ್ತಾರೆ. ನನಗೆ ಅದ್ಭುತ ಚಾರಿತ್ರ್ಯ ವಿದೆಯೆಂದು ಕೆಲವರು ಹೇಳುತ್ತಾರೆ. ನಾನೇನು ಎಂಬುದನ್ನು ದೇವರೇ ಬಲ್ಲ. ಸತ್ಯಾಗ್ರಹದ ಕಾರ್ಯಕಾರಿತ್ವದ ಬಗ್ಗೆ ಒಪ್ಪದಿರಬಹುದು. ಆದರೆ ಚರಖದ ಬಗ್ಗೆ ಇಷ್ಟು ಸ್ವಯಂವೇದ್ಯವೂ ವಾಸ್ತವವೂ ಆದ ಅಂಶಗಳಿರುವಾಗ ಅದನ್ನು ಒಪ್ಪದಿರಲು ಕಾರಣವೇ ಇಲ್ಲ. ಭಾರತದಲ್ಲಿ ಬಡತನವೇ ಇಲ್ಲವೆಂದೂ, ದಿನಕ್ಕೆ ಕೆಲವು ಪೈಸೆಗಳೂ ದೊರೆಯದೆ ಹಸಿದಿರುವ ಜನರ ಸಂಖ್ಯೆ ವಿರಳವೆಂದೂ ಯಾರಾದರೂ ನನಗೆ ಮನದಟ್ಟಾಗುವಂತೆ ತೋರಿಸಿಕೊಟ್ಟರೆ ನನ್ನ ತಪ್ಪನ್ನು ಒಪ್ಪಿಕೊಂಡು ಚರಖವನ್ನು ನಾಶಮಾಡಿಬಿಡುತ್ತೇನೆ.

"ಕೊಂಕಣದಲ್ಲಿ ಬಡತನವಿದೆಯೆಂದು ನೀವು ಹೇಳುವಾಗ ಅದರ ಅರ್ಥವೇನೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡಿರಬೇಕು. ನೀವು ಬಡವರಾಗಿದ್ದರೆ ನಿಮ್ಮ ಬಡತನವನ್ನು ಹೋಗಲಾಡಿಸಲು ಚರಖ ಬಿಟ್ಟರೆ ಮತ್ತಾವ ಸಾಧನವೂ ಇಲ್ಲ. ಅದು ಮಹಿಳೆಯರ ಮರ್ಯಾದೆಯನ್ನು ರಕ್ಷಿಸುತ್ತದೆ. ಮೊದಲು ನೀವು ಚರಖಕ್ಕೂ ಅದಕ್ಕೆ ಸಂಬಂಧಿಸಿದ ಎಲ್ಲ ಅಂಶಗಳಿಗೂ ಮೊರೆಹೋಗಿ; ಮತ್ತೆಲ್ಲವೂ ನಿಮಗೆ ಅನಂತರ ತಾನೇ ತಾನಾಗಿ ಬಂದು ಸೇರುತ್ತವೆ. ಚಾರಿತ್ರ್ಯವನ್ನು ನೀವು ಹೇಗೆ ಉಪೇಕ್ಷಿಸುತ್ತೀರಿ? ಲೋಕಮಾನ್ಯರ ಅನು

ಯಾಯಿಗಳಾಗಿದ್ದುಕೊಂಡು ಚರಖವನ್ನು ತೆಗಳುವುದಾಗಲೀ ತಿರಸ್ಕರಿಸುವುದಾಗಲೀ ನಿಮಗೆ ತರವೆ?

"ಓರ್ವ ಯುವಕ ನನ್ನನ್ನು ಕಠಿಣವಾಗಿ ಕೇಳಿದ ರೀತಿಯಲ್ಲಿ ನೀವೂ ಕೇಳಬಹುದು; 'ಲೋಕಮಾನ್ಯರಿಗೆ ಇದರಲ್ಲಿ ವಿಶ್ವಾಸವಿದ್ದಿದ್ದರೆ ಇದನ್ನು ಕೈಗೆತ್ತಿಕೊಳ್ಳಬೇಕೆಂದು ಜನರಿಗೆ ಅವರು ಏಕೆ ಹೇಳಲಿಲ್ಲ?' ನಿಮ್ಮ ಈ ಪ್ರಶ್ನೆಯಿಂದ ನಾನು ವಿಚಲಿತನಾಗಲಾರೆ. ಲೋಕಮಾನ್ಯರು ಸ್ವದೇಶಿಯ ಮಾತನಾಡಿದಾಗ ಖಾದಿ ಅವರ ಮನಸ್ಸಿನಲ್ಲಿತ್ತೋ ಇಲ್ಲವೋ ತಿಳಿಯದು; ಆದರೆ ಅವರ ಸ್ವದೇಶಿಯಲ್ಲಿ ಖಾದಿ ಅಡಕವಾಗದೆ ಇರದು. ನಾನು ಲೋಕಮಾನ್ಯರ ಉತ್ತರಾಧಿಕಾರಿ; ಅವರು ಬಿಟ್ಟು ಹೋಗಿರುವ ಆಸ್ತಿಯನ್ನು ನಾನು ವರ್ಧಿಸದಿದ್ದರೆ ಅವರಿಗೆ ತಕ್ಕ ಮಗನೆನಿಸುವುದಿಲ್ಲ.

"ಲೋಕಮಾನ್ಯರ ಸಂದೇಶವನ್ನು ಕುರಿತು ನಾನು ಚೆನ್ನಾಗಿ ಪರ್ಯಾಲೋಚನೆ ಮಾಡಿದ್ದೇನೆ. ಅದಕ್ಕೆ ನನ್ನ ಅನೇಕ ವರ್ಷಗಳ ಅನುಭವವನ್ನು ಅನ್ವಯಿಸಿದ್ದೇನೆ. ಲೋಕಮಾನ್ಯರ ಸಂದೇಶವೆಂದರೆ ಖಾದಿ ಎಂಬ ತೀರ್ಮಾನಕ್ಕೆ ಬಂದಿದ್ದೇನೆ. ಅವರು ಏನು ಮಾಡುತ್ತಿದ್ದರೆಂಬುದು ನಿಮಗೆ ಗೊತ್ತೆ? ಅವರು ಸಾಯುವುದಕ್ಕೆ ಸ್ವಲ್ಪ ಮುಂಚೆ ನಡೆದ ಘಟನೆಯೊಂದನ್ನು ಹೇಳುತ್ತೇನೆ. ಖಿಲಾಫತ್ ಪ್ರಶ್ನೆಯ ಸಂಬಂಧವಾಗಿ ಶೌಕತಾಲಿಯವರು ಅವರನ್ನು ನೋಡಿದಾಗ ಲೋಕಮಾನ್ಯರು ಹೀಗೆ ಹೇಳಿದರು 'ಗಾಂಧಿಯವರು ಯಾವುದಕ್ಕೆ ರುಜು ಹಾಕುತ್ತಾರೋ ಅದಕ್ಕೆ ನಾನೂ ಸಹಿ ಹಾಕುತ್ತೇನೆ; ಏಕೆಂದರೆ ಈ ವಿಷಯದಲ್ಲಿ ಅವರಿಗೆ ಚೆನ್ನಾದ ಜ್ಞಾನವಿದೆ ಎಂದು ನಾನು ನಂಬುತ್ತೇನೆ.' ಲೋಕಮಾನ್ಯರು ಸ್ವದೇಶಿಯ ಬಳಕೆಯ ಬಗ್ಗೆ ಸಲಹೆ ಮಾಡಿದಾಗ ಖಾದಿ ಅವರ ಮನಸ್ಸಿನಲ್ಲಿರಲಿಲ್ಲವೆಂದೇ ಭಾವಿಸೋಣ. ಅದರಿಂದ ಆದದ್ದೇನು? ಉದಾಹರಣೆಗೆ, ನಾವು ಕನ್ನಡಕಗಳನ್ನು ತಯಾರು ಮಾಡುತ್ತಿದ್ದೇವೆದಿಟ್ಟುಕೊಳ್ಳಿ. 'ಅವನ್ನು ಉಪಯೋಗಿಸ ಬೇಕೆಂದು ಲೋಕಮಾನ್ಯರು ಹೇಳಿಲ್ಲ; ಆದುದರಿಂದ ಅವನ್ನು ನಾವು ಉಪಯೋಗಿಸುವ ಹಾಗಿಲ್ಲ' ಎಂದು ಯಾರಾದರೂ ಹೇಳಿದರೆ ಸರಿಯಾಗುತ್ತದೆಯೆ? ಅಂತಹವನನು ಪದಶಃ ಅರ್ಥಮಾಡುವ ಪ್ರವೃತ್ತಿಯುಳ್ಳ ವ್ಯಕ್ತಿಯೆಂದು ಅವನನ್ನು ಕೈಬಿಡುತ್ತೇವೆ. ಅಂತಹವನನ್ನು ಗೀತೆಯು 'ವೇದವಾದರತ' ಎಂದು ವರ್ಣಿಸುತ್ತದೆ. ವೇದಗಳನ್ನು ಪದಶಃ ಅರ್ಥಮಾಡುವವನಿಗೆ ಅವುಗಳಲ್ಲಿನ ಅನಂತ ಅರ್ಥವನ್ನು ತಿಳಿಯಲು ಸಾಧ್ಯ ವಾಗುವುದಿಲ್ಲ; ಅಂತೆಯೇ ಲೋಕಮಾನ್ಯರ ಸಂದೇಶವನ್ನು ಪದಶಃ ಅರ್ಥಮಾಡು ವವರಿಗೆ ಅದರ ಅಪಾರ ಶಕ್ತಿಯು ಅರಿವಿರುವುದಿಲ್ಲ."

ಸಭೆಯು ಮುಗಿದನಂತರ, ರೋಗಗ್ರಸ್ತರಾಗಿದ್ದ ಸಾವರ್‌ಕರ್‌ರನ್ನು ನೋಡಲು ಹೋದರು. ಗಾಂಧಿಯವರು ತಮ್ಮಲ್ಲಿಗೆ ಮಿತ್ರರಾಗಿ ಬಂದಿದ್ದಾರೆಯೇ ಹೊರತು ರಾಜಕೀಯ ನಾಯಕರಾಗಿ ಅಲ್ಲ ಎಂದು ಸಾವರ್‌ಕರ್ ಸ್ಪಷ್ಟಪಡಿಸಿದರು. ಅಸ್ಪೃಶ್ಯತೆ ಮತ್ತು ಶುದ್ಧಿಯ ಬಗ್ಗೆ ಗಾಂಧಿಯವರ ನಿಲುವೇನೆಂಬುದನ್ನು ಸ್ಪಷ್ಟಪಡಿಸಬೇಕೆಂದು ಕೋರಿದರು. ಈ ಸಂಬಂಧವಾಗಿ ಉಂಟಾಗಿದ್ದ ತಪ್ಪು ಕಲ್ಪನೆಯನ್ನು ತೊಡೆದು

ಹಾಕಿದರು ಗಾಂಧಿಜಿ. "ಈಗ ನಾವು ಸುದೀರ್ಘವಾಗಿ ಮಾತುಕತೆ ನಡೆಸಲಾಗುವುದಿಲ್ಲ. ನಿಮ್ಮ ಬಗ್ಗೆ ನನಗೆಷ್ಟು ಗೌರವವಿದೆಯೆಂಬುದು ನಿಮಗೆ ತಿಳಿದಿದೆ. ನಮ್ಮಿಬ್ಬರ ಅಂತಿಮ ಗುರಿ ಒಂದೇ. ನಮ್ಮಿಬ್ಬರ ನಡುವೆ ಇರುವ ಭಿನ್ನಾಭಿಪ್ರಾಯಗಳ ಮೇಲೆ ನೀವು ನನ್ನೊಡನೆ ಪತ್ರವ್ಯವಹಾರ ನಡೆಸಬೇಕೆಂದು ಕೋರುತ್ತೇನೆ. ಅಷ್ಟೇ ಅಲ್ಲ. ನೀವು ರತ್ನಗಿರಿ ಬಿಟ್ಟು ಹೋಗಲಾರಿರಿ ಎಂಬುದು ನನಗೆ ಗೊತ್ತು. ಅಗತ್ಯ ಬಿದ್ದಲ್ಲಿ ನಾನೇ ನಿಮ್ಮಲ್ಲಿಗೆ ಬರುತ್ತೇನೆ. ನಿಮ್ಮೊಡನೆ ಎರಡು ಮೂರು ದಿನಗಳಿದ್ದು ಈ ವಿಷಯಗಳನ್ನು ತೃಪ್ತಿಯಾಗುವವರೆಗೆ ಚರ್ಚಿಸುತ್ತೇನೆ."

ರತ್ನಗಿರಿಯಲ್ಲಿ ನಡೆದ ಮಹಿಳೆಯರ ಸಭೆ ತುಂಬಾ ಯಶಸ್ವಿಯಾಯಿತು. ಗಾಂಧಿಯವರಿಗೆ ನಿಧಿಯನ್ನರ್ಪಿಸಲು ಸಾವಿರಕ್ಕಿಂತ ಹೆಚ್ಚಾಗಿ ಮಹಿಳೆಯರು ಸೇರಿದ್ದರು. ಸಾವಿರಕ್ಕೂ ಕಡಿಮೆ ಜನಸಂಖ್ಯೆಯಿದ್ದ ಸಂಗಮೇಶ್ವರದಲ್ಲಿ ೫೦೦ ರೂಪಾಯಿಗಳ ನಿಧಿಯನ್ನು ಅರ್ಪಿಸಲಾಯಿತು. ಮಹದ್‌ನಲ್ಲಿ ನೂರಾರು ಮಂದಿ ಶಿವಾಜಿಯ ಮಾವಳರು ಸ್ವಾಗತಿಸಿದರು. ಆಲಿಬಾಗ್‌ನಲ್ಲಿ ಹಾಕಿದ್ದ ಹದಿನೈದು ಹಾರಗಳನ್ನು ಹರಾಜು ಮಾಡಲಾಯಿತು. ಸಾಸಾವ್ನಿಯಲ್ಲಿ ಪ್ರಧಾನವಾಗಿ ವೈಶ್ಯರ ಬಾಲಕರಿಗಾಗಿಯೇ ನಡೆಸಲಾಗುತ್ತಿದ್ದ ಮಾದರಿ ಗುರುಕುಲಕ್ಕೆ ಭೇಟಿಯಿತ್ತರು. ಸಂಜೆ ನಡೆದ ಪ್ರಶಾಂತ ಸಭೆಯಲ್ಲಿ ಹುಡುಗರು ತಾವು ಆ ತಿಂಗಳಲ್ಲಿ ನೂತಿದ್ದ ೧,೬೦,೦೦೦ ಗಜ ನೂಲನ್ನು ಆ ನೂಲಿನಿಂದಲೇ ಮಾಡಿದ ಒಂದು ತುಂಡು ಬಟ್ಟೆಯನ್ನೂ ಗಾಂಧಿಯವರಿಗೆ ಕೊಟ್ಟರು. ವೈಶ್ಯ ಜನಾಂಗದಿಂದ ಸಂಗ್ರಹಿಸಲಾಗಿದ್ದ ೫೦೧ ರೂಪಾಯಿಗಳನ್ನೂ ನೆರೆಯ ಹಳ್ಳಿಯಲ್ಲಿ ವಸೂಲು ಮಾಡಿದ್ದ ೧೯೦ ರೂಪಾಯಿಗಳನ್ನೂ ಕೊಡಲಾಯಿತು. ಅಲ್ಲದೆ ಬಾಲಕರು ದೇಶಬಂಧು ನಿಧಿಗೆ ಹಣ ಕೂಡಿಸಲು ಒಂದು ವಾರದ ಮಟ್ಟಿಗೆ ತುಪ್ಪ, ಹಾಲು ಮತ್ತು ಗೋಧಿಯ ಸೇವನೆಯನ್ನು ಬಿಟ್ಟಿದ್ದು ಅದರಿಂದ ಉಳಿಸಿದ ೬೩ ರೂಪಾಯಿಗಳನ್ನು ಕೂಡಿಟ್ಟಿದ್ದರು. ಆ ಹಣವನ್ನೂ ಸಲ್ಲಿಸಲಾಯಿತು. "ಪ್ರೀತಿಯ ಸಂಕೇತಗಳಾದ ಈ ಕೊಡುಗೆಗಳು ಬಂದಾವೆಂದು ನಾನು ನಿರೀಕ್ಷಿಸಿಯೇ ಇರಲಿಲ್ಲ. ಈ ಸಂಕೇತಗಳಿಗೆ ಕೊಡಲಾಗಿರುವ ಸ್ವರೂಪವನ್ನು ಕಂಡು ನನಗೆ ತುಂಬಾ ಆನಂದವಾಗಿದೆ." ಎಂದರು. ತಾವು ವೈಶ್ಯರಾಗಿ ವೈಶ್ಯರ ಹುಡುಗರಿಗೆ ಮಾತನಾಡುತ್ತಾ, "ವಾಣಿಜ್ಯಕ್ಕೆ ಅಂಟಿಕೊಂಡಿರುವ ಲೋಭದ ಕಳಂಕವನ್ನು ತೆಗೆದು ಹಾಕಬೇಕಾದರೆ ಚರಖವನ್ನು ಕೇಂದ್ರವನ್ನಾಗಿಟ್ಟುಕೊಂಡು ಅದರ ಸುತ್ತಲೂ ವಾಣಿಜ್ಯವನ್ನು ಬೆಳೆಸಬೇಕು. ಈ ಜಗತ್ತಿನಲ್ಲಿ ಸಾಕಷ್ಟು ಮಂದಿ ಶೋಷಕರಿದ್ದಾರೆ. ನಾವೂ ಅದೇ ದಾರಿ ಹಿಡಿಯುವುದಾದರೆ ನಮ್ಮ ಶೋಷಣೆಗೆ ಒಳಗಾಗುವ ಯಜ್ಞಪಶುಗಳನ್ನು ಇತರ ಗ್ರಹಗಳಲ್ಲಿ ಹುಡುಕಬೇಕಾಗುತ್ತದೆ. ನಾವು ಕೈಗೊಳ್ಳಬಹುದಾದ ಹಿತಕರ ರಾಷ್ಟ್ರೀಯ ವ್ಯಾಪಾರವೆಂದರೆ ಖಾದಿಯೊಂದೇ; ವೈಶ್ಯರು ಅದನ್ನು ಉಪೇಕ್ಷಿಸುವಂತಿಲ್ಲ."

ಮುಂಜಾನೆಯಲ್ಲಿ ಗಾಂಧಿಯವರು ಅಡಿಗೆಮನೆ ಮತ್ತು ನೈರ್ಮಲ್ಯದ ವ್ಯವಸ್ಥೆ ಬಗ್ಗೆ ಉಪಾಧ್ಯಾಯರೊಂದಿಗೆ ಮಾತುಕತೆನಡೆಸಿದರು. "ಸೇವನೆ ಮತ್ತು ವಿಸರ್ಜನೆ,

ಈ ಎರಡು ಕ್ರಿಯೆಗಳ ನಡುವೆ ಜೀವನ ತೂಗಾಡುತ್ತಿದೆ. ನೀವು ವಿದ್ಯಾರ್ಥಿಗಳಿಗೆ ಓದು ಬರಹದ ಶಿಕ್ಷಣ ಕೊಡುವ ಜೊತೆಗೆ ಅಡಿಗೆ ಮಾಡುವುದರಲ್ಲೂ ಕಸಗುಡಿಸುವುದರಲ್ಲೂ ಅವರನ್ನು ಸಿದ್ಧಹಸ್ತರನ್ನಾಗಿ ಮಾಡಿದರೆ ನಿಮ್ಮ ಸಂಸ್ಥೆಯನ್ನು ಆದರ್ಶ ಸಂಸ್ಥೆಯನ್ನಾಗಿ ಮಾಡುತ್ತೀರಿ." ಎಂದು ಹೇಳಿದರು.

ಅನಂತರ ಗಾಂಧಿಯವರು ಮಾರುತಿಯ ವಿಗ್ರಹವನ್ನು ಪ್ರತಿಷ್ಠೆಮಾಡಿದರು. "ಇಲ್ಲಿ ನಾನು ಮಾರುತಿಯ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡುತ್ತೇನೆ. ಮಾರುತಿಯು ಮಹಾಶಕ್ತನೆಂಬ ಕಾರಣದಿಂದ ಮಾತ್ರ ಅದನ್ನು ಮಾಡುತ್ತಿಲ್ಲ. ರಾವಣನಿಗೂ ಅಂತಹ ಶಕ್ತಿಯಿತ್ತು. ಆದರೆ ಮಾರುತಿಗೆ ಇದ್ದದ್ದು ಆತ್ಮಬಲ. ಆತನ ದೈಹಿಕ ಶಕ್ತಿಯು ಆತ್ಮ ಶಕ್ತಿಯ ವ್ಯಕ್ತ ಸ್ವರೂಪವಾಗಿತ್ತು. ಅವನ ಶಕ್ತಿಯು ರಾಮನಲ್ಲಿ ಅವನಿಟ್ಟಿದ್ದ ಅನನ್ಯ ಭಕ್ತಿ ಹಾಗೂ ಬ್ರಹ್ಮಚರ್ಯೆಯ ಫಲವಾಗಿತ್ತು. ನೀವೂ ಬ್ರಹ್ಮಚರ್ಯೆಯನ್ನು ಪಾಲಿಸಿ ಮಾರುತಿಯಂತೆಯೇ ಅಪ್ರತಿಮ ಪರಾಕ್ರಮಿಗಳಾಗಿರಿ. ನಿಮ್ಮ ಶೌರ್ಯವನ್ನು ಮಾತೃ ಭೂಮಿಯ ಸೇವೆಗಾಗಿ ಮುಡುಪಾಗಿಡಿ." ಎಂದು ಹೇಳಿದರು.

ಮಹಾರಾಷ್ಟ್ರದ ಪ್ರವಾಸದ ಕಾರ್ಯಕ್ರಮದಲ್ಲಿ ಕಟ್ಟಕಡೆಯದಾಗಿ ಪುಣೆಗೆ ಹೋದರು. ದೇಶಬಂಧು ಸ್ಮಾರಕ ನಿಧಿಗೆ ಗಣನೀಯವಾದ ಮೊತ್ತವನ್ನು ಕೂಡಿಸುವುದು ಕಾರ್ಯಕರ್ತರಿಗೆ ಕಷ್ಟಕರವಾದ ಕೆಲಸವಾಗಿತ್ತು. ಗಾಂಧಿಯವರು ಬರುವ ಹೊತ್ತಿಗೆ ೫೦೦೦ ರೂಪಾಯಿಗಳನ್ನು ಸಂಗ್ರಹಿಸಿದ್ದರು. ಗಾಂಧಿಯವರ ವಿಚಾರಗಳನ್ನು ಒಪ್ಪಿದ್ದ ವರಿಗೆ ಸಭೆಗಳ ಆವಶ್ಯಕತೆ ಇರಲಿಲ್ಲ. ಆದರೆ ಇನ್ನೂ ಪರಿವರ್ತನೆಯಾಗದ ಜನರಿಗೆ ಈ ಸಭೆಗಳು ಅಗತ್ಯವಾಗಿದ್ದುವು. "ಹೃದಯವನ್ನು ಬಿಚ್ಚಿತೋರಿಸುವ ಶಕ್ತಿ ಹನುಮಂತ ನಿಗಿದ್ದಂತೆ ನನಗಿಲ್ಲ. ಹಾಗೆ ನೀವು ಯಾರಾದರೂ ನನ್ನ ಹೃದಯವನ್ನು ಸೀಳಿದರೆ ಅಲ್ಲಿ ರಾಮನ ಮೇಲಿನ ಪ್ರೇಮವನ್ನಲ್ಲದೆ ಮತ್ತೇನನ್ನೂ ಕಾಣಲಾರಿರಿ. ಭಾರತದಲ್ಲಿನ ಕೋಟ್ಯಂತರ ನಿರ್ಗತಿಕ ಜನರಲ್ಲಿ ರಾಮನನ್ನು ನಾನು ಪ್ರತ್ಯಕ್ಷವಾಗಿ ಕಾಣುತ್ತಿದ್ದೇನೆ." ಎಂದರು.

ಸಹಸ್ರಾರು ಜನ ವಿದ್ಯಾರ್ಥಿಗಳು ಅಲ್ಲಿ ಸೇರಿದ್ದರು. ಅವರಲ್ಲಿ ಕೆಲವರು ತಮಾಷೆ ಗಾಗಿ ಬಂದಿದ್ದರು. ಮಿಕ್ಕವರು ಗಾಂಧಿಯವರ ಸಂದೇಶವನ್ನು ಕೇಳಲು ಬಂದಿದ್ದರು. ಗಾಂಧಿಜಿ ಬರುವ ಹೊತ್ತಿಗೆ ಮಧ್ಯರಾತ್ರಿಯಾಗಿತ್ತು. ಅವರೆಲ್ಲರೂ ತಾಳ್ಮೆಯಿಂದ ಕಾದು ಕುಳಿತಿದ್ದರು. ಇಂಗ್ಲೀಷ್‌ನಲ್ಲಿ ಮಾತನಾಡಬೇಕೆಂಬ ಕೂಗು ಎದ್ದಿತು. ಈ ಪ್ರವಾಸದ ಅವಧಿಯಲ್ಲಿ ವಿದ್ಯಾರ್ಥಿಗಳು ಹಾಗೆ ಕೂಗಿದ್ದು ಇದೇ ಮೊದಲು. "ಪುಣೆಯ ವಿದ್ಯಾರ್ಥಿ ಗಳಿಗೆ ಅರ್ಥವಾಗುವ ಹಾಗೆ ಹೇಳಲಿಕ್ಕಾಗುವುದಿಲ್ಲವೆಂದರೆ ಅದು ನನ್ನ ದೌರ್ಭಾಗ್ಯ, ದೇಶದ ದೌರ್ಭಾಗ್ಯ. ನಿಮ್ಮ ದೌರ್ಭಾಗ್ಯ ಎಂದರೂ ಸರಿಯೆ." ಎಂದು ಆರಂಭಿಸಿದರು ಗಾಂಧಿಜಿ. ವಿದ್ಯಾರ್ಥಿಗಳ ಕೂಗನ್ನು ಮನ್ನಿಸಿ ಇಂಗ್ಲೀಷಿನಲ್ಲೇ ಭಾಷಣವನ್ನಾರಂಭಿಸಿದರು. ಸಭೆಗೆ ತಡವಾಗಿ ಬಂದದ್ದಕ್ಕೆ ವಿಷಾದ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳು ತಮ್ಮ ಮಾತನ್ನು ಕಿವಿಗೊಟ್ಟು ಕೇಳುತ್ತಿದ್ದಾರೆಂದು ಕಂಡಕೂಡಲೇ ಹಿಂದಿಯಲ್ಲಿ ಮಾತನಾಡಿದರು.

"ನನ್ನ ಸಂದೇಶವನ್ನು ಇಂಗ್ಲಿಷಿನಲ್ಲಿ ಹೇಳಿದರೆ ನಿಮ್ಮಿಂದ ಹೆಚ್ಚು ಕಾಣಿಕೆ ಬರಬಹುದು. ನೀವು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಆದರೆ ನನ್ನ ಸಂದೇಶ ನನಗಿಂತ ಶ್ರೇಷ್ಠವಾದದ್ದು. ಅದನ್ನು ಹೇಳಲು ಉಪಯೋಗಿಸಲಾಗುವ ಮಾಧ್ಯಮಕ್ಕಿಂತ ಅತಿ ಶ್ರೇಷ್ಠವಾದದ್ದು. ಅದಕ್ಕೆ ತನ್ನದೇ ಆದ ಶಕ್ತಿಯಿದೆ. ಅದು ಭಾರತದ ಯುವಕರ ಮೇಲೆ ಪರಿಣಾಮ ಬೀರಬಹುದದೆಂದು ಆಶಿಸುತ್ತೇನೆ. ನನ್ನ ಜೀವಿತ ಕಾಲದಲ್ಲಿ ಅದು ಪರಿಣಾಮ ಮಾಡುತ್ತದೆಯೋ ಇಲ್ಲವೋ ನಾನು ಅರಿಯೆ. ಅದಕ್ಕಾಗಿ ನಾನು ಚಿಂತಿಸುವುದಿಲ್ಲ. ಆದರೆ ನನ್ನ ನಂಬಿಕೆ ಅಚಲವಾದದ್ದು. ದಿನಗಳು ಉರುಳಿದಂತೆಲ್ಲಾ ಹಾಗೂ ಜನಸಾಮಾನ್ಯರ ಸಂಕಟ ಸ್ಥಿತಿ ಮುಂದುವರಿದಂತೆಲ್ಲಾ ನನ್ನ ಸಂದೇಶವು ಪ್ರತಿಯೊಬ್ಬ ಭಾರತೀಯನ ಹೃದಯವನ್ನು ಮೀಟುತ್ತದೆ. ಹೃದಯವಿರುವ ಪ್ರತಿಯೊಬ್ಬ ಭಾರತೀಯನೂ ಅದಕ್ಕೆ ಒಳ್ಳೆಯ ಪ್ರತಿಕ್ರಿಯೆ ನೀಡುತ್ತಾನೆ. ಈ ಇಳಿವಯಸ್ಸಿನಲ್ಲಿ ನ್ಯಾಯವಾಗಿ ನಾನು ಒಂದೆಡೆ ಕುಳಿತು ವಿಶ್ರಾಂತಿ ಪಡೆಯಬೇಕು. ಅದು ಬಿಟ್ಟು ದೇಶದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಓಡಾಡುತ್ತಿದ್ದೇನೆ. ಕಾರಣವಿಲ್ಲದೆ ಹೀಗೆ ಮಾಡುತ್ತಿಲ್ಲ. ನನ್ನ ಜೀವಮಾನದ ಕೊನೆಯ ದಿನಗಳವರೆಗೂ ಈ ಸಂದೇಶವನ್ನು ಆದಷ್ಟು ಹೆಚ್ಚು ಜನರ ಕಿವಿಗೂ ಹೃದಯಕ್ಕೂ ಮುಟ್ಟಿಸಬೇಕೆಂಬ ಭಾವನೆ ನನ್ನಲ್ಲಿ ದಿನದಿನಕ್ಕೂ ಬಲವಾಗುತ್ತಿದೆ." ಎಂದು ಹೇಳಿದರು ಗಾಂಧಿಜಿ.

ಭಾಷಣದ ಮುಂದಿನ ಭಾಗವೆಲ್ಲ ಚರಖ ಚಳವಳಿ ಹಾಗೂ ವಿದ್ಯಾರ್ಥಿಗಳ ಕರ್ತವ್ಯಕ್ಕೆ ಸಂಬಂಧಿಸಿತ್ತು. ಯಾವ ಜನರ ನೈತಿಕ ಹಾಗೂ ಆರ್ಥಿಕ ವಿನಾಶದಿಂದ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತಿ ದ್ದಾರೋ ಅಂತಹವರ ಬಗ್ಗೆ ಕರ್ತವ್ಯವೇನೆಂಬುದನ್ನು ತಿಳಿಸಿದರು. "ಬೇಕಿದ್ದರೆ, ನೀವು ಇದೇ ಶಿಕ್ಷಣವನ್ನು ಪಡೆಯುತ್ತಾ ಹೋಗಿ. ಆದರೆ ನೀವು ಪಡೆಯುತ್ತಿರುವ ಉಪಕಾರಕ್ಕೆ ಬದಲಾಗಿ ಉಚಿತರೀತಿಯಲ್ಲಿ ಪ್ರತ್ಯುಪಕಾರ ಮಾಡಿರಿ" ಎಂದರು. "ನೀವು ಖಾದಿಯನ್ನು ಬಳಸದೆ ಇರುವುದಕ್ಕೆ ಕಾರಣ ಅದರ ಮೇಲಿನ ದ್ವೇಷದಿಂದಲ್ಲ. ದೇಶದಲ್ಲಿ ಪ್ರಚಂಡವಾಗಿರುವ ಬಡತನ ಹಾಗೂ ನಿರುದ್ಯೋಗದ ಸಮಸ್ಯೆಯನ್ನು ನಾನು ಸಾರಿ ಸಾರಿ ಹೇಳುತ್ತಿದ್ದರೂ ಆ ವಿಚಾರ ನಿಮಗೆ ಸಾಕಷ್ಟು ಮನವರಿಕೆಯಾಗಿಲ್ಲ. ಆದುದರಿಂದಲೇ ನೀವು ಖಾದಿಯನ್ನು ಧರಿಸುತ್ತಿಲ್ಲ. ತನ್ನ ದೇಶದ ನದಿಗಳು ವರ್ಷದ ಒಂದು ಭಾಗದಲ್ಲಿ ಮಂಜುಗಡ್ಡೆಯಾಗಿ ಬಿಡುತ್ತವೆಂದು ಕರ್ಜನ್‌ರು ಸಯಾಂನ ದೊರೆಗೆ ಹೇಳಿದಾಗ ಅವರು ಅದನ್ನು ನಂಬಲೇ ಇಲ್ಲ. ನಮ್ಮ ದೇಶದಲ್ಲಿ ಮೂರು ಕೋಟಿ ಜನರಿಗೆ ದಿನಕ್ಕೆ ಒಪ್ಪತ್ತು ಊಟಕ್ಕೂ ಗತಿಯಿಲ್ಲವೆಂಬುದನ್ನು ಕಣ್ಣಾರೆ ಕಂಡು ನಾನು ಹೇಳುತ್ತಿದ್ದೇನೆ." ಎಂದರು.

ಮಾರ್ಚ್ ತಿಂಗಳ ಮಧ್ಯಭಾಗದ ಹೊತ್ತಿಗೆ ಮಹಾರಾಷ್ಟ್ರದ ಪ್ರವಾಸ ಮುಗಿಯಿತು. ಅನಂತರ ಗಾಂಧಿಯವರು ಕಾಂಗ್ರಿಯಲ್ಲಿನ ಗುರುಕುಲಕ್ಕೆ ತೆರಳಿದರು. ಈ ಸಂಸ್ಥೆಯ ಮೇಲೆ ಅವರಿಗೆ ವಿಶೇಷವಾದ ಆಸಕ್ತಿ ಇತ್ತು. ಏಕೆಂದರೆ ಇದು ಸ್ವಾಮಿ ಶ್ರದ್ಧಾನಂದರ ಕಾರ್ಯಕ್ಷೇತ್ರವಾಗಿತ್ತು. ಈ ಸಂಸ್ಥೆಯು ಇಪ್ಪತ್ತೈದು ವರ್ಷಗಳ

ಸಾರ್ಥಕ ಸೇವೆಯನ್ನು ಸಲ್ಲಿಸಿತ್ತು. ಸಭಾಂಗಣದಲ್ಲಿ ಹತ್ತು ಸಹಸ್ರಕ್ಕೂ ಮೇಲ್ಪಟ್ಟು ಸಂಖ್ಯೆಯಲ್ಲಿ ಜನರು ಸೇರಿದ್ದರು.

ಗಾಂಧಿಯವರು ಮಾತನಾಡಲು ಆರಂಭಿಸಿದಾಗ ಅವರ ಧ್ವನಿಯೇ ಕುಗ್ಗಿಹೋಗಿತ್ತು. ಮಾತು ಹೊರಡಲೇ ಇಲ್ಲ. ಈಚಿನ ತಿಂಗಳುಗಳಲ್ಲಿ ಹಾಗೆ ಆದುದು ಇದೇ ಮೊದಲು. ಆದರೆ ಸ್ವಲ್ಪ ಹೊತ್ತಿನಲ್ಲೆ ಮಾತನಾಡಲು ಸಾಧ್ಯವಾಯಿತು. "ಸ್ವಾಮೀಜಿಯವರು ಸೃಷ್ಟಿಸಿದ ಶ್ರೇಷ್ಠ ಸಂಸ್ಥೆ ಗುರುಕುಲ. ಭೌತಿಕವಾಗಿ ಅವರು ಇಂದು ನಮ್ಮೊಡನಿಲ್ಲ. ಆದರೂ ಗುರುಕುಲದಲ್ಲಿ ನಮ್ಮ ಮಧ್ಯೆ ಜೀವಂತರಾಗಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಅವರ ಮೂಲಭೂತವಾದ ಕೊಡುಗೆ ಇದು. ಪಾಶ್ಚಾತ್ಯ ಶಿಕ್ಷಣದಿಂದ ನಾವು ನಮ್ಮ ಬುದ್ಧಿಕೆಡಸಿಕೊಂಡಿದ್ದಾಗ, ನಾವು ವೈದಿಕ ರೀತಿಯಲ್ಲಿ ಆಲೋಚಿಸಬೇಕು, ಕಾರ್ಯ ಮಾಡಬೇಕು ಹಾಗೂ ಶಿಕ್ಷಣ ಪಡೆಯಬೇಕು, ಎಂದು ಸ್ವಾಮೀಜಿ ನಿರ್ಧರಿಸಿದರು. ಗುರುಕುಲವಿರುವವರೆಗೆ ಸ್ವಾಮೀಜಿ ಜೀವಂತರಾಗಿರುತ್ತಾರೆ. ಗುರುಕುಲದ ಏಳಿಗೆಗಾಗಿ ಸತ್ಯ ಮತ್ತು ತ್ಯಾಗದಿಂದ, ಸ್ವಾಮೀಜಿಯವರಿಗಿದ್ದ ಧೈರ್ಯ ಮತ್ತು ಕ್ಷಮಾಶೀಲ ಬುದ್ಧಿಯಿಂದ ದುಡಿಯುವ ಈ ಸಂಸ್ಥೆಯ ಓರ್ವ ಪದವೀಧರನಿರುವವರೆಗೂ ಗುರುಕುಲ ಜೀವಂತವಾಗಿರುತ್ತದೆ. ಸ್ವಾಮೀಜಿಯವರು ಒತ್ತಿ ಹೇಳುತ್ತಿದ್ದ ಬ್ರಹ್ಮಚರ್ಯೆಗೂ ಗಮನಕೊಡಬೇಕು. ಅದಕ್ಕೆ ಗಮನ ನೀಡದಿದ್ದರೆ ಶಿಕ್ಷಣವು ನಿಷ್ಪ್ರಯೋಜಕವಾಗುತ್ತದೆ. ಸ್ತ್ರೀಯರೊಂದಿಗೆ ಕಾಮುಕ ಸಂಪರ್ಕವನ್ನು ತ್ಯಜಿಸಿದ ಮಾತ್ರಕ್ಕೆ ಬ್ರಹ್ಮಚರ್ಯೆ ಪೂರ್ಣವಾದಂತಾಗುವುದಿಲ್ಲ. ಅದು ಪ್ರಾರಂಭದ ಹೆಜ್ಜೆ ಅಷ್ಟೆ. ಎಷ್ಟೇ ಪ್ರಚೋದನೆ ಇದ್ದರೂ ವಿಚಲಿತರಾಗದೆ, ಕೋಪತಾಪಗಳನ್ನು ಮಾಡಿಕೊಳ್ಳದೆ ಇರುವ ಬ್ರಹ್ಮಚಾರಿಯ ಬ್ರಹ್ಮಚರ್ಯವು ಪರಿಪೂರ್ಣವೆನಿಸುತ್ತದೆ. ಚೈತನ್ಯದ ಮೂಲವಾದ ವೀರ್ಯವು ರೋಷಾ-ವೇಶದಿಂದ ನಾಶವಾಗುತ್ತದೆ." ಖಾದಿಯ ಬಗ್ಗೆ ಹೆಚ್ಚೇನನ್ನೂ ಹೇಳಬಯಸಲಿಲ್ಲ. "ಆದರೆ ಸ್ವಾಮೀಜಿಯವರ ಮತ್ತೊಂದು ಮಹಾಕೆಲಸವಾದ ಅಸ್ಪೃಶ್ಯತೆಯ ನಿವಾರಣೆಯು ಖಾದಿಯನ್ನು ಬಿಟ್ಟರೆ ಆಗುವುದಿಲ್ಲ; ಅದೇ ರೀತಿ ಸ್ವಾಮೀಜಿಯವರ ಧ್ಯೇಯವಾಗಿದ್ದ ವೈದಿಕ ಜೀವನ ಹಾಗೂ ವಿಚಾರದ ಸಾಧನೆಯಾಗಬೇಕಾದರೆ ಅವು ದೇಶದ ಕೋಟ್ಯಂತರ ಮಂದಿ ನಿರ್ಗತಿಕ ಜನರ ಜೀವನಕ್ಕೆ ಸಂಬಂಧಿಸಿರಬೇಕು"–ಎಂದು ಗಾಂಧಿಜಿ ನುಡಿದರು.

ನಿಧಿ ಕೂಡಿಸಲು ಮಾಡಲಾಗಿದ್ದ ಮನವಿಯನ್ನು ಅವರು ಸಮರ್ಥಿಸಿ ಆರ್ಯ ಸಮಾಜ ಮತ್ತು ಗುರುಕುಲಗಳ ಪ್ರಶಂಸಾರ್ಹ ಸೇವೆಯನ್ನು ಕೊಂಡಾಡಿದರು. "ನಾನು ಆರ್ಯ ಸಮಾಜವನ್ನು ಟೀಕಿಸಿರುವುದುಂಟು. ಆದರೆ ಅದರ ಕೆಲಸವನ್ನು ಪ್ರಶಂಸೆ ಮಾಡಲು ಅಷ್ಟೇ ಆಸಕ್ತನಾಗಿದ್ದೇನೆ. ಯಾರು ಹೃತ್ಪೂರ್ವಕವಾಗಿ ಶ್ಲಾಘನೆ ಮಾಡ ಬಲ್ಲರೋ ಅವರು ಟೀಕೆ ಮಾಡಲೂ ಅರ್ಹರಾಗುತ್ತಾರೆ. ಈಚಿನ ವರ್ಷಗಳಲ್ಲಿ ಅನೇಕ ರಾಜಕೀಯ ಹಾಗೂ ಧಾರ್ಮಿಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಅವುಗಳಲ್ಲೆಲ್ಲ ಆರ್ಯ ಸಮಾಜದ ಸಾಧನೆ ಮಹತ್ವವುಳ್ಳದ್ದು. ಬ್ರಿಟಿಷರು ಭಾರತಕ್ಕೆ ಬಂದಾಗಿನಿಂದ ವರ್ಗಗಳ ಮತ್ತು ಜನಸಾಮಾನ್ಯರ ನಡುವಿನ ಅಂತರ ಬೆಳೆಯುತ್ತಿದೆ. ಈ ಅಂತರವನ್ನು ಹೋಗ

ಲಾಡಿಸಲು ಆರ್ಯ ಸಮಾಜವು ಮಾಡುತ್ತಿರುವ ಕೆಲಸ ಅತ್ಯಂತ ಹಿರಿದಾದುದು. ಯಾವ ಸಂಸ್ಥೆಯೂ ಪರಿಪೂರ್ಣವಾಗಿಲ್ಲ. ಗುರುಕುಲದಲ್ಲಿ ಕಾಣಬರುವ ಕೆಲವು ದೋಷ ಗಳನ್ನು ತೋರಿಸಬಲ್ಲೆ. ಆದರೆ ದೇಶಕ್ಕೆ ಅದು ಗಣನೀಯವಾದ ಸೇವೆಯನ್ನು ಸಲ್ಲಿಸಿದೆ ಎನ್ನುವ ಅಂಶವನ್ನು ಅಲ್ಲಗಳೆಯುವ ಹಾಗಿಲ್ಲ. ದೇವನಾಗರಿ ಲಿಪಿಯಲ್ಲಿ ಓದು ಬರೆಯ ಬಲ್ಲ ಪಂಜಾಬಿಯೊಬ್ಬನು ಎಲ್ಲಾದರೂ ಸಿಕ್ಕಿದರೆ, ಆತ ಯಾವುದಾದರೂ ಒಂದು ಗುರುಕುಲದಲ್ಲಿ ತರಪೇತು ಪಡೆದಿರಬೇಕೆಂದು ಥಟ್ಟನೆ ತೀರ್ಮಾನಿಸುತ್ತೇನೆ. ಆ ಪ್ರದೇಶ ಗಳಲ್ಲಿ ಸಂಸ್ಕೃತ ಜ್ಞಾನವನ್ನೂ ಆರ್ಯ ಸಂಸ್ಕೃತಿಯನ್ನೂ ಪುನರುಜ್ಜೀವನಗೊಳಿಸುವು ದರಲ್ಲಿ ಗುರುಕುಲಗಳು ಮಾಡಿರುವಷ್ಟು ಕೆಲಸವನ್ನು ಮತ್ತಾವ ಸಂಸ್ಥೆಯೂ ಮಾಡಿಲ್ಲ". ಎಂದು ಗಾಂಧಿಜಿ ನುಡಿದರು.

ಗಾಂಧಿಯವರು ಮಾರ್ಚ್ ೨೩ರಂದು ಮುಂಬಯಿ ತಲುಪಿದರು. ಅವರು ಶಕ್ತಿ ಮೀರಿ ಕೆಲಸ ಮಾಡಿದರು. ಮಧ್ಯರಾತ್ರಿಯ ವರೆಗೆ ಭಾಷಣ ಮಾಡಿ ರಾತ್ರಿ ಒಂದು ಗಂಟೆಗೆ ಮಲಗಿಕೊಂಡರು. ಮಾರನೆ ದಿನ ಮಾಮೂಲಿನ ಬೆಳಗಿನ ಝಾವ ನಾಲ್ಕು ಗಂಟೆಯ ಪ್ರಾರ್ಥನೆಯನ್ನು ಐದು ಗಂಟೆಗೆ ಮಾಡಿದರು. ಅದಕ್ಕೆ ಮುಂಚೆ ಏಳಲು ದೈಹಿಕವಾಗಿ ಸಾಧ್ಯವೇ ಆಗಲಿಲ್ಲ. ಮಧ್ಯಾಹ್ನ ಎರಡು ಗಂಟೆಗೆ ರೈಲ್ವೆ ನಿಲ್ದಾಣಕ್ಕೆ ಹೊರಡುವ ವರೆಗೂ ಅವರನ್ನು ನೋಡಲು ತಂಡೋಪ ತಂಡವಾಗಿ ಸಂದರ್ಶನಾರ್ಥಿಗಳು ಬರುತ್ತಲೇ ಇದ್ದರು. ಮಾರ್ಗ ಮಧ್ಯದಲ್ಲಿ ರೋಗಿಗಳನ್ನು ನೋಡಿಕೊಂಡು ಹೋಗಬೇಕಾಗಿತ್ತು. ವಿದ್ಯಾರ್ಥಿ ಗಳೊಂದಿಗೆ ಮಾತನಾಡಬೇಕಾಗಿತ್ತು.

ಗಾಂಧಿಯವರು ಸಾಮಾನ್ಯವಾಗಿ ರೈಲಿನಲ್ಲಿ ಸ್ವಲ್ಪ ನಿದ್ದೆ ಮಾಡುವ ರೂಢಿಯಿಟ್ಟು ಕೊಂಡಿದ್ದರು. ಆದರೆ ಆ ದಿನ ವಿಶ್ರಾಂತಿಯನ್ನು ತೆಗೆದುಕೊಳ್ಳದೆ ಕೆಲಸ ಮಾಡಿದರು. ಐದು ಗಂಟೆ ಸಮಯದಲ್ಲಿ ಅವರಿಗೆ ಸ್ವಲ್ಪ ತಲೆಸುತ್ತಿದ ಹಾಗೆ ಆಯಿತು. ದೇಹದ ಎಡ ಪಾರ್ಶ್ವವೆಲ್ಲ ಜೋವು ಹಿಡಿದು ಜಡವಾಗಿದ್ದಿತು. ಪುಣೆಯ ರೈಲ್ವೆ ನಿಲ್ದಾಣದಲ್ಲಿ ಅವರನ್ನು ಅನಾಮತ್ತು ಎತ್ತಿಕೊಂಡುಹೋಗಿ ಬೆಂಗಳೂರು ಮೇಲ್ ಗಾಡಿಯಲ್ಲಿ ಕೂರಿಸಬೇಕಾಯಿತು. ಅವರ ಕಣ್ಣುಗಳಿಗೆ ಮಬ್ಬು ಕವಿದಿತ್ತು. ಅವರು ಹೇಳಬೇಕಾದ್ದನ್ನು ಕಷ್ಟಪಟ್ಟು ಕಾಗದದ ಮೇಲೆ ಬರೆಯುತ್ತಿದ್ದರು. ರಾತ್ರಿ ಚೆನ್ನಾಗಿ ನಿದ್ರೆ ಮಾಡಿದ್ದರಿಂದ ಸ್ವಲ್ಪ ಚೇತರಿಸಿಕೊಂಡು ಬೆಳಿಗ್ಗೆ ಲವಲವಿಕೆಯಿಂದ ತಮ್ಮ ಕಾರ್ಯವನ್ನಾರಂಭಿಸಿದರು. ಕೊಲ್ಲಾಪುರದಲ್ಲಿ ಏಳು ಸಭೆಗಳಲ್ಲಿ ಮಾತನಾಡಿದರು. ಇದರಿಂದಾಗಿ ಮತ್ತೆ ಖಾಯಿಲೆ ಮರುಕಳಿಸಿತು. ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಅವರಿಗೆ ಸಲಹೆ ಮಾಡಲಾಯಿತು ಆದರೆ ಏನೇ ಆದರೂ ಕಾರ್ಯಕ್ರಮವನ್ನು ಪೂರ್ಣಗೊಳಿಸಬೇಕೆಂದು ಅವರು ಇಚ್ಛೆ ಪಟ್ಟರು.

ಕರ್ನಾಟಕದ ಪ್ರವಾಸದ ಅಂಗವಾಗಿ ಮೊದಲು ನಿಪ್ಪಾಣಿಗೆ ಆಗಮಿಸಿದರು. ಅಲ್ಲಿ ನಾಲ್ಕು ದಿನ ಹಾಸಿಗೆ ಹಿಡಿದು ಮಲಗಬೇಕಾಯಿತು. ಅವರು ತಂಗಿದ್ದ ಮನೆಯ

ಮುಖ್ಯದ್ವಾರದವರೆಗೆ ಜನರು ಬಂದು ಅವರ ಆರೋಗ್ಯ ಸ್ಥಿತಿಯ ಬಗ್ಗೆ ನಿನವೂ ಪ್ರಕಟಿಸಲಾಗುತ್ತಿದ್ದ ಸುದ್ದಿಯನ್ನು ನೋಡಿಕೊಂಡು ಹೋಗುತ್ತಿದ್ದರು. ನಿಪ್ಪಾಣಿಯನ್ನು ಬಿಟ್ಟು ಹೊರಡುವ ಮುನ್ನ ಅವರ ಆತಿಥೇಯರ ಮನವಿಯಂತೆ ಗಾಂಧಿಯವರು ಆ ಮನೆಯ ಉಪ್ಪರಿಗೆಯ ಮೊಗಸಾಲೆಯಲ್ಲಿ ಕುಳಿತು ಕೊಂಡರು. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರು ಗಾಂಧಿಯವರ ದರ್ಶನವನ್ನೂ ಮತ್ತು ಅವರ ಸಂದೇಶ ವನ್ನೂ ಪಡೆದರು. ಅವರು ಅಲ್ಲಿಂದ ಪ್ರಯಾಣ ಮಾಡಿದಂದು ಪ್ರಾತಃಕಾಲ ಅವರನ್ನು ಕಾರಿನಲ್ಲಿ ನೇರವಾಗಿ ಸಭಾಂಗಣಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಶಾಂತವಾಗಿ ಕುರ್ಚಿಯ ಮೇಲೆ ಕುಳಿತಿದ್ದ ಹಾಗೆಯೇ ಅವರಿಗೆ ಮಾನಪತ್ರವನ್ನರ್ಪಿಸಿ ೮೪೫೭ ರೂಪಾಯಿಗಳ ನಿಧಿಯನ್ನು ಕೊಡಲಾಯಿತು. ಮೆತ್ತನೆಯ ದನಿಯಲ್ಲಿ ಧನ್ಯವಾದವನ್ನರ್ಪಿಸಿ ಅವರು ಬೆಳಗಾವಿಗೆ ಕಾರಿನಲ್ಲಿ ತೆರಳಿದರು.

ನಿಪ್ಪಾಣಿಯಲ್ಲಿ ಗಾಂಧಿಯವರನ್ನು ವೈದ್ಯರು ಪರೀಕ್ಷಿಸಿದ್ದರು. ಮಿತಿಮೀರಿದ ಕೆಲಸದಿಂದಲೂ ನರಗಳ ದಣಿವಿನಿಂದಲೂ ಈ ಸ್ಥಿತಿ ಉಂಟಾಗಿದೆ; ಸುದೈವದಿಂದ ಮಿದುಳಿನ ರಕ್ತಸ್ರಾವವಾಗಲಿಲ್ಲ; ಎಂದು ಅವರು ಹೇಳಿದ್ದರು. ಪ್ರವಾಸ ಕಾರ್ಯಕ್ರಮ ವನ್ನು ರದ್ದು ಮಾಡಿ ವಿಶ್ರಾಂತಿ ತೆಗೆದುಕೊಳ್ಳುವಂತೆ ಅವರು ಸಲಹೆ ಮಾಡಿದ್ದರು. ಗಾಂಧಿಯವರ ಖಾಯಿಲೆ ವಿಷಯವನ್ನೂ ಪ್ರವಾಸ ರದ್ದಾದ ಸಂಗತಿಯನ್ನೂ ಮಹದೇವ ದೇಸಾಯಿ ಪ್ರಕಟಿಸಿದರು. ಆದರೆ ಅವರು 'ಯಂಗ್ ಇಂಡಿಯಾ' ಮೂಲಕ ತಮ್ಮ ಸಂದೇಶದ ಪ್ರಸಾರವನ್ನು ಮುಂದುವರಿಸಿದರು. ಮಾರ್ಚ್ ೩೧ರ ಸಂಚಿಕೆಯಲ್ಲಿ:"ನನ್ನ ಜೀವಮಾನದ ಈ ಇಳಿವಯಸ್ಸಿನಲ್ಲಿ ಗೋರಕ್ಷಣೆಯ ಭಾರವನ್ನು ಕೈಗೆತ್ತಿಕೊಂಡಿರು ವುದು ವ್ಯಸನಕರವಾದ ಸಂಗತಿ" ಎಂದು ಹೇಳಿದರು; ಮತ್ತು ಹೀಗೆ ಬರೆದರು:

೧. "ಪ್ರತಿಯೊಂದು ಗೋರಕ್ಷಾ ಸಂಸ್ಥೆಯೂ ಸಮೃದ್ಧ ಪ್ರದೇಶದಲ್ಲಿ–ಅರೆದು ಸಹಸ್ರಾರು ಎಕರೆಗಳಷ್ಟು ಬಯಲಿರುವ ಕಡೆ– ಇರಬೇಕು. ಅಲ್ಲಿ ಸಾಕಷ್ಟು ಮೇವನ್ನು ಬೆಳೆಯುವಂತಿರಬೇಕು. ದನಕರುಗಳಿಗೆ ಸಾಕಷ್ಟು ವ್ಯಾಯಾಮ ಸಿಗಬೇಕು. ಗೋಶಾಲೆ ಗಳೆಲ್ಲವೂ ನನ್ನ ಆಡಳಿತಕ್ಕೊಳಪಟ್ಟಿದ್ದರೆ ಅವುಗಳಲ್ಲಿ ಅನೇಕವನ್ನು ಒಳ್ಳೆಯ ಲಾಭಕ್ಕೆ ಮಾರಿಬಿಟ್ಟು ಅವುಗಳ ಸಮೀಪದಲ್ಲೇ ಅನುಕೂಲವಾದ ಪ್ರದೇಶಗಳನ್ನು ಕೊಂಡು ಬಿಡುತ್ತಿದ್ದೆ. ಉತ್ಪನ್ನಗಳನ್ನು ಶೇಖರಿಸಲು ಅನುಕೂಲವಾಗಬಹುದಾದ ಸ್ಥಳಗಳನ್ನು ಮಾತ್ರ ಮಾರುತ್ತಿರಲಿಲ್ಲ.

೨. "ಪ್ರತಿಯೊಂದು ಗೋಶಾಲೆಯನ್ನೂ ಮಾದರಿ ಹಾಲಿನ ಕೇಂದ್ರವನ್ನಾಗಿಯೂ ಮಾದರಿ ಚರ್ಮಶಾಲೆಯನ್ನಾಗಿಯೂ ಮಾಡಬೇಕು. ಸತ್ತ ಪ್ರತಿಯೊಂದು ದನವನ್ನೂ ಇರಿಸಿಕೊಂಡು ಅದನ್ನು ವೈಜ್ಞಾನಿಕವಾಗಿ ಹದಮಾಡಿ ಅದರ ಚರ್ಮ, ಮೂಳೆ ಮತ್ತು ಅಂತ್ರವನ್ನು ಚೆನ್ನಾಗಿ ಬಳಸಿಕೊಳ್ಳಬೇಕು. ಸತ್ತ ದನಕರುಗಳ ಚರ್ಮ ಪವಿತ್ರವಾದದ್ದು ಮತ್ತು ಬಳಸಲು ಯೋಗ್ಯವಾದದ್ದು, ಎಂದು ನಾನು ಭಾವಿಸುತ್ತೇನೆ. ಆದರೆ ಬದುಕಿರುವ

ದನಕರುಗಳನ್ನು ಕೊಂದು ಅವುಗಳಿಂದ ತೆಗೆದ ಚರ್ಮ ಮತ್ತಿತರ ಭಾಗಗಳು ತ್ಯಾಜ್ಯ. ಯಾವ ಮನುಷ್ಯನೂ ಬಳಸಲು ಯೋಗ್ಯವಲ್ಲ; ಕೊನೆಯ ಪಕ್ಷ ಹಿಂದೂಗಳಾದರೂ ಬಳಸಲೇ ಬಾರದು.

೩. "ಕೆಲವು ಗೋಶಾಲೆಗಳಲ್ಲಿ ಮೂತ್ರ ಸಗಣಿಯನ್ನು ಎಸೆದು ಬಿಡುತ್ತಾರೆ. ಅದನ್ನು ವ್ಯರ್ಥಮಾಡುವುದು ತುಂಬಾ ತಪ್ಪು.

೪. "ಎಲ್ಲ ಗೋಶಾಲೆಗಳಲ್ಲೂ ವೈಜ್ಞಾನಿಕವಾದ ಮೇಲ್ವಿಚಾರಣೆ ಹಾಗೂ ಮಾರ್ಗ ದರ್ಶನವಿರಬೇಕು.

೫. "ಸರಿಯಾಗಿ ನಡೆಸಿದರೆ, ಪ್ರತಿಯೊಂದು ಗೋಶಾಲೆಯನ್ನೂ ಸ್ವಾವಲಂಬಿ ಯಾಗಿ ಮಾಡಬಹುದು. ದಾನವಾಗಿ ಬಂದ ಹಣವನ್ನು ಅದರ ವಿಸ್ತರಣೆಗೆ ಉಪಯೋಗಿಸ ಬಹುದು. ಲಾಭದ ಗಳಿಕೆಗಾಗಿಯೇ ಈ ಸಂಸ್ಥೆಗಳಿಲ್ಲ. ದುರ್ಬಲವಾದ ದನಕರುಗಳನ್ನು ಕೊಳ್ಳುವುದಕ್ಕಾಗಿಯೂ ಕಸಾಯಿ ಮನೆಗೆ ಹೋಗಲಿರುವ ದನಕರುಗಳನ್ನು ಬಹಿರಂಗ ಮಾರುಕಟ್ಟೆಯಲ್ಲಿ ಕೊಂಡುಕೊಂಡು ಅವುಗಳನ್ನು ರಕ್ಷಿಸುವುದಕ್ಕಾಗಿಯೂ ಲಾಭದ ಹಣವನ್ನು ಉಪಯೋಗಿಸಲಾಗುವುದು.

೬. "ಎಮ್ಮೆಗಳು, ಮೇಕೆಗಳು ಮುಂತಾದುವುಗಳನ್ನು ಗೋಶಾಲೆಗಳಿಗೆ ಸೇರಿಸಿ ಕೊಂಡರೆ ಈ ಉದ್ದೇಶ ಸಾಧಿಸಲಾಗುವುದಿಲ್ಲ. ನನ್ನ ಅಭಿಪ್ರಾಯ ಏನೇ ಇರಲಿ, ಭಾರತದ ಜನರೆಲ್ಲರೂ ಸಸ್ಯಾಹಾರಿಗಳಾಗುವವರೆಗೆ ಮೇಕೆಗಳನ್ನೂ ಕುರಿಗಳನ್ನೂ ಕಟುಕನ ಕತ್ತಿಯಿಂದ ಪಾರುಮಾಡಲಾಗುವುದಿಲ್ಲ. ಎಮ್ಮೆ ಹಾಲನ್ನು ನಾವು ಧರ್ಮ ಶ್ರದ್ಧೆಯಿಂದ ವರ್ಜಿಸಿ ಹಸುವಿನ ಹಾಲನ್ನೇ ಸೇವಿಸುವ ಸಂಕಲ್ಪ ಮಾಡಿದ ಹೊರತು ಎಮ್ಮೆಗಳನ್ನು ರಕ್ಷಿಸುವುದಕ್ಕಾಗುವುದಿಲ್ಲ. ಹಸುವಿನ ಹಾಲಿಗೆ ಬದಲಾಗಿ ಎಮ್ಮೆ ಹಾಲನ್ನು ಬಳಸುವ ರೂಢಿ ಬೊಂಬಾಯಿಯಲ್ಲಿದೆ. ವೈದ್ಯಕೀಯ ದೃಷ್ಟಿಯಿಂದ ಹಸು ವಿನ ಹಾಲು ಎಮ್ಮೆ ಹಾಲಿಗಿಂತ ಬಹಳ ಶ್ರೇಷ್ಠ ಎಂದು ವೈದ್ಯರುಗಳು ಒಮ್ಮತದ ಅಭಿಪ್ರಾಯ ಪಡುತ್ತಾರೆ; ಸರಿಯಾಗಿ ನೋಡಿಕೊಂಡರೆ ಹಸುವಿನ ಹಾಲಿನ ಗುಣವನ್ನು ಇನ್ನೂ ಹೆಚ್ಚಿಸಬಹುದೆಂದು ಹೈನಿನ ತಜ್ಞರು ಹೇಳುತ್ತಾರೆ. ಎಮ್ಮೆ ಮತ್ತು ಹಸು ಎರಡನ್ನೂ ರಕ್ಷಣೆ ಮಾಡುವುದು ಅಸಾಧ್ಯ ಎಂದು ನಾನು ಭಾವಿಸುತ್ತೇನೆ. ಎಮ್ಮೆಯ ಸಂತಾನ ವೃದ್ಧಿಯನ್ನು ನಿಲ್ಲಿಸಿದರೆ ಮಾತ್ರ ಹಸುವನ್ನು ರಕ್ಷಿಸಬಹುದು. ವ್ಯವಸಾಯದ ಕೆಲಸಗಳಿಗೆ ಎಮ್ಮೆಯನ್ನು ವ್ಯಾಪಕವಾಗಿ ಬಳಸಲಾಗುವುದಿಲ್ಲ. ಅದರ ವೃದ್ಧಿಯನ್ನು ತಡೆದರೆ ಮಾತ್ರ ಈಗಿರುವಷ್ಟನ್ನು ರಕ್ಷಿಸಬಹುದು. ಎಮ್ಮೆಗಳ ಸಂತಾನವನ್ನು ವೃದ್ಧಿ ಸುವುದು ನಮ್ಮ ಧರ್ಮವೇನಲ್ಲ. ಹಸುಗಳ ವಿಷಯದಲ್ಲೂ ಅಷ್ಟೆ. ನಮ್ಮ ಉಪಯೋಗ ಕ್ಕೋಸ್ಕರ ಅವನ್ನು ವೃದ್ಧಿಮಾಡುತ್ತೇವೆ. ಎಮ್ಮೆಗಳನ್ನು ವೃದ್ಧಿಮಾಡಿದರೆ ಎಮ್ಮೆಗೂ ಅಪಚಾರ, ಹಸುವಿಗೂ ಹಿಂಸೆ. ತಮ್ಮ ಬಳಿಯಿರುವ ಕೋಣಗಳನ್ನು ಪೋಷಣೆ ಮಾಡ ಲಾರದೆ ಹಿಂದೂ ಪಾಲಕರು ಅವುಗಳನ್ನು ನಿರ್ದಯವಾಗಿ ಕೊಂದುಬಿಡುತ್ತಾರೆಂಬುದನ್ನು ಮಾನವತಾವಾದಿಗಳು ತಿಳಿದುಕೊಳ್ಳಬೇಕು. ಹಸುವನ್ನೂ ಅದರ ಸಂತತಿಯನ್ನೂ

ರಕ್ಷಿಸಬೇಕಾದರೆ–ಅದು ಕಾರ್ಯಕಾರಿಯಾಗಬಲ್ಲ ವಿಷಯ– ಹಸುಗಳ ಹಾಗೂ ಅವುಗಳ ಉತ್ಪನ್ನಗಳ ಮಾರಾಟದ ಲಾಭವನ್ನು ಹಿಂದೂಗಳು ವರ್ಜಿಸಬೇಕು. ಹಾಗೆ ಮಾಡದೆ ಬೇರೆ ಮಾರ್ಗವೇ ಇಲ್ಲ. ಧರ್ಮವು ನಿಜವಾಗಬೇಕಾದಲ್ಲಿ ಅದು ಮಾನವೀಯ ಅರ್ಥ ಶಾಸ್ತ್ರಕ್ಕೆ ಅನುಗುಣವಾಗಿರಬೇಕು. ಅಂದರೆ ಆದಾಯ ಮತ್ತು ಖರ್ಚು ಸರಿಸಮವಾಗಿರ ಬೇಕು. ಧರ್ಮಶ್ರದ್ಧೆಯುಳ್ಳ ಹಿಂದೂಗಳು ಕೆಲವು ವರ್ಷಗಳ ಕಾಲ ತಪ್ಪದೆ ದಾನ ಮಾಡಿದರೆ ಅವರ ಸಹಾಯದಿಂದ ಹಸುವಿಗೆ ಸಂಬಂಧಿಸಿದಂತೆ ಮಾತ್ರ ಈ ಅರ್ಥಶಾಸ್ತ್ರ ವನ್ನು ಸಾಧಿಸಬಹುದು. ಹಸುವಿನ ಮಾಂಸವನ್ನು ತಿನ್ನುವ ಜನರ ಮುಂದೆ ಈ ಮಹಾ ಮಾನವೀಯ ಪ್ರಯತ್ನವನ್ನು ಮಾಡುತ್ತಿದ್ದೇವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಜಗತ್ತಿನ ಜನರೆಲ್ಲರೂ ಪ್ರಧಾನವಾಗಿ ಸಸ್ಯಾಹಾರಿಗಳಾಗುವ ವರೆಗೂ ನಾನು ವಿವರಿಸಿರುವ ಪರಿಮಿತಿಗಳನ್ನು ದಾಟಿ ಮುನ್ನಡಿಯಿಡಲು ಸಾಧ್ಯವಿಲ್ಲ. ಅಷ್ಟರ ಮಟ್ಟಿನ ಯಶಸ್ಸು ಸಾಧಿಸಿದರೆ ಮುಂಬರುವ ಜನಾಂಗಗಳು ಮತ್ತಷ್ಟು ಪ್ರಯತ್ನ ಮಾಡಲು ಅನುವಾಗು ತ್ತದೆ. ಈ ಪರಿಮಿತಿಗಳನ್ನು ಮೀರಿ ಹೋದರೆ ಎಮ್ಮೆ ಮತ್ತು ಇತರ ಪ್ರಾಣಿಗಳ ಜೊತೆಗೆ ಹಸುವನ್ನು ಶಾಶ್ವತವಾಗಿ ಕಸಾಯಿಮನೆಗೆ ತಳ್ಳಿದಂತಾಗುತ್ತದೆ.

"ಗೋ ಶಾಲೆ ಮತ್ತು ಪಿಂಜ್ರಾಪೋಲುಗಳನ್ನು ನೋಡಿಕೊಳ್ಳುತ್ತಿರುವ ಹಿಂದೂ ಗಳೂ ಮತ್ತು ಮಾನವತಾವಾದಿ ಸಂಸ್ಥೆಗಳು ವಿವೇಕಯುತವಾದ ಧರ್ಮಶ್ರದ್ಧೆಯುಳ್ಳ ವರಾದರೆ ಗೋರಕ್ಷಣೆಯ ವಿಷಯದಲ್ಲಿ ನಾನು ಮೇಲೆ ಹೇಳಿರುವ ಷರತ್ತುಗಳನ್ನು ಮನಗಂಡು ಅವುಗಳನ್ನು ತಕ್ಷಣ ಕಾರ್ಯಗತಮಾಡಲು ತೊಡಗಬೇಕು."

ಗಾಂಧಿಯವರು ಬೆಳಗಾವಿಯಿಂದ ಸಾವಂತವಾಡಿಯಲ್ಲಿರುವ ಅಂಬೋಲಿ ಎಂಬ ಗಿರಿಧಾಮಕ್ಕೆ ಹೋದರು. ಅಲ್ಲಿಂದ ಆಶ್ರಮವಾಸಿಗಳಿಗೆ ಹೀಗೆ ಒಂದು ಪತ್ರ ಬರೆದರು: "ನನ್ನ ಗಾಡಿ ಕೆಸರಿನಲ್ಲಿ ಸಿಕ್ಕಿಕೊಂಡಿದೆ. ಇಂದು ಅದು ಕೆಸರಿನಲ್ಲಿದೆ. ಸರಿಯಾಗುವ ಭರವಸೆಯೇ ಇಲ್ಲದಂತೆ ಅದು ನಾಳೆ ಮುರಿದು ಬೀಳಬಹುದು. ಅಂತರ್ಯದಲ್ಲಿ ರಾಗ ವಿಲ್ಲದಿದ್ದರೆ ರೋಗಕ್ಕೆಡೆಯೇ ಇಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ರಾಗದಿಂದ ಮುಕ್ತನಾದವನೂ ಸಾಯಲೇಬೇಕು ನಿಜ. ಆದರೆ ಆತ ರೋಗದಿಂದ ನರಳದೆ ಅಥವಾ ತಲೆನೋವು ಸಹಾ ಇಲ್ಲದೆ, ಮಾಗಿರುವ ಹಣ್ಣು ಮರದಿಂದ ಕಳಚಿಬೀಳುವ ಹಾಗೆ ಬೀಳುತ್ತಾನೆ. ನನ್ನ ಆಸೆಯೂ ಅದೇ ಆಗಿದ್ದು ಅದು ಈಡೇರಲೆಂದು ಬಯಸುತ್ತೇನೆ. ಅದರಲ್ಲಿ ನಂಬಿಕೆ ಇನ್ನೂ ಇದೆ. ಆದರೆ ಯಾರು ಬಲ್ಲರು? ರಾಗಗಳು ಇನ್ನೂ ಅಳಿದಿಲ್ಲ. ಅವುಗಳಿಂದ ಮುಕ್ತಿಯಾಗುವುದು ಬಹುದೂರದ ಸಂಗತಿಯೆಂದು ತೋರುತ್ತಿದೆ."

ಮತ್ತೊಂದು ಪತ್ರದಲ್ಲಿ ಹೀಗೆ ಬರೆದರು: "ದಿನನಿತ್ಯದ ಯಜ್ಞಮಾಡದೆ ಊಟ ಮಾಡುವವನು ತನ್ನ ಅನ್ನವನ್ನು ಕದಿಯುತ್ತಾನೆ–ಎಂದು ಗೀತೆ ಹೇಳುತ್ತದೆ. ಅದು ನನಗೆ ಅನ್ವಯಿಸುವುದಿಲ್ಲವೆ? ನಾವು ಬದುಕಬೇಕಾದರೆ ನೂಲಬೇಕು. ಮೃಗಗಳೂ ಸಹಾ ಊಟ, ಪಾನ ಮತ್ತು ನಿದ್ರೆ ಮಾಡುತ್ತವೆ. ಯೋಚನೆಯನ್ನು ಸಹಾ ಮಾಡಕೂಡದೆಂದು

ವೈದ್ಯರು ಹೇಳುತ್ತಾರೆ. ನನಗಾದರೋ ಯೋಚನೆ ಮಾಡದೆ ಇರುವುದು ಹೇಗೆ ಅಸಾಧ್ಯವೊ ಹಾಗೆ ಯೋಚನೆಮಾಡಿದ್ದನ್ನು ಕಾರ್ಯಗತ ಮಾಡದೇ ಇರುವುದೂ ಅಸಾಧ್ಯ. ಆದುದರಿಂದ ನಾನು ಓದುವುದನ್ನೂ ಬರೆಯುವುದನ್ನೂ ನೂಲುವುದನ್ನೂ ಮಾಡುತ್ತೇನೆ. ಅವುಗಳನ್ನು ಮಾಡಲಸಾಧ್ಯವಾದರೆ, ಕೆಲಸ ಮಾಡಲಾಗದ ದೇಹಕ್ಕೆ ಅನ್ನ ತಪ್ಪಿಸುವುದು ಖಾತರಿಯಾದ ಪರಿಹಾರ."

ಅಸ್ವಸ್ಥತೆಯಿಂದ ಇದ್ದರೂ ಕೂಡಾ ರಾಷ್ಟ್ರೀಯ ಸಪ್ತಾಹಕ್ಕೆ ಪೂರ್ವಭಾವಿಯಾಗಿ ಹೀಗೆ ಬರೆದರು: "ನಾವು ಏನು ಮಾಡಬೇಕು?"ಎಂಬ ಪ್ರಶ್ನೆಯನ್ನು ಕೇಳುವುದರಲ್ಲೇ ಈ ವಾರವನ್ನು ವ್ಯರ್ಥಮಾಡದೆ 'ನಾನು ಏನು ಮಾಡಬೇಕು?' ಎಂದು ಪ್ರಶ್ನೆ ಹಾಕಿ ಕೊಂಡು ಆದಷ್ಟು ಉತ್ತಮ ರೀತಿಯಲ್ಲಿ ಈ ಸಪ್ತಾಹವನ್ನು ಉಪಯೋಗಿಸಿಕೊಳ್ಳಬೇಕು, ಎಂದು ಓದುಗರಿಗೆ ಒತ್ತಾಯಪೂರ್ವಕವಾಗಿ ತಿಳಿಸಿದರು. ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯವನ್ನು ತಮಗೆ ಶಕ್ಯವಿದ್ದಷ್ಟು ಪೂರ್ಣವಾಗಿ ನಿರ್ವಹಿಸಿದರೆ, 'ನಾವು ಮುಂದೇನು ಮಾಡಬೇಕು' ಎಂದು ಕೇಳಲು ಸಮರ್ಥರಾಗುತ್ತೇವೆ." ರಾಷ್ಟ್ರೀಯ ಸಪ್ತಾಹದ ಸಮಯದಲ್ಲಿ ಬೀದಿ ಬೀದಿಯಲ್ಲಿ ಖಾದಿಯನ್ನು ಹೊತ್ತು ಮಾರಾಟ ಮಾಡಲು ಮಹದೇವ ಮತ್ತು ದೇವದಾಸ್‌ರನ್ನು ಅಂಬೋಲಿಯಿಂದ ಕಳುಹಿಸಿಕೊಟ್ಟರು. ತಾವು ನೂಲುತ್ತಾ ಇದ್ದರಲ್ಲದೆ 'ಯಂಗ್ ಇಂಡಿಯಾ'ಕ್ಕೆ ಲೇಖನ ಬರೆದರು.

ಏಪ್ರಿಲ್‌ನ ಕೊನೆಯ ವಾರದಲ್ಲಿ ಅವರು ನಂದೀಬೆಟ್ಟಕ್ಕೆ ಪ್ರಯಾಣ ಮಾಡಿದರು.

# ಅವಿಶ್ರಾಂತಿ

## ೧೯೩೭

೧೯೩೭ರ ಜೂನ್ ತಿಂಗಳ ಮಧ್ಯದಲ್ಲಿ ಗಾಂಧೀಜಿ ನಂದಿಬೆಟ್ಟದಿಂದ ಬೆಂಗಳೂರಿಗೆ ಬಂದರು. ಅಲ್ಲಿ ಅವರು ಮೈಸೂರು ರಾಜ್ಯಕ್ಕೆ ಸೇರಿದ ಒಂದು ಅತಿಥಿ ಗೃಹದಲ್ಲಿರಲು ಏರ್ಪಾಡು ಮಾಡಲಾಗಿದ್ದಿತು. ಅನೇಕ ಜನರು ಪ್ರತಿ ಸಂಜೆಯೂ ಪ್ರಾರ್ಥನೆಯಲ್ಲಿ ಭಾಗವಹಿಸಲು ಅಲ್ಲಿಗೆ ಬರುತ್ತಿದ್ದರು. ದಿನ ದಿನಕ್ಕೂ ನೆರವಿಯ ಸಂಖ್ಯೆ ಹೆಚ್ಚುತ್ತಿತ್ತು. ಒಂದು ಸಂಜೆ ಪ್ರಾರ್ಥನೆ ಮುಗಿದನಂತರ ಅವರು ಜನರನ್ನುದ್ದೇಶಿಸಿ ಕೆಲವು ಮಾತು ಗಳನ್ನಾಡಲೇಬೇಕಾಯಿತು:

"ನೀವು ನನ್ನೊಡನೆ ತಾಳ್ಮೆಯಿಂದ ವರ್ತಿಸಬೇಕು. ನಾನು ಸಾಯಂಕಾಲ ಸಂಚಾರಕ್ಕೆ ಹೊರಗೆ ಹೊರಟಾಗ ನೀವು ನನ್ನನ್ನು ಸುತ್ತುಗಟ್ಟಬಾರದು ಅಥವಾ ಅನುಸರಿಸಬಾರದು, ಎಂದು ಇದರರ್ಥ. ನಾನೊಬ್ಬ ರೋಗಿ. ನನ್ನ ಗಂಟಲಿನ್ನೂ ಚೇತರಿಸಿಕೊಳ್ಳಬೇಕಾಗಿದೆ; ನನ್ನ ಶಕ್ತಿಯನ್ನು ಮರಳಿಪಡೆಯಬೇಕಾಗಿದೆ. ಮತ್ತು ನಾನಿಲ್ಲಿ ಬಂದಿರುವುದು ವಿಶ್ರಾಂತಿ ಗಾಗಿ. ನಾನು ಉತ್ತಮಗೊಂಡ ಮೇಲೆ ಮೈಸೂರಿನ ಜನತೆಗೆ ನನ್ನ ಕೈಲಾಗುವ ಸೇವೆ ಯನ್ನು ಮಾಡುವ ಆಶೆಯಿದೆ. ಆದ್ದರಿಂದ ನನಗೆ ಈಗ ಅಗತ್ಯವಾಗಿರುವ ಪೂರ್ಣ ವಿಶ್ರಾಂತಿಯನ್ನು ನೀಡಿ; ಹಾಗೂ ನನ್ನ ಏಕಾಂತ ನಡಿಗೆಗೆ ಭಂಗ ತರದಿರಿ. ಇದಿಷ್ಟು ನನಗೆ ಸಂಬಂಧಿಸಿದಂತೆ ಹೇಳಿದ್ದಾಯಿತು. ಇನ್ನು ನಿಮ್ಮನ್ನು ಕುರಿತು ಹೇಳುವುದಾದರೆ, ನೀವು ಯಾವುದೇ ಮತಕ್ಕೆ ಸೇರಿದ್ದರೂ ಸರಿ, ನಿಮ್ಮೆಲ್ಲರಿಗೂ ಪ್ರಾರ್ಥನೆಯಲ್ಲಿ ಭಾಗವಹಿಸಲು ಸ್ವಾಗತವಿದೆ. ಆದರೆ ಇದರಲ್ಲಿ ಎರಡು ನಿಬಂಧನೆಗಳುಂಟು. ಮೊದಲನೆಯದಾಗಿ ನೀವು ಪ್ರಾರ್ಥನಾಭರಿತ ಮನಸ್ಸಿನಿಂದ, ಪ್ರಾರ್ಥನಾಭರಿತ ಹೃದಯದಿಂದ, ಪ್ರಾರ್ಥನಾಭರಿತ ಮನೋಭಾವದಿಂದ ಬರಬೇಕು. ಪ್ರತಿಯೊಬ್ಬರೂ–ಆ ಅವನು ಅಥವಾ ಅವಳು ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್–ಯಾವುದೇ ಮತಕ್ಕೆ ಸೇರಿದ್ದರಾಗಿರಲಿ ಪ್ರಾರ್ಥನೆ ಯಲ್ಲಿ ಭಾಗವಹಿಸಬಹುದು. ಶ್ಲೋಕಗಳ ಪುನರುಕ್ತಿಯನಂತರ ನಾವು "ರಘುಪತಿ ರಾಘವ ರಾಜಾರಾಂ ಪತಿತ ಪಾವನ ಸೀತಾರಾಂ" ಹಾಡುತ್ತೇವೆ. ಇದರಲ್ಲಿ ಎಲ್ಲರೂ ತಮ್ಮ ದನಿಯನ್ನು ಕೂಡಿಸಬಹುದು. ಇದರಿಂದ ನಮ್ಮ ಪ್ರಾರ್ಥನೆ ಮುಗಿಲೆತ್ತರಕ್ಕೇರು ತ್ತದೆ ಮತ್ತು ನಮ್ಮ ಪ್ರಾರ್ಥನೆಗೆ ಕಿವಿಗೊಡುವ ದೇವನೊಬ್ಬನಿದ್ದರೆ ಅದು ಆ ದೇವನನ್ನು ಸುಪ್ರೀತಗೊಳಿಸುತ್ತದೆ. ಇದರಲ್ಲಿ ಮತ್ತೊಂದು ನಿಬಂಧನೆಯಿದೆ. "ಪತಿತ ಪಾವನ ಸೀತಾರಾಂ" ಎಂಬುದರ ಅರ್ಥವೇನೆಂಬುದು ನಿಮಗೆ ತಿಳಿದಿದೆ. ಪತಿತರ ಮತ್ತು ದಲಿತರ ರಕ್ಷಕನಾದ ಭಗವಂತನನ್ನು ನಾವು ಪ್ರಾರ್ಥಿಸುತ್ತೇವೆ. ಆದ್ದರಿಂದ ನೀವು ಖಾದಿಯುಡುಪಿ ನಲ್ಲಿ ಬರಬೇಕೆಂದು ಕೇಳಿಕೊಳ್ಳುತ್ತೇನೆ; ಕಾರಣ, ಖಾದಿ ನಿಮ್ಮನ್ನು ಪತಿತರು ಮತ್ತು ದಲಿತರೊಂದಿಗೆ ಕೊಂಡಿಸುತ್ತದೆ. ಅಂತಹವರಿಗೆ ನೆರವು ನೀಡಬೇಕೆಂಬ ನಿಮ್ಮ ಸಂಕಲ್ಪದ

ದೃಶ್ಯಸಂಕೇತವಾಗಿ ಯಾವುದೇ ಮತಕ್ಕೆ ಸೇರಿದ ಎಲ್ಲ ಪುರುಷರು, ಸ್ತ್ರೀಯರು ಮತ್ತು ಮಕ್ಕಳು, ಯುವಕರು ಹಾಗೂ ವೃದ್ಧರು ಖಾದಿಯನ್ನುಟ್ಟು ಬರಬೇಕೆಂದು ನಿಮ್ಮೆಲ್ಲರಲ್ಲಿ ಬಿನ್ನವಿಸಿಕೊಳ್ಳುತ್ತೇನೆ."

ಜೂನ್ ತಿಂಗಳ ಕೊನೆಯ ಹೊತ್ತಿಗೆ ಹೆಚ್ಚು ಆಯಾಸವಿಲ್ಲದೆ ಪ್ರವಾಸವನ್ನು ಮತ್ತೆ ಆರಂಭಿಸುವ ನಿರೀಕ್ಷೆ ಹೊಂದಲು ಅವರಿಗೆ ಸಾಧ್ಯವಾಯಿತು. ಈಗ ಅವರು ದಿನಕ್ಕೊಂದು ಸಭೆಯನ್ನು ಜೊತೆಗೆ ಸ್ಥಳೀಯ ಸ್ವಯಂಸೇವಕರೊಂದಿಗೆ ಒಂದು ಅನೌಪಚಾರಿಕ ಸಂಭಾಷಣೆಯನ್ನು ನಿರ್ವಹಿಸಬಲ್ಲವರಾಗಿದ್ದರು. ಅವರ ಮನಸ್ಸು ಎಂದೂ ಜಡವಾಗಿರಲಿಲ್ಲ; ಅಲ್ಲಿ ಹೊಸ ಹೊಸ ಆಲೋಚನೆಗಳು ವಿಕಾಸಗೊಳ್ಳುತ್ತಿದ್ದುವು. ಜುಲೈ ೧೪ರಂದು 'ಯಂಗ್ ಇಂಡಿಯ'ದಲ್ಲಿ ಅವರು "ಅಖಿಲ ಭಾರತೀಯ ಲಿಪಿ"ಯ ಬಗೆಗೆ ಬರೆದರು.:

"ಹಿಂದೂ–ಮುಸ್ಲಿಂ ಭ್ರಮೆಯು ಪರಿಪೂರ್ಣ ಸುಧಾರಣೆಯ ಮಾರ್ಗಕ್ಕೆ ಪ್ರತಿಬಂಧಕವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ದೇವನಾಗರಿ ಲಿಪಿಯ ಅಂಗೀಕಾರವು ಇಂಡಿಯಾದಲ್ಲಿ ಸರ್ವಮಾನ್ಯ ಸಂಗತಿಯಾಗಿ ಪರಿಣಮಿಸುವ ಮುನ್ನ ಹಿಂದೂ ಇಂಡಿಯಾವು ಸಂಸ್ಕೃತ ಮತ್ತು ದ್ರಾವಿಡ ಮೂಲಗಳಿಂದ ನಿಷ್ಪನ್ನವಾದ ಎಲ್ಲ ಭಾಷೆಗಳಿಗೂ ಏಕಲಿಪಿಯಿರಬೇಕೆಂಬ ಧ್ಯೇಯಕ್ಕೆ ಹೊಂದಿಕೊಳ್ಳಬೇಕಾದ್ದು ಅವಶ್ಯ. ಸದ್ಯದಲ್ಲಿ ಬಳಕೆಯಾಗುತ್ತಿರುವ ಲಿಪಿಗಳೆಂದರೆ–ಬಂಗಾಳದಲ್ಲಿ ಬಂಗಾಳಿ, ಪಂಜಾಬಿನಲ್ಲಿ ಗುರುಮುಖಿ, ಸಿಂಧ್‌ನಲ್ಲಿ ಸಿಂಧಿ, ಉತ್ಕಲದಲ್ಲಿ ಒರಿಯ, ಗುಜರಾತಿನಲ್ಲಿ ಗುಜರಾತಿ, ಆಂಧ್ರಪ್ರದೇಶದಲ್ಲಿ ತೆಲುಗು, ತಮಿಳುನಾಡಿನಲ್ಲಿ ತಮಿಳು, ಕೇರಳದಲ್ಲಿ ಮಲಯಾಳಿ, ಮತ್ತು ಕರ್ನಾಟಕದಲ್ಲಿ ಕನ್ನಡ. ಬಿಹಾರದ ಕೈಥಿ ಮತ್ತು ದಖ್ಖನದ ಮೋದಿಗಳನ್ನು ಉಲ್ಲೇಖಿಸಬೇಕಾಗಿಲ್ಲ. ಸರ್ವ ವ್ಯಾವಹಾರಿಕ ಮತ್ತು ರಾಷ್ಟ್ರೀಯ ಉದ್ದೇಶಗಳ ದೃಷ್ಟಿಯಿಂದ ಈ ಎಲ್ಲ ಲಿಪಿಗಳ ಸ್ಥಾನದಲ್ಲಿ ದೇವನಾಗರಿಯನ್ನು ಬಳಕೆಗೆ ತಂದರೆ ಮಹತ್ತರವಾದ ಮುನ್ನಡಿಯಿಟ್ಟಂತಾಗುತ್ತದೆ. ಹಿಂದೂಇಂಡಿಯಾವು ಸುಭದ್ರಗೊಳ್ಳಲು ಇದು ನೆರವು ನೀಡುತ್ತದಲ್ಲದೆ, ಇದರಿಂದ ವಿವಿಧ ಪ್ರಾಂತಗಳ ನಡುವೆ ಆಪ್ತ ಸಂಬಂಧವೇರ್ಪಡುತ್ತದೆ. ವಿವಿಧ ಭಾರತೀಯ ಭಾಷೆಗಳ ಮತ್ತು ಲಿಪಿಗಳ ತಕ್ಕ ಮಟ್ಟಿನ ಜ್ಞಾನವುಳ್ಳಾತನು ಒಂದು ಹೊಸ ಲಿಪಿಯನ್ನು ಕರಗತಮಾಡಿಕೊಳ್ಳಲು ತನ್ನಮಟ್ಟಿಗೆ ಎಷ್ಟು ಕಾಲ ಹಿಡಿಯುವುದೆಂಬುದನ್ನು ಅರಿತಿರುತ್ತಾನೆ. ಆತನ ದೇಶಪ್ರೇಮಕ್ಕೆ ಯಾವುದೂ ಅರಿದಲ್ಲ; ಅಲ್ಲದೆ ವಿವಿಧ ಲಿಪಿಗಳನ್ನು ಅದರಲ್ಲೂ ಅವುಗಳಲ್ಲಿ ತುಂಬ ಸುಂದರವಾದ ಕೆಲವನ್ನು ವಶಮಾಡಿಕೊಳ್ಳಲು ವಿನಿಯೋಗಿಸಿದ ಕಾಲವು ಯಾವ ವಿಧದಲ್ಲೂ ನಿರರ್ಥಕವೆನಿಸದು. ಆದರೆ ಇಂತಹ ಆತ್ಮ ಪರವಶತೆಯನ್ನು ಸಾಮಾನ್ಯ ಜನರಲ್ಲೂ ನಿರೀಕ್ಷಿಸುವುದು ಸರಿಯಲ್ಲ. ರಾಷ್ಟ್ರದ ಮುಖಂಡರು ಅವರಿಗೆ ಸಂಗತಿಗಳನ್ನು ಸುಲಭ ಮಾಡಿಕೊಡಬೇಕು. ಈ ಕಾರಣದಿಂದ ಇಡೀ ಇಂಡಿಯಾಕ್ಕೆ ಅನ್ವಯವಾಗುವ ಸುಲಭಗ್ರಾಹ್ಯವಾದ ಒಂದು ಸಾರ್ವತ್ರಿಕ ಲಿಪಿಯನ್ನು ಹೊಂದಿರಬೇಕಾದುದು ಅತ್ಯವಶ್ಯ; ಮತ್ತು ದೇವನಾಗರಿ ಲಿಪಿಯಂತೆ ಸುಲಭ

ಗ್ರಾಹ್ಯವಾದ ಮತ್ತು ಪೂರ್ವಸಿದ್ಧವಾದ ಲಿಪಿ ಬೇರೊಂದಿಲ್ಲ...ಈ ಪ್ರಯತ್ನವನ್ನು ಸಂಪರ್ಕ ಭಾಷೆಗಾಗಿ ನಡೆಯುತ್ತಿರುವ ಹಿಂದಿ ಅಥವಾ ಹಿಂದುಸ್ತಾನಿಗಳ ಪ್ರಚಾರ ದೊಂದಿಗೆ ಯಾವವಿಧದಲ್ಲೂ ತೊಡಕುಗೊಳಿಸಬಾರದು. ಹಿಂದಿ ಅಥವಾ ಹಿಂದುಸ್ತಾನಿಯು ಪ್ರಾಂತೀಯ ಭಾಷೆಗಳನ್ನು ಪದಚ್ಯುತಗೊಳಿಸಲು ರೂಪಿತವಾದದ್ದಲ್ಲ; ಆದರೆ ಅವು ಗಳನ್ನು ಪೂರಕಗೊಳಿಸುವ ಉದ್ದೇಶದಿಂದ ರೂಪಿತವಾದುದು. ಅದು ಅಂತರರಾಜ್ಯ ಸಂಪರ್ಕಕ್ಕೆ ಬಳಸಲ್ಪಡಬೇಕು. ಹಿಂದೂ–ಮುಸ್ಲಿಂ ಬಿಕ್ಕಟ್ಟು ಕೊನೆಗೊಳ್ಳುವ ವರೆಗೆ ಅದು ಪರ್ಷಿಯನ್ ಲಿಪಿಯಲ್ಲಿ ಬರೆದ ಮತ್ತು ಪರ್ಷಿಯನ್ ಮತ್ತು ಅರ್‍ಯಾಬಿಕ್ ಪದ ಗಳು ಬಾಹುಳ್ಯವಿರುವ ಉರ್ದುವಾಗಿರುತ್ತದೆ ಅಥವಾ ದೇವನಾಗರಿ ಲಿಪಿಯಲ್ಲಿ ಬರೆದ ಮತ್ತು ಸಂಸ್ಕೃತ ಶಬ್ದಗಳ ಆಧಿಕ್ಯದಿಂದ ಕೂಡಿದ ಹಿಂದಿಯಾಗಿರುತ್ತದೆ. ಈ ಇಬ್ಬರ ಹೃದಯಗಳು ಕೂಡಿದಾಗ ಒಂದೇ ಭಾಷೆಯ ಎರಡು ರೂಪಗಳು ಪರಸ್ಪರ ಬೆಸೆದು ಕೊಳ್ಳುತ್ತವೆ; ತನ್ನ ಪೂರ್ಣವಿಕಾಸಕ್ಕೆ ಮತ್ತು ಪೂರ್ಣಾಭಿವ್ಯಕ್ತಿಗೆ ಎಷ್ಟು ಆವಶ್ಯಕವೊ ಅಷ್ಟು ಸಂಸ್ಕೃತ, ಪರ್ಷಿಯನ್, ಅರ್‍ಯಾಬಿಕ್ ಮತ್ತು ಇತರ ಪದಗಳಿಂದ ಕೂಡಿದ ಇವೆರಡರ ಸಂಘಟಿತ ಫಲ ನಮಗೆ ದೊರೆಯುತ್ತದೆ.

"ಆದರೆ ಬೇರೆಲ್ಲ ಲಿಪಿಗಳಿಗೆ ಪ್ರತಿಯಾಗಿ ಏಕಲಿಪಿಯು ರೂಪಿತವಾದುದೆಂಬುದು ಖಚಿತ; ಇದರಿಂದ ವಿವಿಧ ಪ್ರಾಂತಗಳಿಗೆ ಸೇರಿದ ಜನರಿಗೆ ಪ್ರಾಂತೀಯ ಭಾಷೆಗಳನ್ನು ಕಲಿಯಲು ಸುಲಭ ಮಾಡಿಕೊಟ್ಟಂತಾಗುತ್ತದೆ. ಈ ಉದ್ದೇಶವನ್ನು ಸಾಧಿಸಲು ಇರುವ ಅತ್ಯುತ್ತಮ ಮಾರ್ಗವೆಂದರೆ, ಮೊದಲನೆಯದಾಗಿ ಎಲ್ಲ ಶಾಲೆಗಳಲ್ಲೂ ಗುಜರಾತ ದಲ್ಲಿರುವಂತೆ ಕಡೆಯ ಪಕ್ಷ ಹಿಂದೂಗಳಿಗಾದರೂ, ದೇವನಾಗರಿ ಲಿಪಿಯ ಕಲಿಕೆಯನ್ನು ಕಡ್ಡಾಯಗೊಳಿಸುವುದು. ಎರಡನೆಯದಾಗಿ, ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿರುವ ಪ್ರಮುಖ ಸಾಹಿತ್ಯವನ್ನು ದೇವನಾಗರಿ ಲಿಪಿಯಲ್ಲಿ ಅಚ್ಚಿಸುವುದು. ಇಂತಹ ಪ್ರಯತ್ನವು ಕೆಲಮಟ್ಟಿಗೆ ನಡೆದಿದೆ. ದೇವನಾಗರಿ ಲಿಪಿಯಲ್ಲಿ ಅಚ್ಚು ಹಾಕಿಸಿರುವ ಗೀತಾಂಜಲಿಯನ್ನು ನಾನು ನೋಡಿದ್ದೇನೆ. ಆದರೆ ಇಂತಹ ಪ್ರಯತ್ನವು ದೊಡ್ಡ ಪ್ರಮಾಣದಲ್ಲಿ ನಡೆಯ ಬೇಕಾಗಿದೆ; ಅಲ್ಲದೆ ಈ ಬಗೆಯ ಪುಸ್ತಕಗಳ ಪ್ರಸಾರಕ್ಕೆ ಅಗತ್ಯವಾದ ಪ್ರಚಾರವನ್ನೂ ಕೈಗೊಳ್ಳಬೇಕು. ಹಿಂದೂಗಳ ಮತ್ತು ಮುಸಲ್ಮಾನರ ಒಗ್ಗಟ್ಟಿಗಾಗಿ ಯಾವುದೇ ರಚನಾತ್ಮಕ ಸಲಹೆಯನ್ನು ನೀಡುವುದು ಈಗಾಗಲೇ ಸವೆದ ಸಂಗತಿಯಾಗಿ ಹೋಗಿದೆಯೆಂಬುದು ನನಗೆ ತಿಳಿದಿದೆ. ಆದರೂ ಹಿಂದೂಗಳು ತಮ್ಮ ಮುಸಲ್ಮಾನ ಸೋದರರ ಸಮೀಪವರ್ತಿ ಗಳಾಗಿರುವಾಗ ಉರ್ದುವನ್ನೂ, ಅಂತೆಯೇ ಮುಸಲ್ಮಾನರು ತಮ್ಮ ಹಿಂದೂ ಸೋದರರ ನೆರೆಯಲ್ಲಿರುವಾಗ ಹಿಂದಿಯನ್ನೂ ಕಲಿಯಬೇಕೆಂಬುದನ್ನು ಮತ್ತೆ ಮತ್ತೆ ಹೇಳದೆ ವಿಧಿ ಯಿಲ್ಲ. ಹಿಂದೂಗಳ ಮತ್ತು ಮುಸಲ್ಮಾನರ ನಡುವಣ ನಿಜವಾದ ಐಕ್ಯದಲ್ಲಿ ವಿಶ್ವಾಸ ವಿರುವವರು ಪರಸ್ಪರ ದ್ವೇಷದ ಇಂದಿನ ಘೋರ ಘಟನೆಯಿಂದ ಸ್ಥೈರ್ಯಗೆಡ ಬೇಕಾಗಿಲ್ಲ. ಅವರ ವಿಶ್ವಾಸ ಕಿಂಚಿತ್ತಾದರೂ ಮೌಲ್ಯವುಳ್ಳದ್ದಾಗಿದ್ದಲ್ಲಿ ಅವಕಾಶ ಬಂದಾಗಲೆಲ್ಲ ಅವರನ್ನು ಸಕ್ರಿಯವಾದ ಆದರೆ ನಿರಾಡಂಬರ ರೀತಿಯ, ಪರಸ್ಪರ ಸಹನೆ,

ಪ್ರೇಮ ಸೌಜನ್ಯಗಳ ಸದ್ವರ್ತನೆಯಲ್ಲಿ ತೊಡಗಿರುವಂತೆ ಮಾಡುತ್ತದೆ. ಪರಸ್ಪರರ ಭಾಷೆಯ ಕಲಿಕೆ ಈ ದಿಸೆಯಲ್ಲಿ ಒಬ್ಬನು ಮಾಡಬಹುದಾದ ಅತ್ಯಂತ ಕಿರುಪ್ರಯತ್ನ ವಾಗಿದೆ. ಹಿಂದೂಗಳಾಗಲಿ ಮುಸ್ಲಿಮರಾಗಲಿ ಅಜ್ಞಾನಿಗಳು ಅಥವಾ ದುರಭಿಮಾನಿ ದೂಷಕರಿಂದ ಆಯಾ ಮತೀಯ ಗ್ರಂಥಗಳ ಮತ್ತು ಬೋಧಕರ ಬಗೆಗೆ ಹೇಳಿರ ಬಹುದಾದ ಕೆಟ್ಟ ವಿಚಾರಗಳನ್ನು ಅರಿಯುವುದಕ್ಕಿಂತ, ನಿಷ್ಠಾವಂತ ಮುಸಲ್ಮಾನರು ಸಮರ್ಥವಾಗಿ ಬರೆದ ಅನೇಕ ಉರ್ದು ಗ್ರಂಥಗಳ ಮೂಲಕ ಮುಸಲ್ಮಾನರು ಕೊರಾನ್ ಮತ್ತು ಪ್ರವಾದಿಯ ಬಗೆಗೆ ಏನೆಂದು ಆಲೋಚಿಸುತ್ತಾರೆಂಬುದನ್ನು ಹಿಂದೂಗಳು ಅರಿಯಬೇಕು; ಅಂತೆಯೇ ನಿಷ್ಠಾವಂತ ಹಿಂದೂಗಳು ಅಷ್ಟೇ ಚೆನ್ನಾಗಿ ಬರೆದ ಹಿಂದಿ ಗ್ರಂಥಗಳಿಂದ ಹಿಂದೂಗಳು ಗೀತೆ ಮತ್ತು ಕೃಷ್ಣನ ಬಗೆಗೆ ಏನೆಂದು ಆಲೋಚಿಸುತ್ತಾ ರೆಂಬುದನ್ನು ಮುಸಲ್ಮಾನರು ಅರಿಯುವುದು ಉತ್ತಮವಲ್ಲವೆ?"

ಗಾಂಧೀಜಿ ಆಗಸ್ಟ್ ೧೫ರ ವರೆಗೆ ಮೈಸೂರಿನಲ್ಲಿರುವಂತೆಯೂ ಆ ಅವಧಿಯಲ್ಲಿ ಪ್ರಮುಖ ಸ್ಥಳಗಳ ಭೇಟಿಯನ್ನು ಮುಗಿಸುವಂತೆಯೂ, ನಡುನಡುವೆ ವಿಶ್ರಾಂತಿಗಾಗಿ ಅಲ್ಪಕಾಲಿಕ ಬಿಡುವುಗಳಿರುವಂತೆಯೂ ಅವರ ಪ್ರವಾಸ ಕಾರ್ಯಕ್ರಮ ಗೊತ್ತಾಗಿದ್ದಿತು. ಜುಲೈ ೩ ರಂದು ಗಾಂಧೀಜಿ ದಕ್ಷಿಣ ಭಾರತ ಖಾದಿ ಪ್ರದರ್ಶನವನ್ನು ಉದ್ಘಾಟಿಸಿದರು. ಆ ವಿಷಯ ಅವರ ಮನಸ್ಸಿಗೆ ಅತ್ಯಂತ ಪ್ರಿಯವಾದುದಾಗಿದ್ದಿತಲ್ಲದೆ ಅನಾರೋಗ್ಯದಿಂದ ಚೇತರಿಸಿಕೊಂಡ ನಂತರದ ತಮ್ಮ ಕಾರ್ಯಚಟುವಟಿಕೆಗಳಿಗೆ ತಾವು ಬಯಸುತ್ತಿದ್ದಂತೆಯೇ ಅದು ಮಂಗಳಕರ ಪ್ರಾರಂಭವಾಗಿದ್ದಿತು. ಮುಂದಿನ ಕಾರ್ಯಕ್ರಮ ಕಬೀರ್ ಎಂಬ ವಿಶೇಷ ನಾಟಕ ಪ್ರದರ್ಶನದ ವೀಕ್ಷಣೆಯಾಗಿದ್ದಿತು. ಹಿಂದಿ ಮತ್ತು ಖದ್ದರನ್ನು ಜನಪ್ರಿಯ ಗೊಳಿಸುವ ದೃಷ್ಟಿಯಿಂದ ಆ ನಾಟಕವನ್ನು ಆಡಲಾಗಿದ್ದಿತು. ಈ ಸಂದರ್ಭದಲ್ಲಿ ದರಿದ್ರ ನಾರಾಯಣನ ಸ್ವಯಂನೇಮಿತ ಪ್ರತಿನಿಧಿಯಾದ ತಮಗೆ ಕಾಣಿಕೆ ಸಲ್ಲಿಸಿದುದರಿಂದ, ದಕ್ಷಿಣ ಭಾರತದಲ್ಲಿ ಹಿಂದಿಯ ಸೊಗಸಾದ ಉಚ್ಚಾರ ಮತ್ತು ನಿರೂಪಣೆಗಳನ್ನು ಆಲಿಸಿದುದರಿಂದ ಮತ್ತು ಬಹುಮಂದಿ ನಟರು ಖಾದಿಯ ಉಡುಗೆ ಧರಿಸಿದುದನ್ನು ನೋಡಿದ್ದರಿಂದ ತಮಗಾದ ಮುಮ್ಮಡಿ ಸಂತೋಷಕ್ಕಾಗಿ ಗಾಂಧೀಜಿ ಆ ನಾಟಕಕ್ಕೆ ಸಂಬಂಧಿಸಿದ ಎಲ್ಲರನ್ನೂ ವಂದಿಸಿದರು.

ಜುಲೈ ೧೨ರಂದು ಬೆಂಗಳೂರಿನಲ್ಲಿ ವಿದ್ಯಾರ್ಥಿಗಳ ಸಭೆಯೊಂದು ನಡೆಯಿತು; ಅಲ್ಲಿ ಗಾಂಧೀಜಿಗೆ ೧,೭೦೦ ರೂ.ಗಳ ಕಾಣಿಕೆಯನ್ನು ಸಲ್ಲಿಸಲಾಯಿತು. ದೇವನಾಗರಿ ಯಲ್ಲಿ ಲಿಪೀಕರಿಸಿದ್ದ ಕನ್ನಡದ ವಿಜ್ಞಾಪನಾ ಪತ್ರದ ಪ್ರತಿಯೊಂದನ್ನು ಅವರಿಗೆ ನೀಡ ಲಾಯಿತು. ಸಭಾಂಗಣ ಕಿಕ್ಕಿರಿದಿತ್ತು. ವಿದ್ಯಾರ್ಥಿಗಳು ಅವರ ಹಿಂದಿ ಭಾಷಣವನ್ನು ತನ್ಮಯತೆಯಿಂದ ಕೇಳಿದರು. ಹಿಂದಿಯನ್ನು ಅಧ್ಯಯನ ಮಾಡಲು ಮತ್ತು ಬಡವರ ಹಣದಿಂದ ನಡೆಸುವ ಶಿಕ್ಷಣವನ್ನು ಸ್ವೀಕರಿಸುವ ಪಾಪಕ್ಕಾಗಿ ಹೆಚ್ಚಿನ ಕಾಣಿಕೆಯನ್ನು ನೀಡಲು ಕರೆನೀಡಿದರು. ಈ ಹಣವಾದರೊ ಕುಡಿತ ಮತ್ತು ಮಾದಕ ಪದಾರ್ಥಗಳಂಥ ದೋಷಪೂರ್ಣ ಆದಾಯ ಮೂಲಗಳಿಂದ ಬಂದದ್ದು.

ಮರು ದಿನ ಗಾಂಧೀಜಿ ವಿಜ್ಞಾನ ಕೇಂದ್ರಕ್ಕೆ ಭೇಟಿಯಿತ್ತರು. ಅದರ ನಿರ್ದೇಶಕರು ಅವರಿಗೆ ವಿದ್ಯುಚ್ಛಕ್ತಿ, ರಸಾಯನ ವಿಜ್ಞಾನ ಮತ್ತು ಜೀವರಸಾಯನ ವಿಜ್ಞಾನ ವಿಭಾಗ ಗಳನ್ನು ತೋರಿಸಿದರು. ವಿದ್ಯಾರ್ಥಿಗಳನ್ನುದ್ದೇಶಿಸಿ ಗಾಂಧೀಜಿ ಹೀಗೆ ಹೇಳಿದರು:

"ನಾನು ಎಲ್ಲಿಗೆ ಬಂದಿರುವೆನೆಂದು ನನಗೇ ಅಚ್ಚರಿಯಾಗುತ್ತಿದೆ. ಭಯಾಶ್ಚರ್ಯ ಗಳಿಂದ ಮೂಕನಾಗಿ ನಿಲ್ಲಬೇಕಾಗುವ ನನ್ನಂಥ ಗ್ರಾಮೀಣನಿಗೆ ಇಲ್ಲಿ ಸ್ಥಾನವಿಲ್ಲ. ನಾನು ಹೆಚ್ಚೇನೂ ಹೇಳುವ ಸ್ಥಿತಿಯಲ್ಲಿಲ್ಲ. ಒಟ್ಟಾರೆ ನಾನು ಹೇಳಬಹುದಾದುದು ಇಷ್ಟು; ಇಲ್ಲಿ ನಾವು ನೋಡುವ ಈ ಎಲ್ಲ ಬೃಹತ್ ಪ್ರಯೋಗಶಾಲೆಗಳು ಮತ್ತು ವಿದ್ಯುತ್ಸಾಧನ ಗಳು ಲಕ್ಷಾಂತರ ಮಂದಿಯ ಇಷ್ಟವಿಲ್ಲದ ಮತ್ತು ಒತ್ತಾಯಪೂರ್ವಕ ಶ್ರಮದ ಫಲ ವಾಗಿವೆ. ಕಾರಣ, ಟಾಟಾರವರ ಮುವತ್ತು ಲಕ್ಷವಾಗಲಿ ಅಥವಾ ಮೈಸೂರು ರಾಜ್ಯದ ಧನ ಸಹಾಯವಾಗಲಿ ಈ ದರಿದ್ರ ಕೋಟಿಯಿಂದ ಬಂದದ್ದೇ ಹೊರತು ಹೊರಗಿ ನಿಂದಲೋ ಅಥವಾ ಮತ್ತೆಲ್ಲಿಂದಲೋ ಬಂದದ್ದಲ್ಲ; ಒಂದು ಪಕ್ಷ ನಾವು ಹಳ್ಳಿಯ ಜನರನ್ನು ಸಂಧಿಸಿ ಅವರ ಹಣವನ್ನು ಯಾವತ್ತೂ ಅವರ ಪ್ರಯೋಜನಕ್ಕೆ ಬಾರದ, ಬಹುಶಃ ಅವರ ಮುಂದಿನ ಸಂತತಿಗೆ ಫಲದಾಯಕವಾಗಬಹುದಾದ ಕಟ್ಟಡಗಳು ಮತ್ತು ಕಾರ್ಖಾನೆಗಳ ಮೇಲೆ ಹೇಗೆ ಬಳಸುತ್ತಿದ್ದೇವೆಂಬುದನ್ನು ವಿವರಿಸಿದಲ್ಲಿ ಅದನ್ನವರು ಅರಿತುಕೊಳ್ಳಲಾರರು. ಅವರು ಅದರ ಬಗೆಗೆ ಆಸ್ಥೆಯನ್ನೂ ತೋರುವುದಿಲ್ಲ. ಈ ಹಳ್ಳಿಯ ಮಂದಿಯನ್ನು ನಾವು ವಿಶ್ವಾಸದಿಂದ ಕಾಣುವುದಿಲ್ಲ. ಅದು ನಮ್ಮ ಸಿದ್ಧಹಕ್ಕೆಂದು ಪರಿಗಣಿಸುತ್ತೇವೆಯೇ ಹೊರತು 'ಪ್ರಾತಿನಿಧ್ಯವಿಲ್ಲದೆ ತೆರಿಗೆಯಿಲ್ಲ' ಎಂಬ ಕಟ್ಟಳೆ ಅವರಿಗೂ ಅನ್ವಯವಾಗುವುದೆಂಬುದನ್ನು ಮರೆಯುತ್ತೇವೆ. ನೀವು ನಿಜವಾಗಿಯೂ ಇದನ್ನು ಗ್ರಾಮೀಣ ಜನತೆಯ ಪ್ರಯೋಜನಕ್ಕೆ ಬಳಸುವುದಾದರೆ ಮತ್ತು ಈ ವಿಷಯ ದಲ್ಲಿ ಅವರ ಲೆಕ್ಕವನ್ನು ಒಪ್ಪಿಸಬೇಕೆಂಬ ಹೊಣೆಯನ್ನು ಅರಿತುಕೊಳ್ಳುವುದಾದರೆ ಈ ಎಲ್ಲ ಸಾಧನೋಪಕರಣಗಳಿಗೆ ಮತ್ತೊಂದು ಮುಖವಿದೆಯೆಂಬುದನ್ನು ನೀವು ತಿಳಿಯು ತ್ತೀರಿ. ಆಗ ಅವರಿಗಾಗಿ ನಿಮ್ಮ ಹೃದಯಗಳಲ್ಲಿ ಕಿರಿದಲ್ಲದ ಒಂದು ಹಿರಿಯ ಸ್ಥಾನ ಮೀಸಲಾಗಿರುತ್ತದೆ. ಆ ಸ್ಥಾನವನ್ನು ಅಚ್ಯುತವಾಗಿ ಕಾಪಾಡಿಕೊಂಡು ಬಂದಲ್ಲಿ ನಿಮ್ಮ ವಿದ್ಯಾಭ್ಯಾಸ ಯಾವ ದುಡಿಮೆಯನ್ನವಲಂಬಿಸಿದೆಯೋ ಆ ಸಾಮಾನ್ಯ ಮಂದಿಯ ಉದ್ಧಾರಕಾಗಿ ನಿಮ್ಮ ಜ್ಞಾನವನ್ನು ಬಳಸುತ್ತೀರಿ. ನೀವು ನನಗೆ ನೀಡಿರುವ ಕಾಣಿಕೆ ಯನ್ನು ದರಿದ್ರ ನಾರಾಯಣನಿಗಾಗಿ ವಿನಿಯೋಗಿಸುತ್ತೇನೆ. ಆ ದರಿದ್ರ ನಾರಾಯಣನ ಯಥಾರ್ಥ ಸ್ವರೂಪವನ್ನು ಕೇವಲ ನನ್ನ ಕಲ್ಪನೆಯ ಮೂಲಕ ತಿಳಿದಿದ್ದೇನೆಯೇ ಹೊರತು ನಾನಿನ್ನೂ ಕಂಡಿಲ್ಲ. ಈ ಹಣವನ್ನು ಹೊಂದುವ ನೇಕಾರರೂ ಕೂಡ ದರಿದ್ರ ನಾರಾಯಣನ ಯಥಾರ್ಥ ಸ್ವರೂಪವಲ್ಲ. ಅವನು ವಾಸಿಸುವುದು ಸುದೂರದ ಹಳ್ಳಿಗಳ ಮೂಲೆಕೊಂಪೆಗಳಲ್ಲಿ; ಅವುಗಳನ್ನಿನ್ನೂ ಪರಿಶೋಧಿಸಬೇಕಾಗಿದೆ. ಕೆಲವು ರಾಸಾಯನಿಕ ವಸ್ತುಗಳ ಗುಣಲಕ್ಷಣಗಳನ್ನು ಕಂಡುಹಿಡಿಯಲು ವರ್ಷಗಟ್ಟಲೆ ಪ್ರಯೋಗ ನಡೆಸ ಬೇಕಾಗುವುದೆಂದು ನಿಮ್ಮ ಪ್ರಾಧ್ಯಾಪಕರು ತಿಳಿಸಿದರು. ಆದರೆ ಈ ಹಳ್ಳಿಗಳನ್ನು ಒಳ

ಹೊಕ್ಕು ನೋಡಲು ಪ್ರಯತ್ನಿಸುವವರು ಯಾರು? ನಿಮ್ಮ ಪ್ರಯೋಗಶಾಲೆಗಳಲ್ಲಿ ಇಪ್ಪತ್ನಾಲ್ಕು ಗಂಟೆಗಳೂ ಸಾಗುತ್ತಿರುವ ಕೆಲವು ಪ್ರಯೋಗಗಳಂತೆಯೇ ನಿಮ್ಮ ಅಂತಃ ಕರಣವು ಈ ದರಿದ್ರ ಕೋಟಿಯ ಹಿತಕ್ಕಾಗಿ ನಿತ್ಯಾನುಕಂಪಿಯಾಗಿರಲಿ.

"ಬೀದಿಯ ಸಾಮಾನ್ಯ ವ್ಯಕ್ತಿಯಲ್ಲಿ ನಿರೀಕ್ಷಿಸುವುದಕ್ಕಿಂತ ಇನ್ನೂ ಹೆಚ್ಚಾಗಿ ನಿಮ್ಮಿಂದ ನಿರೀಕ್ಷಿಸುತ್ತೇನೆ. ನೀವು ಮಾಡಿಕೊಟ್ಟಿರುವ ಅಲ್ಪದಿಂದಲೇ ತೃಪ್ತಿಯಾಗ ಬೇಡಿ; 'ನಮ್ಮ ಕೈಲಾದುದನ್ನು ಮಾಡಿಯಾಯಿತು. ಈಗ ಟೆನ್ನಿಸ್ ಮತ್ತು ಬಿಲಿಯರ್ಡ್ಸ್ ಗಳನ್ನಾಡೋಣ' ಎಂದು ಹೇಳಿಬಿಡಬೇಡಿ. ಆ ಬಿಲಿಯರ್ಡ್ಸ್ ಕೋಣೆಯಲ್ಲಿ ಮತ್ತು ಟೆನ್ನಿಸ್ ಅಂಗಳದಲ್ಲಿ ನಿಮ್ಮ ಮುಂದೆ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಸಾಲದ ದೊಡ್ಡ ರಾಶಿಯ ಬಗೆಗೆ ಆಲೋಚಿಸಿ. ಆದರೆ ಐಕ್ಯವೆಂಬುದು ತಿರುಕರಿಗಲ್ಲ. ಈಗ ನೀವು ಕೊಟ್ಟಿರುವುದಕ್ಕೆ ನನ್ನ ವಂದನೆಗಳು. ನನ್ನ ಈ ಪ್ರಾರ್ಥನೆಯನ್ನು ಕುರಿತು ಚಿಂತನೆ ಮಾಡಿ ಮತ್ತು ಕಾರ್ಯರೂಪಕೆ ತನ್ನಿ. ಬಡ ಮಹಿಳೆಯರು ನಿಮಗಾಗಿ ಮಾಡುವ ಬಟ್ಟೆಯನ್ನು ಧರಿಸಲು ಹಿಂಜರಿಯದಿರಿ; ನೀವು ಖಾದಿಯನ್ನು ಧರಿಸಿ ಬಂದಲ್ಲಿ ಬಾಗಿಲನ್ನು ತೋರುವಂಥ ನಿಮ್ಮ ಅಧಿಕಾರಿಗಳಿಗೆ ಹೆದರಬೇಡಿ; ನೀವು ಪೌರುಷವಂತರಾಗಬೇಕು ಮತ್ತು ನಿಮ್ಮ ನಂಬಿಕೆಗಳಲ್ಲಿ ನೀವು ಹೊಂದಿರುವ ಅಚಲ ವಿಶ್ವಾಸದಿಂದ ಪ್ರಪಂಚವನ್ನೆ ದುರಿಸಬೇಕೆಂಬುದು ನನ್ನ ಆಶಯ. ಮೂಕ ಜನಕೋಟಿಯ ಬಗೆಗಿನ ನಿಮ್ಮ ಶ್ರದ್ಧೆ ಉತ್ಸಾಹಗಳು ಐಶ್ವರ್ಯಾನ್ವೇಷಣೆಯ ದಂದುಗದಲ್ಲಿ ಉಡುಗಿ ಹೋಗದಿರಲಿ. ದೊಡ್ಡದೊಂದು 'ತಂತಿಲಿ ಸಾಧನ'ವನ್ನು ನೀವು ಯೋಜಿಸಬಹುದಾಗಿದೆ; ಅದಕ್ಕೆ ಅಗತ್ಯ ವಾಗಿರುವುದು ಆ ಜನಸಾಮಾನ್ಯರೊಂದಿಗೆ ನಿಮ್ಮ ಹೃದಯಗಳನ್ನು ಬೆಸೆಯುವಂಥ ಆಂತರಂಗಿಕ ಸಂಶೋಧನೆಯೇ ಹೊರತು ಬಾಹ್ಯ ಸಂಶೋಧನೆಯಲ್ಲ. ಈ ಆಂತರಂಗಿಕ ಸಂಶೋಧನೆಯೊಂದಿಗೆ ಸಂಬಂಧಿಸದ ಎಲ್ಲ ಸಂಶೋಧನೆಯೂ ನಿಷ್ಪ್ರಯೋಜಕವಾಗುತ್ತದೆ. ನಿಮ್ಮ ಆವಿಷ್ಕಾರಗಳಿಗೆಲ್ಲ ದಲಿತೋದ್ಧಾರದ ಚರಮ ಧ್ಯೇಯವಿರದತನಕ ಈ ನಿಮ್ಮ ಕಾರ್ಯಾಗಾರಗಳೆಲ್ಲ ನಿಶ್ಚಯವಾಗಿ ಸೈತಾನನ ಕಾರ್ಯಾಗಾರಗಳಿಗಿಂತ ಯಾವ ರೀತಿಯಿಂದಲೂ ಉತ್ತಮವೆನಿಸುವುದಿಲ್ಲ."

ಮಹಿಳಾ ಸಮಾಜವು ಅವರನ್ನು ಸಂಗೀತ ಕಛೇರಿಗೆ ಬರಮಾಡಿಕೊಂಡು, ೨೨೫ ರೂ.ಗಳ ಕಾಣಿಕೆಯನ್ನರ್ಪಿಸಿತು. ಆದರೆ ಕೇವಲ ಈ ಸಂಗೀತ ಮತ್ತು ನಿಧಿಗಳಿಂದ ಅವರು ತೃಪ್ತರಾಗಲಿಲ್ಲ. ಅವರು ಹೇಳಿದರು: "ದರಿದ್ರ ನಾರಾಯಣನದು ತಣಿಯದ ಹಸಿವು. ನೀವು ಕೊಡಬಹುದಾದ ಎಲ್ಲ ಹಣ ಮತ್ತು ಆಭರಣಗಳಿಗೂ ಆತನ ಉದರದಲ್ಲಿ ಸ್ಥಳ ವಿದ್ದೇ ಇದೆ. ಒಡವೆಗಳು ನಿಮ್ಮ ಸ್ತ್ರೀಧನ; ಅವನ್ನು ಸ್ವಂತ ಇಚ್ಛೆಯಂತೆ ದಾನಮಾಡುವ ಹಕ್ಕು ನಿಮಗಿದೆ." ಇದರ ಪ್ರತಿಕ್ರಿಯೆ ಉದಾರವಾಗಿದ್ದಿತು. ಮಹಿಳೆಯರು ನಾ ಮುಂದು ತಾ ಮುಂದು ಎಂದು ವೇದಿಕೆಯ ಮೇಲೆ ಹೋಗಿ ತಮ್ಮ ಆಭರಣಗಳನ್ನು ತೆಗೆದು ಕೊಟ್ಟರು.

ಪ್ರವಾಸ ನಿರಾತಂಕವಾಗಿಯೇ ಮುಂದುವರಿಯಿತು. ಅವರು ಪ್ರತಿಯೊಂದು ಸಭೆಯಲ್ಲಿ ಹಿಂದಿಯಲ್ಲಿ ಮಾತನಾಡಿದುದು ಈ ಪ್ರವಾಸದ ವೈಶಿಷ್ಟ್ಯವಾಗಿದ್ದಿತು. ಮೈಸೂರಿನಲ್ಲಿ ತಂಗಿದ ಅವಧಿಯಲ್ಲಿ ಅಲ್ಲಿನ ಅನೇಕ ಸಂಘಸಂಸ್ಥೆಗಳಿಗೆ ಭೇಟಿಕೊಡುವ ಪ್ರತಿಯೊಂದು ಅವಕಾಶವೂ ಗಾಂಧೀಜಿಗೆ ಫಲಕಾರಿಯಾಗಿದ್ದಿತು. ಮಿಥಿಕ್ ಸೊಸೈಟಿ ಯಲ್ಲಿ ಭಾಷಣ ಮಾಡುತ್ತಾ ಅವರು ಹೇಳಿದರು:

"ಈ ಅಸ್ಪೃಶ್ಯತೆಯು ಅಭಿಶಾಪ ಈ ನೆಲವನ್ನು ಕಾಡಲು ಕಾರಣವೇನೆಂಬುದನ್ನು ನಿಮ್ಮಲ್ಲಿ ಯಾರಾದರೊಬ್ಬರು ಸಂಶೋಧನೆ ನಡೆಸಬೇಕೆಂದು ನಾನು ಸಲಹೆ ನೀಡುತ್ತೇನೆ. ಅಸ್ಪೃಶ್ಯತೆಯು ಹಿಂದೂಧರ್ಮದ ಅಂಗವಲ್ಲವೆಂಬುದನ್ನೂ, ವೇದಗಳ ಸ್ಫೂರ್ತಿಯನ್ನು ಮತ್ತು ಉಪನಿಷತ್ತುಗಳ ಶ್ರೀಮಂತ ಪರಂಪರೆಯನ್ನು ನಮಗೆ ನೀಡಿದ ನಮ್ಮ ಪೂರ್ವಿ ಕರಿಗೆ ಈಗ ನನ್ನಲ್ಲಿರುವಂತೆಯೇ ಈ ಅಸ್ಪೃಶ್ಯತೆಯಲ್ಲಿ ವಿಶ್ವಾಸವಿರಲಿಲ್ಲವೆಂಬುದನ್ನೂ ಮತ್ತು ಇದು ಹಿಂದೂಧರ್ಮದ ಮೇಲೆ ಬೆಳೆದಿರುವ ಹಾನಿಕರ ವ್ರಣ ಮಾತ್ರವೆಂಬು ದನ್ನೂ ತೋರಿಸಲು ಕೆಲವು ಶ್ರೇಷ್ಠ ಪಂಡಿತರಿರುವ ಮೈಸೂರಿನ ವಿದ್ವಾಂಸ ವರ್ಗವು ಪ್ರಮಾಣೀಕೃತ ಆಧಾರಗಳನ್ನು ಪತ್ತೆಹಚ್ಚುವರೆಂಬ ಆಶೆ ನನಗಿದೆ. ಈ ಕೆಲಸವನ್ನು ನೀವು ಮಾಡುವುದಾದಲ್ಲಿ, ನಿಮ್ಮ ಅನೇಕ ರೀತಿಯ ಸೇವೆಗಳಲ್ಲಿ ಅದು ಯಾವ ವಿಧ ದಿಂದಲೂ ಕನಿಷ್ಠವೆನಿಸಲಾರದು. ನನ್ನಂಥ ಕೆಲಸಗಾರರು ಸ್ವಪ್ರಮಾಣಿತ ಆಧಾರ ಗಳಿಂದಲೆ ಈ ವಿಷಯವು ಹಿಂದೂಧರ್ಮದ ಭಾಗವೇ ಅಲ್ಲವೆಂದು ಹೇಳುತ್ತಾರೆ. ನಾನು ಪಂಡಿತನೇನಲ್ಲ. ಅಲ್ಲದೆ ಮೂಲಶಾಸ್ತ್ರಗಳನ್ನೂ ಓದಿಲ್ಲ. ಆದರೆ ಇಂಥ ಹೇಯ ಪದ್ಧತಿಯ ವಿರುದ್ಧ ನನ್ನ ಹಿಂದೂ ಚೇತನವು ಸಿಡಿದೇಳುತ್ತದೆ. ಪಂಡಿತರೂ ಸಂಶೋಧನಾ ವಿದ್ಯಾರ್ಥಿ ಗಳೂ ಆದ ನೀವು ಸಾಕ್ಷ್ಯಾಧಾರಗಳ ಮೇಲೆ ಸಶಕ್ತ ಪ್ರಭುತ್ವವನ್ನು ಹೊಂದಲು ಸಾಧ್ಯವಾಗುವ ಮತ್ತು ಸಂಪ್ರದಾಯದ ವಿರೋಧವನ್ನು ಅಧಿಕಾರಯುತವಾಗಿ ನಿಶ್ಶೇಷ ಗೊಳಿಸುವ ನಿಮ್ಮ ಪ್ರಮಾಣೀಭೂತ ತೀರ್ಮಾನಗಳಿಂದ ನನ್ನಂಥ ಕೆಲಸಗಾರರಿಗೆ ಭುಜ ಕೊಡುವಿರೆಂದು ಆಶಿಸುತ್ತೇನೆ. ಈ ಬಗೆಯ ಕೆಲಸಗಾರರಿಗೆ ಬೇರೆಲ್ಲೂ ಪಡೆಯಲಾಗದ ಪ್ರಮಾಣ ಗ್ರಂಥಗಳನ್ನು ಒದಗಿಸಿಕೊಟ್ಟು ಅವರ ಕಾರ್ಯಕ್ಕೆ ಉತ್ತೇಜನ ನೀಡಬೇಕಾದ ಹೆಮ್ಮೆಯ ಸಂಯೋಗ ನಿಮ್ಮ ಸಂಸ್ಥೆಯದಾಗಬೇಕು."

ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಗೆ ನೀಡಿದ ಭೇಟಿಯಿಂದ ಅಲ್ಲಿ ನೆರೆದಿದ್ದ ಪಂಡಿತ ಸಮೂಹವನ್ನುದ್ದೇಶಿಸಿ ಮಾತನಾಡುವ ಅವಕಾಶ ಅವರಿಗೊದಗಿತು.

"ನೀವು ನನಗೆ ಸಂಸ್ಕೃತ ಬಿನ್ನವತ್ತಳೆಯನ್ನು ನೀಡಿ ತೋರಿರುವ ಗೌರವವನ್ನು ಮೆಚ್ಚುತ್ತೇನೆ. ಪ್ರತಿಯೊಬ್ಬ ಹಿಂದೂ ಬಾಲಕ ಮತ್ತು ಬಾಲಕಿಯು ಸಂಸ್ಕೃತ ಜ್ಞಾನ ವನ್ನು ಗಳಿಸಲೇಬೇಕೆಂಬ ಮತ್ತು ಪ್ರತಿಯೊಬ್ಬ ಹಿಂದುವೂ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಷ್ಟು ಸಂಸ್ಕೃತ ಭಾಷಾಜ್ಞಾನವನ್ನು ಪಡೆದಿರಬೇಕೆಂಬ ವಿಚಾರವನ್ನು ನಾನು ಎತ್ತಿಹಿಡಿಯುತ್ತೇನೆ.

"ಶೂದ್ರರಿಗೆ ಮತ್ತು ಪಂಚಮರಿಗೆ ಸಂಸ್ಕೃತವನ್ನು ಕಲಿಸಲು ಹಿಂಜರಿಯುತ್ತಿದ್ದ ಪಂಡಿತರು ಮೈಸೂರಿನಲ್ಲಿದ್ದರೆಂಬುದನ್ನು ಕೇಳಿ ಮನಸ್ಸಿಗೆ ನೋವಾಯಿತು. ಶೂದ್ರರಿಗೆ ಸಂಸ್ಕೃತವನ್ನು ಕಲಿಯಲು, ತತ್ಫಲವಾಗಿ ವೇದಗಳನ್ನು ಓದಲು ಹಕ್ಕಿಲ್ಲವೆಂಬ ವಿವಾದವನ್ನು ಧರ್ಮಶಾಸ್ತ್ರದ ಪ್ರಮಾಣಗಳು ಎಷ್ಟರಮಟ್ಟಿಗೆ ಬೆಂಬಲಿಸುತ್ತವೆಂಬುದು ನನಗೆ ತಿಳಿಯದು. ಒಬ್ಬ ಸನಾತನ ಹಿಂದುವಾಗಿ ನನ್ನ ದೃಢಾಭಿಪ್ರಾಯವೇನೆಂದರೆ, ಒಂದು ಪಕ್ಷ ಅಂತಹ ಯಾವುದೇ ಪ್ರಮಾಣವು ಕಂಡುಬಂದರೂ ಆ ಮೂಲಪಾಠ ಪದಶಃ ಅರ್ಥವಿವರಣೆಯಿಂದ ನಮ್ಮ ಧರ್ಮದ ಸತ್ವವನ್ನು ಕೊಲ್ಲಬಾರದೆಂಬುದು. ಶಬ್ದಗಳಿಗೂ ಮನುಷ್ಯನಂತೆ ವಿಕಾಸಾವಕಾಶವಿದೆ; ವಿವೇಕದೂರವಾಗಿ ಅನುಭವವಿರುದ್ಧವಾದುದಾದರೆ ವೇದಶಾಸ್ತ್ರವೂ ವರ್ಜ್ಯ.

"ಅನೇಕ ಬ್ರಾಹ್ಮಣರು ತಕಲಿಗಳನ್ನು ಉಪಯೋಗಿಸುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ. ಆದರೆ ಆ ನೂಲಿನಿಂದ ಕೇವಲ ನಿಮ್ಮ ಪವಿತ್ರ ಯಜ್ಞೋಪವೀತಗಳನ್ನು ಮಾಡಿಕೊಳ್ಳುವುದಕ್ಕೆ ನಿಮ್ಮ ಆ ಕಾರ್ಯವನ್ನು ಸೀಮಿತಗೊಳಿಸಿಕೊಳ್ಳಕೂಡದೆಂದು ನನ್ನ ಇಚ್ಛೆ. ಅವು ಮುಂದೆಯೂ ತಕಲಿಯ ನೂಲಿನವೇ ಆಗಿರುತ್ತವೆ, ಸರಿ. ಆದರೆ ನಿಮ್ಮ ಬಟ್ಟೆಗಳನ್ನೂ ಚರಕದ ನೂಲಿನಿಂದಲೇ ತಯಾರಿಸಿಕೊಳ್ಳಿ. ಶ್ರುತಿಶಾಸ್ತ್ರಗಳಿಂದ ಶ್ಲೋಕಗಳನ್ನು ಪಠಿಸುವ ಹುಡುಗ ಮತ್ತು ಹುಡುಗಿಯರು ವಿದೇಶೀ ವಸ್ತ್ರ ಧರಿಸಿರುವುದನ್ನು ನೋಡಿ ನನಗೆ ಖೇದವಾಯಿತು. ಒಂದೇ ಮಾತಿನಲ್ಲಿ ಹೇಳುವುದಾದರೆ ಅದು ನನಗೆ ತೀರ ಅನುಚಿತವೆಂಬಂತೆ ತೋರಿತು. ಬಾಹ್ಯರೂಪ ಮಾತ್ರ ಧರ್ಮದ ಸಾರವಲ್ಲ; ಆದರೆ ಈ ಬಾಹ್ಯರೂಪವು ಆಗಾಗ್ಗೆ ಅಂತಸ್ಸತ್ವವನ್ನು ಸಾರುತ್ತದೆ. ಆರ್ಯ ಸಂಸ್ಕೃತಿಯನ್ನು ಬೋಧಿಸುವ ಒಂದು ಸಂಸ್ಕೃತ ಕಾಲೇಜಿಗೂ ಅಥವಾ ಒಂದು ಸಂಸ್ಥೆಗೂ ಹೋದಾಗಲೆಲ್ಲ ನಮ್ಮ ಪ್ರಾಚೀನ ಋಷಿಗಳ ಸರಳ ಹಾಗೂ ಪವಿತ್ರ ಪರಿಸರದ ಸ್ಮರಣೆ ಬರಬೇಕೆಂಬುದು ನನ್ನ ನಿರೀಕ್ಷೆ. ನನ್ನ ಈ ನಿರೀಕ್ಷೆಯನ್ನು ನೀವು ಸಫಲಗೊಳಿಸಿಲ್ಲದಿರುವುದು ನನಗೆ ವಿಷಾದವನ್ನುಂಟುಮಾಡಿದೆ. ಈ ಮಕ್ಕಳನ್ನು ಆರ್ಯಸಂಸ್ಕೃತಿಯ ಉತ್ತಮ ಪ್ರತಿನಿಧಿಗಳನ್ನಾಗಿ ಮಾಡಬೇಕೆಂದು ಅವರ ಶಿಕ್ಷಕರು ಮತ್ತು ಪೋಷಕರಲ್ಲಿ ಬಿನ್ನವಿಸಿಕೊಳ್ಳುತ್ತೇನೆ."

ಪೌರ ಮತ್ತು ಸಾಮಾಜಿಕ ಅಭಿವೃದ್ಧಿ ಸಂಘದಲ್ಲಿ ಉತ್ತರಿಸುತ್ತಾ, ಗಾಂಧೀಜಿ, ಯುವಜನರು ರಾಜಕೀಯದಲ್ಲಿನಷ್ಟೆ ಸಾಮಾಜಿಕ ಸುಧಾರಣೆಯಲ್ಲಿಯೂ ಆಸ್ಥೆ ವಹಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಕಾರಣ, ಅನೇಕ ಅನಿಷ್ಟಗಳಿಂದ ತೊಳಲುತ್ತಿರುವ ಸಮಾಜವನ್ನೂ ತಮ್ಮನ್ನೂ ಎಷ್ಟರಮಟ್ಟಿಗೆ ಶುದ್ಧೀಕರಣ ಮಾಡಿದರೆಂಬ ಆಧಾರದ ಮೇಲೆ ಸ್ವರಾಜ್ಯ ನಿರ್ವಹಣೆಗೆ ಅಗತ್ಯವಾದ ಅವರ ಸಾಮರ್ಥ್ಯವನ್ನು ಅಳೆಯಬಹುದಾಗಿದೆ. ಕನ್ಯಾ ವಿಧವೆಯರ ಮತ್ತು ಬಾಲವಿವಾಹಗಳ ಸಮಸ್ಯೆಯನ್ನೆತ್ತಿಕೊಂಡು ಅವರು ಹೀಗೆ ಹೇಳಿದರು:

"ನಾನು ನೂರಾರು ಬಾಲಕಿಯರನ್ನು ಸಂಧಿಸಿದ್ದೇನೆ; ಆದರೆ ನನ್ನ ಈ ಸಂಚಾರಾವಧಿಯಲ್ಲಿ ಅಪರೂಪವಾಗಿ ಹದಿಮೂರು ವರ್ಷವನ್ನು ದಾಟಿದ ಇಬ್ಬರೊ ಮೂವರೊ ತಾವು ಅವಿವಾಹಿತೆಯರೆಂದು ಹೇಳಿದ್ದನ್ನು ಕಂಡಿದ್ದೇನೆ. ತೊಡೆಯ ಮೇಲೆ ಕುಳಿತಿರಬೇಕಾದ ಬಾಲೆಯನ್ನು ಒಬ್ಬನ ಹೆಂಡತಿಯನ್ನಾಗಿ ಮಾಡುವಂತಹ ಧರ್ಮ, ಧರ್ಮವಲ್ಲ; ಅದು ಅಧರ್ಮದ ಪರಮಾವಧಿಯಷ್ಟೆ. ಹದಿನಾರಕ್ಕಿಂತ ಕಡಿಮೆ ವಯಸ್ಸಿನ ಕನ್ಯೆಯನ್ನು ಮದುವೆಯಾಗುವುದಿಲ್ಲವೆಂದು ಪ್ರತಿಯೊಬ್ಬ ಯುವಕನೂ ಸಂಕಲ್ಪ ತೊಡಬೇಕೆಂದು ನಾನು ಬಯಸುತ್ತೇನೆ. ಹಿಂದೂಧರ್ಮದಲ್ಲಿ ವಿಧವೆಗೆ ಪವಿತ್ರ ಸ್ಥಾನವಿದೆ. ಪ್ರಾಚೀನ ಹಿಂದೂ ವಿಧವೆ ಎಂದೂ ಈಗ ನಾವು ಕಾಣುವ ಹಿಂದೂ ವಿಧವೆಯ ದುಃಸ್ಥಿತಿಯಲ್ಲಿರಲಿಲ್ಲ. ಹದಿನೈದರ ಹರೆಯದ ಹುಡುಗಿ ವಿಧವೆಯಾಗುವುದನ್ನು ನಾನು ಕಲ್ಪಿಸಿಕೊಳ್ಳಲಾರೆ. ಹುಡುಗಿಯ ಸಮ್ಮತಿಯಿಲ್ಲದೆ, ದ್ರವ್ಯರೂಪದ ಅಥವಾ ಇನ್ನಿತರ ಪ್ರಯೋಜನಕ್ಕಾಗಿ ತಂದೆ ತಾಯಿಯರು ಆಕೆಗೆ ಮದುವೆ ಮಾಡಿಸುವುದನ್ನು ನಾನೊಪ್ಪುವುದಿಲ್ಲ. ಅಂತಹ ಯಾವಳೇ ತರುಣಿ ವಿಧವೆಯಾದಲ್ಲಿ ಆಕೆಗೆ ಮತ್ತೆ ಮದುವೆ ಮಾಡುವುದು ಹೆತ್ತವರ ಕರ್ತವ್ಯ. ಪರಿಶುದ್ಧ ವಿಧವಾ ಜೀವನವನ್ನು ನಡೆಸುವುದು ಸಾಧ್ಯವಾಗದಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ವಿಧುರರಂತೆಯೇ ವಿಧವೆಯರೂ ಪುನರ್ವಿವಾಹದ ಹಕ್ಕನ್ನು ಪಡೆದಿರಬೇಕು. ನಿಮ್ಮ ಸಂಘವು ಈ ಮೂರು ಸಮಸ್ಯೆಗಳನ್ನು ಗಮನಕ್ಕೆ ತಂದುಕೊಂಡು ಅವುಗಳ ಪರಿಹಾರಕ್ಕೆ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡಲಿ."

ಮೂರು ಲಕ್ಷ ರೂಪಾಯಿಯ ಅಂದಾಜು ಮೊತ್ತದ ನೀರು ಸರಬರಾಯಿ ಮತ್ತು ವಿದ್ಯುತ್‌ಪೂರಣದ ಅರವಾರ್ಷಿಕ ಯೋಜನೆಯನ್ನು ತುಮಕೂರಿನ ಪೌರ ವರದಿಯಲ್ಲಿ ಹೆಮ್ಮೆಯಿಂದ ಉಲ್ಲೇಖಿಸಲಾಗಿದ್ದಿತು. ಅಲ್ಲಿ ಗಾಂಧೀಜಿ ಹೀಗೆ ಉತ್ತರಿಸಿದರು: "ಈ ಬಗೆಗೆ ನಿಮ್ಮನ್ನು ಅಭಿನಂದಿಸುವ ಹೊತ್ತಿನಲ್ಲಿ ಇನ್ನು ಕೆಲವು ಸಂಗತಿಗಳ ಬಗೆಗೆ ನೀವು ಭರವಸೆ ಕೊಡಬಹುದೆಂದು ನಾನು ನಿರೀಕ್ಷಿಸಿದ್ದುದಾಗಿ ಹೇಳಬಯಸುತ್ತೇನೆ. ಊರಿನ ಮಕ್ಕಳಿಗೆ ಶುದ್ಧ ಮತ್ತು ಅಗ್ಗವಾದ ಹಾಲಿನ ಯಥೇಚ್ಛ ಪೂರೈಕೆ ಭರವಸೆಯ ಆಶ್ವಾಸನೆಯನ್ನು ನನಗೆ ನೀವು ಕೊಡಬಲ್ಲಿರಾ? ಗೋರಕ್ಷಣೆಗಾಗಿ ಸಾಧ್ಯವಾದ ಏನೆಲ್ಲವನ್ನು ಮಾಡಿದ್ದೀರೆಂಬುದನ್ನು ನನಗೆ ನೀವು ಅರುಹಲಿಲ್ಲ. ನಿಮ್ಮ ಜನಸಂಖ್ಯೆ ೧೫,೦೦೦ವೆಂಬುದನ್ನು ಹೇಳಿದಿರಿ; ಆದರೆ ನಿಮ್ಮ ಜಾನುವಾರುಗಳ ಸಂಖ್ಯೆಯನ್ನು ನನಗೆ ತಿಳಿಸಿಲ್ಲ. ಜನರ ಐಶ್ವರ್ಯ ಮತ್ತು ಏಳಿಗೆಗಳನ್ನು ಕುಟುಂಬದಲ್ಲಿರುವ ಮಕ್ಕಳ ಸಂಖ್ಯೆ ಮತ್ತು ಅದು ಹೊಂದಿರುವ ದನಕರುಗಳ ಸಂಖ್ಯೆಯ ಮೇಲೆ ಅಳೆಯಲಾಗುತ್ತಿದ್ದ ಕಾಲವೊಂದಿತ್ತು. ನೀವು ನೀರು ಸರಬರಾಯಿಗೆ ಮೂರು ಲಕ್ಷ ಖರ್ಚು ಮಾಡುತ್ತಿದ್ದೀರಿ. ವಿದ್ಯುತ್ಪೂರೈಕೆಗೆ ೫೦,೦೦೦ ರೂ.ಗಳನ್ನು ತೊಡಗಿಸುತ್ತಿದ್ದೀರಿ. ಅದಕ್ಕಿಂತ ಕಡಿಮೆ ವೆಚ್ಚದಲ್ಲಿ ಒಂದು ಉತ್ತಮ ಹಾಲಿನ ಕೇಂದ್ರವನ್ನು ಹೊಂದಬಹುದೆಂದು ನಿಮಗೆ ಭರವಸೆ ಕೊಡುತ್ತೇನೆ. ಜನರು ನೀರಿನಂತೆಯೇ ಹಾಲನ್ನೂ ಸುಲಭವಾಗಿ ಪಡೆಯುವಂಥ ಒಂದು ಹಾಲಿನ ಕೇಂದ್ರವನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ ನೀವು ಹೊಂದಬಹುದು. ಗೋಮಾಂಸ ಮತ್ತು ಹೇಡವನ್ನು

ವರ್ಜಿಸುವಂತೆ ನಿಮ್ಮ ಪಂಚಮರ ಮನವೊಪ್ಪಿಸಿದ್ದೀರಾ? ಜನಾರೋಗ್ಯ ಮತ್ತು ನೈರ್ಮಲ್ಯಗಳ ವಿಷಯದಲ್ಲಿ ನೀವು ಸಾಧಿಸಿರುವುದೇನು? ಪಶ್ಚಿಮದೇಶ ನಮ್ಮ ವಿಶೇಷಾವ ಹೇಳನಕ್ಕೆ ಪಕ್ಕಾಗಿದೆ, ನಿಜ. ಆದರೆ ಅದರ ಆರೋಗ್ಯ ಮತ್ತು ನೈರ್ಮಲ್ಯದ ಸೂತ್ರ ಗಳಿಂದ ನಾವು ಪಾಠಕಲಿಯಬೇಕಾಗಿದೆ. ನನ್ನ ದೃಷ್ಟಿಯಲ್ಲಿ ಜನರ ನೈರ್ಮಲ್ಯದ ಪ್ರಜ್ಞೆಯ ಕುರುಹು ಅವರ ಕಕ್ಕಸು ಮನೆಗಳಸ್ಥಿತಿಯನ್ನವಲಂಬಿಸಿದೆ. ಆದರೆ ಇಲ್ಲಿಯ ವಸ್ತುಸ್ಥಿತಿ ಅಸಹ್ಯಕರವಾಗಿದೆಯೆಂದು ನನಗೆ ತಿಳಿಯಬಂದಿದೆ. ಆರೋಗ್ಯ ಅಥವಾ ನೈರ್ಮಲ್ಯದ ನಿಯಮಕ್ಕೆ ಭಂಗತರುವುದು ಅಪರಾಧವೆಂದು ಎಲ್ಲ ಧರ್ಮಶಾಸ್ತ್ರಗಳು ಹೇಳಿದ್ದರೂ ನಮ್ಮಲ್ಲಿನ ಅತ್ಯಂತ ಸಂಪ್ರದಾಯನಿಷ್ಠರೂ ಮತ್ತು ವಿದ್ಯಾವಂತರೂ ನೈರ್ಮಲ್ಯದ ನಿಯಮಗಳನ್ನು ನಿರಾತಂಕವಾಗಿ ಉಲ್ಲಂಘಿಸುತ್ತಾರೆ. ಈ ಸಮಸ್ಯೆಯನ್ನರಿತು, ಆದರ್ಶ ಜಲಗಾರರಾಗುವ ಗುರಿಯನ್ನು ನೀವು ಹೊಂದಬೇಕೆಂದು ಕೇಳಿಕೊಳ್ಳುತ್ತೇನೆ. ಪೊರಕೆ ಮತ್ತು ಬಕೆಟ್ಟುಗಳನ್ನು ಕೈಗೆ ತೆಗೆದುಕೊಳ್ಳದ ಹೊರತು ನಿಮ್ಮ ಊರುಗಳನ್ನು ನೀವು ಶುಚಿಯಾಗಿಡಲಾರಿರಿ. ಮೈಸೂರಿನ ಜನ ಸೋಮಾರಿಗಳೆಂದೂ, ಅವರು ಆರೇಳು ಗಂಟೆಯ ವರೆಗೂ ಹಾಸಿಗೆ ಬಿಟ್ಟೇಳುವುದಿಲ್ಲವೆಂದೂ ನನಗೆ ತಿಳಿಸಲಾಗಿದೆ. ನಾನು ನಿಮ್ಮ ಮುಂದಿಡುವ ಚರಕವು ಶ್ರಮದ ಸಂಕೇತ; ಮತ್ತು ಸೋಮಾರಿ ಜನ ಅದರಲ್ಲಿ ಕೆಲಸ ಮಾಡಲಾರರೆಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಹೊತ್ತೇ ಸಂಪತ್ತು; ಯಾರು ಕಾಲ ವನ್ನು ನಿಷ್ಪ್ರಯೋಜಕವಾಗಿ ಕಳೆಯುತ್ತಾರೋ ಅಂತಹವರನ್ನು ಮಹಾ ಲಯಕರ್ತನು ನಿರ್ನಾಮಗೊಳಿಸುತ್ತಾನೆಂದು ಗೀತೆ ಹೇಳುತ್ತದೆ."

ಬೆಂಗಳೂರಿನ ಪೌರಚೌಕದಲ್ಲಿ ನೆರೆದಿದ್ದ ಸಾವಿರಾರು ತೆರಿಗೆದಾರರನ್ನು ಕುರಿತು ಆ ಜನರು ತಮ್ಮ ಪೌರಸಭಾ ಸದಸ್ಯರಿಂದ ಏನನ್ನು ನಿರೀಕ್ಷಿಸಬೇಕೆಂಬುದನ್ನವರು ತಿಳಿಸಿದರು:

"ನೀವು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದಿರುವುದು ನನಗೆ ಸಂತೋಷ ತಂದಿದೆ. ವಿಶಾಲರಸ್ತೆಗಳಿಗಾಗಿ, ವೈಭವದ ದೀಪಾಲಂಕಾರಕ್ಕಾಗಿ ಮತ್ತು ಸುಂದರ ಸಾರ್ವಜನಿಕ ಉದ್ಯಾನಗಳಿಗಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಇಲ್ಲಿ ಮಧ್ಯಮ ಮತ್ತು ಉತ್ತಮ ವರ್ಗಗಳ ಜನ ಸುಖಿಗಳಾಗಿದ್ದಾರೆಂದು ನಿಮ್ಮ ಹೇಳಿಕೆಯಿಂದ ನಾನು ಊಹಿಸಬಲ್ಲೆ. ಆದರೆ ನಿಮ್ಮಲ್ಲಿ ದಲಿತ ವರ್ಗವೆಂಬುದೊಂದು ಇಲ್ಲವೇ ಎಂದು ನನಗೆ ಅಚ್ಚರಿಯಾಗುತ್ತಿದೆ. ಅಂತಹದೊಂದು ವರ್ಗವಿದ್ದಲ್ಲಿ ಅವರ ಶುಚಿತ್ವ ಮತ್ತು ಆರೋಗ್ಯಗಳನ್ನು ಕಾಪಾಡಲು ನೀವೇನು ಮಾಡುತ್ತಿದ್ದೀರಿ? ಅವರ ದುಃಖ ಸಂಕಷ್ಟಗಳಲ್ಲಿ ಎಂದಾದರೂ ಭಾಗಿಗಳಾಗಿದ್ದೀರಾ? ಅವರ ಶೌಚಗೃಹಗಳನ್ನು ಶುಚಿಯಾಗಿಡುವಲ್ಲಿ ಅವರಿಗೆ ನೆರವಾಗಿದ್ದೀರಾ? ಝಾಡಮಾಲಿಗಳು ಮತ್ತು ಭಂಗಿ ಗಳು ಎಂತಹ ಸ್ಥಿತಿಯಲ್ಲಿ ಬದುಕುತ್ತಿದ್ದಾರೆಂಬ ಬಗೆಗೆ ನೀವು ಒಮ್ಮೆಯಾದರೂ ಆಲೋಚಿಸಿದ್ದೀರಾ? ಈ ನಿರ್ಗತಿಕ ವರ್ಗಗಳಿಗೆ ಸೇರಿದ ಮಕ್ಕಳು, ಮುದುಕರು ಮತ್ತು ರೋಗಿಗಳಿಗೆ ಅಗ್ಗವಾಗಿ ಹಾಲನ್ನೊದಗಿಸುವ ಆಶ್ವಾಸನೆ ನೀಡಿದ್ದೀರಾ? ನಿಮ್ಮ

ವರ್ತಕರು ಶುದ್ಧವಾದ ಮತ್ತು ಬೆರಕೆ ಮಾಡದ ಆಹಾರ ಸಾಮಗ್ರಿಗಳನ್ನು ಮಾರುವ ರೆಂಬ ವಿಶ್ವಾಸ ನಿಮಗಿದೆಯೆ? ವ್ಯಾಪಾರಿಗಳು ಬಡವರಿಗೆ ಮತ್ತು ಬಲ್ಲಿದರಿಗೆ ಏಕರೀತಿಯಾಗಿ ನ್ಯಾಯವಾಗಿ ಆಹಾರಸಾಮಗ್ರಿಗಳನ್ನು ಸರಬರಾಯಿ ಮಾಡುತ್ತಾರೆಂದು ನಿಮಗೆ ನಂಬುಗೆಯಿದೆಯೆ? ಪ್ರತಿನಿತ್ಯವೂ ನಿಮಗೆ ತರಕಾರಿ ಮತ್ತು ದವಸಗಳನ್ನೊದಗಿಸುವ ಬಡಹಳ್ಳಿಗರ ಬಗೆಗೆ ಎಂದಾದರೂ ಚಿಂತಿಸಿದ್ದೀರಾ? ನಿಮ್ಮಲ್ಲಿ ಜೂಜುಕಟ್ಟೆ ಮತ್ತು ಕಳ್ಳಂಗಡಿಗಳೇನಾದರೂ ಇವೆಯೆ? ಇದ್ದರೆ ಜನರನ್ನು ಅವುಗಳಿಂದ ದೂರವಿಡುವಂಥ ಪ್ರಯತ್ನ ಮಾಡುತ್ತಿದ್ದೀರಾ? ನಿಮ್ಮ ಉಳುವ ಮತ್ತು ಕರಾವಿನ ದನಗಳ ಸ್ಥಿತಿ ಎಂತಹುದು? ಹೀಗೆಯೆ ಇನ್ನೂ ಹಲವಾರು ಪ್ರಶ್ನೆಗಳನ್ನು ನಾನು ಕೇಳಬಲ್ಲೆ. ಈ ಒಂದೊಂದಕ್ಕೂ ನಿಮ್ಮಲ್ಲಿ ತೃಪ್ತಿಕರವಾದ ಪರಿಹಾರವಿದ್ದಲ್ಲಿ ನೀವು ಅಭಿನಂದನಾರ್ಹರು. ಅಂತಹ ಸೂಕ್ತ ಪರಿಹಾರವೊಂದು ನಿಮ್ಮಲ್ಲಿಲ್ಲದಿದ್ದಲ್ಲಿ ಅವುಗಳ ಬಗೆಗೆ ತೀವ್ರವಾಗಿ ಪರ್ಯಾಲೋಚಿಸಬೇಕೆಂದು ನಿಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ."

ಬೀಳ್ಕೊಡುವ ವೇಳೆಯಲ್ಲಿ ಗಾಂಧೀಜಿ ಮೈಸೂರಿನ ಬಗೆಗೆ ತಮ್ಮ ಉನ್ನತ ಆಶಯಗಳನ್ನು ವ್ಯಕ್ತಪಡಿಸಿದರು.

"ನಿಮ್ಮ ನಡುವೆ ಒಬ್ಬ ಶ್ರೇಷ್ಠ ಯಂತ್ರಶಿಲ್ಪಿಯಿದ್ದಾರೆ; ಸಂಗೀತಗಾರರಿದ್ದಾರೆ; ಪ್ರಸಿದ್ಧ ಕಲಾವಿದರೊಬ್ಬರಿದ್ದಾರೆ. ಅಲ್ಲದೆ, ಇತರ ವಿವಿಧ ಕ್ಷೇತ್ರಗಳಲ್ಲಿ ಹೆಸರಿಸಬಹುದಾದ ಅನೇಕ ಗಣ್ಯರಿದ್ದಾರೆ. ನೀವೀಗ ಒಬ್ಬ ಖ್ಯಾತ ಪರಿಣತ ನೂಲುಗಾರನನ್ನು ತಯಾರಿಸಬೇಕೆಂಬುದು ನನ್ನ ಇಚ್ಛೆ. ನೀವು ಮೂರು ಖಾದಿ ಮಳಿಗೆಗಳನ್ನು ಹೊಂದಿದ್ದೀರಿ. ಇನ್ನೂ ಹೆಚ್ಚಿನ ಮಳಿಗೆಗಳು ನಿಮಗೆ ಆವಶ್ಯಕವೆಂದು ನಾನು ಭಾವಿಸಿದ್ದೆ. ಆದರೆ ಈ ಮೂರು ಮಳಿಗೆಗಳೂ ಅಗತ್ಯವಿಲ್ಲವೆಂದು ನನಗಿಂದು ಮನವರಿಕೆಯಾಗಿದೆ; ಈ ಸಭೆಯೆ ಅದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ನಿಮ್ಮಲ್ಲಿಯ ಅನೇಕರು ಖಾದಿಯ ಬಗ್ಗೆ ಒಲವುಳ್ಳವರಾಗಿದ್ದರೂ ಅದನ್ನು ಧರಿಸುತ್ತಿಲ್ಲ. ಆದ್ದರಿಂದ ಆ ಮೂರರ ಸ್ಥಾನದಲ್ಲಿ ಉತ್ತಮವಾದ ಒಂದೇ ಒಂದು ಮಳಿಗೆಯನ್ನಿಟ್ಟುಕೊಂಡು, ಅದನ್ನು ಸೂಕ್ತ ರೀತಿಯಲ್ಲಿ ವ್ಯವಸ್ಥೆಗೊಳಿಸಿ. ಚರಕವನ್ನು ಹೊಸದಾಗಿ ಬಳಕೆಗೆ ತಂದಿರುವ ಅನೇಕ ಸಂಸ್ಥೆಗಳಿವೆ. ಮಹಾರಾಜರ ಅಂಗರಕ್ಷಕರೂ ನೂಲುತ್ತಿದ್ದರೆಂದು ನನಗೆ ತಿಳಿದುಬಂದಿದೆ. ಆದರೆ ಈ ಕಾರ್ಯವು ಎಷ್ಟು ಅಸಮರ್ಥವಾಗಿ ನಡೆಯುತ್ತಿದೆಯೆಂಬುದು ನನಗೆ ಗೊತ್ತು. ಆ ಎಲ್ಲ ಸಂಸ್ಥೆಗಳಿಗೆ ಮತ್ತು ಅಂಗರಕ್ಷಕರಿಗೆ ಒಬ್ಬ ನುರಿತ ನೂಲುಗಾರರನನ್ನು ನೀವು ನೇಮಿಸಲೇಬೇಕು. ಹದಗೆಟ್ಟ ನೂಲು ಶ್ರುತಿಗೆಟ್ಟ ಸಂಗೀತದಂತೆ ಯಾವುದಕ್ಕೂ ಬರದು. ಈ ಚರಕದಲ್ಲಿ ಸಂಗೀತ, ಕಲೆ, ಆರ್ಥಿಕತೆ, ಆನಂದಗಳಿವೆಯೆಂದು ದರಿದ್ರ ನಾರಾಯಣನ ಸೇವಕರಿಗೆ ನಾನು ಭರವಸೆ ಕೊಡಲಿಚ್ಛಿಸುತ್ತೇನೆ. ಮೈಸೂರು ರಾಜ್ಯದಲ್ಲಿ ನಾನು ಹಲವಾರು ಸಂಸ್ಥೆಗಳನ್ನು ಸಂದರ್ಶಿಸಿದ್ದೇನೆ. ಕೃಷ್ಣರಾಜಮ್ಮಣಿ ಸ್ಯಾನಿಟೋರಿಯಮ್ಮಿನಲ್ಲಿ ನಾನು ಏನನ್ನೂ ನಿರೀಕ್ಷಿಸಿರಲಿಲ್ಲ. ಆದರೆ ದೀನದಲಿತರ ಮೇಲಿನ ನಿಷ್ಕಪಟ ಪ್ರೇಮದ ಕುರುಹಾಗಿ ಅಲ್ಲಿನ ರೋಗಿಗಳು ನೀಡಿದ ಕಾಣಿಕೆಯನ್ನು ನಾನು ಸ್ವೀಕರಿಸಲೇಬೇಕಾಯಿತು. ಕುರುಡ–ಮೂಗರ ಪಾಠ

ಶಾಲೆಯ ಅಂಧಗೆಳೆಯರು ಈ ಎರಡು ದಿನಗಳು ತಮ್ಮ ಹೃದಯಸ್ಪರ್ಶಿ ಸಂಗೀತದಿಂದ ನನಗೆ ಮನರಂಜನೆ ನೀಡಿದರು. ದೀನದುರ್ಬಲರ ಸಂಸ್ಥೆ ಮತ್ತು ಆದಿಕರ್ನಾಟಕ ಬಾಲಕರ ಶಾಲೆಗಳೂ ಈ ಬಗೆಯವೇ ಆಗಿವೆ. ಇವೆಲ್ಲ ಮಹಾರಾಜರ ಮಾನವೀಯತಾ ಸತ್ವದ ನಿದರ್ಶನಗಳಾಗಿವೆ. ಅವುಗಳನ್ನು ನೀವು ಇನ್ನೂ ಹೆಚ್ಚಾಗಿ ವಿಸ್ತೃತಗೊಳಿಸಬೇಕು, ಅಭಿನಂದನಾರ್ಹವಾದ ನಮ್ಮ ದಾನಶೀಲ ಪ್ರವೃತ್ತಿಯಿಂದಾಗಿ ಅಂಧರು ಮತ್ತು ದುರ್ಬಲರು ಊಟವನ್ನು ಕಳೆದುಕೊಳ್ಳಬೇಕಾಗಿಲ್ಲ. ಆದರೆ ತಿರುಪೆ ಮಾಡಲಾರದ. ಕೇವಲ ತುಂಡು ಜಮೀನಿನ ಆಧಾರವುಳ್ಳ, ಅರೆಹೊಟ್ಟೆಯ ಲಕ್ಷಾಂತರ ಹಳ್ಳಿಗರಿದ್ದಾರೆ. ಅವರ ಹಸಿವು ಮತ್ತು ದಾರಿದ್ರ್ಯಗಳಿಗೆ ನಾವು ಹೊಣೆಗಾರರು. ಅನೇಕ ಮಾನವಹಿತ ಸಾಧಕಮತ್ತು ದಯಾಶೀಲ ಸಂಸ್ಥೆಗಳಿರುವ ಮೈಸೂರಿನಲ್ಲಿ ಈ ಅರೆಹೊಟ್ಟೆಯ ಸಹಸ್ರಾರು ಕಷ್ಟಜೀವಿಗಳಿಗಾಗಿ ಏನಾದರೂ ಏರ್ಪಾಡು ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿ ಕೊಳ್ಳುತ್ತೇನೆ.

"ನೀವು ಇಮ್ಮಡಿ ಅದೃಷ್ಟಶಾಲಿಗಳು. ಆಹ್ಲಾದಕರ ಹವೆ ಹಾಗೂ ಅದ್ಭುತ ಪ್ರಾಕೃತಿಕ ದೃಶ್ಯಾವಳಿಗಳನ್ನು ನೀವು ಪಡೆದಿದ್ದೀರಿ; ಮತ್ತು ಎಲ್ಲ ವಿಧದಿಂದ ಸದ್ಗುಣಿ ಗಳೂ ಧರ್ಮಶೀಲರೂ ಆದ ಒಡೆಯರಿದ್ದಾರೆ. ಇಂತಹ ರಾಜ್ಯದಲ್ಲಿ ಒಬ್ಬನೇ ಭಿಕ್ಷುಕ ನಾಗಲಿ ಅಥವಾ ಹಸಿವಿನಿಂದ ಹಾಗೂ ಬಡತನದಿಂದ ನರಳುತ್ತಿರುವ ಒಬ್ಬನೇ ವ್ಯಕ್ತಿ ಯಾಗಲಿ ಇರಕೂಡದು. ಇಂದು ಕೃಷ್ಣರಾಜಸಾಗರ ಅಣೆಕಟ್ಟನ್ನು ನೋಡಿದೆ. ಸರ್. ಎಂ. ವಿಶ್ವೇಶ್ವರಯ್ಯನವರ ಅದ್ಭುತ ತಾಂತ್ರಿಕ ಸಾಹಸವನ್ನು ಕಂಡು ಹರ್ಷವಾಯಿತು. ಇಂತಹ ಅಣೆಕಟ್ಟುಗಳಲ್ಲಿ ಇದು ಪ್ರಪಂಚದಲ್ಲೆ ಎರಡನೆಯದೆಂದು ತಿಳಿದುಬಂದಿತು. ಇಂತಹ ಅದ್ಭುತ ಸಾಹಸಗಳ ತವರಿನಲ್ಲಿ ದರಿದ್ರ ನಾರಾಯಣನಿಗೆ ಸಾಧ್ಯವಾದ ನೆರವು ನೀಡಬೇಕೆಂದು ನಿಮ್ಮಲ್ಲಿ ಬೇಡಿಕೊಳ್ಳುತ್ತೇನೆ."

ಗಾಂಧೀಜಿ ಮೈಸೂರಿನಲ್ಲಿ ಪ್ರವಾಸ ಮಾಡುತ್ತಿದ್ದ ಸಮಯದಲ್ಲಿ ಗುಜರಾತಿನಲ್ಲಿ ನೆರೆ ಬಂದಿತ್ತು. ಜುಲೈ ೨೪ರಿಂದ ಸತತವಾದ ಭಾರಿ ಮಳೆ ಆರಂಭವಾಗಿ ಒಂದು ವಾರದ ವರೆಗೂ ಎಡೆಬಿಡದೆ ಸುರಿಯಿತು. ದೊಡ್ಡ ದೊಡ್ಡ ಪ್ರದೇಶಗಳು ಜಲಾವೃತವಾದವು. ಒಂದು ಮನೆಯೂ ಉಳಿಯಲಿಲ್ಲ. ಬೆಳೆ ಮತ್ತು ಜಾನುವಾರುಗಳೆಲ್ಲ ಕೊಚ್ಚಿಹೋದವು. ಮನುಷ್ಯರು ಮರಗಳ ತುದಿಯನ್ನೇರಿ ಕುಳಿತು ಊಟವಿಲ್ಲದೆ ಒಂದು ವಾರವನ್ನು ಕಳೆದರು. ಆ ಪ್ರದೇಶಗಳಲ್ಲಿ ಅವಿಶ್ರಾಂತವಾಗಿ ದುಡಿಯುತ್ತ ಪರಿಹಾರ ಕಾರ್ಯಗಳನ್ನು ಕೈಗೊಳ್ಳುತ್ತಿದ್ದ ವಲ್ಲಭಭಾಯಿ ಪಟೇಲರೊಂದಿಗೆ ಗಾಂಧೀಜಿ ಸಂಕರ್ಪವಿಟ್ಟುಕೊಂಡಿದ್ದರು. ಅನೇಕ ಆಪ್ತರು ಅವರನ್ನು ಗುಜರಾತಿಗೆ ಧಾವಿಸುವಂತೆ ಸೂಚಿಸಿದರು. ಅದಕ್ಕೆ ಗಾಂಧೀಜಿ ಹೀಗೆ ಹೇಳಿದರು: "ನಾನು ಅಲ್ಲಿಗೆ ಹೋಗುವುದರಿಂದ ಸಹಾಯಕ್ಕಿಂತ ಅಡಚಣೆಯೇ ಹೆಚ್ಚು. ನೆರವು ನೀಡುವಂತೆ ಇಲ್ಲಿಂದಲೂ ಜನರನ್ನು ಪ್ರಾರ್ಥಿಸಬಲ್ಲೆ. ಅಲ್ಲಿಗೆ ಹೋದಲ್ಲಿ ಇಡೀ ಪ್ರವಾಹಪೀಡಿತ ಪ್ರದೇಶವನ್ನೆಲ್ಲ ಸುತ್ತುವ ವರೆಗೆ ನನಗೆ ತೃಪ್ತಿ ಯಾಗುವುದಿಲ್ಲ. ಆದರೆ ಹಾಗೆ ಮಾಡುವುದು ನನಗೆ ದೈಹಿಕವಾಗಿ ಸಾಧ್ಯವಿಲ್ಲ." ವಲ್ಲಭ

ಭಾಯಿ ಪಟೇಲರಿಗೆ ತಂತಿ ಕಳುಹಿಸಿದರಲ್ಲದೆ ಅವರಿಂದ ಪೂರ್ಣ ಭರವಸೆಯ ಉತ್ತರ ವನ್ನು ಪಡೆದು ಒದಗಿಬಂದ ಅನಿವಾರ್ಯತೆಯನ್ನು ಹರ್ಷದಿಂದ ಒಪ್ಪಿದರು. ಅಲ್ಲದೆ ಸ್ವಯಂ ವಿಧಿತ ಶಿಸ್ತಿನ ಪ್ರಶ್ನೆಯೂ ಅದರಲ್ಲಿದ್ದಿತು. ಅದಕ್ಕವರು ತಲೆಬಾಗಿದರು:

"ನಾನಿಲ್ಲಿ ರಜೆಯ ಸುಖವನ್ನನುಭವಿಸುತ್ತಿಲ್ಲ. ನನ್ನ ಅಂತರ್ದೃಷ್ಟಿಗನುಸಾರವಾಗಿ ಗುಜರಾತಿನ, ಮಾತ್ರವಲ್ಲ ಇಡೀ ಭಾರತ ದೇಶದ ಚೈತನ್ಯವನ್ನೇ ಕಿತ್ತು ತಿನ್ನುತ್ತಿರುವ ಮಾರಕ ರೋಗದೊಂದಿಗೆ ಹೋರಾಡುವ ಕಾರ್ಯದಲ್ಲಿ ತಕ್ಕಮಟ್ಟಿಗೆ ಉದ್ಯುಕ್ತನಾಗಿದ್ದೇನೆ. ಎಣೆಯೇ ಇಲ್ಲದ ಈ ಮಾರಕ ರೋಗವು ಒಂದು ವಾರದ ಜಲಪ್ರಲಯಕ್ಕಿಂತಲೂ ಪ್ರಬಲತರವಾದುದು ಮತ್ತು ಅಗೋಚರವಾಗಿ ಪಸರಿಸುವಂತಹುದು. ಹೆಚ್ಚು ಮೋಹಕ ವಾದ ಮತ್ತೊಂದಕ್ಕೋಸ್ಕರ ಈ ಕಾರ್ಯವನ್ನು ತೊರೆಯುವುದು ನನ್ನ ದೃಷ್ಟಿಯಲ್ಲಿ ಶ್ಲಾಘ್ಯವೆನಿಸುವುದಿಲ್ಲ. ಬದಲು ಹಾಗೆ ಮಾಡುವುದರಿಂದ ನಿಸ್ಸಂದೇಹವಾಗಿ ಕರ್ತವ್ಯ ಭಂಗವಾದಂತಾಗುತ್ತದೆ. ಅಪಾಯ ಪರಿಸ್ಥಿತಿಗಳಲ್ಲಿ ವಿವೇಕವನ್ನು ಕಳೆದುಕೊಳ್ಳುತ್ತೇವೆಂಬ ಆರೋಪ ನಮ್ಮ ಮೇಲೆ ಇದ್ದದ್ದೇ. ಅಂತಹ ನ್ಯೂನತೆಯಿದ್ದ ಪಕ್ಷದಲ್ಲಿ ನಾವದನ್ನು ತ್ಯಜಿಸಲೇಬೇಕು.

"ನಮ್ಮಲ್ಲಿ ಯಾರೊಬ್ಬರಾಗಲಿ, ಅದರಲ್ಲೂ ಯಾವೊಬ್ಬ ಮುಖಂಡನಾಗಲಿ ಹೊರಗಿನ ಒತ್ತಡದ ಪ್ರಭಾವಕ್ಕೆ ಸಿಕ್ಕಿ ಅಂತರ್ವಾಣಿಯನ್ನು ಧಿಕ್ಕರಿಸಬಾರದು. ಈ ರೀತಿಯಲ್ಲಿ ಎಡವಿಬೀಳುವ ಯಾವನೇ ಮುಖಂಡನಾಗಲಿ ತನ್ನ ನಾಯಕತ್ವದ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಗುಜರಾತಿನ ಮನೆಮಾತಿನ ಒಂದು ಗಾದೆಯಲ್ಲಿ ಹೆಚ್ಚು ಸತ್ಯವಿದೆ. 'ಆಸಕ್ತಿಯಿರುವ ವ್ಯಕ್ತಿ ಮಡಿಕೆ ಕುಡಿಕೆಯಲ್ಲೆ ಎಲ್ಲವನ್ನೂ ಕಾಣಬಲ್ಲ; ಅದೇ ಅವನ ನೆರೆ ಯುವ ಕನ್ನಡಿಯಲ್ಲಿಯೂ ಏನನ್ನೂ ನೋಡಲಾರ.' ಸದ್ಯದ ಪರಿಸ್ಥಿತಿಯಲ್ಲಿ ಗುಜರಾತಿಗೆ ಧಾವಿಸುವುದು ನನ್ನ ಕರ್ತವ್ಯವಾಗಿದ್ದಿತೆಂದು ನಾನು ಭಾವಿಸಲಾರೆ.

ಏನೇ ಆಗಲಿ, ಭಿನ್ನ ಜಾತಿಗಳ ನಡುವೆ ಕಂಡುಬಂದ ಭ್ರಾತೃತ್ವ ಮತ್ತು ಪರಸ್ಪರ ಸಹಾಯ ಮನೋಭಾವಗಳ ವರದಿಗಳು ನೆರೆ ಹಾವಳಿಯ ದುಃಖಕರ ಸುದ್ದಿಯ ತೀವ್ರತೆ ಯನ್ನು ತಗ್ಗಿಸಿದುವು. ಇದು ಅವರ ಮನಸ್ಸಿಗೆ ಸಮಾಧಾನವನ್ನು ತಂದಿತು. ಇದರಿಂದ ಜನ ಒಂದು ನೀತಿ ತತ್ವವನ್ನು ಕಂಡುಕೊಳ್ಳಬೇಕೆಂದು ಅವರು ಆಶಿಸಿದರು:

"ಈ ಸಂದರ್ಭದ ಗುಜರಾತಿನ ನಡೆವಳಿಗಳು ನನ್ನ ದೃಷ್ಟಿಯಲ್ಲಿ ಪರಿಪೂರ್ಣ ಸ್ವರಾಜ್ಯಕ್ಕೆ ನಾಂದಿಯಾಗಿವೆ. ಜನರು ಈಗ ತೋರಿಸಿರುವ ಸದ್ಗುಣಗಳು ಅವರ ನಿತ್ಯ ಜೀವನದಲ್ಲಿ ಶಾಶ್ವತವಾಗಿ ನೆಲೆಸಿದಲ್ಲಿ ಗುಜರಾತು ಸ್ವರಾಜ್ಯವನ್ನು ಪಡೆಯಲು ತಕ್ಕ ಅರ್ಹತೆ ಮತ್ತು ಸಾಮರ್ಥ್ಯವನ್ನು ಪಡೆದಿದೆಯೆಂದು ಹೇಳಬಹುದು. ಈ ಪ್ರವಾಹ ದಿಂದುಂಟಾದ ಹಾನಿ ಹಿಂದೆಂದೂ ಈ ಪ್ರಮಾಣದಲ್ಲಿ ಸಂಭವಿಸಿರಲಿಲ್ಲ. ಹಿಂದೆ ನಡೆದ ಡೈಯರಿಸಂ ಕೂಡ ಈ ಹಾನಿಯ ಮುಂದೆ ಅಲ್ಪವೆನಿಸುತ್ತದೆ. ಡೈಯರ್ ಸಾವಿರ ಅಥವಾ ಸಾವಿರದಿನ್ನೂರು ಜನರನ್ನು ಕೊಂದನು, ಇಲ್ಲವೆ ಗಾಯಗೊಳಿಸಿದನು. ಆದರೆ ಈ

ಪ್ರವಾಹವು ಸೆಳೆದೊಯ್ದ ಅಸಂಖ್ಯ ಜೀವಿಗಳ, ನಾಶಗೈದ ಅಪಾರ ಆಸ್ತಿಪಾಸ್ತಿಯ ವಿವರವನ್ನು ಯಾರೂ ಹೇಳಲಾರರು. ಆದರೆ ನಾವು ಪ್ರವಾಹವನ್ನು ಶಪಿಸಲಿಲ್ಲ. ಅದಕ್ಕೆ ಪ್ರತಿಯಾಗಿ ಸತ್ಯಾಗ್ರಹವನ್ನು ಸಾಧನೆಗೈದೆವು. ನಮ್ಮನ್ನು ನಾವು ಶುದ್ಧೀಕರಿಸಿಕೊಂಡೆವು. ರಚನಾತ್ಮಕ ಕಾರ್ಯಗಳನ್ನು ಕೈಗೊಂಡೆವು. ಹಿಂದೂಮುಸ್ಲಿಂ ಐಕ್ಯತೆಯನ್ನು ಸಾಧಿಸಿದೆವು. ಅಸ್ಪೃಶ್ಯತೆಯನ್ನು ತೊಲಗಿಸಿದೆವು. ಆತ್ಮವಿಶ್ವಾಸವನ್ನು ಗಳಿಸಿದೆವು. ನಮ್ಮ ಸಹೋದರ ಸಹೋದರಿಯರಿಗೆ ಆಶ್ರಯ ದೊರಕಿಸಿಕೊಡಲು ನಮ್ಮೆಲ್ಲವನ್ನೂ ತ್ಯಾಗಮಾಡಿದೆವು. ನಾವು ಒಬ್ಬ ಮುಖಂಡನಿಗಾಗಿ ಕಾಯಲಿಲ್ಲ. ಶತ್ರುವನ್ನು ಕಂಡು ಹಿಮ್ಮೆಟ್ಟುವುದರ ಬದಲು ಅವನನ್ನು ಕೆಚ್ಚಿನಿಂದ ಎದುರಿಸಿದೆವು; ಹಾಗೂ ಏನೂ ಆಗಲಿಲ್ಲವೆಂಬ ರೀತಿಯಲ್ಲಿ ಕಾರ್ಯನಿರತರಾದೆವು. ಪ್ರವಾಹಕ್ಕೆ ಅಂಜಿ ಕುಳಿತಿದ್ದಲ್ಲಿ ಇಲ್ಲವೆ ಅದನ್ನು ಶಪಿಸುತ್ತ ಅದರೊಡನೆ ಭೀಕರ ಸೆಣಸಾಟಕ್ಕೆ ತೊಡಗಿದ್ದಲ್ಲಿ ನಮ್ಮ ತೊಂದರೆಗಳು ದ್ವಿಗುಣಗೊಳ್ಳುತ್ತಿದ್ದುವಷ್ಟೆ."

ಆಗಸ್ಟ್ ಮಧ್ಯಭಾಗದಲ್ಲಿ ಗಾಂಧೀಜಿ ತಮ್ಮ ಪ್ರವಾಸವನ್ನು ಮೈಸೂರಿನ ತುತ್ತತುದಿಯಾದ ದಾವಣಗೆರೆಯಿಂದ ಆರಂಭಿಸಿ ಅನಂತರ ದಕ್ಷಿಣದ ಶಿವಮೊಗ್ಗೆಗೆ ಬಂದರು. ಸಣ್ಣ ಸಣ್ಣ ಹಳ್ಳಿಗಳಲ್ಲಿ ಜನ ತಮ್ಮ ಗೌರವ ಸಲ್ಲಿಸಲು ಮತ್ತು ಕಾಣಿಕೆಯನ್ನು ನೀಡಲು ರಸ್ತೆಯ ಎರಡು ಬದಿಗಳಲ್ಲೂ ನಿಶ್ಶಬ್ದವಾಗಿ ಕುಳಿತಿರುತ್ತಿದ್ದರು. ಹಾದಿ ಬದಿಯ ಈ ಕಾಣಿಕೆ ಸುಮಾರು ೬೦೦ರೂ.ಗಳಷ್ಟಾಗಿದ್ದಿತು. ೩೦೦ ಜನರಿದ್ದ ಅನಂತಪುರವೆಂಬ ಕೊಪ್ಪಲು ೨೦೦ ರೂ.ಗಳ ಖಾದಿ ಕಾಣಿಕೆಯ ಜೊತೆಗೆ ಗುಜರಾತಿನ ಪ್ರವಾಹ ಪರಿಹಾರಕ್ಕೆ ೫೦ ರೂ.ಗಳನ್ನು ಕೊಟ್ಟಿತು.

ದಾವಣಗೆರೆಯ ಸಾರ್ವಜನಿಕ ಭಾಷಣವು ಸೈತಾನನ ಆರ್ಥಿಕ ನೀತಿಗೆ ವಿರುದ್ಧವಾದ ಭಗವಂತನ ಆರ್ಥಿಕ ನೀತಿಯ ವಿಶ್ಲೇಷಣೆಗೆ ಪ್ರಧಾನವಾಗಿ ಮೀಸಲಾಗಿತ್ತು. ಹರಿಹರದ ಖ್ಯಾತ ದೇವಾಲಯದ ಮುಂದೆ ಮಾಡಿದ ಭಾಷಣದಲ್ಲಿ ಆ ಪರಿಸರದಿಂದಲೇ ಆಯ್ದ ಚಿತ್ರವತ್ತಾದ ಉಪಮೆಗಳಿದ್ದುವು: "ದೇವರು ತನ್ನಂತೆಯೆ ಮಾನವನನ್ನು ಸೃಷ್ಟಿಸಿದನಾದರೆ ಮಾನವನು ತನ್ನಂತೆ ದೇವರನ್ನು ಸೃಷ್ಟಿಸಿದನೆಂದು ಹೇಳಲಾಗುತ್ತದೆ. ಇಂದು ನಾವು ನಮ್ಮ ದೇವಾಲಯಗಳಲ್ಲಿ ಕಾಣುತ್ತಿರುವವುದು ನಿರ್ಜೀವ ಭಕ್ತರಾದ ನಮ್ಮ ನಿರ್ಜೀವ ಪ್ರತಿರೂಪಗಳೆಂಬುದರಲ್ಲಿ ಅಚ್ಚರಿಯೇನಿಲ್ಲ. ಅವುಗಳನ್ನು ಭಗವಂತನ ಸಜೀವ ಸ್ವರೂಪಗಳನ್ನಾಗಿ ನಾವು ಮಾರ್ಪಡಿಸಬೇಕಾದರೆ ನಮ್ಮ ಬದುಕಿನಲ್ಲಿ ಸಕ್ರಾಂತಿಯಾಗಬೇಕು, ನಮ್ಮ ಕೋಮುವಾರು ತಿಕ್ಕಾಟಗಳನ್ನು ಕೊನೆಗಾಣಿಸಬೇಕು, ದಲಿತರಿಗೆ ನೆರವು ನೀಡಬೇಕು ಮತ್ತು ಹಸನಾದ ಬಾಳನ್ನು ಬದುಕಬೇಕು. ಹಿಂದೂ ತ್ರಿಮೂರ್ತಿತ್ವದಲ್ಲಿ ಹರಿ ಸ್ಥಿತಿಕರ್ತನಾದರೆ ಹರ ಲಯಕರ್ತ. ಸಿರಿವಂತರು ಬಡವರಿಗೆ ರಕ್ಷಣೆಯ ಆಸರೆ ನೀಡದೆ ಅವರನ್ನು ತುಳಿಯುವುದನ್ನು ಕಂಡಾಗ ಭಗವಂತನು ಹರನ ಉಗ್ರ ಸ್ವರೂಪವನ್ನು ತಳೆದು ಸರ್ವನಾಶದಲ್ಲಿ ತೊಡಗುತ್ತಾನೆ. ಬಡವ ಮತ್ತು ಬಲ್ಲಿದರಿಬ್ಬರೂ ಸಮಭಾವದಿಂದ ಒಡಬೆರೆದಾಗ ಹರಿಹರರಿಬ್ಬರೂ ಒಗ್ಗೂಡುತ್ತಾರೆ; ದೇಶಕ್ಕೆ ಚರಕದ ಕಾಣಿಕೆ

ಕೊಡುವುದರ ಮೂಲಕ ಹರಿಹರೇಶ್ವರನ ಜೀವಂತ ಪ್ರತಿಮೆಯನ್ನು ಸ್ಥಾಪಿಸಬೇಕೆಂಬುದು ನನ್ನ ಮಹಾಕಾಂಕ್ಷೆ. ಚರಕವು ತ್ಯಾಗದ ಸಂಕೇತ; ದೇವತಾಮೂರ್ತಿ ಪ್ರತಿಷ್ಠಾಪನೆಗೆ ತ್ಯಾಗವು ಅತ್ಯಗತ್ಯ."

ಮನೋಹರ ಪ್ರಾಕೃತಿಕ ದೃಶ್ಯಾವಳಿಗಳ ನಡುವೆ ಗಾಂಧೀಜಿ ತಮ್ಮ ಮೈಸೂರು ಪ್ರವಾಸವನ್ನು ಮುಂದುವರಿಸಿದರು; ಆದರೆ ಗೇರುಸೊಪ್ಪೆಯ ಜಲಪಾತವೂ ಅವರನ್ನು ತಡೆದು ನಿಲ್ಲಿಸಲಾಗಲಿಲ್ಲ. ಅವರು ಬೇಲೂರಿಗೆ ಹೋದರು. ಅಲ್ಲಿನ ಶಿಲ್ಪವೈಭವದ ಸ್ಮಾರಕವನ್ನು ನೋಡಲಿಕ್ಕಾಗಿ ಅಲ್ಲ: "ಭಾರತೀಯ ಕಲೆಯ ಈ ಅದ್ಭುತ ದೇವಾಲಯದ ಆಕರ್ಷಣೆಗೊಳಗಾಗದವರಾರು? ಆದರೆ ನನ್ನಂಥ ಒಬ್ಬ ದರಿದ್ರ ನಾರಾಯಣನ ಪ್ರತಿನಿಧಿ ಈ ಕಣ್ಣಿನ ಹಬ್ಬದಿಂದ ತೃಪ್ತಿಪಡಲಾರ. ನನ್ನೆಲ್ಲ ಶಕ್ತಿ, ವೇಳೆಗಳು ಬಡವರ ಸೇವೆಗೆ ಮುಡಿಪಾಗಿವೆ; ಕೇಶವದಾಸರು ೫೦೦ ರೂ.ಗಳ ಕಾಣಿಕೆಯ ಆಶ್ವಾಸನೆ ಕೊಡದಿದ್ದಲ್ಲಿ ನಾನೀ ಊರಿಗೆ ಬರುತ್ತಲೇ ಇರಲಿಲ್ಲ."

ಅರಸೀಕೆರೆಯ ಅಭಿನಂದನಾ ಭಾಷಣದ ಸಮಯದಲ್ಲಿ ನಂಸಂಳಿದ ಜನ್ಮಾಷ್ಟಮಿಯ ಒಂದು ಉಲ್ಲೇಖ ಕೃಷ್ಣನ ಜೀವನ ಮತು ಬೋಧನೆಗಳ ಬಗೆಗೆ ಮಾತನಾಡುವಂತೆ ಅವರನ್ನು ಪ್ರೇರೇಪಿಸಿತು:

"ಪ್ರತಿ ಜನ್ಮಾಷ್ಟಮಿಯ ದಿನವೂ ಕೃಷ್ಣನನ್ನು ಸ್ಮರಿಸಿಕೊಂಡಲ್ಲಿ ಮತ್ತು ಗೀತೆಯನ್ನು ಓದಿ ಅದರ ಉಪದೇಶದಂತೆ ನಡೆಯಲು ಸಂಕಲ್ಪ ಮಾಡಿದಲ್ಲಿ ನಾವು ಈಗಿರುವ ದುಃಸ್ಥಿತಿಯಲ್ಲಿರಬೇಕಾಗಿಲ್ಲ. ಕೃಷ್ಣ ತನ್ನೆಲ್ಲ ಬದುಕನ್ನು ಜನತೆಯ ಸೇವೆಯಲ್ಲಿ ಕಳೆದನು; ಅವನು ಜನತೆಯ ನಿಜವಾದ ಕಿಂಕರನಾಗಿದ್ದನು. ಕುರುಕ್ಷೇತ್ರದಲ್ಲಿ ತಾನೇ ಸೈನ್ಯಾಧಿಪತ್ಯವನ್ನು ವಹಿಸಬಹುದಾಗಿದ್ದರೂ ಅರ್ಜುನನ ಸಾರಥಿಯಾಗಿರಲು ಇಷ್ಟಪಟ್ಟನು. ಅವನ ಬಾಳು 'ಕರ್ಮ'ದ ಒಂದು ಅವಿಚ್ಛಿನ್ನ ಗೀತೆಯಾಗಿತ್ತು. ಗರ್ವಿ ದುರ್ಯೋಧನ ನೀಡಿದ ಭಕ್ಷ್ಯಗಳನ್ನು ಅವನು ನಿರಾಕರಿಸಿದನು. ಆದರೆ ವಿನಯಶೀಲ ವಿದುರನು ಬಡಿಸಿದ ಸೊಪ್ಪಿನ ಸಾರನ್ನು ಸವಿದನು. ಹುಡುಗನಾಗಿದ್ದಾಗ ಅವನು ದನಗಾಹಿಯಾಗಿದ್ದನು. ಗೋಪಾಲನೆಂಬ ಅವನ ನಾಮ ಇಂದಿಗೂ ನಮಗೆ ತಿಳಿದಿದೆ. ಆದರೆ ಅವನ ಉಪಾಸಕರಾದ ನಾವು ಇಂದು ಗೋವನ್ನು ಅಲಕ್ಷಿಸಿದ್ದೇವೆ. ಆದಿಕರ್ಣಾಟಕರು ದನಗಳನ್ನು ಕೊಂದು ಅದರ ಮಾಂಸವನ್ನು ತಿನ್ನುತ್ತಾರೆ. ಮತ್ತು ನಮ್ಮ ಮಕ್ಕಳು ಮತ್ತು ರೋಗಿಗಳಿಗೆ ಹಸುವಿನ ಹಾಲು ದೊರೆಯುವುದಿಲ್ಲ. ನಿದ್ರೆ ಮತ್ತು ಜಡತೆಗಳನ್ನೇ ಅವನು ಅರಿಯ. ಅವನು ಜಗತ್ತನ್ನು ಎವೆ ಮುಚ್ಚದ ಜೆಚ್ಚರದಿಂದ ಕಾಯ್ದನು; ಅವನ ಸಂತತಿಯವರಾದ ನಾವು ಆಲಸಿಗಳಾಗಿದ್ದೇವೆ ಮತ್ತು ಕೈಗಳ ಬಳಕೆಯನ್ನೇ ಮರೆತಿದ್ದೇವೆ. ಗೀತೆಯಲ್ಲಿ ಕೃಷ್ಣನು ಭಕ್ತಿಯ ಪಥವನ್ನು ನಿರ್ದೇಶಿಸಿದ್ದಾನೆ; ಕರ್ಮಮಾರ್ಗವೆಂಬುದೆ ಭಕ್ತಿಮಾರ್ಗ. ನಾವು 'ಭಕ್ತ'ರೊ 'ಜ್ಞಾನಿ'ಗಳೊ ಆಗಬೇಕೆಂದು ಇಚ್ಛಿಸಿದರೆ ಅದಕ್ಕೆ 'ಕರ್ಮ'ವೊಂದೇ ಏಕೈಕ ಮಾರ್ಗ; ಆದರೆ ಆ 'ಕರ್ಮ' ಮಾಡಬೇಕಾದುದು ತನಗಾಗಿಯಲ್ಲದೆ, ಪರರಿಗಾಗಿಯೆಂಬುದನ್ನು ಆ ಲೋಕಮಾನ್ಯನು ಶ್ರುತಪಡಿಸಿದ್ದಾನೆ. ತನಗಾಗಿ ಮಾಡಿದ ಕರ್ಮ

ಬಂಧನಕಾರಕವಾದರೆ ಇತರಿಗಾಗಿ ಮಾಡಿದ ಕರ್ಮ ಮುಕ್ತಿಪ್ರದಾಯಕವಾಗುತ್ತದೆ. ಹಿಂದೂಗಳು, ಮುಸಲ್ಮಾನರು, ಕ್ರಿಶ್ಚಿಯನ್ನರು, ಗಂಡಸರು, ಹೆಂಗಸರು, ಮಕ್ಕಳು–ಇವರೆಲ್ಲರೂ ಸಾರ್ವತ್ರಿಕವಾಗಿ ಕೈಗೊಳ್ಳಬಹುದಾದ ಲೋಕಹಿತಾರ್ಥಕಾರಿಯಾದ ಸತ್ಕಾರ್ಯ ವಾವುದು? ನೂಲುವುದೊಂದೇ ಇಂಥ ತ್ಯಾಗಪೂರ್ಣಕರ್ಮವೆಂಬುದನ್ನು ಪ್ರತ್ಯಕ್ಷವಾಗಿ ಸಾಧಿಸಿ ತೋರಿಸಲು ನಾನು ಪ್ರಯತ್ನಪಟ್ಟಿದ್ದೇನೆ. ಕಾರಣ, ದೇವರ ಹೆಸರಿನಲ್ಲಿ ಏನನ್ನಾದರೂ ಮಾಡಲು, ದೀನದಲಿತರ ಸೇವೆಗೈಯಲು ಪ್ರೇರೇಪಿಸುಂಥದು ಮತ್ತು ಜಡವಾದ ತೋಳುಗಳಲ್ಲಿ ಚಟುವಟಿಕೆಯನ್ನು ತುಂಬುವಂಥದು ಅದೊಂದೆ. ನಾವು ನಿಜವಾದ 'ಭಕ್ತ'ರಾಗಬೇಕಾದಲ್ಲಿ ಬ್ರಾಹ್ಮಣ ಮತ್ತು ಭಂಗಿಯರ ನಡುವೆ ಯಾವ ಭೇದವನ್ನೂ ಎಣಿಸಬಾರದೆಂದು ಕೃಷ್ಣ ತೋರಿಸಿಕೊಟ್ಟಿದ್ದಾನೆ. ಅದು ಸತ್ಯವಾದ ಪಕ್ಷಕ್ಕೆ ಹಿಂದೂ ಮತದಲ್ಲಿ ಅಸ್ಪೃಶ್ಯತೆಗೆ ಯಾವ ಸ್ಥಾನವೂ ಇರಲಾರದು. ಆ ಮೂಢ ನಂಬಿಕೆಗೆ ನೀವಿನ್ನೂ ನೇತುಹಾಕಿಕೊಂಡಿದ್ದಲ್ಲಿ ಕೃಷ್ಣ ಜನನದ ಈ ಪವಿತ್ರ ದಿನ ಅದನ್ನು ತೊಡೆದು ಹಾಕಿ ಪುನೀತರಾಗಿರಿ. ಗೀತೆಯಲ್ಲಿ ದೃಢವಿಶ್ವಾಸವುಳ್ಳಾತ ಹಿಂದೂ ಮತ್ತು ಮುಸಲ್ಮಾನರಲ್ಲಿ ಯಾವ ಭೇದವನ್ನೂ ಎಣಿಸಲಾರ. ಕಾರಣ, ಯಾವುದೇ ಹೆಸರಿನಿಂದಾದರೂ ಸರಿ, ಭಗವಂತನನ್ನು ಯಾರು ನಿಷ್ಕಪಟ ಭಕ್ತಿಯಿಂದ ಆರಾಧಿಸುತ್ತಾರೋ ಅವರನ್ನು ಭಗವಂತ ಪ್ರೀತಿಸುತ್ತಾನೆ. ಗೀತೆಯಲ್ಲಿ ನಿರೂಪಿಸಲ್ಪಟ್ಟ 'ಭಕ್ತಿ', 'ಕರ್ಮ', 'ಪ್ರೇಮಗಳು' ಒಬ್ಬ ಮನುಷ್ಯ ಮತ್ತೊಬ್ಬನನ್ನು ತುಚ್ಛೀಕರಿಸಲು ಆಸ್ಪದ ನೀಡುವುದಿಲ್ಲ."

ಮೈಸೂರು ರಾಜ್ಯದಲ್ಲಿ ಗಾಂಧೀಜಿಯ ನಾಲ್ಕು ತಿಂಗಳ ತಂಗಣೆಯು ಆಗಸ್ಟ್ ಕೊನೆಯ ವಾರದಲ್ಲಿ ಕೊನೆಗೊಂಡಿತು. ಬೀಳ್ಕೊಳ್ಳುವ ದಿನ ಮಧುರ ಸ್ಮೃತಿಗಳಿಂದ ತುಂಬಿದ್ದಿತು. ಅವರು ಹೊರಡುತ್ತಿದ್ದಂತೆ ಭಂಗಿಯೂ ಕೂಡಿ ಎಲ್ಲ ಸೇವಕರೂ ಬೀಳ್ಕೊಡಲು ಬಾಗಿಲ ಬಳಿ ನೆರೆದಿದ್ದರು. "ನಾನು ನಿಮಗೆ ಎಷ್ಟು ಕೃತಜ್ಞನೆಂಬುದನ್ನು ಹೇಳಲಾರೆ" ಎಂದವರಿಗೆ ಗಾಂಧೀಜಿ ನುಡಿದರು. "ನನ್ನ ಜೀವನದಲ್ಲಿ ಯಾರೊಬ್ಬರನ್ನೇ ಆಗಲಿ ನನ್ನ ಅಣ್ಣ ಅಥವಾ ತಂಗಿಯೆಂದು ಗಣಿಸಿದ್ದೇನೆಯೇ ಹೊರತು ಸೇವಕನೆಂಬುದಾಗಿ ಎಂದೂ ತಿಳಿಯಲಿಲ್ಲ. ನೀವು ಅದಕ್ಕಿಂತ ಕಡಿಮೆಯೇನೂ ಆಗಿರಲಿಲ್ಲ. ನಿಮ್ಮ ಸೇವೆಗೆ ಪ್ರತ್ಯುಪಕಾರ ಸಲ್ಲಿಸುವುದು ನನಗೆ ಅಳವಲ್ಲ; ಆದರೆ ದೇವರು ನಿಮಗೆ ಸಲ್ಲಬೇಕಾದುದನ್ನು ಯಥೇಚ್ಛವಾಗಿ ನೀಡುತ್ತಾನೆ."

ಆಗಸ್ಟ್ ೨೪ರಂದು ಬಿಸಿಲಿನ ಧಗೆ ಮತ್ತು ಅಪಾರ ಜನಸಂದಣಿಯಿಂದ ಕೂಡಿದ ತಮಿಳುನಾಡಿನ ಶ್ರಮದಾಯಕ ಪ್ರವಾಸವು ಆರಂಭವಾಯಿತು. ಗಾಂಧೀಜಿ ಬೆಂಗಳೂರಿನಿಂದ ಹೊರಟು ವೆಲ್ಲೂರು, ಆರಣಿ ಮತ್ತು ಆರ್ಕಾಟ್‌ಗಳಿಗೆ ಭೇಟಿಯಿತ್ತು ಉತ್ತರ ಆರ್ಕಾಟಿಗೆ ಬಂದರು. ಹೋದೆಡೆಯಲ್ಲೆಲ್ಲ ಸಹಸ್ರಾರು ಸಂಖ್ಯೆಯ ಜನ ಅವರನ್ನು ಸ್ವಾಗತಿಸಿದರು. ಗುಡಿಯತಂನಲ್ಲಿನ ಗದ್ದಲ ಕೋಲಾಹಲಗಳನ್ನು ತಡೆದುಕೊಳ್ಳುವುದು ಅವರಿಗೆ ಅಸಾಧ್ಯವಾಯಿತು. ತುಂಟತನದ ಕುತೂಹಲದಿಂದ ಜನರು ಅವರು ತಂಗಿದ್ದ ಬಂಗಲೆಯನ್ನು ಮುತ್ತಿ ಗಾಳಿ ಬೆಳಕು ಬರದಂತೆ ತಡೆದರು. ಇದರಿಂದ ಅವರ ಕೆಲಸ

ಮತ್ತು ವಿಶ್ರಾಂತಿಗಳಿಗೆ ಭಂಗವುಂಟಾಯಿತು. ಪುಂಡು ಗುಂಪನ್ನು ನಿಯಂತ್ರಿಸಲೋಸುಗ ಕಿಟಕಿಗಳನ್ನೆಲ್ಲ ಮುಚ್ಚಬೇಕಾಗಿ ಬಂದುದರಿಂದ ಲಾಟೀನುಗಳನ್ನು ತರಿಸಬೇಕಾಯಿತು. ಆದರೆ ಜನರ ಕೂಗಾಟಕ್ಕೆ ಯಾವ ಪರಿಹಾರವೂ ಇರಲಿಲ್ಲ. ಇದ್ದ ಕೊನೆಯ ಉಪಾಯ ವೆಂದರೆ ಅವರು ಆ ಸ್ಥಳದಿಂದ ಮೆಲ್ಲಗೆ ಜಾರಿ ಹೋಗುವುದು. ಕೆಲವು ಮೈಲಿಗಳಾಚೆ ಹೋಗಿ, ಕಾರಿನಲ್ಲಿ ಕುಳಿತು ಕೆಲಸ ಮಾಡಿ ವಿಶ್ರಾಂತಿ ಪಡೆದರು.

ಗಾಂಧೀಜಿ ಸೆಪ್ಟೆಂಬರ್ ೩ ರಂದು ಮದ್ರಾಸನ್ನು ತಲುಪಿದರು. ನಗರದಲ್ಲಿನ ನಾಲ್ಕು ದಿನಗಳ ಮೊಕ್ಕಾಮಿನಲ್ಲಿ ಅವರು ಹದಿನೇಳು ಸಭೆಗಳಲ್ಲಿ ಭಾಷಣ ಮಾಡಿದರು. ೧೮೫೭ರ ದಂಗೆಯ ಸಮಯದಲ್ಲಿನ ಅಮಾನುಷ ಕೃತ್ಯಗಳಿಗೆ ಜವಾಬ್ದಾರನಾದ ಜನರಲ್ ನೀಲ್‌ನ ಪ್ರತಿಮೆಯನ್ನು ತೆಗೆಸಿಹಾಕಬೇಕೆಂದು ಕೆಲವು ಯುವಕರು ಉದ್ದೇಶಿಸಿದರು. ಅವರೊಡನೆ ನಡೆಸಿದ ವಿಚಾರ ವಿನಿಮಯದಲ್ಲಿ ಗಾಂಧೀಜಿ ಅವರಿಗೆ ಹುರುಪು ನೀಡಿದರು, ಎಚ್ಚರಿಕೆಯಿತ್ತರು ಮತ್ತು ಸತ್ಯಾಗ್ರಹದ ಅರ್ಥ ಮತ್ತು ಪರಿಣಾಮಗಳನ್ನರಿತು ಕೊಳ್ಳುವಂತೆ ಹಾಗೂ ವಂಚನೆ, ಬೆದರಿಕೆ ಸೋಗುಗಳನ್ನು ವರ್ಜಿಸಿ ಸತ್ಯ, ಗೌರವ, ಘನತೆಗಳಿಂದ ಕೆಲಸ ಮಾಡುವಂತೆ ಅವರಲ್ಲಿ ವಿನಂತಿಸಿಕೊಂಡರು. ಪ್ರತಿಮೆಯನ್ನುರುಳಿಸು ವುದರಿಂದ ಇಲ್ಲವೆ ವಿರೂಪಗೊಳಿಸುವುದರಿಂದ ಅಹಿಂಸಾ ತತ್ವವನ್ನು ಅತಿಕ್ರಮಿಸಿ ದಂತಾಗುವುದಿಲ್ಲವೆ ಎಂದು ಸತ್ಯಾಗ್ರಹಿಗಳು ಅವರನ್ನು ಪ್ರಶ್ನಿಸಿದರು. ತಮ್ಮ ಷರತ್ತು ಗಳನ್ನು ಪಾಲಿಸಿದ ಪಕ್ಷಕ್ಕೆ ಅದನ್ನು ಅಹಿಂಸಾವಿರೋಧವೆಂದು ತಾವು ಪರಿಗಣಿಸುವುದಿಲ್ಲ ವೆಂದು ಗಾಂಧೀಜಿ ಉತ್ತರಿಸಿದರು. ಇಂತಹ ಪ್ರತಿಮೆಗಳು ಅನಿಷ್ಟಸೂಚಕಗಳು. ಅವು ಬ್ರಿಟಿಷ್ ಸರ್ಕಾರದ ಅಂತಿಮ ನಿಲುವು ಏನೆಂಬುದಕ್ಕೆ, ಅರ್ಥಾತ್ ಕ್ರೌರ್ಯ ವಂಚನೆಗಳಿಗೆ ಸ್ಪಷ್ಟ ಸಾಕ್ಷಿಯಾಗಿವೆ. ಇದರಿಂದ ಈ ಕ್ರೌರ್ಯ ಮತ್ತು ವಂಚನೆಗಳನ್ನು ತನ್ನ ಸರ್ವಶಕ್ತಿಯೊಂದಿಗೆ ಪ್ರತಿಭಟಿಸಬೇಕಾದುದು ಪ್ರತಿಯೊಬ್ಬ ಭಾರತೀಯನ ಹಾಗೂ ಸಾಚಾ ಆಂಗ್ಲನ ಕರ್ತವ್ಯವಾಗಿದೆ."

ನೀಲ್ ಪ್ರತಿಮೆಯ ಸತ್ಯಾಗ್ರಹವು ಗಾಂಧೀ ಅನುವರ್ತಿಯೊಬ್ಬರನ್ನು ದಿಗ್ಭ್ರಮೆಗೊಳಿಸಿತು: "ಅವರು ಹಿಂದೆ ಲಾರೆನ್ಸ್‌ನ ಪ್ರತಿಮೆಯನ್ನು ತೆಗೆದು ಹಾಕಲು ಪ್ರೋತ್ಸಾಹ ನೀಡಿದಂತೆ ನೀಲ್‌ನ ಪ್ರತಿಮೆಯನ್ನು ತೆಗೆದು ಹಾಕುವ ಚಳುವಳಿಗೂ ಬೆಂಬಲ ನೀಡುತ್ತಾರೆ. ಅದು ನನಗೆ ಹಿಂಸಾತ್ಮಕವೆಂಬಂತೆಯೇ ತೋರುತ್ತದೆ. ಆಯುಧಗಳ ಕಾಯಿದೆಯನ್ನು ತೆಗೆದುಹಾಕಲು ಶಸ್ತ್ರಗಳನ್ನೊಯ್ಯುವುದು ನನಗೆ ಹಿಂಸಾತ್ಮಕವೆನಿಸು ವುದಿಲ್ಲ. ಆದರೆ ಅದು ಅವರಿಗೆ ಹಿಂಸೆಯಾಗಿ ಕಾಣುತ್ತದೆ."

ಗಾಂಧೀಜಿ ಅದಕ್ಕೆ ಹೀಗೆ ಉತ್ತರಿಸಿದರು: "ಅಹಿಂಸೆಯು ಕಠೋರವಾದುದು. ನೀಲ್‌ನ ಪ್ರತಿಮೆಯನ್ನು ತೆಗೆದು ಹಾಕುವ ಚಳುವಳಿಯಾಗಲಿ ಅಥವಾ ಅಂತಹ ಯಾವುದೇ ಚಳುವಳಿಯಾಗಲಿ ಆಂಗ್ಲೇಯರ ವಿರುದ್ಧ ದ್ವೇಷಭಾವನೆಯನ್ನು ಹೆಚ್ಚಿಸು ವುದು ಸಹಜ. ನಿಜವಾದ ಅಹಿಂಸೆಯು ದ್ವೇಷದ ಕಾರಣಗಳನ್ನು ಅಲಕ್ಷಿಸುವುದಿಲ್ಲ, ಇಲ್ಲವೆ ಆ ಬಗೆಗೆ ಕುರುಡಾಗಿರುವುದಿಲ್ಲ. ಆದರೆ, ಆ ಕಾರಣಗಳ ಅಸ್ತಿತ್ವದ ಬಗೆಗೆ ಅರಿ

ವಿದ್ದರೂ, ಅವುಗಳಿಗೆ ಚಾಲನೆಯನ್ನು ಕೊಟ್ಟ ವ್ಯಕ್ತಿಯ ಮೇಲೆ ಕ್ರಮಕೈಗೊಳ್ಳುತ್ತದೆ. ಹೀಗಿಲ್ಲದಿದ್ದರೆ ಅಹಿಂಸಾ ಮಾರ್ಗದಿಂದ ಸ್ವರಾಜ್ಯಕ್ಕಾಗಿ ಹೋರಾಟ ನಡೆಸುವುದು ಅಸಾಧ್ಯವಾಗುತ್ತದೆ. ಕಾರಣ, ಸ್ವರಾಜ್ಯವಾದಿಯು ಪ್ರತಿಹೆಜ್ಜೆಯಲ್ಲೂ ವಿದೇಶೀ ಆಳ್ವಿಕೆಯು ಮತ್ತು ವಿದೇಶೀ ಆಳ್ವಿಕೆಗಾರರ ದೋಷದೌರ್ಬಲ್ಯಗಳನ್ನು ಬೆಳಕಿಗೆ ತರಬೇಕಾಗುತ್ತದೆ. ಅಹಿಂಸೆಯಲ್ಲಿ ವಿಶ್ವಾಸವಿರುವವನು ನೀಲ್ ಪ್ರತಿಮೆಯನ್ನು ತೆಗೆದುಹಾಕುವ ಅಹಿಂಸಾತ್ಮಕ ಚಳುವಳಿಯನ್ನು ಮತ್ತು ಅದೇ ಬಗೆಯ ಇತರ ಚಳುವಳಿಗಳನ್ನು ಏಕೆ ಅನುಮೋದಿಸುತ್ತಾ ನೆಂಬುದು ಬಹುಶಃ ಈಗ ಸ್ಪಷ್ಟವಾಗಿರಬೇಕು. ಆದರೆ ಆಹಿಂಸಾವಾದಿ ಶಸ್ತ್ರಗಳನ್ನೊಯ್ಯು ವಂತಿಲ್ಲ; ಕಾರಣ, ಅವುಗಳನ್ನವನು ಬಳಸಕೂಡದು. ಅಲ್ಲದೆ ಶಸ್ತ್ರಕಾಯಿದೆಯ ಸಂಪೂರ್ಣ ನಿರಾಕರಣೆಎಂದಿಗೂ ನ್ಯಾಯವಾದ ಕಾರಣವಾಗಲಾರದು. ಇದರಿಂದಾಗಿ ಶಸ್ತ್ರಕಾಯಿದೆಯ ನಿರಾಕರಣೆಗಾಗಿ ಆಯುಧಗಳನ್ನೊಯ್ಯುವುದು ಅಹಿಂಸೆಯ ಯಾವುದೇ ಕ್ರಮಕ್ಕೆ ಒಳಪಡುವುದಿಲ್ಲ."

ಮದ್ರಾಸಿನಲ್ಲಿ ಗಾಂಧೀಜಿಭಾಷಣ ಮಾಡಿದ ಅನೇಕ ಸಭೆಗಳಲ್ಲಿ ಅತ್ಯಂತ ಗಮನಾರ್ಹ ವಾಗಿದ್ದುದೆಂದರೆ, ಚಮ್ಮಾರರದು. ಸತ್ತ ಪ್ರಾಣಿಯ ಚಕ್ಕಳದಿಂದ ಮಾಡಿದ ಎಕ್ಕಡವು ಗಾಂಧೀಜಿಯ ಬಳಿಯಲ್ಲಿಲ್ಲದಿದ್ದುದರಿಂದ ಅವರು ಕಿತ್ತುಹೋದ ಮೆಟ್ಟುಗಳನ್ನೇ ಉಪ ಯೋಗಿಸುತ್ತಿದ್ದಾರೆಂಬ ಸಂಗತಿಯ ಸುಳಿವು ಹೇಗೋ ಕೆಲವು ಚಮ್ಮಾರರಿಗೆ ದೊರಕಿತು. ಅವರಲ್ಲಿಬ್ಬರು ಒಂದು ಜೊತೆ ಚಪ್ಪಲಿಗಳನ್ನು ತಯಾರಿಸಿ ತಮ್ಮ ಕಾಣಿಕೆಯೊಡನೆ ಗಾಂಧೀಜಿಯ ಬಳಿಗೆ ಬಂದರು. ಅವರೊಡನೆ ಸುದೀರ್ಘ ಮಾತುಕತೆ ನಡೆಸಿದರು. ಅವರ ಮಾತುಗಳನ್ನೆಲ್ಲ ಕೇಳಿದ ನಂತರ ತಾವು ಇನ್ನು ಮುಂದೆ ಕೇವಲ ಮೃತ ಜಾನುವಾರು ಗಳ ಚಕ್ಕಳವನ್ನುಮಾತ್ರ ಬಳಸುವುದಾಗಿ ಪ್ರತಿಜ್ಞೆ ಮಾಡಲು ಆ ಕ್ಷಣವೇ ಸಿದ್ಧ ವೆಂದು ಹೇಳಿದರಲ್ಲದೆ ಇನ್ನೂ ಅನೇಕರನ್ನು ಈ ಪ್ರತಿಜ್ಞೆಯಲ್ಲಿ ಭಾಗಿಗಳಾಗುವಂತೆ ಒಪ್ಪಿಸಿದರು. ಗಾಂಧೀಜಿ ಅವರ ಕೇರಿಗೆ ಹೋದರು. ಚಮ್ಮಾರರಿದ್ದ ಆ ಪರಿಸ್ಥಿತಿಯಲ್ಲಿ ಕೇವಲ ಸತ್ತ ಪ್ರಾಣಿಗಳ ಚರ್ಮವನ್ನು ಬಳಸಬೇಕೆನ್ನುವ ಪ್ರತಿಜ್ಞೆಯನ್ನು ನೆರವೇರಿಸು ವುದು ಕಠಿಣವೆಂಬುದನ್ನವರು ಅರಿತುಕೊಂಡು ಅವರಿಗೆ ಆ ರೀತಿ ಪ್ರತಿಜ್ಞೆ ಗೈಯದಿರು ವಂತೆ ಹೇಳಿದರು. ಆದರೆ ಅದನ್ನೊಂದು ಧ್ಯೇಯವನ್ನಾಗಿಟ್ಟುಕೊಂಡು ಕೊಂದ ಪ್ರಾಣಿಗಳ ಚಕ್ಕಳವನ್ನುಪಯೋಗಿಸದೆಯೇ ಕೆಲಸಮಾಡಲು ತಿಳಿಸಿದರು.

ಮದ್ಯಪಾನ ನಿರೋಧವಾದಿಗಳ ಒಂದು ಸಭೆಯಲ್ಲಿ ಅವರು ಕುಡಿತದ ಹಾನಿಯ ಬಗೆಗೆ ಆವೇಶದಿಂದ ಮಾತನಾಡಿದರು: "ಕುಡಕನ ಹೆಂಡತಿಗೆ ತಾಳ್ಮೆಯಿಂದಿರಲು ಹೇಳಿ; ನಿಮ್ಮ ಬಗೆಗೆ ಆಕೆ ಏನು ಯೋಚಿಸುತ್ತಾಳೆಂಬುದನ್ನು ಗಮನಿಸಿರಿ. ನಾನು ಸಾವಿರಾರು ಕುಡುಕರ ಹೆಂಡತಿಯಾಗುವೆ. ಆದರೆ ನಾನು ತಾಳ್ಮೆಯಿಂದಿರಲಾರೆ. ನಮ್ಮ ನಡುವೆ ಸಹಸ್ರಾರು ಕುಡುಕರನ್ನು ಹೊಂದಿರುವುದಕ್ಕಿಂತ ಭಾರತವನ್ನು ಭಿಕಾರಿ ಸ್ಥಿತಿಗೆ ನೂಕುವುದು ಎಷ್ಟೋ ಮೇಲು. ಮದ್ಯಪಾನ ತೊಡೆದುಹಾಕುವುದಕ್ಕಾಗಿ ಅಗತ್ಯವಾದರೆ ಶಿಕಣ ರಹಿತ ಭಾರತವನ್ನೇ ಆರಿಸಿಕೊಳ್ಳುತ್ತೇನೆ."

ಧೂಮಪಾನ, ಕಾಫಿ ಮತ್ತು ಟೀ ಸೇವನೆಗಳ ಬಗೆಗೆ ಕೆಲವು ಮಾತುಗಳನ್ನಾಡಬೇಕೆಂಬ ಒಬ್ಬ ಪ್ರಾಧ್ಯಾಪಕರ ಕೋರಿಕೆಗೆ ಪ್ರತಿಕ್ರಿಯೆಯಾಗಿ ಗಾಂಧೀಜಿ ಹೀಗೆ ಹೇಳಿದರು: "ಇವು ಜೀವನಕ್ಕೆ ಅನಿವಾರ್ಯವಾದವುಗಳಲ್ಲ. ದಿನಕ್ಕೆ ಹತ್ತು ಕಪ್ಪು ಕಾಫಿ ಕುಡಿಯುವ ರೂಢಿಯುಳ್ಳ ಕೆಲವು ಜನರಿದ್ದಾರೆ. ಅವರ ಆರೋಗ್ಯಕರ ಬೆಳವಣಿಗೆಗೆ ಮತ್ತು ಕೆಲಸದ ಪೂರೈಕೆಗಾಗಿ ನಿದ್ರೆಯನ್ನು ದೂರಮಾಡುವುದಕ್ಕೆ ಅದರ ಅಗತ್ಯವಿದೆಯೇ? ಎಚ್ಚರವಾಗಿರಲು ಕಾಫಿ ಅಥವಾ ಟೀಯನ್ನು ಸೇವಿಸುವ ಬಹುಮಂದಿ ಅವುಗಳಿಗೆ ದಾಸರಾಗಿರುತ್ತಾರೆ. ಚುಟ್ಟ ಮತ್ತು ಸಿಗರೇಟುಗಳನ್ನು—ಅವು ವಿದೇಶಿಯಾಗಿರಲಿ ಅಥವಾ ಸ್ವದೇಶಿಯಾಗಿರಲಿ—ವರ್ಜಿಸಬೇಕು. ಸಿಗರೇಟು ಸೇದುವಿಕೆ ನಿದ್ರೆಯೌಷಧಿಯಿದ್ದಂತೆ. ಚುಟ್ಟಾದಲ್ಲಿ ಅಫೀಮಿನ ಗುಣವಿದೆ. ಅವು ಚಟವಾಗಿ ಪರಿಣಮಿಸುತ್ತವೆಯಲ್ಲದೆ ಅನಂತರ ಅವುಗಳನ್ನು ನೀವು ವರ್ಜಿಸುವುದಕ್ಕಾಗುವುದಿಲ್ಲ. ಟಾಲ್‌ಸ್ಟಾಯ್ ಕಥೆಯಲ್ಲಿ ಬರುವ ಕುಡುಕನೊಬ್ಬ ಚುಟ್ಟಾ ಸೇದದಿದ್ದಾಗ, ಕೊಲೆಮಾಡಬೇಕೆಂಬ ತನ್ನ ಸಂಕಲ್ಪವನ್ನು ನೆರವೇರಿಸಲು ಹಿಂಜರಿಯುತ್ತಿದ್ದನು. ಆದರೆ ಒಮ್ಮೆ ದಮ್ಮೆಳೆದ ನಂತರ ಮುಗುಳ್ನಗುತ್ತೆದ್ದು 'ಎಂತಹ ಹೇಡಿ ನಾನು?' ಎಂದು ಹೇಳುತಾ ಚಾಕುವನ್ನು ತೆಗೆದು ತನ್ನ ಕೆಲಸವನ್ನು ಮುಗಿಸಿದನಂತೆ. ಸಂಗತಿಯ ಸ್ವಂತ ಅನುಭವವಿಲ್ಲದೆ ಟಾಲ್‌ಸ್ಟಾಯ್ ಏನನ್ನೂ ಬರೆದಿಲ್ಲ. ಅಲ್ಲದೆ ಅವನು ಮದ್ಯಪಾನಕ್ಕಿಂತಲೂ ಹೆಚ್ಚಾಗಿ ಚುಟ್ಟಾ ಮತ್ತು ಸಿಗರೇಟುಗಳನ್ನು ವಿರೋಧಿಸುತ್ತಿದ್ದನು. ಆದರೆ ಮದ್ಯ ಮತ್ತು ತಂಬಾಕುಗಳ ನಡುವೆ ಮದ್ಯವು ಕಡಿಮೆ ಹಾನಿಕರವಾದುದೆಂದು ತಿಳಿದು ತಪ್ಪು ಮಾಡಬೇಡಿ. ಖಂಡಿತ ಹಾಗಲ್ಲ. ಸಿಗರೇಟು ಪಿಶಾಚಿಯಾದರೆ, ಮದ್ಯವು ಸೈತಾನ, ಅಷ್ಟೆ."

'ದೇವದಾಸಿ'ಯರೊಂದಿಗೆ ಗಾಂಧೀಜಿ ಸಂಭಾಷಣೆ ನಡೆಸಿದರು. "ನಮ್ಮಲ್ಲಿ ಒಬ್ಬರಿಗೂ ಇದು ಇಷ್ಟವಿಲ್ಲ. ಆದರೆ ನಮ್ಮ ಬದುಕು ನಡೆಸುವುದು ಹೇಗೆ?" ಎಂಬುದು ಆ ದೇವದಾಸಿಯರ ಅಸಹಾಯಕ ರೋದನವಾಗಿದ್ದಿತು. "ಒಂದು ವೇಳೆ ನಾನು ನಿಮ್ಮನ್ನು ಬೇರೆಡೆ ಕರೆದುಕೊಂಡು ಹೋಗಿ ಅಗತ್ಯವಾದ ಊಟ ಬಟ್ಟೆ ನೀಡಿ ವಿದ್ಯಾಭ್ಯಾಸ ಮತ್ತು ಸ್ವಚ್ಛ ಪರಿಸರಗಳನ್ನು ಕಲ್ಪಿಸಿಕೊಟ್ಟಲ್ಲಿ ಈ ನಿಮ್ಮ ಲಜ್ಜಾಸ್ಪದ ಜೀವನವನ್ನು ತ್ಯಜಿಸಿ ನನ್ನೊಂದಿಗೆ ಬರುತ್ತೀರಾ?" ಎಂದು ಗಾಂಧೀಜಿ ಅವರನ್ನು ಕೇಳಿದರು. ಅದಕ್ಕವರು "ಆಗಲಿ" ಎಂದರು. ಅದರ ಬಗೆಗೆ ಯಾವ ಭ್ರಮೆಯೂ ಅವರಲ್ಲಿರಲಿಲ್ಲ. ತಮ್ಮ ಭಾಷಣದಲ್ಲಿ ಈ ಸಂಗತಿಯನ್ನು ಕುರಿತುಪ್ರಸ್ತಾಪಿಸುತ್ತಾ ದೇವದಾಸಿಯರ ಬಗೆಗೆ ತಮ್ಮ ಅನುಕಂಪವನ್ನು ವ್ಯಕ್ತಪಡಿಸಿದರು. "ನಾನು ಅವರೊಂದಿಗೆ ಮಾತನಾಡುತ್ತಿದ್ದಾಗ ಮತ್ತು ಸಂಗತಿಯ ಅಂತರಾರ್ಥವನ್ನು ತಿಳಿಯುತ್ತಿದ್ದಾಗ ಅನೈತಿಕ ಉದ್ದೇಶಗಳಿಗಾಗಿ ಕನ್ಯೆಯರನ್ನು ಒಪ್ಪಿಸುವಂಥ ಸಂಪ್ರದಾಯದ ವಿರುದ್ಧ ನನ್ನ ಆತ್ಮವು ಸಿಡಿದೆದ್ದಿತು. ಅವರನ್ನು 'ದೇವದಾಸಿ'ಗಳೆಂದು ಕರೆದು ಧರ್ಮದ ಹೆಸರಿನಲ್ಲಿ ದೇವರನ್ನೇ ಅವಮಾನಿಸುತ್ತೇವೆ. ಅಲ್ಲದೆ, ಇಬ್ಬಗೆಯ ಪಾತಕಕ್ಕೆ ನಾವು ಸಿಲುಕಿದ್ದೇವೆ; ಮೊದಲನೆಯದಾಗಿ ಈ ನಮ್ಮ ಸಹೋದರಿಯರನ್ನು ನಮ್ಮ ಭೋಗತೃಷ್ಣೆಯ ತೃಪ್ತಿಗಾಗಿ ಬಳಸುತ್ತೇವೆ;

ಮತ್ತು ಅದೇ ಉಸಿರಿನಲ್ಲಿ ದೇವರ ಹೆಸರನ್ನು ಉಚ್ಚರಿಸುತ್ತೇವೆ. ಇಂತಹ ಅನೈತಿಕ ಕೆಲಸಕ್ಕಾಗಿ ಒಂದು ವರ್ಗದ ಜನ ಇರಬೇಕೆಂಬ ಮತ್ತು ಅವರ ಘೋರ ಅನೀತಿಯನ್ನು ಮತ್ತೊಂದು ವರ್ಗ ಸಹಿಸಿಕೊಂಡು ಇರಬೇಕೆಂಬ ಆಲೋಚನೆ ಯಾರಿಗಾದರೂ ಬದುಕಿನಲ್ಲಿ ಹತಾಶೆ ಹುಟ್ಟಿಸುವಂಥದು. ನಾನವರೊಂದಿಗೆ ಸಂಭಾಷಿಸುತ್ತಿದ್ದಾಗ ಅವರ ಕಣ್ಣುಗಳಲ್ಲಿ ಯಾವ ಪಾಪವನ್ನೂ ಕಾಣಲಿಲ್ಲ. ಅಲ್ಲದೆ ಇತರ ಮಹಿಳೆಯರಂತೆಯೇ ಅವರೂ ಸದ್ಭಾವನೆ ಮತ್ತು ಸಚ್ಚಾರಿತ್ರ್ಯಗಳನ್ನು ಹೊಂದಬಲ್ಲವರೆಂದು ತೋರಿತು. ನಮ್ಮ ಒಡಹುಟ್ಟಿದ ಸೋದರಿಯರ ಮತ್ತು ಅವರ ನಡುವೆ ಇರುವ ಭೇದವಾದರೂ ಏನು? ಅನೈತಿಕ ಕೃತ್ಯಗಳಿಗೆ ನಮ್ಮ ಸ್ವಂತ ಸೋದರಿಯರನ್ನು ಬಲಿಕೊಡಲು ನಾವು ಸಿದ್ಧರಾಗದಿರುವಾಗ ಈ ಹೆಂಗಳೆಯರನ್ನು ಇಂತಹ ಅಕೃತ್ಯಗಳಿಗೆ ಬಳಸಲು ಅವಕಾಶ ಕೊಡುವ ಧೈರ್ಯವಾದರೂ ನಿಮಗೆ ಹೇಗೆ ಬಂದಿತು? ಯಾವುದೇ ಬಗೆಯಲ್ಲಾಗಲಿ ಈ ಸಂಗತಿಗಳಿಗೆ ಸಂಬಂಧಪಟ್ಟ ಹಿಂದೂಗಳು ಸಮಾಜವನ್ನು ಈ ಪೀಡೆಯಿಂದ ಮುಕ್ತಗೊಳಿಸಬೇಕು. ನಾನವರಿಗೆ ನೀಡಿದ ವಾಗ್ದಾನವನ್ನು ಪೂರೈಸಿದ ಪಕ್ಷಕ್ಕೆ ಅವರಲ್ಲಿ ಬಹುಮಂದಿ ತಮ್ಮ ವೃತ್ತಿಯನ್ನು ಬಿಟ್ಟುಬಿಡುವುದಾಗಿ ವಚನವಿತ್ತಿದ್ದಾರೆ. ಆದರೆ ಅವರು ಅದನ್ನು ಬಿಟ್ಟುಕೊಡಲಾರದಿದ್ದಲ್ಲಿ, ಯಾವ ಸಮಾಜದಲ್ಲಿ ಅವರು ತಮ್ಮ ಬದುಕನ್ನು ಸಾಗಿಸುತ್ತಿದ್ದಾರೋ ಆ ಸಮಾಜವನ್ನು ದೂಷಿಸುತ್ತೇನೆಯೆ ಹೊರತು ಅವರನ್ನಲ್ಲ. ಈ ಅಭಾಗಿನಿಯರಿಗೆ ಸ್ನೇಹಹಸ್ತವನ್ನು ನೀಡಬೇಕಾದುದು ಮತ್ತು ಅವರನ್ನು ಈ ಹೇಯ ಬದುಕಿನಿಂದ ಮೇಲೆತ್ತಬೇಕಾದುದು ನಿಮ್ಮ ಧರ್ಮ. ಅವರು ಮತ್ತೆ ಪ್ರಲೋಭನೆಗೊಳಗಾದಲ್ಲಿ ಅದನ್ನು ನಿರೋಧಿಸುವುದು ಕಷ್ಟವಾಗುತ್ತದೆಂಬುದು ನನಗೆ ತಿಳಿದಿದೆ. ಆದರೆ ಮನುಷ್ಯ ತನ್ನ ತೃಷೆಯನ್ನು ನಿಗ್ರಹಿಸಿದ್ದಾದರೆ ಮತ್ತು ಸಮಾಜ ಈ ಪಾಪಕೃತ್ಯದ ವಿರುದ್ಧ ಎದ್ದು ನಿಂತದ್ದಾದರೆ, ಸಮಾಜದಿಂದ ಅದನ್ನು ಸುಲಭವಾಗಿ ತೊಲಗಿಸಬಹುದು."

ಸೆಪ್ಟೆಂಬರ್ ೯ರಂದು ಗಾಂಧೀಜಿ ಮದ್ರಾಸನ್ನು ಬಿಟ್ಟು ಕಡಲೂರಿನ ಮೂಲಕ ದಕ್ಷಿಣದ ಒಳನಾಡನ್ನು ಪ್ರವೇಶಿಸಿದರು. ಚಿದಂಬರಂ ಅವರಿಗೆ ಒಂದು ಯಾತ್ರಾಸ್ಥಳವಾಗಿದ್ದಿತು. ಅಲ್ಲಿ ಅವರು ಅಸ್ಪೃಶ್ಯ ಸಂತನಾದ ನಂದನಾರನಿಗೆ ಉದಾತ್ತ ಕಾಣಿಕೆಯನ್ನು ಸಲ್ಲಿಸಿದರು: "ತನ್ನ ಅದಮ್ಯ ಆತ್ಮಶಕ್ತಿಯಿಂದ ಮತ್ತು ಅತುಲ ದೈವಶ್ರದ್ಧೆಯಿಂದ ಗರ್ವಿಷ್ಠ ಬ್ರಾಹ್ಮಣರ ದರ್ಪವನ್ನು ಮುರಿದುದಲ್ಲದೆ, ಮನುಷ್ಯರಲ್ಲೆಲ್ಲ ತಾವೇ ಉತ್ತಮರೆಂದು ಎಣಿಸಿದ್ದ ಹಿಂಸಕರಿಗಿಂತ ಆತ್ಮಸತ್ವದಲ್ಲಿ ತಾನೆಷ್ಟೋ ಮಿಗಿಲಾದವನೆಂಬುದನ್ನು ತೋರಿಸಿಕೊಡಲು ಅವನು ಸಮರ್ಥನಾದನು. ನಂದ ಪ್ರತಿಯೊಂದು ಅಡ್ಡಿ ಆತಂಕವನ್ನು ಕಿತ್ತೊಗೆದು ಸ್ವಾತಂತ್ರ್ಯದ ಹಾದಿಯನ್ನು ಪಡೆದುಕೊಂಡದ್ದು ಬಡಾಯಿಯಿಂದಲ್ಲ ಅಥವಾ ಬೆದರಿಕೆಯಿಂದಲ್ಲ; ಪರಿಶುದ್ಧವಾದ ಆತ್ಮದಂಡನೆಯಿಂದ. ಅವನು ಕಿರುಕುಳಕಾರರನ್ನು ದೂಷಿಸಲಿಲ್ಲ. ಅಥವಾ ದೂಷಕರಿಗೆ ತನ್ನಿಂದ ಸಲ್ಲಬೇಕಾದುದೇನೆಂಬುದನ್ನು ಕೇಳಲು ಸಹ ತಗ್ಗುತ್ತಿರಲಿಲ್ಲ. ತನ್ನ ಅನನ್ಯ ಪ್ರಾರ್ಥನೆಯಿಂದ ಮತ್ತು ಪರಿಶುದ್ಧ ಶೀಲ

ದಿಂದ ಅವರು ನಾಚುವಂತೆ ಮಾಡಿ ಅವರನ್ನು ನ್ಯಾಯಮಾರ್ಗದಲ್ಲಿ ತೊಡಗಿಸಿದನು. ಮಾನವಭಾಷೆಯಲ್ಲಿ ಹೇಳುವುದಾದರೆ ಭಗವಂತನೇ ಅವತರಿಸುವಂತೆ ಒತ್ತಾಯಿಸಿ ಆ ನಿಂದಕರಿಗೆ ಜ್ಞಾನೋದಯವಾಗುವಂತೆ ಮಾಡಿದನು. ನಂದನು ತನ್ನ ಕಾಲದಲ್ಲಿ ತನ್ನ ಕೈಲಾದುದನ್ನೇನು ಮಾಡಿದನೊ ಅದನ್ನೇ ಈ ದಿನ ನಮಗೆ ಶಕ್ಯವಾದುದನ್ನು ಮಾಡ ಲವಕಾಶವಿದೆ."

ಅನಂತರ ತಮಗೆ ಪ್ರಿಯವಾಗಿದ್ದ ಖಾದಿ ಸತ್ವದ ಮತ್ತು ಖಾದಿ ಚಳುವಳಿಯ ಅಂತಸ್ಥವನ್ನು ವಿವರಿಸಿದರು:

"ನಮ್ಮ ನಿತ್ಯಜೀವನದಲ್ಲಿ ನಂದನ ಅಂತಃಸತ್ವವನ್ನು ನಿದರ್ಶಿಸಿ ತೋರಿಸ ಬಹುದೆಂಬ ಬಗೆಗೆ ಕೆಲವು ಮಾತುಗಳನ್ನು ಹೇಳದಿದ್ದರೆ ನನ್ನ ದೃಷ್ಟಿಯಲ್ಲಿ ತಪ್ಪಾದೀತು. ಈ ಖಾದಿಸತ್ವವನ್ನು ಧಾರಣಮಾಡಿಕೊಳ್ಳುವುದಕ್ಕಿಂತ ಬೇರೆ ರೀತಿಯಲ್ಲಿ ಆ ಸಂತನ ಜೀವಾಳವನ್ನು ನಿದರ್ಶಿಸಿ ತೋರಿಸಲಾರೆವೆಂಬುದು ನನ್ನ ನಮ್ರ ಅಭಿಪ್ರಾಯ. ಖಾದಿ ಯನ್ನು ಉಡುವ ಮಾತ್ರದಿಂದಲೆ ನಂದನ ಸತ್ವವನ್ನು ನಿದರ್ಶಿಸುವುದು ಸಾಧ್ಯವೆಂದು ನಾನು ಹೇಳುತ್ತಿಲ್ಲ. ಆ ಖಾದಿಯ ಸತ್ವ ನಮ್ಮಲ್ಲಿ ಅವಶ್ಯವಾಗಿರಬೇಕು. ನೀಚನಾಗಲಿ ವ್ಯಭಿಚಾರಿಯಾಗಲಿ ಖಾದಿಯನ್ನೇ ಧರಿಸಬೇಕು. ಕಾರಣ ಅವಳು ಅಥವಾ ಅವನು, ಆ ನೀಚ ಸಹ ನಮ್ಮಂತೆಯೇ ಗೋಧಿ ಮತ್ತು ಅಕ್ಕಿಗಳನ್ನು ತಿನ್ನುತ್ತಾನಷ್ಟೆ. ಆದ್ದರಿಂದ ಅವನು ಅಥವಾ ಅವಳು ಖಾದಿಯನ್ನು ಧರಿಸಬೇಕು. ಖಾದಿಧಾರಣೆಯ ಅಂತರಾರ್ಥ ವೇನೆಂಬುದನ್ನು ತಿಳಿಯುವುದೇ ಖಾದಿಸತ್ವ. ಪ್ರತಿದಿನ ಬೆಳಗ್ಗೆ ಹೊರಹೊರಡುವ ಮುನ್ನ ಖಾದಿಯನ್ನು ಧರಿಸುತ್ತೇವಷ್ಟೆ. ಆಗ ದರಿದ್ರ ನಾರಾಯಣನ ಹೆಸರಿನಲ್ಲಿ ಮತ್ತು ಭಾರತದ ಹಸಿದ ಜನಕೋಟಿಗೋಸ್ಕರ ಆ ಕೆಲಸವನ್ನು ಮಾಡುತ್ತಿದ್ದೇವೆಂಬುದನ್ನು ನೆನಪಿನಲ್ಲಿಡ ಬೇಕು. ನಮ್ಮಲ್ಲಿ ಖಾದಿಸತ್ವವಿರುವುದಾದರೆ ನಮ್ಮ ಜೀವನದ ಎಲ್ಲ ಮುಖಗಳಲ್ಲಿಯೂ ಸರಳತೆಯು ಮೈಗೂಡುತ್ತದೆ. ಖಾದಿಸತ್ವವೆಂದರೆ ಅನಂತ ಸಹನೆ. ಖಾದಿ ಉತ್ಪಾದನೆಯ ಬಗೆಗೆ ಅಲ್ಪಸ್ವಲ್ಪ ತಿಳುವಳಿಕೆಯುಳ್ಳ ಜನ, ನೂಲುಗಾರರು ಮತ್ತು ನೇಯ್ಗೆಗಾರರು ತಮ್ಮ ಕಸುಬಿನಲ್ಲಿ ಎಷ್ಟು ಕಷ್ಟಪಡುತ್ತಾರೆಂಬುದನ್ನು ತಿಳಿದಿರುತ್ತಾರೆ. ಅಂತೆಯೇ 'ಸ್ವರಾಜ್ಯದ ದಾರವನ್ನು' ನೂಲುವಾಗ ಸಹನೆಯಿರಬೇಕು. ಖಾದಿಸತ್ವವು ಅಷ್ಟೇ ಅಮಿತವಾದ ಶ್ರದ್ಧೆಯನ್ನು ಸೂಚಿಸುತ್ತದೆ. ತಾನು ನೂಲುವ ದಾರ ಚಿಕ್ಕದಾದರೂ, ಒಟ್ಟಾರೆ ಭಾರತದ ಪ್ರತಿಯೊಬ್ಬ ಮನುಷ್ಯನಿಗೂ ಬೇಕಾದ ಬಟ್ಟೆಗೆ ಸಾಕಾಗುವುದೆಂಬ ಅಪಾರ ಶ್ರದ್ಧೆ ಚರಕದೊಂದಿಗೆ ಹೆಣಗಾಡುವ ನೂಲುಗಾರನಲ್ಲಿರುವಂತೆ ಸತ್ಯ ಮತ್ತು ಅಹಿಂಸೆಗಳು ನಮ್ಮ ಮಾರ್ಗದ ಪ್ರತಿಯೊಂದು ಅಡ್ಡಿಯನ್ನೂ ಜಯಿಸುವುದೆಂಬ ಅಮಿತ ಶ್ರದ್ಧೆ ನಮ್ಮಲ್ಲಿರಬೇಕು.

"ಈ ಖಾದಿಯ ಸತ್ವವು ಭೂಮಿಯ ಮೇಲಿರುವ ಪ್ರತಿಯೊಬ್ಬ ಮಾನವ ಜೀವಿ ಯೊಡನೆ ಭ್ರಾತೃಭಾವನೆಯನ್ನು ಮೂಡಿಸುತ್ತದೆ. ನಾವು ನಮ್ಮ ಸಹಜೀವಿಗಳಿಗೆ ತೊಂದರೆಯುಂಟು ಮಾಡಬಹುದಾದಂಥ ಪ್ರತಿಯೊಂದನ್ನೂ ತ್ಯಜಿಸಬೇಕೆಂಬುದನ್ನು

ಅದು ಸೂಚಿಸುತ್ತದೆ ಮತ್ತು ಆ ಚೈತನ್ಯವನ್ನು ದೇಶದ ಜನಕೋಟಿಯಲ್ಲಿ ಬೆಳೆಸಿದ್ದಾದರೆ ನಮ್ಮ ಭಾರತ ಎಂತಹ ದೇಶವಾಗಬಹುದು! ದೇಶದಲ್ಲಿ ಹೆಚ್ಚು ಸಂಚರಿಸಿದಂತೆಲ್ಲ, ವಿಷಯಗಳನ್ನು ಸ್ವತಃ ಪರಿಶೀಲಿಸಿದಂತೆಲ್ಲ ಚರಕದ ಸಾಮರ್ಥ್ಯದ ಬಗೆಗೆ ನನ್ನ ವಿಶ್ವಾಸವು ಹೆಚ್ಚುತ್ತಿದೆ ಮತ್ತು ಬಲವಾಗುತ್ತಿದೆ. ರಾಮನಾಮ ಜಪದ ಸಾಮರ್ಥ್ಯದ ಬಗೆಗೆ ಬೌದ್ಧಿಕವಾಗಿ ತಿಳಿಯ ಹೊರಟರೆ ಅದು ನಮ್ಮ ಹೃದಯವನ್ನು ತೃಪ್ತಿಗೊಳಿಸಲಾರದು. ಆದರೂ ಆ ಪವಿತ್ರ ನಾಮಗಳನ್ನುಚ್ಚರಿಸುವ ಪರಂಪರೆಯನ್ನು ನಮಗೆ ನೀಡಿದ ಆ ಋಷಿಗಳು ಮೂರ್ಖರು ಅಥವಾ ಹೆಡ್ಡರು ಎಂದು ಹೇಳಬಹುದಾದ ಒಬ್ಬ ವ್ಯಕ್ತಿಯೂ ಈ ಸಭೆಯಲ್ಲಿ ಸಿಗಲಾರನೆಂದೇ ನನ್ನ ಅಭಿಪ್ರಾಯ. ಇಷ್ಟಾದರೂ ಖಾದಿಸತ್ವವು ನಾನು ಮೇಲೆ ಹೇಳಿದ ಎಲ್ಲ ಸಾಮರ್ಥ್ಯವನ್ನು ಹೊಂದಿದೆಯೆಂದು ನಿಮಗೆ ಸೂಚಿಸುತ್ತೇನೆ. ಆದರೆ ಅದರ ಹಿಂದೆ ಒಂದು ನಿರ್ಬಂಧವಿದೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ನಿರ್ಬಂಧವು ಆ ಸತ್ವದ ಅಭಿವ್ಯಕ್ತಿಯೊಂದಿಗೆ ಸಂಬಂಧಗೊಂಡಿದೆ. ರಾಮನಾಮವನ್ನು ಯಾರು ನಮಗೆ ನೀಡಿದರೋ ಅವರ 'ಅಪ್ರತಿಮ ತಪಶ್ಚರ್ಯೆ'ಯ ಪ್ರಭಾವವನ್ನು ಹೊಂದಿರುವುದರಿಂದಲೇ ಅದು ನಮ್ಮ ಮನಸ್ಸಿನಲ್ಲಿ ಸಜೀವಶಕ್ತಿಯಾಗುಳಿದಿದೆ; ಅಂತೆಯೇ ಖಾದಿ ಚಳುವಳಿ ಕೂಡ. ಆ ಚಳುವಳಿಯ ಹಿಂದಿರುವವರ 'ತಪಶ್ಚರ್ಯೆ'ಯ ಪ್ರಭಾವ ಅದಕ್ಕಿರಬೇಕಾಗುತ್ತದೆ. ಖಾದಿಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟವರ ಪರಿಶುದ್ಧ ಬಾಳುವೆಯನ್ನು ಕುರಿತು ಸತತವಾಗಿ ಒತ್ತಿ ಹೇಳದಿದ್ದಲ್ಲಿ ಖಾದಿಯು ನಮ್ಮ ಜನರಿಗೆ ಅಸಹ್ಯಕರವಾಗಿ ಪರಿಣಮಿಸುತ್ತೆಂಬುದರ ಅರಿವು ಪ್ರತಿ ನಿಮಿಷವೂ ನನ್ನಲ್ಲಿ ಎಚ್ಚರವಾಗಿರುತ್ತದೆ. ವಾಣಿಜ್ಯ ಕ್ಷೇತ್ರದಲ್ಲಿ ಖಾದಿಯು ಇತರ ಸಾಮಗ್ರಿಗಳೊಡನೆ ಸಮ ಪ್ರಮಾಣದಲ್ಲಿ ಸ್ಪರ್ಧಿಸಲಾರದೆಂಬ ಅರಿವು ನನ್ನಲ್ಲಿ ಚೆನ್ನಾಗಿದೆ. ಸತ್ಯಾಗ್ರಹವು ಒಂದು ಅದ್ವಿತೀಯ ಆಯುಧ; ಅದು ಜನರು ಬಳಸುವಂತಹ ಸಾಧಾರಣ ಆಯುಧವಲ್ಲ. ಅಂತೆಯೇ ಖಾದಿ ಒಂದು ಅದ್ವಿತೀಯ ವಾಣಿಜ್ಯ ಸಾಮಗ್ರಿ. ಅದು ಇತರ ಸಾಮಾನ್ಯ ವಸ್ತುಗಳೊಡನೆ ಸ್ಪರ್ಧೆಯಲ್ಲಿ ಜಯಗಳಿಸಲಾರದು. ನಾನಿಲ್ಲಿ ಕುಳಿತಿರುವುದೆಷ್ಟು ಸತ್ಯವೋ ಅಂತೆಯೇ ಖಾದಿ ಭಾರತದಲ್ಲಿಂದು ಇತರ ಪ್ರತಿಯೊಂದು ವಸ್ತುವನ್ನೂ ಮೆಟ್ಟಿಕ್ಕುವುದೆಂಬುದು ನನಗೆ ಸ್ಪಷ್ಟವಾಗಿದೆ. ನೀವು ನೀಡಿದ ಈ ಎಲ್ಲ ಖಾದಿ ಕಾಣಿಕೆಗಳ ಬಗೆಗೆ ನಾನು ಅತ್ಯುತ್ಸಾಹಿಯಾಗಿಲ್ಲವೆಂಬುದನ್ನು ನೀವು ಬಹುಶಃ ತಿಳಿದಿರಬಹುದು. ಖಾದಿಯ ಬಗೆಗೆ ನನ್ನಲ್ಲಿರುವ ಹತ್ತನೆಯ ಒಂದು ಭಾಗದಷ್ಟು ಶ್ರದ್ಧೆ ನಿಮ್ಮಲ್ಲಿದ್ದಿದ್ದರೆ ನಿಮ್ಮಲ್ಲಿರುವ ಅಪಾರ ಸಂಪತ್ತಿನಿಂದ ಇನ್ನೂರನ್ನೊ ಎರಡು ಸಾವಿರವನ್ನೊ ಕೊಡುತ್ತಿರಲಿಲ್ಲ. ಅದಕ್ಕೆ ಬದಲಾಗಿ ಖಾದಿಗೆ ಹಣದ ಅವಶ್ಯಕತೆ ಇಲ್ಲವಾಗುವವರೆಗೂ ನನ್ನನ್ನು ತೃಪ್ತಿಗೊಳಿಸುತ್ತಿದ್ದಿರಿ."

ಕಡಲೂರಿನ ತಮ್ಮ ಉಪನ್ಯಾಸದಲ್ಲಿ ಗಾಂಧೀಜಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಸಮಸ್ಯೆಯ ಬಗೆಗೆ ಮಾತನಾಡಿದರು.

"ಎರಡು ಪಂಗಡದವರಿಗೂ ಅನ್ವಯವಾಗುವ ಪರಿಪೂರ್ಣ ಬುದ್ಧಿವಾದಗಳನ್ನು

ನಿಮ್ಮ ಮುಂದೆ ಇಡಬಲ್ಲೆ. ಬ್ರಾಹ್ಮಣರಿಗೆ ನಾನು ಹೇಳುವುದೇನೆಂದರೆ, 'ನೀವು ಸರ್ವಜ್ಞಾನದ ನಿಧಿಗಳಾಗಿದ್ದಿರಿ, ತ್ಯಾಗದ ಪ್ರತಿಮೂರ್ತಿಗಳಾಗಿದ್ದೀರಿ ಮತ್ತು ಭಿಕ್ಷಾಜೀವನವನ್ನು ಆರಿಸಿಕೊಂಡಿದ್ದೀರಿ. ಆದ್ದರಿಂದ ಬ್ರಾಹ್ಮಣೇತರರಿಗೆ ಎಲ್ಲವನ್ನೂ ತ್ಯಾಗಮಾಡಿ ಅವರೂ ಬಿಟ್ಟದ್ದರಿಂದ ತೃಪ್ತಿ ಪಡೆಯಿರಿ.' ಆದರೆ ಆಧುನಿಕ ಬ್ರಾಹ್ಮಣರು ತಮ್ಮ ಧರ್ಮದ ಬಗೆಗಿನ ನನ್ನ ಈ ಅಬ್ರಾಹ್ಮಣೀಯ ವಿವರಣೆಯನ್ನು ಒಟ್ಟಾರೆ ನಿರಾಕರಿಸಬಹುದೆಂಬುದು ನನಗೆ ತಿಳಿದೆ. ಬ್ರಾಹ್ಮಣೇತರರಿಗೆ ನಾನು ಹಾಕುವ ಪ್ರಶ್ನೆಯಿದು: 'ನಿಮ್ಮದು ಬಹುಸಂಖ್ಯಾತ ಪಕ್ಷ ಮತ್ತು ನಿಮ್ಮಲ್ಲಿ ಸಾಕಷ್ಟು ಐಶ್ವರ್ಯವಿದೆ. ಆದರೂ ನಿಮ್ಮ ಚಿಂತೆಗೆ ಕಾರಣವೇನು? ನೀವೀಗ ಅಸ್ಪೃಶ್ಯತೆಯನ್ನು ವಿರೋಧಿಸುತ್ತಿದ್ದೀರಿ ಮತ್ತು ಅದು ವಿರೋಧಿಸಬೇಕಾದ್ದೇ ಸರಿ; ಆದರೆ ನಿಮ್ಮ ನಡುವೆ ಹೊಸಬಗೆಯ ಅಸ್ಪೃಶ್ಯತೆಯನ್ನು ಸೃಷ್ಟಿಸಿಕೊಳ್ಳುವ ದೋಷಕ್ಕೆ ಪಕ್ಕಾಗದಿರಿ. ನಿಮ್ಮ ಆತುರದಲ್ಲಿ, ನಿಮ್ಮ ಕುರುಡುತನದಲ್ಲಿ ಮತ್ತು ಬ್ರಾಹ್ಮಣ ವಿರುದ್ಧವಾದ ಕೋಪಾವೇಶದಲ್ಲಿ ಯುಗ ಯುಗಾಂತರದಿಂದ ಬಂದಿರುವ ಸಂಸ್ಕೃತಿಯನ್ನು ನಿಮ್ಮ ಕಾಲಡಿಯಲ್ಲಿ ಹೊಸಕಿ ಹಾಕಲು ಪ್ರಯತ್ನಿಸುತ್ತಿದ್ದೀರಿ. ಲೇಖಣಿಯ ಗೆರೆಯಿಂದ, ಕತ್ತಿಯ ಮೊನೆಯಿಂದ ಹಿಂದೂಧರ್ಮದ ಅಡಿಪಾಯವನ್ನು ನಿರ್ಮೂಲ ಮಾಡುವಷ್ಟು ಅಸಹನೆಗೊಂಡಿದ್ದೀರಿ. ಹಿಂದೂಧರ್ಮದಲ್ಲಿರುವ ಹೊಟ್ಟಿನಿಂದಾಗಿ ನೀವು ಅತೃಪ್ತರಾಗಿದ್ದೀರಿ ನಿಜ. ಆದರೆ ಆ ಧರ್ಮದ ತಿರುಳನ್ನೇ ಅಂದರೆ ಅದರ ಜೀವವನ್ನೇ ಕಳೆದುಕೊಳ್ಳುವ ಅಪಾಯದಲ್ಲಿದ್ದೀರಿ. ವರ್ಣಾಶ್ರಮದ ಬಗ್ಗೆ ಹೇಳುವುದೇನೂ ಇಲ್ಲವೆಂದು ಅಸಹನೆಗೆ ಬಲಿಯಾದ ನೀವು ಹೇಳುತ್ತಿದ್ದೀರಿ. ಈ ವರ್ಣಾಶ್ರಮ ಧರ್ಮವನ್ನು ಎತ್ತಿ ಹಿಡಿಯುವುದರಲ್ಲಿ ನಾನು ಭ್ರಮಿತನಾಗಿ ದುಡಿಯುತ್ತಿದ್ದೇನೆಂದು ನಿಮ್ಮಲ್ಲಿ ಕೆಲವರು ಯೋಚಿಸುತ್ತಿದ್ದೀರಿ. ಆದರೆ ಅಂಥ ತಪ್ಪು ಮಾಡಬೇಡಿ. ಯಾರು ಹೀಗೆ ಹೇಳುವರೋ ಅವರು, ನಾನು ವರ್ಣಾಶ್ರಮವನ್ನು ಕುರಿತು ಹೇಳುವುದೇನೆಂಬುದನ್ನು ಕೂಡ ತಿಳಿದುಕೊಳ್ಳುವ ತೊಂದರೆ ತೆಗೆದುಕೊಳ್ಳುತ್ತಿಲ್ಲ.

"ಅದು ಹಿಂದೂಧರ್ಮವು ಹಲವು ಪದಗಳಲ್ಲಿ ನಿರೂಪಿಸಿದ ವಿಶ್ವ ನಿಯಮ. ಅದು ಆಧ್ಯಾತ್ಮಿಕ ಅರ್ಥಶಾಸ್ತ್ರದ ಒಂದು ಸೂತ್ರ. ಪಾಶ್ಚಾತ್ಯ ರಾಷ್ಟ್ರಗಳು ಮತ್ತು ಇಸ್ಲಾಂಧರ್ಮಗಳು ಅನೈಚ್ಛಿಕವಾಗಿ ಆ ನಿಯಮಕ್ಕೆ ಕಟ್ಟುಬಿದ್ದಿವೆ. ಅವಕ್ಕೆ ಮೇಲುಕೀಳುಗಳ ಸಂಬಂಧವಿಲ್ಲ. ತಿನ್ನುವುದು, ಕುಡಿಯುವುದು ಮತ್ತು ವಿವಾಹಗಳಿಗೆ ಸಂಬಂಧಿಸಿದ ಪದ್ಧತಿಗಳು ವರ್ಣಾಶ್ರಮ ಧರ್ಮದ ಸಮಗ್ರ ಭಾಗಗಳೇನಲ್ಲ; ನಮ್ಮ ಪೂರ್ವಿಕರಾದ ಋಷಿಗಳಿಂದ ಈ ಸೂತ್ರವು ಆವಿಷ್ಕೃತವಾಯಿತು; ತಮ್ಮ ಬದುಕಿನ ಅತ್ಯುತ್ತಮ ಭಾಗವನ್ನು ಸ್ವಾರ್ಥಕ್ಕಲ್ಲದೆ ಪರಮಾತ್ಮನಿಗೆ ಮತ್ತು ಪ್ರಪಂಚಕ್ಕೆ ಸಲ್ಲಿಸಬೇಕಾಗಿದ್ದಲ್ಲಿ ಅದು ಆನುವಂಶಿಕ ನಿಯಮವೊಂದೇ ಗಣಿಸಬೇಕೆಂಬ ತತ್ವವನ್ನವರು ಕಂಡುಕೊಂಡರು. ಸ್ವತಂತ್ರ ವ್ಯಕ್ತಿಯ ಶಕ್ತಿಯನ್ನು ಬಾಳುವೆಯಲ್ಲಿನ ಉನ್ನತ ಗುರಿಗಳತ್ತ ತೊಡಗಿಸಲು ರೂಪಿಸಿದ ನಿಯಮವದು. ನಿಜವಾದ ಬ್ರಾಹ್ಮಣರು ಮಾಡಬೇಕಾದುದೇನೆಂದರೆ, ತಾವು ಕುಳಿತಿರುವ ಅಡಿಪಾಯವನ್ನೇ ಕೀಳ್ಗಳೆಯದೆ ಆ ಅಡಿಪಾಯದ ಮೇಲೆ ಶೇಖರ

ಗೊಂಡಿರುವ ಕಸದ ಗುಡ್ಡೆಗಳನ್ನು ಎತ್ತಿಹಾಕಿ ಅದನ್ನು ಸಂಪೂರ್ಣ ಚೊಕ್ಕಟವಾಗಿಡುವುದು. ಇಂದು ವರ್ಣಾಶ್ರಮ ಧರ್ಮಕ್ಕೆದುರಾಗಿ ಬರುವ ಶತ್ರುವಿನೊಡನೆ ಎಲ್ಲ ಮಾರ್ಗಗಳಿಂದಲೂ ಹೋರಾಡಿ. ಆಗ ನಿಮ್ಮ ಜೊತೆಜೊತೆಯಲ್ಲಿಯೇ ನಾನು ಕೆಲಸ ಮಾಡುವುದನ್ನು ನೀವು ಕಾಣುವಿರಿ.

"ನನ್ನ ವರ್ಣಾಶ್ರಮವು ನನಗೆ ಚೊಕ್ಕಟವಾದ ಊಟವನ್ನು ಕೊಡುವ ಯಾರೊಡನೆಯಾದರೂ ಅವನು ಹಿಂದುವೊ, ಮುಸಲ್ಮಾನನೊ, ಕ್ರಿಶ್ಚಿಯನ್ನನೊ, ಪಾರ್ಸಿಯೋ ಅಥವಾ ಯಾರೇ ಆಗಿರಲಿ ಕುಳಿತು ಊಟಮಾಡಲು ಅವಕಾಶ ಕಲ್ಪಿಸುತ್ತದೆ. ಒಬ್ಬ ಅಸ್ಪೃಶ್ಯ ಬಾಲಕಿಯು ನನ್ನ ಮನೆಯಲ್ಲಿಯೇ ನನ್ನ ಸ್ವಂತ ಮಗಳಂತೆ ಇರಲು ನನ್ನ ವರ್ಣಾಶ್ರಮವು ಸ್ಥಳ ನೀಡುತ್ತದೆ. ಯಾರ ಜೊತೆಯಲ್ಲಿ ನಾನು ಅತ್ಯಂತ ಸಂತೋಷದಿಂದ ಊಟಮಾಡುತ್ತೇನೋ, ಯಾರೊಡನೆ ಊಟಮಾಡುವುದು ಒಂದು ಸುಯೋಗವೊ ಅಂತಹ ಅನೇಕ ಪಂಚಮರ ಕುಟುಂಬಗಳಿಗೆ ನನ್ನ ವರ್ಣಾಶ್ರಮವು ಎಡೆ ದೊರಕಿಸುತ್ತದೆ. ನನ್ನ ವರ್ಣಾಶ್ರಮವು ಈ ಪೃಥ್ವಿಯ ಮೇಲಿನ ಅತ್ಯಂತ ಬಲಿಷ್ಠ ಸರ್ವಾಧಿಕಾರಿಯೆದುರು ತಲೆಬಾಗಿಸಲು ನಿರಾಕರಿಸುತ್ತದೆ; ಆದರೆ ಜ್ಞಾನ, ಪರಿಶುದ್ಧತೆಗಳ ಸಮ್ಮುಖದಲ್ಲಿ, ಭಗವಂತನನ್ನು ಪ್ರತ್ಯಕ್ಷವಾಗಿ ಕಾಣುವ ಪ್ರತಿಯೊಬ್ಬ ವ್ಯಕ್ತಿಯ ಸಮ್ಮುಖದಲ್ಲಿ ಅತ್ಯಂತ ವಿನಮ್ರನಾಗಿ ತಲೆಬಾಗಲು ನನ್ನನ್ನು ಒತ್ತಾಯಿಸುತ್ತದೆ. ಪೂರ್ಣ ಅರ್ಥಹೀನವಾದ ಮತ್ತು ಸವೆದು ಹೋಗಿರುವ ಮಾತುಗಳನ್ನು ಪುನರುಚ್ಚರಿಸುವುದು ಬೇಡ. ನೀನು ಬಯಸಿದಲ್ಲಿ ನಿನ್ನ ಯೋಗ್ಯತೆಗನುಗುಣವಾಗಿ ಬ್ರಾಹ್ಮಣರನ್ನು ಶಪಿಸು, ಆದರೆ ಬ್ರಾಹ್ಮಣತ್ವದ ವಿರುದ್ಧ ಮಾತ್ರ ಬೇಡ. ನಾನು ಬ್ರಾಹ್ಮಣಪರನೆಂದು ನೀವು ತಿಳಿಯಬಹುದಾದ ಅಥವಾ ತಪ್ಪೆಣಿಸಬಹುದಾದ ಅಪಾಯವಿದ್ದರೂ ಸರಿಯೆ. ಕೆಲವು ಮಾತುಗಳನ್ನು ಧೈರ್ಯವಾಗಿ ಘೋಷಿಸಬೇಕಾಗಿದೆ. ಬ್ರಾಹ್ಮಣರು ಪ್ರಾಯಶ್ಚಿತ್ತಾರ್ಹವಾದ ಘೋರ ಪಾಪಗಳನ್ನು ಮಾಡಿರಬಹುದು; ಆದರೂ ಇಂದು ಭಾರತದಲ್ಲಿ ಹಿಂದೂಧರ್ಮದ ಏಳ್ಗೆಯ ಕಡೆಗೆ ಲಕ್ಷ್ಯ ಕೊಡುತ್ತ, ಶಕ್ತಿಮೀರಿ ದುಡಿಯುತ್ತಿದ್ದಾರೆನ್ನುವುದನ್ನು ಮರೆಯಬಾರದು. ಅಂಥವರನ್ನು ನೀವು ಕಂಡೇ ಇಲ್ಲ. ನಾನು ಬ್ರಾಹ್ಮಣರ ಪರವಾಗಿ, ವಕೀಲರು, ಮಂತ್ರಿಗಳು ಮತ್ತು ಭಾರತದ ಹೈಕೋರ್ಟು ನ್ಯಾಯಾಧೀಶರ ಪರವಾಗಿ ವಕಾಲತ್ತು ವಹಿಸುತ್ತಿದ್ದೇನೆಂಬ ನಂಬಿಕೆಯಿಂದ ಓಡಿಹೋಗಬೇಡಿ. ಅವರ ಬಗೆಗೆ ನಾನು ಏನನ್ನೂ ಯೋಚಿಸಿಯೇ ಇಲ್ಲ. ಇದಕ್ಕಾಗಿ ಬ್ರಾಹ್ಮಣರು, ನಬ್ರಾಹ್ಮಣರು ಮತ್ತು ಭಾರತವು ಏಳ್ಗೆಹೊಂದಬೇಕೆಂದು ಆಶಿಸುವ ಪ್ರತಿಯೊಬ್ಬರೂ ಮಾಡಬೇಕಾದುದೇನೆಂದರೆ, ತಂತಮ್ಮ ಮನೆಗಳನ್ನು ಶುದ್ಧವಾಗಿಡುವುದು. ಆದ್ದರಿಂದ ಇನ್ನೂ ಭ್ರಾಂತಿಗೊಳಗಾಗಿರದ ನಬ್ರಾಹ್ಮಣರು ತಾವು ಅಸಮಾಧಾನಗೊಂಡಿರುವ ಕಾರಣದ ಬಗೆಗೆ ಸ್ಪಷವಾಗಿ ಆಲೋಚಿಸಲಿ ಮತ್ತು ಆ ಅನ್ಯಾಯವನ್ನು ನಿರ್ಮೂಲಮಾಡಲು ದೃಢ ಮನಸ್ಸಿನಿಂದ ಹೋರಾಡಲೆಂದುನಾನು ಅವರಿಗೆ ಸೂಚಿಸಬಯಸುತ್ತೇನೆ."

ತಿರುಚಿನಾಪಳ್ಳಿಯಲ್ಲಿ ಕಾರ್ಯಕ್ರಮಂಗಳ ಪಟ್ಟಿ ನಿಬಿಡವಾಗಿತ್ತು. ಅದರಿಂದ ಪಾರಾಗಲು

ಅವರು ಮಾಡಬಹುದಾಗಿದ್ದುದ್ದೇನೆಂದರೆ, ಹಲವು ಸಮಾರಂಭಗಳಲ್ಲಿ ಮೌನವಾಗಿರು ವುದು; "ಈಗ ನಾನು ಮಾತನಾಡುವುದೇನೂ ಇಲ್ಲ." ಆದರೆ ಅವರು ವಿರೋಧಿಗಳ ಕಣ್ತಪ್ಪಿಸಿ ಹೋಗಲಿಲ್ಲ. "ನಾನು ಹಿಂದೆ ಯೋಚಿಸದಿದ್ದ ವಾದವಿವಾದಗಳನ್ನೆದುರಿಸು ವುದರಿಂದ ನನ್ನ ಸ್ಥಾನವು ಮತ್ತಷ್ಟು ಭದ್ರವಾಗುತ್ತದೆ. ನಾನು ಯಾವಾಗಲೂ ಪ್ರಾಮಾಣಿಕ ಭಿನ್ನಾಭಿಪ್ರಾಯವನ್ನು ಸ್ವಾಗತಿಸುತ್ತೇನೆ. ಏಕೆಂದರೆ ನನ್ನದು ಯಾವಾಗಲೂ ತೆರೆದ ಮನಸ್ಸು; ಮತ್ತು ಅದರಲ್ಲಿ ಸಾಧಿಸಿಕೊಳ್ಳಬೇಕೆಂಬ ಯಾವ ಸ್ವಾರ್ಥವೂ ಇಲ್ಲ. ನನ್ನ ವಿರೋಧಿ, ಬಿಚ್ಚು ಮನದ ಚರ್ಚೆಯಿಂದ ನನ್ನನ್ನು ನನ್ನ ನಿಲವಿನಿಂದ ಕದಲಿಸಿದ ಯಾವ ಸಂದರ್ಭವೂ ನನ್ನ ನೆನಪಿನಲ್ಲಿಲ್ಲ."

ಮನ್ನಾರಗುಡಿಯಲ್ಲಿನ ಅನುಭವ ತುಂಬಾ ಅಹಿತಕರವಾಗಿದ್ದಿತು. ಕುಂಭಕೋಣಂ ಪಂಡಿತರ ಮನೋಭಾವ ಶ್ಲಾಘ್ಯವಾದುದಾಗಿದ್ದಿತು. "ಸಾರ್ವಜನಿಕ ಹಿತದೃಷ್ಟಿಯಿಂದ ಅಸ್ಪೃಶ್ಯತೆಯು ಸಮಂಜಸವಾದುದಲ್ಲವೆಂದು ನೀವು ಹೇಳುವುದಾದರೆ ಅದಕ್ಕೆ ನಮ್ಮ ದೇನೂ ಅಭ್ಯಂತರವಿಲ್ಲ; ಆದರೆ ಆ ಅಸ್ಪೃಶ್ಯತೆಗೆ ಶಾಸ್ತ್ರಗಳಲ್ಲಿ ಪ್ರಾಮಾಣ್ಯವಿಲ್ಲವೆಂದು ಹೇಳಬೇಡಿರೆಂದು ನಿಮ್ಮನ್ನು ಪ್ರಾರ್ಥಿಸುತ್ತೇವೆ." ಮನ್ನಾರಗುಡಿ ಪಂಡಿತನು ಬಹುಶಃ ಬೇರೆಯ ಅಚ್ಚಿನಲ್ಲಿ ಎರಕಹೊಂದಿದವನೆಂದು ಕಾಣುತ್ತದೆ. ಅವನಿಗೆ ನೀಡಿದ ವೇಳೆಯ ಬಹುಭಾಗದಲ್ಲಿ ಆತ ಗಾಂಧೀಜಿಯನ್ನು ಹೊಗಳಿ, ಅನಂತರ ಹಿಂದೂಶಾಸ್ತ್ರಗಳ ಬಗೆಗಿನ ತನ್ನ ಶ್ರೇಷ್ಠ ತಿಳುವಳಿಕೆಯ ಪ್ರದರ್ಶನದ ಮೂಲಕ ಅವರನ್ನು ಮರುಳುಮಾಡಲು ಪ್ರಯತ್ನಿಸಿದನು. ಗಾಂಧೀಜಿ ನಿರ್ದಾಕ್ಷಿಣ್ಯವಾಗಿ ಅವನ ಬಾಯಿ ಮುಚ್ಚಿಸಬೇಕಾಯಿತು. ಅವರು ದುಬಾಷಿಯೊಬ್ಬನಿಗೆ ಹೇಳಿದರು: "ಅರ್ಥಾತ್ ಸಂಬಂಧವಿಲ್ಲದ ಪದ್ಯಗಳ ಉದ್ಧರಣೆಯಿಂದ ಅವನ ವಾದ ಅಸಂಗತವಾಗಿದೆಯೆಂದು ಆ ಪಂಡಿತನಿಗೆ ತಿಳಿಸು. ಇದು ಪಂಡಿತನಿಗೆ ಯೋಗ್ಯವಲ್ಲದ ಮನೋಧರ್ಮ. ನ್ಯಾಯಾಸ್ಥಾನದಲ್ಲಿ ವಕೀಲನು ಈ ಪಂಡಿತನಂತೆ ವಾದ ಮಾಡಿದರೆ ನ್ಯಾಯ ನಡವಳಿಯ ದೃಷ್ಟಿಯಿಂದ ದೋಷಿ ಯೆನಿಸುತ್ತಾನೆ. ಅಲ್ಲದೆ ಆತನ ಮನೋಭಾವ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ನಡುವೆ ಸೇತುವೆ ನಿರ್ಮಿಸಲು ತೀವ್ರ ಆತಂಕವನ್ನೊಡ್ಡುತ್ತದೆ. ಕಾರಣ, ಪ್ರತಿಯೊಬ್ಬ ವ್ಯಕ್ತಿಯಲ್ಲೂ ಆಕ್ರೋಶಗಳನ್ನುಂಟುಮಾಡಲು ಆ ಮನೋಭಾವವೇ ಸಾಕು. ಮನುಷ್ಯ ನೊಬ್ಬನಿಗೆ ಅರ್ಥವಾಗಬಹುದಾದ ರೀತಿಯಲ್ಲಿ ಅಸ್ಪೃಶ್ಯತೆಯನ್ನು ಕುರಿತು ಏನನ್ನಾದರೂ ಹೇಳಬೇಕಾಗಿದ್ದಲ್ಲಿ ಹೇಳಲಿ. ಇಲ್ಲಿ ನೇರಮಾರ್ಗದಲ್ಲಿ ಮುನ್ನಡೆಯಲು ಪ್ರಯತ್ನಿಸು ತ್ತಿರುವ ಸರಳ ಜನರ ಮುಂದೆ ನಿಂತಿರುವವನೇ ಹೊರತು ವಕೀಲರ ಮುಂದೆ ಅಲ್ಲ ವೆಂಬುದನ್ನು ಅವನು ತಿಳಿಯಬೇಕು."

ಇದು ಆ ಪಂಡಿತನ ದುರಹಂಕಾರವನ್ನಿಳಿಸಿತಲ್ಲದೆ ಅನಂತರ ಆತ ಸಂಗತ ವಿಷಯಕ್ಕೆ ಬರಲು ತೊಡಗಿದನು. "ಪರಾಶರ ಸ್ಮೃತಿಯನ್ನು ಈ ಕಲಿಯುಗದಲ್ಲಿ ಒಂದು ಪರಿಪೂರ್ಣ ಪ್ರಮಾಣವನ್ನಾಗಿ ಸ್ವೀಕರಿಸಬಾರದೇಕೆ?"

ಗಾಂಧೀಜಿ ಹೇಳಿದರು: "ಇಲ್ಲ, ಯಾವುದೇ ಪ್ರಮಾಣ ಗ್ರಂಥವನ್ನಾಗಲೀ ಅಥವಾ ಶಾಸನವನ್ನಾಗಲಿ ದೋಷರಹಿತ ಮಾರ್ಗದರ್ಶಿಯೆಂದು ನಾನು ಒಪ್ಪುವುದಿಲ್ಲ."

"ಒಂದು ಸ್ಮೃತಿಯ ಒಂದು ಭಾಗವನ್ನು ನೀವು ಅಂಗೀಕರಿಸುವುದಾದರೆ ಅದರ ಮತ್ತೊಂದು ಭಾಗವನ್ನು ನಿರಾಕರಿಸುವಿರೇಕೆ?"

ಗಾಂಧೀಜಿ ಹೇಳಿದರು: "ಒಂದು ಭಾಗವನ್ನು ಒಪ್ಪಿದಲ್ಲಿ ಎಲ್ಲವನ್ನೂ ಒಪ್ಪಬೇಕೆಂಬ ವಾದವನ್ನು ನಾನು ಸಮ್ಮತಿಸುವುದಿಲ್ಲ."

"ಹಾಗಾದರೆ ಯಾವುದು ಅನುಕೂಲವೊ ಅದನ್ನು ಮಾತ್ರ ಅಂಗೀಕರಿಸಿ ಅನುಕೂಲ ವಾಗದುದನ್ನು ನಿರಾಕರಿಸುವಿರಲ್ಲವೆ?" ಎಂದು ಪಂಡಿತನು ಪ್ರಶ್ನಿಸಿದನು.

"ಒಳ್ಳೆಯ ಪ್ರಶ್ನೆ" ಎಂದರು ಅವರು. "ಹಿಂದೂಧರ್ಮವು ಒಂದು ಕ್ರೋಢೀಕೃತ ಧರ್ಮವಲ್ಲ. ಹಿಂದೂಧರ್ಮದ ಬಗೆಗೆ ನನ್ನ ಭಾವನೆಗಳನ್ನು ನಿಮಗೆ ಹೇಳುವೆ. ಹಿಂದೂ ಧರ್ಮದಲ್ಲಿ ಹೆಸರು ಕೂಡ ಗೊತ್ತಿರದ ನೂರಾರು, ಸಾವಿರಾರು ಗ್ರಂಥಗಳಿವೆ; ಅವೆಲ್ಲ ಶಾಸ್ತ್ರಗಳೆಂಬ ಸಂಕ್ಷಿಪ್ತ ಹೆಸರಿನಲ್ಲಿ ಕರೆಯಲ್ಪಡುತ್ತವೆ. ಈಗ ನಾವು ಒಂದು ಸಂಗತಿಯು ಒಳ್ಳೆಯದೋ ಅಥವಾ ಕೆಟ್ಟದೋ ಎಂಬುದನ್ನು ತಿಳಿಯಬೇಕಾದಲ್ಲಿ ನಾನು ಒಂದು ನಿರ್ದಿಷ್ಟ ಗ್ರಂಥವನ್ನು ನೋಡಹೋಗುವುದಿಲ್ಲ; ಆದರೆ ಹಿಂದೂಧರ್ಮದ ಒಟ್ಟು ಪರಿಣಾಮವನ್ನು ಗಮನಿಸುತ್ತೇನೆ. ಪ್ರತಿಯೊಂದು ನಿಯಮವನ್ನು ಅಳೆಯಲು ಹಿಂದೂಧರ್ಮದಲ್ಲಿ ಒಂದು ಉತ್ತಮ ಅಡಿಕಡ್ಡಿಯಿದೆ; ಅದೆ ಸತ್ಯವೆಂಬುದು. ಸತ್ಯವಿಮುಖವಾದ ಎಲ್ಲವೂ—ಅದು ಯಾವುದೇ ಮೂಲದಿಂದ ಬಂದಿರಲಿ—ನಿರಾಕರಣೀಯ ಆದ್ದರಿಂದ ಸತ್ಯಕ್ಕೆ ವಿರುದ್ಧವಾದ ಒಂದು ಪದ್ಧತಿಯನ್ನು ಎತ್ತಿಹಿಡಿಯುವ ವ್ಯಕ್ತಿಯ ಹೆಗಲಿನ ಮೇಲೆ ಅದರ ಹೊಣೆಯಿರುತ್ತದೆ. ಉದಾಹರಣೆಗಾಗಿ ಒಬ್ಬ ವ್ಯಕ್ತಿಯು ಅಸ್ಪೃಶ್ಯತೆಯನ್ನು ಸಮರ್ಥಿಸಿಕೊಳ್ಳಬೇಕಾದರೆ ಅದು ಸತ್ಯ ಸಂಗತವೆಂಬುದನ್ನು ತೋರಿಸ ಬೇಕಾಗುತ್ತದೆ. ಅದನ್ನು ತೋರಿಸುವ ತನಕ ಅವನು ಉದ್ಧರಿಸುವ ಎಲ್ಲ ಪ್ರಾಮಾಣ್ಯ ಗಳೂ ನನ್ನ ದೃಷ್ಟಿಯಲ್ಲಿ ಅಸಂಬದ್ಧವೆನಿಸುತ್ತವೆ."

ಅನಂತರ ಪಂಡಿತನ ಅನೇಕ ಅಸಂಗತ ಪ್ರಶ್ನೆಗಳು ಮುಂದುವರಿದುವು. ಗಾಂಧೀಜಿ ಆತನಿಗೆ ಇನ್ನು ಐದು ನಿಮಿಷಗಳಲ್ಲಿ ಮುಗಿಸಬೇಕೆಂದೂ ಅನಂತರ ತಾವು ಮೌನಧರಿಸು ವುದಾಗಿಯೂ ಸೂಚನೆಯಿತ್ತರು.

"ಅಸ್ಪೃಶ್ಯತೆಯು ಹೇಗೆ ಸತ್ಯವಿರೋಧಿಯಾಗುತ್ತದೆ"? ಎಂದು ಪಂಡಿತನು ಕೇಳಿದನು.

"ಆಗಲಿ. ನಾನದನ್ನು ತೋರಿಸುತ್ತೇನೆ. ನಿಮ್ಮನ್ನು ಅಸ್ಪೃಶ್ಯರೆಂದು ಗಣಿಸುವುದು ಸತ್ಯಸಂಗತವೆನಿಸುವುದೇನು?" ಎಂದು ಗಾಂಧೀಜಿ ಪ್ರಶ್ನಿಸಿದರು.

"ನಾನು ಅಸ್ಪೃಶ್ಯನಾಗಲು ಹೇಗೆ ಸಾಧ್ಯ?" ಎಂದು ಆ ಪಂಡಿತ ವಿದ್ವಾಂಸನು ಮತ್ತಷ್ಟು ಆಶ್ಚರ್ಯದಿಂದ ಉದ್ಗರಿಸಿದನು. "ನೆರೆಮನೆಯೊಲೆಯ ಬೆಂಕಿಗೂ ಸ್ಮಶಾನದ ಅಗ್ನಿಗೂ ವ್ಯತ್ಯಾಸವಿರುವಂತೆ ಮನುಷ್ಯ ಮನುಷ್ಯರ ನಡುವೆ ಭೇದವಿದ್ದೇ ಇದೆ."

"ಹಾಗೋ, ಹಾಗಾದರೆ ನೀವು ಸ್ಪೃಶ್ಯರಾಗಿ ನಾನು ಅಥವಾ ರಾಜಗೋಪಾಲಾಚಾರಿ ಅಸ್ಪೃಶ್ಯರಾಗಿರುವುದು ಏಕೆಂಬುದನ್ನು ಹೇಳುವಿರಾ?"

"ಒಬ್ಬ ಚಂಡಾಲನಿಗೂ ನನಗೂ ಆಕಾರ, ಆಲೋಚನೆ, ನಡವಳಿಕೆ ವ್ಯಕ್ತಿತ್ವ ಮುಂತಾದುವುಗಳಲ್ಲಿ ವ್ಯತ್ಯಾಸವಿದೆ."

ಆದರೆ ಅಷ್ಟರಲ್ಲಿಯೇ ಅವನಿಗೆ ಕೊಟ್ಟ ಅವಧಿಯು ಮುಗಿದಿತ್ತು. "ನಾನು ವಾದ ಮಾಡಲು ಬಂದಿಲ್ಲ. ನಿಮ್ಮೊಡನೆ ಸಂಭಾಷಿಸುವ ಸುಯೋಗವನ್ನು ಪಡೆಯುವುದಷ್ಟೆ ನನಗೆ ಬೇಕಾಗಿದ್ದುದು" ಎಂದು ಹೇಳುತ್ತ ಆ ಪಂಡಿತನು ಮೇಲೆದ್ದನು.

ತಿರುಚಿನಾಪಳ್ಳಿಯಿಂದ ಅವರು ಎಪ್ಪತ್ತೈದು ಹಳ್ಳಿಗಳಿಂದ ನಿಬಿಡವಾದ ಚೆಟ್ಟಿನಾಡು ಪ್ರದೇಶಕ್ಕೆ ಬಂದರು. ಅತ್ಯಂತ ಶ್ರೀಮಂತ ಚೆಟ್ಟಿಯಾರರ ನಡುವೆ ಅವರು ಹೆಚ್ಚುಕಡಿಮೆ ಒಂದು ವಾರವನ್ನು ಕಳೆದರು; ಆದರೆ ಅವರನ್ನು ಟೀಕೆಮಾಡದೆ ಬಿಡಲಿಲ್ಲ. ಕಂದಾಡುಕಥನ್ನಲ್ಲಿ ಚೆಟ್ಟಿಯಾರ್ ಆತಿಥೇಯನನ್ನು ಕುರಿತು ಅವರು ಹೇಳಿದರು: "ನಾನು ನೋಡುತ್ತಿರುವುದೇನು ಮತ್ತು ನಾನು ೧೯೨೧ರಲ್ಲಿ ನೋಡಿದ್ದೇನು? ನಿಮ್ಮ ಗೃಹಗಳು ವಿದೇಶಿ ಪಿಠೋಪಕರಣಗಳಿಂದ ಇಡಿಕಿರಿದಿವೆ, ಮತ್ತು ಸಮಸ್ತ ವಿದೇಶೀ ಅಲಂಕರಣಗಳಿಂದ ಸಜ್ಜಾಗಿವೆ. ನಮ್ಮ ಈ ಪವಿತ್ರ ಭೂಮಿಯಲ್ಲಿರಬಾರದ ಅನೇಕ ವಸ್ತುಗಳು ನಿಮ್ಮ ಮನೆಗಳಲ್ಲಿವೆ. ಇಲ್ಲಿಗೆ ಬರಲು ನನಗೆ ಸಂತೋಷ ದುಃಖಗಳೆರಡೂ ಉಂಟಾದುವೆಂದು ನಿಮಗೆ ಹೇಳಿದೆ. ಈ ವಿಪರೀತ ಪೀಠೋಪಕರಣ ಸಾಮಗ್ರಿಗಳಿಂದ ನನಗೆ ನಿಜವಾಗಿಯೂ ಹಿಂಸೆಯಾಗಿದೆ. ಅವುಗಳ ಮಧ್ಯೆ ಉಸಿರಾಡುವುದಕ್ಕೆ ಅವಕಾಶವಿಲ್ಲದಂತಾಗಿದೆ. ನೀವು ಹಾಕಿರುವ ಕೆಲವು ಚಿತ್ರಗಳಂತೂ ನೋಡಬಾರದಷ್ಟು ಅಸಹ್ಯಕರವಾಗಿವೆ. ಮಹಾಭಾರತದ ಕಾಲದಲ್ಲಿ ಶ್ರೀಮಂತ ವ್ಯಕ್ತಿಗಳೂ ಕೂಡ ಅನೇಕ ನಿರ್ಬಂಧಗಳನ್ನು ತಮ್ಮ ಮೇಲೆ ವಿಧಿಸಿಕೊಂಡಿದ್ದುದು ನನಗೆ ನೆನಪಿಗೆ ಬರುತ್ತದೆ. ಇಲ್ಲಿ ನಡೆಯುತ್ತಿರುವಂಥ ಐಶ್ವರ್ಯದ ಪ್ರದರ್ಶನ ಬೇಡ. ಸೌಮ್ಯವಾಯುಗುಣದ ನಮ್ಮ ದೇಶದಲ್ಲಿ ಪೀಠಸಾಮಗ್ರಿಗಳಲ್ಲಿ ಕೊಳೆ ಸೇರುತ್ತದೆ; ಗಾಳಿಯಲ್ಲಿ ಲಕ್ಷಗಟ್ಟಲೆ ಸೂಕ್ಷ್ಮಜೀವಾಣುಗಳು ತೇಲುತ್ತವೆ. ಆದ್ದರಿಂದ ಇಂಥ ದುಂದು ಪ್ರದರ್ಶನ ಅನಗತ್ಯ. ಚೆಟ್ಟಿನಾಡಿನ ಎಲ್ಲ ಶ್ರೀಮಂತ ಬಂಗಲೆಗಳನ್ನು ಸಜ್ಜುಗೊಳಿಸುವ ಕಂಟ್ರಾಕ್ಟನ್ನು ನನಗೆ ಮಂಜೂರು ಮಾಡಿದ್ದಾದರೆ ಹತ್ತನೇ ಒಂದು ಭಾಗ ವೆಚ್ಚದಲ್ಲಿ ಅದೇ ಸಾಮುಗ್ರಿಗಳನ್ನು ಒದಗಿಸುವುದರ ಜೊತೆಗೆ, ಹೆಚ್ಚಿನ ಸೌಕರ್ಯಗಳೂ ಶುದ್ಧವಾದ ಗಾಳಿಯೂ ದೊರೆಯುವಂತೆ ಮಾಡಿ, ನಿಮ್ಮ ಮನೆಗಳನ್ನು ಅತ್ಯಂತ ಕಲಾತ್ಮಕ ರೀತಿಯಲ್ಲಿ ಸಜ್ಜುಗೊಳಿಸಿದೆನೆಂದು ಭಾರತದ ಅತ್ಯುತ್ತಮ ಕಲಾವಿದರಿಂದ ಒಂದು ಅರ್ಹತಾ ಪತ್ರವನ್ನೂ ಗಳಿಸುತ್ತಿದ್ದೆ. ಅಂತೂ ನಿಮ್ಮ ಈ ಸೌಧಗಳು ನಿಮ್ಮ ನಿಮ್ಮ ಮಧ್ಯೆ ಯಾವ ಸಹಕಾರಪ್ರಜ್ಞೆಯೂ ಇಲ್ಲದೆ ಮತ್ತು ಯಾವ ಸಾಮಾಜಿಕ ಕ್ಷೇಮದ ಅರಿವೂ ಇಲ್ಲದೆ ನಿರ್ಮಾಣವಾದುವೆಂದು ನಾನು ಭಾವಿಸುತ್ತೇನೆ. ಸರ್ವರ ಸೌಖ್ಯಕ್ಕಾಗಿ ಮತ್ತು ನಿಮ್ಮ ನಡುವೆ ವಾಸಿಸುವ ರೈತರ ಏಳಿಗೆಗಾಗಿ ಒಂದು ಚೆಟ್ಟಿಯಾರರ ಸಂಘವನ್ನು ಕಟ್ಟುವುದಾದರೆ ಚೆಟ್ಟಿನಾಡನ್ನು ಒಂದು ಗಂಧರ್ವ ಲೋಕವನ್ನಾಗಿ ಪರಿ

ವರ್ತಿಸಬಹುದು; ಆಗ ನೀವು ಬದುಕುವ ಶಾಂತಿ ಮತ್ತು ಶಿಸ್ತುಗಳ ನಾಡು ಭಾರತದ ಎಲ್ಲ ಕಡೆಗಳಿಂದಲೂ ಜನರನ್ನು ಆಕರ್ಷಿಸುತ್ತದೆ."

ಈ ಟೀಕೆಯು ಬೇರೆಡೆಯ ಆತಿಥ್ಯಕಾರರಿಗೆ ಒಂದು ಸೌಮ್ಯ ಸೂಚನೆಯಾಯಿತು. ಇದರಿಂದ ಅವರು ತಮ್ಮ ಪ್ರಧಾನ ಕೋಣೆಗಳ ಪೀಠಸಾಮಗ್ರಿಗಳನ್ನು ತೆಗೆಸಿಹಾಕಿ, ಅವರಿಗೆ ಹಿಂಸೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದರು.

ಅಕ್ಟೋಬರ್ ತಿಂಗಳ ಮೊದಲವಾರದ ಹೊತ್ತಿಗೆ ಗಾಂಧೀಜಿ ಮಧುರೆ, ರಾಮನಾಡು ಮತ್ತು ತಿನ್ನೆವೇಲಿಯ ಅರೆಭಾಗವೆಲ್ಲವನ್ನೂ ಸುತ್ತಿ ಮುಗಿಸಿ ಇನ್ನೂ ದಕ್ಷಿಣಕ್ಕೆ ಅಂದರೆ ತೂತ್ತುಕುಡಿಯತ್ತ ಹೊರಟರು. ರಾಜ್ಯಪಾಳ್ಯಂ ಆಹ್ಲಾದಕರ ವಿಸ್ಮಯವನ್ನುಂಟು ಮಾಡಿತು. ಹಲವು ದಿನಗಳ ಖದ್ದರನ್ನು ಸಂಗ್ರಹಿಸಿದನಂತರ ನೂಲುಗಾರರ ಮತ್ತು ನೇಯ್ಗೆಗಾರರ ಚಟುವಟಿಕೆಯ ವಸತಿಯಾಗಿದ್ದ ಒಂದು ಸ್ಥಳಕ್ಕೆ ಹೋದರು. ಅಲ್ಲಿ ಸಾವಿರಕ್ಕೆ ಕಡಿಮೆಯಿಲ್ಲದ ನೂಲುಗಾರರಿದ್ದರು ಮತ್ತು ನೂರು ಜನ ನೇಕಾರರಿದ್ದರು.

ತಿನ್ನೆವೇಲಿಯಿಂದ ಅವರು ನಾಗರಕೋಯಿಲ್‌ಗೆ ಹೋಗಿ ಅಲ್ಲಿಂದ ಅಲೆಪ್ಪಿಯನ್ನು ಮುಟ್ಟಿದರು. ನಾಗರಕೋಯಿಲ್‌ನಲ್ಲಿ ಮಾಡಿದ ಮೊದಲ ಉಪನ್ಯಾಸದಲ್ಲಿ ಅವರು ತಿರುವಾಂಕೂರಿನಲ್ಲಿನ ಅಸ್ಪೃಶ್ಯತೆಯನ್ನು ಖಂಡತುಂಡವಾಗಿ ಹೀಗಳೆದರು. ರಾಜಪ್ರತಿನಿಧಿಯಾಗಿದ್ದ ಮಹಾರಾಣಿ ಮತ್ತು ಕಿರಿಯರಾಣಿಯವರನ್ನು ಭೇಟಿಮಾಡಿದರು. ಅನಂತರ ತಿರುವನಂತಪುರದಲ್ಲಿ ಮಾಡಿದ ಭಾಷಣದಲ್ಲಿ ಹೋರಾಟಕ್ಕೆ ಕಾತರರಾಗಿದ್ದವರ ತಿಳಿವಳಿಕೆಗಾಗಿ ಸತ್ಯಾಗ್ರಹದ ರೂಪರೇಖೆಗಳನ್ನು ಪ್ರತಿಪಾದಿಸಲಾಗಿತ್ತು. ಈಡಿಗರ ನಿಯೋಗದೊಂದಿಗೆ ಸುದೀರ್ಘ ಮಾತುಕತೆ ನಡೆಸಿದ ಮೇಲೆ, ಅಲೆಪ್ಪಿಯಲ್ಲಿ ಮಾಡಿದ ತಮ್ಮ ಕೊನೆಯ ಭಾಷಣದಲ್ಲಿ ಆ ಪ್ರಾಂತ್ಯಕ್ಕೆ ನೆಚ್ಚಿಕೆ ಮತ್ತು ಮುನ್ನೆಚ್ಚರಿಕೆಗಳನ್ನು ನೀಡಿದರು.

ಅಕ್ಟೋಬರ್ ಮಧ್ಯದಲ್ಲಿ ಗಾಂಧೀಜಿ ಕೊಚಿನ್‌ನಲ್ಲಿದ್ದರು. ಎರ್ನಾಕುಲಂನಲ್ಲಿ ಅವರು ಹೀಗೆ ಹೇಳಿದರು: "ಅಂಧಕಾರವೇ ಸರ್ವವ್ಯಾಪಿಯಾಗಿರುವಾಗ ಅದರ ಎಲ್ಲೆಯನ್ನು ನಿಶ್ಚಯಿಸುವುದು ನಿರರ್ಥಕ. ಅನುಕೂಲ ಹವಾಮಾನವಿದ್ದಲ್ಲಿ ಒಬ್ಬ ಕಪ್ತಾನನು ವಿರಾಮವಾಗಿ, ಮಿತವೇಗದಲ್ಲಿ, ಅನತಿ ಕಾಲದಲ್ಲಿಯೇ ಗುರಿಯನ್ನು ಮುಟ್ಟಬಹುದೆಂಬ ವಿಶ್ವಾಸದಿಂದ, ಹಡಗನ್ನು ನಡೆಸುವುದು ಸರಿ. ಆದರೆ ನಮ್ಮ ಹಿಂದೂಧರ್ಮದ ನಾವೆಯು ಇಂದು ಬಿರುಗಾಳಿಯಿಂದ ಕೂಡಿದ ಕೆಟ್ಟ ಹವೆಯಲ್ಲಿ ತೇಲುತ್ತಿದೆ. ಇಷ್ಟರಲ್ಲೇ ನಮ್ಮ ಮೇಲೆ ಕವಿಯುವ ಬಿರುಗಾಳಿಯಿಂದ ನಾವು ಪಾರಾಗಬೇಕಾದರೆ ದಿಟ್ಟತನದಿಂದ ಮುನ್ನುಗ್ಗಿ ನಾವೆಯನ್ನು ಬಿರುಸಾಗಿ ಮುನ್ನಡೆಸಬೇಕು. ಹಿಂದೂಧರ್ಮದ ರಕ್ಷಕರೆಂದು ಹೇಳಲ್ಪಡುವ ಪುರೋಹಿತರನ್ನು ಸುತ್ತುವರಿದಿರುವ ಪೂರ್ವಕಲ್ಪಿತ ಮತ್ತು ಮೂಢ ನಂಬಿಕೆಗಳನ್ನು ಚಿನ್ನದ ತಕ್ಕಡಿಯಲ್ಲಿ ತೂಗುತ್ತಾ ಮತ್ತು ಕಾಯುತ್ತಾ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಎಲ್ಲರ ಅರಿವಿಗೂ ಬಂದಿರುವ ಈ ಅಪಾಯದ ಸಮ್ಮುಖದಲ್ಲಿ ಮೂಢನಂಬಿಕೆಗಳು ಮತ್ತು ಪೂರ್ವಕಲ್ಪಿತ ಭಾವನೆಗಳು ದಾರಿ ಬಿಟ್ಟು ಕೊಡುವವರಿಗೂ ಕಾಯುತ್ತಾ ಕುಳಿತಿರುವುದು ಆಗದ ಕೆಲಸ."

## ದರಿದ್ರನಾರಾಯಣನಿಗಾಗಿ

### ೧೯೨೭

ಗಾಂಧೀಜಿ ಮಂಗಳೂರಿನಿಂದ ಡೆಲ್ಲಿಗೆ ೧೨೦೦ ಮೈಲಿ ಪ್ರಯಾಣ ಮಾಡಿದರು. ಅಲ್ಲಿ ವೈಸ್‌ರಾಯರು ಅವರಿಗೊಂದು ದಾಖಲೆಯ ಪತ್ರವನ್ನು ನೀಡಿದರು. ಇಷ್ಟೇ ತಾನೆ ಎಂದವರು ಕೇಳಿದಾಗ ಲಾರ್ಡ್ ಇರ್ವಿನ್ "ಹೌದು" ಎಂದರು.

೧೯೨೭ರ ನವೆಂಬರ್ ೮ರಂದು ಬಹಿರಂಗಪಡಿಸಲ್ಪಟ್ಟ ಆ ಸರ್ಕಾರಿ ದಾಖಲೆಯು ಸರ್ಕಾರಿ ಆಡಳಿತ ವ್ಯವಸ್ಥೆಯ ವಿಚಾರಣೆಗಾಗಿ ಸೈಮನ್ ನಿಯೋಗವನ್ನು ನೇಮಕ ಮಾಡಿದ ಪ್ರಕಟಣೆಯಾಗಿದ್ದಿತು.

ಅದರ ಹಿಂದೆ ಒಂದು ಕಂಟಿಲ ಚರಿತ್ರೆಯಿತು. ಇಂಗ್ಲೆಂಡಿನಲ್ಲಿ ಭಾರತೀಯ ವ್ಯವಹಾರಗಳ ಕಾರ್ಯದರ್ಶಿಯಾಗಿದ್ದ ಲಾರ್ಡ್ ಬರ್ಕೆನ್‌ಹೆಡ್ ೧೯೨೫ರಲ್ಲಿ ಲಾರ್ಡ್ ರೀಡಿಂಗ್‌ಗೆ ಶಾಸನಬದ್ಧ ನಿಯೋಗದ ತಾರೀಖನ್ನು ಮುಂದೂಡಲು ಬರೆದನು: "ಆದ್ದರಿಂದ ಒಂದು ವೇಳೆ ನೀನು ಇದನ್ನು (ಶಾಸನಬದ್ಧ ನಿಯೋಗವನ್ನು) ಉಪಯುಕ್ತ ಚೌಕಾಶಿಗಾಗಿ ಅಥವಾ ಸ್ವರಾಜ್ಯವಾದಿಗಳ ಒಗ್ಗಟ್ಟನ್ನು ಮತ್ತಷ್ಟು ಒಡೆಯುವುದಕ್ಕಾಗಿ ಬಳಸಿಕೊಳ್ಳಲು ಸಾಧ್ಯವೆ ಎಂಬ ಬಗೆಗೆ ನಿನ್ನ ಸಲಹೆಯನ್ನು ಪಡೆಯಲು ಬಯಸುತ್ತೇನೆ." ೧೯೧೯ರ ಭಾರತ ಸರ್ಕಾರದ ಶಾಸನದಲ್ಲಿ ಸೂಚಿತವಾಗಿದ್ದಂತೆ ೧೦ ವರ್ಷಗಳ ಅವಧಿಯಾದ ೧೯೨೯ಕ್ಕಿಂತ ಮೊದಲೇ ಶಾಸನಬದ್ಧ ನಿಯೋಗವು ನೇಮಕವಾಗಬೇಕೆಂದು ಭಾರತದಲ್ಲಿ ಬಹಳ ಮುಂಚಿನಿಂದಲೂ ಬೇಡಿಕೆಯಿದ್ದಿತು. ಅಲ್ಲಿಯ ತನಕ ಸರ್ಕಾರವು ಅದಕ್ಕೆ ಸಮ್ಮತಿಸಿರಲಿಲ್ಲ. ಬ್ರಿಟನ್ನಿನ ಪರಿಸ್ಥಿತಿ ಲಾರ್ಡ್ ಬರ್ಕೆನ್‌ಹೆಡ್‌ನನ್ನು ಒತ್ತಾಯ ಮಾಡಿತು. ಮುಂಬರುವ ಚುನಾವಣೆಯ ಭವಿಷ್ಯ, ಭಯಸೂಚಕವಾಗಿದ್ದಿತು. ಲೇಬರ್ ಸರ್ಕಾರವು ಬರುವುದರಲ್ಲಿದ್ದಿತು. ತಮ್ಮ ಉತ್ತರಾಧಿಕಾರಿಗಳಾದ ಕರ್ನಲ್ ವೆಡ್ಜ್‌ವುಡ್ ಮತ್ತು ಅವರ ಮಿತ್ರರಿಗೆ ಈ ನಿಯೋಗದ ನೇಮಕವನ್ನು ವಹಿಸುವ ಅವಕಾಶವನ್ನು ನೀಡಲು ಸಹ ಅವನು ಸಿದ್ಧನಾಗಿರಲಿಲ್ಲ.

ಸಂವಿಧಾನಾತ್ಮಕ ಪ್ರಗತಿಗೆ ಸಂಬಂಧಿಸಿದ ಸಲಹೆಗಳನ್ನು ವಿರೋಧಿಸುವಲ್ಲಿ ಇಂಡಿಯಾ ಸರ್ಕಾರವು ತೋರಿಸುತ್ತಿದ್ದ ಹಟಮಾರಿತನದ ವಿರುದ್ಧ ಹೋರಾಡಲು ಗೌಹಾತಿ ಕಾಂಗ್ರೆಸ್ ಒಂದು ಐಕ್ಯರಂಗವನ್ನು ಸ್ಥಾಪಿಸಲು ನಿರ್ಧರಿಸಿತು. ಜಿನ್ನಾರ ನಾಯಕತ್ವದಲ್ಲಿ ಕೆಲವು ಪ್ರಮುಖ ಮುಸ್ಲಿಂ ಮುಖಂಡರೂ ದೆಹಲಿಯಲ್ಲಿ ಸಭೆ ಸೇರಿ ಮುಸ್ಲಿಂಸಲಹೆಗಳೆಂದು ತಿಳಿಯಲಾಗಿರುವ ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು ಕೆಳಗಣ ಕೆಲವು ಷರತ್ತುಗಳ ಮೇಲೆ ಅವರು ಪ್ರಾಂತೀಯ ಮತ್ತು ಕೇಂದ್ರಶಾಸನ ಸಭೆಗಳ ಸಂಯುಕ್ತ ಚುನಾವಣಾ ಕ್ಷೇತ್ರ ಪದ್ಧತಿಯನ್ನೊಪ್ಪಲು ಸಿದ್ಧವಾಗಿದ್ದರು: (ಅ) ಸಿಂಧ್ ಅನ್ನು ಒಂದು ಪ್ರತ್ಯೇಕ ಪ್ರಾಂತ್ಯವನ್ನಾಗಿ ಮಾಡಬೇಕು. (ಆ) ವಾಯುವ್ಯ

ಗಡಿ ಮತ್ತು ಬಲೂಚಿಸ್ತಾನ್‌ಗಳು ಇತರ ಪ್ರಾಂತ್ಯಗಳಂತೆಯೇ ಸ್ಥಾನಮಾನ ಪಡೆಯಬೇಕು. (ಕ) ಪಂಜಾಬು ಮತ್ತು ಬಂಗಾಳಗಳಲ್ಲಿ ಜನಸಂಖ್ಯೆಗನುಗುಣವಾಗಿ ಮುಸ್ಲಿಂ ಪ್ರಾತಿನಿಧ್ಯವಿರಬೇಕು. (ದ) ಕೇಂದ್ರ ಶಾಸನ ಸಭೆಯಲ್ಲಿ ಇವರ ಸಂಖ್ಯೆ ಒಟ್ಟು ಸಂಖ್ಯೆಯ ಮೂರನೆಯ ಒಂದು ಭಾಗಕ್ಕಿಂತ ಕಡಿಮೆಯಾಗಿರಕೂಡದು.

ಅಕ್ಟೋಬರಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಈ ಮುಸ್ಲಿಂ ಸಲಹೆಗಳನ್ನು ಹೆಚ್ಚು ಕಡಿಮೆ ಒಪ್ಪಿ ಒಂದು ನಿಲುವಳಿಯನ್ನು ಮಂಡಿಸಿತು. ಎಲ್ಲ ಪಾರ್ಟಿಗಳ ಮುಖಂಡರೊಡನೆ ಸಮಾಲೋಚಿಸಿ ಭಾರತಕ್ಕೆ ಒಂದು ಸಂವಿಧಾನವನ್ನು ರೂಪಿಸಬೇಕೆಂಬ ನಿಲುವಳಿಯೊಂದನ್ನು ಸ್ವೀಕರಿಸಲಾಯಿತು.

ಸೈಮನ್ ನಿಯೋಗವು ನೇಮಕವಾದ ಹೊಸತರಲ್ಲಿ ಕ್ಯಾಥರಿನ್ ಮೇಯೊ ಬರೆದ 'ಮದರ್ ಇಂಡಿಯಾ' ಎಂಬ ಗ್ರಂಥ ಇಂಗ್ಲೆಂಡಿನಲ್ಲಿ ಪ್ರಕಟವಾಯಿತು. ಕೇಂದ್ರ ಶಾಸನಸಭೆಯಲ್ಲಿ ಗೃಹಕಾರ್ಯದರ್ಶಿಯನ್ನು ಪ್ರಶ್ನಿಸಿದಾಗ ಕೇಂದ್ರ ಸರ್ಕಾರವಾಗಲಿ, ಇಂಡಿಯಾ ಕಚೇರಿಯಾಗಲಿ "ಈ ಪುಸ್ತಕದ ಪ್ರಕಟಣೆಯೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲವೆಂದು" ಅವರು ತಿಳಿಸಿದರು. ಆದರೆ ಭಾರತೀಯರೆ ಆಗಲಿ ಅಥವಾ ವಿದೇಶೀಯರೆ ಆಗಲಿ, ತೃಪ್ತಿಕರವಾದ ರುಜುವಾತು ಪತ್ರಗಳನ್ನು ಸಾದರಪಡಿಸುವ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಇತರ ವಿಷಯಗಳ ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಕೊಡಲಾಗುವ ಸೌಕರ್ಯಗಳನ್ನು ಈ ಗ್ರಂಥಕರ್ತೃಳಿಗೂ ಕೊಡಲಾಗಿತ್ತು. ಭಾರತದ ಪ್ರತಿಯೊಂದು ವೃತ್ತಪತ್ರಿಕೆಯೂ ಈ ಕೃತಿಯನ್ನು ಕೀಳ್ಗಳೆದುದಲ್ಲದೆ ಪ್ರಪಂಚದ ದೃಷ್ಟಿಯಲ್ಲಿ ಭಾರತೀಯರನ್ನು ಕೀಳ್ಗಳೆಯಲು ಮತ್ತು ಸ್ವಾಯತ್ತೆ, ಸರ್ಕಾರದ ಬಗೆಗೆ ಪೂರ್ವಾಗ್ರಹವನ್ನುಂಟುಮಾಡಲು ಮಿಸ್ ಮೇಯೊಳಿಗೆ ಸಹಾಯ ದ್ರವ್ಯ ಕೊಟ್ಟು ಈ ಕೃತಿಯನ್ನು ಬರೆಸಲಾಯಿತೆಂದು ಹೇಳಲಾಗುತ್ತಿತ್ತು. ಅತಿ ಕಟುವಾದ ಟೀಕೆಯು ಗಾಂಧೀಜಿಯವರದಾಗಿತ್ತು. 'ಯಂಗ್ ಇಂಡಿಯಾ'ದಲ್ಲಿ ಆ ಪುಸ್ತಕವನ್ನು ವಿಮರ್ಶಿಸುತ್ತಾ ಅವರು ಅದನ್ನು 'ಚರಂಡಿ ಮೇಲ್ವಿಚಾರಕನ ವರದಿ' ಎಂದು ಚಿತ್ರಿಸಿದರು.

"ಕೃತಿಯನ್ನು ಜಾಣತನದಿಂದ ಮತ್ತು ಪ್ರಭಾವಕಾರಿಯಾಗಿ ಬರೆಯಲಾಗಿದೆ. ಬಹಳ ಎಚ್ಚರಿಕೆಯಿಂದ ಆರಿಸಲಾಗಿರುವ ಉದ್ಧರಣಗಳಿಂದ ಅದೊಂದು ಸತ್ಯಪೂರ್ಣ ಕೃತಿಯೆಂಬ ಭಾಸವುಂಟಾಗುತ್ತದೆ. ಆದರೆ ದೇಶದ ಒಳಚರಂಡಿಯನ್ನು ತೆಗೆದು ಪರೀಕ್ಷಿಸಿ, ವಿವರವನ್ನು ನೀಡುವ ಉದ್ದೇಶಕ್ಕಾಗಿ ಅಥವಾ ತೆರೆದ ಚರಂಡಿಗಳಿಂದ ನಾರುತ್ತಿದ್ದ ದುರ್ವಾಸನೆಯ ಸಚಿತ್ರ ವರ್ಣನೆಯನ್ನು ಕೊಡುವ ಸಲುವಾಗಿ, ನೇಮಕವಾದ ಒಬ್ಬ ಚರಂಡಿ ಮೇಲ್ವಿಚಾರಕನ ವರದಿ ನಿರೂಪಣೆಯೆಂಬ ಭಾವನೆಯನ್ನು ನನ್ನ ಮನಸ್ಸಿನ ಮೇಲೆ ಅದು ಮೂಡಿಸಿದೆ. ಮಿಸ್ ಮೇಯೊ ಒಳಚರಂಡಿಗಳನ್ನು ತೆರೆದು ಪರೀಕ್ಷಿಸುವ ಸಲುವಾಗಿ ತಾನು ಇಂಡಿಯಾಕ್ಕೆ ಹೋಗಿದ್ದೆನೆಂದು ಒಪ್ಪಿಕೊಂಡಿದ್ದಲ್ಲಿ ಬಹುಶಃ ಆಕೆಯ ವಿಷಯ ಸಂಗ್ರಹಣೆಯ ಬಗೆಗೆ ಹೆಚ್ಚು ಆರೋಪವಿರಲಾರದು. ಆದರೆ ವಸ್ತುತಃ ಆಕೆ

ಕೆಲವಟ್ಟಿನ ವಿಜಯೋತ್ಸಾಹದಿಂದ 'ಚರಂಡಿಗಳೇ ಭಾರತ' ಎಂದು ಹೇಳುತ್ತಾಳೆ. ಮುಕ್ತಾಯದ ಅಧ್ಯಾಯದಲ್ಲಿ ಒಂದು ಎಚ್ಚರಿಕೆ ಇದೆ, ನಿಜ. ಆದರೆ ಅವಳ ಹುಚ್ಚು ದೂಷಣೆಯನ್ನು ಜಾರಿಗೆ ತರುವಂತೆ ಆ ಎಚ್ಚರಿಕೆಯನ್ನು ಯುಕ್ತಿಯಿಂದ ನೀಡಲಾಗಿದೆ. ಅದರಲ್ಲಿನ ಸಂಗತಿಗಳು ಎಷ್ಟೇ ವಾಸ್ತವಿಕವಾದವುಗಳಾದರೂ ಆ ಪುಸ್ತಕವು ನಿಸ್ಸಂದೇಹ ವಾಗಿ ಸತ್ಯದೂರವಾದುದು. ಲಂಡನ್ನಿನ ಚರಂಡಿಗಳನ್ನು ತೆರೆದು ಅವುಗಳಿಂದ ಜಿನುಗುವ ದುರ್ವಾಸನೆಯನ್ನು ಸೂಕ್ಷ್ಮ ವಿವರಗಳೊಂದಿಗೆ ನಾನು ವಿವರಿಸಿ, 'ಅಗೋ ಲಂಡನ್ನನ್ನು ನೋಡಿ' ಎಂದು ಹೇಳಿದಲ್ಲಿ, ನಾನು ಹೇಳಿದ ಸಂಗತಿಗಳನ್ನು ಯಾರೂ ವಿರೋಧಿಸುವುದು ಸಾಧ್ಯವಿಲ್ಲ. ಆದರೆ ನನ್ನ ತೀರ್ಮಾನವು ಸತ್ಯದ ಅಣಕವೆಂಬ ಯುಕ್ತವಾದ ಖಂಡನೆಗೆ ಗುರಿಯಾಗುತ್ತದೆ. ಮಿಸ್ ಮೇಯೊಳ ಪುಸ್ತಕದಲ್ಲಿ, ಇದಕ್ಕಿಂತ ಹೆಚ್ಚಿನದೇನೂ ಇಲ್ಲ ಮತ್ತು ಅದಕ್ಕಿಂತ ಬೇರೆಯದೇನೂ ಇಲ್ಲ.

"ಭಾರತದ ಬಗೆಗೆ ತಾನು ಓದಿದ ಸಾಹಿತ್ಯ ತನಗೆ ಅತೃಪ್ತಿಯನ್ನು ತಂದುದಾಗಿ ಲೇಖಿಕೆಯು ಹೇಳುತ್ತಾ, ಯಾವ ಉತ್ತೇಜನವೂ ಇಲ್ಲದ ಯಾವ ನಿರ್ಬಂಧವೂ ಇಲ್ಲದ ನಿರಾಸಕ್ತ ಸ್ವಯಂಸೇವಕನೊಬ್ಬನು ಅನುದಿನದ ಮನುಷ್ಯ ಜೀವನದಲ್ಲಿ ಸಾಮಾನ್ಯ ಸಂಗತಿಗಳನ್ನು ಹೇಗೆ ವೀಕ್ಷಿಸಬಹುದೆಂಬುದನ್ನು ಅರಿಯುವ ಸಲುವಾಗಿ ತಾನು ಭಾರತಕ್ಕೆ ಬಂದುದಾಗಿ ತಿಳಿಸಿದ್ದಾಳೆ. ಬಹಳ ಎಚ್ಚರಿಕೆಯಿಂದ ಪುಸ್ತಕವನ್ನು ಓದಿದ ನಂತರ ಈ ವಾದವನ್ನೊಪ್ಪುವುದು ಕಷ್ಟವಾಗುತ್ತದೆಂದು ನಾನು ವಿಷಾದದಿಂದ ಹೇಳ ಬೇಕಾಗುತ್ತದೆ. ಆಕೆಗೆ ಯಾವ ಸಹಾಯದ್ರವ್ಯವೂ ಇಲ್ಲದಿದ್ದಿರಬಹುದು. ಆದರೆ ತನಗೆ ಯಾವುದೇ ನಿರ್ಬಂಧ ಅಥವಾ ಆಸಕ್ತಿಯಿರಲಿಲ್ಲವೆಂಬುದನ್ನು ಯಾವ ಪುಟದಲ್ಲಿಯೇ ಆಗಲಿ ತೋರಿಸಲು ಆಕೆ ಖಚಿತವಾಗಿ ಅಸಮರ್ಥಳಾಗಿದ್ದಾಳೆ. ಸ್ವಾರಸ್ಯಕರ ಪ್ರಕಟಣೆ ಗಳಿಗೆ ಪ್ರೋತ್ಸಾಹ ನೀಡುವುದು ಭಾರತದಲ್ಲಿ ನಮಗೆ ರೂಢಿಯಾಗಿದೆ. ಪ್ರೋತ್ಸಾಹ ವೆಂಬುದು ಸಹಾಯದ್ರವ್ಯವೆಂಬುದರ ಸಮಾನಾರ್ಥಕವೆಂದು ಸರ್ಕಾರದಿಂದ ಒಪ್ಪಿತ ವಾಗಿದೆ. ಆಕೆ ಯಾವ ಉತ್ತೇಜನವನ್ನೂ ಪಡೆಯದಿದ್ದಲ್ಲಿ, ಭಾರತೀಯರಬಗೆಗೆ ಯಾವುದೇ ಒಳ್ಳೆಯದನ್ನು ಮತ್ತು ಬ್ರಿಟಿಷರ ಮತ್ತು ಅವರ ಆಡಳಿತದ ಬಗೆಗೆ ಯಾವುದೇ ಕೆಟ್ಟದನ್ನು ಕಾಣಲು ನಿರಾಕರಿಸುವ ಮಿಸ್ ಮೇಯೊ ತಾನೊಬ್ಬಳು ಭಾರತದ್ವೇಷಿ ಹಾಗೂ ಆಂಗ್ಲಪ್ರೇಮಿಯೆಂದು ಖಡಾಖಂಡಿತವಾಗಿ ತಿಳಿಯಬೇಕಾಗುತ್ತದೆ.

"ಪಾಶ್ಚಾತ್ಯ ವಿವೇಚನಾ ಸಾಮರ್ಥ್ಯದ ಮಟ್ಟದ ಬಗೆಗೆ ಉನ್ನತ ಭಾವನೆಯನ್ನು ಆಕೆ ಮೂಡಿಸುವುದಿಲ್ಲ. ಪಶ್ಚಿಮ ದೇಶಗಳಲ್ಲಿನ ಉದ್ರೇಕಕಾರಿ ಬರಹಗಾರರ ಒಂದು ವರ್ಗವನ್ನು ಆಕೆ ಪ್ರತಿನಿಧಿಸಿದರೂ, ಆ ವರ್ಗವು ಕ್ಷೀಣಿಸುತ್ತಿದೆಯೆಂಬ ನಂಬಿಕೆ ನನಗೆ ಸಂತೋಷವನ್ನುಂಟುಮಾಡಿದೆ. ಭಾವೋದ್ರೇಕಕಾರಿಯಾದ ಅಥವಾ ಕುಟಿಲವೆನಿಸುವ ಎಲ್ಲವನ್ನೂ ದ್ವೇಷಿಸುವ ಅಮೆರಿಕನ್ನರ ಒಂದು ವರ್ಗವು ಬೆಳೆಯುತ್ತಿದೆ. ಆದರೆ ಆ ದೇಶಗಳಲ್ಲಿ ಇಂಥ ಅಗ್ಗದ ಉದ್ರೇಕಕಾರಿ ಕಾದಂಬರಿಗಳಿಂದ ರಂಜನೆಯನ್ನು ಪಡೆಯುವ

ಸಾವಿರಾರು ಜನರು ಇನ್ನೂ ಇದ್ದಾರೆನ್ನುವುದು ವಿಷಾದನೀಯ ಸಂಗತಿ. ಗ್ರಂಥಕರ್ತೆಯ ಯಾವ ಉದ್ಧರಣಗಳೂ ಅಥವಾ ಪ್ರತ್ಯೇಕಿಸಲ್ಪಟ್ಟ ಸಂಗತಿಗಳೂ ಯಥಾವತ್ತಾಗಿ ನಿರೂಪಿತವಾಗಿಲ್ಲ. ಆದರದರ ಸಂದರ್ಭಗಳಿಂದ ಹರಿದು ತೆಗೆದ ಮತ್ತು ಸಪ್ರಮಾಣವಾಗಿ ನಿಷೇಧಿಸಲ್ಪಟ್ಟ ಉದ್ಧರಣಗಳಿಂದ ಪುಸ್ತಕವು ಇಡಿಕಿರಿದಿದೆ.

"ಕವಿಯ ಹೆಸರನ್ನು ಬಾಲ್ಯವಿವಾಹದೊಂದಿಗೆ ಸೇರಿಸಿ ಲೇಖಿಕೆಯು ಎಲ್ಲ ರೀತಿಯ ಔಚಿತ್ಯಪ್ರಜ್ಞೆಯನ್ನು ಅತಿಕ್ರಮಿಸಿದ್ದಾಳೆ. ತನ್ನ ವಾದಕ್ಕೆ ಬೆಂಬಲವಾಗಿ ಪದೇ ಪದೇ ನನ್ನನ್ನು ಉದ್ಧರಿಸುವ ಮೂಲಕ ನನಗೆ ಮರ್ಯಾದೆ ತೋರಿದ್ದಾಳೆ. ಒಬ್ಬ ಮುಖಂಡನ ದಿನಚರಿಯಿಂದ ಉದ್ಧರಣಗಳನ್ನು ಸಂಗ್ರಹಿಸಿ, ಅವುಗಳನ್ನು ಅದರದರ ಸಂದರ್ಭದಿಂದ ಪ್ರತ್ಯೇಕಿಸಿ ತೆಗೆದು ಅವುಗಳ ಆಧಾರದಿಂದ ಯಾರ ನಡುವೆ ಆ ಮುಖಂಡನು ಕೆಲಸ ಮಾಡಿದನೊ ಆ ಜನರನ್ನು ದೂಷಣೆ ಮಾಡಲು ತೊಡಗುವ ಯಾವ ವ್ಯಕ್ತಿಯೂ ವಿವೇಕಯುತ ಹಾಗೂ ನಿಷ್ಪಕ್ಷಪಾತ ಓದುಗರ ಅಥವಾ ಕೇಳುಗರ ಗಮನವನ್ನು ಸೆಳೆಯಲಾರ. ಆದರೆ ಭಾರತೀಯವಾದ ಎಲ್ಲವನ್ನೂ ಒಂದು ಕುತ್ಸಿಕ ದೃಷ್ಟಿಯಿಂದ ನೋಡುವ ಉದ್ವೇಗದಲ್ಲಿ ಆಕೆ ನನ್ನ ಬರಹಗಳ ಬಗೆಗೆ ಸಾಕಷ್ಟು ಅನಪೇಕ್ಷಿತ ಸ್ವಾತಂತ್ರ್ಯ ವಹಿಸಿರುವುದು ಮಾತ್ರವಲ್ಲದೆ ಆಕೆ ಹಾಗೂ ಇತರರು ನನಗೆ ಆರೋಪಿಸಿರುವ ಕೆಲವು ಸಂಗತಿಗಳನ್ನು ನನ್ನನ್ನೇ ಕೇಳಿ ದೃಢಪಡಿಸಿಕೊಳ್ಳುವುದು ಅಷ್ಟೇ ಆವಶ್ಯಕವೆಂಬುದನ್ನು ಆಕೆ ಆಲೋಚಿಸಲಿಲ್ಲ. ವಾಸ್ತವವಾಗಿ, ಭಾರತದಲ್ಲಿ ನಾವು ತಿಳಿಯುವ ನ್ಯಾಯ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳಿಬ್ಬರನ್ನೂ ತನ್ನ ರೂಪದಲ್ಲಿ ಆಕೆ ಸಂಯೋಜಿಸಿಕೊಂಡಿದ್ದಾಳೆ. ಆಕೆ ಫಿರ್ಯಾದಿಯೂ ಆಗಿದ್ದಾಳೆ ಮತ್ತು ನ್ಯಾಯಾಧಿಪತಿಯೂ ಆಗಿದ್ದಾಳೆ.

"ಆದರೆ ನಾನೀ ಲೇಖನವನ್ನು ಬರೆಯುತ್ತಿರುವುದೇಕೆ? ಇದನ್ನು ಬರೆದಿರುವುದು ಭಾರತೀಯ ಓದುಗರಿಗಲ್ಲ; ಆದರೆ ವಾರವಾರವೂ ಈ ಪುಟಗಳನ್ನು ಆಸಕ್ತಿ ಮತ್ತು ಅನುಕಂಪೆಗಳಿಂದ ಓದುವ ಅನೇಕ ಅಮೆರಿಕದ ಮತ್ತು ಇಂಗ್ಲಿಷ್ ಓದುಗರಿಗಾಗಿ. ಈ ಪುಸ್ತಕವನ್ನು ನಂಬಕೂಡದೆಂದು ಅವರಿಗೆ ಎಚ್ಚರ ನೀಡುತ್ತೇನೆ. ಮಿಸ್ ಮೇಯೊ ನನಗೆ ಆರೋಪಿಸಿರುವ ಸಂದೇಶವನ್ನು ನಾನು ನೀಡಿದೆನೆಂದು ನೆನಪಿಲ್ಲ. ಆಗ ಹಾಜರಿದ್ದು ಟಿಪ್ಪಣಿಯನ್ನು ತೆಗೆದುಕೊಳ್ಳುತ್ತಿದ್ದ ವ್ಯಕ್ತಿ ನನ್ನ ಮೇಲೆ ಆರೋಪಿಸಿರುವ ಸಂದೇಶವನ್ನು ನೆನಪಿನಲ್ಲಿಟ್ಟುಕೊಂಡಿಲ್ಲ. ಆದರೆ ನನ್ನನ್ನು ನೋಡಲು ಬರುವ ಪ್ರತಿಯೊಬ್ಬ ಅಮೆರಿಕನ್ನನಿಗೂ ನಾನು ನೀಡುವ ಸಂದೇಶವೇನೆಂಬುದು ನನಗೆ ಸ್ಪಷ್ಟವಾಗಿ ತಿಳಿದಿದೆ: 'ಅಮೆರಿಕಾದಲ್ಲಿ ನಿಮಗೆ ದೊರೆಯುವ ಪತ್ರಿಕೆಗಳನ್ನು ಮತ್ತು ಡಾಂಭಿಕ ಸಾಹಿತ್ಯವನ್ನು ನೀವು ನಂಬಬೇಡಿ. ಭಾರತದ ಬಗೆಗೆ ನಿಮಗೇನಾದರೂ ತಿಳಿಯಬೇಕೆನಿಸಿದಲ್ಲಿ, ಭಾರತಕ್ಕೆ ವಿದ್ಯಾರ್ಥಿಗಳಂತೆ ಹೋಗಿ, ಸ್ವತಃ ನೀವೇ ಭಾರತವನ್ನು ಅಧ್ಯಯನ ಮಾಡಿ. ನೀವು ಹೋಗುವುದು ಸಾಧ್ಯವಾಗದಿದ್ದಲ್ಲಿ ಭಾರತದ ಪರ ಹಾಗೂ ವಿರೋಧವಾಗಿ ರಚಿತವಾಗಿರುವ ಎಲ್ಲ ಸಾಹಿತ್ಯವನ್ನೂ ಅಭ್ಯಸಿಸಿ, ಅನಂತರ ನಿಮ್ಮ ತೀರ್ಮಾನಗಳನ್ನು ರೂಪಿಸಿಕೊಳ್ಳಿ. ನಿಮಗೆ ಸಿಗುವ ಸಾಧಾರಣ ಸಾಹಿತ್ಯವು ಭಾರತದ ಉತ್ಪ್ರೇಕ್ಷಿತ ದೂಷಣೆಯಾಗಿರುತ್ತದೆ ಇಲ್ಲವೆ ಉತ್ಪ್ರೇಕ್ಷಿತ

ಶ್ಲಾಘನೆಯಾಗಿರುತ್ತದೆ. ಮಿಸ್ ಮೇಯೊಳನ್ನು ಅನುಕರಿಸುವುದರ ವಿರುದ್ಧ ಅಮೆರಿಕನ್ನರಿಗೆ ಮತ್ತು ಇಂಗ್ಲಿಷರಿಗೆ ನಾನು ಎಚ್ಚರಿಕೆ ನೀಡುತ್ತೇನೆ. ಪೂರ್ವಕಲ್ಪಿತ ಅಭಿಪ್ರಾಯ ಮತ್ತು ಪೂರ್ವಾಗ್ರಹದೊಂದಿಗೆ ಆಕೆ ಇಲ್ಲಿಗೆ ಬಂದಳೇ ಹೊರತು ಆಕೆ ಹೇಳಿಕೊಳ್ಳುವಂತೆ ಬಿಚ್ಚು ಮನಸ್ಸಿನಿಂದ ಬಂದವಳಲ್ಲ. ತನ್ನ ನಿಲವನ್ನು ನಿರೂಪಿಸುವ ಪೀಠಿಕಾ ಪ್ರಕರಣವೂ ಸೇರಿದಂತೆ, ಪ್ರತಿಯೊಂದು ಪುಟದಲ್ಲೂ ಅದರ ಕುರುಹನ್ನು ಆಕೆ ತೋರ್ಪಡಿಸಿದ್ದಾಳೆ. ಆಕೆ ವಿಷಯ ಸಂಗ್ರಹಕ್ಕಾಗಿ ಭಾರತಕ್ಕೆ ಬಂದಳೇ ಹೊರತು ತನ್ನ ಸ್ವಂತ ಕಣ್ಣುಗಳಿಂದ ಸಂಗತಿಗಳನ್ನು ವೀಕ್ಷಿಸಲು ಬರಲಿಲ್ಲ. ಮುಕ್ಕಾಲು ಭಾಗ ವಿಷಯಗಳನ್ನು ಆಕೆ ಅಮೆರಿಕದಲ್ಲೆ ಸಂಗ್ರಹಿಸಬಹುದಿತ್ತು. ಮಿಸ್ ಮೇಯೋಳದರಂಥ ಒಂದು ಪುಸ್ತಕ ವ್ಯಾಪಕ ಪ್ರಸಾರವನ್ನು ಪಡೆದು ಪಾಶ್ಚಾತ್ಯ ಸಾಹಿತ್ಯ ಮತ್ತು ಸಂಸ್ಕೃತಿಯ ಬಗೆಗೆ ಒಂದು ಹೊಲಸು ಟೀಕೆಯನ್ನೊದಗಿಸಂತ್ತದೆ.

"ಮಿಸ್ ಮೇಯೋ ಇಂದಲ್ಲ ನಾಳೆ ಸ್ವತಃ ತನ್ನ ಪಟ್ಟನ್ನು ಸಡಿಲಿಸಬಹುದು ಮತ್ತು ತನ್ನವರ ಮನಸ್ಸಿನಲ್ಲಿ ನಿರಾಧಾರವಾದ ಪೂರ್ವಾಗ್ರಹವು ಮೂಡುವಂತೆ ಮಾಡಲು ತನ್ನ ಸಂದೇಹಾತೀತ ಸಾಮರ್ಥ್ಯವನ್ನು ಬಳಸುವುದರ ಮೂಲಕ, ನನಗನ್ನಿಸುವಂತೆ ಅಪ್ರಜ್ಞಾಪೂರ್ವಕವಾಗಿ, ಒಂದು ಪ್ರಾಚೀನ ಜನಾಂಗಕ್ಕೆ ಮತ್ತು ಅದೇ ಪ್ರಮಾಣದಲ್ಲಿ ಅಮೆರಿಕನ್ನರಿಗೆ ಆಕೆ ಎಸಗಿರುವ ಪರಮ ಅನ್ಯಾಯಕ್ಕಾಗಿ ಪಶ್ಚಾತ್ತಾಪ ಪಡಬಹುದು ಎಂಬ ನೆಚ್ಚಿಕೆಯಿಂದ ನಾನು ಈ ಲೇಖನವನ್ನು ಬರೆಯುತ್ತಿದ್ದೇನೆ.

"ಈ ಎಲ್ಲದರ ವಿಡಂಬನವೆಂದರೆ, ಪುಸ್ತಕವನ್ನು ಆಕೆ 'ಭಾರತದ ಜನತೆ'ಗೆ ಅಂಕಿತ ಮಾಡಿರುವುದು. ಒಬ್ಬ ಸುಧಾರಕಿಯಾಗಿ ಮತ್ತು ಒಲವಿನಿಂದ ಅದನ್ನು ಆಕೆ ಬರೆದಿಲ್ಲ. ನನ್ನ ಈ ಅಭಿಪ್ರಾಯವು ತಪ್ಪಾದಲ್ಲಿ ಆಕೆ ಭಾರತಕ್ಕೆ ಮತ್ತೆ ಬರಲಿ. ತನ್ನನ್ನು ಪಾಟೀಸವಾಲಿಗೆ ಗುರಿಪಡಿಸಿಕೊಳ್ಳಲಿ. ಈ ವಿಚಾರಣೆಯ ಅಗ್ನಿಪರೀಕ್ಷೆಯ ಮೂಲಕ ಆಕೆಯ ಹೇಳಿಕೆಗಳು ಅನೂನವಾಗಿ ಪಾರಾಗಿಬಂದ ಪಕ್ಷದಲ್ಲಿ ಆಕೆ ನಮ್ಮ ನಡುವೆಯೇ ಇದ್ದು ನಮ್ಮ ಬದುಕನ್ನು ಸುಧಾರಿಸಲಿ. ಇದಿಷ್ಟೂ ಮಿಸ್ ಮೇಯೊ ಮತ್ತು ಆಕೆಯ ಓದುಗರಿಗಾಗಿ ಹೇಳಿದ್ದಾಯಿತು.

"ಚಿತ್ರದ ಮತ್ತೊಂದು ಮುಖವನ್ನೀಗ ನೋಡೋಣ. ಈ ಪುಸ್ತಕದಿಂದ ಯಾವ ಪ್ರಯೋಜನವೂ ಇಲ್ಲವೆಂಬ ಕಾರಣದಿಂದ ಅಮೆರಿಕನ್ನರ ಮತ್ತು ಇಂಗ್ಲಿಷರ ಅವಗಾಹನೆಗೆ ಅದು ಅಯೋಗ್ಯವೆಂದು ನಾನು ಪರಿಗಣಿಸಿದರೂ ಅದು ಪ್ರತಿಯೊಬ್ಬ ಭಾರತೀಯನೂ ಓದಿ ಕೆಲಮಟ್ಟಿನ ಲಾಭವನ್ನು ಪಡೆಯಬಹುದಾದ ಒಂದು ಪುಸ್ತಕವೆಂದು ನನಗನ್ನಿಸುತ್ತದೆ. ಆಕೆ ಮಾಡಿರುವ ದೋಷಾರೋಪಣೆಯನ್ನು ನಾವು ನಿರಾಕರಿಸಬಹುದು. ಆದರೆ ಆ ಆರೋಪಣೆಗಳ ಹಿಂದೆ ಅಡಗಿರುವ ತಾತ್ಪರ್ಯವನ್ನು ನೀವು ಒಪ್ಪಿಕೊಳ್ಳದಿರಲು ಸಾಧ್ಯವಿಲ್ಲ. ಬೇರೆಯವರ ಕಣ್ಣುಗಳಿಂದ ನಮ್ಮನ್ನು ನೋಡಿಕೊಳ್ಳುವುದು ಒಳ್ಳೆಯದು. ಪುಸ್ತಕವನ್ನು ಯಾವ ಉದ್ದೇಶದಿಂದ ಬರೆಯಲಾಗಿದೆಯೆಂಬುದನ್ನೂ ನಾವು ಪರಿಶೋಧಿಸ

ಬೇಕಾಗಿಲ್ಲ. ಚಿಚ್ಛಗವುಳ್ಳ ಸುಧಾರಕನು ಅವರಿಂದ ಕೆಲಮಟ್ಟಿನ ಪ್ರಯೋಜನವನ್ನು ಪಡೆಯುಬಹುದು. ಚಿತ್ರದಲ್ಲಿ ಎಲ್ಲಿಯೋ ಕಂಡುಬರುವ ದೋಷಗಳ ಬಗೆಗೆ ನಮಗೆ ಅರಿವು ಮೂಡಿಸಿದುದರಿಂದ ನಾವು ಅಸಮಾಧಾನಗೊಳ್ಳಬೇಕಾಗಿಲ್ಲ. ಅನೈರ್ಮಲ್ಯ, ಬಾಲ್ಯವಿವಾಹ ಮುಂತಾದುವುಗಳ ಬಗೆಗಿನ ಅವರ ವಿವರಣೆಗಳು ನಿಸ್ಸಂದೇಹವಾಗಿ ಅತಿಶಯೋಕ್ತಿಗಳಾಗಿವೆ. ಸಮಾಜವನ್ನು ನಿಂದಾತ್ಮಕವಾದ ಎಲ್ಲ ಕಾರಣಗಳಿಂದ ವಿಮುಕ್ತಿಗೊಳಿಸಲು ನಾವು ಇದುವರೆಗೆ ಮಾಡಿದುದಕ್ಕಿಂತ ಹೆಚ್ಚಿನ ಪ್ರಯತ್ನಗಳನ್ನು ಕೈಗೊಳ್ಳಲು ಅವು ನಮಗೆ ಪ್ರಚೋದನೆಗಳಾಗಲಿ. ನಮ್ಮ ಬಗೆಗೆ ವಿದೇಶೀ ಭೇಟಿಕಾರರು ಏನನ್ನಾದರೂ ಒಳ್ಳೆಯದನ್ನು ಪ್ರಾಮಾಣಿಕವಾಗಿ ಹೇಳಲು ಸಮರ್ಥವಾಗಿದ್ದಲ್ಲಿ ನಾವು ಅವರಿಗೆ ವಂದನೆಗಳನ್ನು ಸೂಚಿಸಬಹುದು. ನಮ್ಮ ಕೋಪವನ್ನು ನಿಗ್ರಹಿಸಿದಲ್ಲಿ, ನಿಶ್ಚಯವಾಗಿಯೂ ನಾನು ಕಲಿತಿರುವಂತೆ, ನಮ್ಮ ಪ್ರೋತ್ಸಾಹಕರಿಗಿಂತ ಹೆಚ್ಚಾಗಿ ಟೀಕಾಕಾರರಿಂದ ನಾವು ಕಲಿಯುಬಹುದು. ಮಿಥ್ಯಾಪವಾದದ ಕೃತಿಯ ಬಗೆಗೆ ವ್ಯಕ್ತಪಡಿಸಲೇ ಬೇಕಾಗಿರುವ ನಮ್ಮ ಕ್ರೋಧವು ನಮ್ಮಲ್ಲಿರುವ ಸ್ಪಷ್ಟ ಕೊರತೆಗಳು ಹಾಗೂ ದೊಡ್ಡ ಮಿತಿಗಳ ವಿರುದ್ಧ ನಮ್ಮನ್ನು ಕುರುಡರಾಗಿಸಕೂಡದು. ನಮ್ಮ ಕೋಪವು ಮಿಸ್ ಮೇಯೊಗೆ ಯಾವ ನಷ್ಟವನ್ನೂ ಉಂಟುಮಾಡುವುದಿಲ್ಲ. ಆದರೆ ಅದು ನಮ್ಮ ಮೇಲೇ ತಿರುಗಿಬೀಳುತ್ತದಷ್ಟೆ. ಪಶ್ಚಿಮದಲ್ಲಿರುವಂತೆ ನಮ್ಮಲ್ಲೂ ವಿವೇಚನಾರಹಿತ ಓದುಗರ ಗುಂಪು ಇದ್ದೇ ಇದೆ ಮತ್ತು ಮಿಸ್ ಮೇಯೊ ಬರೆದಿರುವ ಪ್ರತಿಯೊಂದನ್ನೂ ಸುಳ್ಳೆಂದು ಸಾಧಿಸಲು ಹೊರಟಲ್ಲಿ ನಮ್ಮದು ಪರಿಪೂರ್ಣ ಮಾನವ ಜನಾಂಗವೆಂಬ, ನಮ್ಮ ವಿರುದ್ಧವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲವೆಂಬ, ಯಾರಿಗೂ ಚಕಾರವೆತ್ತುವ ಧೈರ್ಯವಿಲ್ಲವೆಂಬ ನಂಬಿಕೆಯನ್ನು ಸಾಮಾನ್ಯ ಓದುಗರಲ್ಲಿ ನಾವು ಮೂಡಿಸುತ್ತೇವೆ. ಈ ಪುಸ್ತಕದ ವಿರುದ್ಧ ಉಂಟುಮಾಡಿರುವ ಉದ್ರೇಕವು ಮಿತಿಮೀರಿ ಹೋಗುವ ಅಪಾಯವಿದೆ. ಈ ಉಗ್ರ ಆವೇಶಕ್ಕೆ ಯಾವ ಕಾರಣವೂ ಇಲ್ಲ.

"ಅತ್ಯಂತ ಅನಿಚ್ಛೆಯಿಂದ ಮತ್ತು ಕೆಲಸದ ಮಹಾ ಒತ್ತಡದ ನಡುವೆ ನಾನು ಕೈಗೊಂಡಿರುವ ಈ ವಿಮರ್ಶೆಯನ್ನು ತುಲಸೀದಾಸರ ಒಂದು ಸುಂದರ ದ್ವಿಪದಿಯ ತಾತ್ಪರ್ಯದೊಡನೆ ಮುಗಿಸುತ್ತೇನೆ: 'ಭಗವಂತನಿಂದ ಸೃಷ್ಟಿಸಲ್ಪಟ್ಟ ಪ್ರತಿಯೊಂದೂ–ಅದು ಸಜೀವವಾಗಿರಲಿ ಅಥವಾ ನಿರ್ಜೀವವಾಗಿರಲಿ–ತನ್ನಲ್ಲಿ ಒಳ್ಳೆಯ ಮತ್ತು ಕೆಟ್ಟ ಮುಖಗಳೆರಡನ್ನೂ ಒಳಗೊಂಡಿರುತ್ತದೆ. ಹಾಲಿನಲ್ಲಿರುವ ನೀರಿನಿಂದ ಅದರ ಸಾರವನ್ನು ಬೇರ್ಪಡಿಸಿ, ನೀರನ್ನು ಬಿಟ್ಟು ಹಾಲಿನ ಸಾರವನ್ನು ಮಾತ್ರ ಸ್ವೀಕರಿಸುವ ಪುರಾಣಪ್ರಸಿದ್ಧ ಪಕ್ಷಿಯಂತೆ ವಿವೇಕವುಳ್ಳ ವ್ಯಕ್ತಿಯು ಪ್ರತಿಯೊಂದು ಸಂಗತಿಯಲ್ಲಿಯೂ ಕೆಟ್ಟುದನ್ನು ಬಿಟ್ಟು ಒಳ್ಳೆಯದನ್ನು ಮಾತ್ರ ಸ್ವೀಕರಿಸುತ್ತಾನೆ."

ಮಿಸ್ ಮೆಯೊಳ ವಾದದಲ್ಲಿ ತಿರುಳಿಲ್ಲವೆಂಬುದನ್ನು ಗಾಂಧೀಜಿ ತೋರಿಸಿಕೊಟ್ಟರು. ಆದರೆ ಸೈಮನ್ ನಿಯೋಗದ ಪ್ರಕಟಣೆಯ ಬಗೆಗೆ ಅವರು ಯಾವ ಟೀಕೆಯನ್ನೂ ಮಾಡಲಿಲ್ಲ. ಡೆಲ್ಲಿಯಿಂದ ಸಿಲೋನಿಗೆ ಅವರು ತರಾತುರಿಯಲ್ಲಿ ಹೋದರು. ದೆಹಲಿಯಲ್ಲಿ

ತಂಗಲು ಮತ್ತು ಅದಕ್ಕಿಂತ ಹೆಚ್ಚಾಗಿ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಲು ಅವರಿಗೆ ತೊಂದರೆಯಾಗಿತ್ತು. ಕಾರಣ "ಹಕೀಮ್ ಅಜಮಲ್ ಖಾನ್ ಮತ್ತು ಸ್ವಾಮಿ ಶ್ರದ್ಧಾನಂದರಿದ್ದ ಹಳೆಯ ದೆಹಲಿಯು ಈಗ ಪುಂಡರ ಹೊಸ ದೆಹಲಿಯಾಗಿ ಪರಿಣಮಿಸಿದೆ. ಕೆಲವು ಮುಸ್ಲಿಮರು ಶ್ರದ್ಧಾನಂದರನ್ನು ಕೊಂದವನ ದೇಹವನ್ನು ಮೆರವಣಿಯಲ್ಲೊಯ್ಯು ವುದರ ಮೂಲಕ ಅವನನ್ನು ಹುತಾತ್ಮನನ್ನಾಗಿ ಮಾಡುವ ಮಟ್ಟಕ್ಕೆ ಹೋದರು.

ನವೆಂಬರ್ ೧೩ರಂದು ಕೊಲಂಬೊದಲ್ಲಿ ಇಳಿದಾಗಿನಿಂದ ಗಾಂಧೀಜಿಗೆ ಸಿಲೋನಿನಲ್ಲಿ ದೊರೆತ ಉತ್ಸಾಹಪೂರ್ಣ ಸ್ವಾಗತವು ಭಾರತದಲ್ಲಿ ಅವರಿಗೆ ದೊರೆತುದಕ್ಕಿಂತ ಕಡಿಮೆ ಯದೇನೂ ಆಗಿರಲಿಲ್ಲ. ಜೀವಂತ ಬೌದ್ಧಧರ್ಮವನ್ನು ಸಮೀಪದಿಂದ ಅಧ್ಯಯನ ಮಾಡುವ ಮತ್ತು ಸಾಧ್ಯವಾದಲ್ಲಿ ತಮ್ಮವರಂತೆಯೇ ರಾಷ್ಟ್ರತ್ವವನ್ನು ಕಳೆದುಕೊಂಡ ಜನರಿಗೆ ಮಾರ್ಗದರ್ಶನ ಮಾಡುವ ಉದ್ದೇಶದಿಂದ ಅವರು ಸುಂದರ ಲಂಕಾದ್ವೀಪಕ್ಕೆ ಭೇಟಿಕೊಡಬೇಕೆಂದಿದ್ದರು. ಜೊತೆಗೆ ಪ್ರಾಚೀನ ಸಂಬಂಧವನ್ನು ಮತ್ತಷ್ಟು ಬಲಪಡಿಸಿ ಮುಂದುವರಿಸಬೇಕೆಂಬ ಇಚ್ಛೆಯೂ ಅವರಿಗಿದ್ದಿತು. ಆದರೆ ಭೇಟಿಯು ಸಂಭವಿಸಿದಾಗ ಅದು ವಾಣಿಜ್ಯಾತ್ಮಕವಾದ ಅರ್ಥಾತ್ ಖಾದಿನಿಧಿ ಸಂಗ್ರಹಾರ್ಥವಾದ ಒಂದು ಪ್ರವಾಸ ವಾಗಿ ಪರಿಣಮಿಸಿತು.

ಗಾಂಧೀಜಿಗೆ ಗೌರವಪೂರ್ಣ ಸ್ವಾಗತವನ್ನು ನೀಡುವುದರಲ್ಲಿ ಮತ್ತು ಸಿಲೋನಿಗೆ ಅವರನ್ನು ಕರೆತಂದ ಉದ್ದೇಶಕ್ಕೆ ಸೋತ್ಸಾಹ ಅನುಕಂಪವನ್ನು ತೋರಿಸುವುದರಲ್ಲಿ ಬೌದ್ಧ ಮತು ಕ್ರಿಶ್ಚಿಯನ್ ಸಿಲೋನೀಯರು ಹಿಂದೂ ಮತ್ತು ಭಾರತೀಯ ಸಿಲೋನೀ ಯರಿಗಿಂತ ಮೇಲುಗೈಯಾಗಿದ್ದರು. ಎಲ್ಲರೂ ಒಂದೇ ರೀತಿಯಾಗಿ, ಖಾದಿನಿಧಿಗೆ ತಮ್ಮ ಕೈಲಾದಷ್ಟು ಕಾಣಿಕೆ ನೀಡಿದರು ಮತ್ತು ಈ ಉದ್ದೇಶಕ್ಕೆ ತಾವು ನೆರವು ನೀಡಬೇಕಾದುದು ನ್ಯಾಯವೆಂದು ಒಪ್ಪಿಕೊಂಡರು. ಅವರನ್ನು ಇಳಿಸಿದ್ದ ಮನೆಯ ಒಂದು ಭಾಗವನ್ನು ಖಾದಿಭಂಡಾರವಾಗಿ ಪರಿವರ್ತಿಸಲಾಯಿತು. ಬೆಳಗ್ಗೆಯಿಂದ ರಾತ್ರಿಯ ವರೆಗೆ ಎಲ್ಲ ವರ್ಗದ ಜನರೂ ಅದನ್ನು ಮುತ್ತಿರುತ್ತಿದ್ದರು.

ಕೊಲಂಬೊ ಪುರಸಭೆಯು ಅವರಿಗೆ ಔಚಿತ್ಯಪೂರ್ಣ ಅಭಿನಂದನೆಯೊಂದನ್ನು ಅರ್ಪಿಸಿತು. ಅದನ್ನು ಆಡಳಿತ ಇಲಾಖೆಯ ಒಬ್ಬ ಅಧಿಕಾರಿಯಾಗಿದ್ದ, ಪುರಸಭೆಯ ಅಧ್ಯಕ್ಷರು ಓದಿದರು. ಸಿಲೋನಿನ ರಾಜ್ಯಪಾಲರು ಅವರಿಗೆ ಆದರದ ಸ್ವಾಗತ ನೀಡಿದ ರಲ್ಲದೆ ಸ್ನೇಹದ ಹರಟೆಗೆ ಆಮಂತ್ರಿಸಿದರು. ಅವರು ಹೋಗುವರೆಂದು ಪ್ರಕಟಿಸ ಲಾಗಿದ್ದ ಮುಖ್ಯ ರಸ್ತೆಗಳಲ್ಲೆಲ್ಲ ಸಾವಿರಾರು ಜನರು ಕಿಕ್ಕಿರಿದಿದ್ದರು ಮತ್ತು ಬಹುಮಟ್ಟಿನ ಸ್ಥಳಗಳಲ್ಲಿ ಟಿಕೆಟ್ಟುಗಳ ಮೂಲಕ ಪ್ರವೇಶವನ್ನು ಮಿತಿಗೊಳಿಸಿ ಜನಸಂದಣಿಯನ್ನು ನಿಯಂತ್ರಿಸಬೇಕಾಯಿತು. ಸಿಲೋನಿನಲ್ಲಿ ಇಳಿದ ಮೇಲೆ ಗಾಂಧೀಜಿ ಚೆಟ್ಟಿಯಾರ್ ವರ್ತಕರನ್ನುದ್ದೇಶಿಸಿ ತಮ್ಮ ಪ್ರಥಮ ಭಾಷಣ ಮಾಡಿದರು: "ದರಿದ್ರ ನಾರಾಯಣನಿಗಾಗಿ ಉದಾರವಾಗಿ ಕಾಣಿಕೆಗಳನ್ನು ನೀಡಬೇಕೆಂದು ನಿಮ್ಮಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ಭಾರತದಲ್ಲೇ ಆಗಲಿ ಅಥವಾ ಹೊರಗೇ ಆಗಲಿ, ಶ್ರೀಮಂತ ಭಾರತೀಯರಿಗೆ ಇದಕ್ಕಿಂತ

ಉತ್ತಮವಾದ ಬಂಡವಾಳ ಹೂಡಿಕೆ ಬೇರೆಯಿಲ್ಲವೆಂಬುದು ನನ್ನ ಭಾವನೆ. ನಿಮ್ಮ ಔದಾರ್ಯ ಕೇವಲ ಹಣವನ್ನು ಕೊಡುವಷ್ಟಕ್ಕೆ ಕೊನೆಯಾಗದಿರಲಿ. ಈ ಮೂಲಕ ಜನಕೋಟಿಯೊಂದಿಗೆ ನೀವು ಸಜೀವ ಬಾಂಧವ್ಯವನ್ನು ಸ್ಥಾಪಿಸುವ ಇಚ್ಛೆಯುಳ್ಳವರಾದರೆ, ಆ ಜನರ ಪವಿತ್ರ ಹಸ್ತಗಳಿಂದ ತಯಾರಾದ ಖದ್ದರನ್ನು ನೀವು ಧರಿಸಬೇಕು. ವಿದೇಶಿ ಎಂದು ಹೇಳಬಹುದಾದ ಪ್ರದೇಶದಲ್ಲಿ ನೀವಿದ್ದೀರಿ. ಭೌಗೋಳಿಕವಾಗಿ ಮತ್ತು ಆಧಿಕಾರಿಕವಾಗಿ ಹೇಳುವುದಾದರೆ, ಸಿಲೋನು ಭಾರತದ ಭಾಗವೆಂದು ಪರಿಗಣಿತವಾಗಿಲ್ಲ. ಈ ಔದಾರ್ಯದ ನಾಡಿನಲ್ಲಿ ವರ್ತಕರಾಗಿ, ನೀವು ಸ್ಥಳೀಯ ಜನತೆಯ ಬಗೆಗೆ ಆದರ್ಶಪ್ರಾಯವಾದ ಹಾಗೂ ಪ್ರಾಮಾಣಿಕವಾದ ರೀತಿಯಲ್ಲಿ ವರ್ತಿಸಬೇಕಾಗುತ್ತದೆ. ನಿಮ್ಮ ನಡತೆಯಿಂದ ಭಾರತದ ಜನತೆಯ ನಡತೆಯನ್ನು ಅಳೆಯಲಾಗುತ್ತದೆ. ಆದ್ದರಿಂದ ಮನೋಹರವಾದ ಈ ದ್ವೀಪದ ಜನರೊಂದಿಗೆ ನಿಮ್ಮ ವ್ಯವಹಾರಗಳು ಸಂಪೂರ್ಣ ನ್ಯಾಯಯುತವಾಗಿ ಮತ್ತು ಸರ್ವನಿಂದೆಗಳಿಂದ ಮುಕ್ತವಾಗಿವೆಯೆಂದು ನಾನು ಭಾವಿಸುತ್ತೇನೆ. ನಿಮ್ಮ ತಕ್ಕಡಿಯು ಸಂಪೂರ್ಣ ನಿಷ್ಪಕ್ಷಪಾತವಾಗಿರಲಿ. ಲೆಕ್ಕಾಚಾರಗಳು ನಿಖರವಾಗಿರಲಿ. ಈ ದ್ವೀಪದ ಪ್ರತಿಯೊಬ್ಬ ಮಹಿಳೆಯನ್ನೂ ನಿಮ್ಮ ತಂಗಿಯೆಂದೂ, ಮಗಳೆಂದು ಅಥವಾ ತಾಯಿಯೆಂದು ನೀವು ಭಾವಿಸುವಿರೆಂದು ಆಶಿಸುತ್ತೇನೆ. ಸಂಪತ್ತಿನ ಒಡೆತನವು ನಿಮ್ಮ ತಲೆತಿರುಗಿಸದಿರಲಿ. ಯಾರ ನಡುವೆ ಆ ಸಂಪತ್ತು ಆರ್ಜಿತವಾಯಿತೊ ಆ ಜನರಿಗೆ ಮತ್ತು ಅದರ ಒಡೆಯನಿಗೆ ಅದು ವರಪ್ರಸಾದವಾಗಬೇಕಾದರೆ ಆ ಸಂಪತ್ತು ತನ್ನೊಡನೆ ಜವಾಬ್ದಾರಿಯ ಮಹಾಪ್ರಜ್ಞೆಯನ್ನು ಹೊರಬೇಕಾಗುತ್ತದೆ."

ಮೊದಲ ದಿನ ಅವರು ಅನೇಕ ಸಭೆಗಳನ್ನುದ್ದೇಶಿಸಿ ಭಾಷಣ ಮಾಡಿದರು. ವಿವೇಕಾನಂದ ಸೊಸೈಟಿಯಲ್ಲಿ ಮಾತನಾಡುತ್ತ ಅವರು ಹೀಗೆ ಅಭಿಪ್ರಾಯಪಟ್ಟರು: "ನಿಮ್ಮ ಸಂಘದ ಹೆಸರು ವಿವೇಕಾನಂದ ಎಂದಿರುವಲ್ಲಿ ಭಾರತದ ಹಸಿದ ಜನಕೋಟಿಯನ್ನು ನಿರ್ಲಕ್ಷಿಸುವ ಸಾಹಸವನ್ನು ನೀವು ಮಾಡಲಾರಿರಿ." ಸಭಾಂಗಣದ ಹೊರಗೆ ಅವರ ಮಾತುಗಳನ್ನು ಆಲಿಸಲು ಜನರ ನೆರವಿ ಕಾತರದಿಂದ ಕಾಯುತ್ತಿತ್ತು. ಅದೊಂದು ಬೃಹತ್‌ಸಭೆಯಾಗಿತ್ತು. ಏಕಕಾಲದಲ್ಲಿ ಇಬ್ಬರು ದುಭಾಷಿಗಳ ಮೂಲಕ ಗಾಂಧೀಜಿ ಆ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಿಲೋನಿ ಕಾರ್ಮಿಕರು ಸುಸಂಘಟಿತರಾಗಿದ್ದರು. ಇಪ್ಪತ್ತು ಮಂದಿ ಹಜಾಮರು ೪೦೦ ರೂ.ಗಳ ತಮ್ಮ ಉದಾರ ಕಾಣಿಕೆಯೊಡನೆ ಗಾಂಧೀಜಿಯ ನಿವಾಸಕ್ಕೆ ಹೋದರು.

ನವೆಂಬರ್ ೧೫ರಂದು ಅವರು ಬೌದ್ಧಮತೀಯರ ಅಖಿಲ ಸಿಲೋನಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದರು. ಆ ಸಭೆಯಲ್ಲಿ ಕಾಷಾಯವಸ್ತ್ರವನ್ನು ಧರಿಸಿದ ೫೦೦ ಮಂದಿ ಪುರೋಹಿತರು ಭಾಗವಹಿಸಿದ್ದರು. ಅವರು ತಮ್ಮ ಮೇಲೆ ಸ್ವಸ್ತಿವಾಚನವನ್ನು ಪಠಿಸಿದ ನಂತರ ಗಾಂಧೀಜಿ ತಮ್ಮ ಭಾಷಣದಲ್ಲಿ ಬುದ್ಧನ ಸಂದೇಶವನ್ನು ಸಂಗ್ರಹವಾಗಿ ತಿಳಿಸಿದರು:

“ಬುದ್ಧನ ಬೋಧನೆಗಳ ಸಾರಭೂತವಾದ ಭಾಗವು ಇಂದು ಹಿಂದೂಧರ್ಮದ ಒಂದು ಸಮಗ್ರ ಭಾಗವೇ ಆಗಿದೆ. ಗೌತಮ ಬುದ್ಧನು ಹಿಂದೂಧರ್ಮದಲ್ಲುಂಟುಮಾಡಿದ ಮಹಾಸುಧಾರಣೆಯನ್ನು ಪುನರ್ವಿಮರ್ಶಿಸಲು ಇಂದು ಹಿಂದೂ ಇಂಡಿಯಾಕ್ಕೆ ಸಾಧ್ಯವಿಲ್ಲ. ತನ್ನ ಅನುಪಮ ತ್ಯಾಗ ಮತ್ತು ಮಹಾವೈರಾಗ್ಯಗಳಿಂದ ಮತ್ತು ತನ್ನ ಬದುಕಿನ ನಿಷ್ಕಳಂಕ ಪರಿಶುದ್ಧತೆಯಿಂದ ಗೌತಮ ಬುದ್ಧನು ಹಿಂದೂಧರ್ಮದ ಮೇಲೆ ಚಿರಂತನವಾದ ಪ್ರಭಾವವನ್ನು ಬೀರಿದ್ದಾನೆ. ಮತ್ತು ಹಿಂದೂಧರ್ಮವು ಆ ಮಹಾಬೋಧಕನಿಗೆ ಚಿರಋಣಿಯಾಗಿದೆ. ನನ್ನ ಹೇಳಿಕೆಯನ್ನು ನೀವು ಕ್ಷಮಿಸುವಿರಾದರೆ ಮತ್ತು ಅದಕ್ಕೆ ಅವಕಾಶ ಕೊಟ್ಟರೆ, ಇಂದು ಬೌದ್ಧಮತದ ಹೆಸರಿನಲ್ಲಿ ಏನು ನಡೆಯುತ್ತಿದೆಯೊ ಅದನ್ನು ಹಿಂದೂಧರ್ಮವು ಒಳಗೊಂಡಿರಲಿಲ್ಲ ಮತ್ತು ಬುದ್ಧನ ಜೀವನ ಮತ್ತು ಬೋಧನೆಗಳ ಸಾರವೂ ಆಗಿರಲಿಲ್ಲವೆಂದು ಹೇಳುವ ಸಾಹಸ ಮಾಡಬಲ್ಲೆ.

“ಬೌದ್ಧಮತವು ಅಥವಾ ಖಚಿತವಾಗಿ ಹೇಳುವುದಾದರೆ ಬುದ್ಧನ ಬೋಧನೆಯು ಭಾರತದಲ್ಲಿ ತನ್ನ ಅಭೀಷ್ಟಸಿದ್ಧಿಯನ್ನು ಪಡೆಯಿತು; ಮತ್ತು ಅದು ಪಡೆಯದಿರುವುದು ಸಾಧ್ಯವಿರಲಿಲ್ಲ. ಕಾರಣ, ಸ್ವತಃ ಗೌತಮನು ಒಬ್ಬ ಸಾಚಾ ಹಿಂದೂವಾಗಿದ್ದನೆಂಬುದು ನನ್ನ ಖಚಿತ ಅಭಿಪ್ರಾಯವಾಗಿದೆ. ಅವನು ಹಿಂದೂಧರ್ಮದಲ್ಲಿದ್ದ ಅತ್ಯುತ್ತಮ ಸತ್ವವನ್ನು ಹೀರಿಕೊಂಡನು; ಮತ್ತು ವೇದಗಳಲ್ಲಿ ಮರೆಯಾಗಿ ಹೋಗಿದ್ದ ಮತ್ತು ಮಿತಿಮೀರಿ ಬೆಳೆದ ಕಳೆಯಿಂದ ಮುಚ್ಚಿಹೋಗಿದ್ದ ಕೆಲವು ತತ್ವಗಳಿಗೆ ಜೀವ ತುಂಬಿದನು. ಅವನ ಶ್ರೇಷ್ಠ ಹಿಂದೂ ಚೈತನ್ಯವು, ವೇದಗಳಲ್ಲಿದ್ದ ಸುವರ್ಣಸತ್ಯವನ್ನು ಮುಚ್ಚಿಹಾಕಿದ್ದ ಅರ್ಥಹೀನ ಶಬ್ದಾರಣ್ಯದ ಮೂಲಕ ತನ್ನ ದಾರಿಯನ್ನು ಕಂಡುಕೊಂಡಿತು. ವೇದಗಳಲ್ಲಿದ್ದ ಕೆಲವು ಪದಗಳು, ಅವನ ತಲೆಮಾರಿನ ಜನರ ದೃಷ್ಟಿಯಲ್ಲಿ ಅತ್ಯಂತ ವಿನೂತನವಾದ ಒಂದು ಅರ್ಥವನ್ನು ಪಡೆಯುವಂತೆ ಮಾಡಿದನು. ಭಾರತದಲ್ಲಿ ಅತ್ಯಂತ ಹಿತಕರವಾದ ಪರಿಸರವನ್ನು ಅವನು ಕಂಡುಕೊಂಡನು.

“ಬುದ್ಧನು ಎಲ್ಲೆಲ್ಲಿಗೆ ಹೋದನೊ ಅಲ್ಲೆಲ್ಲ ಅವನನ್ನನುಸರಿಸುತ್ತಿದ್ದವರು ಮತ್ತು ಸುತ್ತುವರಿಯುತ್ತಿದ್ದವರು ವೈದಿಕ ತತ್ವವನ್ನು ಹೀರಿ ಬೆಳೆದಿದ್ದ ಹಿಂದೂಗಳೇ ಹೊರತು ಅಹಿಂದೂಗಳಲ್ಲ.

“ಬುದ್ಧನ ಉಪದೇಶವು ಅವನ ಹೃದಯದಂತೆಯೆ ಪೂರ್ಣವಿಕಾಸಶೀಲವಾದುದು; ಮತ್ತು ಸರ್ವಾಲಿಂಗಿಯಾದುದು. ಅದು ಜಗತ್ತಿನಾದ್ಯಂತ ಪ್ರಸಾರವಾಯಿತಲ್ಲದೆ ಅವನನ್ನು ಅದು ಚಿರಸ್ಥಾಯಿಗೊಳಿಸಿತು. ನನ್ನನ್ನು ಬುದ್ಧನ ಒಬ್ಬ ಅನುಯಾಯಿ ಎಂದು ಕರೆದರೂ ಸರಿಯೆ ಈ ಸಾಧನೆಯನ್ನು ಹಿಂದೂಧರ್ಮದ ವಿಜಯವೆಂದು ನಾನು ಹೇಳುತ್ತೇನೆ. ಬುದ್ಧನು ಹಿಂದೂಧರ್ಮವನ್ನೆಂದೂ ನಿರಾಕರಿಸಲಿಲ್ಲ. ಆದರೆ ಅದರ ತಳಹದಿಯನ್ನು ಅವನು ವಿಶಾಲಗೊಳಿಸಿದನು. ಅವನು ಅದಕ್ಕೆ ಒಂದು ಹೊಸ ಜೀವವನ್ನು ಮತ್ತು ಒಂದು ಹೊಸ ವಿವರಣೆಯನ್ನು ನೀಡಿದನು.

"ಆದರೆ ನಿಮ್ಮ ಕ್ಷಮೆಯನ್ನು ಮತ್ತು ಔದಾರ್ಯವನ್ನಪೇಕ್ಷಿಸುವ ಒಂದು ವಿಷಯ ಇಲ್ಲಿ ಬರುತ್ತದೆ. ಸಿಲೋನಿನಲ್ಲೇ ಆಗಲಿ ಅಥವಾ ಬರ್ಮಾದಲ್ಲೇ ಆಗಲಿ ಅಥವಾ ಚೈನಾ ಅಥವಾ ಟಿಬೆಟ್ಟಿನಲ್ಲೇ ಆಗಲಿ ಬುದ್ಧನ ಬೋಧನೆಯು ತನ್ನ ಪೂರ್ಣರೂಪದಲ್ಲಿ ಗ್ರಹಿಸಲ್ಪಡಲಿಲ್ಲವೆಂಬುದನ್ನು ನಿಮ್ಮಲ್ಲಿ ಅರಿಕೆಮಾಡಿಕೊಳ್ಳಲಿಚ್ಛಿಸುತ್ತೇನೆ. ನನ್ನ ಮಿತಿ ನನಗೆ ತಿಳಿದಿದೆ. ನಾನು ಪಂಡಿತನೆಂದು ಹೇಳಿಕೊಳ್ಳುವಂತಿಲ್ಲ. ಆದರೆ ನನ್ನ ಹೃದಯವು ನಂಬಿರುವುದನ್ನು ನಾನು ಪ್ರಕಟಿಸದಿದ್ದಲ್ಲಿ ನಿಮಗೆ ಮೋಸ ಮಾಡಿದಂತಾಗುತ್ತದೆ; ಮತ್ತು ನನಗೇ ಮೋಸಮಾಡಿಕೊಂಡಂತಾಗುತ್ತದೆ.

"ಬುದ್ಧನ ಜೀವನದ ಕೇಂದ್ರ ತತ್ವವೆಂದು ನಾನು ತಿಳಿದಿರುವುದಕ್ಕೂ ಮತ್ತು ನಿಮ್ಮ ಸ್ವಂತ ಆಚರಣೆಗೂ ನಡುವೆ ಇರುವ ಇಷ್ಟೊಂದು ಅಸಾಂಗತ್ಯಗಳನ್ನು ಕಂಡು ನನಗೆ ದಿಗ್ಭ್ರಮೆಯಾಗಿದೆ. ನಿಮಗೆ ಬೇಸರವಾಗದಿದ್ದಲ್ಲಿ, ಈಗತಾನೇ ನನಗೆ ಹೊಳೆದ ಮೂರು ಪ್ರಮುಖ ಅಂಶಗಳನ್ನು ನಿಮಗೆ ಬೇಗನೆ ಹೇಳಿಮುಗಿಸುತ್ತೇನೆ.

"ಮೊದಲನೆಯದು ದೇವರೆಂಬ ಸರ್ವವ್ಯಾಪೀ ಶಕ್ತಿಯಲ್ಲಿ ನಂಬಿಕೆ. ಬುದ್ಧ ದೇವರನ್ನು ನಂಬುವುದಿಲ್ಲವೆಂಬ ಬೌದ್ಧಮತದ ಅಂತರಾರ್ಥವನ್ನು ಅಭಿವ್ಯಕ್ತಪಡಿಸುವ ಪುಸ್ತಕಗಳನ್ನು ಓದಿದ್ದೇನೆ. ಮತ್ತು ಆ ನಂಬಿಕೆಗೆ ವಿರುದ್ಧವಾದ ಅನೇಕ ವಾದ ವಿವಾದ ಗಳನ್ನೂ ಕೇಳಿದ್ದೇನೆ. ಅಂತಹ ನಂಬಿಕೆಯು ಬುದ್ಧನ ಉಪದೇಶದ ಸಾರಭೂತ ತತ್ವವನ್ನೇ ವಿರೋಧಿಸುತ್ತದೆಂದು ನನ್ನ ಅಭಿಪ್ರಾಯ. ಬಹುಶಃ ದೇವರ ಹೆಸರಿನಲ್ಲಿ ಅವನ ಕಾಲ ದಲ್ಲಿ ನಡೆಯುತ್ತಿದ್ದ ಎಲ್ಲ ಹೀನ ಸಂಗತಿಗಳನ್ನು ಅವನು ನಿರಾಕರಿಸಿದುದರಿಂದ ಮಾತ್ರವೆ, ಈ ನಂಬಿಕೆ ಮೂಡಿತೆಂದು ತೋರುತ್ತದೆ. ದೇವರೆಂದು ಕರೆಯಲ್ಪಡುವಾತ ದ್ವೇಷದಿಂದ ಪ್ರೇರಿತನಾಗುವನೆಂಬ, ತನ್ನ ಕೃತ್ಯಗಳಿಗಾಗಿ ಅನುತಾಪ ಪಡುವನೆಂಬ ಮತ್ತು ಭೂಮಿಯ ಮೇಲಿನ ರಾಜರುಗಳಂತೆ ಪ್ರಲೋಭನೆ ಮತ್ತು ಲಂಚಗಳಿಗೊಳ ಗಾಗುವುದು ಮತ್ತು ಪ್ರೀತಿಪಾತ್ರರನ್ನು ಹೊಂದುವುದು ಸಾಧ್ಯವೆಂಬ ಭಾವನೆಯನ್ನು ಬುದ್ಧನು ನಿಸ್ಸಂದೇಹವಾಗಿ ನಿರಾಕರಿಸಿದನು. ದೇವರೆಂದು ಕರೆಸಿಕೊಳ್ಳುವವ ತನ್ನ ಸಂತೃಪ್ತಿಗಾಗಿ ಮತ್ತು ಸಂಪ್ರೀತಿಗಾಗಿ ತನ್ನಿಂದಲೇ ಸೃಷ್ಟಿಗೊಂಡ ಜೀವಂತ ಪ್ರಾಣಿ ಗಳನ್ನು ಬಯಸುವನೆಂಬ ಕಲ್ಪನೆಯ ವಿರುದ್ಧ ಅವನ ಇಡೀ ಚೇತನವು ಪ್ರಬಲರೋಷ ದಿಂದ ಸಿಡಿದೆದ್ದಿತು. ಆದ್ದರಿಂದ ಅವನು ದೇವರನ್ನು ಯುಕ್ತ ಸ್ಥಾನದಲ್ಲಿ ಸಂಸ್ಥಾಪಿಸಿದ ನಲ್ಲದೆ ಬಹುಕಾಲದಿಂದ ಆ ಧವಳ ಸಿಂಹಾಸನವನ್ನು ಆಕ್ರಮಿಸಿಕೊಂಡಿದ್ದ ದುರಾಕ್ರಮಣ ಕಾರಿಯನ್ನು ಪದಚ್ಯುತಗೊಳಿಸಿದನು. ಈ ವಿಶ್ವದ ನೈತಿಕ ಪ್ರಭುತ್ವದ ಶಾಶ್ವತ ಹಾಗೂ ಬದಲಾಯಿಸಲಾಗದ ಅಸ್ತಿತ್ವವನ್ನು ಬುದ್ಧನು ಒತ್ತಿಹೇಳಿದನು ಮತ್ತು ಪುನರ್ಘೋಷಿಸಿದನು. ನಿಯಮವೇ ದೇವರು ಎಂದು ಅವನು ದೃಢವಾಗಿ ಸಾರಿದನು.

"ಭಗವಂತನ ನಿಯಮಗಳು ಶಾಶ್ವತವಾದುವು ಮತ್ತು ಬದಲಾಯಿಸಲಾಗದುವು ಮತ್ತು ಸ್ವತಃ ಅವನಿಂದ ಪ್ರತ್ಯೇಕಿಸಲಾರದಂಥವು. ಅವನ ಪರಿಪೂರ್ಣತೆಯ ಅನಿವಾರ್ಯ ಸ್ಥಿತಿಯೇ ಅದು. ಇದರಿಂದಾಗಿಯೆ ಬುದ್ಧನು ದೇವರನ್ನು ನಂಬಲಿಲ್ಲವೆಂಬ ಮತ್ತು

ಅವನು ಕೇವಲ ನೈತಿಕ ನಿಯಮಗಳಲ್ಲಿ ನಂಬಿಕೆಯಿಟ್ಟಿದ್ದನೆಂಬ ಗೊಂದಲಕ್ಕೆ ಕಾರಣವಾಯಿತು. ದೇವರ ಬಗೆಗೆ ಎದ್ದ ಈ ಗೊಂದಲದ ಕಾರಣವಾಗಿಯೆ ನಿರ್ವಾಣವೆಂಬ ಮಹಾಶಬ್ದದ ಯಥೋಚಿತ ತಿಳುವಳಿಕೆಯ ಬಗೆಗೂ ತೊಡಕುಂಟಾಯಿತು. ನಿರ್ವಾಣವೆಂಬುದು ಸಂಪೂರ್ಣ ನಾಶವಲ್ಲವೆಂಬುದು ಖಚಿತ. ಬುದ್ಧನ ಬದುಕಿನ ಕೇಂದ್ರ ತತ್ತ್ವವನ್ನು ನಾನು ಅರಿತುಕೊಂಡಿರುವಂತೆ, ನಮ್ಮಲ್ಲಿರುವ ಎಲ್ಲ ಅಲ್ಪತೆಗಳ, ದುಷ್ಪ್ರವೃತ್ತಿಗಳ, ಹೊಲೆತನದ ಮತ್ತು ನೀತಿಭ್ರಷ್ಟಭಾವಗಳ ಸಂಪೂರ್ಣ ನಿರ್ನಾಮವೇ ನಿರ್ವಾಣ. ಅದು ಸ್ಮಶಾನದ ಕರಾಳ ನಿರ್ಜೀವ ಶಾಂತಿಯಲ್ಲ. ಅದು ಜೀವಂತ ಪ್ರಶಾಂತಿ; ತನ್ನ ಇರವಿನ ಬಗೆಗೆ ಎಚ್ಚರವಿರುವ ಮತ್ತು ಅನಂತದ ಎದೆಯಾಂತರಾಳದಲ್ಲಿ ತನ್ನ ನೆಲೆಯನ್ನು ಕಂಡುಕೊಂಡ ಪ್ರಜ್ಞೆಯನ್ನುಳ್ಳ ಒಂದು ಆತ್ಮದ ಸಜೀವ ಆನಂದವದು.

"ಮೂರನೆಯ ಅಂಶವು ಭಾರತದಾಚೆಗೆ ಪ್ರಯಾಣ ಮಾಡಿದ ಬೌದ್ಧಮತದಲ್ಲಿ ಸರ್ವಜೀವಗಳ ಪವಿತ್ರತೆಯ ಬಗೆಗೆ ಇರುವ ಕೀಳೆಣಿಕೆಯನ್ನು ಕುರಿತದ್ದಾಗಿದೆ. ಭಗವಂತನಿಗೆ ಆತನ ಸನಾತನ ಸ್ಥಾನವನ್ನು ಮತ್ತೆ ದೊರಕಿಸಿಕೊಟ್ಟುದು, ಮಾನವ ಜನಾಂಗಕ್ಕೆ ಬುದ್ಧನು ನೀಡಿದ ಬಹುದೊಡ್ಡ ಕೊಡುಗೆ. ನನ್ನ ನಮ್ರ ಅಭಿಪ್ರಾಯದ ಪ್ರಕಾರ ಮಾನವ ಜನಾಂಗಕ್ಕೆ ಅವನು ನೀಡಿದ ಇದಕ್ಕಿಂತ ಮಹತ್ತರವಾದ ಕೊಡುಗೆಯೆಂದರೆ ಎಲ್ಲ ಜೀವಿಗಳ ಬಗೆಗೂ–ಅವು ಎಷ್ಟೇ ಕ್ಷುದ್ರವಾಗಿರಲಿ–ಅವನು ತೋರಿದ ಅಗಾಧ ಪ್ರೇಮ. ತನ್ನ ಭಾರತವು ಯಾವ ಎತ್ತರಕ್ಕೆ ಏರಬೇಕೆಂದು ಆತ ಬಯಸಿದ್ದನೋ ಆ ಎತ್ತರಕ್ಕೆ ಏರಲಿಲ್ಲವೆಂಬುದು ನನ್ನ ತಿಳುವಳಿಕೆ.

"ಬುದ್ಧನ ಉಪದೇಶವು ಬೌದ್ಧಮತವಾಗಿ ಪರಿಣಮಿಸಿದಾಗ ಮತ್ತು ವಿದೇಶಗಳಲ್ಲಿ ಪ್ರಸಾರವಾದಾಗ ಸಾಮಾನ್ಯ ಮನುಷ್ಯನಲ್ಲಿ ಪ್ರಾಣಿಜೀವನ ಪವಿತ್ರತೆಯ ಬಗೆಗೆ ಇದ್ದ ಅರ್ಥ ಅದಕ್ಕಿರಲಿಲ್ಲ. ಸಿಲೋನಿ ಬೌದ್ಧಮತದಲ್ಲಿ, ಈ ವಿಚಾರದಲ್ಲಿ ಇರುವ ನಿರ್ದಿಷ್ಟವಾದ ನಂಬಿಕೆ ಮತ್ತು ಆಚರಣೆಗಳ ಬಗೆಗೆ ನನಗೇನೂ ತಿಳಿದಿಲ್ಲ; ಆದರೆ ಬರ್ಮಾ ಮತ್ತು ಚೈನಾಗಳಲ್ಲಿ ಅದು ಪಡೆದಿರುವ ರೂಪದ ಅರಿವು ನನಗಿದೆ. ಬರ್ಮಾದಲ್ಲಿ, ವಿಶೇಷವಾಗಿ ಬೌದ್ಧಮತೀಯರು ಒಂದು ಸಣ್ಣ ಪ್ರಾಣಿಯನ್ನೂ ಸಹ ಕೊಲ್ಲುವುದಿಲ್ಲ. ಆದರೆ ಇತರರು ಅವರಿಗಾಗಿ ಪ್ರಾಣಿಗಳನ್ನು ಕೊಂದು, ತಮ್ಮ ಆಹಾರಕ್ಕಾಗಿ, ಅವುಗಳ ಶವಗಳನ್ನು ಅಡುವುದಾದರೆ ಅವರಿಗೆ ಅಭ್ಯಂತರವಿಲ್ಲ. ಕಠೋರವಾದ ಕಾರ್ಯಕಾರಣ ಪರಿಣಾಮ ನಿಯಮವನ್ನು ಒತ್ತಿಹೇಳಿದ ಬೋಧಕ, ಪ್ರಪಂಚದಲ್ಲಿ ಯಾರಾದರೂ ಇದ್ದದ್ದಾದರೆ ಅವನು ಗೌತಮನೆ. ಆದರೂ ಭಾರತದ ಹೊರಗಿನ ಬೌದ್ಧಮತೀಯ ಮಿತ್ರರು ಪ್ರಯತ್ನ ಪಟ್ಟಲ್ಲಿ ತಮ್ಮ ಕೃತ್ಯಗಳ ಪರಿಣಾಮಗಳನ್ನು ತಪ್ಪಿಸಬಹುದು.

"ಒಂದೇ ಒಂದು ವಿಷಯವನ್ನು ಹೇಳಿ ನಾನು ಮುಗಿಸುತ್ತೇನೆ. ಬುದ್ಧನನ್ನು ನಿಮ್ಮ ಅಂತರಂಗದ ಪ್ರಭುವನ್ನಾಗಿ ಸ್ವೀಕರಿಸಿರುವ ನೀವು, ಯಾರಿಗಾಗಿ ಅವನು ದುಡಿದನೊ ಮತ್ತು ಯಾರಿಗಾಗಿ ಪ್ರಾಣ ತೆತ್ತನೊ ಆ ಲಕ್ಷಾಂತರ ಮಂದಿ ಅನುಯಾಯಿ

ಗಳಿರುವ ಅವನ ಜನ್ಮಭೂಮಿಗೆ ನೀವು ಕಿಂಚಿತ್ತಾದರೂ ಋಣವನ್ನು ಸಲ್ಲಿಸಬೇಕು. ಇಂದು ಆ ಜನ ದುರವಸ್ಥೆಯ ಬದುಕನ್ನು ನಡೆಸುತ್ತಿದ್ದಾರೆ. ನಿಮ್ಮ ಹೃದಯದ ಪ್ರಭುವಿನ ನಡುವೆ ನೀವು ಜೀವಂತ ಬಾಂಧವ್ಯವನ್ನು ಸ್ಥಾಪಿಸಲು ಖಾದಿಯು ಅವಕಾಶ ನೀಡುತ್ತದೆಂಬ ಸಲಹೆ ನೀಡುವ ಸಾಹಸ ಮಾಡುತ್ತೇನೆ. ಅವನ ಬೋಧನೆಯಕೇಂದ್ರ ತತ್ವವನ್ನು ನೀವು ಅನುಸರಿಸಿದಲ್ಲಿ ಮತ್ತು ಎಲ್ಲ ಜೀವವೂ ನಶ್ವರವಾಗಿರುವಾಗ ಎಲ್ಲ ಐಹಿಕ ವಸ್ತುಗಳ ತ್ಯಾಗವೆ ಚಿರಂತನವಾಗಬೇಕೆಂದು ನೀವು ಗಣಿಸಿದಲ್ಲಿ ಖಾದಿಯ ಸಂದೇಶದ ಸೌಂದರ್ಯವನ್ನು ನೀವು ಒಮ್ಮೆಗೆ ಕಾಣುವಿರಿ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸರಳ ಜೀವನ ಮತ್ತು ಉನ್ನತ ಚಿಂತನೆಯೇ ಅದು. ಈ ಎರಡು ಆಲೋಚನೆಗಳನ್ನು ಸ್ವೀಕರಿಸಿ ಅದರ ವಿವರಗಳನ್ನು ಭರ್ತಿಮಾಡಿಕೊಂಡು ಖಾದಿಯ ಸಂದೇಶದ ಬಗೆಗೆ ನಿಮ್ಮದೆ ಆದ ಅರ್ಥವನ್ನು ಕಂಡುಕೊಳ್ಳಬೇಕೆಂದು ನಿಮ್ಮಲ್ಲಿ ಪ್ರತಿಯೊಬ್ಬರಿಗೂ ನಾನು ಸೂಚಿಸುತ್ತೇನೆ."

ವೈ.ಎಂ.ಸಿ.ಎ. ಸಭಾಂಗಣದಲ್ಲಿ ಅದ್ಭುತ ನೆರವಿಯನ್ನುದ್ದೇಶಿಸಿ ಮಾತನಾಡುತ್ತಾ ಅವರು ಹೀಗೆ ಹೇಳಿದರು: "ನಾನು ಕ್ರಿಶ್ಚಿಯನ್ ಅಲ್ಲವೆಂದು ನೇರವಾಗಿ ನಿರಾಕರಿಸಿದರೂ ಕೆಲವರು ಅದನ್ನೊಪ್ಪುವುದಿಲ್ಲ." ಈ ಅವಕಾಶ ದೊರೆತುದಕ್ಕೆ ಸಂತೋಷಿಸುತ್ತಾ ಅವರು ಕ್ರೈಸ್ತಮತದ ಬಗೆಗೆ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಿದರು.

"ನಾನು ತಿಳಿದಂತೆ ಜೀಸಸ್ಸನ ಪರಿಶುದ್ಧ ಸಂದೇಶವು ಸಿನ್ಯೆ ಬೆಟ್ಟದ ಮೇಲೆ ಮಾಡಿದ ಅವನ ಧರ್ಮೋಪದೇಶದಲ್ಲಡಗಿದೆ. ಅದನ್ನು ಒಟ್ಟಾರೆ ಗಮನಿಸಿದಾಗ ನನ್ನ ಅರ್ಥ ವಿವರಣೆಯು ಅನೇಕ ದೃಷ್ಟಿಗಳಿಂದ ಸಂಪ್ರದಾಯವಾದಿಗಳಿಂದ ಭಿನ್ನವಾಗುತ್ತದೆ. ಪರ್ವತೋಪದೇಶಕ್ಕೆ ಸಂಬಂಧಿಸಿದ ನನ್ನ ವ್ಯಾಖ್ಯಾನವೂ ಅಷ್ಟೆ. ಪಾಶ್ಚಾತ್ಯ ದೇಶಗಳಲ್ಲಿ ಈ ಸಂದೇಶವು ವಿರೂಪ ಪಡೆದಿದೆಯೆಂದು ನನ್ನ ಭಾವನೆ. ಒಬ್ಬನ ಮತವು, ಆತನ ಮತ್ತು ಅವನ ಸೃಷ್ಟಿಕರ್ತನ ನಡುವಣ ವಿಚಾರವಾಗಿರುತ್ತದೆಯೆ ಹೊರತು ಬೇರೆ ಯಾರಿಗೂ ಸಂಬಂಧಿಸಿರುವುದಿಲ್ಲ. ಆದರೆ ಈ ಸಂಜೆ ನನ್ನ ಆಲೋಚನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕೆಂದು ನನ್ನ ಮನಸ್ಸು ಬಯಸುತ್ತಿದೆ. ಏಕೆಂದರೆ ನನ್ನ ಸತ್ಯಶೋಧನೆ ಯಲ್ಲಿ ನಿಮ್ಮ ಸಹಾನುಭೂತಿಯನ್ನು ನಾನು ಪಡೆಯಲಿಚ್ಛಿಸುತ್ತೇನೆ. ಮತ್ತು ಜೀಸಸ್‌ನ ಉಪದೇಶಗಳ ಬಗೆಗಿನ ನನ್ನ ಆಲೋಚನೆಗಳಲ್ಲಿ ಅನೇಕ ಕ್ರಿಶ್ಚಿಯನ್ ಮಿತ್ರರು ಆಸಕ್ತಿ ತೋರಿದ್ದಾರೆ.

"ಹಾಗಾದರೆ ಕ್ರೈಸ್ತ ಧರ್ಮೋಪದೇಶವನ್ನು ಮತ್ತು ಅದರ ಮೇಲಿನ ನನ್ನ ಅರ್ಥ ವಿವರಣೆಯನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡರೆ 'ಹೌದು ನಾನೊಬ್ಬ ಕ್ರಿಶ್ಚಿಯನ್' ಎಂದು ಹೇಳಲು ನಾನು ಹಿಂಜರಿಯಬೇಕಾಗಿಲ್ಲ. ಕ್ರಿಶ್ಚಿಯನ್ ಮತದ ಬಗೆಗೆ ನನ್ನ ಅಭಿಪ್ರಾಯವನ್ನು ನಿಮ್ಮ ಮುಂದಿಡುವ ಇಚ್ಛೆ ನನಗಿಲ್ಲ. ನೇತ್ಯರ್ಥದಲ್ಲಿ ಹೇಳು ವುದಾದರೆ, ಇಂದು ಕ್ರಿಸ್ತಮತವೆಂದು ಯಾವುದು ಪರಿಗಣಿಸಲ್ಪಟ್ಟಿದೆಯೋ ಅದು

ಕ್ರಿಸ್ತಧರ್ಮೋಪದೇಶಕ್ಕೆ ವಿರುದ್ಧವಾಗಿದೆಯೆಂದು ನನಗನ್ನಿಸುತದೆ. ದಯವಿಟ್ಟು ನನ್ನ ಮಾತುಗಳನ್ನು ಗಮನಿಸಿ. ಕ್ರಿಶ್ಚಿಯನ್ ನಡತೆಯ ಬಗೆಗೆ ನಾನೀಗ ಏನೂ ಹೇಳುತ್ತಿಲ್ಲ. ಕ್ರಿಶ್ಚಿಯನ್ ನಂಬಿಕೆಯ ಬಗೆಗೆ ಮತ್ತು ಪಾಶ್ಚಾತ್ಯರು ಅರಿತಿರುವ ಕ್ರೈಸ್ತಮತದ ಬಗೆಗೆ ನಾನು ಮಾತನಾಡುತ್ತಿದ್ದೇನೆ. ಎಲ್ಲೆಡೆಯೂ, ನಡೆಯು ನಂಬಿಕೆಗಿಂತ ಹಿಂದೆ ಬೀಳುತ್ತದೆಂಬ ಸಂಕಟಪೂರ್ಣ ಅರಿವು ನನಗಿದೆ. ಟೀಕೆಯ ರೂಪದಲ್ಲಿ ನಾನಿದನ್ನು ಹೇಳುತ್ತಿಲ್ಲ. ಆದರೆ ನನ್ನ ಮೂಲಭೂತ ತೊಂದರೆಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

"ದಕ್ಷಿಣ ಆಫ್ರಿಕಾದಲ್ಲಿ ಒಬ್ಬ ಶ್ರದ್ಧಾನ್ವಿತ ವಿದ್ಯಾರ್ಥಿಯಂತೆ ಕ್ರಿಶ್ಚಿಯನ್ ಸಾಹಿತ್ಯವನ್ನು ಅಭ್ಯಸಿಸಲು ತೊಡಗಿದಾಗ 'ಇದು ಕ್ರೈಸ್ತಮತವೇ' ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡೆ. ಅದಕ್ಕೆ ಪ್ರತಿಸಲವೂ ನನ್ನಲ್ಲಿ 'ನೇತಿ, ನೇತಿ', ಇದಲ್ಲ ಇದಲ್ಲವೆಂಬ ವೈದಿಕ ಉತ್ತರ ಮೂಡುತ್ತಿತ್ತು. ನನ್ನ ಅಂತರ್ವಾಣಿ ಸಹ ನನ್ನ ಅಭಿಪ್ರಾಯವೇ ಸರಿಯೆಂದು ಸಾರುತ್ತದೆ.

"ನಾನು ನಂಬಿಕೆ ಮತ್ತು ದೈವಶ್ರದ್ಧೆಯುಳ್ಳ ವ್ಯಕ್ತಿಯಾಗಿದ್ದೇನೆ. ನನ್ನನ್ನು ಛಿದ್ರ ಛಿದ್ರಗೊಳಿಸಿದರೂ ಸಹ ಭಗವಂತನನ್ನು ನಿರಾಕರಿಸದಿರಲು ಮತ್ತು ಅವನ ಇರವನ್ನು ಪ್ರತಿಪಾದಿಸಲು ಆತನೇ ಶಕ್ತಿಯನ್ನು ಕೊಡುವನೆಂಬ ವಿಶ್ವಾಸ ನನಗಿದೆ. ಮುಸಲ್ಮಾನನು ಹೇಳುತ್ತಾನೆ ಅವನೊಬ್ಬನೆ; ಮತ್ತು ಬೇರಾರು ಇಲ್ಲ ಎಂದು. ಹೇಳುವ ಮಾತುಗಳು ಭಿನ್ನ ಭಿನ್ನವಾದರೂ ಕ್ರಿಶ್ಚಿಯನ್ ಹೇಳುವುದೂ ಅದೇ; ಹಿಂದೂಗಳು ಮತ್ತು ನಾನು ಸಹ ಹೇಳುವುದು ಅದನ್ನೆ; ಮತ್ತು ಬೌದ್ಧಮತೀಯನು ಹೇಳುವುದೂ ಅದನ್ನೆ. ನಾವು ಹೇಳುವ ಮಾತುಗಳೆಲ್ಲ ಒಂದೇ ಆದರೂ ಅವು ನಮ್ಮೆಲ್ಲರಿಗೂ ಒಂದೇ ಅರ್ಥವನ್ನು ಕೊಡುತ್ತಿಲ್ಲ. ಈ ಕಾರಣದಿಂದ ನಮ್ಮ ಬರಹ ಮತ್ತು ಮಾತುಗಳ ಮೂಲಕ 'ಶುದ್ಧಿ ಅಥವಾ ತಬ್ಲಿಗ್' ಮಾಡಿಕೊಳ್ಳಬೇಕಾದ ಅಥವಾ ಮತಾಂತರಮಾಡಿಕೊಳ್ಳಬೇಕಾದ ಅಗತ್ಯವಿಲ್ಲ. ವಾಸ್ತವವಾಗಿ ನಮ್ಮ ಬದುಕುಗಳ ಮೂಲಕವೇ ಅದನ್ನು ಮಾಡಬಹುದು. ಅವು ಎಲ್ಲರೂ ಓದಬಹುದಾದಂಥ ತೆರೆದ ಪುಸ್ತಕಗಳಾಗಲಿ, ಧರ್ಮಪ್ರಚಾರಕ ಮಿತ್ರರು ಈ ದೃಷ್ಟಿಯನ್ನು ತಮ್ಮ ಧ್ಯೇಯವಾಗಿಟ್ಟುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಆಗ ಯಾವ ಅಪನಂಬಿಕೆ, ಸಂದೇಹ, ಅಸೂಯೆ, ಭಿನ್ನಾಭಿಪ್ರಾಯಗಳೂ ಇರಲಾರವು."

ಈ ಹೇಳಿಕೆಗೆ ಅವರು ಆಧುನಿಕ ಚೈನವನ್ನು ನಿದರ್ಶನವಾಗಿ ತೆಗೆದುಕೊಂಡರು. ಕ್ರಿಸ್ತಮತ ಪ್ರಸಾರ ಆತ್ಮಾಭಿವ್ಯಕ್ತಿಗೆ ಘಾತಕವಾಗುತ್ತದೆಂದು ಎಳೆಯ ಚೀನಾ ಪರಿಗಣಿಸಿತು; ಮತ್ತು ಗಾಂಧೀಜಿಗೆ ಈ ಆತ್ಮಾಭಿವ್ಯಕ್ತಿಯ ನೈತಿಕತೆ ಸ್ಪಷ್ಟವಾಗಿತ್ತು.

"ಈ ನಿಮ್ಮ ಕ್ರಿಸ್ತಮತ ಪ್ರಚಾರವು ರಾಷ್ಟ್ರವಿರೋಧಿಯಾಗದಿರಲಿ ಎಂದು ಯುವ ಚೈನೀಯರು ಹೇಳುತ್ತಾರೆ. ಪಶ್ಚಿಮದಿಂದ ಕಾಲಿಟ್ಟಿರುವ ಈ ಕ್ರಿಶ್ಚಿಯನ್ ಉದ್ಯಮದಲ್ಲಿ ಅವರ ಕ್ರಿಶ್ಚಿಯನ್ ಮಿತ್ರರಿಗೂ ಸಹ ಅಪನಂಬಿಕೆಯುಂಟಾಗಿದೆ. ಈ ನಿದರ್ಶನದಿಂದ ನೀವು ಗ್ರಹಿಸಬೇಕಾದ ಅಂಶವೆಂದರೆ, ಸಿಲೋನಿಗಳಾದ ನೀವು

ನಿಮ್ಮ ಆಧಾರದ ಕೊಂಡಿಗಳಿಂದ ಕಳಚಿಕೊಳ್ಳಬೇಡಿ. ಮೂಲಭೂತ ನೈತಿಕ ತತ್ವ ಮತ್ತು ಶೀಲಗಳಿಗೆ ಸಿಲೋನಿ ರೀತಿನೀತಿಗಳು, ಸಂಪ್ರದಾಯಗಳು ಮತ್ತು ವಾಡಿಕೆಗಳು ಎಲ್ಲಿಯ ವರೆಗೆ ವಿರೋಧಿಯಾಗುವುದಿಲ್ಲವೊ ಅಲ್ಲಿಯ ವರೆಗೆ ಪಾಶ್ಚಾತ್ಯರು ಪ್ರಜ್ಞಾಪೂರ್ವಕ ವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ಅವುಗಳ ಮೇಲೆ ರಾಕ್ಷಸೀ ಹಸ್ತಗಳನ್ನು ಚಾಚದಿರಲಿ. ಈಗಿರುವ ಆಧುನಿಕ ನಾಗರಿಕತೆಯೊಂದಿಗೆ ಜೀಸಸ್‌ನ ಬೋಧನೆಯನ್ನು ತೊಡಕುಗೊಳಿಸಬೇಡಿ. ಯಾರ ನಡುವೆ ನಿಮ್ಮ ಭಾಗ್ಯವನ್ನರಸುತ್ತೀರೋ ಆ ಜನರಿಗೆ ಅಪ್ರಜ್ಞಾಪೂರ್ವಕ ಹಿಂಸೆಯನ್ನೆಸಗಬೇಡಿರೆಂದು ಕೇಳಿಕೊಳ್ಳುತ್ತೇನೆ. ಪೌರ್ವಾತ್ಯರ ಬದುಕನ್ನು ಅದರ ಮೂಲದಿಂದ ಬೇರ್ಪಡಿಸುವುದು ಆ ಸಂದೇಶದ ಭಾಗವಲ್ಲವೆಂದು ನಾನು ನಿಮಗೆ ದೃಢಪಡಿಸುತ್ತೇನೆ. ಒಳ್ಳೆಯದೇನಾದರೂ ಅವರಲ್ಲಿದ್ದರೆ ಸ್ವೈರಿಸಿಕೊಳ್ಳಿ. ನಿಮ್ಮ ಪೂರ್ವಕಲ್ಪಿತ ಭಾವನೆಗಳಿಂದ ಆತುರವಾಗಿ ಅವರನ್ನು ಅಳೆಯಬೇಡಿ. ನಿಮ್ಮ ಯೋಗ್ಯತೆಯನ್ನು ನೀವು ನಿರ್ಣಯಿಸಿಕೊಂಡ ಹೊರತು ಬೇರೆಯವರನ್ನು ಅಳೆಯ ಹೋಗಬೇಡಿ.

"ಪಾಶ್ಚಾತ್ಯ ನಾಗರಿಕತೆಯಲ್ಲಿ ನಂಬಿಕೆಯಿದ್ದರೂ ಮತ್ತು ನಿಮ್ಮೆಲ್ಲ ಸಾಧನೆಗಳ ಬಗೆಗೆ ನಿಮಗೆ ಹೆಮ್ಮೆಯಿದ್ದರೂ ನೀವು ವಿನಮ್ರತೆಯನ್ನು ಗಳಿಸಬೇಕೆಂದು ಕೋರುತ್ತೇನೆ. ಸಂದೇಹಕ್ಕೆ ತುಸು ಅವಕಾಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಟೆನಿಸನ್ ಹಾಡಿರುವಂತೆ ಆ ಸಂದೇಹಕ್ಕೆ ಬೇರೊಂದು ಅರ್ಥವಿದ್ದರೂ ಅದರಲ್ಲಿ ಹೆಚ್ಚಿನ ಸತ್ಯ ವಿದ್ದಿತು. ನಮ್ಮ ಬದುಕನ್ನು ನಾವು ಬಾಳೋಣ. ನಮ್ಮದು ಋಜು ಜೀವನವಾದಲ್ಲಿ ಆತುರಕ್ಕೆ ಕಾರಣವಾದರೂ ಎಲ್ಲಿದೆ? ಅದು ತನಗೆ ತಾನೇ ಪ್ರಕ್ರಿಯೆ ತೋರಿಸುತ್ತದೆ."

"ವೈ.ಎಂ.ಸಿ.ಎ.ಯಲ್ಲಿ ಬೌದ್ಧ ಮತೀಯ ಸದಸ್ಯರೂ ಇದ್ದರು. ಕ್ರಿಶ್ಚಿಯನ್ ಮತ್ತು ಬೌದ್ಧ ಯುವಜನರನ್ನು ಕುರಿತು ಕೆಲವು ಬುದ್ಧಿವಾದದ ಮಾತುಗಳನ್ನು ಆಡಬೇಕೆಂದು ಅದರ ಅಧ್ಯಕ್ಷರು ಗಾಂಧೀಜಿಯನ್ನು ಕೇಳಿಕೊಂಡಿದ್ದರು. ಗಾಂಧೀಜಿಗೆ ಅವರಿಗೆ ಹೀಗೆ ಸಂದೇಶವಿತ್ತರು:

"ಪಶ್ಚಿಮದ ಕಡೆಯಿಂದ ಬರುವ ವೈಭವಕ್ಕೆ ಬೆರಗಾಗಬೇಡಿ. ಈ ಕ್ಷಣಿಕ ಪ್ರದರ್ಶನ ದಲ್ಲಿ ಮೈಮರೆಯಬೇಡಿ. ಅಲ್ಪಾವಧಿಯ ಬದುಕು ಕೇವಲ ಕ್ಷಣಿಕವಾದೊಂದು ಛಾಯೆ ಮತ್ತು ಒಂದು ಕ್ಷಣಭಂಗುರ ವಸ್ತುವೆಂದು ಆ ಮಹಾಜ್ಞಾನಿ (ಬುದ್ಧ) ಅವಿಸ್ಮರಣೀಯ ನುಡಿಗಳಲ್ಲಿ ಹೇಳಿದ್ದಾನೆ. ನಿಮ್ಮ ಕಣ್ಣುಗಳ ಮುಂದೆ ಕಂಡಬರುವ ಎಲ್ಲದರ ಮತ್ತು ಈ ನಮ್ಮ ಕಣ್ಮುಂದೆಯೇ ನಿರಂತರ ಬದಲಾವಣೆಗೊಳಗಾಗುವ ಭೌತ ಶರೀರದ ನಶ್ವರತೆಯನ್ನು ನೀವು ಅರಿಯುವುದಾದರೆ ಇಹದಲ್ಲಿ ಶಾಂತಿಯೂ ಪರದಲ್ಲಿ ಸಂಪದವೂ ನಿಮಗೆ ಲಭಿಸುತ್ತವೆ. ಸರ್ವಜ್ಞಾನ ಮತ್ತು ಆನಂದಗಳನ್ನೊಳಗೊಳ್ಳುವ ಆ ಶಾಂತಿಗೆ ನಾವು ಸಂಪೂರ್ಣ ಹೊಸಬರಾಗಿದ್ದೇವೆ. ಅದನ್ನು ಪಡೆಯಲು ಅದ್ಭುತ ನಿಷ್ಠೆ, ದೈವೀ ಶ್ರದ್ಧೆ ಮತ್ತು ನಮ್ಮ ಮುಂದೆ ಕಾಣುವ ಸರ್ವಪ್ರಾಪಂಚಿಕ ಸಂಗತಿಗಳ ಪರಿತ್ಯಾಗ ಈ ಎಲ್ಲವೂ ಅವಶ್ಯಕ.

"ಬುದ್ಧ, ಕ್ರೈಸ್ತ ಹಾಗೂ ಮಹಮ್ಮದ್ ಸಹ ಮಾಡಿದ್ದೇನು? ಅವರದು ಸ್ವಾರ್ಥ ತ್ಯಾಗದ ಮತ್ತು ವೈರಾಗ್ಯದ ಬದುಕು. ಬುದ್ಧನು ಸಮಸ್ತ ಪ್ರಾಪಂಚಿಕ ಸುಖವನ್ನು ತೊರೆದನು. ಕಾರಣ, ಸತ್ಯಾನ್ವೇಷಣೆಗಾಗಿ ಶ್ರಮಿಸಿದ ಮತ್ತು ತ್ಯಾಗಮಾಡಿದ ವ್ಯಕ್ತಿಗಳು ಹೊಂದಬಹುದಾಗಿದ್ದಂಥ ಆನಂದವನ್ನು ಅವನು ಪಡೆದಿದ್ದ. ಅದನ್ನು ಜಗತ್ತಿನೊಂದಿಗೆ ಹಂಚಿಕೊಳ್ಳುವ ಇಚ್ಛೆ ಅವನಿಗಿದ್ದಿತು.

"ಗೌರೀಶಂಕರದ ತುದಿಗೇರಿ ಹಲಕೆಲವು ಪರಿವೀಕ್ಷಣೆಗಳನ್ನು ನಡೆಸುವ ಸಲುವಾಗಿ ಅಮೂಲ್ಯ ಜೀವಗಳನ್ನು ತ್ಯಾಗಮಾಡುವುದು ಮತ್ತು ಭೂಮಿಯ ಎತ್ತರದ ತುತ್ತ ತುದಿಯಲ್ಲಿ ಧ್ವಜವನ್ನು ನೆಡುವುದಕ್ಕಾಗಿ ಅನೇಕಾನೇಕ ಜೀವಗಳನ್ನು ಕೊಡುವುದು ಮಹದ್ವಿಷಯವಾಗುವುದಾದರೆ ಸಶಕ್ತ ಹಾಗೂ ಅವಿನಾಶಿಯಾದ ಸತ್ಯದ ಅನ್ವೇಷಣೆ ಯಲ್ಲಿ ಕೇವಲ ಒಂದು ಜೀವವನ್ನಲ್ಲ, ಮಿಲಿಯಗಟ್ಟಲೆ ಬಿಲಿಯಗಟ್ಟಲೆ ಜೀವಗಳ ನ್ನೊಪ್ಪಿಸುವುದು ಇನ್ನೆಂಥ ಮಹದ್ವಿಷಯವಾಗಿರುವುದಿಲ್ಲ?

"ಆದ್ದರಿಂದ ಉದ್ರೇಕದಿಂದ ಮೈಮರೆಯಬೇಡಿ, ನಿಮ್ಮ ಪೂರ್ವಿಕರ ಸರಳತೆ ಯಿಂದ ದೂರ ಸರಿಯಬೇಡಿ. ತಮ್ಮ ವಾಂಛೆಗಳನ್ನು ಹೆಚ್ಚಿಸಿಕೊಳ್ಳುವ ಹುಚ್ಚು ಆತುರದಲ್ಲಿ, ಅವು ನಿಜವಾದ ಸತ್ವವನ್ನು ಜಗತ್ತಿನ ಪರಿಶುದ್ಧ ಜ್ಞಾನವನ್ನು ವೃದ್ಧಿ ಗೊಳಿಸುತ್ತವೆಂಬ ಒಣ ಹೆಮ್ಮೆಯಿಂದ ಬೀಗುವ ಜನ ತಮ್ಮನ್ನು ಪುನರ್ವಿಮರ್ಶಿಸಿ ಕೊಳ್ಳುವ ಕಾಲ ಬರಲಿದೆ. ಆಗ ಅವರು ಹೇಳುತ್ತಾರೆ, 'ನಾವೇನು ಮಾಡಿದ್ದೇವೆ?' ಎಂದು.

"ನಾಗರಿಕತೆಗಳು ಹುಟ್ಟಿವೆ ಮತ್ತು ಅಳಿದಿವೆ. ನಮ್ಮ ಈ ಎಲ್ಲ ಏಳಿಗೆಯ ಬಗೆಗೆ ಬಡಾಯಿ ಕೊಚ್ಚಿದರೂ 'ಇದು ಯಾವ ಉದ್ದೇಶಕ್ಕಾಗಿ' ಎಂದು ಮತ್ತೆ ಮತ್ತೆ ಕೇಳ ಬೇಕೆನಿಸುತ್ತದೆ. ವ್ಯಾಲೆಸ್ಸನೂ ಸಹ ಇದನ್ನೆ ಹೇಳಿದ್ದಾನೆ. ಐವತ್ತು ವರ್ಷಗಳ ಉಜ್ವಲ ಸಂಶೋಧನೆಗಳು ಮತ್ತು ಅನ್ವೇಷಣೆಗಳು ಮಾನವಕುಲದ ನೈತಿಕ ಮಟ್ಟವನ್ನು ಒಂದು ಅಂಗುಲದಷ್ಟೂ ಹೆಚ್ಚಿಸಿಲ್ಲವೆಂದು ಆತ ಹೇಳಿದ್ದಾನೆ. ಒಬ್ಬ ಕನಸುಗಾರ ಹಾಗೂ ದಾರ್ಶನಿಕ ಟಾಲ್‌ಸ್ಟಾಯ್ ಹೇಳಿದ್ದೂ ಅದನ್ನೆ. ಏಸು, ಬುದ್ಧ ಮತ್ತು ಮೊಹಮ್ಮದರೂ ಅದನ್ನೇ ಹೇಳಿದರು; ಅವರ ಧರ್ಮಗಳೆಲ್ಲ ಇಂದು ನನ್ನ ದೇಶದಲ್ಲೆ ನಿರಾಕರಣೆಗೆ ಗುರಿ ಯಾಗಿವೆ ಮತ್ತು ತಪ್ಪು ನಿರೂಪಣೆಗೊಳಗಾಗಿವೆ.

"ಏನೇ ಆಗಲಿ ಕ್ರಿಸ್ತನು ನಿಮಗೆ ನೀಡಿರುವ ಉಪದೇಶಾಮೃತವನ್ನು ಸಂಪೂರ್ಣ ವಾಗಿ ಪಾನಮಾಡಿ. ಇಲ್ಲದಿದ್ದಲ್ಲಿ ಅನಂತರ ನೀವು ಪಶ್ಚಾತ್ತಾಪ ಪಡಬೇಕಾಗುತ್ತದೆ ಆ ಉಪದೇಶವು ನಮ್ಮಲ್ಲಿ ಒಬ್ಬೊಬ್ಬರನ್ನೂ ಉದ್ದೇಶಿಸಿ ಹೇಳಿದ್ದಾಗಿದೆ. ನೀವು ದೇವರು ಮತ್ತು ಧನಪಿಶಾಚಿಯಿಬ್ಬರ ಸೇವೆಯನ್ನು ಮಾಡಲಾರಿರಿ."

ಕೊಲಂಬೋದಲ್ಲಿ ಅವರು ಮಾಡಿದ ಕೊನೆಯ ಮುಖ್ಯ ಭಾಷಣವು ೧೬ರಂದು ಕಾರ್ಮಿಕ ಸಂಘದ ಆಶ್ರಯದಲ್ಲಿ ಜರುಗಿತು:

"ನಿಮ್ಮ ಅಭಿನಂದನಾ ಭಾಷಣದಲ್ಲಿ ಉಪಯೋಗಿಸಿದ 'ಮಾತೃಭಾರತಿ' ಎಂಬ ಮಾತಿನಿಂದ ನನ್ನ ಅಂತರಂಗವು ಕರಗಿಹೋಗಿದೆ. ನನ್ನ ವಿನಮ್ರ ಅಭಿಪ್ರಾಯದ ಪ್ರಕಾರ ಆ ಮಾತಿನ ಬಳಕೆಯು ದೊಡ್ಡ ಅರ್ಥವನ್ನು ಸೂಚಿಸುತ್ತದೆ, ಕಾರಣ ನಿಮ್ಮಲ್ಲಿ ಎಲ್ಲರೂ ಭಾರತೀಯರಲ್ಲವೆಂಬುದು ನನಗೆ ತಿಳಿದಿದೆ. ನೀವು ಈ ಮಾತನ್ನು ಬಳಸಿದ ವೇಳೆಯಲ್ಲಿ ಅದಕ್ಕೆ ನಾನು ಸಂಯೋಜಿಸುವ ಮತ್ತು ಈಗ ನಾನು ವಿವರಿಸಲಿರುವ ಅರ್ಥವು ಬಹುಶಃ ನಿಮ್ಮ ನಡುವೆ ಇರುವ ಭಾರತೀಯೇತರರ ಒಳಗಣ್ಣಿನ ಮುಂದಿದ್ದಿರಲಾರದು.

"ಬಹುಕಾಲದ ಹಿಂದೆ ರಾಮನೆಂಬ ರಾಜ ದುಷ್ಟ ದೊರೆಯೊಬ್ಬನಿಂದ ಈ ದ್ವೀಪವನ್ನು ಬಿಡುಗಡೆ ಮಾಡಲು ಲಂಕೆಗೆ ಬಂದನೆಂದೂ, ಮತ್ತು ಭಾರತಕ್ಕೆ ಈ ಸುಂದರ ದ್ವೀಪವನ್ನು ಸೇರಿಸಿಕೊಳ್ಳುವ ಮೂಲಕ ತನ್ನ ದಿಗ್ವಿಜಯದ ಹಕ್ಕನ್ನು ಚಲಾಯಿಸುವ ಬದಲು ಅವನು ಆ ದುಷ್ಟ ದೊರೆಯ ಸಹೋದರನಾದ ವಿಭೀಷಣನೆಂಬುವನಿಗೆ ಆ ರಾಜ್ಯವನ್ನು ಹಿಂದಕ್ಕೊಪ್ಪಿಸಿ ಅವನನ್ನು ಲಂಕೆಯ ರಾಜನನ್ನಾಗಿ ಮಾಡಿದನೆಂದೂ ಐತಿಹ್ಯವು ಹೇಳುತ್ತದೆ. ಐತಿಹ್ಯವು ಆಗಾಗ ಇತಿಹಾಸಕ್ಕಿಂತ ಮೇಲ್ಮಟ್ಟದ್ದಾಗಿರುತ್ತದೆ.

"ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ, ರಾಮನು ಲಂಕೆಯ ಜನರ ಅಥವಾ ರಾಜ ವಿಭೀಷಣನ ನಿಷ್ಠೆಯನ್ನು ಪರೀಕ್ಷಿಸದೆ ಮತ್ತು ಅವನನ್ನು ಅಥವಾ ಜನರನ್ನು ಕೆಲಕಾಲ ಆಶ್ರಿತ ಸ್ಥಿತಿಯಲ್ಲಿರಿಸಿಕೊಳ್ಳದೆ ಅವರಿಗೆ ನೇರವಾಗಿ ಸಂಪೂರ್ಣ ಸ್ವಾಯತ್ತ ಅಧಿಕಾರವನ್ನು ಕೊಟ್ಟುಬಿಟ್ಟನು.

"ಈ ಐತಿಹ್ಯ ಹುಟ್ಟಿದ ಕಾಲದಿಂದ ಈ ನಾಡಿನಲ್ಲಿ ಮತ್ತು ಭಾರತದಲ್ಲಿ ಅನೇಕ ಬದಲಾವಣೆಗಳು ಸಂಭವಿಸಿವೆ; ಮತ್ತು ಎರಡು ದೇಶಗಳ ಭಾಗ್ಯದಲ್ಲೂ ಅನೇಕ ವಿಪರ್ಯಾಸಗಳಾಗಿವೆ. ಆದರೆ ಭಾರತದ ಲಕ್ಷಾಂತರ ಜನ ಇಂದಿಗೂ ಇತಿಹಾಸದ ಯಾವುದೇ ಸಂಗತಿಗಳಿಗಿಂತ ಹೆಚ್ಚಾಗಿ ಈ ಐತಿಹ್ಯವನ್ನು ದೃಢವಾಗಿ ನಂಬುತ್ತಾರೆಂಬುದು ಸತ್ಯಸಂಗತಿಯಾಗಿದೆ. ಈ ಮನೋಹರ ದ್ವೀಪದ ಜನರಾದ ನಿಮಗೆ, ನಿಮ್ಮ ಸಮೀಪದ ನೆರೆನಾಡಿನೊಂದಿಗೆ ಕಿಂಚಿತ್ತಾದರೂ ನಂಟನ್ನು ಹೊಂದುವುದು ಅವಮಾನಕರವೆನಿಸದಿದ್ದಲ್ಲಿ, ಈ ಐತಿಹ್ಯವನ್ನು ಹೊಂದಿರುವ ಬಗೆಗೆ ಲಕ್ಷಾಂತರ ಮಂದಿ ಭಾರತೀಯರಲ್ಲಿರುವ ಹೆಮ್ಮೆಯಲ್ಲಿ ಭಾಗಿಗಳಾಗಬೇಕೆಂದು ನಾನು ನಿಮಗೆ ಹೇಳಬಯಸುತ್ತೇನೆ.

"ನನ್ನ ವಿನೀತ ಅಭಿಪ್ರಾಯದಲ್ಲಿ ಒಂದು ಕುವರೀರಾಜ್ಯದವರಾದ ನೀವು ಆ ದೇಶಕ್ಕೆ ನಿಮ್ಮ ನಿಷ್ಠೆಯನ್ನು ವ್ಯಕ್ತಪಡಿಸುವಾಗ 'ಮಾತೃಭಾರತಿ' ಎಂಬ ಪದವನ್ನು ಬಳಸಿದುದು ಸೂಕ್ತವೇ ಆಯಿತೆಂದು ನಾನು ಏಕೆ ಹೇಳಿದಿದೆನೆಂಬುದು ನಿಮಗೀಗ ಅರ್ಥವಾಗಿರಬೇಕು.

"ಐತಿಹ್ಯದಲ್ಲಿ ಬರುವ ರಾಮನೆಂಬುವನು ಈ ಭೂಮಿಯ ಮೇಲೆ ಇದ್ದನೊ ಇಲ್ಲವೊ ಮತ್ತು ಅದರಲ್ಲಿ ಬರುವ ಹತ್ತು ತಲೆಯ ರಾವಣನು ಲಂಕೆಯಲ್ಲಿದ್ದನೊ ಇಲ್ಲವೊ, ಆದರೆ ಇಂದು ಒಬ್ಬ ರಾಮನೂ ಬದುಕಿದ್ದಾನೆ ಮತ್ತು ಒಬ್ಬ ರಾವಣನೂ

ಬದುಕಿದ್ದಾನೆಂಬುದು ಸತ್ಯ. ಹಿಂದೂಧರ್ಮದಲ್ಲಿ ರಾಮ ಎಂಬುದು ಭಗವಂತನ ಮಧುರವಾದ ಮತ್ತು ಪವಿತ್ರವಾದ ನಾಮ; ಹಿಂದೂ ಪುರಾಣದಲ್ಲಿ ಮಾನುಷ ಸ್ವರೂಪದಲ್ಲಿ ತೋರ್ಪಡುವ ದುಷ್ಟತನಕ್ಕೆ ರಾವಣನೆಂಬ ಅಂಕಿತವಿದೆ. ದೌಷ್ಟ್ಯ ಎಲ್ಲಿಯೇ ತಲೆದೋರಿದರೂ ಅದನ್ನು ನಾಶಮಾಡುವುದು ದೇವರಾದ ರಾಮನ ಕರ್ತವ್ಯ; ಮತ್ತು ವಿಭೀಷಣನಂಥ ತನ್ನ ಭಕ್ತರಿಗೆ ಮರಳಿ ಪಡೆಯಲಾಗದ ಸ್ವತಂತ್ರ ರಾಜ್ಯದ ಸಂಪೂರ್ಣ ಅಧಿಕಾರವನ್ನು ನೀಡುವುದೂ ಅವನ ಕರ್ತವ್ಯವೆ.

"ನಾವು ಕಾರ್ಮಿಕರೆ ಆಗಿರಲಿ ಅಥವಾ ಬೇರೆ ಏನೇ ಆಗಿರಲಿ ನಾವೆಲ್ಲರೂ ನಮ್ಮಲ್ಲಿರುವ ರಾಮನ ಬೆಂಬಲದಿಂದ, ನಮ್ಮೊಳಗೇ ಇರುವ ದಶಮುಖೀ ಪಾಪ ದೈತ್ಯನನ್ನು ತೊಲಗಿಸೋಣ ಮತ್ತು ಆತ್ಮಶಾಸನದ ಅಧಿಕಾರವನ್ನು ಬೇಡೋಣ.

"ಸಲ್ಲಬೇಕಾಗಿರುವ ಬಾಕಿಯನ್ನಿನ್ನೂ ಪಡೆಯದಿರುವ ಸೋದರ ಕಾರ್ಮಿಕರಾದ ನಿಮಗೆ ಕೇಡಿನಿಂದ ಮುಕ್ತಿ ಪಡೆಯಲು ಮತ್ತು ಸ್ವರಾಜ್ಯಕ್ಕೆ ಅರ್ಹತೆಯನ್ನು ಗಳಿಸಲು ರಾಮನ ನೆರವಿನ ಮತ್ತು ಅವನ ಅನುಗ್ರಹದ ವಿಶೇಷ ಅಗತ್ಯವಿದೆ.

"ದಕ್ಷಿಣ ಆಫ್ರಿಕಾದ ಕರಾರುಬಂಧಿತ ಕಾರ್ಮಿಕರಿಗೆ ಬಹುಮಟ್ಟಿನ ಸ್ವಾತಂತ್ರ್ಯವನ್ನು ನಾನು ತಂದುಕೊಟ್ಟೆನೆಂದು ಅಥವಾ ಅಹಮದಾಬಾದಿನ ಅಥವಾ ಚಂಪಾರಣ್ಯದ ಕಾರ್ಮಿಕರಿಗೆ ನಾನು ಬಿಡುಗಡೆಯನ್ನು ದೊರಕಿಸಿಕೊಟ್ಟೆನೆಂದು ಯಾರಾದರೂ ಹೇಳಿದಲ್ಲಿ ಅದನ್ನು ನೀವು ನಂಬಬೇಡಿ. ತಂತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಅವರಿಗೆ ದೊರೆಯಿತಷ್ಟೆ. ಸ್ವತಂತ್ರ ಸರ್ಕಾರವನ್ನು ನಿಯಂತ್ರಿಸುವ ಕಠೋರ ನಿಯಮಗಳಿಗನುಗುಣವಾಗಿ ಅವರು ವರ್ತಿಸಿದರು. ಸ್ವಪ್ರಯತ್ನವೇ ಅವರ ವಿಜಯಕ್ಕೆ ಕಾರಣ.

"ಸ್ವತಂತ್ರರಾಗಲು ನನ್ನ ದೃಷ್ಟಿಯಲ್ಲಿ ನೀವು ಮಾಡಬೇಕಾದುದೇನೆಂಬುದನ್ನೀಗ ಸಂಕ್ಷೇಪವಾಗಿ ಹೇಳುವೆ. ಸಂಘಗಳ ರೂಪದಲ್ಲಿ ನೀವೆಲ್ಲ ಒಟ್ಟುಗೂಡುವುದು ನಿಸ್ಸಂದೇಹವಾಗಿ ಮೊದಲ ಕೆಲಸ. ಈ ಕೆಳಗೆ ನಾನು ಸೂಚಿಸುವ ಇತರ ನಿಯಮಗಳನ್ನನುಸರಿಸದಿದ್ದಲ್ಲಿ ನಿಮ್ಮ ಪ್ರತಿಯೊಂದು ಸಂಘವೂ ಬಂಧನದ ಕಾರಣಗಳಲ್ಲೊಂದಾಗಿ ಪರಿಣಮಿಸಬಹುದೆಂದು ಅನುಭವದಿಂದ ನಾನು ಹೇಳುತ್ತೇನೆ.

"ನಿಮ್ಮಲ್ಲಿಯ ಪ್ರತಿಯೊಬ್ಬರೂ ಸ್ವಾರ್ಥಸಾಧನೆಯಲ್ಲಿ ತೊಡಗದೆ ಉಳಿದ ತಮ್ಮ ಸೋದರ ಕಾರ್ಮಿಕರ ಕಲ್ಯಾಣಕ್ಕಾಗಿ ಶ್ರಮಿಸುವ ಒಬ್ಬ ಧರ್ಮದರ್ಶಿಯೆಂದು ನಿಮ್ಮನ್ನು ಪರಿಗಣಿಸಿಕೊಳ್ಳಬೇಕು. ಪರಿಸ್ಥಿತಿಯು ಎಷ್ಟೇ ತೀವ್ರವಾಗಿದ್ದರೂ ಮತ್ತು ಪ್ರಚೋದಕವಾಗಿದ್ದರೂ ನೀವು ಅಹಿಂಸಾವಾದಿಗಳಾಗಿರಬೇಕು; ಮತ್ತು ಎಂದೂ ಅದೇ ಮಾರ್ಗದಲ್ಲಿ ಮುನ್ನಡೆಯಬೇಕು. ನೀವು ಮನುಷ್ಯರಾಗಿರುವ ಪಕ್ಷಕ್ಕೆ ಮತ್ತು ನಿಮ್ಮ ಘನತೆಯನ್ನರಿತು ಕೊಂಡಿದ್ದ ಪಕ್ಷಕ್ಕೆ ನೀವು ಕುಡಿತದ ದುಶ್ಚಟಕ್ಕೆ ಬಲಿಯಾಗಿದ್ದಲ್ಲಿ ಅದನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಅದರ ದುಷ್ಪ್ರಭಾವಕ್ಕೊಳಗಾದ ವ್ಯಕ್ತಿಯು ಮೃಗಕ್ಕಿಂತ ಕೀಳಾಗುತ್ತಾನೆ; ಮತ್ತು ಸೋದರಿ ತಾಯಿ ಮತ್ತು ಹೆಂಡತಿಯರ ನಡುವಣ ಭೇದವನ್ನು ಮರೆ

ಯುತ್ತಾನೆ. ನಿಮ್ಮ ಸ್ನೇಹಿತನೆಂದು ನನ್ನನ್ನು ನಿಜವಾಗಿಯೂ ನಂಬುವುದಾದರೆ, ಈ ವೃದ್ಧ ಮಿತ್ರನ ಬುದ್ಧಿವಾದವನ್ನು ನೀವು ಗ್ರಹಿಸುತ್ತೀರಿ; ಬುಸುಗುಡುವ ಹಾವಿನಿಂದ ದೂರವಿರುವಂತೆ ಕುಡಿತದಿಂದ ದೂರವಿರುತ್ತೀರಿ. ಹಾವು ಶರೀರವನ್ನು ಮಾತ್ರ ನಾಶಮಾಡುತ್ತದೆ; ಆದರೆ ಕುಡಿತದ ಶಾಪವು ಒಳಗಿನ ಆತ್ಮವನ್ನೇ ಭ್ರಷ್ಟಗೊಳಿಸುತ್ತದೆ. ಹಾವಿಗಿಂತಲೂ ಭಯಪಡಬೇಕಾದ ಮತ್ತು ದೂರವಿಡಬೇಕಾದ ಸಂಗತಿಯಿದು. ಜೂಜನ್ನೂ ಸಹ–ಆ ಕೆಟ್ಟ ಚಟಕ್ಕೆ ನೀವು ಒಳಗಾಗಿದ್ದಲ್ಲಿ–ತೊರೆಯಬೇಕು.

"ಮನುಷ್ಯನು ಬಹು ಹಿಂದಿನಿಂದಲೂ ವಿವಾಹದ ಪವಿತ್ರತೆಯನ್ನು ಅರಿತಕೊಂಡಿದ್ದಾನೆ; ಮತ್ತು ತನ್ನ ಮೇಲೆ ಹೆಚ್ಚು ಹೆಚ್ಚು ಆರೋಪಿಸಿಕೊಂಡ ಆತ್ಮಸಂಯಮದ ಮೂಲಕ ಸ್ತ್ರೀಯರಿಗೆ ಸಂಬಂಧಿಸಿದಂತೆ ತನ್ನ ಜೀವನವನ್ನು ನಿಯಂತ್ರಿಸಿಕೊಂಡಿದ್ದಾನೆ. ಇದು ಮನುಷ್ಯನನ್ನು ಮೃಗಗಳಿಂದ ಬೇರ್ಪಡಿಸಿರುವ ಸಂಗತಿಗಳಲ್ಲಿ ಬಹು ತೀವ್ರವಾದುದು. ಮೂಲಭೂತ ಸಭ್ಯತೆಯ ನಿಯಮಗಳನ್ನು ಪಾಲಿಸುವ ಸಲುವಾಗಿ ಪ್ರತ್ಯೇಕ ಹಾಗೂ ತಕ್ಕ ವಸತಿಗಳನ್ನು ಹೊಂದಲು ನಿಮ್ಮ ಸಂಪಾದನೆ ಸಾಲುವುದಿಲ್ಲವೆನ್ನೋಣ. ಅಂಥ ಹೀನ ಪರಿಸ್ಥಿತಿಯಲ್ಲಿ ಮತ್ತು ಸಾಲದ ಅರೆಕೂಲಿಗಾಗಿ ಕೆಲಸ ಮಾಡಲು ನೀವು ನಿರಾಕರಿಸಬೇಕು. ನೈತಿಕತೆಯ ಮೂಲಭೂತ ನಿಯಮಗಳನ್ನು ಅನುಸರಿಸಲು ಅಸಾಧ್ಯವಾಗುವಂತಹ ಅರೆಕೂಲಿಯ ದುಡಿಮೆಗಿಂತ ಸಂಪೂರ್ಣಉಪವಾಸವನ್ನು ನೀವು ಸ್ವೀಕರಿಸಿದಲ್ಲಿ ಧೀರರೆಂದು ನಿಮ್ಮನ್ನು ಗೌರವಿಸುತ್ತೇನೆ.

"ಬಾಹ್ಯ ಆಘಾತಗಳ ವಿರುದ್ಧವಾದ ರಕ್ಷಣೆಗೆ ಮಾತ್ರವಲ್ಲದೆ ಆಂತರಿಕಸುಧಾರಣೆಗೂ ನಿಮ್ಮ ಸಂಘವನ್ನು ಬಳಸಬೇಕೆಂದು ಸಲಹೆ ನೀಡುತ್ತೇನೆ. ಹಕ್ಕು ಮತ್ತು ಸವಲತ್ತುಗಳಿಗಾಗಿ ನೀವು ಒತ್ತಾಯ ಮಾಡುವುದು ಸರಿಯೆ. ಆದರೆ ಆ ಪ್ರತಿಯೊಂದು ಹಕ್ಕಿನೊಂದಿಗೆ ಇರುವ ಹೊಣೆಯ ಅರಿವು ನಿಮ್ಮಲ್ಲಿರಬೇಕಾದುದು ಅತ್ಯವಶ್ಯ. ಯಥೋಚಿತ ಕೂಲಿಯ ಬಗೆಗೆ, ಯಜಮಾನರಿಂದ ನಿರೀಕ್ಷಿಸುವ ಮಾನವೀಯತೆಯ ಬಗೆಗೆ, ಯೋಗ್ಯ ಮತ್ತು ಚೊಕ್ಕಟವಾದ ವಸತಿಗಳ ಬಗೆಗೆ ನೀವು ಒತ್ತಾಯ ಮಾಡುವಂತೆಯೇ ನಿಮ್ಮ ಮಾಲೀಕರ ವ್ಯವಹಾರವನ್ನು ನಿಮ್ಮದೇ ವ್ಯವಹಾರವೆಂಬಂತೆ ಪರಿಗಣಿಸಿ ಅದಕ್ಕೆ ನಿಮ್ಮ ಪ್ರಾಮಾಣಿಕ ಹಾಗೂ ಸಂಪೂರ್ಣ ಲಕ್ಷ್ಯವನ್ನು ಕೊಡಬೇಕೆಂಬುದನ್ನೂ ನೀವು ಅರಿತಿರಬೇಕು.

"ಕೊನೆಯದಾಗಿ, ಭಾರತದ ನತದೃಷ್ಟ ಜನಕೋಟಿಯ ಬಗೆಗೆ ನೀವು ಗಮನ ಹರಿಸಿರುವುದು ಒಳ್ಳೆಯದೆ; ಅದರ ಜೊತೆಗೆ ನೀವು ಭಾರತವನ್ನು ಮಾತೃ ರಾಜ್ಯವೆಂದು, ಮಾತೃದೇಶವೆಂದು ಈಗಲೂ ಗಣಿಸಿರುವುದಾದರೆ ನಿಮ್ಮ ಮತ್ತು ಆ ಜನರ ನಡುವೆ ಒಂದು ಸಜೀವ ಬಾಂಧವ್ಯವನ್ನು ಏರ್ಪಡಿಸಬೇಕೆಂದು ನಾನು ನಿಮಗೆ ಸಲಹೆ ನೀಡುತ್ತೇನೆ. ನೀವು ಬಟ್ಟೆಗಾಗಿ ವೆಚ್ಚಮಾಡುವ ಪ್ರತಿಯೊಂದು ಬಿಡಿಗಾಸನ್ನೂ ಬಡವರ ಸಲುವಾಗಿ ಖಾದಿಗಲ್ಲದೆ ಬೇರೆ ಯಾವುದಕ್ಕೂ ವಿನಿಯೋಗಿಸದಿರಿ".

ಕೊಲಂಬೊದಲ್ಲಿ ನಾಲ್ಕು ದಿನಗಳನ್ನು ಕಳೆದ ನಂತರ ಗಾಂಧೀಜಿ ಚಿಲೌ ವರೆಗಿನ ಉತ್ತರ ಕರಾವಳಿಯುದ್ದಕ್ಕೂ ಮೋಟಾರಿನಲ್ಲಿ ಹೋದರು. ಅಲ್ಲಿಂದ ಕುರುನೆಗಲದ ಬಳಿ ಗುಡ್ಡ ಗಾಡಿನ ಜಿಲ್ಲೆಗಳನ್ನು ಪ್ರವೇಶಿಸಿ ಅಲ್ಲಿಂದ ದಾರಿಯುದ್ದಕ್ಕೂ ಅನೇಕ ಸ್ಥಳಗಳಿಗೆ ಭೇಟಿ ಕೊಡುತ್ತಾ ಕೊನೆಗೆ ಕ್ಯಾಂಡಿಯನ್ನು ತಲುಪಿದರು. ಬದುಲ್ಲದಲ್ಲಿ ಅವರು ಹೀಗೆ ಹೇಳಿದರು: "ಕ್ಯಾಂಡಿಯಿಂದ ಈ ಪ್ರದೇಶಕ್ಕೆ ನಾನಿಂದು ಬರುತ್ತಿರುವಾಗ ನನ್ನ ಜೀವನದಲ್ಲೆ ಎಂದೂ ನೋಡಿರದಂಥ ಅತ್ಯಂತ ರಮಣೀಯ ದೃಶ್ಯಾವಳಿಗಳನ್ನು ನಾನು ಕಂಡೆ. ಪ್ರಕೃತಿಯು ಇಷ್ಟು ಕೃಪಾಪೂರ್ಣಳಾಗಿರುವಾಗ, ಇಂಥ ಮುಗ್ಧ ಮೋಹಕತೆಗೆ ಅವಕಾಶ ನೀಡಿರುವಾಗ ಮತ್ತು ಉಸಿರಾಡಲು ಇಂಥ ಚೈತನ್ಯಯುಕ್ತ ಗಾಳಿಯನ್ನು ಅನುಗ್ರಹಿಸುವಾಗ ಗಂಡಸೇ ಆಗಲಿ, ಹೆಂಗಸೇ ಆಗಲಿ ಶೀಘ್ರ ಸ್ಫುರಣಕಾರಿಯಾದ ಆದರೆ ಮಾರಕವಾದ ಮದ್ಯದ ಸುಖಪರವಶತೆಯನ್ನು ಕಾಣಬಯಸುವುದು ಪಾಪಕೃತ್ಯವೇ ಸರಿ."

ಮೊದಲ ವಾರದ ಕೊನೆಯ ಹೊತ್ತಿಗೆ ಒಟ್ಟು ಸಂಗ್ರಹ ೬೦,೦೦೦ ರೂ.ಗಳಷ್ಟಾಗಿದ್ದಿತು. ನುವಾರ ಎಲಿಯ, ಬದುಲ್ಲ ಮತ್ತು ಹ್ಯಾಟನ್ನಿನ ಸುತ್ತಮುತ್ತಣ ಟೀ ತೋಟಗಳ ಕೆಲಸಗಾರರು 'ಗಾಂಧೀ ರಾಜ'ನನ್ನು ನೋಡಲು ಬಂದಿದ್ದುದಲ್ಲದೆ ತಮ್ಮ ಅಲ್ಪ ಕಾಣಿಕೆಯನ್ನು ಸಲ್ಲಿಸಿದರು. ಈ ನಿಷ್ಕಪಟ ಜನರ ವಸತಿಗಳಿಗೆ ಹೋಗಿ ಖಾಯಿಲೆಗಳಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬುದನ್ನು ಗಾಂಧೀಜಿ ಅವರಿಗೆ ತೋರಿಸಿಕೊಟ್ಟರು. ಆ ಜನರೊಂದಿಗೆ ಹೆಚ್ಚು ಕಾಲ ಕಳೆಯಲು ಸಾಧ್ಯವಾಗದಿದ್ದುದಕ್ಕಾಗಿ ಅವರು ಪಶ್ಚಾತ್ತಾಪ ಪಟ್ಟರು. ಪರಿಶುದ್ಧತೆ ಮತ್ತು ಮದ್ಯವರ್ಜನೆಗಳ ಸಂದೇಶವನ್ನಷ್ಟೆ ಆ ಜನರಿಗೆ ನೀಡಲು ಅವರಿಗೆ ಸಾಧ್ಯವಾಯಿತು.

ಈ ಅವಿಶ್ರಾಂತ ದಿನಗಳ ಅವಧಿಯಲ್ಲಿ ಗಾಂಧೀಜಿ ನೀಡಿದ ಅಸಂಖ್ಯಾತ ಭಾಷಣಗಳಲ್ಲಿ ಆಪ್ತ ಸಂಗತಿಯೊಂದು ಎದುರಾಯಿತು. 'ಕಸ್ತೂರಿ ಬಾ ನಿಮ್ಮ ತಾಯಿಯೆ' ಎಂದು ಒಂದೆಡೆ ಸಂಭಾವಿತ ವ್ಯಕ್ತಿಯೊಬ್ಬ ಗಾಂಧೀಜಿಯನ್ನು ಕೇಳಿದನು. ಅದಕ್ಕವರು 'ಹೌದು' ಎಂದರು. ಮರುದಿನ ಬೆಳಗ್ಗೆ ಮತಾಲೆಯಲ್ಲಿ ನಡೆದ ಸಾರ್ವಜನಿಕ ಸಭೆಗೆ ಕಸ್ತೂರಿ ಬಾ ಬಂದಿರಲಿಲ್ಲ. ಅವರನ್ನು ಅಲ್ಲಿ ಕಾಣದೆ ಜನರು ಗಾಂಧೀಜಿಯನ್ನು 'ತಾಯಿ' ಏಕೆ ಬರಲಿಲ್ಲವೆಂದು ಕೇಳಿದರು. ಅದಕ್ಕವರು ಹೀಗೆ ಉತ್ತರಿಸಿದರು: "ನಿನ್ನೆ ರಾತ್ರಿ ಒಬ್ಬ ಮನುಷ್ಯ ಆಕೆ ನನ್ನ ತಾಯಿಯೆಂದು ತಪ್ಪಾಗಿತಿಳಿದರು. ಆ ಪ್ರಮಾದವು ನನ್ನ ಮತ್ತು ಆಕೆಯ ದೃಷ್ಟಿಯಲ್ಲಿ ಕ್ಷಮಾರ್ಹವಷ್ಟೆ ಅಲ್ಲ ಸ್ವಾಗತಾರ್ಹವೂ ಹೌದು. ಪರಸ್ಪರ ಸಮ್ಮತಿಯಿಂದ ಬಹುವರ್ಷಗಳ ಹಿಂದಿನಿಂದಲೂ ಆಕೆ ನನ್ನ ಹೆಂಡತಿಯಾಗುಳಿದಿಲ್ಲ. ಸುಮಾರು ನಲವತ್ತು ವರ್ಷಗಳ ಹಿಂದೆ ನಾನು ಅನಾಥನಾದೆ. ಮೂವತ್ತು ವರ್ಷಗಳು ಆಕೆ ನನ್ನ ತಾಯಿಯ ಸ್ಥಾನವನ್ನು ತುಂಬಿದ್ದಾಳೆ. ಕಸ್ತೂರಿ ಬಾ ನನಗೆ ತಾಯಿ, ಗೆಳತಿ, ದಾದಿ, ಅಡಿಗೆಗಾತಿ, ಮುಸುರೆಯಾಕೆ—ಈ ಎಲ್ಲವೂ ಆಗಿದ್ದಾಳೆ. ದಿನದ ಮುಂಜಾನೆ ಆಕೆ ಗೌರವಾದರಗಳಲ್ಲಿ ಪಾಲುಗೊಳ್ಳಲು ನನ್ನೊಡನೆ ಬಂದಲ್ಲಿ ನನಗೆ ಊಟವಿಲ್ಲದಂತಾಗುತ್ತದೆ ನನ್ನ ಬಟ್ಟೆಬರೆಗಳು ಮುಂತಾದ ನನ್ನ ದೇಹಸೌಕರ್ಯ

ಗಳನ್ನು ನೋಡಿಕೊಳ್ಳುವವರಿಲ್ಲದಂತಾಗುತ್ತದೆ. ಆದ್ದರಿಂದ ನಾನು ಎಲ್ಲ ಗೌರವವನ್ನೂ ಪಡೆಯುವುದು ಮತ್ತು ಆಕೆ ಎಲ್ಲ ದುಡಿಮೆ ಮಾಡುವುದು ಎಂಬ ಒಂದು ಯಂತ್ರ ಕರಾರನ್ನು ಮಾಡಿಕೊಂಡಿದ್ದೇವೆ".

ಸಿಲೋನಿ ರಾಷ್ಟ್ರೀಯ ಕಾಂಗ್ರೆಸ್ಸನ್ನುದ್ದೇಶಿಸಿ ಮಾಡಿದ ಭಾಷಣದೊಂದಿಗೆ ತಮ್ಮ ಎರಡನೆಯ ವಾರದ ಕಾರ್ಯಕ್ರಮವನ್ನು ಅವರು ಮುಕ್ತಾಯಗೊಳಿಸಿದರು. "ಭಾರತದಲ್ಲಿ ಕಾಂಗ್ರೆಸ್ ಎಂಬ ಹೆಸರು ಒಂದು ವಿಶೇಷ ಮಹಿಮೆಯನ್ನು ಪಡೆದಿದೆ. ಆದ್ದರಿಂದ ಈ ಹೆಸರನ್ನು ಅಂಗೀಕರಿಸುವಲ್ಲಿ ನೀವು ಕೂಡ ಮಾತ್ರ ಸಂಸ್ಥೆಯ ಸಂಪ್ರದಾಯಗಳನ್ನು ಅನುಸರಿಸುತ್ತೀರೆಂದು ನಾನು ಭಾವಿಸುತ್ತೇನೆ" ಎಂದವರು ಹೇಳಿ ಅನಂತರ ಅವರ ಸಂಸ್ಥೆಯ ಗುರಿಯೇನಾಗಿರಬೇಕೆಂಬುದನ್ನು ಸ್ಪಷ್ಟಪಡಿಸಿದರು. "ನಿಮ್ಮಂ-ತೆಯೇ ಇತರರೂ ಭಾರತಕ್ಕೆ ನಿಷ್ಠೆಯನ್ನು ತೋರಿಸುವಂತೆ ಮತ್ತು ರಾಮಾಯಣದ ಕಥೆಯೊಡನೆಯ ಸಂಬಂಧವನ್ನು ಒಪ್ಪುವಂತೆ ಮಾಡಿ, ಸ್ವರಾಜ್ಯಂತರ್ಗತವಾದ ರಾಮ ರಾಜ್ಯದಿಂದ ಮಾತ್ರ ನೀವು ತೃಪ್ತಿಯನ್ನು ಪಡೆಯಬೇಕೇ ಹೊರತು ಬೇರೆ ಯಾವುದರಿಂದಲೂ ಅಲ್ಲ."

ಮೂರನೆಯ ವಾರದಲ್ಲಿ ಸಿಲೋನಿನ ದಕ್ಷಿಣತುದಿಯ ಪ್ರದೇಶಗಳಾದ ಗಾಲೆ ಮತ್ತು ಮತಾರಗಳಿಗೆ ಹೋಗುವ ದಾರಿಯಲ್ಲಿ ಮೊರೆತುವ, ಪನಡುರ, ಹೊರನ್ನ, ಕಲುತರ ಮತ್ತು ಇನ್ನೂ ಅನೇಕ ಸ್ಥಳಗಳಿಗೆ ಗಾಂಧೀಜಿ ಭೇಟಿಯಿತ್ತರು. ಬಹುಶಃ ಅವರ ಹೆಸರನ್ನು ಮೊದಲ ಬಾರಿಗೆ ಕೇಳಿದ ಸಿಂಹಳಿ ಹಳ್ಳಿಗರು ಅವರನ್ನು ಕಾಣಲು ಕಾತರದಿಂದ ಕಾಯುತ್ತಿದ್ದರು. ಕಾರ್ಯಕ್ರಮಗಳ ಪಟ್ಟಿಯಲ್ಲಿಲ್ಲದಿದ್ದರೂ ಸಹ ತಿರನಾಗಮ ಮಹಿಳಾ ಬೌದ್ಧಸಂಘವು ಅವರಿಗೆ ಕಾಣಿಕೆ ಹಾಗೂ ಅಭಿನಂದನೆಯನ್ನು ಸಲ್ಲಿಸಿತು. "ಅನೇಕ ಶತಮಾನಗಳ ನಂತರ ನಿಮ್ಮ ಪವಿತ್ರಪಾದದ ಸ್ಪರ್ಶದಿಂದ ಈ ಸುಂದರ ಲಂಕಾ ದ್ವೀಪದ ನೆಲ ಪಾವನವಾಗಿದೆ" ಎಂದು ಮೊದಲಾದ ಅಭಿನಂದ ಭಾಷಣವು "ಖಾದಿಯ ಸಂದೇಶವನ್ನು ಹೊತ್ತು, ನಮ್ಮ ಸಮಾನ ಮಾತೃ ಭೂಮಿಯಲ್ಲಿ ಸಂಕಷ್ಟದಲ್ಲಿರುವ ಸೋದರರ ಪರವಾಗಿ ಭಿಕ್ಷಾಪಾತ್ರೆಯನ್ನು ಹಿಡಿದು ಬಂದ" ಅವರ ಭೇಟಿಯ ಸವಿ ನೆನಪನ್ನು ಆನಂದದಿಂದ ಉಲ್ಲೇಖಿಸಿತು.

ಬಾಲಪಿಟಿಯದಲ್ಲಿ, ಆಲದೆಲೆಯ ಮೇಲೆ ಲಿಖಿತವಾದ ಬಿನ್ನವತ್ತಳೆಯನ್ನು ಸುಂದರ ಬೆಳ್ಳಿಯ ಸಂಪುಟದಲ್ಲಿಟ್ಟು ಗಾಂಧೀಜಿಗೆ ಅರ್ಪಿಸಲಾಯಿತು. "ಈ ದ್ವೀಪದ ಖಾಯಂ ನಿವಾಸಿಗಳು ನಿಮ್ಮ ಮತ್ತು ನಿಮ್ಮ ದೇಶದ ಜನರ ನಡುವೆ ಇರುವ ಬಾಂಧವ್ಯವನ್ನು ಅರಿತಿದ್ದಾರೆ; ಎಂದಿಗೂ ಮರೆತಿಲ್ಲ" ಎಂದು ಅಭಿನಂದನೆಯಲ್ಲಿ ಹೇಳಲಾಗಿತ್ತು. ಹಾಗೂ ಬುದ್ಧಗಯೆಯ ಬಗೆಗೆ ಬೌದ್ಧಮತೀಯರ ಹಕ್ಕುಗಳನ್ನು ಭಾರತೀಯರು ನಿರಾಕರಿಸುತ್ತಿರುವುದೇಕೆ ಎಂದು ಆಶ್ಚರ್ಯ ವ್ಯಕ್ತಪಡಿಸಲಾಗಿತ್ತು.

ಗಾಲೆಯಲ್ಲಿನ ಸ್ವಾಗತ ಸಮಾರಂಭದಲ್ಲಿ ಬಹುಮಟ್ಟಿಗೆ ವಿದ್ಯಾರ್ಥಿಗಳ ಕೈವಾಡ ವಿದ್ದಿತು. ಮತಾರದಲ್ಲಿ ಮೋಟಾರು ಚಾಲಕರ ಸಂಘವು ಪ್ರಧಾನ ಪಾತ್ರ ವಹಿಸಿತ್ತು.

ಅವರು ವಿಚಿತ್ರವಾಗಿ ಅಲಂಕೃತಗೊಂಡ ಸುಮಾರು ನೂರು ಮೋಟಾರು ಬಂಡಿಗಳ ಮೆರವಣಿಗೆಯನ್ನು ವ್ಯವಸ್ಥೆಮಾಡಿದ್ದರು; ಜೊತೆಗೆ ಅಭಿನಂದನಾ ಭಾಷಣ ಮಾಡಿ ಕಾಣಿಕೆಯನ್ನೂ ನೀಡಿದರು. ಅಕ್ಮಿಮಾನದಲ್ಲಿ ಬಾಲಕಿಯರ ಒಂದು ನೇಯ್ಗೆಯ ಶಾಲೆಗೆ ಶಂಕುಸ್ಥಾಪನೆ ಮಾಡಲು ಅವರನ್ನು ಪ್ರಾರ್ಥಿಸಿಕೊಳ್ಳಲಾಗಿತ್ತು. ಮತ್ತು ಮತಾರ ಮತ್ತು ಗಾಲೆಯ ನಡುವಣ ಗ್ರಾಮಗಳು ತಮ್ಮ ಕಿರುಗಾಣಿಕೆಗಳನ್ನು ಸಲ್ಲಿಸಲಿದ್ದುವು. ದಕ್ಷಿಣದಿಂದ ಗಾಂಧೀಜಿ ಮತ್ತೆ ತಮ್ಮ ಕೇಂದ್ರಕಾರ್ಯಸ್ಥಾನವಾದ ಕೊಲಂಬೋಗೆ ಹಿಂದಿರುಗಿದರು. ಅಲ್ಲಿ ಅವರಿಗಾಗಿ ಇನ್ನೂ ಅನೇಕ ಸಭೆಗಳೂ ಕಾಣಿಕೆಗಳೂ ಸಹ ಸಿದ್ಧ ವಾಗಿದ್ದುವು. ಆದರೆ ಹೇಳಿಕೊಳ್ಳುವಂಥ ಜನಸಾಮಾನ್ಯರ ಯಾವ ದೊಡ್ಡ ಸಭೆಯೂ ಇರಲಿಲ್ಲ. ಸಿಲೋನಿನ ವಿದ್ಯಾವಂತ ಪ್ರಭುತ್ವ ವರ್ಗವು ಜನಸಾಮಾನ್ಯರ ಸಂಪರ್ಕವಿಲ್ಲದ ಕಟ್ಟುನಿಟ್ಟಾದ ಪ್ರತ್ಯೇಕತೆಯಲ್ಲಿ ಬಾಳುತ್ತಿತ್ತು. ಕೊಲಂಬೋದಲ್ಲಿನ ಸಿಂಹಳೀ ಮಹಿಳೆ ಯರ ಸಾರ್ವಜನಿಕ ಸಭೆಯು ಒಂದು ಭವ್ಯ ಸೌಧದ ದಿವಾನಖಾನೆಯಲ್ಲಿ ಸೇರಿತ್ತು. ಅದು ಒಂದು ಡಜನ್‌ಗಿಂತ ಸ್ವಲ್ಪ ಹೆಚ್ಚಿನ ಸಂಖ್ಯೆಯ ಶ್ರೀಮಂತ ಮಹಿಳೆಯರ ಕೂಟ ವಾಗಿದ್ದಿತು. ಅವರನ್ನುದ್ದೇಶಿಸಿ ಭಾಷಣ ಮಾಡುತ್ತಾ ಗಾಂಧೀಜಿ ಹೀಗೆ ಹೇಳಿದರು:

"ಮಹೇಂದ್ರನು ಸಿಲೋನಿಗೆ ಬಂದಿದ್ದಾಗ ತಾಯಿನಾಡಿನ ಮಕ್ಕಳು ಭೌತಿಕ ಅಥವಾ ಆಧ್ಯಾತ್ಮಿಕ ಹಸಿವಿನಿಂದ ನರಳುತ್ತಿರಲಿಲ್ಲ; ನಮ್ಮ ಭಾಗ್ಯವು ಆಗ ಉಚ್ಛ್ರಾಯ ಸ್ಥಿತಿಯಲ್ಲಿತ್ತು; ಮತ್ತು ಅದನ್ನು ನೀವೂ ಹಂಚಿಕೊಂಡಿದ್ದಿರಿ. ಆದರೆ ಆ ಮಕ್ಕಳು ಇಂದು ಕಂಗೆಟ್ಟಿದ್ದಾರೆ. ಅವರಿಗಾಗಿ ನಾನು ಭಿಕ್ಷಾಪಾತ್ರೆ ಹಿಡಿದು ಬಂದಿದ್ದೇನೆ. ಅವರೊಡನೆ ಇರುವ ಬಾಂಧವ್ಯವನ್ನು ನೀವು ನಿರಾಕರಿಸದೆ ಅದರಲ್ಲಿ ಅಲ್ಪಸ್ವಲ್ಪ ಉತ್ಸಾಹ ವನ್ನು ತೋರುವಲ್ಲಿ ಇತರ ಅನೇಕ ಸ್ಥಳಗಳಲ್ಲಿನ ಸೋದರಿಯರು ಮಾಡಿರುವಂತೆ ನೀವೂ ನಿಮ್ಮ ಹಣವನ್ನು ಮಾತ್ರವಷ್ಟೆ ಅಲ್ಲ ನಿಮ್ಮ ಆಭರಣಗಳನ್ನೂ ನನಗೆ ನೀಡಬೇಕು. ಭಾರಿಯಾಗಿ ಅಲಂಕರಿಸಿಕೊಂಡ ಸೋದರಿಯರನ್ನು ನಾನು ನೋಡಿದಾಗಲೆಲ್ಲ ನನ್ನ ಹಸಿದ ಕಂಗಳು ಅವರ ಆಭರಣಗಳ ಮೇಲೆ ನೆಲಸುತ್ತವೆ. ಆ ಒಡವೆಗಳನ್ನು ಕೇಳು ವುದರಲ್ಲಿ ರಮಣಿಯರ ಆಭರಣಗಳ ಹುಚ್ಚನ್ನು ಬಿಡಿಸಬೇಕೆಂಬ ದೂರದ ಉದ್ದೇಶವೂ ಇದೆ. ಮಹಿಳೆಗೆ ಪತಿಗಿಂತ ಹೆಚ್ಚಿನ ಶೃಂಗಾರ ಸಾಧನ ಯಾವುದು ಎಂದು ಇತರ ಸೋದರಿಯರಲ್ಲಿರುವ ಸಲುಗೆಯಿಂದ ನಿಮ್ಮನ್ನು ಕೇಳಲೇನು? ಪತಿಯ ಪ್ರೀತ್ಯರ್ಥ ವಾಗಿ ಹಾಗೆ ಮಾಡುತ್ತೇವೆಂದು ಮಹಿಳಾ ಮಿತ್ರರು ಹೇಳಿರುವುದನ್ನು ನಾನು ಕೇಳಿದ್ದೇನೆ. ಒಳ್ಳೆಯದು; ಆದರೆ ನೀವು ಜಗತ್ತಿನ ವ್ಯವಹಾರಗಳಲ್ಲಿ ಪಾಲುಗೊಳ್ಳಬೇಕಾದಲ್ಲಿ ಗಂಡನ ಮೆಚ್ಚಿಗೆಗಾಗಿ ಅಲಂಕಾರ ಮಾಡಿಕೊಳ್ಳುವುದನ್ನು ತೊರೆಯಬೇಕು. ನಾನು ಒಬ್ಬ ಹೆಂಗಸಾಗಿ ಹುಟ್ಟಿದ್ದಲ್ಲಿ, ಸ್ತ್ರೀಯು ತನ್ನ ಆಟಿಕೆಯಾಗಲು ಹುಟ್ಟಿದ್ದಾಳೆಂಬ ಗಂಡನಿಗೆ ಸಂಬಂಧಿಸಿದ ಯಾವುದೇ ಹಕ್ಕಿನ ವಿರುದ್ಧ ದಂಗೆಯೇಳುತ್ತಿದ್ದೆ. ಅವಳ ಅಂತರಂಗದ ರಹಸ್ಯವನ್ನರಿಯಲು ನಾನು ಮಾನಸಿಕವಾಗಿ ಹೆಣ್ಣಾಗಿದ್ದೇನೆ. ನಾನು ಹಿಂದೆ ಗಂಡನಾಗಿ ಹೆಂಡತಿಯ ಬಗೆಗೆ ನಡೆದುಕೊಳ್ಳುತ್ತಿದ್ದುದಕ್ಕಿಂತ ವಿಭಿನ್ನವಾಗಿ

ನಡೆದುಕೊಳ್ಳಬೇಕೆಂದು ತೀರ್ಮಾನಿಸುವವರೆಗೆ ಆಕೆಯ ಹೃದಯವನ್ನರಿಯುವುದು ನನಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಅವಳ ಗಂಡನಾಗಿ ಇರಬಹುದಾದ ನನ್ನ ಎಲ್ಲ ಹಕ್ಕುಗಳನ್ನು ರದ್ದುಗೊಳಿಸಿ ಅವಳ ಎಲ್ಲ ಹಕ್ಕುಗಳನ್ನು ಆಕೆಗೆ ಹಿಮ್ಮರಳಿಸಿದೆನು. ಇಂದು ಅವಳು ನನ್ನಷ್ಟೆ ಸರಳವಾಗಿರುವುದನ್ನು ನೀವು ನೋಡುತ್ತಿದ್ದೀರಿ. ನಿಮ್ಮದೇ ಖಯಾಲುಗಳಿಗೆ, ಹುಚ್ಚುಕಲ್ಪನೆಗಳಿಗೆ ಮತ್ತು ಪುರುಷರಿಗೆ ದಾಸರಾಗಬೇಡಿ. ಅಲಂಕರಿಸಿ ಕೊಳ್ಳಲು ನಿರಾಕರಿಸಿ, ಸುಗಂಧತೈಲಗಳನ್ನೂ ಲಾವೆಂಡರ್ ದ್ರವಗಳನ್ನೂ ದೂರವಿಡಿ. ನಿಜವಾದ ಪರಿಮಳವನ್ನು ನೀವು ಸೂಸಬಯಸುವಿರಾದರೆ ಅದು ನಿಮ್ಮ ಅಂತರಂಗ ದಿಂದ ಹೊಮ್ಮಬೇಕು. ಆಗ ನೀವು ಆಕರ್ಷಿಸುವುದು ಪುರುಷನನ್ನಲ್ಲ, ಮಾನವ ಕುಲವನ್ನು. ಅದು ನಿಮ್ಮ ಜನ್ಮಸಿದ್ಧಹಕ್ಕು. ಪುರುಷನು ಹೆಂಗಸಿನ ಒಡಲಿನಿಂದ ಜನಿಸಿ ದವನು. ಅವನು ಆಕೆಯ ರಕ್ತಮಾಂಸಗಳುನ್ನು ಹಂಚಿಕೊಂಡು ಹುಟ್ಟಿದವನು. ನೀವು ನೀವಾಗಿರಿ ಮತ್ತು ನಿಮ್ಮ ಸಂದೇಶವನ್ನು ಮತ್ತೊಮ್ಮೆ ಸಾರಿರಿ."

ಈ ಮುಂದಿನ ಮಾತುಗಳನ್ನು ಹೇಳಿ ಅವರು ತಮ್ಮ ಭಾಷಣವನ್ನು ಪೂರ್ಣ ಗೊಳಿಸಿದರು: "ತೋಟಗಳಲ್ಲಿ ಕೆಲಸ ಮಾಡುವ ನಿಮ್ಮ ಸಹೋದರಿಯರ ಘೋರಾ-ವಸ್ಥೆಯ ಅರಿವು ನಿಮಗಿದೆಯೆ? ಅಕ್ಕ ತಂಗಿಯರಂತೆ ಅವರೊಡನೆ ವ್ಯವಹರಿಸಿ. ಅವರ ನಡುವೆ ಹೋಗಿ ನಿಮ್ಮಲ್ಲಿರುವ ಉತ್ತಮ ನೈರ್ಮಲ್ಯ ಜ್ಞಾನ ಮತ್ತು ಮೇಧಾಶಕ್ತಿ ಗಳನ್ನು ಅವರಿಗೂ ಹಂಚಿಕೊಡಿ. ಅವರ ಸೇವೆಯಲ್ಲಿಯೆ ನಿಮ್ಮ ಘನತೆಯಿದೆ. ಮನೆಯ ಹತ್ತಿರದಲ್ಲಿ ನೀವು ಮಾಡಬೇಕಾದ ಯಾವ ಸೇವೆಯೂ ಇಲ್ಲವೇನು? ದಗಾಕೋರ ಪುರುಷರಿದ್ದಾರೆ; ಸಮಾಜಕ್ಕೆ ತುತ್ತಾಗಿರುವ ಕುಡುಕರಿದ್ದಾರೆ. ಕಳ್ಳರು, ಜೂಜುಕೋರರು ಮತ್ತು ಕುಡುಕರ ಬೀಡುಗಳನ್ನು ನಿರ್ಭೀತವಾಗಿ ಹೊಕ್ಕು ಕಾಡಿ ಬೇಡಿ ಅವರನ್ನು ದಾರಿಗೆ ತರುವ ಮುಕ್ತಿಪಡೆಯ ಕೆಲವು ತರುಣಿಯರಂತೆ ನೀವೂ ಧೈರ್ಯದಿಂದ ಅವರ ನಡುವೆ ಹೊಕ್ಕು ಪುಂಡತನದಿಂದ ಅವರನ್ನು ದೂರಮಾಡಿ. ನಿಮ್ಮ ಈ ಉಡಿಗೆ ತೊಡಿಗೆ ಗಳಿಗಿಂತ ಆ ಬಗೆಯ ಕೆಲಸವು ನಿಮಗೆ ಹೆಚ್ಚು ಶೃಂಗಾರವನ್ನು ತರುತ್ತದೆ. ಆಗ ಮಾತ್ರ, ನೀವು ಸಂಗ್ರಹಿಸುವ ಹಣಕ್ಕೆ ನಾನು ಧರ್ಮದರ್ಶಿಯಾಗುತ್ತೇನೆ; ಮತ್ತು ಬಡವರಿಗೆ ಅದನ್ನು ಹಂಚುತ್ತೇನೆ."

ಕೊನೆಯ ದಿನ ಅನೇಕ ಸಭೆಗಳಿದ್ದುವು. ಅವರ ಒಂದು ಭಾಷಣದಲ್ಲಿ ಸಿಲೋನಿನ ಭಾರತೀಯರಿಗೆ ಈ ಸಂದೇಶವನ್ನಿತ್ತರು:

"ಜೀವನದಲ್ಲಿ ನಮ್ಮನ್ನು ನಡಸಬೇಕಾದ ನಡೆವಳಿಯ ಒಂದು ಸೂತ್ರವೆಂದರೆ ಮತ್ತೊಂದು ದೇಶದಿಂದ ಬಂದ ಮೇಲೆ ನಾವು ಸ್ವೀಕರಿಸಿದ ದೇಶದ ಜನರ ಅದೃಷ್ಟದಲ್ಲಿ ಭಾಗಿಗಳಾಗಬೇಕೆಂಬುದು. ಅವರ ಕಲ್ಯಾಣವು ನಮ್ಮ ಪ್ರಥಮ ಆಸಕ್ತಿಯಾಗಿರಬೇಕು. ನಮ್ಮದು ಅವರದಕ್ಕೆ ಅಧೀನವಾಗಿರಬೇಕು. ಘನತೆಗೆ ತಕ್ಕುದಾದ ದಾರಿ ಅದೊಂದೆ ಎಂದು ನನಗನ್ನಿಸುತ್ತದೆ. ಮತ್ತು ಇತರರು ನಮಗಾಗಿ ಮಾಡಬೇಕೆಂದು ನಾವು ಬಯಸುವಂತೆ ನಾವೂ ಇತರರಿಗೆ ಮಾಡಬೇಕೆಂಬ ಮಹಾತತ್ವದ ಹಾದಿಯನ್ನು ಅದು

ಅನುಸರಿಸುತ್ತದೆ. ನಮ್ಮ ಮತ್ತು ನಮ್ಮ ನಾಡಿಗೆ ಬರುವ ರಾಜಪ್ರತಿನಿಧಿಗಳ ನಡುವಣ ಸಂಬಂಧಗಳನ್ನು ನಿಶ್ಚಯಿಸಲು ಏಕನಿಯಮವಿರಲು ಸಾಧ್ಯವಿಲ್ಲ; ತಮ್ಮ ಮಾತೃಭೂಮಿ ಯೆಂಬ ಭಾವನೆಯನ್ನು ಸಿಂಹಳೀಯರು ಹೊಂದಿರುವುದು ನನಗೆ ತುಂಬ ಸಂತೋಷವನ್ನುಂಟುಮಾಡದಿದ್ದರೂ ಅವರೊಂದಿಗೆ ನಮ್ಮ ಸಂಬಂಧಗಳನ್ನು ಸರಿ ಹೊಂದಿಸಿಕೊಳ್ಳಬೇಕಾದರೆ ನಮ್ಮನ್ನು ವಿದೇಶೀಯರೆಂದು ನಾವು ಗಣಿಸಿಕೊಳ್ಳುವುದು ಉತ್ತಮ. ಕೆಲಸಮಾಡಬೇಕಾದಾಗ ಬಾಂಧವ್ಯವನ್ನು ಒತ್ತಿಹೇಳುವುದು ಮತ್ತು ಹಕ್ಕನ್ನು ಪಡೆಯಬೇಕಾದಾಗ ಬಾಂಧವ್ಯವನ್ನು ಒತ್ತಿಹೇಳದಿರುವುದೇ ನಡವಳಿಕೆಯ ವಿಶ್ವಸನೀಯ ನಿಯಮ.

"ನಡೆವಳಿಕೆಯ ಸ್ವರ್ಣಸೂತ್ರವೆಂದು ನಾನು ಕರೆಯುವ ಈ ಬದುಕಿನ ನಿಯಮ ವನ್ನು ಭಾರತದ ಅಂತರ್ಪ್ರಾಂತೀಯ ಸಂಬಂಧಗಳಿಗೂ ಅನ್ವಯಿಸಿದ್ದೇನೆ. ಉದಾಹರಣೆಗೆ, ಬಂಗಾಲಕ್ಕಾಗಲಿ ಅಥವಾ ಪಂಜಾಬಿಗಾಗಲಿ ಅಥವಾ ಗುಜರಾತನ್ನು ಬಿಟ್ಟು ಬೇರೆ ಯಾವುದೇ ಪ್ರಾಂತಕ್ಕೆ ನಾನು ಹೋದಾಗಲೆಲ್ಲ ಅದು ತಮ್ಮ ಪ್ರಾಂತ್ಯಗಳಿಗಿಂತ ಶ್ರೇಷ್ಠ ವೆಂದು ಭಾವಿಸಿ, ತಾವು ನೆಲೆಸುವ ಇತರ ಪ್ರಾಂತ್ಯಗಳ ಕ್ಷೇಮಾಭ್ಯುದಯವನ್ನು ಪರಿಗಣಿಸ ಬೇಕೆಂದು ಗುಜರಾತಿಗಳಿಗೆ ಸಲಹೆ ನೀಡಲು ನಾನು ಹಿಂಜರಿದಿಲ್ಲ. ಮಾನುಷ ವ್ಯವಹಾರ ಗಳಲ್ಲಿ ಮಧುರ ಬಾಂಧವ್ಯವನ್ನು ಕಾಪಾಡುವ ಇಂಥ ಇನ್ನೊಂದು ವಿಧಾನ ನನಗೆ ಕಂಡು ಬಂದಿಲ್ಲ. ಈ ಸ್ವರ್ಣಸೂತ್ರದ ಆಚರಣೆಗೆಲ್ಲಿ ಭಂಗ ಬಂದಿದೆಯೊ ಅಲ್ಲೆಲ್ಲ ಜಗಳ, ಕಾದಾಟಗಳು ನಡೆದಿವೆ, ತಲೆಗಳೂ ಹೋಗಿವೆ. ಆ ಸೂತ್ರಕ್ಕನುಗುಣವಾಗಿ ನಿಮ್ಮ ನಡೆವಳಿಕೆಯನ್ನು ನಿಯಂತ್ರಿಸಿಕೊಂಡಲ್ಲಿ ನೀವು ಘನತೆ ಮತ್ತು ಖ್ಯಾತಿಗಳನ್ನು ಗಳಿಸುತ್ತೀರಿ, ಯಾವ ದೇಶದಿಂದ ನಾವು ಬಂದೆವೊ, ಯಾವ ದೇಶದ ಉದ್ಧಾರಕ್ಕಾಗಿ ಶಕ್ತಿ ಮೀರಿ ಪ್ರಯತ್ನಿಸುತ್ತಿರುವೆವೋ ಆ ದೇಶದ ಕೀರ್ತಿಯನ್ನು ಆ ನಿಮ್ಮ ನಡತೆಯು ಹೆಚ್ಚಿ ಸುತ್ತದೆಂಬುದರಲ್ಲಿ ನನಗೆ ಯಾವ ರೀತಿಯ ಸಂಶಯವೂ ಇಲ್ಲ."

ಮತ್ತೊಂದು ಸಭೆಯಲ್ಲಿ ಅವರು ಹೇಳಿದರು: "ಹಾಲಿನೊಳಗಣ ಸಕ್ಕರೆಯಂತೆ ನೀವು ಬದುಕಬೇಕು. ಅಂಚಿನವರೆಗೂ ತುಂಬಿರುವ ಬಟ್ಟಲ ಹಾಲಿಗೆ ಸಕ್ಕರೆಯನ್ನು ಸೇರಿಸಿದಾಗ ಅದು ತುಂಬಿ ಸುರಿದುಹೋಗದೆ, ಸಕ್ಕರೆಯು ಆ ಹಾಲಿನಲ್ಲಿ ಹೊಂದಿ ಕೊಂಡು ಅದರ ರುಚಿಯನ್ನು ಹೆಚ್ಚಿಸುವಂತೆ ಅನ್ಯರ ವ್ಯವಹಾರಗಳ ಮಧ್ಯೆ ತಲೆಹಾಕದೆ, ಯಾರ ನಡುವೆ ನೀವು ವಾಸಿಸುತ್ತಿದ್ದೀರೊ ಆ ಜನರ ಬದುಕನ್ನು ಸಮೃದ್ಧಗೊಳಿಸುತ್ತಾ ಈ ದ್ವೀಪದಲ್ಲಿ ನೀವು ಬಾಳಬೇಕೆಂದು ನಾನು ಇಚ್ಛಿಸುತ್ತೇನೆ. ಭಾರತದಲ್ಲಿ ನಾವು ಹೊಂದಿರುವ ದುರ್ಗುಣಗಳನ್ನು ನಿಮ್ಮೊಡನೆ ಇಲ್ಲಿಗೆ ತಂದು ಬದುಕನ್ನು ವಿಷಮಯ ಗೊಳಿಸದಂತೆ ಎಚ್ಚರಿಕೆ ವಹಿಸಿ; ಅಲ್ಲದೆ ಅಸ್ಪೃಶ್ಯತೆಯ ಅಭಿಶಾಪವನ್ನು ಸಹ ನಮ್ಮೊಡನೆ ಈ ನೆಲೆಗಳಿಗೆ ಒಯ್ಯಬಾರದು."

ನವೆಂಬರ್ ೨೯ರಂದು ಗಾಂಧೀಜಿ ಕೊಲಂಬೊವನ್ನು ಬಿಟ್ಟಾಗ ಸಂಗ್ರಹಗೊಂಡ ನಿಧಿಯ ಮೊತ್ತ ೮೬,೦೦೦ರೂ.ಗಳನ್ನು ಮುಟ್ಟಿತ್ತು. ಜಾಫ್ನವು ಒಂದು ಲಕ್ಷವನ್ನು

ಭರ್ತಿ ಮಾಡಲು ಸಮರ್ಥವಾಗುತ್ತದೆಯೆ ಎಂದು ಅವರು ಅಳುಕಿದ್ದರು; ಆದರೆ ಅಲ್ಲಿ ಅದಕ್ಕಿಂತ ಹೆಚ್ಚಿಗೆಯೆ ಸಂಗ್ರಹವಾಯಿತು. ನವೆಂಬರ್ ೨೯ರಂದು ಜಾಫ್ನದ ಜನರಿಗೆ ಅವರು ನೀಡಿದ ಬೀಳ್ಕೊಡುಗೆಯ ಸಂದೇಶವು, ಚರಕದ ಸಂದೇಶವಾಗಿದ್ದಿತು:

"ಭಾರತವನ್ನು ಅಗಿದು ತಿನ್ನುತ್ತಿರುವ ಮತ್ತು ಅಲ್ಲಿನ ಜನಕೋಟಿಯನ್ನು ದಿನದಿನವೂ ಕಂಗಾಲುಗೊಳಿಸುತ್ತಿರುವ ದಾರಿದ್ರ್ಯವು ಈ ದ್ವೀಪದ ಜನರಾದ ನಿಮಗೆ ಅಪರಿಚಿತವಾಗಿದೆಯೆಂಬುದನ್ನು ತಿಳಿದು ಸಂತೋಷವಾಗಿದೆ. ಆದ್ದರಿಂದ ಚರಕವು ಬಹುಶಃ ನಿಮ್ಮ ದೃಷ್ಟಿಯಲ್ಲಿ ಆರ್ಥಿಕ ಮಹತ್ವವನ್ನು ಹೊಂದಿಲ್ಲದಿರಬಹುದು. ಈ ಸುಂದರ ನಾಡಿಗೆ ಸಂಬಂಧಿಸಿದಂತೆ ಇರುವ ಅದರ ಶ್ರೇಷ್ಠ ಸಾಂಸ್ಕೃತಿಕ ಮೌಲ್ಯದ ಬಗೆಗೆ ನನಗೆ ಯಾವ ಸಂದೇಹವೂ ಇಲ್ಲ. ಅದರ ಜೀವಂತ ಸಂದೇಶವು ಎಲ್ಲ ನಾಡುಗಳಿಗೂ ಅನ್ವಯಿಸುವಂತಹುದು. ನಿಮ್ಮ ತರುಣ ತರುಣಿಯರು ಮತ್ತು ವಯಸ್ಕ ಪುರುಷರು ಮತ್ತು ಮಹಿಳೆಯರು ಸಹ ದಿನಕ್ಕೆ ಒಂದು ಗಂಟೆ ನೂಲು ತೆಗೆದು ತಮ್ಮ ಬಟ್ಟೆಬರೆಯ ಅಗತ್ಯಗಳಿಗೆ ಸಂಬಂಧಿಸಿದಂತೆ ಸ್ವಯಂಪೂರ್ಣತೆಯನ್ನು ಪಡೆದಲ್ಲಿ, ಅದರಿಂದ ನಿಮಗೆ ಯಾವ ನಷ್ಟವೂ ಆಗುವುದಿಲ್ಲ. ಪ್ರತಿಯಾಗಿ ಅದು ಈ ರಾಷ್ಟ್ರಕ್ಕೆ ಘನತೆ ಮತ್ತು ಆತ್ಮ ವಿಶ್ವಾಸಗಳನ್ನು ತಂದುಕೊಡುತ್ತದೆಂಬುದನ್ನು ನೀವು ಒಪ್ಪುತ್ತೀರಿ. ಉತ್ತಮ ವರ್ಗ ಗಳಿಗೆ ಸೇರಿದ ಯುವಕರನ್ನು ಈಗ ಆಕ್ರಮಿಸಿರುವ ಸೊಗಸುಗಾರಿಕೆಯ ಚಟವನ್ನು ನಾನು ತಕ್ಕಮಟ್ಟಿನ ಕುತೂಹಲದಿಂದ ಗಮನಿಸಿದ್ದೇನೆ. ಪಶ್ಚಿಮದಿಂದ ಬಂದು, ವಶ್ಯ ಸುಪ್ತಿಗೆಳೆದೊಯ್ಯುವ ಈ ಕಣ್ಣು ಕುಕ್ಕುವ ಪ್ರಕಾಶಕ್ಕೆ ದಾಸರಾಗುವುದರಿಂದ, ಆ ಫ್ಯಾಷನ್ನುಗಳನ್ನು ಎಂದೂ ಹೊಂದಲಾರದಂಥ ನಮ್ಮ ದೇಶದ ಬಡಜನರಿಂದ ತಮ್ಮನ್ನು ತಾವು ಹೇಗೆ ಪ್ರತ್ಯೇಕಗೊಳಿಸಿಕೊಳ್ಳುತ್ತಿರುವರೆಂಬ ತಿಳುವಳಿಕೆ ಅವರಿಗಿಲ್ಲ. ಈ ಥಳುಕಿನ ವೈಭವಕ್ಕೆ ನಿಮ್ಮ ಸರಳತೆಯನ್ನು ಮಾರಿಕೊಳ್ಳುವುದಾದರೆ ಅದೊಂದು ದೊಡ್ಡ ಅನಾಹುತವಾಗುತ್ತದೆ, ಒಂದು ಮಹಾರಾಷ್ಟ್ರೀಯ ದುರಂತವಾಗುತ್ತದೆಂದು ಹೇಳದೆ ವಿಧಿಯಿಲ್ಲ. ಚರಕದ ಈ ಸಾಂಸ್ಕೃತಿಕ ಮುಖವನ್ನು ನೀವು ಮೆಚ್ಚುವಿರೋ ಅಥವಾ ಇಲ್ಲವೊ. ಆದರೆ ಅನೇಕ ವೇದಿಕೆಗಳಿಂದ ಭಾರತವನ್ನು ಮಾತೃಭೂಮಿಯೆಂಬುದಾಗಿ ಒಲವಿನಿಂದ ಕರೆದು, ಆ ದೇಶಕ್ಕೆ ನಿಮ್ಮ ನಿಷ್ಠೆಯನ್ನು ಸಾರಿದ್ದೀರಿ. ನಿಮ್ಮ ಉದಾರ ಕಾಣಿಕೆಗಳಿಂದ ಆ ನಿಷ್ಠೆಗೆ ಸ್ಪಷ್ಟ ಸಾಕ್ಷಿಯನ್ನೊದಗಿಸಿದ್ದೀರಿ. ಈ ನಂಟನ್ನು ಮತ್ತಷ್ಟು ಸುಭದ್ರವಾಗಿ ಮುಂದುವರಿಯುವಂತೆ ಮಾಡಬೇಕೆಂದೂ ಮತ್ತು ನಿಮ್ಮ ಬಟ್ಟೆಬೀರು ಗಳಲ್ಲಿ ಖಾದಿಗೆ ಹೇರಳ ಅವಕಾಶವನ್ನು ನೀಡುವ ಮೂಲಕ ಆ ನಂಟನ್ನು ಒಂದು ಜೀವಂತ ಸಂಗತಿಯನ್ನಾಗಿ ಮಾರ್ಪಡಿಸಬೇಕೆಂದೂ ನಿಮ್ಮಲ್ಲಿ ನಾನು ಬೇಡಿಕೊಳ್ಳುತ್ತೇನೆ."

ಡಿಸೆಂಬರ್ ಮೊದಲ ಭಾಗದಲ್ಲಿ ಅವರು ಒರಿಸ್ಸಾವನ್ನು ತಲುಪಿದರು. "ಬಿನ್ನವತ್ತಳೆ ಯನ್ನು ಓದಿದಂತೆ ಭಾವಿಸಿದುದರಿಂದ ನನಗೆ ಸಂತೋಷವಾಗಿದೆ. ಅಂತೆಯೇ ಭಾಷಣವೂ ಮುಗಿಯಿತೆಂದು ಭಾವಿಸಿಕೊಂಡರೆ ಒಳ್ಳೆಯದು. ಆದರೆ ಕಾಣಿಕೆಯನ್ನು ಕೊಟ್ಟಂತೆ ಭಾವಿಸಬೇಡಿ," ಎಂದು ಬನಪುರವನ್ನು ತಲುಪಿ ಸಾಕಷ್ಟು ಆಯಾಸಗೊಂಡಿದ್ದ ಗಾಂಧೀಜಿ

ನುಡಿದರು. ಕಡೆಯ ಪಕ್ಷ ಅವರು ಒರಿಸ್ಸ ಪ್ರವಾಸದ ಒಂದು ಭಾಗವನ್ನಾದರೂ ಪೂರೈಸ ಬೇಕಾಗಿದ್ದರೆ, ಅದು ನಿಧಾನವಾಗಿ ಸಾಗುವುದಾದರೆ ಮಾತ್ರ ಸಾಧ್ಯವೆಂಬುದನ್ನು ವ್ಯವಸ್ಥಾಪಕರು ಅರಿತರು.

ಸ್ವಲ್ಪಮಟ್ಟಿನ ವಿಶ್ರಾಂತಿಗೆಂದು ಅವರು ಬೋಲ್‌ಗರ್‌ಗೆ ಹೊರಡಲು ಸಿದ್ಧವಾಗು ತ್ತಿದ್ದಾಗ, ಪುರಿ ಜಿಲ್ಲೆಯ ಬನಪುರದ ಕಾರ್ಮಿಕರು ಅಲ್ಲಿಯ ಜನರನ್ನು ಪೋಲಿಸರು ಹೆದರಿ ಸುತ್ತಿದ್ದಾರೆಂಬುದನ್ನು ತಿಳಿಸಲು ಬಂದರು. ಆದ್ದರಿಂದ ಅವರು ಆ ಜನರಲ್ಲಿ ಧೈರ್ಯ ತುಂಬುವುದಕ್ಕಾಗಿ ಹೋದರು: "ನೀವು ಯಾಕೆ ಹೆದರುತ್ತೀರಿ? ಅಪರಾಧವನ್ನರಿಯದ ವ್ಯಕ್ತಿ ಹೆದರಬೇಕಾಗಿಲ್ಲ. ಏನೇ ಬಂದರೂ ಧೈರ್ಯವಾಗಿದ್ದರೆ ನಿಮ್ಮನ್ನು ಯಾರೂ ಅಂಜಿಸ ಲಾರರೆಂಬುದನ್ನು ನೆನಪಿಡಿ. ಯಾವುದೇ ಸಂದರ್ಭದಲ್ಲೂ ಬೆದರಿಕೆಗೆ ಅಂಜಬೇಡಿ. ಏಕೆಂದರೆ ಭಯ. ರೋಗಕ್ಕಿಂತ ಕೆಟ್ಟದ್ದು. ಮತ್ತೊಬ್ಬನನ್ನು ಹೆದರಿಸುವ ಮನುಷ್ಯ ಪ್ರಬುದ್ಧದಶೆಯನ್ನು ಕಳೆದುಕೊಳ್ಳುತ್ತಾನೆ. ದೇವರಿಗೆ ಮಾತ್ರ ಅಂಜಿರಿ. ನಾಳೆ ಎರಡು ಗಂಟೆಯ ವರೆಗೆ ನಾನಿಲ್ಲಿರುತ್ತೇನೆ. ನೀವು ಬಂದು ಏನು ಹೇಳಬೇಕೊ ಅದನ್ನು ನನ್ನೊಂದಿಗೆ ಹೇಳಬಹುದು." ಆದರೆ ಪೋಲಿಸರ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಭಯದಿಂದ ಯಾರೂ ಅವರ ಬಳಿಗೆ ಸುಳಿಯಲಿಲ್ಲ.

ಡಿಸೆಂಬರ್ ೧೧ರಂದು ಗಾಂಧೀಜಿ ಅಖಿಲ ಭಾರತೀಯ ನೂಲುಗಾರರ ಸಂಘದ ಖಾದಿ ಉತ್ಪಾದನಾ ಕೇಂದ್ರವಾದ ಬೋಲ್‌ಗರನ್ನು ಸೇರಿದರು. ಅಲ್ಲಿಯೂ ಜನ ಅವರ ಹತ್ತಿರ ಬರಲು ಹೆದರುತ್ತಿದ್ದರು. ಬನಪುರದಲ್ಲಿ ಸಣ್ಣ ಕಾಣಿಕೆ ಕೊಡಲಾಯಿತು. ಆದರೆ ಬೋಲಗರ್‌ನಲ್ಲಿ ಯಾವ ಕಾಣಿಕೆಯನ್ನೂ ನಿರೀಕ್ಷಿಸುವಂತಿರಲಿಲ್ಲ. ಸಾರ್ವಜನಿಕ ಸಭೆಗಳಲ್ಲಿ ಅರ್ಧಾಣೆ ಕಾಲಾಣೆಗಳನ್ನು ಧಾರಾಳವಾಗಿ ನೀಡಲಾಯಿತು. ಮೂಲ ನಿವಾಸಿಗಳು ಗಾಂಧೀಜಿಗೆ ಕಾಣಿಕೆ ಕೊಡಲು ಪಡವಲ ಮತ್ತು ಬದನೆಕಾಯಿಗಳನ್ನು ತಂದಿದ್ದರು. ಎರಡು ಅಥವಾ ಮೂರು ದಿನಗಳ ಬಲಾತ್ಕಾರದ ವಿಶ್ರಾಂತಿಯಿಂದ ಬೋಲಗರ್‌ನ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಅವರಿಗೆ ಅವಕಾಶವೊದಗಿತ್ತು. ಅದರ ಫಲವಾಗಿ ಒರಿಸ್ಸಾದ ರೈತರ ಸ್ಥಿತಿಗತಿಗಳ ಬಗೆಗೆ ಮನಕರಗುವ ಒಂದು ಕಥನ ವನ್ನು ಬರೆದರು:

"ಬಹುದಿನಗಳಿಂದ ಮುಂದೂಡಲ್ಪಟ್ಟ ಈ ಒರಿಸ್ಸಾ ಭೇಟಿಯು ವ್ಯಥೆ ಮತ್ತು ಅಪಮಾನಗಳ ಕಹಿಯಿಂದ ತುಂಬಿದೆ. ೧೧ನೆಯ ತಾರೀಖು. ಬೋಲ್‌ಗರ್‌ನಲ್ಲಿ ಅತಿ ಸಮೀಪದ ರೈಲ್ವೆ ನಿಲ್ದಾಣದಿಂದ ಮೂವತ್ತೊಂದು ಮೈಲಿಯ ದೂರದಲ್ಲಿ ದೀನ ಬಂಧು ಆ್ಯಂಡ್ರೂಸ್‌ರವರೊಂದಿಗೆ ಕುಳಿತು ಮಾತನಾಡುತ್ತಿದ್ದಾಗ ಅರ್ಧಬಾಗಿದ ಬೆನ್ನಿನ, ಒಂದು ಕೊಳಕು ಚಿಂದಿಯನ್ನು ಸುತ್ತಿದ್ದ ಒಬ್ಬ ಮನುಷ್ಯ ಕುಗ್ಗಿ ನಡೆಯುತ್ತಾ ನಮ್ಮೆದುರಿಗೆ ಬಂದನು. ಅವನು ಹುಲ್ಲುಕಡ್ಡಿಯೊಂದನ್ನು ತೆಗೆದು ತನ್ನ ಬಾಯಿಯಲ್ಲಿ ಕಚ್ಚಿಕೊಂಡು ತೋಳುಗಳನ್ನು ಹೊರಚಾಚಿದಂತೆ ಮುಖವಡಿಯಾಗಿ ಮಲಗಿ ಮತ್ತೆ

ಎದ್ದು ಕೈಕಟ್ಟಿ, ತಲೆಬಾಗಿಸಿ, ಬಾಯಿಯ ಕಡ್ಡಿಯನ್ನು ಹೊರತೆಗೆದು ತಲೆಯಲ್ಲಿ ಸಿಕ್ಕಿಸಿಕೊಂಡು ಹೊರಡುವುದರಲ್ಲಿದ್ದನು. ಈ ದೃಶ್ಯವನ್ನು ನೋಡುತ್ತಿದ್ದಾಗ ನಾನು ತೀವ್ರ ವೇದನೆಯಿಂದ ಚಡಪಡಿಸುತ್ತಿದ್ದೆ. ಮರುಕ್ಷಣವೇ ಈ ಪ್ರದರ್ಶನವು ಮುಗಿಯಿತು. ನಾನು ಒಬ್ಬ ದುಬಾಷಿಯನ್ನು ಕೂಗಿ ಕರೆದೆ. ಆ ಮಿತ್ರನನ್ನು ಹತ್ತಿರಕ್ಕೆ ಕರೆದು ಅವನೊಡನೆ ಮಾತನಾಡಲು ತೊಡಗಿದೆ. ಅವನು ಆರು ಮೈಲುಗಳಾಚೆಯ ಒಂದು ಹಳ್ಳಿಯಲ್ಲಿ ವಾಸಿಸುತ್ತಿದ್ದ ಅಸ್ಪೃಶ್ಯ. ಸೌದೆಯ ಹೊರೆಯನ್ನು ಮಾರಲು ಬೋಲಗರ್‌ಗೆ ಬಂದಾಗ ನನ್ನ ವಿಷಯ ತಿಳಿದು, ನನ್ನನ್ನು ಕಾಣಲು ಬಂದಿದ್ದನು. ಬಾಯಿಯಲ್ಲಿ ಹುಲ್ಲುಕಡ್ಡಿಯನ್ನು ಕಚ್ಚಿಕೊಂಡಿದ್ದೇಕೆ ಎಂದು ಅವನನ್ನು ಕೇಳಿದಾಗ, ಅದು ನನಗೆ ಗೌರವವನ್ನು ಸೂಚಿಸುವುದಕ್ಕಾಗಿ ಎಂದು ಹೇಳಿದನು. ನಾಚಿಕೆಯಿಂದ ನಾನು ತಲೆತಗ್ಗಿಸಿದೆ. ಆ ಗೌರವದ ಬೆಲೆ ನಾನು ಹೊರಲಸಾಧ್ಯವಾದಷ್ಟು ದೊಡ್ಡದೆಂದು ನನಗೆ ತೋರಿತು. ನನ್ನ ಹಿಂದೂ ಚೈತನ್ಯಕ್ಕೆ ತೀವ್ರ ನೋವುಂಟಾಯಿತು. ನಾನು ಅವನಿಂದ ಒಂದು ಕಾಣಿಕೆಯನ್ನು ಕೇಳಿದೆ. ಅವನು ತನ್ನ ಸೊಂಟದ ಬಳಿ ಪೈಸೆಗಾಗಿ ತಡಕಾಡಿದನು. 'ನನಗೆ ನಿನ್ನ ಬಿಡಿಗಾಸು ಬೇಕಿಲ್ಲ. ಅದಕ್ಕಿಂತ ಉತ್ತಮವಾದ ಏನಾದರೊಂದನ್ನು ನಾನು ನಿನ್ನಿಂದ ಬಯಸುತ್ತೇನೆ' ಎಂದು ನಾನವನಿಗೆ ಹೇಳಿದೆ. 'ಆಗಲಿ, ಕೊಡುತ್ತೇನೆ' ಎಂದು ಆತ ಉತ್ತರಿಸಿದನು. ಅವನು ಕುಡಿಯುತ್ತಿದ್ದನೆಂದು ಮತ್ತು ಪದ್ಧತಿಯ ಪ್ರಕಾರ ಕೊಳೆತ ಮಾಂಸವನ್ನು ತಿನ್ನುತ್ತಿದ್ದನೆಂದು ನಾನವನಿಂದ ತಿಳಿದುಕೊಂಡಿದ್ದೆ.

"ಭೂಮಿಯ ಮೇಲಿನ ಯಾವನೇ ಮನುಷ್ಯನ ಎದುರಿಗೆ ಮತ್ತೆ ಬಾಯಲ್ಲಿ ಹುಲ್ಲು ಕಚ್ಚುವುದಿಲ್ಲವೆಂದು ಪ್ರಮಾಣ ಮಾಡು. ಏಕೆಂದರೆ, ಹಾಗೆ ಮಾಡುವುದು ಮನುಷ್ಯನ ಘನತೆಗೆ ತಕ್ಕುದಲ್ಲ. ಮತ್ತೆಂದೂ ಕುಡಿಯುವುದಿಲ್ಲವೆಂದು ಆಣೆಯಿಡು; ಅದು ಮನುಷ್ಯನನ್ನು ಮೃಗಾವಸ್ಥೆಗಿಳಿಸುತ್ತದೆ. ಮತ್ತು ಕೊಳೆತ ಮಾಂಸವನ್ನು ತಿನ್ನುವುದಿಲ್ಲವೆಂದು ಮಾತುಕೊಡು, ಏಕೆಂದರೆ, ಅದು ಹಿಂದೂಧರ್ಮಕ್ಕೆ ವಿರೋಧವಾದುದು. ಯಾವ ನಾಗರಿಕ ವ್ಯಕ್ತಿಯೂ ಕೊಳೆತ ಮಾಂಸವನ್ನೆಂದೂ ತಿನ್ನುವುದಿಲ್ಲ. ಇದೇ ನಾನು ನಿನ್ನಿಂದ ಬಯಸುವ ಕಾಣಿಕೆ."

"ಆದರೆ ನಾನು ಕುಡಿಯದಿದ್ದಲ್ಲಿ ಮತ್ತು ಹೊಲಸನ್ನು ತಿನ್ನದಿದ್ದಲ್ಲಿ ನನ್ನ ಜನ ನನ್ನನ್ನು ಜಾತಿಯಿಂದ ಹೊರಹಾಕುತ್ತಾರೆ" ಎಂದು ಆ ಬಡವ ಹೇಳಿದನು.

"ಹಾಗಾದರೆ ಆ ಬಹಿಷ್ಕಾರವನ್ನು ಅನುಭವಿಸು ಮತ್ತು ಅಗತ್ಯವಿದ್ದಲ್ಲಿ ಹಳ್ಳಿಯನ್ನು ತೊರೆ."

"ಈ ದಲಿತ ದೀನ ಮನುಷ್ಯ ವಾಗ್ದಾನ ನೀಡಿದನು. ಅದನ್ನವನು ಉಳಿಸಿಕೊಂಡಲ್ಲಿ ಅವನ ಈ ಮುಮ್ಮಡಿ ಕಾಣಿಕೆಯು ಉದಾರ ಶ್ರೀಮಂತರು ನನಗೆ ನೀಡುವ ರೂಪಾಯಿಗಳಿಗಿಂತ ಹೆಚ್ಚು ಅಮೂಲ್ಯವಾದುದಾಗುತ್ತದೆ. ಈ ಅಸ್ಪೃಶ್ಯತೆಯು ನಮ್ಮಲ್ಲಿರುವ ಬಹು ದೊಡ್ಡ ಲಜ್ಜಾಸ್ಪದ ಸಂಗತಿ. ಅದರಿಂದುಂಟಾಗುವ ಅವಮಾನ ತೀವ್ರವಾದುದಾಗಿದೆ.

"ಆದರೆ ಈ ಮರೆಯಬಾರದ ಘಟನೆಯು ಲಜ್ಜೆ ಮತ್ತು ವ್ಯಥೆಯ ಒಂದು ಮುಖವಷ್ಟೆ. ೧೯೧೭ರ ಚಂಪಾರಣ್ಯದ ದಿನಗಳಿಂದೀಚೆಗೆ ಬನಪುರದ ಮೂಲಕ ರಾಜಕೀಯ ಒರಿಸ್ಸಾವನ್ನು ಪ್ರವೇಶಿಸಿದಾಗ ಕಂಡಂಥ ಸ್ಮಶಾನ ಮೌನವನ್ನು ನಾನೆಂದೂ ಕಂಡಿರಲಿಲ್ಲ. ಚಂಪಾರಣ್ಯಕ್ಕಿಂತ ಒರಿಸ್ಸದ ಮೌನವು ಕೆಟ್ಟದಾಗಿದೆಯೆಂಬ ಅಂಜಿಕೆ ನನಗಿದೆ. ಚಂಪಾರಣ್ಯದ ರೈತರ ನಡುವೆ ಕೆಲವು ದಿನಗಳು ಇದ್ದನಂತರ ಅವರಲ್ಲಿ ಚೈತನ್ಯ ಸಂಚರಿಸಿತು. ಒರಿಸ್ಸದ ರೈತ ಜನಾಂಗ ಅಷ್ಟು ಶೀಘ್ರವಾಗಿ ಪ್ರತಿಕ್ರಿಯೆ ತೋರಿಸುತ್ತಾರೆಯೆ ಎಂಬ ಸಂದೇಹ ನನಗಿದೆ. ರೈತರು ನನ್ನ ಹತ್ತಿರ ಬರದಂತೆ ಹೆದರಿಸಲು ಜಮೀನ್ದಾರರು, ರಾಜರು ಮತ್ತು ಸ್ಥಳೀಯ ಪೋಲಿಸರು ಸಂಚು ಹೂಡಿದ್ದಾರೆಂಬುದು ನನಗೆ ಕೇಳಿ ಬಂದಿದೆ. ರಾಜರು, ಜಮೀನ್ದಾರರು ಮತ್ತು ಕ್ಷುದ್ರ ಪೋಲೀಸರು ನನ್ನ ಮೇಲೆ ಸಂದೇಹವನ್ನು ನಿಲ್ಲಿಸಿದ್ದಾರೆಂಬ ಮತ್ತು ನನ್ನನ್ನು ಹೆದರಿಸುವುದನ್ನು ಬಿಟ್ಟಿದ್ದಾರೆಂಬ ನಂಬಿಕೆಯಿಂದ ನಾನು ಸಂತೋಷಪಡುತ್ತಿದ್ದೆ. ಒರಿಸ್ಸಾದ ಈಗಿನ ಅನುಭವಗಳು ಆ ನನ್ನ ಹೆಮ್ಮೆಯನ್ನು ತಗ್ಗಿಸಿವೆ. ಹೆಚ್ಚು ಸಂಚರಿಸಲು ಅಶಕ್ತನಾಗಿದ್ದುದರಿಂದ ನನ್ನ ಮಿತ್ರರನ್ನು ಜನರ ಬಳಿಗೆ ಕಳುಹಿಸಿ ಕಾರಣವನ್ನು ತಿಳಿದುಕೊಂಡೆ. ದಂಡನೆಯ ಭಯ ದಿಂದ ಜನ ನನ್ನ ಬಳಿಗೆ ಬರುವುದಿಲ್ಲ ಅಥವಾ ನನ್ನ ಗೌರವಾರ್ಥ ಏರ್ಪಾಡಾಗುವ ಪ್ರದರ್ಶನಗಳಲ್ಲಿ ಭಾಗವಹಿಸುವುದಿಲ್ಲ ಎಂಬ ಸುದ್ದಿಯನ್ನು ಅವರು ತಂದರು. ಅಂಥ ಎಚ್ಚರಿಕೆಗಳನ್ನು ಹಿಂದೆಯೂ ಮತ್ತು ಇತರ ಪ್ರಾಂತ್ಯಗಳಲ್ಲಿಯೂ ನೀಡಲಾಗಿತ್ತು. ಆದರೆ ಅವುಗಳ ಪರಿಣಾಮ ಸಹಜ ಸ್ಥಿತಿಯಲ್ಲಿ ತೀವ್ರವಾಗಿರಲಿಲ್ಲ ಅಥವಾ ಇರಲೇ ಇಲ್ಲವೆಂದು ಹೇಳಬಹುದು. ಆದರೆ ಒರಿಸ್ಸಾದ ರೈತರು ನಿರಂತರ ಭಯಸ್ಥಿತಿಯಲ್ಲಿರುವಂತೆ ನನಗೆ ತೋರುತ್ತಿದೆ. ಅಲ್ಪ ಪ್ರಯತ್ನ ನಡೆಸಿದರೂ ಅವರು ಪೋಲೀಸರ ಕ್ರಮ ಕ್ಕೊಳಗಾಗುವ ಸಂಭವವಿದೆ.

ಈ ಅವಮಾನದಲ್ಲಿ ನಾವು ಮತ್ತು ವಿದೇಶಿ ದೊರೆಗಳು ಇಬ್ಬರೂ ಭಾಗಿ ಗಳಾಗಿದ್ದೇವೆ. ರಾಜರು, ಜಮೀನ್ದಾರರು ಮತ್ತು ಕ್ಷುದ್ರ ಅಧಿಕಾರಿಗಳು ನಮ್ಮ ಬಂಧುಗಳೆ. ಆದರೆ ಭಯದ ಮೂಲಅಂಕರ ಆಳುವವರಲ್ಲಿದೆ. ಅವರ ಆಡಳಿತ ವ್ಯವಸ್ಥೆಯು ಈ 'ಬೆದರಿಕೆ'ಯನ್ನೇ ಅವಲಂಬಿಸಿದೆ. ಪ್ರತಿಷ್ಠೆಯ ಹೆಸರಿನಲ್ಲಿ ಎದ್ದಾಳು ಗಳೂ ತಗ್ಗಿ ನಡೆಯುವಂತೆ ಅವರು ಒತ್ತಾಯಿಸಿದ್ದಾರೆ. ನೀತಿಭ್ರಷ್ಟತೆ ಎಲ್ಲಿರಲಿಲ್ಲವೊ ಅಲ್ಲೆಲ್ಲ ಅದನ್ನು ತೀವ್ರಗೊಳಿಸಿದ್ದಾರೆ. ರೈತರಲ್ಲಿರುವ ಹೀನಭಯ ಅವರಿಗೆ ತಿಳಿದಿದೆ. ತಾವು ಅಧಿಕಾರದಲ್ಲಿ ಮುಂದುವರಿಯಬೇಕೆಂಬ ಆಶೆಯಿಂದ ಆ ಭಯದ ಕಾರಣವನ್ನು ಕಂಡುಹಿಡಿದು ನಿವಾರಿಸಲು ಮತ್ತು ಪರಿಸ್ಥಿತಿಗಳನ್ನು ಸಮೀಪದಿಂದ ಅರಿಯಲು ಯಾವ ಪ್ರಯತ್ನವನ್ನೂ ಮಾಡಿಲ್ಲ. ಹೀಗಿರುವಾಗ, ನಾನು ಕಂಡ ಈ ಹೃದಯವಿದ್ರಾವಕ ದೃಶ್ಯಗಳಿಗೆ ಅವರು ಪ್ರತ್ಯಕ್ಷ ಜವಾಬ್ದಾರರಲ್ಲದಿರಬಹುದು. ಆದರೆ ತಮ್ಮ ಮೇಲಿನ ಹೊಣೆಯ ಗಣನೀಯ ಪಾಲಿನಿಂದ ಅವರು ತಪ್ಪಿಸಿಕೊಳ್ಳುವಂತಿಲ್ಲ.

"ಆದರೆ ನಮ್ಮ ಲಜ್ಜೆಗೇಡಿತನ ಇನ್ನೂ ತೀವ್ರವಾದದ್ದು. ನಾವು ಶಕ್ತಿಶಾಲಿಗಳಾ

ಗಿದ್ದಲ್ಲಿ, ಆತ್ಮಗೌರವ ಹೊಂದಿದ್ದಲ್ಲಿ ಮತ್ತು ಬೆದರಿಕೆಗೆ ಜಗ್ಗದಿದ್ದಲ್ಲಿ ನಮಗೆ ಇಂತಹ ಕಿರುಕುಳವನ್ನೊಡ್ಡುವ ತಾಕತ್ತು ವಿದೇಶೀ ದೊರೆಗಳಿಗಿರುತ್ತಿರಲಿಲ್ಲ. ಭಯಗ್ರಸ್ತರು ಮಾತ್ರ ಇತರರ ಬೆದರಿಕೆಗೊಳಗಾಗುತ್ತಾರೆ. ಬ್ರಿಟಿಷರ ಆಗಮನಕ್ಕೆ ಮುಂಚೆಯೇ ಜಮೀನ್ದಾರರು ಮತ್ತು ರಾಜರು ಒಡ್ಡುತ್ತಿದ್ದ ಭಯಕ್ಕೆ ನಾವು ಒಗ್ಗಿಬಿಟ್ಟಿದ್ದೇವು. ಹಿಂದೆ ಒರಟು ರೂಪದಲ್ಲಿದ್ದದ್ದೇ ಪ್ರಸಕ್ತ ಆಡಳಿತಗಾರರಲ್ಲಿ ಕಲೆಯಾಗಿ ಮಾರ್ಪಟ್ಟಿದೆಯಷ್ಟೆ. ಆದ್ದರಿಂದ ಒರಿಸ್ಸದ ಕಾರ್ಯಕರ್ತರು ರೈತರನ್ನಾಕ್ರಮಿಸಿರುವ ಪುಕ್ಕಲುತನದ ಗಡಿಯಲ್ಲಿರುವ ಹಂದೆತನವನ್ನು ಹೋಗಲಾಡಿಸಲು ಪ್ರಯತ್ನಿಸಬೇಕಾಗಿದೆ. ಜಮೀನ್ದಾರರು, ರಾಜರು ಮತ್ತು ಪೋಲೀಸು ಅಧಿಕಾರಿಗಳನ್ನು ಶಪಿಸುವುದರ ಮೂಲಕ ಇದು ಅವರಿಗೆ ಸಾಧ್ಯ ವಾಗುವುದಿಲ್ಲ. ಮನುಷ್ಯ ಸಹಜವಲ್ಲದ ಈ ರೂಢಿಯನ್ನು ತ್ಯಜಿಸಿದಲ್ಲಿ ಅವರು ಕೂಡ ನಮ್ರರಾಗುತ್ತಾರೆ, ಹಾಗೂ ಸ್ನೇಹಿತರಾಗುತ್ತಾರೆ.

"ಭಯವೆಂಬುದು ಮಲೇರಿಯಾ ಅಥವಾ ಕಾಲಾಅಸಾರ್‌ಗಿಂತ ಬಹು ಕೆಟ್ಟ ಕಾಯಿಲೆ; ಈ ಕಾಯಿಲೆಗಳು ಶರೀರವನ್ನು ಕೊಲ್ಲುತ್ತವೆ, ಭಯ ಆತ್ಮವನ್ನು ಕೊಲ್ಲುತ್ತದೆ. ಭಯಪೀಡಿತ ವ್ಯಕ್ತಿ ದೇವರನ್ನೆಂದಿಗೂ ಅರಿಯಲಾರ ಮತ್ತು ದೇವರನ್ನು ತಿಳಿದಿರುವ ವ್ಯಕ್ತಿ ಒಬ್ಬ ಮರ್ತ್ಯ ಮನುಷ್ಯನಿಗೆಂದೂ ಹೆದರುವುದಿಲ್ಲ. ನಿಮ್ಮ ಅಸ್ತಿತ್ವವನ್ನೆ ಅಲು ಗಾಡಿಸುವ ಭಯವನ್ನು ಕೊಡಹಿರಿ" ಎಂದು ಗಾಂಧೀಜಿ ಹೇಳಿದರು. ಬೋಲಗರ್‌ನಲ್ಲಿ ದುಃಖತಪ್ತ ಹೃದಯದಿಂದ ಅವರು ಹೀಗೆ ನುಡಿದರು: "ಮೂರು ದಿನ ಮಾತ್ರವಲ್ಲ, ಮೂರು ತಿಂಗಳು ಮಾತ್ರವಲ್ಲ, ಮೂರು ವರ್ಷ ನಾನು ಇಲ್ಲಿಯೇ ಇರುತ್ತೇನೆ."

ಬಲಸೂರಿನಲ್ಲಿ ಅವರು ಎರಡು ದಿನಗಳನ್ನು ಕಳೆದರು. ಮತ್ತು ಕೇವಲ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಕಟಕ್‌ನಲ್ಲಿ, ಅವರ ರಕ್ತದ ಒತ್ತಡವು ತೀವ್ರವಾಗಿ ಏರಿದುದರಿಂದ ಬಹುಮಟ್ಟಿಗೆ ಎಲ್ಲ ಕಾರ್ಯಕ್ರಮಗಳನ್ನೂ ರದ್ದುಗೊಳಿಸ ಲಾಯಿತು. ಆದರೂ ತಮ್ಮ ವೈದ್ಯರ ಸಲಹೆಗೆ ವಿರುದ್ಧವಾಗಿ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು. ಸಂಜೆ ವೈದ್ಯರು ಬಂದಾಗ ತಮ್ಮ ರೋಗಿಯು ಮತ್ತೊಂದು ಗಹನ ಸಂಭಾಷಣೆಯಲ್ಲಿ ತೊಡಗಿರುವುದನ್ನು ಕಂಡರು. ರಕ್ತದ ಒತ್ತಡವು ಬೆಳಗ್ಗೆ ೧೮೦ ಇದ್ದುದು ರಾತ್ರಿ ೧೯೪ಕ್ಕೇರಿತು. ವೈದ್ಯರು ನಯವಾಗಿ ಹೇಳಿದರು. "ಇತರ ಎಲ್ಲ ರೋಗಿ ಗಳಂತೆ ನೀವು ನಿಮ್ಮ ಮಿತಿಗಳನ್ನು ಮೀರುತ್ತಿದ್ದೀರಿ ಮಹಾತ್ಮಾಜಿ." ಆದರೆ ಅವರು ವೈದ್ಯರ ಮಗುವಿನೊಂದಿಗೆ ಆಡುತ್ತಾ ಅವರ ಸಲಹೆಯನ್ನು ಅಲಕ್ಷಿಸಿದರು. ಮಗುವಿನ ಚಿನ್ನದ ಗುಂಡಿಗಳನ್ನು ಕಳಚುತ್ತಾ ಅವರು ಹೇಳಿದರು: "ನನಗೆ ೧೯೪ರಷ್ಟು ಒತ್ತಡ ವಿರುವುದು ನಿಮಗೆ ತಿಳಿದಿರುವುದರಿಂದ ನೀವೀಗ ಅದಕ್ಕೆ ತಕ್ಕುದಾದ ಪ್ರಣಾಮ ಸಲ್ಲಿಸ ಬೇಕು."

ಒರಿಸ್ಸಾದಿಂದ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನದಲ್ಲಿ ಭಾಗವಹಿಸಲು ಅವರು ಮದ್ರಾಸಿಗೆ ತೆರಳಿದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಡಾ. ಅನ್ಸಾರಿಯವರು ಕಾಂಗ್ರೆಸ್ಸಿನ ನೀತಿಯನ್ನು ಮೂವತ್ತೈದು ವರ್ಷಗಳ ಸಹಕಾರ, ಒಂದೂವರೆ ವರ್ಷದ

ಅಸಹಕಾರ ಮತ್ತು ನಾಲ್ಕು ವರ್ಷಗಳ ಕಾಲ ಸಲಹಾ ಮಂಡಳಿಗಳೊಳಗೆ ಉಂಟಾದ ಅಡಚಣೆ ಮತ್ತು ಸಂವಿಧಾನಾತ್ಮಕ ಬಿಕ್ಕಟ್ಟು ಎಂಬುದಾಗಿ ಸಂಗ್ರಹಿಸಿ ಹೇಳಿದರು. "ಅಸಹಕಾರವು ನಮ್ಮನ್ನು ಸೋಲಿಸಲಿಲ್ಲ, ನಾವು ಅಸಹಕಾರವನ್ನು ಸೋಲಿಸಿದೆವು" ಎಂದು ಅವರು ಹೇಳಿದರು. ಸೈಮನ್ ನಿಯೋಗವನ್ನು ಬಹಿಷ್ಕರಿಸಲು ಅವರು ಕಾಂಗ್ರೆಸ್ಸಿಗೆ ಮತ್ತು ದೇಶಕ್ಕೆ ಸಲಹೆ ನೀಡಿದರು. ಮತ್ತು ಭಾರತದ, ಭವಿಷ್ಯ ಸಂವಿಧಾನದ ಶೀಘ್ರ ಸಿದ್ಧತೆಗೆ ಒತ್ತಾಯ ಮಾಡಿದರಲ್ಲದೆ ಅದರ ಸ್ವೀಕಾರಕ್ಕಾಗಿ ಒಂದು ರಾಷ್ಟ್ರೀಯ ಸಭೆ ಸೇರಲು ಕರೆಯಿತ್ತರು.

ಆಗತಾನೆ ತಮ್ಮ ಯೂರೋಪು ಮತ್ತು ರಷ್ಯಾ ದೇಶಗಳ ಪ್ರವಾಸದಿಂದ ಹಿಂದಿರುಗಿದ್ದ ಜವಹರಲಾಲ್ ನೆಹ್ರೂರವರು ಸ್ವಾತಂತ್ರ್ಯವನ್ನು, ಸಮರಾಪಾಯವನ್ನು, ಮತ್ತು ಸಾಮ್ರಾಜ್ಯಶಾಹಿ ಪ್ರಭುತ್ವದ ವಿರುದ್ಧ ಲೀಗ್ ಜತೆ ಬೆಳೆಸಬೇಕಾದ ಬಾಂಧವ್ಯ ವನ್ನು ಕುರಿತು ಅನೇಕ ಠರಾವುಗಳನ್ನು ಮಂಡಿಸಿದರು. ಬಹುಮಟ್ಟಿಗೆ ಎಲ್ಲ ಠರಾವು ಗಳನ್ನು ಕಾಂಗ್ರೆಸ್ ಸ್ವೀಕರಿಸಿತು. ಇವು ಒಂದು ಹೊಸ ದೃಷ್ಟಿಕೋನವನ್ನು ಬಿಂಬಿಸಿದು ವಲ್ಲದೆ, ಅಂತರ್‍ರಾಷ್ಟ್ರೀಯ ವ್ಯವಹಾರಗಳ ಬಗೆಗೆ ಕಾಂಗ್ರೆಸ್ ವಾಣಿಯಾಗಿ ಮಾತಾಡಬಲ್ಲ ಏಕೈಕ ಪ್ರತಿನಿಧಿಯೆಂಬ ಜವಾಹರಲಾಲರ ನೂತನ ಪಾತ್ರವನ್ನು ಘೋಷಿಸಿದುವು.

ಗಾಂಧೀಜಿಯು ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನದಲ್ಲಿ ಭಾಗವಹಿಸಿದರು, ಆದರೆ ತಾವು ಸದಸ್ಯರಾಗಿದ್ದ ಕಾರ್ಯಕಾರೀ ಸಮಿತಿಯ ಸಭೆಗಳಿಗೆ ಹೋಗಲಿಲ್ಲ. ಕಾಂಗ್ರೆಸ್ ನೀತಿಯನ್ನು ರೂಪಿಸುವುದರಲ್ಲಿ ಅವರು ಯಾವ ಪಾತ್ರವನ್ನೂ ವಹಿಸಲಿಲ್ಲ. ಸ್ವಾತಂತ್ರ್ಯ ವನ್ನು ಹಾಗೂ ಬ್ರಿಟಿಷ್ ಪದಾರ್ಥಗಳ ಬಹಿಷ್ಕಾರವನ್ನು ಕುರಿತ ನಿರ್ಣಯಗಳು ಅವರಿಗೆ ಸಮ್ಮತವಾಗಲಿಲ್ಲ. "ಈ ಬಗೆಯ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ತನಗೆ ಸಾಮರ್ಥ್ಯವಿಲ್ಲವೆಂಬುದು ತಿಳಿದಿದ್ದರೂ ವರ್ಷ ವರ್ಷವೂ ಅವುಗಳನ್ನು ಪುನರುಚ್ಚರಿಸು ವುದರಿಂದ ಕಾಂಗ್ರೆಸ್ ತನ್ನ ನಿರರ್ಥಕತೆಯನ್ನು ತೋರಿಸುತ್ತಿದೆ. ಇಂಥ ನಿರ್ಣಯ ಗಳನ್ನು ಅಂಗೀಕರಿಸುವುದರಿಂದ ನಮ್ಮ ದೌರ್ಬಲ್ಯವನ್ನು ಪ್ರದರ್ಶಿಸಿದಂತಾಗುತ್ತದೆ. ನಾವು ಟೀಕಾಕಾರರ ನಗೆಪಾಟಲಿಗೆ ಗುರಿಯಾಗುತ್ತೇವೆ ಮತ್ತು ನಮ್ಮ ವಿರೋಧಿಗಳಲ್ಲಿ ತಾತ್ಸಾರ ಬೆಳೆಯುತ್ತದೆ. ನಿರ್ಣಯಗಳು ತಪ್ಪುಗ್ರಹಿಕೆಗೊಳಗಾದಲ್ಲಿ ಮತ್ತು ಅವು ಬರಿಯ ಕಾಗದದ ನಿರ್ಣಯಗಳಾಗುಳಿದಲ್ಲಿ ಕಾಂಗ್ರೆಸ್ ಹಿಂದೆ ಇದ್ದಂತೆ ಮತ್ತು ಈಗ ಆಗಲು ಉದ್ದೇಶಿಸಿರುವಂತೆ ಅಪ್ರತಿಹತ ಶಕ್ತಿಯಾಗುವುದು ಸಾಧ್ಯವೇ ಇಲ್ಲ. ಬಹು ಮಟ್ಟಿಗೆ ಶಾಲಾಬಾಲಕರ ಚರ್ಚಾಕೂಟದ ಮಟ್ಟಕ್ಕೆ ಈಗ ನಾವಿಳಿದಿದ್ದೇವೆ."

ಜಿನ್ನಾರಿಂದ ಒಪ್ಪಿಸಲ್ಪಟ್ಟ ಮುಸ್ಲಿಂ ಯೋಜನೆಗಳಿಗೆ ಕಾಂಗ್ರೆಸ್ ಅಂಗೀಕಾರ ನೀಡಿತು. ಮತ್ತು ಸಮಸ್ಯೆಯ ಮತೀಯ ಹಾಗೂ ಸಾಮಾಜಿಕ ಮುಖಗಳನ್ನು ಕುರಿತಂತೆ ಕೆಲವು ನಿಯಮಗಳನ್ನು ವಿಧಿಸಿತು. ಅದು ಎಲ್ಲ ಬಲಾತ್ಕಾರದ ಮಾರ್ಗಗಳನ್ನೂ ಬಹಿಷ್ಕರಿಸಿ ಪಂಚಾಯಿತಿಯ ಮೂಲಕ ಪರಿಹಾರ ಕಂಡುಹಿಡಿದುಕೊಳ್ಳುವಂತೆ ಶಿಫಾರಸು ಮಾಡಿತು. ಐಕ್ಯ ನಿರ್ಣಯದ ಮುಖ್ಯ ಷರತ್ತುಗಳಲ್ಲೊಂದೆಂದರೆ, ಗೋವನ್ನು ಮತ್ತು ಮಸೀದಿಗಳ

ಮುಂದಿನ ಸಂಗೀತವನ್ನು ಕುರಿತದ್ದು: "ಹಿಂದೂಗಳು ತಮಗೆ ಇಷ್ಟಬಂದಂತೆ ಭಜನೆ ಮಾಡಲು ಮತ್ತು ಮೆರವಣಿಗೆ ಕೊಂಡೊಯ್ಯಲು ಮತ್ತು ಮುಸಲ್ಮಾನರು ಆಹಾರಕ್ಕಾಗಲಿ ಅಥವಾ ಬಲಿಗಾಗಲಿ ದನಗಳನ್ನು ಕಡಿಯಲು ಆಯಾಯ ಪಕ್ಷದವರು ಸಾಧಿಸುವ ಹಕ್ಕುಗಳಿಗೆ ಪೂರ್ವಾಗ್ರಹವಿರಕೂಡದು; ಗೋವಿನ ಬಗೆಗೆ ಹಿಂದೂಗಳ ಭಾವನೆಗಳಲ್ಲಿ ಪಾಲುಗೊಳ್ಳುವಂತೆ ಮುಸಲ್ಮಾನರು ತಮ್ಮ ಮುಸಲ್ಮಾನ ಬಂಧುಗಳ ಹಾಗೂ ಮಸೀದಿಯ ಮುಂದಣ ಸಂಗೀತಕ್ಕೆ ಸಂಬಂಧಿಸಿದಂತೆ ಮುಸಲ್ಮಾನರ ಭಾವನೆಗಳಲ್ಲಿ ಪಾಲುಗೊಳ್ಳುವಂತೆ ಹಿಂದೂಗಳು ತಮ್ಮ ಹಿಂದೂಬಂಧುಗಳ ಮನವೊಲಿಸಬೇಕು."

ಸೈಮನ್ ನಿಯೋಗದೊಂದಿಗೆ ಯಾವುದೇ ಹಂತದಲ್ಲಿ, ಯಾವುದೇ ಮಟ್ಟದವರೆಗೆ ಅಥವಾ ಯಾವುದೇ ರೂಪದಲ್ಲಿ ವ್ಯವಹರಿಸದಿರಲು ತೇಜ್‌ಬಹಾದುರ್ ಸಪ್ರು ಅವರ ಅಧ್ಯಕ್ಷತೆಯಲ್ಲಿ ಉದಾರ ಪಕ್ಷವು ತೀರ್ಮಾನಿಸಿತು. ಹಿಂದೂ ಮಹಾಸಭೆಯೂ ಕೂಡ ಸೈಮನ್ ನಿಯೋಗದ ಬಹಿಷ್ಕಾರವನ್ನು ಒತ್ತಾಯ ಮಾಡುವ ಒಂದು ನಿಲುವಳಿಯನ್ನು ಸ್ವೀಕರಿಸಿತು.

ಈ ವರ್ಷ ಮುಸ್ಲಿಂ ಲೀಗ್ ಎರಡು ಪಂಗಡಗಳಾಗಿ ಒಡೆಯಿತು. ಒಂದು ಪಂಗಡವು ಸರ್ ಮೊಹಮದ್ ಷಫಿಯ ನೇತೃತ್ವದಲ್ಲಿ ಲಾಹೋರಿನಲ್ಲಿ ಸಭೆ ಸೇರಿತು. ಜಿನ್ನಾರ ನಾಯಕತ್ವವನ್ನಂಗೀಕರಿಸಿದ ಪಕ್ಷದ ಅಧಿವೇಶನವು ಕಲ್ಕತ್ತದಲ್ಲಿ ನಡೆಯಿತು. ಸೈಮನ್ ನಿಯೋಗವನ್ನು ಸ್ವಾಗತಿಸುವ ನಿರ್ಣಯವು ಲಾಹೋರಿನಲ್ಲಿ ಅಂಗೀಕೃತವಾದರೆ, ನಿಯೋಗವನ್ನು ಬಹಿಷ್ಕರಿಸುವ ಒಂದು ಗೊತ್ತುವಳಿಯು ಲೀಗ್‌ನ ಕಲ್ಕತ್ತದ ಅಧಿವೇಶನದಲ್ಲಿ ಸ್ವೀಕರಿಸಲ್ಪಟ್ಟಿತು. ಕಾಂಗ್ರೆಸ್ ಮತ್ತು ಇತರ ರಾಜಕೀಯ ಸಂಸ್ಥೆಗಳೊಡನೆ ಸಂವಿಧಾನದ ನಕ್ಷೆಯ ತಯಾರಿಕೆಯನ್ನು ಕೈಗೊಳ್ಳಲು ಮತ್ತು ಉಪಯುಕ್ತ ರಕ್ಷಣಾ ಷರತ್ತುಗಳನ್ನು ಸೂಚಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಅಲ್ಲಿ ತೀರ್ಮಾನವಾಯಿತು.

ಈ ವರ್ಷ ಮುಕ್ತಾಯವಾಗುವ ಮುನ್ನ ಹಕೀಮ್ ಅಜಮಲ್ ಖಾನರು ತೀರಿಹೋದರು. ಅವರ ನಿಧನದಿಂದ ಕಾಂಗ್ರೆಸ್ ಅಪಾರ ನಷ್ಟವನ್ನನುಭವಿಸಿತು. "ದೈಹಿಕವಾಗಿ ಅವರು ನಮ್ಮೊಡನೆ ಇಲ್ಲದಿದ್ದರೂ ಅವರ ಚೇತನವು ಸದಾ ನಮ್ಮ ಜೊತೆಯಲ್ಲಿರುತ್ತದೆ ಮತ್ತು ಇಂದಿಗೂ ನಮ್ಮ ಕರ್ತವ್ಯದ ಪ್ರಾಮಾಣಿಕ ನಿರ್ವಹಣೆಗೆ ಪ್ರೇರಣೆ ನೀಡುತ್ತದೆ. ನಿಜವಾದ ಹಿಂದೂ ಮುಸ್ಲಿಂ ಐಕ್ಯತೆಯನ್ನು ನಾವು ಸಾಧಿಸುವವರೆಗೆ,ಅವರ ನೆನಪು ಶಾಶ್ವತವಾಗಿರುವಂತೆ ನಾವು ನಿರ್ಮಿಸುವ ಯಾವ ಸ್ಮಾರಕವೂ ಪೂರ್ಣವಾಗುವುದಿಲ್ಲ" ಎಂದು ಗಾಂಧೀಜಿ ನುಡಿದರು.

# ಮರಳಿ ಆಶ್ರಮಕ್ಕೆ

## ೧೯೨೮

ಒಂದು ವರ್ಷದ ವರೆಗೆ ಎಡೆಬಿಡದೆ ಪ್ರವಾಸ ಮಾಡಿದನಂತರ ಗಾಂಧೀಜಿ ಒಂದು ನೆಮ್ಮದಿಯ ಭಾವನೆಯಿಂದ ೧೯೨೮ರಲ್ಲಿ ಸಬರಮತಿ ಆಶ್ರಮಕ್ಕೆ ಹಿಂದಿರುಗಿದರು. ಕೂಡಲೆ ಅಮೆರಿಕ, ಇಂಗ್ಲೆಂಡ್, ಸ್ವಿಟ್ಸರ್ಲೆಂಡ್, ರಷ್ಯ ಮತ್ತು ಸ್ವೀಡನ್‌ಗಳಿಂದ ಬಂದಿಳಿದ ಅಂತರ್ರಾಷ್ಟ್ರೀಯ ಮೈತ್ರಿ ಸಂಘದ ಕೆಲವು ಸದಸ್ಯರು ಅವರನ್ನು ಆಶ್ರಮದಲ್ಲಿ ಭೇಟಿ ಮಾಡಿದರು. ಅವರೊಡನೆ ನಡೆಸಿದ ಸಮಾಲೋಚನೆಯಲ್ಲಿ ಗಾಂಧೀಜಿ ಹೀಗೆ ಹೇಳಿದರು: "ಸುದೀರ್ಘ ಅಧ್ಯಯನ ಮತ್ತು ಅನುಭವಗಳಿಂದ ನಾನು ಈ ತೀರ್ಮಾನಕ್ಕೆ ಬಂದಿದ್ದೇನೆ: (೧) ಎಲ್ಲ ಮತಗಳೂ ಸತ್ಯವಾದುವು (೨) ಎಲ್ಲ ಮತಗಳಲ್ಲಿಯೂ ಕೆಲವು ದೋಷ ಗಳಿದ್ದೇ ಇರುತ್ತವೆ (೩) ಎಲ್ಲ ಮತಗಳೂ ನನಗೆ ಹಿಂದೂಮತದಷ್ಟೆ ಪ್ರಿಯವಾದುವು. ನನ್ನ ಧರ್ಮದ ಮೇಲಿರುವ ಪೂಜ್ಯಭಾವ ಇತರ ಧರ್ಮಗಳ ಮೇಲೂ ಇದೆ. ಆದ ಕಾರಣ ಮತಾಂತರದ ಆಲೋಚನೆಯೆ ಅಸಾಧ್ಯವಾದುದು. ಇತರಿಗಾಗಿ ನಾನು ಮಾಡುವ ಪ್ರಾರ್ಥನೆ, 'ದೇವರೆ, ನನಗೆ ಕರುಣಿಸಿರುವ ಬೆಳಕನ್ನು ಅವರಿಗೂ ಕೊಡು, 'ಅವರ ಅತ್ಯುನ್ನತ ಏಳಿಗೆಗೆ ಬೇಕಾಗುವ ಪೂರ್ಣ ಪ್ರಕಾಶ ಮತ್ತು ಸತ್ಯಗಳನ್ನು ಅವರಿಗೆ ಕರುಣಿಸು' ಎಂದಿರಬೇಕು."

ಜನವರಿಯ ಕೊನೆಯಲ್ಲಿ ಗಾಂಧೀಜಿ ತಮ್ಮ ಮೂರನೆಯ ಮಗ ರಾಮದಾಸನ ಮದುವೆಯನ್ನು ಸಬರಮತಿ ಆಶ್ರಮದಲ್ಲಿ ನೆರವೇರಿಸಿದರು. ಸುಮಾರು ಎರಡು ವರ್ಷ ಗಳ ಹಿಂದೆಯೇ ಒಪ್ಪುಮಾತಾಗಿದ್ದರೂ ವಧುವಿಗೆ ಹದಿನೇಳು ವರ್ಷ ತುಂಬುವ ವರೆಗೂ ಗಾಂಧೀಜಿ ಮದುವೆಗೆ ಸಮ್ಮತಿಯಿತ್ತಿರಲಿಲ್ಲ. ರಾಮದಾಸನಿಗೆ ಮುವತ್ತು ವರ್ಷವಾಗಿದ್ದಿತು. ಬೆಳಗ್ಗೆ ಎಂಟು ಗಂಟೆಗೆ ಆರಂಭವಾದ ಸಮಾರಂಭಕ್ಕೆ ಮುನ್ನ ವಧೂವರರು ಉಪವಾಸವಿದ್ದು, ಬಾವಿಕಟ್ಟೆ ಮತ್ತು ಕೊಟ್ಟಿಗೆಗಳನ್ನು ಚೊಕ್ಕಟ ಗೊಳಿಸಿದರು. ಸೃಷ್ಟಿಯೊಡನೆ ಐಕ್ಯತೆಯನ್ನು ಸಂಕೇತಿಸಲು ಮರಗಳಿಗೆ ನೀರೆರೆದರು. ಮತ್ತು ಕೈಯಲ್ಲಿ ನೂಲು ತೆಗೆದು ಭಗವದ್ಗೀತೆಯ ಒಂದು ಅಧ್ಯಾಯವನ್ನು ಪಠಿಸಿದರು ಇಬ್ಬರೂ ಶುಭ್ರ ಬಿಳಿಯ ಖಾದಿಯನ್ನುಟ್ಟಿದ್ದರಲ್ಲದೆ ಅವರ ಮೈಮೇಲೆ ಯಾವ ಆಭರಣಗಳೂ ಇರಲಿಲ್ಲ. ತೊಂಬತ್ತು ನಿಮಿಷಗಳವರೆಗೆ ಜರುಗಿದ ಈ ಉತ್ಸವದಲ್ಲಿ ಪವಿತ್ರಾಗ್ನಿಯ ಮತ್ತು ಹಿರಿಯರ ಸಮ್ಮುಖದಲ್ಲಿ ದಂಪತಿಗಳು ಸೇವೆಗಾಗಿ ತಮ್ಮ ಬದುಕನ್ನು ಶ್ರದ್ಧೆಯಿಂದ ಸಮರ್ಪಿಸುವುದಾಗಿ ಪ್ರತಿಜ್ಞೆಗೈದುದೇ ಪ್ರಮುಖ ಭಾಗ ವಾಗಿದ್ದಿತು. ವಾದ್ಯ ಸಂಗೀತಗಳಾಗಲಿ ಭೋಜನ ಸಮಾರಂಭವಾಗಲಿ ಇರಲಿಲ್ಲ. ಕೆಲವೇ ಕೆಲವು ಸ್ನೇಹಿತರು ಮಾತ್ರ ಭಾಗವಹಿಸಿದ್ದರು. ಉಡುಗೊರೆಗಳೂ ಇರಲಿಲ್ಲ. ಗಾಂಧೀಜಿ ಮಾತ್ರ 'ಮಂಗಳಮಾಲಾ' ಎಂಬ ಭಗವದ್ಗೀತೆಯ ಪ್ರತಿಯನ್ನೂ 'ಆಶ್ರಮ ಭಜನಾವಳಿ'

ಯನ್ನೂ ಮತ್ತು ಎರಡು ತಕಲಿಗಳನ್ನೂ ನೀಡಿದರು. ವಧುವಿನ ತಾಯಿ ಒಂದು ಚರಕ ವನ್ನು ಕೊಟ್ಟರು.

೯-೩೦ ಗಂಟೆಗೆ ಎಲ್ಲರೂ ಒಂದೆಡೆ ಸೇರಿದರು. ಗಾಂಧೀಜಿ ತಮ್ಮ ಪವಿತ್ರ ಗಂಭೀರ ವಚನದಿಂದ ವಧೂವರರನ್ನು ಆಶೀರ್ವದಿಸಿದರು. ತಾವೇ ಪೂರ್ಣವಾಗಿ ಸಾಕಿ ಸಲಹಿ ಬೆಳೆಸಿದ ಮಕ್ಕಳಲ್ಲಿ ಇಬ್ಬರಾದ ರಾಮದಾಸ ಮತ್ತು ದೇವದಾಸರನ್ನು ಕುರಿತು ಮಾತಾಡು ವಾಗ ಅವರ ಕಣ್ಣುಗಳಲ್ಲಿ ನೀರಾಡಿತು. ಮಗ ತಮ್ಮನ್ನು ಎಂದೂ ವಂಚಿಸಿಲ್ಲವೆಂಬ ಅರಿವು ಮೂಡಿ, ಸಂತೋಷದ ಭಾವನೆಯಲ್ಲಿ ಅವರು ಗದ್ಗದಿತರಾದರು.

"ನಿನ್ನ ತಪ್ಪುಗಳನ್ನು ನನ್ನ ಮುಂದೆ ಒಪ್ಪಿಕೊಂಡಿದ್ದೀಯೇ; ಆದರೆ ಅವು ನನ್ನನ್ನು ಗಾಬರಿಗೊಳಿಸಲಿಲ್ಲ. ಕಾರಣ, ನಿನ್ನ ಮುಚ್ಚುಮರೆಯಿಲ್ಲದ ತಪ್ಪೊಪ್ಪಿಗೆಯಿಂದಾಗಿ ನನ್ನ ದೃಷ್ಟಿಯಲ್ಲಿ ನೀನು ದೋಷಮುಕ್ತನಾಗಿದ್ದೀಯೆ. ನೀನು ಇಡೀ ಪ್ರಪಂಚದಿಂದ ಮೋಸಹೋದರೂ ಚಿಂತೆಯಿಲ್ಲ. ಆದರೆ ನೀನು ಯಾರಿಗೂ ಮೋಸಮಾಡದಿದ್ದಲ್ಲಿ ನನಗೆ ಸಂತೋಷವಾಗುತ್ತದೆ. ಸದಾ ಇದೇ ಸತ್ಯಮಾರ್ಗದಲ್ಲಿ ನೀನು ಬದುಕುವಂತಾಗಲಿ.

"ನೀನು ನಿನ್ನ ಪತ್ನಿಯ ಗೌರವವನ್ನು ರಕ್ಷಿಸಬೇಕು; ಆದರೆ ಆಕೆಗೆ ಯಜಮಾನ ನಾಗದೆ, ನಿಜವಾದ ಗೆಳೆಯನಾಗು. ಆಕೆ ನಿನ್ನ ದೇಹ ಮತ್ತು ಆತ್ಮಗಳನ್ನು ಪವಿತ್ರವೆಂದು ತಿಳಿಯುವಂತೆ ನೀನೂ ಆಕೆಯ ದೇಹ ಮತ್ತು ಆತ್ಮಗಳು ಪವಿತ್ರವೆಂದು ಭಾವಿಸುವೆ ಯೆಂದು ನನಗೆ ನಂಬಿಕೆಯಿದೆ. ಆ ಗುರಿಯನ್ನು ಮುಟ್ಟಬೇಕಾದಲ್ಲಿ ನೀವು ಪ್ರಾರ್ಥನಾ ಭರಿತ ದುಡಿಮೆಯ, ಸರಳತೆಯ ಮತ್ತು ಆತ್ಮಸಂಯಮದ ಬದುಕನ್ನು ಬಾಳಬೇಕಾಗು ತ್ತದೆ. ನಿಮ್ಮಿಬ್ಬರಲ್ಲಿ ಯಾರೊಬ್ಬರೂ ಪರಸ್ಪರರನ್ನು ಭೋಗವಸ್ತುವೆಂದು ಗಣಿಸದಿರಿ.

"ಇಲ್ಲಿ ನೀವಿಬ್ಬರೂ ಕೆಲಮಟ್ಟಿಗೆ ಶಿಕ್ಷಣವನ್ನು ಪಡೆದಿದ್ದೀರಿ. ನಿಮ್ಮ ಬಾಳುವೆ ತಾಯ್ನಾಡಿನ ಸೇವೆಗಾಗಿ ಸಮರ್ಪಿತವಾಗಲಿ ಮತ್ತು ದೇಹಗಳು ದಣಿಯುವ ವರೆಗೂ ದುಡಿಮೆಯಲ್ಲಿ ಲೀನವಾಗಿರಲಿ. ನಾವು ಬಡತನಕ್ಕೆ ಒತ್ತೆಯಾಗಿದ್ದೇವೆ. ಬಡವರಂತೆಯೆ ನೀವಿಬ್ಬರೂ ಸಹ ಬೆವರು ಹರಿಸಿ ನಿಮ್ಮ ಅನ್ನವನ್ನು ಗಳಿಸಬೇಕು. ಅನುದಿನದ ನೋವು ಕಷ್ಟಗಳಲ್ಲಿ ಪರಸ್ಪರರು ನೆರವಾಗಬೇಕು ಮತ್ತು ಅದರಲ್ಲೇ ನಲಿವನ್ನು ಪಡೆಯಬೇಕು.

"ನಾನು ನಿಮಗೆ ಯಾವ ಉಡುಗೊರೆಯನ್ನೂ ಕೊಟ್ಟಿಲ್ಲ. ಒಂದು ಜೊತೆ ತಕಲಿ ಮತ್ತು ನನಗೆ ಅತ್ಯಂತ ಪ್ರಿಯವಾದ ಗೀತೆ ಮತ್ತು 'ಭಜನಾವಳಿ'ಗಳನ್ನು ಬಿಟ್ಟು ನಾನು ಬೇರೇನನ್ನೂ ಕೊಡಲಾರೆ. ಈ ಹತ್ತಿಯ ಹಾರಗಳು ನಿಮಗೆ ರಕ್ಷಾಕವಚವಾಗಲಿ. ನನ್ನ ಸ್ನೇಹಿತರಿಂದ ನಿಮಗೆ ಬೆಲೆಬಾಳುವ ಉಡುಗೊರೆಗಳನ್ನು ದೊರಕಿಸಿಕೊಟ್ಟಿದ್ದಲ್ಲಿ ಪ್ರಪಂಚವು ನನ್ನ ಪ್ರತಿಷ್ಠೆಯನ್ನು ಗೇಲಿಮಾಡುತ್ತಿತ್ತು. ಆದರೆ ಇಂದು ನನ್ನ ಸ್ಥಾನಕ್ಕೆ ತಕ್ಕುದಾದಂತಹ ವಸ್ತುಗಳನ್ನೇ ನಾನು ನೀಡಿದ್ದೇನೆಂದು ಅದು ರುಜುವಾತುಪಡಿಸುತ್ತದೆ.

"ಗೀತೆಯು ನನಗೆ ಹೇಗೋ ಹಾಗೆ ನಿಮಗೂ ವಜ್ರದ ಖನಿಯಾಗಲಿ; ಬದುಕಿನ ದಾರಿಯಲ್ಲಿ ಅದು ನಿಮಗೆ ಎಡೆಬಿಡದ ಮಾರ್ಗದರ್ಶಿಯೂ, ಸಂಗಾತಿಯೂ ಆಗಿರಲಿ. ನಿಮಗೆ ಭಗವಂತನು ಸುದೀರ್ಘ ಸೇವಾಜೀವನವನ್ನು ಕರುಣಿಸಲಿ."

ಪ್ರಾರ್ಥನಾಸಭೆಯಲ್ಲಿ ಗಾಂಧೀಜಿ, ಮೂಲಭೂತವಾದ ನಾಲ್ಕು 'ವರ್ಣ'ಗಳನ್ನು ಅಸಂಖ್ಯಾತ ಜಾತಿ, ಉಪಜಾತಿಗಳನ್ನಾಗಿ ವಿಭಜಿಸಿದ ಮಾರಕ ವ್ಯವಸ್ಥೆಯ ಬಗೆಗೆ ಪ್ರಸ್ತಾಪಿಸಿದರು. ಅಲ್ಲದೆ ಒಂದೇ ಜಾತಿಗೆ ಸೇರಿದ ಇಬ್ಬರ ನಡುವೆ ನಡೆಯುವ ವಿವಾಹಗಳಲ್ಲಿ ಈಗ ನಡೆದ ವಿವಾಹವೇ ಆಶ್ರಮಕ್ಕೆ ಕೊನೆಯದಾಗಲೆಂದು ಅವರು ಆಶಿಸಿದರು. ಇದು ಆಶ್ರಮವಾಸಿಗಳು ಈ ದಿಸೆಯಲ್ಲಿ ಮುನ್ನಡಿಯಿಡುವಂತೆ ಮಾಡಿತು. ಒಂದೇ ಜಾತಿಗೆ ಸೇರಿದವರ ಮಧ್ಯೆ ನಡೆಯುವ ಮದುವೆಗಳಿಗೆಲ್ಲ ನಿರುತ್ಸಾಹ ತೋರಿ ವಿವಿಧ ಉಪ ಜಾತಿಗಳಿಗೆ ಸೇರಿದವರ ಮಧ್ಯೆ ನಡೆಯುವ ವಿವಾಹಗಳನ್ನು ಅವರು ಪ್ರೋತ್ಸಾಹಿಸ ತೊಡಗಿದರು. ತರುಣಿಯರು ಇಪ್ಪತ್ತು ಇಪ್ಪತ್ತೈದು ವರ್ಷದವರೆಗೂ ಮದುವೆಯಾಗದಂತೆ ತಡೆಯಬೇಕೆಂದು ಗಾಂಧೀಜಿ ಸೂಚಿಸಿದರು. ಕೊನೆಯಲ್ಲಿ ಅವರು ಉತ್ಸವದ ಪವಿತ್ರ ಅರ್ಥವನ್ನು ವಿವರಿಸಿದರು. "ಮದುವೆಯನ್ನು ಜನಪ್ರಿಯಗೊಳಿಸುವ ಉದ್ದೇಶವನ್ನು ಆಶ್ರಮವು ಹೊಂದಿದೆಯೆಂದು ಭಾವಿಸಬೇಡಿ. ಅದು ಆಜೀವ ಬ್ರಹ್ಮಚರ್ಯೆಯ ಉತ್ತೇಜನವನ್ನೆ ತನ್ನ ಗುರಿಯನ್ನಾಗಿ ಪೊಂದಿದೆ ಮತ್ತು ಹೊಂದುತ್ತದೆ. ಲೋಲುಪತೆಯ ಸಾಧನವಾಗದೆ ಸಂಯಮಕ್ಕೆ ಇಂಬುಕೊಡುವ ವಿವಾಹವನ್ನು ಮಾತ್ರ ಅದು ಪ್ರೋತ್ಸಾಹಿಸುತ್ತದೆ. ಲೋಲುಪತೆಗೆ ಒಂದು ಮಿತಿಯಿದೆಯೇ ಹೊರತು ಆತ್ಮ ಸಂಯಮಕ್ಕಿಲ್ಲ ಎಂಬುದನ್ನು ನೆನಪಿಡಿ. ನಾವೆಲ್ಲ ಅನುದಿನವೂ ಆ ಗುರಿಯತ್ತ ಮುನ್ನಡೆಯೋಣ."

ಸಬರಮತಿಯಲ್ಲಿ ಗಾಂಧೀಜಿಯು ವಿಶ್ರಾಂತಿ ತೆಗೆದುಕೊಳ್ಳಲನುಕೂಲವಾಗುವಂತೆ ಫೆಬ್ರುವರಿ ಮತ್ತು ಮಾರ್ಚಿ ತಿಂಗಳುಗಳಲ್ಲಿ ಗೊತ್ತಾಗಿದ್ದ ಕಾರ್ಯಕ್ರಮಗಳನ್ನೆಲ್ಲ ರದ್ದು ಮಾಡಲಾಯಿತು. ಯಾವ ಚಟುವಟಿಕೆಯೂ ಇರಲಿಲ್ಲವೆಂದು ಇದರರ್ಥವಲ್ಲ. ಆಶ್ರಮದೊಳಗೇ ಅವರು ಪರಿಹರಿಸಬೇಕಾದ ಅನೇಕ ಸಮಸ್ಯೆಗಳಿದ್ದುವು. ಅವುಗಳಲ್ಲಿ ಪ್ರತಿ ವರ್ಷವೂ ಚಳಿಗಾಲದ ಕೊನೆಯಲ್ಲಿ ತಪ್ಪದೆ ಕಾಲಿಡುತ್ತಿದ್ದ ಮಲೇರಿಯಾ ಬೇನೆಯೂ ಒಂದು. ವೈದ್ಯರು ಯಥಾಪ್ರಕಾರ ಸೊಳ್ಳೆಪರದೆಯ ರಕ್ಷಣೆಯನ್ನು ಪಡೆಯಬೇಕೆನ್ನುವುದಕ್ಕಿಂತ ಹೆಚ್ಚಿನ ಸಲಹೆಯೇನನ್ನೂ ನೀಡಲಿಲ್ಲ. "ಎಲ್ಲರೂ ಸೊಳ್ಳೆಪರದೆಯನ್ನು ಹೊಂದುವುದು ಹೇಗೆ ಸಾಧ್ಯ? ನಿರ್ಗತಿಕರು ಬಳಸಬಹುದಾದ ಯಾವ ಉಪಾಯವೂ ಇಲ್ಲವೆ?" ಎಂದು ಗಾಂಧೀಜಿ ಸೋಜಿಗಪಟ್ಟರು. ಅದಕ್ಕೆ ಡಾಕ್ಟರುಗಳು ದೇಹ ಮುಚ್ಚುವಂತೆ ಪೂರ್ಣವಾಗಿ ಹೊದೆದು, ಮುಖಕ್ಕೆ ಸೀಮೆಯೆಣ್ಣೆಯನ್ನು ಬಳಿದುಕೊಳ್ಳಬಹುದೆಂದು ಸಲಹೆಯಿತ್ತರು. ಗಾಂಧೀಜಿ ಸಾಮಾನ್ಯವಾಗಿ ಸೊಳ್ಳೆಪರದೆಯನ್ನು ಬಳಸುತ್ತಿದ್ದರು. ಆದರೆ ಬಡವರ ಪರಿಹಾರವೊಂದಿದೆಯೆಂಬುದನ್ನು ಅರಿತುಕೊಂಡ ಕೂಡಲೆ ಸೊಳ್ಳೆಪರದೆಯನ್ನು ತ್ಯಜಿಸಿ, ಮಲಗುವ ಮುನ್ನ ಮುಖಕ್ಕೆ ಸೀಮೆ ಎಣ್ಣೆಯನ್ನು ಹಚ್ಚಿಕೊಳ್ಳಲು ತೊಡಗಿದರು. "ಅಪ್ಪಟ ನಿರ್ಗತಿಕರಿಗೆ ಮಾತ್ರ ಸ್ವರ್ಗ ಸಾಮ್ರಾಜ್ಯ ಮೀಸಲು. ಆದ್ದರಿಂದ ಬಡವರ ಮಟ್ಟಕ್ಕನುಗುಣವಾಗಿ ನಮ್ಮ ಅಗತ್ಯ ಬೇಡಿಕೆಗಳನ್ನು ಪ್ರತಿಯೊಂದು ಹಂತದಲ್ಲೂ ಕಡಿಮೆ ಮಾಡಿಕೊಳ್ಳುವುದನ್ನು ಕಲಿಯೋಣ

ಮತ್ತು ಸಾಚಾ ಬಡವರಾಗಲು ಪ್ರಯತ್ನಿಸೋಣ," ಎಂದು ಅವರು ಪ್ರಾರ್ಥನಾ ಸಭೆಯಲ್ಲಿ ನುಡಿದರು.

ಸಾಯಂಕಾಲದ ಸಂವಾದವು ಆಶ್ರಮ ನಿವಾಸಿಗಳ ನಿತ್ಯಜೀವನಗಳಿಗೆ ಮೀಸಲಾಗಿದ್ದಿತು. ಪ್ರಾತಃಕಾಲದ ಸಂವಾದಗಳಲ್ಲಿ ಬಹುಮಟ್ಟಿಗೆ ಗೀತೆಯ ಯಾವುದಾದರೊಂದು ವಿಚಾರದ ಚಿಂತನೆ ನಡೆಯುತ್ತಿತ್ತು. ಅದರಲ್ಲಿ ಸವಿಸ್ತಾರ ವ್ಯಾಖ್ಯಾನವಿರುತ್ತಿರಲಿಲ್ಲ. ಆದರೆ ಓದಿದ ಅಧ್ಯಾಯದ ಮೇಲೆ ಪ್ರಸ್ತಾವನಾ ಸ್ವರೂಪದ ಕೆಲವೇ ನುಡಿಗಳು ಅಥವಾ ವಾಕ್ಯಗಳು ಇರುತ್ತಿದ್ದುವು. ನಿದರ್ಶನಕ್ಕೆ:

"ದೈಹಿಕ ಬೇನೆಗಳಿಂದ ಮಾತ್ರವಲ್ಲದೆ ಆತ್ಮಸಂಧಿಯಾದ ಅಸ್ವಸ್ಥತೆಗಳಿಂದ ನರಳುವ ನಮ್ಮಂಥ ಮಾನುಷ ಜೀವಿಗಳಿಗೆ ಈ ಒಂಬತ್ತನೆಯ ಅಧ್ಯಾಯವು ಮಾಯಾ ಮುಲಾಮಾಗಿದೆಯೆಂದು ನನ್ನ ಭಾವನೆ. ಎಲ್ಲ ಪಾಪಕರ್ಮಗಳಿಗೆ, 'ಅಷ್ಟೇ ಅಲ್ಲ ಪಾಪ ಬಸಿರಿನಿಂದಲೇ ಜನಿಸಿ'ದಂಥವರಿಗೂ ಕೂಡ ಇಲ್ಲಿ ಭಗವಂತನ ಭರವಸೆ ದೊರೆಯುತ್ತದೆ. ಅವನನ್ನು ಮೊರೆಹೊಕ್ಕವರು ದುಃಖಿಸಬೇಕಾಗಿಲ್ಲ. ವರ್ಣಾಶ್ರಮವು ತನ್ನ ಆದಿಯ ನಿರ್ಮಲ ಸ್ಥಿತಿಯನ್ನು ಕಳೆದುಕೊಂಡು ಇಂದು ಕಾಣುತ್ತಿರುವ ಉಚ್ಚ ನೀಚ ವಿಭೇದದ ಹೀನಾವಸ್ಥೆಗೆ ಇಳಿದ ಅವಧಿಯಲ್ಲಿ ಗೀತೆಯನ್ನು ರಚಿಸಲಾಯಿತೆಂಬುದನ್ನು ಈ ಅಧ್ಯಾಯವು ಸೂಚಿಸುತ್ತದೆ. ಅದನ್ನು ನಾವೀಗ ಮರೆಯೋಣ. ಸರ್ವರಿಗೂ–ಅವರು ಪಾಪಕೂಪದಲ್ಲಿ ಮುಳುಗಿರಲಿ–ಅದು ನೀಡಿರುವ ಭರವಸೆಯನ್ನು ನೆನೆಯೋಣ. ಇಷ್ಟಕ್ಕೂ ನಾವೆಲ್ಲ ಪಾಪಕೂಪದಲ್ಲಿ–ಅದರ ಪ್ರಮಾಣ ಹೆಚ್ಚು ಕಡಿಮೆಯಿರಬಹುದು–ಬಿದ್ದವರೆ. ಯಾರಿಗೆ ತಾನೆ ಯಾರೊಬ್ಬರ ಮೇಲೆ ಕಲ್ಲೆಸೆಯಲು ಧೈರ್ಯವಿದೆ? 'ನೀನು ನನ್ನನ್ನು ದೃಢವಾಗಿ ನಂಬು, ನನ್ನನ್ನು ನಂಬಿದವರು ಯಾರೂ ನಾಶವಾಗುವುದಿಲ್ಲ, ಎಂದು ಭಗವಂತನು ಹೇಳುತ್ತಾನೆ. ಆದರೆ ಸ್ವಪ್ರಯತ್ನವಿಲ್ಲದೆ ಕೇವಲ ನಂಬಿಕೆಯೊಂದರಿಂದಲೇ ಎಲ್ಲ ಪಾಪಗಳೂ ತೇಲಿಹೋಗುತ್ತವೆಂದು ತಿಳಿಯಬೇಡಿ. ಯಾವಾತ ಇಂದ್ರಿಯಾಕರ್ಷಣೆಗಳ ವಿರುದ್ಧ ಹೋರಾಡುವನೊ ಮತ್ತು ಭಗವಂತನಿಗಾಗಿ ಕಣ್ಣೀರು ಸುರಿಸುವನೋ ಆತ ನೆಮ್ಮದಿಯನ್ನು ಪಡೆಯುತ್ತಾನೆ.

"ಹದಿನಾಲ್ಕನೇ ಅಧ್ಯಾಯ ಮತ್ತು ಪ್ರಕೃತಿಯ ತ್ರಿಗುಣ ವಿಭಜನೆಗಳು ನಾನು ಸುಮಾರು ಮುವತ್ತು ವರ್ಷಗಳ ಹಿಂದೆ ಓದಿದ ಹೆನ್ರಿ ಡ್ರಮ್ಮಂಡ್ಸನ 'ದಿ ನ್ಯಾಚುರಲ್ ಲಾ ಇನ್ ದಿ ಸ್ಪಿರಿಚ್ಯುಯಲ್ ವರ್ಲ್ಡ್', ಎಂಬ ಗ್ರಂಥವನ್ನು ನೆನಪಿಗೆ ತರುತ್ತದೆ. ನಿಯಮಗಳು ನೂರಾರು. ಆದರೆ ಅವನ್ನು ಸ್ಥೂಲವಾಗಿ ಮೂರು ತಲೆಬರಹಗಳಲ್ಲಿ ವರ್ಗೀಕರಿಸಲಾಗಿದೆ. ಗೀತೆಯ ಹದಿನಾಲ್ಕನೇ ಅಧ್ಯಾಯವು ಮನುಷ್ಯನು ಪಾಲಿಸಬೇಕಾದ ಸ್ವಭಾವ ನಿಯಮಗಳನ್ನು ವಿವರಿಸುತ್ತದೆ; ಮತ್ತು ಹದಿನೈದನೇ ಅಧ್ಯಾಯವು ಪುರುಷೋತ್ತಮನ ಅಂದರೆ ಪರಿಪೂರ್ಣ ಮಾನವನ ಬಗೆಗೆ ತಿಳಿಯಲು ಹೇಳುತ್ತದೆ. ಈ ಅಧ್ಯಾಯಗಳಿಂದ ನಾವು ಕಲಿಯಬೇಕಾದುದು ಮನುಷ್ಯನ ಊರ್ಧ್ವಮುಖತೆ

ಯನ್ನು. ಸತ್ವ, ರಜಸ್ ಅಥವಾ ತಮಸ್–ಈ ಮೂರು ಗುಣಗಳಲ್ಲಿ ಯಾವೊಂದೇ ಗುಣಕ್ಕೆ ಸಂಪೂರ್ಣ ಅಧೀನವಾಗಿರುವ ಯಾವ ಮನುಷ್ಯನೂ ಇಲ್ಲ. ನಾವು ಪ್ರತಿಯೊಬ್ಬರೂ ಸತ್ವಗುಣವೆ ಪ್ರಧಾನವಾಗಿರುವ ಸ್ಥಿತಿಗೆ ಏರಲು ಪ್ರಯತ್ನಿಸಬೇಕು; ಕೊಟ್ಟಕೊನೆಗೆ ನಾವು ಈ ಮೂರು ಗುಣಗಳನ್ನೂ ಮೀರಿ ಪರಿಪೂರ್ಣ ಮಾನವರಾಗಬೇಕು. ಭೌತ ಜಗತ್ತಿನ ಒಂದು ನಿದರ್ಶನವನ್ನು ಹೇಳುವೆ. ಭೂಮಿಯ ಮೇಲೆ ಘನಸ್ಥಿತಿಯಲ್ಲಿರುವ ನೀರನ್ನು ತೆಗೆದುಕೊಳ್ಳಿ. ತನ್ನ ಸಾಂದ್ರತೆಯನ್ನು ಕುಗ್ಗಿಸಿಕೊಂಡು ಆವಿಯಾಗದ ಹೊರತು ಅದು ಮೇಲೇರಲಾರದು. ಒಮ್ಮೆ ನೀರು ಆವಿಯಾದಲ್ಲಿ ಅದು ಆಕಾಶದಲ್ಲಿ ಮೇಲೆ ಮೇಲೇರುತ್ತಾ ಹೋಗಿ ಕೊನೆಗೆ ಮೋಡಗಳಾಗಿ ರೂಪಾಂತರ ಹೊಂದುತ್ತದೆ; ಅನಂತರ ಅದು ಮಳೆಯಾಗಿ ಸುರಿದು ಭೂಮಿಗೆ ವರವಾಗುತ್ತದೆ. ನಾವೆಲ್ಲರೂ ನೀರಿದ್ದಂತೆ. ನಮ್ಮನ್ನು ನಾವು ಪರಿಶುದ್ಧಗೊಳಿಸಿಕೊಳ್ಳಲು ಸಾಧನೆಗೈಯಬೇಕು. ಇದರಿಂದ ನಮ್ಮಲ್ಲಿನ ಅಹಂ ನಾಶವಾಗಿ ಸರ್ವರ ಶಾಶ್ವತ ಒಳಿತಿಗಾಗಿ ಅನಂತದಲ್ಲಿ ಬೆರೆತು ಹೋಗುತ್ತೇವೆ".

ಆತ್ಮಸಾಕ್ಷಾತ್ಕಾರಕ್ಕೆ ಅತ್ಯುತ್ತಮ ಮಾರ್ಗವನ್ನು ತೋರಿಸುವುದೇ ಗೀತೆಯ ಗುರಿಯೆಂದು ಗಾಂಧೀಜಿ ತಿಳಿದಿದ್ದರು:

"ಕರ್ಮಫಲವನ್ನು ಬಯಸದಿರುವುದೇ ಅನುಪಮ ಸಂಜೀವಿನಿ. ಗೀತೆಯು ನೇಯ್ಗೆಗೊಂಡಿರುವುದು ಈ ಕೇಂದ್ರಬಿಂದುವಿನ ಸುತ್ತ. ಈ ತ್ಯಾಗವೇ ಕೇಂದ್ರಸೂರ್ಯ. ಅದರ ಸುತ್ತಲೂ ಭಕ್ತಿ, ಜ್ಞಾನ ಮತ್ತು ಬೇರೆಲ್ಲವೂ ಗ್ರಹಗಳೋಪಾದಿಯಲ್ಲಿ ಸುತ್ತುತ್ತವೆ. ಶರೀರವನ್ನು ಸೆರೆಮನೆಗೆ ಹೋಲಿಸಲಾಗಿದೆ. ಶರೀರವಿದ್ದಲ್ಲಿ ಕ್ರಿಯೆಯಿದ್ದೇ ಇರಬೇಕು. ಯಾವೊಂದು ಸಶರೀರ ಜೀವಿಯೂ ದುಡಿಮೆಯಿಂದ ವಿನಾಯಿತಿ ಪಡೆದಿಲ್ಲ. ಇಷ್ಟಾದರೂ ದೇಹವು ದೇವರ ಗುಡಿಯೆಂದು ಭಾವಿಸುವುದರ ಮೂಲಕ ಮನುಷ್ಯನು ವಿಮೋಚನೆ ಹೊಂದುವುದು ಸಾಧ್ಯವೆಂದು ಎಲ್ಲ ಮತಗಳೂ ಸಾರುತ್ತವೆ. ಪ್ರತಿಯೊಂದು ಚರ್ಯೆಯೂ ಅದು ಎಷ್ಟೇ ಚಿಕ್ಕದಾದುದಾಗಿರಲಿ ಕಳಂಕಸ್ಪರ್ಶಿಯಾಗಿರುತ್ತದೆ. ಹೀಗಿರುವಾಗ ಈ ಶರೀರವನ್ನು ಭಗವಂತನ ಆಲಯವನ್ನಾಗಿ ಮಾಡುವುದು ಹೇಗೆ? ಇನ್ನೊಂದು ರೀತಿ ಹೇಳುವುದಾದರೆ ಕರ್ಮದಿಂದ ಅರ್ಥಾತ್ ಪಾಪದ ಸೋಂಕಿನಿಂದ ವ್ಯಕ್ತಿಯು ಬಿಡುಗಡೆ ಹೊಂದುವುದು ಹೇಗೆ? ಗೀತೆಯಲ್ಲಿ ಈ ಪ್ರಶ್ನೆಗೆ ನಿರ್ಣಾಯಕ ಉತ್ತರವಿದೆ: ನಿಷ್ಕಾಮ ಕರ್ಮದಿಂದ, ಫಲಾಪೇಕ್ಷೆಯಿಲ್ಲದ ಕರ್ಮದಿಂದ; ಸರ್ವಕರ್ಮಗಳನ್ನೂ ಪರಮಾತ್ಮನಿಗೆ ಸಮರ್ಪಿಸುವುದರಿಂದ ಅಂದರೆ ದೇಹ ಮತ್ತು ಆತ್ಮಗಳ ಸಂಪೂರ್ಣ ಶರಣಾಗತಿಯಿಂದ.

"ನಿಷ್ಕಾಮ ಅಥವಾ ವೈರಾಗ್ಯವನ್ನು ಬರಿಯ ಮಾತಿನಿಂದ ಸಾಧಿಸಲಾಗುವುದಿಲ್ಲ ಅಥವಾ ಬೌದ್ಧಿಕ ಸಾಹಸದಿಂದಲೂ ಅದು ಕೈಗೂಡುವಂಥದಲ್ಲ. ಸತತ ಹೃದಯ ಮಂಥನದಿಂದ ಮಾತ್ರ ಅದು ಸಿದ್ಧಿಸುತ್ತದೆ. ವೈರಾಗ್ಯಪ್ರಾಪ್ತಿಗೆ ಋಜುಜ್ಞಾನ ಆವಶ್ಯಕ. ಪಂಡಿತರದೇ ಒಂದು ಬಗೆಯ ಜ್ಞಾನ. ಅವರು ನೆನಪಿನಿಂದಲೇ ವೇದಗಳನ್ನು ಹೇಳ

ಬಹುದು. ಆದರೆ ಲೋಲುಪ್ತಿಯಲ್ಲಿ ಮುಳುಗಿರಬಹುದು. ಜ್ಞಾನವು ಸ್ವೇಚ್ಛಾಚಾರಿಯಾಗದಿರಲೆಂದು ಗೀತೆಯ ಕರ್ತೃವು ಅದರ ಜೊತೆಗೆ ಭಕ್ತಿಯ ಆವಶ್ಯಕತೆಯನ್ನು ಒತ್ತಿ ಹೇಳಿದ್ದಾನಲ್ಲದೆ ಅದಕ್ಕೇ ಮೊದಲ ಸ್ಥಾನವನ್ನು ಕೊಟ್ಟಿದ್ದಾನೆ. ಭಕ್ತಿರಹಿತ ಜ್ಞಾನವು ಗುರಿತಪ್ಪಿದ ಗುಂಡಿನಂತಾಗುತ್ತದೆ. ಆದ್ದರಿಂದ ಗೀತೆ ಹೇಳುವುದೇನೆಂದರೆ, 'ಭಕ್ತಿಯನ್ನು ಹೊಂದು; ಜ್ಞಾನವು ಅದನ್ನನುಸರಿಸುತ್ತದೆ'. ಭಕ್ತಿಯೆಂಬುದು ತೋರಿಕೆಯ ಪೂಜೆಯಲ್ಲ. ಅದು ಸಾವಿನೊಡನೆ ನಡೆಸುವ ಸೆಣಸಾಟ. ಆದಕಾರಣ ಗೀತೆಯು ಹೇಳುವ ಭಕ್ತನ ಗುಣಗಳು ಋಷಿಯ ಗುಣಗಳನ್ನು ಹೋಲುತ್ತವೆ.

"ಗೀತೆಯು ಬಯಸುವ ಭಕ್ತಿ ದುರ್ಬಲ ಹೃದಯದ ಭಾವಾವೇಗವಲ್ಲ. ಅದು ಕುರುಡು ನಂಬಿಕೆಯಂತೂ ಅಲ್ಲವೇ ಅಲ್ಲ. ಗೀತೆಯ ಭಕ್ತಿ ಬಾಹ್ಯಾಚರಣೆಗಳೊಂದಿಗೆ ಸಂಬಂಧಿಸಿಲ್ಲ. ಭಕ್ತನೊಬ್ಬ ಜಪಮಾಲೆಗಳನ್ನು ಲಾಂಛನಗಳನ್ನು ಬಳಸಬಹುದು ಮತ್ತು ನೈವೇದ್ಯವನ್ನು ಅರ್ಪಿಸಬಹುದು; ಆದರೆ ಇವುಗಳೆಲ್ಲ ಅವನ ಭಕ್ತಿಗೆ ಒರೆಯಾಗಲಾರವು. ನಿರಸೂಯನೂ, ದಯಾಪರನೂ ನಿರಹಂಕಾರಿಯೂ, ನಿಸ್ವಾರ್ಥಿಯೂ, ಸುಖದುಃಖ ಶೀತೋಷ್ಣಗಳಲ್ಲಿ ಸಮಚಿತ್ತವುಳ್ಳವನೂ, ಕ್ಷಮಾಶೀಲನೂ ಸಂತೃಪ್ತನೂ, ದೃಢನಿಶ್ಚಯನೂ ಭಗವಂತನಿಗೆ ತನ್ನ ಮನಸ್ಸು ಮತ್ತು ಆತ್ಮಗಳನ್ನು ಸಮರ್ಪಿಸಿದವನೂ, ಭಯೋತ್ಪಾದಕನಲ್ಲದವನೂ, ನಿರ್ಭೀತನೂ, ಸುಖದುಃಖಗಳಿಂದ ಮುಕ್ತನಾದವನೂ, ಪರಿಶುದ್ಧನೂ ಕರ್ಮನಿರತನಾಗಿದ್ದೂ ಅದರ ಸೋಂಕಿಲ್ಲದವನೂ, ಸದಸದ್‌ಫಲ ನಿರಪೇಕ್ಷಿಯೂ, ಶತ್ರು ಮತ್ತು ಮಿತ್ರರನ್ನು ಸಮರೀತಿಯಿಂದ ಕಾಣುವವನೂ, ಪುರಸ್ಕಾರ ಅಥವಾ ತಿರಸ್ಕಾರಗಳಿಂದ ದೂರವಾದವನೂ ಹೊಗಳಿಕೆಯಿಂದ ಹಿಗ್ಗದ ಮತ್ತು ತೆಗಳಿಕೆಯಿಂದ ಕುಗ್ಗದ ಸಮಬುದ್ಧಿಯುಳ್ಳವನೂ, ಶಾಂತಿ ಮತ್ತು ಏಕಾಂತ ಪ್ರಿಯನೂ ವಿವೇಕಿಯೂ ಆಗಿರುವವನು ನಿಜವಾದ ಭಕ್ತನೆನಿಸುತ್ತಾನೆ. ಪ್ರಬಲ ವ್ಯಾಮೋಹಗಳಿರುವಾಗ ಇಂತಹ ಭಕ್ತಿ ಅಸಾಧ್ಯವಾಗುತ್ತದೆ.

"ತನ್ನನ್ನು ತಾನರಿಯುವುದೇ ನಿಜವಾದ ಭಕ್ತಿ ಎಂಬುದು ಈಗ ನಮಗೆ ತಿಳಿದಂತಾಯಿತು. ಆತ್ಮಸಾಕ್ಷಾತ್ಕಾರವೆಂಬುದು ಬೇರೇನೂ ಅಲ್ಲ. ಒಂದು ರೂಪಾಯಿಯಿಂದ ನಾವು ವಿಷವನ್ನೊ ಮಧುವನ್ನೊ ಕೊಳ್ಳಬಹುದು. ಆದರೆ ಜ್ಞಾನ ಅಥವಾ ಭಕ್ತಿಗಳಿಂದ ಮುಕ್ತಿಯನ್ನಾಗಲಿ ಬಂಧನವನ್ನಾಗಲಿ ಕೊಳ್ಳುವುದು ಸಾಧ್ಯವಿಲ್ಲ. ಇವು ವಿನಿಮಯ ಮಾಧ್ಯಮಗಳಲ್ಲ. ನಮಗೆ ಬೇಕಾಗಿರುವ ವಸ್ತುಗಳೇ ಅವು. ಬೇರೆ ರೀತಿಯಲ್ಲಿ ಹೇಳುವುದಾದರೆ, ಗುರಿ ಮತ್ತು ಮಾರ್ಗಗಳು ಅಭಿನ್ನವಾದರೂ ಬಹುಮಟ್ಟಿಗೆ ಒಂದೇ ಆಗಿವೆ. ಸಾಧನೆಯ ತುತ್ತತುದಿಯೆ ಮುಕ್ತಿ. ಮುಕ್ತಿಯೆಂದರೆ ಪರಿಪೂರ್ಣ ಶಾಂತಿ.

"ಆದರೆ ಇಂಥ ಭಕ್ತಿ ಮತ್ತು ಜ್ಞಾನಗಳು ಅಪ್ಪಟವೆನಿಸಬೇಕಾದಲ್ಲಿ ನಿಷ್ಕಾಮ ಕರ್ಮದ ಒರೆಯಲ್ಲಿ ಪರೀಕ್ಷಿಸಲ್ಪಡಬೇಕು. ಕೇವಲ ಸರಿತಪ್ಪುಗಳ ಜ್ಞಾನದಿಂದ ಒಬ್ಬ ವ್ಯಕ್ತಿ ಮುಕ್ತಿಗೆ ಯೋಗ್ಯತೆಯನ್ನು ಪಡೆಯಲಾರ. ಸಾಮಾನ್ಯ ಎಣಿಕೆಯ ಪ್ರಕಾರ ಕೇವಲ

ಒಬ್ಬ ವಿದ್ಯಾವಂತನೂ ಪಂಡಿತನೆನಿಸುತ್ತಾನೆ. ಅವನು ಯಾವ ಕೆಲಸವನ್ನೂ ಮಾಡ ಬೇಕಾಗಿರುವುದಿಲ್ಲ. ಒಂದು ಸಣ್ಣ ಲೋಟವನ್ನೆತ್ತಿಡುವುದೂ ಬಂಧನವೆಂದು ಆತ ಭಾವಿಸಿರುತ್ತಾನೆ. ದುಡಿಮೆಯ ಹೊಣೆಯಿಲ್ಲದಿರುವುದೇ ಜ್ಞಾನದ ಪ್ರಮಾಣವೆನಿಸುವಲ್ಲಿ ಲೋಟವನ್ನು ಎತ್ತಿಡುವಂಥ ಲೌಕಿಕ ಕೆಲಸಕ್ಕೆ ಅವಕಾಶವಿರುವುದಿಲ್ಲ.

"ಅಥವಾ ಭಕ್ತಿಯನ್ನು ತೆಗೆದುಕೊಳ್ಳಿ. ಪ್ರಶಾಂತಿ, ಜಪ, ಪೂಜೆ ಮೊದಲಾದುವನ್ನೇ ಭಕ್ತಿಯೆಂದು ಭಾವಿಸುವುದು ಸಾಮಾನ್ಯ. ಮತ್ತು ಜಪ ಮುಂತಾದುವಕ್ಕೆ ಭಂಗ ಬರ ದಿರಲೆಂದು ಪ್ರಿಯವಾದ ಕೆಲಸವನ್ನೂ ನಿರ್ಲಕ್ಷಿಸಬಹುದು. ಇಂಥ ಭಕ್ತಿಯು ಉಣ್ಣುವ ಮತ್ತು ಕುಡಿಯುವಂಥ ಕೆಲಸಗಳಿಗೆ ಮಾತ್ರ ಜಪಮಾಲೆಯನ್ನಿಳಿಸುತ್ತದೆಯೆ ಹೊರತು ರಾಗಿಬೀಸಲು ಅಥವಾ ರೋಗಿಗಳ ಶುಶ್ರೂಷೆ ಮಾಡಲು ಎಂದಿಗೂ ಅವಕಾಶ ಕೊಡುವುದಿಲ್ಲ.

"ಆದರೆ ಗೀತೆ ಹೇಳುತ್ತದೆ: 'ನಿಷ್ಕರ್ಮಿಯಾಗಿ ಯಾವೊಬ್ಬನೂ ತನ್ನ ಗುರಿಯನ್ನು ಸಾಧಿಸಿಲ್ಲ. ಜನಕನಂಥ ವ್ಯಕ್ತಿಗಳು ಸಹ ಕರ್ಮದ ಮೂಲಕವೆ ಮುಕ್ತಿಯನ್ನು ಪಡೆದರು. ನಾನೂ ಸೋಮಾರಿಯಾಗಿ ಕೆಲಸವನ್ನು ನಿಲ್ಲಿಸಿದಲ್ಲಿ ಪ್ರಪಂಚವೆ ನಾಶವಾಗುತ್ತಿತ್ತು. ಹೀಗಿರುವಾಗ ಎಲ್ಲ ಜನರೂ ಕರ್ಮನಿರತವಾಗಿರಬೇಕಾದುದು ಅತ್ಯಗತ್ಯವಲ್ಲವೆ?'

"ಒಂದು ರೀತಿಯಲ್ಲಿ ಎಲ್ಲ ಕರ್ಮಗಳೂ ಬಂಧನಕ್ಕೆ ಎಡೆಕೊಡುತ್ತವೆಂಬುದು ನಿರ್ವಿವಾದ; ಆದರೆ ಎಲ್ಲ ಜೀವಿಗಳೂ, ಅವಕ್ಕೆ ಇಷ್ಟವಿರಲಿ ಅಥವಾ ಇಲ್ಲದಿರಲಿ ಏನಾದರೊಂದು ಕರ್ಮವನ್ನು ಮಾಡಲೇಬೇಕೆಂಬುದು ಅಷ್ಟೇ ಸತ್ಯ. ಇಲ್ಲಿ ಎಲ್ಲ ಚಟುವಟಿಕೆಗಳನ್ನೂ, ಅವು ಶಾರೀರಿಕವಾಗಿರಲಿ ಅಥವಾ ಬೌದ್ಧಿಕವಾಗಿರಲಿ, ಕರ್ಮದ ಹೆಸರಿನಲ್ಲಿ ಸೇರಿಸಬೇಕಾಗುತ್ತದೆ. ಹಾಗಾದರೆ ಕರ್ಮದಲ್ಲಿ ನಿರತನಾಗಿದ್ದು ಅದರ ಬಂಧನದಿಂದ ಮುಕ್ತನಾಗುವ ಬಗೆ ಹೇಗೆ? ಗೀತೆಯು ಈ ಸಮಸ್ಯೆಗೆ ಪರಿಹಾರ ನೀಡಿರುವ ರೀತಿ ಅದ್ವಿತೀಯವಾದುದೆಂದು ನಾನು ತಿಳಿದುಕೊಂಡಿದ್ದೇನೆ. ಗೀತೆ ಹೇಳುತ್ತದೆ: 'ನಿನ್ನ ಪಾಲಿನ ಕೆಲಸವನ್ನು ನೀನು ಮಾಡು. ಆದರೆ ಅದರ ಫಲವನ್ನು ಅಪೇಕ್ಷಿಸಬೇಡ. ನಿರ್ಲಿಪ್ತನಾಗಿ ಕೆಲಸಮಾಡು; ಪ್ರತಿಫಲವನ್ನು ಬಯಸದೆ ಕೆಲಸಮಾಡು.'

"ಇದು ಗೀತೆಯ ಸುಸ್ಪಷ್ಟ ಬೋಧನೆ. ಕರ್ಮವನ್ನು ಕೈಬಿಡುವವನು ಕೆಳಗೆ ಬೀಳು ತ್ತಾನೆ. ಪ್ರತಿಫಲವನ್ನು ಬಯಸದವನು ಮೇಲೇರುತ್ತಾನೆ. ಫಲಾಪೇಕ್ಷೆಯನ್ನು ತ್ಯಜಿಸು ವುದೆಂದರೆ ಫಲಿತಾಂಶವನ್ನುಪೇಕ್ಷಿಸಬೇಕೆಂದರ್ಥವಲ್ಲ. ಪ್ರತಿಯೊಂದು ಕ್ರಿಯೆಯಿಂದಲೂ ನಿರೀಕ್ಷಿಸಬಹುದಾದ ಫಲಿತಾಂಶದ ಜೊತೆಗೆ ಮಾರ್ಗಸ್ವರೂಪವನ್ನು ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯವನ್ನು ಅರಿತಿರಲೇಬೇಕು. ಈ ಬಗೆಯಾಗಿ ಸಜ್ಜುಗೊಂಡಾತ ಫಲಿತಾಂಶದ ಬಗೆಗೆ ನಿರಾಸಕ್ತನಾಗಿರುತ್ತಾನಲ್ಲದೆ ತನ್ನೆದುರಿಗೆ ಇರುವ ಕಾರ್ಯವನ್ನು ಸಕಾಲಕ್ಕೆ ಪೂರೈಸುವುದರಲ್ಲಿ ನಿಮಗ್ನನಾಗಿರುತ್ತಾನೆ; ಅವನು ಮಾತ್ರ ಕರ್ಮಫಲ ಗಳನ್ನು ಪರಿತ್ಯಜಿಸಬಲ್ಲ.

"ಮತ್ತೆ, ಪರಿತ್ಯಾಗವನ್ನು ತ್ಯಾಗಿಯ ಫಲಾಪೇಕ್ಷೆಯೆಂದು ಯಾರೂ ತಿಳಿಯದಿರಲಿ. ಗೀತಾಪಠಣೆಯು ಈ ಬಗೆಯ ಅರ್ಥವನ್ನು ಸಮರ್ಥಿಸುವುದಿಲ್ಲ. ಫಲದ ಬಗೆಗೆ ಗೀಳಿಲ್ಲದಿರುವುದೇ ವೈರಾಗ್ಯ. ನಿಜವಾಗಿ ನೋಡಿದರೆ ಯಾವಾತ ಫಲವನ್ನು ಅಪೇಕ್ಷಿಸು ವುದಿಲ್ಲವೊ ಅವನ ಫಲ ಸಾವಿರಮಡಿಯಾಗುತ್ತದೆ. ಗೀತೆಯಲ್ಲಿ ಹೇಳುವ ವೈರಾಗ್ಯವು ಶ್ರದ್ಧೆಯ ಸತ್ವಪರೀಕ್ಷೆಯಾಗಿದೆ. ಫಲಿತಾಂಶದ ಬಗೆಗೆ ಯಾವಾತ ಸದಾ ಚಿಂತಾಕುಲ ನಾಗಿರುತ್ತಾನೊ ಅವನು ಅನೇಕ ವೇಳೆ ಕರ್ತವ್ಯನಿರ್ವಹಣೆಯಲ್ಲಿ ಎದೆಗುಂದುತ್ತಾನೆ. ಅವನು ತಾಳ್ಮೆಯನ್ನು ಕಳೆದುಕೊಂಡು ಕೋಪಕ್ಕೆ ತುತ್ತಾಗಿ ಅಯೋಗ್ಯ ಕೆಲಸಗಳನ್ನು ಮಾಡಲು ತೊಡಗುತ್ತಾನೆ; ಒಂದು ಕಾರ್ಯದಿಂದ ಮತ್ತೊಂದಕ್ಕೆ ಹಾರುತ್ತ ಯಾವು ದೊಂದನ್ನೂ ಪಟ್ಟುಹಿಡಿದು ಪೂರೈಸುವುದಿಲ್ಲ. ಫಲದ ಗೀಳನು ಹೊಂದಿರುವವನು ಇಂದ್ರಿಯ ಪರಾಧೀನನಂತೆ ಚಿತ್ತಭ್ರಮೆಗೊಳಗಾಗಿ, ಮನಸ್ಸಾಕ್ಷಿಗೆ ಅಳುಕದೆ, ತಾನು ಮಾಡುವುದೆಲ್ಲವೂ ಸರಿಯೆಂಬ ಎಣಿಕೆಯಲ್ಲಿ ತನ್ನ ಗುರಿಸಾಧನೆಗಾಗಿ ನ್ಯಾಯವೊ ಅನ್ಯಾಯವೊ ಆದ ಮಾರ್ಗಗಳನ್ನವಲಂಬಿಸುತ್ತಾನೆ.

"ಫಲಾಪೇಕ್ಷೆಯಿಂದುಂಟಾಗುವ ದುಷ್ಟ ಪರಿಣಾಮಗಳನ್ನರಿತ ಗೀತೆಯ ಕರ್ತೃ ಫಲನಿರಾಸಕ್ತಿಯ ಮಾರ್ಗವನ್ನು ಕಂಡುಕೊಂಡು ಲೋಕಕ್ಕೆ ಮನದಟ್ಟಾಗುವ ರೀತಿ ಯಲ್ಲಿ ಅದನ್ನು ಶ್ರುತಪಡಿಸಿದ್ದಾನೆ. ಧರ್ಮವು ಯಾವಾಗಲೂ ಲೌಕಿಕ ಸುಖಕ್ಕೆ ವಿರೋಧಿಯಾಗಿದೆಯೆಂಬುದು ಸಾಮಾನ್ಯ ಭಾವನೆ. 'ವ್ಯಾಪಾರ ವ್ಯವಹಾರ ಮುಂತಾದು ವುಗಳಲ್ಲಿ ಧಾರ್ಮಿಕವಾಗಿ ನಡೆದುಕೊಳ್ಳುವುದು ಸಾಧ್ಯವಿಲ್ಲ. ಅಂಥ ಕಸಬುಗಳಲ್ಲಿ ಧರ್ಮಕ್ಕೆ ಸ್ಥಾನವಿಲ್ಲ; ಧರ್ಮವಿರುವುದು ಕೇವಲ ಮುಕ್ತಿ ಸಾಧನೆಗಾಗಿ ಮಾತ್ರ' —ಎಂದು ಅನೇಕ ಪ್ರಾಪಂಚಿಕ ವ್ಯವಹಾರಜ್ಞರು ಹೇಳುವುದನ್ನು ಕೇಳುತ್ತೇವೆ. ಗೀತೆಯ ಕರ್ತೃವು ಈ ಭ್ರಮೆಯನ್ನು ತೊಲಗಿಸಿದ್ದಾನೆಂದು ನನಗನ್ನಿಸುತ್ತದೆ. ಲೌಕಿಕ ವ್ಯವಹಾರ ಮತ್ತು ಮುಕ್ತಿಯ ನಡುವೆ ಅವನು ಯಾವ ಎಲ್ಲೆಗೆರೆಯನ್ನೂ ಎಳೆದಿಲ್ಲ. ಪ್ರತಿಯಾಗಿ, ಧರ್ಮ, ನಮ್ಮ ಪ್ರಾಪಂಚಿಕ ವ್ಯವಹಾರಗಳನ್ನೂ ನಿರ್ದೇಶಿಸಬೇಕೆಂಬುದನ್ನು ಸೂಚಿಸಿ ದ್ದಾನೆ; ನಾನು ಅರಿತುಕೊಂಡಂತೆ ಅನುದಿನದ ಬದುಕಿನಲ್ಲಿ ನಾವು ಅನುಸರಿಸಲಾಗದ್ದು ಧರ್ಮವೇ ಅಲ್ಲವೆಂಬುದು ಗೀತೆಯ ಬೋಧನೆಯಾಗಿದೆ. ಈ ಕಾರಣದಿಂದ ಗೀತೆಯ ದೃಷ್ಟಿಯಲ್ಲಿ ಮಮಕಾರದಿಂದ ಮುಕ್ತವಾಗಿರದ ಎಲ್ಲ ಕರ್ಮಗಳೂ ನಿಷಿದ್ಧ. ಈ ಸ್ವರ್ಣ ಸಿದ್ಧಾಂತವು ಮಾನವಕುಲವನ್ನು ಅನೇಕ ಅಪಾಯಗಳಿಂದ ಸಂರಕ್ಷಿಸುತ್ತದೆ. ಈ ವಿವರಣೆಯ ಪ್ರಕಾರ ಕೊಲೆ, ಸುಳ್ಳು, ದುರ್ವ್ಯಸನ ಮೊದಲಾದುವು ಪಾಪಕೃತ್ಯಗಳೆಂದು ಗಣಿಸಲ್ಪಡು ವುದರಿಂದ ಅವು ನಿಷಿದ್ಧವೆನಿಸುತ್ತವೆ. ಆಗ ಮನುಷ್ಯನ ಜೀವನ ಸರಳವಾಗುತ್ತದೆ ಮತ್ತು ಆ ಸರಳತೆಯಿಂದ ಶಾಂತಿಯ ಬುಗ್ಗೆ ಚಿಮ್ಮುತ್ತದೆ.

"ಈ ದಿಸೆಯಲ್ಲಿ ಆಲೋಚಿಸಿದಾಗ ಗೀತೆಯ ಈ ಮೂಲತತ್ವವನ್ನು ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಅನುಷ್ಠಾನಕ್ಕೆ ತರುವಲ್ಲಿ ಅವನು ಸತ್ಯ ಮತ್ತು ಅಹಿಂಸೆಗಳನ್ನು ಕಡ್ಡಾಯವಾಗಿ ಪಾಲಿಸಲೇ ಬೇಕಾಗುತ್ತದೆಂಬುದು ನನ್ನ ಅಭಿಪ್ರಾಯ. ಫಲದಲ್ಲಿ

ಆಸಕ್ತಿಯಿಲ್ಲವೆಂದ ಮೇಲೆ ಹಿಂಸೆ ಮತ್ತು ಅಸತ್ಯಗಳಲ್ಲಿ ಸೆಳೆತವೂ ಇರುವುದಿಲ್ಲ. ಅಸತ್ಯ ಮತ್ತು ಅಹಿಂಸೆಯ ಯಾವುದೇ ನಿದರ್ಶನವನ್ನು ನೋಡಿ; ಅದರ ಹಿಂದೆ, ಮನಸ್ಸಿನಲ್ಲಿಟ್ಟು ಕೊಂಡ ಗುರಿಯನ್ನು ಮುಟ್ಟುವ ಬಯಕೆಯಿರುವುದು ಕಂಡುಬರುತ್ತದೆ. ಆದರೆ ಗೀತೆಯು ಅಹಿಂಸಾತತ್ವ ಸ್ಥಾಪನೆಗಾಗಿ ಬರೆದಿಲ್ಲವೆಂಬುದು ನಿಸ್ಸಂದೇಹ. ಗೀತೆಯ ಯುಗಕ್ಕಿಂತ ಮುನ್ನವೆ ಅಹಿಂಸೆಯು ಅಂಗೀಕೃತ ಹಾಗೂ ಆದ್ಯ ಕರ್ತವ್ಯವಾಗಿತ್ತು. ಗೀತೆಯು ಫಲತ್ಯಾಗ ಸಂದೇಶವನ್ನು ಸಾರಬೇಕಾಯಿತು ಮತ್ತು ಇದನ್ನು ದ್ವಿತಿಯ ಅಧ್ಯಾಯ ದಲ್ಲಿಯೇ ಸ್ಪಷ್ಟವಾಗಿ ನಿರೂಪಿಸಲಾಗಿದೆ.

"ಗೀತೆಯು ಅಹಿಂಸೆಯಲ್ಲಿ ವಿಶ್ವಾಸವಿಟ್ಟಿದ್ದರೆ ಅಥವಾ ನಿರಾಸಕ್ತಿಯನ್ನು ಪ್ರತಿ ಪಾದಿಸಿದ್ದರೆ ಅದರ ಕರ್ತೃವು ಯುದ್ಧದಂಥ ದೃಷ್ಟಾಂತವನ್ನು ತೆಗೆದುಕೊಂಡುದೇಕೆ? ಗೀತೆಯು ರಚನೆಗೊಂಡ ಕಾಲದಲ್ಲಿ ಜನರು ಅಹಿಂಸೆಯಲ್ಲಿ ನಂಬಿಕೆಯಿಟ್ಟಿದ್ದರೂ ಯುದ್ಧ ಗಳು ನಿಷಿದ್ಧವೆನಿಸಿರಲಿಲ್ಲವಷ್ಟೇ ಅಲ್ಲ, ಯುದ್ಧ ಮತ್ತು ಅಹಿಂಸೆಯ ನಡುವಣ ವಿರೋಧಾಭಾಸವನ್ನು ಗಮನಿಸಿರಲಿಲ್ಲ.

"ಫಲ ಪರಿತ್ಯಾಗದ ಪರಿಣಾಮಗಳ ಮೌಲ್ಯವನ್ನು ನಿರ್ಧರಿಸುವಾಗ ಇತರ ಪರಿಮಿತಿಗಳಿಗೆ ಸಂಬಂಧಿಸಿದಂತೆ ಗೀತೆಯ ಕರ್ತೃವಿನ ಮನಸ್ಸನ್ನು ನಾವು ಪರೀಕ್ಷಿಸುವ ಅಗತ್ಯವಿಲ್ಲ. ಏಕೆಂದರೆ, ಒಬ್ಬ ಕವಿ ಒಂದು ನಿರ್ದಿಷ್ಟ ಸತ್ಯವನ್ನು ಲೋಕದ ಮುಂದಿಡು ತ್ತಾನೆ. ಆದರೆ ಅದರ ಎಲ್ಲ ಮಹತ್ಪರಿಣಾಮಗಳನ್ನೂ ಆತ ಅರಿತಿರಬೇಕಾದುದು ಅಥವಾ ಕಂಡುಕೊಳ್ಳಬೇಕಾದುದು ಮತ್ತು ಹಾಗೆ ಕಂಡುಕೊಂಡುದೆಲ್ಲವನ್ನೂ ಅಭಿವ್ಯಕ್ತಗೊಳಿಸಲು ಸದಾ ಸಮರ್ಥನಾಗಿರಬೇಕಾದುದು ಅನಿವಾರ್ಯವೇನಲ್ಲ. ಬಹುಶಃ ಕಾವ್ಯದ ಮತ್ತು ಕವಿಯ ಮಹತ್ವವು ಅಡಗಿರುವುದು ಇದರಲ್ಲಿಯೆ. ಕವಿಯ ಭಾವವು ಅಪರಿಮಿತ ಅರ್ಥ ವುಳ್ಳದ್ದು. ಮನುಷ್ಯನ ಹಾಗೆ, ಮಹಾನ್ ಗ್ರಂಥಗಳ ಅರ್ಥವೂ ವಿಕಾಸಕ್ಕೆ ಗುರಿಯಾಗು ತ್ತದೆ. ಭಾಷೆಗಳ ಚರಿತ್ರೆಯನ್ನು ಪರೀಕ್ಷಿಸಿದಾಗ ಪ್ರಮುಖ ಪದಗಳು ಅರ್ಥಾಂತರವನ್ನು ಅಥವಾ ಅರ್ಥವಿಸ್ತಾರವನ್ನು ಪಡೆದಿರುವುದು ನಮ್ಮ ಗಮನಕ್ಕೆ ಬರುತ್ತದೆ. ಗೀತೆಯ ವಿಷಯದಲ್ಲೂ ಇದು ಸತ್ಯ. ಅದರ ಕರ್ತೃ ತಾನೇ ಕೆಲವು ಪ್ರಚಲಿತ ಪದಗಳ ಅರ್ಥವನ್ನು ವಿಸ್ತೃತಗೊಳಿಸಿರುವುದು ಕಂಡುಬರುತ್ತದೆ. ತೇಲುನೋಟಕ್ಕೆ ಇಂಥವು ನಮ್ಮ ಗಮನಕ್ಕೆ ಬರುತ್ತವೆ. ಗೀತೆಯ ಪೂರ್ವಯುಗದಲ್ಲಿ ಬಹುಶಃ ಯಜ್ಞದಲ್ಲಿ ಪ್ರಾಣಿಗಳನ್ನು ಬಲಿ ಕೊಡಲು ಅವಕಾಶವಿದ್ದಿತು. ಆದರೆ ಗೀತೆಯು ಹೇಳುವ ಯಜ್ಞದಲ್ಲಿ ಪ್ರಾಣಿಬಲಿಯ ಕುರುಹು ಕೂಡ ಕಂಡುಬರುವುದಿಲ್ಲ. ಭಗವದೇಕಾಗ್ರತೆಯೇ ಯಜ್ಞಗಳ ರಾಜನೆಂದು ಗೀತೆ ಹೇಳುತ್ತದೆ. ಯಜ್ಞವು ಮುಖ್ಯವಾಗಿ, ಸೇವೆಗಾಗಿ ಕೈಗೊಳ್ಳುವ ದೈಹಿಕ ದುಡಿಮೆ ಯೆಂದು ಮೂರನೆಯ ಅಧ್ಯಾಯವು ಸೂಚಿಸಿರುವಂತೆ ಕಾಣುತ್ತದೆ. ಮೂರನೆಯ ಮತ್ತು ನಾಲ್ಕನೆಯ ಅಧ್ಯಾಯಗಳನ್ನು ಒಟ್ಟಿಗೆ ಓದಿದಾಗ ಯಜ್ಞಕ್ಕೆ ಹೇಳುವ ಇತರ ಅರ್ಥಗಳು ನಮಗೆ ಗೋಚರಿಸುತ್ತವೆಯೆ ಹೊರತು ಪ್ರಾಣಿಬಲಿಯ ಉಲ್ಲೇಖ ಎಲ್ಲೂ ಕಂಡುಬರುವುದಿಲ್ಲ. ಇದೇ ಬಗೆಯಲ್ಲಿ 'ಸಂನ್ಯಾಸ' ಎಂಬ ಪದವು ಗೀತೆಯಲ್ಲಿ

ಅರ್ಥಾಂತರವನ್ನು ಹೊಂದಿರುವುದು ಕಂಡುಬರುತ್ತದೆ. ಗೀತೆಯ 'ಸಂನ್ಯಾಸ'ವು ಸಂಪೂರ್ಣ ಕ್ರಿಯಾಶೂನ್ಯತೆಯನ್ನು ಒಪ್ಪುವುದಿಲ್ಲ. ಸತತ ದುಡಿಮೆಯೇ ಗೀತೆಯು ಹೇಳುವ ಸಂನ್ಯಾಸ. ಇದರಲ್ಲಿ ಕ್ರಿಯೆಯಿದ್ದರೂ ಕ್ರಿಯೆಯಿರುವುದಿಲ್ಲ. ಹೀಗೆ ಗೀತೆಯ ಕರ್ತೃ, ಪದಗಳ ಅರ್ಥವನ್ನು ವಿಶಾಲಗೊಳಿಸುವುದರ ಮೂಲಕ ಅವನನ್ನು ನಾವು ಅನುಕರಿಸ ಬೇಕೆಂದು ಹೇಳಿದ್ದಾನೆ. ಗೀತೆಯ ಅರ್ಥಕ್ಕನುಸಾರವಾಗಿ ಯುದ್ಧೋದ್ಯಮವು ಫಲ ತ್ಯಾಗಕ್ಕೆ ಅವಿರೋಧಿಯೆಂದು ಹೇಳಲು ಸಾಧ್ಯವೆಂದು ಭಾವಿಸಬಹುದು. ಗೀತೆಯ ಬೋಧನೆಯನ್ನು ನನ್ನ ಬದುಕಿನಲ್ಲಿ ಪೂರ್ಣವಾಗಿ ಅಳವಡಿಸಿಕೊಳ್ಳಲು ನಾನು ಮಾಡಿದ ನಲವತ್ತು ವರ್ಷಗಳ ಸತತ ಸಾಧನೆಯ ನಂತರ, ಎಲ್ಲ ಪ್ರಕಾರಗಳಲ್ಲಿಯೂ ಅಹಿಂಸೆ ಯನ್ನು ಪರಿಪೂರ್ಣವಾಗಿ ಪಾಲಿಸದ ಹೊರತು ಫಲತ್ಯಾಗವು ಸಾಧ್ಯವಿಲ್ಲವೆಂಬುದು ನನ್ನ ವಿನಮ್ರ ಅನಿಸಿಕೆಯಾಗಿದೆ.

"ಗೀತೆಯು ಸೂಕ್ತಿಗ್ರಂಥವಲ್ಲ; ಅದೊಂದು ಮಹಾಧಾರ್ಮಿಕ ಕಾವ್ಯ; ಅದರ ಆಳಕ್ಕೆ ಮುಳುಗಿದಂತೆಲ್ಲ ನೀವು ಹೆಚ್ಚು ಹೆಚ್ಚು ಅರ್ಥಸಂಪತ್ತನ್ನು ಪಡೆಯುತ್ತೀರಿ. ಅದು ಸಾಮಾನ್ಯ ಜನಸಮುದಾಯಕ್ಕೆ ಬರೆದುದಾದ್ದರಿಂದ, ಅದರಲ್ಲಿ ಬೇಸರ ತರದ ಪುನರಾವೃತ್ತಿಯಿದೆ. ಕಾಲದಿಂದ ಕಾಲಕ್ಕೆ ಪ್ರಮುಖ ಪದಗಳು ಹೊಸ ಮತ್ತು ವಿಸ್ತೃತ ಅರ್ಥಗಳನ್ನು ಪಡೆಯುತ್ತಾ ಹೋಗುತ್ತವೆ. ಆದರೆ ಅದರ ಪ್ರಧಾನ ತತ್ತ್ವ ಮಾತ್ರ ಎಂದಿಗೂ ಬದಲಾಗುವುದಿಲ್ಲ. ಅಮೂಲ್ಯಖನಿಯಿಂದ ಪ್ರಧಾನ ತತ್ತ್ವವನ್ನು ತನ್ನ ಬದುಕಿನಲ್ಲಿ ಅನುಷ್ಠಾನಿಸಲು ಅನುವು ಕೊಡುವ, ತನಗಿಷ್ಟಬಂದ ಯಾವ ಅರ್ಥ ವನ್ನಾದರೂ ಪಡೆಯುವ ಸ್ವಾತಂತ್ರ್ಯ ಸಾಧಕನಿಗಿದೆ.

"ಅಥವಾ ಗೀತೆಯು ಮಾಡುಬೇಡಗಳ ಸಂಗ್ರಹವೂ ಅಲ್ಲ. ಒಬ್ಬನಿಗೆ ಸಮ್ಮತ ವಾದುದು ಮತ್ತೊಬ್ಬನಿಗೆ ಅಸಮ್ಮತವಾಗಬಹುದು. ಒಂದು ಕಾಲದಲ್ಲಿ ಅಥವಾ ಒಂದು ಸ್ಥಳದಲ್ಲಿ ಅಂಗೀಕಾರಾರ್ಹವಾದುದು ಬೇರೊಂದು ಕಾಲದಲ್ಲಿ ಮತ್ತು ಬೇರೊಂದು ಸ್ಥಳದಲ್ಲಿ ಅಸಮ್ಮತವಾಗಬಹುದು. ಫಲಾಸಕ್ತಿಯೊಂದೇ ಸಾರ್ವತ್ರಿಕ ನಿಷೇಧ. ನಿರಾಸಕ್ತಿ ಮಾತ್ರ ಕಡ್ಡಾಯವಾದುದು.

"ಗೀತೆಯು ಜ್ಞಾನವನ್ನು ಕೊಂಡಾಡಿದೆ. ಆದರೆ ಅದು ಬರಿಯ ಬುದ್ಧಿಗೆ ನಿಲುಕುವ ಜ್ಞಾನವಲ್ಲ. ಅದು ಮುಖ್ಯವಾಗಿ ಹೃದಯ ಸಂಬೋಧನೆ. ಹೃದಯ ಮಾತ್ರ ಅದನ್ನು ಗ್ರಹಿಸಬಲ್ಲದು. ಆದ್ದರಿಂದ ಗೀತೆಯಿರುವುದು ಶ್ರದ್ಧಾಹೀನರಿಗಲ್ಲ. ಅದರ ಕರ್ತೃವು ಕೃಷ್ಣನ ಬಾಯಿಂದ ಹೀಗೆ ಹೇಳಿಸುತ್ತಾನೆ: 'ತ್ಯಾಗ, ಭಕ್ತಿಗಳಿಲ್ಲದ ಸದ್ಬೋಧೆ ಯಲ್ಲಿ ಆಸಕ್ತಿಯಿಲ್ಲದ ಮತ್ತು ನನ್ನನ್ನು ನಿರಾಕರಿಸುವಂಥವನಿಗೆ ಈ ಭಂಡಾರ ವನ್ನೊಪ್ಪಿಸಬೇಡ. ಬದಲಿಗೆ, ಯಾರು ಈ ಅಮೂಲ್ಯ ಸಿರಿಯನ್ನು ನನ್ನ ಭಕ್ತರಿಗೆ ಕೊಡು ತ್ತಾರೊ, ಅವರು ತಮ್ಮ ಆ ಸೇವೆಯ ಕಾರಣದಿಂದ ನನ್ನ ಬಳಿಗೆ ಬರುತ್ತಾರೊ ಅಲ್ಲದೆ ನಿರ್ಮತ್ಸರರಾಗಿ ಈ ಉಪದೇಶವನ್ನು ಶ್ರದ್ಧೆಯಿಂದ ಗ್ರಹಿಸುತ್ತಾರೋ ಅವರು ಬಂಧವಿಮುಕ್ತರಾಗಿ ಮರಣಾನಂತರ ಯೋಗ್ಯರು ಸೇರುವ ಸ್ಥಳವನ್ನೇ ಸೇರುತ್ತಾರೆ."

ತಮ್ಮ ಈ ಆಧ್ಯಾತ್ಮಿಕ ವಿಚಾರಗಳನ್ನು ಅವರು 'ಯಂಗ್ ಇಂಡಿಯಾ'ದ ಓದುಗರೊಡನೆ ಹಂಚಿಕೊಂಡರು. ಟೀಕೆಗಳಿಗೆ ಉತ್ತರವಾಗಿ ಗಾಂಧೀಜಿ 'ದೇವರಿದ್ದಾನೆ' ಎಂದು ಬರೆದಲ್ಲದೆ: "ವಿವರಿಸಲಾಗದ ಒಂದು ಅದ್ಭುತಶಕ್ತಿ ಎಲ್ಲವನ್ನೂ ವ್ಯಾಪಿಸಿದೆ. ಅದನ್ನು ನಾನು ಕಾಣಲಾಗದಿದ್ದರೂ ಅದು ನನ್ನ ಅನುಭವಕ್ಕೆ ಬಂದಿದೆ. ಅನುಭವಕ್ಕೆ ಬಂದರೂ ಎಲ್ಲ ಸಾಕ್ಷಿಗಳನ್ನೂ ನಿರಾಕರಿಸುವಂಥ ಅಗೋಚರ ಶಕ್ತಿಯದು. ಕಾರಣ, ಅದು ನನ್ನ ಇಂದ್ರಿಯಗಳ ಮೂಲಕ ನಾನು ಗ್ರಹಿಸುವ ಸಂಗತಿಗಳಿಗಿಂತ ತೀರ ಭಿನ್ನವಾದುದು; ಅದು ಇಂದ್ರಿಯಾತೀತವಾದುದು.

"ಒಂದು ಪರಿಮಿತ ಹಂತದ ವರೆಗೆ ಭಗವಂತನ ಅಸ್ತಿತ್ವದ ಬಗೆಗೆ ಪರ್ಯಾಲೋಚಿಸುವುದು ಸಾಧ್ಯ. ಸಾಧಾರಣ ವಿಚಾರಗಳಲ್ಲೂ ಸಹ, ತಮ್ಮನ್ನು ಯಾರು ಆಳುತ್ತಾರೆ ಏಕೆ ಮತ್ತು ಹೇಗೆ ಆಳುತ್ತಾರೆಂಬುದರ ಅರಿವು ಜನರಿಗಿರುವುದಿಲ್ಲವೆಂಬುದನ್ನು ನಾವು ನೋಡಿದ್ದೇವೆ. ಆದರೂ ಯಾವುದೊ ಒಂದು ಶಕ್ತಿ ನಿಶ್ಚಯವಾಗಿ ಆಳುತ್ತದೆಂಬುದನ್ನು ಅವರು ತಿಳಿದಿರುತ್ತಾರೆ. ನನ್ನ ಮೈಸೂರು ಪ್ರವಾಸದಲ್ಲಿ ಅನೇಕ ಬಡಹಳ್ಳಿಗರನ್ನು ಕಂಡೆ. ಅವರನ್ನು ಕೇಳಲಾಗಿ, ಮೈಸೂರನ್ನು ಯಾರು ಯಾರು ಆಳಿದರೆಂಬುದು ಅವರಿಗೆ ಗೊತ್ತಿರಲಿಲ್ಲ. ಯಾವನೋ ದೇವತೆ ಅದನ್ನು ಆಳಿದನೆಂದು ಒಂದೇ ಮಾತಿನಲ್ಲಿ ಹೇಳಿಬಿಟ್ಟರು. ತಮ್ಮ ರಾಜನ ಬಗೆಗೆ ಈ ಬಡಜನರ ತಿಳುವಳಿಕೆ ಇಷ್ಟು ಅಲ್ಪದ್ದಾಗಿರಬೇಕಾದರೆ, ಭಗವಂತನ ವಿಷಯದಲ್ಲಿ ತಮ್ಮ ರಾಜನ ಬಗೆಗೆ ಅವರಿಗಿರುವ ಜ್ಞಾನಕ್ಕಿಂತ ಅಲ್ಪಾತಿಅಲ್ಪ ತಿಳುವಳಿಕೆಯುಳ್ಳ ನಾನು ಪ್ರಭುಗಳ ಪ್ರಭುವಾದ ಅವನ ಅಸ್ತಿತ್ವವನ್ನು ಕಂಡುಕೊಳ್ಳದಿದ್ದಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಆದರೂ ಮೈಸೂರಿನ ಬಗೆಗೆ ಆ ಬಡಜನರಿಗನಿಸಿದಂತೆ ನನಗೂ ಅನಿಸಿದೆ. ವಿಶ್ವದಲ್ಲಿ ಒಂದು ಸುವ್ಯವಸ್ಥೆಯಿದೆ. ಪ್ರತಿಯೊಂದನ್ನೂ ಮತ್ತು ಇರುವ ಅಥವಾ ಬದುಕಿರುವ ಪ್ರತಿಯೊಂದು ಜೀವಿಯನ್ನೂ ನಿಯಂತ್ರಿಸುವ ಬದಲಾಯಿಸಲಾಗದ ಒಂದು ನಿಯಮವಿದೆ. ಅದು ಕುರುಡು ನಿಯಮವೇನಲ್ಲ; ಏಕೆಂದರೆ ಯಾವ ಕುರುಡು ನಿಯಮವೂ ಜೀವಿಗಳ ನಡವಳಿಕೆಯನ್ನು ನಿಯಂತ್ರಿಸಲಾರದು. ಸರ್ ಜೆ.ಸಿ. ಬೋಸರ ಅದ್ಭುತ ಸಂಶೋಧನೆಗೆ ಅಭಿನಂದನೆಗಳು. ಜಡದಲ್ಲೂ ಚೇತನವಿದೆಯೆಂಬುದನ್ನು ಈಗ ಸಿದ್ಧಪಡಿಸಬಹುದು. ಹಾಗಾದರೆ ಎಲ್ಲ ಜೀವಗಳನ್ನೂ ನಿಯಂತ್ರಿಸುವ ನಿಯಮವೇ ದೇವರು. ನಿಯಮ ಮತ್ತು ನಿಯಮಕರ್ತ ಎರಡೂ ಒಂದೆ. ನಿಯಮವನ್ನಾಗಲಿ ನಿಯಮಕರ್ತನನ್ನಾಗಲಿ ನಾನು ನಿರಾಕರಿಸಲಾರೆ. ಏಕೆಂದರೆ ಅದರ ಅಥವಾ ಅವನ ಬಗೆಗೆ ನನಗೆ ತಿಳಿದಿರುವುದು ಅತ್ಯಲ್ಪ. ಲೌಕಿಕ ಪ್ರಭುತ್ವದ ಅಸ್ತಿತ್ವದ ನಿರಾಕರಣೆಯಿಂದಾಗಲಿ ಅಜ್ಞಾನದಿಂದಾಗಲಿ ನನಗೇನೂ ಲಾಭವಿಲ್ಲ. ಅದರಂತೆಯೇ ಭಗವಂತನನ್ನು ಮತ್ತು ಅವನ ನಿಯಮವನ್ನು ನಿರಾಕರಿಸುವುದರಿಂದ ನಾನು ಅದರ ಕಾರ್ಯಾಚರಣೆಯಿಂದ ಮುಕ್ತನಾಗುವುದು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ಲೌಕಿಕ ಪ್ರಭುತ್ವವನ್ನು ಒಪ್ಪಿಕೊಳ್ಳುವುದರಿಂದ ಅದರಡಿಯ ಬದುಕು ಸುಗಮವಾಗು

ವಂತೆಯೇ ದೈವೀ ಪ್ರಭಾವವನ್ನು ವಿನೀತವಾಗಿ ಮತ್ತು ಮೌನವಾಗಿ ಅಂಗೀಕರಿಸು ವುದರಿಂದ ಬಾಳಿನ ಪ್ರಯಾಣ ಸುಗಮವಾಗುತ್ತದೆ.

"ನನ್ನ ಸುತ್ತಲಿನ ಪ್ರತಿಯೊಂದೂ, ನಿರಂತರ ಬದಲಾವಣೆ ಮತ್ತು ನಾಶಗಳಿ ಗೊಳಗಾಗುತ್ತಿರುವಾಗ, ಈ ಎಲ್ಲ ಪರಿವರ್ತನೆಗಳ ಹಿಂದೆ ಅವಿಕಾರಿಯಾದ, ಎಲ್ಲವನ್ನು ಹಿಡಿದಿರುವ, ಸೃಷ್ಟಿ, ಲಯ ಮತ್ತು ಪುನಃಸೃಷ್ಟಿಗಳಲ್ಲಿ ತೊಡಗಿರುವ ಒಂದು ಜೀವಂತ ಶಕ್ತಿಯು ಹುದುಗಿದೆಯೆಂದು ನನಗೆ ಅಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ. ಅಂತಹ ಸಂವೇದನೆಯನ್ನುಂಟು ಮಾಡುವ ಶಕ್ತಿ ಅಥವಾ ಚೈತನ್ಯವೇ ದೇವರು. ಅವನೊಬ್ಬನ ಹೊರತು ಕೇವಲ ಇಂದ್ರಿಯಗಳ ಮೂಲಕ ನೋಡುವ ಯಾವುದೊಂದೂ ಶಾಶ್ವತ ವಾಗಿರಲು ಸಾಧ್ಯವಿಲ್ಲ.

"ಹಾಗಾದರೆ ಈ ಶಕ್ತಿಯು ಉಪಕಾರಿಯೊ ಅಥವಾ ಅಪಕಾರಿಯೊ? ಅದು ಸರ್ವಥಾ ಹಿತಕಾರಿಯೆಂಬುದೇ ನನ್ನ ಭಾವನೆ. ಸಾವಿನ ನಡುವೆ ಜೀವದ ಇರವನ್ನು, ಅಸತ್ಯದ ನಡುವೆ ಸತ್ಯದ ಇರವನ್ನು, ಕತ್ತಲೆಯ ನಡುವೆ ಬೆಳಕಿನ ಇರವನ್ನು ನಾನು ನೋಡುತ್ತಿದ್ದೇನೆ. ಇದರಿಂದ ಜೀವ, ಸತ್ಯ, ಬೆಳಕುಗಳೇ ದೇವರೆಂಬುದು ನನ್ನ ಗ್ರಹಿಕೆ. ಅವನೇ ಪ್ರೇಮ. ಅವನೇ ಸರ್ವೋಚ್ಚ ಸುಗುಣಿ.

"ಕೇವಲ ಬುದ್ಧಿಯನ್ನು ಮಾತ್ರ ತೃಪ್ತಿಗೊಳಿಸುವವನು ದೇವರೇ ಅಲ್ಲ. ದೇವರು ದೇವರಾಗಿರಬೇಕಾದರೆ ಹೃದಯವನ್ನು ಆಳಬೇಕು ಮತ್ತು ಅದನ್ನು ಪರಿವರ್ತಿಸಬೇಕು. ತನ್ನ ಭಕ್ತನ ಪ್ರತಿಯೊಂದು ಸಣ್ಣ ಕ್ರಿಯೆಯಲ್ಲೂ ತನ್ನನ್ನು ತೋರ್ಪಡಿಸಿಕೊಳ್ಳಬೇಕು. ಪಂಚೇಂದ್ರಿಯಗಳು ನೀಡಲಾಗದಂತಹ ಸ್ಪಷ್ಟ ತಿಳಿವಿನ ಮೂಲಕ ಮಾತ್ರ ಇದು ಸಾಧ್ಯವಾಗುತ್ತದೆ. ಇಂದ್ರಿಯಾನುಭವಗಳು ಅನೇಕ ವೇಳೆ ಅವು ಎಷ್ಟೇ ನಿಜವಾಗಿ ಕಂಡುಬಂದರೂ ಸುಳ್ಳಾಗಿರಬಹುದು ಮತ್ತು ತಪ್ಪುದಾರಿಗೆಳೆಯಬಹುದು. ಇಂದ್ರಿಯಾ-ತೀತವಾದ ಅರಿವಿರುವಲ್ಲಿ ಮೋಸಹೋಗುವುದು ಸಾಧ್ಯವಿಲ್ಲ. ಭಗವಂತನ ನಿಜವಾದ ಅಸ್ತಿತ್ವದ ಅನುಭವವನ್ನು ಪಡೆದಂಥವರ ಪರಿವರ್ತಿತ ಚರ್ಯೆ ಮತ್ತು ಶೀಲಗಳಲ್ಲಿ ಇದನ್ನು ಕಾಣಬಹುದೇ ಹೊರತು ಬಾಹ್ಯನಿದರ್ಶನಗಳಿಂದ ಇದು ಸಾಧಿತವಾಗು ವಂತಹುದಲ್ಲ.

"ಈ ಬಗೆಯ ರುಜುವಾತನ್ನು ಎಲ್ಲ ದೇಶಗಳ ಸಂತದಾರ್ಶನಿಕರ ಅನುಭವಗಳಲ್ಲಿ ಗುರುತಿಸಬಹುದು. ಈ ರುಜುವಾತನ್ನು ತಿರಸ್ಕರಿಸುವುದು ತನ್ನನ್ನು ತಾನೆ ತಿರಸ್ಕರಿಸಿದಂತೆ.

"ಅಸ್ಖಲಿತ ಶ್ರದ್ಧೆಯಿಂದ ಮಾತ್ರ ಇಂಥ ಅಂತರ್ಜ್ಞಾನವು ಸಾಧ್ಯ. ಭಗವಂತನ ಇರವನ್ನು ಯಾವಾತ ಸ್ವತಃ ಪರೀಕ್ಷಿಸಲಿಚ್ಛಿಸುವನೊ ಅವನಿಗೆ ನಿಜವಾದ ಶ್ರದ್ಧೆಯಿರ ಬೇಕಾಗುತ್ತದೆ. ಈ ಶ್ರದ್ಧೆಯನ್ನು ಬಾಹ್ಯಸಾಕ್ಷಿಗಳಿಂದ ಪ್ರಮಾಣೀಕರಿಸಲು ಸಾಧ್ಯವಿಲ್ಲ ವಾದ್ದರಿಂದ ಈ ಪ್ರಪಂಚದ ನೈತಿಕ ಆಳ್ವಿಕೆಯಲ್ಲಿ, ಅರ್ಥಾತ್ ನೈತಿಕ ನಿಯಮದ, ಅಂದರೆ ಸತ್ಯ ಮತ್ತು ಪ್ರೇಮಗಳ ನಿಯಮದ ಸರ್ವೋಚ್ಚತೆಯಲ್ಲಿ ನಂಬಿಕೆಯನ್ನಿಡು

ವುದೇ ಸುಕ್ಷೇಮವೆಂದು ಕಾಣುತ್ತದೆ. ಸತ್ಯ ಮತ್ತು ಪ್ರೇಮಗಳಿಗೆ ವಿರುದ್ಧವಾದ ಎಲ್ಲವನ್ನೂ ಸಂಪೂರ್ಣವಾಗಿ ನಿರಾಕರಿಸುವ ದೃಢತೆಯಿರುವಲ್ಲಿ ಶ್ರದ್ಧೆಯ ಅನುಷ್ಠಾನವು ನಿರಪಾಯಕಾರಿಯಾಗಿರುತ್ತದೆ.

"ಬೌದ್ಧಿಕ ತರ್ಕದ ಮೂಲಕ ನಿಮ್ಮ ಮನವೊಪ್ಪಿಸುವ ಯಾವ ವಾದವೂ ನನ್ನಲ್ಲಿಲ್ಲ ವೆಂದು ನಾನು ಒಪ್ಪಿಕೊಳ್ಳುವೆ. ಶ್ರದ್ಧೆಯು ಬುದ್ಧಿಯನ್ನು ಮೀರಿದ್ದು. ಅಸಾಧ್ಯವಾದುದಕ್ಕೆ ಕೈಹಾಕಬೇಡಿ ಎಂದಿಷ್ಟೆ ನಾನು ನಿಮಗೆ ಹೇಳಬಹುದು. ಪಾಪದ ಅಸ್ತಿತ್ವಕ್ಕೆ ನಾನೇನೂ ತಾರ್ಕಿಕ ಕಾರಣವನ್ನು ನೀಡಲಾರೆ. ಹಾಗೆ ಮಾಡಲು ಹೋಗುವುದು ದೇವರೊಂದಿಗೆ ಸಮಾನತೆಯನ್ನು ಪಡೆದಂತೆ. ಆದ್ದರಿಂದ ನಾನು ಪಾಪದ ಅಸ್ತಿತ್ವವನ್ನಷ್ಟೆ ವಿನೀತನಾಗಿ ಒಪ್ಪಿಕೊಳ್ಳುವೆ. ಅಲ್ಲದೆ ದೇವರನ್ನು ದೀರ್ಘದುಃಖಿ ಮತ್ತು ರೋಗಿಯೆಂದೇ ಕರೆಯುವೆ. ಏಕೆಂದರೆ ಅವನು ಪ್ರಪಂಚದಲ್ಲಿ ಪಾಪಕ್ಕೆ ಅವಕಾಶ ಕೊಡುತ್ತಾನೆ. ಅವನಲ್ಲಿ ಯಾವ ಪಾಪವೂ ಇಲ್ಲವೆಂಬುದು ನನಗೆ ತಿಳಿದಿದೆ. ಪಾಪವಿರುವ ಪಕ್ಷಕ್ಕೆ ಅವನೇ ಅದರ ಕರ್ತೃವಾದರೂ ಅದರ ಸೋಂಕು ಅವನಿಗಿರುವುದಿಲ್ಲ.

"ಪಾಪದ ಜೊತೆ ಮತ್ತು ವಿರುದ್ಧ ಪ್ರಾಣದ ಹಂಗನ್ನು ತೊರೆದು ಹೋರಾಡದಿದ್ದಲ್ಲಿ ನಾನು ದೇವರನ್ನೆಂದಿಗೂ ಅರಿಯುತ್ತಿರಲಿಲ್ಲವೆಂಬುದೂ ನನಗೆ ತಿಳಿದಿದೆ. ನನ್ನದೇ ವಿನಮ್ರ ಹಾಗೂ ಪರಿಮಿತ ಅನುಭವದಿಂದ ಈ ನನ್ನ ನಂಬಿಕೆ ದೃಢವಾಗಿದೆ. ನಾನು ಎಷ್ಟೆಷ್ಟು ಪರಿಶುದ್ಧನಾಗಲು ಪ್ರಯತ್ನಿಸುತ್ತೇನೆಯೊ ಅಷ್ಟಷ್ಟು ಭಗವಂತನಿಗೆ ಸಮೀಪವಾದಂತೆನಿಸುತ್ತದೆ. ನನ್ನ ಶ್ರದ್ಧೆಯು ಈಗಿರುವಂತೆ ಕೇವಲ ನಾಮಮಾತ್ರವಾಗಿರದೆ ಹಿಮಾಲಯ ಪರ್ವತಗಳಂತೆ ಅಚಲವೂ ಹಿಮಧವಳವೂ ಆದ ಪಕ್ಷಕ್ಕೆ ಭಗವಂತನಿಗೆ ನಾನು ಎಷ್ಟೊಂದು ಹತ್ತಿರವಾಗಬಲ್ಲೆ!"

ಗಾಂಧೀಜಿ ತಮ್ಮ ಬಿಡುವಿನ ವೇಳೆಯನ್ನು "ಒಂದು ಜೀವಮಾನದ ಹವ್ಯಾಸ"ವಾದ ಪಥ್ಯದ ಪ್ರಯೋಗಗಳನ್ನು ನವೀಕರಿಸಲು ಬಳಸಿಕೊಂಡರು. ಈ ಹವ್ಯಾಸವು ದಕ್ಷಿಣ ಆಫ್ರಿಕಾದಲ್ಲಿ ಅವರ ಅತ್ಯಧಿಕ ಲಕ್ಷ್ಯವನ್ನು ಸೆಳೆದಿತ್ತು. ಈ ಹೊಸ ಪ್ರಯೋಗಗಳ ಅವಧಿಯಲ್ಲಿ ಅವರ ಆರೋಗ್ಯ ಮತ್ತೆ ಕುಸಿಯಿತು. ಆದರೂ ಅವರು ತಮ್ಮ 'ಅತಿಮುಖ್ಯ ಚಟುವಟಿಕೆ'ಯನ್ನು ವೈದ್ಯ ಪರಿಣತರ ಮಾರ್ಗದರ್ಶನ ಮತ್ತು ವೀಕ್ಷಣೆಗಳ ಬೆಳಕಿನಲ್ಲಿ ಮುಂದುವರಿಸಿದರು. ಅವರ ಆರೋಗ್ಯವು ಅನೇಕ ಸ್ನೇಹಿತರಲ್ಲಿ ಕಳವಳವನ್ನುಂಟು ಮಾಡಿತು. ಪತ್ರಿಕೆಗಳು ಗಾಬರಿಯ ವರದಿಗಳನ್ನು ಪ್ರಕಟಿಸಿದುವು. ಕೆಲವು ಪತ್ರಿಕೆಗಳಂತೂ ಮಾರ್ಚ್ ೧೨ರ ಹೊತ್ತಿಗೆ ಅವರು ತಮ್ಮ ಮರಣವನ್ನು ಮುನ್ನುಡಿದಿದ್ದರೆಂದೂ, ಮತ್ತು ಅವರು ವಿಷಣ್ಣರಾಗಿದ್ದಾರೆಂದೂ ಬರೆದಿದ್ದುವು. ಅವರು ತಮ್ಮ ವಿಷಯದಲ್ಲಿ ಸ್ವತಃ ಭವಿಷ್ಯಕಾರರಾಗಿದ್ದರೆಂದೂ ಸೂಚಿಸಲಾಗಿದ್ದಿತು. ಗಾಂಧೀಜಿ ಅದಕ್ಕೆ ಹೀಗೆ ಉತ್ತರಿಸಿದರು: "ಜ್ಯೋತಿಷ್ಯಶಾಸ್ತ್ರದ ಬಗ್ಗೆ ನನಗೆ ಕಿಂಚಿತ್ತೂ ತಿಳಿದಿಲ್ಲ. ಅದು ಒಂದು ವಿಜ್ಞಾನವಾದ ಪಕ್ಷಕ್ಕೆ ನಾನದನ್ನು ಒಂದು ಅನಿಶ್ಚಿತ ವಿಜ್ಞಾನವೆಂದು ಗಣಿಸುತ್ತೇನೆ.

ಮುನ್ನೋಟದಲ್ಲಿ ಅಲ್ಪಸ್ವಲ್ಪ ನಂಬಿಕೆಯುಳ್ಳವರಿಂದ ಮಾತ್ರ ಅದು ನಿಂತಿದೆಯಷ್ಟೆ. ನಾನು ನಿರಾಶನೂ ಆಗಿಲ್ಲ. ಕಾರಣ ನಿರಾಶೆಯೆಂಬುದು ನನ್ನ ಸ್ವಭಾವಕ್ಕೆ ವಿರುದ್ಧ ವಾದುದು. ನಿಜವಾಗಿ ನಡೆದದ್ದು ಹೀಗೆ. ನಾನು ಆರು ವರ್ಷಗಳ ಹಿಂದೆ ಸೆರೆಯಲ್ಲಿದ್ದಾಗ ಸ್ವರಾಜ್ಯ ಭವಿಷ್ಯದ ಬಗೆಗೆ ನನ್ನನ್ನು ಕೇಳಲಾಯಿತು. ನಾನದಕ್ಕೆ ಹೇಳಿದೆ, ಆರು ವರ್ಷಗಳ ಮಿತಿಯಲ್ಲಿ ಭಗವದನುಗ್ರಹವು ಪವಿತ್ರತೆ ಆ ಅವಧಿಯಲ್ಲಿ ನಾವು ಸ್ವರಾಜ್ಯ ವನ್ನು ಗೆಲ್ಲಬೇಕು ಇಲ್ಲವೆ ನಾನು ಸಾಯಬೇಕು; ಅಲ್ಲದೆ ದೇಶವು ಸ್ವಾತಂತ್ರ್ಯವನ್ನು ಗಳಿಸಲು ಆರು ವರ್ಷಗಳ ಅವಧಿಯೆ ಸಾಕು ಎಂದು. ಸ್ವಾತಂತ್ರ್ಯ ಸಾಧನೆಗಾಗಿ ಒಬ್ಬ ವ್ಯಕ್ತಿ ಮಾಡಬಹುದಾದ ಸರ್ವಪ್ರಯತ್ನಗಳನ್ನೂ ನಾನು ಮಾಡಬೇಕೆಂಬುದು ಇದರ ಅಭಿಪ್ರಾಯವಾಗಿದ್ದಿತೆ ಹೊರತು ಬೇರೆ ಯಾವ ಮಹತ್ವವನ್ನೂ ಅದಕ್ಕೆ ಅಂಟಿ ಸಿರಲಿಲ್ಲ. ಆರು ವರ್ಷಗಳ ಅವಧಿ ಸಮಾಪಿಸುತ್ತಿದ್ದರೂ ನಾನು ನಿರ್ಬಾಧಿತನಾಗಿದ್ದೇನೆ. ಅಲ್ಲದೆ ಈ ಅವಧಿ ಮುಗಿಯುವುದು ಮುಂದಿನ ಮಾರ್ಚ್ ೧೭ಕ್ಕೆ ಹೊರತು ಇಂದಿನ ಮಾರ್ಚ್ ೧೭ಕ್ಕಲ್ಲ. ನನ್ನ ದೇಹಕ್ಕೆ ಸನ್ನಿಹಿತವಾಗುತ್ತಿರುವ ಮರಣಕ್ಕೆ ನಾನು ಸಿದ್ಧ ನಾಗುತ್ತಿರುವುದಷ್ಟೇ ಅಲ್ಲ, ಆ ದೇಹವನ್ನು ಆದಷ್ಟು ಸುಸ್ಥಿತಿಯಲ್ಲಿಡಲೂ ಸಹ ಸರ್ವ ಪ್ರಯತ್ನ ಮಾಡುತ್ತಿದ್ದೇನೆ. ಒಬ್ಬ ವ್ಯಕ್ತಿಯ–ಅವನು ಎಷ್ಟೇ ದೊಡ್ಡವನಾಗಿರಲಿ– ಮರಣದ ಮೇಲೆ ಯಾವುದೂ ಅವಲಂಬಿಸುವುದಿಲ್ಲ. ಆದರೆ ಹೆಚ್ಚಾಗಿ ಅವಲಂಬಿಸಿರು ವುದು ಭಾರತದ ಸ್ವಾತಂತ್ರ್ಯದ ಮೇಲೆ. ನಾವೀಗ ವ್ಯಕ್ತಿಗಳನ್ನು ಮರೆಯೋಣ ಮತ್ತು ಪವಿತ್ರ ಸ್ವಾತಂತ್ರ್ಯವನ್ನು ಗಳಿಸುವುದರ ಕಡೆಗೆ ಏಕಾಗ್ರಗೊಳ್ಳೋಣ."

ಏಪ್ರಿಲ್‌ನಲ್ಲಿ ಮಗನ್‌ಲಾಲರ ಸಾವಿನಿಂದ ಅವರು ಅಪಾರ ದುಃಖಕ್ಕೊಳಗಾದರು, ತಮ್ಮ ಬಾಷ್ಪಾಂಜಲಿಯನ್ನರ್ಪಿಸುತ್ತಾ ಅವರು ಹೀಗೆ ಬರೆದರು:

"ನನ್ನೆಲ್ಲಕ್ಕೂ ಯಾರನ್ನು ವಾರಸುದಾರನೆಂದು ಆರಿಸಿದ್ದೆನೊ ಆತ ಎಂದೆಂದಿಗೂ ಇಲ್ಲವಾದನು. ನನ್ನ ಚಿಕ್ಕಪ್ಪನ ಮೊಮ್ಮಗನಾದ ಮಗನ್‌ಲಾಲ್ ಕ. ಗಾಂಧೀ ೧೯೦೪ರ ರಿಂದಲೂ ನನ್ನ ಕೆಲಸಗಳಲ್ಲಿ ಜೊತೆಗಾರನಾಗಿದ್ದನು. ಮಗನ್‌ಲಾಲನ ತಂದೆ ತಮ್ಮೆಲ್ಲ ಮಕ್ಕಳನ್ನೂ ಈ ಮಹಾಧ್ಯೇಯಕ್ಕೆ ಅರ್ಪಿಸಿದ್ದಾರೆ. ಅವನು ಖಾಯಿಲೆಯಲ್ಲಿಯೇ ಈ ತಿಂಗಳ ಮೊದಲಲ್ಲಿ ಬಂಗಾಳಕ್ಕೆ ಹೋದನು. ಬಿಹಾರದಲ್ಲಿ ತನ್ನ ಕರ್ತವ್ಯದಲ್ಲಿ ನಿರತ ನಾಗಿದ್ದಾಗ ವಿಪರೀತ ಜ್ವರಕ್ಕೆ ತುತ್ತಾಗಿ ಒಂಬತ್ತು ದಿನಗಳ ಅನಂತರ ಪಾಟ್ನದಲ್ಲಿ ಮೃತನಾದನು.

"೧೯೦೩ರಲ್ಲಿ ಮಗನ್‌ಲಾಲ್ ಗಾಂಧಿ, ಹಣ ಸಂಪಾದನೆಯನ್ನು ಮಾಡುವ ಆಸೆಯಿಂದ ನನ್ನೊಡನೆ ದಕ್ಷಿಣ ಆಫ್ರಿಕಾಕ್ಕೆ ಹೊರಟನು. ಅವನು ಅಂಗಡಿಯನ್ನಿಟ್ಟು ಒಂದು ವರ್ಷವೂ ಆಗಿತ್ತೊ ಇಲ್ಲವೊ, ಅಷ್ಟರಲ್ಲಿಯೇ ಸ್ವಯಂನಿರ್ಮಿತ ದಾರಿದ್ರ್ಯದ ನನ್ನ ಕರೆಗೆ ಓಗೊಟ್ಟು ಆಶ್ರಮಕ್ಕೆ ಬಂದು ಸೇರಿದನು. ನನ್ನ ಜೊತೆಗೂಡಿದನಂತರ ಒಮ್ಮೆಯಾದರೂ ಅವನು ಹಿಂಜರಿಯಲಿಲ್ಲ ಅಥವಾ ಸೋಲಲಿಲ್ಲ. ದೇಶಸೇವೆಗಾಗಿ ತನ್ನನ್ನು ಸಮರ್ಪಿಸಿಕೊಳ್ಳದಿದ್ದಲ್ಲಿ ಆತ ತನ್ನ ಸ್ವಸಾಮರ್ಥ್ಯದಿಂದ ಮತ್ತು ಅವಿಶ್ರಾಂತ

ದುಡಿಮೆಯಿಂದ ಒಬ್ಬ ಶ್ರೀಮಂತ ವ್ಯಾಪಾರಿಯಾಗಿರುತ್ತಿದ್ದ. ಮುದ್ರಣಾಲಯವೊಂದಕ್ಕೆ ಸೇರಿಸಲಾಗಿ ಅವನು ಮುದ್ರಣ ಕಲೆಯ ರಹಸ್ಯಗಳನ್ನು ಸುಲಭವಾಗಿ ಮತ್ತು ಶೀಘ್ರ ವಾಗಿ ಕರಗತ ಮಾಡಿಕೊಂಡನು. ಹಿಂದೆ ಯಾವೊಂದು ಉಪಕರಣವನ್ನಾಗಲಿ ಯಂತ್ರ ವನ್ನಾಗಲಿ ಮುಟ್ಟದಿದ್ದರೂ ಸಹ ಯಂತ್ರಚಾಲನೆಯಲ್ಲಿ, ಮೊಳೆ ಜೋಡಿಸು ವುದರಲ್ಲಿ ಒಳ್ಳೆಯ ಪರಿಣತಿಯನ್ನು ಗಳಿಸಿದನು. 'ಇಂಡಿಯನ್ ಒಪೀನಿಯನ್'ನ ಗುಜರಾತಿ ಆವೃತ್ತಿಯ ಸಂಪಾದನೆಯನ್ನು ಅಷ್ಟೇ ಸುಲಭವಾಗಿ ನಿರ್ವಹಿಸುತ್ತಿದ್ದನು. ಫೀನಿಕ್ಸ್ ಯೋಜನೆಯಲ್ಲಿ ಗೃಹಕೃಷಿಯೂ ಸೇರಿದ್ದಿತಾದ್ದರಿಂದ ಅವನು ಒಳ್ಳೆಯ ತೋಟಗಾರನೂ ಆದನು. ಆಶ್ರಮದಲ್ಲಿ ಅವನದೇ ಅತ್ಯುತ್ತಮ ತೋಟವಾಗಿದ್ದಿತೆಂದು ತೋರುತ್ತದೆ. ಯಂಗ್ ಇಂಡಿಯಾ ಪತ್ರಿಕೆಗೆ ಒಳ್ಳೆಯ ದುಡಿಮೆಯ ಆವಶ್ಯಕತೆಯಿದ್ದಾಗ ಅಹಮದಾಬಾದಿನಲ್ಲಿ ಪ್ರಕಟವಾದ ಅದರ ಪ್ರಪ್ರಥಮ ಸಂಚಿಕೆಯು ಆತನದೇ ದುಡಿಮೆಯ ಕುರುಹಾಗಿತ್ತೆಂಬುದನ್ನು ನೆನೆಯಬಹುದು. ಯಾವ ಧ್ಯೇಯಕ್ಕಾಗಿ ತನ್ನನ್ನು ಸಮರ್ಪಿಸಿಕೊಂಡಿದ್ದನೋ ಆ ಧ್ಯೇಯ ಪ್ರಾಪ್ತಿಗಾಗಿ ಆತ ಆರೋಗ್ಯ ದೃಢಕಾಯವಾದ ತನ್ನ ದೇಹವನ್ನು ಸವೆಸಿದನು. ಅವನು ನನ್ನ ಆಧ್ಯಾತ್ಮಿಕ ಜೀವನ ಗತಿಯನ್ನು ನಿಕಟ ವಾಗಿ ಅಭ್ಯಸಿಸಿ ಅದರಂತೆ ಅನುಸರಿಸಿದನು. ಸತ್ಯಾನ್ವೇಷಣೆಯ ಮಾರ್ಗದಲ್ಲಿ ಬ್ರಹ್ಮ ಚರ್ಯವು ವಿವಾಹಿತರಿಗೂ ಕೂಡ ಬದುಕಿನ ಒಂದು ಅನಿವಾರ್ಯ ವ್ರತವೆಂಬುದನ್ನು ನನ್ನ ಸಹಕಾರ್ಯಕರ್ತರಿಗೆ ಹೇಳುತ್ತಿದ್ದೆ. ಈ ವ್ರತಾಚರಣೆಯ ಸೊಗಸು ಮತ್ತು ಅಗತ್ಯ ಗಳನ್ನು ಮನಗಂಡವರಲ್ಲಿ ಅವನೇ ಮೊದಲಿಗನು. ಆ ದಿಶೆಯಲ್ಲಿ ಅವನು ಭೀಕರ ಹೋರಾಟ ನಡಸಬೇಕಾಗಿದ್ದಿತಾದರೂ ಅದನ್ನು ಜಯಪ್ರದವಾಗಿ ಮುನ್ನಡೆಸಿದವರಲ್ಲಿ ಅವನು ಅಗ್ರಗಣ್ಯ. ತನ್ನ ಪತ್ನಿಯ ಮೇಲೆ ತನ್ನ ಅಭಿಪ್ರಾಯವನ್ನು ಹೇರುವುದಕ್ಕೆ ಬದಲಾಗಿ ಅವಳಿಗೆ ತಾಳ್ಮೆಯಿಂದ ತಿಳಿಯಹೇಳಿ ತನ್ನ ಮಾರ್ಗದಲ್ಲಿಯೇ ಒಯ್ದನು.

"ಸತ್ಯಾಗ್ರಹವು ಹುಟ್ಟಿದಾಗ ಅವನು ಅದರ ಮುಂಚೂಣಿಯಲ್ಲಿ ದಕ್ಷಿಣ ಆಫ್ರಿಕಾದ ಹೋರಾಟದ ಗುರಿಯ ಪೂರ್ಣಾರ್ಥವನ್ನು ಹುಡುಕಲು ನಾನು ಪ್ರಯತ್ನಿಸು ತ್ತಿದ್ದಾಗ ಅದರ ಸ್ಪಷ್ಟ ಅಭಿವ್ಯಕ್ತಿಯನ್ನು ನೀಡಿದವನು ಅವನು. ಆ ಹೋರಾಟಕ್ಕೆ ನಾನು ಸೂಚಿಸಿದ್ದ 'ಸಾತ್ವಿಕ ಪ್ರತಿಭಟನೆ' ಎಂಬ ಅಷ್ಟು ಉಚಿತವಲ್ಲದ ಹಾಗೂ ತಪ್ಪು ದಾರಿಗೂ ಎಳೆಯಬಹುದಾದ ಪದಕ್ಕಿಂತ ಒಂದು ಉತ್ತಮ ಪದವನ್ನೂ ಆತನೆ ಸೂಚಿಸಿ ದನು. ಆಗ ಅವನು ಆ ಹೆಸರನ್ನು ಸೂಚಿಸುವುದರ ಕಾರಣಗಳನ್ನು ತಿಳಿಸಿ ಬರೆದಿದ್ದ ಸೊಗಸಾದ ಪತ್ರ ನನ್ನಲ್ಲಿದ್ದರೆ ಚೆನ್ನಾಗಿತ್ತು. ಅವನು ಹೋರಾಟದ ಸಕಲ ತತ್ವವನ್ನೂ ಹಂತ ಹಂತವಾಗಿ ವಿವರಿಸಿ, ಓದುಗನು ಅವನ ಆಯ್ಕೆಯ ಹೆಸರನ್ನು ಅವಿರೋಧವಾಗಿ ಒಪ್ಪಿಕೊಳ್ಳುವಂತೆ ಮಾಡಿದ್ದನು. ಆ ಪತ್ರವು, ನನಗೆ ನೆನಪಿರುವಂತೆ ಅವನ ಇತರ ಎಲ್ಲ ಪತ್ರಗಳಂತೆಯೇ ಅತ್ಯಂತ ಚಿಕ್ಕದೂ ವಿಷಯಪ್ರಸಕ್ತವೂ ಆಗಿದ್ದಿತು.

"ಹೋರಾಟದ ವೇಳೆಯಲ್ಲಿ ಆತ ಎಂದೂ ದುಡಿಮೆಯಿಂದ ಬೇಸರಗೊಳ್ಳುತ್ತಿರಲಿಲ್ಲ, ಕರ್ತವ್ಯದಿಂದ ನುಣುಚಿಕೊಳ್ಳುತ್ತಿರಲಿಲ್ಲ. ಅವನ ಎದೆಗಾರಿಕೆಯು ಸುತ್ತಲಿನ ಎಲ್ಲರಲ್ಲೂ

ಧೈರ್ಯೋತ್ಸಾಹಗಳನ್ನು ಬಿತ್ತುತ್ತಿದ್ದುವು. ನನ್ನ ಸೂಚನೆಯಂತೆ ಫೀನಿಕ್ಸ್‌ನಲ್ಲಿ ಬಂಧನವನ್ನು ಬಯಸುವುದು ಬಹುಮಾನ ಯೋಗ್ಯವೆನಿಸಿದ್ದಾಗ ಎಲ್ಲರೂ ಜೈಲಿಗೆ ಹೋದ ವೇಳೆಯಲ್ಲಿ ಅವನು ಅದಕ್ಕಿಂತ ಗುರುತರವಾದ ಹೊಣೆಯನ್ನು ನಿರ್ವಹಿಸುವುದಕ್ಕಾಗಿ ಹಿಂದುಳಿದನು. ಆದರೆ ತನ್ನ ಪತ್ನಿಯನ್ನು ಮಹಿಳಾ ತಂಡದಲ್ಲಿ ಸೇರಲು ಕಳುಹಿಸಿಕೊಟ್ಟನು.

"ಭಾರತಕ್ಕೆ ನಾವು ಹಿಂದಿರುಗಿದ ಮೇಲೆ ಆಶ್ರಮವು ಸ್ಥಾಪನೆಗೊಂಡಾಗಿನ ಪವಿತ್ರ ರೀತಿಯಲ್ಲಿಯೆ ಮುಂದುವರಿಯುವಂತೆ ಮಾಡಿದವನು ಅವನು. ಇಲ್ಲಿ ಒಂದು ಹೊಸ ಹಾಗೂ ಹೆಚ್ಚು ಕಷ್ಟಕರವಾದ ಹೊಣೆ ಅವನ ಹೆಗಲೇರಿತು. ಅದನ್ನು ಅವನು ಸಮರ್ಥವಾಗಿ ನಿರ್ವಹಿಸಿದನು. ಅಸ್ಪೃಶ್ಯತೆಯು ಅವನ ಪಾಲಿಗೆ ಒಂದು ತೀವ್ರ ಪರೀಕ್ಷೆಯಾಗಿತ್ತು. ಒಂದು ಅಲ್ಪ ಕ್ಷಣ ಅವನ ಹೃದಯ ಹಿಂಜರಿದಂತೆ ತೋರಿತು. ಆದರೆ ಅದು ಕೇವಲ ಒಂದು ಸೆಕೆಂಡು ಮಾತ್ರ. ಪ್ರೇಮಕ್ಕೆ ಯಾವ ಕಟ್ಟೂ ಇಲ್ಲ ಎಂಬುದನ್ನವನು ಕಂಡುಕೊಂಡನು.

"ಅವನು ನನ್ನ ಕೈಯಾಗಿದ್ದನು, ಕಾಲಾಗಿದ್ದನು, ಕಣ್ಣಾಗಿದ್ದನು. ನನಗೀಗ ದೊರೆಕೊಂಡಿರುವ ಹಿರಿಮೆಯೆಂಬುದು ಸಮರ್ಥರೂ, ಶುದ್ಧರೂ ಸಮರ್ಪಿತರೂ ಆದ ಮೌನ ಕೆಲಸಗಾರರ, ಗಂಡಸರ ಅಂತೆಯೇ ಹೆಂಗಸರ, ಸತತ ದುಡಿಮೆ ಮತ್ತು ಶ್ರಮಗಳನ್ನೆಷ್ಟು ಅವಲಂಬಿಸಿದೆಯೆಂಬುದು ಪ್ರಪಂಚಕ್ಕೆ ತಿಳಿದಿಲ್ಲ. ಅವರಲ್ಲೆಲ್ಲ ಮಗನ್‌ಲಾಲ್ ನನ್ನ ಪಾಲಿಗೆ ಅತ್ಯಂತ ಶ್ರೇಷ್ಠನೂ ಉತ್ತಮನೂ ಪರಿಶುದ್ಧನೂ ಆದ ವ್ಯಕ್ತಿಯಾಗಿದ್ದನು.

"ನಾನು ಈ ವಾಕ್ಯಗಳನ್ನು ಬರೆಯುತ್ತಿರುವಾಗ ತನ್ನ ಗಂಡನ ಸಾವಿಗಾಗಿ ಗೋಳಾಡುತ್ತಿರುವ ವಿಧವೆಯ ಗದ್ಗದ ನನಗೆ ಕೇಳಿಸುತ್ತಿದೆ. ಅವಳಿಗಿಂತ ಹೆಚ್ಚಾಗಿ ವಿಧವೆಯಾದವನು ನಾನೆಂಬುದು ಆಕೆಗೇನು ಗೊತ್ತು? ಭಗವಂತನ ಮೇಲಿನ ಜೀವಂತ ಶ್ರದ್ಧೆಯೊಂದಿರದಿದ್ದ ಪಕ್ಷಕ್ಕೆ, ನನ್ನ ಮಕ್ಕಳಿಗಿಂತಲೂ ಹೆಚ್ಚು ಪ್ರೀತಿಪಾತ್ರನಾದವನನ್ನು, ನನಗೆಂದಿಗೂ ನೆರಡು ಬಗೆಯದವನನ್ನು, ದುಡಿಮೆಯ ಸಾಕಾರರೂಪವಾಗಿದ್ದವನನ್ನು, ಭೌತಿಕ ನೈತಿಕ ಮತ್ತು ಆಧ್ಯಾತ್ಮಿಕ—ಈ ಎಲ್ಲ ದೃಷ್ಟಿಗಳಿಂದಲೂ ಆಶ್ರಮದ ಪಹರೆಯಾಳಿನಂತಿದ್ದವನನ್ನು ಕಳೆದುಕೊಂಡು ನಾನು ಹುಚ್ಚನಾಗಿರುತ್ತಿದ್ದೆ. ನೈತಿಕ ನಿಯಮದ ಶ್ರೇಷ್ಠತೆ ಮತ್ತು ಸಫಲತೆಗಳ ಪ್ರತ್ಯಕ್ಷ ನಿದರ್ಶನವಾಗಿದ್ದ ಅವನ ಬಾಳು ನನಗೆ ಸ್ಫೂರ್ತಿಶಕ್ತಿಯಾಗಿದೆ. ತನ್ನ ಜೀವನಾವಧಿಯ ಕೇವಲ ಕೆಲವು ದಿವಸಗಳು ಮಾತ್ರವಲ್ಲ, ಕೆಲವು ತಿಂಗಳು ಮಾತ್ರವಲ್ಲ, ಆದರೆ ಸುದೀರ್ಘವಾದ ಇಪ್ಪತ್ತನಾಲ್ಕು ವರ್ಷಗಳೂ—ಅಯ್ಯೋ ಆದರೀಗ ಆ ಅವಧಿ ಎಷ್ಟು ಚಿಕ್ಕದೆನಿಸುತ್ತದೆ— ದೇಶಸೇವೆ, ಮಾನವಸೇವೆ, ಆತ್ಮ ಸಾಕ್ಷಾತ್ಕಾರ ಅಥವಾ ಭಗವದರಿವು ಈ ಎಲ್ಲವೂ ಪರ್ಯಾಯ ಪದಗಳೆಂಬುದನ್ನು ತನ್ನ ಸ್ವಂತ ಜೀವನದಲ್ಲಿಯೆ ನನಗೆ ಸಾಧಿಸಿ ತೋರಿಸಿಕೊಟ್ಟನು.

"ಮಗನ್‌ಲಾಲನು ಸತ್ತಿದ್ದಾನೆ. ಆದರೆ ಅವನು ತನ್ನ ಕೆಲಸಗಳಲ್ಲಿ ಬದುಕಿದ್ದಾನೆ. ಆಶ್ರಮದಲ್ಲಿ ನಡೆದಾಡುವವರು ಅಲ್ಲಿನ ಧೂಳಿನ ಕಣ ಕಣದಲ್ಲೂ ಅವನ ಹೆಜ್ಜೆ ಗುರುತುಗಳನ್ನು ಓದಬಹುದು."

"ನನ್ನ ಪರಮ ಮಿತ್ರನ ಮರಣದಿಂದಾಗಿ ನಾನು ಆಶ್ರಮದಲ್ಲಿಯೆ ಹೆಚ್ಚು ಇರಬೇಕಾಗಿದೆ" ಎಂದು ಬರೆಯುತ್ತಾ ಅವರು ಯೂರೋಪಿನ 'ಬಹುಚರ್ಚಿತ ಭೇಟಿ'ಯು ೧೯೨೮ರಲ್ಲಿ ಸಾಧ್ಯವಾಗುವುದಿಲ್ಲವೆಂದು ಪ್ರಕಟಿಸಿದರು.

"ನನಗೆ ಆದರದ ಆಹ್ವಾನವನ್ನು ಕಳಿಸಿರುವ ಆಸ್ಟ್ರಿಯ, ಹಾಲೆಂಡ್, ಇಂಗ್ಲೆಂಡ್, ಸ್ಕಾಟ್ಲೆಂಡ್, ಡೆನ್ಮಾರ್ಕ್, ಸ್ವೀಡನ್, ಜರ್ಮನಿ ಮತ್ತು ರಷ್ಯದ ಮಿತ್ರರಿಗೆ ನಾನು ಹೇಳಬಹುದಾದುದಿಷ್ಟೆ; ನಿಮಗಾಗಬಹುದಾದ ಆಶಾಭಂಗ ನನ್ನ ವ್ಯಥೆಗಿಂತ ಹೆಚ್ಚಿನದೇನಲ್ಲ.

"ಎಂತೊ ಏನೊ ಯುರೋಪು ಮತ್ತು ಅಮೆರಿಕಗಳಿಗೆ ಹೋಗಲು ಭಯಪಡುವೆ. ನನ್ನ ಜನರಲ್ಲಿರುವುದಕ್ಕಿಂತ ಈ ದೊಡ್ಡ ಖಂಡಗಳ ಜನರಲ್ಲಿ ನನಗೆ ಹೆಚ್ಚು ಅಪನಂಬಿಕೆಯಿದೆಯೆಂದರ್ಥವಲ್ಲ. ಆದರೆ ನನ್ನಲ್ಲೆ ನನಗೆ ನಂಬಿಕೆಯಿಲ್ಲ. ಆರೋಗ್ಯ ಸುಧಾರಣೆಗಾಗಿ ಅಥವಾ ನೋಟ ನೋಡುವುದಕ್ಕಾಗಿ ಪಾಶ್ಚಾತ್ಯ ದೇಶಗಳಿಗೆ ಹೋಗುವ ಆಸೆಯೇನು ನನಗಿಲ್ಲ. ಸಾರ್ವಜನಿಕ ಭಾಷಣಗಳನ್ನು ಮಾಡಬೇಕೆಂಬ ಚಪಲವೂ ಇಲ್ಲ. ಪ್ರಸಿದ್ಧ ಪುರುಷನಂತೆ ಮೆರೆಯಬೇಕೆಂಬ ಅಸಹ್ಯಕರ ಕೀಳಭಿಲಾಷೆಯೂ ನನಗಿಲ್ಲ. ಸಾರ್ವಜನಿಕ ವೇದಿಕೆಯ ಮೇಲೆ ಭಾಷಣ ಮಾಡುವ ಮತ್ತು ನಿದರ್ಶನಪೂರ್ವಕ ಅಭಿಪ್ರಾಯಗಳನ್ನು ಮಂಡಿಸುವಂಥ ಗಂಭೀರ ಶ್ರಮವನ್ನು ತಡೆಯಬಲ್ಲ ಆರೋಗ್ಯವನ್ನು ಮತ್ತೆ ನಾನು ಗಳಿಸುವೆನೆ ಎಂದೆನಿಸುತ್ತದೆ. ಭಗವಂತನು ಎಂದಾದರೊಮ್ಮೆ ಆ ದೇಶಗಳಿಗೆ ನನ್ನನ್ನು ಕಳಿಸಿದಲ್ಲಿ ನಾನು ಹೋಗುವುದು ಅಲ್ಲಿಯ ಜನಸಾಮಾನ್ಯರ ಹೃದಯಗಳನ್ನು ಹೊಕ್ಕು ನೋಡಲು, ಪಾಶ್ಚಾತ್ಯ ಯುವ ಜನಾಂಗದೊಡನೆ ಸಮಾಧಾನವಾಗಿ ಸಂಭಾಷಿಸಲು ಮತ್ತು ಸತ್ಯಕ್ಕಾಗಿ ಹೋರಾಡುವ ಮತ್ತು ಶಾಂತಿಪ್ರೇಮಿಗಳಾದ ಸದೃಶ ಚೇತನಗಳನ್ನು ಭೇಟಿ ಮಾಡುವ ಸುಯೋಗವನ್ನು ಪಡೆಯಲು.

"ಸದ್ಯಕ್ಕೆ ಪಾಶ್ಚಾತ್ಯ ದೇಶಗಳಿಗೆ ವೈಯಕ್ತಿಕವಾಗಿ ಯಾವ ಸಂದೇಶವನ್ನೂ ನೀಡಲಾರೆ. ನನ್ನ ಸಂದೇಶವು ವಿಶ್ವವ್ಯಾಪ್ತಿಯಾಗಿರುತ್ತದೆಯಾದರೂ ಅದನ್ನು ನನ್ನ ದೇಶದಲ್ಲಿ ನಾನು ಮಾಡುವ ಕೆಲಸದ ಮೂಲಕವೆ ಬಿತ್ತರಿಸುವುದೊಳ್ಳೆಯದೆನಿಸುತ್ತದೆ. ಭಾರತದಲ್ಲಿ ನಾನು ಪ್ರತ್ಯಕ್ಷ ಯಶಸ್ಸನ್ನು ತೋರಿಸಬಲ್ಲೆನಾದರೆ ನನ್ನ ಸಂದೇಶವು ಪೂರ್ಣವಾಗುತ್ತದೆ. ನನ್ನ ಸಂದೇಶದಿಂದ ಭಾರತಕ್ಕೆ ಪ್ರಯೋಜನವಾಗುವುದಿಲ್ಲ ಎಂಬ ನಿರ್ಧಾರಕ್ಕೆ ನಾನು ಒಂದು ಪಕ್ಷ ಬಂದಲ್ಲಿ ನಾನು ಆಲಿಸುವವರನ್ನು ಹುಡುಕಿಕೊಂಡು ಬೇರೆಡೆಗೆ ಹೋಗುವುದಿಲ್ಲ. ಆದರೂ ನನ್ನ ದೇಶದಲ್ಲಿ ನನಗೆ ಇನ್ನೂ ನಂಬಿಕೆಯಿದೆ. ಒಂದು ಪಕ್ಷ ನಾನು ಭಾರತದಿಂದ ಹೊರಗೆ ಹೋಗುವ ಸಾಹಸ ಮಾಡಿದಲ್ಲಿ ನನ್ನ ಸಂದೇಶವನ್ನು ಎಷ್ಟೇ ನಿಧಾನವಾಗಿಯಾಗಲಿ, ಭಾರತವು ಸ್ವೀಕರಿಸುತ್ತದೆಂಬ ವಿಶ್ವಾಸದಿಂದಲೇ–ಅದನ್ನು ಸರ್ವರಿಗೂ ತೃಪ್ತಿಯಾಗುವ ರೀತಿಯಲ್ಲಿ ತೋರಿಸುವುದು ನನಗೆ ಸಾಧ್ಯವಿಲ್ಲವಾದರೂ–ಅಂತಹ ಸಾಹಸಕ್ಕೆ ಕೈಹಾಕುತ್ತೇನೆ.

"ಹೀಗೆ ನನ್ನನ್ನಾಹ್ವಾನಿಸಿರುವ ಮಿತ್ರರೊಡನೆ ಅರೆಮನಸ್ಸಿನಿಂದಲೇ ಪತ್ರವ್ಯವಹಾರ

ವನ್ನು ನಡೆಸುತ್ತಿದ್ದಾಗ ರೋಲಾರನ್ನು ನೋಡುವುದಕ್ಕಾದರೂ ಯೂರೋಪಿಗೆ ಹೋಗಬೇಕಾದ ಅಗತ್ಯ ನನಗೆ ಕಂಡುಬಂದಿತು. ಸಾರ್ವತ್ರಿಕ ಭೇಟಿಯ ಬಗೆಗೆ ನನ್ನಲ್ಲಿ ನನಗೆ ನಂಬಿಕೆಯಿರಲಿಲ್ಲ. ಆ ಪಾಶ್ಚಾತ್ಯ ಪ್ರಾಜ್ಞನ ಭೇಟಿಯೆ ನನ್ನ ಯೂರೋಪು ಪ್ರವಾಸದ ಪ್ರಮುಖ ಉದ್ದೇಶವಾಗಿತ್ತು. ಆ ಸಲುವಾಗಿಯೆ ನಾನು ಅಲ್ಲಿಗೆ ಹೋಗಲು ಆಶಿಸಿದ್ದೆ. ಅದಕ್ಕಾಗಿ ನಾನು ರೋಮೆನ್ ರೋಲಾರಿಗೆ ನನ್ನ ಕಷ್ಟ ಗಳನ್ನು ತಿಳಿಸಿ ನನ್ನ ಯೂರೋಪು ಪ್ರವಾಸದ ಪ್ರಮುಖ ಉದ್ದೇಶವಾದ ಅವರ ಭೇಟಿ ಯನ್ನು ನೆರವೇರಿಸಿ ಕೊಡುವುದು ಸಾಧ್ಯವೇ ಎಂದು ಮುಚ್ಚುಮರೆಯಿಲ್ಲದೆ ಕೇಳಿದೆ. ಅದಕ್ಕವರು ತಮ್ಮ ಭೇಟಿಯೊಂದೇ ಯೂರೋಪು ಪ್ರವಾಸದ ಪ್ರಧಾನ ಉದ್ದೇಶ ವಾಗಿರುವ ಪಕ್ಷಕ್ಕೆ ಅದಕ್ಕಾಗಿಯೆ ನೀವು ಯೂರೋಪಿಗೆ ಬರುವುದನ್ನು ನನ್ನ ಮನಸ್ಸು ನಿಜವಾಗಿಯೂ ಒಪ್ಪುತ್ತಿಲ್ಲವೆಂದು ಹೇಳುತ್ತಾರೆ. ನಮ್ಮಿಬ್ಬರ ಭೇಟಿಯ ಕ್ರಮವಾಗಿ ನನ್ನ ಕಾರ್ಯಗಳು ನಿಂತುಹೋಗುವುದನ್ನವರು ಒಪ್ಪುವುದಿಲ್ಲ. ಈ ಭೇಟಿಯನ್ನು ಬಿಟ್ಟರೆ ನನ್ನಲ್ಲಿ ಅತ್ಯಗತ್ಯ ಕರೆ ಯಾವುದೂ ಇಲ್ಲ. ನನ್ನ ನಿರ್ಧಾರಕ್ಕೆ ನಾನು ವಿಷಾದಿಸುತ್ತೇನಾದರೂ ಅದು ಸರಿಯೆಂದೇ ನನಗೆ ತೋರುತ್ತದೆ. ಸದ್ಯಕ್ಕೆ ಯೂರೋಪಿಗೆ ಹೋಗಲು ಯಾವ ಪ್ರೇರಣೆಯೂ ಇಲ್ಲ. ಆದರೆ ಇಲ್ಲಿಯೆ ಮಾಡುವುದು ಬೇಕಾದಷ್ಟಿದೆಯೆಂದು ನನ್ನೊಳಗು ನಿರಂತರವಾಗಿ ಸಾರುತ್ತಿದೆ.

"ಮರುವರ್ಷ ಎಲ್ಲವೂ ಸರಿಯಾಗಿದ್ದಲ್ಲಿ ಮತ್ತು ನಾನು ನಿಮ್ಮ ನಡುವೆ ಬದುಕಿದ್ದಲ್ಲಿ ನಾನು ಸೂಚಿಸಿದ ನಿಶ್ಚಿತ ಪರಿಮಿತಿಗಳ ಪ್ರಕಾರ ಮುಂದೂಡಲ್ಪಟ್ಟ ಪ್ರವಾಸವನ್ನು ಕೈಗೊಳ್ಳಲು ಪ್ರಯತ್ನಿಸುತ್ತೇನೆ. ನಾನು ನನ್ನ ಸಂದೇಶವನ್ನು ಬಿತ್ತರಿಸಲು ಸಿದ್ಧನಾಗಿರಲಿ ಇಲ್ಲದಿರಲಿ ಇದನ್ನು ಮಾತ್ರ ನಡೆಸಿಕೊಡಬಲ್ಲೆ. ನನ್ನ ನೂರಾರು ಮಿತ್ರರನ್ನು ಪ್ರತ್ಯಕ್ಷ ವಾಗಿ ನೋಡುವ ಸುಯೋಗ ಕಡಿಮೆಯದೇನಲ್ಲ. ಎಂದಾದರೂ ಪಶ್ಚಿಮ ದೇಶಗಳಿಗೆ ಭೇಟಿಕೊಡುವ ಸದವಕಾಶ ದೊರೆತಲ್ಲಿ ಅಲ್ಲಿಗೆ ಹೋದಾಗ, ಹವಾಗುಣವು ಮಾರ್ಪಾಟನ್ನು ಅಪೇಕ್ಷಿಸದ ಹೊರತು ಮತ್ತು ಸ್ವಯಮಾರೋಪಿತ ನಿರ್ಬಂಧಗಳು ಅವಕಾಶ ಕೊಟ್ಟ ಹೊರತು, ನನ್ನ ಉಡುಪು ಮತ್ತು ಅಭ್ಯಾಸಗಳಲ್ಲಿ ಯಾವ ಬದಲಾವಣೆಯೂ ಇರು ವುದಿಲ್ಲ. ನನ್ನ ಬಾಹ್ಯರೂಪವು ಅಂತರಂಗದ ಅಭಿವ್ಯಕ್ತಿಯೆಂದು ನಾನು ತಿಳಿದಿದ್ದೇನೆ. ಇಷ್ಟು ಹೇಳಿ ನನ್ನ ವೈಯಕ್ತಿಕ ವಿವರಣೆಯನ್ನು ಮುಗಿಸುತ್ತೇನೆ."

ಗಾಂಧೀಜಿಯ ಯೂರೋಪು ಭೇಟಿ ಮತ್ತು ಟಾಲ್‌ಸ್ಟಾಯ್‌ರ ಶತಮಾನೋತ್ಸವ ಗಳು ಏಕಕಾಲದಲ್ಲಿ ಸಂಭವಿಸಬೇಕಾಗಿತ್ತು. ಆದರೆ ಅದು ಹಾಗಾಗಲಿಲ್ಲ. ಆದರೂ ಅವರು ಟಾಲ್‌ಸ್ಟಾಯ್‌ರ ಬೋಧನೆಗಳನ್ನು ಕುರಿತು ತಮ್ಮ ಸಂದೇಶವನ್ನು ಬಿತ್ತರಿಸಿದರು.:

"ಭಾರತದಲ್ಲಿ ನಾವೆಲ್ಲ ಸಾಮಾನ್ಯವಾಗಿ ತಿಳಿದಿರುವ ಶ್ರಾದ್ಧದ ಆಚರಣೆಯಲ್ಲಿ ಸ್ವತಃ ನನಗೆ ನಂಬಿಕೆಯಿಲ್ಲ. ಹಿಂದೊಮ್ಮೆ ನಾನು ಶ್ರಾದ್ಧವನ್ನು ಆಚರಿಸಿದಂತೆ ನೆನಪಿದ್ದರೂ ಬಹಳ ಹಿಂದೆಯೆ ಆ ಪರಿಪಾಠವನ್ನು ನಾನು ಬಿಟ್ಟುಬಿಟ್ಟೆ. ಏಕೆಂದರೆ, ನಮ್ಮ ಹಿರಿಯರು ಬಹಳ ಉತ್ತಮ ಗುಣಗಳನ್ನು ಸದಾ ನೆನೆಯುವುದು ಮತ್ತು ಅನುದಿನದ ಜೀವನದಲ್ಲಿ ಅವು

ಗಳನ್ನು ಅನುಷ್ಠಾನಕ್ಕೆ ತರುವುದೇ ಅವರ ಶ್ರಾದ್ಧವನ್ನು ನಡೆಸುವ ಯೋಗ್ಯಮಾರ್ಗ ವೆಂದು ನನ್ನ ನಂಬಿಕೆ.

"ನಲವತ್ತು ವರ್ಷಗಳ ಹಿಂದೆ ನಾನು ಸಂದೇಹ ಮತ್ತು ಅನಿಶ್ಚಿಯತೆಗಳ ವಿಷಮ ಸ್ಥಿತಿಯಲ್ಲಿ ತೊಳಲಾಡುತ್ತಿದ್ದಾಗ ಟಾಲ್‌ಸ್ಟಾಯ್‌ರ 'ದಿ ಕಿಂಗ್‌ಡಮ್ ಆಫ್ ದಿ ಗಾಡ್ ಈಸ್ ವಿಥಿನ್ ಯು' ಎಂಬ ಪುಸ್ತಕವು ನನಗೆ ದೊರೆಯಿತು. ಮತ್ತು ಅದರಿಂದ ನಾನು ತುಂಬ ಪ್ರಭಾವಿತನಾದೆ. ಆ ವೇಳೆಯಲ್ಲಿ ನಾನು ಹಿಂಸೆಯಲ್ಲಿ, ವಿಶ್ವಾಸವುಳ್ಳವನಾಗಿದ್ದೆ. ಆ ಪುಸ್ತಕವು ನನ್ನನ್ನು ಅನಿಶ್ಚಯತೆಯಿಂದ ಬಿಡುಗಡೆ ಮಾಡಿತಲ್ಲದೆ ಅಹಿಂಸೆಯಲ್ಲಿ ವಿಶ್ವಾಸವನ್ನು ಹುಟ್ಟಿಸಿತು. ಟಾಲ್‌ಸ್ಟಾಯ್ ತಾವು ಬೋಧಿಸಿದಂತೆ ನಡೆದರು ಮತ್ತು ಅವರ ಸತ್ಯಾನ್ವೇಷಣೆಯ ಮುಂದೆ ಉಳಿದೆಲ್ಲವೂ ಅಗಣನೀಯವಾಗಿದ್ದುವು. ನಾನು ಮೆಚ್ಚಿಕೊಂಡಿರುವುದು ಅವರ ಜೀವನದ ಈ ಅಂಶಗಳನ್ನು. ಅವರ ಜೀವನದ ಸರಳತೆ ಯನ್ನೇ ನೋಡಿ, ಎಷ್ಟು ಅದ್ಭುತ! ಶ್ರೀಮಂತ ಕುಟುಂಬದ ಸಕಲ ಸೌಲಭ್ಯ ಮತ್ತು ವೈಭವಗಳ ನಡುವೆ ಹುಟ್ಟಿ ಬೆಳೆದರೂ, ಆಸೆಯು ಬಯಸಬಹುದಾದ ಭೂಮಿಯ ಮೇಲಿನ ಸರ್ವಸಂಪತ್ಸಮೃದ್ಧಿಯ ನಡುವೆ ತೇಲುತ್ತಿದ್ದರೂ, ಬದುಕಿನ ಎಲ್ಲ ಸುಖವನ್ನು ಸಂತೋಷಗಳನ್ನು ಚೆನ್ನಾಗಿ ಅನುಭವಿಸಿದ್ದ ಈ ಮನುಷ್ಯ ತನ್ನ ಯೌವನದ ಉತ್ತಮ ದೆಸೆಯಲ್ಲಿ ಅವುಗಳಿಗೆಲ್ಲ ಬೆನ್ನು ತಿರುಗಿಸಿದರಲ್ಲದೆ, ಮತ್ತೆಂದೂ ಹಿಂದಕ್ಕೆ ತಿರುಗಿ ನೋಡಲಿಲ್ಲ.

"ಅವರು ಈ ಯುಗದ ಉನ್ನತ ಸತ್ಯವಾದಿಯಾಗಿದ್ದರು. ಅವರ ಬದುಕು ಸತ್ಯ ಸಾಕ್ಷಾತ್ಕಾರಕ್ಕಾಗಿ ಮತ್ತು ಅದರ ಅನುಷ್ಠಾನಕ್ಕಾಗಿ ನಡೆಸಿದ ಒಂದು ಅವಿರತ ಸಾಧನೆ ಯಾಗಿತ್ತು, ಅನುಕ್ಷಣದ ಹೋರಾಟವಾಗಿತ್ತು. ಅವರು ಎಂದೂ ಸತ್ಯವನ್ನು ಮರೆ ಮಾಚಲಾಗಲಿ ಸಪ್ಪೆಗೊಳಿಸಲಾಗಲಿ ಪ್ರಯತ್ನಿಸಲಿಲ್ಲ. ಆದರೆ ಯಾವ ಲೌಕಿಕ ಶಕ್ತಿಗೂ ಹೆದರಿ ಹಿಂಜರಿಯದೆ, ಸಂದೇಹ ಮತ್ತು ದ್ವಂದ್ವಾರ್ಥಗಳಿಗೆಡೆಯಿಲ್ಲದ ರೀತಿಯಲ್ಲಿ ತಾವು ಕಂಡ ಸತ್ಯದ ಪೂರ್ಣ ಸ್ವರೂಪವನ್ನು ಜಗತ್ತಿನ ಮುಂದಿಟ್ಟರು.

"ಟಾಲ್‌ಸ್ಟಾಯ್, ಈ ಯುಗವು ಜಗತ್ತಿಗೆ ನೀಡಿದ ಶ್ರೇಷ್ಠ ಅಹಿಂಸಾದೂತರಾಗಿ ದ್ದರು. ಪಶ್ಚಿಮದಲ್ಲಿ ಟಾಲ್‌ಸ್ಟಾಯರಿಗಿಂತ ಹಿಂದೆಯಾಗಲಿ ಅಥವಾ ಅವರನಂತರ ವಾಗಲಿ ಅಹಿಂಸೆಯ ಬಗೆಗೆ ಸಮಗ್ರವಾಗಿ ಅಥವಾ ದೃಢವಾಗಿ ಮತ್ತು ಇಷ್ಟು ಸೂಕ್ಷ್ಮ ಒಳನೋಟದಿಂದ ಬರೆದವರು ಹಾಗೂ ಮಾತನಾಡಿದವರೂ ಯಾರೂ ಇಲ್ಲ. ಇಷ್ಟೇ ಅಲ್ಲ, ಈ ತತ್ತ್ವವು ಅವರಲ್ಲಿ ಅದ್ಭುತ ವಿಕಾಸವನ್ನು ಪಡೆಯಿತು. ನಮ್ಮ ದೇಶದ ಅಹಿಂಸಾ ವಾದಿಗಳು ಅದಕ್ಕೆ ಆರೋಪಿಸಿರುವ ಇಂದಿನ ಸಂಕುಚಿತ ಮತ್ತು ಸಮತೂಕವಿಲ್ಲದ ವಿವರಣೆಯನ್ನು ಅದು ನಾಚಿಸುತ್ತದೆ. ಕರ್ಮಭೂಮಿ, ಸಿದ್ಧಿಯ ನೆಲೆಯೆಂಬ ಹೆಮ್ಮೆಯ ಅರ್ಹತೆ ನಮ್ಮ ಭಾರತಕ್ಕಿದ್ದರೂ, ನಮ್ಮ ಪ್ರಾಚೀನ ಋಷಿಗಳು ಅಹಿಂಸೆಯ ಕ್ಷೇತ್ರದಲ್ಲಿ ಹಲವು ಮಹಾವಿಷ್ಕಾರಗಳನ್ನು ಮಾಡಿದ್ದರೂ ನಮ್ಮ ನಡುವೆ ಇಂದು ಅನೇಕ ವೇಳೆ ಅಹಿಂಸೆಯ ಹೆಸರಿನಲ್ಲಿ ನಡೆಯುತ್ತಿರುವುದು ಅದರ ವಿಕಟಾನುಕರಣವಾಗಿದೆ. ನಿಜವಾದ

ಅಹಿಂಸೆಯು ದ್ವೇಷ, ಕೋಪ, ಹಗೆಗಳಿಂದ ಸಂಪೂರ್ಣವಾಗಿ ಮುಕ್ತವಾಗಿರಬೇಕು ಮತ್ತು ಸರ್ವಾಂಗೀಣ ಪ್ರೇಮದಿಂದ ತುಳುಕುತ್ತಿರಬೇಕು. ಇಂಥ ನಿಜವಾದ ಮತ್ತು ಉನ್ನತಮಟ್ಟದ ಅಹಿಂಸೆಯು ನಮ್ಮಲ್ಲಿ ಬೇರೂರಬೇಕಾದರೆ ಸಾಗರಸದೃಶ ಪ್ರೇಮ ದಿಂದ ಕೂಡಿದ ಟಾಲ್‌ಸ್ಟಾಯ್‌ರ ಜೀವನ ನಮಗೆ ದಾರಿದೀಪವಾಗಬೇಕು ಮತ್ತು ಬತ್ತದ ಸ್ಫೂರ್ತಿಸೆಲೆಯಾಗಬೇಕು. ಟಾಲ್‌ಸ್ಟಾಯರ ಜೀವನ ಒಂದು ಮಹಾ ಸೋಲೆಂದೂ ಮತ್ತು ಯಾವುದರ ಅನ್ವೇಷಣೆಗಾಗಿ ತಮ್ಮ ಇಡೀ ಜೀವನವನ್ನು ನಡೆಸಿದರೋ ಆ ಆದರ್ಶ ಧ್ಯೇಯದ ಪವಾಡ ದಂಡವನ್ನು ಅವರು ಕಾಣಲೇ ಇಲ್ಲವೆಂದು ಅವರ ವಿಮರ್ಶಕರು ಕೆಲವು ವೇಳೆ ಹೇಳುವುದುಂಟು. ಈ ಟೀಕೆಯನ್ನು ನಾನು ಒಪ್ಪುವುದಿಲ್ಲ. ನಿಜ; ಟಾಲ್‌ಸ್ಟಾಯ್‌ರೆ ಹಾಗೆ ಹೇಳಿದ್ದಾರೆ. ಆದರೆ ಅದು ಅವರ ದೊಡ್ಡತನವನ್ನು ಮಾತ್ರ ತೋರಿಸುತ್ತದೆ. ಬದುಕಿನಲ್ಲಿ ತಮ್ಮ ಆದರ್ಶದ ಸಂಪೂರ್ಣ ಸಾಕ್ಷಾತ್ಕಾರವನ್ನು ಪಡೆಯುವಲ್ಲಿ ಅವರು ಸೋತಿರಬಹುದು. ಅದಕ್ಕೆ ಮಾನುಷಮಿತಿಯೇ ಕಾರಣ. ಈ ಶರೀರದಲ್ಲಿರುವಾಗ ಯಾವಾತನೂ ಪರಿಪೂರ್ಣತೆಯನ್ನು ಸಾಧಿಸಲಾರ. ಕಾರಣ, ಅಹಂ ಅನ್ನು ಸಂಪೂರ್ಣವಾಗಿ ಗೆಲ್ಲದ ಹೊರತು ಯಾರೂ ಆದರ್ಶದ ಹಂತವನ್ನು ಮುಟ್ಟು ವುದು ಸಾಧ್ಯವೇ ಇಲ್ಲ ಮತ್ತು ಈ ರಕ್ತಮಾಂಸಗಳ ಬಂಧನವಿರುವ ತನಕ ಅಹಂ ಅನ್ನು ಸಂಪೂರ್ಣವಾಗಿ ಜಯಿಸುವುದು ದುಸ್ಸಾಧ್ಯ. ಆದರ್ಶವನ್ನು ತಲುಪಿದೆನೆಂಬ ಭಾವನೆ ವ್ಯಕ್ತಿಯಲ್ಲಿ ಮೂಡಿದ ಕ್ಷಣವೆ ಅವನ ಮುಂದಿನ ಏಳಿಗೆ ಸ್ಥಗಿತವಾಗುವುದಲ್ಲದೆ ಇಳಿ ಮುಖತೆ ಪ್ರಾರಂಭವಾಗುತ್ತದೆ. ನಾವು ಹತ್ತಿರ ಹತ್ತಿರ ಹೋದಷ್ಟೂ ನಮ್ಮಿಂದ ದೂರ ಸರಿಯುವುದೇ ಆದರ್ಶದ ಹೆಗ್ಗುಣವೆಂಬುದು ಟಾಲ್‌ಸ್ಟಾಯರ ಅಚ್ಚು ಮೆಚ್ಚಿನ ಹೇಳಿಕೆಯಾಗಿದ್ದಿತು. ಇದರಿಂದ ಟಾಲ್‌ಸ್ಟಾಯರು ಸ್ವತಃ ಒಪ್ಪಿಕೊಂಡಿರು ವಂತೆ ತಮ್ಮ ಆದರ್ಶದ ನೆಲೆಯನ್ನು ತಲುಪುವುದರಲ್ಲಿ ಅಯಶಸ್ವಿಯಾಗಿದ್ದಾರೆಂದು ಹೇಳಿದಲ್ಲಿ ಅವರ ಶ್ರೇಷ್ಠತೆಗೆ ಲವಲೇಶವೂ ಕುಂದುಬರುವುದಿಲ್ಲ; ಅದು ಅವರ ವಿನಮ್ರತೆ ಯನ್ನು ಸೂಚಿಸುತ್ತದಷ್ಟೆ.

"ಟಾಲ್‌ಸ್ಟಾಯರ ಜೀವನದ ಬಗೆಗೆ ಬಯಲಾಗುವ ವಿಸಂಗತಿಗಳನ್ನು ಕುರಿತು ಹೆಚ್ಚು ವಿಚಾರಣೆ ನಡೆದಿದೆ; ಆದರೆ ಅವು ವಾಸ್ತವಕ್ಕಿಂತ ಹೆಚ್ಚಾಗಿ ತೋರಿಕೆಯವು. ವಿಕ ಪ್ರಕಾರವಾದ ಬೆಳವಣಿಗೆಯೆ ಬದುಕಿನ ನಿಯಮ. ಸುಸಂಗತಿಯನ್ನು ತೋರಿಸಕೊಳ್ಳ ಲೋಸುಗ, ತನ್ನ ತತ್ವಗಳನ್ನು ಸಮರ್ಥಿಸಿಕೊಳ್ಳಲು ಸದಾ ಪ್ರಯತ್ನಿಸುವ ವ್ಯಕ್ತಿಯು ತತ್ವವಿರುದ್ಧ ಸನ್ನಿವೇಶಗಳಿಗೆ ತನ್ನನ್ನು ನೂಕಿಕೊಳ್ಳುತ್ತಾನೆ. ಅದಕ್ಕಾಗಿಯೆ ಮೂರ್ಖ ಸಾಮಂಜಸ್ಯವು ಪುಟ್ಟ ಮನಸ್ಸುಗಳೊಳಗಿನ ತುಂಟ ಪಿಶಾಚಿಯೆಂದು ಎಮರ್ಸನ್ ಹೇಳಿದ್ದಾನೆ. ಟಾಲ್‌ಸ್ಟಾಯರ ಜೀವನದ ಬಗೆಗೆ ಹೇಳಲಾಗುವ ಅಸಂಬದ್ಧ ನಡೆವಳಿಗಳು ಅವರ ಚೇತನ ವಿಕಾಸದ ಮತ್ತು ಸತ್ಯದ ಮೇಲಿದ್ದ ಉಜ್ವಲ ಅಭಿಮಾನದ ಸಂಕೇತ ಗಳಾಗಿದ್ದುವು. ಅವರು ತಮ್ಮ ಸಿದ್ಧಾಂತಗಳನ್ನು ಮೀರಿ ಸದಾ ಬೆಳೆಯುತ್ತಿದ್ದರಾದ್ದರಿಂದ ಅನೇಕ ವೇಳೆ ಅವರ ನಡೆವಳಿಕೆಗಳು ಅಸಂಬದ್ಧವೆಂಬಂತೆ ತೋರುತ್ತಿದ್ದುವು. ಅವರ

ಸೋಲುಗಳು ಸಾರ್ವಜನಿಕವಾಗಿರುತ್ತಿದ್ದುವು. ಆದರೆ ಅವರ ಹೋರಾಟ ಮತ್ತು ಗೆಲುವುಗಳು ಗುಪ್ತವಾಗಿರುತ್ತಿದ್ದುವು. ಪ್ರಪಂಚವು ಕಂಡದ್ದು ಮೊದಲಿನದನ್ನು ಮಾತ್ರ. ಮುಂದಿನದು ಬಹುಶಃ ಟಾಲ್‌ಸ್ಟಾಯರಿಂದಲೆ ಬಹುಮಟ್ಟಿಗೆ ಅದೃಶ್ಯವಾಗುಳಿಯಿತು. ಟೀಕಾಕಾರರು ಅವರ ದೋಷಗಳನ್ನು ಸ್ವಾನುಕೂಲಕ್ಕೆ ತಿರುಗಿಸಿಕೊಳ್ಳಲು ಪ್ರಯತ್ನಿಸಿದರು. ಇತರ ಟೀಕಾಕಾರರಿಗಿಂತ ಅವರು ತಾವೇ ತಮ್ಮ ಬಗೆಗಿನ ಶ್ರೇಷ್ಠ ಟೀಕಾಕಾರರಾಗಿದ್ದರು. ತಮ್ಮ ಕುಂದುಕೊರತೆಗಳ ಬಗೆಗೆ ಅವರು ಸದಾ ಎಚ್ಚರವಾಗಿರುತ್ತಿದ್ದರು. ಅವುಗಳನ್ನು ಟೀಕಾಕಾರರು ಎತ್ತಿ ತೋರಿಸುವ ಮೊದಲೆ ಸ್ವತಃ ಅವನ್ನು ಸಾವಿರ ಮಡಿ ದೊಡ್ಡದಾಗಿ ಜಗತ್ತಿಗೆ ಸಾರಿದ್ದಾರೆ ಮತ್ತು ಅದಕ್ಕೆ ಅಗತ್ಯ ಕಂಡ ಪಶ್ಚಾತ್ತಾಪವನ್ನು ವಿಧಿಸಿಕೊಂಡಿದ್ದಾರೆ. ಅವರು ಟೀಕೆಯನ್ನು, ಅದು ಎಷ್ಟೇ ಉತ್ಪ್ರೇಕ್ಷೆಯಿಂದ ಕೂಡಿದ್ದರೂ, ಸದಾ ಸ್ವಾಗತಿಸುತ್ತಿದ್ದರು. ನಿಜವಾದ ಎಲ್ಲ ಶ್ರೇಷ್ಠ ವ್ಯಕ್ತಿಗಳಂತೆ ಪ್ರಪಂಚದ ಹೊಗಳಿಕೆಗೆ ಹಿಂಜರಿಯುತ್ತಿದ್ದರು. ತಮ್ಮ ದೋಷಗಳಲ್ಲಿಯೂ ಅವರು ದೊಡ್ಡವರಾಗಿದ್ದರು. ಆ ದೋಷಗಳು ಅವರ ಆದರ್ಶಗಳ ನಿರರ್ಥಕತೆಯ ಮಾನವಾಗಿರದೆ ಅವರ ಗೆಲುವಿನ ಮಾನವಾಗಿವೆ;

"ಮೂರನೆಯ ದೊಡ್ಡ ಅಂಶವೆಂದರೆ ಪ್ರತಿಯೊಬ್ಬನೂ ತನ್ನ ಅನ್ನಕ್ಕಾಗಿ ದೈಹಿಕವಾಗಿ ಶ್ರಮಿಸಬೇಕೆಂಬ ಅನ್ನಕಾಯಕದ ತತ್ವ. ಜನ ಈ ದಿಸೆಯಲ್ಲಿ ತಮ್ಮ ದೈವತ್ವ ನಿರ್ವಹಿಸದಿರುವುದೇ ಪ್ರಪಂಚದ ಬಹುಪಾಲು ಕ್ಲೇಶಕ್ಕೆ ಕಾರಣ. ದೈಹಿಕ ಶ್ರಮದಿಂದ ನುಣುಚಿಕೊಂಡು, ವೈಭವ ಮತ್ತು ಆರಾಮ ಜೀವನವನ್ನು ಮುಂದುವರಿಸುತ್ತಾ ದಾನ ಧರ್ಮದಿಂದ ಜನರ ಬಡತನವನ್ನು ಸುಧಾರಿಸುತ್ತೇವೆಂಬ ಶ್ರೀಮಂತರ ಎಲ್ಲ ಹಂಚಿಕೆಗಳೂ ಅವರ ದೃಷ್ಟಿಯಲ್ಲಿ ಸೋಗಿನ ಆಟವಷ್ಟೆ. ಬಡವರ ಬೆನ್ನ ಮೇಲಿನ ದಬ್ಬಾಳಿಕೆ ನಿಂತಾಗ ಈ ದಾನಧರ್ಮಗಳೆಂಬುವೆಲ್ಲ ಅನಗತ್ಯವಾಗುತ್ತವೆಂದು ಅವರ ಭಾವನೆ.

"ಅವರ ದೃಷ್ಟಿಯಲ್ಲಿ ನಂಬಿಕೆ ಬೇರೆಯಲ್ಲ ಆಚರಣೆ ಬೇರೆಯಲ್ಲ. ಅದರಿಂದಾಗಿಯೆ ವೈಭವದ ಮೃದು ತಲ್ಪದಲ್ಲಿ ತಮ್ಮ ವಯಸ್ಸಿನ ಬಹುಭಾಗವನ್ನು ಕಳೆದಿದ್ದ ಅವರು ಜೀವನದ ಅಪರಾಹ್ನದಲ್ಲಿ ಕಷ್ಟದ ಮತ್ತು ಕಠಿಣ ದುಡಿಮೆಯ ಬದುಕನ್ನು ಪ್ರಾರಂಭಿಸಿದರು. ಅವರು ತಾವು ಕೈಗೊಂಡ ಬೂಟುತಯಾರಿಕೆ ಮತ್ತು ಬೇಸಾಯದ ಕಾರ್ಯಗಳಲ್ಲಿ ದಿನಕ್ಕೆ ಎಂಟು ಗಂಟೆಯಂತೆ ಬೆವರು ಹರಿಸಿ ದುಡಿದರು. ಆದರೆ ದೈಹಿಕ ಶ್ರಮದಿಂದ ಅವರ ನಿಶಿತ ಬುದ್ಧಿ ಮತ್ತೆಯೇನೂ ಮೊಂಡಾಗಲಿಲ್ಲ. ಬದಲಿಗೆ ಅದು ಮತ್ತಷ್ಟು ಹರಿತವಾಯಿತು, ಉಜ್ವಲವಾಯಿತು. ಅವರ ಬದುಕಿನ ಈ ಅವಧಿಯಲ್ಲಿಯೆ ತಮ್ಮ ನಾಯಕ ಕೃತಿಯೆಂದು ಅವರು ಗಣಿಸಿರುವ 'ವಾಟ್ ಈಸ್ ಆರ್ಟ್' ಎಂಬ ಅವರ ಸತ್ವಯುತ ಕೃತಿ ಸ್ವತಃ ಆರಿಸಿಕೊಂಡ ವೃತ್ತಿಯ ನಡುವೆ ದೊರೆತ ಬಿಡುವಿನ ವೇಳೆಯಲ್ಲಿ ರಚನೆಗೊಂಡಿತು.

"ಆಕರ್ಷಕ ರೂಪದಲ್ಲಿ ನಿರೂಪಿಸಲ್ಪಟ್ಟ ಲೋಲುಪತೆಯ ವಿಷದಿಂದ ತುಂಬಿರುವ ಸಾಹಿತ್ಯವು ಪಶ್ಚಿಮದಿಂದ ನಮ್ಮ ದೇಶಕ್ಕೆ ನುಗ್ಗಿಬರುತ್ತಿದೆ. ನಮ್ಮ ಯುವಜನಾಂಗ ಇದರ ಬಗೆಗೆ ಎಚ್ಚರವಾಗಿರಬೇಕಾದುದು ಅತ್ಯಗತ್ಯವಾಗಿದೆ. ಇದು ಅವರ ಪಾಲಿಗೆ

ಆದರ್ಶಗಳ ಮತ್ತು ಅಗ್ನಿ ಪರೀಕ್ಷೆಗಳ ಸಂಕ್ರಮಣ ಯುಗ. ಪ್ರಪಂಚಕ್ಕೆ, ಅದರ ಯುವಜನಾಂಗಕ್ಕೆ ಮತ್ತು ವಿಶೇಷವಾಗಿ ಭಾರತದ ಯುವಜನಾಂಗಕ್ಕೆ ಈ ಸಂಧಿ ಕಾಲದಲ್ಲಿ ಅಗತ್ಯವಾಗಿ ಬೇಕಾಗಿರುವುದು ಟಾಲ್‌ಸ್ಟಾಯ್‌ರ ವಿಕಾಸಶೀಲ ಆತ್ಮ ಸಂಯಮ. ಅವರ, ಅವರ ದೇಶದ ಮತ್ತು ಜಗತ್ತಿನ ನಿಜವಾದ ವಿಮೋಚನೆಯತ್ತ ಕೊಂಡೊಯ್ಯುವುದು ಅದೊಂದೆ. ನಮ್ಮ ಜಡತೆ, ನಿರುತ್ಸಾಹ, ಸಾಮಾಜಿಕ ಅನ್ಯಾಯ ಗಳಿಂದ, ಇಂಗ್ಲೆಂಡ್ ಅಥವಾ ಇತರರಿಗಿಂತ ಹೆಚ್ಚಾಗಿ ಸ್ವತಃ ನಾವೇ ನಮ್ಮ ಬಿಡುಗಡೆಯ ಪಥಕ್ಕೆ ಕಲ್ಲೆಳೆದುಕೊಂಡಿದ್ದೇವೆ. ನಮ್ಮ ದೋಷದೌರ್ಬಲ್ಯಗಳನ್ನು ಕಳೆದುಕೊಂಡು ನಾವು ಶುದ್ಧರಾದಲ್ಲಿ ಭೂಮಿಯ ಮೇಲಿನ ಯಾವ ಶಕ್ತಿಯೂ ಒಂದು ಕ್ಷಣವೂ ನಮ್ಮಿಂದ ಸ್ವರಾಜ್ಯವನ್ನು ತಡೆಹಿಡಿಯುವುದಕ್ಕಾಗುವುದಿಲ್ಲ. ನಾನು ಸೂಚಿಸಿದ ಟಾಲ್ ಸ್ಟಾಯರ ಜೀವನದ ಮೂರು ಸಾರಭೂತ ಗುಣಗಳು ಜಗತ್ತಿನ ಈ ವಿಷಮ ಪರೀಕ್ಷೆಯ ವೇಳೆಯಲ್ಲಿ ಯುವಜನಾಂಗಕ್ಕೆ ಪರಮ ಪ್ರಯೋಜನಕಾರಿಗಳಾಗಿವೆ."

ಆಶ್ರಮದಲ್ಲಿ ನರಳುವ ಕರು ಮತ್ತು ತುಂಟ ಕೋತಿಗಳ ಸಮಸ್ಯೆಯು ಕಾಣಿಸಿ ಕೊಂಡಿತು. ಅನಿಶ್ಚಯತೆ ಮತ್ತು ವಿವಾದದಲ್ಲಿ ಯಾತನೆಯ ಕೆಲವು ದಿನ ಕಳೆದುವು. ಕೊನೆಗೆ ಗಾಂಧೀಜಿ ಒಂದು ನಿರ್ಧಾರಕ್ಕೆ ಬಂದರು; ಮಾನವೀಯತೆಯ ತತ್ವವು ಒಂದು ಪವಿತ್ರ ನಿಷೇಧದ ಮೇಲೆ ಜಯಗಳಿಸಿತು. ಸಂಪ್ರದಾಯವಾದಿಗಳ ನಡುವೆ ಇದು ಕೋಲಾಹಲವೆಬ್ಬಿಸಿತು. ತಮ್ಮ 'ತೀವ್ರ ಪರೀಕ್ಷೆ' ಎಂಬ ಲೇಖನದಲ್ಲಿ ಅವರು ಆ ಪ್ರಶ್ನೆ ಯನ್ನು ವಿಮರ್ಶಾತ್ಮಕವಾಗಿ ವಿವೇಚಿಸಿದರು:

"ಗೋಸೇವಾ ಸಂಘದ ಪರವಾಗಿ ಆಶ್ರಮದಲ್ಲಿ ಒಂದು ಸಣ್ಣ ಮಾದರಿ ಕ್ಷೀರ ಕೇಂದ್ರ ಮತ್ತು ಚರ್ಮಶಾಲೆಯನ್ನು ನಡೆಸಲು ಪ್ರಯತ್ನ ಮಾಡಲಾಗುತ್ತಿದೆ. ಈ ದಿಸೆಯಲ್ಲಿ ಅದರ ಕೆಸಲವು ಪ್ರತಿ ಹಂತದಲ್ಲೂ ಏಳಬಹುದಾದ ಜಟಿಲ ನೈತಿಕ ಇಕ್ಕಟ್ಟು ಗಳಿಗೆ ವಿರುದ್ಧವಾಗಿ ನಡೆದುಕೊಂಡು ಹೋಗಲು ಪ್ರಯತ್ನಿಸುತ್ತಿದೆ; ಮತ್ತು ಅಹಿಂಸೆಯ ಮೂಲಕ ಮಾತ್ರವೆ ಸತ್ಯವನ್ನು ಕಾಣುವುದು ಸಾಧ್ಯವೆಂಬ ಆದರ್ಶವನ್ನು ಅರಿಯುವ ಉತ್ಸಾಹವನ್ನು ತೋರುತ್ತಿದೆ.

"ನಿದರ್ಶನಕ್ಕೆ, ಕೆಲವು ದಿನಗಳ ಹಿಂದೆ ಕಾಲು ಊನಗೊಂಡ ಒಂದು ಕರು ಮರಣ ಯಾತನೆಯಲ್ಲಿ ಆಶ್ರಮದಲ್ಲಿ ಮಲಗಿತ್ತು. ಸಾಧ್ಯವಾದ ಎಲ್ಲ ಚಿಕಿತ್ಸೆ ಮತ್ತು ಶುಶ್ರೂಷೆ ಗಳನ್ನೂ ಅದಕ್ಕೆ ಮಾಡಲಾಯಿತು. ಇದರ ವಿಷಯದಲ್ಲಿ ಶಸ್ತ್ರವೈದ್ಯರ ಸಲಹೆಯನ್ನು ಕೇಳಲಾಗಿ ಇದು ಸಹಾಯಾತೀತ ಮತ್ತು ಭರವಸೆ ಇಲ್ಲದ ಸ್ಥಿತಿಯೆಂದು ಹೇಳಿಬಿಟ್ಟರು. ಪ್ರಾಣಿಯ ವೇದನೆ ಎಷ್ಟು ತೀವ್ರವಾಗಿದ್ದಿತೆಂದರೆ, ಅದು ಒಂದು ಪಕ್ಕಕ್ಕೆ ಹೊರಳ ಬೇಕಾದರೂ ಅತೀವ ಯಾತನೆಯನ್ನನುಭವಿಸುತ್ತಿತ್ತು.

"ಈ ಪರಿಸ್ಥಿತಿಯಲ್ಲಿ ಪ್ರಾಣವಿಮೋಚನೆಯಿಂದಲೆ ಅದರ ಯಾತನೆ ಕೊನೆಗೊಳ್ಳ ಬೇಕೆಂಬುದಾಗಿ ಮಾನವೀಯತೆ ಬೋಧಿಸುತ್ತಿದೆಯೆಂದು ನನಗನ್ನಿಸಿತು. ಆಶ್ರಮದ

ಎಲ್ಲರ ಮುಂದೆ ಈ ವಿಷಯವನ್ನಿಡಲಾಯಿತು. ಚರ್ಚೆಯಲ್ಲಿ ಒಬ್ಬ ಗಣ್ಯ ನೆರೆವಾಸಿಯು ನೋವನ್ನು ಕೊನೆಗಾಣಿಸಲು ಕೊಲ್ಲುವ ಉದ್ದೇಶವನ್ನು ಉತ್ಕಟವಾಗಿ ವಿರೋಧಿಸಿದನು. ತಾನು ಸೃಷ್ಟಿಸಲಾಗದ ಜೀವವನ್ನು ತೆಗೆಯಲು ಮನುಷ್ಯನಿಗೆ ಹಕ್ಕಿಲ್ಲವೆಂಬುದು ಆತನ ವಿರೋಧಕ್ಕೆ ಕಾರಣವಾಗಿದ್ದಿತು. ಅವನ ವಾದವು ಇಲ್ಲಿ ಅರ್ಥಹೀನವೆಂದು ನನಗೆ ತೋರಿತು. ಸ್ವಾರ್ಥದಿಂದ ಪ್ರೇರಿತವಾಗಿ ಜೀವವನ್ನು ತೆಗೆಯಲು ಹೊರಟಿದ್ದ ಪಕ್ಷಕ್ಕೆ ಅವನ ವಾದದಲ್ಲಿ ಹುರುಳಿರುತ್ತಿತ್ತು. ಕೊನೆಗೆ, ಅತ್ಯಂತ ದೈನ್ಯತೆಯಿಂದ ಆದರೆ ದೃಢ ನಿಶ್ಚಯದಿಂದ ನನ್ನೆದುರಿನಲ್ಲೆ ವೈದ್ಯರೊಬ್ಬರು ವಿಷವನ್ನು ಚುಚ್ಚಿ ಕರುವಿನ ಜೀವವನ್ನು ವಿಮೋಚನೆಗೊಳಿಸಿದರು. ಎರಡು ನಿಮಿಷದಲ್ಲಿ ಎಲ್ಲವೂ ಮುಕ್ತಾಯವಾಯಿತು.

"ವಿಶೇಷವಾಗಿ ಅಹಮದಾಬಾದಿನಲ್ಲಿ ಸಾರ್ವಜನಿಕ ಅಭಿಪ್ರಾಯವು, ನನ್ನ ಈ ಕೃತಿಯನ್ನು ಒಪ್ಪಲಾರದೆಂಬುದೂ, ಅದರಲ್ಲಿ ಹಿಂಸೆಯೊಂದನ್ನೆ ಗ್ರಹಿಸುತ್ತದೆಂಬುದೂ ನನಗೆ ತಿಳಿದಿದೆ. ಆದರೆ ವ್ಯಕ್ತಿಯ ಕರ್ತವ್ಯ ನಿರ್ವಹಣೆಯು ಸಾರ್ವಜನಿಕಾಭಿಪ್ರಾಯ ದಿಂದ ಮುಕ್ತವಾಗಿರಬೇಕೆಂಬುದೂ ನನಗೆ ಗೊತ್ತಿದೆ. ಇತರರಿಗೆ ತಪ್ಪೆಂದು ಕಂಡು ಬಂದರೂ ತನಗೆ ಸರಿಯೆಂದು ಕಂಡು ಬಂದುದನ್ನು ಮಾಡುವುದು ವ್ಯಕ್ತಿಯ ಕರ್ತವ್ಯ ವೆಂಬುದು ನನ್ನ ಅನುಗಾಲದ ಅಭಿಪ್ರಾಯ ಮತ್ತು ಅದೇ ಸರಿಯಾದ ಮಾರ್ಗವೆಂದು ಅನುಭವವು ತೋರಿಸಿಕೊಟ್ಟಿದೆ. ಅದರಿಂದಲೆ ಕವಿಯು 'ಪ್ರೇಮದ ಹಾದಿಯೊಂದು ಅಗ್ನಿದಿವ್ಯ. ಪುಕ್ಕರು ಅದಕ್ಕೆ ಬೆನ್ನು ತಿರುಗಿಸುತ್ತಾರೆ' ಎಂದು ಹಾಡಿರುವುದು. ಅಹಿಂಸೆಯು ಅಂದರೆ ಪ್ರೇಮದ ಪಥದಲ್ಲಿ ಅನೇಕ ವೇಳೆ ವ್ಯಕ್ತಿಯು ಏಕಾಂಗಿಯಾಗಿ ನಡೆಯಬೇಕಾಗುತ್ತದೆ

"ಆದರೆ ನನಗೊಂದು ನ್ಯಾಯಯುತ ಪ್ರಶ್ನೆಯನ್ನು ಹಾಕಬಹುದು: ಕರುವಿಗೆ ಸಂಬಂಧಿಸಿದಂತೆ ನಾನು ನಿರೂಪಿಸಿದ ತತ್ವವನ್ನು ಮನುಷ್ಯರಿಗೂ ಅನ್ವಯಿಸಬಹುದೆ? ನನ್ನ ವಿಷಯದಲ್ಲಿಯೇ ಅದನ್ನು ಅನ್ವಯಿಸಲು ಇಚ್ಛಿಸುತ್ತೇನೆಯೆ? ಇದಕ್ಕೆ ನನ್ನ ಉತ್ತರ 'ಹೌದು' ಎಂಬುದು. ಎರಡು ಪರಿಸ್ಥಿತಿಗಳಲ್ಲೂ ಅದೇ ನಿಯಮ ಚೆನ್ನಾಗಿ ಹೊಂದುತ್ತದೆ. ಒಬ್ಬನಿಗಾದದ್ದು ಎಲ್ಲರಿಗೂ ಎಂಬ ನಿಯಮಕ್ಕೆ ಯಾವ ಅಪವಾದವೂ ಇಲ್ಲ. ಕರುವಿನ ಕೊಲೆ ತಪ್ಪು ಮತ್ತು ಹಿಂಸಾತ್ಮಕವೆಂದೂ ಆ ನಿಯಮವು ಹೇಳುವುದಿಲ್ಲ. ಸಾಮಾನ್ಯವಾಗಿ ನರಳುತ್ತಿರುವ ನಮ್ಮ ಪ್ರಿಯ ವ್ಯಕ್ತಿಗಳ ಯಾತನೆಯನ್ನು ಸಾವಿನ ಮೂಲಕ ಕೊನೆಗಾಣಿಸುವುದಿಲ್ಲ. ಏಕೆಂದರೆ ಅವರಿಗೆ ನೆರವು ನೀಡಬಹುದಾದ ಸಾಧನ ಸಾಮಗ್ರಿಗಳು ನಮ್ಮಲ್ಲಿ ಸದಾ ಇವೆ. ಅಲ್ಲದೇ ತಾವೇ ಆಲೋಚಿಸಿ ನಿರ್ಧರಿಸುವ ಸಾಮರ್ಥ್ಯ ಅವರಿಗಿರುತ್ತದೆ. ಒಂದು ಪಕ್ಷ ನರಳುತ್ತಿರುವ ಒಬ್ಬ ಸ್ನೇಹಿತನ ಪರಿಸ್ಥಿತಿ ಯಲ್ಲಿ ಯಾವುದೇ ಸಹಾಯವನ್ನು ನೀಡಲು ನಾನು ಅಸಮರ್ಥನಾದಾಗ, ಪುನಃಚೇತರಿಕೆ ಅಸಾಧ್ಯವೆಂದು ಕಂಡುಬಂದಾಗ ಮತ್ತು ರೋಗಿಯು ತೀವ್ರ ವೇದನೆಯಿಂದ ಪ್ರಜ್ಞಾ ಹೀನ ಸ್ಥಿತಿಯಲ್ಲಿ ಮಲಗಿರುವಾಗ ಸಾವಿನ ಮೂಲಕ ಅವನ ತೀವ್ರ ಸಂಕಷ್ಟವನ್ನು ಕೊನೆ ಗಾಣಿಸುವುದು ನನಗೆ ಹಿಂಸೆಯೆಂದು ತೋರುವುದಿಲ್ಲ.

“ಶಸ್ತ್ರವೈದ್ಯನು ತನ್ನ ಚಾಕುವನ್ನು ಪ್ರಯೋಗಿಸುವಾಗ ಶುದ್ಧ ಅಹಿಂಸೆಯನ್ನು ಆಚರಿಸುತ್ತಾನೆಯೆ ವಿನಃ ಹಿಂಸೆಯನ್ನಲ್ಲ. ಅಂತೆಯೆ ಕೆಲವು ಅನಿವಾರ್ಯ ಪರಿಸ್ಥಿತಿಗಳಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ನರಳುವ ವ್ಯಕ್ತಿಯ ಹಿತದಿಂದ ಜೀವವನ್ನು ದೇಹದಿಂದ ಪ್ರತ್ಯೇಕಿಸುವ ಅಗತ್ಯವೂ ಕಂಡುಬರಬಹುದು. ಶಸ್ತ್ರವೈದ್ಯನು ರೋಗಿಯ ಜೀವವನ್ನು ಉಳಿಸುವ ಸಲುವಾಗಿ ಶಸ್ತ್ರಕ್ರಿಯೆಯನ್ನು ಮಾಡಿದರೆ ಮತ್ತೊಂದೆಡೆ ನಾವು ಅದಕ್ಕೆ ತದ್ವಿರುದ್ಧವಾದುದನ್ನು ಮಾಡುತ್ತಿದ್ದೇವಲ್ಲ ಎಂದು ಆಕ್ಷೇಪವೆತ್ತಬಹುದು. ಆದರೆ ಎರಡು ಸಂದರ್ಭಗಳಲ್ಲೂ ನರಳುವ ಚೇತನವನ್ನು ನೋವಿನಿಂದ ಮುಕ್ತಗೊಳಿಸುವ ಒಂದೇ ಅಂತಿಮ ಗುರಿಯನ್ನು ಸಾಧಿಸಲಾಗುತ್ತದೆಂಬುದು ಆಳವಾದ ವಿಶ್ಲೇಷಣೆಯಿಂದ ಗೋಚರವಾಗುತ್ತದೆ. ಒಂದು ಸಂದರ್ಭದಲ್ಲಿ ದೇಹದ ರೋಗಪೀಡಿತ ಭಾಗವನ್ನು ಪ್ರತ್ಯೇಕಿಸುವುದರಿಂದ, ಹಾಗೂ ಮತ್ತೊಂದು ಸಂದರ್ಭದಲ್ಲಿ ಆತ್ಮಕ್ಕೆ ಯಾತನೆಯನ್ನು ಕೊಡುವ ಶರೀರ ಮಾಧ್ಯಮವನ್ನು ಆ ಜೀವದಿಂದ ಬೇರ್ಪಡಿಸುವುದರಿಂದ ಆ ಗುರಿಯನ್ನು ಸಾಧಿಸಲಾಗುತ್ತದೆ. ಜೀವವಿಲ್ಲದೆ ದೇಹಕ್ಕೆ ನೋವು, ನಲಿವುಗಳ ಸಂವೇದನೆಯಿರುವುದಿಲ್ಲವಾದ್ದರಿಂದ ಎರಡು ಪರಿಸ್ಥಿತಿಗಳಲ್ಲೂ ಚೇತನವನ್ನು ಸಂಕಟದಿಂದ ಬಿಡುಗಡೆ ಮಾಡುವುದೇ ಗುರಿಯಾಗುತ್ತದೆ. ಕೊಲ್ಲುವುದೆ ಅಹಿಂಸೆಯಾಗಿ, ಕೊಲ್ಲದಿರುವುದೆ ಹಿಂಸೆಯಾಗಬಹುದಾದ ಇತರ ಕೆಲವು ಸನ್ನಿವೇಶಗಳನ್ನೂ ಊಹಿಸಬಹುದು. ಉದಾಹರಣೆಗೆ, ಒಂದು ವೇಳೆ ನನ್ನ ಮಗಳು ಸತೀತ್ವ ಭಂಗದಿಂದ ಹೆದರಿಸಲ್ಪಟ್ಟಾಗ, ಆ ಕ್ಷಣ ಅವಳ ಇಚ್ಛೆಯನ್ನರಿಯುವ ಯಾವ ಮಾರ್ಗವೂ ಇಲ್ಲದಿರುವಾಗ ಮತ್ತು ಅವಳನ್ನು ರಕ್ಷಿಸುವ ಯಾವ ದಾರಿಯೂ ಕಾಣಿಸದಿದ್ದಾಗ ಅವಳ ಜೀವವನ್ನು ಕೊನೆಗಾಣಿಸಿ ಕುಪಿತ ಘಾತುಕನ ರೋಷಕ್ಕೆ ತುತ್ತಾಗುವುದೆ ನನ್ನ ದೃಷ್ಟಿಯಲ್ಲಿ ಶುದ್ಧ ಅಹಿಂಸೆಯಾಗುತ್ತದೆ.

“ಅಹಿಂಸೆಯನ್ನು ಅಂಧಶ್ರದ್ಧೆಯ ಒಂದು ವಸ್ತುವನ್ನಾಗಿ ಮಾಡಿಬಿಟ್ಟಿರುವುದೇ ನಮ್ಮ ಅಹಿಂಸಾಭಕ್ತರಿಂದಾಗಿರುವ ತೊಂದರೆ. ಇದರಿಂದ ನಮ್ಮ ನಡುವೆ ನಿಜವಾದ ಅಹಿಂಸೆಯು ಪ್ರಸಾರವಾಗಲು ದೊಡ್ಡ ಅಡಚಣೆಯುಂಟಾಗಿದೆ. ಈಗಿರುವ ಮತ್ತು ನನ್ನ ಅಭಿಪ್ರಾಯದಲ್ಲಿ ಅಪಾರ್ಥಕ್ಕೊಳಗಾಗಿರುವ ಅಹಿಂಸಾದೃಷ್ಟಿಯು ನಮ್ಮ ಪ್ರಜ್ಞೆಗೆ ಮತ್ತು ಬರಿಸಿದೆಯಲ್ಲದೆ, ನಮಗರಿವಿಲ್ಲದೆಯೆ ನಮ್ಮನ್ನು ಕರ್ಕಶ ಶಬ್ದ, ನಿರ್ದಯ ಟೀಕೆ, ದ್ವೇಷ, ಸಿಟ್ಟು, ಸೇಡು ಮತ್ತು ಕ್ರೌರ್ಯ ಲಾಲಸೆಗಳಂಥ ಇತರ ಅನೇಕ ಹಿಂಸಾತ್ಮಕ ಗುಪ್ತ ರೂಪಗಳ ವಶಕ್ಕೊಪ್ಪಿಸುತ್ತಿದೆ. ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ ನೀಡುವ ಚಿತ್ರಹಿಂಸೆಯಲ್ಲಿ, ಸ್ವಾರ್ಥಲೋಭದಿಂದ ಅವರನ್ನು ಹಸಿವು ಮತ್ತು ಸುಲಿಗೆಗಳಿಗೆ ಈಡು ಮಾಡುವುದರಲ್ಲಿ, ದುರ್ಬಲರ ತೇಜೋವಧೆ ಮಾಡಿ ಅವರ ಮೇಲೆ ದಬ್ಬಾಳಿಕೆ ನಡೆಸುವಲ್ಲಿ ಇಂದು ನಮ್ಮ ಸುತ್ತಲೂ ಕಾಣುತ್ತಿರುವ ಆತ್ಮಗೌರವದ ಕೊಲೆಯಲ್ಲಿ, ಕೇವಲ ಉಪಕಾರಿ ದೃಷ್ಟಿಯಿಂದ ಜೀವ ತೆಗೆಯುವುದರಲ್ಲಿರುವುದಕ್ಕಿಂತ ಹೆಚ್ಚಿನ ಹಿಂಸೆಯಡಗಿದೆ ಎಂಬುದನ್ನು ಅದು ಮರೆಯುವಂತೆ ಮಾಡಿದೆ. ಅಮೃತಸರದ ಯಾವುದೋ ಕುಖ್ಯಾತ ಓಣಿಯಲ್ಲಿ ಹಿಂಸ್ರವ್ಯಕ್ತಿಗಳಿಂದ ಮುಗ್ಧ ಜನ, ಹುಳುಗಳಂತೆ ಹೊಟ್ಟೆಯ ಮೇಲೆ ತೆವಳುವ

ಚಿತ್ರಹಿಂಸೆಗೆ ಗುರಿಯಾದರಷ್ಟೆ. ಆದರೆ ಅವರನ್ನು ಒಂದೇ ಬಾರಿಗೆ ಸಾಯಿಸಿದ್ದರೆ ಹೆಚ್ಚು ಮಾನವೀಯವೆನಿಸುತ್ತಿತ್ತೆಂಬುದನ್ನು ಯಾರಾದರೂ ಸಂದೇಹಿಸುತ್ತಾರೆಯೇ? ತಾವು ತೆವಳುವುದಕ್ಕಿಂತ ಹೆಚ್ಚು ಕೆಟ್ಟ ಸ್ಥಿತಿಯಲ್ಲಿದ್ದೇವೆಂದು ಈಗ ಅದೇ ಜನ ಭಾವಿಸು ತ್ತಾರೆಂದು ಹೇಳುವುದರ ಮೂಲಕ ಯಾರಾದರೂ ಪ್ರತಿವಾದಿಸಲು ಬಯಸಬಹುದು. ಆತನಿಗೆ ಅಹಿಂಸೆಯ ಮೂಲಭೂತ ತತ್ವಗಳೇ ತಿಳಿದಿಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ ತನ್ನ ಪ್ರಾಣವನ್ನೆ ತೆತ್ತು ಅತ್ಯಗತ್ಯವಾಗಿ ಎದುರಿಸಬೇಕಾದ ಕೆಲವು ಸಂದರ್ಭಗಳು ವ್ಯಕ್ತಿಯ ಬದುಕಿನಲ್ಲಿ ಬರುತ್ತವೆ. ಮನುಷ್ಯ ಪದವಿಯ ಈ ಮೂಲಭೂತ ಅಂಶವನ್ನು ಮೆಚ್ಚದಿರುವುದು ಅಹಿಂಸೆಯ ಅಡಿಪಾಯದ ಬಗೆಗೆ ಅಜ್ಞಾನವನ್ನು ತೋರಿಸಿದಂತಾಗು ತ್ತದೆ. ಉದಾಹರಣೆಗೆ, ಒಬ್ಬ ಸತ್ಯಾರಾಧಕನು ಅಸತ್ಯದ ಜೀವನದಿಂದ ಪಾರಾಗಲು ತನಗೆ ಸಾವನ್ನು ಕರುಣಿಸೆಂದು ಭಗವಂತನನ್ನು ಬೇಡಬಹುದು. ಅದೇ ರೀತಿಯಲ್ಲಿ ತೇಜೋವಧೆ ಮಾಡುವುದಕ್ಕಿಂತ ಅಥವಾ ಮನುಷ್ಯನ ಘನತೆಗೆ ತಕ್ಕುದಲ್ಲದ ಕೆಲಸ ಗಳನ್ನು ತನ್ನಿಂದ ಮಾಡಿಸುವುದಕ್ಕಿಂತ ಜೀವವನ್ನು ತೆಗೆದುಬಿಡೆಂದು ಅಹಿಂಸಾವಾದಿ ಯೊಬ್ಬ ತನ್ನ ಶತ್ರುವನ್ನು ದೈನದಿಂದ ಕೇಳಿಕೊಳ್ಳಬಹುದು. ಕವಿಯು ಹಾಡಿರುವಂತೆ: 'ಭಗವಂತನ ದಾರಿಯಿರುವುದು ವೀರರಿಗೇ ಹೊರತು ಹೇಡಿಗಳಿಗಲ್ಲ.'

"ಕೊಲ್ಲದಿರುವುದೊಂದೆ ಅಹಿಂಸೆಯೆಂಬ ನಮ್ಮ ತಪ್ಪು ತಿಳಿವಳಿಕೆಗೆ ಮತ್ತು ನಮ್ಮ ದೇಶದಲ್ಲಿ ಅಹಿಂಸೆಯ ಹೆಸರಿನಲ್ಲಿ ನಡೆಯುತ್ತಿರುವ ಭಯಂಕರ ಪ್ರಮಾಣದ ಹಿಂಸೆಗೆ, ಅಹಿಂಸೆಯ ಸ್ವರೂಪ ಮತ್ತು ವ್ಯಾಪ್ತಿಯ ಬಗೆಗೆ ಇರುವ ಈ ಮೂಲಭೂತ ವಾದ ತಪ್ಪುಗ್ರಹಿಕೆ ಮತ್ತು ಅದಕ್ಕೆ ಸಂಬಂಧಪಟ್ಟ ಮೌಲ್ಯಗಳ ಬಗೆಗೆ ಇರುವ ಗೊಂದಲವೇ ಕಾರಣ. ನಮ್ಮ ಪಿಂಜ್ರಾಪೋಲಗಳನ್ನು ಮತ್ತು ಗೋಶಾಲೆಗಳನ್ನು ನೋಡಿ. ಇಂದು ಅನೇಕ ಗೋಶಾಲೆಗಳು ಚಿತ್ರಹಿಂಸೆಯ ನೆಲೆಗಳಾಗಿವೆ. ನಮ್ಮ ಮನಸ್ಸಾಕ್ಷಿಯ ಸಮಾಧಾನಕ್ಕಾಗಿ ದುರದೃಷ್ಟದ ಮತ್ತು ಅಸಹಾಯಕ ದನಗಳನ್ನು ಅವುಗಳ ಪಾಲುಮಾಡುತ್ತೇವೆ. ಅವುಗಳಿಗೆ ಮಾತನಾಡುವ ಶಕ್ತಿಯಿದ್ದಲ್ಲಿ 'ಈ ಚಿತ್ರ ಹಿಂಸೆಗೆ ಗುರಿಮಾಡುವುದಕ್ಕಿಂತ ನಮ್ಮ ಪ್ರಾಣವನ್ನು ತೆಗೆದು ಬಿಡಿ' ಎಂದು ನಮ್ಮ ವಿರುದ್ಧ ಕೂಗಿ ಹೇಳುತ್ತಿದ್ದುವು. ಅವುಗಳ ಕಣ್ಣುಗಳಲ್ಲಿ ಅನೇಕ ಸಲ ಈ ಮೌನ ಬೇಡಿಕೆ ಯನ್ನು ನಾನು ಗುರುತಿಸಿದ್ದೇನೆ.

"ಒಟ್ಟಾರೆ ಹೇಳುವುದಾದರೆ, ಸೇಡಿನಿಂದ ಅಥವಾ ಸ್ವಾರ್ಥದ ಉದ್ದೇಶದಿಂದ ಯಾವುದೇ ಜೀವಿಯ ಪ್ರಾಣಾಪಹರಣ ಮಾಡುವುದು ಅಥವಾ ಆ ಜೀವಿಗೆ ನೋವುಂಟು ಮಾಡುವುದು ಅಥವಾ ಕೆಡುಕು ಬಯಸುವುದು ಹಿಂಸೆಯಾಗುತ್ತದೆ. ಮತ್ತೊಂದು ಸಂದರ್ಭದಲ್ಲಿ, ವಿವೇಚಿತ ಮತ್ತು ಸ್ಪಷ್ಟ ತೀರ್ಮಾನದ ನಂತರ, ಶುದ್ಧನಿಸ್ವಾರ್ಥ ದೃಷ್ಟಿ ಯಿಂದ ಒಂದು ಜೀವಿಯನ್ನು ಕೊಲ್ಲುವುದು ಅಥವಾ ನೋವುಂಟುಮಾಡುವುದು ಅಪ್ಪಟ ಅಹಿಂಸೆಯೆನಿಸುತ್ತದೆ. ಇಂತಹ ಪ್ರತಿಯೊಂದು ಪರಿಸ್ಥಿತಿಯನ್ನೂ ಅದರದೇ ಗುಣ ದೋಷಗಳ ಆಧಾರದ ಮೇಲೆ ಪ್ರತ್ಯೇಕವಾಗಿ ನಿರ್ಣಯಿಸಬೇಕು. ಒಟ್ಟಾರೆ ಕೃತಿಯ

ಹಿಂಬದಿಯಲ್ಲಿ ಹುದುಗಿರುವ ಉದ್ದೇಶವೆ ಆ ಕೃತಿಯು ಹಿಂಸಾತ್ಮಕವೊ ಅಥವಾ ಅಹಿಂಸಾತ್ಮಕವೊ ಎಂಬುದರ ಅಖೈರು ಪ್ರಮಾಣವಾಗಿರುತ್ತದೆ.

"ಇಂದು ಆಶ್ರಮಕ್ಕೆದುರಾಗಿ ನಿಂತಿರುವ ಮತ್ತೊಂದು ಪ್ರಬಲ ಸಮಸ್ಯೆಗೆ ನಾನೀಗ ಬರುತ್ತೇನೆ. ಮಂಗಗಳ ಪೀಡೆ ಬಹುತೀವ್ರವಾಗಿ ಪರಿಣಮಿಸಿದೆ ಮತ್ತು ಅದಕ್ಕೆ ಜರೂರು ಪರಿಹಾರದ ಅಗತ್ಯವೂ ಹೆಚ್ಚಿದೆ. ಬೆಳೆಯುತ್ತಿದ್ದ ತರಕಾರಿ ಮತ್ತು ಹಣ್ಣಿನ ಮರಗಳು ಈ ಪ್ರತಿಷ್ಠಿತ ಸೋದರರ ವಿಶೇಷ ಆಕರ್ಷಣೆಯಾಗಿ ಪರಿಣಮಿಸಿವೆ. ಈಗ ಅವುಗಳು ಸಂಪೂರ್ಣವಾಗಿ ನಾಶವಾಗುವ ಭಯ ಹುಟ್ಟಿದೆ. ಎಷ್ಟು ಪ್ರಯತ್ನ ಕೈಗೊಂಡರೂ ಈ ಅನಿಷ್ಟಕ್ಕೆ ಫಲಕಾರಿಯೂ ಅಹಿಂಸಾತ್ಮಕವೂ ಆದ ಪರಿಹಾರವನ್ನು ಕಂಡುಹಿಡಿಯಲು ಇನ್ನೂ ಸಾಧ್ಯವಾಗಿಲ್ಲ. ಆಶ್ರಮದಲ್ಲಿ ಇದುವರೆಗೆ ಒಂದು ಕೋತಿಯೂ ಸಾಯಿಸಲ್ಪಟ್ಟಿಲ್ಲ; ಇಲ್ಲವೆ ಪತ್ರ ವ್ಯವಹಾರಿಯು ಊಹಿಸಿದಂತೆ ಬಾಣಗಳಿಂದಾಗಲಿ ಅಥವಾ ಇತರ ಯಾವುದೇ ರೀತಿಯಿಂದಾಗಲಿ ಘಾಸಿಗೊಳಿಸಲ್ಪಟ್ಟಿಲ್ಲವೆಂದು ಓದುಗನಿಗೆ ಭರವಸೆ ನೀಡುತ್ತೇನೆ. ಅವನ್ನು ಓಡಿಸಲು ಖಂಡಿತ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಮತ್ತು ಅದಕ್ಕಾಗಿ ಅನಪಾಯಕಾರಿ ಬಾಣಗಳನ್ನು ಬಳಸಲಾಗುತ್ತಿದೆ.

"ಅನಿವಾರ್ಯವೆನಿಸಿದಲ್ಲಿ ಕೋತಿಗಳನ್ನು ಕೊಲ್ಲುವ ಪ್ರಶ್ನೆಯನ್ನು ತೀವ್ರವಾಗಿ ಪರಿಗಣಿಸುತ್ತಿದ್ದೇನೆ. ಆದರೆ ಅವು ಹೆದರಿ ಓಡಿಹೋಗುವಂತೆ ಮಾಡಲು ಅವುಗಳನ್ನು ಗಾಯಗೊಳಿಸಬೇಕೆಂಬ ಆಲೋಚನೆ ನನಗೆ ಅಸಹನೀಯವಾಗಿ ಕಂಡಿದೆ. ಆದರೆ ಈ ಸಮಸ್ಯೆ ಹಿಂದಿನದರಂತೆ ಸರಳ ಹಾಗೂ ಸುಲಭವಲ್ಲ.

"ಕೋತಿಗಳನ್ನೋಡಿಸುವುದರಲ್ಲೂ ನನ ಅಹಿಂಸೆಯ ಸ್ಪಷ್ಟ ಉಲ್ಲಂಘನೆ ಕಂಡು ಬರುತ್ತಿದೆ. ಅವುಗಳನ್ನು ಕೊಲ್ಲಲೇ ಬೇಕಾದಲ್ಲಿ ಈ ಉಲ್ಲಂಘನೆಯ ಪ್ರಮಾಣ ಅಧಿಕವಾಗುತ್ತದೆ. ಏಕೆಂದರೆ, ಮೊತ್ತದಲ್ಲಿ ಅದು ಕೊಲೆಯಾಗಿರಲಿ ಅಥವಾ ಆಗದಿರಲಿ ಸ್ವಾರ್ಥ ಹಿತದಿಂದ ಮಾಡಲ್ಪಟ್ಟ ಯಾವುದೇ ಕೇಡು ನಿಸ್ಸಂದೇಹವಾಗಿ ಹಿಂಸೆಯಾಗುತ್ತದೆ.

"ರಕ್ತಮಾಂಸಗಳಿಂದ ಕೂಡಿದ ಬದುಕೆಲ್ಲ ಕೆಲವೊಂದು ರೀತಿಯ ಹಿಂಸೆಯಿಂದಲೆ ನಡೆದಿದೆ. ಆದ್ದರಿಂದಲೆ, ಶ್ರೇಷ್ಠ ಧರ್ಮವು ಅಹಿಂಸಾ ಎಂಬ ನಿಷೇಧಾರ್ಥಕ ಪದದಿಂದ ನಿರೂಪಿಸಲ್ಪಟ್ಟಿದೆ. ಈ ಪ್ರಪಂಚವು ವಿನಾಶದ ಸಂಕೋಲೆಯಲ್ಲಿ ಬಂಧಿತವಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಸಶರೀರ ಬದುಕಿನಲ್ಲಿ ಹಿಂಸೆಯೆಂಬುದು ಒಂದು ಅಂತರ್ಗತ ಅನಿವಾರ್ಯವಾಗಿದೆ. ಅದಕ್ಕಾಗಿಯೆ ಅಹಿಂಸಾವಾದಿಯು ಈ ರಕ್ತಮಾಂಸಗಳ ಸೆರೆಯ ಅಂತಿಮ ಬಿಡುಗಡೆಗಾಗಿ ಸದಾ ಪ್ರಾರ್ಥಿಸುತ್ತಾನೆ.

"ದೇಹಿಗಳಾಗಿರುವಾಗ ಯಾರೂ ಹಿಂಸೆಯಿಂದ ಸಂಪೂರ್ಣವಾಗಿ ಮುಕ್ತರಾಗಿರುವುದು ಸಾಧ್ಯವಿಲ್ಲ. ಏಕೆಂದರೆ ಬದುಕುವ ಆಸೆಯನ್ನು ಯಾರೂ ಸಂಪೂರ್ಣವಾಗಿ ತ್ಯಜಿಸಲಾರರು. ಚಿತ್ತವು ಸಹಕರಿಸಲು ಒಪ್ಪದಿದ್ದಲ್ಲಿ ದೇಹವನ್ನು ಮಾತ್ರ ಬಲಾತ್ಕರಿಸುವುದರಿಂದ ಪ್ರಯೋಜನವೇನು? ನೀವು ಆಮರಣಾಂತ ಉಪವಾಸವನ್ನು ಕೈಗೊಳ್ಳಬಹುದು.

ಆದರೆ ಅದೇ ವೇಳೆಯಲ್ಲಿ ಮನಸ್ಸು ಇಂದ್ರಿಯ ವಿಷಯಗಳತ್ತ ನಾಲಿಗೆ ಚಾಚುತ್ತಿದ್ದರೆ ನಿಮ್ಮ ಉಪವಾಸವು ಕೇವಲ ನಟನೆಯಾಗುತ್ತದೆ, ಭ್ರಮೆಯೆನಿಸುತ್ತದೆ. ಹೀಗಿರುವಲ್ಲಿ ಚಿತ್ತದ ದಾಸನಾದ ಬಡಪಾಯಿಯ ಗತಿಯೇನು? ಅವನು ಕಟ್ಟುಬೀಳಬಹುದಾದ ಹಿಂಸೆಯ ಸ್ವರೂಪ ಮತ್ತು ವ್ಯಾಪ್ತಿಗಳನ್ನು ಹೇಗೆ ತಾನೆ ನಿರ್ಧರಿಸಬಲ್ಲ? ಸಮಾಜವು ಒಂದು ಆದರ್ಶವನ್ನೇನೊ ಹಾಕಿಕೊಟ್ಟಿದೆ ಮತ್ತು ಆ ಮಟ್ಟದಲ್ಲಿ ಅದರ ಬಗೆಗೆ ವ್ಯಕ್ತಿ ತೊಂದರೆ ತೆಗೆದುಕೊಳ್ಳುವುದನ್ನು ತಪ್ಪಿಸಿದೆ. ಆದರೆ ಪ್ರತಿಯೊಬ್ಬ ಸತ್ಯಾನ್ವೇಷಕನೂ ತನ್ನ ಅಗತ್ಯಕ್ಕೆ ತಕ್ಕಂತೆ ಈ ಆದರ್ಶವನ್ನು ಹೊಂದಿಸಿಕೊಳ್ಳಬೇಕಾಗುತ್ತದೆ; ಮತ್ತು ಹೆಚ್ಚು ಕಡಿಮೆ ಮಾಡಿಕೊಳ್ಳಲೂಬೇಕಾಗುತ್ತದೆ. ಅಲ್ಲದೆ ಹಿಂಸೆಯ ಪರಿಧಿಯನ್ನು ಕುಗ್ಗಿಸಲು ಎಡೆಬಿಡದೆ ಪ್ರಯತ್ನಿಸಬೇಕು. ಆದರೆ ರೈತ ಕಠಿನವೂ ಅನಿಶ್ಚಿತವೂ ಆದ ತನ್ನ ಬದುಕಿನ ಹೊರೆಯನ್ನು ಹೊರುವುದರಲ್ಲಿಯೆ ಮಗ್ನನಾಗಿರುತ್ತಾನಾದ್ದರಿಂದ ಈ ಎಲ್ಲ ಸಮಸ್ಯೆಗಳನ್ನು ತಾನೇ ಆಲೋಚಿಸಿ ನಿರ್ಧರಿಸುವ ಸಮಯ ಅಥವಾ ಸಾಮರ್ಥ್ಯ ಗಳೆರಡೂ ಅವನಿಗಿರುವುದಿಲ್ಲ. ಸುಸಂಸ್ಕೃತ ವರ್ಗವು ಅವನಿಗೆ ಸಹಾಯ ಮಾಡುವುದಕ್ಕೆ ಬದಲಾಗಿ ಅನಾದರಣೆಯನ್ನು ತೋರಿಸುತ್ತದೆ. ನಾನೇ ರೈತನಾಗಿರುವುದರಿಂದ ಮುಂಬರಿ ಯಲು ಯಾವ ನಿರ್ದಿಷ್ಟ ದಾರಿಯೂ ಇಲ್ಲ; ನನಗಾಗಿ ಹಾಗೂ ಸಾಧ್ಯವಾದಲ್ಲಿ ನನ್ನ ಸಹರೈತರಿಗಾಗಿಯೂ ಒಂದು ಮಾರ್ಗವನ್ನು ಕಂಡುಕೊಳ್ಳಬೇಕಾಗಿದೆ. ರೈತನ ಎದುಗಿರಿರುವ ಅನೇಕ ತೊಡಕಿನ ಸಮಸ್ಯೆಗಳಲ್ಲಿ ಈ ಕಪಿ ಪೀಡೆಯೂ ಒಂದು. ಆತನ ಬೆಳೆಗಳು ಅವುಗಳಿಂದ ರಕ್ಷಣೆ ಪಡೆಯುವಂತಾಗಲು ಕನಿಷ್ಠ ಪ್ರಮಾಣದ ಹಿಂಸೆಯಿಂದ ಯಾವುದಾದರೊಂದು ಪರಿಹಾರೋಪಾಯವನ್ನು ಹುಡುಕಲೇಬೇಕು.

"ಗುಜರಾತಿನ ರೈತರು ಇದಕ್ಕಾಗಿ ಕೆಲವು ವಿಶೇಷ ಕಾವಲುಗಾರರನ್ನು ನೇಮಿಸಿ ಕೊಳ್ಳುತ್ತಾರೆಂದು ಕೇಳಿದ್ದೇನೆ. ಅವರ ಹಾಜರಿ ಮಾತ್ರದಿಂದಲೇ ಕೋತಿಗಳು ಹೆದರಿ ಓಡಿಹೋಗುತ್ತವೆಂದೂ, ಅವುಗಳನ್ನು ಕೊಲ್ಲುವ ಅಗತ್ಯ ರೈತನಿಗಿರುವುದಿಲ್ಲವೆಂದೂ ಹೇಳಲಾಗುತ್ತದೆ. ಅದು ಸಾಧ್ಯ. ಆದರೆ ಈ ಉಪಾಯವು ಎಷ್ಟೇ ಪರಿಣಾಮಕಾರಿ ಯಾಗಿದ್ದರೂ ಒಂದಲ್ಲ ಒಂದು ವೇಳೆ ಕೆಲವು ಪ್ರಮಾಣವಾದರೂ ನಷ್ಟವಾಗುವ ಸಂಭವವಿದ್ದೇ ಇರುತ್ತದೆ. ಕಾರಣ, ನಮ್ಮ ಈ ದಾಯಾದಿಗಳಿಗೆ ಬುದ್ಧಿ ಮತ್ತು ಯುಕ್ತಿ ಗಳೆರಡೂ ಇವೆ. ಆ ಕಾವಲುಗಾರರಿಂದ ತಮಗೆ ನಿಜವಾದ ಯಾವ ಅಪಾಯವೂ ಇಲ್ಲ ವೆಂದು ಅರಿತ ಕ್ಷಣ ಗುಂಡಿನ ಶಬ್ದಕ್ಕೂ ಸಹ ಅವು ಅಂಜುವುದಿಲ್ಲ ಮತ್ತು ಗುಂಡು ಹಾರಿಸಿದ್ದಷ್ಟೂ ಜೋರಾಗಿ ಅರಚಿ ಗಲಾಟೆ ಮಾಡುತ್ತವಷ್ಟೆ. ಆದ್ದರಿಂದ ಈ ಅನಿಷ್ಟ ನಿವಾರಣೆಗಾಗಿ ಆಶ್ರಮದಲ್ಲಿ ಯಾವ ಪ್ರಯತ್ನಗಳನ್ನೂ ಮಾಡಿಲ್ಲವೆಂದು ಯಾರೂ ಎಣಿಸದಿರಿ. ಆದರೆ ನಾನು ಈ ವರೆಗೆ ತಿಳಿದಿರುವ ಯಾವ ಉಪಾಯವೂ ಹಿಂಸೆಯಿಂದ ಮುಕ್ತವಾಗಿಲ್ಲ."

'ಅಗ್ನಿದಿವ್ಯ'ವು ಅವರನ್ನು ಅನೇಕ ಕಂಪಿತ ವಿಮರ್ಶಕರ ಸಿಟ್ಟಿಗೆ ಗುರಿಮಾಡಿತು. ಅದಕ್ಕೆ ಗಾಂಧೀಜಿ ಹೀಗೆ ವಾದಿಸಿದರು:

"ನಿಜವಾಗಿಯೂ ಹೊರೆಯಾಗಿರುವ ಈ 'ಮಹಾತ್ಮ' ಪದವಿಗಿಂತಲೂ ನನಗೆ ಸತ್ಯವೇ ಅತ್ಯಂತ ಪ್ರಿಯವಾದುದು. ನನ್ನ ಪರಿಮಿತಿಗಳ ಮತ್ತು ನನ್ನ ಅಲ್ಪತೆಯ ಅರಿವೇ ಇದುವರೆಗೆ ಮಹಾತ್ಮ ಪದವಿಯ ದಬ್ಬಾಳಿಕೆಯಿಂದ ನನ್ನನ್ನು ಕಾಪಾಡಿದೆ. ಈ ದೇಹದಲ್ಲಿ ಬದುಕನ್ನು ಮುಂದುವರಿಸಬೇಕೆಂಬ ನನ್ನ ಆಸೆಯು ಎಡೆಬಿಡದ ಹಿಂಸೆಯಲ್ಲಿ ನನ್ನನ್ನು ತೊಡಕಿಸುತ್ತದೆಯೆಂಬ ಸಂಕಟದ ಎಚ್ಚರ ನನಗಿದೆ. ಅದಕ್ಕಾಗಿಯೆ ನನ್ನ ಭೌತಿಕ ದೇಹದ ಬಗೆಗೆ ನಾನು ಹೆಚ್ಚು ಹೆಚ್ಚು ಉದಾಸೀನನಾಗುತ್ತಿದ್ದೇನೆ. ಉದಾಹರಣೆಗೆ ಉಸಿರಾಟದ ಕ್ರಿಯೆಯಲ್ಲಿ ವಾಯುವಿನಲ್ಲಿ ತೇಲುತ್ತಿರುವ ಅಸಂಖ್ಯ ಅಗೋಚರ ಜೀವಾಣುಗಳ ನಾಶವಾಗುತ್ತವೆಂಬುದು ನನಗೆ ತಿಳಿದಿದೆ. ಆದರೂ ನಾನು ಉಸಿರಾಟವನ್ನು ನಿಲ್ಲಿಸಲಾರೆ. ತರಕಾರಿಯ ಸೇವನೆಯೂ ಹಿಂಸೆಯೆ. ಆದರೂ ಅವುಗಳನ್ನು ನಾನು ತ್ಯಜಿಸಲಾರೆ. ಮತ್ತೆ ಕೀಟನಾಶಕಗಳ ಬಳಕೆಯಲ್ಲಿಯೂ ಹಿಂಸೆಯಿದೆ. ಆದರೂ ಸೊಳ್ಳೆ ಮೊದಲಾದ ಉಪದ್ರವಕಾರಿ ಜೀವಿಗಳಿಂದ ತಪ್ಪಿಸಿಕೊಳ್ಳಲು ಸೀಮೆಯೆಣ್ಣೆಯಂಥ ಸೋಂಕುನಿವಾರಕಗಳ ಬಳಕೆಯನ್ನು ತಪ್ಪಿಸಲಾರೆ. ಆಶ್ರಮದೊಳಗಿರುವ ಹಾವುಗಳನ್ನು ಹಿಡಿದು ಅಪಾಯದ ಹಾದಿಯಿಂದ ಆಚೆ ಬಿಟ್ಟುಬಿಡಲು ಸಾಧ್ಯವಾಗದಿದ್ದಲ್ಲಿ ಅವುಗಳನ್ನು ಕೊಲ್ಲಲು ಅನುಮತಿ ನೀಡುತ್ತೇನೆ. ಆಶ್ರಮದಲ್ಲಿ ಎತ್ತು ನಡೆಸಲು ಚಾಟಿಯ ಬಳಕೆಯನ್ನು ನಾನು ಸಹಿಸಿಕೊಂಡಿದ್ದೇನೆ. ಹೀಗಾಗಿ ನಾನು ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಮಾಡುವ ಹಿಂಸೆಗೆ ಕೊನೆಯೆ ಇಲ್ಲ. ಈಗ ಈ ಮಂಗಗಳ ಸಮಸ್ಯೆ ನನ್ನನ್ನೆದುರಿಸಿ ನಿಂತಿದೆ. ಅವುಗಳನ್ನು ಕೊಲ್ಲುವ ಅಂತಿಮ ತೀರ್ಮಾನವನ್ನು ಕೈಗೊಳ್ಳುವ ಆತುರವೂ ನನಗಿಲ್ಲವೆಂದು ಸ್ಪಷ್ಟಪಡಿಸುತ್ತೇನೆ. ಕೊಟ್ಟಕೊನೆಗೆ ಅವುಗಳನ್ನು ಕೊಂದೇಬಿಡುವ ನಿರ್ಧಾರವನ್ನು ಕೈಗೊಳ್ಳಲು ನನ್ನಿಂದ ಸಾಧ್ಯವೇ ಎಂಬುದೂ ನಿಶ್ಚಯವಿಲ್ಲ. ಆದರೆ ಆಶ್ರಮದ ಸಮಸ್ತ ಬೆಳೆಯನ್ನು ನಾಶ ಮಾಡಿದರೂ ಕೋತಿಗಳನ್ನೆಂದೂ ಕೊಲ್ಲುವುದಿಲ್ಲವೆಂದು ಪ್ರಮಾಣ ಮಾಡಲಾರೆ. ನನ್ನ ಈ ತಪ್ಪೊಪ್ಪಿಗೆಯ ಫಲವಾಗಿ ನಾನು ಸೋತೆನೆಂದು ಸ್ನೇಹಿತರು ನನ್ನನ್ನು ತ್ಯಜಿಸಲು ಸಿದ್ಧವಿದ್ದರೆ ನನಗೆ ವ್ಯಥೆಯಾಗುತ್ತದೆ. ಆದರೆ ಅಹಿಂಸೆಯ ಆಚರಣೆಯಲ್ಲಿ ಕಂಡುಬರುವ ನನ್ನ ಕುಂದುಕೊರತೆಗಳನ್ನು ಮುಚ್ಚಿಕೊಳ್ಳುವಂತೆ ಯಾವುದೂ ನನ್ನನ್ನು ಪ್ರೇರೇಪಿಸುವುದಿಲ್ಲ. ನನ್ನ ಬಗೆಗೆ ಇಷ್ಟು ಮಾತ್ರ ಹೇಳಿಕೊಳ್ಳಬಲ್ಲೆ:

"ಅಹಿಂಸೆಯಂಥ ದೊಡ್ಡ ಆದರ್ಶಗಳ ಪರಿಣಾಮಗಳನ್ನು ಅರಿಯಲು ಮತ್ತು ಅವುಗಳನ್ನು ಮಾತು, ಕೃತಿ ಆಲೋಚನೆಗಳಲ್ಲಿ ಅನುಷ್ಠಾನಕ್ಕೆ ತರಲು ಸತತವಾಗಿ ಪ್ರಯತ್ನಿಸುತ್ತಿದ್ದೇನೆ. ಅದರಲ್ಲಿ ನಾನಂದುಕೊಂಡಂತೆ ಅಲ್ಪಸ್ವಲ್ಪ ಗೆಲವೂ ಇಲ್ಲದಿಲ್ಲ. ಆದರೆ ಈ ದಿಸೆಯಲ್ಲಿ ನಾನು ಮುನ್ನಡೆಯಬೇಕಾದ ದಾರಿ ಸುದೀರ್ಘವಾಗಿದೆ ಎಂಬ ಅರಿವು ಮಾತ್ರ ನನಗಿದೆ."

ಹುಚ್ಚುನಾಯಿಗಳನ್ನು ಕೊಲ್ಲಲು ಸಲಹೆಯಿತ್ತುದರಿಂದ ಸಂಪ್ರದಾಯವಾದಿಗಳು ಗಾಬರಿಗೊಂಡರು: "ಈ ನಾಯಿಗಳನ್ನು ಕೊಲ್ಲುವುದು ನನ್ನ ಅಭಿಪ್ರಾಯದಲ್ಲಿ ಹಿಂಸೆ ಆಗುವುದಾದರೂ ಇದಕ್ಕಿಂತ ದೊಡ್ಡ ಹಿಂಸೆಯಿಂದ ನಾವು ಪಾರಾಗಬೇಕಾದರೆ ಅದು

ಅನಿವಾರ್ಯವೆಂದು ನನ್ನ ನಂಬಿಕೆ. ಪ್ರತಿಯೊಂದು ನಾಯಿಯೂ ಯಾರಿಗಾದರೂ ಸೇರಿದ್ದಾಗಿರಬೇಕು ಮತ್ತು ಕೊರಳಪಟ್ಟಿಯನ್ನು ಹೊಂದಿರಬೇಕು. ಪ್ರತಿಯೊಂದು ನಾಯಿಗೂ ಅಪ್ಪಣೆ ಚೀಟಿಯಿರಬೇಕು. ಎಲ್ಲ ಬೀದಿನಾಯಿಗಳನ್ನೂ ಪೋಲೀಸಿನವರು ಹಿಡಿದು ತಕ್ಷಣ ಅವುಗಳನ್ನು ಸಾಕುವ ಅನುಕೂಲವಿರುವ ಮಹಾಜನರಿಗೆ ಒಪ್ಪಿಸಬೇಕು. ಅಂಥ ಅವಕಾಶವಿಲ್ಲದಿದ್ದಲ್ಲಿ ಎಲ್ಲ ತೋಡುನಾಯಿಗಳನ್ನೂ ಕೊಂದುಬಿಡಬೇಕು. ನಾಯಿ ಹಾವಳಿಗೆ ನನ್ನ ದೃಷ್ಟಿಯಲ್ಲಿ ಇದೇ ಅತ್ಯಂತ ಮಾನವೀಯ ಪರಿಹಾರ. ಶುನಕ ಹಾವಳಿ ಎಲ್ಲರ ಅನುಭವಕ್ಕೂ ಬಂದಿದೆ. ಆದರೂ ಅದನ್ನೆದುರಿಸುವ ಆಸಕ್ತಿ ಅಥವಾ ಧೈರ್ಯ ಯಾರಿಗೂ ಇಲ್ಲ. ಆದರೆ ಆ ಬಗೆಯ ಉದಾಸೀನವೇ ಹಿಂಸೆಯಾಗುತ್ತದೆ ಮತ್ತು ಅಹಿಂಸಾವಾದಿಯು ಕ್ಷುದ್ರ ಸಮಸ್ಯೆಗಳನ್ನು ಕೂಡ, ಅವು ಅಹಿಂಸಾತ್ಮಕ ಪರಿಹಾರ ಅಪೇಕ್ಷಿಸಿದಲ್ಲಿ, ನಿರ್ಲಕ್ಷಿಸುವಂತಿಲ್ಲ ಅಥವಾ ಅವುಗಳಿಂದ ಜಾರಿಕೊಳ್ಳುವಂತಿಲ್ಲ. ತೀವ್ರ ತಪ್ಪುಗಳನ್ನು ಮಾಡುವ ಸಂಭವವಿದ್ದರೂ ಅವುಗಳನ್ನು ಕೆಚ್ಚಿನಿಂದ ಎದುರಿಸುವುದರ ಮೂಲಕ ಶ್ರೇಷ್ಠ ತತ್ವದ ಯಥಾರ್ಥ ಜ್ಞಾನವನ್ನು ಪಡೆಯಬಹುದು."

ಗಾಂಧೀಜಿಯ ವಾದವು ಮಡಿವಂತ ಹಿಂದೂಗಳ ಕೋಪವನ್ನು ತಣಿಸಲಿಲ್ಲ. ಅನೇಕ ತಿಂಗಳುಗಳ ವರೆಗೆ ಉದ್ರಿಕ್ತ ವಾದ ವಿವಾದಗಳು ಮುಂದುವರಿದುವು. ಅಹಿಂಸಾ ಕ್ಷೇತ್ರದಿಂದ ಹಿಮ್ಮೆಟ್ಟಬೇಕೆಂದು ಅವರಿಗೆ ಹೇಳಲಾಯಿತು. ಅದಕ್ಕೆ ಅವರು ಹೀಗೆ ಹೇಳಿದರು: "ನಾನು ಅಹಿಂಸಾ ಕ್ಷೇತ್ರದಿಂದ ಅಥವಾ ಆ ಕಾರಣವಾಗಿ ಬೇರೆ ಯಾವುದೇ ಕ್ಷೇತ್ರದಿಂದ ದೂರ ಸರಿಯಬೇಕೇ ಬೇಡವೆ ಎಂಬುದು ಸಂಪೂರ್ಣವಾಗಿ ನನ್ನ ತೀರ್ಮಾನಕ್ಕೆ ಸೇರಿದುದು. ಒಬ್ಬ ವ್ಯಕ್ತಿಯು ತನ್ನ ಹಕ್ಕನ್ನು ತ್ಯಜಿಸಬಹುದು; ಆದರೆ ಗಂಭೀರವಾದ ತಪ್ಪನ್ನೆಸಗಿದ ಯಾವ ದೋಷವೂ ಇಲ್ಲದಿರುವಾಗ ಅವನು ತನ್ನ ಕರ್ತವ್ಯವನ್ನು ಬಿಟ್ಟುಕೊಡಲಾರ."

# ನವಪ್ರೇರಣೆ

## ೧೯೨೮

೧೯೨೮ನೆಯ ಇಸವಿ ದೇಶದ ಎಲ್ಲೆಡೆಗಳಲ್ಲೂ ಅತ್ಯಂತ ಹೆಚ್ಚಿನ ರಾಜಕೀಯ ಚಟುವಟಿಕೆಗಳಿಂದ ಕೂಡಿತ್ತು. ಆ ವೇಳೆಯಲ್ಲಿ ಗಾಂಧೀಜಿ ಆಶ್ರಮದ ಗೋಡೆಗಳಿಂದಾಚೆಗೆ ಕದಲಲಿಲ್ಲ. ೧೯೨೮ರ ಜನವರಿ ೧೨ರ 'ಯಂಗ್ ಇಂಡಿಯಾ'ದಲ್ಲಿ ಅವರು ತಮ್ಮ ವಿಚಾರ ವನ್ನು ಮುಂದಿಟ್ಟರು:

"ಸ್ವಾತಂತ್ರ್ಯದ ಸಂಕಲ್ಪವೆ ಲಾರ್ಡ್ ಬರ್ಕನ್ ಹೆಡ್‌ಗೆ ತಕ್ಕ ಉತ್ತರವೆಂದು ತಿಳಿಯ ಲಾಗಿದೆ. ಇದೊಂದು ತೀವ್ರ ಹೋರಾಟವಾಗುವ ಪಕ್ಷಕ್ಕೆ ಶಾಸನ ಆಯೋಗದ ನೇಮಕದ ಬಗೆಗೆ ಮತ್ತು ಆ ನೇಮಕವು ಘೋಷಿತವಾದಾಗ ಇದ್ದ ಪರಿಸ್ಥಿತಿಗಳ ಬಗೆಗೆ ನಾವು ತಯಾರಿಸಬೇಕಾದ ಉತ್ತರದ ಪೂರ್ಣ ಕಲ್ಪನೆ ನಮಗಿಲ್ಲ. ಈ ನೇಮಕಕ್ಕೆ ಒಂದು ಉತ್ತರದ ಆಗತ್ಯವಿದೆ. ಬ್ರಿಟಿಷ್ ಮಂತ್ರಿಯು, ಅವನ ಸಹೋದ್ಯೋಗಿಗಳ ಮತ್ತು ಅನುಯಾಯಿಗಳ ನಡತೆಗೆ ಅನುರೂಪವಾದ ಕ್ರಮವನ್ನು ತೆಗೆದುಕೊಳ್ಳಬೇಕೇ ಹೊರತು ಭಾಷಣಗಳು ಎಷ್ಟೇ ವೀರೋಚಿತವಾಗಿರಬಹುದಾದರೂ, ಘೋಷಣೆಗಳು ಎಷ್ಟೇ ಪ್ರತಾಪಪೂರ್ಣವಾಗಿರಬಹುದಾದರೂ ಅವು ಸೂಕ್ತ ಉತ್ತರವಾಗುವುದಿಲ್ಲ. ಒಂದು ವೇಳೆ ಕಾಂಗ್ರೆಸ್ ಯಾವ ನಿಲುವಳಿಯನ್ನೂ ಅಂಗೀಕರಿಸದೆ, ತನ್ನ ವಶದಲ್ಲಿರುವ ಸಮಸ್ತ ವಿದೇಶಿ ಬಟ್ಟೆಯನ್ನು ಸುಟ್ಟುಹಾಕಿದ್ದ ಪಕ್ಷದಲ್ಲಿ ಮತ್ತು ಇಡೀ ರಾಷ್ಟ್ರದಲ್ಲಿ ಇದೇ ಬಗೆಯ ಆಚರಣೆಯನ್ನು ಚೋದಿಸಿದ್ದ ಪಕ್ಷದಲ್ಲಿ ಆ ನೇಮಕದ ಉದ್ದೇಶಕ್ಕೆ ಸಂಪೂರ್ಣ ಯಥೋಚಿತವಲ್ಲದಿದ್ದರೂ, ತಕ್ಕ ಮಟ್ಟಿನ ಉತ್ತರವಾಗುತ್ತಿದ್ದಿತು. ಉಚ್ಚ ನ್ಯಾಯಾಧೀಶ ರಿಂದ ಹಿಡಿದು ಜವಾನರ ವರೆಗೆ ಸೈನಿಕರೂ ಒಳಪಡುವಂತೆ ಎಲ್ಲ ಸರ್ಕಾರಿ ನೌಕರರೂ ಸಂಪು ಹೂಡುವಂತೆ ಮಾಡಿದ್ದಲ್ಲಿ, ಕಾಂಗ್ರೆಸ್‌ನ ಆ ಕ್ರಮವೂ ಅತ್ಯಂತ ಉಚಿತ ಉತ್ತರ ವಾಗುತ್ತಿತ್ತು. ಯಾವ ನಿರಾತಂಕ ಚಿತ್ತಸ್ಥೈರ್ಯದಿಂದ ಬ್ರಿಟಿಷ್ ಮಂತ್ರಿಗಳು ಮತ್ತು ಅದಕ್ಕೆ ಸಂಬಂಧಪಟ್ಟವರು ನಮ್ಮೆಲ್ಲ ಸಾಹಸಗಳನ್ನು ನೋಡುತ್ತಿದ್ದರೂ ಆ ಚಿತ್ತ ಸ್ಥೈರ್ಯವನ್ನು ಕದಡುತ್ತಿತ್ತು.

"ಇದೊಂದು ಅಸಾಧ್ಯ ಧ್ಯೇಯವೆಂದೂ ಇದನ್ನು ಕಾರ್ಯರೂಪಕ್ಕೆ ತರುವುದಕ್ಕಾಗು ವುದಿಲ್ಲವೆಂದೂ ಕೆಲವರು ಹೇಳಬಹುದು. ನಾನು ಆ ಅಭಿಪ್ರಾಯವನ್ನು ಒಪ್ಪು ವುದಿಲ್ಲ. ರಾಷ್ಟ್ರವನ್ನು ದಾಸ್ಯದಲ್ಲಿ ಅದುಮಿಟ್ಟಿರುವ ಸರ್ಕಾರದ ವ್ಯವಸ್ಥೆಯನ್ನು ಸದ್ಯದಲ್ಲಿ ತಾಳಿಕೊಂಡಿರುವ ಪ್ರತಿಯೊಬ್ಬ ಭಾರತೀಯನೂ ತನ್ನ ರಾಷ್ಟ್ರವಿರೋಧಿ ಸೇವೆಯನ್ನು ತ್ಯಜಿಸುವ ಸಂತೋಷದ ದಿನಕ್ಕಾಗಿ ತಂತಮ್ಮದೇ ರೀತಿಯಲ್ಲಿ ಸಿದ್ಧವಾಗುತ್ತಿರುವುದಂತು ಖಂಡಿತ. ಕಾರ್ಯಕ್ಕೆ ಸಿದ್ಧನಲ್ಲದಾಗ ವ್ಯಕ್ತಿ ತನ್ನ ನಾಲಿಗೆಯನ್ನು ಸಂಯಮದಲ್ಲಿಟ್ಟು ಕೊಳ್ಳುವುದು ನಿಜಕ್ಕೂ ಧೈರ್ಯದ ಮತ್ತು ವಿವೇಕದ ಕೆಲಸ. ಕ್ರಿಯಾಮೂಲವಲ್ಲದ

ಬರಿಯ ಆಡಂಬರದ ಭಾಷಣ, ನಿರುಪಯುಕ್ತ ಆವಿಯನ್ನು ಹರಿಯಬಿಟ್ಟಂತಾಗುತ್ತದೆ. ೧೯೨೦ರಲ್ಲಿ ದೇಶಪ್ರೇಮಿಗಳು ತೀಕ್ಷ್ಣ ಭಾಷಣಗಳ ಕಾರಣದಿಂದ ಬಂಧನಕ್ಕೊಳಗಾದಾಗ ಅತ್ಯಂತ ಸಮರ್ಥ ಭಾಷಣವು ಕಲಿತನವನ್ನು ಹೊರಸೂಸಿತು. ಮೂಗರಿಗೆ ಮಾತು ಅಗತ್ಯ. ಗಳಹುವವರಿಗೆ ಸಂಯಮ ಅಗತ್ಯ. ಇಂಗ್ಲಿಷ್ ಅಧಿಕಾರಿಗಳು ನಮ್ಮ ಭಾಷಣವನ್ನು ಕುಚೋದ್ಯ ಮಾಡುತ್ತಾರೆ ಮತ್ತು ಆಗಾಗ್ಗೆ ತಮ್ಮ ಎಸಕಗಳ ಮೂಲಕ ನಮ್ಮ ಭಾಷಣಗಳ ಬಗೆಗಿನ ತಮ್ಮ ತಾತ್ಸಾರವನ್ನು ತೋರ್ಪಡಿಸುತ್ತಾರೆ; ಆ ಮೂಲಕ 'ಧೈರ್ಯವಿದ್ದರೆ ಕಾರ್ಯದಲ್ಲಿ ತೋರಿಸಿ' ಎಂದು ಮಾತುಗಳಿಗಿಂತಲೂ ಪರಿಣಾಮಕಾರಿಯಾಗಿ ನಮಗೆ ಮನದಟ್ಟು ಮಾಡಿಕೊಡುತ್ತಾರೆ. ಸವಾಲನ್ನು ಅಂಗೀಕರಿಸುವ ತನಕ ನಮ್ಮ ಪ್ರತಿಯೊಂದು ಬೆದರಿಕೆಯ ಮಾತು ಅಥವಾ ಸೂಚನೆ ಅವಮಾನಕರವೆನಿಸುತ್ತದೆ, ಅದರಿಂದ ನಮ್ಮ ದೌರ್ಬಲ್ಯವನ್ನು ಒಪ್ಪಿಕೊಂಡಂತಾಗುತ್ತದೆ. ಬಂಧನದಲ್ಲಿರುವ ಕೈದಿಗಳ ಪೊಳ್ಳು ಪ್ರತಿಜ್ಞೆಗಳ ಬೊಗಳಿಕೆಯನ್ನು ನಾನು ಕೇಳಿದ್ದೇನೆ. ಅದರಿಂದ ಅವರ ಜೈಲಿನ ಅಧಿಕಾರಿಗಳಿಗೆ ವಿನೋದ ಮಾತ್ರ ದೊರೆಯುತ್ತದೆ.

"ಮಿಗಿಲಾಗಿ, ಯಾರೋ ಆಂಗ್ಲ ಮಾಡಿದ ಯಾವುದೋ ಅವಮಾನಕಾರಕ ಕೃತ್ಯಕ್ಕೆ ಉತ್ತರವಾಗಿ ಸ್ವಾತಂತ್ರ್ಯವು ಹಠಾತ್ತನೆ ಒಂದು ಗುರಿಯಾಗಿ ಪರಿಣಮಿಸಿದೆಯೇನು? ಜನರನ್ನು ಸಂತೋಷಗೊಳಿಸುವ ಸಲುವಾಗಿ ಅಥವಾ ಅವರ ಕೃತ್ಯಗಳಿಗೆ ಅಸಮಾಧಾನ ಸೂಚಿಸುವ ಸಲುವಾಗಿ ಮನುಷ್ಯರು ತಮ್ಮ ಗುರಿಗಳನ್ನು ರೂಪಿಸಿಕೊಳ್ಳುವರೇನು? ಅದೊಂದು ಗುರಿಯಾಗಿರುವ ಪಕ್ಷಕ್ಕೆ ಅದನ್ನು ಸ್ಪಷ್ಟವಾಗಿ ಘೋಷಿಸಬೇಕು ಮತ್ತು ಇತರರ ಕೃತ್ಯ ಅಥವಾ ಬೆದರಿಕೆಗಳಿಗೆ ಲಕ್ಷ್ಯಕೊಡದೆ ಆ ಗುರಿಯನ್ನು ಬೆಂಬತ್ತಿ ಹೋಗಬೇಕೆಂಬುದನ್ನು ನಾನು ಒಪ್ಪುತ್ತೇನೆ.

"ಆದ್ದರಿಂದ ಸ್ವಾತಂತ್ರ್ಯದ ಅರ್ಥವೇನೆಂಬುದನ್ನು ಮೊದಲು ತಿಳಿಯೋಣ. ಇಂಗ್ಲೆಂಡ್, ರಷ್ಯ, ಸ್ಪೇಯಿನ್, ಇಟಲಿ, ಟರ್ಕಿ, ಚಿಲಿ, ಭೂತಾನ್‌ಗಳೆಲ್ಲ ತಮ್ಮ ಸ್ವಾತಂತ್ರ್ಯವನ್ನು ಗಳಿಸಿಕೊಂಡಿವೆ. ನಮಗೆ ಬೇಕಾದುದು ಎಂಥ ಸ್ವಾತಂತ್ರ್ಯ? ಈ ಪ್ರಶ್ನೆಯನ್ನು ಕೇಳಿದೆನೆಂದು ನನ್ನನ್ನು ಆಕ್ಷೇಪಿಸಬೇಡಿ. ನಾವು ಅಪೇಕ್ಷಿಸುವುದು ಭಾರತೀಯ ಸ್ವಾತಂತ್ರ್ಯವನ್ನು ಎಂದು ನನಗೆ ಹೇಳಿದಲ್ಲಿ, ಯಾರೇ ಇಬ್ಬರು ವ್ಯಕ್ತಿಗಳಾಗಲಿ ಏಕರೀತಿಯ ವಿವರಣೆಯನ್ನು ಕೊಡಲಾರರೆಂಬುದನ್ನು ತೋರಿಸುವುದು ಸಾಧ್ಯ. ವಾಸ್ತವಾಂಶವೆಂದರೆ, ನಮ್ಮ ಸುದೂರದ ಗುರಿಯನ್ನು ನಾವು ಅರಿತಿಲ್ಲ. ಆದರೆ ನಮ್ಮ ಇಚ್ಛಾಪೂರ್ವಕ ಅಥವಾ ಅನಿಚ್ಛಾಪೂರ್ವಕ ಕೃತಿಗಳಿಂದ ಅದನ್ನು ನಿರ್ಧರಿಸಬೇಕೇ ಹೊರತು ಕೇವಲ ಅರ್ಥನಿರೂಪಣೆಗಳಿಂದಲ್ಲ. ನಾವು ವಿವೇಕವಂತರಾದಲ್ಲಿ ಇಂದಿನದನ್ನು ನಾವು ನೋಡಿಕೊಳ್ಳೋಣ; ಭವಿಷ್ಯವು ತನ್ನ ಯೋಗಕ್ಷೇಮವನ್ನು ತಾನೇ ನೋಡಿಕೊಳ್ಳುತ್ತದೆ. ದೇವರು ನಮಗೆ ಕೇವಲ ಒಂದು ಪರಿಮಿತ ಕಾರ್ಯಕ್ಷೇತ್ರವನ್ನು ಮತ್ತು ಒಂದು ಪರಿಮಿತ ನೋಟವನ್ನು ಕರುಣಿಸಿದ್ದಾನೆ. ಒಳ್ಳೆಯ ದಿನಗಳು ಬರುವ ವರೆಗೆ ಅವು ಸಾಕು.

"ಸ್ವರಾಜ್ಯವು ಎಲ್ಲ ಕಾಲಕ್ಕೂ ಮತ್ತು ಎಲ್ಲರಿಗೂ ತೃಪ್ತಿಯಾಗುವಂಥ ಒಂದು

ಗುರಿಯೆಂದು ನಾನು ತಿಳಿದಿದ್ದೇನೆ. ಇಂಗ್ಲಿಷ್ ಮಾತನಾಡುವ ಅತ್ಯಲ್ಪ ಸಂಖ್ಯೆಯ ಭಾರತೀಯರೇ ಸಂಪೂರ್ಣ ಭಾರತವೆಂದು, ಇಂಗ್ಲಿಷ್ ಶಿಕ್ಷಣ ಪಡೆದ ನಾವು ಅನೇಕ ವೇಳೆ ಆಲೋಚಿಸುವ ಭಯಂಕರ ಪ್ರಮಾದವನ್ನು ಅಪ್ರಜ್ಞಾಪೂರ್ವಕವಾಗಿ ಮಾಡುತ್ತೇವೆ. ಸ್ವಾತಂತ್ರ್ಯವೆಂಬುದಕ್ಕೆ ಸಾಮಾನ್ಯ ಜನತೆಗೆ ಗ್ರಾಹ್ಯವಾಗುವ ಸಾಮಾನ್ಯ ಭಾರತೀಯ ಪದವನ್ನು ಯಾರಾದರೂ ತೋರಿಸುವುದಾದರೆ ನಾನು ಸೈ ಎನ್ನುತ್ತೇನೆ. ಮೂವತ್ತು ಕೋಟಿ ಮಂದಿಗೂ ತಿಳಿಯುವಂಥ ಒಂದು ಸ್ವದೇಶೀಯ ಪದದಿಂದ ನಮ್ಮ ಗುರಿಯೇ ನೆಂಬುದನ್ನಾದರೂ ಅವರು ಅರಿಯಬಹುದು. ಸ್ವರಾಜ್ಯವೆಂಬುದು ನಮ್ಮಲ್ಲಿರುವ ಅಂತಹುದೊಂದು ಪದ. ರಾಷ್ಟ್ರದ ಹೆಸರಿನಲ್ಲಿ ಅದನ್ನು ಮೊದಲು ಬಳಸಿದವರು ದಾದಾಭಾಯಿ ನವರೋಜಿಯವರು. ಅದು ಸ್ವಾತಂತ್ರ್ಯಕ್ಕಿಂತ ಬಹು ದೊಡ್ಡದು ಮತ್ತು ಅದನ್ನೂ ಒಳಗೊಳ್ಳುವಂತಹುದು. ಸಾವಿರಾರು ಮಂದಿ ಭಾರತೀಯರ ಉಜ್ವಲ ತ್ಯಾಗಗಳಿಂದ ಅದು ಪವಿತ್ರಗೊಂಡಿದೆ. ಭಾರತದ ಸುದೂರದ ಮೂಲೆಗಳನ್ನು ಪ್ರವೇಶಿಸ ದಿದ್ದರೂ ಆ ನುಡಿಯು ಯಾವುದೇ ಸದೃಶಪದದಂತೆ ವ್ಯಾಪಕ ಚಲಾವಣೆಯನ್ನಾದರೂ ಪಡೆದಿದೆ. ಈ ಪದದ ಸ್ಥಾನದಲ್ಲಿ ಅನಿಶ್ಚಿತ ಮೌಲ್ಯವನ್ನುಳ್ಳ ವಿದೇಶೀ ಪದವನ್ನಿಡುವುದು ದ್ರೋಹ ಬಗೆದಂತೆ. ಕಾಂಗ್ರೆಸ್ಸಿನ ನಡೆವಳಿಗಳನ್ನು ಏಕಮಾತ್ರ ಹಿಂದೂಸ್ತಾನಿಯಲ್ಲಿಯೇ ನಡಸಲು ಬಹುಶಃ ಈ ಸ್ವಾತಂತ್ರ್ಯ ನಿರ್ಣಯವೇ ಮುಖ್ಯ ಕಾರಣ. ಆಗ ಸ್ವಾತಂತ್ರ್ಯ ನಿರ್ಣಯಕ್ಕಿಂತ ದುರಂತ ಬೇರೊಂದಿರಲು ಸಾಧ್ಯವಾಗುತ್ತಿರಲಿಲ್ಲ. ಅತ್ಯಂತ ಕೆಚ್ಚಿನ ಭಾಷಣಕಾರರು ಆಗ ಸ್ವರಾಜ್ಯ ಶಬ್ದದ ದೇಶೀಯ ಅರ್ಥದ ಸೊಬಗನ್ನು ಹೆಚ್ಚಿಸುತ್ತಿದ್ದರು ಮತ್ತು ಎಲ್ಲ ಬಗೆಯ ಪ್ರಸಿದ್ಧ ಮತ್ತು ಅಪ್ರಸಿದ್ಧ ವಿವರಣೆಗಳನ್ನು ನೀಡಲು ಪ್ರಯತ್ನಿ ಸುತ್ತಿದ್ದರು. ಸ್ವಾತಂತ್ರ್ಯವಾದಿಗಳು ಅವರ ಅನುಭವದಿಂದ ಲಾಭಪಡೆದು, ಯಾರಿಗಾಗಿ ಅವರು ಸ್ವಾತಂತ್ರ್ಯವನ್ನು ಬಯಸುತ್ತಾರೊ ಆ ಸಾಮಾನ್ಯ ಜನರ ನಡುವೆ ದುಡಿಯಲು ಸಂಕಲ್ಪ ಮಾಡಿ, ಕಾಂಗ್ರೆಸ್‌ನಂಥ ಸಾಮಾನ್ಯ ಮಂದಿಯ ಸಂಸ್ಥೆಗೆ ಸಂಬಂಧಿಸಿದ ಸಭೆ ಗಳಲ್ಲಿ ಇಂಗ್ಲಿಷ್ ಭಾಷಣವನ್ನು ಸಂಪೂರ್ಣವಾಗಿ ನಿಷೇಧಿಸುತ್ತಿದ್ದರು.

"ವೈಯಕ್ತಿಕವಾಗಿ ಹೇಳುವುದಾದರೆ, ಅರ್ಥಮಾಡಿಕೊಳ್ಳಲಾಗದ 'ಸ್ವಾತಂತ್ರ್ಯ ಕ್ಕಾಗಿ' ನಾನು ಹಂಬಲಿಸುವುದಿಲ್ಲ. ಆದರೆ ಇಂಗ್ಲಿಷ್ ನೊಗದಿಂದ ಮುಕ್ತಿಯನ್ನು ನಾನು ಬಯಸುವೆ. ಅದಕ್ಕಾಗಿ ಯಾವ ತ್ಯಾಗಕ್ಕಾದರೂ ಸಿದ್ಧವಾಗಿದ್ದೇನೆ. ಅದು ದೊರಕು ವುದಾದಲ್ಲಿ ಅವ್ಯವಸ್ಥೆಯನ್ನಾದರೂ ಸ್ವಾಗತಿಸುತ್ತೇನೆ. ಏಕೆಂದರೆ ಇಂಗ್ಲಿಷ್‌ಶಾಂತಿ ಯೆಂಬುದು ಸ್ಮಶಾನ ಶಾಂತಿಯಿದ್ದಂತೆ. ಸಮಸ್ತ ಜನತೆಯ ಈ ಬಗೆಯ ಜೀವಂತ ಮರಣಕ್ಕಿಂತ ಬೇರೆ ಯಾವುದಾದರೂ ಉತ್ತಮ. ಈ ಸೈತಾನೀ ಆಳ್ವಿಕೆಯು ಬಹುಮಟ್ಟಿಗೆ ಭೌತಿಕವಾಗಿ, ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಈ ಚೆಲುವು ನಾಡನ್ನು ಪಾಳು ಕೆಡವಿದೆ. ಇದರ ನ್ಯಾಯಾಲಯಗಳು ನ್ಯಾಯವನ್ನು ನಿರಾಕರಿಸಿ, ಸತ್ಯವನ್ನು ಕೊಲೆಗೈಯು ತ್ತಿರುವುದನ್ನು ನಿತ್ಯವೂ ನೋಡುತ್ತಿದ್ದೇನೆ. ಭಯಭೀತ ಒರಿಸ್ಸಾದಿಂದ ಈಗ ತಾನೆ ನಾನು ಬಂದಿದ್ದೇನೆ. ತನ್ನ ಪಾಪಪೂರ್ಣ ಉಳಿವಿಗಾಗಿ ಈ ಆಳ್ವಿಕೆಯು ನನ್ನ ದೇಶದ

ಜನರನ್ನೆ ಬಳಸಿಕೊಳ್ಳುತ್ತಿದೆ. ಖುರ್ದಾ ಜಿಲ್ಲೆಗಳಲ್ಲಿ ತೆರಿಗೆಯ ಏರಿಕೆಯ ಸಲ್ಲಿಕೆಗಳನ್ನು ಬಹುಮಟ್ಟಿಗೆ ಬಲಪ್ರಯೋಗದ ಮೂಲಕ ಜನರಿಂದ ಪಡೆಯಲಾಗುತ್ತಿದೆಯೆಂದು ಆಣೆಯಿಟ್ಟು ಹೇಳುವ ಅನೇಕ ಪ್ರಮಾಣ ಪತ್ರಗಳು ನನ್ನಲ್ಲಿವೆ. ಈ ಆಳ್ವಿಕೆಯ ಅಸಮಾನ ಅತಿವರ್ತನೆಯು ರಾಜಮಹಾರಾಜರುಗಳಿಗೆ ಹುಚ್ಚು ಹಿಡಿಸಿದೆ. ಪರಿಸ್ಥಿತಿಗಳನ್ನು ಅರಿಯದೆಯೆ ಇವರು ಅದನ್ನನುಕರಿಸುತ್ತಾ ತಮ್ಮ ಪ್ರಜೆಗಳನ್ನು ಪೀಡಿಸುತ್ತಿದ್ದಾರೆ. ತನ್ನ ಅನೀತಿಯುತ ವ್ಯವಹಾರವನ್ನು ರಕ್ಷಿಸುವಲ್ಲಿ ಈ ಆಳ್ವಿಕೆಗೆ ಯಾವ ಮಾರ್ಗವೂ ಕೀಳಲ್ಲ. ಹತ್ತು ಲಕ್ಷ ಮಂದಿ ಮುವತ್ತು ಕೋಟಿ ಜನರ ಮೇಲೆ ಹಿಡಿತವಿಟ್ಟುಕೊಳ್ಳುವ ಸಲುವಾಗಿ, ಲಕ್ಷಾಂತರ ಮಂದಿಯನ್ನು ಅರೆಹೊಟ್ಟೆಯಲ್ಲಿ ಕೆಡವಿ, ಸಾವಿರಾರು ಬಾಯಿಗಳನ್ನು ಮಾದಕ ಪಾನೀಯಗಳಿಂದ ಹೊಲೆಗೊಳಿಸಿರುವ ಸೇನಾವೆಚ್ಚವನ್ನು ತುಂಬುತ್ತಿದೆ.

"ಆದರೆ ಎಂಥ ಪರಿಸ್ಥಿತಿಯಲ್ಲೂ ಅಹಿಂಸೆಯೇ ನನ್ನ ಧರ್ಮ. ನನ್ನ ವಿಧಾನವು ಪರಿವರ್ತನೆಯದೇ ಹೊರತು ಬಲಾತ್ಕಾರದ್ದಲ್ಲ. ಅದು ಆತ್ಮದಂಡನೆಯೇ ಹೊರತು ನಿರಂಕುಶ ದೊರೆಯ ಸಂಕಟವಲ್ಲ. ಈ ಮಾರ್ಗ ದೋಷಾತೀತವೆಂಬುದು ನನಗೆ ತಿಳಿದಿದೆ. ತನ್ನ ಧರ್ಮವೆಂದು ಅದನ್ನು ಸ್ವೀಕರಿಸದೆಯೆ ಮತ್ತು ಅದರ ತತ್ವವನ್ನರಿಯದೆಯೆ ಇಡೀ ಜನತೆ ಆದನ್ನು ಅನುಸರಿಸಬಹುದು. ಸಾಮಾನ್ಯವಾಗಿ ಜನ ತಮ್ಮೆಲ್ಲ ಕೃತ್ಯಗಳ ಹಿಂದಿರುವ ತತ್ವವನ್ನು ಅರಿತಿರುವುದಿಲ್ಲ. ನನ್ನದು ಸ್ವಾತಂತ್ರ್ಯಕ್ಕಿಂತ ಬಹು ಉನ್ನತವಾದ ಆಕಾಂಕ್ಷೆ. ಭಾರತದ ಬಿಡುಗಡೆಯ ಮೂಲಕ, ದುರ್ಬಲವೆಂದು ಹೇಳಲಾಗುವ ಪ್ರಪಂಚದ ಜನಾಂಗಗಳನ್ನು ಪಾಶ್ಚಾತ್ಯ ರಾಷ್ಟ್ರಗಳ ಶೋಷಣೆಯ ದಬ್ಬಾಳಿಕೆಯಿಂದ–ಅದರಲ್ಲಿ ಇಂಗ್ಲೆಂಡಿನ ಪಾಲು ಬಹುದೊಡ್ಡದು–ಉದ್ಧಾರಮಾಡಲು ಪ್ರಯತ್ನಿಸುತ್ತೇನೆ. ಭಾರತವು ಇಂಗ್ಲಿಷ್ ಜನರನ್ನು ಪರಿವರ್ತಿಸಿದಲ್ಲಿ–ಅದು ಪರಿವರ್ತಿಸಬಲ್ಲದು–ವಿಶ್ವದ ಪ್ರಜಾ ಪ್ರಭುತ್ವ ಕೂಟದಲ್ಲಿ ಅದು ಪ್ರಬಲವಾದ ಸಹಭಾಗಿಯಾಗಬಲ್ಲುದು. ಇಂಗ್ಲೆಂಡೂ ಸಹ ಇಚ್ಛಿಪಟ್ಟಲ್ಲಿ ಅದರಲ್ಲಿ ಪಾಲುಗೊಳ್ಳುವ ಸದವಕಾಶವನ್ನು ಪಡೆಯಬಹುದು. ತನ್ನ ಜನಸಂಖ್ಯಾ ಪ್ರಮಾಣದಿಂದ, ಭೌಗೋಳಿಕ ಸ್ಥಾನದಿಂದ ಮತ್ತು ಯುಗಯುಗಾಂತರಗಳ ಸಾಂಸ್ಕೃತಿಕ ಪರಂಪರೆಯಿಂದ ಭಾರತಿಯು ಪ್ರಬಲ ಪಾಲುದಾರಳಾಗುವ ಹಕ್ಕನ್ನು ಪಡೆದಿದ್ದಾಳೆ. ಆದರೆ ಅದನ್ನದು ಅರಿತುಕೊಳ್ಳಬೇಕಷ್ಟೆ. ಇದು ತುಂಬ ದೊಡ್ಡ ಮಾತಾಯಿತೆಂದು ನನಗೆ ಗೊತ್ತು. ದುರ್ದೆಶೆಯಲ್ಲಿರುವ ಭಾರತವು ಜಗತ್ತನ್ನೇ ಅಲುಗಾಡಿಸಲು ಮತ್ತು ದುರ್ಬಲ ಜನಾಂಗಗಳನ್ನು ರಕ್ಷಿಸಲು ಬಯಸುವುದು ತುಂಬಾ ಅಧಿಕ ಪ್ರಸಂಗಿತನವೆಂಬಂತೆ ತೋರುತ್ತದೆ. ಈ ಸ್ವಾತಂತ್ರ್ಯದ ಕೂಗಿಗೆ ನನ್ನ ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸುವಲ್ಲಿ ನಿದರ್ಶನವನ್ನು ಸ್ಥಾಪಿಸಬೇಕೆಂದಿದ್ದೇನೆ. ಬದುಕುವುದಕ್ಕಾಗಲಿ ಪ್ರಾಣ ತೆರುವುದಕ್ಕಾಗಲಿ ಅರ್ಹವಾದ ಒಂದು ಮಹಾಕಾಂಕ್ಷೆ ನನ್ನದು. ಫಲಿತಾಂಶ ಭಯದಿಂದ ಯಾವ ಸಂದರ್ಭದಲ್ಲೇ ಆಗಲಿ ಶ್ರೇಷ್ಠವಾದುದಕ್ಕಿಂತ ಕನಿಷ್ಠದೊಂದಿಗೆ ನಾನು ರಾಜಿಯಾಗಲಾರೆ. ಆದ್ದರಿಂದ ಸ್ವಾತಂತ್ರ್ಯ ಧ್ಯೇಯವನ್ನು ನಾನು ವಿರೋಧಿಸುವುದು ಸ್ವಾನುಕೂಲ ದೃಷ್ಟಿಯಿಂದಲ್ಲ. ಭಾರತವು ಸಂಪೂರ್ಣ ಸ್ವಾವಲಂಬಿಯಾಗಬೇಕೆನ್ನುವುದೇ

ನನ್ನ ಇಚ್ಛೆ. ಮತ್ತು ಆ ಸ್ವರಾಜ್ಯವೆಂಬ ಪದವನ್ನು ಬಿಟ್ಟರೆ ಬೇರೆ ಯಾವುದೇ ಬಿಡಿ ನುಡಿಯೂ ಈ ಸ್ಥಿತಿಯನ್ನು ಸ್ಪಷ್ಟಪಡಿಸಲಾರದು. ಆಯಾಯ ಕ್ಷಣದಲ್ಲಿ ರಾಷ್ಟ್ರವು ಕೈಗೊಳ್ಳುವ ಕ್ರಿಯೆಯೊಂದಿಗೆ ಅದರ ತಾತ್ಪರ್ಯವೂ ವ್ಯತ್ಯಾಸ ಹೊಂದುತ್ತದೆ. ಭಾರತವು ಸ್ವಾವಲಂಬಿಯಾಗುವುದೆಂದರೆ ಪ್ರತಿಯೊಂದು ರಾಷ್ಟ್ರವೂ ಅದೇ ಹಾದಿಯಲ್ಲಿ ಸಾಗುತ್ತಿದೆಯೆಂದರ್ಥ."

ಒಂದು ಹೊಸ ಪ್ರೇರಣೆ ಜನರನ್ನು ಮುನ್ನಡೆಸುತ್ತಿದ್ದಂತೆ ಕಂಡುಬರುತ್ತಿತ್ತು. ಮಾರ್ಚಿಯಲ್ಲಿ ಗಾಂಧೀಜಿಯ ಮೇಲೆ ಹೊರಿಸಿದ್ದ ಆರು ವರ್ಷಗಳ ಶಿಕ್ಷೆಯೂ ಕೊನೆಗೊಂಡಿತು. ೧೯೨೪ರಲ್ಲಿ ಅನಾರೋಗ್ಯದ ಕಾರಣ ಅವರು ಮುಂದಾಗಿಯೇ ಬಿಡುಗಡೆ ಪಡೆದ ವೇಳೆಯಲ್ಲಿ ಆರು ವರ್ಷಗಳಲ್ಲಿ ಉಳಿದ ಭಾಗ ಕಳೆಯುವವರೆಗೂ ರಾಜಕೀಯದಲ್ಲಿ ಅವರು ಸಕ್ರಿಯ ಪಾತ್ರ ವಹಿಸಬಾರದೆಂದು ಸೆರೆಯಲ್ಲಿದ್ದಾಗ ಅವರು ಅಂದುಕೊಂಡಿದ್ದರು. ಈಗ ಮತ್ತೆ ಸ್ವತಂತ್ರರಾಗಿದ್ದರು ಮತ್ತು ಅವರ ಪುನರೋದಯದ ಕಾಲ ಹತ್ತಿರವಾಗುತ್ತಿತ್ತು.

ಬಾರ್ಡೋಲಿಯಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದ ಇಬ್ಬರು ಸೋದರರಾದ ಕಲ್ಯಾಣ್‌ಜೀ ಮತ್ತು ಕುನ್ವರ್ಜೀ ಇವರು ವಲ್ಲಭಭಾಯಿ ಪಟೇಲರ ಕೋರಿಕೆಯ ಮೇರೆಗೆ ಒಂದು ದಿನ ಸಬರ್ಮತಿ ಆಶ್ರಮಕ್ಕೆ ಹೋದರು. ಅವರು ಗಾಂಧೀಜಿಯನ್ನು ಸಂಧಿಸಿದರಲ್ಲದೆ ವಾರದ ಉಪನ್ಯಾಸಕ್ಕಾಗಿ ಗುಜರಾತಿನ ವಿದ್ಯಾಪೀಠಕ್ಕೆ ಹೋಗುತ್ತಿದ್ದ ಗಾಂಧೀಜಿಯೊಡನೆ ಅವರೂ ಹೊರಟರು. ಕಲ್ಯಾಣ್‌ಜೀ ಮಾತಿಗಾರಂಭಿಸಿ, ಏರಿಸಿದ ಕಂದಾಯದ ಹೆಚ್ಚುವರಿಯನ್ನು ನೀಡಲು ನಿರಾಕರಿಸುವ ಸಲುವಾಗಿ ಬಾರ್ಡೋಲಿಯಲ್ಲಿ ನಡೆಯುತ್ತಿದ್ದ ಸಿದ್ಧತೆಯನ್ನು ಕುರಿತು ವಿವರಿಸಿದರು.

ಗಾಂಧೀಜಿ: ಅದು ನನಗೆ ಸ್ಪಷ್ಟವಾಗಿ ತಿಳಿಯುತ್ತಿಲ್ಲ.

ಕಲ್ಯಾಣ್‌ಜೀ: ಕಂದಾಯವನ್ನು ಶೇ. ೨೨ರಷ್ಟು ಏರಿಸಲಾಗಿದೆ. ಹಿಂದೆ ಇದ್ದ ಕಂದಾಯದ ಮೊತ್ತವನ್ನು ತಾವು ನೀಡಲಿಚ್ಛಿಸುವುದಾಗಿಯೂ, ಶೇ. ೨೨ರಷ್ಟು ಏರಿಕೆಯನ್ನು ನೀಡಲು ನಿರಾಕರಿಸುವುದಾಗಿಯೂ ಜನ ಹೇಳುತ್ತಾರೆ.

ಗಾಂಧೀಜಿ: ಅದು ಅತ್ಯಂತ ಅಪಾಯಕರ. ನಿಮ್ಮ ಹಣದ ನೆರವಿನಿಂದಲೇ ಸರ್ಕಾರ ನಿಮ್ಮೊಡನೆ ಹೋರಾಟ ನಡೆಸುತ್ತದೆ. ಮತ್ತು ಕ್ಷಣಾರ್ಧದಲ್ಲಿ ಏರಿಕೆಯ ಮೊತ್ತವನ್ನು ವಸೂಲು ಮಾಡುತ್ತದೆ. ಏರಿಕೆಯನ್ನು ರದ್ದು ಮಾಡುವ ವರೆಗೆ ಯಾವ ಕಂದಾಯವನ್ನೂ ಕಟ್ಟಲಾಗದು ಮತ್ತು 'ಏರಿಕೆಯ ರದ್ದತಿಯನ್ನು ಘೋಷಿಸಿ ಅನಂತರ ಹಿಂದಿನ ಕಂದಾಯವನ್ನು ತೆಗೆದುಕೊಳ್ಳಿ' ಎಂದು ನೀವು ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಬೇಕು. ಈ ಮನೋಭಾವವನ್ನು ತಳೆಯಲು ಜನ ಸಿದ್ಧರಾಗಿದ್ದಾರೇನು?

ಕಲ್ಯಾಣ್‌ಜೀ: ಬಾರ್ಡೋಲಿ ಅಥವಾ ವಲೊಡ್‌ನಂಥ ದೊಡ್ಡ ಸ್ಥಳಗಳ ಬಗೆಗೆ ನನಗೆ ಸಂಪೂರ್ಣ ಖಾತ್ರಿಯಿಲ್ಲ. ಕಾರಣ, ಸರ್ಕಾರವು ತಮ್ಮ ಭೂಮಿಯನ್ನು ಕಿತ್ತು

ಕೊಂಡು ಹಿಂದಿನ ಹಿಡುವಳಿದಾರರಾದ ರಾಣಿಪರಾಜ್ ಜನರಿಗೆ ವರ್ಗಾಯಿಸ ಬಹುದೆಂದು ಈ ಸ್ಥಳಗಳಲ್ಲಿರುವ ಬನಿಯಾಗಳು ಭಯಪಡುವುದು ಸ್ವಾಭಾವಿಕ. ಆದರೆ ಇತರ ಹಳ್ಳಿಗಳು ದೃಢವಾಗಿ ನಿಂತಿವೆ.

ಗಾಂಧೀಜಿ: ಆದರೆ ಅವರ ವಾದ ನ್ಯಾಯಯುತವಾಗಿದೆಯೇ? ಅವರ ಮೊಕದ್ದಮೆ ಆಕ್ಷೇಪದೂರವಾಗಿದೆಯೇ?

ಕಲ್ಯಾಣ್‌ಜಿ: ಖಂಡಿತವಾಗಿ. ನರಹರಿಭಾಯಿ ತಮ್ಮ ಲೇಖನಗಳಲ್ಲಿ ಅದನ್ನು ಸ್ಪಷ್ಟಪಡಿಸಿದ್ದಾರೆ.

ಗಾಂಧೀಜಿ: ನನಗದು ತಿಳಿಯದು. ಆ ಲೇಖನಗಳನ್ನು ಗಮನವಿಟ್ಟು ನಾನು ಓದಿಲ್ಲ. ಆದರೆ ಇಡೀ ದೇಶದ ಬೆಂಬಲ ನಿಮಗಿರಬೇಕೆಂಬುದನ್ನು ನೆನಪಿಡಿ. ಮತ್ತು ನಿಮ್ಮ ಉದ್ದೇಶವು ಸಂಪೂರ್ಣ ನ್ಯಾಯಯುತವಾಗಿರಬೇಕೆಂಬುದು ಮೊದಲನೆಯ ನಿಯಮ. ಅನಂತರ ಮತ್ತೊಂದು ವಿಷಯವಿದೆ. ಜನರು ಹೋರಾಟಕ್ಕೆ ಸಿದ್ಧರಾಗಿರ ಬಹುದು. ಆದರೆ ಸತ್ಯಾಗ್ರಹದ ಪರಿಣಾಮಗಳನ್ನು ಅವರು ಅರಿತಿರುವರೇನು? ಒಂದು ವೇಳೆ ನೀವೂ ಸೇರಿದಂತೆ, ವಲ್ಲಭಭಾಯಿಯನ್ನು ಅವರಿಂದ ದೂರ ಮಾಡಿದರೆ, ಅವರು ಒಗ್ಗಟ್ಟಾಗಿ ನಿಲ್ಲುವರೇನು?

ಕಲ್ಯಾಣ್‌ಜೀ: ಅದನ್ನು ಹೇಳುವುದು ನನಗಳವಲ್ಲ.

ಗಾಂಧೀಜಿ: ಒಳ್ಳೆಯದು, ನೀವು ಮೊದಲು ಅದನ್ನು ಗೊತ್ತುಮಾಡಿಕೊಳ್ಳಬೇಕು. ಆದರೆ ವಲ್ಲಭಭಾಯಿ ಏನು ಹೇಳುತ್ತಾರೆ.?

ವಲ್ಲಭಭಾಯಿ ಆಗತಾನೇ ಅಲ್ಲಿಗೆ ಆಗಮಿಸಿದ್ದರು. ತಾವು ಪರಿಸ್ಥಿತಿಯನ್ನು ಅಧ್ಯಯನ ಮಾಡಿರುವುದಾಗಿಯೂ ಮತ್ತು ಉದ್ದೇಶವು ನ್ಯಾಯಯುತವಾಗಿರುವು ವುದಾಗಿಯೂ ಅವರು ಹೇಳಿದರು. "ಸರಿ, ಹಾಗಾದರೆ ಇನ್ನು ಆಲೋಚಿಸಬೇಕಾದ್ದೇನಿಲ್ಲ; ಗುಜರಾತಿಗೆ ಜಯವಾಗಲಿ" ಎಂದರು ಗಾಂಧೀಜಿ.

ಇಡೀ ಬಾರ್ಡೋಲಿ ತಾಲ್ಲೂಕಿನಲ್ಲಿ ೨೫೦ ಸ್ವಯಂಸೇವಕರ ನೇತೃತ್ವದಲ್ಲಿ ಹದಿನಾರು ಶಿಬಿರಗಳನ್ನು ವಲ್ಲಭಭಾಯಿ ವ್ಯವಸ್ಥೆಗೊಳಿಸಿದ್ದರು. ಫೆಬ್ರುವರಿ ೧೨ರಂದು ಬಾರ್ಡೋಲಿಯ ರೈತರ ಪ್ರಾತಿನಿಧಿಕ ಸಭೆಯೊಂದು ಜರುಗಿತು. ಸರ್ಕಾರವು ಹಿಂದಿನ ಕಂದಾಯದ ಮೊತ್ತವನ್ನೇ ತಮಗೆ ಸಲ್ಲಬೇಕಾದ ಪೂರ್ಣಭಾಗವೆಂದು ಸ್ವೀಕರಿಸಲು ಸಿದ್ಧವಾಗುವ ವರೆಗೆ ಅಥವಾ ಆ ಕೂಡಲೆ ತನಿಖೆಯ ಮೂಲಕ ಪರಿಷ್ಕರಣದ ಪ್ರಶ್ನೆಯನ್ನು ತೀರ್ಮಾನಿ ಸಲು ಒಂದು ನಿಷ್ಪಕ್ಷಪಾತ ನ್ಯಾಯಮಂಡಲಿಯನ್ನು ಸರ್ಕಾರವು ನೇಮಿಸುವ ವರೆಗೆ ಭೂಹಿಡುವಳಿದಾರರು ಪರಿಷ್ಕೃತ ಮೊತ್ತವನ್ನು ನೀಡಲು ನಿರಾಕರಿಸಬೇಕೆಂದು ಆ ಸಭೆ ಕರೆ ನೀಡಿತು. ಅಹಿಂಸೆಯನ್ನು ಕೈಬಿಡುವುದಿಲ್ಲವೆಂಬುದಾಗಿ ಮತ್ತು ಕಟ್ಟಕಡೆಯ ವರೆಗೆ ಕಷ್ಟವನ್ನು ನಗು ನಗುತ್ತಾ ಎದುರಿಸುವುದಾಗಿ ರೈತರು ಪ್ರತಿಜ್ಞೆಕೈಗೊಂಡರು.

ವಲ್ಲಭಭಾಯಿ ಒಬ್ಬ ಸಮರ್ಥ ಮುಖಂಡರಾಗಿದ್ದರು. ರೈತರು ಅವರನ್ನು ಆರಾಧಿಸಿದರು, ಮತ್ತು ಸ್ವಯಂಪ್ರೇರಣೆಯಿಂದ ಅವರನ್ನು 'ಸರ್ದಾರ್' ಎಂದು ಕರೆದರು. ಪ್ರತಿಯಾಗಿ, ವಲ್ಲಭಭಾಯಿಯವರು, ಸತ್ಯಾಗ್ರಹದ ಆಯುಧವನ್ನು ಪ್ರಯೋಗಿಸುತ್ತಿದ್ದುದರಿಂದ "ಸಬರ್ಮತಿಯ ಮನುಷ್ಯನಿಗೆ ತಾವು ಜವಾಬ್ದಾರರೆಂದು" ವಿನೀತರಾಗಿ ಹೇಳಿಕೊಂಡರು. ಹೋರಾಟದಲ್ಲಿ ಗಾಂಧೀಜಿ ತೀವ್ರಾಸಕ್ತಿಯನು ವಹಿಸಿದರಲ್ಲದೆ, ಮಹದೇವ ದೇಸಾಯಿಯವರು ಬರೆದ ಉಜ್ವಲ ಲೇಖನಗಳಿಂದ ಮತ್ತು ಸ್ಪಷ್ಟ ವಿವರಣೆಗಳಿಂದ 'ಯಂಗ್ ಇಂಡಿಯ'ದ ಅಂಕಣಗಳನ್ನು ತುಂಬಿದರು. ಬೇಸಾಯಗಾರನ ಮಗನಾದ ವಲ್ಲಭಭಾಯಿ, ರೈತರನ್ನು ಕುರಿತು ಅವರ ನುಡಿಗಟ್ಟುಗಳಲ್ಲೇ ಮಾತನಾಡಿದರು ಮತ್ತು ನಿರಾಯಾಸವಾಗಿ ನಿರ್ಭಯವಾಗಿ ಅವರೊಡನೆ ಬೆರೆತರು. ಇದನ್ನೆಲ್ಲ ದೂರದಿಂದಲೆ ಗಮನಿಸುತ್ತಾ ಗಾಂಧೀಜಿ "ವಲ್ಲಭಭಾಯಿ ತಮ್ಮ ದೈವವಾದ ವಲ್ಲಭನನ್ನು ಬಾರ್ಡೋಲಿಯಲ್ಲಿ ಸಾಕ್ಷಾತ್ಕರಿಸಿಕೊಂಡರು"ಎಂದು ಹೇಳಿದರು.

ಸರ್ಕಾರವು ಜನರನ್ನು ಬೆದರಿಸಲು ಸರ್ವ ಪ್ರಯತ್ನವನ್ನು ಮಾಡಿತು; ಬಲಿಷ್ಠ ಪಠಾಣರನ್ನು ಕರೆಸಿತು. ಅವರು ಚರ ಆಸ್ತಿಯನ್ನೆಲ್ಲ ವಶಪಡಿಸಿಕೊಂಡು ಮಾರಾಟ ಮಾಡಿದರು. ಎಮ್ಮೆಗಳನ್ನು ಹೊಡೆದುಕೊಂಡು ಹೋದರು; ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡರು; ಮತ್ತು ಜಿಲ್ಲೆಗೆ ದೊರೆಯುತ್ತಿದ್ದ ಇಡೀ ಕಂದಾಯದ ಅನೇಕ ಪಟ್ಟು ಹೆಚ್ಚಿನ ಮೌಲ್ಯಕ್ಕೆ ಯೋಗ್ಯವಾದ ಭೂಪ್ರದೇಶಗಳನ್ನು ಅಸಂಬದ್ಧ ಬೆಲೆಗಳಿಗೆ ಹರಾಜು ಮಾಡಿದರು. ವಲ್ಲಭಭಾಯಿ ರೈತರಿಗೆ ಧೈರ್ಯ ನೀಡಿದರು: "ನಿಮ್ಮ ಜಮೀನನ್ನು ತಾಕತ್ತಿದ್ದಲ್ಲಿ ಇಂಗ್ಲೆಂಡಿಗೆ ತೆಗೆದುಕೊಂಡು ಹೋಗಿರೆಂದು ಸರ್ಕಾರಕ್ಕೆ ಸವಾಲು ಹಾಕಿ." ರೈತರು ತಮ್ಮ ಜಮೀನುಗಳನ್ನು ಬಿಟ್ಟುಕೊಡದೆ ಮುಂಚಿನಂತೆಯೆ ಬೆಳೆಬಿತ್ತಬೇಕೆಂದು ವಲ್ಲಭಭಾಯಿಯವರು ಅವರಿಗೆ ಸೂಚನೆಯಿತ್ತರು. ಮುಟ್ಟುಗೋಲು ಹಾಕಿಕೊಂಡಿದ್ದ ಜಮೀನುಗಳಿಂದ ಅವರನ್ನು ಹೊರದೂಡಲು ಯಾರೂ ಬರಲಿಲ್ಲ. ಆದರೆ ೮೭,೦೦೦ ಜನರ ನಡುವೆ ಕೆಲಸಮಾಡಲು ನಿಯಮಿತರಾಗಿದ್ದ ೨೫೦ ಮಂದಿ ಸ್ವಯಂಸೇವಕರನ್ನು ಅಸಂಬದ್ಧ ಆಪಾದನೆಗಳ ಮೇಲೆ ಬಂಧಿಸಲಾಯಿತು. ಜಿಲ್ಲಾ ಮುಖ್ಯಾಧಿಕಾರಿಯ ಮನೆಯ ಮೇಲೆ ನಿಗಾ ಇಡುತ್ತಾ, ಸಾರ್ವಜನಿಕ ರಸ್ತೆಗಳಲ್ಲಿ ಕುಳಿತಿದ್ದುದಾಗಿ ಮತ್ತು ಅಂಥದೇ ಅಪರಾಧಗಳಿಗಾಗಿ ಅವರನ್ನು ದೀರ್ಘಾವಧಿ ಶಿಕ್ಷೆಗೆ ಗುರಿಪಡಿಸಲಾಯಿತು.

ವಿಧಾನ ಪರಿಷತ್ತಿನ ಏಳು ಮಂದಿ ಸದಸ್ಯರು ಮತ್ತು ಬಾರ್ಡೋಲಿಯ ಅರವತ್ತುಮೂರು ಜನ ಪಟೇಲರು ಹಾಗೂ ಹನ್ನೊಂದು ಮಂದಿ ತಲಾಟಿಗಳು ಸರ್ಕಾರದ ಈ ದಮನ ನೀತಿಯ ಪ್ರತಿಭಟನಾರ್ಥವಾಗಿ ರಾಜೀನಾಮೆ ನೀಡಿದರು. ಗುಜರಾತಿನ ಪ್ರತಿನಿಧಿಯೂ, ವಿಧಾನಸಭೆಯ ಅಧ್ಯಕ್ಷರೂ ಆದ ವಿಠಲಭಾಯಿ ಪಟೇಲರು ಮಧ್ಯಪ್ರವೇಶಿಸುವಂತೆ ವೈಸ್‌ರಾಯರನ್ನು ಕೇಳಿಕೊಂಡರು ಮತ್ತು ಬಾರ್ಡೋಲಿ ಚಳುವಳಿಗಾಗಿ ತಿಂಗಳಿಗೆ ಸಾವಿರ ರೂಪಾಯಿಗಳಂತೆ ಬಹಿರಂಗವಾಗಿ ನೀಡಿದರು.

ಬೊಂಬಾಯಿ ಸರ್ಕಾರ ಜುಲೈ ೨೩ರಂದು ಅಂತಿಮ ತೀರ್ಮಾನವನ್ನು ಹೊರ ಗೆಡಹಿತು. ಆಂಗ್ಲ ಸರ್ಕಾರದ ಭಾರತೀಯ ವ್ಯವಹಾರಗಳ ಕಾರ್ಯದರ್ಶಿ ಅದೇ ವೇಳೆ ಯಲ್ಲಿ ನೀಡಿದ ಹೇಳಿಕೆಯೆ ಆ ತೀರ್ಮಾನದ ಮೂಲವಾಗಿತ್ತೆಂದು ಸ್ಪಷ್ಟವಾಗಿ ತೋರು ತ್ತಿತ್ತು. "ಬೊಂಬಾಯಿ ವಿಧಾನ ಪರಿಷತ್ತಿನಲ್ಲಿ ಸರ್ ಲೆಸ್ಲಿ ವಿಲ್ಸನರು ಬಾರ್ಡೋಲಿಯ ಬಗ್ಗೆ ಸೂಚಿಸಿದ ಷರತ್ತುಗಳಿಗೆ ಮಣಿಯದಿದ್ದಲ್ಲಿ ಕಾನೂನು ಪಾಲನೆಗಾಗಿ ಹಾಗೂ ಚಳುವಳಿಯ ದಮನಕ್ಕಾಗಿ ಬೊಂಬಾಯಿ ಸರ್ಕಾರವು ಭಾರತ ಸರ್ಕಾರದ ಸಂಪೂರ್ಣ ಸಹಾಯವನ್ನು ಪಡೆಯುತ್ತದೆ. ಸಕಾರಣವಾದ ಕುಂದುಕೊರತೆಗಳನ್ನು ಮುಂದಿಡುವ ಬದಲು ಸರ್ಕಾರದ ಮೇಲೆ ಒತ್ತಡ ತಂದು ಹಿಂಸೆ ಕೊಡುವುದೇ ಚಳುವಳಿಯ ಉದ್ದೇಶ ವೆಂದು ಬೀದಿಗೆಳೆಯಬೇಕಾದೀತು."

ಒಡನೆಯೆ ಹೊಸ ಕಂದಾಯ ಖಜಾನೆಗೆ ಪಾವತಿಯಾಗಬೇಕೆಂದು ಸರ್ಕಾರದ ಅಂತಿಮ ತೀರ್ಮಾನ ಜಾರಿಯಾಯಿತು. ವಿವಾದಕ್ಕೊಳಗಾದ ವಿಷಯ ಮತ್ತು ಅಂಕಿ ಅಂಶಗಳನ್ನು ಮಾತ್ರ ಕುರಿತು ಕಂದಾಯದ ಅಧಿಕಾರಿಯು ವಿಚಾರಣೆ ಕೈಗೊಳ್ಳುತ್ತಾ ನೆಂದೂ ಅದು ಸೂಚಿಸಿತು. ಸತ್ಯಾಗ್ರಹಿ ಸೆರೆಯಾಳುಗಳ ಬಿಡುಗಡೆಗಾಗಿ, ಮಾರಲ್ಪಟ್ಟ ಮತ್ತು ಮುಟ್ಟುಗೋಲು ಹಾಕಿಕೊಂಡ ಜಮೀನುಗಳ ಪುನರ್‌ಸ್ವಾಧೀನಕ್ಕಾಗಿ, ವಶ ಪಡಿಸಿಕೊಂಡ ಚರ ಆಸ್ತಿಯ ಚಾಲ್ತಿ ಬೆಲೆಯ ವಾಪಸಾತಿಗಾಗಿ ಮತ್ತು ಎಲ್ಲ ಶಿಕ್ಷೆ ಮತ್ತು ವಜಾಗಳ ಮಾಫಿಗಾಗಿ ವಲ್ಲಭಭಾಯಿಯವರು ಒತ್ತಾಯ ಮಾಡಿದರು. ಇವುಗಳೆಲ್ಲ ಈಡೇರಿದಲ್ಲಿ ತಾವು ಅಧಿಕೃತ ವಿಚಾರಣೆಗೂ ಸಿದ್ಧವಿರುವುದಾಗಿ ಪಟೇಲರು ತಿಳಿಸಿದರು. ಆದರೆ ಅವರ ಪ್ರಕಾರ ಆ ವಿಚಾರಣೆ ಬಹಿರಂಗವೂ, ನಿಷ್ಪಕ್ಷಪಾತವೂ ಆಗಿರಬೇಕಾಗಿದ್ದಿ ತಲ್ಲದೆ ಜನರೂ ಹಾಜರಿರಬಹುದಾದಂಥ ನ್ಯಾಯಾಸ್ಥಾನದ ಸ್ವರೂಪದ್ದಾಗಿರಬೇಕಾಗಿತ್ತು. ಅಂತಹ ವಿಚಾರಣೆ ನಡಸುವುದಾಗಿ ಪ್ರಕಟಿಸಿದ್ದಾದರೆ ಚಳುವಳಿಯನ್ನು ಹಿಂತೆಗೆದು ಕೊಳ್ಳುವುದಾಗಿ ಮತ್ತು ವಿಚಾರಣೆಯಾಗುವುದರೊಳಗೆ ಹಳೆಯ ಕಂದಾಯವನ್ನು ಕಟ್ಟು ವುದಾಗಿ ಗಾಂಧೀಜಿ ಮತ್ತು ಸರ್ದಾರರಿಬ್ಬರೂ ಭರವಸೆ ನೀಡಿದರು.

ಹೋರಾಟವನ್ನು ವೀಕ್ಷಿಸುವ ಸಲುವಾಗಿ ಆಗಸ್ಟ್ ೩ರಂದು ಗಾಂಧೀಜಿ ಬಾರ್ಡೋಲಿಯನ್ನು ತಲುಪಿದರು. ಅಂತ್ಯವು ಹಠಾತ್ತನೆ ಸಂಭವಿಸಿತು. ಸರ್ಕಾರವು ಕೇಳಿದ್ದಕ್ಕೆಲ್ಲ ಅನೇಕ ವಿಧಾನ ಸಭಾ ಸದಸ್ಯರು ಅರ್ಥಹೀನ ಭರವಸೆಯನ್ನು ನೀಡಿದರು. ಆದರೂ ವಲ್ಲಭಭಾಯಿಯವರು ಕಂದಾಯ ವ್ಯವಸ್ಥೆಯ ವಿಷಯದಲ್ಲಿ ತಮ್ಮ ಮಾತು ಗಳನ್ನು ಪುನರುಚ್ಚರಿಸಿದರು. ಆದರೆ ಭರವಸೆಯು ಸರ್ಕಾರದ ಮಾನವನ್ನುಳಿಸಿತು. ಮತ್ತು ಅದರಿಂದಾಗಿ ವಲ್ಲಭಭಾಯಿಯವರ ಅಂತಿಮ ತೀರ್ಮಾನದಂತೆಯೆ ವಿಚಾರಣೆಯ ವಿಷಯವನ್ನು ಪ್ರಕಟಿಸುವುದು ಅದಕ್ಕೆ ಸಾಧ್ಯವಾಯಿತು. ಅನತಿಕಾಲದಲ್ಲಿಯೆ ಬಂಧಿತರು ಬಿಡುಗಡೆ ಹೊಂದಿದರು. ಜಮೀನುಗಳು ಮರಳಿ ಅವರ ಸ್ವಾಧೀನಕ್ಕೆ ಬಂದುವು ಮತ್ತು ಗ್ರಾಮಾಧಿಕಾರಿಗಳು ಪೂರ್ವಸ್ಥಾನಗಳನ್ನು ಪಡೆದರು, ವಿಚಾರಣೆಯು ಮುಂದುವರಿಯಿತು. ಬ್ರೂಮ್‌ಫಿಲ್ಡ್ ಮತ್ತು ಮಾಕ್ಸ್‌ವೆಲ್ಲರು ಕಂದಾಯ ನಿಗದಿಗಾರರ ಮತ್ತು ರೆವಿನ್ಯೂ

ಅಧಿಕಾರಿಗಳ ಕೆಲಸವನ್ನು ಟೀಕಿಸಿದರು. ಚಳುವಳಿಗಾರರು ನೀಡಿದ ಅಮೂಲ್ಯ ಸಹಕಾರಕ್ಕಾಗಿ ಅವರನ್ನು ಅಭಿನಂದಿಸಿದರು. ಅವರು ಶೇ. ೨೨ಕ್ಕೆ ಬದಲಾಗಿ ಶೇ. ೫.೭ರಷ್ಟು ಏರಿಕೆಯನ್ನು ಶಿಫಾರಸು ಮಾಡಿದರು. ಇದರಿಂದ ಎಲ್ಲರಿಗೂ ಸಂಪೂರ್ಣವಾಗಿ ಸಮಾಧಾನವಾಗಲಿಲ್ಲ. ಆದರೆ ಇದರಿಂದ ಸ್ವತಂತ್ರ ವಿಚಾರಣೆಯ ತತ್ವವನ್ನು ನೆಲೆಗೊಳಿಸಿದಂತಾಯಿತು.

ಬಾರ್ಡೋಲಿಯು ಭಾರತೀಯ ರೈತನಿಗೆ ಆಶೆಯ, ಸಾಮರ್ಥ್ಯದ ಮತ್ತು ಜಯದ ಸಂಕೇತವಾಗಿ ಪರಿಣಮಿಸಿತು. ಮುಂಬರಲಿದ್ದ ಕಲ್ಕತ್ತ ಕಾಂಗ್ರೆಸಿನ ಅಧ್ಯಕ್ಷಸ್ಥಾನಕ್ಕೆ ಸರ್ದಾರ್ ಪಟೇಲರ ಹೆಸರನ್ನು ಸೂಚಿಸಲಾಯಿತು. ಆದರೆ ಗಾಂಧೀಜಿ ಹೇಳಿದರು: "ಬಂಗಾಳಕ್ಕೆ ಹಿರಿಯ ನೆಹ್ರೂವಿನ ಅಗತ್ಯವಿದೆ. ಗೌರವಾನ್ವಿತ ಸಂಧಾನಕ್ಕೆ ಅವರು ಹೆಸರಾದ ವ್ಯಕ್ತಿ. ದೇಶಕ್ಕೆ ಈಗ ಅದರ ಅಗತ್ಯವಿದೆ ಮತ್ತು ದೇಶದಲ್ಲಿ ಅದಕ್ಕೆ ತಕ್ಕ ಪರಿಸ್ಥಿತಿಯಿದೆ. ಆದ್ದರಿಂದ ಅವರನ್ನು ಮಾಡಿ."

ಮೋತಿಲಾಲ್ ನೆಹ್ರೂರವರ ಸಮರ್ಥ ನಾಯಕತ್ವದಲ್ಲಿ ಸಮಗ್ರ ರಾಷ್ಟ್ರ ಸೈಮನ್ ನಿಯೋಗವನ್ನು ಬಹಿಷ್ಕರಿಸುವ ಮೂಲಕ ಮತ್ತು ಸ್ವರಾಜ್ಯ ಸಂವಿಧಾನವನ್ನು ರೂಪಿಸುವ ಮೂಲಕ ಸರ್ಕಾರವನ್ನು ಜಯಪ್ರದವಾಗಿ ಎದುರಿಸಿತು. ದೇಶದ ಎಲ್ಲ ಪಕ್ಷಗಳ ನಡುವೆ ಗರಿಷ್ಠ ಪ್ರಮಾಣದ ಒಪ್ಪಂದವನ್ನು ಸಾಧಿಸುವ ಸಲುವಾಗಿ ಡೊಮಿನಿಯನ್ ಸ್ಥಾನಮಾನವೇ ಭಾರತೀಯ ಸಂವಿಧಾನದ ಅಡಿಪಾಯವಾಗಬೇಕೆಂದು ಸೂಚಿಸಲಾಯಿತು.

ರಾಷ್ಟ್ರೀಯ ಸ್ಥಾನಮಾನದ (ಡೊಮಿನಿಯನ್ ಸ್ಟೇಟಸ್) ತತ್ವವನ್ನು ಮುಂದಿಟ್ಟ ನಂತರ ನೆಹ್ರೂ ಸಮಿತಿಯು ಮತೀಯ ಮತ್ತು ಮುಖ್ಯವಾಗಿ ಹಿಂದೂ–ಮುಸ್ಲಿಂ ಭಿನ್ನಾಭಿಪ್ರಾಯಗಳ ಸಮಸ್ಯೆಯನ್ನೆದುರಿಸಿತು. ಎಲ್ಲ ಜಾತಿಯವರ ಮನಸ್ಸಿನಿಂದ ಪರಸ್ಪರವೂ ಆಧಾರರಹಿತವೂ ಆದ ಭಯವನ್ನು ನಿವಾರಣೆ ಮಾಡುವ ಮತ್ತು ಸರ್ವರಿಗೂ ಭದ್ರತೆಯ ಭಾವನೆಯನ್ನುಂಟು ಮಾಡುವ ಸಲುವಾಗಿ ಸಮಿತಿ ಸಾಧ್ಯವಾದಷ್ಟು ಮಟ್ಟಿಗೆ ಸಾಂಸ್ಕೃತಿಕ ಸ್ವಯಮಾಧಿಪತ್ಯದ ಕಾಪುಪರತ್ತುಗಳನ್ನೂ, ಖಾತರಿಗಳನ್ನೂ. ದತ್ತಿಗಳನ್ನೂ ಶಿಫಾರಸು ಮಾಡಿತು.

ಮುಸ್ಲಿಮರಿಗೆ ಅನೇಕ ರಿಯಾಯತಿಗಳನ್ನು ಸೂಚಿಸುವಾಗ ನೆಹ್ರೂ ಸಮಿತಿ ಲಕ್ನೋ ಯೋಜನೆಯ ಕರ್ತೃಗಳಿಗೆ ವಿರುದ್ಧವಾಗಿ, ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ನಿರಾಕರಿಸಿತು. ಪ್ರತ್ಯೇಕ ಚುನಾವಣಾ ಕ್ಷೇತ್ರಗಳು ಜವಾಬ್ದಾರಿ ಸರ್ಕಾರದ ಮೂಲಭೂತ ತತ್ವಗಳನ್ನುಲ್ಲಂಘಿಸುತ್ತವೆಂದೂ, ಎರಡು ಜಾತಿಗಳ ನಡುವಣ ಉತ್ತಮ ಸೌಹಾರ್ದಕ್ಕೆ ದಾರಿಮಾಡಿಕೊಡಲಾರವೆಂದೂ ಸಮಿತಿ ತೀರ್ಮಾನಿಸಿತು. ಎಲ್ಲ ಚುನಾವಣೆಗಳೂ ಸಂಯುಕ್ತ ಅಥವಾ ಮಿಶ್ರ ಚುನಾವಣ ಕ್ಷೇತ್ರಗಳ ಮೂಲಕ ನಡೆಯಬೇಕು. ಇರಬೇಕಾದ ಒಂದೇ ಒಂದು ಮತೀಯ ರಕ್ಷಣೆ ಎಂದರೆ ಮೀಸಲು ಸ್ಥಾನಗಳ ವ್ಯವಸ್ಥೆ. ಅದೂ ಕೂಡ ಇರುವುದು ಮುಸ್ಲಿಮರು ಎಲ್ಲೆಲ್ಲಿ ಅಲ್ಪಸಂಖ್ಯಾತರಾಗಿದ್ದಾರೋ

ಅಂಥ ಕಡೆ ಮಾತ್ರವೆಂದು ಅದು ಸೂಚಿಸಿತು. ಮೀಸಲು ಸ್ಥಾನಗಳ ಸಂಖ್ಯೆ ಖಂಡಿತವಾಗಿ ಜಾತಿಗಾತ್ರಕ್ಕನುಗುಣವಾಗಿರಬೇಕಾಗಿತ್ತು. "ಎಷ್ಟೇ ಸ್ಥಾನಗಳು ಮೀಸಲಾಗಿರಲಿ ಬಿಡಲಿ ಅಲ್ಪಸಂಖ್ಯಾತ ಪಕ್ಷವು ಅಲ್ಪಸಂಖ್ಯಾತ ಪಕ್ಷವಾಗಿಯೇ ಉಳಿಯಬೇಕು." ನೆಹ್ರೂ ವರದಿ ಆಗಸ್ಟ್‌ನಲ್ಲಿ ಪ್ರಕಟವಾಯಿತು. ತಾನು ಸರ್ಕಾರದ ಕಾರ್ಯದರ್ಶಿಯಾಗಿದ್ದ ಮೂರು ವರ್ಷಗಳ ಅವಧಿಯಲ್ಲಿ ಸಂವಿಧಾನ ಸಂಬಂಧವಾಗಿ ಸಲಹೆಗಳನ್ನು ವ್ಯಕ್ತಪಡಿಸಬಹುದೆಂದು ಭಾರತದ ಟೀಕಾಕಾರರಿಗೆ ಆಹ್ವಾನವಿತ್ತುದಾಗಿಯೂ ಆ ಆಹ್ವಾನವನ್ನು ಹಿಂತೆಗೆದು ಕೊಂಡಿರಲಿಲ್ಲವೆಂದೂ ಶಾಸನಬದ್ಧ ಆಯೋಗ ನೇಮಕದ ಸಂದರ್ಭದಲ್ಲಿ ಲಾರ್ಡ್ ಬರ್ಕನ್ ಹೆಡ್ ಹೇಳಿದ್ದನು. ಈ ಮಾತುಗಳು ಭಾರತದಲ್ಲಿನ ಸರ್ವಹಿತಾಸಕ್ತಿಗಳ ಸಮ್ಮತಿಯನ್ನು ಪಡೆಯಬಹುದಾದ ಸಂವಿಧಾನದ ರಚನೆಗೆ ಸರ್ಕಾರ ಎಸೆದ ಸವಾಲೆಂದು ಭಾರತೀಯ ಮುಖಂಡರು ಬಗೆದರು. ನೆಹ್ರೂ ವರದಿ ಈ ದುರಹಂಕಾರದ ಸವಾಲಿಗೆ ಉತ್ತರವಾಗಿತ್ತು.

"ವರದಿ ಎಲ್ಲ ನ್ಯಾಯಯುತ ಆಕಾಂಕ್ಷೆಗಳನ್ನು ತೃಪ್ತಿಪಡಿಸುತ್ತದೆಂದು ಮತ್ತು ತನ್ನ ಸ್ವಂತ ಅರ್ಹತೆಯ ಮೇಲೆ ನಿಲ್ಲುವ ಸಾಮರ್ಥ್ಯ ಅದಕ್ಕಿದೆಯೆಂದು ಧೈರ್ಯವಾಗಿ ಹೇಳಬಲ್ಲೆ"ಎಂದು ಗಾಂಧೀಜಿ ಅಭಿಪ್ರಾಯಪಟ್ಟರು. "ನೆಹ್ರೂ ಸಮಿತಿಯ ಕೆಲಸಕ್ಕೆ ಅಂತಿಮ ಮೆರಗು ಕೊಡಲು ಕೆಲಮಟ್ಟಿನ ಸಹನೆ, ಪರಸ್ಪರ ಗೌರವ, ಪರಸ್ಪರ ವಿಶ್ವಾಸ, ಪರಸ್ಪರ ಹೊಂದಿಕೆ ಮತ್ತು ಆತ್ಮವಿಶ್ವಾಸಗಳ ಅಗತ್ಯವಿದೆಯಷ್ಟೆ. ಆದರೆ ಇವು ಇರ ಬೇಕಾದದ್ದು ಅಲ್ಪರಾದ ನಮ್ಮಲ್ಲಲ್ಲ, ನಾವು ಪ್ರತಿಯೊಬ್ಬರೂ ಯಾವುದರ ವಿನೀತ ಸದಸ್ಯ ಮಾತ್ರರಾಗಿರುವೆವೊ ಆ ಮಹಾರಾಷ್ಟ್ರದಲ್ಲಿ."

ನೆಹ್ರೂ ಸಮಿತಿಯ ವರದಿಯನ್ನು ಪರ್ಯಾಲೋಚಿಸುವ ಸಲುವಾಗಿ ಆಗಸ್ಟ್‌ನಲ್ಲಿ, ಲಕ್ನೋದಲ್ಲಿ ಸರ್ವಪಕ್ಷೀಯ ಸಮ್ಮೇಳನ ನಡೆಯಿತು. ಅಲ್ಲಿ ಹಾಜರಿದ್ದವರಲ್ಲಿ ಮಹ್ಮುದಾ ಬಾದಿನ ರಾಜ, ಸರ್ ಆಲಿ ಇಮಾಂ, ಸರ್ ಸಿ. ಶಂಕರನ್ ನಾಯರ್, ಸರ್. ಸಿ. .ಪಿ ರಾಮಸ್ವಾಮಿ ಅಯ್ಯರ್, ತೇಜ್‌ಬಹಾದುರ್ ಸಪ್ರು ಮತ್ತು ಮೋತಿಲಾಲ್ ನೆಹ್ರೂ ರವರು ಮುಖ್ಯರು. ಸಮ್ಮೇಳನ ನೆಹ್ರೂ ವರದಿಯ ಶಿಫಾರಸುಗಳನ್ನು ತಾತ್ವಿಕವಾಗಿ ಒಪ್ಪಿತು. ಗಾಂಧೀಜಿ ಸಮ್ಮೇಳನದಲ್ಲಿ ಭಾಗವಹಿಸಿರಲಿಲ್ಲ. ಆದರೆ ಅದನ್ನು ಅತ್ಯಂತ ಸಂಭ್ರಮದಿಂದ ಸ್ವಾಗತಿಸಿದರು:

"ಬಾರ್ಡೋಲಿಯಲ್ಲಿ ಸಾಧಿಸಿದ ವಿಜಯದ ಬೆನ್ನ ಹಿಂದೆಯೇ ಲಕ್ನೋದಲ್ಲಿ ಸಾಧಿಸಿದ ಉಜ್ವಲ ಗೆಲವಿನಿಂದ ದ್ವಿಗುಣ ಸಂತೋಷವಾಗಿದೆ. ಪಂಡಿತ ಮೋತಿಲಾಲರು ಇಂದು ಭಾರತದಲ್ಲಿ ಅತ್ಯಂತ ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ ಮತ್ತು ಅವರ ಅಂಥ ಸ್ಥಾನಕ್ಕೆ ಕಾರಣವೂ ಇದೆ. ಆದರೆ ಕಾರ್ಯಕಲಾಪಗಳನ್ನು ಯಶಸ್ವಿಗೊಳಿಸಲು ಪ್ರತಿಯೊಬ್ಬರ ಜೊತೆಗೂಡದಿದ್ದಲ್ಲಿ ಮೋತಿಲಾಲರೊಬ್ಬರೇ ಏನನ್ನೂ ಮಾಡಲಾಗುತ್ತಿರಲಿಲ್ಲ. ಮುಸ್ಲಿಮರು ಮತ್ತು ಹಿಂದೂಗಳು ಸುಲಭವಾಗಿ ಅಡಚಣೆಯೊಡ್ಡಬಹುದಿತ್ತು.

ಸಿಖ್ಖರೂ ಅದೇ ರೀತಿ ಮಾಡಬಹುದಿತ್ತು. ಆದರೆ ನೆಹ್ರೂ ಸಮಿತಿಯ ತಾಳ್ಮೆಯ ಶ್ರಮವನ್ನು ಹಾಳುಮಾಡುವ ಧೈರ್ಯ ಯಾರಿಗೂ ಇರಲಿಲ್ಲ. ಅದಮ್ಯ ಆಶಾವಾದಿಯಾದ ಪಂಡಿತ ಮಾಳವೀಯರು ೧೯೩೦ರಲ್ಲಿ ಸ್ವರಾಜ್ಯವನ್ನು ಸಾಧಿಸಬಹುದೆಂದು ಹೇಳಿದು ದರಲ್ಲಿ ಆಶ್ಚರ್ಯವೇನಿಲ್ಲ.

"ಶುಭ ಸಿದ್ಧಿಯ ಈ ಗೌರವಕ್ಕೆ ಪಂಡಿತ ನೆಹ್ರೂರವರೊಂದಿಗೆ ಡಾ. ಅನ್ಸಾರಿಯವರೂ ಅರ್ಹರು. ಮುಸಲ್ಮಾನರ ವಿರೋಧ ನಿವಾರಣೆಗಾಗಿ ಅವರು ಮುಸಲ್ಮಾನರ ಮೇಲಿದ್ದ ತಮ್ಮ ಅಪ್ರತಿಮ ಪ್ರಭಾವವನ್ನು ಬಳಸಿದರು. ಅವರ ಪರಿಶುದ್ಧ ಪ್ರಾಮಾಣಿಕತೆಯನ್ನು ಮತ್ತು ಅಷ್ಟೆ ಪರಿಶುದ್ಧ ರಾಷ್ಟ್ರೀಯ ಭಾವನೆಯನ್ನು ಪ್ರತಿಭಟಿಸುವ ಶಕ್ತಿ ಹಿಂದೂಗಳಲ್ಲಿರಲಿಲ್ಲ. ಸರ್ ತೇಜಬಹದ್ದೂರ ಸಪ್ರುರವರ ನೇತೃತ್ವದ ಉದಾರ ಪಕ್ಷದವರು ಸಮ್ಮೇಳನಕ್ಕೆ ಗುರುತ್ವವನ್ನು ನೀಡಿದರು. ಇಲ್ಲದಿದ್ದಲ್ಲಿ ಅದರ ಕೊರತೆ ಎದ್ದು ಕಾಣುತ್ತಿತ್ತು. ರಾಷ್ಟ್ರೀಯ ಸಂಸ್ಥೆಗೆ ಮತ್ತೆ ಪ್ರವೇಶಿಸುತ್ತೇವೆಂಬ ಶ್ರೀಮತಿ ಬೆಸೆಂಟರ ಆಶೆಯನ್ನು ನಾನು ಸ್ವಾಗತಿಸುತ್ತೇನೆ. ಹಿಂದೂ ಮತ್ತು ಮುಸಲ್ಮಾನ ಸಂಸ್ಥೆಗಳು ತಮ್ಮ ಅನನ್ಯತೆಯನ್ನು ಕಳೆದು ಕೊಳ್ಳದಿರುವಂತೆಯೆ ಅವರೂ ತಮ್ಮ ಅನನ್ಯತೆಯನ್ನು ಕಳೆದು ಕೊಳ್ಳಬೇಕಾಗಿಲ್ಲ.

"ಉದಾರ ಪಕ್ಷದವರ ಉಲ್ಲೇಖ, ಭವಿಷ್ಯದತ್ತ ನಮ್ಮ ಗಮನವನ್ನು ಸೆಳೆಯುತ್ತದೆ. ಮಾಡಬೇಕಾದ ರಾಜತಾಂತ್ರಿಕ ಕಾರ್ಯ ಬಹಳವಿದೆ. ಆದರೆ ರಾಜತಾಂತ್ರಿಕ ಕೆಲಸಕ್ಕಿಂತ ಮಂಜೂರಾತಿ ದೊರಕಿಸಿಕೊಳ್ಳುವುದು ಅಗತ್ಯವಾಗಿದೆ. ರಾಷ್ಟ್ರೀಯ ಸ್ಥಾನಮಾನವಾಗಲಿ ಸ್ವಾತಂತ್ರ್ಯವೇ ಆಗಲಿ, ರಾಷ್ಟ್ರೀಯ ಬೇಡಿಕೆಯನ್ನು ಒತ್ತಾಯಮಾಡುವುದಾದರೆ ಸರ್ವ ಸಮ್ಮತಿ ಅತ್ಯಗತ್ಯವೆಂಬ ಜವಹರಲಾಲ್ ನೆಹ್ರೂ ಅವರ ಅಭಿಪ್ರಾಯ ಸತ್ಯವಾದು ದಾಗಿದೆ. ಬಾರ್ಡೋಲಿ ತೋರಿಸಿದ ಮಾರ್ಗದಲ್ಲಿ ಸರ್ವಸಮ್ಮತಿ ಅಹಿಂಸಾತ್ಮಕವಾಗಿರ ಬೇಕಾಗುತ್ತದೆ.

"ಮಂಜೂರಾತಿ ಖಾತ್ರಿಯಾದ ಪಕ್ಷಕ್ಕೆ ಸ್ವರಾಜ್ಯವು ರಾಷ್ಟ್ರೀಯ ಸ್ಥಾನಮಾನ ವೆಂಬರ್ಥದಲ್ಲಾಗಲಿ ಸ್ವಾತಂತ್ರ್ಯವೆಂಬರ್ಥದಲ್ಲಾಗಲಿ ಹೇಗೆ ಕರೆಯಲ್ಪಟ್ಟರೂ ಚಿಂತಿಸ ಬೇಕಾಗಿಲ್ಲ. ಮಂಜೂರಾತಿಯ ಬೆಂಬಲವಿರುವ ರಾಷ್ಟ್ರೀಯ ಸ್ಥಾನಮಾನವು ಬಹು ಸುಲಭವಾಗಿ ಸ್ವಾತಂತ್ರ್ಯಕ್ಕಿಂತ ಮಿಗಿಲಾಗಬಲ್ಲದು. ಮಂಜೂರಾತಿಯ ಬೆಂಬಲವಿಲ್ಲದ ಸ್ವಾತಂತ್ರ್ಯವು ಬಹುಬೇಗ ಹಾಸ್ಯಾಸ್ಪದವಾಗಬಲ್ಲುದು. ವಾಸ್ತವಿಕತೆ ರೂಢಿಸಿದ ಪಕ್ಷಕ್ಕೆ ಹೆಸರಿನಲ್ಲೇನಿದೆ? ಗುಲಾಬಿಯ ಹೆಸರು ನಿಮಗೆ ಗೊತ್ತಿರಲಿ, ಗೊತ್ತಿಲ್ಲದಿರಲಿ; ಅದು ಬೀರುವ ಪರಿಮಳ ಒಂದೇ ಆಗಿರುತ್ತದೆ. ಆದ್ದರಿಂದ ಮಾರ್ಗವು ಅಹಿಂಸಾತ್ಮಕ ವಾಗಿರಬೇಕೇ ಅಥವಾ ಹಿಂಸಾತ್ಮಕವಾಗಿರಬೇಕೆ ಎಂಬುದನ್ನು ಮೊದಲು ದೃಢಪಡಿಸಿ ಕೊಳ್ಳೋಣ. ರಾಜತಂತ್ರಜ್ಞರು ಸಂವಿಧಾನ ರಚನೆಯಲ್ಲಿ ಹೇಗೆ ಶ್ರಮಿಸಬೇಕೊ ಅಂತೆಯೆ ಸಾಮಾನ್ಯ ಜನರೂ ಮಂಜೂರಾತಿಗೆ ನಿಜವಾದ ಶ್ರದ್ಧೆಯಿಂದ ಶ್ರಮಿಸಬೇಕು.

ಸೈಮನ್ ನಿಯೋಗವು ಭಾರತದಲ್ಲೆಲ್ಲ ಸಂಚರಿಸುತ್ತಿತ್ತು. ಅದು ಹೋದಲ್ಲೆಲ್ಲ ಕಪ್ಪು ಬಾವುಟಗಳು ಮತ್ತು 'ಸೈಮನ್ ಹಿಂದಿರುಗು' ಎಂಬ ವಿರೋಧ ಗುಂಪುಗಳ ಕೂಗುಗಳು ಹಿಂಬಾಲಿಸುತ್ತಿದ್ದುವು. ನಿಯೋಗವು ಫೆಬ್ರುವರಿ ೩ರಂದು ತನ್ನ ಪೂರ್ವಭಾವೀ ಪ್ರವಾಸಕ್ಕಾಗಿ ಬೊಂಬಾಯಿಯಲ್ಲಿಳಿಯಿತು. ಅಲ್ಲಿ ಅಖಿಲ ಭಾರತೀಯ ಹರತಾಳವು ಜರುಗಿತು. ಅದರ ಆಗಮನದ ಸಂದರ್ಭದಲ್ಲಿ ವೈಸ್‌ರಾಯ್, ಕೇಂದ್ರೀಯ ಶಾಸನಸಭೆ ಯನ್ನುದ್ದೇಶಿಸಿದ ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು: "ಜನ ದೂರ ನಿಲ್ಲಬಹುದು ಮತ್ತು ತಮ್ಮ ಅಭಿಪ್ರಾಯಗಳನ್ನು ತಡೆಹಿಡಿಯಬಹುದು. ಆದರೂ ವಿಚಾರಣೆಯನ್ನು ಮುಂದುವರಿಸಿ ಬಹಿಷ್ಕಾರವಿದ್ದರೂ ಸಾಧ್ಯವಾಗಬಹುದಾದ ಸೌಲಭ್ಯ ಸೌಕರ್ಯಗಳ ನೆರವಿನಿಂದ ತೀರ್ಮಾನಕ್ಕೆ ಬರುವುದು ನಿಯೋಗಕ್ಕೆ ಸಾಧ್ಯವಾಗುತ್ತದೆ." ಕೇಂದ್ರಸಭೆಯ ಸದಸ್ಯರು ನಿಯೋಗವನ್ನು ಅಧಿಕೃತವಾಗಿ ಬಹಿಷ್ಕರಿಸುವುದು ಮಾತ್ರವಲ್ಲದೆ ಸಾಮಾಜಿಕ ವಾಗಿಯೂ ಅದನ್ನು ಬಹಿಷ್ಕರಿಸಲು ಪ್ರತಿಜ್ಞೆಗೊಂಡರು. ಬೊಂಬಾಯಿಯಲ್ಲಿ ೫೦,೦೦೦ ಸ್ವಯಂಸೇವಕರ ಮೆರವಣಿಗೆ ನಡೆಯಿತು. ಆ ಸಂದರ್ಭದಲ್ಲಿ ಪೋಲೀಸರು ಗುಂಡು ಹಾರಿಸಿದರು. 'ಸೈಮನ್ ಸಪ್ತ'ವು ಫೆಬ್ರುವರಿ ೪ ರಂದು ದೆಹಲಿಯನ್ನು ತಲುಪಿತು. ದೆಹಲಿಯಿಂದ ಅವರು ಕಲ್ಕತ್ತಕ್ಕೆ, ಅಲ್ಲಿಂದ ಮದ್ರಾಸಿಗೆ ಮತ್ತು ಉತ್ತರದ ಲಾಹೋರಿಗೆ ಹೋದರು. ಮದ್ರಾಸಿನಲ್ಲಿ ಪೋಲೀಸರು ಗುಂಡು ಹಾರಿಸಿದರು. ಅನೇಕ ಸಂಖ್ಯೆಯ ಜನ ಮೃತರಾದರು ಮತ್ತು ಗಾಯಗೊಂಡರು. ಕಲ್ಕತ್ತ ಮತ್ತು ಇತರೆಡೆಗಳಲ್ಲಿ ವಿದ್ಯಾರ್ಥಿ ಗಳ ಮತ್ತು ಪೋಲೀಸರ ನಡುವೆ ಘರ್ಷಣೆ ನಡೆಯಿತು. ಲಾಹೋರಿನಲ್ಲಿ ಪ್ರದರ್ಶಕರ ಮುಂದೆ ರಸ್ತೆಯ ಪಕ್ಕದಲ್ಲಿ ನಿಂತಿದ್ದ ಅರುವತ್ತಾಲ್ಕು ವರ್ಷದ ಲಜಪತ್‌ರಾಯರ ಮೇಲೆ ಒಬ್ಬ ಇಂಗ್ಲಿಷ್ ಅಧಿಕಾರಿ ಹಲ್ಲೆಮಾಡಿ ಲಾಠಿಯಿಂದ ಎದೆಗೆ ಹೊಡೆದಾಗ ಅದು ಪರಾಕಾಷ್ಠೆಯನ್ನು ಮುಟ್ಟಿತು. ನವೆಂಬರ್ ೧೭ರಂದು ಲಾಲಾ ಲಜಪತರಾಯ್ ನಿಧನರಾದರು. ಆ ಸಂದರ್ಭದಲ್ಲಿ ಗಾಂಧೀಜಿ ಹೀಗೆ ಬರೆದರು.:

"ಭಾರತೀಯ ಆಕಾಶದಲ್ಲಿ ಸೂರ್ಯನು ಪ್ರಕಾಶಿಸುವ ವರೆಗೆ ಲಾಲಾಜಿಯಂಥ ವ್ಯಕ್ತಿಗಳು ಸಾಯುವುದಿಲ್ಲ. ಅವರ ಚಟುವಟಿಕೆಗಳು ನಾನಾ ಬಗೆಯಾಗಿದ್ದುವು. ಅವರೊಬ್ಬ ಉಜ್ವಲ ಸಾಮಾಜಿಕ ಮತ್ತು ಮತೀಯ ಸುಧಾರಕರಾಗಿದ್ದರು. ನಮ್ಮಲ್ಲ ನೇಕರಂತೆ ಅವರೂ ಒಬ್ಬ ರಾಜಕಾರಣಿಯಾಗಿದ್ದರು. ಸಾಮಾಜಿಕ ಮತ್ತು ಮತೀಯ ಸುಧಾರಣೆಯಲ್ಲಿದ್ದ ಅವರ ಉತ್ಸಾಹವು ರಾಜಕೀಯದಲ್ಲಿ ಭಾಗವಹಿಸುವಂತೆ ಅವರನ್ನು ಚೋದಿಸಿತು. ದೇಶವು ವಿದೇಶಿ ಆಳ್ವಿಕೆಯಿಂದ ಮುಕ್ತವಾಗುವ ವರೆಗೆ ತಮ್ಮ ಕಲ್ಪನೆಯ ಸುಧಾರಣೆಗಳು ಸಾಧ್ಯವಾಗವೆಂದು ತಮ್ಮ ಸಾರ್ವಜನಿಕ ಜೀವನದ ಮೊದಲ ಹಂತ ದಲ್ಲಿಯೇ ಅವರು ಅರಿತುಕೊಂಡರು. ಅದು ನಮ್ಮ ಜೀವನದ ಪ್ರತಿಯೊಂದು ವಿಭಾಗ ವನ್ನೂ ಕಲುಷಿತಗೊಳಿಸುತ್ತಿರುವ ವಿಷದಂತೆ ನಮಗೆಂತೊ ಅವರಿಗೂ ಗೋಚರಿಸಿತು.

"ಲಾಲಾಜಿ ಭಾಗವಹಿಸದ ಯಾವ ಸಾರ್ವಜನಿಕ ಚಳುವಳಿಯನ್ನೂ ಊಹಿಸಿ ಕೊಳ್ಳುವುದು ಸಾಧ್ಯವಿಲ್ಲ. ಅವರ ಸೇವಾಜೀವನಕ್ಕೆ ತಣಿವೆಂಬುದಿರಲಿಲ್ಲ. ಅವರು

ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಿದರು; ದಲಿತ ವರ್ಗಗಳಿಗೆ ನೆರವು ನೀಡಿದರು; ದಾರಿದ್ರ್ಯ ಎಲ್ಲಿ ಕಂಡುಬಂದರೂ ಅವರ ಗಮನ ಅಲ್ಲಿಗೆ ಹೋಗುತ್ತಿತ್ತು. ಯುವಕರನ್ನು ಅತ್ಯಂತ ಪ್ರೀತಿಯಿಂದ ಕಂಡರು. ಅವರಲ್ಲಿ ಸಹಾಯವನ್ನಪೇಕ್ಷಿಸಿದ ಯಾವ ತರುಣನ ಮೊರೆಯೇ ಆಗಲಿ ನಿರರ್ಥಕವಾಗುತ್ತಿರಲಿಲ್ಲ. ರಾಜಕೀಯ ಕ್ಷೇತ್ರದಲ್ಲಂತೂ ಅವರಿಲ್ಲದೆ ನಿರ್ವಾಹ ವಿರಲಿಲ್ಲ. ತಮ್ಮ ಅಭಿಪ್ರಾಯಗಳ ಅಭಿವ್ಯಕ್ತಿಯಲ್ಲಿ ಅವರು ನಿರ್ಭಯರಾಗಿರುತ್ತಿದ್ದರು. ಆ ಕಾರಣಕ್ಕಾಗಿ ನೋವನ್ನನುಭವಿಸಿದರು. ಅವರ ಬದುಕು ಒಂದು ತೆರೆದ ಪುಸ್ತಕ ವಾಗಿತ್ತು. ಅವರ ಮುಚ್ಚುಮರೆಯಿಲ್ಲದ ಬಿಚ್ಚು ಸ್ವಭಾವವು ಅನೇಕ ವೇಳೆ ಸ್ನೇಹಿತರನ್ನು ತಬ್ಬಿಬ್ಬುಗೊಳಿಸುತ್ತಿತ್ತಲ್ಲದೆ ಟೀಕಾಕಾರರನ್ನೂ ಸಹ ದಿಗ್ಭ್ರಮೆಗೊಳಿಸುತ್ತಿತ್ತು. ಆದರೆ ಲಾಲಾಜಿಯವರನ್ನು ತಿದ್ದುವುದು ಅಸಾಧ್ಯವಾಗಿತ್ತು.

"ಅವರೆಂದೂ ಇಸ್ಲಾಂನ ಶತ್ರುವಲ್ಲವೆಂಬುದನ್ನು ನನ್ನ ಮುಸಲ್ಮಾನ ಗೆಳೆಯ ರಲ್ಲಿರುವ ಸರ್ವ ಗೌರವದೊಂದಿಗೆ, ನಾನು ಕಂಠೋಕ್ತವಾಗಿ ಹೇಳುತ್ತೇನೆ. ಹಿಂದೂ ಧರ್ಮವನ್ನು ಸಬಲಗೊಳಿಸಬೇಕೆಂಬ ಮತ್ತು ಪರಿಶುದ್ಧಗೊಳಿಸಬೇಕೆಂಬ ಅವರ ಇಚ್ಛೆ ಇಸ್ಲಾಂ ಅಥವಾ ಮುಸಲ್ಮಾನ ದ್ವೇಷದಿಂದ ಕಲುಷಿತವಾಗಿರಲಿಲ್ಲ. ಹಿಂದೂ ಮುಸ್ಲಿಂ ಐಕ್ಯತೆಗೆ ಉತ್ತೇಜನ ಕೊಡುವ ಮತ್ತು ಅದನ್ನು ಸಾಧಿಸುವ ಪ್ರಾಮಾಣಿಕ ಅಭಿಲಾಷೆ ಅವರಲ್ಲಿತ್ತು. ಅವರಿಗೆ ಭಾರತೀಯ ಪ್ರಭುತ್ವ ಬೇಕಾಗಿತ್ತೆ ಹೊರತು ಹಿಂದೂ ಪ್ರಭುತ್ವ ವಲ್ಲ. ಭಾರತೀಯರೆಂದು ಕರೆದುಕೊಳ್ಳುವವರಲ್ಲಿ ಪೂರ್ಣ ಸಮಾನತೆಯಿರಬೇಕೆಂಬುದೇ ಅವರ ಅಪೇಕ್ಷೆಯಾಗಿತ್ತು. ಲಾಲಾಜಿಯ ಸಾವು ನಮ್ಮ ನಡುವೆ ಪರಸ್ಪರ ವಿಶ್ವಾಸದ ಪಾಠವನ್ನು ಕಲಿಸುತ್ತದೆಂದು ನಾನು ಆಶಿಸುತ್ತೇನೆ. ಭಯವನ್ನು ತೊರೆಯುವುದಾದ ಪಕ್ಷಕ್ಕೆ ನಾವು ಇದನ್ನು ಸುಲಭವಾಗಿ ಸಾಧಿಸಬಹುದು.

"ಒಂದು ರಾಷ್ಟ್ರೀಯ ಸ್ಮಾರಕಕ್ಕಾಗಿ ಒತ್ತಾಯ ಬರುತ್ತಿದೆ. ಅದು ಸರಿಯೆ. ಯಾವ ಸ್ವಾತಂತ್ರ್ಯ ಸಾಧನೆಗಾಗಿ ಅವರು ಉದಾತ್ತವಾಗಿ ಬದುಕಿದರೊ ಮತ್ತು ಸತ್ತರೋ ಅದನ್ನು ಸಾಧಿಸಲು ಒಂದು ಸ್ಪಷ್ಟ ಸಂಕಲ್ಪವನ್ನು ಕೈಗೊಳ್ಳದ ಹೊರತು ನನ್ನ ದೃಷ್ಟಿಯಲ್ಲಿ ಯಾವ ಸ್ಮಾರಕವೂ ಪೂರ್ಣವಾಗಲಾರದು. ಲಾಲಾಜಿಯ ಅಂತಿಮ ಇಚ್ಛೆಯಾದರೂ ಏನಿದ್ದಿತೆಂಬುದನ್ನು ನಾವು ನೆನೆಯೋಣ. ಭಾರತದ ಸ್ವಾತಂತ್ರ್ಯ ಮತ್ತು ಗೌರವಗಳನ್ನು ಸಂರಕ್ಷಿಸುವ ಹೊಣೆಯನ್ನವರು ಯುವ ಪೀಳಿಗೆಗೆ ಬಿಟ್ಟು ಹೋಗಿದ್ದಾರೆ. ಅವರು ತಮ್ಮ ಮೇಲಿಟ್ಟಿದ್ದ ನೆಚ್ಚಿಕೆಗೆ ತಾವು ಯೋಗ್ಯರೆಂಬುದನ್ನು ಯುವ ಪೀಳಿಗೆಯು ತೋರಿಸಿಕೊಡುವುದೇನು? ದೇಶಾಭಿಮಾನಿಗಳ ಸುದೀರ್ಘಶ್ರೇಣಿ ಯಲ್ಲಿ ಲಾಲಾಜಿ ಪ್ರತಿಷ್ಠಿತ ವ್ಯಕ್ತಿಯಾಗಿದ್ದರು. ನೂತನ ಸುಸಂಘಟಿತ ಮಹಾಪ್ರಯತ್ನ ದಿಂದ ಅವರ ಕನಸನ್ನು ನನಸಾಗಿಸುವ ಮೂಲಕ ಲಾಲಾಜಿಯನ್ನು ದೇಶಬಾಂಧವರಾಗಿ ಪಡೆದದ್ದು ಸಾರ್ಥಕವಾಯಿತೆಂದು ಇನ್ನೂ ಜೀವಂತವಾಗಿರುವ ಹಳಬರು ಸಂತೋಷ ಪಡೋಣವೆ?"

ಲಜಪತರಾಯರ ಸಾವಿನಿಂದ ದೇಶದ ಯುವಜನರಲ್ಲಿ ತೀವ್ರ ಕ್ರಾಂತಿಕಾರಕ

ಮನೋಭಾವ ಬೆಳೆಯಿತು. ಕ್ರೂರ ಲಾಠಿ ಪ್ರಹಾರಗಳು ನಡೆದುವು. ಅವುಗಳಿಗೆ ಗುರಿಯಾದವರಲ್ಲಿ ಜವಹರಲಾಲ ನೆಹ್ರೂ ಮತ್ತು ಗೋವಿಂದ ವಲ್ಲಭ ಪಂತರಂಥವರೂ ಇದ್ದರು.

ಡಿಸೆಂಬರ್‌ನಲ್ಲಿ, ಲಾಹೋರಿನ ಸಹಾಯಕ ಪೋಲೀಸು ಸೂಪರಿಂಟೆಂಡೆಂಟ್ ಸ್ಯಾಂಡರ್ಸ್ ಆಫೀಸು ಬಿಟ್ಟು ಹೊರಟಾಗ, ಗುಂಡಿಗೆ ಆಹುತಿಯಾದರು. "ಪಂಜಾಬು ಸರ್ಕಾರದ ಸ್ವೇಚ್ಛಾ ಪ್ರವೃತ್ತಿಯ ಅಧಿಕಾರದ ವಿರುದ್ಧ ಸೇಡು ತೀರಿಸುವ ಸಲುವಾಗಿ ಈ ಕೊಲೆ ನಡೆದಿದ್ದ ಪಕ್ಷಕ್ಕೆ ನಾನು ಆಶ್ಚರ್ಯಪಡಬೇಕಾಗಿಲ್ಲ. ಭಾರತಕ್ಕೆ ಮರಳಿ ಸ್ವಾತಂತ್ರ್ಯವನ್ನು ಗಳಿಸಿಕೊಡುವುದೇ ಲಾಲಾಜಿಯ ಸಾವಿಗೆ ಮಾಡಬಹುದಾದ ತಕ್ಕ ಪ್ರತೀಕಾರವೆಂಬುದನ್ನು ಭಾರತದ ಯುವಜನಾಂಗ ಅರಿತುಕೊಳ್ಳಲಿ. ಕೇವಲ ಒಬ್ಬನ ವೀರಕರ್ಮಗಳಿಂದ–ಅವು ಎಷ್ಟೇ ನಿರ್ವಂಚನೆಯಿಂದ ಕೂಡಿರಲಿ– ಒಂದು ರಾಷ್ಟ್ರದ ಸ್ವಾತಂತ್ರ್ಯವನ್ನು ಜಯಿಸುವುದು ಸಾಧ್ಯವಿಲ್ಲ; ಕೇವಲ ಕಲಿತನದಿಂದಲೂ ಅದು ಸಾಧ್ಯವೇ ಇಲ್ಲ. ಬಿಡುಗಡೆಯ ದೇಗುಲದ ನಿರ್ಮಾಣಕ್ಕೆ ಸಹಸ್ರಾರು ಸ್ತ್ರೀ ಪುರುಷರ ತರುಣರ ಮತ್ತು ವೃದ್ಧರ ತಾಳ್ಮೆಯು, ಬುದ್ಧಿವಂತಿಕೆಯು ಮತ್ತು ರಚನಾತ್ಮಕ ದುಡಿಮೆಯ ಅಗತ್ಯವಿದೆ. ನಮ್ಮ ಸಂತಾಪಕ್ಕೆ ಗುರಿಯಾಗಿರುವ ಇಂಥ ಕೃತ್ಯಗಳು ಈ ಮೌನ ನಿರ್ಮಾಣದ ಮುನ್ನಡೆಯನ್ನು ಖಂಡಿತವಾಗಿ ವಿಳಂಬಗೊಳಿಸುತ್ತವೆ. ಅದು ಬೇರೇನನ್ನು ಮಾಡದಿದ್ದರೂ ಅಸಂಖ್ಯಾತ ಶಿಲ್ಪಿಗಳ ಲಕ್ಷ್ಯವನ್ನು ವಿಮುಖಗೊಳಿಸುತ್ತದೆ" ಎಂದು ಗಾಂಧೀಜಿ ಅಭಿಪ್ರಾಯಪಟ್ಟರು.

ತೀವ್ರಗಾಮಿ ಭಾವನೆಗಳ ಅಲೆಯು ಎಲ್ಲೆಲ್ಲೂ ಉಕ್ಕೇರುತ್ತಿತ್ತು. ಹೊಸದಾಗಿ ರೂಪಿತವಾದ ಮತ್ತು ಪ್ರಧಾನವಾಗಿ ವಿದ್ಯಾರ್ಥಿಗಳನ್ನೊಳಗೊಂಡ ಯುವಕ ಸಂಘಗಳು ಸೈಮನ್ ನಿಯೋಗದ ಬಹಿಷ್ಕಾರದಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿದುವು. ಯೂಸುಫ್, ಜೆ. ಮೆಹೆರಾಲಿಯಂಥ ಉತ್ಸಾಹೀ ಕೆಲಸಗಾರರನ್ನು ಅವು ಪ್ರಕಾಶಕ್ಕೆ ತಂದುವು. ಸಮಾಜವಾದದತ್ತ ಒಲವಿದ್ದ ಜವಾಹರಲಾಲ್ ನೆಹ್ರೂ ಮತ್ತು ಸುಭಾಷ್ ಬೋಸರಿಗೆ ಯುವಜನರ ಕಾರ್ಯಕ್ಷೇತ್ರದಲ್ಲಿ ವಿಶೇಷ ಗೌರವ ದೊರೆಯಿತು. ಭಾರತೀಯ ತರುಣ ಜನಾಂಗವನ್ನು ಸೋವಿಯೆತ್ ರಷ್ಯ, ಚೈನಾ ಮತ್ತು ಟರ್ಕಿಗಳು ಬಲವಾಗಿ ಆಕರ್ಷಿಸಿದುವು. ಯುವಕರು ಆದರ್ಶ ಸಮಾಜವಾದದ ದಿಕ್ಕಿನಲ್ಲಿ ಆಲೋಚಿಸ ತೊಡಗಿದರು. ಮತ್ತು ಕೆಲವರು ತಮ್ಮನ್ನು ಅಪ್ಪಟ ಮಾರ್ಕ್ಸ್‌ವಾದಿಗಳೆಂದು ಕರೆದುಕೊಂಡರು. ಸೋವಿಯೆತ್ ದೇಶದ ಮುನ್ನಡೆಯಿಂದ, ಅದರಲ್ಲೂ ಪಂಚವಾರ್ಷಿಕ ಯೋಜನೆಯಿಂದ ಭಾರತದಲ್ಲಿ ಈ ಒಲವು ಮತ್ತಷ್ಟು ಬಲಗೊಂಡಿತು. ಜವಹರಲಾಲರು ರಷ್ಯಾವನ್ನು ಕುರಿತು ಬರೆದ ಲೇಖನಗಳನ್ನು 'ಯಂಗ್ ಇಂಡಿಯ' ಪ್ರಕಟಿಸಿತು. ಗುಜರಾತು ವಿದ್ಯಾಪೀಠದ ವಿದ್ಯಾರ್ಥಿಗಳು ಗಾಂಧೀಜಿಯೊಂದಿಗೆ ಬೋಲ್ಷೆವಿಸಮ್ಮನ್ನು ಕುರಿತು ಚರ್ಚಿಸಿದರು. ಗಾಂಧೀಜಿ ತಮ್ಮ ಮನೋಭಿಪ್ರಾಯವನ್ನು ಈ ಬಗೆಯಾಗಿ ಸ್ಪಷ್ಟಪಡಿಸಿದರು.

"ಬೋಲ್ಷೆವಿಸಮ್ಮನ್ನು ಅರ್ಥಮಾಡಿಕೊಳ್ಳಲು ಪೂರ್ಣ ಸಮರ್ಥನಾಗಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳಬೇಕು. ಅದು ಖಾಸಗಿ ಆಸ್ತಿಯ ವ್ಯವಸ್ಥೆಯನ್ನು ನಿರ್ಮೂಲ ಮಾಡುತ್ತದೆಯೆಂಬುದಷ್ಟೆ ನನಗೆ ತಿಳಿದಿರುವುದು. ಇಲ್ಲಿ ಆಸ್ತಿತ್ಯಾಗವೆಂಬ ನೈತಿಕ ಆದರ್ಶವನ್ನು ಆರ್ಥಿಕ ಕ್ಷೇತ್ರಕ್ಕೆ ಅನ್ವಯಿಸಲಾಗಿದೆ. ಜನರು ಈ ಆದರ್ಶವನ್ನು ಸ್ವಇಚ್ಛೆಯಿಂದ ಸ್ವೀಕರಿಸಿದ್ದಲ್ಲಿ ಅಥವಾ ಶಾಂತಿಯುತ ಒಡಂಬಡಿಕೆಯಿಂದ ಅದನ್ನವರು ಒಪ್ಪುವಂತೆ ಮಾಡಿದಲ್ಲಿ ಅದಕ್ಕೆ ಸಮನಾದುದು ಬೇರೊಂದಿರುವುದಿಲ್ಲ. ಆದರೆ ಬೋಲ್ಷೆವಿಸಂ, ನನಗೆ ತಿಳಿದಿರುವ ಪ್ರಕಾರ, ಬಲಾತ್ಕಾರಕ್ಕೆ ಅವಕಾಶ ನೀಡುವುದಲ್ಲದೆ ಖಾಸಗಿ ಸ್ವತ್ತನ್ನು ಕಿತ್ತುಕೊಳ್ಳಲು ಮತ್ತು ಅದರ ಸಾಮೂಹಿಕ ಒಡೆತನವನ್ನು ನಿರ್ವಹಿಸಲು ಅನಿರ್ಬಂಧ ಅನುಮತಿಯನ್ನು ನೀಡುತ್ತದೆ. ಅದು ಹಾಗಿರುವ ಪಕ್ಷಕ್ಕೆ ಬೋಲ್ಷೆವಿಕ್ ಆಡಳಿತ ಕ್ರಮವು ತನ್ನ ಈಗಿನ ಸ್ವರೂಪದಲ್ಲಿ ಬಹಳ ದಿವಸ ಉಳಿಯುವುದಿಲ್ಲವೆಂದು ನಾನು ನಿಶ್ಚಯವಾಗಿ ಹೇಳಬಲ್ಲೆ. ಯಾವುದು ಶಾಶ್ವತವೊ ಅದನ್ನು ಹಿಂಸೆಯ ಮೇಲೆ ನಿರ್ಮಿಸುವುದು ಸಾಧ್ಯವಿಲ್ಲವೆಂಬುದು ನನ್ನ ದೃಢನಂಬಿಕೆ. ಆದರೆ ಅದು ಹೇಗೇ ಇರಲಿ, ಬೋಲ್ಷೆವಿಕ್ ಧ್ಯೇಯದ ಹಿಂಬದಿಯಲ್ಲಿ ಆ ಧ್ಯೇಯಕ್ಕೋಸ್ಕರ ತಮ್ಮೆಲ್ಲವನ್ನೂ ತ್ಯಜಿಸಿದ ಅಸಂಖ್ಯಾತ ಸ್ತ್ರೀ ಪುರುಷರ ಪರಿಶುದ್ಧ ತ್ಯಾಗವು ಅಡಗಿದೆಯೆಂಬ ಸಂಗತಿಯನ್ನು ಯಾರೂ ಪ್ರಶ್ನಿಸುವಂತಿಲ್ಲ. ಲೆನಿನ್‌ನಂಥ ಮಹಾಚೇತನಗಳ ತ್ಯಾಗಗಳಿಂದ ಪವಿತ್ರವಾಗಿರುವ ಧ್ಯೇಯವು ಎಂದೂ ನಿರರ್ಥಕವಾಗುವುದಿಲ್ಲ. ಅವರ ತ್ಯಾಗ ಮೂಲ ಶ್ರೇಷ್ಠ ನಿದರ್ಶನವು ಶಾಶ್ವತವಾಗಿ ಕೆತ್ತಲ್ಪಡುತ್ತದೆ ಮತ್ತು ಅದು ಕಾಲ ಕಳೆದಂತೆ ಆ ಧ್ಯೇಯಕ್ಕೆ ಚೈತನ್ಯದುಂಬಿ ಪರಿಶುದ್ಧಗೊಳಿಸುತ್ತದೆ."

ಕಾಂಗ್ರೆಸ್ ಅಧಿವೇಶನಕ್ಕಿಂತ ಕೆಲವು ವಾರಗಳ ಮುಂಚೆ ಸಂಭವಿಸಿದ ಲಜಪತ್ ರಾಯರ ಸಾವು ಪರಿಣಾಮಕಾರಿಯಾಗಿತ್ತು. ನಿಗ್ರಹಗೊಂಡ ಉದ್ವೇಗದ ವಾತಾವರಣದಲ್ಲಿ ವರ್ಷದ ಕೊನೆಯ ಎ.ಐ.ಸಿ.ಸಿ. ಸಭೆಯು ಡಿಸೆಂಬರ್ ೨೭ರಂದು ಜರುಗಿತು. ಅಲ್ಲಿ ಹಾಜರಿದ್ದವರ ಪೈಕಿ ಗಾಂಧೀಜಿ, ಮೋತಿಲಾಲ್ ನೆಹ್ರೂ, ಮಾಳವೀಯ, ಜೆ.ಎಂ. ಸೇನ್‌ಗುಪ್ತ, ಶ್ರೀನಿವಾಸಯ್ಯಂಗಾರ್ ಜವಹರಲಾಲ್ ನೆಹ್ರೂ, ಸುಭಾಷ್ ಬೋಸ್. ಶ್ರೀಮಂತಿ ಬೆಸೆಂಟ್, ಸಪ್ರು, ರಾಜೇಂದ್ರ ಪ್ರಸಾದ್ ಮತ್ತು ಆಜಾದರೂ ಇದ್ದರು. ಆಲಿ ಸಹೋದರರು ನೆಹ್ರೂ ವರದಿಯನ್ನು ಬಲವಾಗಿ ವಿರೋಧಿಸಿದರು. ಮತ್ತು "ಸದ್ಯದ ಪರಿಸ್ಥಿತಿ ಬದಲಾಗದ ಹೊರತು ಒಂದು ವರ್ಷದ ವರೆಗೂ ಹಿಂದೂ ಮತ್ತು ಮುಸಲ್ಮಾನರ ಯಾವ ಮಿಶ್ರ ಕೂಟಗಳಲ್ಲಿಯೂ ಭಾಗವಹಿಸುವುದಿಲ್ಲವೆಂದು ಪ್ರತಿಜ್ಞೆ ಕೈಗೊಂಡಿರುವುದಾಗಿ ಷೌಕತ್ ಆಲಿ ಘೋಷಿಸಿದರು. ಈ ಮಧ್ಯೆ ತಮ್ಮ ವೇಳೆ ಮತ್ತು ಶಕ್ತಿಯನ್ನು ಸಂಪೂರ್ಣವಾಗಿ "ಹಿಂದೂಗಳ ವಿರುದ್ಧವಾಗಿಯಲ್ಲ, ಆದರೆ ದೇಶಸೇವೆಗಾಗಿ ಮುಸಲ್ಮಾನರನ್ನು ಸಂಘಟಿಸಲು" ಮುಡುಪಿಡುವುದಾಗಿ ಅವರು ಹೇಳಿದರು.

ಗಾಂಧೀಜಿಯಿಂದ ಮಂಡಿಸಲ್ಪಟ್ಟ ರಾಷ್ಟ್ರೀಯ ಸ್ಥಾನಮಾನದ ಬಗೆಗಿನ ನಿರ್ಣಯವೇ ಕಾರ್ಯಸೂಚಿಯಲ್ಲಿ ಬಹು ಮುಖ್ಯವಾದದ್ದು. "ಸರ್ವಪಕ್ಷೀಯ ಸಮಿತಿಯ ಚಾರಿತ್ರಿಕ

ವರದಿಯ ಸಂಬಂಧದಲ್ಲಿ ಕಾಂಗ್ರೆಸ್ಸಿಗರು ವಹಿಸಬೇಕಾದ ಮುಂದಾಳುತನದ ಬಗೆಗೆ ನಮ್ಮ ಪಕ್ಷದಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿರುವುದು ತೆರೆದ ಸತ್ಯವಾಗಿದೆ" ಎಂದು ಅವರು ಆರಂಭದಲ್ಲಿ ಹೇಳಿದರು. ಶ್ರೀನಿವಾಸಯ್ಯಂಗಾರ್, ಜವಹರಲಾಲ್ ನೆಹ್ರೂ ಮತ್ತು ಸುಭಾಷ್‌ಚಂದ್ರ ಬೋಸರು ರಾಷ್ಟ್ರೀಯ ಸ್ಥಾನಮಾನದ ಕಲ್ಪನೆಗೆ ಬಹುಮಟಿಗೆ ವಿರೋಧವಾಗಿದ್ದರು. ಆದರೆ ಮೋತಿಲಾಲ ನೆಹ್ರೂರವರು ತಮ್ಮ ವರದಿಯ ಪರವಾದ ನಿರ್ಣಯಕ್ಕೆ ಬಹುಮತ ದೊರೆಯದಿದ್ದಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗುವುದಿಲ್ಲವೆಂದು ಸ್ಪಷ್ಟಪಡಿಸಿದರು. ಗಾಂಧೀಜಿ ಮಧ್ಯಮ ಮಾರ್ಗವನ್ನು ಅವಲಂಬಿಸಿ ಹೀಗೆ ಸೂಚಿಸಿದರು: "೧೯೩೦ರ ಡಿಸೆಂಬರ್ ೩೧ರಂದು ಅಥವಾ ಅಷ್ಟರೊಳಗೆ ಸಂವಿಧಾನವು ಅಂಗೀಕೃತವಾಗದಿದ್ದಲ್ಲಿ ಕಾಂಗ್ರೆಸ್ಸು ಅದಕ್ಕೆ ಬದ್ಧವಾಗಿರುವುದಿಲ್ಲ. ಅಲ್ಲದೆ ಆವೇಳೆಯೊಳಗೆ ಬ್ರಿಟಿಷ್ ಪಾರ್ಲಿಮೆಂಟು ಸಂವಿಧಾನವನ್ನು ಅಂಗೀಕರಿಸದಿದ್ದ ಸಂದರ್ಭದಲ್ಲಿ ಕಾಂಗ್ರೆಸ್ಸು ಅಹಿಂಸಾತ್ಮಕ ಅಸಹಕಾರವನ್ನು ಮತ್ತೆ ಕಾರ್ಯರೂಪಕ್ಕೆ ತರುತ್ತದೆ.

"ಆದ್ದರಿಂದ ನೀವು ಆ ವರದಿಯನ್ನು ಪೂರ್ಣ ಮನಸ್ಸಿನಿಂದ ಮತ್ತು ದುಡಿಯಬೇಕೆಂಬ ದೃಢ ನಿರ್ಧಾರದೊಂದಿಗೆ ಒಪ್ಪಿಕೊಳ್ಳಬೇಕೆಂಬುದೇ ನನ್ನ ಇಚ್ಛೆ. ಆ ಕೆಲಸಕ್ಕಾಗಿ ನಿಮ್ಮ ಧ್ಯೇಯದ ತೀಕ್ಷ್ಣತೆಯನ್ನು ಕುಗ್ಗಿಸಿಕೊಳ್ಳುವುದು ನನಗಿಷ್ಟವಿಲ್ಲ. ಈ ದೇಶದ ಅತ್ಯಂತ ಆವೇಶಯುತ ಹೃದಯಗಳಲ್ಲಿ ಪ್ರಜ್ವಲಿಸುತ್ತಿರುವಷ್ಟೆ ಪ್ರಕಾಶಮಾನವಾಗಿ ಸ್ವಾತಂತ್ರ್ಯಾಗ್ನಿಯು ನನ್ನ ಅಂತರಾಳದಲ್ಲಿಯೂ ಪ್ರಜ್ವಲಿಸುತ್ತಿದೆ. ಆದರೆ ಮಾರ್ಗಗಳು ಮತ್ತು ವಿಧಾನಗಳು ಬೇರೆಯಾಗುತ್ತವಷ್ಟೆ. ಈ ಭೂಮಿಯ ಮೇಲೆ ನನ್ನ ಬದುಕಿನ ಅವಸಾನ ಸಮೀಪವಾದಾಗ ನಾನು ದುರ್ಬಲನಾದಂತೆನಿಸಬಹುದು. ಆಗ ನೀವು ನನ್ನ ಮಾತುಗಳಿಗೆ ಕಿವಿಗೊಡುವುದಿಲ್ಲ; ತಿರಸ್ಕಾರಪೂರ್ವಕವಾಗಿ ವೇದಿಕೆಯಿಂದ ನನ್ನನ್ನು ಓಡಿಸಿಬಿಡುತ್ತೀರಿ. ದೌರ್ಬಲ್ಯದ ಕಾರಣದಿಂದ ರಾಷ್ಟ್ರದ ಸೇವೆಗೆ ನಾನು ಅನರ್ಹನೆಂದು ಬಗೆಯುತ್ತೇನೆ. ನಾನು ರಾಷ್ಟ್ರಕ್ಕಾಗಿ ನಿವೇದಿಸಬೇಕೆಂದು ಬಯಸುವುದು ನನ್ನಲ್ಲಿರುವ ಅಲ್ಪಸ್ವಲ್ಪ ಶಕ್ತಿಯನ್ನೆ ಹೊರತು ನನ್ನ ಅಶಕ್ತತೆಯನ್ನಲ್ಲ."

ತರುಣ ಗುಂಪಿನವರು ಗಾಂಧೀಜಿಯನ್ನು ತೀವ್ರವಾಗಿ ವಿರೋಧಿಸಿದರು. ಬ್ರಿಟಿಷ್ ಕಾಮನ್‌ವೆಲ್ತ್‌ನೊಡನೆ ಇರಬೇಕಾದ ಭಾರತದ ಭವಿಷ್ಯಒಡನಾಟದ ಬಗೆಗೆ ಸರ್ವಪಕ್ಷೀಯ ಸಮಿತಿಯಲ್ಲಿ ಉಂಟಾಗಿದ್ದ ವಿವಾದ ಮತ್ತೆ ತಲೆಯೆತ್ತಿತ್ತು. ಈ ಬಾರಿ ಜವಹರಲಾಲರು ಸಹ ಸೇರಿದಂತೆ ಅಧಿಕ ಸಂಖ್ಯೆಯ ಜನ ರಾಷ್ಟ್ರೀಯ ಸ್ಥಾನಮಾನವನ್ನು ನಿರಾಕರಿಸಿದಲ್ಲದೆ, ಬ್ರಿಟಿಷ್ ಸಂಬಂಧ ಸಂಪೂರ್ಣವಾಗಿ ಕಳಚಿಹೋದಲ್ಲದೆ ನಿಜವಾದ ಸ್ವಾತಂತ್ರ್ಯವಿರುವುದಿಲ್ಲವೆಂದು ದೃಢವಾಗಿ ಹೇಳಿದರು. ತಮ್ಮ ತಿದ್ದುಪಾಡನ್ನು ಕುರಿತು ಮಾತನಾಡುತ್ತ ಜವಹರಲಾಲರು ಹೇಳಿದರು: "ಕಾರ್ಯಕಾರೀ ಸಮಿತಿಯು ಶಿಫಾರಸು ಮಾಡಿದ ನಿರ್ಣಯವನ್ನು ಆ ಸಮಿತಿಯ ಕಾರ್ಯದರ್ಶಿಯೆ ಪ್ರಶ್ನಿಸುವುದು ಅನುಚಿತ. ಗಾಂಧೀಜಿಯಿಂದ ಸೂಚಿಸಲ್ಪಟ ನಿರ್ಣಯವನ್ನು ಪ್ರತಿಭಟಿಸುವ ನನ್ನನ್ನು ಧಾರ್ಷ್ಟ್ಯ ವ್ಯಕ್ತಿಯೆಂದು

ತಿಳಿಯಬಹುದು. ಆದರೂ ಅವರ ಪಾದಗಳ ಬಳಿ ನಾನು ಕಲಿತ ಉಪದೇಶದಿಂದಾಗಿ, ಅವರ ನೇತೃತ್ವದಲ್ಲಿ ದುಡಿಯುವ ಮಹಾಸೌಭಾಗ್ಯ ದೊರೆತಿದ್ದಾಗ ಅವರು ನನಗೆ ಕಲಿಸಿದ ಪಾಠದಿಂದಾಗಿ ಹಾಗೆ ಮಾಡುವುದು ನನ್ನ ಕರ್ತವ್ಯವೆಂದು ಕಂಡುಬಂದಿತು."

ಕಾಂಗ್ರೆಸ್ ವ್ಯೂಹ ಒಡೆಯುವುದು ಅನಿವಾರ್ಯವೆಂಬಂತೆ ಕಂಡುಬಂದಿತು. ಆದರೆ ಮಂಖಂಡರೊಡನೆ ನಡೆಸಿದ ದೀರ್ಘಮಾತುಕತೆಯ ನಂತರ ಗಾಂಧೀಜಿ ಒಂದು ಒಪ್ಪಂದ ವನ್ನು ಕುದುರಿಸಿದರು. ಅದರ ಪ್ರಕಾರ ನೆಹ್ರೂ ವರದಿಯು ಶಿಫಾರಸು ಮಾಡಿದ ಸಂವಿಧಾನವನ್ನು ಅಂಗೀಕರಿಸಲು ಪಾರ್ಲಿಮೆಂಟಿಗೆ ಎರಡು ವರ್ಷಗಳ ಬದಲು ಒಂದು ವರ್ಷದ ಕಾಲಮಿತಿಯನ್ನು ನೀಡಬೇಕೆಂಬುದಾಗಿ ನಿರ್ಣಯದ ವಾಕ್ಯವನ್ನು ಬದಲಾಯಿಸ ಲಾಯಿತು. ವರದಿಯ ಜೊತೆಯಲ್ಲಿ ನಿರ್ಣಯದ ಪ್ರತಿಯನ್ನು ವೈಸರಾಯರಿಗೆ ಕಳುಹಿಸ ಬೇಕೆಂದಿದ್ದ ಮೂಲನಿರ್ಣಯದ ಉಪವಾಕ್ಯವನ್ನು ಕೈಬಿಡಲಾಯಿತು. ಸ್ವಾತಂತ್ರ್ಯ ಪ್ರಚಾರಕರು ಕಾಂಗ್ರೆಸ್ಸಿನ ಹೆಸರಿನಲ್ಲಿ ತಮ್ಮ ಚಳುವಳಿಯನ್ನು ಮುನ್ನಡೆಸುವ ಅವಕಾಶ ನೀಡುವ ಸಲುವಾಗಿ ಸ್ವಾತಂತ್ರ್ಯದ ಪ್ರಚಾರಕ್ಕೆ ಸಂಬಂಧಿಸಿದ ವಾಕ್ಯವನ್ನು ತಿದ್ದುಪಡಿ ಮಾಡಲಾಯಿತು. ಸರ್ವಪಕ್ಷೀಯ ಸಮಿತಿಯ ವರದಿಯು ಶಿಫಾರಸು ಮಾಡಿದ ಸಂವಿಧಾನವು ತಿರಸ್ಕೃತವಾದಲ್ಲಿ ಅಥವಾ ೧೯೨೯ ಡಿಸೆಂಬರ್ ೩೧ರ ಹೊತ್ತಿಗೆ ಸ್ವೀಕೃತ ವಾಗದಿದ್ದಲ್ಲಿ ಕಾಂಗ್ರೆಸ್ಸು ಕರ ನಿರಾಕರಣೆಗೆ ದೇಶಕ್ಕೆ ಕರೆಕೊಡುವ ಮೂಲಕ ಅಹಿಂಸಾತ್ಮಕ ಅಸಹಕಾರವನ್ನು ಮತ್ತು ಮುಂದೆ ನಿರ್ಣಯವಾಗುವ ಅಂಥ ಇತರ ಮಾರ್ಗಗಳನ್ನು ವ್ಯವಸ್ಥೆಗೊಳಿಸುವುದೆಂದು ಅದು ಘೋಷಿಸಿತು. ನಿರ್ಣಯವು ವಿಷಯ ಸಮಿತಿಯಲ್ಲಿ ೧೧೮ ಮತಗಳ ಪರ ಮತ್ತು ೪೫ ಮತಗಳ ವಿರೋಧದಿಂದ ಅಂಗೀಕಾರ ಪಡೆಯಿತು.

ಬಹಿರಂಗ ಸಭೆಯಲ್ಲಿ ಸುಭಾಷ್‌ಚಂದ್ರ ಬೋಸರು ರಾಜಿ ನಿರ್ಣಯಕ್ಕೆ ಒಂದು ತಿದ್ದುಪಡಿಯನ್ನು ಸೂಚಿಸಿದರು ; ಜವಾಹರಲಾಲ ನೆಹ್ರೂ ಸಹ ಅದನ್ನು ಬೆಂಬಲಿ ಸಿದರು. ಆದರೆ ಇಬ್ಬರೂ ಆ ರಾಜಿಯಲ್ಲಿ ಭಾಗಿಗಳಾದವರೆ. ಇದರಿಂದ ನೊಂದುಕೊಂಡ ಗಾಂಧೀಜಿ ಹೀಗೆ ಹೇಳಿದರು: "ಮುಸಲ್ಮಾನರು ಅಲ್ಲಾನ ಹೆಸರನ್ನು ಅಥವಾ ಪವಿತ್ರ ಹಿಂದೂಗಳು ಕೃಷ್ಣ ಅಥವಾ ರಾಮನ ಹೆಸರನ್ನುಚ್ಚರಿಸುವಂತೆ ನೀವು ಸ್ವಾತಂತ್ರ್ಯದ ಹೆಸರನ್ನು ಮತ್ತೆ ಮತ್ತೆ ಉಚ್ಚರಿಸಬಹುದು. ಆದರೆ ಅದರ ಹಿಂಬದಿಯಲ್ಲಿ ಯಾವ ನಿಷ್ಠೆ ಗೌರವಗಳೂ ಇಲ್ಲದಿದ್ದಲ್ಲಿ ಎಲ್ಲ ಜಪವೂ ಒಂದು ಅರ್ಥಶೂನ್ಯ ಸೂತ್ರವಾಗುತ್ತದೆ. ನಿಮ್ಮ ಮಾತಂಗಳಿಗನುಗುಣವಾಗಿ ನಡೆದುಕೊಳ್ಳಲು ನೀವು ಸಿದ್ಧರಾಗದಿದ್ದಲ್ಲಿ ಸ್ವಾತಂತ್ರ್ಯ ವೆಲ್ಲಿರುತ್ತದೆ? ಸ್ವಾತಂತ್ರ್ಯವೆಂಬುದು ಕಟುಸಾಮಗ್ರಿಯಿಂದ ಮಾಡಿದ್ದು. ಮಾತಿನ ಕಸರತ್ತಿನಿಂದ ಅದು ಸಿದ್ಧವಾಗುವುದಿಲ್ಲ." ಸುಭಾಷ್‌ಚಂದ್ರ ಬೋಸರ ತಿದ್ದುಪಡಿಯ ಬಗೆಗಿನ ವಿರಸವು ಒಂದು ಗಂಟೆ ಕಾಲ ಮುಂದುವರಿಯಿತು ಮತ್ತು ೯೭೩ ಮತಗಳ ಪರ ಮತ್ತು ೧೩೫೦ ಮತಗಳ ವಿರೋಧದಿಂದ ಅದು ಬಿದ್ದುಹೋಯಿತು.

ಮತ್ತೊಂದು ನಿರ್ಣಯದ ಮೂಲಕ ಗಾಂಧೀಜಿ, ಬರುವ ವರ್ಷದ ಕಾರ್ಯಕ್ರಮ ಗಳನ್ನು ರೇಖಿಸಿದರು. ಪಾನನಿರೋಧವನ್ನು ಜಾರಿಗೆ ತರುವ ಸಲುವಾಗಿ ವಿಧಾನಸಭೆ

ಗಳಲ್ಲಿ ಮತ್ತು ಹೊರಗೆ ಕಾಂಗ್ರೆಸ್ಸಿಗರು ಪ್ರಯತ್ನಿಸಬೇಕು, ಖಾದಿಯ ಉತ್ಪಾದನೆ ಹಾಗೂ ಬಳಕೆಗೆ ಉತ್ತೇಜನ ನೀಡುವುದಲ್ಲದೆ ಪ್ರಚಾರದ ಮೂಲಕ ಕೂಡಲೆ ಅವರು ವಿದೇಶೀ ವಸ್ತ್ರದ ಬಹಿಷ್ಕಾರವನ್ನು ಕಾರ್ಯರೂಪಕ್ಕೆ ತರಲು ತೊಡಗಬೇಕು; ಕಾಂಗ್ರೆಸ್ ಟಿಕೆಟ್ಟನ್ನು ಪಡೆದು ಗೆದ್ದ ಶಾಸಕರು ತಮ್ಮ ಹೆಚ್ಚಿನ ವೇಳೆಯನ್ನು ರಚನಾತ್ಮಕ ಕಾರ್ಯ ಕ್ರಮಗಳಿಗೆ ಮುಡುಪಾಗಿಡುವಂತೆ ಕೇಳಿಕೊಳ್ಳಲಾಯಿತು. ಮಹಿಳೆಯರ ಸ್ಥಾನಮಾನ ಗಳ ಉತ್ತಮೀಕರಣ, ಸಾಮಾಜಿಕ ಅನ್ಯಾಯಗಳ ನಿರ್ಮೂಲನ, ಗ್ರಾಮಪುನರ್ರಚನೆ ಮತ್ತು ನಗರದ ಶ್ರಮಜೀವಿಗಳ ಸಂಘಟನೆ–ಇವು ಕಾರ್ಯಕ್ರಮಕ್ಕೆ ಸೇರಿದ್ದ ಹೊಸ ವಿಷಯಗಳಾಗಿದ್ದುವು.

"ರಚನಾತ್ಮಕ ಕಾರ್ಯಕ್ರಮದ ಮೂಲಕ ಮಾತ್ರವೆ ಅಸಹಕಾರದ ಪುನರುಜ್ಜೀವನ ಸಾಧ್ಯ"ವೆಂದು ಅವರು ಹೇಳಿದರು. "ನೆಹ್ರೂ ವರದಿಯು ಫಲಕಾರಿಯಾಗಬೇಕೆಂದು ನೀವು ಬಯಸುವಲ್ಲಿ, ಕಡೆಯ ಪಕ್ಷ ನೀವು ಮಾಡಬಹುದಾದುದೆಂದರೆ ಈ ನಿರ್ಣಯ ವನ್ನು ಜಾರಿಗೆ ತರಲು ಶ್ರಮಿಸುವುದು."

ಕಾಂಗ್ರೆಸ್ ಅಧಿವೇಶನವನ್ನು ಮುಕ್ತಾಯಗೊಳಿಸುತ್ತ ಮೋತಿಲಾಲ ನೆಹ್ರೂ ರವರು ಹೇಳಿದರು: "ಸುಭಾಷ್ ಮತ್ತು ಜವಾಹರರು ಮಹಾತ್ಮಾಜಿಯವರ ನಿರ್ಣಯದ ತಿದ್ದುಪಡಿಯ ಮೇಲೆ ಮಾಡಿದ ತಮ್ಮ ಭಾಷಣಗಳಲ್ಲಿ ವೃದ್ಧರಾದ ನಾವು ನಿಷ್ಪ್ರಯೋಜಕ ರೆಂಬ, ನಮ್ಮಲ್ಲಿ ಸಾಕಷ್ಟು ಶಕ್ತಿಯಿಲ್ಲವೆಂಬ ಮತ್ತು ನಾವು ತುಂಬ ಹಿಂದುಳಿದಿದ್ದೇವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಹೊಸದೇನೂ ಇಲ್ಲ. ವೃದ್ಧರು ಕಾಲಕ್ಕೆ ತಕ್ಕಂತಿಲ್ಲವೆಂದು ಯುವಕರು ಗಣಿಸುವುದು ಈ ಪ್ರಪಂಚದಲ್ಲಿ ಸಾಮಾನ್ಯ. ನಾನು ನಿಮಗೆ ಒಂದು ಸಲಹೆಯ ಮಾತನ್ನು ಹೇಳುತ್ತೇನೆ. ಇಂದಿನಿಂದ ನೀವು ವಿದೇಶಿ ಭಾಷೆಯಿಂದ ಕಡ ತಂದ ಆ ಎರಡು ಪದಗಳನ್ನು ಅಂದರೆ, ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಸ್ಥಾನಮಾನ ಎಂಬುವನ್ನು ನಿಮ್ಮ ಮನಸ್ಸಿನಿಂದ ಅಳಿಸಿ ಹಾಕಿ ಮತ್ತು ಸ್ವರಾಜ್ಯ ಮತ್ತು 'ಆಜಾದಿ' ಎಂಬ ಮಾತುಗಳನ್ನು ಸ್ವೀಕರಿಸಿ. ಸ್ವರಾಜ್ಯಕ್ಕಾಗಿ–ಅದನ್ನು ನಾವು ಯಾವುದೇ ಹೆಸರಿನಿಂದ ಕರೆಯಲಿ–ದುಡಿಯೋಣ. ಮಹಾತ್ಮಾಜಿ ನಿಮ್ಮ ಮುಂದೆ ಇಟ್ಟಿರುವ ಮತ್ತು ನೀವು ಒಪ್ಪಿಕೊಂಡಿರುವ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತನ್ನಿ. ರಾಷ್ಟ್ರದ ಇತಿಹಾಸದಲ್ಲಿ ಒಂದು ವರ್ಷವೆಂಬುದು ಅತ್ಯಲ್ಪ. ನಾವು ಒಗ್ಗಟ್ಟಾಗಿರು ವುದನ್ನು ಹಾಗೂ ಮತ್ತೊಂದು ಹೆಜ್ಜೆ ಮುನ್ನಡೆದಿರುವುದನ್ನು ಮುಂಬರುವ ಅಧಿವೇಶನ ಕಾಣುತ್ತದೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ."

ಮುಸ್ಲಿಂ ಲೀಗ್ ಸಹ ಡಿಸೆಂಬರ್ ೨೬ರಂದು ಕಲ್ಕತ್ತದಲ್ಲಿ ತನ್ನ ಅಧಿವೇಶನವನ್ನು ಜರುಗಿಸಿತು. ಅಲ್ಲಿ ಹಾಜರಿದ್ದವರಲ್ಲಿ ಮೌಲಾನ ಆಜಾದ್, ಡಾ. ಕಿಚಲೂ, ಫಜಲುಲ್ ಹಕ್ ಮತ್ತು ಸರ್ ಆಲಿ ಇಮಾಮರು ಮುಖ್ಯರು. ಆಲಿ ಸಹೋದರರು ಸಭೆಯಲ್ಲಿ ಭಾಗವಹಿಸಲಿಲ್ಲ. ನೆಹ್ರೂ ವರದಿಯ ಕಟ್ಟಾ ಬೆಂಬಲಿಗರಾದ, ಮಹಮುದಾಬಾದಿನ

ರಾಜ ಅಧ್ಯಕ್ಷನಾಗಿ ಚುನಾಯಿತನಾದನು. ನೆಹ್ರೂ ವರದಿ ತಿದ್ದುಪಡಿಯಾಗಬೇಕೆಂದು ಜಿನ್ನಾ ಅಪೇಕ್ಷಿಸಿದರು. ಆದರೆ ಆ ದಿಸೆಯಲ್ಲಿ ಕಾಂಗ್ರೆಸ್ ಮುಖಂಡರಿಂದ ಯಾವ ಪ್ರೋತ್ಸಾಹವೂ ಅವರಿಗೆ ಸಿಗದಿದ್ದುದರಿಂದ ಲೀಗ್ ಅಧಿವೇಶನ ಮುಖ್ಯ ನಿರ್ಣಯ ವೊಂದೂ ಇಲ್ಲದೆಯೆ ಮುಂದೂಡಲ್ಪಟ್ಟಿತು.

ಕಲ್ಕತ್ತೆಯಲ್ಲಿ, ಕೈಗಾರಿಕಾ ಕಾರ್ಮಿಕರು ಈಗ ಕ್ರಾಂತಿಕಾರಕ ಮನೋಭಾವದಲ್ಲಿದ್ದಾರೆಂಬ ಸಂಗತಿ ಹಠಾತ್ತನೆ ಕಾಂಗ್ರೆಸ್ಸಿನ ಎದುರು ನಿಂತಿತು. ಒಂದು ವರ್ಷದ ಸಾವಕಾಶದ ಸೂಚನೆಯಿಂದ ಸಹನೆಯನ್ನು ಕಳೆದುಕೊಂಡ ಸುಮಾರು ಐವತ್ತು ಸಾವಿರ ಮಂದಿ ಸಭಾ ಮೈದಾನಕ್ಕೆ ಮೆರವಣಿಗೆ ಹೊರಟು, ರಾಷ್ಟ್ರಧ್ವಜವನ್ನು ವಂದಿಸಿತು. ಅನಂತರ ಕಾಂಗ್ರೆಸ್ ಮಂಟಪವನ್ನು ಮುತ್ತಿ ವಶಪಡಿಸಿಕೊಂಡಿತು. ಅಲ್ಲಿ ಅವರ ಮುಖಂಡರು ಶೀಘ್ರ ಸ್ವಾತಂತ್ರ್ಯದ ಪರವಾಗಿ ಒಂದು ನಿರ್ಣಯವನ್ನು ಕೈಗೊಂಡರು.

ನೆಹ್ರೂ ಸಮಿತಿಯ ವರದಿ ಎಲ್ಲ ದಿಕ್ಕುಗಳಿಂದಲೂ ಟೀಕೆಗೆ ಗುರಿಯಾಯಿತು. ಆದರೆ ಗಾಂಧೀಜಿ ಅಧೈರ್ಯಗೊಳ್ಳಲಿಲ್ಲ: "ನೀವು ನನಗೆ ಸಹಾಯ ಮಾಡುವುದಾದಲ್ಲಿ ಮತ್ತು ನಾನು ಸೂಚಿಸಿರುವ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಮತ್ತು ಚುರುಕಾಗಿ ಪಾಲಿಸುವುದಾದಲ್ಲಿ ಸ್ವರಾಜ್ಯವು ಒಂದು ವರ್ಷದೊಳಗೆ ಪ್ರಾಪ್ತವಾಗುತ್ತದೆಂದು ನಾನು ಭರವಸೆ ನೀಡುತ್ತೇನೆ."

# ಅನುಗ್ರಹವರ್ಷ

## ೧೯೨೮

ಗಾಂಧೀಜಿ ಯೂರೋಪಿಗೆ ಹೋಗುವ ಉದ್ದೇಶ ಹೊಂದಿದ್ದರಾದರೂ ತಾವು ಅಂದಿನ ಪರಿಸ್ಥಿತಿಯಲ್ಲಿ ಭಾರತದಲ್ಲಿರಲೇಬೇಕೆಂದು ಯೋಚಿಸಿದರು. "ಕಾಂಗ್ರೆಸ್ಸಿನ ಮುಂದೆ ರಚನಾತ್ಮಕ ನಿಲುವಳಿಯನ್ನು ಮಂಡಿಸಿ ಅದಕ್ಕೆ ಸಾರ್ವತ್ರಿಕ ಬೆಂಬಲವನ್ನು ಪಡೆದುಕೊಂಡಿರುವ ಈ ಸಮಯದಲ್ಲಿ ನಾನು ಯೂರೋಪಿಗೆ ಹೋದರೆ ಜವಾಬ್ದಾರಿಯಿಂದ ನುಣುಚಿಕೊಂಡಂತಾಗುತ್ತದೆ" ಎಂದು ೧೯೨೯ರ ಜನವರಿ ೩೧ರ ಯಂಗ್ ಇಂಡಿಯಾದಲ್ಲಿ ಅವರು ಬರೆದರು. "ಮುಂಬರುವ ಎಲ್ಲಕ್ಕೂ ನಾನು ಸ್ವತಃ ಸಿದ್ಧನಾಗಿರಬೇಕಲ್ಲದೆ ಫಲಪ್ರಾಪ್ತಿಯ ಮಾರ್ಗವನ್ನು ಆಲೋಚಿಸಿ ಸೂಚಿಸಬೇಕೆಂದು ನನ್ನ ಅಂತರ್ವಾಣಿಯು ನುಡಿಯುತ್ತಿದೆ. ಇದು ನನಗೆ ಒಂದು ಮಹಾಕಾರ್ಯಕ್ರಮವೇ ಆಗುತ್ತದೆ. ಎಲ್ಲಕ್ಕೂ ಮಿಗಿಲಾಗಿ ಮುಂದಿನ ವರ್ಷದ ಹೋರಾಟಕ್ಕೆ –ಅದು ಯಾವುದೇ ಸ್ವರೂಪವನ್ನು ಪಡೆಯಲಿ–ನಾನು ಸಜ್ಜುಗೊಳ್ಳಬೇಕಾಗಿದೆ. ನೆಹ್ರೂ ಸಮಿತಿಯ ವರದಿಯು ಈ ವರ್ಷಾಂತ್ಯದೊಳಗೆ ಬ್ರಿಟಿಷ್ ಜನರಿಂದ ಅಥವಾ ಅವರ ಪರವಾಗಿ ಅಂಗೀಕಾರ ಪಡೆಯದಿದ್ದಲ್ಲಿ ಡಿಸೆಂಬರ್ ೩೧ರ ಮಧ್ಯರಾತ್ರಿಯಿಂದಾಚೆಗೆ ನನ್ನ ದೃಷ್ಟಿಯಲ್ಲಿ ಈ ಹೋರಾಟಕ್ಕೆ ಯಾವ ಅರ್ಥವೂ ಇರುವುದಿಲ್ಲ ಮತ್ತು ನಾನು ಸ್ವತಂತ್ರ ಪ್ರಜೆಯೆಂದು ಸ್ವತಃ ಘೋಷಿಸಿಕೊಳ್ಳಬೇಕಾಗುತ್ತದೆ. ಇದನ್ನು ನಾನು ತೀವ್ರವಾಗಿ ಪರಿಗಣಿಸಿದಲ್ಲಿ ಪರೀಕ್ಷೆಯ ಮತ್ತು ಸಿದ್ಧತೆಯ ಈ ವರ್ಷದಲ್ಲಿ ಬಹುಭಾಗ ಭಾರತದಿಂದ ಹೊರಗೆ ಹೋಗುವುದಕ್ಕಾಗುವುದಿಲ್ಲ. ನನ್ನ ದೇಶಕ್ಕೆ ಹೊರಗಿನಿಂದ ದೊರೆಯಬಹುದಾದ ನೆರವಿನ ಅಗತ್ಯ ನನಗಿಲ್ಲವೆಂದು ಇದರರ್ಥವಲ್ಲ. ಆದರೆ ಅದಕ್ಕಾಗಿ ಭಿಕ್ಷಾಯಾತ್ರೆ ಕೈಗೊಳ್ಳುವ ಇಚ್ಛೆಯಿಲ್ಲ. ನಾವು ಆ ಸಹಾಯಕ್ಕೆ ಅರ್ಹರಾದಾಗ ಅದು ಕೇಳದೆಯೇ ಬರುತ್ತದೆ. ನನಗೆ ವಿಶೇಷ ಸಿದ್ಧತೆಯ ಆವಶ್ಯಕತೆಯಿದೆ. ಆ ಮಧ್ಯದಲ್ಲಿ ಈ ಸಾಲುಗಳು ನನ್ನ ಮತ್ತು ಅವರ ನಡುವೆ ಸಜೀವ ಒಡಂಬಡಿಕೆಯಾಗಿ ಪರಿಣಮಿಸಲಿ."

ಈಗ ಅವರು ಖಾದೀ ಸತ್ವವನ್ನು ಜನಪ್ರಿಯಗೊಳಿಸುವ ಕಡೆ ಹೆಚ್ಚು ಗಮನ ಹರಿಸಿದರು. ಕಾಂಗ್ರೆಸ್ಸಿಗರುಸಹ ಖಾದಿಯ ಮಹತ್ವವನ್ನು ಇನ್ನೂ ಗ್ರಹಿಸಿದಂತೆ ಕಾಣುತ್ತಿರಲಿಲ್ಲ. ಕಲ್ಕತ್ತದ ಕಾಂಗ್ರೆಸ್ ಅಧಿವೇಶನದಲ್ಲಿ ಖಾದಿ ಕಂಠವಸ್ತ್ರ ಮತ್ತು ಮಿಲ್ಲಿನ ಧೋತಿಯನ್ನು ಧರಿಸಿದ್ದ ಪ್ರತಿನಿಧಿಯೊಬ್ಬ ಮತದಾನಕ್ಕೆ ಅರ್ಹನಾಗಲು ತನ್ನ ಧೋತಿಯನ್ನು ತೆಗೆದಿಟ್ಟು ಖಾದಿಯ ಕಂಠವಸ್ತ್ರವನ್ನು ತೊಟ್ಟು ಬರಬೇಕಾಯಿತು. ಅಲ್ಲಿ ಕಾಂಗ್ರೆಸ್ ಅಧ್ಯಕ್ಷರಿಂದ ಉತ್ಸವಪೂರ್ವಕವಾಗಿ ಏರಿಸಲ್ಪಟ್ಟ ಧ್ವಜದಲ್ಲಿ ಚರಕಕ್ಕೆ ಸ್ಥಾನವಿರಲಿಲ್ಲ. ಖಾದಿಯ ಮೂಲಕ ವಿದೇಶಿ ವಸ್ತ್ರವನ್ನು ಬಹಿಷ್ಕರಿಸಲು ಗಾಂಧೀಜಿ ಒಂದು ಯೋಜನೆಯನ್ನು ಸಿದ್ಧಗೊಳಿಸಿದರು.

ಈ ಯೋಜನೆಗನುಗುಣವಾಗಿ, ಸ್ವಯಂಸೇವಕ ಸದಸ್ಯರನ್ನು ಪ್ರತಿಯೊಂದು ಪಟ್ಟಣ ಮತ್ತು ಹಳ್ಳಿಯ ಮನೆ ಮನೆಗೆ ಕಳಿಸಿ ಮನೆಯ ಜನರಲ್ಲಿರುವ ವಿದೇಶೀ ವಸ್ತ್ರಗಳನ್ನು ಸಂಗ್ರಹಿಸಿ ಅವರಿಗೆ ಅಗತ್ಯವಾದ ಖಾದಿಯನ್ನು ಬಟವಾಡೆ ಮಾಡಲು ಇಲ್ಲವೆ ಕೋರಿಕೆಗಳನ್ನು ಸ್ವೀಕರಿಸಲು ಕಾಂಗ್ರೆಸ್ಸಿನ ಸಂಘಗಳಿಗೆ ಕರೆ ನೀಡಲಾಯಿತು. ಎಲ್ಲ ಬಗೆಯ ಖಾದಿಯೂ ಅಖಿಲ ಭಾರತ ನೇಕಾರ ಸಂಘದ ಮುದ್ರೆಯನ್ನು ಹೊಂದಿರಬೇಕು ಮತ್ತು ಬೆಲೆಗಳು ಅದರಲ್ಲಿ ಸ್ಪಷ್ಟವಾಗಿ ನಮೂದಿಸಲ್ಪಟ್ಟಿರಬೇಕು. ಖಾದಿಯ ಬಳಕೆಯನ್ನು ಜನಪ್ರಿಯಗೊಳಿಸಲು ಮತ್ತು ವಿದೇಶಿ ವಸ್ತ್ರದ ಸಂಪೂರ್ಣ ಬಹಿಷ್ಕಾರವನ್ನು ಪ್ರಚಾರ ಮಾಡಲು ಸ್ವಯಂಪ್ರೇರಿತ ಪ್ರಚಾರಕರಿಗೆ ಕರೆನೀಡಬೇಕು. ಸಂಗ್ರಹಿತ ವಿದೇಶಿ ವಸ್ತ್ರಗಳನ್ನು ಎಲ್ಲಿ ಸಾಧ್ಯವೊ ಅಲ್ಲಿ ಸಾರ್ವಜನಿಕವಾಗಿ ಸುಡಬೇಕು. ವಿದೇಶಿ ವಸ್ತ್ರದ ವ್ಯಾಪಾರಿಗಳನ್ನು ಪ್ರತ್ಯೇಕವಾಗಿ ಭೇಟಿಮಾಡಿ ವಿದೇಶೀ ವಸ್ತ್ರವನ್ನು ಕೊಳ್ಳುವುದನ್ನು ನಿಲ್ಲಿಸುವಂತೆ ಒತ್ತಾಯಮಾಡಬೇಕು. ವಿದೇಶೀ ವಸ್ತ್ರದ ಮಳಿಗೆಗಳಿಗೆ ಶಾಂತಿಯುತವಾಗಿ ತಡೆಗಾವಲು ಹಾಕಬೇಕು. ಪ್ರಾಂತೀಯ ಶಾಸನಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಗಳಲ್ಲಿ ತಮ್ಮ ಎಲ್ಲ ವಸ್ತ್ರಸಂಬಂಧದ ವ್ಯಾಪಾರವನ್ನು, ದುಬಾರಿಯೆಂದು ಹೇಳಲಾಗುವ ಅದರ ಬೆಲೆಯನ್ನು ಗಣಿಸದೆಯೆ ಖಾದಿಯಲ್ಲೇ ನಡೆಸಬೇಕೆಂದು ತಂತಮ್ಮ ಸರ್ಕಾರಗಳನ್ನು ಕೇಳಿಕೊಳ್ಳಬೇಕು. ಜೊತೆಗೆ ವಿದೇಶೀ ವಸ್ತ್ರದ ಆಮದಿನ ಮೇಲೆ ನಿರೋಧಾತ್ಮಕ ತೆರಿಗೆಯನ್ನು ಹಾಕಬೇಕೆಂಬ ನಿಲುವಳಿಯನ್ನು ಮಂಡಿಸಬೇಕು; ವಿದೇಶಿ ವಸ್ತ್ರ ಬಹಿಷ್ಕಾರ ಸಮಿತಿಗಳು ರಚನೆಗೊಂಡು ಪ್ರಚಾರಪತ್ರಗಳ ಮುದ್ರಣ ಮತ್ತು ಹಂಚಿಕೆಯ ಕೆಲಸವನ್ನು ವಹಿಸಿಕೊಳ್ಳಬೇಕು.

"ಬೇರೆ ಯಾವ ಮಾರ್ಗಗಳಿಂದಲೂ ಬಹಿಷ್ಕಾರವನ್ನು ಸಾಂಗಗೊಳಿಸುವುದು ಸಾಧ್ಯವಿಲ್ಲವೆಂಬುದು ಮನವರಿಕೆಯಾಗಲಿ. ಈ ಬಹಿಷ್ಕಾರದಲ್ಲಿ ಸ್ಥಳೀಯ ಮಿಲ್ಲುಬಟ್ಟೆಯ ಸ್ಥಾನವೇನೆಂಬುದರ ಬಗೆಗೆ ಯಾರೂ ಚಿಂತಿಸಬೇಕಾಗಿಲ್ಲ. ಈ ಬಟ್ಟೆ ತನ್ನನ್ನು ತಾನೇ ರಕ್ಷಿಸಿಕೊಂಡಿದೆ ಮತ್ತು ಮುಂದೆಯೂ ರಕ್ಷಿಸಿಕೊಳ್ಳುತ್ತದೆ. ನಾವು ಸಂಧಿಸುವ ಎಲ್ಲರೂ ಖಾದಿಯನ್ನುಡುವಂತೆ ಮಾಡುವುದೇ ನಾವೀಗ ಅಗತ್ಯವಾಗಿ ನಿರ್ವಹಿಸಬೇಕಾದ ಕೆಲಸ. ನಾವು ಇಬ್ಬಗೆಯಾಗಿ ಮಾತನಾಡಿದಲ್ಲಿ ಬಹಿಷ್ಕಾರವನ್ನು ಸಾಂಗಗೊಳಿಸುವುದರಲ್ಲಿ ನಿಷ್ಫಲರಾಗುತ್ತೇವೆ. ಸ್ಥಳೀಯ ಮಿಲ್ಲುಬಟ್ಟೆಯ ಬೆಲೆಗಳನ್ನು ಏರಿಸುವುದರಲ್ಲಿ ಮತ್ತು ನಿಷ್ಠಾಹೀನ ಮಿಲ್ ಮಾಲೀಕರು ಬೆಪ್ಪು ಮಂದಿಯನ್ನು ಮೋಸಗೊಳಿಸುವಂತೆ ಪ್ರಲೋಭಿಸುವುದರಲ್ಲಿ ಮಾತ್ರ ನಾವು ಯಶಸ್ವಿಯಾಗಬಹುದು" ಎಂದು ಗಾಂಧೀಜಿ ನುಡಿದರು.

ಜನವರಿ ೧ರಂದು ಕಲ್ಕತ್ತದಲ್ಲಿ ಗಾಂಧೀಜಿ ಖಾದಿ ಭಂಡಾರದ ಆರಂಭೋತ್ಸವವನ್ನು ನೆರವೇರಿಸಿದರು. ಕೊನೆಯ ಪಕ್ಷ ಎರಡು ರೂಪಾಯಿ ಬೆಲೆಯ ಖಾದಿಯನ್ನಾದರೂ ಕೊಳ್ಳಲು ಸಿದ್ಧರಾದವರಿಗೆ ಮಾತ್ರ ಸಮಾರಂಭದಲ್ಲಿ ಪಾಲ್ಗೊಳ್ಳುವ ಅವಕಾಶವಿತ್ತು.

ಒಂದು ಗಂಟೆಯಲ್ಲಿ ೩೫೨ ಜನರು ೫,೦೦೦ ರೂ.ಗಳ ಬೆಲೆಯ ಖಾದಿಯನ್ನು ಖರೀದಿ ಮಾಡಿದರು; ಮತ್ತು ಗಾಂಧೀಜಿಯ ಸಹಿಯಿದ್ದ ರಶೀತಿಗಳನ್ನು ಪಡೆದರು.

ಆಶ್ರಮ ವ್ಯವಹಾರಗಳನ್ನು ಪರಿಶೀಲಿಸಲು ಅವರು ಅಹಮದಾಬಾದಿಗೆ ಮರಳಿದರು. 'ನವಜೀವನ'ದಲ್ಲಿ ಅವರು ಆಶ್ರಮ ನಿವಾಸಿಗಳ ದೌರ್ಬಲ್ಯಗಳನ್ನು ಖಂಡಿಸಿ ಬರೆದರು. 'ನನ್ನ ದುಃಖ, ನನ್ನ ಅವಮಾನ' ಎಂಬ ಒಂದು ಲೇಖನದಲ್ಲಿ ಕಸ್ತೂರಿ ಬಾ ರವರ ಒಂದು ಸಣ್ಣ ತಪ್ಪನ್ನು ಗಮನಕ್ಕೆ ತಂದರು.

"ಈ ಪ್ರಕರಣವನ್ನು ನಾನು ಬರೆಯಬೇಕೇ ಬೇಡವೇ ಎಂದು ಬಹಳ ಕಾಲ ಯೋಚಿಸಿದ ನಂತರ, ಕೊನೆಗೆ, ಬರೆಯದಿದ್ದಲ್ಲಿ ಅದು ಕರ್ತವ್ಯಲೋಪವಾಗುತ್ತದೆಂಬ ನಿರ್ಣಯಕ್ಕೆ ಬಂದೆ. ಅನೇಕ ಮಿತ್ರರು ಸತ್ಯಾಗ್ರಹಾಶ್ರಮದ ವೃತ್ತಿಶಿಕ್ಷಣ ಶಾಲೆಯನ್ನು ಪವಿತ್ರ ಸ್ಥಾನವೆಂದು ಎಣಿಸಿದ್ದರು. ತಮ್ಮ ರೋಗಿಬಂಧುಗಳ ಪವಿತ್ರ ನೆನಪಿನಲ್ಲಿ ಕೆಲವರು ಖಾದಿ ಮೊದಲಾದುವಕ್ಕೆ ದುಡ್ಡನ್ನು ಕಳುಹಿಸುತ್ತಿದ್ದರು. ಅದನ್ನು ನಾನು ಸ್ವೀಕರಿಸುತ್ತಿದ್ದೆ.

"ಇಷ್ಟಾದರೂ ಈ ಮಂದಿರದಲ್ಲಿ ದೊಡ್ಡ ದೊಡ್ಡ ಅಪಚಾರಗಳು ಸಂಭವಿಸಿವೆ. ಅವುಗಳನ್ನು ಆಶ್ರಮ ನಿವಾಸಿಗಳ ಮುಂದೆ ಪ್ರಕಟಿಸಿದ್ದೇನೆ. ಆದರೆ ಅದಷ್ಟೇ ಸಾಲದು. ನನ್ನ ಮತ್ತು 'ನವಜೀವನ'ದ ಓದುಗರ ನಡುವೆ ಪವಿತ್ರ ಬಾಂಧ್ಯವಿದೆ. ನನ್ನ ಮತ್ತು ನನ್ನವರ ನಿಷ್ಕಳಂಕತೆಯನ್ನು ಅವರು ಒಪ್ಪಿದ್ದಾರೆ. ತಪ್ಪನ್ನು ಯಾವಾಗಲೂ ಮುಚ್ಚಿಡಬಾರದೆಂದು ನಾನು ಅನೇಕ ಸಲ ಹೇಳಿದ್ದೇನೆ. ನನ್ನಲ್ಲಿ ಯಾವ ಗುಟ್ಟೂ ಇಲ್ಲ. ಆದ್ದರಿಂದ ಈ ಮಂದಿರದೊಂದಿಗೆ ಸಂಬಂಧವಿರಿಸಿಕೊಂಡಿರುವವರು ಎಸಗಿದ ಎಲ್ಲ ಉಲ್ಲಂಘನೆಗಳನ್ನು ಸಾರ್ವಜನಿಕರ ಮುಂದಿಡಬೇಕಾದುದು ಆವಶ್ಯಕ.

"ಬಾಲ್ಯದಿಂದಲೂ ನನ್ನ ಬಳಿಯಲ್ಲಿಯೇ ಇಟ್ಟುಕೊಂಡು ಮಗನಂತೆ ಬೆಳೆಸಿದ್ದ ಚಗನ್‌ಲಾಲ್ ಗಾಂಧಿ ಅನೇಕ ದುರುಪಯೋಗದ ಕೃತ್ಯಗಳಲ್ಲಿ ಸಿಕ್ಕಿಬಿದ್ದಿದ್ದಾನೆ. ಅವನು ಸಾರ್ವಜನಿಕವಾಗಿ ತನ್ನ ತಪ್ಪೊಪ್ಪಿಕೊಂಡಿದ್ದಲ್ಲಿ ನನ್ನ ವ್ಯಥೆ ಕಡಿಮೆಯಾಗುತ್ತಿತ್ತು. ಆದರೆ ಈ ಎಲ್ಲ ದುಷ್ಕೃತ್ಯಗಳೂ ಅವನ ಜಾಗ್ರತ ಕಾರ್ಯದರ್ಶಿಯಿಂದ ಅಕಸ್ಮಾತ್ತಾಗಿ ಕಂಡುಹಿಡಿಯಲ್ಪಟ್ಟವು. ತನ್ನ ತಪ್ಪನ್ನು ಮುಚ್ಚಿಡಬೇಕೆಂದು ಈ ನನ್ನ ಸೋದರಳಿಯ ಮಾಡಿದ ಪ್ರಯತ್ನವೆಲ್ಲ ನಿಷ್ಫಲವಾದುವು. ಆದರೆ ಅವೆಲ್ಲ ಪ್ರಕಟವಾದಾಗ ಅವನು ತುಂಬ ಪಶ್ಚಾತ್ತಾಪಪಟ್ಟನು. ಅವನೀಗ ವ್ಯಥೆಯಿಂದ ಕಣ್ಣೀರಿಡುತ್ತಾನೆ. ಸದ್ಯಕ್ಕೆ ಅವನು ಸ್ವಪ್ರೇರಣೆಯಿಂದ ಮಂದಿರವನ್ನು ಬಿಟ್ಟು ಹೋಗಿದ್ದಾನೆ. ತನ್ನನ್ನು ಪರಿಶುದ್ಧಗೊಳಿಸಿಕೊಂಡ ಅನಂತರ ಅವನು ಮರಳಿ ಬರುತ್ತಾನೆಂದು ನನಗೆ ನೆಚ್ಚಿಕೆಯಿದೆ. ಮಂದಿರವು ಅವನನ್ನು ಸ್ವಾಗತಿಸುತ್ತದೆ. ಈ ಎಲ್ಲ ಮೋಸದ ಕೆಲಸಗಳೂ ಕ್ಷುದ್ರವಾದುವೆಂದು ಕಂಡುಬಂದಿವೆ. ಅವುಗಳ ಬಗೆಗೆ ಆಲೋಚಿಸಿದನಂತರ ಅದೊಂದು ಚಗನ್‌ಲಾಲನಿಗೆ ಹಿಡಿದಿದ್ದ ವ್ಯಾಧಿಯೆಂಬ ನಿರ್ಧಾರಕ್ಕೆ ಬಂದಿದ್ದೇನೆ. ದುರುಪಯೋಗಗಳಿಂದ ಮಂದಿರಕ್ಕೆ ಯಾವ ಆರ್ಥಿಕ ನಷ್ಟವೂ ಸಂಭವಿಸಿಲ್ಲ. ಚಗನ್‌ಲಾಲನ ಬಳಿ ೧೦,೦೦೦

ರೂ.ಗಳ ಉಳಿತಾಯದ ಹಣವಿದೆ. ಅವುಗಳ ವಿವರವನ್ನು ತಿಳಿಯಲು ನಾನು ಹೋಗುವುದಿಲ್ಲ. ನನ್ನ ಸಲಹೆಯ ಪ್ರಕಾರ ಅವನು ಅದಷ್ಟನ್ನೂ ಮಂದಿರಕ್ಕೆ ಕೊಟ್ಟುಬಿಟ್ಟಿದ್ದಾನೆ. ನಿಷ್ಠುರ ಕರ್ತವ್ಯಪ್ರಜ್ಞೆ ಈ ಕೃತ್ಯಕ್ಕೆ ಕಾರಣವೇ ಹೊರತು ಹೃದಯದ ಔದಾರ್ಯವಲ್ಲ. ಬೇಸ್ವತ್ತಿನ ಶಪಥ ಮಾಡಿರುವವನು ಸ್ವಂತ ಆಸ್ತಿಯನ್ನು ಹೊಂದಿರುವುದು ಸಾಧ್ಯವಿಲ್ಲ. ಚಗನ್‌ಲಾಲ್ ಗಾಂಧಿ ಅದನ್ನು ಪಡೆದಿದ್ದನು. ಅದು ನನಗೆ ನೋವುಂಟುಮಾಡಿತು. ಚಗನ್‌ಲಾಲ್ ಹಾಗೂ ಅವನ ಹೆಂಡತಿ ಮತ್ತು ಅವನ ಇಬ್ಬರು ಮಕ್ಕಳಿಗೆ ಆ ಹಣವನ್ನು ತಾವು ಇಟ್ಟುಕೊಳ್ಳಬಾರದೆನಿಸಿತು. ಅವರಿಂದ ಮಂದಿರಕ್ಕೆ ಅದು ಲಭಿಸಿತು. ಈಗ ಚಗನ್‌ಲಾಲ್‌ಗೆ ಅವನ ತಂದೆಯ ಆಸ್ತಿಯಲ್ಲಿರುವ ಪಾಲಿನ ಹೊರತು ಬೇರೇನೂ ಇಲ್ಲವೆಂದು ನಾನಂದುಕೊಂಡಿದ್ದೇನೆ. ಚಗನ್‌ಲಾಲ್ ಗಾಂಧಿಯ ಮುವತ್ತು ವರ್ಷಗಳ ಸೇವೆಯನ್ನು ಮತ್ತು ಅವನ ಸರಳ ಜೀವನವನ್ನು ನೆನಸಿಕೊಂಡರೆ ಅವನ ಈ ಕೃತ್ಯವನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಸ್ವಭಾವ ಎಂದಿದ್ದರೂ ಮೇಲೆ ತಲೆ ಹಾಕುತ್ತದೆ.

"ಇದು ಒಂದು ಲಜ್ಜಾಸ್ಪದ ಕೃತ್ಯ. ನಾವೀಗ ಎರಡನೆಯದಕ್ಕೆ ಬರೋಣ. ನನ್ನ ಆತ್ಮಚರಿತ್ರೆಯಲ್ಲಿ ಕಸ್ತೂರಿಬಾಳ ಅನೇಕ ಸದ್ಗುಣಗಳನ್ನು ನಿರೂಪಿಸಲು ನಾನು ಹಿಂದೆಗೆದಿಲ್ಲ. ನನ್ನ ಬದುಕಿನ ಮಹಾ ಸ್ಥಿತ್ಯಂತರಗಳಲ್ಲಿ ಆಕೆ ಇಚ್ಛಾಪೂರ್ವಕವಾಗಿಯೋ ಅಥವಾ ಅನಿಚ್ಛಾಪೂರ್ವಕವಾಗಿಯೋ ನನ್ನೊಂದಿಗೆ ಸಹಕರಿಸಿದ್ದಾಳೆ. ಅವಳ ಜೀವನ ಪರಿಶುದ್ಧವಾಗಿದೆಯೆಂದು ನಾನು ಪರಿಗಣಿಸುತ್ತೇನೆ. ವಿವೇಚನೆಯಿಂದಲ್ಲವಾದರೂ ಪತ್ನಿಯ ಕರ್ತವ್ಯವೆಂದು ತಿಳಿದು ಆಕೆ ಬಹಳವಾಗಿ ತ್ಯಾಗಮಾಡಿದ್ದಾಳೆ. ನನ್ನ ತ್ಯಾಗದ ಪಥಕ್ಕೆ ಆಕೆ ಅಡ್ಡವಾಗಿ ನಿಂತಿಲ್ಲ. ನನ್ನ ಖಾಯಿಲೆಯಲ್ಲಿ ತಾನು ಗೈದ ಶುಶ್ರೂಷೆಯಿಂದ ಆಕೆ ನನ್ನ ಮೆಚ್ಚಿಕೆ ಗಳಿಸಿದ್ದಾಳೆ. ಬ್ರಹ್ಮಚರ್ಯ ಪಾಲನೆಯಲ್ಲಿ ಆಕೆ ನನಗೆ ನೆರವಿತ್ತು ನನ್ನನ್ನು ರಕ್ಷಿಸಿದ್ದಾಳೆ. ಈ ಎಲ್ಲ ಸದ್ಗುಣಗಳನ್ನು ಘಾತಿಸುವ ದೌರ್ಬಲ್ಯಗಳೂ ಆಕೆಯಲ್ಲಿವೆ. ಪತ್ನಿಯ ಕರ್ತವ್ಯವೆಂದು ಬಗೆದು ಎಲ್ಲ ಹಣವನ್ನು ಕೊಟ್ಟುಬಿಟ್ಟಿದ್ದರೂ ಅರಿಯಲಾಗದ ಒಂದು ಪ್ರಾಪಂಚಿಕ ಆಸೆ ಆಕೆಯಲ್ಲಿ ಉಳಿದುಕೊಂಡಿದೆ. ಒಂದು ಅಥವಾ ಎರಡು ವರ್ಷಗಳ ಹಿಂದೆ ಆಕೆ ತನ್ನ ಬಳಿ ವಿವಿಧ ಸಂದರ್ಭಗಳಲ್ಲಿ ಬೇರೆ ಬೇರೆ ವ್ಯಕ್ತಿಗಳಿಂದ ಕಾಣಿಕೆಯಾಗಿ ಸ್ವೀಕರಿಸಿದ ನೂರೋ ಇನ್ನೂರೋ ರೂಪಾಯಿಗಳನ್ನು ಇಟ್ಟುಕೊಂಡಿದ್ದಳು. ಯಾವುದನ್ನೇ ಆಗಲಿ ಅದು ಆಕೆಗೆಂದೇ ಕೊಟ್ಟಿದ್ದಿರಬಹುದಾದರೂ ತನ್ನದೆಂದು ಇಟ್ಟುಕೊಳ್ಳುವಂತಿರಲಿಲ್ಲ. ಆದ್ದರಿಂದ ಆಕೆ ಹಣವನ್ನು ತನ್ನ ಬಳಿಯಿಟ್ಟುಕೊಂಡಿದ್ದುದು ನಿಯಮಕ್ಕೆ ವಿರೋಧವಾಗಿದ್ದಿತು. ಅವಳ ಮತ್ತು ಮಂದಿರದ ಸುಯೋಗದಿಂದ ಒಮ್ಮೆ ಕಳ್ಳರು ಆಕೆಯ ಕೊಠಡಿಯನ್ನು ಹೊಕ್ಕರು. ಅವರಿಗೇನೂ ಸಿಕ್ಕಲಿಲ್ಲ. ಆದರೆ ಅವರು ಬಂದುದರಿಂದಾಗಿ ಕಸ್ತೂರಿ ಬಾಳ ಅಪರಾಧವು ಪತ್ತೆಯಾಯಿತು. ಆದಕ್ಕಾಗಿ ಆಕೆ ಪ್ರಾಮಾಣಿಕವಾಗಿ ಪಶ್ಚಾತ್ತಾಪಪಟ್ಟಳು. ಆದ ಆ ಪಶ್ಚಾತ್ತಾಪ ಕ್ಷಣಿಕವಾದದ್ದೆಂದು ಗೊತ್ತಾಯಿತು. ಹೃದಯದ ನಿಜವಾದ ಪರಿವರ್ತನೆಯಿನ್ನೂ

ಆಗಿಲ್ಲ. ಹಣವನ್ನು ಕೂಡಿಡುವ ಮೋಹ ಅಳಿದಿಲ್ಲ. ಕೆಲವು ದಿನಗಳ ಹಿಂದೆ ಯಾರೊ ಆಗಂತುಕರು ನಾಲ್ಕು ರೂಪಾಯಿಗಳ ಕಾಣಿಕೆಯನ್ನು ಕೊಟ್ಟರು. ಎಂದಿನ ನಿಯಮದ ಪ್ರಕಾರ ದುಡ್ಡನ್ನು ಆಫೀಸಿಗೆ ಕೊಡುವ ಬದಲು ಆಕೆ ಅದನ್ನು ತನ್ನ ಬಳಿಯೆ ಇಟ್ಟು ಕೊಂಡಳು. ಒಬ್ಬ ಆಶ್ರಮವಾಸಿ ಇದನ್ನು ತಿಳಿದಿದ್ದನು. ಕಸ್ತೂರಿ ಬಾಳನ್ನು ಎಚ್ಚರಿಸ ಬೇಕಾದುದು ಅವನ ಕರ್ತವ್ಯವಾಗಿತ್ತು. ಈ ನಿಯಮಾತಿಕ್ರಮವನ್ನು ಆತ ತಿಳಿದಿ ದ್ದರೂ ದಾಕ್ಷಿಣ್ಯದ ಭ್ರಮೆಗೊಳಗಾಗಿ ಸಂಗತಿಯನ್ನು ಮುಚ್ಚಿಟ್ಟನು. ಜಗನ್‌ಲಾಲ್ ಗಾಂಧಿಯ ಪ್ರಕರಣದ ನಂತರ ಮಂದಿರದ ನಿವಾಸಿಗಳು ಜಾಗರೂಕರಾದರು. ಕಸ್ತೂರಿ ಬಾಳ ಕಳ್ಳತನವನ್ನು ಅರಿತಿದ್ದಾತ ಅದನ್ನು ಜಗನ್‌ಲಾಲ್ ಜೋಶಿಗೆ ತಿಳಿಸಿದನು. ಜೋಶಿ ನಡುಗುತ್ತಾ ಕಸ್ತೂರಿ ಬಾಳ ಹತ್ತಿರ ಹೋದನು. ಕಸ್ತೂರಿ ಬಾ ಪಶ್ಚಾತ್ತಾಪ ಪಟ್ಟಳು. ಅತ್ಯಂತ ವಿನಮ್ರನಾಗಿ ಹಣವನ್ನು ವಾಪಸುಮಾಡಿದಳಲ್ಲದೆ ಅಂಥ ಸಂಗತಿ ಮತ್ತೆ ನಡೆಯುವುದಿಲ್ಲವೆಂದು ಪ್ರಮಾಣ ಮಾಡಿದಳು. ಅವಳದು ನಿಜವಾದ ಪಶ್ಚಾತ್ತಾಪ ವೆಂದು ನಾನು ನಂಬುತ್ತೇನೆ. ಹಿಂದೆ ಮಾಡಿದ ಇತರ ಯಾವುದೇ ಅಪರಾಧವು ಪತ್ತೆ ಯಾದಲ್ಲಿ ಅಥವಾ ಮುಂದೆ ಅಂಥದೇ ತಪ್ಪನ್ನು ಮಾಡುವಾಗ ಸಿಕ್ಕಿಬಿದ್ದಲ್ಲಿ ನನ್ನನ್ನು ಮತ್ತು ಮಂದಿರವನ್ನು ಬಿಟ್ಟು ಹೋಗುವೆನೆಂದು ಆಕೆ ವಚನ ನೀಡಿದ್ದಾಳೆ. ಆಶ್ರಮ ಆಕೆಯ ಪಶ್ಚಾತ್ತಾಪವನ್ನು ಅಂಗೀಕರಿಸಿದೆ. ಆಶ್ರಮವಾಸಿಗಳು ಆಕೆಯನ್ನು ಕ್ಷಮಿಸಿದಲ್ಲಿ ಮತ್ತು ಆಕೆ ಮಂದಿರದಲ್ಲಿಯೆ ಉಳಿದಲ್ಲಿ ಹಿಂದಿನಂತೆಯೆ ಆಕೆ ಮನ್ನಣೆಯ ಸ್ಥಾನವನ್ನು ಪಡೆಯಬಹುದು.

"ಇನ್ನು ನಾಚಿಗೆಗೇಡಿನ ಮೂರನೆಯ ಪ್ರಸಂಗವನ್ನು ಕುರಿತು ಹೇಳುತ್ತೇನೆ:

"ಮೂರು ವರ್ಷಗಳ ಹಿಂದೆ ಮಂದಿರದಲ್ಲಿ ಒಬ್ಬ ವಿಧವೆಯಿದ್ದಳು. ಅವಳು ನಿಷ್ಕಳಂಕಳೆಂದು ನಾವೆಲ್ಲ ನಂಬಿದ್ದೆವು. ಅನಾಥಾಲಯದಲ್ಲಿ ಬೆಳೆದ ಒಬ್ಬ ತರುಣನೂ ಆ ಸಮಯದಲ್ಲಿ ಅಲ್ಲಿಯೆ ಇದ್ದನು. ಅವನು ಒಳ್ಳೆಯವನೆಂದು ನಾವು ಭಾವಿಸಿದ್ದೆವು. ಆಗ ಅವನು ಅವಿವಾಹಿತನಾಗಿದ್ದನು. ಅವನು ಆ ವಿಧವೆಯೊಂದಿಗೆ ನಿಷಿದ್ಧ ಸಂಬಂಧ ವನ್ನು ಬೆಳೆಸಿದನು. ಈ ಸಂಗತಿಯು ಬಹಳ ಹಿಂದಿನದೆಂದೇ ಹೇಳಬಹುದು; ಆದರೆ ಬ್ರಹ್ಮಚರ್ಯದ ಪಾಲನೆಗಾಗಿ ಭೀಷ್ಮಪ್ರಯತ್ನಗಳನ್ನು ನಡೆಸುತ್ತಿರುವ ಈ ಆಶ್ರಮ ದಲ್ಲಿ ಇಂತಹ ಹೊಲೆಗೆಲಸ ಕಂಡುಬಂದದ್ದು ದುರಂತವೇ ಸರಿ.

"ಹೀಗಿದೆ ಆಶ್ರಮ! ಹೀಗಿದೆ ಮಂದಿರ!

"ಮಿತ್ರರು ಮತ್ತು ಅಜ್ಞಾತ ಹಾಗೂ ಮುಗ್ಧ ಓದುಗರು ನನ್ನನ್ನು ಮತ್ತು ಮಂದಿರವನ್ನು ಪರಿತ್ಯಜಿಸಿದಲ್ಲಿ, ಅದರಿಂದ ಎರಡು ಉದ್ದೇಶಗಳು ಸಾಧಿತವಾಗುತ್ತವೆ. ಅವರು ಮತ್ತು ನಾನು ಇಬ್ಬರೂ ನಿರಾಳರಾಗುತ್ತೇವೆ. ಆದರೆ ಗೃಹಕೃತ್ಯದ ಸಮಸ್ಯೆಗಳು ಅಷ್ಟು ಸುಲಭವಾಗಿ ಪರಿಹಾರವಾಗುವುದಿಲ್ಲ. ಮಂದಿರದಲ್ಲಿ ವಾಸಿಸುತ್ತಿರುವ ಸಜ್ಜನ ರಾಗಲಿ ಅಥವಾ ದುಷ್ಕರ್ಮಿಗಳಾಗಲಿ ಯಾರೂ ಮಂದಿರವನ್ನು ತ್ಯಜಿಸುವುದಿಲ್ಲ.

"ಈ ತಪ್ಪುಗಳೆಲ್ಲ ನನ್ನ ದೌರ್ಬಲ್ಯಗಳ ಸಂಕೇತವೆಂದು ನಾನು ಹೇಳಿದಲ್ಲಿ ಅದನ್ನು ಓದುಗನು ನಂಬಬೇಕೆಂದು ಕೇಳಿಕೊಳ್ಳುತ್ತೇನೆ. ಆದ್ದರಿಂದ ಮೇಲಿನ ಸಾಲುಗಳನ್ನು ಬರೆಯುವಾಗ ನಾನು ಒಳ್ಳೆಯವ ಮತ್ತು ನನ್ನ ಜೊತೆಗಾರರು ಕೆಟ್ಟವರೆಂಬ ಅಭಿಪ್ರಾಯ ಬರದಿರಲಿ. ನನ್ನ ಒಳಗಿನ ಆಳದಲ್ಲಿ ಹುದುಗಿರುವ ಅನೇಕ ದೌರ್ಬಲ್ಯಗಳೇ, ಪೂರ್ವ ನಿರೂಪಿತ ರೂಪಗಳಲ್ಲಿ ವ್ರಣಗಳಾಗಿ ಸ್ಫೋಟಗೊಳ್ಳುತ್ತವೆಂಬುದು ನನ್ನ ದೃಢವಾದ ನಂಬುಗೆ. ನಾನು ಪರಿಪೂರ್ಣನೆಂದು ಯಾವತ್ತೂ ಗಣಿಸಿಕೊಂಡಿಲ್ಲ. ಆಶ್ರಮದ ಪಾಪ ಗಳು ನನ್ನದೇ ಪ್ರತಿಧ್ವನಿಗಳಷ್ಟೆ. ನನ್ನ ತಪ್ಪುಗಳ ಅರಿವು ನನಗಿಲ್ಲವೆಂದು ಮಾತ್ರ ನಾನು ಹೇಳಬಲ್ಲೆ. ಆಳವರಿಯಲಾಗದ ಪ್ರಪಂಚದಲ್ಲಿ ತಪ್ಪುಗಳನ್ನೆಸಗಿ ಸುತ್ತಲಿನ ಪರಿಸರವನ್ನು ನಾನು ಹೊಲೆಗೆಡಿಸುತ್ತಿದ್ದಲ್ಲಿ ಅದನ್ನು ಯಾರು ತಾನೆ ಅರಿಯಬಲ್ಲರು? 'ಮಹಾತ್ಮ' ಎಂಬ ಉಪಾಧಿಯು ನನ್ನನ್ನು ಯಾವಾಗಲೂ ಚುಚ್ಚುತ್ತಿದೆ. ಇಂದು ನನ್ನ ಪಾಲಿಗೆ ಅದೊಂದು ದೂಷಣೆಯಾಗಿದೆ. ಆದರೆ ನಾನು ಎಲ್ಲಿಗೆ ಹೋಗಲಿ? ನಾನೇನು ಮಾಡಲಿ? ಆತ್ಮಹತ್ಯೆಯ ಮೂಲಕ ಅಥವಾ ಉಪವಾಸದಿಂದ ಅಥವಾ ಆಶ್ರಮದಲ್ಲಿ ಸಮಾಧಿ ಗೊಳ್ಳುವುದರಿಂದ ಅಥವಾ ಸಾರ್ವಜನಿಕ ಕೆಲಸಕ್ಕಾಗಲಿ, ನನ್ನ ಜೀವನ ನಿರ್ವಹಣೆ ಗಾಗಲಿ ಬಿಡಿಗಾಸನ್ನೂ ತೆಗೆದುಕೊಳ್ಳದಿರುವುದರಿಂದ ನಾನು ಪಾರಾಗಬಲ್ಲೆನೆ? ಸದ್ಯಕ್ಕೆ ಇವುಗಳಲ್ಲಿ ಯಾವುದೊಂದನ್ನೂ ಮಾಡಲು ಮನವೊಪ್ಪುತ್ತಿರಲಿಲ್ಲ. ಬಹುಶಃ ನನ್ನಲ್ಲಿ ಆ ಧೈರ್ಯವಿಲ್ಲವೇನೋ.

"ಬೇರೆಯವರು ನನ್ನ ಮಾತಿಗೆ ಬೆಲೆಕೊಡದಿದ್ದರೂ ಮಂದಿರದ ಜನ ನಿಜ ವಾಗಿಯೂ ನನ್ನಲ್ಲಿ ನಂಬಿಕೆಯಿಟ್ಟ ಪಕ್ಷದಲ್ಲಿ ನನ್ನ ಕಲ್ಪನೆಯ ಸ್ವರಾಜ್ಯವನ್ನು ಸಾಧಿಸು ವೆನೆಂಬ ನೆಚ್ಚಿಕೆ ನನಗಿದೆ. ನನ್ನ ನ್ಯೂನತೆಗಳನ್ನು ಪತ್ತೆ ಹಚ್ಚಿ ನಿರ್ಮೂಲಗೊಳಿಸಲು ನಾನು ಸದಾ ಸಿದ್ಧನಾಗಿದ್ದೇನೆ. ಆದ್ದರಿಂದ ಪೂರ್ವನಿರೂಪಿತ ಸ್ಥಿತಿಯಿದ್ದರೂ ಆಶ್ರಮ ಈಗಲೂ ತನ್ನ ಹೆಸರಿನ ಯೋಗ್ಯತೆಯನ್ನುಳಿಸಿಕೊಳ್ಳುತ್ತದೆಂಬ ಮತ್ತು ಅದರಂತೆ ಕೆಲಸಮಾಡುತ್ತದೆಂಬ ವಿಶ್ವಾಸ ನನಗಿದೆ. ಸದ್ಯಕ್ಕೆ ಕುಂದುಕೊರತೆಗಳು ತಲೆದೋರಿದಾಗ ಅವುಗಳನ್ನು ಬಹಿರಂಗಗೊಳಿಸಬೇಕೆಂಬುದರಿಂದ ಮತ್ತು ಮಂದಿರವು ತನ್ನ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂಬಷ್ಟರಿಂದ ನಾನೀಗ ಸಮಾಧಾನಗೊಳ್ಳಬೇಕಾಗಿದೆ.

"ಭಗವಂತನ ಪ್ರೀತಿಗಾಗಿ ಕೈಗೊಂಡ ಕೆಲಸವನ್ನು ಅವನ ಅನುಜ್ಞೆಯಿಲ್ಲದೆ ನಾನು ಹೇಗೆ ತಾನೆ ತ್ಯಜಿಸಲಿ? ನಾನು ಈ ಕಾರ್ಯವನ್ನು ನಿಲ್ಲಿಸಬೇಕೆಂದು ಪರಮಾತ್ಮನು ಇಚ್ಛಿಸಿ ದಾಗ ನನ್ನಿಂದ ದೂರ ಸರಿಯುವಂತೆ ಜನರನ್ನು ಪ್ರೇರೇಪಿಸುತ್ತಾನೆ. ಒಂದು ವೇಳೆ ಅಂಥ ಸಂಗತಿ ಸಂಭವಿಸಿದರೂ ನನ್ನ ನೆಚ್ಚಿಕೆ ಅಳಿಯುವುದಿಲ್ಲ; ಆಗಲೂ ನನ್ನ ಹೃದಯವು 'ನಾನು ನಿನ್ನವನು' ಎಂದು ತುಡಿಯುತ್ತಿರುತ್ತದೆ.

"ಬಹು ದೋಷಪೂರ್ಣವಾದ ಈ ಸಂಸ್ಥೆಯ ಮೂಲಕ ಭಗವಂತನನ್ನು ಕಾಣ ಬೇಕೆಂಬುದು ನನ್ನ ಬಯಕೆ. ಅದು ನನ್ನನ್ನಳೆಯುವ ಅಳತೆಗಡ್ಡಿಯಾಗಿದೆ. ಆಗಾಗ

ವಿಕೃತ ನಡೆವಳಿಗಳು ಕಂಡುಬಂದರೂ ನನ್ನ ನೆಚ್ಚಿಕೆ ಮಾತ್ರ ದೃಢವಾಗಿರುತ್ತದೆ. ಈ ನನ್ನ ವಿಶ್ವಾಸವು ಕೇವಲ ಭ್ರಮೆ ಅಥವಾ ಹುಚ್ಚುತನವಾಗಿರಲೂ ಸಾಧ್ಯ.

"ಚಿಪ್ಪಿನಲ್ಲಿ ಬೆಳ್ಳಿಯನ್ನೂ ಮರೀಚಿಕೆಯಲ್ಲಿ ನೀರನ್ನೂ ಕಾಣುವುದು ಸದಾಕಾಲಕ್ಕೂ ಭ್ರಮೆಯಾದರೂ ನಿಜವನ್ನು ಅರಿಯದಾತನಿಗೆ ಅದು ಸತ್ಯವೇ ಆಗಿರುತ್ತದೆ. ಶುದ್ಧ ಜ್ಞಾನದಿಂದ ಮಾತ್ರ ಭ್ರಮನಿರಸನ ಸಾಧ್ಯ. ಇದು ನನಗೂ ಅನ್ವಯಿಸುತ್ತದೆ."

ಈ ಲೇಖನವನ್ನು ಓದಿದ ಆಜಾದರು "ಶತ್ರುಗಳು ಕೂಡ ಸಂದೇಹಿಸಲಾಗದ ಸತ್ಯವಂತರಾದ ವ್ಯಕ್ತಿಯಿವರು" ಎಂದು ಅಭಿಪ್ರಾಯಪಟ್ಟರು. ಗಾಂಧೀಜಿಯ ಸತ್ಯ ಅವರನ್ನು ಎಷ್ಟು ದೂರದ ವರೆಗೆ ಕೊಂಡೊಯ್ಯಬಲ್ಲುದೆಂಬುದು ಆಜಾದರನ್ನು ಬೆರಗುಗೊಳಿಸಿತು.

ಅನೇಕ ಬಾರಿ ಪ್ರಪಂಚಯಾತ್ರೆ ಮಾಡಿದ್ದ ಟಾಲ್‌ಸ್ಟಾಯ್ ಮತ್ತು ಜೆಕೊಸ್ಲಾ-ವೇಕಿಯಾದ ಅಧ್ಯಕ್ಷ ಮಸಾರಿಕ್‌ರಂಥ ಪ್ರಸಿದ್ಧ ಪುರುಷರೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದ ಡಾ. ಜಾನ್‌ಮಾಟ್ ಎಂಬ ಸಂಚಾರೀ ಕ್ರೈಸ್ತ ಧರ್ಮೋಪದೇಶಕರು ಗಾಂಧೀಜಿಯೊಡನೆ ಚರ್ಚಿಸಲು ಸಬರಮತಿಗೆ ಬಂದರು.

"ನಿಮ್ಮ ಅಭಿಪ್ರಾಯದಲ್ಲಿ ಜಗತ್ತಿನ ಅಭ್ಯುದಯಕ್ಕೆ ಭಾರತವು ನೀಡಬಹುದಾದ ಅಮೂಲ್ಯ ಕೊಡುಗೆ ಯಾವುದು?" ಎಂದು ಡಾ. ಮಾಟ್ ಪ್ರಶ್ನಿಸಿದರು.

"ಅಹಿಂಸೆ" ಎಂದು ಗಾಂಧೀಜಿ ಉತ್ತರಿಸಿದರು. "ಇತಿಹಾಸದಲ್ಲಿ ಹಿಂದೆಂದೂ ಕಂಡು ಬರದಂಥ ಪ್ರಮಾಣದಲ್ಲಿ ಇಂದು ದೇಶ ಈ ತತ್ವವನ್ನು ಪ್ರಕಾಶಪಡಿಸುತ್ತಿದೆ. ಅದಿಲ್ಲದಿದ್ದಲ್ಲಿ ಇಂದು ಅಗ್ನಿಪ್ರಳಯವಾಗುತ್ತಿತ್ತು. ಕಾರಣ ಉದ್ರೇಕವನ್ನು ಕೆರಳಿಸುವುದೇ ಸರ್ಕಾರದ ಇಚ್ಛೆಯಾಗಿದೆ. ಹಿಂಸೆಯಲ್ಲಿ ವಿಶ್ವಾಸವುಳ್ಳ ಒಂದು ಪಂಥವೂ ದೇಶದಲ್ಲಿದೆ. ಆದರೆ ಅದು ಮೈಮೇಲೆ ಬೆಳೆದ ಕೇವಲ ಒಂದು ದುರ್ಮಾಂಸದ ಗಡ್ಡೆಯಷ್ಟೆ ಅಲ್ಲದೆ ಅದರ ಧ್ಯೇಯಗಳಿಗೆ ಒಗ್ಗುವ ಪರಿಸರವೂ ಈ ದೇಶದಲ್ಲಿಲ್ಲ."

ಇದರನಂತರ ಅವರು, ರಾಷ್ಟ್ರದ ಏಳಿಗೆಗಾಗಿ ಹಿಂದೂ, ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳು ನೀಡಿದ ವಿಶಿಷ್ಟ ಕಾಣಿಕೆಗಳನ್ನು ಕುರಿತು ಸಂಭಾಷಿಸಿದರು. "ಭಾರತದ ಸಂಸ್ಕೃತಿಗೆ ಹಿಂದೂಧರ್ಮವು ನೀಡಿರುವ ಅತ್ಯಂತ ವಿಶಿಷ್ಟವಾದ ಮತ್ತು ವ್ಯಾಪಕವಾದ ಕಾಣಿಕೆಯೆಂದರೆ ಅಹಿಂಸಾತತ್ವ. ಕಳೆದ ಮೂರು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಕಾಲದ ವರೆಗೆ ಅದು ಭಾರತದ ಚರಿತ್ರೆಗೆ ಸ್ಪಷ್ಟ ಪ್ರೇರಣೆಯನ್ನೊದಗಿಸಿದೆ. ಮತ್ತು ಇಂದಿಗೂ ಭಾರತದ ಜನಕೋಟಿಯ ಬದುಕಿನಲ್ಲಿ ಅದು ಜೀವಂತಶಕ್ತಿಯಾಗಿ ಪ್ರವಹಿಸುತ್ತಿದೆ. ಅದು ದಿನದಿಂದ ದಿನಕ್ಕೆ ಬೆಳೆಯುವ ಸಿದ್ಧಾಂತ. ಅದರ ಸಂದೇಶವಿನ್ನೂ ಜನಮನವನ್ನು ಸೇರುತ್ತಿದೆ. ಅದರ ಉಪದೇಶ ನಮ್ಮ ಜನತೆಯ ನರನಾಡಿಗಳನ್ನು ಎಷ್ಟು ವ್ಯಾಪಿಸಿಕೊಂಡಿದೆಯೆಂದರೆ, ಭಾರತದಲ್ಲಿ ಸಶಸ್ತ್ರಕ್ರಾಂತಿಯು ಸಾಧ್ಯತೆಯೆ ಇಲ್ಲವೆಂಬಂತಾಗಿದೆ. ಪರಂಪರಾಗತವಾದ ಅಹಿಂಸೆಯ ಬೋಧೆ ನಮ್ಮ ಜನರಲ್ಲಿ ಆಳವಾಗಿ

ಬೇರೂರಿರುವುದು ಇದಕ್ಕೆ ಕಾರಣವೇ ಹೊರತು ಕೆಲವರು ತಿಳಿಯುವಂತೆ, ನಮ್ಮದು ದೈಹಿಕವಾಗಿ ದುರ್ಬಲ ಜನಾಂಗವೆಂಬುದಲ್ಲ; ಪೈಶಾಚಸಂಕಲ್ಪಕ್ಕೆಷ್ಟು ಬೇಕೊ ಒಬ್ಬ ಮನುಷ್ಯನನ್ನು ಕೊಲ್ಲುವ ಸಲುವಾಗಿ ಬಂದೂಕಿನ ಕುದುರೆಯೊತ್ತಲು ದೈಹಿಕ ದಾರ್ಢ್ಯ ಅಷ್ಟು ಬೇಕಿಲ್ಲ" ಎಂದು ಗಾಂಧೀಜಿ ಅಭಿಪ್ರಾಯಪಟ್ಟರು.

ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಅದರ ಎರಡು ವಿಶಿಷ್ಟ ಕಾಣಿಕೆಗಳನ್ನು ಎತ್ತಿ ತೋರಿಸಿದರು. "ಒಂದು, ಭಗವಂತನ ಏಕತ್ವದಲ್ಲಿ ಅದಕ್ಕಿರುವ ಪರಿಶುದ್ಧ ನಂಬಿಕೆ. ಮತ್ತೊಂದು, ಹೆಸರಿಗೆ ಮಾತ್ರ ಆ ಧರ್ಮಕ್ಕೆ ಸೇರಿದವರೆಲ್ಲರಿಗೂ ಮಾನವ ಭ್ರಾತೃತ್ವದ ಸತ್ಯವು ವಾಸ್ತವವಾಗಿ ಅನ್ವಯವಾಗುತ್ತದೆ. ಇವೆರಡೂ ಈ ಧರ್ಮದ ವಿಶಿಷ್ಟ ಕಾಣಿಕೆಗಳು. ಕಾರಣ, ಹಿಂದೂ ಧರ್ಮದಲ್ಲಿ ಭ್ರಾತೃತ್ವದ ಸತ್ವವು ಬರಿಯ ತತ್ವವಾಗಿ ಬಿಟ್ಟಿದೆ. ಅದೇ ರೀತಿಯಲ್ಲಿ ದಾರ್ಶನಿಕ ಹಿಂದೂಧರ್ಮದಲ್ಲಿ ಒಬ್ಬ ದೇವರ ಹೊರತು ಬೇರೆ ದೇವರುಗಳಿಲ್ಲದಿದ್ದರೂ, ಆಚರಣೆಯ ಹಿಂದೂಧರ್ಮ ಇಸ್ಲಾಂಧರ್ಮದಂತೆ ರಾಜೀ ಮನೋಭಾವಕ್ಕೆ ಸಿದ್ಧವಿಲ್ಲವೆಂದು ಸ್ಪಷ್ಟವಾಗಿ ನಿರಾಕರಿಸುವಂತಿಲ್ಲ".

"ಭಾರತದ ರಾಷ್ಟ್ರೀಯ ಜೀವನಕ್ಕೆ ಕ್ರೈಸ್ತಧರ್ಮದ ಕೊಡುಗೆಯೇನು? ಅಂದರೆ, ಕ್ರೈಸ್ತಧರ್ಮವನ್ನುಳಿದು ಕ್ರಿಸ್ತನ ಪ್ರಭಾವವೇನೆಂಬುದು ನನ್ನ ಅರ್ಥ. ಕಾರಣ, ಇಂದು ಈ ಎರಡನ್ನು ಬೇರ್ಪಡಿಸುವ ಒಂದು ಆಳವಾದ ಕಮರಿಯಿದೆಯೆಂಬ ಭಯ ನನಗಿದೆ" ಎಂದು ಡಾ. ಮಾಟ್ ನುಡಿದರು.

"ತೊಡಕಿರುವುದು ಅಲ್ಲಿಯೆ" ಎಂದು ಗಾಂಧೀಜಿ ಅಭಿಪ್ರಾಯಪಡುತ್ತಾ, ಒಬ್ಬ ಧರ್ಮ ಬೋಧಕನ ಉಪದೇಶವನ್ನು ಆತನ ಅನುಯಾಯಿಗಳ ಬದುಕಿನಿಂದ ಪ್ರತ್ಯೇಕವಾಗಿ ಗಣಿಸುವುದು ಸಾಧ್ಯವಿಲ್ಲ. ದುರದೃಷ್ಟವಶಾತ್ ಕ್ರೈಸ್ತಧರ್ಮವು ಭಾರತದಲ್ಲಿ ನೂರೈವತ್ತು ವರ್ಷಗಳಿಂದ ಬ್ರಿಟಿಷ್ ಆಳ್ವಿಕೆಯೊಂದಿಗೆ ಬಿಡಿಸಿಕೊಳ್ಳಲಾರದ ರೀತಿಯಲ್ಲಿ ಬೆರೆತು ಹೋಗಿದೆ. ಸಾಮ್ರಾಜ್ಯ ಮನೋಧರ್ಮದ ಪ್ರಬಲಶಾಲಿ ಬಿಳಿಯ ಜನಾಂಗಗಳು ನಡೆಸಿದ ಪ್ರಪಂಚದ ದುರ್ಬಲ ಜನಾಂಗಗಳ ಸುಲಿಗೆಯೊಂದಿಗೆ ಮತ್ತು ಭೌತಿಕ ನಾಗರಿಕತೆಯೊಂದಿಗೆ ಇದು ಸಮಾನಾರ್ಥಕವೆಂಬಂತೆ ನಮಗೆ ಕಂಡುಬರುತ್ತದೆ. ಇದರಿಂದಾಗಿ ಭಾರತಕ್ಕೆ ಆ ಧರ್ಮದ ಕಾಣಿಕೆ ಬಹುಮಟ್ಟಿಗೆ ನೇತಿಸ್ವರೂಪದ್ದು. ಸಾಕಷ್ಟು ಪ್ರತಿಪಾದಕರಿದ್ದರೂ ಅದು ಕೊಂಚಮಟ್ಟಿಗೆ ಒಳ್ಳೆಯದನ್ನೂ ಮಾಡಿದೆ. ನಮ್ಮ ಮನೆಯನ್ನು ಕ್ರಮವಾಗಿ ಓರಣಗೊಳಿಸಿಕೊಳ್ಳುವಂತೆ ಅದು ನಮಗೆ ಎಚ್ಚರಿಕೆಯಿತ್ತಿದೆ. ಕ್ರೈಸ್ತ ಧರ್ಮ ಪ್ರಚಾರಕ ಸಾಹಿತ್ಯವು ನಮ್ಮ ಕೆಲವು ದುಷ್ಟ ಪದ್ಧತಿಗಳತ್ತ ತೀವ್ರ ಗಮನವನ್ನು ಸೆಳೆದಿದೆ ಮತ್ತು ಆ ಬಗೆಗೆ ನಾವು ಆಲೋಚಿಸುವಂತೆ ಮಾಡಿದೆ" ಎಂದು ಹೇಳಿದರು.

"ಅಸ್ಪೃಶ್ಯತಾ ನಿವಾರಣೆಯ ಸಂಬಂಧದ ನಿಮ್ಮ ಕೆಲಸವು ನನಗೆ ಹೆಚ್ಚು ಸ್ವಾರಸ್ಯಪೂರ್ಣವಾಗಿ ಕಂಡು ಬಂದಿದೆ" ಎಂದು ಮೆಚ್ಚುಗೆ ಸೂಚಿಸಿದ ಮಾಟ್ ರವರು "ನೀವು ಹೇಳುವಂತೆ ಈ ಸಂಪ್ರದಾಯ ತನ್ನ ಅಂತ್ಯವನ್ನು ಸಮೀಪಿಸುತ್ತಿದೆಯೆಂಬುದನ್ನು

ಸೂಚಿಸುವ ಬಹು ದೊಡ್ಡ ಆಶಾಜನಕ ಚಿಹ್ನೆ ಯಾವುದೆಂಬುದನ್ನು ದಯವಿಟ್ಟು ತಿಳಿಸುವಿರಾ?" ಎಂದು ಗಾಂಧೀಜಿಯನ್ನು ಪ್ರಶ್ನಿಸಿದರು.

"ಮಡಿವಂತ ಹಿಂದೂಧರ್ಮದಲ್ಲಿ ಕಾಣಿಸುತ್ತಿರುವ ಪ್ರತಿಕ್ರಿಯೆ ಮತ್ತು ಅದು ಕಾಣಿಸಿಕೊಳ್ಳುತ್ತಿರುವ ತ್ವರಿತತೆಯೇ ಈ ಆಶಾಜನಕ ಚಿಹ್ನೆ" ಎಂದು ಗಾಂಧೀಜಿ ಉತ್ತರಿಸಿದರು. "ಒಂದು ಪ್ರಖ್ಯಾತ ನಿದರ್ಶನವಾಗಿ ಪಂಡಿತ ಮಾಳವೀಯರ ಹೆಸರನ್ನು ನಾನು ಸೂಚಿಸುತ್ತೇನೆ. ಹತ್ತು ವರ್ಷಗಳ ಹಿಂದೆ ಅವರು ಬಹುಶಃ ಆ ಕಾಲದ ಅತಿ ಮಡಿವಂತ ಹಿಂದೂಗಳಂತೆಯೇ ಅಸ್ಪೃಶ್ಯತೆ ಸಂಬಂಧಿಸಿದ ನಿಯಮಗಳ ಪಾಲನೆಯಲ್ಲಿ ಸಂಪ್ರದಾಯನಿಷ್ಠರಾಗಿದ್ದರು. ಇಂದು ಅವಿವೇಕಿ ಮಡಿವಂತಿಕೆಯ ಕೋಪಕ್ಕೆ ಹಲವು ವೇಳೆ ತುತ್ತಾದರೂ ಗಂಗೆಯ ದಡದಲ್ಲಿ ಅಸ್ಪೃಶ್ಯರಿಗೆ ಶುದ್ಧಿಮಂತ್ರವನ್ನು ಬೋಧಿಸುವಲ್ಲಿ ಅವರು ಉತ್ಸಾಹಿತರಾಗಿದ್ದಾರೆ. ವಾರ್ಧಾದಲ್ಲಿ ಸೇಟ್ ಜಮನಾಲಾಲ್ ಬಜಾಜ್ ಎಂಬ ಶ್ರೀಮಂತ ವರ್ತಕರೊಬ್ಬರು ಇತ್ತೀಚೆಗೆ ತಮ್ಮ ಭವ್ಯ ದೇವಾಲಯದಲ್ಲಿ ಯಾವ ತೀವ್ರ ವಿರೋಧವನ್ನೂ ಎಬ್ಬಿಸದೆ, ಅಸ್ಪೃಶ್ಯರಿಗೆ ಪ್ರವೇಶ ನೀಡಿದ್ದಾರೆ. ಈ ವಿಷಯ ದಲ್ಲಿ ಅತ್ಯಂತ ಗಮನಾರ್ಹ ಸಂಗತಿಯೆಂದರೆ, ಅಸ್ಪೃಶ್ಯರಿಗೆ ಪ್ರವೇಶ ನೀಡಿದಾಗಿನಿಂದ ಭೇಟಿಕಾರರ ಸಂಖ್ಯೆ ಕಡಮೆಯಾಗುವುದರ ಬದಲಾಗಿ ಅವರ ಹಾಜರಿ ಹೆಚ್ಚುತ್ತಿರುವುದು ದೇವಾಲಯದಲ್ಲಿರುವ ಭೇಟಿಕಾರರ ದಾಖಲೆ ಪುಸ್ತಕದಿಂದ ತಿಳಿದು ಬರುತ್ತದೆ. ಅಸ್ಪೃಶ್ಯತೆ ವಿರುದ್ಧ ಎದ್ದಿರುವ ನೆರೆ ಈಗಾಗಲೆ ಬೆರಗುಪಡಿಸುವ ವೇಗದಲ್ಲಿದ್ದರೂ, ಇಷ್ಟರಲ್ಲಿಯೇ ಮತ್ತಷ್ಟು ಶೀಘ್ರವಾಗಿ ಹೆಚ್ಚು ನಿರೀಕ್ಷೆಯಿದೆಯೆಂಬ ಒಂದೇ ಮಾತಿನಲ್ಲಿ ಅದರ ಭವಿಷ್ಯವನ್ನು ಅಡಕಗೊಳಿಸಬಹುದು."

"ನಿಮ್ಮ ಮಿತ್ರರನ್ನು ಎಲ್ಲಿ ಸಂಪಾದಿಸುತ್ತೀರಿ? ಈ ಕೆಲಸಕ್ಕೆ ಮುಸ್ಲಿಮರ ಮತ್ತು ಕ್ರೈಸ್ತರ ಬೆಂಬಲ ನಿಮಗಿದೆಯೆ?" ಎಂದು ಡಾ. ಮಾಟ್ ಕೇಳಿದರು.

"ಮುಸ್ಲಿಮರು ಮತ್ತು ಕ್ರೈಸ್ತರು ಈ ಸಂಗತಿಯ ಸ್ವರೂಪಮಾತ್ರದಿಂದಲೆ ತುಸು ಸಹಾಯವನ್ನು ಮಾಡಬಹುದು. ಅಸ್ಪೃಶ್ಯತೆಯ ನಿವಾರಣೆಯು ಹಿಂದೂಧರ್ಮದ ಶುದ್ಧೀಕರಣದ ಒಂದು ಪ್ರಶ್ನೆ. ಆದ್ದರಿಂದ ಅದು ತನ್ನ ಧರ್ಮದೊಳಗೇ ಪರಿಹಾರವನ್ನು ಕಂಡುಕೊಳ್ಳಬೇಕು" ಎಂದು ಗಾಂಧೀಜಿ ಉತ್ತರಿಸಿದರು.

"ಆದರೆ ಈ ಸಂಬಂಧದಲ್ಲಿ ಕ್ರಿಶ್ಚಿಯನ್ನರು ಹೆಚ್ಚು ಸಹಾಯವನ್ನು ನೀಡಬಹು ದೆಂದು ನಾನು ಭಾವಿಸಿದ್ದೆ" ಎಂದು ಅಭಿಪ್ರಾಯಪಟ್ಟ ಡಾ. ಮಾಟ್‌ರವರು ಇಂಗ್ಲೆಂಡಿನ ಧರ್ಮಪ್ರಚಾರಕ ಮಂಡಲಿಯ ರೆ. ವೈಟ್ ಹೆಡ್ ಮದ್ರಾಸ್ ಪ್ರಾಂತ್ಯದಲ್ಲಿ ಅಸ್ಪೃಶ್ಯರ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ನಡೆಸಿದ ಕ್ರಿಶ್ಚಿಯನ್ನರ ಸಾಮೂಹಿಕ ಚಳುವಳಿಯ ಬಗೆಗೆ ಕೆಲವು ಗಮನಾರ್ಹ ಹೇಳಿಕೆಗಳನ್ನು ಕೊಟ್ಟದ್ದನ್ನು ನೆನಪಿಸಿದರು.

"ಈ ಬಗೆಯ ಸಾಮೂಹಿಕ ಚಳುವಳಿಯಲ್ಲಿ ನನಗೆ ವಿಶ್ವಾಸವಿಲ್ಲ" ಎಂದು ಗಾಂಧೀಜಿ ನಡುವೆಯೆ ಅವರ ಮಾತು ತಡೆದರು. "ಮತಾಂತರವು ಅವರ ಗುರಿಯೇ

ಹೊರತು ಅಸ್ಪೃಶ್ಯರ ಉದ್ಧಾರವಲ್ಲ. ಹಿನ್ನೆಲೆಯಲ್ಲಿ ಅಡಗಿರುವ ಈ ಸಾಮೂಹಿಕ ಮತಾಂತರದ ಉದ್ದೇಶವು ಪಾದ್ರಿಗಳ ಪ್ರಯತ್ನಕ್ಕೆ ಕಳಂಕವನ್ನು ತರುತ್ತದೆ."

"ಈ ಅಂಶದ ಬಗೆಗೆ ವಿರೋಧಾಭಿಪ್ರಾಯಗಳಿವೆ" ಎಂದು ಡಾ. ಮಾಟ್‌ರು ದನಿಯೆತ್ತಿದರು. "ಶ್ರದ್ಧೆಯಿಂದ ಕ್ರಿಶ್ಚಿಯನ್ನರಾಗಿ ಪರಿವರ್ತಿತರಾದಲ್ಲಿ ಅಸ್ಪೃಶ್ಯರು ಸುಖಿಗಳಾಗುವರೆಂದೂ ಅದು ಅವರ ಬದುಕನ್ನು ಉತ್ತಮಗೊಳಿಸುವುದೆಂದೂ ಕೆಲವರು ಪ್ರಬಲವಾಗಿ ನಂಬಿದ್ದಾರೆ."

"ಈ ವಿಚಾರವನ್ನು ದೃಢೀಕರಿಸುವ ಯಾವೊಂದು ಸ್ಪಷ್ಟ ಸಾಕ್ಷಿಯನ್ನು ಕಂಡು ಕೊಳ್ಳಲು ನಾನು ಅಸಮರ್ಥನಾಗಿದ್ದೇನೆಂದು ಹೇಳಲು ವಿಷಾದಿಸುತ್ತೇನೆ. ಒಮ್ಮೆ ಕ್ರಿಶ್ಚಿಯನ್ ಹಳ್ಳಿಯೊಂದಕ್ಕೆ ನನ್ನನ್ನು ಕರೆದೊಯ್ಯಲಾಯಿತು. ಧಾರ್ಮಿಕ ಪರಿವರ್ತನೆಯೊಡನೆ ಇರಬೇಕಾದ ಅಕೃತ್ರಿಮತೆಯನ್ನು ಮತಾಂತರಿಗಳ ನಡುವೆ ಕಾಣು ವುದಕ್ಕೆ ಬದಲಾಗಿ ಒಂದು ಬಗೆಯ ನುಣುಚಿಕೊಳ್ಳುವ ಮನೋಭಾವವನ್ನು ನಾನು ಅವರಲ್ಲಿ ಕಂಡೆ. ಅವರು ಮಾತನಾಡಲು ಅಂಜುತ್ತಿದ್ದರು. ಈ ಮಾರ್ಪಾಡು ಕೆಟ್ಟದ್ದಕ್ಕೆ ಹೊರತು ಒಳ್ಳೆಯದಕ್ಕಲ್ಲವೆಂದು ನನಗನ್ನಿಸಿತು" ಎಂದು ಗಾಂಧೀಜಿ ಹೇಳಿದರು.

ಡಾ. ಮಾಟ್ ಹಾಗಾದರೆ ಮತಾಂತರದಲ್ಲಿ ನಿಮಗೆ ವಿಶ್ವಾಸವಿಲ್ಲವೆ?

ಗಾಂಧೀಜಿ: ಒಬ್ಬ ವ್ಯಕ್ತಿ ಮತ್ತೊಬ್ಬನನ್ನು ಮತಾಂತರಿಸುವುದರಲ್ಲಿ ನನಗೆ ನಂಬಿಕೆಯಿಲ್ಲ. ವ್ಯಕ್ತಿಯು ತನ್ನ ಧರ್ಮದ ಉತ್ತಮ ಅನುಯಾಯಿಯಾಗುವಂತೆ ಮಾಡ ಬೇಕೇ ಹೊರತು ಮತ್ತೊಬ್ಬನ ಧರ್ಮವನ್ನು ಕೀಳ್ಗಳೆಯುವ ಪ್ರಯತ್ನ ಸಲ್ಲದು. ಇದು ಎಲ್ಲ ಧರ್ಮಗಳೂ ಸತ್ಯವೆಂಬ ನಂಬಿಕೆಯನ್ನು ಮತ್ತು ಅವುಗಳ ಬಗೆಗೆ ಇರುವ ಗೌರವ ವನ್ನು ಸೂಚಿಸುತ್ತದೆ. ಭಗವದ್ಪ್ರಕಾಶವು ರಕ್ತಮಾಂಸಗಳ ಒಂದು ಅಪರಿಪೂರ್ಣ ಮಾಧ್ಯಮದ ಮೂಲಕ ಎಲ್ಲ ಧರ್ಮಗಳಿಗೂ ಅನುಗೃಹೀತವಾಗಿದೆ. ವಾಹಕದ ಅಪರಿಪೂರ್ಣತೆಯನ್ನು ಹೆಚ್ಚೋ ಕಡಿಮೆಯೋ ಅಂತೂ ಎಲ್ಲ ಧರ್ಮಗಳೂ ಹಂಚಿಕೊಳ್ಳ ಬೇಕೆಂಬ ಅಪ್ಪಟ ವಿನಮ್ರ ಅರಿವು ಇದರಿಂದ ಮೂಡುತ್ತದೆ.

ಡಾ. ಮಾಟ್: ಸತ್ಯದ ಪರಾಕಾಷ್ಠೆಯನ್ನು ತಲುಪಲು ಹಂಚಬಹುದಾದ ನಮ್ಮಲ್ಲಿರುವ ಗಾಢ ಆಧ್ಯಾತ್ಮಿಕ ಅನುಭವಗಳ ಮೂಲಕ ಸೋದರ ಮಾನವರಿಗೆ ನೆರ ವೀಯಬೇಕಾದುದು ನಮ್ಮ ಕರ್ತವ್ಯವಲ್ಲವೆ?

ಗಾಂಧೀಜಿ: ಮತ್ತೆ ಈ ವಿಷಯದಲ್ಲಿ ನನ್ನ ಅಭಿಪ್ರಾಯ ಭಿನ್ನವಾಗಿದೆ. ಅದಕ್ಕೆ ಸರಳ ಕಾರಣವೆಂದರೆ, ಪ್ರಗಾಢ ಆಧ್ಯಾತ್ಮಿಕ ಸತ್ಯಗಳು ಯಾವಾಗಲೂ ವಾಗತೀತ ವಾದುವು. ನೀವು ಹೇಳುವ ಆ ಜ್ಯೋತಿಯು ಮಾತುಗಳನ್ನು ಮೀರಿ ನಿಲ್ಲುವಂತಹುದು. ಅಂತರಂಗದ ಅನುಭವದ ಮೂಲಕ ಮಾತ್ರ ಅದನ್ನು ನಾವು ಸ್ಪರ್ಶಿಸಬಹುದು. ಆದ್ದರಿಂದ ಪರಮ ಸತ್ಯಕ್ಕೆ ಯಾವ ವಾಹಕದ ಅಗತ್ಯವೂ ಇಲ್ಲ; ಅದು ಸ್ವಭಾವತಃ

ಸ್ವಯಂಚಾಲಿತವಾದುದು. ಯಾವ ಮಾಧ್ಯಮದ ಪ್ರವೇಶವೂ ಇಲ್ಲದೆ ಗುಲಾಬಿ ತನ್ನ ಪರಿಮಳವನ್ನು ಬೀರುವಂತೆ ಅದು ತನ್ನ ಪ್ರಭಾವವನ್ನು ಮೌನವಾಗಿ ಪ್ರಸರಿಸುತ್ತದೆ.

ಡಾ. ಮಾಟ್: "ಹಾಗಾದರೆ ಭಗವಂತ ಕೂಡ ಕೆಲವು ವೇಳೆ ತನ್ನ ಆಯ್ಕೆಯ ಪ್ರವಾದಿಗಳ ಮೂಲಕ ಮಾತನಾಡುತ್ತಾನಲ್ಲ?

ಗಾಂಧೀಜಿ: ಹೌದು, ಆದರೆ ಪ್ರವಾದಿಗಳು ತಮ್ಮ ಬದುಕಿನ ಮೂಲಕ ಮಾತನಾಡುತ್ತಾರೆಯೇ ಹೊರತು ನಾಲಿಗೆಗಳ ಮೂಲಕವಲ್ಲ. ಈ ವಿಷಯದಲ್ಲಿ ಕ್ರಿಶ್ಚಿಯನ್ನರ ದೃಢಾಭಿಪ್ರಾಯಕ್ಕೆ ವಿರೋಧಿಯಾಗಿದ್ದೇನೆಂದು ನಾನಂದುಕೊಂಡಿದ್ದೇನೆ.

"ಖಂಡಿತ ಇಲ್ಲ" ಎಂದು ಡಾ. ಮಾಟ್‌ರವರು ನುಡಿದರು. "ಅಧಿಕಾರಿಕ ಪದ್ಧತಿಯನ್ನು ಸೇರಿಸಬಾರದೆಂಬ ಮತ್ತು ಜೀವನದ ಪ್ರಗಾಢ ಸತ್ಯಗಳನ್ನು ಸ್ವತಃ ಕಂಡುಕೊಳ್ಳಲು ಪ್ರತಿಯೊಬ್ಬ ವ್ಯಕ್ತಿಗೂ ಅವಕಾಶ ನೀಡಬೇಕೆಂಬ ಅಭಿಪ್ರಾಯವುಳ್ಳ ಒಂದು ಪಂಥ ಕ್ರಿಶ್ಚಿಯನ್ನರಲ್ಲೂ ಇದೆ ಮತ್ತು ಬೆಳೆಯುತ್ತಿದೆ. ಅವರು ಮುಂದಿಡುವ ವಾದವೇನೆಂದರೆ, ಆಧ್ಯಾತ್ಮಿಕ ಅನ್ವೇಷಣೆಯ ಗತಿಯು ವಿವಿಧ ವ್ಯಕ್ತಿಗಳಲ್ಲಿ ಅವರ ಅಗತ್ಯಗಳು ಮತ್ತು ಅವರ ಮನೋಧರ್ಮಗಳಿಗೆ ಅನುಗುಣವಾಗಿ ವ್ಯತ್ಯಾಸ ಹೊಂದಲೇಬೇಕು. ಇನ್ನೊಂದು ರೀತಿ ಹೇಳುವುದಾದರೆ, ಪ್ರಚಾರವು ಅದರ ಅಂಗೀಕೃತ ಅರ್ಥದಲ್ಲಿ ಅತ್ಯಂತ ಪರಿಣಾಮಕಾರಿ ವಿಧಾನವೇನಲ್ಲವೆಂದು ಅವರು ಭಾವಿಸುತ್ತಾರೆ."

"ನೀವು ಈ ರೀತಿ ಹೇಳಿದ್ದನ್ನು ಕೇಳಿ ನನಗೆ ಸಂತೋಷವಾಗಿದೆ. ಹಿಂದೂಧರ್ಮ ಒತ್ತಿ ಹೇಳುವುದೂ ಇದನ್ನೆ." ಎಂದು ಗಾಂಧೀಜಿ ನುಡಿದರು.

"ದೇಶದ ಭವಿಷ್ಯದ ಬಗೆಗೆ ನೀವು ಕಳವಳಗೊಳ್ಳಲು ಕಾರಣವೇನು?" ಎಂದು ಡಾ. ಮಾಟ್ ವಿಚಾರಿಸಿದರು.

"ಜನಸಾಮಾನ್ಯರ ಬಗೆಗೆ ಹಾಗೂ ಅವರ ದಾರಿದ್ರ್ಯದ ಬಗೆಗೆ ನಮ್ಮ ಮನೋಧರ್ಮದಲ್ಲಿ ಕಂಡಬರುವ–ಬೈಬಲ್ಲಿನ ಈ ವಾಕ್ಯಸರಣಿಯನ್ನು ಬಳಸಿ ಹೇಳಬಹುದಾದರೆ–ನಿರ್ಲಕ್ಷ್ಯ ಮತ್ತು ನಿರ್ದಯಗಳೇ ಇದಕ್ಕೆ ಕಾರಣ" ಎಂದು ಗಾಂಧೀಜಿ ಉತ್ತರವಿತ್ತರು. "ನಮ್ಮ ಯುವಜನಾಂಗದಲ್ಲಿ ಉದಾತ್ತ ಭಾವನೆಗಳು ಮತ್ತು ಪ್ರೇರಣೆಗಳು ತುಂಬಿವೆ; ಆದರೆ ಅವಿನ್ನೂ ಸ್ಪಷ್ಟ ಪ್ರಾಯೋಗಿಕ ಸ್ವರೂಪವನ್ನು ಪಡೆದುಕೊಂಡಿಲ್ಲ. ಒಂದು ಪಕ್ಷ ನಮ್ಮ ತರುಣರ ಪೀಳಿಗೆಯು ಸತ್ಯ ಮತ್ತು ಅಹಿಂಸೆಗಳಲ್ಲಿ ಜೀವಂತ ಮತ್ತು ಉತ್ಸಾಹಪೂರ್ಣ ಶ್ರದ್ಧೆಯನ್ನು ಹೊಂದಿದ್ದಲ್ಲಿ ಈ ವೇಳೆಗೆ ನಾವು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಬಹುದಾಗಿತ್ತು. ಆದರೂ ನಮ್ಮ ಎಲ್ಲ ಯುವಕರೂ ಅಷ್ಟೊಂದು ನಿರುತ್ಸಾಹಿಗಳಾಗಿಲ್ಲ. ಅವರು ಉದುಗು ಹಿಟ್ಟಿನಂತೆ ಪ್ರಭಾವಬೀರಿ ಮುಂದೆ ಇಡೀ ಸಮುದಾಯವನ್ನೆ ಪರಿವರ್ತಿಸಬಹುದೆಂಬ ಭರವಸೆಯನ್ನು ನಾನು ತಾಳಿಕೊಂಡಿದ್ದೇನೆ."

ಪರೀಕ್ಷೆಯ ಮತ್ತು ಸಿದ್ಧತೆಯ ವರ್ಷವು ಫೆಬ್ರುವರಿ ೨ರಂದು ಅಂದರೆ ಗಾಂಧೀಜಿ ಅಲಹಾಬಾದನ್ನು ಬಿಟ್ಟು ಸಿಂಧ್‌ಗೆ ಪ್ರಯಾಣ ಬೆಳೆಸಿದಂದು ಆರಂಭವಾಯಿತು. ಇದು

ಹನ್ನೆರಡು ವರ್ಷಗಳ ನಂತರ ಆ ಪ್ರಾಂತ್ಯಕ್ಕೆ ಅವರು ನೀಡಿದ್ದ ದ್ವಿತೀಯ ಭೇಟಿಯಾಗಿತ್ತು; ಈಗ ಅವರು ಮತ್ತೆ ಮೂರನೆಯ ದರ್ಜೆಯ ಬೋಗಿಯಲ್ಲಿ ಪ್ರಯಾಣ ಮಾಡಿದರು.

ಕರಾಚಿಯಲ್ಲಿನ ಕಾರ್ಯಕ್ರಮ ತುಂಬ ನಿಬಿಡವಾಗಿತ್ತು. ಅದು ಫೆಬ್ರವರಿ ೩ರಂದು ಪುರಸಭೆಯವರು ಏರ್ಪಡಿಸಿದ್ದ ಭಾಷಣದಿಂದ ಆರಂಭವಾಯಿತು. ಎರಡು ರೂಪಾಯಿಯ ತಿಂಗಳುಗಂದಾಯ ಕಟ್ಟುವ ಪ್ರತಿಯೊಬ್ಬನಿಗೂ ಪೌರಸಭೆ ಮತದಾನದ ಹಕ್ಕನ್ನು ಕೊಟ್ಟಿರುವುದಾಗಿಯೂ, ಕರಾಚಿಯ ಒಟ್ಟು ಜನಸಂಖ್ಯೆಯ ಮೂರನೆಯ ಒಂದು ಭಾಗಕ್ಕೆ ಹೀಗೆ ಚುನಾವಣಾ ಹಕ್ಕು ದೊರೆತಿರುವುದಾಗಿಯೂ ಪೌರ ವರದಿಯಲ್ಲಿ ತಿಳಿಸಲಾಯಿತು. ಪೌರಸಭೆಯ ಈ ಸುಧಾರಣೆಯನ್ನು ಗಾಂಧೀಜಿ ಅಭಿನಂದಿಸಿದರಲ್ಲದೆ ಈ ಧನಮೂಲವಾದ ಮತದಾನದ ಹಕ್ಕನ್ನು ಪರಿಹರಿಸುವ ಕಾಲ ದೂರವೇನಿಲ್ಲವೆಂದೂ, ಅದರ ಸ್ಥಾನದಲ್ಲಿ ವಿವೇಕ ಚಿತ್ತವುಳ್ಳ ಪ್ರತಿಯೊಬ್ಬನಿಗೂ ಮತದಾನದ ಹಕ್ಕನ್ನು ಕೊಡುವಂಥ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಬಳಕೆಗೆ ತಂದು ಈ ಕಾಲದ ಪ್ರಗತಿಶೀಲ ಪ್ರಜಾಸತ್ತೆಯ ಸತ್ವದೊಂದಿಗೆ ಅದು ಸಹಕರಿಸಬೇಕಾಗುತ್ತದೆಂದೂ ಅವರು ಆಶಿಸಿದರು. ಇದಲ್ಲದೆ ನಗರದ ಹಾಲಿನ ವ್ಯಾಪಾರವನ್ನು ಸಂಪೂರ್ಣವಾಗಿ ಪುರಸಭೆಯವರು ವಹಿಸಿಕೊಳ್ಳುವ ಮೂಲಕ ಕರಾಚಿಯ ನಾಗರಿಕರಿಗೆ ಶುದ್ಧ ಹಾಗೂ ಅಗ್ಗವಾದ ಹಾಲಿನ ಸಮೃದ್ಧ ಹಂಚಿಕೆಯ ಭರವಸೆಯನ್ನು ಪುರಸಭೆಯು ನೀಡಬೇಕು ಮತ್ತು ಇಡೀ ಭಾರತಕ್ಕೆ ಒಂದು ನಿದರ್ಶನವನ್ನು ಹಾಕಿಕೊಡಬೇಕೆಂದು ಸೂಚಿಸಿದರು.

ಮರುದಿನ ಲಜಪತರಾಯ್ ಸ್ಮಾರಕ ನಿಧಿಗೆ ೪೩,೦೦೦ ರೂ.ಗಳ ಕಾಣಿಕೆಯನ್ನು ಅರ್ಪಿಸುವ ಸಲುವಾಗಿ ನಾಗರಿಕರ ಸಭೆಯೊಂದು ಸೇರಿತ್ತು. ನಿಧಿಗೆ ಎಷ್ಟೇ ಉದಾರವಾಗಿ ಚಂದಾ ನೀಡಿದರೂ ಅಷ್ಟರಿಂದಲೇ ತೃಪ್ತರಾಗದೆ, ಯಾವ ಮಣಿಹಕ್ಕಾಗಿ ಲಜಪತ್ ರಾಯರು ಜೀವಿಸಿದರೊ ಮತ್ತು ಬದುಕಿನುದ್ದಕ್ಕೂ ದುಡಿದರೊ ಮತ್ತು ಪ್ರಾಣವನ್ನು ಸಮರ್ಪಿಸಿ ಹುತಾತ್ಮರಾದರೊ ಅದನ್ನು ಪೂರ್ಣಗೊಳಿಸುವುದರ ಮೂಲಕ ಅರ್ಥಾತ್ ಭಾರತಕ್ಕೆ ಸ್ವರಾಜ್ಯವನ್ನು ಗೆದ್ದುಕೊಡುವುದರ ಮೂಲಕ ಆ ಮಹಾನಾಯಕನ ಆತ್ಮಕ್ಕೆ ತೃಪ್ತಿಯಾಗುವಂಥ ಏಕಮಾತ್ರ ಸ್ಮಾರಕವನ್ನು ನಿರ್ಮಿಸಬೇಕೆಂಬುದು ಅವರ ಭಾಷಣದ ಉಜ್ವಲ ಮನವಿಯಾಗಿದ್ದಿತು. ಹಾಗೆ ಮಾಡಬೇಕಾದಲ್ಲಿ ಇರುವ ಮಾರ್ಗವೆಂದರೆ ಕಲ್ಕತ್ತ ಕಾಂಗ್ರೆಸ್ಸಿನಲ್ಲಿ ಮಂಡಿಸಲ್ಪಟ್ಟ ಚತುರ್ವಿಧ ರಚನಾತ್ಮಕ ಕಾರ್ಯಕ್ರಮಗಳನ್ನು ಜಾರಿಗೆ ತರುವುದು. ದೃಢನಿರ್ಧಾರದಿಂದ ಅದರಲ್ಲಿ ಅವರು ನಿರತರಾದಲ್ಲಿ ಸನಿಹದಲ್ಲಿಯೇ ಅಂದರೆ ಈ ವರ್ಷದ ಕೊನೆಯ ವೇಳೆಗೆ ಸ್ವರಾಜ್ಯವನ್ನು ಅವರು ಕಾಣಬಹುದು ಇಲ್ಲವೆ ಅಸಹಕಾರವನ್ನು ಪುನರೂರ್ಜಿತಗೊಳಿಸಲು ಮತ್ತು ಕರ ನಿರಾಕರಣ ಚಳುವಳಿಯನ್ನು ಮುನ್ನಡೆಸಲು ಅವರಿಗೆ ಕರೆ ಬರಬಹುದು.

ವಿದ್ಯಾರ್ಥಿಗಳ ಸಮಾರಂಭದೊಂದಿಗೆ ಸಿಂಧಿ ಯುವಕ ಯುವತಿಯರ ಸಂಪರ್ಕ ವೇರ್ಪಟ್ಟಿತು. ಅಲ್ಲಿ ಕರಾಚಿಯ ಲಾ ಕಾಲೇಜು, ಎಂಜಿನಿಯರಿಂಗ್ ಕಾಲೇಜು, ಮತ್ತು ಆರ್ಟ್ಸ್ ಕಾಲೇಜುಗಳ ಪರವಾಗಿ ಗಾಂಧೀಜಿಗೆ ಜಂಟಿ ಬಿನ್ನವತ್ತಳೆಯನ್ನರ್ಪಿಸಲಾಯಿತು.

ಬಿನ್ನವತ್ತಳೆಯು ಇಂಗ್ಲಿಷಿನಲ್ಲಿತ್ತು. "ಒಳ್ಳೆಯದು, ಯುವಕರೆ" ಎಂದವರು ಆರಂಭಿಸಿದರು. "ಅನುಕರಣವು ಪ್ರಾಮಾಣಿಕ ಮುಖಸ್ತುತಿ ಎಂದು—ಇಂಗ್ಲಿಷ್ ಗಾದೆಯೊಂದು ಹೇಳುತ್ತದೆ. ನನ್ನನ್ನು ಹೊಗಳುವುದರಲ್ಲಿ ನೀವು ವಾಗ್ಮಿತೆಯನ್ನು ತೋರಿದ್ದೀರಿ; ಆದರೆ ಅದೇ ವೇಳೆಯಲ್ಲಿ ಯಾವ ಸಂಗತಿಗಳನ್ನು ನಾನು ಪ್ರತಿಪಾದಿಸುತ್ತೇನೆಯೋ ಅವನ್ನೆಲ್ಲ ನೀವು ಆಚರಣೆಯಲ್ಲಿ ಉಲ್ಲಂಘಿಸುತ್ತಿದ್ದೀರಿ; 'ನೀವು ಬಯಸುವುದೇನೆಂಬುದು ನಮಗೆ ತಿಳಿದಿದೆ. ಅದರೂ ಅದಕ್ಕೆ ತದ್ವಿರುದ್ಧವಾದುದನ್ನೆ ನಾವು ಮಾಡುತ್ತೇವೆ' ಎಂದು ನೀವು ಹೇಳುವಂತೆ ತೋರುತ್ತದೆ ಇದು. ನೀವು ಹೀಗೆ ನನಗೆ ಉದ್ದೇಶಪೂರ್ವಕ ಮುಖಭಂಗ ಮಾಡಬಾರದಿತ್ತು. ಗಡ್ಡೆಗಟ್ಟಿರುವ ಹಿಮಾಲಯ ಶಿಖರಗಳ ಎತ್ತರದ 'ಮಹಾತ್ಮ ಪದವಿ'ಗೆ ನನ್ನನ್ನು ರೂಪಾಂತರಿಸಿ ನನ್ನ ಬೋಧೆಯ ಅನುಸರಣೆಯಿಂದ ವಿನಾಯಿತಿಯನ್ನು ಅಪೇಕ್ಷಿಸಿ ನನ್ನನ್ನು ನೀವು ಪರಿಹಾಸಗೈಯಲು ಇಚ್ಛಿಸಿದ್ದೀರೇನು? ಆದರೆ ನನ್ನನ್ನು ಹೀಗೆ ಕರೆದದ್ದು ಹಾಗಿರಲಿ, ನಿಮ್ಮ ಈ ಎಲ್ಲ ಅಕೃತ್ಯಗಳಿಗೂ ನೀವು ಲೆಕ್ಕವೊಪ್ಪಿಸಲೇಬೇಕು."

ತಮ್ಮ ಬಿನ್ನವತ್ತಳೆಯನ್ನು ವಿದೇಶೀ ಭಾಷೆಯಲ್ಲಿ ಸಿದ್ಧಪಡಿಸಿದುದಕ್ಕಾಗಿ ಗಾಂಧೀಜಿ ವಿದ್ಯಾರ್ಥಿಗಳನ್ನು ಮೊದಲು ಆಕ್ಷೇಪಿಸಿದರು. ನೆಹ್ರೂ ಸಮಿತಿಯ ವರದಿಯಲ್ಲಿ ಹಿಂದೂಸ್ತಾನಿಯು ಸ್ವರಾಜ್ಯ ಭಾರತದ ವ್ಯವಹಾರ ಭಾಷೆಯಾಗಿರಬೇಕೆಂದು ಶಿಫಾರಸು ಮಾಡಲಾಗಿತ್ತು. "ನಾವು ಸ್ವತಂತ್ರ ಜನರೆಂದು ನೀವು ಒಂದು ವೇಳೆ ಹೇಳಿಕೊಳ್ಳಬಹುದು. ಹಾಗಾದರೆ ನಾನು ಜನರಲ್ ಬೋರ್ಡಿನ ಒಂದು ನಿದರ್ಶನವನ್ನು ನಿಮಗೆ ನೆನಪಿಸುತ್ತೇನೆ. ಬೋಯರ್ ಯುದ್ಧದ ನಂತರ ಅಧಿಕಾರವು ದಕ್ಷಿಣ ಆಫ್ರಿಕಕ್ಕೆ ವರ್ಗಾಯಿಸಲ್ಪಟ್ಟಾಗ, ರಾಜನ ಮುಂದೆಯೂ ಇಂಗ್ಲಿಷಿನಲ್ಲಿ ಮಾತನಾಡಲು ಆತ ನಿರಾಕರಿಸಿದನಲ್ಲದೆ ದುಬಾಷಿಯ ನೆರವನ್ನು ಪಡೆದು ಡಚ್ ಭಾಷೆಯನ್ನೇ ಬಳಸಲು ಇಚ್ಛಿಸಿದನು. ಸ್ವಾತಂತ್ರ್ಯಪ್ರೇಮಿ ಜನರ ಪ್ರತಿನಿಧಿಯೊಬ್ಬ ಮಾಡಬಹುದಾದ್ದು ಹೀಗೆ ಮಾತ್ರವೆ." ದುಂದುಗಾರಿಕೆ ಮತ್ತು ಪೋಕಿಗಳಿಂದ ಕೂಡಿದ ಯುವಕರ ಜೀವನದ ರೀತಿಗಳನ್ನು ಕುರಿತು ಅವರು ಹೀಗೆ ಹೇಳಿದರು: "ಸಾರ್ವಜನಿಕ ಬೊಕ್ಕಸವು ನಿಮ್ಮ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುವ ಹಣದಲ್ಲಿ ಅರ್ಧಭಾಗವನ್ನು ನೀವು ಕೊಡುವ ಫೀಸು ಭರ್ತಿಮಾಡುವುದಿಲ್ಲವೆಂಬುದನ್ನು ಅರ್ಥಶಾಸ್ತ್ರದ ವಿದ್ಯಾರ್ಥಿಗಳಾಗಿ ನೀವು ಅರಿತಿರಲೇಬೇಕು. ಉಳಿದ ಹಣವು ಎಲ್ಲಿಂದ ಬರುತ್ತದೆಂಬುದನ್ನು ನೀವು ಎಂದಾದರೂ ಆಲೋಚಿಸಿದ್ದೀರಾ? ಕಾಂತಿಹೀನ ಕಣ್ಣುಗಳನ್ನೂ, ನಿರಾಶೆಯೇ ಲಿಖಿತಗೊಂಡ ಮುಖಗಳನ್ನೂ, ವರ್ಷವಿಡೀ ಹಸಿವಿನ ಯಾತನೆಯಿಂದ ನರಳುವ ಹೊಟ್ಟೆಗಳನ್ನೂ ಹೊತ್ತ, ಶ್ರೀಮಂತ ಗುಜರಾತಿಗಳು ಮತ್ತು ಮಾರ್ವಾಡಿಗಳು ಹೀನ ಔದಾರ್ಯದಿಂದ ಎಸೆಯುವ ಹಳಸಿದ ಹಿಡಿಗೂಳಿನಿಂದ ಮತ್ತು ಚಿಟಿಕೆ ಕೊಳಕು ಉಪ್ಪಿನಿಂದ ಬದುಕನ್ನು ಹೊರೆಯುತ್ತ ಅಲೆಯುವ ಒರಿಸ್ಸದ ಜೀವಂತ ಅಸ್ಥಿಪಂಜರಗಳಿಂದ, ಬಡವರ ಜೇಬುಗಳಿಂದ ಅದು ಬರುತ್ತದೆ. ನಿಮ್ಮ ಈ ಸಹೋದರರಿಗೆ ನೀವು ಮಾಡಿರುವುದೇನು? ಮನೆಯಲ್ಲಿಯೆ ನೇಯಲ್ಪಟ್ಟ,

ನಿಮ್ಮ ಸೋದರಿಯರ ನಿರ್ಮಲ ಹಸ್ತದಿಂದ ಸಿದ್ಧವಾದ, ಅವರಿಗೆ ಹೆಚ್ಚಿನ ನಾಲ್ಕಾರು ಕಾಸುಗಳನ್ನು ಗಳಿಸಿಕೊಡುವ ಖಾದಿಯನ್ನು ಧರಿಸುವುದಕ್ಕೆ ಬದಲಾಗಿ ನೀವು ವಿದೇಶಿ ಮಾಲಿಗೆ ಕೈಹಾಕುತ್ತೀರಿ. ಆ ಮೂಲಕ ವರ್ಷಕ್ಕೆ ಅರವತ್ತು ಕೋಟಿ ರೂಪಾಯಿಗಳನ್ನು ದೇಶದಿಂದಾಚೆಗೆ ಕಳುಹಿಸಲು ಮತ್ತು ಭಾರತದ ನಿರ್ಗತಿಕರ ಬಾಯಿಗಳ ತುತ್ತನ್ನು ಕಸಿದುಕೊಳ್ಳಲು ಅನುವು ಮಾಡಿಕೊಡುತ್ತಿದ್ದೀರಿ. ಇದರ ಫಲವಾಗಿ ದೇಶವು ಕಷ್ಟದಲ್ಲಿ ನುಚ್ಚುನುರಿಯಾಗುತ್ತಿದೆ. ನಮ್ಮ ವಾಣಿಜ್ಯವು ನಮ್ಮ ದೇಶದ ಸಂಪತ್ತನ್ನು ವೃದ್ಧಿ ಮಾಡುವುದಕ್ಕೆ ಬದಲಾಗಿ ನಮ್ಮನ್ನು ಶೋಷಿಸುವ ಒಂದು ಸಾಧನವಾಗಿದೆ. ನಮ್ಮ ವಾಣಿಜ್ಯಗಾರರು ಲಂಕಾಶೈರ್ ಮತ್ತು ಮ್ಯಾಂಚೆಸ್ಟರ್‌ಗಳ ದಳ್ಳಾಳಿಗಾಗಿ ಹೀನಸ್ಥಿತಿಗಿಳಿಸಲ್ಪಟ್ಟಿದ್ದಾರೆ. ತಮ್ಮ ವ್ಯಾಪಾರದಲ್ಲಿ ಅವರಿಗೆ ಸಿಗುವ ಲಾಭದ ಪಾಲು ಎಲ್ಲೋ ಶೇಕಡ ಐದು ಭಾಗಮಾತ್ರ. ಈ ಐದು ಭಾಗ ಲಾಭದಿಂದಲೆ ನಮ್ಮ ದೊಡ್ಡ ದೊಡ್ಡ ನಗರಗಳ ತೋರಿಕೆಯ ವೈಭವವು ನಿರ್ಮಾಣವಾಗಿದೆ.”

ಇಂಡಿಯಾವು ರಕ್ತವನ್ನು ಸುರಿಸಲೇಬೇಕಾಗಿರುವುದರಿಂದ, ರಕ್ತಗಟ್ಟಿದ ಭಾಗಗಳಲ್ಲಿ ಶಸ್ತ್ರವನ್ನು ಪ್ರಯೋಗಿಸಬೇಕೆಂಬುದಾಗಿ ಸ್ಯಾಲಿಸ್‌ಬರಿಯು ಹೇಳಿದ್ದಾನೆಂದು ಸೂಚಿಸುತ್ತಾ ಅವರು ತಮ್ಮ ಮಾತನ್ನು ಮುಂದುವರಿಸಿದರು. ಲಾರ್ಡ್ ಸ್ಯಾಲಿಸ್‌ಬರಿಯ ಕಾಲದಲ್ಲಿಯೆ ರಕ್ತ ಸುರಿತದ ಮೂಲಕ ಆದಾಯವನ್ನು ಪಡೆಯಬೇಕಾಗಿದ್ದಲ್ಲಿ, ಈ ಎಲ್ಲ ವರ್ಷಗಳ ಶೋಷಣೆಯ ಫಲವಾಗಿ ಮತ್ತಷ್ಟು ನಿರ್ಗತಿಕವಾಗಿರುವ ಭಾರತದ ಇಂದಿನ ಸ್ಥಿತಿಯಲ್ಲಿ ಅದರ ಪ್ರಮಾಣ ಈಗ ಇನ್ನೂ ಎಷ್ಟು ಹೆಚ್ಚಾಗಿರಬೇಡ? ಭಾರತೀಯ ಜನಸಾಮಾನ್ಯರ ಜೀವಂತ ರಕ್ತವನ್ನು ಪ್ರತಿನಿಧಿಸುವ ಈ ಆದಾಯದಿಂದಲೆ ವಿದ್ಯಾಭ್ಯಾಸಕ್ಕೆ ಹಣವು ಪೂರೈಕೆಯಾಗುತ್ತಿದೆಯೆಂಬುದನ್ನು ಯುವಜನರು ಮರೆಯಬಾರದು. ಅದಕ್ಕೆ ಖರ್ಚುಮಾಡುವ ಹಣ ಕುಪ್ರಸಿದ್ಧ ಹೆಂಡದ ಆದಾಯದಿಂದ ಬಂದುದಾದ್ದರಿಂದ ತಾವು ಪಡೆಯುತ್ತಿರುವ ವಿದ್ಯಾಭ್ಯಾಸವು ತಮ್ಮ ದೇಶದ ಜನರ ದುರ್ಗತಿಯ ಮೂಲಕ ಬಂದುದೆಂಬುದನ್ನು ಅವರು ಅರಿತಿರುವರೆ? ಆದ್ದರಿಂದ ಭಗವಂತನ ನ್ಯಾಯಪೀಠದ ಮುಂದೆ ‘ನೀವು ಸೋದರರಿಗೆ ಏನು ಮಾಡಿದ್ದೀರಿ?’ ಎಂಬ ಘೋರ ಪ್ರಶ್ನೆಗೆ ಅಲ್ಲವರು ಉತ್ತರಿಸಲೇಬೇಕಾಗುತ್ತದೆ. ಆಗವರು ಏನು ಉತ್ತರ ಕೊಡುತ್ತಾರೆಂದು ಗಾಂಧೀಜಿ ಪ್ರಶ್ನಿಸಿದರು. ಮುಂದೆ ಅವರು ಹಜರತ್ ಉಮರನ ಸಂಗತಿಯನ್ನು ಉದಾಹರಿಸಿದರು. ಮುಸ್ಲಿಂ ಗಣ್ಯರು ಆಡಂಬರದ ಬದುಕನ್ನು ನಡೆಸಲು ತೊಡಗಿ ಬೆಲೆಬಾಳುವ ಬಟ್ಟೆಗಳನ್ನು ಉಡಲಾರಂಭಿಸಿ ತರಿ ಹಿಟ್ಟಿನಿಂದ ಮಾಡಿದ ರೊಟ್ಟಿಯನ್ನು ಮತ್ತು ಒರಟು ಬಟ್ಟೆಗಳನ್ನು ಬಳಸುತ್ತಿರಲಿಲ್ಲವಾದ್ದರಿಂದ ಅವರು ಪ್ರವಾದಿಯ ನಿಜವಾದ ಅನುಯಾಯಿಗಳಲ್ಲವೆಂದು ಹೇಳಿ, ತನ್ನಿಂದ ಅವರೆಲ್ಲರೂ ದೂರ ಸರಿಯುವಂತೆ ಉಮರನು ಹೇಳಿದನು. ಆ ದೇವಭೀರು ಕಲೀಫನನ್ನು ತರುಣರು ಅನುಸರಿಸುವರೆಂದು ಗಾಂಧೀಜಿ ಮನಃಪೂರ್ವಕವಾಗಿ ಆಶಿಸಿದರು.

ಅಶ್ಲೀಲ ಪದ್ಧತಿಯಾದ ‘ದೇತಿ ಲೇತಿ’ಯ ಬಗೆಗೆ ಯುವಜನರು ಏನು ಹೇಳ

ಬಲ್ಲರು? ಅವರು ಪತ್ನಿಯರನ್ನು ತಮ್ಮ ಮನೆಗಳ ಮತ್ತು ಮನಗಳ ರಾಣಿಯರನ್ನಾಗಿ ಮಾಡುವುದಕ್ಕೆ ಬದಲು ಅವರನ್ನು ಕೊಳ್ಳುವ ಮತ್ತು ಮಾರುವ ಚರಸ್ವತ್ತನ್ನಾಗಿ ಪರಿವರ್ತಿಸಿದ್ದಾರೆ. ಇಂಗ್ಲಿಷ್ ಸಾಹಿತ್ಯದ ಓದಿನಿಂದ ಇದನ್ನೇ ಏನು ಅವರು ಗ್ರಹಿಸಿರುವುದು? ಹೆಂಗಸನ್ನು ಗಂಡಸಿನ ಅರ್ಧಾಂಗವೆಂದು ಕರೆಯಲಾಗಿದೆ. ಆದರೆ ಅವರು ಅವಳನ್ನು ದಾಸಿಯ ಸ್ಥಿತಿಗೆ ಇಳಿಸಿದ್ದಾರೆ ಮತ್ತು ಇದರ ಫಲವಾಗಿ ಅವರ ದೇಶವು ನಿಸ್ಸತ್ವ ಸ್ಥಿತಿಯಲ್ಲಿದೆ. ವಿದ್ಯಾರ್ಥಿನಿಯರನ್ನು ಸಂಬೋಧಿಸುತ್ತಾ ಗಾಂಧೀಜಿ ಹೀಗೆ ನುಡಿದರು: "ತರುಣಿಯರೆ, ನಿಮಗೆ ನಾನು ಹೇಳುವುದಿಷ್ಟೆ. ನನ್ನ ರಕ್ಷಣೆಯಲ್ಲಿ ಒಬ್ಬ ಹುಡುಗಿಯಿದ್ದ ಪಕ್ಷದಲ್ಲಿ, ಮದುವೆಯಾಗಲು ಬಿಡಿಗಾಸನ್ನೇ ಆಗಲಿ ಅಪೇಕ್ಷಿಸುವಂಥವನಿಗೆ ಅವಳನ್ನು ಒಪ್ಪಿಸುವುದಕ್ಕಿಂತ ಜೀವನಪೂರ್ತಿ ಕನ್ಯೆಯಾಗಿಯೇ ಇರಿಸಿಕೊಳ್ಳುತ್ತಿದ್ದೆ."

ಗಾಂಧೀಜಿ ತಮ್ಮ ಭಾಷಣವನ್ನು ಹೀಗೆ ಮುಕ್ತಾಯಗೊಳಿಸಿದರು. "ಸ್ವರಾಜ್ಯವಿರುವುದು ನಗುನಗುತ್ತಾ ಗಲ್ಲುಗಂಬವನ್ನೇರುವಂಥ ಮತ್ತು ತಮ್ಮ ಕಣ್ಣುಗಳನ್ನು ಕಟ್ಟಿಸಿಕೊಳ್ಳಲು ಸಿದ್ಧರಾಗಿರುವಂಥ ಜನರಿಗೆ ಹೊರತು ಹೇಡಿಗಳಿಗಲ್ಲ. 'ದೇತಿ ಲೇತಿ'ಯ ಕಳಂಕವನ್ನು ನಿರ್ಮೂಲಗೊಳಿಸುತ್ತೇವೆಂದು, ನಿಮ್ಮ ಸಹೋದರಿಯರ ಮತ್ತು ಹೆಂಡತಿಯರ ಪೂರ್ಣ ಗೌರವ ಮತ್ತು ಸ್ವಾತಂತ್ರ್ಯವನ್ನು ಮತ್ತೆ ಗಳಿಸಿಕೊಡಲು ಪ್ರಾಣ ಕೊಟ್ಟು ಹೋರಾಡುತ್ತೇವೆ ಎಂದು ಮಾತು ಕೊಡಿ. ಆಗ ಮಾತ್ರ ನಿಮ್ಮ ನಾಡಿನ ಸ್ವಾತಂತ್ರ್ಯಕ್ಕೆ ನೀವು ಸಿದ್ಧರಾಗಿದ್ದೀರೆಂದು ನಾನು ತಿಳಿಯುತ್ತೇನೆ."

ನಿಮ್ನ ವರ್ಗದ ಶಾಲೆಯಲ್ಲಿ ಗಾಂಧೀಜಿಗೆ ವಿಚಿತ್ರ ಅನುಭವವಾಯಿತು. ಇಲ್ಲಿ ಕಾಣಿಕೆಯನ್ನು ಏತಕ್ಕೆ ಕೊಡುತ್ತಿದ್ದೇವೆಂಬುದು ಮಕ್ಕಳಿಗೆ ತಿಳಿದಿಲ್ಲವೆಂಬುದು ಅವರ ಗಮನಕ್ಕೆ ಬಂದಿತು. ವನವಿಹಾರಕ್ಕಾಗಿ ಸಿಹಿತಿಂಡಿಗಳನ್ನು ಕೊಳ್ಳಲು ದುಡ್ಡುಕೊಟ್ಟಿರುವುದಾಗಿ ಕೆಲವು ಮಕ್ಕಳು ಹೇಳಿದರು. ಒಬ್ಬ ಹುಡುಗನಂತೂ ಆ ತಿಂಡಿಯನ್ನು ಬೇರೆ ಯಾರೊಂದಿಗೂ ಹಂಚಿಕೊಳ್ಳುವುದಿಲ್ಲವೆಂದು ಪಟ್ಟು ಹಿಡಿದನು. ಈ ಸಂಗತಿಯು ಲಜಪತರಾಯ್ ಯಾರು ಮತ್ತು ನಿಮ್ನವರ್ಗದವರ ಏಳ್ಗೆಗಾಗಿ ಅವರು ಎಷ್ಟು ಆಸಕ್ತಿ ವಹಿಸಿದ್ದರು ಎಂಬ ಬಗೆಗೆ ಮಾತನಾಡುವಂತೆ ಅವರನ್ನು ಪ್ರೇರೇಪಿಸಿತು. ಸರಳ ಭಾಷೆಯಲ್ಲಿ ಖಾದಿಯ ಮಹತ್ವವನ್ನು ಅವರು ಆ ಮಕ್ಕಳಿಗೆ ವಿವರಿಸಿದರು.

ನಾಲ್ಕು ದಿನಗಳ ಬಿಡುವಿಲ್ಲದ ಸಭೆಗಳ ನಂತರ ಉಳಿದ ತಮ್ಮ ಸಿಂದ್ ಕಾರ್ಯಕ್ರಮವನ್ನು ಪೂರೈಸುವ ಸಲುವಾಗಿ ಅವರು ಕರಾಚಿಯನ್ನು ಬಿಟ್ಟರು. ಜಕೊಬಾಬಾದ್‌ನಲ್ಲಿ ಅನಿರೀಕ್ಷಿತ ಘಟನೆಯೊಂದರಿಂದ ದಿನದ ಕಾರ್ಯಕ್ರಮ ಆರಂಭವಾಯಿತು. ಜಾಡಮಾಲಿಗಳ ಸಭೆಯು ಪ್ರತ್ಯೇಕವಾಗಿ ಏರ್ಪಾಡಾಗಿತ್ತು. ಗಾಂಧೀಜಿ ಅದಕ್ಕೆ ಸಿದ್ಧವಾಗಿರಲಿಲ್ಲ. "ನಿಮ್ಮ ಕಾಣಿಕೆ ಮತ್ತು ಅಭಿನಂದನೆಗಳನ್ನೆಲ್ಲ ಹಿಂದೆಗೆದುಕೊಳ್ಳಬಹುದು" ಎಂದು ಅವರು ವ್ಯವಸ್ಥಾಪಕರಿಗೆ ತಿಳಿಸಿದರು. "ನಾನು ಕೇವಲ ಅಸ್ಪೃಶ್ಯರ ಸಭೆಯಲ್ಲಿ ಭಾಗವಹಿಸುತ್ತೇನೆ. ಇಚ್ಛೆಯಿದ್ದವರೆಲ್ಲರೂ ಬಂದು ತಮ್ಮ ಅಭಿನಂದನೆಗಳನ್ನು ಅಲ್ಲಿ ಸಲ್ಲಿಸಲಿ" ಸಾಯಂಕಾಲದ ಒಂದು ಸಾರ್ವಜನಿಕ ಸಭೆಯಲ್ಲಿ ಸ್ಥಳೀಯ ಕ್ಷೌರಿಕರ ಪಂಚಾ

ಯಿತಿಯೂ ಸೇರಿದಂತೆ ಏಳು ವಿವಿಧ ಸಂಘಗಳ ಪರವಾಗಿ ಕಾಣಿಕೆಗಳನ್ನು ಸಲ್ಲಿಸಲಾಯಿತು. ಚಮ್ಮಾರರು ಮತ್ತು ಭಂಗಿಗಳು ೫೧ ರೂ.ಗಳ ತಮ್ಮ ಪುಟ್ಟ ಕಾಣಿಕೆಯನ್ನು ನೀಡಿದರು. ಅವರಲ್ಲನೇಕರು ಸಭೆಗೂ ಬಂದಿದ್ದರು ಮತ್ತು ಮಡಿವಂತ ಹಿಂದೂಗಳ ಒತ್ತೊತ್ತಿಗೆ ಕುಳಿತಿದ್ದರು.

'ಲಾಲಾಜಿ ಸ್ಮಾರಕ ನಿಧಿ'ಗೆ ತಂತಮ್ಮ ಕಾಣಿಕೆಗಳನ್ನು ಅರ್ಪಿಸುವುದರಲ್ಲಿ ತೋರಿದ ದೇಶಪ್ರೇಮಕ್ಕಾಗಿ ಗಾಂಧೀಜಿ ಆಯಾ ಸಂಘ ಸಮುದಾಯಗಳಿಗೆ ತಮ್ಮ ಭಾಷಣದಲ್ಲಿ ವಂದನೆಗಳನ್ನು ಹೇಳುತ್ತಾ, ಪ್ರತ್ಯೇಕತಾ ಮನೋಭಾವವನ್ನು ಬೆಳೆಸುವುದರಿಂದ ತಲೆ ದೋರುವ ಅಪಾಯಗಳ ವಿರುದ್ಧ ಅವರಿಗೆ ಎಚ್ಚರಿಕೆಯಿತ್ತರು. ಎಲ್ಲರ ಪರವಾಗಿ ಒಂದೇ ಗಂಟಿನಲ್ಲಿ ನಿಧಿಯನ್ನೇಕೆ ನೀಡಬಾರದಿತ್ತು? ತಮ್ಮೆಲ್ಲರ ಸಮಾನ ಪ್ರತಿನಿಧಿಯಾಗಿ ಒಬ್ಬ ವ್ಯಕ್ತಿಯನ್ನು ಅಂಗೀಕರಿಸುವುದು ಅವರಿಗೆ ಸಾಧ್ಯವಿಲ್ಲವೆಂದು ಇದರರ್ಥವೆ? ಕೊನೆಯ ಪಕ್ಷ ತಮ್ಮ ಕಾಣಿಕೆಯ ಗಣನೀಯ ಭಾಗವನ್ನು ಸಿಂದ್‌ನಲ್ಲಿಯೇ ಬಳಸಲು ತೆಗೆದಿಡುವ ಭರವಸೆಯನ್ನು ಜನರಿಗೆ ನೀಡಿದ್ದಲ್ಲಿ ಲಾಲಾಜಿ ಸ್ಮಾರಕ ನಿಧಿಯ ಕೋರಿಕೆಗೆ ಪ್ರತಿಕ್ರಿಯೆಯು ಮತ್ತಷ್ಟು ಉದಾರವಾಗಿರುತ್ತಿತ್ತೆಂದು ಗಾಂಧೀಜಿಗೆ ಸಲಹೆ ನೀಡಲಾಗಿತ್ತು. ಈ ಸಲಹೆಯು ನಿಸ್ಸಂದೇಹವಾಗಿ ಸಂಕುಚಿತ ದೃಷ್ಟಿಯನ್ನು ಸೂಚಿಸುತ್ತಿತ್ತು. ಭಾರತದ ಸೇವೆಯಲ್ಲಿ ಸಿಂದ್ ದೇಶದ ಸೇವೆಯೂ ಸೇರುತ್ತದೆಂದು ಅವರೆಲ್ಲ ಭಾವಿಸಬೇಕೆಂಬುದು ಗಾಂಧೀಜಿಯ ಇಚ್ಛೆಯಾಗಿತ್ತು. ಅನಂತರ "ಪರೀಕ್ಷೆಯ ಮತ್ತು ಅನುಗ್ರಹಗಳ ಸದ್ಯದ ವರ್ಷದಲ್ಲಿ ಆತ್ಮಶುದ್ಧೀಕರಣ ಮತ್ತು ಕಾಂಗ್ರೆಸ್ ಸಂಸ್ಥೆಯ ಶುದ್ಧೀಕರಣ ವಿಧಾನಗಳ ಮೂಲಕ ಮುಂದೆ ಕಾದಿರುವ ಅಗ್ನಿದಿವ್ಯಕ್ಕೆ" ಸಿದ್ಧರಾಗಬೇಕೆಂದು ಅವರು ಕೆಲಸಗಾರರಲ್ಲಿ ಕಳಕಳಿ ಯಿಂದ ಮನವಿಮಾಡಿಕೊಂಡರು.

ಫೆಬ್ರುವರಿ ೧೨ರಂದು ಸುಕ್ಕೂರಿನಲ್ಲಿ ಸಿಂದ್ ದೇಶದ ಒಳನಾಡಿನ ನಾಲ್ಕು ದಿನಗಳ ಪ್ರವಾಸವು ಮೊದಲಾಯಿತು. ಅಲ್ಲಿ, ವಿದೇಶಿ ವಸ್ತ್ರ, ಮತ್ತು ವಿದೇಶಿ ಭೋಗವಸ್ತುಗಳು ಹಳ್ಳಿಗಳನ್ನು ಆಕ್ರಮಿಸಿದ್ದುದನ್ನು ಮತ್ತು ಹಿಂದೂಗಳಲ್ಲಿ ಕುಡಿತದ ಚಟ ಪ್ರಧಾನ ವಾಗಿದ್ದುದನ್ನು ಕಂಡು ಗಾಂಧೀಜಿ ತುಂಬ ದಿಗ್ಭ್ರಮೆಗೊಂಡರು. ಪಡಿದಾನ್‌ನ ಮಹಿಳೆ ಯರನ್ನುದ್ದೇಶಿಸಿ ಮಾತನಾಡುತ್ತಾ ಅವರು ಹೀಗೆ ಸೂಚಿಸಿದರು: "ನೀವು ನಿಮ್ಮ ಗೃಹ ಗಳಲ್ಲಿ ನ್ಯಾಯವಾಗಿ ರಾಣಿಯರ ಸ್ಥಾನವನ್ನು ಗಳಿಸಬೇಕು. ಆದರೆ ಅದು ಸಾಧ್ಯವಾಗು ವುದು ನಿಮ್ಮ ಗಂಡಂದಿರನ್ನು ಕುಡಿತದ ಚಟದಿಂದ ಪಾರು ಮಾಡಿದಾಗ ಮಾತ್ರ. ಈ ಕುಡಿತದ ವಿಶಾಪದಿಂದಲೆ ಸ್ವಯಂ ಕೃಷ್ಣನೂ ಸೇರಿದ್ದ ಯಾದವ ಸಂತತಿಯು ಸಂಪೂರ್ಣ ವಾಗಿ ನಾಶವಾಯಿತು." ಸತ್ಯಾಗ್ರಹದ ಸಶಕ್ತ ಆಯುಧ ಹೆಂಗಸರ ಕೈಯಲ್ಲಿತ್ತು. 'ದುರಾಗ್ರಹ'ದ ಬಲದಿಂದ ಕೈಕೇಯಿ ತನಗೆ ಬೇಕಾದುದೆಲ್ಲವನ್ನೂ ದಶರಥನಿಂದ ಪಡೆದುಕೊಳ್ಳಬಹುದಾದರೆ, ಸತ್ಯಾಗ್ರಹದ ಬೆಂಬಲದಿಂದ ಅವರು ಯಾವುದನ್ನು ತಾನೆ ಸಾಧಿಸಲಾರರು? ಅವರು ಪ್ರಯತ್ನಿಸಿದಲ್ಲಿ ಮತ್ತು ಕೊನೆಯ ತನಕ ಹಿಡಿದ ಪಟ್ಟು ಬಿಡದಿದ್ದಲ್ಲಿ ಜಯವು ಖಂಡಿತವಾಗಿ ಅವರದೇ ಆಗುತ್ತದೆ.

ಮೀರ್‌ಪುರ್ಖಾಸ್‌ನಲ್ಲಿ ಗಾಂಧೀಜಿಯ ಸಿಂದ್ ಪ್ರವಾಸ ಕೊನೆಗೊಂಡಿತು. ಆಗ ನಿಧಿಯ ಮೊತ್ತ ೭೦,೦೦೦ ರೂಗಳಷ್ಟಾಯಿತು.

ಫೆಬ್ರುವರಿ ೧೧ರಂದು ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಗಾಂಧೀಜಿ ದೆಹಲಿಗೆ ಹೋದರು. ನಾಲ್ಕು ಗಂಟೆಗಳ ಚರ್ಚೆಯ ನಂತರ ಗಾಂಧೀಜಿಯ ಯೋಜನೆಯು ಅಂಗೀಕೃತವಾಯಿತು. ಗಾಂಧೀಜಿ, ಮೋತಿಲಾಲ್, ಜವಾಹರಲಾಲ್ ನೆಹ್ರೂ, ಪಂಡಿತ ಮಾಳವೀಯ, ಡಾ. ಅನ್ಸಾರಿ ಮತ್ತು ಆಜಾದರನ್ನೊಳಗೊಂಡ ವಿದೇಶೀವಸ್ತ್ರ ಬಹಿಷ್ಕಾರ ಸಮಿತಿಯು ರೂಪುಗೊಂಡಿತು. ಜೊತೆಗೆ ನೆಹ್ರೂ ಸಮಿತಿಯ ವರದಿಯನ್ನು ಜನಪ್ರಿಯಗೊಳಿಸಲು ಕಾರ್ಯಕಾರೀ ಸಮಿತಿಯು ಒಂದು ಕಾರ್ಯಕ್ರಮವನ್ನು ತಯಾರಿಸಿತು.

ಫೆಬ್ರುವರಿ ೧೯ರಂದು ದೆಹಲಿಯಲ್ಲಿ ವಿಠಲಭಾಯಿ ಪಟೇಲರು ಏರ್ಪಡಿಸಿದ್ದ ಉಪಾಹಾರ ಕೂಟದಲ್ಲಿ ವೈಸ್‌ರಾಯರು ಗಾಂಧೀಜಿಯನ್ನು ಭೇಟಿ ಮಾಡಿದರು. ಆಹ್ವಾನಿತರಲ್ಲಿ ಜಿನ್ನ, ಮಾಲವೀಯ, ಮೋತಿಲಾಲ್ ನೆಹ್ರೂ, ಸರ್ ಅಬ್ದುಲ್ ಕೈಯೂಂ ಮತ್ತು ಕಾಶ್ಮೀರ ಮತ್ತು ಬಿಕನೀರ್‌ಗಳ ರಾಜರೂ ಇದ್ದರು. ರಾಜಕೀಯ ವೃತ್ತಗಳಲ್ಲಿ ಸಾಕಷ್ಟು ಊಹೆಗೆ ಅದು ದಾರಿ ಮಾಡಿಕೊಟ್ಟಿತು. ಗಾಂಧೀಜಿ ಅದನ್ನು ಹೀಗೆ ವ್ಯಾಖ್ಯಾನಿಸಿದರು: "ಒಂದು ಖಾಸಗಿ ಅನೌಪಚಾರಿಕ ಉಪಾಹಾರ ಕೂಟದಲ್ಲಿ ನಿಸ್ಸಂಕೋಚವಾದ ಚರ್ಚೆ ಸಾಧ್ಯವಿಲ್ಲ. ನನ್ನ ಅಭಿಪ್ರಾಯದಲ್ಲಿ ಇಬ್ಬರೂ ಸಿದ್ಧವಾಗಿರದಿದ್ದಲ್ಲಿ ಯಾವ ವಾಸ್ತವ ಮುನ್ನಡೆ ಅಥವಾ ಕಾರ್ಯವೂ ಸಾಧಿತವಾಗುವುದಿಲ್ಲ. ನಾವಿನ್ನೂ ಸಿದ್ಧವಾಗಿಲ್ಲವೆಂಬುದು ನಮಗೆ ತಿಳಿದಿದೆ. ಬಲಾತ್ಕಾರ ಬರದ ಹೊರತು ಭಾರತದ ಅಭೀಪ್ಸೆಗಳನ್ನು ತೃಪ್ತಿಗೊಳಿಸಲು ಇಂಗ್ಲೆಂಡು ಎಂದೂ ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ವ್ಯವಹಾರಕ್ಕೆ ಎರಡು ಪಕ್ಷಗಳೂ ಸಿದ್ಧವಾಗಿರುವಾಗ ಅವರಿಬ್ಬರೂ ಸುಲಭವಾಗಿ ಕಲೆಯುವಂತೆ ಈ ಸಾಂದರ್ಭಿಕ ಕೂಟಗಳು ಅನುಕೂಲವಾಗಬಹುದು. ಅಷ್ಟರ ಮಟ್ಟಿಗೆ ಮಾತ್ರ ಅವು ಉಪಯುಕ್ತವಾಗಿರುತ್ತವೆ. ಗೋಷ್ಠಿಯು ಅಧ್ಯಕ್ಷ ಪಟೇಲರ ಅನೇಕ ಶ್ಲಾಘ್ಯ ವಿಲಕ್ಷಣತೆಗಳಲ್ಲೊಂದಾಗಿತ್ತು.

"ಬೇಡುವುದರ ಜೊತೆಗೆ ಕಾಂಗ್ರೆಸ್ಸಿನ ರಚನಾತ್ಮಕ ನಿರ್ಣಯದ ಸಂಬಂಧವಾಗಿ, ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಬಹಿಷ್ಕಾರ ಯೋಜನೆಯ ಬಗೆಗೆ ಚುರುಕಾದ ಪ್ರಚಾರವನ್ನು ಕೈಗೊಳ್ಳಬೇಕೆಂದು ನಾನು ಬಯಸುವೆ." ಎಂದು ಕಲ್ಕತ್ತೆಗೆ ಹೋಗುವ ದಾರಿಯಲ್ಲಿ ಗಾಂಧೀಜಿ ನುಡಿದರು. "ಅತ್ಯುತ್ಸಾಹಿಗಳು ನನ್ನ ಮೇಲೆ ಕನಿಕರ ತೋರಿಸುತ್ತಾರೆ. ನನ್ನ ಶರೀರವನ್ನು ಸುಸ್ಥಿತಿಯಲ್ಲಿಡುವ ಸಂಪೂರ್ಣ ಹೊರೆಯನ್ನು ಅವರು ಹೊರದಿದ್ದಲ್ಲಿ ನನ್ನ ತೊಂದರೆಗಳಲ್ಲಿ ಅವರೂ ಭಾಗಿಗಳಾಗುತ್ತಾರೆ. ಕೆಲವು ಬೇಡಗಳನ್ನು ನಾನು ಸೂಚಿಸುವೆ. ಶರೀರಕ್ಕೆ ಆರು ಗಂಟೆಗಳಿಗಿಂತ ಹೆಚ್ಚಿನ ಕೆಲಸವನ್ನು ಕೊಡಬೇಡಿ; ಸಭೆಗಳಲ್ಲಾಗಲಿ ಅಥವಾ ಬೇರೆಲ್ಲೇ ಆಗಲಿ ಕೂಗಾಡಬೇಡಿ; ಆಡಂಬರದ ಸಂಗತಿಗಳನ್ನು ಬಯಸಬೇಡಿ; ಅತಿ ಹೆಚ್ಚಿನ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬೇಡಿ;

ಪ್ರವಾಸೋದ್ದೇಶ ಸಂಬಂಧವಾದ ವ್ಯವಹಾರವಾಗಲಿ ಧನಸಂಪಾದನೆಯಾಗಲಿ ಇಲ್ಲದ ಸ್ಥಳಗಳಿಗೆ ಹೋಗುವ ಶ್ರಮವನ್ನು ದೇಹಕ್ಕೆ ಕೊಡಬೇಡಿ; ಹುಚ್ಚಾಟಿಕೆ ಅಥವಾ ಪ್ರತಿಷ್ಠೆಗಳನ್ನು ತೃಪ್ತಿಪಡಿಸುವ ಸಲುವಾಗಿ ಎಲ್ಲಿಗೂ ಅದನ್ನೊಯ್ಯಬೇಡಿ; ತುಂಬ ಊರುಗಳಿಗೆ ಅದನ್ನು ಅಲೆದಾಡಿಸಬೇಡಿ."

"ಹಸಿದ ಜನಕೋಟಿಗಾಗಿ ನಾವು ಸ್ವರಾಜ್ಯವನ್ನು ಸಾಧಿಸಬೇಕಾದರೆ ಕೇವಲ ಬ್ರಿಟಿಷ್ ವಸ್ತ್ರದ ನಿಷೇಧವಷ್ಟೇ ಅಲ್ಲ, ಎಲ್ಲ ವಿದೇಶಿ ವಸ್ತ್ರದ ನಿಷೇಧವು ನನ್ನ ಅಭಿಪ್ರಾಯದಲ್ಲಿ ಅನಿವಾರ್ಯ"ವೆಂದು ಅವರು ಮಾರ್ಚ್ ೪ರಂದು ಕಲ್ಕತ್ತದಲ್ಲಿ ವಿದೇಶಿ ವಸ್ತ್ರ ದಹನದ ಪ್ರದರ್ಶನ ಸಂದರ್ಭದಲ್ಲಿ ಹೇಳಿದರು. ಮುಂದುವರಿಸುತ್ತಾ ಅವರು ಹೀಗೆ ನುಡಿದರು:

"ಖಾದಿಯ ಮೂಲಕ ವಿದೇಶಿ ವಸ್ತ್ರ ಬಹಿಷ್ಕಾರದ ಸಾಧಕಬಾಧಕಗಳನ್ನು ವಾದಿಸಿ ಹೇಳುವ ಇಚ್ಛೆ ನನಗಿಲ್ಲ. ಈ ವರ್ಷದ ಅವಧಿಯಲ್ಲಿ ಈ ಕಾರ್ಯಕ್ರಮವನ್ನು ನಾವು ನೆರವೇರಿಸಬೇಕಾಗಿದ್ದಲ್ಲಿ ನಾವು ಮಾಡಬಹುದಾದದ್ದು ಇದೊಂದೆ ಕೆಲಸವೆಂದು ಕಾರ್ಯಕಾರೀ ಸಮಿತಿಯು ಸಂಪೂರ್ಣವಾಗಿ ಒಪ್ಪಿಕೊಂಡಿದೆ. ಆವಶ್ಯಕತೆ ಕಂಡುಬಂದಲ್ಲಿ ಜನವರಿ ಒಂದರ ನಂತರ ಇಡೀ ದೇಶದೊಂದಿಗೆ ಸ್ವತಂತ್ರ ಜನರಾಗಿ ಎದ್ದೇಳಿ. ಒಬ್ಬ ಕುಡುಕನು ಏಕಾಏಕಿ ಸಂಪೂರ್ಣ ಮದ್ಯವರ್ಜಕನಾದಾಗ, ತನ್ನ ಬೀರುವನ್ನೆಲ್ಲ ಖಾಲಿಮಾಡಿ ಎಷ್ಟೇ ಬೆಲೆಯನ್ನು ತೆತ್ತಿದ್ದರೂ ತನ್ನ ಬಳಿಯಿರುವ ಬ್ರಾಂದಿ ಮತ್ತು ವಿಸ್ಕಿ ಶೀಷೆಗಳನ್ನೆಲ್ಲ ಎಸೆಯುತ್ತಾನಷ್ಟೆ. ಅಂತೆಯೇ ಇನ್ನು ಮುಂದೆ ಯಾವ ವಿದೇಶಿ ವಸ್ತ್ರವನ್ನೂ ಬಳಸುವುದಿಲ್ಲವೆಂದು ನಿಮ್ಮ ಬಳಿಯಿರುವ ವಿದೇಶೀ ವಸ್ತ್ರಗಳನ್ನೆಲ್ಲ ದೂರ ಎಸೆದುಬಿಡುವೆವೆಂದು ಸೋಂಕು ಕಳೆಯಲೋಸುಗ ನಿಮ್ಮಲ್ಲಿರುವ ಚಿಂದಿಯನ್ನೆಲ್ಲ ಸುಡುವ ರೀತಿಯಲ್ಲಿ ಇವನ್ನೂ ಸುಡುತ್ತೇವೆಂದು, ನನ್ನ ಮುಂದಲ್ಲ, ನಿಮ್ಮ ದೇವರ ಮುಂದೆ ನೀವು ಶಪಥ ಮಾಡಬೇಕೆಂದು ನಾನು ಬಯಸುತ್ತೇನೆ. ನಿಮ್ಮ ಧ್ಯೇಯದ ಮುಂದೆ, ನಿಮ್ಮ ದೇಶದ ಗೌರವ ಮತ್ತು ಸ್ವಾತಂತ್ರ್ಯಗಳ ಮುಂದೆ ಯಾವುದೂ ಹೆಚ್ಚಲ್ಲ.

"ಆದರೆ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿರುವ ಒಂದು ಅಲ್ಪ ವಿಷಯವಿದೆ. ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯ ಹೆಸರಿನಲ್ಲಿ ನೀಡಲಾಗಿರುವ ಒಂದು ಎಚ್ಚರಿಕೆಯ ಸೂಚನಾ ಪತ್ರವನ್ನು ನೋಡಿದ್ದೇನೆ. ಅದರ ಸಾಲುಗಳು ಹೆಚ್ಚು ಕಡಿಮೆ ಹೀಗೆ ಮುಂಬರಿಯುತ್ತವೆ: ಈ ಸಭೆಯಲ್ಲಿ ಯಾವ ಬಗೆಯ ವಸ್ತ್ರದಹನವೂ ನಡೆಯಬಾರದು. ಕಾರಣ, ಯಾವ ರೀತಿಯಲ್ಲಿ ಕರೆಯಲ್ಪಟ್ಟರೂ ಪೋಲೀಸ್ ಕಾಯಿದೆಯ ಅಥವಾ ಪೋಲೀಸ್ ಕಟ್ಟಳೆಗಳ ದೃಷ್ಟಿಯಿಂದ ಅದೊಂದು ಅಪರಾಧ. ಆ ವಾಕ್ಯವು ಇದೇ ರೀತಿ ಮುಂದುವರಿಯುತ್ತ ಹುಲ್ಲು ಅಥವಾ ಇನ್ನಿತರ ಪದಾರ್ಥಗಳನ್ನು ಸಾರ್ವಜನಿಕ ಬೀದಿಗಳಲ್ಲಾಗಲಿ ಅಥವಾ ರಾಜಮಾರ್ಗಗಳಲ್ಲಾಗಲಿ ಸುಡಬಾರದೆಂಬುದನ್ನು ಸೂಚಿಸುತ್ತದೆ. ಅದು ಸರಿ, ಆದರೆ ಈ ಪಾರ್ಕನ್ನು ಮುಖ್ಯರಸ್ತೆಯೆಂದು ಕರೆಯಬೇಕೆ ಬೇಡವೆ ಎಂಬುದನ್ನರಿಯಲು ನನ್ನ ಮನಸ್ಸು ಶ್ರಮಪಡುತ್ತಿದೆ. ಇಬ್ಬರು ವಕೀಲರು ಸಮಾಲೋಚನೆ ನಡೆಸಿ–ವಕೀಲನೆಂದು ನಾನು ಹೇಳಿಕೊಳ್ಳುವುದಿಲ್ಲ, ನಾನು ಬ್ಯಾರಿಸ್ಟರ್ ಪದವಿಯಿಂದ ಬಹಿಷ್ಕೃತ–

ಯಾವ ಅರ್ಥದಿಂದಲೂ ಈ ಮೈದಾನವನ್ನು ರಾಜಮಾರ್ಗವೆಂದು ಕರೆಯಲಾಗು ವುದಿಲ್ಲವೆಂದು ನನಗೆ ಸೂಚಿಸಿದರು. ಸಾರ್ವಜನಿಕ ಬೀದಿ ಸಾರ್ವಜನಿಕ ಮುಖ್ಯರಸ್ತೆ ಮತ್ತು ಸಾರ್ವಜನಿಕ ಸ್ಥಳಗಳ ಉಲ್ಲೇಖವಿದ್ದ ಕಾನೂನಿನ ಮತ್ತೊಂದು ನಿಬಂಧನೆಯ ಬಗೆಗೆ ಅವರು ನನ್ನ ಗಮನ ಸೆಳೆದರು. ಆದರೆ ಈ ನಿಬಂಧನೆಯಲ್ಲಿ ಸಾರ್ವಜನಿಕ ಸ್ಥಳದ ಉಲ್ಲೇಖವನ್ನು ಸ್ಪಷ್ಟವಾಗಿ ಬಿಡಲಾಗಿದೆ. ಆದ್ದರಿಂದ ಈ ಮೈದಾನವು ಸಾರ್ವಜನಿಕ ವಿಹಾರದ ಒಂದು ಸ್ಥಳವಾಗಿದೆಯೆಂಬುದನ್ನು ನಾನು ಚೆನ್ನಾಗಿ ಗ್ರಹಿಸಬಲ್ಲೆ.

"ಈ ಪರಿಸ್ಥಿತಿಯಲ್ಲಿ ನಾನೇನು ಮಾಡಬೇಕು? ಎಚ್ಚರಿಕೆಯ ಸೂಚನೆಯು ನನಗಾಗಿಯೇ ನೀಡಲ್ಪಟ್ಟಿದೆಯೆಂದು ಒಪ್ಪಿಕೊಳ್ಳುತ್ತೇನೆ. ಈ ಕಾನೂನಿನ ಪರಿಣಾಮ ಗಳಿಂದ ತಪ್ಪಿಸಿಕೊಳ್ಳಲು ನಾನು ಬಯಸುವುದಿಲ್ಲ. ಆದರೆ ಇಂದು ನಾನು ನಿಮ್ಮ ಮುಂದೆ ಒಬ್ಬ ಕಾನೂನಿನ ಅತಿಕ್ರಮಿಯಾಗಿ ಕಾಣಿಸಿಕೊಳ್ಳುವುದಿಲ್ಲ, ಒಬ್ಬ ಪೌರವಿರೋಧಿಯಾಗಿ ಕಾಣಿಸಿಕೊಳ್ಳುವುದಿಲ್ಲ. ಈ ವೇಳೆಯಲ್ಲಿ ನೀವು ಯಾವುದೇ ರೀತಿಯ ಕಾನೂನು ಭಂಗ ವನ್ನು ಮಾಡಬಾರದೆಂಬುದೇ ನನ್ನ ಇಚ್ಛೆ. ನನ್ನ ನೈತಿಕ ಪ್ರಜ್ಞೆಯನ್ನು ಘಾತಿಸಬಹುದಾದ ಎಲ್ಲ ನಿಯಮಗಳನ್ನೂ ಮುರಿಯುವ ಶಕ್ತಿ ನನಗಿದೆ. ಆದರೆ ಆ ಕಾಲ ನನಗಿನ್ನೂ ಬಂದಿಲ್ಲ. ಅದು ಮುಂದೆ ಬರಬಹುದು, ಈ ರಾತ್ರಿಗಲ್ಲ. ಆದರೆ ನಾನೀಗ ನಿಮ್ಮ ಮುಂದೆ ನಿರ್ವಹಿಸಬೇಕಾದ ಒಂದು ಬಹಿರಂಗ ಕರ್ತವ್ಯವಿದೆ. ಕಾರ್ಯದರ್ಶಿಯ ಹೆಸರಿನಲ್ಲಿ ನೀಡಿರುವ ನೋಟೀಸು ನನಗೂ ಅನ್ವಯವಾಗುತ್ತದೆಂಬ ವಾದವನ್ನೊಪ್ಪಿಕೊಂಡರೂ, ನನಗೆ ತಿಳಿದಂತೆ ಅಥವಾ ಇತರರ ಸಲಹೆಯಂತೆ ಕಾನೂನನ್ನು ವ್ಯಾಖ್ಯಾನಮಾಡಿದಲ್ಲಿ ಈ ನೋಟೀಸು ನನಗೆ ಸಂಬಂಧಿಸುವುದಿಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ಒಂದು ವೇಳೆ ನನ್ನನ್ನು ನ್ಯಾಯಾಲಯದ ಮುಂದೆ ನಿಲ್ಲಿಸಿದಲ್ಲಿ, ಈ ಸೂಚನೆ ನನಗೆ ಕೊಟ್ಟಿದ್ದಲ್ಲ ವೆಂಬ ಸಂಗತಿಯನ್ನು ನಾನು ಪ್ರಸ್ತಾಪಿಸುವುದಿಲ್ಲವೆಂದು ಸ್ಪಷ್ಟವಾಗಿ ಭರವಸೆ ನೀಡು ತ್ತೇನೆ. ಇದು ಸಾರ್ವಜನಿಕ ಮಾರ್ಗವಲ್ಲವೆಂದು ನಾನು ವಾದಿಸುತ್ತೇನೆ ಮತ್ತು ಅಪಾಯ ಕಾರಿಯಾದುದನ್ನು ನಾನು ಮಾಡುತ್ತಿಲ್ಲವೆಂದೂ ಸಾಧಿಸುತ್ತೇನೆ. ಅದು ಕಾಂಗ್ರೆಸ್ಸಿನ ಅಥವಾ ಮಿಗಿಲಾಗಿ ಕಾರ್ಯಕಾರೀ ಸಮಿತಿಯ ಇತ್ಯರ್ಥ ನೀತಿಯೆಂಬುದು ಎಲ್ಲರಿಗೂ ತಿಳಿದಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ವಹಿಸಬೇಕಾದ ಒಂದು ಕರ್ತವ್ಯವಿದೆ. ನಾನು ಆ ಸಮಿತಿಯ ಸದಸ್ಯ, ಬಹಿಷ್ಕಾರ ಸಮಿತಿಯ ಅಧ್ಯಕ್ಷ. ಈ ಪ್ರಕರಣದಿಂದ ನಾನು ಹೊರಳಿಕೊಂಡಲ್ಲಿ ಮತ್ತು ನನ್ನ ವಿರುದ್ಧವಾದ ಆಪಾದನೆಯಿಂದ ಜಾರಿಕೊಂಡಲ್ಲಿ ನಾನು ಕರ್ತವ್ಯ ವಿಮುಖನಾಗುತ್ತಿದ್ದೇನೆಂಬ ಭಾವನೆ ನನ್ನಲ್ಲುಂಟಾಗುತ್ತದೆ.

"ಬೇರೆಡೆಗೆ ಹೋಗಲು ನನಗೆ ಅವಕಾಶ ಕೊಟ್ಟಲ್ಲಿ ನಾಳೆ ನಾನು ಹೋಗುತ್ತೇನೆ. ನಾನು ಯಾವುದನ್ನು ಸಾರ್ವಜನಿಕ ಮಾರ್ಗವಲ್ಲವೆಂದು ಸಾಧಿಸುತ್ತೇನೊ ಅಂತಹ ಒಂದು ಸಾರ್ವಜನಿಕ ಪಾರ್ಕಿನಲ್ಲಿ ವಿದೇಶಿ ವಸ್ತ್ರ ದಹನವನ್ನು ನಡೆಸಿದ್ದಕ್ಕಾಗಿ ನನ್ನ ವಿರುದ್ಧ ಮಾಡಲಾದ ಆಪಾದನೆಗೊಳಗಾಗಲು ಮತ್ತು ಅದನ್ನು ಅನುಭವಿಸಲು ಮತ್ತೆ ಈ ತಿಂಗಳ ೨೫ ಅಥವಾ ೨೬ರಂದು ಹಿಂದಿರುಗುತ್ತೇನೆ. ನಾನು ನಿಮ್ಮ ಮುಂದೆ ಹೇಳ

ಬೇಕೆಂದಿದ್ದುದು ಇದನ್ನೆ. ಇಲ್ಲಿ ಸುಡುತ್ತಿರುವುದು ನೀವಲ್ಲ. ಏಕೆಂದರೆ ನನ್ನಿಂದಾಗಿ ಈ ದಹನ ಕಾರ್ಯ ನಡೆಯುತ್ತಿದೆ ಮತ್ತು ಅದರ ಎಲ್ಲ ಹೊಣೆಯೂ ನನ್ನ ಮೇಲಿರುತ್ತದೆ. ಇದನ್ನು ನೋಡುತ್ತಿರುವ ನಿಮಗೆ ಯಾವ ಕೆಡುಕೂ ಆಗಿಲ್ಲ. ಆದರೆ ಹಾನಿ ತಟ್ಟಿದ್ದರೆ ಚೆನ್ನಾಗಿತ್ತು. ಇಂದಿನ ಈ ಚಳವಳಿಯು ಪೌರವಿರೋಧಿಯಾದುದಲ್ಲ. ಎಲ್ಲಿಯವರೆಗೆ ಸಾಧ್ಯವೊ ಅಲ್ಲಿಯವರೆಗೆ ಕಾನೂನಿನ ಚೌಕಟ್ಟಿನೊಳಗೇ, ಬಹಿಷ್ಕಾರ ಹಾಕುವ ಚಳುವಳಿ ಯಿದು. ಉಗ್ರ ಬಹಿಷ್ಕಾರ ಹಾಕುತ್ತಿರುವುದು ವಿದೇಶಿ ವಸ್ತ್ರಗಳಿಗೆ. ಆ ಕೆಲವು ಕಾನೂನು ಗಳು ಏನೇ ಇರಲಿ, ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ಈ ಬಗೆಯ ಕಾನೂನುಭಂಗದ ತಪ್ಪಿಗೆ ನೀವು ಒಳಗಾಗದಿರಿ. ಕಾರ್ಯಕಾರೀ ಸಮಿತಿಯ ಸೂಚನೆಗಳನ್ನು ಪಾಲಿಸುವ ಆಸಕ್ತಿ ನಿಮ್ಮಲ್ಲಿದ್ದಲ್ಲಿ ತಕ್ಕ ಕಾಲ ಬಂದಾಗ ಕೆಲವು ಕಾನೂನುಗಳನ್ನು ಅಥವಾ ದೇಶದ ಎಲ್ಲ ಅನೈತಿಕ ಕಾನೂನುಗಳನ್ನು ಮುರಿಯುವ ಸುಯೋಗ ನಿಮಗೆ ಒದಗಿ ಬರುತ್ತದೆ. ಆದರೆ ನಾನು ಹೇಳಿದಂತೆ ಆ ಕಾಲವಿನ್ನೂ ಬಂದಿಲ್ಲ. ಅಂಥ ಪರಿಸ್ಥಿತಿಗಾಗಿ ನಾನು ಅವಸರಿಸುವುದಿಲ್ಲ; ಅಂಥ ಕಾಲವನ್ನು ನಿರೀಕ್ಷಿಸುವುದೂ ಇಲ್ಲ. ಸರ್ಕಾರವು ನ್ಯಾಯಸಮ್ಮತವಾಗಿ ನಡೆದುಕೊಂಡಲ್ಲಿ, ಪೋಲೀಸರು ಸಭ್ಯರೀತಿಯಿಂದ ವರ್ತಿಸಿದಲ್ಲಿ ಸತ್ಯಾಗ್ರಹವನ್ನವಲಂಬಿಸದೆ ಅಥವಾ ಅದರ ಒಂದು ಭಾಗವೇ ಆದ ಕರನಿರಾಕರಣ ಚಳುವಳಿಯನ್ನು ಜನ ಆಶ್ರಯಿಸದೆಯೆ ಸರ್ಕಾರದೊಂದಿಗೆ ನಮ್ಮ ವ್ಯವಹಾರವನ್ನು ತೀರ್ಮಾನಿಸುವುದಾಗಿ ಭರವಸೆಯನ್ನು ನೀಡುತ್ತೇನೆ. ನನ್ನ ಹೆಗಲಮೇಲಿರುವ ಜವಾ ಬ್ದಾರಿಯ ಪೂರ್ಣಪ್ರಜ್ಞೆಯಿಂದ ಹೇಳುವುದಾದರೆ ಇಂತಹ ದೊಡ್ಡ ದೇಶದಲ್ಲಿ, ಶಿಸ್ತಿಲ್ಲದ ಸಾಮಾನ್ಯ ಜನರಿರುವ ಈ ದೇಶದಲ್ಲಿ ಸತ್ಯಾಗ್ರಹ ಮತ್ತು ಕರನಿರಾಕರಣ ಚಳುವಳಿ ಗಳಿಂದಾಗಬಹುದಾದ ಭೀಕರ ಪರಿಣಾಮಗಳನ್ನು ನಾನು ಅರಿತಿದ್ದೇನೆ. ಆದರೆ ನನ್ನಂತೆ ಸ್ವಾತಂತ್ರ್ಯಕ್ಕಾಗಿ ಹುಚ್ಚನಾಗಿರುವ ಒಬ್ಬ ವ್ಯಕ್ತಿ, ಬಿಡುಗಡೆಗಾಗಿ ಹಂಬಲಿಸುವವನು– ಮತ್ತು ಸ್ವಾತಂತ್ರ್ಯಕ್ಕಾಗಿ ನಿಜವಾಗಿ ಹಂಬಲಿಸುವವನ ನೋವು ರೊಟ್ಟಿಗಾಗಿ ಹಂಬಲಿ ಸುವವನ ಸಂಕಟಕ್ಕಿಂತ ಬಹುಪಾಲು ಹೆಚ್ಚಿನದು– ಭೀಕರ ಅಪಾಯಗಳಿಗೆ ತಲೆಗೊಡ ಬೇಕಾಗುತ್ತದೆ ಮತ್ತು ಅಮೂಲ್ಯ ಸ್ವಾತಂತ್ರ್ಯದ ಪ್ರಾಪ್ತಿಗಾಗಿ ತನ್ನೆಲ್ಲವನ್ನೂ ಬಲಿ ಕೊಡಬೇಕಾಗುತ್ತದೆ. ಈಗಾಗಲೆ ನಾನು ಮೃತ್ಯುವಿನ ಹೊಸ್ತಿಲಲ್ಲಿದ್ದೇನೆ. ಉಸಿರಿರು ವಾಗಲೆ ಸ್ವರಾಜ್ಯವನ್ನು ಕಾಣಬೇಕೆಂದು ಬಯಸಿದ್ದೇನೆ. ಅದಕ್ಕಾಗಿಯೆ ಈ ಎಲ್ಲ ಅಪಾಯ ಗಳಿಗೂ ತಲೆಕೊಡಲು ನಾನು ಸಿದ್ಧನಾಗಿದ್ದೇನೆ. ಇದೇ ವೇಳೆಯಲ್ಲಿ ಎಲ್ಲ ಮುನ್ನೆಚ್ಚರಿಕೆ ಯನ್ನೂ ನಾನು ತೆಗೆದುಕೊಳ್ಳಬೇಕಾಗಿದೆ ಮತ್ತು ಅದಕ್ಕಾಗಿ ಸರ್ಕಾರ ಮತ್ತು ಆಡಳಿತ ಗಾರರು ತಮ್ಮ ಅವಿವೇಕದಿಂದ ಎಚ್ಚೆತ್ತುಕೊಳ್ಳುವಂತೆ ವಿನಂತಿಸಿಕೊಳ್ಳುತ್ತೇನೆ.

"ನೀವು ನನಗೆ ನೆರವೀಯುವುದಾದಲ್ಲಿ ಈ ಎಲ್ಲ ಅಪಾಯಗಳನ್ನು ದಾಟಲು ನಾವು ಸಮರ್ಥರಾಗುತ್ತೇವೆ; ಮತ್ತು ಮುಂದಿನ ಡಿಸೆಂಬರ್ ೩೧ಕ್ಕೆ ಮುನ್ನವೆ ಸ್ವಾತಂತ್ರ್ಯದ ಅರುಣೋದಯದ ಕಾಂತಿ ನಮ್ಮ ಮೇಲೆ ಚಿಮ್ಮುವುದನ್ನು ಕಾಣುತ್ತೇವೆ.

"ಕಾಲಕಾಲಕ್ಕೆ ನಿಮ್ಮ ಮುಂದೆ ಇಡಲಾಗುವ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ

ನಿಷ್ಠಾಪೂರ್ವಕವಾಗಿ ಮತ್ತು ಸಂಪೂರ್ಣವಾಗಿ ಆಚರಣೆಗೆ ತಂದಲ್ಲಿ ನೀವು ಯಾವ ಸಾಹಸ ಕೃತ್ಯಗಳಿಗೂ ಕೈಹಾಕಬೇಕಾದ ಆವಶ್ಯಕತೆಯಿಲ್ಲವೆಂದು ನಾನು ಭರವಸೆ ಕೊಡುತ್ತೇನೆ. ವಿದೇಶಿ ವಸ್ತ್ರ ಬಹಿಷ್ಕಾರ ಅಂತಹ ಸಾಹಸವೇನು? ಕಾಂಗ್ರೆಸ್ ಭವನವನ್ನು ವ್ಯವಸ್ಥೆಗೊಳಿಸುವುದು ಇಂಥ ಒಂದು ಸಾಹಸಕೃತ್ಯವೇನು? ಕಾಂಗ್ರೆಸ್ಸಿಗೆ ಅಥವಾ ಖಾದಿಯ ನಿತ್ಯ ಬಳಕೆಗೆ ಸಹಸ್ರಾರು ಮಂದಿ ಸದಸ್ಯರನ್ನು ದಾಖಲು ಮಾಡುವುದು ಒಂದು ಸಾಹಸವೇನು? ಇವೆಲ್ಲ ಸಾಹಸಕೃತ್ಯಗಳೆಂದು ನೀವು ತಿಳಿದದ್ದಾದರೆ ಸಾಹಸಕೃತ್ಯಗಳೆಂದರೇನೆಂಬುದನ್ನು ನೀವು ತಿಳಿದಿಲ್ಲವೆಂದು ನಾನು ಸತ್ಯವಾಗಿ ಹೇಳಬಲ್ಲೆ. ಸಾಹಸಕೃತ್ಯಗಳು ಹೆಚ್ಚು ಕಠೋರ ಸಂಗತಿಗಳಿಂದ ಕೂಡಿದುವು. ನೂರು ಅಥವಾ ಸಾವಿರ ಜನರ ವಿರುದ್ಧವಾಗಿ ನೀವು ಲಕ್ಷಾಂತರ ಮಂದಿಯಿದ್ದೀರಿ ಎಂಬುದನ್ನು ಸೂಚಿಸಲು ಈ ಸುಲಭ ಸಂಗತಿಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

"ನಾವು ವಶೀಕರಣದ ಮೋಡಿಗೊಳಗಾಗದಿದ್ದಲ್ಲಿ ಅಥವಾ ಜಡತೆಯ ಮಹಾ ಸೆಳೆತಕ್ಕೆ ಒಳಗಾಗಿ ವರ್ತಿಸದಿದ್ದಲ್ಲಿ ಅಥವಾ ನಮ್ಮಲ್ಲಿ ಆತ್ಮ ವಿಶ್ವಾಸವಿದ್ದಿದ್ದಲ್ಲಿ ನಮ್ಮದೇ ಆದ ಸ್ವಾತಂತ್ರ್ಯದ ಗಾಳಿಯಲ್ಲಿ ಉಸಿರಾಡುವುದು ಅತ್ಯಂತ ಸಹಜವಾಗಿ ಕಾಣುತ್ತಿತ್ತು. ನಾವು ಈ ವಶೀಕರಣದ ಮೋಡಿಗೊಳಗಾಗದಿದ್ದಲ್ಲಿ ಈ ಸುಲಭ ಹಂತಗಳ ಮೂಲಕವೂ ನಾವು ಹಾದು ಹೋಗಬೇಕಿರಲಿಲ್ಲ. ಈ ಸಮಾರಂಭದಲ್ಲಿ ನಾನು ಭಾಗವಹಿಸಬೇಕೆಂದು ಎಲ್ಲಿಯವರೆಗೆ ಇಚ್ಛಿಸುತ್ತೀರೋ ಅಲ್ಲಿಯವರೆಗೆ ಯಾವ ಹಿಂಸೆಗೂ ನೀವು ಕೈಹಾಕಬಾರದು. ಅಹಿಂಸೆಯೇ ನನ್ನ ಮತವೆಂದು ದೃಢವಾಗಿ ನಂಬುತ್ತೇನೆ. ನನ್ನ ಸ್ವಾತಂತ್ರ್ಯವನ್ನು ಮರಳಿ ಪಡೆಯಲು ಬೇರೆ ಯಾವ ಮಾರ್ಗವೂ ನನ್ನ ಮುಂದಿಲ್ಲ.

"ಈ ದಹನ ಕೃತ್ಯದ ಹೊಣೆಯು ಸಂಪೂರ್ಣವಾಗಿ ನನ್ನ ಹೆಗಲ ಮೇಲಿದೆ. ನಮಗೆ ಬೇಕಾಗಿರುವುದು ಕೇವಲ ಬ್ರಿಟಿಷ್ ಸಮವಸ್ತ್ರಗಳ ಬಹಿಷ್ಕಾರ ಮಾತ್ರವಲ್ಲ, ವಿದೇಶಿ ವಸ್ತ್ರದ ಬಹಿಷ್ಕಾರವೆಂಬುದನ್ನು ದಯವಿಟ್ಟು ನೆನಪಿಡಿ. ನಾನು ಭಾರತದ ಮಿಲ್ಲುಗಳ ಪ್ರಶ್ನೆಯನ್ನೆತ್ತಲು ಇಚ್ಛಿಸುವುದಿಲ್ಲ; ನೀವು ನಿಮ್ಮ ಖಾದಿಯ ಯೋಗಕ್ಷೇಮವನ್ನು ನೋಡಿಕೊಂಡಲ್ಲಿ ತಮ್ಮ ರಕ್ಷಣೆಯನ್ನವು ನೋಡಿಕೊಳ್ಳುತ್ತವೆ."

ಉತ್ಸವಾಗ್ನಿಯನ್ನು ಹೊತ್ತಿಸಿದ ಕೂಡಲೆ ಪೋಲೀಸರು ತಮ್ಮ ಲಾಠಿಗಳಿಂದ ಜನರನ್ನು ದಬ್ಬಿ ಬೆಂಕಿಯನ್ನು ನಂದಿಸಿದರು. ಅನಂತರ ಕಲ್ಕತ್ತೆಯ ಪೋಲೀಸು ಕಾಯಿದೆಯ ನಿಯಮವನ್ನು ಉಲ್ಲಂಘಿಸಿದುದಕ್ಕಾಗಿ ಗಾಂಧೀಜಿಯನ್ನು ಬಂಧಿಸಿದರು. ಮಾರ್ಚ್ ೫ರಂದು ಪ್ರಾಂತ್ಯದ ಮುಖ್ಯ ನ್ಯಾಯಾಧೀಶರ ಮುಂದೆ ಹಾಜರಾಗಬೇಕೆಂಬ ಕರಾರು ಪತ್ರಕ್ಕೆ ಸಹಿ ಹಾಕಲು ಗಾಂಧೀಜಿ ವಿನಾಯಿತಿ ಕೇಳಿದರು ಮತ್ತು ಬರ್ಮದ ಸಹಸ್ರಾರು ಜನರನ್ನು ನಿರಾಶೆಗೊಳಿಸುವ ಹೊಣೆ ಹೊರಲು ಸಾಧ್ಯವಿಲ್ಲವೆಂದು ಖಡಾಖಂಡಿತವಾಗಿ ನುಡಿದರು. "ಸರ್ಕಾರವು ನನ್ನನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ಆ ಹೊಣೆಯನ್ನು ಹೊರಲಿ" ಎಂದು ಅವರು ಹೇಳಿದರು. ಪೋಲೀಸು ಮುಖ್ಯಾಧಿಕಾರಿಯಾದ ಚಾರ್ಲ್ಸ್ ಟೆಗಾರ್ಟನು ಬರ್ಮಾದಿಂದ ಅವರು ಹಿಂದಿರುಗುವ ವರೆಗೆ ವಿಚಾರಣೆಯನ್ನು ಮುಂದೂ

ಡಿದನು. ಈ ಮೊಕದ್ದಮೆ ತೀರ್ಮಾನವಾಗುವ ವರೆಗೂ ಕಲ್ಕತ್ತದ ಸಾರ್ವಜನಿಕ ಚೌಕಗಳಲ್ಲಿ ಯಾವ ವಿದೇಶೀ ವಸ್ತ್ರದ ದಹನವೂ ನಡೆಯಲಾರದೆಂಬ ವಾಗ್ದಾನವನ್ನು ನೀಡುವ ಮೂಲಕ ಗಾಂಧೀಜಿ ತಮ್ಮ ಪ್ರತಿಸೌಜನ್ಯವನ್ನು ವ್ಯಕ್ತಪಡಿಸಿದರು.

"ಇದು ಬಹಿಷ್ಕಾರದ ಅಥವಾ ವಿದೇಶಿ ವಸ್ತ್ರದಹನದ ಅಂತ್ಯವನ್ನು ಸೂಚಿಸುವುದಿಲ್ಲವೆಂಬುದನ್ನು ಸುಸ್ಪಷ್ಟಗೊಳಿಸುತ್ತೇನೆ. ಪೋಲೀಸು ಕಾಯಿದೆಯ ವಿಶೇಷ ನಿಬಂಧನೆಯ ಸಪ್ರಮಾಣ ವಿವರಣೆಯು ಇತ್ಯರ್ಥವಾಗುವ ವರೆಗೆ ಕಲ್ಕತ್ತದ ಸಾರ್ವಜನಿಕ ಚೌಕಗಳಲ್ಲಿ ಮತ್ತು ಸಹಜವಾಗಿ ಕಲ್ಕತ್ತದ ಸಾರ್ವಜನಿಕ ರಸ್ತೆಗಳಲ್ಲಿ ಯಾವ ಸುಡುವಿಕೆಯೂ ಇರುವುದಿಲ್ಲವೆಂದಷ್ಟೆ ಈ ವಾಗ್ದಾನದ ಅರ್ಥ. ಆದರೆ ಎಂದಾದರು ಅದು ಅಗತ್ಯವೆಂದು ಎಣಿಸಲ್ಪಟ್ಟಲ್ಲಿ ಮತ್ತು ಎಂದಾದರು ಕಾಂಗ್ರೆಸ್ ಅಧಿಕಾರಿಗಳು ಹಾಗೆ ತೀರ್ಮಾನಿಸಿದಲ್ಲಿ ಅವರು ಖಾಸಗಿ ಜಾಗಗಳಲ್ಲಿ ಅಥವಾ ಪೋಲೀಸರು ನೀಡುವ ವಿವರಣೆಗನುಗುಣವಾಗಿಯೂ ಸ್ಪಷ್ಟವಾಗಿ ಆ ನಿಬಂಧನೆಗೊಳಗಾಗದಂಥ ಸ್ಥಳಗಳಲ್ಲಿ, ಸಂಗ್ರಹಿಸಿದ ವಿದೇಶಿ ವಸ್ತ್ರಗಳನ್ನು ಸುಡಲು ಹಿಂಜರಿಯುವುದಿಲ್ಲ. ಶ್ರದ್ಧಾನಂದ ಪಾರ್ಕಿನ ಈ ಪ್ರದರ್ಶನದಲ್ಲಿ ಪೋಲೀಸರ ನಿರಾಧಾರ ಹಾಗೂ ಆತುರದ ಪ್ರವೇಶದನಂತರ ಸರ್ವಜನರೂ ವಿದೇಶಿ ವಸ್ತ್ರವನ್ನು ತೊರೆಯದಿದ್ದಲ್ಲಿ ಮತ್ತು ಬಹಿಷ್ಕಾರವನ್ನು ಪೂರ್ಣಗೊಳಿಸದಿದ್ದಲ್ಲಿ ನನಗೆ ನಿಜವಾಗಿಯೂ ತುಂಬ ಆಶ್ಚರ್ಯವಾಗುತ್ತದೆ. ಗ್ರಾಮಾಂತರಗಳ ಮತ್ತು ಇತರ ಪ್ರಾಂತ್ಯಗಳ ಜನರು ದೊರೆಯಬಹುದಾದ ಎಲ್ಲ ವಿದೇಶಿ ವಸ್ತ್ರಗಳನ್ನೂ ಶೇಖರಿಸಿ ಬೆಂಕಿಗೊಪ್ಪಿಸುವುದೆ ಪೋಲೀಸರ ಈ ಮಧ್ಯಪ್ರವೇಶಕ್ಕೆ ಅತ್ಯಂತ ಪರಿಣಾಮಕಾರಿಯಾದ ಉತ್ತರವಾಗುತ್ತದೆ. ವಿದೇಶೀ ವಸ್ತ್ರಗಳನ್ನು ಸುಡುವ ಈ ಪ್ರಶ್ನೆಯನ್ನು ಕುರಿತು ನಾನು ಅನೇಕ ಬಾರಿ ಆಲೋಚಿಸಿದ್ದೇನೆ. ಕೆಲವು ಮಿತ್ರರು ಇದನ್ನು ಒಪ್ಪುವುದಿಲ್ಲವೆಂಬುದು ನನಗೆ ತಿಳಿದಿದೆ. ಆದರೆ ವಿದೇಶೀ ವಸ್ತ್ರವು ದೇಶದ ಸಂಪನ್ಮೂಲವು ಹರಿದುಹೋಗುವ ದೊಡ್ಡ ಕಾಲುವೆಯಾಗಿದೆಯೆಂಬುದು ಮತ್ತು ಹಸಿದ ಜನಕೋಟಿಯನ್ನು ನಿರ್ಗತಿಕತೆಗೆ ತಳ್ಳುತ್ತಿದೆಯೆಂಬುದು ವಾಸ್ತವಾಂಶವಾಗಿದ್ದಲ್ಲಿ ಅಂಥ ವಿಷಪೂರಿತ ಜೀವಾಣುಗಳಿಂದ ಕೂಡಿ ಆರೋಪಕ್ಕೊಳಗಾದ ಈ ವಿದೇಶೀ ವಸ್ತ್ರವು ಖಂಡಿತ ನಾಶಯೋಗ್ಯವಾದುದು."

ಗಾಂಧೀಜಿಯ ದಸ್ತಗಿರಿ, ಚಳುವಳಿಗೆ ಪ್ರಚೋದನೆಯನ್ನಿತು ಮತ್ತು ದೇಶದಲ್ಲೆಲ್ಲ ವಿದೇಶೀ ವಸ್ತ್ರದ ದಹನಾಗ್ನಿಯು ಹೊತ್ತಿತು.

ಮಾರ್ಚ್ ೫ರ ಬೆಳಗ್ಗೆ ಗಾಂಧೀಜಿ ಹಡಗಿನಲ್ಲಿ ಒಬ್ಬ ಮೇಲ್ಪಟ್ಟದ ಕೋಣೆಯ ಪ್ರಯಾಣಿಕರಾಗಿ ರಂಗೂನಿಗೆ ಪಯಣಿಸಿದರು. ಹಡಗು ಬಂದರು ಕಟ್ಟೆಯನ್ನು ತಲುಪುವ ಮೊದಲೆ ಬರ್ಮಾದ ಎಲ್ಲ ಪ್ರಧಾನ ಪಂಗಡಗಳ ಹನ್ನೆರಡು ಮಂದಿ ಪ್ರತಿನಿಧಿಗಳನ್ನೊಳಗೊಂಡ ಒಂದು ನಿಯೋಗವು ದೋಣಿಯಲ್ಲಿ ಅವರನ್ನೆದುರು ನೋಡುತ್ತಿತ್ತು. ಬಂದರಿನಲ್ಲಿ ಅವರಿಗೆ ಹಾರ್ದಿಕ ಸ್ವಾಗತವು ಕಾದಿತ್ತು. ಗಾಂಧೀಜಿಯ ಆತಿಥೇಯರೂ ಮತ್ತು ಹಳೆಯ

ಗೆಳೆಯರೂ ಆದ ಡಾ. ಪಿ. ಜೆ. ಮೆಹ್ತಾರವರ ಮನೆಯ ಮುಂದೆ ದಿನದ ಅನೇಕ ತಾಸು ಗಳ ವರೆಗೆ ಜನರು ನೆರೆದಿದ್ದರು.

ಗಾಂಧೀಜಿಯಿಂದ ವಿದೇಶಿ ದಬ್ಬಾಳಿಕೆಯ ವಿರುದ್ಧ ಹೋರಾಟದ ಹೊಸ ತಂತ್ರ ವನ್ನು ಕಲಿಯಲು ಬರ್ಮೀಯರು ಕಾತರರಾಗಿದ್ದರು. "ನಮ್ಮಲ್ಲನೇಕರು ಯಾರ ಮಕ್ಕಳಾಗಿರುವೆವೊ ಅಥವಾ ಯಾರಿಂದ ನಮ್ಮಲ್ಲನೇಕರು ನಮ್ಮ ಧರ್ಮ ಮತ್ತು ನಮ್ಮ ಸಂಸ್ಕೃತಿಯನ್ನು ಪಡೆದಿರುವೆವೊ ಆ ಶ್ರೇಷ್ಠ ಭಾರತಮಾತೆಯ ಸತ್ಪುತ್ರನೆಂದೂ ಜಗತ್ತಿನ ಮುಂದೆ ಮತ್ತೊಮ್ಮೆ ಎಲ್ಲ ಹಿಂಸೆಯ ವಿರುದ್ಧ ರುಜುವಾತು ಪಡಿಸಿ ತೋರಿ ಸಿರುವ ಅಹಿಂಸಾತ್ಮಕ ಅಸಹಕಾರದ ಪ್ರತಿಪಾದಕನೆಂದೂ" ನಾಗರಿಕರ ಬಿನ್ನವತ್ತಳೆ ಅವರನ್ನು ಸ್ವಾಗತಿಸಿತು.

ಭಾರತೀಯರಿಗಾಗಿ ಭಿಕ್ಷಾಪಾತ್ರೆ ಹಿಡಿದು ಬರ್ಮದಲ್ಲಿ ಸಂಚರಿಸುವುದೇ ಗಾಂಧೀಜಿ ಅವರ ಮುಖ್ಯ ಉದ್ದೇಶವಾಗಿತ್ತು. ನಿಧಿಗಾಗಿ ಅವರ ಒತ್ತಾಯಪೂರ್ವಕ ಮನವಿಯು ಗುಜರಾತಿಗಳಿಗೆ ಮೀಸಲಾಗಿದ್ದಿತು. ಸಂಗ್ರಹದ ಮೊತ್ತ ೪೦,೦೦೦ ರೂಗಳಾಯಿತೆಂದು ಅವರಿಗೆ ತಿಳಿಸಿದಾಗ ಗಾಂಧೀಜಿ ಹೀಗೆ ಹೇಳಿದರು: "ಈ ಚಂದಾ ಪಟ್ಟಿಯನ್ನು ಮೂಲೆ ಗೆಸೆದು ಹೊಸದನ್ನು ಆರಂಭಿಸಿ. ನಾನು ಕೇವಲ ಗುಜರಾತಿಗಳಿಂದ ಮಾತ್ರವಲ್ಲ, ಬಂಗಾಳಿಗಳಿಂದ, ಪಂಜಾಬಿಗಳಿಂದ ಮತ್ತು ತಮಿಳರಿಂದಲೂ ಅವರು ಎಷ್ಟು ಕೊಡಲು ಸಾಧ್ಯವೊ ಅಷ್ಟನ್ನು ನಿರೀಕ್ಷಿಸುತ್ತೇನೆ. ಆದರೆ ಇತರರದಕ್ಕಿಂತ ಗುಜರಾತಿಗಳ ಜೇಬಿಗೆ ಹೆಚ್ಚಾಗಿ ಕೈಹಾಕುವುದು ಖಂಡಿತ. ಕೋಟಿಗಟ್ಟಲೆ ವ್ಯವಹಾರವನ್ನುಳ್ಳ ಮತ್ತು ಲಕ್ಷಾಂತರ ರೂಪಾಯಿಗಳ ಬೆಲೆಯ ಆಸ್ತಿಯನ್ನುಳ್ಳ ಚೆಟ್ಟಿಗಳು ನನ್ನ ಈ ವಾದವನ್ನು ತಳ್ಳಿಹಾಕ ಲಾರರು. ನಾನೊಬ್ಬ ಗುಜರಾತಿ ಚೆಟ್ಟಿ. ನಾನೂ ಅವರ ಪಂಗಡಕ್ಕೆ ಸೇರಿದವನೆಂಬುದನ್ನು ಅವರು ಮರೆಯದಿರಲಿ. ಹದಿನಾಲ್ಕು ವರ್ಷಗಳ ನಂತರ ನಾನು ಬರ್ಮಾಕ್ಕೆ ಬರುತ್ತಿರು ವುದೆನ್ನುವುದನ್ನು ನೀವು ನೆನಪಿಡಿ. ಹದಿನಾಲ್ಕು ವರ್ಷಗಳಲ್ಲಿ ಒಮ್ಮೆ ಕ್ಷಾಮ ಬಂದರೂ ನೀವು ಚಿಂತಿಸಬೇಡಿ. ಅದನ್ನು ನಿಮ್ಮ ಸಾಮರ್ಥ್ಯವಿರುವಷ್ಟು ಧೈರ್ಯದಿಂದ ಎದುರಿಸಲು ಪ್ರಯತ್ನಿಸಿ. ಮತ್ತೆಂದಿಗೂ ನಿಮ್ಮ ನಡುವೆ ಬರದಿರಬಹುದಾದ ಈ ದರಿದ್ರನಾರಾಯಣನ ಪ್ರತಿನಿಧಿಯ ಹಸಿವನ್ನು ಇಂಗಿಸಲು ನಿಮ್ಮ ಶಕ್ತಿಮೀರಿ ಪ್ರಯತ್ನಿಸುವಿರೆಂದು ನಾನು ನಂಬಿದ್ದೇನೆ." ಅವರ ಮನವಿಯಿಂದ ೮೦,೦೦೦ ರೂ.ಗಳು ದೊರಕಿತು. ಸಂಗ್ರಹದ ಅತ್ಯಂತ ಗಮನಾರ್ಹವಾದ ಪಾಲು ಬಡಜನರರಾದ ಒರಿಯಾಗಳು ಮತ್ತು ಗೋರಖ ಪುರಿಗಳಿಂದ ಸಂದಿತ್ತು. ತಮ್ಮ ಸಣ್ಣ ಕಾಣಿಕೆಯು ವ್ಯವಸ್ಥಾಪಕರನ್ನು ತೃಪ್ತಿಪಡಿಸದಿರ ಬಹುದೆಂಬ ಭಯದ ಕಾರಣ, ಅವರ ಪ್ರವಾಸದ ಕಾರ್ಯಕ್ರಮದಲ್ಲಿ ತಮ್ಮ ಸಂಸ್ಥೆಗಳನ್ನು ಸೇರಿಸಿಕೊಳ್ಳಬೇಕೆಂದು ಅವರು ಗಾಂಧೀಜಿಗೆ ಸುದ್ದಿ ಕಳುಹಿಸಿದ್ದರು.

ಎಲ್ಲ ಊರುಗಳಲ್ಲಿಯೂ ಅಭಿನಂದನೆಗಳು ಬರ್ಮೀ ಭಾಷೆಯಲ್ಲಿದ್ದುವು. ಕೆಲವು ವೇಳೆ ಅವುಗಳ ಇಂಗ್ಲಿಷ್ ಅನುವಾದಗಳನ್ನು ಓದಲಾಗುತ್ತಿತ್ತು. ಮತ್ತೆ ಕೆಲವು ಸಲ ಅವಗಾಹನೆಗಾಗಿ ಗಾಂಧೀಜಿಗೆ ಒಪ್ಪಿಸಲಾಗುತ್ತಿತ್ತು. ಪಾಂಗ್ಡೆಯಲ್ಲಿ ಯೋಗ್ಯ ದುಬಾಷಿ

ಯಿಲ್ಲದೆ ಸ್ವಲ್ಪ ತೊಂದರೆಯುಂಟಾಯಿತು. ಕೊನೆಗೆ, ಗಾಂಧೀಜಿ ಅವರಿಗಾಗಿ ಆಮೇಲೆ ಬರೆದು ಸಿದ್ಧಗೊಳಿಸಿದ ಭಾಷಣದ ಬರ್ಮೀ ಅನುವಾದಗಳನ್ನು ಹಂಚಿದ್ದರಿಂದ ಆ ತೊಂದರೆ ನಿವಾರಣೆಯಾಯಿತು. ಮಾಂಡಲೆಯಲ್ಲಿ ತಮ್ಮ ಹಿಂದುಸ್ತಾನಿ ಭಾಷಣವನ್ನು ಅಚ್ಚ ಬರ್ಮೀ ಭಾಷೆಗೆ ತರ್ಜುಮೆ ಮಾಡಿದ ಮುಸ್ಲಿಂ ದುಭಾಷಿಯನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ಆದರೂ ಬರ್ಮೀ ಭಾಷೆಯಲ್ಲಿ ಪರಿಣತಿಯನ್ನು ಗಳಿಸಿದ ಭಾರತೀಯರ ಸಂಖ್ಯೆ ತುಂಬ ಕಡಿಮೆಯೆಂದು ಅವರು ವಿಷಾದಪಟ್ಟರು. ಬರ್ಮಾದಲ್ಲಿನ ಭಾರತೀಯರಿಗೆ ಅವರು ನೀಡಿದ ಸಂದೇಶದ ಭಾಗವಿದು: "ಕಡೆಯಪಕ್ಷ ಭಾರತೀಯರು ಬರ್ಮೀಯರಿಗೆ ಸಲ್ಲಿಸಬೇಕಾದ ಋಣವೆಂದರೆ, ಅವರ ಭಾಷೆಯನ್ನು ಕಲಿಯುವ ಮೂಲಕ ಅವರೊಂದಿಗೆ ಆಪ್ತತೆಯನ್ನು ಬೆಳೆಸಿಕೊಳ್ಳುವುದು. ಭಾರತೀಯರು ಮಕ್ಕಳಿಗೆ ಬರ್ಮೀ ಭಾಷೆಯನ್ನು ಕಲಿಸಬೇಕೆಂದು—ಈಗ ಆ ಕೆಲಸ ಮಾಡುವುದು ಅವರಿಗೆ ತುಂಬ ತಡವೆಂದು ಕಂಡುಬಂದರೂ—ನಾನು ಸಲಹೆ ನೀಡುತ್ತೇನೆ."

ಭೇಟಿಯ ಅವಧಿಯಲ್ಲಿ ನಡೆದ ಪ್ರಮುಖ ಸಮಾರಂಭವೆಂದರೆ ರಂಗೂನಿನ ಪೌರಸಭೆಯು ಅರ್ಪಿಸಿದ ಬಿನ್ನವತ್ತಳೆ. ರಂಗೂನಿನ ನಗರಸಭೆಯು ತನ್ನ ಇತಿಹಾಸ ದಲ್ಲಿಯೆ ಮೊತ್ತಮೊದಲಿಗೆ ಒಬ್ಬ ಸಾರ್ವಜನಿಕ ವ್ಯಕ್ತಿಗೆ ಮಾನಪತ್ರವನ್ನು ಅರ್ಪಿಸಿತು. ಈ ಅಭಿನಂದನೆಯು ಗಾಂಧೀಜಿಗೆ ಸಿಲೋನಿನಲ್ಲಿ ಅವರಿಗಾದ ಹಿತಕರ ಅನುಭವಗಳನ್ನು ನೆನಪಿಗೆ ತಂದುಕೊಟ್ಟಿತು. "ಸಿಲೋನಿನಲ್ಲಿ ಅನೇಕ ಬೌದ್ಧರು ಸಹಜಪ್ರವೃತ್ತಿಯಿಂದಲೋ ಎಂಬಂತೆ ನನ್ನನ್ನು ತಮ್ಮವನೆಂದು ಸಾಧಿಸಿದರು. ಸಿಲೋನಿನ ಮತ್ತು ಬರ್ಮಾಗಳ, ಚೈನಾ ಹಾಗೂ ಜಪಾನುಗಳ ಬೌದ್ಧರು ನನ್ನನ್ನು ತಮ್ಮವನೆಂದು ಸಾಧಿಸಿದಲ್ಲಿ ನಿಸ್ಸಂದೇಹ ವಾಗಿ ನಾನು ಆ ಗೌರವಕ್ಕೆ ಯೋಗ್ಯನಾಗುತ್ತೇನೆ. ಏಕೆಂದರೆ, ರೋಮನ್ ಕ್ಯಾಥೋಲಿಕ್ ಧರ್ಮಕ್ಕೆ ಪ್ರಾಟೆಸ್ಟೆಂಟ್ ಧರ್ಮವು ಎಂತೊ ಅಂತೆಯೆ ಹಿಂದೂ ಧರ್ಮಕ್ಕೆ ಬೌದ್ಧ ಧರ್ಮ. ಆದರೆ ಇದರ ನಂಟು ಅದಕ್ಕಿಂತ ಹೆಚ್ಚು ಉಜ್ವಲವೂ ಅಧಿಕಪ್ರಮಾಣದ್ದು ಆಗಿದೆ."

ಸ್ವರ್ಣಪಗೋಡದ ನೆರಳಿನಲ್ಲಿ ಮಾನವ ಕೋಟಿಯ ತಪ್ತ ಜನತೆಯ ಒಂದು ಭಾಗವಾದ ಬಹುಸಂಖ್ಯೆಯ ಬರ್ಮೀಯರೆಂದರೆ, ಬರ್ಮೀ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಫೂಂಗಿಗಳು. ಫೂಂಗಿಗಳಿಗೆ ನೀಡಿದ ಸಂಕ್ಷಿಪ್ತ ಸಂದೇಶದಲ್ಲಿ ಗಾಂಧೀಜಿ ಹೀಗೆ ಹೇಳಿದರು: "ಫೂಂಗಿಗಳು ಬರ್ಮದ ರಾಜಕೀಯ ಚಳುವಳಿಯ ಮುಖಂಡತ್ವವನ್ನು ವಹಿಸುತ್ತಿದ್ದಾರೆಂಬುದನ್ನು ನಿಮ್ಮಿಂದ ಕೇಳಿ ನನಗೆ ಸಂತೋಷ ವಾಗಿದೆ. ಆದರೆ ರಾಜಕೀಯ ಹೋರಾಟದ ನೇತೃತ್ವವನ್ನು ಕೈಗೊಂಡಾಗ ನಿಮ್ಮ ಹೆಗಲ ಮೇಲೆ ತೀವ್ರ ಹೊಣೆಯಿರುತ್ತದೆ. ಮಾನವ ಕುಲದ ದೃಷ್ಟಿಯಿಂದ ಪೌರೋಹಿತ್ಯವು ಯಾವಾಗಲೂ ರಾಜಕೀಯ ಸಂಗತಿಗಳಲ್ಲಿ ತಲೆಹಾಕಿಲ್ಲವೆಂಬುದನ್ನು ಇತಿಹಾಸ ತೋರಿಸು ತ್ತದೆ. ಬಹುವೇಳೆ ಅನುಚಿತ ಮಹಾಕಾಂಕ್ಷೆಯು ನೀತಿ ನಿಷ್ಠಾರಹಿತ ವ್ಯಕ್ತಿಗಳನ್ನು

ರಾಜಕೀಯದಲ್ಲಿ ತೊಡಗಲು ಪ್ರೇರೇಪಿಸಿರುವಂತೆ ಜಗತ್ತಿನ ಪುರೋಹಿತ ವರ್ಗವನ್ನೂ ಪ್ರೇರಿಸಿದೆ. ಈಗ ನೀವು ಪೂಂಗಿಗಳಾದ ನಿಮಗೆ ಚಳುವಳಿಯನ್ನು ಮುನ್ನಡೆಸುವ ಆಕಾಂಕ್ಷೆಯಿದ್ದಲ್ಲಿ, ನೀವು ಮಹತ್ತರ ಜವಾಬ್ದಾರಿಗೆ ಹೆಗಲು ಕೊಡುತ್ತೀರಿ. ಸಂಶಯಕ್ಕೆಡೆಗೊಡದ ಪರಿಶುದ್ಧತೆಯನ್ನು ಸಾಧಿಸುವುದಲ್ಲದೆ ಆ ನಿಷ್ಕಂಳಕ ಪರಿಶುದ್ಧತೆಯೊಡನೆ ಶ್ರೇಷ್ಠ ಬುದ್ಧಿಮತ್ತೆ ಮತ್ತು ಅಸಾಧಾರಣ ಸಾಮರ್ಥ್ಯಗಳನ್ನು ಮಿಳಿತಗೊಳಿಸಿರೆಂದು ನಿಮ್ಮನ್ನು ನಾನು ಕೇಳಿಕೊಳ್ಳುತ್ತೇನೆ. ಯಾರ ನೆರಳಿನಲ್ಲಿ ನಾವೀಗ ಕುಳಿತಿದ್ದೇವೆಯೊ ಆ ಬುದ್ಧನ ಚೈತನ್ಯವು ಚಳುವಳಿಯೊಂದಿಗೆ ಸಂಬಂಧ ಹೊಂದಿರುವ ಎಲ್ಲರನ್ನೂ ಮುನ್ನಡೆಸಲಿ."

ರಂಗೂನಿನ ಸ್ವರ್ಣಪಗೋಡದ ಸ್ಫೂರ್ತಿದಾಯಕ ದೃಶ್ಯದನಂತರ ಗಾಂಧೀಜಿಯನ್ನು ಹವ್ಯಾಸಿ ಕಲಾವಿದರೆಂದು ತಿಳಿಯಲಾದ ಒಂದು ಪ್ರದರ್ಶನಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಅವರು ಪ್ರದರ್ಶನದ ಉತ್ಪತ್ತಿಯಿಂದ ೨,೦೦೦ ರೂ.ಗಳನ್ನು ಸ್ವೀಕರಿಸುವವರಿದ್ದರು. ಆದರೆ ವೃತ್ತಿ ಕಲಾವಿದರು ಹಾಡುತ್ತಿದ್ದ ಮತ್ತು ನರ್ತಿಸುತ್ತಿದ್ದ ಆ ರಂಗಶಾಲೆಯನ್ನು ಕಂಡು ಅವರಿಗೆ ಅಚ್ಚರಿಯಾಯಿತು. ತಾತ್ವಿಕವಾಗಿ ಅವರು ನಾಟಕಶಾಲೆಗಳಿಗೆ ಭೇಟಿ ಕೊಡಲು ಒಪ್ಪುತ್ತಿರಲಿಲ್ಲ. "ಬಹಶಃ ನಿಮಗೆ ಗೊತ್ತಿರಲಾರದು" ಎಂದು ಹೇಳುತ್ತಾ ಅವರು ಹೀಗೆ ಮುಂದುವರಿಸಿದರು: "ತಿಲಕ್ ಸ್ವರಾಜ್ಯನಿಧಿಸಂಗ್ರಹದ ಕಾಲದಲ್ಲಿ ಒಂದು ವೃತ್ತಿಕಲಾವಿದರ ಪ್ರದರ್ಶನಕ್ಕೆ ಹತ್ತು ನಿಮಿಷಗಳ ಕಾಲ ಭೇಟಿ ಕೊಟ್ಟಲ್ಲಿ ನಿಧಿಗೆ ಐವತ್ತು ಸಾವಿರ ರೂಪಾಯಿಗಳ ಚಂದಾ ನೀಡುವುದಾಗಿ ನನಗೆ ಆಹ್ವಾನ ಬಂದಿತ್ತು. ಆದರೆ ನಾನದನ್ನು ನಿರಾಕರಿಸಿದೆ. ವೃತ್ತಿ ಕಲಾವಿದರ ಪ್ರಪಂಚದೊಂದಿಗೆ ಬೆರೆಯಲು ಮತ್ತು ಸಹಚರಿಸಲು ನಾನು ತಿರಸ್ಕರಿಸುತ್ತೇನೆಂದಲ್ಲ. ಏಕೆಂದರೆ ನಾನು ಸಂಬಂಧವನ್ನು ಪಡೆಯದ ಮಾನವ ಜನಾಂಗದ ಯಾವ ವರ್ಗವೂ ಇಲ್ಲ; ಆದರೆ ನನ್ನ ಸ್ಥಾನದಲ್ಲಿರುವ ಒಬ್ಬ ವ್ಯಕ್ತಿ ತನ್ನ ದೃಷ್ಟಿಯಿಂದ ಮಾತ್ರವಷ್ಟೆ ಅಲ್ಲ, ಅವನ ನಿದರ್ಶನವು ಇತರರ ಮೇಲೆ ಉಂಟುಮಾಡಬಹುದಾದ ಪರಿಣಾಮಗಳ ದೃಷ್ಟಿಯಿಂದಲೂ ತನ್ನ ಚರ್ಯೆಯನ್ನು ನಿಯಂತ್ರಿಸಬೇಕಾದುದು ಅವಶ್ಯ. ಸಾರ್ವಜನಿಕ ರಂಗಮಂದಿರಕ್ಕೆ ಹೋಗುವುದರ ಅನುಕೂಲ ಪ್ರತಿಕೂಲಗಳೇನೇ ಇರಲಿ, ಅದು ಈ ದೇಶದಲ್ಲಿ ಬಹುಪಾಲು ಯುವಜನಾಂಗದ ಶೀಲವನ್ನು ಹಾಳುಮಾಡಿದೆ ಮತ್ತು ನಡತೆಯನ್ನು ಕೆಡಿಸಿದೆಯೆಂಬುದು ಸ್ಪಷ್ಟ ಸಂಗತಿಯಾಗಿದೆ. ರಂಗಮಂದಿರದ ಅಗೋಚರ ಪರಿಣಾಮಗಳು ನಮಗೆ ಸೋಕುವುದಿಲ್ಲವೆಂದು ವಯಸ್ಕರಾದ ನೀವು ತಿಳಿದಿರುತ್ತೀರಿ. ಆದರೆ ಚಿಕ್ಕ ಮಕ್ಕಳ ಬಗೆಗಾದರೂ ನೀವು ಸ್ವಲ್ಪ ಲಕ್ಷ್ಯವಿಡಬೇಕಾಗುತ್ತದೆ. ಅವರನ್ನು ಸಂದೇಹಾಸ್ಪದ ಪ್ರದರ್ಶನಗಳಿಗೆ ಕರೆದುಕೊಂಡು ಹೋಗುವುದರಿಂದ ಅವರ ಮುಗ್ಧತೆಯನ್ನು ಪೈಶಾಚಿಕ ಸಂಪತ್ತಿಗೆ ನೀವು ಗುರಿಮಾಡುತ್ತೀರಿ. ನಿಮ್ಮ ಸುತ್ತಲೂ ನೋಡಿ. ಧಗಧಗಿಸುವ ಅಗ್ನಿವೃತ್ತದ ನಡುವೆ ನಾವಿದ್ದೇವೆ. ಸಿನಿಮಾ, ರಂಗಭೂಮಿ, ಜೂಜು ಮೈದಾನ, ಕಳ್ಳಂಗಡಿ, ಅಫೀಮು ಕಟ್ಟೆ–ಇಂದಿನ ವ್ಯವಸ್ಥೆಯ ಪ್ರೋತ್ಸಾಹದ ಪ್ರಭಾವದಿಂದ ಉದ್ಭವಿಸಿರುವ

ಸಮಾಜದ ಈ ಎಲ್ಲ ಶತ್ರುಗಳು ಸರ್ವದಿಕ್ಕಿನಿಂದಲೂ ನಮ್ಮನ್ನು ಹೆದರಿಸುತ್ತಿವೆ. ಹಾಗಾದರೆ ಇಂದಿನ ವ್ಯವಸ್ಥೆಯನ್ನು ಪೈಶಾಚಿಕವೆಂದು ನಾನು ಹಿಂಜರಿಯದೆ ಕರೆದುದರಲ್ಲಿ ಆಶ್ಚರ್ಯವಿದೆಯೇನು? ನಿಮಗೆ ನಾನು ಕೊಡುವ ಸಲಹೆಯಿಷ್ಟೆ: ಅಪಾಯಕರ ಇರುಬುಗಳಿವೆ, ಎಚ್ಚರಿಕೆ.

"ನಟನೆಯ ಕಸುಬಿನವರಾದ ನೀವು ಇಚ್ಛೆಯಿದ್ದಲ್ಲಿ ನಿಮ್ಮ ವೃತ್ತಿಯನ್ನು ಮುಂದುವರಿಸಬಹುದು, ಆದರೆ ನಿಮ್ಮ ನಿಷ್ಕಳಂಕತೆಯನ್ನು ಕಾಪಾಡಿಕೊಳ್ಳಿ.ಭಗವಂತನು ನಿಮ್ಮನ್ನು ರಕ್ಷಿಸುತ್ತಾನೆ. ದುಡಿಮೆಗಾರ ಸದಾ ಪ್ರತಿಫಲಕ್ಕೆ ಯೋಗ್ಯ."

ರಂಗೂನಿನ ಸಭೆಗಳಲ್ಲೊಂದರಲ್ಲಿ ಅವರು ತಮ್ಮ ಜೀವನ ದರ್ಶನದ ಬಗೆಗೆ ಮಾತನಾಡಿದರು:

"ನೀವು ನನಗೆ ತೋರಿರುವ ಮೆಚ್ಚಿಕೆಗೆ ಬೆಲೆಕಟ್ಟಲು ನಾನು ನಿಜವಾಗಿಯೂ ಅಸಮರ್ಥನಾಗಿದ್ದೇನೆ; ಅದನ್ನು ಜೀರ್ಣಿಸಿಕೊಳ್ಳುವುದು ಮತ್ತಷ್ಟು ಕಷ್ಟವಾಗಿದೆ. ಆದರೆ ನೀವು ಕೃಪೆಯಿಟ್ಟು ಪ್ರಸ್ತಾಪಿಸಿರುವ ಎರಡು ಸಂಗತಿಗಳು ನಿಶ್ಚಯವಾಗಿ ನನ್ನವೆಂದು ಹೇಳಬಲ್ಲೆ. ಮೊದಲನೆಯ ಅಂಶವೆಂದರೆ, ನನ್ನ ಧ್ಯೇಯವು ಭಾರತೀಯ ಜನಾಂಗದ ಭ್ರಾತೃತ್ವ ಮಾತ್ರವಲ್ಲ ಎಂಬುದು. ಭಾರತದ ಸ್ವಾತಂತ್ರ್ಯವು ಇಂದು ನನ್ನ ಇಡೀ ಬದುಕನ್ನು ಮತ್ತು ನನ್ನ ಸಂಪೂರ್ಣ ವೇಳೆಯನ್ನು ಬಹುಮಟ್ಟಿಗೆ ಆಕ್ರಮಿಸಿಕೊಂಡಿರುವುದು ಸತ್ಯವಾದರೂ ಅದೇ ನನ್ನ ಗುರಿಯಲ್ಲ. ಭಾರತದ ಸ್ವಾತಂತ್ರ್ಯವನ್ನು ಸಾಧಿಸುವ ಮೂಲಕ ಮಾನವ ಭ್ರಾತೃತ್ವದ ಧ್ಯೇಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಮತ್ತು ಅದನ್ನು ಮುನ್ನಡೆಸಿಕೊಂಡು ಹೋಗಲು ನಾನು ಆಶಿಸುತ್ತೇನೆ. ನನ್ನ ದೇಶಪ್ರೇಮವು ಸಂಕುಚಿತವಾದುದಲ್ಲ. ಅದು ಸರ್ವಾಲಿಂಗಿ ಯಾದುದು. ಇತರ ರಾಷ್ಟ್ರಗಳ ಶೋಷಣೆ ಅಥವಾ ಸಂಕಷ್ಟಗಳ ಮೇಲೆ ಸವಾರಿ ಮಾಡಲು ಪ್ರಯತ್ನಿಸುವ ದೇಶಪ್ರೇಮವನ್ನು ನಾನು ಅಲ್ಲಗಳೆಯುತ್ತೇನೆ. ಅಪವಾದರಹಿತವಾಗಿ ಎಲ್ಲ ಸಂದರ್ಭಗಳಲ್ಲೂ, ಸರ್ವಮಾನವ ಜನಾಂಗದ ಅತ್ಯಧಿಕ ಒಳಿತಿನೊಂದಿಗೆ ದೇಶಭಕ್ತಿಯು ಸಂಗತವಾಗಿರದಿದ್ದಲ್ಲಿ ಅದು ನನ್ನ ದೇಶಭಕ್ತಿಯ ಕಲ್ಪನೆಯಾಗಲಾರದು. ಅದಷ್ಟೇ ಅಲ್ಲ, ನನ್ನ ಧರ್ಮದಿಂದ ಹರಿದು ಬಂದಿರುವ ನನ್ನ ದೈವನಿಷ್ಠೆ ಮತ್ತು ದೇಶಭಕ್ತಿಗಳು ಸಮಸ್ತ ಜೀವಿಗಳನ್ನೂ ಒಳಗೊಳ್ಳುತ್ತವೆ. ಮನುಷ್ಯರೆಂಬ ಜೀವಿಗಳೊಂದಿಗೆ ಮಾತ್ರವಲ್ಲ ಸರ್ವಜೀವಿಗಳೊಂದಿಗೆ, ಭೂಮಿಯ ಮೇಲಿನ ಎರೆಹುಳುವಿನಂಥ ಜೀವಿಗಳೊಂದಿಗೂ ಸಹ ಭ್ರಾತೃತ್ವ ಅಥವಾ ಅನನ್ಯತೆಯನ್ನು ಕಂಡುಕೊಳ್ಳಲು ನಾನು ಬಯಸುವೆ. ಭೂಮಿಯ ಮೇಲೆ ತೆವಳುವ ವಸ್ತುಗಳೊಡನೆಯೂ ನಾನು ಅನನ್ಯತೆಯನ್ನು ಕಾಣಲು ಇಚ್ಛಿಸುತ್ತೇನೆ. ಕಾರಣವೇನೆಂದರೆ, ನಮ್ಮದುಒಬ್ಬನೇ ಭಗವಂತನಿಂದ ಪಡೆದ ಹುಟ್ಟಾಗಿದೆ. ಮಾನವಭ್ರಾತೃತ್ವವೇ ಧ್ಯೇಯವಾಗುಳ್ಳ ನನ್ನನ್ನೀಗ ಕೊಂಡಾಡಿದ್ದೀರಿ. ಆದ್ದರಿಂದ ಯಾವುದೇ ರೂಪದಲ್ಲಿರುವ ಸಮಸ್ತ ಜೀವಿಗಳೂ ನೀವು ಸಲ್ಲಿಸಬೇಕೆಂದಿರುವ ಸರ್ವ ಗೌರವಕ್ಕೂ ನಿಸ್ಸಂದೇಹವಾಗಿ ಭಾಗಿಗಳಾಗುತ್ತವೆ.

“ಬರ್ಮಾದ ಸ್ಥಳೀಯ ಜನತೆಗೆ ಏನಾದರೂ ಸಲಹೆ ನೀಡಬೇಕೆಂದು ನೀವು ನನ್ನನ್ನು ಕೇಳಿದ್ದೀರಿ. ನಿಮಗೆ ಯಾವುದೇ ಸಲಹೆಯನ್ನು ನೀಡಲು ನಾನು ಸಂಪೂರ್ಣವಾಗಿ ಅನರ್ಹನೆಂದು ಭಾವಿಸಿದ್ದೇನೆ. ನನ್ನ ಆ ದೌರ್ಬಲ್ಯವನ್ನು ನಿಮ್ಮ ಮುಂದೆ ಮರೆಮಾಚದೆ ಒಪ್ಪಿಕೊಳ್ಳಬೇಕಾಗಿದೆ. ನಿಮ್ಮ ಶ್ರೇಷ್ಠ ಸಂಪ್ರದಾಯಗಳ ಬಗೆಗೆ ನನ್ನ ತಿಳಿವಳಿಕೆ ಕೇವಲ ಮೇಲು ಮೇಲಿನದು; ನಿಮ್ಮ ಇಂದಿನ ದಿನಗಳ ಸಮಸ್ಯೆಯ ಬಗೆಗೆ ನನಗೆ ಏನೇನೂ ತಿಳಿವಳಿಕೆಯಿಲ್ಲ. ಆದರೂ ನಿಮ್ಮ ಮೇಲಿನ ಪ್ರೀತಿ ಮತ್ತು ಮೆಚ್ಚುಗೆಗಳಲ್ಲಿ ನಾನು ಯಾರಿಗೂ ಕಡಿಮೆಯವನಾಗಿರಲಿಲ್ಲ. ಬರ್ಮಾದ ವಿವಿಧ ಪಕ್ಷಗಳು ನನ್ನನ್ನು ಭೇಟಿಮಾಡಬೇಕೆಂದು ಕೋರುತ್ತೇನೆ: ಆಗ ನಿಮ್ಮ ಅಂತರಂಗವನ್ನರಿಯಲು ದಾರಿಯಾಗುತ್ತದೆ. ನಿಮ್ಮನ್ನು ಸ್ವಾಗತಿಸಲು ನನ್ನ ಹೃದಯ ಸದಾ ಸಿದ್ಧವಿದೆ. ಆದರೆ ಅದನ್ನು ಕರೆಯಬೇಕಾದವರು ನೀವು. ಆ ಕರೆಯು ಖಂಡಿತ ನಿರರ್ಥಕವಾಗುವುದಿಲ್ಲ.”

ಭಾರತದ ಬಂಡವಾಳಗಾರರು ಯೂರೋಪೀಯ ಶೋಷಣೆಗೆ ನೆರವು ನೀಡುತ್ತಿದ್ದಾರೆಂದೂ ಮತ್ತು ವಿಮೋಚನೆಗಾಗಿ ನಡೆಯುತ್ತಿರುವ ಬರ್ಮಿ ಚಳುವಳಿಯ ಬಗೆಗೆ ಭಾರತೀಯರು ನಿರ್ಲಕ್ಷದಿಂದಿದ್ದಾರೆಂದೂ ಸರ್ವ ಬರ್ಮೀಯ ಸಂಘದ ಕಾರ್ಯದರ್ಶಿ ಅಸಮಾಧಾನ ಸೂಚಿಸಿದರು. ದೇಶದ ಉಪ್ಪು ತಿಂದು ದೇಶಕ್ಕೆ ಎರಡು ಬಗೆಯುವ ವಂಚಕ ಜನರಿಂದ ಭಾರತವೂ ಮುಕ್ತವಾಗಿಲ್ಲವೆಂದು ಗಾಂಧೀಜಿ ನುಡಿದರು. “ಕೆಲವು ಜನ ಭಾರತೀಯರ ನಡವಳಿಕೆಯು ಹಿಂದೆ ಹೇಳಿದ ರೀತಿಯಲ್ಲಿದ್ದರೂ ಭಾರತದ ವಿರುದ್ಧ ಕಹಿ ಆಲೋಚನೆಗಳಿಗೆ ಎಡೆಕೊಡಲು ಬರ್ಮೀಯರಿಗೆ ಯಾವ ಕಾರಣವೂ ಇಲ್ಲ. ಸ್ಥಳೀಯ ಭಾರತೀಯ ಸಮುದಾಯವೆಲ್ಲ ಬರ್ಮಾದ ಬಗೆಗೆ ಅಯುಕ್ತ ಮನೋಭಾವವನ್ನು ಹೊಂದಿದ್ದರೂ, ಭಾರತವು ಅದನ್ನನುಮೋದಿಸುವುದಿಲ್ಲ. ಆದ್ದರಿಂದ ಯಾವ ಕಾರಣಕ್ಕಾಗಿಯೂ ಚಿಂತಿಸಬೇಕಾದಿಲ್ಲ.”

ಬರ್ಮಾದ ಪ್ರತಿ ಊರಿನಲ್ಲೂ ಗಾಂಧೀಜಿಯನ್ನು ಬಹುಸಂಭ್ರಮದಿಂದ ಸ್ವಾಗತಿಸಲಾಯಿತು. ರಂಗೂನಿನಿಂದ ಮೌಲಮೀನ್‌ವರೆಗಿನ ಕರಾವಳಿಯುದ್ದಕ್ಕೂ ರೈಲು ಪಯಣಿಸಿದಂತೆ, ರಾತ್ರಿಯಿಡೀ ಜನರ ಗುಂಪು ಅವರನ್ನು ಸ್ವಾಗತಿಸಲು ಕಾದಿರುತ್ತಿತ್ತು. ಮೌಲಮೀನ್‌ನಲ್ಲಿ,ಪಾಂಗ್ಡೆಯಲ್ಲಿ ಪ್ರೋಮ್‌ನಲ್ಲಿ ಮತ್ತು ಮಾಡಲೆಯ ವರೆಗಿನ ಉತ್ತರದ ದಾರಿಯುದ್ದಕ್ಕೂ ನಡೆದ ಎಲ್ಲ ಸಭೆಗಳಲ್ಲಿ ತಮ್ಮ ರೇಶ್ಮೆಯ ‘ಪಸೋಸ್ ಮತ್ತು ಟೆಮಿಮಾನ್ಸ್'ಗಳನ್ನುಟ್ಟ ಬರ್ಮಿ ಹೆಂಗಸರು ಮತ್ತು ಗಂಡಸರು ಕಿಕ್ಕಿರಿದಿರುತ್ತಿದ್ದರು. “ಹಣದ ಕಾಣಿಕೆ ಎಂದೂ ಪ್ರೀತಿಯ ನಿಜವಾದ ಕುರುಹಾಗದು. ದೇವರು ಉನ್ನತ ಸ್ಥಾನದಲ್ಲಿರುವವರ ಕಾಣಿಕೆಯನ್ನು ನಿರಾಕರಿಸಿ ಒಬ್ಬ ಭಕ್ತನು ಪ್ರೀತಿಯಿಂದ ನೀಡಿದ ಹಿಡಿಯವಲಕ್ಕಿಯನ್ನು ಮೆಚ್ಚಿದನೆಂಬ ಒಂದು ಕಥೆ ನಮ್ಮ ಮಹಾಕಾವ್ಯಗಳಲ್ಲಿ ಅನೇಕ ಸಲ ಬರುತ್ತದೆ. ಆದರೆ ದರಿದ್ರನಾರಾಯಣನಿಗಾಗಿ ನೀವು ಕೊಡುವ ಹಣದ ಕಾಣಿಕೆಯಿಂದ ನಿಮ್ಮ ಪ್ರೀತಿಯನ್ನು ಅಳೆಯಬೇಕಾದುದು ನನ್ನ ದುರ್ದೈವವಾಗಿದೆ. ಇದು ನಿಮಗೆ

ಅಷ್ಟು ಹಿತವಾಗಿ ಕಾಣುವುದಿಲ್ಲವೆಂದು ನನಗೆ ತಿಳಿದಿದೆ. ಆದರೆ ಯಾವ ತಕ್ಕಡಿಯಲ್ಲಿ ತೂಗಿದರೂ ನಿಮ್ಮ ತೂಕ ಕಡಿಮೆಯಾಗದಂತೆ ನೋಡಿಕೊಂಡಿದ್ದೀರಿ. ನಿಮ್ಮ ಪ್ರೀತಿಯ ಆಧಿಕ್ಯವು ನಾನು ಮತ್ತಷ್ಟು ವಿನಮ್ರನಾಗಿರಲು ಮತ್ತು ಆ ಪ್ರೀತಿಗಿಂತ ಹೆಚ್ಚಿನ ಯೋಗ್ಯತೆಯನ್ನು ಗಳಿಸಿಕೊಳ್ಳಲು ಪ್ರೇರೇಪಿಸಿದೆ” ಎಂದು ಗಾಂಧೀಜಿ ನುಡಿದರು.

ಮೌಲ್‌ಮೀನಿನಲ್ಲಿ ಗಾಂಧೀಜಿಯ ಭಾಷಣವನ್ನು ಕೇಳುವ ಸಲುವಾಗಿ ನೆರೆ ಹೊರೆಯ ದ್ವೀಪಗಳಿಂದ ಸುಮಾರು ೫೦೦೦ಕ್ಕಿಂತ ಹೆಚ್ಚು ಜನ ರೈತರು ಬಂದಿದ್ದರು. ಚರಕವು ಅಹಿಂಸಾ ತತ್ವದ ನೇರಾದ ಉಪಸಿದ್ಧಾಂತವೆಂಬ ವಾದವನ್ನು ಗಾಂಧೀಜಿ ಮುಂದಿಟ್ಟರು. ನೆರೆಹೊರೆಯವರನ್ನು ಕುರಿತು ಬುದ್ಧನು ಬೋಧಿಸಿದ ಕರ್ತವ್ಯವನ್ನು ಅವರು ವಿವರಿಸಿದರು: “ನಿಮ್ಮಂತೆ ಬುದ್ಧನ ಉಪದೇಶದಲ್ಲಿ ನಂಬಿಕೆಯುಳ್ಳವರು ಒಂದು ಕ್ಷಣವನ್ನೂ ಸೋಮಾರಿತನದಿಂದ ಕಳೆಯುವಂತಿಲ್ಲ. ನಾವು ಬೆವರು ಸುರಿಸಿ ನಮ್ಮ ಅನ್ನವನ್ನು ಹುಟ್ಟಿಸಿಕೊಳ್ಳಬೇಕೆಂಬುದು ಈ ಮಹಾಸೃಷ್ಟಿಯ ಉದ್ದೇಶವಾಗಿದೆ. ಆದ್ದರಿಂದ ಒಂದು ಕ್ಷಣವನ್ನು ಸೋಮಾರಿಯಾಗಿ ಕಳೆಯುವ ಪ್ರತಿಯೊಬ್ಬನೂ ಆ ಮಟ್ಟಿಗೆ ತನ್ನ ನೆರೆಯವರಿಗೆ ಹೊರೆಯಾಗಿ ಪರಿಣಮಿಸುತ್ತಾನೆ ಮತ್ತು ಹಾಗೆ ಮಾಡುವುದರಿಂದ ಅಹಿಂಸೆಯ ಪ್ರಥಮ ಪಾಠವನ್ನು ಉಲ್ಲಂಘಿಸಿದಂತಾಗುತ್ತದೆ. ನೆರೆಯವರ ಬಗೆಗೆ ಸಮತೋಲನಾತ್ಮಕವೂ ತೀವ್ರವೂ ಆದ ಆಸಕ್ತಿಯಿಲ್ಲದಿರುವುದು ಅಹಿಂಸೆಯೇ ಅಲ್ಲ. ಸೋಮಾರಿಯಲ್ಲಿ ಈ ಆಸಕ್ತಿಯೇ ಇರುವುದಿಲ್ಲ. ಈ ಎಲ್ಲ ಸಂಕಟ ಪರಿಸ್ಥಿತಿಗೆ ನಾನು ಸೂಚಿಸುವ ಪರಿಹಾರವು ಭಾರತದಲ್ಲಿ ನನ್ನ ಜನರಿಗೆ ಸೂಚಿಸಿದುದೇ ಆಗಿದೆ ಈ ಸುಂದರ ದೇಶದಲ್ಲಿ ಸಾಕಷ್ಟು ನೇಕಾರರಿದ್ದಾರೆ. ಆದರೆ ರಾಷ್ಟ್ರದ ಒಳಿತಿಗೆ ದುಡಿಯುವ ಬದಲು ಅವರು ವಿದೇಶಿ ಬಂಡವಾಳಗಾರನಿಗೆ ಗುಲಾಮರಾಗಿದ್ದಾರೆ, ಏಕೆಂದರೆ ಅವರು ತಮ್ಮ ಕೌಶಲ ಮತ್ತು ಕೆಲಸಗಾರಿಕೆಗಳನ್ನು ಅರ್ಪಿಸುತ್ತಿರುವುದು ವಿದೇಶಿ ನೂಲಿಗೆ. ಭಾರತದಲ್ಲಿ ನಾವಿರುವಂತೆ ಅರೆಹೊಟ್ಟೆಯಿಂದ ಬಳಲದೆ ನೀವು ಅಸಹಾಯಕತೆಯನ್ನು ನಿವಾರಿಸಿಕೊಂಡು ಸಂತೃಪ್ತಿ ಮತ್ತು ಸಂತೋಷಗಳನ್ನು ಹೊಂದಬೇಕಾದರೆ ಕಾಲಮಿಂಚಿ ಹೋಗುವ ಮುನ್ನ ನನ್ನ ಮಾತಿಗೆ ಬೆಲೆ ಕೊಟ್ಟು ಮತ್ತೆ ಚರಕಕ್ಕೆ ಹಿಮ್ಮರಳುತ್ತೀರಿ.”

ಪ್ರೋಮ್‌ನಲ್ಲಿ ಅವರು ಮತ್ತೆ ಅದೇ ವಿಷಯವನ್ನು ಪ್ರಸ್ತಾಪಿಸಿದರು. “ಅಹಿಂಸೆಯ ಸಾಮಾನ್ಯ ಸೂತ್ರವನ್ನು ಅಂದರೆ ಆತ್ಮ ಪರಿಶುದ್ಧಿಯನ್ನು ನಿಮ್ಮ ಗಮನಕ್ಕೆ ತರುವುದರ ಹೊರತು ನಾನು ನಿಮಗೆ ತೋರಿಸಬಹುದಾದ ಬೇರೆ ಯಾವ ಉತ್ತಮ ಮಾರ್ಗವೂ ಇಲ್ಲ. ಅದನ್ನು ಹೇಗೆ ಮತ್ತು ಯಾವ ರೀತಿ ಅನ್ವಯಿಸಬಹುದೆಂಬುದು, ನಿಮ್ಮಲ್ಲಿ ಅಸ್ತಿತ್ವದಲ್ಲಿರುವ ಕೆಡಕುಗಳನ್ನವಲಂಬಿಸುತ್ತದೆ. ಆದರೆ ಒಂದು ವಿಷಯವನ್ನು ನಾನು ಎತ್ತಿ ಹೇಳಬಯಸುತ್ತೇನೆ. ನಿಮ್ಮ ವ್ಯವಸಾಯದ ಪರಿಸ್ಥಿತಿ ನಮ್ಮ ದೇಶದಲ್ಲಿನಂತೆಯೇ ಇದೆಯೆಂದು ನನಗೆ ತೋರುತ್ತದೆ. ನಾನು ಪ್ರೋಮ್‌ಗೆ ಹೋಗುತ್ತಿದ್ದಾಗ ಪ್ರಧಾನವಾಗಿ ನೇಕಾರರೇ ಇದ್ದ ಒಂದು ಹಳ್ಳಿಯನ್ನು ಕಂಡೆ. ಅಲ್ಲಿಯ ಎಲ್ಲ ಮಗ್ಗಗಳೂ ವಿದೇಶೀ ನೂಲಿ

ನಿಂದ ಕೆಲಸ ಮಾಡುತ್ತಿದ್ದುವು. ಹೀಗಾಗಿ ರೈತಾಪಿ ಜನರೊಡನೆ ಯಾವುದೇ ಬಗೆಯ ಸಜೀವ ಸಂಪರ್ಕ ಅಲ್ಲಿ ಕಂಡುಬರಲಿಲ್ಲ. ಈ ಎಲ್ಲ ಸುಂದರ ಲುಂಗಿಗಳೂ ಕೈಯಿಂದ ತೆಗೆದ ನೂಲಿನಿಂದ ತಯಾರಾಗುತ್ತಿದ್ದ ಕಾಲವೂ ಇತ್ತೆಂಬ ಅರಿವು ಈಗ ನನ್ನಲ್ಲಿ ಮೂಡಿದೆ. ಇಲ್ಲಿ ನೀವು ತಯಾರಿಸುವ ಚರಕವು ಕಲಾತ್ಮಕ ದೃಷ್ಟಿಯಿಂದ ಭಾರತದ ಯಾವುದೇ ಬಗೆಯ ಚರಕಕ್ಕಿಂತಲೂ ಅತ್ಯುತ್ತಮವಾದುದಾಗಿದೆ. ಒಟ್ಟಿನಲ್ಲಿ ಅದು ಭಾರತದ ಚರಕಗಳಿಗಿಂತ ಅಗ್ಗವಾಗಿದೆಯಲ್ಲದೆ ಬಹುಶಃ ಕೆಲಸ ಮಾಡಲು ಹಗುರವಾಗಿಯೂ ಇದೆ. ದೇವರು ಈ ನಾಡಿಗೆ ಹೇರಳವಾಗಿ ಬಿದಿರನ್ನು ಅನುಗ್ರಹಿಸಿದ್ದಾನೆ. ನೀವೆಲ್ಲ ಮಾಡ ಬೇಕಾದುದೇನೆಂದರೆ, ಚರಕದ ಸಂದೇಶವನ್ನು ರೈತಾಪಿ ಜನರಿಗೆ ಒಯ್ಯುವುದು ಮತ್ತು ಕೈನೂಲುವಿಕೆಯ ಈ ಸುಂದರ ಕಲೆಯನ್ನು ಪುನರುಜ್ಜೀವನಗೊಳಿಸುವುದು. ಪೌರಾಡಳಿತಕ್ಕೆ ಸೇರಿದ ಶಾಲೆಗಳಲ್ಲಿ ಇಂತಹ ಕಾರ್ಯವನ್ನು ಆರಂಭಿಸಿ ಅವುಗಳ ಮೂಲಕ ಗ್ರಾಮಸ್ಥರಿಗೆ ಸಂದೇಶವನ್ನು ಒಯ್ಯಬೇಕೆಂದು ಬರ್ಮಾದ ಪುರಸಭೆಗಳಿಗೆ ನಾನು ಹೇಳಬಯಸುತ್ತೇನೆ. ಆಗ ನೇಕಾರರು ಬಡಹಳ್ಳಿಗರಿಗೋಸ್ಕರ ಕೆಲಸ ಮಾಡುವಂತಾಗುತ್ತದೆ. ಅದು ಬಿಟ್ಟು ನೇಕಾರರು ವಿದೇಶಿ ನೂಲನ್ನೇ ಅವಲಂಬಿಸಿದಲ್ಲಿ ಗ್ರಾಮಜೀವನದಿಂದ ಅವರು ಪ್ರತ್ಯೇಕ ವಾಗುಳಿಯುವುದಲ್ಲದೆ ಅನತಿಕಾಲದಲ್ಲಿ ಅವರ ನೇಕಾರ ವೃತ್ತಿಯು ಹುಟ್ಟಳಿಸಿ ಹೋಗು ತ್ತದೆ. ನೂಲುವ ಮಿಲ್ಲುಗಳು ತಯಾರಿಸುವ ಎಲ್ಲ ನೂಲನ್ನೂ, ನೇಯುವ ಮಿಲ್ಲುಗಳು ಬಳಸಿಕೊಳ್ಳುವುದು ಸಹಜ. ಆದ್ದರಿಂದ ನೀವು ಹಳ್ಳಿಗಳೊಡನೆ–ಅಂದರೆ ನೇಕಾರರು ಹಳ್ಳಿಗರೊಡನೆ ಹಾಗೂ ಹಳ್ಳಿ ಮತ್ತು ನಗರಗಳ ನಡುವೆ ಸಜೀವ ಸಂಪರ್ಕವನ್ನು ಸ್ಥಾಪಿಸಬೇಕೆನ್ನುವುದಾದರೆ ಅದು ಚರಕದ ಮೂಲಕ ಮಾತ್ರ ಸಾಧ್ಯವಾಗುತ್ತದೆ."

ಬೀಳ್ಕೊಳ್ಳುವ ಸಂದರ್ಭದಲ್ಲಿ ಗಾಂಧೀಜಿ ಮಾಂಡಲೆಯಲ್ಲಿ ತುಂಬ ಭಾವಾವಿಷ್ಟ ರಾಗಿ ಮಾತನಾಡಿದರು: "ಈ ಮಾಂಡಲೆಯಲ್ಲಿಯೆ ಭಾರತದ ಶ್ರೇಷ್ಠ ಪುತ್ರರಾದ ಲೋಕಮಾನ್ಯ ತಿಲಕರನ್ನು ಜೀವಂತವಾಗಿ ಸಮಾಧಿಗೊಳಿಸಲಾಯಿತೆಂಬುದನ್ನು ನೀವು ನನಗೆ ನೆನಪಿಸಿದುದು ಯುಕ್ತವಾಗಿದೆ. ಭಾರತಕ್ಕೆ ಸ್ವರಾಜ್ಯದ ಮಂತ್ರವನ್ನು ನೀಡಿದವರು ಅವರು. ಅವರನ್ನು ಜೀವಂತವಾಗಿ ಸಮಾಧಿಗೆ ತಳ್ಳಿ ಬ್ರಿಟಿಷ್ ಸರ್ಕಾರವು ಭಾರತವನ್ನು ಸಜೀವವಾಗಿ ಮಣ್ಣುಗೂಡಿಸಿದೆ. ಇದೇ ರೀತಿ ಪಂಜಾಬಿನ ಸಿಂಹವೂ ಇಲ್ಲಿ ಬಂಧನ ಕ್ಕೊಳಗಾಗಿತ್ತು. ಆ ಸಂಗತಿಗಳನ್ನೆಲ್ಲ ನಾವು ಮರೆಯುವ ಮೊದಲೆ ಈಚೆಗೆ ಸರ್ಕಾರ ಸುಭಾಷ್‌ಚಂದ್ರ ಬೋಸರನ್ನು ಮತ್ತು ಬಂಗಾಳದ ಅನೇಕ ಇತರ ಸುಪುತ್ರರನ್ನು ಸೆರೆ ಯಲ್ಲಿಟ್ಟಿತು. ಹೀಗಾಗಿ ಭಾರತೀಯರಿಗೆ ಮಾಂಡಲೆಯು ಒಂದು ಯಾತ್ರಾಸ್ಥಳವಾಗಿದೆ. ಈ ಕೋಟೆಯ ಮತ್ತು ಭಾರತದ ಎಲ್ಲ ಸುಪುತ್ರರಿಂದ ಪವಿತ್ರವಾಗಿರುವ ಈ ಕಾರಾಗೃಹದ ಗೋಡೆಗಳ ನೆರಳಿನಲ್ಲಿ ನಾವಿಂದು ಕುಳಿತಿರುವುದು ಒಂದು ಅಸಾಧಾರಣ ಸಂಘಟನೆಯೇ ಸರಿ. ಮಾಂಡಲೆಯ ಮೂಲಕ ಸ್ವರಾಜ್ಯದ ಮಾರ್ಗವಿದೆಯೆಂಬುದು ಭಾರತದಲ್ಲಿ ಒಂದು ಸಾಮಾನ್ಯ ಹೇಳಿಕೆಯಾಗಿ ಪರಿಣಮಿಸಿದೆ. ಭಾರತದ ಶ್ರೇಷ್ಠಪುತ್ರರನ್ನು ಇಲ್ಲಿ ಬಂಧಿಸು

ವುದರ ಮೂಲಕ ಬ್ರಿಟಿಷ್ ಸರಕಾರ ನಿಮಗೂ ಆ ದೊಡ್ಡ ಪಾಠಗಳನ್ನು ಕಲಿಸಿಕೊಟ್ಟಿದೆ. ಸ್ವರಾಜ್ಯದ ಹಾದಿ ಕಷ್ಟನಷ್ಟಗಳಿಂದ ಕೂಡಿದ್ದು. ವಾಸ್ತವವಾಗಿ ಕಷ್ಟನಷ್ಟಗಳನ್ನನುಭವಿಸದೆ ಯಾವ ದೇಶವೂ ಸ್ವರಾಜ್ಯವನ್ನು ಗಳಿಸಿಲ್ಲ. ಮಾಂಡಲೆಯು ನಿಮಗೆ ಮತ್ತು ನಮಗೆ ಆ ಮಹಾಸತ್ಯವನ್ನು ನೆನಪಿಸುವ ಶಾಶ್ವತ ಸ್ಮಾರಕವಾಗಿರಲಿ.”

# ವಾತಾವರಣದಲ್ಲಿ ಸಿಡಿಲು

೧೯೨೯

ಗಾಂಧೀಜಿಯು ಬರ್ಮಾದಲ್ಲಿ ಪ್ರವಾಸ ಮಾಡುತ್ತಿದ್ದ ಆ ಹದಿನೈದು ದಿನಗಳ ಅವಧಿಯಲ್ಲಿ ಭಾರತದಲ್ಲಿ ಹೊಸದೊಂದು ಪರಿಸ್ಥಿತಿ ಉದ್ಭವಿಸಿತು. ೧೯೨೯ರ ಮಾರ್ಚ್ ೨೦ರಂದು ಸರ್ಕಾರವು ಸಂಘಟಿತ ಕಾರ್ಮಿಕ ಗುಂಪಿನ ಮೇಲೆ ಹಠಾತ್ತನೆ ಎರಗಿ ಅದರ ಮುವತ್ತಾರು ಸಮರ್ಥ ಮುಂದಾಳುಗಳನ್ನು ಬಂಧಿಸಿತು. ಅವರಲ್ಲಿ ಅರ್ಧ ಜನ ಕಮ್ಯೂನಿಸ್ಟರಾಗಿದ್ದರು. ಸುಮಾರು ನಾಲ್ಕು ವರ್ಷಗಳವರೆಗೆ ಎಳೆದಾಡಿದ ವಿಚಾರಣೆ ಯಲ್ಲಿ ಭಾರತದಲ್ಲಿನ ಚಕ್ರವರ್ತಿಯ ಪ್ರಭುತ್ವವನ್ನು ತಪ್ಪಿಸಲು ಪಿತೂರಿ ನಡೆಸಿದರೆಂಬ ಅಪರಾಧಕ್ಕಾಗಿ, ಅವರನ್ನು ಮೀರತ್‌ನಲ್ಲಿ ಬಂಧನದಲ್ಲಿಡಲಾಯಿತು. ವಾಸ್ತವವಾಗಿ ಅವರು ಕೆಲವು ನ್ಯಾಯಯುತ ಚಳುವಳಿಗಳನ್ನು ಕೈಗೊಂಡಿದ್ದರು. ಈ ದಸ್ತಗಿರಿಯನ್ನು ಟೀಕಿಸುತ್ತಾ ಗಾಂಧೀಜಿ ಹೀಗೆ ಹೇಳಿದರು:

"ಈ ಕಾರ್ಮಿಕರ ಮುಖಂಡರ ಅಥವಾ ಕಮ್ಯುನಿಸ್ಟರೆಂದು ಕರೆಯಲ್ಪಡುವವರ ದಸ್ತಗಿರಿಯಿಂದ ಸರ್ಕಾರವು ಭೀತಸ್ಥಿತಿಯಲ್ಲಿದೆಯೆಂಬುದು ತಿಳಿಯುತ್ತದೆ. ನಮಗೆ ಈಗಾಗಲೇ ಅಭ್ಯಾಸವಾಗಿರುವ ಕುರುಹುಗಳನ್ನು ಮತ್ತು ಭೀಕರ ಕಾಲವನ್ನು ಮುನ್ಸೂಚಿ ಸುವಂಥ ಲಕ್ಷಣಗಳನ್ನು ಅದು ಬಹಿರಂಗಪಡಿಸುತ್ತದೆ. ಎಲ್ಲ ಕಾನೂನುಗಳನ್ನು ತಳ್ಳಿ ಹಾಕುವ ಮತ್ತು ಸಾಮಾನ್ಯವಾಗಿ ಮರೆಯಲ್ಲಿ ಹುದುಗಿರುವ ರಕ್ತವರ್ಣದ ಪಂಜಗಳನ್ನು, ತತ್ತರಿಸುತ್ತಿರುವ ಭಾರತಕ್ಕೆ ತೋರಿಸುವ ತನ್ನ ಸಾಮರ್ಥ್ಯದ ನಿಯತಕಾಲಿಕ ಪ್ರದರ್ಶನ ದಲ್ಲಿ ಅದು ವಿಶ್ವಾಸವಿಟ್ಟಿದೆಯೆಂಬುದು ಸ್ಪಷ್ಟವಾಗುತ್ತದೆ. ಸಹಜವಾಗಿ, ವಿಚಾರಣೆಯ ನಾಟಕ ನಡೆಯುತ್ತದೆ. ಅಪಾದಿತರು ಬುದ್ಧಿವಂತರಾದರೆ, ಆ ಬಲೆಯೊಳಗೆ ಬೀಳುವುದಿಲ್ಲ ಮತ್ತು ನ್ಯಾಯವಾದಿಯ ಪ್ರಾತಿನಿಧ್ಯದ ಮೂಲಕ ಆ ನಾಟಕಕ್ಕೆ ನೆರವಾಗುವುದಿಲ್ಲ. ಅವರು ಧೈರ್ಯದಿಂದ ಸೆರೆವಾಸವನ್ನನುಭವಿಸುತ್ತಾರೆ. ಕಾನೂನಿನ ಮುಸುಕನ್ನು ಹೊದ್ದಿ ರುವ ಈ ಕಾನೂನುರಹಿತ ಆಳ್ವಿಕೆಯು ಎಂದೆಂದಿಗೂ ಕೊನೆಗೊಳ್ಳಬೇಕಾದರೆ ಸದ್ಯ ದಲ್ಲಿಯೆ, ಅಪಾಯಕ್ಕೆ ತಲೆಗೊಡುವ ಹಾಗೂ ಬಂಧನವನ್ನೆದುರಿಸುವ ಮತ್ತು ಅದಕ್ಕೆ ಆಹ್ವಾನವೀಯುವ ಜನ ಸಹಸ್ರಗಟ್ಟಳೆ ಮುಂದೆ ಬರಬೇಕು.

"ಈ ಕಟ್ಟಳೆ ಕ್ರಮಂಗಳ ಹಿಂದೆ ಇರುವ ಉದ್ದೇಶ ಭಯವನ್ನು ಹುಟ್ಟಿಸುವುದೇ ಹೊರತು ಕಮ್ಯೂನಿಸಂನ ನಾಶವಲ್ಲ. ಹಿಂಸಾಮಾರ್ಗಗಳಿಂದ ಆಸ್ತಿ ಮತ್ತು ಅಧಿಕಾರ ಗಳನ್ನು ಸ್ವಾಧೀನ ಪಡಿಸಿಕೊಳ್ಳುವುದೇ ಕಮ್ಯೂನಿಸಂನ ಗುರಿಯಾದರೆ, ಸಾರ್ವಜನಿಕ ಅಭಿಪ್ರಾಯವು ಆ ಭೂತವನ್ನು ಜಯಪ್ರದವಾಗಿ ಹಿಮ್ಮೆಟ್ಟಿಸುತ್ತಿತ್ತು. ಅಹಿಂಸಾತ್ಮಕ ಮಾರ್ಗಗಳಿಂದ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸುವುದೇ ಕಾಂಗ್ರೆಸ್ಸಿನ, ಅಷ್ಟೇಕೆ ಎಲ್ಲ ರಾಜಕೀಯ ಪಕ್ಷಗಳ ನಂಬಿಕೆಯಾಗಿದೆ. ಆದರೆ ಸರ್ಕಾರವು ತನ್ನ ನಡತೆಯಿಂದ

ಈ ಹಿಂಸಾ ಪಂಥಕ್ಕೆ ಎಂದೂ ಇಲ್ಲದಿದ್ದ ಒಂದು ಬಲವನ್ನು ನೀಡಿದೆ. ಇದು ಈ ರೀತಿ ಆಗಬಹುದೆಂಬುದನ್ನರಿಯುವುದರಲ್ಲಿ ಅವರು ಚತುರರಾಗಿದ್ದರು. ಆದ್ದರಿಂದ, ಈ ದಸ್ತಗಿರಿಗಳ ಹಿಂದಿರುವ ಉದ್ದೇಶವನ್ನು ಮತ್ತೊಂದು ದಿಕ್ಕಿನಲ್ಲಿ ಹುಡುಕಬೇಕಾಗಿದೆ. ಒಂದು ವಿಷಯವಂತೂ ಖಚಿತ. ಭಯೋತ್ಪಾದನೆಯು ಪ್ಲೇಗಿನಂತೆ ಜನರನ್ನು ಈಗ ದಿಗಿಲುಗೊಳಿಸಲಾರದಾಗಿದೆ. ಸ್ವರಾಜ್ಯ ಚಳುವಳಿಯು ಜನರ ಮನಸ್ಸಿನಲ್ಲಿ ಎಷ್ಟು ಆಳವಾಗಿ ಬೇರೂರಿದೆಯೆಂದರೆ ಅದನ್ನು ಈಗ ಅಳ್ಳಾಡಿಸುವುದಾಗಲಿ ಅಥವಾ ಅಳಿಸಿ ಹಾಕುವುದಾಗಲಿ ಸಾಧ್ಯವಿಲ್ಲ. ಈ ದಸ್ತಗಿರಿಗಳ ಮೂಲಕ ಮತ್ತು ಸ್ವಾತಂತ್ರ್ಯ ಚಳುವಳಿಗೆ ಮಾರಕ ಆಘಾತವನ್ನುಂಟುಮಾಡಬೇಕೆಂಬ ಆಶಯವುಳ್ಳ ಸರ್ಕಾರದ ಇಂಥದೇ ಇತರ ವರ್ತನೆಗಳ ಮೂಲಕ ಆ ಚಳುವಳಿ ಮತ್ತಷ್ಟು ಪ್ರಬಲವಾಗುವುದು ನಿಸ್ಸಂಶಯ. ಏಕೆಂದರೆ, ಸಾಂಬಮೂರ್ತಿ ಮತ್ತು ಖಾಡಿಲ್ಕರ್‌ರವರ ಮೇಲೆ ಜರುಗಿಸಿದ ಕಾನೂನು ಕ್ರಮ, ಸುಂದರಲಾಲರ ಗ್ರಂಥಗಳ ನಿಷೇಧ, ಶ್ರದ್ಧಾನಂದ ಪಾರ್ಕಿನಲ್ಲಿ ಪೋಲೀಸರ ನಡತೆಯ ರೀತಿ ಮತ್ತು ನನ್ನ ಗಮನದಿಂದ ತಪ್ಪಿಸಿಕೊಂಡಿರಬಹುದಾದ ಇಂಥದೇ ಇತರ ಘಟನೆಗಳು ಒಟ್ಟಾಗಿ ಒಂದೇ ದಿಕ್ಕಿನತ್ತ ಸಾಗಿವೆ. ಸರ್ಕಾರವು ಇಂಥ ಕೃತ್ಯಗಳಿಂದ ಸತ್ಯಾಗ್ರಹದ ಸುಲಭ ಮಾರ್ಗಗಳನ್ನು ನಮಗೆ ಕಲ್ಪಿಸಿಕೊಡುತ್ತಿದೆ. ಮುಂದಿನ ವರ್ಷ ಅದನ್ನು ಬೃಹತ್ಪ್ರಮಾಣದಲ್ಲಿ ಜಾರಿಗೆ ತಯರಲು ಈ ಕೃತ್ಯಗಳು ನಮಗೆ ಅತ್ಯಗತ್ಯ ವಾಗುತ್ತವೆ."

ಬರ್ಮಾದಿಂದ ವಾಪಸಾದ ನಂತರ ಮಾರ್ಚ್ ೨೪ರಂದು ಗಾಂಧೀಜಿ ಕಲ್ಕತ್ತೆಯ ಒಂದು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು. ಎಲ್ಲ ವಿದೇಶೀ ವಸ್ತ್ರಗಳನ್ನು ತ್ಯಜಿಸ ಬೇಕೆಂಬ ಅವರ ಮನವಿಗೆ ಪ್ರತಿಕ್ರಿಯೆಯಾಗಿ ಹತ್ತು ನಿಮಿಷಗಳ ವರೆಗೆ ಬಟ್ಟೆಗಳ ಸುರಿಮಳೆಯಾಯಿತು. ಆ ದೊಡ್ಡ ರಾಶಿಯನ್ನು ಖಾಸಗಿ ಅಂಗಳಕ್ಕೆ ಒಯ್ದು ಸುಡ ಲಾಯಿತು. ಮಾರ್ಚ್ ೪ರಂದು ಶ್ರದ್ಧಾನಂದ ಪಾರ್ಕಿನಲ್ಲಿ ವಿದೇಶೀ ವಸ್ತ್ರ ದಹನವನ್ನು ಕೈಗೊಂಡ ಆಪಾದನೆಯ ಮೇಲಿನ ವಿಚಾರಣೆಯನ್ನೆದುರಿಸಲು ಮಾರ್ಚ್ ೨೭ರಂದು ಗಾಂಧೀಜಿ ಇತರ ನಾಲ್ವರೊಂದಿಗೆ ಮುಖ್ಯ ಜಿಲ್ಲಾ ನ್ಯಾಯಾಧೀಶರ ಮುಂದೆ ಹಾಜ ರಾದರು. ಆ ಜಿಲ್ಲಾ ನ್ಯಾಯಾಧೀಶರು ಆ ಪಾರ್ಕನ್ನು ಒಂದು ಸಾರ್ವಜನಿಕ ಸ್ಥಳ ವೆಂಬುದಾಗಿ ತೀರ್ಮಾನಿಸಿ, ಎಲ್ಲ ಆಪಾದಿತರಿಗೂ ತಲಾ ಒಂದು ರೂಪಾಯಿ ದಂಡವನ್ನು ಹಾಕಿದರು. ಗಾಂಧೀಜಿಗೆ ತಿಳಿಯದಂತೆ ಯಾರೋ ಒಬ್ಬರು ಆ ದಂಡವನ್ನು ತೆತ್ತಿದ್ದರು. ಅದಕ್ಕೆ ಗಾಂಧೀಜಿ ಹೇಳಿದರು: "ದಂಡವನ್ನು ಯಾರೇ ತೆತ್ತಿರಲಿ ಆತ ನನ್ನ ಮಿತ್ರನಲ್ಲ; ಪೋಲೀಸರ ನಡತೆಯ ಬಗೆಗಿನ ಕೋರ್ಟಿನ ಸಮರ್ಥನೆಯನ್ನು ಒಪ್ಪಲು ನಾನು ಸಿದ್ಧ ನಿರಲಿಲ್ಲ. ಪೋಲೀಸರ ದರ್ಪದ ವರ್ತನೆಯು ಬಹಿಷ್ಕಾರ ಚಳುವಳಿಗೆ, ಅದು ಅನ್ಯಥಾ ಪಡೆಯಲಾಗದಿದ್ದ ಪ್ರಚಾರವನ್ನೂ ಪ್ರೋತ್ಸಾಹವನ್ನೂ ನೀಡಿತು;" ಗಾಂಧೀಜಿಯ ವಿಚಾರಣೆಯ ದಿನ ದೇಶಾದ್ಯಂತ ವಿದೇಶಿ ವಸ್ತ್ರದಹನ ಸಮಾರಂಭಗಳು ಏರ್ಪಾಡಾ ಗಿದ್ದುವು.

ಹಿಂದೆಯೇ ಭಾವೋದ್ರೇಕಕಾರಿ ಘಟನೆಗಳು ಸಂಭವಿಸಿದುವು. ಸರ್ಕಾರ ಕೇಂದ್ರ ಶಾಸನಸಭೆಯಲ್ಲಿ ಸಾರ್ವಜನಿಕ ಭದ್ರತಾ ಮಸೂದೆಗೆ ಆತುರಾತುರವಾಗಿ ಅಂಗೀಕಾರ ಪಡೆಯಲು ತವಕಿಸುತ್ತಿದ್ದಿತು. ಆದರೆ ನ್ಯಾಯಾಲಯದ ಮುಂದಿರುವ ಮೊಕದ್ದಮೆಯ ಉಲ್ಲೇಖವಿಲ್ಲದೆ ಮಸೂದೆಯ ಮೇಲಣ ಚರ್ಚೆ ಸಾಧ್ಯವಿಲ್ಲದ ಕಾರಣ, ಮೀರತ್ ವಿಚಾರಣೆ ತೀರ್ಮಾನವಾಗುವವರೆಗೆ ಅಥವಾ ಕಾನೂನು ಕ್ರಮವನ್ನು ಹಿಂತೆಗೆದು ಕೊಳ್ಳುವ ವರೆಗೆ ಮಸೂದೆಯನ್ನು ಮುಂದೂಡಬೇಕೆಂದು ಏಪ್ರಿಲ್ ೨ರಂದು ಅಧ್ಯಕ್ಷ ಪಟೇಲರು ಸೂಚಿಸಿದರು. "ಇಂಥ ಪರಿಸ್ಥಿತಿಯಲ್ಲಿ ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸಲು ಸರ್ಕಾರಕ್ಕೆ ಅವಕಾಶ ಕೊಡುವುದು ನ್ಯಾಯಸಮ್ಮತವಲ್ಲವೆಂದು ನನಗೆ ತೋರುತ್ತದೆ." ಮಸೂದೆಯನ್ನು ಮುಂದೂಡಬೇಕೆಂಬ ವಾದವನ್ನು ಸರ್ಕಾರ ನಿರಾಕರಿಸಿತು. ಏಪ್ರಿಲ್ ೮ರಂದು ಕಾರ್ಮಿಕ ವಿವಾದ ಮಸೂದೆಯನ್ನು ಸಭೆಯು ಅಂಗೀಕರಿಸಿದಾಗ ಮತ್ತು ಸಾರ್ವಜನಿಕ ಭದ್ರತಾ ಮಸೂದೆಯ ಮೇಲೆ ತಮ್ಮ ತೀರ್ಪನ್ನು ನೀಡಲು ಅಧ್ಯಕ್ಷ ಪಟೇಲರು ಎದ್ದು ನಿಂತಾಗ, ಪ್ರೇಕ್ಷಕರ ಮೊಗಸಾಲೆಯಿಂದ ಅರ್ಥ ಸಚಿವರಾದ ಸರ್ ಜಾರ್ಜ್ ಪ್ಯೂಸ್ಟರ್‌ರವರ ಪೀಠದ ಸಮೀಪದಲ್ಲಿ ಕೆಂಪು ಕರಪತ್ರ ಗಳಿಂದ ಕೂಡಿದ ಎರಡು ಬಾಂಬುಗಳು ಬಿದ್ದುವು. ಕೂಡಲೆ ಉಸಿರು ಕಟ್ಟುವ ಹೊಗೆ ಯೆದ್ದಿತಲ್ಲದೆ ದೊಡ್ಡ ಕೂಗಾಟ ಪ್ರಾರಂಭವಾಯಿತು. ಆದರೆ ಯಾರಿಗೂ ತೀವ್ರ ಗಾಯವಾಗಲಿಲ್ಲ. ಈ ಬಾಂಬುಗಳ ಉದ್ದೇಶವು "ಗಲಭೆಯುಂಟು ಮಾಡಿ ಕೋಲಾಹಲ ವೆಬ್ಬಿಸುವುದೇ ಹೊರತು ಹಾನಿಯುಂಟುಮಾಡುವುದಾಗಿರಲಿಲ್ಲ." ಸಭೆಯು ಭೀತಿ ಯಿಂದ ಒಮ್ಮೆ ಚದುರಿತು. ಭಗತ್‌ಸಿಂಗ್ ಮತ್ತು ಬಟುಕೇಶ್ವರ ದತ್ತರೆಂಬ ಇಬ್ಬರು ತರುಣರನ್ನು ಬಂಧಿಸಲಾಯಿತು.

ಸಾರ್ವಜನಿಕ ಭದ್ರತಾ ಮಸೂದೆಯ ಬಗೆಗೆ ಅಧ್ಯಕ್ಷರ ತೀರ್ಪನ್ನು ಕೇಳಲು ಸಭೆಯು ಸೇರಿದಾಗ ಸಭಾ ಭವನದಲ್ಲಿ ಬಲವಾದ ಪಹರೆಯಿದ್ದಿತು. ಸರ್ಕಾರದ ಮನೋಭಾವವು ಈ ಪೀಠಕ್ಕೆ ಒಂದು ಸವಾಲಾಗಿದೆಯೆಂದು ಹೇಳಿ ಅವರು ಮಸೂದೆ ಅಕ್ರಮವಾದುದೆಂದು ತೀರ್ಪಿತ್ತರು. ಏಪ್ರಿಲ್ ೧೨ರಂದು ವೈಸ್‌ರಾಯರು ಎರಡೂ ಸಭೆಗಳ ಜಂಟಿ ಅಧಿವೇಶನದಲ್ಲಿ ಭಾಷಣಮಾಡಿದರು. ಅವರು ಬಾಂಬ್ ಪ್ರಕರಣ ಮತ್ತು ಅಧ್ಯಕ್ಷರ ತೀರ್ಪುಗಳನ್ನುಲ್ಲೇಖಿಸಿದರು. ಸಾರ್ವಜನಿಕ ಭದ್ರತಾ ಮಸೂದೆಗೆ ಸಂಬಂಧಿಸಿದಂತೆ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸುವ ಮತ್ತು ಎರಡೂ ಸಭೆಗಳ ಅಧ್ಯಕ್ಷರಿಂದ ಸಾಮಾನ್ಯ ಶಾಸನ ಕಾರ್ಯವಿಧಾನಕ್ಕೆ ಅಡ್ಡಿಬರದಂತೆ ತಡೆಯಲು ನಿಯಮ ಗಳಿಗೆ ತಿದ್ದುಪಡಿಯನ್ನು ಜಾರಿಗೆ ತರುವ ತಮ್ಮ ತೀರ್ಮಾನವನ್ನು ಪ್ರಕಟಿಸಿದರು.

"ಸ್ವಾತಂತ್ರ್ಯದ ಹೆಸರಿನಲ್ಲಿ ಬಾಂಬನ್ನೆಸೆದ ವ್ಯಕ್ತಿಗಳು ಸ್ವಾತಂತ್ರ್ಯದ ಧ್ಯೇಯಕ್ಕೆ ಕಳಂಕ ತಂದಿದ್ದಾರೆ" ಎಂದು ಒಡನೆಯೆ ಗಾಂಧೀಜಿ ಆಕ್ಷೇಪಿಸಿದರು. "ಸರ್ಕಾರವು ಇದರಿಂದ ಕೆರಳಿ ಪ್ರತಿಯಾದ ಆವೇಶಕ್ಕೆಡೆಕೊಟ್ಟಲ್ಲಿ ಮೂರ್ಖತನವಾಗುತ್ತದೆ. ಅವರು ವಿವೇಕಿಗಳಾದಲ್ಲಿ ಬಾಂಬು ಎಸೆದವನ ಹುಚ್ಚಿಗೆ ತಮ್ಮ ಜವಾಬ್ದಾರಿ ಸಹ ಕಡಿಮೆಯ

ದೇನಲ್ಲವೆಂಬುದನ್ನು ಅರಿಯುತ್ತಾರೆ. ಜನತೆಯ ಅಭಿಪ್ರಾಯಕ್ಕೆ ತಾವು ತೋರಿಸುತ್ತಿರುವ ನಿರ್ಲಕ್ಷ್ಯದಿಂದ ಅವರು ರಾಷ್ಟ್ರವನ್ನು ಉದ್ರೇಕಗೊಳಿಸುತ್ತಿದ್ದಾರೆ. ಮತ್ತು ಈ ಉದ್ರೇಕದಿಂದ ದಾರಿ ತಪ್ಪುವುದಂತು ನಿಶ್ಚಯ. ಅಹಿಂಸೆಯಲ್ಲಿ ನಂಬಿಕೆಯಿಟ್ಟಿರುವ ಕಾಂಗ್ರೆಸ್ಸಿಗರು ಈ ಹಿಂಸಾಕೃತ್ಯಕ್ಕೆ ಗುಟ್ಟಾಗಿ ಸಹ ಸಮ್ಮತಿ ನೀಡದೆ, ತಾವನುಸರಿಸುವ ಮಾರ್ಗದಲ್ಲಿ ಶ್ರದ್ಧೆಯಿದ್ದದ್ದಾದರೆ ಅದನ್ನೆ ಇಮ್ಮಡಿ ಹುರುಪಿನಿಂದ ಅನುಸರಿಸಿದಲ್ಲಿ ವಿವೇಕವಾಗುತ್ತದೆ. ಭಾರತದಲ್ಲಿ ಬಾಂಬಿಗೆ ತಕ್ಕ ಪರಿಸರವಿಲ್ಲ. ಸರ್ಕಾರವು ಅಪೇಕ್ಷಿಪಟ್ಟಲ್ಲಿ ಇದನ್ನು ಇಂದೇ ನಿಲ್ಲಿಸಬಹುದು. ಆದರೆ ಅದು ಬೆದರಿಕೆಯ ಮೂಲಕವಲ್ಲ, ಗೌರವಯುತವಾಗಿ ಮತ್ತು ಸಕಾಲದಲ್ಲಿ ರಾಷ್ಟ್ರೀಯ ಬೇಡಿಕೆಗೆ ಸಮ್ಮತಿ ನೀಡುವ ಮೂಲಕ. ಆದರೆ ಅದು ಬಯಲಾಸೆಯನ್ನು ನೆಚ್ಚಿಕೊಂಡಂತೆ ಅಷ್ಟೆ. ಕಾರಣ, ಸರ್ಕಾರವು ಹಾಗೆ ಮಾಡಬೇಕಾದರೆ ಕಾರ್ಯನೀತಿಯ ಮಾರ್ಪಾಡಿನ ಜೊತೆಗೆ ಅವರ ಹೃದಯದ ಪರಿವರ್ತನೆಯೂ ಆಗಬೇಕಾಗುತ್ತದೆ. ಆದರೆ ಅಂಥ ಯಾವುದೇ ಪರಿವರ್ತನೆಯು ಸನ್ನಿಹಿತವಾಗಿದೆಯೆಂಬ ಭರವಸೆಯನ್ನು ಮೂಡಿಸುವಂಥದೇನೂ ಈಗ ಕಂಡುಬರುತ್ತಿಲ್ಲ."

ಜೂನ್ ೧೨ರಂದು ದೆಹಲಿಯಲ್ಲಿ ಜರುಗಿದ ಚರಿತ್ರಾರ್ಹ ವಿಚಾರಣೆಯಲ್ಲಿ ಭಗತ್‌ಸಿಂಗ್ ಮತ್ತು ಬಟುಕೇಶ್ವರ ದತ್ತರಿಗೆ ಜೀವಾವಧಿ ಗಡೀಪಾರು ಶಿಕ್ಷೆಯನ್ನು ವಿಧಿಸಲಾಯಿತು. ತಮ್ಮ ಆವೇಶಾತ್ಮಕ ಹೇಳಿಕೆಯಲ್ಲಿ ಅವರು ಹೀಗೆ ನುಡಿದರು:

"ಇದನ್ನು ಹಾಗೂ ಕಾರ್ಮಿಕ ಚಳುವಳಿಯ ಮುಖಂಡರ ಸಾಮೂಹಿಕ ದಸ್ತಗಿರಿಗಳನ್ನು ಕುರಿತು ನಾವು ಮನನಮಾಡುತ್ತಿದ್ದೇವೆ. ಕಾರ್ಮಿಕ ವಿವಾದ ಮಸೂದೆಯ ಪ್ರಸ್ತಾಪವು ಬಂದ ವೇಳೆಯಲ್ಲಿ ಅದರ ಪ್ರಗತಿಯನ್ನೂ ಚರ್ಚೆಯ ಗತಿಯನ್ನೂ ಗಮನಿಸುವ ಸಲುವಾಗಿ ನಾವು ಸಭೆಗೆ ಹೋದದ್ದುಂಟು. ಆಗ ಶೋಷಕರ ದಮನ ಶಕ್ತಿಗೂ ಅಸಹಾಯಕ ಜೀತಗಾರರ ಗುಲಾಮಗಿರಿಗೂ ವಿಪತ್ಸೂಚಕ ಸ್ಮಾರಕದಂತಿರುವ ಸಂಸ್ಥೆಯಿಂದ ಕ್ಲೇಶಕ್ಕೊಳಗಾಗಿರುವ ಭಾರತದ ಜನಕೋಟಿಗೆ ಯಾವ ಪ್ರಯೋಜನವೂ ಇಲ್ಲವೆಂಬ ನಮ್ಮ ನಂಬಿಕೆಯನ್ನು ಅಲ್ಲಿಯ ಚರ್ಚೆ ದೃಢಪಡಿಸಿತು.

"ದುಡಿಮೆಗಾರರ ಮೂಕ ಗುಲಾಮಿ ಚಾಕರಿಗೆ ನಮ್ಮಂತೆ ಮರುಗಿದ ಯಾರೂ ಈ ದೃಶ್ಯವನ್ನು ಸಮಚಿತ್ತದಿಂದ ವೀಕ್ಷಿಸುವುದು ಸಾಧ್ಯವಿಲ್ಲ. ಶೋಷಕನ ಆರ್ಥಿಕ ಸೌಧ ನಿರ್ಮಾಣಕ್ಕಾಗಿ ಸದ್ದಿಲ್ಲದೆ ತಮ್ಮ ರಕ್ತವನ್ನು ಬಸಿದ ಮಂದಿಯನ್ನು ಕಂಡು ಎದೆಗರಗಿದ ಯಾರೂ ಯಾತನಾಮಯ ಬೇಗುದಿಯಿಂದ ಪರಿತಪಿಸುವ ಆತ್ಮದ ಕೂಗನ್ನು ತಡೆಹಿಡಿಯಲಾರರು. ಈ ದೇಶದ ಶೋಷಕರಲ್ಲಿ ಸರ್ಕಾರವೇ ಅತಿ ದೊಡ್ಡ ಸಂಸ್ಥೆಯೆಂದು ತೋರುತ್ತದೆ. ತಮ್ಮ ಹೃದಯವನ್ನು ಸೀಳುತ್ತಿರುವ ಬೇಗುದಿಗೆ ಅಭಿವ್ಯಕ್ತಿ ಕೊಡಲು ಬೇರೆ ಯಾವ ಮಾರ್ಗವೂ ಉಳಿದಿರದ ಜನರ ಪರವಾಗಿ ನಮ್ಮ ಪ್ರತಿಭಟನೆಯನ್ನು ದಾಖಲಿಸಲು ಸಭಾಂಗಣದಲ್ಲಿ ನಾವು ಬಾಂಬುಗಳನ್ನೆಸೆದೆವು. ಕಿವುಡರಿಗೆ ಕೇಳುವಂತೆ ಮಾಡುವುದು ಮತ್ತು ಉದಾಸೀನರಿಗೆ ಸಕಾಲಿಕ ಎಚ್ಚರಿಕೆ ನೀಡುವುದು ನಮ್ಮ ಏಕಮಾತ್ರ ಉದ್ದೇಶವಾಗಿದ್ದಿತು.

"ನಮ್ಮಂತೆಯೆ ಇತರರೂ ತೀವ್ರವಾಗಿ ಮರುಗಿದ್ದಾರೆ. ಭಾರತೀಯ ಜನಸಾಗರದ ತೋರಿಕೆಯ ಪ್ರಶಾಂತತೆಯ ಗರ್ಭದಿಂದ ವಾಸ್ತವವಾದ ಬಿರುಗಾಳಿಯೇಳಲಿದೆ. ಘೋರ ಅಪಾಯಗಳನ್ನು ಲಕ್ಷಿಸದೆ ಮುನ್ನುಗ್ಗುತ್ತಿರುವವರಿಗೆ ಎಚ್ಚರಿಕೆ ನೀಡಲು ಅಪಾಯ ಸೂಚಕ ಧ್ವಜವನ್ನು ಮಾತ್ರ ನಾವು ಹಾರಿಸಿದ್ದೇವೆ. ಆದರ್ಶ ಅಹಿಂಸಾ ಯುಗದ ಅಂತ್ಯ ವನ್ನಷ್ಟೇ ನಾವು ಸೂಚಿಸಿದ್ದೇವೆ. ಉದಯೋನ್ಮುಖ ಪೀಳಿಗೆಯು ಆ ಅಹಿಂಸಾಯುಗದ ನಿಷ್ಪ್ರಯೋಜಕತೆಯನ್ನು ಸಂದೇಹಾತೀತವಾಗಿ ಮನಗಂಡಿದೆ.

"ಕ್ರಾಂತಿಯು ಮಾನವ ಜನಾಂಗದ ಸ್ವತಃ ಸಿದ್ಧ ಹಕ್ಕು. ಸ್ವಾತಂತ್ರ್ಯವು ಸರ್ವರಿಗೂ ನಿರ್ಬಾಧಿತವಾಗಿ ದೊರೆತಿರುವ ಜನ್ಮದತ್ತ ಹಕ್ಕು. ದುಡಿಮೆಗಾರನೇ ಸಮಾಜದ ನಿಜವಾದ ಪೋಷಕ. ಪ್ರಜೆಗಳ ಪ್ರಭುತ್ವವೇ ಶ್ರಮಜೀವಿಗಳ ಅಂತಿಮ ಧ್ಯೇಯ. ಈ ಧ್ಯೇಯ ಗಳಿಗಾಗಿ ಮತ್ತು ಈ ಎಲ್ಲ ನಂಬಿಕೆಗಾಗಿ ನಾವು ಗುರಿಯಾಗಬಹುದಾದ ಎಲ್ಲ ಸಂಕಷ್ಟ ಗಳನ್ನೂ ಸ್ವಾಗತಿಸೋಣ. ಈ ಕ್ರಾಂತಿಯಜ್ಞಕ್ಕೆ ಧೂಪವಾಗಲು ನಮ್ಮ ತರುಣರನ್ನು ನಾವು ಕರೆತಂದಿದ್ದೇವೆ. ಏಕೆಂದರೆ, ಇಂಥ ಒಂದು ಮಹತ್ತಾದ ಧ್ಯೇಯಕ್ಕಾಗಿ ಮಾಡುವ ಯಾವ ತ್ಯಾಗವೂ ದೊಡ್ಡದಲ್ಲ. ನಮಗೀಗ ಸಮಾಧಾನವಾಗಿದೆ. ಕ್ರಾಂತಿಯ ಆಗಮನ ವನ್ನು ನಾವು ನಿರೀಕ್ಷಿಸುತ್ತೇವೆ. ಕ್ರಾಂತಿ ಚಿರಂಬಾಳ್ಗೆ."

ಅಂದು ವಾತಾವರಣದಲ್ಲಿ ಸಿಡಿಲೆರಗಿತ್ತು. ಸರ್ಕಾರಕ್ಕೆ ಭೀತಿ ತಲೆದೋರಿದ್ದಿತು. ಬೊಂಬಾಯಿಯಲ್ಲಿ ಸುಮಾರು ೧,೫೦,೦೦೦ ಗಿರಣಿ ಕೂಲಿಗಳು ಹರತಾಳವನ್ನಾರಂಭಿಸಿ ದರು ಮತ್ತು ಅದು ಆರು ತಿಂಗಳ ವರೆಗೆ ಮುಂದುವರಿಯಿತು. ಜಮ್‌ಷೆಡ್‌ಪುರದಲ್ಲಿ ಪೂರ್ವ ಭಾರತೀಯ ರೈಲ್ವೆಯಲ್ಲಿ, ಬಂಗಾಳದ ಸೆಣಬಿನ ಗಿರಣಿಗಳಲ್ಲಿ ಮತ್ತು ಕಲ್ಕತ್ತದ ಜಾಡಮಾಲಿಗಳು ಮತ್ತು ಇತರ ಪೌರಸಂಸ್ಥೆಯ ಕೆಲಸಗಾರರಲ್ಲಿ ಕಾರ್ಮಿಕ ಮುಷ್ಕರ ಗಳು ನಡೆದುವು. ಸರ್ಕಾರವು ದಮನ, ದಸ್ತಗಿರಿ ಮತ್ತು ಶೋಧನೆಗಳಲ್ಲಿ ತೊಡಗಿತು. ಅಧಿಕಾರಿಗಳು ಎದೆಗುಂದಿದರು ಮತ್ತು ೧೮೫೭ರ ದಂಗೆಯ ವಾರ್ಷಿಕೋತ್ಸವದಂದು ಕ್ರಾಂತಿ ಸಂಭವಿಸಬಹುದೆಂದು ಹೆದರಿದರು. ಮೇ ೯ರಂದು ಮೀರತ್ ನಗರವು ಒಂದು ಅಸಾಧರಣ ದೃಶ್ಯವನ್ನು ಪ್ರದರ್ಶಿಸಿತು. ಎಲ್ಲೆಲ್ಲೂ ಸೇನೆ ಮತ್ತು ಪೋಲೀಸರ ಕಾವಲಿದ್ದಿತು. ಗಾಢ ತನಿಖೆಯಿಲ್ಲದೆ ಯಾರೂ ಮೀರತ್ ನಗರವನ್ನು ಬಿಡುವಂತಿರಲಿಲ್ಲ ಅಥವಾ ಪ್ರವೇಶಿಸುವಂತಿರಲಿಲ್ಲ. ಪುಸ್ತಕಗಳು ಮತ್ತು ಪತ್ರಿಕೆಗಳು ಅಧಿಕಾರಿಗಳ ಕೋಪಕ್ಕೆ ಗುರಿ ಯಾದುವು. ಡಾ. ಸಂಡರ್‌ಲಾಂಡರ್ 'ಬಂಧನದ ಭಾರತ'ವನ್ನು ಪ್ರಕಟಿಸಿ ಸರ್ಕಾರದ ವಿರುದ್ಧ ಸಂಚು ನಡೆಸಿದರೆಂಬ ಆಪಾದನೆಯ ಮೇಲೆ ಮಾಡರ್ನ್ ರೆವ್ಯೂನ ಪರಿಣತ ಸಂಪಾದಕರಾದ ರಮಾನಂದ ಚಟರ್ಜಿಯವರನ್ನು ಬಂಧಿಸಲಾಯಿತು. "ಬ್ರಿಟಿಷ್ ಆಳ್ವಿಕೆಯ ಮೇಲಿನ ಡಾ. ಸಂಡರ್‌ಲಾಂಡರ ಆಪಾದನೆಗೆ ಈ ದಸ್ತಗಿರಿಯು ಒಂದು ಸಮರ್ಥ ಸಾಕ್ಷಿಯಾಗಿದೆ"ಯೆಂದು ಗಾಂಧೀಜಿ ನುಡಿದರು. ತಮ್ಮ ದೃಷ್ಟಿಯಲ್ಲಿ ಸಂಶಯಾಸ್ಪದ ರಾದವರನ್ನೆಲ್ಲ ಬಂಧಿಸಲು ಮತ್ತು ವಿಚಾರಣೆಯಿಲ್ಲದೆ ಜೈಲಿನಲ್ಲಿಡಲು ನೆರವಾಗುವ ಬಂಗಾಲದ ಶಾಸನವೆಂಬ ಒಂದು ಸುಗ್ರೀವಾಜ್ಞೆಯನ್ನು ಸರ್ಕಾರ ಜಾರಿಗೆ ತಂದಿತು.

ಕ್ಷುಲ್ಲಕ ಆಧಾರಗಳ ಮೇಲೆ ಸುಭಾಷ್‌ಚಂದ್ರ ಬೋಸ್‌ಮತ್ತು ಇತರ ಅನೇಕ ಕಾಂಗ್ರೆಸ್ಸಿಗರನ್ನು ಕಾನೂನು ಕ್ರಮಕ್ಕೆ ಗುರಿಪಡಿಸಲಾಯಿತು.

ಬಂಗಾಲ, ಯು.ಪಿ. ಮತ್ತು ಪಂಜಾಬುಗಳಲ್ಲಿ ಭಯೋತ್ಪಾದಕ ಚಟುವಟಿಕೆಗಳು ಮತ್ತೆ ತಲೆದೋರಿದವು. ಲಾಹೋರ್, ಸಹಾರನ್‌ಪುರ, ಆಗ್ರ ಮತ್ತು ಕಲ್ಕತ್ತಗಳಲ್ಲಿ ಬಾಂಬುಗಳ ತಯಾರಿಕೆ, ಬಿಹಾರ್ ಮತ್ತು ಒರಿಸ್ಸಗಳಲ್ಲಿ ರಾಜಕೀಯ ಉದ್ದೇಶಗಳಿಗಾಗಿ ಡಕಾಯಿತಿ ಮತ್ತು ಲಾಹೋರಿನಲ್ಲಿ ಮಿ. ಸಾಂಡರ್ಸ್‌ರವರ ಉದ್ದೇಶಕಾರೀ ಹನನ ಮೊದಲಾದ ವ್ಯಾಪಕ ಕ್ರಾಂತಿಕಾರಿ ಸಂಚಿನಲ್ಲಿ ತೊಡಗಿದ್ದರೆಂಬ ಆಪಾದನೆಯ ಮೇಲೆ ಭಗತ್‌ಸಿಂಗ್ ಮತ್ತು ಬಟುಕೇಶ್ವರದತ್ತ ಮೊದಲಾದ ಅನೇಕರನ್ನು ವಿಚಾರಣೆಗೆ ಗುರಿಪಡಿಸುವುದಕ್ಕೆ ಪಂಜಾಬಿನ ಪೋಲೀಸರು ಕಾರಣರಾಗಿದ್ದರು. ಈ ಮೊಕದ್ದಮೆಯು ಲಾಹೋರ್ ಒಳಸಂಚು ಮೊಕದ್ದಮೆಯೆಂಬುದಾಗಿ ಪ್ರಸಿದ್ಧವಾಯಿತು.

ಈ ಮೊಕದ್ದಮೆಯಲ್ಲಿ ಪೋಲೀಸರು ಕೋರ್ಟಿನಲ್ಲಿ ಕೆಲವು ಅಸಾಮಾನ್ಯ ದೃಶ್ಯಗಳನ್ನು ಪ್ರದರ್ಶಿಸಿದರು. ಕೋರ್ಟಿನಲ್ಲಿ ಮತ್ತು ಕಾರಾಗೃಹದಲ್ಲಿ ತಮ್ಮನ್ನು ನಡೆಸಿಕೊಂಡ ರೀತಿಗೆ ವಿರುದ್ಧವಾಗಿ ಪ್ರತಿಭಟನೆ ಸೂಚಿಸಲು ಬಂದಿಗಳು ಉಪವಾಸ ಮುಷ್ಕರ ಹೂಡಿದರು. ಉಪವಾಸ ಮುಷ್ಕರವು ವಾರದಿಂದ ವಾರಕ್ಕೆ ಮುಂದುವರಿದು ದೇಶದಲ್ಲಿ ಕೋಲಾಹಲವನ್ನೆಬ್ಬಿಸಿತು. ಆಪಾದಿತರ ದೈಹಿಕ ಶಕ್ತಿಹೀನತೆಯಿಂದಾಗಿ ಅವರನ್ನು ಕೋರ್ಟಿಗೆ ಕರೆದೊಯ್ಯಲು ಸಾಧ್ಯವಾಗುತ್ತಿರಲಿಲ್ಲ. ತತ್ಫಲವಾಗಿ ಕಾನೂನು ನಡೆವಳಿಗಳನ್ನು ಮತ್ತೆ ಮತ್ತೆ ಮುಂದೂಡಬೇಕಾಯಿತು. ಅದರಿಂದ ಆಪಾದಿತರ ಅಥವಾ ಅವರ ನ್ಯಾಯವಾದಿಯ ಗೈರುಹಾಜರಿಯಲ್ಲಿಯೂ ಕೋರ್ಟಿನ ನಡೆವಳಿಗಳು ಮುಂದುವರಿಯಲನುವಾಗುವಂತೆ ಸರ್ಕಾರವು ಉಪವಾಸ ಮುಷ್ಕರ ಮಸೂದೆಯನ್ನು ಜಾರಿಗೆ ತಂದಿತು. ಭಗತ್‌ಸಿಂಗ್, ಬಟುಕೇಶ್ವರದತ್ತ ಮತ್ತು ಜತಿನದಾಸರು ರಾಜಕೀಯ ಕೈದಿಗಳ ಬಗೆಗಿನ ವರ್ತನೆಯ ಕಾರಣಕ್ಕಾಗಿ ಸುಮಾರು ಎರಡು ತಿಂಗಳು ಉಪವಾಸ ಮುಷ್ಕರ ನಡೆಸಿದರು. ಸೆಪ್ಟೆಂಬರ್ ೧೩ರಂದು ತಮ್ಮ ಉಪವಾಸ ಮುಷ್ಕರದ ಅರುವತ್ತೊಂದನೆಯ ದಿನ ಜತಿನದಾಸರು ಸಾವನ್ನಪ್ಪಿದರು. ಈ ಘಟನೆಯಿಂದಾಗಿ ಕಲ್ಕತ್ತದಲ್ಲಿ ೫,೦೦,೦೦೦ ಜನರ ಅದ್ಭುತ ಪ್ರದರ್ಶನ ಜರುಗಿತು. ಅಂತೆಯೇ ಭಾರತಾದ್ಯಂತ ಬೃಹತ್ ಮೆರವಣಿಗೆಗಳು ನಡೆದುವು.

ದೇಶಾದ್ಯಂತ ಒಂದು ನವಚೈತನ್ಯ ಸಂಚಾರವಾಯಿತು. ಗಾಂಧೀಜಿ ಪ್ರಾಸಂಗಿಕವಾಗಿ ಮುಂಬರುವ ಹೋರಾಟದ ಭವಿಷ್ಯ ಸೂಚನೆಗಳನ್ನು ಹೊರಗೆಡಹಿದರು:

"ಸ್ವಾತಂತ್ರ್ಯಕ್ಕೆ ಮೀಸಲಾದ ವ್ಯಕ್ತಿಯು ಘೋರ ಅಪಾಯಗಳಿಗೆ ತಲೆಗೊಡಬೇಕಾಗುತ್ತದೆ ಮತ್ತು ಸರ್ವಸ್ವವನ್ನೂ ಪಣವೊಡ್ಡಬೇಕಾಗುತ್ತದೆ." ಅವರ ಕಾರ್ಯಕ್ರಮವಂತು ಅದೇ ಆಗಿತ್ತು. "ಹಳ್ಳಿಗರಿಗೆ ನಾನು ನೀಡುವ ಸಂದೇಶವೂ ಅದೇ ಬಗೆಯದಾಗಿದೆ. ಎಲ್ಲ ವಿದೇಶೀ ವಸ್ತ್ರವನ್ನು ಬಹಿಷ್ಕರಿಸಿ, ನಿಮ್ಮ ಹಳ್ಳಿಗಳಲ್ಲೆ ತಯಾರಾದ ಖಾದಿಯನ್ನು

ಧರಿಸಿ; ಅಸ್ಪೃಶ್ಯತೆಯನ್ನು ತೊಲಗಿಸಿ; ಹಿಂದೂಗಳು, ಮುಸಲ್ಮಾನರು, ಕ್ರಿಶ್ಚಿಯನ್ನರು ಮತ್ತು ಇತರರ ನಡುವಣ ಐಕ್ಯಮತ್ಯಕ್ಕೆ ಉತ್ತೇಜನ ನೀಡಿ; ಕುಡಿತವನ್ನು ವರ್ಜಿಸುವಂತೆ ಸಕಾರಣವಾಗಿ ಒಪ್ಪಿಸಿರಿ; ಒಳಜಗಳಗಳನ್ನು ದೂರಮಾಡಿ. ಆದರೆ ಅವು ತಲೆದೋರಿದಾಗ ಸ್ವಪ್ರೇರಿತ ಗ್ರಾಮಪಂಚಾಯಿತಿಗಳ ಮೂಲಕ ಸರಿಪಡಿಸಿಕೊಳ್ಳಿ."

ಏಪ್ರಿಲ್ ೬ರಂದು ಗಾಂಧೀಜಿಯ ಆಂಧ್ರಪ್ರವಾಸ ಆರಂಭವಾಯಿತು. "ಟೀಕೆ ಅಗತ್ಯವಿದ್ದಾಗ ಟೀಕೆ ಮಾಡುವಲ್ಲಿ ಅಂಜಿಕೆ ಮತ್ತು ಹಿಂಜರಿಕೆ ಅಡ್ಡ ಬರುತ್ತವೆ. ಪ್ರತಿಯೊಂದು ದೋಷವನ್ನೂ ಮುಚ್ಚಿಡುವ ಸಾಮಾನ್ಯ ರಾಷ್ಟ್ರೀಯ ದೌರ್ಬಲ್ಯ ನಿಮ್ಮಲ್ಲೂ ಇದೆ. ಶಿಸ್ತು ಮತ್ತು ಪರೀಕ್ಷೆಯ ಈ ವರ್ಷದಲ್ಲಿ ಇಂಥ ದೋಷಗಳ ವಿರುದ್ಧ ನಾನು ಎಚ್ಚರಿಕೆ ನೀಡದಿದ್ದಲ್ಲಿ ಮತ್ತು ನಿಮ್ಮ ಸಾಮರ್ಥ್ಯವಿದ್ದಷ್ಟೂ ಅವುಗಳನ್ನು ನಿವಾರಿಸಲು ಪ್ರೇರೇಪಿಸದಿದ್ದಲ್ಲಿ ನಿಮಗೆ ದ್ರೋಹವೆಸಗಿದಂತಾಗುತ್ತದೆ" ಎಂದು ಗಾಂಧೀಜಿ ಜನರಿಗೆ ನುಡಿದರು.

"ವ್ಯಕ್ತಿಗಳಾಗಿ ನಾವು ಶುದ್ಧರಾಗಿದ್ದೇವೆಯೇ ಹೊರತು ಸಮಾಜದ ಅಥವಾ ರಾಷ್ಟ್ರದ ಸದಸ್ಯರಾಗಿಯಲ್ಲ; ವ್ಯಕ್ತಿಗಳು, ಆ ಸಮಾಜದ ಅಥವಾ ರಾಷ್ಟ್ರದ ಕಿರುಭಾಗ ಮಾತ್ರ" ಎಂದು ಕೃಷ್ಣಾನದಿಯನ್ನು ದಾಟುತ್ತಿರುವ ಸಮಯದಲ್ಲಿ ತಾವು ನೋಡಿದ ದೃಶ್ಯವನ್ನು ಉಲ್ಲೇಖಿಸುತ್ತಾ ಗಾಂಧೀಜಿ ನುಡಿದರು. "ನದಿಯ ದಡದಿಂದ ಕೆಲವು ಗಜಗಳ ದೂರದಲ್ಲಿಯೇ ಕುಳಿತು ಮಲವಿಸರ್ಜನೆ ಮಾಡುತ್ತಿದ್ದ ನೂರಾರು ಜನ ಗಂಡಸರು ಮತ್ತು ಹೆಂಗಸರ ನಡುವೆ ನಮ್ಮ ಕಾರು ಹಾದುಹೋಯಿತು. ಜನರು ಸ್ನಾನಮಾಡಲು ಹಾಗೂ ಕುಡಿಯಲು ಬಳಸುತ್ತಿದ್ದ ನದಿ ಅದು. ಇಲ್ಲಿ ಸಭ್ಯತೆಯ ನಿಯಮೋಲ್ಲಂಘನೆ ಮತ್ತು ಆರೋಗ್ಯದ ಅತ್ಯಂತ ಮೂಲಭೂತ ನಿಯಮಗಳನ್ನು ಅಲಕ್ಷಿಸಿದ ಅಪರಾಧಗಳು ನಡೆದಿದ್ದುವು. ಇದರ ಜೊತೆಗೆ ಆರ್ಥಿಕವಾಗಿಯೂ ಅಮೂಲ್ಯ ಗೊಬ್ಬರ ನಿರುಪಯೋಗವಾಗುತ್ತಿತ್ತು. ಬದಲಿಗೆ ಒಂದು ಹೊಲದಲ್ಲಿ ಈ ವಿಸರ್ಜನೆ ನಡೆದು ಭೂಮಿಯ ಜೀವಂತ ಮೇಲ್ಮೈಯೊಳಗೆ ಮಲವನ್ನು ಹೂಳಿದ್ದಲ್ಲಿ ಮತ್ತು ಸಡಿಲಗೊಂಡ ಮಣ್ಣಿನೊಡನೆ ಚೆನ್ನಾಗಿ ಮಿಶ್ರಣಮಾಡಿದ್ದಲ್ಲಿ ಅದು ಅಮೂಲ್ಯ ಗೊಬ್ಬರವಾಗುತ್ತಿತ್ತು; ಅಷ್ಟೇ ಅಲ್ಲ, ಅದರಿಂದ ನಾಗರಿಕರಿಗೆ ಹೇಸಿಕೆಯೂ ಆರೋಗ್ಯಕ್ಕೆ ಅಪಾಯವೂ ತಪ್ಪುತ್ತಿದ್ದುವು. ರಾಷ್ಟ್ರೀಯ ನೈರ್ಮಲ್ಯ ರಕ್ಷಣೆ ಸ್ವರಾಜ್ಯದ ಕೆಲಸ. ಯಾವ ಕಾರಣದಿಂದಲಾಗಲಿ ಒಂದು ದಿನವೂ ಆ ಕೆಲಸವನ್ನು ಮುಂದೂಡಬಾರದೆಂದು ನಾನು ಸ್ಪಷ್ಟಪಡಿಸುತ್ತೇನೆ. ರಾಷ್ಟ್ರೀಯ ಜೀವನದ ಪ್ರತಿಯೊಂದು ಸಣ್ಣ ವಿವರಕ್ಕೂ ಗಮನ ನೀಡುವುದರಿಂದ ಮಾತ್ರ ಸ್ವರಾಜ್ಯವನ್ನು ಶಾಂತಿಯುತ ವಿಧಾನಗಳಿಂದ ಸಾಧಿಸುವುದು ಸಾಧ್ಯ. ಅಂಥ ಕೆಲಸ ದುಡಿಯುವವರಲ್ಲಿ ಸಂಸಕ್ತಿಯನ್ನು ಉತ್ತೇಜಿಸುತ್ತದೆ; ಅವರ ಮತ್ತು ಜನರ ಮಧ್ಯೆ ದೃಢವಾದ ಬಾಂಧವ್ಯವನ್ನೇರ್ಪಡಿಸುತ್ತದೆ. ಇಂಥ ಒಂದು ಬಾಂಧವ್ಯ ಈಗ ಅಸ್ತಿತ್ವದಲ್ಲಿರುವ ಸರ್ಕಾರೀ ವ್ಯವಸ್ಥೆಯನ್ನು ಅಂತಿಮವಾಗಿ ಹೊರಹಾಕಲು ಅವಶ್ಯಕ. ಈ ಸರ್ಕಾರೀ ವ್ಯವಸ್ಥೆಯು ರಾಷ್ಟ್ರದ ದೌರ್ಬಲ್ಯಗಳಿಂದಾಗಿ

ತನ್ನ ಅಸ್ತಿತ್ವವನ್ನುಳಿಸಿಕೊಂಡಿದೆ. ಸ್ವಪ್ರಯೋಜನಕ್ಕೆ ಬಳಸಿಕೊಳ್ಳಬಹುದಾದಂಥ ದೌರ್ಬಲ್ಯಗಳೇ ಇಲ್ಲವಾದಲ್ಲಿ ಅದು ತನಗೆ ತಾನೇ ಕೊನೆಗೊಳ್ಳುತ್ತದೆ."

ಹೊಗಳಿಕೆ ಮತ್ತು ಪ್ರಶಂಸೆಗಳನ್ನು ಗಾಂಧೀಜಿ ಪ್ರೋತ್ಸಾಹಿಸಲಿಲ್ಲ. ಅತಿಶಯೋಕ್ತಿಗಳಿಂದ ತುಂಬಿದ ಬಿನ್ನವತ್ತಳೆಗಳನ್ನು ರಚಿಸಕೂಡದೆಂದು ಅವರು ತಮ್ಮ ಮೆಚ್ಚುಗೆಗಾರರಿಗೆ ಎಚ್ಚರಿಕೆ ನೀಡಿದರು. "ಮತ್ತೊಬ್ಬರಲ್ಲಿ ಪ್ರಶಂಸಾಯೋಗ್ಯವಾದದ್ದನ್ನು ಕಂಡ ವ್ಯಕ್ತಿ ಅದನ್ನು ತನ್ನ ನಡತೆಯಲ್ಲಿ ಅಳವಡಿಸಿಕೊಳ್ಳುವುದೇ ಅತ್ಯುತ್ತಮ ರೀತಿಯ ಪ್ರಶಂಸೆಯಾಗುತ್ತದೆ. ನನಗೆ ಟೀಕೆಯಿಂದ ಲಾಭವಿದೆಯೇ ಹೊರತು ಹೊಗಳಿಕೆಯಿಂದಲ್ಲ." ಸಾರ್ವಜನಿಕ ಬಿನ್ನವತ್ತಳೆಗಳಲ್ಲಿದ್ದ ಉಪಯುಕ್ತ ಅಂಕಿಅಂಶಗಳ ವಿವರಗಳನ್ನು ಅವರು ಸ್ವಾಗತಿಸಿದರು: "ಪ್ರತಿಯೊಂದು ಹಳ್ಳಿಯಲ್ಲಿನ ಅಥವಾ ನಿರ್ದಿಷ್ಟ ಬಿನ್ನವತ್ತಳೆಯಲ್ಲಿ ಉಕ್ತಗೊಂಡ ಕ್ಷೇತ್ರದ ಗಂಡಸರು ಮತ್ತು ಹೆಂಗಸರ ಸಂಖ್ಯೆ; ಹಿಂದೂಗಳು, ಮುಸಲ್ಮಾನರು ಮತ್ತಿತರರ ಸಂಖ್ಯೆ; ಅಸ್ಪೃಶ್ಯರ ಸಂಖ್ಯೆ ಮತ್ತು ಅವರ ಸ್ಥಿತಿಗತಿ; ಸ್ತ್ರೀ ಮತ್ತು ಪುರುಷ ಕಾಂಗ್ರೆಸ್ ಸದಸ್ಯರ ಸಂಖ್ಯೆ; ಕುಡಿತದ ಚಟಚೊಕ್ಕಳಗಾದವರ ಸಂಖ್ಯೆ; ನೇಕಾರರ, ಸಂಖ್ಯೆ ಅವರ ಕೆಲಸದ ಅವಧಿ, ಆದಾಯ, ತಿಂಗಳೊಂದಕ್ಕೆ ತೆಗೆಯುವ ನೂಲಿನ ಪ್ರಮಾಣ ಮತ್ತು ಮೊತ್ತ; ಹತ್ತಿ ಬೆಳೆಯುವುದಿದ್ದರೆ ಅದರ ಪ್ರಮಾಣ; ನೇಕಾರರು ತಾವೇ ಸ್ವತಃ ಹೆಕ್ಕುವರೆ ಎಂಬ ಅಂಶ; ಕೈನೂಲನ್ನು ಮಾತ್ರ ನೇಯುವ ಮಗ್ಗಗಳ ಸಂಖ್ಯೆ ಹಾಗೂ ಗಿರಣಿನೂಲನ್ನು ನೇಯುವ ಮಗ್ಗಗಳ ಸಂಖ್ಯೆ; ರಾಷ್ಟ್ರೀಯ ಶಾಲೆಗಳ ಸಂಖ್ಯೆ ಮತ್ತು, ಹಾಜರಾತಿ ಮತ್ತು ಇಂಥ ಇತರ ವಿಚಾರಗಳು ರಾಷ್ಟ್ರೀಯ ದೃಷ್ಟಿಯಿಂದ ಉಪಯುಕ್ತವಾಗುತ್ತವೆ. ಈ ಮೇಲೆ ಸೂಚಿಸಿದ ಅಂಶಗಳ ಮೇಲೆ ನಿಖರವಾದ ತಿಳಿವಳಿಕೆಯನ್ನು ನೀಡುವ ಬಿನ್ನವತ್ತಳೆಗಳು ನಾನು ಮೆಚ್ಚುವ ಮತ್ತು ಸಂಗ್ರಹಿಸಬೇಕಾದ ದಾಖಲೆಗಳಾಗುತ್ತವೆ. ಅಂಥವು ನನ್ನ ಪಾಲಿಗೆ ಅಮೂಲ್ಯ ವಿಷಯಗಳ ಗಣಿಗಳಾಗುತ್ತವೆ."

ಕಾರ್ಖಾನೆಯ ಕೆಲಸಗಾರರು ಅವರಿಗೆ ಒಂದು ವಿಶಿಷ್ಟ ಬಗೆಯ ಅಭಿನಂದನೆಯನ್ನು ಸಲ್ಲಿಸಿದರು: "೧೯೧೬ರಲ್ಲಿ ಮೊದಲಬಾರಿಗೆ ಆವಿಯ ಶಕ್ತಿಯಿಂದ ಚಾಲಿತವಾಗುವ ವಿದೇಶಿಯಂತ್ರವ್ಯೂಹವು ಹತ್ತಿಯಿಂದ ಬೀಜವನ್ನು ಬೇರ್ಪಡಿಸುವುದನ್ನು ನೋಡಿದೆವು. ನಮ್ಮ ಕಾರ್ಖಾನೆಯು ಈಗ ಇಪ್ಪತ್ತು ಹಳ್ಳಿಗಳಲ್ಲಿ ಉತ್ಪನ್ನವಾಗುವ ಹತ್ತಿಯ ಬೀಜವನ್ನು ಬೇರ್ಪಡಿಸಬಲ್ಲುದು ಮತ್ತು ನಮ್ಮಲ್ಲಿ ಕೇವಲ ಕೆಲವರಿಗೆ ಮಾತ್ರ ಇಲ್ಲಿ ಕೆಲಸ ಮಾಡಲು ಅವಕಾಶವಿದೆ. ೧೯೨೨ರ ವೇಳೆಗೆ ನೀವು ಝುಂಝಾವಾತ ಜರ್ಜರಿತವೂ ವಿನಾಶೋನ್ಮುಖವೂ ಆದ ಉತ್ತರ ಭಾರತದಲ್ಲಿ ಚರಕವನ್ನು ಪುನರುಜ್ಜೀವನಗೊಳಿಸುತ್ತಿದ್ದಾಗ ಈ ಭಾಗದಲ್ಲಿ ದಿನಬಳಕೆಗೆ ಬಟ್ಟೆಗಳನ್ನು ಕೊಳ್ಳುತ್ತಿದ್ದ ಕೃಷಿಕರ ಹಾಗೂ ಕಾರ್ಮಿಕರ ಸಂಖ್ಯೆ ತೀರ ಕಡಮೆ. ಎಂಟು ವರ್ಷಗಳು ಉರುಳಿವೆ. ಗಿರಣಿ ನೂಲು ಪೇಟೆಯಲ್ಲಿ ಕಾಣಿಸಿಕೊಂಡಿದೆ. ಅದರ ಅಗ್ಗದ ಬೆಲೆ ಮತ್ತು ನಯ ನಮ್ಮನ್ನಾಕರ್ಷಿಸಿದೆ. ಸ್ವಯಂನೂಲುವಿಕೆಯು ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿದೆ. ಪ್ರಧಾನವಾಗಿ ಗಿರಣಿ ನೂಲಿನಿಂದ ಮತ್ತು ಸ್ಥಳೀಯ ನೇಕಾರರಿಂದ– ಅವರಲ್ಲಿ ಹೆಚ್ಚಿನವರು ದಲಿತ

ವರ್ಗದಿಂದ ಬಂದವರು–ನೇಯಲ್ಪಟ್ಟ ಬಟ್ಟೆಯನ್ನು ಕೊಳ್ಳುವ ಪರಿಸ್ಥಿತಿಗೆ ಬಹುಮಟ್ಟಿಗೆ ನಾವೀಗ ಬಂದಿದ್ದೇವೆ. ಇಂದಿಗೂ ಗಿರಣಿ ಬಟ್ಟೆ ಮತ್ತು ವಿದೇಶೀ ವಸ್ತ್ರಗಳನ್ನು ಬ್ರಾಹ್ಮಣ ಮತ್ತು ವೈಶ್ಯ ವರ್ಗದವರು ಮಾತ್ರ ಬಳಸಲು ಯೋಗ್ಯವಾದ ಭೋಗಸಾಮಗ್ರಿಗಳೆಂದು ನಾವು ಗಣಿಸಿದ್ದೇವೆ. ಖಾದಿ ಬಟ್ಟೆಯ ಗುಣದಲ್ಲಿ ನಮಗೆ ಇನ್ನೂ ನಂಬಿಕೆಯಿದೆ ಮತ್ತು ದುಬಾರಿಯಲ್ಲದ ಬೆಲೆಗೆ ಅದು ಸಿಗುವುದಾದರೆ ಅದನ್ನೇ ಬಳಸಲು ಇಷ್ಟಪಡುತ್ತೇವೆ. ಈ ಭಾಗಗಳಲ್ಲಿ ಒಂದು ಕಬ್ಬಿಣದ ಅಕ್ಷವುಳ್ಳ ಎಂಟು ಅರಗಳ ಚರಕವನ್ನು ನಾವು ಬಳಸುತ್ತೇವೆ. ಅದರ ಒಟ್ಟು ಬೆಲೆ ಕೇವಲ ೭ ರೂ. ಮಾತ್ರ. ಭಾಗ್ಯವಶಾತ್ ನೇಯ್ಗೆಯ ಕಾಲದಲ್ಲಿ ಈ ಭಾಗಗಳಿಗೆ ನೀವು ಭೇಟಿಯಿತ್ತಿದ್ದೀರಿ. ಕೆಲವು ಹಳ್ಳಿಗರು ಈಗಲೂ ತಮ್ಮ ಚರಕಗಳ ಜತೆ ಕೆಲಸ ಮಾಡುತ್ತಿರುವುದನ್ನು ನೀವು ನೋಡಬಹುದು. ಮುಷ್ಕರಗಳು, ಅಖಿಲ ಭಾರತ ನೇಕಾರರ ಸಂಘ, ಕಾಂಗ್ರೆಸ್, ಸ್ವರಾಜ್ಯ, ಹಿಂದೂಮುಸ್ಲಿಂ ಪ್ರಶ್ನೆ–ಇವೆಲ್ಲ ಸಾಮಾನ್ಯವಾಗಿ ಹಳ್ಳಿಗರಾದ ನಮಗೆ ಅರ್ಥವಾಗದ ಪದಗಳು ಮತ್ತು ನುಡಿಗಟ್ಟುಗಳು. ಇವುಗಳನ್ನು ನಮಗೆ ವಿವರಿಸಲು ಯಾರೂ ಪ್ರಯತ್ನಿಸುವುದಿಲ್ಲ. ಇಲ್ಲವೆ ನಾವು ಅವುಗಳನ್ನು ಅರ್ಥಮಾಡಿಕೊಳ್ಳುವಷ್ಟು ಅಕ್ಷರಸ್ಥರೂ ಅಲ್ಲ. ನಿಮ್ಮ ಸಾರ್ವಜನಿಕ ಕಾರ್ಯದಲ್ಲಿ ಉಪಯೋಗಕ್ಕೆ ಬರಬಹುದಾದ ನಮ್ಮ ಅಲ್ಪಕಾಣಿಕೆಯನ್ನೂ ಇಲ್ಲಿ ದೊರೆಯುವ ಹತ್ತಿಯ ಮಾದರಿಗಳನ್ನೂ ಸ್ವೀಕರಿಸಬೇಕೆಂದು ಕೇಳಿಕೊಳ್ಳುವುದಕ್ಕಾಗಿ ನಾವೆಲ್ಲ ಇಲ್ಲಿ ನೆರೆದಿದ್ದೇವೆ. ಇಲ್ಲಿ ದೊರೆಯುವ ಹತ್ತಿಯ ಗುಣವನ್ನು ನಿಮ್ಮ ಗಮನಕ್ಕೆ ತರುವ ಸಲುವಾಗಿ ಕೆಲವು ಉತ್ಪನ್ನಗಳನ್ನು ಸಹ ನಿಮಗೆ ನೀಡುತ್ತಿದ್ದೇವೆ. ಇಷ್ಟೇ ಅಲ್ಲದೆ, ಪ್ರಾಮಾಣಿಕವಾಗಿ ನಮ್ಮ ಅನ್ನವನ್ನು ಹುಟ್ಟಿಸಿಕೊಳ್ಳುವುದಕ್ಕೆ ಅನುದಿನವೂ ದುಡಿಯಲನುವಾಗುವ ದೃಢ ಆರೋಗ್ಯವನ್ನು ನಮಗೆ ಕರುಣಿಸುವಂತೆ ಸರ್ವಶಕ್ತನಲ್ಲಿ ಪ್ರಾರ್ಥಿಸಬೇಕೆಂದು ನಿಮ್ಮನ್ನು ಕೋರುತ್ತೇವೆ.”

ಅನೇಕ ಸಂದರ್ಭಗಳಲ್ಲಿ ಸಾರ್ವಜನಿಕ ಅಭಿನಂದನೆಗಳು ಗಾಂಧೀಜಿಯಿಂದ ಶುದ್ಧಿಕಾರಕ ಟೀಕೆಯನ್ನು ಹೊರಹೊಮ್ಮಿಸುತ್ತಿದ್ದುವು. ಖಾದಿ, ದಳ್ಳಾಳಿಗಳ ಮೂಲಕ ಮಾರಲ್ಪಡದೆ ಪ್ರತಿಯೊಬ್ಬನೂ ತಾನೇ ತಯಾರಿಸಿಕೊಳ್ಳುವಂತಿರಬೇಕೆಂದು ಒಂದು ಬಿನ್ನವತ್ತಳೆಯು ಸೂಚಿಸಿತು. “ಈ ನಿರ್ದಿಷ್ಟ ಸಲಹೆಯನ್ನು ನಾನು ಮೆಚ್ಚುತ್ತೇನೆ. ಆದರೆ ಅದು ಖಾದಿ ಉತ್ಪಾದನೆಯ ಪ್ರಾಯೋಗಿಕ ಅಂಶಗಳನ್ನು ಕುರಿತ ಅಜ್ಞಾನವನ್ನು ಸೂಚಿಸುತ್ತದಷ್ಟೆ. ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಅನ್ನವನ್ನು ತಾನೇ ಬೆಳೆದುಕೊಳ್ಳಲು ಹೇಗೆ ಸಾಧ್ಯವಿಲ್ಲವೊ ಅದೇ ಬಗೆಯಲ್ಲಿ ಪ್ರತಿಯೊಬ್ಬನೂ ತನಗೆ ಅಗತ್ಯವಾದ ಖಾದಿಯನ್ನು ತಾನೇ ಉತ್ಪಾದಿಸಿಕೊಳ್ಳುವುದು ಭೌತಿಕವಾಗಿ ಅಸಾಧ್ಯ. ‘ನಿಮ್ಮ ಸ್ವಂತ ಖಾದಿಯನ್ನು ಧರಿಸಿ, ಇಲ್ಲವೆ ವಿದೇಶಿ ವಸ್ತ್ರಸವನ್ನು ಬಳಸಿ’ ಎಂಬ ಹೇಳಿಕೆಯ ಹಿಂದಿರುವ ತತ್ವವನ್ನು ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಿಲ್ಲ. ದಿನಕ್ಕೆ ಎಂಟು ಗಂಟೆ ಚರಕ ಹಿಡಿದು ಕೆಲಸ ಮಾಡಬಲ್ಲ ಲಕ್ಷಾಂತರ ಜನ ಭಾರತದಲ್ಲಿದ್ದಾರೆ. ಆದರೆ ತಯಾರಿಸಿದ ಖಾದಿಯೆಲ್ಲವನ್ನೂ ತಾವೇ ಬಳಸುವುದು ಅವರಿಗೆ ಸಾಧ್ಯವಿಲ್ಲವೆಂಬುದನ್ನು ತಿಳಿಯ

ಬೇಕು. ತಮ್ಮ ಈ ಸೋದರ ಸೋದರಿಯರಿಂದ ತಯಾರಿಸಲ್ಪಟ್ಟ ಅಧಿಕ ಉತ್ಪನ್ನವನ್ನು ಕೊಳ್ಳುವುದು ಭಾರತದಲ್ಲಿರುವ ಎಲ್ಲ ಸಭ್ಯ ನಾಗರಿಕರ ಅವಶ್ಯ ಕರ್ತವ್ಯ. ಮನುಷ್ಯನನ್ನು ಮೃಗಪ್ರಪಂಚದಿಂದ ಬೇರ್ಪಡಿಸಿರುವುದು ಆತನ ಸಾಮಾಜಿಕ ಸ್ವಭಾವವೆಂಬುದನ್ನು ನಾವು ಮರೆಯದಿರೋಣ. ಸ್ವಾವಲಂಬಿಯಾಗುವುದು ಹೇಗೆ ಮನುಷ್ಯನ ಹಕ್ಕಾಗಿದೆಯೋ ಅಂತೆಯೆ ಪರಸ್ಪರಾವಲಂಬಿಯಾಗಿರಬೇಕಾದುದೂ ಅವನ ಕರ್ತವ್ಯ. ಒಬ್ಬ ದುರಂಹಕಾರಿ ಮಾತ್ರ ತಾನು ಸಂಪೂರ್ಣ ಸ್ವಾವಲಂಬಿಯೆಂದೂ ಸ್ವಯಂಪೂರ್ಣನೆಂದೂ ಹೇಳಿಕೊಳ್ಳಬಹುದು. ಆದರೆ ಖಾದಿ ಉತ್ಪಾದನೆಯ 'ಸ್ವಯಂಪೂರ್ಣ' ವ್ಯವಸ್ಥೆಯ ಚಳುವಳಿಯು ಭಾರತದ ಅನೇಕ ಸ್ಥಳಗಳಲ್ಲಿ ನಡೆಯುತ್ತಿದೆ ಮತ್ತು ಪೌರಸಭೆಗಳು, ತಾಲ್ಲೂಕು ಬೋರ್ಡುಗಳು ಮತ್ತು ಜಿಲ್ಲಾ ಬೋರ್ಡುಗಳು ತಮ್ಮ ಕರ್ತವ್ಯವನ್ನು ನಿರ್ವಹಿಸಿದಲ್ಲಿ ಮತ್ತು ನೆರವು ನೀಡಿದಲ್ಲಿ ನಮ್ಮ ಹಳ್ಳಿಗರನ್ನು ಪುನರುಜ್ಜೀವನಗೊಳಿಸಲು ಸಾಧ್ಯವಾಗುತ್ತದೆ. ಆಗ ಹಳ್ಳಿಗಳು ಒಟ್ಟಾಗಿ–ವೈಯಕ್ತಿಕವಾಗಿ ಹಳ್ಳಿಗರಲ್ಲ–ತಮ್ಮ ವಸ್ತ್ರದ ಅಗತ್ಯಗಳಿಗೆ ಸಂಬಂಧಿಸಿದಂತೆ ಸ್ವಯಂಪೂರ್ಣವಾಗುತ್ತವೆಂಬುದನ್ನು ಈ ಬಿನ್ನವತ್ತಳೆಯ ರಚಕರಿಗೆ ವಿನಮ್ರವಾಗಿ ಸೂಚಿಸಬಯಸುತ್ತೇನೆ. ಆ ಕಾರಣಕ್ಕಾಗಿಯೆ ಭಾರತದಲ್ಲಿ ಎಂದು ಖಾದಿಯು ಚಲಾವಣೆಗೆ ಬರುತ್ತದೋ ಆಗ ಅದು ವಿದೇಶೀ ವಸ್ತ್ರದ ಅಥವಾ ಭಾರ ಭಾರತೀಯ ಗಿರಣಿ ಬಟ್ಟೆಯ ಸ್ಪರ್ಧೆಗೆ ಹೆದರಬೇಕಾಗಿರುವುದಿಲ್ಲವೆಂದು ಲೆಕ್ಕವಿಲ್ಲದಷ್ಟು ಬಾರಿ ನಾನು ಹೇಳಿದ್ದೇನೆ" ಎಂದು ಅವರು ನುಡಿದರು.

ದಕ್ಷಿಣ ಆಫ್ರಿಕದಲ್ಲಿನ ಸ್ಮರಣಾರ್ಹ ಚಳುವಳಿಗಳ ಕಾಲದಿಂದಲೂ ಗಾಂಧೀಜಿ ಆಂಧ್ರದ ಜನರನ್ನು ಅರಿತಿದ್ದರು. ಆದ್ದರಿಂದ ಆ ಜನರೊಡನೆ ಅವರು ಅತ್ಯಂತ ಸಹಜವಾಗಿ ಮುಚ್ಚುಮರೆಯಿಲ್ಲದೆ ಮಾತಾಡಬಲ್ಲವರಾಗಿದ್ದರು. "ನಿಮ್ಮ ಧೈರ್ಯ ಪ್ರಶ್ನಾತೀತವಾದುದು. ಆದರೆ ದುರದೃಷ್ಟವಶಾತ್ ಯಾರು ರಾಷ್ಟ್ರಕ್ಕೆ ತಕ್ಕಮಟ್ಟಿನ ಸೇವೆಯನ್ನು ಸಲ್ಲಿಸುವ ಸ್ಥಿತಿಯಲ್ಲಿದ್ದಾರೊ ಅವರು ಸೇವೆ ಮಾಡುವುದಕ್ಕಿಂತ ಹೆಚ್ಚಾಗಿ ನಾಯಕತ್ವ ವಹಿಸುವುದಕ್ಕೆ ಆತುರರಾಗಿದ್ದಾರೆ" ಎಂದು ಗಾಂಧೀಜಿ ನುಡಿದರು. ಆ ಜನರ ಅದ್ಭುತ ಸ್ವಾರ್ಥತ್ಯಾಗ ಮತ್ತು ಔದಾರ್ಯಗಳು ಅವರಿಗೆ ಹೊಸದಾಗಿರಲಿಲ್ಲ. ದುಂದುವೆಚ್ಚದ ವಿರುದ್ಧ ಅವರು ಸಾರ್ವಜನಿಕ ಕಾರ್ಯಕರ್ತರಿಗೆ ಎಚ್ಚರಿಕೆ ನೀಡಿದರು: "ಕೆಲಸಗಾರರು ಹಣವನ್ನು ಸ್ವಂತಕ್ಕಾಗಿ ಬಳಸಬಾರದೆಂಬುದಷ್ಟೆ ಅಲ್ಲ, ಅದನ್ನು ಅಲಕ್ಷ್ಯದಿಂದ ಉದ್ದೇಶರಹಿತ ಕೆಲಸಗಳಿಗೆ ಬಳಸುವುದೂ ತಪ್ಪಾಗುತ್ತದೆ." ವಿಶೇಷವಾಗಿ ಮಹಿಳೆಯರ ಕಾಣಿಕೆಯು ಅವರನ್ನು ಹೆಚ್ಚು ಸಂತೋಷಗೊಳಿಸಿತು. ಒಂದು ಸಭೆಯಲ್ಲಿ ಬಡ ಮುದುಕಿಯೊಬ್ಬಳು ಗಾಂಧೀಜಿಯ ಕೈಗೆ ನಾಲ್ಕಾಣೆಯನ್ನು ಹಾಕಿದಳು. ಮರುಕ್ಷಣವೆ ಖಾದಿಧಾರಿಣಿ ಸ್ತ್ರೀಯೊಬ್ಬಳು ಅವರಿಗೆ ಐದು ರೂಪಾಯಿ ಮತ್ತು ಒಂದು ಕಾಲಾಣೆಯನ್ನು ನೀಡಿದಳು. "ನಿನ್ನ ಮತ್ತು ಈ ವೃದ್ಧ ಸೋದರಿಯರ ಕೊಡುಗೆಗಳಲ್ಲಿ ಯಾವುದು ದೊಡ್ಡದು?" ಎಂದು ಆಕೆಯನ್ನು ಗಾಂಧೀಜಿ ಪ್ರಶ್ನಿಸಿದರು. "ಇಬ್ಬರದೂ ಸಮ" ಎಂದು ಆಕೆ ಉತ್ತರವಿತ್ತಳು. ಗಾಂಧೀಜಿ ದಿಗ್ಭ್ರಮೆಗೊಂಡರು. ಮುಂದುವರಿದು ಆಕೆ ಹೇಳಿದಳು: "ಅನೇಕ

ವರ್ಷಗಳಿಂದ ರಾಷ್ಟ್ರೀಯ ಚಳುವಳಿಯಲ್ಲಿ ನನಗೆ ಆಸಕ್ತಿಯಿದೆ. ನನ್ನ ಶಕ್ತಿಗೆ ಸಾಧ್ಯ ವಿದ್ದಷ್ಟು ಕಾಣಿಕೆಯನ್ನು ಯಾವಾಗಲೂ ನೀಡುತ್ತ ಬಂದಿದ್ದೇನೆ. ಖಾದಿಯಲ್ಲಿ ನನಗೆ ನಂಬಿಕೆಯಿದೆ ಮತ್ತು ಸದಾ ಅದನ್ನೇ ಧರಿಸುತ್ತೇನೆ."

ಗಾಂಧೀಜಿ ಬೆಜವಾಡದಿಂದ ಎಲ್ಲೂರಿಗೆ ಹೋಗುತ್ತಿದ್ದಾಗ, ಸ್ವಲ್ಪ ದಿನಗಳ ಹಿಂದೆ ಗಂಡನನ್ನು ಕಳೆದುಕೊಂಡ ಇಪ್ಪತ್ತರ ವಯಸ್ಸಿನ ಸತ್ಯವತಿಯೆಂಬ ಒಬ್ಬ ತರುಣಿ ೧,೪೦೦ರೂ.ಗಳು ಬೆಲೆಬಾಳುವ ತನ್ನ ಎಲ್ಲ ಒಡವೆಗಳನ್ನೂ ಗಾಂಧೀಜಿಗೆ ಕೊಡಬೇಕೆಂದು ಬಯಸಿರುವುದಾಗಿಯೂ, ಅದಕ್ಕಾಗಿ ಪೆದ್ದಪಡುವಿನಿಂದ ಕೆಲವು ಮೈಲಿಗಳ ದೂರ ದಲ್ಲಿರುವ ಒಂದು ಹಳ್ಳಿಯಲ್ಲಿನ ತನ್ನ ಮನೆಗೆ ಅವರು ಬರಬೇಕೆಂದು ಇಚ್ಛಿಸುತ್ತಿದ್ದು ದಾಗಿಯೂ ಅವರಿಗೆ ತಿಳಿದುಬಂದಿತು. ಆದ್ದರಿಂದ ಅವರು ಅಲ್ಲಿಗೆ ಹೋದರು. ಕೇವಲ ವಿಧವೆಯಾದ ಕಾರಣದಿಂದಲೆ ಒಡವೆಗಳನ್ನು ನಿರಾಕರಿಸಬೇಕಾದ ಅಗತ್ಯವಿಲ್ಲವೆಂದು ಗಾಂಧೀಜಿ ಆ ತರುಣಿಗೆ ತಿಳಿಸಿದರು. ಆದರೆ ಅವಳ ನಿಶ್ಚಯ ದೃಢವಾಗಿತ್ತು ಮತ್ತು ತನ್ನೆಲ್ಲ ಆಭರಣಗಳನ್ನು ಆಕೆ ಖಾದಿಯ ಕೆಲಸಕ್ಕಾಗಿ ಸಮರ್ಪಿಸಿದಳು. ಪೆದ್ದಪಡುವಿನಲ್ಲಿನ ಅವರ ಭಾಷಣವು ಸತ್ಯವತಿಯನ್ನು ಕುರಿತದ್ದಾಗಿತ್ತು; ಘರ್ದಾವನ್ನು ಕಿತ್ತೊಗೆದು, ಪ್ರತಿಯೊಬ್ಬ ವಿಧವೆಯೂ ಒಂದು ವೇಳೆ ಇಚ್ಛೆಪಟ್ಟಲ್ಲಿ ಆಕೆಗೆ ಪುನರ್ವಿವಾಹ ಮಾಡಲು ಅವಳ ತಂದೆ ತಾಯಿಯರಿಗೆ ನೆರವು ನೀಡುವುದು ಪ್ರತಿಯೊಬ್ಬರ ಕರ್ತವ್ಯವೆಂದು ಅವರು ನೆರೆದಿದ್ದ ಸಭಿಕರಿಗೆ ತಿಳಿಸಿದರು. "ಸತ್ಯವತಿಯಂಥದೇ ಕಥೆ ನೂರಾರು ಹಿಂದೂ ಗಳ ಮನೆಯಲ್ಲಿ ನಡೆಯುತ್ತಿದೆ. ಹಿಂದೂ ಸಮಾಜವು ವಿಧವೆಯನ್ನು ಅಕ್ಷಮ್ಯ ದಾಸ್ಯ ದಲ್ಲಿಟ್ಟಿರುವ ತನಕ ಪುನರ್ವಿವಾಹವಾಗಲು ಕುದಿಯುತ್ತಿರುವ, ಆದರೆ ಕ್ರೂರ ಸಂಪ್ರ ದಾಯದ ಭಯದಿಂದ ಮುನ್ನುಗ್ಗಲು ಧೈರ್ಯವಿಲ್ಲದ ಪ್ರತಿಯೊಬ್ಬ ವಿಧವೆಯ ಶಾಪ ಆ ಸಮಾಜಕ್ಕೆ ತಟ್ಟದಿರದು."

ತನ್ನ ವಿಸ್ತಾರದ ಹಾಗೂ ಒಳನಾಡಿನ ಸಂಚಾರದ ದೃಷ್ಟಿಯಿಂದ ಆಂಧ್ರ ಪ್ರವಾಸವು ಗಮನಾರ್ಹವಾದುದಾಗಿದ್ದಿತು. ಪ್ರಯಾಣ ಮಾಡಬೇಕಾದ ದೂರ ದೀರ್ಘವಾಗಿತ್ತು. ಕೊನೆಯ ದಿನದ ಪ್ರಯಾಣ ನೂರು ಮೈಲಿಗಳಿಗಿಂತ ಜಾಸ್ತಿಯಾಗಿತ್ತು. ಕಾರುಗಳು ಕೆಟ್ಟ ರಸ್ತೆಗಳ ಮೂಲಕ ಕಷ್ಟಪಟ್ಟು ಮುಂಬರಿಯಬೇಕಾಗುತ್ತಿತ್ತು. ಇದರಿಂದ ಕಾರ್ಯಕ್ರಮ ಗಳೆಲ್ಲ ಅಸ್ತವ್ಯಸ್ತವಾಗುತ್ತಿದ್ದುವು. ಕರಮುಚೆಡುವನ್ನು ಸುಮಾರು ನಾಲ್ಕು ಗಂಟೆ ತಡವಾಗಿ, ಅಂದರೆ ೧೧–೩೦ ಗಂಟೆಗೆ ತಲುಪಿದರು. ಉತ್ಸುಕರಾದ ಸುಮಾರು ಐದು ಸಾವಿರ ಮಂದಿ ಸಭಿಕರು ಆರು ಗಂಟೆಗಳಿಂದ ಕಾಯುತ್ತಿದ್ದರು. ಸಭೆಯು ನಡುರಾತ್ರಿ ಯಲ್ಲಿ ಜರುಗಿತು.

ಏಪ್ರಿಲ್ ೨೧ರಂದು ಒಂದು ಕಿರೀಟಪ್ರಾಯ ಘಟನೆ ಸಂಭವಿಸಿತು. ಎಪ್ಪತ್ತಾರು ಮೈಲಿಗಳ ಆಯಾಸಕರ ಕಾರು ಪ್ರಯಾಣವನಂತರ, ನಡುಹಗಲಿನ ಹೊತ್ತಿಗೆ ಗಾಂಧೀಜಿ ರೆಂಟಚಿಂತ್ಲವನ್ನು ತಲುಪಿದರು. ಒಂದು ಕಾರ್ಖಾನೆಯ ಗೋಡೆಗೆದುರಾಗಿ, ಉರಿ ಬಿಸಿಲಿನ ಸುಡುಮೈದಾನದ ಮಧ್ಯೆ ಸೋಗೆ ಗುಡಿಸಲೊಂದನ್ನು ಅವರಿಗಾಗಿ ವ್ಯವಸ್ಥೆ

ಮಾಡಲಾಗಿದ್ದಿತು. ಕಾಲು ಗಂಟೆಯೊಳಗಾಗಿ ಪಲನಾಡಿನ ಎಲ್ಲ ಭಾಗಗಳಿಂದ ಬಂದ ಹತ್ತು ಸಾವಿರ ಮಂದಿ ರೈತರು ಆ ಗುಡಿಸಲನ್ನು ಮುತ್ತಿದರು. ಸೋಗೆ ತೆರೆಗಳೆಲ್ಲ ಇಣುಕುಗಂಡಿಗಳ ಮತ್ತು ಸೀಳುಗಳ ತೇಪೆಯ ಸ್ಥಿತಿಗಿಳಿದುವು. ಆ ಕಂಡಿಗಳ ಮೂಲಕ ಸಾವಿರಾರು ಕಾತರತೆಯ ಕಣ್ಣುಗಳು ಇಣುಕಿ ನೋಡುತ್ತಿದ್ದುವು. ಹೀಗಾಗಿ ಗಾಂಧೀಜಿ ಸಾರ್ವಜನಿಕ ಸಭೆಯು ಜರುಗಲಿದ್ದ ಚಪ್ಪರದ ಕೆಳಗಿನ ವೇದಿಕೆಗೆ ತಮ್ಮ ಸ್ಥಳವನ್ನು ಬದಲಾಯಿಸಿದರು. ತಮ್ಮ ಕಾಗದಪತ್ರಗಳ ಕಟ್ಟುಗಳನ್ನು ತೆಗೆದುಕೊಂಡು ಕಾಗದಗಳನ್ನು ಬರೆಯಲಾರಂಭಿಸಿದರು. ಸುಡುಬಿಸಿಲನ್ನೂ ಲೆಕ್ಕಿಸದೆ ಆ ಬೃಹತ್ ಜನಸಂದಣಿ ಅವರನ್ನು ನಿಟ್ಟಿಸುತ್ತಾ ಕುಳಿತಿತ್ತು. ತಮ್ಮ ಕೆಲಸವನ್ನು ಮುಗಿಸಿದ ಕೂಡಲೆ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು; ಖಾದಿ ಕೆಲಸಕ್ಕಾಗಿ ಚೂರುಪಾರು ಕಾಣಿಕೆಯನ್ನು ಸಂಗ್ರಹಿಸಿದರು.

ಆಂಧ್ರ ಪ್ರವಾಸವು ಬಹಳ ಪ್ರಯಾಸಕರವಾದುದಾಗಿತ್ತು. ಕಾಲ ಮತ್ತು ಶಕ್ತಿಗಳನ್ನು ಉಳಿಸುವುದಕ್ಕಾಗಿ ಗಾಂಧೀಜಿಯನ್ನು ಹೊತ್ತ ಕಾರೇ ಚಲಿಸುವ ವೇದಿಕೆಯಾಗಿ ಮಾರ್ಪಟ್ಟಿತು. "ಕಾರಿನಿಂದ ಇಳಿದು, ಮೆಚ್ಚುಗೆ ವ್ಯಕ್ತಡಿಸುತ್ತ ಘೋಷಣೆ ಕೂಗುತ್ತಿರುವ ಗುಂಪಿನ ಮೂಲಕ ನುಗ್ಗಿಕೊಂಡು ಹೋಗಿ, ಕೆಲವು ವೇಳೆ ದಾರಿ ಬಿಡುವಂತೆ ಬೆದರಿಸಿ, ಹಲವೊಮ್ಮೆ ಆ ಬೆದರಿಕೆಯ ಉದ್ದೇಶವು ಫಲಿಸಿ, ಅನಂತರ ವೇದಿಕೆಯನ್ನೇರಿ, ಮತ್ತೆ ಇಳಿದು, ಅದೇ ನೂಕುನುಗ್ಗಲಿನ ನೆರವಿಯ ಮೂಲಕ ಹಾಯ್ದು ಮತ್ತೆ ಕಷ್ಟಪಟ್ಟು ಕೊನೆಗೆ ಪೀಠದಲ್ಲಿ ಕುಸಿಯಬೇಕಾಗುತ್ತದೆ. ಹದಿನೈದು ನಿಮಿಷಗಳ ನಂತರ ಮತ್ತೆ ಇದೇ ಕ್ರಮದಲ್ಲಿ ಮುಂದುವರಿಯಬೇಕಾಗುತ್ತದೆ. ಇಂಥ ಪ್ರಯಾಸವನ್ನು ಈಗಿನ ನನ್ನ ಶರೀರ ತಡೆದುಕೊಳ್ಳುವುದು ಕಷ್ಟವಾಗುತ್ತದೆ. ಇದರಿಂದಾಗಿ ಕಾರನ್ನೆ ಸಭೆಯ ಮಧ್ಯಭಾಗಕ್ಕೆ ತಂದು ನಿಲ್ಲಿಸಬೇಕೆಂದೂ ಮತ್ತು ಅದೇ ವೇದಿಕೆಯಾಗಬೇಕೆಂದೂ ನಾನು ನನ್ನ ಕಾರ್ಯನಿರ್ವಾಹಕರಿಗೆ ಸೂಚಿಸಿದೆ." ಈ ವ್ಯವಸ್ಥೆಯು ಉಪಯುಕ್ತವಾಗಿ ಕಂಡುಬಂದಿತು. ಅವರು ಸಾಮಾನ್ಯವಾಗಿ ಕಾರಿನ ಹಿಂಬದಿಯ ಅಂಚಿನ ಮೇಲೆ ಕುಳಿತು ಸಭೆಗಳನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದರು. ಈ ಪ್ರವಾಸ ಕಾಲದಲ್ಲಿ ಅವರು ೩೧೯ ಹಳ್ಳಿಗಳಲ್ಲಿ ಸಂಚರಿಸಿದರು. ಮತ್ತು ಸಾವಿರಾರು ಹಳ್ಳಿಗರನ್ನುದ್ದೇಶಿಸಿ ಭಾಷಣ ಮಾಡಿದರು.

ಸಾಮಾನ್ಯವಾಗಿ ಗಾಂಧೀಜಿ ತಾವೇ ಕ್ಷೌರಮಾಡಿಕೊಳ್ಳುತ್ತಿದ್ದರು. ಆದರೆ ಈ ಬಾರಿ ಅವರು ನಿರಪಾಯ ಬ್ಲೇಡಿನ ಬಳಕೆಯನ್ನು ತ್ಯಜಿಸಿ ಮಗನ್‌ಲಾಲ್ ಗಾಂಧಿ ಬಿಟ್ಟು ಹೋಗಿದ್ದ ಒಂದು ಹಳೆಯ ಬಿಹಾರಿ ಕ್ಷುರವನ್ನು ಮತ್ತೆ ಉಪಯೋಗಿಸಲು ತೊಡಗಿದರು. ಆದರೆ ಕಲ್ಲು ಮತ್ತು ಮಸೆದೊಗಲುಗಳನ್ನು ಬಳಸುವ ಕಲೆ ಗಾಂಧೀಜಿಗೆ ಇನ್ನೂ ಕರಗತವಾಗಿರಲಿಲ್ಲ. ಆದ್ದರಿಂದ ಪ್ರವಾಸದ ಪ್ರಾರಂಭಿಕ ಹಂತದಲ್ಲಿ ಅವರು ಒಬ್ಬ ಖಾದಿಧಾರಿ ಕ್ಷೌರಿಕನಿಗಾಗಿ ಕರೆಕಳುಹಿದರು. ಖಾದಿಧಾರಿ ಕ್ಷೌರಿಕನೇ ಬೇಕೆನ್ನುತ್ತಿದ್ದುದರಿಂದ ಖಾದಿಗೆ ಒಳ್ಳೆಯ ಪ್ರಚಾರವಾಗಿತ್ತು. "ದರಿದ್ರ ನಾರಾಯಣನ ಸಂದೇಶವನ್ನು ಆ ವರ್ಗಕ್ಕೆ ಬೋಧಿಸುವ ಒಂದು ಅವಕಾಶವನ್ನು ಅದು ನನಗೆ ದೊರಕಿಸಿಕೊಟ್ಟಿತು.

ಆ ವರ್ಗದವರಿಗಿಂತ ಉತ್ತಮವಾದ ಪ್ರಚಾರ ನಿಯೋಗಿಗಳನ್ನು ಯಾರೂ ಊಹಿಸಲಾರರು." ರಚನಾತ್ಮಕ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಾ, ಅನುದಿನದ ಸಂಪರ್ಕವನ್ನು ಹೊಂದಿರುವ ಕ್ಷೌರಿಕರು ಮತ್ತು ದೋಬಿಗಳಬಳಿಗೆ ಸ್ವದೇಶೀ ಸಂದೇಶವನ್ನೊಯ್ಯುವಂತೆ ಗಾಂಧೀಜಿ ಅವರಿಗೆ ಕರೆನೀಡಿದರು. "ರಾಷ್ಟ್ರದ ಮುನ್ನಡೆಗೆ ಯಾರ ಸೇವೆಯು ಉನ್ನತ ವ್ಯಕ್ತಿಗಳ ಸೇವೆಯಷ್ಟೆ ಅಗತ್ಯವಾಗಿರುವುದೋ ಅಂಥವರೊಡನೆ ನಾವು ಸೋದರ ಪ್ರಜೆಗಳಂತೆ ವ್ಯವಹರಿಸೋಣ."

ಮೇ ೨೧ರಂದು ಗಾಂಧೀಜಿಯ ಆರುವಾರಗಳ ಪ್ರಯಾಸಕರ ಹಾಗೂ ಯಾವುದೊಂದೇ ಪ್ರಾಂತ್ಯದಲ್ಲಿ ಅದುವರೆಗೆ ಕೈಗೊಳ್ಳದಿದ್ದಷ್ಟು ಸುದೀರ್ಘವೂ ಸವಿವರವೂ ಆದ ಪ್ರವಾಸವು ಕೊನೆಗೊಂಡಿತು. ಸಂಗ್ರಹವಾದ ಚಂದಾ ಕೂಡ ಬೇರೆ ಯಾವುದೇ ಪ್ರಾಂತ್ಯದಲ್ಲಿ ಅದುವರೆಗೆ ಸಂಗ್ರಹವಾದುದಕ್ಕಿಂತ ಅತ್ಯಧಿಕವಾಗಿದ್ದಿತು. ಅದರ ಮೊತ್ತ ಸುಮಾರು ೨,೭೦,೦೦೦ರೂ.ಗಳು. ರಶೀತಿಗಳನ್ನು ಹಾಜರ್ಪಡಿಸಿ ತಮ್ಮಿಂದ ಒಪ್ಪಿಗೆ ಪಡೆಯದೆ ಸಂಗ್ರಹಿಸಲ್ಪಟ್ಟ ನಿಧಿಯಿಂದ ಹಣವನ್ನು ಬಳಸಬಾರದೆಂದು ಅವರು ಒತ್ತಿ ಹೇಳಿದರು. ಆ ಹಿಂದೆ ಅವರು ಖರ್ಚಿನ ಬಗೆಗೆ ಸಡಿಲತೆಯನ್ನೂ ಪದಾರ್ಥಗಳ ಕೊಳ್ಳಾಣಿಕೆಯಲ್ಲಿ ವಿಪರೀತ ದುಂದನ್ನೂ ಗಮನಿಸಿದ್ದರು. ಅಲ್ಲದೆ ತಮ್ಮ ಗುಂಪಿನ ಪ್ರಯಾಣದ ಸಕಲ ವೆಚ್ಚವನ್ನು ತಾವೇ ವಹಿಸಿಕೊಳ್ಳುವುದಾಗಿಯೂ, ಅದರಿಂದ ನಿಧಿಗೆ ಹೊರೆಯಾಗಿರುವುದು ತಪ್ಪುವುದೆಂದೂ ಅವರು ದೃಢವಾಗಿ ಹೇಳಿದರು. ಸ್ಥಳೀಯ ವ್ಯವಸ್ಥಾಪಕರು ತಮ್ಮ ಗುಂಪಿನ ಊಟದ ಖರ್ಚನ್ನು ವಹಿಸಿಕೊಳ್ಳದಿದ್ದಲ್ಲಿ ತಾವೇ ಆ ಖರ್ಚನ್ನು ಕೊಡುವುದಾಗಿ ಸ್ಪಷ್ಟಪಡಿಸಿದರು. ನಿಧಿಯ ಸುಮಾರು ಶೇ. ೫ ಭಾಗದ ಅಂಗೀಕೃತ ಖರ್ಚಿನ ಲೆಕ್ಕದಲ್ಲಿ ಕಾರು ಬಾಡಿಗೆ, ಪೆಟ್ರೋಲು ಮತ್ತು ಅಂಥ ಇತರ ಅಗತ್ಯ ಬಾಬತ್ತುಗಳು ಮಾತ್ರ ಸೇರಿದ್ದುವು.

ಪ್ರವಾಸದ ಜೊತೆಜೊತೆಯಲ್ಲಿಯೇ ಅವರು ಮಿತಾಹಾರದ ಪ್ರಯೋಗವನ್ನಾರಂಭಿಸಿದರು. ರಾಜಮಹೇಂದ್ರಿಯಲ್ಲಿ ಪ್ರಕೃತಿ ಚಿಕಿತ್ಸಾ ಸಂಸ್ಥೆಯ ಸ್ಥಾಪಕರಾದ ಸುಂದರಂ ಗೋಪಾಲರಾವ್ ಎಂಬ ಸಮವಿಚಿತ್ರ ವ್ಯಕ್ತಿಯು ಅವರಿಗೆ ಸಿಕ್ಕಿದರು. ರೋಗದಿಂದ ದೂರವಾಗಿರಬೇಕಾದರೆ ಆಹಾರದ ತಯಾರಿಕೆಯಲ್ಲಿ ಬೆಂಕಿಯ ಉಪಯೋಗವನ್ನು ಪರಿಹರಿಸುವುದು ಅಗತ್ಯವೆಂಬುದು ಅವರ ನಂಬಿಕೆಯಾಗಿತ್ತು. ಗಾಂಧೀಜಿ ದಿನನಿತ್ಯವೂ ಎಂಟು ತೊಲ ಮೊಳೆಬಂದ ಗೋಧಿ, ಎಂಟು ತೊಲ ಅರೆದ ಸಿಹಿ ಬಾದಾಮಿ, ಎಂಟು ತೊಲ ಕತ್ತರಿಸಿದ ಅಥವಾ ಜಜ್ಜಿದ ಸೊಪ್ಪು, ಆರು ಹುಳಿ ನಿಂಬೆ ಹಣ್ಣುಗಳು ಮತ್ತು ಎರಡು ಔನ್ಸು ಜೇನುತುಪ್ಪ ಇವಿಷ್ಟನ್ನು ಸೇವಿಸಲು ತೊಡಗಿದರು. ವಾರಕ್ಕೆ ಎರಡು ಅಥವ ಮೂರು ಬಾರಿ ಗೋಧಿಯ ಬದಲಿಗೆ ಅಷ್ಟೇ ಪ್ರಮಾಣದ ಮೊಳೆ ಬಂದ ಕಾಳನ್ನು ಬಳಸುತ್ತಿದ್ದರು. ಆಹಾರವು ಎರಡು ಭಾಗಗಳಾಗಿ ವಿಂಗಡಣೆಗೊಂಡಿತ್ತು. ಬೆಳಗ್ಗೆ ಹನ್ನೊಂದು ಗಂಟೆಗೆ ಅವರು ಮೊದಲ ಊಟವನ್ನು ಪೂರೈಸುತ್ತಿದ್ದರು. ಎರಡನೆಯ ಊಟ ಸಂಜೆ ೬–೧೫ಕ್ಕೆ. ಬೆಂಕಿಯ ಸ್ಪರ್ಶಕ್ಕೊಳಪಡುತ್ತಿದ್ದ ಒಂದೇ ಒಂದು ಪದಾರ್ಥವೆಂದರೆ ನೀರು. ಅದನ್ನು

ಅವರು ದಿನಕ್ಕೆ ಎರಡು ಬಾರಿ ನಿಂಬೆಹಣ್ಣು ಮತ್ತು ಜೇನುತುಂಪ್ಪಗಳೊಡನೆ ಸೇವಿಸು ತ್ತಿದ್ದರು.

ಗಾಂಧೀಜಿ ವರ್ಷಗಟ್ಟಲೆ ಬರಿಯ ಹಣ್ಣು ಬೀಜಗಳ ಮೇಲೆ ಜೀವಿಸಿದುದುಂಟು. ಆದರೆ ಈ ಮುನ್ನ ಬೇಯಿಸಿದ ಕಾಳು ಮತ್ತು ಧಾನ್ಯಗಳನ್ನು ಹದಿನೈದು ದಿನಗಳಿಗಿಂತ ಹೆಚ್ಚಾಗಿ ಬಳಸಿರಲಿಲ್ಲ. ಹೊಸ ಪ್ರಯೋಗಕ್ಕೆ ಅವರು ತುಂಬ ಪ್ರಾಮುಖ್ಯವನ್ನು ನೀಡಿದರು. "ಇದು ಯಶಸ್ವಿಯಾದಲ್ಲಿ ವಿಚಾರಶೀಲ ಸ್ತ್ರೀಪುರುಷರು ತಮ್ಮ ಬದುಕಿನ ಕ್ರಮದಲ್ಲಿ ಕ್ರಾಂತಿಕಾರಕ ಮಾರ್ಪಾಟುಗಳನ್ನು ಕೈಕೊಳ್ಳಲು ಸಾಧ್ಯವಾಗುತ್ತದೆ." ಸಂತೋಷಕರವಲ್ಲದ ಆದರೆ ಕ್ರಮೇಣ ರೋಗದ ಸರಣಿಯನ್ನು ಹೊತ್ತುತರುವ ಅಡಿಗೆಯ ಚಾಕರಿಯಿಂದ ಮಹಿಳೆಯರು ಬಿಡುಗಡೆ ಹೊಂದಬಹುದೆಂಬುದು ಅವರಿಗೆ ಒಂದು ಆಕರ್ಷಕ ಸೂಚನೆಯಾಗಿದ್ದಿತು. ಪ್ರವಾಸಗಳಲ್ಲೂ ಈ ಪ್ರಯೋಗವು ನೆರವಿಗೆ ಬರುತ್ತಿತ್ತು. "ಇಂಥ ಆಹಾರ, ವಿವಿಧ ಪ್ರಾಂತಗಳ ವಿಧವಿಧವಾದ ಆಹಾರ ಪದ್ಧತಿ ಗಳಿಂದ ಉದ್ಭವಿಸುವ ತೊಂದರೆಯನ್ನು ನಿವಾರಿಸುತ್ತದೆ."

ಆಹಾರ ವಿಷಯಕ ಪ್ರಯೋಗವು ಯಾವ ತೊಡಕೂ ಇಲ್ಲದೆ ನಾಲ್ಕು ತಿಂಗಳ ಕಾಲ ಮುಂದುವರಿಯಿತು. ಆದರೆ ಅನಂತರ ಬಹುದಿನಗಳಕಾಲ ಆಮಶಂಕೆಯ ಬಾಧೆ ಗೊಳಗಾಗಿ ಅವರು ಮಲಗಬೇಕಾಯಿತು. "ಆರೋಗ್ಯವು ಸುಧಾರಿಸಿದಲ್ಲಿ ಮತ್ತು ತುಸು ವಿರಾಮಾವಕಾಶ ದೊರೆತಲ್ಲಿ ಹಿಂದಿನ ಪ್ರಯೋಗವನ್ನು ಹೆಚ್ಚಿನ ಭರವಸೆಯಿಂದ ಮತ್ತೆ ಆರಂಭಿಸುವ ಇಚ್ಛೆಯಿದೆ; ಮತ್ತು ಬಿಡಬೇಕಾದ ತಪ್ಪುಗಳಾವುವು ಎಂಬುದನ್ನು ನಿರ್ಣಯಿಸುತ್ತೇನೆ" ಎಂಬುದಾಗಿ ಅವರು ತಿಳಿಸಿದರು.

"ನಾನು ನಿಯತವಾಗಿ ನೂಲುತ್ತೇನೆ. ಆದರೆ ಕೇವಲ ಪ್ರತಿಜ್ಞೆಯಿಂದ ಆ ಕ್ರಿಯೆಗೆ ನನ್ನನ್ನು ಬದ್ಧಗೊಳಿಸಿಕೊಳ್ಳಬೇಕೇ ಬೇಡವೇ ಎಂಬುದು ಪ್ರಶ್ನೆಯಾಗಿದೆ" ಎಂದು ಒಬ್ಬ ವರದಿಗಾರ ಕೇಳಿದನು. ಅದಕ್ಕೆ ಅವರು ಹೀಗೆ ಉತ್ತರಿಸಿದರು:

"ಬಾಲ್ಯದಿಂದಲೂ ಶಪಥಕ್ಕೆಗೊಳ್ಳೋಣ. ಒಗ್ಗಿಹೋಗಿರುವ ನನಗೆ ಆ ಪರಿಪಾಠದ ಬಗ್ಗೆ ವಿಶೇಷ ಪಕ್ಷಪಾತವಿದೆ. ಅನೇಕ ಸಂದಿಗ್ಧ ಸನ್ನಿವೇಶಗಳಲ್ಲಿ ಅದು ನನ್ನನ್ನು ರಕ್ಷಿಸಿದೆ. ಇತರರನ್ನೂ ಕೂಡ ಅನೇಕ ವಿಪತ್ತುಗಳಿಂದ ಪಾರುಮಾಡಿರುವುದನ್ನು ನಾನು ಕಂಡಿದ್ದೇನೆ. ಸಂಕಲ್ಪಗಳಿಲ್ಲದ ಬದುಕು ಲಂಗರಿಲ್ಲದ ಹಡಗಿನಂತೆ ಅಥವಾ ಗಟ್ಟಿಯಾದ ಶಿಲೆಯ ಅಡಿಪಾಯದ ಮೇಲೆ ನಿರ್ಮಿಸದೆ ಮರಳಿನ ಮೇಲೆ ಕಟ್ಟಿದ ಭವನದಂತೆ. ಪ್ರತಿಜ್ಞೆ ಮನುಷ್ಯನ ವ್ಯಕ್ತಿತ್ವಕ್ಕೆ ದೃಢತೆ, ಸ್ಥಿರತೆ ಮತ್ತು ಭದ್ರತೆಗಳನ್ನು ನೀಡುತ್ತದೆ. ಈ ಮೂಲಭೂತ ಗುಣಗಳನ್ನು ಹೊಂದಿರದ ವ್ಯಕ್ತಿಯಲ್ಲಿ ನೆಚ್ಚಿಕೆಯಿಡುವುದಾದರೂ ಹೇಗೆ? ಒಪ್ಪಂದವೆಂಬುದು ಪ್ರತಿಜ್ಞೆಗಳ ಪರಸ್ಪರ ವಿನಿಮಯವಲ್ಲದೆ ಬೇರೇನೂ ಅಲ್ಲ. ಒಬ್ಬನು ಮತ್ತೊಬ್ಬನಿಗೆ ಭಾಷೆ ಕೊಟ್ಟ ವೇಳೆಯಲ್ಲಿಯೇ ಆತ ಪ್ರತಿಜ್ಞೆಗೊಳಪಟ್ಟಂತಾಗು ತ್ತದೆ.

"ಹಿಂದಿನ ಕಾಲದಲ್ಲಿ ಪ್ರಖ್ಯಾತ ವ್ಯಕ್ತಿಗಳ ಬಾಯಿಮಾತು ಒಂದು ಕರಾರು ಪತ್ರದಷ್ಟೆ ಬೆಲೆಯುಳ್ಳದಾಗಿದ್ದಿತು. ಲಕ್ಷಾಂತರದ ವ್ಯವಹಾರಗಳನ್ನು ಅವರು ಬಾಯಿಮಾತಿನ ಒಪ್ಪಂದಗಳಿಂದಲೇ ತೀರ್ಮಾನಿಸುತ್ತಿದ್ದರು. ವಾಸ್ತವವಾಗಿ, ನಮ್ಮ ಸಂಪೂರ್ಣ ಸಾಮಾಜಿಕ ರಚನೆಯು ವಾಗ್ದಾನದ ಪವಿತ್ರತೆಯ ಮೇಲೆ ನಿಂತಿದೆ. ಕೈಗೊಂಡ ಒಪ್ಪಂದಗಳಲ್ಲಿ ಈ ದೃಢತೆ ಅಥವಾ ಅಂತಿಮತೆಗಳಿಲ್ಲದಿದ್ದಲ್ಲಿ ಪ್ರಪಂಚವು ಛಿದ್ರಛಿದ್ರವಾಗುತ್ತಿತ್ತು. ಹಿಮಾಲಯ ಪರ್ವತಗಳು ಎಂದೆಂದಿಗೂ ತಮ್ಮ ಸ್ಥಾನದಲ್ಲಿ ಅಚಲವಾಗಿ ನಿಂತಿರುತ್ತವೆ. ಹಿಮಾಲಯದ ಸ್ಥಿರತೆಯು ಕುಗ್ಗಿಹೋದಲ್ಲಿ ಭಾರತವು ನಾಶವಾಗುತ್ತಿತ್ತು. ಸೂರ್ಯ, ಚಂದ್ರ ಮತ್ತು ಇತರ ಆಕಾಶಸ್ಥ ಕಾಯಗಳು ಗುರಿ ತಪ್ಪದ ನಿಯತತೆಯಲ್ಲಿ ಚಲಿಸುತ್ತವೆ. ಹಾಗಿಲ್ಲದೆ ಹೋಗಿದ್ದರೆ, ಮಾನವನ ವ್ಯವಹಾರಗಳೆಲ್ಲ ಸ್ಥಗಿತಗೊಳ್ಳುತ್ತಿದ್ದುವು. ಸೂರ್ಯನು ಅಸಂಖ್ಯಾತ ಯುಗಗಳಿಂದ ನಿರ್ದಿಷ್ಟ ವೇಳೆಯಲ್ಲಿ ನಿಯತವಾಗಿ ಉದಯಿಸುತ್ತಾ ಬಂದಿದ್ದಾನೆ ಮತ್ತು ಮುಂದೆಯೂ ಅದೇ ರೀತಿ ಉದಯಿಸುತ್ತಾನೆ. ಅನೇಕ ಯುಗಗಳಿಂದಲೂ ನಡೆದು ಬಂದಿರುವಂತೆ ಚಂದ್ರನ ಶೀತಲಗೋಳವು ಗಡಿಯಾರದ ನಿಯತತೆಯಿಂದ ಸದಾ ಕಾಲಕ್ಕೂ ವೃದ್ಧಿಕ್ಷಯಗಳನ್ನು ಹೊಂದುತ್ತಾ ಹೋಗುತ್ತದೆ. ಆ ಕಾರಣಕ್ಕಾಗಿಯೇ ಸೂರ್ಯ ಮತ್ತು ಚಂದ್ರರನ್ನು ನಮ್ಮ ವ್ಯವಹಾರಗಳಿಗೆ ಸಾಕ್ಷಿ ಕೋರುತ್ತೇವೆ. ನಮ್ಮ ಪಂಚಾಂಗವು ಅವುಗಳ ಚಲನವಲನಗಳನ್ನು ಅವಲಂಬಿಸಿದೆ. ಅವುಗಳ ಉದಯಾಸ್ತಗಳಿಗೆ ನಮ್ಮ ವೇಳೆಯನ್ನು ಸರಿಹೊಂದಿಸಿಕೊಳ್ಳುತ್ತೇವೆ.

"ಈ ಆಕಾಶಸ್ಥ ಕಾಯಗಳನ್ನು ನಿಯಂತ್ರಿಸುವ ನಿಯಮವೇ ಮನುಷ್ಯರಿಗೂ ಅನ್ವಯಿಸುತ್ತದೆ. ಪ್ರತಿಜ್ಞೆಗೊಳಪಡದ ವ್ಯಕ್ತಿ ಎಂದೂ ವಿಶ್ವಾಸಕ್ಕೆ ಯೋಗ್ಯನಲ್ಲ. 'ಈ ಸಂಗತಿ ನನಗೆ ಸ್ವಾಭಾವಿಕವಾದುದು. ಸಂಕಲ್ಪಗಳ ಮೂಲಕ ಶಾಶ್ವತವಾಗಿ ಕಟ್ಟಿಗೊಳಪಡಬೇಕೇಕೆ? ಸಂದಿಗ್ಧ ಸಂದರ್ಭಗಳಲ್ಲಿ ನನ್ನ ಯೋಗಕ್ಷೇಮವನ್ನು ನಾನು ನೋಡಿಕೊಳ್ಳಬಲ್ಲೆ. ದ್ರಾಕ್ಷಾರಸದ ವಿರುದ್ಧ ನಾನು ಒಂದು ನಿರುಪಾಧಿಕ ಪ್ರತಿಜ್ಞೆಯನ್ನೇಕೆ ಕೈಗೊಳ್ಳಬೇಕು? ಎಂದೂ ನಾನು ಮತ್ತಿಗೊಳಗಾಗುವುದಿಲ್ಲ. ಆಗಾಗ ಒಂದು ಲೋಟದ ಸೇವನೆಯಿಂದ ದೊರೆಯುವ ಸಂತೋಷವನ್ನು ನಿರರ್ಥಕವಾಗಿ ತೊರೆಯಬೇಕೇಕೆ?' ಎಂದು ಹೇಳುವುದು ದುರಹಂಕಾರವಾಗುತ್ತದೆ. ಈ ಬಗೆಯಾಗಿ ವಾದಿಸುವ ವ್ಯಕ್ತಿ ತನ್ನ ವ್ಯಸನದಿಂದ ಎಂದೂ ಮುಕ್ತನಾಗಲಾರ.

"ಪ್ರತಿಜ್ಞೆ ಕೈಗೊಳ್ಳಲು ಜಾರಿಕೊಂಡಲ್ಲಿ ಅದು ಅನಿಶ್ಚಯತೆಯನ್ನು ಮತ್ತು ದೃಢಮನೋಭಾವದ ಕೊರತೆಯನ್ನು ಸೂಚಿಸುತ್ತದೆ. ದೃಢಸಂಕಲ್ಪವಿಲ್ಲದ ವ್ಯಕ್ತಿ ಈ ಪ್ರಪಂಚದಲ್ಲಿ ಬಹುಕಾಲ ನಿಲ್ಲುವಂಥದೇನನ್ನು ಸಾಧಿಸಲಾರ. ಉದಾಹರಣೆಗೆ, 'ನನಗೆ ಸಾಧ್ಯವಾಗುವ ವರೆಗೆ ಮಾತ್ರ ನಾನು ರಕ್ಷಣೆ ನೀಡಬಲ್ಲೆ' ಎಂದು ಹೇಳುವ, ಮತ್ತು ಸ್ಥೈರ್ಯ ಹಾಗೂ ದೃಢ ಸಂಕಲ್ಪಗಳಿಲ್ಲದ ಒಬ್ಬ ದಂಡನಾಯಕ ಅಥವ ಸೈನಿಕನಲ್ಲಿ ನೀವು ಹೇಗೆ ವಿಶ್ವಾಸವಿಡುವಿರಿ? ಹಾಗೆಯೇ ತನ್ನ ಕೈಲಾಗುವ ಮಟ್ಟಿಗೆ ಕಾವಲು ಕಾಯುತ್ತೇನೆಂದು ಹೇಳುವ ಕಾವಲಿನವನನ್ನು ಹೊಂದಿದ ಮನೆಯ ಯಜಮಾನ ಆತಂಕವಿಲ್ಲದೆ

ನಿದ್ರಿಸಲಾರ. 'ತನಗೆ ಸಾಧ್ಯವಾಗುವ ತನಕ ಜಾಗರೂಕನಾಗಿರುವೆ'ನೆಂಬ ತತ್ವವನ್ನು ಅನುಸರಿಸಿ ಯಾವ ಸೇನಾಧಿಪತಿಯೂ ಜಯಗಳಿಸಿಲ್ಲ.

"ಸ್ವಂತ ಇಚ್ಛೆಯಿಂದ ನೂಲುಗಾರರಾದವರ ಅಸಂಖ್ಯಾತ ನಿದರ್ಶನಗಳು ನನ್ನಲ್ಲಿವೆ. ಅವರಲ್ಲಿ ಪ್ರತಿಯೊಬ್ಬರೂ ಮುಂದಾಗಿಯೋ ಅಥವಾ ತಡವಾಗಿಯೋ ಕಷ್ಟಕ್ಕೆ ಸಿಕ್ಕಿದ್ದಾರೆ. ಮತ್ತೊಂದೆಡೆ, ಪವಿತ್ರವಾದ ನೂಲುವಿಕೆಯು ಆ ಹವ್ಯಾಸದಲ್ಲಿ ನಿರತರಾದವರ ಬದುಕನ್ನು ಮಾರ್ಪಾಡುಗೊಳಿಸಿದೆ. ಅವರ ಬಳಿ ಶೇಖರವಾದ ನೂಲಿನ ಪರ್ವತಗಳೆ ಕತೆಯನ್ನು ಹೇಳುತ್ತವೆ. ಒಂದು ಪ್ರತಿಜ್ಞೆಯು ಸಮಕೋನವಿದ್ದಂತೆ. ಕ್ಷುದ್ರವಾದೊಂದು ಸಮಕೋನ ಬೃಹತ್ ಕಟ್ಟಡದ ಸೊಬಗು ವಿಕಾರಗಳ ಮತ್ತು ಭದ್ರತೆ ಅಭದ್ರತೆಗಳ ನಡುವೆ ಸಂಪೂರ್ಣ ವ್ಯತ್ಯಾಸವನ್ನುಂಟು ಮಾಡುತ್ತದೆ. ಅದೇ ರೀತಿಯಲ್ಲಿ ಇಡೀ ಜೀವಮಾನದ ಸ್ಥಿರತೆ ಅಥವಾ ಅಸ್ಥಿರತೆಯಾಗಲಿ, ಪರಿಶುದ್ಧತೆ ಅಥವಾ ಮತ್ತೊಂದೇ ಆಗಲಿ ಪ್ರತಿಜ್ಞಾ ಸ್ವೀಕಾರವನ್ನವಲಂಬಿಸಿರಬಹುದು.

"ಸಮತೆ ಸೌಜನ್ಯಗಳು ಪ್ರತಿಜ್ಞಾಸ್ವೀಕಾರದ ಫಲವೆಂದು ಹೇಳಲೇಬೇಕಾಗಿಲ್ಲ. ಕಾರ್ಯಸಾಧ್ಯವಲ್ಲದ ಅಥವಾ ಅಳವಿಗೆ ಮೀರಿದ ಪ್ರತಿಜ್ಞೆಗಳನ್ನು ಕೈಗೊಳ್ಳುವುದು ವಿವೇಕ ಶೂನ್ಯತೆಯನ್ನೂ ಸಮತೂಕದ ಕೊರತೆಯನ್ನೂ ಸೂಚಿಸುತ್ತದೆ. ಅದೇ ರೀತಿಯಲ್ಲಿ ಒಂದು ಪ್ರತಿಜ್ಞೆಯನ್ನು, ಅದರ ಯಾವುದೇ ಗುಣ ಮತ್ತು ಪ್ರಭಾವಗಳು ನಷ್ಟವಾಗದಂತೆ ಸೋಪಾಧಿಕಗೊಳಿಸುವುದು ಸಾಧ್ಯ. ನಿದರ್ಶನಕ್ಕೆ, ಪ್ರಯಾಣ ಮಾಡುವಾಗ ಅಥವಾ ಅನಾರೋಗ್ಯವಿದ್ದಾಗ ಬಿಟ್ಟು ಪ್ರತಿದಿನವೂ ಕಡೆಯ ಪಕ್ಷ ಒಂದು ಗಂಟೆ ನೂಲುವ ಮತ್ತು ನಿತ್ಯವೂ ೨೦೦ ಗಜಗಳಿಗೆ ಕಡಿಮೆಯಿಲ್ಲದಂತೆ ನೂಲನ್ನು ಉತ್ಪಾದಿಸುವ ಪ್ರತಿಜ್ಞೆ ಕೈಗೊಂಡಲ್ಲಿ ಅದರಿಂದ ಯಾವ ತೊಂದರೆಯೂ ಆಗಲಾರದು. ಅಂಥ ಪ್ರತಿಜ್ಞೆ ಸಮಗ್ರ ಸ್ವರೂಪದ್ದಾಗಿರುತ್ತದಲ್ಲದೆ ಅನುಷ್ಠಾನಕ್ಕೂ ಸುಲಭವಾಗಿರುತ್ತದೆ. ಒಂದು ಪ್ರತಿಜ್ಞೆಯ ಸಾರ ಅಡಗಿರುವುದು ಕಷ್ಟಗಳ ಇರುಕಿನಲ್ಲಿಯೂ ಹಿಂಜರಿಯದೆ ಪಟ್ಟು ಹಿಡಿದು ಸಾಧಿಸುವ ಸುಪ್ತ ಸಂಕಲ್ಪದಲ್ಲಿಯೇ ಹೊರತು ಅದರ ಆಚರಣೆಯ ಕ್ಲಿಷ್ಟತೆಯಲ್ಲಲ್ಲ.

"ಆತ್ಮಸಂಯಮವೇ ಪ್ರತಿಜ್ಞಾಸ್ವೀಕಾರ ತತ್ವದ ಅಡಿಗಲ್ಲು. ಉದಾಹರಣೆಗೆ ಒಬ್ಬ ವ್ಯಕ್ತಿ ಕುಡಿಯುವ, ತಿನ್ನುವ ಮತ್ತು ವಿನೋದದಿಂದಿರುವ, ಒಂದೇ ಮಾತಿನಲ್ಲಿ ಹೇಳುವುದಾದರೆ, ಮನಸೋ ಇಚ್ಛೆ ನಡೆಯಬಹುದಾದಂಥ ಲೋಲುಪತೆಯ ಪ್ರತಿಜ್ಞೆಯನ್ನು ಕೈಗೊಳ್ಳುವುದು ಸಾಧ್ಯವಿಲ್ಲ. ಈ ಎಚ್ಚರಿಕೆ ತುಂಬ ಅಗತ್ಯವಾದುದು. ಏಕೆಂದರೆ ವಿವಾದಾತ್ಮಕ ಅರ್ಥವುಳ್ಳ ಸಂಗತಿಗಳನ್ನು ಪ್ರತಿಜ್ಞೆಗಳ ಮೂಲಕ ಮುಚ್ಚುವ ಪ್ರಯತ್ನ ನಡೆದ ಅನೇಕ ಸಂದರ್ಭಗಳು ನನಗೆ ತಿಳಿದಿವೆ. 'ಸರ್ಕಾರಕ್ಕೆ ಸೇವೆ ಸಲ್ಲಿಸುತ್ತೇನೆಂದು ನಾನು ಕರಾರು ಮಾಡಿಕೊಂಡಿರುವಾಗ ಸರ್ಕಾರಿ ಕೆಲಸಕ್ಕೆ ರಾಜೀನಾಮೆಯನ್ನು ಕೊಡುವುದು ಹೇಗೆ ಸಾಧ್ಯ? ಅಥವಾ ಮತ್ತೆ, ಐದು ವರ್ಷಗಳವರೆಗೆ ಹೆಂಡದಂಗಡಿಯನ್ನು ನಡೆಸುತ್ತೇನೆಂಬ ಒಪ್ಪಂದಕ್ಕೆ ಕಟ್ಟುಬಿದ್ದಿರುವಾಗ ಅದನ್ನು ಹೇಗೆ ಮುಚ್ಚಲಿ?'

ಎಂಬುದಾಗಿ ಅಸಹಕಾರದ ಉತ್ಕರ್ಷ ಕಾಲದಲ್ಲಿ ಎತ್ತಿದ ಆಕ್ಷೇಪಣೆಗಳನ್ನು ಯಾರೋ ಒಬ್ಬರು ಕೇಳಿಸಿಕೊಂಡುದೂ ಉಂಟು. ಅಂಥ ಪ್ರಶ್ನೆಗಳು ಕೆಲವು ವೇಳೆ ತಬ್ಬಿಬ್ಬುಂಟು ಮಾಡುವಂತೆ ತೋರಬಹುದು. ಆದರೆ ಒಂದು ಪ್ರತಿಜ್ಞೆಯನ್ನು ಅನೈತಿಕ ಕೃತ್ಯ ಸಮರ್ಥನೆಗಾಗಲಿ ಅಥವಾ ಬೆಂಬಲಕ್ಕಾಗಲಿ ಎಂದೂ ಬಳಸಕೂಡದೆಂಬ ಅಂಶ ಸೂಕ್ಷ್ಮ ವಿವೇಚನೆಗೆ ತಿಳಿದುಬರುತ್ತದೆ. ಪ್ರತಿಜ್ಞೆ ವ್ಯಕ್ತಿಯನ್ನು ಊರ್ಧ್ವಮುಖಿಗೊಳಿಸಬೇಕೇ ಹೊರತು ಪತನಾಭಿಮುಖಿಗೊಳಿಸಬಾರದು."

ಪ್ರತಿಜ್ಞೆಗಳನ್ನು ಕುರಿತ ಗಾಂಧೀಜಿಯ ಅಭಿಪ್ರಾಯಗಳಿಂದ ಅವರು ಬಹುಶಃ ಧರ್ಮಶ್ರದ್ಧೆಯ ಹೆಸರಿನ ಕೆಳಗೆ ಬರುವ ಎಲ್ಲವನ್ನೂ ಬೆಂಬಲಿಸುತ್ತಾರೆಂದು ಕೆಲವು ಜನ ಆಲೋಚಿಸುತ್ತಿದ್ದುದುಂಟು. ಸತ್ತವರ ಆತ್ಮಗಳ ಸಂಪರ್ಕ ಸಾಧ್ಯತೆಯ ಬಗೆಗೆ ನಿಮಗೆ ನಂಬಿಕೆಯಿದೆಯೆ ಎಂದು ವರದಿಗಾರನೊಬ್ಬ ಗಾಂಧೀಜಿಯನ್ನು ಕೇಳಿದನು. ಅದಕ್ಕೆ ಅವರು ಹೀಗೆ ಉತ್ತರಿಸಿದರು: "ಅಂಥ ಸಂಪರ್ಕಗಳ ಸಾಧ್ಯತೆಯಲ್ಲಿ ಅವಿಶ್ವಾಸವನ್ನು ಮೂಡಿಸುವ ಯಾವ ಸಾಕ್ಷಿಯೂ ನನ್ನಲ್ಲಿಲ್ಲ. ಆದರೆ ಅಂಥ ಸಂಪರ್ಕಗಳನ್ನು ಸಾಧಿಸುವ ಅಥವಾ ಸಾಧಿಸಲು ಪ್ರಯತ್ನಿಸುವ ಉದ್ಯಮವನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಅವು ಅನೇಕ ವೇಳೆ ಮೋಸಗೊಳಿಸುತ್ತವೆ. ಮತ್ತು ಅವು ಕೇವಲ ಕಲ್ಪನೆಯ ಉತ್ಪನ್ನಗಳು. ಇಂಥ ಸಂಪರ್ಕಗಳ ಸಾಧ್ಯತೆಯನ್ನು ಒಪ್ಪಿಕೊಂಡು ಕೈಗೊಳ್ಳುವ ಪ್ರಯೋಗವು ಮಾಧ್ಯಮ ಮತ್ತು ಆತ್ಮಗಳೆರಡಕ್ಕೂ ಹಾನಿಕಾರಕವಾಗುತ್ತದೆ. ಹೀಗೆ ಆಹ್ವಾನಿಸಿದ ಆತ್ಮವನ್ನು ಅದು ಆಕರ್ಷಿಸಿ ಮರ್ತ್ಯಕ್ಕೆ ಬಂಧಿಸುತ್ತದೆ. ಬದಲಿಗೆ ಆ ಪ್ರಯೋಗ' ಈ ಭೂಮಿಯ ಬಂಧನದಿಂದ ಆತ್ಮವು ಕಳಚಿಕೊಂಡನಂತರ ಮೇಲೇರುವಂತೆ ಮಾಡಲು ಪ್ರಯತ್ನಿಸಬೇಕು. ಆತ್ಮವು ವಿದೇಹಗೊಂಡಿರುವುದರಿಂದ ಅನಿವಾರ್ಯವಾಗಿ ಅದು ಪರಿಶುದ್ಧವಾಗಿರಬೇಕೆಂದಿಲ್ಲ. ಭೂಮಿಯ ಮೇಲಿದ್ದಾಗ ತನ್ನನ್ನಂಟಿಕೊಂಡಿದ್ದ ದೌರ್ಬಲ್ಯಗಳನ್ನೇ ಅದು ತನ್ನೊಡನೆ ಒಯ್ಯುತ್ತದೆ. ಆದ್ದರಿಂದ ಅದು ನೀಡುವ ಸುದ್ದಿ ಅಥವಾ ಸಲಹೆಯು ಸತ್ಯ ಅಥವಾ ಶುದ್ಧವಾಗಿರಬೇಕಾಗಿಲ್ಲ. ಆತ್ಮವು ಭೂಮಿಯ ಮೇಲಿರುವವರೊಂದಿಗೆ ಸಂಪರ್ಕಹೊಂದಲು ಇಚ್ಛಿಸುತ್ತದೆಂಬುದು ಸಂತೋಷದ ವಿಷಯವೇನಲ್ಲ. ಪ್ರತಿಯಾಗಿ ಆತ್ಮವನ್ನು ಅಂಥ ಧರ್ಮವಿರೋಧಿ ಸಂಸಕ್ತಿಯಿಂದ ಬಿಡುಗಡೆಗೊಳಿಸಬೇಕು."

ವೃಕ್ಷಾರಾಧನೆಯಲ್ಲಿ ನಂಬಿಕೆಯಿದೆಯೆ ಎಂದು ಮತ್ತೊಬ್ಬ ವರದಿಗಾರ ಗಾಂಧೀಜಿಯನ್ನು ಪ್ರಶ್ನಿಸಿದನು. ಅದಕ್ಕೆ ಅವರು ನೀಡಿದ ಉತ್ತರವಿದು: "ಇದು ಅತ್ಯಂತ ಹಳೆಯದಾದ ಪ್ರತಿಮಾಪೂಜೆಯ ಪ್ರಶ್ನೆಗೆ ಸಂಬಂಧಿಸಿದ್ದು. ನಾನು ಪ್ರತಿಮಾ ಪೂಜೆಯ ಬೆಂಬಲಿಗನೂ ಹೌದು, ವಿರೋಧಿಯೂ ಹೌದು. ಯಾವಾಗ ಪ್ರತಿಮಾರಾಧನೆ ಅಂಧ ವಿಶ್ವಾಸದ ಕೀಳು ಮಟ್ಟಕ್ಕಿಳಿಯುವುದೊ ಮತ್ತು ಅದರ ಸುತ್ತ ಹುಸಿ ನಂಬಿಕೆಗಳ ಮತ್ತು ತತ್ವಗಳ ಪೊರೆ ಆವರಿಸುವುದೊ ಆಗ ಅದೊಂದು ಮಹತ್ತರ ಸಾಮಾಜಿಕ ಕೇಡಾಗುತ್ತದೆ. ಆಗ ಅದರ ವಿರುದ್ಧ ಹೋರಾಡಬೇಕಾದುದು ಅಗತ್ಯವಾಗುತ್ತದೆ. ಮತ್ತೊಂದು ದೃಷ್ಟಿ

ಯಿಂದ ವ್ಯಕ್ತಿ ತನ್ನ ಆದರ್ಶವನ್ನು ಒಂದು ಮೂರ್ತರೂಪದಲ್ಲಿ ಕಾಣಲೆಳಸುತ್ತಾನೆ. ಅದರಿಂದಾಗಿ ವಿಗ್ರಹಾರಾಧನೆ ಮನುಷ್ಯ ಸ್ವಭಾವದಲ್ಲಿ ಸಹಜವಾಗಿ ನೆಲೆಸಿರುವಂತಹುದು. ಭಕ್ತಿಗೆ ನೆರವು ನೀಡುತ್ತದೆಂಬ ದೃಷ್ಟಿಯಿಂದಲೂ ಅದು ಅಮೂಲ್ಯವಾದುದು. ವೃಕ್ಷಾ-ರಾಧನೆಯಲ್ಲಿ ಸಹಜವಾಗಿ ನೆಲೆಸಿರುವಂಥ ಯಾವುದೇ ಕೆಡುಕನ್ನಾಗಲಿ ಅಥವಾ ಅಪಾಯ ವನ್ನಾಗಲಿ ಕಾಣುವುದು ಹಾಗಿರಲಿ. ಅದರಲ್ಲಿ ಆಳವಾದ ಕರುಣರಸ ಮತ್ತು ಕಾವ್ಯ ಸೌಂದರ್ಯಗಳ ಸಹಜತೆ ಅಡಗಿರುವುದನ್ನು ನಾನು ಕಾಣುತ್ತೇನೆ. ಸುಂದರಾಕಾರ ಮತ್ತು ರೂಪಗಳಿಂದ ಕೂಡಿದ ಅನಂತಾನಂತ ದೃಶ್ಯಪರಂಪರೆಗಳಿಂದ ಲಕ್ಷಾಂತರ ನಾಲಿಗೆಗಳನ್ನು ಹೊಂದಿದೆಯೋ ಎಂಬಂತೆ ಭಗವಂತನ ಹಿರಿಮೆ ಮತ್ತು ಮಹಿಮೆಗಳನ್ನು ನಮಗೆ ಪ್ರಕಟಪಡಿಸುತ್ತಿರುವ ಸಮಸ್ತ ಸಸ್ಯ ಸಾಮ್ರಾಜ್ಯದ ಬಗೆಗೆ ಒಂದು ನಿಜವಾದ ಪೂಜ್ಯ ಭಾವನೆಯನ್ನು ಅದು ಸಂಕೇತಿಸುತ್ತದೆ. ನಮ್ಮ ಈ ಗ್ರಹದಲ್ಲಿ ಸಸ್ಯಗಳಿಲ್ಲದೆ ಕ್ಷಣಮಾತ್ರವೂ ಜೀವಿಗಳು ಬದುಕುವುದು ಸಾಧ್ಯವಿರುತ್ತಿರಲಿಲ್ಲ. ಆದ್ದರಿಂದ ವಿಶೇಷವಾಗಿ ಮರಗಳ ಕೊರತೆಯಿರುವಂಥ ದೇಶದಲ್ಲಿ ವೃಕ್ಷಪೂಜೆ ಅಗಾಧ ಆರ್ಥಿಕ ಮಹತ್ವವನ್ನು ಪಡೆಯುತ್ತದೆ. ಮರಗಳಿಗೆ ಪೂಜೆಯನ್ನು ಸಲ್ಲಿಸುವ ಅಕುಟಿಲ ಮನಸ್ಕರಾದ ಸ್ತ್ರೀಯರಿಗೆ ತಮ್ಮ ಕೃತ್ಯದ ಪರಿಣಾಮಗಳ ಬಗೆಗೆ ಸಕಾರಣ ತಿಳುವಳಿಕೆಯಿಲ್ಲವೆಂಬುದು ನಿಜ. ಅಂಥ ಪೂಜೆಯನ್ನೇಕೆ ತಾವು ಮಾಡುತ್ತಿರುವರೆಂಬುದಕ್ಕೆ ಬಹುಶಃ ಅವರು ಯಾವುದೇ ವಿವರಣೆ ನೀಡಲಾರರು. ತಮ್ಮ ಶ್ರದ್ಧೆಯ ಪರಿಶುದ್ಧತೆ ಮತ್ತು ಪರಿಪೂರ್ಣ ಸರಳತೆಗನುಗುಣವಾಗಿ ಅವರು ವರ್ತಿಸಿದ್ದಾರೆ. ಆ ಬಗೆಯ ಶ್ರದ್ಧೆ ಉಪೇಕ್ಷಿಸುವಂಥ ಸಂಗತಿಯಲ್ಲ; ನಾವು ಕಾಪಾಡಿ ಕೊಳ್ಳಬೇಕಾದ ಒಂದು ದೊಡ್ಡ ಹಾಗೂ ಪ್ರಭಾವಶಾಲಿ ಶಕ್ತಿಯದು."

ಮಹಿಳೆಯರ ಸಾಮಾಜಿಕ ಸ್ಥಾನಮಾನದ ಬಗೆಗೆ ಗಾಂಧೀಜಿ ಉತ್ಸಾಹಪೂರ್ಣ ಆಸಕ್ತಿಯನ್ನು ವಹಿಸಿದರು. ಶಾಸನಸಭೆ ಆಗಸ್ಟ್‌ನಲ್ಲಿ 'ಶಾರದಾ ಬಾಲ ವಿವಾಹ ನಿರ್ಬಂಧ ಮಸೂದೆ'ಯ ಅಂತಿಮ ಪಠನವನ್ನು ಮುಗಿಸಿತು. ಹದಿನೆಂಟು ವರ್ಷಗಳ ಕೆಳಗಿನ ಹುಡುಗರ ಅಥವಾ ಹದಿನಾಲ್ಕು ವರ್ಷಗಳ ಕೆಳಗಿನ ಹುಡುಗಿಯರ ನಡುವೆ ವಿವಾಹಗಳು ನೆರವೇರದಂತೆ ತಡೆಯುವುದೆ ಅದರ ಉದ್ದೇಶವಾಗಿದ್ದಿತು. ಹಿಂದೂ ಮಡಿವಂತಿಕೆಯು ಅದನ್ನು ತೀವ್ರವಾಗಿ ವಿರೋಧಿಸಿತು. ಮಹಮ್ಮದ್ ಆಲಿ, ಮಸೂದೆಯ ವಿರುದ್ಧ ಒಂದು ಚಳುವಳಿಯನ್ನು ನಡೆಸಿದ್ದಲ್ಲದೆ ಮುಸಲ್ಮಾನರಿಗೆ ಅದರಿಂದ ವಿನಾಯಿತಿ ದೊರಕಿಸಿಕೊಳ್ಳಲು ವೈಸರಾಯರೊಡನೆಯೂ ಪ್ರಸ್ತಾಪಿಸಿದರು. ಗಾಂಧೀಜಿ ಶಾರದಾ ಮಸೂದೆಗೆ ಬೆಂಬಲ ನೀಡಿದರು ಮತ್ತು ಪುರುಷರೊಂದಿಗೆ ಮಹಿಳೆಯರ ಸರ್ವ ಸಮಾನತೆಯನ್ನು ಎತ್ತಿಹಿಡಿದರು. ಅಕ್ಟೋಬರ್ ೧೭ರ 'ಯಂಗ್ ಇಂಡಿಯಾ'ದಲ್ಲಿ ಅವರು ಹೀಗೆ ಬರೆದರು:

"ಮಹಿಳಾ ಸಂಬಂಧವಾದ ಪುರುಷನ ಪರಮ ನೀಚತನಗಳನ್ನು ಕಂಡು ರೋಷಾ ವಿಷ್ಟನಾಗಲು ನಾನು ತರುಣಿಯೇ ಆಗಿರಬೇಕಾದ ಅಗತ್ಯವಿಲ್ಲ. ಪಿತ್ರಾರ್ಜಿತ ಹಕ್ಕಿನ ವಿಷಯ ಪಟ್ಟಿಯಲ್ಲಿ ಕೊಟ್ಟಕೊನೆಯದೆಂದು ನಾನು ಗಣಿಸುತ್ತೇನೆ. ಉತ್ತರಾಧಿಕಾರದ

ಶಾಸನ ಸೂಚಿಸುವ ಕೆಡುಕಿಗಿಂತ ಮಹತ್ತರವಾದ ಕೆಡುಕನ್ನು ಶಾರದಾ ಮಸೂದೆಯು ಉಲ್ಲೇಖಿಸುತ್ತದೆ. ಆದರೆ ಸ್ತ್ರೀಯರ ಹಕ್ಕುಗಳ ವಿಷಯದಲ್ಲಿ ನನ್ನ ಪಟ್ಟು ಸಡಿಲವಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಪುರುಷನಿಗೆ ಸಲ್ಲದ ಕಾನೂನಿನ ಅನರ್ಹತೆ ಮಹಿಳೆಗೂ ಸಲ್ಲಕೂಡದು. ಗಂಡು ಹೆಣ್ಣು ಮಕ್ಕಳನ್ನು ಸಂಪೂರ್ಣ ಸಮಾನವಾಗಿ ಕಾಣುತ್ತೇನೆ. ತಾವು ಪೊಂದುವ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಸ್ತ್ರೀಯರು ತಮ್ಮ ಸಾಮರ್ಥ್ಯವನ್ನು ಅರಿತುಕೊಳ್ಳಲಾರಂಭಿಸಿದಂತೆ–ಅದನ್ನವರು ಅರಿತುಕೊಳ್ಳಲೇಬೇಕು–ತಾವನುಭವಿಸುತ್ತಿರುವಂಥ ಕಣ್ಣುಕ್ಕುವ ಅಸಮಾನತೆಗಳ ಬಗೆಗೆ ಅವರು ಸ್ವಾಭಾವಿಕವಾಗಿಯೆ ಕೆರಳುತ್ತಾರೆ.

"ಆದರೆ ಕಾನೂನಿನ ಅಸಮಾನತೆಗಳ ನಿವಾರಣೆ ಕೇವಲ ಉಪಶಾಮಕವಾಗುತ್ತದಷ್ಟೆ. ಕೆಡುಕಿನ ಬೇರು ಬಹುಮಂದಿ ಅರಿತಿರುವುದಕ್ಕಿಂತಲೂ ಆಳದಲ್ಲಿ ಹುದುಗಿದೆ. ಅದು ಪುರುಷನಲ್ಲಿರುವ ಅಧಿಕಾರ ಮತ್ತು ಕೀರ್ತಿಗಳ ದುರಾಶೆಯಲ್ಲಡಗಿದೆ ಮತ್ತು ಪರಸ್ಪರ ವಿಷಯಾಭಿಲಾಷೆಯಲ್ಲಿ ಅದು ಮತ್ತಷ್ಟು ಆಳವಾಗಿ ಬೇರುಬಿಟ್ಟಿದೆ. ಪುರುಷ ಸದಾ ಅಧಿಕಾರಲೋಲುಪ. ಆಸ್ತಿಯಸ್ವಾಮ್ಯ ಈ ಅಧಿಕಾರವನ್ನವನಿಗೆ ನೀಡಿದೆ. ಆ ಅಧಿಕಾರದ ಆಧಾರದ ಮೇಲೆ ಪುರುಷನು ಮರಣಾನಂತರದ ಕೀರ್ತಿಗಾಗಿಯೂ ಕಾತರಿಸುತ್ತಾನೆ. ಮುಂದಿನ ತಲೆಮಾರಿನವರೆಲ್ಲ ಸಮಾನ ಪಾಲುದಾರರಾಗುವ ಸಲುವಾಗಿ ಆಸ್ತಿಯು ಕ್ರಮೇಣ ತುಂಡು ತುಣುಕುಗಳಾಗಿ ವಿಭಜಿಸಲ್ಪಟ್ಟಲ್ಲಿ–ಮತ್ತು ಅದು ಹಾಗೆಯೇ ಆಗುತ್ತದೆ–ಇಂಥ ಕೀರ್ತಿ ಸಂಪಾದನೆ ಅವನಿಗೆ ಸಾಧ್ಯವಾಗುವುದಿಲ್ಲ. ಅದರಿಂದಾಗಿಯೆ ಆಸ್ತಿಯ ಬಹುಪಾಲು ವಂಶಾನುಕ್ರಮವಾಗಿ ಹಿರಿಯ ಗಂಡು ಸಂತಾನಕ್ಕೆ ಬರುತ್ತಿದೆ. ಹೆಚ್ಚಿನ ಸ್ತ್ರೀಯರು ವಿವಾಹಿತರಾಗಿರುತ್ತಾರೆ. ಮತ್ತು ಕಾನೂನಿನ ವಿರೋಧವಿದ್ದರೂ ಅವರು ತಮ್ಮ ಗಂಡಂದಿರ ಅಧಿಕಾರ ಮತ್ತು ಗೌರವಗಳಲ್ಲಿ ಸಹ ಪಾಲುದಾರರಾಗಿದ್ದಾರೆ. ಇಂಥ ಯಜಮಾನರ ಹೆಂಡಂದಿರಾಗಿದ್ದೇವೆಂಬ ಸಂಗತಿಗಾಗಿಯೇ –ಇನ್ನು ಬೇರೆ ಯಾವುದಕ್ಕೂ ಅಲ್ಲ–ಅವರು ತಾವು ಹೆಂಗಸರಾಗಿರುವುದಕ್ಕೆ ಸಂತೋಷ ಪಡುತ್ತಾರೆ. ಆದ್ದರಿಂದ ಅಸಮಾನತೆಗಳನ್ನು ಕುರಿತ ತಾರ್ಕಿಕ ಜಿಜ್ಞಾಸೆಗಳಲ್ಲಿ ಅವರು ಆಮೂಲಾಗ್ರ ಸುಧಾರಣೆಗೆ ಮತ ನೀಡಬಹುದಾದರೂ, ತಮ್ಮ ಮತಕ್ಕನುಗುಣವಾಗಿ ನಡೆದುಕೊಳ್ಳಬೇಕಾದ ಸಂದರ್ಭ ಬಂದಾಗ ತಮ್ಮ ವಿಶೇಷಾಧಿಕಾರಗಳನ್ನು ತ್ಯಜಿಸಲು ಅವರು ಒಪ್ಪುವುದಿಲ್ಲ.

"ಆದ್ದರಿಂದ ಎಲ್ಲ ಕಾನೂನಿನ ಅನರ್ಹತೆಗಳ ರದ್ದಿಯಾತಿಯನ್ನು ನಾನು ಯಾವಾಗಲೂ ಸಮರ್ಥಿಸುತ್ತೇನೆ. ಅಂತೆಯೇ ಜ್ಞಾನಿಗಳಾದ ಭಾರತದ ಮಹಿಳೆಯರು ಮೂಲ ಸಮಸ್ಯೆಯನ್ನು ಕುರಿತು ಆಲೋಚಿಸಬೇಕಾಗಿದೆ. ಸ್ತ್ರೀ ತ್ಯಾಗ ಮತ್ತು ಸಂಕಷ್ಟಗಳ ಮೂರ್ತಸ್ವರೂಪ. ಸಾರ್ವಜನಿಕ ಜೀವನವನ್ನು ಶುದ್ಧೀಕರಿಸುವುದರಲ್ಲಿ, ಅಂಕೆಯಿಲ್ಲದ ಅತ್ಯಾಶೆಯನ್ನು ಮತ್ತು ಆಸ್ತಿಸಂಗ್ರಹವನ್ನು ತಡೆಗಟ್ಟುವುದರಲ್ಲಿ ಅವಳ ಸಾರ್ವಜನಿಕ ಕ್ಷೇತ್ರ ಪ್ರವೇಶ ಸಹಾಯವಾಗುತ್ತದೆ. ತಮ್ಮ ಸಂತತಿಗೆ ವರ್ಗಾಯಿಸಲು ಲಕ್ಷಾಂತರ ಜನ

ಯಾವ ಆಸ್ತಿಯನ್ನೂ ಹೊಂದಿಲ್ಲವೆಂಬುದನ್ನು ಅವರು ತಿಳಿಯಲಿ. ಯಾವ ಪಿತ್ರಾರ್ಜಿತ ಆಸ್ತಿಯನ್ನು ಹೊಂದದಿರುವುದೇ ಉತ್ತಮವೆಂಬುದನ್ನು ನಾವು ಅವರಿಂದ ಕಲಿಯೋಣ; ಹೆತ್ತವರು ಎಲ್ಲರಿಗೂ ಸಮಾನವಾಗಿ ವರ್ಗಾಯಿಸಬಹುದಾದ ನಿಜವಾದ ಆಸ್ತಿಯೆಂದರೆ ಅವರ ಶೀಲ ಹಾಗೂ ಶಿಕ್ಷಣ ಸೌಲಭ್ಯಗಳು. ತಮ್ಮ ಹೆಣ್ಣು ಮತ್ತು ಗಂಡು ಮಕ್ಕಳು ಸ್ವಾವಲಂಬಿಗಳಾಗುವಂತೆ ಮತ್ತು ಬೆವರು ಸುರಿಸಿ ದುಡಿದು ಪ್ರಾಮಾಣಿಕ ಜೀವನೋಪಾಯವನ್ನು ಕಂಡುಕೊಳ್ಳುವಂತೆ ಮಾಡಲು ತಂದೆ ತಾಯಿಗಳು ಪ್ರಯತ್ನಿಸಬೇಕು. ಅಪ್ರಾಪ್ತ ವಯಸ್ಸಿನ ಮಕ್ಕಳ ಪಾಲನೆಯ ಹೊಣೆ ಆಗ ಸ್ವಾಭಾವಿಕವಾಗಿ ಪ್ರಾಪ್ತ ವಯಸ್ಕರಾದ ಹಿರಿಯರ ಮೇಲೆ ಬೀಳುತ್ತದೆ. ಸಾಹಸವನ್ನು ಕೊಲ್ಲುವ ಮತ್ತು ಸೋಮಾರಿತನ ಹಾಗೂ ಆಡಂಬರಗಳನ್ನೊಡಗೂಡಿದ, ಮನೋವಿಕಾರಗಳಿಗೆಡೆ ಕೊಡುವ ಪಿತ್ರಾರ್ಜಿತ ಆಸ್ತಿಗೆ ತಮ್ಮ ಮಕ್ಕಳನ್ನು ಗುಲಾಮರನ್ನಾಗಿ ಮಾಡುವ ಅನುಚಿತ ಬಯಕೆಯ ಬದಲಿಗೆ ಸ್ವಾವಲಂಬಿಗಳಾಗುವಂತೆ ಅವರಿಗೆ ಶಿಕ್ಷಣ ನೀಡುವ ಯೋಗ್ಯ ಆಕಾಂಕ್ಷೆಯನ್ನು ಶ್ರೀಮಂತರು ಹೊಂದಿದ ಪಕ್ಷಕ್ಕೆ ಅವರ ಮಕ್ಕಳಲ್ಲಿ ಇಂದು ಕಂಡುಬರುತ್ತಿರುವ ಬಹುಮಟ್ಟಿನ ಮನೋದೌರ್ಬಲ್ಯವು ನಿವಾರಣೆಯಾಗುತ್ತಿತ್ತು. ಬಹಳ ಹಿಂದಿನಿಂದ ಉಳಿದ ಕೆಡುಕುಗಳನ್ನು ಪತ್ತೆ ಹಚ್ಚಿ ನಿರ್ಮೂಲಗೊಳಿಸುವುದು ಜಾಗೃತ ಮಹಿಳೆಯರ ಸುಯೋಗವಾಗಬೇಕು.

"ಸ್ತ್ರೀ ಜಾತಿಗೆ ಅನರ್ಹತೆಗಳನ್ನುಂಟು ಮಾಡುವಲ್ಲಿ ಪರಸ್ಪರ ಕಾಮಾಸಕ್ತಿಯೂ ಸಹ ಪ್ರಮುಖ ಪಾತ್ರ ವಹಿಸಿದೆಯೆಂಬುದಕ್ಕೆ ಯಾವ ನಿದರ್ಶನದ ಅಗತ್ಯವೂ ಇಲ್ಲ. ಮಹಿಳೆಯು ತನ್ನ ಮೇಲೆ ಆಧಿಪತ್ಯವನ್ನು ಹೊಂದದಂತೆ ತಡೆಯಲು ಪುರುಷನು ವ್ಯರ್ಥವಾಗಿ, ಆದರೆ ಅಷ್ಟೇ ಪ್ರಜ್ಞಾಪೂರ್ವಕವಾಗಿ ಹೆಣಗಾಡಿದಂತೆಯೇ ಸ್ತ್ರೀಯು ತನ್ನ ಅಪ್ರಜ್ಞಾಪೂರ್ವಕ ಸೂಕ್ಷ್ಮ ವಿಧಾನಗಳಲ್ಲಿ ಪುರುಷನನ್ನು ನಾನಾ ರೀತಿಗಳಲ್ಲಿ ಮೀರಿಸಿದ್ದಾಳೆ. ಇದರ ಫಲವಾಗಿ ಒಂದು ಇಕ್ಕಟ್ಟಿನ ಪರಿಸ್ಥಿತಿಯುಂಟಾಗಿದೆ. ಅವರು ಪಾಶ್ಚಾತ್ಯ ಪರಿಸರಕ್ಕೆ ಹೊಂದುವಂಥ ರೀತಿಯನ್ನನುಕರಿಸಬಾರದು; ಭಾರತೀಯ ಜಾಯಮಾನಕ್ಕೆ ಮತ್ತು ಪರಿಸರಕ್ಕೆ ತಕ್ಕುದಾದ ವಿಧಾನಗಳನ್ನು ಅನ್ವಯಿಸಬೇಕು. ಅವರದು ಬಲವಾದ ಹತೋಟಿಯನ್ನುಳ್ಳ, ಅಲ್ಲದೆ ಪರಿಶುದ್ಧೀಕರಿಸುವ, ಮತ್ತು ಸ್ಥಿರಗೊಳಿಸುವ ಹಸ್ತವಾಗಬೇಕು; ಅದು ನಮ್ಮ ಸಂಸ್ಕೃತಿಯಲ್ಲಿ ಅತ್ಯುತ್ತಮವಾದುದನ್ನು ರಕ್ಷಿಸುವ ಮತ್ತು ತುಚ್ಛ ಮತ್ತು ಹೀನಾಯವಾದುವನ್ನು ಹಿಂಜರಿಯದೆ ತಿರಸ್ಕರಿಸುವಂಥದಾಗಿರಬೇಕು. ಇದು ಸೀತೆ, ದ್ರೌಪದಿ, ಸಾವಿತ್ರಿ ಮತ್ತು ದಮಯಂತಿಯಂಥವರ ಕೆಲಸವೆ ಹೊರತು ಗಂಡುಬೀರಿಯರ ಮತ್ತು ನವನಾಗರಿಕ ನಟನಗಾರ್ತಿಯರದಲ್ಲ."

ಹೆಂಡತಿ ಗಂಡನಿಗೆ ಅತಿ ಅಧೀನವಾಗಿರುವುದರ ವಿರುದ್ಧ ಗಾಂಧೀಜಿ ಒಂದು ಪರಿಹಾರವನ್ನು ಸೂಚಿಸಿದರು. ಅಂಥ ಅಧೀನತೆಯು ಕ್ರೌರ್ಯಕ್ಕೆಡೆಗೊಟ್ಟಾಗ, ಹಿಂದೂ ಸಮಾಜದಲ್ಲಿ ಯುಗಯುಗಗಳಿಂದ ವಿವಾಹವಿಚ್ಛೇದನದ ಪದ್ಧತಿಯಿಲ್ಲದಿದ್ದರೂ ಕ್ರೌರ್ಯವನ್ನೆದುರಿಸುವ ಸನ್ನಿವೇಶ ಪ್ರಾಪ್ತವಾದಾಗ ಸ್ತ್ರೀಯರು, ವಿಚ್ಛೇದನ ಪಡೆಯ

ಬೇಕೆಂದು ಅವರು ವಾದಿಸಿದರು. ಆದರೆ ಯಜ್ಞಪಶುವನ್ನು ಹಿಂಸೆಯಿಂದ ಪ್ರತ್ಯೇಕಿಸುವುದಷ್ಟೇ ಸಾಲದು. ಸಾರ್ವಜನಿಕ ಸೇವೆಗೆ ಅರ್ಹತೆಯನ್ನು ಸಂಪಾದಿಸುವಂತೆ ಆಕೆಯನ್ನು ಪ್ರೇರಿಸಬೇಕು.

ಅಪ್ರಾಪ್ತ ವಯಸ್ಕ ವಿವಾಹವನ್ನೂ ಅನಗತ್ಯ ವೆಚ್ಚವನ್ನೂ ತರುಣರು ತಡೆಗಟ್ಟಬೇಕೆಂಬ ಸರ್ವಾಂಗೀಣ ಸುಧಾರಣೆಯನ್ನವರು ಪ್ರತಿಪಾದಿಸಿದರು. ಮತೀಯ ಕರ್ಮಾಚರಣೆಗೆ ಹತ್ತು ರೂಪಾಯಿಗಳಿಗಿಂತ ಹೆಚ್ಚಿನ ಅಗತ್ಯವಿರಬಾರದು ಮತ್ತು ಕರ್ಮಾಚರಣೆ ಬಿಟ್ಟು ಬೇರೆ ಯಾವುದೂ ವಿವಾಹ ಸಂಸ್ಕಾರಗಳ ಅನಿವಾರ್ಯ ಅಂಗವಾಗಿರಬಾರದೆಂದು ಅವರು ಹೇಳಿದರು. "ಸಿರಿವಂತರ ಮತ್ತು ಬಡವರ, ಉತ್ತಮ ಕೆಳವರ್ಗಗಳ ನಡುವಣ ಅಂತರವು ನಿರ್ನಾಮವಾಗಬೇಕೆಂದು ಪ್ರಯತ್ನ ನಡೆಯುತ್ತಿರುವ ಈ ಪ್ರಜಾಪ್ರಭುತ್ವದ ಯುಗದಲ್ಲಿ ತಮ್ಮ ಎಲ್ಲ ಲಂಪಟತನ ಮತ್ತು ಭೋಗಗಳಲ್ಲಿ ಆತ್ಮಸಂಯಮವನ್ನು ಸಾಧಿಸುವ ಮೂಲಕ ಬಡವರ ತೃಪ್ತಜೀವನಕ್ಕೆ ದಾರಿಮಾಡಿಕೊಡುವುದು ಐಶ್ವರ್ಯವಂತರ ಕರ್ತವ್ಯ. ಈ ಉದ್ದೇಶಕ್ಕಾಗಿ ಸಾವಿರಾರು ಮಂದಿ ಬಡವರು ಜೀವನಾವಶ್ಯಕಗಳನ್ನು ಕಳೆದುಕೊಳ್ಳುತ್ತಾರೆ. ಮತ್ತು ಬಹುಭಾರದ ಬಡ್ಡಿಯ ದರಗಳನ್ನು ತೆತ್ತು ಸಾಲಗಳ ಹೊರೆಯಿಂದ ಬಳಲುತ್ತಾರೆ."

ಹೋರಾಟ ಸನ್ನಿಹಿತವಾಗಿತ್ತು. ಗಾಂಧೀಜಿ ಸ್ವಾತಂತ್ರ್ಯದ ಗಳಿಕೆಗಾಗಿ ಬಲಿದಾನ ಅತ್ಯಂತ ಅಗತ್ಯವೆಂದು ಸಾರಿದರು. ತಮ್ಮ ಅರುವತ್ತನೆಯ ಹುಟ್ಟುಹಬ್ಬದ ದಿನ ಅವರು ಒಂದು ಲಕ್ಷ ರೂ.ಗಳ ಆಸ್ತಿಯುಳ್ಳ ನವಜೀವನ ಕಾರ್ಯಾಲಯದ ಸಾರ್ವಜನಿಕ ಟ್ರಸ್ಟನ್ನು ರಚಿಸಿದರು. ಸ್ವರಾಜ್ಯಸಾಧನೆಗಾಗಿ ಅಹಿಂಸೆಯನ್ನು ಬೋಧಿಸುವ, ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಖಾದಿ ಮತ್ತು ಸ್ವದೇಶಿ ಪ್ರಚಾರವನ್ನು ಕೈಗೊಳ್ಳುವ ಅಸ್ಪೃಶ್ಯತಾ ನಿವಾರಣೆ ಮತ್ತು ಮತೀಯ ಐಕ್ಯವನ್ನು ಸಾಧಿಸುವ ಗುರಿಯನ್ನು ಇಟ್ಟುಕೊಂಡು ಈ ಸಂಸ್ಥೆ ಇನ್ನು ಮುಂದೆ ತನ್ನೆಲ್ಲ ಚಟುವಟಿಕೆಗಳನ್ನು ಸ್ವಾವಲಂಬನೆಯ, ಆಧಾರದ ಮೇಲೆ ನಿರ್ವಹಿಸಿಕೊಳ್ಳಬೇಕು.

# ಪೂರ್ಣಸ್ವರಾಜ್ಯ

೧೯೨೯

ದೇಶಾದ್ಯಂತ ನಡೆಯುತ್ತಿದ್ದ ದಮನಾತ್ಮಕ ದಾಳಿಯ ಹಿನ್ನೆಲೆಯಲ್ಲಿ, ಪ್ರತಿಭಟನೆಯನ್ನು ಕುರಿತ ಗಾಂಧೀಜಿಯ ಯೋಜನೆಯನ್ನು ಪರ್ಯಾಲೋಚಿಸುವುದಕ್ಕಾಗಿ ೧೯೨೯ ಮೇ ೨೪ರಂದು ಬೊಂಬಾಯಿಯಲ್ಲಿ ಎ.ಐ.ಸಿ.ಸಿ.ಯು ಸೇರಿತು. ಮುಂದಿನ ಆಗಸ್ಟ್ ತಿಂಗಳ ಕೊನೆಯ ವೇಳೆಗೆ ಕಾಂಗ್ರೆಸ್‌ನ ದಾಖಲೆ ಪುಸ್ತಕದಲ್ಲಿ ಕಡೆಯ ಪಕ್ಷ ಏಳೂವರೆ ಲಕ್ಷ ಸ್ತ್ರೀಪುರುಷರ ಹೆಸರು ಸೇರಿರಬೇಕೆಂದು ಗಾಂಧೀಜಿ ಸಲಹೆಯಿತ್ತರು. "ಪ್ರಾಮಾಣಿಕವಾಗಿ ಕೆಲಸ ಮಾಡಿದಲ್ಲಿ ೧೯೨೧ರಲ್ಲಿದ್ದಂತೆ ಅದೊಂದು ಕ್ರಿಯಾಶೀಲ ಸಂಸ್ಥೆಯಾಗುತ್ತದೆ. ಒಂದು ಪರಿಪೂರ್ಣ ಕಾಂಗ್ರೆಸ್ ಸಂಸ್ಥೆಯ ಪರೀಕ್ಷೆ ಸರಳವಾದುದು: ಪ್ರತಿಯೊಂದು ಹಳ್ಳಿಯಿಂದಲೂ ಕಾಂಗ್ರೆಸ್ಸು ಪ್ರತಿನಿಧಿಗಳನ್ನು ಹೊಂದಿರಬೇಕು ಮತ್ತು ಪ್ರತಿಯೊಬ್ಬ ಸದಸ್ಯನೂ ಕಾಂಗ್ರೆಸ್ಸಿನ ಉದ್ದೇಶವೇನೆಂಬುದನ್ನು ಅರಿತಿರಬೇಕು. ಅಲ್ಲದೆ ಕಾಂಗ್ರೆಸ್ಸಿನ ಎಲ್ಲ ಕೋರಿಕೆಗಳಿಗೂ ಅವನು ಜವಾಬು ನೀಡಬೇಕು."

"ಜೂನ್ ೧೧ರಂದು ಗಾಂಧೀಜಿ ಸಬರಮತಿ ಆಶ್ರಮದಿಂದ ಆಲ್ಮೋರಾಕ್ಕೆ ಪಯಣಿಸಿದರು. ವಿಶ್ರಾಂತಿ ಹಾಗೂ ಕೆಲಸಗಳೆರಡೂ ಸಾಧ್ಯವಾಗುವಂತೆ ಈ ಪ್ರವಾಸವು ಜವಹರಲಾಲ್ ನೆಹ್ರೂರವರಿಂದ ಏರ್ಪಾಡಾಗಿತ್ತು. ಜೂನ್ ೧೪ರಂದು ಅವರು ನೈನಿತಾಲನ್ನು ತಲುಪಿದರು. ಬೋವಾಲಿಯಲ್ಲಿ ನಡೆದ ಒಂದು ಸಾರ್ವಜನಿಕ ಸಭೆಯಲ್ಲಿ ಅವರು ನಾಗರಿಕರ ಮನವಿಯಲ್ಲಿ ಸೂಚಿಸಲ್ಪಟ್ಟ ಕುಂದುಕೊರತೆಗಳ ಬಗೆಗೆ ಪ್ರಸ್ತಾಪಿಸಿದರು. ಗಾಂಧೀಜಿಯ ಭೇಟಿಯಿಂದ ತಮ್ಮೆಲ್ಲ ತೊಂದರೆಗಳು ಕೊನೆಗಾಣುತ್ತವೆಂಬ ಆಶೆಯನ್ನು ನಾಗರಿಕರು ವ್ಯಕ್ತಪಡಿಸಿದ್ದರು. ಭಗವಂತನಿಗೆ ಮಾತ್ರವೇ ಸೇರಿದ ಆ ಶಕ್ತಿಯನ್ನು ಆರೋಪಿಸಿಕೊಳ್ಳುವ ಸೊಕ್ಕು ತಮ್ಮಲ್ಲಿಲ್ಲವೆಂದೂ, ಯಾರು ಪ್ರಯತ್ನಪಡುತ್ತಾರೋ ಅವರಿಗೆ ಮಾತ್ರ ದೇವರು ಸಹಾಯ ಮಾಡುತ್ತಾನೆಂದೂ ಗಾಂಧೀಜಿ ನುಡಿದರು. ಅಲ್ಲಿನ ಜನರೆಲ್ಲ ಒಗ್ಗಟ್ಟಾಗಿ, ಸುಸಂಘಟಿತರಾಗಿ ತಮ್ಮಲ್ಲಿರುವ ಸಾಮರ್ಥ್ಯವನ್ನು ಅರಿತುಕೊಂಡಲ್ಲಿ ಯಾವ ಮರ್ತ್ಯಶಕ್ತಿಯೂ ಅವರ ಹಕ್ಕುಗಳನ್ನು ಎಷ್ಟು ಕಾಲದ ವರೆಗೂ ತಡೆಹಿಡಿದಿಡುವುದಕ್ಕಾಗುವುದಿಲ್ಲವೆಂದೂ ಈ ಆಂತರಿಕ ಸಾಮರ್ಥ್ಯವನ್ನು ವಿಕಾಸಗೊಳಿಸುವುದಕ್ಕಾಗಿಯೆ ಎ.ಐ.ಸಿ.ಸಿ.ಯು ಕಾಂಗ್ರೆಸ್ ಕಾರ್ಯಕ್ರಮವನ್ನು ರೂಪಿಸಿದೆಯೆಂದೂ ಗಾಂಧೀಜಿ ಆ ಜನರಿಗೆ ತಿಳುಹಿದರು.

೧೯೨೧ರಲ್ಲಿ ಸ್ಥಾಪಿತವಾದ ಪ್ರೇಮ ವಿದ್ಯಾಲಯದ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ಜೂನ್ ೧೬ರಂದು ಅವರು ತಡಿಖೇಟನ್ನು ತಲುಪಿದರು. ಅವರ ಆಗಮನವು ಸುತ್ತಮುತ್ತಣ ಹಳ್ಳಿಗಳಿಂದ ಸಾವಿರಾರು ಮಂದಿಯನ್ನು ಆಕರ್ಷಿಸಿತು. "ನಿಮ್ಮ ಸಂಕಟದ ಕಥೆಯನ್ನು ನಾನಿಲ್ಲಿಗೆ ಬರುವ ಮುನ್ನವೇ ಕೇಳಿದೆ" ಎಂದು ಗಾಂಧೀಜಿ

ಆರಂಭಿಸಿದರು, "ಆದರೆ ಪರಿಹಾರ ನಿಮ್ಮ ಕೈಗಳಲ್ಲೆ ಇದೆ.ಅದೇನೆಂದರೆ ಆತ್ಮಪರಿಶುದ್ಧತೆ. ನಂನಮ್ಮ ಸ್ವಾರ್ಥತೆಯಿಂದ ಮತ್ತು ಪಕ್ಷಪಾತ ಮನೋಭಾವದಿಂದ ನಾವಿಂದು ಕುಗ್ಗಿ ಹೋಗಿದ್ದೇವೆ; ಅವುಗಳನ್ನು ನಾವು ಕಿತ್ತೊಗೆಯಬೇಕು. ನಮ್ಮ ಸಂಸಾರದ ಬಗೆಗೆ ತವಕಪಡುವುದು ನಮಗೆ ತಿಳಿದಿದೆ. ಆದರೆ ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗುವ ಕಾಲ ಬಂದಿದೆ. ಇಡೀ ಹಳ್ಳಿಯನ್ನಾಲಂಗಿಸುವ ವರೆಗೆ ನಮ್ಮ ಪ್ರೇಮದ ಪರಿಧಿಯನ್ನು ಹಿಗ್ಗಲಿಸಿಕೊಳ್ಳಬೇಕು. ನಮ್ಮ ಪ್ರೇಮದ ವ್ಯಾಪ್ತಿ ಇನ್ನೂ ಮುಂದುವರಿದು ಹಳ್ಳಿಯು ಜಿಲ್ಲೆಯನ್ನು, ಜಿಲ್ಲೆ ಪ್ರಾಂತ್ಯವನ್ನು ಅಂತೆಯೇ ಜಗತ್ತಿನ ಎಲ್ಲೆಯನ್ನು ಒಳಗೊಳ್ಳು ವಂತಾಗಬೇಕು. ನಮ್ಮ ಕಾಂಗ್ರೆಸ್ ಸಮಿತಿಗಳು ಮೃತಾವಸ್ಥೆಯಲ್ಲಿವೆ. ಕಾಂಗ್ರೆಸ್ ಧ್ವಜದ ಸುತ್ತ ನೀವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಒಟ್ಟುಗೂಡಬೇಕು. ಮತ್ತು ಅದು ಮತ್ತೊಮ್ಮೆ ಜೀವದಿಂದ ತುಡಿಯುವಂತೆ ಮಾಡಬೇಕು. ನೀವು ಆತ್ಮವಿಶ್ವಾಸವನ್ನು, ಬೆಳೆಸಿಕೊಳ್ಳಬೇಕು ಮತ್ತು ಭಗವಂತನು ನಿಮ್ಮ ರಕ್ಷಾಕವಚವಾಗಬೇಕು. ಅವನಿಗಿಂತ ಬಲಿಷ್ಠ ಶಕ್ತಿ ಬೇರೊಂದಿಲ್ಲ. ಅವನಿಗೆ ಶರಣುಹೋದ ವ್ಯಕ್ತಿ" ಮನುಷ್ಯನಿಗೆ ಹೆದರಲಾರ.

ಪ್ರೇಮ ವಿದ್ಯಾನಿಲಯದ ದುಡಿಮೆಗಾರರನ್ನು ಕುರಿತು ಗಾಂಧೀಜಿ ಹೀಗೆ ಹೇಳಿದರು: "ಸಮರ್ಥವಾದ ಯಾವುದೇ ಸಂಸ್ಥೆಯು ಹಣದ ಅಭಾವದಿಂದ ತೊಂದರೆಪಡಲಾರ ದೆಂಬುದೇ ನನ್ನ ಅಭಿಪ್ರಾಯ. ಹಣದ ಕೊರತೆಯಿಂದ ನಾಶವಾಗಿಹೋಗುವ ಸಂಸ್ಥೆ ಗಳಿಗಿಂತ ಧನಸಮೃದ್ಧಿಯಿಂದ ಉಸಿರು ಕಟ್ಟಿರುವ ಸಂಸ್ಥೆಗಳೇ ಹೆಚ್ಚು. ಹಣಕ್ಕಾಗಿ ಜನತೆಯ ಮೇಲಿನ ನಿರಂತರ ಅವಲಂಬನೆಯು ಒಂದು ಸಂಸ್ಥೆಗೆ ನಿಜವಾದ ವಿನಮ್ರತೆಯ ಪಾಠವನ್ನು ಕಲಿಸುತ್ತದೆ ಮತ್ತು ಅದು ಸದಾ ಚಟುವಟಿಕೆಯಿಂದ ಕೂಡಿರುವಂತೆ ಮಾಡುತ್ತದೆ. ಇದಕ್ಕೆ ಪ್ರತಿಯಾಗಿ ತನ್ನ ನೆರವಿಗೆ ಜನತೆಯನ್ನು ಸಂಪೂರ್ಣವಾಗಿ ಅವ ಲಂಬಿಸದ ಒಂದು ಸಂಸ್ಥೆಯು ಜಡತೆಗೆ ತುತ್ತಾಗುತ್ತದೆ ಮತ್ತು ಅದರ ಕರ್ತವ್ಯ ನಿರ್ವಹಣೆ ಯಲ್ಲಿ ಅಸಡ್ಡೆ ತಲೆದೋರುತ್ತದೆ. ಒಂದು ಸಂಸ್ಥೆ ಪಡೆಯಬಹುದಾದ ಸಾರ್ವಜನಿಕ ನೆರವಿನ ಮೊತ್ತವು ಅದರ ಉಪಯುಕ್ತತೆಗೆ ಅಳತೆಗೋಲಾಗಿರುತ್ತದೆ. ಆದ್ದರಿಂದ ಆರ್ಥಿಕ ಕೊರತೆಯನ್ನೆದುರಿಸುವ ಪ್ರತಿಯೊಂದು ಸಂಸ್ಥೆಯೂ ಕಡತಂದ ಹಣದಿಂದ ಶ್ರೀಮಂತಿಕೆಯ ಸೋಗುಹಾಕುವ ಬದಲು ತನ್ನ ಆದಾಯದ ಮಿತಿಗೊಳಪಡುವಂತೆ ತನ್ನ ಚಟುವಟಿಕೆ ಗಳನ್ನು ಖೋತಮಾಡಿಕೊಳ್ಳಬೇಕೆಂಬುದೇ ನನ್ನ ಸಲಹೆ. ಮೊದಲ ಸಂದರ್ಭದಲ್ಲಿ ಸಂಸ್ಥೆ ಗಾತ್ರದಲ್ಲಿ ಕುಗ್ಗಿದರೂ ತನ್ನ ಮೂಲಭೂತ ನಿರ್ಮಲ ಆರೋಗ್ಯವನ್ನುಳಿಸಿ ಕೊಳ್ಳುತ್ತದೆ. ಮತ್ತು ಎರಡನೆಯ ಪರಿಸ್ಥಿತಿಯಲ್ಲಿ ಅದರ ಊದಿದ ಗಾತ್ರವು ರೋಗಾ ವಸ್ಥೆಯ ಊತವಾಗಿರುತ್ತದೆ. ಆದ್ದರಿಂದ ಈ ಮಾರಕ ಪ್ರಮಾದದಿಂದ ದೂರವಿರುವಂತೆ ನಿಮ್ಮನ್ನು ನಾನು ಮನಃಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.

"ನಿಮ್ಮ ಸಂಸ್ಥೆ ಖಾದಿ ಕೆಲಸಕ್ಕೆ ತನ್ನನ್ನು ಸಮರ್ಪಿಸಿಕೊಂಡಿರುವುದನ್ನೂ ಚರಕಕ್ಕೆ ಕೇಂದ್ರಸ್ಥಾನ ನೀಡಿರುವುದನ್ನೂ ಕೇಳಿ ಸಂತೋಷವಾಗಿದೆ. ಇದರಿಂದಾಗಿ ಈ ಪುಟ್ಟ ಚಕ್ರದ ಆಂತರಿಕ ಮಹತ್ವವನ್ನು ತಿಳಿದುಕೊಳ್ಳಲೂ ಅದರ ಪೂರ್ಣ ಸಾಮರ್ಥ್ಯವನ್ನು

ಅರಿತುಕೊಳ್ಳಲೂ ಸಾಧ್ಯವಾಗಿದೆಯೆಂಬುದನ್ನು ಬಲ್ಲೆ. ಪೆಷಾವರಿನಿಂದ ಕನ್ಯಾಕುಮಾರಿಯ ವರೆಗೆ ಮತ್ತು ಕರಾಚಿಯಿಂದ ದೂರದ ಅಸ್ಸಾಮಿನವರೆಗೆ ಭಾರತದ ಸಮೃದ್ಧ ಜನ ಕೋಟಿಯನ್ನು ಪರಸ್ಪರ ಹತ್ತಿರಕ್ಕೆ ತರಲು ಮತ್ತು ಒಂದು ದೃಢವಾದ ಬಾಂಧವ್ಯದಿಂದ ಬಂಧಿಸಲು ಈ ಚರಕದಿಂದ ನೂತ ದುರ್ಬಲ ನೂಲಿಗಿಂತ ಶಕ್ತಿಯುತವಾದ ಸಾಧನ ಬೇರೊಂದಿಲ್ಲ. ರೂಪಾಯಿಗಳ, ಆಣೆಗಳ ಮತ್ತು ಪೈಸೆಗಳ ಪರಿಭಾಷೆಯಲ್ಲಿ ಅದರ ಯೋಗ್ಯತೆಯನ್ನು ಅಳೆಯದೆ, ಜನರಲ್ಲಿ ಅದು ಉತ್ಪಾದಿಸಬಹುದಾದ ಶಕ್ತಿಯ ಪರಿ ಭಾಷೆಯಲ್ಲಿ ಅಳೆಯಬೇಕೆಂದು ನಾನು ನಿಮಗೆ ಸೂಚಿಸುತ್ತೇನೆ."

ಆಲ್ಮೋರದ ಕಾರ್ಯಕ್ರಮವು ಪೌರಸಭೆಯ ಅಭಿನಂದನಾ ಭಾಷಣದಿಂದ ಆರಂಭ ವಾಯಿತು. ಉತ್ತರವಾಗಿ, ಗಾಂಧೀಜಿಯು ಪಾಠಕ್ರಮದಲ್ಲಿ ನೂಲುವಿಕೆ ಮತ್ತು ನೇಯ್ಗೆಗಳ ಶಿಕ್ಷಣವನ್ನು ಸೇರ್ಪಡೆಗೊಳಿಸುವ ಮೂಲಕ ಶಿಕ್ಷಣವನ್ನು ಸ್ವಯಮಾಧಾರ ವುಳ್ಳದ್ದನ್ನಾಗಿ ಮಾಡಲು ಪ್ರಯತ್ನಿಸಬೇಕೆಂದು ಪುರಸಭೆಗಳಿಗೆ ಸಲಹೆ ನೀಡಿದರು. ಅವರು ಸೂಚಿಸಿದ ಈ ಯೋಜನೆಯು ಸಾರ್ವತ್ರಿಕವಾಗಿ ಸ್ವೀಕೃತವಾಗಬೇಕು. ಇಲ್ಲದಿದ್ದರೆ ಭಾರತದಂಥ ವಿಶಾಲದೇಶದಲ್ಲಿ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡಿಯೂ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಕಾರ್ಯವು ಅಸಾಧ್ಯವಾಗುತ್ತದೆ. ದೈಹಿಕ ಶ್ರಮದ ತರಬೇತಿಯ ಪ್ರಾರಂಭ, ಪ್ರಾಥಮಿಕ ಶಿಕ್ಷಣದ ಖರ್ಚನ್ನು ತೂಗಿಸುವುದರಲ್ಲಿ ನೆರವು ನೀಡುವುದಲ್ಲದೆ, ಮಕ್ಕಳ ಶಾರೀರಿಕ ಆರೋಗ್ಯದ ಮೇಲೂ ಸ್ವಾಗತಾರ್ಹ ಪರಿಣಾಮವನ್ನು ಬೀರುತ್ತದೆ ಮತ್ತು ಅದರಲ್ಲಿನ ಶಿಸ್ತು ಅವರ ಕೀಟಲೆಯ ಪ್ರವೃತ್ತಿ ಯನ್ನು ಚಿವುಟಿಹಾಕುತ್ತದೆ.

ಗಾಂಧೀಜಿ ಸಭೆಯಿಂದ ವಾಪಸಾಗುತ್ತಿದ್ದಾಗ ಪದಮ್‌ಸಿಂಗ್ ಎಂಬ ಹಳ್ಳಿಗನಿಗೆ ಅವರ ಕಾರು ಹೊಡೆದು ನೆಲಕ್ಕುರುಳಿದನು. ಅವನನ್ನು ನೋಡಲು ಗಾಂಧೀಜಿ ಆಸ್ಪತ್ರೆಗೆ ಹೋದಾಗ ಪದಮ್‌ಸಿಂಗ್ ಹೀಗೆಂದು ಹೇಳಿದನು: "ನಾನು ಸತ್ತುಹೋದಲ್ಲಿ ನನ್ನ ಮಗನನ್ನು ನೀವು ಆಶೀರ್ವದಿಸಬೇಕು." "ಅವನನ್ನು ಆಶ್ರಮಕ್ಕೆ ಕರೆದುಕೊಂಡು ಹೋಗುವ ಜವಾಬ್ದಾರಿ ನನ್ನದು. ಅಲ್ಲಿ ಅವನಿಗೆ ಶಿಕ್ಷಣ ನೀಡಿ ಪಾಲಿಸಲಾಗುತ್ತದೆ. ಅಥವಾ ನೀನು ಇಷ್ಟಪಡುವಂತೆ ಊರಿನಲ್ಲಿಯೇ ಅವನಿಗೆ ಅಗತ್ಯ ಮುನ್ನೇರ್ಪಾಡನ್ನು ಮಾಡಲಾಗುತ್ತದೆ" ಎಂದು ಗಾಂಧೀಜಿ ಹೇಳಿದರು. ಅದಕ್ಕೆ ಸಾಯುತ್ತಿರುವ ಮನುಷ್ಯ ಹೇಳಿದ, "ಇಲ್ಲ, ನನಗೆ ಬೇಕಾದುದು ಅದಲ್ಲ; ಅದರ ಅಗತ್ಯವೇನೂ ಇಲ್ಲ. ನನಗೆ ಬೇಕಾದುದೆಂದರೆ ನಿಮ್ಮ ಆಶೀರ್ವಾದವೊಂದೆ."

ಪದಮ್‌ಸಿಂಗನ ಸಾವನ್ನು ಪ್ರಸ್ತಾಪಿಸುತ್ತಾ ಅವರು 'ಯಂಗ್ ಇಂಡಿಯಾ'ದಲ್ಲಿ ಹೀಗೆ ಬರೆದರು: "ಸಾವು ಅಥವಾ ಅದಕ್ಕಿಂತ ಲಘುವಾದ ಆಕಸ್ಮಿಕಗಳು ಸಾಮಾನ್ಯವಾಗಿ ನನ್ನಲ್ಲಿ ಕ್ಷಣಿಕ ಆಘಾತವನ್ನುಂಟುಮಾಡುತ್ತವೆ. ಆದರೆ ಇದನ್ನು ಬರೆಯುವ ವೇಳೆಯಲ್ಲಿ ಕೂಡ ಇತ್ತೀಚಿನ ಆಘಾತದಿಂದ ನಾನು ಚೇತರಿಸಿಕೊಂಡಿಲ್ಲ. ಗುಂಪನ್ನು ದಾಟುವ ವರೆಗೆ ನಾನು ನಡೆದು ಬರಬೇಕಾಗಿತ್ತು; ಇಲ್ಲವೆ ಕಾರನ್ನು ನಡಿಗೆಯ ಗತಿಯಲ್ಲಿ ಸಾಗುವಂತೆ

ಮಾಡಬೇಕಾಗಿತ್ತು. ಆದರೆ ಒಂದೇ ಸಮನಾದ ಕಾರು ಪ್ರಯಾಣ ನನ್ನನ್ನು ಒರಟನನ್ನಾಗಿ ಮಾಡಿದೆ. ತೀವ್ರವಾದ ಅಪಘಾತಗಳು ಇಲ್ಲದಿರುವಿಕೆ ಪಾದಚಾರಿಗಳ ಸುರಕ್ಷತೆಯ ಬಗೆಗೆ ಅಪ್ರಜ್ಞಾಪೂರ್ವಕ, ಆದರೆ ಅಕ್ಷಮ್ಯ ಅವಜ್ಞೆಯನ್ನು ಹುಟ್ಟಿಸಿದೆ. ಎಲ್ಲ ಬಗೆಯ ಸೌಕರ್ಯಗಳನ್ನು ಹೊಂದಿದ್ದರೂ ಕಾರುಯಾನವು ಪ್ರಯಾಣದ ಒಂದು ಅಸ್ವಾಭಾವಿಕ ವಿಧಾನವೆಂಬ ನನ್ನ ನಂಬುಗೆಯನ್ನು ಪುನರುಚ್ಚರಿಸಲೇಬೇಕಾಗುತ್ತದೆ. ಇದರಿಂದ ನನ್ನ ನಡೆವಳಿಯ ಅಸಾಂಗತ್ಯದ ಬಗೆಗೆ ಆಕ್ಷೇಪವೇಳುವುದಾದರೂ ಪರವಾಯಿಲ್ಲ. ಕಾರನ್ನು ಬಳಸುವವರು ತಮ್ಮ ಚಾಲಕರನ್ನು ಹತೋಟಿಯಲ್ಲಿಡಬೇಕಾದುದು ಮತ್ತು ವೇಗವೇ ಜೀವನದ ಪರಮಪುರುಷಾರ್ಥವಲ್ಲವೆಂದು ಅರಿಯುವುದು ಅಗತ್ಯ. ಕಟ್ಟಕಡೆಗೆ ಅದರಿಂದ ಯಾವ ಫಾಯಿದೆಯೂ ದೊರೆಯಲಾರದು. ಭಾರತದಲ್ಲಿನ ಈ ನನ್ನ ಬಿರುಸಿನ ಪ್ರವಾಸ ದಿಂದ ಒಳ್ಳೆಯದಾಗಿದೆಯೆಂದು ನನ್ನ ಮನಸ್ಸಿಗೆ ಸ್ಪಷ್ಟವಾಗಿಲ್ಲ. ಏನೇ ಆಗಲಿ, ಪದಮ್ ಸಿಂಗನ ಸಾವು ನನ್ನನ್ನು ಅತ್ಯುಗ್ರ ಆಲೋಚನೆಗೆ ಒಳಗುಮಾಡಿದೆ."

ಜುಲೈ ೨ರಂದು ಗಾಂಧೀಜಿ ಆಲ್ಮೋರವನ್ನು ಬಿಟ್ಟರು. ೬ರಂದು ಸಬರಮತಿ ಆಶ್ರಮಕ್ಕೆ ಹಿಂದಿರುಗಿದಾಗ, ತಮ್ಮ ಹೆಸರು ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನಕ್ಕೆ ಸೂಚಿತ ವಾಗಿರುವುದನ್ನು ಅವರು ಪತ್ರಿಕೆಗಳಲ್ಲಿ ಓದಿದರು. ಗಾಂಧೀಜಿ ಈ ಬೇಡಿಕೆಯನ್ನು ನಿರಾಕರಿಸಿ ಆ ಸ್ಥಾನಕ್ಕೆ ಜವಹರಲಾಲ್ ನೆಹ್ರೂರವರ ಹೆಸರನ್ನು ಸೂಚಿಸಿದರು.

"ಅಧಿಕಾರವನ್ನು ನಾನು ಒಪ್ಪಿಕೊಂಡಲ್ಲಿ ನನ್ನ ಸ್ವಭಾವಕ್ಕನುಗುಣವಾಗಿ ಕಛೇರಿಯ ಕೆಲಸದ ಎಲ್ಲ ವಿವರಗಳಿಗೂ ಗಮನ ನೀಡಬೇಕಾಗುತ್ತದೆ. ಆದರೆ ಈಗ ಅದನ್ನು ನಿರ್ವಹಿ ಸಲು ನಾನು ಬಹುತೇಕ ಅಸಮರ್ಥನಾಗಿದ್ದೇನೆಂದು ನನಗನ್ನಿಸುತ್ತದೆ. ಘಟನೆಗಳ ಗತಿ ಯೊಂದಿಗೆ ನಾನು ಸರಿಸಮನಾಗಿ ಹೆಜ್ಜೆ ಹಾಕುತ್ತಿಲ್ಲವೆಂಬುದೂ ನನಗೆ ತಿಳಿದಿದೆ. ಆದ್ದರಿಂದ ಉದಯೋನ್ಮುಖ ಪೀಳಿಗೆಗೂ ನನಗೂ ನಡುವೆ ಒಂದು ಖಾರಿಯಿದೆ. ಇದರರ್ಥ ನನ್ನನ್ನು ಕಾಲಕ್ಕೆ ತಗದ ಒಬ್ಬ ಮನುಷ್ಯನೆಂದು ನಾನು ಭಾವಿಸುವೆನೆಂದಲ್ಲ. ಆದರೆ ಅವರ ನಡುವೆ ಕೆಲಸ ಮಾಡುವ ಸಂದರ್ಭ ಬಂದಾಗ ನಾನು ಹಿಂಬದಿಯ ಪೀಠದಲ್ಲಿ ಕುಳಿತು ಕೊಳ್ಳಬೇಕು ಮತ್ತು ಉಕ್ಕೇರುವ ಅಲೆಗಳು ನನ್ನ ಮೇಲೆ ಮುನ್ನುಗ್ಗಲು ಅವಕಾಶ ಮಾಡಿಕೊಡಬೇಕು ಎಂದು ನಾನು ತಿಳಿದಿದ್ದೇನೆ.

"ವಯಸ್ಸಾದವರ ಅಧಿಕಾರದ ಕಾಲ ಮುಗಿಯಿತು. ಭವಿಷ್ಯದ ಹೋರಾಟವನ್ನು ಇಂದಿನ ಯುವಕ ಯುವತಿಯರು ನಡೆಸಬೇಕಾಗಿದೆ. ನಮ್ಮಲ್ಲಿ ಯಾರಾದರೊಬ್ಬರ ನೇತೃತ್ವದಲ್ಲಿ ಅವರು ಮುಂದುವರಿಯುವುದು ಯುಕ್ತ. ವಯಸ್ಸಾದ ಮಂದಿ, ಕಾಲದ ಲಕ್ಷಣಗಳನ್ನರಿಯದಿದ್ದಾಗ ಯಾವುದನ್ನು ಅವರಿಂದ ಬಲಾತ್ಕಾರಪೂರ್ವಕವಾಗಿ ಕಸಿದು ಕೊಳ್ಳಲಾಗುವುದೋ ಅದನ್ನವರು ಗೌರವದಿಂದ ಬಿಟ್ಟುಕೊಡಬೇಕು. ಜವಾಬ್ದಾರಿಯು ಯುವಜನಾಂಗವನ್ನು ಹದಗೊಳಿಸುತ್ತದೆ ಮತ್ತು ಸ್ತಿಮಿತಕ್ಕೆ ತರುತ್ತದೆ; ನಿರ್ವಹಿಸ ಬೇಕಾದ ಹೊಣೆಗೆ ಅವರನ್ನು ಸಿದ್ಧಗೊಳಿಸುತ್ತದೆ. ಪಂಡಿತ ಜವಹರಲಾಲ ನೆಹ್ರೂ ರವರಲ್ಲಿ ಸರ್ವಸಾಮಾನ್ಯವಾದ ಎಲ್ಲ ಅರ್ಹತೆಗಳೂ ಇವೆ. ಅವರು ಕಾಂಗ್ರೆಸ್ಸಿನ

ಕಾರ್ಯದರ್ಶಿಯ ಜವಾಬ್ದಾರಿಯನ್ನು ಅನೇಕ ವರ್ಷಗಳಿಂದ ಅದ್ವಿತೀಯ ಸಾಮರ್ಥ್ಯ ದಿಂದ ಮತ್ತು ಶ್ರದ್ಧೆಯಿಂದ ನಿರ್ವಹಿಸಿದ್ದಾರೆ. ತಮ್ಮ ಧೈರ್ಯ, ದೃಢಸಂಕಲ್ಪ, ಶ್ರದ್ಧೆ, ಪ್ರಾಮಾಣಿಕತೆ ಮತ್ತು ಖ್ಯಾತಿಗಳಿಂದ ಈ ದೇಶದ ತರುಣ ಜನಾಂಗದ ಕಲ್ಪನೆಯನ್ನು ಸೆರೆ ಹಿಡಿದಿದ್ದಾರೆ. ರೈತರು ಮತ್ತು ಕಾರ್ಮಿಕರ ಸಂಪರ್ಕ ಅವರಿಗಿದೆ. ನಮ್ಮ ರಾಜಕೀಯದ ಮೌಲ್ಯಮಾಪನ ಕಾರ್ಯದಲ್ಲಿ ಅವರ ಯುರೋಪೀಯ ರಾಜಕೀಯದ ನಿಕಟ ಪರಿಚಯವು ಒಂದು ದೊಡ್ಡ ಆಸ್ತಿಯಾಗಿದೆ.

"ಕಾಂಗ್ರೆಸ್ಸಿನ ಹೊರಗೆ ವಿವಿಧ ಗುಂಪುಗಳು ಮತ್ತು ಪಕ್ಷಗಳೊಡನೆ ಸೂಕ್ಷ್ಮ ಸಂಧಾನಗಳನ್ನು ಕೈಗೊಳ್ಳಬೇಕಾಗಿರುವಾಗ, ಮತ್ತು ಬ್ರಿಟಿಷ್ ರಾಜತಾಂತ್ರಿಕತೆಯೊಂದಿಗೆ ವ್ಯವಹರಿಸಬೇಕಾಗಿರುವಾಗ, ಇನ್ನೂ ಪರಿಹರಿಸಬೇಕಾದ ಹಿಂದೂ ಮುಸ್ಲಿಂ ತೊಡಕು ಮುಂದಿರುವಾಗ, ನಿಮ್ಮಂಥ ಯಾರಾದರೊಬ್ಬರು ನಾಯಕರಾಗಿರಬೇಕು– ಎಂದು ಹಿರಿಯ ಪೀಳಿಗೆಯವರು ಹೇಳುತ್ತಾರೆ. ಈ ವಾದದಲ್ಲಿ ಹುರುಳಿರುವು ದಾದರೆ, ಈ ಕೆಳಗಿನ ಅಂಶದ ಬಗೆಗೆ ಅವರ ಗಮನ ಸೆಳೆಯುವುದರ ಮೂಲಕ ಅದಕ್ಕೆ ಸೂಕ್ತ ಉತ್ತರ ನೀಡಬಹುದು. ಏನೇ ವಿಶೇಷ ಗುಣಗಳನ್ನು ನಾನು ಪಡೆದಿರಬಹು ದಾದರೂ, ಅಧಿಕಾರದ ತೊಡಕ್ಕಿಲ್ಲದೆ, ದೂರವುಳಿಯುವುದರಿಂದ ಆ ಗುಣಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ನನಗೆ ಸಾಧ್ಯವಾಗುತ್ತದೆ. ಎಲ್ಲಿಯವರೆಗೆ ನಮ್ಮ ಜನರ ಪ್ರೀತಿವಿಶ್ವಾಸಗಳನ್ನು ನಾನು ಉಳಿಸಿಕೊಳ್ಳುತ್ತೇನೆಯೋ ಅಲ್ಲಿಯವರೆಗೆ, ಅಧಿಕಾರವಿಲ್ಲದೆ ನಾನು ಪಡೆದಿರಬಹುದಾದ ಅಂಥ ಶಕ್ತಿಗಳ ಸಂಪೂರ್ಣ ಪ್ರಯೋಜನ ವನ್ನು ಪಡೆಯಲು ಸಮರ್ಥನಾಗುವುದರಲ್ಲಿ ಕಿಂಚಿತ್ ಭಯವೂ ಇರುವುದಿಲ್ಲ. ೧೯೨೦ ನೆಯ ಇಸವಿಯಿಂದ ಅಧಿಕಾರವಿಲ್ಲದೆಯೆ ದೇಶದ ಬದುಕಿನ ಮೇಲೆ ಪ್ರಭಾವ ಬೀರಲು ಭಗವಂತನು ನನಗೆ ಶಕ್ತಿ ನೀಡಿದ್ದಾನೆ. ಬೆಳಗಾಂನಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷನಾದದ್ದರಿಂದ ನನ್ನ ಸೇವಾ ಸಾಮರ್ಥ್ಯವು ಅಧಿಕಗೊಂಡಿತೆಂದು ನಾನು ತಿಳಿದಿಲ್ಲ.

"ನನ್ನ ಮತ್ತು ಜವಹರಲಾಲರ ನಡುವಣ ಸಂಬಂಧವನ್ನು ಅರಿತಿರುವವರು ಆ ಪೀಠದಲ್ಲಿ ಜವಹರರಿರುವುದು ನಾನಿದ್ದಂತೆಯೇ ಎಂದು ತಿಳಿಯುತ್ತಾರೆ. ನಮ್ಮಲ್ಲಿ ಬೌದ್ಧಿಕ ಭಿನ್ನಾಭಿಪ್ರಾಯಗಳಿರಬಹುದು. ಆದರೆ ನಮ್ಮ ಹೃದಯಗಳು ಒಂದೆ. ಹುರುಪಿನ ಚಾಲಕ ಶಕ್ತಿಯಿಂದೊಡಗೂಡಿದ ನಿಷ್ಠೆ ಮತ್ತು ಕಠೋರ ಶಿಸ್ತಿನ ಪ್ರಜ್ಞೆಯಿಂದಾಗಿ ಅವರು ಸಂಪೂರ್ಣ ವಿಶ್ವಾಸವಿಡಬಹುದಾದ ಒಬ್ಬ ಅನರ್ಘ್ಯಗೆಳೆಯರಾಗಿದ್ದಾರೆ.

"ಜವಹರಲಾಲರ ಹೆಸರು ಬ್ರಿಟಿಷ್ ಗೂಳಿಯನ್ನು ಕೆರಳಿಸುವ ಕೆಂಪು ವಸ್ತ್ರವಾಗು ವುದಿಲ್ಲವೆ? ಎಂದು ಮತ್ತೊಬ್ಬ ವಿಚಾರಕನು ಪಿಸುಗುಟ್ಟುತ್ತಾನೆ. ಕಾಲ್ಪನಿಕ ವಿಚಾರಕನಂತೆ ನಾವು ಯೋಚಿಸಿದ್ದಾದಲ್ಲಿ ಸಾಮಾನ್ಯ ವ್ಯವಹಾರ ಜ್ಞಾನ ಮತ್ತು ರಾಜ ತಾಂತ್ರಿಕತೆ ಗಳಿಗಾಗಿ ಬ್ರಿಟಿಷ್ ರಾಜಕೀಯ ಪ್ರಮುಖರನ್ನು ನಾವು ಅಲ್ಪಸ್ವಲ್ಪ ನಂಬು ತ್ತೇವೆ; ಆದರೆ ನಮ್ಮಲ್ಲಿ ನಾವು ವ್ಯಕ್ತಪಡಿಸುವ ವಿಶ್ವಾಸವು ಅದಕ್ಕಿಂತ ಕಡಿಮೆಯಾದುದು. ನಮಗೆ ನಿಜವಾಗಿಯೂ ಸಾಧುವಾದ ನಿರ್ಣಯ ಇಡೀ ಪ್ರಪಂಚಕ್ಕೆ ಸಾಧುವಾಗಿರಬೇಕು.

ಕೊನೆಯದಾಗಿ, ಕಾಂಗ್ರೆಸ್ಸಿನ ಅಧ್ಯಕ್ಷ ನಿರಂಕುಶ ಪ್ರಭುವೇನಲ್ಲ. ಒಂದು ಸ್ಪಷ್ಟರೂಪಿತ ವ್ಯವಸ್ಥೆಯ ಮತ್ತು ಸುಪ್ರಸಿದ್ಧ ಸಂಪ್ರದಾಯಗಳ ಕೆಳಗೆ ಕೆಲಸಮಾಡುವ ಒಬ್ಬ ಪ್ರತಿನಿಧಿ ಅವನು. ಇಂಗ್ಲಿಷ್ ದೊರೆಗಿಂತ ಹೆಚ್ಚಾಗಿ ಆತ ಎಂದೂ ತನ್ನ ಅಭಿಪ್ರಾಯಗಳನ್ನು ಜನರ ಮೇಲೆ ಹೇರಲು ಸಾಧ್ಯವಿಲ್ಲ. ಕಾಂಗ್ರೆಸ್ ನಲವತ್ತೈದು ವರ್ಷಗಳ ಒಂದು ಹಿರಿಯ ಸಂಸ್ಥೆ. ಅದು ತನ್ನ ಅತ್ಯಂತ ಖ್ಯಾತ ಅಧ್ಯಕ್ಷರನ್ನೂ ಮೀರಿಸಿದ ಸ್ಥಾನವನ್ನು ಪಡೆದಿದೆ. ಕಾಲವು ಪಕ್ವವಾದಾಗ ಅಖಂಡ ಕಾಂಗ್ರೆಸ್ಸಿನೊಡನೆ ಮಾತ್ರವೆ ಬ್ರಿಟಿಷ್ ಮುತ್ಸದ್ದಿಗಳು ವ್ಯವಹರಿಸಬೇಕಾಗುತ್ತದೆ. ಇದು ಬಹುಶಃ ನಮಗಿಂತ ಅವರಿಗೆ ಚೆನ್ನಾಗಿ ತಿಳಿದಿದೆ. ಆದ್ದರಿಂದ ಈ ಎಲ್ಲ ಸಂಗತಿಗಳನ್ನು ಪರಿಗಣಿಸಿ, ನನ್ನ ಬಗೆಗೆ ಆಲೋಚಿಸುವುದನ್ನು ಬಿಟ್ಟು ಸಂಪೂರ್ಣ ವಿಶ್ವಾಸ ಮತ್ತು ಭರವಸೆಗಳೊಡನೆ ಪಂಡಿತ ಜವಹರಲಾಲ ನೆಹ್ರೂರವರನ್ನು ಉನ್ನತ ಅಧಿಕಾರಕ್ಕೆ ಆಹ್ವಾನಿಸಬೇಕೆಂದು ಸಂಬಂಧಪಟ್ಟವರಿಗೆ ನಾನು ಸಲಹೆ ನೀಡುತ್ತೇನೆ."

ಗಾಂಧೀಜಿಯ ನಿರಾಕರಣೆಯು ಅರ್ಥವತ್ತಾಗಿದ್ದರೂ ಅದು ಚರ್ಚೆಗೆ ತುಸು ಅವಕಾಶ ಮಾಡಿಕೊಡುವಂತೆ ತೋರಿತು. ಅವರು ಅದರ ಬಗೆಗೆ ಪುನರಾಲೋಚಿಸುತ್ತಾರೆಂದು ಆಶಿಸಲಾಗಿತ್ತು. ಹತ್ತು ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಗಾಂಧೀಜಿಯನ್ನು ನಾಮಕರಣ ಮಾಡಿದುವು. ವಲ್ಲಭಭಾಯಿ ಪಟೇಲ್ ಮತ್ತು ಜವಹರಲಾಲರನ್ನು ಕ್ರಮವಾಗಿ ಐದು ಮತ್ತು ಮೂರು ಸಮಿತಿಗಳು ಬೆಂಬಲಿಸಿದುವು. ಅಂತಿಮ ತೀರ್ಮಾನಕ್ಕೆ ಕೈಗೊಳ್ಳಲು ಲಕ್ನೊದಲ್ಲಿ ಎ.ಐ.ಸಿ.ಸಿ ಯ ಸಭೆ ನಡೆಯಿತು. ಆದರೆ ಗಾಂಧೀಜಿ ಅಧ್ಯಕ್ಷ ಸ್ಥಾನಕ್ಕೆ ಜವಹರಲಾಲರ ಹೆಸರನ್ನೇ ಒತ್ತಾಯಪೂರ್ವಕವಾಗಿ ಸೂಚಿಸಿದರು, ಆ ಸೂಚನೆಗೆ ಅಂಗೀಕಾರವೂ ದೊರೆಯಿತು. ತರುಣ ಅಧ್ಯಕ್ಷರನ್ನು ಸ್ವಾಗತಿಸುತ್ತಾ ಗಾಂಧೀಜಿ ಹೀಗೆ ಬರೆದರು:

"ಹಿರಿಯರಿಂದ ತರುಣರಿಗೆ ಅಧಿಕಾರ ವರ್ಗಾವಣೆಯಾದದ್ದರಿಂದ ಕೆಲವರು ಕಾಂಗ್ರೆಸ್ಸಿನ ಭವಿಷ್ಯದ ಬಗೆಗೆ ಆತಂಕಗೊಂಡಿದ್ದಾರೆ. ಆದರೆ ಆ ಆತಂಕ ನನಗಿಲ್ಲ. ಈಗ ನನ್ನಂಥವರ ದುರ್ಬಲ ಕೈಗಳಲ್ಲಿ ಅಧಿಕಾರದಂಡವಿದ್ದ ಪಕ್ಷದಲ್ಲಿ ಭವಿಷ್ಯದ ಬಗೆಗೆ ಆತಂಕ ಪಡಬೇಕಾಗಿತ್ತು. ನಾನು ಓದುಗನಿಗೆ ಒಂದು ಗುಟ್ಟನ್ನು ಹೇಳಬಹುದು. ಆ ಹೊರೆಗೆ ಜವಹರಲಾಲ ನೆಹ್ರೂರವರ ಹೆಸರನ್ನು ಶಿಫಾರಸು ಮಾಡುವ ಮೊದಲು, ಅದನ್ನು ಹೊರಲು ಅವರು ಸಾಕಷ್ಟು ಸಮರ್ಥರಾಗಿದ್ದಾರೆಯೆ ಎಂದು ತಿಳಿಯಲು ಅವರೊಡನೆ ಮಾತಾಡಿದೆ. ಅದಕ್ಕೆ ಅವರು ಕೊಟ್ಟ ಉತ್ತರ ವಿಶಿಷ್ಟವಾಗಿತ್ತು: ' ಆ ಹೊಣೆಯನ್ನು ನನ್ನ ಮೇಲೆ ಹೇರಿದಲ್ಲಿ ನಾನೇನೂ ಹೆದರಿ ಹಿಂಜರಿಯುವುದಿಲ್ಲ.' ಸ್ಥೈರ್ಯದಲ್ಲಿ ಅವರನ್ನು ಮೀರಿಸುವುದಕ್ಕಾಗದು. ದೇಶಪ್ರೇಮದಲ್ಲಿ ಅವರನ್ನು ಸರಿಗಟ್ಟುವವರು ಯಾರು? 'ಅವರು ದುಡುಕೀ ಹಾಗೂ ಒರಟ'ರೆಂದು ಕೆಲವರು ಹೇಳುತ್ತಾರೆ. ಪ್ರಸಕ್ತ ಸಮಯದಲ್ಲಿ ಈ ಗುಣವು ಒಂದು ವಿಶೇಷ ಅರ್ಹತೆಯೇ ಆಗಿದೆ. ಸಿಪಾಯಿಯ ದಿಟ್ಟತನ ಮತ್ತು ಒರಟುತನಗಳ ಜೊತೆಗೆ ಮುತ್ಸದ್ದಿಯ ದೂರದೃಷ್ಟಿಯೂ ಅವರಲ್ಲಿದೆ. ಶಿಸ್ತುಪ್ರಿಯ

ರಾಗಿರುವ ಅವರು ಇಕ್ಕಟ್ಟಿನ ಸಂದರ್ಭದಲ್ಲಿಯೂ ಅದಕ್ಕೆ ಕಟ್ಟುನಿಟ್ಟಾಗಿ ತಲೆಬಾಗುವ ಸಾಮರ್ಥ್ಯವನ್ನು ತೋರಿದ್ದಾರೆ. ಅವರು ತಮ್ಮ ಪರಿಸರಕ್ಕಿಂತ ಮುಂದಾಗಿ ಆಲೋಚಿಸುವ ಉಗ್ರಗಾಮಿಯೆಂಬುದು ಖಚಿತ. ಆದರೆ ಒಡಕು ಸಂಭವಿಸುವಷ್ಟು ದೂರ ಹೋಗದಂಥ ವಿನೀತತೆ ಮತ್ತು ಕಾರ್ಯಶೀಲತೆ ಅವರಲ್ಲಿದೆ. ಅವರು ಸ್ಫಟಿಕದಂತೆ ನಿರ್ಮಲರೂ ಸಂಶಯ ಕ್ಕೆಡೆಯಿಲ್ಲದಂಥ ಸತ್ಯವಾದಿಯೂ ಆಗಿದ್ದಾರೆ; ನಿರ್ಭೀತರೂ ನಿರ್ದುಷ್ಟರೂ ಆದ ಒಬ್ಬ ಧೀರೋದಾತ್ತ ವೀರರಾಗಿದ್ದಾರೆ. ಅವರ ಕೈಗಳಲ್ಲಿ ರಾಷ್ಟ್ರವು ಸುರಕ್ಷಿತವಾಗಿರುತ್ತದೆ.

"ಆದರೆ ಯುವಜನಾಂಗಕ್ಕೆ ಇದು ಪರೀಕ್ಷೆಯ ಕಾಲ. ತರುಣಪೀಳಿಗೆಯು ಜಾಗೃತಿ ಗೊಳ್ಳಬೇಕಾದ ವರ್ಷವಿದು. ಸೈಮನ್ ನಿಯೋಗದ ಬಹಿಷ್ಕಾರದ ಉಜ್ವಲ ಯಶಸ್ಸಿಗೆ ಅವರದು ನಿಸ್ಸಂದೇಹವಾಗಿ ಅತಿ ದೊಡ್ಡ ಕೊಡುಗೆಯಾಗಿತ್ತು. ಜವಹರಲಾಲ ನೆಹ್ರೂ ರವರ ಆಯ್ಕೆಯನ್ನು ಅವರು ತಮ್ಮ ಸೇವೆಗೆ ಸಂದ ಗೌರವವೆಂದು ಭಾವಿಸಬಹುದು. ಆದಗೆ ಯುವಜನರು ಹಿಂದೆ ಸಂಪಾದಿಸಿರುವ ಪ್ರಶಸ್ತಿಗಳಿಂದಲೇ ತೃಪ್ತರಾಗಕೂಡದು. ರಾಷ್ಟ್ರವು ಸ್ವತಂತ್ರವಾಗುವ ಮುನ್ನ ಅವರು ಅನೇಕ ಹಂತಗಳಲ್ಲಿ ಮುನ್ನಡೆಯಬೇಕಾಗಿದೆ. ಬಲವಾದುದೂ ಚಿಕ್ಕದೂ ಆದ ಒಂದು ಕೋಶದಲ್ಲಿ ಕೂಡಿಟ್ಟು ಕಿರಿದಾದ ಹೊರ ಗಿಂಡಿಯ ಮೂಲಕ ಕ್ರಮವಾಗಿ ಹರಿಸಿದಾಗ ಮಾತ್ರ ಆವಿಯು ಒಂದು ಬಲಿಷ್ಠ ಶಕ್ತಿ ಯಾಗಿ ಪರಿಣಮಿಸುತ್ತದೆ. ಆಗ ಅದು ಅದ್ಭುತ ಚಲನಶಕ್ತಿಯನ್ನು ಸೃಷ್ಟಿಸುತ್ತಲ್ಲದೆ, ದೊಡ್ಡ ಭಾರಗಳನ್ನೂ ಹೊತ್ತೊಯ್ಯುತ್ತದೆ. ಅಂತೆಯೇ ಇಚ್ಛಾಸ್ವಾತಂತ್ರ್ಯವುಳ್ಳ ದೇಶದ ಯುವಜನತೆಯು ತಮ್ಮಲ್ಲಿರುವ ಅಕ್ಷಯ ಸಾಮರ್ಥ್ಯವನ್ನು ಕೂಡಿಟ್ಟು, ನಿಯಂತ್ರಣ ಕ್ಕೊಳಪಡಿಸಿ ಕ್ರಮಬದ್ಧ ಹಾಗೂ ಅಗತ್ಯ ಪ್ರಮಾಣಗಳಲ್ಲಿ ಬಿಡುಗಡೆಗೊಳಿಸಬೇಕು. ಪಂಡಿತ ಜವಹರಲಾಲ ನೆಹ್ರೂರವರನ್ನು ನಾಯಕರನ್ನಾಗಿ ನೇಮಿಸಿರುವುದು ರಾಷ್ಟ್ರವು ಯುವಜನಾಂಗದಲ್ಲಿಟ್ಟಿರುವ ನೆಚ್ಚಿಕೆಗೆ ನಿದರ್ಶನವಾಗಿದೆ. ಜವಹರಲಾಲರೊಬ್ಬರೇ ಏನನ್ನೂ ಮಾಡಲಾರರು. ದೇಶದ ಯುವಜನರು ಅವರಿಗೆ ತೋಳುಗಳಾಗಬೇಕು; ಕಣ್ಣುಗಳಾಗಬೇಕು. ನಾವು ಅವರಲ್ಲಿಟ್ಟಿರುವ ವಿಶ್ವಾಸಕ್ಕೆ ಯೋಗ್ಯರೆಂಬುದನ್ನು ಯುವ ಜನರು ಸಾಧಿಸಿತೋರಿಸಲಿ."

ವಿದ್ಯಾರ್ಥಿಗಳು ನಿಜವಾದ ರಾಷ್ಟ್ರೀಯ ಕಾರ್ಯವನ್ನು ನಿರ್ವಹಿಸಲು ಹೇಗೆ ತಮ್ಮನ್ನು ಸಿದ್ಧಗೊಳಿಸಬೇಕೆಂಬ ಬಗೆಗೆ ಗಾಂಧೀಜಿ ನಿರ್ದಿಷ್ಟ ಸಲಹೆಗಳನ್ನು ನೀಡಿದರು:

"ವಿದ್ಯಾರ್ಥಿಗಳು ತಮ್ಮ ಇಡೀ ರಜೆಯ ಅವಧಿಯನ್ನು ಗ್ರಾಮಸೇವೆಗೆ ಮುಡಿಪಾಗಿಡಬೇಕು. ಈ ಉದ್ದೇಶಕ್ಕಾಗಿ ಸವೆದ ದಾರಿಯಲ್ಲೇ ನಡೆಯುವ ಬದಲು ಅವರು ತಮ್ಮ ಸಂಸ್ಥೆಗಳ ಸುಲಭ ವ್ಯಾಪ್ತಿಗೆ ಒಳಪಡುವ ಹಳ್ಳಿಯ ಜನರ ಪರಿಸ್ಥಿತಿ ಯನ್ನು ಅಧ್ಯಯನ ಮಾಡಬೇಕು ಮತ್ತು ಅವರ ಸ್ನೇಹವನ್ನು ಗಳಿಸಬೇಕು. ಈ ಪರಿಪಾಠ ಯಿಂದ ಹಳ್ಳಿಗರ ಸಂಪರ್ಕ ಅವರಿಗೆ ಲಭಿಸುತ್ತದೆ. ವಿದ್ಯಾರ್ಥಿಗಳು ವಾಸ್ತವವಾಗಿ ಅವರ ನಡುವೆ ನೆಲೆಸಲು ಹೋದಾಗ ಸಾಂದರ್ಭಿಕವಾದ ಈ ಪೂರ್ವ ಪರಿಚಯದ

ಕಾರಣದಿಂದ ಅವರನ್ನು ಅಪರಿಚಿತರೆಂಬ ಸಂಶಯದಿಂದ ಕಾಣದೆ ಮಿತ್ರರಂತೆ ಸ್ವಾಗತಿಸು ತ್ತಾರೆ. ರಜೆಯ ಕಾಲದಲ್ಲಿ ವಿದ್ಯಾರ್ಥಿಗಳು ಗ್ರಾಮಗಳಲ್ಲಿ ನೆಲಸಬೇಕು ಮತ್ತು ವಯಸ್ಕರಿಗೆ ತರಗತಿಗಳನ್ನು ನಡೆಸಲು ಪ್ರಯತ್ನಿಸಬೇಕು. ಗ್ರಾಮಸ್ಥರಿಗೆ ನೈರ್ಮಲ್ಯದ ನಿಯಮ ಗಳನ್ನು ಕಲಿಸಬೇಕು; ಸಾಮಾನ್ಯವಾದ ಕಾಯಿಲೆಗಳನ್ನು ಪಚರಿಸಬೇಕು. ಅಲ್ಲದೆ ಚರಕದ ಬಳಕೆಯನ್ನು ಆ ಹಳ್ಳಿಗರಿಗೆ ಕಲಿಸಬೇಕು. ಬಿಡುವಿನ ಪ್ರತಿಯೊಂದು ನಿಮಿಷವನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ಅವರಿಗೆ ತಿಳಿಯಹೇಳಬೇಕು. ಈ ಕೆಲಸವು ನಡೆಯ ಬೇಕಾದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ರಜೆಯ ಬಳಕೆಯ ಬಗೆಗಿನ ತಮ್ಮ ಕಲ್ಪನೆ ಗಳನ್ನು ಪರಿಷ್ಕರಿಸಿಕೊಳ್ಳಬೇಕು. ಅನೇಕವೇಳೆ ವಿವೇಚನೆಯಿಲ್ಲದ ಶಿಕ್ಷಕರು ರಜೆಯಲ್ಲಿ ಮಾಡಲೆಂದೆ ಪಾಠಗಳನ್ನು ನಿಯಮಿಸುತ್ತಾರೆ. ಇದೊಂದು ದುಷ್ಟ ಪದ್ಧತಿ. ರಜೆಯು ನಿತ್ಯಗಟ್ಟಲೆಯ ದಿನಚರಿಯಿಂದ ವಿದ್ಯಾರ್ಥಿಗಳ ಮನಸ್ಸನ್ನು ಮುಕ್ತಗೊಳಿಸಬೇಕಾದ ಅವಧಿ; ಸ್ವಯಂಸಹಾಯಕ್ಕೆ ಮತ್ತು ಸ್ವೋಪಜ್ಞತೆಯ ಬೆಳವಣಿಗೆಗೆ ಅದು ಸಂಪೂರ್ಣ ಅವಕಾಶ ನೀಡಬೇಕು. ನಾನು ಸೂಚಿಸಿರುವ ಗ್ರಾಮಸೇವೆ ಮನೋರಂಜನೆಯ ಹಾಗೂ ತಿಳಿಬೋಧನೆಯ ಅತ್ಯುತ್ತಮ ವಿಧಾನವಾಗಿದೆ. ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ ಸಂಪೂರ್ಣ ಗ್ರಾಮಸೇವೆಗೆ ತಮ್ಮನ್ನು ಅರ್ಪಿಸಿಕೊಳ್ಳಲು ವಿದ್ಯಾರ್ಥಿಗಳ ಪಾಲಿಗೆ ಇದೊಂದು ಅತ್ಯುತ್ತಮ ಸಿದ್ಧತೆಯಾಗುತ್ತದೆಂಬುದು ಖಂಡಿತ."

ಹಿಂದೂ ಮತ್ತು ಮುಸಲ್ಮಾನರ ನಡುವಣ ಅನೈಕ್ಯವು ರಾಷ್ಟ್ರದ ಮುನ್ನಡೆಗೆ ಪ್ರಮುಖ ತಡೆಯಾಗಿತ್ತು. ಜಿನ್ನಾ ಮತ್ತು ಆಲಿ ಸಹೋದರರು ರಾಷ್ಟ್ರೀಯ ಕಾಂಗ್ರೆಸ್ಸಿ ನಿಂದ ಬೇರೆಯಾದರು ಮತ್ತು ಕೋಮುವಾರುವಾದಿಗಳೊಡನೆ ಲೀನಗೊಂಡರು. "ಸದ್ಯದ ಹಿಂದೂ ಮನೋಭಾವವು ಚಾಲ್ತಿಯಲ್ಲಿರುವ ವರೆಗೆ ಮುಸಲ್ಮಾನರು ಕಾಂಗ್ರೆಸ್ಸಿನೊಂದಿಗೆ ವ್ಯವಹರಿಸಕೂಡದು" ಎಂದು ಮೌಲಾನಾ ಷೌಕತ್ ಆಲಿ ಘೋಷಿಸಿ ದರು. ಮುಸಲ್ಮಾನರಲ್ಲಿ ರಾಷ್ಟ್ರೀಯ ಮನೋಭಾವವನ್ನು ಉತ್ತೇಜಿಸುವ ಮತ್ತು ಸಂಕುಚಿತ ಕೋಮುವಾರು ವಾದವನ್ನು ತಡೆಗಟ್ಟುವ ಉದ್ದೇಶದಿಂದ ಮೌಲಾನಾ ಅಜಾದರು ರಾಷ್ಟ್ರೀಯವಾಗಿ ಮುಸ್ಲಿಂ ಪಕ್ಷವೆಂಬ ಒಂದು ಹೊಸ ಪಕ್ಷದ ಸಭೆಯನ್ನು ಜುಲೈನಲ್ಲಿ ಅಲಹಾಬಾದಿನಲ್ಲಿ ಕರೆದರು. ಹದಿನೈದು ದಿನಗಳ ತರುವಾಯ ಶ್ರೀಮತಿ ನಾಯ್ಡುರವರು ಭಿನ್ನಾಭಿಪ್ರಾಯಗಳಿಗೆ ಸೇತುವೆಯನ್ನೇರ್ಪಡಿಸುವ ಸಲುವಾಗಿ ಗಾಂಧೀಜಿ, ಜಿನ್ನಾ ಮತ್ತು ಆಲಿ ಸೋದರರ ನಡುವೆ ಬೊಂಬಾಯಿಯಲ್ಲಿ ಭೇಟಿಯನ್ನೇ ರ್ಪಡಿಸಿದರು. ಅವರ ಮಾತುಕತೆಗಳನ್ನು ಬಹಿರಂಗಗೊಳಿಸಲಿಲ್ಲ. ಆದರೆ ಗಾಂಧೀಜಿ ಹೀಗೆ ಅಭಿಪ್ರಾಯವಿತ್ತರು: "ಅವು ಸ್ನೇಹದ ಮಾತುಕತೆಗಳಾಗಿದ್ದುವು ಮತ್ತು ಅವು ಗಳಿಗೆ ಯಾವ ಮಹತ್ವವನ್ನೂ ಜೋಡಿಸಬೇಕಾಗಿಲ್ಲ. ಆದರೆ ಸಹಜವಾಗಿ ಶಾಂತಿಯ ಎಲ್ಲ ಸಾಧ್ಯ ಮಾರ್ಗಗಳನ್ನು ಶೋಧಿಸಬೇಕೆಂಬ ಇಚ್ಛೆ ನನಗಿದೆ. ಭಾರತದಲ್ಲಿಯ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ ಮನಸ್ಸನ್ನು ಅರಿಯುವ ಸಣ್ಣ ಅವಕಾಶವನ್ನೂ ನಾನು ಕಳೆದುಕೊಳ್ಳುವುದಿಲ್ಲ. ಸಾರ್ವಜನಿಕರು ಮಾತುಕತೆಗಳ ಅಥವಾ ಫಲಿತಾಂಶಗಳ

ಬಗೆಗೆ ಊಹಿಸದಿರುವುದೊಳ್ಳೆಯದು. ಅವುಗಳಿಂದ ಏನಾದರೂ ಫಲಿತಾಂಶ ಹೊರ ಬಂದಲ್ಲಿ ಅದು ಅವರಿಗೆ ಖಂಡಿತವಾಗಿ ತಿಳಿಯುತ್ತದೆ."

ಗಾಂಧೀಜಿ ತಮ್ಮ ವೇಳೆಯನ್ನು ಮುಖ್ಯವಾಗಿ ಖಾದಿ ಕೆಲಸದ ಮುನ್ನಡೆಗಾಗಿ ಮುಡುಪಿಟ್ಟರು. ಎಂಟು ಗಂಟೆಗಳಲ್ಲಿ ಹನ್ನೆರಡರಿಂದ ಇಪ್ಪತ್ತು ಕೌಂಟುಗಳ ೧೬.೦೦೦ ಗಜ ನೂಲನ್ನು ಉತ್ಪಾದಿಸುವಂಥ ಚರಕವನ್ನು ೧೯೩೦ ಅಕ್ಟೋಬರ್ ೩೦, ಅಥವಾ ಅದರೊಳಗೆ ಒಪ್ಪಿಸುವ ವಿಜಯಿಗೆ ಒಂದು ಲಕ್ಷ ರೂಪಾಯಿ ಬಹುಮಾನವನ್ನು ನೀಡ ಲಾಗುವುದೆಂಬ ಷರತ್ತನ್ನು ಅಖಿಲ ಭಾರತ ನೇಕಾರರ ಸಂಘವು ಪ್ರಕಟಿಸಿತು. ಅದರ ಬೆಲೆ ೧೫೦ ರೂ.ಗಳನ್ನು ಮೀರಿರಬಾರದು ಮತ್ತು ಅದು ಒಯ್ಯಲನುಕೂಲವಾಗುವಂತೆ ಹಗುರವಾಗಿರಬೇಕು, ದೃಢವಾಗಿರಬೇಕು ಮತ್ತು ಸವೆದು ಹೋದ ಭಾಗಗಳನ್ನು ಸುಲಭ ವಾಗಿ ಪುನರ್ಜೋಡಿಸಬಹುದಾದಂಥ ರಚನೆಯಾಗಿರಬೇಕು. "ಬಹುಮಾನವು ಹಳ್ಳಿಯ ನೂಲುಗಾರನ ಆದಾಯವನ್ನು ಎಂಟು ಮಡಿ ಹೆಚ್ಚಿಸುವಂಥ ಒಬ್ಬ ನೂಲುಗಾಯಕನನ್ನು ಸೃಷ್ಟಿಸುತ್ತದೆಂಬ ಭರವಸೆ ನನಗಿದೆ" ಎಂದು ಗಾಂಧೀಜಿ ನುಡಿದರು.

"೧೯೩೦ರ ನಿರ್ಧಾರಕ ದಿನವಾದ ಜನವರಿ ೧ ಬಹುಬೇಗ ಸಮೀಪಿಸುತ್ತಿದೆ. ಆದರೆ 'ನೀವು ಇನ್ನೂ ಖಾದಿ, ಖಾದಿ ಮತ್ತು ಇನ್ನೂ ಖಾದಿ'ಯೆಂಬ ಸೂತ್ರವನ್ನು ಬೇಜಾರು ಹಿಡಿಸುವಂತೆ ಹಾಡುತ್ತಿದ್ದೀರಿ ಹೊರತು ದೇಶಕ್ಕೆ ಯಾವುದೇ ಪರಿಣಾಮಕಾರಕ ಮಾರ್ಗದರ್ಶನವನ್ನು ನೀಡಲು ನಿರಾಕರಿಸುತ್ತಿದ್ದೀರಿ" ಎಂದು ಟೀಕಾಕಾರರು ಹೇಳಿದರು. "ದೇಶಕ್ಕಾಗಿ ಪ್ರಾಣವನ್ನು ತೆರಲು ಸಿದ್ಧರಾಗಿರುವಂಥ ಒಂದು ಕೋಟಿ ರಾಷ್ಟ್ರೀಯ ಸ್ವಯಂಸೇವಕರ ಪಡೆಯೊಂದನ್ನು ಹುರಿಗೊಳಿಸಲು ಜವಹರಲಾಲ ನೆಹ್ರೂ ಮತ್ತು ಸುಭಾಷ್ ಬೋಸರಂಥ ಯುವಕ ಮುಖಂಡರಿಗೆ ಒಂದು ಸೂಚನೆಯನ್ನೇಕೆ ಕೊಡ ಬಾರದು?", ಈ ಟೀಕೆಗೆ ಗಾಂಧೀಜಿ ನೀಡಿದ ಉತ್ತರವಿದು:

"ಖಾದಿಯು ಅವರ ಮನಸ್ಸಿಗೆ ಸಮಾಧಾನ ಕೊಡದಿದ್ದರು ಸಹ ಅದರ ಸ್ಥಾನ ದಲ್ಲಿ ನಾನು ಸೂಚಿಸಬಹುದಾದ ಪರಿಹಾರ ಬೇರೆ ಯಾವುದೂ ಇಲ್ಲ. ಖಾದಿ ಇಲ್ಲದ ಸ್ವರಾಜ್ಯವನ್ನು ನಾನು ಕಲ್ಪಿಸಿಕೊಳ್ಳಲಾರೆ.

"ದೇಶವು ಖಾದಿಯಿಂದ ತೀರ ಬೇಸರಗೊಂಡಿದೆಯೆಂಬುದಾಗಲೀ ಖಾದಿಯು ಜನರಿಗೆ ಆತಂಕಕಾರಿಯಾಗಲು ತೊಡಗಿದೆಯೆಂಬುದಾಗಲಿ ಸತ್ಯವಲ್ಲ. ಭಾರತದ ಹಿಡಿ ಮಂದಿ ಪಟ್ಟಣವಾಸಿಗಳ ವಿಷಯದಲ್ಲಿ ಹಾಗಿರಬಹುದು. ಆದರೆ ಆ ಹಿಡಿಮಂದಿಯೇ ಭಾರತವಲ್ಲ. ಭಾರತದ ರಾಷ್ಟ್ರೀಯತೆಯ ಅಸ್ತಿಭಾರವು ಹಾಕಲ್ಪಡಬೇಕಾಗಿರುವುದು ಅದರ ಹಳ್ಳಿಗಳಲ್ಲಿಯೇ ಹೊರತು ಪಟ್ಟಣಗಳಲ್ಲಲ್ಲ. ಸದ್ಯಕ್ಕೆ ಭಾರತದ ಹಳ್ಳಿಗಳಲ್ಲಿ ಹುರುಪಿನಿಂದ ಮುನ್ನಡೆಯುತ್ತಿರುವ ಏಕಮಾತ್ರ ಚಳುವಳಿಯೆಂದರೆ ಖಾದಿಯದು. ಅದು ದಿನದಿನಕ್ಕೂ ವಿಸ್ತಾರಗೊಳ್ಳುತ್ತಿದೆ. ಇಂದು ಅದು ಕಡೆಯಪಕ್ಷ ೨೦೦೦ ಮಧ್ಯಮ ವರ್ಗದ ತರುಣರ ಬದುಕಿಗೆ ದಾರಿಮಾಡಿಕೊಟ್ಟಿದೆ ಮತ್ತು ಸುಮಾರು ಒಂದು ಲಕ್ಷ ಬಡ ಸ್ತ್ರೀ ನೂಲುಗಾರರಿಗೆ ಹೊಟ್ಟೆ ಹೊರೆಯಲು ನೆರವೀಯುತ್ತಿದೆ. ಇದೇ ರೀತಿಯಲ್ಲಿ

ಅದು ಸುಮಾರು ಹತ್ತು ಸಾವಿರ ನೇಯ್ಗೆಗಾರರಿಗೆ ಮತ್ತು ಬಹುಸಂಖ್ಯೆಯ ಅಗಸ, ಬಣ್ಣಗಾರ, ಎಕ್ಕಿಗ, ದರ್ಜಿ ಮುಂತಾದವರಿಗೆ ಉದ್ಯೋಗವನ್ನೊದಗಿಸುತ್ತಿದೆ. ಈ ಎಲ್ಲ ಉಪಯುಕ್ತ ಫಲಗಳನ್ನು ಖಾದಿಯು ನೀಡಿದ್ದರೂ ಮತ್ತು ನೀಡುತ್ತಿದ್ದರೂ ಅದು ಯಾರಿಗಾದರೂ ಕಹಿಭಾವನೆಗೆ ಆಸ್ಪದ ಕೊಟ್ಟಲ್ಲಿ ಅಂತಹವರ ಬಗೆಗೆ ನಾನು ಕನಿಕರ ಪಡಬೇಕಷ್ಟೆ.

"ದೇಶದ ಯುವಕರನ್ನು ಸಂಘಟಿಸಲು ಜವಹರಲಾಲ ನೆಹ್ರೂ ಅಥವಾ ಸುಭಾಷ್ ಬೋಸರು ನನ್ನ ಅನುಮತಿ ಅಥವಾ ಸೂಚನೆಗೆ ಕಾಯುತ್ತಿರುವರೆಂದೂ ಮತ್ತು ಅದು ದೊರೆಯದೆ ಅವರು ಸುಮ್ಮನಿರುವರೆಂದೂ ಹೇಳುವುದು ಅವರಿಗೆ ನಿಷ್ಕಾರಣ ಮುಖ ಭಂಗವೆಸಗಿದಂತಾಗುತ್ತದೆ. ತಮ್ಮ ಶಕ್ತಿ ಮತ್ತು ಸಾಮರ್ಥ್ಯಕ್ಕೂ ಮೀರಿ ಅವರು ಈಗಾಗಲೆ ಸಂಘಟನೆಯ ಕಾರ‍್ಯವನ್ನು ಮಾಡುತ್ತಿದ್ದಾರೆ. ತಮ್ಮ ಭಾಗದ ಕೆಲಸವನ್ನು ಮಾಡುವುದಕ್ಕಾಗಿ ಅವರಿಗೆ ನನ್ನ ಯಾವ ಅನುಮತಿಯ ಅಗತ್ಯವೂ ಇಲ್ಲ. ನಾನು ನಂಬಿರುವಂತೆ ಅವರು ಸಾಚಾ ಸಿಪಾಯಿಗಳಾಗಿರುವ ಪಕ್ಷಕ್ಕೆ ನಾನು ಅವರನ್ನು ತಡೆಗಟ್ಟ ಬೇಕೆಂದರೂ ಅದು ಸಾಧ್ಯವಾಗುವುದಿಲ್ಲ. ಆದರೆ ಈ ವಿಷಯದ ಸ್ಪಷ್ಟ ಹಾಗೂ ದುಃಖ ಕರ ಸಂಗತಿಯೆಂದರೆ, ಒಂದು ಕೋಟಿ ಸ್ವಯಂಸೇವಕರ ಮಾತು ಹಾಗಿರಲಿ, ಕರ್ತವ್ಯದ ಫಲವಾಗಿ ತಮ್ಮನ್ನೆ ತ್ಯಾಗಮಾಡಲು ಸಂಪೂರ್ಣ ಸಿದ್ಧವಾದ ಹತ್ತು ಸಾವಿರಮಂದಿಯೂ ಇಲ್ಲ. ಮನಸ್ಸು ಮಾಡಿದರೆ ಕ್ಷಣಮಾತ್ರದಲ್ಲಿ ಅವರು ಸಿದ್ಧರಾಗಬಲ್ಲರೆಂಬುದು ನನಗೆ ತಿಳಿದಿದೆ. ಆದರೆ 'ಮಾಡಬೇಕೆಂಬ ಸಂಕಲ್ಪ'ವೇ ಅವರಲ್ಲಿಲ್ಲ. ಬರಿಯ ಭಾಷಣಗಳು, ಪ್ರದರ್ಶನಗಳು, ಮೆರವಣಿಗೆಗಳು ಮುಂತಾದುವುಗಳಿಂದ ನೀವು ಸ್ವರಾಜ್ಯವನ್ನು ಗಳಿಸ ಲಾರಿರಿ. ಈಗ ಬೇಕಾಗಿರುವುದು ಸಾರವತ್ತಾದ, ಎಡೆಬಿಡದ ರಚನಾತ್ಮಕ ಕಾರ‍್ಯ; ಆದರೆ ಯುವಜನರು ಬಯಸುವುದು ಮತ್ತು ಪೋಷಿಸುವುದು ಮೊದಲಿನದನ್ನು.

"ಜನತೆ ಸತ್ಯಾಗ್ರಹಕ್ಕೆ ಹಾತೊರೆಯುತ್ತಿರುವರೆಂದೂ, ನಾನು ಮಾತ್ರ ಹಿಂಜರಿ ಯುತ್ತಿದ್ದೇನೆಂದೂ ಹೇಳುತ್ತಿರುವುದು ವಾಸ್ತವಸ್ಥಿತಿಯ ತಪ್ಪು ನಿರೂಪಣೆಯಾಗಿದೆ. ನನ್ನ ಮಾತಿನಂತೆ ಸತ್ಯಾಗ್ರಹವನ್ನು ಪ್ರಾರಂಭಿಸಲು ಸಿದ್ಧರಾಗಿರುವಂಥ ಜನತೆಯನ್ನು ಹೇಗೆ ಕರೆದೊಯ್ಯಬೇಕೆಂಬುದು ನನಗೆ ತಿಳಿದಿದೆ. ಆದರೆ ಈ ಅವಧಿಯಲ್ಲಿ ಅಂತಹ ಯಾವ ಚಿಹ್ನೆಯೂ ನನಗೆ ಕಂಡುಬರುತ್ತಿಲ್ಲ. ನಾನು ವಿಶ್ವಾಸಜೀವಿ. ಮುಂದಿನ ಜನವರಿ ೧ರಂದು 'ಸುತ್ತುವರಿದಿರುವ ಈ ಮಬ್ಬಿ'ನಿಂದಾಚೆಗೆ ಒಂದು ದಾರಿ ಕಾಣಬಹುದೆಂಬ ಭರವಸೆ ನನ್ನಲ್ಲಿನ್ನೂ ಇದೆ."

ಸೆಪ್ಟೆಂಬರ್‌ನ ಮೊದಲ ವಾರದಲ್ಲಿ ಗಾಂಧೀಜಿ ಆಗ್ರ ತಲುಪಿದರು. ಅಲ್ಲಿ ಅವರು ಒಂದು ವಾರ ಕಾಲ ವಿಶ್ರಾಂತಿ ತೆಗೆದುಕೊಳ್ಳಬೇಕಾಯಿತು. ಭೂಪಾಲ್ ರಾಜನ ಆಹ್ವಾನದ ಮೇರೆಗೆ ಮುಂದಿನ ಮೂರು ದಿನಗಳನ್ನು ಅವರು ಅಲ್ಲಿ ಕಳೆದರು. ಸೇಠ್ ಜಮನಾಲಾಲ್ ಬಜಾಜರು ತಮ್ಮ ಖಾದಿಯ ಸಕಾಸೆಯೊಂದಿಗೆ ಬೊಂಬಾಯಿಯಿಂದ

ಬಂದು ಜೊತೆಗೂಡಿದರು. ಜಮಿಯ ಮಿಲಿಯಾದ ಡಾ. ಜಾಕೀರ್‌ಹುಸೇನರು ಅವರೊಡನೆ ತಮ್ಮ ಸಂಸ್ಥೆಯ ವ್ಯವಹಾರಗಳನ್ನು ಚರ್ಚಿಸಲು ಬಂದರು. ಅಲ್ಲಿ ಒಂದು ಸಾರ್ವಜನಿಕ ಸಮಾರಂಭವಿತ್ತು. ಭೂಪಾಲದಲ್ಲಿ ಆ ಬಗೆಯ ಸಮಾರಂಭ ಅದೇ ಮೊದಲನೆಯದಾಗಿತ್ತು. ಅರ್ಥಮಂತ್ರಿಯ ಅಧ್ಯಕ್ಷತೆಯಲ್ಲಿ ನಡೆದ ಆ ಸಮಾರಂಭದಲ್ಲಿ ನಾಗರಿಕರಿಂದ ಸಂಗ್ರಹಿಸಿದ ೧೦೩೫ರೂ.ಗಳ ಕಾಣಿಕೆಯನ್ನು ಅವರಿಗೆ ಸಲ್ಲಿಸಲಾಯಿತು. ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಭಾರತೀಯ ರಾಜರ ಆಳ್ವಿಕೆಯ ಅಸ್ತಿತ್ವವು ನಿಜವಾದ ಪ್ರಜಾಪ್ರಭುತ್ವದ ಪ್ರಗತಿಗೆ ಅಸಂಗತವಾಗಿಲ್ಲವೆಂಬ ತಮ್ಮ ಅಭಿಪ್ರಾಯವನ್ನು ಅವರು ಮತ್ತೆ ಉಚ್ಚರಿಸಿದರು. ಆದ್ದರಿಂದ ಗಾಂಧೀಜಿ ರಾಜರ ಅಧೀನದಲ್ಲಿದ್ದ ರಾಜ್ಯಗಳ ಶತ್ರುವಾಗಿರಲಿಲ್ಲ. ತಾವು ಆಗಾಗ್ಗೆ ರಾಮರಾಜ್ಯವೆಂದು ವಿವರಿಸಿ ಹೇಳುತ್ತಿದ್ದ ತಮ್ಮ ಪ್ರಜಾಸತ್ತಾತ್ಮಕ ಸ್ವರಾಜ್ಯದ ಗುರಿಯನ್ನು ರಾಜರು ಮುಟ್ಟುವರೆಂಬ ಎಲ್ಲ ಭರವಸೆಯನ್ನೂ ಇಟ್ಟುಕೊಂಡಿದ್ದರು. ಒಂದು ಮುಸ್ಲಿಂ ರಾಜ್ಯದಲ್ಲಿ ಹಾಗೂ ಮುಸ್ಲಿಂ ಸಭಿಕರು ಅಧಿಕ ಸಂಖ್ಯೆಯಲ್ಲಿದ್ದ ಒಂದು ಸಭೆಯಲ್ಲಿ ರಾಮರಾಜ್ಯವೆಂಬ ಮಾತನ್ನು ಬಳಸುತ್ತಾ ಅವರು ಕೂಡಲೆ ಹೀಗೆ ನುಡಿದರು: "ರಾಮರಾಜ್ಯವೆಂಬ ಪದದ ಬಳಕೆಯನ್ನು ತಪ್ಪಾಗಿ ಗ್ರಹಿಸುವಂಥ ನನ್ನ ಮುಸಲ್ಮಾನ ಗೆಳೆಯರಿಗೆ ಎಚ್ಚರಿಕೆ ಕೊಡುತ್ತೇನೆ. ರಾಮರಾಜ್ಯವೆಂದರೆ ನನ್ನ ಪ್ರಕಾರ ಹಿಂದೂರಾಜ್ಯವೆಂದರ್ಥವಲ್ಲ. ರಾಮರಾಜ್ಯವೆಂದರೆ, ದೈವೀ ರಾಜ್ಯ, ದೇವರ ಸಾಮ್ರಾಜ್ಯ ಎಂಬುದು ನನ್ನ ಅಭಿಪ್ರಾಯ. ನನ್ನ ದೃಷ್ಟಿಯಲ್ಲಿ ರಾಮ ರಹೀಮರು ಭಿನ್ನರಲ್ಲ; ಅವರಿಬ್ಬರೂ ಒಂದೇ. ಸತ್ಯ ಮತ್ತು ಧರ್ಮಗಳೇ ನನ್ನ ದೇವರು; ಅವನ್ನು ಬಿಟ್ಟು ಬೇರೆ ದೇವರನ್ನು ನಾನು ಅಂಗೀಕರಿಸುವುದಿಲ್ಲ. ನನ್ನ ಕಲ್ಪನೆಯ ರಾಮ ಈ ಭೂಮಿಯ ಮೇಲೆ ಎಂದಾದರೂ ಬದುಕಿದ್ದನೋ ಇಲ್ಲವೊ, ಆದರೆ ರಾಮರಾಜ್ಯದ ಪುರಾತನ ಕಲ್ಪನೆ ನಿಸ್ಸಂದೇಹವಾಗಿ ಅಪ್ಪಟ ಪ್ರಜಾಪ್ರಭುತ್ವದ ಆದರ್ಶವಾಗಿದೆ. ಅದರಲ್ಲಿ ದೀರ್ಘವಲ್ಲದ ಹಾಗೂ ಹೆಚ್ಚು ವೆಚ್ಚದ ಕಾರ್ಯವಿಧಾನವಿಲ್ಲದ ಶೀಘ್ರ ನ್ಯಾಯವು ಅತ್ಯಂತ ಕೆಳದರ್ಜೆಯ ನಾಗರಿಕನಿಗೂ ತಪ್ಪದೆ ದೊರೆಯುತ್ತದೆ. ರಾಮರಾಜ್ಯದಲ್ಲಿ ನಾಯಿ ಸಹ ನ್ಯಾಯ ಪಡೆದುದನ್ನು ಕವಿ ವರ್ಣಿಸಿದ್ದಾನೆ."

ಸೆಪ್ಟೆಂಬರ್ ೧೧ರಂದು ಸಾಂಚಿಯ ಸ್ಮಾರಕಗಳನ್ನು ವೀಕ್ಷಿಸಿದ ನಂತರ ಗಾಂಧೀಜಿ ಆಗ್ರಾಕ್ಕೆ ಹಿಂದಿರುಗಿದರು. ಮರುದಿನ ಅವರು ಒಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಆ ಸಭೆಯಲ್ಲಿ ೮,೦೦೦ ರೂ.ಗಳ ಕಾಣಿಕೆಯನ್ನು ಅವರಿಗೆ ಸಲ್ಲಿಸಲಾಯಿತು. "ಅಸಹಕಾರದ ಶಕ್ತಿಯಲ್ಲಿರುವ ನನ್ನ ವಿಶ್ವಾಸವನ್ನು ಪುನರ್ಘೋಷಿಸಲು ನಾನಿಲ್ಲಿ ನಿಂತಿದ್ದೇನೆ" ಎಂದು ಅವರು ಗಂಭೀರವಾಗಿ ನುಡಿದರು. "ಇಂದಿನಿಂದ ನೀವೆಲ್ಲ ೧೯೩೦ರ ಜನವರಿಯ ಘಟನೆಗೆ ಸಿದ್ಧರಾಗಬೇಕು. ಎ.ಐ.ಸಿ.ಸಿ.ಯು ಈಗಾಗಲೆ ಕೆಲವು ಷರತ್ತುಗಳನ್ನು ಮುಂದಿಟ್ಟಿದೆ. ಅವುಗಳನ್ನು ಕಾರ್ಯಗತಗೊಳಿಸುವುದರಿಂದ ಹಾಗೂ ಅಸಹಕಾರದ ಮೂಲಕ ಮಾತ್ರ ಸ್ವರಾಜ್ಯವನ್ನು ಸಾಧಿಸುವುದು ಸಾಧ್ಯವೆಂದು ಅದರ ಅಭಿಪ್ರಾಯ. ಅದು ಮೂರು ಭಾಗಗಳನ್ನುಳ್ಳ ಒಂದು ರಚನಾತ್ಮಕ ಕಾರ್ಯಕ್ರಮ

ಖಾದಿಯ ಮೂಲಕ ವಿದೇಶಿ ವಸ್ತ್ರ ಬಹಿಷ್ಕಾರ, ಕುಡಿತದ ಮತ್ತು ಮಾದಕ ಪದಾರ್ಥ ಸೇವನೆಯ ನಿರೋಧ ಮತ್ತು ಹಿಂದೂಗಳಿಂದ ಅಸ್ಪೃಶ್ಯತೆಯ ನಿರ್ಮೂಲನ. ವ್ಯವಸ್ಥಿತ ಕಾಂಗ್ರೆಸ್ ಸಂಸ್ಥೆ ಮಾತ್ರ ಈ ಕೆಲಸವನ್ನು ಪರಿಣಾಮಕಾರಿಯಾಗಿ ನೆರವೇರಿಸಬಹುದು. ಆದ್ದರಿಂದ ಕಾಂಗ್ರೆಸ್ಸಿಗೆ ಸದಸ್ಯರನ್ನು ಕೂಡಿಸುವುದರ ಮೂಲಕ ಕಾಂಗ್ರೆಸ್ಸನ್ನು ಪುನರ್ವ್ಯವಸ್ಥೆಗೊಳಿಸುವುದು ಅಗತ್ಯವಾಗಿದೆ. ನಾವು ಏನನ್ನೂ ಮಾಡದೆ ಡಿಸೆಂಬರ್‌ನಲ್ಲಿ ಕಾಂಗ್ರೆಸ್ಸು ಮಾಡುವ ಘೋಷಣೆಯಿಂದ ಮಾತ್ರವೆ ಸ್ವರಾಜ್ಯ ಅಥವಾ ಸ್ವಾತಂತ್ರ್ಯವು ಸ್ವರ್ಗದಿಂದ ಇಳಿದುಬರುವುದಿಲ್ಲವೆಂದು ಮನಃಪೂರ್ವಕವಾಗಿ ನಿಮಗೆ ಎಚ್ಚರಿಕೆ ನೀಡುತ್ತೇನೆ. ಇನ್ನೂ ಮುಂದೆ ಹೋಗಿ ನಾನು ಹೇಳುವುದೇನೆಂದರೆ, ನಾವು ಮಾಡಬೇಕೆಂದಿರುವ ಘೋಷಣೆಗೆ ಕೂಡಲೆ ಜನತೆಯಿಂದ ಪರಿಣಾಮಕಾರೀ ಮಂಜೂರಾತಿಯನ್ನು ಕಷ್ಟಪಟ್ಟು ದೊರಕಿಸಿಕೊಳ್ಳಬೇಕಾಗಿದೆ. ಒಂದುವೇಳೆ ಸರ್ಕಾರ ೧೯೨೯ ಡಿಸೆಂಬರ್ ೩೧ರ ಮಧ್ಯ ರಾತ್ರಿಯ ವೇಳೆಗೆ ರಾಷ್ಟ್ರೀಯ ಬೇಡಿಕೆಯನ್ನು ಅಂಗೀಕರಿಸದಿದ್ದಲ್ಲಿ ನಮ್ಮ ಘೋಷಣೆ ಒಂದು ಸತ್ತಪತ್ರವಾಗುಳಿಯುತ್ತದೆ ; ಮತ್ತು ೧೯೩೦ರ ಅವಧಿಯಲ್ಲಿ ಏನನ್ನೂ ಮಾಡಲು ನಮಗೆ ಸಾಧ್ಯವಾಗುವುದಿಲ್ಲ."

ಇಲ್ಲಿಯವರೆಗೆ ನಡೆದವುಗಳಲ್ಲಿ ಒಂದು ಮುಖ್ಯ ಸಮಾರಂಭವೆಂದರೆ ಆಗ್ರ ಮತ್ತು ಸೇಂಟ್ ಜಾನ್ಸ್ ಕಾಲೇಜುಗಳು ಜಂಟಿಯಾಗಿ ನಡೆಸಿದ ಒಂದು ಸಭೆ. ಅವರ ಶ್ರಮವನ್ನು ಕಡಿಮೆ ಮಾಡಲೋಸುಗ ಆ ರೀತಿ ಜಂಟಿಸಭೆ ಏರ್ಪಾಡಾಗಿತ್ತು. ಬಾಲ ವಿವಾಹದ ದುಷ್ಟಪದ್ಧತಿಯು ಯು. ಪಿ. ಯ ವಿದ್ಯಾರ್ಥಿಗಳಲ್ಲಿ ಇತರ ಯಾವುದೇ ಪ್ರಾಂತ್ಯಗಳಲ್ಲಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಲ್ಲಿದ್ದಿತೆಂಬುದನ್ನು ಅವರ ಗಮನಕ್ಕೆ ತರಲಾಗಿತ್ತು. ಆದ್ದರಿಂದ ತಮ್ಮ ಭಾಷಣವನ್ನು ಪ್ರಾರಂಭಿಸುವ ಮುನ್ನ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ನೀಡಿದ ಹೇಳಿಕೆ ಸತ್ಯವಾದುದೆ ಅಲ್ಲವೆ ಎಂಬುದನ್ನು ತಿಳಿಯುವ ಸಲುವಾಗಿ, ಈಗಾಗಲೆ ಮದುವೆಯಾಗಿರುವಂಥ ವಿದ್ಯಾರ್ಥಿಗಳು ತಮ್ಮ ಕೈಗಳನ್ನೆತ್ತುವಂತೆ ಹೇಳಿದರು. ಖಾದಿ ಧರಿಸಿದವರ ಸಂಖ್ಯೆಯ ಬಗೆಗೂ ಅದೇ ರೀತಿಯಲ್ಲಿ ಪ್ರಶ್ನಿಸಲಾಗಿ, ಆ ಬೃಹತ್ ಸಭೆಯಲ್ಲಿ ಒಂದು ಡಜನ್ ಮಂದಿಯೂ ಖಾದಿಯನ್ನು ಧರಿಸಿರಲಿಲ್ಲವೆಂಬ ಅಂಶ ಹೊರಪಟ್ಟಿತು. ಈ ಎರಡು ಪ್ರಕರಣಗಳಿಂದ ಅವರಿಗೆ ಸೂಚನೆ ದೊರಕಿತು. ಅವರು ಪ್ರತಿಪಾದಿಸುವ ಉನ್ನತ ಆದರ್ಶಗಳಲ್ಲಿ ತಮಗೆ ನಂಬಿಕೆಯಿದ್ದರೂ, ಆ ಆದರ್ಶಗಳನ್ನು ಅನುಷ್ಠಾನಕ್ಕೆ ತರಲು ತಾವು ಅಸಮರ್ಥರಾಗಿರುವುದಾಗಿ ಒಪ್ಪಿಕೊಳ್ಳುತ್ತೇವೆಂದು ಆ ಕಾಲೇಜುಗಳಲ್ಲೊಂದರ ವಿದ್ಯಾರ್ಥಿಗಳು ತಿಳಿಸಿದರು. ಹೀಗಾಗಿ, ತಮ್ಮ ಹೃದಯಾರ್ಪಣೆಯಿಂದ ಮಾತ್ರ ಆ ವಿದ್ಯಾರ್ಥಿಗಳು ತೃಪ್ತರಾಗಿದ್ದರು. "ವಿದ್ಯಾರ್ಥಿಗಳಿಂದ ಬಂದ ಅವರ ಈ ಅಸಾಮರ್ಥ್ಯದ ತಪ್ಪೊಪ್ಪಿಗೆಯನ್ನು ಕೇಳಲು ನಾನು ಸಿದ್ಧನಿಲ್ಲ. ನಿಮ್ಮ ಆಲೋಚನೆ ಮತ್ತು ಕ್ರಿಯೆಗಳ ಮೇಲೆ ಪ್ರಭುತ್ವವನ್ನು ಗಳಿಸದಿದ್ದಲ್ಲಿ ಮತ್ತು ಶೀಲವನ್ನು ರೂಪಿಸಿಕೊಳ್ಳದಿದ್ದಲ್ಲಿ ನಿಮ್ಮೆಲ್ಲ ವಿದ್ವತ್ತು ಹಾಗೂ ಷೇಕ್ಸ್‌ಪಿಯರ್ ಮತ್ತು ವರ್ಡ್ಸ್‌ವರ್ತರ ಎಲ್ಲ ಅಧ್ಯಯನಗಳು ನಿರರ್ಥಕವಾಗುತ್ತವೆ. ಆತ್ಮಪ್ರಭುತ್ವವನ್ನು ಗಳಿಸಿದಾಗ ಮತ್ತು

ಭಾವನೆಗಳನ್ನು ಹತೋಟಿಯಲ್ಲಿಡಲು ಕಲಿತಾಗ ನೀವು ನಿರಾಶೆಯ ಮಾತುಗಳನ್ನು ಉದ್ಗರಿಸಲಾರಿರಿ. ನಿಮ್ಮ ಮನಸ್ಸನ್ನು ಮಾತ್ರ ಅರ್ಪಿಸಿ, ಅನುಷ್ಠಾನ ದಾರಿದ್ರ್ಯವನ್ನು ತೋರ್ಪಡಿಸಿಕೊಳ್ಳಬಾರದು. ಮನಸ್ಸನ್ನು ತೆರುವುದೆಂದರೆ ಎಲ್ಲವನ್ನೂ ತೆತ್ತಂತೆ. ಮೊದಲು ಹೃದಯಗಳನ್ನು ಪಡೆಯಬೇಕು, ತಾನೆ. ಹಾಗೆ ಅರ್ಪಿಸಬೇಕಾದರೆ ಸಂಸ್ಕಾರದ ಮೂಲಕ ಅವುಗಳನ್ನು ಪಡೆಯಬಹುದು."

ಹತ್ತಿರದ ಹಳ್ಳಿಗಳಿಗೆ ನೀಡಿದ ಎರಡು ಅವಸರದ ಭೇಟಿಗಳು ಉಳಿದ ಕಾರ್ಯ ಕ್ರಮವಾಗಿದ್ದುವು. ಇಲ್ಲಿ ಅವರಿಗೆ ಹೆಚ್ಚಿನ ವಿರಾಮ ದೊರೆತದ್ದರಿಂದ ಅವರು ಭೇಟಿ ಕೊಡಬೇಕೆಂದು ಬಯಸಿದ್ದ ಆಗ್ರ ಮತ್ತು ಅದರ ಸುತ್ತಲ ಕೆಲವು ಚಾರಿತ್ರಿಕ ಸ್ಥಳಗಳನ್ನು ನೋಡಲವಕಾಶವಾಯಿತು. ಅವರು ಫತೇಪುರ ಸಿಕ್ರಿಯನ್ನು ಸಂದರ್ಶಿಸಿದರು. ಅಲ್ಲಿ ಅಕ್ಬರನು ಕಟ್ಟಿಸಿದ್ದ ಇಬಾದತ್‌ಖಾನ ಅಥವಾ ಅಥವಾ ಸರ್ವಧರ್ಮೀಯ ಪೂಜಾ ಮಂದಿರವು ಅವರ ಮೇಲೆ ಆಳವಾದ ಪ್ರಭಾವ ಬೀರಿತು. ತಾಜ್‌ಮಹಲ್‌ನಂಥ ಮೊಗಲ್ ವಾಸ್ತುಶಿಲ್ಪದ ನಾಯಕಕೃತಿಗಳು ಪರಿಣಾಮಕಾರಿಯಾಗಿದ್ದುವು. ಆದರೆ ಆ ಅತ್ಯುತ್ಕೃಷ್ಟ ನಿರ್ಮಾಣಗಳ ಹಿಂದಿನ ಬಲಾತ್ಕಾರದ ದುಡಿಮೆಯನ್ನು ಅವರು ಮರೆಯ ಲಾಗಲಿಲ್ಲ.

ಆಗ್ರಾದಲ್ಲಿನ ಗಾಂಧೀಜಿಯ ಆರೋಗ್ಯ ಸುಧಾರಣೆಯ ಕಿರು ಅವಧಿ ಸೆಪ್ಟಂಬರ್ ೯ರಂದು ಕೊನೆಗೊಂಡಿತು. ಮೊದಲು ಪ್ರಯಾಣ ಕೈಗೊಳ್ಳಬೇಕಾಗಿದ್ದ ಮಯಿನ್‌ಪುರಿ ಸುಮಾರು ಎಂಟು ಲಕ್ಷ ಜನಸಂಖ್ಯೆಯುಳ್ಳ ಒಂದು ಚಿಕ್ಕ ಜಿಲ್ಲೆಯಾಗಿತ್ತು. ಶ್ರಮ ತಗ್ಗಿಸುವ ಸಲುವಾಗಿ ಎಲ್ಲ ಸಾರ್ವಜನಿಕ ಅಭಿನಂದನೆಗಳನ್ನು ಒಂದೇ ಸಭೆಯಲ್ಲಿ ಅವರಿಗೆ ಸಲ್ಲಿಸಲಾಯಿತು ಮತ್ತು ಬಹುಮಟ್ಟಿಗೆ ಓದಲಾಯಿತೆಂದು ಗಣಿಸಲಾಯಿತು. ೧೮೫೭ರ ದಂಗೆಯ ಕಾಲದಿಂದಲೂ ಮಯಿನ್‌ಪುರಿಯಲ್ಲಿ ನಡೆದ ರಾಜಕೀಯ ಜಾಗೃತಿಯ ದೀರ್ಘ ಪರಂಪರೆಯನ್ನು ಜಿಲ್ಲಾ ಕಾಂಗ್ರೆಸ್ ಸಮಿತಿ ವರದಿಯು ಹೆಮ್ಮೆಯಿಂದ ಉಲ್ಲೇಖಿಸಿತು. ಅಲ್ಲದೆ ನಿಯಮಿತ ಸಂಖ್ಯೆಯಾದ ೧೮೦೦ಕ್ಕೆ ಬದಲಾಗಿ ೨೮೦೦ ಸದಸ್ಯರನ್ನು ಕಾಂಗ್ರೆಸ್ಸಿಗೆ ದಾಖಲು ಮಾಡಿಕೊಂಡಿದೆಯೆಂದು ವರದಿ ಸೂಚಿಸಿತು. ಅಲ್ಲಿ ನಡೆದಿರುವ ಕಾರ್ಯದ ಬಗೆಗೆ ಗಾಂಧೀಜಿ ಸಮಾಧಾನವನ್ನು ವ್ಯಕ್ತಪಡಿಸಿದರು. "ಆದರೆ ಕಾಂಗ್ರೆಸ್ಸಿನ ಸದಸ್ಯರು ಒಂದು ವ್ಯವಹಾರ ಸಂಸ್ಥೆಯ ಜಡಪಾಲುದಾರರಂತಿದ್ದರೆ ಕೇವಲ ಸಂಖ್ಯೆಯೇ ಸ್ವರಾಜ್ಯದ ಹಾದಿಯಲ್ಲಿ ಹೆಚ್ಚು ಮುನ್ನಡೆಸಲಾರದು. ೧೯೩೦ರಲ್ಲಿ ಪರಿಣಾಮಕಾರಿಯಾದ ಕಾರ್ಯ ಕ್ರಮ ನಡೆಸಬೇಕೆಂಬ ಇಚ್ಛೆ ಅವರಿಗಿದ್ದರೆ, ದಾಖಲಾದ ಸದಸ್ಯರು ತಮ್ಮ ಹೊಣೆ ಯನ್ನರಿತುಕೊಳ್ಳುವಂತೆ ಮಾಡಬೇಕು ಎಂದರು.

ಯು.ಪಿ.ಯ ಜಿಲ್ಲೆಗಳಲ್ಲಿ ಗಾಂಧೀಜಿ ಅನೇಕ ವಾರಗಳನ್ನು ಕಳೆದರು. ಗ್ರಾಮಾಂತರ ಪ್ರದೇಶಗಳ ಮೂಲಕ ಮೋಟಾರಿಸುತ್ತಿದ್ದಾಗ ಅವರನ್ನು ಕಾಣಲು ಮತ್ತು ಅವರ ಮಾತುಗಳನ್ನಾಲಿಸಲು ಪ್ರತಿ ಕೆಲವು ಮೈಲಿಗಳಿಗೂ ೧೦,೦೦೦ದಿಂದ ೨೫,೦೦೦ದ ವರೆಗಿನ ಸಂಖ್ಯೆಯ ಜನರ ನೆರವಿಗಳು ಕೂಡಿರುತ್ತಿದ್ದುವು. ಗೋರಖಪುರದಂಥ

ಪೂರ್ವಜಿಲ್ಲೆಗಳಲ್ಲಿ ನಡೆಯುತ್ತಿದ್ದ ದಿನದ ಪ್ರಮುಖ ಸಭೆಯಲ್ಲಿ ೧,೦೦,೦೦೦ ಜನರು ಭಾಗವಹಿಸುತ್ತಿದ್ದರು. ಮಿತಿಮೀರಿದ ಯಾವ ಶ್ರಮಕ್ಕೂ ಒಳಗಾಗದೆ ಅವರು ಜನರ ದೊಡ್ಡ ನೆರವಿಗಳನ್ನುದ್ದೇಶಿಸಿ ಅದೀರ್ಘ ಭಾಷಣಗಳನ್ನು ಮಾಡುತ್ತಿದ್ದರು.

ವಿದ್ಯಾರ್ಥಿಗಳು ಅತ್ಯಂತ ಉತ್ಸಾಹ ಭರಿತರಾಗಿದ್ದರು. ಆದರೆ ಸತತ ಕಾರ್ಯಾಚರಣೆಯ ಸಾಮರ್ಥ್ಯವಿನ್ನೂ ಅವರಲ್ಲಿರಲಿಲ್ಲ. "ನಿಮ್ಮ ಬದುಕಿನಲ್ಲಿ ಮೂರ್ತಗೊಂಡಿರುವ ಉನ್ನತ ಆದರ್ಶಗಳನ್ನು ಕುರಿತು ನಮಗೆ ಅತ್ಯಧಿಕ ಮೆಚ್ಚುಗೆಯಿದೆ. ಆದರೆ ಅವುಗಳನ್ನು ಅನುಸರಿಸಲು ನಾವು ಪ್ರಯತ್ನವನ್ನು ಸಹ ಮಾಡುತ್ತಿಲ್ಲ"ವೆಂದು ಕಾನ್‌ಪುರ ಕ್ರಿಸ್ತ ಚರ್ಚ್ ಕಾಲೇಜಿನ ಪ್ರಿನ್ಸಿಪಾಲರು ವ್ಯಥೆಪಟ್ಟರು. ಗಾಂಧೀಜಿ ಅದಕ್ಕೆ ಹೀಗೆ ಉತ್ತರಿಸಿದರು: "೧೯೩೦ರಲ್ಲಿ ನಾನು ನಿಮ್ಮಿಂದ ಏನು ಮಾಡಿಸಬಹುದೆಂಬುದನ್ನು ನೀವು ಕೇಳಿದಿರಿ. ಒಳ್ಳೆಯದು: ಅಗತ್ಯ ಬಂದಲ್ಲಿ ನೀವು ನಗುನಗುತ್ತಾ ಸಾವನ್ನು ಎದುರಿಸಬೇಕೆಂದು ನಾನು ಬಯಸುತ್ತೇನೆ. ಆದರೆ ಅದು ಒಬ್ಬ ಪಾತಕಿಯ ಸಾವಾಗಿರಬಾರದು. ಪರಿಶುದ್ಧ ಹೃದಯಿಗಳ ತ್ಯಾಗವನ್ನು ಭಗವಂತ ಸ್ವೀಕರಿಸುತ್ತಾನೆ. ಆದ್ದರಿಂದ ಸಾವಿನತನಕ ದೇಶ ಸೇವೆಗೆ ನೀವು ಯೋಗ್ಯಸಾಧನಗಳಾಗಬೇಕಾದರೆ ಮೊದಲು ನಿಮ್ಮನ್ನು ನೀವು ಪರಿಶುದ್ಧಗೊಳಿಸಿಕೊಳ್ಳಬೇಕು."

ಬನಾರಸಿನ ಹಿಂದೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ ಅವರು ಹೀಗೆ ನುಡಿದರು: "ಆಚರಣೆಯಲ್ಲಿ ಅಗತ್ಯವಾದ ವ್ಯಕ್ತಿತ್ವಶುದ್ಧಿಯನ್ನು ನೀವು ತೋರ್ಪಡಿಸಬೇಕೆನ್ನುವುದಾದರೆ ಚರಕಕ್ಕಿಂತಲೂ ಉತ್ತಮವಾದ ಬೇರೆ ಸಾಧನವೇ ಇಲ್ಲ. ಭಗವಂತನ ಅಸಂಖ್ಯಾತ ಸ್ವರೂಪಗಳಲ್ಲಿ ದರಿದ್ರನಾರಾಯಣನದು ಅತ್ಯಂತ ಪವಿತ್ರವಾದದ್ದು. ಏಕೆಂದರೆ ಅದು ಕೆಲವು ಶ್ರೀಮಂತ ಜನರಿಂದ ಭಿನ್ನವಾಗಿರುವ ಅಗಣಿತ ದರಿದ್ರ ಜನಕೋಟಿಯನ್ನು ಪ್ರತಿನಿಧಿಸುತ್ತದೆ. ಈ ಹಸಿದ ಜನಕೋಟಿಯೊಡನೆ ನಿಮ್ಮನ್ನು ತಾದಾತ್ಮ್ಯಗೊಳಿಸಿಕೊಳ್ಳುವ ಸರಳ ಮತ್ತು ಅತ್ಯುತ್ತಮ ಮಾರ್ಗವೆಂದರೆ, ನಾನು ಸೂಚಿಸಿರುವ ತ್ರಿವಿಧಸ್ವರೂಪದ ಚರಕದ ಸಂದೇಶವನ್ನು ಪ್ರಸಾರ ಮಾಡುವುದು. ಪರಿಣತ ನೂಲುಗಾರರಾಗುವ ಮೂಲಕ, ಖಾದಿಯನ್ನು ಧರಿಸುವ ಮೂಲಕ ಮತ್ತು ದ್ರವ್ಯರೂಪದ ಕಾಣಿಕೆಗಳನ್ನು ಸಲ್ಲಿಸುವ ಮೂಲಕ ಅದನ್ನು ನೀವು ಪ್ರಸಾರಮಾಡಬಹುದು. ಮಾಳವೀಯಜಿ ನಿಮಗೆ ದೊರಕಿಸಿಕೊಟ್ಟಿರುವ ಸೌಲಭ್ಯಗಳಲ್ಲಿ ಆ ಲಕ್ಷಾಂತರ ಜನರಿಗೆ ಪ್ರವೇಶಾಧಿಕಾರವಿಲ್ಲವೆಂಬುದನ್ನು ನೆನಪಿಡಿ. ನಿಮ್ಮ ಈ ಸೋದರ ಸೋದರಿಯರಿಗೆ ಪ್ರತಿಫಲವಾಗಿ ನೀವು ಏನನ್ನು ನೀಡುತ್ತೀರಿ? ಪಂಡಿತ ಮಾಳವೀಯಜಿ ಈ ವಿಶ್ವವಿದ್ಯಾನಿಲಯದ ಯೋಜನೆಯನ್ನು ಕಲ್ಪಿಸಿಕೊಂಡಾಗ ಈ ಪ್ರಶ್ನೆಯು ಅವರ ಮನಸ್ಸಿನಲ್ಲಿತ್ತು. ನಿಮಗೆ ನೀಡಲಾಗುವ ಶಿಕ್ಷಣಕ್ಕೆ ಯೋಗ್ಯರಾಗಿ ನಡೆದುಕೊಳ್ಳುತ್ತೀರೆಂಬ ಭರವಸೆಯಿಂದ ಅವರು ಈ ಸಂಸ್ಥೆಯನ್ನು ಪ್ರಾರಂಭಿಸಿದರೆಂಬುದು ಖಚಿತ. ಇದನ್ನು ನೀವು ತಿಳಿದಿರಬೇಕು."

ಅದೇ ದಿನ, ಗಾಂಧೀಜಿ ಆಚಾರ್ಯ ನರೇಂದ್ರ ದೇವರು ನಡೆಸುತ್ತಿದ್ದ ಕಾಶಿ ವಿದ್ಯಾ ಪೀಠದಲ್ಲಿ ಘಟಿಕೋತ್ಸವ ಭಾಷಣವನ್ನು ಮಾಡಿದರು. ಸಾಂಪ್ರದಾಯಿಕ ಸಮಾರಂಭ ದಲ್ಲಿ ಭಾಗವಹಿಸಲು ಗಾಂಧೀಜಿ ಚಪ್ಪರದೊಳಗೆ ಪ್ರವೇಶಿಸಿದಾಗ ಅವರು ಕುಲಪತಿಯ ಹಳದಿ ನಿಲುವಂಗಿಯನ್ನು ಧರಿಸಬೇಕಾಯಿತು. ವಿದ್ಯಾರ್ಥಿಗಳಿಗೆ ನೀಡಿದ ಪ್ರಮಾಣ ವಚನದ ಉಪದೇಶ ಮತ್ತು ಪ್ರಬೋಧನೆಗಳು ಸಂಸ್ಕೃತದಲ್ಲಿದ್ದುವು. ಈ ಗಂಭೀರ ಉತ್ಸವವು ಮುಕ್ತಾಯಗೊಂಡನಂತರ ಗಾಂಧೀಜಿ ಸರಳ ಹಿಂದೂಸ್ತಾನಿಯಲ್ಲಿ ಭಾಷಣ ಮಾಡಿದರು: "ನಿಮ್ಮ ಅಲ್ಪಸಂಖ್ಯೆಯು ಅನೇಕ ವೇಳೆ ನಿಮ್ಮನ್ನು ಚಿಂತೆಗೀಡುಮಾಡ ಬಹುದು. ನಿಮ್ಮಲ್ಲಿ ಕೆಲವರು ಹಿಂದಿನ ಸಂಸ್ಥೆಗಳನ್ನು ಬಿಟ್ಟು ಬಂದುದರ ವಿವೇಕವನ್ನು ಶಂಕಿಸಬಹುದು ಮತ್ತು ಅವುಗಳಿಗೆ ಮತ್ತೆ ಹಿಂದಿರುಗುವ ಇಚ್ಛೆಯನ್ನು ಮನಸ್ಸಿನಲ್ಲಿಟ್ಟು ಕೊಂಡಿರಬಹುದು. ಪ್ರತಿಯೊಂದು ದೊಡ್ಡ ಧ್ಯೇಯದಲ್ಲಿಯೂ ಗಣನೆಗೆ ಬರುವುದು ಹೋರಾಟಗಾರರ ಸಂಖ್ಯೆಯಲ್ಲ. ಆದರೆ ಆ ಹೋರಾಟಗಾರರು ಯಾವ ದರ್ಜೆ ಯವರು ಎಂಬುದು ಇತ್ಯರ್ಥಕ ಅಂಶವಾಗಿ ಪರಿಣಮಿಸುತ್ತದೆ. ಜಗತ್ತಿನ ಅತ್ಯಂತ ಶ್ರೇಷ್ಠ ವ್ಯಕ್ತಿಗಳೆಲ್ಲ ಸದಾ ಏಕಾಂಗಿಗಳಾಗಿ ನಿಂತವರು. ಜೊರಾಸ್ಟರ್, ಬುದ್ಧ, ಜೀಸಸ್, ಮಹಮ್ಮದ್ ಈ ಎಲ್ಲ ಮಹಾಪ್ರವಾದಿಗಳನ್ನು ನೋಡಿ, ನಾನು ಇನ್ನೂ ಹೆಸರಿಸ ಬಹುದಾದ ಇತರ ಅನೇಕರಂತೆ ಅವರೆಲ್ಲ ಏಕಾಂಗಿಗಳಾಗಿ ನಿಂತರು. ಆದರೆ ಅವರಿಗೆ ತಮ್ಮಲ್ಲಿ ಮತ್ತು ತಮ್ಮ ದೇವರಲ್ಲಿ ಜೀವಂತ ಶ್ರದ್ಧೆಯಿತ್ತು. ದೇವರು ತಮ್ಮ ಪಕ್ಷ ದಲ್ಲಿದ್ದಾನೆಂದು ನಂಬಿದ್ದ ಅವರು ಎಂದೂ ಒಂಟಿತನವನ್ನನುಭವಿಸಲಿಲ್ಲ. ಪಲಾಯನ ಕಾಲದಲ್ಲಿ ಪ್ರವಾದಿಯೊಡಗೂಡಿ ಹೋಗುತ್ತಿದ್ದ ಅಬುಬಕರ್ ತಮ್ಮನ್ನು ಬೆಂಬತ್ತಿ ಬರುತ್ತಿದ್ದ ಅಸಂಖ್ಯಾತ ಶತ್ರುಗಳನ್ನು ಕಂಡು, ತಮ್ಮ ಸ್ಥಿತಿಯನ್ನು ಕಂಡು ನಡುಗುತ್ತಾ 'ನಮ್ಮನ್ನು ಹಿಂಬಾಲಿಸಿ ಬರುತ್ತಿರುವ ಶತ್ರುಗಳ ಸಂಖ್ಯೆಯನ್ನು ನೋಡು. ಈ ಭಾರಿ ಪ್ರತಿಕೂಲಗಳ ವಿರುದ್ಧ ನಾವಿಬ್ಬರು ಏನುಮಾಡುವುದು' ಎಂದು ಕೇಳಿದ ಸಂದರ್ಭ ವನ್ನು ನೀವು ಸ್ಮರಿಸಿಕೊಳ್ಳಬಹುದು. ಮರುಕ್ಷಣವೇ ಪ್ರವಾದಿಯು 'ಇಲ್ಲ, ಅಬುಬಕರ್, ನಾವು ಇರುವುದು ಮೂವರು. ಏಕೆಂದರೆ, ದೇವರು ನಮ್ಮೊಡನಿದ್ದಾನೆ' ಎಂದು ಹೇಳುತ್ತಾ ತನ್ನ ನಿಷ್ಠಾವಂತ ಗೆಳೆಯನನ್ನು ಆಕ್ಷೇಪಿಸಿದನು. ವಿಭೀಷಣನ ಮತ್ತು ಪ್ರಹ್ಲಾದರ ಅಜೇಯ ನಿಷ್ಠೆಯನ್ನು ನೋಡಿ. ಅದೇ ಬಗೆಯ ಜೀವಂತ ನಿಷ್ಠೆಯನ್ನು ನೀವು ನಿಮ್ಮಲ್ಲಿ ಮತ್ತು ಭಗವಂತನಲ್ಲಿಡಬೇಕೆಂಬುದೇ ನನ್ನ ಇಚ್ಛೆ."

ಗಾಂಧೀಜಿಯ ಯು.ಪಿ. ಪ್ರವಾಸವು ಬಹುಮಟ್ಟಿಗೆ ಆ ಪ್ರಾಂತ್ಯದ ಪ್ರತಿಯೊಂದು ಪ್ರಮುಖ ಸ್ಥಳವನ್ನೂ ಒಳಗೊಂಡಿತ್ತು. ಕಾರ್ಮಿಕ ಮುಖಂಡರನ್ನು ವಿಚಾರಣೆಗೊಳ ಪಡಿಸಲಾಗಿದ್ದ ಮೀರತ್, ಗಾಂಧೀಜಿಗೆ ಒಂದು ವಿಶೇಷ ಆಕರ್ಷಣೆಯಾಗಿದ್ದಿತು. ತಾವು ಕಮ್ಯುನಿಸ್ಟ್ ಅಥವಾ ಇತರ ಯಾವುದೇ 'ಇಸ್ಟು' ಆಗಿರದಿದ್ದರೂ, ಅನುಮತಿ ದೊರೆತಲ್ಲಿ ಬಂಧಿತರನ್ನು ಕಾಣುವ ಅವಕಾಶವನ್ನು ಕಳೆದುಕೊಳ್ಳುವುದಿಲ್ಲವೆಂದು ಅವರು ಹೇಳಿದರು. ಒಂದು ಮಧ್ಯಾಹ್ನ ಅವರು ಅನಿರೀಕ್ಷಿತವಾಗಿ ಬಂಧಿತರನ್ನು ಭೇಟಿಮಾಡಿದರು. ಬಂದಿ

ಗಳು ವರ್ಷದ ಕೊನೆಯಲ್ಲಿ ಸ್ವತಂತ್ರರಾಗದಿದ್ದಲ್ಲಿ ಮರು ವರ್ಷದ ಆದಿಯಲ್ಲಿಯೆ ತಾವೂ ಅವರನ್ನು ಕೂಡಿಕೊಳ್ಳಬೇಕಾಗಬಹುದೆಂದು ಗಾಂಧೀಜಿ ಮೀರತ್‌ನ ಆಪಾದಿತರಿಗೆ ತಿಳಿಸಿದರು. ಅವರ ಮೇಲಿನ ಕಾನೂನು ಕ್ರಮವು ಸರಿಯಲ್ಲವೆಂಬುದನ್ನು ಮತ್ತು ಮೀರತ್‌ನಂಥ ದೂರದ ಮತ್ತು ಅನಾನುಕೂಲಕರ ಪ್ರದೇಶದಲ್ಲಿ ಅವರನ್ನು ಬಂಧನ ದಲ್ಲಿಟ್ಟಿರುವುದು ಹೇಯವೆಂಬುದನ್ನು ಕಾರ್ಯತಃ ಎತ್ತಿತೋರಿಸಬೇಕೆಂಬುದು ಅವರ ಭೇಟಿಯ ಉದ್ದೇಶವಾಗಿದ್ದಿತು.

ಮುಸ್ಲಿಂ ವಿಶ್ವವಿದ್ಯಾನಿಲಯದ ಕುಲಪತಿಗಳ ಕೋರಿಕೆಯ ಮೇರೆಗೆ ಗಾಂಧೀಜಿ ಅಲಿಘರ್‌ಗೆ ಭೇಟಿಯಿತ್ತರು. ಅವರು ತಮ್ಮ ಭಾಷಣದಲ್ಲಿ, ಗೋಖಲೆಯವರಂಥ, ದೇಶದ ಮತ್ತು ಇಸ್ಲಾಂನ ಸೇವಕರನ್ನು ತಯಾರುಮಾಡುವಂತೆ ಯುವಜನರಿಗೆ ಕಳಕಳಿಯಿಂದ ಮನವಿ ಮಾಡಿಕೊಂಡರು. ಎರಡನೆ ಖಲೀಫ್ ಉಮರನ ಸರಳತೆಯನ್ನು ಅವರು ವಿದ್ಯಾರ್ಥಿಗಳಿಗೆ ನೆನಪುಮಾಡಿಕೊಟ್ಟರು. ಜಗತ್ತಿನ ಭಂಡಾರವೆಲ್ಲ ತನ್ನ ಕಾಲಡಿ ಯಲ್ಲಿ ಬಿದ್ದಿದ್ದರೂ ಎಲ್ಲ ಬಗೆಯ ವಿಶ್ರಾಂತಿ ವೈಭವಗಳನ್ನು ಆತ ಹೇಗೆ ನಿರಾಕರಿಸಿದ ನೆಂಬುದನ್ನೂ ಒರಟು ಖಾದಿಯ ಬದಲಿಗೆ ಮೃದು ರೇಶ್ಮೆಯ ಉಡುಗೆಗಳನ್ನು ಹಾಗೂ ಜರಡಿಯಾಡದ, ಕಲ್ಲಿನಿಂದ ಬೀಸಿದ ತರಿ ಹಿಟ್ಟಿನ ಬದಲು ಸಂಸ್ಕರಿಸಿದ ಹಿಟ್ಟನ್ನು ಬಳಸುವುದರಲ್ಲಿ ಒಲವನ್ನು ತೋರಿಸುತ್ತಿದ್ದ ತನ್ನ ಅಧಿಕಾರಿಗಳನ್ನು ಆತ ಹೇಗೆ ಖಂಡಿಸು ತ್ತಿದ್ದನೆಂಬುದನ್ನೂ ಅವರು ತಿಳಿಸಿದರು. ವಿದ್ಯಾರ್ಥಿಗಳು ಖಾದಿ ಧರಿಸದಿದ್ದುದು ಎದ್ದು ಕಾಣುತ್ತಿತ್ತು. ಸರ್ ಸೈಯದ್ ಅಹ್ಮದ್‌ರ ಪ್ರತಿಭೆ ಮತ್ತು ದೂರದೃಷ್ಟಿಗಳು ದೊರಕಿಸಿ ಕೊಟ್ಟಿರುವ ಶಿಕ್ಷಣ ಸೌಲಭ್ಯಗಳನ್ನು ಯಾರ ಮಕ್ಕಳು ಎಂದಿಗೂ ಪಡೆಯಲು ಸಾಧ್ಯ ವಿಲ್ಲವೊ ಭಾರತದ ಅಂಥ ನಿರ್ಗತಿಕ ಜನತೆ ಹಾಗೂ ತಮ್ಮ ನಡುವೆ ಖಾದಿಯನ್ನು ಬಳಸುವುದರ ಮೂಲಕ ಒಂದು ಜೀವಂತ ಬಾಂಧವ್ಯವನ್ನೇರ್ಪಡಿಸಿಕೊಳ್ಳಬೇಕೆಂದು ಅವರು ವಿದ್ಯಾರ್ಥಿಗಳಲ್ಲಿ ಬಿನ್ನವಿಸಿಕೊಂಡರು. ಕೊನೆಯದಾಗಿ, ತಾವು ರಾಷ್ಟ್ರಗೌರವದ ಸಂರಕ್ಷಕರೆಂದು ಮತ್ತು ಹಿಂದೂ–ಮುಸ್ಲಿಂ ಐಕ್ಯತೆಯ ನಿರ್ಮಾಪಕರೆಂದು ತಿಳಿಯ ಬೇಕೆಂದು ಗಾಂಧೀಜಿ ವಿದ್ಯಾರ್ಥಿಗಳನ್ನು ಕೇಳಿಕೊಂಡರು.

ಅಲಿಘರ್‌ನಿಂದ ಹೊರಟು ದಾರಿಯಲ್ಲಿ ಅನೇಕ ಸ್ಥಳಗಳಿಗೆ ಭೇಟಿ ಕೊಟ್ಟು ಗಾಂಧೀಜಿ ಮಥುರೆಯನ್ನು ಸೇರಿದರು. ಜಗತ್ತಿನ ದನಗಾಹಿಗಳಲ್ಲಿ ಕೃಷ್ಣ ಮೊತ್ತಮೊದಲಿಗ ನೆಂದು ಹಿಂದೊಂದು ಸಾರ್ವಜನಿಕ ಸಭೆಯಲ್ಲಿ ಗಾಂಧೀಜಿ ಹೇಳಿದ್ದರು. ಈ ಪ್ರಖ್ಯಾತ ಯಾತ್ರಾಸ್ಥಳದಲ್ಲಿ ಕೃಷ್ಣನ ಜನನವನ್ನು ಸ್ಮರಣೆಗೆ ತರುವಂಥದೇನೂ ಇಲ್ಲದಿರುವುದು ಅವರ ಮನಸ್ಸಿಗೆ ವ್ಯಥೆಯನ್ನುಂಟುಮಾಡಿತು. ಅಭಿನಂದನೆಗಳಿಗೆ ಪ್ರತ್ಯುತ್ತರವಾಗಿ ಅವರು ಗೋಸಂರಕ್ಷಣೆಯ ಬಗೆಗೆ ಮಾತನಾಡಿದರು. ಮಥುರೆ ಮತ್ತು ಅದರ ಸುತ್ತ ಮುತ್ತಣ ಪ್ರದೇಶಗಳಿಗೆ ಒಬ್ಬ ಪ್ರವಾಸಿ ಬಂದನೆನ್ನಿ. ಅದು ದೇವಗೋಪಾಲಕನ ಜನ್ಮಸ್ಥಳ ಮತ್ತು ಲೀಲಾಕ್ಷೇತ್ರವೆಂದು ತಿಳಿದಾಗ ಇಲ್ಲಿಯ ಜನ ಪ್ರಪಂಚದ ಅತ್ಯುತ್ತಮ ರಾಸು ಗಳನ್ನು ಹೊಂದಿರಬೇಕೆಂದು ಅವರು ನಿರೀಕ್ಷಿಸುತ್ತಾರೆ. ಅಂತೆಯೇ ಕೃಷ್ಣನ ಕಾಲದಲ್ಲಿದ್ದಿ

ತೆಂದು ಹೇಳಲಾದ ಪದ್ಧತಿಯಂತೆ ಹೆಚ್ಚುಕಡಿಮೆ ನೀರಿನ ಬೆಲೆಯಷ್ಟಕ್ಕೆ ಸಮೃದ್ಧ ಹಾಗೂ ಶುದ್ಧವಾದ ಹಾಲನ್ನು ಉತ್ಪಾದಿಸಬೇಕೆಂದು ಕೇಳಬಹುದು. ಮಥುರೆಯ ಜನ ಕೃಷ್ಣನ ತೀವ್ರ ಧರ್ಮಶ್ರದ್ಧೆ, ಸರಳತೆ ಮತ್ತು ಸ್ಥೈರ್ಯಗಳನ್ನು ತೋರಬೇಕೆಂದು ಭೇಟಿ ಕಾರನು ಬಯಸಬಹುದು. ಉಪೇಕ್ಷೆಗೆ ಪಾತ್ರರಾದ ಅಸ್ಪೃಶ್ಯರನ್ನು ಪ್ರೀತಿ ಮತ್ತು ಸಹಾನುಭೂತಿಗಳಿಂದ ಕಾಣಬೇಕೆಂದು ಆತ ಎಣಿಸುತ್ತಾನೆ. ಮುಂದುವರಿಸುತ್ತಾ ಗಾಂಧೀಜಿ ಹೀಗೆ ಹೇಳಿದರು: "ಮಥುರೆಯ ಬೀದಿಗಳಲ್ಲಿ ನಾನು ಹೋಗುತ್ತಿರುವಾಗ ಮೂಳೆ ಬಿಟ್ಟುಕೊಂಡಿರುವ ಎತ್ತುಗಳು, ಕೇವಲ ಆರ್ಥಿಕ ಹೊರೆಯಾಗಿರುವ ಮತ್ತು ಕಡಿಮೆ ಹಾಲನ್ನು ಕೊಡುವ ಹಸುಗಳು ಕಂಡುಬಂದುವು. ಈ ಪವಿತ್ರ ಸ್ಥಳದಲ್ಲಿ ಕೃಷ್ಣನು ಪಾಲಿಸಿದ ಮತ್ತು ಪೂಜಿಸಿದಂಥ ಗೋವನ್ನು ಆಹಾರಕ್ಕಾಗಿ ಕೊಲ್ಲುವ ಕಸಾಯಿಖಾನೆ ಯಿದೆ. ಲಜ್ಜಾಸ್ಪದವಾದ ಈ ಪರಿಸ್ಥಿತಿಗೆ ಮುಸಲ್ಮಾನರಾಗಲಿ ಅಥವಾ ಇಂಗ್ಲಿಷರಾಗಲಿ ಪ್ರಥಮತಃ ಹೊಣೆಗಾರರೆಂದು ಭಾವಿಸಬೇಡಿ. ಹಿಂದೂಗಳಾದ ನಾವು ಇದಕ್ಕೆ ಮೊತ್ತ ಮೊದಲ ಜವಾಬ್ದಾರರು. ನಮ್ಮ ನೆಲದಲ್ಲಿ ದನಗಳು ಬಹುಬೇಗನೆ ಆರ್ಥಿಕ ಹೊರೆಯಾಗಿ ಪರಿಣಮಿಸುತ್ತಿರುವುದರಿಂದ, ಭಾರತದಲ್ಲಿ ಅವುಗಳನ್ನು ಕಡಿಯದಿದ್ದರೂ, ಈಗಾಗಲೆ ನಡೆಯುತ್ತಿರುವಂತೆ ಆಸ್ಟ್ರೇಲಿಯಾದ ಕಸಾಯಿಖಾನೆಗೆ ಸಾಗಿಸಲಾಗುತ್ತಿದೆ. ಭಾರತದ ಅತ್ಯಧಿಕ ಪಾಲಿನ ದನಗಳನ್ನು ಹೊಂದಿರುವವರಲ್ಲಿ ಹಿಂದೂಗಳೇ ಮೊದಲಿಗರು. ಅವು ಗಳನ್ನು ಕಟುಕರಿಗೆ ಅಥವಾ ವ್ಯಾಪಾರಿಗಳಿಗೆ ಮಾರುವವರೂ ಅವರೆ. ನಾವು ಯಾರನ್ನು ಪೂಜಿಸುವ ಸೋಗಿನಲ್ಲಿದ್ದೇವೆಯೋ ಆ ದೇವಶಿಶುವಿನ ಬಗೆಗೆ ನಮ್ಮ ಕರ್ತವ್ಯವನ್ನು ನೆರವೇರಿಸಲೇಬೇಕೆಂದಿದ್ದಲ್ಲಿ ದನಗಳ ಪಾಲನೆಯ ವಿಜ್ಞಾನವನ್ನು ಅಭ್ಯಸಿಸಿ, ಹಾಲು ಕೊಡುವುದರಲ್ಲಿ ಮತ್ತು ಹೊರೆ ಹೊರುವುದರಲ್ಲಿ ಅವು ಪ್ರಪಂಚದ ಯಾವುದೇ ರಾಸು ಗಳಿಗಿಂತ ಶ್ರೇಷ್ಠವಾದುವೆಂಬುದನ್ನು ಖಂಡಿತಗೊಳಿಸಬೇಕು. ಇದನ್ನು ನಾವು ಸಾಧಿಸ ಬೇಕಾದರೆ ನಮ್ಮ ಮೂರ್ಖ ಪೂರ್ವಾಗ್ರಹಗಳನ್ನು ಮತ್ತು ಮೂಢಾಚರಣೆಗಳನ್ನು ಅವು ಎಷ್ಟೇ ಪುರಾತನವಾದುವಾಗಿರಲಿ—ತೊರೆಯಬೇಕಾಗುತ್ತದೆ."

ಗೋವರ್ಧನದಲ್ಲಿ ಅವರು ಕಂಡ ದನಗಳ ಅವಸ್ಥೆ ಮಥುರೆಯಲ್ಲಿಗಿಂತ ಹೆಚ್ಚಾಗಿ ಅವರನ್ನು ದುಃಖಕ್ಕೀಡುಮಾಡಿತು. "ನನ್ನ ಅಂತರಂಗವನ್ನು ಕೆರಳಿಸುವಂಥ ಸ್ಥಳಕ್ಕೆ ನೀವು ನನ್ನನ್ನು ಕರೆತಂದಿದ್ದೀರಿ. ನಾನು ವೈಷ್ಣವ ಕುಟುಂಬಕ್ಕೆ ಸೇರಿದವ. ಕೃಷ್ಣನ ಜನ್ಮ ಸ್ಥಳ ಮತ್ತು ವಿಹಾರಕ್ಷೇತ್ರಗಳ ಭೇಟಿಯಿಂದ ಮನುಷ್ಯ ತನ್ನ ಪಾಪಗಳನ್ನೆಲ್ಲ ತೊರೆ ಯುವಂತಾಗುತ್ತದೆಂದು ಬಾಲ್ಯದಿಂದಲೂ ನನಗೆ ತಿಳಿವಳಿಕೆ ನೀಡಲಾಗಿತ್ತು. ಇಲ್ಲಿಯ ರಸ್ತೆಗಳ ಮೂಲಕ ಹೋಗುತ್ತಿದ್ದಾಗ ಅಂತಹ ಯಾವ ಭಾವನೆಯೂ ನನ್ನಲ್ಲಿ ಉದಿಸಲಿಲ್ಲ. ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಿಂದ ಪ್ರಳಯವಾಗದಂತೆ ಕೃಷ್ಣನು ತನ್ನ ಕಿರುಬೆರಳಿನಿಂದ ಗೋವರ್ಧನಗಿರಿಯನ್ನು ಎತ್ತಿಹಿಡಿದು ಒಡನಾಡಿ ಗೋಪಾಲಕರನ್ನು ಮತ್ತು ಗೋವುಗಳನ್ನು ಸಂರಕ್ಷಿಸಿದನೆಂದು ಹೇಳಲಾಗುತ್ತದೆ. ಮಾನವ ಜನಾಂಗದ ಮತ್ತು ಅದರ ಒಡನಾಡಿಯಾದ ಗೋವಿನ ಸೇವೆಯ ಅಂದಿನ ಉತ್ಸಾಹ ಇಲ್ಲಿ ನನಗೆ

ಕಂಡುಬರುತ್ತಿಲ್ಲ. ಬದಲಿಗೆ ಮೂಳೆಚಕ್ಕಳದ ದನಗಳನ್ನು, ಸತ್ವವಿಲ್ಲದ, ಕ್ರಾಂತಿಯಿಲ್ಲದ ಗಂಡಸರು ಮತ್ತು ಹುಡುಗರನ್ನು ಮತ್ತು ಭಿಕ್ಷುಕರೆಂದು ವರ್ಣಿಸಲ್ಪಟ್ಟ ಬ್ರಾಹ್ಮಣರನ್ನು ಕಾಣುತ್ತಿದ್ದೇನೆ. ಹಿಂದಿನ ಬ್ರಾಹ್ಮಣರು ಹೀಗಿರಲಿಲ್ಲ. ಭಗವಂತನನ್ನು ಪ್ರತ್ಯಕ್ಷವಾಗಿ ಕಂಡಿದ್ದ ಅವರು ಅವನನ್ನು ಕಾಣುವ ರಹಸ್ಯವನ್ನು ಸರ್ವರಿಗೂ ತಿಳಿಸಿಕೊಟ್ಟರು. ಅವರು ಬದುಕುತ್ತಿದ್ದುದು ಭಿಕ್ಷೆಯಿಂದಲ್ಲ. ಅವರಿಂದ ದೈವೀಜ್ಞಾನವನ್ನು ಪಡೆಯುತ್ತಿದ್ದವರು ಅವರ ಬದುಕಿಗೆ ಅನುಕೂಲಮಾಡಿಕೊಡುವುದು ತಮ್ಮ ಪಾಲಿನ ಭಾಗ್ಯವೆಂದು ತಿಳಿಯುತ್ತಿದ್ದರು. ಅದರ ಫಲವಾಗಿ ಬ್ರಾಹ್ಮಣರ ಜೀವನ ನಡೆಯುತ್ತಿತ್ತು. ಕೃಷ್ಣನ ಕಾಲದಲ್ಲಿ ಅವರು ಸಾಚಾ ಧರ್ಮರಕ್ಷಕರಾಗಿದ್ದರು. ತಮಗೆ ಯಾವ ಶ್ರೇಷ್ಠತೆಯನ್ನೂ ಅವರು ಆರೋಪಿಸಿಕೊಂಡಿರಲಿಲ್ಲ. ಆದರೆ ಮಾನವ ಜನಾಂಗಕ್ಕೆ ಸಲ್ಲಿಸುತ್ತಿದ್ದ ಸೇವೆಯ ಕಾರಣದಿಂದ ಅವರು ಗೌರವ ಮತ್ತು ಪೂಜ್ಯತೆಗಳನ್ನು ಪಡೆದಿದ್ದರು. ಪವಿತ್ರ ಗೋವರ್ಧನದಲ್ಲಿ ಇದರ ಯಾವ ಕುರುಹೂ ಕಂಡುಬರುತ್ತಿಲ್ಲ."

ಗಾಂಧೀಜಿಯ ಮನಸ್ಸನ್ನು ಕದಡಿದ್ದ ಸಮಸ್ಯೆಗಳು ಅನೇಕ. ಅವುಗಳಲ್ಲೊಂದಾದ ಉತ್ತರ ಪ್ರದೇಶದ ಜಮೀನ್ದಾರರು ಮತ್ತು ರೈತರ ನಡುವಣ ಸಂಬಂಧವು 'ಯಂಗ್ ಇಂಡಿಯ'ದಲ್ಲಿ ಬರೆಯಲು ಅವರನ್ನು ಪ್ರಚೋದಿಸಿತು:

"ರೈತರಿಗೆ ಸಲ್ಲಬೇಕಾದ್ದನ್ನು ವಿಳಂಬವಾಗಿಯಾದರೂ ಸಲ್ಲಿಸಿದರೆ ಸಾಕಾಗಿದೆ. ಅದಕ್ಕಿಂತ ಹೆಚ್ಚೇನನ್ನೂ ಮಾಡಲು ಸಾಧ್ಯವಿಲ್ಲ. ಕ್ಷತ್ರಿಯರೆಂದು ಕರೆಯಲ್ಪಡುವವರ ಶ್ರೇಷ್ಠತೆಯ ಠೀವಿಗೆ ಮತ್ತು ತನ್ನ ಪಾಲಿನ ಅದೃಷ್ಟವೇ ಅದೆಂದು ವಿಧೇಯನಾಗಿ ಒಪ್ಪಿಕೊಳ್ಳುವ ಬಡರೈತನ ಅನುವಂಶಿಕ ಕೀಳರಿಮೆಗೆ ವರ್ಣಾಶ್ರಮದ ವಿಕಟವಿಡಂಬನೆಯೇ ಕಾರಣ. ಭಾರತೀಯ ಸಮಾಜವು ಶಾಂತಿಯುತ ರೀತಿಯಲ್ಲಿ ನಿಜವಾದ ಮುನ್ನಡೆಯನ್ನು ಸಾಧಿಸಬೇಕಾದರೆ, ರೈತನು ತಮ್ಮಂತೆಯೇ ಆತ್ಮವನ್ನು ಹೊಂದಿರುವನೆಂದೂ ತಮ್ಮ ಐಶ್ವರ್ಯವೇ ಕಾರಣವಾಗಿ ಬಡವನ ಮೇಲೆ ಶ್ರೇಷ್ಠತೆಯ ಹಕ್ಕು ಲಭಿಸುವುದಿಲ್ಲವೆಂದೂ ಶ್ರೀಮಂತವರ್ಗದ ಜನ ಸ್ಪಷ್ಟವಾಗಿ ಅರಿತುಕೊಳ್ಳಬೇಕು. ಜಪಾನೀ ಶ್ರೀಮಂತರಂತೆಯೆ ಇವರೂ ತಮ್ಮ ಆಶ್ರಿತರೈತರ ಏಳಿಗೆಗಾಗಿ ಐಶ್ವರ್ಯವನ್ನು ಪಡೆದಿರುವ ಧರ್ಮದರ್ಶಿಗಳೆಂದು ತಿಳಿದುಕೊಳ್ಳಬೇಕು. ಆಗ, ಅವರು ತಮ್ಮ ದುಡಿಮೆಗೆ ತಕ್ಕುದಾದಕ್ಕಿಂತಹೆಚ್ಚಿನ ಮೊತ್ತವನ್ನು ರುಸುಮಾಗಿ ತೆಗೆದುಕೊಳ್ಳುವುದಿಲ್ಲ.

"ಒಂದೆಡೆ ಶ್ರೀಮಂತ ವರ್ಗದವರ ಸಂಪೂರ್ಣ ಅನಾವಶ್ಯಕವಾದ ಆಡಂಬರ ಹಾಗೂ ದುಂದುಗಳು ; ಮತ್ತೊಂದೆಡೆ ಆ ಶ್ರೀಮಂತರು ಯಾರ ನಡುವೆ ವಾಸಿಸುತ್ತಿದ್ದಾರೋ ಆ ರೈತರ ಹೊಲಸು ಪರಿಸರ ಮತ್ತು ನುಚ್ಚುನುರಿಗೊಳಿಸುತ್ತಿರುವ ದಾರಿದ್ರ್ಯ. ಇಂದು ಈ ಎರಡರ ನಡುವೆ ಯಾವ ಸಂಬಂಧವೂ ಇಲ್ಲ. ಆದ್ದರಿಂದ ಒಬ್ಬ ಮಾದರಿ ಜಮೀನ್ದಾರನು, ರೈತ ಈಗ ಹೊರುತ್ತಿರುವ ಹೊರೆಯ ಬಹುಭಾಗವನ್ನು ಒಮ್ಮೆಲೆ ತಗ್ಗಿಸಬೇಕಾಗುತ್ತದೆ; ರೈತರೊಡನೆ ನಿಕಟ ಸಂಪರ್ಕವನ್ನು ಹೊಂದಿ ಅವರ ಬೇಡಿಕೆಗಳನ್ನು ತಿಳಿದುಕೊಳ್ಳಬೇಕಾಗುತ್ತದೆ; ಮತ್ತು ಅವರ ಚೈತನ್ಯವನ್ನೆ ಹಿಂಡುತ್ತಿರುವ ನಿರಾಶೆಯ

ಸ್ಥಾನದಲ್ಲಿ ಆಶೆಯನ್ನು ತುಂಬಬೇಕು. ಆರೋಗ್ಯ ಮತ್ತು ನೈರ್ಮಲ್ಯ ನಿಯಮಗಳ ಬಗೆಗಿನ ರೈತರ ಅಜ್ಞಾನವನ್ನು ಅವನು ಒಪ್ಪಕೂಡದು. ರೈತರು ಜೀವನಾಧಾರದ ಆವಶ್ಯಕತೆಗಳನ್ನು ಹೊಂದಲೆಂಬ ಸಲುವಾಗಿ ಅವನು ತಾನೇ ದಾರಿದ್ರ್ಯಕ್ಕೆ ಒಳಗಾಗುತ್ತಾನೆ. ತಾನೇ ಆಸಕ್ತಿ ವಹಿಸಿ ರೈತರ ಆರ್ಥಿಕ ಸ್ಥಿತಿಯನ್ನು ಅರಿಯುತ್ತಾನೆ. ಶಾಲೆಗಳನ್ನು ಸ್ಥಾಪಿಸಿ ರೈತರ ಮಕ್ಕಳ ಜೊತೆಜೊತೆಯಲ್ಲಿಯೆ ತನ್ನ ಮಕ್ಕಳಿಗೂ ಶಿಕ್ಷಣಕೊಡಿಸುತ್ತಾನೆ. ಹಳ್ಳಿಯ ಕೆರೆ ಮತ್ತು ಭಾವಿಗಳನ್ನು ಶುದ್ಧೀಕರಿಸುತ್ತಾನೆ. ಅನಿವಾರ್ಯವೆಂದುತೋರುವ ಕೆಲವು ಕೆಲಸಗಳನ್ನು, ಅಂದರೆ ತನ್ನ ಬೀದಿಗಳನ್ನು ಗುಡಿಸಿಕೊಳ್ಳುವುದನ್ನೂ ತನ್ನ ಕಕ್ಕಸು ಗಳನ್ನು ತೊಳೆದುಕೊಳ್ಳುವುದನ್ನೂ ರೈತನಿಗೆ ಕಲಿಸುತ್ತಾನೆ. ಅವನ್ನು ತನ್ನ ಸ್ವಂತ ತೋಟತುಡಿಕೆಗಳನ್ನು ಯಾವ ತಡೆಯೂ ಇಲ್ಲದೆ ರೈತನ ಅನಿರ್ಬಂಧಿತ ಉಪಯೋಗಕ್ಕಾಗಿ ಬಿಟ್ಟುಕೊಡುತ್ತಾನೆ. ಸ್ವಸಂತೋಷಕ್ಕಾಗಿಟ್ಟುಕೊಂಡಿರುವ ಅನಗತ್ಯ ಕಟ್ಟಡಗಳನ್ನು ಆಸ್ಪತ್ರೆ, ಶಾಲೆ, ಮೊದಲಾದವುಗಳಿಗೆ ಬಳಸುತ್ತಾನೆ. ಬಂಡವಾಳಗಾರರ ವರ್ಗವು ಕಾಲಲಕ್ಷಣ ಗಳನ್ನರಿತು, ಅತ್ಯಲ್ಪ ಅವಧಿಯೊಳಗೆ ಆಸ್ತಿಯ ಮೇಲಣ ತಮ್ಮ ದೈವದತ್ತ ಹಕ್ಕಿನ ಕಲ್ಪನೆಯನ್ನು ಬದಲಾಯಿಸಿಕೊಂಡಾಗ ಮಾತ್ರ ಇಂದು ಹಳ್ಳಿಗಳೆಂದು ಕರೆಯಲಾಗು ತ್ತಿರುವ ಏಳುನೂರು ಸಾವಿರ ತಿಪ್ಪೆಗಳನ್ನು ಆರೋಗ್ಯ, ಶಾಂತಿ ಮತ್ತು ಸುಖದ ನೆಲೆ ಗಳನ್ನಾಗಿ ಪರಿವರ್ತಿಸಬಹುದು. ಜಪಾನಿನ ಸಮುರಾಯನನ್ನು ಅನುಸರಿಸಿದಲ್ಲಿ ಬಂಡ ವಾಳಗಾರ ವಾಸ್ತವವಾಗಿ ಏನನ್ನೂ ಕಳೆದುಕೊಳ್ಳುವುದಿಲ್ಲ, ಅದರಿಂದ ಅವನಿಗೆ ಬರು ವುದೆಲ್ಲ ಲಾಭವೆ ಎಂದು ನನಗೆ ಮನವರಿಕೆಯಾಗಿದೆ. ಈಗಿರುವುದು ಎರಡೇ ದಾರಿ: ಬಂಡವಾಳಗಾರರು ಎಲ್ಲ ಮಿಗಿತಾಯವನ್ನು ಸ್ವಸಂತೋಷದಿಂದ ತ್ಯಜಿಸಿ ಸರ್ವರ ಸೌಖ್ಯವನ್ನು ಸಂಪಾದಿಸುವುದು; ಇಲ್ಲವೆ ಅವರು ಸಕಾಲದಲ್ಲಿ ಜಾಗೃತವಾಗದಿದ್ದಲ್ಲಿ ಎಚ್ಚೆತ್ತ, ಆದರೆ ಅಜ್ಞಾನವಶರಾಗಿ ಹಸಿವಿನಿಂದ ನರಳುತ್ತಿರುವ ಜನ ದೇಶವನ್ನು ಗೊಂದಲಕ್ಕೆ ನೂಕುವುದು. ಪ್ರಬಲ ಸರ್ಕಾರದ ಸಶಸ್ತ್ರ ಕಾರ್ಯಾಚರಣೆ ಸಹ ಆ ಗೊಂದಲ ವನ್ನು ನಿವಾರಿಸಲಾರದು."

ನವೆಂಬರ್ ೨೪ರಂದು ಯು.ಪಿ.ಯ ಪ್ರವಾಸವು ಕೊನೆಗೊಂಡಿತು. ಇಡಿಕಿರಿದ ಆ ಐದು ವಾರಗಳಲ್ಲಿ ಗಾಂಧೀಜಿ ಸಾವಿರಾರು ಜನರನ್ನುದ್ದೇಶಿಸಿ ಭಾಷಣ ಮಾಡಿದರು; ಮತ್ತು ಖಾದಿ ನಿಧಿಗೆ ೩,೩೦,೦೦೦ರೂ.ಗಳನ್ನು ಸಂಗ್ರಹಿಸಿದರು. ತಮ್ಮ ಪ್ರಾಂತ್ಯಕ್ಕೆ ಒಂದು ಸಂದೇಶವನ್ನು ನೀಡುವಂತೆ ಜನ ಕೇಳಿಕೊಂಡಾಗ ಅವರು ಹೇಳಿದರು: "ಅದು ಪಂಡಿತ ಜವಹರಲಾಲ ನೆಹ್ರೂರವರಂತಿರಬೇಕೆಂದು ನಾನು ಬಯಸುತ್ತೇನೆ."

ಲಾಹೋರ್ ಕಾಂಗ್ರೆಸ್ಸು ಸಮೀಪಿಸುತ್ತಿತ್ತು; ಘಟನೆಗಳು ಚುರುಕಾಗಿ ಜರುಗು ತ್ತಿದ್ದುವು. ಬ್ರಿಟಿಷ್ ಸರ್ಕಾರವು ಒಂದು ಹೊಸ ಹೆಜ್ಜೆಯನ್ನಿಟ್ಟಿತು. ವೈಸರಾಯ್ ಲಾರ್ಡ್ ಇರ್ವಿನ್ನರು ಅಕ್ಟೋಬರ್‌ನಲ್ಲಿ ಇಂಗ್ಲೆಂಡಿನಿಂದ ಹಿಂದಿರುಗಿದ ಕೂಡಲೆ, ಪಾರ್ಲಿಮೆಂಟಿಗೆ ಒಪ್ಪಿಸಬೇಕಾಗಿದ್ದ ಅಂತಿಮ ಯೋಜನೆಗಳಿಗೆ ಒಪ್ಪಿಗೆಯನ್ನು ತಡೆಯುವ ಉದ್ದೇಶದಿಂದ ಬ್ರಿಟಿಷ್ ಮತ್ತು ಭಾರತೀಯ ರಾಜಕೀಯ ಪ್ರಮುಖರನ್ನೊಳಗೊಂಡ

ಒಂದು ದುಂಡುಮೇಜಿನ ಸಮ್ಮೇಳನವನ್ನು ಕರೆಯುವುದಾಗಿ ಪ್ರಕಟಿಸಿದರು. ಅಕ್ಟೋಬರ್ ೩೧ರಂದು ನೀಡಿದ ತಮ್ಮ ಹೇಳಿಕೆಯಲ್ಲಿ ಲಾರ್ಡ್ ಇರ್ವಿನ್ನರು ಹೀಗೆ ತಿಳಿಸಿದರು: "೧೯೧೯ರ ಶಾಸನವನ್ನು ಅಂಗೀಕರಿಸಿದಾಗ ಬ್ರಿಟಿಷ್ ಸರ್ಕಾರದ ಉದ್ದೇಶಗಳ ಬಗ್ಗೆ ಹೊರಹೊಮ್ಮಿದ ವ್ಯಾಖ್ಯಾನವನ್ನು ಕುರಿತು ಬ್ರಿಟನ್ ಮತ್ತು ಇಂಡಿಯಾಗಳೆರಡರಲ್ಲೂ ಸಂದೇಹಗಳನ್ನು ವ್ಯಕ್ತಪಡಿಸಲಾಯಿತಷ್ಟೆ. ಡೊಮಿನಿಯನ್ ಸ್ಥಾನಮಾನದ ನೀಡಿಕೆಯೆ ಭಾರತದ ಸಂವಿಧಾನಾತ್ಮಕ ಪ್ರಗತಿಯ ಗುರಿ ಎಂಬ ಸಂಗತಿ ೧೯೧೭ರ ಘೋಷಣೆಯಲ್ಲಿ ಅಡಕವಾಗಿದೆ. ಈ ವಿವರಣೆಯನ್ನು ನೀಡಬೇಕಾಗಿ ಮಹಾಪ್ರಭುಗಳ ಸರ್ಕಾರದ ಪರವಾಗಿ ನಾನು ಅಧಿಕಾರ ಪಡೆದಿದ್ದೇನೆ." ಲಾರ್ಡ್ ಇರ್ವಿನ್ನರು ಮೊದಲ ಬಾರಿಗೆ ಒಂದು ಅಧಿಕೃತ ಹೇಳಿಕೆಯಲ್ಲಿ "ರಾಷ್ಟ್ರ (ಅಥವಾ ಡೊಮಿನಿಯನ್)"ವೆಂಬ ಮಾಂತ್ರಿಕ ಶಬ್ದವನ್ನು ಬಳಸಿದರು. ವಾಗ್ದಾನದ ತಾರೀಖು ಮತ್ತು ಅವಧಿ ಸ್ಪಷ್ಟವಾಗಿ ನಮೂದಾಗಿರಲಿಲ್ಲ. ಇಷ್ಟಾದರೂ ಅದು ಭಾರತೀಯ ಮುಖಂಡರ ಮೇಲೆ ಪ್ರಭಾವ ಬೀರಿತು. ಕಾರಣ, ಎರಡು ಸಮಾನ ರಾಷ್ಟ್ರಗಳ ಮುಖಂಡರ ನಡುವೆ ನಡೆಯುವಂಥ ಒಂದು ದುಂಡು ಮೇಜಿನ ಸಮ್ಮೇಳನವನ್ನು ಕರೆಯಬೇಕೆಂಬ ಬಹುದಿನಗಳ ಹಿಂದಿನ ಭಾರತೀಯರ ವ್ಯರ್ಥ ಕೋರಿಕೆ ಕೊನೆಗಾದರೂ ಸಫಲಗೊಂಡಿತ್ತು.

ವೈಸ್‌ರಾಯರ ಪ್ರಕಟನೆ ಹೊರಬಿದ್ದ ಕೂಡಲೆ ಡೆಲ್ಲಿಯಲ್ಲಿ ಅಧ್ಯಕ್ಷ ಪಟೇಲರ ನಿವಾಸದಲ್ಲಿ ಮುಖಂಡರ ಸಭೆಯನ್ನು ಕರೆಯಲಾಯಿತು. ಸಭೆ ಮೂರು ಗಂಟೆಗಳ ಕಾಲ ಜರುಗಿತು. ಗಾಂಧೀಜಿಯ ಉತ್ತರದ ಕರಡು ಪ್ರತಿಯನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಯಿತು. ಸಪ್ರೂರವರ ಕೆಲವು ಸಲಹೆಗಳನ್ನು ಅಳವಡಿಸಿಕೊಂಡು ಕೆಲವು ತಿದ್ದುಪಡಿಗಳೊಡನೆ ಅದನ್ನು ಪರಿಶೀಲಿಸಲಾಯಿತು. ಕೊನೆಗೆ ಅಂಗೀಕೃತವಾದ ಹೇಳಿಕೆ ಈ ರೀತಿಯಲ್ಲಿತ್ತು: "ಈ ಪ್ರಕಟಣೆಗಳ ಹಿಂದಿರುವ ಪ್ರಾಮಾಣಿಕತೆಯನ್ನೂ ಅಂತೆಯೆ ಭಾರತೀಯ ಮನೋಭಿಪ್ರಾಯವನ್ನು ಪುರಸ್ಕರಿಸುವ ಬ್ರಿಟಿಷ್ ಸರ್ಕಾರದ ನಿಲವನ್ನೂ ನಾವು ಮೆಚ್ಚುತ್ತೇವೆ. ಭಾರತದ ಅಗತ್ಯಗಳಿಗೆ ಯೋಗ್ಯವಾದ ಡೊಮಿನಿಯನ್ ಮಟ್ಟದ ಸಂವಿಧಾನದ ಯೋಜನೆಯನ್ನು ರೂಪಿಸುವ ಪ್ರಯತ್ನದಲ್ಲಿ ಮಹಾಪ್ರಭುಗಳ ಸರ್ಕಾರಕ್ಕೆ ನಮ್ಮ ಸಹಕಾರವನ್ನು ನೀಡಲು ಸಿದ್ಧರಿದ್ದೇವೆ. ಆದರೆ ದೇಶದ ಪ್ರಮುಖ ರಾಜಕೀಯ ಸಂಸ್ಥೆಗಳಲ್ಲಿ ವಿಶ್ವಾಸವನ್ನು ಮೂಡಿಸುವ ಮತ್ತು ಅವುಗಳ ಸಹಕಾರವನ್ನು ಪಡೆಯುವ ಸಲುವಾಗಿ ಕೆಲವು ಕ್ರಮಗಳನ್ನು ಕೈಗೊಳ್ಳಬೇಕಾದ್ದು ಮತ್ತು ಕೆಲವು ಅಂಶಗಳನ್ನು ಸ್ಪಷ್ಟಗೊಳಿಸಬೇಕಾದ್ದು ಅಗತ್ಯವೆಂದು ತಿಳಿಯುತ್ತೇವೆ."

ಆ ಷರತ್ತುಗಳು ಯಾವುವೆಂದರೆ: ಮೇಲೆ ಸೂಚಿಸಿದ ಪರಿಷತ್ತಿನಲ್ಲಿ ಎಲ್ಲ ಚರ್ಚೆಗಳೂ ಭಾರತಕ್ಕೆ ಸಂಪೂರ್ಣ ಡೊಮಿನಿಯನ್ ಸ್ಥಾನಮಾನಗಳನ್ನು ಕೊಡುವ ಒಪ್ಪಿಗೆಯ ತಳಹದಿಯ ಮೇಲೆ ಜರುಗಬೇಕು; ಸಮ್ಮೇಳನದಲ್ಲಿ ಕಾಂಗ್ರೆಸ್ಸಿಗರಿಗೆ ಅಧಿಕ ಪ್ರಾತಿನಿಧ್ಯವಿರಬೇಕು; ಎಲ್ಲ ರಾಜಕೀಯ ಕೈದಿಗಳಿಗೆ ಕ್ಷಮಾದಾನ ನೀಡಬೇಕು; ಇಂದಿನಿಂದ ಭಾರತದ

ಸರ್ಕಾರವು, ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಾಗುವಷ್ಟರಮಟ್ಟಿಗೆ ಡೊಮಿನಿಯನ್ ಮಾರ್ಗದಲ್ಲಿ ಮುನ್ನಡೆಯಬೇಕು.

ಈ ಪ್ರಕಟಣೆಗೆ ಗಾಂಧೀಜಿ, ಮಾಳವೀಯ, ಮೋತಿಲಾಲ ನೆಹ್ರೂ, ಸಪ್ರು, ಶ್ರೀಮತಿ ಬೆಸೆಂಟ್ ಮತ್ತು ಡಾ. ಅನ್ಸಾರಿ ಹಾಗೂ ಇತರರು ಸಹಿ ಮಾಡಿದರು. ಜವಹರಲಾಲ ನೆಹ್ರೂರವರು ಮೊದಲು ಇದಕ್ಕೆ ಒಪ್ಪಿಗೆ ನೀಡಲಿಲ್ಲ. ಆದರೆ ಅನಂತರ ಸಹಿ ಹಾಕಲು ಸಮ್ಮತಿಸಿದರು. ಸುಭಾಷ್ ಬೋಸ್, ಡಾ. ಕಿಚ್‌ಲೂ ಮತ್ತು ಅಬ್ದುಲ್ ಬಾರಿ ಆ ಪ್ರಕಟಣೆಗೆ ತಮ್ಮ ಬೆಂಬಲವನ್ನು ನಿರಾಕರಿಸಿದರು.

ಅಂತಹ ಒಂದು ನಿರ್ಣಯಕ್ಕೆ ಎಲ್ಲ ಗುಂಪುಗಳ ಪ್ರತಿನಿಧಿಗಳಿಂದಲೂ ಸಮ್ಮತಿಯನ್ನು ಪಡೆದುದು ಮಹಾಸಾಧನೆಯಾಗಿದ್ದಿತು. ಆದರೆ ನಿರ್ಣಯದಲ್ಲಿನ ಷರತ್ತುಗಳನ್ನು ಕಡೆಯ ಪಕ್ಷ ಎರಡು ವಿಭಿನ್ನ ದೃಷ್ಟಿಕೋಣಗಳಿಂದ ಗಮನಿಸಲಾಯಿತು. ಕಾಂಗ್ರೆಸ್ ನಾಯಕರು ಅವು ಆವಶ್ಯಕಾಂಶಗಳೆಂದು ಗಣಿಸಿದರು. ಮತ್ತು ಅವರ ಪ್ರಕಾರ ಆ ಷರತ್ತುಗಳು ಕನಿಷ್ಠ ಬೇಡಿಕೆಗಳನ್ನೊಳಗೊಂಡಿದ್ದುವು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಇದನ್ನು ಸ್ಪಷ್ಟಪಡಿಸಿತಲ್ಲದೆ, ಮುಂದಿನ ಕಾಂಗ್ರೆಸ್ಸಿನ ಅವಧಿಯ ವರೆಗೆ ಮಾತ್ರ ಈ ನೀಡಿಕೆ ಸಿಂಧುವಾಗಿರುತ್ತದೆಂದು ಹೇಳಿತು. ಆದರೆ ಮಿತಗಾಮಿಗಳಿಗೆ ಅವು ಸ್ಪಷ್ಟವಾಗಿ ವ್ಯಕ್ತಪಡಿಸಬೇಕಾದ, ಆದರೆ ಸಹಕಾರ ನಿರಾಕರಣೆಯ ಮೂಲಕ ಒತ್ತಾಯಪಡಿಸಬಾರದ ವರಿಷ್ಠ ಬೇಡಿಕೆಗಳಾಗಿದ್ದುವು.

ವೈಸ್‌ರಾಯರ ಹೇಳಿಕೆಯು ಇಂಗ್ಲೆಂಡಿನಲ್ಲಿ ಬಿರುಗಾಳಿಯನ್ನೆಬ್ಬಿಸಿತು. ರಾಜನೀತಿಯಲ್ಲಿ ಅದು ಯಾವುದೇ ಬದಲಾವಣೆಯನ್ನು ಅಥವಾ ಡೊಮಿನಿಯನ್ ಸ್ಥಾನಮಾನದ ತ್ವರೆಯನ್ನು ಸೂಚಿಸುವುದಿಲ್ಲವೆಂದು ಪ್ರಧಾನ ಮಂತ್ರಿ ಮಿ. ಮ್ಯಾಕ್ಡನಾಲ್ಡರು ವಿವರಿಸಬೇಕಾಯಿತು. ಭಾರತೀಯ ವ್ಯವಹಾರಗಳ ಕಾರ್ಯದರ್ಶಿಯಾಗಿದ್ದ ವೆಡ್ಜ್‌ವುಡ್ ಬೆನ್ ಕ್ಷಮಾದಾನದ ಮನವಿಗೆ ನೀಡಿದ ಉತ್ತರ ರಾಜಿಗೂ ದೂರವಾದ ನಕಾರವಾಗಿದ್ದಿತು. ಲೇಬರ್ ಸರ್ಕಾರದ ಆಹ್ವಾನಕ್ಕೆ ಮನ್ನಣೆ ತೋರಿಸುವಂತೆ ಸಹಾನುಭೂತಿಪರರಾದ ಆಂಗ್ಲರು ಗಾಂಧೀಜಿಗೆ ತಂತಿಗಳನ್ನು ಕಳುಹಿಸುತ್ತಿದ್ದರು. ಅವುಗಳಿಗುತ್ತರವಾಗಿ ಅವರು ಹೀಗೆ ಬರೆದರು:

"ನನ್ನ ಅಸಹಕಾರವು ನಿಜವಾದ ಹಾರ್ದಿಕ ಸಹಕಾರದ ತೀವ್ರ ಹಂಬಲಕ್ಕೆ ಒಂದು ಕುರುಹಾಗಿದೆ; ಅದು ಕೃತಕ ಸಹಕಾರದೊಡನೆ ಅದಲುಬದಲಾಗುವಂಥದಲ್ಲ. ಆದ್ದರಿಂದ ಅದು ಪ್ರಕಟವಾದ ಪ್ರಥಮದಲ್ಲಿಯೆ ನಾನು ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದೇನೆ. ಪ್ರಖ್ಯಾತ ಕಲ್ಕತ್ತ ಕಾಂಗ್ರೆಸ್ಸಿನ ನಿರ್ಣಯವೆಂತು ಸತ್ಯವೊ ಅಂತೆಯೆ ಈ ಜಂಟಿ ಪ್ರಕಟನೆಯು ಪ್ರತಿಯೊಂದು ಮಾತೂ ಪ್ರಾಮಾಣಿಕವಾದುದು. ಯಾವುದೇ ಅರ್ಥದಲ್ಲಿ ಈ ಎರಡೂ ಪರಸ್ಪರ ವಿರುದ್ಧವಾದವುಗಳಲ್ಲ. ಪ್ರಮಾಣಪತ್ರದ ಅರ್ಥವನ್ನು ನಾವು ಅಚ್ಚಳಿಯದೆ ಕಾಪಾಡಿಕೊಂಡಲ್ಲಿ ಅದರ ಅಕ್ಷರಗಳಲ್ಲೇನಿರುತ್ತದೆ? ಬ್ರಿಟಿಷ್ ಜನರಲ್ಲಿ ಇಂದು ನಿಜವಾದ

ಹೃದಯಪರಿವರ್ತನೆಯಾಗಿದ್ದು ಭಾರತವನ್ನು ಒಂದು ಸ್ವತಂತ್ರ ಹಾಗೂ ಆತ್ಮಗೌರವವುಳ್ಳ ರಾಷ್ಟ್ರವನ್ನಾಗಿ ಗಣಿಸಲು ನಿಜವಾದ ಆಸಕ್ತಿಯಿದ್ದು, ಭಾರತದಲ್ಲಿರುವ ಅಧಿಕಾರಿಗಳಲ್ಲಿ ನಿಜವಾದ ಸೇವಾ ಮನೋಭಾವವಿದ್ದು, ಕಾರ್ಯತಃ ನಿಜವಾದ ಡೊಮಿನಿಯನ್ ಸ್ಥಾನಮಾನ ದೊರೆಯುವುದು ಸಾಧ್ಯವಾದಲ್ಲಿ, ಆ ಸ್ಥಾನಮಾನದ ವ್ಯವಸ್ಥೆಗಾಗಿ ನಾನು ಕಾಯಬಲ್ಲೆ. ಇದರಿಂದ ಬಲಪ್ರಯೋಗದ ಬದಲಿಗೆ ಜನರ ಸತ್ಸಂಕಲ್ಪವನ್ನು ಪ್ರತಿನಿಧಾನಿಸಿದಂತಾಗುತ್ತದೆ. ಆಂಗ್ಲ ಪುರುಷರು ಮತ್ತು ಮಹಿಳೆಯರು ತಮ್ಮ ಜೀವಗಳ ಮತ್ತು ಆಸ್ತಿಯ ಭದ್ರತೆಗಾಗಿ ತಮ್ಮ ಫಿರಂಗಿಸಜ್ಜಿತ ಕೋಟೆಗಳಿಗಿಂತ ಜನರ ಸದುದ್ದೇಶವನ್ನು ನೆಚ್ಚಿಕೊಳ್ಳಲು ಸಿದ್ಧವಾಗಿದ್ದಾರೇನು? ಇನ್ನೂ ಅವರು ಸಿದ್ಧವಾಗಿರದಿದ್ದಲ್ಲಿ ನನಗೆ ತೃಪ್ತಿತರಬಹುದಾದ ಡೊಮಿನಿಯನ್ ಸ್ಥಾನಮಾನವಿರುವುದು ಸಾಧ್ಯವಿಲ್ಲ. ನಾನು ಇಚ್ಛಿಸಿದಲ್ಲಿ ಬ್ರಿಟಿಷ್ ಸಂಪರ್ಕವನ್ನು ಕಡಿದುಕೊಳ್ಳುವಂಥ ಸಾಮರ್ಥ್ಯ ನನ್ನ ಡೊಮಿನಿಯನ್ ಸ್ಥಾನಮಾನದ ಕಲ್ಪನೆಯಲ್ಲಿ ಅಡಕಗೊಂಡಿದೆ. ಆದ್ದರಿಂದ ಬ್ರಿಟನ್ ಮತ್ತು ಭಾರತಗಳ ನಡುವಣ ಸಂಬಂಧಗಳ ಕಟ್ಟುಪಾಡಿನಲ್ಲಿ ಯಾವ ಬಗೆಯ ಒತ್ತಾಯವೂ ಇರುವುದು ಸಾಧ್ಯವಿಲ್ಲ. ನಾನು ಚಕ್ರಾಧಿಪತ್ಯದಲ್ಲುಳಿಯಲು ಇಚ್ಛಿಸಿದ್ದಾದರೆ, ಪ್ರಪಂಚದಲ್ಲಿ ಶಾಂತಿ ಮತ್ತು ಸದುದ್ದೇಶಗಳ ಸಾಧನೆಯ ಮೂಲಕ ಪಾಲುಗಾರಿಕೆಯನ್ನು ಸಶಕ್ತಗೊಳಿಸುವುದಕ್ಕೇ ಹೊರತು, ಈಗಾಗಲೆ ಪ್ರಸಿದ್ಧವಾಗಿರುವ ಬ್ರಿಟನ್ನಿನ ಸಾಮ್ರಾಜ್ಯದಾಹವನ್ನೂ ಶೋಷಣೆಯನ್ನೂ ಉತ್ತೇಜಿಸುವುದಕ್ಕಲ್ಲ. ಲೇಬರ್ ಸರ್ಕಾರವು ನಾನು ಸೂಚಿಸಿದ ಎಲ್ಲ ಪರಿಣಾಮಗಳನ್ನು ಅರ್ಥಮಾಡಿಕೊಂಡಿಲ್ಲವೆಂದು ಬಹುಮಟ್ಟಿಗೆ ತೋರುತ್ತದೆ. ಪರಿಣಾಮಗಳನ್ನು ಉಲ್ಲೇಖಿಸುವುದರ ಮೂಲಕ ಘೋಷಣೆಯ ಅರ್ಥವನ್ನು ಹಿಗ್ಗಲಿಸಿಲ್ಲವೆಂದು ನಾನು ತಿಳಿದಿದ್ದೇನೆ. ಅವುಗಳ ಭಾರವನ್ನು ಘೋಷಣೆ ಹೊರುತ್ತದೊ ಇಲ್ಲವೊ ಕಾಣೆ. ಆದರೆ ನನ್ನ ಮೂಲಭೂತ ನಿಲವನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕಾದುದು ಇಂಗ್ಲೆಂಡ್ ಮತ್ತು ಭಾರತದಲ್ಲಿರುವ ಮಿತ್ರರಿಗೆ ಸೇರಿದ್ದು. ಇಲ್ಲಿ ಪ್ರತಿಪಾದಿಸಿರುವ ನಿಲವನ್ನೆತ್ತಿ ಹಿಡಿಯುವ ಸಾಮರ್ಥ್ಯವನ್ನು ಭಾರತ ಬೆಳೆಸಿಕೊಂಡಿಲ್ಲವೆಂಬುದರ ಅರಿವು ನನಗೆ ಚೆನ್ನಾಗಿದೆ. ಆದ್ದರಿಂದ ಅದನ್ನೀಗ ಅವರು ಅರಿತುಕೊಳ್ಳುವುದಾದರೆ ಬಹುಮಟ್ಟಿಗೆ ಬ್ರಿಟಿಷ್ ಜನರ ಕೃಪೆಯ ಮೂಲಕವೇ ಎಂದು ಹೇಳಬೇಕಾಗುತ್ತದೆ. ಅದನ್ನವರು ಪ್ರಸಕ್ತ ಸಂಧಿಕಾಲದಲ್ಲಿ ಅಭಿವ್ಯಕ್ತಪಡಿಸಿದಲ್ಲಿ ಆಶ್ಚರ್ಯವೇನಲ್ಲ. ಭಾರತಕ್ಕೆ ಎಸಗಿದ್ದ ಪೂರ್ವಾಪರಾಧಗಳಿಗೆ ಅದು ತಕ್ಕಮಟ್ಟಿನ ಪರಿಹಾರವಾಗುತ್ತದೆ.

"ಭಾರತವು ಸ್ವಾತಂತ್ರ್ಯವನ್ನು ಪಡೆಯಲು ಕಾಲವಿನ್ನೂ ಪಕ್ವವಾಗಿರದಿದ್ದಲ್ಲಿ ಅದಕ್ಕಾಗಿ ಕಾಯುವಷ್ಟು ತಾಳ್ಮೆ ನನಗಿದೆ. ನನ್ನ ದುಡಿಮೆಯ ಹಾಗೂ ಬದುಕಿನ ಗುರಿ ಬೇರಾವುದೂ ಇಲ್ಲ. ನನ್ನದು ಕೇವಲ ವೈಯಕ್ತಿಕ ಧ್ವನಿಯೆಂಬುದನ್ನು ನಾನು ಅರಿತಿದ್ದೇನೆ. ಅದು ಎಷ್ಟರಮಟ್ಟಿಗೆ ಭಾರತದ ಜನಕೋಟಿಯನ್ನು ಪ್ರತಿನಿಧಿಸುತ್ತದೆಂಬುದನ್ನು ಯಾರೂ ಹೇಳಲು ಸಾಧ್ಯವಿಲ್ಲ; ನನಗಂತೂ ಖಂಡಿತ ಸಾಧ್ಯವಿಲ್ಲ."

ಲಾಹೋರ್ ಕಾಂಗ್ರೆಸ್ಸಿಗೆ ತುಸು ಪೂರ್ವದಲ್ಲಿ ಕಾಂಗ್ರೆಸ್ ಮತ್ತು ಸರ್ಕಾರಗಳ ನಡುವೆ ಒಪ್ಪಂದಕ್ಕೆ ಸಂಬಂಧಿಸಿದ ಆಧಾರಭೂತ ಸೂತ್ರಗಳನ್ನು ಕಂಡುಹಿಡಿಯುವ ಸಲುವಾಗಿ ಅಂತಿಮ ಪ್ರಯತ್ನವನ್ನು ಕೈಗೊಳ್ಳಲಾಯಿತು. ಡಿಸೆಂಬರ್ ೨೩ಕ್ಕೆ ವೈಸ್‌ರಾಯರೊಡನೆ ಸಂದರ್ಶನವನ್ನು ನಿಗದಿ ಮಾಡಲಾಯಿತು. ಅದೇ ದಿನ ಲಾರ್ಡ್ ಇರ್ವಿನ್ನರು ದೆಹಲಿಗೆ ವಾಪಸಾಗುತ್ತಿದ್ದಾಗ ರೈಲುಹಾದಿಯಲ್ಲಿ ಬಾಂಬನ್ನು ಸಿಡಿಸಲಾಯಿತು. ಆದರೆ ಅವರು ಯಾವ ತೊಂದರೆಗೂ ಒಳಗಾಗದೆ ಪಾರಾದರು. ವೈಸರಾಯರು ದೆಹಲಿಗೆ ಹಿಂದಿರುಗಿದ ಕೂಡಲೆ ಗಾಂಧೀಜಿ, ಮೋತಿಲಾಲ ನೆಹ್ರೂ, ವಿಠಲಭಾಯಿ ಪಟೇಲ್, ತೇಜಬಹಾದುರ್ ಸಪ್ರು ಮತ್ತು ಜಿನ್ನರು ಅವರನ್ನು ಭೇಟಿ ಮಾಡಿದರು. ಬಾಂಬ್ ಸಿಡಿತದ ಬಗೆಗೆ ಸುದೀರ್ಘ ಮಾತುಕತೆಯಾದ ಅನಂತರ ವೈಸ್‌ರಾಯರು ಕೇಳಿದರು: "ನಾವೀಗ ಹೇಗೆ ಪ್ರಾರಂಭಿಸೋಣ? ಖೈದಿಗಳ ಬಿಡುಗಡೆಯ ಪ್ರಶ್ನೆಯನ್ನು ಎತ್ತಿಕೊಳ್ಳೋಣವೇನು?" ಆಗ ಗಾಂಧೀಜಿ ಈ ನಿರ್ಣಾಯಕ ಪ್ರಶ್ನೆಯನ್ನು ಮುಂದಿಟ್ಟರು: "ಸಂಪೂರ್ಣ ಡೊಮಿನಿಯನ್ ಸ್ಥಾನಮಾನದ ತಳಹದಿಯ ಮೇಲೆ ದುಂಡು ಮೇಜಿನ ಸಭೆಯು ಜರುಗುವುದೇನು?" ಲಾರ್ಡ್ ಇರ್ವಿನ್ ಈ ಭರವಸೆಯನ್ನು ಕೊಡಲಾಗಲಿಲ್ಲ. ಈ ನಿಷೇಧಾತ್ಮಕ ಧೋರಣೆಯಿಂದ ಮಾತುಕತೆ ಮುಕ್ತಾಯಗೊಂಡಿತು.

ಆಗಿನ ಸಂದರ್ಭದ ಬಗೆಗೆ ಟೀಕಿಸುತ್ತಾ ಗಾಂಧೀಜಿ ಹೀಗೆ ನುಡಿದರು: "ನಮ್ಮನ್ನು ಸುತ್ತುವರಿದಿರುವ ರಾಜಕೀಯಾಸಕ್ತ ಭಾರತದ ವಾತಾವರಣದಲ್ಲಿ ಎಷ್ಟು ಹಿಂಸೆ ತುಂಬಿದೆಯೆಂದರೆ ಅಲ್ಲಲ್ಲಿ ಎಸೆದ ಬಾಂಬುಗಳು ಅಷ್ಟಿಷ್ಟು ಗೊಂದಲವೆಬ್ಬಿಸುವುದಲ್ಲದೆ ಕೆಲವರ ಮನಸ್ಸಿಗೆ ಸಂತೋಷವನ್ನು ತರುತ್ತದೆ. ಈ ಹಿಂಸೆಯು ಕದಡಿದ ದ್ರವದಲ್ಲಿ ಮೇಲೆದ್ದ ಕಲ್ಮಷವೆಂಬುದನ್ನು ನಾನು ಬಲ್ಲೆ. ಹಾಗಲ್ಲದಿದ್ದಲ್ಲಿ, ಎಲ್ಲ ಹಿಂಸಾವಾದಿ ಮತ್ತು ಅಹಿಂಸಾವಾದಿ ಜನರು ಯಾವ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದಾರೊ ಅದನ್ನು ಸಮೀಪದ ಭವಿಷ್ಯದಲ್ಲಿ ನಮಗೆ ಗಳಿಸಿಕೊಡುವುದರಲ್ಲಿ ಅಹಿಂಸೆಯು ಯಶಸ್ವಿಯಾಗುತ್ತದೆಂಬ ಆಶೆಯನ್ನು ನಾನು ತೊರೆಯಬೇಕಾಗುತ್ತದೆ. ಸಂತೋಷದ ವಿಷಯವೆಂದರೆ, ಕಳೆದ ಹನ್ನೆರಡು ತಿಂಗಳುಗಳಿಂದ ಭಾರತದ ಒಳಭಾಗಗಳಲ್ಲಿ ನಾನು ಕೈಗೊಂಡ ಪ್ರವಾಸದ ಅವಧಿಯಲ್ಲಿ ದೊರೆತ ಸತತ ಅನುಭವದ ಆಧಾರದಿಂದ ಹಿಂಸಾ ಪಿಶಾಚಿಯ ಸೋಂಕಿಲ್ಲದ ಸ್ವಾತಂತ್ರ್ಯವನ್ನು ತಾವು ಪಡೆಯಬೇಕೆಂಬ ಚೆಚ್ಚರ ಅಪಾರ ಸಂಖ್ಯೆಯ ಜನಸಾಮಾನ್ಯರಲ್ಲಿದೆಯೆಂಬ ನಂಬಿಕೆ ನನ್ನಲ್ಲಿ ಮೂಡಿದೆ. ಆದ್ದರಿಂದ ವೈಸ್‌ರಾಯರು ಪ್ರಯಾಣ ಮಾಡುವ ರೈಲಿನ ಕೆಳಗೆ ಬಾಂಬು ಸಿಡಿಸುವಂಥ ಹಿಂಸಾಸ್ಫೋಟನೆಗಳು ಅಲ್ಲೊಂದು ಇಲ್ಲೊಂದು ಜರುಗಿದರೂ ಅಹಿಂಸೆ ದೃಢವಾಗಿ ನೆಲೆಸಿದೆಯೆಂದೇ ನನ್ನ ಭಾವನೆ.

"ನಾವೀಗ ಒಂದು ಹೊಸ ಯುಗವನ್ನು ಪ್ರವೇಶಿಸುತ್ತಿದ್ದೇವೆ. ಸಂಪೂರ್ಣ ಸ್ವಾತಂತ್ರ್ಯವೆ ನಮ್ಮ ತಕ್ಷಣದ ಉದ್ದೇಶವಾಗಿದೆ, ದೂರದ್ದಲ್ಲದ ಗುರಿಯಾಗಿದೆ. ಲಕ್ಷಾಂತರ ಜನಸಾಮಾನ್ಯರ ನಡುವೆ ಸ್ವಾತಂತ್ರ್ಯದ ನಿಜವಾದ ಸತ್ವವನ್ನು ಅರಳಿಸಬೇಕಾದಲ್ಲಿ ಕೇವಲ ಅಹಿಂಸೆಯು ಮತ್ತು ಅದಕ್ಕೆ ಸಂಬಂಧಿಸಿದ ಸಂಗತಿಗಳ ಮೂಲಕ

ಮಾತ್ರವೆ ಸಾಧ್ಯವೆಂಬುದು ಸ್ಪಷ್ಟವಲ್ಲವೆ? ಗುಪ್ತ ಹಿಂಸೆಯ ಮೂಲಕ ಆಂಗ್ಲರ ಜೀವಗಳನ್ನು ಅಭದ್ರಗೊಳಿಸಿ ಅವರನ್ನು ಓಡಿಸುತ್ತೇವೆಂಬುದು ಸಾಧ್ಯವೆ? ಅದು ಕೇವಲ ಗೊಂದಲಕ್ಕೆಡೆಗೊಡುವುದೇ ಹೊರತು ಸ್ವಾತಂತ್ರ್ಯದತ್ತ ಮುನ್ನಡೆಸುವುದಿಲ್ಲ. ಬುದ್ಧಿ ಮತ್ತು ಹೃದಯಗಳನ್ನೊಲಿಸಿಕೊಂಡು ಭಿನ್ನಾಭಿಪ್ರಾಯಗಳನ್ನು ಹೊಂದಿಸಿಕೊಳ್ಳುವುದರಿಂದ, ನಮ್ಮ ನಡುವೆ ಸುಸಂಘಟಿತ ಐಕ್ಯವನ್ನು ಬೆಳೆಸುವುದರಿಂದ ಮಾತ್ರ ಸ್ವಾತಂತ್ರ್ಯವನ್ನು ಗಳಿಸಬಹುದೆ ಹೊರತು, ನಮ್ಮ ಮುನ್ನಡೆಗೆ ತಡೆಯೊಡ್ಡುವರೆಂದು ನಾವು ಭಾವಿಸುವವರನ್ನು ಅಂಜಿಸುವ ಅಥವಾ ಕೊಲ್ಲುವ ಮೂಲಕವಲ್ಲ. ಆದರೆ ತಾಳ್ಮೆಯು ಮತ್ತು ಸೌಮ್ಯ ಕಾರ್ಯಾಚರಣೆಯಿಂದ ವಿರೋಧಿಯನ್ನು ಪರಿವರ್ತಿಸುವ ಮೂಲಕ ಸತ್ಯಾಗ್ರಹವನ್ನು ನಡೆಸಬೇಕೆಂದು ನಾನು ಮನವಿಮಾಡಿಕೊಳ್ಳುತ್ತೇನೆ. ಸಾರ್ವತ್ರಿಕ ಅಹಿಂಸೆಯಿಂದಲ್ಲದೆ ಸರ್ವರಶಿಸ್ತಿನಿಂದಲ್ಲದೆ ಸತ್ಯಾಗ್ರಹ ಸಾಧ್ಯವಿಲ್ಲವೆಂಬುದು ಈಗಾಗಲೆ ಸ್ಪಷ್ಟಗೊಂಡಿದೆಯಲ್ಲವೆ? ನಾನು ಸೂಚಿಸಿರುವ ಸೀಮಿತ ಸ್ವರೂಪದ ಅಹಿಂಸೆಯನ್ನು ಇಂದಿನ ಸಂದರ್ಭ ಅಪೇಕ್ಷಿಸುತ್ತದೆಂಬುದನ್ನು ಮನಗಾಣಿಸಲು ನಮ್ಮ ಧಾರ್ಮಿಕ ಶ್ರದ್ಧೆಗೆ ಮನವಿ ಮಾಡಿಕೊಳ್ಳುವ ಅಗತ್ಯವಿಲ್ಲವೆಂಬುದು ಖಂಡಿತ. ಹಾಗಿದ್ದರೆ ವಿವೇಕವನ್ನು ಕಳೆದುಕೊಳ್ಳದ ಜನ ಇತ್ತೀಚಿನ ಬಾಂಬ್ ಅತ್ಯಾಚಾರಗಳಂಥ ಕೃತ್ಯಗಳಿಗೆ ಗುಟ್ಟಾಗಿ ಅಥವಾ ಬಹಿರಂಗವಾಗಿ ಅನುಮೋದನೆ ನೀಡುವುದನ್ನು ನಿಲ್ಲಿಸಲಿ. ಬದಲಿಗೆ ಈ ದಾಷ್ಟ್ಯಗಳನ್ನು ಬಹಿರಂಗವಾಗಿ ಮತ್ತು ಧೈರ್ಯವಾಗಿ ಖಂಡಿಸಲಿ. ಅದರ ಫಲವಾಗಿ, ನಮ್ಮ ಈ ಭ್ರಮಿತ ದೇಶಪ್ರೇಮಿಗಳ ಹಿಂಸಾಚೇತನಕ್ಕೆ ಪೋಷಣೆ ದೊರೆಯದಂತಾಗಿ ಹಿಂಸೆಯ ನಿರರ್ಥಕತೆಯನ್ನು ಮತ್ತು ಹಿಂಸಾಕೃತ್ಯವು ಪ್ರತಿ ಬಾರಿಯೂ ಉಂಟು ಮಾಡುತ್ತಿರುವ ತೊಂದರೆಯನ್ನು ಅವರು ಅರಿಯುವಂತಾಗುತ್ತದೆ."

ಲಾಹೋರಿನ ಹೊರವಲಯದಲ್ಲಿ, ರಾವಿ ನದಿಯ ದಡದ ಮೇಲೆ, ಕ್ರಿಸ್ಮಸ್ ವಾರದಲ್ಲಿ ಕಾಂಗ್ರೆಸ್ ಸೇರಿದಾಗ ವಾತಾವರಣದಲ್ಲಿ ಉದ್ವೇಗ ತುಂಬಿತ್ತು. ೩೦,೦೦೦ ಮಂದಿ ವೀಕ್ಷಕರು ಮತ್ತು ಪ್ರತಿನಿಧಿಗಳು ಅಲ್ಲಿ ನೆರೆದಿದ್ದರು. ಅವರಲ್ಲಿ ಹಲವು ವರ್ಷಗಳ ಹಿಂದಿನಿಂದಲೂ ಕಾಂಗ್ರೆಸ್ಸಿನ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದ ಖಾನ್ ಅಬ್ದುಲ್ ಗಫಾರಖಾನ್‌ರ ನೇತೃತ್ವದಲ್ಲಿ ವಾಯುವ್ಯ ಗಡಿನಾಡಿನಿಂದ ಬಂದವರ ಸಂಖ್ಯೆ ಗಣನೀಯವಾಗಿತ್ತು. ಅಲಿ ಸಹೋದರರು ೧೯೨೪ರಿಂದಲೆ ಕಾಂಗ್ರೆಸ್ಸಿನಿಂದ ದೂರ ದೂರ ಸರಿಯುತ್ತಾ ಇದ್ದರು. ಅವರು ಲಾಹೋರ್ ಕಾಂಗ್ರೆಸ್ಸಿನಲ್ಲಿ ಭಾಗವಹಿಸಿದ್ದರೂ, ಮುಸ್ಲಿಮರು ಕಾಂಗ್ರೆಸ್ಸಿನ ಸತ್ಯಾಗ್ರಹ ಚಳುವಳಿಗೆ ಬೆಂಬಲ ನೀಡುವುದಿಲ್ಲವೆಂದು ಗಾಂಧೀಜಿಗೆ ಎಚ್ಚರಿಕೆ ನೀಡುವುದೇ ಅವರ ಉದ್ದೇಶವಾಗಿತ್ತು. ಕಾಂಗ್ರೆಸ್ಸಿನ ಸಂಪೂರ್ಣ ಬೆಂಬಲಿಗರಾಗಿದ್ದ ಡಾ. ಅನ್ಸಾರಿಯವರೂ ಸಹ ಪರಿಸ್ಥಿತಿಯ ಪರಿಣಾಮವಾಗಿ ಹೆದರಿದ್ದರು. ಅದರಿಂದಾಗಿ ನಿರುತ್ಸಾಹಿಯಾಗಿದ್ದರು. ಕಾಂಗ್ರೆಸ್ ಪರವಾದ ಇತರ ಮುಸ್ಲಿಂ ಮುಖಂಡರ ಮನಃಸ್ಥಿತಿಯೂ ಅದೇ ಬಗೆಯದಾಗಿತ್ತು. ಆದರೆ ಆಜಾದರು ಕಾಂಗ್ರೆಸ್ಸಿಗೆ

ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು. ಬಿಡುಗಡೆಯ ಕರೆಗೆ ಮುಸ್ಲಿಂ ಜನತೆ ಓಗೊಡುವರೆಂಬುದರಲ್ಲಿ ಅವರಿಗೆ ಯಾವ ಬಗೆಯ ಸಂದೇಹವೂ ಇರಲಿಲ್ಲ.

ಮೋತಿಲಾಲ ನೆಹ್ರೂರವರು ಕಾಂಗ್ರೆಸ್ ಅಧ್ಯಕ್ಷತೆಯ ಹೊಣೆಯನ್ನು ತಮ್ಮ ಮಗ ಜವಹರಲಾಲರಿಗೆ ಒಪ್ಪಿಸಿದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಜವಹರಲಾಲರು ತಾವೊಬ್ಬ ಸಮಾಜವಾದಿ ಹಾಗೂ ಪ್ರಜಾಪ್ರಭುತ್ವವಾದಿಯೆಂದು ಘೋಷಿಸಿಕೊಂಡರು: "ಬ್ರಿಟಿಷ್ ಆಳ್ವಿಕೆ ಮತ್ತು ಸಾಮ್ರಾಜ್ಯಷಾಹಿಗಳಿಂದ ಸಂಪೂರ್ಣ ಮುಕ್ತಿ ಪಡೆಯುವುದೇ ಸ್ವಾತಂತ್ರ್ಯದ ಅರ್ಥ. ನಮ್ಮ ಸ್ವಾತಂತ್ರ್ಯಾನಂತರ ಭಾರತವು ಜಾಗತಿಕ ಸಹಕಾರದ ಹಾಗೂ ಜಾಗತಿಕ ಒಕ್ಕೂಟದ ಎಲ್ಲ ಪ್ರಯತ್ನಗಳನ್ನೂ ಸ್ವಾಗತಿಸುತ್ತದೆಂಬುದರಲ್ಲಿ ಮತ್ತು ಯಾವ ಒಕ್ಕೂಟದ ಸಮಾನ ಸದಸ್ಯತ್ವವನ್ನು ಪಡೆದಿದೆಯೋ ಆ ಕೂಟಕ್ಕಾಗಿ ತನ್ನ ಸ್ವಾತಂತ್ರ್ಯದ ಕೆಲವು ಭಾಗವನ್ನು ತ್ಯಾಗಮಾಡಲು ಸಹ ಅದು ಒಪ್ಪುತ್ತದೆಂಬುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ."

ಕಲ್ಕತ್ತೆಯಲ್ಲಿ ಸ್ವಾತಂತ್ರ್ಯದ ಬೇಡಿಕೆಯನ್ನು ಮುಂದೊಡುವುದಕ್ಕೆ ಜವಾಬ್ದಾರರಾಗಿದ್ದ ಗಾಂಧೀಜಿ ಚಾರಿತ್ರಿಕ ನಿರ್ಣಯವೊಂದನ್ನು ಮಂಡಿಸಿದರು. ಕಾಂಗ್ರೆಸ್ ಸಂವಿಧಾನ ಮೊದಲ ಭಾಗದಲ್ಲಿ ಇತರ ಸಂಗತಿಗಳ ನಡುವೆ ಬರುವ ಸ್ವರಾಜ್ಯ ಎಂಬ ಮಾತು ಸಂಪೂರ್ಣ ಸ್ವಾತಂತ್ರ್ಯವನ್ನು ಸೂಚಿಸುತ್ತದೆಂದು ತಿಳಿಸಿದರು. ನಿರ್ಣಯದ ಪರಿಣಾಮಕಾರೀ ಭಾಗವು ಹೀಗಿದ್ದಿತು: "ದುಂಡುಮೇಜಿನ ಸಭೆಯಲ್ಲಿ ಕಾಂಗ್ರೆಸ್ಸು ಭಾಗವಹಿಸುವುದರಿಂದ ಈಗಿನ ಪರಿಸ್ಥಿತಿಯಲ್ಲಿ ಏನನ್ನೂ ಸಾಧಿಸುವುದಕ್ಕಾಗುದಿಲ್ಲ. ಸ್ವಾತಂತ್ರ್ಯ ಚಳುವಳಿಯನ್ನು ವ್ಯವಸ್ಥೆಗೊಳಿಸುವ ಮಾರ್ಗದಲ್ಲಿ ಪೂರ್ವಭಾವೀ ಹೆಜ್ಜೆಯಾಗಿ ಮತ್ತು ತತ್ವದ ಬದಲಾವಣೆಗೆ ತಕ್ಕಂತೆ ಕಾಂಗ್ರೆಸ್ಸಿನ ನೀತಿಯನ್ನು ಸಾಧ್ಯವಾದಷ್ಟು ಸಂಗತಗೊಳಿಸುವ ಸಲುವಾಗಿ ಕಾಂಗ್ರೆಸ್ಸು, ಸರ್ಕಾರದಿಂದ ರಚಿತವಾದ ಶಾಸನಸಭೆಗಳನ್ನು ಮತ್ತು ಸಮಿತಿಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಲು ನಿರ್ಧರಿಸುತ್ತದೆ; ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುವ ಕಾಂಗ್ರೆಸ್ಸಿಗರು ಮತ್ತು ಇತರರು ಮುಂದಿನ ಚುನಾವಣೆಗಳಲ್ಲಿ ಪಾಲುಗೊಳ್ಳಬಾರದೆಂದು ಕರೆನೀಡುತ್ತದೆ; ಶಾಸನಸಭೆಗಳ ಹಾಲಿ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಲು ನಿರ್ದೇಶನ ನೀಡುತ್ತದೆ; ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳನ್ನು ಹುರುಪಿನಿಂದ ಜಾರಿಗೆ ತರಲು ಕಾಂಗ್ರೆಸ್ ರಾಷ್ಟ್ರಕ್ಕೆ ಮನವಿ ಮಾಡಿಕೊಳ್ಳುತ್ತದೆ; ಆಯ್ಕೆಯ ಪ್ರದೇಶಗಳಲ್ಲಿಯೊ ಅಥವಾ ಇತರೆಡೆಗಳಲ್ಲಿಯೊ, ಎಲ್ಲಿ ಯೋಗ್ಯವೆಂದು ಕಂಡುಬರುತ್ತದೊ ಅಲ್ಲಿ, ಹಾಗೂ ತನಗೆ ಅಗತ್ಯವೆಂದು ತಿಳಿದು ಬರುವ ರೀತಿಯಲ್ಲಿ, ಕರನಿರಾಕರಣೆಯೂ ಸೇರಿದಂತೆ, ಸತ್ಯಾಗ್ರಹ ಕಾರ್ಯಕ್ರಮವನ್ನು ಕೈಗೊಳ್ಳುವ ಅಧಿಕಾರವನ್ನು ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಗೆ ನೀಡುತ್ತದೆ."

ಕಾಂಗ್ರೆಸ್ಸಿನ ಮುಂದಿನ ಕೆಲಸಕ್ಕೆ ಈ ನಿರ್ಣಯವು ಮೂಲಸ್ವರೂಪದ್ದಾಗಿದೆಯೆಂದು ಗಾಂಧೀಜಿ ವರ್ಣಿಸಿದರು. ಪ್ರಧಾನ ನಿರ್ಣಯದ ಮೇಲಿನ ಚರ್ಚೆಯು ಬಹಳ ಹೊತ್ತು ಮುಂದುವರಿಯಿತು. ನಿರ್ಣಯದಲ್ಲಿ ವೈಸ್‌ರಾಯರಿಗೆ ಸಂಬಂಧಿಸಿದ ಉಲ್ಲೇಖ

ಗಳನ್ನು ಮತ್ತು ಗಾಂಧೀಜಿಯು ಸೂಚಿಸಿದ ಕಾರ್ಯಕ್ರಮದ ವಿವರಗಳನ್ನು ಅನೇಕರು ಒಪ್ಪದಿದ್ದುದೇ ಸುದೀರ್ಘ ಚರ್ಚೆಗೆ ಕಾರಣವಾಗಿತ್ತು; ಗುರಿಯ ಬಗೆ ಯಾರಲ್ಲಿಯೂ ಭಿನ್ನಾಭಿಪ್ರಾಯಗಳಿರಲಿಲ್ಲ. ಚರ್ಚೆ ಡಿಸೆಂಬರ್ ೩೧ರ ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಕೊನೆಗೊಂಡಿತು. ಮತದಾನ ಎರಡು ಗಂಟೆ ನಡೆಯಿತು. ಹೆಚ್ಚು ಕಡಿಮೆ ಹದಿನಾಲ್ಕು ತಿದ್ದುಪಡಿಗಳಿದ್ದುವು. ಅವುಗಳಲ್ಲನೇಕ ತಿದ್ದುಪಡಿಗಳನ್ನು ಒತ್ತಾಯ ಮಾಡಲಾಯಿತು. ಸ್ವಾತಂತ್ರ್ಯದ ಮೇಲಿನ ನಿರ್ಣಯ ಮತ್ತು ಹೋರಾಟದ ಮುನ್ನಡೆಯಲ್ಲಿ ತೆಗೆದುಕೊಳ್ಳ ಬೇಕಾದ ಕ್ರಮ—ಇವು ಬಹುಮಟ್ಟಿಗೆ ಅವಿರೋಧವಾಗಿ ಅಂಗೀಕರಿಸಲ್ಪಟ್ಟುವು. ಅನೇಕ ಸಾವಿರ ಜನರಲ್ಲಿ ಎಲ್ಲೊ ಇಪ್ಪತ್ತು ಮುವತ್ತು ಮಂದಿ ವಿರುದ್ಧವಾಗಿ ಮತ ನೀಡಿದರು. ಡಿಸೆಂಬರ್ ೩೧ರ ಮಧ್ಯರಾತ್ರಿಯ ವೇಳೆಗೆ ಸರಿಯಾಗಿ, ಅಂಗೀಕೃತವಾದ ನಿರ್ಣಯವನ್ನು ಘೋಷಿಸಲಾಯಿತು. ಅದೇ ವೇಳೆಗೆ ಸರಿಯಾಗಿ ಕಲ್ಕತ್ತದಲ್ಲಿ ನೀಡಲಾಗಿದ್ದ ಅಂತಿಮ ಎಚ್ಚರಿಕೆಯ ಅವಧಿ ಮುಕ್ತಾಯವಾಯಿತು.

ಮಧ್ಯರಾತ್ರಿಯಲ್ಲಿ ೧೯೩೦ನೆಯ ವರ್ಷಕ್ಕೆ ಕಾಲಿಡುತ್ತಿದ್ದಂತೆಯೇ "ಇನ್‌ಕಿಲಾಬ್ ಜಿಂದಾಬಾದ್", "ಕ್ರಾಂತಿ ಬಹುಕಾಲ ಬಾಳಲಿ" ಎಂಬ ಕಿವುಡಾಗಿಸುವ ಕೂಗುಗಳ ಮಧ್ಯೆ ಭಾರತೀಯ ಸ್ವಾತಂತ್ರ್ಯದ ತ್ರಿವರ್ಣ ಧ್ವಜವು ಹಾರಾಡಿತು.

ಕಾಂಗ್ರೆಸ್ಸಿನ ನಿರ್ಣಯಗಳು ಅಧ್ಯಕ್ಷೀಯ ಭಾಷಣದ ಧೋರಣೆಯನ್ನೆ ನಿಷ್ಕೃಷ್ಟ ವಾಗಿ ಅನುಸರಿಸಿದುವು. ನೆಹ್ರೂ ವರದಿಯ ಸಂಪೂರ್ಣ ಯೋಜನೆ ಸೀದುಹೋಯಿ ತೆಂದು ಘೋಷಿಸಲಾಯಿತು. ಪೂರ್ಣಸ್ವರಾಜ್ಯ ಅರ್ಥಾತ್ ಸಂಪೂರ್ಣ ಸ್ವಾತಂತ್ರ್ಯವು ಕಾಂಗ್ರೆಸ್ಸಿನ ಗುರಿಯೆಂದು ಸಾರಲಾಯಿತು. ಸಂಬಂಧಪಟ್ಟ ಪಕ್ಷಗಳಿಗೆ ಪೂರ್ಣ ಸಮಾಧಾನ ವನ್ನು ನೀಡದಿದ್ದ ಯಾವ ಪರಿಹಾರವನ್ನೂ ಒಪ್ಪುವುದಿಲ್ಲವೆಂದು ಮತೀಯ ಪ್ರಶ್ನೆಗೆ ಸಂಬಂಧಿಸಿದ ನಿರ್ಣಯವು ಅಲ್ಪಸಂಖ್ಯಾತರಿಗೆ ಭರವಸೆ ನೀಡಿತು. ಸ್ವತಂತ್ರ ಭಾರತವು ಉತ್ತರಾಧಿಕಾರದ ಮೂಲಕ ಪಡೆಯುವ ಪ್ರತಿಯೊಂದು ಕರಾರನ್ನು ನಿಷ್ಕೃಷ್ಟ ತನಿಖೆ ಗೊಳಗು ಮಾಡುತ್ತದಲ್ಲದೆ, ನ್ಯಾಯರಹಿತ ರಿಯಾಯಿತಿಗಳು ಹಾಗೂ ಕರಾರುಗಳನ್ನು ನಿರಾಕರಿಸುತ್ತದೆಂದು ಕಾಂಗ್ರೆಸ್ಸು ಘೋಷಿಸಿತು. ಜತಿನ್‌ದಾಸರ ಮಹತ್ತರ ಬಲಿದಾನದ ಬಗೆಗೆ ಕಾಂಗ್ರೆಸ್ಸು ಮೆಚ್ಚುಗೆ ವ್ಯಕ್ತಪಡಿಸಿತು. ವೈಸ್‌ರಾಯರ ರೈಲಿನಲ್ಲಿ ಬಾಂಬು ಸಿಡಿದು ದಕ್ಕಾಗಿ ತನ್ನ ಸಂತಾಪವನ್ನು ಸೂಚಿಸಿತು. ಅದರಿಂದ ಪಾರಾದ ಲಾರ್ಡ್ ಇರ್ವಿನ್ನರಿಗೆ ಬಡಪಾಯಿ ಸೇವಕರೂ ಸೇರಿದಂತೆ ಅವರ ಎಲ್ಲ ಪರಿವಾರದವರಿಗೆ ಅಭಿನಂದನೆಗಳನ್ನು ಸಲ್ಲಿಸಿತು. ಬಾಂಬಿನ ಮೇಲಿನ ನಿರ್ಣಯವು ಬಿರುಸಿನ ವಿವಾದಕ್ಕೊಳಗಾಯಿತು. ಆದರೆ ಅಂತಿಮವಾಗಿ ಅದು ಅಂಗೀಕೃತವಾಯಿತು. ಪ್ರಧಾನ ನಿರ್ಣಯದಲ್ಲಿದ್ದ ಸ್ಥಳೀಯ ಸಂಸ್ಥೆಗಳ ಬಹಿಷ್ಕಾರಕ್ಕೆ ಸಂಬಂಧಿಸಿದ ಕಲಮನ್ನು ವಿಷಯನಿಯಾಮಕ ಸಮಿತಿಯಲ್ಲಿ ಬಿಟ್ಟುಬಿಡಲಾಯಿತು. ಕಾಂಗ್ರೆಸ್ಸು "ತತ್ವಗಳನ್ನು ಘೋಷಿಸುವ ಸಂಸ್ಥೆಯಲ್ಲ.ಅದು ರಾಷ್ಟ್ರೀಯ ಆಶೆ ಆಕಾಂಕ್ಷೆಗಳನ್ನು ಮೊದಲೇ ತಿಳಿದು ಅವುಗಳ ಪೂರೈಕೆಗಾಗಿ ಉಪಯುಕ್ತ

ವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರಯತ್ನಿಸಬೇಕು” ಎಂದು ಹೇಳುತ್ತಾ ಗಾಂಧೀಜಿ ಚರ್ಚೆಯನ್ನು ಮುಕ್ತಾಯಗೊಳಿಸಿದರು.

“ಧೈರ್ಯದಿಂದ ಮುನ್ನುಗ್ಗಿ ಕೆಲಸಮಾಡುವವರಿಗೆ ಬಹುತೇಕವಾಗಿ ಗೆಲುವು ಸಿದ್ಧಿಸುತ್ತದೆ; ಪರಿಣಾಮಗಳಿಗೆ ಅಂಜುವಂಥ ಪುಕ್ಕರಿಗೆ ವಿಜಯ ದುರ್ಲಭ”ವೆಂದು ಜವಹರಲಾಲ ನೆಹ್ರೂ ಅವರು ಅಭಿಪ್ರಾಯಪಟ್ಟರು.

ಡೊಮಿನಿಯನ್ ಸ್ಥಾನಮಾನವನ್ನಾಧರಿಸಿದ ಸಂವಿಧಾನವೊಂದನ್ನು ರೂಪಿಸಿಕೊಳ್ಳುವ ಉದ್ದೇಶಕ್ಕಾಗಿ ಎಲ್ಲ ಪಕ್ಷಗಳೂ ಒಟ್ಟಾಗಿ ಸೇರಬೇಕೆಂದು ಕರೆನೀಡುವ ಒಂದು ಪ್ರಕಟಣೆಯನ್ನು ಉದಾರ ಪಕ್ಷದ ಸಮ್ಮೇಳನವು ಮದ್ರಾಸಿನಿಂದ ಹೊರಗೆಡಹಿತು. ಆ ಮನವಿಯನ್ನು ಬೆಂಬಲಿಸುತ್ತಾ ಶಾಸ್ತ್ರಿಗಳು ಲಾಹೋರ್ ಕಾಂಗ್ರೆಸ್ಸನ್ನು ಉಲ್ಲೇಖಿಸಿ ಹೀಗೆ ಹೇಳಿದರು: “ಭಾರತದ ರಾಜಕೀಯ ಚರಿತ್ರೆಯಲ್ಲಿ ಎಂದೆಂದೂ ಇಲ್ಲದ ಬಿಕ್ಕಟ್ಟನ್ನು ನಾವು ಎದುರಿಸುತ್ತಿದ್ದೇವೆಂಬುದರಲ್ಲಿ ಯಾವ ಸಂಶಯವೂ ಇಲ್ಲ.”

WO 13213—MUPM—2,000 copies—7-5-75